1. The maximum time allowed for retention of a book shall be one fortnight. It may be borrowed again if not required by others.

2. No reference books shall be lent out.

3. No borrower shall have more than two volumes out of the Library at one time.

4. Borrowers must not pass books from one to another but must return them to the Librarian.

5. Library books must not be used as class-books.

6. Any one who defaces by writing or otherwise damages any book shall pay the full cost of the book or of the entire works, if it consists of more than one volume.

7. The borrower shall be responsible for the value of the books lent out to him if they are lost, damaged or otherwise cannot be returned to the Library when they are due or recalled.

8. The presence of the voucher with the Librarian shall be considered sufficient proof of the non-return of books.

1615-36 The Bangalore Press

ಶ್ರೀ

ಶ್ರೀರಾಮಚಂದ್ರ ಪರಬ್ರಹ್ಮಣೇನಮಃ

ಕರ್ಣಾಟಕ ಟೀಕಾ, ತಾತ್ಪರ್ಯ, ಸಮೇತವಾದ

ಶ್ರೀಮದ್ವಾಲ್ಮೀಕಿ ರಾಮಾಯಣ

ಅಯೋಧ್ಯಾಕಾಂಡ

(ಉತ್ತರಾರ್ಧ)

ಗ್ರಂಥಕರ್ತರು

ಕೈಲಾಸವಾಸಿ, ವೇ|| ಬ್ರಂ|| ಪಟ್ಟಾಭಿರಾಮಶಾಸ್ತ್ರಿಗಳು.

ಪರಿಶೋಧಕರು ಮತ್ತು ಟಿಪ್ಪಣಿಕಾರರು

ಮೋಟಗಾನಹಳ್ಳಿ, ವೇ|| ಬ್ರಂ|| ಸುಬ್ರಹ್ಮಣ್ಯಶಾಸ್ತ್ರಿಗಳು.

ಮುದ್ರಾಪಕರು ಮತ್ತು ಪ್ರಕಾಶಕರು

ವಾಜಪೇಯಂ ಗೋವಿಂದಯ್ಯನವರು
ಶ್ರೀ ವೆಂಕಟಾದ್ರಿ ಮುದ್ರಾಕ್ಷರಶಾಲಾಧ್ಯಕ್ಷರು
ಬೆಂಗಳೂರು ಸಿಟಿ.

1932.

ಅಯೋಧ್ಯಾಕಾಂಡದ ಉತ್ತರಾರ್ಧದ ವಿಷಯಾನುಕ್ರಮಣಿಕೆ.

ಸರ್ಗ ಸಂಖ್ಯೆ	ವಿ ಷ ಯ	ಪುಟ
೫೭.	ಸುಮಂತ್ರಕೃತ ಶ್ರೀರಾಮ ವನಗಮನಾನಂತರ ಅಯೋಧ್ಯಾನಗರ ಪ್ರವೇಶ.	೧
೫೮.	ಸುಮಂತ್ರಕೃತ ಶ್ರೀಸೀತಾರಾಮಲಕ್ಷ್ಮಣ ವನಗಮನ ವೃತ್ತಾಂತ.	೧೦
೫೯.	ದಶರಥರಾಜ ವಿಲಾಪ.	೨೦
೬೦.	ದಂಡಕಾರಣ್ಯಗತ ಸೀತಾವೃತ್ತಾಂತ.	೩೦
೬೧.	ಕೌಸಲ್ಯಾದೇವೀಕೃತ ದಶರಥರಾಜಗರ್ಹಣ.	೩೬
೬೨.	ಕೌಸಲ್ಯಾಕೃತ ದಶರಥಸಮಾಶ್ವಾಸನ.	೪೫
೬೩.	ದಶರಥರಾಜನಿರೂದಿತ ಸ್ವಶಾಪ.	೫೧
೬೪.	ದಶರಥಸಿಂರ್ಯಾಣ.	೬೬
೬೫.	ದಶರಥರಾಜಾಂತಃಪುರ ಜನವಿಲಾಪ.	೮೭
೬೬.	ಅಯೋಧ್ಯಾಪುರಜನವಿಲಾಪ.	೯೫
೬೭.	ವಸಿಷ್ಠವಾಮದೇವಾದಿ ವಿಪ್ರೋತ್ತಮ ಭರತಾನಯನ ಸಮಾಲೋಚನ.	೧೦೩
೬೮.	ವಸಿಷ್ಠನಿಯುಕ್ತದೂತಕೃತ ಕೇಕಯದೇಶಾಗಮನ.	೧೧೩
೬೯.	ಭರತಕುಮಾರನಿಗದಿತ ದುಸ್ವಪ್ನ ವಿಧಾನ.	೧೧೯
೭೦.	ಭರತಕೃತ ಅಯೋಧ್ಯಾಪ್ರಯಾಣ.	೧೨೫
೭೧.	ಭರತಕೃತ ಅಯೋಧ್ಯಾಪಟ್ಟಣಪ್ರವೇಶ.	೧೩೪
೭೨.	ಕೈಕೇಯಯೋಕ್ತ ದಶರಥನಿರ್ಯಾಣ, ಶ್ರೀರಾಮವಿವಾಸನ ವೃತ್ತಾಂತ.	೧೪೬
೭೩-೪.	ಭರತಕೃತ ಕೈಕೇಯೀಗರ್ಹಣ ವೃತ್ತಾಂತ.	೧೬೧
೭೫.	ಭರತಕೃತ ಕೌಸಲ್ಯಾಸಮಾಶ್ವಾಸನ.	೧೮೦
೭೬.	ಭರತಕೃತ ಸ್ವಪಿತೃಕಳೇವರದಹನ	೧೯೬
೭೭.	ದಶರಥರಾಜಾಸ್ಥಿಸಂಚಯನ, ಭರತಶತ್ರುಘ್ನ ವಿಲಾಪ ನಿರೂಪಣ.	೨೦೩
೭೮.	ಶತ್ರುಘ್ನಕೃತ ಮಂಥರಾಗರ್ವಭಂಗ.	೨೧೯
೭೯.	ಭರತಗದಿತ ಶ್ರೀರಾಮಾನಯನ ಸಂಕಲ್ಪವಿಧಾನ.	೨೧೭
೮೦.	ಪುರಜನ ಪರಿಜನಕೃತ ಶ್ರೀರಾಮಾನಯನ ಮಾರ್ಗಕರಣ.	೨೨೨
೮೧.	ಭರತಸಂತಾಪ ,ವಸಿಷ್ಠಾಜ್ಞಾ, ಭರತಸಭಾಪ್ರವೇಶ.	೨೨೮
೮೨.	ಭರತಕೃತ ಪುರಜನಸಹಿತ ವನಪ್ರಯಾಣೋದ್ಯಮ.	೨೩೩
೮೩.	ಭರತಕೃತ ಶೃಂಗಿಬೇರಪುರ ಸಮೀಪಾಗಮನ.	೨೪೩
೮೪.	ಗುಹಕೃತ ಭರತಸಮೀಪಾಗಮನ ವೃತ್ತಾಂತ.	೨೫೦
೮೫.	ಭರತಗದಿತ ಶ್ರೀರಾಮಾನಯನಾರ್ಥಕ ನಿಜಾಗಮನವಿಧಾನವಿವರಣ.	೨೫೫
೮೬.	ಗುಹವಿಸ್ತೃತ, ಲಕ್ಷ್ಮಣಕೃತವ್ರತಾನುಷ್ಠಾನ ವಿವರಣ.	೨೬೨
೮೭.	ಗುಹಗದಿತ ಶ್ರೀರಾಮಕೃತ ಶೃಂಗಿಬೇರಪುರ ನಿವಾಸವಿಧಾನ.	೨೬೯
೮೮.	ಭರತಸಂತಾಪ.	೨೭೬
೮೯.	ಭರತಕೃತ ಗಂಗಾತರಣ ವೃತ್ತಾಂತ.	೨೮೩
೯೦.	ಭರತಕೃತ ಭರದ್ವಾಜಾಶ್ರಮಪ್ರವೇಶ.	೨೮೯
೯೧.	ಭರದ್ವಾಜಮುನಿಪುಂಗವಕೃತ ಭರತಾತಿಥ್ಯ.	೨೯೬
೯೨.	ಭರತಕೃತ ಮಾತೃನಿರ್ದೇಶ, ಪುನಃ ಶ್ರೀರಾಮಾನ್ವೇಷಣ ಪ್ರಯಾಣ.	೩೧೭
೯೩.	ಭರತಕೃತ ಧೂಮಾಗ್ರದರ್ಶನ.	೩೨೮
೯೪.	ಶ್ರೀರಾಮಕೃತ ಚಿತ್ರಕೂಟ ಸೌಂದರ್ಯಾನುವರ್ಣನ.	೩೩೫
೯೫.	ಶ್ರೀರಾಮಕೃತ ಮಂದಾಕಿನೀ ನದ್ಯಾನುವರ್ಣನ.	೩೪೩
೯೬.	ಲಕ್ಷ್ಮಣಕೋಪಾನುವರ್ಣನ.	೩೪೯
೯೭.	ಲಕ್ಷ್ಮಣಸಾಂತ್ವನ ವಿಧಾನ.	೩೫೭

೯೮.	ಭರತಕೃತಕೃತ ಶ್ರೀರಾಮಾನ್ವೇಷಣ.	೩೬೫
೯೯.	ಭರತಶತ್ರುಘ್ನಕೃತ ಶ್ರೀಸೀತಾರಾಮಲಕ್ಷ್ಮಣ ಸಂದರ್ಶನ ವಿಧಾನ.	೩೭೦
೧೦೦.	ಶ್ರೀರಾಮಕೃತ ರಾಜ್ಯಕರಣ ವಿಧಾನ.	೩೮೩
೧೦೧.	ಭರತೋಕ್ತ ದಶರಥನಿರ್ಯಾಣ.	೪೧೦
೧೦೨.	ಶ್ರೀರಾಮಲಕ್ಷ್ಮಣಕೃತ ಸ್ವಪಿತೃತಿಲೋದಕ ಕ್ರಿಯಾವಿಧಾನ.	೪೧೪
೧೦೩.	ವಸಿಷ್ಠಸಹಿತ ದಶರಥರಾಜಪತ್ನೀಕೃತ ಶ್ರೀರಾಮಲಕ್ಷ್ಮಣ ದರ್ಶನಾದಿ ವೃತ್ತಾಂತ.	೪೨೭
೧೦೪.	ಶ್ರೀರಾಮಕೃತ ಭರತಯಾಚನಾನಿರಾಕರಣ.	೪೩೬
೧೦೫.	ಶ್ರೀರಾಮೋಕ್ತ ಅವಶ್ಯಂಕರಣೀಯ ಪಿತೃವಾಕ್ಯಾಪರಿಪಾಲನಾವಿವರಣ.	೪೪೪
೧೦೬.	ಭರತಕೃತ ರಾಜ್ಯಾಗಮನಯಾಚನಾ.	೪೫೭
೧೦೭.	ಶ್ರೀರಾಮಕೃತ ಭರತಸಮಾಶ್ವಾಸನ.	೪೬೯
೧೦೮.	ಜಾಬಾಲಿಕೃತ ನಾಸ್ತಿಕಮತನಿರೂಪಣಪೂರ್ವಕ ರಾಜ್ಯಾಂಗೀಕಾರ ಯಾಚನಾ.	೪೭೫
೧೦೯.	ಶ್ರೀರಾಮಕೃತ ರಾಜ್ಯಾಗಮನ ಯಾಚನಾನಿರಾಕರಣ.	೪೮೦
೧೧೦.	ವಸಿಷ್ಠಮಹಾಮುನಿಗದಿತ ಪ್ರಪಂಚಸ್ಥಿತ್ಯಾನುವರ್ಣನ.	೪೯೩
೧೧೧.	ವಸಿಷ್ಠೋಕ್ತಿನಿರೂಪಣ, ಶ್ರೀರಾಮಭರತ ಸಂವಾದ.	೫೦೨
೧೧೨.	ಶ್ರೀರಾಮಕೃತ ಪಾದುಕಾಪ್ರದಾನ.	೫೧೨
೧೧೩.	ಭರತಕೃತ ಪುನರಾಗಮನ ವೃತ್ತಾಂತ.	೫೨೦
೧೧೪.	ಭರತಕೃತ ಪಾದುಕಾಸಹಿತ ಅಯೋಧ್ಯಾನಗರಪ್ರವೇಶ.	೫೨೭
೧೧೫.	ಭರತಕೃತ ಶ್ರೀರಾಮಪಾದುಕಾಪಟ್ಟಾಭಿಷೇಕ.	೫೩೫
೧೧೬.	ಮುನಿಕುಲಪತಿಕಥಿತ ಖರಾದಿರಾಕ್ಷಸ ಪೀಡಾಕರಣ.	೫೪೨
೧೧೭.	ಶ್ರೀಸೀತಾರಾಮಲಕ್ಷ್ಮಣಕೃತ ಅತ್ರಿಮುನಿದರ್ಶನ ವೃತ್ತಾಂತ.	೫೪೯
೧೧೮.	ಶ್ರೀಸೀತಾದೇವ್ಯುಕ್ತ ಸ್ವವಿವಾಹ ವೃತ್ತಾಂತ ನಿರೂಪಣ.	೫೫೭
೧೧೯.	ಸೀತಾಲಕ್ಷ್ಮಣಸಮೇತ ಶ್ರೀರಾಮಚಂದ್ರಕೃತ ದಂಡಕಾರಣ್ಯಪ್ರವೇಶ.	೫೭೨

ಅಯೋಧ್ಯಾಕಾಂಡದ ದ್ವಿತೀಯ ಭಾಗದಲ್ಲಿನ ಚಿತ್ರಗಳ ಅನುಕ್ರಮಣಿಕೆ.

ಸಂಖ್ಯೆ		ಪುಟ
೧.	ದಶರಥಶಾಪ.	೭೮
೨.	ದಶರಥಮರಣ.	೮೬
೩.	ಭರತವನಪ್ರಯಾಣ.	೨೪೨
೪.	ಗಂಗಾತರಣ.	೨೮೪
೫.	ಮಾತಾ ಅಭಿಜ್ಞಾನ.	೩೨೨
೬.	ಪರ್ಣಕುಟೀದರ್ಶನ.	೩೩೨
೭.	ಲಕ್ಷ್ಮಣಸಾಂತ್ವನ.	೩೫೨
೮.	ಭರತಾದಿ ಸಮಾಗಮ.	೩೮೩
೯.	ಪಾದುಕಾಪ್ರಾಪ್ತಿ.	೫೧೮
೧೦.	ಅನಸೂಯಾ ಪ್ರೀತಿದಾನ.	೫೬೨

ಅಯೋಧ್ಯಾಕಾಂಡೇ ಸಪ್ತಪಂಚಾಶಸ್ಸರ್ಗಃ.

ಕಥಯಿತ್ವಾ ಸು ದುಃಖಾರ್ತ ಸ್ಸುಮಂತ್ರೇಣ ಚಿರಂಸಹ ॥ ರಾಮೇ ದಕ್ಷಿಣಕೂಲಸ್ಥೇ ಜಗಾಮ ಸ್ವಗೃಹಂ ಗುಹಃ ॥ ೧ ॥ ಭರದ್ವಾಜಾಭಿಗಮನಂ ಪ್ರಯಾಗೇಚ ಸಹಾಸನಂ ॥ ಆಗಿರೇರ್ಗಮನಂ ತೇಷಾಂ ತತ್ರಸ್ಥೈ ರುಪ ಲಕ್ಷಿತಂ ॥ ೨ ॥ ಅನುಜ್ಞಾತ ಸ್ಸುಮಂತ್ರೋಥ ಯೋಜಯಿತ್ವಾ ಹಯೋತ್ತಮಾನ್ ॥ ಅಯೋಧ್ಯಾಮೇವ ನಗರೀಂ ಪ್ರಯಯೌ ಗಾಢದುರ್ಮನಾಃ ॥೩॥

ಸುದುಃಖಾರ್ತಃ, ಸುದುಃಖ - ಬಹಳ ದುಃಖದಿಂದ, ಆರ್ತಃ - ದೀನನಾದ, ಗುಹಃ - ಗುಹನು, ಸುಮಂತ್ರೇಣಸಹ - ಸುಮಂತ್ರನೊಡನೆ, ಚಿರಂ - ಬಹಳಹೊತ್ತು, ಕಥಯಿತ್ವಾ - ಮಾತನಾಡಿ, ರಾಮೇ - ಶ್ರೀರಾಮನು, ದಕ್ಷಿಣಕೂಲಸ್ಥೇ - ದಕ್ಷಿಣಭಾಗದಲ್ಲಿರುವ ದಡವನ್ನು ಹೊಂದಿದವನಾಗಲು, ಸ್ವಗೃಹಂ - ತನ್ನ ಮನೆಯನ್ನು ಕುರಿತು, ಜಗಾಮ-ತೆರಳಿದನು. ॥೧॥ ಭರದ್ವಾಜಾಭಿಗಮನಂ - ಭರದ್ವಾಜ ಋಷಿಯೊಡನೆ ಸಮಾಗಮನ, ಪ್ರಯಾಗೇಚ - ಪ್ರಯಾಗಕ್ಷೇತ್ರದಲ್ಲಿ, ಸಹಾಸನಂ - ಕೂಡಿರುವಿಕೆಯು, ತೇಷಾಂ - ಸೀತಾರಾಮಲಕ್ಷ್ಮಣರ, ಆಗಿರೇಃ - ಚಿತ್ರಕೂಟಪರ್ವತದವರೆವಿಗೂ, ಗಮನಂ - ಹೋಗುವಿಕೆಯು, ತತ್ರಸ್ಥೈಃ - ಆ ಗುಹನಕೈಕೆಳಗಿರುವವರಿಂದ, ಉಪಲಕ್ಷಿತಂ - ನೋಡಲ್ಪಟ್ಟಿತು. ॥ ೨ ॥ ಅಥ - ಬಳಿಕ, ಸುಮಂತ್ರಃ - ಸುಮಂತ್ರನು, ಅನುಜ್ಞಾತಃ - ಗುಹನಿಂದ ಅಪ್ಪಣೆತೆಗೆದುಕೊಂಡವನಾಗಿ, ಹಯೋತ್ತಮಾನ್ - ಉತ್ತಮವಾದ ಕುದುರೆಗಳನ್ನು, ಯೋಜಯಿತ್ವಾ - ಕಟ್ಟಿ, ಗಾಢದುರ್ಮನಾಃ - ದುಃಖಾಕ್ರಾಂತವಾದ ಮನಸ್ಸುಳ್ಳವನಾಗಿ, ಅಯೋಧ್ಯಾಂನಗರೀಮೇವ - ಅಯೋಧ್ಯಾಪಟ್ಟಣವನ್ನೇ ಕುರಿತು, ಪ್ರಯಯೌ - ಹೊರಟನು. ॥೩॥ ಸಃ - ಆ ಸುಮಂತ್ರನು, ಸುಗಂಧೀನಿ - ಒಳ್ಳೆಯವಾಸನೆಯುಳ್ಳ, ವನಾನಿ - ವನಗಳನ್ನೂ, ಸರಿತಶ್ಚ -

---

ಆ ಬಳಿಕ ಗುಹನು, ಶ್ರೀರಾಮಮೂರ್ತಿಯು ಗಂಗಾನದಿಯ ಆಚಿನ ದಡವನ್ನು ಸೇರುತ್ತಲೆ, ಸುಮಂತ್ರನೊಡನೆ ಬಹಳ ಕಾಲ ಮಾತನಾಡುತ್ತಿದ್ದು, ಮುಂದಾವ ಕೆಲಸವನ್ನೂ ಮಾಡಲು ತೋರದವನಾಗಿ ತನ್ನ ಮನೆಗೆ ಹೊರಟುಹೋದನು. ಆಗ ಸುಮಂತ್ರನೂ ಸಹ ಅಯೋಧ್ಯಾನಗರವನ್ನು ಕುರಿತು ತೆರಳಿದವನಾದನು. ಆ ಸಮಯದಲ್ಲಿ ಗುಹನಿಂದ ಕಳುಹಲ್ಪಟ್ಟಿದ್ದ ಚಾರರು ಸಂಚಾರ ಮಾಡಿಕೊಂಡು ಬಂದು, ಸೀತಾ ರಾಮ ಲಕ್ಷ್ಮಣರು ಭರದ್ವಾಜ ಮಹರ್ಷಿಯ ಬಳಿಸಾರಿದುದನ್ನೂ, ಆತನೊಡಗೂಡಿ ಪ್ರಯಾಗ ಕ್ಷೇತ್ರಕ್ಕೆ ತೆರಳಿದುದನ್ನೂ, ಆಮೇಲೆ ಚಿತ್ರಕೂಟ ಪರ್ವತಕ್ಕೆ ಹೋದುದನ್ನೂ, ಇವೇ ಮೊದಲಾದ ಸಂಗತಿಗಳನ್ನು ಸುಮಂತ್ರನಿಗೆ ತಿಳುಹಿದರು. ಆ ಬಳಿಕ ಸುಮಂತ್ರನು ಗುಹನ ಅಣತಿಯನ್ನು ಪಡೆದು ರಥಕ್ಕೆ ಕುದುರೆಗಳನ್ನು ಕಟ್ಟಿ, ಬಹಳವಾದ ದುಃಖವುಳ್ಳವನಾಗಿ ಅಯೋಧ್ಯಾಪಟ್ಟಣಕ್ಕೆ ಹೋದನು.॥೧-೩॥ಆಗಲಾ ಸುಮಂತ್ರನು, ಮಾರ್ಗದಲ್ಲಿ ಪುಷ್ಪಸೌರಭದಿಂದ ಘಮಘಮಿಸುವ

ಸ ವನಾನಿ ಸುಗಂಧೀನಿ ಸರಿತಶ್ಚ ಸರಾಂಸಿಚ ‖ ಪಶ್ಯನ್ನತಿಯಯೌ ಶೀಘ್ರಂ ಗ್ರಾಮಾಂಶ್ಚ ನಗರಾಣಿಚ ‖ ೪ ‖ ತತ ಸ್ಸಾಯಾಹ್ನ ಸಮಯೇ ತೃತೀಯೇ ಹನಿ ಸಾರಥಿಃ ‖ ಅಯೋಧ್ಯಾಂ ಸಮನುಪ್ರಾಪ್ಯ ನಿರಾನಂದಾಂ ದದರ್ಶಹ ‖೫‖ ಸ ಶೂನ್ಯಾಮಿವ ನಿಶ್ಶಬ್ದಾಂ ದೃಷ್ಟ್ವಾ ಪರಮದುರ್ಮನಾಃ ‖ ಸುಮಂತ್ರ ಶ್ಚಿಂತ ಯಾಮಾಸ ಶೋಕವೇಗ ಸಮಾಹತಃ ‖೬‖ ಕಚ್ಚಿ ನ್ನ ಸಗಜಾ ಸಾಶ್ವಾ ಸಜನಾ ಸಜನಾಧಿಪಾ ‖ ರಾಮಸಂತಾಪ ದುಃಖೇನ ದಗ್ಧಾ ಶೋಕಾಗ್ನಿನಾ ಪುರೀ ‖೭‖

ನದಿಗಳನ್ನೂ, ಸರಾಂಸಿಚ - ಸರೋವರಗಳನ್ನೂ, ಗ್ರಾಮಾಂಶ್ಚ - ಚಿಕ್ಕಹಳ್ಳಿಗಳನ್ನೂ, ನಗರಾಣಿಚ-ದೊಡ್ಡಪಟ್ಟಣಗಳನ್ನೂ, ಪಶ್ಯ್ನ - ನೋಡುತ್ತ, ಅತಿಶೀಘ್ರಂ - ಬಹಳ ಜಾಗ್ರತೆಯಾಗಿ, ಯಯೌ - ತೆರಳಿದನು. ‖ ೪ ‖ ತತಃ - ಬಳಿಕ, ಸಾರಥಿಃ - ಸುಮಂತ್ರನು, ತೃತೀಯೇ - ಮೂರನೆಯದಾದ, ಅಹನಿ - ದಿವಸದಲ್ಲಿ, ಸಾಯಾಹ್ನಸಮಯೇ - ಸಾಯಂಕಾಲದಲ್ಲಿ, ಸಮನುಪ್ರಾಪ್ಯ - ಬಂದು, ನಿರಾನಂದಾಂ - ಆನಂದರಹಿತವಾದ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು, ದದರ್ಶಹ - ಕಂಡನಷ್ಟೆ. ‖ ೫ ‖ ಪರಮದುರ್ಮನಾಃ - ಬಹುದುಃಖಾಕ್ರಾಂತಮನವುಳ್ಳ, ಶೋಕವೇಗಸಮಾಹತಃ - ಮನೋವ್ಯಥೆಯವೇಗದಿಂದ ಹೊಡಿಯಲ್ಪಟ್ಟ, ಸಸುಮಂತ್ರಃ - ಆ ಸುಮಂತ್ರನು, ಶೂನ್ಯಾಮಿವ - ಜನರಿಂದ ಶೂನ್ಯವಾದಂತಿರುವ, ನಿಶ್ಶಬ್ದಂ - ಶಬ್ದವಿಲ್ಲದ, ತಾಂ - ಆ ಪಟ್ಟಣವನ್ನು, ದೃಷ್ಟ್ವಾ - ಕಂಡು, ಚಿಂತಯಾಮಾಸ - ಆಲೋಚಿಸಿದನು. ‖ ೬ ‖ ಸಗಜಾ - ಆನೆಗಳಿಂದಲೂ, ಸಾಶ್ವಾ - ಕುದುರೆಗಳಿಂದಲೂ, ಸಜನಾ - ಜನರೊಡನೆಯೂ, ಸಜನಾಧಿಪಾ - ರಾಜನಿಂದಲೂ ಕೂಡಿರುವ, ಪುರೀ - ಪಟ್ಟಣವು, ರಾಮಸಂತಾಪದುಃಖೇನ - ರಾಮವಿರಹದಿಂದ ಹುಟ್ಟಿದ ದುಃಖದಿಂದ, ಶೋಕಾಗ್ನಿನಾ - ಮನೋವ್ಯಥೆ ಎಂಬ ಅಗ್ನಿಯಿಂದ, ನದಗ್ಧಾಕಚ್ಚಿತ್ - ಸುಡಲ್ಪಡಲಿಲ್ಲವೋ ಏನೋ, ಇತಿ - ಈಪರಿಯಾಗಿ, ಚಿಂತಾಪರಃ - ಆಲೋಚನೆಗೊಂಡ, ಸೂತಃ - ಸಾರಥಿಯು, ಶೀಘ್ರಪಾತಿಭಿಃ - ಜಾಗ್ರತೆಯಾಗಿ ಬರುತ್ತಿರುವ, ವಾಜಿಭಿಃ - ಕುದುರೆಗಳಿಂದ, ನಗರ

ವನಗಳನ್ನೂ, ನದಿಗಳನ್ನೂ, ಗ್ರಾಮಗಳನ್ನೂ, ಪಟ್ಟಣಗಳನ್ನೂ, ನೋಡುತ್ತ ಮುಂಬರಿದನು. ಆ ಬಳಿಕಲಾತನು ಗುಹನ ದೇಶವಾದ ಶೃಂಗಿಬೇರಪುರದಲ್ಲಿದ್ದುಕೊಂಡು, ಅಲ್ಲಿಂದ ಮುಂದಕ್ಕೆ ಹೊರಟು ಮೂರನೆಯ ದಿನದ ಸಂಧ್ಯಾಕಾಲದಲ್ಲಿ ಅಯೋಧ್ಯಾಪಟ್ಟಣಕ್ಕೆ ಹೋದನು. ಆಗ ಆ ಸುಮಂತ್ರನು ಅಧಿಕವಾದ ದುಃಖದಿಂದ ಪೀಡಿತರಾದ ಜನಗಳಿಂದ ವ್ಯಾಪ್ತವಾದ ಆ ಪಟ್ಟಣವನ್ನು ಸೇರಿ, ಅಪಾರವಾದ ದುಃಖವುಳ್ಳವನಾಗಿ, ಶಬ್ದವೇ ಇಲ್ಲದೆ ಹಾಳುಬಿದ್ದಂತೆಯೂ, ಗಭೀರವಾಗಿಯೂ ಇರುವ ಅಯೋಧ್ಯಾಪಟ್ಟಣವನ್ನು ನೋಡಿ, ಇಮ್ಮಡಿಯಾದ ದುಃಖವುಳ್ಳವನಾಗಿ ಈ ರೀತಿ ಚಿಂತಿಸಿದನು. ‖೪-೭‖ "ಗಜಗಳಿಂದಲೂ, ಅಶ್ವಗಳಿಂದಲೂ, ಜನಗಳಿಂದಲೂ, ರಾಜರಿಂದಲೂ ತುಂಬಿರುವ ಈ ಅಯೋಧ್ಯಾನಗರವೆಲ್ಲವೂ, ಶ್ರೀರಾಮನಿಲ್ಲದಿರುವುದರಿಂದುಂಟಾದ ದುಃಖವೆಂಬ ವೈಶ್ವಾನರನಿಂದ ದಗ್ಧವಾಗಿ ಹೋಗಲಿಲ್ಲವೆ? ಇದೇನು? ದಶರಥಮಹಾರಾಜನು ತಾನೆ ಹೇಗೆ ಜೀವಿಸಿದ್ದಾನೆಯೊ?" ಎಂಬೀ ಪ್ರಕಾರ ಚಿಂತಿಸುತ್ತ ವೇಗದಿಂದ ಕುದುರೆಗಳನ್ನು ತುರುಬಿ, ಪಟ್ಟಣದ್ವಾರವನ್ನವಲೋಕಿಸಿ ಒಳ

ಇತಿಚಿಂತಾಪರ ಸ್ಸೂತೋ ವಾಜಿಭಿ ಶ್ಶೀಘ್ರಪಾತಿಭಿಃ ॥ ನಗರದ್ವಾರ ಮಾಸಾದ್ಯ ತ್ವರಿತಃ ಪ್ರವಿವೇಶಹ ॥ ೮ ॥ ಸುಮಂತ್ರ ಮಭಿಯಾಂತಂ ತಂ ಶತಶೋಥ ಸಹಸ್ರಶಃ ॥ ಕ್ವ ರಾಮ ಇತಿ ಪೃಚ್ಛಂತ ಸ್ಸೂತ ಮಭ್ಯದ್ರವ ನ್ನರಾಃ ॥ ೯ ॥ ತೇಷಾಂ ಶಶಂಸ ಗಂಗಾಯಾ ಮಹ ಮಾಪೃಚ್ಛ್ಯ ರಾಘವಂ ॥ ಅನುಜ್ಞಾತೋ ನಿವೃತ್ತೋಽಸ್ಮಿ ಧಾರ್ಮಿಕೇಣ ಮಹಾತ್ಮನಾ ॥ ೧೦ ॥ ತೇ ತೀರ್ಣಾ ಇತಿ ವಿಜ್ಞಾಯ ಬಾಷ್ಪಪೂರ್ಣ ಮುಖಾ ಜನಾಃ ॥ ಅಹೋ ಧಿಗಿತಿ ನಿಶ್ವಸ್ಯ ಹಾ ರಾಮೇತಿಚ ಚುಕ್ರುಶುಃ ॥ ೧೧ ॥ ಶುಶ್ರಾವಚ ವಚಸ್ತೇಷಾಂ ಬೃಂದಂ

ದ್ವಾರಂ - ಊರುಬಾಗಿಲನ್ನು, ಆಸಾದ್ಯ - ಹೊಂದಿ, ತ್ವರಿತಃ - ಬೇಗನೆ, ಪ್ರವಿವೇಶಹ- ಹೊಕ್ಕನಷ್ಟೆ. ॥ ೮ ॥ ಅಭಿಯಾಂತಂ - ಹಿಂತಿರುಗಿಬರುತ್ತಿರುವ, ಸೂತಂ - ಸಾರಥಿಯಾದ, ತಂಸುಮಂತ್ರಂ - ಆ ಸುಮಂತ್ರನನ್ನು, ರಾಮಃ - ಶ್ರೀರಾಮನು, ಕ್ವ - ಎಲ್ಲಿ, ಇತಿ - ಇಂತೆಂದು, ಪೃಚ್ಛಂತಃ - ಕೇಳುತ್ತಿರುವ, ಶತಶಃ - ನೂರಾರುಸಂಖ್ಯೆಯುಳ್ಳ, ಅಥ-ಬಳಿಕ, ಸಹಸ್ರಶಃ-ಸಾವಿರಾರುಸಂಖ್ಯೆಯುಳ್ಳ, ನರಾಃ-ಮನುಷ್ಯರು, ಅಭ್ಯದ್ರರ್ವ - ಇದಿರೋಡಿದರು. ॥ ೯ ॥ ಅಹಂ - ನಾನು, ಗಂಗಾಯಾಂ - ಗಂಗಾನದಿಯಲ್ಲಿ, ರಾಘವಂ - ಶ್ರೀರಾಮನನ್ನು, ಆಪೃಚ್ಛ - ಯೋಗಕ್ಷೇಮವನ್ನೂ ಅಪ್ಪಣೆಯನ್ನೂ ಕೇಳಿ, ಧಾರ್ಮಿಕೇಣ - ಧರ್ಮಜ್ಞನಾದ, ಮಹಾತ್ಮನಾ - ಮಹಾತ್ಮನಾದ ಶ್ರೀರಾಮನಿಂದ, ಅನುಜ್ಞಾತಃ - ಸಮ್ಮತಿಸಲ್ಪಟ್ಟು, ನಿವೃತ್ತಃ - ಹಿಂತಿರುಗಿದವನು, ಅಸ್ಮಿ - ಆಗಿರುವೆನು, ಇತಿ-ಇಂತೆಂದು, ತೇಷಾಂ-ಆ ಪಟ್ಟಣಿಗರಿಗೆ, ಶಶಂಸ-ಹೇಳಿದನು. ॥ ೧೦ ॥ ತೇ ಆ ಸೀತಾರಾಮಲಕ್ಷ್ಮಣರು, ತೀರ್ಣಾಇತಿ-ಗಂಗಾನದಿಯನ್ನು ದಾಟಿಹೋದರು ಎಂದು, ವಿಜ್ಞಾಯ - ತಿಳಿದು, ಜನಾಃ - ಜನರು, ಬಾಷ್ಪಪೂರ್ಣಮುಖಾಸ್ಸಂತಃ - ಕಂಬನಿಯಿಂದ ಪೂರ್ಣವಾದ ಮುಖವುಳ್ಳವರಾಗಿ, ಅಹೋ - ಆಶ್ಚರ್ಯವು, ಧಿಕ್-ನಿಂದಿಸು, ಇತಿ - ಇಂತೆಂದು, ನಿಶ್ವಸ್ಯ - ನಿಟ್ಟುಸಿರುಬಿಟ್ಟು, ಹಾ - ಕಷ್ಟವು, ಹೇ ರಾಮ - ಎಲೈ ಶ್ರೀರಾಮನೆ! ಇತಿ - ಇಂತೆಂದು, ಚುಕ್ರುಶುಃ - ಕೂಗಿದರು. ॥ ೧೧ ॥ ಯೇ - ಯಾವ ನಾವು, ಇಹ - ಈ ಅಯೋಧ್ಯಾಪಟ್ಟಣದಲ್ಲಿ, ರಾಘವಂ - ಶ್ರೀರಾಮನನ್ನು, ನಪಶ್ಯಾಮಃ - ನೋಡಲಿಲ್ಲವೋ, (ತೇ-ಅಂತಹ ನಾವು,) ಹತಾಸ್ಮಖಲು-(ದೈವದಿಂದ) ಹೊಡಿಯಲ್ಪಟ್ಟವರಾದೆವಷ್ಟೆ, ಇತಿ-ಇಂತೆಂದು,

---

ಹೊಕ್ಕನು.॥೭-೮॥ಇಂತು ಒಳಹೊಗುತ್ತಿರುವಾಗ,ಪಟ್ಟಣದಲ್ಲಿರುವ ಪ್ರಜೆಗಳೆಲ್ಲರೂ ಆತನನ್ನು ನೋಡಿ, "ಶ್ರೀರಾಮನೆಲ್ಲಿ! ಎಲ್ಲಿರುವನು!" ಎಂದು ಕೇಳುತ್ತ, ಗುಂಪುಗುಂಪಾಗಿ ಎದುರು ಬಂದು ಕೇಳುತ್ತಿದ್ದರು. ಆಗಲಾ ಸುಮಂತ್ರನು ಅವರನ್ನು ಕುರಿತು, "ಎಲೈ ಮನುಜ ಶ್ರೇಷ್ಠರೆ! ನಾನು ಶ್ರೀರಾಮನನ್ನು ಗಂಗಾನದಿಯ ದಕ್ಷಿಣತೀರದಲ್ಲಿಬಿಟ್ಟು, ಆತನ ಅನುಮತಿಯನ್ನು ಪಡೆದು, ಬಂದಿದ್ದೇನೆ" ಎಂದು ಹೇಳಿದನು. ಆಗಲಾ ಜನರು ಸೀತಾ ರಾಮ ಲಕ್ಷ್ಮಣರು ಗಂಗಾನದಿಯನ್ನು ದಾಟ ಮುಂಬರಿದರೆಂಬುದನ್ನು ಸುಮಂತ್ರನಿಂದ ಕೇಳಿ, "ಹಾ ರಾಮ! ರಾಮಾ!" ಎಂದು ಎತ್ತಿದ ಕಂಠದಿಂದ ಒಂದೇ ಧ್ವನಿಯುಳ್ಳಂತೆ ರೋದಿಸಿದರು.॥೯-೧೧॥ಇಷ್ಟೆಯಲ್ಲದೆ ಆ ಜನರು ಗುಂಪುಗುಂಪಾಗಿ ಕೂಡಿಕೊಂಡು,ಹೇಳಿಕೊಳ್ಳುತ್ತಿದ್ದ ಮಾತುಗಳನ್ನು ಸುಮಂತ್ರನು ಕೇಳಿದವನಾದನು. ಆ ಜನರು "ರಾಮನನ್ನು ಕಾಣದಿರುವುದ

ಬೃಂದಂಚ ತಿಷ್ಠತಾಂ ॥ ಹತಾಸ್ಸ್ಮಖಲು ಯೇನೇಹ ಪಶ್ಯಾಮ ಇತಿ ರಾಘವಂ ॥೧೨॥ ದಾನ ಯಜ್ಞ ವಿವಾಹೇಷು ಸಮಾಜೇಷು ಮಹತ್ಸುಚ॥ನ ದ್ರಕ್ಷ್ಯಾಮಃ ಪುನರ್ಜಾತು ಧಾರ್ಮಿಕಂ ರಾಮ ಮಂತರಾ ॥ ೧೩ ॥ ಕಿಂ ಸಮರ್ಥಂ ಜನಸ್ಯಾಸ್ಯ ಕಿಂ ಪ್ರಿಯಂ ಕಿಂ ಸುಖಾವಹಂ ॥ ಇತಿ ರಾಮೇಣ ನಗರಂ ಪಿತೃವತ್ಪರಿಪಾಲಿತಂ ॥ ೧೪ ॥ ವಾತಾಯನ ಗತಾನಾಂಚ ಸ್ತ್ರೀಣಾ ಮನ್ವಂತರಾಪಣಂ ॥ ರಾಮಶೋಕಾಭಿ ತಪ್ತಾನಾಂ ಶುಶ್ರಾವ ಪರಿದೇವನಂ ॥೧೫॥ ಸ ರಾಜಮಾರ್ಗೇ

ಬೃಂದಂಬೃಂದಂ - ಗುಂಪುಗುಂಪಾಗಿ, ತಿಷ್ಠತಾಂ - ಕುಳಿತುಕೊಳ್ಳುತ್ತಿರುವ, ತೇಷಾಂ - ಆ ಪೌರಜನರ, ವಚಃ - ಮಾತನ್ನು, ಶುಶ್ರಾವಚ - ಕೇಳಿದನಷ್ಟೆ. ॥ ೧೨ ॥ ದಾನಯಜ್ಞವಿವಾಹೇಷು - ದಾನದಲ್ಲಿಯೂ, ಯಜ್ಞದಲ್ಲಿಯೂ, ಮದುವೆಯಲ್ಲಿಯೂ, ಮಹತ್ಸುಸಮಾಜೇಷು-ದೊಡ್ಡದೊಡ್ಡಸಭೆಗಳಲ್ಲಿ, ರಾಮಮಂತರಾ - ಶ್ರೀರಾಮನನ್ನು ಬಿಟ್ಟು, ಜಾತು - ಒಂದಾನೊಂದು ಕಾಲದಲ್ಲಿಯೂ, ಪುನಃ- ಮರಳಿ, ಧಾರ್ಮಿಕಂ-ಧರ್ಮಿಷ್ಠನನ್ನು, ನದ್ರಕ್ಷ್ಯಾಮಃ - ನೋಡಲಾರೆವು. ॥ ೧೩ ॥ ಅಸ್ಯಜನಸ್ಯ ಈ ಜನಕ್ಕೂ, ಕಿಂಸಮರ್ಥಂ-ಏನುಯೊಗ್ಯವಾದ ಪದಾರ್ಥವು, ಪ್ರಿಯಂಕಿಂ-ಇಷ್ಟವಾದುದೇನು ? ಸುಖಾವಹಂ - ಸುಖಕರವಾದುದೂ, ಕಿಂ - ಏನು, ಇತಿ - ಇಂತೆಂದು, ರಾಮೇಣ - ಶ್ರೀರಾಮನಿಂದ, ನಗರಂ - ಪಟ್ಟಣವು, ಪಿತೃವತ್ - ತಂದೆಯಂತೆ, ಪರಿಪಾಲಿತಂ - ಸಂರಕ್ಷಣೆಮಾಡಲ್ಪಟ್ಟಿತು, ಅನ್ವಂತರಾಪಣಂ - ಅಂಗಡಿಗಳ ಪ್ರತಿಮಧ್ಯಪ್ರದೇಶದಲ್ಲಿಯೂ, ರಾಮಶೋಕಾಭಿತಪ್ತಾನಾಂ - ಶ್ರೀರಾಮನ ಸಂಬಂಧವಾದ ವ್ಯಸನದಿಂದ ಸಂತಪ್ತರಾದ, ವಾತಾಯನಗತಾನಾಂ, ವಾತಾಯನ - ಗವಾಕ್ಷಿಗಳನ್ನು, ಗತಾನಾಂ - ಹೊಂದಿರುವ, ಸ್ತ್ರೀಣಾಂ - ಹೆಂಗಳ, ಪರಿದೇವನಂ - ವಿಲಾಪವನ್ನು, ಶುಶ್ರಾವ - ಕೇಳಿದನು. ॥ ೧೪-೧೫ ॥ ಸಃ-ಆ ಸುಮಂತ್ರನು, ರಾಜಮಾರ್ಗಮಧ್ಯೇನ - ರಾಜಮಾರ್ಗದ ಮಧ್ಯದಲ್ಲಿ, ಪಿಹಿತಾನನಃ - ಮುಚ್ಚಲ್ಪಟ್ಟ ಮುಖವುಳ್ಳವನಾಗಿ, ಯತ್ರ - ಯಾವ

ರಿಂದ ಹತರಾದೆವು" ಎಂದರು. "ದಾನ, ಯಜ್ಞ, ವಿವಾಹಗಳಲ್ಲಿಯೂ, ಮಹಾ ಸಭೆಗಳಲ್ಲಿಯೂ, ಮಹಾ ಧರ್ಮಾತ್ಮನಾದ ಶ್ರೀರಾಮಮೂರ್ತಿಯನ್ನಿನ್ನು ನೋಡಲಾರೆವಲ್ಲ!" ಎಂದು ರೋದಿಸಿದರು. "ಇದುವರೆವಿಗೆ ರಾಮನಿಂದ ಈ ಪಟ್ಟಣದಲ್ಲಿರುವ ನಾವೆಲ್ಲರೂ, ತಂದೆಯಿಂದ ಪೋಷಿತರಾಗುವ ರೀತಿಯಲ್ಲಿ ಪಾಲಿತರಾದೆವು. ಅಂತಹ ರಘುರಾಮನನ್ನೀಗ ಕಳೆದುಕೊಂಡು, ಆತನಿಂದ ವರ್ಜಿತವಾಗಿರುವ ನಮಗಾವುದು ತಾನೆ ಇಷ್ಟವಾಗಿದ್ದೀತು? ಯಾವುದುತಾನೆ ಉಚಿತವಿದ್ದೀತು? ಯಾವ ಪದಾರ್ಥವು ತಾನೆ ಸಂತೋಷವನ್ನುಂಟುಮಾಡೀತು? ಇನ್ನುಮೇಲೆ ನಾವೇನು ಮಾಡುವ? ಇನ್ನು ನಮ್ಮನ್ನು ಸಲಹುವವನಾವನು?" ಎಂದು ಅತ್ತರು. ಹೀಗೆ ಆಡಿಕೊಳ್ಳುತ್ತಿದ್ದ ಜನಗಳ ಮಾತುಗಳನ್ನು ಆ ಸುಮಂತ್ರನನ್ನು ತನ್ನ ಕಿವಿಯಾರ ಕೇಳಿದನು. ಅಲ್ಲದೆಯೂ ಸುಮಂತ್ರನು, ಮುಂಬರಿಯುತ್ತ ಗವಾಕ್ಷಿಗಳಿಂದ ತನ್ನನ್ನು ನೋಡುತ್ತ, ರಾಮವಿಯೋಗದಿಂದುಂಟಾದ ದುಃಖವನ್ನು ಹೊಂದಿದ ಸ್ತ್ರೀಯರ ರೋದನವನ್ನೂ ಕೇಳಿದನಷ್ಟೆ!॥೧೨-೧೫॥ಹೀಗೆ ಎಲ್ಲ ಜನರ ರೋದನ ಧ್ವನಿಯನ್ನು ಕೇಳುತ್ತ, ಅವರಾರಿಗೂ ಮುಖವನ್ನು ತೋರಲಾರದೆ, ತಲೆ ಬಗ್ಗಿಸಿಕೊಂಡು ರಾಜಮಾರ್ಗದಲ್ಲಿ ನಡೆಯುತ್ತ,

ಮಧ್ಯೇನ ಸುಮಂತ್ರಃ ಪಿಹಿತಾನನಃ ॥ ಯತ್ರ ರಾಜಾ ದಶರಥ ಸ್ತದೇವೋಪ ಯಯೌ ಗೃಹಂ ॥ ೧೬ ॥ ಸೋಽವತೀರ್ಯ ರಥಾಚ್ಛೀಘ್ರಂ ರಾಜವೇಶ್ಮ ಪ್ರವಿಶ್ಯಚ ॥ ಕಕ್ಷ್ಯಾ ಸ್ಸಪ್ತಾಭಿ ಚಕ್ರಾಮ ಮಹಾಜನ ಸಮಾಕುಲಾಃ ॥೧೭॥ ಹರ್ಮ್ಯೈರ್ವಿಮಾನೈಃ ಪ್ರಾಸಾದೈ ರವೇಕ್ಷ್ಯಾಥ ಸಮಾಗತಂ ॥ ಹಾಹಾಕಾರ ಕೃತಾನಾರ್ಯೋ ರಾಮಾದರ್ಶನ ಕರ್ಶಿತಾಃ ॥ ೧೮ ॥ ಆಯತೈ ರ್ವಿಮಲೈ ರ್ನೇತ್ರೈ ರಶ್ರುವೇಗ ಪರಿಪ್ಲುತೈಃ॥ಅನ್ಯೋನ್ಯ ಮಭಿವೀಕ್ಷಂತೇ ವ್ಯಕ್ತಮಾರ್ತ ತರಾ ಸ್ಸ್ತ್ರಿಯಃ ॥ ೧೯ ॥ ತತೋ ದಶರಥಸ್ತ್ರೀಣಾಂ ಪ್ರಾಸಾದೇಭ್ಯ ಸ್ತತ ಸ್ತತಃ ॥ ರಾಮಶೋಕಾಭಿ ತಪ್ತಾನಾಂ ಮಂದಂ ಶುಶ್ರಾವ ಜಲ್ಪಿತಂ ॥ ೨೦ ॥

ಸ್ಥಳದಲ್ಲಿ, ದಶರಥೋರಾಜಾ - ದಶರಥರಾಯನು, (ಅಸ್ತಿ - ಇರುವನೋ,) ತದೇವಗೃಹಂ - ಅದೇ ಮನೆಯನ್ನು ಕುರಿತು, ಉಪಯಯೌ - ಬಂದನು. ॥ ೧೬ ॥ ಸಃ - ಆ ಸುಮಂತ್ರನು, ರಥಾತ್- ರಥದಿಂದ, ಶೀಘ್ರಂ - ಜಾಗ್ರತೆಯಾಗಿ, ಅವತೀರ್ಯ - ಇಳಿದು, ರಾಜವೇಶ್ಮ - ರಾಜಗೃಹವನ್ನು, ಪ್ರವಿಶ್ಯ - ಹೊಕ್ಕು, ಮಹಾಜನಸಮಾಕುಲಾಃ - ಶ್ರೀಮಂತರಿಂದ ತುಂಬಿರುವ, ಕಕ್ಷ್ಯಾಸ್ಸಪ್ತಾಭಿಃ - ಏಳುತೊಟ್ಟಿಗಳನ್ನು, ಅಭಿಚಕ್ರಾಮ - ದಾಟಿಹೋದನು. ॥ ೧೭ ॥ ಅಥ - ಬಳಿಕ, ಸಮಾಗತಂ - ಬಂದಿರುವಸುಮಂತ್ರನನ್ನು, ಹರ್ಮ್ಯೈಃ - ಧನಿಕರಮನೆಗಳಿಂದಲೂ, ವಿಮಾನೈಃ - ಪ್ರಾಸಾದ ಗಳಿಂದ ಯುಕ್ತವಾದ ಮನೆಗಳಿಂದಲೂ, ಪ್ರಾಸಾದೈಃ - ರಾಜಭವನಗಳಿಂದಲೂ, (ಉಪಲಕ್ಷಿತಾಃ - ಕೂಡಿಕೊಂಡಿರುವ,) ನಾರ್ಯಃ - ಸ್ತ್ರೀಯರು, ರಾಮಾದರ್ಶನಕರ್ಶಿತಾಃ - ಶ್ರೀರಾಮನ ದರ್ಶನಾ ಭಾವದಿಂದ ಕೃಶೀಭಾವವನ್ನು ಹೊಂದಿ, ಹಾಹಾಕಾರಕೃತಾಃ - ಹಾಹಾ ಇತ್ಯಾದ್ಯನುಕರುಣ ಶಬ್ದ ವನ್ನು ಮಾಡುವವರಾದರು. ॥ ೧೮ ॥ ಆರ್ತತರಾಃ - ಅತಿಶಯವಾದ ದುಃಖವುಳ್ಳ, ಸ್ತ್ರಿಯಃ - ಹೆಂಗಳು, ಅಶ್ರುವೇಗಪರಿಪ್ಲುತೈಃ - ಕಂಬನಿಗಳ ವೇಗದಿಂದ ತುಂಬಿರುವ, ಆಯತೈಃ-ದೀರ್ಘಗಳಾದ, ವಿಮಲೈಃ - ನಿರ್ಮಲಗಳಾದ, ನೇತ್ರೈಃ - ಕಣ್ಣುಗಳಿಂದ, ಅವ್ಯಕ್ತಂ - ಅಸ್ಪಷ್ಟವಾಗಿ, ಅಭಿವೀಕ್ಷಂ ತೇ - ನೋಡುವರಾದರು. ॥ ೧೯ ॥ ತತಃ - ಬಳಿಕ, ದಶರಥಃ - ದಶರಥರಾಯನು, ರಾಮಶೋಕಾ ಭಿತಪ್ತಾನಾಂ - ಶ್ರೀರಾಮನ ವಿಷಯವಾದ ವ್ಯಸನದಿಂದ ಪರಿತಪ್ತರಾದ, ಪ್ರಾಸಾದೇಭ್ಯಃ-ಉಪ್ಪರಿಗೆ

ದಶರಥರಾಜನು ವಾಸಿಸುವ ಅರಮನೆಯನ್ನು ಕುರಿತು ಹೊರಟನು. ॥ ೧೬ ॥ ಇಂತು ಅರಮ ನೆಯಬಳಿಸಾರಿದವನಾಗಿ, ರಥದಿಂದಿಳಿದು ರಾಜಗೃಹದೊಳಕ್ಕೆ ಹೋಗಿ, ದಶರಥರಾಯನನ್ನು ನೋಡಲು ಬಂದಿದ್ದ ಶ್ರೀಮಂತರಿಂದ ಸಿಬಿಡಿತವಾಗಿದ್ದ, ಮಧ್ಯಮ ಕಕ್ಷ್ಯಕ್ಕೆ ನಡೆತಂದವನಾ ದನು. ಆ ಬಳಿಕ ಅಂತಃಪುರ ಸ್ತ್ರೀಯರೆಲ್ಲರೂ, ಮಾಳಿಗೆಗಳ ಮೇಲೆಯೂ, ಏಳುಪ್ಪರಿಗೆಗಳ ಮೇಲೆಯೂ, ರಾಜಗೃಹಗಳ ಮೇಲೆಯೂ ಹತ್ತಿ ಸುಮಂತ್ರನನ್ನು ನೋಡಿ ಶ್ರೀರಾಮನು ಆತನೊಡನಿಲ್ಲದಿರುವುದರಿಂದ "ಹಾ ರಾಮ ! ರಾಮಾ" ಎಂದು ರೋದಿಸಿದರು. ಇಷ್ಟೆ ಯಲ್ಲದೆ ಆ ಸ್ತ್ರೀಯರು ಅಧಿಕವಾದ ದುಃಖದಿಂದ ಉಂಟಾದ ಕಂಬನಿಗಳಿಂದ ಕಲುಷಿತ ವಾದ ಕಂಗಳುಳ್ಳವರಾಗಿ ಒಬ್ಬರನ್ನೊಬ್ಬರು ನೋಡಿಕೊಳ್ಳುತ್ತಿದ್ದರು. ಆಗಲಾ ಸುಮಂ ತ್ರನು, ಸ್ತ್ರೀಯರೆಲ್ಲರೂ ಮಾಳಿಗೆಗಳಮೇಲೆ ಗುಂಪುಗೂಡಿ, ಕಣ್ಣೀರಿಡುತ್ತ ಆಡಿಕೊಳ್ಳುತ್ತಿದ್ದ

ಸಹ ರಾಮೇಣ ನಿರ್ಯಾತೋ ವಿನಾ ರಾಮ ಮಿಹಾಗತಃ ॥ ಸೂತಃ ಕಿನ್ನಾಮ ಕೌಸಲ್ಯಾಂ ಶೋಚಂತೀಂ ಪ್ರತಿವಕ್ಷ್ಯತಿ ॥೨೦॥ ಯಥಾಚ ಮನ್ಯೇ ದುರ್ಜೀವ ಮೇವಂ ನಸುಕರಂ ಧ್ರುವಂ ॥ ಆಚ್ಛಿದ್ಯ ಪುತ್ರನಿರ್ಯಾತೇ ಕೌಸಲ್ಯಾ ಯತ್ರ ಜೀವತಿ ॥ ೨೨ ॥ ಸತ್ಯರೂಪಂತು ತದ್ವಾಕ್ಯಂ ರಾಜ್ಞಃ ಸ್ತ್ರೀಣಾಂ ನಿಶಾಮ ಯ್ಯ ॥ ಪ್ರದೀಪ್ತಮಿವ ಶೋಕೇನ ವಿವೇಶ ಸಹಸಾ ಗೃಹಂ ॥೨೩॥ ಸ ಪ್ರವಿಶ್ಯಾ ಷ್ಟಮೀಂ ಕಕ್ಷ್ಯಾಂ ರಾಜಾನಂ ದೀನಮಾತುರಂ ॥ ಪುತ್ರಶೋಕ ಪರಿಮ್ಲಾನ ಮಪಶ್ಯ ತ್ಪಾಂಡುರೇ ಗೃಹೇ ॥ ೨೪ ॥ ಅಭಿಗಮ್ಯತಮಾಸೀನಂ ನರೇಂದ್ರ

ಗಳಿಂದ, (ಅವತೀರ್ಣಾನಾಂ - ಇಳಿದ,) ಸ್ತ್ರೀಣಾಂ - ಹೆಂಗಳ, ತತಸ್ತತಃ - ಅಲ್ಲಲ್ಲಿ, ಮಂದಂ - ಮೆಲ್ಲನಾಡಿದ, ಜಲ್ಪಿತಂ - ಮಾತುಗಳನ್ನು, ಶುಶ್ರಾವ - ಕೇಳಿದನು. ॥ ೨೦ ॥ ರಾಮೇಣಸಹ - ಶ್ರೀರಾಮನೊಡನೆ, ನಿರ್ಯಾತಃ - ಹೊರಟುಹೋದ, ಸೂತಃ - ಸಾರಥಿಯಾದ ಸುಮಂತ್ರನು, ರಾಮಂ ವಿನಾ - ಶ್ರೀರಾಮನವಿನಾ, ಇಹ - ಇಲ್ಲಿಗೆ, ಆಗತಃ - ಬಂದನು, ಶೋಚಂತೀಂ - ದುಃಖಿಸುತ್ತಿರುವ, ಕೌಸಲ್ಯಾಂ - ಕೌಸಲ್ಯಾದೇವಿಯು, ಪುತ್ರಃ - ಮಗನು, ನಿರ್ಯಾತೇ - ವನವನ್ನು ಕುರಿತು ಹೊರಟು ಹೋಗಲು, ಆಚ್ಛಿದ್ಯ - ಬಲಾತ್ಕಾರದಿಂದ, ಯಥಾ - ಹೇಗೆ, ಜೀವತೀತಿ - ಬದುಕುವಳೆಂಬದು ಯಾವದುಂಟೋ, ಏತತ್ - ಈ, ದುರ್ಜೀವಂ - ದುಷ್ಟಜೀವನವು, ಏವಂ - ಈಪರಿಯಾಗಿ, ನಸು ಕರಂ - ಸುಖಕರವಲ್ಲವು, ಧ್ರುವಂ - ನಿಶ್ಚಯವು, ಇತಿ - ಇಂತೆಂದು, ಮನ್ಯೇ - ತಿಳಿದಿರುವೆನು. ॥ ೨೧-೨೨ ॥ ರಾಜ್ಞಃಸ್ತ್ರೀಣಾಂ - ರಾಜಸ್ತ್ರೀಯರ, ಸತ್ಯರೂಪಂ - ಸತ್ಯವಾದ, ತದ್ವಾಕ್ಯಂ - ಆ ಮಾತನ್ನು, ನಿಶಾಮಯ್ಯ - ಕೇಳುತ್ತ, ಶೋಕೇನ - ಶೋಕಾಗ್ನಿಯಿಂದ, ಪ್ರದೀಪ್ತಮಿವ - ಸುಡು ವದೋ ಎಂಬಂತಿರುವ, ಗೃಹಂ - ಮನೆಯನ್ನು, ಸಹಸಾ - ಜಾಗ್ರತೆಯಾಗಿ, ವಿವೇಶ - ಹೊಕ್ಕನು. ॥ ೨೩ ॥ ಸಃ - ಆ ಸುಮಂತ್ರನು, ಅಷ್ಟಮೀಂ - ಎಂಟನೆಯದಾದ, ಕಕ್ಷ್ಯಾಂ - ತೊಟ್ಟಿಯನ್ನು, ಪ್ರವಿಶ್ಯ - ಪ್ರವೇಶಿಸಿ, ಪಾಂಡುರೇ - ಬೆಳ್ಳಗಿರುವ, ಗೃಹೇ - ಮನೆಯಲ್ಲಿ, ಪುತ್ರಶೋಕಪರಿ ಮ್ಲಾನಂ - ಮಗನವಿಷಯವಾದ ವ್ಯಸನದಿಂದ ಬಳಲಿರುವ, ಆತುರಂ - ದುಃಖಾರ್ತನಾದ, ದೀನಂ -

---

ನುಡಿಗಳನ್ನಾಲಿಸಿದನು. ॥೧೭-೨೦॥ ಆ ಸ್ತ್ರೀಯರು “ ಅಯ್ಯೋ! ಈ ಸುಮಂತ್ರನು ಇಲ್ಲಿಂದ ಹೊರಡುವಾಗ ಶ್ರೀರಾಮನೊಡಗೂಡಿ ಹೊರಟು, ಈಗ ರಾಮನನ್ನೆಲ್ಲಿಯೋ ಬಿಟ್ಟು ಬಂದ ನಲ್ಲವೆ? ಕೌಸಲ್ಯಾದೇವಿಯು “ನನ್ನ ಮಗನನ್ನೆಲ್ಲಿ ಬಿಟ್ಟು ಬಂದೆ” ಎಂದು ಕೇಳಿದರೆ ಏನು ಹೇಳುತ್ತಾನೆಯೋ ” ಎನ್ನುತ್ತಿದ್ದರು. “ಅಹಹ! ಸದ್ಗುಣಸಂಪನ್ನನಾದ ಮಗನು ವನಕ್ಕೆ ಹೋದಮೇಲೆಯೂ ಕೌಸಲ್ಯಾದೇವಿಯು ಜೀವಿಸಿದ್ದಾಳೆಯಲ್ಲಾ! ಇದು ಬಹು ಕಷ್ಟ! ಇಂತಹ ದುಃಖವಾಂತವರು ಜೀವದಿಂದಿರುವುದು ಮಹದಾಶ್ಚರ್ಯವಲ್ಲವೆ? ” ಎಂದೀ ರೀತಿ ದಶರಥರಾಜ ಸ್ತ್ರೀಯರೆಂದುಕೊಂಡರು. ॥೨೧-೨೨॥ ಈ ರೀತಿ ಹೇಳಿಕೊಳ್ಳುತ್ತಲಿದ್ದ ಅಂತಃಪುರ ಸ್ತ್ರೀಯರ ಮಾತುಗಳನ್ನು ಕೇಳಿದ ಸುಮಂತ್ರನು, ಎಲ್ಲರೂ ದುಃಖಿತರಾದುದ ರಿಂದ, ಉರಿಯುತ್ತಿರುವುದೋ ಎಂಬಂತಿರುವ ಆ ರಾಯನ ಅಂತಃಪುರವನ್ನು ಹೊಕ್ಕವ ನಾದನು. ಆ ಬಳಿಕಲಾ ಸುಮಂತ್ರನು ಎಂಟನೆಯ ತೊಟ್ಟಿಯನ್ನು ಪ್ರವೇಶಿಸಿ, ಬಿಳಿತಾಗಿ

ಮಭಿವಾದ್ಯಚ ॥ ಸುಮಂತ್ರೋ ರಾಮವಚನಂ ಯಥೋಕ್ತಂ ಪ್ರತ್ಯವೇದಯತ್ ॥ ೨೫ ॥ ಸ ತೂಷ್ಣೀ ಮೇವ ತಚ್ಛ್ರುತ್ವಾ ರಾಜಾ ವಿಭ್ರಾಂತ ಚೇತನಃ ॥ ಮೂರ್ಛಿತೋ ನ್ಯಪತದ್ಭೂಮೌ ರಾಮಶೋಕಾಭಿಪೀಡಿತಃ ॥ ೨೬ ॥ ತತೋಂತಃಪುರ ಮಾವಿದ್ಧಂ ಮೂರ್ಛಿತೇ ಪೃಥಿವೀಪತೌ ॥ ಉದ್ಧೃತ್ಯ ಬಾಹೂ ಚುಕ್ರೋಶ ನೃಪತೌ ಪತಿತೇ ಕ್ಷಿತೌ ॥೨೭॥ ಸುಮಿತ್ರಯಾತು ಸಹಿತಾ ಕೌಸಲ್ಯಾ ಪತಿತಂ ಪತಿಂ ॥ ಉತ್ಥಾಪಯಾಮಾಸ ತದಾ ವಚನಂ ಚೇದ ಮಬ್ರವೀತ್ ॥ ೨೮ ॥

ಪರಿತಪಿಸುತ್ತಿರುವ, ರಾಜಾನಂ - ಅರಸನ್ನು, ಅಪಶ್ಯತ್ - ಕಂಡನು. ॥ ೨೪ ॥ ಸುಮಂತ್ರಃ - ಸುಮಂತ್ರನು, ಆಸೀನಂ - ಕುಳಿತುಕೊಂಡಿರುವ, ತಂನರೇಂದ್ರಂ - ಆ ದಶರಥರಾಯನನ್ನು, ಅಭಿಗಮ್ಯ - ನೋಡಿ, ಅಭಿವಾದ್ಯಚ - ನಮಸ್ಕಾರವನ್ನೂ ಮಾಡಿ, ರಾಮವಚನಂ, ರಾಮ - ಶ್ರೀರಾಮನ, ವಚನಂ - ಮಾತನ್ನು, ಯಥೋಕ್ತಂ - ಹೇಗೆ ಹೇಳಲ್ಪಟ್ಟನೋ ಹಾಗೆ, ಪ್ರತ್ಯವೇದಯತ್ - ತಿಳಿಸಿದನು. ॥೨೫॥ ಸಃರಾಜಾ - ಆ ದಶರಥರಾಜನು, ತೂಷ್ಣೀಮೇವ-ಮೌನದಿಂದಲೇ, ತತ್ - ಆ ಮಾತನ್ನು, ಶ್ರುತ್ವಾ - ಕೇಳಿ, ವಿಭ್ರಾಂತಚೇತನಃ - ಭ್ರಾಂತಿಗೊಂಡ ಬುದ್ಧಿಯುಳ್ಳವನಾಗಿ, ರಾಮಶೋಕಾಭಿಪೀಡಿತಃ-ರಾಮಸಂಬಂಧವಾದ ವ್ಯಸನದಿಂದ ಬಾಧೆಗೊಂಡವನಾದುದರಿಂದ, ಮೂರ್ಛಿತಃ - ಮೂರ್ಛೆಗೊಂಡು, ಭೂಮೌ - ನೆಲದಲ್ಲಿ, ನ್ಯಪತತ್ - ಬಿದ್ದನು. ॥ ೨೬ ॥ ತತಃ-ಬಳಿಕ, ಪೃಥಿವೀಪತೌ - ಭೂಮಂಡಲಾಧಿಪತಿಯಾದ, ನೃಪತೌ - ಅರಸು, ಮೂರ್ಛಿತೇ - ಮೂರ್ಛಿತನಾಗಿ, ಕ್ಷಿತೌ - ನೆಲದಲ್ಲಿ, ಪತಿತೇ - ಬೀಳಲು, ಅಂತಃಪುರಂ - ಅಂತಃಪುರಸ್ತ್ರೀಸಮುದಾಯವು, ಆವಿದ್ಧಂ-ಶೋಕದಿಂದ ಹೊಡಿಯಲ್ಪಟ್ಟುದಾಗಿ, ಬಾಹೂ - ಭುಜಗಳನ್ನು, ಉದ್ಧೃತ್ಯ - ಮೇಲಕ್ಕೆ ಎತ್ತಿಕೊಂಡು, ಚುಕ್ರೋಶ - ಅಳುತ್ತಿದ್ದಿತು. ॥ ೨೭ ॥ ಸುಮಿತ್ರಯಾತು - ಸುಮಿತ್ರಾದೇವಿಯೊಡನೆ, ಸಹಿತಾ - ಕೂಡಿಕೊಂಡಿರುವ, ಕೌಸಲ್ಯಾ - ಕೌಸಲ್ಯಾದೇವಿಯು, ಪತಿತಂ - ಕೆಳಗೆಬಿದ್ದಿರುವ, ಪತಿಂ - ಗಂಡನನ್ನು ಉತ್ಥಾಪಯಾಮಾಸ - ಮೇಲಕ್ಕೆ ಎಬ್ಬಿಸಿದಳು, ತದಾ - ಆ ಕಾಲದಲ್ಲಿ, ಇದಂವಚನಂಚ - ಈ ಮಾತನ್ನೂ, ಅಬ್ರವೀತ್ - ನುಡಿದಳು. ॥ ೨೮ ॥ ಹೇ ಮಹಾಭಾಗ -

ರುವ ಆ ಮನೆಯಲ್ಲಿ, ಪುತ್ರಶೋಕದಿಂದ ಬಳಲಿ, ದುಃಖಾರ್ತನಾಗಿ, ಪರಿತಪಿಸುತ್ತಿರುವ ದಶರಥರಾಜನನ್ನು ಕಂಡವನಾದನು ; ಆಮೇಲೆ ಕುಳಿತುಕೊಂಡಿರುವ ಆ ರಾಯನನ್ನುನೋಡಿ, ನಮಸ್ಕಾರ ಮಾಡಿ, ಶ್ರೀರಾಮನು ತನ್ನ ಮೂಲಕ ಹೇಳಿ ಕಳುಹಿಸಿದ್ದ ಮಾತನ್ನು ಇದ್ದುದನ್ನಿದ್ದ ಹಾಗೆಯೇ ಅರಿಕೆ ಮಾಡಿಕೊಂಡನು. ॥೨೪-೨೫॥ ಆಗ ದಶರಥರಾಜನು ಮೌನದಿಂದಲೇ ಆ ಮಾತನ್ನುಕೇಳಿ,ಭ್ರಾಂತಿಗೊಂಡಬುದ್ಧಿಯುಳ್ಳವನಾಗಿ ರಾಮಶೋಕದಿಂದಪೀಡಿತನಾದುದರಿಂದ ಮೂರ್ಛೆಯೊಂದಿ ನೆಲದಲ್ಲಿ ಬಿದ್ದವನಾದನು. ಆಗ ಅಂತಃಪುರ ಸ್ತ್ರೀಯರ ಸಮುದಾಯವು ಶೋಕಾಹತವಾಗಿ, ಎತ್ತಿದ ಭುಜಗಳುಳ್ಳುದಾಗಿ ರೋದಿಸುತ್ತಿದ್ದಿತು. ಆ ಬಳಿಕ ಸುಮಿತ್ರಾ ದೇವಿಯೊಡಗೂಡಿದ ಕೌಸಲ್ಯಾದೇವಿಯು, ಮೂರ್ಛಿತನಾಗಿ ಬಿದ್ದಿರುವ ಪತಿದೇವನನ್ನು ಮೇಲಕ್ಕೆಬ್ಬಿಸಿ, "ಎಲೈ ಪುಣ್ಯಶಾಲಿಯೆ! ಅಸಾಧ್ಯ ಕಾರ್ಯವನ್ನು ಸಾಧಿಸಿದ ಶ್ರೀರಾಮನಿಗೆ ದೂತನಾದವನೂ, ವನದಿಂದ ಹಿಂತಿರುಗಿದವನೂ ಆದ ಈ ಸುಮಂತ್ರನೊಡನೆ, ಮಾತನಾಡಲಾರಿ

ಇಮಂ ತಸ್ಯ ಮಹಾಭಾಗ! ದೂತಂ ದುಷ್ಕರಕಾರಿಣಃ ॥ ವನವಾಸಾದನುಪ್ರಾಪ್ತಂ ಕಸ್ಮಾನ್ನ ಪ್ರತಿಭಾಷಸೇ ॥ ೨೯ ॥ ಅದ್ಯೈವ ಮನಯಂ ಕೃತ್ವಾ ವ್ಯಪತ್ರಪಸಿ ರಾಘವ! ॥ ಉತ್ತಿಷ್ಠ ಸುಕೃತಂ ತೇಽಸ್ತು ಶೋಕೇ ನಸ್ಯಾತ್ಸಹಾಯತಾ ॥ ೩೦ ॥ ದೇವ! ಯಸ್ಯಾಭಯಾದ್ರಾಮಂ ನಾನುಪೃಚ್ಛಸಿ ಸಾರಥಿಂ॥ ನೇಹತಿಷ್ಠತಿ ಕೈಕೇಯೀ ವಿಸ್ರಬ್ಧಂ ಪ್ರತಿಭಾಷ್ಯತಾಂ ॥೩೧॥ ಸಾ ತಥೋಕ್ತ್ವಾ ಮಹಾರಾಜಂ ಕೌಸಲ್ಯಾ ಶೋಕಲಾಲಸಾ ॥ ಧರಣ್ಯಾಂ ನಿಪಪಾತಾಶು ಬಾಷ್ಪವಿಪ್ಲುತಭಾಷಿಣೀ ॥ ೩೨ ॥

ಎಲೈ ಪುಣ್ಯಶಾಲಿಯೇ, ದುಷ್ಕರಕಾರಿಣಃ - ಅಸಾಧ್ಯವ್ಯಾಪಾರವನ್ನು ಮಾಡಿದ, ತಸ್ಯ-ಆ ಶ್ರೀರಾಮನಿಗೆ, ದೂತಂ - ಸೇವಕನಾದ, ವನವಾಸಾತ್ - ವನವಾಸದಿಂದ, ಅನುಪ್ರಾಪ್ತಂ - ಬಂದಿರುವ, ಇಮಂ - ಈ ಸುಮಂತ್ರನನ್ನು ಕುರಿತು, ಕಸ್ಮಾತ್ - ಯಾವ ನಿಮಿತ್ತದಿಂದ, ನಪ್ರತಿಭಾಷಸೇ - ಮಾತನಾಡಲಾರೆನು. ॥ ೨೯ ॥ ಹೇ ರಾಘವ - ಎಲೈ ರಘುವಂಶೋತ್ಪನ್ನನೇ, ಅದ್ಯ - ಈಗ, ಏವಂ - ಈಪರಿಯಾಗಿ, ಅನಯಂ - ಅನ್ಯಾಯವನ್ನು, ಕೃತ್ವಾ - ಮಾಡಿ, ವ್ಯಪತ್ರಪಸಿ - ನಾಚಿಗೊಂಡೆಯಾ ? ಉತ್ತಿಷ್ಠ - ಮೇಲಕ್ಕೇಳು, ತೇ - ನಿನಗೆ, ಸುಕೃತಂ - ಸತ್ಯವಚನದಿಂದ ಹುಟ್ಟಿದ ಪುಣ್ಯವು, ಅಸ್ತು - ಆಗಲಿ, ಶೋಕೇ - ಶೋಕವಿಷಯದಲ್ಲಿ, ಸಹಾಯತಾ - ಸಹಾಯಕರ್ಮವು, ಯಥಾ - ಹೇಗೆ, ನಸ್ಯಾತ್ - ಇಲ್ಲದೆಹೋಗುವದೋ, ತಥಾ - ಹಾಗೆ, ಕುರು - ಮಾಡು. ॥ ೩೦ ॥ ಹೇ ದೇವ - ಎಲೈ ಸ್ವಾಮಿಯೇ, ಯಸ್ಯಾಃ - ಯಾವ ಕೈಕೇಯಿದೇವಿಯ, ಭಯಾತ್ - ಭಯದಿಂದ, ಸಾರಥಿಂ - ಸಾರಥಿಯನ್ನು ಕುರಿತು, ರಾಮಂ - ಶ್ರೀರಾಮನನ್ನುದ್ದೇಶಿಸಿ, ನಾನುಪೃಚ್ಛಸಿ - ಕೇಳದೆ ಇರುವೆಯೋ, ಇಹ - ಈ ಅಂತಃಪುರದಲ್ಲಿ, ಕೈಕೇಯೀ - ಕೈಕೇಯಿದೇವಿಯು, ನತಿಷ್ಠತಿ ಇರುವುದಿಲ್ಲ, ವಿಸ್ರಬ್ಧಂ - ವಿಶ್ವಾಸಪೂರ್ವಕವಾಗಿ, ಪ್ರತಿಭಾಷ್ಯತಾಂ - ಮಾತನಾಡಲ್ಪಡಲಿ. ॥ ೩೧ ॥ ಸಾಕೌಸಲ್ಯಾ - ಆ ಕೌಸಲ್ಯಾದೇವಿಯು, ಶೋಕಲಾಲಸಾ - ಶೋಕಾಕ್ರಾಂತಳಾಗಿ, ಮಹಾರಾಜಂ - ದಶರಥರಾಜನನ್ನು ಕುರಿತು, ತಥಾ - ಆಪರಿಯಾಗಿ, ಉಕ್ತ್ವಾ - ಹೇಳಿ, ಬಾಷ್ಪವಿಪ್ಲುತಭಾಷಿಣೀ- ಕಂಬನಿಗಳಿಂದ ಗದ್ಗದವಾದ ಮಾತುಗಳುಳ್ಳವಳಾಗಿ, ಧರಣ್ಯಾಂ - ನೆಲದಲ್ಲಿ, ಆಶು - ಜಾಗ್ರತೆಯಾಗಿ, ನಿಪಪಾತ - ಬಿದ್ದಳು. ॥ ೩೨ ॥ ಏವಂ - ಈಪರಿಯಾಗಿ, ವಿಲಪಂತೀಂ - ಪ್ರಲಾಪಮಾಡುತ್ತ,

---

ಯೇಕೆ ? ಎಲೈ ರಘುವಂಶೋತ್ಪನ್ನನೆ! ಈ ರೀತಿ ಅನ್ಯಾಯವನ್ನು ಮಾಡಿ ನಾಚಿಕೆಗೊಂಡಿರುವೆಯೇನು ? ನಿನಗೆ ಹೇಗಾದರೂ ಪುಣ್ಯವು ಲಭಿಸುವುದು. ದುಃಖಿಸುವುದರಿಂದ ಸ್ವಲ್ಪವಾದರೂ ಪ್ರಯೋಜನವಿಲ್ಲವು. ಮೇಲಕ್ಕೇಳು; ನೀನು ಕೈಕೇಯಿಯ ಭಯದಿಂದ ಸುಮಂತ್ರನೊಡನೆ ರಾಮ ವೃತ್ತಾಂತವನ್ನು ಪ್ರಸ್ತಾಪಿಸಲು ಭಯಪಡುತ್ತಿರುವೆಯೇನೊ ? ಆ ಕೈಕೇಯಿಯು ಇಲ್ಲಿಲ್ಲವು ; ನೀನು ಭಯಪಡಬೇಕಾದುದಿಲ್ಲವು. ವಿಶ್ವಾಸಪೂರ್ವಕವಾಗಿ ಮಾತನಾಡು ಎಂದಳು. ॥೨೩-೩೧॥ ಕೌಸಲ್ಯಾದೇವಿಯು ಈ ರೀತಿಯಾಗಿ, ಶೋಕಾಕ್ರಾಂತಳಾಗಿ, ಆ ರಾಯನಿಗೆ ಹೇಳಿ, ದುಃಖದಿಂದ ಗದ್ಗದಸ್ವರಭರಿತಳಾಗಿ ಮೂರ್ಛೆಯೊಂದಿ ಬಹು ಬೇಗನೆ ನೆಲಕ್ಕೆ ಬಿದ್ದಳು. ಈ ರೀತಿ ಪ್ರಲಪಿಸುತ್ತ ನೆಲದಲ್ಲಿ ಬಿದ್ದ ಕೌಸಲ್ಯಾದೇವಿಯನ್ನೂ, ಆಕೆಯ ಪತಿಯಾದ ದಶರಥರಾಜನನ್ನೂ ನೋಡಿದ ಅಂತಃಪುರ ಸ್ತ್ರೀಯರು ಗಟ್ಟಿಯಾಗಿ ಅಳುತ್ತಿದ್ದರು.

ಏವಂ ವಿಲಪತೀಂ ದೃಷ್ಟ್ವಾ ಕೌಸಲ್ಯಾಂ ಪತಿತಾಂ ಭುವಿ ॥ ಪತಿಂಚಾವೇಕ್ಷ್ಯ
ತಾ ಸ್ಸರ್ವಾ ಸ್ಸುಸ್ವರಂ ರುರುದು ಸ್ಸ್ತ್ರಿಯಃ ॥ ೩೩ ॥

ತತಸ್ತಮಂತಃಪುರ ನಾದಮುತ್ಥಿತಂ
ಸಮೀಕ್ಷ್ಯ ವೃದ್ಧಾ ಸ್ತರುಣಾಶ್ಚಮಾನವಾಃ ॥
ಸ್ತ್ರಿಯಶ್ಚ ಸರ್ವಾರುರುದು ಸ್ಸಮಂತತಃ
ಪುರಂ ತದಾಸೀ ತ್ಪುನರೇವ ಸಂಕುಲಂ ॥ ೩೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಪಂಚಾಶಸ್ಸರ್ಗಃ.

ಭುವಿ - ನೆಲದಲ್ಲಿ, ಪತಿತಾಂ - ಬಿದ್ದಿರುವ, ಕೌಸಲ್ಯಾಂ - ಕೌಸಲ್ಯಾದೇವಿಯನ್ನೂ, ಪತಿಂಚ - ಗಂಡನನ್ನೂ, ಅವೇಕ್ಷ್ಯ - ಕಂಡು, ಸರ್ವಾಃ - ಸಮಸ್ತರಾದ, ತಾಸ್ಸರ್ವಾಃ - ಆ ಅಂತಃಪುರಸ್ತ್ರೀಯರು, ಸುಸ್ವರಂ - ಸ್ವರದಿಂದ ಕೂಡಿದಂತೆ, ರುರುದುಃ - ಅಳುತ್ತಿದ್ದರು. ॥ ೩೩ ॥ ತತಃ - ಬಳಿಕ, ಉತ್ಥಿತಂ - ಹುಟ್ಟಿದ, ತಂಅಂತಃಪುರನಾದಂ - ಆ ಅಂತಃಪುರಸ್ತ್ರೀಜನದ ರೋದನಧ್ವನಿಯನ್ನು, ಸಮೀಕ್ಷ್ಯ - ಕಂಡು, ವೃದ್ಧಾಃ - ಮುದುಕರು, ತರುಣಾಶ್ಚ - ಯೌವನಸ್ಥರೂ ಆದ, ಮಾನವಾಃ - ಮನುಷ್ಯರೆಲ್ಲ, ಸರ್ವಾಃ - ಸಮಸ್ತರಾದ, ಸ್ತ್ರಿಯಶ್ಚ - ಹೆಣ್ಣುಮಕ್ಕಳೂ, ಸಮಂತತಃ - ಸುತ್ತುಮುತ್ತಲೂ ಸೇರಿಕೊಂಡು, ರುರುದುಃ - ರೋದನ ಮಾಡಿದರು, ತತ್ಪುರಮೇವ - ಆ ಪಟ್ಟಣವೇ, ಪುನಃ - ಮತ್ತು, ಸಂಕುಲಂ - ವ್ಯಾಪ್ತವಾದುದಾಗಿ, ಆಸೀತ್ - ಆಯಿತು. ॥ ೩೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಪಂಚಾಶಸ್ಸರ್ಗಃ.

ಆಗ ಅಂತಃಪುರದಲ್ಲಿ ಜನಿಸಿದ ಸ್ತ್ರೀಯರ ರೋದನ ಧ್ವನಿಯನ್ನು ಕಂಡು ಮುದುಕರೂ, ಯೌವನಸ್ಥರೂ ಇವರೇ ಮೊದಲಾದವರೆಲ್ಲರೂ, ಕೊನೆಗೆ ಹೆಣ್ಣುಮಕ್ಕಳೂ ಸಹ ಸುತ್ತುಮುತ್ತಲೂ ಸೇರಿಕೊಂಡು ರೋದಿಸತೊಡಗಿದರು. ಆಗಲಾ ಪಟ್ಟಣವು ಪುನಃ ದುಃಖದಿಂದ ವ್ಯಾಪ್ತವಾಯಿತು. ॥ ೩೩-೩೪ ॥

ಇಂತಿದು ಸುಮಂತ್ರಕೃತ ಶ್ರೀರಾಮ ವನಗಮನಾನಂತರ ಅಯೋಧ್ಯಾನಗರ ಪ್ರವೇಶ ಕಥಾಕಥನವೆಂಬ ಐವತ್ತೇಳನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಅಷ್ಟಪಂಚಾಶಸ್ಸರ್ಗಃ.

ಪ್ರತ್ಯಾಶ್ವಸ್ತೋ ಯದಾ ರಾಜಾ ಮೋಹಾ ತ್ಪ್ರತ್ಯಾಗತಂ ಪುನಃ ॥ ಅಥಾ ಜುಹಾವ ತಂ ಸೂತಂ ರಾಮವೃತ್ತಾಂತ ಕಾರಣಾತ್ ॥ ೧ ॥ ಅಥ ಸೂತೋ ಮಹಾರಾಜಂ ಕೃತಾಂಜಲಿ ರುಪಸ್ಥಿತಃ ॥ ರಾಮಮೇವಾನು ಶೋಚಂತಂ ದುಃಖಶೋಕ ಸಮನ್ವಿತಂ ॥೨॥ ವೃದ್ಧಂ ಪರಮಸಂತಪ್ತಂ ನವಗ್ರಹ ಮಿವದ್ವಿಪಂ ॥ ವಿನಿಶ್ವಸಂತಂ ಧ್ಯಾಯಂತಂ ಅಸ್ವಸ್ಥಮಿವ ಕುಂಜರಂ ॥ ೩ ॥ ರಾಜಾತು ರಜಸಾ ಸೂತಂ ಧ್ವಸ್ತಾಂಗಂ ಸಮುಪಸ್ಥಿತಂ ॥ ಅಶ್ರುಪೂರ್ಣ

ಯದಾ - ಯಾವ ಕಾಲದಲ್ಲಿ, ರಾಜಾ - ದಶರಥರಾಯನು, ಮೋಹಾತ್ - ಮೂರ್ಛೆ ಯಿಂದ, ಪ್ರತ್ಯಾಶ್ವಸ್ತಃ - ಸಮಾಧಾನಗೊಳಿಸಲ್ಪಟ್ಟನೋ, ತದಾ - ಆಕಾಲದಲ್ಲಿ, ಅಥ - ಬಳಿಕ, ಪುನಃ - ಮತ್ತು, ಪ್ರತ್ಯಾಗತಂ - ಹಿಂತಿರುಗಿ ಬಂದಿರುವ, ತಂಸೂತಂ - ಆ ಸಾರಥಿಯಾದ ಸುಮಂತ್ರ ನನ್ನು, ರಾಮವೃತ್ತಾಂತಕಾರಣಾತ್ - ಶ್ರೀರಾಮನ ವೃತ್ತಾಂತವನ್ನು ಕೇಳುವನಿಮಿತ್ತ, ಆಜುಹಾವ-ಕರೆದನು. ॥ ೧ ॥ ಅಥ - ಬಳಿಕ, ಸೂತಃ - ಸುಮಂತ್ರನು, ರಾಮಮೇವ - ಶ್ರೀರಾಮನನ್ನು ಕುರಿತೇ, ಅಶೋಚಂತಂ - ದುಃಖಿಸುತ್ತಿರುವ, ದುಃಖಶೋಕಸಮನ್ವಿತಂ - ಅಂತರ್ಬಹಿ ದುಃಖಗ ಳಿಂದ ಕುಳಿತುಕೊಂಡಿರುವ, ವೃದ್ಧಂ - ಮುದುಕನಾದ, ಪರಮಸಂತಪ್ತಂ - ಬಹಳ ಸಂಕಟ ಬೀಳುತ್ತಿರುವ, ನವಗ್ರಹಂ - ನೂತನವಾಗಿ ಹಿಡಿದುಕೊಳ್ಳಲ್ಪಟ್ಟ, ದ್ವಿಪಮಿವ - ಆನೆಯಂತೆ, ವಿನಿಶ್ವಸಂತಂ - ನಿಟ್ಟುಸುರು ಬಿಡುತ್ತಲೂ, ಧ್ಯಾಯಂತಂ - ಧ್ಯಾನಮಾಡುತ್ತಲೂ ಇರುವ, ಕುಂಜರ ಮಿವ - ಆನೆಯಂತೆ, ಅಸ್ವಸ್ಥಂ - ಸ್ವಸ್ಥಚಿತ್ತನಾಗದಿರುವ, ಮಹಾರಾಜಂ - ದಶರಥರಾಯ ನನ್ನು ಕುರಿತು. ಕೃತಾಂಜಲಿಃ - ಕೈಮುಗಿದು, ಉಪಸ್ಥಿತಃ - ಸಮೀಪದಲ್ಲಿ ನಿಂತುಕೊಂಡನು. ॥ ೩ ॥ ರಾಜಾತು - ದಶರಥರಾಯನಾದರೊ, ರಜಸಾ - ಧೂಳಿಯಿಂದ, ಧ್ವಸ್ತಾಂಗಂ - ವ್ಯಾಪ್ತ ವಾದ ಶರೀರವುಳ್ಳ, ಸಮುಪಸ್ಥಿತಂ - ಇದಿರಾಗಿ ನಿಂತಿರುವ, ಅಶ್ರುಪೂರ್ಣಮುಖಂ - ಕಂಬನಿಗಳಿಂದ

ಆ ಬಳಿಕ ಸ್ವಲ್ಪಹೊತ್ತಿನಮೇಲೆ ದಶರಥಮಹಾರಾಜನು ಮೂರ್ಛೆಯಿಂದೆಚ್ಚರ ಗೊಂಡು, ಸಮಾಧಾನಗೊಳಿಸಲ್ಪಟ್ಟವನಾಗಿ ಹಿಂತಿರುಗಿ ಬಂದ ಸುಮಂತ್ರನನ್ನು ಶ್ರೀರಾಮವೃತ್ತಾಂತವನ್ನುಕೇಳಿ ತಿಳಿದುಕೊಳ್ಳಲೋಸುಗ ಪುನಃ ಕರೆದವನಾದನು. ಆಗಲಾ ಸುಮಂತ್ರನು, ರಾಮನನ್ನು ಕುರಿತು ಅಧಿಕವಾಗಿ ರೋದಿಸುತ್ತಿರುವವನೂ. ಮಹತ್ತರವಾದ ವ್ಯಸನವಾಂತವನೂ, ಸಂತಾಪವನ್ನು ಹೊಂದಿದವನೂ, ಹೊಸತಾಗಿ ಹಿಡಿದ ಆನೆಯಂತಿರು ವವನೂ, ಶ್ರೀರಾಮಮೂರ್ತಿಯನ್ನೇ ಕುರಿತು ಧ್ಯಾನ ಮಾಡುತ್ತಿರುವವನೂ, ಮಹಾ ರೋಗ ಪೀಡಿತನಾದ ಗಜರಾಜನಂತಿರುವವನೂ ಆದ ದಶರಥಮಹಾರಾಜನನ್ನು ನಮಸ್ಕರಿಸಿ, ಕೈ ಜೋಡಿಸಿಕೊಂಡು ಬಳಿಸಾರಿದನು. ಆಗ ದಶರಥಮಹೀಪಾಲನು ಪರಮದುಃಖಿತನಾಗಿ, ಸಮೀ

ಮುಖಂ ದೀನ ಮುವಾಚ ಪರಮಾರ್ತವತ್ ॥ ೪ ॥ ಕ್ವನು ವತ್ಸ್ಯತಿ ಧರ್ಮಾತ್ಮಾ ವೃಕ್ಷಮೂಲ ಮುಪಾಶ್ರಿತಃ ॥ ಸೋತ್ಯಂತ ಸುಖಿತ ಸ್ಸೂತ ! ಕಿಮ ಶಿಷ್ಯತಿ ರಾಘವಃ ॥ ೫ ॥ ದುಃಖಸ್ಯಾನುಚಿತೋ ದುಃಖಂ ಸುಮಂತ್ರ ! ಶಯ ನೋಚಿತಃ ॥ ಭೂಮಿಪಾಲಾತ್ಮಜೋ ಭೂಮೌ ಶೇತೇ ಕಥಮನಾಥವತ್ ॥ ೬ ॥ ಯಂ ಯಾಂತಮನುಯಾಂತಿಸ್ಮ ಪದಾತಿ ರಥಕುಂಜರಾಃ ॥ ಸ ವತ್ಸ್ಯತಿ ಕಥಂ ರಾಮೋ ನಿಜನಂ ವನಮಾಶ್ರಿತಃ ॥ ೭ ॥ ವ್ಯಾಳೈರ್ಮೃಗೈ ರಾಚರಿತಂ ಕೃಷ್ಣ

ತುಂಬಿದ ಮುಖವುಳ್ಳ, ದೀನಂ - ಪರಿತಪ್ತನಾದ, ಸೂತಂ - ಸಾರಥಿಯನ್ನು ಕುರಿತು, ಪರಮಾರ್ತವತ್ - ಬಹಳ ದೀನನಾಗಿ, ಉವಾಚ - ಹೇಳಿದನು. ॥ ೪ ॥ ಹೇ ಸೂತ - ಎಲೈ ಸುಮಂತ್ರನೇ, ಧರ್ಮಾತ್ಮಾ - ಧರ್ಮಿಷ್ಠನಾದ, ರಾಘವಃ - ಶ್ರೀರಾಮನು, ವೃಕ್ಷಮೂಲಂ - ಗಿಡದ ಆಲವಾಲಪ್ರದೇಶವನ್ನು, ಉಪಾಶ್ರಿತಃ - ಆಶ್ರಯಿಸಿ, ಕ್ವನುವತ್ಸ್ಯತಿ - ಎಲ್ಲಿ ವಾಸಮಾಡುತ್ತಾನೆ? ಸಃ-ಆ ಶ್ರೀರಾಮನು, ಅತ್ಯಂತಸುಖಿತಃ - ಬಹಳ ಸುಖವಾಗಿದ್ದಾನು, ಕಿಮಶಿಷ್ಯತಿ - ಯಾವುದನ್ನು ಭುಜಿಸುತ್ತಾನೆ. ॥ ೫ ॥ ಹೇ ಸುಮಂತ್ರ - ಎಲೈ ಸುಮಂತ್ರನೇ, ದುಃಖಸ್ಯ - ದುಃಖಕ್ಕೆ, ಅನುಚಿತಃ - ಯೋಗ್ಯನಲ್ಲದಿರುವ, ಶಯನೋಚಿತಃ - ಸುಪ್ಪತ್ತಿಗೆಯಲ್ಲಿಯೇ ಮಲಗಲು ಯೋಗ್ಯನಾದ, ಭೂಮಿಪಾಲಾತ್ಮಜಃ - ರಾಜಪುತ್ರನಾದ ಶ್ರೀರಾಮನು, ದುಃಖಂಯಥಾತಥಾ - ಕಷ್ಟವಾಗಿ, ಅನಾಥವತ್ - ದರಿದ್ರನಂತೆ, ಭೂಮೌ - ನೆಲದಲ್ಲಿ, ಕಥಂಶೇತೇ - ಹೇಗೆ ಮಲುಗುತ್ತಾನೆ. ॥ ೬ ॥ ಯಾಂತಂ - ಹೊರಹೋಗುತ್ತಿರುವ, ಯಂ - ಯಾವ ಶ್ರೀರಾಮನನ್ನು, ಪದಾತಿರಥಕುಂಜರಾಃ - ಕಾಲುಬಲಗಳೂ, ರಥಗಳೂ, ಆನೆಗಳೂ ಸಹ, ಅನುಯಾಂತಿಸ್ಮ - ಅನುಸರಿಸಿಹೋಗುತ್ತಿರುವವೋ, ಸಃರಾಮಃ - ಆ ಶ್ರೀರಾಮನು, ನಿಜನಂ - ಜನರಹಿತವಾದ, ವನಂ - ವನವನ್ನು, ಆಶ್ರಿತಃ - ಆಶ್ರಯಿಸಿ, ಕಥಂವತ್ಸ್ಯತಿ - ಹೇಗಿರುವನು? ॥ ೭ ॥ ಕುಮಾರೌ - ಬಾಲಕರಾದ ರಾಮಲಕ್ಷ್ಮಣರು, ವೈದೇಹ್ಯಾಸಾರ್ಧಂ - ಸೀತಾದೇವಿ

ಪಕ್ಕೆ ಬಂದಿರುವವನೂ, ಮಾರ್ಗಧೂಳಿಯಿಂದ ವ್ಯಾಪ್ತನಾದ ಶರೀರವುಳ್ಳವನೂ, ಕಂಬನಿಗಳಿಂದನೆನದುಹೋಗಿದ್ದ ಮುಖವುಳ್ಳವನೂ, ದೀನನೂ ಆದ ಸುಮಂತ್ರನನ್ನು ಕುರಿತು ಹೀಗೆಂದನು. ॥೧-೪॥ "ಎಲೈ ಸುಮಂತ್ರನೆ! ಧರ್ಮಾತ್ಮನೂ, ಇದುವರೆವಿಗೂ ಸುಖವನ್ನನುಭವಿಸಿದವನೂ ಆದ ಶ್ರೀರಾಮನು ಎಲ್ಲಿ ವಾಸ ಮಾಡುತ್ತಾನೆ? ಯಾವ ವೃಕ್ಷಮೂಲವನ್ನಾಶ್ರಯಿಸಿರುವನು? ಯಾವುದನ್ನು ಭುಜಿಸಿಕೊಂಡಿರುವನು? ಸುಮಂತ್ರಾ! ದುಃಖಗಳನ್ನು ಹೊಂದಲು ಅರ್ಹನಲ್ಲದವನೂ, ಮೃದುಶಯ್ಯೆಯಲ್ಲಿಯೇ ಪವಳಿಸಲು ಯೋಗ್ಯನೂ, ರಾಜಕುಮಾರನೂ ಆದ ಶ್ರೀರಾಮನು ಇದೀಗ ದಿಕ್ಕಿಲ್ಲದವನಂತೆ ಯಾವ ಸ್ಥಳದಲ್ಲಿ ಭೂಶಾಯಿಯಾಗಿದ್ದಾನೆ? ಇದುವರೆವಿಗೂ ಶ್ರೀರಾಮನು ಅರಮನೆಯಿಂದ ಹೊರಹೊರಟನೆಂದರೆ, ಗಜ, ತುರಗ, ರಥ, ಪದಾತಿಗಳು ಆತನನ್ನು ಹಿಂಬಾಲಿಸುತ್ತಿದ್ದುವಲ್ಲವೆ? ಅಂತಹನು ಈಗ ವನದಲ್ಲಿ ಹೇಗೆತಾನೆ ಸಂಚರಿಸಿಯಾನು? ಎಲೈ ಸುಮಂತ್ರನೆ! ಕ್ರೂರ ಮೃಗಗಳಿಂದ ತುಂಬಿರುವುದೂ, ಕೃಷ್ಣ ಸರ್ಪಗಳಿಂದೊಡಗೂಡಿದುದೂ ಆದ ಅರಣ್ಯದಲ್ಲಿ, ರಾಜಕುವರರಾದ ರಾಮ ಲಕ್ಷ್ಮಣರು ಸೀತೆಯೊಡಗೂಡಿ ಹೇಗೆ ನಡೆದರು? ರಾಜಪುತ್ರರಾದ ಅವರು, ಕೋಮ

ಸರ್ಪ ನಿಷೇವಿತಂ ॥ ಕಥಂ ಕುಮಾರೌ ವೈದೇಹ್ಯಾ ಸಾರ್ಧಂ ವನಮುಪಸ್ಥಿತೌ ॥ ೮ ॥ ಸುಕುಮಾರ್ಯಾ ತಪಸ್ವಿನ್ಯಾ ಸುಮಂತ್ರ! ಸಹಸೀತಯಾ ॥ ರಾಜಪುತ್ರೌ ಕಥಂ ಪಾದೈರವರುಹ್ಯ ರಥಾದ್ಗತೌ ॥ ೯ ॥ ಸಿದ್ಧಾರ್ಥಃ ಖಲು ಸೂತ! ತ್ವಂ ಯೇನ ದೃಷ್ಟೌ ಮಮಾತ್ಮಜೌ ॥ ವನಾಂತಂ ಪ್ರವಿಶಂತೌ ತಾವಶ್ವಿನಾವಿವ ಮಂದರಂ ॥ ೧೦ ॥ ಕಿಮುವಾಚ ವಚೋರಾಮಃ ಕಿಮುವಾಚ ಚ ಲಕ್ಷ್ಮಣಃ ॥ ಸುಮಂತ್ರ! ವನ ಮಾಸಾದ್ಯ ಕಿಮುವಾಚಚ ಮೈಥಿಲೀ ॥ ೧೧ ॥ ಆಸಿತಂ ಶಯಿತಂ ಭುಕ್ತಂ ಸೂತ! ರಾಮಸ್ಯ ಕೀರ್ತಯ ॥ ಜೀವಿಷ್ಯಾಮ್ಯಹ

ಯೊಡನೆ, ವ್ಯಾಳೈಃ - ಮದವೇರಿದ ಆನೆಗಳಿಂದಲೂ, ಮೃಗೈಃ - ಮೃಗಗಳಿಂದಲೂ, ಆಚರಿತಂ - ಸಂಚಾರಮಾಡಲ್ಪಟ್ಟ, ಕೃಷ್ಣಸರ್ಪನಿಷೇವಿತಂ - ಕಪ್ಪಾಗಿರುವ ಸರ್ಪಗಳಿಂದ ಸೇವಿಸಲ್ಪಟ್ಟ, ವನಂ - ವನದಲ್ಲಿ, ಕಥಮುಪಸ್ಥಿತೌ - ಹೇಗೆಯಿರುವರು. ॥ ೮ ॥ ಹೇ ಸುಮಂತ್ರ - ಎಲೈ ಸುಮಂತ್ರನೇ, ರಾಜಪುತ್ರೌ - ರಾಜಕುವರರಾದ ರಾಮಲಕ್ಷ್ಮಣರು, ಸುಕುಮಾರ್ಯಾ - ಬಹಳ ಮೃದುವಾದ ಶರೀರವುಳ್ಳ, ತಪಸ್ವಿನ್ಯಾ - ತಪಸ್ವಿಯಾದ, ಸೀತಯಾಸಹ - ಸೀತಾದೇವಿಯೊಡನೆ, ರಥಾತ್ - ರಥದಿಂದ, ಅವರುಹ್ಯ - ಇಳಿದು, ಪಾದೈಃ - ಕಾಲ್ನಡಿಗೆಯಿಂದ, ಕಥಂಗತೌ - ಹೇಗೆ ಹೋದರು. ॥೯॥ ಹೇ ಸೂತ - ಎಲೈ ಸಾರಥಿಯೇ, ಯೇನ - ಯಾವ ನಿನ್ನಿಂದ, ಅಶ್ವಿನೌ - ಅಶ್ವಿನೀದೇವತೆಗಳು, ಮಂದರಮಿವ - ಮಂದರಪರ್ವತವನ್ನಂತೆ, ವನಾಂತಂ - ವನಮಧ್ಯವನ್ನು, ಪ್ರವಿಶಂತೌ - ಹೋಗುತ್ತಿರುವ, ಮಮ - ನನ್ನ, ತಾವಾತ್ಮಜೌ - ಆ ಕುಮಾರರು, ದೃಷ್ಟೌ - ನೋಡಲ್ಪಟ್ಟರೋ, ತ್ವಂ - ಅಂತಹ ನೀನು, ಸಿದ್ಧಾರ್ಥಃಖಲು - ಕೃತಾರ್ಥನಷ್ಟೆ, ಹೇ ಸುಮಂತ್ರ - ಎಲೈ ಸುಮಂತ್ರನೇ, ರಾಮಃ - ಶ್ರೀರಾಮನು, ಕಿಂವಚಃ - ಯಾವ ಮಾತನ್ನು, ಕಿಮುವಾಚ - ಏನು ಹೇಳಿದನು, ಲಕ್ಷ್ಮಣಶ್ಚ - ಲಕ್ಷ್ಮಣನೂ, ಕಿಮುವಾಚ - ಏನು ಹೇಳಿದನು, ವನಂ-ಅರಣ್ಯವನ್ನು, ಆಸಾದ್ಯ-ಹೊಂದಿದ, ಮೈಥಿಲೀಚ - ಸೀತಾದೇವಿಯೂ, ಕಿಮುವಾಚ - ಏನು ಹೇಳಿದಳು. ॥೧೦-೧೧॥ ಹೇ ಸೂತ-ಎಲೈ ಸಾರಥಿಯೇ, ರಾಮಸ್ಯ - ಶ್ರೀರಾಮನ, ಆಸಿತಂ - ಆಸನವನ್ನೂ, ಶಯಿತಂ ಶಯನವನ್ನೂ, ಭುಕ್ತಂ-ಭೋಜನವನ್ನೂ, ಕೀರ್ತಯ - ಹೇಳು, ಅಹಂ - ನಾನು, ಏತೇನ - ಇದರಿಂದ, ಸಾಧುಷು - ಸಜ್ಜನ

ಲವಾದ ಶರೀರವುಳ್ಳವಳೂ, ದಯೆಯನ್ನು ತೋರಲು ತಕ್ಕವಳೂ ಆದ ಸೀತೆಯೊಡಗೂಡಿ ರಥದಿಂದಿಳಿದು ಪಾದಚಾರಿಗಳಾಗಿ ಅರಣ್ಯಕ್ಕೆ ಹೋದುದೆಂತು? ಎಲೈ ಸೂತನೆ! ಅಶ್ವಿನೀದೇವತೆಗಳು ಮಂದರಪರ್ವತವನ್ನು ಪ್ರವೇಶಿಸಿದಂತೆ, ಶ್ರೀರಾಮಲಕ್ಷ್ಮಣರು ಅರಣ್ಯಪ್ರವೇಶ ಮಾಡಿದುದನ್ನು ನೋಡಿದ ನೀನೇ ಕೃತಕೃತ್ಯನು! ಸುಮಂತ್ರನೆ! ಶ್ರೀರಾಮನೇನಂದನು? ಲಕ್ಷ್ಮಣನಂದುದೇನು? ವನವನ್ನು ಪ್ರವೇಶಿಸುವಾಗ ಸೀತಾದೇವಿಯೇನಂದಳು? ಸುಮಂತ್ರ! ರಾಮನೆಲ್ಲಿ ಕುಳಿತುಕೊಂಡನು? ಏನನ್ನು ಭುಜಿಸಿದನು? ನನಗೀ ವಿಷಯಗಳನ್ನು ವಿಸ್ತಾರವಾಗಿ ಹೇಳುವವನಾಗು! ಎಲೈ ಸುಮಂತ್ರನೆ! ಪೂರ್ವದಲ್ಲಿ ಯಯಾತಿಯು ಸ್ವರ್ಗದಲ್ಲಿದ್ದು ಕೆಳಕ್ಕೆ ಬೀಳುವಾಗ, ದೇವೇಂದ್ರನನ್ನು ಕುರಿತು, "ಮಹೇಂದ್ರನೆ! ನನಗೆ ಸತ್ಸಹವಾಸವನ್ನುಂಟುಮಾಡು" ಎಂದು ಪ್ರಾರ್ಥಿಸಿ ಸತ್ಸಹವಾಸವನ್ನು ಪಡೆದು ದುಃಖವನ್ನು ತೊರೆದ

ಮೋತೇನ ಯಯಾತಿರಿವ ಸಾಧುಷು ॥ ೧೨ ॥ ಇತಿಸೂತೋ ನರೇಂದ್ರೇಣ ಚೋದಿತ ಸ್ಸಜ್ಜಮಾನಯಾ ॥ ಉವಾಚ ವಾಚಾ ರಾಜಾನಂ ಸಬಾಷ್ಪ ಪರಿರಬ್ಧಯಾ ॥ ೧೩ ॥ ಅಬ್ರವೀನ್ಮಾಂ ಮಹಾರಾಜ! ಧರ್ಮಮೇವಾನು ಪಾಲಯನ್ ॥ ಅಂಜಲಿಂ ರಾಘವಃ ಕೃತ್ವಾ ಶಿರಸಾಭಿಪ್ರಣಮ್ಯಚ ॥ ೧೪ ॥ ಸೂತ! ಮದ್ವಚನಾ ತ್ತಸ್ಯ ತಾತಸ್ಯ ವಿದಿತಾತ್ಮನಃ ॥ ಶಿರಸಾ ವಂದನೀಯಸ್ಯ ವಂದ್ಯೌ ಪಾದೌ ಮಹಾತ್ಮನಃ ॥ ೧೫ ॥ ಸರ್ವಮಂತಃಪುರಂ ವಾಚ್ಯಂ ಸೂತ! ಮದ್ವಚನಾ ತ್ತ್ವಯಾ ॥ ಆರೋಗ್ಯಮವಿಶೇಷೇಣ ಯಥಾರ್ಹಂ ಚಾಭಿವಾ

ರಲ್ಲಿ, ಯಯಾತಿರಿವ - ಯಯಾತಿಯಂತೆ, ಜೀವಿಷ್ಯಾಮಿ - ಬದುಕುವೆನು. ॥ ೧೨ ॥ ಸಸೂತಃ - ಆ ಸುಮಂತ್ರನು, ಇತಿ - ಈಪರಿಯಾಗಿ, ನರೇಂದ್ರೇಣ - ದಶರಥರಾಜನಿಂದ, ಚೋದಿತಃ - ಕೇಳಲ್ಪಟ್ಟವನಾಗಿ, ಸಜ್ಜಮಾನಯಾ - ಸ್ಫುಟವಾಗದಿರುವ, ಬಾಷ್ಪಪರಿರಬ್ಧಯಾ - ಕಣ್ಣೀರಿನಿಂದ ವ್ಯಾಪ್ತವಾದ, ವಾಚಾ - ಮಾತಿನಿಂದ, ಉವಾಚ - ಹೇಳಿದನು. ॥ ೧೩ ॥ ಹೇ ಮಹಾರಾಜ - ಎಲೈ ಧೊರೆಯೆ! ರಾಘವಃ - ಶ್ರೀರಾಮನು, ಶಿರಸಾ - ಶಿರಸ್ಸಿನಿಂದ, ಅಭಿಪ್ರಣಮ್ಯ - ನಮಸ್ಕಾರಮಾಡಿ, ಅಂಜಲಿಂ - ಅಂಜಲಿಯನ್ನು, ಕೃತ್ವಾ - ಮಾಡಿ, ಧರ್ಮಮೇವ - ಧರ್ಮವನ್ನೇ, ಅನುಪಾಲಯನ್ - ಪಾಲಿಸುವವನಾಗಿ, ಮಾಂ - ನನ್ನನ್ನು ಕುರಿತು, ಅಬ್ರವೀತ್ - ನುಡಿದನು. ॥ ೧೪ ॥ ಹೇ ಸೂತ - ಎಲೈ ಸಾರಥಿಯೇ, ಮದ್ವಚನಾತ್ - ನನ್ನ ಮಾತಿನಂತೆ, ವಿದಿತಾತ್ಮನಃ-ತಿಳಿವಳಿಕೆಯಾದ ಮನವುಳ್ಳ, (ಪರತತ್ವವೇತ್ತನಾದ) ವಂದನೀಯಸ್ಯ - ನಮಸ್ಕಾರಕ್ಕೆ ಯೋಗ್ಯನಾದ, ಮಹಾತ್ಮನಃ-ಮಹಾತ್ಮನಾದ, ತಸ್ಯತಾತಸ್ಯ - ಆ ತಂದೆಯ, ಪಾದೌ - ಚರಣಗಳು, ಶಿರಸಾ-ಮಂಡೆಯಿಂದ, ವಂದ್ಯೌ-ನಮಸ್ಕರಿಸತಕ್ಕವು. ॥೧೫॥ ಹೇ ಸೂತ-ಎಲೈ ಸಾರಥಿಯೇ, ಮದ್ವಚನಾತ್-ನನ್ನ ಮಾತಿನಂತೆ, ತ್ವಯಾ - ನಿನ್ನಿಂದ, ಸರ್ವಂ - ಸಮಸ್ತವಾದ, ಅಂತಃಪುರಂ - ಅಂತಃಪುರ ಸ್ತ್ರೀಸಂಘವು, ಅವಿಶೇಷೇಣ - ಸರ್ವಸಮವಾಗಿ, ಆರೋಗ್ಯಂ - ಕ್ಷೇಮವನ್ನು ಕುರಿತು, ವಾಚ್ಯಂ - ಹೇಳತಕ್ಕದು, ಯಥಾರ್ಹಂ - ಯಥಾಯೋಗ್ಯವಾಗಿ, ಅಭಿವಾದನಂಚ - ನಮಸ್ಕಾರವೂ, ವಾಚ್ಯಂ-

---

ರೀತಿಯಲ್ಲಿ ನಾನೂ ಸಹ ಶ್ರೀರಾಮನ ಚರಿತ್ರೆಯನ್ನು ಕೇಳುವುದರಿಂದ ಸ್ವಲ್ಪವಾಗಿ ದುಃಖವನ್ನು ಹೋಗಲಾಡಿಸಿಕೊಂಡು ಜೀವಿಸುತ್ತೇನೆ" ಇಂತು ನುಡಿದ ದಶರಥಭೂಪಾಲನ ನುಡಿಗಳನ್ನು ಕೇಳಿ ಸುಮಂತ್ರನು ಕಣ್ಣೀರಿಡುತ್ತ ಗದ್ಗದಸ್ವರಭರಿತನಾಗಿ ಹೇಳತೊಡಗಿದನು. ॥ ೫-೧೩ ॥ "ಎಲೈ ದಶರಥಮಹಾರಾಜನೆ! ಶ್ರೀರಾಮನು ಧರ್ಮವನ್ನೆಡೆಬಿಡದೆ ಅನುಸರಿಸಿದವನಾಗಿ, ಕೈಗಳನ್ನು ಜೋಡಿಸಿಕೊಂಡು, ನಿನ್ನನ್ನು ನಮಸ್ಕರಿಸಿ, ನನ್ನನ್ನು ಕುರಿತು ಹೀಗೆ ಹೇಳಿದನು. ಎಲೈ ಸುಮಂತ್ರನೆ! ಪರಮಾತ್ಮ ತತ್ವವನ್ನು ತಿಳಿದವನೂ, ತಲೆಬಾಗಿ ವಂದಿಸಲು ಅರ್ಹನೂ, ಮಹಾನುಭಾವನೂ ಆದ ದಶರಥಮಹಾರಾಜನ ಪಾದಗಳು ನನಗೆ ವಂದನೀಯಗಳೆಂದು ನನ್ನ ಮಾತಿನಿಂದರಿಕೆ ಮಾಡುವವನಾಗು. ಇಷ್ಟೆಯಲ್ಲದೆ ನನ್ನ ಮಾತಿನಂತೆ, ಅಂತಃಪುರ ಜನರೆಲ್ಲರಿಗೂ ಅವರವರಿಗೆ ತಕ್ಕಂತೆ ನಮಸ್ಕಾರವಂಗೈದೆನೆಂದು ಹೇಳು. ಎಲೈ ಸುಮಂತ್ರನೆ! ನಮ್ಮ ತಾಯಿಯಾದ ಕೌಸಲ್ಯಾದೇವಿಗೆ ಮರೆಯದೆ ಮೊದಲು ನನ್ನ

ದನಂ ‖ ೧೬ ‖ ಮಾತಾಚ ಮಮ ಕೌಸಲ್ಯಾ ಕುಶಲಂ ಚಾಭಿವಾದನಂ ‖ ಅಪ್ರಮಾದಂ ಚ ವಕ್ತವ್ಯಾ ಬ್ರೂಯಾಶ್ಚೈನಾ ಮಿದಂ ವಚಃ ‖ ೧೭ ‖ ಧರ್ಮ ನಿತ್ಯಾ ಯಥಾ ಕಾಲ ಮಗ್ನ್ಯಗಾರ ಪರಾಭವ ‖ ದೇವಿ ! ದೇವಸ್ಯ ಪಾದೌಚ ದೇವವ ತ್ಪರಿಪಾಲಯ ‖ ೧೮ ‖ ಅಭಿಮಾನಂಚ ಮಾನಂಚ ತ್ಯಕ್ತ್ವಾ ವರ್ತಸ್ವ ಮಾತೃಷು‖ಅನುರಾಜಾನ ಮಾರ್ಯಾಂಚ ಕೈಕೇಯಿಮಂಬ! ಕಾರಯ‖೧೯‖ ಕುಮಾರೇ ಭರತೇ ವೃತ್ತಿ ರ್ವರ್ತಿತವ್ಯಾ ಚ ರಾಜವತ್ ‖ ಅರ್ಥಜ್ಯೇಷ್ಠಾ ಹಿ ರಾಜಾನೋ ರಾಜಧರ್ಮ ಮನುಸ್ಮರ ‖ ೨೦ ‖ ಭರತಃ ಕುಶಲಂ ವಾಚ್ಯೋ

ಹೇಳತಕ್ಕುದು. ‖ ೧೭ ‖ ಮಮ - ನನ್ನ, ಮಾತಾ - ತಾಯಿಯಾದ, ಕೌಸಲ್ಯಾಚ - ಕೌಸಲ್ಯಾ ದೇವಿಗೂ, ಕುಶಲಂಚ - ಕ್ಷೇಮವನ್ನೂ, ಅಭಿವಾದನಂಚ - ನಮಸ್ಕಾರವನ್ನೂ, ಅಪ್ರಮಾದಂಚ - ಭರ್ತೃಶುಶ್ರೂಷಾವಿಷಯದಲ್ಲಿ ಅನಾಲಸ್ಯವನ್ನು, ವಕ್ತವ್ಯಾ - ಹೇಳತಕ್ಕವಳು, ಏನಾಂ-ಈ ಕೌಸಲ್ಯಾ ದೇವಿಯನ್ನು ಕುರಿತು, ಇದಂವಚಃ - ಈ ಮಾತನ್ನು, ಬ್ರೂಯಾಶ್ಚ - ಹೇಳು. ‖ ೧೭ ‖ ಹೇ ದೇವಿ - ಎಲೌ ಕೌಸಲ್ಯಾದೇವಿಯೇ, ಯಥಾಕಾಲಂ - ಕಾಲವನ್ನನುಸರಿಸಿ, ಅಗ್ನ್ಯಗಾರಪರಾ - ಅಗ್ನಿ ಹೋತ್ರುಗಳಲ್ಲಿ ಆಸಕ್ತಳಾಗಿ, ಧರ್ಮನಿತ್ಯಾ - ಧರ್ಮದಲ್ಲೇ ನಿತ್ಯಬುದ್ಧಿಯುಳ್ಳವಳು, ಭವ - ಆಗು, ದೇವಸ್ಯ - ಸ್ವಾಮಿಯಾದ ದಶರಥರಾಯನ, ಪಾದೌಚ - ಚರಣಗಳನ್ನು, ದೇವವತ್ - ದೇವರಂತೆ, ಪರಿಪಾಲಯ - ರಕ್ಷಿಸು. ‖ ೧೮ ‖ ಅಭಿಮಾನಂಚ - ಗರ್ವವನ್ನೂ, ಮಾನಂಚ - (ಗೋ) ಪರಾನು ಸರಣೆಯಿಲ್ಲದ ಭಾವವನ್ನೂ, (ಮ) ನಾನು ಹಿರಿಯಳೆಂಬ ಅಭಿಮಾನವನ್ನೂ, ತ್ಯಕ್ತ್ವಾ - ಬಿಟ್ಟು, ಮಾತೃಷು - ಇತರ ತಾಯಿಯರಲ್ಲಿ, ವರ್ತಸ್ವ - ನಡೆದುಕೊ, ಹೇ ಅಂಬ - ಎಲೌ ಜನನಿಯೆ ! ರಾಜಾನಂ - ಅರಸನನ್ನೂ, ಆರ್ಯಾಂ - ಪೂಜ್ಯಳಾದ, ಕೈಕೇಯಿಮಾಂಚ - ಕೈಕೇಯಿಮಾದೇವಿಯನ್ನೂ, ಅನುಕಾರಯ - ಅನುಸರಿಸಿಹೋಗು. ‖ ೧೯ ‖ ಕುಮಾರೇ - ಹುಡುಗನಾದ, ಭರತೇ - ಭರತನಲ್ಲಿ, ರಾಜವತ್ - ರಾಜನಂತೆ, ವೃತ್ತಿಃ - ಮನೋಭಾವವು, ವರ್ತಿತವ್ಯಾ - ಇರತಕ್ಕುದು, ಹಿ - ಯಾವ ಕಾರಣ, ರಾಜಾನಃ - ಅರಸರು, ಅರ್ಥಜ್ಯೇಷ್ಠಾಃ - ಧನದಿಂದಹಿರಿಯರೆನಿಸುವರೋ, ತಸ್ಮಾತ್ - ಆ

ಕ್ಷೇಮಸಮಾಚಾರವನ್ನರುಹಿ ಆಮೇಲೆ ನನ್ನ ನಮಸ್ಕಾರಗಳನ್ನರಿಕೆ ಮಾಡುವವನಾಗು. ಅಲ್ಲದೆ ನಾನೀಗ ಹೇಳುವ ಈ ಮಾತನ್ನೂ ಆಕೆಗೆ ತಿಳಿಸುವವನಾಗು. ಆ ಮಾತೇನೆಂಬೆಯೊ? ಕೇಳು ; "ಜನನಿಯಾದ ಕೌಸಲ್ಯಾದೇವಿಯೆ ! ಕಾಲಕ್ರಮದಂತೆ ಅಗ್ನಿಹೋತ್ರಗಳಲ್ಲಿ ಆಸಕ್ತಳಾಗಿ ಧರ್ಮದಲ್ಲಿಯೇ ನಿತ್ಯಬುದ್ಧಿಯುಳ್ಳವಳಾಗಿರು. ಸ್ವಾಮಿಯಾದ ದಶರಥ ರಾಯನ ಪಾದಗಳನ್ನು ದೇವರನ್ನು ಪೂಜಿಸುವ ಮರ್ಯಾದೆಯಲ್ಲಿ ಪೂಜಿಸುವವಳಾಗು. ಗರ್ವವನ್ನೂ, ನಾನು ದೊಡ್ಡವಳೆಂಬ ಅಭಿಮಾನವನ್ನೂ, ಪರಾನುಸರಣೆಯಿಲ್ಲದ ಭಾವ ವನ್ನೂ ತೊರೆದು, ಇತರ ತಾಯಂದರೊಡನೆ ಇರುವವಳಾಗು. ಎಲೌ ಜನನಿಯೆ ! ರಾಜ ನನ್ನೂ, ಪೂಜ್ಯಳಾದ ಕೈಕೇಯಿಮಾದೇವಿಯನ್ನೂ ಅನುಸರಿಸಿಕೊಂಡಿರು. ಕುಮಾರನಾದ ಭರತನಲ್ಲಿ ರಾಜನೆಂಬ ಮನೋಭಾವವನ್ನು ಹೊಂದಬೇಕು, ಸಾಮಾನ್ಯವಾಗಿ ರಾಜರು ಧನದಿಂದ ಜ್ಯೇಷ್ಠರಾಗಿರುವುದರಿಂದ ರಾಜಧರ್ಮವನ್ನನುಸರಿಸಿ ನಡೆದುಕೊ !" ಈ ಪ್ರಕಾರ

ವಾಚ್ಯೋ ಮದ್ವಚನೇನಚ ‖ ಸರ್ವಾಸ್ವೇವ ಯಥಾನ್ಯಾಯಂ ವೃತ್ತಿಂ ವರ್ತಸ್ವ ಮಾತೃಷು ‖ ೨೧ ‖ ವಕ್ತವ್ಯಶ್ಚ ಮಹಾಬಾಹು ರಿಕ್ಷ್ವಾಕು ಕುಲನಂದನಃ ‖ ಪಿತರಂ ಯೌವರಾಜ್ಯಸ್ಥೋ ರಾಜ್ಯಸ್ಥ ಮನುಪಾಲಯ ‖ ೨೨ ‖ ಅತಿಕ್ರಾಂತ ವಯಾ ರಾಜಾ ಮಾಸ್ಮೈನಂ ವ್ಯಪರೋರುಧಃ ‖ ಕುಮಾರ ರಾಜ್ಯೇ ಜೀವ ತ್ವಂ ತಸ್ಯೈವಾಜ್ಞಾಪ್ರವರ್ತನಾತ್ ‖ ೨೩ ‖ ಅಬ್ರವೀಚ್ಚಾಪಿ ಮಾಂ ಭೂಯೋ ಭೃಶಮಶ್ರೂಣಿ ವರ್ತಯನ್ ‖ ಮಾತೇವ ಮಮ ಮಾತಾ ತೇ ದ್ರಷ್ಟವ್ಯಾ

ಕಾರಣ, ರಾಜಧರ್ಮಂ - ರಾಜಧರ್ಮವನ್ನು, ಅನುಸ್ಮರ - ಅನುಸರಿಸಿಹೋಗು. ‖೨೦‖ ಭರತಃ - ಭರತನು, ಕುಶಲಂ - ಕ್ಷೇಮವನ್ನು, ವಾಚ್ಯಃ - ಕೇಳತಕ್ಕವನು, ಮದ್ವಚನೇನಚ - ನನ್ನ ಮಾತಿನಿಂದಲೂ ಕೂಡ, ವಾಚ್ಯಃ-ಹೇಳತಕ್ಕವನು, ಸರ್ವಾಸು ಸಮಸ್ತರಾದ, ಮಾತೃಷು - ತಾಯಿಯರಲ್ಲಿ, ಯಥಾನ್ಯಾಯಂ - ನ್ಯಾಯಾನುಸಾರವಾಗಿ, ವೃತ್ತಿಂ - ಮನೋವೃತ್ತಿಯನ್ನು, ವರ್ತಸ್ವ - ನಡಿಸು. ‖ ೨೧ ‖ ಮಹಾಬಾಹುಃ - ಮಹಾಭುಜಪರಾಕ್ರಮಿಯಾದ, ಇಕ್ಷ್ವಾಕುಕುಲನಂದನಃ - ಇಕ್ಷ್ವಾಕು ವಂಶಕ್ಕೆ ಆನಂದಕರನಾದ, ಭರತಃ - ಭರತನು, ವಕ್ತವ್ಯಶ್ಚ - ಹೇಳತಕ್ಕವನು, ಯೌವರಾಜ್ಯಸ್ಥಃ - ದ್ವಿತೀಯ ರಾಜ್ಯಭಾರದಲ್ಲಿ ಇರುವನಾಗಿ, ರಾಜ್ಯಸ್ಥಂ - ರಾಜ್ಯದಲ್ಲಿ ಪಟ್ಟಾಭಿಷಿಕ್ತನಾದ, ಪಿತರಂ - ತಂದೆಯನ್ನು, ಅನುಪಾಲಯ - ಪರಿಪಾಲನೆಮಾಡು. ‖ ೨೨ ‖ ಕುಮಾರರಾಜ್ಯೇ - ಯೌವ ರಾಜ್ಯದಲ್ಲಿ, ತ್ವಂ - ನೀನು, ತಸ್ಯೈವ - ಆ ದಶರಥರಾಯನ, ಆಜ್ಞಾಪ್ರವರ್ತನಾತ್ - ಆಜ್ಞಾನುಸಾರವೇ, ಜೀವ - ಬದುಕು, ರಾಜಾ - ಅರಸು, ಅತಿಕ್ರಾಂತವಯಾಃ, ಅತಿಕ್ರಾಂತ - ಕಳೆದುಹೋದ, ವಯಾಃ - ವಯಸ್ಸುಳ್ಳವನು, ಏನಂ - ಈ ರಾಜನನ್ನು, ವ್ಯಪರೋರುಧಸ್ಮ - ತಡೆಯಬೇಡ. ‖ ೨೩ ‖ ಮಾಂ - ನನ್ನನ್ನು ಕುರಿತು, ಭೂಯಃ - ಮತ್ತು, ಭೃಶಂ - ಅತ್ಯಂತವಾಗಿ, ಅಶ್ರೂಣಿ - ಕಂಬನಿಯನ್ನು, ವರ್ತಯನ್ - ಸುರಿಸುತ್ತಲಿರುವ, ಮಮ - ನನ್ನ, ಮಾತಾ - ತಾಯಿಯಾದ, ಪುತ್ರಗರ್ಧಿನೀ - ಪುತ್ರನಲ್ಲಿ ಅಭಿಲಾಷೆಯುಳ್ಳ ಕೌಸಲ್ಯಾದೇವಿಯು, ತೇ - ನಿನ್ನ, ಮಾತೇವ -

---

ವಾಗಿ ನನ್ನ ತಾಯಿಯಾದ ಕೌಸಲ್ಯೆಗೆ ಹೇಳು. ‖ ೧೪-೨೦ ‖ ಎಲೈ ಸುಮಂತ್ರನೆ! ನನ್ನ ಮಾತಿನಿಂದ ಭರತನಿಗೆ ನನ್ನ ಕ್ಷೇಮವನ್ನು ತಿಳುಹಿಸು. ತಾಯಿಯರೆಲ್ಲರಲ್ಲಿಯೂ ಒಂದೇ ಸಮನಾಗಿ ನಡೆದುಕೊಳ್ಳಬೇಕೆಂದು ಹೇಳು. ಮಹಾಬಾಹುವೂ, ಪರಾಕ್ರಮಿಯೂ, ಇಕ್ಷ್ವಾಕುಕುಲಕ್ಕೆ ಆನಂದವನ್ನುಂಟುಮಾಡುವವನೂ ಆದ ಆ ಭರತನಿಗೆ ಇನ್ನೊಂದು ಮಾತನ್ನು ಹೇಳತಕ್ಕುದಿದೆ. ಏನೆಂದರೆ:—“ ವತ್ಸಾ ಭರತ! ನೀನು ಯೌವರಾಜ್ಯಾಭಿಷಿಕ್ತನಾಗಿ ತಂದೆಯಾದ ದಶರಥಮಹಾರಾಜನನ್ನು ಪಾಲಿಸುವವನಾಗು. ಆತನ ಅಣತಿಯಂತೆ ರಾಜ್ಯಭಾರವನ್ನು ಮಾಡುವವನಾಗು. ಮಹಾರಾಜನಾದ ದಶರಥನು ಅತಿ ವೃದ್ಧನು; ಆದುದರಿಂದ ಆತನ ಆಜ್ಞೆಯನ್ನೆಂದಿಗೇ ಆಗಲಿ ಮೀರಬೇಡ” ಈ ಪ್ರಕಾರವಾಗಿ ಹೇಳು. ಹೀಗೆ ಹೇಳಿದ ಬಳಿಕ ಶ್ರೀರಾಮನು ಪುನಃ ನನ್ನನ್ನು ನೋಡಿ ಧಾರೆಧಾರೆಯಾಗಿ ಕಣ್ಣೀರಿಡುತ್ತ ಬಹಳವಾಗಿ ದುಃಖಿಸಿ, ಭರತನಿಗೆ ಈ ಮಾತನ್ನು ಹೇಳಬೇಕೆಂದನು. ಅದೇನೆಂದರೆ:—“ಎಲೈ ಭರತನೆ! ಅಧಿಕವಾದ ಪುತ್ರವಾತ್ಸಲ್ಯವುಳ್ಳವಳೂ, ನನಗೆ ತಾಯಿಯಾದವಳೂ ಆದ

ಪುತ್ರಗರ್ಧಿನೀ ॥ ೨೪ ॥ ಇತ್ಯೇವಂ ಮಾಂ ಮಹಾರಾಜ ! ಬ್ರುವನ್ನೇವ ಮಹಾಯಶಾಃ॥ ರಾಮೋ ರಾಜೀವತಾಮ್ರಾಕ್ಷೋ ಭೃಶಮಶ್ರೂಣ್ಯ ವರ್ತಯತ್ ॥೨೫॥ ಲಕ್ಷ್ಮಣಸ್ತು ಸು ಸಂಕ್ರುದ್ಧೋ ನಿಶ್ವಸನ್ ವಾಕ್ಯಮಬ್ರವೀತ್ ॥ ಕೇನಾಯಮಪರಾಧೇನ ರಾಜಪುತ್ರೋ ವಿವಾಸಿತಃ ॥೨೬॥ ರಾಜ್ಞಾತು ಖಲು ಕೈಕೇಯ್ಯಾ ಲಘುಮಾಶ್ರಿತ್ಯ ಶಾಸನಂ ॥ ಕೃತಂ ಕಾರ್ಯಮಕಾರ್ಯಂವಾ ವಯಂ ಯೇನಾಭಿಪೀಡಿತಾಃ ॥ ೨೭ ॥ ಯದಿ ಪ್ರವ್ರಾಜಿತೋ ರಾಮೋ ಲೋಭಕಾರಣ

ತಾಯಿಯಂತೆ, ದ್ರಷ್ಟವ್ಯಾ - ನೋಡತಕ್ಕವಳು. ॥ ೨೪ ॥ ಹೇ ಮಹಾರಾಜ - ಎಲೈ ಮಹಾರಾಜನೇ, ಇತ್ಯೇವಂ - ಈಪರಿಯಾಗಿ, ಮಾಂ - ನನ್ನನ್ನು ಕುರಿತು, ಬೃವನ್ನೇವ - ಮಾತನಾಡುತ್ತಲೇ ಇದ್ದು, ಮಹಾಯಶಾಃ ಮಹಾಕೀರ್ತಿವಂತನಾದ, ರಾಜೀವತಾಮ್ರಾಕ್ಷಃ - ಕಮಲಗಳಂತೆ ಕೆಂಪಗಿರುವ ನೇತ್ರಗಳುಳ್ಳ, ರಾಮಃ - ಶ್ರೀರಾಮನು, ಭೃಶಂ - ಅತ್ಯಂತವಾಗಿ, ಅಶ್ರೂಣಿ - ಕಂಬನಿಗಳನ್ನು, ಅವರ್ತಯತ್ - ಬಿಟ್ಟನು. ॥ ೨೫ ॥ ಲಕ್ಷ್ಮಣಸ್ತು - ಲಕ್ಷ್ಮಣನಾದರೆ, ಸುಸಂಕ್ರುದ್ಧಃ - ಕೋಪಗೊಂಡವನಾಗಿ, ನಿಶ್ವಸನ್-ನಿಟ್ಟುಸಿರುಬಿಟ್ಟು, ವಾಕ್ಯಂ-ಮಾತನ್ನು, ಅಬ್ರವೀತ್ - ನುಡಿದನು, ರಾಜಪುತ್ರಃ - ರಾಜಕುವರನಾದ, ಅಯಂ - ಈ ಶ್ರೀರಾಮನು, ಕೇನಾಪರಾಧೇನ - ಯಾವ ಅಪರಾಧದಿಂದ, ವಿವಾಸಿತಃ - ಹೊರಡಿಸಲ್ಪಟ್ಟನು. ॥ ೨೬ ॥ ರಾಜ್ಞಾ - ಅರಸಿನಿಂದ, ಕೈಕೇಯ್ಯಾಃ - ಕೈಕೇಯಿದೇವಿಯ, ಲಘು-ತುಚ್ಛವಾದ, ಶಾಸನಂ-ಆಜ್ಞೆಯನ್ನು, ಆಶ್ರಿತ್ಯ-ಹೊಂದಿ, ಯೇನಾಕಾರ್ಯಂವಾ - ಯಾವ ಅಕಾರ್ಯದಿಂದ, ವಯಂ-ನಾವು, ಅಭಿಪೀಡಿತಾಃ ಬಾಧಿತರಾದೆವೋ, ತತ್ - ಅಂತಹ ಅಕಾರ್ಯವು, ಕಾರ್ಯಂವಾ - ಸತ್ಕಾರದಂತೆ, ಕೃತಂ - ಮಾಡಲ್ಪಟ್ಟಿತು. ॥ ೨೭ ॥ ರಾಮಃ - ಶ್ರೀರಾಮನು, ಪ್ರವ್ರಾಜಿತಇತಿಯತ್ - ವನವಾಸಕ್ಕೆ ಹೊರಡಿಸಲ್ಪಟ್ಟನೆಂಬದು ಯಾವದುಂಟೋ, ತತ್ - ಅದು, ಸರ್ವಥಾ - ಬಹುಬಗೆಯಾಗಿ, ದುಷ್ಕೃತಂ - ದುಷ್ಟಕಾರ್ಯವು, ಕೃತಂ - ಮಾಡಲ್ಪಟ್ಟಿತು, ವರದಾನನಿಮಿತ್ತಂಯದಿ - ವರದಾನ ನಿಮಿತ್ತವಾಗಿ ಹೊರಡಿಸಲ್ಪಟ್ಟನೆಂಬದಾಗಿ ಹೇಳುವಿಯೋ, ಸರ್ವಥಾ - ಸರ್ವಪ್ರಕಾರವಾಗಿ, ದುಷ್ಕೃತಂ - ದುಷ್ಕಾರ್ಯ

ಕೌಸಲ್ಯಾದೇವಿಯನ್ನು, ನಿನ್ನ ತಾಯಿಯನ್ನು ಗೌರವಿಸುವಂತೆ ಗೌರವಿಸು" ಎಲೈ ದಶರಥ ಮಹಾರಾಜನೆ! ಈ ರೀತಿ ಕೀರ್ತಿವಂತರಲ್ಲಿ ಉತ್ತಮನಾದ ಶ್ರೀರಾಮನು ಹೇಳಿ ಬಹಳವಾದ ದುಃಖದಿಂದ ಕೆಂಪಾದ ಕಂಗಳುಳ್ಳವನಾಗಿ ಕಂಬನಿಗರೆದನು. ॥ ೨೧-೨೫ ॥ ಆಗ ಲಕ್ಷ್ಮಣಸ್ವಾಮಿಯು ಬಹಳವಾದ ಕೋಪವನ್ನು ಹೊಂದಿ, ನಿಟ್ಟುಸಿರುಗಳನ್ನು ಬಿಡುತ್ತ ಹೀಗೆಂದನು. "ಯಾವ ಕಾರಣದಿಂದೀ ಶ್ರೀರಾಮನು ಅರಣ್ಯಕ್ಕೆ ಕಳುಹಲ್ಪಟ್ಟನು? ದಶರಥ ಮಹಾರಾಜನು ದುರ್ಮಾರ್ಗಳಾದ ಕೈಕೇಯಿಯ ಆಜ್ಞೆಯನ್ನವಲಂಬಿಸಿ ನಮ್ಮನ್ನು ಅನೇಕ ವಿಧವಾದ ಕಷ್ಟಗಳಿಗೀಡುಮಾಡಿದನಲ್ಲವೆ? ಇಂತಹ ಶಿಕ್ಷೆಯನ್ನು ವಿಧಿಸಲು ನಾವೇನು ಅಪರಾಧ ಮಾಡಿದೆವು? ಆಹ! ದಶರಥನು ಕಾಮಪೀಡಿತನಾಗಿ ಎಂತಹ ಕ್ರೂರ ಕರ್ಮವನ್ನಾಚರಿಸಿದನು? ರಾಮನನ್ನು ಅರಣ್ಯಕ್ಕೆ ಕಳುಹುವುದು, ರಾಜ್ಯಲೋಭದಿಂದಾದರೆ ಅದು ದೋಷವೇ ಸರಿ! ಕೈಕೇಯಿಗೆ ವರಗಳನ್ನು ಕೊಟ್ಟುದರಿಂದ ನಮ್ಮನ್ನು ಅರಣ್ಯಕ್ಕೆ ಕಳುಹಿಸಿ

ಕಾರಿತಂ ॥ ವರದಾನ ನಿಮಿತ್ತಂವಾ ಸರ್ವಥಾ ದುಷ್ಕೃತಂ ಕೃತಂ ॥ ೨೮ ॥
ಇದಂ ತಾವದ್ಯಥಾ ಕಾಮ ಮೀಶ್ವರಸ್ಯ ಕೃತೇ ಕೃತಂ ॥ ರಾಮಸ್ಯತು ಪರಿತ್ಯಾಗೇ
ನ ಹೇತು ಮುಪಲಕ್ಷಯೇ ॥ ೨೯ ॥ ಅಸಮೀಕ್ಷ್ಯ ಸಮಾರಬ್ಧಂ ವಿರುದ್ಧಂ
ಬುದ್ಧಿ ಲಾಘವಾತ್ ॥ ಜನಯಿಷ್ಯತಿ ಸಂಕ್ರೋಶಂ ರಾಘವಸ್ಯ ವಿವಾಸನಂ॥೨೯॥
ಅಹಂ ತಾವನ್ಮಹಾರಾಜೇ ಪಿತೃತ್ವಂ ನೋಪಲಕ್ಷಯೇ ॥ ಭ್ರಾತಾ ಭರ್ತಾಚ
ಬಂಧುಶ್ಚ ಪಿತಾಚ ಮಮ ರಾಘವಃ ॥ ೩೦ ॥ ಸರ್ವಲೋಕಪ್ರಿಯಂ ತ್ಯಕ್ತ್ವಾ
ಸರ್ವಲೋಕ ಹಿತೇರತಂ ॥ ಸರ್ವಲೋಕೋನುರಜ್ಯೇತ ಕಥಂ ತ್ವಾನೇನ

ವೇಸರಿ, ತತ್ - ಆ ಹೊರಡುವಿಕೆಯು, ಲೋಭಕಾರಣಕಾರಿತಂ-ಪರದ್ರವ್ಯಾಕಾಂಕ್ಷೆಯೆಂಬ ಹೇತುವಿನಿಂದ ಮಾಡಲ್ಪಟ್ಟಿತು. ॥ ೨೮ ॥ ಅಥವಾ - ಹಾಗಲ್ಲದೆಹೋದರೆ, ಇದಂತಾವತ್- ಈ ಕಾರ್ಯವು, ಯಥಾಕಾಮಂ-ಸ್ವತಂತ್ರವಾಗಿ, ಈಶ್ವರಸ್ಯ-(ಗೋ)ಭಗವಂತನ, ಕೃತೇ-ಪ್ರೇರಣೆಯಿಂದ, (ಮ) ನಾನು ರಾಜನೆಂಬ ಗರ್ವದಿಂದ; ಕೃತಂ-ಮಾಡಲ್ಪಟ್ಟಿತು, ರಾಮಸ್ಯತು-ಶ್ರೀರಾಮನ, ಪರಿತ್ಯಾಗೇ-ತ್ಯಾಗದಲ್ಲಿ, ಹೇತುಂ-ಮತ್ತಾವಕಾರಣವನ್ನೂ, ನೋಪಲಕ್ಷಯೇ-ಕಾಣೆನು. ॥೨೯॥ ಅಸಮೀಕ್ಷ್ಯ-ಆಲೋಚಿಸದೆ, ಬುದ್ಧಿಲಾಘವಾತ್-ಸ್ವಲ್ಪಬುದ್ಧಿಯಿಂದ, ಆರಬ್ಧಂ-ಆರಂಭಿಸಲ್ಪಟ್ಟ, ವಿರುದ್ಧಂ - ಲೋಕವಿರುದ್ಧವಾದ, ರಾಘವಸ್ಯ ಶ್ರೀರಾಮನ, ವಿವಾಸನಂ-ಹೊರಡುವಿಕೆಯು,ಸಂಕ್ರೋಶಂ-ದಶರಥಮಹಾರಾಯನಿಗೆ ನಿಂದೆಯನ್ನು, ಜನಯಿಷ್ಯತಿ - ಹುಟ್ಟಿಸುವದು. ॥ ೩೦ ॥ ಅಹಂತು - ನಾನಾದರೆ, ಮಹಾರಾಜೇ - ಮಹಾರಾಜನಲ್ಲಿ, ಪಿತೃತ್ವಂ - ಪಿತೃಭಾವವನ್ನು, ನೋಪಲಕ್ಷಯೇ - ಎಣಿಸುವದಿಲ್ಲ, ರಾಘವಃ - ಶ್ರೀರಾಮನು, ಮಮ - ನನಗೆ, ಭ್ರಾತಾ - ಅಣ್ಣನಾದರೂ, ಭರ್ತಾ - ಭರಣಕರ್ತನೂ, ಬಂಧುಶ್ಚ-ಬಂಧುವೂ, ಪಿತಾಚ - ತಂದೆಯೂ ಆಗಿದ್ದಾನೆ, ಸರ್ವಲೋಕಪ್ರಿಯಂ - ಸಮಸ್ತಜನರಿಗೂ ಇಷ್ಟನಾದ, ಸರ್ವಲೋಕಹಿತೇ - ಸರ್ವಜನರಿಗೂ ಪ್ರೀತಿಯುಂಟುಮಾಡುವುದರಲ್ಲಿ, ರತಂ - ಆಸಕ್ತನಾದ, (ರಾಮಂ - ಶ್ರೀರಾಮನನ್ನು,) ತ್ಯಕ್ತ್ವಾ - ಬಿಟ್ಟು, ಸರ್ವಲೋಕಃ - ಸಮಸ್ತಜನವೂ, ಅನೇನ

ದುದೇ ಆದರೂ, ಅದು ದೋಷವೆ! ॥ ೨೬-೨೮ ॥ ಈ ಪ್ರಕಾರವಾಗಿ ದಶರಥರಾಯನು ಶ್ರೀರಾಮನನ್ನು ಅರಣ್ಯಕ್ಕೆ ಕಳುಹಲು ಕಾರಣವೇನೂ ಕಾಣುವುದಿಲ್ಲ. ಆದುದರಿಂದ ಮಹಾರಾಜನು ಇಂತಹ ಕಾರ್ಯವನ್ನು ಪ್ರಭುತ್ವ ಮದದಿಂದ ಸ್ವೇಚ್ಛೆಯಾಗಿ ಮಾಡಿರುವನಲ್ಲದೆ ಮತ್ತೆ ಬೇರೆಯಲ್ಲವು. ಬುದ್ಧಿ ಮಾಂದ್ಯದಿಂದ ಆಲೋಚಿಸದೆ ಮಾಡಲ್ಪಟ್ಟಿರುವುದೂ, ಲೋಕವಿರುದ್ಧವೂ ಆದ ಈ ಶ್ರೀರಾಮನ ಅರಣ್ಯವಾಸದ ಆಣತಿಯು ಆತನಿಗೆ ಮಹದ್ದುಃಖವನ್ನುಂಟುಮಾಡುತ್ತದೆ ಆದುದರಿಂದೀಗಲಾ ದಶರಥರಾಯನು ಶೋಕಿಸುವನೆಂದು ತೋರುತ್ತದೆ. ನಾನು ಮಾತ್ರ ಮಹಾರಾಜ ದಶರಥನಲ್ಲಿ, ತಂದೆಯಲ್ಲಿರಬೇಕಾದ ಯಾವ ಲಕ್ಷಣವನ್ನೂ ಕಾಣುವುದಿಲ್ಲ. ನನಗೆ ಶ್ರೀರಾಮನು ಅಣ್ಣನು ; ಆತನೇ ಪ್ರಭುವು ; ಬಂಧುವಾದವನೂ ಆತನೇ ; ಇಷ್ಟೆಯಲ್ಲ, ತಂದೆಯೂ ಕೂಡ ಶ್ರೀರಾಮನಲ್ಲದೆ ಮತ್ತಾರೂ ಅಲ್ಲವು. ಸಮಸ್ತ ಲೋಕಗಳಿಗೂ ಪ್ರಿಯನಾಗಿರುವವನೂ, ಎಲ್ಲ ಲೋಕಗಳಿಗೂ ಹಿತವನ್ನುಂಟುಮಾಡಬೇಕೆಂದೆಣಿಸುವವನೂ ಆದ ಶ್ರೀರಾಮನನ್ನು ತೊರೆದ ಎಲೈ ದಶರಥಮಹಾರಾಜನೆ!

ಕರ್ಮಣಾ ||೩೨|| ಸರ್ವಪ್ರಜಾಭಿರಾಮಂಹಿ ರಾಮಂ ಪ್ರವ್ರಾಜ್ಯ ಧಾರ್ಮಿಕಂ || ಸರ್ವಲೋಕಂ ವಿರುಧ್ಯೇಮಂ ಕಥಂ ರಾಜಾ ಭವಿಷ್ಯಸಿ || ೩೩ || ಜಾನಕೀಚ ಮಹಾರಾಜ! ನಿಶ್ವಸಂತೀ ತಪಸ್ವಿನೀ || ಭೂತೋಪಹತಚಿತ್ತೇವ ವಿಷ್ಠಿತಾ ವಿಸ್ಮೃತಾ ಸ್ಥಿತಾ || ೩೪ || ಅದೃಷ್ಟ ಪೂರ್ವವ್ಯಸನಾ ರಾಜಪುತ್ರೀ ಯಶಸ್ವಿನೀ || ತೇನ ದುಃಖೇನ ರುದತೀ ನೈವ ಮಾಂ ಕಿಂಚಿ ದಬ್ರವೀತ್ || ೩೫ ||

ಕರ್ಮಣಾ - ಈ ದುರ್ವ್ಯಾಪಾರದಿಂದ, ತ್ವಾಂ - ನಿನ್ನನ್ನು ಕುರಿತು, ಕಥಂ - ಹೇಗೆತಾನೆ, ಅನುರಜ್ಯೇತ - ಅನುರಕ್ತವಾದೀತು. || ೩೧-೩೨ || ಸರ್ವಪ್ರಜಾಭಿರಾಮಂ - ಸಮಸ್ತ ಜನಗಳಿಗೆ ಮನೋಹರನಾದ, ಧಾರ್ಮಿಕಂ - ಧರ್ಮಿಷ್ಠನಾದ, ರಾಮಂ - ಶ್ರೀರಾಮನನ್ನು, ಪ್ರವ್ರಾಜ್ಯ - ಹೊರಡಿಸಿ, ಇಮಂಸರ್ವಲೋಕಂ - ಈ ಸಮಸ್ತಲೋಕವನ್ನೂ, ವಿರುಧ್ಯ - ವಿರೋಧಿಸಿ, ಕಥಂ - ಹೇಗೆ, ರಾಜಾ - ಅರಸನೂ, ಭವಿಷ್ಯಸಿ - ಆಗುವೆ, ಇತಿ - ಇಂತೆಂದು, ಬ್ರೂಹಿ - ಹೇಳು, ಇತಿ - ಹೀಗೆಂದು, ಲಕ್ಷ್ಮಣಃ - ಲಕ್ಷ್ಮಣನು, ಅಬ್ರವೀತ್ - ನುಡಿದನು. || ೩೩ || ಹೇ ಮಹಾರಾಜ - ಎಲೈ ಮಹಾರಾಜನೇ, ತಪಸ್ವಿನೀ - ದೈನ್ಯವುಳ್ಳ, ನಿಶ್ವಸಂತೀ - ನಿಟ್ಟುಸಿರು ಬಿಡುತ್ತಿರುವ, ಜಾನಕೀಚ - ಸೀತಾದೇವಿಯೂ, ಭೂತೋಪಹತಚಿತ್ತೇವ - ಪಿಶಾಚದಿಂದ ಹೊಡಿಯಲ್ಪಟ್ಟ ಮನಸ್ಸುಳ್ಳವಳಂತೆ, ವಿಷ್ಠಿತಾ - ನಿಂತು, ವಿಸ್ಮೃತಾ - ಸಕಲ ಪ್ರಯೋಜನಗಳನ್ನು ಮರೆತು, ಸ್ಥಿತಾ - ಇರುತ್ತ, ಅದೃಷ್ಟಪೂರ್ವವ್ಯಸನಾ - ಹಿಂದಾವಾಗಲೂ ಕಾಣದಿರುವ ಶೋಕವುಳ್ಳವಳಾಗಿ, ರಾಜಪುತ್ರೀ - ರಾಜಕನ್ಯೆಯಾದ ಕಾರಣ, ಯಶಸ್ವಿನೀ - ಕೀರ್ತಿಯಲ್ಲಿಯೇ ದೃಷ್ಟಿಯಿಟ್ಟ, ತೇನ ದುಃಖೇನೈವ - ಅದೇ ವ್ಯಸನದಿಂದಲೇ, ರುದತೀ - ಅಳುತ್ತ, ಮಾಂ - ನನ್ನನ್ನು ಕುರಿತು, ಕಿಂಚಿತ್- ಸ್ವಲ್ಪವಾದರೂ, ನೈವಾಬ್ರವೀತ್ - ಹೇಳಲೇಯಿಲ್ಲವು. || ೩೪ ೩೫ || ಪರಿಶುಷ್ಯತಾ - ಒಣಗಿ ಹೋಗುತ್ತಿರುವ, ಮುಖೇನ - ಮುಖದಿಂದ, ಭರ್ತಾರಂ - ಗಂಡನಾದ ಶ್ರೀರಾಮನನ್ನು, ಉದೀಕ್ಷ್ಯಮಾಣಾ - ನೋಡುತ್ತ, ಸಾ - ಆ ಸೀತಾದೇವಿಯು, ಪ್ರಯಾಂತಂ - ಹೊರಟುಬರುತ್ತಿರುವ, ಮಾಂ-

ಸಕಲ ಜನಗಳಿಗೂ ಸಹ ನಿನ್ನಲ್ಲಿ ಅಭಿಮಾನವು ಹೇಗೆತಾನೆ ಜನಿಸುವುದು" ಈ ಪ್ರಕಾರವಾಗಿ ಹೇಳೆಂದು ನನ್ನೊಡನೆಂದನು. ಅಲ್ಲದೆ, "ಲೋಕಾಭಿರಾಮನೂ, ಧರ್ಮವನ್ನೆಡೆಬಿಡದೆ ಆಚರಿಸುವವನೂ ಆದ ರಾಮನನ್ನು ಅರಣ್ಯಕ್ಕಟ್ಟಿ, ಜನರೆಲ್ಲರಿಗೂ ವಿರೋಧವನ್ನಾಚರಿಸಿದ ಈ ದಶರಥನು ರಾಜ್ಯಾಧಿಪತಿಯಾಗಿರುವುದೆಂತು?" ಎಂದು ಕೂಡ ಹೇಳಿದನು. ಎಲೈ ದಶರಥಮಹಾರಾಜನೆ! ಸತ್ಸ್ವಭಾವವತಿಯಾದ ಸೀತಾದೇವಿಯು ನಿಟ್ಟುಸಿರುಗಳನ್ನುಬಿಡುತ್ತ ಮೈಮರೆತವಳೂ, ಮುಗುಳ್ನಗೆಯಿಲ್ಲದವಳೂ, ಪಿಶಾಚಾವಿಷ್ಟಳಾದಂತೆ ಅತ್ತಿತ್ತ ಕದಲದವಳೂ, ಆಶ್ಚರ್ಯವನ್ನು ಹೊಂದಿದವಳೂ ಆಗಿ ಏನನ್ನೂ ಹೇಳದೆ ಸುಮ್ಮನಿದ್ದಳು. ಇದು ವರೆವಿಗೆಂದೂ ದುಃಖವನ್ನು ಹೊಂದದವಳೂ, ರಾಜಕುಮಾರಿಯೂ, ಕೀರ್ತಿವತಿಯರಲ್ಲಿ ಶ್ರೇಷ್ಠಳಾದವಳೂ ಆದ ಸೀತಾದೇವಿಯು ದುಃಖದಿಂದ ಪರಿತಪಿಸುತ್ತಿದ್ದ ನನ್ನನ್ನುನೋಡಿಯೂ ಮಾತನಾಡದೆ ಸುಮ್ಮನಿದ್ದಳು. ಇಷ್ಟೆಯಲ್ಲದೆ ಆ ದೇವಿಯು, ಒಣಗಿಹೋದ ಮುಖವುಳ್ಳವಳಾಗಿ, ಪತಿಯಾದ ಶ್ರೀರಾಮನನ್ನು ನೋಡಿ, ನಾನು ಪ್ರಯಾಣವಾಗಿ ಹೊರಟು

ಉದ್ವೀಕ್ಷಮಾಣಾ ಭರ್ತಾರಂ ಮುಖೇನ ಪರಿಶುಷ್ಯತಾ || ಮುಮೋಚ ಸಹಸಾ ಬಾಷ್ಪಂ ಮಾಂ ಪ್ರಯಾಂತ ಮುದೀಕ್ಷ್ಯಸಾ || ೩೬ ||

ತಥೈವ ರಾಮೋ ಶ್ರುಮುಖಃ ಕೃತಾಂಜಲಿಃ
ಸ್ಥಿತೋ ಭವಲ್ಲಕ್ಷ್ಮಣ ಬಾಹುಪಾಲಿತಃ ||
ತಥೈವ ಸೀತಾ ರುದತೀ ತಪಸ್ವಿನೀ
ನಿರೀಕ್ಷತೇ ರಾಜರಥಂ ತಥೈವ ಮಾಂ || ೩೭ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಪಂಚಾಶಸ್ಸರ್ಗಃ.

ನನ್ನನ್ನು, ಉದ್ವೀಕ್ಷ - ಕಂಡು, ಸಹಸಾ - ಶೀಘ್ರವಾಗಿ, ಬಾಷ್ಪಂ-ಕಂಬನಿಯನ್ನು, ಮುಮೋಚ-ಬಿಟ್ಟಳು. || ೩೬ || ತಥೈವ - ಹಾಗೆಯೇ, ರಾಮಃ - ಶ್ರೀರಾಮನು, ಅಶ್ರುಮುಖಃ - ಕಂಬನಿಯಿಂದ ಕೂಡಿದ ಮುಖವುಳ್ಳವನಾಗಿ, ಕೃತಾಂಜಲಿಃ - ಅಂಜಲಿಬದ್ಧನಾಗಿ, ಸ್ಥಿತಃ - ನಿಂತು, ಲಕ್ಷ್ಮಣಬಾಹುಪಾಲಿತಃ - ಲಕ್ಷ್ಮಣಸ್ವಾಮಿಯು ಭುಜಗಳಿಂದ ಸಂರಕ್ಷಿತನಾದವನು, ಅಭವತ್ - ಆದನು, ತಥೈವ - ಹಾಗೆಯೇ, ತಪಸ್ವಿನೀ - ಪರಿತಪಿಸುತ್ತಿರುವ, ಸೀತಾ - ಸೀತಾದೇವಿಯು, ರುದತೀ - ರೋದನಮಾಡುತ್ತ, ರಾಜರಥಂ - ಮಹಾರಾಜನಾದ ನಿನ್ನ ರಥವನ್ನೂ, ತಥೈವ - ಹಾಗೆಯೇ, ಮಾಂ - ನನ್ನನ್ನೂ, ನಿರೀಕ್ಷತೇ - ನೋಡುತ್ತಿದ್ದಳು. || ೩೭ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಪಂಚಾಶಸ್ಸರ್ಗಃ.

ದನ್ನು ಕಂಡು ಧಾರಾಪೂರ್ವಕವಾಗಿ ಕಣ್ಣೀರಿಟ್ಟಳು. ಆ ರೀತಿಯಾಗಿಯೇ ಶ್ರೀರಾಮನೂ ಸಹ ಕಣ್ಣೀರಿಡುತ್ತ ಕೆಳಗೆ ಬೀಳುವಂತಾದನು. ಆಗ ಲಕ್ಷ್ಮಣಸ್ವಾಮಿಯು ದೀರ್ಘವಾದ ನಿಜ ಬಾಹುಗಳಿಂದ ರಾಮನನ್ನು ಹಿಡಿದುಕೊಂಡನು. ಆ ಸೀತಾದೇವಿಯಾದರೋ ಆ ರೀತಿಯಲ್ಲಿಯೇ ಕಂಬನಿಗರೆದು ಪ್ರಲಪಿಸುತ್ತ ಈ ನಿನ್ನ ರಥವನ್ನೂ, ನನ್ನನ್ನೂ ನೋಡುತ್ತಲಿದ್ದಳು. || ೨೯-೩೭ ||

ಇಂತಿದು ಸುಮಂತ್ರಕೃತ ಶ್ರೀಸೀತಾರಾಮಲಕ್ಷ್ಮಣ ವನಗಮನ ವೃತ್ತಾಂತ
ನಿವೇದನವೆಂಬ ಐವತ್ತೆಂಟನೆಯ ಸರ್ಗವು ಸಂಪೂರ್ಣವಾದುದು.

ಅಯೋಧ್ಯಾಕಾಂಡೇ ಏಕೋನಷಷ್ಟಿತಮಸ್ಸರ್ಗಃ.

(ಇತಿ ಬ್ರುವಂತಂ ತಂ ಸೂತಂ ಸುಮಂತ್ರಂ ಮಂತ್ರಿಸತ್ತಮಂ ॥ ಬ್ರೂಹಿ ಶೇಷಂ ಪುನರಿತಿ ರಾಜಾ ವಚನಮಬ್ರವೀತ್ ॥ ೧ ॥ ತಸ್ಯ ತದ್ವಚನಂ ಶ್ರುತ್ವಾ ಸುಮಂತ್ರೋ ಬಾಷ್ಪವಿಕ್ಲಬಃ ॥ ಕಥಯಾಮಾಸ ಭೂಯೋಽಪಿ ರಾಮಸಂದೇಶ ವಿಸ್ತರಂ ॥೨॥ ಜಟಾಃ ಕೃತ್ವಾ ಮಹಾರಾಜ ! ಚೀರವಲ್ಕಲ ಧಾರಿಣೌ ॥ ಗಂಗಾ ಮುತ್ತೀರ್ಯ ತೌವೀರೌ ಪ್ರಯಾಗಾಭಿಮುಖೌ ಗತೌ ॥ ೩ ॥ ಅಗ್ರತೋ ಲಕ್ಷ್ಮಣೋ ಯಾತಃ ಪಾಲಯನ್ ರಘುನಂದನಂ ॥ ಅನಂತರಂಚ ಸೀತಾಥ

ಇತಿಬ್ರುವಂತಂ - ಈಪರಿಯಾಗಿ ಹೇಳುತ್ತಿರುವ, ಮಂತ್ರಿಸತ್ತಮಂ - ಮಂತ್ರಿಶ್ರೇಷ್ಠನಾದ, ಸೂತಂ - ಸಾರಥಿಯಾದ, ತಂಸುಮಂತ್ರಂ - ಆ ಸುಮಂತ್ರನನ್ನು ಕುರಿತು, ರಾಜಾ-ಅರಸು, ಶೇಷಂ-ಉಳಿದಿರುವ ಮಾತನ್ನೂ, ಬ್ರೂಹಿ - ಹೇಳು, ಇತಿ - ಇಂತೆಂದು, ಪುನಃ - ಮತ್ತೂ, ವಚನಂ - ಮಾತನ್ನು, ಅಬ್ರವೀತ್ - ನುಡಿದನು. ॥ ೧ ॥ ತಸ್ಯ - ಆ ದಶರಥರಾಯನ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಸುಮಂತ್ರಃ - ಸುಮಂತ್ರನು, ಬಾಷ್ಪವಿಕ್ಲಬಃ - ಕಣ್ಣೀರಿನಿಂದ ಕಲುಷವಾದ ಮುಖವುಳ್ಳವನಾಗಿ, ಭೂಯೋಽಪಿ - ಮತ್ತೂ, ರಾಮಸಂದೇಶವಿಸ್ತರಂ - ಶ್ರೀರಾಮನ ಸಮಾಚಾರದ ವಿಸ್ತಾರವನ್ನು, ಕಥಯಾಮಾಸ - ಹೇಳಿದನು. ॥ ೨ ॥ ಹೇ ಮಹಾರಾಜ - ಎಲೈ ಮಹಾರಾಜನೆ! ವೀರೌ - ಶೂರರಾದ, ತೌ - ಆ ರಾಮಲಕ್ಷ್ಮಣರು, ಜಟಾಃ - ಜಟೆಗಳನ್ನು, ಕೃತ್ವಾ-ಮಾಡಿ, ಚೀರವಲ್ಕಲಧಾರಿಣೌ - ನಾರು ಶೀರೆಗಳನ್ನುಟ್ಟವರಾಗಿ, ಗಂಗಾಂ-ಗಂಗೆಯನ್ನು, ಉತ್ತೀರ್ಯ-ದಾಟಿ, ಪ್ರಯಾಗಾಭಿಮುಖೌ - ಪ್ರಯಾಗಕ್ಷೇತ್ರಕ್ಕೆ ಅಭಿಮುಖರಾಗಿ, ಗತೌ - ಹೊರಟುಹೋದರು. ॥ ೩ ॥ ಲಕ್ಷ್ಮಣಃ - ಲಕ್ಷ್ಮಣಸ್ವಾಮಿಯು, ರಘುನಂದನಂ - ಶ್ರೀರಾಮನನ್ನು, ಪಾಲಯನ್ - ರಕ್ಷಿಸುತ್ತ, ಅಗ್ರತಃ - ಮುಂಗಡೆ, ಯಾತಃ - ಹೊರಟುಹೋದನು, ಅನಂತರಂ - ಬಳಿಕ, ಸೀತಾ-ಸೀತಾದೇವಿಯು, ಯಾತಾ - ಅವನನ್ನು ಅನುಸರಿಸಿ, ಅಥ ಬಳಿಕ, ರಘುನಂದನಃ - ರಘುಕುಲಾ

ಹೀಗೆ ಮಂತ್ರಿಗಳಲ್ಲಿ ಉತ್ತಮನೂ, ಸಾರಥಿಯೂ ಆದ ಸುಮಂತ್ರನು ನುಡಿದ ನುಡಿಗಳನ್ನು ಕೇಳಿ ದಶರಥರಾಯನು ಪುನಃ ಆತನನ್ನು ಕುರಿತು, "ಎಲೈ ಸುಮಂತ್ರನೆ! ಮಿಕ್ಕ ವೃತ್ತಾಂತವನ್ನೂ ಹೇಳುವವನಾಗು" ಎಂದನು. ಆಗ ಸುಮಂತ್ರನು ಬಹು ದುಃಖಾಕ್ರಾಂತನಾಗಿ ಕಂಬನಿಗರೆಯುತ್ತ ರಾಮ ವೃತ್ತಾಂತವೆಲ್ಲವನ್ನೂ ವಿಸ್ತಾರವಾಗಿ ಹೇಳಲುಜ್ಜುಗಿಸಿ ಹೀಗೆಂದನು. "ಎಲೈ ಮಹಾರಾಜನೆ! ಮಹಾ ಪರಾಕ್ರಮಶಾಲಿಗಳಾದ ಆ ರಾಮಲಕ್ಷ್ಮಣರು ಜಟೆಗಳನ್ನು ಧರಿಸಿ, ನಾರುಮಡಿಗಳನ್ನುಟ್ಟು ಗಂಗಾನದಿಯನ್ನು ದಾಟಿ, ಪ್ರಯಾಗ ಕ್ಷೇತ್ರವನ್ನು ಕುರಿತು ತೆರಳಿದರು. ಹಾಗೆ ಹೋಗುವಾಗ ಲಕ್ಷ್ಮಣಸ್ವಾಮಿಯು ಮುಂದೆ ಹೊರಟನು; ಆಮೇಲೆ ಸೀತಾದೇವಿಯು ನಡೆದಳು; ಅವರಿಬ್ಬರನ್ನೂ ಸಂರಕ್ಷಿಸುತ್ತ

ರಾಘವೋ ರಘುನಂದನಃ ॥ ೪ ॥ ತಾಂಸ್ತಥಾ ಗಚ್ಛತೋ ದೃಷ್ಟ್ವಾ ನಿವೃ
ತ್ತೋಽಸ್ಮ್ಯವಶ ಸ್ತದಾ॥) ಮಮುತ್ತ್ವಶ್ವಾ ನಿವೃತ್ತಸ್ಯ ನಪ್ರಾವರ್ತಂತ ವರ್ತ್ಮನಿ॥೫॥
ಉಷ್ಣಮಶ್ರು ಪ್ರಮುಂಚಂತೋ ರಾಮೇ ಸಂಪ್ರಸ್ಥಿತೇ ವನಂ ॥ ಉಭಾಭ್ಯಾಂ
ರಾಜಪುತ್ರಾಭ್ಯಾ ಮಥ ಕೃತ್ವಾಹಮಂಜಲಿಂ ॥ ೬ ॥ ಪ್ರಸ್ಥಿತೋ ರಥ
ಮಾಸ್ಥಾಯ ತದ್ದುಃಖಮಪಿ ಧಾರಯರ್ನ್ ॥ ಗುಹೇನ ಸಾರ್ಧಂ ತತ್ರೈವ
ಸ್ಥಿತೋಽಸ್ಮಿ ದಿವಸಾರ್ನ್ ಬಹೂರ್ನ್ ॥ ೭ ॥ ಆಶಯಾ ಯದಿ ಮಾಂ ರಾಮಃ ಪುನ

ನಂದಕರನಾದ, ರಾಘವಃ - ಶ್ರೀರಾಮನು, ಯಾತಃ - ಆಕೆಯಹಿಂದೆ ಹೊರಟುಹೋದನು, ತಥಾ - ಹಾಗೆಯೇ, ತಾರ್ನ್ - ಆ ಮೂವರನ್ನು, ಗಚ್ಛತಃ - ಹೋಗುತ್ತಿರುವರನ್ನಾಗಿ, ದೃಷ್ಟ್ವಾ - ಕಂಡು, ತದಾ - ಆಕಾಲದಲ್ಲಿ, ಅವಶಃ - ಪರಾಧೀನನಾದ ಕಾರಣ, ನಿವೃತ್ತಸ್ಯ - ಹಿಂತಿರುಗಿದನು, ಅಸ್ಮಿ - ಆದೆನು. ॥ ೪ ॥ ನಿವೃತ್ತಸ್ಯ - ಹಿಂತಿರುಗಿದ, ಮಮ - ನನ್ನ, ಅಶ್ವಾಸ್ತು - ಕುದುರೆಗಳಾದರೆ, ರಾಮೇ - ಶ್ರೀರಾಮನು, ವನಂ - ಅರಣ್ಯವನ್ನು ಕುರಿತು, ಸಂಪ್ರಸ್ಥಿತೇಸತಿ - ಹೊರಟವನಾಗಲಾಗಿ, ಉಷ್ಣಂ - ಬಿಸಿಯಾಗಿರುವ, ಅಶ್ರು - ಕಂಬನಿಯನ್ನು, ಪ್ರಮುಂಚಂತಃ - ಬಿಡುತ್ತಿರುವುಗಳಾಗಿ, ನಪ್ರಾವರ್ತಂತ - ಹಿಂತಿರುಗದೆಹೋದವು. ॥ ೫ ॥ ಅಥ - ಬಳಿಕ, ಅಹಂ - ನಾನು, ಉಭಾಭ್ಯಾಂ - ಇಬ್ಬರಾದ, ರಾಜಪುತ್ರಾಭ್ಯಾಂ - ರಾಜಕುವರರಾದ ರಾಮಲಕ್ಷ್ಮಣರಿಗೆ, ಅಂಜಲಿಂಕೃತ್ವಾ - ಕೈಮುಗಿದು, ರಥಂ - ರಥದಲ್ಲಿ, ಆಸ್ಥಾಯ - ಕುಳಿತುಕೊಂಡು, ತದ್ದುಃಖಂ - ಅಂತಹ ದುಃಖವನ್ನು, ಧಾರಯರ್ನಅಪಿ - ಧರಿಸಿದವನಾದರೂ ಕೂಡ, ಪ್ರಸ್ಥಿತಃ - ಹೊರಟುಬಂದೆನು. ॥ ೬ ॥ ರಾಮಃ - ಶ್ರೀರಾಮನು, ಮಾಂ - ನನ್ನನ್ನು, ಪುನಃ - ಮತ್ತು, ಶಬ್ದಾಪಯೇದ್ಯದಿ - ಕರದವನೇ ಆದರೆ, ತದಾ - ಆ ಕಾಲದಲ್ಲಿ, (ಗೋ + ಮ) ಮಯಾ-ನನ್ನಿಂದ, (ಸ್ಥಾತವ್ಯಂ-ಇರತಕ್ಕುದು.) ಇತಿ - ಇಂತೆಂದು, ಆಶಯಾ - ಕೋರಿಕೆಯಿಂದ, ತತ್ರೈವ - ಅಲ್ಲಿಯೇ, ಗುಹೇನ ಸಾರ್ಧಂ - ಗುಹನೊಡನೆ, ಬಹೂರ್ನದಿವಸಾರ್ನ್ - ಎರಡು ಮೂರು ದಿನಗಳು, ಸ್ಥಿತಃ - ನಿಂತವನು, ಅಸ್ಮಿ - ಆದೆನು. ॥ ೭ ॥ ಹೇ ಮಹಾರಾಜ - ಎಲೈ ಮಹಾರಾಜನೆ, ತೇವಿಷಯೇ - ನಿನ್ನ ದೇಶದಲ್ಲಿ, ಸಪುಷ್ಪಾಂಕುರಕೋರಕಾಃ - ಹೂವು, ಚಿಗುರು, ಹೂಮೊಗ್ಗೆ ಇವುಗಳಿಂದಲೂ

ಶ್ರೀರಾಮನು ಹಿಂದೆ ಹೊರಟನು. ಆ ರೀತಿ ಹೋಗುತ್ತಿದ್ದ ಸೀತಾರಾಮಲಕ್ಷ್ಮಣರನ್ನು ನೋಡಿ ನಾನು ದುಃಖದಿಂದ ಸ್ವಾಧೀನತೆಯಿಲ್ಲದವನಾದೆನು. ಶ್ರೀರಾಮನು ಅರಣ್ಯವನ್ನು ಕುರಿತು ಹೊರಟುಹೋದಮೇಲೆ ಈ ನನ್ನ ಕುದುರೆಗಳೂ ಕಣ್ಣೀರಿಡುತ್ತ ನಡೆಯಲಾರದೆ ಹೋದುವು. ಆ ಬಳಿಕ ರಾಜಪುತ್ರರಾದ ಆ ರಾಮ ಲಕ್ಷ್ಮಣರಿಬ್ಬರಿಗೂ ನಮಸ್ಕಾರವನ್ನು ಮಾಡಿ, ರಥವನ್ನೇರಿ ಅಧಿಕ ದುಃಖವನ್ನು ಹೊಂದಿದರೂ ಹಿಂದಿರುಗಿದೆನು. ಅಷ್ಟರಲ್ಲಿ ರಾಮನು ಮರಳಿ ನನ್ನನ್ನು ಕರೆಯುವನೋ ಏನೊ! ಎಂದು ಯೋಚಿಸಿ ಶೃಂಗಿಬೇರಪುರಾಧಿಪನಾದ ಗುಹನೊಡನೆ ಮೂರುದಿನಗಳವರೆವಿಗೆ ವಾಸಿಸಿದೆನು. ಎಲೈ ರಾಯನೆ! ನಿನ್ನ ದೇಶದಲ್ಲಿ, ಪುಷ್ಪಗಳೂ, ಚಿಗುರುಗಳುಳ್ಳ ವೃಕ್ಷಗಳೂ ಕೂಡ ರಾಮವಿಯೋಗ ದುಃಖವನ್ನು ಹೊಂದಿದುವಾಗಿ ಬಾಡಿಹೋದುವು. ಅಲ್ಲದೆ ನದಿಗಳೂ, ತೊರೆಗಳೂ ರಾಮವಿವಾಸನ

ಶ್ಯಬ್ದಾಪಯೇದಿತಿ ॥ ವಿಷಯೇ ತೇ ಮಹಾರಾಜ! ರಾಮವ್ಯಸನ ಕರ್ಶಿತಾಃ॥೮॥
ಅಪಿ ವೃಕ್ಷಾಃ ಪರಿಮ್ಲಾನಾ ಸ್ಸಪುಷ್ಪಾಂಕುರ ಕೋರಕಾಃ ॥ ಉಪತಪ್ತೋದಕಾ
ನದ್ಯಃ ಪಲ್ವಲಾನಿ ಸರಾಂಸಿಚ ॥೯॥ ಪರಿಶುಷ್ಕ ಪಲಾಶಾನಿ ವನಾನ್ಯುಪ
ವನಾನಿಚ ॥ ನಚ ಸರ್ಪಂತಿ ಸತ್ವಾನಿ ವ್ಯಾಳಾ ನಪ್ರಚರಂತಿಚ ॥೧೦॥ ರಾಮ
ಶೋಕಾಭಿಭೂತಂ ತನ್ನಿಷ್ಕೂಜ ಮಭವದ್ವನಂ ॥ ಲೀನಪುಷ್ಕರ ಪತ್ರಾಶ್ಚ
ನರೇಂದ್ರ! ಕಲುಷೋದಕಾಃ ॥೧೧॥ ಸಂತಪ್ತ ಪದ್ಮಾಃ ಪದ್ಮಿನ್ಯೋ ಲೀನ
ಮೀನ ವಿಹಂಗಮಾಃ ॥ ಜಲಜಾನಿಚ ಪುಷ್ಪಾಣಿ ಮಾಲ್ಯಾನಿ ಸ್ಥಲಜಾನಿಚ ॥೧೨॥

ಒಡಗೂಡಿದ, ವೃಕ್ಷಾಅಪಿ - ಗಿಡಗಳೂಕೂಡ, ರಾಮವ್ಯಸನಕರ್ಶಿತಾಃ - ಶ್ರೀರಾಮನ ವ್ಯಥೆಯಿಂದ ಶೋಷಿಸಿದವುಗಳಾಗಿ, ಪರಿಮ್ಲಾನಾಃ - ಮುಗ್ಗಿಹೋದವು. ॥೮॥ ನದ್ಯಃ - ನದಿಗಳು, ಉಪತಪ್ತೋದಕಾಃ - ಬಿಸಿಯಾಗಿರುವ ನೀರುಳ್ಳವುಗಳಾಗಿವೆ, ಸರಾಂಸಿ- ಸರೋವರಗಳು, ಪಲ್ವಲಾನಿ- ನಡುವುಗಳೂ, ಉಪತಪ್ತೋದಕಾನಿ - ಬಿಸಿಯಾದ ನೀರುಳ್ಳವು, ವನಾನಿ-ವನಗಳೂ, ಉಪವನಾನಿಚ- ಹೂವಿನತೋಟಗಳೂ, ಪರಿಶುಷ್ಕಪಲಾಶಾನಿ - ಒಣಗಿಹೋದ ಎಲೆಗಳುಳ್ಳವುಗಳಾಗಿವೆ. ॥೯॥ ಸತ್ವಾನಿ - ಜಂತುಗಳು, ನಸರ್ಪಂತಿ - ಕದಲುವದಿಲ್ಲ, ವ್ಯಾಳಾಃ - ಘಾತುಕಪಶುಗಳು, ನಪ್ರಚರಂತಿಚ - (ಗೂ) ಆಹಾರಾರ್ಥವಾಗಿಯೂ ಕೂಡ ಸಂಚರಿಸುವದಿಲ್ಲ, ರಾಮಶೋಕಾಭಿಭೂತಂ, ರಾಮ - ಶ್ರೀರಾಮನ ಪ್ರವಾಸದಿಂದ ಹುಟ್ಟಿದ, ಶೋಕ - ವ್ಯಸನದಿಂದ, ಅಭಿಭೂತಂ - ವ್ಯಾಪ್ತವಾದ, ತದ್ವನಂ - ಆ ಅರಣ್ಯವು, ನಿಷ್ಕೂಜಂ - ನಿಶ್ಶಬ್ದವಾದುದು, ಅಭವತ್ - ಆಯಿತು. ॥೧೦॥ ಹೇ ನರೇಂದ್ರ - ಎಲೈ ಅರಸನೆ ! ಪದ್ಮಿನ್ಯಶ್ಚ - ಕಮಲಸರೋವರಗಳೂ, ಲೀನಪುಷ್ಕರಪತ್ರಾಃ - ಒಣಗಿಹೋಗಿರುವ ಕಮಲಗಳ ದಳಗಳುಳ್ಳವಾಗಿ, ಕಲುಷೋದಕಾಃ - ಕೆಸರಾದ ನೀರುಳ್ಳವುಗಳಾಗಿವೆ, ಸಂತಪ್ತ - ತಪಿಸುತ್ತಿರುವ, ಪದ್ಮಾಃ - ಕಮಲಗಳುಳ್ಳವುಗಳಾಗಿ, ಲೀನಮೀನವಿಹಂಗಮಾಃ, ಲೀನ - ಔತುಕೊಂಡ, ಮೀನ - ಮತ್ಸ್ಯಗಳೂ, ವಿಹಂಗಮಾಃ-ಹಕ್ಕಿಗಳೂ ಉಳ್ಳವುಗಳಾಗಿವೆ. ॥೧೧॥ ಜಲಜಾನಿ - ನೀರಲ್ಲಿಹುಟ್ಟಿದ, ಪುಷ್ಪಾಣಿಚ - ಹೂವುಗಳೂ, ಸ್ಥಲಜಾನಿ - ಸ್ಥಲದಲ್ಲಿಹುಟ್ಟಿದ, ಮಾಲ್ಯಾನಿ - ಪುಷ್ಪಗಳೂ, ಅಲ್ಪಗಂಧೀನಿ - ಸ್ವಲ್ಪವಾದ ವಾಸನೆಯುಳ್ಳವುಗಳಾಗಿ, ಫಲಾನಿಚ - ಹಣ್ಣುಗಳೂ, ಯಥಾಪುರಂ - ಪೂರ್ವದಂತೆ, ಅದ್ಯ - ಈಗ, ನಭಾಂತಿ - ಹೊಳೆಯುವದಿಲ್ಲ. ॥೧೨॥

ದುಃಖದಿಂದ ಬತ್ತಿಹೋದ ನೀರುಳ್ಳವುಗಳಾದುವು. ವನಗಳೂ, ಉಪವನಗಳೂ ಒಣಗಿಹೋದ ಪರ್ಣಗಳುಳ್ಳವಾದುವು. ಇಷ್ಟೆಯಲ್ಲದೆ ಯಾವ ದುಷ್ಟ ಜಂತುಗಳೂ ಆಹಾರಕ್ಕೋಸುಗವೂ ಹೊರಬರುವುದಿಲ್ಲ ; ಕ್ರೂರ ಮೃಗಗಳು ಕೂಡ ಆಹಾರವನ್ನು ತೆಗೆದುಕೊಳ್ಳುವುದಿಲ್ಲ. ಈ ರೀತಿ ರಾಮವಿಯೋಗ ದುಃಖದಿಂದ ವನವೆಲ್ಲವೂ ಪೀಡಿತವಾಗಿ ನಿಶ್ಶಬ್ದವಾಗಿರುವುದು. ॥೮-೧೦॥ ಮಹಾರಾಜ ! ಕಮಲ ಸರೋವರಗಳು, ಅಂತರ್ಗತವಾದ ಕಮಲಗಳುಳ್ಳವಾಗಿಯೂ, ಕೆಸರಾದ ಉದಕವುಳ್ಳವಾಗಿಯೂ ಇರುವುವು. ಅಲ್ಲದೆ ಯಾವುದನ್ನು ನೋಡಿದರೂ, ತಪಿಸುತ್ತಿರುವ ಕಮಲಗಳುಳ್ಳವೂ, ಔತುಕೊಂಡಿರುವ ಮೀನುಗಳೂ, ಪಕ್ಷಿಗಳೂ ಉಳ್ಳವೂ ಆಗಿವೆ. ನೀರಿನಲ್ಲಿ ಹುಟ್ಟಿದ ಪುಷ್ಪಗಳೂ, ಭೂಮಿಯಲ್ಲಿ ಹುಟ್ಟಿದ

ನಾದ್ಯ ಭಾಂತ್ಯಲ್ಪಗಂಧೀನಿ ಫಲಾನಿಚ ಯಥಾಪುರಂ ॥ ಅತ್ರೋದ್ಯಾನಾನಿ ಶೂನ್ಯಾನಿ ಪ್ರಲೀನ ವಿಹಗಾನಿಚ ॥೧೩॥ ನಚಾಭಿರಾಮಾ ನಾರಾಮಾ ಪಶ್ಯಾಮಿ ಮನುಜರ್ಷಭ! ॥ ಪ್ರವಿಶಂತ ಮಯೋಧ್ಯಾಂ ಮಾಂ ನಕಶ್ಚಿದಭಿನಂದತಿ ॥೧೪॥ ನರಾ ರಾಮಮಪಶ್ಯಂತೋ ನಿಶ್ವಸಂತಿ ಮುಹುರ್ಮುಹುಃ ॥ ದೇವ ! ರಾಜ ರಥಂ ದೃಷ್ಟ್ವಾ ವಿನಾ ರಾಮಮಿಹಾಗತಂ ॥೧೫॥ ದುಃಖಾದಶ್ರು ಮುಖಸ್ಸರ್ವೋ ರಾಜಮಾರ್ಗ ಗತೋಜನಃ ॥ ಹರ್ಮ್ಯೈ ರ್ವಿಮಾನೈಃ ಪ್ರಾಸಾದೈ ರವೇಕ್ಷ್ಯ ರಥಮಾಗತಂ ॥೧೬॥ ಹಾಹಾಕಾರಕೃತಾ ನಾರ್ಯೋ

ಹೇ ಮನುಜರ್ಷಭ - ಎಲೈ ದಶರಥರಾಜನೆ, ಅತ್ರ - ಈ ದೇಶದಲ್ಲಿ, ಉದ್ಯಾನಾನಿ - ಹೂವಿನತೋಟಗಳು, ಶೂನ್ಯಾನಿ - ಪುಷ್ಪವರ್ಜಿತಗಳಾಗಿ, (ಗೋ+ಮ) ಶೂನ್ಯಾನಿ - ಜನವರ್ಜಿತಗಳಾಗಿ, ಪ್ರಲೀನವಿಹಗಾನಿಚ-ಔತುಕೊಂಡ ಪಕ್ಷಿಗಳುಳ್ಳವುಗಳಾಗಿವೆ, ಆರಾಮಾ-ಉದ್ಯಾನವನಗಳನ್ನು, ಅಭಿರಾಮಾ-ಮನೋಹರಗಳನ್ನಾಗಿ, ನಪಶ್ಯಾಮಿ - ಕಾಣೆನು. ॥೧೩॥ ಅಯೋಧ್ಯಾಂ - ಅಯೋಧ್ಯಾ ಪಟ್ಟಣದಲ್ಲಿ, ಪ್ರವಿಶಂತಂಮಾಂ - ಹೋಗುತ್ತಿರುವ ನನ್ನನ್ನು ಕುರಿತು, ಕಶ್ಚಿತ್ - ಒಬ್ಬನಾದರೂ, ನಾಭಿನಂದತಿ - ಸಂತೋಷಿಸಲಿಲ್ಲ, ನರಾಃ - ಮನುಜರು, ರಾಮಂ - ಶ್ರೀರಾಮನನ್ನು, ಅಪಶ್ಯಂತಃ - ನೋಡದಿರುವರಾಗಿ, ಮುಹುರ್ಮುಹುಃ - ಬಾರಿಬಾರಿಗೂ, ನಿಶ್ವಸಂತಿ - ನಿಟ್ಟುಸುರುಗಳನ್ನು ಬಿಡುತ್ತಾರೆ. ॥೧೪॥ ಹೇ ದೇವ - ಎಲೈ ಸ್ವಾಮಿಯೆ, ರಾಮಂವಿನಾ - ಶ್ರೀರಾಮನನ್ನು ಬಿಟ್ಟು, ಇಹ - ಇಲ್ಲಿಗೆ, ಆಗತಂ - ಬಂದ, ರಾಜರಥಂ - ನಿನ್ನ ತೇರನ್ನು, ದೃಷ್ಟ್ವಾ - ಕಂಡು, ಸರ್ವೋಜನಃ - ಸಮಸ್ತ ಮನುಜರು, ರಾಜಮಾರ್ಗಗತಃ-ರಾಜಬೀದಿಯನ್ನು ಹೊಂದಿದವರಾಗಿ, ದುಃಖಾತ್ - ವ್ಯಸನದಿಂದ, ಅಶ್ರುಮುಖಃ - ಕಂಬನಿಯಿಂದ ಕೂಡಿದ ಮುಖವುಳ್ಳದಾಗಿರುವುದು. ॥೧೫॥ ರಾಮಾದರ್ಶನಕರ್ಶಿತಾಃ - ಶ್ರೀರಾಮನ ದರ್ಶನವಿಲ್ಲದ್ದರಿಂದ ಕೃಶೀಭೂತರಾದ, ನಾರ್ಯಃ - ಹೆಂಗಳು, ಹರ್ಮ್ಯೈಃ - ಧನಿಕರಮನೆಗಳಿಂದಲೂ, ವಿಮಾನೈಃ - ಸಪ್ತಪ್ರಾಸಾದಗಳುಳ್ಳ ರಾಜರಮನೆಗಳಿಂದಲೂ, ಪ್ರಾಸಾದೈಃ - ಉಪ್ಪರಿಗೆಗಳಿಂದಲೂ, ಆಗತಂ - ಬಂದ, ರಥಂ - ರಥವನ್ನು, ಅವೇಕ್ಷ್ಯ - ಕಂಡು,

ಪುಷ್ಪಗಳೂ, ಫಲಗಳೂ ಕೂಡ ಅಲ್ಪ ವಾಸನೆಯುಳ್ಳವಾಗಿ ಪೂರ್ವದಂತೆ ಶೋಭಿಸುವುದಿಲ್ಲ. ಎಲೈ ರಾಜನೆ! ಈ ದೇಶದಲ್ಲಿ ಹೂವಿನ ತೋಟಗಳು ಪುಷ್ಪವರ್ಜಿತವಾಗಿಯೂ, ಜನವರ್ಜಿತವಾಗಿಯೂ, ವಿಲೀನವಾದ ಪಕ್ಷಿಗಳುಳ್ಳವಾಗಿಯೂ ಇರುವುವು. ಉದ್ಯಾನವನಗಳು ಕಳಕಳಿಸುತ್ತಿಲ್ಲವು. ವನದಿಂದ ಹಿಂತಿರುಗಿ ಪಟ್ಟಣಕ್ಕೆ ಬರುತ್ತಿರುವ ನನ್ನನ್ನು ಕುರಿತು ಒಬ್ಬನಾದರೂ ಸಂತೋಷಿಸಲಿಲ್ಲ. ಅವರೆಲ್ಲರೂ ಶ್ರೀರಾಮನನ್ನು ಕಾಣದೆ ಬಾರಿಬಾರಿಗೂ ನಿಟ್ಟುಸಿರು ಬಿಡುತ್ತಾರೆ. ಎಲೈ ಸ್ವಾಮಿಯೆ! ಶ್ರೀರಾಮಮೂರ್ತಿಯನ್ನುಳಿದು ಇಲ್ಲಿಗೆ ಬಂದ ನಿನ್ನ ರಥವನ್ನು ನೋಡಿ ಜನರೆಲ್ಲರೂ ರಾಜವೀಥಿಗೆ ಬಂದು ವ್ಯಸನದಿಂದ ಕಣ್ಣೀರಿಡುತ್ತಿರುವರು. ॥೧೧-೧೫॥ ಶ್ರೀರಾಮ ದರ್ಶನವಿಲ್ಲದುದರಿಂದ ಕೃಶೀಭೂತರಾದ ಹೆಂಗಸರು, ಧನಿಕರ ಮನೆಗಳಿಂದಲೂ, ಸಪ್ತಪ್ರಾಸಾದಗಳುಳ್ಳ ಅರಮನೆಗಳಿಂದಲೂ, ಉಪ್ಪರಿಗೆಗಳಿಂದಲೂ ಈ ನಿನ್ನ ರಥವನ್ನು ನೋಡಿ ಹಾಹಾಕಾರ ಮಾಡುತ್ತಲಿರುವರು. ಸ್ತ್ರೀಯರು ಅತಿ

ರಾನಾದರ್ಶನ ಕರ್ಶಿತಾಃ ॥ ಆಯತೈ ರ್ವಿಮಲೈ ರ್ನೇತ್ರೈ ರಶ್ರುವೇಗ ಪರಿ
ಪ್ಲುತೈಃ ॥ ೧೭ ॥ ಅನ್ಯೋನ್ಯ ಮಭಿವೀಕ್ಷಂತೇಽವ್ಯಕ್ತಮಾರ್ತತರಾ ಸ್ತ್ರಿಯಃ ॥
ನಾಮಿತ್ರಾಣಾಂ ನಮಿತ್ರಾಣಾ ಮುದಾಸೀನ ಜನಸ್ಯಚ ॥ ೧೮ ॥ ಅಹಮಾರ್ತ
ತಯಾ ಕಿಂಚಿದ್ವಿಶೇಷಂ ನೋಪಲಕ್ಷಯೇ ॥ ಅಪ್ರಹೃಷ್ಟ ಮನುಷ್ಯಾಚ ದೀನ
ನಾದತುರಂಗಮಾ ॥ ೧೯ ॥ ಆರ್ತಸ್ವರ ಪರಿಮ್ಲಾನಾ ವಿನಿಶ್ವಸಿತ ನಿಸ್ವನಾ ॥
ನಿರಾನಂದಾ ಮಹಾರಾಜ ! ರಾಮಪ್ರವ್ರಾಜನಾತುರಾ ॥೨೦॥ ಕೌಸಲ್ಯಾ ಪುತ್ರ
ಹೀನೇವ ಹ್ಯಯೋಧ್ಯಾ ಪ್ರತಿಭಾತಿ ಮಾ ॥ ಸೂತಸ್ಯ ವಚನಂ ಶ್ರುತ್ವಾ ವಾಚಾ

ಹಾಹಾಕಾರಕೃತಾಃ - ಮಾಡಲ್ಪಟ್ಟ ಹಾಹಾಕಾರವುಳ್ಳವರಾಗಿದಾರೆ. ॥ ೧೭ ॥ ಸ್ತ್ರಿಯಃ - ಹೆಂಗಳು, ಆರ್ತತರಾಃ - ಅತ್ಯಂತದೀನರಾಗಿ, ಆಯತೈಃ - ವಿಸ್ತಾರಗಳಾದ, ವಿಮಲೈಃ - ನಿರ್ಮಲಗಳಾದ, ಅಶ್ರುವೇಗಪರಿಪ್ಲುತೈಃ ಕಣ್ಣೀರುಗಳ ತ್ವರೆಯಿಂದ ತುಂಬಿರುವ, ನೇತ್ರೈಃ - ಕಣ್ಣುಗಳಿಂದ, ಅನ್ಯೋನ್ಯಂ - ಒಬ್ಬರಿಗೊಬ್ಬರು, ಅವ್ಯಕ್ತಂ - ಸ್ಪಷ್ಟವಾಗದಂತೆ, ಅಭೀಕ್ಷಂತೇ - ನೋಡುತ್ತಾರೆ. ॥ ೭ ॥ ಅಹಂ - ನಾನು, ಆರ್ತತಯಾ - ದೀನಭಾವದಿಂದ, ಅಮಿತ್ರಾಣಾಂ - ಶತ್ರುಗಳಿಗೂ, ಮಿತ್ರಾಣಾಂ - ಸ್ನೇಹಿತರಿಗೂ, ಉದಾಸೀನಜನಸ್ಯಚ-ಶತ್ರುಮಿತ್ರಗಳಿಗಿಂತಲೂ ವ್ಯತಿರಿಕ್ತವಾದ ಜನಕ್ಕೂ, ವಿಶೇಷಂ-ಭೇದವನ್ನು, ಕಿಂಚಿತ್ - ಸ್ವಲ್ಪವಾದರೂ, ನೋಪಲಕ್ಷಯೇ - ಕಾಣೆನು. ॥ ೧೮ ॥ ಹೇ ಮಹಾರಾಜ - ಎಲೈ ಮಹಾರಾಯನೆ, ಪುತ್ರಹೀನಾ - ಮಗನಿಂದ ಹೀನಳಾದ, ಕೌಸಲ್ಯೇವ - ಕೌಸಲ್ಯಾದೇವಿಯಂತೆ, ಅಯೋಧ್ಯಾ - ಅಯೋಧ್ಯಾಪಟ್ಟಣವು, ಅಪ್ರಹೃಷ್ಟಮನುಷ್ಯಾ - ಸಂತೋಷವಿಲ್ಲದಿರುವ ಜನವುಳ್ಳದಾಗಿ, ದೀನನಾದತುರಂಗಮಾ - ಖಿನ್ನವಾದ ಧ್ವನಿಯುಳ್ಳ ಕುದುರೆಗಳುಳ್ಳದಾಗಿ, ಆರ್ತಸ್ವರಪರಿಮ್ಲಾನಾ - ದೀನಧ್ವನಿಯಿಂದ ಮುಗ್ಗಿರುವದಾಗಿಯೂ, ವಿನಿಶ್ವಸಿತನಿಸ್ವನಾ - ನಿಟ್ಟುಸುರೆಂಬ ಧ್ವನಿಯುಳ್ಳದಾಗಿಯೂ, ನಿರಾನಂದಾ - ಆನಂದರಹಿತವಾದುದಾಗಿಯೂ, ರಾಮಪ್ರವ್ರಜನಾತುರಾ - ಶ್ರೀರಾಮನ ಪ್ರವಾಸದಿಂದ ದೀನವಾಗಿ, ಮಾಪ್ರತಿಭಾತಿ - ಪ್ರಕಾಶಿಸುವದಿಲ್ಲ. ॥೧೯-೨೦॥ ರಾಜಾ-ದಶರಥರಾಯನು, ಸೂತಸ್ಯ - ಸಾರಥಿಯ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಪರಮದೀನಯಾ - ಬಹಳ ದೀನವಾದ, ಬಾಷ್ಪೋಪಹತಯಾ - ಕಂಬನಿಯಿಂದ ಸ್ಪಷ್ಟಾಕ್ಷರಗಳಿಲ್ಲದೆ ಗದ್ಗದ ಧ್ವನಿಯಾದ, ವಾಚಾ - ಮಾತಿನಿಂದ, ತಂಸೂತಂ - ಆ ಸುಮಂತ್ರನನ್ನು ಕುರಿತು, ಇದಂ - ಈ

ದೀನರಾಗಿ ವಿಸ್ತಾರವಾಗಿಯೂ, ನಿರ್ಮಲವಾಗಿಯೂ, ಕಣ್ಣೀರಿನಿಂದ ಕೂಡಿರುವುವಾಗಿಯೂ ಇರುವ ನೇತ್ರಗಳಿಂದ ಒಬ್ಬರನ್ನೊಬ್ಬರು ಅವ್ಯಕ್ತವಾಗಿ ನೋಡುತ್ತಲಿರುವರು. ನಾನು ಶತ್ರುಗಳಿಗೂ, ಮಿತ್ರರಿಗೂ, ಉದಾಸೀನ ಜನಗಳಿಗೂ ಸಹ ಸ್ವಲ್ಪವಾದರೂ ಭೇದವನ್ನು ಕಾಣದೆ ಹೋಗಿರುವೆನು. ಎಲೈ ಮಹಾರಾಜನೆ! ಪುತ್ರವಿಯೋಗ ಸಂತಪ್ತಳಾದ ಕೌಸಲ್ಯಾದೇವಿಯಂತೆ ಈ ಅಯೋಧ್ಯಾಪಟ್ಟಣವು ಸಂತೋಷವಿಲ್ಲದಿರುವ ಮನುಷ್ಯರುಳ್ಳದಾಗಿಯೂ, ಖಿನ್ನವಾದ ಆನೆ ಕುದುರೆಗಳುಳ್ಳದಾಗಿಯೂ, ಆರ್ತಧ್ವನಿಯಿಂದ ಕುಗ್ಗಿರುವುದಾಗಿಯೂ, ನಿಟ್ಟುಸಿರೆಂಬ ಧ್ವನಿಯುಳ್ಳದಾಗಿಯೂ, ಆನಂದರಹಿತವಾಗಿಯೂ ಆಗಿ ಕಂಗೊಳಿಸುತ್ತಿಲ್ಲವು.” ॥ ೧೭-೨೦ ॥ ಇಂತು ನುಡಿದ ಸುಮಂತ್ರನ ಮಾತುಗಳನ್ನು ಕೇಳಿ ಬಹು

ಪರಮ ದೀನಯಾ ॥ ೨೧ ॥ ಬಾಷ್ಪೋಪಹತಯಾ ರಾಜಾ ತಂ ಸೂತಮಿದ
ಮಬ್ರವೀತ್ ॥ ಕೈಕೇಯ್ಯಾ ವಿನಿಯುಕ್ತೇನ ಪಾಪಾಭಿಜನ ಭಾವಯಾ ॥೨೨॥
ಮಯಾ ನ ಮಂತ್ರಕುಶಲೈ ರ್ವೃದ್ಧೈ ಸ್ಸಹ ಸಮರ್ಥಿತಂ॥ನ ಸುಹೃದ್ಭಿ ರ್ನಚಾ
ಮಾತ್ಯೈ ರ್ಮಂತ್ರಯಿತ್ವಾ ನ ನೈಗಮೈಃ ॥ ೨೩ ॥ ಮಯಾಯಮರ್ಥ
ಸ್ಸಂಮೋಹಾತ್ ಸ್ತ್ರೀಹೇತೋ ಸ್ಸಹಸಾ ಕೃತಃ ॥ ಭವಿತವ್ಯತಯಾ ನೂನಮಿದಂ
ವಾ ವ್ಯಸನಂ ಮಹತ್ ॥ ೨೪ ॥ ಕುಲಸ್ಯಾಸ್ಯ ವಿನಾಶಾಯ ಪ್ರಾಪ್ತಂ ಸೂತ !

ಮಾತನ್ನು, ಅಬ್ರವೀತ್ - ನುಡಿದನು. ॥ ೨೧ ॥ ಪಾಪಾಭಿಜನಭಾವಯಾ, ಪಾಪ - ಪಾಪಗಳಿಗೆ, ಅಭಿಜನ - ಉತ್ಪತ್ತಿಸ್ಥಾನವಾದ, ಭಾವಯಾ - ಅಭಿಪ್ರಾಯವುಳ್ಳ, ಕೈಕೇಯ್ಯಾ - ಕೈಕೇಯಿಯಾದೇವಿಯಿಂದ, ವಿನಿಯುಕ್ತೇನ - ಬದ್ಧನಾದ, ಮಯಾ - ನನ್ನಿಂದ, ಮಂತ್ರಕುಶಲೈಃ - ಆಲೋಚನೆಯಲ್ಲಿ ಸಮರ್ಥರಾದ, ವೃದ್ಧೈಸ್ಸಹ - ಮುದುಕರೊಡನೆ, ನಸಮರ್ಥಿತಂ - ಆಲೋಚಿಸಲ್ಪಡಲಿಲ್ಲ. ॥ ೨೨ ॥ ಮಯಾ - ನನ್ನಿಂದ, ಸುಹೃದ್ಭಿಃ - ಸ್ನೇಹಿತರೊಡನೆ, ನಸಮರ್ಥಿತಂ - ಆಲೋಚಿಸಲ್ಪಡಲಿಲ್ಲ, ಅಮಾತ್ಯೈಃ · ಮಂತ್ರಿಗಳಿಂದ, ಮಂತ್ರಯಿತ್ವಾ - ಆಲೋಚಿಸಿ, ನಸಮರ್ಥಿತಂ - ಆಲೋಚಿಸಲ್ಪಡಲಿಲ್ಲ, ನೈಗಮೈಃ - ವೇದಶಾಸ್ತ್ರಜ್ಞರೊಡನೆ, ನಸಮರ್ಥಿತಂ - ಆಲೋಚಿಸಲ್ಪಡಲಿಲ್ಲ, ಅಯಮರ್ಥಃ - ಈ ವಿಷಯವು, ಸ್ತ್ರೀಹೇತೋಃ - ಹೆಂಗಸಿನ ನಿಮಿತ್ತವಾಗಿ, ಸಂಮೋಹಾತ್ - ಮಹಾಭ್ರಾಂತಿಯಿಂದ, ಸಹಸಾ - ಜಾಗ್ರತೆಯಾಗಿ, ಕೃತಃ - ಮಾಡಲ್ಪಟ್ಟಿತು. ॥ ೨೩ ॥ (ಹೇ ಸೂತ - ಎಲೈ ಮಂತ್ರಿಯೆ.) ಭವಿತವ್ಯತಯಾ - ಮುಂದೆ ಆಗತಕ್ಕಭಾವದಿಂದ, ಮಹತ್ - ದೊಡ್ಡದಾದ, ಇದಂವ್ಯಸನಂ - ಈ ದುಃಖವು, ಅಸ್ಯಕುಲಸ್ಯ - ಈ ವಂಶದ, ವಿನಾಶಾಯ - ನಾಶಕ್ಕೋಸುಗ, ಯದೃಚ್ಛಯಾ - ಸ್ವೇಚ್ಛೆಯಿಂದ, ಪ್ರಾಪ್ತಂ - ಒದಗಿತು, ನೂನಂ - ನಿಶ್ಚಯವು. ॥ ೨೪ ॥ ಹೇ ಸೂತ - ಎಲೈ ಸಾರಥಿಯೆ, ಮಯಾತು - ನನ್ನಿಂದಲಾದರೆ, ಕೃತಂ - ಮಾಡಲ್ಪಟ್ಟ, ಕಿಂಚಿತ್ - ಕೊಂಚವಾದ, ಸುಕೃತಂ - ಪುಣ್ಯವು, ತೇ - ನಿನ್ನ ಬುದ್ಧಿಗೆ, ಅಸ್ತಿಯದಿ - ತೋರಿದ್ದೇ ಆದರೆ,

---

ವಾಗಿ ದುಃಖಿಸಿ ದಶರಥಮಹಾರಾಜನು, ದೀನನಾಗಿ ಕಂಬನಿಯಿಂದ ಸ್ಪಷ್ಟಾಕ್ಷರಗಳಿಲ್ಲದೆ ಗದ್ಗದಸ್ವರಭರಿತನಾಗಿ ಆ ಸುಮಂತ್ರನನ್ನು ಕುರಿತು ಇಂತೆಂದನು. "ಎಲೈ ಸುಮಂತ್ರನೆ! ಪಾಪವನ್ನು ಮಾಡಿದ ವಂಶದಲ್ಲಿ ಜನಿಸಿದವಳೂ, ಪಾಪಸ್ವಭಾವವನ್ನೊಳಗೊಂಡವಳೂ ಆದ ಕೈಕೇಯಿಯು, "ನೀನು ರಾಮನನ್ನು ಅರಣ್ಯಕ್ಕೆ ಕಳುಹು" ಎಂದು ಹೇಳಿದಳು! ಆ ಸಮಯದಲ್ಲಿ ಆಲೋಚನೆಯನ್ನು ಮಾಡುವುದರಲ್ಲಿ ಸಮರ್ಥರಾದವರಲ್ಲಿ ಆಲೋಚಿಸದೆ ಹೋದೆನು! ಇಷ್ಟೆಯಲ್ಲದೆ ಸ್ನೇಹಿತರು, ಮಂತ್ರಿಗಳು ಮೊದಲಾದವರಲ್ಲಿಯೂ ಆಲೋಚಿಸಲಿಲ್ಲವು! ನಮ್ಮ ಪಟ್ಟಣದಲ್ಲಿರುವ ಜನರಲ್ಲಿಯೂ ಆಲೋಚಿಸದೆ ಹೋದೆನು. ಹೀಗೆ ಆಲೋಚಿಸದೆ ಕೇವಲ ಸ್ತ್ರೀ ವ್ಯಾಮೋಹದಿಂದ ಬಹು ಬೇಗನೆ ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿದೆನು! ಎಲೈ ಸೂತನೆ! ಈ ವ್ಯಸನವು ನಿಶ್ಚಯವಾಗಿಯೂ ಈ ವಂಶವು ನಶಿಸುವುದಕ್ಕೆ ಒದಗಿ ಬಂದಿರುವುದೆಂಬುದರಲ್ಲಿ ಸ್ವಲ್ಪವೂ ಸಂಶಯವಿಲ್ಲ! ಎಲೈ ಸುಮಂತ್ರನೆ! ನಿನಗೆ ನಾನಾವಾಗಲಾದರೂ ಉಪಕಾರವನ್ನು ಮಾಡಿರುವೆನಾದರೆ, ಆ ಉಪಕಾರಕ್ಕೆ ಪ್ರತಿ

ಯದೃಚ್ಛಯಾ॥ಸೂತ! ಯದ್ಯಸ್ತಿ ತೇ ಕಿಂಚಿನ್ಮಯಾ ತು ಸುಕೃತಂ ಕೃತಂ ॥೨೫॥ ತ್ವಂ ಪ್ರಾಪಯಾಶು ಮಾಂ ರಾಮಂ ಪ್ರಾಣಾ ಸ್ಸಂತ್ವರಯಂತಿ ಮಾಂ ॥ ಯದ್ಯದ್ಯಾಪಿ ಮಮೈವಾಜ್ಞಾ ನಿವರ್ತಯತು ರಾಘವಂ ॥೨೬॥ ನ ಶಕ್ಷ್ಯಾಮಿ ವಿನಾ ರಾಮಂ ಮುಹೂರ್ತಮಪಿ ಜೀವಿತುಂ ॥ ಅಥವಾಪಿ ಮಹಾಬಾಹು ರ್ಗತೋ ದೂರಂ ಭವಿಷ್ಯತಿ ॥ ೨೭ ॥ ಮಾಮೇವ ರಥಮಾರೋಪ್ಯ ಶೀಘ್ರಂ ರಾಮಾಯ ದರ್ಶಯ॥ವೃತ್ತ ದಂಷ್ಟ್ರೋ ಮಹೇಷ್ವಾಸಃ ಕ್ವಾಸೌ ಲಕ್ಷ್ಮಣಪೂರ್ವಜಃ॥೨೮॥

ತ್ವಂ - ನೀನು, ಮಾಂ - ನನ್ನನ್ನು, ರಾಮಂ - ಶ್ರೀರಾಮನನ್ನು ಕುರಿತು, ಆಶು - ಜಾಗ್ರತೆಯಾಗಿ, ಪ್ರಾಪಯ - ಹೊಂದಿಸು, ಪ್ರಾಣಾಃ - ಪ್ರಾಣಗಳು, ಮಾಂ - ನನ್ನನ್ನು, ಸಂತ್ವರಯಂತಿ - ತ್ವರೆಗೊಳಿಸುತ್ತಿವೆ. ॥ ೨೫ ॥ ಅದ್ಯಾಪಿ - ಈಗಲೂ, ಮಮ - ನನ್ನ, ಅಜ್ಞಾಯದಿ - ಅಪ್ಪಣೆಯೇ ಆದರೆ, (ಭವಾನ್ - ನೀನು,) ರಾಘವಂ - ಶ್ರೀರಾಮನನ್ನು, ನಿವರ್ತಯತು - ಹಿಂತಿರುಗಿಸು, ರಾಮಂ ವಿನಾ - ಶ್ರೀರಾಮನನ್ನು ಬಿಟ್ಟು, ಮುಹೂರ್ತಮಪಿ - ಒಂದು ಮುಹೂರ್ತಕಾಲವಾದರೂ, ಜೀವಿತುಂ - ಬದುಕುವದಕ್ಕೋಸುಗ, ನಶಕ್ಷ್ಯಾಮಿ - ಸಮರ್ಥನಾಗಲಾರೆನು. ॥ ೨೬ ॥ ಅಥವಾ - ಹಾಗಲ್ಲದೇಹೋದರೆ, ಮಹಾಬಾಹುಃ - ಮಹಾಭುಜಪರಾಕ್ರಮಿಯಾದ ಶ್ರೀರಾಮನು, ದೂರಂ ಬಹಳ ದೂರವಾಗಿ, ಗತಃ - ಹೋದವನು, ಭವಿಷ್ಯತಿ - ಆಗುವನು, (ತದಾ - ಆ ಕಾಲದಲ್ಲಿ,) ಮಾಮೇವ - ನನ್ನನ್ನೇ, ರಥಂ - ರಥವನ್ನು, ಆರೋಪ್ಯ - ಏರಿಸಿ, ಶೀಘ್ರಂ - ಜಾಗ್ರತೆಯಾಗಿ, ರಾಮಾಯ - ಶ್ರೀರಾಮನಿಗೋಸುಗ, ದರ್ಶಯ - ತೋರಿಸು. ॥ ೨೭ ॥ ವೃತ್ತದ್ರಂಷ್ಟ್ರಃ, ವೃತ್ತ - ಮಲ್ಲಿಗೆ ಮೊಗ್ಗುಗಳಂತೆ ಗುಂಡಗಿರುವ, ದ್ರಂಷ್ಟ್ರಃ - ಹಲ್ಲುಗಳುಳ್ಳ, ಮಹೇಷ್ವಾಸಃ - ಮಹಾಧನುರ್ಧರನಾದ, ಲಕ್ಷ್ಮಣಪೂರ್ವಜಃ - ಲಕ್ಷ್ಮಣನಿಗಿಂತ ದೊಡ್ಡವನಾದ, ಅಸೌ - ಈ ಶ್ರೀರಾಮನು, ಕ್ವ - ಎಲ್ಲಿರುವನು? ಅಹಂ - ನಾನು, ಜೀವಾಮಿಯದಿ-ಬದುಕಿದವನೇ ಆದರೆ, ಸೀತಯಾಸಹ - ಸೀತಾದೇವಿಯೊಡಗೂಡಿದ, ಏನಂ - ಈ ಶ್ರೀರಾಮನನ್ನು, ಸಾಧು - ಚನ್ನಾಗಿ, ಪಶ್ಯೇಯಂ - ನೋಡುವೆನು. ॥ ೨೮ ॥ ಲೋಹಿತಾಕ್ಷಂ - ಕೆಂಗಣ್ಣುಗಳುಳ್ಳ, ಮಹಾಬಾಹುಂ - ದೊಡ್ಡಭುಜಗಳುಳ್ಳ, ಆಮುಕ್ತಮಣಿಕುಂಡಲಂ - ಧರಿಸಲ್ಪಟ್ಟ ರತ್ನಕುಂಡಲಗಳುಳ್ಳ, ರಾಮಂ - ಶ್ರೀರಾಮನನ್ನು, ನಪಶ್ಯೇಯಂ

ಯಾಗಿ ಈಗ ನನ್ನನ್ನು ರಾಮನಿರುವ ಸ್ಥಳಕ್ಕೆ ಕರೆದುಕೊಂಡು ಹೋಗು ! ನನ್ನ ಪ್ರಾಣಗಳು ನಿಲ್ಲುವ ಹಾಗೆ ತೋರುವುದಿಲ್ಲವು ! ಆದುದರಿಂದ ನನ್ನನ್ನು ಶೀಘ್ರವಾಗಿ ಕರೆದುಕೊಂಡು ಹೋಗು. ಈಗಲೂ ಕೂಡ ನನ್ನಆಜ್ಞೆಯೇ ನಡೆಯುತ್ತದೆಯೆಂದೂ, ನಾನಾಜ್ಞಾಪಿಸಿದೆನೆಂದೂ ಹೇಳಿ ಶ್ರೀರಾಮನನ್ನಿಲ್ಲಿಗೆ ಪುನಃ ಕರೆದುಕೊಂಡು ಬರುವವನಾಗು! ॥೨೧-೨೬॥ ನಾನು ರಾಮನನ್ನಗಲಿದು ಬದುಕಲಾರೆನು ! ಅದಲ್ಲದೆ ಎಲೈ ಸೂತನೆ ! ಮಹಾ ಬಾಹುವಾದ ಶ್ರೀರಾಮನು ಬಹಳ ದೂರ ಹೋಗುವುದಕ್ಕೆ ಮೊದಲೇ ನನ್ನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ರಾಮನ ಬಳಿಗೆ ಕರೆದುಕೊಂಡು ಹೋಗು ! ದುಂಡಾದ ಹಲ್ಲುಗಳುಳ್ಳವನೂ, ಮಹಾ ಧನುಷ್ಮಂತನೂ, ಲಕ್ಷ್ಮಣಾಗ್ರಜನೂ ಆದ ಶ್ರೀರಾಮನು ಸೀತೆಯೊಡಗೂಡಿ ಯೆಲ್ಲಿರುವನೋ ಅಲ್ಲಿಗೆ ನನ್ನನ್ನು ಕರೆದುಕೊಂಡು ಹೋಗು ! ಹಾಗೆ ಮಾಡಿದರೆ ನಾನು ಶ್ರೀರಾಮನನ್ನು ನೋಡಿ ಜೀವಿಸು

ಯದಿ ಜೀವಾಮಿ ಸಾಧ್ವೇನಂ ಪಶ್ಯೇಯಂ ಸೀತಯಾ ಸಹ ॥ ಲೋಹಿತಾಕ್ಷಂ ಮಹಾಬಾಹು ಮಾಮುಕ್ತ ಮಣಿಕುಂಡಲಂ ॥ ೨೯ ॥ ರಾಮಂ ಯದಿ ನಪಶ್ಯೇಯಂ ಗಮಿಷ್ಯಾಮಿ ಯಮಕ್ಷಯಂ ॥ ಅತೋನು ಕಿಂ ದುಃಖತರಂ ಸೋಹಮಿಕ್ಷ್ವಾಕು ನಂದನಂ ॥ ೩೦ ॥ ಇಮಾಮವಸ್ಥಾ ಮಾಪನ್ನೋ ನೇಹ ಪಶ್ಯಾಮಿ ರಾಘವಂ ॥ ಹಾ! ರಾಮ! ರಾಮಾನುಜ! ಹಾಹಾ! ವೈದೇಹಿ! ತಪಸ್ವಿನಿ! ॥೩೧॥ ನ ಮಾಂ ಜಾನೀತ ದುಃಖೇನ ಮ್ರಿಯಮಾಣ ಮನಾಥವತ್ ॥ ಸ ತೇನ ರಾಜಾ ದುಃಖೇನ ಭೃಶಮರ್ಪಿತ ಚೇತನಃ ॥ ೩೨ ॥ ಅವಗಾಢ ಸುದುಷ್ಪಾರಂ ಶೋಕ

ಯದಿ - ನೋಡದೇಹೋದವನಾದರೆ, ಯಮಕ್ಷಯಂ - ಯಮಮಂದಿರವನ್ನು ಕುರಿತು, ಗಮಿಷ್ಯಾಮಿ- ಹೋಗುವೆನು. ॥ ೨೯ ॥ ಸೋಹಂ - ಆ ನಾನು, ಇಮಾಂಅವಸ್ಥಾಂ - ಇಂತಹ ಅವಸ್ಥೆಯನ್ನು, ಆಪನ್ನಃ - ಹೊಂದಿದವನಾಗಿ, ಇಹ - ಈಗಲೂ ಕೂಡ, ಇಕ್ಷ್ವಾಕುನಂದನಂ - ಇಕ್ಷ್ವಾಕುವಂಶಕ್ಕೆ ಆನಂದಕರನಾದ, ರಾಮಂ - ಶ್ರೀರಾಮನನ್ನು, ನಪಶ್ಯಾಮಿ - ಕಾಣೆನು, ಅತಃ - ಇದಕ್ಕಿಂತಲೂ, ದುಃಖತರಂ - ಅತಿಶಯವಾದ ವ್ಯಸನವು, ಕಿನ್ನು - ಏನಿರುವುದು? ॥ ೩೦ ॥ ಹಾ - ಕಷ್ಟವು, ಹೇ ರಾಮ - ಎಲೈ ಶ್ರೀರಾಮನೆ, ಹಾ ರಾಮಾನುಜ-ಎಲೈ ಲಕ್ಷ್ಮಣನೇ, ಹಾ-ಕಷ್ಟವು, ಹೇ ತಪಸ್ವಿನೀ- ಎಲೌ ನಿಯಮಶೀಲಳೇ, ಹೇ ವೈದೇಹಿ - ಎಲೌ ಸೀತಾದೇವಿಯೆ, ಹಾ - ಕಷ್ಟವು, ಅನಾಥವತ್ - ನಾಥನಿಲ್ಲದವನಂತೆ, ದುಃಖೇನ - ವ್ಯಸನದಿಂದ, ಮ್ರಿಯಮಾಣಂ - ಮರಣವನ್ನು ಹೊಂದುತ್ತಿರುವ, ಮಾಂ - ನನ್ನನ್ನು, ನಜಾನೀತ - ಅರಿಯದೆಹೋದಿರಿ. ॥ ೩೧ ॥ ಸರಾಜಾ - ಆ ದಶರಥ ರಾಜನು, ತೇನದುಃಖೇನ - ಅದೇ ದುಃಖದಿಂದ, ಭೃಶಂ - ಬಹಳವಾಗಿ, ಅರ್ಪಿತಚೇತನಃ, ಅರ್ಪಿತ- ವ್ಯಾಪ್ತವಾದ, ಚೇತನಃ - ಬುದ್ಧಿಯುಳ್ಳವನಾಗಿ, ಸುದುಷ್ಪಾರಂ - ಅಗಾಧವಾದ, ಶೋಕಸಾಗರಂ - ಶೋಕವೆಂಬ ಸಮುದ್ರದಲ್ಲಿ, ಅವಗಾಢಃ - ಮುಳುಗಿದವನಾಗಿ, ಅಬ್ರವೀತ್ - ನುಡಿದನು. ॥ ೩೨ ॥ ರಾಮಶೋಕಮಹಾಭೋಗಃ, ರಾಮ - ಶ್ರೀರಾಮನ, ಶೋಕ - ದುಃಖವೆಂಬ, ಮಹಾಭೋಗಃ -

ತ್ತೇನೆ. ಅಯ್ಯಾ ಸುಮಂತ್ರನೆ! ಕೆಂಪಾದ ಕಂಗಳುಳ್ಳವನೂ, ಮಹಾ ಬಾಹುವೂ, ರತ್ನ ಕುಂಡಲಗಳುಳ್ಳವನೂ ಆದ ರಾಮನನ್ನು ನಾನು ನೋಡದೆ ಹೋದರೆ ಯಮ ಮಂದಿರವನ್ನು ಹೊಗುವೆನು! ನಾನು ಮರಣಾವಸ್ಥೆಯನ್ನು ಹೊಂದಿದೆನು! ಇಂತಹ ಕಾಲದಲ್ಲಿ ಇಕ್ಷ್ವಾಕು ಕುಲಸಂಭೂತನಾದ ಶ್ರೀರಾಮನನ್ನು ನೋಡದವನಾದೆನು! ಅಯ್ಯೋ! ಇದಕ್ಕಿಂತಲೂ ಅಧಿಕವಾದ ದುಃಖವುಂಟೆ? ಅಯ್ಯೋ! ನಾನು ಶ್ರೀರಾಮನನ್ನು ಕಣ್ಣಾರ ನೋಡದೆಯೇ ಮರಣವನ್ನು ಹೊಂದುವವನಾಗುವೆನಲ್ಲ! ರಾಮಾ! ಹಾ ಲಕ್ಷ್ಮಣಾ! ತಪಸ್ವಿನಿಯಾದ ಎಲೌ ಸೀತಾದೇವಿಯೆ! ನಾನು ದಿಕ್ಕಿಲ್ಲದವನಂತೆ ಮರಣವನ್ನು ಹೊಂದುತ್ತಲಿರುವೆನು. ಈ ವೃತ್ತಾಂತವನ್ನು ನೀವು ತಿಳಿಯದೆ ಹೋದಿರಲ್ಲವೆ?" ಎಂಬೀ ಪ್ರಕಾರವಾಗಿ ಆ ದಶರಥ ರಾಯನು, ದುಃಖದಿಂದ ವ್ಯಾಪ್ತವಾದ ಬುದ್ಧಿಯುಳ್ಳವನಾಗಿಯೂ, ಅಪಾರವಾದ ದುಃಖ ಸಮುದ್ರದಲ್ಲಿ ಮುಳುಗಿಹೋದವನಾಗಿಯೂ ಆಗಿ ಹೀಗೆಂದನು. ॥ ೨೭-೩೨ ॥ ಶ್ರೀರಾಮ ಶೋಕವೆಂಬ ವಿಸ್ತಾರವುಳ್ಳದಾಗಿಯೂ, ಸೀತಾದೇವಿಯ ವಿಯೋಗವೆಂಬ ತೀರವುಳ್ಳ

ಸಾಗರ ಮಬ್ರವೀತ್‌॥ರಾಮಶೋಕ ಮಹಾಭೋಗ ಸ್ಸೀತಾವಿರಹ ಪಾರಗಃ॥೩೭॥
ಶ್ವಸಿತೋರ್ಮಿ ಮಹಾವರ್ತೋ ಬಾಷ್ಪ ಫೇನ ಜಲಾವಿಲಃ ॥ ಬಾಹುವಿಕ್ಷೇಪ
ಮೀನೌಘೋ ವಿಕ್ರಂದಿತ ಮಹಾಸ್ವನಃ ॥ ೩೮ ॥ ಪ್ರಕೀರ್ಣ ಕೇಶ ಶೈವಾಲಃ
ಕೈಕೇಯೀ ಬಡಬಾಮುಖಃ ॥ ಮಮಾಶ್ರು ವೇಗ ಪ್ರಭವಃ ಕುಬ್ಜಾ ವಾಕ್ಯ
ಮಹಾಗ್ರಹಃ ॥ ೩೯ ॥ ವರವೇಲೋ ನೃಶಂಸಾಯಾ ರಾಮಪ್ರವ್ರಾಜನಾ
ಯತಃ॥ಯಸ್ಮಿನ್‌ ಬತ ನಿಮಗ್ನೋಽಹಂ ಕೌಸಲ್ಯೇ! ರಾಘವಂ ವಿನಾ॥ದುಸ್ತರೋ
ಜೀವಿತಾ ದೇವಿ! ಮಯಾಯಂ ಶೋಕಸಾಗರಃ ॥ ೪೦ ॥

ವಿಸ್ತಾರವುಳ್ಳ, ಸೀತಾವಿರಹಪಾರಗಃ-ಸೀತಾದೇವಿಯ ವಿಯೋಗವೆಂಬ ತೀರವನ್ನು ಹೊಂದಿರುವ, ಶ್ವಸಿತೋರ್ಮಿಮಹಾವರ್ತಃ - ನಿಟ್ಟುಸಿರುಗಳೆಂಬ ತೆರೆಗಳೂ ಸುಳಿಗಳೂ ಉಳ್ಳ, ಬಾಷ್ಪಫೇನಜಲಾವಿಲಃ - ಕಂಬನಿಗಳೆಂಬ ನೊರೆಗಳಿಂದಲೂ ಉದಕದಿಂದಲೂ ವ್ಯಾಪ್ತವಾದ, ಬಾಹುವಿಕ್ಷೇಪಮೀನೌಘಃ - ಭುಜಗಳ ಸಂಚಲನವೆಂಬ ಮತ್ಸ್ಯಗಳ ಗುಂಪುಗಳುಳ್ಳ, ವಿಕ್ರಂದಿತಮಹಾಸ್ವನಃ - ದೀನಧ್ವನಿಗಳೆಂಬ ಮಹಾ ಶಬ್ದವುಳ್ಳ, ನೃಶಂಸಾಯಾಃ - ಘಾತಕಳಾದ ಕೈಕೇಯೀದೇವಿಯ, ವರವೇಲಃ - ವರವೆಂಬ ದಡವುಳ್ಳ, ರಾಮಪ್ರವ್ರಾಜನ - ಶ್ರೀರಾಮನ ವನಪ್ರಯಾಣದಿಂದ, ಆಯತಃ - ವಿಸ್ತಾರವಾದ, ಶೋಕಸಾಗರಃ - ದುಃಖವೆಂಬ ಸಮುದ್ರವು, ಅಭವತ್ - ಉಂಟಾಯಿತು. ॥ ೩೭-೩೯ ॥ ಹೇ ಕೌಸಲ್ಯೇ - ಎಲೌ ಕೌಸಲ್ಯಾದೇವಿಯೇ, ರಾಘವಂವಿನಾ - ಶ್ರೀರಾಮನನ್ನು ಬಿಟ್ಟು, ಅಹಂ - ನಾನು, ಯಸ್ಮಿನ್ - ಯಾವ ಶೋಕವೆಂಬ ಸಮುದ್ರದಲ್ಲಿ, ನಿಮಗ್ನಃ - ಮುಳುಗಿದೆನೋ, ಬತ - ಕಷ್ಟವು, ಹೇ ದೇವಿ-ಎಲೌ ದೇವಿಯೇ, ಅಯಂ - ಈ ಶೋಕಸಮುದ್ರವು, ಜೀವಿತಾ-ಬದುಕಿರುವಿಕೆಯು, ಮಯಾ - ನನ್ನಿಂದ, ದುಸ್ತರಃ - ದಾಂಟಲಸದಳವು. ॥ ೪೦ ॥ ಯೋಽಹಂ-ಯಾವ ನಾನು, ದಿದೃಕ್ಷಮಾಣಃ-ನೋಡಲಿಚ್ಛೆಯುಳ್ಳವನಾದರೂ, ಅದ್ಯ - ಈಗ, ಸಲಕ್ಷ್ಮಣಂ-ಲಕ್ಷ್ಮಣನಿಂದೊಡಗೂಡಿದ, ರಾಘವಂ-ಶ್ರೀರಾಮನನ್ನು, ಇಹ - ಇಲ್ಲಿ, ನಲಭೇ - ಕಾಣೆನೋ, ಇದಂ - ಇದು, ಅಶೋಭನಂ-ಅಮಂಗಳವು,

---

ದಾಗಿಯೂ, ನಿಟ್ಟುಸಿರೆಂಬ ತೆರೆಗಳೂ, ದೊಡ್ಡ ಸುಳಿಗಳೂ ಉಳ್ಳುದಾಗಿಯೂ, ಕಂಬನಿಗಳೆಂಬ ನೊರೆಗಳಿಂದಲೂ, ಜಲದಿಂದಲೂ ಸಹ ವ್ಯಾಪ್ತವಾದುದಾಗಿಯೂ, ಭುಜಗಳ ಸಂಚಲನವೆಂಬ ಮೀನುಗಳ ಗುಂಪುಳ್ಳುದಾಗಿಯೂ, ದೀನಧ್ವನಿಗಳೆಂಬ ಮಹಾ ಘೋಷವುಳ್ಳುದಾಗಿಯೂ, ಕೆದರಿಹೋದ ಕೇಶಗುಚ್ಛಗಳೆಂಬ ಪಾಚಿಯುಳ್ಳುದಾಗಿಯೂ, ಕೈಕೇಯಿಯೆಂಬ ಬಡಬಾಗ್ನಿಯುಳ್ಳುದಾಗಿಯೂ, ಘಾತಕಳಾದ ಕೈಕೇಯಿಯ ವರವೆಂಬ ತೀರವುಳ್ಳುದಾಗಿಯೂ ನನ್ನ ಕಂಬನಿಯ ವೇಗದಿಂದ ಜನಿಸಿದ ಮಂಥರೆಯ ಮಾತುಗಳೆಂಬ ದೊಡ್ಡ ಮೊಸಳೆಗಳುಳ್ಳುದಾಗಿಯೂ, ಶ್ರೀರಾಮನ ವನಪ್ರಯಾಣದಿಂದ ವಿಸ್ತಾರವಾಗಿಯೂ ಇರುವ ಈ ದುಃಖ ಸಮುದ್ರವು ಆವಿರ್ಭವಿಸಿತು. ॥ ೩೭ - ೩೯ ॥ ಎಲೌ ಕೌಸಲ್ಯಾದೇವಿಯೆ! "ನಾನು ಯಾವ ಶೋಕ ಸಮುದ್ರದಲ್ಲಿ ಮುಳುಗಿದೆನೋ, ಆ ಸಮುದ್ರವು ದಾಟಲಸದಳವಾದುದು. ಯಾವ ನಾನು ನೋಡಲಪೇಕ್ಷೆಯುಳ್ಳವನಾದರೂ, ಲಕ್ಷ್ಮಣನೊಡಗೂಡಿದ ಶ್ರೀರಾಮನನ್ನು ಈಗ ನೋಡಲಾರೆನೋ ಅದು ಬಹು ಅಮಂಗಳವು"

ಅಶೋಭನಂ ಯೋಽಹ ಮಿಹಾದ್ಯ ರಾಘವಂ
ದಿದೃಕ್ಷಮಾಣೋ ನಲಭೇ ಸಲಕ್ಷ್ಮಣಂ ॥
ಇತೀವ ರಾಜಾ ವಿಲಪನ್ಮಹಾಯಶಾಃ
ಪಪಾತ ತೂರ್ಣಂ ಶಯನೇ ಸ ಮೂರ್ಛಿತಃ ॥ ೬೭ ॥

ಇತಿವಿಲಪತಿ ಪಾರ್ಥಿವೇ ಪ್ರಣಷ್ಟೇ
ಕರುಣತರಂ ದ್ವಿಗುಣಂ ಚ ರಾಮಹೇತೋಃ ॥
ವಚನ ಮನುನಿಶಮ್ಯ ತಸ್ಯ ದೇವೀ
ಭಯಮಗಮ ತ್ಪುನರೇವ ರಾಮಮಾತಾ ॥ ೩೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನಷಷ್ಟಿತಮಸ್ಸರ್ಗಃ.

ಇತೀವ - ಇಂತೆಂದು, ವಿಲಪನ್ - ಪ್ರಲಪಿಸುತ್ತಿರುವ, ಮಹಾಯಶಾಃ - ಮಹಾ ಕೀರ್ತಿವಂತನಾದ, ಸರಾಜಾ - ಆ ದಶರಥರಾಯನು, ಮೂರ್ಛಿತಃ - ಮೂರ್ಛಿತನಾಗಿ, ಶಯನೇ - ಹಾಸಿಗೆಯಲ್ಲಿ, ತೂರ್ಣಂ - ಜಾಗ್ರತೆಯಾಗಿ, ಪಪಾತ - ಬಿದ್ದನು. ॥ ೩೭ ॥ ಇತಿ - ಈಪರಿಯಾಗಿ, ವಿಲಪತಿ - ಪ್ರಲಾಪಮಾಡುತ್ತಿರುವ, ಪಾರ್ಥಿವೇ - ದಶರಥರಾಯನು, ಪ್ರಣಷ್ಟೇಸತಿ - ಮೂರ್ಛಿತನಾಗಲು, ರಾಮಮಾತಾ - ಶ್ರೀರಾಮನ ತಾಯಿಯಾದ, ದೇವೀ - ಕೌಸಲ್ಯಾದೇವಿಯು, ರಾಮಹೇತೋಃ - ಶ್ರೀರಾಮನ ನಿಮಿತ್ತವಾಗಿ, ಕರುಣತರಂ - ವಿಶೇಷವಾದದೈನ್ಯವುಳ್ಳ, ತಸ್ಯ - ಆ ದಶರಥರಾಯನ, ವಚನಂ-ಮಾತನ್ನು, ಅನುನಿಶಮ್ಯ - ಅನುಸರಿಸಿ, ದ್ವಿಗುಣಂ - ಎರಡರಷ್ಟು, ಭಯಂ-ಭೀತಿಯನ್ನು, ಪುನಃ-ಮತ್ತು, ಅಗಮದೇವ - ಹೊಂದಲೇಹೊಂದಿದಳು. ॥ ೩೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನಷಷ್ಟಿತಮಸ್ಸರ್ಗಃ.

ಇಂತು ಪ್ರಲಪಿಸುತ್ತಿರುವ ಮಹಾ ಕೀರ್ತಿವಂತನಾದ ದಶರಥರಾಯನು ಮೂರ್ಛಿತನಾಗಿ ಹಾಸಿಗೆಯಲ್ಲಿ ಬೇಗನೆ ಬಿದ್ದವನಾದನು. ಹೀಗೆ ಆ ರಾಯನು ಮೂರ್ಛಿತನಾಗಲು ಶ್ರೀರಾಮ ಮಾತೆಯಾದ ಕೌಸಲ್ಯಾದೇವಿಯು ಶ್ರೀರಾಮನಿಗೋಸುಗ ದೈನ್ಯವಾಂತ ಆ ರಾಯನ ಮಾತನ್ನು ಕೇಳಿ ಎರಡರಷ್ಟು ಭಯವನ್ನು ಹೊಂದಿದಳು. ॥ ೩೭-೩೮ ॥

ಇಂತಿದು ದಶರಥರಾಜ ವಿಲಾಪವಿಧಾನ ಕಥನವೆಂಬ ಐವತ್ತೊಂಬತ್ತನೆಯ
ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಷಷ್ಠಿತಮಸ್ಸರ್ಗಃ.

ತತೋ ಭೂತೋಪಸೃಷ್ಟೇವ ವೇಪಮಾನಾ ಪುನಃಪುನಃ ॥ ಧರಣ್ಯಾಂ ಗತ ಸತ್ವೇವ ಕೌಸಲ್ಯಾ ಸೂತಮಬ್ರವೀತ್ ॥ ೧ ॥ ನಯ ಮಾಂ ಯತ್ರ ಕಾಕುತ್ಸ್ಥ ಸ್ಸೀತಾ ಯತ್ರಚ ಲಕ್ಷ್ಮಣಃ ॥ ತಾನ್ ವಿನಾ ಕ್ಷಣಮಪ್ಯತ್ರ ಜೀವಿತುಂ ಚಾಪಿ ನೋತ್ಸಹೇ ॥ ೨ ॥ ಯೋಜಯಸ್ವ ರಥಂ ಶೀಘ್ರಂ ದಂಡಕಾನ್ನಯ ಮಾಮಪಿ॥ಅಥ ತಾನ್ನಾನುಗಚ್ಛಾಮಿ ಗಮಿಷ್ಯಾಮಿ ಯಮಕ್ಷಯಂ ॥೩॥ ಬಾಷ್ಪವೇಗೋಪಹತಯಾ ಸ ವಾಚಾ ಸಜ್ಜಮಾನಯಾ ॥ ಇದಮಾಶ್ವಾಸಯನ್

ತತಃ - ಬಳಿಕ, ಭೂತೋಪಸೃಷ್ಟೇವ - ಪಿಶಾಚದಿಂದ ಆವಿಷ್ಟಳಾದವಳಂತೆ, ಪುನಃಪುನಃ - ಬಾರಿಬಾರಿಗೂ, ವೇಪಮಾನಾ - ನಡುಗುತ್ತಿರುವ, ಧರಣ್ಯಾಂ - ನೆಲದಲ್ಲಿ, ಗತಸತ್ವೇವಸ್ಥಿತಾ - ಚೇತನಾರಹಿತಳೆಂಬಂತಿರುವ, ಕೌಸಲ್ಯಾ - ಕೌಸಲ್ಯಾದೇವಿಯು, ಸೂತಂ - ಸಾರಥಿಯನ್ನು ಕುರಿತು, ಅಬ್ರವೀತ್ - ನುಡಿದಳು. ॥ ೧ ॥ ಯತ್ರ - ಯಾವ ಸ್ಥಳದಲ್ಲಿ, ಕಾಕುತ್ಸ್ಥಃ - ಶ್ರೀರಾಮನು, ಸೀತಾಚ - ಸೀತಾದೇವಿಯೂ, ಲಕ್ಷ್ಮಣಶ್ಚ - ಲಕ್ಷ್ಮಣನೂ, (ಸ್ಥಿತಾಃ - ಇರುವರೋ, ತತ್ರ - ಆ ಸ್ಥಳದಲ್ಲಿ,) ಮಾಂ - ನನ್ನನ್ನು, ನಯ - ಹೊಂದಿಸು, ತಾನ್ವಿನಾ - ಆ ಮೂವರನ್ನೂ ಬಿಟ್ಟು, ಕ್ಷಣಮಪಿ - ಕ್ಷಣಕಾಲವೂ, ಅತ್ರ - ಇಲ್ಲಿ, ಜೀವಿತುಂಚಾಪಿ - ಬದುಕಿರುವದಕ್ಕೂ, ನೋತ್ಸಹೇ-ಉದ್ಯುಕ್ತಳಾಗಲಾರೆನು. ॥ ೨ ॥ ರಥಂ - ರಥವನ್ನು, ಶೀಘ್ರಂ - ಜಾಗ್ರತೆಯಾಗಿ, ಯೋಜಯಸ್ವ - ಕಟ್ಟಿಸು, ಮಾಮಪಿ - ನನ್ನನ್ನೂ, ದಂಡಕಾನ್ - ದಂಡಕಾರಣ್ಯವನ್ನು ಕುರಿತು, ನಯ - ಹೊಂದಿಸು, ಅಥ - ಬಳಿಕ, ತಾನ್-ಆ ಮೂವರನ್ನೂ, ನಾನುಗಚ್ಛಾಮಿ-ಅನುಸರಿಸಿ ಹೋಗದಿದ್ದರೆ, ಯಮಕ್ಷಯಂ-ಯಮನಾಲಯಕ್ಕೆ, ಗಮಿಷ್ಯಾಮಿ - ಹೋಗುವೆನು, (ಇತಿ - ಇಂತೆಂದು, ಅಬ್ರವೀತ್ - ನುಡಿದಳು.) ॥ ೩ ॥ ಸೂತಃ - ಸಾರಥಿಯಾದ, ಸಃ - ಆ ಸುಮಂತ್ರನು, ಬಾಷ್ಪವೇಗೋಪಹತಯಾ - ಕಂಬನಿಗಳ ವೇಗದಿಂದ ಹೊಡಿಯಲ್ಪಟ್ಟ, ಸಜ್ಜಮಾನಯಾ - ವಿಸ್ವರವುಳ್ಳ, ವಾಚಾ-ಮಾತಿನಿಂದ, ದೇವೀಂ-

---

ಆ ಬಳಿಕ ಭೂತಾವಿಷ್ಟಳಂತೆ ಅಡಿಗಡಿಗ್ಗೂ ನಡುಗುತ್ತ ಚೈತನ್ಯವಿಲ್ಲದಿರುವ ಕೌಸಲ್ಯಾದೇವಿಯು ಸಾರಥಿಯಾದ ಸುಮಂತ್ರನನ್ನು ಕುರಿತು, "ಎಲೈ ಸುಮಂತ್ರನೆ! ಶ್ರೀರಾಮನೂ, ಲಕ್ಷ್ಮಣನೂ, ಸೀತಾದೇವಿಯೂ ಯಾವ ಸ್ಥಳದಲ್ಲಿರುವರೋ ಆ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋಗು! ಆ ಮೂವರನ್ನೂ ಬಿಟ್ಟು, ನಾನೀ ಸ್ಥಳದಲ್ಲಿ ಒಂದು ಕ್ಷಣಕಾಲವಾದರೂ ಬದುಕಲಾರೆನು! ರಥವನ್ನು ಜಾಗ್ರತೆಯಾಗಿ ಸಜ್ಜೆಗೊಳಿಸು! ನನ್ನನ್ನು ದಂಡಕಾರಣ್ಯಕ್ಕೆ ಕರೆದುಕೊಂಡು ಹೋಗು! ನಾನಾ ಮೂವರನ್ನೂ ಅನುಸರಿಸಿ ಹೋಗದಿದ್ದರೆ ಯಮ ಮಂದಿರವನ್ನು ಸೇರುವುದು ಖಂಡಿತ!" ಎಂದಳು. ಆಗ ಸಾರಥಿಯಾದ ಸುಮಂತ್ರನು ಕಂಬನಿಗಳ ವೇಗದಿಂದ ತಡೆಯಲ್ಪಟ್ಟುದೂ, ವಿಸ್ವರವಾದುದೂ ಆದ ಮಾತು

ದೇವೀಂ ಸೂತಃ ಪ್ರಾಂಜಲಿ ರಬ್ರವೀತ್ ‖ ೪ ‖ ತ್ಯಜ ಶೋಕಂ ಚ ಮೋಹಂಚ ಸಂಭ್ರಮಂ ದುಃಖಜಂ ತಥಾ ‖ ವ್ಯವಧೂಯಚ ಸಂತಾಪಂ ವನೇ ವತ್ಸ್ಯತಿ ರಾಘವಃ ‖ ೫ ‖ ಲಕ್ಷ್ಮಣಶ್ಚಾಪಿ ರಾಮಸ್ಯ ಪಾದೌ ಪರಿಚರ್ರ ವನೇ ‖ ಆರಾಧಯತಿ ಧರ್ಮಜ್ಞಃ ಪರಲೋಕಂ ಜಿತೇಂದ್ರಿಯಃ ‖ ೬ ‖ ವಿಜನೇಪಿ ವನೇ ಸೀತಾ ವಾಸಂ ಪ್ರಾಪ್ಯ ಗೃಹೇಷ್ವಿವ ‖ ವಿಸ್ರಂಭಂ ಲಭತೇಽಭೀತಾ ರಾಮೇ ಸನ್ನ್ಯಸ್ತ ಮಾನಸಾ ‖ ೭ ‖ ನಾಸ್ಯಾ ದೈನ್ಯಂ ಕೃತಂ ಕಿಂಚಿ ತ್ಸುಸೂಕ್ಷ್ಮಮಪಿ ಲಕ್ಷ್ಯತೇ ‖ ಉಚಿತೇವ ಪ್ರವಾಸಾನಾಂ ವೈದೇಹೀ ಪ್ರತಿಭಾತಿ ಮಾ ‖ ೮ ‖

ಕೌಸಲ್ಯಾದೇವಿಯನ್ನು ಕುರಿತು, ಆಶ್ವಾಸರ್ಯ - ಸಮಾಧಾನಗೊಳಿಸುತ್ತ, ಪ್ರಾಂಜಲಿಃ - ಕೈಗಳನ್ನು ಜೋಡಿಸಿಕೊಂಡು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ‖ ೪ ‖ ಶೋಕಂಚ - ದುಃಖವನ್ನೂ, ದುಃಖಜಂ - ದುಃಖದಿಂದ ಹುಟ್ಟಿದ, ಸಂಭ್ರಮಂ - ತ್ವರೆಯನ್ನೂ, ತ್ಯಜ - ಬಿಡು, ವನೇ - ಅರಣ್ಯದಲ್ಲಿ, ರಾಘವಶ್ಚ - ಶ್ರೀರಾಮನೂ, ಸಂತಾಪಂ - ಸಂಕಟವನ್ನು, ವ್ಯವಧೂಯ - ಕೊಡವಿ, ವತ್ಸ್ಯತಿ - ಇರುತ್ತಾನೆ. ‖ ೫ ‖ ಧರ್ಮಜ್ಞಃ-ಧರ್ಮವನ್ನು ತಿಳಿದಿರುವ, ಜಿತೇಂದ್ರಿಯಃ-ಜಯಿಸಲ್ಪಟ್ಟ ಇಂದ್ರಿಯಗಳುಳ್ಳ, ಲಕ್ಷ್ಮಣಶ್ಚಾಪಿ - ಲಕ್ಷ್ಮಣನೂ, ವನೇ - ಆರಣ್ಯದಲ್ಲಿ, ರಾಮಸ್ಯ-ಶ್ರೀರಾಮನ,ಪಾದೌ-ಚರಣಗಳನ್ನು, ಪರಿಚರ್ರ-ಸೇವಿಸುತ್ತ, ಪರಲೋಕಂ-(ಗೋ) ಸತ್ಯಲೋಕವನ್ನು' ಆಧಾರಯತಿ - ಸಾಧಿಸಿಕೊಳ್ಳುತ್ತಾನೆ. ‖ ೬ ‖ ಸೀತಾ - ಸೀತಾದೇವಿಯು, ಗೃಹೇಷ್ವಿವ - ಅರಮನೆಯಲ್ಲಿರುವಂತೆ, ವಿಜನೇ - ಜನರಹಿತವಾದ, ವನೇಪಿ - ಅರಣ್ಯದಲ್ಲಿಯೂ, ವಾಸಂ - ಇರುವಿಕೆಯನ್ನು, ಪ್ರಾಪ್ಯ - ಹೊಂದಿ, ಅಭೀತಾ - ಭಯರಹಿತಳಾಗಿ, ರಾಮೇ - ಶ್ರೀರಾಮನಲ್ಲಿ, ಸನ್ಯಸ್ತಮಾನಸಾ - ಇರಿಸಲ್ಪಟ್ಟ ಮನವುಳ್ಳವಳಾಗಿ, ವಿಸ್ರಂಭಂ - ವಿಶ್ವಾಸವನ್ನು, ಲಭತೇ - ಹೊಂದಿದಾಳೆ. ‖ ೭ ‖ ಅಸ್ಯಾಃ - ಈ ಸೀತಾದೇವಿಗೆ, ಸುಸೂಕ್ಷ್ಮಮಪಿ - ಸ್ವಲ್ಪವಾದರೂ, ಕೃತಂ - ಮಾಡಲ್ಪಟ್ಟ, ದೈನ್ಯಂ - ದೀನತೆಯು, ಕಿಂಚಿತ್ - ಎಷ್ಟುಮಾತ್ರವೂ, ನಲಕ್ಷ್ಯತೇ - ಕಾಣಲ್ಪಡುವದಿಲ್ಲ, ವೈದೇಹೀ - ಸೀತಾದೇವಿಯು, ಪ್ರವಾಸಾನಾಂ - ವನವಾಸಿಗಳಿಗೆ, ಉಚಿತೇವ - ಯೋಗ್ಯಳಂತೆ,

---

ಗಳಿಂದ ಕೌಸಲ್ಯಾದೇವಿಯನ್ನು ಸಮಾಧಾನಗೊಳಿಸುತ್ತ ಕೈ ಜೋಡಿಸಿಕೊಂಡು ಹೀಗೆಂದನು. ‖ ೧-೪ ‖ ಎಲೌ ತಾಯೆ! ಶೋಕವನ್ನೂ, ಅಜ್ಞಾನವನ್ನೂ, ದುಃಖದಿಂದ ಜನಿಸಿದ ಸಂಭ್ರಮವನ್ನೂ ತೊರೆ! ಅರಣ್ಯದಲ್ಲಿ ಶ್ರೀರಾಮನೂ ಸಹ ದುಃಖವನ್ನು ತೊರೆದು ವಾಸಿಸುತ್ತಾನೆ. ಧರ್ಮಜ್ಞನೂ, ಜಿತೇಂದ್ರಿಯನೂ ಆದ ಲಕ್ಷ್ಮಣಸ್ವಾಮಿಯೂ ಸಹ ಆ ಅರಣ್ಯದಲ್ಲಿ ಶ್ರೀರಾಮನ ಚರಣಗಳನ್ನು ಸೇವಿಸುತ್ತ, ಸತ್ಯಲೋಕವನ್ನು ಸಾಧಿಸಿಕೊಳ್ಳುತ್ತಾನೆ. ಸೀತಾದೇವಿಯು ಅರಮನೆಯಲ್ಲಿರುವಂತೆಯೇ, ಅರಣ್ಯದಲ್ಲಿಯೂ ವಾಸಿಸುತ್ತ, ನಿರ್ಭೀತಳಾಗಿ ಪತಿದೇವನಾದ ಶ್ರೀರಾಮನಲ್ಲಿಯೇ ನ್ಯಸ್ತಚಿತ್ತಳಾಗಿ ವಿಶ್ವಾಸವನ್ನು ಹೊಂದಿರುವಳು. ಆಕೆಯು ಸ್ವಲ್ಪವಾದರೂ ದೈನ್ಯವನ್ನು ಹೊಂದಿಯೇ ಇರುವುದಿಲ್ಲವು. ಆದುದರಿಂದಾಕೆಯು ವನವಾಸಕ್ಕೆ ಯೋಗ್ಯಳಾಗಿಯೇ ತೋರುತ್ತಾಳೆ. ಹಿಂದೆ ಆ ದೇವಿಯು ಉದ್ಯಾನವನಗಳಲ್ಲಿ ಹೇಗೆ ವಿಹರಿಸುತ್ತಿದ್ದಳೋ, ಹಾಗೆಯೇ ಈಗಲೂ ನಿರ್ಜನವಾದ ವನಗಳಲ್ಲಿ ವಿಹರಿಸುತ್ತಿರು

ನಗರೋಪವನಂ ಗತ್ವಾ ಯಥಾ ಸ್ಮ ರಮತೇ ಪುರಾ ॥ ತಥೈವ ರಮತೇ ಸೀತಾ ನಿರ್ಜನೇಷು ವನೇಷ್ವಪಿ ॥ ೯ ॥ ಬಾಲೇವ ರಮತೇ ಸೀತಾ ಬಾಲಚಂದ್ರನಿಭಾನನಾ ॥ ರಾಮಾ ರಾಮೇ ಹ್ಯಧೀನಾತ್ಮಾ ವಿಜನೇಪಿ ವನೇ ಸತೀ ॥ ೧೦ ॥ ತದ್ಗತಂ ಹೃದಯಂ ಹ್ಯಸ್ಯಾ ಸ್ತದಧೀನಂ ಚ ಜೀವಿತಂ ॥ ಅಯೋಧ್ಯಾಪಿ ಭವೇತ್ತಸ್ಯಾ ರಾಮಹೀನಾ ತಥಾ ವನಂ ॥ ೧೧ ॥ ಪರಿಪೃಚ್ಛತಿ ವೈದೇಹೀ ಗ್ರಾಮಾಂಶ್ಚ ನಗರಾಣಿಚ ॥ ಗತಿಂ ದೃಷ್ಟ್ವಾ ನದೀನಾಂಚ ಪಾದಪಾ‌ನ್ ವಿವಿಧಾನಪಿ ॥ ೧೨ ॥

ಮಾ - ನನಗೆ, ಪ್ರತಿಭಾತಿ - ತೋರುತ್ತಾಳೆ. ॥ ೮ ॥ ಪುರಾ - ಪೂರ್ವದಲ್ಲಿ, ನಗರೋಪವನಂ - ಅಯೋಧ್ಯಾಪಟ್ಟಣದ ಉದ್ಯಾನವನ್ನು, ಗತ್ವಾ - ಹೊಂದಿ, ಯಥಾ - ಹೇಗೆ, ರಮತೇಸ್ಮ - ವಿಹರಿಸುತ್ತಿದ್ದಳೋ, ತಥೈವ - ಹಾಗೆಯೇ, ಸೀತಾ - ಸೀತಾದೇವಿಯು, ನಿರ್ಜನೇಷು - ಜನರಹಿತಗಳಾದ, ವನೇಷ್ವಪಿ ವನಗಳಲ್ಲಿಯೂ, ರಮತೇ - ವಿಹರಿಸುತ್ತಾಳೆ. ॥ ೯ ॥ ಬಾಲಚಂದ್ರನಿಭಾನನಾ - ಆಗತಾನೇ ಹುಟ್ಟಿದ ಚಂದ್ರನಿಗೆ ಸದೃಶವಾದ ಮುಖವುಳ್ಳ, ರಾಮೇ - ಶ್ರೀರಾಮನಲ್ಲಿ, ಅಧೀನಾತ್ಮಾ - ಆಸಕ್ತವಾದ ಚಿತ್ತವುಳ್ಳ, ಸತೀ - ಪತಿವ್ರತೆಯಾದ, ರಾಮಾ - ರಮಣಶೀಲಳಾದ, ಸೀತಾ - ಸೀತಾದೇವಿಯು, ವನೇ - ವನದಲ್ಲಿ, ಬಾಲೇವ - ಬಾಲಕಿಯಂತೆ, ರಮತೇ - ಕ್ರೀಡಿಸುತ್ತಾಳೆ. ॥ ೧೦ ॥ ಹಿ - ಯಾವ ಕಾರಣ, ಅಸ್ಯಾಃ - ಈ ಸೀತಾದೇವಿಯ, ಹೃದಯಂ - ಮನಸ್ಸು, ತದ್ಗತಂ - ಆ ಶ್ರೀರಾಮನನ್ನೇ ಹೊಂದಿರುವುದೋ, ಜೀವಿತಂಚ - ಪ್ರಾಣವೂ, ತದಧೀನಂ - ಆ ಶ್ರೀರಾಮನಿಗೆ ಅಧೀನವಾಗಿರುವುದೋ, ತಸ್ಮಾತ್ - ಆ ಕಾರಣ, ತಸ್ಯಾಃ - ಆ ಸೀತಾದೇವಿಗೆ, ವನಂ - ಅರಣ್ಯವು, ಅಯೋಧ್ಯಾ - ಅಯೋಧ್ಯಾಪಟ್ಟಣವೇ, ಭವೇತ್ - ಆದೀತು, ತಥಾ - ಹಾಗೆಯೇ, ರಾಮಹೀನಾ - ರಾಮನಿಂದ ಬಿಡಲ್ಪಟ್ಟ, ಅಯೋಧ್ಯಾಪಿ - ಅಯೋಧ್ಯಾಪಟ್ಟಣವೂ, ವನಂ - ಅರಣ್ಯವು, ಭವೇತ್ - ಆದೀತು. ॥ ೧೧ ॥ ವೈದೇಹೀ - ಸೀತಾದೇವಿಯು, ಗ್ರಾಮಾಂಶ್ಚ - ಹಳ್ಳಿಗಳನ್ನೂ, ನಗರಾಣಿಚ - ದೊಡ್ಡಪಟ್ಟಣಗಳನ್ನೂ, ನದೀನಾಂ - ಹೊಳೆಗಳ, ಗತಿಂ - ಪ್ರವಾಹವನ್ನೂ, ವಿವಿಧಾ‌ನ್ - ನಾನಾವಿಧಗಳಾದ, ಪಾದಪಾನಪಿ - ಗಿಡಗಳನ್ನೂ, ದೃಷ್ಟ್ವಾ - ಕಂಡು, ಪರಿಪೃಚ್ಛತಿ - ಕೇಳುತ್ತಾಳೆ. ॥ ೧೨ ॥ ಜಾನಕೀ - ಸೀತಾದೇವಿಯು, ಅಯೋಧ್ಯಾಕ್ರೋಶಮಾತ್ರೇತು - ಅಯೋಧ್ಯಾಪಟ್ಟಣಕ್ಕೆ ಒಂದು ಹರಿ

ವಳು. ಪೂರ್ಣಚಂದ್ರನಂತಿರುವ ಮುಖವುಳ್ಳವಳೂ, ಮಹಾ ಪತಿವ್ರತೆಯೂ, ಸುಂದರಿಯೂ ಆದ ಸೀತಾದೇವಿಯು ರಾಮಾಧೀನವಾದ ಮನವುಳ್ಳವಳಾಗಿ ಬಾಲಕಿಯಂತೆ ಕ್ರೀಡಿಸುತ್ತಿರುವಳು.॥೫-೯॥ ಇಷ್ಟೆಯಲ್ಲದೆ ಆ ಸೀತಾದೇವಿಯ ಮನಸ್ಸೂ, ಜೀವಿತವೂ, ರಾಮಾಧೀನವಾಗಿರುವುದು. ರಾಮನೊಬ್ಬನಿಲ್ಲದಿದ್ದರೆ ಆಕೆಗೆ ಈ ಅಯೋಧ್ಯಾಪಟ್ಟಣವೆಲ್ಲ ಅರಣ್ಯದಂತಿರುವುದು. ಅಮ್ಮಾ! ಕೌಸಲ್ಯಾದೇವಿಯೆ ! ಸೀತಾದೇವಿಯು ಈ ಅಯೋಧ್ಯಾಪಟ್ಟಣದಿಂದ ಒಂದು ಹರಿದಾರಿದೂರದಲ್ಲಿ ವಿಹರಿಸುತ್ತಿರುವಳಂತಿರುವಳು. ಮಾರ್ಗದಲ್ಲಿ ಹೋಗುವಾಗ ಸಂತೋಷದಿಂದ ಗ್ರಾಮಗಳನ್ನೂ, ಪಟ್ಟಣಗಳನ್ನೂ, ನದಿಗಳನ್ನೂ, ನಾನಾವಿಧಗಳಾದ ವೃಕ್ಷಗಳನ್ನೂ ನೋಡಿ ಶ್ರೀರಾಮನನ್ನಾಗಲಿ, ಲಕ್ಷ್ಮಣನನ್ನಾಗಲಿ ಅವುಗಳ ಹೆಸರುಗಳನ್ನು ಕೇಳಿ ತಿಳಿದುಕೊಳ್ಳುವಳು" ಸುಮಂತ್ರನೀರೀತಿ ಹೇಳಿ ಸೀತಾದೇವಿಯು

ರಾಮಂ ವಾ ಲಕ್ಷ್ಮಣಂವಾಪಿ ಪೃಷ್ಟ್ವಾ ಜಾನಾತಿ ಜಾನಕೀ ॥ ಅಯೋಧ್ಯಾ
ಕ್ರೋಶಮಾತ್ರೇತು ವಿಹಾರಮಿವ ಸಂಶ್ರಿತಾ ॥ ೧೩ ॥ ಇದಮೇವ ಸ್ಮರಾಮ್ಯಸ್ಯಾ
ಸ್ಸಹಸೈವೋಪಜಲ್ಪಿತಂ ॥ ಕೈಕೇಯಿಸಂಶ್ರಿತಂ ವಾಕ್ಯಂ ನೇದಾನೀಂ ಪ್ರತಿ
ಭಾತಿ ಮಾ ॥ ೧೪ ॥ ಧ್ವಂಸಯಿತ್ವಾತು ತದ್ವಾಕ್ಯಂ ಪ್ರಮಾದಾ ತ್ಪರ್ಯುಪ
ಸ್ಥಿತಂ ॥ ಹ್ಲಾದನಂ ವಚನಂ ಸೂತೋ ದೇವ್ಯಾ ಮಧುರ ಮಬ್ರವೀತ್ ॥೧೫॥
ಅಧ್ವನಾ ವಾತವೇಗೇನ ಸಂಭ್ರಮೇಣಾತಪೇನಚ ॥ ನ ವಿಗಚ್ಛತಿ ವೈದೇಹ್ಯಾ
ಶ್ಚಂದ್ರಾಂಶು ಸದೃಶೀ ಪ್ರಭಾ ॥ ೧೬ ॥ ಸದೃಶಂ ಶತಪತ್ರಸ್ಯ ಪೂರ್ಣಚಂದ್ರೋ
ಪಮಪ್ರಭಂ ॥ ವದನಂ ತದ್ವದಾನ್ಯಾಯಾ ವೈದೇಹ್ಯಾ ನ ವಿಕಂಪತೇ ॥ ೧೭ ॥

ದಾರಿಯಲ್ಲಿ, ವಿಹಾರಂ - ವಿಲಾಸವನ್ನು, ಸಂಶ್ರಿತೇವ - ಆಶ್ರಯಿಸಿದವಳಂತೆ, ರಾಮಂವಾ - ಶ್ರೀರಾಮ ನನ್ನಾದರೂ, ಲಕ್ಷ್ಮಣಂವಾ - ಲಕ್ಷ್ಮಣಸ್ವಾಮಿಯನ್ನಾದರೂ, ಪೃಷ್ಟ್ವಾ - ಕೇಳಿ, ಜಾನಾತಿ- ತಿಳಿದುಕೊಳ್ಳುತ್ತಾಳೆ. ॥ ೧೩ ॥ ಅಸ್ಯಾಃ - ಈ ಸೀತಾದೇವಿಯಿಂದ, ಸಹಸೈವ - ಜಾಗ್ರತೆಯಾಗಿ, ಉಪಜಲ್ಪಿತಂ - ಹೇಳಲ್ಪಟ್ಟ, ಕೈಕೇಯಿಸಂಶ್ರಿತಂ - ಕೈಕೇಯಿಸಂಬಂಧವಾದ, ವಾಕ್ಯಮಿದಮೇವ - ಈ ಮಾತನ್ನೇ, ಸ್ಮರಾಮಿ - ಜ್ಞಾಪಿಸಿಕೊಳ್ಳುತ್ತೇನೆ, ಇದಾನೀಂ - ಈಗ, ಮಾ - ನನಗೆ, ನಪ್ರತಿ ಭಾತಿ - ಸ್ಫುರಣೆಗೆಬರಲಿಲ್ಲ, ಇತಿ - ಇಂತೆಂದು, ಪ್ರಮಾದಾತ್ - ಬುದ್ಧಿಭ್ರಂಶದಿಂದ, ಪರ್ಯುಪ ಸ್ಥಿತಂ - ಉಪಸ್ಥಿತವಾದ, ತದ್ವಾಕ್ಯಂ - ಆ ಮಾತನ್ನು, ಧ್ವಂಸಯಿತ್ವಾ - ಹೋಗಲಾಡಸಿ. ಸೂತಃ - ಸಾರಥಿಯು, ದೇವ್ಯಾಃ - ಕೌಸಲ್ಯಾದೇವಿಗೆ, ಹ್ಲಾದನಂ - ಆಹ್ಲಾದಕರವಾದ, ಮಧುರಂ-ಮನೋ ಹರವಾದ, ವಚನಂ - ಮಾತನ್ನು, ಅಬ್ರವೀತ್ - ನುಡಿದನು. ॥೧೪-೧೫॥ ವೈದೇಹ್ಯಾಃ - ಸೀತಾ ದೇವಿಯ, ಚಂದ್ರಾಂಶುಸದೃಶೀ - ಚಂದ್ರಕಿರಣಕ್ಕೆ ಸಮಾನವಾದ, ಪ್ರಭಾ - ಕಾಂತಿಯು, ಅಧ್ವನಾ- ಮಾರ್ಗದಿಂದಲೇ ಆಗಲಿ, ವಾತವೇಗೇನ-ಗಾಳಿಯವೇಗದಿಂದಲೇ ಆಗಲಿ, ಸಂಭ್ರಮೇಣ-ವ್ಯಾಘ್ರಾದಿ ದರ್ಶನದಿಂದ ಹುಟ್ಟಿದ ವ್ಯಾಕುಲತೆಯಿಂದಲೇ ಆಗಲಿ, ಆತಪೇನಚ - ಬಿಸಿಲಿನಿಂದಲೇ ಆಗಲಿ, ನವಿ ಗಚ್ಛತಿ - ವಿಕಾರವನ್ನು ಹೊಂದುವುದಿಲ್ಲ. ॥ ೧೬ ॥ ಶತಪತ್ರಸ್ಯ - ಕಮಲಕ್ಕೆ, ಸದೃಶಂ - ಸಮಾನವಾದ, ಪೂರ್ಣಚಂದ್ರೋಪಮಪ್ರಭಂ - ಪೂರ್ಣಚಂದ್ರನಿಗೆ ಸಮಾನವಾದ ಕಾಂತಿಯುಳ್ಳ, ವದಾನ್ಯಾಯಾಃ - ಮನೋಹರವಾದ ವಾಕ್ಕುಗಳುಳ್ಳ, ವೈದೇಹ್ಯಾಃ - ಸೀತಾದೇವಿಯ, ತದ್ವದನಂ - ಆ ಮುಖವು, ನವಿಕಂಪತೇ - ಚಲಿಸುವದಿಲ್ಲ. ॥ ೧೭ ॥ ಅಲಕ್ತರಸರಕ್ತಾಭೌ, ಅಲಕ್ತರಸ -

---

ಕೈಕೇಯಿಯನ್ನು ಕುರಿತು, ಒಂದು ಮಾತನ್ನು ಹೇಳಿದಳು.” ಎಂದಾಮಾತನ್ನು ಹೇಳಬೇಕೆಂ ದೆಣಿಸಿ, “ಆ ಮಾತನ್ನು ಹೇಳಿದೆನಾದರೆ ಈ ಕೌಸಲ್ಯಾ ದಶರಥರು ಮರಣವನ್ನು ಹೊಂದು ವರೊ ಏನೋ?” ಎಂದು ಶಂಕಿಸಿ ಆ ಮಾತನ್ನು ಮರೆಯಿಸಿ, ಕೌಸಲ್ಯಾದೇವಿಗೆ ಸಂತೋಷ ಕರವೂ ಮತ್ತು ಮನೋಹರವೂ ಆದ ಈ ಮಾತನ್ನಾಡಿದನು. ॥೧೦-೧೫॥ “ಎಲೌ ಕೌಸಲ್ಯಾ ದೇವಿಯೆ ! ಬಹುಕಾಲ ಮಾರ್ಗದಲ್ಲಿ ನಡೆದ ಆಯಾಸದಿಂದಲಾಗಲಿ, ವಾಯುವೇಗದಿಂದಾ ಗಲಿ, ದೊಡ್ಡ ಹುಲಿಗಳನ್ನು ನೋಡುವುದರಿಂದಾಗಲಿ, ಬಿಸಿಲಿನ ಬೇಗೆಯಿಂದಾಗಲಿ, ಚಂದ್ರ ಕಿರಣ ಸಮಾನವಾದ, ಮೃದುವಾದ ಆ ಸೀತಾದೇವಿಯ ಶರೀರಕಾಂತಿಯು ಏನೊಂದೂ

ಅಲಕ್ತರಸ ರಕ್ತಾಭಾ ವಲಕ್ತರಸ ವರ್ಜಿತೌ ॥ ಅದ್ಯಾಪಿ ಚರಣೌ ತಸ್ಯಾಃ ಪದ್ಮಕೋಶಸಮಪ್ರಭೌ ॥ ೧೮ ॥ ನೂಪುರೋದ್ಘುಷ್ಟ ಹೇಲೇವ ಖೇಲಂ ಗಚ್ಛತಿ ಭಾಮಿನೀ॥ಇದಾನೀಮಪಿ ವೈದೇಹೀ ತದ್ರಾಗಾ ನ್ನ್ಯಸ್ತ ಭೂಷಣಾ ॥೧೯॥ ಗಜಂವಾ ವೀಕ್ಷ್ಯ ಸಿಂಹಂವಾ ವ್ಯಾಘ್ರಂವಾ ವನಮಾಶ್ರಿತಾ ॥ ನಾಽಹಾರಯತಿ ಸಂತ್ರಾಸಂ ಬಾಹೂ ರಾಮಸ್ಯ ಸಂಶ್ರಿತಾ ॥ ೨೦ ॥ ನಶೋಚ್ಯಾಸ್ತೇ ನಚಾ

ಲಾಕ್ಷಾರಸದಂತೆ, ರಕ್ತ - ಕೆಂಪಾಗಿರುವ, ಆಭೌ-ಕಾಂತಿಯುಳ್ಳ, ಅಲಕ್ತರಸವರ್ಜಿತೌ, ಅಲಕ್ತರಸ-ಲಾಕ್ಷಾರಸದಿಂದ, ವರ್ಜಿತೌ - ಬಿಡಲ್ಪಟ್ಟ, ತಸ್ಯಾಃ - ಆ ಸೀತಾದೇವಿಯ, ಚರಣೌ - ಪಾದಗಳು, ಅದ್ಯಾಪಿ - ಈಗಲೂ, ಪದ್ಮಕೋಶಸಮಪ್ರಭೌ - ಕಮಲಗಳ ಮೊಗ್ಗುಗಳಿಗೆ ಸಮಾನವಾದ ಕಾಂತಿಯುಳ್ಳದಾಗಿವೆ. ॥ ೧೮ ॥ ಭಾಮಿನೀ - ಸ್ತ್ರೀಯಾದ, ವೈದೇಹೀ - ಸೀತಾದೇವಿಯು, ತದ್ರಾಗಾತ್ - ಆ ಒಡಿವೆಗಳಲ್ಲಿನ ಅನುರಾಗದಿಂದ, ನ್ಯಸ್ತಭೂಷಣಾ - ಧರಿಸಲ್ಪಟ್ಟ ಒಡಿವೆಗಳುಳ್ಳವಳಾಗಿ, (ಗೋ) ತದ್ರಾಗಾತ್, ತತ್ - ಆ ಶ್ರೀರಾಮನೊಡನೆ ಗಮನದಲ್ಲಿ, ರಾಗಾತ್ - ಅನುರಾಗದಿಂದ, ನ್ಯಸ್ತಭೂಷಣಾ, ನ್ಯಸ್ತ - ಬಿಡಲ್ಪಟ್ಟ, ಭೂಷಣಾ-ಒಡಿವೆಗಳುಳ್ಳವಳಾದರೂ, ನೂಪುರೋದ್ಘುಷ್ಟಹೇಲೇವ, ನೂಪುರ - ಕಾಲ್ಕಡಗಗಳ, ಉದ್ಘುಷ್ಟ - ಧ್ವನಿಗಳ, ಹೇಲೇವ - ವಿಲಾಸವುಳ್ಳವಳಂತೆ, ಇದಾನೀಮಪಿ-ಈಗಲೂ, ಖೇಲಂ - ವಿಲಾಸದಿಂದ ಕೂಡಿದಂತೆ, ಗಚ್ಛತಿ - ಹೋಗುತ್ತಾಳೆ, (ಅಥವ) ನೂಪುರೋದ್ಘುಷ್ಟಹೇಲೇವ, ನೂಪುರ - ಕಾಲ್ಕಡಗಗಳ, ಉದ್ಘುಷ್ಟ - ಧ್ವನಿಗಳ, ಹೇಲೇವ - ವಿಲಾಸವುಳ್ಳವಳಾಗಿಯೇ, ಖೇಲಂ - ವಿಲಾಸವಾಗಿ, ಗಚ್ಛತಿ - ಹೋಗುತ್ತಾಳೆ. ॥ ೧೯ ॥ ವನಂ - ಅರಣ್ಯವನ್ನು, ಆಶ್ರಿತಾ - ಹೊಂದಿದ ಸೀತಾದೇವಿಯು, ರಾಮಸ್ಯ - ಶ್ರೀರಾಮನ, ಬಾಹೂ - ಭುಜಗಳನ್ನು, ಸಂಶ್ರಿತಾ - ಆಶ್ರಯಿಸಿ, ಗಜಂವಾ - ಆನೆಯನ್ನೇ ಆಗಲಿ, ಸಿಂಹಂವಾ - ಸಿಂಹವನ್ನೇ ಆಗಲಿ, ವ್ಯಾಘ್ರಂವಾ - ಹುಲಿಯನ್ನೇ ಆಗಲಿ, ವೀಕ್ಷ್ಯ-ಕಂಡು, ಸಂತ್ರಾಸಂ-ಭಯವನ್ನು, ನಾಹಾರಯತಿ - ಹೊಂದುವುದಿಲ್ಲವು. ॥ ೨೦ ॥ ತೇ - ಆ ಸೀತಾರಾಮಲಕ್ಷ್ಮಣರು, ನಶೋಚ್ಯಾಃ - ಶೋಕಿಸತಕ್ಕವರಲ್ಲ, ಆತ್ಮಾನಶ್ಚ - ನಾವೂ, ನಶೋಚ್ಯಾಃ - ಶೋಕಿಸತಕ್ಕವರಲ್ಲ, ಜನಾಧಿಪಃ - ದಶರಥರಾಯನೂ, ನಶೋಚ್ಯಃ - ಶೋಕಿಸತಕ್ಕವನಲ್ಲ, ಇದಂಚರಿತಂ - (ಗೋ + ಮ) ಈ ಪಿತೃವಾಕ್ಯ

ವಿಕಾರವನ್ನು ಹೊಂದಲಿಲ್ಲವು. ಇಷ್ಟೆಯಲ್ಲದೆ ಕಮಲಕ್ಕೆ ಸಮಾನವಾದುದೂ, ಪೂರ್ಣಚಂದ್ರೋಪಮವಾದುದೂ ಆದ ದೇಹಕಾಂತಿಯನ್ನೊಳಗೊಂಡಿರುವ ಆ ಸೀತಾದೇವಿಯ ಮುಖವು ಸ್ವಲ್ಪವಾದರೂ ಬಾಡಲಿಲ್ಲವು. ಲಾಕ್ಷಾರಸದಂತೆ ಕೆಂಪಾಗಿಯೂ, ಲಾಕ್ಷಾರಸವಿವಿವರ್ಜಿತವಾಗಿಯೂ ಇರುವ ಆ ದೇವಿಯ ಪಾದಗಳು ಈಗಲೂ ಕಮಲಕೋರಕಗಳಿಗೆ ಸಮಾನವಾಗಿ ಶೋಭಿಸುತ್ತಿರುವುದು. ಈಗಲೂ ಭೂಷಣಗಳಲ್ಲಿನ ಆಶೆಯಿಂದ, ಸಕಲಾಭರಣಗಳನ್ನೂ ಧರಿಸಿಕೊಂಡಿರುವ ಆ ಸೀತಾದೇವಿಯು ಅರಣ್ಯವನ್ನು ಹೊಂದಿ ಶ್ರೀರಾಮನ ಭುಜಗಳನ್ನಾಶ್ರಯಿಸಿದವಳಾಗಿ, ಆನೆ, ಸಿಂಹ, ಹುಲಿ ಮೊದಲಾದ ದುಷ್ಟಸತ್ವಗಳನ್ನು ನೋಡಿ ಅಂಜುವುದಿಲ್ಲವು. ॥ ೧೬-೨೦ ॥ ಆ ಸೀತಾರಾಮಲಕ್ಷ್ಮಣರು, "ಅರಣ್ಯದಲ್ಲಿರಬೇಕಾಯಿತಲ್ಲ!" ಎಂದು ದುಃಖಿಸತಕ್ಕವರಲ್ಲವು. ಆದುದರಿಂದ ನಾವು ಅವರನ್ನು ಕುರಿತು, ದುಃಖಿ

ತ್ಮಾನ ಶ್ರೋಚ್ಯೋ ನಾಪಿ ಜನಾಧಿಪಃ ॥ ಇದಂ ಹಿ ಚರಿತಂ ಲೋಕೇ ಪ್ರತಿಷ್ಠಾ
ಸ್ಯತಿ ಶಾಶ್ವತಂ ॥ ೨೧ ॥ ವಿಧೂಯ ಶೋಕಂ ಪರಿಹೃಷ್ಟಮಾನಸಾ ಮಹರ್ಷಿ
ಯಾತೇ ಪಥಿ ಸುವ್ಯವಸ್ಥಿತಾಃ ॥ ವನೇ ರತಾ ವನ್ಯಫಲಾಶನಾಃ ಪಿತುಃ ಶುಭಾಂ
ಪ್ರತಿಜ್ಞಾಂ ಪರಿಪಾಲಯಂತಿ ತೇ ॥ ೨೨ ॥

ತಥಾಪಿ ಸೂತೇನ ಸುಯುಕ್ತ ವಾದಿನಾ
ನಿವಾರ್ಯಮಾಣಾ ಸುತಶೋಕ ಕರ್ಶಿತಾ ॥
ನಚೈವ ದೇವೀ ವಿರರಾಮ ಕೂಜಿತಾ
ತ್ಪ್ರಿಯೇತಿ ಪುತ್ರೇತಿಚ ರಾಘವೇತಿಚ ॥ ೨೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಷ್ಠಿತಮಸ್ಸರ್ಗಃ.

ಪರಿಪಾಲನ ರೂಪಚರಿತ್ರೆಯಾಪರೆ, ಲೋಕೇ - ಪ್ರಪಂಚದಲ್ಲಿ, ಶಾಶ್ವತಂ - ಆಚಂದ್ರಾರ್ಕವಾಗಿ, ಪ್ರತಿಷ್ಠಾಸ್ಯತಿ - ಇರುತ್ತದೆ. ॥ ೨೧ ॥ ಶೋಕಂ - ವ್ಯಸನವನ್ನು, ವಿಧೂಯ - ಕೊಡಹಿ, ಪರಿಹೃಷ್ಟಮಾನಸಾಃ - ಸಂತೋಷಗೊಂಡ ಮನವುಳ್ಳವರಾಗಿ, ಮಹರ್ಷಿಯಾತೇ, ಮಹರ್ಷಿ - ದೊಡ್ಡ ಋಷಿಗಳಿಂದ, ಯಾತೇ - ಹೊಂದಲ್ಪಟ್ಟ, ಪಥಿ - ಸನ್ಮಾರ್ಗದಲ್ಲಿ, ಸುವ್ಯವಸ್ಥಿತಾಃ - ಚನ್ನಾಗಿ ಆಚರಿಸುತ್ತಿರುವ, ವನೇ - ಅರಣ್ಯದಲ್ಲಿ, ರತಾಃ - ಆಸಕ್ತರಾದ, ತೇ - ಆ ಸೀತಾರಾಮಲಕ್ಷ್ಮಣರು, ವನ್ಯಫಲಾಶನಾಃ - ವನದಲ್ಲಿಹುಟ್ಟಿದ ಫಲಗಳನ್ನೇ ಭಕ್ಷಿಸುತ್ತ, ಪಿತುಃ - ತಂದೆಯ, ಶುಭಾಂ - ಮಂಗಳಕರವಾದ, ಪ್ರತಿಜ್ಞಾಂ - ಪ್ರತಿಜ್ಞೆಯನ್ನು, ಪರಿಪಾಲಯಂತಿ - ರಕ್ಷಿಸುತ್ತಾರೆ. ॥ ೨೨ ॥ ತಥಾ - ಆಪರಿಯಾಗಿ, ಸುಯುಕ್ತವಾದಿನಾ - ಯುಕ್ತಮಾರ್ಗವನ್ನು ಹೇಳುತ್ತಿರುವ, ನಿವಾರ್ಯಮಾಣಾಪಿ - ತಡೆಮಾಡಿರೂ, ಸುತಶೋಕಕರ್ಶಿತಾ - ಪುತ್ರಶೋಕದಿಂದ ಕೃಶೀಭಾವವನ್ನು ಹೊಂದಿರುವ, ದೇವೀ - ಕೌಸಲ್ಯಾದೇವಿಯು, ಪ್ರಿಯೇತಿ - ಎಲೈ ಇಷ್ಟನಾದವನೇ, ಹೇ ಪುತ್ರೇತಿ - ಎಲೈ ಮಗನೇ ಎಂತಲೂ, ಹೇ ರಾಘವೇತಿಚ - ಎಲೈ ಶ್ರೀರಾಮನೇ ಎಂತಲೂ, ಕೂಜಿತಾತ್ - ಧ್ವನಿಯಿಂದ, ನವಿರರಾಮೈವ-ವಿರಾಮವನ್ನು ಹೊಂದಲೇ ಇಲ್ಲವು. ॥ ೨೩ ॥

ಇತ್ಯಾರ್ಷೇ ಶ್ರಿಮದ್ರಾಮಾಯಣೇ ಅಯೋಧ್ಯಾಕಾಂಡೇ ಷಷ್ಠಿತಮಸ್ಸರ್ಗಃ.

ಸುವುದು ಯೋಗ್ಯವಾದುದಲ್ಲವು. ಅಲ್ಲದೆ ಆ ಸೀತಾರಾಮಲಕ್ಷ್ಮಣರನ್ನು ಕುರಿತಾಗಲಿ, ಈ ದಶರಥರಾಯನನ್ನು ಕುರಿತಾಗಲಿ, ನನ್ನನ್ನು ಕುರಿತಾಗಲಿ ದುಃಖಿಸುವುದು ಸರಿಯಲ್ಲ. ಶ್ರೀರಾಮನು ಪಿತೃವಾಕ್ಯಪರಿಪಾಲನೆಯನ್ನು ಮಾಡಿ ಸಂಪಾದಿಸುವ ಕೀರ್ತಿಯು ಸೂರ್ಯಚಂದ್ರರಿರುವವರೆವಿಗೂ ಶಾಶ್ವತವಾಗಿರುತ್ತದೆ. ಆದುದರಿಂದ ನಾವೀವಿಷಯದಲ್ಲಿ ಸಂತೋಷವನ್ನು ಹೊಂದಬೇಕು. ಆ ಸೀತಾರಾಮಲಕ್ಷ್ಮಣರು ಮೂವರೂ ದುಃಖವನ್ನು ತೊರೆದು ಸಂತೋಷದಿಂದ ಋಷಿಪುಂಗವರ ಆಚಾರವನ್ನು ಕೈಕೊಂಡು, ತಂದೆಯು ಮಾಡಿದ ಪ್ರತಿಜ್ಞೆಯನ್ನು ಪರಿಪಾಲಿಸುತ್ತಿರುವರು." ಈ ರೀತಿ ಸುಮಂತ್ರನು ಬಹುವಿಧವಾಗಿ ಸಮಾಧಾನಗೊಳಿಸಿದರೂ ಪುತ್ರಶೋಕದಿಂದ ಕೃಶಿಸಿಹೋದ ಆ ಕೌಸಲ್ಯಾದೇವಿಯು, "ಹಾ ಮಗನೆ! ಎಲೈ ಪ್ರೀತಿಪಾತ್ರನೆ!" ಎಂದು ಕೂಗುತ್ತಲೇ ಇದ್ದಳು. ॥ ೨೧-೨೩ ॥

ಇಂತಿದು ದಂಡಕಾರಣ್ಯಗತ ಸೀತಾ ವೃತ್ತಾಂತ ನಿರೂಪಣವೆಂಬ
ಅರವತ್ತನೆಯ ಸರ್ಗವು ಸಂಪೂರ್ಣವಾದುದು.

ಅಯೋಧ್ಯಾಕಾಂಡೇ ಏಕಷಷ್ಠಿತಮಸ್ಸರ್ಗಃ.

ವನಂ ಯಾತೇ ಧರ್ಮಪರೇ ರಾಮೇ ರಮಯತಾಂ ವರೇ || ಕೌಸಲ್ಯಾ ರುದತೀ ಸ್ವಾರ್ತಾ ಭರ್ತಾರ ಮಿದಮಬ್ರವೀತ್ || ೧ || ಯದ್ಯಪಿ ತ್ರಿಷು ಲೋಕೇಷು ಪ್ರಥಿತಂ ತೇ ಮಹದ್ಯಶಃ || ಸಾನುಕ್ರೋಶೋ ವದಾನ್ಯಶ್ಚ ಪ್ರಿಯವಾದೀಚ ರಾಘವಃ || ೨ || ಕಥಂ ನರವರಶ್ರೇಷ್ಠ ! ಪುತ್ರೌ ತೌ ಸಹಸೀತಯಾ || ದುಃಖಿತೌ ಸುಖಸಂವೃದ್ಧೌ ವನೇ ದುಃಖಂ ಸಹಿಷ್ಯತಃ || ೩ || ಸಾ ನೂನಂ

ರಮಯತಾಂ - ಮನೋರಂಜನ ಮಾಡುವುದರಲ್ಲಿ, ವರೇ - ಶ್ರೇಷ್ಠನಾದ, ಧರ್ಮಪರೇ - ಧರ್ಮದಲ್ಲಿಯೇ ಆಸಕ್ತನಾದ, ರಾಮೇ - ಶ್ರೀರಾಮನು, ವನಂಯಾತೇ - ವನವನ್ನು ಕುರಿತು ಹೊರಟುಹೋಗಲು, ರುದತೀ - ರೋದನಮಾಡುತ್ತಿರುವ ಕೌಸಲ್ಯಾ - ಕೌಸಲ್ಯಾದೇವಿಯು, ಸ್ವಾರ್ತಾ - ಬಹಳ ಖಿನ್ನಳಾಗಿ, ಭರ್ತಾರಂ - ಗಂಡನನ್ನು ಕುರಿತು, ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದಳು. || ೧ || ಯದ್ಯಪಿ - ಹೇಗಾದರೂ, ತ್ರಿಷುಲೋಕೇಷು - ಮೂರು ಲೋಕಗಳಲ್ಲಿಯೂ, ತೇ - ನಿನ್ನ, ಮಹದ್ಯಶಃ - ಉನ್ನತವಾದ ಕೀರ್ತಿಯು, ಪ್ರಥಿತಂ - ಪ್ರಸಿದ್ಧವಾಯಿತು, (ಗೋ) ಸಾನುಕ್ರೋಶಃ - ದಯೆಯಿಂದೊಡಗೂಡಿದ, ವದಾನ್ಯಶ್ಚ - ಬಹುದಾತನಾದ, ರಾಘವಶ್ಚ - ಶ್ರೀರಾಮನೂ, ಪ್ರಿಯವಾದೀಚ - ಇಷ್ಟವಾದಮಾತುಗಳುಳ್ಳವನು, ಇತಿ - ಇಂತೆಂದು ಶ್ರೀರಾಮನಿಗೂ, ಯಶಃ - ಯಶಸ್ಸು, ಪ್ರಥಿತಂ - ಪ್ರಸಿದ್ಧವಾಯಿತು, (ಅಥವ) ರಾಘವಃ - ದಶರಥ ರಾಯನು, ಸಾನುಕ್ರೋಶಃ - ದಯೆಯಿಂದ ಕೂಡಿದವನು, ವದಾನ್ಯಶ್ಚ - ಬಹುದಾತನಾದವನು, ಪ್ರಿಯವಾದೀಚ - ಸತ್ಯವಾದಿಯು, ಇತಿ - ಇಂತೆಂದು, ತೇ - ನಿನಗೆ, ಮಹದ್ಯಶಃ-ಬಹಳ ಯಶಸ್ಸು, ಪ್ರಥಿತಂ - ಪ್ರಖ್ಯಾತವಾಯಿತು. || ೨ || ಹೇ ನರವರಶ್ರೇಷ್ಠ - ಎಲೈ ನರಶ್ರೇಷ್ಠನೇ, ಸುಖಸಂವೃದ್ಧೌ - ಸುಖದಿಂದಲೇ ಬೆಳದಿರುವ, ತೌಪುತ್ರೌ - ಆ ಮಕ್ಕಳಿಬ್ಬರೂ, ಸೀತಯಾಸಹ - ಸೀತಾದೇವಿಯೊಡನೆ, ದುಃಖಿತೌ - ದುಃಖಿತರಾಗಿ, ವನೇ - ಅರಣ್ಯದಲ್ಲಿ, ದುಃಖಂ - ವ್ಯಸನವನ್ನು, ಕಥಂ ಸಹಿಷ್ಯತಃ - ಹೇಗೆ ಸಹಿಸುವರು. ತರುಣೀ - (ಗೋ) ಅತಿಕ್ರಾಂತವಾದ ಬಾಲ್ಯಾವಸ್ಥೆಯುಳ್ಳ,

---

ಮನೋರಂಜನೆ ಮಾಡುವವರಲ್ಲಿ ಶ್ರೇಷ್ಠನೂ, ಮಹಾ ಧರ್ಮಾತ್ಮನೂ ಆದ ಶ್ರೀರಾಮನು ವನವನ್ನು ಕುರಿತು ತೆರಳಲು ರೋದಿಸುತ್ತಿರುವ ಕೌಸಲ್ಯಾದೇವಿಯು ಮಹಾ ಖಿನ್ನಳಾಗಿ ಪತಿಯಾದ ದಶರಥರಾಯನನ್ನು ಕುರಿತು ಹೀಗೆ ಹೇಳಿದಳು. "ಎಲೈ ರಾಯನೆ ! ನೀನು ಮಹಾ ದಯೆಯುಳ್ಳವನೆಂದೂ ಬಹುದಾತನೂ ಪ್ರಿಯವಾದಿಯೂ ಎಂದೂ, ಮೂರೂ ಲೋಕಗಳಲ್ಲಿ ಅತ್ಯುನ್ನತ ಕೀರ್ತಿಯುನ್ನಾಂತೆ ! ಆದರೂ ಪ್ರಸಿದ್ಧವಾದ ಕೀರ್ತಿಗಿಂತಲೂ, ಬಲು ಬೇಗನೆ ಮೂರು ಲೋಕಗಳಲ್ಲಿಯೂ ವ್ಯಾಪಿಸುವ ಅಪಕೀರ್ತಿಯನ್ನು ಹುಟ್ಟಿಸುವ ಕಾರ್ಯವನ್ನು ಮಾಡಿದೆ ! ಮಾನವೋತ್ತಮನಾದ ಎಲೈ ದಶರಥರಾಯನೆ! ಇದುವರೆವಿಗೂ ಸುಖವಾಗಿ ಹುಟ್ಟಿ ಬೆಳೆದ

ತರುಣೀ ಶ್ಯಾಮಾ ಸುಕುಮಾರೀ ಸುಖೋಚಿತಾ ॥ ಕಥಮುಷ್ಣಂಚ ಶೀತಂಚ ಮೈಥಿಲೀ ಪ್ರಸಹಿಷ್ಯತೇ ॥ ೪ ॥ ಭುಕ್ತ್ವಾಽಶನಂ ವಿಶಾಲಾಕ್ಷೀ ಸೂಪದಂಶಾನ್ವಿತಂ ಶುಭಂ ॥ ವನ್ಯಂ ನೈವಾರಮಾಹಾರಂ ಕಥಂ ಸೀತೋಪಭೋಕ್ಷ್ಯತೇ॥೫॥ ಗೀತವಾದಿತ್ರ ನಿರ್ಘೋಷಂ ಶ್ರುತ್ವಾ ಶುಭಮನಿಂದಿತಾ ॥ ಕಥಂ ಕ್ರವ್ಯಾದ ಸಿಂಹಾನಾಂ ಶಬ್ದಂ ಶ್ರೋಷ್ಯತ್ಯಶೋಭನಂ ॥ ೬ ॥ ಮಹೇಂದ್ರ ಧ್ವಜಸಂಕಾಶಃ ಕ್ವನು ಶೇತೇ ಮಹಾಭುಜಃ ॥ ಭುಜಂ ಪರಿಘಸಂಕಾಶ ಮುಪಧಾಯ ಮಹಾ

ಶ್ಯಾಮಾ - ಯೌವನಮಧ್ಯಸ್ಥಳಾದ, ಸುಕುಮಾರೀ - ಮೃದುವಾದ ಶರೀರವುಳ್ಳ, ಸುಖೋಚಿತಾ - ಸುಖಕ್ಕೆ ಯೋಗ್ಯಳಾದ, ಸಾಮೈಥಿಲೀ - ಆ ಸೀತಾದೇವಿಯು, ಉಷ್ಣಂಚ - ಬಹಳ ಬಿಸಲನ್ನೂ, ಶೀತಂಚ - ತಂಡಿಯನ್ನೂ, ಕಥಂ - ಹೇಗೆ, ಪ್ರಸಹಿಷ್ಯತಿ - ಸಹಿಸುವಳೋ! ||೪|| ವಿಶಾಲಾಕ್ಷೀ- ವಿಶಾಲವಾದ ಕಂಗಳುಳ್ಳ ಸೀತಾದೇವಿಯು, ಸೂಪದಂಶಾನ್ವಿತಂ - ವ್ಯಂಜನಗಳಿಂದ ಕೂಡಿರುವ, ಶುಭಂ - ಒಳ್ಳೆಯ, ಅಶನಂ - ಅನ್ನವನ್ನು, ಭುಕ್ತ್ವಾ - ಭೋಜನವಮಾಡುತ್ತಿದ್ದು, ನೈವಾರಂ - ತೃಣಸಂಬಂಧವಾದ, ವನ್ಯಂ - ವನವಲ್ಲಿಹುಟ್ಟಿದ, ಆಹಾರಂ - ಆಹಾರವನ್ನು, ಕಥಂ - ಹೇಗೆ, ಉಪಭೋಕ್ಷ್ಯತೇ - ಭುಜಿಸುವಳು. || ೫ || ಅನಿಂದಿತಾ - ನಿಂದಾರಹಿತಳಾದ ಸೀತಾದೇವಿಯು, ಶುಭಂ - ಶುಭಕರವಾದ, ಗೀತವಾದಿತ್ರನಿರ್ಘೋಷಂ, ಗೀತಾ - ಗಾನದ, ವಾದಿತ್ರ - ವಾದ್ಯಗಳ, ನಿರ್ಘೋಷಂ - ಶಬ್ದವನ್ನು, ಶ್ರುತ್ವಾ - ಕೇಳಿ, ಅಶೋಭನಂ - ಅಮಂಗಳಕರವಾದ, ಕ್ರವ್ಯಾದಸಿಂಹಾನಾಂ - ಮಾಂಸಭಕ್ಷಕಗಳಾದ ಸಿಂಹಗಳ, ಶಬ್ದಂ - ಹುಂಕಾರ ಶಬ್ದವನ್ನು, ಕಥಂಶ್ರೋಷ್ಯತಿ - ಹೇಗೆ ತಾನೆ ಕೇಳುತ್ತಾಳೆ. || ೬ || ಮಹೇಂದ್ರಧ್ವಜಸಂಕಾಶಃ, ಮಹೇಂದ್ರ - ದೇವೇಂದ್ರನ, ಧ್ವಜ - ಧ್ವಜಕ್ಕೆ, ಸಂಕಾಶಃ - ಸಮಾನನಾದ, ಮಹಾಭುಜಃ - ಮಹಾಭುಜಗಳುಳ್ಳ, ಮಹಾಬಲಃ - ಮಹಾ ಪರಾಕ್ರಮಿಯಾದ ಶ್ರೀರಾಮನು, ಪರಿಘಸಂಕಾಶಂ - ಲಾಲುಂಡಿಗೆಮರಕ್ಕೆ ಸಮಾನವಾದ, ಭುಜಂ - ಭುಜವನ್ನು, ಉಪಾಧಾಯ - ತಲೆದಿಂಬನ್ನಾಗಿ ಮಾಡಿಕೊಂಡು, ಕ್ವನು - ಎಲ್ಲೋ ಒಂದುಕಡೆ,

---

ಶ್ರೀರಾಮ ಲಕ್ಷ್ಮಣರು ಸೀತಾದೇವಿಯೊಡಗೂಡಿ ಅರಣ್ಯದಲ್ಲಿದ್ದುಕೊಂಡು ವನವಾಸ ದುಃಖವನ್ನು ಹೇಗೆತಾನೆ ಸಹಿಸುತ್ತಾರೆ? ಅತಿ ಕ್ರಾಂತವಾದ ಬಾಲ್ಯಾವಸ್ಥೆಯುಳ್ಳವಳೂ, ಯೌವನ ಮಧ್ಯಸ್ಥಳೂ, ಮೃದುವಾದ ಶರೀರವುಳ್ಳವಳೂ, ಸುಖಕ್ಕೆ ಯೋಗ್ಯಳೂ ಆದ ಸೀತಾದೇವಿಯು ಬಿಸಿಲಿನ ಬೇಗೆಯನ್ನೂ, ಚಳಿಯನ್ನೂ ಹೇಗೆ ಸಹಿಸುತ್ತಾಳೆಯೊ? ವಿಶಾಲಾಕ್ಷಿಯಾದ ಸೀತಾದೇವಿಯು, ಬಹು ರುಚಿಕರವೂ, ವ್ಯಂಜನೋಪೇತವೂ, ಮನೋಹರವಾದುದೂ ಆದ ಆಹಾರವನ್ನು ಭುಜಿಸುತ್ತಿದ್ದಳಲ್ಲವೆ! ಅಂತಹ ಸೀತೆಯು ಇನ್ನುಮೇಲೆ ವನವಲ್ಲಿ ಹುಟ್ಟಿದ ತೃಣ ಧಾನ್ಯಗಳನ್ನು ಹೇಗೆ ಭುಜಿಸುತ್ತಾಳೆ? ಇಷ್ಟೆಯಲ್ಲದೆ ಅನಿಂದಿತಳಾದಾ ಸೀತಾದೇವಿಯು ಗೀತವಾದಿತ್ರಾದಿ ವಾದ್ಯಗಳ ಶಬ್ದಗಳನ್ನು ಕೇಳಿ ಮಾಂಸಾಹಾರಿಗಳಾದ ಸಿಂಹಗಳ ಶಬ್ದವನ್ನು ಹೇಗೆತಾನೆ ಕೇಳಿಯಾಳು! || ೧-೬ || ದೇವೇಂದ್ರನ ಧ್ವಜಕ್ಕೆ ಸಮಾನನಾದ ಮಹಾ ಭುಜಗಳುಳ್ಳವನಾಗಿಯೂ, ಮಹಾ ಪರಾಕ್ರಮಶಾಲಿಯಾಗಿಯೂ ಇರುವ ಶ್ರೀರಾಮನು ಲಾಲುಂಡಿಗೆಯ ಮರಕ್ಕೆ ಸಮಾನವಾದ ಭುಜವನ್ನು ತಲೆ

ಬಲಃ ॥ ೭ ॥ ಪದ್ಮವರ್ಣಂ ಸುಕೇಶಾಂತಂ ಪದ್ಮನಿಶ್ವಾಸ ಮುತ್ತಮಂ ॥
ಕದಾ ದ್ರಕ್ಷ್ಯಾಮಿ ರಾಮಸ್ಯ ವದನಂ ಪುಷ್ಕರೇಕ್ಷಣಂ ॥ ೮ ॥ ವಜ್ರಸಾರಮಯಂ
ನೂನಂ ಹೃದಯಂ ಮೇ ನಸಂಶಯಃ ॥ ಅಪಶ್ಯಂತ್ಯಾ ನತಂ ಯದ್ವೈ ಫಲ
ತೀದಂ ಸಹಸ್ರಧಾ ॥ ೯ ॥ ಯತ್ತ್ವಯಾ ಕರುಣಂ ಕರ್ಮ ವ್ಯಪೋಹ್ಯ ಮಮ
ಬಾಂಧವಾಃ ॥ ನಿರಸ್ತಾಃ ಪರಿಧಾವಂತಿ ಸುಖಾರ್ಹಾಃ ಕೃಪಣಾ ವನೇ ॥ ೧೦ ॥
ಯದಿ ಪಂಚದಶೇ ವರ್ಷೇ ರಾಘವಃ ಪುನರೇಷ್ಯತಿ ॥ ಜಹ್ಯಾದ್ರಾಜ್ಯಂಚ

ಶೇತೇ - ಮಲಗುತ್ತಾನೆ. ॥ ೭ ॥ ಪದ್ಮವರ್ಣಂ - ಕಮಲಕ್ಕೆ ಸಮಾನವಾದ ಬಣ್ಣವುಳ್ಳ, ಸುಕೇಶಾಂತಂ - ಸಮೀಚೀನವಾದ ಕೂದಲುಕೊನೆಗಳುಳ್ಳ, ಪದ್ಮನಿಶ್ವಾಸಂ - ಕಮಲಗಂಧದಂತೆ ನಿಟ್ಟುಸಿರುಳ್ಳ, ಉತ್ತಮಂ - ಉತ್ತಮವಾದ, ಪುಷ್ಕರೇಕ್ಷಣಂ - ಕಮಲಗಳಂತೆ ನೇತ್ರಗಳುಳ್ಳ, ರಾಮಸ್ಯ - ಶ್ರೀರಾಮನ, ವದನಂ - ಮುಖವನ್ನು, ಕದಾ - ಯಾವಾಗ, ದ್ರಕ್ಷ್ಯಾಮಿ - ನೋಡುತ್ತೇನೆ. ॥ ೮ ॥ ತಂ - ಆ ಶ್ರೀರಾಮನನ್ನು, ಅಪಶ್ಯಂತ್ಯಾಃ - ನೋಡದಿರುವ, ಮೇ - ನನ್ನ, ಯತ್ - ಯಾವ ಹೃದಯವು, ಸಹಸ್ರಧಾ - ಸಹಸ್ರಭಾಗಗಳಾಗಿ, ನಫಲತಿ-ಒಡೆದುಹೋಗಲಿಲ್ಲವೋ, ಇದಂಹೃದಯಂ- ಈ ವೃಕ್ಷಸ್ಥಳವು, ನೂನಂ - ನಿಶ್ಚಯವಾಗಿಯೂ, ವಜ್ರಸಾರಮಯಂ - ವಜ್ರದಸ್ಥಿರಾಂಶವಿಕಾರವಾದುದು, ಸಂಶಯಃ - ಸಂಶಯವು, ನ - ಇಲ್ಲ. ॥ ೯ ॥ ತ್ವಯಾ - ನಿನ್ನಿಂದ, ವ್ಯಪೋಹ್ಯ - ಅನಾದರಣೆಮಾಡಿ, ನಿರಸ್ತಾಃ - ಹೊರಡಿಸಲ್ಪಟ್ಟ, ಮಮ - ನನಗೆ, ಬಾಂಧವಾಃ - ಮಕ್ಕಳಾದ, ಸುಖಾರ್ಹಾಃ - ಸುಖಕ್ಕೆಯೋಗ್ಯರಾದವರು, ವನೇ - ಅರಣ್ಯದಲ್ಲಿ, ಕೃಪಣಾಃ - ದರಿದ್ರರಾಗಿ, ಪರಿಧಾವಂತೀತಿಯತ್ - ಓಡಾಡುತ್ತಾರೆಂಬುದು ಯಾವದುಂಟೋ, ತತ್ - ಅದು, ಅಕರುಣಂ - ದಯಾಹೀನವಾದ, ಕರ್ಮ - ವ್ಯಾಪಾರವು, ಕೃತಂ - ಮಾಡಲ್ಪಟ್ಟಿತು. ॥ ೧೦ ॥ ರಾಘವಃ-ಶ್ರೀರಾಮನು, ಪಂಚದಶೇ - ಹದಿನೈದನೆಯದಾದ, ವರ್ಷೇ - ಸಂವತ್ಸರದಲ್ಲಿ, ಪುನಃ - ಮತ್ತು, ಏಷ್ಯತಿಯದಿ -

ದಿಂಬಾಗಿ ಮಾಡಿಕೊಂಡು ಎಲ್ಲಿಯೋ ಒಂದುಕಡೆ, ಆ ಅರಣ್ಯದಲ್ಲಿ ಮಲಗುತ್ತಾನೆ! ಕಮಲಸಮಾನವಾದ ವರ್ಣವುಳ್ಳವನೂ, ಸಮನಾದ ಗುಂಗುರು ಕೂದಲುಗಳುಳ್ಳವನೂ, ಕಮಲಗಂಧದಂತೆ ನಿಟ್ಟುಸಿರುಳ್ಳವನೂ, ಉತ್ತಮವಾದ ಕಮಲಗಳಂತೆ ನೇತ್ರಗಳುಳ್ಳವನೂ ಆದ ಶ್ರೀರಾಮನ ಮುಖವನ್ನಾವಾಗ ಕಾಣುವೆನೋ! ಆ ನನ್ನ ಶ್ರೀರಾಮನನ್ನು ನೋಡದಿರುವ ಯಾವ ನನ್ನ ಹೃದಯವು ಸಹಸ್ರ ಭಾಗಗಳಾಗಿ ಸೀಳಿಹೋಗಲಿಲ್ಲವೋ, ಆ ನನ್ನ ಹೃದಯವು ವಜ್ರದಂತೆ ಬಹು ಕಠಿಣವಾದುದೆಂಬುದರಲ್ಲಿ ಲೇಶಮಾತ್ರವೂ ಸಂಶಯವಿಲ್ಲವು. ಎಲ್ಲ ಕಾಲಗಳಲ್ಲಿಯೂ ಸುಖಪಡಲು ತಕ್ಕವರೂ, ನನಗೆ ಬಂಧುಗಳೂ ಆದ ಸೀತಾರಾಮಲಕ್ಷ್ಮಣರನ್ನು ನಿಷ್ಕಾರಣವಾಗಿ ಅರಣ್ಯಕ್ಕೆ ಕಳುಹಿಸಿದೆ! ಅಹ; ಇದು ನಿರ್ದಯವಾಗಿ ಮಾಡಿದ ಕಾರ್ಯವೆಂಬುದರಲ್ಲಿ ಸಂದೇಹವಿಲ್ಲ! ದಯಾಹೀನನಾಗಿ ಎಂತಹ ಕಾರ್ಯವನ್ನು ಮಾಡಿದೆ? ಎಲೈ ಮಹಾರಾಜನೆ! ಶ್ರೀರಾಮನು ಹದಿನೈದನೆಯ ಸಂವತ್ಸರದಲ್ಲಿ ಪುನಃ ಈ ಅಯೋಧ್ಯಾಪಟ್ಟಣಕ್ಕೆ ಬಂದರೆ ರೂಢಮೂಲನಾದ ಭರತನು ಆತನಿಗೆ ರಾಜ್ಯಕೋಶಗಳನ್ನು ಒಪ್ಪಿಸುತ್ತಾನೆಂದು ನನಗೆ ತೋರುವುದಿಲ್ಲ! ॥ ೭-೧೧ ॥ ಲೋಕದಲ್ಲಿ ಬ್ರಾಹ್ಮಣರಲ್ಲಿಯೂ ಸಹ

ಕೋಶಂಚ ಭರತೋ ನೋಪಲಕ್ಷ್ಯತೇ ॥ ೧೧ ॥ ಭೋಜಯಂತಿ ಕಿಲ ಶ್ರಾದ್ಧೇ
ಕೇಚಿತ್ಸ್ವಾನೇವ ಬಾಂಧವಾ್ನ್ ॥ ತತಃ ಪಶ್ಚಾತ್ಸಮೀಕ್ಷಂತೇ ಕೃತಕಾರ್ಯಾ್ನ್
ದ್ವಿಜರ್ಷಭಾ್ನ್ ॥ ೧೨ ॥ ತತ್ರ ಯೇ ಗುಣವಂತಶ್ಚ ವಿದ್ವಾಂಸಶ್ಚ ದ್ವಿಜಾತಯಃ॥
ನಪಶ್ಚಾತ್ತೇ ಭಿಮನ್ಯಂತೇ ಸುಧಾಮಪಿ ಸುರೋಪಮಾಃ ॥ ೧೩ ॥ ಬ್ರಾಹ್ಮಣೇ
ಷ್ವಪಿ ತೃಪ್ತೇಷು ಪಶ್ಚಾದ್ಭೋಕ್ತುಂ ದ್ವಿಜರ್ಷಭಾಃ ॥ ನಾಭ್ಯುಪೈತುಮಲಂ
ಪ್ರಾಜ್ಞಾ ಶ್ಶೃಂಗಚ್ಛೇದ ಮಿವರ್ಷಭಾಃ ॥ ೧೪ ॥ ಏವಂ ಕನೀಯಸಾ ಭ್ರಾತ್ರಾ

ಬಂದವನೇ ಆದರೆ, ಭರತಃ - ಭರತನು, ರಾಜ್ಯಂಚ - ರಾಜ್ಯವನ್ನೂ, ಕೋಶಂಚ - ಬೊಕ್ಕಸವನ್ನೂ, ಜಹ್ಯಾದಿತಿ - ಬಿಡುವನೆಂದು, ನೋಪಲಕ್ಷ್ಯತೇ - ಕಾಣಲ್ಪಡುವದಿಲ್ಲ. ॥ ೧೧ ॥ ಕೇಚಿತ್ - ಕೆಲವರು, ಶ್ರಾದ್ಧೇ - ಶ್ರಾದ್ಧಕರ್ಮದಲ್ಲಿ, ಸ್ವಾನ್ - ಸ್ವಕೀಯರಾದ, ಬಾಂಧವಾನೇವ - ಬಂಧುಗಳನ್ನೇ, ಭೋಜಯಂತಿಕಿಲ - ಭೋಜನಮಾಡಿಸುತ್ತಾರೆಯಷ್ಟೆ, ತತಃಪಶ್ಚಾತ್ - ಆ ಬಳಿಕ, ಕೃತಕಾರ್ಯಾಃ, ಕೃತ - ಮಾಡಲ್ಪಟ್ಟ, ಕಾರ್ಯಾಃ-ಶ್ರಾದ್ಧ ಕರ್ಮವುಳ್ಳವರಾಗಿ, ದ್ವಿಜರ್ಷಭಾನ್-ಶ್ರೇಷ್ಠರಾದ ಬ್ರಾಹ್ಮಣರನ್ನು, ಸಮೀಕ್ಷಂತೇ - ಇದಿರುನೋಡುತ್ತಾರೆ. ॥೧೨॥ ತತ್ರ-ಆ ಶ್ರಾದ್ಧದಲ್ಲಿ, ಯೇ - ಯಾರು, ಗುಣವಂತಶ್ಚ-ಪಾರಶುದ್ಧ್ಯಾದಿ ಗುಣವಂತರಾದ, ವಿದ್ವಾಂಸಶ್ಚ-ವಿದ್ವಾಂಸರಾದ, ದ್ವಿಜಾತಯಃ-ಬ್ರಾಹ್ಮಣರು, ಸಂತಿ - ಇರುವರೋ, ಸುರೋಪಮಾಃ - ದೇವತೆಗಳಿಗೆ ಸಮಾನರಾದ, ತೇ - ಆ ಬ್ರಾಹ್ಮಣರು, ಪಶ್ಚಾತ್ - ಶ್ರಾದ್ಧಭೋಜನಾನಂತರದಲ್ಲಿ, ಸುಧಾಮಪಿ - ಅಮೃತವನ್ನೂ ಕೂಡ, ನಾಭಿಮನ್ಯಂತೇ-ಆದರಿಸುವದಿಲ್ಲ. ॥ ೧೩ ॥ ತೃಪ್ತೇಷು - ಭೋಜನಮಾಡಿ ತೃಪ್ತಿಹೊಂದಿದವರು, ಬ್ರಾಹ್ಮಣೇಷ್ವಪಿ-ಬ್ರಾಹ್ಮಣರಾದಾಗ್ಯೂ, ದ್ವಿಜರ್ಷಭಾಃ - ಬ್ರಾಹ್ಮಣಶ್ರೇಷ್ಠರಾದ, ಪ್ರಾಜ್ಞಾಃ - ಪಂಡಿತರು, ಪಶ್ಚಾತ್-ಆ ಮೇಲೆ, ಭೋಕ್ತುಂ - ಭುಜಿಸುವದಕ್ಕೆ, ಋಷಭಾಃ - ಎತ್ತುಗಳು, ಶೃಂಗಚ್ಛೇದಮಿವ-ಕೊಂಬುಗಳ ಅಗ್ರಭಾಗಚ್ಛೇದದಂತೆ, ಅಭ್ಯುಪೈತುಂ - ಅಂಗೀಕರಿಸಲು, ನಾಲಂ - ಸಮರ್ಥರಾಗುವದಿಲ್ಲ. ॥ ೧೪ ॥ ಏವಂ - ಈಪರಿಯಾಗಿಯೇ, ಕನೀಯಸಾಭ್ರಾತ್ರಾ - ಕನಿಷ್ಠಭ್ರಾತೃವಿನಿಂದ, ಭುಕ್ತಂ-ಅನುಭವಿಸಲ್ಪಟ್ಟ. ರಾಜ್ಯಂ - ರಾಜ್ಯವನ್ನು, ಹೇ ವಿಶಾಂಪತೇ - ಎಲೈ ಅರಸನೆ ! ಜ್ಯೇಷ್ಠೋಭ್ರಾತಾ -

ಕೆಲವರು ತಮ್ಮ ಒಡಿವೆಯು ತಮ್ಮವರಿಗೇ ಸೇರಲೆಂಬ ಆಶೆಯಿಂದ ಶ್ರಾದ್ಧಗಳಲ್ಲಿ ಮೊದಲು ತಮ್ಮ ಬಂಧುಗಳಿಗೇ ಅನ್ನವನ್ನಿಡುತ್ತಾರೆ. ಆ ಬ್ರಾಹ್ಮಣರಲ್ಲಿಯೂ ಸಹ ಗುಣವಂತರಾದವರೂ, ಪಂಡಿತರಾದವರೂ, ದೇವತಾ ಸಮಾನರೂ ಆದ ಕೆಲ ಬ್ರಾಹ್ಮಣ ಸತ್ತಮರು, “ಎತ್ತುಗಳ ಕೊಂಬಿನ ಅಗ್ರಭಾಗ ಛೇದದಂತೆ”, ಆ ಮೇಲಿನ ಅಮೃತ ಭೋಜನಕ್ಕೂ ಸಮ್ಮತಿಸುವುದಿಲ್ಲ. ಎಲೈ ಮನುಜಶ್ರೇಷ್ಠನಾದ ದಶರಥರಾಯನೆ ! ಜ್ಯೇಷ್ಠನೂ, ಶ್ರೇಷ್ಠನೂ ಆದ ಶ್ರೀರಾಮನು ಮೊದಲು ಕನಿಷ್ಠನಾದ ತಮ್ಮನಿಂದ ಅನುಭವಿಸಿ ಬಿಡಲ್ಪಟ್ಟ ರಾಜ್ಯವನ್ನು ಅನುಭವಿಸಲು ಮನಸ್ಸು ಮಾಡುವನೆಂದು ನನಗೆ ತೋರುವುದಿಲ್ಲ! ಉತ್ತಮನಾದವನು ತಮ್ಮನಿಂದ ಅನುಭೂತವಾದುದನ್ನೇಕೆ ಕೋರುತ್ತಾನೆ? ಕೋರುವುದಿಲ್ಲ; “ಮಹಾ ವ್ಯಾಘ್ರವು ಇತರ ಮೃಗಗಳು ತಿಂದುಳಿದ ಮಾಂಸವನ್ನು ತಿನ್ನದಿರುವಂತೆ” ಪುರುಷವ್ಯಾಘ್ರನಾದ ಶ್ರೀರಾಮನೂ ಸಹ ಬೇರೊಬ್ಬನಿಂದ ಅನುಭವಿಸಲ್ಪಟ್ಟ ರಾಜ್ಯವನ್ನು ಕೋರು

ಭುಕ್ತಂ ರಾಜ್ಯಂ ವಿಶಾಂಪತೇ ॥ ಭ್ರಾತಾ ಜ್ಯೇಷ್ಠೋ ವರಿಷ್ಠಶ್ಚ ಕಿಮರ್ಥಂ
ನಾವಮಂಸ್ಯತೇ ॥೧೫॥ ನಪರೇಣಾಶಿತಂ ಭಕ್ಷ್ಯಂ ವ್ಯಾಘ್ರಃ ಖಾದಿತುಮಿಚ್ಛತಿ॥
ಏವಮೇವ ನರವ್ಯಾಘ್ರಃ ಪರಲೀಢಂ ನಮಂಸ್ಯತೇ ॥೧೬॥ ಹವಿರಾಜ್ಯಂ
ಪುರೋಡಾಶಃ ಕುಶಾ ಯೂಪಾಶ್ಚ ಖಾದಿರಾಃ ॥ ನೈತಾನಿ ಯಾತ ಯಾಮಾನಿ
ಕುರ್ವಂತಿ ಪುನರಧ್ವರೇ ॥೧೭॥ ತಥಾಹ್ಯಾತ್ತಮಿದಂ ರಾಜ್ಯಂ ಹೃತಸಾರಾಂ
ಸುರಾಮಿವ ॥ ನಾಭಿಮಂತುಮಲಂ ರಾಮೋ ನಷ್ಟಸೋಮಮಿವಾಧ್ವರಂ ॥೧೮॥

ಅಣ್ಣನಾದ, ವರಿಷ್ಠಶ್ಚ - ಶ್ರೇಷ್ಠನಾದ ಶ್ರೀರಾಮನು, ಕಿಮರ್ಥಂ - ಏತಕ್ಕೋಸುಗ, ನಾವಮಂಸ್ಯತೇ - ತಿರಸ್ಕರಿಸುವದಿಲ್ಲ. ॥೧೫॥ ವ್ಯಾಘ್ರಃ - ಹುಲಿಯು, ಪರೇಣ - ಇತರ ಮೃಗದಿಂದ, ಆಶಿತಂ - ಭಕ್ಷಿಸಲ್ಪಟ್ಟ, ಭಕ್ಷ್ಯಂ - ತಿನ್ನತಕ್ಕ ಪದಾರ್ಥವನ್ನು, ಖಾದಿತುಂ - ತಿನ್ನುವದಕ್ಕೆ, ನೇಚ್ಛತಿ - ಇಚ್ಛಿಸುವದಿಲ್ಲ, ಏವಮೇವ-ಹೀಗೆಯೇ, ನರವ್ಯಾಘ್ರಃ-ಪುರುಷಶ್ರೇಷ್ಠನಾದ ಶ್ರೀರಾಮನು, ಪರಲೀಢಂ, ಪರ - ಇತರ ಪುರುಷನಿಂದ, ಲೀಢಂ - ಅನುಭವಿಸಲ್ಪಟ್ಟದನ್ನು, ನಮಂಸ್ಯತೇ - ಸಮ್ಮತಿಸುವದಿಲ್ಲ. ॥೧೬॥ ಹವಿಃ ಹವಿಸ್ಸು, ಆಜ್ಯಂ-ಘೃತವೂ, ಪುರೋಡಾಶಃ - ಪುರೋಡಾಶವೂ, ಕುಶಾಃ - ದರ್ಭೆಗಳೂ, ಖಾದಿರಾಃ - ಕಗ್ಗಲಿಗಿಡದ ಸಂಬಂಧವಾದ, ಯೂಪಾಶ್ಚ - ಯೂಪಸ್ತಂಭಗಳೂ, ಯಾತಯಾಮಾನಿ - ವಿನಿಯೋಗಿಸಲ್ಪಟ್ಟವುಗಳಾಗಿ, ಏತಾನಿ-ಇವುಗಳನ್ನು, ಅಧ್ವರೇ-ಯಾಗಾಂತರದಲ್ಲಿ, ಪುನಃ - ಮತ್ತು, ನಕುರ್ವಂತಿ - ವಿನಿಯೋಗಮಾಡುವದಿಲ್ಲ. ॥೧೭॥ ತಥಾ - ಹಾಗೆಯೇ, ಆತ್ತಂ - ಪರಿಗ್ರಹಿಸಲ್ಪಟ್ಟ, ಇದಂರಾಜ್ಯಂ - ಈ ರಾಜ್ಯವನ್ನು, ಹೃತಸಾರಾಂ - ಅಪಹರಿಸಲ್ಪಟ್ಟ ಸ್ಥಿರಾಂಶವುಳ್ಳ, ಸುರಾಮಿವ - ಮದ್ಯವನ್ನಂತೆ, ನಷ್ಟಸೋಮಂ - ಪಾನಮಾಡಲ್ಪಟ್ಟ ಸೋಮರಸವುಳ್ಳ, ಅಧ್ವರಮಿವ - ಯಜ್ಞದಂತೆ, ರಾಮಃ - ಶ್ರೀರಾಮನು, ಅಭಿಮಂತುಂ - ಸಮ್ಮತಿಸಲು, ನಾಲಂ - ಸಮರ್ಥನಾಗಲಾರನು. ॥೧೮॥ ಹಿ - ಯಾವ ಕಾರಣ, ಕೃದ್ಧಃ - ಕೋಪಿಷ್ಠ

ವುದಿಲ್ಲವೆಂದು ನನಗೆ ತೋರುತ್ತದೆ. ತೋರುವುದೆಂದು ಹೇಳುವುದೇನು? "ಶ್ರೀರಾಮನು ಅನುಭವಿಸುವುದೇ ಇಲ್ಲ!" ಹವಿಸ್ಸು, ಘೃತ, ಪುರೋಡಾಶ, ದರ್ಭೆ, ಖಾದಿರವೇ ಮೊದಲಾದ ಯೂಪಸ್ತಂಭಗಳು, ಇವೇ ಮೊದಲಾದುವುಗಳನ್ನು ಒಂದು ಯಜ್ಞದಲ್ಲಿ ಉಪಯೋಗಿಸಿದ ಮೇಲೆ, ಬೇರೊಂದು ಯಜ್ಞದಲ್ಲಿ ಅವುಗಳನ್ನು ಉಪಯೋಗಿಸುವುದಿಲ್ಲವಷ್ಟೆ? ಅದೇ ಪ್ರಕಾರವಾಗಿ ಶ್ರೀರಾಮನೂ ಪುನಃ ಈ ರಾಜ್ಯವನ್ನು ಅನುಭವಿಸುವುದಿಲ್ಲ? ಇಷ್ಟೆಯಲ್ಲದೆ, ಒಬ್ಬನಿಂದ ಗ್ರಹಿಸಲ್ಪಟ್ಟ ಈ ರಾಜ್ಯವನ್ನು, ಸಾರವಿಲ್ಲದ ಮದ್ಯದಂತೆಯೂ, ಪಾನಮಾಡಲ್ಪಟ್ಟ ಸೋಮರಸವುಳ್ಳ ಯಜ್ಞದಂತೆಯೂ, ಆ ಶ್ರೀರಾಮನು ಭರತನಿಂದ ಆಳಲ್ಪಟ್ಟ ಈ ರಾಜ್ಯವನ್ನು ಅನುಭವಿಸಲು ಎಷ್ಟುಮಾತ್ರವೂ ಸಮ್ಮತಿಸುವುದಿಲ್ಲ! ಶ್ರೀರಾಮಮೂರ್ತಿಯು ಕೋಪಗೊಂಡುದಾದರೆ ಮಂದರಪರ್ವತವನ್ನಾದರೂ ಸೀಳುತ್ತಾನೆ. ಅಂತಹನು ಈ ಅವಮಾನವನ್ನೆಂದಿಗೂ ಸಹಿಸುವುದಿಲ್ಲ. ಮಹಾ ಮನಸ್ವಿಯಾದ ಶ್ರೀರಾಮನು, ತಂದೆಯೆಂಬ ಗೌರವದಿಂದ ನಿನ್ನನ್ನು ಸಂಹರಿಸಲುದ್ಯುಕ್ತನಾಗಲಿಲ್ಲ. ಆತನು ಮುನಿದರೆ ಚಂದ್ರ, ಸೂರ್ಯ, ಗ್ರಹಗಳ ಸಮೂಹಗಳಿಂದೊಡಗೂಡಿ ನಕ್ಷತ್ರಗಳಿಂದ ವಿಚಿತ್ರಕರವಾದ

ನಚೇಮಾಂ ಧರ್ಷಣಾಂ ರಾಮ ಸ್ಸಂಗಚ್ಛೇ ದತ್ಯಮರ್ಷಣಃ॥ದಾರಯೇ ನ್ಮಂದರ ಮಪಿ ಸ ಹಿ ಕ್ರುದ್ಧಶ್ಶಿತೈಶ್ಶರೈಃ ॥ ೧೯ ॥ ತ್ವಾಂ ತು ನೋತ್ಸಹತೇ ಹಂತುಂ ಮಹಾತ್ಮಾ ಪಿತೃಗೌರವಾತ್॥ಸಸೋಮಾರ್ಕಗ್ರಹಗಣಂ ನಭಸ್ತಾರಾ ವಚಿತ್ರಿತಂ ॥೨೦॥ ಪಾತಯೇದ್ಯದಿ ಸಂಕ್ರುದ್ಧ ಸ್ಸ ತ್ವಾಂ ನವ್ಯತಿವರ್ತತೇ ॥ ಪ್ರಕ್ಷೋಭಯೇ ದ್ವಾರಯೇ ದ್ವಾ ಮಹೀಂ ಶೈಲಶತಾಚಿತಾಂ ॥ ೨೧ ॥ ನೈವಂ ವಿಧಮ ಸತ್ಕಾರಂ ರಾಘವೋ ಮರ್ಷಯಿಷ್ಯತಿ ॥ ಬಲವಾನಿವ ಶಾರ್ದೂಲೋ ವಾಲಧೇ ರಭಿಮರ್ಶ ನಂ ॥೨೨॥ ನೈತಸ್ಯ ಸಹಿತಾ ಲೋಕಾ ಭಯಂ ಕುರ್ಯುರ್ಮಹಾಮೃಧೇ ॥

ನಾದ, ಸಃ - ಆ ಶ್ರೀರಾಮನು, ಶಿತೈಃ - ತೀಕ್ಷ್ಣಗಳಾದ, ಶರೈಃ - ಬಾಣಗಳಿಂದ, ಮಂದರಮಪಿ - ಮಂದರಪರ್ವತವನ್ನೂ ಕೂಡ, ದಾರಯೇತ್ - ಸೀಳಿಹಾಕುವನೋ, (ತಸ್ಮಾತ್ - ಆಕಾರಣ,) ಅತ್ಯ ಮರ್ಷಣಃ - ಅತಿಕೋಪಿಯಾದ, ರಾಮಃ - ಶ್ರೀರಾಮನು, ಇಮಾಂಧರ್ಷಣಾಂ - ಈ ಅವಮಾನ ವನ್ನು, ನಸಂಗಚ್ಛೇತ್ - ಸಮ್ಮತಿಸಲಾರನು. ॥ ೧೯ ॥ ಮಹಾತ್ಮಾ - ಮಹಾಮನಸ್ವಿಯಾದ ಶ್ರೀರಾಮನು, ಪಿತೃಗೌರವಾತ್ - ತಂದೆಯೆಂಬ ಗೌರವದಿಂದ, ತ್ವಾಂ - ನಿನ್ನನ್ನು, ಹಂತುಂ - ಕೊಲ್ಲಲು, ನೋತ್ಸಹತೇ - ಉದ್ಯುಕ್ತನಾಗಲಿಲ್ಲ, ಯಃ - ಯಾವ ಶ್ರೀರಾಮನು, ಸಂಕ್ರುದ್ಧೋಯದಿ - ಕೋಪಿಷ್ಠನಾದರೆ, ಸಸೋಮಾರ್ಕಗ್ರಹಗಣಂ - ಚಂದ್ರಸೂರ್ಯಗ್ರಹಗಳ ತಂಡಗಳಿಂದೊಡಗೂಡಿದ, ತಾರಾವಿಚಿತ್ರಿತಂ - ನಕ್ಷತ್ರಗಳಿಂದ ಆಶ್ಚರ್ಯಕರವಾದ, ನಭಃ - ಅಂತರಿಕ್ಷವನ್ನು, ಪಾತಯೇತ್ - ಕೆಳಕ್ಕೆ ಬೀಳಿಸುವನು, ಸಃ - ಅಂತಹ ಶ್ರೀರಾಮನು, ತ್ವಾಂ - ನಿನ್ನನ್ನು, ನವ್ಯತಿವರ್ತತೇ-ಅತಿಕ್ರಮಿಸಿ ನಡಿಯುವನಲ್ಲ, ಶೈಲಶತಾಚಿತಾಂ, ಶೈಲಶತ - ನೂರು ಪರ್ವತಗಳಿಂದ, ಆಚಿತಾಂ - ವ್ಯಾಪ್ತವಾದ, ಮಹೀಂ - ನೆಲವನ್ನು, ಪ್ರಕ್ಷೋಭಯೇತ್ - ಕ್ಷೋಭೆಗೊಳಿಸುವನು, ವಾರಯೇದ್ವಾ - ತಡೆಮಾಡು ವನು, ಬಲವಾನ್ - ಬಲಿಷ್ಠವಾದ, ಶಾರ್ದೂಲಃ - ವ್ಯಾಘ್ರವು, ವಾಲಧೇಃ - ಪುಚ್ಛದ, ಅಭಿಮರ್ಶನ ಮಿವ - ಸ್ಪರ್ಶವನ್ನಂತೆ, ರಾಘವಃ - ಶ್ರೀರಾಮನು, ಏವಂವಿಧಂ - ಇಂತಹ, ಅಸತ್ಕಾರಂ - ಅವಮಾ ನವನ್ನು, ನಮರ್ಷಯಿಷ್ಯತಿ - ಸಹಿಸಲಾರನು. ॥ ೨೨ ॥ ಸಹಿತಾಃ - ಗುಂಪುಗೂಡಿದ, ಲೋಕಾಃ - ಜನರು, ಏತಸ್ಯ - ಈ ಶ್ರೀರಾಮನಿಗೆ, ಮಹಾಮೃಧೇ - ಮಹಾಕಾಳೆಗದಲ್ಲಿ, ಭಯಂ - ಭಯವನ್ನು, ನಕುರ್ಯುಃ - ಮಾಡಲಾರರು, ಇಹ - ಈ ಲೋಕದಲ್ಲಿ, ಧರ್ಮಾತ್ಮಾ-ಧರ್ಮಿಷ್ಠನಾದ ಶ್ರೀರಾಮನು, ಅಧರ್ಮಂ - ಧರ್ಮಶೂನ್ಯವಾದ, ಲೋಕಂ - ಜನವನ್ನು, ಧರ್ಮೇಣ - ಧರ್ಮದೊಡನೆ, ಯೋಜ

ಅಂತರಿಕ್ಷವನ್ನೂ ಕೆಳಕ್ಕೆ ಬೀಳಿಸಲು ಸಮರ್ಥನಿದ್ದಾನೆ. ಅಂತಹ ಪರಾಕ್ರಮಶಾಲಿಯಾದ ರಘುರಾಮನು ಪೂಜ್ಯನಾದ ನಿನಗೆ ವ್ಯತಿರಿಕ್ತವಾಗಿ ನಡೆಯುವುದಿಲ್ಲ. ನೂರಾರು ಪರ್ವತ ಗಳಿಂದ ವ್ಯಾಪ್ತವಾದ ಭೂಮಂಡಲವನ್ನಾದರೂ ಕ್ಷೋಭೆಗೊಳಿಸುತ್ತಾನೆ; ಮತ್ತು ತಡೆ ಯಲೂ ತಡೆಯುತ್ತಾನೆ. ॥ ೧೨-೨೦ ॥ ಮಹಾ ಬಲಿಷ್ಠನಾದ ವ್ಯಾಘ್ರವು ಬಾಲದ ತುಳಿತವನ್ನು ಹೇಗೆ ಸಹಿಸಲಾರದೋ ಹಾಗೆ, ಶ್ರೀರಾಮನು ಈ ಅವಮಾನವನ್ನು ಸರ್ವಥಾ ಸಹಿಸುವುದಿಲ್ಲವು. ಲೋಕದಲ್ಲಿ ಯಾರೇ ಆಗಲಿ ಕಾಳೆಗದಲ್ಲಿ ಶ್ರೀರಾಮನಿದಿರಿಗೆ ನಿಲ್ಲಲಾ ರರು. ಧರ್ಮಿಷ್ಠನಾದ ಶ್ರೀರಾಮನು ಈ ಜಗತ್ತಿನಲ್ಲಿ ಧರ್ಮಬಾಹಿರರಾದವರನ್ನು ಧರ್ಮಿಷ್ಠ

ಅಧರ್ಮಂತ್ವಿಹ ಧರ್ಮಾತ್ಮಾ ಲೋಕಂ ಧರ್ಮೇಣ ಯೋಜಯೇತ್ ‖ ೨೩ ‖ ನಸ್ವಸೌ ಕಾಂಚನೈರ್ಬಾಣೈರ್ಮಹಾವೀರ್ಯೋ ಮಹಾಭುಜಃ ‖ ಯುಗಾಂತ ಇವ ಭೂತಾನಿ ಸಾಗರಾನಪಿ ನಿರ್ದಹೇತ್ ‖೨೪‖ ಸ ತಾದೃಶ ಸ್ಸಿಂಹಬಲೋ ವೃಷಭಾಕ್ಷೋ ನರರ್ಷಭಃ ‖ ಸ್ವಯಮೇವ ಹತಃ ಪಿತ್ರಾ ಜಲಜೇನಾತ್ಮಜೋ ಯಥಾ ‖ ೨೫ ‖ ದ್ವಿಜಾತಿ ಚರಿತೋ ಧರ್ಮ ಶ್ಶಾಸ್ತ್ರದೃಷ್ಟ ಸ್ಸನಾತನಃ ‖ ಯದಿ ತೇ ಧರ್ಮನಿರತೇ ತ್ವಯಾ ಪುತ್ರೇ ವಿವಾಸಿತೇ ‖ ೨೬ ‖ ಗತಿರೇಕಾ ಪತಿ ರ್ನಾರ್ಯಾ ದ್ವಿತೀಯಾ ಗತಿ ರಾತ್ಮಜಃ‖ತೃತೀಯಾ ಜ್ಞಾತಯೋ ರಾಜಂ ! ಶ್ಚ

ಯೇತ್ - ಸೇರಿಸುವನು. ‖ ೨೩ ‖ ಮಹಾವೀರ್ಯಃ - ಮಹಾಸಾಮರ್ಥ್ಯವುಳ್ಳ, ಮಹಾಭುಜಃ - ಮಹಾಭುಜಗಳುಳ್ಳ, ಅಸೌ - ಈ ಶ್ರೀರಾಮನು, ಯುಗಾಂತಇವ - ಪ್ರಳಯಕಾಲದಂತೆ, ಭೂತಾನಿ - ಭೂತಗಳನ್ನೂ, ಸಾಗರಾನಪಿ-ಸಮುದ್ರಗಳನ್ನೂ, ಕಾಂಚನೈಃ - ಚಿನ್ನದ ಕಟ್ಟುಗಳುಳ್ಳ, ಬಾಣೈಃ - ಬಾಣಗಳಿಂದ, ನಿರ್ದಹೇನ್ನನು - ದಹಿಸುವನಷ್ಟೆ. ‖ ೨೪ ‖ ತಾದೃಶಃ - ಅಂತಹನಾದ, ಸಿಂಹಬಲಃ - ಸಿಂಹದಬಲದಂತೆ ಸಾಮರ್ಥ್ಯವುಳ್ಳ, ವೃಷಭಾಕ್ಷಃ - ವೃಷಭದಂತೆ ವಿಸ್ತಾರವಾದ ನೇತ್ರಗಳುಳ್ಳ, ಸನರರ್ಷಭಃ - ಆ ಮನುಷ್ಯಶ್ರೇಷ್ಠನಾದ ಶ್ರೀರಾಮನು, ಜಲಜೇನ - ಮತ್ಸ್ಯದಿಂದ, ಆತ್ಮಜೋಯಥಾ - ಮತ್ಸ್ಯಶಿಶುವಿನಂತೆ, ಪಿತ್ರಾ - ತಂದೆಯಿಂದ, ಸ್ವಯಮೇವ - ತನ್ನಷ್ಟಕ್ಕೆ ತಾನೆ, ಹತಃ - ಹೊಡೆಯಲ್ಪಟ್ಟನು. ‖ ೨೫ ‖ ದ್ವಿಜಾತಿಚರಿತಃ - ರಾಜರ್ಷಿಗಳಿಂದ ಆಚರಿಸಲ್ಪಟ್ಟ, ಶಾಸ್ತ್ರದೃಷ್ಟಃ - ಶಾಸ್ತ್ರದಲ್ಲಿ ಹೇಳಲ್ಪಟ್ಟ, ಸನಾತನಃ - ಅನಾದಿಸಿದ್ಧವಾದ, ಧರ್ಮಃ - ಧರ್ಮವು, ತೇ-ನಿನ್ನ, ಪುತ್ರೇ - ಮಗನಲ್ಲಿ, ನಸ್ಯಾದ್ಯದಿ - ಇಲ್ಲದೇಹೋದರೆ, ಧರ್ಮನಿರತೇ - ಧರ್ಮಿಷ್ಠನಾದ ಶ್ರೀರಾಮನು, ತ್ವಯಾ - ನಿನ್ನಿಂದ, ವಿವಾಸಿತೇ - ಹೊರಡಿಸಲ್ಪಡಲು, (ಯುಕ್ತಂಭವೇತ್ - ಯುಕ್ತವಾಗಿಯೇ ಇರುವದು?) ‖೨೬‖ ಹೇ ರಾಜನ್ - ಎಲೈ ಅರಸನೆ, ನಾರ್ಯಾಃ - ಸ್ತ್ರೀಯರಿಗೆ, ಪತಿಃ - ಗಂಡನು, ಏಕಾಗತಿಃ - ಒಬ್ಬನೇ ಸಂರಕ್ಷಣಕರ್ತನು, ಆತ್ಮಜಃ - ಕುವರನು, ದ್ವಿತೀಯಾಗತಿಃ - ಎರಡನೆಯ ಸಂರಕ್ಷಣಕರ್ತನು, ಜ್ಞಾತಯಃ - ಭರ್ತೃಸಂಬಂಧವಾದ ಜ್ಞಾತಿಗಳು, ತೃತೀಯಾಗತಿಃ - ಮೂರನೆಯ

ರನ್ನಾಗಿ ಮಾಡುತ್ತಾನೆ. ಮಹಾ ಭುಜಬಲಪರಾಕ್ರಮಶಾಲಿಯಾದ ಆತನು ಪ್ರಳಯಕಾಲದಂತೆ, ಭೂತಗಳನ್ನೂ, ಸಮುದ್ರಗಳನ್ನೂ, ಸಹ ಸುವರ್ಣಖಚಿತವಾದ ಬಾಣಸಮೂಹಗಳಿಂದ ದಹಿಸುತ್ತಾನೆ. ‖ ೨೧-೨೪ ‖ ಇಂತಹ ಸಿಂಹ ಸಮಾನ ಬಲವುಳ್ಳ, ವೃಷಭದಂತೆ ವಿಶಾಲವಾದ ನೇತ್ರಗಳುಳ್ಳ, ಪುರುಷಶ್ರೇಷ್ಠನಾದ ಶ್ರೀರಾಮನು ಮತ್ಸ್ಯಾಹತವಾದ ಸ್ವಶಿಶುವಿನಂತೆ, ತಂದೆಯಾದ ನಿನ್ನಿಂದ ತನ್ನಷ್ಟಕ್ಕೆ ತಾನೇ ಆಹತನಾದನು. ಓ ದಶರಥ ಮಹಾರಾಜನೆ! ಮಹಾ ಧರ್ಮಾತ್ಮನಾದ ಶ್ರೀರಾಮನನ್ನು - ನಿನ್ನ ಕುವರನನ್ನು - ಅರಣ್ಯಕ್ಕೆ ಕಳುಹಿದೆಯಲ್ಲವೆ? ಇಂತಹ ನಿನಗೆ ಶಾಸ್ತ್ರದಲ್ಲಿ ಹೇಳಿರುವುದೂ, ಸನಾತನವೂ ಆದ ಧರ್ಮವು ಹೇಗೆತಾನೆ ಉಂಟಾಗುವುದು? ಎಲೈ ರಾಯನೆ! ಲೋಕದಲ್ಲಿ ಸ್ತ್ರೀಯಾದವಳಿಗೆ ಗಂಡನೇ ಸಕಲವೂ ಆಗಿರುವನು. ಎರಡನೆಯದಾಗಿ ಮಗನು ಹೆಚ್ಚಿನವನು. ಮೂರನೆಯದಾಗಿ ಬಂಧುಗಳು ಅಧಿಕರು. ಈ ಮೂವರನ್ನೂ ಬಿಟ್ಟರೆ ನಾಲ್ಕನೆಯದಾಗಿ, ಈ ಲೋಕದಲ್ಲಿ

ತುರ್ಥೀ ನೇಹ ವಿದ್ಯತೇ ॥ ೨೭ ॥ ತತ್ರ ತ್ವಂ ಚೈವ ಮೇ ನಾಸ್ತಿ ರಾಮಶ್ಚ ವನಮಾಶ್ರಿತಃ ॥ ನ ವನಂ ಗಂತುಮಿಚ್ಛಾಮಿ ಸರ್ವಥಾ ಭಿಹತಾ ತ್ವಯಾ ॥೨೮॥ ಹತಂ ತ್ವಯಾ ರಾಜ್ಯಮಿದಂ ಸರಾಷ್ಟ್ರಂ ಹತ ಸ್ತಥಾತ್ಮಾ ಸಹಮಂತ್ರಿಭಿಶ್ಚ ॥ ಹತಾ ಸಪುತ್ರಾಸ್ಮಿ ಹತಾಶ್ಚಪೌರಾ ಸ್ಸುತಶ್ಚ ಭಾರ್ಯಾಚ ತವ ಪ್ರಹೃಷ್ಟೌ ॥ ೨೯ ॥

ಇಮಾಂ ಗಿರಂ ದಾರುಣ ಶಬ್ದಸಂಶ್ರಿತಾಂ
ನಿಶಮ್ಯ ರಾಜಾಪಿ ಮುಮೋಹ ದುಃಖಿತಃ ॥

ದಾಗಿ ಸಂರಕ್ಷಣ ಕರ್ತೃಗಳು, ಇಹ - ಈ ಲೋಕದಲ್ಲಿ, ಚತುರ್ಥೀ - ನಾಲ್ಕನೆಯದು, ನವಿದ್ಯತೇ - ಕಾಣುವುದೇ ಇಲ್ಲವು. ॥ ೨೭ ॥ ತತ್ರ - ಆ ಮೂವರಲ್ಲಿ, ತ್ವಂಚ - ನೀನಾದರೆ, ಮೇ - ನನಗೆ, ನಾಸ್ತ್ಯೇವ - ಇಲ್ಲವೇ ಇಲ್ಲವು, ರಾಮಶ್ಚ - ಶ್ರೀರಾಮನೂ, ವನಂ - ವನವನ್ನು, ಆಶ್ರಿತಃ - ಆಶ್ರಯಿಸಿದನು, (ಅಹಂ - ನಾನು,) ವನಂ - ಅರಣ್ಯವನ್ನು ಕುರಿತು, ಗಂತುಂ - ಹೋಗಲು, ನೇಚ್ಛಾಮಿ - ಅಪೇಕ್ಷಿಸದೆಹೋದೆ, ತ್ವಯಾ - ನಿನ್ನಿಂದ, ಸರ್ವಥಾ - ಎಲ್ಲರೀತಿಗಳಲ್ಲಿಯೂ, ಅಭಿಹತಾ ಹೊಡೆಯಲ್ಪಟ್ಟೆನು. ॥ ೨೮ ॥ ತ್ವಯಾ - ನಿನ್ನಿಂದ, ಸರಾಷ್ಟ್ರಂ - ದೇಶಗಳಿಂದೊಡಗೂಡಿದ, ಇದಂ ರಾಜ್ಯಂ - ಈ ಅಯೋಧ್ಯಾರಾಜ್ಯವು, ಹತಂ - ಹೊಡೆಯಲ್ಪಟ್ಟಿತು, ತಥಾ - ಹಾಗೆಯೇ, ಆತ್ಮಾ - ನೀನು, ಮಂತ್ರಿಭಿಶ್ಚಸಹ - ಮಂತ್ರಿಗಳೊಡಗೂಡಿ, ಹತಃ - ಹತನಾದೆ, (ಅಹಂ-ನಾನೂ,) ಸಪುತ್ರಾ- ಮಗನಿಂದೊಡಗೂಡಿದವಳಾಗಿ, ಹತಾಸ್ಮಿ - ಹತಳಾದೆನು, ಪೌರಾಶ್ಚ - ಪಟ್ಟಣಸ್ಥರಾದ ಜನರೂ, ಹತಾಃ - ಕೆಡಿಸಲ್ಪಟ್ಟರು, ತವ - ನಿನ್ನ, ಸುತಶ್ಚ - ಮಗನಾದ ಭರತನೂ, ಭಾರ್ಯಾಚ - ಹೆಂಡತಿಯಾದ ಕೈಕೇಯಿಯೂ, ಸಂಪ್ರಹೃಷ್ಟೌ - ಸಂತೋಷಗೊಂಡರು. ॥ ೨೯ ॥ ಸರಾಜಾ - ಆ ದಶರಥರಾಯನು, ದಾರುಣಶಬ್ದಸಂಶ್ರಿತಾಂ - ಕ್ರೂರವಾದ ಶಬ್ದಗಳಿಂದ ಕೂಡಿರುವ, ಇಮಾಂ ಗಿರಂ - ಈ ಮಾತನ್ನು, ನಿಶಮ್ಯ - ಕೇಳಿ, ದುಃಖಿತಃ - ಬಹಳ ವ್ಯಸನಗೊಂಡವನಾಗಿ,

---

ಇನ್ನಾವುದೂ ಇಲ್ಲವಷ್ಟೆ? ಈ ಮೂರು ಗತಿಗಳಲ್ಲಿ, ನೀನು ನನ್ನ ಸವತಿಗೆ ವಶ್ಯನಾಗಿರುವುದರಿಂದ ನನಗೆ ನೀನು ಗತಿಯೆಂದು ಹೇಳಲಾಗುವುದಿಲ್ಲ. "ಶ್ರೀರಾಮನಿಲ್ಲವೆ" ಎಂದರೆ ಆತನು ಅರಣ್ಯವನ್ನು ಸೇರಿದನು. ಈಗ ನೀನಿರುವೆಯಾದುದರಿಂದ ನಾನು ರಾಮನೊಡನೆ ಅರಣ್ಯಕ್ಕೆ ತೆರಳದೆ ಇಲ್ಲಿಯೇ ನಿಂತೆನು. ನೀನಿರುವಾಗ ನಾನು ಇತರ ಬಂಧುಗಳನ್ನಾಶ್ರಯಿಸುವುದು ಧರ್ಮವಲ್ಲ. ಆದುದರಿಂದ ಸಕಲ ವಿಧಗಳಲ್ಲಿಯೂ ನೀನು ನನ್ನನ್ನು ನಾಶಗೊಳಿಸಿದೆ. ಇನ್ನು ನನಗೆ ಗತಿ ಯಾರು? ನೀನು ಅನೇಕ ರಾಜ್ಯಗಳಿಂದೊಡಗೂಡಿದ ಈ ಕೋಸಲ ರಾಜ್ಯವು ನಾಶವಾಗುವಂತೆ ಮಾಡಿದೆ. ಮಂತ್ರಿಗಳೊಡಗೂಡಿ ನೀನೂ ಹತನಾದೆ. ನಾನೂ ನನ್ನ ಕುವರನೊಡಗೂಡಿ ಹತಳಾದೆನು. ಇಷ್ಟು ಮಂದಿಯನ್ನೂ ಕೊಂದು, ಕುಮಾರನಾದ ಭರತನಿಗೂ, ಭಾರ್ಯೆಯಾದ ಕೈಕೇಯಿಗೂ ಆನಂದವನ್ನುಂಟುಮಾಡಿದೆ! ಅಹಹ! ಎಂತಹ ಕ್ರೂರಕೃತ್ಯವನ್ನು ಮಾಡಿದೆ" ॥ ೨೧-೨೯ ॥ ಇಂತು ಕಠಿಣ ಶಬ್ದಗಳಿಂದ ಕೂಡಿದ ಕೌಸಲ್ಯಾದೇವಿಯ ಮಾತುಗಳನ್ನು ಕೇಳಿ ದಶರಥ ನು ಮಹಾ ದುಃಖಿತನಾಗಿ, ಮೂರ್ಛೆ

ತತಸ್ಸ ಶೋಕಂ ಪ್ರವಿವೇಶ ಪಾರ್ಥಿವ
ಸ್ಸ್ವದುಷ್ಕೃತಂ ಚಾಪಿ ಪುನಸ್ತದಾ ಸ್ಮರತ್ ॥ ೩೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಷಷ್ಟಿತಮಸ್ಸರ್ಗಃ.

ಮೋಹಾಪಿ - ಮೂರ್ಛೆಯನ್ನು ಪಡೆದನು, ತತಃ - ಬಳಿಕ, ಪಾರ್ಥಿವಃ - ಅರಸಾದ ದಶರಥರಾಯನು, ಶೋಕಂ - ಮನೋವ್ಯಥೆಯನ್ನು, ಪ್ರವಿವೇಶ - ಹೊಂದಿದನು, ತದಾ - ಆ ಕಾಲದಲ್ಲಿ, ಪುನಶ್ಚ - ಮತ್ತು, ಸ್ವದುಷ್ಕೃತಮಪಿ - ಸ್ವಕೀಯವಾದ ಕಾರ್ಯವನ್ನು, ಅಸ್ಮರತ್ - ಸ್ಮರಿಸಿಕೊಂಡನು. ॥ ೩೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಷಷ್ಟಿತಮಸ್ಸರ್ಗಃ.

ಗೊಂಡು, ಸ್ವಲ್ಪಹೊತ್ತಿನಮೇಲೆ ಚೇತರಿಸಿಕೊಂಡು, ಶೋಕಾಕ್ರಾಂತನಾಗಿ ಹಿಂದೆ ತಾನು ಮಾಡಿದ ಪಾಪಕೃತ್ಯವನ್ನು ಸ್ಮರಿಸಿಕೊಂಡನು. ॥ ೩೦ ॥

ಇಂತಿದು ಕೌಸಲ್ಯಾದೇವಿಕೃತ ದಶರಥರಾಜ ಗರ್ಹಣವೆಂಬ
ಅರವತ್ತೊಂದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ದ್ವಿಷಷ್ಠಿತಮಸ್ಸರ್ಗಃ.

ಏವಂ ತು ಕ್ರುದ್ಧಯಾ ರಾಜಾ ರಾಮಮಾತ್ರಾ ಸಶೋಕಯಾ ॥ ಶ್ರಾವಿತಃ ಪರುಷಂ ವಾಕ್ಯಂ ಚಿಂತಯಾಮಾಸ ದುಃಖಿತಃ ॥ ೧ ॥ ಚಿಂತಯಿತ್ವಾ ಸ ಚ ನೃಪೋ ಮುಮೋಹ ವ್ಯಾಕುಲೇಂದ್ರಿಯಃ ॥ ಅಥ ದೀರ್ಘೇಣ ಕಾಲೇನ ಸಂಜ್ಞಾಮಾಪ ಪರಂ ತಪಃ ॥ ೨ ॥ ಸ ಸಂಜ್ಞಾಮುಪಲಭ್ಯೈವ ದೀರ್ಘಮುಷ್ಣಂಚ ನಿಶ್ವಸನ್ ॥ ಕೌಸಲ್ಯಾಂ ಪಾರ್ಶ್ವತೋ ದೃಷ್ಟ್ವಾ ಪುನಶ್ಚಿಂತಾ ಮುಪಾಗಮತ್ ॥ ೩ ॥ ತಸ್ಯ ಚಿಂತಯಮಾನಸ್ಯ ಪ್ರತ್ಯಭಾ ತ್ಕರ್ಮ ದುಷ್ಕೃತಂ ॥ ಯದನೇನ ಕೃತಂ ಪೂರ್ವ ಮಜ್ಞಾನಾ ಚ್ಛಬ್ದವೇಧಿನಾ ॥ ೪ ॥

ಏವಂ - ಹೀಗೆ, ರಾಜಾತು - ದಶರಥನಾದರೆ, ಸಶೋಕಯಾ - ದುಃಖದಿಂದೊಡಗೂಡಿ, ಕೃದ್ಧಯಾ - ಕೋಪಗೊಂಡ, ರಾಮಮಾತ್ರಾ - ಕೌಸಲ್ಯಾದೇವಿಯಿಂದ, ಪರುಷಂ - ಕಠಿನವಾದ, ವಾಕ್ಯಂ - ಮಾತನ್ನು, ಶ್ರಾವಿತಃ - ಕೇಳಿಸಿಕೊಂಡು, ದುಃಖಿತಃ - ವ್ಯಸನಗೊಂಡವನಾಗಿ, ಚಿಂತಯಾಮಾಸ - ಆಲೋಚಿಸಿದನು. ॥ ೧ ॥ ಸನೃಪಃ - ಆ ದಶರಥರಾಯನು, ಚಿಂತಯಿತ್ವಾ - ಆಲೋಚಿಸಿ, ವ್ಯಾಕುಲೇಂದ್ರಿಯಃ - ಕ್ಷೋಭೆಗೊಂಡ ಸರ್ವೇಂದ್ರಿಯಗಳುಳ್ಳವನಾಗಿ, ಮುಮೋಹ - ಮೂರ್ಛೆಗೊಂಡನು, ಅಥ - ಬಳಿಕ, ದೀರ್ಘೇಣಕಾಲೇನ - ಬಹಳಹೊತ್ತಿನಮೇಲೆ, ಪರಂತಪಃ - ಶತ್ರುಸಂಹಾರಕನಾದ ದಶರಥನು, ಸಂಜ್ಞಾಂ - ಪ್ರಜ್ಞೆಯನ್ನು, ಆಪ - ಹೊಂದಿದನು. ॥ ೨ ॥ ಸಃ - ಆ ರಾಯನು, ಸಂಜ್ಞಾಂ - ಪ್ರಜ್ಞೆಯನ್ನು, ಉಪಲಭ್ಯೈವ - ಹೊಂದುತ್ತಲೇ, ದೀರ್ಘಂ - ದೊಡ್ಡದಾಗಿಯೂ, ಉಷ್ಣಂಚ - ಬಿಸಿಯಾಗಿಯೂ, ನಿಶ್ವಸನ್ - ನಿಟ್ಟುಸಿರು ಬಿಡುತ್ತ, ಪಾರ್ಶ್ವತಃ - ಪಕ್ಕದಲ್ಲಿರುವ, ಕೌಸಲ್ಯಾಂ - ಕೌಸಲ್ಯಾದೇವಿಯನ್ನು, ದೃಷ್ಟ್ವಾ - ಕಂಡು, ಪುನಃ - ಮತ್ತೂ, ಚಿಂತಾಂ - ಆಲೋಚನೆಯನ್ನು, ಉಪಾಗಮತ್ - ಹೊಂದಿದನು. ॥ ೩ ॥ ಚಿಂತಯಮಾನಸ್ಯ - ಆಲೋಚಿಸುತ್ತಿರುವ, ತಸ್ಯ - ಆ ದಶರಥರಾಯನಿಗೆ, ಶಬ್ದವೇಧಿನಾ - ಶಬ್ದವೇಧನ ವಿದ್ಯೆಯನ್ನು ಕಲೆತುಕೊಂಡಿರುವ, ಅನೇನ - ಈತನಿಂದ, ಪೂರ್ವಂ - ಹಿಂದೆ, ಅಜ್ಞಾನಾತ್ - ತಿಳುವಳಿಕೆಯಿಲ್ಲದೆ,

---

ಹೀಗೆ ದಶರಥರಾಯನು ಮಹಾ ದುಃಖದಿಂದ ಕೂಡಿದವಳೂ, ಕೋಪಗೊಂಡವಳೂ, ಶ್ರೀರಾಮ ಜನನಿಯೂ ಆದ ಕೌಸಲ್ಯಾದೇವಿಯಾಡಿದ ಕಠಿಣ ವಾಕ್ಯಗಳೆಲ್ಲವನ್ನೂ ಕೇಳಿ, ಅಧಿಕವಾದ ದುಃಖವಾಂತವನಾಗಿ ಪುನಃ ಮೂರ್ಛಿತನಾದನು. ಹೀಗೆ ಮೂರ್ಛೆಯೊಂದಿದ ಶತ್ರುಮರ್ದನನಾದ ಆ ರಾಯನು ಕೆಲಕಾಲದಮೇಲೆ ಎಚ್ಚರಗೊಂಡವನಾದನು. ಅಲ್ಲದೆ ಆ ದಶರಥರಾಜನು ಎಚ್ಚರಗೊಂಡಮೇಲೆಯೂ, ನಿಟ್ಟುಸಿರುಗಳನ್ನು ಬಿಡುತ್ತ, ತನ್ನ ಪಕ್ಕದಲ್ಲಿಯೇ ಇದ್ದ ಕೌಸಲ್ಯಾದೇವಿಯನು, ನೋಡಿ ಪುನಃ ವಿಚಾರತತ್ಪರನಾದನು. ಹೀಗಾಗಿರುವ ಆ ರಾಯನು ಹಿಂದೆ ತಾನು ಅರಣ್ಯದಲ್ಲಿ "ಶಬ್ದವೇಧಿ"ಯೆಂಬ

ಅಮನಾಸ್ತೇನ ಶೋಕೇನ ರಾಮಶೋಕೇನಚ ಪ್ರಭುಃ ‖ ದ್ವಾಭ್ಯಾಮಪಿ ಮಹಾ
ರಾಜ ಶ್ಶೋಕಾಭ್ಯಾ ಮನ್ವತಪ್ಯತ ‖ ೫ ‖ ದಹ್ಯಮಾನ ಸ್ಸ ಶೋಕಾಭ್ಯಾಂ
ಕೌಸಲ್ಯಾಮಾಹ ಭೂಪತಿಃ ‖ ವೇಪಮಾನೋಂಜಲಿಂ ಕೃತ್ವಾ ಪ್ರಸಾದಾರ್ಥ
ಮವಾಙ್ಮುಖಃ ‖ ೬ ‖ ಪ್ರಸಾದಯೇ ತ್ವಾಂ ಕೌಸಲ್ಯೇ! ರಚಿತೋಯಂ
ಮಯಾಂಜಲಿಃ ‖ ವತ್ಸಲಾ ಚಾನೃಶಂಸಾಚ ತ್ವಂ ಹಿ ನಿತ್ಯಂ ಪರೇಷ್ವಪಿ ‖ ೭ ‖
ಭರ್ತಾತು ಖಲು ನಾರೀಣಾಂ ಗುಣವಾ ನ್ನಿರ್ಗುಣೋಪಿ ವಾ ‖ ಧರ್ಮಂ

ಯತ್ - ಯಾವ ದುಷ್ಕೃತ್ಯವು, ಕೃತಂ - ಮಾಡಲ್ಪಟ್ಟಿತೋ, (ತತ್ ಅಂತಹ,) ದುಷ್ಕೃತಂಕರ್ಮ- ದುಷ್ಕರ್ಮವು, ಪ್ರತ್ಯಭಾತ್ - ಸ್ಫುರಿಸಿತು. ‖ ೪ ‖ ಪ್ರಭುಃ - ಸಮರ್ಥನಾದ, ಮಹಾರಾಜಃ - ದಶರಥರಾಯನು, ತೇನಶೋಕೇನ - ಆ ದುಃಖದಿಂದಲೂ, ರಾಮಶೋಕೇನಚ - ಶ್ರೀರಾಮ ಶೋಕ ದಿಂದಲೂ, ದ್ವಾಭ್ಯಾಂಶೋಕಾಭ್ಯಾಮಪಿ - ಎರಡು ವ್ಯಸನಗಳಿಂದಲೂ, ಅಮನಾಃ-ಮನಗೆಟ್ಟವನಾಗಿ, ಅನ್ವತಪ್ಯತ - ಪರಿತಪಿಸಿದನು. ‖ ೫ ‖ ಸಭೂಪತಿಃ - ಆ ದಶರಥರಾಜನು, ಶೋಕಾಭ್ಯಾಂ - ಆ ಎರಡು ದುಃಖಗಳಿಂದಲೂ, ದಹ್ಯಮಾನಃ - ದಹಿಸಲ್ಪಟ್ಟವನಾಗಿ, ವೇಪಮಾನಃ - ನಡುಗುತ್ತ, ಪ್ರಸಾದಾರ್ಥಂ-ಕೌಸಲ್ಯಾದೇವಿಯನ್ನು ಸಮಾಧಾನಗೊಳಿಸಲೋಸುಗ, ಅಂಜಲಿಂಕೃತ್ವಾ-ಕೈಮುಗಿದು, ಅವಾಙ್ಮುಖಃ - ತಲೆಬಗ್ಗಿಸಿ, ಕೌಸಲ್ಯಾಂ - ಕೌಸಲ್ಯಾದೇವಿಯನ್ನು ಕುರಿತು, ಆಹ - ಹೇಳಿದನು. ‖ ೬ ‖ ಹೇ ಕೌಸಲ್ಯೇ - ಎಲೌ ಕೌಸಲ್ಯಾದೇವಿಯೆ, ತ್ವಾಂ - ನಿನ್ನನ್ನು, ಪ್ರಸಾದಯೇ - ಪ್ರಸನ್ನ ಳನ್ನಾಗಿ ಮಾಡಿಕೊಳ್ಳುತ್ತೇನೆ, ಮಯಾ - ನನ್ನಿಂದ, ಅಯಮಂಜಲಿಃ - ಈ ಅಂಜಲಿಯು, ರಚಿತಃ- ಮಾಡಲಾಯಿತು, ತ್ವಂ - ನೀನು, ಪರೇಷ್ವಪಿ - ಇತರ ಜನರಲ್ಲಿಯೂ ಕೂಡ, ನಿತ್ಯಂ - ಯಾವಾ ಗಲೂ, ವತ್ಸಲಾ - ಪ್ರೀತಿಯುಳ್ಳವಳು, ಅನೃಶಂಸಾಚಹಿ - ಘಾತಕಳಲ್ಲವಷ್ಟೆ. ‖ ೭ ‖ ಹೇ ದೇವಿ- ಎಲೌ ಕೌಸಲ್ಯಾದೇವಿಯೆ, ಧರ್ಮಂ - ಧರ್ಮವನ್ನು, ವಿಮೃಶಮಾನಾನಾಂ - ವಿಮರ್ಶೆಮಾಡುತ್ತಿ ರುವ, ನಾರೀಣಾಂ - ಹೆಂಗಸರಿಗೆ, ಭರ್ತಾತು - ಪತಿಯಾದರೋ, ಗುಣವಾನ್ - ಗುಣವಂತನಾದರೂ, ನಿರ್ಗುಣೋಪಿವಾ - ಗುಣಹೀನನಾದರೂ, ಪ್ರತ್ಯಕ್ಷಂ - ಪ್ರತ್ಯಕ್ಷವಾದ, ದೈವತಂಖಲು - ದೇವತಾ

ವಿದ್ಯೆಯಿಂದ ಆಚರಿಸಿದ ಕ್ರೂರಕರ್ಮವನ್ನು ಜ್ಞಾಪಕಕ್ಕೆ ತಂದುಕೊಂಡು ಮಹಾ ದುಃಖಿತ ನಾಗಿ, ಮಗನಾದ ಶ್ರೀರಾಮನ ವಿಯೋಗದಿಂದುಂಟಾದ ವ್ಯಸನದಿಂದ ಮತ್ತೂ ಅಧಿಕ ವಾಗಿ ಪರಿತಪಿಸುತ್ತಿದ್ದನು. ರಾಜೇಂದ್ರನಾದ ಆ ದಶರಥ ಮಹೀಪಾಲನು, ಈ ರೀತಿ ಎರಡು ವಿಧವಾದ ದುಃಖಗಳಿಂದ ಪೀಡಿತನಾಗಿ, ಗಡಗಡನೆ ನಡುಗುತ್ತಲೂ, ರೋಮಾಂಚವನ್ನು ಹೊಂದುತ್ತಲೂ, ತಲೆ ಬಗ್ಗಿಸಿ ಕೈಗಳನ್ನು ಜೋಡಿಸಿಕೊಂಡು ಆ ಕೌಸಲ್ಯಾದೇವಿಯನ್ನು ಕುರಿತು ಈ ರೀತಿ ಹೇಳಿದನು. ‖ ೧-೬ ‖ "ಎಲೌ ಕೌಸಲ್ಯಾದೇವಿಯೆ! ಪ್ರಸನ್ನ ಳಾಗು! ನಾನು ಕೈ ಮುಗಿದು ಬೇಡುತ್ತೇನೆ! ದೇವಿ! ನೀನು ಶತ್ರುಗಳಲ್ಲಿಯೂ ಸಹ ದಯೆಯನ್ನು ತೋರಿಸತಕ್ಕವಳಲ್ಲವೆ! ಒಳ್ಳೆಯ ಮನವುಳ್ಳವಳಲ್ಲವೆ! ಇಷ್ಟೆಯಲ್ಲದೆ, ಓ ಕೌಸಲ್ಯಾದೇವಿಯೆ! ಧರ್ಮಸ್ವಭಾವವನ್ನುಂಟಾಗಿರುವ ಸ್ತ್ರೀಗೆ, ಗುಣಾಢ್ಯನಾದರೂ, ಗುಣ ಹೀನನಾದರೂ, ಪತಿಯೇ ಪ್ರತ್ಯಕ್ಷ ದೇವತಾಸ್ವರೂಪನಲ್ಲವೆ? ಈ ರೀತಿ ಹಿರಿಯರು ನುಡಿ

ವಿಮೃಶಮಾನಾನಾಂ ಪ್ರತ್ಯಕ್ಷಂ ದೇವಿ! ದೈವತಂ ॥ ೮ ॥ ಸಾತ್ವಂ ಧರ್ಮ
ಪರಾ ನಿತ್ಯಂ ದೃಷ್ಟಲೋಕ ಪರಾವರಾ ॥ ನಾರ್ಹಸೇ ವಿಪ್ರಿಯಂ ವಕ್ತುಂ
ದುಃಖಿತಾಪಿ ಸು ದುಃಖಿತಂ ॥ ೯ ॥ ತದ್ವಾಕ್ಯಂ ಕರುಣಂ ರಾಜ್ಞ ಶ್ಶ್ರುತ್ವಾ
ದೀನಸ್ಯ ಭಾಷಿತಂ॥ಕೌಸಲ್ಯಾ ವ್ಯಸೃಜ ದ್ಬಾಷ್ಪಂ ಪ್ರಣಾಳೀವ ನವೋದಕಂ॥೧೦॥
ಸಾ ಮೂರ್ಧ್ನಿ ಬಧ್ವಾ ರುದತೀ ರಾಜ್ಞಃ ಪದ್ಮಮಿವಾಂಜಲಿಂ ॥ ಸಂಭ್ರಮಾ
ದಬ್ರುವೀತ್ತ್ರಸ್ತಾ ತ್ವರಮಾಣಾಕ್ಷರಂ ವಚಃ ॥ ೧೧ ॥ ಪ್ರಸೀದ! ಶಿರಸಾ
ಯಾಚೇ ಭೂಮೌ ನಿಪತಿತಾಸ್ಮಿ ತೇ ॥ ಯಾಚಿತಾಸ್ಮಿ ಹತಾ ದೇವ! ಕ್ಷಂತ

ಸ್ವರೂಪವನಷ್ಟೆ. ॥ ೮ ॥ ನಿತ್ಯಂ - ನಿರಂತರವೂ, ಧರ್ಮಪರಾ - ಧರ್ಮದಲ್ಲಿಯೇ ಆಸಕ್ತಳೂ, ದೃಷ್ಟ ಲೋಕಪರಾವರಾ - ನೋಡಲ್ಪಟ್ಟ ಲೋಕದ ಉತ್ಕರ್ಷಾಪಕರ್ಷಗಳುಳ್ಳವಳೂ, ದುಃಖಿತಾಪಿ ದುಃಖಿತ ಳಾದವಳೂ, ಸಾತ್ವಂ - ಅದಂತಹ ನೀನು, ಸುದುಃಖಿತಂ - ಬಹಳ ದುಃಖಗೊಂಡಿರುವ ನನ್ನನ್ನು ಕುರಿತು, ವಿಪ್ರಿಯಂ - ಕಠೋರವಾದ ಮಾತನ್ನು, ವಕ್ತುಂ - ಹೇಳಲು, ನಾರ್ಹಸೇ - ಯೋಗ್ಯಳಾಗ ಬೇಡ. ॥ ೯ ॥ ದೀನಸ್ಯ - ದೀನನಾದ, ರಾಜ್ಞಃ - ಅರಸನಾದ ದಶರಥರಾಯನು, ಕರುಣಂ - ದೈನ್ಯದಿಂದ, ಭಾಷಿತಂ - ನುಡಿಯಲ್ಪಟ್ಟ, ತದ್ವಾಕ್ಯಂ - ಆ ಮಾತನ್ನು, ಶೃತ್ವಾ-ಕೇಳಿ, ಕೌಸಲ್ಯಾ- ಕೌಸಲ್ಯಾದೇವಿಯು, ಪ್ರಣಾಳೀ - ಜಲಧಾರೆಯು, ನವೋದಕಮಿವ - ಹೊಸನೀರಿನಂತೆ, ಬಾಷ್ಪಂ - ಕಂಬನಿಯನ್ನು, ವ್ಯಸೃಜತ್ - ಬಿಟ್ಟಳು. ॥ ೧೦ ॥ ಸಾ - ಆ ಕೌಸಲ್ಯಾದೇವಿಯು, ರುದತೀ - ಅಳುತ್ತ, ಸಂಭ್ರಮಾತ್ - ತ್ವರೆಯಿಂದ, ತ್ರಸ್ತಾ - ಭಯಗೊಂಡು, ರಾಜ್ಞಃ - ಅರಸನಾದ ದಶರಥ ರಾಯನ, ಪದ್ಮಮಿವ - ಕಮಲದಂತಿರುವ, ಅಂಜಲಿಂ-ಅಂಜಲಿಯನ್ನು, ಮೂರ್ಧ್ನಿ - ತನ್ನ ಮಂಡೆ ಯಲ್ಲಿ, ಬಧ್ವಾ - ಕಟ್ಟಿಕೊಂಡು, ತ್ವರಮಾಣಾಕ್ಷರಂ - ಸ್ಪಷ್ಟವಾಗದಿರುವ ಅಕ್ಷರಗಳುಳ್ಳ, ವಚಃ - ಮಾತನ್ನು, ಅಬ್ರುವೀತ್ - ನುಡಿದಳು. ॥ ೧೧ ॥ ಹೇ ದೇವ - ಎಲೈ ಸ್ವಾಮಿಯೇ, ಪ್ರಸೀದ - ಪ್ರಸನ್ನನಾಗು, ಹಿ - ಯಾವ ಕಾರಣ, ಅಹಂ - ನಾನು, ತ್ವಯಾ - ನಿನ್ನಿಂದ, ನಕ್ಷಂತವ್ಯಾ - ಕ್ಷಮಿಸೆಂದು ಹೇಳಿಸಿಕೊಳ್ಳುವಳಲ್ಲ, (ತಸ್ಮಾತ್ - ಆ ಕಾರಣ,) ಭೂಮೌ - ನೆಲದಲ್ಲಿ, ಶಿರಸಾ - ಮಂಡೆಯಿಂದ, ನಿಪತಿತಾ - ಬಿದ್ದು, ಯಾಚೇ - ಬೇಡಿಕೊಳ್ಳುತ್ತೇನೆ, ಹತಾ - ಹತಳಾಗಿ, ಯಾಚಿ

ಯುತ್ತಾರೆ. ನೀನು ಯಾವಾಗಲೂ ಧರ್ಮಸ್ವಭಾವವುಳ್ಳವಳು. ಲೋಕದಲ್ಲಿರುವ ಗುಣಾ ಗುಣಗಳನ್ನು ಚೆನ್ನಾಗಿ ತಿಳಿದಿರುವೆಯಲ್ಲವೆ? ಇಂತಹ ನೀನು ಕಠಿಣವಾದ ನುಡಿಗಳಿಂದ ನನ್ನನ್ನು ನಿಂದಿಸಲು ಅರ್ಹಳಾಗಬೇಡ" ಹೀಗೆ ಬಹು ದೈನ್ಯದಿಂದ ನುಡಿದ ದಶರಥರಾಯನ ನುಡಿಗಳನ್ನು ಕೇಳಿದ ಕೌಸಲ್ಯಾದೇವಿಯು, ವರ್ಷಾಕಾಲದಲ್ಲಿ ಜಲಧಾರೆಯು ಹೊಸ ನೀರನ್ನು ಬಿಡುವಂತೆ ಕಂಬನಿಗಳನ್ನು ಸುರಿಸಿದಳು. ॥ ೭-೧೦ ॥ ಅಲ್ಲದೆ ಆ ದೇವಿಯು ಅಧಿಕವಾದ ಭಯದಿಂದ ಅಳುತ್ತ, ಸಮಾನ ದುಃಖಿಯಾದ ದಶರಥರಾಯನ ಅಂಜಲಿಪುಟ ವನ್ನು ತನ್ನ ಶಿರಸ್ಸಿನಲ್ಲಿಟ್ಟುಕೊಂಡು, ಗದ್ಗದಸ್ವರಭರಿತಳಾಗಿ ಆತನನ್ನು ಕುರಿತು, "ಸ್ವಾಮಿಯೆ! ಪ್ರಸನ್ನನಾಗು! ನನ್ನನ್ನು ಕ್ಷಮಿಸು ; ಶಿರಸಾ ನಮಸ್ಕರಿಸುತ್ತೇನೆ. ಪ್ರಾರ್ಥಿಸು ತ್ತೇನೆ! ನಾನು ಕೆಳಗೆ ಬಿದ್ದವಳಂತಾಗುತ್ತಿರುವೆನು. ಪತಿಯಾದ ನಿನ್ನಿಂದ ನಾನು ಯಾಚಿತ

ನ್ಯಾಹಂ ನ ಹಿ ತ್ವಯಾ ‖ ೧೨ ‖ ನೈಷಾಹಿ ಸಾ ಸ್ತ್ರೀ ಭವತಿ ಶ್ಲಾಘನೀಯೇನ ಧೀಮತಾ ‖ ಉಭಯೋರ್ಲೋಕಯೋರ್ವೀರ ಪತ್ಯಾ ಯಾ ಸಂಪ್ರಸಾದ್ಯತೇ ‖೧೩‖ ಜಾನಾಮಿ ಧರ್ಮಂ ಧರ್ಮಜ್ಞ ! ತ್ವಾಂ ಜಾನೇ ಸತ್ಯವಾದಿನಂ ‖ ಪುತ್ರಶೋಕಾರ್ತಯಾ ತತ್ತು ಮಯಾ ಕಿಮಪಿ ಭಾಷಿತಂ ‖ ೧೪ ‖ ಶೋಕೋ ನಾಶಯತೇ ಧೈರ್ಯಂ ಶೋಕೋ ನಾಶಯತೇ ಶ್ರುತಂ ‖ ಶೋಕೋ ನಾಶಯತೇ ಸರ್ವಂ ನಾಸ್ತಿ ಶೋಕಸಮೋ ರಿಪುಃ ‖ ೧೫ ‖ ಶಕ್ಯ ಆಪತಿತಸ್ಸೋಢುಂ ಪ್ರಹಾರೋ ರಿಪುಹಸ್ತತಃ ‖ ಸೋಢುಮಾಪತಿತಶ್ಶೋಕಃ ಸು

ತಾಸ್ಮಿ - ಬೇಡಿಕೊಳ್ಳುತ್ತೇನೆ. ‖ ೧೨ ‖ ಹೇ ವೀರ - ಎಲೈ ಶೂರನೆ, ಯಾ - ಯಾವ ಸ್ತ್ರೀಯು, ಶ್ಲಾಘನೀಯೇನ - ಸ್ತೋತ್ರಾರ್ಹನಾದ, ಧೀಮತಾ - ಬುದ್ಧಿಶಾಲಿಯಾದ, ಪತ್ಯಾ - ಗಂಡನಿಂದ, ಸಂಪ್ರಸಾದ್ಯತೇ - ಪ್ರಾರ್ಥಿತಳಾಗುವಳೋ, ಸೈಷಾಸ್ತ್ರೀ - ಆ ಸ್ತ್ರೀಯು, ಉಭಯೋರ್ಲೋಕಯೋಃ - ಎರಡು ಲೋಕಗಳಲ್ಲಿಯೂ, ನಭವತಿ - ಐಹಿಕಾಮುಷ್ಮಿಕ ಫಲವನ್ನು ಹೊಂದಲಾರಳು. ‖ ೧೩ ‖ ಹೇ ಧರ್ಮಜ್ಞ - ಎಲೈ ಧರ್ಮವನ್ನರಿತವನೇ, ಧರ್ಮಂ - ಧರ್ಮವನ್ನು, ಜಾನಾಮಿ - ತಿಳಿದಿರುವೆನು, ತ್ವಾಂ - ನಿನ್ನನ್ನು, ಸತ್ಯವಾದಿನಂ - ಸತ್ಯವಚನವುಳ್ಳವನನ್ನಾಗಿ, ಜಾನೇ - ತಿಳಿದುಕೊಂಡಿರುವೆನು, ಪುತ್ರಶೋಕಾರ್ತಯಾ - ಮಗನ ವಿರಹದಿಂದ ಹುಟ್ಟಿದ ವ್ಯಸನದಿಂದ ಪರಿತಪ್ತಳಾದ, ಮಯಾ - ನನ್ನಿಂದ, ಕಿಮಪಿ - ಅರ್ಥವಿಲ್ಲದ, ತತ್ - ಆ ಮಾತು, ಭಾಷಿತಂ - ಹೇಳಲಾಯಿತು. ‖ ೧೪ ‖ ಶೋಕಃ - ಮನೋವ್ಯಥೆಯು, ಧೈರ್ಯಂ - ಧೈರ್ಯವನ್ನು, ನಾಶಯತೇ - ಹೋಗಲಾಡಿಸುತ್ತದೆ, ಶೋಕಃ - ಶೋಕವು, ಶ್ರುತಂ - ಶಾಸ್ತ್ರವನ್ನು, ನಾಶಯತೇ - ಹೋಗಲಾಡಿಸುತ್ತದೆ, ಶೋಕಃ - ದುಃಖವು, ಸರ್ವಂ - ಸಮಸ್ತವನ್ನೂ, ನಾಶಯತೇ - ಹಾಳುಮಾಡುತ್ತವೆ, ಶೋಕಸಮಃ-ದುಃಖಕ್ಕೆಸರಿಯಾದ, ರಿಪುಃ - ಶತ್ರುವು, ನಾಸ್ತಿ - ಇಲ್ಲವು. ‖ ೧೫ ‖ ರಿಪುಹಸ್ತತಃ - ಹಗೆಯುನ ಕೈಯಿಂದ, ಆಪತಿತಃ - ಬೀಳುತ್ತಿರುವ, ಪ್ರಹಾರಃ - ಪೆಟ್ಟು, ಸೋಢುಂ - ಸಹಿಸಲು, ಶಕ್ಯೋಹಿ -

---

ಳಾದೆನಾದುದರಿಂದ ಪಾಪಿಷ್ಠೆಯಾದೆನು. ಆದುದರಿಂದ ನೀನು ನನ್ನನ್ನು ಚೆನ್ನಾಗಿ ಶಿಕ್ಷಿಸಬಹುದು. ಲೋಕದಲ್ಲಿ ಯಾವ ಹೆಂಗಸು ಪತಿಯಿಂದ ಪ್ರಾರ್ಥಿತಳಾಗುತ್ತಾಳೆಯೋ, ಆ ಹೆಂಗಸು ಐಹಿಕಾಮುಷ್ಮಿಕ ಫಲಗಳನ್ನು ಕಳೆದುಕೊಂಡು ಪತಿತಳಾಗುತ್ತಾಳೆ. ಎಲೈ ಧರ್ಮಿಷ್ಠನಾದ ದಶರಥರಾಯನೆ! ನಾನು ಧರ್ಮಗಳನ್ನು ತಿಳಿದಿದ್ದೇನೆ. ನೀನು ಸತ್ಯವಾದಿಯೆಂಬುದನ್ನೂ ಅರಿತಿದ್ದೇನೆ. ಆದರೂ ನಾನು ಪುತ್ರಶೋಕದಿಂದ ನೈಮರೆತು ಅನುಚಿತವಾದ ಮಾತುಗಳನ್ನಾಡಿದೆನು. ಆದುದರಿಂದ ನನ್ನನ್ನು ಮನ್ನಿಸು ! ‖ ೧೧-೧೪ ‖ ಓ ರಾಯನೆ! ದುಃಖದಿಂದ ಧೈರ್ಯವು ನಶಿಸಿಹೋಗುವುದು ; ದುಃಖದಿಂದಲೇ ವಿದ್ಯೆಯೂ ನಾಶವೈದುವುದು ; ಇಷ್ಟುಮಾತ್ರವಲ್ಲದೆ ದುಃಖದಿಂದ ಸಕಲವೂ ನಾಶವಾಗುವುದು. ಆದುದರಿಂದ ದುಃಖದಂತಹ ಶತ್ರುವು ಮತ್ತಾವುದೂ ಅಲ್ಲವು! ಇಷ್ಟೆಯಲ್ಲದೆ ಶತ್ರುವಿನಿಂದ ಜಾಗ್ರತೆಯಾಗಿ ಬಿದ್ದ ಹೊಡತವನ್ನಾದರೂ ಸಹಿಸಬಹುದು. ಆದರೆ ಜಾಗ್ರತೆಯಾಗಿ ಒದಗಿ ಬರುವ ದುಃಖವು ಅತ್ಯಲ್ಪವಾದರೂ ಅದನ್ನು ಸಹಿಸಿಕೊಳ್ಳಲಾಗುವುದಿಲ್ಲವು! ಎಲೈ ಶೂರನೆ!

ಸೂಕ್ಷ್ಮೋಽಪಿ ನ ಶಕ್ಯತೇ||೧೬||ಧರ್ಮಜ್ಞಾಶ್ಶ್ರುತಿಮಂತೋಽಪಿ ಛಿನ್ನಧರ್ಮಾರ್ಥ ಸಂಶಯಾಃ||ಯತಯೋ ವೀರ! ಮುಹ್ಯಂತಿ ಶೋಕ ಸಂಮೂಢ ಚೇತಸಃ ||೧೭|| ವನವಾಸಾಯ ರಾಮಸ್ಯ ಪಂಚರಾತ್ರೋಽದ್ಯ ಗಣ್ಯತೇ || ಯಶ್ಶೋಕ ಹತ ಹರ್ಷಾಯಾಃ ಪಂಚವರ್ಷೋಪಮೋ ಮಮ ||೧೮|| ತಂ ಹಿ ಚಿಂತಯಮಾನಾಯಾ ಶ್ಶೋಕೋಽಯಂ ಹೃದಿ ವರ್ಧತೇ || ನದೀನಾಮಿವ ವೇಗೇನ ಸಮುದ್ರ ಸಲಿಲಂ ಮಹತ್ ||೧೯|| ಏವಂ ಹಿ ಕಥಯಂತ್ಯಾಸ್ತು ಕೌಸಲ್ಯಾಯಾ ಶ್ಶುಭಂ ವಚಃ || ಮಂದರಶ್ಮಿರಭೂತ್ಸೂರ್ಯೋ ರಜನೀ ಚಾಭ್ಯವರ್ತತ ||೨೦||

ಸಾಧ್ಯವಷ್ಟೆ, ಆಪತಿತಃ - ಒದಗಿಬಂದ, ಶೋಕಃ - ವ್ಯಸನವು, ಸುಸೂಕ್ಷ್ಮೋಪಿ - ಬಹು ಸ್ವಲ್ಪವಾದರೂ, ಸೋಢುಂ - ಸಹಿಸಲು, ನಶಕ್ಯತೇ - ಆಗುವದಿಲ್ಲ. ||೧೬|| ಹೇ ವೀರ - ಎಲೈ ಶೂರನೇ, ಧರ್ಮಜ್ಞಾಃ - ಧರ್ಮವನ್ನು ತಿಳಿದಿರುವರೂ, ಶೃತಿಮಂತೋಪಿ - ಶಾಸ್ತ್ರಜ್ಞರಾದವರೂ ಕೂಡ, ಛಿನ್ನ ಧರ್ಮಾರ್ಥಸಂಶಯಾಃ - ಕಳೆದುಹೋದ ಸಂಶಯವುಳ್ಳ, ಯತಯೋಪಿ - ಯತಿಗಳೂ, ಶೋಕ ಸಮ್ಮೂಢಚೇತಸಃ - ಮನೋವ್ಯಥೆಯಿಂದ ಮಂಕುಹಿಡಿದ ಮನಸವುಳ್ಳವರಾಗಿ, ಮುಹ್ಯಂತಿ - ಭ್ರಾಂತರಾಗುತ್ತಾರೆ. ||೧೭|| ರಾಮಸ್ಯ - ಶ್ರೀರಾಮನ, ವನವಾಸಾಯ - ವನವಾಸಕ್ಕೆ, ಅದ್ಯ - ಈಗ, ಯಃ - ಯಾವ ದಿವಸವು, ಪಂಚರಾತ್ರಃ - ಐದನೇ ರಾತ್ರಿಯಾಗಿ, ಗಣ್ಯತೇ-ಎಣಿಸಲ್ಪಡುತ್ತದೆಯೋ, (ಸಃ - ಆ ದಿವಸವು,) ಶೋಕಹತಹರ್ಷಾಯಾಃ - ವ್ಯಸನದಿಂದ ನೀಗಿದ ಸಂತೋಷವುಳ್ಳ, ಮಮ-ನನಗೆ, ಪಂಚವರ್ಷೋಪಮಃ - ಐದುವರ್ಷಗಳಿಗೆ ಸಮಾನವಾದುದಾಗಿದೆ. ||೧೮|| ತಂಹಿ - ಆ ಶ್ರೀರಾಮನನ್ನೇ, ಚಿಂತಯಮಾನಾಯಾಃ - ಆಲೋಚಿಸುತ್ತಿರುವ, (ಮೇ - ನನ್ನ,) ಹೃದಿ - ಹೃದಯದಲ್ಲಿ, ಅಯಂಶೋಕಃ - ಈ ವ್ಯಸನವು, ನದೀನಾಂ - ಹೊಳೆಗಳ, ವೇಗೇನ - ವೇಗದಿಂದ, ಮಹತ್ - ಬಹಳವಾದ, ಸಮುದ್ರಸಲಿಲಮಿವ - ಸಮುದ್ರೋದಕದಂತೆ, ವರ್ಧತೇ - ವೃದ್ಧಿಗೊಳಿಸುತ್ತಿರುವುದು. ||೧೯|| ಏವಂ - ಈಪರಿಯಾಗಿ, ಕೌಸಲ್ಯಾಯಾಃ - ಕೌಸಲ್ಯಾದೇವಿಯು, ಶುಭಂ - ಮಂಗಳಕರವಾದ, ವಚಃ - ಮಾತುಗಳನ್ನು, ಕಥಯಂತ್ಯಾಃ-ಹೇಳುತ್ತಿರುವಹಾಗೆಯೇ, ಸೂರ್ಯಃ - ಸೂರ್ಯನು, ಮಂದರಶ್ಮಿಃ - ಮಂದಕಿರಣಗಳುಳ್ಳವನಾಗಿ, ಅಭೂತ್ - ಆದನು, ರಜನೀಚ - ರಾತ್ರಿಯೂ, ಅಭ್ಯ

ಧರ್ಮವನ್ನರಿತವರೂ, ವೇದಗಳನ್ನು ಚೆನ್ನಾಗಿ ಅಧ್ಯಯನ ಮಾಡಿದವರೂ, ಧರ್ಮಾರ್ಥಗಳಲ್ಲಿ ಎಳ್ಳಷ್ಟೂ ಸಂಶಯಪಡದವರೂ ಆದ ಮುನೀಶ್ವರರೂ ಸಹ, ದುಃಖ ಬಂದಾಗ ಜ್ಞಾನವಿಲ್ಲದವರಾಗುತ್ತಾರೆ. ಶ್ರೀರಾಮಮೂರ್ತಿಯು ಅರಣ್ಯವಾಸಕ್ಕೆ ಹೊರಟು ಇಂದಿಗೆ ಐದು ದಿನಗಳಾಯವು. ಸಂತೋಷವಿಲ್ಲದೆ ಪುತ್ರಶೋಕದಿಂದ ದುಃಖಿಸುತ್ತಿರುವ ನನಗೆ ಈ ಐದು ದಿನಗಳು ಐದು ಸಂವತ್ಸರಗಳಾಗಿವೆ. ಅಲ್ಲದೆ ಆ ರಾಮನನ್ನೇ ಎಲ್ಲ ಸಮಯಗಳಲ್ಲಿಯೂ ಚಿಂತಿಸುತ್ತಿರುವ ನನ್ನ ಮನಸ್ಸಿನಲ್ಲಿಯೇ ದುಃಖವು, ನದಿಗಳಿಂದ ಸಮುದ್ರವು ವೃದ್ಧಿಯೈದುವಂತೆ ಅಧಿಕವಾಗುತ್ತಿರುವುದು" ಎಂದಳು. ಈ ರೀತಿಯಾಗಿ ಆ ಕೌಸಲ್ಯಾದೇವಿಯು ಮಂಗಳಕರವಾದ ಮಾತುಗಳನ್ನು ಹೇಳುತ್ತಿರುವಾಗಲೇ ಸೂರ್ಯನು ಕಾಂತಿಗುಂದಿದ ಕಿರಣಗಳುಳ್ಳವನಾದನು. ಆಗ ರಾತ್ರಿಯು ಪ್ರಾಪ್ತವಾಯಿತು. ||೧೫-೨೦|| ಅಷ್ಟರಲ್ಲಿ

ತಥಾ ಪ್ರಸಾದಿತೋ ವಾಕ್ಯೈ ರ್ದೇವ್ಯಾ ಕೌಸಲ್ಯಯಾ ನೃಪಃ ॥
ಶೋಕೇನಚ ಸಮಾಕ್ರಾಂತೋ ನಿದ್ರಾಯಾ ವಶಮೇಯಿವಾನ್ ॥ ೨೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿಷಷ್ಟಿತಮಸ್ಸರ್ಗಃ.

ವರ್ತತ - ಪ್ರಾಪ್ತವಾಯಿತು. ॥ ೨೦ ॥ ತಥಾ - ಆಪರಿಯಾಗಿ, ನೃಪಃ - ದಶರಥರಾಯನು, ಕೌಸಲ್ಯಯಾದೇವ್ಯಾ - ಕೌಸಲ್ಯಾದೇವಿಯ, ವಾಕ್ಯೈಃ - ಮಾತುಗಳಿಂದ, ಪ್ರಸಾದಿತಃ - ಪ್ರಸನ್ನನಾಗಿ, ಶೋಕೇನ - ವ್ಯಸನದಿಂದ, ಸಮಾಕ್ರಾಂತಃ - ಆಕ್ರಮಿಸಲ್ಪಟ್ಟವನಾಗಿ, ನಿದ್ರಾಯಾಃ - ನಿದ್ದೆಯ, ವಶಂ - ಸ್ವಾಧೀನವನ್ನು, ಏಯಿವಾನ್ - ಹೊಂದಿದವನಾದನು. ॥ ೨೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿಷಷ್ಟಿತಮಸ್ಸರ್ಗಃ.

ಆ ರಾಯನು ಪಟ್ಟಮಹಿಷಿಯಾದಾ ಕೌಸಲ್ಯಾದೇವಿಯ ಕ್ಷಮಾ ವಾಕ್ಯಗಳಿಂದ ವ್ಯಸನಾಕ್ರಾಂತವಾದ ಮನವುಳ್ಳವನಾಗಿ ನಿದ್ರಾಪರವಶನಾದನು. ॥ ೨೧ ॥

ಇಂತಿದು ಕೌಸಲ್ಯಾಕೃತ ದಶರಥ ಸಮಾಶ್ವಾಸನ ವಿಧಾನವೆಂಬ
ಅರವತ್ತೆರಡನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ತ್ರಿಷಷ್ಠಿತಮಸ್ಸರ್ಗಃ.

ಪ್ರತಿಬುದ್ಧೋ ಮುಹೂರ್ತೇನ ಶೋಕೋಪಹತ ಚೇತನಃ || ಅಥ ರಾಜಾ ದಶರಥ ಸ್ಸಚಿಂತಾ ಮಭ್ಯಪದ್ಯತ || ೧ || ರಾಮಲಕ್ಷ್ಮಣಯೋಶ್ಚೈವ ವಿವಾಸಾ ದ್ವಾಸವೋಪಮಂ || ಆವಿವೇಶೋಪಸರ್ಗ ಸ್ತಂ ತಮಸ್ಸೂರ್ಯ ಮಿವಾಸುರಂ || ೨ || ಸಭಾರ್ಯೇ ನಿರ್ಗತೇ ರಾಮೇ ಕೌಸಲ್ಯಾಂ ಕೋಸಲೇಶ್ವರಃ || ವಿವಕ್ಷು ರಸಿತಾಪಾಂಗಾಂ ಸ್ಮೃತ್ವಾ ದುಷ್ಕೃತ ಮಾತ್ಮನಃ || ೩ || ಸ ರಾಜಾ ರಜನೀಂ ಷಷ್ಠೀಂ ರಾಮೇ ಪ್ರವ್ರಾಜಿತೇ ವನಂ||ಅರ್ಧರಾತ್ರೇ ದಶರಥ ಸ್ಸಂಸ್ಮರ್ರ

ಅಥ - ಬಳಿಕ, ಸರಾಜಾದಶರಥಃ - ಆ ದಶರಥರಾಯನು, ಮುಹೂರ್ತೇನ - ಮುಹೂರ್ತಕಾಲದಲ್ಲಿಯೇ, ಪ್ರತಿಬುದ್ಧಃ - ಎಚ್ಚರಗೊಂಡವನಾಗಿ, ಶೋಕೋಪಹತಚೇತನಃ - ವ್ಯಸನದಿಂದ ಆಕ್ರಾಂತಮನವುಳ್ಳವನಾಗಿ, ಚಿಂತಾಂ - ಆಲೋಚನೆಯನ್ನು, ಅಭ್ಯಪದ್ಯತ - ಹೊಂದಿದನು. || ೧ || ರಾಮಲಕ್ಷ್ಮಣಯೋಶ್ಚೈವ - ರಾಮಲಕ್ಷ್ಮಣರಿಬ್ಬರ, ವಿವಾಸಾತ್ - ವನವಾಸದಿಂದ, ಉಪಸರ್ಗಃ - ಮಹದುಪದ್ರವವು, ವಾಸವೋಪಮಂ - ದೇವೇಂದ್ರನಿಗೆ ಸಮಾನನಾದ, ತಂ - ಆ ದಶರಥರಾಯನನ್ನು, ಆಸುರಂ - ದೈತ್ಯಸಂಬಂಧವಾದ, ತಮಃ - ರಾಹುವು, ಸೂರ್ಯಮಿವ - ಸೂರ್ಯನನ್ನಂತೆ, ಆವಿವೇಶ - ಪ್ರವೇಶಿಸಿತು. || ೨ || ಕೋಸಲೇಶ್ವರಃ - ಕೋಸಲಾಧಿಪತಿಯಾದ ದಶರಥನು, ಸಭಾರ್ಯೇ - ಹೆಂಡತಿಯಿಂದೊಡಗೂಡಿದ, ರಾಮೇ - ಶ್ರೀರಾಮನು, ನಿರ್ಗತೇ-ಹೊರಟುಹೋಗಲು, ಅಸಿತಾಪಾಂಗಾಂ-ಕಪ್ಪಾಗಿರುವ ಕಟಾಕ್ಷವೀಕ್ಷಣಗಳುಳ್ಳ, ಕೌಸಲ್ಯಾಂ-ಕೌಸಲ್ಯಾದೇವಿಯನ್ನು ಕುರಿತು, ಆತ್ಮನಃ - ತನ್ನ, ದುಷ್ಕೃತಂ - ದುಷ್ಕಾರ್ಯವನ್ನು, ಸ್ಮೃತ್ವಾ - ಜ್ಞಾಪಿಸಿಕೊಂಡು, ವಿವಕ್ಷುಃ - ಹೇಳಲಿಚ್ಛೆಯುಳ್ಳವನು, ಅಭವತ್ - ಆದನು. || ೩ || ಸದಶರಥೋರಾಜಾ - ಆ ದಶರಥರಾಜನು, ರಾಮೇ - ಶ್ರೀರಾಮನು, ವನಂ - ವನವನ್ನು ಕುರಿತು, ಪ್ರವ್ರಾಜಿತೇ - ಕಳುಹಿದವನಾಗಲು, ಷಷ್ಠೀಂ ರಜನೀಂ - ಆರನೆಯ ರಾತ್ರಿಯಲ್ಲಿ, ಅರ್ಧರಾತ್ರೇ - ಅರ್ಧರಾತ್ರಿಯ ಕಾಲದಲ್ಲಿ, ಕೃತಂ - ಮಾಡಲ್ಪಟ್ಟ,

---

ಆ ಬಳಿಕಲಾ ದಶರಥರಾಯನು ಕ್ಷಣಮಾತ್ರದಲ್ಲಿಯೇ ಎಚ್ಚರಗೊಂಡವನಾಗಿ, ಅಧಿಕವಾದ ದುಃಖದಿಂದ ವಿಚಾರಪರನಾದನು. ಆಗಲಾ ರಾಯನು ಸೀತಾರಾಮಲಕ್ಷ್ಮಣರನ್ನು ಅರಣ್ಯಕ್ಕೆ ಕಳುಹಿದುದರಿಂದ, ರಾಹುಗ್ರಸ್ತನಾದ ಸೂರ್ಯನಂತೆ ಮಹೋಪದ್ರವವನ್ನು ಹೊಂದಿದನು. ಅಲ್ಲದೆ ಶ್ರೀರಾಮನು ಅರಣ್ಯಕ್ಕೆ ತೆರಳಿದ ಬಳಿಕ ಕೋಸಲದೇಶಾಧೀಶ್ವರನಾದ ಆ ದಶರಥನು ತಾನು ಹಿಂದೆ ಮಾಡಿದ ಪಾಪವನ್ನು ಸ್ಮರಿಸಿಕೊಂಡು ಕಪ್ಪಾಗಿರುವ ಕಟಾಕ್ಷವೀಕ್ಷಣವುಳ್ಳ ಕೌಸಲ್ಯಾದೇವಿಯನ್ನು ಕುರಿತು, ಆ ವೃತ್ತಾಂತವನ್ನು ಹೇಳತೊಡಗಿದನು. ಹೀಗೆ ಶ್ರೀರಾಮನು ಅರಣ್ಯಕ್ಕೆ ತೆರಳಿದ ಮೇಲೆ ಆರನೆಯ ರಾತ್ರಿಯಲ್ಲಿ ಆ ರಾಯನು ತಾನು ಮಾಡಿದ ಪಾಪವನ್ನು ಸ್ಮರಿಸಿಕೊಂಡನು. ಪುತ್ರಶೋಕಾರ್ತನಾದ ದಶರಥರಾಜನು

ದುಷ್ಕೃತಂ ಕೃತಂ ॥ ೪ ॥ ಸ ರಾಜಾ ಪುತ್ರಶೋಕಾರ್ತಃ ಸ್ಮೃತ್ವಾ ದುಷ್ಕೃತಮಾತ್ಮನಃ ॥ ಕೌಸಲ್ಯಾಂ ಪುತ್ರಶೋಕಾರ್ತಾಮಿದಂ ವಚನಮಬ್ರವೀತ್ ॥೫॥ ಯದಾ ಚರತಿ ಕಲ್ಯಾಣಿ! ಶುಭಂವಾ ಯದಿವಾಶುಭಂ ॥ ತದೇವ ಲಭತೇ ಭದ್ರೇ! ಕರ್ತಾ ಕರ್ಮಜಮಾತ್ಮನಃ ॥ ೬ ॥ ಗುರುಲಾಘವಮರ್ಥಾನಾಮಾರಂಭೇ ಕರ್ಮಣಾಂ ಫಲಂ ॥ ದೋಷಂವಾ ಯೋ ನಜಾನಾತಿ ಸಬಾಲಇತಿ ಹೋಚ್ಯತೇ ॥ ೭ ॥ ಕಶ್ಚಿದಾಮ್ರವಣಂ ಛಿತ್ವಾ ಪಲಾಶಾಂಶ್ಚ ನಿಷಿಂಚತಿ ॥ ಪುಷ್ಪಂ ದೃಷ್ಟ್ವಾ

ದುಷ್ಕೃತಂ - ಪಾಪಕೃತ್ಯವನ್ನು, ಸಂಸ್ಮರ್ರ - ಜ್ಞಾಪಿಸಿಕೊಂಡನು. ॥ ೪ ॥ ಸರಾಜಾ - ಆ ದಶರಥ ರಾಯನು, ಪುತ್ರಶೋಕಾರ್ತಃ - ಪುತ್ರವ್ಯಸನ ಪೀಡಿತನಾಗಿ, ಆತ್ಮನಃ - ತನ್ನ, ದುಷ್ಕೃತಂ - ಪಾಪವನ್ನು, ಸ್ಮೃತ್ವಾ - ಸ್ಮರಿಸಿಕೊಂಡು, ಪುತ್ರಶೋಕಾರ್ತಾಂ - ಪುತ್ರವಿರಹದಿಂದ ದುಃಖಿತಳಾದ, ಕೌಸಲ್ಯಾಂ - ಕೌಸಲ್ಯಾದೇವಿಯನ್ನು ಕುರಿತು, ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೫ ॥ ಹೇ ಕಲ್ಯಾಣಿ - ಎಲೌ ಶುಭಕರಳೇ, ಶುಭಂವಾ - ಶುಭವನ್ನೇ ಆಗಲಿ, ಯದಿವಾ - ಹಾಗಿಲ್ಲದಿದ್ದರೆ, ಅಶುಭಂವಾ - ಅಶುಭವನ್ನಾಗಲ್ಲೀ, ಯತ್ - ಯಾವದನ್ನು, ಆಚರತಿ - ಮಾಡುತ್ತಾನೆಯೋ, ಕರ್ತಾ - ಆ ಕರ್ಮವನ್ನುಮಾಡಿದ ಪುರುಷನು, ಹೇ ಭದ್ರೇ - ಎಲೌ ಶುಭಕರಳೇ, ಆತ್ಮನಃ - ತನ್ನ, ಕರ್ಮಜಂ - ಕರ್ಮಜನ್ಯವಾದ, ತದೇವ - ಅದೇ ಫಲವನ್ನೇ, ಲಭತೇ - ಹೊಂದುತ್ತಾನೆ. ॥ ೬ ॥ ಕರ್ಮಣಾಂ - ಕರ್ಮಗಳ, ಆರಂಭೇ - ಪ್ರಾರಂಭಕಾಲದಲ್ಲಿ, ಅರ್ಥಾನಾಂ - ಫಲಗಳ, ಗುರುಲಾಘವಂ - ಹೆಚ್ಚುಕಡಿಮೆಗಳನ್ನೂ, ಫಲಂ - ಸುಖವನ್ನೂ, ದೋಷಂವಾ - ದೋಷವನ್ನೂ, ಯಃ - ಯಾವ ಪುರುಷನು, ನಜಾನಾತಿ - ತಿಳಿಯುವುದಿಲ್ಲವೋ, ಸಃ - ಆ ಪುರುಷನು, ಬಾಲಇತಿ - ಮೂರ್ಖನೆಂದು, ಉಚ್ಯತೇ - ಹೇಳಲ್ಪಡುವನು, ಹಾ - ಕಷ್ಟವು. ॥ ೭ ॥ ಕಶ್ಚಿತ್ - ಒಬ್ಬಾನೊಬ್ಬ ಪುರುಷನು, ಆಮ್ರವಣಂ - ಮಾವಿನ ತೋಟವನ್ನು, ಛಿತ್ವಾ - ಛೇದಿಸಿ, ಫಲೇ - ಫಲದಲ್ಲಿ, ಗೃಧ್ನುಃ - ಆಸೆಯುಳ್ಳವನಾಗಿ, ಪಲಾಶಾಂಶ್ಚ - ಮುತ್ತುಗದ ಗಿಡಗಳನ್ನು, ನಿಷಿಂಚತಿ - ನೀರು ಹಾಕಿ ಬೆಳೆಯಿಸುತ್ತಾನೆಯೋ, ಸಃ - ಆ ಪುರುಷನು, ಪುಷ್ಪಂ - ಹೂವುಗಳನ್ನು, ದೃಷ್ಟ್ವಾ-ಕಂಡು,

---

ತನ್ನ ಪಾಪಕರ್ಮವನ್ನು ಜ್ಞಾಪಿಸಿಕೊಂಡು, ಪುತ್ರಶೋಕಪೀಡಿತಳಾಗಿಯೇ ಇದ್ದ ಕೌಸಲ್ಯಾದೇವಿಯೊಡನೆ ಈ ರೀತಿ ಹೇಳಿದನು.॥೧-೫॥"ಮಂಗಳಸ್ವರೂಪಿಣಿಯಾದ ಕೌಸಲ್ಯಾದೇವಿಯೆ! ಲೋಕದಲ್ಲಿ ಮಾನವನು ಎಂತಹ ಪಾಪಕಾರ್ಯವನ್ನು ಮಾಡುವನೋ, ಅಂತಹ ಕಾರ್ಯಕ್ಕೆ ತಕ್ಕ ಫಲವನ್ನೇ ಹೊಂದುತ್ತಾನೆ. ಎಂತಹ ಪುಣ್ಯಕರ್ಮವನ್ನು ಮಾಡುವನೋ, ಅಂತಹ ಕಾರ್ಯಕ್ಕೆ ತಕ್ಕ ಪುಣ್ಯವನ್ನೇ ಪಡೆಯುತ್ತಾನೆಂಬುದು ನಿಶ್ಚಯವು. ಲೋಕದಲ್ಲಿ ಯಾವನು, ಕಾರ್ಯಗಳನ್ನು ಪ್ರಾರಂಭಿಸುವುದಕ್ಕೆ ಮೊದಲು, ಆ ಕಾರ್ಯಗಳ ಹೆಚ್ಚುಕಡಿಮೆಗಳನ್ನೂ, ಗುಣದೋಷಗಳನ್ನೂ ವಿಚಾರ ಮಾಡುವುದಿಲ್ಲವೋ, ಅಂತಹನು ಪಂಡಿತರಿಂದ ಮೂಢನೆಂದು ಕರೆಯಲ್ಪಡುತ್ತಾನೆ.॥೬-೭॥ಲೋಕದಲ್ಲಿ ಯಾರು, ಬಹು ದೊಡ್ಡದಾಗಿಯೂ, ಮನೋಹರವಾಗಿಯೂ ಇರುವ ಮುತ್ತುಗದ ಹೂಗಳನ್ನು ನೋಡಿ ಈ ಹೂಗಳಿಗೆ ತಕ್ಕಂತೆಯೇ ಈ ವೃಕ್ಷದಲ್ಲಿ ಫಲಗಳಾಗುತ್ತವೆಯೆಂದೆಣಿಸಿ, ಸಣ್ಣ ಸಣ್ಣ ಹೂಗಳುಳ್ಳ ಮಾವಿನಗಿಡದಲ್ಲಿ ಚಿಕ್ಕ ಚಿಕ್ಕ ಫಲಗಳೇ

ಫಲೇ ಗೃಧ್ನು ಸ್ಸ ಶೋಚತಿ ಫಲಾಗಮೇ ॥೮॥ ಅವಿಜ್ಞಾಯ ಫಲಂ ಯೋಹಿ ಕರ್ಮತ್ವೇ ವಾ ನುಧಾವತಿ ॥ ಸಶೋಚೇ ತ್ಫಲವೇಳಾಯಾಂ ಯಥಾ ಕಿಂಶುಕ ಸೇಚಕಃ ॥ ೯ ॥ ಸೋಹಮಾಮ್ರವಣಂ ಛಿತ್ವಾ ಪಲಾಶಾಂಶ್ಚ ನ್ಯಷೇಚಯಂ ॥ ರಾಮಂ ಫಲಾಗಮೇ ತ್ಯಕ್ತ್ವಾ ಪಶ್ಚಾ ಚ್ಛೋಚಾಮಿ ದುರ್ಮತಿಃ ॥ ೧೦ ॥ ಲಬ್ಧ ಶಬ್ದೇನ ಕೌಸಲ್ಯೇ ! ಕುಮಾರೇಣ ಧನುಷ್ಮತಾ ॥ ಕುಮಾರ ಶ್ಶಬ್ದವೇಧೀತಿ ಮಯಾ ಪಾಪಮಿದಂ ಕೃತಂ ॥೧೧॥ ತದಿದಂ ಮೇ ನುಸಂಪ್ರಾಪ್ತಂ ದೇವಿ !

ಫಲಾಗಮೇ - ಫಲಪ್ರಾಪ್ತಿಕಾಲದಲ್ಲಿ, ಶೋಚತಿ - ದುಃಖಿಸುತ್ತಾನೆ. ॥ ೮ ॥ ಯೋಹೀ - ಯಾವ ಪುರುಷನಾದರೆ, ಫಲಂ - ಫಲವನ್ನು, ಅವಿಜ್ಞಾಯ - ತಿಳಿಯದೆ, ಕರ್ಮತ್ವೇವ - ಕರ್ಮವನ್ನೇ, ಅನುಧಾವತಿ - ಅನುಷ್ಠಾನಮಾಡುತ್ತಾನೆಯೋ, ಸಃ - ಆ ಕರ್ಮಾನುಷ್ಠಾನಮಾಡುವವನು, ಫಲ ವೇಳಾಯಾಂ - ಫಲಕಾಲವಲ್ಲಿ, ಕಿಂಶುಕಸೇಚಕೋಯಥಾ - ಮುತ್ತುಗದ ಗಿಡವನ್ನು ನೀರಿನಿಂದ ಬೆಳೆಯಿಸಿದವನಂತೆ, ಶೋಚೇತ್ - ಶೋಕಿಸಿಯಾನು. ॥ ೯ ॥ ಸೋಹಂ - ಅಂತಹ ನಾನು, ಆಮ್ರವಣಂ - ಮಾವಿನವನವನ್ನು, ಛಿತ್ವಾ - ಛೇದಿಸಿ, ಪಲಾಶಾಂಶ್ಚ - ಮುತ್ತುಗದ ಗಿಡಗಳನ್ನು, ನಷೇಚಯಂ - ಬೆಳಸದೆ, ರಾಮಂ - ಶ್ರೀರಾಮನನ್ನು, ಫಲಾಗಮೇ-ಫಲಪ್ರಾಪ್ತಿಕಾಲದಲ್ಲಿ, ತ್ಯಕ್ತ್ವಾ-ಬಿಟ್ಟು, ಪಶ್ಚಾತ್ - ಆಮೇಲೆ, ದುರ್ಮತಿಃ - ದುರ್ಬುದ್ಧಿಯುಳ್ಳವನಾಗಿ, ಶೋಚಾಮಿ - ದುಃಖಿಸುತ್ತೇನೆ. ॥ ೧೦ ॥ ಹೇ ಕೌಸಲ್ಯೇ - ಎಲೌ ಕೌಸಲ್ಯಾದೇವಿಯೆ, ಕುಮಾರಃ - ಕುವರನು, ಶಬ್ದವೇಧೀತಿ - ಶಬ್ದವೇಧನ ವಿದ್ಯಾವಂತನೂ ಎಂದೂ, ಲಬ್ಧಶಬ್ದೇನ, ಲಬ್ದ - ಹೊಂದಿದ, ಶಬ್ದೇನ - ಪ್ರಸಿದ್ಧವುಳ್ಳ, ಧನುಷ್ಮತಾ - ಧನುರ್ಧಾರಿಯಾದ, ಕುಮಾರೇಣ - ಬಾಲಕನಾದ, ಮಯಾ - ನನ್ನಿಂದ, ಇದಂಪಾಪಂ - ಈ ಪಾಪವು, ಕೃತಂ - ಮಡಲ್ಪಟ್ಟಿತು. ॥ ೧೧ ॥ ಹೇ ದೇವಿ - ಎಲೌ ದೇವಿಯೇ, ತದಿದಂ - ಆ ಈ, ಸ್ವಯಂಕೃತಂ - ನನ್ನಿಂದಮಾಡಲ್ಪಟ್ಟ, ದುಃಖಂ-ದುಃಖವು, ಮೇ - ನನಗೆ, ಸಮ್ಮೋಹಾತ್ - ಅಜ್ಞಾನದಿಂದ, ಇಹ - ಈ ಲೋಕದಲ್ಲಿ, ಬಾಲ್ಯೇನ - ಬಾಲ್ಯದಿಂದ,

---

ಬಿಡುತ್ತವೆಯೆಂದು ಆ ಮಾವಿನಗಿಡವನ್ನು ಕತ್ತರಿಸಿಹಾಕಿ, ಮುತ್ತುಗದ ಗಿಡಕ್ಕೆ ನೀರೆರೆದು ದೊಡ್ಡದು ಮಾಡಿ ಕೊನೆಗೆ ಅದರಲ್ಲಿ ಫಲಗಳನ್ನು ಹೊಂದದೆ ವ್ಯಸನವನ್ನು ಹೊಂದುತ್ತಾನೆಯಲ್ಲವೆ? ಫಲವನ್ನು ತಿಳಿಯದೆ ಕರ್ಮವನ್ನೇ ಅನುಷ್ಠಿಸುವವನು, ಆ ಕರ್ಮಾನುಷ್ಠಾನಕ್ಕೆ ತಕ್ಕಂತಹ ಫಲ ಕಾಲದಲ್ಲಿ ಮುತ್ತುಗದ ಗಿಡಕ್ಕೆ ನೀರು ಹಾಕಿ ಬೆಳಿಸಿ ಫಲ ಕಾಣದೆ ನರಳುವವನಂತೆ ದುಃಖಿಸುತ್ತಾನೆ. ಅಂತೆಯೇ ನಾನೂ ಸಹ ಮಾವಿನಮರವನ್ನು ಛೇದಿಸಿ ಮುತ್ತುಗದ ಗಿಡಕ್ಕೆ ನೀರೆರೆದವನಾದೆ! ಫಲಕಾಲದಲ್ಲಿ ಶ್ರೀರಾಮಮೂರ್ತಿಯನ್ನು ತೊರೆದು ಆಮೇಲೆ ದುಃಖಿಸುತ್ತಿದ್ದೇನೆಯಲ್ಲವೆ? ಎಲೌ ಕೌಸಲ್ಯಾದೇವಿಯೆ! ಈ ಲೋಕದಲ್ಲಿ ನಾನು ಚಿಕ್ಕವನಾಗಿದ್ದಾಗ “ಶಬ್ದವನ್ನರಿತು ಗುರಿಯಿಡುವವನು” ಎಂದು ಖ್ಯಾತಿಗೊಂಡಿದ್ದೆನು. ಧನುರ್ಧಾರಿಗಳಲ್ಲಿ ಮಹಾ ಶ್ರೇಷ್ಠನೂ ಆಗಿದ್ದೆನು. ಅಂತಹ ನಾನು ಆ ಬಾಲ್ಯದಲ್ಲಿಯೇ ಒಂದು ಪಾಪಕಾರ್ಯವನ್ನು ಮಾಡಿದೆನು. ॥ ೮-೧೧ ॥ ಇಷ್ಟೆಯಲ್ಲದೆ ಎಲೌ ದೇವಿಯೆ! ಈ ಲೋಕದಲ್ಲಿ ಹುಡುಗನು ಅಜ್ಞಾನದಿಂದ ವಿಷವನ್ನೂ ಭಕ್ಷಣ ಮಾಡುವಂತೆ, ನಾನೂ

ದುಃಖಂ ಸ್ವಯಂ ಕೃತಂ ॥ ಸಮ್ಮೋಹಾದಿಹ ಬಾಲ್ಯೇನ ಯಥಾ ಸ್ಯಾದ್ಭಕ್ಷಿತಂ ವಿಷಂ ॥ ೧೨ ॥ ಯಥಾನ್ಯಃ ಪುರುಷಃ ಕಶ್ಚಿ ತ್ಪಲಾಶೈ ರ್ಮೋಹಿತೋ ಭವೇತ್॥ ಏವಂ ಮಯಾಪ್ಯವಿಜ್ಞಾತಂ ಶಬ್ದವೇಧ್ಯಮಯಂ ಫಲಂ ॥ ೧೩ ॥ ದೇವ್ಯನೂಢಾ ತ್ವಮಭವೋ ಯುವರಾಜೋ ಭವಾಮ್ಯಹಂ ॥ ತತಃ ಪ್ರಾವೃಡನುಪ್ರಾಪ್ತಾ ಮದಕಾಮ ವಿವರ್ಧಿನೀ ॥ ೧೪ ॥ ಉಪಾಸ್ಯಹಿ ರಸಾ‌ರ್ ಭೌಮಾಂಸ್ತಪ್ತ್ವಾ ಚ ಜಗದಂಶುಭಿಃ ॥ ಪರೇತಾಚರಿತಾಂ ಭೀಮಾಂ ರವಿರಾವಿಶತೇ ದಿಶಂ ॥ ೧೫ ॥ ಉಷ್ಣಮಂತರ್ದಧೇ ಸದ್ಯಃ ಸ್ನಿಗ್ಧಾ ದದೃಶಿರೇ ಘನಾಃ ॥ ತತೋ

ಯಥಾ - ಹೇಗೆ, ವಿಷಂ - ವಿಷವು, ಭಕ್ಷಣಂ - ಭಕ್ಷಣೆಮಾಡಿದುದು, ಸ್ಯಾತ್ - ಆಗುವುದೋ, ತಥಾ - ಹಾಗೆಯೇ, ಅನುಸಂಪ್ರಾಪ್ತಂ - ಅನುಸರಿಸಿ ಬಂದಿತು. ॥ ೧೨ ॥ ಯಥಾ - ಹೇಗೆ, ಅನ್ಯಃ - ಮತ್ತೊಬ್ಬನಾದ, ಕಶ್ಚಿತ್ಪುರುಷಃ - ಒಬ್ಬಾನೊಬ್ಬ ಪುರುಷನು, ಪಲಾಶೈಃ - ಮುತ್ತುಗದ ಹೂಗಳಿಂದ, ಮೋಹಿತಃ - ಭ್ರಾಂತನು, ಭವೇತ್ - ಆಗುವನೊ, ಏವಂ - ಈಪರಿಯಾಗಿ, ಮಯಾ - ನನ್ನಿಂದ, ಶಬ್ದವೇಧ್ಯಮಯಂ - ಶಬ್ದವೇ ಲಕ್ಷ್ಯವಾದ ವಿದ್ಯೆಯು ಹೇತುವಾಗುಳ್ಳ, ಫಲಂ - ಪಾಪ ಫಲವು, ಅವಿಜ್ಞಾತಂ - ತಿಳಿಯಲ್ಪಡಲಿಲ್ಲ. ॥ ೧೩ ॥ ಹೇ ದೇವಿ - ಎಲೌ ದೇವಿಯೇ, ತ್ವಂ - ನೀನು, ಅನೂಢಾ - ಅವಿವಾಹಿತಳು, ಅಭವಃ - ಆಗಿದ್ದೆ, ಅಹಂ - ನಾನು, ಯುವರಾಜಃ - ಎರಡನೆಯ ದೊರೆಯಾಗಿ, ಭವಾಮಿ - ಆಗಿದ್ದೆನು, ತತಃ - ಬಳಿಕ, ಮದಕಾಮವರ್ಧಿನೀ - ಮದವನ್ನೂ ಕಾಮವನ್ನೂ ವೃದ್ಧಿಗೊಳಿಸುತ್ತಿರುವ, ಪ್ರಾವೃಟ್ - ವರ್ಷಕಾಲವು, ಅನುಪ್ರಾಪ್ತಃ - ಬಂದಿತು. ॥ ೧೪ ॥ ರವಿಃ - ಸೂರ್ಯನು, ಭೌಮಾ‌ರ್ - ಭೂಮಿಯಲ್ಲಿ ಹುಟ್ಟಿದ, ರಸಾ‌ರ್ - ರಸಗಳನ್ನು, ಅಂಶುಭಿಃ - ಕಿರಣಗಳಿಂದ, ಉಪಾಸ್ಯ - ಹೀರಿ, ಜಗತ್-ಲೋಕವನ್ನು, ತಪ್ತ್ವಾ ಚ - ಬಣಗಿದ್ದುದನ್ನಾಗಿಮಾಡಿ, ಪರೇತಾಚರಿತಾಂ, ಪರೇತ - ಯಮನಿಂದ, ಆಚರಿತಾಂ-ಸಂಚರಿಸಲ್ಪಟ್ಟ, ಭೀಮಾಂ- ಭಯಂಕರವಾದ, ದಿಶಂ - ದಿಕ್ಕನ್ನು, ಆವಿಶತೇ - ಪ್ರವೇಶಿಸಿದನು. ॥ ೧೫ ॥ ಸದ್ಯಃ - ಆಗಲೇ,

---

ಸಹ ಅವಿವೇಕದಿಂದ ಇಂತಹ ದುಃಖವನ್ನುಂಟುಮಾಡುವ ಪಾಪವನ್ನು ಮಾಡಿದೆನು. ಮಾತ್ರವಲ್ಲದೆ ಲೋಕದಲ್ಲಿ ಅಜ್ಞಾನಿಯಾದವನು ಪುಷ್ಪಗಳು ಒಳ್ಳೆಯದಾಗಿರುವುದರಿಂದ, ಫಲಗಳೂ ಒಳ್ಳೆಯದೇ ಆಗಿರುವುದೆಂದು ತಿಳಿಯುವ ಹಾಗೆ, ನಾನೂ ಸಹ ಭ್ರಾಂತನಾಗಿ ಮೃಗವೆಂದರಿತು, ಗುರಿಯಿಟ್ಟು ಬಾಣವನ್ನು ಹೊಡೆದು ಮುನಿ ಪುತ್ರನನ್ನು ಕೊಂದು ಆ ಪಾಪಕ್ಕೆ ತಕ್ಕುದಾದ ಫಲವನ್ನು ಲೋಕಪ್ರಸಿದ್ಧವಾಗುವಂತೆ ಅನುಭವಿಸುತ್ತಿದ್ದೇನೆ! ಮೊಟ್ಟಮೊದಲು ಒಳ್ಳೆಯ ಫಲಗಳೇ ಉಂಟಾಗುವುವೆಂದು ತಿಳಿದು, ದುಷ್ಕಾರ್ಯಗಳನ್ನು ಮಾಡಿದುದರಿಂದ ಇಂತಹ ಫಲವನ್ನು ಅನುಭವಿಸುತ್ತಿರುವೆನು! ದೇವಿ! ನಾನು ಬಾಲ್ಯದಲ್ಲಿ ಆ ಕ್ರೂರ ಕಾರ್ಯವನ್ನು ಮಾಡಿದಾಗ, ನಿನ್ನನ್ನು ಮದುವೆಯಾಗಿರಲಿಲ್ಲ. ಆಗ ನಮ್ಮ ಪೂಜ್ಯಪಾದರು ಜೀವಿಸಿದ್ದರು; ನಾನು ಯುವರಾಜ ಪದವಿಯಲ್ಲಿ ಅಭಿಷಿಕ್ತನಾಗಿದ್ದೆನು. ಅಂತಹ ಕಾಲದಲ್ಲಿ, ಕಾಮವನ್ನೂ, ಮದವನ್ನೂ ವೃದ್ಧಿ ಹೊಂದಿಸುವಂತಹ ವರ್ಷಾಕಾಲವು ಬಂದಿತು. ಸೂರ್ಯನು ತನ್ನ ಕಿರಣಗಳಿಂದ ಭೂಮಿಯಲ್ಲಿರುವ ಜಲವನ್ನು ಗ್ರಹಿಸಿ, ಭೂಮಿಯನ್ನು

ಜಹೃಷಿರೇ ಸರ್ವೇ ಭೇಕಸಾರಂಗ ಬರ್ಹಿಣಃ ॥ ೧೬ ॥ ಕ್ಲಿನ್ನ ಪಕ್ಷೋತ್ತರಾ ಸ್ನಾತಾಃ ಕೃಛ್ರಾದಿವ ಪತತ್ರಿಣಃ ॥ ವೃಷ್ಟಿವಾತಾವಧೂತಾಗ್ರಾ ಪಾದಪಾನ ಭಿಪೇದಿರೇ ॥ ೧೭ ॥ ಪತಿತೇನಾಂಭಸಾಚ್ಛನ್ನಃ ಪತಮಾನೇನ ಚಾಸಕೃತ್ ॥ ಆಬಭೌಮತ್ತಸಾರಂಗ ಸ್ತೋಯರಾಶಿ ರಿವಾಚಲಃ ॥ ೧೮ ॥ ಪಾಂಡುರಾರುಣ ವರ್ಣಾನಿ ಸ್ರೋತಾಂಸಿ ವಿಮಲಾನ್ಯಪಿ ॥ ಸುಸ್ರುವು ರ್ಗಿರಿಧಾತುಭ್ಯ ಸ್ಸಭಸ್ಮಾನಿ ಭುಜಂಗವತ್ ॥ ೧೯ ॥ ಆಕುಲಾರುಣ ತೋಯಾನಿ ಸ್ರೋತಾಂಸಿ ವಿಮಲಾ

ಉಷ್ಣಂ - ಗ್ರೀಷ್ಮತಾಪವು, ಅಂತರ್ದಧೇ - ಅಂತರ್ಧಾನವನ್ನು ಹೊಂದಿತು, ಸ್ನಿಗ್ಧಾಃ - ಮನೋಹರಗಳಾದ, ಘನಾಃ - ಮೇಘಗಳು, ದದೃಶಿರೇ - ಕಾಣಿಸಿದುವು, ತತಃ - ಬಳಿಕ, ಸರ್ವೇ - ಸಮಸ್ತಗಳಾದ, ಭೇಕಸಾರಂಗಬರ್ಹಿಣಃ-ಕಪ್ಪೆಗಳೂ, ಚಾತಕಪಕ್ಷಿಗಳೂ, ನವಿಲುಗಳೂ, ಜಹರ್ಷಿರೇ-ಸಂತೋಷಗೊಂಡವು. ॥ ೧೬ ॥ ಪತತ್ರಿಣಃ - ಪಕ್ಷಿಗಳು, ಕ್ಲಿನ್ನಪಕ್ಷೋತ್ತರಾಃ, ಕಿನ್ನ - ನೆಂದುಹೋದ, ಪಕ್ಷ - ರೆಕ್ಕೆಗಳ, ಉತ್ತರಾಃ - ಉಪರಿಭಾಗಗಳುಳ್ಳವಳಾಗಿ, ಸ್ನಾನಾ ಇವ - ಸ್ನಾನಮಾಡಿದವುಗಳಂತೆ, ಕೃಚ್ಛ್ರಾತ್-ಕಷ್ಟದಿಂದ, ವೃಷ್ಟಿವಾತಾವಧೂತಾಗ್ರಾ - ಮಳೆಗಳಿಂದಲೂ ಗಾಳಿಯಿಂದಲೂ ಕೊಡಹಲ್ಪಟ್ಟ ಕೊನೆಗಳುಳ್ಳ, ಪಾದಪಾ - ಗಿಡಗಳನ್ನು, ಅಭಿಪೇದಿರೆ - ಹೊಂದಿದವು. ॥ ೧೭ ॥ ಪತಿತೇನ - ಬಿದ್ದಿರುವ, ಅಸಕೃತ್ - ಬಾರಿಬಾರಿಗೂ, ಪತಮಾನೇನ - ಬೀಳುತ್ತಿರುವ, ಅಂಭಸಾ - ಉದಕದಿಂದ, ಚ್ಛನ್ನಃ - ಆಚ್ಛಾದಿತವಾದ, ಮತ್ತಸಾರಂಗಃ, ಮತ್ತ - ಮದವೇರಿದ, ಸಾರಂಗಃ - ಆನೆಗಳುಳ್ಳ, ಅಚಲಃ - ಕದಲದಿರುವ, ತೋಯಂರಾಶಿರಿವ - ಕಡಲಿನಂತೆ, ಆಬಭೌ - ಹೊಳೆಯುತಿದ್ದಿತು. ॥ ೧೮ ॥ ವಿಮಲಾನ್ಯಪಿ - ನಿರ್ಮಲಗಳಾದರೂ, ಸ್ರೋತಾಂಸಿ - ಪ್ರವಾಹಗಳು, ಗಿರಿಧಾತುಭ್ಯಃ, ಗಿರಿ - ಬೆಟ್ಟಗಳ, ಧಾತುಭ್ಯಃ ಧಾತುಗಳಿಂದ, ಪಾಂಡುರಾರುಣವರ್ಣಾನಿ, ಪಾಂಡುರ-ಬೆಳ್ಳಗಿರುವ, ಅರುಣ - ಕೆಂಪಗಿರುವ, ವರ್ಣಾನಿ - ಬಣ್ಣಗಳುಳ್ಳ, ಸಭಸ್ಮಾನಿ - ಭಸ್ಮಗಳಿಂದೊಡಗೂಡಿದವುಗಳಾಗಿ, ಭುಜಂಗವತ್ - ಸರ್ಪಗಳಂತೆ, ಸತ್ಸ್ರುವುಃ - ಹರಿದುವು. ॥೧೯॥ ಸ್ರೋತಾಂಸಿ-

ತಪಿಸುವಂತೆ ಮಾಡಿ ಪ್ರೇತಪತಿಯಾದ ಯಮನ ದಿಕ್ಕನ್ನು ಹೊಂದಿದನು. ॥ ೧೩-೧೫ ॥ ಅಷ್ಟರಲ್ಲಿ ಆತನ ಉಷ್ಣವು ನಶಿಸಿತು. ಆಗ ಶೀತಮೇಘಗಳುದಯಿಸಿದುವು. ಆ ಸಮಯದಲ್ಲಿ ಕಪ್ಪೆಗಳೂ, ಚಾತಕಪಕ್ಷಿಗಳೂ, ನವಿಲುಗಳೂ ಮಹದಾನಂದಭರಿತವಾದುವು. ಆ ಸಮಯದಲ್ಲಿ ಪಕ್ಷಿಗಳೆಲ್ಲವೂ ನೆಂದ ರೆಕ್ಕೆಗಳ ಮೇಲ್ಭಾಗಗಳುಳ್ಳವಾಗಿ ಸ್ನಾನ ಮಾಡಿದವುಗಳಂತಾದುವು. ಹೀಗೆ ನೆಂದ ರೆಕ್ಕೆಗಳುಳ್ಳ ಆ ಪಕ್ಷಿಗಳು ಮಳೆಯ ಗಾಳಿಯಿಂದ ಅಲುಗಾಡುತ್ತಿರುವ ರೆಂಬೆಗಳುಳ್ಳ ವೃಕ್ಷಗಳನ್ನೇರಿದುವುಗಳಾದುವು. ॥ ೧೬-೧೭ ॥ ಭೂಮಿಯ ಮೇಲೆ ಬಿದ್ದಿರುವುದೂ, ಬೀಳುತ್ತಿರುವುದೂ ಆಗಿ, ಉದಕವೇಗದಿಂದ ಆಚ್ಛಾದಿತವಾಗಿ ಅತ್ತಿತ್ತ ಕದಲದೆಯಿರುವ ಮದ್ದಾನೆಗಳು ಸಮುದ್ರದಂತೆ ಪ್ರಕಾಶಿಸಿದುವು. ॥ ೧೮ ॥ ಜಲಪ್ರವಾಹಗಳು ಸ್ವಾಭಾವಿಕವಾಗಿ ಶುಭ್ರವಾದುವಾದರೂ, ಗೈರಿಕಾದಿ ಧಾತುಗಳು ಮಿಶ್ರವಾಗುವುದರಿಂದ, ಒಂದುಕಡೆ ಬೆಳ್ಳಗೂ, ಇನ್ನೊಂದುಕಡೆ ಕೆಂಪಗೂ, ಭಸ್ಮದಿಂದೊಡಗೂಡಿ ಸರ್ಪದಂತೆ ವಕ್ರವಕ್ರವಾಗಿ ಪ್ರವಹಿಸುತ್ತಿದ್ದುವು. ನಿರ್ಮಲವಾದಾಪ್ರವಾಹಗಳು ಮಳೆ

ನ್ಯಪಿ ॥ ಉನ್ಮಾರ್ಗಜಲವಾಹೀನಿ ಬಭೂವುರ್ಜಲದಾಗಮೇ ॥ ೨೦ ॥ ತಸ್ಮಿನ್ನತಿ ಸುಖೇ ಕಾಲೇ ಧನುಷ್ಮಾನಿಷುಮಾನ್ ರಥೀ ॥ ವ್ಯಾಯಾಮ ಕೃತಸಂಕಲ್ಪಸ್ಸರಯೂಮನ್ವಗಾಂ ನದೀಂ ॥ ೨೧ ॥ ನಿಪಾನೇ ಮಹಿಷಂ ರಾತ್ರೌ ಗಜಂವಾಭ್ಯಾಗತಂ ನದೀಂ ॥ ಅನ್ಯಂವಾ ಶ್ವಾಪದಂ ಕಿಂಚಿ ಜ್ಜಿಘಾಂಸು ರಜಿತೇಂದ್ರಿಯಃ ॥೨೨॥ ತಸ್ಮಿಂಸ್ತತ್ರಾಹ ಮೇಕಾಂತೇ ರಾತ್ರೌ ವಿವೃತ ಕಾರ್ಮುಕಃ ॥ ತತ್ರಾಹಂ ಸಂವೃತಂ ವನ್ಯಂ ಹತವಾನ್ ತೀರಮಾಗತಂ ॥ ೨೩ ॥ ಅನ್ಯಂಚಾಪಿ ಮೃಗಂ

ಪ್ರವಾಹಗಳು, ಮಲ್ಯಾನಪಿ - ನಿರ್ಮಲಗಳಾದರೂ, ಜಲದಾಗಮೇ - ವರ್ಷಾಕಾಲದಲ್ಲಿ, ಆಕುಲಾರುಣತೋಯಾನಿ, ಆಕುಲ - ಕಲುಷಗಳಾದ, ಅರುಣ - ಕೆಂಪಾದ, ತೋಯಾನಿ - ಉದಕಗಳುಳ್ಳವುಗಳಾಗಿ, ಉನ್ಮಾರ್ಗಜಲವಾಹಿನೀ - ಮಾರ್ಗವನ್ನು ಅತಿಕ್ರಮಿಸಿದ ಜಲಪ್ರವಾಹಗಳುಳ್ಳವುಗಳು, ಬಭೂವುಃ - ಆದವು. ॥ ೨೦ ॥ ಅತಿಸುಖೇ-ಸುಖಾತಿಕ್ರಾಂತವಾದ, ತಸ್ಮಿನ್ಕಾಲೇ - ಆ ಕಾಲದಲ್ಲಿ, ಧನುಷ್ಮಾನ್ - ಧನುರ್ಧಾರಿಯಾಗಿಯೂ, ಇಷುಮಾನ್ - ಬಾಣಗಳುಳ್ಳವನಾಗಿಯೂ, ರಥೀ - ರಥಾರೂಢನಾಗಿಯೂ, ವ್ಯಾಯಾಮಕೃತಸಂಕಲ್ಪಃ-ವ್ಯಾಯಾಮ-ಬೇಟೆಯಾಡುವಿಕೆಯಲ್ಲಿ, ಕೃತ - ಮಾಡಲ್ಪಟ್ಟ, ಸಂಕಲ್ಪಃ - ಅಭಿಲಾಷೆಯುಳ್ಳವನಾಗಿ, ಸರಯೂಂನದೀಂ - ಸರಯೂನದಿಯನ್ನು, ಅನ್ವಗಾಂ-ಅನುಸರಿಸಿಹೋದೆನು. ॥ ೨೧ ॥ ರಾತ್ರೌ - ರಾತ್ರಿಯಲ್ಲಿ, ನಿಪಾನೇ - ಹ್ರದದಲ್ಲಿ, ಅಭ್ಯಾಗತಂ - ಬಂದ, ಮಹಿಷಂ - ಕಾಡೆಮ್ಮೆಯನ್ನು, ಗಜಂವಾ - ಆನೆಯನ್ನಾದರೂ, ನದೀಂ - ನದಿಯನ್ನು ಕುರಿತು, ಅಭ್ಯಾಗತಂ - ಬಂದಿರುವ, ಅನ್ಯಂ - ಮತ್ತೊಂದಾದ, ಶ್ವಾಪದಂವಾ - ನಾಯಿಯನ್ನಾದರೂ, ಕಂಚಿತ್ - ಯಾವ ಜಂತುವಿಶೇಷವನ್ನಾದರೂ, ಜಿಘಾಂಸುಃ - ಹೊಡಿಯಲಿಚ್ಛೆಯುಳ್ಳವನಾಗಿ, ಅಜಿತೇಂದ್ರಿಯಃ - ಜಿತೇಂದ್ರಿಯನಲ್ಲದಿರುವ ಕಾರಣ, ತತ್ರರಾತ್ರೌ - ಆ ರಾತ್ರಿಯಲ್ಲಿ, ತಸ್ಮಿನ್-ಆ ಸರಯೂತೀರದಲ್ಲಿ, ಅಹಂ - ನಾನು, ಏಕಾಂತೇ - ರಹಸ್ಯವಾಗಿ, ವಿವೃತಕಾರ್ಮುಕಃ, ವಿವೃತ - ವಿಸ್ತರಿಸಲ್ಪಟ್ಟ, ಕಾರ್ಮುಕಃ - ಧನಸ್ಸುಳ್ಳವನಾಗಿ, ತತ್ರ - ಅಲ್ಲಿ, ಅಹಂ - ನಾನು, ಸಂವೃತಂ - ಕಾಣದಿರುವ, ತೀರಂ - ದಡವನ್ನು ಕುರಿತು, ಆಗತಂ - ಬಂದಿರುವ, ವನ್ಯಂ - ವನದಲ್ಲಿಹುಟ್ಟಿದ ಮೃಗವನ್ನು, ಹತವಾನ್ - ಹೊಡದೆನು. ॥ ೨೨ - ಶಬ್ದಂ - ಧ್ವನಿಯನ್ನು, ಶ್ರುತ್ವಾ - ಕೇಳಿ, ಅಭ್ಯಪಾಗತಂ - ಬಂದಿರುವ, ಹಿಂಸ್ರಂ - ಘಾತುಕವಾದ, ಅನ್ಯಂ - ಮತ್ತೊಂದಾದ, ಮೃಗಂ -

---

ಬೀಳುವುದರಿಂದ ಕೆಸರಿನಿಂದೊಡಗೂಡಿ ಕೆಂಪಾದ ಭೂಮಿಗಳಲ್ಲಿಯೂ ಪ್ರವಹಿಸುತ್ತಿದ್ದುವು. ಹೀಗೆ ಸಕಲ ಪ್ರದೇಶಗಳೂ ಸುಖಕರವಾಗಿರುವ ಕಾಲದಲ್ಲಿ ನನಗೆ ಬೇಟೆಯಾಡಬೇಕೆಂಬ ಬಯಿಕೆಯುಂಟಾಯಿತು. ಆಗ ನಾನು ಧನುರ್ಬಾಣಗಳನ್ನು ಧರಿಸಿ, ರಥದಲ್ಲಿ ಕುಳಿತು, ಸರಯೂ ನದಿಯ ತೀರಕ್ಕೆ ಹೋದೆನು. ॥ ೧೯-೨೧ ॥ ಹೀಗೆ ಹೊರಟ ಜಿತೇಂದ್ರಿಯನಾದ ನಾನು, ನೀರು ಕುಡಿಯುವ ಪ್ರದೇಶದಲ್ಲಿ, ಆನೆಯಾಗಲಿ, ಕಾಡೆಮ್ಮೆಯಾಗಲಿ ಮತ್ತಾವುದಾದರೂ ಆಗಲಿ ಬಂದುದಾದರೆ ಹೊಡೆಯಬೇಕೆಂದು ಯೋಚಿಸಿದ್ದೆನು. ಇಂತಹ ಅಭಿಪ್ರಾಯವುಳ್ಳವನಾದ ನಾನು ಆ ರಾತ್ರಿಯಲ್ಲೆಲ್ಲಾ ಸರಯೂ ನದೀತೀರದಲ್ಲಿಯೇ ರಹಸ್ಯವಾಗಿ ಧನುಸ್ಸನ್ನು ಹೆದೆಯೇರಿಸಿಕೊಂಡು, ಬಹು ಜಾಗರೂಕನಾಗಿ ಹೊಂಚುಹಾಕು

ಹಿಂಸ್ರಂ ಶಬ್ದಂ ಶ್ರುತ್ವಾಭ್ಯುಪಾಗತಂ ॥ ಅಥಾಂಧಕಾರೇ ತ್ವಶ್ರೌಷಂ ಜಲೇ ಕುಂಭಸ್ಯ ಪೂರ್ಯತಃ ॥ ೨೪ ॥ ಅಚಕ್ಷುರ್ವಿಷಯೇ ಘೋಷಂ ವಾರಣಸ್ಯೇವ ನರ್ದತಃ ॥ ತತೋಽಹಂ ಶರಮುದ್ಧೃತ್ಯ ದೀಪ್ತ ಮಾಶೀವಿಷೋಪಮಂ ॥ ೨೫ ॥ ಶಬ್ದಂ ಪ್ರತಿಗಜಪ್ರೇಪ್ಸು ರಭಿಲಕ್ಷ್ಯತ್ವ ಪಾತಯಂ ॥ ಅಮುಂಚಂ ನಿಶಿತಂ ಬಾಣಮಹ ಮಾಶೀವಿಷೋಪಮಂ ॥ ೨೬ ॥ ತತ್ರವಾಗುಷಸಿ ವ್ಯಕ್ತಾ ಪ್ರಾದುರಾಸೀ ದ್ವನೌಕಸಃ ॥ ಹಾಹೇತಿ ಪತತ ಸ್ತೋಯೇ ಬಾಣಾಭಿಹತ ಮರ್ಮಣಃ ॥ ೨೭ ॥ ತಸ್ಮಿನ್ನಿಪತಿತೇ ಬಾಣೇ ವಾಗಭೂ ತ್ತತ್ರ ಮಾನುಷೀ ॥

ಮೃಗವನ್ನೂ ಕೂಡ, ಹತವಾ೯ - ಹೊಡದೆನು, ಅಥ - ಬಳಿಕ, ಅಂಧಕಾರೇ - ಕತ್ತಲಿನಲ್ಲಿ, ಜಲೇ - ನೀರಿನಲ್ಲಿ, ಪೂರ್ಯತಃ - ತುಂಬಿರುತ್ತಿರುವ, ಕುಂಭಸ್ಯ - ಕುಂಭದ, ಘೋಷಂ - ಶಬ್ದವನ್ನು, ಅಚಕ್ಷುರ್ವಿಷಯೇ - ಕಣ್ಣಿಗೆಕಾಣದಿರುವ ಸ್ಥಳದಲ್ಲಿ,, ನರ್ದತಃ - ಧ್ವನಿಮಾಡುತ್ತಿರುವ, ವಾರಣಸ್ಯ- ಆನೆಯ, ಘೋಷಮಿವ - ಶಬ್ದದಂತೆ, ಅಶ್ರೌಷಂ - ಕೇಳಿದೆನು. ॥ ೨೪ ॥ ತತಃ - ಬಳಿಕ, ಅಹಂ - ನಾನು, ಆಶೀವಿಷೋಪಮಂ - ಸರ್ಪಕ್ಕೆಸಮಾನವಾದ, ದೀಪ್ತಂ - ಹೊಳೆಯುತ್ತಿರುವ, ಶರಂ - ಬಾಣವನ್ನು, ಉದ್ಧೃತ್ಯ - ಎತ್ತಿ, ಶಬ್ದಂಪ್ರತಿ - ಶಬ್ದವನ್ನು ಕುರಿತು, ಗಜಪ್ರೇಪ್ಸುಃ - ಗಜವೆಂದು ಭ್ರಾಂತಿಯುಳ್ಳವನಾಗಿ, ಅಭಿಲಕ್ಷ್ಯ - ಲಕ್ಷ್ಯವನ್ನನುಸರಿಸಿ, ಅಪಾತಯಂ - ಬೀಳಿಸಿದೆನು, ಆಶೀವಿಷೋಪಮಂ - ಸರ್ಪಕ್ಕೆಸಮಾನವಾದ, ನಿಶಿತಂ - ತೀಕ್ಷ್ಣವಾದ, ಬಾಣಂ - ಬಾಣವನ್ನು, ಅಹಂ - ನಾನು, ಅಮುಂಚಂ - ಬಿಟ್ಟೆನು. ॥ ೨೬ ॥ ತತ್ರ - ಆ ಸರಯೂನದಿಯಲ್ಲಿ, ಬಾಣಾಭಿಹತಮರ್ಮಣಃ, ಬಾಣ - ಬಾಣದಿಂದ, ಅಭಿಹತ - ಹೊಡಿಯಲ್ಪಟ್ಟ, ಮರ್ಮಣಃ - ಮರ್ಮವುಳ್ಳ, ತೋಯೇ - ನೀರಿನಲ್ಲಿ, ಪತತಃ - ಬೀಳುತ್ತಿರುವ, ವನೌಕಸಃ - ವನವಾಸಿಯಾದ ಒಬ್ಬಾನೊಬ್ಬನ, ಹಾಹೇತಿ - ಹಾಹಾ ಎಂದು, ವ್ಯಕ್ತಾ - ಸ್ಪಷ್ಟವಾದ, ವಾಕ್ - ಮಾತು, ಉಷಸಿ - ಪ್ರಾತಃಕಾಲದಲ್ಲಿ, ಪ್ರಾದುರಾಸೀತ್ - ಹುಟ್ಟಿತು ॥ ೨೭ ॥ ಬಾಣೇ - ಬಾಣವು, ತಸ್ಮಿ೯ - ಆ ವನ

ತ್ತಿದ್ದೆನು. ಹೀಗೆ ನಾನು ರಹಸ್ಯದಿಂದಿರುವಾಗ ನನಗೆ ಕೇಳಿಸಿದ ಶಬ್ದವನ್ನು ಗುರಿಯಿಟ್ಟು ಆ ಸರಯೂ ತೀರಕ್ಕೆ ಬಂದ ಆರಣ್ಯಕ ಮೃಗವೊಂದನ್ನು, ಕ್ರೂರ ಮೃಗವೊಂದನ್ನೂ ಕೊಂದೆನು. ಆ ಬಳಿಕ ಅಂಧಕಾರಮಯವಾದ ಆ ರಾತ್ರಿಯಲ್ಲಿ, ನದೀ ಜಲದಲ್ಲಿ ನೀರನ್ನು ತುಂಬಿಕೊಳ್ಳುತ್ತಿರುವ ಕುಂಭದ "ಬುಡುಬುಡ" ಎಂಬ ಒಂದು ಶಬ್ದವನ್ನು ಕೇಳಿದೆನು. ಆ ಧ್ವನಿಯು ಆನೆಯ ಧ್ವನಿಯಂತಹುದಾಗಿದ್ದಿತು. ॥ ೨೨-೨೫ ॥ ಆ ಧ್ವನಿ ಮಾತ್ರ ನನಗೆ, ಎಲ್ಲಿಯೋ ಕಣ್ಣಿಗೆ ಕಾಣದ ಸ್ಥಳದಲ್ಲಿ ಕೇಳಿಸಿತು. ಅದನ್ನು ಕೇಳಿ ನಾನು, "ಎಲ್ಲಿಯೋ ಒಂದು ಆನೆಯು ಜಲಪಾನ ಮಾಡುತ್ತಿರುವುದು, ಆದುದರಿಂದ ಆ ಗಜವನ್ನು ಹೊಡಿಯ ಬೇಕು" ಎಂದು ಯೋಚಿಸಿದೆನು. ಹೀಗೆ ಯೋಚಿಸಿ, ನಾನು ಶಬ್ದವೇಧಿತ್ವ ಶಕ್ತಿಯನ್ನು ಹೊಂದಿರುವವನಾದುದರಿಂದ, ಈ ಶಬ್ದವು ಇಷ್ಟು ದೂರದಲ್ಲಿಯೇ ಇರಬೇಕೆಂದು ನಿಶ್ಚಯಿಸಿ, ಮಹಾ ಪ್ರಕಾಶವನ್ನೊಳಗೊಂಡು ಸರ್ಪದಂತಿರುವ ಬಾಣವನ್ನೆತ್ತಿ ಆನೆಯಮೇಲೆ ಬಾಣಪ್ರಯೋಗವನ್ನು ಮಾಡಲೆಳಸಿ ಗುರಿಯಿಟ್ಟು ಆ ಬಾಣವನ್ನು ಪ್ರಯೋಗಿಸಿದೆನು.

ಕಥಮಸ್ಮದ್ವಿಧೇ ಶಸ್ತ್ರಂ ನಿಪತೇತ್ತು ತಪಸ್ವಿನಿ ॥ ೨೮ ॥ ಪ್ರವಿವಿಕ್ತಾಂ ನದೀಂ ರಾತ್ರಾ ವುದಾಹಾರೋ ಹಮಾಗತಃ ॥ ಇಷುಣಾಭಿಹತಃ ಕೇನ ಕಸ್ಯ ವಾ ಕಿಂಕೃತಂ ಮಯಾ ॥ ೨೯ ॥ ಋಷೇರ್ಹಿ ನ್ಯಸ್ತದಂಡಸ್ಯ ವನೇ ವನ್ಯೇನ ಜೀವತಃ ॥ ಕಥಂನು ಶಸ್ತ್ರೇಣ ವಧೋ ಮದ್ವಿಧಸ್ಯ ವಿಧೀಯತೇ ॥ ೩೦ ॥ ಜಟಾಭಾರಧರಸ್ಯೈವ ವಲ್ಕಲಾಜಿನ ವಾಸಸಃ ॥ ಕೋವಧೇನ ಮಮಾರ್ಥೀಸ್ಯಾ

ವಾಸಿಯಲ್ಲಿ, ನಿಪತಿತೇ - ಬೀಳಲು, ಅಸ್ಮದ್ವಿಧೇ - ನನ್ನಂತಹ, ತಪಸ್ವಿನಿ - ತಪಸ್ವಿಯಲ್ಲಿ, ಶಸ್ತ್ರಂ ಶಸ್ತ್ರವು, ನಿಪತೇತ್ - ಬೀಳುವುದು, ಇತಿ - ಇಂತೆಂದು, ಮಾನುಷೀ - ಮನುಷ್ಯಸಂಬಂಧವಾದ, ವಾಕ್ - ಮಾತು, ತತ್ರ - ಆ ಸರಯೂತೀರದಲ್ಲಿ, ಅಭೂತ್ - ಆಯಿತು. ॥ ೨೮ ॥ ರಾತ್ರೌ - ರಾತ್ರಿಯಲ್ಲಿ, ಪ್ರವಿವಿಕ್ತಾಂ - ನಿರ್ಜನವಾಗಿರುವ, ನದೀಂ - ನದಿಯನ್ನು ಕುರಿತು, ಅಹಂ - ನಾನು, ಉದಾಹಾರಃ - ನೀರುತಗೆದುಕೊಂಡು ಹೋಗಲಿಚ್ಛೆಯುಳ್ಳವನಾಗಿ, ಆಗತಃ - ಬಂದೆನು, ಕೇನ - ಯಾವನಿಂದ, ಇಷುಣಾ - ಬಾಣದಿಂದ, ಅಭಿಹತಃ - ಹೊಡಿಯಲ್ಪಟ್ಟೆನು, ಕಸ್ಯವಾ - ಯಾವ ವನಿಗೆತಾನೇ, ಮಯಾ - ನನ್ನಿಂದ, ಕಿಂಕೃತಂ - ಏನುಮಾಡಲ್ಪಟ್ಟಿತು. ॥ ೨೯ ॥ ನ್ಯಸ್ತ ದಂಡಸ್ಯ - ತ್ಯಾಗಮಾಡಲ್ಪಟ್ಟ ಪರಹಿಂಸೆಯುಳ್ಳ, ವನೇ - ಅರಣ್ಯದಲ್ಲಿ, ವನ್ಯೇನ-ವನವೃತ್ತಿಯಿಂದ, ಜೀವತಃ - ಜೀವನಮಾಡುತ್ತಿರುವ, ಮದ್ವಿಧಸ್ಯ - ನನ್ನಂತಹ, ಋಷೇಃ-ಋಷಿಗೆ, ಶಸ್ತ್ರೇಣ - ಬಾಣ ದಿಂದ, ವಧಃ - ಸಂಹಾರವು, ಕಥನ್ನುವಿಧೀಯತೇ - ಹೇಗೆಮಾಡಲ್ಪಟ್ಟಿತು, ಜಟಾಭಾರಭರಸ್ಯ - ಜಟಾಭಾರವನ್ನು ವಹಿಸಿರುವ, ವಲ್ಕಲಾಜಿನವಾಸಸಃ - ನಾರುಮಡಿಯೂ ಕೃಷ್ಣಾಜಿನವೂ ವಸ್ತ್ರಗಳಾ ಗುಳ್ಳ, ಮಮ - ನನ್ನ, ವಧೇನೈವ - ಸಂಹಾರದಿಂದಲೇ, ಕಃ - ಯಾವನು, ಅರ್ಥೀ - ಪ್ರಯೋ ಜನವುಳ್ಳವನು, ಸ್ಯಾತ್ - ಆಗುತ್ತಾನೆಯೋ, ಅಸ್ಯ - ಹೀಗೆ ಹೊಡೆದವನಿಗೆ, ಮಯಾವಾ - ನನ್ನಿಂದ

ಅಯ್ಯೋ! ಕೌಸಲ್ಯಾದೇವಿಯೇ! ನಾನೇನು ಹೇಳಲಿ! ಆ ತಕ್ಷಣವೇ ನಾನಾವ ದಿಕ್ಕಿಗೆ ಬಾಣ ಪ್ರಯೋಗವನ್ನು ಮಾಡಿದೆನೋ, ಆ ದಿಕ್ಕಿನಿಂದ, ಒಬ್ಬ ಋಷಿ ಕುಮಾರನ ದೀನ ಧ್ವನಿಯನ್ನು ಕೇಳಿದೆನು. ಆಗ ಉಷಃಕಾಲವಾಗಿದ್ದಿತು. ಇಷ್ಟೆಯಲ್ಲದೆ ಆ ಬ್ರಾಹ್ಮಣ ಪುತ್ರನು ಆ ಬಾಣದಿಂದ ಭೇದಿಸಲ್ಪಟ್ಟ ಮರ್ಮಸ್ಥಾನಗಳುಳ್ಳವನಾಗಿ "ಹಾ" ಎಂಬು ಕೂಗಿದುದನ್ನು ಕೇಳಿದೆನು. ಆ ಸಮಯದಲ್ಲಿಯಾ ಋಷಿ ಪುತ್ರನು "ಅಯ್ಯೋ! ನಾನು ಋಷಿ ಕುಮಾರ ನಲ್ಲವೆ? ನನ್ನಂತಹನಲ್ಲಿ ಬಾಣಪ್ರಯೋಗವನ್ನು ಮಾಡಬಹುದೇ? ಈ ಬಾಣಪ್ರಯೋಗವನ್ನು ಮಾಡಿದವನು ಯಾರಾಗಿರಬಹುದು? ನಾನು ಯಾರಿಗೆತಾನೆ ಅಪಕಾರವನ್ನು ಮಾಡಿದೆನು? ಯಾರೊಬ್ಬರಿಗೂ ಹಿಂಸೆಯನ್ನು ಮಾಡದೆ, ವನದಲ್ಲಿ ಕಂದಮೂಲ ಫಲಗಳನ್ನು ಭುಜಿಸುತ್ತ, ಕಾಲವನ್ನು ಕಳೆಯುತ್ತಿರುವ ಋಷಿಕುಮಾರನಾದ ನನ್ನನ್ನು ಬಾಣದಿಂದ ಹೇಗೆ ಕೊಂದನು? ಜಟೆಗಳಭಾರವನ್ನು ಧರಿಸಿದವನೂ, ನಾರುಮಡಿಗಳನ್ನೂ, ಕೃಷ್ಣಾಜಿನವನ್ನೂ ವಸ್ತ್ರಗಳನ್ನಾಗಿ ಧರಿಸಿದವನೂ ಆದ ನನ್ನನ್ನು ಕೊಂದುದರಿಂದ ಯಾರಿಗೆತಾನೆ ಲಾಭವೇನಿರುವುದು? ನಾನು ಯಾರಿಗೆ ಯಾವ ಅಪಕಾರವನ್ನುಮಾಡಿದೆನು? ನಿಷ್ಫಲವಾದ ಮಹದನರ್ಥಕರವಾದ ಈ ಕಾರ್ಯವನ್ನು ಮಾಡಿದವರು ಯಾರು? ಈ ರೀತಿ ನಿಷ್ಕಾರಣವಾಗಿ ನನ್ನನ್ನು ಕೊಂದು

ತ್ಕಿಂವಾಸ್ಯಾಪಕೃತಂ ಮಯಾ ॥ ೩೧ ॥ ಏವಂ ನಿಷ್ಫಲ ಮಾರಬ್ಧಂ ಕೇವಲಾ ನರ್ಥ ಸಂಹಿತಂ ॥ ನಕಶ್ಚಿ ತ್ಸಾಧುಮನ್ಯೇತ ಯಥೈವ ಗುರುತಲ್ಪಗಂ ॥ ೩೨ ॥ ನಾಹಂ ತಥಾ ನುಶೋಚಾಮಿ ಜೀವಿತ ಕ್ಷಯಮಾತ್ಮನಃ ॥ ಮಾತರಂ ಪಿತರಂ ಚೋಭಾ ವನುಶೋಚಾಮಿ ಮದ್ವಧೇ ॥ ೩೩ ॥ ತದೇತ ನ್ಮಿಥುನಂ ವೃದ್ಧಂ ಚಿರಕಾಲ ಭೃತಂ ಮಯಾ ॥ ಮಯಿ ಪಂಚತ್ವ ಮಾಪನ್ನೇ ಕಾಂವೃತ್ತಿಂ ವರ್ತ ಯಿಷ್ಯತಿ ॥ ೩೪ ॥ ವೃದ್ಧೌಚ ಮಾತಾಪಿತರಾವಹಂ ಚೈಕೇಷುಣಾ ಹತಃ ॥ ಕೇನಸ್ಮ ವಿಹತಾ ಸ್ಸರ್ವೇ ಸುಬಾಲೇನಾ ಕೃತಾತ್ಮನಾ ॥ ೩೫ ॥ ತಾಂಗಿರಂ

ಲಾದರೂ, ಕಿಮಪ್ರಿಯಂಕೃತಂ - ಯಾವ ಅಪಕಾರಮಾಡಲಾಯಿತು. ॥ ೩೦ ೩೧ ॥ ಏವಂ - ಈಪರಿಯಾಗಿ, ನಿಷ್ಫಲಂ - ನಿಷ್ಪ್ರಯೋಜನವಾಗಿ, ಆರಬ್ಧಂ - ಆರಂಭಿಸಿದ, ಕೇವಲಾನರ್ಥಸಂಹಿತಂ - ಮುಖ್ಯವಾಗಿ ಪಾಪದಿಂದ ಕೂಡಿರುವ ಪುರುಷನನ್ನು, ಗುರುತಲ್ಪಗಂಯಥಾ - ಗುರುತಲ್ಪಗಮನವನ್ನು ಮಾಡಿದವನನ್ನಂತೆ, ಕಶ್ಚಿತ್ - ಯಾವನು, ಸಾಧು - ಚೆನ್ನಾಗಿ, ನಮನ್ಯೇತಇವ - ಎಣಿಸುವದೇ ಇಲ್ಲವು. ॥ ೩೨ ॥ ಮದ್ವಧೇ - ನನ್ನ ಸಂಹಾರವಾಗಲು, ಮಾತರಂ - ತಾಯಿಯನ್ನೂ, ಪಿತರಂ - ತಂದೆಯನ್ನೂ, ಉಭೌ - ಇಬ್ಬರನ್ನೂ ಕುರಿತು, ಯಥಾ - ಹೇಗೆ, ಅನುಶೋಚಾಮಿ - ಅಳುತ್ತೇನೆಯೋ, ತಥಾ - ಹಾಗೆ, ಅಹಂ - ನಾನು, ಆತ್ಮನಃ - ನನ್ನ, ಜೀವಿತಕ್ಷಯಂ - ಪ್ರಾಣನಾಶವನ್ನು ಕುರಿತು, ನಾನುಶೋಚಾಮಿ - ದುಃಖಿಸಲಾರೆನು. ॥ ೩೩ ॥ ಮಯಾ - ನನ್ನಿಂದ, ವೃದ್ಧಂ-ಮುದುಕರಾದ, ತದೇತನ್ಮಿಥುನಂ-ಈ ತಾಯಿತಂದೆಗಳೆಂಬ ಸ್ತ್ರೀಪುರುಷಯುಗ್ಮವು, ಚಿರಕಾಲ ಭೃತಂ - ಬಹುಕಾಲದಿಂದ ಸಂರಕ್ಷಿಸಲ್ಪಟ್ಟು, ಮಯಿ - ನಾನು, ಪಂಚತ್ವಂ - ಮರಣವನ್ನು, ಆಪನ್ನೇ - ಹೊಂದಲು, ಕಾಲವೃತ್ತಿಂ - ಯಾವ ಜೀವಿಕೆಯನ್ನು, ವರ್ತಯಿಷ್ಯತಿ - ಅವಲಂಬಿಸುವುದು. ॥ ೩೪ ॥ ಮಾತಾಪಿತರೌ - ತಾಯಿತಂದೆಗಳಿಬ್ಬರೂ, ವೃದ್ಧೌ - ಮುದುಕರು, ಅಹಂಚ - ನಾನಾದರೋ, ಏಕೇಷುಣಾ - ಒಂದು ಬಾಣದಿಂದಲೇ, ಹತಃ - ಹತನಾದೆನು, ಸರ್ವೇ-ನಾವೆಲ್ಲರೂ, ಅಕೃತಾತ್ಮನಾ - ಬುದ್ಧಿಸ್ವಾಧೀನವಿಲ್ಲದ, ಸುಬಾಲೇನ - ಮೂರ್ಖನಾದ, ಕೇನ - ಯಾವನಿಂದಲೋ,

---

ನನ್ನು ಲೋಕದಲ್ಲಿರುವ ಯಾವತ್ತೂ ಪ್ರಜೆಗಳು, ಗುರುಭಾರ್ಯೆಯನ್ನು ಹೊಂದಿದವನನ್ನು ನಿಂದಿಸುವಂತೆ ನಿಂದಿಸುತ್ತಾರೆ. ॥ ೨೬-೩೨ ॥ "ನನ್ನನ್ನುಕೊಂದು ನನ್ನಪ್ರಾಣಗಳನ್ನು ಹೋಗಲಾಡಿಸಿದನೆ" ಎಂದು ನಾನು ದುಃಖಿಸುವುದಿಲ್ಲ ! ನಾನು ಸತ್ತಬಳಿಕ "ನನ್ನ ತಂದೆ ತಾಯಿಗಳಿಗೆ ದಿಕ್ಕಾರೂ ಇಲ್ಲವಲ್ಲಾ !" ಎಂದು ನನ್ನ ತಂದೆತಾಯಿಗಳನ್ನು ಕುರಿತು ದುಃಖಿಸುತ್ತೇನೆ, ಅಯ್ಯೋ ! ಇನ್ನು ನನ್ನ ತಂದೆತಾಯಿಗಳಿಗೆ ದಿಕ್ಕಾರು ? ನಾನು ಮರಣವನ್ನು ಹೊಂದಿದ ಬಳಿಕ, ಬಹುಕಾಲದಿಂದ ನನ್ನಿಂದ ಸಂರಕ್ಷಿತರಾದ ನನ್ನ ಮಾತಾಪಿತೃಗಳು ಯಾವ ರೀತಿಯಲ್ಲಿ ಜೀವಿಸುತ್ತಾರೆ? ಅಯ್ಯೋ! ನನ್ನ ತಂದೆತಾಯಿಗಳು ವೃದ್ಧರು. ಅವರಿಗೆ ನಾನು ಆಧಾರವಾಗಿದ್ದೆನು. ಇಂತಹ ನನ್ನನ್ನುಕೊಂದಮೂರ್ಖನು ನನ್ನ ಮಾತಾಪಿತೃಗಳನ್ನೂ ಕೊಂದವನಾದನು ! ಅಯ್ಯೋ! ನಾವು ಮೂವರೂ ಒಂದು ಬಾಣದಿಂದಲೇ ಹತರಾದೆವಲ್ಲವೆ!" ಎಂಬುದಾಗಿ ಕೂಗಿದ ಆ ಮಾನವವಾಕ್ಯನ್ನು ಕೇಳಿದೆನು. ॥ ೩೩-೩೫ ॥ ಬಹು ದುಃಖಕರ

ಕರುಣಾಂ ಶ್ರುತ್ವಾ ಮಮ ಧರ್ಮಾನುಕಾಂಕ್ಷಿಣಃ || ಕರಾಭ್ಯಾಂ ಸಶರಂ ಚಾಪಂ ವ್ಯಥಿತಸ್ಯಾ ಪತದ್ಭುವಿ || ೩೬ || ತಸ್ಯಾಹಂ ಕರುಣಂ ಶ್ರುತ್ವಾ ನಿಶಿ ಲಾಲಪತೋ ಬಹು || ಸಂಭ್ರಾಂತ ಶ್ಶೋಕವೇಗೇನ ಭೃಶಮಾಸಂ ವಿಚೇತನಃ||೩೭|| ತಂ ದೇಶಮಹಮಾಗಮ್ಯ ದೀನಸತ್ವ ಸ್ಸುದುರ್ಮನಾಃ || ಅಪಶ್ಯಮಿಷುಣಾ ತೀರೇ ಸರಯ್ವಾ ಸ್ತಾಪಸಂ ಹತಂ || ೩೮ || ಅವಕೀರ್ಣ ಜಟಾಭಾರಂ ಪ್ರವಿದ್ಧ ಕಲಶೋದಕಂ || ಪಾಂಸು ಶೋಣಿತದಿಗ್ಧಾಂಗಂ ಶಯಾನಂ ಶಲ್ಯಪೀಡಿತಂ||೩೯||

ನಿಹತಾಸ್ಮ - ಹೊಡೆಯಲ್ಪಟ್ಟೆವು. || ೩೫ || ಕರುಣಾಂ - ದೀನವಾದ, ತಾಂಗಿರಂ - ಆ ಮಾತನ್ನು, ಶ್ರುತ್ವಾ - ಕೇಳಿ, ವ್ಯಥಿತಸ್ಯ - ಸಂಜಾತಮನೋವ್ಯಥೆಯುಳ್ಳ, ಧರ್ಮಾನುಕಾಂಕ್ಷಿಣಃ - ಧರ್ಮವನ್ನೇ ಅಪೇಕ್ಷಿಸುತ್ತಿರುವ, ಮಮ - ನನ್ನ, ಕರಾಭ್ಯಾಂ - ಕೈಗಳಿಂದ, ಸಶರಂ-ಬಾಣಗಳಿಂದೊಡಗೂಡಿದ, ಚಾಪಂ - ಧನಸ್ಸು, ಭುವಿ - ನೆಲದಲ್ಲಿ, ಅಪತತ್ - ಬಿದ್ದುಹೋಯಿತು. || ೩೬ || ಅಹಂ ನಾನು, ನಿಶಿ - ಆ ರಾತ್ರಿಯಲ್ಲಿ, ಬಹು - ಬಹಳವಾಗಿ, ಲಾಲಪತಃ - ವಿಲಪಿಸುತ್ತಿರುವ, ತಸ್ಯ - ಆ ಋಷಿಯ, ಕರುಣಂ - ದೀನಧ್ವನಿಯನ್ನು, ಶ್ರುತ್ವಾ - ಕೇಳಿ, ಶೋಕವೇಗೇನ - ವ್ಯಸನಾತಿಶಯದಿಂದ, ಸಂಭ್ರಾಂತಃ - ಭ್ರಮೆಗೊಂಡವನಾಗಿ, ಭೃಶಂ - ಅತ್ಯಂತವಾಗಿ, ವಿಚೇತನಃ - ಪ್ರಜ್ಞೆಯಿಲ್ಲದವನು, ಆಸಂ - ಆದೆನು. || ೩೭ || ಅಹಂ - ನಾನು, ದೀನಸತ್ವಃ - ಕುಗ್ಗಿದ ಬಲವುಳ್ಳವನಾಗಿ, ಸರಯ್ವಾಃ - ಸರಯೂನದಿಯ, ತಂದೇಶಂ - ಆಸ್ಥಲವನ್ನು ಕುರಿತು, ಆಗಮ್ಯ - ಬಂದು, ಇಷುಣಾ - ಬಾಣದಿಂದ, ಹತಂ - ಹೊಡೆಯಲ್ಪಟ್ಟ, ಅವಕೀರ್ಣಜಟಾಭಾರಂ - ಬಿಚ್ಚಿಹೋದ ಜಡೆಗಳುಳ್ಳ, ಪ್ರವಿದ್ಧಕಲಶೋದಕಂ - ಉರುಳಿದ ಕಲಶೋದಕವುಳ್ಳ, ಪಾಂಸುಶೋಣಿತದಿಗ್ಧಾಂಗಂ - ಧೂಳಿಯಿಂದಲೂ ರಕ್ತದಿಂದಲೂ ವ್ಯಾಪ್ತವಾದ ಅವಯವಗಳುಳ್ಳ, ಶಲ್ಯಪೀಡಿತಂ - ಬಾಣದಿಂದ ಬಾಧೆಗೊಳಿಸಲ್ಪಟ್ಟ, ಶಯಾನಂ - ಮಲಗಿರುವ, ತಾಪಸಂ - ಋಷಿಯನ್ನು, ಅಪಶ್ಯಂ - ಕಂಡೆನು. || ೩೯ || ಸಃ - ಆ

ವಾದ ಆ ವಾಕ್ಯಗಳನ್ನು ಕೇಳಿದ ಕೂಡಲೇ, ನನ್ನ ಮನಸ್ಸಿಗೆ ಅಧಿಕವಾದ ತಾಪವುಂಟಾಯಿತು. ಅಧರ್ಮ ಭಯದಿಂದ ಈ ರೀತಿ ನಾನು ಪರಿತಪ್ತವಾದ ಮನಸ್ಸುಳ್ಳವನಾಗಲು, ನನ್ನ ಕೈಯಲ್ಲಿದ್ದ ಧನುರ್ಬಾಣಗಳು ಕೆಳಕ್ಕೆ ಬಿದ್ದುವು. ನಾನು ಆ ಅರ್ಧ ರಾತ್ರಿಯ ಸಮಯದಲ್ಲಿ ಆ ರೀತಿ ವಿಲಪಿಸುತ್ತಿದ್ದ ಮುನಿಪುತ್ರನ ದೀನಾಲಾಪಗಳನ್ನು ಕೇಳಿ ಏನೊಂದೂ ತೋರದೆ, ತಹತಹಗೊಳ್ಳುವನಾಗಿ ಅಧಿಕವಾದ ವ್ಯಸನದಿಂದ ಪ್ರಜ್ಞೆಯಿಲ್ಲದವನಾದೆನು. ಆ ಬಳಿಕ ಸ್ವಲ್ಪ ಹೊತ್ತಿನ ಮೇಲೆ ಎಚ್ಚರಗೊಂಡು, ಪರಮ ದುಃಖಿತನಾದರೂ ಧೈರ್ಯ ತಂದುಕೊಂಡು ಆ ಮುನಿ ಕುಮಾರನಿದ್ದೆಡೆಗೆ ಹೋದೆನು. ಇಂತು ತೆರಳಿ ಸರಯೂ ನದಿಯ ತೀರದಲ್ಲಿ ಜಟೆಗಳನ್ನು ಕೆದರಿಕೊಂಡು, ಸಮೀಪದಲ್ಲಿದ್ದ ಕುಂಭದಲ್ಲಿನ ಸ್ವಲ್ಪವಾದ ನೀರು ಕೆಳಕ್ಕೆ ಬಿದ್ದು ಅದರಿಂದ ನೆಂದವನೂ, ರಕ್ತದಿಂದಲೂ, ಉಬ್ಬಸದಿಂದಲೂ, ವ್ಯಾಪ್ತವಾದ ದೇಹವುಳ್ಳವನೂ, ಬಾಣಪೀಡಿತನೂ ಆಗಿ ನೆಲದಮೇಲೆಬಿದ್ದಿದ್ದ ಆ ಮುನಿಕುಮಾರನನ್ನು ನೋಡಿದೆನು. ಆಗಲಾ ಮುನಿಪುತ್ರನು ಮಹದ್ಭಯವನ್ನು ಹೊಂದಿ ನಡುಗುತ್ತಿರುವ ನನ್ನನ್ನು ನೋಡಿ ತೀಕ್ಷ್ಣವಾದ ತನ್ನ ನೇತ್ರಕಾಂತಿಯಿಂದ ಸುಡುವನೋ ಎಂಬಂತೆ ಕಠಿಣವಾದ

ಸಮಾಮುದ್ವೀಕ್ಷ್ಯ ನೇತ್ರಾಭ್ಯಾಂ ತ್ರಸ್ತ ಮಸ್ವಸ್ಥ ಚೇತಸಂ ॥ ಇತ್ಯುವಾಚ ತತಃ ಕ್ರೂರಂ ದಿಧಕ್ಷನ್ನಿವ ಚೇತಸಾ ॥ ೪೦ ॥ ಕಿಂತವಾಪಕೃತಂ ರಾಜನ್! ವನೇ ನಿವಸತಾ ಮಯಾ ॥ ಜಿಹೀರ್ಷು ರಂಭೋಗುರ್ವರ್ಥಂ ಯದಹಂ ತಾಡಿತ ಸ್ತ್ವಯಾ ॥ ೪೧ ॥ ಏಕೇನ ಖಲು ಬಾಣೇನ ಮರ್ಮಣ್ಯಭಿಹತೇ ಮಯಿ ॥ ದ್ವಾವಂಧೌ ನಿಹತೌ ವೃದ್ಧೌ ಮಾತಾ ಜನಯಿತಾಚ ಮೇ ॥ ೪೨ ॥ ತೌ ನೂನಂ ದುರ್ಬಲಾ ವಂಧೌ ಮತ್ಪ್ರತೀಕ್ಷೌ ಪಿಪಾಸಿತೌ ॥ ಚಿರಮಾಶಾಕೃತಾಂ ತೃಷ್ಣಾಂ ಕಥಂ ಸಂಧಾರಯಿಷ್ಯತಃ ॥ ೪೩ ॥ ನ ನೂನಂ ತಪಸೋ ವಾಸ್ತಿ ಫಲಯೋಗಃ

ತಾಪಸನು, ತ್ರಸ್ತಂ - ಭಯಗೊಂಡ, ಅಸ್ವಸ್ಥಚೇತಸಃ - ಸ್ವಸ್ಥಚಿತ್ತನಲ್ಲದಿರುವ, ಮಾಂ - ನನ್ನನ್ನು, ನೇತ್ರಾಭ್ಯಾಂ - ಕಣ್ಣುಗಳಿಂದ, ಉದ್ವೀಕ್ಷ್ಯ - ನೋಡಿ, ತತಃ - ಬಳಿಕ, ತೇಜಸಾ - ತಪೋಜ್ವಾಲೆಯಿಂದ, ದಿಧಕ್ಷನ್ನಿವ - ದಹಿಸುವನೋ ಎಂಬಂತಿರುವವನಾಗಿ, ಕ್ರೂರಂ - ಬಹಳ ಕಠಿನವಾಗಿ, ಉವಾಚ - ಹೇಳಿದನು. ॥ ೪೦ ॥ ಹೇ ರಾಜನ್ - ಎಲೈ ರಾಜನೇ, ಯತ್ - ಯಾವ ಕಾರಣ, ಗುರ್ವರ್ಥಂ - ತಾಯಿತಂದೆಗಳಿಗೋಸ್ಕರ, ಅಂಭಃ - ಉದಕವನ್ನು, ಜಿಹೀರ್ಷುಃ - ತೆಗದು ಕೊಂಡುಹೋಗಲಿಚ್ಛಿಸಿ, ಅಹಂ - ನಾನು, ತ್ವಯಾ - ನಿನ್ನಿಂದ, ತಾಡಿತಃ - ಹೊಡೆಯಲ್ಪಟ್ಟಿನೋ, ತಸ್ಮಾತ್ - ಆ ಕಾರಣ, ವನೇ - ಅರಣ್ಯದಲ್ಲಿ, ನಿವಸತಾ - ವಾಸಮಾಡುತ್ತಿರುವ, ಮಯಾ - ನನ್ನಿಂದ, ತವ - ನಿನಗೆ, ಕಿಂ - ಯೇನು, ಅಪಕೃತಂ - ಅಪಕಾರಮಾಡಲ್ಪಟ್ಟಿತು. ॥ ೪೧ ॥ ಮಯಿ - ನಾನು, ಏಕೇನಬಾಣೇನ - ಒಂದು ಬಾಣದಿಂದಲೇ, ಮರ್ಮಣಿ - ಮರ್ಮಸ್ಥಾನದಲ್ಲಿ, ಅಭಿಹತೇನ - ಹೊಡೆಯಲ್ಪಡಲು, ಮೇ - ನನ್ನ, ಮಾತಾ - ತಾಯಿಯು, ಜನಯಿತಾಚ - ತಂದೆ ಯೂ, ವೃದ್ಧೌ - ಮುದುಕರಾದ, ಅಂಧೌ - ಕುರುಡರಾದ, ಉಭೌ - ಇಬ್ಬರೂ, ನಿಹತೌ-ಹೊಡೆಯ ಲ್ಪಟ್ಟರು. ॥ ೪೨ ॥ ದುರ್ಬಲೌ - ಬಲಹೀನರಾದ, ಅಂಧೌ - ಕುರುಡರಾದ, ಮತ್ಪ್ರತೀಕ್ಷೌ - ನನ್ನನ್ನೇ ನಿರೀಕ್ಷಿಸಿಕೊಂಡಿರುವ, ಪಿಪಾಸಿತೌ - ನೀರಡಿಕೆಯುಳ್ಳ, ತೌ - ಆ ದಂಪತಿಗಳಿಬ್ಬರೂ, ಚಿರಂ - ಬಹಳ ಹೊತ್ತಿನಿಂದ, ಆಶಾಕೃತಾಂ - ಮಗನು ನೀರುತರುತ್ತಾನೆಯೆಂಬ ಆಶೆಯಿಂದ ಮಾಡ ಲ್ಪಟ್ಟ, ತೃಷ್ಣಾಂ - ನೀರಡಿಕೆಯನ್ನು, ಕಥಂ - ಹೇಗೆ, ಸಂಧಾರಯಿಷ್ಯತಃ - ಧರಿಸುವರು. ॥ ೪೩ ॥

ಮಾತನ್ನು ಹೇಳಿದನು. ॥೩೬-೪೦॥ “ ಎಲೈ ರಾಜನೆ! ವನದಲ್ಲಿ ವಾಸಿಸುತ್ತಿರುವ ನಾನು ನಿನಗಾವ ಅಪರಾಧವನ್ನು ಮಾಡಿದೆನು! ನಾನು ನನ್ನ ಮಾತಾಪಿತೃಗಳ ದಾಹಶಾಂತಿಗಾಗಿ ನೀರನ್ನು ತೆಗೆದುಕೊಂಡು ಹೋಗಬೇಕೆಂದು ಈ ನದೀತೀರಕ್ಕೆ ಬಂದವನಾದೆನು. ಈ ರೀತಿ ಬಂದ ನನ್ನನ್ನು ನೀನು ಅನ್ಯಾಯವಾಗಿ ಕೊಂದವನಾದೆ. ಹೀಗೆ ಕೊಲ್ಲಲು ನಾನು ಮಾಡಿದ ತಪ್ಪೇನು? ನೀನು ಒಂದು ಬಾಣದಿಂದಲೇ ನನ್ನ ಮರ್ಮಸ್ಥಾನವನ್ನು ಭೇದಿಸಿದೆ! ಈ ಬಾಣ ದಿಂದ, ವೃದ್ಧರಾದ ನನ್ನ ತಂದೆತಾಯಿಗಳನ್ನೂ ಹೊಡೆದವನಾಗಿರುವೆ! ಬಲಹೀನರೂ, ವೃದ್ಧರೂ, ಕಣ್ಣುಕಾಣದವರೂ, ನೀರಡಿಕೆಯಿಂದ ಪೀಡಿತರಾದವರೂ ಆದ ನನ್ನ ಜನನೀ ಜನಕರು ನಾನು ನೀರನ್ನು ತೆಗೆದುಕೊಂಡು ಬರುವೆನೆಂದು, ನನ್ನನ್ನೇ ಇದಿರುನೋಡುತ್ತ ನಿರೀಕ್ಷಿಸುತ್ತಿರುವರು. ಎಷ್ಟು ತಪಸ್ಸು ಮಾಡಿದರೂ, ವಿದ್ಯೆಯನ್ನೆಷ್ಟು ಕಲಿತರೂ ಪ್ರಯೋ

ಶೃತಸ್ಯವಾ ॥ ಪಿತಾ ಯನ್ಮಾಂ ನಜಾನಾತಿ ಶಯಾನಂ ಪತಿತಂ ಭುವಿ ॥ ೪೪ ॥ ಜಾನನ್ನಪಿ ಚ ಕಿಂಕುರ್ಯಾದಶಕ್ತಿ ರಪರಿಕ್ರಮಃ ॥ ಭಿದ್ಯಮಾನಮಿವಾಶಕ್ತ ಸ್ತ್ರಾತುಮನ್ಯೋ ನಗೋನಗಂ ॥ ೪೫ ॥ ಪಿತುಸ್ತ್ವಮೇವ ಮೇ ಗತ್ವಾ ಶೀಘ್ರ ಮಾಚಕ್ಷ್ವ ರಾಘವ! ॥ ನ ತ್ವಾ ಮನುದಹೇತ್ಕ್ರುದ್ಧೋ ವನಂ ವಹ್ನಿರಿವೈಧಿತಃ ॥ ೪೬ ॥ ಇಯಮೇಕಪದೀ ರಾಜನ್! ಯತೋ ಮೇ ಪಿತುರಾಶ್ರಮಃ ॥ ತಂ ಪ್ರಸಾದಯ ಗತ್ವಾ ತ್ವಂ ನ ತ್ವಾಂ ಸ ಕುಪಿತಃ ಶಪೇತ್ ॥೪೭॥ ವಿಶಲ್ಯಂ

ಯತ್ - ಯಾವ ಕಾರಣ, ಭುವಿ - ನೆಲದಲ್ಲಿ, ಪತಿತಂ - ಬಿದ್ದು, ಶಯಾನಂ - ಮಲಗಿರುವ, ಮಾಂ - ನನ್ನನ್ನು, ಪಿತಾ - ತಂದೆಯು, ನಜಾನಾತಿ - ತಿಳಿಯದೇ ಹೋದನೋ, ತತ್-ಆ ಕಾರಣ, ತಪಸೋವಾ - ತಪಸ್ಸಿಗಾದರೂ, ಶೃತಸ್ಯವಾ - ಅದರ ಸಂಬಂಧವಾದ ಶಾಸ್ತ್ರಕ್ಕಾದರೂ, ಫಲಯೋಗಃ-ಫಲಪ್ರಾಪ್ತಿಯು, ನಾಸ್ತಿ - ಇಲ್ಲ, ನೂನಂ - ನಿಶ್ಚಯವು. ॥ ೪೪ ॥ ಅಪಿಚ - ಇಷ್ಟುಮಾತ್ರವೇ ಅಲ್ಲ, ಜಾನನ್ - ತಿಳಿದವನಾದರೂ, ಅಶಕ್ತಃ - ಶಕ್ತಿಹೀನನಾದ, ಅಪರಿಕ್ರಮಃ - ಸಂಚಾರ ಸಾಮರ್ಥ್ಯವಿಲ್ಲದವನಾದ, ಭಿದ್ಯಮಾನಂ - ಚಂಡಮಾರುತದಿಂದ ಭೇದಿಸಲ್ಪಟ್ಟ, ನಗಂ - ಗಿಡವನ್ನು, ಅನ್ಯೋನಗಇವ - ಮತ್ತೊಂದು ವೃಕ್ಷದಂತೆ, ತ್ರಾತುಂ - ಸಂರಕ್ಷಿಸುವದಕ್ಕೆ, ಕಿಂಕುರ್ಯಾತ್ - ಯಾವ ಪ್ರಯತ್ನವನ್ನು ತಾನೆ ಮಾಡಿಯಾನು ? ॥ ೪೫ ॥ ಹೇ ರಾಘವ - ಎಲೈ ರಘುವಂಶೋತ್ಪನ್ನನಾದ ದಶರಥರಾಯನೇ, ತ್ವಮೇವ - ನೀನೇ, ಶೀಘ್ರಂ - ಜಾಗ್ರತೆಯಾಗಿ, ಗತ್ವಾ - ಹೋಗಿ, ಮೇ - ನನ್ನ, ಪಿತುಃ - ತಂದೆಗೆ, ಆಚಕ್ಷ್ವ - ಹೇಳು, ಕೃದ್ಧಃ - ಕೋಪಿಷ್ಠನಾದ ನಮ್ಮ ತಂದೆಯು, ಏಧಿತಃ - ವೃದ್ಧಿಗೊಂಡ, ವಹ್ನಿಃ - ಅಗ್ನಿಯು, ವನಮಿವ - ವನವನ್ನಂತೆ, ತ್ವಾಂ - ನಿನ್ನನ್ನು, ನಾನುದಹೇತ್ - ದಹಿಸಲಾರನು. ॥ ೪೬ ॥ ಹೇ ರಾಜನ್ - ಎಲೈ ಅರಸೇ, ಯತಃ - ಎಲ್ಲಿ, ಮೇ - ನನ್ನ, ಪಿತುಃ - ತಂದೆಯ, ಆಶ್ರಮಃ - ಆಶ್ರಮವು, (ಅಸ್ತಿ - ಇರುವುದೋ,) ಇಯಂಏಕಪದೀ - ಈ ಕಾಲುದಾರಿಯ, ತ್ವಂ - ನೀನು, (ಅತ್ರ - ಈ ದಾರಿಯಲ್ಲಿ,) ಗತ್ವಾ - ಹೋಗಿ, ತಂ - ಆ ನಮ್ಮ ತಂದೆಯನ್ನು, ಪ್ರಸಾದಯ - ಸಮಾಧಾನಗೊಳಿಸು, ಸಃ - ಆ ತಂದೆಯು, ಕುಪಿತಃ - ಕೋಪಿಷ್ಠನಾಗಿ, ತ್ವಾಂ - ನಿನ್ನನ್ನು, ನಶಪೇತ್ - ಶಪಿಸಲಾರನು. ॥ ೪೭ ॥

ಜನವಿಲ್ಲ! ಅಧಿಕವಾಗಿ ತಪಸ್ಸನ್ನು ಮಾಡಿಕೊಂಡು, ಸಕಲ ವಿದ್ಯೆಗಳನ್ನು ತಿಳಿದರೂ, ನಾನು ನಮ್ಮ ತಂದೆಗೂ ತಿಳಿಯದೆ ಕೆಳಗೆ ಬಿದ್ದಿರುವೆನಲ್ಲವೆ! ಒಂದುವೇಳೆ ತಿಳಿದುಕೊಂಡರೂ, ಬಲಹೀನನೂ ನಡೆಯುವುದಕ್ಕಾಗದವನೂ ಆದ ನಮ್ಮ ತಂದೆಯು ಏನುತಾನೆ ಮಾಡಬಲ್ಲನು? ಒಂದು ಗಿಡವು ಕೆಳಗೆ ಬೀಳುತ್ತಿರಲು, ಅದರ ಸಮೀಪದಲ್ಲಿರುವ ಮತ್ತೊಂದು ಗಿಡವು ಅದನ್ನು ಹಿಡಿದುಕೊಳ್ಳಲು ಹೇಗೆ ಸಾಧ್ಯವಾಗಲಾರದೋ, ಹಾಗೆ ನನ್ನ ತಂದೆಯು ನನಗಾವ ವಿಧವಾದ ಸಹಾಯವನ್ನೂ ಮಾಡಲಾರನು. ಎಲೈ ರಘುವಂಶೋತ್ಪನ್ನನೆ! ಈಗ ನೀನು ನನ್ನ ತಂದೆಯ ಸಮೀಪಕ್ಕೆ ಹೋಗಿ ಈ ವೃತ್ತಾಂತವನ್ನು ತಿಳಿಸು. ಹೀಗೆ ಮಾಡಿದೆಯೆಂದು, ಅಧಿಕವಾದ ಕಾಳ್ಕಿಚ್ಚು ವನವನ್ನು ದಹಿಸುವಂತೆ, ಕೋಪವುಳ್ಳ ಆ ನನ್ನ ತಂದೆಯು ನಿನ್ನನ್ನು ದಹಿಸಲಾರನು. ನಮ್ಮ ತಂದೆಯಾಶ್ರಮಕ್ಕೆ ಹೋಗುವ ಕಾಲುದಾರಿಯು ಇಲ್ಲಿಯೇ

ಕುರು ಮಾಂ ರಾಜನ್! ಮರ್ಮ ಮೇ ನಿಶಿತಶ್ಶರಃ॥ರುಣದ್ಧಿ ಮೃದುಸೋತ್ಸೇಧಂ ತೀರಮಂಬುರಯೋ ಯಥಾ ॥ ೪೮ ॥ ಸಶಲ್ಯಃ ಕ್ಲಿಶ್ಯತೇ ಪ್ರಾಣೈರ್ವಿಶಲ್ಯೋ ವಿನಶಿಷ್ಯತಿ ॥ ಇತಿ ಮಾಮವಿಶಚ್ಚಿಂತಾ ತಸ್ಯ ಶಲ್ಯಾಪಕರ್ಷಣೇ ॥ ೪೯ ॥ ದುಃಖಿತಸ್ಯ ಚ ದೀನಸ್ಯ ಮಮ ಶೋಕಾತುರಸ್ಯಚ ॥ ಲಕ್ಷಯಾಮಾಸ ಹೃದಯೇ ಚಿಂತಾಂ ಮುನಿಸುತ ಸ್ತದಾ ॥೫೦॥ ತಾಮ್ಯಮಾನ ಸ್ಸ ಮಾಂ ಕೃಛ್ರಾದುವಾಚ ಪರಮಾರ್ತವತ್ ॥ ಸೀದಮಾನೋ ವಿವೃತ್ತಾಂಗೋ ವೇಷ್ಟಮಾನೋ ಗತಃ

ಹೇ ರಾಜನ್ - ಎಲೈ ಅರಸನೆ ! ಮಾಂ - ನನ್ನನ್ನು, ವಿಶಲ್ಯಂ-ಬಾಣಹೀನನನ್ನಾಗಿ, ಕುರು-ಮಾಡು, ನಿಶಿತಃ - ತೀಕ್ಷ್ಣವಾದ, ಶರಃ - ಬಾಣವು, ಅಂಬುರಯಃ - ಉದಕವೇಗವು, ಸೋತ್ಸೇಧಂ - ಔನ್ನತ್ಯದಿಂದ ಕೂಡಿ, ಮೃದು - ಮೆತ್ತಗಿರುವ, ತೀರಂಯಥಾ - ದಡವನ್ನಂತೆ, ಮೇ - ನನ್ನ, ಮರ್ಮ - ಮರ್ಮಸ್ಥಾನವನ್ನು, ರುಣದ್ಧಿ - ತಡಮಾಡುತ್ತಿದೆ. ॥ ೪೮ ॥ ಸಶಲ್ಯಃ - ಬಾಣದಿಂದ ಕೂಡಿರುವನಾದರೆ, ಪ್ರಾಣೈಃ - ಪ್ರಾಣಗಳೊಡನೆ, ಕ್ಲಿಶ್ಯತೇ - ಕ್ಲೇಶಗೊಳ್ಳುತ್ತಾನೆ, ವಿಶಲ್ಯಃ - ಬಾಣದಿಂದ ವಿಮುಕ್ತನಾದರೆ, ವಿನಶಿಷ್ಯತಿ - ಮೃತಪಡುತ್ತಾನೆ, ಇತಿ - ಇಂತೆಂದು, ತಸ್ಯ - ಆ ಋಷಿಗೆ, ಶಲ್ಯಾಪಕರ್ಷಣೇ - ಬಾಣವನ್ನು ತೆಗೆಯುವ ವಿಷಯದಲ್ಲಿ, ಮಾಂ - ನನ್ನನ್ನು, ಚಿಂತಾ - ಆಲೋಚನೆಯು, ಅವಿಶತ್ - ಹೊಕ್ಕಿತು. ॥ ೪೯ ॥ ದುಃಖಿತಸ್ಯ - ಅಕೃತ್ಯವನ್ನು ಮಾಡಿದೆನೆಂದು ದುಃಖವುಳ್ಳ, ಶೋಕಾತುರಸ್ಯಚ - ಬ್ರಹ್ಮಹತ್ಯೆಯು ಬರುತ್ತದೆಯೆಂಬ ಮನೋವ್ಯಥೆಯಿಂದ ಆರ್ತ ನಾದ, ದೀನಸ್ಯ - ಪರಿತಪ್ತನಾದ, ಮಮ - ನನ್ನ, ಹೃದಯೇ - ಮನದಲ್ಲಿರುವ, ಚಿಂತಾಂ-ಆಲೋ ಚನೆಯನ್ನು, ತದಾ - ಆ ಕಾಲದಲ್ಲಿ, ಮುನಿಸುತಃ - ಋಷಿಪುತ್ರನು, ಲಕ್ಷಯಾಮಾಸ - ಕಂಡನು. ॥ ೫೦ ॥ ಸಃ - ಆ ಋಷಿಪುತ್ರನು, ಕೃಚ್ಛ್ರಾತ್ - ಕಷ್ಟದಿಂದ, ತಾಮ್ಯಮಾನಃ - ಬತ್ತಿಹೋದವ ನಾಗಿ, ಪರಮಾರ್ತವತ್ - ಬಹಳ ದೀನನಾಗಿ, ಸೀದಮಾನಃ - ಸಂಕಟಬೀಳುತ್ತ, ವಿವೃತ್ತಾಂಗಃ - ಸುತ್ತುತಿರುಗುತ್ತಿರುವ ಮೈಯುಳ್ಳವನಾಗಿ, ವೇಷ್ಟಮಾನಃ - ಹೊರಳಾಡುತ್ತ, ಕ್ಷಯಂ - ನಾಶವನ್ನು,

---

ಇರುವುದು. ಇದೇ ಮಾರ್ಗದಿಂದ ನೀನೀಗಲೇ ಹೋಗಿ ಆ ಮಹಾನುಭಾವನು ಅನುಗ್ರಹ ಗೊಳ್ಳುವಂತೆ ಪ್ರಸನ್ನನನ್ನಾಗಿಮಾಡಿಕೊ! ಹೀಗೆ ಮಾಡಿದೆಯೆಂದು ಆತನು ನಿನ್ನನ್ನುಶಪಿಸುವು ದಿಲ್ಲವು. ಎಲೈ ದಶರಥರಾಯನೆ! ಉದಕವೇಗವು ಅಧಿಕವಾಗಿ ಮೆತ್ತಗಿರುವ ದಡವನ್ನು ಕೊರೆಯುವಂತೆ, ತೀಕ್ಷ್ಣವಾದ ಈ ಬಾಣವು ನನ್ನ ಮರ್ಮಸ್ಥಾನವನ್ನು ಕೊರೆಯುತ್ತಿರು ವುದು. ಆದುದರಿಂದ ನೀನಿದನ್ನು ಕಿತ್ತುಹಾಕು” ಆ ಮುನಿಸುತನಿಂತೆನಲು, ಬಾಣವನ್ನು ಕಿತ್ತುಹಾಕಿದರೆ ಮೃತಪಡುವನೆಂದೂ, ಬಾಣವು ಹಾಗೆಯೇ ಶರೀರದಲ್ಲಿದ್ದರೆ ಬಾಧೆಗೊಳ್ಳುವ ನೆಂದೂ ನನಗೆ ತೋರಿತು. “ಇಂತಹ ಕ್ರೂರಕೃತ್ಯವನ್ನು ಮಾಡಿದೆನಲ್ಲ!” ಎಂದು ದುಃಖ ವುಳ್ಳವನಾಗಿಯೂ, “ಬ್ರಹ್ಮಹತ್ಯೆಯು ಬರುತ್ತದೆಯಲ್ಲ” ಎಂಬ ಮನೋವ್ಯಥೆಯುಳ್ಳವನಾ ಗಿಯೂ ಆಗಿ ಮನೋವ್ಯಥೆಯಿಂದ, ದೀನನೂ, ಆರ್ತನೂ ಆದ ನನ್ನ ಮನಸ್ಸಿನ ಆಲೋಚನೆ ಯನ್ನು ಆ ಮುನಿಕುಮಾರನು ತಿಳಿದನು. ॥ ೪೭-೫೦ ॥ ಆಗಲಾತನು ನನ್ನನ್ನು ನೋಡಿ “ಎಲೈ ದಶರಥರಾಯನೆ! ನಾನು ಧೈರ್ಯದಿಂದ ದುಃಖವನ್ನು ಕಳೆದುಕೊಂಡು ದೃಢಚಿತ್ತ

ಕ್ಷಯಂ ॥ ೫೧ ॥ ಸಂಸ್ತಭ್ಯ ಶೋಕಂ ಧೈರ್ಯೇಣ ಸ್ಥಿರಚಿತ್ತೋ ಭವಾನಘ! ॥ ಬ್ರಹ್ಮಹತ್ಯಾಕೃತಂ ಪಾಪಂ ಹೃದಯಾ ದಪನೀಯತಾಂ॥೫೨॥ನದ್ವಿಜಾತಿ ರಹಂ ರಾಜನ್! ಮಾಭೂತ್ತೇ ಮನಸೋ ವ್ಯಥಾ ॥ (೧) ಶೂದ್ರಾಯಾಮಪಿ ವೈಶ್ಯೇನ ಜಾತೋ ಜನಪದಾಧಿಪ! ॥ ೫೩ ॥ ಇತೀವ ವದತಃ ಕೃಛ್ರಾದ್ಬಾಣಾಭಿಹತ ಮರ್ಮಣಃ ॥ ವಿಘೂರ್ಣತೋ ವಿಚೇಷ್ಟಸ್ಯ ವೇಪಮಾನಸ್ಯ ಭೂತಲೇ ॥ ೫೪ ॥ ತಸ್ಯ ತ್ವಾನಮ್ಯಮಾನಸ್ಯ ತಂ ಬಾಣಮಹ ಮುದ್ಧರಂ ॥ ಸ ಮಾಮುದ್ವೀಕ್ಷ್ಯ ಸಂತ್ರಸ್ತೋ ಜಹೌ ಪ್ರಾಣಾಂ ಸ್ತಪೋಧನಃ ॥ ೫೫ ॥

ಗತಃ - ಹೊಂದುವವನಾಗಿ, ಮಾಂ - ನನ್ನನ್ನು ಕುರಿತು, ಉವಾಚ - ಹೇಳಿದನು. ॥ ೫೧ ॥ ಹೇ ಅನಘ - ಎಲೈ ನಿರ್ದೋಷನೇ, ಧೈರ್ಯೇಣ - ಧೈರ್ಯದಿಂದ, ಶೋಕಂ - ಮನೋವ್ಯಥೆಯನ್ನು, ಸಂಸ್ತಭ್ಯ - ನಿಗ್ರಹಿಸಿ, ಸ್ಥಿರಚಿತ್ತಃ - ಸ್ಥಿರವಾದ ಮನವುಳ್ಳವನು, ಭವ - ಆಗು, ಬ್ರಹ್ಮಹತ್ಯಾಕೃತಂ-ಬ್ರಾಹ್ಮಣಹತ್ಯೆಯಿಂದ ಮಾಡಿದ ಪಾಪವು, ಹೃದಯಾತ್ - ಮನಸ್ಸಿನಿಂದ, ಅಪನೀಯತಾಂ-ಕಳೆಯುವವನಾಗು. ॥ ೫೨ ॥ ಹೇ ರಾಜನ್ - ಎಲೈ ಅರಸನೇ, ಅಹಂ - ನಾನು, ದ್ವಿಜಾತಿಃ - ಬ್ರಾಹ್ಮಣನು, ನ - ಅಲ್ಲ, ತೇ - ನಿನಗೆ, ಮನಸಃ - ಮನಸ್ಸಿಗೆ, (ದುಃಖಂ - ವ್ಯಸನವು,) ಮಾಭೂತ್ - ಆಗಬೇಡ, ಹೇ ಜನಪದಾಧಿಪ - ಎಲೈ ದೇಶಾಧಿಪತಿಯೇ, ಶೂದ್ರಾಯಾಂ ಶೂದ್ರಸ್ತ್ರೀಯಲ್ಲಿ, ವೈಶ್ಯೇನ - ವೈಶ್ಯನಿಂದ, ಜಾತಃ - ಹುಟ್ಟಿದವನು, ಅಸ್ಮಿ - ಆಗಿರುವೆನು. ॥ ೫೩ ॥ ಇತೀವ-ಹೀಗೆಯೇ, ವದತಃ - ಹೇಳುತ್ತಿರುವ, ಕೃಚ್ಛ್ರಾತ್-ಕಷ್ಟದಿಂದ, ಬಾಣಾಭಿಹತಮರ್ಮಣಃ - ಬಾಣದಿಂದ ಹೊಡೆಯಲ್ಪಟ್ಟ ಮರ್ಮಸ್ಥಾನವುಳ್ಳ, ವಿಘೂರ್ಣತಃ - ತಿರುಗುತ್ತಿರುವ, ವಿಚೇಷ್ಟಸ್ಯ - ನಿಂತುಹೋದ ಅಂಗಚೇಷ್ಟೆಗಳುಳ್ಳ, ಭೂತಲೇ - ನೆಲದಲ್ಲಿ, ವೇಪಮಾನಸ್ಯ - ನಡುಗುತ್ತಿರುವ, ಅನಮ್ಯಮಾನಸ್ಯ - ಕುಗ್ಗಿಹೋದ, ತಸ್ಯ - ಆ ಋಷಿಪುತ್ರನ, ತಂಬಾಣಂತು - ಆ ಬಾಣವನ್ನಾದರೆ, ಉದ್ಧರಂ - ತೆಗೆದುಹಾಕಿದೆನು, ಸತಪೋಧನಃ ಆ ಮುನಿಪುತ್ರನು, ಸಂತ್ರಸ್ತಃ - ಭಯಗೊಂಡು, ಮಾಂ - ನನ್ನನ್ನು,

---

ನಾಗುತ್ತಿರುವೆನು. ನೀನು ಮನಸ್ಸಿನಲ್ಲಿ ಬ್ರಹ್ಮಹತ್ಯಾದೋಷವು ಬರುತ್ತದೆಯೆನೋಯೆಂದು ಭಯಪಡಬೇಡ. ನಿನಗಾಹತ್ಯಾದೋಷವೆಂದಿಗೂ ಬರುವುದಿಲ್ಲ. ಆದುದರಿಂದ ಸಂದೇಹವನ್ನು ತ್ಯಜಿಸುವವನಾಗು! ನಾನು ಬ್ರಾಹ್ಮಣನಲ್ಲವು; ನಿನ್ನ ಮನಸ್ಸಿಗೆ ದುಃಖವು ಬಾರದಿರಲಿ; ನಾನು ಶೂದ್ರಸ್ತ್ರೀಯಲ್ಲಿ ವೈಶ್ಯನಿಗೆ ಹುಟ್ಟಿದವನು. ಆದುದರಿಂದ ನೀನು ಭಯವನ್ನು ಹೊಂದಕೂಡದು" ಎಂದು ಕಷ್ಟದಿಂದ ಹೇಳಿದನು. ಇಷ್ಟೆಯಲ್ಲದೆ ಆತನು ಒಂದುಸಲ ನಿಶ್ಚೇಷ್ಟನೂ, ಒಂದುಸಲ ನೆಲದಮೇಲೆಬಿದ್ದು ಒಣಕುತ್ತಿರುವವನೂ, ಇನ್ನೊಂದುಸಲ ಗಡಗಡನೆ ನಡುಗುತ್ತಿರುವ ದೇಹವುಳ್ಳವನೂ ಆಗಿದ್ದನು. ಹೀಗೆ ಬಾಧೆಪಡುತ್ತಿರುವ ಮುನಿಪುತ್ರನ ಶರೀರದಲ್ಲಿ ನಾಟಿಕೊಂಡಿದ್ದ ಬಾಣವನ್ನು ನಾನು ಕಿತ್ತುಹಾಕಿ

ಟಿ. (೧) "ಶೂದ್ರಾವಿಶೋಸ್ತುಕರಣಃ" ಎಂದು ಅಮರಕಾರನ ಹೇಳಿಕೆ. ಶೂದ್ರಸ್ತ್ರೀಯಲ್ಲಿ ವೈಶ್ಯನಿಂದ ಹುಟ್ಟಿದವನಿಗೆ "ಕರಣ"ನೆಂದು ಹೆಸರು.

ಜಲಾರ್ದ್ರ ಗಾತ್ರಂತು ವಿಲಪ್ಯ ಕೃಛ್ರಾ
ನ್ಮರ್ಮವ್ರಣಂ ಸಂತತ ಮುಚ್ಛ್ವಸಂತಂ ||
ತತಸ್ಸರಯ್ವಾಂ ತಮಹಂ ಶಯಾನಂ
ಸಮೀಕ್ಷ್ಯ ಭದ್ರೇಽಸ್ಮಿ ಭೃಶಂ ವಿಷಣ್ಣಃ || ೫೬ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಿಷಷ್ಟಿತಮಸ್ಸರ್ಗಃ.

ಉದ್ವೀಕ್ಷ್ಯ - ಚನ್ನಾಗಿನೋಡಿ, ಪ್ರಾಣಾ - ಪ್ರಾಣಗಳನ್ನು, ಜಹೌ - ಬಿಟ್ಟನು. ||೫೪-೫೫|| ಹೇ ಭದ್ರೇ - ಎಲೌ ಶುಭಕರಳೇ, ತತಃ - ಬಳಿಕ, ಅಹಂ - ನಾನು, ಕೃಚ್ಛ್ರಾತ್ - ಕಷ್ಟದಿಂದ, ವಿಲಪ್ಯ-ರೋದಿಸಿ, ಜಲಾರ್ದ್ರಗಾತ್ರಂ - ನೀರಿನಿಂದ ನೆಂದುಹೋದ ಶರೀರವುಳ್ಳ, ಮರ್ಮವ್ರಣಂ - ಮರ್ಮ ಸ್ಥಾನದಲ್ಲಿ ಘಾಯವುಳ್ಳ, ಸಂತತಂ - ನಿರಂತರವು, ಉಚ್ಛ್ವಸಂತಂ - ಉಚ್ಛ್ವಾಸ ನಿಶ್ವಾಸಗಳನ್ನು ಬಿಡುತ್ತಿರುವ, ಸರಯ್ವಾಂ - ಸರಯೂನದಿಯಲ್ಲಿ, ಶಯಾನಂ - ಮಲಗಿರುವ, ತಂ - ಆ ಋಷಿಪುತ್ರ ನನ್ನು, ಸಮೀಕ್ಷ್ಯ - ಕಂಡು, ಭೃಶಂ - ಬಹಳವಾಗಿ, ವಿಷಣ್ಣಃ - ವಿಷಾದಗೊಂಡವನು, ಅಸ್ಮಿ - ಆದೆನು. || ೫೬ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಿಷಷ್ಟಿತಮಸ್ಸರ್ಗಃ.

ದೆನು. ಆಗಲಾತನು ನನ್ನನ್ನು ನೋಡುತ್ತ ಪ್ರಾಣಗಳನ್ನು ತೊರೆದನು. ಮಂಗಳಸ್ವರೂಪಿಣಿಯಾದ ಎಲೌ ದೇವಿಯೆ! ಆ ಸಮಯದಲ್ಲಿ ಹೀಗೆ ಕಷ್ಟದಿಂದ ಅಳುತ್ತಲಿದ್ದನಾದುದರಿಂದ ಮಾತನಾಡಲಾಗದೆ ನಿಟ್ಟುಸಿರುಗಳನ್ನು ಬಿಡುತ್ತಿರುವನೂ, ನೀರಿನಿಂದ ನೆಂದ ಶರೀರವುಳ್ಳವನೂ, ಜೀವಸ್ಥಾನದಲ್ಲಿ ವ್ರಣವುಳ್ಳವನೂ, ಸರಯೂನದೀತೀರದಲ್ಲಿ ಬಿದ್ದಿರುವವನೂ ಆದ ಆ ಮುನಿಕುಮಾರನನ್ನು ನೋಡಿ ಅಧಿಕವಾದ ದುಃಖವುಳ್ಳವನಾದೆನು. || ೫೧-೫೬ ||

ಇಂತಿದು ದಶರಥರಾಜ ನಿರೂಪಿತ ಸ್ವಶಾಪವಿಧಾನ ಕಥಾಕಥನವೆಂಬ
ಅರವತ್ತಮೂರನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಚತುಷ್ಷಷ್ಠಿತಮಸ್ಸರ್ಗಃ.

ವಧಮಪ್ರತಿರೂಪಂತು ಮಹರ್ಷೇ ಸ್ತಸ್ಯ ರಾಘವಃ || ಪ್ರಲಪನ್ನೇವ ಧರ್ಮಾತ್ಮಾ ಕೌಸಲ್ಯಾಂ ಪುನರಬ್ರವೀತ್ || ೧ || ತದಜ್ಞಾನಾ ನ್ಮಹತ್ಪಾಪಂ ಕೃತ್ವಾಹಂ ವ್ಯಾಕುಲೇಂದ್ರಿಯಃ || ಏಕಸ್ತ್ವಚಿಂತಯಂ ಬುದ್ಧ್ಯಾ ಕಥನ್ನು ಸುಕೃತಂ ಭವೇತ್||೨||ತತಸ್ತಂ ಘಟಮಾದಾಯ ಪೂರ್ಣಂ ಪರಮವಾರಿಣಾ || ಆಶ್ರಮಂ ತಮಹಂ ಪ್ರಾಪ್ಯ ಯಥಾ ಖ್ಯಾತಪಥಂ ಗತಃ || ೩ || ತತ್ರಾಹಂ ದುರ್ಬಲಾವಂಧೌ ವೃದ್ಧಾವಪರಿಣಾಯಕೌ || ಅಪಶ್ಯಂ ತಸ್ಯ ಪಿತರೌ ಲೂನ

ಧರ್ಮಾತ್ಮಾ - ಧರ್ಮದಲ್ಲಿಯೇ ಮನವುಳ್ಳ, ರಾಘವಃ - ದಶರಥರಾಯನು, ಮಹರ್ಷೇಃ - ಮಹಾಋಷಿಯಾದ, ತಸ್ಯ - ಆ ಋಷಿಪುತ್ರನ, ಅಪ್ರತಿರೂಪಂ - ಪ್ರತಿಕ್ರಿಯೆಯಿಲ್ಲದೇಲೇ, ವಧಂ- ಸಂಹಾರವನ್ನು, ಪ್ರಲಪನ್ನೇವ - ಹೇಳುತ್ತ, ಕೌಸಲ್ಯಾಂ - ಕೌಸಲ್ಯಾದೇವಿಯನ್ನು ಕುರಿತು, ಪುನಃ - ಮತ್ತೆ, ಅಬ್ರವೀತ್ - ನುಡಿದನು. || ೧ || ಅಹಂ - ನಾನು, ಅಜ್ಞಾನಾತ್ - ಅಜ್ಞಾನದಿಂದ, ಮಹತ್ - ದೊಡ್ಡದಾದ, ತತ್ಪಾಪಂ - ಆ ಪಾಪಕೃತ್ಯವನ್ನು, ಕೃತ್ವಾ - ಮಾಡಿ, ವ್ಯಾಕುಲೇಂದ್ರಿಯಃ - ದುಃಖಿತವಾದ ಮನವುಳ್ಳವನಾಗಿ, ಬುಧ್ಯಾ - ಬುದ್ಧಿಯಿಂದ, ಏಕಃ - ಒಬ್ಬನೇ, ಸುಕೃತಂ - ಪುಣ್ಯವು, ಕಥಂಭವೇದಿತಿ - ಉಂಟಾಗುವುದು ಹೇಗೆಂದು, ಅಚಿಂತಯಂ - ಆಲೋಚಿಸಿದೆನು. || ೨ || ತತಃ - ಬಳಿಕ, ಅಹಂ - ನಾನು, ಪರಮವಾರಿಣಾ - ಉತ್ತಮವಾದ ನೀರಿನಿಂದ, ಪೂರ್ಣಂ - ತುಂಬಿದ, ತಂಘಟಂ - ಆ ಗಡಿಗೆಯನ್ನು, ಆದಾಯ - ತೆಗದುಕೊಂಡು, ಯಥಾಖ್ಯಾತಪಥಂ - ಋಷಿಕುವರನಿಂದ ಹೇಳಲ್ಪಟ್ಟ ಮಾರ್ಗವನ್ನನುಸರಿಸಿ, ಪ್ರಾಪ್ಯ - ಹೋಗಿ, ತಮಾಶ್ರಮಂ - ಆ ಆಶ್ರಮವನ್ನು ಕುರಿತು, ಗತಃ - ಹೋದೆನು. || ೩ || ತತ್ರ - ಆ ಆಶ್ರಮದಲ್ಲಿ, ಅಹಂ - ನಾನು, ದುರ್ಬಲೌ - ಬಲಹೀನರಾದ, ವೃದ್ಧೌ - ಮುದುಕರಾದ, ಅಪರಿಣಾಯಕೌ - ಸಂರ

ಧರ್ಮಾತ್ಮನೂ, ರಘುವಂಶೋದ್ಭವನೂ ಆದ ದಶರಥರಾಜನು ತಾನು ಹಿಂದೆ ಅಕ್ರಮದಿಂದ ಮುನಿಕುಮಾರನನ್ನು ಕೊಂದ ವೃತ್ತಾಂತವನ್ನು ಸ್ಮರಣೆಗೆ ತಂದುಕೊಂಡು, ಕೌಸಲ್ಯಾದೇವಿಯನ್ನು ನೋಡಿ ಆಗಲೂ ಅತಿ ದುಃಖಿತನಾಗಿ ಇಂತೆಂದನು. " ಓ ದೇವಿ ! ಕೇಳು, ನಾನು ತಿಳಿವಳಿಕೆಯಿಲ್ಲದವನಾಗಿ ಇಂತಹ ಮಹತ್ಪಾಪವನ್ನು ಮಾಡಿದವನಾದೆನು. " ಇಂತಹ ಪಾಪವನ್ನು ವ್ಯಾಕುಲೇಂದ್ರಿಯನಾದ ನಾನೊಬ್ಬನೇ ಮಾಡಿದೆನು. ಇಂತಹ ನನಗೆ ಸದ್ಗತಿಯು ಹೇಗೆತಾನೆ ದೊರಕುವುದು " ಎಂದು ಹೇಳಿ ಸ್ವಲ್ಪಹೊತ್ತು ದುಃಖಿಸಿ, ಸ್ವಲ್ಪ ಹೊತ್ತಿನ ಮೇಲೆ ಧೈರ್ಯವನ್ನು ತಂದುಕೊಂಡವನಾದೆನು. ಆಮೇಲೆ ಸರಯೂನದೀ ಜಲದಿಂದ ತುಂಬಲ್ಪಟ್ಟ ಆ ಕುಂಭವನ್ನು ತೆಗೆದುಕೊಂಡು, ಆ ಮುನಿಕುಮಾರನು ಹೇಳಿದ ಮಾರ್ಗವಾಗಿ ಆತನ ತಂದೆಯಿದ್ದಾಶ್ರಮಕ್ಕೆ ಹೋದೆನು. ಇಂತು ಆ ಆಶ್ರಮಕ್ಕೆ

ಪಕ್ಷಾ ವಿವದ್ವಿಜೌ ॥ ೪ ॥ ತನ್ನಿಮಿತ್ತಾಭಿರಾಸೀನೌ ಕಥಾಭಿ ರಪರಿಕ್ರಮೌ ॥ ತಾವಾಶಾಂ ಮತ್ಕೃತೇ ಹೀನಾ ವುದಾಸೀನಾ ವನಾಥವತ್ ॥೫॥ ಶೋಕೋಪಹತ ಚಿತ್ತಶ್ಚ ಭಯಸಂತ್ರಸ್ತ ಚೇತನಃ ॥ ತಚ್ಚಾಶ್ರಮಪದಂ ಗತ್ವಾ ಭೂಯಶ್ಶೋಕಮಹಂ ಗತಃ ॥ ೬ ॥ ಪದಶಬ್ದಂತು ಮೇ ಶ್ರುತ್ವಾ ಮುನಿರ್ವಾಕ್ಯಮಭಾಷತ ॥ ಕಿಂ ಚಿರಾಯಸಿ ಮೇ ಪುತ್ರ ! ಪಾನೀಯಂ ಕ್ಷಿಪ್ರಮಾನಯ ॥೭॥ ಯನ್ನದತ್ತಮಿದಂ ತಾತ! ಸಲಿಲೇ ಕ್ರೀಡಿತಂ ತ್ವಯಾ ॥ ಉತ್ಕಂಠಿತಾ ತೇ ಮಾತೇಯಂ ಪ್ರವಿಶ ಕ್ಷಿಪ್ರಮಾಶ್ರಮಂ ॥ ೮ ॥ ಯದ್ವ್ಯಲೀಕಂ ಕೃತಂ ಪುತ್ರ!

ಕ್ಷಣಕರ್ತನಿಲ್ಲದಿರುವ, ಲೂನಪಕ್ಷೌ - ಕತ್ತರಿಸಲ್ಪಟ್ಟ ರೆಕ್ಕೆಗಳುಳ್ಳ, ದ್ವಿಜಾವಿವ - ಹಕ್ಕಿಗಳಂತಿರುವ, ತಸ್ಯ - ಅವನ, ಪಿತರೌ - ತಾಯಿತಂದೆಗಳನ್ನು, ಅಪಶ್ಯಂ - ಕಂಡೆನು. ॥ ೪ ॥ ತನ್ನಿಮಿತ್ತಾಭಿಃ- ಆ ಪುತ್ರನವಿಷಯಕಗಳಾದ, ಕಥಾಭಿಃ - ಮಾತುಗಳಿಂದಲೇ, ಆಸೀನಂ - ಕುಳಿತುಕೊಂಡಿರುವ, ಅಪರಿಕ್ರಮೌ - ಕುಂಟರಾದ, ತಾವಾತಾಂ - ಆ ಪುತ್ರನ ಆಶೆಯನ್ನು ಕುರಿತು, ಮತ್ಕೃತೇ - ನನ್ನ ನಿಮಿತ್ತವಾಗಿ, ಹೀನೌ - ರಹಿತರಾದ, ಅನಾಥವತ್ - ನಾಥನಿಲ್ಲದೆ, ಉದಾಸೀನೌ - ಪ್ರಯತ್ನರಹಿತರಾದ ಆ ದಂಪತಿಗಳನ್ನು, (ಅಪಶ್ಯಂ - ಕಂಡೆನು.) ॥ ೫ ॥ ಶೋಕೋಪಹತಚಿತ್ತಶ್ಚ - ವ್ಯಸನದಿಂದ ಕಲುಷಿತವಾದ ಮನವುಳ್ಳ, ಭಯ - ದಂಪತಿಗಳ ಭೀತಿಯಿಂದ, ಸಂತ್ರಸ್ತಚೇತಸಃ - ಹೆದರಿದ ಬುದ್ಧಿಯುಳ್ಳ, ಅಹಂ - ನಾನು, ತಚ್ಚಾಶ್ರಮಪದಂ - ಆ ಆಶ್ರಮಸ್ಥಾನವನ್ನು, ಗತ್ವಾ-ಹೊಂದಿ, ಭೂಯಃ- ಮತ್ತು, ಶೋಕಂ - ವ್ಯಸನವನ್ನು, ಗತಃ - ಹೊಂದಿದೆನು. ॥ ೬ ॥ ಮುನಿಃ - ಋಷಿಯು, ಮೇ - ನನ್ನ, ಪದಶಬ್ದಂತು - ಪಾದವಿನ್ಯಾಸ ಧ್ವನಿಯನ್ನು, ಶೃತ್ವಾ - ಕೇಳಿ, ಹೇ ಪುತ್ರ - ಎಲೈ ಮಗನೇ, ಕಿಂಚಿರಾಯಸಿ - ಸಾವಕಾಶಮಾಡಿದೆಯೇಕೆ, ಮೇ - ನನಗೆ, ಕ್ಷಿಪ್ರಂ - ಜಾಗ್ರುತೆಯಾಗಿ, ಪಾನೀಯಂ- ಉದಕವನ್ನು, ಆನಯ - ತೆಗದುಕೊಂಡುಬಾ. ॥ ೭ ॥ ಹೇ ತಾತ - ಎಲೈ ಅಪ್ಪನೇ, ಇದಂ - ಉದಕವು, ಯತ್ - ಯಾವ ಕಾರಣ, ನದತ್ತಂ - ಕೊಡಲಾಗಲಿಲ್ಲವೋ,(ತತ್ - ಆ ಕಾರಣ,) ತ್ವಯಾ - ನಿನ್ನಿಂದ, ಸಲಿಲೇ - ನೀರಿನಲ್ಲಿ, ಕ್ರೀಡಿತಂ - ಈಜಾಡಲ್ಪಟ್ಟಿತು, ತೇ - ನಿನ್ನ, ಇಯಂ

ಹೋಗಿ, ಬಲಹೀನರೂ, ವೃದ್ಧರೂ, ಅಂಧರೂ, ದಿಕ್ಕಿಲ್ಲದವರೂ, ರೆಕ್ಕೆಗಳುದುರಿದ ಪಕ್ಷಿಗಳಂತಿರುವವರೂ, ಪುತ್ರನಿಮಿತ್ತವಾದ ಮಾತುಗಳಿಂದ ಕಾಲವನ್ನು ಕಳೆಯುತ್ತಿರುವವರೂ, ಹೆಜ್ಜೆಯಿಡುವುದಕ್ಕೂ ಶಕ್ತಿಯಿಲ್ಲದವರೂ, ಆದುದರಿಂದಲೇ ಪುತ್ರವಿಷಯಿಕವಾದ ಆಶೆಯುಳ್ಳವರೂ, ಯಾವ ವಿಧವಾದ ಪ್ರಯತ್ನವನ್ನು ಮಾಡಲಾರದವರೂ, ದಿಕ್ಕಿಲ್ಲದವರಂತಿರುವವರೂ ಆದ ಆ ಋಷಿಕುಮಾರನ ಮಾತಾಪಿತೃಗಳನ್ನು ಕಂಡವನಾದೆನು. ಆ ಮುನಿಸುತನನ್ನು ಕೊಂದುದರಿಂದ ಅಧಿಕವಾದ ದುಃಖವುಳ್ಳವನೂ, ಭಯದಿಂದ ಭ್ರಾಂತವಾದ ಬುದ್ಧಿಯುಳ್ಳವನೂ ಆದ ನಾನು ಆ ಆಶ್ರಮಸ್ಥಾನವನ್ನು ಹೊಂದಿದ ಕೂಡಲೇ ನನ್ನ ದುಃಖವು ಬಹಳ ಹೆಚ್ಚಿತು. ಆಗಲಾ ಮುನೀಶ್ವರನು ನನ್ನ ಕಾಲುಗಳ ಧ್ವನಿಯನ್ನು ಕೇಳಿದ ಕೂಡಲೇ ಹೀಗೆಂದನು. “ವತ್ಸ! ನೀನೇಕೆ ಬೇಗನೆ ಉದಕವನ್ನು ತಂದುಕೊಡಲಿಲ್ಲ! ಯೋಚಿಸಿದರೆ ನೀನಿಷ್ಟು ಹೊತ್ತು ಜಲಕ್ರೀಡೆಯಾಡುತಿದ್ದೆಯೆಂದು ತೋರುತ್ತದೆ.

ಮಾತ್ರಾ ತೇ ಯದಿವಾ ಮಯಾ ॥ ನತನ್ಮನಸಿ ಕರ್ತವ್ಯಂ ತ್ವಯಾ ತಾತ! ತಪ
ಸ್ವಿನಾ ॥ ೯ ॥ ತ್ವಂ ಗತಿ ಸ್ತ್ವಗತೀನಾಂಚ ಚಕ್ಷುಸ್ತ್ವಂ ಹೀನಚಕ್ಷುಷಾಂ ॥
ಸಮಾಸಕ್ತಾ ಸ್ತ್ವಯಿ ಪ್ರಾಣಾಃ ಕಿಂ ತ್ವಂ ನೋ ನಾಭಿಭಾಷಸೇ ॥೧೦॥ ಮುನಿ
ಮವ್ಯಕ್ತಯಾ ವಾಚಾ ತಮಹಂ ಸಜ್ಜಮಾನಯಾ ॥ ಹೀನವ್ಯಂಜನಯಾ
ಪ್ರೇಕ್ಷ್ಯ ಭೀತೋ ಭೀತಇವಾಬ್ರುವಂ ॥ ೧೧ ॥ ಮನಸಃ ಕರ್ಮ ಚೇಷ್ಟಾಭಿ
ರಭಿಸಂಸ್ತಭ್ಯ ವಾಗ್ಬಲಂ ॥ ಆಚಚಕ್ಷೇ ತ್ವಹಂ ತಸ್ಮೈ ಪುತ್ರವ್ಯಸನಜಂ

ಮಾತಾ - ಈ ತಾಯಿಯ, ಉತ್ಕಂಠಿತಾ - ಜಲಪಾನದಲ್ಲಿ ಬಹಳ ಆಸಕ್ತಳಾಗಿರುವಳು, ಕ್ಷಿಪ್ರಂ - ಜಾಗ್ರುತೆಯಾಗಿ, ಆಶ್ರಮಂ - ಆಶ್ರಮವನ್ನು, ಪ್ರವಿಶ - ಪ್ರವೇಶಿಸು. ॥ ೮ ॥ ಹೇ ಪುತ್ರ - ಎಲೈ ಮಗನೇ, ತೇ - ನಿನಗೆ, ಮಾತ್ರಾ - ತಾಯಿಯಿಂದ, ಯದಿವಾ - ಹಾಗಲ್ಲದೇ ಹೋದರೆ, ಮಯಾವಾ- ನನ್ನಿಂದಲಾದರೂ, ಯದ್ವ್ಯಳೀಕಂ - ಯಾವ ಅಪರಾಧವು, ಕೃತಂ - ಮಾಡಲ್ಪಟ್ಟಿತೋ, ಹೇ ತಾತ - ಎಲೈ ವತ್ಸನೆ ! ತತ್ - ಅದು, ಮನಸಿ - ಮನಸ್ಸಿನಲ್ಲಿ, ತಪಸ್ವಿನಾ - ತಪಸ್ವಿಯಾದ, ತ್ವಯಾ - ನಿನ್ನಿಂದ, ನಕರ್ತವ್ಯಂ - ಮಾಡತಕ್ಕುದಲ್ಲ. ॥ ೯ ॥ ತ್ವಂ - ನೀನು, ಅಗತೀನಾಂ - ಗತಿಯಿಲ್ಲದವರಿಗೆ, ಗತಿಃ - ರಕ್ಷಕನು, ತ್ವಂ - ನೀನು, ಹೀನಚಕ್ಷುಷಾಂ - ನೇತ್ರಹೀನರಾದವರಿಗೆ, ಚಕ್ಷುಃ - ನೇತ್ರಪ್ರಾಯನಾಗಿರುವೆ, ತ್ವಯಿ - ನಿನ್ನಲ್ಲಿ, ಪ್ರಾಣಾಃ - ಪ್ರಾಣಗಳು, ಸಮಾಸಕ್ತಾಃ - ಚನ್ನಾಗಿ ಆಸಕ್ತವಾಗಿವೆ, ತ್ವಂ - ನೀನು, ನಃ - ನಮ್ಮನ್ನು ಕುರಿತು, ಕಿನ್ನಾಭಿಭಾಷಸೇ - ಏತಕ್ಕೆಮಾತನಾಡುವದಿಲ್ಲ, ಇತಿ - ಇಂತೆಂದು, ವಾಕ್ಯಂ - ಮಾತನ್ನು, ಅಭಿಭಾಷತ - ಹೇಳಿದನು, ॥೧೦॥ ಭೀತಃ - ಭಯಗೊಂಡ, ಅಹಂ - ನಾನು, ತಂಮುನಿಂ - ಆ ಋಷಿಯನ್ನು, ಪ್ರೇಕ್ಷ್ಯ - ಕಂಡು, ಅವ್ಯಕ್ತಯಾ - ಸ್ಪಷ್ಟವಿಲ್ಲದಿರುವ, ಸಜ್ಜಮಾನಯಾ - ಮಾತಿನಿಂದ, ಭೀತಇವ - ಅತ್ಯಂತ ಭೀತಿಗೊಂಡವನಂತೆ, ಅಬ್ರುವಂ - ನುಡಿದೆನು. ॥ ೧೧ ॥ ಮನಸಃ - ಮನಸ್ಸಿನ, ಕರ್ಮ - ಚಲನಾತ್ಮಕ ವ್ಯಾಪಾರದಿಂದಲೂ, ಚೇಷ್ಟಾಭಿಃ - ಶರೀರವ್ಯಾಪಾರದಿದಲೂ, ವಾಗ್ಬಲಂ-ವಾಗ್ವ್ಯಾಪಾರವನ್ನು, ಸಂಸ್ತಭ್ಯ-

---

ಮಗನೆ ! ನೀನೇಕೆ ಇಷ್ಟು ಹೊತ್ತು ಜಲಕ್ರೀಡೆಯಾಡಿದೆ? ಈ ವಿಷಯವೆಲ್ಲವನ್ನೂ ಹೇಳು. ನೀನು ಇಷ್ಟುಹೊತ್ತಿನವರೆವಿಗೂ ಬಾರದಿದ್ದುದರಿಂದ, ನಿನ್ನ ತಾಯಿಯು ಅಧಿಕವಾಗಿ ದುಃಖವನ್ನು ಹೊಂದುತ್ತಿರುವಳಲ್ಲ ! ಆದುದರಿಂದೆಲೈ ಕುಮಾರನೆ ! ಬೇಗನೆ ಆಶ್ರಮದೊಳಗೆ ಬಾ! ಮಗನೆ ! ನಿನಗೆ ನಿನ್ನ ಜನನಿಯೇನಾದರೂ ಅಪಕಾರವನ್ನು ಮಾಡಿದಳೆ ! ನಾನೇನಾದರೂ ಅಪಕೃತಿಯೆಣಿಸಿದೆನೆ ? ಮಾಡಲಿಲ್ಲವಷ್ಟೆ ; ಒಂದುವೇಳೆ ಮಾಡಿದ್ದರೂ ನೀನು ತಪೋವಂತನಾದುದರಿಂದ ಅದನ್ನು ಮನಸ್ಸಿಗೆ ತಂದುಕೊಳ್ಳಬೇಡ ! ನಾವು ದಿಕ್ಕಿಲ್ಲದವರಾದುದರಿಂದ, ನಮಗೆ ನೀನೇದಿಕ್ಕು ! ನಮಗೆ ಕಣ್ಣುಗಳಿಲ್ಲವಾದುದರಿಂದ ನಮಗೆ ನೀನೇ ನೇತ್ರವಾಗಿರುತ್ತೀಯೆ! ನಮ್ಮ ಪಂಚಪ್ರಾಣಗಳೂ ನಿನ್ನನ್ನೇಹೊಂದಿರುತ್ತವೆ! ಇಂತಹ ನಮ್ಮೊಡನೆ ನೀನೇಕೆ ಮಾತನಾಡುವುದಿಲ್ಲ?'' ಆ ಮುನಿಯು ಈರೀತಿ ಕೇಳುತ್ತಿರಲೆ, ನಾನಾತನನ್ನು ನೋಡಿ ಬಹಳ ಭಯಗೊಂಡೆನು. ಹೀಗೆ ಭಯಗೊಂಡವನೂ, ಗದ್ಗದಸ್ವರಭರಿತನಾದವನೂ ಆದ ನಾನು, ವ್ಯಾಪಾರದಿಂದಲೂ, ಮನಸ್ಸಿನ ಕಾರ್ಯದಿಂದಲೂ, ವಾಗ್ಬಲವನ್ನೂ ಅಣಗಿಸಿಕೊಂಡು,

ಭಯಂ ॥ ೧೨ ॥ ಕ್ಷತ್ರಿಯೋಽಹಂ ದಶರಥೋ ನಾಹಂ ಪುತ್ರೋ ಮಹಾತ್ಮನಃ ॥
ಸಜ್ಜನಾವಮತಂ ದುಃಖಮಿದಂ ಪ್ರಾಪ್ತಂ ಸ್ವಕರ್ಮಜಂ ॥ ೧೩ ॥ ಭಗವನ್ !
ಚಾಪಹಸ್ತೋಽಹಂ ಸರಯೂತೀರ ಮಾಗತಃ ॥ ಜಿಘಾಂಸು ಶ್ವಾಪದಂ ಕಿಂಚಿ
ನ್ನಿಪಾನೇ ಚಾಗತಂ ಗಜಂ ॥ ೧೪ ॥ ತತ ಶ್ಶ್ರುತೋ ಮಯಾ ಶಬ್ದೋ ಜಲೇ
ಕುಂಭಸ್ಯ ಪೂರ್ಯತಃ ॥ ದ್ವಿಪೋಽಯಮಿತಿ ಮತ್ವಾಯಂ ಬಾಣೇನಾಭಿಹತೋ
ಮಯಾ ॥೧೫॥ ಗತ್ವಾ ನದ್ಯಾ ಸ್ತತಸ್ತೀರ ಮಪಶ್ಯಮಿಷುಣಾ ಹೃದಿ॥ವಿನಿರ್ಭಿನ್ನಂ

ನಿಯಮಿಸಿ, ಅಹಂತು - ನಾನಾದರೆ, ತಸ್ಮೈ - ಆ ಋಷಿಗೆ, ಪುತ್ರವ್ಯಸನಂ - ಪುತ್ರವ್ಯಸನದಿಂದ ಹುಟ್ಟಿದ, ಭಯಂ - ಭಯವನ್ನು, ಆಚಚಕ್ಷೇ - ಹೇಳಿದೆನು. ॥ ೧೨ ॥ ಅಹಂ - ನಾನು, ಕ್ಷತ್ರಿಯಃ - ಕ್ಷತ್ರಿಯನಾದ, ದಶರಥಃ - ದಶರಥರಾಯನು, ಮಹಾತ್ಮನಃ - ಮಹಾತ್ಮನಾದ ನಿನ್ನ, ಪುತ್ರಃ - ಮಗನು, ನ - ಇಲ್ಲ, ಸಜ್ಜನಾವಮತಂ - ಸತ್ಪುರುಷರಿಂದ ನಿಂದಿತವಾದ, ಇದಂದುಃಖಂ - ಈ ವ್ಯಸನವು, ಸ್ವಕರ್ಮಜಂ - ನನ್ನ ಪೂರ್ವಾರ್ಜಿತ ಕರ್ಮದಿಂದ, ಪ್ರಾಪ್ತಂ - ಹೊಂದಲಾಯಿತು. ॥ ೧೩ ॥ ಹೇ ಭಗವನ್ - ಎಲೈ ಪೂಜ್ಯನೇ, ಅಹಂ - ನಾನು, ಚಾಪಹಸ್ತಃ - ಧನುರ್ಬಾಣಗಳೇ ಹಸ್ತದಲ್ಲಿ ಉಳ್ಳವನಾಗಿ, ಶ್ವಾಪದಂ - ನಾಯಿಗಳನ್ನು, ನಿಪಾನೇಚ - ಉದಕ ಪ್ರದೇಶದಲ್ಲಿ, ಆಗತಂ - ಬಂದಿರುವ, ಗಜಂ - ಆನೆಯನ್ನು, ಕಿಂಚಿತ್ - ಯಾವುದಾದರೂ ಜಂತು ವಿಶೇಷವನ್ನು, ಜಿಘಾಂಸುಃ-ಹೊಡೆಯಲಿಚ್ಛೆಯುಳ್ಳವನಾಗಿ, ಸರಯೂತೀರಂ - ಸರಯೂನದಿಯ ದಡ ವನ್ನು ಕುರಿತು, ಆಗತಂ - ಬಂದೆನು. ॥ ೧೪ ॥ ತತಃ - ಬಳಿಕ, ಮಯಾ - ನನ್ನಿಂದ, ಜಲೇ - ನೀರಿನಲ್ಲಿ, ಪೂರ್ಯತಃ - ತುಂಬುತ್ತಿರುವ, ಕುಂಭಸ್ಯ - ಗಡಿಗೆಯ, ಶಬ್ದಃ - ಶಬ್ದವು, ಶ್ರುತಃ-ಕೇಳ ಲಾಯಿತು, ಅಯಂ - ಇದು, ದ್ವಿಪಇತಿ - ಆನೆಯೆಂದು, ಮತ್ವಾ - ತಿಳಿದು, ಅಯಂ - ಆ ಪುರು ಷನು, ಬಾಣೇನ - ಬಾಣದಿಂದ, ಮಯಾ - ನನ್ನಿಂದ, ಅಭಿಹತಃ - ಹತನಾದನು. ॥ ೧೫ ॥ ತತಃ - ಬಳಿಕ, ನದ್ಯಾಃ - ನದಿಯ, ತೀರಂ - ದಡವನ್ನು ಕುರಿತು, ಗತ್ವಾ - ಹೋಗಿ, ಇಷುಣಾ - ಬಾಣದಿಂದ, ಹೃದಿ - ವಕ್ಷಸ್ಥಲದಲ್ಲಿ, ವಿನಿರ್ಭಿನ್ನಂ - ಭೇದಿಸಲ್ಪಟ್ಟ, ಗತಪ್ರಾಣಂ - ಗತವಾದ ಶಕ್ತಿ

ಪುತ್ರವ್ಯಸನವನ್ನುಂಟುಮಾಡುವುದೂ ಭಯವನ್ನುಹುಟ್ಟಿಸುವುದೂ ಆದ ಮಾತುಗಳನ್ನು ಹೀಗೆ ಹೇಳಿದೆನು. ॥ ೧-೧೨ ॥ " ಎಲೈ ಮುನೀಶ್ವರನೆ ! ನಾನು ದಶರಥಮಹಾರಾಜನು; ಮಹಾತ್ಮನಾದ ನಿನ್ನ ಮಗನಲ್ಲವು. ಪ್ರಾಚೀನಕರ್ಮದಿಂದ, ಸಜ್ಜನರಿಂದ ನಿಂದಿತವಾದ ಈಗ ದುಃಖವನ್ನು ಹೇಳಲು ಇಲ್ಲಿಗೆ ಬಂದೆನು. ಮಹಾತ್ಮನೆ ! ನಾನು ನೀರು ಕುಡಿಯುವ ಪ್ರದೇಶಕ್ಕೆ ಬಂದ ಮೃಗಗಳನ್ನೂ, ಆನೇಗಳನ್ನೂ ಹೊಡೆಯಲೆಳಸಿ, ಬಿಲ್ಲನ್ನು ಧರಿಸಿದವನಾಗಿ ಸರಯೂನದೀ ಸಮೀಪಕ್ಕೆ ಬಂದೆನು. ಹೀಗೆ ಬಂದವನಾಗಿ ಒಂದು ಕಡೆ ಹೊಂಚುಹಾಕು ತ್ತಿದ್ದೆನು. ಆಗಲಾ ನದೀಜಲದಲ್ಲಿ ನೀರಿನಲ್ಲಿ " ಬುಡಬುಡ " ನೆಂಬ ಒಂದು ಧ್ವನಿಯು ಕೇಳಿಸಿತು. ಆ ಧ್ವನಿಯನ್ನು, ಗಜಧ್ವನಿಯನ್ನಾಗಿ ತಿಳಿದು, ಧ್ವನಿಯನ್ನೇಗುರಿಯಿಟ್ಟು ಬಾಣ ವನ್ನು ಹೊಡೆದೆನು. ಆ ಬಳಿಕ ನಾನು ನದೀತೀರಕ್ಕೆಹೋಗಿ ಎದೆಯ ಬಾಣ ತಗಲಿಕೊಂಡಿ ರುವುದರಿಂದ ಪ್ರಾಣಹೋದಹಾಗೆ ನೆಲದಮೇಲೆ ಬಿದ್ದಿರುವ ಋಷಿಪುತ್ರನನ್ನು ನೋಡಿದೆನು.

ಗತಪ್ರಾಣಂ ಶಯಾನಂ ಭುವಿ ತಾಪಸಂ ॥ ೧೬ ॥ ಭಗವಾನ್! ಶಬ್ದಮಾಲಕ್ಷ್ಯ ಮಯಾ ಗಜ ಜಿಘಾಂಸುನಾ ॥ ವಿಸೃಷ್ಟೋಂಭಸಿ ನಾರಾಚ ಸ್ತತಸ್ತೇನ ಹತ ಸ್ಸುತಃ ॥ ೧೭ ॥ ತತಸ್ತಸ್ಯೈವ ವಚನಾದುಪೇತ್ಯ ಪರಿತಪ್ಯತಃ ॥ ಸಮಯಾ ಸಹಸಾ ಬಾಣ ಉದ್ಧೃತೋ ಮರ್ಮತ ಸ್ತದಾ ॥ ೧೮ ॥ ಸಚೋದ್ಧೃತೇನ ಬಾಣೇನ ತತ್ರೈವ ಸ್ವರ್ಗಮಾಸ್ಥಿತಃ ॥ ಭವಂತೌ ಪಿತರೌ ಶೋಚನ್ನಂಧಾವಿತಿ ವಿಲಪ್ಯಚ ॥ ೧೯ ॥ ಅಜ್ಞಾನಾ ದ್ಭವತಃ ಪುತ್ರ ಸ್ಸಹಸಾಭಿಹತೋ ಮಯಾ॥

ಯುಳ್ಳ, ಭುವಿ - ನೆಲದಲ್ಲಿ, ಶಯಾನಂ - ಮಲಗಿರುವ, ತಾಪಸಂ - ಋಷಿಯನ್ನು, ಅಪಶ್ಯಂ - ಕಂಡೆನು. ॥ ೧೬ ॥ ಹೇ ಭಗವನ್ - ಎಲೈ ಪೂಜ್ಯನೇ, ಶಬ್ದಂ - ಶಬ್ದವನ್ನು, ಆಲಕ್ಷ್ಯ - ಗುರಿಯಿಟ್ಟು, ಗಜಜಿಘಾಂಸುನಾ - ಆನೆಯನ್ನು ಹೊಡೆಯಲಿಚ್ಛೆಯುಳ್ಳ, ಮಯಾ - ನನ್ನಿಂದ, ಅಂಭಸಿ - ನೀರಿನಲ್ಲಿ, ನಾರಾಚಃ - ಬಾಣವು, ವಿಸೃಷ್ಟಃ - ಬಿಡಲಾಯಿತು, ತತಃ - ಬಳಿಕ, ತೇನ - ಆ ಬಾಣದಿಂದ, ಸುತಃ - ಮಗನು, ಹತಃ - ಹತನಾದನು. ॥ ೧೭ ॥ ತತಃ - ಬಳಿಕ, ಪರಿತಪ್ಯತ - ಪರಿತಪಿಸುತ್ತಿರುವ, ತಸ್ಯ - ಆ ಮಗನ, ವಚನಾದೇವ - ಮಾತಿನಿಂದಲೇ, ಸಹಸಾ - ಬೇಗನೆ, ಉಪೇತ್ಯ - ಬಂದು, ಮಯಾ - ನನ್ನಿಂದ, ಸಬಾಣಃ - ಆ ಬಾಣವು, ತದಾ - ತತ್‌ಕ್ಷಣದಲ್ಲಿ, ಮರ್ಮತಃ - ಮರ್ಮಸ್ಥಾನದಿಂದ, ಉದ್ಧೃತಃ - ತೆಗಿಯಲ್ಪಟ್ಟಿತು. ॥ ೧೮ ॥ ಸಚ - ಆ ಮಗನೂ, ಉದ್ಧೃತೇನ - ತೆಗೆಯಲ್ಪಟ್ಟ, ಬಾಣೇನ - ಬಾಣದಿಂದ, ತತ್ರೈವ - ಅಲ್ಲಿಯೇ, ಭವಂತೌ - ನೀವು, ಪಿತರೌ - ತಾಯಿತಂದೆಗಳು, ಅಂಧೌ - ಕುರುಡರು, ಇತಿ - ಇಂತೆಂದು, ವಿಲಪ್ಯಚ - ವಿಲಾಪವನ್ನುಮಾಡಿ, ಶೋಚನ್ - ಅಳುತ್ತಿರುವನಾಗಿ, ಸ್ವರ್ಗಂ - ಸ್ವರ್ಗವನ್ನು, ಆಸ್ಥಿತಃ - ಹೊಂದಿದನು. ॥ ೧೯ ॥ ಅಜ್ಞಾನಾತ್ - ಅಜ್ಞಾನದಿಂದ, ಮಯಾ - ನನ್ನಿಂದ, ಭವತಃ - ನಿನ್ನ, ಪುತ್ರಃ - ಮಗನು, ಸಹಸಾ - ಶೀಘ್ರವಾಗಿ, ಅಭಿಹತಃ - ಮೃತನಾದನು, ಏವಂ - ಈಪರಿಯಾಗಿ, ಗತೇ - ಹೋದವನಾಗಲಾಗಿ, ಶೇಷಂ - ಮಿಕ್ಕಕಾರ್ಯವು, ಯತ್ಸ್ಯಾತ್ - ಯಾವುದಾಗಬೇಕೋ, ತತ್ - ಅದನ್ನು, ಮೇ - ನನಗೆ, ಮುನಿಃ - ಋಷಿಯು, ಪ್ರಸೀದತು - ಪ್ರಸನ್ನನಾಗಲಿ. ॥ ೨೦ ॥ ಭಗವಾನ್ - ಪೂಜ್ಯನಾದ,

ಮಹಾನುಭಾವನಾದ ಎಲೈ ಮುನೀಶ್ವರನೆ ! ನಾನು ಶಬ್ದವನ್ನನುಸರಿಸಿ ಗಜವನ್ನುಹೊಡೆಯಬೇಕೆಂದು ಯೋಚಿಸಿ ಬಾಣಪ್ರಯೋಗವನ್ನುಮಾಡಿ ನಿನ್ನ ಮಗನ ಪ್ರಾಣಗಳನ್ನು ನೀಗಿದವನಾದೆನು. ಆ ಮೇಲೆ ನಾನಾತನ ಸಮೀಪಕ್ಕೆಹೋದೆನು. ಹೋದಮೇಲೆ ಬಾಣವೇದನೆಯನ್ನು ಸಹಿಸಲಾರದೆ ಆ ಬಾಣವನ್ನು ಕಿತ್ತುಹಾಕೆಂದು ಹೇಳಿದ ಅತನ ಮಾತಿನಪ್ರಕಾರವೇ ಆ ಬಾಣವನ್ನು ಕಿತ್ತುಹಾಕಿದೆನು. ಹಾಗೆ ಆ ಬಾಣವನ್ನು ಕಿತ್ತುಹಾಕಿದ ಕೂಡಲೇ ಆತನು “ ನನ್ನ ತಂದೆತಾಯಿಗಳು ಅಂಧರಾದುದರಿಂದ ಕಾಪಾಡುವವರಾರೂ ಇಲ್ಲ ” ಎಂದು ನಿಮ್ಮನ್ನು ಕುರಿತು ದುಃಖಿಸುತ್ತ ಸ್ವರ್ಗವನ್ನು ಸೇರಿದನು. ಎಲೈ ಮುನಿಯೆ ! ನಾನು ಅವಿವೇಕದಿಂದ ಬಹುಬೇಗನೆ ಮಾಡಿದ ಕೆಲಸವನ್ನು ತಿಳಿಸಿದೆನು. ಇನ್ನುಮೇಲೆ ಮಾಡಬೇಕಾದ ಕಾರ್ಯವಾವುದೋ ಅದನ್ನು ಮಹಾತ್ಮನಾದ ನೀನೇ ತಿಳಿಸಬೇಕು. ಅವಿವೇಕದಿಂದ ನಾನೀಕಾರ್ಯವನ್ನು ಮಾಡಿದೆನಾದುದರಿಂದ ನನ್ನನ್ನು ಮನ್ನಿಸುವವನಾಗು.” ॥೨೦॥

ಶೇಷಮೇವಂ ಗತೇ ಯತ್ಸ್ಯಾ (೧) ತ್ತತ್ಪ್ರಸೀದತು ಮೇ ಮುನಿಃ ॥ ೨೦ ॥ ಸತ
ಚ್ಛೃತ್ವಾ ವಚಃಕ್ರೂರಂ ಮಯೋಕ್ತ ಮಘಶಂಸಿನಾ॥ನಾಶಕತ್ತೀವ್ರ ಮಾಯಾಸ
ಮಕರ್ತುಂ ಭಗವಾನೃಷಿಃ ॥ ೨೧ ॥ ಸಬಾಷ್ಪಪೂರ್ಣ ವದನೋ ನಿಶ್ವಸ
ಶೋಕಕರ್ಶಿತಃ॥ಮಾ ಮುವಾಚ ಮಹಾತೇಜಾಃ ಕೃತಾಂಜಲಿ ಮುಪಸ್ಥಿತಂ॥೨೨॥
ಯದ್ಯೇತದಶುಭಂ ಕರ್ಮ ನ ತ್ವಂ ಮೇ ಕಥಯೇ ತ್ಸ್ವಯಂ॥ಫಲೇನ್ಮೂರ್ಧಾಸ್ಮ
ತೇ ರಾಜನ್! ಸದ್ಯ ಶ್ಯತಸಹಸ್ರಧಾ ॥೨೩॥ ಕ್ಷತ್ರಿಯೇಣ ವಧೋ ರಾಜನ್! ವಾನ

ಸಋಷಿಃ - ಆ ಋಷಿಯು, ಅಘಶಂಸಿನಾ - ಪಾಪವನ್ನು ಹೇಳುತ್ತಿರುವ, ಮಯಾ - ನನ್ನಿಂದ, ಉಕ್ತಂ - ಹೇಳಿದ, ಕ್ರೂರಂ - ಕಠೋರವಾದ, ತದ್ವಚಃ - ಆ ಮಾತನ್ನು, ಶೃತ್ವಾ-ಕೇಳಿ, ತೀವ್ರಂ-ತೀಕ್ಷ್ಣವಾದ, ಆಯಾಸಂ - ಆಯಾಸವನ್ನು, ಅಕರ್ತುಂ - ಮಾಡದಿರಲು, ನಾಶಕತ್ - ಸಮನಾಗಲಿಲ್ಲ. ॥ ೨೧ ॥ ಮಹಾತೇಜಾಃ - ಮಹಾತೇಜೋವಂತನಾದ, ಬಾಷ್ಪಪೂರ್ಣವದನಃ - ಕಂಬನಿಗಳಿಂದ ತುಂಬಿರುವ ಮುಖವುಳ್ಳ, ಸಃ - ಆ ಋಷಿಯು, ನಿಶ್ವಸನ್ - ನಿಟ್ಟುಸಿರನ್ನು ಬಿಡುತ್ತ, ಶೋಕಕರ್ಶಿತಃ - ದುಃಖದಿಂದ ಸಮೆದವನಾಗಿ, ಕೃತಾಂಜಲಿಂ - ಮಾಡಲ್ಪಟ್ಟ ಅಂಜಲಿಯುಳ್ಳ, ಉಪಸ್ಥಿತಂ - ಸಮೀಪದಲ್ಲಿ ನಿಂತಿರುವ, ಮಾಂ - ನನ್ನನ್ನು ಕುರಿತು, ಉವಾಚ - ಹೇಳಿದನು. ॥ ೨೨ ॥ ಹೇ ರಾಜನ್ - ಎಲೈ ಅರಸನೇ, ತ್ವಂ - ನೀನು, ಮೇ - ನನಗೆ, ಸ್ವಯಂ - ನೀನಾಗಿಯೇ, ಅಶುಭಂ - ಅಮಂಗಳಕರವಾದ, ಏತತ್ಕರ್ಮ - ಈ ಕರ್ಮವನ್ನು, ನಕಥಯೇದ್ಯದಿ - ಹೇಳದೇಹೋಗಿದ್ದರೆ, ತೇ-ನಿನ್ನ, ಮೂರ್ಧಾ - ಮಂಡೆಯು, ಸದ್ಯಃ - ತತ್ಕ್ಷಣದಲ್ಲಿ, ಶತಸಹಸ್ರಧಾ - ನೂರು ಸಹಸ್ರಭಾಗಗಳಾಗಿ, ಫಲೇತ್ಸ್ಮ - ಶೀಳಿಹೋಗುತಿದ್ದಿತು. ॥ ೨೩ ॥ ಹೇ ರಾಜನ್ - ಎಲೈ ಅರಸನೆ ! ವಿಶೇಷತಃ-ವಿಶೇಷವಾಗಿ, ವಾನಪ್ರಸ್ಥೇ - ವಾನಪ್ರಸ್ಥನಾದವನಲ್ಲಿ, ಕ್ಷತ್ರಿಯೇಣ - ಕ್ಷತ್ರಿಯನಿಂದ, ಜ್ಞಾನಪೂರ್ವಕವಾಗಿಮಾಡಿದ, ವಧಃ - ಸಂಹಾರವು, ವಜ್ರಿಣಮಪಿ - ದೇವೇಂದ್ರನನ್ನೂ, ಸ್ಥಾನಾತ್ - ಸ್ವಸ್ಥಾನ

ನಾನಿರೀಕ್ಷಿ ಪ್ರಾರ್ಥಿಸಿಕೊಳ್ಳಲು, ಆ ಮುನಿಯು ದುಃಖಕರವೂ, ಭಯಂಕರವೂ ಆದ ನನ್ನ ಮಾತುಗಳೆಲ್ಲವನ್ನೂ ಕೇಳಿ ಕೋಪವನ್ನು ತಾಳಲಾರದೆ ಹೋದನು. ಅಲ್ಲದೆ ಮಹಾ ತಪಸ್ಸಂಪನ್ನನಾದಾಮುನಿಯು ಮಹಾದುಃಖದಿಂದ ಮುಖದ ತುಂಬ ಕಣ್ಣೀರು ಸುರಿಸುತ್ತಲೂ ರೋದಿಸುತ್ತಲೂ ನಿಟ್ಟುಸಿರುಗಳನ್ನುಬಿಡುತ್ತಲೂ, ಕೈಗಳನ್ನು ಜೋಡಿಸಿಕೊಂಡು, ಸಮೀಪದಲ್ಲಿಯೇ ನಿಂತಿದ್ದ ನನ್ನನ್ನು ನೋಡಿ ಹೀಗೆ ಹೇಳಿದನು. “ಎಲೈ ದಶರಥರಾಜನೆ ! ಈ ಅಮಂಗಳ ಕಾರ್ಯವನ್ನು ನನ್ನೊಡನೆ ಹೇಳದೆ ಇನ್ನಾರೊಡನೆಯಾದರೂ ಹೇಳಿದ್ದೆಯಾದರೆ ಆಗಲೇ ನಿನ್ನ ಶಿರಸ್ಸು ಸಾವಿರಹೋಳುಗಳಾಗಿ ಶೀಳಿಹೋಗುತಿದ್ದಿತು. ಎಲೈ ರಾಜನೆ ! ಪ್ರಭುವಾದವನು ಬುದ್ಧಿಪೂರ್ವಕವಾಗಿ ಇತರರನ್ನು ಕೊಂದರೂ, ವಿಶೇಷವಾಗಿ ವಾನಪ್ರಸ್ಥಾಶ್ರಮಿಗಳನ್ನು ಕೊಂದರೂ, ದೇವೇಂದ್ರನ ಪದವಿಯನ್ನಾತನು ಪಡೆದಿದ್ದರೂ, ಭ್ರಷ್ಟನಾಗಿ

ಟ. (೧) “ಶಾಪವೋ, ಅನುಗ್ರಹವೋ, ಯಾವುದನ್ನು ಮಾಡಬೇಕೋ ಅದನ್ನು ಮಾಡೋಣವಾಗಲಿ” ಎಂಬುದು ಇಲ್ಲಿನ ತಾತ್ಪರ್ಯ.

ಪ್ರಸ್ಥೇ ವಿಶೇಷತಃ ॥ ಜ್ಞಾನಪೂರ್ವಕೃತಃ ಸ್ಥಾನಾ ಚ್ಚಾವಯೇದಪಿ ವಜ್ರಿಣಂ ॥ ೨೪ ॥ ಸಪ್ತಧಾತು ಫಲೇನ್ಮೂರ್ಧಾ ಮುನೌ ತಪಸಿ ತಿಷ್ಠತಿ ॥ ಜ್ಞಾನಾದ್ವಿಸೃಜತ ಶ್ಶಸ್ತ್ರಂ ತಾದೃಶೇ ಬ್ರಹ್ಮಚಾರಿಣಿ(೧) ॥೨೫॥ ಅಜ್ಞಾನಾದ್ಧಿ ಕೃತಂ ಯಸ್ಮಾದಿದಂ ತೇನೈವ ಜೀವಸಿ ॥ ಅಪಿಹ್ಯದ್ಯ ಕುಲಂನಸ್ಯಾ ದಿಕ್ಷ್ವಾಕೂಣಾಂ ಕುತೋ ಭವಾನ್ ॥ ೨೬ ॥ ನಯ ನೌ ನೃಪ! ತಂ ದೇಶಮಿತಿ ಮಾಂ ಚಾಭ್ಯಭಾಷತ॥ ಅದ್ಯತಂ ದ್ರಷ್ಟುಮಿಚ್ಛಾವಃ ಪುತ್ರಂ ಪಶ್ಚಿಮ ದರ್ಶನಂ ॥ ೨೭ ॥ ರುಧಿರೇಣಾ

ದಿಂದ, ಚ್ಯಾವಯೇತ್ - ಕೆಳಕ್ಕೆಬೀಳಿಸುವದು. ॥ ೨೪ ॥ ತಪಸಿ - ತಪಸ್ಸಿನಲ್ಲಿ, ತಿಷ್ಠತಿ-ಇರುವ, ಮುನೌ - ಋಷಿಯಲ್ಲಿ, ತಾದೃಶೇ - ಅಂತಹನಾದ, ಬ್ರಹ್ಮಚಾರಿಣಿ - ಬ್ರಹ್ಮಚಾರಿಯಲ್ಲಿಯೂ, ಜ್ಞಾನಾತ್ - ಜ್ಞಾನದಿಂದ, ಶಸ್ತ್ರಂ - ಶಸ್ತ್ರವನ್ನು, ವಿಸೃಜತಃ - ಬಿಟ್ಟಂತಹನ, ಮೂರ್ಧಾ - ಶಿರಸ್ಸು, ಸಪ್ತಧಾತು - ಏಳು ಭಾಗಗಳಾಗಿ, ಫಲೇತ್ - ಒಡೆದುಹೋಗುವದು. ॥ ೨೫ ॥ ಅದ್ಯ-ಈಗ, ಇಕ್ಷ್ವಾಕೂಣಾಂ - ಇಕ್ಷ್ವಾಕುವಂಶದರಾಜರ, ಕುಲಂ - ವಂಶವು, ನಸ್ಯಾತ್ - ಇರದೇ ಹೋಗುತ್ತಿದ್ದಿತು, ಭವಾನ್ - ನೀನು, ಕುತಃ - ಎಲ್ಲಿರುತ್ತಿದೆ, ಅಜ್ಞಾನಾದ್ಧಿ - ಅಜ್ಞಾನದಿಂದಲೇ, ಇದಂ - ಈ ಪಾಪಕೃತ್ಯವು, ಯಸ್ಮಾತ್ - ಯಾವ ಕಾರಣ, ಕೃತಂ - ಮಾಡಲಾಯಿತೋ, ತೇನೈವ-ಅದರಿಂದಲೇ, ಜೀವಸಿ - ಬದುಕಿರುವೆನು. ॥ ೨೬ ॥ ಹೇ ನೃಪ-ಎಲೈ ರಾಜನೆ! ನೌ-ನಮ್ಮನ್ನು, ತಂದೇಶಂ - ಆ ಪ್ರದೇಶವನ್ನು ಕುರಿತು, ನಯ - ಹೊಂದಿಸು, ಅದ್ಯ - ಈಗ, ಪಶ್ಚಿಮದರ್ಶನಂ - ಅಂತ್ಯದರ್ಶನವುಳ್ಳ, ರುಧಿರೇಣ - ರಕ್ತದಿಂದ, ಅವಸಿಕ್ತಾಂಗಂ - ನೆನೆಸಲ್ಪಟ್ಟ ಶರೀರವುಳ್ಳ, ಪ್ರಕೀರ್ಣಾಜಿನವಾಸಸಂ - ಬಿಚ್ಚಿಹೋದ ಕೃಷ್ಣಾಜಿನವೇ ವಸ್ತ್ರವಾಗುಳ್ಳ, ಭುವಿ - ನೆಲದಲ್ಲಿ, ಶಯಾನಂ - ಮಲಗಿರುವ, ನಿಸ್ಸಂಜ್ಞಂ - ಪ್ರಜ್ಞೆಯಿಲ್ಲದಿರುವ, ಧರ್ಮರಾಜವಶಂಗರಂ - ಯಮಧರ್ಮರಾಯನಿಗೆ

ಹೋಗುತ್ತಾನೆಯೆಂಬುದರಲ್ಲಿ ಲವಲೇಶವೂ ಸಂದೇಹವಿಲ್ಲವು. ತಪೋವಂತನನ್ನೂ, ಬ್ರಹ್ಮವೇತ್ತನನ್ನೂ ಬುದ್ಧಿಪೂರ್ವಕವಾಗಿ, ತಿಳಿದು ತಿಳಿದೂ ಕೊಂಪವನ ಶಿರಸ್ಸು ತಕ್ಷಣದಲ್ಲಿಯೇ ಏಳು ಶೀಳುಗಳಾಗಿ ಕೆಳಕ್ಕೆ ಬೀಳುವುದು. ನೀನಾದರೋ ಜ್ಞಾನವಿಲ್ಲದೆ ಈ ಕಾರ್ಯವನ್ನು ಮಾಡಿರುವೆಯಾದುದರಿಂದ ನಿನ್ನ ತಲೆಯು ವ್ಯತ್ಯಾಸ ಹೊಂದದೆ ಹಾಗೆಯೇ ನಿಂತಿರುವುದು. ನೀನು ತಿಳಿದೇನಾದರೂ ಈ ಕಾರ್ಯವನ್ನುಮಾಡಿದ್ದೆಯಾದರೆ ಇದುವರೆವಿಗೆ ನಿಮ್ಮ ಇಕ್ಷ್ವಾಕು ರಾಯರ ವಂಶವೆಲ್ಲ ಆಗಲೇ ನಾಶವಾಗುತ್ತಿದ್ದಿತು. ಇನ್ನು ನೀನು ನಾಶವಾಗುತ್ತಿದ್ದೆಯೆಂದು ಹೇಳುವುದೇನು?" ಆ ಮುನೀಶ್ವರನಿಂತು ನುಡಿದು ಮತ್ತೇನನ್ನು ಕುರಿತು, "ಅಯ್ಯಾ ರಾಜನೆ! ನಮ್ಮನ್ನು ನಮ್ಮ ಮಗನು ಸತ್ತುಬಿದ್ದಿರುವ ಸ್ಥಳಕ್ಕೆ ಕರೆದುಕೊಂಡು ಹೋಗು! ಈಗ ರಕ್ತದಿಂದ ತೋಯ್ದ ಶರೀರವುಳ್ಳವನೂ, ಜಾರಿದ ಕೃಷ್ಣಾಜಿನ ವಸ್ತ್ರವುಳ್ಳವನೂ ಆದ

ಟಿ. (೧) "ಬ್ರಹ್ಮಚಾರಿಣಿ" ಎಂಬ ಕಡೆ, "ಬ್ರಹ್ಮತತ್ವಂಚರಿತುಂ ಶೀಲಮಸ್ಯಾಸ್ತೀತಿ ಬ್ರಹ್ಮಚಾರೀ ತಸ್ಮಿನ್" ಎಂದು ಸಮಾಸ, "ಜ್ಞಾನೇ ತತ್ವೇ ತಪೋಧ್ಯಾತ್ಮ ವೇದೇಷು" ಎಂದು ನಿಘಂಟುವಿದೆಯಾದುದರಿಂದ ಈ ಸಮಾಸವಿಲ್ಲಿ ಸರಿಯಾಗಿದೆ. "ಬ್ರಹ್ಮವಾದಿನಿ" ಎಂದು (ಗೋ) ಪಾಠ. ಇಲ್ಲಿ ಪರಮಾತ್ಮನನ್ನು ತಿಳಿದವನು ಎಂದು ಮಾತ್ರ ಅರ್ಥ ಮಾಡಬೇಕು.

ವಸಿಕ್ತಾಂಗಂ ಪ್ರಕೀರ್ಣಾಜಿನ ವಾಸಸಂ ॥ ಶಯಾನಂ ಭುವಿ ನಿಸ್ಸಂಜ್ಞಂ ಧರ್ಮ
ರಾಜ ವಶಂಗತಂ ॥ ೨೮ ॥ ಅಥಾಹಮೇಕಸ್ತಂ ದೇಶಂ ನೀತ್ವಾ ತೌ ಭೃಶ
ದುಃಖಿತೌ ॥ ಅಸ್ಪರ್ಶಯಮಹಂ ಪುತ್ರಂ ತಂಮುನಿಂ ಸಹಭಾರ್ಯಯಾ॥೨೯॥
ತೌ ಪುತ್ರಮಾತ್ಮನ ಸ್ಸ್ಪೃಷ್ಟ್ವಾ ತಮಾಸಾದ್ಯ ತಪಸ್ವಿನೌ ॥ ನಿಪೇತತು ಶ್ಶರೀ
ರೇಸ್ಯ ಪಿತಾಚಾಸ್ಯೇದ ಮಬ್ರವೀತ್ ॥ ೩೦ ॥ ನಾಭಿವಾದಯಸೇ ಮಾದ್ಯ
ನ ಚ ಮಾ ಮಭಿಭಾಷಸೇ॥ಕಿನ್ನು ಶೇಷೇಚ ಭೂಮೌ ತ್ವಂ ವತ್ಸ! ಕಿಂ ಕುಪಿತೋ
ಹ್ಯಸಿ? ॥ ೩೧ ॥ ನತ್ವಹಂ ತೇ ಪ್ರಿಯಃ ಪುತ್ರ! ಮಾತರಂ ಪಶ್ಯ ಧಾರ್ಮಿಕ! ॥

ಸ್ವಾಧೀನನಾದ, ತಂಪುತ್ರಂ - ಆ ಮಗನನ್ನು, ದ್ರಷ್ಟುಂ - ನೋಡಲು, ಇಚ್ಛಾವಃ - ಬಯಸುತ್ತೇವೆ, ಇತಿ - ಇಂತೆಂದು, ಮಾಂಚ - ನನ್ನನ್ನು ಕುರಿತು, ಅಭಿಭಾಷತ - ಮಾತನಾಡಿದನು. ॥ ೨೮ ॥ ಅಥ - ಬಳಿಕ, ಅಹಂ - ನಾನು, ಏಕಃ - ಒಬ್ಬನೇ, ತಂದೇಶಂ - ಆ ಪ್ರದೇಶವನ್ನು ಕುರಿತು, ಭೃಶ ದುಃಖಿತೌ - ಬಹಳ ದುಃಖಗೊಂಡ, ತೌ - ಆ ದಂಪತಿಗಳನ್ನು, ನೀತ್ವಾ - ಕರೆದುಕೊಂಡುಹೋಗಿ, ಭಾರ್ಯಾಸಹ - ಹೆಂಡತಿಯೊಡಗೂಡಿದ, ತಂಮುನಿಂ - ಆ ಋಷಿಯನ್ನು, ತಂಪುತ್ರಂ - ಆ ಮಗನನ್ನು, ಅಸ್ಪರ್ಶಯಂ - ಸ್ಪರ್ಶಮಾಡಿಸಿದೆನು. ॥ ೨೯ ॥ ತೌ - ಆ ದಂಪತಿಗಳು, ಆತ್ಮನಃ - ತಮ್ಮ, ಪುತ್ರಂ - ಕುವರನನ್ನು, ಸ್ಪೃಷ್ಟ್ವಾ - ಸ್ಪರ್ಶಮಾಡಿ, ತಂ - ಆ ಮಗನನ್ನು. ಆಸಾದ್ಯ - ಹೊಂದಿ, ತಪಸ್ವಿನೌ - ತಪಿಸುತ್ತಿರುವವರಾಗಿ, ಅಸ್ಯ - ಈ ಮಗನ, ಶರೀರೇ - ಶರೀರದಲ್ಲಿ, ನಿಪೇತತುಃ - ಬಿದ್ದರು, ಅಸ್ಯ - ಈ ಮಗನ, ಪಿತಾಚ - ತಂದೆಯು, ಇದಂ-ಈ ಮಾತನ್ನು, ಅಬ್ರವೀತ್- ನುಡಿದನು. ॥ ೩೦ ॥ ಹೇ ವತ್ಸ - ಎಲೈ ಮಗನೆ, ಮಾಂ-ನನ್ನನ್ನು ಕುರಿತು, ನಾಭಿವಾದಯಸೇ - ನಮಸ್ಕಾರಮಾಡದೆಹೋದೆ, ಅದ್ಯ-ಈಗ, ಮಾಂ - ನನ್ನನ್ನು ಕುರಿತು, ನಾಭಿಭಾಷಸೇಚ-ಮಾತನ್ನೂ ಆಡದಿರುವೆ, ತ್ವಂ - ನೀನು, ಭೂಮೌ - ನೆಲದಲ್ಲಿ, ಕಿನ್ನುಶೇಷೇ - ಏತಕ್ಕೆಮಲಗಿರುವೆ, ಕಿಂಕುಪಿತೋಹ್ಯಸಿ - ಏಕೆ ಕೋಪಮಾಡಿಕೊಂಡಿರುವೆಯೇನು. ॥೩೧॥ ಹೇ ಪುತ್ರ-ಎಲೈ ಮಗನೇ, ಅಹಂತು - ನಾನಾದರೆ, ತೇ - ನಿನಗೆ, ಪ್ರಿಯಃ - ಇಷ್ಟನು, ನ - ಅಲ್ಲವೆ, ಹೇ ಧಾರ್ಮಿಕ - ಎಲೈ ಧರ್ಮಿಷ್ಠನೇ,

---

ನನ್ನ ಮಗನನ್ನು ನೋಡಲಪೇಕ್ಷಿಸುತ್ತೇನೆ. ॥ ೧೩-೨೮ ॥ ಇಷ್ಟೆಯಲ್ಲದೆ ಸ್ಮೃತಿ ತಪ್ಪಿದವನೂ, ಯಮಧರ್ಮರಾಯನ ವಶನಾದವನೂ ಆದ ನನ್ನ ಮಗನನ್ನು ನೋಡಲಿಚ್ಛಿಸುತ್ತೇನೆ" ಎಂದು ಹೇಳಿದನು. ಆಗ ನಾನು ಪರಮ ದುಃಖಿತರಾದಾದಂಪತಿಗಳನ್ನಲ್ಲಿಗೆ ಕರೆದುಕೊಂಡುಹೋಗಿ, ಆ ಮುನಿಪುತ್ರನ ಕಳೇಬರವನ್ನು, ಕೈಯಿಂದ ಮುಟ್ಟಿಸಿ ನೋಡಿಸಿದೆನು. ಆಗಲಾ ತಪೋವಂತರಾದಾದಂಪತಿಗಳು ಪುತ್ರನ ಶರೀರವನ್ನು ಸವರಿನೋಡಿ, ಅದರಮೇಲೆಬಿದ್ದು ಸ್ವಲ್ಪಹೊತ್ತು ರೋದನ ಮಾಡಿದರು. ಆ ಬಳಿಕ ಆ ಮುನಿಯು ಹೀಗೆಂದನು. "ಮಗನೆ! ನನ್ನನ್ನು ನೋಡಿ ನಮಸ್ಕಾರವನ್ನೇಕೆ ಮಾಡಲಾರೆ! ಏನೊಂದೂ ಮಾತನ್ನಾಡಲಾರೆಯೇಕೆ! ನಿಷ್ಕಾರಣವಾಗಿ ನೆಲದಮೇಲೆ ಬಿದ್ದಿರುವೆಯಾ? ನನ್ನಮೇಲೆ ಕೋಪವೆ? ಧರ್ಮಸ್ವಭಾವವುಳ್ಳ ಎಲೈ ಕುಮಾರನೆ! ನನ್ನಮೇಲೆ ನಿನಗೆ ಪ್ರೀತಿಯಿಲ್ಲದಿದ್ದರೆ ಹೋಗಲಿ! ಇಗೋ ನಿಮ್ಮ ತಾಯಿಯು ಇಲ್ಲಿಗೆ ಬಂದಿದ್ದಾಳೆ! ಆಕೆಯನ್ನಾದರೂ ನೋಡು!

ಕಿನ್ನು ನಾಲಿಂಗಸೇ ಪುತ್ರ! ಸುಕುಮಾರ! ವಚೋ ವದ ॥ ೩೨ ॥ ಕಸ್ಯ ವಾಽಪರ ರಾತ್ರೇಹಂ ಶ್ರೋಷ್ಯಾಮಿ ಹೃದಯಂಗಮಂ ॥ ಅಧೀಯಾನಸ್ಯ ಮಧುರಂ ಶಾಸ್ತ್ರಂವಾನ್ಯದ್ವಿಶೇಷತಃ ॥ ೩೩ ॥ ಕೋ ಮಾಂ ಸಂಧ್ಯಾಮುಪಾಸ್ಯೈವ ಸ್ನಾತ್ವಾ ಹುತಹುತಾಶನಃ ॥ (೧) ಶ್ಲಾಘಯಿಷ್ಯತ್ಯುಪಾಸೀನಃ ಪುತ್ರಶೋಕ ಭಯಾರ್ದಿತಂ ॥೩೪॥ ಕಂದಮೂಲಫಲಂ ಹೃತ್ವಾ ಕೋ ಮಾಂ ಪ್ರಿಯಮಿವಾ

ಮಾತರಂ - ತಾಯಿಯನ್ನು, ಪಶ್ಯ - ನೋಡು, ಹೇ ಪುತ್ರ - ಎಲೈ ಮಗನೇ, ಕಿನ್ನುನಾಲಿಂಗಸೇ - ಏತಕ್ಕೆ ಅಪ್ಪಿಕೊಳ್ಳಲಿಲ್ಲ, ಸುಕುಮಾರಃ-ಎಲೈ ಸತ್ಪುತ್ರನೇ! (ಗೋ+ಮ) ಸೌಕುಮಾರ್ಯವುಳ್ಳವನೇ! ಮೃದುಸ್ವಭಾವವುಳ್ಳವನೇ! ವಚಃ - ಮಾತನ್ನು, ವದ - ಹೇಳು. ॥ ೩೨ ॥ ಅಹಂ - ನಾನು, ಅಪರರಾತ್ರೇ - ಅರ್ಧರಾತ್ರಿಯಲ್ಲಿ, ಹೃದಯಂಗಮಂ - ಮನೋರಂಜಕವಾಗಿ, ಅಧೀಯಾನಸ್ಯ - ಓದುತ್ತಿರುವ, ಮಧುರಂ - ಮಧುರಸ್ವರವನ್ನೂ, ಅನ್ಯತ್ - ಮತ್ತೊಂದಾದ ಪುರಾಣಾದಿ ಕಥೆಗಳನ್ನೇ ಆಗಲಿ, ಶಾಸ್ತ್ರಂವಾ - ಶಾಸ್ತ್ರವನ್ನೇ ಆಗಲಿ, ಕಸ್ಯ - ಯಾವನಮನೋಹರಸ್ವರವನ್ನು, ಶ್ರೋಷ್ಯಾಮಿ - ಕೇಳುವೆನು. ॥ ೩೩ ॥ ಕಃ - ಯಾವನು, ಸ್ನಾತ್ವಾ - ಸ್ನಾನಮಾಡಿ, ಸಂಧ್ಯಾಂ - ಸಂಧ್ಯೆಯನ್ನು, ಉಪಾಸ್ಯ - ಆಚರಿಸಿ, ಹುತಹುತಾಶನಃ - ಮಾಡಲ್ಪಟ್ಟ ಅಗ್ನಿಕಾರ್ಯವುಳ್ಳವನಾಗಿ, ಪುತ್ರಶೋಕಭಯಾರ್ದಿತಂ - ಪುತ್ರವ್ಯಸನದಿಂದ ಭಯಾಕ್ರಾಂತನಾದ, ಮಾಂ - ನನ್ನನ್ನು, ಉಪಾಸೀನಃ - ಸೇವೆಮಾಡುತ್ತ, ಶ್ಲಾಘಯಿಷ್ಯತಿ - ಸ್ತೋತ್ರಮಾಡುವನು. ॥ ೩೪ ॥ ಕಃ-ಯಾವನು, ಕಂದಮೂಲಫಲಂ-ಜಲದಲ್ಲಿ ಹುಟ್ಟಿದಗಡ್ಡೆಗಳನ್ನೂ, ಸ್ಥಲದಲ್ಲಿ ಹುಟ್ಟಿದಗಡ್ಡೆಗಳನ್ನೂ, ಫಲಗಳನ್ನೂ, ಹೃತ್ವಾ - ತೆಗದುಕೊಂಡು ಬಂದು, ಪ್ರಿಯಂ - ಇಷ್ಟನಾದ, ಅತಿಥಿಮಿವ - ಅಭ್ಯಾಗತ

ಏಕೆ ನಮ್ಮನ್ನು ಆಲಿಂಗನೆ ಮಾಡಿಕೊಳ್ಳಲಿಲ್ಲ! ಮಾತನಾಡು; ಮುದ್ದಾಗಿಯೂ, ಮಧುರವಾಗಿಯೂ ಇರುವ ಮಾತುಗಳನ್ನು ಹೇಳಿ ನಮ್ಮನ್ನು ಸಂತೋಷಗೊಳಿಸು! ಕುಮಾರ! ಇನ್ನುಮೇಲೆ ನನ್ನ ಆಶ್ರಮದಲ್ಲಿ ಅರ್ಧರಾತ್ರಿಯಲ್ಲಿ ಎದ್ದು, ವೇದಶಾಸ್ತ್ರಗಳನ್ನಾರು ಓದುತ್ತಾರೆ? ಇನ್ನುಮೇಲೆ ಮನೋರಮ್ಯವಾಗಿ ಓದುತ್ತಿರುವ ಯಾರ ಓದನ್ನು ನಾನು ಕೇಳಿ ಆನಂದಿಸುತ್ತೇನೆ? ಇನ್ನುಮೇಲೆ ಯಾರುತಾನೆ, ಸ್ನಾನಮಾಡಿ, ಸಂಧ್ಯೆಯನ್ನಾಚರಿಸಿ, ಅಗ್ನಿಹೋತ್ರಕರ್ಮವನ್ನುಮಾಡಿ, ನನ್ನಬಳಿ ಕುಳಿತುಕೊಂಡು ಪುತ್ರಶೋಕದಿಂದ ದುಃಖಿಸುತ್ತಿರುವ ನನ್ನನ್ನುಸಮಾಧಾನಗೊಳಿಸುತ್ತಾರೆ. ॥ ೩೧-೩೩ ॥ ಮಗನೆ! ಇನ್ನುಮೇಲೆ ಕಂದಮೂಲ ಫಲಗಳನ್ನು ಪ್ರೀತಿಯಿಂದ ತೆಗೆದುಕೊಂಡು ಬಂದು, ಇಷ್ಟನಾದ ಅತಿಥಿಯನ್ನು ಸತ್ಕರಿಸಿದಂತೆ ನನ್ನನ್ನು ಸತ್ಕರಿಸುವವನಾವನು? ನಾನು ಕರ್ಮಗಳನ್ನು

ಟಿ. (೧) ಇಲ್ಲಿ "ಶೂದ್ರಸ್ತ್ರೀಯಲ್ಲಿ ವೈಶ್ಯನಿಗೆ ಹುಟ್ಟಿದ ಕರಣನಿಗೆ ಮಂತ್ರಪೂರ್ವಕವಾದ ಹೋಮಾಧಿಕಾರವು ಹೇಳಿದಂತಾಯಿತಲ್ಲ. ಇದು ಹೇಗೆತಾನೆ ಕೂಡುತ್ತದೆ?" ಎಂದು ಕೆಲವರು ಶಂಕಿಸುತ್ತಾರೆ. ಇದಕ್ಕೆ ಸಮಾಧಾನಃ— "ನಮಸ್ಕಾರೇಣ ಮಂತ್ರೇಣ ಪಂಚಯಜ್ಞಾನ್ ಸಮಾಪಯೇತ್" ಎಂಬುದರಿಂದ ಚತುರ್ವರ್ಣದವರಿಗೂ ಪಂಚಮಹಾಯಜ್ಞಾಧಿಕಾರವು ಸ್ಮಾರಿತವಾಗಿದೆ. ಅದರಲ್ಲಿಯೂ, ಕರಣನಿಗೆ, ಸ್ವೋಚಿತ ಮಂತ್ರಗಳಿಂದ ಹೋಮಾಧಿಕಾರವು ಕೈಮುತ್ಯ ನ್ಯಾಯದಿಂದ ಸಿದ್ಧವಾಗಿಯೇ ಇರುವುದು. (ಇದು **ಗೋವಿಂದರಾಜರ** ಅಭಿಪ್ರಾಯ.)

ತಿಥಿಂ ॥ ಭೋಜಯಿಷ್ಯತ್ಯಕರ್ಮಣ್ಯ ಮಪ್ರಗ್ರಹ ಮನಾಯಕಂ ॥ ೩೫ ॥
ಇಮಾಮಂಧಾಂಚ ವೃದ್ಧಾಂಚ ಮಾತರಂ ತೇ ತಪಸ್ವಿನೀಂ ॥ ಕಥಂ ವತ್ಸ! ಭರಿ
ಷ್ಯಾಮಿ ಕೃಪಣಾಂ ಪುತ್ರಗರ್ಧಿನೀಂ ॥೩೬॥ ತಿಷ್ಠ ಮಾಂ ಮಾಗಮಃ ಪುತ್ರ!
ಯಮಸ್ಯ ಸದನಂ ಪ್ರತಿ ॥ ಶ್ವೋ ಮಯಾಸಹ ಗಂತಾಸಿ ಜನನ್ಯಾಚ ಸಮೇ
ಧಿತಃ ॥ ೩೭ ॥ ಉಭಾವಪಿಚ ಶೋಕಾರ್ತಾ ವನಾಥೌ ಕೃಪಣೌ ವನೇ ॥
ಕ್ಷಿಪ್ರಮೇವ ಗಮಿಷ್ಯಾವ ಸ್ತ್ವಯಾಹೀನೌ ಯಮಕ್ಷಯಂ ॥ ೩೮ ॥ ತತೋ

ನನ್ನಂತೆ, ಅಕರ್ಮಣ್ಯಂ - ಕರ್ಮಮಾಡಲಶಕ್ತನಾದ, ಅಪ್ರಗ್ರಹಂ-ಧನಧಾನ್ಯಸಂಗ್ರಹದಲ್ಲಿ ಸಮರ್ಥ ನಾಗದಿರುವ, ಅನಾಯಕಂ - ರಕ್ಷಕನಿಂದರಹಿತನಾದ, ಮಾಂ - ನನ್ನನ್ನು, ಭೋಜಯಿಷ್ಯತಿ - ಭೋಜನಮಾಡಿಸುವನು. ॥ ೩೫ ॥ ಹೇ ವತ್ಸ - ಎಲೈ ಮಗನೇ, ವೃದ್ಧಾಂ - ವೃದ್ಧಳಾದ, ಅಂಧಾಂ- ಕುರುಡಿಯಾದ, ತಪಸ್ವಿನೀಂ - ತಪೋನಿಷ್ಠಳಾದ, ಕೃಪಣಾಂ - ದೀನಳಾದ, ಪುತ್ರಗರ್ಧಿನೀಂ - ಮಗನಲ್ಲಿಯೇ ಮಮತೆಯುಳ್ಳ, ಇಮಾಂ - ಈ, ತೇಮಾತರಂ - ನಿನ್ನ ತಾಯಿಯನ್ನು, ಕಥಂ - ಹೇಗೆ, ಭರಿಷ್ಯಾಮಿ - ಸಂರಕ್ಷಿಸುತ್ತೇನೆ. ॥ ೩೬ ॥ ಹೇ ಪುತ್ರ - ಎಲೈ ಮಗನೇ, ಮಾಂ - ನನ್ನಬಳಿ, ತಿಷ್ಠ - ಇರು, ಯಮಸ್ಯ - ಯಮನ, ಸದನಂಪ್ರತಿ - ಮನೆಯನ್ನು ಕುರಿತು, ಮಾಗಮಃ - ಹೋಗಬೇಡ, ಶ್ವಃ - ನಾಳೆ, ಮಯಾಸಹ - ನನ್ನೊಡನೆಯೂ, ಜನನ್ಯಾಚ - ತಾಯಿ ಯೊಡನೆಯೂ, ಸಮೇಧಿತಃ - ಕೂಡಿ, ಗಂತಾಸಿ - ಹೋಗುವೆಯಂತೆ. ॥ ೩೭ ॥ ಉಭಾವಪಿ - ನಾವಿ ಬ್ಬರೂ, ಶೋಕಾರ್ತೌ - ವ್ಯಸನದಿಂದ ಬಾಧಿತರಾಗಿ, ಅನಾಥೌ - ನಾಥನಿಲ್ಲದವರಾಗಿ, ವನೇ - ಅರಣ್ಯ ದಲ್ಲಿ, ಕೃಪಣೌ - ಗತಿಯಿಲ್ಲದವರಾಗಿ, ತ್ವಯಾ - ನಿನ್ನಿಂದ, ಹೀನೌ - ಬಿಡಲ್ಪಟ್ಟವರಾಗಿ, ಕ್ಷಿಪ್ರಮೇವ - ಜಾಗ್ರತೆಯಾಗಿಯೇ, ಯಮಕ್ಷಯಂ - ಯಮನಮನೆಯನ್ನು ಕುರಿತು, ಗಮಿಷ್ಯಾವಃ- ಹೋಗುವೆವು. ॥ ೩೮ ॥ ತತಃ - ಬಳಿಕ, ವೈವಸ್ವತಂ - ಆ ಯಮನನ್ನು, ದೃಷ್ಟ್ವಾ - ಕಂಡು, ಧರ್ಮರಾಜಃ - ಧರ್ಮರಾಯನು, ಮೇ - ನನಗೆ, ಕ್ಷಮತಾಂ - ಪ್ರಸನ್ನನಾಗಲಿ, ಅಯಂ - ಈ

ಮಾಡಲು ಶಕ್ತಿಯಿಲ್ಲದವನಲ್ಲವೆ? ಇನ್ನುಮೇಲೆ ನನ್ನಕೈಯಿಂದ ಕರ್ಮಗಳನ್ನು ಮಾಡಿಸು ವವನಾವನು? ಈಗ ನಾನು ಸಂಪಾದಿಸಿರುವ ದ್ರವ್ಯವೇನೂ ನನ್ನಬಳಿಯಿಲ್ಲವಲ್ಲ! ಇನ್ನು ಮೇಲೆ ನಾನಾವ ಆಧಾರದಮೇಲೆ ಜೀವಿಸಲಿ! ಇನ್ನುಮೇಲೆ ಕೋಲನ್ನು ಹಿಡಿದುಕೊಂಡು ನನಗೆ ಮಾರ್ಗವನ್ನು ತೋರಿಸಿ ಕರೆದುಕೊಂಡು ಹೋಗುವವನಾರು? ಅಯ್ಯೋ! ಕುಮಾರನೇ! ನನ್ನನ್ನು ದಿಕ್ಕಿಲ್ಲದವನಂತೆ ಮಾಡಿಹೋದೆಯಲ್ಲವೆ? ವತ್ಸ!! ದಿಕ್ಕಿಲ್ಲದವಳೂ, ಅಂಧಳೂ, ವೃದ್ಧೆಯೂ, ನಿನ್ನಲ್ಲಿ ಅಧಿಕ ವಾತ್ಸಲ್ಯವುಳ್ಳವಳೂ ಆದ ನಿನ್ನ ಜನನಿಯನ್ನು ನಾನು ಹೇಗೆ ಕಾಪಾಡಬೇಕು. ಮಗನೆ! ನೀನು ಹೋಗಬೇಡ! ಇಲ್ಲಿಯೇ ಇರುವವನಾಗು! ನಾಳೆ ನಿನ್ನ ತಾಯಿಯನ್ನೂ, ನನ್ನನ್ನೂ ಕರೆದುಕೊಂಡು ಯಮನಬಳಿಸಾರು! ॥೩೪-೩೮॥ ಅಡವಿಯಲ್ಲಿ ದಿಕ್ಕಿಲ್ಲದವರೂ, ಪುತ್ರಹೀನರೂ, ದೀನರೂ, ದುಃಖಪೀಡಿತರೂ ಆದ ನಾವಿಬ್ಬರೂ ಶೀಘ್ರದ ಲ್ಲಿಯೇಯಮನಬಳಿಗೆ ಬರುವವರಾಗಿರುವೆವು! ಆದುದರಿಂದ ನಾವೂ ಸಹ ಯಮನ ಬಳಿಗೈದಿ "ಓ ಯಮಧರ್ಮರಾಜನೆ! ನಾವು ಕುರುಡರು; ನಮ್ಮನ್ನು ಕಾಪಾಡುವವನಾವನೂ ಇಲ್ಲ!

ನ್ಯೈನಸ್ತ್ವಕಂ ದೃಷ್ಟ್ವಾ ತಂ ಪ್ರವಕ್ಷ್ಯಾಮಿ ಭಾರತೀಂ॥ಶ್ರುಣುತಾಂ ಧರ್ಮರಾಜೋ ನೋ ಬಿಭೃಯಾತ್ಪಿತರೌ ವಯಂ ॥ ೩೯ ॥ ದಾತುಮರ್ಹತಿ ಧರ್ಮಾತ್ಮಾ ಲೋಕಪಾಲೋ ಮಹಾಯಶಾಃ ॥ ಈದೃಶಸ್ಯ ಮಮಾಕ್ಷಯ್ಯಾಮೇಕಾಮಭಯ ದಕ್ಷಿಣಾಂ॥೪೦॥ಅಪಾಪಸ್ತ್ವಂ ಯದಾ ಪುತ್ರ! ನಿಹತಃ ಪಾಪಕರ್ಮಣಾ ॥ ತೇನ ಸತ್ಯೇನ ಗಚ್ಛಾಶು ಯೇಲೋಕಾ (೧) ಶ್ಯಸ್ತ್ರಯೋಧಿನಾಂ ॥೪೧॥ ಯಾಂತಿ ಶೂರಾ ಗತಿಂ ಯಾಂಚ ಸಂಗ್ರಾಮೇಷ್ವನಿವರ್ತಿನಃ ॥ ಹತಾಸ್ತ್ವಭಿಮುಖಾಃ

ಹುಡುಗನು, ಪಿತರೌ - ತಾಯಿತಂದೆಗಳನ್ನು, ಬಿಭೃಯಾತ್ - ಭರಿಸಲಿ, ಇತಿ - ಇಂತೆಂದು, ಭಾರತೀಂ - ಮಾತನ್ನು, ಪ್ರವಕ್ಷ್ಯಾಮಿ - ಹೇಳುತ್ತೇನೆ. ॥ ೩೯ ॥ ಧರ್ಮಾತ್ಮಾ - ಧರ್ಮನಿಷ್ಠನಾದ, ಮಹಾಯಶಾಃ - ಮಹಾಕೀರ್ತಿವಂತನಾದ, ಲೋಕಪಾಲಃ - ದಿಕ್ಪಾಲಕನಾದ ಯಮನು, ಈದೃಶಸ್ಯ - ಇಂತಹ ಅವಸ್ಥೆಯನ್ನು ಪಡೆದಿರುವ, ಮಮ - ನನಗೆ, ಅಕ್ಷಯ್ಯಾಂ - ನಾಶರಹಿತವಾದ, ಏಕಾಂ - ಒಂದಾದ, ಅಭಯದಕ್ಷಿಣಾಂ - ಅಭಯಪ್ರದಾನರೂಪ ದಕ್ಷಿಣೆಯನ್ನು, ದಾತುಂ-ಕೊಡಲು, ಅರ್ಹತಿ - ಯೋಗ್ಯನಾಗುತ್ತಾನೆ. ॥ ೪೦ ॥ ಹೇ ಪುತ್ರ - ಎಲೈ ಮಗನೇ, ಅಪಾಪಃ - ಪಾಪರಹಿತನಾದ, ತ್ವಂ - ನೀನು, ಪಾಪಕರ್ಮಣಾ - ಪಾಪಕೃತ್ಯವುಳ್ಳ ಈ ದಶರಥರಾಯನಿಂದ, ಯದಾ - ಯಾವಾಗ, ನಿಹತಃ - ಹತನಾದೆಯೋ, ತೇನ - ಆ ಅಪಾಪಕೃತ್ಯಕ್ಕೆ ಕಾರಣಭೂತವಾದ, ಸತ್ಯೇನಚ - ನನ್ನ ಸತ್ಯದಿಂದ, ಶಸ್ತ್ರಯೋಧಿನಾಂ - ಶಸ್ತ್ರಗಳಿಂದ ಯುದ್ಧಮಾಡುವವರಿಗೆ, ಯೇಲೋಕಾಃ - ಯಾವ ಲೋಕಗಳೋ, ತಾನ್‌ಲೋಕಾನ್ - ಆ ಲೋಕಗಳನ್ನು ಕುರಿತು, ಆಶು - ಜಾಗ್ರತೆಯಾಗಿ, ಗಚ್ಛ - ಹೋಗು. ॥ ೪೧ ॥ ಹೇ ಪುತ್ರ - ಎಲೈ ಮಗನೇ, ಶೂರಾಃ - ಶೂರರು, ಸಂಗ್ರಾಮೇಷು - ಕಾಳಗಗಳಲ್ಲಿ, ಅನಿವರ್ತಿನಃ - ಹಿಂತಿರುಗದೆ, ಅಭಿಮುಖಾಃ-ಯುದ್ಧಾಭಿಮುಖರಾಗಿ, ಹತಾಃ - ಹೊಡಿಯಲ್ಪಟ್ಟು, ಯಾಂಗತಿಂ - ಯಾವ ಗತಿಯನ್ನು, ಯಾಂತಿ - ಹೊಂದುತ್ತಾರೆಯೋ,

---

ಈ ಕಾರಣದಿಂದ ನಾವು ನಿನ್ನ ಬಳಿಗೆ ಬರಲು ತಡವಾಯಿತು; ಮನ್ನಿಸು. ಆದುದರಿಂದ ನಮ್ಮ ಮಗನನ್ನು ನಮಗೆ ಕೊಡು.” ಎಂದು ಪ್ರಾರ್ಥಿಸುತ್ತೇವೆಯಲ್ಲದೆ, “ಎಲೈ ಯಮನೆ! ನೀನು ಧರ್ಮಿಷ್ಠನು, ಲೋಕಪಾಲನು; ಮಹಾ ಕೀರ್ತಿವಂತನು. ಈ ರೀತಿ ದುಃಖ ಪಡುತ್ತಿರುವ ನಮಗೆ ನಮ್ಮ ಮಗನನ್ನು ಕೊಟ್ಟು ಶಾಶ್ವತವಾದ ಅಭಯದಾನವನ್ನು ಮಾಡು” ಎಂದು ಪ್ರಾರ್ಥಿಸಿಕೊಳ್ಳುತ್ತೇವೆ. ॥ ೩೯-೪೦ ॥ ಪ್ರಾರ್ಥಿಸಿಕೊಂಡುದೇ ಆದರೆ, ದಯಾಳುವಾದ ಯಮನು ನಿನ್ನನ್ನು ನಮಗೆ ಕೊಟ್ಟುಬಿಡುವನು, ಮಗನೆ! ನೀನಾವ ಪಾಪವನ್ನೂ ಮಾಡಿದವನಲ್ಲ! ನೀನು ನಿಷ್ಕಾರಣವಾಗಿ, ಪಾಪಕರ್ಮಿಯಾದೀ ದಶರಥರಾಯನಿಂದ ಹತನಾದೆ. ಆದುದರಿಂದ ನೀನು, ಸತ್ಯಬಲದಿಂದ ಯುದ್ಧವನ್ನು

ಟಿ. (೧) “ತಪಸ್ವಿಯಾದವನಿಗೆ ಬ್ರಹ್ಮಲೋಕವಾಸವನ್ನೇ ಹೇಳಬೇಕು. ಹಾಗಿಲ್ಲದೆ, “ಶಸ್ತ್ರಯೋಧಿನಾಂ” ಎಂದು ಹೇಳಿದ್ದಾರಲ್ಲ” ಎಂದು ಕೆಲವರ ಸಂಶಯ. ಇದಕ್ಕೆ ಸಮಾಧಾನ:— ದ್ವಾವಿಮೌ ಪುರುಷೌ ಲೋಕೇ ಸೂರ್ಯಮಂಡಲ ಭೇದಿನೌ । ಪರಿವ್ರಾಡ್ಯೋಗ ಯುಕ್ತಶ್ಚ ರಣೇಚಾಭಿಮುಖೋಹತಃ” ಎಂದು ಹೇಳಿದ್ದಾರೆಯಾದುದರಿಂದ ಇಲ್ಲಿ ದೋಷವೇನೂ ಕಾಣುವುದಿಲ್ಲ.

ಪುತ್ರ! ಗತಿಂ ತಾಂ ಪರಮಾಂ ವ್ರಜ ||೪೨|| ಯಾಂ ಗತಿಂ ಸಗರಶ್ಶೈಬ್ಯೋ ದಿಲೀಪೋ ಜನಮೇಜಯಃ || ನಹುಷೋ ಧುಂಧುಮಾರಶ್ಚ ಪ್ರಾಪ್ತಾ ಸ್ತಾಂ ಗಚ್ಛ ಪುತ್ರಕ! || ೪೩ || ಯಾಗತಿ ಸ್ಸರ್ವ ಸಾಧೂನಾಂ ಸ್ವಾಧ್ಯಾಯ ತ್ತಪಸಾಚ ಯಾ || ಭೂಮಿದಸ್ಯಾ ಹಿತಾಗ್ನೇಶ್ಚ ಏಕಪತ್ನೀ ವ್ರತಸ್ಯಚ ||೪೪|| ಗೋಸಹಸ್ರ ಪ್ರದಾತೄಣಾಂ ಯಾಯಾ ಗುರುಭೃತಾಮಪಿ || ದೇಹನ್ಯಾಸಕೃತಾಂ ಯಾಚ ತಾಂ ಗತಿಂ ಗಚ್ಛ ಪುತ್ರಕ! || ೪೫ || ನಹಿತ್ವಸ್ಮಿನ್ ಕುಲೇ ಜಾತೋ ಗಚ್ಛೇದಕುಶಲಾಂ ಗತಿಂ || ಸತು ಯಾಸ್ಯತಿ ಯೇನ ತ್ವಂ ನಿಹತೋ ಮಮ

ಪರಮಾಂ - ಉತ್ಕೃಷ್ಟವಾದ, ತಾಂಗತಿಂ - ಆ ಗತಿಯನ್ನು, ವ್ರಜ-ಹೊಂದು. || ೪೨ || ಸಗರಃ - ಸಗರಚಕ್ರವರ್ತಿಯು, ಶೈಬ್ಯಃ - ಶೈಬ್ಯನು, ದಿಲೀಪಃ - ದಿಲೀಪರಾಯನು, ಜನಮೇಜಯಃ - ಜನಮೇಜಯರಾಯನು, ನಹುಷಃ - ನಹುಷರಾಯನು, ಧುಂಧುಮಾರಶ್ಚ - ಧುಂಧುಮಾರನೂ, ಯಾಂಗತಿಂ - ಯಾವ ಗತಿಯನ್ನು, ಪ್ರಾಪ್ತಾಃ - ಹೊಂದಿದರೋ, ಹೇ ಪುತ್ರಕ - ಎಲೈ ಮಗನೆ, ತಾಂ - ಅಂತಹ ಗತಿಯನ್ನು, ಗಚ್ಛ - ಹೊಂದು. || ೪೩ || ಹೇ ಪುತ್ರಕ-ಎಲೈ ಮಗನೆ, ಸರ್ವಸಾಧೂನಾಂ - ಸಮಸ್ತ ಸತ್ಪುರುಷರಿಗೆ, ಯಾಗತಿಃ - ಯಾವ ಲೋಕಪ್ರಾಪ್ತಿಯೋ, ಸ್ವಾಧ್ಯಾಯಾತ್ - ನಿಯಮಾಧ್ಯಯನದಿಂದಲೂ, ತಪಸಾಚ - ತಪಸ್ಸಿನಿಂದಲೂ, ಯಾಗತಿಃ - ಯಾವ ಗತಿಯೋ, ಭೂಮಿದಸ್ಯ - ಭೂದಾನಮಾಡಿದವನಿಗೆ, ಆಹಿತಾಗ್ನೇಶ್ಚ - ಅಗ್ನಿಹೋತ್ರಮಾಡಿದವನಿಗೆ, ಏಕಪತ್ನೀವ್ರತಸ್ಯಚ - ಪತ್ನ್ಯಂತರಗಮನಮಾಡದೆ ಏಕಪತ್ನಿಯಲ್ಲಿಯೇ ನಿಯಮವಂತನಾದವನಿಗೆ, ಗೋಸಹಸ್ರಪ್ರದಾತೄಣಾಂ - ಸಹಸ್ರ ಗೋದಾನಮಾಡಿದವರಿಗೆ, ಗುರುಭೃತಾಮಪಿ - ಗುರುಶುಶ್ರೂಷ ಮಾಡಿದವರಿಗೆ, ದೇಹನ್ಯಾಸಕೃತಾಂ - ಮಹಾ ಪ್ರಸ್ಥಾನಗಮನದಿಂದ ದೇಹತ್ಯಾಗಮಾಡಿದವರಿಗೆ, ಯಾಯಾಗತಿಃ - ಯಾವ ಯಾವ ಗತಿಯುಂಟೋ, ತಾಂಗತಿಂ - ಅಂತಹ ಗತಿಯನ್ನು, ಗಚ್ಛ - ಹೊಂದು. || ೪೪-೪೫ || ಅಸ್ಮಿನ್ - ಈ ನಮ್ಮ, ಕುಲೇ - ವಂಶದಲ್ಲಿ, ಜಾತಃ - ಹುಟ್ಟಿದವನು, ಅಕುಶಲಾಂ - ಅಶುಭವಾದ, ಗತಿಂ - ಗತಿಯನ್ನು, ನಗಚ್ಛೇತ್ - ಹೊಂದಬೇಡ, ಯೇನ - ಯಾವ ರಾಜನಿಂದ, ಮಮ - ನನ್ನ, ಬಾಂಧವಃ - ಕುಮಾರನಾದ, ತ್ವಂ - ನೀನು, ನಿಹತಃ - ಹತ

ಮಾಡಿದ ವೀರರು ಹೋಗುವ ಉತ್ತಮ ಲೋಕಗಳಿಗೆ ಹೋಗು. ಮಗನೆ! ಯುದ್ಧಗಳಲ್ಲಿ ಹಿಂತಿರುಗದವರೂ, ಮುಂಬರಿದು ಯುದ್ಧ ಮಾಡುವವರೂ ಆಗಿ ಮಡಿದ ಶೂರರು ಹೋಗುವಂತಹ ಉತ್ತಮ ಲೋಕಗಳಿಗೆ ಹೋಗು. ಸಗರ, ಶೈಬ್ಯ, ದಿಲೀಪ, ಜನಮೇಜಯ, ನಹುಷ, ಧುಂಧುಮಾರರೇ ಮೊದಲಾದ ಮಹಾರಾಜರು ಹೊಂದಿರುವ ಉತ್ತಮ ಲೋಕಗಳಿಗೆ ನೀನೂ ತೆರಳುವವನಾಗು. ಕುಮಾರಾ! ಸಮಸ್ತ ಸಜ್ಜನರಿಗೂ, ಸ್ವಾಧ್ಯಾಯಾಧ್ಯಯನ ತಪಸ್ಸುಗಳನ್ನು ಮಾಡುವವರಿಗೂ, ಭೂದಾನ ಮಾಡುವವನಿಗೂ, ಆಹಿತಾಗ್ನಿಗೂ, ಏಕಪತ್ನೀವ್ರತವನ್ನವಲಂಬಿಸಿದವನಿಗೂ, ಗುರುರಕ್ಷಣಕರ್ತನಿಗೂ, ಪುಣ್ಯಕ್ಷೇತ್ರಗಳಲ್ಲಿ ದೇಹ ಬಿಟ್ಟವನಿಗೂ ಉಂಟಾಗುವ ಲೋಕಗಳಿಗೆ ನೀನೂ ಹೋಗುವವನಾಗು. ||೪೧-೪೫|| ತಪಸ್ಸಂಪನ್ನರಾದ ನಮ್ಮಕುಲದಲ್ಲಿ ಜನಿಸಿದವನಾವನೂ, ದುರ್ಗತಿಯನ್ನು ಹೊಂದುವುದಿಲ್ಲವು. ನನ್ನ ಕುಮಾರ

ಬಾಂಧವಃ || ೪೬ || ಏವಂ ಸ ಕೃಪಣಂ ತತ್ರ ಪರ್ಯದೇವಯುತಾಸಕೃತ್ || ತತೋಽಸ್ಮೈ ಕರ್ತು ಮುದಕಂ ಪ್ರವೃತ್ತ ಸ್ಸಹಭಾರ್ಯಯಾ ||೪೭|| ಸತು ದಿವ್ಯೇನ ರೂಪೇಣ ಮುನಿಪುತ್ರ ಸ್ಸ್ವಕರ್ಮಭಿಃ || ಸ್ವರ್ಗಮಧ್ಯಾರುಹತ್ ಕ್ಷಿಪ್ರಂ ಶಕ್ರೇಣಸಹ ಧರ್ಮವಿತ್ || ೪೮ || ಆಬಭಾಷೇಚ ತೌ ವೃದ್ಧೌ ಸಹಶಕ್ರೇಣ ತಾಪಸಃ || ಆಶ್ವಾಸ್ಯಚ ಮುಹೂರ್ತಂತು ಪಿತರೌ ವಾಕ್ಯಮಬ್ರವೀತ್ || ೪೯ || ಸ್ಥಾನಮಸ್ಮಿ ಮಹತ್ಪ್ರಾಪ್ತೋ ಭವತೋಃ ಪರಿಚಾರಣಾತ್ || ಭವಂತಾವಪಿ ಚ ಕ್ಷಿಪ್ರಂ ಮಮಮೂಲ ಮುಪೈಷ್ಯತಃ || ೫೦ || ಏವಮುಕ್ತ್ವಾತು ದಿವ್ಯೇನ

ನಾದೆಯೋ, ಸತು - ಆ ರಾಜನಾದರೆ, ಅಕುಶಲಾಂ - ಅಶುಭಕರವಾದ, ಗತಿಂ - ಗತಿಯನ್ನು, ಯಾಸ್ಯತಿ - ಹೊಂದುತ್ತಾನೆ. || ೪೬ || ಏವಂ - ಈಪರಿಯಾಗಿ, ಸಃ ಆ ವೃದ್ಧ ಋಷಿಯು, ತತ್ರ - ಆ ಸರಯೂತೀರದಲ್ಲಿ, ಅಸಕೃತ್ - ಬಾರಿಬಾರಿಗೂ, ಕೃಪಣಂ - ದೈನ್ಯವಾಗಿ, ಪರ್ಯದೇವಯತ - ಸಂಕಟಬಿದ್ದನು, ತತಃ - ಬಳಿಕ, ಅಸ್ಮೈ - ಈ ಪುತ್ರನಿಗೋಸುಗ, ಉದಕಂ - ಜಲಾಂಜಲಿಯನ್ನು ಮಾಡಲು, ಭಾರ್ಯಯಾಸಹ - ಹೆಂಡತಿಯೊಡನೆ, ಪ್ರವೃತ್ತಃ - ಯತ್ನಿಸಿದನು. || ೪೭ || ಧರ್ಮವಿತ್ - ಧರ್ಮಜ್ಞನಾದ, ಸಮುನಿಪುತ್ರಃ - ಆ ಋಷಿಪುತ್ರನು, ದಿವ್ಯೇನರೂಪೇಣ - ದೇವತಾ ಸಂಬಂಧವಾದ ರೂಪದಿಂದ, ಸ್ವಕರ್ಮಭಿಃ, ಸ್ವ - ತನ್ನ, ಕರ್ಮಭಿಃ-ಪಿತೃಶುಶ್ರೂಷಾದಿ ಕರ್ಮರೂಪದಿಂದ, ಶಕ್ರೇಣಸಹ - ದೇವೇಂದ್ರನೊಡಗೂಡಿ, ಸ್ವರ್ಗಂ - ಸ್ವರ್ಗಲೋಕವನ್ನು, ಕ್ಷಿಪ್ರಂ - ಜಾಗ್ರತೆಯಾಗಿ, ಅಧ್ಯಾರುಹತ್ - ಏರಿದನು. || ೪೮ || ತಾಪಸಃ - ಋಷಿಯು, ಶಕ್ರೇಣಸಹ - ದೇವೇಂದ್ರನೊಡನೆ, ವೃದ್ಧೌ - ಮುದುಕರಾದ, ತೌ - ಅವರಿಬ್ಬರನ್ನು ಕುರಿತು, ಆಬಭಾಷೇಚ - ಮಾತನ್ನೂ ಆಡಿದನು, ಪಿತರೌತು - ತಾಯಿತಂದೆಗಳನ್ನಾದರೆ, ಮುಹೂರ್ತಂತು - ಮುಹೂರ್ತಕಾಲವು, ಆಶ್ವಾಸ್ಯಚ - ಸಮಾಧಾನಗೊಳಿಸಿ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. || ೪೯ || ಭವತೋಃ - ನಿಮ್ಮ, ಪರಿಚಾರಣಾತ್ - ಸೇವೆಯಿಂದ, ಮಹತ್‌ಸ್ಥಾನಂ - ಸರ್ವೋತ್ಕೃಷ್ಟವಾದ ಪದವಿಯನ್ನು, ಪ್ರಾಪ್ತಃ - ಹೊಂದಿದವನು, ಅಸ್ಮಿ - ಆದೆನು, ಭವಂತಾವಪಿ - ನೀವೂ, ಕ್ಷಿಪ್ರಂ - ಜಾಗ್ರತೆಯಾಗಿ, ಮಮ - ನನ್ನ, ಮೂಲಂ - ಸಮೀಪವನ್ನು ಕುರಿತು, ಉಪೈಷ್ಯತಃ - ಹೊಂದುತ್ತೀರಿ. || ೫೦ ||

ನಾದ ನಿನ್ನನ್ನು ಕೊಂದ ಈ ದಶರಥರಾಯನು ಮಾತ್ರ ದುರ್ಗತಿಯನ್ನು ಹೊಂದುತ್ತಾನೆ.'' || ೪೬ || ಈ ರೀತಿಯಾಮುನಿಯು ಅನೇಕವಿಧವಾಗಿ ದುಃಖಿಸುತ್ತಿದ್ದು ಆಮೇಲೆ ನಿಜಭಾರ್ಯೆಯೊಡಗೂಡಿ ತನ್ನ ಮಗನಿಗೆ ಉತ್ತರಕ್ರಿಯೆಗಳನ್ನು ಮಾಡಲು ಯೋಚಿಸಿದನು. ಆ ಸಮಯದಲ್ಲಿ ಧರ್ಮವೇತ್ತನಾದ ಆ ಮುನಿಕುಮಾರನು, ತನ್ನ ಪುಣ್ಯಕರ್ಮದಿಂದ ದಿವ್ಯರೂಪವನ್ನುಹೊಂದಿ, ದೇವೇಂದ್ರನು ತನ್ನನ್ನು ಹಿಂಬಾಲಿಸಿ ಬರಲು, ರಥವನ್ನೇರಿ ಸ್ವರ್ಗವೈದಿದನು. ಈ ಪ್ರಕಾರವಾಗಿ ಆ ಮುನಿಕುವರನು ದಿವ್ಯ ರೂಪವನ್ನು ಹೊಂದಿ ದೇವೇಂದ್ರನೊಡನೆ ಸ್ವರ್ಗವನ್ನು ಕುರಿತು ತೆರಳುವಾಗ ವೃದ್ಧರಾದ ಆ ಮಾತಾಪಿತೃಗಳನ್ನು ಒಂದು ಮುಹೂರ್ತಕಾಲ ಸಮಾಧಾನಗೊಳಿಸಿ. "ತಮ್ಮ ಪರಿಚರ್ಯೆಯಿಂದ ನಾನು ಶ್ರೇಷ್ಠವಾದ ಪದವಿಯನ್ನು ಹೊಂದಿದವನಾದೆನು. ತಾವೂ ಜಾಗ್ರತೆ



The Hermit's Curse.

Lakshmi Art Bombay, 8

ವಿಮಾನೇನ ವಪುಷ್ಮತಾ ॥ ಆರುರೋಹ ದಿವಂ ಕ್ಷಿಪ್ರಂ ಮುನಿಪುತ್ರೋ ಜಿತೇಂ
ದ್ರಿಯಃ ॥ ೫೧ ॥ ಸ ಕೃತ್ವಾ ತೂದಕಂ ತೂರ್ಣಂ ತಾಪಸ ಸ್ಸಹಭಾರ್ಯಯಾ॥
ಮಾ ಮುವಾಚ ಮಹಾತೇಜಾಃ ಕೃತಾಂಜಲಿ ಮುಪಸ್ಥಿತಂ ॥೫೨॥ ಅದ್ಯೈವ
ಜಹಿ ಮಾಂ ರಾಜನ್! ಮರಣೇ ನಾಸ್ತಿ ಮೇ ವ್ಯಥಾ॥ಯಚ್ಛರೇಣೈಕಪುತ್ರಂ ಮಾಂ
ತ್ವಮಕಾರ್ಷೀ ರಪುತ್ರಕಂ ॥ ೫೩ ॥ ತ್ವಯಾತು ಯದವಿಜ್ಞಾನಾ ನ್ನಿಹತೋ
ಮೇ ಸುತ ಶ್ಶುಚಿಃ॥ತೇನ ತ್ವಾ ಮಭಿಶಪ್ಸ್ಯಾಮಿ ಸುದುಃಖ ಮತಿದಾರುಣಂ॥೫೪॥

ಜಿತೇಂದ್ರಿಯಃ - ಜಯಿಸಲ್ಪಟ್ಟ ಇಂದ್ರಿಯಗಳುಳ್ಳ, ಮುನಿಪುತ್ರಃ - ಋಷಿಪುತ್ರನು, ಏವಂ - ಈಪರಿಯಾಗಿ, ಉಕ್ತ್ವಾ - ಹೇಳಿ, ವಪುಷ್ಮತಾ - ಪ್ರಶಸ್ತಾಕಾರವುಳ್ಳ, ದಿವ್ಯೇನ - ದೇವತಾಸಂಬಂಧವಾದ, ವಿಮಾನೇನ - ವಿಮಾನದಿಂದ, ಕ್ಷಿಪ್ರಂ - ಜಾಗ್ರತೆಯಾಗಿ, ದಿವಂ-ಸ್ವರ್ಗಲೋಕವನ್ನು, ಆರುರೋಹ-ಏರಿದನು. ॥ ೫೧ ॥ ಮಹಾತೇಜಾಃ - ಬಹಳ ತೇಜೋವಂತನಾದ, ಸತಾಪಸಃ - ಆ ಋಷಿಯು, ಭಾರ್ಯಯಾಸಹ - ಹೆಂಡತಿಯೊಡನೆ, ಉದಕಂ - ತಿಲೋದಕವನ್ನು, ತೂರ್ಣಂ - ಜಾಗ್ರತೆಯಾಗಿ, ಕೃತ್ವಾ - ಮಾಡಿ, ಕೃತಾಂಜಲಿಂ - ಕೈಮುಗಿದುಕೊಂಡು, ಉಪಸ್ಥಿತಂ - ಸಮೀಪವರ್ತಿಯಾದ, ಮಾಂ - ನನ್ನನ್ನು ಕುರಿತು, ಉವಾಚ - ಹೇಳಿದನು. ॥ ೫೨ ॥ ಹೇ ರಾಜನ್ - ಎಲೈ ಅರಸನೆ! ಅದ್ಯೈವ - ಈಗಲೇ, ಮಾಂ - ನನ್ನನ್ನೂ, ಜಹಿ - ಹೊಡೆದುಬಿಡು, ಯತ್ - ಯಾವ ಕಾರಣ, ತ್ವಂ - ನೀನು, ಏಕಪುತ್ರಂ - ಒಬ್ಬನೇ ಮಗನುಳ್ಳ, ಮಾಂ - ನನ್ನನ್ನು, ಅಪುತ್ರಕಂ - ಪುತ್ರರಹಿತನನ್ನಾಗಿ, ಶರೇಣ - ಬಾಣದಿಂದ, ಅಕಾರ್ಷೀಃ - ಮಾಡಿದೆಯೋ, ತೇನ - ಆ ಕಾರಣದಿಂದ, ಮರಣೇ-ಸಾಯುವದರಲ್ಲಿ, ಮೇ - ನನಗೆ, ವ್ಯಥಾ - ವ್ಯಸನವು, ನಾಸ್ತಿ - ಇಲ್ಲವು. ॥ ೫೩ ॥ ಯತ್ - ಯಾವ ಕಾರಣ, ಮೇ - ನನ್ನ, ಶುಚಿಃ - ಶುಚಿರ್ಭೂತನಾದ, ಸುತಃ - ಕುವರನು, ತ್ವಯಾತು - ನಿನ್ನಿಂದಲಾದರೆ, ಅವಿಜ್ಞಾನಾತ್ - ಅಜ್ಞಾನದಿಂದ, ನಿಹತಃ - ಹೊಡೆಯಲ್ಪಟ್ಟನೋ, ತೇನ - ಆ ಕಾರಣ, ತ್ವಾಂ - ನಿನ್ನನ್ನು ಕುರಿತು, ಸುದುಃಖಂ - ಅತಿದುಃಖವಾಗಿ, ಅತಿದಾರುಣಂ - ಬಹಳ ಕ್ರೂರವಾಗಿ, ಅಭಿಶಪ್ಸ್ಯಾಮಿ - ಶಪಿಸುತ್ತೇನೆ. ॥ ೫೪ ॥ ಹೇ ರಾಜನ್ - ಎಲೈ ರಾಜನೆ! ಯತ್ - ಯಾವ

ಯಾಗಿಯೇ ನನ್ನಬಳಿ ಸಾರುವಿರಿ" ಎಂದು ಹೇಳಿ, ಜಿತೇಂದ್ರಿಯನಾದ ಆ ಮುನಿಕುಮಾರನು ದೇವತಾ ಸಂಬಂಧವಾದ ವಿಮಾನದಲ್ಲಿ, ದಿವ್ಯ ಶರೀರವನ್ನಾಂತು ಸ್ವರ್ಗವನ್ನೈದಿದನು. ಆ ಬಳಿಕ ವೃದ್ಧನಾದ ಆ ಮುನಿಯು ಭಾರ್ಯೆಯೊಡಗೂಡಿ ಮಗನ ಉದಕಕ್ರಿಯೆಗಳನ್ನು ಸಂಪೂರ್ಣಗೊಳಿಸಿ, ಕೈಜೋಡಿಸಿಕೊಂಡು ನಿಂತಿರುವ ನನ್ನನ್ನು ಕುರಿತು ಹೀಗೆಂದನು. "ಓ ದಶರಥರಾಯನೆ! ಒಂದೇ ಒಂದು ಬಾಣದಿಂದ ಒಬ್ಬನೇ ಒಬ್ಬನಾದ ನನ್ನ ಮಗನನ್ನು ಕೊಂದು, ನನ್ನನ್ನು ಅಪುತ್ರವಂತನನ್ನಾಗಿ ಮಾಡಿದೆ! ಸಾಯುವಿಕೆಯಲ್ಲಿ ನನಗೆ ವ್ಯಥೆಯೇ ಇಲ್ಲ. ನನ್ನನ್ನೀಗಲೇ ಕೊಲ್ಲು! ಯಾವ ಕಾರಣದಿಂದ ಪರಿಶುದ್ಧನಾದ ನನ್ನ ಕುವರನನ್ನು ಅಜ್ಞಾನದಿಂದ ಕೊಂದೆಯೋ ಆ ಕಾರಣದಿಂದಲೇ ನಾನೀಗ ನಿನ್ನನ್ನು ಬಹು ಕ್ರೂರವಾಗಿಯೂ, ಬಹು ದುಃಖಕರವಾಗಿಯೂ ಶಪಿಸುತ್ತೇನೆ. ಅಯ್ಯಾ, ರಾಜನೆ! ಈಗ ನಾನಾವ ರೀತಿಯಲ್ಲಿ ಪುತ್ರವ್ಯಸನದಿಂದುಂಟಾದ ದುಃಖವನ್ನನುಭವಿಸುತ್ತಿರುವೆನೋ, ಅದೇ ರೀತಿ

ಪುತ್ರವ್ಯಸನಜಂ ದುಃಖಂ ಯದೇತ ನ್ಮಮ ಸಾಂಪ್ರತಂ ॥ ಏವಂ ತ್ವಂ ಪುತ್ರ ಶೋಕೇನ ರಾಜನ್! ಕಾಲಂ ಕರಿಷ್ಯಸಿ ॥೫೫॥ ಅಜ್ಞಾನಾತ್ತು ಹತೋ ಯಸ್ಮಾತ್ ಕ್ಷತ್ರಿಯೇಣ ತ್ವಯಾ ಮುನಿಃ ॥ ತಸ್ಮಾತ್ತ್ವಾಂ ನಾವಿಶತ್ಯಾಶು ಬ್ರಹ್ಮಹತ್ಯಾ ನರಾಧಿಪ! ॥ ೫೬ ॥ ತ್ವಾಮಪ್ಯೇತಾದೃಶೋ ಭಾವಃ ಕ್ಷಿಪ್ರಮೇವ ಗಮಿಷ್ಯತಿ ॥ ಜೀವಿತಾಂತಕರೋ ಘೋರೋ ದಾತಾರಮಿವ ದಕ್ಷಿಣಾ ॥ ೫೭ ॥ ಏವಂ ಶಾಪಂ ಮಯಿ ನ್ಯಸ್ಯ ವಿಲಪ್ಯ ಕರುಣಂ ಬಹು ॥ ಚಿತಾಮಾರೋಪ್ಯ ದೇಹಂ ತನ್ಮಿಥುನಂ ಸ್ವರ್ಗಮಭ್ಯಯಾತ್ ॥ ೫೮ ॥ ತದೇತಚ್ಚಿಂತಯಾನೇನ ಸ್ಮೃತಂ ಪಾಪಂ

ಕಾರಣ, ಮಮ - ನನಗೆ, ಸಾಂಪ್ರತಂ - ಈಗ, ಪುತ್ರವ್ಯಸನಜಂ - ಮಗನ ವ್ಯಸನದಿಂದ ಹುಟ್ಟಿದ, ಏತದ್ದುಃಖಂ - ಈ ವ್ಯಸನವು, (ಅಭೂತ್ - ಆಯಿತೋ, ತಸ್ಮಾತ್ - ಆ ಕಾರಣ,) ತ್ವಂ - ನೀನು, ಏವಂ - ಇದೇ ರೀತಿ, ಪುತ್ರಶೋಕೇನ - ಪುತ್ರವ್ಯಸನದಿಂದ, ಕಾಲಂ - ಮೃತ್ಯುವನ್ನು, ಕರಿಷ್ಯಸಿ - ಹೊಂದುತ್ತೀಯೆ. ॥ ೫೫ ॥ ಹೇ ನರಾಧಿಪ - ಎಲೈ ಅರಸೇ, ಯಸ್ಮಾತ್ - ಯಾವ ಕಾರಣ, ಕ್ಷತ್ರಿಯೇಣ - ಕ್ಷತ್ರಿಯ ಜಾತೀಯನಾದ, ತ್ವಯಾ - ನಿನ್ನಿಂದ, ಮುನಿಃ - ಋಷಿಯು, ಅಜ್ಞಾನಾತ್ - ತಿಳಿಯದೆ, ಹತಃ - ಹೊಡೆಯಲ್ಪಟ್ಟನೋ. ತಸ್ಮಾತ್ - ಆ ಕಾರಣ, ಬ್ರಹ್ಮಹತ್ಯಾ - ಬ್ರಹ್ಮಹತ್ಯವೆಂಬ ಮಹಾ ಪಾತಕವು, ತ್ವಾಂ - ನಿನ್ನನ್ನು, ಆಶು - ಜಾಗ್ರತೆಯಾಗಿ, ನಾವಿಶತಿ - ಹೊಂದುವದಿಲ್ಲ. ॥ ೫೬ ॥ ತ್ವಾಮಪಿ - ನಿನ್ನನ್ನೂ ಕೂಡ, ಏತಾದೃಶಃ - ಇಂತಹ ಪುತ್ರಶೋಕರೂಪವಾದ, ಜೀವಿತಾಂತಕರಃ - ಪ್ರಾಣಾಂತಕರವಾದ, ಘೋರಃ - ಭಯಂಕರವಾದ, ಭಾವಃ - ಸ್ವಭಾವವು, ದಕ್ಷಿಣಾ - ಬ್ರಾಹ್ಮಣನಿಗೆ ಕೊಟ್ಟ ದಕ್ಷಿಣಾಜನ್ಯಫಲವು, ದಾತಾರಮಿವ - ದಾತೃವನ್ನಂತೆ, ಕ್ಷಿಪ್ರಮೇವ - ಜಾಗ್ರತೆಯಾಗಿಯೇ, ಗಮಿಷ್ಯತಿ - ಹೊಂದುವದು. ॥ ೫೭ ॥ ಏವಂ - ಈಪರಿಯಾಗಿ, ಮಯಿ - ನನ್ನಲ್ಲಿ, ಶಾಪಂ - ಶಾಪವನ್ನು, ನ್ಯಸ್ಯ - ಇಟ್ಟು, ಕರುಣಂ - ದೈನ್ಯವಾಗಿ, ಬಹು - ಬಹಳವಾಗಿ, ವಿಲಪ್ಯ - ಅತ್ತು, ತನ್ಮಿಥುನಂ - ಆ ಸ್ತ್ರೀಪುರುಷಯುಗ್ಮವು, ದೇಹಂ - ದೇಹವನ್ನು, ಚಿತಾಂ - ಚಿತಿಯನ್ನು, ಆರೋಪ್ಯ - ಏರಿ, ಸ್ವರ್ಗಂ - ಸ್ವರ್ಗಲೋಕವನ್ನು, ಅಭ್ಯಯಾತ್ - ಹೊಂದಿತು. ॥ ೫೮ ॥ ಹೇ ದೇವಿ - ಎಲೌ ಕೌಸಲ್ಯೆಯೇ, ಬಾಲ್ಯಾತ್ - ಬಾಲ್ಯಾವಸ್ಥೆಯಿಂದ,

---

ಯಲ್ಲಿ ನೀನೂ ಸಹ ಜೀವಿತವನ್ನು ಕಳೆ. ನೀನು ಕ್ಷತ್ರಿಯನು. ಅಜ್ಞಾನದಿಂದ ಮನನಶೀಲನಾದ ನನ್ನ ಮಗನನ್ನು ಕೊಂದವನಾದೆ. ಆದುದರಿಂದ ಬ್ರಹ್ಮಹತ್ಯೆಯು ನಿನ್ನನ್ನು ಜಾಗ್ರತೆಯಾಗಿ ಹೊಂದುವುದಿಲ್ಲ. ಆದರೆ ಇದು ನಿನ್ನನ್ನು ಬಿಡುವಹಾಗಿಲ್ಲ. ಜೀವಿತವನ್ನು ಕೊನೆಮುಟ್ಟಿಸುವುದಾಗಿಯೂ, ಬಹು ಘೋರವಾಗಿಯೂ ಇರುವ ಈ ಭಾವವು ದಕ್ಷಿಣೆಯನ್ನು ಕೊಟ್ಟ ದಾತೃವನ್ನು ಆ ದಕ್ಷಿಣೆಯು ಪುನಃ ಬಂದು ಸೇರುವಂತೆ ಜಾಗ್ರತೆಯಾಗಿಯೇ ನಿನ್ನನ್ನು ಸೇರುವುದು?" ಎಲೌ ಕೌಸಲ್ಯಾದೇವಿಯೆ! ಆ ವೃದ್ಧಮುನಿಯು ನನ್ನನ್ನೀರೀತಿ ಶಪಿಸಿ, ಬಹು ದೈನ್ಯವಾಗಿ ಬಹಳಕಾಲ ರೋದಿಸಿ, ಚಿತೆಯನ್ನು ಹತ್ತಿಸಿ, ಭಾರ್ಯೆಯೊಡಗೂಡಿ ಅದನ್ನು ಪ್ರವೇಶಿಸಿ, ಸ್ವರ್ಗವನ್ನು ಕುರಿತು ತೆರಳಿದವರಾದನು. ದೇವಿ! ಇದನ್ನೇ ಚಿಂತಿಸುತ್ತಿರುವ ನನ್ನಿಂದ ಆ ಪಾಪವು ಸ್ಮರಿಸಲಾಯಿತು. ಈ ರೀತಿ ಬಾಲ್ಯದಲ್ಲಿ 'ಶಬ್ದವೇಧಿ'

ಮಯಸಾ ಸ್ವಯಂ||ತದಾ ಬಾಲ್ಯಾತ್ಕೃತಂ ದೇವಿ! ಶಬ್ದವೇಧ್ಯಾನುಶಿಕ್ಷಿಣಾ||೫೯|| ತಸ್ಯಾಯಂ ಕರ್ಮಣೋ ದೇವಿ! ವಿಪಾಕ ಸ್ಸಮುಪಸ್ಥಿತಃ || ಅಪಥ್ಯೈ ಸ್ಸಹಸಂ ಭುಕ್ತೇ ವ್ಯಾಧಿರನ್ನರಸೇ ಯಥಾ || ೬೦ || ತಸ್ಮಾನ್ಮಾಮಾಗತಂ ಭದ್ರೇ! ತಸ್ಯೋದಾರಸ್ಯ ತದ್ವಚಃ || ಯದಹಂ ಪುತ್ರಶೋಕೇನ ಸಂತ್ಯಕ್ಷ್ಯಾಮ್ಯದ್ಯ ಜೀವಿತಂ || ೬೧ || ಚಕ್ಷುರ್ಭ್ಯಾಂ ತ್ವಾಂ ನಪಶ್ಯಾಮಿ ಕೌಸಲ್ಯೇ! ಸಾಧು ಮಾಂ ಸ್ಪೃಶ || ಇತ್ಯುಕ್ತ್ವಾ ಸ ರುದಂ ಸ್ತ್ರಸ್ತೋ ಭಾರ್ಯಾಮಾಹಚ ಭೂಮಿಪಃ || ೬೨ || ಏತನ್ಮೇ ಸದೃಶಂ ದೇವಿ! ಯನ್ಮಯಾ ರಾಘವೇ ಕೃತಂ || ಸದೃಶಂ ತತ್ತು

ತದಾ - ಆ ಕಾಲದಲ್ಲಿ, ಶಬ್ದವೇಧ್ಯಾನುಶಿಕ್ಷಿಣಾ - ಶಬ್ದವೇ ಲಕ್ಷ್ಯವಾಗುಳ್ಳ ವಿದ್ಯೆಯಲ್ಲಿ ಶಿಕ್ಷಿತನಾದ, ಮಯಾ - ನನ್ನಿಂದ, ಯತ್ಪಾಪಂ - ಯಾವ ಪಾಪವು, ಸ್ವಯಂ - ತಾನಾಗಿಯೇ, ಕೃತಂ-ಮಾಡಲ್ಪಟ್ಟಿತೋ, ತದೇತತ್ - ಆ ಈ ಪಾಪವು, ಚಿಂತಯಾನೇನ-ಆಲೋಚಿಸುತ್ತಿರುವ ನನ್ನಿಂದ, ಸ್ಮೃತಂ - ಸ್ಮರಿಸಲ್ಪಟ್ಟಿತು. ||೫೯|| ಹೇ ದೇವಿ - ಎಲೌ ದೇವಿಯೇ, ತಸ್ಯಕರ್ಮಣಃ - ಆ ಪಾಪಕರ್ಮಕ್ಕೆ, ಅಯಂವಿಪಾಕಃ - ಈ ಫಲಕಾಲವು, ಅನ್ನರಸೇ - ಅನ್ನರಸವು, ಅಪಥ್ಯೈಸ್ಸಹ - ವ್ಯಾಧಿವೃದ್ಧಿಗೊಳಿಸುವ ಶಾಕಾದಿಗಳೊಡನೆ, ಸಂಭುಕ್ತೇ - ಭೋಜನವಮಾಡಲ್ಪಟ್ಟದೇ ಆದರೆ, ವ್ಯಾಧಿರ್ಯಥಾ- ರೋಗದಂತೆ, ಸಮುಪಸ್ಥಿತಃ - ಪ್ರಾಪ್ತವಾಯಿತು. ||೬೦|| ಯತ್ - ಯಾವ ಕಾರಣ, ಅಹಂ - ನಾನು, ಪುತ್ರಶೋಕೇನ - ಪುತ್ರವಿಷಯಕವ್ಯಸನದಿಂದ, ಅದ್ಯ - ಈಗ, ಜೀವಿತಂ - ಪ್ರಾಣವನ್ನು, ಸಂತ್ಯಕ್ಷ್ಯಾಮಿ - ತ್ಯಾಗವಮಾಡುವೆನೋ, ತಸ್ಮಾತ್ - ಆ ಕಾರಣ, ಹೇ ಭದ್ರೇ - ಎಲೌ ಶುಭಕರಳೇ, ಉದಾರಸ್ಯ - ಮಹಾತ್ಮನಾದ, ತಸ್ಯ - ಆ ಋಷಿಯ, ತದ್ವಚನಂ - ಆ ಮಾತು, ಮಮ - ನನಗೆ, ಆಗತಂ - ಪ್ರಾಪ್ತವಾಯಿತು. ||೬೧|| ಹೇ ಕೌಸಲ್ಯೇ - ಎಲೌ ಕೌಸಲ್ಯಾದೇವಿಯೆ, ಚಕ್ಷುರ್ಭ್ಯಾಂ - ಕಣ್ಣುಗಳಿಂದ, ತ್ವಾಂ - ನಿನ್ನನ್ನು, ನಪಶ್ಯಾಮಿ-ಕಾಣುವುದಿಲ್ಲ, ಸಾಧು - ಚನ್ನಾಗಿ, ಮಾಂ - ನನ್ನನ್ನು, ಸ್ಪೃಶ - ಸ್ಪರ್ಶವಮಾಡು, ಇತಿ - ಇಂತೆಂದು, ಉಕ್ತ್ವಾ - ಹೇಳಿ, ರುದನ್ - ರೋದನವಮಾಡುತ್ತಿರುವ, ಸಭೂಮಿಪಃ - ಆ ದಶರಥರಾಯನು, ತ್ರಸ್ತಃ - ಭಯಗೊಂಡವನಾಗಿ, ಭಾರ್ಯಾಂ - ಹೆಂಡತಿಯನ್ನು ಕುರಿತು, ಆಹಚ - ಹೇಳಲೂ ಹೇಳಿದನು. ||೬೨|| ಹೇ ದೇವಿ - ಎಲೌ ಕೌಸಲ್ಯಾದೇವಿಯೇ, ಮಯಾ - ನನ್ನಿಂದ, ರಾಘವೇ - ಶ್ರೀರಾಮನಲ್ಲಿ, ಯತ್-

ಯನ್ನು ಅಭ್ಯಸಿಸುತ್ತಿರುವಾಗ ಪಾಪಕರ್ಮವನ್ನಾಚರಿಸಿದೆನು. ಅದಕ್ಕೆ ಅನುಗುಣವಾದ ಫಲವು ಅಪಥ್ಯದಿಂದೊಡಗೂಡಿದ ಅನ್ನರಸ ಭೋಜನದಿಂದ ವ್ಯಾಧಿಯು ಒದಗಿಬರುವಂತೆ ಸಂಪ್ರಾಪ್ತವಾಗಿರುವುದು. ||೫೭-೬೦|| ಆದುದರಿಂದೆಲೌ ಮಂಗಳಕರಳೆ! ಮಹಾ ಉದಾರಿಯಾದ ಆ ಮುನಿಯ ಶಾಪವು ನನಗೆ ಈಗ ಪ್ರಾಪ್ತವಾಗಿರುವುದು. ಆದುದರಿಂದ ನಾನೀಗ ಜೀವಿತವನ್ನು ತೊರೆಯುತ್ತೇನೆ. ಕೌಸಲ್ಯೆ! ನಿನ್ನನ್ನೀಕಣ್ಣುಗಳಿಂದ ನೋಡಲಾರದವನಾಗಿರುವೆನು. ನನ್ನನ್ನು ಚನ್ನಾಗಿ ಸ್ಪರ್ಶಿಸು." ಈ ಪ್ರಕಾರವಾಗಿ ಆ ದಶರಥರಾಯನು ರೋದಿಸುತ್ತ ಭಯಗೊಂಡವನಾಗಿ ಭಾರ್ಯೆಯಾದ ಕೌಸಲ್ಯೆಯನ್ನು ಕುರಿತು, "ದೇವಿ! ರಘುರಾಮನಲ್ಲಿ ನನ್ನಿಂದಾಚರಿಸಲ್ಪಟ್ಟುದು ನನಗೆ ತಕ್ಕುದು! ಆ ಶ್ರೀರಾಮನಿಂದ ನನ್ನಲ್ಲಿ ಆಚರಿಸ

ತಸ್ಯೈವ ಯದನೇನ ಕೃತಂ ಮಯಿ ||೬೩|| ದುರ್ವೃತ್ತಮಪಿ ಕಃ ಪುತ್ರಂ ತ್ಯಜೇದ್ಭುವಿ ವಿಚಕ್ಷಣಃ || ಕಶ್ಚ ಪ್ರವ್ರಾಜ್ಯಮಾನೋವಾ ನಾಸೂಯೇತ್ಪಿತರಂ ಸುತಃ ||೬೪|| ಯದಿ ಮಾಂ ಸಂಸ್ಪೃಶೇದ್ರಾಮ ಸ್ಸಕೃದದ್ಯ ಲಭೇತವಾ || ಯಮಕ್ಷಯ ಮನುಪ್ರಾಪ್ತಾಃ ದ್ರಕ್ಷ್ಯಂತಿ ನಹಿ ಮಾನವಾಃ ||೬೫|| ಚಕ್ಷುಷಾ ತ್ವಾಂ ನಪಶ್ಯಾಮಿ ಸ್ಮೃತಿರ್ಮಮ ವಿಲುಪ್ಯತೇ || ದೂತಾ ವೈವಸ್ವತಸ್ಯೈತೇ ಕೌಸಲ್ಯೇ! ತ್ವರಯಂತಿ ಮಾಂ ||೬೬|| ಅತಸ್ತು ಕಿಂ ದುಃಖತರಂ ಯದಹಂ

ಯಾವ ವನಪ್ರಸ್ಥಾನರೂಪ ಕಾರ್ಯವು, ಕೃತಂ - ಮಾಡಲಾಯಿತೋ, ಏತತ್ - ಇದು, ಮೇ - ನನಗೆ, ಸದೃಶಂ - ಸಮಾನವು, ಅನೇನ - ಈ ಶ್ರೀರಾಮನಿಂದ, ಮಯಿ - ನನ್ನ ವಿಷಯದಲ್ಲಿ, ಯತ್-ಯಾವ ಕಾರ್ಯವು, ಕೃತಂ - ಮಾಡಲ್ಪಟ್ಟಿತೋ, ತತ್ - ಆ ಪಿತೃವಾಕ್ಯಪರಿಪಾಲನದಿಂದ, ವನಗಮನ - ರೂಪಕಾರ್ಯವು, ತಸ್ಯ - ಆ ಶ್ರೀರಾಮನು, ಸದೃಶಂ - ಯೋಗ್ಯವಾದುದು, (ಗೋ) ಅನೇನ - ಈ ಋಷಿಯಿಂದ, ಮಯಿ - ನನ್ನ ವಿಷಯದಲ್ಲಿ, ಯತ್ - ಯಾವ ಪುತ್ರವ್ಯಸನದಿಂದ ಮರಣರೂಪ ಕಾರ್ಯವು, ಕೃತಂ - ಮಾಡಲ್ಪಟ್ಟಿತೋ, ತತ್ - ಆ ಕಾರ್ಯವು, ತಸ್ಯೈವ - ಆ ಶಾಪವ್ಯಾಪಾರಕ್ಕೇ, ಸದೃಶಂ - ಸಮಾನವಾದುದು. ||೬೩|| ಭುವಿ - ಭೂಲೋಕದಲ್ಲಿ, ವಿಚಕ್ಷಣಃ - ತಿಳಿದವನು, ಕಃ - ಯಾವನು, ದುರ್ವೃತ್ತಮಪಿ - ದುರ್ವ್ಯಾಪಾರಿಯಾದರೂ, ಪುತ್ರಂ - ಮಗನನ್ನು, ತ್ಯಜೇತ್ - ತ್ಯಾಗಮಾಡಿಯಾನು, ಪ್ರವ್ರಾಜ್ಯಮಾನಃ - ಹೊರಡಿಸಲ್ಪಟ್ಟ, ಸುತಃ - ಕುವರನು, ಕೋವಾ - ಯಾವ ನುತಾನೆ, ಪಿತರಂ - ತಂದೆಯನ್ನು ಕುರಿತು, ನಾಸೂಯೇತ್ - ಅಸೂಯೆ ಬೀಳದಿರುವನು. ||೬೪|| ಹಿ - ಯಾವ ಕಾರಣ, ಯಮಕ್ಷಯಂ - ಯಮನಮನೆಯನ್ನು, ಅನುಪ್ರಾಪ್ತಾಃ - ಹೊಂದಿರುವ, ಮಾನವಾಃ - ಮನುಷ್ಯರು, ಬಾಂಧವಾನ್ - ಮಕ್ಕಳನ್ನು, ನದ್ರಕ್ಷ್ಯಂತಿ-ನೋಡಲಾರರೋ, ತಸ್ಮಾತ್ - ಆ ಕಾರಣ, ರಾಮಃ - ಶ್ರೀರಾಮನು, ಮಾಂ - ನನ್ನನ್ನು, ಸಕೃತ್ - ಒಂದಾವರ್ತಿ, ಸಂಸ್ಪೃಶೇದ್ಯದಿ-ಸ್ಪರ್ಶಮಾಡಿದವನಾದರೆ, ಅದ್ಯ - ಈಗ, ಲಭೇತವಾ - ದೃಷ್ಟಿಗೋಚರನೇ ಆದರೆ, ತದಾ - ಆಗ, ಜೀವೇಯಂ - ಬದುಕುವೆನು. ||೬೫|| ತ್ವಾಂ - ನಿನ್ನನ್ನು, ಚಕ್ಷುಷಾ-ಕಣ್ಣಿನಿಂದ, ನಪಶ್ಯಾಮಿ-ನೋಡಲಾರೆನು, ಮಮ - ನನಗೆ, ಸ್ಮೃತಿಃ - ಜ್ಞಾಪಕಶಕ್ತಿಯು, ವಿಲುಪ್ಯತೇ - ಕುಂದುತ್ತಿರುವುದು, ಹೇ ಕೌಸಲ್ಯೆ - ಎಲೌ ಕೌಸಲ್ಯೆಯೆ, ವೈವಸ್ವತಸ್ಯ - ಯಮಧರ್ಮನ, ಏತೇದೂತಾಃ - ಈ ಸೇವಕರು, ಮಾಂ - ನನ್ನನ್ನು, ತ್ವರಯಂತಿ - ತ್ವರೆಗೊಳಿಸುತ್ತಾರೆ, ಯತ್ - ಯಾವ ಕಾರಣ, ಅಹಂ - ನಾನು,

ಲ್ಪಟ್ಟುದು ಆತನಿಗೆ ತಕ್ಕುದಾಗಿರುವುದು. ಆ ವೃದ್ಧಮುನಿಯು ನನಗೆ ಪುತ್ರವ್ಯಸನದಿಂದಲೇ ಮರಣವುಂಟಾಗಬೇಕೆಂದು ಶಾಪ ಕೊಟ್ಟುದೂ ತಕ್ಕುದಾಗಿದೆ. ಏಕೆಂದರೆ, ಓ ದೇವಿಯೆ! ಕೇಳು; ಧರ್ಮಾಧರ್ಮ ವಿವೇಕಶೀಲನಾದ ಯಾವನು ತಾನೆ ಈ ಪ್ರಪಂಚದಲ್ಲಿ ಮಗನು ದುರ್ವ್ಯಾಪಾರಿಯಾದರೂ ಆತನನ್ನು ತೊರೆದಾನು? ಯಾವ ಮಗನು ತಾನೆ ತನ್ನನ್ನು ಅರಣ್ಯಕ್ಕೆ ಕಳುಹುತ್ತಿರುವ ತಂದೆಯನ್ನು ಕುರಿತು ಅಸೂಯೆಗೊಳ್ಳದೆ ಇದ್ದಾನು? ಈಗ ನಾನು ಶ್ರೀರಾಮನನ್ನು ಹೊಂದಿದರೆ, ಅಥವ ಆತನು ನನ್ನನ್ನೊಂದುಸಲ ಸ್ಪರ್ಶಿಸಿದರೆ, ನಾನು ಜೀವದಿಂದುಳಿಯುವೆನು. ಯಮಮಂದಿರವನ್ನು ಹೊಂದಿದ ಮಾನವರು ನಿಜಕುವರರನ್ನು ನೋಡಲಾರರಷ್ಟೆ! ||೬೧-೬೫|| ಓ ಕೌಸಲ್ಯಾದೇವಿಯೆ! ನಿನ್ನನ್ನು ಕಣ್ಣಿನಿಂದ ನೋಡಲಾರದವನಾದೆನು

ಜೀವಿತಕ್ಷಯೇ || ನಹಿ ಪಶ್ಯಾಮಿ ಧರ್ಮಜ್ಞಂ ರಾಮಂ ಸತ್ಯಪರಾಕ್ರಮಂ||೧೭||
ತಸ್ಯಾದರ್ಶನಜ ಶ್ಶೋಕಸ್ಸುತಸ್ಯಾ ಪ್ರತಿಕರ್ಮಣಃ || ಉಚ್ಛೋಷಯತಿ ಮೇ
ಪ್ರಾಣಾ ನ್ವಾರಿಸ್ತೋಕ ಮಿವಾತಪಃ || ೧೮ || ನ ತೇ ಮನುಷ್ಯಾ ದೇವಾಸ್ತೇ
ಯೇ ಚಾರು ಶುಭಕುಂಡಲಂ ||೧೯|| ಮುಖಂ ದ್ರಕ್ಷ್ಯಂತಿ ರಾಮಸ್ಯ ವರ್ಷೇ
ಪಂಚದಶೇ ಪುನಃ || ಪದ್ಮಪತ್ರೇಕ್ಷಣಂ ಸುಭ್ರು ಸುದಂಷ್ಟ್ರಂ ಚಾರುನಾಸಿಕಂ
|| ೨೦ || ಧನ್ಯಾ ದ್ರಕ್ಷ್ಯಂತಿ ರಾಮಸ್ಯ ತಾರಾಧಿಪನಿಭಂ ಮುಖಂ || ಸದೃಶಂ

ಜೀವಿತಕ್ಷಯೇ - ಪ್ರಾಣತ್ಯಾಗದಲ್ಲಿ, ಧರ್ಮಜ್ಞಂ - ಧರ್ಮವನ್ನು ತಿಳಿದಿರುವ, ಸತ್ಯಪರಾಕ್ರಮಂ - ಸತ್ಯವೂ ಶೌರ್ಯವೂ ಈ ಎರಡೂ ಉಳ್ಳ, ರಾಮಂ - ಶ್ರೀರಾಮನನ್ನು, ನಪಶ್ಯಾಮಿ - ಕಾಣೆನೋ, ಅತಸ್ತು - ಇದಕ್ಕಿಂತಲೂ, ಕಿಂ - ಯಾವದು, ದುಃಖತರಂಹಿ - ಅತಿಶಯವಾದ ದುಃಖವು ? || ೧೭ || ತಸ್ಯ - ಅಂತಹ, ಅಪ್ರತಿಕರ್ಮಣಃ - ಅಸದೃಶವ್ಯಾಪಾರವುಳ್ಳ, ಸುತಸ್ಯ - ಕುವರನಾದ ಶ್ರೀರಾಮನ, ಅದರ್ಶಜಃ - ದರ್ಶನಾಭಾವದಿಂದ ಹುಟ್ಟಿದ, ಶೋಕಃ - ವ್ಯಸನವು, ಮೇ - ನನ್ನ, ಪ್ರಾಣಾನ್-ಪ್ರಾಣಗಳನ್ನು, ಆತಪಃ - ಬಿಸಿಲು, ಸ್ತೋಕಂ - ಸ್ವಲ್ಪವಾದ, ವಾರೀವ - ಉದಕವನ್ನಂತೆ, ಉಚ್ಛೋಷಯತಿ - ಬತ್ತಿಸುತ್ತಿದೆ. || ೧೮ || ಯೇ - ಯಾರು, ಚಾರು - ಮನೋಹರವಾದ, ಶುಭಕುಂಡಲಂ- ಶುಭಕರವಾದ ಕರ್ಣಭೂಷಣಗಳುಳ್ಳ, ಪದ್ಮಪತ್ರೇಕ್ಷಣಂ - ಪದ್ಮದಳಗಳಿಗೆ ಸಮಾನವಾದ ನೇತ್ರಗಳುಳ್ಳ, ಸುಭ್ರೂ-ಶುಭಕರಗಳಾದ ಕಣ್ಣುಹುಬ್ಬುಗಳುಳ್ಳ, ಸುದಂಷ್ಟ್ರಂ-ಒಳ್ಳೇ ಹಲ್ಲುಗಳುಳ್ಳ, ಚಾರುನಾಸಿಕಂ- ಸುಂದರವಾದ ಮೂಗುಳ್ಳ, ರಾಮಸ್ಯ - ಶ್ರೀರಾಮನ, ಮುಖಂ - ಮುಖವನ್ನು, ಪುನಃ - ಮತ್ತು, ಪಂಚದಶೇವರ್ಷೇ - ಹದಿನೈದನೆಯ ವರ್ಷದಲ್ಲಿ, ದ್ರಕ್ಷ್ಯಂತಿ - ನೋಡುವರೋ, ತೇ - ಅವರು, ದೇವಾಃ - ದೇವತೆಗಳೇ ಸರಿ, ತೇ - ಅವರು, ಮನುಷ್ಯಾಃ - ಮನುಜರು, ನಭವಂತಿ - ಆಗುವದಿಲ್ಲ. || ೧೯-೨೦ || ಧನ್ಯಾಃ - ಪುಣ್ಯವಂತರು, ಶಾರದಸ್ಯ - ಶರತ್ಕಾಲದಲ್ಲಿ ಹುಟ್ಟಿದ, ಇಂದೋಃ - ಚಂದ್ರನಿಗೂ, ಪುಲ್ಲಸ್ಯ - ಅರಳಿದ, ಕಮಲಸ್ಯಚ - ಕಮಲಕ್ಕೂ, ಸದೃಶಂ - ಸಮಾನವಾದ, ತಾರಾಧಿಪನಿಭಂ - ಚಂದ್ರನಿಗೆ ಸಮಾನವಾದ, ರಾಮಸ್ಯ - ಶ್ರೀರಾಮನ, ಮುಖಂ - ಮುಖವನ್ನು, ದ್ರಕ್ಷ್ಯಂತಿ-

---

ನನಗೆ ಜ್ಞಾಪಕಶಕ್ತಿಯು ಕುಂದುತ್ತಿರುವುದು. ಯಮದೂತರು ನನ್ನನ್ನು ತ್ವರೆಗೊಳಿಸುತ್ತಿರುವರು. ಇಂತಹ ಸಮಯದಲ್ಲಿಯೂ ಸತ್ಯಪರಾಕ್ರಮಿಯೂ, ಧರ್ಮಜ್ಞನೂ ಆದ ಶ್ರೀರಾಮನನ್ನು ಕಾಣಲಾರದವನಾದೆನು! ಅಯ್ಯೋ! ಪ್ರಪಂಚದಲ್ಲಿ ಇದಕ್ಕಿಂತಲೂ ಮಹತ್ತರವಾದ ದುಃಖವು ಬೇರೊಂದುಂಟೆ! ಇಲ್ಲ, ದೇವಿ! ಅಸಮಾನ ಪರಾಕ್ರಮಿಯೂ, ನನ್ನ ಮಗನೂ ಆದ ಶ್ರೀರಾಮನ ದರ್ಶನಾಭಾವಜನ್ಯವಾದ ಶೋಕವು ಅಲ್ಪೋದಕವನ್ನು ಬತ್ತಿಸುವ ಬಿಸಿಲಿನಂತೆ ನನ್ನಪ್ರಾಣಗಳನ್ನು ಬತ್ತಿಸುತ್ತಿರುವುದು. ಹದಿನೈದು ಸಂವತ್ಸರಗಳು ಕಳೆಯಲು, ಮನೋಹರವಾಗಿಯೂ ಮಂಗಳಕರವಾಗಿಯೂ ಇರುವ ಕರ್ನಕುಂಡಲಗಳುಳ್ಳವನೂ, ಪದ್ಮಪತ್ರದಂತೆ ವಿಶಾಲನಯನನೂ, ಮನೋಹರವಾದ ಹುಬ್ಬುಗಳುಳ್ಳವನೂ,ಅಂದವಾದ ರದನಪಙ್ತಿಯುಳ್ಳವನೂ, ಸೊಗಸೊಗೆದ ನಾಸಿಕವುಳ್ಳವನೂ, ಆದ ಶ್ರೀರಾಮನನ್ನು ನೋಡುವ ಮಾನವರು ಮಾನವರಲ್ಲ; ||೧೭-೨೦|| ಅವರು ದೇವತೆಗಳೇ ಸರಿ! ಉಡುರಾಜನಿಗೆ

ಶಾರದಸ್ಯೇಂದೋಃ ಫುಲ್ಲಸ್ಯ ಕಮಲಸ್ಯಚ ‖ ೭೧ ‖ ಸುಗಂಧಿ ಮಮ ನಾಥಸ್ಯ ಧನ್ಯಾ ದ್ರಕ್ಷ್ಯಂತಿ ತನ್ಮುಖಂ ‖ ನಿವೃತ್ತವನವಾಸಂತಮಯೋಧ್ಯಾಂ ಪುನರಾಗತಂ ‖೭೨‖ ದ್ರಕ್ಷ್ಯಂತಿ ಸುಖಿನೋ ರಾಮಂ ಶುಕ್ರಂ ಮಾರ್ಗಗತಂ ಯಥಾ ‖ ಕೌಸಲ್ಯೇ! ಚಿತ್ತಮೋಹೇನ ಹೃದಯಂ ಸೀದತೀವ ಮೇ ‖ ೭೩ ‖ ವೇದಯೇನಚ ಸಂಯುಕ್ತಾನ್ ಶಬ್ದಸ್ಪರ್ಶ ರಸಾನಹಂ ‖ ಚಿತ್ತನಾಶಾ ದ್ವಿಪದ್ಯಂತೇ ಸರ್ವಾಣ್ಯೇ ವೇಂದ್ರಿಯಾಣಿ ಮೇ ‖ ೭೪ ‖ ಕ್ಷೀಣಸ್ನೇಹಸ್ಯ ದೀಪಸ್ಯ ಸಂಸಕ್ತಾ

ನೋಡುತ್ತಾರೆ. ‖ ೭೧ ‖ ಧನ್ಯಾಃ - ಪುಣ್ಯಶಾಲಿಗಳು, ಮಮ - ನನಗೆ, ನಾಥಸ್ಯ - ರಕ್ಷಕನಾದ ಶ್ರೀರಾಮನ, ಸುಗಂಧಿ - ಸುವಾಸನೆಯುಳ್ಳ, ತನ್ಮುಖಂ - ಆ ಮುಖವನ್ನೂ, ದ್ರಕ್ಷ್ಯಂತಿ - ನೋಡುತ್ತಾರೆ, ನಿವೃತ್ತವನವಾಸಂ, ನಿವೃತ್ತ - ನೆರವೇರಿಸಲ್ಪಟ್ಟ, ವನವಾಸಂ - ವನವಾಸವುಳ್ಳ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ಪುನಃ - ಮತ್ತೆ, ಆಗತಂ - ಬಂದಿರುವ, ರಾಮಂ - ಶ್ರೀರಾಮನ್ನು, ಮಾರ್ಗಗತಂ - ಸ್ವಸ್ಥಾನಮಾರ್ಗವನ್ನು ಹೊಂದಿರುವ, ಶುಕ್ರಂಯಥಾ - ಶುಕ್ರಾಚಾರ್ಯನನ್ನಂತೆ, ಸುಖಿನಃ - ಸುಖವಂತರು, ದ್ರಕ್ಷ್ಯಂತಿ - ನೋಡುತ್ತಾರೆ. ‖ ೭೨ ‖ ಹೇ ಕೌಸಲ್ಯೆ- ಎಲೌ ಕೌಸಲ್ಯಾದೇವಿಯೆ, ಯೇನ - ಯಾವ ಚಿತ್ತದಿಂದ, ಸಂಯುಕ್ತಾನ್ - ಕೂಡಿಕೊಂಡಿರುವ, ಶಬ್ದಸ್ಪರ್ಶರಸಾನ್ - ಶಬ್ದಸ್ಪರ್ಶಗಳನ್ನು, ಅಹಂ - ನಾನು, ವೇದ - ತಿಳಿಯುವೆನೋ, ಚಿತ್ತಮೋಹೇನ - ಅಂತಹ ಮನಸ್ಸಿನ ಅಜ್ಞಾನದಿಂದ, ಮೇ - ನನ್ನ, ಹೃದಯಂ - ಮನಸ್ಸು, ಸೀದತೀವ - ಶೀಳಿಹೋಗುತ್ತದೆಯೋ ಎಂಬಂತಿದೆ. ‖ ೭೩ ‖ ಮೇ - ನನ್ನ, ಸರ್ವಾಣಿ-ಸಮಸ್ತಗಳಾದ, ಇಂದ್ರಿಯಾಣಿ- ಇಂದ್ರಿಗಯಳು, ಚಿತ್ತನಾಶಾತ್-ಚಿತ್ತದ ಶೈಥಿಲ್ಯದಿಂದ, ವಿಪದ್ಯಂತಏವ-ನಶಿಸಿಹೋಗುತ್ತವೆ, ಅರ್ಥಾತ್- ವಿಷಯಗ್ರಹಣ ಸಾಮರ್ಥ್ಯವಿಲ್ಲದವುಗಳಾಗುತ್ತವೆ, ಕ್ಷೀಣಸ್ನೇಹಸ್ಯ - ಕ್ಷಯಿಸಿಹೋದ ತೈಲವುಳ್ಳ, ದೀಪಸ್ಯ - ದೀಪದ, ಸಂಸಕ್ತಾಃ - ಸಂಬಂಧಿಗಳಾದ, ರಶ್ಮಯಃ - ಕಿರಣಗಳು, ಯಥಾ - ಹೇಗೆ, ವಿಪದ್ಯಂತೇ - ನಷ್ಟಗಳಾಗುತ್ತವೋ, ತಥಾ - ಹಾಗೆ. ‖ ೭೪ ‖ ನದೀರಯಃ - ಹೊಳೆಯವೇಗವು, ವೇಗೇನ - ಪ್ರವಾಹಹೋಗುವ ಸಂಸ್ಕಾರದಿಂದ, ಕೂಲಂಯಥಾ - ದಡವನ್ನಂತೆ, ಅಯಂ - ಈ, ಆತ್ಮಭವಃ - ನನ್ನ ಮನವಲ್ಲಿ ಹುಟ್ಟಿದ, ಶೋಕಃ - ಮನೋವ್ಯಥೆಯು, ಅನಾಥಂ - ಪೋಷಕನಿಲ್ಲದಿರುವ, ಅಚೇತನಂ - ಬುದ್ಧಿಯಿಲ್ಲದ, ಮಾಂ - ನನ್ನನ್ನು, ಸಂಸಾದಯತಿ - ಕೊಲ್ಲು

ಸಮಾನವಾದ, ಶರತ್ಕಾಲದ ಚಂದ್ರನಿಗೂ, ಅರಳಿದ ಕಮಲಕ್ಕೂ ಸಮಾನವಾದ, ಶ್ರೀರಾಮನ ಮುಖವನ್ನು ಧನ್ಯರಾದವರು ನೋಡುತ್ತಾರೆ! ನನ್ನಸ್ವಾಮಿಯಾದ ಶ್ರೀರಾಮನ ಸುವಾಸನೆಯುಳ್ಳಮುಖವನ್ನುಪುಣ್ಯವಂತರಾದವರು ಕಾಣುತ್ತಾರೆ! ವನವಾಸವನ್ನುಮುಗಿಯಿಸಿಕೊಂಡು ಅಯೋಧ್ಯಾಪಟ್ಟಣವನ್ನು ಕುರಿತು ಬರುವ ಶ್ರೀರಾಮನನ್ನು ಸುಖಿಗಳಾದವರು ಸ್ವಸ್ಥಾನಮಾರ್ಗವನ್ನುಹೊಂದುವ ಶುಕ್ರಾಚಾರ್ಯನನ್ನೋಪಾದಿಯಲ್ಲಿ ನೋಡುತ್ತಾರೆ. ಎಲೌ ಕೌಸಲ್ಯಾದೇವಿಯೆ! ಶಬ್ದಸ್ಪರ್ಶಗಳನ್ನರಿಯುವ ನನ್ನಮನಸ್ಸು ಅಜ್ಞಾನದಿಂದ ಶೀರಿಹೋಗುತ್ತಿರುವುದು. ‖೭೧-೭೩‖ ಈ ಮನಸ್ಸಿನ ಶೈಥಿಲ್ಯದಿಂದ ಸರ್ವೇಂದ್ರಿಯಗಳೂ ನಾಶಹೊಂದುತ್ತಿವೆ. ನನಗೆ ವಿಷಯಗ್ರಹಣಸಾಮರ್ಥ್ಯವೇ ಹಾಳಾಗುತ್ತಿದೆ. ನದೀವೇಗವುಪ್ರವಾಹದಿಂದದಡವನ್ನು ಕೊರೆಯುವಂತೆ ಈ ನನ್ನ ಮನಸ್ಸಿನಲ್ಲಿ ಹುಟ್ಟಿದ ವ್ಯಥೆಯು, ಅನಾಥನೂ, ಬುದ್ಧಿಶೂನ್ಯನೂ, ಆದ

ರಶ್ಮಯೋ ಯಥಾ ॥ ಅಯಮಾತ್ಮಭವ ಶ್ಶೋಕೋ ಮಾಮನಾಥ ಮಚೇತನಂ ॥೭೫॥ ಸಂಸಾದಯತಿ ವೇಗೇನ ಯಥಾಕೂಲಂ ನದೀರಯಃ ॥ ಹಾ ! ರಾಘವ ! ಮಹಾಬಾಹೋ ! ಹಾ ! ಮಮಾಯಾಸ ನಾಶನ ! ॥ ಹಾ ! ಪಿತೃಪ್ರಿಯ! ಮೇ ನಾಥ ! ಹಾದ್ಯ ಕ್ವಾಸಿ ! ಗತಸ್ಸುತ ! ॥ ೭೬ ॥ ಹಾ ! ಕೌಸಲ್ಯೇ ! ನಶಿಷ್ಯಾಮಿ ! ಹಾ ! ಸುಮಿತ್ರೇ ! ತಪಸ್ವಿನಿ ! ॥ ಹಾ ! ನೃಶಂಸೇ ! ಮಮಾಮಿತ್ರೇ ! ಕೈಕೇಯಿ ! ಕುಲಪಾಂಸನಿ ! ॥ ೭೭ ॥ ಇತಿರಾಮಸ್ಯ ಮಾತುಶ್ಚ ಸುಮಿತ್ರಾಯಾಶ್ಚ ಸನ್ನಿಧೌ॥ ರಾಜಾ ದಶರಥ ಶ್ಶೋಚರ್ ಜೀವಿತಾಂತ ಮುಪಾಗಮತ್ ॥ ೭೮ ॥

ಯದಾತು ದೀನಂ ಕಥಯ ನ್ನರಾಧಿಪಃ
ಪ್ರಿಯಸ್ಯ ಪುತ್ರಸ್ಯ ವಿವಾಸನಾತುರಃ ॥

ತ್ತಿದೆ. ॥ ೭೫ ॥ ಹಾ - ಕಷ್ಟವು, ಹೇ ರಾಘವ - ಎಲೈ ಶ್ರೀರಾಮನೇ, ಹೇ ಮಹಾಬಾಹೋ - ಎಲೈ ಭುಜಪರಾಕ್ರಮಶಾಲಿಯೇ, ಹಾ - ಕಷ್ಟವು, ಮಮ - ನನಗೆ, ಹೇ ಆಯಾಸನಾಶನ - ಎಲೈ ಆಯಾಸವನ್ನು ಪರಿಹಾರಮಾಡುವನೇ, ಹಾ-ಕಷ್ಟವು, ಹೇ ಪಿತೃಪ್ರಿಯ-ಎಲೈ ತಂದೆಗೆ ಇಷ್ಟನಾದವನೇ, ಮೇ-ನನಗೆ, ಹೇ ನಾಥ - ಎಲೈ ಸ್ವಾಮಿಯೇ, ಹೇ ಸುತ - ಎಲೈ ಪುತ್ರನೇ, ಅದ್ಯ - ಈಗ, ಹಾ - ಕಷ್ಟವು, ಕ್ವ-ಎಲ್ಲಿ, ಗತಃ-ಹೋದವನು, ಅಸಿ - ಆದೆ. ॥೭೬॥ ಹೇ ಕೌಸಲ್ಯೇ - ಎಲೌ ಕೌಸಲ್ಯೆಯೆ, ಹಾ - ಕಷ್ಟವು, ನಶಿಷ್ಯಾಮಿ-ನಾಶವನ್ನು ಹೊಂದುವೆನು, ಹೇ ತಪಸ್ವಿನಿ-ಎಲೌ ತಪೋವಂತಳಾದ, ಹೇ ಸುಮಿತ್ರೇ-ಎಲೌ ಸುಮಿತ್ರಾದೇವಿಯೇ, ಹಾ - ಕಷ್ಟವು, ಹಾ ನೃಶಂಸೇ - ಎಲೌ ಘಾತಕಳೇ, ಹಾ - ಕಷ್ಟವು, ಮಮ-ನನಗೆ, ಅಮಿತ್ರೇ - ಶತ್ರುವಾದ, ಹೇ ಕೈಕೇಯಿ - ಎಲೌ ಕೈಕೇಯಿಯೇ, ಹೇ ಕುಲಪಾಂಸನಿ - ಎಲೈ ಕುಲವನ್ನು ನಾಶಮಾಡುವವಳೆ, ಹಾ - ಕಷ್ಟವು, ಇತಿ - ಈ ಪರಿಯಾಗಿ, ದಶರಥೋರಾಜಾ - ದಶರಥ ಮಹಾರಾಯನು, ಶೋಚರ್ - ಅಳುತ್ತ, ರಾಮಸ್ಯ - ಶ್ರೀರಾಮನಿಗೆ, ಮಾತುಃ - ತಾಯಿಯಾದ ಕೌಸಲ್ಯಾದೇವಿಯ, ಸುಮಿತ್ರಾಯಾಶ್ಚ - ಸುಮಿತ್ರಾದೇವಿಯ, ಸನ್ನಿಧೌ - ಸಮೀಪದಲ್ಲಿ, ಜೀವಿತಾಂತಂ - ಪ್ರಾಣಾಂತವನ್ನು, ಉಪಾಗಮತ್ - ಹೊಂದಿದನು. ॥ ೭೮ ॥ ಉದಾರದರ್ಶನಃ - ಉದಾರ - ಗಂಭೀರವಾದ, ದರ್ಶನಃ - ದೃಷ್ಟಿಯುಳ್ಳ, ನರಾಧಿಪಃ - ಅರಸಾದ ದಶರಥರಾಯನು, ಯದಾತು - ಯಾವ ಕಾಲದಲ್ಲಿ, ದೀನಂ - ದೈನ್ಯವಾಗಿ, ಕಥಯರ್ - ಮಾತನಾಡುತ್ತ, ಪ್ರಿಯಸ್ಯ - ಇಷ್ಟನಾದ, ಪುತ್ರಸ್ಯ - ಮಗನ, ವಿವಾಸನಾತುರಃ, ವಿವಾಸನ - ವನವಾಸದಿಂದ, ಆತುರಃ - ದೈನ್ಯವುಳ್ಳವನಾದನೋ, ತದಾ - ಆ ಕಾಲದಲ್ಲಿ, ಅರ್ಧರಾತ್ರೇ - ಅರ್ಧರಾತ್ರಿಕಾಲವು, ಗತೇ - ಕಳೆದು

ನನ್ನನ್ನು ಕೊರೆಯುತ್ತಿರುವುದು ! ಹಾ, ಕಷ್ಟ ! ಓ, ಶ್ರೀರಾಮನೆ ! ನನ್ನ ಆಯಾಸಪರಿಹಾರಕನೆ ! ಎಲೈ ಪಿತೃಪ್ರಿಯನೆ ! ನನ್ನ ಸ್ವಾಮಿಯೆ ! ಕುಮಾರ ! ಎಲ್ಲಿಹೋದೆ ? ಎಲೌ ಕೌಸಲ್ಯೆಯೆ ! ಓ ತಪಸ್ವಿನಿಯಾದ ಸುಮಿತ್ರೆಯೆ ! ನಾಶಹೊಂದುತ್ತೇನೆ, ಎಲೆ ಘಾತಕಿ ! ನನಗೆ ಶತ್ರುಭೂತಳಾದವಳೆ ! ಎಲಗೆ ಕೈಕೇಯೀ ! ಕುಲಘಾತಕಿ ! ಎಂದು ಹೇಳಿದನು. ಈ ಪ್ರಕಾರವಾಗಿ ಆ ದಶರಥರಾಜನು ಹೆಂಡಂದಿರಾದ ಕೌಸಲ್ಯಾ, ಸುಮಿತ್ರೆಯರ ಸನ್ನಿಧಿಯಲ್ಲಿ ದುಃಖಿಸುತ್ತ ಜೀವಿತವನ್ನು ತೊರೆದವನಾದನು. ಈರೀತಿ ಗಂಭೀರ ದೃಷ್ಟಿಯುಳ್ಳ ದಶರಥ

ಗತೇಽರ್ಧರಾತ್ರೇ ಭೃಶದುಃಖಪೀಡಿತ
ಸ್ತದಾಜಹೌ ಪ್ರಾಣಮುದಾರ ದರ್ಶನಃ ॥ ೭೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುಷ್ಷಷ್ಠಿತಮಸ್ಸರ್ಗಃ.

ಹೋಗಲು, ಭೃಶದುಃಖಪೀಡಿತಃ, ಭೃಶ - ಅತ್ಯಂತವಾದ, ದುಃಖ - ವ್ಯಸನದಿಂದ, ಪೀಡಿತಃ - ಬಾಧೆಗೊಂಡವನಾಗಿ, ಪ್ರಾಣಂ - ಪ್ರಾಣವಾಯುವನ್ನು, ಜಹೌ - ಬಿಟ್ಟನು. ॥ ೭೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುಷ್ಷಷ್ಠಿತಮಸ್ಸರ್ಗಃ.

ರಾಯನು ಯಾವಾಗ ದೈನ್ಯವಾಗಿಮಾತನಾಡುತ್ತ ಪ್ರಿಯಪುತ್ರನ ವನವಾಸದಿಂದ ದುಃಖಿತನಾದನೋ ಆಗ ಅರ್ಧರಾತ್ರಿಯು ಕಳೆಯುತ್ತಲಿದ್ದಿತು. ಆ ಸಮಯದಲ್ಲಿ ಮಹಾರಾಜ ದಶರಥನು ಅತ್ಯಂತ ದುಃಖದಿಂದ ಪೀಡಿತನಾಗಿ ಪ್ರಾಣವಾಯುವನ್ನು ನೀಗಿದನು. ॥೭೮-೭೯॥

ಇಂತಿದು ಪುತ್ರವ್ಯಸನ ಪೀಡಿತನಾದ ದಶರಥರಾಜನ ನಿರ್ಯಾಣ ಕಥಾನಿರೂಪಣವೆಂಬ
ಅರವತ್ತನಾಲ್ಕನೆಯ ಸರ್ಗವು ಸಮಾಪ್ತವಾದುದು.



Dasaratha's Death.

Lakshmi Art Bombay, 8.

ಅಯೋಧ್ಯಾಕಾಂಡೇ ಪಂಚಷಷ್ಠಿತಮಸ್ಸರ್ಗಃ.

ಅಥರಾತ್ರ್ಯಾಂ ವ್ಯತೀತಾಯಾಂ ಪ್ರಾತರೇವಾಪರೇಹನಿ ॥ ವಂದಿನಃ ಪರ್ಯುಪಾತಿಷ್ಠಂ ಸ್ತತ್ಪಾರ್ಥಿವ ನಿವೇಶನಂ ॥ ೧ ॥ ಸೂತಾಃ ಪರಮಸಂಸ್ಕಾರಾ ಮಂಗಳಾ ಶ್ಚೋತ್ತಮಶ್ರುತಾಃ ॥ ಗಾಯಕಾಃ ಸ್ತುತಿಶೀಲಾಶ್ಚ ನಿಗದಂತಃ ಪೃಥಕ್ಪೃಥಕ್ ॥ ೨ ॥ ರಾಜಾನಂ ಸ್ತುವತಾಂ ತೇಷಾ ಮುದಾತ್ತಾ ಭಿಹಿತಾಶಿಷಾಂ ॥ ಪ್ರಾಸಾದಾಭೋಗ ವಿಸ್ತೀರ್ಣಃ ಸ್ತುತಿಶಬ್ದೋ ಹ್ಯವರ್ಧತ ॥ ೩ ॥ ತತಸ್ತು ಸ್ತುವತಾಂ ತೇಷಾಂ ಸೂತಾನಾಂ ಪಾಣಿವಾದಕಾಃ ॥ ಅಪದಾನಾ ನ್ಯುದಾಹೃತ್ಯ

ಅಥ - ಬಳಿಕ, ರಾತ್ರ್ಯಾಂ - ರಾತ್ರಿಯಕಾಲವು, ಗತಾಯಾಂ - ಕಳೆಯಲು, ಅಪರೇಹನಿ - ಎರಡನೆಯದಿವಸದ, ಪ್ರಾತರೇವ - ಪ್ರಾತಃಕಾಲದಲ್ಲಿಯೇ, ವಂದಿನಃ - ಸ್ತುತಿಪಾಠಕರಾದ, ಪರಮಸಂಸ್ಕಾರಾಃ - ಬಹಳ ಅನುಭವದಿಂದ ಕೂಡಿರುವ, (ಗೋ) - ಶ್ರೇಷ್ಠವಾದ ಅಲಂಕಾರದಿಂದ ಕೂಡಿಕೊಂಡಿರುವ, ಮಂಗಳಾಶ್ಚ - ಮಂಗಳಪ್ರದಾಯಕವಾದ ಕಥೆಗಳನ್ನು ಹೇಳುತ್ತಿರುವ, ಉತ್ತಮಶ್ರುತಾಃ - ಉತ್ಕೃಷ್ಟ ಶಾಸ್ತ್ರವನ್ನರಿತಿರುವ, ಗಾಯಕಾಃ - ಗಾನಶಾಸ್ತ್ರವನ್ನು ತಿಳಿದಿರುವ, ಸ್ತುತಿಶೀಲಾಃ - ಸ್ತೋತ್ರ ಮಾಡುವುದರಲ್ಲೇ ಸ್ವಭಾವವುಳ್ಳ, ಸೂತಾಃ - ವಂಶಾವಳಿಯನ್ನು ಸ್ತೋತ್ರ ಮಾಡುತ್ತಿರುವ ಭಟ್ಟರಾಜರುಗಳು, ಪೃಥಕ್ಪೃಥಕ್ - ಬೇರೆಬೇರೆಯಾಗಿಯೇ, ನಿಗದಂತಃ - ಆಳುತ್ತಿರುವರಾಗಿ, ತತ್ - ಆ, ಪಾರ್ಥಿವನಿವೇಶನಂ - ದಶರಥರಾಯನ ಮನೆಯನ್ನು ಕುರಿತು, ಪರ್ಯುಪಾತಿಷ್ಠನ್ - ಬಂದು ಸೇವಿಸಿದರು. ॥ ೧-೨ ॥ ರಾಜಾನಂ - ಅರಸನನ್ನು, ಸ್ತುವತಾಂ - ಸ್ತೋತ್ರ ಮಾಡುತ್ತಿರುವ, ಉದತ್ತಾಭಿಹಿತಾಶಿಷಾಂ - ಉದಾತ್ತಸ್ವರದಿಂದ ನುಡಿಯಲ್ಪಟ್ಟ ಕಲ್ಯಾಣವಾರ್ತೆಗಳುಳ್ಳ, ತೇಷಾಂ - ಆ ಸ್ತುತಿಪಾಠಕರ, ಸ್ತುತಿಶಬ್ದಃ - ಸ್ತೋತ್ರಘೋಷವು, ಪ್ರಾಸಾದಾಭೋಗವಿಸ್ತೀರ್ಣಃ - ಉಪ್ಪರಿಗೆಗಳ ವಿಸ್ತಾರದಿಂದ ದೊಡ್ಡದಾಗಿ, ಅವರ್ಧತೋಹಿ - ವೃದ್ಧಿಗೊಂಡಿತಷ್ಟೆ. ॥ ೩ ॥ ತತಃ- ಬಳಿಕ, ತೇಷಾಂಸೂತಾನಾಂ - ಆ ಮಾಗಧರು, ಸ್ತುವತಾಂ - ಸ್ತೋತ್ರ ಮಾಡುತ್ತಿರಲು, ಪಾಣಿವಾ

ಆ ಬಳಿಕ ಆ ರಾತ್ರಿಯು ಕಳೆದು ಪ್ರಾತಃಕಾಲವಾಗುತ್ತಲೆ ಸ್ತುತಿಪಾಠಕರೂ, ಮಹಾ ಅನುಭವಿಗಳೂ, ಶ್ರೇಷ್ಠವಾದ ಅಲಂಕಾರದಿಂದ ಕೂಡಿದವರೂ, ಮಂಗಳಕರವಾದ ಕಥೆಗಳನ್ನು ಹೇಳುತ್ತಿರುವವರೂ, ಉತ್ತಮ ಶಾಸ್ತ್ರವೇತ್ತರೂ, ಗಾನಶಾಸ್ತ್ರವಿದರೂ, ಹೊಗಳುಭಟ್ಟರೂ, ವಂಶಾವಳಿಯನ್ನು ಸ್ತುತಿಸುವವರೂ, ಇವರೆಲ್ಲರೂ ಬೇರೆಬೇರೆಯಾಗಿ ನುಡಿಯುತ್ತ, ದಶರಥರಾಯನ ಅರಮನೆಗೆ ಬಂದು ಸೇರಿದರು. ಮಹಾರಾಜನನ್ನು ಸ್ತೋತ್ರ ಮಾಡುತ್ತಿರುವ, ಉದಾತ್ತಸ್ವರದಿಂದ ನುಡಿಯಲ್ಪಟ್ಟ ಮಂಗಳವಾರ್ತೆಗಳುಳ್ಳ ಆ ಸ್ತುತಿಪಾಠಕರ ಸ್ತೋತ್ರಘೋಷವು ಪ್ರಾಸಾದಗಳ ವಿಸ್ತಾರದಿಂದ ಮಹತ್ತರವಾಗಿ ವೃದ್ಧಿಗೊಂಡಿತು. ಆ ಬಳಿಕ ವಂದಿಮಾಗಧರು ಸ್ತೋತ್ರಮಾಡುತ್ತ ತಾಳಗಳನ್ನೂ, ಕರತಾಳಗಳನ್ನೂ

ಪಾಣಿವಾದಾ ನವಾದರ್ಯ್ನ ॥ ೪ ॥ ತೇನ ಶಬ್ದೇನ ವಿಹಗಾಃ ಪ್ರತಿಬುದ್ಧಾ ವಿಸಸ್ವನುಃ ॥ ಶಾಖಾಸ್ಥಾಃ ಪಂಜರಸ್ಥಾಶ್ಚ ಯೇ ರಾಜಕುಲ ಗೋಚರಾಃ ॥೫॥ ವ್ಯಾಹೃತಾಃ ಪುಣ್ಯಶಬ್ದಾಶ್ಚ ವೀಣಾನಾಂ ಚಾಪಿ ನಿಸ್ವನಾಃ ॥ ಆಶೀರ್ಗೇಯಂ ಚ ಗಾಥಾನಾಂ ಪೂರಯಾಮಾಸ ವೇಶ್ಮ ತತ್ ॥ ೬ ॥ ತತಶ್ಶುಚಿ ಸಮಾಚಾರಾಃ ಪರ್ಯುಪಸ್ಥಾನ ಕೋವಿದಾಃ ॥ ಸ್ತ್ರೀವರ್ಷಧರ ಭೂಯಿಷ್ಠಾ ಉಪತಸ್ಥು ರ್ಯಥಾಪುರಂ ॥ ೭ ॥ ಹರಿಚಂದನ ಸಂಪೃಕ್ತ ಮುದಕಂ ಕಾಂಚನೈ ರ್ಘಟೈಃ॥ ಆನಿನ್ಯುಃ ಸ್ನಾನಶಿಕ್ಷಾಜ್ಞಾ ಯಥಾಕಾಲಂ ಯಥಾವಿಧಿ ॥ ೮ ॥ ಮಂಗಳಾ

ದಕಾಃ - ತಾಳಗಳನ್ನೂ ಹಸ್ತತಾಳಗಳನ್ನೂ ಬಾರಿಸುತ್ತಿರುವವರು, ಅಪದಾನಾನಿ - ದಶರಥರಾಯನ ಚರಿತ್ರೆಗಳನ್ನು, ಉದಾಹೃತ್ಯ - ಉದಹರಿಸಿ, ಪಾಣಿವಾದ್ಯಾ - ಹಸ್ತತಾಳಗಳನ್ನು, ಆವಾದರ್ಯ - ಧ್ವನಿಗೊಳಿಸಿದರು. ॥ ೪ ॥ ತೇನ - ಆ, ಶಬ್ದೇನ - ಶಬ್ದದಿಂದ, ರಾಜಕುಲಗೋಚರಾಃ - ಅರಮನೆಯಲ್ಲಿ ವಾಸಮಾಡುತ್ತಿರುವ, ಪಂಜರಸ್ಥಾಃ - ಪಂಜರದಲ್ಲಿ ಇರುತ್ತಿರುವ ಹಕ್ಕಿಗಳು, ಶಾಖಾಸ್ಥಾಶ್ಚ - ಕೊಂಬೆಗಳ ಮೇಲಿರುವ, ವಿಹಗಾಃ - ಪಕ್ಷಿಗಳು, ಯೇ - ಯಾವುವೋ, ತೇ - ಆ ಪಕ್ಷಿಗಳು, ಪ್ರತಿಬುದ್ಧಾಃ - ಎಚ್ಚರಗೊಂಡು, ವಿಸಸ್ವನುಃ - ಧ್ವನಿ ಮಾಡಿದುವು. ॥ ೫ ॥ ವ್ಯಾಹೃತಾಃ - ಹೇಳಲ್ಪಟ್ಟ, ಪುಣ್ಯಶಬ್ದಾಶ್ಚ - ಪುಣ್ಯಕರವಾದ ಶಬ್ದಗಳೂ, ವೀಣಾನಾಂ - ವೀಣೆಗಳ, ನಿಸ್ವನಾಶ್ಚಾಪಿ - ಧ್ವನಿಗಳೂ, ಗಾಥಾನಾಂ - ಪುಣ್ಯಕಥೆಗಳ, ಆಶೀರ್ಗೇಯಂಚ - ಆಶೀರ್ವಾದ ಪುರಸ್ಸರವಾದ ಗಾನವೂ ಸಹ, ತದ್ವೇಶ್ಮ - ಆ ಅರಮನೆಯನ್ನು, ಪೂರಯಾಮಾಸ - ತುಂಬಿಸಿತು. ॥ ೬ ॥ ತತಃ - ಬಳಿಕ, ಶುಚಿಸಮಾಚಾರಾಃ - ಶುಚಿ - ಪರಿಶುದ್ಧವಾದ, ಸಮಾಚಾರಾಃ - ಸದಾಚಾರವುಳ್ಳ, ಪರ್ಯುಪಸ್ಥಾನ ಕೋವಿದಾಃ-ಆಯಾಯಕಾಲದಲ್ಲಿ ಮಾಡತಕ್ಕಸೇವೆಗಳಲ್ಲಿ ವಿಚಕ್ಷಣರಾದ, ಸ್ತ್ರೀವರ್ಷಧರಭೂಯಿಷ್ಠಾಃ- ಅವ್ವೆರೆಯರಿಂದಲೂ ಷಂಡರಿಂದಲೂ ತುಂಬಿರುವ ಪರಿಚಾರಕರು, ಯಥಾಪುರಂ - ಪೂರ್ವದಂತೆ, ಉಪತಸ್ಥುಃ - ಸೇವಿಸಿದರು. ॥ ೭ ॥ ಸ್ನಾನಶಿಕ್ಷಾಜ್ಞಾಃ - ಸ್ನಾನವಿಧವನ್ನು ತಿಳಿದಂತಹರು, ಯಥಾಕಾಲಂ - ಕಾಲಾನುಸಾರವಾಗಿ, ಯಥಾವಿಧಿ - ಯಥಾಶಾಸ್ತ್ರವಾಗಿ, ಕಾಂಚನೈಃಘಟೈಃ - ಚಿನ್ನದಕಲಶಗಳಿಂದಲೂ, ಹರಿಚಂದನಸಂಪೃಕ್ತಂ - ಶ್ರೀಗಂಧರಸದಿಂದ ಮಿಶ್ರವಾದ, ಉದಕಂ - ಜಲವನ್ನು, ಆನಿನ್ಯುಃ - ತೆಗೆದುಕೊಂಡು ಬಂದರು. ॥ ೮ ॥ ತಥಾ - ಹಾಗೆಯೇ, ಕುಮಾರೀಬಹುಳಾಃ - ಕನ್ಯೆಕೆ

ಸಹ ಬಾರಿಸುತ್ತಿದ್ದರು; ದಶರಥರಾಯನ ಚರಿತ್ರೆಗಳನ್ನುದಹರಿಸಿ ಕರತಾಳಗಳನ್ನು ಧ್ವನಿಗೊಳಿಸಿದರು. ಆ ಧ್ವನಿಯಿಂದ ಅರಮನೆಯಲ್ಲಿ ವಾಸಮಾಡುತ್ತಿರುವ ಪಂಜರಸ್ಥವಾದ ಪಕ್ಷಿಗಳೂ, ವೃಕ್ಷಶಾಖೆಗಳನ್ನು ಅವಲಂಬಿಸಿರುವ ಪಕ್ಷಿಗಳೂ ಎಚ್ಚರಗೊಂಡು ಧ್ವನಿಗೈದವು.॥೧-೫॥ ಈರೀತಿ ಮಂಗಳ ಧ್ವನಿಗಳೂ ವೀಣಾನಾದವೂ, ಪುಣ್ಯಕಥೆಗಳ ಆಶೀರ್ವಾದ ಪುರಸ್ಸರವಾದ ಹಾಡುಗಳೂ, ಆ ರಾಯನರಮನೆಯಲ್ಲಿ ತುಂಬಿಹೋದವು. ಬಳಿಕ ಪರಿಶುದ್ಧವಾದ ಆಚಾರವುಳ್ಳ ಆಯಾಯ ಕಾಲಗಳಲ್ಲಿ ಮಾಡಬೇಕಾದ ಸೇವೆಗಳಲ್ಲಿ ವಿಚಕ್ಷಣರಾದ ಅವ್ವೆಯರೂ, ಷಂಡರೂ, ಇವರೇ ಮೊದಲಾದ ಪರಿಚಾರಕರು ಹಿಂದಿನಂತೆ ಸೇವಿಸಿದವರಾದರು. ಅಲ್ಲದೆ ಸ್ನಾನವಿಧಾನವನ್ನರಿತವರೂ, ಕಾಲಾನುಗುಣವಾಗಿಯೂ, ಶಾಸ್ತ್ರಯುಕ್ತವಾಗಿಯೂ ಇರುವ ಸುವರ್ಣ

ಲಂಭನೀಯಾನಿ ಪ್ರಾಶನೀಯಾ ನ್ಯುಪಸ್ಕರಾ‌ || ಉಪನಿನ್ಯು ಸ್ತಥಾಪ್ಯನ್ಯಾಃ ಕುಮಾರೀ ಬಹುಳಾ ಸ್ತ್ರಿಯಃ ||೯|| ಸರ್ವಲಕ್ಷಣಸಂಪನ್ನಂ ಸರ್ವಂ ವಿಧಿವದರ್ಚಿತಂ || ಸರ್ವಂ ಸುಗುಣಲಕ್ಷ್ಮೀವ ತದ್ಬಭೂವಾ ಭಿಹಾರಿಕಂ ||೧೦|| ತತ್ತು ಸೂರ್ಯೋದಯಂ ಯಾವತ್ಸರ್ವಂ ಪರಿಸಮುತ್ಸುಕಂ || ತಸ್ಥಾ ವನುಪಸಂಪ್ರಾಪ್ತಂ ಕಿಂಸ್ವಿದಿತ್ಯುಪಶಂಕಿತಂ ||೧೧|| ಅಥ ಯಾಃ ಕೋಸಲೇಂದ್ರಸ್ಯ ಶಯನಂ ಪ್ರತ್ಯನಂತರಾಃ || ತಾಸ್ಸ್ತ್ರಿಯಸ್ತು ಸಮಾಗಮ್ಯ ಭರ್ತಾರಂ ಪ್ರತ್ಯ

ಯರೇ ಪ್ರಚುರವಾಗುಳ್ಳ, ಅನ್ಯಾಃಸ್ತ್ರಿಯಃ-ಮತ್ತೆ ಕೆಲಹೆಂಗಸರು, ಮಂಗಳಾಲಂಭನೀಯಾನಿ-ಮಂಗಳಕರವಾದ ದರ್ಪಣಗಳೂ ಆಕಳುಗಳೂ ಮೊದಲಾಗುಳ್ಳ ನೋಡತಕ್ಕ ಪದಾರ್ಥಗಳನ್ನೂ, ಪ್ರಾಶನೀಯಾನಿ-ಮುಕ್ಕಳಿಸುವ ಜಲ ದ್ರವ್ಯಗಳನ್ನೂ, ಉಪಸ್ಕರಾ‌ - ವಸ್ತ್ರಾಭರಣಾದಿ ಸಾಮುಗ್ರಿಗಳನ್ನೂ, ಉಪನಿನ್ಯುಃ-ತೆಗೆದುಕೊಂಡು ಬಂದು ಇಟ್ಟರು. ||೯|| ಸರ್ವಲಕ್ಷಣಸಂಪನ್ನಂ - ಸಮಸ್ತವಾದ ಲಕ್ಷಣಗಳಿಂದ ಕೂಡಿರುವ, ಸರ್ವಂ - ಸಮಸ್ತವಾದ ವಸ್ತುಜಾತವೂ, ವಿಧಿವತ್ - ಯಥಾಶಾಸ್ತ್ರವಾಗಿ, ಅರ್ಚಿತಂ - ಶ್ಲಾಘಿಸಲ್ಪಟ್ಟ ಪದಾರ್ಥಜಾತವೂ, ಸರ್ವಂ - ಸಮಸ್ತವಾದ, ಸುಗುಣಲಕ್ಷ್ಮೀವತ್, ಸುಗುಣ - ಒಳ್ಳೆಯ ಗುಣಗಳುಳ್ಳ, ಲಕ್ಷ್ಮೀವತ್ - ಪ್ರಕಾಶಯುಕ್ತವಾದ, ತತ್ ಅಭಿಹಾರಿಕಂ - ರಾಜಪರಿಗ್ರಹಯೋಗ್ಯವಾದ ಜನವು, ಬಭೂವ - ಸಿದ್ಧವಾಯಿತು. ||೧೦|| ತತ್ಸರ್ವಂ - ಆ ಪರಿಜನ ಸಮುದಾಯವೆಲ್ಲ, ಯಾವತ್ಸೂರ್ಯೋದಯಂ - ಸೂರ್ಯೋದಯ ಪರ್ಯಂತ, ಪರಿಸಮುತ್ಸುಕಂ - ಉತ್ಸಾಹದಿಂದ ಕೂಡಿದುದಾಗಿ ಸಿದ್ಧವಾಯಿತು, ಅನುಪಸಂಪ್ರಾಪ್ತಂ - ಹೊರಗೆ ಬಾರದಿರುವ ರಾಜನನ್ನು ಕುರಿತು, ಕಿಂಸ್ವಿತ್ - ಇದೇನಿರಬಹುದು ಎಂದು, ಉಪಶಂಕಿತಂ - ಸಂಶಯಾಕ್ರಾಂತವಾಗಿ, (ಗೋ) ಉತ್ಕಂಠತೆಯಿಂದ ಕೂಡಿದುದಾಗಿ, ತಸ್ಥೌ - ನಿಂತು ಹೊರಗೆಬಾರದಿರುವರಾಜನನ್ನು ಕಂಡು ಸಂದೇಹಗೊಂಡಿತು. ||೧೧|| ಅಥ - ಬಳಿಕ, ಕೋಸಲೇಂದ್ರಸ್ಯ - ದಶರಥರಾಯನ, ಶಯನಂ - ಹಾಸಿಗೆಯ, ಪ್ರತ್ಯನಂತರಾಃ - ಸಮೀಪದಲ್ಲಿರುವ, ಯಾಃ - ಯಾವ ಸ್ತ್ರೀಯರೋ, ತಾಃಸ್ತ್ರಿಯಃ - ಆ ಸ್ತ್ರೀಯರು, ಸಮಾಗಮ್ಯ - ಬಂದು, ಭರ್ತಾರಂ - ಪತಿಯಾದ ದಶರಥರಾಯನನ್ನು, ಪ್ರತ್ಯಬೋ

ಮಯವಾದ ಕಲಶಗಳಲ್ಲಿ ಶ್ರೀಗಂಧಮಿಶ್ರಿತವಾದ ಜಲವನ್ನು ತೆಗೆದುಕೊಂಡು ಬಂದರು. ಅಂತೆಯೇ, ಕನ್ನಿಕೆಯರೇ ಮುಖ್ಯವಾಗುಳ್ಳ ಸ್ತ್ರೀಯರು ದರ್ಪಣಗಳು, ಗೋವುಗಳು, ಇವೇ ಮೊದಲಾದ ಪ್ರಾತಃಕಾಲದಲ್ಲಿ ದರ್ಶಿಸಲು ಯೋಗ್ಯವಾದ ಪದಾರ್ಥಗಳನ್ನೂ, ಪ್ರಾಶನೀಯ ದ್ರವ್ಯಗಳನ್ನೂ, ವಸ್ತ್ರಾಭರಣಾದಿ ಸಾಮುಗ್ರಿಗಳನ್ನೂ, ತೆಗೆದುಕೊಂಡು ಬಂದವರಾದರು. ಸರ್ವಲಕ್ಷಣ ಲಕ್ಷಿತವಾದ ವಸ್ತುಸಮುದಾಯವೆಲ್ಲವೂ ಶಾಸ್ತ್ರೋಕ್ತವಾಗಿ ಶ್ಲಾಘಿಸತಕ್ಕ ಸುಗುಣ ಪ್ರಕಾಶಯುಕ್ತವಾದ, ರಾಜಪರಿಗ್ರಹಯೋಗ್ಯವಾದ ಜನವೂಸಹ ಸಿದ್ಧವಾಯಿತು. ಇಷ್ಟೆಯಲ್ಲದೆಯಾರಾಜಕೀಯ ಜನರು ಸೂರ್ಯೋದಯವಾಗುವುದರೊಳಗಾಗಿ ಮಹಾಸಂತೋಷವುಳ್ಳವರಾಗಿ, ಮಹಾರಾಜ ದಶರಥನು ಹೊರಗೆ ಬಾರದಿರುವುದರಿಂದ ಹಾಗೆ ಬಾರದಿರಲು ಕಾರಣವೇನೆಂದು ಯೋಚಿಸುತ್ತಿದ್ದರು. ಮಾತ್ರವಲ್ಲದೆ "ರಾಜನಿಗೆ ಯಾವ ಆಪತ್ತು ಸಂಭವಿಸಿತೋ!" ಎಂದು ಸಂಶಯಗೊಂಡವರೂ ಆದರು. ಆಮೇಲೆ ಅಂತಃ

ಬೋಧಯನ್ ॥ ೧೨ ॥ ತಥಾ ಪ್ಯುಚಿತವೃತ್ತಾಸ್ತಾ ವಿನಯೇನ ನಯೇನಚ॥ ನಹ್ಯಸ್ಯ ಶಯನಂ ಸ್ಪೃಷ್ಟ್ವಾ ಕಿಂಚಿದ ಪ್ಯುಪಲೇಭಿರೇ ॥ ೧೩ ॥ ತಾಸ್ಸ್ತ್ರಿಯ ಸ್ಸ್ವಪ್ನಶೀಲಜ್ಞಾ ಶ್ಚೇಷ್ಟಾ ಸಂಚಲನಾದಿಷು ॥ ತಾ ವೇಪಥುಪರೀತಾಶ್ಚ ರಾಜ್ಞಃ ಪ್ರಾಣೇಷು ಶಂಕಿತಾಃ ॥ ೧೪ ॥ ಪ್ರತಿಸ್ರೋತ ಸ್ತೃಣಾಗ್ರಾಣಾಂ ಸದೃಶಂ ಸಂಚಕಾಶಿರೇ ॥ ಅಥ ಸಂವೇಪಮಾನಾನಾಂ ಸ್ತ್ರೀಣಾಂ ದೃಷ್ಟ್ವಾಚ ಪಾರ್ಥಿವಂ ॥ ೧೫ ॥ ಯತ್ತದಾಶಂಕಿತಂ ಪಾಪಂ ತಸ್ಯ ಜಜ್ಞೇ ವಿನಿಶ್ಚಯಃ ॥ ಕೌಸಲ್ಯಾಚ

ಧಯನ್ - ಎಚ್ಚರಗೊಳಿಸಿದರು. ॥ ೧೨ ॥ ತಥಾಪಿ - ಹಾಗಾದರೂ, ಉಚಿತವೃತ್ತಾಃ - ಯೋಗ್ಯವಾದ ನಡತೆಗಳುಳ್ಳ, ತಾಃ - ಆ ಸ್ತ್ರೀಯರು, ವಿನಯೇನ - ನಮ್ರಭಾವದಿಂದಲೂ, ನಯೇನಚ - ರಾಜಮರ್ಯಾದೆಯಿಂದಲೂ, ಅಸ್ಯ - ಈ ದಶರಥರಾಯನ, ಶಯನಂ - ಹಾಸಿಗೆಯನ್ನು, ಸ್ಪೃಷ್ಟ್ವಾ - ಸ್ಪರ್ಶಿಸಿ, ಕಿಂಚಿದಪಿ - ಸ್ವಲ್ಪವಾದರೂ, ನೋಪಲೇಭಿರೇಹಿ - (ಗೋ) ಅಂಗಚೇಷ್ಟಾವಿಶೇಷಗಳನ್ನು ಕಾಣಲಿಲ್ಲವಷ್ಟೆ. ॥ ೧೩ ॥ ಸ್ವಪ್ನಶೀಲಜ್ಞಾಃ - ನಿದ್ರೆಯಲಕ್ಷಣಗಳನ್ನರಿತಿರುವ, ತಾಃಸ್ತ್ರಿಯಃ - ಆ ಹೆಂಗಸರು, ಚೇಷ್ಟಾಸಂಚಲನಾದಿಷು, ಚೇಷ್ಟಾ - ಅಂಗಚಾಲನ, ಸಂಚಲನ - ನಿಶ್ವಾಸಾದಿ ವಾಯುಚಲನ, ಆದಿಷು - ಇವೇ ಮೊದಲಾದುವುಗಳಲ್ಲಿ, ಕಿಂಚಿತ್ - ಸ್ವಲ್ಪವನ್ನಾದರೂ, ನೋಪಲೇಭಿರೇ- ತಿಳಿಯದೆಹೋದರು, ತಾಃ-ಆ ಸ್ತ್ರೀಯರು, ವೇಪಥುಪರೀತಾಶ್ಚ, ವೇಪಥು-ಕಂಪದಿಂದ, ಪರೀತಾಶ್ಚ- ವ್ಯಾಪ್ತರಾಗಿ, ರಾಜ್ಞಃ - ಅರಸನ, ಪ್ರಾಣೇಷು - ಪ್ರಾಣಗಳ ವಿಷಯದಲ್ಲಿ, ಶಂಕಿತಾಃ - ಸಂಶಯಗೊಂಡು, ಪ್ರತಿಸ್ರೋತಸ್ತೃಣಾಗ್ರಾಣಾಂ, ಪ್ರತಿಸ್ರೋತ-ಪ್ರವಾಹಕ್ಕೆ ಇದಿರಾಗಿರುವ, ತೃಣಾಗ್ರಾಣಾಂ- ಹುಲ್ಲುಕೊನೆಗಳಿಗೆ, ಸದೃಶಂ - ಸಮಾನವಾಗಿ, ಸಂಚಕಾಶಿರೇ - ಹೊಳೆಯುತ್ತಿದ್ದರು. ॥ ೧೪ ॥ ಅಥ - ಬಳಿಕ, ಪಾರ್ಥಿವಂ - ದಶರಥರಾಯನನ್ನು, ದೃಷ್ಟ್ವಾ - ಕಂಡು, ಸಂವೇಪಮಾನಾನಾಂ - ನಡುಗುತ್ತಿರುವ, ಸ್ತ್ರೀಣಾಂ - ಹೆಂಗಸರಿಗೆ, ಯತ್ಪಾಪಂ - ಯಾವ ಮರಣರೂಪವಾದ ಪಾಪಕೃತ್ಯವು, ಆಶಂಕಿತಂ - ಊಹಿಸಲಾಯಿತೋ, ತಸ್ಯ - ಅದರ, ವಿನಿಶ್ಚಯಃ - ನಿಶ್ಚಯವು, ತದಾ - ಆಗ,

---

ಪುರದಲ್ಲಿ ಸಂಚರಿಸಲರ್ಹರಾದ ಸ್ತ್ರೀಯರು ಬಂದು, ದಶರಥರಾಯನನ್ನು, ಮೃದುಮಧುರ ವಾಕ್ಯಗಳಿಂದ ಎಚ್ಚರಗೊಳಿಸಿದರು. ಹೀಗೆ ಎಚ್ಚರಗೊಳಿಸಿದರೂ ಏಳದಿರುವ ಮಹಾರಾಜನನ್ನು ನೋಡಿ ಆ ಸ್ತ್ರೀಯರು, ಉಪಾಯದಿಂದಲೂ, ವಿನಯದಿಂದಲೂ, ಆ ರಾಜನನ್ನು ಮುಟ್ಟನೋಡಿ, ಉಚ್ಛ್ವಾಸ, ನಿಶ್ವಾಸಗಳಿಲ್ಲದಿರುವುದನ್ನರಿತವರಾದರು. ಅಲ್ಲದೆ ಆ ಸ್ತ್ರೀಯರು ನಿದ್ರೆಯ ಲಕ್ಷಣಗಳನ್ನು ಚೆನ್ನಾಗಿ ತಿಳಿದವರಾದುದರಿಂದ ಉಚ್ಛ್ವಾಸ ನಿಶ್ವಾಸಗಳಿಲ್ಲದಿರುವ ಆ ರಾಯನನ್ನು ನೋಡಿ, ಇದು ನಿದ್ರೆಯಲ್ಲವೆಂದುಕೊಂಡರು. ಆಗಲಾ ಪರಿಚಾರಿಕೆಯರೆಲ್ಲರೂ ನಡುಗುತ್ತಿರುವ ಶರೀರಗಳುಳ್ಳವರಾಗಿ, ರಾಜನಿಗೆ ಪ್ರಾಣಗಳಿವೆಯೋ ಇಲ್ಲವೋ ಎಂದು ಸಂಶಯಗೊಂಡರು. ಅಲ್ಲದೆ ಮಹಾ ಪ್ರವಾಹಕ್ಕೆ ಅಭಿಮುಖಗಳಾಗಿರುವ ತೃಣಾಗ್ರಗಳಂತೆ ಒಣಕುತ್ತಲೂ ಇದ್ದರು. ಹೀಗೆ ಆ ಹೆಂಗಸರೆಲ್ಲರೂ ದಶರಥರಾಜನನ್ನು ನೋಡಿ ಭಯದಿಂದ ಗಡಗಡನೆ ನಡಗುತ್ತ, ಸ್ವಲ್ಪ ಹೊತ್ತಿನಮೇಲೆ ಆತನು ಮರಣವಾಂತನೆಂದು ನಿಶ್ಚಯಿಸಿದರು. ॥ ೧-೧೫ ॥ ಆ ಸಮಯದಲ್ಲಿ ಕೌಸಲ್ಯಾ ಸುಮಿತ್ರೆಯರಿಬ್ಬರೂ

ಸುಮಿತ್ರಾಚ ಪುತ್ರಶೋಕ ಪರಾಜಿತೇ ॥ ೧೬ ॥ ಪ್ರಸುಪ್ತೇನ ಪ್ರಬುಧ್ಯೇತೇ ಯಥಾಕಾಲ ಸಮನ್ವಿತೇ ॥ ನಿಷ್ಪ್ರಭಾಚ ವಿವರ್ಣಾಚ ಸನ್ನಾ ಶೋಕೇನ ಸನ್ನತಾ ॥ ೧೭ ॥ ನವ್ಯರಾಜಾತ ಕೌಸಲ್ಯಾ ತಾರೇವ ತಿಮಿರಾವೃತಾ ॥ ಕೌಸಲ್ಯಾನಂತರಂ ರಾಜ್ಞ ಸ್ಸುಮಿತ್ರಾ ತದನಂತರಂ ॥ ೧೮ ॥ ನಸ್ಮ ವಿಭ್ರಾಜತೇ ದೇವೀ ಶೊಕಾಶ್ರು ಲುಳಿತಾನನಾ॥ತೇಚ ದೃಷ್ಟ್ವಾ ತಥಾ ಸುಪ್ತೇ ಉಭೇ ದೇವ್ಯೌ ಚ ತಂ ನೃಪಂ ॥ ೧೯ ॥ ಸುಪ್ತಮೇವೋದ್ಗತಪ್ರಾಣ ಮಂತಃಪುರ ಮದೃಶ್ಯತ ॥

ಜಜ್ಞೇ - ಹುಟ್ಟಿತು. ॥ ೧೫ ॥ ಕೌಸಲ್ಯಾಚ - ಕೌಸಲ್ಯಾದೇವಿಯು, ಸುಮಿತ್ರಾಚ - ಸುಮಿತ್ರಾದೇವಿಯು, ಉಭೇ - ಇಬ್ಬರೂ, ಪುತ್ರಶೋಕಪರಾಜಿತೇ - ಮಗನಸಂಬಂಧವಾದ ವ್ಯಸನದಿಂದ ಆಕ್ರಾಂತರಾಗಿ, ಪ್ರಸುಪ್ತೇ - ನಿದ್ದೆಗೊಂಡು, ಕಾಲಸಮನ್ವಿತೇಯಥಾ - ಮರಣವನ್ನು ಹೊಂದಿದವರಂತೆ, ನಪ್ರಬುಧ್ಯೇತೇ - ಎಚ್ಚರಗೊಳ್ಳಲಿಲ್ಲ. ॥ ೧೬ ॥ ನಿಷ್ಪ್ರಭಾಚ - ಕಾಂತಿಹೀನಳಾದ, ವಿವರ್ಣಾಚ - ವೈವರ್ಣ್ಯವುಳ್ಳ, ಶೋಕೇನ - ದುಃಖದಿಂದ, ಸನ್ನಾ - ಕೃಶಳಾಗಿರುವ, ಸನ್ನತಾ - ಬಗ್ಗಿಹೋದ, ಕೌಸಲ್ಯಾ - ಕೌಸಲ್ಯಾದೇವಿಯು, ತಿಮಿರಾವೃತಾ - ಅಂಧಕಾರದಿಂದ ಆಚ್ಛಾದಿತವಾದ, ತಾರೇವ - ನಕ್ಷತ್ರದಂತೆ, ನವ್ಯರಾಜತ-ಪ್ರಕಾಶಿಸಲಿಲ್ಲ. ॥ ೧೭ ॥ ರಾಜ್ಞಃ-ಅರಸನಿಗೆ, ಅನಂತರಂ-ಆಚೆಗೆ, ಕೌಸಲ್ಯಾ - ಕೌಸಲ್ಯಾದೇವಿಯು, ತದನಂತರಂ - ಆಕೆಗೆ ಆಚೇಕಡೆ, ಸುಮಿತ್ರಾಂ-ಸುಮಿತ್ರಾದೇವಿಯೂ, ಸುಪ್ತಾ - ಮಲಗಿದವಳಾಗಿದ್ದಳು, ದೇವೀ - ಕೌಸಲ್ಯಾದೇವಿಯು, ಶೋಕಾಶ್ರುಲುಳಿತಾನನಾ - ಕಂಬನಿಗಳಿಂದ ವ್ಯಾಪ್ತವಾದ ಮುಖವುಳ್ಳವಳಾಗಿ, ನವಿಭ್ರಾಜತೇಸ್ಮ-ಪ್ರಕಾಶಿಸುತ್ತಿರಲಿಲ್ಲವಷ್ಟೆ, ಸುಮಿತ್ರಾಚ - ಸುಮಿತ್ರಾದೇವಿಯೂ, ನವಿಭ್ರಾಜತೇಸ್ಮ - ಪ್ರಕಾಶಿಸುತ್ತಿರಲಿಲ್ಲ. ॥ ೧೮ ॥ ತಥಾ-ಆಪರಿಯಾಗಿ, ಸುಪ್ತೇ - ನಿದ್ದೆಹೋಗುತ್ತಿರುವ, ಉಭೇದೇವ್ಯೌ-ಕೌಸಲ್ಯಾ ಸುಮಿತ್ರಾದೇವಿಯರಿನ್ನಿಬ್ಬರನ್ನೂ, ತಂನೃಪಂಚ - ಆ ಅರಸನನ್ನೂ, ದೃಷ್ಟ್ವಾ - ಕಂಡು, ಸುಪ್ತಂ - ನಿದ್ದೆಹೋಗುತ್ತಿರುವ, ಅಂತಃಪುರಮೇವ - ಅಂತಃಪುರವೇ, ಉದ್ಗತಪ್ರಾಣಂ - ಉರ್ಧ್ವಗತವಾದ ಪ್ರಾಣವುಳ್ಳುದಾಗಿ, ಅದೃಶ್ಯತ - ಕಂಡಿತು. ॥ ೧೯ ॥ ತತಃ - ಬಳಿಕ, ತಾಃವರಾಂಗನಾಃ - ಆ ಶ್ರೇಷ್ಠಸ್ತ್ರೀಯರು,

---

ಪುತ್ರಶೋಕದಿಂದ ಅತ್ತುತ್ತು ಬೇಸತ್ತು ನಿದ್ರಿಸುತ್ತಿದ್ದರಾದುದರಿಂದ ಮರಣವನ್ನು ಹೊಂದಿದವರಂತೆಯೂ, ಉಸಿರಾಡದವರಂತೆಯೂ ಬಿದ್ದಿದ್ದರು.ಅಲ್ಲದೆ ಆ ಕೌಸಲ್ಯಾದೇವಿಯು ಕಾಂತಿಯಿಲ್ಲದವಳೂ, ವಿವರ್ಣವಾದ ದೇಹವುಳ್ಳವಳೂ, ದುಃಖದಿಂದ ಕೃಶೀಭಾವವನ್ನು ಹೊಂದಿರುವಳೂ ಆಗಿ ಉತ್ಪಾತದಿಂದುಂಟಾದ ಹೊಗೆಯಿಂದಾಚ್ಛಾದಿತವಾದ ನಕ್ಷತ್ರದಂತೆ ನಿಸ್ತೇಜಸ್ಕಳಾಗಿದ್ದಳು. ಮೊದಲು ದಶರಥರಾಯನು ಮೃತನಾಗಿದ್ದನಾದುದರಿಂದ ಕಾಂತಿಹೀನನಾಗಿದ್ದನು;ಆತನಾದಬಳಿಕ ಕೌಸಲ್ಯಾದೇವಿಯು, ಕಣ್ಣೀರಿಟ್ಟು ರೋದಿಸಿದ್ದಳಾದುದರಿಂದ ಕಾಂತಿಯಿಲ್ಲದವಳಾಗಿದ್ದಳು. ಆಮೇಲೆ ಸುಮಿತ್ರೆಯೂ ಸಹ ಆ ರೀತಿಯಲ್ಲಿಯೇ ಪ್ರಭಾರಹಿತಳಾಗಿದ್ದಳು. ಆಗಲಾಅಂತಃಪುರಸ್ತ್ರೀಯರು ಈ ರೀತಿಯಲ್ಲಿಯೇ ನಿದ್ರೆಹೋಗುತ್ತಿದ್ದ ಕೌಸಲ್ಯಾ ಸುಮಿತ್ರೆಯರನ್ನು ನೋಡಿದರು. ಆ ಮೇಲೆ ನಿದ್ರೆಹೋಗಿ ಮರಣವನ್ನುಹೊಂದಿದ ದಶರಥರಾಯನನ್ನು ನೋಡಿದರು. ಆಗ ಉತ್ತಮರಾದ ಆ ಹೆಂಗಸರೆಲ್ಲರೂ ಮಹಾದುಃಖ

ತತಃ ಪ್ರಚುಕ್ರುಶು ರ್ದೀನಾ ಸ್ಸಸ್ವರಂ ತಾ ವರಾಂಗನಾಃ ॥ ೨೦ ॥ ಕರೇಣವ ಇವಾರಣ್ಯೇ ಸ್ಥಾನಪ್ರಚ್ಯುತ ಯೂಥಪಾಃ ॥ ತಾಸಾಮಾಕ್ರಂದಶಬ್ದೇನ ಸಹಸೋದ್ಗತ ಚೇತನೇ ॥ ೨೧ ॥ ಕೌಸಲ್ಯಾಚ ಸುಮಿತ್ರಾಚ ತ್ಯಕ್ತನಿದ್ರೇ ಬಭೂವತುಃ ॥ ಕೌಸಲ್ಯಾಚ ಸುಮಿತ್ರಾಚ ದೃಷ್ಟ್ವಾ ಸ್ಪೃಷ್ಟ್ವಾಚ ಪಾರ್ಥಿವಂ ॥೨೨॥ ಹಾ! ನಾಥೇತಿ ಪರಿಕ್ರುಶ್ಯ ಪೇತತು ರ್ಧರಣೀತಲೇ॥ಸಾ ಕೋಸಲೇಂದ್ರದುಹಿತಾ ವೇಷ್ಟಮಾನಾ ಮಹೀತಲೇ ॥೨೩॥ ನಬಭ್ರಾಜ ರಜೋಧ್ವಸ್ತಾ ತಾರೇವ ಗಗನಾಚ್ಚ್ಯುತಾ ॥ ನೃಪೇ ಶಾಂತಗುಣೇ ಜಾತೇ ಕೌಸಲ್ಯಾಂ ಪತಿತಾಂ ಭುವಿ ॥೨೪॥

ದೀನಾಃ - ಪರಿತಾಪವುಳ್ಳವರಾಗಿ, ಅರಣ್ಯೇ - ಕಾಡಿನಲ್ಲಿ, ಸ್ಥಾನಪರಿಚ್ಯುತಯೂಥಪಾಃ - ಸ್ವಸ್ಥಾನದಿಂದ ತಪ್ಪಿಸಿಕೊಂಡ ಗಂಡಾನೆಯುಳ್ಳ, ಕರೇಣಇವ - ಹೆಣ್ಣಾನೆಗಳಂತೆ, ಸಸ್ವರಂ - ಸ್ವರಯುಕ್ತವಾಗಿ, ಪ್ರಚುಕ್ರುಶುಃ - ಘಟ್ಟಿಯಾಗಿ ಕೂಗುತ್ತಿದ್ದರು. ॥ ೨೦ ॥ ತಾಸಾಂ - ಆ ಅಂತಃಪುರ ಸ್ತ್ರೀಯರ, ಆಕ್ರಂದಶಬ್ದೇನ - ಅಳುವಿಕೆಯ ಶಬ್ದದಿಂದ, ಸಹಸಾ-ಜಾಗ್ರತೆಯಾಗಿ, ಉದ್ಗತಚೇತನೇ-ಎಚ್ಚರಗೊಂಡವರಾಗಿ, ಕೌಸಲ್ಯಾಸುಮಿತ್ರಾಚ - ಕೌಸಲ್ಯಾ ಸುಮಿತ್ರಾದೇವಿಯರಿಬ್ಬರೂ, ತ್ಯಕ್ತನಿದ್ರೇ-ಬಿಡಲ್ಪಟ್ಟ ನಿದ್ದೆಯುಳ್ಳವರು, ಬಭೂವತುಃ - ಆದರು. ॥ ೨೧ ॥ ಕೌಸಲ್ಯಾಚ - ಕೌಸಲ್ಯಾದೇವಿಯೂ, ಸುಮಿತ್ರಾಚ - ಸುಮಿತ್ರಾದೇವಿಯೂ, ಉಭೇ - ಇಬ್ಬರೂ, ಪಾರ್ಥಿವಂ - ಅರಸನನ್ನು, ದೃಷ್ಟ್ವಾ - ಕಂಡು, ಸ್ಪೃಷ್ಟ್ವಾಚ - ಮುಟ್ಟಿನೋಡಿ, ಹಾ - ಕಷ್ಟವು, ಹೇ ನಾಥ - ಎಲೈ ಪ್ರಾಣನಾಥನೇ (ಎಂದು) ಪರಿಕ್ಲಿಶ್ಯ - ಕೂಗಿ, ಧರಣೀತಲೇ - ನೆಲದಲ್ಲಿ, ಪೇತತುಃ - ಬಿದ್ದರು. ॥ ೨೨ ॥ ಸಾಕೋಸಲೇಂದ್ರದುಹಿತಾ - ಆ ಕೋಸಲರಾಯನಿಗೆ ಮಗಳಾದ ಕೌಸಲ್ಯಾದೇವಿಯು, ಮಹೀತಲೇ - ನೆಲದಲ್ಲಿ, ವೇಷ್ಟಮಾನಾ - ಹೊರಳಾಡುತ್ತ, ರಜೋಧ್ವಸ್ತಾ - ಧೂಳಿಯಿಂದ ವ್ಯಾಪ್ತಳಾಗಿ, ಗಗನಾತ್ - ಅಂತರಿಕ್ಷದಿಂ, ಚ್ಯುತಾ - ಜಾರಿಬಿದ್ದ, ತಾರೇವ - ನಕ್ಷತ್ರದಂತೆ, ನಬಭ್ರಾಜ - ಪ್ರಕಾಶಿಸಲಿಲ್ಲ. ॥ ೨೩ ॥ ನೃಪೇ - ಅರಸು, ಶಾಂತಗುಣೇ - ಶಾಂತವಾದ ಇಂದ್ರಿಯವ್ಯಾಪಾರವುಳ್ಳವನು, ಜಾತೇ - ಆಗಲು, ಭುವಿ - ನೆಲದಲ್ಲಿ, ಪತಿತಾಂ - ಬಿದ್ದಿರುವ, ಹತಾಂ - ಹೊಡೆಯಲ್ಪಟ್ಟ, ನಾಗವಧೂಮಿವಸ್ಥಿತಾಂ - ನಾಗಕನ್ಯಕೆಯಂತಿರುವ, ಕೌಸಲ್ಯಾಂ - ಕೌಸಲ್ಯಾದೇವಿಯನ್ನು, ಸರ್ವಾಃ -

ವುಳ್ಳವರಾಗಿ, ಅರಣ್ಯದಲ್ಲಿ ಸ್ವಸ್ಥಾನದಿಂದ ತಪ್ಪಿಸಿಕೊಂಡ ಗಂಡಾನೆಯನ್ನು ನೋಡಿ ಅರಚಿಕೊಳ್ಳುವ ಹೆಣ್ಣಾನೆಗಳಂತೆ ಗಟ್ಟಿಯಾಗಿ ಕೂಗಿಕೊಂಡರು. ॥ ೧೬-೨೦ ॥ ಹೀಗೆ ಆ ಹೆಂಗಳೆಲ್ಲರೂ ರೋದಿಸುತ್ತಿರಲು, ಆ ಧ್ವನಿಯನ್ನು ಕೇಳಿ ಕೌಸಲ್ಯಾ ಸುಮಿತ್ರೆಯರು ತಕ್ಷಣವೇ ಎಚ್ಚರಗೊಂಡು ನಿದ್ರೆಯನ್ನು ತೊರೆದವರಾದರು. ಆಗಲಾಕೌಸಲ್ಯಾಸುಮಿತ್ರೆಯರು ದಶರಥರಾಯನನ್ನು ನೋಡಿ ತಮ್ಮಕರಗಳಿಂದ ಸ್ಪರ್ಶಿಸಿ, ಮೃತನಾಗಿದ್ದುದರಿಂದ, “ ಹಾ ! ಪ್ರಾಣನಾಥ ! ” ಎಂದೊರಲುತ್ತ ಕೆಳಕ್ಕೆ ಬಿದ್ದವರಾದರು. ಆ ಸಮಯದಲ್ಲಿ ಕೋಸಲೇಶ್ವರ ಕುಮಾರಿಯಾದಾ ಕೌಸಲ್ಯಾದೇವಿಯು ಭೂಮಿಯಮೇಲೆ ಬಿದ್ದು ಹೊರಳುತ್ತ, ಧೂಳಿನಿಂದ ವ್ಯಾಪ್ತವಾದ ಶರೀರವುಳ್ಳವಳಾಗಿ, ನಭೋಮಂಡಲದಿಂದ ಕೆಳಕ್ಕೆಬಿದ್ದ ತಾರೆಯಂತೆ ಕಾಂತಿವಿಹೀನಳಾಗಿದ್ದಳು. ಮಹಾರಾಜನಾದ ದಶರಥನು ಶಾಂತವಾದ ಇಂದ್ರಿಯ ವ್ಯಾಪಾರವುಳ್ಳ

ಅಪಶ್ಯಂಸ್ತಾಃ ಸ್ತ್ರಿಯಸ್ಸರ್ವಾ ಹತಾಂ ನಾಗವಧೂಮಿವ ॥ ತತ ಸ್ಸರ್ವಾ ನರೇಂ
ದ್ರಸ್ಯ ಕೈಕೇಯಿಪ್ರಮುಖಾ ಸ್ಸ್ತ್ರಿಯಃ ॥ ೨೫ ॥ ರುದಂತ್ಯ ಶ್ಶೋಕಸಂತಪ್ತಾ
ನಿಪೇತು ರ್ಗತಚೇತನಾಃ ॥ ತಾಭಿ ಸ್ಸಬಲವಾನ್ನಾದಃ ಕ್ರೋಶಂತೀಭಿ ರನು
ದ್ರುತಃ ॥ ೨೬ ॥ ಯೇನ ಸ್ಥಿರೀಕೃತಂ ಭೂಯ ಸ್ತದ್ಗೃಹಂ ಸಮನಾದಯತ್ ॥
ತತ್ಸಮುತ್ರಸ್ತ ಸಂಭ್ರಾಂತಂ ಪರ್ಯುತ್ಸುಕ ಜನಾಕುಲಂ ॥ ೨೭ ॥ ಸರ್ವ
ತಸ್ತುಮುಲಾಕ್ರಂದಂ ಪರಿತಾಪಾರ್ತಬಾಂಧವಂ ॥ ಸದ್ಯೋ ನಿಪತಿತಾನಂದಂ

ಸಮಸ್ತರಾದ, ತಾಃಸ್ತ್ರಿಯಃ - ಆ ಸ್ತ್ರೀಯರು, ಅಪಶ್ಯನ್ - ಕಂಡರು. ॥ ೨೪ ॥ ತತಃ - ಬಳಿಕ, ಕೈಕೇಯಿಪ್ರಮುಖಾಃ - ಕೈಕೇಯೀದೇವಿಯೇ ಮೊದಲಾದ, ಸರ್ವಾಃ - ಸಮಸ್ತರಾದ, ನರೇಂದ್ರಸ್ಯ ಸ್ತ್ರಿಯಃ - ರಾಜಸ್ತ್ರೀಯರು, ಶೋಕಸಂತಪ್ತಾಃ - ವ್ಯಸನದಿಂದ ಪರಿತಪಿಸುತ್ತ, ರುದಂತ್ಯಃ - ಅಳು ತ್ತಿರುವರಾಗಿ, ಗತಚೇತನಾಃ - ಪ್ರಜ್ಞೆತಪ್ಪಿ, ನಿಪೇತುಃ - ಕೆಳಕ್ಕೆಬಿದ್ದರು. ॥ ೨೫ ॥ ಯೇನ - ಯಾವ ಶೋಕದಧ್ವನಿಯಿಂದ, ಸ್ಥಿರೀಕೃತಂ - ಸ್ತಂಭೀಭೂತವಾದ, ತದ್ಗೃಹಂ - ಆ ರಾಜಭವನವು, ಭೂಯಃ - ಮತ್ತು, ಸಮನಾದಯತ್ - ಪ್ರತಿಧ್ವನಿಗೊಂಡಿತೋ, ಕ್ರೋಶಂತೀಭಿಃ - ಅಳುತ್ತಿರುವ, ತಾಭಿಃ - ಆ ಸ್ತ್ರೀಯರಿಂದ, ಬಲವಾನ್ - ಪ್ರಬಲವಾದ, ಸನಾದಃ - ಆ ಧ್ವನಿಯು, ಅನುದ್ರುತಃ - ಅನುಸರಿಸಲ್ಪಟ್ಟಿತು. ॥ ೨೬ ॥ ಪರ್ಯುತ್ಸುಕಜನಾಕುಲಂ - ಅತ್ಯುತ್ಕಂಠಾವಿಶಿಷ್ಟವಾದ ಜನರಿಂದ ವ್ಯಾಪ್ತವಾದ, ತತ್ - ಆ, ಸದ್ಮ - ಅರಮನೆಯು, ನರದೇವಸ್ಯ - ಅರಸನು, ದಿಷ್ಟಾಂತಂ - ದೈವಾ ದೀನತೆಯನ್ನು, ಏಯುಷಂ - ಹೊಂದಿದವನಾಗಲು, ಸಮುತ್ರಸ್ತಸಂಭ್ರಾಂತಂ - ಹೆದರಿ ಭ್ರಾಂತಿ ಗೊಂಡ ಜನವುಳ್ಳದಾಗಿ, ಸರ್ವತಃ - ಎಲ್ಲಾಕಡೆಯಲ್ಲಿಯೂ, ತುಮುಲಾಕ್ರಂದಂ, ತುಮುಲ-ಸಂಕುಲ ವಾದ, ಆಕ್ರಂದಂ - ರೋದನಧ್ವನಿಯುಳ್ಳದಾಗಿ, ಪರಿತಾಪಾರ್ತಬಾಂಧವಂ - ಸಂಕಟದಿಂದ ಪರಿತಪಿ ಸುತ್ತಿರುವ ಬಂಧುಜನವುಳ್ಳದಾಗಿ, ಸದ್ಯೋನಿಪತಿತಾನಂದಂ - ಆಗತಾನೆ ಹತವಾದ ಸಂತೋಷವುಳ್ಳ ದಾಗಿ, ದೀನವಿಕ್ಲಬದರ್ಶನಂ - ದೈನ್ಯಮುಖವುಳ್ಳ ಗಾಬರಿಬಿದ್ದ ದೃಷ್ಟಿಯುಳ್ಳದು, ಬಭೂವ-ಆಯಿತು. ॥ ೨೮ ॥ ಪತ್ನ್ಯಃ - ಹೆಂಡತಿಯರು, ಯಶಸ್ವಿನಂ - ಕೀರ್ತಿವಂತನಾದ, ಪಾರ್ಥಿವರ್ಷಭಂ - ರಾಜ

ವನಾಗಲು ಆ ರಾಜಾಂತಃಪುರಗತಸ್ತ್ರೀಯರೆಲ್ಲರೂ. ಹೊಡೆದುಕೆಡುಹಿದ ನಾಗಕನ್ನಿಕೆಯರಂತೆ ನೆಲದಲ್ಲಿ ಬಿದ್ದಿರುವ ಆ ಕೌಸಲ್ಯಾದೇವಿಯನ್ನು ನೋಡಿದವರಾದರು. ಆಮೇಲೆ ಕೈಕೇಯಿಯೇ ಮೊದಲಾದ ಸಮಸ್ತ ರಾಜಸ್ತ್ರೀಯರೆಲ್ಲರೂ ವ್ಯಸನದಿಂದ ಪರಿತಪಿಸುತ್ತಲೂ, ರೋದಿಸು ತ್ತಲೂ ಪ್ರಜ್ಞೆತಪ್ಪಿ ನೆಲಕ್ಕುರುಳಿದರು. ॥ ೨೧-೨೫ ॥ ಶೋಕಧ್ವನಿಯಿಂದ ವ್ಯಾಪ್ತ ವಾದ ಆ ರಾಜಭವನವು ರೋದಿಸುತ್ತಿರುವ ಆ ಸ್ತ್ರೀಯರ ಧ್ವನಿಯಿಂದ ಪ್ರತಿಧ್ವನಿಗೊಂಡಿತು. ಅಲ್ಲದೆ ಹಿಂದೆ ಮಹಾ ಸಂತೋಷಸಂಭ್ರಮಗಳಿಂದೊಡಗೂಡಿದ ಜನಗಳಿಂದ ವ್ಯಾಪ್ತವಾದ ಆ ರಾಜಗೃಹವೆಲ್ಲ ದಶರಥರಾಯನು ಮರಣವನ್ನುಹೊಂದುತ್ತಲೆ, ಭಯಗ್ರಸ್ತವಾದ ಜಯ ವುಳ್ಳದಾಗಿಯೂ, ಎಲ್ಲೆಡೆಗಳಲ್ಲಿಯೂ ವ್ಯಾಪ್ತವಾದ ರೋಧನಧ್ವನಿಯುಳ್ಳದಾಗಿಯೂ, ಸಂಕಟದಿಂದ ಪರಿತಪಿಸುತ್ತಿರುವ ಬಂಧುಜನರುಳ್ಳದಾಗಿಯೂ, ಆಗತಾನೆ ಹತಸಂತೋಷ ವುಳ್ಳದಾಗಿಯೂ ಆಗಿ ದೈನ್ಯವಾಂತು ಚಕಿತದೃಷ್ಟಿಯುಳ್ಳದಾಯಿತು. ದಶರಥರಾಜನ

ದೀನವಿಕ್ಲಬದರ್ಶನಂ ॥ ೨೮ ॥ ಬಭೂವ ನರದೇವಸ್ಯ ಸದ್ಮ ದಿಷ್ಟಾಂತ ಮೇಯುಷಃ ॥ ೨೯ ॥

ಅತೀತ ಮಾಜ್ಞಾಯತು ಪಾರ್ಥಿವರ್ಷಭಂ
ಯಶಸ್ವಿನಂ ಸಂಪರಿವಾರ್ಯಪತ್ನಯಃ ॥
ಭೃಶಂ ರುದಂತ್ಯಃ ಕರುಣಂ ಸುದುಃಖಿತಾಃ
ಪ್ರಗೃಹ್ಯ ಬಾಹೂ ವ್ಯಲಪ ನ್ನನಾಥವತ್ ॥ ೩೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಷಷ್ಟಿತಮಸ್ಸರ್ಗಃ.

ಶ್ರೇಷ್ಠನಾದ ದಶರಥರಾಯನನ್ನು, ಅತೀತಂ - ಮೃತನನ್ನಾಗಿ, ಆಜ್ಞಾಯ-ತಿಳಿದು, ಸಂಪರಿವಾರ್ಯ-ಸುತ್ತಿಕೊಂಡು, ಭೃಶಂ - ಬಹಳವಾಗಿ, ಕರುಣಂ - ದೀನವಾಗಿ, ರುದಂತ್ಯಃ - ಅಳುತ್ತ, ಸುದುಃಖಿತಾಃ - ಬಹಳ ವ್ಯಸನಗೊಂಡು, ಬಾಹೂ - ಒಬ್ಬರೊಬ್ಬರು ಭುಜಗಳನ್ನು, ಪ್ರಗೃಹ್ಯ-ಹಿಡಿದುಕೊಂಡು, ಅನಾಥವತ್ - ನಾಥನಿಲ್ಲದವರಂತೆ, ವ್ಯಲಪನ್ - ಪ್ರಲಾಪಮಾಡಿದರು. ॥ ೩೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಟ್ಷಷ್ಟಿತಮಸ್ಸರ್ಗಃ.

ಹೆಂಡತಿಯರೆಲ್ಲರೂ, ಮಹಾ ಕೀರ್ತಿವಂತನಾದ ಆತನನ್ನು ಮೃತನನ್ನಾಗಿ ತಿಳಿದು ಅಳುತ್ತ ಕಡುದುಃಖಿತರಾಗಿ ಒಬ್ಬರಭುಜಗಳನ್ನೊಬ್ಬರು ಹಿಡಿದುಕೊಂಡು ಪ್ರಲಪಿಸಿದರು. ॥೨೬-೩೦॥

ಇಂತಿದು ದಶರಥರಾಜಾಂತಃಪುರ ಜನವಿಲಾಪ ನಿರೂಪಣವೆಂಬ
ಅರವತ್ತೈದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಷಟ್‌ಷಷ್ಠಿತಮಸ್ಸರ್ಗಃ.

ತಮಗ್ನಿಮಿವ ಸಂಶಾಂತ ಮಂಬುಹೀನ ಮಿವಾರ್ಣವಂ ॥ ಹತಪ್ರಭಮಿವಾದಿತ್ಯಂ ಸ್ವರ್ಗಸ್ಥಂಪ್ರೇಕ್ಷ್ಯ ಪಾರ್ಥಿವಂ ॥ ೧ ॥ ಕೌಸಲ್ಯಾ ಭಾಷ್ಪಪೂರ್ಣಾಕ್ಷೀ ವಿವಿಧಂ ಶೋಕಕರ್ಶಿತಾ॥ಉಪಗೃಹ್ಯ ಶಿರೋರಾಜ್ಞಃ ಕೈಕೇಯೀಂ ಪ್ರತ್ಯಭಾಷತ ॥ ೨ ॥ ಸಕಾಮಾ ಭವ ಕೈಕೇಯಿ! ಭುಙ್ಕ್ಷ್ವ ರಾಜ್ಯ ಮಕಂಟಕಂ ॥ ತ್ಯಕ್ತ್ವಾ ರಾಜಾನ ಮೇಕಾಗ್ರಾ ನೃಶಂಸೇ! ದುಷ್ಟಚಾರಿಣಿ! ॥ ೩ ॥ ವಿಹಾಯ ಮಾಂ ಗತೋ ರಾಮೋ ಭರ್ತಾಚ ಸ್ವರ್ಗತೋ ಮಮ ॥ ವಿತಥೇ

ಸಂಶಾಂತಂ - ಶಾಂತವಾದ ಜ್ವಾಲೆಗಳುಳ್ಳ, ಅಗ್ನಿಮಿವ-ಬೆಂಕಿಯಂತಿರುವ, ಅಂಬುಹೀನಂ-ಜಲರಹಿತವಾದ, ಅರ್ಣವಮಿವಸ್ಥಿತಂ - ಕಡಲಿನಂತಿರುವ, ಹತಪ್ರಭಂ - ಕ್ಷೀಣವಾದ ಕಾಂತಿಯುಳ್ಳ, ಆದಿತ್ಯಮಿವಸ್ಥಿತಂ - ಸೂರ್ಯನಂತಿರುವ, ಸ್ವರ್ಗಸ್ಥಂ - ಸ್ವರ್ಗವನ್ನುಹೊಂದಿದ, ಪಾರ್ಥಿವಂ - ಅರಸನನ್ನು, ಪ್ರೇಕ್ಷ್ಯ - ಕಂಡು. ॥ ೧ ॥ ಬಾಷ್ಪಪೂರ್ಣಾಕ್ಷೀ - ಕಂಬನಿಗಳಿಂದ ಸಂಪೂರ್ಣವಾದ ನೇತ್ರಗಳುಳ್ಳ, ಕೌಸಲ್ಯಾ - ಕೌಸಲ್ಯಾದೇವಿಯು, ರಾಜ್ಞಂ - ದಶರಥರಾಯನ, ಶಿರಃ - ಮಂಡೆಯನ್ನು, ಉಪಗೃಹ್ಯ - ತೊಡೆಯಮೇಲಿರಿಸಿಕೊಂಡು, ವಿವಿಧಂ - ನಾನಾಬಗೆಯಾಗಿ, ಶೋಕಕರ್ಶಿತಾ - ಶೋಕದಿಂದ, ಕೃಶಳಾಗಿ, ಕೈಕೇಯೀಂ - ಕೈಕೆಯೀದೇವಿಯನ್ನು ಕುರಿತು, ಪ್ರತ್ಯಭಾಷತ - ನುಡಿದಳು. ॥ ೨ ॥ ಹೇ ನೃಶಂಸೇ - ಎಲೌ ಘಾತುಕಳೇ, ಹೇ ದುಷ್ಟಚಾರಿಣಿ - ಎಲೌ ದುಷ್ಕಾರ್ಯವನ್ನು ಮಾಡಿದವಳೆ, ಹೇ ಕೈಕೇಯಿ - ಎಲೌ ಕೈಕೇಯಿದೇವಿಯೆ, ಸಕಾಮಾ - ಮನೋರಥದಿಂದೊಡಗೂಡಿದವಳು, ಭವ - ಆಗು, ಏಕಾಗ್ರಾ - ಏಕಾಗ್ರಚಿತ್ತಳಾಗಿ, ರಾಜಾನಂ - ಅರಸನನ್ನು, ತ್ಯಕ್ತ್ವಾ - ಬಿಟ್ಟು, ಅಕಂಟಕಂ - ನಿಷ್ಕಂಟಕವಾಗಿ, ರಾಜ್ಯಂ - ರಾಜ್ಯವನ್ನು, ಭುಂಕ್ಷ್ವ - ಅನುಭವಿಸು. ॥ ೩ ॥ ರಾಮಃ - ಶ್ರೀರಾಮನು, ಮಾಂ - ನನ್ನನ್ನು, ವಿಹಾಯ - ಬಿಟ್ಟು, ಗತಃ - ಹೊರಟುಹೋದನು, ಮಮ - ನನ್ನ, ಭರ್ತಾಚ - ಗಂಡನೂ ಕೂಡ, ಸ್ವರ್ಗತಃ - ಸ್ವರ್ಗವನ್ನು ಪಡದನು, ವಿತಥೇ-ದುರ್ಗ

ಆ ದಶರಥಮಹಾರಾಜನು ತಣ್ಣಗಿರುವ ಅಗ್ನಿಯಂತೆಯೂ, ಜಲರಹಿತವಾದ ಸಮುದ್ರದಂತೆಯೂ, ಕಾಂತಿಯಿಲ್ಲದ ದಿನಮಣಿಯಂತೆಯೂ ಆಗಿ ನಿಸ್ತೇಜಸ್ಕನಾಗಿ ಇದ್ದನು. ಈ ರೀತಿಯಿರುವ ಆ ರಾಯನನ್ನು ನೋಡಿ ಕೌಸಲ್ಯಾದೇವಿಯು ಕಂಬನಿಗಳು ಧಾರೆಧಾರೆಯಾಗಿ ಪ್ರವಹಿಸುತ್ತಿರಲು, ದುಃಖವನ್ನುತಡೆಯಲಾರದೆ, ಪತಿದೇವನಾದ ದಶರಥರಾಯನ ಶಿರಸ್ಸನ್ನು ತನ್ನತೊಡೆಯಮೇಲಿಟ್ಟುಕೊಂಡು ಕೈಕೇಯಿಯನ್ನುನೋಡಿ ಹೀಗೆಂದಳು. "ಎಲೇ! ಕ್ರೂರಾತ್ಮಳೆ! ಕೈಕೇಯಿ; ಇನ್ನು ನಿನ್ನ ಕೋರಿಕೆಗಳೆಲ್ಲವನ್ನೂ ನಿರಾತಂಕವಾಗಿ ನೆರವೇರಿಸಿಕೊ! ದಶರಥರಾಜನು ಮರಣವನ್ನು ಹೊಂದಿದನಲ್ಲವೆ? ಇನ್ನುಮೇಲೆ ನೀನೀರಾಜ್ಯವನ್ನು ನಿಷ್ಕಂಟಕವಾಗಿ ಅನುಭವಿಸಬಹುದು! ಅರಸನನ್ನು ತೊರೆದು ಏಕಾಗ್ರಚಿತ್ತಳಾಗಿ ಈ ರಾಜ್ಯವ

ಸಾರ್ಥಹೀನೇನ ನಾಹಂ ಜೀವಿತು ಮುತ್ಸಹೇ ! ‖ ೪ ‖ ಭರ್ತಾರಂ ತಂ ಪರಿ
ತ್ಯಜ್ಯ ಕಾಸ್ತ್ರೀ ದೈವತ ಮಾತ್ಮನಃ ‖ ಇಚ್ಛೇಜ್ಜೀವಿತು ಮನ್ಯತ್ರ ಕೈಕೇಯ್ಯಾ
ಸ್ತ್ಯಕ್ತ ಧರ್ಮಣಃ ‖ ೫ ‖ ನಲುಬ್ಧೋ ಬುಧ್ಯತೇ ದೋಷಾ ಕಿಂಪಾಕಮಿವ
ಭಕ್ಷಯ೯ ‖ ಕುಬ್ಜಾನಿಮಿತ್ತಂ ಕೈಕೇಯ್ಯಾ ರಾಘವಾಣಾಂ ಕುಲಂ ಹತಂ! ‖೬‖
ಅನಿಯೋಗೇ ನಿಯುಕ್ತೇನ ರಾಜ್ಞಾ ರಾಮಂ ವಿವಾಸಿತಂ ‖ ಸಭಾರ್ಯಂ ಜನ
ಕಶ್ಶ್ರುತ್ವಾ ಪರಿತಪ್ಸ್ಯ ತ್ಯಹಂ ಯಥಾ ‖ ೭ ‖ ಸಮಾಮನಾಥಾಂ ವಿಧವಾಂ

ಸ್ಥಾನದಲ್ಲಿ, ಸಾರ್ಥಹೀನೇವ - ಸಹಾಯದಿಂದ ರಹಿತಳಾದವಳಂತೆ, ಅಹಂ - ನಾನು, ಜೀವಿತುಂ - ಬದುಕಲು, ನೋತ್ಸಹೇ - ಸಹಿಸಲಾರೆ. ‖ ೪ ‖ ತ್ಯಕ್ತಧರ್ಮಣಃ - ಬಿಡಲ್ಪಟ್ಟ ಸ್ವಧರ್ಮವುಳ್ಳ, ಕೈಕೇಯ್ಯಾಃ - ಕೈಕೇಯಿಗಿಂತಲೂ, ಅನ್ಯತ್ರ - ಮತ್ತೊಂದು ಸ್ಥಳದಲ್ಲಿ, ಕಾಸ್ತ್ರೀ - ಯಾವ ಸ್ತ್ರೀಯು, ಆತ್ಮನಃ - ತನಗೆ, ದೈವತಂ - ದೇವತಾಸ್ವರೂಪನಾದ, ತಂಭರ್ತಾರಂ - ಅಂತಹ ಗಂಡನನ್ನು, ಪರಿತ್ಯಜ್ಯ - ತ್ಯಾಗಮಾಡಿ, ಜೀವಿತುಂ - ಬದುಕುವದಕ್ಕೆ, ಇಚ್ಛೇತ್ - ಅಪೇಕ್ಷಿಸಿಯಾಳು. ಲುಬ್ಧಃ - ಅರ್ಥಲುಬ್ಧನಾದ ಪುರುಷನು, ಕಿಂಪಾಕಮಿವ - ವಿಷಮಿಶ್ರವಾದ ಫಲವನ್ನಂತೆ, ಭಕ್ಷಯ೯ - ಭಕ್ಷಿಸುತ್ತಿರುವನಾಗಿ, ದೋಷಾ - ದೋಷಗಳನ್ನು, ನಬುಧ್ಯತೇ - ತಿಳಿಯಲಾರನು, ಕುಬ್ಜಾನಿಮಿತ್ತಂ - ಮಂಥರಾನಿಮಿತ್ತವಾಗಿ, ಕೈಕೇಯ್ಯಾ-ಕೈಕೆಯಿದೇವಿಯಿಂದ, ರಾಘವಾಣಾಂ-ರಘುಕುಲೋತ್ಪನ್ನರಾದ ರಾಜರ, ಕುಲಂ - ವಂಶವು, ಹತಂ - ನಾಶಗೊಳಿಸಲ್ಪಟ್ಟಿತು. ‖ ೬ ‖ ಅನಿಯೋಗೇ-ವರಪ್ರದಾನ ಕಾಲದಲ್ಲಿ ಸ್ಪಷ್ಟವಾಗದಿರುವ ಶ್ರೀರಾಮನ ಹೊರಡಿಸುವಿಕೆಯ ವಿಷಯವಾಗಿ, ನಿಯುಕ್ತೇನ - ನಿರ್ಬಂಧ ಮಾಡಲ್ಪಟ್ಟ, ರಾಜ್ಞಾ - ಅರಸನಿಂದ, ಸಭಾರ್ಯಂ - ಹೆಂಡತಿಯಿಂದೊಡಗೂಡಿದ, ರಾಮಂ - ಶ್ರೀರಾಮನನ್ನು, ವಿವಾಸಿತಂ - ಅರಣ್ಯವನ್ನು ಕುರಿತು ಹೊರಡಿಸಲ್ಪಟ್ಟವನನ್ನಾಗಿ, ಜನಕಃ - ಜನಕರಾಯನು, ಶ್ರುತ್ವಾ - ಕೇಳಿ, ಅಹಂಯಥಾ - ನನ್ನಂತೆ, ಪರಿತಪ್ಸ್ಯತಿ - ಪರಿತಾಪಗೊಳ್ಳುವನು. ‖ ೭ ‖ ಅದ್ಯ - ಈಗ, ಕಮಲಪತ್ರಾಕ್ಷಃ-ಕಮಲದಳಗಳಂತೆ ವಿಸ್ತಾರವಾದ ನೇತ್ರಗಳುಳ್ಳ, ಧಾರ್ಮಿಕಃ-

---

ನ್ನಾಳು ! ನನ್ನಮಗನಾದ ಶ್ರೀರಾಮನು ನನ್ನನ್ನು ತೊರೆದು ಅರಣ್ಯಕ್ಕೆ ಹೊರಟುಹೋದನು ; ನನ್ನನ್ನು ಕಾಪಾಡುವ ನನ್ನ ನಾಥನು ಮರಣವನ್ನು ಹೊಂದಿದನು ! ಆದುದರಿಂದ ಭಯಂಕರವಾದ ಮಾರ್ಗದಲ್ಲಿ ಜೊತೆಯಿಲ್ಲದ ದಾರಿಗಳಂತಿರುವ ನಾನು ಜೀವಿಸಿರಲು ಅಪೇಕ್ಷಿಸುವುದಿಲ್ಲ! ಧರ್ಮಬಾಹಿರಳಾದ ಕೈಕೇಯಿಯನ್ನುಳಿದು ಮತ್ತೆ ಯಾವ ಹೆಂಗಸು ತಾನೆ ತನಗೆ ದೇವತಾಸ್ವರೂಪನಾದ ಪತಿಯನ್ನು ತೊರೆದು ಜೀವಿಸಲು ಸಮ್ಮತಿಸಿಯಾಳು? ‖೫‖ ಲುಬ್ಧನಾದ ಪುರುಷನು ವಿಷಮಿಶ್ರಿತವಾದ ಫಲವನ್ನು ನೋಡಿ, “ ಇದೂ ಒಂದು ಫಲವೇ ” ಎಂದು ತಿಳಿದು, ಆ ಫಲವನ್ನು ತಿನ್ನುವುದರಿಂದುಂಟಾಗುವ ಕೆಡುಕನ್ನು ಆಮೇಲೆ ತಿಳಿದುಕೊಂಡಂತೆ ; ಎಲೌ ಕೈಕೇಯಿ ! ನೀನೂ ಆ ಗೂನುಬೆನ್ನಿನ ಮಂಥರೆಯ ಮಾತುಗಳನ್ನು ಕೇಳಿ ರಘುಕುಲವೆಲ್ಲವನ್ನೂ ನಾಶಗೊಳಿಸಿದೆ! ವರಗಳನ್ನು ಕೊಡಬೇಕಾದ ಸಂಗತಿಯು ಸುಳ್ಳಾಗಿ, “ ದಶರಥರಾಯನು ಕೈಕೇಯಿಯ ಮಾತುಗಳನ್ನು ಕೇಳಿ ದುರಭಿಪ್ರಾಯದಿಂದ ಸೀತಾರಾಮರನ್ನು ಅರಣ್ಯಕ್ಕೆ ಕಳುಹಿದನು ” ಎಂಬ ಸಮಾಚಾರವನ್ನು ಜನಕಚಕ್ರೇಶ್ವರನು ಕೇಳಿದರೆ ಆತನೂ

ನಾದ್ಯ ಜಾನಾತಿ ಧಾರ್ಮಿಕಃ || ರಾಮಃ ಕಮಲಪತ್ರಾಕ್ಷೋ ಜೀವನ್ನಾಶಮಿತೋ ಗತಃ ||೮|| ವಿದೇಹರಾಜಸ್ಯ ಸುತಾ ತಥಾ ಸೀತಾ ತಪಸ್ವಿನೀ || ದುಃಖಸ್ಯಾನುಚಿತಾ ದುಃಖಂ ವನೇ ಪರ್ಯುದ್ವಿಜಿಷ್ಯತಿ ||೯|| ನದತಾಂ ಭೀಮಘೋಷಾಣಾಂ ನಿಶಾಸು ಮೃಗಪಕ್ಷಿಣಾಂ || ನಿಶಮ್ಯ ನೂನಂ ಸಂತ್ರಸ್ತಾ ರಾಘವಂ ಸಂಶ್ರಯಿಷ್ಯತಿ ||೧೦|| ವೃದ್ಧಶ್ಚೈವಾಲ್ಪಪುತ್ರಶ್ಚ ವೈದೇಹೀಮನುಚಿಂತಯನ್ || ಸೋಪಿ ಶೋಕಸಮಾವಿಷ್ಟೋ ನನು ತ್ಯಕ್ಷ್ಯತಿ ಜೀವಿತಂ? ||೧೧|| ಸಾಹಮದ್ಯೈವ ದಿಷ್ಟಾಂತಂ ಗಮಿಷ್ಯಾಮಿ ಪತಿವ್ರತಾ || ಇದಂ

ಧರ್ಮವೇ ಪ್ರಧಾನವಾಗುಳ್ಳ, ರಾಮಃ-ಶ್ರೀರಾಮನು, ಇತಃ ಇಲ್ಲಿಂದ, ಜೀವನ್ - ಬದುಕಿದ್ದರೂ, ನಾಶಂ - ಇಲ್ಲದ ಭಾವವನ್ನು, ಗತಃ-ಹೊಂದಿದನು, ಸಃ - ಆ ಶ್ರೀರಾಮನು, ಅದ್ಯ - ಈಗ, ಅನಾಥಾಂ - ನಾಥ ರಹಿತಳಾದ, ಮಾಂ - ನನ್ನನ್ನು, ವಿಧವಾಂ - ಗಂಡನಿಲ್ಲದವಳನ್ನಾಗಿ, ನಜಾನಾತಿ - ತಿಳಿಯುವುದಿಲ್ಲವಷ್ಟೆ, ||೮|| ತಥಾ - ಹಾಗೆಯೇ, ವಿದೇಹರಾಜಸ್ಯ - ಜನಕರಾಯನ, ಸುತಾ - ಕುವರಿಯಾದ, ಸೀತಾ - ಸೀತಾದೇವಿಯು, ತಪಸ್ವಿನೀ - ದೈನ್ಯವುಳ್ಳವಳಾಗಿ, ದುಃಖಸ್ಯ - ದುಃಖಕ್ಕೆ, ಅನುಚಿತಾ - ಅಯೋಗ್ಯಳಾದರೂ, ವನೇ - ಅರಣ್ಯದಲ್ಲಿ, ದುಃಖಂ - ದುಃಖವಾಗಿ, ಪರ್ಯುದ್ವಿಜಿಷ್ಯತಿ - ಬಹಳ ಭಯವನ್ನು ಹೊಂದುತ್ತಾಳೆ. ||೯|| ನಿಶಾಸು - ರಾತ್ರಿಯ ಕಾಲಗಳಲ್ಲಿ, ನದತಾಂ - ಕೂಗುತ್ತಿರುವ, ಭೀಮಘೋಷಾಣಾಂ - ಭಯಂಕರವಾದ ಧ್ವನಿಗಳುಳ್ಳ, ಮೃಗಪಕ್ಷಿಣಾಂ - ಮೃಗ ಪಕ್ಷಿಗಳ, ನಾದಂ - ಧ್ವನಿಯನ್ನು, ನಿಶಮ್ಯ - ಕೇಳಿ, ಸಂತ್ರಸ್ತಾ - ಭಯಗೊಂಡು, ರಾಘವಂ - ಶ್ರೀರಾಮನನ್ನು, ಸಂಶ್ರಯಿಷ್ಯತಿ - ಆಶ್ರಯಿಸುತ್ತಾಳೆ, ನೂನಂ - ನಿಶ್ಚಯವು. ||೧೦|| ವೃದ್ಧಶ್ಚೈವ - ಮುದುಕನಾದ, ಅಲ್ಪಪುತ್ರಶ್ಚ-(ಗೋ) ಗಂಡುಸಂತಾನವಿಲ್ಲದಿರುವ, ಸೋಪಿ-ಆ ಜನಕರಾಯನೂ, ವೈದೇಹೀಂ-ಸೀತಾದೇವಿಯನ್ನು, ಅನುಚಿಂತಯನ್ನೇವ - ಚಿಂತಿಸುತ್ತಿರುವನಾಗಿಯೇ, ಶೋಕಸಮಾವಿಷ್ಟಃ - ಮನೋವ್ಯಥೆಯಿಂದ ವ್ಯಾಪ್ತನಾಗಿ, ಜೀವಿತಂ - ಪ್ರಾಣವನ್ನು, ತ್ಯಕ್ಷ್ಯತಿನನು - ಬಿಡುತ್ತಾನೆಯಲ್ಲವೆ. ||೧೧|| ಸಾಹಂ - ಅಂತಹ ನಾನು, ಅದ್ಯೈವ - ಈಗಲೆ, ಪತಿವ್ರತಾ-ಪತಿಪರಾಯಣಳಾಗಿ, ಇದಂ

ನನ್ನಂತೆಯೇ ಪರಿತಾಪಗೊಳ್ಳುತ್ತಾನೆ! ಬದುಕಿದ್ದರೂ ಅಯೋಧ್ಯಾಪಟ್ಟಣಕ್ಕಿಲ್ಲದಾದವನೂ, ಕಮಲಪತ್ರಗಳಂತೆ ವಿಶಾಲವಾದ ನೇತ್ರಗಳುಳ್ಳವನೂ ಆದ ಶ್ರೀರಾಮನು ಈಗ ನಾನು ಪತಿಯಿಲ್ಲದಿರುವುದರಿಂದ ವಿಧವೆಯೂ, ಅನಾಥಳೂ ಆಗಿದ್ದೇನೆಂಬುದನ್ನು ತಿಳಿಯದವನಾಗಿರುವನಲ್ಲವೆ? ದಶರಥರಾಜನು ಮೃತನಾದನೆಂಬುದೂ ಆತನಿಗೆ ತಿಳಿಯದಲ್ಲವೆ? ಹಾಗೆಯೇ ಕರುಣಿಸಲು ಯೋಗ್ಯಳೂ, ಜನಕರಾಜಕುಮಾರಿಯೂ, ದುಃಖಿಸಲನರ್ಹಳಾದರೂ, ಅರಣ್ಯದಲ್ಲಿರುವವಳೂ ಆದ ಸೀತಾದೇವಿಯು ಬಹಳವಾದ ದುಃಖದಿಂದೊಡಗೂಡಿ ಭಯವನ್ನು ಹೊಂದಿರುವಳಲ್ಲವೆ? ಇಷ್ಟೆಯಲ್ಲದೆ ಆ ದೇವಿಯು, ರಾತ್ರಿಯ ಕಾಲಗಳಲ್ಲಿ ಕೂಗುವ ಮೃಗ ಪಕ್ಷಿಗಳ ಭಯಂಕರವಾದ ಧ್ವನಿಯನ್ನು ಕೇಳಿ ನಿಶ್ಚಯವಾಗಿಯೂ ಶ್ರೀರಾಮನನ್ನಾಶ್ರಯಿಸುತ್ತಾಳೆ. ||೮-೧೦|| ಗಂಡುಸಂತಾನವೇ ಇಲ್ಲದೆ ಒಬ್ಬಳೇ ಒಬ್ಬ ಮಗಳನ್ನುಳ್ಳವನೂ, ಮುದುಕನೂ ಆದ ಜನಕಭೂಪಾಲನು, ಸೀತಾದೇವಿಯ ವೃತ್ತಾಂತವನ್ನು ಕುರಿತು ಶೋಕಿ

ಶರೀರಮಾಲಿಂಗ್ಯ ಪ್ರವೇಕ್ಷ್ಯಾಮಿ ಹುತಾಶನಂ ॥ ೧೨ ॥ ತಾಂ ತತ ಸ್ಸಂಪರಿಷ್ವಜ್ಯ ವಿಲಪಂತೀಂ ತಪಸ್ವಿನೀಂ ॥ ವ್ಯಪನಿನ್ಯು ಸ್ಸುದುಃಖಾರ್ತಾಂ ಕೌಸಲ್ಯಾಂ ವ್ಯಾವಹಾರಿಕಾಃ ॥ ೧೩ ॥ ತೈಲದ್ರೋಣ್ಯಾ ಮಥಾಮಾತ್ಯಾ ಸ್ಸಂವೇಶ್ಯ ಜಗತೀಪತಿಂ ॥ ರಾಜ್ಞ ಸ್ಸರ್ವಾಣಿ ಸಂದಿಷ್ಟಾ ಶ್ಚಕ್ರುಃ ಕರ್ಮಾಣ್ಯನಂತರಂ ॥ ೧೪ ॥ ನತು ಸಂಕಾಲನಂ ರಾಜ್ಞೋ ವಿನಾ ಪುತ್ರೇಣ ಮಂತ್ರಿಣಃ ॥ ಸರ್ವಜ್ಞಾಃ ಕರ್ತು ಮೀಷುಸ್ತೇ ತತೋ ರಕ್ಷಂತಿ ಭೂಮಿಪಂ ॥ ೧೫ ॥ ತೈಲದ್ರೋಣ್ಯಾಂತು ಸಚಿವೈ

ಶರೀರಂ - ಈ ದಶರಥರಾಜನ ಶರೀರವನ್ನು, ಆಲಿಂಗ್ಯ-ಅಪ್ಪಿಕೊಂಡು, ಹುತಾಶನಂ - ಅಗ್ನಿಯನ್ನು, ಪ್ರವೇಕ್ಷ್ಯಾಮಿ - ಪ್ರವೇಶಿಸುತ್ತೇನೆ, ದಿಷ್ಟಾಂತಂ - ಮರಣವನ್ನು, ಗಮಿಷ್ಯಾಮಿ - ಹೊಂದುವೆನು. ॥ ೧೨ ॥ ತತಃ - ಬಳಿಕ, ವ್ಯಾವಹಾರಿಕಾಃ - ಅಂತಃಪುರಕ್ಕೆ ಅಧ್ಯಕ್ಷರಾದ ಹೆಂಗಳು, ವಿಲಪಂತೀಂ-ಪ್ರಲಾಪಮಾಡುತ್ತಿರುವ, ತಪಸ್ವಿನೀಂ - ದೀನಳಾದ, ಸುದುಃಖಾರ್ತಾಂ-ಬಹು ದುಃಖಾಕ್ರಾಂತಳಾದ, ತಾಂ ಕೌಸಲ್ಯಾಂ - ಆ ಕೌಸಲ್ಯಾದೇವಿಯನ್ನು, ಸಂಪರಿಷ್ವಜ್ಯ-ಅಪ್ಪಿಕೊಂಡು, ವ್ಯಪನಿನ್ಯುಃ - ಬೇರೆ ಕಡೆಗೆ ಕರೆದುಕೊಂಡುಹೋದರು. ॥ ೧೩ ॥ ಅಥ-ಬಳಿಕ, ಅಮಾತ್ಯಾಃ - ಮಂತ್ರಿಗಳು, ಜಗತೀಪತಿಂ-ಪೃಥ್ವೀಪತಿಯಾದ ದಶರಥರಾಯನನ್ನು, ತೈಲದ್ರೋಣ್ಯಾಂ - ಎಣ್ಣೆಯ ಕೊಪ್ಪರಿಗೆಯಲ್ಲಿ, ಸಂವೇಶ್ಯ-ಮಲಗಿಸಿ, ಸಂದಿಷ್ಟಾಃ - ವಸಿಷ್ಠಾದಿಗಳಿಂದ ಆಜ್ಞಾಪಿತರಾಗಿ, ಅನಂತರಂ - ಬಳಿಕ, ರಾಜ್ಞಃ - ಅರಸನಿಗೆ, ಸರ್ವಾಣಿ - ಸಮಸ್ತಗಳಾದ, ಕಾರ್ಯಾಣಿ - ಕಾರ್ಯಗಳನ್ನು, ಚಕ್ರುಃ - ಮಾಡಿದರು. ॥ ೧೪ ॥ ಸರ್ವಜ್ಞಾಃ - ಎಲ್ಲವನ್ನು ತಿಳಿದಿರುವ, ತೇ ಮಂತ್ರಿಣಃ - ಆ ಮಂತ್ರಿಗಳು, ಪುತ್ರೇಣವಿನಾ-ಮಗನನ್ನುಳಿದು, ರಾಜ್ಞಃ - ರಾಜನಿಗೆ, ಸಂಕಾಲನಂ - ಸಂಸ್ಕಾರವನ್ನುಮಾಡಲು, ನೇಷುಃ - ಇಚ್ಛಿಸದೇಹೋದರು, ತತಃ - ಆ ಕಾರಣ, ಭೂಮಿಪಂ - ದಶರಥರಾಯನನ್ನು, ರಕ್ಷಂತಿ - ಸಂರಕ್ಷಿಸಿದರು. ॥ ೧೫ ॥ ಸಚಿವೈಃ - ಮಂತ್ರಿಗಳಿಂದ, ತೈಲದ್ರೋಣ್ಯಾಂ - ಎಣ್ಣೆಯಕೊಪ್ಪರಿಗೆಯಲ್ಲಿ, ಶಾಯಿತಂ -

ಸುತ್ತ ಪ್ರಾಣಗಳನ್ನು ತೊರೆಯುತ್ತಾನೆ. ನಾನೂ ಸಹ ಪತಿವ್ರತೆಯಾಗಿ ಪತಿದೇವನೊಡನೆ ಸಹಗಮನವನ್ನು ಮಾಡುತ್ತೇನೆ" ಎಂಬೀಪ್ರಕಾರವಾಗಿ ಸಂತಪಿಸುತ್ತಿರುವ ಕೌಸಲ್ಯಾದೇವಿಯ ಮಾತುಗಳನ್ನು ಕೇಳಿ, ವ್ಯವಹಾರಗಳಲ್ಲಿ ನಿಯುಕ್ತರಾದ ಅಂತಃಪುರ ಸ್ತ್ರೀಯರು, ತಪಸ್ವಿನಿಯೂ, ಮಹಾದುಃಖ ಸಂತಪ್ತಳಾಗಿರುವವಳೂ ಆದ ಆ ದೇವಿಯನ್ನು ದಶರಥಮಹಾರಾಜನ ಕಳೇಬರದಿಂದ ಬೇರೊಂದು ಕಡೆಗೆ ಹಿಡಿದುಕೊಂಡು ಹೋದರು. ಆ ಸಮಯದಲ್ಲಿ ಮಂತ್ರಿಗಳೆಲ್ಲರೂ ಬಂದವರಾಗಿ ವಸಿಷ್ಠರೇ ಮೊದಲಾದವರ ಅನುಮತಿಯಂತೆ ದಶರಥರಾಯನ ಆ ಕಳೇಬರವನ್ನು ತೈಲ ದ್ರೋಣದಲ್ಲಿಟ್ಟು, ಆ ಮೇಲೆ ರಾಜಕಾರ್ಯಗಳನ್ನೆಲ್ಲ ನಡೆಯಿಸತೊಡಗಿದರು. ಅಲ್ಲದೆ ಆ ಮಂತ್ರಿಗಳೆಲ್ಲರೂ, ಯುಕ್ತಾಯುಕ್ತ ವಿಚಾರ ಶೀಲರಾದುದರಿಂದ ಪುತ್ರರಿಲ್ಲದೆ ದಶರಥರಾಯನಿಗೆ ಸಂಸ್ಕಾರವನ್ನು ಮಾತ್ರ ಮಾಡದೆ ಎಣ್ಣೆಯ ಕೊಪ್ಪರಿಗೆಯಲ್ಲಿ ದಶರಥರಾಜನದೇಹವನ್ನಿಟ್ಟು ರಕ್ಷಿಸಿದರು, ॥ ೧೧-೧೫ ॥ ಈ ಪ್ರಕಾರವಾಗಿ ಆ ಮಂತ್ರಿಗಳೆಲ್ಲರೂ ದಶರಥರಾಜನ ಕಳೇಬರವನ್ನೂ ಎಣ್ಣೆಯಕೊಪ್ಪರಿಗೆಯಲ್ಲಿಟ್ಟುದನ್ನು ನೋಡಿದಕೂಡಲೇ, ಅಂತಃಪುರದ ಸ್ತ್ರೀಯರೆಲ್ಲರೂ, "ಅಯ್ಯೋ! ದಶರಥ

ಶ್ಶಾಯಿತಂ ತಂ ನರಾಧಿಪಂ ॥ ಹಾ! ಮೃತೋಽಯಮಿತಿ ಜ್ಞಾತ್ವಾ ಸ್ತ್ರಿಯಸ್ತಾಃ ಪರ್ಯವಾರಯನ್ ॥ ೧೬ ॥ ಬಾಹೂನುದ್ಯಮ್ಯ ಕೃಪಣಾ ನೇತ್ರಪ್ರಸ್ರವಣೈರ್ಮುಖೈಃ ॥ ರುದನ್ತ್ಯಶ್ಶೋಕಸಂತಪ್ತಾಃ ಕೃಪಣಂ ಪರ್ಯದೇವಯನ್ ॥೧೭॥ ಹಾ! ಮಹಾರಾಜ! ರಾಮೇಣ ಸತತಂ ಪ್ರಿಯವಾದಿನಾ ॥ ವಿಹೀನಾ ಸ್ಸತ್ಯಸಂಧೇನ ಕಿಮರ್ಥಂ ವಿಜಹಾಸಿ? ನಃ ॥೧೮॥ ಕೈಕೇಯ್ಯಾ ದುಷ್ಟಭಾವಾಯಾ ರಾಘವೇಣ ವಿಯೋಜಿತಾಃ ॥ ಕಥಂ ಪತಿಘ್ನ್ಯಾ ವತ್ಸ್ಯಾಮ? ಸ್ಸಮೀಪೇ ವಿಧವಾ ವಯಂ ॥ ೧೯ ॥ ಸಹಿ ನಾಥ ಸ್ಸದಾಸ್ಮಾಕಂ ತವಚ ಪ್ರಭುರಾತ್ಮವಾನ್ ॥

ಮಲಗಿಸಿದ, ತಂನರಾಧಿಪಂ - ಆ ದಶರಥರಾಯನನ್ನು, ಜ್ಞಾತ್ವಾ - ತಿಳಿದು, ಹಾ-ಕಷ್ಟವು, ಅಯಂ-ಈ ದಶರಥರಾಯನು, ಮೃತಇತಿ - ಮೃತನೆಂದು, ತಾಃಸ್ತ್ರಿಯಃ - ಆ ಹೆಂಗಳು, ಪರ್ಯವಾರಯನ್ - ಸುತ್ತಿಕೊಂಡರು. ॥ ೧೬ ॥ ಕೃಪಣಾಃ - ದೀನರಾದ ಆ ಸ್ತ್ರೀಯರು, ಬಾಹೂನ್ - ಭುಜುಗಳನ್ನು, ಉದ್ಯಮ್ಯ - ಎತ್ತಿ, ನೇತ್ರಪ್ರಸ್ರವಣೈಃ - ಕಣ್ಣುಗಳಿಂದ ಸುರಿಯುತ್ತಿರುವ ಕಂಬನಿಗಳುಳ್ಳ, ಮುಖೈಃ-ಮುಖಗಳಿಂದ, ರುದಂತ್ಯಃ - ರೋದನಮಾಡುತ್ತ, ಶೋಕಸಂತಪ್ತಾಃ - ವ್ಯಸನದಿಂದ ಪರಿತಪಿಸುತ್ತ, ಕೃಪಣಂ - ದೀನವಾಗಿ, ಪರ್ಯದೇವಯನ್ - ರೋದಿಸಿದರು. ॥ ೧೭ ॥ ಹೇ ಮಹಾರಾಜ - ಎಲೈ ಮಹಾರಾಯನೇ, ಹಾ - ಕಷ್ಟವು, ಸತತಂ - ನಿರಂತರವು, ಪ್ರಿಯವಾದಿನಾ - ಇಂಪಾದ ಮಾತುಗಳುಳ್ಳ, ಸತ್ಯಸಂಧೇನ - ಸತ್ಯ ಪ್ರತಿಜ್ಞಾವಂತನಾದ, ರಾಮೇಣ - ಶ್ರೀರಾಮನಿಂದ, ವಿಹೀನಾಃ - ಹೀನರಾದ, ನಃ - ನಮ್ಮನ್ನು, ಕಿಮರ್ಥಂ - ಯಾವ ನಿಮಿತ್ತವಾಗಿ, ಜಹಾಸಿ - ತೊರೆದವನಾದೆ. ॥ ೧೮ ॥ ರಾಘವೇಣ - ಶ್ರೀರಾಮನಿಂದ, ವಿಯೋಜಿತಾಃ - ವಿರಹಿತರಾದ ವಿಧವಾಃ - ಗಂಡನಿಲ್ಲದಿರುವ, ವಯಂ - ನಾವು, ಪತಿಘ್ನ್ಯಾಃ - ಗಂಡನನ್ನುಕೊಂದುಹಾಕಿದ, ದುಷ್ಟಭಾವಾಯಾಃ - ದುಷ್ಟಸ್ವಭಾವವುಳ್ಳ, ಕೈಕೇಯ್ಯಾಃ - ಕೈಕೆಯಿದೇವಿಯ, ಸಮೀಪೇ - ಸಮೀಪದಲ್ಲಿ, ಕಥಂವತ್ಸ್ಯಾಮಃ - ಹೇಗೆತಾನೆ ಇರೋಣ? ॥ ೧೯ ॥ ಸದಾ - ನಿರಂತರವೂ, ಅಸ್ಮಾಕಂ - ನಮಗೆ, ನಾಥಃ - ಸ್ವಾಮಿಯಾದ, ತವಚ - ನಿನಗೂ, ಪ್ರಭುಃ - ಸಂರಕ್ಷಣೆಯಲ್ಲಿ ಸಮರ್ಥನಾದ, ಆತ್ಮವಾನ್ - ಧೈರ್ಯಶಾಲಿ

ರಾಯನು ಮೃತನಾದನಲ್ಲ" ಎಂದು ಬಹಳವಾಗಿ ರೋದಿಸಿದರು. ಮತ್ತು ಆ ಹೆಂಗೆಳೆಲ್ಲರೂ ದೀನಸ್ವಭಾವವುಳ್ಳವರಾಗಿ, ಇತರರಿಗೂ ವ್ಯಸನವುಂಟಾಗುವಂತೆ ರೋದಿಸಿದರು. "ಹಾ! ದಶರಥಮಹಾರಾಜನೆ! ನಾವೆಲ್ಲರೂ ಮೊದಲು, ಪ್ರಿಯವಾದಿಯೂ, ಸತ್ಯಸಂಧನೂ ಆದ ಶ್ರೀರಾಮನು ಆರಣ್ಯವನ್ನು ಕುರಿತು ತೆರಳುವಿಕೆಯಲ್ಲಿಯೇ ವ್ಯಸನವನ್ನು ಹೊಂದಿದ್ದೆವು. ಈ ರೀತಿ ದುಃಖಿತರಾದ ನಮ್ಮನ್ನು ನೀನು ತೊರೆದು ತೆರಳಿದೆಯಾ?" ಎಂಬೀರೀತಿ ಭುಜಗಳನ್ನೆತ್ತಿ ಕಣ್ಣೀರು ಸುರಿಸುತ್ತಲೂ, ರೋದಿಸುತ್ತಲೂ, ವ್ಯಸನದಿಂದ ಪರಿತಪಿಸುತ್ತಲೂ ದೀನರಾಗಿ ಪ್ರಲಪಿಸಿದರು. "ಎಲೈ ರಾಜನೆ! ನಾವು ರಾಮನನ್ನು ಕಳೆದುಕೊಂಡೆವು; ಇದರಮೇಲೆ ನೀನೂ ಮರಣವನ್ನಾಂತೆ! ಇನ್ನುಮೇಲೆ ದುಷ್ಟಸ್ವಭಾವವುಳ್ಳವಳೂ, ಪತಿಘಾತಕಳೂ ಆದ ಈ ಕೈಕೇಯಿವಶದಲ್ಲಿ ನಾವು ಯಾವ ರೀತಿ ಇದ್ದೇವು? ಸರ್ವಕಾಲದಲ್ಲಿಯೂ ನಮ್ಮೆಲ್ಲರಿಗೂ ಪ್ರಭುವಾದವನು, ಸತ್ತ್ವಭಾವವುಳ್ಳವನು, ಶ್ರೀಮಂತನೂ ಆದ ಶ್ರೀರಾಮನು

ವನಂ ರಾಮೋ ಗತಶ್ರೀರ್ವಾ ವಿಹಾಯ ನೃಪತಿಶ್ರಿಯಂ ॥ ೨೦ ॥ ತ್ವಯಾ ತೇನಚ ವೀರೇಣ ವಿನಾ ವ್ಯಸನಮೋಹಿತಾಃ ॥ ಕಥಂ ವಯಂ ನಿವತ್ಸ್ಯಾಮಃ? ಕೈಕೇಯ್ಯಾಚ ವಿದೂಷಿತಾಃ ॥ ೨೧ ॥ ಯಯಾತು ರಾಜಾ ರಾಮಶ್ಚ ಲಕ್ಷ್ಮಣಶ್ಚ ಮಹಾಬಲಃ॥ಸೀತಯಾಸಹ ಸಂತ್ಯಕ್ತಾ ಸ್ಸಾ ಕಮನ್ಯಂ ನಹಾಸ್ಯತಿ? ॥೨೨॥ ತಾ ಬಾಷ್ಪೇನಚ ಸಂವೀತಾ ಶೋಕೇನ ವಿಪುಲೇನಚ ॥ ವ್ಯವೇಷ್ಟಂತ ನಿರಾನಂದಾ ರಾಘವಸ್ಯ ವರಸ್ತ್ರಿಯಃ ॥ ೨೩ ॥ ನಿಶಾ ಚಂದ್ರವಿಹೀನೇವ ಸ್ತ್ರೀವ ಭರ್ತೃವಿವರ್ಜಿತಾ ॥ ಪುರೀ ನಾರಾಜತಾಯೋಧ್ಯಾ ಹೀನಾ ರಾಜ್ಞಾ ಮಹಾ

ಯಾದ, ಶ್ರೀರ್ವಾ - ಸಂಪದ್ಯುಕ್ತನಾದ, ಸರಾಮಃ - ಆ ಶ್ರೀರಾಮನು, ನೃಪತಿಶ್ರಿಯಂ - ರಾಜ್ಯೈಶ್ವರ್ಯವನ್ನು, ವಿಹಾಯ - ಬಿಟ್ಟು, ವನಂ - ಅರಣ್ಯವನ್ನು ಕುರಿತು, ಗತೋಹಿ - ಹೋದನಷ್ಟೆ. ॥ ೨೦ ॥ ತ್ವಯಾ - ನಿನ್ನಿಂದ, ವೀರೇಣ - ಶೂರನಾದ, ತೇನವಿನಾ - ಆ ಶ್ರೀರಾಮನಿಂದಲೂ ವಿರಹಿತರಾಗಿ, ವ್ಯಸನಮೋಹಿತಾಃ, ವ್ಯಸನ - ಶೋಕದಿಂದ, ಮೋಹಿತಾಃ - ಮೂರ್ಛಿತರಾದ, ವಯಂ-ನಾವು, ಕೈಕೇಯ್ಯಾಚ - ಕೈಕೇಯಿದೇವಿಯಿಂದ, ವಿದೂಷಿತಾಃ - ಹೀನಗೊಂಡು, ಕಥಂ - ಹೇಗೆ, ನಿವತ್ಸ್ಯಾಮಃ - ಇರುವೆವು. ॥ ೨೧ ॥ ಯಯಾ - ಯಾವ ಕೈಕೇಯಿಯಿಂದ, ರಾಜಾ - ದಶರಥರಾಯನೂ, ರಾಮಶ್ಚ - ಶ್ರೀರಾಮನೂ, ಮಹಾಬಲಃ - ಮಹಾ ಬಲಿಷ್ಠನಾದ, ಲಕ್ಷ್ಮಣಶ್ಚ - ಲಕ್ಷ್ಮಣನೂ, ಸೀತಯಾಸಹ - ಸೀತಾದೇವಿಯೊಡನೆ, ಸಂತ್ಯಕ್ತಾಃ - ಪರಿತ್ಯಾಗಮಾಡಲ್ಪಟ್ಟರೋ, ಸಾ - ಆ ಕೈಕೇಯಿದೇವಿಯು, ಅನ್ಯಂ - ಮತ್ತೊಬ್ಬನಾದ, ಕಂ-ಯಾವ ಮನುಷ್ಯನನ್ನುತಾನೆ, ನಹಾಸ್ಯತಿ - ಬಿಡಲಾರಳು. ॥ ೨೨ ॥ ರಾಘವಸ್ಯ - ರಘುಕುಲೋತ್ಪನ್ನನಾದ ದಶರಥರಾಯನ, ತಾಃವರಸ್ತ್ರಿಯಃ- ಆ ಶ್ರೇಷ್ಠರಾದ ಸ್ತ್ರೀಯರು, ಬಾಷ್ಪೇಣ - ಕಂಬನಿಯಿಂದ, ವಿಪುಲೇನ - ವಿಸ್ತಾರವಾದ, ಶೋಕೇನ - ಮನೋವ್ಯಥೆಯಿಂದಲೂ. ಸಂವೀತಾಃ-ವ್ಯಾಪ್ತರಾದವರಾಗಿ, ವ್ಯವೇಷ್ಟಂತ - ನೆಲದಮೇಲೆಬಿದ್ದು ಉರುಳಾಡಿದರು. ॥೨೩॥ ಮಹಾತ್ಮನಾ-ಮಹಾತ್ಮನಾದ, ರಾಜ್ಞಾ-ದಶರಥರಾಯನಿಂದ, ಹೀನಾ-ರಹಿತವಾದ, ಅಯೋಧ್ಯಾಪುರೀ - ಅಯೋಧ್ಯಾಪಟ್ಟಣವು, ಚಂದ್ರವಿಹೀನಾ - ಚಂದ್ರನಿಂದ ಶೂನ್ಯವಾದ, ನಿಶೇವ - ರಾತ್ರಿಯಂತೆ, ಭರ್ತೃವಿವರ್ಜಿತಾ - ಗಂಡನಿಂದ ಬಿಡಲ್ಪಟ್ಟ, ಸ್ತ್ರೀವ - ಹೆಂಗಸಿನಂತೆ, ನಾರಾಜತ -

---

ರಾಜ್ಯಲಕ್ಷ್ಮಿಯನ್ನು ತೊರೆದು, ಅರಣ್ಯಕ್ಕೆ ಹೊರಟು ಹೋದನು. ॥ ೧೬-೨೦ ॥ ಇಷ್ಟೆಯಲ್ಲದೆ ಎಲೈ ಮಹಾರಾಜನೆ ! ನಾವು ಶೂರನಾದ ಶ್ರೀರಾಮನನ್ನು, ನಿನ್ನನ್ನೂ ಸಹ ಬಿಟ್ಟು ಅಧಿಕವಾದ ದುಃಖದಿಂದ ಪೀಡಿತರಾಗಿ, ಕೈಕೇಯಿಯಿಂದ ಅನೇಕ ವಿಧಗಳಿಂದ ಬಾಧೆಗಳನ್ನನುಭವಿಸುತ್ತ ಹೇಗೆ ತಾನೆ ಜೀವಿಸುತ್ತೇವೆ? ಎಲೈ ರಾಯನೆ ! ಪತಿದೇವನಾದ ನಿನ್ನನ್ನೂ, ಶ್ರೀರಾಮನನ್ನೂ, ಮಹಾ ಬಲಿಷ್ಠನಾದ ಲಕ್ಷ್ಮಣ ಸ್ವಾಮಿಯನ್ನೂ, ಸೀತಾದೇವಿಯನ್ನೂ ಪರಿತ್ಯಜಿಸಿದ ಈ ಕೈಕೇಯಿಯು ನಮ್ಮನ್ನು ಅನಾಥರನ್ನಾಗಿ ಮಾಡಿ ಪರಿತ್ಯಾಗ ಮಾಡುತ್ತಾಳೆಂದು ಹೇಳುವುದೇನು? ಹಾಗೆ ಮಾಡಿಯೇ ಮಾಡುತ್ತಾಳೆ!" ಎಂಬೀ ಪ್ರಕಾರವಾಗಿ ಆ ದಶರಥರಾಜನ ಅಂತಃಪುರಸ್ತ್ರೀಯರೆಲ್ಲರೂ, ಕಂಬನಿಗರೆಯುತ್ತ, ಬಹು ಮನೋವ್ಯಥೆಯುಳ್ಳವರಾಗಿಯೂ, ನಿರಾನಂದರಾಗಿಯೂ ಆಗಿ ನೆಲದಮೇಲೆಬಿದ್ದು ಹೊರಳಾಡಿದರು.

ತ್ಮನಾ ॥ ೨೪ ॥ ಬಾಷ್ಪಪರ್ಯಾಕುಲಜನಾ ಹಾ! ಹಾ! ಭೂತ ಕುಲಾಂಗನಾ ॥ ಶೂನ್ಯ ಚತ್ವರ ವೇಶ್ಮಾಂತಾ ನಬಭ್ರಾಜ ಯಥಾಪುರಂ ॥ ೨೫ ॥ ಗತೇತು ಶೋಕಾತ್ತ್ರಿದಿವಂ ನರಾಧಿಪೇ । ಮಹೀತಲಸ್ಥಾ ಸುನೃಪಾಂಗನಾಸು ಚ ॥ ನಿವೃತ್ತಚಾರ ಸ್ಸಹಸಾ ಗತೋ ರವಿಃ । ಪ್ರವೃತ್ತ ಚಾರಾ ರಜನೀ ಹ್ಯುಪಸ್ಥಿತಾ ॥೨೬॥ ಋತೇತು ಪುತ್ರಾದ್ದಹನಂ ಮಹೀಪತೇ । ರ್ನರೋಚಯಂತೇ ಸುಹೃದ ಸ್ಸಮಾಗತಾಃ ॥ ಇತೀವ ತಸ್ಮಿನ್ ಶಯನೇನ್ಯವೇಶಯನ್ । ವಿಚಿಂತ್ಯ ರಾಜಾನ ಮಚಿಂತ್ಯ ದರ್ಶನಂ ॥ ೨೭ ॥

ಪ್ರಕಾಶಿಸಲಿಲ್ಲವು. ॥ ೨೪ ॥ ಬಾಷ್ಪಪರ್ಯಾಕುಲಜನಾ - ಕಂಬನಿಗಳೆಂಬ ವ್ಯಾಕುಲರಾದ ಜನರುಳ್ಳ, ಹಾಹಾಭೂತಕುಲಾಂಗನಾ - ಹಾಹಾಎಂದು ದುಃಖಿಸುತ್ತಿರುವ, ಕುಲಾಂಗನಾ - ಕುಲಸ್ತ್ರೀಯರುಳ್ಳ, ಶೂನ್ಯಚತ್ವರವೇಶ್ಮಾಂತಾ-ಜನವರ್ಜಿತವಾದ ಅಂಗಳಗಳು ಭುವನಪ್ರಾಂತಗಳೂಉಳ್ಳ,ಪುರೀ-ಪಟ್ಟಣವು, ಯಥಾಪುರಂ - ಪೂರ್ವದಂತೆ, ನಬಭ್ರಾಜ - ಪ್ರಕಾಶಿಸದೇಹೋಯಿತು. ॥ ೨೫ ॥ ನರಾಧಿಪೇ - ದಶರಥರಾಯನು, ಶೋಕಾತ್ - ದುಃಖದಿಂದ, ತ್ರಿದಿವಂ - ಸ್ವರ್ಲೋಕವನ್ನು ಕುರಿತು, ಗತೇ - ಹೋದವನಾಗಲು, ನೃಪಾಂಗನಾಸು - ರಾಜಸ್ತ್ರೀಯರೆಲ್ಲರೂ, ಮಹೀತಲಸ್ಥಾಸು - ನೆಲದಮೇಲೆ ಕುಳಿತುಕೊಂಡವರಾಗಲು, ಸಹಸಾ - ಜಾಗ್ರುತೆಯಾಗಿ, ರವಿಃ - ಸೂರ್ಯನು, ನಿವೃತ್ತಚಾರಃ - ಹೋಗಲಾಡಿಸಲ್ಪಟ್ಟ ಕಿರಣಸಂಚಾರವುಳ್ಳವನಾಗಿ, ಅಸ್ತಂ - ಅಸ್ತಮಾನವನ್ನು, ಗತಃ - ಹೊಂದಿದನು, ಪ್ರವೃತ್ತಚಾರಾ - ಪ್ರವರ್ತಿಸಿದ ತಮಸ್ಸಚಾರವುಳ್ಳ, ರಜನೀ - ರಾತ್ರಿಯು, ಉಪಸ್ಥಿತಾಹಿ-ಬಂದಿತಷ್ಟೆ. ॥ ೨೬ ॥ ಸುಹೃದಃ - ಸ್ನೇಹಿತರೂ, ಸಮಾಗತಃ - ಬಂದವರಾಗಿ, ಪುತ್ರಾದೃತೇ - ಮಗನನ್ನುವಿನಹ, ಮಹೀಪತೇಃ - ಅರಸನಾದ ದಶರಥರಾಯನ, ದಹನಂ - ದಹನವನ್ನು, ನರೋಚಯಂತೇ - ಸಮ್ಮತಿಸದೇಹೋದರು, ಇತೀವ - ಹೀಗೆ, ಅಚಿಂತ್ಯದರ್ಶನಂ-ಚಿಂತಿಸಲಸಾಧ್ಯವಾದ ದರ್ಶನವುಳ್ಳ, ರಾಜಾನಂ-ದಶರಥರಾಯನನ್ನು, ತಸ್ಮಿಂಶಯನೇ - ಆ ತೈಲದ್ರೋಣಿಯಲ್ಲಿ, ನ್ಯವೇಶಯನ್ - ಇರಿಸಿದರು, ॥ ೨೭ ॥ ಅಸ್ರಕಂಠಾಕುಲಮಾರ್ಗಚತ್ವರಾ - ಕಂಬನಿಗಳಿಂದ ವಿಸ್ವರವಾದ ಕಂಠಗಳುಳ್ಳ ಜನರಿಂದ, ಆಕುಲ -

---

ಆಗಲಾ ಅಯೋಧ್ಯಾನಗರವು ದಶರಥರಾಯನಿಲ್ಲದುದರಿಂದ ಚಂದ್ರನಿಲ್ಲದ ರಾತ್ರಿಯಂತೆಯೂ, ಪತಿಯಿಲ್ಲದ ಸತಿಯಂತೆಯೂ ಪ್ರಕಾಶಹೀನವಾಯಿತು, ಕಂಬನಿಗಳಿಂದ ಕಲುಷಿತವಾದ ಜನರಿಂದಲೂ, ಹಾಹಾಕಾರಗಳಿಂಪಳುತ್ತಿರುವ ಕುಲಸ್ತ್ರೀಯರಿಂದಲೂ, ಜನವರ್ಜಿತಗಳಾದ ಅಂಗಳಗಳಿಂದಲೂ, ಭವನಗಳಿಂದಲೂ ಕೂಡಿದ ಆ ಅಯೋಧ್ಯಾಪಟ್ಟಣವು ಹಿಂದಿನಂತೆ ಬೆಳಗದೆ ತೇಜೋಹೀನವಾಯಿತು. ॥ ೨೧-೨೫ ॥ ಪುತ್ರಶೋಕಸಂತಪ್ತನಾದ ದಶರಥರಾಯನು ಸ್ವರ್ಗವೈದಿದಮೇಲೆ ರಾಜಾಂಗನೆಯರೆಲ್ಲರೂ ಭೂಮಿಯಮೇಲೆಯೇ ಕುಳಿತಿರಲು ಸೂರ್ಯನು ಕಾಂತಿಹೀನನಾಗಿ ಅಸ್ತಮಿಸಿದನು. ಆಮೇಲೆ ಸ್ವಲ್ಪಹೊತ್ತಾದ ಬಳಿಕ ರಾತ್ರಿಯಾಯಿತು. ಆ ಸಮಯದಲ್ಲಿ ದಶರಥರಾಯನಿಗೆ ಸ್ನೇಹಿತರಾದವರು, ಆತನಿಗೆ ಪುತ್ರನಿಲ್ಲದೆ ದಹನಮಾಡಲು ಸಮ್ಮತಿಸಲಿಲ್ಲವು. ಅಲ್ಲದೆ ಯಾವ ಸ್ನೇಹಿತಜನರು ಈರೀತಿ ಯೋಚಿಸಿ ಆರಾಯನ ಶರೀರವನ್ನು ಎಣ್ಣೆಯಕೊಪ್ಪರಿಗೆಯಲ್ಲಿರಿಸಿದವರಾದರು. ಕಣ್ಣೀರಿಡುವುದರಿಂದ

ಗತಪ್ರಭಾ ದ್ಯೌರಿವ ಭಾಸ್ಕರಂ ವಿನಾ
ವ್ಯಪೇತ ನಕ್ಷತ್ರ ಗಣೇವ ಶರ್ವರೀ ॥
ಪುರೀ ಬಭಾಸೇ ರಹಿತಾ ಮಹಾತ್ಮನಾ
ನ ಚಾಸ್ರ ಕಂಠಾಕುಲ ಮಾರ್ಗಚತ್ವರಾ ॥ ೨೮ ॥

ನರಾಶ್ಚ ನಾರ್ಯಶ್ಚ ಸಮೇತ್ಯ ಸಂಘಶೋ
ವಿಗರ್ಹಮಾಣಾ ಭರತಸ್ಯ ಮಾತರಂ ॥
ತದಾ ನಗರ್ಯಾಂ ನರದೇವ ಸಂಕ್ಷಯೇ
ಬಭೂವುರಾರ್ತಾ ನಚ ಶರ್ಮ ಲೇಭಿರೇ ॥ ೨೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಟ್‌ಷಷ್ಠಿತಮಸ್ಸರ್ಗಃ.

ವ್ಯಾಪ್ತವಾದ ಮಾರ್ಗಗಳೂ ಅಂಗಗಳೂ ಉಳ್ಳ, ಮಹಾತ್ಮನಾ - ಮಹಾನುಭಾವನಾದ ದಶರಥರಾಯನಿಂದ, ರಹಿತಾ - ಶೂನ್ಯವಾದ, ಪುರೀ - ಪಟ್ಟಣವು, ಭಾಸ್ಕರಂ - ಸೂರ್ಯನನ್ನುಳಿದು, ಗತಪ್ರಭಾ- ಕಳೆದುಹೋದ ಪ್ರಕಾಶವುಳ್ಳ, ದ್ಯೌರಿವ - ನಕ್ಷತ್ರಮಂಡಲದಂತೆ, ವ್ಯಪೇತನಕ್ಷತ್ರಗಣಾ - ಮುಳುಗಿಹೋದ, ನಕ್ಷತ್ರಗಣಾ - ನಕ್ಷತ್ರರಾಶಿಗಳುಳ್ಳ, ಶರ್ವರೀವ - ರಾತ್ರಿಯಂತೆ, ನಬಭಾಸೇ - ಪ್ರಕಾಶಿಸಲಿಲ್ಲ. ॥ ೨೮ ॥ ನರಾಶ್ಚ - ಮನುಷ್ಯರೂ, ನಾರ್ಯಶ್ಚ - ಹೆಂಗಳೂ, ಸಂಘಶಃ - ಗುಂಪುಗುಂಪಾಗಿ, ಸಮೇತ್ಯ - ಬಂದು, ಭರತಸ್ಯ - ಭರತನ, ಮಾತರಂ - ತಾಯಿಯನ್ನು, ವಿಗರ್ಹಮಾಣಾಃ - ನಿಂದಿಸುತ್ತ, ತದಾ - ಆಕಾಲದಲ್ಲಿ, ನರದೇವಸಂಕ್ಷಯೇ - ರಾಜನು ನಾಶವಾಗಲು, ನಗರ್ಯಾಂ - ಪಟ್ಟಣದಲ್ಲಿ, ಆರ್ತಾಃ - ದೀನಧ್ವನಿಯುಳ್ಳವರು, ಬಭೂವುಃ - ಆದರು, ಶರ್ಮ - ಸುಖವನ್ನು, ನಲೇಭಿರೇಚ- ಹೊಂದದೆಯೂಹೋದರು. ॥ ೨೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಟ್‌ಷಷ್ಠಿತಮಸ್ಸರ್ಗಃ.

ಗದ್ಗದ ಸ್ವರಭರಿತರಾದ ಜನರಿಂದ ವ್ಯಾಪ್ತವಾದ ರಾಜಮಾರ್ಗಗಳುಳ್ಳದೂ, ದಶರಥಮಹೀಪಾಲರಹಿತವೂ ಆದ ಆ ನಗರವು ದಿನಕರನಿಲ್ಲದ ಅಂಬರತಲದಂತೆಯೂ, ತಾರೆಗಳಿಲ್ಲದ ರಾತ್ರಿಯಂತೆಯೂ ಪ್ರಕಾಶಿಸಲಿಲ್ಲವು. ಮಹಾರಾಜನು ಮೃತಿಯೊಂದಲು ಸ್ತ್ರೀಪುರುಷರು ಗುಂಪುಗುಂಪಾಗಿ ಅಲ್ಲಲ್ಲಿ ಕೂಡಿಕೊಂಡು, ಭರತಜನನಿಯಾದಾಕೈಕೇಯಿಯನ್ನು ನಿಂದಿಸುತ್ತ ಪಟ್ಟಣದಲ್ಲಿ ಸುಖವನ್ನುಹೊಂದದೆ ದೀನಧ್ವನಿಯುಳ್ಳವರಾದರು. ॥ ೨೮-೨೯ ॥

ಇಂತಿದು ಪುರಜನವಿಲಾಪ ಕಥನವೆಂಬ
ಅರವತ್ತಾರನೆಯ ಸರ್ಗವು ಸಮಾಪ್ತವಾದುದು

ಅಯೋಧ್ಯಾಕಾಂಡೇ ಸಪ್ತಷಷ್ಟಿತಮಸ್ಸರ್ಗಃ.

ಆಕ್ರಂದಿತ ನಿರಾನಂದಾ ಸಾಸ್ರುಕಂಠ ಜನಾಕುಲಾ ‖ ಅಯೋಧ್ಯಾಯಾಮತಿತತಾ ಸಾ ವ್ಯತೀಯಾಯ ಶರ್ವರೀ ‖ ೧ ‖ ವ್ಯತೀತಾಯಾಂತು ಶರ್ವರ್ಯಾಂ ಮಾದಿತ್ಯಸ್ಯೋದಯೇ ತತಃ ‖ ಸಮೇತ್ಯ ರಾಜಕರ್ತಾರ ಸ್ಸಭಾಮೀಯು ರ್ದ್ವಿಜಾತಯಃ ‖ ೨ ‖ ಮಾರ್ಕಂಡೇಯೋಽಥ ಮೌದ್ಗಲ್ಯೋ ವಾಮದೇವಶ್ಚ ಕಾಶ್ಯಪಃ ‖ ಕಾತ್ಯಾಯನೋ ಗೌತಮಶ್ಚ ಜಾಬಾಲಿಶ್ಚ ಮಹಾಯಶಾಃ ‖ ೩ ‖ ಏತೇ ದ್ವಿಜಾ ಸ್ಸಹಾಮಾತ್ಯೈಃ ಪೃಥಗ್ವಾಚಮುದೀರಯನ್ ‖ ವಸಿಷ್ಠಮೇವಾಭಿಮುಖಾಃ ಶ್ರೇಷ್ಠಂ ರಾಜಪುರೋಹಿತಂ ‖ ೪ ‖ ಅತೀತಾ ಶರ್ವರೀ ದುಃಖಂ

ಆಕ್ರಂದಿತನಿರಾನಂದಾ - ದೀನಧ್ವನಿಗಳಿಂದ ಆನಂದರಹಿತವಾದ, ಸಾಸ್ರುಕಂಠಜನಾಕುಲಾ- ಕಂಬನಿಗಳಿಂದೊಡಗೂಡಿದ, ಜನ - ಜನರಿಂದ, ಆಕುಲ - ವ್ಯಾಕುಲವಾದ, ಅಯೋಧ್ಯಾಯಾಂ - ಅಯೋಧ್ಯಾಪಟ್ಟಣದಲ್ಲಿ, ಅತಿತತಾ - ಅತಿದೀರ್ಘವಾದ, ಸಾಶರ್ವರೀ-ಆ ರಾತ್ರಿಯು, ವ್ಯತೀಯಾಯ- ಕಳೆಯಿತು. ‖ ೧ ‖ ಶರ್ವರ್ಯಾಂ - ರಾತ್ರಿಯು, ವ್ಯತೀತಾಯಾಂ - ಕಳೆಯಲು, ಆದಿತ್ಯಸ್ಯ - ಸೂರ್ಯನ, ಉದಯೇ - ಉದಯವಾಗಲು, ತತಃ - ಬಳಿಕ, ರಾಜಕರ್ತಾರಃ - ರಾಜ್ಯಾಭಿಷೇಕವನ್ನು ಮಾಡುವ, ದ್ವಿಜಾತಯಃ - ಬ್ರಾಹ್ಮಣರು, ಸಮೇತ್ಯ - ಗುಂಪುಸೇರಿ, ಸಭಾಂ - ಸದಸ್ಸನ್ನು ಕುರಿತು, ಈಯುಃ - ಬಂದವರಾದರು. ‖ ೨ ‖ ಮಾರ್ಕಂಡೇಯಃ - ಮಾರ್ಕಂಡೇಯ, ಅಥ - ಬಳಿಕ, ಮೌದ್ಗಲ್ಯಃ - ಮೌದ್ಗಲ್ಯ, ವಾಮದೇವಶ್ಚ - ವಾಮದೇವನೂ, ಕಾಶ್ಯಪಃ - ಕಾಶ್ಯಪ, ಕಾತ್ಯಾಯನಃ - ಕಾತ್ಯಾಯನನೂ, ಗೌತಮಶ್ಚ - ಗೌತಮನೂ, ಮಹಾಯಶಾಃ - ಮಹಾ ಕೀರ್ತಿವಂತನಾದ, ಜಾಬಾಲಿಶ್ಚ-ಜಾಬಾಲಿಯೂ, ‖೩‖ ಏತೇದ್ವಿಜಾಃ-ಇವರೇಮೊದಲಾದ ಬ್ರಾಹ್ಮಣರು, ಅಮಾತ್ಯೈಸ್ಸಹ- ಮಂತ್ರಿಗಳೊಡನೆ, ಶ್ರೇಷ್ಠಂ - ಶ್ರೇಷ್ಠನಾದ, ರಾಜಪುರೋಹಿತಂ - ರಾಜಪುರೋಹಿತನಾದ, ವಸಿಷ್ಠಂ- ವಸಿಷ್ಠಋಷಿಯನ್ನು ಕುರಿತು, ಅಭಿಮುಖಾಃ - ಇದಿರಾಗಿನಿಂತು, ಪೃಥಕ್-ಬೇರೆಬೇರೆಯಾಗಿ, ವಾಚಂ-

---

ಈ ರೀತಿ ದೀನಧ್ವನಿಗಳಿಂದ ನಿರಾನಂದರಾಗಿ, ಕಣ್ಣೀರಿನಿಂದ ಕಲುಷಿತವಾದ ಕಂಗಳುಳ್ಳ ಜನರಿಂದ ತುಂಬಿದ ಆ ಅಯೋಧ್ಯಾಪಟ್ಟಣದಲ್ಲಿ ಅತಿ ದೀರ್ಘವಾದ ಆ ರಾತ್ರಿಯು ಕಳೆದುಹೋಯಿತು. ರಾತ್ರಿಯು ಕಳೆದು ಸೂರ್ಯೋದಯವಾದ ಬಳಿಕ ರಾಜಕಾರ್ಯಗಳನ್ನು ಆಗುಗೊಳಿಸುವ ಬ್ರಾಹ್ಮಣರೆಲ್ಲರೂ ಬಂದು ಒಂದು ಸ್ಥಳದಲ್ಲಿ ಸಭೆ ಕೂಡಿದರು. ಆ ಸಭೆಯಲ್ಲಿ, ಮಾರ್ಕಂಡೇಯ, ಮೌದ್ಗಲ್ಯ, ವಾಮದೇವ, ಕಾಶ್ಯಪ, ಕಾತ್ಯಾಯನ, ಗೌತಮ, ಜಾಬಾಲಿಯೇ ಮೊದಲಾದ ಮಹಾನುಭಾವರಾದ ವಿಪ್ರವರೇಣ್ಯರೆಲ್ಲರೂ ಕುಳಿತಿದ್ದರು. ಆಮೇಲೆ ಆ ಬ್ರಾಹ್ಮಣರೆಲ್ಲರೂ ಮಂತ್ರಿಗಳೊಡಗೂಡಿ, ರಾಜಪುರೋಹಿತನೂ, ಶ್ರೇಷ್ಠನೂ ಆದ ವಸಿಷ್ಠಮುನಿಯೊಡನೆ ಬೇರೆಬೇರೆಯಾಗಿಯೇ ಹೀಗೆಂದರು. ‖ ೪ ‖

ಯಾ ನೋ ವರ್ಷಶತೋಪಮಾ ‖ ಅಸ್ಮಿನ್ ಪಂಚತ್ವಮಾಪನ್ನೇ ಪುತ್ರಶೋಕೇನ ಪಾರ್ಥಿವೇ ‖ ೫ ‖ ಸ್ವರ್ಗತಶ್ಚ ಮಹಾರಾಜೋ ರಾಮಶ್ಚಾರಣ್ಯಮಾಶ್ರಿತಃ ‖ ಲಕ್ಷ್ಮಣಶ್ಚಾಪಿ ತೇಜಸ್ವೀ ರಾಮೇಣೈವ ಗತಸ್ಸಹ ‖ ೬ ‖ ಉಭೌ ಭರತ ಶತ್ರುಘ್ನೌ ಕೇಕಯೇಷು ಪರಂತಪೌ ‖ ಪುರೇ ರಾಜಗೃಹೇ ರಮ್ಯೇ ಮಾತಾಮಹ ನಿವೇಶನೇ ‖ ೭ ‖ ಇಕ್ಷ್ವಾಕೂಣಾ ಮಿಹಾದ್ಯೈವ ಕಶ್ಚಿದ್ರಾಜಾ ವಿಧೀಯತಾಂ ‖ ಅರಾಜಕಂಹಿ ನೋರಾಷ್ಟ್ರಂ ನವಿನಾಶ ಮವಾಪ್ನುಯಾತ್ ‖೮‖

ಮಾತನ್ನು, ಉದೀರಯ್ನ - ನುಡಿದರು. ‖ ೪ ‖ ನಃ - ನಮಗೆ, ಪಾರ್ಥಿವೇ - ದೊರೆಯಾದ, ಅಸ್ಮಿನ್ - ಈ ದಶರಥರಾಯನು, ಪುತ್ರಶೋಕೇನ - ಪುತ್ರವ್ಯಸನದಿಂದ, ಪಂಚತ್ವಂ - ಮರಣವನ್ನು, ಆಪನ್ನೇ - ಹೊಂದಲು, ಯಾ - ಯಾವ ರಾತ್ರಿಯು, ವರ್ಷಶತೋಪಮಾ - ನೂರುವರ್ಷಗಳಿಗೆ ಸಮಾನವಾಯಿತೋ, ಸಾಶರ್ವರೀ - ಆ ರಾತ್ರಿಯು, ದುಃಖಂ - ದುಃಖವಾಗಿ, ಅತೀತಾ - ಕಳೆದು ಹೋಯಿತು. ‖ ೫ ‖ ಮಹಾರಾಜಃ - ದಶರಥರಾಯನು, ಸ್ವರ್ಗತಶ್ಚ - ಸ್ವರ್ಗಸ್ಥನೂ ಆದನು, ರಾಮಶ್ಚ - ಶ್ರೀರಾಮನೂ, ಅರಣ್ಯಂ - ವನವನ್ನು, ಆಶ್ರಿತಃ - ಹೊಂದಿದನು, ತೇಜಸ್ವೀ - ಪರಾಕ್ರಮ ಶಾಲಿಯಾದ, ಲಕ್ಷ್ಮಣಶ್ಚಾಪಿ - ಲಕ್ಷ್ಮಣನೂ, ರಾಮೇಣಸಹೈವ - ಶ್ರೀರಾಮನೊಡಗೂಡಿಯೇ, ಗತಃ - ಹೊರಟುಹೋದನು, ಪರಂತಪೌ - ಶತ್ರುಸಂಹಾರಕರಾದ, ಉಭೌ - ಇಬ್ಬರಾದ, ಭರತ ಶತ್ರುಘ್ನೌಚ - ಭರತಶತ್ರುಘ್ನರೂ, ಕೇಕಯೇಷು - ಕೇಕಯದೇಶಗಳಲ್ಲಿ, ರಮ್ಯೇ - ಮನೋಹರ ವಾದ, ರಾಜಗೃಹೇ - ರಾಜಗೃಹವೆಂಬ ಹೆಸರುಳ್ಳ, ಪುರೇ - ಪಟ್ಟಣದಲ್ಲಿ, ಮಾತಾಮಹನಿವೇಶನೇ - ತಾತನಮನೆಯಲ್ಲಿ, ವರ್ತೇತೇ - ಇರುವರು. ‖ ೬-೭ ‖ ಹಿ - ಯಾವ ಕಾರಣದಿಂದ, ನಃ - ನಮ್ಮ, ರಾಷ್ಟ್ರಂ - ರಾಜ್ಯವು, ಅರಾಜಕಂ - ರಾಜನಿಲ್ಲದುದಾಗಿ, ವಿನಾಶಂ-ನಾಶವನ್ನು, ನಾವಾಪ್ನುಯಾತ್- ಹೊಂದಬೇಡ, ಇಹ - ಇಲ್ಲಿ, ಅದ್ಯೈವ - ಈಗಲೇ, ಇಕ್ಷ್ವಾಕೂಣಾಂ - ಇಕ್ಷ್ವಾಕುವಂಶಸ್ಥರಲ್ಲಿ, ಕಶ್ಚಿತ್ - ಯಾವನಾದರೂ, ರಾಜಾ - ಅರಸನಾಗಿ, ವಿಧೀಯತಾಂ - ಮಾಡಲ್ಪಡಲಿ. ‖ ೮ ‖ ಅರಾಜಕೇ - ರಾಜರಹಿತವಾದ, ಜನಪದೇ - ದೇಶದಲ್ಲಿ, ವಿದ್ಯುನ್ಮಾಲೀ - ಮಿಂಚುಗಳ ಪಙ್ತಿಗಳುಳ್ಳ,

“ಎಲೈ ವಸಿಷ್ಠಮುನಿಯೆ! ಈ ರಾತ್ರಿಯೆಲ್ಲವನ್ನೂ ಮಹಾ ದುಃಖದಿಂದ ಅನೇಕ ನೂರು ಸಂವತ್ಸರಗಳನ್ನು ಕಳೆಯುವಂತೆ ಕಳೆದೆವು. ಮಹಾರಾಜನಾದ ದಶರಥ ಭೂಪಾಲನು ಸ್ವರ್ಗಸ್ಥನಾದನು. ಶ್ರೀರಾಮನು ಅರಣ್ಯಕ್ಕೆ ಹೊರಟುಹೋದನು. ಶತ್ರುಮರ್ದನರಾದ ಭರತಶತ್ರುಘ್ನರೀರ್ವರೂ, ಕೇಕಯ ದೇಶಾಧೀಶ್ವರನೂ, ತಮ್ಮ ತಾಯಿಯನ್ನು ಪಡೆದವನೂ ಆದ ಮಾತಾಮಹನ ಮನೆಯಲ್ಲಿ ವಾಸಿಸುತ್ತಿದ್ದಾರೆ. ಆದುದರಿಂದೆಲೈ ಮುನಿವರೇಣ್ಯನೆ! ಈ ರಾಜ್ಯವು ರಾಜನಿಲ್ಲದುದಾಗದಿರಲಿ! ಇಕ್ಷ್ವಾಕು ರಾಯರ ಮನೆತನದವರಲ್ಲಿ ಯಾವನಾದರೂ ಒಬ್ಬನು ರಾಜನಾಗಲಿ! ರಾಜನಿಲ್ಲದಿದ್ದರೆ ರಾಜ್ಯಕ್ಕೆ ಹಾನಿ ತಟ್ಟುವುದು. ಅರಾಜಕ ವಾದ ರಾಜ್ಯಕ್ಕೆ ಹಾನಿಯೊದಗುವುದೆಂಬುದು ನಿನಗೆ ತಿಳಿದೇ ಇರುವುದಲ್ಲವೆ? ರಾಜನಿಲ್ಲದ ರಾಜ್ಯದಲ್ಲಿ, ಮೇಘಪಙ್ತಿಗಳಿಂದೊಡಗೂಡಿದವನೂ, ಮಹಾ ಧ್ವನಿಯುಳ್ಳವನೂ, ಮಿಂಚುಗಳಿಂದೊಡಗೂಡಿದವನೂ ಆದ ವರ್ಷಾಭಿಮಾನದೇವತೆಯು ದಿವ್ಯೋದಕದಿಂದ ಮಳೆಗರೆಯು

ನಾರಾಜಕೇ ಜನಪದೇ ವಿದ್ಯುನ್ಮಾಲೀ ಮಹಾಸ್ವನಃ ॥ ಅಭಿವರ್ಷತಿ ಪರ್ಜನ್ಯೋ ಮಹೀಂ ದಿವ್ಯೇನ ವಾರಿಣಾ ॥ ೯ ॥ ನಾರಾಜಕೇ ಜನಪದೇ ಬೀಜಮುಷ್ಟಿಃ ಪ್ರಕೀರ್ಯತೇ ॥ ನಾರಾಜಕೇ ಪಿತುಃ ಪುತ್ರೋ ಭಾರ್ಯಾವಾ ವರ್ತತೇ ವಶೇ ॥ ೧೦ ॥ ಅರಾಜಕೇ ಧನಂ ನಾಸ್ತಿ ನಾಸ್ತಿ ಭಾರ್ಯಾಪ್ಯರಾಜಕೇ ॥ ಇದಮತ್ಯಾಹಿತಂ ಚಾನ್ಯತ್ಕುತ ಸ್ಸತ್ಯಮರಾಜಕೇ? ॥ ೧೧ ॥ ನಾರಾಜಕೇ ಜನಪದೇ ಕಾರಯಂತಿ ಸಭಾಂ ನರಾಃ ॥ ಉದ್ಯಾನಾನಿಚ ರಮ್ಯಾಣಿ ಹೃಷ್ಟಾಃ ಪುಣ್ಯಗೃಹಾಣಿಚ ॥ ೧೨ ॥ ಸಾರಾಜಕೇ ಜನಪದೇ ಯಜ್ಞಶೀಲಾ ದ್ವಿಜಾತಯಃ ॥

ಮಹಾಸ್ವನಃ - ಮಹಾಧ್ವನಿಯುಳ್ಳ, ಪರ್ಜನ್ಯಃ - ವರ್ಷಾಭಿಮಾನದೇವತೆಯು, ದಿವ್ಯೇನ - ಮನೋಹರವಾದ, ವಾರಿಣಾ - ಉದಕದಿಂದ, ಮಹೀಂ - ನೆಲದಲ್ಲಿ, ನಾಭಿವರ್ಷತಿ - ಮಳೆಗರೆಯುವುದಿಲ್ಲ. ॥ ೯ ॥ ಅರಾಜಕೇಜನಪದೇ - ರಾಜನಿಲ್ಲದ ದೇಶದಲ್ಲಿ, ಬೀಜಮುಷ್ಟಿಃ - ಬೀಜಾವಾಪವು, ನಪ್ರಕೀರ್ಯತೇ - ಮಾಡಲ್ಪಡುವದಿಲ್ಲ, ನಾರಾಜಕೇ - ರಾಜರಹಿತವಾದ, ಜನಪದೇ - ದೇಶದಲ್ಲಿ, ಪಿತುಃ - ತಂದೆಯ, ವಶೇ - ಸ್ವಾಧೀನದಲ್ಲಿ, ಪುತ್ರಃ - ಮಗನು, ಭಾರ್ಯಾವಾ-ಹೆಂಡತಿಯಾದರೂ, ನವರ್ತತೇ-ಇರುವದಿಲ್ಲ. ॥ ೧೦ ॥ ಅರಾಜಕೇ - ದೊರೆಯಿಲ್ಲದನಾಡಿನಲ್ಲಿ, ಧನಂ - ದ್ರವ್ಯವು, ನಾಸ್ತಿ - ಇರುವುದಿಲ್ಲ, ಅರಾಜಕೇ - ಅರಸನಿಲ್ಲದ ದೇಶದಲ್ಲಿ, ಭಾರ್ಯಾಪಿ - ಹೆಂಡತಿಯೂ, ನಾಸ್ತಿ - ಸ್ವಾಧೀನದಲ್ಲಿರುವುದಿಲ್ಲ, ಅರಾಜಕೇ - ಭೂಪಾಲನಿಲ್ಲದ ದೇಶದಲ್ಲಿ, ಇದಮತ್ಯಾಹಿತಂ - ಈ ಮಹಾಭೀತಿಯು, ಅನ್ಯತ್ - ಮತ್ತೊಂದು, ಭಯಂ - ಭಯವು, ಅಸ್ತಿ - ಇರುವುದು, ಸತ್ಯಂ - ಕ್ರಯವಿಕ್ರಯಾದಿ ಸತ್ಯವ್ಯಾಪಾರವು, ಕುತಃ - ಆಗುವುದೆಂದರೇನು. ? ॥೧೧॥ ಅರಾಜಕೇ - ಅರಸನಿಲ್ಲದ, ಜನಪದೇ-ದೇಶದಲ್ಲಿ, ನರಾಃ - ಮನುಷ್ಯರು, ಸಭಾಂ - ಸಭೆಯನ್ನು, ನಕಾರಯಂತಿ - ಮಾಡಿಸುವುದಿಲ್ಲ, ರಮ್ಯಾಣಿ - ಮನೋಹರಗಳಾದ, ಉದ್ಯಾನಾನಿ - ಹುವ್ವಿನತೋಟಗಳನ್ನು, ಪುಣ್ಯಗೃಹಾಣಿಚ - ಪುಣ್ಯಾರ್ಥವಾಗಿ ಅನ್ನಛತ್ರ ದೇವಾಲಯಾದಿ ಭವನಗಳನ್ನು, ನಕಾರಯಂತಿ - ಮಾಡಿಸುವದಿಲ್ಲ. ॥ ೧೨ ॥ ಅರಾಜಜಕೇನಪದೇ - ದೊರೆಯಿಲ್ಲದ ದೇಶದಲ್ಲಿ, ದ್ವಿಜಾತಯಃ - ಬ್ರಾಹ್ಮಣರು, ಯಜ್ಞಶೀಲಾಃ - ಯಜ್ಞಗಳನ್ನು ಮಾಡುವುದರಲ್ಲಿ ಭಕ್ತಿಯುಳ್ಳವರು, ನ - ಆಗುವದಿಲ್ಲ, ದಾಂತಾಃ - ಉಪಶಾಂತರಾದ, ಸಂಶಿತವ್ರತಾಃ - ತೀಕ್ಷ್ಣವಾದ ವ್ರತವುಳ್ಳ, ಬ್ರಾಹ್ಮಣಾಃ - ಬ್ರಾಹ್ಮಣರು, ಸತ್ರಾಣಿ -

ವುದಿಲ್ಲವಷ್ಟೆ? ಅಲ್ಲದೆ ಅರಾಜಕವಾದೆಡೆಯಲ್ಲಿ ಬೀಜಾವಾಪವೂ ಆಗುವುದಿಲ್ಲ. ಇಷ್ಟೆಯಲ್ಲದೆ ರಾಜ್ಯವು ರಾಜವಿಹೀನವಾದುದಾದರೆ, ಗಂಡಹೆಂಡಿರು ಒಬ್ಬರಿಗೊಬ್ಬರು ವಶ್ಯರಾಗಿರುವುದಿಲ್ಲ; ಮಗನಾದವನು ತಂದೆಯ ಸ್ವಾಧೀನನಾಗಿರುವುದಿಲ್ಲ. ಅರಾಜಕರಾಜ್ಯದಲ್ಲಿ ಧನವಾಗಲಿ, ಕಳತ್ರವಾಗಲಿ, ಸ್ವಾಧೀನದಲ್ಲಿಲ್ಲದೆ ಪರಾಧೀನವಾಗುತ್ತವೆ. ಇದಕ್ಕಿಂತಲೂ ಭಯಂಕರವಾಗಿ, ಅರಾಜಕರಾಜ್ಯದಲ್ಲಿ ಅಸತ್ಯವು ತಲೆದೋರುತ್ತದೆ. ಕ್ರಯವಿಕ್ರಯಾದಿ ಸತ್ಯವ್ಯಾಪಾರವು ನಡೆಯುವುದಿಲ್ಲ. ॥ ೫-೧೧ ॥ ಅರಾಜಕರಾಜ್ಯದಲ್ಲಿ ಪ್ರಜೆಗಳ ಸಭೆಸೇರುವುದಿಲ್ಲ; ಮನೋಹರಗಳಾದ ಹೂವಿನತೋಟಗಳನ್ನೂ, ಧರ್ಮಾರ್ಥವಾಗಿ ಧರ್ಮಶಾಲೆಗಳೇ ಮೊದಲಾದ ಭವನಗಳನ್ನು ಕಟ್ಟಿಸುವುದಿಲ್ಲ. ದೊರೆಯಿಲ್ಲದ ರಾಜ್ಯದಲ್ಲಿ ವಿಪ್ರರಾದವರು ಯಜ್ಞಗಳನ್ನು

ಸತ್ರಾಣ್ಯನ್ವಾಸತೇ ದಾಂತಾ ಬ್ರಾಹ್ಮಣಾ ಸ್ಸಂಶಿತವ್ರತಾಃ ‖ ೧೩ ‖ ನಾರಾಜಕೇ ಜನಪದೇ ಮಹಾಯಜ್ಞೇಷು ಯಜ್ವನಃ ‖ ಬ್ರಾಹ್ಮಣಾ ವಸುಸಂಪೂರ್ಣಾ ವಿಸೃಜಂತ್ಯಾಪ್ತ ದಕ್ಷಿಣಾಃ ‖೧೪‖ ನಾರಾಜಕೇ ಜನಪದೇ ಪ್ರಭೂತ ನಟನರ್ತಕಾಃ ‖ ಉತ್ಸವಾಶ್ಚ ಸಮಾಜಾಶ್ಚ ವರ್ಧಂತೇ ರಾಷ್ಟ್ರವರ್ಧನಾಃ ‖ ೧೫ ‖ ನಾರಾಜಕೇ ಜನಪದೇ ಸಿದ್ಧಾರ್ಥಾ ವ್ಯವಹಾರಿಣಃ ‖ ಕಥಾಭಿ ರನುರಜ್ಯಂತೇ ಕಥಾಶೀಲಾಃ ಕಥಾಪ್ರಿಯೈಃ ‖ ೧೬ ‖ ನಾರಾಜಕೇ ಜನಪದೇ ಉದ್ಯಾನಾನಿ ಸಮಾಗತಾಃ ‖ ಸಾಯಾಹ್ನೇ ಕ್ರೀಡಿತುಂ ಯಾಂತಿ ಕುಮಾರ್ಯೋ ಹೇಮಭೂಷಿತಾಃ ‖೧೭‖ ನಾರಾಜಕೇ ಜನಪದೇ ವಾಹನೈ ಶ್ಶೀಘ್ರಗಾಮಿಭಿಃ ‖ ನರಾ ನಿರ್ಯಾಂ

ಯಜ್ಞಗಳನ್ನು, ನಾನ್ವಾಸತೇ - ಅನುಷ್ಠಾನಮಾಡುವದಿಲ್ಲ. ‖ ೧೩ ‖ ಅರಾಜಕೇಜನಪದೇ - ದೊರೆಯಿಲ್ಲದ ದೇಶದಲ್ಲಿ, ಯಜ್ವನಃ - ಯಜಮಾನನ, ಮಹಾಯಜ್ಞೇಷು - ದೊಡ್ಡ ಯಜ್ಞಗಳಲ್ಲಿ, ಬ್ರಾಹ್ಮಣಾಃ - ಬ್ರಾಹ್ಮಣರು, ವಸ ಸಂಪೂರ್ಣಾಃ-ದ್ರವ್ಯದಿಂದ ತುಂಬಿದವರಾದರೂ, ಆಪ್ತದಕ್ಷಿಣಾಃ-ಭೂರಿದಕ್ಷಿಣೆಗಳನ್ನು, ನವಿಸೃಜಂತಿ - ಕೊಡುವದಿಲ್ಲ. ‖ ೧೪ ‖ ಅರಾಜಕೇಜನಪದೇ - ರಾಜನಿಲ್ಲದ ದೇಶದಲ್ಲಿ, ಪ್ರಭೂತನಟನರ್ತಕಾಃ, ಪ್ರಭೂತ - ಪ್ರಚುರರಾದ, ನಟ - ನಟರು, ನರ್ತಕಾಃ-ನಾಟ್ಯವನ್ನುಮಾಡುವರೂ ಉಳ್ಳ, ಉತ್ಸವಾಶ್ಚ - ಉತ್ಸವಗಳೂ, ರಾಷ್ಟ್ರವರ್ಧನಾಃ - ರಾಜ್ಯವನ್ನು ವೃದ್ಧಿಗೊಳಿಸುತ್ತಿರುವ, ಸಮಾಜಾಶ್ಚ - ಸಭೆಗಳೂ, ನವರ್ಧಂತೇ - ವೃದ್ಧಿಯೊಂದುವದಿಲ್ಲ. ‖ ೧೫ ‖ ಅರಾಜಕೇನಪದೇ - ರಾಜರಹಿತವಾದ ರಾಷ್ಟ್ರದಲ್ಲಿ, ವ್ಯವಹಾರಿಣಃ - ವ್ಯಾಪಾರಿಗಳು, ಸಿದ್ಧಾರ್ಥಾಃ - ನಿಷ್ಪನ್ನವಾದ ಪ್ರಯೋಜನವುಳ್ಳವರು, ನ - ಆಗುವದಿಲ್ಲ, ಕಥಾಶೀಲಾಃ - ಕಥೆಹೇಳುವವರು, ಕಥಾಭಿಃ - ಕಥೆಗಳಿಂದ, ಕಥಾಪ್ರಿಯೈಃ - ಕಥೆಗಳಲ್ಲಿ ವಿಶ್ವಾಸವುಳ್ಳವರೊಡನೆ, ನಾನುರಜ್ಯಂತೇ - ರಂಜನೆ ಮಾಡುವದಿಲ್ಲ. ‖ ೧೬ ‖ ಅರಾಜಕೇಜನಪದೇ - ರಾಜನಿಲ್ಲದ ರಾಜ್ಯದಲ್ಲಿ, ಉದ್ಯಾನಾನಿ - ಹುವ್ವಿನತೋಟಗಳನ್ನು ಕುರಿತು, ಸಮಾಗತಾಃ - ಬಂದ, ಕುಮಾರ್ಯಃ - ಅವಿವಾಹಿತ ಸ್ತ್ರೀಯರು, ಹೇಮಭೂಷಿತಾಃ - ಭಂಗಾರದ ಒಡಿವೆಗಳಿಂದ ಭೂಷಿತರಾಗಿ, ಸಾಯಾಹ್ನೇ - ಸಾಯಂಕಾಲದಲ್ಲಿ, ಕ್ರೀಡಿತುಂ - ವಿಹರಿಸಲು, ನಯಾಂತಿ - ಬರುವದಿಲ್ಲವು. ‖ ೧೭ ‖ ಅರಾಜಕೇಜನಪದೇ - ರಾಜ

ಮಾಡುವುದರಲ್ಲಿ ಆಸಕ್ತರಾಗುವುದಿಲ್ಲ. ಅರಾಜಕರಾಜ್ಯದಲ್ಲಿ ಯಜಮಾನನಿಗಾಗಿ ನಡೆಯಿಸುವ ಮಹಾಯಜ್ಞದಲ್ಲಿ, ಬ್ರಾಹ್ಮಣರು ಶ್ರೀಮಂತರಾದರೂ ಭೂರಿದಕ್ಷಿಣೆಗಳನ್ನು ಕೊಡುವುದಿಲ್ಲ. ಅಲ್ಲದೆ ಪ್ರಸಿದ್ಧರಾದ ನಟಿಯರಿಂದ ನಾಟ್ಯವಾಡಿಸುವ ರಸಿಕರೂ ರಾಜ್ಯವನ್ನು ವೃದ್ಧಿಹೊಂದಿಸುವ ಮಹಾಸಭೆಗಳೂ ಇವೇಮೊದಲಾದುವಾವುವೂ ಅಭಿವೃದ್ಧಿಯೊಂದುವದಿಲ್ಲ. ‖ ೧೨-೧೫ ‖ ರಾಜವಿಹೀನವಾದ ರಾಜ್ಯದಲ್ಲಿ ವ್ಯವಹಾರಿಗಳು ತಮ್ಮ ಕೆಲಸಕ್ಕೆ ತಕ್ಕ ಫಲವನ್ನು ಹೊಂದುವುದಿಲ್ಲ. ಕಥೆಗಳನ್ನು ಹೇಳುವವರೂ ಕೇಳಿ ಸಂತೋಷಪಡುವ ಜನರಿಗೆ ತಾವು ಹೇಳುವ ಕಥೆಗಳಿಂದ ಸಂತೋಷವನ್ನುಂಟುಮಾಡುವುದಿಲ್ಲ. ರಾಜನಿಲ್ಲದ ರಾಷ್ಟ್ರದಲ್ಲಿ ವಿವಿಧಾಭರಣ ಭೂಷಿತೆಯರಾದ ಅವಿವಾಹಿತ ತರುಣಿಯರು ಸಂಧ್ಯಾಕಾಲಗಳಲ್ಲಿ ಉದ್ಯಾನವನಗಳಿಗೆ ಬಂದು ನಿರಾತಂಕವಾಗಿ ವಿಹರಿಸುವುದಿಲ್ಲ. ಇದೂ ಅಲ್ಲದೆ ಅರಾಜಕ

ತ್ಯರಣ್ಯಾನಿ ನಾರೀಭಿಸ್ಸಹ ಕಾಮಿನಃ ॥ ೧೮ ॥ ನಾರಾಜಕೇ ಜನಪದೇ ಧನವಂತಸ್ಸುರಕ್ಷಿತಾಃ ॥ ಶೇರತೇ ವಿವೃತದ್ವಾರಾ ಕೃಷಿಗೋರಕ್ಷಜೀವಿನಃ ॥೧೯॥ ನಾರಾಜಕೇ ಜನಪದೇ ಬದ್ಧಘಂಟಾ ವಿಷಾಣಿನಃ ॥ ಅಟಂತಿ ರಾಜಮಾರ್ಗೇಷು ಕುಂಜರಾಷ್ಷಷ್ಟಿಹಾಯನಾಃ ॥ ೨೦ ॥ ನಾರಾಜಕೇ ಜನಪದೇ ಶರಾನ್ ಸತತಮಸ್ಯತಾಂ ॥ ಶ್ರೂಯತೇ ತಲನಿರ್ಘೋಷ ಇಷ್ವಸ್ತ್ರಾಣಾಮುಪಾಸನೇ ॥೨೧॥ ನಾರಾಜಕೇ ಜನಪದೇ ವಣಿಜೋ ದೂರಗಾಮಿನಃ ॥ ಗಚ್ಛಂತಿ ಕ್ಷೇಮಮಧ್ವಾನಂ

ನಿಲ್ಲದ ರಾಷ್ಟ್ರದಲ್ಲಿ, ಕಾಮಿನಃ - ಕಾಮುಕರಾದ, ನರಾಃ - ಮನುಜರು, ಶೀಘ್ರಗಾಮಿಭಿಃ - ವೇಗದಿಂದ ಹೋಗುತ್ತಿರುವ, ವಾಹನೈಃ-ಕುದುರೆ, ರಥ, ಇವೇ ಮೊದಲಾದ ವಾಹನಗಳಿಂದ, ನಾರೀಭಿಸ್ಸಹ-ಸ್ವಸ್ತ್ರೀಯರೊಡನೆ, ಅರಣ್ಯಾನಿ - ಅರಣ್ಯಗಳನ್ನು ಕುರಿತು, ನನಿರ್ಯಾಂತಿ - ಹೊರಡುವದಿಲ್ಲ. ॥ ೧೮ ॥ ಅರಾಜಕೇಜನಪದೇ - ಅರಸನಿಲ್ಲದ ರಾಜ್ಯದಲ್ಲಿ, ಧನವಂತಃ - ಧನಿಕರು, ವಿವೃತದ್ವಾರಾಃ-ತೆರೆದಿರುವ ಬಾಗಿಲುಗಳುಳ್ಳವರಾಗಿ, ಕೃಷಿಗೋರಕ್ಷಜೀವಿನಃ - ಕೃಷಿಯಿಂದಲೂ ಗೋರಕ್ಷಣೆಯಿಂದಲೂ ಜೀವಿಸುತ್ತಾ, ಸುರಕ್ಷಿತಾಃ - ಚೆನ್ನಾಗಿ ರಕ್ಷಿತರಾಗಿ, ನಶೇರತೇ - ನಿದ್ರಿಸುವುದಿಲ್ಲ. ॥ ೧೯ ॥ ಅರಾಜಕೇಜನಪದೇ - ರಾಜರಹಿತವಾದ ದೇಶದಲ್ಲಿ, ಬದ್ಧಘಂಟಾಃ - ಕಟ್ಟಲ್ಪಟ್ಟ ಘಂಟೆಗಳುಳ್ಳ, ವಿಷಾಣಿನಃ - ಶ್ರೇಷ್ಠವಾದ ದಂತಗಳುಳ್ಳ, ಷಾಷ್ಟಿಹಾಯನಾಃ - ಅರವತ್ತು ವರುಷವುಳ್ಳ, ಕುಂಜರಾಃ - ಆನೆಗಳು, ರಾಜಮಾರ್ಗೇಷು - ರಾಜಬೀದಿಗಳಲ್ಲಿ, ನಾಟಂತಿ - ಸಂಚಾರ ಮಾಡುವವಿಲ್ಲ. ॥ ೨೦ ॥ ಅರಾಜಕೇಜನಪದೇ - ರಾಜನಿಲ್ಲದ ದೇಶದಲ್ಲಿ, ಇಷ್ವಸ್ತ್ರಾಣಾಂ - ಬಾಣಾಸ್ತ್ರವಿದ್ಯೆಗಳ, ಉಪಾಸನೇ - ಅಭ್ಯಾಸದಲ್ಲಿ, ಸತತಂ - ನಿರಂತರವೂ, ಶರಾನ್ - ಬಾಣಗಳನ್ನು, ಅಸತ್ಯಾಂ - ಬಿಡುತ್ತಿರುವರ, ತಲನಿರ್ಘೋಷಃ - ಹಸ್ತತಾಳಶಬ್ದವು, ನಶ್ರೂಯತೇ - ಕೇಳಲ್ಪಡುವದಿಲ್ಲವು. ॥ ೨೧ ॥ ಅರಾಜಕೇಜನಪದೇ - ರಾಜರಹಿತವಾದ ರಾಜ್ಯದಲ್ಲಿ, ದೂರಗಾಮಿನಃ - ದೂರದೇಶಕ್ಕೆ ಹೋಗಿಬರುವ, ವಣಿಜಃ - ವರ್ತಕರು, ಬಹುಪಣ್ಯಸಮಾಚಿತಾಃ, ಬಹು - ಅನೇಕಗಳಾದ, ಪಣ್ಯ - ಕ್ರಯವಿಕ್ರಯಮಾಡತಕ್ಕ ದ್ರವ್ಯಗಳಿಂದ, ಸಮಾಚಿತಾಃ - ಸಮೃದ್ಧರಾಗಿ, ಕ್ಷೇಮಂ - ಕ್ಷೇಮ

ರಾಜ್ಯದಲ್ಲಿ ಕಾಮುಕರು ವೇಗದಿಂದಹೋಗುವ ವಾಹನಗಳಲ್ಲಿ ಸ್ತ್ರೀಯರೊಡನೆ ಸಂತೋಷದಿಂದ ವನಕ್ಕೆಹೊರಡುವುದಿಲ್ಲ. ಇಷ್ಟುಮಾತ್ರವಲ್ಲದೆ ರಾಜನಿಲ್ಲದ ರಾಜ್ಯದಲ್ಲಿ ಧನಿಕರಾದ ವರ್ತಕರು ಅಂಗಡಿಯಬಾಗಿಲುಗಳನ್ನು ಮುಚ್ಚಿ ಕೃಷಿ ಮತ್ತು ಗೋರಕ್ಷಣೆಯಿಂದ ಜೀವನ ಮಾಡುತ್ತಾರೆ; ಚನ್ನಾಗಿ ಪರಿಪಾಲಿತವಾಗಿ ನಿದ್ರಿಸುವುದೂ ಇಲ್ಲ; ಕಟ್ಟಿದ ಘಂಟೆಗಳುಳ್ಳ ಶ್ರೇಷ್ಠವಾದ ದಂತಗಳುಳ್ಳ ಅರವತ್ತುವರ್ಷ ವಯಸ್ಸುಳ್ಳ ಆನೆಗಳು ಸಾಧುತನದಿಂದ ಸಂಚರಿಸುವುದಿಲ್ಲ. ॥೧೬-೨೦॥ ರಾಜನಿಲ್ಲದ ನಾಡಿನಲ್ಲಿ ಬಾಣವಿದ್ಯೆಯನ್ನೂ, ಅಸ್ತ್ರವಿದ್ಯೆಯನ್ನೂಕಲೆಯುವುದರಲ್ಲಿ ಕುತೂಹಲವುಳ್ಳವರು ಎಲ್ಲಕಾಲಗಳಲ್ಲಿಯೂ ಅವುಗಳಅಭ್ಯಾಸವನ್ನು ತೋರಿದಿರುತ್ತಾರೆ. ಇಷ್ಟೆಯಿಲ್ಲದೆ ಅವರೀರೀತಿ ಬಾಣಶಾಸ್ತ್ರ ವಿದ್ಯೆಗಳನ್ನು ಅಭ್ಯಾಸಮಾಡುವಾಗ ಜನಿಸುವ ಬಿಲ್ಲಿನ ಠೇಂಕಾರವೇ ಮೊದಲಾದ ವೀರನಾದಗಳೂ ಕೇಳಿಸುವುದಿಲ್ಲ. ರಾಜನಿಲ್ಲದ ನಾಡಿನಲ್ಲಿ ವರ್ತಕತನವನ್ನು ಮಾಡಿ ಜೀವಿಸುವವರು, ನಾನಾವಿಧಗಳಾದ ವಿಕ್ರ

ಬಹುಪಣ್ಯ ಸಮಾಚಿತಾಃ ॥ ೨೨ ॥ ನಾರಾಜಕೇ ಜನಪದೇ ಚರತ್ಯೇಕ ಚರೋ ವಶೀ ॥ ಭಾವಯ ನ್ನಾತ್ಮನಾತ್ಮಾನಂ ಯತ್ರ ಸಾಯಂಗೃಹೋ ಮುನಿಃ ॥೨೩॥ ನಾರಾಜಕೇ ಜನಪದೇ ಯೋಗಕ್ಷೇಮಂ ಪ್ರವರ್ತತೇ ॥ ನಚಾಪ್ಯರಾಜಕೇ ಸೇನಾ ಶತ್ರೂರ್ವಿಷಹತೇ ಯುಧಿ ॥ ೨೪ ॥ ನಾರಾಜಕೇ ಜನಪದೇ ಹೃಷ್ಟೈಃ ಪರಮ ವಾಜಿಭಿಃ ॥ ನರಾ ಸ್ಸಂಯಾಂತಿ ಸಹಸಾ ರಥೈಶ್ಚ ಪರಿಮಂಡಿತಾಃ ॥ ೨೫ ॥ ನಾರಾಜಕೇ ಜನಪದೇ ನರಾ ಶ್ಶಾಸ್ತ್ರ ವಿಶಾರದಾಃ ॥ ಸಂವದಂತೋ ವತಿಷ್ಠಂತೇ ವನೇಷೂ ಪವನೇಷುಚ ॥ ೨೬ ॥ ನಾರಾಜಕೇ ಜನಪದೇ ಮಾಲ್ಯ ಮೋದಕ

ವಾಗಿ, ಅಧ್ವಾನಂ - ಮಾರ್ಗದಲ್ಲಿ, ನಗಚ್ಛಂತಿ - ಹೋಗುವದಿಲ್ಲ. ॥ ೨೨ ॥ ಅರಾಜಕೇಜನಪದೇ - ರಾಜನಿಲ್ಲದ ದೇಶದಲ್ಲಿ, ಯತ್ರ - ಎಲ್ಲಿ, ಸಾಯಂಗೃಹಃ - ಸಾಯಂಕಾಲವಾಗುವದೋ ಅಲ್ಲಿಯೇ ವಾಸಮಾಡುತ್ತ, ಮುನಿಃ - ಮನನಶೀಲನಾದ, ಏಕಚರಃ - ಒಬ್ಬಂಟಿಗನಾಗಿ, ಆತ್ಮನಾ - ಮನಸ್ಸಿನಿಂದ, ಆತ್ಮಾನಂ - ಪರಮಾತ್ಮನನ್ನು, ಭಾವರ್ಯ - ಧ್ಯಾನಮಾಡುತ್ತಿರುವ ಸನ್ಯಾಸಿಯು, ನಚರತಿ - ಸಂಚರಿಸುವದಿಲ್ಲ. ॥ ೨೩ ॥ ಅರಾಜಕೇಜನಪದೇ - ರಾಜನಿಲ್ಲದ ದೇಶದಲ್ಲಿ, ಯೋಗಕ್ಷೇಮಂ - ಅಲಬ್ಧವಾದ ಪದಾರ್ಥಲಾಭವು, ಲಬ್ಧವಾದ ಪದಾರ್ಥದ ಸಂರಕ್ಷಣೆಯು, ನಪ್ರವರ್ತತೇ - ನಡೆಯುವದಿಲ್ಲ, ಅರಾಜಕೇ - ರಾಜರಹಿತವಾದ ದೇಶದಲ್ಲಿ, ಸೇನಾ - ಸೈನ್ಯವು, ಯುಧಿ - ಕಾಳೆಗದಲ್ಲಿ, ಶತ್ರೂನ್ - ಶತ್ರುಗಳನ್ನು, ನವಿಷಹತೇ - ಸಹಿಸುವದಿಲ್ಲ. ॥ ೨೪ ॥ ಅರಾಜಕೇ - ರಾಜನಿಲ್ಲದ, ಜನಪದೇ - ದೇಶದಲ್ಲಿ, ನರಾಃ - ಮನುಷ್ಯರು, ಹೃಷ್ಟೈಃ - ಸಂತೋಷಗೊಂಡ, ಪರಮವಾಜಿಭಿಃ - ಉತ್ಕೃಷ್ಟವಾದ ಕುದುರೆಗಳಿಂದಲೂ, ರಥೈಶ್ಚ - ರಥಗಳಿಂದಲೂ, ಪರಿಮಂಡಿತಾಃ - ಅಲಂಕೃತರಾಗಿ, ಸಹಸಾ - ಜಾಗ್ರತೆಯಾಗಿ, ನಸಂಯಾಂತಿ - ಸಂಚರಿಸುವುದಿಲ್ಲ. ॥ ೨೫ ॥ ಅರಾಜಕೇಜನಪದೇ - ರಾಜನಿಲ್ಲದ ದೇಶದಲ್ಲಿ, ಶಾಸ್ತ್ರವಿಶಾರದಾಃ - ಶಾಸ್ತ್ರಗಳಲ್ಲಿ ಪಂಡಿತರಾದ, ನರಾಃ - ಮನುಷ್ಯರು, ಸಂವದಂತಃ - ಸಂವಾದಮಾಡುತ್ತ, ವನೇಷು - ವನಗಳಲ್ಲಿಯೂ, ಉಪವನೇಷುಚ - ಉದ್ಯಾನವನಗಳಲ್ಲಿಯೂ, ನಾವತಿಷ್ಠಂತೇ - ಇರುವುದಿಲ್ಲ. ॥ ೨೬ ॥ ಅರಾಜಕೇಜನಪದೇ - ರಾಜರಹಿತವಾದ ದೇಶದಲ್ಲಿ, ಮ್ಯಾಲ್ಯ

ಯಿಸಲ್ಪಡುವ ಪದಾರ್ಥಗಳನ್ನು ತೆಗೆದುಕೊಂಡು ದೂರದೇಶಗಳಿಗೆ ವ್ಯಾಪಾರಾರ್ಥವಾಗಿ ಹೋಗಿ ಕ್ಷೇಮವಾಗಿ ಹಿಂತಿರುಗಿ ಬರಲಾರನೆಂದುಕೊಂಡು ಪ್ರಯಾಣ ಬೆಳಿಸುವುದೇ ಇಲ್ಲವು. ಇದರಿಂದ ಪ್ರಜೆಗಳಿಗೆಲ್ಲ ತೊಂದರೆಯಾಗುವುದು. ಅರಾಜಕವಾದ ದೇಶದಲ್ಲಿ ಒಬ್ಬನೇ ಸಂಚರಿಸುವವನೂ, ಇಂದ್ರಿಯನಿಗ್ರಹವುಳ್ಳವನೂ, ಅಸ್ತಮಯವೆಲ್ಲಾಗುವುದೋ ಅಲ್ಲಿಯೇ ನಿಂತು ಪರಮಾತ್ಮ ಧ್ಯಾನವನ್ನು ಮಾಡುವವನೂ ಆದ ಸನ್ಯಾಸಿಯೂ ಸಹ ಹಾಗೆ ಸಂಚಾರ ಮಾಡಲು ಹೆದರುತ್ತಾನೆ. ರಾಜರಹಿತವಾದ ರಾಜ್ಯದಲ್ಲಿ ಅಲಬ್ಧಪದಾರ್ಥವು ದೊರಕಿಕೆಯು, ಲಬ್ಧವಾದ ಪದಾರ್ಥವು ಸುರಕ್ಷಿತವಾಗಿರುವಿಕೆ ಇವು ಸರ್ವಥಾ ನಡೆವುದಿಲ್ಲ. ರಾಜನಿಲ್ಲದ ರಾಷ್ಟ್ರದಲ್ಲಿ ಪ್ರಜೆಗಳು ಸಂತೋಷದಿಂದ, ಕುದುರೆಗಳಮೇಲೆಯೂ, ದಿವ್ಯಾಶ್ವಗಳನ್ನು ಕಟ್ಟಿದ ರಥಗಳಮೇಲೆಯೂ ಶೀಘ್ರವಾಗಿ ಸಂಚಾರಮಾಡುವುದಿಲ್ಲವು ॥ ೨೧-೨೫- ॥ ರಾಜನಿಲ್ಲದಿರುವ ರಾಷ್ಟ್ರದಲ್ಲಿ ಶಾಸ್ತ್ರವಿಶಾರದರಾದವರು ಮನೆಮನೆಗಳಲ್ಲಿಯೂ ಕಲೆತು

ದಕ್ಷಿಣಾಃ ॥ ದೇವತಾಭ್ಯರ್ಚನಾರ್ಥಾಯ ಕಲ್ಪ್ಯಂತೇ ನಿಯತೈರ್ಜನೈಃ ॥೨೭॥
ನಾರಾಜಕೇ ಜನಪದೇ ಚಂದನಾಗರು ರೂಷಿತಾಃ ॥ ರಾಜಪುತ್ರಾ ವಿರಾಜಂತೇ
ವಸಂತಇವ ಶಾಖಿನಃ ॥ ೨೮ ॥ ಯಥಾಹ್ಯನೂದಕಾ ನದ್ಯೋ ಯಥಾವಾ
ಪ್ಯತೃಣಂ ವನಂ ॥ ಅಗೋಪಾಲಾ ಯಥಾ ಗಾವ ಸ್ತಥಾ ರಾಷ್ಟ್ರ ಮರಾಜಕಂ
॥ ೨೯ ॥ ಧ್ವಜೋ ರಥಸ್ಯ ಪ್ರಜ್ಞಾನಂ ಧೂಮೋ ಜ್ಞಾನಂ ವಿಭಾವಸೋಃ ॥
ತೇಷಾಂ ಯೋ ನೋ ಧ್ವಜೋ ರಾಜಾ ಸದೇವತ್ವ ಮಿತೋಗತಃ ॥ ೩೦ ॥

ಮೋದಕದಕ್ಷಿಣಾಃ-ಪುಷ್ಪಹಾರಗಳೂ ಕಡುಬುಗಳೂ ದಕ್ಷಿಣೆಗಳೂವುಳ್ಳವರಾಗಿ,ನಿಯತೈಃ-ನಿಯಮನಿಷ್ಠಾಪರರಾದ, ಜನೈಃ - ಜನರಿಂದ, ದೇವತಾಭ್ಯರ್ಚನಾರ್ಥಾಯ - ದೇವತೆಗಳ ಪೂಜಾಪ್ರಾರ್ಥನೆಗಳಿಗೋಸುಗ, ನಕಲ್ಪ್ಯಂತೇ - ಕಲ್ಪಿಸಲ್ಪಡುವದಿಲ್ಲ. ॥ ೨೭ ॥ ಅರಾಜಕೇಜನಪದೇ - ರಾಜನಿಲ್ಲದ ದೇಶದಲ್ಲಿ, ಚಂದನಾಗರುರೂಷಿತಾಃ - ಶ್ರೀಗಂಧದಿಂದಲೂ ಅಗರುಗಂಧದಿಂದಲೂ ಲೇಪನೆಮಾಡಲ್ಪಟ್ಟ, ರಾಜಪುತ್ರಾಃ - ಅರಸುಮಕ್ಕಳು, ವಸಂತೇ - ವಸಂತಕಾಲದಲ್ಲಿ, ಶಾಖಿನೇವ - ಗಿಡಗಳಂತೆ, ನವಿರಾಜಂತೇ - ಪ್ರಕಾಶಿಸುವದಿಲ್ಲ. ॥ ೨೮ ॥ ಅನೂದಕಾಃ - ನೀರಿಲ್ಲದ, ನದ್ಯಃ - ನದಿಗಳು, ಯಥಾ - ಹೇಗೊ, ಅತೃಣಂ - ಹುಲ್ಲಿಲ್ಲದ, ವನಂವಾ - ವನವು, ಯಥಾ - ಹೇಗೋ, ಅಗೋಪಾಲಾಃ - ಗೋಪಾಲಕನಿಲ್ಲದಿರುವ, ಗಾವಃ - ಆಕಳುಗಳು, ಯಥಾ - ಹೇಗೋ, ಅರಾಜಕಂ - ರಾಜರಹಿತವಾದ, ರಾಷ್ಟ್ರಂ - ರಾಜ್ಯವು, ತಥಾ - ಹಾಗೆಯೇ ಸರಿ. ॥ ೨೯ ॥ ರಥಸ್ಯ - ರಥಕ್ಕೆ, ಧ್ವಜಃ - ಧ್ವಜವು, ಪ್ರಜ್ಞಾನಂ - ಜ್ಞಾಪಕಚಿಹ್ನೆಯು, ಧೂಮಃ - ಹೊಗೆಯು, ವಿಭಾವಸೋಃ - ಅಗ್ನಿಗೆ, ಜ್ಞಾನಂ - ಜ್ಞಾಪಕಲಿಂಗವು, ತೇಷಾಂನಃ - ಅಂತಹನಮಗೆ, ಯೋರಾಜಾ - ಯಾವ ರಾಜನು, ಧ್ವಜಃ - ಧ್ವಜಪ್ರಾಯನಾಗಿದ್ದನೋ, ಸಃ - ಆ ಅರಸು, ಇತಃ - ಈ ಲೋಕದಿಂದ, ದೇವತ್ವಂ-ದೇವತ್ವವನ್ನು, ಗತಃ-ಹೊಂದಿದನು. ॥ ೩೦ ॥ ಅರಾಜಕೇ - ರಾಜರಹಿತವಾದ, ಜನಪದೇ - ದೇಶದಲ್ಲಿ, ಕಸ್ಯಚಿತ್-ಯಾವ ಪುರುಷನಿಗೂ, ಸ್ವಂತಂ-ಸ್ವತ್ತು, ನಭವತಿ-ಇರುವುದಿಲ್ಲವು, ನರಾಃ-ಮನುಷ್ಯರು, ನಿತ್ಯಂ-ನಿರಂತರವೂ,

ಶಾಸ್ತ್ರವಿಚಾರಗಳನ್ನು ಮಾಡುವುದಿಲ್ಲವಲ್ಲದೆ ಶಾಸ್ತ್ರವಿಚಾರಕ್ಕಾಗಿ ವನೋಪವನಗಳನ್ನು ಸೇರುವುದಿಲ್ಲ, ಅರಾಜಕವಾಗಿರುವದೇಶದಲ್ಲಿ ಮಾನವರೆಲ್ಲರೂ ನಿಯಮನಿಷ್ಠಾಪಂತರಾಗಿ ದೇವತೆಗಳನ್ನು ಪೂಜಿಸುವುದಿಲ್ಲ. ಅಲ್ಲದೆ ಪೂಮಾಲಿಕೆಗಳನ್ನು, ಮೋದಕಗಳನ್ನೂ, ಭಕ್ಷ್ಯ ಪದಾರ್ಥಗಳನ್ನೂ ದೇವತಾನಿವೇದನಾರ್ಥವಾಗಿ ಸಂಪಾದಿಸುವುದಿಲ್ಲ. ರಾಜನಿಲ್ಲದಿರುವ ನಾಡಿನಲ್ಲಿ ರಾಜಪುತ್ರರಾದವರೆಲ್ಲರೂ,ಚಂದನದಿಂದಲೂ, ಅಗರುಗಂಧದಿಂದಲೂ ಲೇಪಿತವಾದ ಶರೀರದಿಂದ ವಸಂತಋತುವಿನಲ್ಲಿ ಚಿಗುರೊಡೆದ ವೃಕ್ಷಗಳು ಪ್ರಕಾಶಿಸುವಂತೆ ಪ್ರಕಾಶಿಸುವುದಿಲ್ಲ. ಅಲ್ಲದೆ ನೀರಿಲ್ಲದ ನದಿಗಳೂ, ಹಸುರಿಲ್ಲದ ವನಗಳೂ, ಗೊಲ್ಲನಿಲ್ಲದಗೋವುಗಳೂ ಹೇಗೆ ಪ್ರಕಾಶಿಸುವುದಿಲ್ಲವೋ ಹಾಗೆ ರಾಜನಿಲ್ಲದನಾಡು ಸ್ವಲ್ಪ ಮಾತ್ರವೂ ಪ್ರಕಾಶಿಸುವುದಿಲ್ಲ. ಇಷ್ಟುಮಾತ್ರವಲ್ಲದೆ, ರಥಕ್ಕೆ ಧ್ವಜವು ಯಾವ ರೀತಿ ಅಲಂಕಾರಪ್ರಾಯವಾದುದೊ, ಅಗ್ನಿ ಹೋತ್ರಕ್ಕೆ, ಧೂಮವು ಹೇಗೆ ಗುರುತೊ ಆ ರೀತಿ ನಮ್ಮೆಲ್ಲರಿಗೂ ಪ್ರಕಾಶವನ್ನುಂಟು ಮಾಡುತ್ತಿದ್ದ ದಶರಥರಾಜನೀಗ ಮರಣವನ್ನು ಹೊಂದಿದನು. ॥ ೨೬-೩೦ ॥ ರಾಜನಿಲ್ಲ

ನಾರಾಜಕೇ ಜನಪದೇ ಸ್ವಕಂ ಭವತಿ ಕಸ್ಯಚಿತ್ ॥ ಮತ್ಸ್ಯಾ ಇವ ನರಾನಿತ್ಯಂ ಭಕ್ಷಯಂತಿ ಪರಸ್ಪರಂ ॥ ೩೧ ॥ ಯೇಹಿ ಸಂಭಿನ್ನ ಮರ್ಯಾದಾ ನಾಸ್ತಿಕಾಶ್ಛಿನ್ನಸಂಶಯಾಃ ॥ ತೇಪಿ ಭಾವಾಯ ಕಲ್ಪಂತೇ ರಾಜದಂಡ ನಿಪೀಡಿತಾಃ ॥೩೨॥ ಯಥಾ ದೃಷ್ಟಿ ಶ್ಶರೀರಸ್ಯ ನಿತ್ಯಮೇವ ಪ್ರವರ್ತತೇ ॥ ತಥಾ ನರೇಂದ್ರೋ ರಾಷ್ಟ್ರಸ್ಯ ಪ್ರಭವ ಸ್ಸತ್ಯ ಧರ್ಮಯೋಃ ॥ ೩೩ ॥ ರಾಜಾ ಸತ್ಯಂಚ ಧರ್ಮಶ್ಚ ರಾಜಾ ಕುಲವತಾಂ ಕುಲಂ ॥ ರಾಜಾ ಮಾತಾ ಪಿತಾಚೈವ ರಾಜಾ

ಮತ್ಸ್ಯಾ ಇವ-ಮೀನುಗಳಂತೆ, ಪರಸ್ಪರಂ ಅನ್ಯೋನ್ಯವಾಗಿ, ಭಕ್ಷಯಂತಿ ತಿನ್ನುತ್ತಾರೆ. ॥ ೩೧ ॥ ಯೇ - ಯಾರು, ಸಂಭಿನ್ನಮರ್ಯಾದಾಃ-ಉಲ್ಲಂಘಿಸಿದ ಸ್ವಸ್ವಜಾತಿಪದ್ಧತಿಗಳುಳ್ಳವರೋ, ನಾಸ್ತಿಕಾಃ-ನಾಸ್ತಿಕರು, ಯೇ - ಯಾರೋ, ರಾಜದಂಡನಿಪೀಡಿತಾಃ - ಅರಸರಶಿಕ್ಷೆಯಿಂದ ಬಾಧಿಸಲ್ಪಟ್ಟವರು, ಯೇ-ಯಾರೋ, ತೇಪಿ - ಅವರೆಲ್ಲರೂ ಕೂಡ, ಭಾವಾಯ - ಪ್ರಾಬಲ್ಯಕ್ಕೋಸ್ಕರ, ಕಲ್ಪಂತೇ-ಸಮರ್ಥರಾಗುತ್ತಾರೆ. ॥ ೩೨ ॥ ದೃಷ್ಟಿಃ - ದೃಷ್ಟಿಯು, ಶರೀರಸ್ಯ - ಶರೀರಕ್ಕೆ (ಅಹಿತಪರಿಹಾರಕ್ಕೋಸ್ಕರ,) ನಿತ್ಯಮೇವ - ನಿರಂತರವೂ, ಯಥಾ - ಹೇಗೋ, ನರೇಂದ್ರಃ - ಅರಸು, ರಾಷ್ಟ್ರಸ್ಯ - ರಾಜ್ಯದ, ಸತ್ಯಧರ್ಮಯೋಃ - ಸತ್ಯಧರ್ಮಗಳಿಗೆ, ಪ್ರಭವಃ - ಉತ್ಪತ್ತಿಕಾರಣವು. ॥ ೩೩ ॥ ರಾಜಾ - ಅರಸು, ಸತ್ಯಂಚ - ಸತ್ಯಸ್ವರೂಪನು, ಧರ್ಮಶ್ಚ - ಧರ್ಮಪ್ರವರ್ತಕನು, ಕುಲವತಾಂ - ಸತ್ಕುಲಪ್ರಸೂತರಿಗೆ, ರಾಜಾ - ಅರಸು, ಕುಲಂ - ಕುಲಧರ್ಮಪ್ರವರ್ತಕನು, ರಾಜಾ - ಅರಸು, ನೃಣಾಂ - ಮನುಷ್ಯರಿಗೆ, ಮಾತಾ - ತಾಯಿಯು, ಪಿತಾಚೈವ - ತಂದೆಯೂ ಅಹುದು, ರಾಜಾ - ಅರಸು, ಹಿತಕರಃ - ಹಿತವನ್ನುಂಟುಮಾಡುವವನಾಗಿದ್ದಾನೆ. ॥ ೩೪ ॥ ಯತಃ - ಯಾವಕಾರಣ, ಮಹತಾ - ಬಹಳವಾದ,

---

ದಿರುವ ರಾಜ್ಯದಲ್ಲಿ, "ಒಂದು ಮತ್ಸ್ಯವು ಮತ್ತೊಂದು ಮತ್ಸ್ಯವನ್ನು ಭಕ್ಷಿಸುವಂತೆ" ಒಬ್ಬರ ದ್ರವ್ಯವನ್ನು ಮತ್ತೊಬ್ಬರು ಅಪಹರಿಸುತ್ತಾರೆ. ವರ್ಣಾಶ್ರಮ ಧರ್ಮಗಳನ್ನು ಲಕ್ಷ್ಯಕ್ಕೆ ತಾರದೆ, ಪರಲೋಕಭಯವನ್ನು ದೂರೀಕರಿಸಿ ಸ್ವೇಚ್ಛಾನುಸಾರವಾಗಿ ನಡೆಯುವ ನಾಸ್ತಿಕರೆಲ್ಲರೂ ರಾಜನಿದ್ದರೆ, ಅವನ ಭಯದಿಂದ ಸಜ್ಜನರಾಗುತ್ತಾರೆ. ರಾಜನೇ ಇಲ್ಲದಿದ್ದರೆ ಅವರೆಲ್ಲರೂ ಯಥೇಚ್ಛವಾಗಿ ಸಂಚರಿಸುತ್ತಾರೆ. ದೇಹಕ್ಕೆ ಕಣ್ಣುಗಳು ಹೇಗೆ ಮುಖ್ಯವಾದುವೋ, ಹಾಗೆಯೇ ರಾಜನೂ ಸಹ ದೇಶದ ಧರ್ಮಗಳಿಗೆ ಆಧಾರವಾಗಿದ್ದಾನೆ ಯಲ್ಲದೆ ರಾಜ್ಯದಲ್ಲಿನ ಸರ್ವೋಪದ್ರವಗಳನ್ನೂ ದೂರಮಾಡಿ ಪ್ರಜೆಗಳನ್ನು ಯುಕ್ತರೀತಿಯಿಂದ ಕಾಪಾಡುತ್ತಾನೆ "ರಾಜನೇ ಸತ್ಯಸ್ವರೂಪನು, ಧರ್ಮಪ್ರವರ್ತಕನು, ಸತ್ಕುಲಪ್ರಸೂತರಿಗೆ ಕುಲಧರ್ಮಪ್ರವರ್ತಕನು, ಮಾನವರಿಗೆ ತಂದೆತಾಯಿಯು; ಮತ್ತು ಹಿತವನ್ನುಂಟುಮಾಡುವನು" ಎಂದು ಹಿರಿಯರಾದವರು ಹೇಳುತ್ತಾರೆ. ಅಮೋಘವಾದ ಪ್ರಜಾಪರಿಪಾಲನರೂಪ ಸಚ್ಚರಿತ್ರೆಯಿಂದ ಕೂಡಿರುವ ರಾಜನಿಂದ ಯಮನೂ, ಕುಬೇರನೂ, ದೇವೇಂದ್ರನೂ, ವರುಣನೂ ಸತ್ಕರಿಸಲ್ಪಡುತ್ತಾರೆ. ಯಮನಿಗೆ ದಂಡನೆಯನ್ನು ಮಾತ್ರ ಮಾಡುವಶಕ್ತಿಯು, ಕುಬೇರನಿಗೆ ಹಣಕೊಡುವ ಶಕ್ತಿಯೂ, ಇಂದ್ರನಿಗೆ ಪ್ರಜಾಪಾಲನ

ಹಿತಕರೋ ನೃಣಾಂ ॥ ೩೪ ॥ ಯಮೋವೈಶ್ರವಣ ಶ್ಶಕ್ರೋ ವರುಣಶ್ಚ
ಮಹಾಬಲಃ ॥ ವಿಶಿಷ್ಯಂತೇ ನರೇಂದ್ರೇಣ ವೃತ್ತೇನ ಮಹತಾ ತತಃ ॥ ೩೫ ॥
ಅಹೋ ತಮಇವೇದಂ ಸ್ಯಾನ್ನಪ್ರಜ್ಞಾಯೇತ ಕಿಂಚನ ॥ ರಾಜಾಚೇನ್ನಭವೇ
ಲ್ಲೋಕೇ ವಿಭಜನ್ ಸಾಧ್ವಸಾಧುನೀ ॥ ೩೬ ॥ ಜೀವತ್ಯಪಿ ಮಹಾರಾಜೇ ತವೈವ
ವಚನಂ ವಯಂ॥ನಾತಿಕ್ರಮಾಮಹೇ ಸರ್ವೇ ವೇಲಾಂ ಪ್ರಾಪ್ಯೇವ ಸಾಗರಃ॥೩೭॥

ಸನಸ್ಸಮೀಕ್ಷ್ಯ ದ್ವಿಜವರ್ಯ ವೃತ್ತಂ
ನೃಪಂ ವಿನಾ ರಾಜ್ಯಮರಣ್ಯಭೂತಂ ॥

ವೃತ್ತೇನ - ಪ್ರಜಾಪಾಲನರೂಪ ಸಚ್ಚರಿತ್ರೆಯಿಂದ ಕೂಡಿರುವನೋ, ತತಃ-ಆ ಕಾರಣ, ನರೇಂದ್ರೇಣ-ಅರಸನಿಂದ, ಯಮಃ - ಯಮನು, ವೈಶ್ರವಣಃ - ಕುಬೇರನು, ಶಕ್ರಃ - ದೇವೇಂದ್ರನೂ, ಮಹಾಬಲಃ - ಮಹಾಬಲವುಳ್ಳ, ವರುಣಶ್ಚ - ವರುಣನೂ, ವಿಶಿಷ್ಯಂತೇ - ಕಡಿಮೆಯೆನಿಸುತ್ತಾರೆ. ॥ ೩೫ ॥ ರಾಜಾ-ಅರಸನು, ಲೋಕೇ-ಲೋಕದಲ್ಲಿ, ಸಾಧ್ವಸಾಧೂನಿ - ಒಳ್ಳೆಯ ಮತ್ತು ಕೆಟ್ಟದು ಇವುಗಳನ್ನು, ವಿಭಜನ್ - ಬೇರ್ಪಡಿಸುತ್ತ, ನಭವೇಚ್ಚೇತ್ - ಇಲ್ಲದೇಹೋದರೆ, ಇದಂ - ಈ ಜಗತ್ತು, ತಮಇವ - ಅಂಧಕಾರದಂತೆ, ಸ್ಯಾತ್ - ಆದೀತು, ಕಿಂಚನ - ಯೇನೂ, ನಪ್ರಜ್ಞಾಯೇತ - ತಿಳಿಯಲ್ಪಡದೆ ಹೋದೀತು. ॥ ೩೬ ॥ ಮಹಾರಾಜೇ - ದಶರಥರಾಯನು, ಜೀವತ್ಯಪಿ-ಬದುಕಿರುವಾಗಲೇ, ಸರ್ವೇ-ಸಮಸ್ತರಾದ, ವಯಂ - ನಾವು, ವೇಲಾಂ - ದಡವನ್ನು, ಪ್ರಾಪ್ಯ - ಹೊಂದಿದ, ಸಾಗರಇವ - ಕಡಲಿನಂತೆ, ತವ - ನಿನ್ನ, ವಚನವೇವ - ಮಾತನ್ನೇ, ನಾತಿಕ್ರಮಾಮಹೇ - ಅತಿಕ್ರಮಿಸಿದವರಲ್ಲ. ॥ ೩೭ ॥ ಹೇ ದ್ವಿಜವರ್ಯ - ಎಲೈ ಬ್ರಾಹ್ಮಣಶ್ರೇಷ್ಠನಾದ ವಸಿಷ್ಠನೇ, ಸತ್ವಮೇವ - ಅಂತಹ ನೀನೇ, ನಃ - ನಮ್ಮ, ವೃತ್ತಂ - ವ್ಯಾಪಾರವನ್ನು, ಸಮೀಕ್ಷ್ಯ - ಕಂಡು, ನೃಪಂವಿನಾ - ಅರಸನನ್ನುಳಿದು, ರಾಜ್ಯಂ - ರಾಜ್ಯವನ್ನು, ಅರಣ್ಯಭೂತಂ - ಅಟವಿಯನ್ನಾಗಿ, ಸಮೀಕ್ಷ್ಯ - ಆಲೋಚಿಸಿ,

---

ಶಕ್ತಿಯೂ, ವರುಣನಿಗೆ ಸದಾಚಾರ ನಿಯಮನಶಕ್ತಿಯೂ ಇರುವುದು. ರಾಜನಲ್ಲಿ ಈ ಗುಣಗಳಿರುವುದರಿಂದ ಅವನು ಇವರೆಲ್ಲರಿಗಿಂತಲೂ ಹೆಚ್ಚಾದವನೆನಿಸಿಕೊಳ್ಳುತ್ತಾನೆ. ॥ ೩೧-೩೫ ॥ ರಾಜನಾದವನು ಲೋಕದಲ್ಲಿ ಸದಸದ್ವಿವೇಕಶಾಲಿಯಾಗದೆ ಹೋದರೆ ಇಡೀ ಜಗತ್ತೇ ಅಂಧಕಾರಮಯವಾದೀತು ! ಎಲೈ ಮಹಾತ್ಮನಾದ ವಸಿಷ್ಠ ಋಷಿಯೆ ! ದಶರಥಮಹಾರಾಜನು ಬದುಕಿದ್ದಾಗಲೂ, ಸಮುದ್ರವು ತನ್ನದಡವನ್ನು ದಾಂಟದಿರುವಂತೆ ನಿನ್ನಮಾತನ್ನು ನಾವು ಸ್ವಲ್ಪವಾದರೂ ಮೀರಿದವರಲ್ಲ. ದಶರಥಮಹಾರಾಜನು ಮಡಿದಿರುವುದರಿಂದ ಈಗಲೂ ನಿನ್ನ ಮಾತನ್ನು ನಾವು ಸ್ವಲ್ಪವಾದರೂ ಮೀರುವುದಿಲ್ಲವೆಂದು ಹೇಳಬೇಕಾದುದೇನಿದೆ ? ಆದುದರಿಂದೆಲೈ ವಿಪ್ರೋತ್ತಮನೆ! ನೀನು ನಮ್ಮ ಸಮಾಚಾರಗಳೆಲ್ಲವನ್ನೂ ಕೇಳಿ ರಾಜನಿಲ್ಲದೇಹೋಗುವುದರಿಂದ ರಾಜ್ಯವೆಲ್ಲ ಅರಣ್ಯ ಸಮಾನವಾಗುತ್ತದೆಯೆಂದರಿತು ರಘುಕುಲ

ಕುಮಾರ ಮಿಕ್ಷ್ವಾಕುಸುತಂ ವದಾನ್ಯಂ
ತ್ವಮೇವ ರಾಜಾನ ಮಿಹಾಭಿಷಿಂಚ ‖ ೩೮ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಷಷ್ಠಿತಮಸ್ಸರ್ಗಃ.

ಇಕ್ಷ್ವಾಕುಸುತಂ - ಇಕ್ಷ್ವಾಕುವಂಶೋತ್ಪನ್ನನಾದ, ವದಾನ್ಯಂ - ದಾತೃವಾದ, ಕುಮಾರಂ - ದಶರಥಕುಮಾರನನ್ನು, ರಾಜಾನಂ - ಅರಸನನ್ನಾಗಿ, ಇಹ - ಈಗ, ಅಭಿಷಿಂಚ - ಪಟ್ಟಾಭಿಷೇಕ ಮಾಡು. ‖ ೩೮ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಷಷ್ಠಿತಮಸ್ಸರ್ಗಃ.

ಪ್ರಸೂತರಾದ ದಶರಥ ಕುಮಾರರಲ್ಲಿ ಯಾರನ್ನಾದರೂ ಒಬ್ಬನನ್ನು ನಮಗೆ ರಾಜನನ್ನಾಗಿ ನಿಯಮಿಸುವವನಾಗು. ‖ ೩೭-೩೮ ‖

ಇಂತಿದು ವಸಿಷ್ಠ ವಾಮದೇವಾದಿ ವಿಪ್ರೋತ್ತಮಕೃತ ಭರತಾನಯನ ಸಮಾಲೋಚನ
ವೃತ್ತಾಂತ ವರ್ಣನವೆಂಬ ಅರವತ್ತೇಳನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಅಷ್ಟಷಷ್ಠಿತಮಸ್ಸರ್ಗಃ.

ತೇಷಾಂಹಿ ವಚನಂ ಶ್ರುತ್ವಾ ವಸಿಷ್ಠಃ ಪ್ರತ್ಯುವಾಚಹ ॥ ಮಿತ್ರಾ ಮಾತ್ಯ ಜನಾರ್ ಸರ್ವಾರ್ ಬ್ರಾಹ್ಮಣಾಂ ಸ್ತಾನಿದಂ ವಚಃ ॥ ೧ ॥ ಯದಸೌ ಮಾತುಲ ಕುಲೇ ಪುರೇ ರಾಜಗೃಹೇ ಸುಖೀ ॥ ಭರತೋ ವಸತಿ ಭ್ರಾತ್ರಾ ಶತ್ರುಘ್ನೇನ ಸಮನ್ವಿತಃ ॥ ೨ ॥ ತಚ್ಛೀಘ್ರಂ ಜವನಾ ದೂತಾ ಗಚ್ಛಂತು ತ್ವರಿತೈ ರ್ಹಯೈಃ ॥ ಆನೇತುಂ ಭ್ರಾತರೌ ವೀರೌ ಕಿಂ ಸಮೀಕ್ಷಾಮಹೇ ವಯಂ ॥ ೩ ॥ ಗಚ್ಛಂ ತ್ವಿತಿ ತತ ಸ್ಸರ್ವೇ ವಸಿಷ್ಠಂ ವಾಕ್ಯ ಮಬ್ರುವರ್ ॥ ತೇಷಾಂ ತದ್ವಚನಂ ಶ್ರುತ್ವಾ

ವಸಿಷ್ಠಃ - ವಸಿಷ್ಠಋಷಿಯು, ತೇಷಾಂ - ಆ ಅಮಾತ್ಯಾದಿಗಳ, ವಚನಂ-ಮಾತನ್ನು, ಶೃತ್ವಾ-ಕೇಳಿ, ಸರ್ವಾರ್-ಸಮಸ್ತರಾದ, ಅಮಾತ್ಯಜನಾರ್-ರಾಜಮಂತ್ರಿಗಳಾದ ಜನರನ್ನೂ, ತಾರ್ಬ್ರಾಹ್ಮಣಾರ್-ಆ ಬ್ರಾಹ್ಮಣರನ್ನೂ ಕುರಿತು, ಇದಂವಚಃ - ಈ ಮಾತನ್ನು, ಪ್ರತ್ಯುವಾಚ - ಹೇಳಿದನಷ್ಟೆ. ॥ ೧ ॥ ಯತ್ - ಯಾವಕಾರಣ, ಭರತಃ - ಭರತನು, ಭ್ರಾತ್ರಾ - ತಮ್ಮನಾದ, ಶತ್ರುಘ್ನೇನ - ಶತ್ರುಘ್ನನೊಡನೆ, ಸಮನ್ವಿತಃ-ಕೂಡಿದವನಾಗಿ, ರಾಜಗೃಹೇ-ರಾಜಗೃಹವೆಂಬ, ಪುರೇ-ಪಟ್ಟಣದಲ್ಲಿ, ಮಾತುಲ ಕುಲೇ - ಸೋದರಮಾವನ ಮನೆಯಲ್ಲಿ, ಸುಖೀ - ಸುಖವಂತನಾಗಿ, ವಸತಿ - ಇದಾನೆಯೋ. ॥ ೨ ॥ ತತ್ - ಆ ಕಾರಣ, ಜವನಾಃ - ವೇಗವಂತರಾದ, ದೂತಾಃ - ಭೃತ್ಯರು, ತ್ವರಿತೈಃ - ವೇಗವತ್ತುಗಳಾದ, ಹಯೈಃ - ಕುದುರೆಗಳಿಂದ, ವೀರೌ - ಶೂರರಾದ, ಭ್ರಾತರೌ - ಅಣ್ಣತಮ್ಮಂದಿರಾದ ಭರತ ಶತ್ರುಘ್ನರನ್ನು, ಆನೇತುಂ - ಕರೆದುಕೊಂಡು ಬರಲು, ಶ್ರೀಘ್ರಂ - ಜಾಗ್ರತೆಯಾಗಿ, ಗಚ್ಛಂತು - ಹೋಗಲಿ, ವಯಂ - ನಾವು, ಕಿಂಸಮೀಕ್ಷಾಮಹೇ - ಏಕೆ ನಿರೀಕ್ಷಣೆಮಾಡಬೇಕು. ॥ ೩ ॥ ತತಃ-ಬಳಿಕ, ಸರ್ವೇ - ಸಮಸ್ತರೂ, ವಸಿಷ್ಠಂ - ವಸಿಷ್ಠಋಷಿಯನ್ನು ಕುರಿತು, ಗಚ್ಛಂತ್ವಿತಿ - ಹೋಗಲೆಂದು, ವಾಕ್ಯಂ - ಮಾತನ್ನು, ಅಬ್ರುವರ್ - ನುಡಿದರು, ತೇಷಾಂ - ಆ ಮಂತ್ರಿಗಳ, ತದ್ವಚನಂ -

---

ಈ ರೀತಿ ಮಾರ್ಕಂಡೇಯನೇ ಮೊದಲಾದ ಮಹರ್ಷಿಗಳು ನುಡಿದ ಮಾತುಗಳನ್ನು ಕೇಳಿ ವಸಿಷ್ಠ ಮಹಾ ಮುನಿಯು, ಸ್ನೇಹಿತರು, ಮಂತ್ರಿಗಳು, ಬ್ರಾಹ್ಮಣೋತ್ತಮರು ಮೊದಲಾದವರೆಲ್ಲರನ್ನೂ ನೋಡಿ ಹೀಗೆಂದನು. ಎಲೈ ಪುರುಷಶ್ರೇಷ್ಠರೆ! ಈಗ ಭರತನು ತಮ್ಮನಾದ ಶತ್ರುಘ್ನನೊಡನೆ ಅಧಿಕವಾದ ಸುಖವುಳ್ಳವನಾಗಿ ಸೋದರಮಾವನ ಮನೆಯಲ್ಲಿ ವಾಸ ಮಾಡುತ್ತಿದ್ದಾನೆ. ಆದುದರಿಂದ ಈಗ ಮಹಾ ಪರಾಕ್ರಮಶಾಲಿಗಳಾದ ಆ ಭರತ ಶತ್ರುಘ್ನರನ್ನು ಕರೆದುಕೊಂಡು ಬರಲು ಜಾಗ್ರತೆಯಾಗಿ ಹೋಗತಕ್ಕ ದೂತರು, ಶೀಘ್ರಗಾಮಿಗಳಾದ ಕುದುರೆಗಳನ್ನೇರಿ ಮಹಾ ವೇಗದಿಂದ ಹೋಗುವಂತೆ ಮಾಡಬೇಕು. ಈ ರೀತಿಯಾಗಿ ನುಡಿದ ವಸಿಷ್ಠ ಮುನಿಯ ಮಾತುಗಳನ್ನು ಕೇಳಿ ಮಾರ್ಕಂಡೇಯನೇ ಮೊದಲಾದ ಮುನಿಶ್ರೇಷ್ಠರೆಲ್ಲರೂ ಏಕವಾಕ್ಯತೆಯಿಂದ ದಶರಥರಾಜ ಕುಮಾರನಾದ ಭರತನನ್ನು ಕರೆಯಿಸುವುದೇ ಯುಕ್ತವೆಂದು ಹೇಳಿದರು. ಹೀಗೆ ಎಲ್ಲರೂ ಭರತಾನಯನ ವಿಷಯದಲ್ಲಿ ಏಕವಾಕ್ಯತೆಯಿಂದ ಅಂಗೀಕಾರವನ್ನು ಸೂಚಿಸಿದ ಬಳಿಕ ವಸಿಷ್ಠಮುನಿಯು ಅವರ ಮಾತು

ವಸಿಷ್ಠೋ ವಾಕ್ಯ ಮಬ್ರವೀತ್ ‖೪‖ ಏಹಿ ಸಿದ್ಧಾರ್ಥ; ವಿಜಯ, ಜಯಂತಾ ಶೋಕನಂದನ! ‖ ಶ್ರೂಯತಾ ಮಿತಿಕರ್ತವ್ಯಂ ಸರ್ವಾನೇವ ಬ್ರವೀಮಿ ವಃ‖೫‖ ಪುರಂ ರಾಜಗೃಹಂ ಗತ್ವಾ ಶೀಘ್ರಂ ಶೀಘ್ರಜವೈ ರ್ಹಯೈಃ ‖ ತ್ಯಕ್ತಶೋಕೈ ರಿದಂ ವಾಚ್ಯ ಶ್ಶಾಸನಾ ದ್ಭರತೋ ಮಮ ‖ ೬ ‖ ಪುರೋಹಿತ ಸ್ತ್ವಾಂ ಕುಶಲಂ ಪ್ರಾಹ ಸರ್ವೇಚ ಮಂತ್ರಿಣಃ ‖ ತ್ವರಮಾಣಶ್ಚ ನಿರ್ಯಾಹಿ ಕೃತ್ಯ ಮಾತ್ಯಯಿಕಂ ತ್ವಯಾ ‖ ೭ ‖ ಮಾಚಾಸ್ಮೈ ಪ್ರೋಷಿತಂ ರಾಮಂ ಮಾಚಾಸ್ಮೈ ಪಿತರಂ

ಆ ಮಾತನ್ನು, ಶ್ರುತ್ವಾ - ಕೇಳಿ, ವಸಿಷ್ಠಃ - ವಸಿಷ್ಠಋಷಿಯು, ವಾಕ್ಯಂ - ಮಾತನ್ನು, ಅಬ್ರವೀತ್- ನುಡಿದನು. ‖ ೪ ‖ ಹೇ ಸಿದ್ಧಾರ್ಥ - ಎಲೈ ಸಿದ್ಧಾರ್ಥನೇ, ಹೇ ವಿಜಯ - ಎಲೈ ವಿಜಯನೇ, ಹೇ ಜಯಂತ - ಎಲೈ ಜಯಂತನೇ, ಹೇ ಅಶೋಕ - ಎಲೈ ಅಶೋಕನೇ, ಹೇ ನಂದನ - ಎಲೈ ನಂದನನೇ, ಸರ್ವಾನೇವ - ಸಮಸ್ತರಾದ, ವಃ - ನಿಮ್ಮನ್ನು ಕುರಿತು, ಬ್ರವೀಮಿ - ಹೇಳುತ್ತೇನೆ, ಇತಿಕರ್ತವ್ಯಂ - ಮುಂದೆಮಾಡತಕ್ಕ ಕಾರ್ಯಕಲಾಪವು, ಶ್ರೂಯತಾಂ - ಕೇಳಲ್ಪಡಲಿ. ‖ ೫ ‖ ರಾಜಗೃಹಂ - ರಾಜಗೃಹವೆಂಬ, ಪುರಂ - ಪಟ್ಟಣವನ್ನು ಕುರಿತು, ಶೀಘ್ರಜವೈಃ - ವೇಗಶಾಲಿಗಳಾದ, ಹಯೈಃ - ಕುದುರೆಗಳಿಂದ, ಶೀಘ್ರಂ - ಜಾಗ್ರತೆಯಾಗಿ, ಗತ್ವಾ - ಹೋಗಿ, ಭರತಃ - ಭರತನು, ಮಮ - ನನ್ನ, ಶಾಸನಾತ್ - ಆಜ್ಞಾವಚನದಿಂದ, ತ್ಯಕ್ತಶೋಕೈಃ - ಬಿಡಲ್ಪಟ್ಟ ಶೋಕವುಳ್ಳ, ಭವದ್ಭಿಃ - ನಿಮ್ಮಿಂದ, ಇದಂ - ಮುಂದಾಡುವ ಈಮಾತು, ವಾಚ್ಯಃ-ಹೇಳತಕ್ಕವನು. ‖ ೬ ‖ ಪುರೋಹಿತಃ - ಪುರೋಧಸನಾದ ವಸಿಷ್ಠನು, ಸರ್ವೇ - ಸಮಸ್ತರಾದ, ಮಂತ್ರಿಣಶ್ಚ - ಮಂತ್ರಿಗಳೂ, ತ್ವಾಂ - ನಿನ್ನನ್ನು ಕುರಿತು, ಕುಶಲಂ - ಕ್ಷೇಮವನ್ನು, ಪ್ರಾಹುಃ - ಹೇಳಿದರು, ತ್ವಯಾ - ನಿನ್ನಿಂದ, ಆತ್ಯಯಿಕಂ - ವಿಳಂಬಸದಳವಾದ, ಕೃತ್ಯಂ - ಕಾರ್ಯವು, ಅಸ್ತಿ - ಇರುವುದು, ತ್ವರಮಾಣಶ್ಚ - ಸಾವಕಾಶಮಾಡದೆ, ನಿರ್ಯಾಹಿ - ಹೊರಡು, ಇತಿ - ಎಂದು, ವಾಚ್ಯಃ - ಹೇಳತಕ್ಕವನು. ‖ ೭ ‖ ಭವಂತಃ - ನೀವು, ಗತ್ವಾ - ರಾಜಗೃಹಕ್ಕೆಹೋಗಿ, ಅಸ್ಮೈ - ಈ ಭರತನಿಗೆ, ರಾಮಂ-ಶ್ರೀರಾಮನನ್ನು, ಪ್ರೋಷಿತಂ - ಅರಣ್ಯವನ್ನು ಕುರಿತು ಪ್ರಯಾಣ ಮಾಡಿದವನನ್ನಾಗಿ, ಪಿತರಂ - ತಂದೆಯನ್ನು,

---

ಗಳನ್ನು ಕೇಳಿ ದೂತರನ್ನು ಕರೆದು ಹೀಗೆಂದನು. ‖ ೧-೪ ‖ "ಎಲೈ ಸಿದ್ಧಾರ್ಥನೆ, ವಿಜಯನೆ, ಜಯಂತನೆ, ಅಶೋಕನೆ, ನಂದನನೆ! ನೀವೆಲ್ಲರೂ ಇಲ್ಲಿಗೆ ಬಂದು ನನ್ನ ಮಾತನ್ನು ಕೇಳುವವರಾಗಿರಿ. ನೀವೀಗ ಮಾಡಬೇಕಾಗಿರುವ ಕಾರ್ಯವನ್ನು ಹೇಳುತ್ತೇನೆ, ಸಾವಧಾನಚಿತ್ತರಾಗಿ ಕೇಳಿರಿ. ನೀವೆಲ್ಲರೂ ಬಹು ವೇಗದಿಂದ ಕುದುರೆಗಳನ್ನೇರಿ ಅತಿ ಜಾಗ್ರತೆಯಾಗಿ ರಾಜಗೃಹವೆಂಬ ಪಟ್ಟಣಕ್ಕೆ ತೆರಳಿ, ಸ್ವಲ್ಪವಾದರೂ ದುಃಖವಿಲ್ಲದವರಾಗಿ, ನಾನೀರೀತಿ ಹೇಳಿದೆನೆಂದು ಭರತನಿಗೆ ಹೇಳಿರಿ; "ಎಲೈ ಭರತನೆ! ಪುರೋಹಿತನಾದ ವಸಿಷ್ಠಮುನಿಯೂ ಮತ್ತು ಇತರರಾದ ಮಂತ್ರಿಗಳೂ ನಿನ್ನೊಡನೆ ಕ್ಷೇಮವನ್ನು ಹೇಳಬೇಕೆಂದು ಆಜ್ಞಾಪಿಸಿದ್ದಾರೆಂದೂ, ನಿನ್ನಿಂದ ಅತ್ಯವಶ್ಯಕವಾಗಿ ಆಗಬೇಕಾದ ಕಾರ್ಯವಿರುವುದು, ಆದುದರಿಂದ ಏನೊಂದೂ ತಡೆಮಾಡದೆ ಜಾಗ್ರತೆಯಾಗಿ ತೆರಳಬೇಕೆಂದೂ ಹೇಳಿರಿ. ಅಲ್ಲದೆ ಆ ಭರತನೊಡನೆ, ರಾಮನು ಅರಣ್ಯಕ್ಕೆ ತೆರಳಿದನೆಂದಾಗಲಿ, ತಂದೆಯಾದ ದಶರಥರಾಜನು ಮೃತಿಯೊಂದಿದನೆಂದಾಗಲಿ, ರಘುಕುಲಕ್ಕೆ ದೊಡ್ಡ ಆಪತ್ತು ಸಂಭವಿಸಿತೆಂದಾಗಲಿ ಖಂಡಿತ

ಮೃತಂ ॥ ಭವಂತಶ್ಶಂಸಿಷು ರ್ಗತ್ವಾ ರಾಘವಾಣಾ ಮಿಮಂ ಕ್ಷಯಂ ॥ ೮ ॥
ಕೌಶೇಯಾನಿಚ ವಸ್ತ್ರಾಣಿ ಭೂಷಣಾನಿ ವರಾಣಿಚ ॥ ಕ್ಷಿಪ್ರಮಾದಾಯ ರಾಜ್ಞಶ್ಚ
ಭರತಸ್ಯಚ ಗಚ್ಛತ ॥ ೯ ॥ ದತ್ತ ಪಥ್ಯಶನಾ ದೂತಾಃ ಜಗ್ಮುಸ್ಸ್ವಂಸ್ವಂ ನಿವೇ
ಶನಂ ॥ ಕೇಕಯಾಂಸ್ತೇ ಗಮಿಷ್ಯಂತೋ ಹಯಾನಾರುಹ್ಯ ಸಂಮತಾನ್ ॥೧೦॥
ತತಃ ಪ್ರಾಸ್ಥಾನಿಕಂ ಕೃತ್ವಾ ಕಾರ್ಯಶೇಷ ಮನಂತರಂ ॥ ವಸಿಷ್ಠೇನಾ ಭ್ಯನು
ಜ್ಞಾತಾ ದೂತಾ ಸ್ಸಂತ್ವರಿತಾ ಯಯುಃ ॥ ೧೧ ॥ ನ್ಯಂತೇನಾ ಪರತಾಲಸ್ಯ
ಪ್ರಲಂಬಸ್ಯೋತ್ತರಂ ಪ್ರತಿ ॥ ನಿಷೇವಮಾಣಾ ಸ್ತೇಜಗ್ಮು ರ್ನದೀಂ ಮಧ್ಯೇನ

ಮೃತಂ - ಮರಣವನ್ನುಹೊಂದಿದವನನ್ನಾಗಿ, ರಾಘವಾಣಾಂ - ರಘುವಂಶೋತ್ಪನ್ನರ ಇಮಂ ಕ್ಷಯಂ - ಈ ಪ್ರಕಾಶನಾಶವನ್ನು, ಮಾಶಂಸಿಷುಃ - ಹೇಳಬೇಡಿರಿ. ॥೮॥ ರಾಜ್ಞಶ್ಚ - ಕೇಕಯರಾಜನಿಗೂ, ಭರತಸ್ಯ - ಭರತನಿಗೂ, ಕೌಶೇಯಾನಿಚ - ಪಟ್ಟೆಯ, ವಸ್ತ್ರಾಣಿಚ - ವಸ್ತ್ರಗಳನ್ನೂ, ವರಾಣಿಚ - ಶ್ರೇಷ್ಠಗಳಾದ, ಭೂಷಣಾನಿಚ - ಒಡಿವೆಗಳನ್ನೂ, ಕ್ಷಿಪ್ರಂ - ಜಾಗ್ರತೆಯಾಗಿ, ಆದಾಯ - ತೆಗೆದುಕೊಂಡು, ಗಚ್ಛತ - ಹೋಗಿರಿ, ಇತಿ - ಇಂತೆಂದು, ವಸಿಷ್ಠಃ - ವಸಿಷ್ಠಋಷಿಯು, ಅಬ್ರವೀತ್ - ನುಡಿದನು. ॥ ೯ ॥ ದತ್ತಪಥ್ಯಶನಾಃ, ದತ್ತ - ಕೊಡಲ್ಪಟ್ಟ, ಪಥ್ಯಶನಾಃ - ಮಾರ್ಗಭತ್ಯವುಳ್ಳವರಾಗಿ, ತೇ ದೂತಾಃ - ಆ ದೂತರು, ಕೇಕಯಾನ್ - ಕೇಕಯದೇಶಗಳನ್ನು ಕುರಿತು, ಗಮಿಷ್ಯಂತಃ - ಹೋಗಲಿಚ್ಛೆಯುಳ್ಳವರಾಗಿ, ಸಮ್ಮತಾನ್ - ಇಷ್ಟಗಳಾದ, ಹಯಾನ್ - ಕುದುರೆಗಳನ್ನು, ಆರುಹ್ಯ - ಏರಿ, ಸ್ವಂಸ್ವಂ - ತಮ್ಮತಮ್ಮ ಸಂಬಂಧವಾದ, ನಿವೇಶನಂ - ಮನೆಯನ್ನು ಕುರಿತು, ಜಗ್ಮುಃ - ತೆರಳಿದರು. ॥ ೧೦ ॥ ತತಃ - ಬಳಿಕ, ವಸಿಷ್ಠೇನ - ವಸಿಷ್ಠಋಷಿಯಿಂದ, ಅಭ್ಯನುಜ್ಞಾತಾಃ - ಆಜ್ಞಾಪಿಸಲ್ಪಟ್ಟವರಾದ, ದೂತಾಃ - ಭಟರು, ಪ್ರಾಸ್ಥಾನಿಕಂ - ಪ್ರಯಾಣಕ್ಕೆ ಉಪಯುಕ್ತವಾದ, ಅನಂತರಂ - ಮುಂದೆಮಾಡಿಕೊಳ್ಳತಕ್ಕ, ಕಾರ್ಯಶೇಷಂ - ಉಳಿದ ಕೆಲಸಗಳನ್ನು, ಕೃತ್ವಾ - ಮಾಡಿ, ಸಂತ್ವರಿತಾಃ - ಜಾಗ್ರತೆಯುಳ್ಳವರಾಗಿ, ಯಯುಃ - ತೆರಳಿದರು. ॥ ೧೧ ॥ ತೇ- ಆ ದೂತರು, ಅಪರತಾಲಸ್ಯ - ಅಪರತಾಲವೆಂಬ ಬೆಟ್ಟದ, ನ್ಯಂತೇನ - ಮುಂದೆಹೋಗತಕ್ಕ ಮಾರ್ಗದಿಂದ, ಪ್ರಲಂಬಸ್ಯ - ಪ್ರಲಂಬಪರ್ವತದ, ಉತ್ತರಂಪ್ರತಿ - ಉತ್ತರ ಮಾರ್ಗದಲ್ಲಿ, ಮಧ್ಯೇನ -

---

ವಾಗಿಯೂ ಹೇಳಕೂಡದು. ಇಷ್ಟುಮಾತ್ರವಲ್ಲದೆ ಈ ವಿಷಯದಲ್ಲಿ ಅವನಿಗೆ ಸ್ವಲ್ಪವಾದರೂ ಸೂಚನೆಯನ್ನು ತೋರಿಸಬಾರದು. ಕೇಕಯರಾಜನಿಗೂ, ಭರತನಿಗೂ ಪಟ್ಟೆವಸ್ತ್ರಗಳನ್ನೂ, ವಿವಿಧವಾದ ಆಭರಣಗಳನ್ನೂ ಬೇಗನೆ ತೆಗೆದುಕೊಂಡು ಜಾಗ್ರತೆಯಾಗಿ ಹೊರಡಿರಿ'' ಈ ಪ್ರಕಾರವಾಗಿ ವಸಿಷ್ಠಮುನೀಶ್ವರನು ಆಜ್ಞಾಪಿಸಲು ಸಿದ್ಧಾರ್ಥನೇ ಮೊದಲಾದ ದೂತರು ಮಾರ್ಗ ಭತ್ಯಗಳನ್ನು ತೆಗೆದುಕೊಂಡು ಮಹಾ ವೇಗಗಾಮಿಗಳಾದ ತಮ್ಮ ಕುದುರೆಗಳನ್ನೇರಿ, ಕೇಕಯ ದೇಶವನ್ನು ಕುರಿತು ಪಯಣ ಬೆಳಸಿ ತಮ್ಮ ತಮ್ಮ ಮನೆಗಳಿಗೆ ಹೇಳಿ ಬರಲು ಹೊರಟುಹೋದರು. ॥೫-೧೦॥ ಆ ಬಳಿಕ ವಸಿಷ್ಠನಿಂದಾಜ್ಞಾಪಿತರಾದ ಆ ದೂತರು ಪ್ರಯಾಣಕ್ಕೆ ಯೋಗ್ಯವಾದ ಎಲ್ಲ ಕಾರ್ಯಗಳನ್ನೂ ನೆರವೇರಿಸಿಕೊಂಡು ಬಹು ಜಾಗ್ರತೆಯಾಗಿ ತೆರಳಿದವರಾದರು. ಹೀಗೆ ಪಯಣ ಹೊರಟ ಆ ದೂತರು ಮೊದಲು ದಕ್ಷಿಣೋತ್ತರ ಮಾರ್ಗವಾಗುಳ್ಳ ಅಪರತಾಲ ಪರ್ವತವನ್ನು ಕಂಡರು. ಅದಕ್ಕೆ ಪಶ್ಚಿಮದಲ್ಲಿ ದಕ್ಷಿಣೋ

ಮಾಲಿನೀಂ ॥ ೧೨ ॥ ತೇಹಾಸ್ತಿನಪುರೇ ಗಂಗಾಂ ತೀರ್ತ್ವಾ ಪ್ರತ್ಯಙ್ಮುಖಾ ಯಯುಃ ॥ ಪಾಂಚಾಲದೇಶ ಮಾಸಾದ್ಯ ಮಧ್ಯೇನ ಕುರುಜಾಂಗಲಂ ॥ ೧೩ ॥ ಸರಾಂಸಿಚ ಸುಪೂರ್ಣಾನಿ ನದೀಶ್ಚ ವಿಮಲೋದಕಾಃ ॥ ನಿರೀಕ್ಷಮಾಣಾ ಸ್ತೇ ಜಗ್ಮು ರ್ದೂತಾಃ ಕಾರ್ಯವಶಾ ದ್ದ್ರುತಂ ॥ ೧೪ ॥ ತೇಪ್ರಸನ್ನೋದಕಾಂ ದಿವ್ಯಾಂ ನಾನಾವಿಹಗ ಸೇವಿತಾಂ ॥ ಅತೀತ್ಯ ಜಗ್ಮು ರ್ವೇಗೇನ ಶರದಂಡಾಂ ಜನಾಕುಲಾಂ ॥೧೫॥ ನಿಕೂಲ ವೃಕ್ಷಮಾಸಾದ್ಯ ದಿವ್ಯಂ ಸತ್ಯೋಪಯಾಚನಂ ॥

ಅಪರತಾಲಪ್ರಲಂಬ ಪರ್ವತಗಳ ಮಧ್ಯದಲ್ಲಿ, ಮಾಲಿನೀ - ಮಾಲಿನಿಯೆಂಬ, ನದೀಂ - ಹೊಳೆಯನ್ನು, ನಿಷೇವಮಾಣಾಃ - ಸೇವಿಸಿದವರಾಗಿ, ಜಗ್ಮುಃ - ತೆರಳಿದರು. ॥ ೧೨ ॥ ತೇ - ಆ ದೂತರು, ಹಾಸ್ತಿನಪುರೇ - ಹಸ್ತಿನಾಪಟ್ಟಣದ ಸಮೀಪದಲ್ಲಿ, ಗಂಗಾಂ - ಗಂಗೆಯನ್ನು, ತೀರ್ತ್ವಾ - ದಾಂಟಿ, ಪಾಂಚಾಲದೇಶಂ - ಪಾಂಚಾಲ ದೇಶವನ್ನು, ಆಸಾದ್ಯ - ಹೊಂದಿ, ಕುರುಜಾಂಗಲಂ - ಕುರುದೇಶದ ಏಕಪ್ರದೇಶವಾದ ಜಾಂಗಲದೇಶದ, ಮಧ್ಯೇನ - ಮಧ್ಯಮಾರ್ಗದಿಂದ, ಪ್ರತ್ಯಙ್ಮುಖಾಃ - ಪಡವಲ ಮುಖರಾಗಿ, ಯಯುಃ - ತೆರಳಿದರು. ॥ ೧೩ ॥ ತೇ ದೂತಾಃ - ಆ ದೂತರು, ಸುಪೂರ್ಣಾನಿ - ಸಂಪೂರ್ಣ ಜಲವುಳ್ಳ, ಸರಾಂಸಿಚ - ಸರೋವರಗಳನ್ನೂ, ವಿಮಲೋದಕಾಃ - ನಿರ್ಮಲವಾದ ನೀರುಳ್ಳ, ನದೀಶ್ಚ - ನದಿಗಳನ್ನೂ, ನಿರೀಕ್ಷಮಾಣಾಃ - ನೋಡುತ್ತ, ಕಾರ್ಯವಶಾತ್ - ಕಾರ್ಯಾಧೀನತೆಯಿಂದ, ದ್ರುತಂ - ಶೀಘ್ರವಾಗಿ, ಜಗ್ಮುಃ - ತೆರಳಿದರು. ॥ ೧೪ ॥ ತೇ - ಆ ದೂತರು, ಪ್ರಸನ್ನೋದಕಾಂ - ನಿರ್ಮಲವಾದ ನೀರುಳ್ಳ, ದಿವ್ಯಾಂ - ಮನೋಹರವಾದ, ನಾನಾವಿಹಗಸೇವಿತಾಂ- ಅನೇಕ ಬಗೆಗಳಾದ ಹಕ್ಕಿಗಳಿಂದ ಸೇವಿಸಲ್ಪಟ್ಟ, ಜನಾಕುಲಾಂ-ಜನರಿಂದ ತುಂಬಿರುವ, ಶರದಂಡಾಂ- ಶರದಂಡೆವೆಂಬ ಹೊಳೆಯನ್ನು, ಅತೀತ್ಯ - ದಾಟಿ, ವೇಗೇನ - ವೇಗದಿಂದ, ಜಗ್ಮುಃ - ತೆರಳಿದರು. ॥ ೧೫ ॥ ತೇ - ಆ ದೂತರು, ದಿವ್ಯಂ - ಮನೋಹರವಾದ, ಸತ್ಯೋಪಯಾಚನಂ, ಸತ್ಯ - ಸಫಲ

ತ್ತರವಾಗಿರುವ ಪ್ರಲಂಬ ಪರ್ವತವನ್ನು ನೋಡಿದವರಾದರು. ಆದುದರಿಂದಲಾ ದೂತರು ಮೊದಲು ಅಯೋಧ್ಯೆಯಿಂದ ಪಶ್ಚಿಮಾಭಿಮುಖರಾಗಿ ಸ್ವಲ್ಪದೂರಹೋಗಿ ಅಪರತಾಲ ಪರ್ವತದ ದಕ್ಷಿಣ ಶಿಖರವನ್ನತಿಕ್ರಮಿಸಿದರು. ಆಮೇಲೆ ಅಪರತಾಲ, ಪ್ರಲಂಬ ಈ ಪರ್ವತಗಳ ನಡುವೆ ಹರಿಯುವ ಮಾಲಿನೀ ನದಿಯ ತೀರದ ಮಾರ್ಗವಾಗಿ ಸ್ವಲ್ಪದೂರ ಹೋದರು. ಆಮೇಲೆ ಪ್ರಲಂಬ ಪರ್ವತದ ಉತ್ತರಭಾಗದಿಂದ ಪಶ್ಚಿಮಭಾಗಕ್ಕೆ ಹೋದರು. ಆಮೇಲೆಯಾವೇಗಗಾಮಿಗಳಾದ ರಾಜದೂತರು ಹಸ್ತಿನಾಪುರದ ಬಳಿಯಲ್ಲಿ ಗಂಗಾನದಿಯನ್ನು ದಾಂಟಿದವರಾಗಿ ಕುರುಜಾಂಗಲದೇಶದ ಮಧ್ಯಭಾಗವನ್ನು ಸೇರಿ ಪಾಂಚಾಲದೇಶಗಳಿಗೆ ಹೋಗಿ ಅಲ್ಲಿ ತಂಗಿದ್ದು ಪಶ್ಚಿಮಾಭಿಮುಖರಾಗಿ ಮುಂಬರಿದರು. ಆಮೇಲೆ ಪಾಂಚಾಲ ದೇಶದಲ್ಲಿರುವ ಚಿಕ್ಕಚಿಕ್ಕ ದೇಶಗಳನ್ನು ದಾಟ ಜಲಪೂರ್ಣಗಳಾದ ಹೊಳೆಗಳನ್ನೂ, ನಿರ್ಮಲೋದಕಗಳುಳ್ಳ ನದಿಗಳನ್ನೂ ನೋಡುತ್ತ, ಕಾರ್ಯವಶದಿಂದ ಎಲ್ಲಿಯೂ ನಿಲ್ಲದವರಾಗಿ ಬಹು ಜಾಗ್ರತೆಯಾಗಿ ತೆರಳಿದರು. ॥ ೧೧-೧೫ ॥ ಇಷ್ಟುಮಾತ್ರವಲ್ಲದೆ ಆ ದೂತರು ಮಹಾ ವೇಗದಿಂದ ಮುಂಬರಿಯುತ್ತ, ಜಲ ಪರಿಪೂರ್ಣವಾದ ಶರದಂಡವೆಂಬ ನದಿಯ ತೀರಕ್ಕೆ ಹೋಗಿ ಆ ನದಿಯನ್ನು ದಾಂಟ, ಅದಕ್ಕೆ ಉತ್ತರಕ್ಕಿರುವ ದೇವತಾಧಿಷ್ಠಾನಗಳನ್ನು ಹೊಂದಿರುವುದೂ,

ಅಭಿವಾದ್ಯಾ ಭಿವಾದ್ಯಂ ತಂ ಕಳಿಂಗಾಂ ಪ್ರಾವಿಶ್ರ್ ಪುರೀಂ ॥ ೧೬ ॥ ಅಭಿ
ಕಾಲಂ ತತಃ ಪ್ರಾಪ್ಯ ತೇಜೋಭಿ ಭವನಾ ಚ್ಚ್ಯುತಾಃ ॥ ಪಿತೃಪೈತಾಮಹೀಂ
ಪುಣ್ಯಾಂ ತೇರು ರಿಕ್ಷುಮತೀಂ ನದೀಂ ॥ ೧೭ ॥ ಅವೇಕ್ಷ್ಯಾಂಜಲಿ ಪಾನಾಂಶ್ಚ
ಬ್ರಾಹ್ಮಣಾ ನ್ವೇದಪಾರಗಾ್ ॥ ಯಯುು ರ್ಮಧ್ಯೇನ ಬಾಹ್ಲೀಕಾ್ ಸುದಾಮಾನ
ನಂಚ ಪರ್ವತಂ ॥ ೧೮ ॥ ವಿಷ್ಣೋಃ ಪದಂ ಪ್ರೇಕ್ಷಮಾಣಾ ವಿಪಾಶಾಂ ಚಾಪಿ
ಶಾಲ್ಮಲೀಂ ॥ ನದೀ ರ್ವಾಪೀ ಸ್ತಟಾಕಾನಿ ಪಲ್ವಲಾನಿ ಸರಾಂಸಿಚ ॥ ೧೯ ॥

ವಾದ, ಉಪಯಾಚನಂ - ಪ್ರಾರ್ಥನೆಯುಳ್ಳ, ನಿಕೂಲವೃಕ್ಷಂ - ತೀರದಲ್ಲಿರುವ ವೃಕ್ಷವನ್ನು, ಆಸಾದ್ಯ- ಹೊಂದಿ, ಅಭಿವಾದ್ಯಂ - ವಂದನೆಮಾಡತಕ್ಕ, ತಂ - ಆ ಗಿಡವನ್ನು, ಅಭಿವಾದ್ಯ - ನಮಸ್ಕರಿಸಿ, ಕಳಿಂಗಾಂ - ಕಳಿಂಗದೇಶವೆಂಬ, ಪುರೀಂ - ಪಟ್ಟಣವನ್ನು, ಪ್ರಾವಿಶ್ರ್ - ಹೊಕ್ಕರು. ॥ ೧೬ ॥ ತತಃ - ಬಳಿಕ, ಅಭಿಕಾಲಂ - ಅಭಿಕಾಲವೆಂಬ ಗ್ರಾಮವನ್ನು, ಪ್ರಾಪ್ಯ - ಹೊಂದಿ, ತೇಜೋಭಿಭವ ನಾತ್ - ತೇಜೋಭಿಭವನವೆಂಬ ಗ್ರಾಮದಿಂದ, ಚ್ಯುತಾಃ - ಹೊರಟವರಾಗಿ, ಪಿತೃಪೈತಾಮಹೀಂ - ದಶರಥರಾಯನ ಪಿತೃಪಿತಾಮಹಾದ್ಯನು ಭೂತವಾದ, ಪುಣ್ಯಾಂ - ಪುಣ್ಯಕರವಾದ, ಇಕ್ಷುಮತೀಂ - ಇಕ್ಷುಮತಿಯೆಂಬ, ನದೀಂ - ನದಿಯನ್ನು, ತೇರುಃ - ದಾಟಿದರು. ॥ ೧೭ ॥ ಅಂಜಲಿಪಾನಾಂಶ್ಚ- ಬೊಗಸೆಯ ಪ್ರಮಾಣವುಳ್ಳ ಉದಕವೇ ಆಹಾರವಾಗುಳ್ಳ, ವೇದಪಾರಗಾ್ - ವೇದಶಾಸ್ತ್ರಪಾರಂಗತ ರಾದ, ಬ್ರಾಹ್ಮಣಾ್ - ಬ್ರಾಹ್ಮಣರನ್ನು, ಅವೇಕ್ಷ್ಯ - ದರ್ಶನಮಾಡಿಕೊಂಡು, ಬಾಹ್ಲೀಕಾ್ - ಬಾಹ್ಲೀಕ ದೇಶಗಳನ್ನು, ಸುದಾಮಾನಂ - ಸುದಾಮವೆಂಬ, ಪರ್ವತಂ - ಪರ್ವತಕ್ಕೆ, ಮಧ್ಯೇನ - ಮಧ್ಯಪ್ರದೇಶವನ್ನು ಕುರಿತು, ಯಯೌ - ತೆರಳಿದರು. ॥ ೧೮ ॥ ವಿಷ್ಣೋಃಪದಂ - ವಿಷ್ಣುಪದ ವೆಂಬ ಪ್ರದೇಶವನ್ನು, ವಿಪಾಶಾಂ - ವಿಪಾಶವೆಂಬ ನದಿಯನ್ನು, ಶಾಲ್ಮಲೀಂಚಾಪಿ - ಶಾಲ್ಮಲೀ ವೃಕ್ಷ ವನ್ನೂ, ನದೀಃ - ಇತರ ನದಿಗಳನ್ನೂ, ವಾಪೀಃ - ಭಾವಿಗಳನ್ನೂ, ತಟಾಕಾನಿ - ಕೆರೆಗಳನ್ನೂ, ಪಲ್ವ ಲಾನಿ - ಸರಸ್ಸುಗಳನ್ನೂ, ಸರಾಂಸಿಚ - ದೊಡ್ಡ ಸರೋವರಗಳನ್ನೂ, ಪ್ರೇಕ್ಷಮಾಣಾಃ - ನೋಡುತ್ತ,

---

ಸತ್ಯೋಪಯಾಚನವೆಂದು ಪ್ರಸಿದ್ಧವಾದುದೂ ಆದ ತೀರವೃಕ್ಷದ ಬಳಿಸಾರಿ, ಸಕಲ ಸಂಕಲ್ಪ ಗಳನ್ನೂ ಆಗುಗೊಳಿಸುವಂತಹ ಮಹಿಮೆಯುಳ್ಳ ಆ ವೃಕ್ಷಕ್ಕೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿದವರಾಗಿ ಕಳಿಂಗವೆಂಬ ಪಟ್ಟಣವನ್ನು ಸೇರಿದರು. ಆಮೇಲೆ ಅಭಿಕಾಲವೆಂಬ ಪಟ್ಟಣಕ್ಕೆ ಹೋಗಿ ದಶರಥರಾಯನ ಪಿತೃಪೈತಾ ಮಹಾದಿಗಳಿಂದ ಅನುಭವಿಸಲ್ಪಟ್ಟ ಬಹು ಪುಣ್ಯಕರ ವಾದ ಇಕ್ಷುಮತಿಯೆಂಬ ಹೊಳೆಯನ್ನು ದಾಂಟಿದವರಾದರು. ಈ ರೀತಿಯಾನದಿಯನ್ನು ದಾಂಟದವರಾಗಿ ಬೊಗಸೆಗಳಿಂದ ಆ ನದಿಯ ನೀರನ್ನು ಕುಡಿದು ವೇದಪಾರಂಗತರೂ, ಆ ನದಿಯ ತೀರದಲ್ಲಿರುವವರೂ ಆದ ಬ್ರಾಹ್ಮಣೋತ್ತಮರ ದರ್ಶನ ಮಾಡಿಕೊಂಡು ಮುಂದೆ ಪ್ರಯಾಣ ಮಾಡಿದವರಾಗಿ ಬಾಹ್ಲೀಕ ದೇಶಗಳನ್ನು ಸೇರಿ, ಅವುಗಳ ಸಮೀಪದಲ್ಲಿರುವ ಸುದಾಮವೆಂಬ ಪರ್ವತದ ಮಧ್ಯಪ್ರದೇಶವನ್ನು ಕುರಿತು ತೆರಳಿದರು. ॥೧೬-೧೮॥ ಬಾಹ್ಲೀಕ ದೇಶ, ಸುದಾಮ ಪರ್ವತ ಇವುಗಳ ಮಧ್ಯಭಾಗದಲ್ಲಿ ಹೋಗುತ್ತ ವಿಷ್ಣುಪಾದಾಂಕಿತವಾದ ಪವಿತ್ರ ಸ್ಥಳವನ್ನೂ, ವಿಪಾಶವೆಂಬ ಪುಣ್ಯನದಿಯನ್ನೂ, ಶಾಲ್ಮಲೀ ವೃಕ್ಷಗಳನ್ನೂ ನೋಡ ಬೇಕಾದ ನದಿಗಳನ್ನೂ, ಕೊಳಗಳನ್ನೂ, ಕೆರೆಗಳನ್ನೂ, ನೀರು ನಿಂತ ಹಳ್ಳಗಳನ್ನೂ ದಾಂಟ

ಪಶ್ಯಂತೋ ವಿವಿಧಾಂಶ್ಚಾಪಿ ಸಿಂಹವ್ಯಾಘ್ರ ಮೃಗದ್ವಿಪಾನ್॥ಯಯುಃ ಪಥಾಽತಿ
ಮಹತಾ ಶಾಸನಂ ಭರ್ತು ರೀಪ್ಸವಃ ॥ ೨೦ ॥ ತೇ ಶ್ರಾಂತವಾಹನಾ ದೂತಾ
ವಿಕೃಷ್ಟೇನ ಪಥಾ ತತಃ॥ಗಿರಿವ್ರಜಂ ಪುರವರಂ ಶೀಘ್ರಮಾಸೇದು ರಂಜಸಾ॥೨೧॥

ಭರ್ತುಃ ಪ್ರಿಯಾರ್ಥಂ ಕುಲರಕ್ಷಣಾರ್ಥಂ
ಭರ್ತುಶ್ಚ ವಂಶಸ್ಯ ಪರಿಗ್ರಹಾರ್ಥಂ ॥
ಅಹೇಡಮಾನಾ ಸ್ತ್ವರಯಾಹಿ ದೂತಾ
ರಾತ್ರ್ಯಾಂತು ತೇತತ್ಪುರ ಮೇವ ಯಾತಾಃ ॥ ೨೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಷಷ್ಠಿತಮಸ್ಸರ್ಗಃ.

ವಿವಿಧಾನ್ - ನಾನಾಬಗೆಗಳಾದ, ಸಿಂಹವ್ಯಾಘ್ರಮೃಗದ್ವಿಪಾನ್-ಸಿಂಹಗಳೂ, ಹುಲಿ, ಚಿಗುರೆ, ಆನೆ ಎಂಬಿ ವುಗಳನ್ನು, ಪಶ್ಯಂತಃ - ನೋಡುತ್ತ, ಭರ್ತುಃ - ಒಡೆಯನ, ಶಾಸನಂ - ಅಜ್ಞೆಯನ್ನು, ಈಪ್ಸವಃ - ಇಚ್ಛಿಸುತ್ತ, ಅತಿಮಹತಾ - ಬಹಳದೂರವಾದ, ಪಥಾ - ಮಾರ್ಗದಿಂದ, ಯಯುಃ - ತೆರಳಿದರು. ॥ ೨೦ ॥ ತೇ ದೂತಾಃ - ಆ ದೂತರು, ತತಃ - ಬಳಿಕ, ವಿಪ್ರಕೃಷ್ಟೇನ - ಅತಿದೂರವಾದ, ಪಥಾ - ಮಾರ್ಗದಿಂದ, ಶ್ರಾಂತವಾಹನಾಃ - ಬಳಲಿದ ಕುದುರೆಗಳುಳ್ಳವರಾಗಿ, ಅಂಜಸಾ - ಮನೋವೇಗ ದಿಂದ, ಶೀಘ್ರಂ - ಜಾಗ್ರತೆಯಾಗಿ, ಗಿರಿವ್ರಜಂ - ರಾಜಗೃಹವೆಂಬ, ಪುರವರಂ - ಪಟ್ಟಣವನ್ನು, ಆಸೇದುಃ - ಹೊಂದಿದರು. ॥ ೨೧ ॥ ತೇ ದೂತಾಃ - ಆ ಭಟರು, ಭರ್ತುಃ - ಒಡೆಯನಾದ ದಶರಥ ರಾಯನಿಗೆ, ಪ್ರಿಯಾರ್ಥಂ - ಪರಲೋಕಪ್ರಾಪ್ತಿರೂಪವಾದ ಇಷ್ಟಕ್ಕೋಸ್ಕರ, ಕುಲರಕ್ಷಣಾರ್ಥಂ - ದಶರಥರಾಯನ ವಂಶವನ್ನು ಕಾಪಾಡಲೋಸುಗ, ಭರ್ತುಃ - ದಶರಥರಾಯನ, ವಂಶಸ್ಯಚ - ವಂಶಸ್ಥ ನಾದ ಭರತನ, ಪರಿಗ್ರಹಾರ್ಥಂಚ-ಪ್ರತಿಷ್ಠಾಪನಾರ್ಥವಾಗಿಯೂ, ತ್ವರಯಾ-ಬೇಗನೆ, ಅಹೇಡಮಾನಾಃ- ಅನಾದರಣೆಮಾಡದೆ, ರಾತ್ರ್ಯಾಂತು - ಅದೇ ರಾತ್ರಿಯಲ್ಲಿ, ತತ್ಪುರಮೇವ-ಅದೇ ಪಟ್ಟಣವನ್ನು ಕುರಿತು, ಯಾತಾಃ - ಹೋದರು.

ಇತ್ಯಾರ್ಷೇ ಶ್ರೀಮದ್ರಾಯಣೇ ಅಯೋಧ್ಯಾಕಾಂಡೇ ಅಷ್ಟಷಷ್ಠಿತಮಸ್ಸರ್ಗಃ.

ದವರಾಗಿ ನಾನಾವಿಧವಾದ, ಸಿಂಹವ್ಯಾಘ್ರಾದಿ ಕ್ರೂರಮೃಗಗಳನ್ನೂ ನೋಡುತ್ತ ಸ್ವಾಮ್ಯಾ ಜ್ಞೆಯನ್ನು ನೆರವೇರಿಸುವವರಾಗಿ ಬಹು ದೊಡ್ಡದಾದ ಮಾರ್ಗದಿಂದ ಮುಂದಕ್ಕೆ ತೆರಳಿದರು. ಅನಂತರ ಆ ದೂತರು, ಬಹಳ ದೀರ್ಘವಾದ ಮಾರ್ಗ ಪ್ರಯಾಣದಿಂದ ಬಳಲಿದ ಕುದುರೆ ಗಳುಳ್ಳವರಾಗಿ, ಮನೋವೇಗದಿಂದಲೇ, ರಾಜಗೃಹವೆಂಬ ಕೇಕಯರಾಯನ ಪಟ್ಟಣವನ್ನು ಸೇರಿದರು. ಬಳಿಕ ಆ ದೂತರು ಒಡೆಯನಾದ ದಶರಥರಾಯನಿಗೆ ಪರಲೋಕಪ್ರಾಪ್ತಿರೂಪ ವಾದ ಇಷ್ಟಕ್ಕೋಸುಗವೂ, ಆತನ ವಂಶ ಸಂರಕ್ಷಣೆಗೋಸುಗವೂ, ಭರತರಾಜ್ಯ ಪಟ್ಟಾಭಿ ಷೇಕಕ್ಕೋಸುಗವೂ ಸಹ ಏನೊಂದೂ ಅನಾದರಣೆಯಿಲ್ಲದೆ ಬಹು ಜಾಗ್ರತೆಯಾಗಿ ರಾತ್ರಿ ಯಲ್ಲಿಯೇ ಆ ರಾಜಗೃಹವೆಂಬ ಪಟ್ಟಣವನ್ನು ಸೇರಿದರು. ॥ ೧೯-೨೨ ॥

ಇಂತಿದು ವಸಿಷ್ಠನಿಯುಕ್ತ ದೂತಕೃತ ಕೇಕಯ ದೇಶಾಗಮನ ವೃತ್ತಾಂತ ನಿರೂಪಣವೆಂಬ ಅರವತ್ತೆಂಟನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕೋನಸಪ್ತತಿತಮಸ್ಸರ್ಗಃ.

ಯಾಮೇವ ರಾತ್ರಿಂ ತೇದೂತಾಃ ಪ್ರವಿಶಂತಿಸ್ಮ ತಾಂ ಪುರೀಂ ॥ ಭರತೇ ನಾಪಿ ತಾಂ ರಾತ್ರಿಂ ಸ್ವಪ್ನೋ ದೃಷ್ಟೋಯ ಮಪ್ರಿಯಃ ॥ ೧ ॥ ವ್ಯುಷ್ಟಾ ಮೇವತು ತಾಂ ರಾತ್ರಿಂ ದೃಷ್ಟ್ವಾ ತಂ ಸ್ವಪ್ನ ಮಪ್ರಿಯಂ ॥ ಪುತ್ರೋ ರಾಜಾಧಿ ರಾಜಸ್ಯ ಸುಭೃಶಂ ಪರ್ಯತಪ್ಯತ ॥ ೨ ॥ ತಪ್ಯಮಾನಂ ಸಮಾಜ್ಞಾಯ ವಯಸ್ಯಾಃ ಪ್ರಿಯವಾದಿನಃ ॥ ಆಯಾಸಂಹಿ ವಿನೇಷ್ಯಂತ ಸ್ಸಭಾಯಾಂ ಚಕ್ರಿರೇ ಕಥಾಃ ॥ ೩ ॥ ವಾದಯಂತಿ ತಥಾ ಶಾಂತಿಂ ಲಾಸಯಂತ್ಯಪಿ ಚಾಪರೇ ॥

ತೇ ದೂತಾಃ - ಆ ದೂತರು, ಯಾಮೇವರಾತ್ರಿಂ - ಯಾವ ರಾತ್ರಿಯಲ್ಲಿ, ತಾಂಪುರೀಂ - ಆ ಪಟ್ಟಣವನ್ನು, ಪ್ರವಿಶಂತಿಸ್ಮ - ಪ್ರವೇಶಮಾಡಿದರೋ, ಭರತೇನಾಪಿ - ಭರತನಿಂದಲೂ ಕೂಡ, ತಾಂರಾತ್ರಿಂ - ಅದೇ ರಾತ್ರಿಯಲ್ಲಿ, ಅಪ್ರಿಯಃ - ಅರಿಷ್ಟಕರವಾದ, ಅಯಂಸ್ವಪ್ನಃ - ಈ ಸ್ವಪ್ನವು, ದೃಷ್ಟಃ - ಕಾಣಲಾಯಿತು. ॥ ೧ ॥ ರಾಜಾಧಿರಾಜಸ್ಯ - ರಾಜಾಧಿರಾಜನಾದ ದಶರಥರಾಯನಿಗೆ, ಪುತ್ರಃ - ಕುವರನಾದ ಭರತನು, ತಾಂರಾತ್ರಿಂ - ಆ ರಾತ್ರಿಯು, ವ್ಯುಷ್ಟಾಮೇವತು - ಬೆಳಗಾಗುತ್ತಿರಲು, ಅಪ್ರಿಯಂ - ಅನಿಷ್ಟಕರವಾದ, ತಂಸ್ವಪ್ನಂ-ಆ ಸ್ವಪ್ನವನ್ನು, ದೃಷ್ಟ್ವಾ - ಕಂಡು, ಸುಭೃಶಂ- ಬಹಳವಾಗಿ, ಪರ್ಯತಪ್ಯತ - ಪರಿತಪಿಸಿದನು. ॥ ೨ ॥ ಪ್ರಿಯವಾದಿನಃ - ಇಷ್ಟವಾದ ಮಾತುಗಳನ್ನು ನುಡಿಯುತ್ತಿರುವ, ವಯಸ್ಯಾಃ - ಸ್ನೇಹಿತರು, ತಪ್ಯಮಾನಂ - ಪರಿತಪಿಸುತ್ತಿರುವನನ್ನಾಗಿ, ಸಮಾಜ್ಞಾಯ - ತಿಳಿದು, ಆಯಾಸಂ - ಮನೋವ್ಯಥೆಯನ್ನು, ವಿನೇಷ್ಯಂತಃ - ಹೋಗಲಾಡಿಸಲಿಚ್ಛಿಸಿ, ಸಭಾಯಾಂ - ಸಭೆಯಲ್ಲಿ, ಕಥಾಃ - ಕಥೆಗಳನ್ನು, ಚಕ್ರಿರೇ - ಹೇಳಿದರು. ॥ ೩ ॥ ತಥಾ- ಹಾಗೆಯೇ, ಕೇಚಿತ್ - ಕೆಲವರು, ಶಾಂತಿಂ - ದುಃಖೋಪಶಾಂತಿಯನ್ನು ಕುರಿತು, ವಾದಯಂತಿ - ವಾದ್ಯವಿಶೇಷಗಳನ್ನು ಬಾರಿಸಿದರು, ಅಪರೇಚ - ಮತ್ತೆ ಕೆಲವರು, ಲಾಸಯಂತಿಚ - ನರ್ತನಮಾಡಿಸಿ

ಈ ಪ್ರಕಾರವಾಗಿ ವಸಿಷ್ಠಮುನಿ ಪುಂಗವನಿಂದಾಜ್ಞಪ್ತರಾದ ಆ ದೂತರು ರಾಜಗೃಹವೆಂಬ ಕೇಕಯರಾಜನ ಪಟ್ಟಣಕ್ಕೆ ಹೋಗಿ ಸೇರಿದ ರಾತ್ರಿಯಲ್ಲಿಯೇ ಭರತನಿಗೆ ದುಃಖಕರವಾದ ಈ ವೃತ್ತಾಂತವೆಲ್ಲವೂ ಸ್ವಪ್ನದಲ್ಲಿ ಗೋಚರನಾಯಿತು. ಆ ರೀತಿ ರಾಜಾಧಿರಾಜನಾದ ದಶರಥರಾಯನ ಪುತ್ರನಾದ ಭರತನು ಬೆಳಗಾಗುತ್ತಲೇ ಮಹಾಘೋರವಾದ ಆ ಸ್ವಪ್ನವನ್ನು ಸ್ಮರಿಸಿಕೊಂಡು ಬಹಳವಾದ ಪರಿತಾಪವನ್ನಾಂತವನಾದನು. ಆಗ ಸಂತೋಷಕರವಾಗಿ ಮಾತನಾಡುವುದರಲ್ಲಿ ಅಧಿಕ ಸಾಮರ್ಥ್ಯವುಳ್ಳವರೂ, ಸ್ನೇಹಿತರೂ ಭರತನೇಕರಿಂದೀರೀತಿ ಸಂತಾಪಕ್ಕೊಳಗಾಗಿರುವನೋ ಎಂದು ಶಂಕಿಸಿದವರಾಗಿ, ಅದರ ಹೇತುವನ್ನರಿತು, ಆ ವ್ಯಸನವನ್ನು ಹೋಗಲಾಡಿಸಲು ಮನೋಹರವಾದ ಕಥೆಗಳನ್ನು ಸಭಾಂಗಣದಲ್ಲಿ ಒಕ್ಕಣಿಸುತ್ತಿದರು. ಅಲ್ಲಿ ಕೆಲವರು ಭರತನ ದುಃಖಶಾಂತಿಗಾಗಿ ವೀಣೆಯನ್ನು ಬಾಜಿಸುತ್ತ

ನಾಟಕಾನ್ಯಪರೇ ಪ್ರಾಹು ರ್ಹಾಸ್ಯಾನಿ ವಿವಿಧಾನಿಚ ॥ ೪ ॥ ಸತೈರ್ಮಹಾತ್ಮಾ ಭರತಸ್ಸಖಿಭಿಃ ಪ್ರಿಯವಾದಿಭಿಃ ॥ ಗೋಷ್ಠೀ ಹಾಸ್ಯಾನಿ ಕುರ್ವದ್ಭಿ ರ್ನಪ್ರಾಹೃಷ್ಯತ ರಾಘವಃ ॥ ೫ ॥ ತಮಬ್ರವೀ ತ್ಪ್ರಿಯಸಖೋ ಭರತಂ ಸಖಿಭಿ ರ್ವೃತಂ॥ ಸುಹೃದ್ಭಿಃ ಪರ್ಯುಪಾಸೀನಃ ಕಿಂಸಖೇ! ನಾನುಮೋದಸೇ ॥ ೬ ॥ ಏವಂ ಬ್ರುವಾಣಂ ಸುಹೃದಂ ಭರತಃ ಪ್ರತ್ಯುವಾಚಹ ॥ ಶೃಣು ತ್ವಂ ಯನ್ನಿಮಿತ್ತಂ ಮೇ ದೈನ್ಯ ಮೇತದು ಪಾಗತಂ ॥ ೭ ॥ ಸ್ವಪ್ನೇಪಿ ತರಮದ್ರಾಕ್ಷಂ ಮಲಿನಂ

ದರು, ಅಪರೇ - ಇನ್ನು ಕೆಲವರು, ನಾಟಕಾನಿ - ನಾಟಕಗಳನ್ನು, ವಿವಿಧಾನಿ - ನಾನಾಬಗೆಗಳಾದ, ಹಾಸ್ಯಾನಿ - ಹಾಸ್ಯರಸಪ್ರಧಾನವಾದ ವಾಕ್ಯಗಳನ್ನು, ಪ್ರಾಹುಃ - ಹೇಳಿದರು, ॥ ೪ ॥ ರಾಘವಃ - ರಘುವಂಶೋತ್ಪನ್ನನಾದ, ಮಹಾತ್ಮಾ - ಮಹಾಮನಸ್ವಿಯಾದ, ಸಭರತಃ - ಆ ಭರತನು, ಗೋಷ್ಠೀ ಹಾಸ್ಯಾನಿ - ಸಭೆಯಲ್ಲಿ ಮಾಡುವ ಹಾಸ್ಯರಸಪ್ರಧಾನವಾದ ವಾಕ್ಯಗಳನ್ನು, ಕುರ್ವದ್ಭಿಃ - ಆಡುತ್ತಿರುವ, ಪ್ರಿಯವಾದಿಭಿಃ - ಪ್ರಿಯವಾದ ಮಾತುಗಳನ್ನಾಡುತ್ತಿರುವ, ತೈಸ್ಸಖಿಭಿಃ - ಆ ಸ್ನೇಹಿತರೊಡನೆ, ನಪ್ರಾಹೃಷ್ಯತ - ಸಂತೋಷಿಸಲಿಲ್ಲವು. ॥ ೫ ॥ ಪ್ರಿಯಸಖಃ - ಇಷ್ಟನಾದ ಸಖನು, ಸಖಿಭಿಃ - ಸ್ನೇಹಿತರಿಂದ, ವೃತಂ - ಸುತ್ತುವರೆಯಲ್ಪಟ್ಟ, ತಂಭರತಂ - ಆ ಭರತನನ್ನು ಕುರಿತು, ಹೇ ಸಖೇ- ಎಲೈ ಸ್ನೇಹಿತನೇ, ಸುಹೃದ್ಭಿಃ - ಸ್ನೇಹಿತರಿಂದ, ಪರ್ಯುಪಾಸೀನಃ - ಸೇವಿಸಲ್ಪಟ್ಟವನಾದರೂ, ಕಿಂ ನಾನುಮೋದಸೇ - ಏಕೆ ಸಂತೋಷಗೊಳ್ಳದೆ ಇರುವೆ, ಇತಿ - ಇಂತೆಂದು, ಅಬ್ರವೀತ್ - ನುಡಿದರು. ॥ ೬ ॥ ಭರತಃ - ಭರತನು, ಏವಂ - ಹೀಗೆ, ಬ್ರುವಾಣಂ - ಹೇಳುತ್ತಿರುವ, ಸುಹೃದಂ - ಸ್ನೇಹಿತರನ್ನು ಕುರಿತು, ಪ್ರತ್ಯುವಾಚಹ - ಹೇಳಿದನು, ತ್ವಂ - ನೀನು, ಯನ್ನಿಮಿತ್ತಂ - ಯಾವ ನಿಮಿತ್ತವಾಗಿ, ಮೇ - ನನಗೆ, ಏತದ್ದೈನ್ಯಂ - ಈ ಪರಿತಾಪವು, ಉಪಾಗತಂ - ಬಂದಿರುವುದೊ, ತತ್ - ಅದನ್ನು, ಶೃಣು - ಕೇಳು. ॥ ೭ ॥ ಸ್ವಪ್ನೇ - ಸ್ವಪ್ನದಲ್ಲಿ, ಅದ್ರಿಶಿಖರಾತ್ - ಬೆಟ್ಟದತುದಿಯಿಂದ, ಕಲುಷೇ - ಕಲ್ಮಷವಾದ, ಗೋಮಯಹ್ರದೇ - ಸಗಣಿಯನೀರುಭಾವಿಯಲ್ಲಿ, ಪತಂತಂ -

---

ದ್ದರು. ಕೆಲವರು ನರ್ತಿಸುತ್ತಿದ್ದರು. ಮತ್ತೆ ಕೆಲವರು ನಾಟಕಗಳೇ ಮೊದಲಾದ ಪ್ರಬಂಧಗಳನ್ನಭಿನಯಿಸುತ್ತಿದ್ದರು ; ಕೆಲವರು ನಾನಾವಿಧಗಳಾದ ಹಾಸ್ಯಗಳನ್ನು ಮಾಡುತ್ತಿದ್ದರು. ಆಗ ರಘುವಂಶದಲ್ಲಿ ಜನಿಸಿದವನೂ, ಮಹಾನುಭಾವನೂ ಆದ ಆ ಭರತನು ಸಭಾಯೋಗ್ಯವಾಗಿ ನಗುವಂತೆ ಮಾಡುತ್ತಿದ್ದ ಮಾತುಗಳನ್ನಾಡುತ್ತಿರುವವರೂ, ಪ್ರಿಯಕರವಾಗಿ ಸಂಭಾಷಣೆಗೈಯ್ಯುತ್ತಿರುವವರೂ ಆದ ಸ್ನೇಹಿತರೊಡನೆ ಸಂತೋಷವನ್ನು ಹೊಂದದೆಹೋದನು. ॥ ೧-೫ ॥ ಆಗಲಾ ಸಭೆಯಲ್ಲಿರುವವರಲ್ಲಿ ಭರತನಿಗೆ ಅಂತರಂಗ ಸ್ನೇಹಿತನಾದವನೊಬ್ಬನು ಆತನನ್ನು ಕುರಿತು, "ಎಲೈ ಮಿತ್ರನೆ ! ನೀನು ಸ್ನೇಹಿತ ಜನರಿಂದುಪಸೇವಿತನಾದವನಾದರೂ ಸಂತೋಷಪಡದಿರಲು ಕಾರಣವೇನು?" ಎಂದು ಕೇಳಿದನು. ಇಂತು ನುಡಿದ ಆ ಆಪ್ತಮಿತ್ರನ ಮಾತುಗಳನ್ನು ಕೇಳಿ ಭರತನು ಅವನನ್ನು ಕುರಿತು ಹೀಗೆ ಹೇಳಿದನು. "ಎಲೈ ಮಿತ್ರನೆ! ಯಾವುದರಿಂದ ನನಗೆ ವ್ಯಸನವು ಸಂಭವಿಸಿರುವುದೋ ಅದನ್ನು ಹೇಳುತ್ತೇನೆ; ಸಾವಧಾನದಿಂದಾಲಿಸು. ನಾನು ನಿನ್ನೆಯ ರಾತ್ರಿಯ ಸ್ವಪ್ನದಲ್ಲಿ ಬಿರಿಹೊಯ್ದುಕೊಂಡಿರುವ

ಮುಕ್ತ ಮೂರ್ಧಜಂ ‖ ಪತಂತ ಮದ್ರಿಶಿಖರಾ ತ್ಕಲುಷೇ ಗೋಮಯ ಹ್ರದೇ ‖ ೮ ‖ ಪ್ಲವಮಾನಶ್ಚ ಮೇ ದೃಷ್ಟ ಸ್ಸತಸ್ಮಿ೯ ಗೋಮಯ ಹ್ರದೇ ‖ ಪಿಬನ್ನಂ ಜಲಿನಾ ತೈಲಂ ಹಸನ್ನಪಿ ಮುಹುರ್ಮುಹುಃ ‖ ೯ ‖ ತತಸ್ತಿಲೋದನಂ ಭುಕ್ತ್ವಾ ಪುನಃ ಪುನರಧಶ್ಶಿರಾಃ ‖ ತೈಲೇನಾಭ್ಯಕ್ತ ಸರ್ವಾಂಗ ಸ್ತೈಲಮೇವಾ ವಗಾಹತ ‖ ೧೦ ‖ ಸ್ವಪ್ನೇಪಿ ಸಾಗರಂ ಶುಷ್ಕಂ ಚಂದ್ರಂಚ ಪತಿತಂ ಭುವಿ ‖ ಉಪರುದ್ಧಾಂಚ ಜಗತೀಂ ತಮಸೇವ ಸಮಾವೃತಾಂ ‖ ೧೧ ‖ ಔಪವಾಹ್ಯಸ್ಯ ನಾಗಸ್ಯ ವಿಷಾಣಂ ಶಕಲೀಕೃತಂ ‖ ಸಹಸಾ ಚಾಪಿ ಸಂಶಾಂತಂ ಜ್ವಲಿತಂ ಜಾತ ವೇದಸಂ‖೧೨‖ಅವದೀರ್ಣಾಂಚ ಪೃಥಿವೀಂ ಶುಷ್ಕಾಂಚ ವಿವಿಧಾ೯ ದ್ರುಮಾ೯ ‖

ಬೀಳುತ್ತಿರುವ, ಮುಕ್ತಮೂರ್ಧಜಂ - ಬಿಡಲ್ಪಟ್ಟ ಕೂದಲುಗಳುಳ್ಳ, ಮಲಿನಂ - ಕಪ್ಪಾಗಿರುವ, ಪಿತರಂ - ತಂದೆಯನ್ನು, ಅದ್ರಾಕ್ಷಂ - ಕಂಡೆನು. ‖ ೮ ‖ ಮೇ - ನನ್ನಿಂದ, ಸಃ-ಆ ತಂದೆಯು, ತಸ್ಮಿ೯ ಗೋಮಯಹ್ರದೇ - ಸಗಣಿಯ ಕೊಳದಲ್ಲಿ, ಪ್ಲವಮಾನಃ - ತೇಲುತ್ತ, ಅಂಜಲಿನಾ - ಬೊಗಸೆಯಿಂದ, ತೈಲಂ - ಎಣ್ಣೆಯನ್ನು, ಪಿಬ೯ - ಪಾನಮಾಡುತ್ತ, ಮುಹುರ್ಮುಹುಃ-ಬಾರಿಬಾರಿಗೂ, ಹಸನ್ನಪಿ - ನಗುತ್ತಿರುವವನಾಗಿ, ದೃಷ್ಟಃ - ನೋಡಲ್ಪಟ್ಟನು. ‖ ೯ ‖ ತತಃ - ಬಳಿಕ, ಪುನಃಪುನಃ - ಬಾರಿಬಾರಿಗೂ, ತಿಲೋದನಂ - ತಿಲಮಿಶ್ರಾನ್ನವನ್ನು, ಭುಕ್ತ್ವಾ - ಭೋಜನಮಾಡಿ, ಅಧಶ್ಶಿರಾಃ - ತಲೆಕೆಳಕಾಗಿ, ತೈಲೇನ - ಎಣ್ಣೆಯಿಂದ, ಅಭ್ಯಕ್ತಸರ್ವಾಂಗಃ - ಅಭಿಷೇಕಮಾಡಲ್ಪಟ್ಟ ಸರ್ವಾವಯ ವವುಳ್ಳವನಾಗಿ, ತೈಲಮೇವ - ತೈಲವನ್ನೇ, ಅವಗಾಹತ - ಹೊಕ್ಕನು. ‖ ೧೦ ‖ ಸ್ವಪ್ನೇಪಿ - ಸ್ವಪ್ನದಲ್ಲಿಯೂ, ಅಹಂ - ನಾನು, ಸಾಗರಂ - ಕಡಲನ್ನು, ಶುಷ್ಕಂ-ನೀರಿಲ್ಲದುದನ್ನಾಗಿ, ಪಶ್ಯಾಮಿ - ಕಂಡೆನು, ಚಂದ್ರಂ - ಚಂದ್ರನನ್ನು, ಭುವಿ - ನೆಲದಲ್ಲಿ, ಪತಿತಂಚ - ಬಿದ್ದವನನ್ನಾಗಿ, ಪಶ್ಯಾಮಿ - ಕಂಡೆನು, ತಮಸಾ - ಅಂಧಕಾರದಿಂದ, ಸಮಾವೃತಾಮಿವ - ಮುಚ್ಚಿಕೊಂಡಿದ್ದಂತೆ, ಉಪರುದ್ಧಾಂ - ಆಚ್ಛಾದಿತವಾದ, ಪೃಥಿವೀಂ - ನೆಲವನ್ನು, ಪಶ್ಯಾಮಿ - ಕಂಡೆನು. ‖ ೧೧ ‖ ಔಪವಾಹ್ಯಸ್ಯ - ರಾಜನುಕೂಡುವದಕ್ಕೆ ಯೋಗ್ಯವಾದ, ನಾಗಸ್ಯ - ಆನೆಯ, ವಿಷಾಣಂ - ದಂತವನ್ನು, ಶಕಲೀಕೃತಂ- ಛಿದ್ರಮಾಡಲ್ಪಟ್ಟುದನ್ನಾಗಿಯೂ, ಜ್ವಲಿತಂ - ಪ್ರಜ್ವಲಿಸುತ್ತಿರುವ, ಜಾತವೇದಸಂ - ಅಗ್ನಿಯನ್ನು,

---

ತಲೆಗೂದಲುಳ್ಳವನಾಗಿಯೂ, ಪರ್ವತಾಗ್ರದಿಂದ ಮಲಿನವಾದ ಗೋಮಯದ ಗುಂಡಿಯಲ್ಲಿ ಪಪಾತವಾಗುತ್ತಿರುವವನೂ ಆದ ನಮ್ಮ ಜನಕನನ್ನು ನೋಡಿದೆನು. ಅಲ್ಲದೆ ನಮ್ಮ ತಂದೆ ಯಾದ ದಶರಥರಾಯನು ಅಂತಹ ಗೋಮಯ ಕೂಪದಲ್ಲಿ ಬಿದ್ದವನಾಗಲು ಅದರಲ್ಲಿ ಮುಳುಗೇಳುತ್ತ ತೈಲವನ್ನು ಬೊಗಸೆಗಳಿಂದ ಪಾನ ಮಾಡುತ್ತಿರುವಂತೆ ಕಾಣಿಸಿದನು. ಆಗಲಾತನು ಮಾತಿಮಾತಿಗೂ ನಗುತ್ತಿದ್ದನು. ಇಂತಹ ಮಹಾ ಮಲಿನರೂಪನೂ, ವಿಕಾರ ವನ್ನು ಹೊಂದಿದವನೂ ಆದ ನಮ್ಮ ತಂದೆಯನ್ನು ಸ್ವಪ್ನದಲ್ಲಿನೋಡಿದವನಾದೆನು. ಇಷ್ಟು ಮಾತ್ರವಲ್ಲದೆ, ಆ ಸ್ವಪ್ನದಲ್ಲಿ ನನಗೆ ಕಾಣಿಸಿದ ಆ ದಶರಥರಾಯನು ತಿಲಮಿಶ್ರಿತವಾದ ಅನ್ನ ವನ್ನು ಭುಜಿಸುತ್ತಿದ್ದನು; ಅಡಿಗಡಿಗ್ಗೂ ತಲೆಕೆಳಕಾದವನಾಗಿ ತೈಲದಿಂದ ನೆನೆಯಿಸಲ್ಪಟ್ಟ ದೇಹವುಳ್ಳವನಾಗುತ್ತಿದ್ದನು. ಇದೂ ಅಲ್ಲದೆ ಆತನು ತೈಲಕೂಪದಲ್ಲಿ ಮುಳುಗುತ್ತಿರುವ

ಅಹಂ ಪಶ್ಯಾಮಿ ವಿಧ್ವಸ್ತಾನ್ ಸಧೂಮಾಂಶ್ಚಾಪಿ ಪರ್ವತಾನ್ ॥ ೧೩ ॥ ಪೀಠೇ ಕಾರ್ಷ್ಣಾಯಸೇ ಚೈನಂ ವಿಷಣ್ಣಂ ಕೃಷ್ಣವಾಸಸಂ ॥ ಪ್ರಹಸಂತಿಸ್ಮ ರಾಜಾನಂ ಪ್ರಮದಾಃ ಕೃಷ್ಣಪಿಂಗಳಾಃ ॥ ೧೪ ॥ ತ್ವರಮಾಣಶ್ಚ ಧರ್ಮಾತ್ಮಾ ರಕ್ತಮಾಲ್ಯಾನುಲೇಪನಃ ॥ ರಥೇನ ಖರಯುಕ್ತೇನ ಪ್ರಯಾತೋ ದಕ್ಷಿಣಾಮುಖಃ ॥ ೧೫ ॥ ಪ್ರಹಸಂತೀವ ರಾಜಾನಂ ಪ್ರಮದಾ ರಕ್ತವಾಸಿನೀ ॥ ಪ್ರಕರ್ಷಂತೀ ಮಯಾ

ಸಹಸಾ - ಜಾಗ್ರತೆಯಾಗಿ, ಸಂಶಾಂತಮಪಿ - ತಣ್ಣಗಾದವನನ್ನಾಗಿಯೂ, ಪೃಥಿವೀಂ - ನೆಲವನ್ನು, ಅವದೀರ್ಣಾಂ - ಸೀಳಿಹೋದುದನ್ನಾಗಿಯೂ, ವಿವಿಧಾನ್ - ನಾನಾಬಗೆಗಳಾದ, ದ್ರುಮಾನ್ - ಗಿಡಗಳನ್ನು, ಶುಷ್ಕಾಂಶ್ಚ - ಒಣಗಿಹೋದವುಗಳನ್ನಾಗಿಯೂ, ಸಧೂಮಾಂಶ್ಚ - ಧೂಮದಿಂದೊಡಗೂಡಿದ, ಪರ್ವತಾನ್ - ಬೆಟ್ಟಗಳನ್ನು, ವಿಧ್ವಸ್ತಾನ್ - ಚೂರ್ಣಗೊಳಿಸಲ್ಪಟ್ಟವುಗಳನ್ನಾಗಿಯೂ, ಪಶ್ಯಾಮಿ - ಕಂಡೆನು. ॥ ೧೨-೧೩ ॥ ಕಾರ್ಷ್ಣಾಯಸೇ-ಕಬ್ಬಿಣದ, ಪೀಠೇ - ಆಸನದಲ್ಲಿ, ವಿಷಣ್ಣಂ - ಕುಳಿತುಕೊಂಡಿರುವ, ಕೃಷ್ಣವಾಸಸಂ - ಕಪ್ಪಾದವಸ್ತ್ರಗಳುಳ್ಳ, ರಾಜಾನಂ - ಅರಸನನ್ನು, ಕೃಷ್ಣಪಿಂಗಳಾಃ - ಕಪ್ಪುಬಣ್ಣವೂ ಪಿಂಗಳವರ್ಣವೂ ವುಳ್ಳ, ಪ್ರಮದಾಃ - ಹೆಂಗಳು, ಪ್ರಹಸಂತಿಸ್ಮ - ನಗುತ್ತಿದ್ದರು. ॥ ೧೪ ॥ ಧರ್ಮಾತ್ಮಾ - ಧರ್ಮಿಷ್ಠನಾದ, (ದಶರಥಃ - ದಶರಥರಾಯನು,) ತ್ವರಮಾಣಶ್ಚ - ಜಾಗ್ರತೆಯುಳ್ಳವನಾಗಿ, ರಕ್ತಮಾಲ್ಯಾನುಲೇಪನಃ - ಕೆಂಪಾದ ಹುವ್ವುಗಳ ಸರಗಳೂ ಗಂಧವೂ ಉಳ್ಳವನಾಗಿ, ಖರಯುಕ್ತೇನ - ಕತ್ತೆಗಳಿಂದ ಕೂಡಿಕೊಂಡಿರುವ, ರಥೇನ - ರಥದಿಂದ, ದಕ್ಷಿಣಾಮುಖಃ- ದಕ್ಷಿಣದಿಕ್ಕಿಗೆ ಇದಿರಾಗಿ, ಪ್ರಯಾತಃ - ಹೊರಟುಹೋದನು. ॥ ೧೫ ॥ ರಕ್ತವಾಸಿನೀ - ಕೆಂಪಾದ ಸೀರೆಯನ್ನುಟ್ಟಿರುವ, ವಿಕೃತಾನನಾ - ವಕ್ರಮುಖಿಯಾದ, ರಾಕ್ಷಸೀ - ರಾಕ್ಷಸರಸಂಬಂಧವಾದ, ಪ್ರಮದಾ - ಹೆಂಗಸು, ಪ್ರಹಸಂತೀವ - ನಗುತ್ತಿರುವಳಂತೆ, ರಾಜಾನಂ - ಅರಸನನ್ನು, ಪ್ರಕರ್ಷಂತೀ-

---

ನಂತೆಯೂ ಕಾಣಿಸಿದನು. ಎಲೈ ಮಿತ್ರನೆ ! ಇಷ್ಟೇ ಅಲ್ಲ ! ನಾನು ಆ ಸ್ವಪ್ನದಲ್ಲಿಯೇ ಸಮುದ್ರವು ಬತ್ತಿಹೋದಂತೆಯೂ, ಚಂದ್ರನನ್ನು ಭೂಮಿಯಮೇಲೆ ಬಿದ್ದವನನ್ನಾಗಿಯೂ, ಪ್ರಪಂಚವೆಲ್ಲ ಅಂಧಕಾರಮಯವಾದಂತೆಯೂ,ರಾಜಾರೋಹಣ ಯೋಗ್ಯವಾದ ಗಜರಾಜನ ದಂತಯುಗ್ಮವು ಪುಡಿಪುಡಿಯಾದಂತೆಯೂ, ಭಗಭಗನೆ ಉರಿಯುತ್ತಿರುವ ಅಗ್ನಿಹೋತ್ರವು ತಣ್ಣಗಾದುದನ್ನಾಗಿಯೂ, ಭೂಮಿಯು ಇಬ್ಭಾಗವಾಗಿ ಬಿರಿದುದನ್ನಾಗಿಯೂ, ನಾನಾ ವಿಧಗಳಾದ ವೃಕ್ಷಗಳೆಲ್ಲವೂ ಒಣಗಿ ಬೆಂಡಾದುದನ್ನಾಗಿಯೂ, ಬೆಟ್ಟಗಳೆಲ್ಲವೂ ನಾಶವಾಗಿ ಅವುಗಳಿಂದ ಹೊಗೆಯೇಳುತ್ತಿರುವುದನ್ನಾಗಿಯೂ ನೋಡಿದೆನು. ಇಷ್ಟುಮಾತ್ರವೇ ಅಲ್ಲದೆ, ಕೇಳೈ ಮಿತ್ರನೆ ! ಅಂದವಾದ ಶರೀರವುಳ್ಳವರೂ, ಗೋರೋಜನದಂತೆ ಕಾಂತಿಯುಳ್ಳವರೂ ಆದ ಸ್ತ್ರೀಯರು ಕಬ್ಬಿಣದ ಪೀಠದಲ್ಲಿ ಕುಳಿತು, ಸೊಗಸಾದ ವಸ್ತ್ರಗಳನ್ನು ಧರಿಸಿದ್ದ ನಮ್ಮ ತಂದೆಯಾದ ದಶರಥರಾಜನನ್ನು ನೋಡಿ ಪಕಪಕನೆ ನಕ್ಕರು. ಆಗಲಾ ಧರ್ಮಾತ್ಮನಾದ ದಶರಥಮಹಾರಾಜನು ಕೆಂಪುಹೂಗಳ ಮಾಲಿಕೆಯನ್ನೂ, ಅನುಲೇಪನವನ್ನೂ ಉಳ್ಳವನಾಗಿ, ಜಾಗ್ರತೆಗೊಳಿಸುತ್ತಿರುವವನಾಗಿ ಗಾರ್ದಭಗಳಿಂದ ಬದ್ಧವಾದ ರಥವನ್ನೇರಿ ದಕ್ಷಿಣಾಭಿಮುಖವಾಗಿ ಹೊರಟವನಾದನು. ॥ ೧೧-೧೫ ॥ ಅಲ್ಲದೆ ರಕ್ತ

ದೃಷ್ಟ್ವಾ ರಾಕ್ಷಸೀ ವಿಕೃತಾನನಾ ॥ ೧೬ ॥ ಏವಮೇತನ್ಮಯಾ ದೃಷ್ಟಮಿಮಾಂ ರಾತ್ರಿಂ ಭಯಾವಹಂ ॥ ಅಹಂ ರಾಮೋಥವಾ ರಾಜಾ ಲಕ್ಷ್ಮಣೋವಾ ಮರಿಷ್ಯತಿ ॥ ೧೭ ॥ ನರೋ ಯಾನೇನ ಯಸ್ಸ್ವಪ್ನೇ ಖರಯುಕ್ತೇನ ಯಾತಿಹಿ ॥ ಅಚಿರಾತ್ತಸ್ಯ ಧೂಮಾಗ್ರಂ ಚಿತಾಯಾಂ ಸಂಪ್ರದೃಶ್ಯತೇ ॥ ೧೮ ॥ ಏತನ್ನಿಮಿತ್ತಂ ದೀನೋಹಂ ತನ್ನ ವಃ ಪ್ರತಿಪೂಜಯೇ ॥ ಶುಷ್ಯತೀವಚ ಮೇ ಕಂಠೋ ನಸ್ವಸ್ಥಮಿವ ಮೇ ಮನಃ ॥೧೯॥ ನ ಪಶ್ಯಾಮಿ ಭಯಸ್ಥಾನಂ ಭಯಂ ಚೈವೋಪಧಾರಯೇ ॥ ಭ್ರಷ್ಟಶ್ಚ ಸ್ವರಯೋಗೋ ಮೇ ಛಾಯಾ ಚೋಪಹತಾ ಮಮ ॥ ೨೦ ॥ ಜುಗಪ್ಸನ್ನಿವ ಚಾತ್ಮಾನಂ ನಚ ಪಶ್ಯಾಮಿ ಕಾರಣಂ ॥

ಸೆಳೆಯುತ್ತಿರುವಳಾಗಿ, ಮಯಾ - ನನ್ನಿಂದ, ದೃಷ್ಟಾ - ಕಾಣಲ್ಪಟ್ಟಳು. ॥ ೧೬ ॥ ಏವಂ - ಈಪರಿಯಾಗಿ, ಇಮಾಂರಾತ್ರಿಂ - ಈ ರಾತ್ರಿಯಲ್ಲಿ, ಭಯಾವಹಂ - ಭಯಂಕರವಾದ, ಏತತ್ - ಈ ಸ್ವಪ್ನವು, ಮಯಾ - ನನ್ನಿಂದ, ದೃಷ್ಟಂ - ಕಾಣಲಾಯಿತು, ಅಹಂ - ನಾನಾದರೂ ಸರಿಯೇ, ಅಥವಾ - ಹಾಗಲ್ಲದೇಹೋದರೆ, ರಾಮಃ-ಶ್ರೀರಾಮನು, ರಾಜಾವಾ-ಅರಸನಾದರೂ, ಲಕ್ಷ್ಮಣೋವಾ-ಲಕ್ಷ್ಮಣನಾದರೂ, ಮರಿಷ್ಯತಿ - ಮೃತನಾಗುವನು. ॥ ೧೭ ॥ ಯಃನರಃ - ಯಾವ ಪುರುಷನು, ಸ್ವಪ್ನೇ - ಸ್ವಪ್ನದಲ್ಲಿ, ಖರಯುಕ್ತೇನ - ಕತ್ತೆಗಳಿಂದ ಕೂಡಿರುವ, ಯಾನೇನ - ವಾಹನದಿಂದ, ಯಾತಿ - ಹೋಗುತ್ತಾನೆಯೋ, ತಸ್ಯ - ಅವನ ಸಂಬಂಧವಾದ, ಧೂಮಾಗ್ರಂ - ಹೊಗೆದುದಿಯು, ಚಿತಾಯಾಂ - ಚಿತೆಯಲ್ಲಿ, ಅಚಿರಾತ್ - ಜಾಗ್ರತೆಯಾಗಿ, ಸಂಪ್ರದೃಶ್ಯತೇಹಿ - ಕಾಣಲ್ಪಡುತ್ತದೆಯಷ್ಟೆ. ॥ ೧೮ ॥ ಏತನ್ನಿಮಿತ್ತಂ - ಈ ಕಾರಣದಿಂದ, ಅಹಂ - ನಾನು, ದೀನಃ - ಪರಿತಪ್ತನಾಗಿದೇನೆ, ತತ್ - ಆ ಕಾರಣ, ವಃ - ನಿಮ್ಮನ್ನು, ನಪ್ರತಿಪೂಜಯೇ - ಶ್ಲಾಘಿಸಲಾರೆನು, ಮೇ - ನನ್ನ, ಕಂಠಃ- ಕಂಠವು, ಶುಷ್ಯತೀವಚ - ಒಣಗಿಹೋಗುವಂತಿರುವುದು, ಮೇ - ನನ್ನ, ಮನಃ - ಮನವು, ನಸ್ವಸ್ಥಮಿವ - ಕಳವಳಗೊಂಡಂತಿದೆ. ॥ ೧೯ ॥ ಭಯಸ್ಥಾನಂ - ಹೆದರಿಕೆಯ ಕಾರಣವನ್ನು, ನಪಶ್ಯಾಮಿ- ಕಾಣೆನು, ಭಯಂಚೈವ - ಭಯವನ್ನೂ ಕೂಡ, ಉಪಧಾರಯೇ - ಧರಿಸುವೆನು, ಮೇ - ನನ್ನ, ಸ್ವರಯೋಗಃ - ಕಂಠಸ್ವರಸಂಪತ್ತು, ಭ್ರಷ್ಟಶ್ಚ - ಇಳಿದುಹೋಗಿದೆ, ಮಮ - ನನ್ನ, ಛಾಯಾಚ -

---

ವಸ್ತ್ರವನ್ನುಟ್ಟಿರುವವಳೂ, ವಿಕಾರಸ್ವರೂಪವುಳ್ಳವಳೂ ಆದ ಓರ್ವ ರಾಕ್ಷಸಸ್ತ್ರೀಯು ದಶರಥರಾಯನನ್ನು ನೋಡಿ ಪರಿಹಾಸ್ಯವನ್ನು ಮಾಡುತ್ತ, ಆತನನ್ನು ಹಿಡಿದುಕೊಂಡು ಎಳೆಯುತ್ತಿದ್ದಂತೆ ಸ್ವಪ್ನವನ್ನು ನೋಡಿದೆನು. ಮಿತ್ರನೆ ! ಈ ರಾತ್ರಿ ನಾನೆಂತಹ ದುಸ್ವಪ್ನವನ್ನು ನೋಡಿದೆ ? ಈ ಸ್ವಪ್ನಕ್ಕೆ ಫಲವಿಚಾರವನ್ನು ಮಾಡಿದರೆ, ಶ್ರೀರಾಮನಾಗಲಿ, ನಾನಾಗಲಿ, ಲಕ್ಷ್ಮಣನಾಗಲಿ, ದಶರಥರಾಯನಾಗಲಿ, ನಮ್ಮ ನಾಲ್ವರಲ್ಲಿ ಯಾರಾದರೂ ಒಬ್ಬರು ಮೃತಿಯೊಂದುತ್ತೇವೆಂದು ತೋರುತ್ತಿದೆ. ಸ್ವಪ್ನದಲ್ಲಿ ಖರಯುಕ್ತವಾದ ವಾಹನದಲ್ಲಿ ಯಾವಾತನು ಹೊಗುತ್ತಾನೆಯೋ ಆತನ ಚಿತಾಧೂಮವು ಜಾಗ್ರತೆಯಾಗಿಯೇ ಕಾಣುತ್ತದೆ. ಈ ಕಾರಣದಿಂದ ಪರಿತಪ್ತನಾಗಿದ್ದೇನೆ. ಆದುದರಿಂದಲೇ ನಿಮ್ಮನ್ನು ಶ್ಲಾಘಿಸಲಾರದವನಾಗಿದ್ದೇನೆ. ನನ್ನ ಕಂಠವು ಶುಷ್ಕವಾದಂತೆಯೂ, ಮನಸ್ಸು ಕಳವಳಗೊಂಡಂತೆಯೂ ಆಗಿದೆ.

ಇಮಾಂಹಿ ದುಸ್ಸ್ವಪ್ನ ಗತಿಂ ನಿಶಾಮ್ಯ ತಾ
ಮನೇಕರೂಪಾ ಮವಿತರ್ಕಿತಾಂ ಪುರಾ ||
ಭಯಂ ಮಹತ್ತ ದ್ಧೃದಯಾ ನ್ನಯಾತಿ ಮೇ
ವಿಚಿಂತ್ಯ ರಾಜಾನ ಮಚಿಂತ್ಯ ದರ್ಶನಂ || ೨೧ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನಸಪ್ತತಿತಮಸ್ಸರ್ಗಃ.

ಕಾಂತಿಯೂ, ಉಪಹತಾಚ - ಹೊಡಿಯಲ್ಪಟ್ಟಿದೆ, ಆತ್ಮಾನಂ - ನನ್ನನ್ನು, ಜಿಗುಪ್ಸನ್ನಿವ - ನಿಷ್ಕಾರಣವಾಗಿ ಅಸೂಯೆಗೊಂಡವನನ್ನಾಗಿ ಎಣಿಸುತ್ತೇನೆ, ಕಾರಣಂ - ಹೇತುವನ್ನು, ನಪಶ್ಯಾಮಿ-ಕಾಣೆನು. || ೨೦ || ತಾಮಿಮಾಂ - ಆ ಈ, ಪುರಾ - ಪೂರ್ವದಲ್ಲಿ, ಅವಿತರ್ಕಿತಾಂ - ಆಲೋಚಿಸಲ್ಪಡದಿರುವ, ಅನೇಕರೂಪಾಂ - ನಾನಾಬಗೆಗಳುಳ್ಳ, ಸ್ವಪ್ನಗತಿಂ - ದುಸ್ವಪ್ನದರ್ಶನವನ್ನು, ನಿಶಾಮ್ಯ - ಕಂಡು, ಅಚಿಂತ್ಯದರ್ಶನಂ - ಆಲೋಚಿಸಲಸಾಧ್ಯವಾದ ನೋಡುವಿಕೆಯುಳ್ಳ, ರಾಜಾನಂಚ - ದಶರಥರಾಯನ ವಿಚಾರವನ್ನೂ, ವಿಚಿಂತ್ಯ - ಆಲೋಚಿಸಿ, ಮೇ - ನನ್ನ, ಹೃದಯಾತ್ - ಮನಸ್ಸಿನಿಂದ, ಮಹತ್ - ಮಹತ್ತರವಾದ, ತದ್ಭಯಂ - ಆ ಭೀತಿಯು, ನಯಾತಿ - ಹೋಗುವದೇ ಇಲ್ಲವು. || ೨೧ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನಸಪ್ತತಿತಮಸ್ಸರ್ಗಃ.

ನನಗೆ ಭಯವುಂಟಾಗಲು ಯಾವ ಕಾರಣವೂ ಕಾಣುವುದಿಲ್ಲ. ಆದರೂ ಭಯವುಂಟಾಗಿದೆ. ಆದುದರಿಂದ ನಾನೀಗ ಗದ್ಗದ ಸ್ವರಭರಿತನಾಗಿದ್ದೇನೆ. ನನ್ನದೇಹಕಾಂತಿಯು ಕಡಿಮೆಯಾಗಿ ಬಿಳುಪೇರುತ್ತಿರುವುದು. ನಾನೇ ನನ್ನನ್ನು ದೂಷಿಸಿಕೊಳ್ಳುತ್ತಿದ್ದೇನೆ. ಕಾರಣವಾದರೋ ತಿಳಿಯದಿರುವುದು. ನಾನಾ ವಿಧವಾದುದೂ, ಇದುವರೆಗೆಂದಿಗೇ ಆಗಲಿ ನೋಡಿಲ್ಲವಾದುದೂ ಆದ ಈ ದುಸ್ವಪ್ನವನ್ನು ನೋಡಿ, ಬಹಳ ದೂರದಲ್ಲಿರುವ ದಶರಥರಾಯನನ್ನು ಸ್ಮರಿಸಿಕೊಂಡು ನನ್ನ ಮನಸ್ಸು ಮಹದ್ಭಯವನ್ನು ಹೊಂದುತ್ತಿರುವುದು. " || ೧೬-೨೦ ||

ಇಂತಿದು ಭರತ ಕುಮಾರನಿಗದಿತ ದುಸ್ವಪ್ನ ವಿಧಾನವೆಂಬ
ಅರವತ್ತೊಂಭತ್ತನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಸಪ್ತತಿತಮಸ್ಸರ್ಗಃ.

ಭರತೇ ಬ್ರುವತಿ ಸ್ವಪ್ನಂ ದೂತಾಸ್ತೇ ಕ್ಲಾಂತ ವಾಹನಾಃ ॥ ಪ್ರವಿಶ್ಯಾ ಸಹ್ಯ ಪರಿಘಂ ರಮ್ಯಂ ರಾಜಗೃಹಂ ಪುರಂ ॥ ೧ ॥ ಸಮಾಗಮ್ಯತು ರಾಜ್ಞಾಚ ರಾಜಪುತ್ರೇಣ ಚಾರ್ಚಿತಾಃ ॥ ರಾಜ್ಞಃ ಪಾದೌ ಗೃಹೀತ್ವಾತು ತಮೂಚು ರ್ಭರತಂ ವಚಃ ॥ ೨ ॥ ಪುರೋಹಿತ ಸ್ತ್ವಾಂ ಕುಶಲಂ ಪ್ರಾಹ ಸರ್ವೇಚ ಮಂತ್ರಿಣಃ ॥ ತ್ವರಮಾಣಶ್ಚ ನಿರ್ಯಾಹಿ ಕೃತ್ಯ-ಮಾತ್ಯಯಿಕಂ ತ್ವಯಾ ॥ ೩ ॥

ಭರತೇ - ಭರತನು, ಸ್ವಪ್ನಂ - ಸ್ವಪ್ನವನ್ನು, ಬ್ರುವತಿ - ಹೇಳುತ್ತಿರಲು, ತೇ ದೂತಾಃ - ಆ ಚಾರರು, ಕ್ಲಾಂತವಾಹನಾಃ, ಕ್ಲಾಂತ - ಬಳಲಿದ, ವಾಹನಾಃ - ಕುದುರೆಗಳುಳ್ಳವರಾಗಿ, ಅಸಹ್ಯ ಪರಿಘಂ - ಅಗಳ್ತೆಯುಳ್ಳ, ರಮ್ಯಂ - ಮನೋಹರವಾದ, ರಾಜಗೃಹಂ - ರಾಜಗೃಹವೆಂಬ, ಪುರಂ - ಪಟ್ಟಣವನ್ನು, ಪ್ರವಿಶ್ಯ - ಪ್ರವೇಶಿಸಿ, ರಾಜ್ಞಾಚ - ಕೇಕಯರಾಜನೊಡನೆ, ರಾಜಪುತ್ರೇಣಚ - ರಾಜ ಕುವರನಾದ ಯುಧಾಜಿತನೊಡನೆ, ಸಮಾಗಮ್ಯ - ಸೇರಿ, ಅರ್ಚಿತಾಃ - ಬಹುಮಾನಿತರಾಗಿ, ರಾಜ್ಞಃ ಭರತನ, ಪಾದೌ - ಪಾದಗಳನ್ನು, ಗೃಹೀತ್ವಾ - ಹಿಡಿದುಕೊಂಡು, ತಂಭರತಂ - ಆ ಭರತನನ್ನು ಕುರಿತು, ವಾಚಂ - ಮಾತನ್ನು, ಊಚುಃ - ಹೇಳಿದರು. ॥ ೧-೨ ॥ ಪುರೋಹಿತಃ - ಪುರೋಹಿತನಾದ ವಸಿಷ್ಠಋಷಿಯು, ತ್ವಾಂ - ನಿನ್ನನ್ನು ಕುರಿತು, ಕುಶಲಂ - ಕ್ಷೇಮವನ್ನು, ಪ್ರಾಹ - ಹೇಳಿದನು, ಸರ್ವೇ - ಸಮಸ್ತರಾದ, ಮಂತ್ರಿಣಶ್ಚ - ಮಂತ್ರಿಗಳೂ, ಪ್ರಾಹುಃ - ಹೇಳಿದರು, ತ್ವಯಾ - ನಿನ್ನಿಂದ, ಆತ್ಯಯಿಕಂ - ಅತಿಕ್ರಮಿಸಲಾಗದ, ಕೃತ್ಯಂ - ಕಾರ್ಯವು, ಅಸ್ತಿ - ಇರುವುದು, (ಗೊ) ದುಷ್ಕರವಾದ ಕಾರ್ಯವು, ತ್ವಯಾ - ನಿನ್ನಿಂದ, ಕೃತ್ಯಂ - ಮಾಡತಕ್ಕುದು, ಅತಃ - ಈ ಕಾರಣ, ತ್ವರಮಾಣಃ - ಜಾಗ್ರತೆಯಾಗಿ, ನಿರ್ಯಾಹಿ - ಹೊರಡು. ॥ ೩ ॥ ಹೇ ವಿಶಾಲಾಕ್ಷ - ಎಲೈ

ಈ ಪ್ರಕಾರವಾಗಿ ಭರತನು ತನ್ನ ದುಸ್ಸ್ವಪ್ನ ವೃತ್ತಾಂತವನ್ನು ಹೇಳುತ್ತಿರುವಾಗಲೇ ಅಯೋಧ್ಯಾಪಟ್ಟಣದಿಂದ ಹೊರಟ ರಾಜದೂತರು ಬಳಲಿದ ವಾಹನಗಳುಳ್ಳವರಾಗಿ ಮಹಾ ಭಯಂಕರವಾದ ಕಾವಲುಳ್ಳುದೂ, ಬಹು ಮನೋಹರವಾದುದೂ ಆದ ರಾಜಗೃಹ ಪಟ್ಟಣ ವನ್ನು ಪ್ರವೇಶಿಸಿದರು. ಹೀಗೆ ಪ್ರವೇಶಿಸಿದಮೇಲೆ ರಾಜಪುತ್ರನಾದ ಕೇಕಯರಾಜನಿಂದ ಸತ್ಕರಿಸಲ್ಪಟ್ಟ ಆ ದೂತರು ಆತನಿಗೆ ವಂದನೆಯಂಗೈದು, ಆತನ ಅನುಮತಿಯನ್ನು ಹೊಂದಿ ಭರತನ ಸಮೀಪವನ್ನುಸೇರಿ ಹೀಗೆಂದರು. ರಾಜನಂದನನಾದ ಎಲೈ ಭರತನೆ! ಪುರೋಹಿತ ನಾದ ವಸಿಷ್ಠನು ಕುಶಲವನ್ನು ಹೇಳಿದನು, ಮಂತ್ರಿಗಳೆಲ್ಲರೂ ಕುಶಲವನ್ನು ಹೇಳಿದರು. ನಿನ್ನೊಡನೆ ಬಹು ಜಾಗ್ರತೆಯಾಗಿ ಸಂಭಾಷಿಸಬೇಕಾಗಿರುವುದಂತೆ ; ಆದುದರಿಂದ ಬೇಗನೆ ಕರೆದುಕೊಂಡು ಬರಬೇಕೆಂದು ಹೇಳಿದ್ದಾರೆ. ಆದಕಾರಣ ನೀನು ಸಾವಕಾಶಮಾಡದೆ ಅಯೋಧ್ಯೆಗೆ ಪಯಣ ಬೆಳೆಯಿಸು. ಆಲಸ್ಯವನ್ನು ಮಾಡಕೂಡದು. ವಿಶಾಲಾಕ್ಷನಾದ ಎಲೈ

ಇಮಾನಿಚ ಮಹಾರ್ಹಾಣಿ ವಸ್ತ್ರಾಣ್ಯಾಭರಣಾನಿಚ ‖ ಪ್ರತಿಗೃಹ್ಯ ವಿಶಾಲಾಕ್ಷ ! ಮಾತುಲಸ್ಯ ಚ ದಾಪಯ ‖೪‖ ಅತ್ರ ವಿಂಶತಿ ಕೋಟ್ಯಸ್ತು ನೃಪತೇ ರ್ಮಾತುಲಸ್ಯತೇ ‖ ದಶಕೋಟ್ಯಸ್ತು ಸಂಪೂರ್ಣಾ ಸ್ತಥೈವಚ ನೃಪಾತ್ಮಜ ! ‖೫‖ ಪ್ರತಿಗೃಹ್ಯತು ತತ್ಸರ್ವ ಮನುರಕ್ತ ಸ್ಸುಹೃಜ್ಜನೇ ‖ ದೂತಾನುವಾಚ ಭರತಃ ಕಾಮೈಸ್ಸಂಪ್ರತಿ ಪೂಜ್ಯತಾನ್ ‖ ೬ ‖ ಕಚ್ಚಿತ್ಸುಕುಶಲೀ ರಾಜಾ ಪಿತಾ ದಶರಥೋ ಮಮ ‖ ಕಚ್ಚಿಚ್ಚಾರೋಗತಾ ರಾಮೇ ಲಕ್ಷ್ಮಣೇಚ ಮಹಾತ್ಮನಿ ‖ ೭ ‖

ವಿಸ್ತಾರವಾದ ನೇತ್ರಗಳುಳ್ಳವನೇ, ಮಹಾರ್ಹಾಣಿ - ಅಮೂಲ್ಯಗಳಾದ, ಇಮಾನಿವಸ್ತ್ರಾಣಿ - ಈ ವಸ್ತ್ರಗಳನ್ನು, ಆಭರಣಾನಿಚ - ಒಡಿವೆಗಳನ್ನೂ, ಪ್ರತಿಗೃಹ್ಯ - ತೆಗದುಕೊಂಡು, ಮಾತುಲಸ್ಯಚ - ಮಾತಾಮಹನಿಗೂ ಸೋದರಮಾವನಿಗೂ, ದಾಪಯ - ಕೊಡಿಸು. ‖ ೪ ‖ ಹೇ ನೃಪಾತ್ಮಜ - ಎಲೈ ರಾಜಕುವರನೇ, ಅತ್ರ - ಈ ಒಡಿವೆವಸ್ತ್ರಗಳಲ್ಲಿ, ನೃಪತೇಃ - ರಾಜನಿಗೆ, ವಿಂಶತಿಕೋಟ್ಯಃ - ಇಪ್ಪತ್ತುಕೋಟಿ ಮೌಲ್ಯವುಳ್ಳ ವಸ್ತ್ರಾಭರಣಗಳನ್ನೂ, ತೇ - ನಿನ್ನ, ಮಾತುಲಸ್ಯ - ಸೋದರಮಾವನಿಗೆ, ಸಂಪೂರ್ಣಾಃ - ಸಮಗ್ರವಾದ, ದಶಕೋಟ್ಯಸ್ತು - ಹತ್ತುಕೋಟಿ ಬೆಲೆಯುಳ್ಳ ವಸ್ತ್ರಾಭರಣಗಳನ್ನೂ ಸಹ, ತಥೈವ - ಹಾಗೆಯೇ, ದಾಪಯ - ಕೊಡಿಸು. ‖ ೫ ‖ ಸುಹೃಜ್ಜನೇ - ಸ್ನೇಹಿತ ಜನರಲ್ಲಿ, ಅನುರಕ್ತಃ - ಆಸಕ್ತನಾದ, ಭರತಃ - ಭರತನು, ತತ್ಸರ್ವಂ - ಆ ಸಮಸ್ತ ವಸ್ತ್ರಾಭರಣ ಜಾತವನ್ನು, ಪ್ರತಿಗೃಹ್ಯ - ಪ್ರತಿಗ್ರಹಿಸಿ, ತಾಂದೂತಾನ್ - ಆ ದೂತರನ್ನು, ಕಾಮೈಃ - ಅನ್ನಾದಿಗಳಿಂದ, ಸಂಪ್ರತಿಪೂಜ್ಯ - ಬಹುಮಾನಮಾಡಿ, ಉವಾಚ - ಹೇಳಿದನು. ‖ ೬ ‖ ಮಮ - ನನ್ನ, ಪಿತಾ - ತಂದೆಯಾದ, ದಶರಥೋರಾಜಾ - ದಶರಥರಾಯನು, ಕುಶಲೀಕಚ್ಚಿತ್ - ಕ್ಷೇಮವಂತನಾಗಿ ಧಾನೆಯಷ್ಟೆ, ರಾಮೇ - ಶ್ರೀರಾಮನಲ್ಲಿ, ಅರೋಗತಾಕಚ್ಚಿತ್ - ಆರೋಗ್ಯವೇ, ಮಹಾತ್ಮನಿ - ಮಹಾತ್ಮನಾದ, ಲಕ್ಷ್ಮಣೇಚ - ಲಕ್ಷ್ಮಣನಲ್ಲಿಯೂ, ಅರೋಗತಾಕಚ್ಚಿತ್ - ಆರೋಗ್ಯವೇ. ‖ ೭ ‖

ಭರತನೆ ! ಆಮಹಾರ್ಹವಾದುದೂ, ಬಹು ಬೆಲೆಯುಳ್ಳದೂ ಆದ ಆಭರಣಗಳನ್ನು, ವಸ್ತ್ರಗಳನ್ನೂ ನಿಮ್ಮ ಸೋದರಮಾವನಿಗಾಗಿ ಕಳುಹಿಸಿದ್ದಾರೆ. ಆದುದರಿಂದ ಇವುಗಳನ್ನು ಆತನಿಗೆ ಕೊಡುವವನಾಗು. ಎಲೈ ರಾಜಕುಮಾರನಾದ ಭರತನೇ ! ಈ ವಸ್ತ್ರಾಭರಣಗಳಲ್ಲಿ ನಿನ್ನ ತಾಯಿಯ ತಂದೆತಾಯಿಗಳಿಗೆ ಕೊಡಬೇಕಾದ ವಸ್ತ್ರಾಭರಣಗಳು ಇಪ್ಪತ್ತುಕೋಟಿಗಳಷ್ಟು ಬೆಲೆ ಬಾಳುತ್ತವೆ. ನಿಮ್ಮ ಸೋದರಮಾವನಿಗೆ ಕೊಡಬೇಕಾದ ವಸ್ತ್ರಾಭರಣಗಳೂ ಅಷ್ಟು ಬೆಲೆ ಬಾಳುವುದಿಲ್ಲ. ಅವು ಹತ್ತುಕೋಟಿಗಳಷ್ಟು ಬೆಲೆ ಬಾಳುತ್ತವೆ." ‖ ೧-೫ ‖ ರಾಜಭಟರೀರೀತಿ ನುಡಿಯಲು, ಮಿತ್ರರಲ್ಲಿ ಪರಮ ಸ್ನೇಹವುಳ್ಳ ಆ ಭರತನು ಅವೆಲ್ಲವನ್ನೂ ಸ್ವೀಕರಿಸಿ ಅವರಿಗೆ ತಕ್ಕರೀತಿಯಲ್ಲಿ ಸತ್ಕಾರವನ್ನು ಮಾಡಿ ಹೀಗೆ ಹೇಳಿದನು. "ಎಲೈ ಭಟರಿರಾ! ನನ್ನ ತಂದೆಯಾದ ದಶರಥಮಹಾರಾಜನು ಕ್ಷೇಮದಿಂದಿರುವನೆ ? ಮಹಾನುಭಾವರಾದ ರಾಮಲಕ್ಷ್ಮಣರು ಅರೋಗಿಷ್ಠರಾಗಿದ್ದಾರೆಯಷ್ಟೆ ? ಮಹಾಬುದ್ಧಿಶಾಲಿಯೂ, ಶ್ರೀರಾಮಜನನಿಯೂ, ಪೂಜ್ಯಳೂ, ಧರ್ಮದಲ್ಲಿ ಆಸಕ್ತಿಯುಳ್ಳವಳೂ, ಎಲ್ಲ ಧರ್ಮಗಳನ್ನು ತಿಳಿದವಳೂ, ಎಲ್ಲ ಕಾಲಗಳಲ್ಲಿಯೂ ಧರ್ಮವನ್ನೇ ನೋಡುತ್ತಿರು

ಆರ್ಯಾಚ ಧರ್ಮನಿರತಾ ಧರ್ಮಜ್ಞಾ ಧರ್ಮದರ್ಶಿನೀ ॥ ಅರೋಗಾ ಚಾಪಿ ಕೌಸಲ್ಯಾ ಮಾತಾ ರಾಮಸ್ಯ ಧೀಮತಃ ॥ ೮ ॥ ಕಚ್ಚಿತ್ಸುಮಿತ್ರಾ ಧರ್ಮಜ್ಞಾ ಜನನೀ ಲಕ್ಷ್ಮಣಸ್ಯ ಯಾ ॥ ಶತ್ರುಘ್ನಸ್ಯಚ ವೀರಸ್ಯ ಸಾರೋಗಾಚ ಸುಮಧ್ಯಮಾ॥೯॥ ಆತ್ಮಕಾಮಾ (೧) ಸದಾ ಚಂಡೀ ಕ್ರೋಧನಾ ಪ್ರಾಜ್ಞಮಾನಿನೀ॥ ಅರೋಗಾಚಾಪಿ ಮೇ ಮಾತಾ ಕೈಕೇಯೀ ಕಿಮುವಾಚಹ ॥ ೧೦ ॥ ಏವ

ಆರ್ಯಾ - ಪೂಜ್ಯಳಾದ, ಧರ್ಮನಿರತಾ - ಧರ್ಮದಲ್ಲಿಯೇ ಆಸಕ್ತಳಾದ, ಧರ್ಮಜ್ಞಾ - ಧರ್ಮವನ್ನೇ ತಿಳಿದಿರುವ. ಧರ್ಮದರ್ಶಿನೀ - ಧರ್ಮದಲ್ಲಿಯೇ ದೃಷ್ಟಿಯುಳ್ಳ. ಧೀಮತಃ - ಬುದ್ಧಿಶಾಲಿಯಾದ, ರಾಮಸ್ಯ - ಶ್ರೀರಾಮನ, ಮಾತಾ - ತಾಯಿಯಾದ, ಕೌಸಲ್ಯಾಪಿ-ಕೌಸಲ್ಯಾದೇವಿಯೂ, ಅರೋಗಾಚ-ರೋಗವಿಲ್ಲದೆ ಇದ್ದಾಳೆಯಷ್ಟೆ. ॥ ೮ ॥ ಲಕ್ಷ್ಮಣಸ್ಯ - ಲಕ್ಷ್ಮಣನಿಗೂ, ವೀರಸ್ಯ - ಶೂರನಾದ, ಶತ್ರುಘ್ನಸ್ಯಚ - ಶತ್ರುಘ್ನನಿಗೂ, ಜನನೀ - ತಾಯಿಯು, ಯಾ - ಯಾವಳೋ, ಧರ್ಮಜ್ಞಾ - ಧರ್ಮವನ್ನರಿತಿರುವ, ಮಧ್ಯಮಾ-ಎರಡನೆಯವಳಾದ, ಸಾಸುಮಿತ್ರಾ-ಆ ಸುಮಿತ್ರಾದೇವಿಯು, ಅರೋಗಾಚಾಪಿಕಚ್ಚಿತ್ - ಆರೋಗ್ಯವಂತಳಾಗಿ ಇದ್ದಾಳೆಯೋ. ॥ ೯ ॥ ಆತ್ಮಕಾಮಾ - ಸ್ವಕಾರ್ಯಧುರಂಧರಳಾದ, ಸದಾ - ನಿರಂತರವೂ, ಚಂಡೀ-ಕ್ರೂರಳಾದ, ಕ್ರೋಧನಾ-ಕೋಪಿಷ್ಠಳಾದ, ಪ್ರಾಜ್ಞಮಾನಿನೀ - ತಾನೇ ಪ್ರಾಜ್ಞಳೆಂದು ತಿಳಿದುಕೊಂಡಿರುವ, ಮೇ ಮಾತಾ - ನನ್ನ ತಾಯಿಯಾದ, ಕೈಕೇಯೀ - ಕೈಕೇಯೀದೇವಿಯೂ, ಅರೋಗಾಚಾಪಿ - ಆರೋಗ್ಯವಾಗಿದ್ದಾಳೆಯೇ, ಕಿಮುವಾಚಹ - ಏನು ಹೇಳಿದಳು, ತೇ ದೂತಾಃ - ಆ ದೂತರು, ಮಹಾತ್ಮನಾ - ಮಹಾಮನಸ್ವಿಯಾದ, ಭರತೇನ - ಭರತನಿಂದ, ಏವಮುಕ್ತಾಃ - ಈಪರಿಯಾಗಿ ಹೇಳಲ್ಪಟ್ಟವರಾಗಿ, ತದಾ - ಆ ಕಾಲದಲ್ಲಿ, ಭರತಂ - ಭರತನನ್ನು

ವಂತಳೂ ಆದ ಕೌಸಲ್ಯಾದೇವಿಯು ರೋಗರಹಿತಳಾಗಿದ್ದಾಳೆಯೆ? ಲಕ್ಷ್ಮಣಸ್ವಾಮಿಗೂ, ವೀರನಾದ ಶತ್ರುಘ್ನನಿಗೂ ತಾಯಿಯಾದ ಮತ್ತು ಧರ್ಮಗಳೆಲ್ಲವನ್ನೂ ಚೆನ್ನಾಗಿ ತಿಳಿದಿರುವ ನನ್ನ ಎರಡನೆಯ ತಾಯಿಯಾದ ಸುಮಿತ್ರಾದೇವಿಯೂ ಕ್ಷೇಮವಾಗಿರುವಳೆ? ಇವರೀರ್ವರೂ ಸುಖದಿಂದಿರುವರಷ್ಟೆ? ಯಾವಾಗಲೂ ಕೋಪವನ್ನುಳ್ಳವಳೂ, ತಾನೇ ಸರ್ವಜ್ಞಳೆಂದು ತಿಳಿದಿರುವವಳೂ, ಮಹಾ ಗರ್ವಿಷ್ಠಳೂ, ಮಹಾ ಚಂಡಿಯೂ, ಸ್ವಕಾರ್ಯಧುರಂಧರಳೂ, ನನ್ನ ತಾಯಿಯೂ ಆದ ಕೈಕೇಯಿಯು ಆರೋಗ್ಯವಾಗಿರುವಳೆ? ನೀವಿಲ್ಲಿಗೆ ಬರುವಾಗ ಏನು ಹೇಳಿ ಕಳುಹಿಸಿದಳು? " ಎಂಬೀಪ್ರಕಾರವಾಗಿ ನುಡಿದ ಮಹಾತ್ಮನಾದ ಭರತಕುಮಾರನ ಮಾತು

(೧) ಟಿ. "ಆತ್ಮಕಾಮಾ" ಎಂಬೀಶ್ಲೋಕದಲ್ಲಿನ ಅಭಿಪ್ರಾಯವನ್ನು **ಗೋವಿಂದರಾಜರು** ಹೀಗೆ ಪ್ರತಿಪಾದಿಸುತ್ತಾರೆ. ಭರತನು ಹಿಂದಿನ ರಾತ್ರಿಯಲ್ಲಿ ದುಸ್ಸ್ವಪ್ನವನ್ನು ನೋಡಿದ್ದನು. ಅದಕ್ಕೆ ತಕ್ಕ ಹಾಗೆ ಅಯೋಧ್ಯೆಯಿಂದ ರಾಜದೂತರು ಬಂದು ಮಾರಲಸದಳವಾದ ಕಾರ್ಯವಿರುವುದೆಂದೂ, ಜಾಗ್ರತೆಯಾಗಿಯೇ ರಾಜಧಾನಿಗೆ ತೆರಳಬೇಕೆಂದೂ, ಈ ರೀತಿ ವಸಿಷ್ಠನ ಆಜ್ಞೆಯಾಗಿರುವುದೆಂದೂ ಹೇಳಿದರು. ಇದರಿಂದ ಭರತನ ಮನಸ್ಸಿನಲ್ಲಿ ವಿಚಾರವು ತಲೆದೋರಿತು. "ಸ್ವಾರ್ಥಪರಾಯಣೆಯಾದ ಕೈಕೇಯಿಯು ಯಾವುದೋ ಒಂದು ದುಷ್ಕಾರ್ಯವನ್ನು ಮಾಡಿದ್ದಾಳೆಂಬುದೇ" ಆ ವಿಚಾರ. ಅಲ್ಲದೆ ಭರತನು ತನ್ನ ತಾಯಿಯಾದ ಕೈಕೇಯಿಯ ನೈಜವಾದ ಗುಣಾವಳಿಯನ್ನು ಅರಿತವನೂ ಆಗಿದ್ದನು. ಆದುದರಿಂದಲೇ ಆತ್ಮಕಾಮಾ, ಸದಾಚಂಡೀ, ಇವೇ ಮೊದಲಾದ ವಿಶೇಷಣಗಳನ್ನು ಆಕೆಗೆ ಕೊಟ್ಟದ್ದಾನೆ.

ಮುಕ್ತಾಸ್ತು ತೇ ದೂತಾ ಭರತೇನ ಮಹಾತ್ಮನಾ ॥ ಊಚುಸ್ಸಪ್ರಶ್ರಯಂ ವಾಕ್ಯಮಿದಂ ತಂ ಭರತಂ ತದಾ ॥೧೧॥ ಕುಶಲಾಸ್ತೇ ನರವ್ಯಾಘ್ರ! ಯೇಷಾಂ ಕುಶಲ ಮಿಚ್ಛಸಿ॥ಶ್ರೀಶ್ಚ ತ್ವಾಂ ವೃಣುತೇ ಪದ್ಮಾ ಯುಜ್ಯತಾಂ ಚಾಪಿ ತೇ ರಥಃ ॥೧೨॥ ಭರತಶ್ಚಾಪಿ ತಾನ್ ದೂತಾ ನೇವಮುಕ್ತೋಽಭ್ಯಭಾಷತ ॥ ಆಪೃಚ್ಛೇಽಹಂ ಮಹಾರಾಜಂ ದೂತಾ ಸ್ಸಂತ್ವರಯಂತಿ ಮಾಂ ॥೧೩॥ ಏವ ಮುಕ್ತ್ವಾತು ತಾನ್ ದೂತಾನ್ ಭರತಃ ಪಾರ್ಥಿವಾತ್ಮಜಃ ॥ ದೂತೈಸ್ಸಂಚೋ

ಕುರಿತು, ಸಪ್ರಶ್ರಯಂ - ವಿನಯದಿಂದೊಡಗೂಡಿದಂತೆ, ಇದಂವಾಕ್ಯಂ - ಈ ಮಾತನ್ನು, ಊಚುಃ - ಹೇಳಿದರು. ॥ ೧೦-೧೧ ॥ ಹೇ ನರವ್ಯಾಘ್ರ - ಎಲೈ ನರಶ್ರೇಷ್ಠನೇ ! ಏಷಾಂ - ಯಾರ, ಕುಶಲಂ - ಕ್ಷೇಮವನ್ನು, ಇಚ್ಛಸಿ - ಅಪೇಕ್ಷಿಸುವೆಯೋ, ತೇ - ಅವರು, ಕುಶಲಾಃ - ಕ್ಷೇಮದಲ್ಲಿದ್ದಾರೆ, ಪದ್ಮಾ- ಕಮಲಹಸ್ತಳಾದ, ಶ್ರೀಶ್ಚ (೧) - ಲಕ್ಷ್ಮಿದೇವಿಯು, ತ್ವಾಂ - ನಿನ್ನನ್ನು, ವೃಣುತೇ-ವರಿಸಿದ್ದಾಳೆ, ತೇ- ನಿನ್ನ, ರಥಶ್ಚಾಪಿ - ರಥವೂ, ಯುಜ್ಯತಾಂ - ಕಟ್ಟಲ್ಪಡಲಿ. ॥ ೧೨ ॥ ಏವಂ - ಈಪರಿಯಾಗಿ, ಉಕ್ತಃ - ಹೇಳಲ್ಪಟ್ಟ, ಭರತಶ್ಚಾಪಿ - ಭರತನೂ, ತಾನ್‌ದೂತಾನ್ - ಆ ದೂತರನ್ನು ಕುರಿತು, ಮಾಂ- ನನ್ನನ್ನು, ದೂತಾಃ - ದೂತರು, ಸಂತ್ವರಯಂತಿ - ಅವಸರಗೊಳಿಸುತ್ತಾರೆ, ಇತಿ - ಇಂತೆಂದು, ಮಹಾರಾಜಂ - ಕೇಕಯರಾಜನನ್ನು, ಅಹಂ - ನಾನು, ಆಪೃಚ್ಛೇ-ಕೇಳುತ್ತೇನೆಂದು, ಅಭ್ಯಭಾಷತ- ಹೇಳಿದನು. ॥ ೧೩ ॥ ಪಾರ್ಥಿವಾತ್ಮಜಃ - ರಾಜಕುಮಾರನಾದ, ಭರತಃ-ಭರತನು, ತಾನ್‌ದೂತಾನ್- ಆ ದೂತರನ್ನು ಕುರಿತು, ಏವಂ - ಈಪರಿಯಾಗಿ, ಉಕ್ತ್ವಾ - ಹೇಳಿ, ದೂತೈಃ - ಭಟರಿಂದ, ಸಂಚೋದಿತಃ - ಪ್ರೇರಿತನಾಗಿ, ಮಾತಾಮಹಂ - ತಾತನನ್ನು ಕುರಿತು, ಉವಾಚಹ - ಹೇಳಿದನು.

ಗಳನ್ನು ಕೇಳಿದ ಆ ದೂತರೆಲ್ಲರೂ, ಬಹು ನಮ್ರತೆಯಿಂದ ಆತನನ್ನು ಕುರಿತು ಹೀಗೆಂದರು. ॥ ೬-೧೧ ॥ ಎಲೈ ನರಶ್ರೇಷ್ಠನಾದ ಭರತನೆ ! ನೀನು ಯಾರಯಾರ ಕ್ಷೇಮವನ್ನು ಕುರಿತು ಪ್ರಶ್ನೆಯಂಗೈದೆಯೋ ಅವರೆಲ್ಲರೂ ಕ್ಷೇಮದಿಂದಿದ್ದಾರೆ. ಪದ್ಮಹಸ್ತಳಾದ ಮಹಾಲಕ್ಷ್ಮಿಯು ನಿನ್ನನ್ನು ಹೊಂದಬೇಕೆಂದು ಕೋರುತ್ತಿದ್ದಾಳೆ ! ಆದುದರಿಂದ ರಥವನ್ನು ಸಿದ್ಧಗೊಳಿಸು.” ಇಂತು ನುಡಿದ ದೂತರ ಮಾತನ್ನುಕೇಳಿ ಭರತನು ಅವರನ್ನು ಕುರಿತು “ ಎಲೈ ದೂತರಿರಾ ! ” ದೂತರು ಬಂದು ನನ್ನನ್ನು ಬೇಗನೆ ಬರಬೇಕೆಂದು ಕರೆಯುತ್ತಿದ್ದಾರೆ ಎಂದು ನಮ್ಮ ತಾತ ನಾದ ಕೇಕಯರಾಜನಿಗೆ ಹೇಳಿಬರುತ್ತೇನೆ ” ಎಂದು ಹೇಳಿ, ಆ ರಾಜನಾದ ಭರತನು ಅವ ರಿಂದ ಪ್ರೇರಿತನಾಗಿ ತನ್ನ ತಾತನಾದ ಕೇಕಯರಾಜನಬಳಿ ಸೇರಿ, “ ಎಲೈ ಮಹಾರಾಜನೆ !

(೧) ಟಿ. ಇಲ್ಲಿನ ಅಭಿಪ್ರಾಯವು ಹೀಗೆ— ಮಾತನಾಡುವುದರಲ್ಲಿ ಅತಿ ಕುಶಲರಾದ ದೂತರು ಈ ಶ್ಲೋಕದಿಂದ ಅಯೋಧ್ಯೆಯ ವೃತ್ತಾಂತವೆಲ್ಲವನ್ನೂ ಸೂಕ್ಷ್ಮವಾಗಿ ತಿಳಿಸಿದ್ದಾರೆ. “ಪದ್ಮಹಸ್ತಳಾದ ಲಕ್ಷ್ಮಿಯು ನಿನ್ನನ್ನೊಲಿಯುವಳು” ಹೀಗೆ ಹೇಳಿರುವುದರಿಂದ ದಶರಥರಾಯನು ಮೃತಿ ಹೊಂದಿದನೆಂದೇ ಸೂಚಿತವಾಯಿತು. ಆದರೆ ಭರತನಿಗೆ ರಾಜ್ಯಾಧಿ ಕಾರವೆಲ್ಲಿಯದೆಂಬ ಪ್ರಶ್ನೆಯು ಹುಟ್ಟುತ್ತದೆ. ಅದಕ್ಕೆ ಇಷ್ಟೇ ಸಮಾಧಾನ. ವಸಿಷ್ಠಮುನಿಯು ದಶರಥನ ಮರಣ ವೃತ್ತಾಂತವನ್ನು ಭರತನೊಡನೆ ಹೇಳಕೂಡದೆಂದಾಜ್ಞಾಪಿಸಿದ್ದನಾದುದರಿಂದ ಅದನ್ನು ಮರೆಮಾಚಿ ಔಪಚಾರಿಕವಾಗಿ ಭರತಕುಮಾರನಿಗೆ ಮಂಗಳವನ್ನಪೇಕ್ಷಿಸಿದ ಆ ರಾಜದೂತರು “ ಪದ್ಮಾ ಶ್ರೀಶ್ಚತ್ವಾಂ ವೃಣುತೇ ” ಎಂದು ಹೇಳಿದ್ದಾರೆ.

ದಿತೋ ವಾಕ್ಯಂ ಮಾತಾಮಹ ಮುವಾಚಹ || ೧೪ || ರಾಜನ್! ಪಿತು ರ್ಗಮಿ ಷ್ಯಾಮಿ ಸಕಾಶಂ ದೂತಚೋದಿತಃ || ಪುನರಪ್ಯಹ ಮೇಷ್ಯಾಮಿ ಯದಾ ಮೇ ತ್ವಂ ಸ್ಮರಿಷ್ಯಸಿ || ೧೫ || ಭರತೇನೈವ ಮುಕ್ತಸ್ತು ನೃಪೋ ಮಾತಾಮಹ ಸ್ತದಾ || ತಮುವಾಚ ಶುಭಂ ವಾಕ್ಯಂ ಶಿರಸ್ಯಾಘ್ರಾಯ ರಾಘವಂ || ೧೬ || ಗಚ್ಛ ತಾತಾನುಜಾನೇ ತ್ವಾಂ ಕೈಕೇಯೀ ಸುಪ್ರಜಾ ಸ್ತ್ವಯಾ || ಮಾತರಂ ಕುಶಲಂ ಬ್ರೂಯಾಃ ಪಿತರಂ ಚ ಪರಂತಪ! || ೧೭ || ಪುರೋಹಿತಂ ಚ ಕುಶಲಂ ಏಚಾನ್ಯೇ ದ್ವಿಜಸತ್ತಮಾಃ || ತೌಚ ತಾತ! ಮಹೇಷ್ವಾಸೌ ಭ್ರಾತರೌ

|| ೧೪ || ಹೇ ರಾಜನ್ - ಎಲೈ ತಾತನೇ! ದೂತಚೋದಿತಃ - ಭೃತ್ಯರಿಂದ ಪ್ರೇರಿತನಾಗಿ, ಪಿತುಃ - ತಂದೆಯ, ಸಕಾಶಂ - ಸಮೀಪವನ್ನು ಕುರಿತು, ಗಮಿಷ್ಯಾಮಿ - ಹೋಗುವೆನು, ಯದಾ - ಎಂದು, ಮೇ - ನನ್ನನ್ನು, ತ್ವಂ - ನೀನು, ಸಂಸ್ಮರಿಷ್ಯಸಿ - ಸ್ಮರಿಸುವೆಯೋ, ತದಾ - ಆಗ, ಪುನರಪಿ - ಮತ್ತು, ಅಹಂ - ನಾನು, ಏಷ್ಯಾಮಿ - ಬರುವೆನು. || ೧೫ || ಭರತೇನ - ಭರತನಿಂದ, ಏವಂ - ಈಪರಿಯಾಗಿ, ಉಕ್ತಃ - ಹೇಳಲ್ಪಟ್ಟ, ಮಾತಾಮಹಃ - ತಾತನಾದ, ನೃಪಃ - ಕೇಕಯ ರಾಯನು, ತದಾ - ಆ ಕಾಲದಲ್ಲಿ, ರಾಘವಂ - ರಘುವಂಶೋತ್ಪನ್ನನಾದ, ತಂ - ಆ ಭರತನನ್ನು, ಶಿರಸಿ - ಮಂಡೆಯಲ್ಲಿ, ಆಘ್ರಾಯ - ಆಘ್ರಾಣಿಸಿ, ಶುಭಂ - ಮಂಗಳಕರವಾದ, ವಾಕ್ಯಂ - ಮಾತನ್ನು, ಉವಾಚ-ಹೇಳಿದನು. || ೧೬ || ಹೇ ತಾತ-ಎಲೈ ಅಪ್ಪನೇ, ತ್ವಾಂ-ನಿನ್ನನ್ನು ಕುರಿತು, ಅನುಜಾನೇ-ಸಮ್ಮತಿಸಿದ್ದೇನೆ, ಗಚ್ಛ - ಹೋಗು, ಕೈಕೇಯೀ - ಕೈಕೇಯೀದೇವಿಯು, ತ್ವಯಾ - ನಿನ್ನಿಂದ, ಸುಪ್ರಜಾಃ - ಸತ್ಪುತ್ರನುಳ್ಳವಳು, ಹೇ ಪರಂತಪ - ಎಲೈ ಶತ್ರುಸಂಹಾರಕನೇ, ಮಾತರಂ - ತಾಯಿಯನ್ನು, ಪಿತರಂಚ - ತಂದೆಯನ್ನೂ, ಕುಶಲಂ - ಕ್ಷೇಮವನ್ನು, ಬ್ರೂಯಾಃ - ಹೇಳು. || ೧೭ || ಪುರೋಹಿತಂಚ - ಪುರೋಹಿತನಾದ ವಸಿಷ್ಠನನ್ನೂ ಕುರಿತು, ಕುಶಲಂ - ಕ್ಷೇಮವನ್ನು, ಬ್ರೂಯಾಃ - ಹೇಳು, ಅನ್ಯೇ - ಮತ್ತೆ ಕೆಲವರಾದ, ದ್ವಿಜಸತ್ತಮಾಶ್ಚ-ಬ್ರಾಹ್ಮಣಶ್ರೇಷ್ಠರೂ. ಯೇ-ಯಾರುಂಟೋ, ತಾನ್ - ಅವರನ್ನು ಕುರಿತು, ಕುಶಲಂ - ಕ್ಷೇಮವನ್ನು, ಬ್ರೂಯಾಃ - ಹೇಳುವವನಾಗು, ಹೇ ತಾತ -

"ನಮ್ಮ ತಂದೆಯು ನನ್ನನ್ನು ಕರೆದುಕೊಂಡು ಬನ್ನಿರೆಂದು ದೂತರನ್ನು ಕಳುಹಿಸಿರುವನು. ಆದುದರಿಂದ ನಾನಾತನ ಬಳಿಗೈದುವೆನು, ನೀನು ನನ್ನನ್ನು ಯಾವಾಗ ಸ್ಮರಿಸುತ್ತೀಯೋ ಆಗ ನಾನು ಪುನಃ ನಿನ್ನ ಸಮೀಪಕ್ಕೆ ಬರುವವನಾಗಿರುತ್ತೇನೆ" ಎಂದು ಹೇಳಿದನು. || ೧೨-೧೫ || ಈ ರೀತಿಯಾಗಿ ನುಡಿದ ಭರತನ ಮಾತುಗಳನ್ನು ಕೇಳಿ, ಕೇಕಯರಾಜನು ಆತನ ಮಂಡೆಯನ್ನಾಘ್ರಾಣಿಸಿ, ಅವನನ್ನು ಕುರಿತು, "ಎಲೈ ತಂದೆಯೆ! ಭರತನೆ! ನೀನು ಅಯೋಧ್ಯಾಪಟ್ಟಣಕ್ಕೆ ಹೋಗಿ ಬರಲು ಅನುಮತಿಯನ್ನಿತ್ತಿರುವೆನು. ನಿನ್ನಿಂದಲೇ ಕೈಕೇಯಿಯು ಸುಪುತ್ರವತಿಯೆನಿಸಿದ್ದಾಳೆ. ನೀನು ಹೋದೊಡನೆಯೆ ನಿನ್ನ ತಾಯಿಯಾದ ಕೈಕೇಯಿಯೊಡನೆಯೂ, ತಂದೆಯಾದ ದಶರಥರಾಯನೊಡನೆಯೂ, ನಾನು ಕುಶಲವನ್ನು ಕೇಳಿದೆನೆಂದು ಹೇಳುವವನಾಗು; ಪುರೋಹಿತನಾದ ವಸಿಷ್ಠಮುನಿಯೊಡನೆಯೂ, ಇತರ ಬ್ರಾಹ್ಮಣರೊಡನೆಯೂ, ಧನುರ್ಧಾರಿಗಳಲ್ಲಿ ಶ್ರೇಷ್ಠರಾದ ಶ್ರೀರಾಮಲಕ್ಷ್ಮಣರೊಡನೆಯೂ ನಾನು ಕುಶಲವನ್ನು

ರಾಮಲಕ್ಷ್ಮಣೌ ॥ ೧೮ ॥ ತಸ್ಮೈ ಹಸ್ತ್ಯುತ್ತಮಾಂ ಶ್ಚಿತ್ರಾನ್ ಕಂಬಳಾನ್ಯ ಜಿನಾನಿಚ ॥ ಅಭಿಸತ್ಕೃತ್ಯ ಕೈಕೇಯೋ ಭರತಾಯ ಧನಂ ದದೌ ॥ ೧೯ ॥ ರುಕ್ಮ ನಿಷ್ಕಸಹಸ್ರೇ ದ್ವೇ ಷೋಡಶಾಶ್ವ ಶತಾನಿಚ ॥ ಸತ್ಕೃತ್ಯ ಕೈಕಯೀಪುತ್ರಂ ಕೈಕೇಯೋ ಧನಮಾದಿಶತ್ ॥ ೨೦ ॥ ತಥಾಮಾತ್ಯಾನಭಿಪ್ರೇತಾ ನ್ವಿಶ್ವಾಸ್ಯಾಂಶ್ಚ ಗುಣಾನ್ವಿತಾನ್ ॥ ದದಾ ವಶ್ವಪತಿಃ ಕ್ಷಿಪ್ರಂ ಭರತಾಯಾ ನುಯಾಯಿನಃ ॥ ೨೧ ॥ ಐರಾವತಾ ನೈಂದ್ರಶಿರಾ ನ್ನಾಗಾನ್ವೈ ಪ್ರಿಯದರ್ಶನಾನ್ ॥ ಖರಾನ್ ಶೀಘ್ರಾನ್ ಸು ಸಂಯುಕ್ತಾ ನ್ಮಾತುಲೋಸ್ಮೈ ಧನಂ ದದೌ ॥ ೨೨ ॥

ಎಲೈ ಅಪ್ಪನೇ, ಮಹೇಷ್ವಾಸೌ - ಮಹಾ ಧನುರ್ಧಾರಿಗಳಾದ, ಭ್ರಾತರೌ - ಅಣ್ಣ ತಮ್ಮಂದಿರಾದ, ತೌ ರಾಮಲಕ್ಷ್ಮಣೌಚ - ಆ ರಾಮಲಕ್ಷ್ಮಣರನ್ನೂ, ಕುಶಲಂ - ಕ್ಷೇಮವನ್ನು, ಬ್ರೂಯಾಃ - ಕೇಳು. ॥ ೧೮ ॥ ಕೇಕಯಃ - ಕೇಕಯರಾಯನು, ತಸ್ಮೈಭರತಾಯ - ಆ ಭರತನಿಗೋಸುಗ, ಅಭಿಸತ್ಕೃತ್ಯ- ಬಹುಸತ್ಕಾರಮಾಡಿ, ಹಸ್ತ್ಯುತ್ತಮಾನ್ - ಗಜಶ್ರೇಷ್ಠಗಳನ್ನು, ಚಿತ್ರಾನ್ - ನಾನಾಬಣ್ಣಗಳಾದ, ಕಂಬಳಾನ್ - ಕಂಬಳಿಗಳನ್ನೂ, ಅಜಿನಾನಿಚ - ಚರ್ಮಗಳನ್ನೂ, ಧನಂಚ - ಧನವನ್ನೂ, ದದೌ - ಕೊಟ್ಟನು. ॥ ೧೯ ॥ ಕೇಕಯಃ - ಕೇಕಯರಾಯನು, ದ್ವೇ - ಎರಡಾದ, ರುಕ್ಮನಿಷ್ಕಸಹಸ್ರೇ. ರುಕ್ಮ - ಭಂಗಾರದ, ನಿಷ್ಕ - ಕಂಠಾಭರಣಗಳ, ಸಹಸ್ರೇ ಎರಡು ಸಾವಿರವನ್ನು, ಷೋಡಶ-ಹದಿನಾರು ಸಂಖ್ಯೆಯುಳ್ಳ, ಅಶ್ವಶತಾನಿಚ - ಕುದುರೆಗಳ ನೂರುಗಳನ್ನೂ, ಕೈಕೇಯೀಪುತ್ರಂ - ಕೈಕೇಯಿಯ ಮಗನಾದ ಭರತನನ್ನು, ಸತ್ಕೃತ್ಯ - ಬಹುಮಾನಿಸಿ, ಧನಂ - ದ್ರವ್ಯವನ್ನು, ಆದಿಶತ್ - ತೆಗೆದು ಕೊಂಡು ಹೋಗಬೇಕೆಂದಾಜ್ಞಾಪಿಸಿದನು. ॥ ೨೦ ॥ ಅಶ್ವಪತಿಃ - ಕೇಕಯರಾಜನಾದ ಅಶ್ವಪತಿಯು, ತಥಾ - ಹಾಗೆಯೇ, ಭರತಾಯ - ಭರತನಿಗೆ, ಅಭಿಪ್ರೇತಾನ್ - ಸಮ್ಮತರಾದ, ವಿಶ್ವಾಸ್ಯಾನ್ - ಪ್ರೀತಿಗೆ ಯೋಗ್ಯರಾಗಿರುವ, ಗುಣಾನ್ವಿತಾನ್ - ಸುಗುಣಗಳಿಂದ ಕೂಡಿರುವ, ಅಮಾತ್ಯಾನ್ - ಮಂತ್ರಿಗಳನ್ನು, ಅನುಯಾಯಿನಃ - ಹಿಂಬಾಲಿಸುವವರಾದ, ಕ್ಷಿಪ್ರಂ - ಬೇಗನೆ, ದದೌ - ಕೊಟ್ಟನು. ॥ ೨೧ ॥ ಮಾತುಲಃ - ಸೋದರಮಾವನು, ಅಸ್ಮೈ - ಈ ಭರತನಿಗೆ, ಐಂದ್ರಶಿರಾನ್ - ಇಂದ್ರಶಿರಸ್ಸೆಂಬ ಪರ್ವತ ದಲ್ಲಿ ಹುಟ್ಟಿದ, ಐರಾವತಾನ್ - ಇರಾವತ ಕುಲೋತ್ಪನ್ನಗಳಾದ, ಪ್ರಿಯದರ್ಶನಾನ್ - ಪೆಂಪೊಗದ ನೋಟವುಳ್ಳ, ನಾಗಾನ್ - ಆನೆಗಳನ್ನು, ಶೀಘ್ರಾನ್ - ವೇಗಗಾಮಿಗಳಾದ, ಸುಸಂಯುಕ್ತಾನ್ - ಶಿಕ್ಷಿತಗ

ಕೇಳಿದೆನೆಂದು ಹೇಳು" ಎಂದು ಹೇಳಿದನು. ಆ ಬಳಿಕಲಾ ಕೇಕಯರಾಯನು ಭರತನಿಗೀ ರೀತಿ ಹೇಳಿ, ಆನೆಗಳಲ್ಲಿ ಉತ್ತಮವಾದ ಆನೆಗಳನ್ನೂ, ನಾನಾವರ್ಣ ಸಮನ್ವಿತಗಳಾದ ಕಂಬಳಿಗಳನ್ನೂ, ಚರ್ಮಗಳನ್ನೂ, ಎರಡುಸಾವಿರ ವರಹಗಳನ್ನೂ, ಸಾವಿರದಾರುನೂರು ಕುದುರೆಗಳನ್ನೂ, ಇನ್ನೂ ಅಧಿಕವಾದ ಧನವನ್ನೂ ಆತನಿಗೆ ಕೊಟ್ಟವನಾದನು. ॥ ೧೬-೨೦॥ ಇಷ್ಟೆಯಲ್ಲದೆ ಕೇಕಯ ದೇಶಾಧಿಪತಿಯಾದ ಆ ಅಶ್ವಪತಿರಾಯನು ಮಹಾ ಪ್ರೀತಿಪಾತ್ರರೂ, ಸಂಪನ್ನರೂ, ಸದ್ಗುಣಶಾಲಿಗಳೂ, ಶ್ರೇಷ್ಠರೂ ಆದ ಮಂತ್ರಿಗಳನ್ನು ಭರತನೊಡನೆ ಹೋಗು ವಂತೆ ನಿಯಮಿಸಿದನು. ಆ ಸಮಯದಲ್ಲಿ ಭರತನ ಸೋದರಮಾವನಾದ ಯುಧಾಜಿತುವು ಅವನಲ್ಲಿರುವ ವಿಶ್ವಾಸದಿಂದ ನೋಡಲು ಮನೋಹರವಾದುವೂ, ಇರಾವತ ಪರ್ವತದಲ್ಲಿ

ಅಂತಃಪುರೇಽತಿಸಂವೃದ್ಧಾನ್ ವ್ಯಾಘ್ರವೀರ್ಯ ಬಲಾನ್ವಿತಾನ್ ॥ ದಂಷ್ಟ್ರಾ
ಯುಧಾನ್ ಮಹಾಕಾಯಾನ್ ಶುನಶ್ಚೋಪಾಯನಂ ದದೌ ॥ ೨೩ ॥ ಸ ದತ್ತಂ
ಕೈಕಯೇಂದ್ರೇಣ ಧನಂ ತನ್ನಾಭ್ಯನಂದತ ! ॥ ಭರತಃ ಕೈಕೇಯಿಪುತ್ರೋ
ಗಮನತ್ವರಯಾ ತದಾ ॥ ೨೪ ॥ ಬಭೂವಹ್ಯಸ್ಯ ಹೃದಯೇ ಚಿಂತಾ ಸು
ಮಹತೀ ತದಾ॥ತ್ವರಯಾಚಾಪಿ ದೂತಾನಾಂ ಸ್ವಪ್ನಸ್ಯಾಪಿ ಚ ದರ್ಶನಾತ್॥೨೫॥
ಸಸ್ವವೇಶ್ಮಾಭ್ಯತಿಕ್ರಮ್ಯ ನರನಾಗಾಶ್ವ ಸಂವೃತಂ॥ಪ್ರಪೇದೇ ಸುಮಹಚ್ಛ್ರೀಮಾನ್

ಆದ, ಖರಾನ್ - ಕತ್ತೆಗಳನ್ನೂ, ಧನಂ - ಧನವನ್ನು, ದದೌ - ಕೊಟ್ಟನು. ॥ ೨೨ ॥ ಅಂತಃಪುರೇ - ಅಂತಃಪುರದಲ್ಲಿ, ವ್ಯಾಘ್ರವೀರ್ಯಬಲಾನ್ವಿತಾನ್ - ಹುಲಿಗಳ ಪರಾಕ್ರಮದಂತೆ ಪರಾಕ್ರಮವುಳ್ಳ, ಬಲ - ತ್ರಾಣದಿಂದಲೂ, ಅನ್ವಿತಾನ್ - ಕೂಡಿರುವ, ಅತಿಸಂವೃದ್ಧಾನ್ - ಮೊನಚಾದ, ದಂಷ್ಟ್ರಾಯುಧಾನ್ - ಕೋರೆಹಲ್ಲುಗಳೇ ಆಯುಧಗಳಾಗುಳ್ಳ, ಮಹಾಕಾಯಾನ್ - ದೊಡ್ಡಶರೀರಗಳುಳ್ಳ, ಶುನಶ್ಚ - ನಾಯಿಗಳನ್ನೂ, ಉಪಾಯನಂ - ಬಹುಮಾನವಾಗಿ, ದದೌ - ಕೊಟ್ಟನು. ॥ ೨೩ ॥ ಕೈಕಯಿಪುತ್ರಃ - ಕೈಕೇಯಿಯ ಮಗನಾದ, ಸಭರತಃ - ಆ ಭರತನು, ತದಾ - ಆಗ, ಗಮನತ್ವರಯಾ - ಹೊರಡುವ ಅವಸರದಿಂದ, ಕೇಕೇಯೇಂದ್ರೇಣ - ಕೇಕಯರಾಯನಿಂದ, ದತ್ತಂ - ಕೊಡಲ್ಪಟ್ಟ, ತದ್ಧನಂ - ಆ ಸಂಪತ್ತನ್ನು ನೋಡಿ, ನಾಭ್ಯನಂದತ - ಸಂತೋಷಿಸಲಿಲ್ಲ, ಅಸ್ಯ - ಈ ಭರತನ, ಹೃದಿ - ಮನದಲ್ಲಿ, ತದಾ - ಆಗ, ದೂತಾನಾಂ - ಚಾರರ, ತ್ವರಯಾಚ - ವೇಗದಿಂದಲೂ, ಸ್ವಪ್ನಸ್ಯ - ಸ್ವಪ್ನದ, ದರ್ಶನಾದಪಿಚ - ನೋಡುವಿಕೆಯಿಂದಲೂ, ಸುಮಹತೀ - ತೀವ್ರವಾದ, ಚಿಂತಾ - ಆಲೋಚನೆಯು, ಬಭೂವಹಿ - ಆಯಿತಷ್ಟೆ. ॥ ೨೪-೨೫ ॥ ಶ್ರೀಮಾನ್ - ಸಂಪದ್ಯುಕ್ತನಾದ, ಸಃ - ಆ ಭರತನು, ಸಮಹತ್ - ದೊಡ್ಡದಾದ, ಸ್ವವೇಶ್ಮ - ತನ್ನರಮನೆಯನ್ನು, ಅಭ್ಯತಿಕ್ರಮ್ಯ - ಅತಿಕ್ರಮಿಸಿ, ನರನಾಗಾಶ್ವಸಂವೃತಂ - ಮನುಷ್ಯರಿಂದಲೂ ಆನೆಗಳಿಂದಲೂ ಕೂಡಿರುವ, ಅನುತ್ತಮಂ - ಶ್ರೇಷ್ಠವಾದ, ರಾಜಮಾರ್ಗಂ - ರಾಜಬೀದಿಯನ್ನು, ಪ್ರಪೇದೇ - ಹೊಂದಿದನು.॥೨೬॥

ಹುಟ್ಟಿದುವೂ, ಇಂದ್ರಶಿರ ಪರ್ವತದಲ್ಲಿ ಹುಟ್ಟಿದುವೂ, ಚೆನ್ನಾಗಿ ಅಲಂಕರಿಸಲ್ಪಟ್ಟುವೂ, ಬೇಗನೆ ಹೋಗುವುದರಲ್ಲಿ ಮಹಾ ಸಮರ್ಥವಾದುವೂ ಆದ ಹೇಸರಕತ್ತೆಗಳನ್ನೂ, ವಿಶೇಷವಾದ ಧನವನ್ನೂ ಕೊಟ್ಟನು. ಅಲ್ಲದೆಯೂ ಯುಧಾಜಿತುವು ರಾಜಭವನಗಳಲ್ಲಿರಲು ಯೋಗ್ಯವಾದುವೂ, ದೊಡ್ಡದೊಡ್ಡ ಹುಲಿಗಳಂತೆ ಬಲಶಾಲಿಗಳಾದುವೂ ಕೋರೆಹಲ್ಲುಗಳೇ ಆಧಾರವಾಗುಳ್ಳುವೂ, ದೊಡ್ಡ ಶರೀರವುಳ್ಳುವೂ ಆದ ನಾಯಿಗಳನ್ನೂ ಕೊಟ್ಟವನಾದನು. ಆಗ ಕೈಕೇಯಿಯ ಮಗನಾದ ಭರತನು ಅಯೋಧ್ಯಾಪಟ್ಟಣಕ್ಕೆ ಜಾಗ್ರತೆಯಾಗಿ ಹೋಗಬೇಕೆಂದು ಅಭಿಪ್ರಾಯವುಳ್ಳವನಾಗಿದ್ದುದರಿಂದ ಕೇಕಯ ದೇಶಾಧಿಪತಿಯಿಂದ ಕೊಡಲ್ಪಟ್ಟ ಆ ಸಂಪತ್ತನ್ನು ನೋಡಿ ಸಂತೋಷಿಸದೆ ಹೋದನು. ಇಷ್ಟುಮಾತ್ರವಲ್ಲದೆ ಆಗಲಾ ಭರತನ ಹೃದಯದಲ್ಲಿ ಅಧಿಕವಾದ ವಿಚಾರವು ತಲೆದೋರಿದ್ದಿತು. ತನಗೆ ದುಸ್ಸ್ವಪ್ನವುಂಟಾಗಿದ್ದುದರಿಂದಲೂ, ಹಿಂದಿನಿಂದಲೇ ದೂತರು ಬಂದುದರಿಂದಲೂ ಯೋಚಿಸಿದವನಾಗಿ ಏನೂ ತೋರದವನಾಗಿದ್ದನು. ॥ ೨೧-೨೫ ॥ ಆಮೇಲೆ ಮಹಾ ಭಾಗ್ಯಶಾಲಿಯಾದ ಆ ಭರತ ಕುಮಾರನು,

ರಾಜಮಾರ್ಗ ಮನುತ್ತಮಂ ‖ ೨೬ ‖ ಅಭ್ಯತೀತ್ಯ ತತೋ ಪಶ್ಯದಂತಃ ಪುರ ಮುದಾರಧೀಃ ‖ ತತಸ್ತ ದ್ಭರತಶ್ಶ್ರೀಮಾ ನಾವಿವೇಶಾ ನಿವಾರಿತಃ ‖೨೭‖ ಸ ಮಾತಾಮಹಮಾಪೃಚ್ಛ್ಯ ಮಾತುಲಂಚ ಯುಧಾಜಿತಂ ‖ ರಥಮಾರುಹ್ಯ ಭರತಃ ಶತ್ರುಘ್ನಸಹಿತೋ ಯಯೌ ‖ ೨೮ ‖ ರಥಾ ನ್ಮಂಡಲಚಕ್ರಾಂಶ್ಚ ಯೋಜಯಿತ್ವಾ ಪರಶ್ಶತಂ ‖ ಉಷ್ಟ್ರ ಗೋಶ್ವಬಲ್ಯೈ ರ್ಭೃತ್ಯಾ ಭರತಂ ಯಾಂತ ಮನ್ವಯುಃ ‖ ೨೯ ‖

ಬಲೇನ ಗುಪ್ತೋ ಭರತೋ ಮಹಾತ್ಮಾ
ಸಹಾರ್ಯಕಸ್ಯಾತ್ಮಸಮೈ ರಮಾತ್ಯೈಃ ‖

ತತಃ - ಬಳಿಕ, ಶ್ರೀಮಾನ್ - ಸಂಪದ್ಯುಕ್ತನಾದ, ಉದಾರಧೀಃ - ಗಂಭೀರ ಸ್ವಭಾವವುಳ್ಳ, ಭರತಃ - ಭರತನು, ತತಃ - ಆ ಮಾರ್ಗದಿಂದ, ಅಭ್ಯತೀತ್ಯ - ಆಕ್ರಮಿಸಿ, ಅಂತಃಪುರಂ - ಅಂತಃ ಪುರವನ್ನು, ಅಪಶ್ಯತ್ - ಕಂಡನು, ಅನಿವಾರಿತಃ - ತಡೆಯಲ್ಪಡದಿರುವನಾಗಿ, ತತ್ - ಆ ರಾಜಾ ಸ್ಥಾನವನ್ನು, ಆವಿವೇಶ - ಹೊಕ್ಕನು. ‖ ೨೭ ‖ ಸಭರತಃ - ಆ ಭರತನು, ಶತ್ರುಘ್ನಸಹಿತಃ - ಶತ್ರುಘ್ನನೊಡಗೂಡಿ, ಮಾತಾಮಹಂ - ಮಾತಾಮಹನಾದ ಕೇಕಯರಾಯನನ್ನು, ಮಾತುಲಂ - ಸೋದರಮಾವನಾದ, ಯುಧಾಜಿತಂಚ - ಯುಧಾಜಿತುವನ್ನೂ, ಆಪೃಚ್ಛ್ಯ - ಕೇಳಿ, ರಥಂ - ರಥ ವನ್ನು, ಆರುಹ್ಯ - ಹತ್ತಿ, ಯಯೌ - ತೆರಳಿದನು. ‖ ೨೮ ‖ ಭೃತ್ಯಾಃ - ಭಟರು, ಮಂಡಲ ಚಕ್ರಾನ್ - ಮಂಡಲಾಕಾರವಾದ ಚಕ್ರಗಳುಳ್ಳ, ಪರಶ್ಶತಂ - ನೂರಾದ, ರಥಾನ್ - ರಥಗಳನ್ನು, ಉಷ್ಟ್ರಗೋಶ್ವಬಲ್ಯೈಃ - ಒಂಟೆಗಳಿಂದಲೂ, ಎತ್ತುಗಳಿಂದಲೂ, ಕುದುರೆಗಳ ಬಲಗಳಿಂದಲೂ, ಯೋಜ ಯಿತ್ವಾ - ಸೇರಿಸಿ, ಯಾಂತಂ - ಹೋಗುತ್ತಿರುವ, ಭರತಂ - ಭರತನನ್ನು, ಅನ್ವಯುಃ - ಅನುಸರಿಸಿ ನಡೆದರು. ‖ ೨೯ ‖ ಮಹಾತ್ಮಾ - ಮಹಾ ಧೈರ್ಯಶಾಲಿಯಾದ, ಭರತಃ - ಭರತನು, ಆರ್ಯ ಕಸ್ಯ - ಮಾತಾಮಹನಾದ ಕೇಕಯರಾಯನ, ಬಲೇನ - ಬಲದಿಂದ, ಗುಪ್ತಃ - ಸಂರಕ್ಷಿತನಾಗಿ, ಅಪೇತಶತ್ರುಃ - ಹೋಗಲಾಡಿಸಲ್ಪಟ್ಟ ಶತ್ರುಭಯವುಳ್ಳವನಾಗಿ, ಆತ್ಮಸಮೈಃ - ತನಗೆ ಸದೃಶರಾದ,

ಮಾನವರಿಂದಲೂ, ಗಜಗಳಿಂದಲೂ, ಅಶ್ವಗಳಿಂದಲೂ ವ್ಯಾಪ್ತವಾಗಿದ್ದ ತನ್ನರಮನೆಯಿಂದ ಹೊರಹೊರಟು ಸರ್ವೋತ್ತಮವಾದ ರಾಜಮಾರ್ಗಕ್ಕೆ ಬಂದವನಾದನು ; ಆಮೇಲೆ ಅಂತಃ ಪುರಕ್ಕೆ ಹೋದನು. ಆಗಲಾ ಭರತನು ನಿರಾತಂಕವಾಗಿ ಅಂತಃಪುರಕ್ಕೆ ಹೋಗಿ ತಾತನಾದ ಕೇಕಯರಾಜನ, ಸೋದರಮಾವನಾದ ಯುಧಾಜಿತನ ಅನುಮತಿಯನ್ನು ಹೊಂದಿ ಶತ್ರುಘ್ನ ನೊಡಗೂಡಿ ರಥವನ್ನೇರಿ ಹೊರಟವನಾದನು. ಆಗ ಸೇವಕರನೇಕರು ಶ್ರೇಷ್ಠವಾದ ಚಕ್ರ ಗಳುಳ್ಳ ಅನೇಕ ನೂರು ರಥಗಳಿಂದಲೂ, ಒಂಟೆಗಳಿಂದಲೂ, ಅಶ್ವಗಳಿಂದಲೂ, ಪದಾತಿಗಳಿಂ ದಲೂ ಒಡಗೂಡಿದವರಾಗಿ ಭರತನನ್ನು ಹಿಂಬಾಲಿಸಿದರು. ಈ ರೀತಿ ಮಹಾತ್ಮನಾದ ಆ ಭರ ತನು ಪೂಜ್ಯನಾದ ಕೇಕಯರಾಜನು, ತನ್ನ ಹಿಂದೆ ಕಳುಹಿದ ಮಂತ್ರಿಗಳಿಂದಲೂ, ಸೈನ್ಯ

ಆದಾಯ ಶತ್ರುಘ್ನ ಮುಪೇತ ಶತ್ರು
ರ್ಗೃಹಾದ್ಯಯೌ ಸಿದ್ಧ ಇವೇಂದ್ರಲೋಕಾತ್ || ೩೦ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತತಿತಮಸ್ಸರ್ಗಃ.

ಅಮಾತ್ಯೈಸ್ಸಹ - ಸ್ನೇಹಿತರೊಡನೆ, ಶತ್ರುಘ್ನಂ - ಶತ್ರುಘ್ನನನ್ನು, ಆದಾಯ - ಕರೆದುಕೊಂಡು, ಇಂದ್ರಲೋಕಾತ್ - ಇಂದ್ರಲೋಕದಿಂದ, ಸಿದ್ಧ ಇವ - ಸಿದ್ಧಪುರುಷನಂತೆ, ಗೃಹಾತ್ - ಮನೆಯಿಂದ, ಯಯೌ - ತೆರಳಿದನು. || ೩೦ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತತಿತಮಸ್ಸರ್ಗಃ.

ಿಂದಲೂ ಸಂರಕ್ಷಿತನಾಗಿ, ಶತ್ರುಘ್ನನೊಡಗೂಡಿ, "ಇಂದ್ರಲೋಕದಿಂದ ಸಿದ್ಧನು ಹೊರಹೊರಟಂತೆ" ಪಯಣ ಬೆಳಿಸಿದನು. || ೨೬-೩೦ ||

ಇಂತಿದು ಭರತಕೃತ ಅಯೋಧ್ಯಾ ಪ್ರಯಾಣ ಕಥಾಕಥನವೆಂಬ
ಎಪ್ಪತ್ತನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕಸಪ್ತತಿತಮಸ್ಸರ್ಗಃ.

ಸಪ್ರಾಙ್ಮುಖೋ ರಾಜಗೃಹಾ ದಭಿನಿರ್ಯಾಯ ರಾಘವಃ ‖ ತತಸ್ಸು
ದಾಮಾಂ ದ್ಯುತಿಮಾ ಸಂತೀರ್ಯಾವೇಕ್ಷ್ಯ ತಾಂ ನದೀಂ ‖ ೧ ‖ ಹ್ಲಾದಿನೀಂ
ದೂರಪಾರಾಂಚ ಪ್ರತ್ಯಕ್ ಸ್ರೋತ ಸ್ತರಂಗಿಣೀಂ ‖ ಶತದ್ರೂ ಮತರಚ್ಛ್ರೀಮಾ
ನ್ನದೀ ಮಿಕ್ಷ್ವಾಕುನಂದನಃ ‖ ೨ ‖ ಏಳಧಾನೇ ನದೀಂ ತೀರ್ತ್ವಾ ಪ್ರಾಪ್ಯ
ಚಾಪರಪರ್ಪಟಾ ‖ ಶಿಲಾಮಾಕುರ್ವತೀಂ ತೀರ್ತ್ವಾ ಹ್ಯಾಗ್ನೇಯಂ ಶಲ್ಯ
ಕರ್ತನಂ ‖ ೩ ‖ ಸತ್ಯಸಂಧ ಶ್ಶುಚಿ ಶ್ಶ್ರೀಮಾ ಪ್ರೇಕ್ಷಮಾಣ ಶ್ಶಿಲಾವಹಾಂ ‖

ತತಃ - ಬಳಿಕ, ರಾಘವಃ - ರಘುವಂಶೋತ್ಪನ್ನನಾದ, ದ್ಯುತಿಮಾ - ಮಹಾ ಪ್ರಕಾಶವಂತನಾದ, ಸಃ - ಆ ಭರತನು, ಪ್ರಾಙ್ಮುಖಃ - ಪೂರ್ವಮುಖನಾಗಿ, ರಾಜಗೃಹಾತ್ - ಅರಮನೆಯಿಂದ, ಅಭಿನಿರ್ಯಾಯ - ಹೊರಟನು, ಸುದಾಮಾಂ - ಸುದಾಮವೆಂಬ ಹೆಸರುಳ್ಳ, ತಾಂ - ಪ್ರಸಿದ್ಧವಾದ, ನದೀಂ - ಹೊಳೆಯನ್ನು, ಅವೇಕ್ಷ್ಯ - ಕಂಡು, ಸಂತೀರ್ಯ - ದಾಟಿ, ದೂರಪಾರಾಂ - ದೂರವಾದ ತೀರವುಳ್ಳ, ಹ್ಲಾದಿನೀಂ - ಹ್ಲಾದಿನೀ ಎಂಬ, ಪ್ರತ್ಯಕ್ಸ್ರೋತಸ್ತರಂಗಿಣೀಂ - ಪಶ್ಚಿಮಾಭಿ ಮುಖವಾಗಿ ಪ್ರವಹಿಸುತ್ತಿರುವ ನದಿಯನ್ನು, ಅತರತ್ - ದಾಟಿದನು, ಶ್ರೀಮಾ-ಸಂಪದ್ಯುಕ್ತನಾದ, ಇಕ್ಷ್ವಾಕು ನಂದನಃ - ಇಕ್ಷ್ವಾಕು ಕುಲಾನಂದಕರನಾದ ಭರತನು, ಶತದ್ರೂಂ - ಶತದ್ರೂ ಎಂಬ, ನದೀಂ - ಹೊಳೆಯನ್ನು, ಅತರತ್ - ದಾಟಿದನು. ‖ ೧-೨ ‖ ಏಳಧಾನೇ - ಏಳಧಾನವೆಂಬ ಗ್ರಾಮದಲ್ಲಿ, ನದೀಂ - ನದಿಯನ್ನು, ತೀರ್ತ್ವಾ - ದಾಟಿ, ಅಪರಪರ್ಪಟಾ - ಅಪರಪರ್ಪಟಗಳೆಂಬ ದೇಶಗಳನ್ನು, ಪ್ರಾಪ್ಯ - ಹೊಂದಿ, ಶಿಲಾಂ - ಶಿಲೆಗಳನ್ನು, ಆಕುರ್ವತೀಂ - ಎಲ್ಲ ಕಡೆಯಲ್ಲಿಯೂ ಎಳೆಯುತ್ತಿರುವ, ನದೀಂ - ಹೊಳೆಯನ್ನು, ತೀರ್ತ್ವಾ - ದಾಟಿ, ಆಗ್ನೇಯಂ - ಅಗ್ನಿದಿಕ್ಕಿನಲ್ಲಿರುವ, ಶಲ್ಯಕರ್ತನಂ - ಶಲ್ಯಕರ್ತನವೆಂಬ ಗ್ರಾಮವನ್ನು, ತೀರ್ತ್ವಾ - ದಾಟಿ. ‖ ೩ ‖ ಸತ್ಯಸಂಧಃ - ಸತ್ಯಸಂಧನಾದ,

---

ಆ ಬಳಿಕ ರಘುಕುಲೋದ್ಭವನಾದ ಭರತಕುಮಾರನು ಪೂರ್ವದಿಕ್ಕಿಗೆದುರಾಗಿ ಪಯಣಮಾಡಿ, ಮೊದಲು ಸುದಾಮವೆಂಬ ನದಿಯನ್ನು ದಾಟದನು. ಆಮೇಲೆ ಮಹಾ ಸಂತೋಷವನ್ನುಂಟುಮಾಡುವುದೂ, ಬಹು ವಿಸ್ತಾರವುಳ್ಳದ್ದೂ, ಪಶ್ಚಿಮಾಭಿಮುಖವಾಗಿ ಪ್ರವಹಿಸುತ್ತಿರುವುದೂ ಆದ ಶತದ್ರೂ ನದಿಯನ್ನು ದಾಟಿದವನಾದನು. ಇಕ್ಷ್ವಾಕು ಕುಲ ನಂದನನೂ, ಶ್ರೀಮಂತನೂ, ದ್ಯುತಿಮಂತನೂ ಆದ ಆ ಭರತನು ಈ ಎರಡು ನದಿಗಳನ್ನೂ ದಾಟಿದ ತರುವಾಯ ಏಳಧಾನವೆಂದು ಹೆಸರುಳ್ಳ ಗ್ರಾಮದಲ್ಲಿರುವ ಏಳಾ ನದಿಯನ್ನು ದಾಂಟಿದನು. ಆಮೇಲೆ ಸತ್ಯಸಂಧನೂ, ಶುಚಿರ್ಭೂತನೂ, ಶ್ರೀಮಂತನೂ ಆದ ಆ ಭರತನು ಅಪರಪರ್ಪಟದೇಶಕ್ಕೆ ಬಂದವನಾದನು. ಇಂತು ಬಂದಮೇಲೆ ಆ ದೇಶಕ್ಕೆ ಸಮೀಪದಲ್ಲಿರುವ ಕಲ್ಲುಗಳನ್ನಾಕರ್ಷಿಸುವುದೂ, ಶಿಲಾವಹವೆಂಬ ಹೆಸರುಳ್ಳದ್ದೂ ಆದ ನದಿಯನ್ನು

ಅತ್ಯಯಾ ತ್ಸ ಮಹಾಶೈಲಾ ನ್ವನಂ ಚೈತ್ರರಥಂ ಪ್ರತಿ ॥ ೪ ॥ ಸರಸ್ವತೀಂಚ
ಗಂಗಾಂಚ ಯುಗ್ಮೇನ ಪ್ರತಿಪದ್ಯಚ ॥ ಉತ್ತರಂ ವೀರಮತ್ಸ್ಯಾನಾಂ ಭಾರುಂಡಂ
ಪ್ರಾವಿಶದ್ವನಂ ॥ ೫ ॥ ವೇಗಿನೀಂಚ ಕುಳಿಂಗಾಖ್ಯಾಂ ಹ್ಲಾದಿನೀಂ ಪರ್ವತಾ
ವೃತಾಂ ॥ ಯಮುನಾಂ ಪ್ರಾಪ್ಯ ಸಂತೀರ್ಣೋ ಬಲಮಾಶ್ವಾಸಯ ತ್ತದಾ ॥ ೬ ॥
ಶೀತೀಕೃತ್ಯತು ಗಾತ್ರಾಣಿ ಕಾಂತಾನಾಶ್ವಾಸ್ಯ ವಾಜಿನಃ ॥ ತತ್ರ ಸ್ನಾತ್ವಾ ಚ
ಪೀತ್ವಾಚ ಪ್ರಾಯಾದಾದಾಯ ಚೋದಕಂ ॥ ೭ ॥ ರಾಜಪುತ್ರೋ ಮಹಾ

ಶ್ರೀಮಾನ್ - ಸಂಪದ್ಯುಕ್ತನಾದ, ಶುಚಿಃ - ಪರಿಶುದ್ಧನಾದ, ಸಃ - ಆ ಭರತನು, ಶಿಲಾವಹಾಂ - ಶಿಲಾವಹವೆಂಬ ನದಿಯನ್ನು, ಪ್ರೇಕ್ಷಮಾಣಃ - ನೋಡಿ, ಮಹಾಶೈಲಾನ್ - ದೊಡ್ಡಬೆಟ್ಟಗಳನ್ನು, ಚೈತ್ರರಥಂ - ಚೈತ್ರರಥವೆಂಬ, ವನಂಪ್ರತಿ - ವನವನ್ನು ಕುರಿತು, ಅತ್ಯಯಾತ್ - ದಾಟಿದನು. ॥ ೪ ॥ ಸರಸ್ವತೀಂಚ - ಸರಸ್ವತೀನದಿಯನ್ನು, ಗಂಗಾಂಚ - ಗಂಗಾನದಿಯನ್ನು, ಯುಗ್ಮೇನ - ಸಂಗಮಮಾರ್ಗದಿಂದ, ಪ್ರತಿಪದ್ಯ - ಹೊಂದಿ, ವೀರಮತ್ಸ್ಯಾನಾಂ - ವೀರಮತ್ಸ್ಯಗಳೆಂಬ ದೇಶಗಳಿಗೆ, ಉತ್ತರಂ - ಉತ್ತರವಾದ, ಭಾರುಂಡಂ - ಭಾರುಂಡವೆಂಬ, ವನಂ - ವನವನ್ನು, ಪ್ರಾವಿಶತ್ - ಹೊಕ್ಕನು. ॥ ೫ ॥ ಕುಳಿಂಗಾಖ್ಯಾಂ - ಕುಳಿಂಗವೆಂಬ ಹೆಸರುಳ್ಳ, ವೇಗನೀಂ - ವೇಗವತ್ತಾದ ನದಿಯನ್ನು, ಪರ್ವತಾವೃತಾಂ - ಬೆಟ್ಟಗಳಿಂದ ಕೂಡಿರುವ, ಹ್ಲಾದಿನೀಂ - ಹ್ಲಾದಿನೀ ಎಂಬ ನದಿಯನ್ನು, ಯಮುನಾಂ - ಯಮುನಾ ನದಿಯನ್ನು, ಪ್ರಾಪ್ಯ - ಹೊಂದಿ, ಸಂತೀರ್ಣಃ - ದಾಟಿದವನಾಗಿ, ತದಾ - ಆಗ, ಬಲಂ - ಸೈನ್ಯವನ್ನು, ಆಶ್ವಾಸಯತ್ - ಸಮಾಧಾನಗೊಳಿಸಿದನು, ॥ ೬ ॥ ತತ್ರ - ಆ ಯಮುನಾ ನದಿಯಲ್ಲಿ, ಸ್ನಾತ್ವಾ - ಸ್ನಾನಮಾಡಿ, ಪೀತ್ವಾಚ - ಜಲಪಾನವನ್ನೂ ಮಾಡಿ, ಗಾತ್ರಾಣಿ - ಕುದುರೆಗಳ ಶರೀರಗಳನ್ನು, ಶೀತೀಕೃತ್ಯ - ತೊಳದು, ಕಾಂತಾಂ - ಮನೋಹರಗಳಾದ, ವಾಜಿನಶ್ಚ - ಕುದುರೆಗಳನ್ನೂ, ಆಶ್ವಾಸ್ಯ - ಸಮಾಧಾನಗೊಳಿಸಿ, ಉದಕಂಚ - ನೀರನ್ನೂ, ಆದಾಯ-ತೆಗದುಕೊಂಡು, ಪ್ರಾಯಾತ್ - ಹೊರಟನು. ॥ ೭ ॥ ಭದ್ರಃ - ಶುಭಕರನಾದ, ರಾಜಪುತ್ರಃ -

ದಾಟಿ, ಅದಕ್ಕೆ ಆಗ್ನೇಯ ದಿಕ್ಕಿನಲ್ಲಿರುವ ಶಲ್ಯಕರ್ತನವೆಂಬ ಗ್ರಾಮವನ್ನೂ, ಹಿಂದೆ ತಾನು ದಾಟಿದ ಶಿಲಾವಹ ನದಿಯನ್ನೂ ನೋಡುತ್ತ, ಚೈತ್ರರಥವೆಂಬ ಅರಣ್ಯದಲ್ಲಿರುವ ದೊಡ್ಡ ದೊಡ್ಡ ಬಂಡೆಗಳನ್ನು ನೋಡಿದವನಾದನು. ಆಮೇಲೆ ಆ ಬಂಡೆಗಳನ್ನೆಲ್ಲ ದಾಟಿ, ಸರಸ್ವತೀ ನದಿಯನ್ನೂ, ಅದರ ಸಮೀಪದಲ್ಲಿರುವ ಇನ್ನೊಂದು ನದಿಯನ್ನೂ ದಾಂಟಿದನು. ಹೀಗೆ ಆ ನದಿಗಳನ್ನುದಾಟಿದಮೇಲೆ ಮತ್ಸ್ಯದೇಶಗಳಿಗೆ ಉತ್ತರದಿಕ್ಕಿನಲ್ಲಿರುವ ಭಾರುಂಡವೆಂಬ ಮಹಾರಣ್ಯವನ್ನು ಪ್ರವೇಶಿಸಿದನು. ॥ ೧-೫ ॥ ಆ ಬಳಿಕಲಾ ಭರತನು ಆ ಅರಣ್ಯವನ್ನು ಕಳೆದು ಅಧಿಕವಾದ ವೇಗವುಳ್ಳುದೂ, ಸಂತೋಷವನ್ನುಂಟುಮಾಡುವುದೂ, ಬಂಡೆಗಳ ಮಧ್ಯಭಾಗದಲ್ಲಿ ಪ್ರವಹಿಸುತ್ತಿರುವುದೂ ಆದ ಕಳಿಂಗವೆಂಬ ಹೆಸರುಳ್ಳ ನದಿಯನ್ನೂ, ಯಮುನಾ ನದಿಯನ್ನೂ ದಾಟಿದನು. ಹೀಗೆ ಆ ನದಿಗಳನ್ನು ದಾಟಿದಮೇಲೆ ಆ ಭರತನು ತನ್ನ ಹಿಂದೆ ಬಂದಿದ್ದ ಸೈನ್ಯವು ಬಳಲಿದ್ದಿತಾದುದರಿಂದ ಸ್ವಲ್ಪ ವಿಶ್ರಾಂತಿ ಕೊಡಲು ಯೋಚಿಸಿ, ಆ ಕಳಿಂಗಾ, ಯಮುನಾನದಿಗಳ ಸಂಗಮಸ್ಥಳದಲ್ಲಿ ಕುದುರೆಗಳ ಆಯಾಸವನ್ನು ಪರಿಹರಿಸಿ,

ರಣ್ಯಂ ಮುನಿಭಿ ಶ್ಚೋಪಸೇವಿತಂ ॥ ಭದ್ರೋ ಭದ್ರೇಣ ಯಾನೇನ ಮಾರುತಃ ಖಮಿವಾತ್ಯಯಾತ್ ॥ ೮ ॥ ಭಾಗೀರಥೀಂ ದುಷ್ಪ್ರತರಾ ಮಂಶುಧಾನೇ ಮಹಾನದೀಂ ॥ ಉಪಾಯಾ ದ್ರಾಘವ ಸ್ತೂರ್ಣಂ ಪ್ರಾಗ್ವಟೇ ವಿಶ್ರುತೇ ಪುರೇ ॥ ೯ ॥ ಸ ಗಂಗಾ ಪ್ರಾಗ್ವಟೇ ತೀರ್ತ್ವಾ ಸಮಾಯೋ ತ್ಕುಟಿಕೋಷ್ಠಿಕಾಂ ॥ ಸಬಲಸ್ತಾಂ ಸತೀರ್ತ್ವಾಥ ಸಮಾಯಾ ದ್ಧರ್ಮವರ್ಧನಂ ॥ ೧೦ ॥ ತೋರಣಂ ದಕ್ಷಿಣಾರ್ಧೇನ ಜಂಬೂಪ್ರಸ್ಥ ಮುಪಾಗಮತ್ ॥ ವರೂಥಂಚ ಯಯೌ ರಮ್ಯಂ ಗ್ರಾಮಂ ದಶರಥಾತ್ಮಜಃ ॥ ೧೧ ॥ ತತ್ರ ರಮ್ಯೇ ವನೇ ವಾಸಂ ಕೃತ್ವಾಸೌ

ರಾಜಕುವರನಾದ ಭರತನು, ಅನಭೀಕ್ಷ್ಣೋಪಸೇವಿತಂ - ಬಹಳ ಜನರಿಂದ ಸೇವಿಸಲ್ಪಡದಿರುವ, ಮಹಾರಣ್ಯಂ - ಮಹಾವನವನ್ನು, ಭದ್ರೇಣ - ಭದ್ರಜಾತೀಯವಾದ ಆನೆಯ, ಯಾನೇನ - ವಾಹನದಿಂದ, ಮಾರುತಃ - ಗಾಳಿಯು, ಖಮಿವ - ಅಂತರಿಕ್ಷವನ್ನಂತೆ, ಅತ್ಯಯಾತ್ - ದಾಟಿದನು. ॥ ೮ ॥ ರಾಘವಃ - ಭರತನು, ಅಂಶುಧಾನವೆಂಬ ದೇಶದಲ್ಲಿ, ದುಷ್ಪ್ರತಾರಾಂ - ದಾಟಲಸದಳವಾದ, ಭಾಗೀರಥೀಂ - ಭಾಗೀರಥೀ ಎಂಬ, ಮಹಾನದೀಂ - ಮಹಾ ನದಿಯನ್ನು, ಪ್ರಾಗ್ವಟೇ - ಪ್ರಾಗ್ವಟವೆಂಬ, ವಿಶ್ರುತೇ - ಪ್ರಸಿದ್ಧವಾದ, ಪುರೇ - ಪಟ್ಟಣದಲ್ಲಿ, ತೂರ್ಣಂ - ಜಾಗ್ರತೆಯಾಗಿ, ಉಪಾಯಾತ್ - ಬಂದನು. ॥ ೯ ॥ ಸಬಲಃ - ಸೈನ್ಯಸಮೇತನಾದ, ಸಃ - ಆ ಭರತನು, ಪ್ರಾಗ್ವಟೇ - ಪ್ರಾಗ್ವಟವೆಂಬ ಪಟ್ಟಣದಲ್ಲಿ, ಗಂಗಾಂ - ಗಂಗಾನದಿಯನ್ನು, ತೀರ್ತ್ವಾ - ದಾಟಿ, ಕುಟಿಕೋಷ್ಠಿಕಾಂ - ಕುಟಕೋಷ್ಠಿಕಾ ಎಂಬ ನದಿಯನ್ನು ಕುರಿತು, ಸಮಾಯಾತ್ - ಬಂದನು, ಸಃ - ಆ ಭರತನು, ತಾಂ - ಆ ನದಿಯನ್ನು, ತೀರ್ತ್ವಾ - ದಾಟಿ, ಅಥ - ಬಳಿಕ, ಧರ್ಮವರ್ಧನಂ - ಧರ್ಮವರ್ಧನವೆಂಬ ಗ್ರಾಮವನ್ನು ಕುರಿತು, ಸಮಾಯಾತ್ - ಬಂದನು. ॥ ೧೦ ॥ ದಶರಥಾತ್ಮಜಃ - ಭರತನು, ತೋರಣಂ - ತೋರಣವೆಂಬ ಗ್ರಾಮಕ್ಕೆ, ದಕ್ಷಿಣಾರ್ಧೇನ - ದಕ್ಷಿಣಭಾಗದಲ್ಲ, ಜಂಬೂಪ್ರಸ್ಥಂ - ಜಂಬೂಪ್ರಸ್ಥವೆಂಬ ಗ್ರಾಮವನ್ನು ಕುರಿತು, ಉಪಾಗಮತ್ - ಬಂದನು, ರಮ್ಯಂ - ಮನೋಹರವಾದ, ವರೂಥಂ-

---

ನೀರಿನಿಂದ ಕುದುರೆಗಳನ್ನು ತೊಳಿಸಿ ತಾನೂ ಅಲ್ಲಿಯೇ ಸ್ನಾನವನ್ನು ಮಾಡಿದನು. ಇದಾದ ಮೇಲೆ ಆ ಭರತಕುಮಾರನು ಆ ನದಿಯಲ್ಲಿ ಜಲಪಾನಮಾಡಿ ಮುಂದಿನ ಮಾರ್ಗಕ್ಕೆ ನೀರು ದೊರಕುವುದಿಲ್ಲವೆಂದು ಎಲ್ಲರಿಗೂ ಬೇಕಾದಷ್ಟು ನೀರನ್ನು ಸಂಗ್ರಹಿಸಿಕೊಂಡು ಮುಂಬರಿದನು. ಆ ಬಳಿಕ ಶುಭಕರನೂ, ರಾಜಪುತ್ರನೂ ಆದ ಆ ಭರತನು ಹಿಂದಾವಾಗಲೂ ನೋಡದಿರುವ ಆ ಅರಣ್ಯವನ್ನು, ಗಜಾರೂಢನಾಗಿ ವಾಯುವು ಗಗನವನ್ನು ದಾಟದಂತೆ ದಾಟಿದವನಾದನು. ಆಮೇಲೆ ರಘುಕುಲೋದ್ಭವನಾದಾ ಭರತನು ಪ್ರಸಿದ್ಧವಾದ ಪ್ರಾಗ್ವಟಣದಲ್ಲಿರುವ ಅಂಶುಧಾನವೆಂಬ ಸ್ಥಳದಲ್ಲಿ ದಾಟಸಲಸದಳವಾದ ಗಂಗಾನದಿಯನ್ನು ಬಹು ಬೇಗನೆ ದಾಂಟಿದವನಾದನು. ಈ ರೀತಿ ಪ್ರಾಗ್ವಟಪಟ್ಟಣದಬಳಿ ಗಂಗಾನದಿಯನ್ನು ದಾಟಿ ಕುಟಕೋಷ್ಠಿಕವೆಂಬ ನದಿಯ ಬಳಿಗೆ ಹೋಗಿ ಚತುರಂಗ ಬಲಸಮೇತನಾಗಿ ಆ ನದಿಯನ್ನು ದಾಟಿ, ಕೂಡಲೆ ಧರ್ಮವರ್ಧನಪಟ್ಟಣಕ್ಕೆ ಹೋದನು. ॥ ೬-೧೦ ॥ ಆ ಬಳಿಕಲಾಭರತನು ತೋರಣವೆಂಬ ಗ್ರಾಮದ ದಕ್ಷಿಣಭಾಗದಿಂದ ಜಂಬೂಪ್ರಸ್ಥವೆಂಬ ಗ್ರಾಮಕ್ಕೆ ಹೋಗಿ, ಅಲ್ಲಿಂದ ಮಹಾ

ಪ್ರಾಙ್ಮುಖೋ ಯಯೌ ‖ ಉದ್ಯಾನ ಮುಜ್ಜಿಹಾನಾಯಾಃ ಪ್ರಿಯಕಾ ಯತ್ರ ಪಾದಪಾಃ ‖ ೧೨ ‖ ಸಾಲಾಂಸ್ತು ಪ್ರಿಯಕಾನ್ ಪ್ರಾಪ್ಯ ಶೀಘ್ರಾನಾಸ್ಥಾಯ ವಾಜಿನಃ ‖ ಅನುಜ್ಞಾಪ್ಯಾಥ ಭರತೋ ವಾಹಿನೀಂ ತ್ವರಿತೋ ಯಯೌ ‖೧೩‖ ವಾಸಂಕೃತ್ವಾ ಸರ್ವತೀರ್ಥೇ ತೀರ್ತ್ವಾ ಚೋತ್ತಾನಿಕಾಂ ನದೀಂ ‖ ಅನ್ಯಾ ನದೀಶ್ಚ ವಿವಿಧಾಃ ಪಾರ್ವತೀಯೈ ಸ್ತುರಂಗಮೈಃ ‖ ೧೪ ‖ ಹಸ್ತಿಪೃಷ್ಠಕ ಮಾಸಾದ್ಯ

ವರೂಥವೆಂಬ, ಗ್ರಾಮಂ - ಗ್ರಾಮವನ್ನು ಕುರಿತು, ಯಯೌ - ತೆರಳಿದನು. ‖ ೧೧ ‖ ತತ್ರ - ಅಲ್ಲಿ, ಅಸೌ - ಈ ಭರತನು, ರಮ್ಯಂ - ಮನೋಹರವಾದ, ವನೇ - ವನದಲ್ಲಿ, ವಾಸಂಕೃತ್ವಾ - ವಾಸವಮಾಡಿ, ಪ್ರಾಙ್ಮುಖಃ - ಪೂರ್ವಮುಖನಾಗಿ, ಯತ್ರ - ಯಾವ ಸ್ಥಳದಲ್ಲಿ, ಪ್ರಿಯಕಾಃ - ಹೊನ್ನೇಗಿಡಗಳೆಂಬ, ಪಾದಪಾಃ - ವೃಕ್ಷಗಳುಂಟೋ, ತತ್ರ - ಅಲ್ಲಿ, ಉಜ್ಜಿಹಾನಾಯಾಃ - ಉಜ್ಜಿಹಾನವೆಂಬ ಪಟ್ಟಣಕ್ಕೆ ಸಂಬಂಧಿಸಿದ, ಉದ್ಯಾನಂ - ಉದ್ಯಾವನವನ್ನು ಕುರಿತು, ಯಯೌ-ತೆರಳಿದನು. ‖ ೧೨ ‖ ಅಥ - ಬಳಿಕ, ಭರತಃ - ಭರತನು, ಪ್ರಿಯಕಾನ್ - ಹೊನ್ನೇಗಿಡಗಳನ್ನು, ಸಾಲಾಂಸ್ತು - ಸಾಲವೃಕ್ಷಗಳನ್ನು, ಪ್ರಾಪ್ಯ - ಹೊಂದಿ, ಶೀಘ್ರಾನ್ - ವೇಗವತ್ತುಗಳಾದ, ವಾಜಿನಃ - ಕುದುರೆಗಳನ್ನು, ಆಸ್ಥಾಯ - ರಥದಲ್ಲಿ ಬಂಧಿಸಿ, ವಾಹಿನೀಂ - ಸೈನ್ಯವನ್ನು, ಅನುಜ್ಞಾಪ್ಯ - ಸಮ್ಮತಿಸಿ, ತ್ವರಿತಃ - ಜಾಗ್ರತೆಯುಳ್ಳವನಾಗಿ, ಯಯೌ - ತೆರಳಿದನು. ‖ ೧೩ ‖ ಸರ್ವತೀರ್ಥೇ - ಸರ್ವತೀರ್ಥವೆಂಬ ಗ್ರಾಮದಲ್ಲಿ, ವಾಸಂ - ಇರುವಿಕೆಯನ್ನು, ಕೃತ್ವಾ - ಮಾಡಿ, ಉತ್ತಾನಿಕಾಂ - ಉತ್ತಾನಿಕವೆಂಬ, ನದೀಂ - ಹೊಳೆಯನ್ನು ತೀರ್ತ್ವಾ - ದಾಟಿ, ಪಾರ್ವತೀಯೈಃ - ಪರ್ವತದೇಶೋತ್ಪನ್ನಗಳಾದ, ಅಶ್ವೈಃ - ಕುದುರೆಗಳಿಂದ, ಅನ್ಯಾಃ - ಮತ್ತೂ ಕೆಲವಾದ, ವಿವಿಧಾಃ - ನಾನಾಬಗೆಗಳಾದ, ನದೀಃ - ಹೊಳೆಗಳನ್ನು, ತೀರ್ತ್ವಾ - ದಾಟಿ, ಯಯೌ - ಮುಂದಕ್ಕೆ ತೆರಳಿವನು. ‖ ೧೪ ‖ ನರವ್ಯಾಘ್ರಃ - ಪುರುಷಶ್ರೇಷ್ಠನಾದ ಭರತನು, ಹಸ್ತಿಪೃಷ್ಟಕಂ - ಆನೆಯನ್ನು, ಆಸಾದ್ಯ - ಹೊಂದಿ, ಕುಟಿಕಾಂ -

ಮನೋಹರವಾದ ವರೂಥವೆಂಬ ಪಟ್ಟಣಕ್ಕೆ ಹೋದನು. ಆಮೇಲೆ ಆ ಗ್ರಾಮದ ಸಮೀಪವಾದುದೂ, ರಮಣೀಯವಾದುದೂ ಆದ ಅರಣ್ಯದಲ್ಲಿ ಸ್ವಲ್ಪಹೊತ್ತು ತಂಗಿದ್ದು, ಅಲ್ಲಿಂದ ಮುಂಬರಿದು ಸಾಲವೃಕ್ಷಗಳೊಡಗೂಡಿದ ಉಜ್ಜಿಹಾನಪಟ್ಟಣದ ಪ್ರಾಂತದಲ್ಲಿರುವ ಉದ್ಯಾನವನವನ್ನು ನೋಡಿದವನಾದನು. ಇಷ್ಟೆಯಲ್ಲದೆಯಾಭರತನು ಆ ಉದ್ಯಾನವನದಲ್ಲಿ, ಸಾಲವೃಕ್ಷಗಳನ್ನೂ, ಪ್ರಿಯಕವೃಕ್ಷಗಳನ್ನೂ ನೋಡುತ್ತಲೆ ತನ್ನ ಸೈನ್ಯಕ್ಕೆಲ್ಲಕ್ಕೂ ಸಾವಕಾಶವಾಗಿಬರಬಹುದೆಂದಾಣತಿಯಿತ್ತು, ತಾನು ಮಹಾವೇಗದಿಂದ ಕುದುರೆಯನ್ನೇರಿ ಅತಿ ತ್ವರೆಯುಳ್ಳವನಾಗಿ ಸರ್ವತೀರ್ಥವೆಂಬ ಗ್ರಾಮಕ್ಕೆ ಹೋದನು. ಆಮೇಲೆ ಆ ಸರ್ವತೀರ್ಥವೆಂಬ ಗ್ರಾಮದಲ್ಲಿ ಸ್ವಲ್ಪಹೊತ್ತು ವಿಶ್ರಮಿಸಿಕೊಂಡು ಬಳಿಕ ಉತ್ತಾನಿಕವೆಂಬ ನದಿಯನ್ನು ದಾಟಿ, ನಾನಾವಿಧಗಳಾದ ನದಿಗಳನ್ನೂ ಪರ್ವತಗಳಲ್ಲಿಹುಟ್ಟಿದ ಆ ಕುದುರೆಗಳಿಂದ ದಾಟಿದವನಾಗಿ, ಗಜಾರೂಢನಾಗಿ ಕುಟಿಕವೆಂಬ ನದಿಯನ್ನು ದಾಟಿ ಸ್ವಲ್ಪದೂರ ಹೋಗಿ ಲೌಹಿತ್ಯ ನಗರವನ್ನು ಸೇರಿದನು. ಆಮೇಲೆಯಾಭರತನು ಲೌಹಿತ್ಯವೆಂಬ ಆ ಗ್ರಾಮದಲ್ಲಿ ಬಹು ಕಪಿಗಳಿಂದುಪಸೇವಿತವಾದ ಕಪೀವತಿಯೆಂಬ ನದಿಯನ್ನು ದಾಟಿದವನಾದನು. ‖ ೧೧-೧೫ ‖ ಆ ಬಳಿಕ ಏಕಸಾಲವೆಂಬ

ಕುಟಿಕಾ ಮತ್ಯವರ್ತತ ॥ ತತಾರಚ ನರವ್ಯಾಘ್ರೋ ಲೌಹಿತ್ಯೇ ಸ ಕಪೀವತೀಂ ॥ ೧೫ ॥ ಏಕಸಾಲೇ ಸ್ಥಾಣುಮತೀಂ ವಿನತೇ ಗೋಮತೀಂ ನದೀಂ ॥ ಕಳಿಂಗ ನಗರೇಚಾಪಿ ಪ್ರಾಪ್ಯ ಸಾಲವನಂ ತದಾ ॥ ೧೬ ॥ ಭರತಃ ಕ್ಷಿಪ್ರಮಾಗಚ್ಛ ತ್ಸುಪರಿಶ್ರಾಂತ ವಾಹನಃ ॥ ವನಂಚ ಸಮತೀತ್ಯಾಶು ಶರ್ವರ್ಯಾಂ ಮರುಣೋ ದಯೇ ॥೧೭॥ ಅಯೋಧ್ಯಾಂ ಮನುನಾ ರಾಜ್ಞಾ ನಿರ್ಮಿತಾಂ ಸಂದದರ್ಶಹ ॥ ತಾಂ ಪುರೀಂ ಪುರುಷವ್ಯಾಘ್ರ ಸ್ಸಪ್ತರಾತ್ರೋಷಿತಃ ಪಥಿ ॥ ೧೮ ॥ ಅಯೋಧ್ಯಾ ಮಗ್ರತೋ ದೃಷ್ಟ್ವಾ ಸಾರಥಿಂ ವಾಕ್ಯ ಮಬ್ರವೀತ್ ॥ ಏಷಾ ನಾತಿಪ್ರತೀತಾ

ಕುಟಿಕಾ ನದಿಯನ್ನು, ಅತ್ಯವರ್ತತ - ಅತಿಕ್ರಮಿಸಿದನು, ಲೋಹಿತ್ಯೇ - ಲೋಹಿತ್ಯನಾಮಕವಾದ ಗ್ರಾಮದಲ್ಲಿ, ಕಪೀವತೀಂ - ಬಹು ಕಪಿಗಳುಳ್ಳ ಕಪೀವತೀ ಎಂಬ ನದಿಯನ್ನು, ಸಃ - ಆ ಭರತನು, ತತಾರ - ದಾಟಿದನು. ॥ ೧೫ ॥ ಏಕಸಾಲೇ - ಏಕಸಾಲನೆಂಬ ಗ್ರಾಮದಲ್ಲಿ, ಸ್ಥಾಣುಮತೀಂ - ಸ್ಥಾಣುಮತೀ ಎಂಬ ನದಿಯನ್ನು, ವಿನತೇ - ವಿನತವೆಂಬ ಗ್ರಾಮದಲ್ಲಿ, ಗೋಮತೀಂ - ಗೋಮತೀ ನದಿಯನ್ನು, ಕಳಿಂಗನಗರೇಚಾಪಿ - ಕಳಿಂಗನಗರದಲ್ಲಿಯೂ, ತದಾ - ಆ ಕಾಲದಲ್ಲಿ, ಸಾಲವನಂ - ಮದ್ದೀಗಿಡಗಳ ವನವನ್ನು, ಪ್ರಾಪ್ಯ - ಹೊಂದಿ. ॥ ೧೬ ॥ ಭರತಃ - ಭರತನು, ಸುಪರಿಶ್ರಾಂತ ವಾಹನಃ - ಬಳಲಿದ ವಾಹನಗಳುಳ್ಳವನಾಗಿ, ವನಂ - ಆ ಸಾಲವನವನ್ನು, ಸಮತೀತ್ಯ - ದಾಟಿ, ಆಶು - ಶೀಘ್ರವಾಗಿ, ಶರ್ವರ್ಯಾಂ - ರಾತ್ರಿಯಲ್ಲಿ, ಅರುಣೋದಯೇ - ಅರುಣೋದಯ ಕಾಲದಲ್ಲಿ, ಕ್ಷಿಪ್ರಂ - ವೇಗವಾಗಿ, ಆಗಚ್ಛತ್ - ಬಂದನು. ॥ ೧೭ ॥ ಪುರುಷವ್ಯಾಘ್ರಃ - ಪುರುಷಶ್ರೇಷ್ಠನಾದ ಭರತನು, ಪಥಿ - ಮಾರ್ಗದಲ್ಲಿ, ಸಪ್ತರಾತ್ರೋಷಿತಃ - ಏಳು ರಾತ್ರಿಗಳು ಇದ್ದವನಾಗಿ, ಮನುನಾ - ವೈವಸ್ವತ ಮನುವೆಂಬ, ರಾಜ್ಞಾ - ಅರಸನಿಂದ, ನಿರ್ಮಿತಾಂ - ನಿರ್ಮಾಣಮಾಡಲ್ಪಟ್ಟ, ತಾಮ ಯೋಧ್ಯಾಂಪುರೀಂ - ಆ ಅಯೋಧ್ಯಾಪಟ್ಟಣವನ್ನು, ಸಂದದರ್ಶಹ - ಕಂಡನಷ್ಟೆ. ॥ ೧೮ ॥ ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು, ಅಗ್ರತಃ - ಮುಂಗಡೆ, ದೃಷ್ಟ್ವಾ - ಕಂಡು, ಸಾರಥಿಂ - ಸಾರಥಿಯನ್ನು ಕುರಿತು, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು, ಹೇ ಸಾರಥೇ - ಎಲೈ

ಗ್ರಾಮದಲ್ಲಿ ಸ್ಥಾಣುಮತಿಯೆಂಬ ನದಿಯನ್ನೂ, ವಿನತವೆಂಬ ಗ್ರಾಮದಲ್ಲಿ ಗೋಮತಿಯೆಂಬ ನದಿಯನ್ನೂ, ಕಳಿಂಗನಗರದಲ್ಲಿ ಮದ್ದೀಗಿಡಗಳ ವನವನ್ನುದಾಂಟಿ, ಬಳಲಿದ ವಾಹನವುಳ್ಳ ವನಾಗಿ ರಾತ್ರಿ ಅರುಣೋದಯ ಸಮಯಕ್ಕೆ ಆಸಾಲವನವನ್ನು ದಾಂಟದವನಾಗಿ ವೈವಸ್ವತ ಮನುವಿಂದ ನಿರ್ಮಿತವಾದ ಅಯೋಧ್ಯಾಪಟ್ಟಣವನ್ನು ನೋಡಿದನು. ಹೀಗೆ ಪುರುಷೋತ್ತ ಮನಾದ ಆ ಭರತನು ಮಾರ್ಗದಲ್ಲಿ ಏಳು ದಿನಗಳನ್ನು ಕಳೆದು, ಎಂಟನೆಯ ದಿನದ ಪ್ರಾತಃ ಕಾಲದಲ್ಲಿ ಅಯೋಧ್ಯಾಪಟ್ಟಣವನ್ನು ನೋಡಿ ತನ್ನ ಸಾರಥಿಯನ್ನು ಕುರಿತು ಹೀಗೆಂದನು.॥೧೬-೧೮॥ "ಎಲೈಸಾರಥಿಯೆ! ಪಾವನಗಳಾದ ಉದ್ಯಾನವನಗಳನ್ನುಳ್ಳುದೂ,ಸರ್ವೋತ್ತಮವಾದ ಕೀರ್ತಿಯುಳ್ಳುದೂ,ಪಾಂಡುವರ್ಣವಾದ ಮೃತ್ತಿಕೆಯುಳ್ಳುದೂ,ಅನೇಕಯಾಗಗಳನ್ನುಮಾಡಿದ ಬ್ರಾಹ್ಮಣರಿಂದೊಡಗೂಡಿದುದೂ, ವೇದವೇದಾಂಗವೇತ್ತರಾದ ವಿಪ್ರರಿಂದ ನಿಬಿಡಿತವಾ ದುದೂ, ಇಷ್ಟೆಯಲ್ಲದೆ ಸರ್ವ ಸಮೃದ್ಧರಾದ ವಿಪ್ರೋತ್ತಮರಿಂದೊಡಗೂಡಿದುದೂ, ರಾಜರ್ಷಿ

ನೋ ಪುಣ್ಯೋದ್ಯಾನಾ ಯಶಸ್ವಿನೀ ॥ ೧೯ ॥ ಅಯೋಧ್ಯಾ ದೃಶ್ಯತೇ ದೂರಾ
ತ್ಸಾರಥೇ! ಪಾಂಡುಮೃತ್ತಿಕಾ ॥ ಯಜ್ವಭಿ ರ್ಗುಣಸಂಪನ್ನೈ ರ್ಬ್ರಾಹ್ಮಣೈ
ರ್ವೇದಪಾರಗೈಃ ॥ ೨೦ ॥ ಭೂಯಿಷ್ಠ ಮೃದ್ಧೈ ರಾಕೀರ್ಣಾ ರಾಜರ್ಷಿ ಪರಿ
ಪಾಲಿತಾ ॥ ಅಯೋಧ್ಯಾಯಾಂ ಪುರಾ ಶಬ್ದ ಶ್ಶ್ರೂಯತೇ ತುಮುಲೋ
ಮಹಾನ್ ॥ ೨೧ ॥ ಸಮಂತಾ ನ್ನರನಾರೀಣಾಂ ತಮದ್ಯ ನಶೃಣೋಮ್ಯಹಂ ॥
ಉದ್ಯಾನಾನಿ ಹಿ ಸಾಯಾಹ್ನೇ ಕ್ರೀಡಿತ್ವೋಪರತೈ ರ್ನರೈಃ ॥ ೨೨ ॥ ಸಮಂತಾ
ದ್ವಿಪ್ರಧಾವದ್ಭಿಃ ಪ್ರಕಾಶಂತೇ ಮಮಾನ್ಯಥಾ ॥ ತಾನ್ಯದ್ಯಾ ನುರುದಂತೀವ

ಸಾರಥಿಯೇ, ಪುಣ್ಯೋದ್ಯಾನಾ - ಮಂಗಳಕರವಾದ ಪೂದೋಟಗಳುಳ್ಳ, ಯಶಸ್ವಿನೀ - ಕೀರ್ತಿವತಿಯಾದ, ಪಾಂಡುಮೃತ್ತಿಕಾಃ - ಬಿಳಿತಾದ ಮೃತ್ತಿಕೆಯುಳ್ಳ, ಗುಣಸಂಪನ್ನೈಃ - ಪಾರಿಶುದ್ಧ್ಯಾದಿ ಗುಣಗಳಿಂದ ತುಂಬಿರುವ, ವೇದಪಾರಗೈಃ - ವೇದವೇದಾಂಗಗಳನ್ನು ತಿಳಿದಿರುವ, ಯಜ್ವಭಿಃ - ಸೋಮಯಾಜಿಗಳಾದ, ಋದ್ಧೈಃ - ಸಮೃದ್ಧರಾದ, ಬ್ರಾಹ್ಮಣೈಃ - ಬ್ರಾಹ್ಮಣರಿಂದ, ಆಕೀರ್ಣಾ - ತುಂಬಿರುವ, ರಾಜರ್ಷಿಪರಿಪಾಲಿತಾ - ರಾಜರ್ಷಿಗಳಿಂದ ಸಂರಕ್ಷಿತವಾದ, ಏಷಾಅಯೋಧ್ಯಾ - ಈ ಅಯೋಧ್ಯಾಪಟ್ಟಣವು, ಅತಿಪ್ರತೀತಾ - ಬಹು ಹರ್ಷವುಳ್ಳುದಾಗಿ, ದೂರಾತ್ - ದೂರದಿಂದಲೇ, ನದೃಶ್ಯತೇ - ಕಾಣಲ್ಪಡುವದಿಲ್ಲ. ॥ ೧೯-೨೦ ॥ ಅಯೋಧ್ಯಾಯಾಂ - ಅಯೋಧ್ಯಾಪಟ್ಟಣದಲ್ಲಿ, ನರನಾರೀಣಾಂ - ಸ್ತ್ರೀಪುರುಷರ, ತುಮುಲಃ - ಕಲಕಲದ, ಮಹಾನ್ - ಬಹಳವಾದ, ಶಬ್ದಃ ಧ್ವನಿಯು, ಪುರಾ - ಪುರದಲ್ಲಿ, ಸಮಂತಾತ್ - ಎಲ್ಲಾ ಕಡೆಯಲ್ಲಿಯೂ, ಶ್ರೂಯತೇ - ಕೇಳಿಸುತ್ತಿದ್ದಿತು, ತಂ - ಆ ಕೋಲಾಹಲ ಧ್ವನಿಯನ್ನು, ಅದ್ಯ - ಈಗ, ಅಹಂ - ನಾನು, ನಶೃಣೋಮಿ - ಕೇಳುವದಿಲ್ಲ. ॥ ೨೧ ॥ ಯಾನ್ಯುದ್ಯಾನಾನಿ - ಯಾವ ಉದ್ಯಾನವನಗಳು, ಸಾಯಾಹ್ನೆ - ಸಾಯಂಕಾಲದಲ್ಲಿ, ಕ್ರೀಡಿತ್ವಾ - ವಿಹರಿಸಿ, ಉಪರತೈಃ - ವಿಶ್ರಾಂತಿಯನ್ನು ಹೊಂದಿದ, ಸಮಂತಾತ್ - ಎಲ್ಲಾ ಕಡೆಯಲ್ಲಿಯೂ, ಪರಿಧಾವದ್ಭಿಃ - ಓಡಿಬರುತ್ತಿರುವ, ನರೈಃ - ಮನುಷ್ಯರಿಂದ, ಪ್ರಕಾಶಂತೇ - ಹೊಳೆಯುತ್ತಿದ್ದುವೋ, ತಾನಿ - ಆ ಉದ್ಯಾನವನಗಳು, ಅದ್ಯ - ಈಗ, ಕಾಮಿಭಿಃ - ಕಾಮುಕರಿಂದ, ಪರಿತ್ಯಕ್ತಾನಿ - ಬಿಡಲ್ಪಟ್ಟವುವಾಗಿ, ಮಮ - ನನಗೆ, ಅನ್ಯಥಾ-ಮತ್ತೊಂದು ರೀತಿಯಲ್ಲಿ, ಅನುರುದಂತೀವ-

ಯಾದ ದಶರಥಭೂಪಾಲನಿಂದ ಪರಿಪಾಲಿತವಾದುದೂ ಆದ ಈ ಅಯೋಧ್ಯಾಪಟ್ಟಣವು ದೂರದಿಂದಲೇ ನನಗೆ ಕಾಣುತ್ತಿರುವುದು ; ನೋಡುವವನಾಗು. ಯೋಚಿಸಿ ನೋಡಿದರೆ, ಪೂರ್ವದಲ್ಲಿದ್ದಂತಿರದೆ ಕಾಂತಿಹೀನವಾಗಿರುವಂತೆ ಕಾಣುತ್ತದೆ. ಆದುದರಿಂದಲೇ ಸಂತೋಷವಿಲ್ಲದಿರುವಂತೆ ಕಾಣುತ್ತಿರುವುದು. ಪೂರ್ವದಲ್ಲಿ ಅಯೋಧ್ಯಾಪಟ್ಟಣದ ನಾಲ್ಕು ಕಡೆಯಲ್ಲಿಯೂ, ಸ್ತ್ರೀಪುರುಷರ ಕಲಕಲಧ್ವನಿಯು ಬಹುದೂರಕ್ಕೇ ಕೇಳಿಸುತ್ತಿದ್ದಿತು. ಈಗ ಅಂತಹ ಧ್ವನಿಗಳಾವುವೂ ಕೇಳಿಬರುವುದಿಲ್ಲ. ವಿಚಾರಮಾಡಿ ನೋಡಿದೆ ಧ್ವನಿಯಡಗಿದಂತಿರುವುದು. ಸಂಧ್ಯಾಕಾಲ ಮೊದಲ್ಗೊಂಡು ಪ್ರಾತಃಕಾಲದವರೆಗೂ, ನಾನಾವಿಧಗಳಾದ ಜನರಿಂದ ಬಹುವಿಧವಾಗಿ ಕ್ರೀಡಿಸಲ್ಪಡುತ್ತಿದ್ದ ಉದ್ಯಾನವನಗಳು ಈಗ ಜನರಹಿತವಾಗಿರುವಂತೆ ತೋರುತ್ತಿರುವುದು ; ಉದ್ಯಾನವನಗಳಲ್ಲಿ ಯಾರೂ ವಿಹರಿಸುತ್ತಿಲ್ಲವು. ॥೧೯-೨೨॥ ಈಗ

ಪರಿತ್ಯಕ್ತಾನಿ ಕಾಮಿಭಿಃ ॥ ೨೩ ॥ ಅರಣ್ಯಭೂತೇವ ಪುರೀ ಸಾರಥೇ! ಪ್ರತಿ
ಭಾತಿ ಮೇ ॥ ನಹ್ಯತ್ರ ಯಾನೈರ್ದೃಶ್ಯಂತೇ ನಗಜೈರ್ನಚ ವಾಜಿಭಿಃ ॥ ೨೪ ॥
ನಿರ್ಯಾಂತೋವಾಽಭಿಯಾಂತೋವಾ ನರಮುಖ್ಯಾ ಯಥಾ ಪುರಂ ॥ ಉದ್ಯಾ
ನಾನಿ ಪುರಾ ಭಾಂತಿ ಮತ್ತ ಪ್ರಮುದಿತಾನಿ ಚ ॥ ೨೫ ॥ ಜನಾನಾಂ ರತಿ
ಸಂಯೋಗೇಷ್ವತ್ಯಂತ ಗುಣವಂತಿಚ ॥ ತಾನ್ಯೇತಾನ್ಯದ್ಯ ಪಶ್ಯಾಮಿ ನಿರಾನಂದಾನಿ
ಸರ್ವಶಃ ॥ ೨೬ ॥ ಸಸ್ತಪರ್ಣೈರನುಪಥಂ ವಿಕ್ರೋಶದ್ಭಿರಿವ ದ್ರುಮೈಃ ॥
ನಾದ್ಯಾಪಿ ಶ್ರೂಯತೇ ಶಬ್ದೋ ಮತ್ತಾನಾಂ ಮೃಗಪಕ್ಷಿಣಾಂ ॥೨೭॥ ಸಂರಕ್ತಾಂ

ಅನುಸರಿಸಿ ರೋದನ ಮಾಡುತ್ತವೆಯೋ ಎಂಬಂತೆ, ಪ್ರಕಾಶಂತೇ - ಕಾಣುತ್ತವೆ. ॥ ೨೨-೨೩ ॥ ಹೇ ಸಾರಥೇ - ಎಲೈ ಸಾರಥಿಯೇ ! ಪುರೀ - ಅಯೋಧ್ಯಾಪಟ್ಟಣವು, ಅರಣ್ಯಭೂತೇವ - ಅರಣ್ಯವಾದಂತೆ, ಮೇ - ನನಗೆ, ಪ್ರತಿಭಾತಿ - ತೋರುತ್ತದೆ, ಅತ್ರ - ಈ ಪಟ್ಟಣದಲ್ಲಿ, ನರಮುಖ್ಯಾಃ - ಮುಖಂಡರಾದ ಜನರು, ಯಾನೈಃ - ವಾಹನಗಳಿಂದಲೂ, ಯಥಾಪುರಂ - ಪೂರ್ವದಂತೆ, ಗಜೈಃ - ಆನೆಗಳಿಂದ, ವಾಜಿಭಿಶ್ಚ - ಕುದುರೆಗಳಿಂದಲೂ, ನಿರ್ಯಾಂತೋವಾ - ಹೋಗುವುದಾಗಲಿ, ಅಭಿಯಾಂತೋವಾ - ಬರುವುದಾಗಲಿ, ನದೃಶ್ಯಂತೇ - ಕಾಣುವುದಿಲ್ಲ. ॥ ೨೪ ॥ ಜನಾನಾಂ - ಜನರ, ರತಿಸಂಗೇಷು - ಕ್ರೀಡಾರ್ಥವಾದ ಸಂಬಂಧಗಳಲ್ಲಿ, ಅತ್ಯಂತಗುಣವಂತಿಚ - (ಗೋ + ಮ) ಬಹಳವಾದ ಕುಸುಮ ಲತಾಬಾಹುಳ್ಯಾದಿ ಗುಣಗಳಿಂದ ಕೂಡಿರುವ, ಉದ್ಯಾನಾನಿ - ಉದ್ಯಾನವನಗಳು, ಪುರಾ - ಪೂರ್ವದಲ್ಲಿ, ಮತ್ತಪ್ರಮುದಿತಾನಿಚ - ಮದಕರವಾಗಿಯೂ ಸಂತೋಷಕರಗಳಾಗಿಯೂ ಇರುವುವಾಗಿ, ಭಾಂತಿ - ಹೊಳೆಯುತ್ತಿದ್ದುವು, ತಾನ್ಯೇತಾನಿ - ಅಂತಹ ಈ ಉದ್ಯಾನವನಗಳನ್ನು, ಅದ್ಯ - ಈಗ, ಅನುಪಥಂ - ಮಾರ್ಗದಲ್ಲಿ, ಸ್ರಸ್ತಪರ್ಣೈಃ - ಜಾರಿಹೋದ ಎಲೆಗಳುಳ್ಳ, ವಿಕ್ರೋಶದ್ಭಿರಿವ - ಕೂಗುತ್ತವೆಯೋ ಎಂಬಂತಿರುವ, ದ್ರುಮೈಃ - ಗಿಡಗಳಿಂದ, ಸರ್ವಶಃ-ಎಲ್ಲ ರೀತಿಗಳಲ್ಲಿಯೂ, ನಿರಾನಂದಾನಿ - ಸಂತೋಷವಿಲ್ಲದವುಗಳನ್ನಾಗಿ, ಪಶ್ಯಾಮಿ - ಕಾಣುತ್ತೇನೆ. ॥ ೨೫-೨೬ ॥ ಮತ್ತಾನಾಂ - ಮದವೇರಿದ, ಮಧುರಾಂ - ಮನೋಹರವಾದ, ಸಂರಕ್ತಾಂ - ರಾಗಯುಕ್ತವಾದ, ವಾಣೀಂ - ಮಾತನ್ನು, ಬಹು - ಬಹಳವಾಗಿ, ಕಲಂ - ಮಧುರವಾಗಿಯೂ, ವ್ಯಾಹರತಾಂ-ನುಡಿಯುತ್ತಿರುವ, ಮೃಗಪಕ್ಷಿಣಾಂ-ಮೃಗಗಳ ಮತ್ತು ಹಕ್ಕಿಗಳ, ಶಬ್ದಃ-ಧ್ವನಿಯು, ಅದ್ಯಾಪಿ-ಈಗಲೂ, ನಶ್ರೂಯತೇ - ಕೇಳಿಸುವುದಿಲ್ಲ. ॥ ೨೭ ॥ ಚಂದನಾಗರುಸಂಪೃಕ್ತಃ - ಶ್ರೀಗಂಧದಿಂದಲೂ ಅಗರುಗಂಧ

ಆ ಉದ್ಯಾನವನಗಳೆಲ್ಲವೂ ಕಾಮುಕರಿಂದ ವಿರಹಿತವಾಗಿ ರೋದಿಸುತ್ತಿರುವಂತಿವೆ. ಇಷ್ಟೆಯಲ್ಲದೆ, ಎಲೈ ಸಾರಥಿಯೆ ! ಅಯೋಧ್ಯಾನಗರವು ಅರಣ್ಯವಾದಂತಿರುವುದು. ಈಗಲೀಪಟ್ಟಣದಲ್ಲಿ ಹಿಂದಿನಂತೆ ಜನರು ಅಶ್ವಾರೂಢರಾಗಿ ಹೋಗಿ ಬರುತ್ತಲಿರುವುದು ನನಗೆ ಕಾಣಿಸಲಿಲ್ಲ ; ಪೂರ್ವದಲ್ಲಿ ಉದ್ಯಾನವನಗಳು ಮದಿಸಿದವುಗಳಾಗಿಯೂ, ಸಂತೋಷವನ್ನುಂಟುಮಾಡುವುದಾಗಿಯೂ, ರತಿಕೇಳಿಯಲ್ಲಿ ಜನರಿಗೆ ಸಹಾಯಭೂತವಾದ ಲತಾಬಾಹುಳ್ಯಾದಿ ಗುಣಗಳಿಂದಲೂ ಪ್ರಕಾಶಿಸುತ್ತಿದ್ದುವು. ಅಂತಹ ಈ ಅಯೋಧ್ಯಾಪಟ್ಟಣದ ವನಗಳು ಈಗ ನಿರಾನಂದಗಳಾಗಿ ಪ್ರಕಾಶವಿಲ್ಲದವುಗಳಾಗಿವೆ. ॥೨೩-೨೬॥ ಮಾರ್ಗಸಮೀಪದಲ್ಲುದುರಿದ ಎಲೆಗಳುಳ್ಳವೃಕ್ಷಗಳೆಲ್ಲವೂ ರೋದಿಸುತ್ತಿರುವಂತೆ ಕಾಣುತ್ತಿವೆ. ಈಗ ಪ್ರಾತಃ

ಮಧುರಾಂ ವಾಣೀಂ ಕಲಂ ವ್ಯಾಹರತಾಂ ಬಹು ॥ ಚಂದನಾಗರು ಸಂಪೃಕ್ತ
ಧೂಪ ಸಂಮೂರ್ಛಿತೋಽತುಲಃ ॥ ೨೮ ॥ ಪ್ರವಾತಿ ಪವನ ಶ್ರೀರ್ವಾ
ಕಿನ್ನು ನಾದ್ಯ ಯಥಾಪುರಂ? ॥ ಭೇರೀ ಮೃದಂಗ ವೀಣಾನಾಂ ಕೋಣ ಸಂಘ
ಟ್ಟಿತಃ ಪುನಃ ॥ ೨೯ ॥ ಕಿಮದ್ಯ ಶಬ್ದೋ ವಿರತ ಸ್ಸದಾ ದೀನಗತಿಃ ಪುರಾ ॥
ಅನಿಷ್ಟಾನಿ ಚ ಪಾಪಾನಿ ಪಶ್ಯಾಮಿ ವಿವಿಧಾನಿಚ ॥ ೩೦ ॥ ನಿಮಿತ್ತಾನ್ಯಮ
ನೋಜ್ಞಾನಿ ತೇನ ಸೀದತಿ ಮೇ ಮನಃ ॥ ಸರ್ವಥಾ ಕುಶಲಂ ಸೂತ! ದುರ್ಲಭಂ

ದಿಂದಲೂ ಮಿಳಿತವಾದ, ಧೂಪಸಮ್ಮೂರ್ಛಿತಃ - ಧೂಪದ ವಾಸನೆಯಿಂದ ವ್ಯಾಪ್ತವಾದ. ಅತುಲಃ - ಸಮಾನವಿಲ್ಲನಿರುವ, ಶ್ರೀರ್ವಾ - ಸಂಪದ್ಯುಕ್ತವಾದ, ಪವನಃ - ಗಾಳಿಯು, ಅದ್ಯ - ಈಗ, ಯಥಾಪುರಂ - ಪೂರ್ವದಂತೆ, ಕಿನ್ನುನಪ್ರವಾತಿ - ಬೀಸುವುದಿಲ್ಲನೇಕೆ? ॥೨೮॥ ಭೇರೀಮೃದಂಗವೀಣಾನಾಂ- ಭೇರಿಗಳ, ಮದ್ದಲೆಗಳ, ವೀಣೆಗಳ, ಕೋಣಸಂಘಟ್ಟಿತಃ, ಕೋಣ - ದಂಡ ಅಂಗುಳ್ಯಾದಿಗಳ ಕೊನೆಗಳಿಂದ,ಸಂಘಟ್ಟಿತಃ-ಹೊಡೆಯುವದರಿಂದ ಹುಟ್ಟಿದ, ಸದಾ-ಯಾವಾಗಲೂ, ಅದೀನಗತಿಃ-ಗಂಭೀರಧ್ವನಿಯುಳ್ಳುದಾದ, ಶಬ್ದಃ - ನಾದವು, ಪುರಾ-ಪೂರ್ವದಲ್ಲಿ, ಪುನಃ-ಬಾರಿಬಾರಿಗೂ, (ಆಗುತ್ತಿತ್ತು) ಅದ್ಯ- ಈಗ, ವಿರತಃಕಿಂ-ವಿರಾಮವನ್ನು ಹೊಂದಿತೇಕೆ ? ॥ ೨೯ ॥ ವಿವಿಧಾನಿ-ನಾನಾಬಗೆಗಳಾದ, ಪಾಪಾನಿ - ಕ್ರೂರಗಳಾದ, ಅನಿಷ್ಟಾನಿ-ಅನಿಷ್ಟಸೂಚಕಗಳಾದ, ಅಮನೋಜ್ಞಾನಿ - ಮನಸ್ಸಿಗೆ ಇಂಪಾಗಿಲ್ಲದಿರುವ, ನಿಮಿತ್ತಾನಿ - ಶಕುನಗಳನ್ನು, ಪಶ್ಯಾಮಿ - ಕಾಣುತ್ತೇನೆ, ತೇನ - ಹೀಗೆ ಕಾಣುವುದರಿಂದ, ಮೇ - ನನ್ನ, ಮನಃ - ಮನವು, ಸೀದತಿ - ಪರಿತಪಿಸಿರುವುದು. ॥ ೩೦ ॥ ಹೇ ಸೂತ - ಎಲೈ ಸಾರಥಿಯೇ, ಮಮ - ನನ್ನ, ಬಂಧುಷು - ನೆಂಟರಲ್ಲಿ, ಸರ್ವಥಾ-ಹೇಗಾದರೂ, ಕುಶಲಂ - ಕ್ಷೇಮವು, ದುರ್ಲಭಂ - ಅಸಾಧ್ಯವು, ತಥಾಹಿ - ಹಾಗೆಯೇಸರಿ, ಸಮ್ಮೋಹೇ - ಮೋಹಕ್ಕೆ ಕಾರಣವು, ಅಸತಿ -

---

ಕಾಲವಾಗಿದ್ದರೂ ಕೂಡ, ಮದಿಸಿದ ಮೃಗಪಕ್ಷಿಗಳ ಮಧುರವಾದುದೂ, ಅನುರಾಗಯುಕ್ತವಾದುದೂ ಆದ ಧ್ವನಿಗಳು ಕೇಳಿಬರುವುದಿಲ್ಲ. ಪೂರ್ವದಲ್ಲಿ ಪ್ರಾತಃಕಾಲವಾಗುತ್ತಲೆ, ಮೃಗಗಳೂ, ಪಕ್ಷಿಗಳೂ ಬಹು ಮನೋಹರವಾಗಿ ಧ್ವನಿಗೈಯ್ಯುತ್ತಿದ್ದುವು. ಈಗೆ ಹಿಂದಿನಂತೆ ಈ ಪಟ್ಟಣದಲ್ಲಿ, ಚಂದನಾಗರು ಗಂಧದ ಧೂಪದಿಂದೊಡಗೂಡಿದುದೂ, ನಿರುಪಮಾನವಾದುದೂ, ಮಂಗಳಕರವಾದುದೂ ಆದ ಗಾಳಿಯು ಬೀಸುತ್ತಿಲ್ಲವು! ನಾವು ಈ ಪಟ್ಟಣದಲ್ಲಿ ಎಲ್ಲ ಕಾಲಗಳಲ್ಲಿಯೂ, ಮಹಾ ಗಂಭೀರವಾದ ಭೇರೀ ಮೃದಂಗ ವೀಣಾದಿಗಳ ಧ್ವನಿಯನ್ನು ಕೇಳುತ್ತಿದ್ದೆವು; ಈಗೆ ಅಂತಹ ಧ್ವನಿಯಾವುದೂ ಕೇಳಿಸಲಿಲ್ಲ. ಇಷ್ಟೆಯಲ್ಲದೆ ಅನಿಷ್ಟ ಸೂಚಕಗಳೂ, ಕ್ರೂರಗಳಾದುವೂ, ಮನೋಹರಗಳಲ್ಲದುವೂ ಆದ ನಾನಾವಿಧಗಳಾದ ದುರ್ನಿಮಿತ್ತಗಳು ಕಾಣಿಸುತಿವೆ.॥೨೭-೩೦॥ಎಲೈ ಸಾರಥಿಯೆ! ಯಾವ ವಿಧವಾಗಿ ವಿಚಾರಿಸಿ ನೋಡಿದರೂ ನನ್ನಬಂಧುಗಳಿಗೆ ಕುಶಲವಿಲ್ಲದಿರುವುದೆಂದೇ ತೋರುತ್ತಿರುವುದು.ಆದುದರಿಂದ ನನ್ನ ಮನಸ್ಸಿನಲ್ಲಿ ಮಹಾ ವ್ಯಸನವುಂಟಾಗುತ್ತಿರುವುದು. ದುಃಖಕ್ಕೆ ತಕ್ಕ ಕಾರಣವಿಲ್ಲದೆ ಹೋಯಿತೆಂದರೆ ನನ್ನ ಮನಸ್ಸಿನಲ್ಲಿ ಅಂತಹ ದುಃಖವುಂಟಾಗದು. ಆದುದರಿಂದ ಯಾವುದೋ ಒಂದು ಅನರ್ಥವು

ಮಮ ಬಂಧುಷು! ॥ ೩೧ ॥ ತಥಾಹ್ಯಸತಿ ಸಂಮೋಹೇ ಹೃದಯಂ ಸೀದತೀವ ಮೇ ॥ ವಿಷಣ್ಣ ಶ್ಶ್ರಾಂತಹೃದಯ ಸ್ತ್ರಸ್ತ ಸ್ಸಂಲುಳಿತೇಂದ್ರಿಯಃ ॥ ೩೨ ॥ ಭರತಃ ಪ್ರವಿವೇಶಾಶು ಪುರೀ ಮಿಕ್ಷ್ವಾಕು ಪಾಲಿತಾಂ ॥ ದ್ವಾರೇಣ ವೈಜಯಂತೇನ ಪ್ರಾವಿಶ ಚ್ಛ್ರಾಂತ ವಾಹನಃ ॥ ೩೩ ॥ ದ್ವಾಸ್ಸ್ಥೈ ರುತ್ಥಾಯ ವಿಜಯಂ ಪೃಷ್ಟಸ್ತೈ ಸ್ಸಹಿತೋ ಯಯೌ ॥ ಸತ್ವನೇಕಾಗ್ರ ಹೃದಯೋ ದ್ವಾಸ್ಸ್ಥಂ ಪ್ರತ್ಯರ್ಚ್ಯ ತಂ ಜನಂ ॥ ೩೪ ॥ ಸೂತ ಮಶ್ವಪತೇಃ ಕ್ಲಾಂತ ಮಬ್ರವೀ ತ್ತತ್ರ ರಾಘವಃ ॥ ಕಿಮಹಂ ತ್ವರಯಾ ನೀತಃ ಕಾರಣೇನ ವಿನಾನಘ ॥ ೩೫ ॥

ಇಲ್ಲದಿದ್ದರೂ, ಮೇ - ನನ್ನ, ಹೃದಯಂ - ಮನವು, ಸೀದತೀವ - ದುಃಖಿತವಾದಂತಿರುವುದು. || ೩೧ || ವಿಷಣ್ಣಃ ವ್ಯಸನಗೊಂಡ, ಶ್ರಾಂತಹೃದಯಃ - ಬಳಲಿದ ಮನಸ್ಸುಳ್ಳ, ತ್ರಸ್ತಃ - ಭಯಗೊಂಡ, ಭರತಃ - ಭರತನು, ಸಂಲುಳಿತೇಂದ್ರಿಯಃ - ಕದಡಿದ ಇಂದ್ರಿಯಗಳುಳ್ಳವನಾಗಿ, ಇಕ್ಷ್ವಾಕು ಪಾಲಿತಾಂ - ಇಕ್ಷ್ವಾಕುಮಹಾರಾಜನಿಂದ ಸಂರಕ್ಷಿಸಲ್ಪಟ್ಟ, ಪುರೀಂ - ಅಯೋಧ್ಯಾಪಟ್ಟಣವನ್ನು, ಆಶು - ಜಾಗ್ರತೆಯಾಗಿ, ಪ್ರವಿವೇಶ - ಹೊಕ್ಕನು. || ೩೨ || ಶ್ರಾಂತವಾಹನಃ, ಶ್ರಾಂತ - ಬಳಲಿದ, ವಾಹನಃ - ಕುದುರೆಗಳುಳ್ಳವನಾಗಿ, ವೈಜಯಂತೇನ-ವೈಜಯಂತವೆಂಬ ಹೆಸರುಳ್ಳ, ದ್ವಾರೇಣ-ಬಾಗಿಲಿನಿಂದ, ಪ್ರಾವಿಶತ್ - ಹೊಕ್ಕನು, ದ್ವಾಸ್ಸ್ಥೈಃ - ದ್ವಾರಪಾಲಕರಿಂದ, ಉತ್ಥಾಯ - ಎದ್ದು, ವಿಜಯಂ - ವಿಜಯವನ್ನು, ಪೃಷ್ಟಃ - ಕೇಳಲ್ಪಟ್ಟವನಾಗಿ, ತೈಃ - ಆ ದ್ವಾರಪಾಲಕರೊಡನೆ, ಸಹಿತಾ-ಕೂಡಿ, ಯಯೌ - ಒಳಕ್ಕೆಹೋದನು. || ೩೩ || ಅನೇಕಾಗ್ರಹೃದಯಃ - ಏಕಾಗ್ರಚಿತ್ತನಲ್ಲದಿರುವ, ಸರಾಘವಃ - ಆ ಭರತನು, ದ್ವಾಸ್ಸ್ಥಂ - ಬಾಗಿಲಿನಲ್ಲಿ ಕಾದಿರುವ, ತಂಜನಂ - ಆ ಜನವನ್ನು, ಪ್ರತ್ಯರ್ಚ್ಯ - ಮರ್ಯಾದಿಸಿ, ಕ್ಲಾಂತಂ - ಬಳಲಿದ, ಅಶ್ವಪತೇಃ - ಕೇಕಯರಾಯನ, ಸೂತಂ - ಸಾರಥಿಯನ್ನು ಕುರಿತು, ತತ್ರ - ಆ ಸ್ಥಳದಲ್ಲಿ, ಅಬ್ರವೀತ್ - ನುಡಿದನು. || ೩೪ || ಹೇ ಅನಘ-ಎಲೈ ನಿಷ್ಕಲ್ಮಷನಾದವನೆ! ಅಹಂ - ನಾನು, ಕಾರಣೇನವಿನಾ - ಕಾರಣವಿಲ್ಲದೆ, ತ್ವರಯಾ - ಜಾಗ್ರತೆಯಾಗಿ, ಕಿಂನೀತಃ - ಏಕೆ ಕರೆದುಕೊಂಡು ಬರಲಾದೆ, ಮೇ - ನನ್ನ, ಹೃದಯಂ - ಮನವು, ಅಶುಭಾಶಂಕಿ - ಅಮಂಗಳವನ್ನೇ ಊಹಿಸುತ್ತದೆ, ಶೀಲಂಚ - ಸ್ವಭಾವವೂ, ಪತತೀವ-ನಾಶವಾಗಿರುವಂತಿರುವುದು. || ೩೫ || ನಃ - ನಮ್ಮಿಂದ, ಪೂರ್ವಂ - ಹಿಂದೆ, ನೃಪತೀನಾಂ - ರಾಜರ, ವಿನಾಶನೇ-

---

ಸಂಭವಿಸಿರುವುದೆಂದು ತೋರುತ್ತಿರುವುದು. || ೩೧ || ಭರತಕುಮಾರನೀರೀತಿಯಾಗಿ ಹೇಳಿ ಬಹು ದುಃಖವುಳ್ಳವನೂ, ಆಯಾಸವನ್ನುಹೊಂದಿದ ಮನಸ್ಸುಳ್ಳವನೂ ಆಗಿ ಇಕ್ಷ್ವಾಕು ವಂಶೋದ್ಭವರಾದ ರಾಜರಿಂದ ಪರಿಪಾಲಿತವಾದ ಅಯೋಧ್ಯಾಪಟ್ಟಣವನ್ನು ಪ್ರವೇಶಿಸಿದನು. ಬಳಲಿದ ಕುದುರೆಗಳುಳ್ಳ ಆ ಭರತನು ವೈಜಯಂತವೆಂಬ ಹೆಸರುಳ್ಳ ದ್ವಾರದಿಂದ ಪ್ರವೇಶವಂ ಗೈದವನಾದನು. ಹೀಗೆ ಪ್ರವೇಶಿಸುವಾಗ ಆ ದ್ವಾರದಲ್ಲಿದ್ದ ಕಾವಲುಗಾರರು ಆತನನ್ನು ನೋಡಿ "ಜಯಜಯ" ನಾದವನ್ನು ಮಾಡಿದರು. ಆಗಲಾಭರತನು ಆ ನಾದದಿಂದ ವ್ಯಾಕುಲ ಮನಸ್ಕನಾಗಿ ಆ ದ್ವಾರಪಾಲಕರನ್ನು ಗೌರವಿಸಿ, ತನಗೆ ಪರಮಾಪ್ತನೂ, ತನ್ನ ತಾತನಾದ ಅಶ್ವಪತಿರಾಯನ ಸಾರಥಿಯಾದವನೂ ಆದವನೊಡನೆ ಹೀಗೆಂದನು. " ಎಲೈ ನಿಷ್ಕಲ್ಮಷನಾದ

ಅಶುಭಾಶಂಕಿ ಹೃದಯಂ ಶೀಲಂಚ ಪತತೀವ ಮೇ ॥ ಶ್ರುತಾ ನೋ ಯಾ
ದೃಶಾಃ ಪೂರ್ವಂ ನೃಪತೀನಾಂ ವಿನಾಶನೇ ॥ ೩೬ ॥ ಆಕಾರಾ ಸ್ತಾನಹಂ
ಸರ್ವಾನಿಹ ಪಶ್ಯಾಮಿ ಸಾರಥೇ! ॥ ಸಂಮಾರ್ಜನ ವಿಹೀನಾನಿ ಪರುಷಾಣ್ಯುಪ
ಲಕ್ಷಯೇ ॥ ೩೭ ॥ ಅಸಂಯುತ ಕವಾಟಾನಿ ಶ್ರೀವಿಹೀನಾನಿ ಸರ್ವಶಃ ॥ ಬಲಿ
ಕರ್ಮ ವಿಹೀನಾನಿ ಧೂಪ ಸಂಮೋದನೇನ ಚ ॥ ೩೮ ॥ ಅನಾಶಿತ ಕುಟುಂ
ಬಾನಿ ಪ್ರಭಾಹೀನ ಜನಾನಿಚ ॥ ಅಲಕ್ಷ್ಮೀಕಾನಿ ಪಶ್ಯಾಮಿ ಕುಟುಂಬ ಭವನಾ
ನ್ಯಹಂ ॥ ೩೯ ॥ ಅಪೇತ ಮಾಲ್ಯಸಂಶೋಭಾ ನ್ಯಸಂಮೃಷ್ಟಾ ಜಿರಾಣಿಚ ॥

ಮರಣಕಾಲದಲ್ಲಿ, ಯಾದೃಶಾಃ - ಎಂತಹ ಅಪಶಕುನಗಳು, ಶ್ರುತಾಃ - ಕೇಳಲಾಗಿರುವುವೋ,
ಹೇ ಸಾರಥೇ - ಎಲೈ ಸಾರಥಿಯೇ! ಅಹಂ - ನಾನು, ಸರ್ವಾನ್ - ಸಮಸ್ತವಾದ, ತಾನಾಕಾರಾನ್ -
ಅಂತಹ ಆಕಾರಗಳನ್ನು, ಇಹ - ಇಲ್ಲಿ, ಪಶ್ಯಾಮಿ - ಕಾಣುತ್ತೇನೆ. ॥ ೩೬ ॥ ಭವನಾನಿ - ಮನೆಗ
ಳನ್ನು, ಸಮ್ಮಾರ್ಜನವಿಹೀನಾನಿ - ಕಸಗುಡಿಸುವಿಕೆಯಿಂದ ಶೂನ್ಯಗಳನ್ನಾಗಿಯೂ, ಪರುಷಾನಿ -
ಕ್ರೂರಗಳನ್ನಾಗಿಯೂ, ಅಸಂಯುತಕವಾಟಾನಿ - ಹಾಕದಿರುವ ಬಾಗಿಲುಗಳುಳ್ಳವುಗಳನ್ನಾಗಿಯೂ,
ಸರ್ವಶಃ - ಎಲ್ಲರೀತಿಗಳಲ್ಲಿಯೂ, ಶ್ರೀವಿಹೀನಾನಿ-ಕಾಂತಿವಿಹೀನಗಳಾಗಿಯೂ, ಉಪಲಕ್ಷಯೇ-ಕಾಣು
ತ್ತೇನೆ. ॥ ೩೭ ॥ ಬಲಿಕರ್ಮವಿಹೀನಾನಿ - ಹರಿದ್ರಾಕುಂಕುಮಾದಿ ಪೂಜೆಗಳಿಂದ ರಹಿತಗಳನ್ನಾ
ಗಿಯೂ, ಧೂಪಸಮ್ಮೋದನೇನಚ - ಧೂಪವಾಸನೆಯಿಂದಲೂ, ವಿಹೀನಾನಿ-ಬಿಡಲ್ಪಟ್ಟವನ್ನಾಗಿಯೂ,
ಅನಾಶಿತಕುಟುಂಬಾನಿ - ಭೋಜನವಿಲ್ಲದ ಸಂಸಾರಿಗಳುಳ್ಳವುಗಳನ್ನಾಗಿಯೂ, ಪ್ರಭಾಹೀನಜನಾ
ನಿಚ - ಕಾಂತಿಯಿಲ್ಲದ ಜನಗಳುಳ್ಳವುಗಳನ್ನಾಗಿಯೂ ಇರುವ, ಕುಟುಂಬಭವನಾನಿ - ಗೃಹಸ್ಥರ
ಮನೆಗಳನ್ನು, ಅಹಂ - ನಾನು, ಅಲಕ್ಷ್ಮೀಕಾನಿ - ಕಾಂತಿಹೀನವನ್ನಾಗಿ, ಪಶ್ಯಾಮಿ - ಕಾಣುತ್ತೇನೆ.
॥ ೩೮-೩೯ ॥ ಅಪೇತಮಾಲ್ಯಶೋಭಾನಿ, ಅಪೇತ - ಹೋಗಲಾಡಿಸಲ್ಪಟ್ಟ, ಮಾಲ್ಯಶೋಭಾನಿ - ಪುಷ್ಪ
ಮಾಲಿಕೆಗಳುಳ್ಳ, ಅಸಮ್ಮೃಷ್ಟಾಜಿರಾಣಿಚ - ಸಮ್ಮಾರ್ಜನೆಯಿಲ್ಲದ ಅಂಗಗಳುಳ್ಳ, ದೇವಾಗಾರಾಣಿ -

---

ಸಾರಥಿಯೆ ! ನನ್ನನ್ನಾವಕಾರಣದಿಂದ ಬಹು ಜಾಗ್ರತೆಯಾಗಿ ಇಲ್ಲಿಗೆ ಕರೆಯಿಸಿದರೋ ? ಆ
ಕಾರಣವು ತಿಳಿಯಲಿಲ್ಲ. ಆದುದರಿಂದಲೇ ನನ್ನ ಮನಸ್ಸಿನಲ್ಲಿ ಅಮಂಗಳಕರವಾದ ಸಂಶಯವು
ತಲೆದೋರಿರುವುದು. ಅದೂ ಅಲ್ಲದೆ ನನ್ನ ಮನಸ್ಸಿನಲ್ಲಿ ಸಹಜವಾದ ಧೈರ್ಯವು ನಾಶವಾ
ಗಿರುವುದು, ಅಯ್ಯಾ ಸಾರಥಿಯೆ ! ಹಿಂದೆ ನಾನು ರಾಜನು ಮರಣವನ್ನು ಹೊಂದಿದಾಗ
ಯಾವವಿಧಗಳಾದ ಅಮಂಗಳ ಸೂಚನೆಗಳಾಗುತ್ತವೆಯೆಂದು ಕೇಳಿದ್ದೆನೊ, ಅಂತಹ ಅಮಂಗ
ಳಗಳೀಗ ಕಾಣಿಸುತ್ತಿವೆ. ಅಲ್ಲದೆ ರಾಜನಮರಣ ಚಿಹ್ನೆಗಳೇ ಕಾಣುತ್ತಿವೆ, ಕಸಗೂಡಿಸದಿರು
ವುದರಿಂದ ಅಪರಿಶುದ್ಧಗಳಾಗಿರುವುವೂ, ಮುಚ್ಚಿದ ಬಾಗಿಲುಗಳುಳ್ಳವೂ, ಎಲ್ಲ ವಿಧಗ
ಳಿಂದಲೂ ಕಾಂತಿಹೀನಗಳಾದುವೂ, ಬಲಿಕರ್ಮರಹಿತವಾದುವೂ, ಭೋಜನವನ್ನು ಮಾಡ
ದಿರುವ ಕುಟುಂಬಗಳುಳ್ಳವೂ, ನಿಸ್ತೇಜಸ್ಕರಾದ ಜನಗಳುಳ್ಳವೂ, ಸಂಪತ್ತಿಲ್ಲದುವೂ ಆದ
ಗೃಹಸ್ಥರ ಗೃಹಗಳು ಕಾಣುತ್ತಿವೆ. ॥ ೩೨-೩೯ ॥ ದೇವಾಲಯಗಳ ಜಗಲಿಗಳು ಸಮ್ಮಾರ್ಜನೆ
ಯಿಲ್ಲದುವಾಗಿವೆಯಲ್ಲದೆ ಶೂನ್ಯಗಳಾಗಿಯೂ ಇವೆ. ಈಗ ದೇವಪೂಜೆಗಳು ನಶಿಸಿಹೋಗಿವೆ.

ದೇವಾಗಾರಾಣಿ ಶೂನ್ಯಾನಿ ನಚಾಭಾಂತಿ ಯಥಾ ಪುರಂ ॥ ೪೦ ॥ ದೇವತಾ ರ್ಚಾಃಪ್ರವಿದ್ಧಾಶ್ಚ ಯಜ್ಞಗೋಷ್ಠ್ಯ ಸ್ತಥಾವಿಧಾಃ ॥ ಮಾಲ್ಯಾಪಣೇಷು ರಾಜಂತೇ ನಾದ್ಯ ಪಣ್ಯಾನಿ ವಾ ತಥಾ ॥ ೪೧ ॥ ದೃಶ್ಯಂತೇ ವಣಿಜೋಪ್ಯದ್ಯ ನಯಥಾ ಪೂರ್ವಮತ್ರ ವೈ ॥ ಧ್ಯಾನ ಸಂವಿಗ್ನಹೃದಯಾ ನಷ್ಟವ್ಯಾಪಾರ ಯಂತ್ರಿತಾಃ ॥ ೪೨ ॥ ದೇವಾಯತನ ಚೈತ್ಯೇಷು ದೀನಾಃ ಪಕ್ಷಿಗಣಾ ಸ್ತಥಾ ॥ ಮಲಿನಂ ಚಾಶ್ರುಪೂರ್ಣಾಕ್ಷಂ ದೀನಂ ಧ್ಯಾನಪರಂ ಕೃಶಂ ॥ ೪೩ ॥ ಸಸ್ತ್ರೀ

ದೇವಸ್ಥಾನಗಳು, ಶೂನ್ಯಾನಿ - ಜನರಹಿತಗಳಾಗಿ, ಯಥಾಪುರಂ - ಹಿಂದಿನಂತೆ, ನಭಾಂತಿಹಿ - ಹೊಳೆಯುವುದಿಲ್ಲವಷ್ಟೆ. ॥ ೪೦ ॥ ದೇವತಾರ್ಚಾಃ - ದೇವತಾಪೂಜೆಗಳು, ಪ್ರವಿದ್ಧಾಃ - ಹೊಡೆಯಲ್ಪಟ್ಟುವು, ತಥಾವಿಧಾಃ - ಅಂತಹ, ಯಜ್ಞಗೋಷ್ಠ್ಯಃ - ಯಾಗಶಾಲೆಗಳು, ಪ್ರವಿದ್ಧಾಃ - ಹೊಡೆಯಲ್ಪಟ್ಟುವು, ಮಾಲ್ಯಾಪಣೇಷು - ಹುವ್ವಾಡಿಗರ ಅಂಗಡಿಗಳಲ್ಲಿ, ಅದ್ಯ - ಈಗ, ಪಣ್ಯಾನಿ - ವ್ಯಾಪಾರಗಳು, ತಥಾ - ಹಾಗೆಯೇ, ನರಾಜಂತೇ - ಪ್ರಕಾಶಿಸುವುದಿಲ್ಲ. ॥ ೪೧ ॥ ವಣಿಜಃ - ವರ್ತಕರು, ಅತ್ರ - ಈ ಊರಿನಲ್ಲಿ, ಯಥಾಪೂರ್ವಂ - ಪೂರ್ವದಂತೆ, ನದೃಶ್ಯಂತೇ - ಕಾಣಲ್ಪಡುವುದಿಲ್ಲ, ಧ್ಯಾನಸಂವಿಗ್ನಹೃದಯಾಃ - ಧ್ಯಾನದಲ್ಲಿ ಆಸಕ್ತವಾದ ಮನಸ್ಸುಳ್ಳವರಾಗಿಯೂ, ನಷ್ಟವ್ಯಾಪಾರಯಂತ್ರಿತಾಃ - ನಾಶವಾದ ಕ್ರಯ ವಿಕ್ರಯಾದಿ ವ್ಯಾಪಾರವುಳ್ಳವರಾಗಿ, ಯಂತ್ರಿತಾಃ - ಕಟ್ಟುಬಿದ್ದವರಂತೆ, ದೃಶ್ಯಂತೇ - ಕಾಣುತ್ತಾರೆ. ॥ ೪೨ ॥ ಪುರೇ - ಪಟ್ಟಣದಲ್ಲಿ, ಪಕ್ಷಿಗಣಾಃ - ಹಕ್ಕಿಗಳ ಸಮೂಹಗಳು, ದೇವಾಯತನಚೈತ್ಯೇಷು - ದೇವಸ್ಥಾನಗಳಲ್ಲಿಯೂ ಧರ್ಮಭವನಗಳಲ್ಲಿಯೂ, ದೀನಾಃ - ದೈನ್ಯವುಳ್ಳವುಗಳಾಗಿ, ತಥಾ - ಹಾಗೆಯೇ, ದೃಶ್ಯಂತೇ - ಕಾಣುತ್ತವೆ, ಸಸ್ತ್ರೀಪುಂಸಂ - ಸ್ತ್ರೀಪುರುಷರಿಂದೊಡಗೂಡಿದ, ಜನಂ - ಜನವನ್ನು, ಮಲಿನಂ - ಸ್ನಾನಾದಿಗಳಿಲ್ಲದವನ್ನಾಗಿಯೂ, ಅಶ್ರುಪೂರ್ಣಾಕ್ಷಂ - ಕಂಬನಿದುಂಬಿದ ನೇತ್ರಗಳುಳ್ಳುದನ್ನಾಗಿಯೂ, ದೀನಂ - ದೈನ್ಯಮುಖವುಳ್ಳುದನ್ನಾಗಿಯೂ, ಧ್ಯಾನಪರಂ - ಚಿಂತಿಸುತ್ತಿರುವದನ್ನಾಗಿಯೂ, ಕೃಶಂ - ಸವೆದುಹೋಗುತ್ತಿರುವುದನ್ನಾಗಿಯೂ, ಉತ್ಕಂಠಿತಂ - ಗದ್ಗದಸ್ವರಭರಿತವಾದ ಕಂಠಗಳುಳ್ಳುದನ್ನಾಗಿಯೂ, ಪಶ್ಯಾಮಿ - ಕಾಣುತ್ತೇನೆ. ॥ ೪೩ ॥ ಭರತಃ - ಭರತನು, ದೀನಮಾನಸಃ - ಪರಿತಪಿಸುತ್ತಿರುವ ಮನವುಳ್ಳವನಾಗಿ, ಇತ್ಯೇವಂ - ಈಪರಿಯಾಗಿ, ತಂಸೂತಂ - ಆ

ಯಾರೂ ದೇವಪೂಜೆಯನ್ನು ಮಾಡುತ್ತಿಲ್ಲವು. ಯಾಗಶಾಲೆಗಳೂ ಅಂತೆಯೇ ಕಾಣುತ್ತಿವೆ. ಪುಷ್ಪಮಾಲಿಕೆಗಳನ್ನು ವಿಕ್ರಯಿಸುವ ಅಂಗಡಿಗಳಲ್ಲಿ ಪೂಮಾಲಿಕೆಗಳು ಕಾಣಬರಲಿಲ್ಲ ಈಗಲೀ ಪಟ್ಟಣದ ವರ್ತಕರೆಲ್ಲರೂ ವ್ಯಸನದಿಂದ ಕೂಡಿದ ಮನಸ್ಸುಳ್ಳವರೂ, ವ್ಯಾಪಾರವಿಲ್ಲದವರೂ, ಆಗಿರುವರಲ್ಲದೆ ಹಿಂದಿನಂತೆ ಸಂತೋಷದಿಂದಿರುವಂತೆ ಕಾಣುವುದಿಲ್ಲ. ಇಷ್ಟುಮಾತ್ರವಲ್ಲದೆ ಈಗಲೀಪಟ್ಟಣದಲ್ಲಿ ಸ್ತ್ರೀಪುರುಷಾತ್ಮಕವಾದ ಜನನಿವಹವೆಲ್ಲ ಮಲಿನ ಸ್ವಭಾವವುಳ್ಳುದಾಗಿರುವುದು ; ಮಾತ್ರವಲ್ಲದೆ ಕಣ್ಣೀರಿಡುತ್ತಲೂ ಇರುವುದು. ಇದೂ ಅಲ್ಲದೆ ದುಃಖವುಳ್ಳುದು, ವಿಚಾರಸಾಗರದಲ್ಲಿ ಮುಳುಗಿರುವುದು, ಕೃಶಿಸಿಹೋಗಿರುವುದು, ಪರಿತಾಪವನ್ನು ಹೊಂದಿರುವುದೂ ಆಗಿರುವುದು. ಈ ರೀತಿ ಎಲ್ಲವೂ ವಿಕಾರವನ್ನು ಹೊಂದಿದಂತೆ ನನಗೆ ಕಾಣುತ್ತಿರುವುದು. ॥ ೪೦-೪೩ ॥ ಈರೀತಿಯಾಗಿಯಾಮಹಾತ್ಮನಾದ ಭರತನು ದೀನಮಾನಸನಾಗಿ

ಪುಂಸಂಚ ಪಶ್ಯಾಮಿ ಜನ ಮುತ್ಕಂಠಿತಂ ಪುರೇ ‖ ಇತ್ಯೇವಮುಕ್ತ್ವಾ ಭರತ ಸ್ಸೂತಂ ತಂ ದೀನಮಾನಸಃ ‖ ೪೪ ‖ ತಾನ ನಿಷ್ಟಾನ್ಯಯೋಧ್ಯಾಯಾಂ ಪ್ರೇಕ್ಷ್ಯ ರಾಜಗೃಹಂ ಯಯೌ ‖ ತಾಂ ಶೂನ್ಯಶೃಂಗಾಟಕ ವೇಶ್ಮ ರಥ್ಯಾಂ ರಜೋರುಣ ದ್ವಾರ ಕವಾಟಯಂತ್ರಾಂ ‖ ೪೫ ‖ ದೃಷ್ಟ್ವಾ ಪುರೀಮಿಂದ್ರ ಪುರಪ್ರಕಾಶಾಂ ದುಃಖೇನ ಸಂಪೂರ್ಣತರೋ ಬಭೂವ ‖ ೪೫ ‖

ಬಹೂನಿ ಪಶ್ಯನ್ಮನಸೋ ಪ್ರಿಯಾಣಿ
ಯಾನ್ಯನ್ಯಥಾ ನಾಸ್ಯಪುರೇ ಬಭೂವುಃ ‖
ಅವಾಕ್ಶಿರಾ ದೀನಮನಾ ನಹೃಷ್ಟಃ
ಪಿತುರ್ಮಹಾತ್ಮಾ ಪ್ರವಿವೇಶ ವೇಶ್ಮ ‖ ೪೬ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಸಪ್ತತಿತಮಸ್ಸರ್ಗಃ.

ಸಾರಥಿಯನ್ನು ಕುರಿತು, ಉಕ್ತ್ವಾ - ಹೇಳಿ, ಅಯೋಧ್ಯಾಯಾಂ - ಅಯೋಧ್ಯಾಪಟ್ಟಣದಲ್ಲಿ, ತಾನ್ಯನಿಷ್ಟಾನಿ - ಆ ಅನಿಷ್ಟಗಳನ್ನು, ಪ್ರೇಕ್ಷ್ಯ - ಕಂಡು, ರಾಜಗೃಹಂ-ಅರಮನೆಯನ್ನು ಕುರಿತು, ಯಯೌ-ತೆರಳಿದನು. ‖ ೪೪ ‖ ಇಂದ್ರಪುರಪ್ರಕಾಶಾಂ - ದೇವೇಂದ್ರನ ಪಟ್ಟಣಕ್ಕೆ ಸಮಾನವಾದ ಕಾಂತಿಯುಳ್ಳ, ತಾಂಪುರೀಂ - ಆ ಅಯೋಧ್ಯಾಪಟ್ಟಣವನ್ನು, ಶೂನ್ಯಶೃಂಗಾಟಕವೇಶ್ಮರಥ್ಯಾಂ - ಜನವಿಲ್ಲದಿರುವ ಚಚ್ಚೌಕಗಳು, ಮನೆಗಳು, ದೊಡ್ಡಬೀದಿಗಳೂಉಳ್ಳದನ್ನಾಗಿಯೂ,ರಜೋರುಣದ್ವಾರಕವಾಟಯಂತ್ರಾಂ - ಧೂಳಿಯಿಂದ ಕೆಂಪಾಗಿರುವ ಬಾಗಿಲುಗಳ ಕೀಲುಗಳುಳ್ಳದನ್ನಾಗಿಯೂ, ದೃಷ್ಟ್ವಾ - ಕಂಡು, ದುಃಖೇನ - ವ್ಯಸನದಿಂದ, ಸಂಪೂರ್ಣತರಃ - ಬಹಳವಾಗಿ ತುಂಬಿದವನು, ಬಭೂವ-ಆದನ. ‖ ೪೫ ‖ ಅಸ್ಯ - ಈ ಭರತನ, ಪುರೇ-ಪಟ್ಟಣದಲ್ಲಿ, ಅನ್ಯಥಾ - ಮತ್ತೊಂದುಕಾಲದಲ್ಲಿ, ಯಾನಿ - ಯಾವ ಅಪಶಕುನಗಳು, ನಬಭೂವಹ - ಆಗದಿದ್ದವೋ, ಬಹೂನಿ - ಅನೇಕವಾದ, ಮನಸಃ-ಮನಸ್ಸಿಗೆ, ಅಪ್ರಿಯಾನಿ - ಅನಿಷ್ಟಕರವಾದ, ತಾನಿ - ಆ ಅಪಶಕುನಗಳನ್ನು, ಪಶ್ಯನ್ - ನೋಡುತ್ತ, ಮಹಾತ್ಮಾ - ಮಹಾ ಮನಸ್ವಿಯಾದ ಭರತನು, ಅವಾಕ್ಶಿರಾಃ - ತಲೆ ಬಗ್ಗಿಸಿಕೊಂಡವನಾಗಿಯೂ, ದೀನಮನಾಃ - ಪರಿತಪಿಸುತ್ತಿರುವ ಮನಸ್ಸುಳ್ಳವನಾಗಿಯೂ, ನಹೃಷ್ಟಃ - ಸಂತೋಷಗೊಳ್ಳದವನಾಗಿಯೂ, ಪಿತುಃ - ತಂದೆಯ, ವೇಶ್ಮ - ಮನೆಯನ್ನು, ಪ್ರವಿವೇಶ - ಹೊಕ್ಕನು. ‖ ೪೬ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಸಪ್ತತಿತಮಸ್ಸರ್ಗಃ.

ಸಾರಥಿಯೊಡನೆ ಹೇಳಿ, ಆ ಅನಿಷ್ಟಗಳೆಲ್ಲವನ್ನೂ ನೋಡುತ್ತ ರಾಜಗೃಹಕ್ಕೆ ಹೋದನು. ಅಲ್ಲದೆ ಆತನು ಜನಗಳಿಲ್ಲದ ಚತುಷ್ಪಥಗಳನ್ನೂ, ಗೃಹಗಳನ್ನೂ, ರಾಜಮಾರ್ಗವುಳ್ಳದೂ, ಧೂಳಿನಿಂದಾಚ್ಛಾದಿತವಾಗಿ ಕೆಂಪುರಂಗುಳ್ಳದೂ ಆದ ಬಾಗಿಲುಗಳ ಕೀಲುಗಳನ್ನೂ ನೋಡಿ ಮಹಾ ದುಃಖಿತನಾಗಿ, ತಲೆಬಾಗಿ ಪರಿತಪಿಸುತ್ತ ಸಂತೋಷರಹಿತನಾಗಿ ತನ್ನ ತಂದೆಯ ಅರಮನೆಯನ್ನು ಪ್ರವೇಶಿಸಿದನು. ‖ ೪೬ ‖

ಇಂತಿದು ಭರತಕುಮಾರಕೃತ ಅಯೋಧ್ಯಾಪಟ್ಟಣ ಪ್ರವೇಶ ವಿಧಾನ ವಿವರಣವೆಂಬ ಎಪ್ಪತ್ತೊಂದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ದ್ವಿಸಪ್ತತಿತಮಸ್ಸರ್ಗಃ.

ಅಪಶ್ಯಂಸ್ತು ತತಸ್ತತ್ರ ಪಿತರಂ ಪಿತುರಾಲಯೇ || ಜಗಾಮ ಭರತೋ ದ್ರಷ್ಟುಂ ಮಾತರಂ ಮಾತುರಾಲಯೇ || ೧ || ಅನುಪ್ರಾಪ್ತಂತು ತಂ ದೃಷ್ಟ್ವಾ ಕೈಕೇಯೀ ಪ್ರೋಷಿತಂ ಸುತಂ || ಉತ್ಪಪಾತ ತದಾ ಹೃಷ್ಟಾ ತ್ಯಕ್ತ್ವಾ ಸೌವರ್ಣ ಮಾಸನಂ || ೨ || ಸಪ್ರವಿಶ್ಯೈವ ಧರ್ಮಾತ್ಮಾ ಸ್ವಗೃಹಂ ಶ್ರೀ ವಿವರ್ಜಿತಂ || ಭರತಃ ಪ್ರತಿಜಗ್ರಾಹ ಜನನ್ಯಾ ಶ್ಚರಣೌ ಶುಭೌ || ೩ || ಸಾ ತಂ ಮೂರ್ಧನ್ಯು ಪಾಘ್ರಾಯ ಪರಿಷ್ವಜ್ಯ ಯಶಸ್ವಿನಂ || ಅಂಕೇ ಭರತ ಮಾರೋಪ್ಯ ಪ್ರಷ್ಟುಂ

ಭರತಃ - ಭರತನು, ಪಿತಾ - ತಂದೆಯು, ತತ್ರಆಲಯೇ - ಆ ಮನೆಯಲ್ಲಿ, ಪಿತರಂ - ತಂದೆಯನ್ನು, ಅಪಶ್ಯ - ನೋಡದೆ, ತತಃ - ಬಳಿಕ, ಮಾತುಃ - ತಾಯಿಯ, ಆಲಯೇ - ಮನೆಯಲ್ಲಿ, ಮಾತರಂ - ತಾಯಿಯನ್ನು, ದ್ರಷ್ಟುಂ - ನೋಡುವುದಕ್ಕೆ, ಜಗಾಮ - ತೆರಳಿದನು. || ೧ || ಕೈಕೇಯೀ- ಕೈಕೇಯೀದೇವಿಯು, ಪ್ರೋಷಿತಂ - ಹೊರಟುಹೋಗಿದ್ದ, ತಂಸುತಂ - ಆ ಭರತಕುಮಾರನನ್ನು, ಅನುಪ್ರಾಪ್ತಂ - ಬಂದವನನ್ನಾಗಿ, ದೃಷ್ಟ್ವಾ - ಕಂಡು, ತದಾ - ಆ ಕಾಲದಲ್ಲಿ, ಹೃಷ್ಟಾ - ಸಂತೋಷ ಗೊಂಡವಳಾಗಿ, ಸೌವರ್ಣಂ - ಸುವರ್ಣವಿಕಾರವಾದ, ಆಸನಂ - ಪೀಠವನ್ನು, ತ್ಯಕ್ತ್ವಾ -"ಬಿಟ್ಟು, ಉತ್ಪಪಾತ - ನೆಗೆದಳು. || ೨ || ಧರ್ಮಾತ್ಮಾ - ಧರ್ಮಿಷ್ಠನಾದ, ಸಭರತಃ - ಆ ಭರತನು, ಶ್ರೀ ವಿವರ್ಜಿತಂ - ಕಾಂತಿಹೀನವಾದ, ಸ್ವಗೃಹಂ - ತನ್ನಮನೆಯನ್ನು, ಪ್ರವಿಶ್ಯೈವ - ಪ್ರವೇಶ ಮಾಡುತ್ತಲೇ, ಜನನ್ಯಾಃ - ತಾಯಿಯ, ಶುಭೌ-ಮಂಗಳಕರಗಳಾದ, ಚರಣೌ-ಪಾದಗಳನ್ನು, ಪ್ರತಿಜಗ್ರಾಹ- ಹಿಡಿದುಕೊಂಡನು. || ೩ || ಸಾ - ಆ ಕೈಕೇಯೀದೇವಿಯು, ಯಶಸ್ವಿನಂ - ಕೀರ್ತಿವಂತನಾದ, ತಂಭರತಂ - ಆ ಭರತನನ್ನು, ಪರಿಷ್ವಜ್ಯ - ಅಪ್ಪಿಕೊಂಡು, ಮೂರ್ಧನಿ - ಮಂಡೆಯಲ್ಲಿ, ಉಪಾ

ಈ ರೀತಿ ಭರತನು ಅರಮನೆಯನ್ನು ಪ್ರವೇಶಿಸಿದ ಬಳಿಕ, ತಂದೆಯು ಅಂತಪುರಕ್ಕೆ ಹೋಗಿ ಅಲ್ಲಿ ಆತನನ್ನು ಕಾಣದೆ, ತಾಯಿಯಾದ ಕೈಕೇಯೀದೇವಿಯು ಅಂತಃಪುರದಲ್ಲಿರಬಹುದೆಂದು ಯೋಚಿಸಿ ಅಲ್ಲಿಗೆ ಹೋದನು. ಆಗಲಾ ಕೈಕೇಯೀದೇವಿಯು ದೇಶಾಂತರದಿಂದ ಹಿಂತಿರುಗಿಬಂದ ಮಗನನ್ನು ನೋಡಿ ಕೂಡಲೆ ಅಧಿಕವಾದ ಸಂತೋಷದಿಂದ ಮೈಯ್ಯುಬ್ಬಿದವಳಾಗಿ, ತಾನು ಸುಖಾಸೀನಳಾಗಿದ್ದ ಸುವರ್ಣಮಯವಾದ ಆಸನದಿಂದ ಮೇಲಕ್ಕೆದ್ದಳು. ಆ ಸಮಯದಲ್ಲಿ ಎಲ್ಲ ಧರ್ಮಗಳನ್ನೂ ಚೆನ್ನಾಗಿ ತಿಳಿದಿರುವ ಭರತಕುಮಾರನು. ಕಾಂತಿಹೀನವಾದ ಆ ಭವನವನ್ನು ಒಳಹೊಕ್ಕೊಡನೆಯೇ, ಮಂಗಳಕರವಾದ ಆ ತಾಯಿಯ ಪಾದಗಳಿಗೆ ಸಾಷ್ಟಾಂಗ ಪ್ರಣಾಮವಂಗೈದನು. ಅಷ್ಟರಲ್ಲಿಯಾ ಕೈಕೇಯಿಯು, ಮಗನನ್ನು ಪಿಡಿದೆತ್ತಿ, ಆಲಿಂಗಿಸಿಕೊಂಡು ಮುದ್ದುಗೈದು, ತನ್ನತೊಡೆಯಮೇಲೆ ಕೂಡಿಸಿಕೊಂಡು ಹೀಗೆಂದಳು. ||೧-೪|| " ವತ್ಸ ! ಭರತ; ನಮ್ಮ ಜನನಿಯ ಮನೆಯಿಂದ ಹೊರಟು

ಸಮುಪಚಕ್ರಮೇ ॥ ೪ ॥ ಅದ್ಯ ತೇ ಕತಿಚಿದ್ರಾತ್ರ್ಯ ಶ್ಚ್ಯುತಸ್ಯಾ ರ್ಯಕ ವೇಶ್ಮನಃ ॥ ಅಪಿ ನಾಧ್ವಶ್ರಮ ಶ್ಶೀಘ್ರಂ ರಥೇನಾ ಪತತ ಸ್ತವ ॥ ೫ ॥ ಆರ್ಯಕಸ್ತೇ ಸ ಕುಶಲೀ ಯುಧಾಜಿ ನ್ಮಾತುಲ ಸ್ತವ ॥ ಪ್ರವಾಸಾಚ್ಚ ಸುಖಂ ಪುತ್ರ! ಸರ್ವಂ ಮೇ ವಕ್ತು ಮರ್ಹಸಿ ॥ ೬ ॥ ಏವಂ ಪೃಷ್ಟಸ್ತು ಕೈಕೇಯ್ಯಾ ಪ್ರಿಯಂ ಪಾರ್ಥಿವ ನಂದನಃ ॥ ಆಚಷ್ಟ ಭರತ ಸ್ಸರ್ವಂ ಮಾತ್ರೇ ರಾಜೀವಲೋಚನಃ ॥ ೭ ॥ ಅದ್ಯಮೇ ಸಪ್ತಮೀ ರಾತ್ರಿ ಶ್ಚ್ಯುತಸ್ಯಾ ರ್ಯಕ ವೇಶ್ಮನಃ ॥ ಅಂಬಾಯಾಃ ಕುಶಲೀ ತಾತೋ ಯುಧಾಜಿ ನ್ಮಾತುಲಶ್ಚ ಮೇ ॥ ೮ ॥ ಯನ್ಮೇ

ಘ್ರಾಯ - ಆಘ್ರಾಣಿಸಿ, ಅಂಕೇ - ತೊಡೆಯಮೇಲೆ, ಆರೋಪ್ಯ - ಕೂಡಿಸಿಕೊಂಡು, ಪ್ರಷ್ಟುಂ - ಪ್ರಶ್ನೆ ಮಾಡುವುದಕ್ಕೆ, ಉಪಚಕ್ರಮೇ - ಮೊದಲು ಮಾಡಿದಳು. ॥ ೪ ॥ ಅದ್ಯ - ಈಗ, ಆರ್ಯಕ ವೇಶ್ಮನಃ - ಮಾತಾಮಹನ ಮನೆಯಿಂದ, ಚ್ಯುತಸ್ಯ - ಹೊರಹೊರಟ, ತೇ-ನಿನಗೆ, ಕತಿಚಿದ್ರಾತ್ರ್ಯಃ- ಎಷ್ಟು ರಾತ್ರಿಗಳಾದವು, ರಥೇನ - ರಥದಿಂದ, ಶೀಘ್ರಂ - ತ್ವರಿತವಾಗಿ, ಆಪತತಃ - ಬರುತ್ತಿರುವ, ತವ - ನಿನಗೆ, ಅಧ್ವಶ್ರಮಃ - ಮಾರ್ಗಾಯಾಸವು, ಅಪಿನ - ಆಗಲಿಲ್ಲವಷ್ಟೆ. ॥ ೫ ॥ ತೇ - ನಿನ್ನ, ಆರ್ಯಕಃ - ಮಾತಾಮಹನಾದ, ಸಃ - ಆ ಕೇಕಯರಾಯನು, ಕುಶಲೀ - ಕ್ಷೇಮವೇ, ತವ - ನಿನಗೆ, ಮಾತುಲಃ - ಸೋದರಮಾವನಾದ, ಯುಧಾಜಿತ್ - ಯುಧಾಜಿತುವು, ಕುಶಲೀ - ಕ್ಷೇಮವೇ, ಹೇ ಪುತ್ರ - ಎಲೈ ಮಗನೇ, ಪ್ರವಾಸಾಚ್ಚ - ಪ್ರಯಾಣ ಮಾಡಿದ್ದು ಮೊದಲ್ಗೊಂಡು, ಅಪಿಸುಖಂ - ಸುಖವಷ್ಟೆ, ಮೇ - ನನಗೆ, ಸರ್ವಂ - ಸಮಸ್ತವನ್ನು, ವಕ್ತುಂ - ಹೇಳಲು, ಅರ್ಹಸಿ - ಯೋಗ್ಯನಾಗು. ॥ ೬ ॥ ರಾಜೀವಲೋಚನಃ - ಕಮಲಗಳಂತೆ ವಿಶಾಲವಾದ ಕಂಗಳುಳ್ಳ, ಪಾರ್ಥಿವನಂದನಃ - ರಾಜಪುತ್ರನಾದ, ಭರತಃ - ಭರತನು, ಏವಂ - ಹೀಗೆ ಪ್ರಿಯಂ - ಇಷ್ಟವನ್ನು, ಕೈಕೇಯ್ಯಾ - ಕೈಕೇಯಿಯಾದೇವಿಯಿಂದ, ಪೃಷ್ಟಸ್ತು - ಕೇಳಲ್ಪಟ್ಟವನಾಗಿ, ಮಾತ್ರೇ - ತಾಯಿಗೆ, ಸರ್ವಂ - ಸಕಲ ಕ್ಷೇಮಲಾಭವನ್ನು, ಆಚಷ್ಟ - ಹೇಳಿದನು. ॥ ೭ ॥ ಆರ್ಯಕವೇಶ್ಮನಃ - ಮಾತಾಮಹನ ಮನೆಯಿಂದ, ಚ್ಯುತಸ್ಯ - ಹೊರಟುಬಂದ, ಮೇ - ನನಗೆ, ಅದ್ಯ - ಈಗ, ಸಪ್ತಮೀರಾತ್ರಿಃ - ಏಳನೆಯ ರಾತ್ರಿಯು, ಅಂಬಾಯಾಃ - ತಾಯಿಯಾದ ನಿನಗೆ, ಪಿತಾ - ತಂದೆಯಾದ ಕೇಕಯರಾಯನು, ಮೇ - ನನಗೆ, ಮಾತುಲಃ - ಸೋದರಮಾವನಾದ, ಯುಧಾಜಿಚ್ಚ - ಯುಧಾಜಿತುವೂ, ಕುಶಲೀ - ಕ್ಷೇಮ

ಎಷ್ಟು ದಿನಗಳಾದುವು ? ಬಹು ಜಾಗ್ರತೆಯಾಗಿ ಪಯಣಮಾಡಿ ಇಲ್ಲಿಗೆ ಬಂದನಿನಗೆ ಬಹಳವಾದ ಆಯಾಸವೇನೂ ಆಗಲಿಲ್ಲವಷ್ಟೆ ? ಮಗನೆ ! ಪೂಜ್ಯನೂ, ನಿನಗೆ ಸೋದರಮಾವನೂ ಆದ ಯುಧಾಜಿತುವು ಕುಶಲದಿಂದಿರುವನಷ್ಟೆ ? ಮಾತ್ರವಲ್ಲದೆ ನಿನಗೆ ದೂರದೇಶದಲ್ಲಿರುವುದರಿಂದ ಸುಖವಾಗಿದ್ದಿತಲ್ಲವೆ ? ಈ ವಿಷಯಗಳೆಲ್ಲವನ್ನೂ ವಿಸ್ತಾರವಾಗಿ ಹೇಳುವವನಾಗು.'' ಕೈಕೇಯಿಯು ನುಡಿದ ಈ ಮಾತುಗಳೆಲ್ಲವನ್ನೂ ಕೇಳಿದ ಭರತನು ಬಹು ಸಂತೋಷದಿಂದ ತಾಯಿಯು ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರವೀಯುವವನಾಗಿ ಹೀಗೆ ಹೇಳಿದನು. ॥ ೫-೭ ॥ ಜನನೀ ! ನಾನು ಮಾತಾಮಹನ ಮನೆಯಿಂದ ಹೊರಹೊರಟು ಇಂದಿಗೆ ಏಳು ದಿನಗಳಾದುವು. ನಿಮ್ಮ ತಂದೆಯಾದ ಅಶ್ವಪತಿರಾಯನು ಕ್ಷೇಮವಾಗಿರುವನು. ನನ್ನ ಸೋದರ

ಧನಂಚ ರತ್ನಂಚ ದದೌ ರಾಜಾ ಪರಂತಪಃ ॥ ಪರಿಶ್ರಾಂತಂ ಪಥ್ಯಭವ ತ್ತತೋಽಹಂ ಪೂರ್ವ ಮಾಗತಃ ॥ ೯ ॥ ರಾಜವಾಕ್ಯಹರೈ ರ್ದೂತೈ ಸ್ತ್ವರ್ಯ ಮಾಣೋಽಹಮಾಗತಃ ॥ ಯದಹಂ ಪ್ರಷ್ಟು ಮಿಚ್ಛಾಮಿ ತದಂಬಾ ವಕ್ತು ಮರ್ಹತಿ ॥ ೧೦ ॥ ಶೂನ್ಯೋಽಯಂ ಶಯನೀಯ ಸ್ತೇ ಪರ್ಯಂಕೋ ಹೇಮ ಭೂಷಿತಃ ॥ ನಚಾಯ ಮಿಕ್ಷ್ವಾಕುಜನಃ ಪ್ರಹೃಷ್ಟಃ ಪ್ರತಿಭಾತಿ ಮಾ! ॥೧೧॥ ರಾಜಾಭವತಿ ಭೂಯಿಷ್ಠ ಮಿಹಾಂಬಾಯಾ ನಿವೇಶನೇ ॥ ತಮಹಂ ನಾದ್ಯ ಪಶ್ಯಾಮಿ ದ್ರಷ್ಟುಮಿಚ್ಛ ನ್ನಿಹಾಗತಃ ॥ ೧೨ ॥ ಪಿತುರ್ಗೃಹೀಷ್ಯೇ ಚರಣೌ

ವಾಗಿರುವರು. ॥ ೮ ॥ ಪರಂತಪಃ - ಶತ್ರುಸಂಹಾರಕನಾದ, ರಾಜಾ - ಕೇಕಯರಾಯನು, ಮೇ - ನನಗೆ, ರತ್ನಂ - ಶ್ರೇಷ್ಠವಾದ, ಯದ್ಧನಂ - ಅಶ್ವಗಜಾದಿ ರೂಪವಾದ ಯಾವ ಧನವನ್ನು ಕೊಟ್ಟನೋ, ತತ್ - ಆ ದ್ರವ್ಯವು, ಪರಿಶ್ರಾಂತಂ - ಬಳಲಿದ ವಾಹನಗಳುಳ್ಳದಾಗಿ, ಪಥಿ - ಮಾರ್ಗದಲ್ಲಿ, ಅಭವತ್- ಆಯಿತು, ತತಃ - ಆ ಕಾರಣ, ಅಹಂ - ನಾನು, ಪೂರ್ವಂ - ಮೊದಲು, ಆಗತಃ - ಬಂದೆನು. ॥ ೯ ॥ ಅಹಂ - ನಾನು, ರಾಜವಾಕ್ಯಹರೈಃ - ರಾಜವಚನವನ್ನು ತೆಗೆದುಕೊಂಡು ಬಂದ, ದೂತೈಃ - ಭಟರಿಂದ, ತ್ವರ್ಯಮಾಣಃ - ತ್ವರೆಗೊಳಿಸಲ್ಪಟ್ಟವನಾಗಿ, ಆಗತಃ - ಬಂದೆನು, ಅಹಂ - ನಾನು, ಯತ್ - ಯಾವ ಮಾತನ್ನು, ಪ್ರಷ್ಟುಂ - ಹೇಳುವುದಕ್ಕೆ, ಇಚ್ಛಾಮಿ-ಬಯಸುತ್ತೇನೆಯೋ, ಅಂಬಾ - ತಾಯಿಯು, ತತ್ - ಆ ಮಾತನ್ನು ಕುರಿತು, ವಕ್ತುಂ - ಪ್ರತ್ಯುತ್ತರವನ್ನು ಹೇಳಲು, ಅರ್ಹತಿ - ಯೋಗ್ಯಳಾಗಲಿ. ॥ ೧೦ ॥ ತೇ - ನಿನ್ನ, ಶಯನೀಯಃ - ಮಲಗತಕ್ಕ, ಹೇಮಭೂಷಿತಃ - ಬಂಗಾರದ ಕಟ್ಟುಗಳಿಂದ ಅಲಂಕರಿಸಲ್ಪಟ್ಟ, ಅಯಂಪರ್ಯಂಕಃ - ಈ ಮಂಚವು, ಶೂನ್ಯಃ - ಬರಿದಾಗಿದೆ, ಅಯಂ - ಈ, ಇಕ್ಷ್ವಾಕುಜನಶ್ಚ - ಇಕ್ಷ್ವಾಕುರಾಯನ ನೆಂಟರು, (ಗೋ) ಇಕ್ಷ್ವಾಕು ವಂಶೋತ್ಪನ್ನನಾದ ದಶರಥರಾಯನು, ಪ್ರಹೃಷ್ಟಃ-(ಸಂತಸವಾಂತು) ಸಂತೋಷಗೊಂಡುದಾಗಿ, ಮೇ-ನನಗೆ, ನಪ್ರತಿಭಾತಿ-ತೋರುವುದಿಲ್ಲ. ॥ ೧೧ ॥ ರಾಜಾ-ಅರಸು, ಇಹ-ಇಲ್ಲಿಯೇ, ಅಂಬಾಯಾಃ-ತಾಯಿಯ, ನಿವೇಶನೇ - ಮನೆಯಲ್ಲಿಯೇ, ಭೂಯಿಷ್ಠಂ - ಬಹಳವಾಗಿ, ಭವತಿ - ಇರುತ್ತಿದ್ದನಷ್ಟೆ, ಅಹಂ - ನಾನು, ಅದ್ಯ - ಈಗ, ತಂ - ಆ ದಶರಥರಾಯನನ್ನು, ನಪಶ್ಯಾಮಿ - ಕಾಣುವುದಿಲ್ಲ, ದ್ರಷ್ಟುಂ - ನೋಡಲು, ಇಚ್ಛನ್ - ಅಪೇಕ್ಷೆಯುಳ್ಳವನಾಗಿ, ಇಹ - ಇಲ್ಲಿಗೆ, ಆಗತಃ-ಬಂದೆನು. ॥ ೧೨ ॥ ಪಿತುಃ-

---

ಮಾವನಾದ ಯುಧಾಜಿತುವೂ ಆರೋಗ್ಯವಾಗಿದ್ದಾನೆ, ಶತ್ರುಮರ್ದನನಾದ ಕೇಕಮಹಾರಾಜನು ನನಗಿತ್ತ ಧನವನ್ನು ಹೊತ್ತುಕೊಂಡು ಬಂದ ಕುದುರೆಗಳು, ಆನೆಗಳೂ ಮಾರ್ಗದಲ್ಲಿಯೇ ಇರುವುದರಿಂದ ನಿಧಾನವಾಗಿ ಬರುತ್ತಿರುವುವು. ಅವುಗಳೆಲ್ಲವನ್ನು ಸಾವಕಾಶವಾಗಿ ಬರುವಂತೆ ಆಜ್ಞಾಪಿಸಿ ನಾನು ಮಾತ್ರ ಜಾಗ್ರತೆಯಾಗಿ ಬರಬೇಕಾಯಿತು. ನಾನೀಗ ಯಾವ ವಿಷಯವನ್ನು ಕೇಳುತ್ತೇನೆಯೋ ಆ ವಿಷಯವನ್ನು ಸ್ವಲ್ಪವೂ ಮರೆಮಾಚದೆ ಹೇಳುವವಳಾಗು. ಜನನೀ ! ಸುವರ್ಣಾಲಂಕೃತವಾದ ನಿನ್ನ ಹಾಸಿಗೆಯು ಶೂನ್ಯವಾಗಿರಲು ಕಾರಣವೇನು ? ಇದನ್ನು ನೋಡಿದರೆ ಮಹಾರಾಜನಾದ ದಶರಥರಾಯನು ಕ್ಷೇಮದಿಂದಿರುವನೆಂದು ನನಗೆ ತೋರುವುದಿಲ್ಲ ! ನನ್ನ ತಂದೆಯಾದ ದಶರಥಭೂಪಾಲನು ಸಾಧಾರಣವಾಗಿ

ತಂ ಮಮಾಖ್ಯಾಹಿ? ಪೃಚ್ಛತಃ॥ಆಹೋಸ್ವಿದಂಬ! ಜ್ಯೇಷ್ಠಾಯಾಃ ಕೌಸಲ್ಯಾಯಾ
ನಿವೇಶನೇ॥೧೩॥ ತಂ ಪ್ರತ್ಯುವಾಚ ಕೈಕೇಯೀ ಪ್ರಿಯವದ್ಘೋರ ಮಪ್ರಿಯಂ॥
ಅಜಾನಂತಂ ಪ್ರಜಾನಂತೀ ರಾಜ್ಯಲೋಭೇನ ಮೋಹಿತಾ ॥ ೧೪ ॥ ಯಾ ಗತಿ
ಸ್ಸರ್ವಭೂತಾನಾಂ ತಾಂಗತಿಂ ತೇ ಪಿತಾ ಗತಃ ॥ ರಾಜಾ ಮಹಾತ್ಮಾ ತೇಜಸ್ವೀ
ಯಾಯಜೂಕ ಸ್ಸತಾಂ ಗತಿಃ ॥ ೧೫ ॥ ತಚ್ಛ್ರುತ್ವಾ ಭರತೋ ವಾಕ್ಯಂ ಧರ್ಮಾಭಿ
ಜನವಾ೯ ಶುಚಿಃ ॥ ಪಪಾತ ಸಹಸಾ ಭೂಮೌ ಪಿತೃಶೋಕ ಬಲಾರ್ದಿತಃ॥೧೬॥

ತಂದೆಯ, ಚರಣೌ - ಪಾದಗಳನ್ನು, ಗೃಹ್ಣೀಯಾಂ - ಹಿಡಿದುಕೊಳ್ಳುವೆನು, ಪೃಚ್ಛತಃ - ಕೇಳುತ್ತಿರುವ, ಮಮ - ನನಗೆ, ತಂ - ಆ ತಂದೆಯ ವಿಷಯವನ್ನು, ಆಖ್ಯಾಹಿ - ಹೇಳು, ಅಹೋಸ್ವಿತ್ - ಇಲ್ಲದಿದ್ದರೆ, ಹೇ ಅಂಬ - ಎಲೌ ತಾಯಿಯೇ, ಜ್ಯೇಷ್ಠಾಯಾಃ - ಹಿರೀಹೆಂಡತಿಯಾದ, ಕೌಸಲ್ಯಾಯಾಃ - ಕೌಸಲ್ಯಾದೇವಿಯ, ನಿವೇಶನೇ - ಮನೆಯಲ್ಲಿ, (ಅಸ್ತಿ-ಇರುವನೇನು?) ॥ ೧೩ ॥ ಕೈಕೇಯೀ - ಕೈಕೇಯೀದೇವಿಯು, ಪ್ರಜಾನಂತೀ - ತಿಳಿದವಳಾದರೂ, ರಾಜ್ಯಲೋಭೇನ - ರಾಜ್ಯದಲ್ಲಿನ ಆಸಕ್ತಿಯಿಂದ, ಮೋಹಿತಾ - ಭ್ರಾಂತಳಾಗಿ, ಅಜಾನಂತಂ - ತಿಳಿಯದಿರುವ, ತಂ - ಆ ಭರತನನ್ನು ಕುರಿತು, ಘೋರಂ - ಕರ್ಣಕಠೋರನಾದ, ಅಪ್ರಿಯಂ - ಅನಿಷ್ಟವಚನವನ್ನು, ಪ್ರಿಯವತ್ - ಇಷ್ಟವನ್ನಾಗಿ ತಿಳಿದು, ಪ್ರತ್ಯುವಾಚ - ಪ್ರತ್ಯುತ್ತರಕೊಟ್ಟಳು. ॥ ೧೪ ॥ ಸರ್ವಭೂತಾನಾಂ - ಸಮಸ್ತ ಭೂತಗಳಿಗೂ, ಯಾ - ಯಾವದು, ಗತಿಃ - ಗಮ್ಯಸ್ಥಾನವೋ, ಮಹಾತ್ಮಾ - ಮಹಾತ್ಮನಾದ, ತೇಜಸ್ವೀ - ತೇಜೋವಂತನಾದ, ಯಾಯಜೂಕಃ - ಸೋಮಯಾಜಿಯಾದ, ಸತಾಂ - ಸತ್ಪುರುಷರಿಗೆ, ಗತಿಃ - ಶರಣನಾದ, ತೇ - ನಿನಗೆ, ಪಿತಾ - ತಂದೆಯಾದ, ರಾಜಾ - ಅರಸು, ತಾಂಗತಿಂ - ಅಂತಹ ಪರಲೋಕ ಗತಿಯನ್ನು, ಗತಃ - ಹೊಂದಿದನು. ॥ ೧೫ ॥ ಧರ್ಮಾಭಿಜನವಾ೯, ಧರ್ಮ - ಧರ್ಮಪ್ರಧಾನವಾದ, ಅಭಿಜನವಾ೯ - ಸತ್ಕುಲಪ್ರಸೂತನಾದ, ಶುಚಿಃ - ಪರಿಶುದ್ಧವಾದ ಮನಸ್ಸುಳ್ಳ, ಭರತಃ - ಭರತನು, ತದ್ವಾಕ್ಯಂ - ಆ ಮಾತನ್ನು, ಶ್ರುತ್ವಾ - ಕೇಳಿ, ಪಿತೃಶೋಕಬಲಾರ್ದಿತಃ -

---

ನನ್ನ ತಾಯಿಯಾದ ನಿನ್ನ ಶಯ್ಯೆಯಲ್ಲಿಯೇ ಇರುತ್ತಿದ್ದನಲ್ಲವೆ ? ನಾನು ದಶರಥರಾಜನನ್ನು ನೋಡಲು ಬಂದೆ; ಆ ಮಹನೀಯನಿಲ್ಲಿ ಕಾಣಲೇಇಲ್ಲ ! ನನಗೀವಿಷಯವನ್ನು ಹೇಳು; ನಾನು ಬಹು ಜಾಗ್ರತೆಯಾಗಿ ನನ್ನ ತಂದೆಯ ಪಾದಕಮಲಗಳಿಗೆ ವಂದನೆಯಂಗೈಯ್ಯಬೇಕು. ಒಂದು ವೇಳೆ ನಮ್ಮ ತಂದೆಯು ಕೌಸಲ್ಯಾದೇವಿಯ ಅಂತಃಪುರದಲ್ಲಿದ್ದಾನೆಯೋ; ಹೇಗೆ? ” ಎಂಬೀಪ್ರಕಾರ ನುಡಿದ ಭರತನಮಾತುಗಳನ್ನು ಕೇಳಿದ ಕೈಕೇಯಿಯು, ರಾಜ್ಯಲೋಭದಿಂದ ಮೋಹಿತಳಾದುದರಿಂದಲೇ ಯಾವ ವಿಷಯವೂ ತಿಳಿಯದ ಭರತನಿಗೆ ಅನಿಷ್ಟವಾದ ಮಾತನ್ನು ಇಷ್ಟವೆಂದೇ ಭ್ರಮಿಸಿ ಇಂತೆಂದಳು. ॥ ೮-೧೪ ॥ “ ಎಲೈ ಮಗನೆ! ಮಹಾನುಭಾವನೂ, ತೇಜೋವಂತನೂ, ಯಾಯಜೂಕನೂ, ಸತ್ಪುರುಷರೆಲ್ಲರಿಗೂ ಗತಿಯೂ ಆಗಿದ್ದ ದಶರಥ ಭೂಪಾಲನು ಚರಾಚರಾತ್ಮಕವಾದ ಸಕಲ ಭೂತಗಳೂ ಹೊಂದುವಂತಹ ಗತಿಯನ್ನು ಹೊಂದಿದನು.” (ಮರಣವನ್ನು ಹೊಂದಿದನು.) ಧರ್ಮಬುದ್ಧಿಯುಳ್ಳವನೂ, ಉತ್ತಮ ವಂಶದಲ್ಲಿ ಜನಿಸಿದವನೂ, ಪರಿಶುದ್ಧನೂ ಆದ ಆ ಭರತನು ತನ್ನ ತಾಯಿಯು ಹೇಳಿದ ಕಠಿನ

ಹಾ! ಹತೋಸ್ಮೀತಿ ಕೃಪಣಾಂ ದೀನಾಂ ವಾಚ ಮುದೀರಯನ್ ॥ ನಿಪಪಾತ ಮಹಾಬಾಹು ರ್ಬಾಹೂ ವಿಕ್ಷಿಪ್ಯ ವೀರ್ಯವಾನ್ ॥ ೧೭ ॥ ತತ ಶ್ಶೋಕೇನ ಸಂವೀತಃ ಪಿತುರ್ಮರಣ ದುಃಖಿತಃ ॥ ವಿಲಲಾಪ ಮಹಾತೇಜಾ ಭ್ರಾಂತಾಕುಲಿತ ಚೇತನಃ ॥ ೧೮ ॥ ಏತಚ್ಛ್ಮ ರುಚಿರಂ ಭಾತಿ ಪಿತುರ್ಮೇ ಶಯನಂ ಪುರಾ॥ ಶಶಿನೇವಾಮಲಂ ರಾತ್ರೌ ಗಗನಂ ತೋಯದಾತ್ಯಯೇ ॥ ೧೯ ॥ ತದಿದಂ ನವಿಭಾತ್ಯದ್ಯ ವಿಹೀನಂ ತೇನ ಧೀಮತಾ ॥ ವ್ಯೋಮೇವ ಶಶಿನಾ ಹೀನ ಮಪ್

ತಂದೆಯ ವಿಷಯವಾದ ವ್ಯಸನಾಧಿಕ್ಯದಿಂದ ಬಾಧಿತನಾಗಿ, ಸಹಸಾ - ಬೇಗನೆ, ಭೂಮೌ - ನೆಲದಲ್ಲಿ, ಪಪಾತ - ಬಿದ್ದನು. ॥ ೧೬ ॥ ಹಾ - ಕಷ್ಟವು, ಹತಃ - ಕೆಟ್ಟುಹೋದವನು, ಅಸ್ಮೀತಿ - ಆದೆನೆಂದು, ಕೃಪಣಾಂ - ಕಾರ್ಪಣ್ಯವುಳ್ಳ, ದೀನಾಂ - ಪರಿತಾಪಕರವಾದ, ವಾಚಂ - ಮಾತನ್ನು, ಉದೀರಯನ್ - ಹೇಳುತ್ತಿರುವ, ವೀರ್ಯವಾನ್ - ಸಾಮರ್ಥ್ಯವಂತನಾದ, ಮಹಾಬಾಹುಃ - ಮಹಾ ಭುಜ ಬಲಪರಾಕ್ರಮಿಯಾದ ಭರತನು, ಬಾಹೂ - ಭುಜಗಳನ್ನು, ವಿಕ್ಷಿಪ್ಯ - ಮೇಲಕ್ಕೆತ್ತಿ, ನಿಪಪಾತ - ಬಿದ್ದನು. ॥ ೧೭ ॥ ತತಃ - ಬಳಿಕ, ಶೋಕೇನ - ದುಃಖದಿಂದ, ಸಂವೀತಃ - ಕೂಡಿ, ಪಿತುಃ - ತಂದೆಯ, ಮರಣದುಃಖಿತಃ - ಮರಣದಿಂದ ದುಃಖಾಕ್ರಾಂತನಾದ, ಮಹಾತೇಜಾಃ - ಮಹಾ ಪರಾಕ್ರಮಶಾಲಿಯಾದ ಆ ಭರತನು, ಭ್ರಾಂತಾಕುಲಿತಃ - ಕಳವಳದಿಂದ ವ್ಯಾಕುಲವಾದ, ಚೇತನಃ - ಬುದ್ಧಿಯುಳ್ಳವನಾಗಿ, ವಿಲಲಾಪ - ರೋದಿಸಿದನು ॥ ೧೮ ॥ ಪುರಾ - ಪೂರ್ವದಲ್ಲಿ, ಮೇ - ನನ್ನ, ಪಿತುಃ - ತಂದೆಯ, ರುಚಿರಂ - ಮನೋಹರವಾದ, ಏತಚ್ಛಯನಂ - ಈ ಹಾಸಿಗೆಯು, ರಾತ್ರೌ - ರಾತ್ರಿಯಲ್ಲಿ, ಶಶಿನಾ - ಶರತ್ಕಾಲೀನನಾದ ಚಂದ್ರನಿಂದ, ತೋಯದಾತ್ಯಯೇ - ಶರದೃತುವಿನಲ್ಲಿ, ಅಮಲಂ - ನಿರ್ಮಲವಾದ, ಗಗನಮಿವ - ಅಂತರಿಕ್ಷದಂತೆ, ಭಾತಿಸ್ಮ - ಹೊಳೆಯುತಿದ್ದಿತಷ್ಟೆ. ॥ ೧೯ ॥ ಅದ್ಯ - ಈಗ, ಧೀಮತಾ - ಜ್ಞಾನನಿಷ್ಠನಾದ, ತೇನ - ಆ ತಂದೆಯಿಂದ, ವಿಹೀನಂ - ರಹಿತವಾದ, ತದಿದಂ - ಅಂತಹ ಈ ಹಾಸಿಗೆಯು, ಶಶಿನಾ - ಚಂದ್ರನಿಂದ, ಹೀನಂ - ಶೂನ್ಯವಾದ, ವ್ಯೋಮೇವ - ಅಂತರಿಕ್ಷದಂತೆ, ಅಪ್ಪುಷ್ಕಃ - ಬತ್ತಿಹೋದ ನೀರುಳ್ಳ, ಸಾಗರಇವ - ಕಡಲಿನಂತೆ,

---

ವಾಕ್ಯವನ್ನು ಕೇಳಿ ತಂದೆಯ ಮರಣದಿಂದುಂಟಾದ ದುಃಖವನ್ನು ಸಹಿಸಲಾರದೆ ತಕ್ಷಣದಲ್ಲಿಯೇ ಕೆಳಕ್ಕೆಬಿದ್ದು ಮೂರ್ಛೆಯೊಂದಿದನು. ಸ್ವಲ್ಪಹೊತ್ತಿನ ಬಳಿಕ ಎಚ್ಚೆತ್ತು, ಮಹಾಬಾಹುವೂ, ಸರ್ವೋತ್ಕೃಷ್ಟವಾದ ಪರಾಕ್ರಮವೂವುಳ್ಳ ಆ ಭರತನು, "ಅಯ್ಯೋ! ನಾನು ಹತನಾದೆನಲ್ಲವೆ?" ಎಂದನು. ಇಷ್ಟೆಯಲ್ಲದೆ ದೀನವಾದ ಮಾತುಗಳನ್ನಾಡುತ್ತ "ಅಯ್ಯೊ" ಎಂದು ಕೈಗಳನ್ನು ಮೇಲಕ್ಕೆತ್ತಿ "ತಂದೆಯೆ!" ಎಂದು ಅಳುತ್ತ ನೆಲಕ್ಕೆಬಿದ್ದು ಪುನಃ ಮೂರ್ಛೆಯಾಂತನು. ಆ ಬಳಿಕ ಮಹಾಕಾಂತಿವಂತನಾದಾ ಭರತನು, ಪಿತೃಮರಣದಿಂದಾಚ್ಛಾದಿತವಾದ ಕಾಂತಿಯುಳ್ಳವನಾಗಿ, ಅದೇ ಪಿತೃಮರಣದಿಂದಲೇ ಪೀಡಿತನೂ, ಭ್ರಾಂತಮನಸ್ಕನೂ ಆಗಿ ಬಹಳವಾಗಿ ರೋದಿಸುತ್ತ ಈರೀತಿ ಹೇಳಿದನು. ॥ ೧೫-೧೮ ॥ "ಅಯ್ಯೊ! ನನ್ನ ತಾಯಿಯ ಶಯ್ಯೆಯಮೇಲೆ ಮಲಗಿಕೊಳ್ಳುತ್ತಿದ್ದ ನಮ್ಮ ತಂದೆಯಾದ ದಶರಥಭೂವಲ್ಲಭನು, ಶರತ್ಕಾಲದ ರಾತ್ರಿಯಲ್ಲಿ ಚಂದ್ರನು ಪ್ರಕಾಶಿಸುವಂತೆ ಪ್ರಕಾಶಿಸುತ್ತಿ

ಛುಷ್ಕ ಇವ ಸಾಗರಃ ॥ ೨೦ ॥ ಬಾಷ್ಪಮುತ್ಸೃಜ್ಯ ಕಂಠೇನ ಸ್ವಾರ್ತಃ ಪರಮ
ಪೀಡಿತಃ ॥ ಪ್ರಚ್ಛಾದ್ಯ ವದನಂ ಶ್ರೀಮಾನ್ವಸ್ತ್ರೇಣ ಜಯತಾಂವರಃ ॥ ೨೧ ॥
ತಮಾರ್ತಂ ದೇವಸಂಕಾಶಂ ಸಮೀಕ್ಷ್ಯ ಪತಿತಂ ಭುವಿ ॥ ನಿಕೃತ್ತಮಿವ ಸಾಲಸ್ಯ
ಸ್ಕಂಧಂ ಪರಶುನಾ ವನೇ ॥ ೨೨ ॥ ಮತ್ತಮಾತಂಗ ಸಂಕಾಶಂ ಚಂದ್ರಾರ್ಕ
ಸದೃಶಂ ಭುವಃ ॥ ಉತ್ಥಾಪಯಿತ್ವಾ ಶೋಕಾರ್ತಂ ವಚನಂ ಚೇದ ಮಬ್ರವೀತ್
॥೨೩॥ ಉತ್ತಿಷ್ಠೋತ್ತಿಷ್ಠ ಕಿಂ ಶೇಷೇ ರಾಜಪುತ್ರ! ಮಹಾಯಶಃ! ॥ ತ್ವದ್ವಿಧಾ

ನವಿಭಾತಿ - ಪ್ರಕಾಶಿಸುವದಿಲ್ಲ. ॥ ೨೦ ॥ ಜಯತಾಂವರಃ - ಜಯಶೀಲರಲ್ಲಿ ಶ್ರೇಷ್ಠನಾದ ಭರತನು, ವಸ್ತ್ರೇಣ - ವಸ್ತ್ರದಿಂದ, ಶ್ರೀಮತ್ - ಕಾಂತಿಯುಕ್ತವಾದ, ವದನಂ - ಮುಖವನ್ನು, ಪ್ರಚ್ಛಾದ್ಯ - ಮುಚ್ಚಿಕೊಂಡು, ಬಾಷ್ಪಂ - ಕಂಬನಿಯನ್ನು, ಉತ್ಸೃಜ್ಯ - ಬಿಟ್ಟು, ಕಂಠೇನ - ಕಂಠದಿಂದ, ಸ್ವಾರ್ತಃ - ಗದ್ಗದಧ್ವನಿಯುಳ್ಳವನಾಗಿ, ಪರಮಪೀಡಿತಃ - ಬಹಳ ವ್ಯಸನಗೊಂಡವನಾದನು. ॥೨೧॥ ದೇವಸಂಕಾಶಂ - ದೇವತೆಗಳಿಗೆ ಸಮಾನನಾದ, ವನೇ - ಅರಣ್ಯದಲ್ಲಿ, ಪರಶುನಾ - ಕೊಡಲಿಯಿಂದ, ನಿಕೃತ್ತಂ - ಕತ್ತರಿಸಿದ, ಸಾಲಸ್ಯ - ಮದ್ದೀಮರದ, ಸ್ಕಂಧಮಿವ - ಟೊಂಗೆಯಂತೆ, ಭುವಿ - ನೆಲದಲ್ಲಿ, ಪತಿತಂ - ಬಿದ್ದಿರುವ, ಆರ್ತಂ - ದೀನನಾದ, ಮತ್ತಮಾತಂಗಸಂಕಾಶಂ - ಮದಿಸಿದ ಗಜಕ್ಕೆ ಸಮಾನನಾದ, ಚಂದ್ರಾರ್ಕಸದೃಶಂ - ಸೂರ್ಯಚಂದ್ರರಿಗೆ ಸಮಾನವಾದ ಕಾಂತಿಯುಳ್ಳ, ತಂ - ಆ ಭರತನನ್ನು, ಸಮೀಕ್ಷ್ಯ - ಕಂಡು, ಭುವಃ - ನೆಲದಿಂದ, ಉತ್ಥಾಪಯಿತ್ವಾ - ಮೇಲಕ್ಕೆಬ್ಬಿಸಿ, ಶೋಕಾರ್ತಂ - ಖತಿಯಿಂದಳುತ್ತಿರುವ ಭರತನನ್ನು ಕುರಿತು, ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದಳು. ॥ ೨೩ ॥ ಹೇ ರಾಜಪುತ್ರ - ಎಲೈ ಅರಸುಗುವರನೇ, ಹೇ ಮಹಾಯಶಾಃ - ಎಲೈ ಮಹಾ ಕೀರ್ತಿವಂತನೇ! ಕಿಂಶೇತೇ - ಏತಕ್ಕೆ ಮಲಗಿರುವೆ, ಉತ್ತಿಷ್ಠೋತ್ತಿಷ್ಠ - ಏಳೇಳು,

ದ್ದನು ! ಅಂತಹ ನನ್ನ ತಂದೆಯು ಈಗಲೀ ಶಯ್ಯೆಯಲ್ಲಿಲ್ಲದಿರುವುದರಿಂದ ಇದು ಚಂದ್ರ ವಿಹೀನವಾದ ಶರತ್ಕಾಲದ ರಾತ್ರಿಯಂತೆ ನಿಸ್ತೇಜಸ್ಕವಾಗಿರುವುದು ! ಜಲವಿಲ್ಲದ ಕಡಲಿನಂತೆಯೂ, ಚಂದ್ರನಿಲ್ಲದ ಆಕಾಶದಂತೆಯೂ ಪ್ರಕಾಶಹೀನವಾದ ಈ ಶಯ್ಯೆಯು ಶೋಭಿಸುತ್ತಿಲ್ಲ !" ಎಂದೀರೀತಿ ರೋದಿಸಿ ಆಮೇಲೆಯೂ, ಅಧಿಕವಾದ ದುಃಖದಿಂದ ಭಾಧಿತನಾದವನೂ, ಜಯಶಾಲಿಗಳಲ್ಲಿ ಉತ್ತಮನೂ ಆದ ಆ ಭರತನು ಗದ್ಗದಸ್ವರದಿಂದ ಕಣ್ಣೀರಿಟ್ಟು, ಮಹಾ ಕಾಂತಿಯುಕ್ತವಾದ ತನ್ನ ಮುಖದಮೇಲೆ ಬಟ್ಟೆಯನ್ನಿಟ್ಟುಕೊಂಡು ಗೊಳಗೊಳನೆ ದುಃಖಿಸಿದನು. ಆರೀತಿ ದುಃಖವನ್ನು ಹೊಂದುತ್ತಿರುವವನೂ, ದೇವತೆಗಳಿಗೆ ಸಮಾನನಾದವನೂ, ನೆಲದಲ್ಲಿ ಬಿದ್ದಿರುವವನೂ, ಅರಣ್ಯದಲ್ಲಿ ಕೊಡಲಿಯಿಂದ ಕತ್ತರಿಸಿದ ಮದ್ದೀಮರದ ರೆಂಬೆಯಂತಿರುವವನೂ, ಮದಿಸಿದಾನೆಯಂತೆ ರಾರಾಜಿಸುತ್ತಿರುವವನೂ, ಚಂದ್ರಸೂರ್ಯರಿಗೆ ಸಮಾನವಾದವನೂ, ಶೋಕಪೀಡಿತನೂ ಆದ ಆ ಭರತನನ್ನು ಆ ಕೈಕೇಯಿಯು ಮೇಲಕ್ಕೆಬ್ಬಿಸಿ, "ಎಲೈ ಮಹಾ ಕೀರ್ತಿವಂತನೂ, ರಾಜಪುತ್ರನೂ ಆದ ಭರತನೆ! ಏಳೇಳು; ಏತಕ್ಕೆ ಮಲಗಿರುವೆ ? ಸಭಾಪೂಜ್ಯರಾದ ನಿನ್ನಂತಹ ಸತ್ಪುರುಷರು ಈರೀತಿಯಾಗಿ ದುಃಖಪಡುವುದಿಲ್ಲ. ಮಹಾ ಬುದ್ಧಿಶಾಲಿಯಾದ ಎಲೈ ಭರತಕುಮಾರನೆ ! ದಾನಯಜ್ಞಾದಿ

ನಹಿ ಶೋಚಂತಿ ಸಂತಸ್ಸದಸಿ ಸಮ್ಮತಾಃ ॥ ೨೪ ॥ ದಾನ ಯಜ್ಞಾಧಿಕಾರಾಹಿ ಶೀಲಶ್ರುತಿ ತಪೋನುಗಾ ॥ ಬುದ್ಧಿಸ್ತೇ ಬುದ್ಧಿ ಸಂಪನ್ನ ! ಪ್ರಭೇವಾರ್ಕಸ್ಯ ಮಂದರೇ ॥ ೨೫ ॥ ಸ ರುದಿತ್ವಾ ಚಿರಂ ಕಾಲಂ ಭೂಮೌ ವಿಪರಿವೃತ್ಯಚ ॥ ಜನನೀಂ ಪ್ರತ್ಯುವಾಚೇದಂ ಶೋಕೈರ್ಬಹುಭಿರಾವೃತಃ ॥ ೨೬ ॥ ಅಭಿಷೇಕ್ಷ್ಯತಿ ರಾಮಂ ನು ರಾಜಾ ಯಜ್ಞಂ ನು ಯಕ್ಷ್ಯತೇ ॥ ಇತ್ಯಹಂ ಕೃತಸಂಕಲ್ಪೋ ಹೃಷ್ಟೋ ಯಾತ್ರಾಮಯಾಸಿಷಂ ॥ ೨೭ ॥ ತದಿದಂ ಹ್ಯನ್ಯಥಾಭೂತಂ ವ್ಯವದೀರ್ಣಂ ಮನೋ ಮಮ ॥ ಪಿತರಂ ಯೋ ನಪಶ್ಯಾಮಿ ನಿತ್ಯಂ

ತ್ವದ್ವಿಧಾಃ - ನಿನ್ನಂತಹರು, ಸದಸಿ - ಸಭೆಯಲ್ಲಿ, ಸಮ್ಮತಾಃ - ಸಮ್ಮತರಾದ, ಸಂತಃ - ಸತ್ಪುರುಷರು, ನಶೋಚಂತಿ - ಅಳುವದಿಲ್ಲವಷ್ಟೆ. ॥ ೨೪ ॥ ಹೇ ಬುದ್ಧಿಸಂಪನ್ನ - ಎಲೈ ಬುದ್ಧಿಶಾಲಿಯೆ, ದಾನಯಜ್ಞಾಧಿಕಾರಾ - ದಾನದಲ್ಲಿಯೂ ಕ್ರತುಗಳಲ್ಲಿಯೂ ಅಧಿಷ್ಠಿತವಾದ, ಶೀಲಶ್ರುತಿತಪೋನುಗಾ - ಸತ್ಸ್ವಭಾವವನ್ನೂ ವೇದಶಾಸ್ತ್ರಗಳನ್ನೂ ತಪಸನ್ನೂ ಅನುಸರಿಸಿ ಹೋಗುತ್ತಿರುವ, ತೇ-ನಿನ್ನ, ಬುದ್ಧಿಃ-ಬುದ್ಧಿಯು, ಮಂದರೇ-ಮಂದರಪರ್ವತದಲ್ಲಿ, ಅರ್ಕಸ್ಯ-ಸೂರ್ಯನ, ಪ್ರಭೇವ-ಕಾಂತಿಯಂತೆ, ಭಾತಿ-ಹೊಳೆಯುತ್ತಿದೆ, (ಇತಿ-ಇಂತೆಂದು, ಅಬ್ರವೀತ್-ನುಡಿದಳು.) ॥ ೨೫ ॥ ಸಃ-ಆ ಭರತನು, ಸುಚಿರಂ-ಬಹುಕಾಲವು, ರುದಿತ್ವಾ-ರೋದನವಮಾಡಿ, ಭೂಮೌ-ನೆಲದಲ್ಲಿ, ಪರಿವೃತ್ಯಚ-ಹೊರಳಾಡಿ, ಬಹುಭಿಃ-ಅನೇಕ ಬಗೆಗಳಾದ, ಶೋಕೈಃ - ವ್ಯಸನಗಳಿಂದ, ಆವೃತಃ - ಸುತ್ತಲ್ಪಟ್ಟವನಾಗಿ, ಜನನೀಂ - ತಾಯಿಯಾದ ಕೈಕೇಯಿಯನ್ನು ಕುರಿತು, ಇದಂ - ಈ ಮುಂದೆ ಹೇಳತಕ್ಕ ಮಾತುಗಳನ್ನು, ಅಬ್ರವೀತ್ - ನುಡಿದನು. ॥ ೨೬ ॥ ರಾಜಾ - ದಶರಥರಾಯನು, ರಾಮಂನು - ಶ್ರೀರಾಮನನ್ನಾದರೆ, ಅಭಿಷೇಕ್ಷ್ಯತಿ - ಅಭಿಷೇಕವಮಾಡುವನು, ಯಜ್ಞಂನು - ಯಾಗವನ್ನು, ಯಕ್ಷ್ಯತೇ - ಮಾಡುವನು, ಇತಿ - ಈಪರಿಯಾಗಿ, ಕೃತಸಂಕಲ್ಪಃ - ಮಾಡಲ್ಪಟ್ಟ ಮನೋರಥವುಳ್ಳ, ಅಹಂ - ನಾನು, ಹೃಷ್ಟಃ-ಸಂತೋಷಗೊಂಡವನಾಗಿ, ಯಾತ್ರಾಂ - ಪ್ರಯಾಣವನ್ನು, ಅಯಾಸಿಷಂ - ಮಾಡಿದೆನು. ॥ ೨೭ ॥ ತದಿದಂ - ಆ ಈ ಕಾರ್ಯವು, ಅನ್ಯಥಾಭೂತ್ - ಮತ್ತೊಂದು ಬಗೆಯಾಯಿತು, ಮಮ - ನನ್ನ, ಮನಃ -

ಕಾರ್ಯಗಳುಳ್ಳುದೂ, ಸತ್ಸ್ವಭಾವ, ವೇದವಾಕ್ಯಗಳನ್ನು ಅನುಸರಿಸಿರುವುದೂ ಆದ ನಿನ್ನ ಬುದ್ಧಿಯು ಮಂದರಪರ್ವತದಲ್ಲಿ ಸೂರ್ಯನ ಕಾಂತಿಯಂತೆ ಎಲ್ಲ ಕಾಲಗಳಲ್ಲಿಯೂ ಪ್ರಕಾಶಿಸುತ್ತಿರುವುದು. ಇಂತಹ ಬುದ್ಧಿವಂತನಾದ ನೀನು ಈರೀತಿಯಾಗಿ ದುಃಖಿಸುವುದು ಉಚಿತವಲ್ಲ; ಈ ದುಃಖವನ್ನು ತೊರೆ" ಎಂದು ಹೇಳಿದಳು. ॥ ೧೯-೨೫ ॥ ತಾಯಿಯಾದ ಕೈಕೇಯಿಯು ಹೀಗೆ ಹೇಳುತ್ತಿದ್ದರೂ ಆ ಭರತನು ಬಹಳಹೊತ್ತು ನೆಲದಲ್ಲಿ ಬಿದ್ದು ಹೊರಳಿಹೊರಳಿ ಅಳುತ್ತ, ಅನೇಕ ವಿಧವಾದ ವ್ಯಸನಗಳುಳ್ಳವನಾಗಿ ಆ ಕೈಕೇಯಿಯೊಡನಿಂತೆಂದನು. "ಅಮ್ಮಾ ಕೈಕೇಯಿಯೆ! ನನ್ನನ್ನು ಕರೆಯಿಸುವುದರಿಂದ ದಶರಥಭೂಪಾಲನು ರಾಮನಿಗೆ ರಾಜ್ಯಾಭಿಷೇಕವನ್ನೋ, ಯಾವುದಾದರೂ ಒಂದು ಯಜ್ಞವನ್ನೋ ಮಾಡುತ್ತಾನೆಯೆಂದು ತಿಳಿದಿದ್ದೆ ! ಅಂತಹ ಅಭಿಪ್ರಾಯವು ಕೂಡಲೇ ಮನವರಿಕೆಯಾದುದರಿಂದ ನಾನು, ಬಹು ಜಾಗ್ರತೆಯಾಗಿ ಮಹಾ ಸಂತೋಷದಿಂದಿಲ್ಲಿಗೆ ಬಂದೆನು. ಅಂತಹ ನನ್ನ ಅಭಿಪ್ರಾ

ಪ್ರಿಯಹಿತೇ ರತಂ ॥ ೨೮ ॥ ಅಂಬ! ಕೇನಾತ್ಯಗಾ ದ್ರಾಜಾ ವ್ಯಾಧಿನಾ ಮಯ್ಯ
ನಾಗತೇ?॥ಧನ್ಯಾ ರಾಮಾದಯ ಸ್ಸರ್ವೇ ಯೈಃ ಪಿತಾ ಸಂಸ್ಕೃತ ಸ್ಸ್ವಯಂ॥೨೯॥
ನನೂನಂ ಮಾಂ ಮಹಾರಾಜಃ ಪ್ರಾಪ್ತಂ ಜಾನಾತಿ ಕೀರ್ತಿಮಾ೯ ॥ ಉಪಜಿಘ್ರ
ದಿಮಾಂ ಮೂರ್ಧ್ನಿ ತಾತ ಸ್ಸನ್ನಮ್ಯ ಸತ್ವರಂ ॥ ೩೦ ॥ ಕ್ವಸಪಾಣಿ ಸ್ಸುಖಸ್ಪರ್ಶ
ಸ್ತಾತಾಸೌ ಕ್ಲಿಷ್ಟಕರ್ಮಣಃ?॥ಯೇನ ಮಾಂ ರಜಸಾಧ್ವಸ್ತ ಮಭೀಕ್ಷ್ಣಂ ಪರಿಮಾ
ರ್ಜತಿ ॥ ೩೧ ॥ ಯೋ ಮೇ ಭ್ರಾತಾ ಪಿತಾ ಬಂಧು ರ್ಯಸ್ಯ ದಾಸೋಸ್ಮಿ

ಮನವು, ವ್ಯದೀರ್ಣಂ - ಒಡೆದುಹೋಯಿತು, ಯಃ - ಯಾವ ನಾನು, ನಿತ್ಯಂ - ನಿರಂತರವು, ಪ್ರಿಯಹಿತೇ - ಇಷ್ಟವಾದ ಕಾರ್ಯದಲ್ಲಿ, ನಿರತಂ-ಆಸಕ್ತನಾದ, ಪಿತರಂ-ತಂದೆಯನ್ನು, ನಪಶ್ಯಾಮಿ, ಕಾಣೆನೊ. ॥ ೨೮ ॥ ಹೇ ಅಂಬ - ಎಲೌ ತಾಯಿಯೇ, ರಾಜಾ - ಅರಸು, ಮಯಿ - ನಾನು, ಅನಾಗತೇ - ಬಾರನಿರುವನಾಗಲಾಗಿ, ಕೇನ - ಯಾವ, ವ್ಯಾಧಿನಾ - ರೋಗದಿಂದ, ಅತ್ಯಗಾತ್ - ಮೃತನಾದನೋ, ಯೈಃ - ಯಾವ ರಾಮಾದಿಗಳಿಂದ, ಪಿತಾ - ತಂದೆಯು, ಸ್ವಯಂ - ತಾನು, ಸಂಸ್ಕೃತಃ - ಸಂಸ್ಕಾರಮಾಡಲಾದನೋ, ತೇ ರಾಮಾದಯಃ - ಅಂತಹ ರಾಮನೇ ಮೊದಲಾದ, ಸರ್ವೇ - ಸಮಸ್ತರೂ, ಧನ್ಯಾಃ-ಧನ್ಯರಾದವರು. ॥ ೨೯ ॥ ಕೀರ್ತಿಮಾ೯ - ಯಶೋವಂತನಾದ-ಮಹಾರಾಜಃ - ದಶರಥರಾಯನು, ಮಾಂ - ನನ್ನನ್ನು, ಆಗತಂ - ಬಂದವನನ್ನಾಗಿ, ನಜಾನಾತಿ - ತಿಳಿಯಲಾರನು, ನೂನಂ - ನಿಶ್ಚಯವು, ತಾತಃ - ತಂದೆಯು, ಸನ್ನಮ್ಯ - ಬೊಗ್ಗಿಸಿ, ಸತ್ವರಂ - ಜಾಗ್ರತೆಯಾಗಿ, ಮೂರ್ಧ್ನಿ - ಮಂಡೆಯಲ್ಲಿ, ಮಾಂ - ನನ್ನನ್ನು, ಉಪಜಿಘ್ರುದ್ಧಿ - ಆಘ್ರಾಣಮಾಡುತಿದ್ದನಷ್ಟೆ. ॥ ೩೦ ॥ ಯೇನ - ಯಾವ ಹಸ್ತದಿಂದ, ರಜಸಾ - ಧೂಳಿಯಿಂದ, ಅಭೀಕ್ಷ್ಣಂ - ಬಹಳವಾಗಿ, ಧ್ವಸ್ತಂ - ಮಲಿನಶರೀರವುಳ್ಳ, ಮಾಂ - ನನ್ನನ್ನು, ಪರಿಮಾರ್ಜತಿ - ಒರಿಸುವನೋ, ಅಕ್ಲಿಷ್ಟಕರ್ಮಣಃ - ಕ್ಲೇಶವಿಲ್ಲದೆ ಕಾರ್ಯವನ್ನು ಮಾಡುವ, ತಾತಸ್ಯ - ತಂದೆಯ, ಸುಖಸ್ಪರ್ಶಃ - ಸುಖಕರವಾದ ಸ್ಪರ್ಶೆಯುಳ್ಳ, ಸಪಾಣಿಃ - ಆ ಹಸ್ತವು, ಕ್ವ - ಎಲ್ಲಿಹೋಯಿತೋ. ॥ ೩೧ ॥

ಯವು ಈಗ ಈರೀತಿಯಾಗಿ ವ್ಯತ್ಯಾಸವನ್ನು ಹೊಂದಿತು. ಎಲ್ಲ ಕಾಲಗಳಲ್ಲಿಯೂ, ನನಗೆ ಹಿತಗಳೂ, ಪ್ರಿಯಗಳೂ ಆದ ಕಾರ್ಯಗಳನ್ನು ಮಾಡುತ್ತಿದ್ದ ನನ್ನ ತಂದೆಯನ್ನು ನೋಡದೆ ಹೋಗಿರುವುದರಿಂದ ನನ್ನ ಮನಸ್ಸು ಬಿರಿದುಹೋಗುತ್ತಿದೆ; ಅಯ್ಯೋ ! ನಾನೇನುಮಾಡಲಿ; ಜನನೀ! ನಾನಿಲ್ಲಿಲ್ಲದ ವೇಳೆಯಲ್ಲಿ ನಮ್ಮ ತಂದೆಯು ಮರಣವನ್ನು ಹೊಂದಿದನಲ್ಲವೆ? ಯಾವ ವ್ಯಾಧಿಯಿಂದ ಪೀಡಿತನಾಗಿ ಮೃತ್ಯುದೇವತೆಯ ಪಾಲಾದನೊ ? ತಂದೆಯಾದ ದಶರಥರಾಯನ ಪರಲೋಕ ಕ್ರಿಯೆಗಳನ್ನು ನೆರವೇರಿಸಿದ ಶ್ರೀರಾಮನೇ ಮೊದಲಾದವರು ಎಷ್ಟು ಸುಕೃತಶಾಲಿಗಳೊ? ಅಯ್ಯೋ ! ನಾನೂ ಸಹ ನಮ್ಮ ತಂದೆಯಾದ ದಶರಥ ಮಹೀಪಾಲನಿಗೆ ನನ್ನ ಕೈಯಾರ ಪಾರಲೌಕಿಕ ಕ್ರಿಯೆಗಳನ್ನು ಮಾಡುತ್ತಿದ್ದೆನು. ಅದು ನನ್ನ ಭಾಗಕ್ಕಿಲ್ಲವಾಯಿತು! ಅಹಹ ! ನಾನಿಲ್ಲಿಗೆ ಬಂದ ಸಂಗತಿಯು ನಮ್ಮ ತಂದೆಯು ತಿಳಿಯಲಿಲ್ಲವಲ್ಲವೆ? ನಾನಿಲ್ಲಿಗೆ ಬಂದ ಸಂಗತಿಯನ್ನು ನಮ್ಮ ತಂದೆಯು ತಿಳಿದುಕೊಂಡವನೇ ಆಗಿದ್ದರೆ ಆತನು ನನ್ನಶಿರವನ್ನಾಘ್ರಣಿಸುತ್ತಿದ್ದನಲ್ಲವೆ ? ನಮ್ಮತಂದೆಯು ಬಹುದೂರದಿಂದ ಬಳಲಿ ಬೆಂಡಾಗಿ

ಧೀಮತಃ ॥ ತಸ್ಯ ಮಾಂ ಶೀಘ್ರಮಾಖ್ಯಾಹಿ ರಾಮಸ್ಯಾ ಕ್ಲಿಷ್ಟಕರ್ಮಣಃ॥೩೨॥
ಪಿತಾಹಿ ಭವತಿ ಜ್ಯೇಷ್ಠೋ ಧರ್ಮಮಾರ್ಯಸ್ಯ ಜಾನತಃ ॥ ತಸ್ಯಪಾದೌ ಗೃಹೀ
ಷ್ಯಾಮಿ ಸಹೀದಾನೀಂ ಗತಿರ್ಮಮ ॥ ೩೩ ॥ ಧರ್ಮವಿದ್ಧರ್ಮನಿತ್ಯಶ್ಚ ಸತ್ಯ
ಸಂಧೋ ದೃಢವ್ರತಃ॥ಆರ್ಯಃ ಕಿಮಬ್ರವೀ ದ್ರಾಜಾ ಪಿತಾ ಮೇ ಸತ್ಯವಿಕ್ರಮಃ
॥ ೩೪ ॥ ಪಶ್ಚಿಮಂ ಸಾಧು ಸಂದೇಶಮಿಚ್ಛಾಮಿ ಶ್ರೋತು ಮಾತ್ಮನಃ ॥

ಯಃ - ಯಾವ ಶ್ರೀರಾಮನು, ಮೇ - ನನಗೆ, ಭ್ರಾತಾ - ಅಣ್ಣನೂ, ಪಿತಾ - ತಂದೆಯೂ, ಬಂಧುಃ - ಬಂಧುವೂ, ಅಭೂತ್ - ಆಗಿರುವನೋ, ಧೀಮತಃ - ಬುದ್ಧಿಶಾಲಿಯಾದ, ಯಸ್ಯ - ಯಾವ ಶ್ರೀರಾಮನಿಗೆ, ದಾಸಃ - ಭೃತ್ಯನು, ಅಸ್ಮಿ - ಆಗಿರುವನೋ, ಅಕ್ಲಿಷ್ಟಕಾರಿಣಃ ಕ್ಲೇಶವಿಲ್ಲದೆ ಕಾರ್ಯ ವನ್ನು ನಡೆಯಿಸುತ್ತಿರುವ, ರಾಮಸ್ಯ - ಮನೋಹರನಾದ, ತಸ್ಯ - ಆ ಶ್ರೀರಾಮನಿಗೆ, ಮಾಂ - ನನ್ನನ್ನು, ಶೀಘ್ರಂ - ಜಾಗ್ರತೆಯಾಗಿ, ಆಖ್ಯಾಹಿ - ಹೇಳು: ॥ ೩೨ ॥ ಹಿ - ಯಾವ ಕಾರಣ, ಜ್ಯೇಷ್ಠಃ - ದೊಡ್ಡಮಗನು, ಪಿತಾ - ತಂದೆಯು, ಭವತಿ - ಆಗುವನೋ, ಜಾನತಃ - ತಿಳಿದಿರುವ, ಆರ್ಯಸ್ಯ - ಪೂಜ್ಯನಾದ, ತಸ್ಯ - ಆ ಶ್ರೀರಾಮನ, ಪಾದೌ - ಚರಣಗಳನ್ನು, ಗೃಹೀಷ್ಯಾಮಿ-ಹಿಡಿದು ಕೊಳ್ಳುವೆನು, ಸಃ - ಆ ಶ್ರೀರಾಮನು, ಇದಾನೀಂ - ಈಗ, ಮಮ - ನನಗೆ, ಗತಿರ್ಹಿ - ಶರಣವಷ್ಟೆ. ॥ ೩೩ ॥ ಧರ್ಮವಿತ್ - ಧರ್ಮವೇತ್ತನಾದ, ಧರ್ಮನಿತ್ಯಃ - ಧರ್ಮದಲ್ಲಿಯೇ ಸ್ಥಿರವಾದ ಬುದ್ಧಿ ಯುಳ್ಳ, ಸತ್ಯಸಂಧಃ - ಸತ್ಯ ಪ್ರತಿಜ್ಞಾವಂತನಾದ, ದೃಢವ್ರತಃ - ದೃಢಪ್ರತಿಜ್ಞೆಯುಳ್ಳ, ಆರ್ಯಃ - ಪೂಜ್ಯನಾದ, ಸತ್ಯವಿಕ್ರಮಃ - ಸಫಲವಾದ ಪರಾಕ್ರಮವುಳ್ಳ, ಮೇ - ನನ್ನ, ಪಿತಾ - ತಂದೆಯಾದ, ರಾಜಾ - ಅರಸು, ಕಿಂ - ಯಾವದನ್ನು, ಅಬ್ರವೀತ್ - ನುಡಿದನು. ॥ ೩೪ ॥ ಪಶ್ಚಿಮಂ - ಕಡೆಯದಾದ, ಆತ್ಮನಃ - ನನ್ನ ವಿಷಯವಾದ, ಸಂದೇಶಂ - ತಂದೆಯ ಆಜ್ಞಾವಚನವನ್ನು,

---

ಬಂದ ನನ್ನ ಶರೀರದ ಮೇಲಿನ ಧೂಳನ್ನು ಮೊದಲು ಕೊಡಹ ತಿದ್ದನು ! ಎಂತಹ ಅಸಾಧ್ಯ ವಾದ ಕೆಲಸವನ್ನಾದರೂ ಬಹು ಸುಲಭವಾಗಿ ಮಾಡುತ್ತಿದ್ದ ಆ ನನ್ನ ತಂದೆಯಾದ ದಶರಥ ರಾಜನ ಹಸ್ತವು ಸುಖಸ್ಪರ್ಶವುಳ್ಳದಾಗಿದ್ದಿತು ! ಅಂತಹ ಹಸ್ತವೀಗೆಲ್ಲಿರುವುದು! ನನಗಾ ವನು ಅಣ್ಣನು, ತಂದೆಯೂ, ಬಂಧುವೂ ಆಗಿದ್ದನೊ ? ಮತ್ತಾವನಿಗೆ ನಾನು ಅಡಿಯಾಳಾಗಿ ದ್ದೆನೊ ಅಂತಹ ಶ್ರೀರಾಮ ಮೂರ್ತಿಯು ಈಗ ಎಲ್ಲಿರುವನು ? ನನ್ನ ದುಃಖವೆಲ್ಲವನ್ನೂ ಹೋಗಲಾಡಿಸುವ ಆ ಶ್ರೀರಾಮನಿಗೆ ನಾನಿಲ್ಲಿಗೆ ಬಂದಿದ್ದೇನೆಂದು ತಿಳುಹಿಸು. ಧರ್ಮಗಳನ್ನು ತಿಳಿದವನಿಗೆ ಅಣ್ಣನೇ ಅಲ್ಲವೆ ತಂದೆಯು ! ಆದುದರಿಂದ ನನ್ನ ಅಣ್ಣದೇವನಿರುವ ಠಾವನ್ನ ರುಹು ! ನಾನೀಗ ಆ ಮಹನೀಯನ ಪಾದಗಳಿಗೆ ನಮಸ್ಕಾರವನ್ನು ಮಾಡಿ ತಂದೆಯ ಮರಣ ದುಃಖವನ್ನು ಹೋಗಲಾಡಿಸಿಕೊಳ್ಳುತ್ತೇನೆ. ಜನನೀ ! ಕೈಕೇಯಿ ; ಧರ್ಮಗಳನ್ನು ಚೆನ್ನಾಗಿ ತಿಳಿದವನೂ, ಧರ್ಮದಲ್ಲಿಯೇ ಸ್ಥಿರವಾದ ಬುದ್ಧಿಯುಳ್ಳವನೂ, ಸತ್ಯಸಂಧನೂ, ದೃಢವ್ರ ತನೂ, ಪೂಜ್ಯನೂ, ನನ್ನ ಸ್ವಾಮಿಯೂ, ನಿಜವಾದ ಪರಾಕ್ರಮವುಳ್ಳವನೂ ಆದ ದಶರಥ ಮಹಾರಾಯನು ಹೇಳಿದ ಕೊನೆಯ ಮಾತುಗಳೇನು? ಅಲ್ಲದೆ ಮುಖ್ಯವಾಗಿ ನನ್ನನ್ನು ಕುರಿತು ಆತನೇನೆಂದು ಹೇಳಿದ್ದಾನೆ ? ಮಹಾನುಭಾವನೂ, ನನಗೆ ತಂದೆಯಾದವನೂ ಆದ ದಶರಥ

ಇತಿಪೃಷ್ಟಾ ಯಥಾತತ್ತ್ವಂ ಕೈಕೇಯೀ ವಾಕ್ಯ ಮಬ್ರವೀತ್ ॥ ೩೫ ॥ ರಾಮೇತಿ ರಾಜಾ ವಿಲಪನ್ ಹಾ! ಸೀತೇ! ಲಕ್ಷ್ಮಣೇತಿಚ ॥ ಸ ಮಹಾತ್ಮಾ ಪರಂಲೋಕಂ ಗತೋ ಗತಿಮತಾಂ ವರಃ ॥ ೩೬ ॥ ಇಮಾಂತು ಪಶ್ಚಿಮಾಂ ವಾಚಂ ವ್ಯಾಜಹಾರ ಪಿತಾ ತವ ॥ ಕಾಲಧರ್ಮ ಪರಿಕ್ಷಿಪ್ತಃ ಪಾಶೈರಿವ ಮಹಾಗಜಃ ॥ ೩೭ ॥ ಸಿದ್ಧಾರ್ಥಾಸ್ತೇ ನರಾ ರಾಮ ಮಾಗತಂಸೀತಯಾ ಸಹ ॥ ಲಕ್ಷ್ಮಣಂಚ ಮಹಾಬಾಹುಂ ದ್ರಕ್ಷ್ಯಂತಿ ಪುನರಾಗತಂ ॥೩೮॥ ತಚ್ಛ್ರುತ್ವಾ ವಿಷಸಾದೈವ ದ್ವಿತೀಯಾ

ಸಾಧು - ಚನ್ನಾಗಿ, ಶ್ರೋತುಂ - ಕೇಳಲು, ಇಚ್ಛಾಮಿ - ಅಪೇಕ್ಷಿಸುತ್ತೇನೆ, ಇತಿ - ಈಪರಿಯಾಗಿ, ಪೃಷ್ಟಾ - ಕೇಳಲ್ಪಟ್ಟ, ಕೈಕೇಯೀ-ಕೈಕೆಯೀದೇವಿಯು, ಯಥಾತತ್ತ್ವಂ - ಯಥಾರ್ಥವಾದ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದಳು. ॥ ೩೫ ॥ ಮಹಾತ್ಮಾ - ಮಹಾ ಮನಸ್ವಿಯಾದ, ಗತಿಮತಾಂ - ಸದ್ಗತಿಯನ್ನು ಹೊಂದಿದವರಲ್ಲಿ, ವರಃ - ಶ್ರೇಷ್ಠನಾದ, ಸರಾಜಾ - ಆ ದಶರಥರಾಯನು, ಹೇ ರಾಮೇತಿ - ಎಲೈ ಶ್ರೀರಾಮನೇ ಎಂದು, ಹಾಸೀತೇತಿ - ಎಲೌ ಸೀತಾದೇವಿಯೇ ಎಂದು, ಲಕ್ಷ್ಮಣೇತಿಚ - ಎಲೈ ಲಕ್ಷ್ಮಣನೇ ಎಂದೂ, ವಿಲಪನ್ - ವಿಲಾಪಮಾಡುತ್ತ, ಪರಂ - ಉತ್ಕೃಷ್ಟವಾದ, ಲೋಕಂ - ಲೋಕವನ್ನು, ಗತಃ - ಹೊಂದಿದನು. ॥ ೩೬ ॥ ತವ - ನಿನ್ನ, ಪಿತಾ - ತಂದೆಯು, ಪಾಶೈಃ - ಪಾಶಗಳಿಂದ, ಮಹಾಗಜಇವ - ದೊಡ್ಡ ಆನೆಯಂತೆ, ಕಾಲಧರ್ಮಪರಿಕ್ಷಿಪ್ತಃ- ಮರಣದಿಂದ ಹಿಡಿಯಲ್ಪಟ್ಟವನಾಗಿ, ಪಶ್ಚಿಮಾಂ - ಕಡೆಯದಾದ, ಇಮಾಂವಾಚಂ - ಈ ಮಾತನ್ನು, ವ್ಯಾಜಹಾರ - ನುಡಿದನು. ॥ ೩೭ ॥ ಯೇ - ಯಾರು, ಪುನರಾಗತಂ - ತಿರುಗಿಬಂದ, ಸೀತಯಾ ಸಹ - ಸೀತಾದೇವಿಯೊಡನೆ, ಆಗತಂ - ಬಂದಿರುವ, ರಾಮಂ - ಶ್ರೀರಾಮನನ್ನು, ಮಹಾಬಾಹುಂ - ಮಹಾ ಭುಜಪರಾಕ್ರಮಶಾಲಿಯಾ, ಲಕ್ಷ್ಮಣಂಚ - ಲಕ್ಷ್ಮಣನನ್ನೂ, ದ್ರಕ್ಷ್ಯಂತಿ - ನೋಡುವರೋ, ತೇನರಾಃ - ಆ ಮನುಷ್ಯರು, ಸಿದ್ಧಾರ್ಥಾಃ - ಕೃತಾರ್ಥರು, ತೇಪಿತಾ-ನಿನ್ನ ತಂದೆಯು, ವ್ಯಾಜಹಾರ- ನುಡಿದನು. ॥ ೩೮ ॥ ತತ್ - ಆ ಮಾತನ್ನು, ಶ್ರುತ್ವಾ - ಕೇಳಿ, ದ್ವಿತೀಯಾಪ್ರಿಯಶಂಸಂನಾತ್ -

---

ರಾಜನ ಕಟ್ಟಕಡೆಯ ಅಣತಿಯನ್ನು ಚೆನ್ನಾಗಿ ಕೇಳಬೇಕೆಂದು ನನಗೆ ಅಭಿಲಾಷೆಯಿರುವುದು. ಆದುದರಿಂದೆಲೌ ಜನನಿಯೆ! ನನ್ನ ಈ ಕೋರಿಕೆಯನ್ನುನೆರವೇರಿಸು" ಈ ರೀತಿ ಆ ಭರತನು ತನ್ನ ತಾಯಿಯಾದಕೈಕೇಯಿಯನ್ನುಕೇಳಲು ಆಕೆಯು ಇದ್ದುದನ್ನಿದ್ದಂತೆಯೇ ಹೇಳತೊಡಗಿದಳು. ॥೩೬-೩೫॥ "ಎಲೈ ಭರತಕುಮಾರನೆ! ಸದ್ಗತಿಯನ್ನು ಹೊಂದಿದವರಲ್ಲಿ ಮಹಾ ಶ್ರೇಷ್ಠನೂ, ನಿನ್ನಜನಕನೂಆದ ದಶರಥಧರಾವಲ್ಲಭನು " ಹಾ! ರಾಮ! ಹಾ! ಸೀತೇ! ಹಾ! ಲಕ್ಷ್ಮಣ! " ಎಂದು ವಿಲಪಿಸುತ್ತ ಪರಲೋಕವನ್ನೈದಿದನು. ನಿನ್ನ ತಂದೆಯಾದ ಮಹಾರಾಜ ದಶರಥನು ಪಾಶಗಳಿಂದ ಮದ್ದಾನೆಯು ಬಂಧಿತವಾದಂತೆ, ಯಮನ ಪಾಶಗಳಿಂದ ಕಟ್ಟಲ್ಪಟ್ಟವನಾಗಿ ಸೀತಾರಾಮಲಕ್ಷ್ಮಣರನ್ನು ಕುರಿತು ಪ್ರಲಪಿಸುತ್ತ ಈ ಮಾತನ್ನೂ ಹೇಳಿ ಪ್ರಾಣಗಳನ್ನ ತೊರೆದನು. ಆ ಮಾತೇನೆಂಬೆಯೋ? ಕೇಳು ಹೇಳುತ್ತೇನೆ; "ಯಾರು ಪುನಃ ಅಯೋಧ್ಯೆಗೆ ಬಂದ ಶ್ರೀ ಸೀತಾರಾಮ ಲಕ್ಷ್ಮಣರನ್ನು ನೋಡುತ್ತಾರೆಯೋ ಅವರೇ ಸುಕೃತಶಾಲಿಗಳು" ಎಂದು. ನಿನ್ನ ಜನಕನಾದ ದಶರಥರಾಯನು ತನ್ನ ಮರಣಕಾಲದಲ್ಲಿ ಈ ರೀತಿಯಾಗಿ ಹೇಳಿ ಅಸುವನ್ನುಳಿದವನಾದನು. " ಎಂಬೀ ಪ್ರಕಾರವಾಗಿ ನುಡಿದ ಕೈಕೇಯಿಯ ಮಾತುಗಳನು

ಪ್ರಿಯಶಂಸನಾತ್ ॥ ವಿಷಣ್ಣ ವದನೋಽಭೂತ್ವಾ ಭೂಯಃ ಪಪ್ರಚ್ಛ ಮಾತರಂ ॥ ೩೯ ॥ ಕ್ವಚೇದಾನೀಂ ಸಧರ್ಮಾತ್ಮಾ ಕೌಸಲ್ಯಾನಂದವರ್ಧನಃ ॥ ಲಕ್ಷ್ಮಣೇನ ಸಹಭ್ರಾತ್ರಾ ಸೀತಯಾಚ ಸಮಂಗತಃ ॥ ೪೦ ॥ ತಥಾ ಪೃಷ್ಟಾ ಯಥಾತತ್ವ ಮಾಖ್ಯಾತು ಮುಪಚಕ್ರಮೇ ॥ ಮಾತಾಽಸ್ಯ ಸುಮಹದ್ವಾಕ್ಯಂ ವಿಪ್ರಿಯಂ ಪ್ರಿಯ ಶಂಕಯಾ ॥ ೪೧ ॥ ಸಹಿ ರಾಜಸುತಃ ಪುತ್ರ ! ಚೀರವಾಸಾ ಮಹಾವನಂ ॥ ದಂಡಕಾನ್ ಸಹವೈದೇಹ್ಯಾ ಲಕ್ಷ್ಮಣಾನುಚರೋ ಗತಃ ॥ ೪೨ ॥ ತಚ್ಛ್ರುತ್ವಾ

ಎರಡನೆಯ ಅನಿಷ್ಟವಚನದ ಹೇಳುವಿಕೆಯಿಂದ, ವಿಷಣ್ಣವದನಃ - ವಿಷಾದಯುಕ್ತವಾದ ಮುಖವುಳ್ಳವನು, ಭೂತ್ವಾ - ಆಗಿ, ಭೂಯಃ - ಮತ್ತು, ಮಾತರಂ - ತಾಯನ್ನು ಕುರಿತು, ಪಪ್ರಚ್ಛ - ಕೇಳಿದನು. ॥ ೩೯ ॥ ಇದಾನೀಂ - ಈಗ, ಕೌಸಲ್ಯಾನಂದವರ್ಧನಃ - ಕೌಸಲ್ಯಾದೇವಿಗೆ ಆನಂದಕರನಾದ, ಧರ್ಮಾತ್ಮಾ - ಧರ್ಮಿಷ್ಠನಾದ, ಸಃ - ಆ ಶ್ರೀರಾಮನು, ಭ್ರಾತ್ರಾ - ತಮ್ಮನಾದ, ಲಕ್ಷ್ಮಣೇನ ಸಹ - ಲಕ್ಷ್ಮಣನೊಡನೆ, ಸೀತಯಾಚಸಮಂ - ಸೀತಾದೇವಿಯೊಡನೆಯೂ, ಕ್ವ - ಎಲ್ಲಿಗೆ, ಗತಃ - ಹೋದನು ॥ ೪೦ ॥ ತಥಾ - ಆಪರಿಯಾಗಿ, ಪೃಷ್ಟಾ - ಕೇಳಲ್ಪಟ್ಟ, ಮಾತಾ - ತಾಯಿಯಾದ ಕೈಕೇಯಿಯು, ಅಸ್ಯ - ಈ ಭರತನಿಗೆ, ವಿಪ್ರಿಯಂ - ಅನಿಷ್ಟಕರವಾದ, ಸುಮಹತ್ - ದೊಡ್ಡದಾದ, ವಾಕ್ಯಂ - ಮಾತನ್ನು, ಪ್ರಿಯಶಂಕಯಾ - ಇಷ್ಟವಾದುದೆಂಬ ಭ್ರಾಂತಿಯಿಂದ, ಯಥಾತತ್ವಂ - ಇದ್ದುದನಿದ್ದಹಾಗೆಯೇ, ಆಖ್ಯಾತು - ಹೇಳುವುದಕ್ಕೆ, ಉಪಚಕ್ರಮೇ - ಉಪಕ್ರಮಿಸಿದಳು. ॥ ೪೧ ॥ ಹೇ ಪುತ್ರ - ಎಲೈ ಮಗನೇ, ಸಃರಾಜಸುತಃ - ರಾಜಕುವರನಾದ ಆ ಶ್ರೀರಾಮನು, ಚೀರವಾಸಾಃ - ನಾರುಮಡಿಗಳನ್ನು ಧರಿಸಿ, ವೈದೇಹ್ಯಾಸಹ - ಸೀತಾದೇವಿಯೊಡನೆ, ಲಕ್ಷ್ಮಣಾನುಚರಃ - ಲಕ್ಷ್ಮಣನು ಸೇವಕನಾಗುಳ್ಳವನಾಗುಳ್ಳವನಾಗಿ, ದಂಡಕಾನ್ - ದಂಡಕವೆಂಬ, ಮಹಾವನಂ - ಮಹದರಣ್ಯವನ್ನು ಕುರಿತು, ಗತಃ - ಹೋದನು. ॥ ೪೨ ॥ ಭರತಃ - ಭರತನು, ಭ್ರಾತುಃ - ಅಣ್ಣನಾದ ಶ್ರೀರಾಮನ, ಚಾರಿತ್ರಶಂಕಯಾ - ನಡತೆಯ ವಿಷಯವಾದ ಸಂಶಯದಿಂದ, ತ್ರಸ್ತಃ - ಭಯಗೊಂಡವನಾಗಿ, ಸ್ವಸ್ಯ

ಕೇಳಿ ಭರತನು, ಕೈಕೇಯಿಯು ಎರಡನೆಯಸಲ ಹೇಳಿದ ಶ್ರೀರಾಮನು ಅಯೋಧ್ಯೆಯಲ್ಲಿಲ್ಲವೆಂಬ ಅಪ್ರಿಯವಾಕ್ಯವನ್ನು ಕುರಿತು ಮಹಾ ದುಃಖಿತನಾಗಿ ತಾಯಿಯಾದ ಆ ಕೈಕೆಯನ್ನು ಕುರಿತು ಮತ್ತೂ ಹೀಗೆಂದನು. ॥ ೩೬-೩೯ ॥ "ಅಮ್ಮಾ ! ಕೈಕೇಯೀ ದೇವಿಯೆ ! ಕೌಸಲ್ಯಾನಂದವರ್ಧನನೂ, ಧರ್ಮಾತ್ಮನನೂ ಆದ ಶ್ರೀರಾಮನು, ತಮ್ಮನಾದ ಲಕ್ಷ್ಮಣಸ್ವಾಮಿಯೊಡನೆಯೂ, ಭಾರ್ಯೆಯಾದ ಸೀತಾದೇವಿಯೊಡನೆಯೂ ಒಡಗೂಡಿದವನಾಗಿ ಈಗ ಎಲ್ಲಿಗೆ ಹೋದನು ? ಆ ವಿಷಯವೆಲ್ಲವನ್ನೂ ಸಂಪೂರ್ಣವಾಗಿ ತಿಳುಹುವಳಾಗು." ಭರತನೀರೀತಿ ನುಡಿದುದನ್ನು ಕೇಳಿದ ಆ ಕೈಕೇಯಿಯು, ಮಹದನಿಷ್ಟವನ್ನುಂಟುಮಾಡುವುದೂ, ಮಹಾ ಕಠಿನವಾದುದೂ, ಆದ ಮಾತನ್ನು, ಭರತನಿಗೆ ಸಂತೋಷಕರವಾದುದೆಂದೆಣಿಸಿ ಶ್ರೀರಾಮ ವೃತ್ತಾಂತವನ್ನು ಇದ್ದುದನ್ನು ಇದ್ದಹಾಗೆಯೆ ಹೇಳಲು ಮೊದಲುಮಾಡಿದಳು." ಮಗನೇ ! ಭರತ ಕೇಳು; ದಶರಥರಾಜ ನಂದನನಾದ ಶ್ರೀರಾಮನು ನಾರುಮಡಿಗಳನ್ನೂ ಕೃಷ್ಣಾಜಿನವನ್ನೂ ಧರಿಸಿದವನಾಗಿ ದಂಡಕವೆಂಬ ಹೆಸರುಳ್ಳ ಗೊಂಡಾರಣ್ಯಕ್ಕೆ ಸೀತಾಲಕ್ಷ್ಮಣರೊಡ

ಭರತ ಸ್ತ್ರಸ್ತೋ ಭ್ರಾತು ಶ್ಚಾರಿತ್ರ ಶಂಕಯಾ ॥ ಸ್ವಸ್ಯ ವಂಶಸ್ಯ ಮಾಹಾತ್ಮ್ಯಾ ತ್ಪ್ರಷ್ಟುಂ ಸಮುಪಚಕ್ರಮೇ॥೪೩॥ಕಚ್ಚಿನ್ನ ಬ್ರಾಹ್ಮಣಧನಂ ಹೃತಂ ರಾಮೇಣ ಕಸ್ಯಚಿತ್ ॥ ಕಚ್ಚಿನ್ನಾಢ್ಯೋ ದರಿದ್ರೋವಾ ತೇನಾಽಪಾಪೋ ವಿಹಿಂಸಿತಃ॥೪೪॥ ಕಚ್ಚಿನ್ನ ಪರದಾರಾನ್ವಾ ರಾಜಪುತ್ರೋಽಭಿಮನ್ಯತೇ ॥ ಕಸ್ಮಾತ್ಸ ದಂಡಕಾರಣ್ಯೇ ಭ್ರೂಣಹೇವ ವಿವಾಸಿತಃ ॥ ೪೫ ॥ ಅಥಾಸ್ಯ ಚಪಲಾ ಮಾತಾ ತತ್ಸ್ವಕರ್ಮ ಯಥಾತಥಂ ॥ ತೇನೈವ ಸ್ತ್ರೀಸ್ವಭಾವೇನ ವ್ಯಾಹರ್ತು ಮುಪಚಕ್ರಮೇ ॥ ೪೬ ॥

ವಂಶಸ್ಯ - ತನ್ನ ಕುಲದ, ಮಾಹಾತ್ಮ್ಯಾತ್ - ಸದಾಚಾರ ಜನ್ಯವಾದ ಪ್ರಭಾವದಿಂದ, ಪ್ರಷ್ಟುಂ - ಕೇಳಲು, ಸಮುಪಚಕ್ರಮೇ - ಉಪಕ್ರಮಿಸಿದನು. ॥ ೪೩ ॥ ರಾಮೇಣ - ಶ್ರೀರಾಮನಿಂದ, ಬ್ರಾಹ್ಮಣಧನಂ - ಬ್ರಾಹ್ಮಣ ದ್ರವ್ಯವು, ಕಸ್ಯಚಿತ್ - ಏನಾದರೂ, ನಾಪಹೃತಂಕಚ್ಚಿತ್ - ಅಪಹರಿಸಲ್ಪಡಲಿಲ್ಲವಷ್ಟೆ, ತೇನ - ಆ ಶ್ರೀರಾಮನಿಂದ, ಅಪಾಪಃ - ಪಾಪರಹಿತನಾದ, ಆಢ್ಯೋವಾ - ಧನಿಕನೇ ಆಗಲಿ, ನವಿಹಿಂಸಿತಃಕಚ್ಚಿತ್ - ಹಿಂಸೆಮಾಡಲ್ಪಡಲಿಲ್ಲವಷ್ಟೆ. ॥ ೪೪ ॥ ರಾಜಪುತ್ರಃ - ರಾಜಕುವರನು, ಪರದಾರಾನ್ವಾ - ಇತರ ಹೆಂಡತಿಯರನ್ನು, ನಾಭಿಮನ್ಯತೇಕಚ್ಚಿತ್ - ಅಪೇಕ್ಷಿಸಲಿಲ್ಲವಷ್ಟೆ, ಸಃ - ಆ ಶ್ರೀರಾಮನು, ದಂಡಕಾರಣ್ಯೇ - ದಂಡಕಾರಣ್ಯದಲ್ಲಿ, ಕಸ್ಮಾತ್ - ಯಾವ ಅಪರಾಧದಿಂದ, ಭ್ರೂಣಹೇವ-(ಗೋ + ಮ) ಸರ್ವಶಾಖಾಧ್ಯಾಯಿಯಾದ ಬ್ರಾಹ್ಮಣನನ್ನು ಕೊಂದವನಂತೆ, ವಿವಾಸಿತಃ- ಹೊರಡಿಸಲ್ಪಟ್ಟನು. ॥ ೪೫ ॥ ಅಥ - ಅನಂತರದಲ್ಲಿ, ಅಸ್ಯ - ಈ ಭರತನಿಗೆ, ಮಾತಾ - ತಾಯಿಯಾದ ಕೈಕೇಯಿದೇವಿಯು, ಚಪಲಾ - ಚಂಚಲಚಿತ್ತಳಾಗಿ, ತತ್ - ಆ, ಸ್ವಕರ್ಮ - ತಾನು ಮಾಡಿದ ಕೆಲಸವನ್ನು, ಯಥಾತಥಂ - ಸತ್ಯವಾಗಿ, ತೇನಸ್ತ್ರೀಸ್ವಭಾವೇನೈವ - ಅದೇ ಸ್ತ್ರೀಸ್ವಭಾವದಿಂದಲೇ, ವ್ಯಾಹರ್ತುಂ - ಹೇಳುವದಕ್ಕೆ, ಉಪಚಕ್ರಮೇ - ಉಪಕ್ರಮಿಸಿದಳು. ॥ ೪೬ ॥ ಏವಂ- ಈಪರಿಯಾಗಿ, ಮಹಾತ್ಮನಾ - ಮಹಾ ಮನಸ್ವಿಯಾದ, ಭರತೇನ - ಭರತನಿಂದ, ಉಕ್ತಾ - ಹೇಳ

ಗೂಡಿ ಹೊರಟುಹೋದನು.'' ಈ ಮಾತನ್ನು ಕೇಳಿದ ಆ ಭರತಕುಮಾರನು ತನ್ನ ವಂಶದ ನಿರ್ಮಲ ಚರಿತ್ರೆಯನ್ನು ಚೆನ್ನಾಗಿ ಅರಿತಿರುವ "ಶ್ರೀರಾಮನು, ಪೂರ್ವಿಕರ ಆಚಾರಕ್ಕೆ ವಿರುದ್ಧವಾಗಿ ನಡೆಯುವ ವಿಪತ್ತು ನಿಷ್ಕಾರಣವಾಗಿ ಸಂಭವಿಸಿತೇನೋ,, ಎಂದು ಭಯಭ್ರಾಂತನಾಗಿ, " ಜನನೀ ! ಕೈಕೇಯೀ !! ಶ್ರೀರಾಮಮೂರ್ತಿಯು ಬ್ರಾಹ್ಮಣಶ್ರೇಷ್ಠರ ದ್ರವ್ಯವನ್ನೇನೂ ಅಪಹರಿಸಲಿಲ್ಲವಷ್ಟೆ ? ನಮ್ಮಣ್ಣನು ನಿಷ್ಕಾರಣವಾಗಿ ಧನಿಕರನ್ನಾಗಲಿ, ದರಿದ್ರರನ್ನಾಗಲಿ ವಧಿಸಲಿಲ್ಲವಷ್ಟೆ ? ದಶರಥರಾಜ ಕುಮಾರನಾದ ಶ್ರೀರಾಮನು ಇತರರ ಹೆಂಡರನ್ನು ಬಯಸಲಿಲ್ಲವಷ್ಟೆ ? ಇವೊಂದೂ ಇಲ್ಲದ ಮೇಲೆ ಯಾವ ಕಾರಣದಿಂದ ಶ್ರೀರಾಮನು, " ವೇದವೇದಾಂಗ ಪಾರಗನಾದ ಬ್ರಾಹ್ಮಣನನ್ನು ಕೊಂದವನಂತೆ '' ಘೋರವಾದ ದಂಡಕಾರಣ್ಯಕ್ಕೆ ಹೊರಟುಹೋದನು ? ಆ ವಿಷಯವೆಲ್ಲವನ್ನೂ ತಿಳಿಸುವವಳಾಗು, '' ಎಂದನು. ॥ ೪೦-೪೫ ॥ ಈ ರೀತಿಯಾಗಿ ಹೇಳಿದ ಮಹಾನುಭಾವನಾದ ಭರತನ ಮಾತನ್ನು ಕೇಳಿ, ತಾನು ಮೂಢಳಾದುದರಿಂದ ಆತನ ಅಭಿಪ್ರಾಯವನ್ನು ತಿಳಿದುಕೊಳ್ಳದೆ, ಪಂಡಿತಳೆಂದು ಅರ್ಥವಿಲ್ಲದೆ ಹೆಮ್ಮೆಯನ್ನು ಹೊಂದಿದ ಆ ಕೈಕೇಯಿಯು ಆತನನ್ನು ಕುರಿತು ಈರೀತಿ ಹೇಳಿದಳು. " ವತ್ಸ !

ಏವ ಮುಕ್ತಾತು ಕೈಕೇಯಿೀ ಭರತೇನ ಮಹಾತ್ಮನಾ ॥ ಉವಾಚ ವಚನಂ ಹೃಷ್ಟಾ ಮೂಢಾ ಪಂಡಿತ ಮಾನಿನೀ ॥ ೪೭ ॥ ನಬ್ರಾಹ್ಮಣಧನಂ ಕಿಂಚಿದ್ಧೃತಂ ರಾಮೇಣ ಕಸ್ಯಚಿತ್ ॥ ಕಶ್ಚಿನ್ನಾಢ್ಯೋ ದರಿದ್ರೋವಾ ತೇನಾಽಪಾಪೋ ವಿಹಿಂಸಿತಃ ॥ ೪೮ ॥ ನರಾಮಃ ಪರದಾರಾಂಶ್ಚ ಚಕ್ಷುರ್ಭ್ಯಾಮಪಿ ಪಶ್ಯತಿ ॥ ಮಯಾತು ಪುತ್ರ! ಶ್ರುತ್ವೈವ ರಾಮಸ್ಯೈವಾ ಭಿಷೇಚನಂ ॥ ೪೯ ॥ ಯಾಚಿತಸ್ತೇ ಪಿತಾ ರಾಜ್ಯಂ ರಾಮಸ್ಯ ಚ ವಿವಾಸನಂ ॥ ಸಸ್ವವೃತ್ತಿಂ ಸಮಾಸ್ಥಾಯ ಪಿತಾ ತೇ ತತ್ತಥಾ ಕರೋತ್ ॥ ೫೦ ॥ ರಾಮಶ್ಚ ಸಹಸೌಮಿತ್ರಿಃ ಪ್ರೇಷಿತ

ಲ್ಪಟ್ಟ, ಕೈಕೇಯಿೀತು - ಕೈಕೇಯಿೀದೇವಿಯಾದರೆ, ಮೂಢಾ - ಮೂಢಳಾದರೂ, ಪಂಡಿತಮಾನಿನೀ- ಪಂಡಿತಳನ್ನಾಗಿ ತನ್ನನ್ನು ತಿಳಿದುಕೊಂಡು, ವಚನಂ - ಮಾತನ್ನು, ಉವಾಚ - ಹೇಳಿದಳು. ॥ ೪೭ ॥ ರಾಮೇಣ - ಶ್ರೀರಾಮನಿಂದ, ಕಸ್ಯಚಿತ್ - ಯಾವ ನಿಮಿತ್ತದಿಂದಲಾದರೂ, ಬ್ರಾಹ್ಮಣಧನಂ - ಬ್ರಾಹ್ಮಣನಸ್ವತ್ತು, ಕಿಂಚಿತ್ - ಕೊಂಚವಾದರೂ, ನಹೃತಂ - ಅಪಹರಿಸಲ್ಪಡಲಿಲ್ಲ, ತೇನ - ಆ ಶ್ರೀರಾಮನಿಂದ, ಅಪಾಪಃ - ಪಾಪರಹಿತನಾದ, ಆಢ್ಯಃ - ಧನಿಕನೇ ಆಗಲಿ, ದರಿದ್ರೋವಾ - ದರಿದ್ರನೇ ಆಗಲಿ, ಕಚ್ಚಿತ್ - ಯಾವನೂ, ನವಿಹಿಂಸಿತಃ - ಹಿಂಸೆ ಮಾಡಲ್ಪಡಲಿಲ್ಲ. ॥ ೪೮ ॥ ರಾಮಃ - ಶ್ರೀರಾಮನು, ಪರದಾರಾ - ಪರಸ್ತ್ರೀಯರನ್ನು, ಚಕ್ಷುರ್ಭ್ಯಾಮಪಿ - ಕಣ್ಣಿನಿಂದಲೂ, ನಪಶ್ಯತಿ - ನೋಡುವವನಲ್ಲ, ಕಿಂತು - ಆದರೆ, ಹೇ ಪುತ್ರ - ಎಲೈ ಮಗನೆ, ಮಯಾ - ನನ್ನಿಂದ, ರಾಮಸ್ಯ - ಶ್ರೀರಾಮನಿಗೆ, ಅಭಿಷೇಚನಂ-ಪಟ್ಟಾಭಿಷೇಕವನ್ನು, ಶ್ರುತ್ವಾ - ಕೇಳಲ್ಪಟ್ಟು, ತೇಪಿತಾ-ನಿನ್ನತಂದೆಯು, ತೇ - ನಿನಗೆ, ರಾಜ್ಯಂಚ - ರಾಜ್ಯವನ್ನು, ರಾಮಸ್ಯ - ಶ್ರೀರಾಮನಿಗೆ, ವಿವಾಸನಂಚ - ವನವಾಸವನ್ನು, ಯಾಚಿತಃ - ಪ್ರಾರ್ಥಿಸಲ್ಪಟ್ಟನು, ಸಃ - ಆ, ತೇಪಿತಾ - ನಿನ್ನತಂದೆಯು, ಸ್ವವೃತ್ತಿಂ - ತನ್ನಪ್ರತಿಜ್ಞಾರೂಪವಾದ ವ್ಯಾಪಾರದಲ್ಲಿ, ಸಮಾಸ್ಥಾಯ - ನಿಂತು, ತತ್ - ಅದನ್ನು, ತಥಾ - ಹಾಗೆಯೇ, ಅಕರೋತ್ - ಮಾಡಿದನು. ॥ ೫೦ ॥ ರಾಮಶ್ಚ - ಶ್ರೀರಾಮನು, ಸಹಸೌಮಿತ್ರಿಃ - ಲಕ್ಷ್ಮಣಸ್ವಾಮಿಯೊಡಗೂಡಿ, ಸೀತಯಾಸಹ - ಸೀತಾದೇವಿಯೊಡನೆ, ಪ್ರೇಷಿತಃ - ಕಳುಹಲಾದನು. ಮಹಾ

ಭರತ ; ಶ್ರೀರಾಮನು ವಿಪ್ರವರೇಣ್ಯರದ್ರವ್ಯವನ್ನು ಅಪಹರಿಸಲಿಲ್ಲ; ಧನಿಕರನ್ನು ವಧಿಸಲಿಲ್ಲ ; ದರಿದ್ರರನ್ನು ನಾಶಗೊಳಿಸಲಿಲ್ಲ ; ಇಷ್ಟೇ ಅಲ್ಲದೆ ಮತ್ತಾವ ಪಾಪಕೃತ್ಯವನ್ನೂ ಮಾಡಲಿಲ್ಲ. ಇದೂ ಅಲ್ಲ ಆ ಶ್ರೀರಾಮನು ಪರರ ಹೆಂಡತಿಯರನ್ನು ಕಣ್ಣಿನಿಂದಲೂ ನೋಡಿದವನಲ್ಲ! ನಿನ್ನ ತಂದೆಯಾದ ದಶರಥರಾಜನು ಶ್ರೀರಾಮನಿಗೆ ಯೌವರಾಜ್ಯಾಭಿಷೇಕವನ್ನು ಮಾಡಬೇಕೆಂದು ಬಯಸಿ, ಅದಕ್ಕೆ ತಕ್ಕ ಕಾರ್ಯಗಳನ್ನು ಸಿದ್ಧಗೊಳಿಸುತ್ತಿದ್ದನು. ಆ ಸಂಗತಿಯನ್ನು ಕೇಳಿದ ನಾನು ಶ್ರೀರಾಮನನ್ನು ಅರಣ್ಯಕ್ಕೆ ಕಳುಹಬೇಕೆಂದೂ, ನಿನಗೆ ಪಟ್ಟಾಭಿಷೇಕವನ್ನೂ ಮಾಡಬೇಕೆಂದೂ ಎರಡುವರಗಳನ್ನು ಯಾಚಿಸಿದೆನು. ಆಗಲಾರಾಯನು ಸತ್ಯವ್ರತವನ್ನು ಬಿಡಲಾರದೆ ನಾನು ಬಯಸಿದಂತೆಯೇ ಮಾಡಿದನು. ಆಮೇಲೆ ಸೀತಾಲಕ್ಷ್ಮಣರೊಡಗೂಡಿದ ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿದನು. ಆ ಸಮಯದಲ್ಲಿ ಮಹಾ ಕೀರ್ತಿವಂತನೂ, ಭೂಪಾಲಕನೂ ಆದ ದಶರಥರಾಯನು “ ಮುದ್ದುಮಗನಾದ ಶ್ರೀರಾಮನನ್ನಿನ್ನು

ಸ್ಸೀತಯಾಸಹ ॥ ತಮಪಶ್ಯನ್ ಪ್ರಿಯಂ ಪುತ್ರಂ ಮಹೀಪಾಲೋ ಮಹಾಯಶಾಃ ॥ ೫೧ ॥ ಪುತ್ರಶೋಕ ಪರಿದ್ಯೂನಃ ಪಂಚತ್ವ ಮುಪಪೇದಿವಾನ್ ॥ ತ್ವಯಾ ತ್ವಿದಾನೀಂ ಧರ್ಮಜ್ಞ ! ರಾಜತ್ವಮವಲಂಬ್ಯತಾಂ ॥ ೫೨ ॥ ತ್ವತ್ಕೃತೇಹಿ ಮಯಾ ಸರ್ವಮಿದಮೇವಂ ವಿಧಂಕೃತಂ ॥ ಮಾಶೋಕಂ ಮಾಚ ಸಂತಾಪಂ ಧೈರ್ಯಮಾಶ್ರಯ ಪುತ್ರಕ ! ॥ ೫೩ ॥ ತ್ವದಧೀನಾಹಿ ನಗರೀ ರಾಜ್ಯಂ ಚೈತ ದನಾಮಯಂ ॥

ಯಶಾಃ - ಮಹಾಕೀರ್ತಿವಂತನಾದ, ಮಹೀಪಾಲಃ - ಅರಸು, ಪ್ರಿಯಂ - ಇಷ್ಟನಾದ, ತಂಪುತ್ರಂ - ಆ ಮಗನನ್ನು, ಅಪಶ್ಯನ್ - ನೋಡದಿರುವನಾಗಿ, ಪುತ್ರಶೋಕಪರಿದ್ಯೂನಃ - ಪುತ್ರವ್ಯಸನದಿಂದ, ಪರಿತಪ್ತನಾಗಿ, ಪಂಚತ್ವಂ - ಮರಣವನ್ನು, ಉಪಪೇದಿವಾನ್ - ಹೊಂದಿದನು, ಹೇ ಧರ್ಮಜ್ಞ - ಎಲೈ ಧರ್ಮವಂತನೇ, ತ್ವಯಾತು - ನಿನ್ನಿಂದಲಾದರೆ, ಇದಾನೀಂ - ಈಗ, ರಾಜತ್ವಂ - ಪ್ರಭುತ್ವವು, ಅವಗಮ್ಯತಾಂ - ಹೊಂದಲ್ಪಡಲಿ. ॥ ೫೨ ॥ ಮಯಾ - ನನ್ನಿಂದ, ತ್ವತ್ಕೃತೇ - ನಿನ್ನ ನಿಮಿತ್ತವಾಗಿ, ಇದಂಸರ್ವಂ - ಈ ಸಮಸ್ತ ಕಾರ್ಯವು, ಏವಂವಿಧಂ - ಈ ಪರಿಯಾಗಿ, ಕೃತಂಹಿ - ಮಾಡಲಾಯಿತಲ್ಲವೆ, ಶೋಕಂ - ವ್ಯಸನವನ್ನು, ಮಾಶ್ರಯ - ಆಶ್ರಯಿಸಬೇಡ, ಹೇ ಪುತ್ರಕ - ಎಲೈ ಮಗನೇ, ಸಂತಾಪಂ - ಪರಿತಾಪವನ್ನು, ಮಾಶ್ರಯ - ಹೊಂದಬೇಡ, ಧೈರ್ಯಂ - ಧೈರ್ಯವನ್ನು, ಆಶ್ರಯ- ಅವಲಂಬಿಸು. ॥ ೫೩ ॥ ಹಿ - ಯಾವ ಕಾರಣ, ನಗರೀ - ಅಯೋಧ್ಯಾಪಟ್ಟಣವು, ತ್ವದಧೀನಾ - ನಿನ್ನ ಸ್ವಾಧೀನವೋ, ಏತತ್‌ರಾಜ್ಯಂಚ - ಈ ರಾಜ್ಯವೂ, ಅನಾಮಯಂ - ನಿಷ್ಕಂಟಕವಾಗಿರುವುದೋ, ತತ್ - ಆ ಕಾರಣ, ಹೇ ಪುತ್ರಕ - ಎಲೈ ಮಗನೇ, ಶೀಘ್ರಂ - ಜಾಗ್ರತೆಯಾಗಿ, ವಿಧಿನಾ- ಶಾಸ್ತ್ರಾನುಸಾರವಾದ, ಆಹಿತಾಗ್ನಿ - ವಿಧಾನದಿಂದ, ವಿಧಿಜ್ಞೈಃ - ಶಾಸ್ತ್ರಜ್ಞರಾದ, ವಸಿಷ್ಠಮುಖ್ಯೈಃ - ವಸಿಷ್ಠನೇ ಮೊದಲಾದ, ದ್ವಿಜೇಂದ್ರೈಃ - ಬ್ರಾಹ್ಮಣಶ್ರೇಷ್ಠರಿಂದ, ಸಹಿತಃ - ಕೂಡಿ, ರಾಜಾನಂ - ಅರಸನಾದ ದಶರಥರಾಯನನ್ನು, ಸಂಕಾಲ್ಯ - ಸಂಸ್ಕಾರಮಾಡಿ, ಅದೀನಸತ್ವಂ - ದೈನ್ಯ

ನೋಡಲಾಗದೆ ಹೋಯಿತಲ್ಲ" ಎಂದು ದುಃಖಿತನಾಗಿ ಮರಣವನ್ನು ಹೊಂದಿದನು. ಆದುದರಿಂದೆಲೈ ಭರತನೆ ! ನೀನು ಧರ್ಮಜ್ಞನು ; ನೀನೀಗ ರಾಜ್ಯವನ್ನವಲಂಬಿಸಿ ಭೂಪರಿಪಾಲನೆಯನ್ನು ಮಾಡು. ನಿನ್ನನ್ನು ಮಹಾರಾಜನನ್ನಾಗಿಮಾಡಲೆಳಸಿ ನಾನೇ ಈ ಕಾರ್ಯವೆಲ್ಲವನ್ನೂ ಮಾಡಿದೆನು. ಮಗನೆ ! ನೀನು ದುಃಖಿಸಬೇಡ; ಸಂತಪಿಸಬೇಡ. ಧೈರ್ಯವೊಂದು. ಈ ಪಟ್ಟಣವೆಲ್ಲವೂ ನಿನ್ನಧೀನವಾಗಿರುವುದು. ಆದುದರಿಂದ ಯಾವ ವಿಧವಾದ ತೊಂದರೆಯೂ ಇಲ್ಲದವನಾಗಿ ರಾಜ್ಯಪರಿಪಾಲನೆಯನ್ನು ಮಾಡು. ಇಷ್ಟೆಯಲ್ಲದೆ ಎಲೈ ಮಗನೆ ! ಶಾಸ್ತ್ರವೇತ್ತರಾದ ವಸಿಷ್ಠರೇ ಮೊದಲಾದ ಬ್ರಾಹ್ಮಣೋತ್ತಮರೊಡಗೂಡಿ ಬಹು ಜಾಗ್ರತೆ

ತತ್ಪುತ್ರ ! ಶೀಘ್ರಂ ವಿಧಿನಾ ವಿಧಿಜ್ಞೈ
ರ್ವಸಿಷ್ಠಮುಖ್ಯೈ ಸ್ಸಹಿತೋ ದ್ವಿಜೇಂದ್ರೈಃ ॥
ಸಂಕಾಲ್ಯ ರಾಜಾನ ಮದೀನಸತ್ತ್ವ
ಮಾತ್ಮಾನ ಮುರ್ವ್ಯಾ ಮಭಿಷೇಚಯಸ್ವ ॥ ೫೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿಸಪ್ತತಿತಮಸ್ಸರ್ಗಃ.

ವಿಲ್ಲದಿರುವ, ಸತ್ವಗುಣವುಳ್ಳ, ಆತ್ಮಾನಂ - ನಿನ್ನನ್ನು, ಉರ್ವ್ಯಾಂ - ಭೂಮಂಡಲದಲ್ಲಿ, ಅಭಿಷೇಚಯಸ್ವ - ಪಟ್ಟಾಭಿಷೇಕ ಮಾಡಿಕೋ. ॥ ೫೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿಸಪ್ತತಿತಮಸ್ಸರ್ಗಃ.

ಯಾಗಿ ಮಹಾಪರಾಕ್ರಮಶಾಲಿಯಾದ ದಶರಥಮಹಾರಾಜನಿಗೆ ಉತ್ತರಕ್ರಿಯಾದಿಗಳನ್ನೆಸಗಿ ನೀನು ರಾಜ್ಯಾಭಿಷಿಕ್ತನಾಗು." ॥ ೫೬-೫೪ ॥

ಇಂತಿದು ಕೈಕೇಯ್ಯೋಕ್ತ ದಶರಥನಿರ್ಯಾಣ, ಶ್ರೀರಾಮವಿವಾಸನ ವೃತ್ತಾಂತ
ನಿರೂಪಣವೆಂಬ ಎಪ್ಪತ್ತೆರಡನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ತ್ರಿಸಪ್ತತಿತಮಸ್ಸರ್ಗಃ.

*** ಶ್ರುತ್ವಾತು ಪಿತರಂ ವೃತ್ತಂ ಭ್ರಾತರೌಚ ವಿವಾಸಿತೌ || ಭರತೋ ದುಃಖಸಂತಪ್ತ ಇದಂ ವಚನ ಮಬ್ರವೀತ್ ||೧|| ಕಿನ್ನು ಕಾರ್ಯಂ ? ಹತಸ್ಯೇಹ**

ಭರತಃ - ಭರತನು, ಪಿತರಂ - ತಂದೆಯನ್ನು, ವೃತಂ - ಮರಣವನ್ನು ಹೊಂದಿದವನನ್ನಾಗಿಯೂ, ಭ್ರಾತರೌಚ - ಅಣ್ಣತಮ್ಮಂದಿರನ್ನು, ವಿವಾಸಿತೌ - ವನಕ್ಕೆ ಕಳುಹಲಾದವರನ್ನಾಗಿಯೂ, ಶ್ರುತ್ವಾ - ಕೇಳಿ, ದುಃಖಸಂತಪ್ತಃ - ದುಃಖದಿಂದ ಪರಿತಪ್ತನಾಗಿ, ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು. || ೧ || ಇಹ-ಈಗ, ಪಿತ್ರಾ - ತಂದೆಯಿಂದ, ಅಥ - ಬಳಿಕ, ಪಿತೃಸಮೇನ-

ಈ ರೀತಿ ಭರತನು ತನ್ನತಂದೆಯಾದ ದಶರಥರಾಯನ ಮರಣವಾರ್ತೆಯನ್ನೂ, ನಿಜಜನನಿಯಾದ ಕೈಕೇಯೀದೇವಿಯಿಂದ ಕೇಳಿ ತಿಳಿದುಕೊಂಡು, ಅಣ್ಣತಮ್ಮಂದಿರು ದಂಡಕಾರಣ್ಯಕ್ಕೆ ಹೋದುದನ್ನರಿತು ಬಹಳವಾದ ದುಃಖದಿಂದ ಪರಿತಪಿಸುತ್ತ ಆ

ಕೆಲವು ಪ್ರತಿಗಳಲ್ಲಿ ಈ ಕೆಳಗೆ ಕಂಡ ಅಧಿಕ ಶ್ಲೋಕಗಳು ಇಲ್ಲಿ ಕೊಡಲಾಗಿವೆ. ಇವಕ್ಕೆ ಪ್ರತಿಪದಾರ್ಥ ಬರೆವುದರಿಂದ,ಗ್ರಂಥ ವಿಸ್ತಾರವಾಗುವುದರಿಂದ ತಾತ್ಪರ್ಯ ಮಾತ್ರ ಕೊಡಲಾಗಿದೆ.

* ಕೈಕೇಯ್ಯಾ ತ್ವೇವಮುಕ್ತಸ್ತು ಭರತೋ ರಾಘವಾನುಜಃ |
ಕರ್ಣೌ ಕರಾಭ್ಯಾಂ ಪ್ರಚ್ಛಾದ್ಯ ಪಪಾತ ಧರಣೀ ತಲೇ || ೧ ||
ಹಾ ! ತಾತ ! ರಾಮ ! ನಾಥೇತಿ ವಿಲಪ್ಯ ಕರುಣಂ ಬಹು |
ಮುಹೂರ್ತಮಿವ ನಿಸ್ಸಂಜ್ಞಃ ಸಂಜ್ಞಾವಾನಿದ ಮಬ್ರವೀತ್ || ೨ ||
ಹತೋಽಸ್ಮಿ ರಾಜಾ ನಿಹತೋ ಹತೋ ಲೋಕಶ್ಚ ದುರ್ಮತೇ ! |
ಕಿಮಿದಂ ಸಂಜ್ಞಿತಂ ಕೇನ ತಸ್ಯಕಾರ್ಯಂ ತ್ವಯಾಕೃತಂ ? || ೩ ||
ರಾಜಾನಂ ಪ್ರೇತಭಾವಸ್ಥಂ ಕೃತ್ವಾ ರಾಮಂಚ ತಾಪಸಂ |
ತ್ವಂತು ರಾಜ್ಯಫಲಂ ಭೋಕ್ತು ಮದ್ಯತಿಷ್ಠತಿ ದುರ್ಮತೇ ! || ೪ ||
ರಾಮಪ್ರಸ್ಥಾಪಿಕಾಯಾಶ್ಚ ಪತಿಘ್ನ್ಯಾಶ್ಚತವೋದರೇ |
ದಶಮಾಸಾ ಮಯಾ ನೀತಾ ಹಾ! ಲೋಕೇ ನಿಂದಿತೋ ಹ್ಯಹಂ || ೫ ||
ಕಂಠೇಽವಸಜ್ಯ ಪಾಶಂವಾ ವಿಷಂ ಪೀತ್ವಾಽಥವಾ ಶಠೇ ! |
ತ್ಯಜ್ಯ ಪ್ರಾಣಾಂಶ್ಚ ದುರ್ಮೇಧೇ ! ಜಲಮಗ್ನಿಂ ಪ್ರವಿಶ್ಯವಾ ! || ೬ ||
ತ್ವಾಮದ್ಯ ನಿಹನಿಷ್ಯಾಮಿ ನೋಚೇದ್ರಾಮಸ್ಯ ದುರ್ಯಶಃ |
ರಾಘವಸ್ಯಾನುಜೋ ಭ್ರಾತಾ ಭರತೋ ಮಾತೃಹಾ ಇತಿ || ೭ ||
ಏವಂ ಪರುಷ ಮುಕ್ತ್ವಾತು ನಿರ್ದಗ್ಧುಮಿವ ಚಕ್ಷುಷಾ |
ನಿರೀಕ್ಷಮಾಣೇ ಭರತೇ ಕೈಕೇಯೀ ವಾಕ್ಯ ಮಬ್ರವೀತ್ || ೮ ||
ಕಿಂಮಯಾಽಪಕೃತಂ ತೇಽದ್ಯ ಗರ್ಹಸೇ ಮಾಂ ಮುಹುರ್ಮುಹುಃ |
ಪ್ರಸೂಯ ವರ್ಧಯಿತ್ವಾ ತ್ವಾಂ ಕಾಮಂಚಾ ಕರವಂನಕಿಂ || ೯ ||
ತೇಪಿತಾ ಸ್ವರ್ಗತೋ ರಾಜಾ ಭ್ರಾತರೌಚ ವಿವಾಸಿತೌ |
ಬಹುನಾಕಿಂ ಪ್ರಲಾಪೇನ ಕುರುರಾಜ್ಯಂ ಯಥಾ ಸುಖಂ || ೧೦ ||

ಮಮ ರಾಜ್ಯೇನ ಶೋಚತಃ ! ‖ ವಿಹೀನಸ್ಯಾಥ ಪಿತ್ರಾಚ ಭ್ರಾತ್ರಾ ಪಿತೃಸಮೇನಚ ! ‖ ೨ ‖ ದುಃಖೇ ಮೇ ದುಃಖಮಕರೋರ್ವ್ರಣೇ ಕ್ಷಾರಮಿವಾದಧಾಃ ‖ ರಾಜಾನಂ ಪ್ರೇತಭಾವಸ್ಥಂ ಕೃತ್ವಾ ರಾಮಂಚ ತಾಪಸಂ ‖ ೩ ‖ ಕುಲಸ್ಯ

ತಂದೆಗೆ-ಸಮಾನನಾದ, ಭ್ರಾತ್ರಾಪಿ - ಅಣ್ಣನಿಂದಲೂ, ವಿಹೀನಸ್ಯ - ಬಿಡಲ್ಪಟ್ಟ, ಹತಸ್ಯ - ಹೊಡೆಯಲಾಗಿ, ಶೋಚತಃ - ದುಃಖಿಸುತ್ತಿರುವ, ಮಮ-ನನಗೆ, ರಾಜ್ಯೇನ - ರಾಜ್ಯದಿಂದ, ಕಿಂಕಾರ್ಯಂ - ಏನುಪ್ರಯೋಜನವು. ‖ ೨ ‖ ರಾಜಾನಂ - ಅರಸನನ್ನು, ಪ್ರೇತಭಾವಸ್ಥಂ - ಮರಣವೊಂದಿದವನನ್ನಾಗಿಯೂ, ರಾಮಂಚ - ಶ್ರೀರಾಮನನ್ನು, ತಾಪಸಂ - ತಪಸ್ವಿಯನ್ನಾಗಿಯೂ, ಕೃತ್ವಾ - ಮಾಡಿ, ದುಃಖೇ - ದುಃಖಿತವಾದ, ವ್ರಣೇ - ಘಾಯದಮೇಲೆ, ಕ್ಷಾರಂ - ಉಪ್ಪಿನನೀರನ್ನು, ಆದಧಾಇವ - ಬಿಡುವಳಂತೆ, ದುಃಖಂ - ದುಃಖವನ್ನು, ಅಕರೋಃ - ಮಾಡಿದವಳಾದೆ. ‖ ೩ ‖ ತ್ವಂ - ನೀನು

ಕೈಕೇಯಿಯನ್ನು ಕುರಿತು ಹೀಗೆಂದನು. “ಓ ಕೈಕೇಯಿ ! ಪಿತೃಹೀನನೂ, ಭ್ರಾತೃಹೀನನೂ, ಆದ ನನಗೆ ಇನ್ನುಮೇಲೆ ಈ ರಾಜ್ಯದಿಂದೇನು ಪ್ರಯೋಜನ? ಅಯ್ಯೋ! ಅಣ್ಣನೂ ಇಲ್ಲದೆ, ತಂದೆಯೂ ಇಲ್ಲದೆ ನಾನು ದಿಕ್ಕಿಲ್ಲದವನಾದೆನಲ್ಲವೆ? ಕೈಕೇಯಿ! ನೀನು ದಶರಥರಾಜನನ್ನು ಕೊಂದೆ; ಸೀತಾರಾಮಲಕ್ಷ್ಮಣರನ್ನು ದಂಡಕಾರಣ್ಯಕ್ಕಟ್ಟಿದೆ; ಹೀಗೆ ಮಾಡಿದುದರಿಂದ ನೀನು ಒಂದು ದುಃಖದ ಮೇಲೆ ಇನ್ನೊಂದು ದುಃಖವನ್ನು ನಿರ್ಮಿಸಿದವಳಾದೆ. ಮಾತ್ರವಲ್ಲದೆ ಹುಣ್ಣಿನಮೇಲೆ ಉಪ್ಪಿಟ್ಟಂತೆ ನಿನ್ನ ಕಾರ್ಯವು ಅತಿ ಹೇಯವಾದುದು. ಎಲೌ ಕೈಕೇಯಿ! ನೀನು ಈ ನಮ್ಮ ರಘುರಾಯರ ವಂಶವನ್ನು ನಾಶಗೊಳಿಸಲು ಕಾಳರಾತ್ರಿ

ತಾತ್ಪರ್ಯ:—ಕೈಕೇಯಿಯು ಈ ರೀತಿ ಹೇಳಲು ಶ್ರೀರಾಮನ ತಮ್ಮನಾದ ಆ ಭರತನು ಕೈಗಳಿಂದ ಕಿವಿಗಳನ್ನು ಮುಚ್ಚಿಕೊಂಡು ನೆಲಕ್ಕೆ ಬಿದ್ದು, “ಹಾ! ತಂದೆ, ಹಾ! ರಾಮ, ಸ್ವಾಮಿಯೆ!” ಎಂದು ಬಹಳವಾಗಿ ವಿಲಪಿಸಿ ಒಂದು ಮುಹೂರ್ತಕಾಲ ಮೈಮರೆತವನಾಗಿದ್ದು ಆ ಬಳಿಕ ಎಚ್ಚತ್ತವನಾಗಿ ತಾಯಿಯಾದ ಆ ದೇವಿಯನ್ನು ಕುರಿತು ಹೀಗೆಂದನು. “ಅಯ್ಯೋ! ನಾಶವಾದೆನು! ಎಲೆಗೆ ದುರ್ಬುದ್ಧಿಯುಳ್ಳವಳೆ! ಮಹಾರಾಜ ದಶರಥನು ಹತನಾದನು. ಲೋಕವೆಲ್ಲವೂ ನಾಶವಾಯಿತು! ಏನಿದು: ಇದನ್ನಾರು ಪ್ರೇರಿಸಿದರು? ಯಾರಿಗೋಸುಗ ನೀನೀಕೆಲಸವನ್ನು ಮಾಡಿದೆ? ಎಲೆ ದುರ್ಮತಿಯೆ! ಮಹಾರಾಜನನ್ನು ಕೊಂದು, ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿ ತಪಸ್ವಿಯನ್ನಾಗಿ ಮಾಡಿ, ನೀನು ರಾಜ್ಯವನ್ನನುಭವಿಸುವುದಕ್ಕಾಗಿರುವೆಯಲ್ಲವೆ? ಅಯ್ಯೋ! ಶ್ರೀರಾಮಮೂರ್ತಿಯನ್ನು ಕಾಡಿಗೆ ಕಳುಹಿದವಳೂ, ಪತಿಮಾರಕಳೂ ಆದ ನಿನ್ನುದರದಲ್ಲಿ ಹತ್ತು ತಿಂಗಳವರೆವಿಗೂ ಗರ್ಭವಾಸವನ್ನು ಮಾಡಿದೆನಲ್ಲ! ಲೋಕದಲ್ಲಿ ಜನನಿಂದೆಗೆ ಪಾತ್ರನಾದೆನಲ್ಲ! ಎಲೆಗೇ ಹತಮಾರಿಯೆ! ಶ್ರೀರಾಮಮೂರ್ತಿಗೆ “ಶ್ರೀರಾಮನನುಜನಾದ ಭರತನು ಮಾತೃಘಾತಿಯು” ಎಂಬ ಅಪಕೀರ್ತಿಯಿಲ್ಲದಿದ್ದರೆ, ನಾನೀಗಲೆ ಕುತ್ತಿಗೆಗೆ ಹಗ್ಗವನ್ನು ಬಿಗಿದುಕೊಂಡಾಗಲಿ, ವಿಷವನ್ನು ಕುಡಿದಾಗಲಿ ಬೆಂಕಿಯಲ್ಲಿಯೋ ನೀರಿನಲ್ಲಿಯೋ ಬಿದ್ದಾಗಲಿ, ನಾನೂ ಪ್ರಾಣಗಳನ್ನು ತೊರೆದು, ನಿನ್ನನ್ನೂ ಕೊಂದುಬಿಡುತ್ತಿದ್ದೆ! ಅಯ್ಯೋ! ಅದಕ್ಕೆ ಮಾರ್ಗವಿಲ್ಲದೆ ಹೋಗಿರುವುದು. ನಮ್ಮಣ್ಣನಾದ ಶ್ರೀರಾಮನು ನಿನ್ನಲ್ಲಿಯೂ ನಿಜಜನನಿಯಲ್ಲಿಯಂತೆಯೇ ಪ್ರೀತಿವಿಶ್ವಾಸಗಳನ್ನಿಟ್ಟಿದ್ದಾನೆ! ಏನು ಮಾಡಲಿ!” ಭರತನೀರೀತಿ ಕಠಿನ ವಾಕ್ಯಗಳನ್ನು ನುಡಿದು ಕಂಗಳಿಂದ ಸುಡುವನೋ ಎಂಬಂತೆ ನೋಡುತ್ತಿರಲು, ಕೈಕೇಯಿಯು ಅವನನ್ನು ಕುರಿತು ಹೀಗೆಂದಳು. “ಅಡಿಗಡಿಗ್ಗೂ ನನ್ನನ್ನೀರೀತಿ ಅಲ್ಲೆಗಳೆಯುತ್ತಿರುವೆಯೇಕೆ? ನಾನು ನಿನಗಾವ ಅಪಕಾರವನ್ನು ಮಾಡಿದೆ? ನಿನ್ನನ್ನು ಹೊತ್ತು ಹೆತ್ತು ಸಾಕಿ ಸಲುಹಿ ನಿನಗೆ ಬೇಕಾದ ಹಾಗೆ ಉಪಚಾರಗಳನ್ನು ಮಾಡಿಲ್ಲವೆ? ನಿನ್ನ ತಂದೆಯು ಸ್ವರ್ಗಸ್ಥನಾದನು; ಅಣ್ಣತಮ್ಮಂದಿರಾದ ಶ್ರೀರಾಮಲಕ್ಷ್ಮಣರು ಅರಣ್ಯಕ್ಕೆ ಕಳುಹಲಾದರು. ಹೆಚ್ಚಾಗಿ ಹೇಳುವುದರಿಂದೇನು ಪ್ರಯೋಜನ! ಸುಖವಾಗಿ ರಾಜ್ಯಭಾರವನ್ನು ಮಾಡುವವನಾಗು. ‖ ೧೦ ‖

ತ್ವಮಭಾವಾಯ ಕಾಳರಾತ್ರಿ ರಿವಾಗತಾ || ಅಂಗಾರ ಮುಪಗೂಹ್ಯಸ್ಮ ಪಿತಾ ಮೇ
ನಾವಬುದ್ಧವಾನ್ || ೪ || ಮೃತ್ಯು ಮಾಪಾದಿತೋ ರಾಜಾ ತ್ವಯಾ ಮೇ
ಪಾಪದರ್ಶಿನಿ! || ಸುಖಂ ಪರಿಹೃತಂ ಮೋಹಾ ತ್ಕುಲೇಸ್ಮಿನ್ ಕುಲಪಾಂಸನಿ! ||೫||
ತ್ವಾಂ ಪ್ರಾಪ್ಯಹಿ ಪಿತಾ ಮೇದ್ಯ ಸತ್ಯಸಂಧೋ ಮಹಾಯಶಾಃ|| ತೀವ್ರ ದುಃಖಾಭಿ
ಸಂತಪ್ತೋ ವೃತ್ತೋ ದಶರಥೋ ನೃಪಃ || ೬ || ವಿನಾಶಿತೋ ಮಹಾರಾಜಃ
ಪಿತಾಮೇ ಧರ್ಮವತ್ಸಲಃ! || ಕಸ್ಮಾ ತ್ಪ್ರವ್ರಾಜಿತೋ ರಾಮಃ? ಕಸ್ಮಾದೇವ
ವನಂಗತಃ? || ೭ || ಕೌಸಲ್ಯಾಚ ಸುಮಿತ್ರಾಚ ಪುತ್ರಶೋಕಾಭಿಪೀಡಿತೇ ||

ಕಾಳರಾತ್ರಿರಿವ - (ಗೋ) ಪ್ರಳಯಕಾಲದ ರಾತ್ರಿಯಲ್ಲಿ ಹುಟ್ಟಿದ ಸರ್ವಸಂಹಾರಶಕ್ತಿಯಂತೆ, ಕುಲಸ್ಯ - **ವಂಶದ**, ಅಭಾವಾಯ - ನಾಶಕ್ಕೋಸ್ಕರ ಆಗತಾ - ಬಂದುಸೇರಿದೆ, ಮೇ-ನನ್ನ, ಪಿತಾ - ತಂದೆಯು, **ಅಂಗಾರಂ** - ಬೆಂಕಿಯಕಿಡಿಯನ್ನು, ಉಪಗೂಹ್ಯ - (ತಿ) ಬಟ್ಟೆಯಲ್ಲಿ ಮುಚ್ಚಿಕೊಂಡು, ನಾವಬುದ್ಧ **ವಾನ್** - ಅರಿಯದೆಹೋದನು. || ೪ || ಹೇ ಪಾಪದರ್ಶಿನಿ - ಎಲೌ ಪಾಪದಲ್ಲಿಯೇ ದೃಷ್ಟಿಯುಳ್ಳವಳೇ, **ತ್ವಯಾ** - ನಿನ್ನಿಂದ, ರಾಜಾ - ಅರಸು, ಮೃತ್ಯುಂ - ಮರಣವನ್ನು, ಆಪಾದಿತಃ - ಹೊಂದಿಸಲ್ಪಟ್ಟನು, **ಹೇ ಕುಲಪಾಂಸನಿ** - ಎಲೌ ಕುಲನಾಶಕಳೇ, ಅಸ್ಮಿನ್ಕುಲೇ - ಈ ವಂಶದಲ್ಲಿ, ಮೇ-ನನಗೆ, ಮೋಹಾತ್- **ಅಜ್ಞಾನದಿಂದ**, ಸುಖಂ - ಸುಖವು, ಪರಿಹೃತಂ - ಹೋಗಲಾಡಿಸಲಾಯಿತು. || ೫ || ಸತ್ಯಸಂಧಃ- **ಸತ್ಯಪ್ರತಿಜ್ಞೆಯುಳ್ಳ**, ಮಹಾಯಶಾಃ - ಬಹಳ ಕೀರ್ತಿವಂತನಾದ, ಮೇ - ನನ್ನ, ಪಿತಾ-ತಂದೆಯಾದ, ದಶರಥೋನೃಪಃ - ದಶರಥರಾಯನು, ತ್ವಾಂ - ನಿನ್ನನ್ನು, ಪ್ರಾಪ್ಯ-ಹೊಂದಿ, ಅದ್ಯ - ಈಗ, ತೀವ್ರ **ದುಃಖಾಭಿಸಂತಪ್ತಃ** - ತೀಕ್ಷ್ಣವಾದ ದುಃಖದಿಂದ ಸಂಕಟಗೊಂಡು, ವೃತ್ತಃ - ಮೃತನಾದನು. || ೬ || ಧರ್ಮವತ್ಸಲಃ - ಧರ್ಮದಲ್ಲೇ ವಾತ್ಸಲ್ಯವುಳ್ಳ, ಮಹಾರಾಜಃ - ಮಹಾರಾಜನಾದ, ಮೇ - **ನನ್ನ**, ಪಿತಾ - ತಂದೆಯು, ಕಸ್ಮಾತ್ - ಯಾವ ಕಾರಣ, ವಿನಾಶಿತಃ - ನಾಶಗೊಳಿಸಲ್ಪಟ್ಟನು, **ರಾಮಃ** - ಶ್ರೀರಾಮನು, ವನಂಗತಃ - ಅರಣ್ಯವನ್ನು ಹೊಂದಿ, ಕಸ್ಮಾದೇವ-ಮತ್ತಾವ ಹೇತುವಿನಿಂದ, **ಪ್ರವ್ರಾಜಿತಃ** - ಹೊರಡಿಸಲ್ಪಟ್ಟನು. || ೭ || ಕೌಸಲ್ಯಾಚ - ಕೌಸಲ್ಯಾದೇವಿಯೂ, ಸುಮಿತ್ರಾಚ -

---

ಯಂತೆ ನಮ್ಮ ಮನೆಯನ್ನು ಸೇರಿದೆ! ನಮ್ಮ ಪೂಜ್ಯಪಾದನು ಏನೂ ಅರಿಯದೆ ಕೆಂಡದಂತಿರುವ ನಿನ್ನನ್ನು ಆಲಿಂಗಿಸಿಕೊಂಡನು; ಅರಿಯದೆ ನಿನ್ನ ಕೈ ಹಿಡಿದುದರಿಂದ ಕೊನೆಗೆ ನಿನ್ನಿಂದಲ್ಲೇ **ಮರಣವನ್ನೂ** ಹೊಂದಿದನು! ಎಲೆಗೆ ಪಾಪಸ್ವಭಾವವುಳ್ಳವಳೆ! ನಮ್ಮ ತಂದೆಯಾದ ದಶರಥ **ರಾಯನನ್ನು** ನಿರ್ನಿಮಿತ್ತವಾಗಿ ಕೊಂದೆಯಲ್ಲವೆ? ಎಲೆ ಕುಲಗೇಡಿಯೆ! ಎಳ್ಳಷ್ಟೂ ಜ್ಞಾನವಿಲ್ಲದೆ, ಕೇವಲ ಭ್ರಾಂತಿಯಿಂದ, ಇತಃಪರ ನಮ್ಮ ರಘುಕುಲದವರಾರೂ ಸಂತೋಷಪಡ **ದಂತೆ** ಮಾಡಿದೆಯಲ್ಲವೆ? || ೫ || ಸತ್ಯಸಂಧನೂ, ಅಧಿಕವಾದ ಸತ್ಕೀರ್ತಿವಂತನೂ ನಮ್ಮ **ತಂದೆಯೂ** ಆದ ದಶರಥ ಮಹೀಪಾಲನು ನಿನ್ನನ್ನು ಹೊಂದಿ ಈಗ ಮಹದ್ದುಃಖವನ್ನು ಸಹಿಸಲಾರದೆ ಮರಣವನ್ನು ಹೊಂದಿದನಲ್ಲವೆ? ಎಲೆಗೆ; ಮಹಾತ್ಮನೂ, ಮಹಾರಾಜನೂ ಆದ **ನಮ್ಮ** ತಂದೆಯನ್ನೇಕೆ ಕೊಂದೆಯೋ? ನೀನಾವ ನಿಮಿತ್ತದಿಂದ ನಮ್ಮಣ್ಣನಾದ ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿದೆ? ಅಹಹ! ಎಂತಹ ದುಷ್ಕೃತ್ಯವನ್ನು ಮಾಡಿರುವೆ? ಅಯ್ಯೋ!,

ದುಷ್ಕರಂ ಯದಿ ಜೀವೇತಾಂ ಪ್ರಾಪ್ಯ ತ್ವಾಂ ಜನನೀಂ ಮಮ ॥ ೮ ॥ ನನು ತ್ವಾರ್ಯೋಽಪಿ ಧರ್ಮಾತ್ಮಾ ತ್ವಯಿ ವೃತ್ತಿ ಮನುತ್ತಮಾಂ ॥ ವರ್ತತೇ ಗುರುವೃತ್ತಿಜ್ಞೋ ಯಥಾ ಮಾತರಿ ವರ್ತತೇ? ॥೯॥ ತಥಾ ಜ್ಯೇಷ್ಠಾ ಹಿ ಮೇ ಮಾತಾ ಕೌಸಲ್ಯಾ ದೀರ್ಘದರ್ಶಿನೀ ॥ ತ್ವಯಿ ಧರ್ಮಂ ಸಮಾಸ್ಥಾಯ ಭಗಿನ್ಯಾಮಿವ ವರ್ತತೇ? ॥ ೧೦ ॥ ತಸ್ಯಾಃ ಪುತ್ರಂ ಕೃತಾತ್ಮಾನಂ ಚೀರವಲ್ಕಲವಾಸಸಂ ॥ ಪ್ರಸ್ಥಾಪ್ಯ ವನವಾಸಾಯ ಕಥಂ ಪಾಪೇ ನಶೋಚಸಿ? ॥ ೧೧ ॥ ಅಪಾಪ

ಸುಮಿತ್ರಾದೇವಿಯೂ, ಪುತ್ರಶೋಕಾಭಿಪೀಡಿತೇ - ಪುತ್ರವ್ಯಸನದಿಂದ ಬಾಧಿತರಾಗಿ, ಮಮ - ನನಗೆ, ಜನನೀಂ - ತಾಯಿಯಾದ, ತ್ವಾಂ - ನಿನ್ನನ್ನು, ಪ್ರಾಪ್ಯ - ಹೊಂದಿ, ಜೀವೇತಾಂಯದಿ - ಬದುಕಿರುವವರೇ ಆದರೆ, ದುಷ್ಕರಂ - ಅಸಾಧ್ಯವು. ॥ ೮ ॥ ಗುರುವೃತ್ತಿಜ್ಞಃ - ಗುರುಶುಶ್ರೂಷೆಯಕ್ರಮವನ್ನು ತಿಳಿದಿರುವ, ಧರ್ಮಾತ್ಮಾ - ಧರ್ಮಿಷ್ಠನಾದ, ಆರ್ಯೋಽಪಿ - ಅಣ್ಣನೂ ಕೂಡ, ಮಾತರಿ-ತಾಯಿಯಲ್ಲಿ, ಯಥಾ - ಹೇಗೆ, ವರ್ತತೇ - ನಡೆದುಕೊಳ್ಳುವನೋ, ತ್ವಯಿ - ನಿನ್ನಲ್ಲಿಯೂ, ತಥಾ - ಹಾಗೆಯೇ, ಅನುತ್ತಮಾಂ - ಸರ್ವೋತ್ತಮವಾದ, ವೃತ್ತಿಂ - ಶುಶ್ರೂಷಾವ್ಯಾಪಾರವನ್ನು, ವರ್ತತೇನನು - ಅನುಸರಿಸಿದ್ದನಲ್ಲವೆ. ॥ ೯ ॥ ತಥಾ - ಹಾಗೆಯೇ, ದೀರ್ಘದರ್ಶಿನೀ - ಬಹಳ ದೂರದೃಷ್ಟಿಯುಳ್ಳ, ಮೇ - ನನಗೆ, ಜ್ಯೇಷ್ಠಾಮಾತಾ - ದೊಡ್ಡಮ್ಮನಾದ, ಕೌಸಲ್ಯಾ - ಕೌಸಲ್ಯಾದೇವಿಯು, ತ್ವಯಿ - ನಿನ್ನಲ್ಲಿ, ಧರ್ಮಂ - ಧರ್ಮವನ್ನು, ಸಮಾಸ್ಥಾಯ - ತಿಳಿದುಕೊಂಡು, ಭಗಿನ್ಯಾಮಿವ - ತಂಗಿಯಲ್ಲಿಯಂತೆ, ವರ್ತತೇ - ನಡೆದುಕೊಂಡಿದ್ದಳಷ್ಟೆ. ॥ ೧೦ ॥ ಹೇ ಪಾಪೇ - ಎಲೌ ಪಾಪಿಷ್ಠಳೇ, ತಸ್ಯಾಃ - ಅಂತಹ ಕೌಸಲ್ಯಾದೇವಿಗೆ, ಪುತ್ರಂ - ಕುವರನಾದ, ಕೃತಾತ್ಮಾನಂ - ಕೃತಜ್ಞನಾದ ಶ್ರೀರಾಮುನನ್ನು, ಚೀರವಲ್ಕಲವಾಸಸಂ - ನಾರುಮಡಿಯೇ ವಸ್ತ್ರವುಳ್ಳವನನ್ನಾಗಿ, ವನವಾಸಾಯ - ಅರಣ್ಯವಾಸಕ್ಕೋಸುಗ, ಪ್ರಸ್ಥಾಪ್ಯ - ಕಳುಹಿಸಿ, ಕಥಂನಶೋಚಸಿ - ದುಃಖಿತಳಾಗದಿರುವೆಯೇಕೆ. ॥ ೧೧ ॥ ಅಪಾಪದರ್ಶನಂ - ಪಾಪದಲ್ಲಿ ಸ್ವಲ್ಪವೂ ದೃಷ್ಟಿಯಿಲ್ಲದಿರುವ, ಶೂರಂ - ಪರಾಕ್ರಮಿಯಾದ, ಕೃತಾ

ಪಾಪಿಷ್ಠಳೆ; ನನಗೆ ತಾಯಿಯಾದ ನಿನ್ನಿಂದ, ಕೌಸಲ್ಯಾ ಸುಮಿತ್ರೆಯರೀರ್ವರೂ, ಪುತ್ರ ದುಃಖದಿಂದ ಪರಿತಪಿಸುವವರಾದರಲ್ಲವೆ? ಈ ಇಬ್ಬರೂ ಇನ್ನು ಹೇಗೆ ಜೀವಿಸುತ್ತಾರೆ; ಗುರು ಸನ್ನಿಧಾನದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನರಿತಿರುವವನೂ, ಧರ್ಮಾತ್ಮನೂ, ಪೂಜ್ಯನೂ ಆದ ಶ್ರೀರಾಮನು ಯಾವ ರೀತಿಯಲ್ಲಿ ತನ್ನ ತಾಯಿಗೆ ಶುಶ್ರೂಷೆಯನ್ನು ಮಾಡುತ್ತಿದ್ದನೋ, ಆ ರೀತಿ ನಿನಗೂ ಶುಶ್ರೂಷೆಯನ್ನು ಮಾಡುತ್ತಿದ್ದನಲ್ಲವೆ? ಅಲ್ಲದೆ ಆ ರೀತಿಯಲ್ಲಿಯೇ, ದೀರ್ಘಾಲೋಚನೆಯುಳ್ಳವಳೂ, ನನಗೆ ದೊಡ್ಡಮ್ಮನಾದವಳೂ ಆದ ಕೌಸಲ್ಯಾದೇವಿಯು ಧರ್ಮಮಾರ್ಗವನ್ನು ತಪ್ಪದೆ ನಿನ್ನಲ್ಲಿ, ತನ್ನ ತಂಗಿಯಲ್ಲಿಯಂತೆ ನಡೆದುಕೊಳ್ಳುತ್ತಿದ್ದಳಲ್ಲವೆ? ॥೧೦॥ ಎಲೌ ಪಾಪಾತ್ಮಳೆ! ಬುದ್ಧಿವಂತರಲ್ಲುತ್ತಮನೂ, ಕೌಸಲ್ಯಾದೇವಿಯ ಮಗನೂ ಆದ ಶ್ರೀರಾಮನನ್ನು ನಾರುಮಡಿಗಳನ್ನುಡುವಂತೆ ಮಾಡಿ ಅರಣ್ಯದಲ್ಲಿ ವಾಸ ಮಾಡುವಂತೆ ಮಾಡಿದೆ! ಇಂತಹ ದುಷ್ಕಾರ್ಯವನ್ನುಮಾಡಿಬಿಟ್ಟು ಏನೂ ದುಃಖಿಸದೆ ಹೇಗೆತಾನೆ ಇರುವೆಯೋ? ಸ್ವಲ್ಪವಾದರೂ ಪಾಪವನ್ನುಮಾಡದವನೂ, ಬುದ್ಧಿವಂತರಲ್ಲಿ ಶ್ರೇಷ್ಠನೂ,

ದರ್ಶನಂ ಶೂರಂ ಕೃತಾತ್ಮಾನಂ ಯಶಸ್ವಿನಂ ॥ ಪ್ರವ್ರಾಜ್ಯ ಚೀರವಸನಂ ಕಿನ್ನು ಪಶ್ಯಸಿ ಕಾರಣಂ? ॥ ೧೨ ॥ ಲುಬ್ಧಾಯ ವಿಧಿತೋ ಮನ್ಯೇ ನತೇಽಹಂ ರಾಘವಂ ಪ್ರತಿ ॥ ತಥಾಹ್ಯನರ್ಥೋ ರಾಜ್ಯಾರ್ಥಂ ತ್ವಯಾಽನೀತೋ ಮಹಾನಯಂ ॥೧೩॥ ಕಥಂಹಿ ಪುರುಷವ್ಯಾಘ್ರೌ ಪ್ರಪಶ್ಯ ರಾಮಲಕ್ಷ್ಮಣೌ ॥ ಕೇನ ಶಕ್ತಿಪ್ರಭಾವೇನ ರಾಜ್ಯಂ ರಕ್ಷಿತು ಮುತ್ಸಹೇ ? ॥೧೪॥ ತಂಹಿ ನಿತ್ಯಂ ಮಹಾರಾಜೋ ಬಲವಂತಂ ಮಹಾಬಲಃ ॥ ಉಪಾಶ್ರಿತೋಽಭೂ ದ್ಧರ್ಮಾತ್ಮಾ ಮೇರುರ್ಮೇರುವನಂ ಯಥಾ ॥೧೫॥ ಸೋಽಹಂ ಕಥಮಿಮಂ ಭಾರಂ ಮಹಾಧುರ್ಯ ಸಮುದ್ಧೃತಂ ॥

ತ್ಮಾನಂ - ಕೃತಜ್ಞನಾದ, ಯಶಸ್ವಿನಂ - ಕೀರ್ತಿವಂತನಾದ, ಚೀರವಸನಂ - ನಾರುಮಡಿಯುಟ್ಟಿರುವ ಶ್ರೀರಾಮನನ್ನು, ಪ್ರವ್ರಾಜ್ಯ - ಹೊರಡಿಸಿ, ಕಿಂಕಾರಣಂ - ಯಾವ ಫಲರೂಪವಾದ ಹೇತುವನ್ನು, ಪಶ್ಯಸಿ - ಕಂಡೆ. ॥ ೧೨ ॥ ಅಹಂ - ನಾನು, ರಾಘವಂಪ್ರತಿ - ಶ್ರೀರಾಮನನ್ನು ಕುರಿತು, ಯಥಾ- ಹೇಗೋ, ತಥಾ - ಹಾಗೆಯೇ ಎಂಬುದನ್ನು, ಲುಬ್ಧಾಯಾಃ - ರಾಜ್ಯದಲ್ಲಿ ಆಸಕ್ತಳಾದ, ತೇ - ನಿನ್ನಿಂದ, ನವಿದಿತಃ - ತಿಳಿಯಲಾಗಲಿಲ್ಲ, ಇತಿ - ಇಂತೆಂದು, ಮನ್ಯೇ - ಎಣಿಸುತ್ತೇನೆ, ರಾಜ್ಯಾರ್ಥಂ - ನನಗೆ ರಾಜ್ಯನಿಮಿತ್ತವಾಗಿ, ತ್ವಯಾ - ನಿನ್ನಿಂದ, ಮಹಾ - ದೊಡ್ಡದಾದ, ಅಯಮನರ್ಥಃ - ಈ ಅನರ್ಥವು, ಆನೀತೇಹಿ - ತಂದುಹಾಕಲಾಯಿತಲ್ಲವೆ. ॥ ೧೩ ॥ ಅಹಂ - ನಾನಾದರೊ, ಪುರುಷವ್ಯಾಘ್ರೌ - ಪುರುಷಶ್ರೇಷ್ಠರಾದ, ರಾಮಲಕ್ಷ್ಮಣೌ-ರಾಮಲಕ್ಷ್ಮಣರನ್ನು, ಅಪಶ್ಯ - ಕಾಣದೆ, ಕೇನ - ಯಾವ ಶಕ್ತಿಪ್ರಭಾವೇನ - ಸಾಮರ್ಥ್ಯದಿಂದಲೂ ಪ್ರಭಾವದಿಂದಲೂ, ರಾಜ್ಯಂ - ರಾಜ್ಯವನ್ನು, ರಕ್ಷಿತುಂ - ರಕ್ಷಣೆಮಾಡಲು, ಉತ್ಸಹೇ - ಉದ್ಯುಕ್ತನಾದೇನು. ॥ ೧೪ ॥ ಮಹಾಬಲಃ - ಮಹಾಬಲಿಷ್ಠನೂ, ಧರ್ಮಾತ್ಮಾ - ಧರ್ಮಿಷ್ಠನೂ, ಮಹಾರಾಜಃ-ಮಹಾರಾಜನೂ ಆದ ದಶರಥರಾಯನು, ಮೇರುಃ - ಮೇರುಪರ್ವತವು, ಮೇರುವನಂಯಥಾ - ಮೇರುಪರ್ವತಕ್ಕೆ ಸಂಬಂಧಿಸಿದ ವನವನ್ನಂತೆ, ಬಲವಂತಂ - ಬಲಾಢ್ಯನಾದ, ತಂ - ಆ ಶ್ರೀರಾಮನನ್ನು, ನಿತ್ಯಂ - ನಿರಂತರವೂ, ಉಪಾಶ್ರಿತಃ - ಆಶ್ರಯಿಸಿದವನು, ಅಭೂದ್ಧಿ - ಆಗಿದ್ದನಷ್ಟೆ. ॥ ೧೫ ॥ ಸೋಽಹಂ - ಅಂತಹ ನಾನು,

ಮಹಾ ಕೀರ್ತಿಶಾಲಿಯೂ ಆದ ಶ್ರೀರಾಮನನ್ನು ನಾರುಮಡಿಯುಟ್ಟವನನ್ನಾಗಿ ಅರಣ್ಯಕ್ಕೆ ಕಳುಹಿದೆಯಲ್ಲ! ಹೀಗೆ ಕಳುಹಲು ಯಾವ ಕಾರಣವನ್ನು ಕಂಡೆ? ನಾನು ನಮ್ಮಣ್ಣನಿವನಾದ ಶ್ರೀರಾಮನಲ್ಲಿ ಮಹಾ ಭಕ್ತಿಯುಳ್ಳವನಾಗಿರುವುದು, ರಾಜ್ಯಲುಬ್ಧಳಾದ ನಿನಗೆ ತಿಳಿಯದೆಹೋಯಿತಲ್ಲವೆ ಅಯ್ಯೋ? ಪಾಪಿ; ರಾಜ್ಯಲೋಭದಿಂದ ದೊಡ್ಡ ಕೇಡನ್ನೇ ತಂದಿಟ್ಟೆಯಲ್ಲವೆ? ನಾನು ಪುರುಷೋತ್ತಮರಾದ ರಾಮಲಕ್ಷ್ಮಣರನ್ನು ನೋಡದೆ, ಯಾರ ಬಲದಿಂದ ಈ ಸಾಕೇತರಾಜ್ಯವನ್ನು ಪಾಲಿಸಲಿ? ನಾನೀರಾಜ್ಯವನ್ನಾಳಲಾರೆನು. ಇದನ್ನು ಖಂಡಿತವಾಗಿಯೂ ತಿಳಿದುಕೊ; ಮಹಾ ಬಲಶಾಲಿಯೂ, ಧರ್ಮಸ್ವಭಾವವುಳ್ಳವನೂ ಆದ ದಶರಥಧರಾವಲ್ಲಭನು "ಮೇರುಪರ್ವತವು ತನ್ನಲ್ಲಿರುವ ವನಗಳನ್ನಂತೆ" ಎಲ್ಲ ಕಾಲಗಳಲ್ಲಿಯೂ, ಪ್ರೇಮವುಳ್ಳವನೊ, ಬಲವಂತನೂ ಆದ ಶ್ರೀರಾಮಮೂರ್ತಿಯನ್ನೇ ಆಶ್ರಯಿಸಿದವನಾಗಿದ್ದನು. ॥ ೧೫ ॥ ಈಗ ಶ್ರೀರಾಮನಾಶ್ರಯವಿಲ್ಲದ ನಾನು, "ಕರುವು ಎತ್ತುಹೊರುವ

ದಮ್ಯೋ ಭಾರಮಿಮಾಸಾದ್ಯ ವಹೇಯಂ ಕೇನ ಚೌಜಸಾ? ॥ ೧೬ ॥ ಅಥವಾ
ಮೇ ಭವೇಚ್ಛಕ್ತಿ ರ್ಯೋಗೈರ್ಬುದ್ಧಿಬಲೇನ ವಾ ॥ ಸಕಾಮಾಂ ನಕರಿಷ್ಯಾಮಿ
ತ್ವಾಮಹಂ ಪುತ್ರಗರ್ಧಿನೀಂ ॥ ೧೭ ॥ ನಮೇ ವಿಕಾಂಕ್ಷಾ ಜಾಯೇತ ತ್ಯಕ್ತುಂ
ತ್ವಾಂ ಪಾಪನಿಶ್ಚಯಾಂ ॥ ಯದಿ ರಾಮಸ್ಯ ನಾಪೇಕ್ಷಾ ತ್ವಯಿ ಸ್ಯಾನ್ಮಾತೃವ
ತ್ಸದಾ ॥ ೧೮ ॥ ಉತ್ಪನ್ನಾ ತು ಕಥಂ ಬುದ್ಧಿ ಸ್ತವೇಯಂ ಪಾಪದರ್ಶಿನಿ? ॥
ಸಾಧುಚಾರಿತ್ರ ವಿಭ್ರಷ್ಟೇ! ಪೂರ್ವೇಷಾಂ ನೋ ವಿಗರ್ಹಿತಾ ॥ ೧೯ ॥ ಅಸ್ಮಿನ್

ಮಹಾಧುರ್ಯಸಮುದ್ಧೃತಂ - ದೊಡ್ಡದಾದ ಭಾರವನ್ನು ಹೊರುವ ದೊಡ್ಡ ಎತ್ತಿನಿಂದ ಎತ್ತಿದ, **ಇಮಂಭಾರಂ** - ಈ ಭಾರವನ್ನು, ದಮ್ಯಃ - ಕರುವು, ಧುರಮಿವ - ಭಾರವನ್ನಂತೆ, ಆಸಾದ್ಯ - **ಹೊಂದಿ, ಕೇನಚೌಜಸಾ** - ಯಾವ ಸಾಮರ್ಥ್ಯದಿಂದ, ಕಥಂವಹೇಯಂ - ಹೇಗೆ ವಹಿಸಿಯೇನು? ॥ ೧೬ ॥ ಅಥವಾ - ಹಾಗಲ್ಲದೇ ಹೋದರೆ, ಯೋಗೈಃ - ಸಾಮಾದ್ಯುಪಾಯಗಳಿಂದಲೂ, ಬುದ್ಧಿ **ಬಲೇನವಾ** - ಬುದ್ಧಿಚಾತುರ್ಯದಿಂದಲೂ, ಮೇ - ನನಗೆ, ಶಕ್ತಿಃ - ಸಾಮರ್ಥ್ಯವು, ಭವೇತ್ - **ಆದೀತು,** ತಥಾಪಿ - ಹಾಗಾದರೂ, ಅಹಂ - ನಾನು, ಪುತ್ರಗರ್ಧಿನೀಂ - ಮಗನಿಗೆ ರಾಜ್ಯವನ್ನ **ಪೇಕ್ಷಿಸಿದ,** ತ್ವಾಂ - ನಿನ್ನನ್ನು, ಸಕಾಮಾಂ - ಮನೋರಥದಿಂದೊಡಗೂಡಿದವಳನ್ನಾಗಿ, ನಕರಿ **ಷ್ಯಾಮಿ** - ಮಾಡಲಾರೆನು. ॥ ೧೭ ॥ ತ್ವಯಿ - ನಿನ್ನಲ್ಲಿ, ರಾಮಸ್ಯ - ಶ್ರೀರಾಮನಿಗೆ, ಮಾತೃವತ್ - **ತಾಯಿಯಂತೆ,** ಸದಾ - ನಿರಂತರವೂ, ಅಪೇಕ್ಷಾ - ಅಪೇಕ್ಷೆಯು, ನಸ್ಯಾದ್ಯದಿ - ಇಲ್ಲದೇ ಹೋದರೆ, **ಪಾಪನಿಶ್ಚಯಾಂ** - ಪಾಪದಲ್ಲೇ ನಿಶ್ಚಯವುಳ್ಳ, ತ್ವಾಂ - ನಿನ್ನನ್ನು, ತ್ಯಕ್ತುಂ - ಬಿಡಲು, ಮೇ - **ನನಗೆ,** ವಿಕಾಂಕ್ಷಾ - ಅಪೇಕ್ಷೆಯಿಲ್ಲದಿರುವಿಕೆಯು, ನಜಾಯೇತ - ಹುಟ್ಟದೇಯಿದ್ದೀತು. ॥ ೧೮ ॥ **ಹೇ ಸಾಧುಚಾರಿತ್ರವಿಭ್ರಷ್ಟೇ** - ಎಲೌ ಒಳ್ಳೆಯನಡತೆಯಿಂದ ಬಿಡಲ್ಪಟ್ಟವಳೇ, ತವ - ನಿನಗೆ, ನಃ - **ನಮ್ಮ, ಪೂರ್ವೇಷಾಂ** - ಪೂರ್ವರಾಜರಿಗೆ, ವಿಗರ್ಹಿತಾ - ನಿಂದಿತವಾದ, ಪಾಪದರ್ಶನೀ - ಪಾಪ **ವನ್ನೇ ತೋರಿಸುತ್ತಿರುವ,** ಇಯಂಬುದ್ಧಿಃ - ಈ ಬುದ್ಧಿಯು, ಕಥಮುತ್ಪನ್ನಾ - ಹೇಗೆತಾನೆ ಉಂಟಾ **ಯಿತು,** ಹಿ - ಯಾವ ಕಾರಣ, ಅಸ್ಮಿನ್ಕುಲೇ - ಈ ವಂಶದಲ್ಲಿ, ಪೂರ್ವೇಷಾಂ - ಪೂರ್ವರಾಜರಲ್ಲಿ,

ಭಾರವನ್ನು ಹೊರಲಾರದಂತೆ" ಈ ರಾಜ್ಯವನ್ನು ಪರಿಪಾಲಿಸುವ ಭಾರವನ್ನು ಹೊರಲಾರದವ**ನಾಗಿದ್ದೇನೆ;** ಈ ರಾಜ್ಯಭಾರವನ್ನು ನನ್ನ ತೇಜಸ್ಸಿನಿಂದ ಭರಿಸಲಾರೆನು; ಇಂತಹ ಭಾರವನ್ನು **ನನ್ನ ಮೇಲೆ** ನೀನು ಹೊರಿಸಿದೆ. ಹಾಗೆ ನೀನು ಬಲಾತ್ಕಾರವಾಗಿ ಹೊರಿಸಿದರೂ ಇದನ್ನು **ನಾನು** ಹೊರಲಾರೆನೆಂಬುದನ್ನು ತಿಳಿ. ಒಂದು ವೇಳೆ, ಸಾಮದಾನಭೇದಾದ್ಯುಪಾಯಗ**ಳಿಂದ** ಈ ರಾಜ್ಯಭಾರವನ್ನು ವಹಿಸಲು ನಾನು ಸಮರ್ಥನಾದರೂ, ಮಗನಿಗೆ ರಾಜ್ಯವಿತ್ತು **ಸಂತಸಪಡಬೇಕೆಂದು** ಕೋರಿದ ನಿನಗೆ ಸಂತೋಷವನ್ನುಂಟುಮಾಡಲಾರೆನು! ಶ್ರೀರಾಮ**ನಿಗೆ** ನಿನ್ನಲ್ಲಿ ನಿಜಜನನಿಯಲ್ಲಿಯಂತೆ ಗೌರವವುಂಟು. ಹಾಗೆ ಶ್ರೀರಾಮನಿಗೆ ನಿನ್ನಲ್ಲಿ ಆ ನಿಜ ಜನನೀಭಾವವಿಲ್ಲದಿದ್ದಿದ್ದರೆ ನಿನ್ನನ್ನೀಗಲೇ ತೊರೆದುಬಿಡುತ್ತಿದ್ದೆನು. ಎಲ್ಲ ಕಾಲಗಳಲ್ಲಿಯೂ **ಪಾಪಕೃತ್ಯವನ್ನೇ** ಮಾಡಬೇಕೆಂಬ ಬಯಕೆಯುಳ್ಳವಳೆ! ಸದಾಚಾರಹೀನಳೆ? ಎಲೆಗೆ **ಕೈಕೇಯೀ!** ನಮ್ಮ ಪೂರ್ವಜರಾರಿಗೂ ಹುಟ್ಟದ ಈ ದುರ್ಬುದ್ಧಿಯು ನಿನಗೆಲ್ಲಿಂದ ಹುಟ್ಟಿತೇ!

ಕುಲೇ ಹಿ ಪೂರ್ವೇಷಾಂ ಜ್ಯೇಷ್ಠೋ ರಾಜ್ಯೇಽಭಿಷಿಚ್ಯತೇ ॥ ಅಪರೇ ಭ್ರಾತರ ಸ್ತಸ್ಮಿನ್ ಪ್ರವರ್ತಂತೇ ಸಮಾಹಿತಾಃ ॥೨೦॥ ನಹಿ ಮನ್ಯೇ ನೃಶಂಸೇ! ತ್ವಂ ರಾಜಧರ್ಮ ಮುಪೇಕ್ಷಸೇ ॥ ಗತಿಂ ವಾ ನವಿಜಾನಾಸಿ ರಾಜವೃತ್ತಸ್ಯ ಶಾಶ್ವತೀಂ ॥ ೨೧ ॥ ಸತತಂ ರಾಜವೃತ್ತೇಹಿ ಜ್ಯೇಷ್ಠೋ ರಾಜ್ಯೇಽಭಿಷಿಚ್ಯತೇ ॥ ರಾಜ್ಞಾ ಮೇ ತತ್ಸಮಂ ತತ್ಸ್ಯಾ ದಿಕ್ಷ್ವಾಕೂಣಾಂ ವಿಶೇಷತಃ ॥ ೨೨ ॥ ತೇಷಾಂ ಧರ್ಮೈಕ ರಕ್ಷಾಣಾಂ ಕುಲಚಾರಿತ್ರ ಶೋಭಿನಾಂ ॥ ಅತ್ರಚಾರಿತ್ರ ಶೌಂಡೀ ರ್ಯಂ ತ್ವಾಂ ಪ್ರಾಪ್ಯ ವಿನಿವರ್ತಿತಂ ॥ ೨೩ ॥ ತವಾಪಿ ಸುಮಹಾಭಾಗಾ

ಜ್ಯೇಷ್ಠಃ - ದೊಡ್ಡವನಾದವನು, ಅಭಿಷಿಚ್ಯತೇ-ಅಭಿಷೇಕಮಾಡಲಾಗುತ್ತಾನೆಯೋ, ಅಪರೇಭ್ರಾತರಃ - ಉಳಿದ ತಮ್ಮಂದಿರು, ತಸ್ಮಿನ್ - ಆ ಜ್ಯೇಷ್ಠನಲ್ಲಿ, ಸಮಾಹಿತಾಃ - ಸಮಾಧಾನ ಚಿತ್ತವುಳ್ಳವರಾಗಿ, ಪ್ರವರ್ತಂತೇ - ಅನುಸರಿಸಿರುತ್ತಾರೆ. ॥ ೨೦ ॥ ಹೇ ನೃಶಂಸೇ - ಎಲೌ ಘಾತಕಳೇ, ತ್ವಂ - ನೀನು, ರಾಜಧರ್ಮಂ - ರಾಜಧರ್ಮವನ್ನು, ನಾಪೇಕ್ಷಸೇಹಿ - ಅಪೇಕ್ಷಿಸದೇಹೋದೆಯಲ್ಲವೆ, ರಾಜ ವೃತ್ತಸ್ಯ - ರಾಜನಡತೆಯ, ಶಾಶ್ವತೀಂ - ಸ್ಥಿರಭಾವವನ್ನು, ಗತಿಂವಾ - ಪರ್ಯವಸಾನವನ್ನೇ ಆಗಲಿ, ನವಿಜಾನಾಸಿ - ತಿಳಿಯದೆಹೋದೆ. ॥ ೨೧ ॥ ಸತತಂ - ನಿರಂತರವೂ, ರಾಜವೃತ್ತೇ - ರಾಜರ ನಡತೆಯಲ್ಲಿ, ಜ್ಯೇಷ್ಠಃ - ಜ್ಯೇಷ್ಠನು, ರಾಜ್ಯೇ - ರಾಜ್ಯದಲ್ಲಿ, ಅಭಿಸಿಚ್ಯತೇಹಿ - ಅಭಿಷೇಕಮಾಡಲಾ ಗುವನಷ್ಟೆ, ಏತತ್ - ಆ ಈ ನಡತೆಯು, ರಾಜ್ಞಾಂ - ಅರಸರಿಗೆ, ಸಮಂ - ಸಾಧಾರಣವಾದುದು, ಸ್ಯಾತ್ - ಆಗುವದು, ಇಕ್ಷ್ವಾಕೂಣಾಂ - ಇಕ್ಷ್ವಾಕು ವಂಶೋತ್ಪನ್ನರಾಯರಿಗೆ, ವಿಶೇಷತಃ - ವಿಶೇಷವಾಗಿ, ಸ್ಯಾತ್ - ಆಗುವದು. ॥ ೨೨ ॥ ಧರ್ಮೈಕರಕ್ಷಾಣಾಂ - ಧರ್ಮವನ್ನೇ ಮುಖ್ಯ ವಾಗಿ ಸಂರಕ್ಷಿಸುತ್ತಿರುವ, ಕುಲಚಾರಿತ್ರಶೋಭಿನಾಂ - ಕುಲಾಚಾರದಿಂದ ಪ್ರಕಾಶಿಸುತ್ತಿರುವ, ತೇಷಾಂ - ಆ ಪೂರ್ವರಾಜರ, ಚಾರಿತ್ರಶೌಂಡೀರ್ಯಂ - ನಡತೆಯಲ್ಲಿನ ದೊಡ್ಡತನವು, ತ್ವಾಂ - ನನ್ನನ್ನು, ಪ್ರಾಪ್ಯ - ಹೊಂದಿ, ವಿನಿವರ್ತಿತಂ - ತಿರಸ್ಕಾರಮಾಡಲ್ಪಟ್ಟಿತು. ॥ ೨೩ ॥ ತವಾಪಿ - ನಿನಗೂ, ಸುಮಹಾಭಾಗಾಃ - ಬಹಳ ಪುಣ್ಯವಂತರಾದ, ಕುಲಪೂರ್ವಗಾಃ - ವಂಶದಲ್ಲಿ ಜ್ಯೇಷ್ಠಾನು

ನಮ್ಮ ವಂಶದಲ್ಲಿ ಅನಾದಿಯಾಗಿ ಜ್ಯೇಷ್ಠಪುತ್ರನನ್ನೇ ರಾಜ್ಯದಲ್ಲಿ ಪಟ್ಟಾಭಿಷಿಕ್ತನನ್ನಾಗಿ ಮಾಡುತಿದ್ದರು; ಕನಿಷ್ಠರೆಲ್ಲರೂ ಜ್ಯೇಷ್ಠನಿಗೆ ಸಹಾಯಕರಾಗಿರುತಿದ್ದರು.॥೨೦॥ಛೀ,ಛೀ, ಘಾತಕಳೆ! ನೀನು ರಾಜಧರ್ಮಗಳನ್ನು ತಿಳಿದವಳಲ್ಲ; ರಾಜರ ಆಚಾರದಲ್ಲಿನ ಶಾಶ್ವತವಾದ ಸ್ಥಿತಿಯು ಕೂಡ ನಿನಗೆ ಗೊತ್ತಿಲ್ಲ; ನೀನು ದುಷ್ಟಳಾದುದರಿಂದಲೇ, ಸದಾಚಾರದಲ್ಲಿ ನಿನಗೆ ಬುದ್ಧಿಯು ಜನಿಸಲಿಲ್ಲ. ಪ್ರಾಚೀನ ರಾಜಸಂಪ್ರದಾಯಗಳನ್ನು ವಿಚಾರಿಸಲು, ಅನಾದಿ ಯಾಗಿ ಜ್ಯೇಷ್ಠಪುತ್ರನೇ ಅಭಿಷಿಕ್ತನಾಗುತಿದ್ದನಲ್ಲವೆ? ಇದು ಎಲ್ಲ ರಾಜರಿಗೂ ಸಹಜ ವಾದ ಧರ್ಮವು. ಈ ಧರ್ಮವು ರಘುಕುಲದವರಲ್ಲಿ ವಿಶೇಷವಾಗಿ ನಡೆದು ಬರುತ್ತಿರು ವುದು. ಧರ್ಮವನ್ನೆಡೆಬಿಡದೆ ಆಚರಿಸುವುದರಿಂದಲೂ, ಸತ್ಕುಲದಿಂದಲೂ, ಸದಾಚಾರ ಪರಂಪರೆಯಿಂದಲೂ ಒಡಗೂಡಿದ ಇಕ್ಷ್ವಾಕುರಾಯರ ವಂಶದ, "ಸದಾಚಾರ ಸಮನ್ವಿತ ವಾದ ಗರ್ವವು" ನಿನ್ನಿಂದ ನಾಶಗೊಳಿಸಿದುದಾಯಿತು. ನಿನ್ನ ತಂದೆಯಾದ ಕೇಕಯ

ಜನೇಂದ್ರಾಃ ಕುಲಪೂರ್ವಗಾಃ ॥ ಬುದ್ಧೇರ್ಮೋಹಃ ಕಥಮಯಂ ಸಂಭೂತ ಸ್ತ್ವಯಿ ಗರ್ಹಿತಃ ॥ ೨೪ ॥ ನತು ಕಾಮಂ ಕರಿಷ್ಯಾಮಿ ತವಾಹಂ ಪಾಪ ನಿಶ್ಚಯೇ ! ॥ ತ್ವಯಾ ವ್ಯಸನ ಮಾರಬ್ಧಂ ಜೀವಿತಾಂತಕರಂ ಮಮ ॥೨೫॥ ಏಷತ್ವಿದಾನೀಮೇವಾಹ ಮಪ್ರಿಯಾರ್ಥಂ ತವಾನಘಂ ॥ ನಿವರ್ತಯಿಷ್ಯಾಮಿ ವನಾ ದ್ಭ್ರಾತರಂ ಸ್ವಜನಪ್ರಿಯಂ ॥ ೨೬ ॥ ನಿವರ್ತಯಿತ್ವಾ ರಾಮಂಚ ತಸ್ಯಾಹಂ ದೀಪ್ತ ತೇಜಸಃ ॥ ದಾಸಭೂತೋ ಭವಿಷ್ಯಾಮಿ ಸುಸ್ಥಿತೇ ನಾಂತ ರಾತ್ಮನಾ ॥ ೨೭ ॥

ವರ್ತನದಲ್ಲಿ ಸ್ವಭಾವವುಳ್ಳವರು, ತ್ವಯಿ - ನಿನ್ನಲ್ಲಿ, ಗರ್ಹಿತಃ - ನಿಂದಿತವಾದ, ಅಯಂ - ಈಪರಿದೃಶ್ಯ ಮಾನವಾದ, ಬುದ್ಧೇರ್ಮೋಹಃ - ಬುದ್ಧಿಭ್ರಾಂತಿಯು, ಕಥಂಸಂಭೂತಃ - ಹೇಗೆ ಹುಟ್ಟಿತು ? ॥೨೪॥ ಹೇ ಪಾಪನಿಶ್ಚಯೇ - ಎಲೌ ಪಾಪದಲ್ಲಿಯೇ ಆಸಕ್ತಿಯುಳ್ಳವಳೇ, ಅಹಂ - ನಾನು, ತವ - ನಿನ್ನ, ಕಾಮಂ - ಕೋರಿಕೆಯನ್ನು, ನಕರಿಷ್ಯಾಮಿ - ಮಾಡಲಾರೆನು, ತ್ವಯಾ - ನಿನ್ನಿಂದ, ಮಮ-ನನಗೆ, ಜೀವಿತಾಂತಕರಂ - ಪ್ರಾಣಾಂತವನ್ನುಂಟುಮಾಡುತ್ತಿರುವ, ವ್ಯಸನಂ ವ್ಯಥೆಯು, ಆರಬ್ಧಂ - ಪ್ರಾರಂಭಿಸಲ್ಪಟ್ಟಿತು. ॥ ೨೫ ॥ ಏಷೋಹಂ - ಅಂತಹ ನಾನು, ಇದಾನೀಮೇವ - ಈಗಲೇ, ತವ - ನಿನಗೆ, ಅಪ್ರಿಯಾರ್ಥಂ - ಅರಿಷ್ಟವನ್ನು ಮಾಡುವನಿಮಿತ್ತವಾಗಿ, ಅನಘಂ - ನಿರ್ದೋಷಿಯಾದ, ಸ್ವಜನಪ್ರಿಯಂ - ತನ್ನವರಲ್ಲಿ ಪ್ರೇಮವುಳ್ಳ, ಭ್ರಾತರಂ - ಅಣ್ಣನನ್ನು, ವನಾತ್ - ವನದಿಂದ, ನಿವರ್ತಯಿಷ್ಯಾಮಿ - ಹಿಂತಿರುಗಿಸುತ್ತೇನೆ. ॥ ೨೬ ॥ ಅಹಂ - ನಾನು, ರಾಮಂ - ಶ್ರೀರಾಮನನ್ನು, ನಿವರ್ತಯಿತ್ವಾ - ಹಿಂತಿರುಗಿಸಿ, ದೀಪ್ತತೇಜಸಃ - ಹೊಳೆಯುತ್ತಿರುವ ಪರಾಕ್ರಮವುಳ್ಳ, ತಸ್ಯ - ಆ ಶ್ರೀರಾಮನಿಗೆ, ಸುಸ್ಥಿತೇನ - ಸುಖವಾಗಿರುವ, ಅಂತರಾತ್ಮನಾ - ಮನಸ್ಸಿನಿಂದ, ದಾಸಭೂತಃ - ದಾಸನಾದವನಾಗಿ, ಭವಿಷ್ಯಾಮಿ - ಇರುವೆನು. ॥ ೨೭ ॥ ಇತ್ಯೇವಂ - ಈಪರಿಯಾಗಿ, ಉಕ್ತ್ವಾ - ಹೇಳಿ, ಮಹಾತ್ಮನಃ - ಮಹಾ ಮನಸ್ವಿಯಾದ, ಭರತಃ - ಭರತನು, ಪ್ರಿಯೇತರೈಃ - ಕರ್ಣಕಠೋರವಾದ, ವಾಕ್ಯಗಣೈಃ - ಮಾತುಗಳ ತಂಡಗಳಿಂದ, ತಾಂ - ಆ ಕೈಕೇಯಿದೇವಿಯನ್ನು,

ರಾಯನ ರಾಜ್ಯದಲ್ಲಿಯೂ ಜ್ಯೇಷ್ಠಕುಮಾರನಿಗೇನೇ ಯೌವರಾಜ್ಯಾಭಿಷೇಕವನ್ನು ಮಾಡುತ್ತಿದ್ದಾರೆ. ಅಲ್ಲದೆ ಅವರೆಲ್ಲರೂ ಪೂಜ್ಯವಾದ ಸತ್ಸ್ವಭಾವವುಳ್ಳವರಾಗಿದ್ದಾರೆ. ಹೀಗಿರಲು ನಿನಗೆ ಮಾತ್ರ ಇಂತಹ ದುರ್ಬುದ್ಧಿಯು ಹೇಗೆ ಹುಟ್ಟಿತೋ; ಅದು ತಿಳಿಯದಿರುವುದು. ಎಲೇ; ಪಾಪಸಂಕಲ್ಪಳೇ; ಕೈಕೇಯಿ ! ನಾನು ಆ ನಿನ್ನ ಕೋರಿಕೆಯನ್ನು ಮಾತ್ರ ಸಫಲವನ್ನಾಗಿಮಾಡುವುದಿಲ್ಲ. ನೀನೀಗ ನನ್ನ ಪ್ರಾಣಕ್ಕೇಕುಂದುಕ ಬರುವಂತಹ ಕಾರ್ಯವನ್ನೆಸಗಿದ್ದೀಯೆ. ॥೨೫॥ ಕೈಕೇಯಿ ! ಇದೋ, ನೀನು ನೋಡುತ್ತಿರುವಹಾಗೆಯೇ ನಾನು ಅರಣ್ಯಕ್ಕೆ ಹೊರಟು ಹೋಗುತ್ತೇನೆ. ಆ ಬಳಿಕ ನಿಷ್ಕಲ್ಮಷನೂ, ಬಂಧುಜನಪ್ರಿಯನೂ, ನನಗೆ ಅಣ್ಣನಾದವನೂ ಆದ ಶ್ರೀರಾಮನನ್ನು ಕರೆದುಕೊಂಡು ಬರುತ್ತೇನೆ. ಹೀಗೆ ಕರೆದುಕೊಂಡು ಬಂದು ಮಹಾ ಕಾಂತಿಯಿಂದ ಪ್ರಕಾಶಿಸುತ್ತಿರುವ ಆ ನನ್ನ ಅಣ್ಣನಾದ ಶ್ರೀರಾಮನಿಗೆ, ನಾನು ಸುಸ್ಥಿರಮನಸ್ಕನಾದ ದಾಸನಾಗಿರುತ್ತೇನೆ," ಭರತನೀರೀತಿಯಾಗಿ ನುಡಿದು, ದೀನಗೆ

ಇತ್ಯೇವ ಮುಕ್ತ್ವಾ ಭರತೋ ಮಹಾತ್ಮಾ
ಪ್ರಿಯೇತರೈ ರ್ವಾಕ್ಯ ಗಣೈಸ್ತುದಂಸ್ತಾಂ ॥
ಶೋಕಾತುರ ಶ್ಚಾಪಿ ನನಾದ ಭೂಯು
ಸ್ಸಿಂಹೋ ಯಥಾ ಮಂದರ ಕಂದರಸ್ಥಃ* ॥ ೨೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಿಸಪ್ತತಿತಮಸ್ಸರ್ಗಃ.

ತುದನ್ - ಚುಚ್ಚುತ್ತಿರುವನಾಗಿ, ಶೋಕಾತುರಶ್ಚಾಪಿ - ವ್ಯಸನದಿಂದ ಆರ್ತನಾದರೂ, ಮಂದರಕಂದರಸ್ಥಃ - ಮಂದರಪರ್ವತದ ಗುಹೆಯೊಳಗಿನ, ಸಿಂಹೋಯಥಾ - ಸಿಂಹದಂತೆ, ಭೂಯಃ - ಮತ್ತು, ನನಾದ - ದೀನಧ್ವನಿಯನ್ನು ಮಾಡಿದನು. ॥ ೨೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಿಸಪ್ತತಿತಮಸ್ಸರ್ಗಃ.

ಳಾದ ಮಾತುಗಳಿಂದ ಕೈಕೇಯಿಯ ದುರ್ವರ್ತನನನ್ನು ಖಂಡಿಸುತ್ತ, "ಮಂದರಾಚಲದ ಗುಹೆಯಲ್ಲಿನ ಸಿಂಹದಂತೆ" "ಹಾ! ರಾಮ! ಹಾ! ತಂದೆಯೆ!" ಎಂದು ಬಹು ಘಟ್ಟಿಯಾಗಿ ಕೂಗುತ್ತಿದ್ದನು. (ಇದು ಅಲ್ಲಿದ್ದ ಎಲ್ಲರಿಗೂ ಕೇಳಿಸುತ್ತಿದ್ದಿತು.) ॥ ೨೮ ॥

ಇಂತಿದು ಬರತಕುಮಾರ ಕೃತ ಕೈಕೇಯಿಗರ್ಹಣ ವೃತ್ತಾಂತ ಕಥನವೆಂಬ
ಎಪ್ಪತ್ತಮೂರನೆಯ ಸರ್ಗವು ಸಮಾಪ್ತವಾದುದು.

---

* "ಪರ್ವತಗಹ್ವರಸ್ಥಃ" ಎಂದು ಪಾಠಾಂತರ,

ಅಯೋಧ್ಯಾಕಾಂಡೇ ಚತುಸ್ಸಪ್ತತಿತಮಸ್ಸರ್ಗಃ.

ತಾಂ ತಥಾ ಗರ್ಹಯಿತ್ವಾತು ಮಾತರಂ ಭರತಸ್ತದಾ ॥ ರೋಷೇಣ ಮಹತಾವಿಷ್ಟಃ ಪುನರೇವಾಬ್ರವೀದ್ವಚಃ ॥ ೧ ॥ ರಾಜ್ಯಾದ್ಭ್ರಂಶಸ್ವ ಕೈಕೇಯಿ! ನೃಶಂಸೇ! ದುಷ್ಟಚಾರಿಣಿ! ॥ ಪರಿತ್ಯಕ್ತಾಚ ಧರ್ಮೇಣ ಮಾಂ ಮೃತಂ ರುದತೀ ಭವ ॥೨॥ ಕಿನ್ನು ತೇ ದೂಷಯದ್ರಾಜಾ? ರಾಮೋವಾ ಭೃಶಧಾರ್ಮಿಕಃ? ॥ ಯಯೋರ್ಮೃತ್ಯುರ್ವಿವಾಸಶ್ಚ ತ್ವತ್ಕೃತೇ ತುಲ್ಯಮಾಗತೌ ॥ ೩ ॥ ಭ್ರೂಣ

ತದಾ - ಆ ಕಾಲದಲ್ಲಿ, ಭರತಃ - ಭರತನು, ಮಾತರಂ ತಾಯಿಯಾದ, ತಾಂ - ಆ ಕೈಕೇಯಿಯನ್ನು, ತಥಾ-ಆಪರಿಯಾಗಿ, ಗರ್ಹಯಿತ್ವಾ - ನಿಂದಿಸಿ, ಮಹತಾರೋಷೇಣ - ಬಹಳ ರೋಷದಿಂದ, ಆವಿಷ್ಟಃ - ವ್ಯಾಪ್ತನಾಗಿ, ಪುನರೇವ - ಮತ್ತೂ, ವಚಃ - ಮಾತನ್ನು, ಅಬ್ರವೀತ್ - ನುಡಿದನ. ॥ ೧ ॥ ಹೇ ಕೈಕೇಯಿ - ಎಲೌ ಕೈಕೇಯಿಯೇ, ಹೇ ನೃಶಂಸೇ - ಎಲೌ ಘಾತಕಳೇ, ಹೇ ದುಷ್ಟಚಾರಿಣಿ - ಎಲೌ ದುರ್ವ್ಯಾಪಾರವನ್ನು ಮಾಡುವಳೇ, ರಾಜಧರ್ಮೇಣ-ರಾಜನೀತಿಯಿಂದ ಪರಿತ್ಯಕ್ತಾ-ಬಿಡಲ್ಪಟ್ಟು, ರಾಜ್ಯಾತ್ - ರಾಜ್ಯದಿಂದ, ಭ್ರಂಶಸ್ವ - ತೊಲಗಿಹೋಗಿ ವನಪ್ರವೇಶಮಾಡು, ಮಾಂ-ನನ್ನನ್ನು, ಮೃತಂ - ಸತ್ತವನನ್ನಾಗಿ ತಿಳಿದು, ರುದತೀ - ರೋದನಮಾಡುವವಳು, ಭವ - ಆಗು, (ಗೋ) ಮೃತಂ - ಮರಣಹೊಂದಿದ ಗಂಡನನ್ನು ಕುರಿತು, ರುದತೀ - ರೋದನಮಾಡುವವಳು, ಮಾಭವ - ಆಗಬೇಡ. ॥ ೨ ॥ ರಾಜಾ - ಅರಸು, ತೇ - ನಿನ್ನ, ಕಿಂ - ಯಾವ ನಡತೆಯನ್ನು, ಅದೂಷಯತ್ - ಆಕ್ಷೇಪಿಸಿದನು, ಭೃಶಧಾರ್ಮಿಕಃ - ಮಹಾ ಧರ್ಮಿಷ್ಠನಾದ, ರಾಮೋವಾ - ಶ್ರೀರಾಮನಾಗಲಿ, ಕಿಮದೂಷಯತ್ - ಯಾವದನ್ನು ಕುರಿತು ದೂಷಿಸಿದನು, ಯಯೋಃ - ಯಾವ ದಶರಥ ಶ್ರೀರಾಮರಿಬ್ಬರಿಗೂ, ತ್ವತ್ಕೃತೇ - ನಿನ್ನ ನಿಮಿತ್ತವಾಗಿ, ಮೃತ್ಯುಃ - ಮರಣವು, ವಿವಾಸಶ್ಚ-ವನವಾಸವೂ, ತುಲ್ಯಂ - ಸಮಕಾಲದಲ್ಲಿ, ಆಗತೌ - ಬಂದವೋ. ॥ ೩ ॥ ಹೇ ಕೈಕೇಯಿ - ಎಲೌ

ಆ ಬಳಿಕಲಾ ಭರತನು ತನ್ನ ತಾಯಿಯಾದ ಕೈಕೇಯಿಯನ್ನು ಆ ರೀತಿಯಾಗಿ ಅನೇಕ ವಿಧಗಳಿಂದ ನಿಂದಿಸಿ ಕೋಪಾವಿಷ್ಟನಾಗಿ ಮತ್ತೂ ಹೀಗೆಂದನು. "ಎಲೌ ಕ್ರೂರಳು, ದುಷ್ಟಾತ್ಮಳೂ ಆದ ಕೈಕೇಯಿಯೆ ! ನೀನು ಧರ್ಮಮಾರ್ಗವನ್ನು ತೊರೆದೆ ; ಆದುದರಿಂದ ನೀನಿನ್ನುಮೇಲೆ ರಾಜ್ಯದಿಂದ ಭ್ರಷ್ಟಳಾಗು. ನೀನು ಹೀಗೆ ರಾಜ್ಯಭ್ರಷ್ಟಳಾಗಿ ನಿನ್ನ ಪತಿಯನ್ನು ಕುರಿತು ರೋದಿಸಬೇಡ ; ನಾನು ಮೃತನಾದೆನೆಂದು ನನ್ನನ್ನು ಕುರಿತು ರೋದಿಸುತ್ತಿರು. ಓ ದುರಾತ್ಮಳೆ ! ನೀನಾವಕಾರಣದಿಂದ ದಶರಥರಾಜನನ್ನು ಕೊಂದೆ ? ಯಾವ ಕಾರಣದಿಂದ ಶ್ರೀರಾಮಮೂರ್ತಿಯನ್ನು ಅರಣ್ಯಕ್ಕಟ್ಟಿದೆ ? ನಮ್ಮ ತಂದೆಯಾದ ದಶರಥಭೂಪಾಲನೂ, ನಮ್ಮಣ್ಣನೂ, ಮಹಾ ಧರ್ಮಿಷ್ಠನೂ ಆದ ಶ್ರೀರಾಮನೂ ನಿನ್ನನ್ನೇನಾದರೂ ದೂಷಿಸಿದರೆ ? ಕೈಕೇಯಿ ! ಈ ರಘುಕುಲಕ್ಕೆ ಹಾನಿಯನ್ನು ತಂದೊಡ್ಡಿ ಭ್ರೂಣಹತ್ಯಾದೋಷವನ್ನು ತಂದು

ಹತ್ಯಾಮಸಿ ಪ್ರಾಪ್ತಾ ಕುಲಸ್ಯಾಸ್ಯ ವಿನಾಶನಾತ್ ॥ ಕೈಕೇಯಿ! ನರಕಂ ಗಚ್ಛ ಮಾಚಭರ್ತುಸ್ಸಲೋಕತಾಂ ॥೪॥ ಯತ್ತ್ವಯಾ ಹೀದೃಶಂ ಪಾಪಂ ಕೃತಂ ಘೋರೇಣ ಕರ್ಮಣಾ ॥ ಸರ್ವಲೋಕಪ್ರಿಯಂ ಹಿತ್ವಾ ಮಮಾಪ್ಯಾಪಾದಿತಂ ಭಯಂ ॥೫॥ ತ್ವತ್ಕೃತೇ ಮೇ ಪಿತಾ ವೃತ್ತೋ ರಾಮಶ್ಚಾರಣ್ಯಮಾಶ್ರಿತಃ ॥ ಅಯಶೋ ಜೀವಲೋಕೇಽಚ ತ್ವಯಾಹಂ ಪ್ರತಿಪಾದಿತಃ ॥೬॥ ಮಾತೃರೂಪೇ! ಮಮಾಮಿತ್ರೇ! ನೃಶಂಸೇ! ರಾಜ್ಯಕಾಮುಕೇ! ॥ ನತೇಹಮಭಿಭಾಷ್ಯೋಽಸ್ಮಿ ದುರ್ವೃತ್ತೇ! ಪತಿಘಾತಿನಿ! ॥೭॥ ಕೌಸಲ್ಯಾಚ ಸುಮಿತ್ರಾಚ

ಕೈಕೇಯಿಯೇ, ಅಸ್ಯಕುಲಸ್ಯ - ಈ ಕುಲದ, ವಿನಾಶಾತ್ - ನಾಶಮಾಡಿದುದರಿಂದ, ಭ್ರೂಣಹತ್ಯಾಂ- ಭ್ರೂಣಹತ್ಯಾ ದೋಷವನ್ನು, ಪ್ರಾಪ್ತಾ - ಹೊಂದಿದವಳು, ಅಸಿ - ಆದೆ, ನರಕಂ - ನರಕವನ್ನು, ಗಚ್ಛ - ಹೊಂದು, ಭರ್ತುಃ - ಪತಿಯ, ಸಲೋಕತಾಂ - ಸಾಲೋಕ್ಯವನ್ನು, ಮಾಗಚ್ಛ - ಹೊಂದಬೇಡ. ॥೪॥ ಯತ್ - ಯಾವ ಕಾರಣ, ತ್ವಯಾಹಿ - ನಿನ್ನಿಂದಲಾದರೆ, ಘೋರೇಣ - ಕ್ರೂರವಾದ, ಕರ್ಮಣಾ - ವ್ಯಾಪಾರದಿಂದ, ಈದೃಶಂ - ಇಂತಹ, ಪಾಪಂ - ಪಾಪವು, ಕೃತಂ - ಮಾಡಲ್ಪಟ್ಟಿತೋ, ಸರ್ವಲೋಕಪ್ರಿಯಂ - ಸಮಸ್ತ ಜನರಿಗೂ ಇಷ್ಟನಾದ ಶ್ರೀರಾಮನನ್ನು, ಹಿತ್ವಾ - ಬಿಟ್ಟು, ಮಮಾಪಿ - ನನಗೂ, ಭಯಂ - (ಶ್ರೀಧರೀಯ) ಪಿತೃಹತ್ಯಾದೋಷಭಯವು, ಆಪಾದಿತಂ - ಉತ್ಪನ್ನವಾದಲ್ಲಾಯಿತೋ. ॥೫॥ ಮೇ - ನನ್ನ, ಪಿತಾ - ತಂದೆಯೂ, ತ್ವತ್ಕೃತೇ - ನಿನ್ನ ನಿಮಿತ್ತವಾಗಿ, ವೃತ್ತಃ - ಮರಣವನ್ನು ಹೊಂದಿದನು, ರಾಮಶ್ಚ - ಶ್ರೀರಾಮನೂ, ಅರಣ್ಯಂ - ವನವನ್ನು, ಆಶ್ರಿತಃ - ಆಶ್ರಯಿಸಿದನು, ಜೀವಲೋಕೇಚ - ಈ ಮಾನವ ಪ್ರಪಂಚದಲ್ಲಿಯೂ, ತ್ವಯಾ - ನಿನ್ನಿಂದ, ಅಹಂ - ನಾನು, ಅಯಶಃ - ಅಪಕೀರ್ತಿಯನ್ನು, ಪ್ರತಿಪಾದಿತಃ - ಹೊಂದಿದವನಾದೆನು. ॥೬॥ ಮಮ - ನನಗೆ, ಮಾತೃರೂಪೇ - ತಾಯಿಯ ಸ್ವರೂಪಳಾದ, ಅಮಿತ್ರೇ - ಹಗೆಯುಳ್ಳ, ಹೇ ನೃಶಂಸೇ - ಎಲೌ ಘಾತಕಳೇ, ಹೇ ರಾಜ್ಯಕಾಮುಕೇ-ಎಲೌ ರಾಜ್ಯಲುಬ್ಧಳೇ, ಹೇ ದುರ್ವೃತ್ತೇ-ಎಲೌ ದುಷ್ಟಸ್ವಭಾವವುಳ್ಳವಳೇ, ಹೇ ಪತಿಘಾತಿನಿ - ಎಲೌ ಗಂಡನನ್ನು ಕೊಂದವಳೇ, ತೇ - ನಿನಗೆ,

---

ಕೊಂಡೆ! ಆದುದರಿಂದ ನೀನು ಘೋರವಾದ ನರಕವನ್ನು ಹೊಂದು. ನೀನು ಪಾಪಾತ್ಮಳಾದುದರಿಂದ, ಪರಲೋಕದಲ್ಲಿಯೂ ಕೂಡ ಭರ್ತೃಸಮಾಗಮವನ್ನು ಪಡೆಯುವುದಿಲ್ಲವು. ಇದು ಬಹಳ ನಿಜ. ಓ ದುಷ್ಟಾತ್ಮಳೆ! ನೀನು ಮಹಾ ದುಷ್ಟತನವನ್ನು ತೋರಿ, ಎಲ್ಲ ಲೋಕಕ್ಕೂ ಪ್ರಿಯಂಕರನಾದ ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿಸಿ, ಘೋರಕೃತ್ಯವನ್ನು ಮಾಡಿದೆ. ಇಂತಹ ದುಷ್ಕೃತ್ಯವನ್ನು ಮಾಡಿ ನೀನು ಕೆಟ್ಟುದಲ್ಲದೆ, ನನಗೂ ಮಹದ್ಭಯವನ್ನು ತಂದೊಡ್ಡಿದೆ. ॥೧-೫॥ ನಿನ್ನ ನಿಮಿತ್ತವಾಗಿ ನನ್ನತಂದೆಯು ಮರಣವನ್ನು ಹೊಂದಿದನು. ಶ್ರೀರಾಮನು ಅರಣ್ಯಕ್ಕೆ ತೆರಳಿದನು; ಈ ಜೀವಲೋಕದಲ್ಲೆಲ್ಲ ನಿನ್ನ ನಿಮಿತ್ತದಿಂದ ನಾನು ಅಪಕೀರ್ತಿಯನ್ನು ಹೊಂದಿದೆನು. ನೀನು ನನಗೆ ತಾಯಿಯ ರೂಪದಿಂದ ಸಂಭವಿಸಿದ ಶತ್ರುವೇ ಸರಿ! ಕ್ರೂರಳೂ ಅಹುದು; ರಾಜ್ಯಲೋಭಿಯೂ ಆಗಿದ್ದೀಯೆ; ಗಂಡನನ್ನು ಕೊಂದವಳು ಮೊದಲೇ ಆಗಿದ್ದೀಯೆ; ಎಲೆಗೇ ಕೈಕೇಯಿ; ನಾನು ನಿನ್ನೊಡನೆ ಸಂಭಾಷಿ

ಯಾಶ್ಚಾನ್ಯಾ ಮಮ ಮಾತರಃ ॥ ದುಃಖೇನ ಮಹತಾವಿಷ್ಟಾ ಸ್ತ್ವಾಂ ಪ್ರಾಪ್ಯ
ಕುಲದೂಷಿಣೀಂ ॥ ೮ ॥ ನತ್ವ ಮಶ್ವಪತೇಃ ಕನ್ಯಾ ಧರ್ಮರಾಜಸ್ಯ ಧೀಮತಃ ॥
ರಾಕ್ಷಸೀ ತತ್ರ ಜಾತಾಸಿ ಕುಲಪ್ರಧ್ವಂಸಿನೀ ಪಿತುಃ ॥ ೯ ॥ ಯತ್ತ್ವಯಾ
ಧಾರ್ಮಿಕೋ ರಾಮೋ ನಿತ್ಯಂ ಸತ್ಯಪರಾಯಣಃ ॥ ವನಂ ಪ್ರಸ್ಥಾಪಿತೋ
ದುಃಖಾತ್ಪಿತಾಚ ತ್ರಿದಿವಂ ಗತಃ ॥ ೧೦ ॥ ಯತ್ ಪ್ರಧಾನಾಸಿ ತತ್ಪಾಪಂ
ಮಯಿ ಪಿತ್ರಾ ವಿನಾಕೃತೇ ॥ ಭ್ರಾತೃಭ್ಯಾಂಚ ಪರಿತ್ಯಕ್ತೇ ಸರ್ವಲೋಕಸ್ಯ

ಅಹಂ - ನಾನು, ಅಭಿಭಾಷ್ಯಃ - ಸಂಭಾಷಣಯೋಗ್ಯನು, ನಾಸ್ಮಿ - ಆಗಲಾರೆನು. ॥ ೭ ॥ ಕೌಸಲ್ಯಾಚ - ಕೌಸಲ್ಯಾದೇವಿಯೂ, ಸುಮಿತ್ರಾಚ - ಸುಮಿತ್ರಾದೇವಿಯೂ, ಅನ್ಯಾಃ - ಮತ್ತೆ ಕೆಲವರಾದ, ಮಮ - ನನ್ನ, ಮಾತರಃ - ತಾಯಿಯರು, ಯಾಃ - ಯಾರೋ, ತಾಶ್ಚ - ಅವರೂ, ಕುಲದೂಷಿಣೀಂ - ವಂಶದ ಕೀರ್ತಿಯನ್ನು ಕದಡಿದ, ತ್ವಾಂ - ನಿನ್ನನ್ನು, ಪ್ರಾಪ್ಯ - ಹೊಂದಿ, ಮಹತಾ - ಬಹಳವಾದ, ದುಃಖೇನ - ದುಃಖದಿಂದ, ಆವಿಷ್ಟಾಃ - ವ್ಯಾಪ್ತರಾದರು. ॥ ೮ ॥ ತ್ವಂ- ನೀನು, ಧೀಮತಃ - ಬುದ್ಧಿಶಾಲಿಯಾದ, ಧರ್ಮರಾಜಸ್ಯ-ಧರ್ಮಿಷ್ಠನೂ ರಾಜನೂ ಆದ, ಅಶ್ವಪತೇಃ- ಕೇಕಯರಾಜನ, ಕನ್ಯಾ - ಹೆಣ್ಣುಮಗಳು, ನ - ಅಲ್ಲ, ಕಿಂತು - ಆದರೆ, ಪಿತುಃ - ತಂದೆಯ, ಕುಲಪ್ರಧ್ವಂಸಿನೀ - ವಂಶನಾಶಕಳಾದ, ರಾಕ್ಷಸೀ - ರಕ್ಕಸಿಯು, ತತ್ರ - ಆ ಕೇಕಯರಾಯನ ವಂಶದಲ್ಲಿ, ಜಾತಾಸಿ - ಹುಟ್ಟಿರುವೆ. ॥ ೯ ॥ ಯತ್ - ಯಾವ ಕಾರಣ, ತ್ವಯಾ - ನಿನ್ನಿಂದ, ನಿತ್ಯಂ- ನಿರಂತರವೂ, ಸತ್ಯಪರಾಯಣಃ - ಸತ್ಯಸಂಧನಾದ, ಧಾರ್ಮಿಕಃ - ಧರ್ಮಿಷ್ಠನಾದ, ರಾಮಃ - ಶ್ರೀರಾಮನು, ವನಂ - ಅರಣ್ಯವನ್ನು ಕುರಿತು, ಪ್ರಸ್ಥಾಪಿತಃ-ಕಳುಹಲಾದನೋ, ಪಿತಾಚ-ತಂದೆಯೂ, ದುಃಖಾತ್ - ಪುತ್ರವ್ಯಸನದಿಂದ, ತ್ರಿದಿವಂ - ಸ್ವರ್ಗವನ್ನು, ಗತಃ - ಪಡೆದನೋ. ॥ ೧೦ ॥ ಯತ್ಪ್ರಧಾನಾ (ತಿ + ತ) ಗಂಡನನ್ನು ಕೊಂದು ಮಗನನ್ನು ಅರಣ್ಯಕ್ಕೆ ಕಳುಹಿದ ಪಾಪವೇ ಮುಖ್ಯವಾಗುಳ್ಳವಳು, ಅಸಿ - ಆಗಿರುವೆಯೋ, ಪಿತ್ರಾ - ತಂದೆಯಿಂದ, ವಿನಾಕೃತೇ-ವಿರಹಿತನಾಗಿ, ಭ್ರಾತೃಭ್ಯಾಂಚ - ಅಣ್ಣತಮ್ಮಂದಿರಿಂದಲೂ, ಪರಿತ್ಯಕ್ತೇ - ಬಿಡಲಾದವನಾದುದರಿಂದಲೇ, ಸರ್ವಲೋಕಸ್ಯ - ಎಲ್ಲ ಜನರಿಗೂ, ಅಪ್ರಿಯೇ - ಅಹಿತನಾದ, ಮಯಿ - ನನ್ನಲ್ಲಿ, ತತ್ಪಾಪಂ - ಆ ಪಾಪವು, ಅಭೂತ್ -

ಸುವುದಿಲ್ಲ. ಪಾಪಿಷ್ಠಳೆ! ದುಷ್ಟಚಾರಿಣಿಯಾದ ನಿನ್ನಿಂದ, ನನ್ನ ಮಿಕ್ಕ ತಾಯಿಯರಾದ ಕೌಸಲ್ಯಾ ಸುಮಿತ್ರೆಯರು ಮಹಾ ದುಃಖವುಳ್ಳವರಾದರು. ಎಲ್ಲ ಕಾಲಗಳಲ್ಲಿಯೂ ಸತ್ಯಪರಾಯಣನಾಗಿಯೂ, ಧರ್ಮಾತ್ಮನೂ, ನಮ್ಮಣ್ಣನೂ ಆದ ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿದುದನ್ನೂ, ಪುತ್ರದುಃಖದಿಂದಲೇ ನಮ್ಮ ಜನಕನು ಮರಣವಾಂತುದನ್ನೂ ನೋಡಿದರೆ, ನೀನು ಮಹಾ ಬುದ್ಧಿಶಾಲಿಯೂ, ಧರ್ಮಿಷ್ಠನೂ ಆದ ಅಶ್ವಪತಿರಾಯನ ಮಗಳೆಂದು ತೋರಲಿಲ್ಲ. ಕೇಕಯರಾಜನ ಕುಲದಲ್ಲಿ ಬಂದು ಸೇರಿದ ರಾಕ್ಷಸಿಯೇಹೊರ್ತು ಮತ್ತೆ ಬೇರೆಯಲ್ಲ ॥೭-೧೦॥ ನೀನು ಪಾಪಕರ್ಮವೇ ಮುಖ್ಯವಾಗುಳ್ಳ ಕಾರ್ಯವುಳ್ಳವಳು. ನಿನ್ನ ಮೂಲಕವಾಗಿಯೇ ನಾನು ಪಿತೃಭ್ರಾತೃವಿಹೀನನಾದೆನು. ಪಾಪಕೃತ್ಯಗಳನ್ನು ಮಾಡುವುದರಲ್ಲಿಯೇ ಬುದ್ಧಿಯುಳ್ಳವಳೂ, ನರಕಲೋಕಕ್ಕೆ ಹೋಗಲು ಅರ್ಹಳಾದವಳೂ ಆದ ಎಲೌ ಕೈಕೇಯಿಯೆ!

ಚಾಽಪ್ರಿಯೇ ॥ ೧೧ ॥ ಕೌಸಲ್ಯಾಂ ಧರ್ಮಸಂಯುಕ್ತಾಂ ವಿಯುಕ್ತಾಂ ಪಾಪ
ನಿಶ್ಚಯೇ ! ॥ ಕೃತ್ವಾ ಕಂ ಪ್ರಾಪ್ಸ್ಯಸೇ ತ್ವದ್ಯ ಲೋಕಂ ನಿರಯ ಗಾಮಿನಿ? ॥೧೨॥
ಕಿಂ ನಾವಬುಧ್ಯಸೇ ಕ್ರೂರೇ ! ನಿಯತಂ ಬಂಧುಸಂಶ್ರಯಂ ॥ ಜ್ಯೇಷ್ಠಂ ಪಿತೃ
ಸಮಂ ರಾಮಂ ಕೌಸಲ್ಯಾಽಯಾತ್ಮಸಂಭವಂ ॥ ೧೩ ॥ “ ಅಂಗಪ್ರತ್ಯಂಗಜಃ
ಪುತ್ರೋ ಹೃದಯಾಚ್ಚಾಪಿ ಜಾಯತೇ ” ॥ ತಸ್ಮಾ ತ್ಪ್ರಿಯತಮೋ ಮಾತುಃ
ಪ್ರಿಯತ್ವಾ ನ್ನತು ಬಾಂಧವಃ ॥ ೧೪ ॥ ಅನ್ಯದಾ ಕಿಲ ಧರ್ಮಜ್ಞಾ ಸುರಭಿ ಸ್ಸುರ

ಆಯಿತು. ॥ ೧೧ ॥ ಹೇ ಪಾಪನಿಶ್ಚಯೇ - ಎಲೌ ಪಾಪದಲ್ಲಿಯೇ ನಿಶ್ಚಯನಾದ ಬುದ್ಧಿಯುಳ್ಳವಳೇ, ಹೇ ನಿರಯಗಾಮಿನಿ - ಎಲೌ ನರಕವನ್ನು ಹೊಂದುವಳೇ, ಧರ್ಮಸಂಯುಕ್ತಾಂ - ಧರ್ಮದಿಂದ ಕೂಡಿರುವ, ಕೌಸಲ್ಯಾಂ - ಕೌಸಲ್ಯಾದೇವಿಯನ್ನು, ವಿಯುಕ್ತಾಂ - ಶ್ರೀರಾಮನಿಂದ ವಿರಹಿತಳನ್ನಾಗಿ, ಕೃತ್ವಾ - ಮಾಡಿ. ಕಂಲೋಕಂತು - ಯಾವ ಲೋಕವನ್ನಾದರೆ, ಪ್ರಾಪ್ಸ್ಯಸೇ - ಹೊಂದುವೆ. ॥ ೧೨ ॥ ಹೇ ಕ್ರೂರೇ - ಎಲೌ ಕಠೋರಳೇ, ಬಂಧುಸಂಶ್ರಯಂ - ಬಾಂಧವರಿಗೆ ಆಧಾರಭೂತನಾದ, ಪಿತೃಸಮಂ - ತಂದೆಗೆ ಸಮಾನನಾದ, ಜ್ಯೇಷ್ಠಂ - ಹಿರಿಮಗನಾದ, ರಾಮಂ - ಶ್ರೀರಾಮನನ್ನು, ಕೌಸಲ್ಯಾಯಾಃ - ಕೌಸಲ್ಯಾದೇವಿಗೆ, ಆತ್ಮಸಂಭವಂ - ಕುವರನನ್ನಾಗಿ, ನಿಯತಂ - ನಿಶ್ಚಯವಾಗಿ, ಕಿನ್ನಾವಬುಧ್ಯಸೇ - ಏಕೆ ಅರಿಯದೆಹೋದೆ. ॥ ೧೩ ॥ ಅಂಗಪ್ರತ್ಯಂಗಜಃ - ಸರ್ವಾಂಗತೇಜಸ್ಸಂಭೂತನಾದ, ಪುತ್ರಃ - ಮಗನು, ಹೃದಯಾಚ್ಚಾಪಿ - ಹೃದಯದಿಂದಲೂ, ಜಾಯತೇ - ಹುಟ್ಟುತ್ತಾನೆ, ತಸ್ಮಾತ್ - ಆ ಕಾರಣ, ಪುತ್ರಃ - ಮಗನು, ಮಾತುಃ - ತಾಯಿಗೆ, ಪ್ರಿಯತಮಃ - ಬಹಳ ಇಷ್ಟನು, ಪ್ರಿಯತ್ವಾತ್ - ಪ್ರೇಮಪಾತ್ರತೆಯಿಂದ, ಬಾಂಧವಸ್ತು - ಬಂಧುವಾದರೆ, ನಪ್ರಿಯತಮಃ- ಪ್ರಿಯತಮನಲ್ಲ. ॥ ೧೪ ॥ ಅನ್ಯದಾ - ಪೂರ್ವಕಾಲದಲ್ಲಿ, ಧರ್ಮಜ್ಞಾ - ಸಕಲ ಧರ್ಮಗಳನ್ನೂ ತಿಳಿದಿರುವ, ಸುರಸಮ್ಮತಾ - ದೇವತೆಗಳಿಗೆ ಪ್ರಿಯಳಾದ, ಸುರಭಿಃ - ಕಾಮಧೇನುವು,

---

ಧರ್ಮವತಿಯರಲ್ಲಿ ಮಹಾ ಶ್ರೇಷ್ಠಳಾದ ಕೌಸಲ್ಯೆಯನ್ನು ಪುತ್ರಹೀನಳನ್ನಾಗಿ ಮಾಡಿದೆ. ಇಂತಹ ಪಾಪಿಷ್ಠಳಾದ ನೀನು ಯಾವ ಪುಣ್ಯಲೋಕವನ್ನು ತಾನೆ ಹೊಂದಲು ಯೋಗ್ಯಳಾಗುತ್ತೀಯೆ? ನರಕಲೋಕವನ್ನಂತೂ ಹೊಂದುವೆಯೆಂಬುದರಲ್ಲಿ ಲವಲೇಶವೂ ಸೋಜಿಗವಿಲ್ಲ. ಎಲೆ ಕ್ರೂರಳಾದ ಕೈಕೇಯಿ; ನೀನು ಕೌಸಲ್ಯಾನಂದಕರನಾದ ಶ್ರೀರಾಮನು, ಪರಿಶುದ್ಧನು, ಬಂಧುಗಳನ್ನು ಪರಿಪಾಲಿಸುವವನು, ಜ್ಯೇಷ್ಠನು, ತಂದೆಗೆ ಸಮಾನನಾದವನೂ ಆಗಿರುವನೆಂಬುದನ್ನು ತಿಳಿಯದೆ ಹೋದೆಯಲ್ಲ ! ಓ ಕೈಕೇಯಿ ! ಕೇಳು ; ಪುತ್ರನಾದವನು ಪಾದಾದಿಕೇಶಾಂತಗಳಾದ ಸಕಲಾವಯವಗಳಿಂದಲೂ ಹುಟ್ಟಿದವನು. ಇಷ್ಟುಮಾತ್ರವಲ್ಲದೆ, ಹೃದಯದಿಂದೊಡಗೂಡಿ ಜನಿಸಿದವನೂ ಅಹುದು. ಹೀಗಿರುವುದರಿಂದಲೇ ಮಗನಾದವನು, ತಾಯಿಗೆ ಪ್ರಿಯತಮನೆಂದು ಹೇಳಲ್ಪಡುವನು; ಬಂಧುವಲ್ಲ. ಆದುದರಿಂದಲೇ ತಾಯಿಯರಿಗೆ ಪುತ್ರಶೋಕಕ್ಕಿಂತ ಬೇರೆ ಯಾವ ದುಃಖವೂ ಇಲ್ಲವೆಂದು ಹಿರಿಯರು ಹೇಳುತ್ತಾರೆ. ಹಿಂದೆ ಒಂದು ದಿನ ಸಕಲ ಧರ್ಮಗಳನ್ನೂ ತಿಳಿದು, ದೇವತೆಗಳಿಗೆ ಪ್ರಿಯಂಕರವಾದ ಕಾಮಧೇನುವು, ನೊಗವನ್ನು ಹೊತ್ತುಕೊಂಡು ಉತ್ತು ಉತ್ತು ಮಧ್ಯಾಹ್ನ ಕಾಲದಲ್ಲಿ

ಸಮ್ಮತಾ ॥ ವಹಮಾನೌ ದದರ್ಶೋರ್ವ್ಯಾಂ ಪುತ್ರೌ ವಿಗತ ಚೇತಸೌ ॥೧೫॥
ತಾವರ್ಧ ದಿವಸಂ ಶ್ರಾಂತೌ ದೃಷ್ಟ್ವಾ ಪುತ್ರೌ ಮಹೀತಲೇ ॥ ರುರೋದ ಪುತ್ರ
ಶೋಕೇನ ಬಾಷ್ಪಪರ್ಯಾಕುಲೇಕ್ಷಣಾ ॥ ೧೬ ॥ ಅಧಸ್ತಾದ್ವ್ರಜತಸ್ತಸ್ಯಾ
ಸ್ಸುರರಾಜ್ಞೋ ಮಹಾತ್ಮನಃ ॥ ಬಿಂದವಃ ಪತಿತಾ ಗಾತ್ರೇ ಸೂಕ್ಷ್ಮಾಸ್ಸುರಭಿ
ಗಂಧಿನಃ ॥೧೭॥ ಇಂದ್ರೋಽಪ್ಯಶ್ರುನಿಪಾತಂ ತಂ ಸ್ವಗಾತ್ರೇ ಪುಣ್ಯಗಂಧಿನಂ ॥
ಸುರಭಿಂ ಮನ್ಯತೇ ದೃಷ್ಟ್ವಾ ಭೂಯಸೀಂ ತಾಂ ಸುರೇಶ್ವರಃ ॥ ೧೮ ॥ ನಿರೀಕ್ಷ
ಮಾಣ ಶ್ಶಕ್ರಸ್ತಾಂ ದದರ್ಶ ಸುರಭಿಂ ಸ್ಥಿತಾಂ ॥ ಆಕಾಶೇ ವಿಷ್ಠಿತಾಂ ದೀನಾಂ
ರುದಂತೀಂ ಭೃಶದುಃಖಿತಾಂ ॥ ೧೯ ॥ ತಾಂ ದೃಷ್ಟ್ವಾ ಶೋಕ ಸಂತಪ್ತಾಂ

ವಹಮಾನೌ - ನೊಗವನ್ನು ವಹಿಸುತ್ತಿರುವ, ಉರ್ವ್ಯಾಂ - ನೆಲದಲ್ಲಿ, ವಿಗತಚೇತಸೌ - ಮೂರ್ಛಾ
ಕ್ರಾಂತರಾದ, ಪುತ್ರೌ - ಮಕ್ಕಳಾದ ವೃಷಭಗಳನ್ನು, ದದರ್ಶ - ಕಂಡಳು. ॥ ೧೫ ॥ ಅರ್ಧದಿವಸಂ-
ಮಧ್ಯಾಹ್ನಕಾಲದಲ್ಲಿ, ಶ್ರಾಂತೌ - ಬಳಲಿದ, ಪುತ್ರೌ - ಕುವರರಾದ. ತೌ - ಆ ವೃಷಭಗಳನ್ನು,
ಮಹೀತಲೇ - ನೆಲದಲ್ಲಿ, ದೃಷ್ಟ್ವಾ - ಕಂಡು, ಪುತ್ರಶೋಕೇನ - ಪುತ್ರವಿಷಯಕ ವ್ಯಸನದಿಂದ, ಬಾಷ್ಪ
ಪರ್ಯಾಕುಲೇಕ್ಷಣಾ - ಕಂಬನಿಗಳಿಂದ ವ್ಯಾಪ್ತವಾದ ನೇತ್ರಗಳುಳ್ಳವಳಾಗಿ, ರುರೋದ - ಅಳುತ್ತಿ
ದ್ದಳು. ॥ ೧೬ ॥ ಅಧಸ್ತಾತ್ - ಕೆಳಗೆ, ವ್ರಜತಃ - ಹೋಗುತ್ತಿರುವ, ಮಹಾತ್ಮನಃ - ಮಹಾ
ಮನನಶೀಲನಾದ, ಸುರರಾಜ್ಞಃ - ದೇವೇಂದ್ರನ, ಗಾತ್ರೇ - ಶರೀರದಲ್ಲಿ, ಸುರಭಿಗಂಧಿನಃ - ಪರಿಮಳ
ಯುಕ್ತವಾದ ಗಂಧವುಳ್ಳ, ಸೂಕ್ಷ್ಮಾಃ - ಸಣ್ಣಗಿರುವ, ತಸ್ಯಾಃ - ಆ ಕಾಮಧೇನುವಿನ, ಬಿಂದವಃ -
ಕಂಬನಿಗಳು, ಪತಿತಾಃ - ಬಿದ್ದವು. ॥ ೧೭ ॥ ಸುರೇಶ್ವರಃ - ದೇವತಾಧಿಪತಿಯಾದ, ಇಂದ್ರೋಽಪಿ-
ಇಂದ್ರನೂ ಕೂಡ, ಸ್ವಗಾತ್ರೇ - ತನ್ನ ಶರೀರದಲ್ಲಿ, ಪುಣ್ಯಗಂಧಿನಂ - ಪುಣ್ಯಕರವಾದ ಸುವಾಸನೆ
ಯುಳ್ಳ, ತಂ ಅಶ್ರುನಿಪಾತಂ - ಆ ಕಂಬನಿಗಳ ಬೀಳುವಿಕೆಯನ್ನು, ದೃಷ್ಟ್ವಾ-ಕಂಡು, ತಾಂಸುರಭಿಂ -
ಆ ಕಾಮಧೇನುವನ್ನು, ಭೂಯಸೀಂ - ಶ್ರೇಷ್ಠಳನ್ನಾಗಿ, ಮನ್ಯತೇ - ತಿಳಿಯುತ್ತಾನೆ. ॥ ೧೮ ॥
ಶಕ್ರಃ - ದೇವೇಂದ್ರನು, ನಿರೀಕ್ಷಮಾಣಃ - ನೋಡುತ್ತ, ಆಕಾಶೇ - ಅಂತರಿಕ್ಷಮಾರ್ಗದಲ್ಲಿ, ಸ್ಥಿತಾಂ-
ನಿಂತಿರುವ, ವಿಷ್ಠಿತಾಂ - ಧ್ಯಾನಪರಳಾದ, ದೀನಾಂ - ಪರಿತಪಿಸುತ್ತಿರುವ, ಭೃಶದುಃಖಿತಾಂ -
ಬಹಳ ದುಃಖಗೊಂಡು, ರುದಂತೀಂ - ಅಳುತ್ತಿರುವ, ತಾಂಸುರಭಿಂ - ಆ ಕಾಮಧೇನುವನ್ನು,
ದದರ್ಶ - ಕಂಡನು, ವಜ್ರಪಾಣಿಃ - ವಜ್ರಹಸ್ತನಾದ, ಸುರರಾಜಃ - ದೇವರಾಜನಾದ, ಇಂದ್ರಃ -

---

ನೆಲದಮೇಲೆ ಸಿಟ್ಟುಸಿರುಬಿಡುತ್ತ ಬಿದ್ದಿರುವ ತನ್ನ ಮಕ್ಕಳಾದ ವೃಷಭಗಳನ್ನು ನೋಡಿ
ಕಂಬನಿಗರೆದು ರೋದಿಸಿದಳು. ॥ ೧೧-೧೫ ॥ ಆ ಕಾಮಧೇನುವಿನ ಕಣ್ಣೀರು ಅದರ
ಕೆಳಭಾಗದಲ್ಲಿಯೇ ಸಂಚರಿಸುತ್ತಿದ್ದ ದೇವೇಂದ್ರನ ಮೇಲೆ ಬಿದ್ದಿತು. ಆಗಲಾತನು
ಕಾಮಧೇನುವಿನ ಕಂಬನಿಗಳು ತನ್ನ ಮೇಲೆ ಬಿದ್ದುವೆಂದು ತಲೆಯೆತ್ತಿ ನೋಡಿ ಆ
ಧೇನುವನ್ನು, ಕಂಡು ಖತಿಯಾಂತು ಅಂಜಲಿಬದ್ಧನಾಗಿ ಹೀಗೆಂದನು. "ಎಲೌ ಕಾಮ
ಧೇನುವೆ ! ನೀನು ಸರ್ವರಿಗೂ ಹಿತವನ್ನೆಣಿಸುವವಳು; ನಮಗೆ ಈಗ ಯಾವ ವಿಧವಾದ
ಭಯವೂ ಒದಗಿರುವುದಿಲ್ಲವಷ್ಟೆ. ಹೀಗಿರುವಾಗ ನೀನೇಕೆ ಶೋಕಿಸುತ್ತ ರೋದನ

ವಜ್ರಪಾಣಿರ್ಯಶಸ್ವಿನೀಂ ॥ ಇಂದ್ರಃ ಪ್ರಾಂಜಲಿರುದ್ವಿಗ್ನ ಸ್ಸುರರಾಜೋಽಬ್ರವೀ ದ್ವಚಃ ॥ ೨೦ ॥ ಭಯಂ ಕಚ್ಚಿನ್ನಚಾಸ್ಮಾಸು ಕುತಶ್ಚಿ ದ್ವಿದ್ಯತೇ ಮಹತ್? ॥ ಕುತೋ ನಿಮಿತ್ತ ಶ್ಶೋಕಸ್ತೇ ಬ್ರೂಹಿ ಸರ್ವಹಿತೈಷಿಣಿ ! ॥ ೨೧ ॥ ಏವಮು ಕ್ತಾತು ಸುರಭಿ ಸ್ಸುರರಾಜೇನ ಧೀಮತಾ ॥ ಪ್ರತ್ಯುವಾಚ ತತೋ ಧೀರಾ ವಾಕ್ಯಂ ವಾಕ್ಯವಿಶಾರದಂ ॥ ೨೨ ॥ ಶಾಂತಂಪಾಪಂ! ನವಃ ಕಿಂಚಿ ತ್ಕುತಶ್ಚಿ ದಮರಾಧಿಪ! ॥ ಅಹಂತು ಮಗ್ನಾ ಶೋಚಾಮಿ ಸ್ವಪುತ್ರೌ ವಿಷಮೇ ಸ್ಥಿತೌ॥೨೩॥ ಏತೌ ದೃಷ್ಟ್ವಾ ಕೃಶೌ ದೀನೌ ಸೂರ್ಯರಶ್ಮಿ ಪ್ರತಾಪಿತೌ ॥ ಅರ್ದ್ಯಮಾನೌ

ದೇವೇಂದ್ರನು, ಉದ್ವಿಗ್ನಃ - ಭಯಗೊಂಡವನಾಗಿ, ಯಶಸ್ವಿನೀಂ - ಕೀರ್ತಿವಂತಳಾದ, ಶೋಕ ಸಂತಪ್ತಾಂ - ವ್ಯಸನಗೊಂಡಿರುವ, ತಾಂ - ಆ ಕಾಮಧೇನುವನ್ನು, ದೃಷ್ಟ್ವಾ - ಕಂಡು, ಪ್ರಾಂಜಲಿಃ - ಅಂಜಲಿಬದ್ಧನಾಗಿ, ವಚಃ - ಮಾತನ್ನು, ಅಬ್ರವೀತ್ - ನುಡಿದನು. ॥ ೨೦ ॥ ಹೇ ಸರ್ವಹಿತೈಷಿಣಿ - ಎಲೌ ಸಮಸ್ತಭೂತಗಳಿಗೂ ಹಿತವನ್ನಪೇಕ್ಷಿಸುವಳೇ, ಅಸ್ಮಾಸು - ನಮ್ಮಲ್ಲಿ, ಕುತಶ್ಚಿತ್ - ಯಾವ ಭೂತದಿಂದಲೂ. ಮಹತ್ - ದೊಡ್ಡದಾದ, ಭಯಂ - ಭಯವು, ನಚಕಚ್ಚಿತ್ - ಇಲ್ಲವಷ್ಟೆ, ತೇ - ನಿನಗೆ, ಶೋಕಃ - ಶೋಕವು, ಕುತೋನಿಮಿತ್ತಃ - ಯಾವ ನಿಮಿತ್ತವಾಗುಳ್ಳದು, ಬ್ರೂಹಿ - ಹೇಳು. ॥ ೨೧ ॥ ಧೀರಾ - ಧೈರ್ಯವಂತಳಾದ, ಸುರಭಿಃ - ಕಾಮಧೇನುವು, ಧೀಮತಾ - ಬುದ್ಧಿ ಶಾಲಿಯಾದ, ಸುರರಾಜೇನ - ದೇವೇಂದ್ರನಿಂದ, ಏವಂ - ಈಪರಿಯಾಗಿ, ಉಕ್ತಾ - ಹೇಳಲ್ಪಟ್ಟು, ವಾಕ್ಯವಿಶಾರದಂ - ಮಾತುಗಳಾಡುವದರಲ್ಲಿ ಬುದ್ಧಿವಂತನಾದ ದೇವೇಂದ್ರನನ್ನು ಕುರಿತು, ವಾಕ್ಯಂ - ಮಾತನ್ನಾದರೆ, ತತಃ - ಬಳಿಕ, ಪ್ರತ್ಯುವಾಚ - ಪ್ರತ್ಯುತ್ತರವನ್ನು ಕೊಟ್ಟಳು. ॥ ೨೨ ॥ ಹೇ ಅಮರಾಧಿಪ - ಎಲೈ ದೇವರಾಜನೇ, ವಃ - ನಿಮಗೆ, ಕುತಶ್ಚಿತ್ - ಯಾರಿಂದಲೂ, ಕಿಂಚಿತ್ - ಕೊಂಚವಾದರೂ ಭಯವು, ನ - ಇಲ್ಲ, ಶಾಂತಂಪಾಪಂ - (ಗೋ) ಅಮಂಗಳ ಶ್ರವಣಜನಿತದಿಂದ ಪಾಪವಿಶೇಷಹೋಗಲಿ, (ಗೋ + ವ) ಕಿಂಚಿತ್ - ಸ್ವಲ್ಪವಾದ, ಪಾಪಂ - ನಿಮಗೆ ಭಯಜನಕ ವಾದ ಪಾಪವು, ಶಾಂತಂ - ಹೋಗಿದೇ ಇರುವುದು, ಕಿಂತು - ಮತ್ತೇನೆಂದರೆ, ಹೇ ಸುರಾಧಿಪ - ಎಲೈ ದೇವೇಂದ್ರನೆ, ಅಹಂ - ನಾನು, ವಿಷಮೇ - ಸಂಕಟದಲ್ಲಿ, ಸ್ಥಿತೌ - ಇರುತ್ತಿರುವ, ಮಗ್ನಾ - ಶೋಕಸಮುದ್ರದಲ್ಲಿ ಮುಳಗಿರುವ, ಸೂರ್ಯರಶ್ಮಿಪ್ರತಾಪಿತೌ - ಸೂರ್ಯಕಿರಣಗಳಿಂದ ಸಂತಾಪ ಗೊಂಡು, ದೀನೌ - ಪರಿತಪಿಸುತ್ತಿರುವ, ಕರ್ಷಕೇಣ - ನೆಲವನ್ನು ಉಳುತ್ತಿರುವವನಿಂದ, ಅರ್ದ್ಯ ಮಾನೌ - ಹೊಡೆಯಲ್ಪಡುತ್ತಿರುವ, ಕೃಶೌ - ಕ್ಷಯಿಸಿರುವ, ಸ್ವಪುತ್ರೌ - ನನ್ನ ಮಕ್ಕಳಾದ, ಏತೌ

ಮಾಡುತ್ತಿರುವೆ? ” ಹೀಗೆ ಪ್ರಶ್ನಿಸಿದ ದೇವೇಂದ್ರನನ್ನು ಕುರಿತು ಆ ಕಾಮಧೇನುವು, “ ಎಲೈ ದೇವೇಂದ್ರನೆ ! ನಿಮಗೆ ಯಾವ ವಿಧವಾದ ಭಯವೂ ಒದಗಲಿಲ್ಲವೆಂಬುದನ್ನು ನಾನು ಬಲ್ಲೆ, ಅಮಂಗಳಕರವಾದ ಶಬ್ದವನ್ನು ಕೇಳುವುದರಿಂದ ಜನಿಸಿದ ಪಾಪವಿಶೇಷವಾಗಲಿ, ಭಯದಿಂದುಂಟಾಗುವ ಪಾಪವಾಗಲಿ ಯಾವುದೂ ಕಾಣುವುದಿಲ್ಲ. ಆದರೆ ಬಹಳ ಸಂಕಟ ಪಡುವುದಾಗಿಯೂ, ಸೂರ್ಯಕಿರಣಗಳಿಂದ ಸಂತಾಪಗೊಂಡವುಗಳಾಗಿಯೂ, ಉಳುವ ರೈತನಿಂದ ಅಡಿಗಡಿಗೆ ಪೆಟ್ಟುತಿನ್ನುವುವಾಗಿಯೂ, ಕೃಶವಾಗಿಯೂ ಇರುವ ನನ್ನ ಮಕ್ಕಳಾದ

ಬಲೀವರ್ದೌ ಕರ್ಷಕೇಣ ಸುರಾಧಿಪ ॥ ೨೪ ॥ ಮಮಕಾಯಾತ್ಪ್ರಸೂತೌಹಿ ದುಃಖಿತೌ ಭಾರಪೀಡಿತೌ ॥ ಯೌ ದೃಷ್ಟ್ವಾ ಪರಿತಪ್ಯೇಹಂ ನಾಸ್ತಿ ಪುತ್ರ ಸಮಃ ಪ್ರಿಯಃ ॥ ೨೫ ॥ ಯಸ್ಯಾಃ ಪುತ್ರಸಹಸ್ರೈಸ್ತು ಕೃತ್ಸ್ನಂ ವ್ಯಾಪ್ತಮಿದಂ ಜಗತ್ ॥ ತಾಂ ದೃಷ್ಟ್ವಾ ರುದತೀಂ ಶಕ್ರೋ ನಸುತಾ ನ್ಮನ್ಯತೇಪರಂ ॥ ೨೬ ॥ ಸದಾಽಪ್ರತಿಮ ವೃತ್ತಾಯಾ ಲೋಕಧಾರಣ ಕಾಮ್ಯಯಾ ॥ ಶ್ರೀಮತ್ಯಾ ಗುಣ ನಿತ್ಯಾಯಾ ಸ್ವಭಾವ ಪರಿವೇಷಯಾ ॥ ೨೭ ॥ ಯಸ್ಯಾಃ ಪುತ್ರಸಹಸ್ರಾಣಿ

ಬಲೀವರ್ದೌ - ಈ ವೃಷಭಗಳನ್ನು, ದೃಷ್ಟ್ವಾ - ಕಂಡು, ಶೋಚಾಮಿ - ದುಃಖಿಸುತ್ತಿರುವೆನು. ॥ ೨೪ ॥ ಮಮ - ನನ್ನ, ಕಾಯಾತ್ - ಶರೀರದಿಂದ, ಪ್ರಸೂತೌ - ಹುಟ್ಟಿದ, ಭಾರಪೀಡಿತೌ - ನೊಗಗಳ ತೂಕದಿಂದ ಬಾಧೆಗೊಂಡ, ಯೌ - ಯಾವ ವೃಷಭಗಳು, ದುಃಖಿತೌ - ದುಃಖಗೊಂಡುವಾಗಿವೆಯೋ, ತೌ - ಆ ವೃಷಭಗಳನ್ನು, ದೃಷ್ಟ್ವಾ - ಕಂಡು, ಅಹಂ - ನಾನು, ಪರಿತಪ್ಯೇಹಿ - ವ್ಯಸನಗೊಂಡಿರುವೆನಷ್ಟೆ, ಪುತ್ರಸಮಃ - ಮಗನಿಗೆ ಸಮಾನನಾದ, ಪ್ರಿಯಃ - ಇಷ್ಟನಾದವನು, ನಾಸ್ತಿ- ಇಲ್ಲ. ॥ ೨೫ ॥ ಯಸ್ಯಾಃ - ಯಾವ ಕಾಮಧೇನುವಿನ, ಪುತ್ರಸಹಸ್ರೈಃ - ಮಕ್ಕಳ ಸಹಸ್ರಗಳಿಂದ, ಕೃತ್ಸ್ನಂ - ಸಮಸ್ತವಾದ, ಇದಂಜಗತ್ - ಈ ಲೋಕವು, ವ್ಯಾಪ್ತಂ - ವ್ಯಾಪಿಸಿರುವುದೋ, ಶಕ್ರಃ- ದೇವೇಂದ್ರನು, ರುದತೀಂ - ರೋದನಮಾಡುತ್ತಿರುವ, ತಾಂ-ಅಂತಹ ಕಾಮಧೇನುವನ್ನು, ದೃಷ್ಟ್ವಾ- ಕಂಡು, ಸುತಾತ್ - ಕುವರನಿಗಿಂತಲೂ, ಪರಂ - ಹೆಚ್ಚಾದ - ಹೆಚ್ಚಾದ ಪದಾರ್ಥವು, ನ - ಇಲ್ಲ ವೆಂದು, ಮನ್ಯತೇ - ತಿಳಿದುಕೊಂಡನು. ॥ ೨೬ ॥ ಸದಾ - ನಿರಂತರವೂ, ಅಪ್ರತಿಮವೃತ್ತಾಯಾಃ- ಸಮಾನವಿಲ್ಲದಿರುವ ಚರಿತ್ರೆಯುಳ್ಳ, ಯೋಗಧಾರಣಕಾಮ್ಯಯಾ - ಲೋಕೋದ್ಧರಣೇಚ್ಛೆಯಿಂದ, ಸ್ವಭಾವಪರಿವೇಷಯಾ, ಸ್ವ - ತನ್ನ, ಭಾವ - ಶೀಲವೆ, ಪರಿವೇಷಯಾ - ಆವರಣವಾಗುಳ್ಳ, ಶ್ರೀಮತ್ಯಾಃ - ಸಂಪದ್ಯುಕ್ತಳಾದ, ಗುಣನಿತ್ಯಾಯಾಃ-ನಿಯತವಾದ ಸದ್ಗುಣಗಳುಳ್ಳ, ಯಸ್ಯಾಃ-ಯಾವ ಕಾಮಧೇನುವಿಗೆ, ಪುತ್ರಸಹಸ್ರಾಣಿ - ಸಾವಿರಾರು ಮಕ್ಕಳು, ಸಂತಿ - ಇರುತ್ತವೋ, (ಗೋ + ಶ್ರೀಧ) ಯಸ್ಯಾಃ - ಯಾವ ಕಾಮಧೇನುವಿನ, ಸ್ವಭಾವಪರಿವೇಷಯಾ, ಸ್ವಭಾವ - ವೈಥುನಕರ್ಮದಿಂದ, ಪರಿವೇಷಯಾ - ಆವರ್ತಿಯುಳ್ಳ, ಲೋಕಧಾರಣಕಾಮ್ಯಯಾ, ಲೋಕ - ಲೋಕದ, ಧಾರಣ - ನಿಲ್ಲುವಿಕೆಯ, ಕಾಮ್ಯಯಾ - ಇಚ್ಛೆಯಿಂದ, ಪುತ್ರಸಹಸ್ರಾಣಿ - ಸಾವಿರಾರು ಮಕ್ಕಳು, ಸಂತಿ - ಇರುತ್ತಾರೋ, ಸಾಕಾಮಧೇನುರಪಿ - ಅಂತಹ ಕಾಮಧೇನುವೂ, ಶೋಚತಿ - ದುಃಖಿಸಿದಳೋ, ಯಾ-

ಈ ವೃಷಭಗಳನ್ನು ಕಂಡು ನಾನು ದುಃಖಿಸುತ್ತಿರುವೆನು. ॥ ೧೬-೨೪ ॥ ಈ ಎರಡು ವೃಷಭಗಳು ನನ್ನ ಹೊಟ್ಟೆಯಲ್ಲಿ ಜನಿಸಿದುವು. ಬಹಳ ಭಾರವನ್ನು ಹೊತ್ತು ದುಃಖಿಸುತ್ತವೆಯಾದುದರಿಂದ ನಾನೀರೀತಿ ಶೋಕಿಸುತ್ತಿದ್ದೇನೆ. ಪುತ್ರನಿಗೆ ಸಮಾನನಾದ ಪ್ರಿಯತಮನಾರೂ ಇಲ್ಲವು" ಎಂದಿತು. ಕಾಮಧೇನುವಿಂತು ನುಡಿಯಲು ಆ ದೇವೇಂದ್ರನು ಅದರ ದುಃಖವನ್ನು ನೋಡಿ, ಪುತ್ರಸಮಾನವಾದ ವಸ್ತುವು ಜಗತ್ತಿನಲ್ಲಿಯೇ ಇಲ್ಲವೆಂದುಕೊಂಡನು. ನಿರುಪಮಾನಚಾರಿತ್ರವುಳ್ಳುದೂ, ನಿಯತವಾದ ಸುಗುಣವುಳ್ಳುದೂ, ಲೋಕೋದ್ಧಾರ ಸ್ವಭಾವವೇ ಆವರಣವುಳ್ಳುದೂ ಆಗಿರುವ ಯಾವ ಕಾಮಧೇನುವಿಗೆ ಅನೇಕ ಮಕ್ಕಳಿರುವುವೋ

ಸಾಪಿ ಶೋಚತಿ ಕಾಮಧುಕ್ ॥ ಕಿಂಪುನ ರ್ಯಾವಿನಾ ರಾಮಂ ಕೌಸಲ್ಯಾ
ವರ್ತಯಿಷ್ಯತಿ ? ॥ ೨೮ ॥ ಏಕಪುತ್ರಾಚ ಸಾಧ್ವೀಚ ವಿವತ್ಸೇಯಂ ತ್ವಯಾ
ಕೃತಾ ॥ ತಸ್ಮಾತ್ತ್ವಂ ಸತತಂ ದುಃಖಂ ಪ್ರೇತ್ಯಚೇಹಚ ಲಪ್ಸ್ಯಸೇ ॥ ೨೯ ॥
ಅಹಂ ಹ್ಯಪಚಿತಿಂ ಭ್ರಾತುಃ ಪಿತುಶ್ಚ ಸಕಲಾಮಿಮಾಂ ॥ ವರ್ಧನಂ ಯಶಸ
ಶ್ಚಾಪಿ ಕರಿಷ್ಯಾಮಿ ನಸಂಶಯಃ ॥ ೩೦ ॥ ಆನಾಯಯಿತ್ವಾ ತನಯಂ ಕೌಸ
ಲ್ಯಾಯಾ ಮಹಾಬಲಂ ॥ ಸ್ವಯಮೇವ ಪ್ರವೇಕ್ಷ್ಯಾಮಿ ವನಂ ಮುನಿನಿಷೇ
ವಿತಂ ॥೩೧॥ ನಹ್ಯಹಂ ಪಾಪಸಂಕಲ್ಪೇ ! ಪಾಪೇ ! ಪಾಪಂ ತ್ವಯಾ ಕೃತಂ ॥

ಯಾವ ಕೌಸಲ್ಯಾದೇವಿಯು, ರಾಮಂವಿನಾ - ಶ್ರೀರಾಮನನ್ನುಳಿದು, ವರ್ತಯಿಷ್ಯತಿ - ಬದುಕಿರುವಳೋ, ಸಾ - ಆ ಕೌಸಲ್ಯಾದೇವಿಯು, ಶೋಚತೀತಿ - ಅಳುತ್ತಾಳೆಂದು, ಕಿಂಪುನಃ - ಏನು ಹೇಳತಕ್ಕದು. ॥ ೨೮ ॥ ಯಸ್ಮಾತ್ - ಯಾವ ಕಾರಣ, ಏಕಪುತ್ರಾ - ಒಬ್ಬನೇ ಮಗನುಳ್ಳ, ಸಾಧ್ವೀಚ - ಪತಿವ್ರತೆಯಾದ, ಇಯಂ - ಈ ಕೌಸಲ್ಯಾದೇವಿಯು, ತ್ವಯಾ - ನಿನ್ನಿಂದ, ವಿವತ್ಸಾ-ಮಗನಿಂದ ವಿಯುಕ್ತಳಾದವಳಾಗಿ, ಕೃತಾ - ಮಾಡಲಾದಳೋ, ತಸ್ಮಾತ್ - ಆಕಾರಣ, ತ್ವಂ - ನೀನ, ಸತತಂ - ನಿರಂತರವೂ, ಪ್ರೇತ್ಯ - ಸತ್ತುಹೋದರೂ ಪರಲೋಕದಲ್ಲಿಯೂ, ಇಹಚ - ಈ ಲೋಕದಲ್ಲಿಯೂ, ದುಃಖಂ - ದುಃಖವನ್ನು, ಲಪ್ಸ್ಯಸೇ - ಹೊಂದುವೆಯು. ॥ ೨೯ ॥ ಅಹಂಹಿ - ನಾನಾದರೆ, ಭ್ರಾತುಃ - ಅಣ್ಣನಿಗೂ, ಪಿತುಶ್ಚ - ತಂದೆಗೂ, ಸಕಲಾಂ - ಸಮಸ್ತವಾದ, ಇಮಾಂ - ಈ, ಅಪಚಿತಂ - ಪೂಜೆಯನ್ನು, ಕರಿಷ್ಯಾಮಿ - (೧) ಮಾಡುವೆನು, ಯಶಸಃ - ಕೀರ್ತಿಯ, ವರ್ಧನಂಚಾಪಿ - ಬೆಳೆಸುವಿಕೆಯನ್ನೂ, ಕರಿಷ್ಯಾಮಿ - ಮಾಡುವೆನು, ಸಂಶಯೋನ - ಸಂಶಯವಿಲ್ಲ. ॥ ೩೦ ॥ ಮಹಾಬಲಂ - ಮಹಾ ಬಲಿಷ್ಠನಾದ, ಕೌಸಲ್ಯಾಯಾಃ - ಕೌಸಲ್ಯಾದೇವಿಯ, ತನಯಂ - ಕುಮಾರನಾದ ಶ್ರೀರಾಮನನ್ನು, ಆನಾಯಯಿತ್ವಾ - ಕರೆಯಿಸಿ, ಸ್ವಯಮೇವ - ನಾನೇ, ಮುನಿನಿಷೇವಿತಂ - ಋಷಿಗಳಿಂದ ಸೇವಿಸಲಾದ, ವನಂ - ಅರಣ್ಯವನ್ನು, ಪ್ರವೇಕ್ಷ್ಯಾಮಿ - ಪ್ರವೇಶಿಸುವೆನು. ॥ ೩೧ ॥

ಅಂತಹ ಕಾಮಧೇನುವೇ ಪುತ್ರನಿಗಾಗಿ ರೋದಿಸಿತು. ಹೀಗಿರುವಲ್ಲಿ ಏಕಮಾತ್ರ ಪುತ್ರನುಳ್ಳವಳೂ, ಪತಿವ್ರತೆಯೂ ಆದ ಆ ಕೌಸಲ್ಯಾದೇವಿಯು ರಾಮನನ್ನಗಲಿ ಹೇಗೆತಾನೆ ಇದ್ದಾಳು? ಈ ಮಹಾವ್ಯಸನವನ್ನುಂಟುಮಾಡಿದ ನೀನು ಇಹಪರಗಳಲ್ಲಿ ದುಃಖವನ್ನೇ ಅನುಭವಿಸುತ್ತೀಯೆ; ಇದು ಖಂಡಿತ. ನಾನಾದರೋ ನನ್ನಣ್ಣನಾದ ಶ್ರೀರಾಮನ ಸೇವೆಯನ್ನೇ ಮಾಡುತ್ತೇನೆ. ಅದೇ ನನಗೆ ಕೀರ್ತಿದಾಯಕವೆಂಬುದರಲ್ಲಿ ಸಂದೇಹವಿಲ್ಲ. ॥ ೨೮-೩೦ ॥ ಕೌಸಲ್ಯಾತನಯನೂ, ಮಹಾ ಪರಾಕ್ರಮಿಯೂ ಆದ ಶ್ರೀರಾಮನನ್ನು ರಾಜಧಾನಿಗೆ ಕರೆಯಿಸಿ ನಾನು ಅರಣ್ಯಕ್ಕೆ ತೆರಳುತ್ತೇನೆ. ಪಾಪಸಂಕಲ್ಪವುಳ್ಳವಳೆ ! ಎಲೆಗೇ ಕೈಕೇಯಿ; ನೀನು ಮಾಡಿದ ಈ ಪಾಪಕಾರ್ಯವನ್ನು ನಾನು ಸಹಿಸಲಾರೆನು. ನಾನು ಲೋಕವೆಲ್ಲವೂ

---

(೧) ಅಣ್ಣನಿಗೆ ರಾಜ್ಯಪ್ರಧಾನರೂಪವಾದ ಪೂಜೆಯನ್ನು ತಂದೆಗೆ ಔರ್ಧ್ವದೈಹಿಕ ಕರ್ಮರೂಪವಾದ ಪೂಜೆಯನ್ನೂ ಮಾಡುತ್ತೇನೆಂದು ತಾತ್ಪರ್ಯವು.

ಶಕ್ನೋತಿ ಧಾರಯಿತುಂ ಪೌರ್ಯೈ ರಶ್ರುಕಂಠ್ಯೈ ರ್ನಿರೀಕ್ಷಿತಃ ‖ ೩೨ ‖ ಸಾತ್ವ ಮಗ್ನಿಂ ಪ್ರವಿಶವಾ ಸ್ವಯಂವಾ ದಂಡಕಾ ನ್ವಿಶ ‖ ರಜ್ಜುಂ ಬಧಾನವಾ ಕಂಠೇ ನಹಿ ತೇನ್ಯತ್ ಪರಾಯಣಂ ‖ ೩೩ ‖ ಅಹಮಪ್ಯವನಿಂ ಪ್ರಾಪ್ತೇ ರಾಮೇ ಸತ್ಯಪರಾಕ್ರಮೇ ‖ ಕೃತಕೃತ್ಯೋ ಭವಿಷ್ಯಾಮಿ ವಿಪ್ರವಾಸಿತ ಕಲ್ಮಷಃ ‖ ೩೪ ‖ ಇತಿ ನಾಗಇವಾರಣ್ಯೇ ತೋಮರಾಂಕುಶ ಚೋದಿತಃ ‖ ಪಪಾತ ಭುವಿ ಸಂಕ್ರುದ್ಧೋ ನಿಶ್ವಸನ್ನಿವ ಪನ್ನಗಃ ‖ ೩೫ ‖

ಹೇ ಪಾಪೇ - ಎಲೌ ಪಾಪಿಷ್ಠಳೇ, ಹೇ ಪಾಪಸಂಕಲ್ಪೇ - ಎಲೌ ಪಾಪಕರವಾದ ಸಂಕಲ್ಪವುಳ್ಳವಳೇ, ಅಶ್ರುಕಂಠ್ಯೈಃ - ಕಂಬನಿಯಿಂದ ಗದ್ಗದಧ್ವನಿಯುಳ್ಳ, ಪೌರ್ಯೈಃ - ಪಟ್ಟಣಸ್ಥರಿಂದ, ನಿರೀಕ್ಷಿತಃ - ನೋಡಲ್ಪಟ್ಟ, ತ್ವಯಾ - ನಿನ್ನಿಂದ, ಕೃತಂ - ಮಾಡಲ್ಪಟ್ಟ, ಪಾಪಂ - ಪಾಪವನ್ನು, ಧಾರಯಿತುಂ - ಧರಿಸಲು, ನಶಕ್ನೋತಿ - ಸಮರ್ಥನಲ್ಲವಷ್ಟೆ. ‖ ೩೨ ‖ ಸಾ - ಅಂತಹ, ತ್ವಂ - ನೀನು, ಅಗ್ನಿಂವಾ - ಬೆಂಕಿಯಲ್ಲಾದರೂ, ಪ್ರವಿಶ - ಪ್ರವೇಶಮಾಡು, ಕಂಠೇ - ಕೊರಳಿನಲ್ಲಿ, ರಜ್ಜುಂವಾ - ಹಗ್ಗವನ್ನಾದರೂ, ಬಧಾನ - ಬಿಗಿಸಿಕೋ, ತೇ - ನಿನಗೆ, ಅನ್ಯತ್-ಈ ಮೂರಕ್ಕಿಂತಲೂ ಮತ್ತೊಂದು, ಪರಾಯಣಂ - ಗತಿಯು, ನಹಿ - ಇಲ್ಲವಷ್ಟೆ. ‖ ೩೩ ‖ ಅಹಮಪಿ - ನಾನೂ ಕೂಡ, ಸತ್ಯಪರಾಕ್ರಮೇ - ಸತ್ಯದಿಂದ ಪರಾಕ್ರಮಶಾಲಿಯಾದ, ರಾಮೇ - ಶ್ರೀರಾಮನು, ಅವನಿಂ - ಭೂಮಿಯನ್ನು, ಪ್ರಾಪ್ತೇ - ಹೊಂದಲು, ವಿಪ್ರವಾಸಿತಕಲ್ಮಷಃ - ಹೋಗಲಾಡಿಸಿದ ಪಾಪವುಳ್ಳವನಾಗಿ, ಕೃತಕೃತ್ಯಃ - ಕೃತಾರ್ಥನು, ಭವಿಷ್ಯಾಮಿ - ಆಗುತ್ತೇನೆ. ‖ ೩೪ ‖ ಇತಿ - ಈಪರಿಯಾಗಿ, ಅರಣ್ಯೇ- ಅರಣ್ಯದಲ್ಲಿ, ತೋಮರಾಂಕುಶಚೋದಿತಃ - ತೋಮರಾಯುಧದಿಂದಲೂ ಭಲ್ಲಾಯುಧದಿಂದಲೂ ತಿವಿದ, ನಾಗಇವ - ಆನೆಯಂತೆ, ಸಂಕೃದ್ಧಃ - ಕೋಪಿಷ್ಠನಾದ ಭರತನು, ಪನ್ನಗಇವ - ಗಜದಂತೆ, ನಿಶ್ವಸನ್ - ನಿಟ್ಟುಸಿರು ಬಿಡುತ್ತ, ಭುವಿ - ನೆಲದಲ್ಲಿ, ಪಪಾತ - ಬಿದ್ದನು ‖ ೩೫ ‖ ಸಂರಕ್ತನೇತ್ರಃ - ಕೆಂಗಣ್ಣುಗಳುಳ್ಳ, ತಥಾ - ಹಾಗೆಯೇ, ಶಿಥಿಲಾಂಬರಃ - ಬಿಚ್ಚಿಹೋದ ವಸ್ತ್ರವುಳ್ಳ, ವಿಧೂತಸರ್ವಾಭರಣಃ - ಕೊಡುಹಿದ ಸಮಸ್ತಾಭರಣಗಳುಳ್ಳ, ಪರಂತಪಃ - ಶತ್ರುಸಂಹಾರಕನಾದ,

---

ಚೋದಿಸುತ್ತಿರಲು ಇಂತಹ ದುಷ್ಕೃತ್ಯವನ್ನು ಮಾಡಲಾರೆನು. ಓ ಕೈಕೇಯಿ! ನೀನು ಬೆಂಕಿಯಲ್ಲಾದರೂ ಬೀಳು; ಬುದ್ಧಿಪೂರ್ವಕವಾಗಿ ದಂಡಕಾರಣ್ಯಕ್ಕಾದರೂ ತೊಲಗಿಹೋಗು; ಕುತ್ತಿಗೆಗೆ ನೇಣುಹಾಕಿಕೊಂಡಾದರೂ ಸಾಯಿ; ಇವು ಮೂರುಮಾರ್ಗಗಳನ್ನು ಬಿಟ್ಟರೆ ನಿನಗೆ ಬೇರೊಂದುಮಾರ್ಗವೇಗತಿಯಿಲ್ಲ. ಸತ್ಯಪರಾಕ್ರಮವುಳ್ಳ ಶ್ರೀರಾಮಮೂರ್ತಿಯು ಪುನಃ ಈ ಅಯೋಧ್ಯೆಗೆ ಬಂದವನೇ ಆದರೆ, ನಾನು ಪಾಪರಹಿತನಾಗುವುದು ಮಾತ್ರವಲ್ಲದೆ ಕೃತಕೃತ್ಯನೂ ಆಗುತ್ತೇನೆ" ಈರೀತಿಯಾಗಿಯಾಭರತಕುಮಾರನು ಅಧಿಕವಾದ ಕೋಪದಿಂದ ಕೂಡಿ ಮಹಾ ಸರ್ಪದಂತೆ ನಿಟ್ಟುಸಿರುಗಳನ್ನು ಬಿಡುತ್ತ ಅರಣ್ಯದಲ್ಲಿ ತೋಮರಗಳಿಂದಲೂ, ಅಂಕುಶಗಳಿಂದಲೂ ತಿವಿಯಲ್ಪಟ್ಟ ಆನೆಯಂತೆ ಮೂರ್ಛೆಯೊಂದಿ ಭೂಮಿಯಲ್ಲಿ ಬಿದ್ದವನಾದನು. ಇಷ್ಟೆಯಲ್ಲದೆ ಆ ಸಮಯದಲ್ಲಿ ಶತ್ರುಮರ್ದನನೂ, ರಾಜನಂದನನೂ, ಬಹುಕೆಂಪಾದ ಕಂಗಳುಳ್ಳವನೂ, ದೂರದಲ್ಲಿ ಜಾರಿ ಬಿದ್ದುಹೋದ ವಸ್ತ್ರಾಭರಣಗಳುಳ್ಳವನೂ

ಸಂರಕ್ತ ನೇತ್ರ ಶ್ಶಿಥಿಲಾಂಬರಸ್ತಥಾ
ವಿಧೂತ ಸರ್ವಾಭರಣಃ ಪರಂತಪಃ ||
ಬಭೂವ ಭೂಮೌ ಪತಿತೋ ನೃಪಾತ್ಮಜ
ಶ್ಶಚೀಪತೇಃ ಕೇತುರಿವೋತ್ಸವಕ್ಷಯೇ || ೩೬ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುಸ್ಸಪ್ತತಿತಮಸ್ಸರ್ಗಃ.

ನೃಪಾತ್ಮಜಃ - ಅರಸುಗುವರನಾದ ಭರತನು, ಉತ್ಸವಕ್ಷಯೇ - ಉತ್ಸವಾನಂತರದಲ್ಲಿ, ಶಚೀಪತೇಃ- ದೇವೇಂದ್ರನ, ಕೇತುರಿವ - ಧ್ವಜದಂತೆ, ಭೂಮೌ - ನೆಲದಲ್ಲಿ, ಪತಿತಃ - ಬಿದ್ದವನು, ಬಭೂವ - ಆದನು. || ೩೬ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುಸ್ಸಪ್ತತಿತಮಸ್ಸರ್ಗಃ.

ಆದ ಭರತಕುಮಾರನು ಉತ್ಸವಾಂತ್ಯದಲ್ಲಿ ದೇವೇಂದ್ರನ ಧ್ವಜವು ನೆಲಕ್ಕುರುಳಿದಂತೆ ಕಾಣುತ್ತಿದ್ದನು. || ೩೧-೩೬ ||

ಇಂತಿದು ಭರತಕೃತ ಕೈಕೇಯೀ ಗರ್ಹಣ ವೃತ್ತಾಂತ ವಿವರಣವೆಂಬ
ಎಪ್ಪತ್ತನಾಲ್ಕನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಪಂಚಸಪ್ತತಿತಮಸ್ಸರ್ಗಃ.

ದೀರ್ಘಕಾಲಾ ತ್ಸಮುತ್ಥಾಯ ಸಂಜ್ಞಾಂ ಲಬ್ಧ್ವಾಚ ವೀರ್ಯವಾನ್ ॥
ನೇತ್ರಾಭ್ಯಾ ಮಶ್ರುಪೂರ್ಣಾಭ್ಯಾಂ ದೀನಾ ಮುದ್ವೀಕ್ಷ್ಯ ಮಾತರಂ ॥ ೧ ॥
ಸೋಽಮಾತ್ಯ ಮಧ್ಯೇ ಭರತೋ ಜನನೀ ಮಭ್ಯಕುತ್ಸಯತ್ ॥ ರಾಜ್ಯಂ ನಕಾ
ಮಯೇ ಜಾತು ಮಂತ್ರಯೇ ನಾಪಿ ಮಾತರಂ ॥ ೨ ॥ ಅಭಿಷೇಕಂ ನಜಾ
ನಾಮಿ ಯೋಽಭೂದ್ರಾಜ್ಞಾ ಸಮೀಕ್ಷಿತಃ ॥ ವಿಪ್ರಕೃಷ್ಟೇ ಹ್ಯಹಂ ದೇಶೇ
ಶತ್ರುಘ್ನ ಸಹಿತೋಽವಸಂ ॥ ೩ ॥ ವನವಾಸಂ ನಜಾನಾಮಿ ರಾಮಸ್ಯಾಹಂ

ವೀರ್ಯವಾನ್ - ಪರಾಕ್ರಮಶಾಲಿಯಾದ, ಭರತಃ - ಭರತನು, ದೀರ್ಘಕಾಲಾತ್ - ಬಹಳ ಕಾಲದ ಮೇಲೆ, ಸಂಜ್ಞಾಂ - ಪ್ರಜ್ಞೆಯನ್ನು, ಲಬ್ಧ್ವಾ - ಹೊಂದಿ, ಸಮುತ್ಥಾಯ - ಮೇಲಕ್ಕೆದ್ದು, ಅಶ್ರುಪೂರ್ಣಾಭ್ಯಾಂ - ಕಂಬನಿಗಳಿಂದ ತುಂಬಿರುವ, ನೇತ್ರಾಭ್ಯಾಂ - ಕಣ್ಣುಗಳಿಂದ, ದೀನಾಂ - ದೀನಮುಖಳಾದ, ಮಾತರಂ - ತಾಯಿಯನ್ನು, ಉದ್ವೀಕ್ಷ್ಯ - ಕಂಡು, ಅಮಾತ್ಯಮಧ್ಯೇ - ಮಂತ್ರಿಗಳ ಮಧ್ಯದಲ್ಲಿ, ಸಃ - ಆ ಭರತನು, ಜನನೀಂ - ತಾಯಿಯನ್ನು, ಅಭ್ಯಕುತ್ಸಯತ್ - ನಿಂದಿಸಿದನು. ॥ ೧ ॥ ರಾಜ್ಯಂ - ರಾಜ್ಯವನ್ನು, ಜಾತು-ಒಂದಾನೊಂದು ಕಾಲದಲ್ಲಿಯೂ, ನಕಾಮಯೇ-ಕೋರಿದವನಲ್ಲ, ಮಾತರಮಪಿ - ತಾಯಿಯನ್ನೂ ಕೂಡ, ನಮಂತ್ರಯೇ - ಆಲೋಚಿಸಿದವನಲ್ಲ, ಯಃ - ಯಾವ ಪಟ್ಟಾಭಿಷೇಕವು, ರಾಜ್ಞಾ - ಅರಸನಿಂದ, ಸಮೀಕ್ಷಿತಃ - ಆಲೋಚಿಸಲ್ಪಟ್ಟದು, ಆಸೀತ್ - ಆಯಿತೋ, ತಮಭಿಷೇಕಂ - ಅಂತಹ ಅಭಿಷೇಕವನ್ನು, ನಜಾನಾಮಿ - ಅರಿತವನಲ್ಲ, ಅಹಂಹಿ - ನಾನಾದರೆ, ವಿಪ್ರಕೃಷ್ಟೇ - ದೂರವಾದ, ದೇಶೇ - ಪ್ರದೇಶದಲ್ಲಿ, ಶತ್ರುಘ್ನಸಹಿತಃ - ಶತ್ರುಘ್ನನೊಡಗೂಡಿದವನಾಗಿ, ಅವಸಂ - ಇದ್ದೆನು. ॥ ೩ ॥ ಮಹಾತ್ಮನಃ - ಮಹಾತ್ಮನಾದ, ರಾಮಸ್ಯ - ಶ್ರೀರಾಮನಿಗೆ, ಸೌಮಿತ್ರೇಶ್ಚ - ಲಕ್ಷ್ಮಣನಿಗೂ, ಸೀತಾಯಾಶ್ಚ - ಸೀತಾದೇವಿಗೂ, ವಿವಾಸನಂ - ಪ್ರವಾಸನವು, ಯಥಾ - ಹಾಗೆ, ಅಭವತ್ - ಆಯಿತೋ, ತಥಾ-ಹಾಗೆಯೇ, ತಂವನವಾಸಂ-

---

ಆ ಬಳಿಕ ಮಹಾ ಪರಾಕ್ರಮಶಾಲಿಯಾದ ಆ ಭರತನು ಬಹಳ ಹೊತ್ತಿನ ಮೇಲೆ ಎಚ್ಚರಗೊಂಡು ಮೇಲಕ್ಕೆದ್ದವನಾದನು. ಆಮೇಲೆ ಕಣ್ಣುಗಳತುಂಬ ನೀರು ಸುರಿಸುತ್ತ ದೀನಳಾದ ತನ್ನ ತಾಯಿಯನ್ನು ನೋಡಿ ಮಂತ್ರಿಗಳೆಲ್ಲರ ಮಧ್ಯದಲ್ಲಿಯೇ ಆಕೆಯನ್ನು ನಿಂದಿಸಿದನು. ನಾನು ಎಂದಿಗೂ ಈ ರಾಜ್ಯಾಧಿಪತ್ಯವನ್ನು ಕೋರಿದವನಲ್ಲ. ನಾನು ನನ್ನ ತಾಯಿಯೊಡನೆ ರಾಜ್ಯವನ್ನು ಕುರಿತು ಯೋಚಿಸಿದವನೂ ಅಲ್ಲ. ನನ್ನ ಯೌವರಾಜ್ಯಪಟ್ಟಾಭಿಷೇಕಕ್ಕಾಗಿ ಈ ಕೈಕೇಯಿಯು ನನ್ನ ತಂದೆಯಾದ ದಶರಥರಾಯನೊಡನೆ ಆಲೋಚಿಸಿದುದನ್ನೂ ನಾನರಿಯೆನು. ನಾನು ಶತ್ರುಘ್ನನೊಡಗೂಡಿ ದೂರದೇಶದಲ್ಲಿದ್ದೆನು. ॥೩॥ ಮಹಾತ್ಮನಾದ ಶ್ರೀರಾಮನು ಲಕ್ಷ್ಮಣಸೀತೆಯರೊಡಗೂಡಿ ಅರಣ್ಯಕ್ಕೆ ತೆರಳಿದುದೂ ಸಹ ನನಗೆ ತಿಳಿಯಲಿಲ್ಲ."

ಮಹಾತ್ಮನಃ || ವಿವಾಸನಂವಾ ಸೌಮಿತ್ರೇಸ್ಸೀತಾಯಾಶ್ಚ ಯಥಾಭವೇತ್||೪||
ತಥೈವ ಕ್ರೋಶತ ಸ್ತಸ್ಯ ಭರತಸ್ಯ ಮಹಾತ್ಮನಃ || ಕೌಸಲ್ಯಾ ಶಬ್ದಮಾಜ್ಞಾಯ
ಸುಮಿತ್ರಾ ಮಿದಮಬ್ರವೀತ್ || ೫ || ಆಗತಃ ಕ್ರೂರಕಾರ್ಯಾಯಾಃ ಕೈಕೇ
ಯ್ಯಾ ಭರತ ಸ್ಸುತಃ || ತಮಹಂ ದ್ರಷ್ಟುಮಿಚ್ಛಾಮಿ ಭರತಂ ದೀರ್ಘದರ್ಶಿನಂ
|| ೬ || ಏವಮುಕ್ತ್ವಾ ಸುಮಿತ್ರಾಂ ಸಾ ವಿವರ್ಣಾ ಮಲಿನಾ ಕೃಶಾ || ಪ್ರತಸ್ಥೇ
ಭರತೋ ಯತ್ರ ವೇಪಮಾನಾ ವಿಚೇತನಾ || ೭ || ಸತು ರಾಮಾನುಜಶ್ಚಾಪಿ
ಶತ್ರುಘ್ನ ಸಹಿತಸ್ತದಾ || ಪ್ರತಸ್ಥೇ ಭರತೋ ಯತ್ರ ಕೌಸಲ್ಯಾಯಾ ನಿವೇ
ಶನಂ || ೮ || ತತ ಶ್ಶತ್ರುಘ್ನ ಭರತೌ ಕೌಸಲ್ಯಾಂ ಪ್ರೇಕ್ಷ್ಯ ದುಃಖಿತೌ ||

ಆ ವನವಾಸವನ್ನು, ನಜಾನಾಮಿ - ತಿಳಿದವನಲ್ಲ. || ೪ || ಕೌಸಲ್ಯಾ - ಕೌಸಲ್ಯಾದೇವಿಯು, ತಥೈವ-ಹಾಗೆಯೇ, ಕ್ರೋಶತಃ - ಕೂಗುತ್ತಿರುವ, ಮಹಾತ್ಮನಃ - ಮಹಾತ್ಮನಾದ, ತಸ್ಯಭರತಸ್ಯ-ಆ ಭರತನ, ಶಬ್ದಂ - ಧ್ವನಿಯನ್ನು, ಆಜ್ಞಾಯ - ತಿಳಿದು, ಸುಮಿತ್ರಾಂ - ಸುಮಿತ್ರಾದೇವಿಯನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದಳು. || ೫ || ಕ್ರೂರಕಾರ್ಯಾಯಾಃ - ಕ್ರೂರವಾದ ವ್ಯಾಪಾರವುಳ್ಳ, ಕೈಕೇಯ್ಯಾಃ - ಕೈಕೇಯಿದೇವಿಯ, ಸುತಃ - ಕುಮಾರನಾದ, ಭರತಃ - ಭರತನು, ಆಗತಃ - ಬಂದಿದ್ದಾನೆ, ದೀರ್ಘದರ್ಶಿನಂ - ದೂರಾಲೋಚನೆಯುಳ್ಳ, ತಂಭರತಂ-ಆ ಭರತನನ್ನು, ಅಹಂ - ನಾನು, ದ್ರಷ್ಟುಂ - ನೋಡಲು, ಇಚ್ಛಾಮಿ - ಬಯಸುತ್ತೇನೆ. || ೬ || ಏವಂ-ಹೀಗೆ, ಸುಮಿತ್ರಾಂ-ಸುಮಿತ್ರಾದೇವಿಯನ್ನು ಕುರಿತು, ಉಕ್ತ್ವಾ-ಹೇಳಿ, ವಿವರ್ಣಾ-ಕಾಂತಿಹೀನಳಾದ, ಮಲಿನಾ - (ಗೋ + ಮ) ಸ್ನಾನಪಾನ ವರ್ಜಿತಳಾದುದರಿಂದ ಮಲಿನಳಾದ, ಕೃಶಾ - ಸವೆದುಹೋಗಿದ್ದ, ಸಾ - ಆ ಕೌಸಲ್ಯಾದೇವಿಯು, ವೇಪಮಾನಾ - ನಡುಗುತ್ತ, ವಿಚೇತನಾ - ಮೈಮರೆತು, ಭರತಃ-ಭರತನು, ಯತ್ರಾಸ್ತೇ - ಎಲ್ಲಿರುವನೋ, ತತ್ರ-ಅಲ್ಲಿಗೆ, ಪ್ರತಸ್ಥೇ-ಹೊರಟಳು. || ೭ || ತದಾ-ಆಗ, ರಾಮಾನುಜಃ - ಶ್ರೀರಾಮನಿಗೆ ತಮ್ಮನಾದ, ಸಭರತಃ - ಆ ಭರತನೂ, ಶತ್ರುಘ್ನಸಹಿತಃ - ಶತ್ರುಘ್ನನೊಡನೆ, ಕೌಸಲ್ಯಾಯಾಃ - ಕೌಸಲ್ಯಾದೇವಿಯ, ನಿವೇಶನಂ - ಮನೆಯು, ಯತ್ರ - ಎಲ್ಲೊ, ತತ್ರ - ಅಲ್ಲಿಗೆ, ಪ್ರತಸ್ಥೇ - ಹೊರಟನು. || ೮ || ತತಃ - ಆ ಬಳಿಕ, ಶತ್ರುಘ್ನಭರತೌ - ಶತ್ರುಘ್ನ

ಎಂಬೀ ಪ್ರಕಾರವಾಗಿ ನುಡಿದ ಆ ಭರತನು ಘಟ್ಟಿಯಾಗಿ ರೋದಿಸಿದನು. ಭರತನೀರೀತಿ ರೋದಿಸುತ್ತಿರಲು, ಮಹಾನುಭಾವನಾದ ಆತನ ಕಂಠಧ್ವನಿಯುನ್ನು ಕೇಳಿ ಕೌಸಲ್ಯಾದೇವಿಯು ಸುಮಿತ್ರೆಯನ್ನು ಕುರಿತು, " ಸುಮಿತ್ರೆ ! ಕ್ರೂರ್ಯಕಾರ್ಯವನ್ನೆಸಗಿದ ಕೈಕೇಯಿಯ ಪುತ್ರನಾದ ಭರತನು ಬಂದಿದ್ದಾನೆ; ಅವನು ದೀರ್ಘಾಲೋಚನಾಪರನು; ಆತನನ್ನು ನೋಡಲಪೇಕ್ಷಿಸುತ್ತೇನೆ" ಎಂದಳು.||೧-೫||ಕೌಸಲ್ಯಾದೇವಿಯು ಸುಮಿತ್ರೆಯೊಡನೆ ಈ ರೀತಿಯಾಗಿ ಹೇಳಿ ಕೃಶಿಸಿಹೋದವಳೂ, ಮಲಿನವಾದವಳೂ, ಗಡಗಡನೆ ಒಣಕುತ್ತಿರುವಳೂ ಸ್ಮೃತಿಯಿಲ್ಲದವಳೂ ಆಗಿ ಆ ಭರತಕುಮಾರನಿದ್ದೆಡೆಗೆ ಹೋದಳು. ಆಗ ಶ್ರೀರಾಮಾನುಜನಾದ ಭರತನು ತಮ್ಮನಾದ ಶತ್ರುಘ್ನನೊಡಗೂಡಿದವನಾಗಿ ಆ ಕೌಸಲ್ಯೆಯಿದ್ದ ಸ್ಥಳಕ್ಕೆ ಬಂದವನಾದನು. ಅಷ್ಟರಲ್ಲಿಯಾ ಕೌಸಲ್ಯಾದೇವಿಯನ್ನು ನೋಡಿ ಆ ಭರತಶತ್ರುಘ್ನರೀರ್ವರೂ ಅಪಾರವಾದ

ಪರ್ಯಷ್ವಜೇತಾಂ ದುಃಖಾರ್ತಾಂ ಪತಿತಾಂ ನಷ್ಟಚೇತಸಾಂ ‖ ೯ ‖ ರುದಂತೌ ರುದತೀಂ ದುಃಖಾ ತ್ಸಮೇತ್ಯಾರ್ಯಾಂ ಮನಸ್ವಿನೀಂ ‖ ಭರತಂ ಪ್ರತ್ಯುವಾಚೇದಂ ಕೌಸಲ್ಯಾ ಭೃಶದುಃಖಿತಾ ‖ ೧೦ ‖ ಇದಂ ತೇ ರಾಜ್ಯಕಾಮಸ್ಯ ರಾಜ್ಯಂ ಪ್ರಾಪ್ತ ಮಕಂಟಕಂ ‖ ಸಂಪ್ರಾಪ್ತಂ ಬತ! ಕೈಕೇಯ್ಯಾ ಶ್ಶೀಘ್ರಂ ಕ್ರೂರೇಣ ಕರ್ಮಣಾ ‖ ೧೧ ‖ ಪ್ರಸ್ಥಾಪ್ಯ ಚೀರವಸನಂ ಪುತ್ರಂ ಮೇ ವನವಾಸಿನಂ ‖ ಕೈಕೇಯಿಾ ಕಂಗುಣಂ ತತ್ರ ಪಶ್ಯತಿ? ಕ್ರೂರ ದರ್ಶಿನೀ ‖ ೧೨ ‖ ಕ್ಷಿಪ್ರಂ

ಭರತರಿಬ್ಬರೂ, ದುಃಖಾರ್ತಾಂ - ದುಃಖಗೊಂಡಿರುವ, ಕೌಸಲ್ಯಾಂ-ಕೌಸಲ್ಯಾದೇವಿಯನ್ನು, ಪ್ರೇಕ್ಷ್ಯ-ಕಂಡು, ದುಃಖಿತೌ - ದುಃಖಿತರಾಗಿ, ಪತಿತಾಂ - ನೆಲದಮೇಲೆ ಬಿದ್ದಿರುವ, ನಷ್ಟಚೇತಸಾಂ - ಸ್ಮೃತಿಯಿಲ್ಲದಿರುವ, ದುಃಖಾತ್ - ದುಃಖದಿಂದ, ರುದತೀಂ - ಅಳುತ್ತಿರುವ, ಮನಸ್ವಿನೀಂ - ಒಳ್ಳೆಯ ಮನವುಳ್ಳ, ಆರ್ಯಾಂ - ಪೂಜ್ಯಳಾದ ಕೌಸಲ್ಯಾದೇವಿಯನ್ನು ಕುರಿತು, ಸಮೇತ್ಯ-ಬಂದು, ರುದಂತೌ-ರೋದನಮಾಡುತ್ತ, ಪರಿಷ್ವಜೇತಾಂ · ಅಪ್ಪಿಕೊಂಡರು. ‖ ೯ ‖ ಕೌಸಲ್ಯಾ - ಕೌಸಲ್ಯಾದೇವಿಯು, ಭೃಶದುಃಖಿತಾಂ - ಬಹಳ ದುಃಖಗೊಂಡವಳಾಗಿ, ಭರತಂಪ್ರತಿ - ಭರತನನ್ನು ಕುರಿತು, ಇದಂ - ಈ ಮಾತನ್ನು, ಉವಾಚ - ಹೇಳಿದಳು. ‖ ೧೦ ‖ ರಾಜ್ಯಕಾಮಸ್ಯ - ರಾಜ್ಯವನ್ನು ಆಶಿಸುತ್ತಿರುವ ನಿನಗೆ, ಇದಂರಾಜ್ಯಂ - ಈ ರಾಜ್ಯವು, ಕೈಕೇಯ್ಯಾಃ - ಕೈಕೇಯಿಾದೇವಿಯ, ಕ್ರೂರೇಣಕರ್ಮಣಾ - ಕಠಿನವಾದ ಕೆಲಸದಿಂದ, ಅಕಂಟಕಂ - ನಿಷ್ಕಂಟಕವಾಗಿ, ಸಂಪ್ರಾಪ್ತಂ - ಬಂದಿರುವದಾಗಿ, ಅಕಂಟಕಂ-ನಿಷ್ಕಂಟಕವಾಗಿಯೇ, ಶೀಘ್ರಂ - ಜಾಗ್ರತೆಯಾಗಿ, ಪ್ರಾಪ್ತಂ - ಲಬ್ಧವಾಯಿತು, ಬತ - ಕಷ್ಟವು. ‖ ೧೧ ‖ ಕ್ರೂರದರ್ಶಿನೀ - ಕ್ರೂರದೃಷ್ಟಿಯುಳ್ಳ, ಕೈಕೇಯಿಾ - ಕೈಕೇಯಿಾದೇವಿಯು, ಚೀರವಸನಂ-ನಾರುಮಡಿಯುಟ್ಟಿರುವ, ಮೇ - ನನ್ನ, ಪುತ್ರಂ - ಮಗನನ್ನು, ವನವಾಸಿನಂ - ವನವಾಸಿಯಾದ, ಪ್ರಸ್ಥಾಪ್ಯ - ಕಳುಹಿಸಿ, ತತ್ರ - ಆ ವನಪ್ರಸ್ಥಾನದಲ್ಲಿ, ಕಂಗುಣಂ - ಯಾವ ಗುಣವನ್ನು. ಪಶ್ಯತಿ - ಕಂಡಿರುವಳು. ‖ ೧೨ ‖ ಹಿರಣ್ಯನಾಭಃ - (ಮ) ಹೊಕ್ಕಳೇ ಮೊದಲಾದ ಅವಯವಗಳುಳ್ಳ, ಸುಮಹಾಯಶಾಃ - ಮಹಾ ಕೀರ್ತಿಯುಳ್ಳ, ಮೇಸುತಃ - ನನ್ನ ಕುವರನು, ಯತ್ರ - ಎಲ್ಲಿ,

---

ದುಃಖವನ್ನು ಹೊಂದಿದವರಾಗಿ, ಮೂರ್ಛೆಯೊಂದಿ ಕೆಳಕ್ಕೆ ಬಿದ್ದಿರುವವಳೂ, ಬಹಳವಾಗಿ ರೋದಿಸುತ್ತಿರುವವಳೂ, ಪೂಜ್ಯಳೂ, ಒಳ್ಳೆಯ ಮನಸ್ಸುಳ್ಳವಳೂ ಆದ ಆ ಕೌಸಲ್ಯೆಯನ್ನು ಅಪ್ಪಿಕೊಂಡರು. ಆ ಬಳಿಕ ಸ್ವಲ್ಪಹೊತ್ತಿನಮೇಲೆ ಆ ದೇವಿಯು ಎಚ್ಚರಗೊಂಡು ಅಧಿಕವಾದ ದುಃಖವುಳ್ಳವಳಾಗಿ ಆ ಭರತನನ್ನು ಕುರಿತು, ‖೬-೧೦‖ ". ವತ್ಸ; ಭರತ! ರಾಜ್ಯಕಾಮನಾದ ನಿನಗೆ ನಿರಾತಂಕವಾಗಿ ಈ ರಾಜ್ಯವೆಲ್ಲವೂ ಲಭಸಿತು. ಅಯ್ಯೋ ! ಕೇಕೇಯಿಯು ಮಾಡಿದ ಕ್ರೂರಕಾರ್ಯದಿಂದ ನಿನಗೆ ರಾಜ್ಯವು ಲಭಸಿತಲ್ಲವೆ ? ಕ್ರೂರಕೃತ್ಯಗಳನ್ನೇ ಮಾಡುತ್ತಿರುವ ಆ ಕೈಕೇಯಿಯು ನನ್ನ ಮಗನಾದ ಶ್ರೀರಾಮನನ್ನು ನಾರುಮಡಿಗಳುಡುವವನನ್ನಾಗಿ ಮಾಡಿ ಅರಣ್ಯಗಳಲ್ಲಿ ವಾಸಮಾಡತಕ್ಕುದೆಂದು ನಿಯಮಿಸಿದಳು. ಹಾಗೆ ಮಾಡಿದುದರಿಂದ ತನಗಾವ ಲಾಭವುಂಟಾಯಿತೋ ತಿಳಿಯಲಿಲ್ಲ! ಈ ಕೈಕೇಯಿಯು, ಹಿರಣ್ಯನಾಭನೂ,ಮಹಾ ಕೀರ್ತಿವಂತನೂ ನನ್ನ ಮಗನೂ ಆದ ಶ್ರೀರಾಮನಿರುವ ಅರಣ್ಯಕ್ಕೆ ಕಳುಹುವಳೆಂದು ತೋರುತ್ತಿರು

ಮಾಮಪಿ ಕೈಕೇಯಿಶಾ ಪ್ರಸ್ಥಾಪಯಿತು ಮರ್ಹತಿ॥ಹಿರಣ್ಯ ನಾಭೋ ಯತ್ರಾಸ್ತೇ
ಸುತೋ ಮೇ ಸುಮಹಾಯಶಾಃ ||೧೩|| ಅಥವಾ ಸ್ವಯಮೇವಾಹಂ ಸುಮಿತ್ರಾ
ನುಚರಾ ಸುಖಂ || ಅಗ್ನಿಹೋತ್ರಂ ಪುರಸ್ಕೃತ್ಯ ಪ್ರಸ್ಥಾಸ್ಯೇ ಯತ್ರ ರಾಘವಃ
|| ೧೪ || ಕಾಮಂ ವಾ ಸ್ವಯಮೇವಾದ್ಯ ತತ್ರ ಮಾಂ ನೇತು ಮರ್ಹಸಿ ||
ಯತ್ರಾಸೌ ಪುರುಷವ್ಯಾಘ್ರಃ ಪುತ್ರೋಮೇ ತಪ್ಯತೇ ತಪಃ || ೧೫ || ಇದಂಹಿ
ತವ ವಿಸ್ತೀರ್ಣಂ ಧನಧಾನ್ಯ ಸಮಾಚಿತಂ || ಹಸ್ತ್ಯಶ್ವ ರಥಸಂಪೂರ್ಣಂ ರಾಜ್ಯಂ
ನಿರ್ಯಾತಿತಂ ತಯಾ || ೧೬ || ಇತ್ಯಾದಿ ಬಹುಭಿ ರ್ವಾಕ್ಯೈಃ ಕ್ರೂರೈ ಸ್ಸಂ

ಅಸ್ತೇ - ಇರುವನೋ, ತತ್ರ - ಆ ಸ್ಥಳದಲ್ಲಿ, ಕೈಕೇಯಿಶಾ - ಕೈಕೇಯಿಶಾದೇವಿಯು, ಮಾಮಪಿ - ನನ್ನನ್ನೂ, ಕ್ಷಿಪ್ರಂ - ಜಾಗ್ರತೆಯಾಗಿ, ಪ್ರಸ್ಥಾಪಯಿತುಂ - ಕಳುಹಲು, ಅರ್ಹತಿ - ಯೋಗ್ಯಳಾಗುತ್ತಾಳೆ. ||೧೩|| ಅಥವಾ - ಹಾಗಲ್ಲದೇ ಹೋದರೆ, ಅಹಮೇವ - ನಾನೇ, ಸ್ವಯಂ - ತಾನು, ಸುಮಿತ್ರಾನುಚರಾ - ಸುಮಿತ್ರಾದೇವಿಯ ಹಿಂಬಾಲಿಕೆಯುಳ್ಳವಳಾಗಿ, ಅಗ್ನಿಹೋತ್ರಂ - ಅಗ್ನಿಹೋತ್ರವನ್ನು, ಪುರಸ್ಕೃತ್ಯ - ತೆಗದುಕೊಂಡು, ಯತ್ರ - ಯಾವ ಸ್ಥಳದಲ್ಲಿ, ರಾಘವಃ - ಶ್ರೀರಾಮನು, ಅಸ್ತಿ - ಇರುವನೋ, ತತ್ರ - ಆ ಸ್ಥಳದಲ್ಲಿ, ಸುಖಂ - ಸುಖವಾಗಿ, ಪ್ರಸ್ಥಾಸ್ಯೇ - ಪ್ರಯಾಣಮಾಡುತ್ತೇನೆ. ||೧೪|| ಸ್ವಯಮೇವ - ನೀನಾದರೂ, ಅದ್ಯ - ಈಗಲೇ, ಕಾಮಂ - ಮನಬಂದಂತೆ, ಮಾಂ - ನನ್ನನ್ನು, ತತ್ರ - ಆ ಸ್ಥಳದಲ್ಲಿ, ನೇತುಂ - ಕಳುಹಲು, ಅರ್ಹಸಿ - ಯೋಗ್ಯನಾಗು, ಯತ್ರ-ಯಾವ ಸ್ಥಳದಲ್ಲಿ, ಪುರುಷವ್ಯಾಘ್ರಃ - ಪುರುಷಶ್ರೇಷ್ಠನಾದ, ಅಸೌ - ಈ, ಮೇ - ನನ್ನ, ಪುತ್ರಃ - ಕುವರನು, ತಪಃ - ತಪವನ್ನು, ತಪ್ಯತೇ - ಮಾಡುತ್ತಾನೋ. ||೧೫|| ತವ - ನಿನಗೆ, ವಿಸ್ತೀರ್ಣಂ-ವಿಸ್ತಾರವಾದ, ಧನಧಾನ್ಯಸಮಾಚಿತಂ - ಧನದಿಂದಲೂ ಧಾನ್ಯದಿಂದಲೂ ವ್ಯಾಪ್ತವಾದ, ಹಸ್ತ್ಯಶ್ವರಥಸಂಪೂರ್ಣಂ - ಆನೆಗಳಿಂದಲೂ ಕುದುರೆಗಳಿಂದಲೂ ರಥಗಳಿಂದಲೂ ತುಂಬಿರುವ, ಇದಂರಾಜ್ಯಂ-ಈ ರಾಜ್ಯವು, ತಯಾ - ಆಕೆಯಿಂದ, ನಿರ್ಯಾತಿತಂಹಿ - ಕೊಡಿಸಲಾಯಿತಲ್ಲವೆ. ||೧೬|| ಇತ್ಯಾದಿ-ಇದೇಮೊದಲಾಗಿ, ಕ್ರೂರೈಃ - ಕಠೋರಗಳಾದ, ಬಹುಭಿಃ - ಅನೇಕ, ವಾಕ್ಯೈಃ - ಮಾತುಗಳಿಂದ, ವ್ರಣೇ - ಘಾಯದಲ್ಲಿ, ಸೂಚಿನಾ - ಸೂಜಿಯಿಂದ, ತುದ್ಯೇವ - ಚುಚ್ಚಿದಂತೆ, ಸಂಭರ್ತ್ಸಿತಃ-ಚುಚ್ಚಿದ,

ವುದು. ಮಹಾ ಕೀರ್ತಿಸಂಪನ್ನನಾದ ಆ ರಾಮಮೂರ್ತಿಯಿರುವ ಸ್ಥಳಕ್ಕೆ ಹೋಗಬೇಕೆಂದು ನನಗೂ ಆಸೆಯಿರುವುದು. ನಾನೇ ಸುಮಿತ್ರೆಯೊಡಗೂಡಿ ದಶರಥನ ಅಗ್ನಿಹೋತ್ರವನ್ನು ಮುಂದಿಟ್ಟುಕೊಂಡು ಶ್ರೀರಾಮನಿರುವ ಸ್ಥಳಕ್ಕೆ ಹೋಗುತ್ತೇನೆ. ಇಲ್ಲವಾದರೆ ಪುರುಷೋತ್ತಮನೂ, ನನಗೆ ಮಗನೂ ಆದ ಶ್ರೀರಾಮನೆಲ್ಲಿ ತಪಸಂಗೈಯುತ್ತಿರುವನೋ ಆ ಸ್ಥಳಕ್ಕೆ ನೀನಾದರೂ ನನ್ನನ್ನು ಕರೆದುಕೊಂಡು ಹೋಗು. ||೧೧-೧೫|| ಮಹಾವಿಸ್ತಾರವಾದುದೂ, ಧನಧಾನ್ಯ ಸಮೃದ್ಧವಾದುದೂ, ಗಜ, ತುರಗ, ರಥಾದಿಗಳಿಂದ ನಿಬಿಡಿತವಾದುದೂ ಆದ ಈ ಸಾಕೇತ ಸಾಮ್ರಾಜ್ಯವನ್ನು, ಕೈಕೇಯಿಯು ನಿನಗಾಗಿ ಸಂಪಾದಿಸಿದ್ದಾಳೆ. ಆದುದರಿಂದ ನೀನಿನ್ನುಮೇಲೆ ಈ ರಾಜ್ಯವನ್ನು ನಿಷ್ಕಂಟಕವಾಗಿ ಪರಿಪಾಲಿಸುವವನಾಗು" ಎಂದು ಹೇಳಿದಳು. ಈ ರೀತಿಯಾಗಿ ಆ ಕೌಸಲ್ಯಾದೇವಿಯು "ಗಾಯದಮೇಲೆ ಸೂಜಿಯಿಂದ ತಿವಿ

ಭರ್ತ್ಸಿತೋಽನಘಃ॥ವಿವ್ಯಥೇ ಭರತ ಸ್ತೀವ್ರಂ ವ್ರಣೇ ತುದ್ಯೇವ ಸೂಚಿನಾ ॥೧೭॥ ಪಪಾತ ಚರಣೇ ತಸ್ಯಾ ಸ್ತದಾ ಸಂಭ್ರಾಂತ ಚೇತಸಃ ॥ ವಿಲಪ್ಯ ಬಹುಧಾ ಸಂಜ್ಞೋ ಲಬ್ಧಸಂಜ್ಞ ಸ್ತತ ಸ್ಥಿತಃ ॥ ೧೮ ॥ ಏವಂ ವಿಲಪಮಾನಾಂ ತಾಂ ಭರತಃ ಪ್ರಾಂಜಲಿ ಸ್ತದಾ ॥ ಕೌಸಲ್ಯಾ ಪ್ರತ್ಯುವಾಚೇದಂ ಶೋಕೈ ರ್ಬಹುಭಿ ರಾವೃತಾಂ ॥ ೧೯ ॥ ಆರ್ಯೇಕಸ್ಮಾ ದಜಾನಂತಂ ಗರ್ಹಸೇ ಮಾಮ ಕಿಬ್ಬಿಷಂ॥ ವಿಪುಲಾಂಚ ಮಮ ಪ್ರೀತಿಂ ಸ್ಥಿರಾಂ ಜಾನಾಸಿ ರಾಘವೇ ॥ ೨೦ ॥ ಕೃಶಾ ಶಾಸ್ತ್ರಾನುಗಾ ಬುದ್ಧಿ ರ್ಮಾಭೂತ್ತಸ್ಯ ಕದಾಚನ ॥ ಸತ್ಯಸಂಧ ಸ್ಸತಾಂ ಶ್ರೇಷ್ಠೋ

ಅನಘಃ - ನಿರ್ದೋಷನಾದ, ಭರತಃ - ಭರತನು, ತೀವ್ರಂ - ಬಹಳವಾಗಿ, ವಿವ್ಯಥೇ-ವ್ಯಸನಗೊಂಡು, ತದಾ - ಆಗ, ಸಂಭ್ರಾಂತಚೇತಸಃ - ಭ್ರಾಂತಿಗೊಂಡ ಮನವುಳ್ಳ, ತಸ್ಯಾಃ - ಆ ಕೌಸಲ್ಯಾದೇವಿಯ, ಚರಣೇ - ಪಾದದಲ್ಲಿ, ಪಪಾತ - ಬಿದ್ದನು. ॥ ೧೭ ॥ ಬಹುಧಾ - ಬಹಳ ಪ್ರಕಾರವಾಗಿ, ವಿಲಪ್ಯ - ಪ್ರಲಾಪಮಾಡಿ, ಅಸಂಜ್ಞಃ - ಪ್ರಜ್ಞೆತಪ್ಪಿ, ತತಃ - ಬಳಿಕ, ಲಬ್ಧಸಂಜ್ಞಃ - ಪೊಂದಲ್ಪಟ್ಟ ಸಂಜ್ಞೆಯುಳ್ಳವನಾಗಿಯೂ, ಸ್ಥಿತಃ - ನಿಂತನು. ॥ ೧೮ ॥ ಏವಂ - ಈಪರಿಯಾಗಿ, ವಿಲಪಮಾನಾಂ - ವಿಲಾಪಮಾಡುತ್ತಿರುವ, ಬಹುಭಿಃ - ಬಹಳವಾದ, ಶೋಕೈಃ - ವ್ಯಸನಗಳಿಂದ, ಆವೃತಾಂ - ವ್ಯಾಪ್ತಳಾದ, ತಾಂಕೌಸಲ್ಯಾಂ - ಆ ಕೌಸಲ್ಯಾದೇವಿಯನ್ನು ಕುರಿತು, ತದಾ - ಆಗ, ಭರತಃ - ಭರತನು, ಪ್ರಾಂಜಲಿಃ - ಅಂಜಲಿಬದ್ಧನಾಗಿ, ಇದಂ - ಈ ಮಾತನ್ನು, ಪ್ರತ್ಯುವಾಚ - ಪ್ರತ್ಯುತ್ತರಕೊಟ್ಟನು. ॥ ೧೯ ॥ ಹೇ ಆರ್ಯೇ - ಎಲೌ ಪೂಜ್ಯಳೇ, ಅಜಾನಂತಂ - ಏನೂ ಅರಿಯದಿರುವ, ಅಕಿಲ್ಬಿಷಂ ನಿರಪರಾಧಿಯಾದ, ಮಾಂ - ನನ್ನನ್ನು, ಕಸ್ಮಾತ್ - ಯಾವ ಕಾರಣ, ಗರ್ಹಸೇ - ನಿಂದಿಸುವೆ, ಮಮ - ನನಗೆ, ರಾಘವೇ - ಶ್ರೀರಾಮನಲ್ಲಿ, ವಿಪುಲಾಂ - ಹೆಚ್ಚಾದ, ಸ್ಥಿರಾಂ-ಅಚಲವಾದ, ಪ್ರೀತಿಂ-ವಿಶ್ವಾಸವನ್ನೂ, ಜಾನಾಸಿ - ತಿಳಿದೇ ಇರುವೆಯಲ್ಲವೆ. ॥ ೨೦ ॥ ಸತ್ಯಸಂಧಃ - ಸತ್ಯ ಪ್ರತಿಜ್ಞೆಯುಳ್ಳ, ಸತಾಂ - ಸತ್ಪುರುಷರೊಳಗೆ, ಶ್ರೇಷ್ಠಃ - ಶ್ರೇಷ್ಠನಾದ, ಆರ್ಯಃ - ಅಣ್ಣನಾದ ಶ್ರೀರಾಮನು, ಯಸ್ಯ - ಯಾವನ, ಅನುಮತೇ - ಸಮ್ಮತಿಯಾಗಲು, ಗತಃ - ಅರಣ್ಯವನ್ನು ಕುರಿತು ಹೋದನೋ,

---

ಯುಮಂತೆ, ಮೊದಲೇ ಪಿತೃಮರಣ ದುಃಖದಿಂದ ಸಂತಪ್ತನಾದ ಆ ಭರತನನ್ನು ಕುರಿತು ಬಹು ಕಠಿನಗಳಾದ ನುಡಿಗಳನ್ನಾಡಿದಳು. ಆಗಲಾ ಕೌಸಲ್ಯಾದೇವಿಯ ಆ ವಿಧಗಳಾದ ಪರುಷವಾಕ್ಯಗಳನ್ನು ಕೇಳಿದ ಭರತಕುಮಾರನು ಬಹಳವಾಗಿ ಮನನೊಂದು, ಆ ದೇವಿಯ ಪಾದಗಳಮೇಲೆ ಬಿದ್ದು ಸ್ಮೃತಿಯಿಲ್ಲದೆ ಅನೇಕ ವಿಧವಾಗಿ ರೋದಿಸಿ ಸ್ವಲ್ಪ ಹೊತ್ತಾದ ಮೇಲೆ ಎಚ್ಚರಗೊಂಡು ಕೈಗಳನ್ನು ಜೋಡಿಸಿಕೊಂಡು ಮತ್ತೂ ಅಧಿಕವಾಗಿ ರೋದಿಸುತ್ತ, ನಾನಾವಿಧಗಳಾದ ದುಃಖಗಳಿಂದಾವೃತಳಾದಾಕೌಸಲ್ಯಾದೇವಿಯನ್ನುಕುರಿತು ಈ ರೀತಿ ಹೇಳಿದನು. "ಪೂಜ್ಯಳಾದ ಓ ಕೌಸಲ್ಯಾದೇವಿಯೆ ! ಏನೂ ತಿಳಿಯದವನೂ, ಪಾಪರಹಿತನೂ ಆದ ನನ್ನನ್ನು ಯಾವಕಾರಣದಿಂದ ನಿಂದಿಸುತ್ತಿರುವೆ? ನನಗೆ ಶ್ರೀರಾಮಮೂರ್ತಿಯಲ್ಲಿರುವ ನಿಶ್ಚಲವಾದ ಭಕ್ತಿಯನ್ನು ನೀನು ತಿಳಿದುಕೊಂಡಿಲ್ಲವೆ? ॥೧೭-೨೦॥ ನನ್ನಲ್ಲಿ ದೋಷವೇನೂ ಇಲ್ಲವೆಂಬುದನ್ನರಿತೂ ಈ ರೀತಿ ನಿಂದಿಸುತ್ತಿರುವೆಯೇಕೆ ? ಸತ್ಯಸಂಧನೂ, ಸತ್ಪುರುಷರಲ್ಲಿ

ಯಸ್ಯಾಽರ್ಯೋಽನುಮತೇಗತಃ ‖ ೨೧ ‖ ಪ್ರೇಷ್ಯಂ ಪಾಪೀಯಸಾಂ ಯಾತು ಸೂರ್ಯಂಚ ಪ್ರತಿಮೇಹತು ‖ ಹಂತು ಪಾದೇನ ಗಾಂ ಸುಪ್ತಾಂ ಯಸ್ಯಾಽರ್ಯೋಽನುಮತೇಗತಃ ‖ ೨೨ ‖ ಕಾರಯಿತ್ವಾ ಮಹತ್ಕರ್ಮ ಭರ್ತಾ ಭೃತ್ಯಮನರ್ಥಕಂ ‖ ಅಧರ್ಮೋ ಯೋಽಸ್ಯ ಸೋಽಸ್ಯಾಸ್ತು ಯಸ್ಯಾಽರ್ಯೋಽನುಮತೇ ಗತಃ ‖ ೨೩ ‖ ಪರಿಪಾಲಯಮಾನಸ್ಯ ರಾಜ್ಞೋ ಭೂತಾನಿ ಪುತ್ರವತ್ ‖

ತಸ್ಯ-ಆ ಪುರುಷನಿಗೆ, ಶಾಸ್ತ್ರಾನುಗಾ-(ಗೋ) ವಿಧಿಪ್ರತಿಷೇಧಬೋಧಕರೂಪಕವಾದ ಶಾಸ್ತ್ರವನ್ನು ಅನುಸರಿಸಿ, ಕೃತಾ - ಕೃಷಿಮಾಡಲಾದ, ಬುದ್ಧಿಃ - ಬುದ್ಧಿಯು, ಕದಾಚನ - ಒಂದಾನೊಂದು ಕಾಲದಲ್ಲಿಯೂ, ಮಾಭೂತ್-ಸಫಲವಾಗದಿರಲಿ. ‖ ೨೧ ‖ ಆರ್ಯಃ-ಅಣ್ಣನು, ಯಸ್ಯ-ಯಾವ ಪುರುಷನ, ಅನುಮತೇ-ಸಮ್ಮತಿಯಾಗಲು, ಅರಣ್ಯಂಪ್ರತಿ - ಅರಣ್ಯವನ್ನು ಕುರಿತು, ಗತಃ - ಹೋದನೋ. ಸಃ - ಅಂತಹ ಪುರುಷನು, ಪಾಪೀಯಸಾಂ - ಪಾಪಿಷ್ಠರಿಗೆ, ಪ್ರೇಷ್ಯಂ - ದೌತ್ಯವನ್ನು, ಯಾತು - ಹೊಂದಲಿ, ಸೂರ್ಯಂಚ - ಸೂರ್ಯನನ್ನು ಕುರಿತು, ಪ್ರತಿಮೇಹತು - ಅಭಿಮುಖವಾಗಿ ಮೂತ್ರಪುರೀಷೋತ್ಸರ್ಜನವನ್ನು ಮಾಡಲಿ, ಪಾದೇನ - ಪಾದದಿಂದ, ಸುಪ್ತಾಂ - ಮಲಗಿರುವ, ಗಾಂ - ಗೋವನ್ನು, ಹಂತು - ಒದೆಯಲಿ. ‖ ೨೨ ‖ ಭರ್ತಾ - ಪೋಷಕನಾದ ಯಾವ ಮನುಷ್ಯನು, ಮಹತ್ - ಬಹಳವಾದ, ಕರ್ಮ - ವ್ಯಾಪಾರವನ್ನು, ಕಾರಯಿತ್ವಾ - ಮಾಡಿಸಿಕೊಂಡು, ಭೃತ್ಯಂ - ಭೃತ್ಯನನ್ನು, ಅನರ್ಥಕಂ - ಪ್ರಯೋಜನವಿಲ್ಲದವನನ್ನಾಗಿ, ಕರೋತಿ - ಮಾಡುತ್ತಾನೆಯೋ, ಅಸ್ಯ - ಈ ಪುರುಷನಿಗೆ, ಯಃಅಧರ್ಮಃ - ಯಾವ ಅಧರ್ಮವುಂಟೋ, ಅಸ್ಯ - ಈ ಪುರುಷನಿಗೆ, ಸಃ - ಆ ಅಧರ್ಮವು, ಅಸ್ತು-ಆಗಲಿ, (ಯಸ್ಯಾರ್ಯಾನುಮತೇಗತಃ - ಎಂಬ ಪದಕ್ಕೆ ಅರ್ಥವುಸ್ಪಟವಾಗಿಯೇ ಇದೆ.) ‖೨೩‖ ರಾಜ್ಞಃ - ಅರಸು, ಭೂತಾನಿ - ಪ್ರಾಣಿಗಳನ್ನು, ಪುತ್ರವತ್ - ಮಕ್ಕಳಂತೆ, ಪರಿಪಾಲಯಮಾನಸ್ಯ ಪರಿಪಾಲಿಸುತ್ತಿರಲು, ತತಃ - ಬಳಿಕ, ತದ್ದ್ರುಹ್ಯತಾಂ - ಅವನಿಗೆ ದ್ರೋಹಮಾಡುತ್ತಿರುವರಿಗೆ,

---

ಶ್ರೇಷ್ಠನೂ ಆದ ಶ್ರೀರಾಮನು ಅರಣ್ಯಕ್ಕೆ ತೆರಳಲು ನಾನು ಸಮ್ಮತಿಸಿದ್ದವನೇ ಆಗಿದ್ದರೆ, ನಾನು ಗುರುಮುಖದಿಂದ ಅಭ್ಯಾಸಮಾಡಿರುವ ಶಾಸ್ತ್ರಾನುಸಾರವಾದ ವಿವೇಕವೆಲ್ಲವೂ ನಶಿಸಿಹೋಗಲಿ! ತಾಯೆ ; ಕೇಳು, ನಾನು ಶ್ರೀರಾಮನರಣ್ಯಕ್ಕೆ ಹೋಗಲು ಸಮ್ಮತಿಸಿದ್ದವನೇ ಆಗಿದ್ದಲ್ಲಿ ನೀಚರಾದವರಿಗೆ ಭೃತ್ಯತ್ವವನ್ನು ವಹಿಸುವುದರಿಂದಾವ ಪಾಪವು ಘಟಿಸುವುದೋ ಆ ಪಾಪವೆನಗೆ ಬರಲಿ! ಸೂರ್ಯನಿಗೆದುರಾಗಿ ಮೂತ್ರಪುರೀಷಗಳನ್ನು ವಿಸರ್ಜಿಸುವುದರಿಂದುಂಟಾಗುವ ಪಾಪವು ನನ್ನನ್ನು ಹೊಂದಲಿ! ನಿದ್ರಿಸುತ್ತಿರುವ ಗೋವನ್ನು ಕಾಲಿನಿಂದೊದೆದ ಪಾಪವೆನಗುಂಟಾಗಲಿ! ರಾಮಮೂರ್ತಿಯು ಅರಣ್ಯಕ್ಕೆ ಹೋದುದೆನಗೆ ಇಷ್ಟವಾಗಿದ್ದ ಪಕ್ಷದಲ್ಲಿ ಭೃತ್ಯನಿಂದ ಮಹತ್ಕಾರ್ಯವನ್ನು ಮಾಡಿಸಿಕೊಂಡು ಅವನಿಗೆ ದ್ರವ್ಯವನ್ನು ಕೊಡದಿರುವ ಪಾಪಾತ್ಮನು ಹೋಗುವ ಲೋಕಕ್ಕೆ ಹೋಗುವವನಾಗುತ್ತೇನೆ. ಶ್ರೀರಾಮನು ಅರಣ್ಯಕ್ಕೆ ಹೋದುದೆನಗೆ ಸಮ್ಮತವಾದುದಾದರೆ, ಪ್ರಜೆಗಳೆಲ್ಲರನ್ನೂ ಮಕ್ಕಳಂತೆ ಕಾಪಾಡಿದ ರಾಜನಿಗಪಕಾರಮಾಡಿದ ಪಾಪಾತ್ಮನು ಹೋಗುವ ಲೋಕಕ್ಕೆ ಹೋಗುವವನಾಗುತ್ತೇನೆ. ‖೨೧-೨೪‖ ಅಲ್ಲದೆ ಧರ್ಮಶಾಸ್ತ್ರದಲ್ಲಿ ವಿಭಾಗಿಸಲ್ಪಟ್ಟಂತೆ ರಾಜರು, ಪ್ರಜೆಗಳ

ತತ ಸ್ತದ್ದ್ರುಹ್ಯತಾಂ ಪಾಪಂ ಯಸ್ಯಾಽರ್ಯೋಽನುಮತೇಗತಃ ॥ ೨೪ ॥ ಬಲಿಷಡ್ಭಾಗ ಮುದ್ಧೃತ್ಯ ನೃಪಸ್ಯಾಽರಕ್ಷತಃ ಪ್ರಜಾಃ ॥ ಅಧರ್ಮೋ ಯೋಽಸ್ಯ ಸೋಽಸ್ಯಾಸ್ತು ಯಸ್ಯಾಽರ್ಯೋಽನುಮತೇಗತಃ ॥ ೨೫ ॥ (೧) ಸಂಶ್ರುತ್ಯಚ ತಪಸ್ವಿಭ್ಯ ಸ್ಸತ್ರೇ ವೈ ಯಜ್ಞದಕ್ಷಿಣಾಂ ॥ ತಾಂ ವಿಪ್ರಲಪತಾಂ ಪಾಪಂ ಯಸ್ಯಾಽರ್ಯೋಽನುಮತೇಗತಃ ॥೨೬॥ ಹಸ್ತ್ಯಶ್ವ ರಥಸಂಬಾಧೇ ಯುದ್ಧೇ ಶಸ್ತ್ರಸಮಾಕುಲೇ ॥ ಮಾಸ್ಮಕಾರ್ಷೀ ತ್ಸತಾಂ ಧರ್ಮಂ ಯಸ್ಯಾಽರ್ಯೋಽನುಮತೇಗತಃ ॥೨೭॥ ಉಪದಿಷ್ಟಂ ಸುಸೂಕ್ಷ್ಮಾರ್ಥಂ ಶಾಸ್ತ್ರಂ ಯತ್ನೇನ ಧೀಮತಾ ॥ ಸನಾಶಯತುದುಷ್ಟಾತ್ಮಾ ಯಸ್ಯಾಽರ್ಯೋಽನುಮತೇಗತಃ ॥೨೮॥ ಮಾಚತಂ ವ್ಯೂಢ

ಯತ್ - ಯಾವ, ಪಾಪಂ - ಪಾಪವುಂಟೋ, ತತ್ - ಅಂತಹ, ಪಾಪಂ - ಪಾಪವು, ಅಸ್ತು-ಆಗಲಿ. ॥ ೨೪ ॥ ಬಲಿಷಡ್ಭಾಗಂ - ಆರನೇ ಒಂದು ಭಾಗವನ್ನು, ಉದ್ಧೃತ್ಯ - ತೆಗೆದುಕೊಂಡು, ಪ್ರಜಾಃ - ಪ್ರಜೆಗಳನ್ನು, ಅರಕ್ಷತಃ - ಸಂರಕ್ಷಣೆಮಾಡದಿರುವ, ಅಸ್ಯನೃಪಸ್ಯ - ಈ ಅರಸನಿಗೆ, ಯಃಅಧರ್ಮಃ- ಯಾವ ಅಧರ್ಮವುಂಟೋ, ಸಃ - ಅಂತಹ ಅಧರ್ಮವು, ಅಸ್ಯ - ಈ ಪುರುಷನಿಗೆ, ಅಸ್ತು - ಆಗಲಿ. ॥ ೨೫ ॥ ಯಸ್ಯ - ಯಾವನ ಅನುಮತಿಯಾಗಲು ಅಣ್ಣನು ಅರಣಕ್ಕೆ ಹೊರಟುಹೋದನೋ, ಸತ್ರೇ- ಯಜ್ಞದಲ್ಲಿ, ತಪಸ್ವಿಭ್ಯಃ - ಋಷಿಗಳಿಗೆ, ಯಜ್ಞದಕ್ಷಿಣಾಂ-ಯಜ್ಞದಕ್ಷಿಣೆಯನ್ನು, ಸಂಶ್ರುತ್ಯ-ಪ್ರತಿಜ್ಞೆ ಮಾಡಿ, ತಾಂ - ಆ ಯಜ್ಞದಕ್ಷಿಣೆಯನ್ನು, ವಿಪ್ರಲಪತಾಂ - ನಾನು ಅಷ್ಟುಕೊಡುವೆನೆಂದು ಪ್ರತಿಜ್ಞ ಮಾಡಲಿಲ್ಲವೆಂದು ಪ್ರಲಪಿಸುತ್ತಿರುವರಿಗೆ, ಯತ್ಪಾಪಂ - ಯಾವ ಪಾಪವುಂಟೋ ಅಂತಹ ಪಾಪವು ಈತನಿಗೇ ಬರಲಿ. ॥ ೨೬ ॥ ಹಸ್ತ್ಯಶ್ವರಥಸಂಬಾಧೇ - ಆನೆಗಳಿಂದಲೂ ಕುದುರೆಗಳಿಂದಲೂ ರಥಗಳಿಂದಲೂ ತುಂಬಿದ, ಶಸ್ತ್ರಸಮಾಕುಲೇ - ಶಸ್ತ್ರಗಳಿಂದ ಸಂಕುಲವಾದ, ಯುದ್ಧೇ - ಕಾಳಗದಲ್ಲಿ, ಸತಾಂ - ಶೂರರಾದ ಸತ್ಪುರುಷರ, ಧರ್ಮಂ - ಧರ್ಮವನ್ನು, ಸಃ-ಆ ಪುರುಷನು, ಮಾಸ್ಮಕಾರ್ಷೀತ್- ಮಾಡದಿರಲಿ. ॥ ೨೭ ॥ ಸದುಷ್ಟಾತ್ಮಾ - ದುಷ್ಟ ಸ್ವಭಾವವುಳ್ಳ ಆ ಪುರುಷನು, ಧೀಮತಾ - ಜ್ಞಾನಿಯಾದ ಪುರುಷನಿಂದ, ಯತ್ನೇನ - ಯತ್ನದಿಂದ, ಉಪದಿಷ್ಟಂ-ಉಪದೇಶಮಾಡಲಾದ, ಸುಸೂಕ್ಷ್ಮಾರ್ಥಂ - ಬಹಳ ಸೂಕ್ಷ್ಮವಾದ ಅರ್ಥವುಳ್ಳ, ಶಾಸ್ತ್ರಂ - ಶಾಸ್ತ್ರವನ್ನು, ನಾಶಯತು - ನಾಶಗೊಳಿ

ಆದಾಯದಲ್ಲಿ ಆರನೆಯ ಒಂದು ಭಾಗವನ್ನು ಸ್ವೀಕರಿಸಿಯೂ ಅವರನ್ನು ಪರಿಪಾಲಿಸದಿರುವುದರಿಂದ ಯಾವ ಗತಿಯು ಪ್ರಾಪ್ತವಾಗುವುದೋ ಆ ಗತಿಯು ನನಗುಂಟಾಗಲಿ. ॥೨೫॥ ಯಜಮಾನನಾದವನು, ತಾನು ಮಾಡುವ ಯಜ್ಞದಲ್ಲಿ ಋತ್ವಿಕ್ಕುಗಳಾದ ಋಷಿಗಳಿಗೆ ದಕ್ಷಿಣೆಯನ್ನು ಕೊಡುತ್ತೇನೆಯೆಂದು ಮಾತು ಕೊಟ್ಟು, ಆ ಮಾತಿಗೆ ತಪ್ಪಿದರೆ, ಅವನಿಗಾಗುವ ಗತಿಯೂ, ಚತುರಂಗಬಲ ಸಮೇತನಾದರೂ ಕಾಳಗದಲ್ಲಿ ಶೂರ ಧರ್ಮವನ್ನು ಮೀರುವವನಿಗುಂಟಾಗುವ ಗತಿಯೂ, ಜ್ಞಾನಿಯು ಪ್ರಯತ್ನಪೂರ್ವಕವಾಗಿ ಉಪದೇಶಿಸಿದ ಸೂಕ್ಷ್ಮಾರ್ಥಯುಕ್ತವಾದ ಶಾಸ್ತ್ರವನ್ನು ನಾಶಗೊಳಿಸಿದವನು ಹೊಂದುವ ಗತಿಯೂ ನನಗುಂಟಾಗಲಿ! ಇಷ್ಟುಮಾತ್ರವಲ್ಲದೆ ಕೇಳೌ ದೇವಿಯೇ! ನಾನು ಶ್ರೀರಾಮನು ಅರಣ್ಯವಾಸಕ್ಕೆ ತೆರಳಲು ಇಷ್ಟವುಳ್ಳವನೇ ಆಗಿದ್ದರೆ, ವಿಪುಲವಾದ ಭುಜಗಳುಳ್ಳವನೂ, ಚಂದ್ರಸೂರ್ಯರ

(೧) ಟಿ. ವ್ಯಾಖ್ಯಾನ ಚತುಷ್ಟಯದ ಪುಸ್ತಕದಲ್ಲಿ ಈ ಶ್ಲೋಕವಿರುವುದಿಲ್ಲ. ವ್ಯಾಖ್ಯಾನಗಳಲ್ಲಿ ಈ ಶ್ಲೋಕದ ವ್ಯಾಖ್ಯೆಯೇನೋ ಇರುತ್ತದೆ.

ಬಾಹ್ವಂಸಂ ಚಂದ್ರಾರ್ಕ ಸಮತೇಜಸಂ ॥ ದ್ರಾಕ್ಷೀ ದ್ರಾಜ್ಯಸಮಾಸೀನಂ
ಯಸ್ಯಾಽಯೋಽನುಮತೇಗತಃ ॥ ೨೯ ॥ ಪಾಯಸಂ ಕೃಸರಂ ಛಾಗಂ ವೃಥಾ
ಸೋಽಶ್ನಾತು ನಿರ್ಘೃಣಃ ॥ ಗುರೂಂಶ್ಚಾ ಪ್ಯವಜಾನಾತು ಯಸ್ಯಾಽಯೋಽ
ನುಮತೇಗತಃ ॥೩೦॥ ಗಾಶ್ಚ ಸ್ಪೃಶತು ಪಾದೇನ ಗುರೂರ್ನ್ ಪರಿವದೇ ತ್ಸ್ವಯಂ ॥
ಮಿತ್ರೇ ದ್ರುಹ್ಯೇತ ಸೋಽತ್ಯಂತಂ ಯಸ್ಯಾಽಯೋಽನುಮತೇಗತಃ ॥ ೩೧ ॥
ವಿಶ್ವಾಸಾ ತ್ಕಥಿತಂ ಕಿಂಚಿ ತ್ಪರಿವಾದಂ ಮಿಥಃ ಕ್ವಚಿತ್ ॥ ವಿವೃಣೋತು ಸದು
ಷ್ಟಾತ್ಮಾ ಯಸ್ಯಾಽಯೋಽನುಮತೇಗತಃ ॥ ೩೨ ॥ ಅಕರ್ತಾ ಹ್ಯಕೃತಜ್ಞಶ್ಚ

ಸಲಿ. ॥ ೨೮ ॥ ಆರ್ಯಃ - ಪೂಜ್ಯನಾದ ಶ್ರೀರಾಮನು, ಯಸ್ಯ - ಯಾವ ಪುರುಷನ, ಅನುಮತೇ - ಅನುಮತಿಯಾಗಲು, ಗತಃ - ಹೋದನೋ, ವ್ಯೂಢಬಾಹ್ವಂಸಂ - ಮಾಂಸಭೂಯಿಷ್ಠಗಳಾದ ಭುಜಗಳೂ ಭುಜಶಿರಸ್ಸೂ ಉಳ್ಳ, ಚಂದ್ರಾರ್ಕಸಮತೇಜಸಂ - ಸೂರ್ಯ ಚಂದ್ರರಿಗೆ ಸಮಾನವಾದ ತೇಜಸ್ಸುಳ್ಳ, ರಾಜ್ಯಸ್ಥಂ - ಪ್ರಾಪ್ತರಾಜ್ಯವುಳ್ಳ, ಆಸೀನಂ - ಸಿಂಹಾಸನದಲ್ಲಿ ಕುಳಿತುಕೊಂಡಿರುವ, ತಂ - ಆ ಶ್ರೀರಾಮನನ್ನು, ಸಃ - ಆ ಪುರುಷನು, ಮಾದ್ರಾಕ್ಷೀತ್ - ನೋಡದಿರಲಿ. ॥ ೨೯ ॥ ಸಃ - ಆ ಪುರುಷನು, ನಿರ್ಘೃಣಃ - ದಯಾಹೀನನಾಗಿ, ಪಾಯಸಂ - ಕ್ಷೀರಮಿಶ್ರವಾದ ಪರಮಾನ್ನವನ್ನು, ಕೃಸರಂ-ತಿಲಮಿಶ್ರಾನ್ನವನ್ನು, ಛಾಗಂ-ಮೇಕೆಯಮಾಂಸವನ್ನು, ವೃಥಾ-ವ್ಯರ್ಥವಾಗಿ, (ಗೋ+ಮ) ದೇವತಾಪಿತ್ರರ್ಥವಾಗಿ ನಿವೇದನವಿಲ್ಲದೆ, ಅಶ್ನಾತು - ಊಟಮಾಡಲಿ. ಗುರೂಂಶ್ಚಾಪಿ-ಗುರುಗಳನ್ನೂ, ಸಃ - ಆ ಪುರುಷನು, ಅವಜಾನಾತು - ಅವಮಾನಮಾಡಲಿ. ॥ ೩೦ ॥ ಸಃ - ಆ ಪುರುಷನು, ಗಾಶ್ಚ - ಗೋವುಗಳನ್ನು, ಪಾದೇನ - ಪಾದದಿಂದ, ಸ್ಪೃಶತು-ಸ್ಪರ್ಶಮಾಡಲಿ, ಸ್ವಯಂ-ತನ್ನ ಷ್ಟಕ್ಕೆ ತಾನೇ, ಗುರೂರ್ನ್-ಗುರುಗಳನ್ನು, ಪರಿವದೇತ್ - ನಿಂದಿಸಲಿ, ಮಿತ್ರೇ-ಮಿತ್ರನವಿಷಯದಲ್ಲಿ, ಸಃ-ಆ ಪುರುಷನು, ಅತ್ಯಂತಂ - ಬಹಳವಾಗಿ, ದ್ರುಹ್ಯೇತ - ದ್ರೋಹಮಾಡಲಿ. ॥ ೩೧ ॥ ದುಷ್ಟಾತ್ಮಾ - ಕೆಟ್ಟ ಮನಸ್ಸುಳ್ಳ, ಸಃ - ಆ ಪುರುಷನು, ವಿಶ್ವಾಸಾತ್ - ವಿಶ್ವಾಸದಿಂದ, ಮಿಥಃ - ರಹಸ್ಯವಾಗಿ, ಕ್ವಚಿತ್ - ಒಂದಾನೊಂದು ಸ್ಥಳದಲ್ಲಿ, ಕಥಿತಂ - ಹೇಳಲ್ಪಟ್ಟ, ಕಿಂಚಿತ್ - ಸ್ವಲ್ಪವಾದ, ಪರಿವಾದಂ - ನಿಂದಾವಚನವನ್ನು, ವಿವೃಣೋತು - ಸರ್ವತ್ರಸ್ಪಷ್ಟಮಾಡಲಿ. ॥ ೩೨ ॥ ಸಃ - ಆ ಪುರುಷನು, ಅಕರ್ತಾ-

---

ತೇಜಸ್ಸುಳ್ಳವನೂ ಆದ ಆತನು ಈ ಸಾಕೇತ ಸಿಂಹಾಸನದ ಮೇಲೆ ಕುಳಿತುಕೊಂಡು ಇಡೀ ರಾಜ್ಯವನ್ನು ಪರಿಪಾಲಿಸುವಿಕೆಯನ್ನು ನೋಡಿ, ಆನಂದವನ್ನು ಹೊಂದುವ ಭಾಗ್ಯವು ನನಗಿಲ್ಲದೆ ಹೋಗಲಿ. ॥ ೨೬-೨೯ ॥ ನಾನು ಶ್ರೀರಾಮಮೂರ್ತಿಯ ಅರಣ್ಯಪ್ರವೇಶ ವಿಚಾರದಲ್ಲಿ ಅಪೇಕ್ಷೆಯುಳ್ಳವನೇ ಆದರೆ, ಕ್ಷೀರಾನ್ನವನ್ನೂ, ತಿಲಮಿಶ್ರಾನ್ನವನ್ನೂ, ಅಜಮಾಂಸವನ್ನೂ, ದೇವತೆಗಳಿಗಾಗಲಿ, ಪಿತೃದೇವತೆಗಳಿಗಾಗಲಿ ನಿವೇದಿಸದೆ ತಾನೊಬ್ಬನೇ ಕುಳಿತು ಭುಜಿಸುವವನಿಗೂ, ಗುರುವನ್ನೂ, ತಂದೆತಾಯಿಗಳನ್ನೂ ಸ್ವೇಚ್ಛೆಯಾಗಿ ನಿಂದಿಸುವವನಿಗೂ ಉಂಟಾಗುವ ಲೋಕಗಳು ನನಗೂ ದೊರಕಲಿ! ಮಾತ್ರವಲ್ಲದೆ, ಮಿತ್ರದ್ರೋಹಿಗೂ, ವಿಶ್ವಾಸಘಾತಕನಿಗೂ, ಪರೋಪಕಾರಿಯಲ್ಲದವನಿಗೂ ಉಂಟಾಗುವ ಗತಿಯು ನನಗುಂಟಾಗಲಿ! ಎಲ್ಲಿಯೋ ಒಂದು ಕಡೆ ಹಾಸ್ಯಕ್ಕಾಗಿ ಆಡಿದ ಸುಳ್ಳಿನ ಬೈಗಳನ್ನು ಎಲ್ಲೆಲ್ಲಿಯೂ ಹರಡಿದವನಪಾಪವೂ ಎನಗಿರಲಿ!

ತ್ಯಕ್ತಾತ್ಮಾ ನಿರಪತ್ರಪಃ ॥ ಲೋಕೇ ಭವತು ವಿದ್ವೇಷ್ಯೋ ಯಸ್ಯಾಽರ್ಯೋಽ
ನುಮತೇಗತಃ ॥ ೩೩ ॥ ಪುತ್ರದಾರೈಶ್ಚ ಭೃತ್ಯೈಶ್ಚ ಸ್ವಗೃಹೇ ಪರಿವಾರಿತಃ ॥
ಸಏಕೋ ಮೃಷ್ಟಮಶ್ನಾತು ಯಸ್ಯಾಽರ್ಯೋಽನುಮತೇಗತಃ ॥ ೩೪ ॥
ಅಪ್ರಾಪ್ಯ ಸದೃಶಾನ್ ದಾರಾ ನನಪತ್ಯಃ ಪ್ರಮೀಯತಾಂ ॥ ಅನವಾಪ್ಯ ಕ್ರಿಯಾಂ
ಧರ್ಮ್ಯಾಂ ಯಸ್ಯಾಽರ್ಯೋಽನುಮತೇಗತಃ ॥ ೩೫ ॥ ಮಾತ್ಮನ ಸ್ಸಂತತಿಂ
ದ್ರಾಕ್ಷೀ ತ್ಸ್ವೇಷು ದಾರೇಷು ದುಃಖಿತಃ ॥ ಆಯುಸ್ಸಮಗ್ರ ಮಪ್ರಾಪ್ಯ ಯಸ್ಯಾಽ
ರ್ಯೋಽನುಮತೇಗತಃ ॥೩೬॥ ರಾಜಸ್ತ್ರೀ ಬಾಲವೃದ್ಧಾನಾಂ ವಧೇ ಯತ್ಪಾಪ

ಪ್ರತ್ಯುಪಕಾರ ಮಾಡದಿರುವನಾಗಿಯೂ, ಅಕೃತಜ್ಞಶ್ಚ - ಕೃತಜ್ಞನಲ್ಲದಿರುವನಾಗಿಯೂ, ತ್ಯಕ್ತಾತ್ಮಾ - ಸತ್ಪುರುಷರಿಂದ ಪರಿತ್ಯಕ್ತನಾದ ಸ್ವರೂಪವುಳ್ಳವನಾಗಿಯೂ, ಲೋಕೇ - ಲೋಕದಲ್ಲಿ, ನಿರಪತ್ರಪಃ- ಲಜ್ಜಾಹೀನನಾಗಿಯೂ, ವಿದ್ವೇಷ್ಯಃ - ದ್ವೇಷಕ್ಕೆ ಯೋಗ್ಯನಾದವನೂ, ಭವತು - ಆಗಲಿ. ॥ ೩೩ ॥ ಸಃ - ಆ ಪುರುಷನು, ಸ್ವಗೃಹೇ - ತನ್ನ ಮನೆಯಲ್ಲಿ, ಪುತ್ರದಾರೈಶ್ಚ - ಹೆಂಡತಿ ಮಕ್ಕಳಿಂದಲೂ, ಭೃತ್ಯೈಶ್ಚ - ಸೇವಕರಿಂದಲೂ, ಪರಿವಾರಿತಃ - ಸುತ್ತಿಕೊಳ್ಳಲಾದ, ಏಕಃ - ಒಬ್ಬನೆ, ಮೃಷ್ಟಂ - ಮೃಷ್ಟಾನ್ನವನ್ನು, ಅಶ್ನಾತು - ಭೋಜನಮಾಡಲಿ. ॥ ೩೪ ॥ ಸಃ - ಆ ಪುರುಷನು, ಧರ್ಮ್ಯಾಂ- ಧರ್ಮಪ್ರಧಾನವಾದ, ಕ್ರಿಯಾಂ - ಕರ್ಮವನ್ನು, ಅನವಾಪ್ಯ - ಹೊಂದದೆ, ಸದೃಶಾನ್ - ಅನುರೂಪರಾದ, ದಾರಾನ್ - ಹೆಂಡತಿಯನ್ನು, ಅಪ್ರಾಪ್ಯ - ಹೊಂದದೆ, ಅನಪತ್ಯಃ - ಮಕ್ಕಳಿಲ್ಲದವನಾಗಿ, ಪ್ರಮೀಯತಾಂ - ಮರಣವನ್ನು ಹೊಂದಲಿ. ॥ ೩೫ ॥ ಸಃ - ಆ ಪುರುಷನು, ಸಮಗ್ರಂ - ಸಂಪೂರ್ಣವಾದ, ಆಯುಃ - ಆಯುಸ್ಸನ್ನು, ಅಪ್ರಾಪ್ಯ - ಹೊಂದದೆ, ದುಃಖಿತಃ - ದುಃಖಗೊಂಡು, ಆತ್ಮನಃ - ತನಗೆ, ಸ್ವೇಷು - ಸ್ವಕೀಯರಾದ, ದಾರೇಷು - ಹೆಂಡತಿಯಲ್ಲಿ, ಸಂತತಿಂ - ಸಂತಾನವನ್ನು, ಮಾದ್ರಾಕ್ಷೀತ್ - ನೋಡದಿರಲಿ. ॥ ೩೬ ॥ ರಾಜಸ್ತ್ರೀಬಾಲವೃದ್ಧಾನಾಂ - ಅರಸನ ಹೆಂಗಸರ ಹುಡುಗರ ಮುದುಕರ, ವಧೇ - ಸಂಹಾರದಲ್ಲಿ. ಯತ್ - ಯಾವದು, ಪಾಪಂ - ಪಾಪವು, ಉಚ್ಯತೇ - ಹೇಳಲ್ಪಡುತ್ತದೋ, ಭೃತ್ಯತ್ಯಾಗೇಚ-ಸೇವಕರ ಸಂಬಳಕೊಡದೆ ಪರಿತ್ಯಜಿಸುವಿಕೆಯಿಂದ, ಯತ್ಪಾಪಂ - ಯಾವ ಪಾಪವುಂಟೋ, ತತ್ಪಾಪಂ - ಅಂತಹ ಪಾಪವನ್ನು, ಪ್ರತಿಪದ್ಯತಾಂ -

ಕೃತಜ್ಞನಲ್ಲದವನಿಗೂ, ಸತ್ಪುರುಷರಿಂದ ತ್ಯಕ್ತನಾದವನಿಗೂ, ಲಜ್ಜೆಯನ್ನುತೊರೆದು ಮಿತ್ರರಲ್ಲಿಯೂ, ಸತ್ಪುರುಷರಲ್ಲಿಯೂ ದ್ವೇಷಿಯಾದವನಿಗೂ, ಉಂಟಾಗುವ ಗತಿಯೇ ನನಗಾಗಲಿ. ಅಮ್ಮ! ಇಷ್ಟೇ ಅಲ್ಲ; ಮತ್ತೂ ಹೇಳುತ್ತೇನೆ ಕೇಳು. ನಾನು ನಮ್ಮಣ್ಣನಾದ ಶ್ರೀರಾಮಮೂರ್ತಿಯ ವನವಾಸಕ್ಕೆ ಸಮ್ಮತಿಸಿದ್ದವನೇ ಆಗಿದ್ದರೆ, ಸ್ವಗೃಹದಲ್ಲಿರುವ ಪತ್ನೀಪುತ್ರರನ್ನುಳಿದು ತಾನೊಬ್ಬನೇ ಮೃಷ್ಟಾನ್ನವನ್ನು ತಿಂದವನಿಗೂ, ಧರ್ಮಕ್ರಿಯೆಯನ್ನೊದರಿ, ತಕ್ಕ ಸತಿಯನ್ನು ಪಡೆಯದೆ, ಅಪುತ್ರವಂತನಾಗಿ ಮರಣವಾನುವವನಿಗೂ ಉಂಟಾಗುವ ಪಾಪವೆನಗಿರಲಿ ; ॥ ೩೦-೩೫ ॥ ಚಿರಾಯುಷ್ಯವನ್ನು ಪಡೆಯದೆ ನಿಜಭಾರ್ಯೆಯಲ್ಲಿ ಸಂತಾನವನ್ನು ಪಡೆಯದವನೂ ಆಗುತ್ತೇನೆ. ರಾಜಸ್ತ್ರೀಯನ್ನೂ, ಬಾಲಕರನ್ನೂ, ಮುದುಕರನ್ನೂ ಕೊಲ್ಲುವುದರಿಂದಲೂ, ಸೇವಕರಿಗೆ ಮಾಸವೇತನವನ್ನೀಯದೆ ತಳ್ಳುವುದರಿಂದಲೂ, ಎಲ್ಲ ಕಾಲಗಳಲ್ಲಿಯೂ, ಅರಗನ್ನೂ, ಮದ್ಯಮಾಂಸಗಳನ್ನೂ ಲೋಹಗಳನ್ನೂ ಮಾರಿ ಅದರಿಂದ

ಮುಚ್ಯತೇ ॥ ಭೃತ್ಯತ್ಯಾಗೇಚ ಯತ್ಪಾಪಂ ತತ್ಪಾಪಂ ಪ್ರತಿಪದ್ಯತಾಂ ॥ ೩೭ ॥ ಲಾಕ್ಷಯಾ ಮಧುಮಾಂಸೇನ ಲೋಹೇನಚ ವಿಷೇಣಚ ॥ ಸದೈವ ಬಿಭೃಯಾದ್ಭೃತ್ಯಾನ್ ಯಸ್ಯಾಽರ್ಯೋಽನುಮತೇಗತಃ ॥ ೩೮ ॥ ಸಂಗ್ರಾಮೇ ಸಮುಪೋಢೇಸ್ಮ ಶತ್ರುಪಕ್ಷಭಯಂಕರೇ ॥ ಪಲಾಯಮಾನೋ ವಧ್ಯೇತ ಯಸ್ಯಾಽರ್ಯೋಽನುಮತೇಗತಃ ॥ ೩೯ ॥ ಕಪಾಲಪಾಣಿಃ ಪೃಥಿವೀಂ ಮಟತಾಂ ಚೀರಸಂವೃತಃ ॥ ಭಿಕ್ಷಮಾಣೋ ಯಥೋನ್ಮತ್ತೋ ಯಸ್ಯಾಽರ್ಯೋಽನುಮತೇಗತಃ ॥ ೪೦ ॥ ಪಾನೇ ಪ್ರಸಕ್ತೋ ಭವತು ಸ್ತ್ರೀಷ್ವಕ್ಷೇಷುಚ ನಿತ್ಯಶಃ ॥ ಕಾಮಕ್ರೋಧಾಭಿಭೂತಸ್ತು ಯಸ್ಯಾಽರ್ಯೋಽನುಮತೇಗತಃ ॥ ೪೧ ॥ ಮಾಸ್ಮ ಧರ್ಮೇ ಮನೋ ಭೂಯಾದಧರ್ಮಂ ಸನಿಷೇವತಾಂ ॥ ಅಪಾತ್ರವರ್ಷೀ

ಹೊಂದಲಿ. ॥ ೩೭ ॥ ಸಃ - ಆ ಪುರುಷನು, ಭೃತ್ಯಾನ್ - ಭರಣೀಯರಾದ ದಾರಾಪುತ್ರಾದಿಗಳನ್ನು, ಲಾಕ್ಷಯಾ - ಅರಗಿನಿಂದಲೂ, ಮಧುಮಾಂಸೇನ - ಮದ್ಯದಿಂದಲೂ ಮಾಂಸದಿಂದಲೂ (ಗೋ + ತಿ) ಜೇನುತುಪ್ಪದಿಂದಲೂ, ಲೋಹೇನ - ಲೋಹದಿಂದಲೂ, ವಿಷೇಣಚ - ವಿಷದಿಂದಲೂ, ಸದೈವ - ನಿರಂತರವೂ, ಬಿಭೃಯಾತ್ - ಸಂರಕ್ಷಣೆಮಾಡಲಿ. ॥ ೩೮ ॥ ಶತ್ರುಪಕ್ಷಭಯಂಕರೇ - ಶತ್ರುಪಕ್ಷದವರಿಗೆಲ್ಲ ಭಯಂಕರವಾದ, ಸಂಗ್ರಾಮೇ - ಕಾಳಗವು, ಸಮುಪೋಢೇ - ಸಮೀಪಿಸಲು ಪಲಾಯಮಾನಃ - ಓಡಿಹೋಗುವ, ಸಃ - ಆ ಪುರುಷನು, ವಧ್ಯೇತ - ಸಂಹರಿಸಲ್ಪಡಲಿ. ॥ ೩೯ ॥ ಸಃ - ಆ ಪುರುಷನು, ಕಪಾಲಪಾಣಿಃ - ತಲೆಬುರುಡೆಯೇ ಹಸ್ತದಲ್ಲಿ ಉಳ್ಳವನಾಗಿ, ಚೀರಸಂವೃತಃ - ನಾರುಮಡಿಯಿಂದ ಆಚ್ಛಾದಿತನಾಗಿ, ಭಿಕ್ಷಮಾಣಃ - ಭಿಕ್ಷೆ ಬೇಡುತ್ತ, ಉನ್ಮತ್ತೋಯಥಾ - ಉನ್ಮಾದಾವಸ್ಥೆಯನ್ನು ಹೊಂದಿದವನಂತೆ, ಪೃಥಿವೀಂ - ನೆಲದಲ್ಲಿ, ಅಟತಾಂ - ಸಂಚರಿಸಲಿ. ॥ ೪೦ ॥ ಸಃ - ಆ ಪುರುಷನು, ಕಾಮಕ್ರೋಧಾಭಿಭೂತಃ - ಕಾಮದಿಂದಲೂ ಕ್ರೋಧದಿಂದಲೂ ತಿರಸ್ಕೃತನಾಗಿ, ಪಾನೇ - ಮದ್ಯಪಾನದಲ್ಲಿ, ಪ್ರಸಕ್ತಃ - ಆಸಕ್ತನು, ಭವತು - ಆಗಲಿ, ನಿತ್ಯಶಃ - ಯಾವಾಗಲೂ, ಸ್ತ್ರೀಷು - ಪರಸ್ತ್ರೀಯರಲ್ಲಿ, ಅಕ್ಷೇಷು - ಪಗಡೆಯಾಟದಲ್ಲಿ, ಪ್ರಸಕ್ತಃ - ಆಸಕ್ತನಾದವನು, ಭವತು - ಆಗಲಿ. ॥ ೪೧ ॥ ಸಃ - ಆ ಪುರುಷನು, ಅಧರ್ಮಂ - ಅಧರ್ಮವನ್ನೇ, ನಿಷೇವತಾಂ - ಸೇವಿಸಲಿ, ಅಪಾತ್ರವರ್ಷೀ - ದಾನಕ್ಕೆ ಪಾತ್ರನಲ್ಲದಿರುವನಲ್ಲಿ ದಾನಮಾಡುವಂತಹನು,

ಬಂದ ಹಣದಿಂದ ಕುಟುಂಬವನ್ನು ಕಾಪಾಡಿದವನು ಹೋಗುವ ನರಕಲೋಕಗಳಿಗೆನಗಿರಲಿ. ತಾಯೆ! ಕೌಸಲ್ಯಾದೇವಿಯೆ! ನಾನು ಶ್ರೀರಾಮನ ಅರಣ್ಯವಾಸವನ್ನು ಕುರಿತು ಸಮಾಧಾನವೃತ್ತಿಗನಾಗಿದ್ದರೆ, ಸಮೀಪದಲ್ಲಿ ಶತ್ರುಗಳಿಗೆ ಭಯವನ್ನುಂಟುಮಾಡುವ ಯುದ್ಧವನ್ನು ತೊರೆದು ಓಡಿಹೋಗುತ್ತ ಕೊಲ್ಲಲಾಗುವ ವೀರನು ಹೋಗುವಂತಹ ಪಾಪಲೋಕಗಳಿಗೆ ನಾನು ಹೋಗುವನಾಗುತ್ತೇನೆ. ಇಷ್ಟುಮಾತ್ರವಲ್ಲದೆ, ಕಪಾಲಹಸ್ತನಾಗಿ, ನಾರುಮಡಿಯುಟ್ಟು ತಿರುಪೆ ಬೇಡುತ್ತ, ಹುಚ್ಚನಂತೆ ಭೂಮಿಯಲ್ಲಿ ಸಂಚರಿಸುವುದರಿಂದಲೂ, ಕಾಮಕ್ರೋಧಾದಿಗಳುಳ್ಳವನಾಗಿ, ಯಾವಾಗಲೂ ಮದ್ಯಪಾನಾಸಕ್ತನೂ, ಪರಸ್ತ್ರೀಲಂಪಟನೂ, ದ್ಯೂತದಲ್ಲಿಯೇ ನೆಲೆಗೊಳಿಸಿದ ಮನವುಳ್ಳವನೂ ಆಗುವುದರಿಂದಲು, ॥೩೭-೪೧॥ ಅಪಾತ್ರನಿಗೆ ದಾನ

ಭವತು ಯಸ್ಯಾಽರ್ಯೋಽನುಮತೇಗತಃ ॥ ೪೨ ॥ ಸಂಚಿತಾನ್ಯಸ್ಯ ವಿತ್ತಾನಿ ವಿವಿಧಾನಿ ಸಹಸ್ರಶಃ॥ದಸ್ಯುಭಿ ರ್ವಿಪ್ರಲುಪ್ಯಂತಾಂ ಯಸ್ಯಾಽರ್ಯೋಽನುಮತೇ ಗತಃ ॥ ೪೩ ॥ ಉಭೇ ಸಂಧ್ಯೇ ಶಯಾನಸ್ಯ ಯತ್ಪಾಪಂ ಪರಿಕಲ್ಪ್ಯತೇ ॥ ತಚ್ಚ ಪಾಪಂ ಭವೇತ್ತಸ್ಯ ಯಸ್ಯಾಽರ್ಯೋಽನುಮತೇಗತಃ ॥ ೪೪ ॥ ಯದಗ್ನಿ ದಾಯಕೇ ಪಾಪಂ ಯತ್ಪಾಪಂ ಗುರುತಲ್ಪಗೇ ॥ ಮಿತ್ರದ್ರೋಹೇಚ ಯತ್ಪಾಪಂ ತತ್ಪಾಪಂ ಪ್ರತಿಪದ್ಯತಾಂ ॥ ೪೫ ॥ ದೇವತಾನಾಂ ಪಿತೄಣಾಂಚ ಮಾತಾ ಪಿತ್ರೋ ಸ್ತಥೈವಚ ॥ ಮಾಸ್ಮ ಕಾರ್ಷೀತ್ಸ ಶುಶ್ರೂಷಾಂ ಯಸ್ಯಾಽರ್ಯೋಽ

ಭವತು - ಆಗಲಿ, ಅಸ್ಯ - ಇವನಿಗೆ, ಧರ್ಮೇ - ಧರ್ಮದಲ್ಲಿ, ಮನಃ - ಮನವು, ಮಾಭೂಯಾತ್ಸ್ಮ - ಆಗದಿರಲಿ. ॥ ೪೨ ॥ ಅಸ್ಯ - ಈ ಪುರುಷನ, ಸಂಚಿತಾನಿ - ಸಂಪಾದಿಸಲ್ಪಟ್ಟ, ವಿವಿಧಾನಿ - ನಾನಾ ಬಗೆಗಳಾದ, ಸಹಸ್ರಶಃ - ಅನೇಕ ಸಂಖ್ಯೆಯುಳ್ಳ, ವಿತ್ತಾನಿ - ದ್ರವ್ಯಗಳು, ದಸ್ಯುಭಿಃ - ಚೋರರಿಂದ ವಿಪ್ರಲುಪ್ಯಂತಾಂ - ನಾಶಗೊಳಿಸಲಾಗಲಿ. ॥ ೪೩ ॥ ಉಭೇಸಂಧ್ಯೇ - ಪ್ರಾತಸ್ಸಾಯಂ ಸಂಧ್ಯಾ ಕಾಲಗಳಲ್ಲಿ, ಶಯಾನಸ್ಯ - ಮಲಗಿರುವನಿಗೆ, ಯತ್ಪಾಪಂ - ಯಾವ ಪಾಪವು, ಪರಿಕಲ್ಪ್ಯತೇ - ನಿಶ್ಚಯಿಸಲ್ಪಡುತ್ತದೆಯೊ, ತಚ್ಚಪಾಪಂ - ಆ ಪಾಪವೂ, ತಸ್ಯ - ಆ ಪುರುಷನಿಗೇ, ಭವೇತ್-ಆಗಲಿ. ॥ ೪೪ ॥ ಅಗ್ನಿದಾಯಕೇ - ಪರರಮನೆಗೆ ಬೆಂಕೀಹಾಕಿದವನಲ್ಲಿ, ಯತ್ಪಾಪಂ - ಯಾವ ಪಾಪವೋ, ಗುರುತಲ್ಪಗೇ - ಗುರುತಲ್ಪಗಮನಮಾಡಿದವನಲ್ಲಿ, ಯತ್ಪಾಪಂ - ಯಾವ ಪಾಪವುಂಟೋ, ಮಿತ್ರ ದ್ರೋಹೇಚ - ಮಿತ್ರದ್ರೋಹಮಾಡಿದವನಲ್ಲಿ, ಯತ್ಪಾಪಂ - ಯಾವ ಪಾಪವುಂಟೋ, ತತ್ಪಾಪಂ - ಅಂತಹ ಪಾಪವು, ತೇನ - ಆ ಪುರುಷನಿಂದ, ಪ್ರತಿಪದ್ಯತಾಂ - ಹೊಂದಲ್ಪಡಲಿ, ದೇವತಾನಾಂ - ದೇವತೆಗಳ, ಪಿತೄಣಾಂ - ಪಿತೃದೇವತೆಗಳಿಗೆ, ತಥೈವ - ಹಾಗೆಯೇ, ಮಾತಾಪಿತ್ರೋಶ್ಚ - ತಾಯಿ ತಂದೆಗಳಿಗೆ, ಶುಶ್ರೂಷಾಂ - ಸೇವೆಯನ್ನು, ಸಃ - ಆ ಪುರುಷನು, ಮಾಸ್ಮಕಾರ್ಷೀತ್ - ಮಾಡಿದವ ನಾಗಲಿ. ॥ ೪೫ ॥ ಸಃ - ಆ ಪುರುಷನು, ಸತಾಂ - ಸತ್ಪುರುಷರ, ಲೋಕಾತ್-ಲೋಕದಿಂದಲೂ, ಸತಾಂ - ಸತ್ಪುರುಷರಿಗೆ, ಕೀರ್ತ್ಯಾತ್ - ಹೊಗಳಿಕೆಯ, ಸಜ್ಜುಷ್ಟಾತ್ - ಸತ್ಪುರುಷರಿಂದಂಗೀಕೃತ ವಾದ, ಕರ್ಮಣಃ - ಕೆಲಸದಿಂದ, ಅದ್ಯೈವ - ಈಗಲೆ, ಕ್ಷಿಪ್ರಂ - ಬೇಗನೆ, ಭ್ರಶ್ಯತು - ಜಾರಿ

ಮಾಡುವುದರಿಂದಲೂ,ಅಧರ್ಮದಲ್ಲಿಆಸಕ್ತವಾದ ಮನವುಳ್ಳವನಾಗುವುದರಿಂದಲೂ,ಅಧರ್ಮ ವನ್ನೇಸೇವಿಸುವುದರಿಂದಲೂ, ಇತರರು ಕಷ್ಟಪಟ್ಟುಸಂಪಾದಿಸಿದ ದ್ರವ್ಯವನ್ನು ಕಳ್ಳತನದಿಂದ ಅಪಹರಿಸುವುದರಿಂದಲೂ, ಬೆಳಿಗ್ಗೆಮತ್ತು ಸಾಯಂಕಾಲಗಳಲ್ಲಿ ನಿದ್ರಿಸುವುದರಿಂದಲೂ ಯಾವ ಯಾವ ಪಾಪಗಳುಂಟಾಗುವುವೋ ಆ ಪಾಪಗಳೆಲ್ಲವೂ, ಶ್ರೀರಾಮನ ಅರಣ್ಯಗಮನಕ್ಕೆ ಸಮ್ಮ ತಿಸಿದವನ ಪಾಲಾಗಲಿ! ॥೪೨-೪೪॥ ಅಲ್ಲದೆ ಮನೆಗಳನ್ನು ಸೂರೆಮಾಡುವವನೂ, ಗುರುಪತ್ನೀ ಗಮನವನ್ನುಮಾಡುವವನೂ, ಮಿತ್ರನಾದವನಿಗೆ ದ್ರೋಹಮಾಡಿದವನೂ ಎಂತಹ ಪಾಪವನ್ನು ಪಡೆಯುತ್ತಾನೆಯೋ ಅಂತಹ ಪಾಪವು ನನಗುಂಟಾಗಲಿ! ನಾನು ಶ್ರೀರಾಮನರಣ್ಯಕ್ಕೆ ಹೋದುದಕ್ಕೆ ಸಮಾಧಾನವನ್ನು ಪಡೆದವನೇ ಆಗಿದ್ದರೆ, ಪಿತೃದೇವತೆಗಳಿಗೂ, ದೇವತೆಗಳಿಗೂ, ತಂದೆತಾಯಿಗಳಿಗೂ ಶುಶ್ರೂಷೆಯನ್ನುಮಾಡದವನಾಗುವೆನು; ॥೪೫-೪೬॥ ಸತ್ಪುರುಷರಿಂದ

ನುಮತೇಗತಃ ॥ ೪೬ ॥ ಸತಾಂ ಲೋಕಾತ್ ಸತಾಂ ಕೀರ್ತ್ಯಾ ತ್ಸಂಜುಷ್ಟಾ
ತ್ಕರ್ಮಣ ಸ್ತಥಾ ॥ ಭ್ರಶ್ಯತು ಕ್ಷಿಪ್ರಮದ್ಯೈವ ಯಸ್ಯಾಽರ್ಯೋಽನುಮತೇ
ಗತಃ ॥ ೪೭ ॥ ಅಪಾಸ್ಯ ಮಾತೃಶುಶ್ರೂಷಾ ಮನರ್ಥೇ ಸೋಽವತಿಷ್ಠತಾಂ ॥
ದೀರ್ಘಬಾಹು ರ್ಮಹಾವಕ್ಷಾ ಯಸ್ಯಾಽರ್ಯೋಽನುಮತೇಗತಃ ॥ ೪೮ ॥
ಬಹುಪುತ್ರೋ ದರಿದ್ರಶ್ಚ ಜ್ವರರೋಗ ಸಮನ್ವಿತಃ ॥ ಸಭೂಯಾ ತ್ಸತತಕ್ಲೇಶೀ
ಯಸ್ಯಾಽರ್ಯೋಽನುಮತೇಗತಃ ॥ ೪೯ ॥ ಆಶಾ ಮಾಶಂಸಮಾನಾನಾಂ
ದೀನಾನಾ ಮೂರ್ಧ್ವ ಚಕ್ಷುಷಾಂ ॥ ಅರ್ಥಿನಾಂ ವಿತಥಾಂ ಕುರ್ಯಾದ್ಯಸ್ಯಾಽ
ರ್ಯೋಽನುಮತೇಗತಃ ॥ ೫೦ ॥ ಮಾಯಯಾ ರಮತಾಂ ನಿತ್ಯಂ ಪರುಷಃ
ಪಿಶುನೋಽಶುಚಿಃ ॥ ರಾಜ್ಞೋ ಭೀತ ಸ್ತ್ವಧರ್ಮಾತ್ಮಾ ಯಸ್ಯಾಽರ್ಯೋಽ

ಬೀಳಲಿ. ॥ ೪೭ ॥ ಮಹಾವಕ್ಷಾಃ - ಅಗಲವಾದ ಎದೆಯುಳ್ಳ, ದೀರ್ಘಬಾಹುಃ - ಉದ್ದವಾದ ಭುಜಗಳುಳ್ಳವನಾಗಿ, ಸಃ - ಆ ಪುರುಷನು, ಮಾತೃಶುಶ್ರೂಷಾಂ-ತಾಯಿಯ ಸೇವೆಯನ್ನು, ಅಪಾಸ್ಯ - ಬಿಟ್ಟು, ಅನರ್ಥೇ - ಅಧರ್ಮದಲ್ಲಿಯೇ, ಅವತಿಷ್ಠತಾಂ - ಇರಲಿ. ॥ ೪೮ ॥ ಸಃ - ಆ ಪುರುಷನು, ಬಹುಪುತ್ರಃ - ಅನೇಕ ಮಕ್ಕಳುಳ್ಳವನಾಗಿಯೂ, ದರಿದ್ರಃ - ದರಿದ್ರನಾಗಿಯೂ, ಜ್ವರರೋಗಸಮನ್ವಿತಃ - ಜ್ವರರೋಗದಿಂದ ಕೂಡಿದವನಾಗಿಯೂ, ಸತತಕ್ಲೇಶೀ - ಯಾವಾಗ ನೋಡಿದರೂ ದುಃಖಗೊಂಡವನೇ, ಭೂಯಾತ್ - ಆಗಲಿ. ॥ ೪೯ ॥ ಆಶಂಸಮಾನಾನಾಂ - ಸ್ತೋತ್ರಮಾಡುತ್ತಿರುವ, ದೀನಾನಾಂ - ದರಿದ್ರರಾದ, ಊರ್ಧ್ವಚಕ್ಷುಷಾಂ, (ಗೋ × ಮ) ದಾತೃವಿನ ಮುಖೋರ್ಧ್ವಪ್ರದೇಶವಲ್ಲಿ, ಕಣ್ಣುಗಳುಳ್ಳ, ಅರ್ಥಿನಾಂ - ಯಾಚಕರ, ಆಶಾ - ಆಶೆಯನ್ನು, ಸಃ - ಆ ಪುರುಷನು, ವಿತಥಾಂ - ವ್ಯರ್ಥವನ್ನಾಗಿ, ಕುರ್ಯಾತ್ - ಮಾಡುವನು. ॥ ೫೦ ॥ ಸಃ - ಆ ಪುರುಷನು, ಅಧರ್ಮಾತ್ಮಾ - ಅಧರ್ಮದಲ್ಲಿಯೇ ಮನವುಳ್ಳವನಾಗಿ, ರಾಜ್ಞಃ - ಅರಸನಿಂದ, ಭೀತಃ - ಭಯಗೊಂಡು, ನಿತ್ಯಂ - ನಿರಂತರವೂ, ಪರುಷಃ - ಕ್ರೂರವಾದ ಮಾತುಗಳುಳ್ಳವನಾಗಿ, ಪಿಶುನಃ -

---

ತ್ಯಜಿಸಲಾಗುತ್ತೇನೆ. ಸತ್ಕರ್ಮಭ್ರಷ್ಟನೆನಿಸುತ್ತೇನೆ; ಮಾತೃಶುಶ್ರೂಷೆಯನ್ನುಮಾಡಿದವನ್ನು ಹೊಗುವಪಾಪಲೋಕಗಳಿಗೆ ಹೋಗುತ್ತೇನೆ ದೀರ್ಘಬಾಹುವೂ, ವಿಶಾಲಾಕ್ಷನೂ ಆದ ಶ್ರೀರಾಮನು ಅರಣ್ಯಕ್ಕೆಹೋಗುವ ವಿಷಯವನ್ನುಕುರಿತು ನಾನು ನನ್ನಸಮ್ಮತಿಯನಿತ್ತವನೇ ಆಗಿದ್ದರೆ ನಾನು ಬಹು ಪುತ್ರವಂತನಲ್ಲದವನೂ ದರಿದ್ರನೂ, ಜ್ವರರೋಗಪೀಡಿತನು, ಮಹಾದುಃಖವುಳ್ಳವನೂ ಆಗುತ್ತೇನೆ. ನಾನು ಪೂಜ್ಯನಾದ ಶ್ರೀರಾಮನು ಅರಣ್ಯಕ್ಕೆ ಹೋಗುವ ಸಂಗತಿಯನ್ನು ಕುರಿತು ಏನನ್ನಾದರೂ ತಿಳಿದವನಾಗಿದ್ದಿದ್ದರೆ, ಸ್ತೋತ್ರವನ್ನು ಮಾಡುತ್ತಿರುವವರೂ, ಮೇಲ್ಭಾಗವನ್ನುನೋಡುತ್ತಿರುವ ಕಂಗಳುಳ್ಳವರೂ,ದೀನರೂಆದ ಯಾಚಕರಯಾಚನೆಯನ್ನು ವ್ಯರ್ಥವನ್ನಾಗಿ ಮಾಡಿದವನಾಗುತ್ತೇನೆ.॥೪೭-೫೦॥ಶ್ರೀರಾಮನಅರಣ್ಯವಾಸಕ್ಕೆ ನನ್ನಸಮ್ಮತಿಯಿದ್ದುದೇ ಆದರೆ, ಎಲ್ಲ ಕಾಲಗಳಲ್ಲಿಯೂ ಧರ್ಮಶೂನ್ಯವಾದವನೂ, ಕಠಿನನಾದವನೂ, ಕಪಟವೃತ್ತಿಯುಳ್ಳವನೂ, ಅಪರಿಶುದ್ಧನೂ, ರಾಜರಿಗೆ ಭಯಪಡುವವನೂ, ಮೋಸದಿಂದ

ನುಮತೇಗತಃ ॥ ೫೧ ॥ ಋತುಸ್ನಾತಾಂ ಸತೀಂ ಭಾರ್ಯಾಮೃತುಕಾಲಾನುರೋಧಿನೀಂ ॥ ಅತಿವರ್ತೇತ ದುಷ್ಟಾತ್ಮಾ ಯಸ್ಯಾರ್ಯೋಽನುಮತೇಗತಃ ॥ ೫೨ ॥ ಧರ್ಮದಾರಾನ್ಪರಿತ್ಯಜ್ಯ ಪರದಾರಾನ್ನಿಷೇವತಾಂ ॥ ತ್ಯಕ್ತಧರ್ಮರತಿರ್ಮೂಢೋ ಯಸ್ಯಾರ್ಯೋಽನುಮತೇಗತಃ ॥ ೫೩ ॥ ವಿಪ್ರಲುಪ್ತಪ್ರಜಾತಸ್ಯ ದುಷ್ಕೃತಂ ಬ್ರಾಹ್ಮಣಸ್ಯ ಯತ್ ॥ ತದೇವ ಪ್ರತಿಪದ್ಯೇತ ಯಸ್ಯಾರ್ಯೋಽನುಮತೇಗತಃ ॥ ೫೪ ॥ ಪಾನೀಯದೂಷಕೇ ಪಾಪಂ ತಥೈವ ವಿಷದಾಯಕೇ ॥ ಯತ್ತದೇಕಸ್ಸಲಭತಾಂ ಯಸ್ಯಾರ್ಯೋಽನುಮತೇಗತಃ ॥ ೫೫ ॥ ಬ್ರಾಹ್ಮಣಾಯೋದ್ಯತಾಂ ಪೂಜಾಂ ವಿಹಂತು ಕಲುಷೇಂದ್ರಿಯಃ ॥

ಚಾಡೀಕೋರನಾಗಿ, ಅಶುಚಿಃ - ಕೊಳಕನಾಗಿ, ಮಾಯಯಾ - ಮೋಸದಿಂದ, ರಮತಾಂ-ವಿಹರಿಸಲಿ. ॥ ೫೧ ॥ ದುಷ್ಟಾತ್ಮಾ - ದುಷ್ಟಮನಸ್ಸುಳ್ಳ, ಸಃ - ಆ ಪುರುಷನು, ಋತುಸ್ನಾತಾಂ - ರಜಸ್ವಲೆಯಾಗಿ ಸ್ನಾನಮಾಡಿದ, ಋತುಕಾಲಾನುರೋಧಿನೀಂ - ಋತುಕಾಲದಲ್ಲಿ ಅನುಸರಿಸುತ್ತಿರುವ, ಸತೀಂ - ಪತಿವ್ರತೆಯಾದ, ಭಾರ್ಯಾಂ - ಹೆಂಡತಿಯನ್ನು, ಅತಿವರ್ತೇತ - ಅತಿಕ್ರಮಿಸಲಿ. ॥ ೫೨ ॥ ತ್ಯಕ್ತಧರ್ಮರತಿಃ - ಬಿಡಲಾದ ಧರ್ಮಪ್ರಧಾನವಾದ ಕ್ರೀಡೆಯುಳ್ಳವನಾಗಿ, ಮೂಢಃ - ಮೂಢನಾದ, ಸಃ - ಆ ಪುರುಷನು, ಧರ್ಮದಾರಾನ್ - ಧರ್ಮಪತ್ನಿಯನ್ನು, ಪರಿತ್ಯಜ್ಯ - ತೊರೆದು, ಪರದಾರಾನ್ - ಪರಸ್ತ್ರೀಯರನ್ನು, ನಿಷೇವತಾಂ - ಭೋಗಿಸಲಿ. ॥ ೫೩ ॥ ವಿಪ್ರಲುಪ್ತಪ್ರಜಾತಸ್ಯ - (ಮ) ಅನ್ನಪಾನಾದಿಗಳನ್ನು ಕೊಡದೆ ಶೋಷಗೊಳಿಸಲಾದ, ಪ್ರಜಾತಸ್ಯ - ಕ್ಷಯಿಸಲ್ಪಟ್ಟ ಸಂತಾನವುಳ್ಳ ಹೆಂಡತಿಯುಳ್ಳ, (ಗೋ) - ನಷ್ಟ, ಪ್ರಜಾತಸ್ಯ - ಸಂತತಿಯುಳ್ಳ, ಬ್ರಾಹ್ಮಣಸ್ಯ - ಬ್ರಾಹ್ಮಣನಿಗೆ, ಯತ್ ದುಷ್ಕೃತಂ - ಯಾವ ಪಾಪವುಂಟೋ, ತದೇವ - ಆ ಪಾಪವನ್ನೇ, ಸಃ - ಆ ಪುರುಷನು, ಪ್ರತಿಪದ್ಯೇತ - ಹೊಂದಲಿ. ॥ ೫೪ ॥ ಪಾನೀಯದೂಷಕೇ - ಉದಕವನ್ನು ಕೆಡಿಸುವ ಪುರುಷನಲ್ಲಿ, ತಥೈವ - ಹಾಗೆಯೇ, ವಿಷದಾಯಕೇ - ವಿಷವಿಡುವವನಲ್ಲಿಯೂ, ಯತ್ ಪಾಪಂ - ಯಾವ ಪಾಪವೋ, ತತ್ - ಆ ಪಾಪವನ್ನು, ಸಃ - ಆ ಪುರುಷನು, ಏಕಃ - ಒಬ್ಬನೇ, ಲಭತಾಂ - ಹೊಂದಲಿ. ॥ ೫೫ ॥

ಜೀವಿಸುವವನೂ ಆಗುತ್ತೇನೆಯಲ್ಲವೆ? ಶ್ರೀರಾಮನ ಅರಣ್ಯಗಮನ ವಿಷಯದಲ್ಲಿ ನಾನು ಅನುಮತಿಯಿತ್ತವನೇ ಆಗಿದ್ದರೆ, ಋತುಸ್ನಾತಳೂ, ಋತುಕಾಲವನ್ನು ಸಮೀಪಿಸಿರುವವಳೂ, ಪತಿವ್ರತೆಯೂ ಆದ ಭಾರ್ಯೆಯನ್ನು ತೊರೆದ, ಮನುಷ್ಯನು ಹೋಗುವ ಪಾಪಲೋಕಗಳಿಗೆ ಹೋದೇನು ; ಧರ್ಮವನ್ನು ತೊರೆದವನೂ, ಮೂಢನೂ ಆಗಿ ನಿಜಭಾರ್ಯೆಯನ್ನು ಬಿಟ್ಟು, ಪರಸತಿಯನ್ನು ಬಯಸುವನು ಹೋಗುವ ಅಧೋಲೋಕಗಳಿಗೆ ನಾನೂ ಹೋಗುವವನಾಗುತ್ತೇನೆ; ಅಲ್ಲದೆ ಧರ್ಮಪತ್ನಿಯಲ್ಲಿ ಸಂತಾನವನ್ನು ಪಡೆಯದೆ, ವೇಶ್ಯೆಗೆ ವಶನಾದ ಬ್ರಾಹ್ಮಣನು ಹೊಂದುವ ಪಾಪಲೋಕಗಳಿಗೆ ಹೋಗುತ್ತೇನೆಯಲ್ಲವೆ? ॥ ೫೧-೫೪ ॥ ನಾನು ಪೂಜ್ಯನಾದ ಶ್ರೀರಾಮನು ಅರಣ್ಯಕ್ಕೆ ಹೋಗಲು ಸಮ್ಮತಿಯಿತ್ತವನೇ ಆಗಿದ್ದರೆ ಕುಡಿಯುವ ನೀರನ್ನು ನಿಂದಿಸುವವನೂ, ವಿಷವಿಕ್ಕಿ ಇತರನ್ನು ಕೊಲ್ಲುವವನೂ ಯಾವಲೋಕಗಳನ್ನು ಹೊಂದುವನೋ ಆ ಲೋಕವನ್ನು ಹೊಂದುತ್ತೇನೆ. ಅಲ್ಲದೆ ಬ್ರಾಹ್ಮಣನಿಗೆ ಮಾಡುವಉಪಕಾರಕ್ಕೆ ವಿಘ್ನವನ್ನು

ಬಾಲವತ್ಸಾಂಚ ಗಾಂ ದೋಗ್ಧು ಯಸ್ಯಾಽರ್ಯೋಽನುಮತೇಗತಃ ‖ ೩೬ ‖
ತೃಷ್ಣಾರ್ತಂ ಸತಿಪಾನೀಯೇ ವಿಪ್ರಲಂಭೇನ ಯೋಜಯೇತ್ ‖ ಲಭೇತ ತಸ್ಯ
ಯತ್ಪಾಪಂ ಯಸ್ಯಾಽರ್ಯೋಽನುಮತೇಗತಃ ‖ ೩೭ ‖ ಭಕ್ತ್ಯಾ ವಿವದಮಾ
ನೇಷು ಮಾರ್ಗಮಾಶ್ರಿತ್ಯ ಪಶ್ಯತಃ ‖ ತಸ್ಯ ಪಾಪೇನ ಯುಜ್ಯೇತ ಯಸ್ಯಾಽ
ರ್ಯೋಽನುಮತೇಗತಃ ‖ ೩೮ ‖ ವಿಹೀನಾಂ ಪತಿಪುತ್ರಾಭ್ಯಾಂ ಕೌಸಲ್ಯಾಂ
ಪಾರ್ಥಿವಾತ್ಮಜಃ ‖ ಏವಮಾಶ್ವಾಸಯನ್ನೇವ ದುಃಖಾರ್ತೋ ನಿಪಪಾತಹ! ‖ ೩೯ ‖

ಸಃ - ಆ ಪುರುಷನು, ಕಲುಷೇಂದ್ರಿಯಃ - ಚಪಲಚಿತ್ತನಾಗಿ, ಬ್ರಾಹ್ಮಣಾಯ - ಬ್ರಾಹ್ಮಣನಿಗೆ, ಉದ್ಯತಾಂ - ಸಿದ್ಧಮಾಡಿದ, ಪೂಜಾಂ - ಪೂಜೆಯನ್ನು, ವಿಹಂತು-ವಿಘ್ನಗೊಳಿಸಲಿ, ಬಾಲವತ್ಸಾಂಚ- ಹತ್ತು ದಿವಸ ವಯಸ್ಸಿನ ಕರುವುಳ್ಳ, ಗಾಂ - ಆಕಳನ್ನು, ದೋಗ್ಧು - ಕರೆಯಲಿ. ‖ ೩೬ ‖ ಪಾನೀಯೇಸತಿ - ನೀರಿದ್ದರೂ, ತೃಷ್ಣಾರ್ತಂ - ನೀರಡಿಕೆಯಿಂದ ಬಳಲಿದ ಪುರುಷನನ್ನು, ವಿಪ್ರಲಂಭೇನ - ವಂಚನೆಯಿಂದ, ಯಃ - ಯಾವ ಪುರುಷನು, ಯೋಜಯೇತ್ - ಸೇರಿಸುವನೋ, (ಮ) ಇಲ್ಲವೆಂದು ದೂರಮಾಡುತ್ತಾನೆಯೋ, ತಸ್ಯ-ಅವನಿಗೆ, ಯತ್ ಪಾಪಂ-ಯಾವ ಪಾಪವು, ಲಭೇತ- ಲಭಿಸುವದೋ, ತತ್ಪಾಪಂ - ಅಂತಹ ಪಾಪವನ್ನು, ಲಭೇತ - ಹೊಂದಲಿ. ‖ ೩೭ ‖ ಆರ್ಯಃ - ಪೂಜ್ಯನಾದ ಅಣ್ಣನು, ಯಸ್ಯ - ಯಾವನ, ಅನುಮತೇ - ಸಮ್ಮತಿಯಮೇಲೆ, ಗತಃ - ಅರಣ್ಯವನ್ನು ಕುರಿತು ಹೋದನೋ, ಸಃ-ಆ ಪುರುಷನು, ವಿವದಮಾನೇಷು-ವಾದಿಪ್ರತಿವಾದಿಗಳು ಸೇರಿ ಕಲಹವನ್ನು ಮಾಡುತ್ತಿರಲು, ಭಕ್ತ್ಯಾ - ಪಕ್ಷಪಾತದಿಂದ, ಮಾರ್ಗಂ - ಜಯೋಪಾಯವನ್ನು, ಆಶ್ರಿತ್ಯ - ಆಶ್ರ ಯಿಸಿ, ಪಶ್ಯತಃ - ನೋಡಿ ಹೇಳುತ್ತಿರುವ, ತಸ್ಯ - ಆ ಪುರುಷನ, ಪಾಪೇನ - ಪಾಪದಿಂದ, ಯುಜ್ಯೇತ- ಸಂಬಂಧಪಡಲಿ. ‖ ೩೮ ‖ ಏವಂ - ಈಪರಿಯಾಗಿ, ಪಾರ್ಥಿವಾತ್ಮಜಃ - ರಾಜಕುವರನಾದ ಭರತನು, ಪತಿಪುತ್ರಾಭ್ಯಾಂ - ಪತಿಯಿಂದಲೂ ಮಗನಿಂದಲೂ, ವಿಹೀನಾಂ-ರಹಿತಳಾದ, ಕೌಸಲ್ಯಾಂ- ಕೌಸಲ್ಯಾದೇವಿಯನ್ನು, ಆಶ್ವಾಸಯನ್ನೇವ - ಸಮಾಧಾನಗೊಳಿಸಿದವನಾಗಿಯೇ, ದುಃಖಾರ್ತಃ - ವ್ಯಸನಾಕ್ರಾಂತನಾಗಿ, ನಿಪಪಾತಹ - ಕೆಳಕ್ಕೆ ಬಿದ್ದನಷ್ಟೆ. ‖ ೩೯ ‖ ತಥಾತು - ಆಪರಿಯಾಗಾದರೆ,

ತುದೊಡ್ಡವನು ಹೋದುವ ಪಾಪಲೋಕವನ್ನು ಹೊಂದುತ್ತೇನೆ. ಈದ ಆಕಳನ್ನು ಹತ್ತುದಿನಗಳೊಳಗಾಗಿಯೇ ಕರೆಯುವವನೂ, ಬಾಯಾರಿಬಂದ ಮನುಷ್ಯನಿಗೆ ನೀರಿದ್ದೂ ಇಲ್ಲವೆಂದು ಹೇಳಿ ಮೋಸ ಮಾಡುವವನೂ ಯಾವಲೋಕಗಳಿಗೆ ಹೋಗುವನೋ, ಆ ಲೋಕ ಗಳು ಶ್ರೀರಾಮನ ಅರಣ್ಯಗಮನಕ್ಕೆ ಸಮ್ಮತಿಸಿದವನಿಗಾಗಲಿ. ‖ ೩೬-೩೭ ‖ ಎಲೌ ಕೌಸ ಲ್ಯಾಜನನಿಯೆ! ಪೂಜ್ಯನಾದ ಶ್ರೀರಾಮನು ಯಾವನ ಸಮ್ಮತಿಯಿಂದ ವನಕ್ಕೈದಿದನೋ, ಅವನು ವಿವಾದಕಾಲಗಳಲ್ಲಿ ಪಕ್ಷಪಾತದಿಂದ ಜಯಾಪಜಯಗಳನ್ನು ತೀರ್ಮಾನಿಸುವ ಪುರು ಷನು ಹೋಗುವ ಪಾಪಲೋಕಗಳಿಗೆ ಹೋಗುತ್ತಾನೆ.” ಈ ರೀತಿಯಾಗಿ ರಾಜಪುತ್ರನಾದ ಆ ಭರತನು, ಪತಿಯಿಂದಲೂ, ಮಗನಿಂದಲೂ ವಿರಹಿತಳಾಗಿರುವ ಆ ಕೌಸಲ್ಯಾದೇವಿಯನ್ನು ಸಮಾಧಾನಗೊಳಿಸುತ್ತ, ದುಃಖದಿಂದ ಪರಿತಪಿಸುವವನಾಗಿ ಕೆಳಕ್ಕೆ ಬಿದ್ದನು. ಆಗಲಾ

ತಥಾತು ಶಪಥೈಃ ಕಷ್ಟೈ ಶ್ಶಪಮಾನ ಮಚೇತನಂ || ಭರತಂ ಶೋಕಸಂತಪ್ತಂ ಕೌಸಲ್ಯಾ ವಾಕ್ಯ ಮಬ್ರವೀತ್ ||೬೦|| ಮಮ ದುಃಖಮಿದಂ ಪುತ್ರ! ಭೂಯ ಸ್ಸಮುಪಜಾಯತೇ || ಶಪಥೈ ಶ್ಶಪಮಾನೋಹಿ ಪ್ರಾಣಾ ನುಪರುಣತ್ಸಿಮೇ || ೬೧ || ದಿಷ್ಟ್ಯಾ ನಚಲಿತೋ ಧರ್ಮಾದಾತ್ಮಾ ತೇ ಸಹಲಕ್ಷ್ಮಣಃ || ವತ್ಸ! ಸತ್ಯಪ್ರತಿಜ್ಞೋ ಮೇ ಸತಾಂ ಲೋಕ ಮವಾಪ್ಸ್ಯಸಿ || ೬೨ || ಇತ್ಯುಕ್ತ್ವಾ ಚಾಂಕಮಾನೀಯ ಭರತಂ ಭ್ರಾತೃವತ್ಸಲಂ || ಪರಿಷ್ವಜ್ಯ ಮಹಾಬಾಹುಂ ರುರೋದ ಭೃಶದುಃಖಿತಾ || ೬೩ || ಏವಂ ವಿಲಪಮಾನಸ್ಯ ದುಃಖಾರ್ತಸ್ಯ

ಕಷ್ಟೈಃ - ದುಃಖಕರವಾದ, ಶಪಥೈಃ - ಪ್ರತಿಜ್ಞೆಗಳಿಂದ, ಶಪಮಾನಂ - ಪ್ರಮಾಣವನ್ನು ಮಾಡುತ್ತಿರುವ, ಅಚೇತನಂ - ಪ್ರಜ್ಞಾಹೀನನಾದ, ಶೋಕಸಂತಪ್ತಂ - ದುಃಖದಿಂದ ಸಂತಾಪಗೊಂಡ, ಭರತಂ- ಭರತನನ್ನು ಕುರಿತು, ಕೌಸಲ್ಯಾ - ಕೌಸಲ್ಯಾದೇವಿಯು, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದಳು. || ೬೦ || ಹೇ ಪುತ್ರ - ಎಲೈ ಮಗನೆ, ಮಮ - ನನಗೆ, ಇದಂದುಃಖಂ - ಈ ದುಃಖವು, ಭೂಯಃ - ಮತ್ತು ಹೆಚ್ಚಾಗಿ, ಸಮುಪಜಾಯತೇ - ಉಂಟಾಗುತ್ತದೆ, ಶಪಥೈಃ - ಶಪಥಗಳಿಂದ, ಶಪಮಾನಃ - ಪ್ರತಿಜ್ಞೆಯನ್ನು ಮಾಡುತ್ತ, ಮೇ - ನನ್ನ, ಪ್ರಾಣಾನ್ - ಪ್ರಾಣಗಳನ್ನು, ಉಪರುಣತ್ಸಿ- ಬಾಧಿಸುತ್ತೀಯೆ. || ೬೧ || ಸಹಲಕ್ಷ್ಮಣಃ - ಲಕ್ಷ್ಮಣನಿಂದೊಡಗೂಡಿದ, ತೇ ನಿನ್ನ, ಆತ್ಮಾ - ಅಂತಃಕರಣವು, ದಿಷ್ಟ್ಯಾ - ದೈವಾಧೀನದಿಂದ, ಧರ್ಮಾತ್ - ಜ್ಯೇಷ್ಠಾನುವರ್ತನರೂಪವಾದ ಧರ್ಮದಿಂದ, ನಚಲಿತಃ - ಕದಲಲಿಲ್ಲ, ಹೇ ವತ್ಸ - ಎಲೈ ಹುಡುಗನೇ, ಮೇ - ನನ್ನ ಸಮೀಪದಲ್ಲಿ, ಸತ್ಯ ಪ್ರತಿಜ್ಞಃ - ಸತ್ಯವಾದ ಪ್ರತಿಜ್ಞೆಯುಳ್ಳವನಾಗಿ, ಸತಾಂ - ಸತ್ಪುರುಷರ, ಲೋಕಂ - ಸ್ಥಾನವನ್ನು, ಅವಾಪ್ಸ್ಯಸಿ - ಹೊಂದುವೆ. || ೬೨ || ಇತಿ - ಈಪರಿಯಾಗಿ, ಉಕ್ತ್ವಾ - ಹೇಳಿ, ಭೃಶದುಃಖಿತಾ- ಬಹಳ ದುಃಖಗೊಂಡವಳಾಗಿ, ಭ್ರಾತೃವತ್ಸಲಂ - ಅಣ್ಣನಲ್ಲಿ ಬಹಳ ಭಕ್ತಿಮಂತನಾದ, ಮಹಾಬಾಹುಂ- ಮಹಾ ಪರಾಕ್ರಮಶಾಲಿಯಾದ, ಭರತಂ - ಭರತನನ್ನು, ಅಂಕಂ - ತೊಡೆಯನ್ನು, ಆನೀಯ - ಹತ್ತಿಸಿಕೊಂಡು, ಪರಿಷ್ವಜ್ಯ - ಅಪ್ಪಿಕೊಂಡು, ರುರೋದ - ಅತ್ತಳು. || ೬೩ || ಏವಂ - ಈಪರಿಯಾಗಿ, ವಿಲಪಮಾನಸ್ಯ - ಪ್ರಲಾಪಮಾಡುತ್ತಿರುವ, ದುಃಖಾರ್ತಸ್ಯ - ವ್ಯಸನದಿಂದ ದೀನನಾದ,

ದೇವಿಯು ಆರೀತಿ ಘೋರಶಪಥಮಂಗೈಯುತ್ತಿರುವವನೂ, ಪ್ರಜ್ಞೆತಪ್ಪಿದವನೂ, ದುಃಖಾವಿಷ್ಟನೂ ಆದ ಭರತನನ್ನು ಕುರಿತು ಹೀಗೆ ಹೇಳಿದಳು. || ೫೮-೬೦ || "ಎಲೈ ಭರತಕುಮಾರ! ನೀನು ಕಠಿನವಾದ ಶಪಥಗಳನ್ನು ಮಾಡಿ ನನ್ನ ಪ್ರಾಣಗಳನ್ನೇಕೆ ಸೆಳೆಯುತ್ತಿರುವೆ! ನೀನೀರೀತಿ ಮಾಡುವುದರಿಂದ ನನ್ನ ದುಃಖವು ಮತ್ತೂ ಅಧಿಕವಾಗುತ್ತದೆ. ದೈವಾಧೀನದಿಂದ ನಿನ್ನಮನಸ್ಸು ಧರ್ಮವನ್ನು ಮೀರಲಿಲ್ಲ. ಆದುದರಿಂದಲೇ ನೀನು ಸತ್ಯಪ್ರತಿಜ್ಞೆಯುಳ್ಳವನಾಗಿ ಸತ್ಪುರುಷರು ಹೊಂದುವ ಸದ್ಗತಿಯನ್ನು ಹೊಂದುತ್ತೀಯೆ"||೬೧-೬೨|| ಈರೀತಿಯಾಗಿ ನುಡಿದ ಆ ಕೌಸಲ್ಯಾದೇವಿಯು ಅಣ್ಣನಾದ ಶ್ರೀರಾಮಮೂರ್ತಿಯಲ್ಲಿ ಅಧಿಕ ವಾತ್ಸಲ್ಯವುಳ್ಳ ಆ ಭರತಕುಮಾರನನ್ನು ಅಪ್ಪಿಕೊಂಡು ತೊಡೆಯಮೇಲೆ ಕೂಡಿಸಿಕೊಂಡು, ದುಃಖಾಕ್ರಾಂತಳಾಗಿ ರೋದಿಸಿದಳು. ಇಷ್ಟೆಯಲ್ಲದೆ ಅಧಿಕವಾಗಿ ವಿಲಾಪಮಂಗೈಯುತ್ತಿರುವವನೂ, ಸ್ಮೃತಿ

ಮಹಾತ್ಮನಃ||ಮೋಹಾಚ್ಚ ಶೋಕಸಂರೋಧಾ ದ್ಬಭೂವ ಲುಳಿತಂ ಮನಃ||೬೪||

ಲಾಲಪ್ಯಮಾನಸ್ಯ ವಿಚೇತನಸ್ಯ
ಪ್ರಣಷ್ಟಬುದ್ಧೇಃ ಪತಿತಸ್ಯ ಭೂಮೌ ||
ಮುಹುರ್ಮುಹು ರ್ನಿಶ್ವಸತಶ್ಚ ಘರ್ಮಂ
ಸಾ ತಸ್ಯ ಶೋಕೇನ ಜಗಾಮ ರಾತ್ರಿಃ || ೬೫ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಸಪ್ತತಿತಮಸ್ಸರ್ಗಃ.

ಮಹಾತ್ಮನಃ - ಮಹಾಮನಸ್ಸುಳ್ಳ ಭರತನ, ಮನಃ - ಮನವು, ಮೋಹಾಚ್ಚ - ಮೋಹದಿಂದಲೂ, ಶೋಕಸಂರೋಧಾತ್ - ದುಃಖದಿಂದಲೂ, ಲುಳಿತಂ - ಕ್ಷೀಣವಾದುದು, ಬಭೂವ - ಆಯಿತು. || ೬೪ || ಲಾಲಪ್ಯಮಾನಸ್ಯ - ವಿಲಾಪಮಾಡುತ್ತಿರುವ, ವಿಚೇತನಸ್ಯ - ಪ್ರಜ್ಞಾಶೂನ್ಯನಾದ, ಪ್ರಣಷ್ಟಬುದ್ಧೇಃ - ಕ್ಷೋಭೆಗೊಂಡ ಅಂತಃಕರಣವುಳ್ಳ, ಭೂಮೌ - ನೆಲದಲ್ಲಿ, ಪತಿತಸ್ಯ - ಬಿದ್ದಿರುವ, ಮುಹುರ್ಮುಹುಃ - ಬಾರಿಬಾರಿಗೂ, ಘರ್ಮಂ - ಉಷ್ಣವಾಗಿ, ನಿಶ್ವಸತಶ್ಚ - ನಿಟ್ಟುಸಿರುಬಿಡುತ್ತಿರುವ, ತಸ್ಯ - ಆ ಭರನಿಗೆ, ಶೋಕೇನ - ಶೋಕದಿಂದಲೇ, ಸಾರಾತ್ರಿಃ - ಆ ರಾತ್ರಿಯು, ಜಗಾಮ - ಕಳೆಯಿತು. || ೬೫ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಸಪ್ತತಿತಮಸ್ಸರ್ಗಃ.

ಯಿಲ್ಲದವನೂ, ನಶಿಸಿಹೋದತಿಳಿವಳಿಕೆಯುಳ್ಳವನೂ, ನೆಲದಮೇಲೆ ಬಿದ್ದಿರುವವನೂ, ಬಹಳವಾಗಿ ನಿಟ್ಟುಸಿರುಗಳನ್ನು ಬಿಡುತ್ತಿರುವವನೂ ಆದ ಭರತನಿಗೆ ಆ ರಾತ್ರಿಯೆಲ್ಲವು ದುಃಖದಲ್ಲಿಯೇ ಕಳೆದುಹೋಯಿತು. || ೬೧-೬೫ ||

ಇಂತಿದು ಭರತಕುಮಾರಕೃತ ಕೌಸಲ್ಯಾ ಸಮಾಶ್ವಾಸನ ವೃತ್ತಾಂತ ನಿರೂಪಣವೆಂಬ ಎಪ್ಪತ್ತೈದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಷಟ್ಸಪ್ತತಿತಮಸ್ಸರ್ಗಃ.

ತಮೇವಂ ಶೋಕಸಂತಪ್ತಂ ಭರತಂ ಕೈಕಯೀಸುತಂ ॥ ಉವಾಚ ವದತಾಂ ಶ್ರೇಷ್ಠೋ ವಸಿಷ್ಠಶ್ಶ್ರೇಷ್ಠವಾಗೃಷಿಃ ॥ ೧ ॥ ಅಲಂ ಶೋಕೇನ ಭದ್ರಂತೇ ರಾಜಪುತ್ರ! ಮಹಾಯಶಃ ॥ ಪ್ರಾಪ್ತಕಾಲಂ ನರಪತೇಃ ಕುರು ಸಂಯಾನ ಮುತ್ತಮಂ ॥ ೨ ॥ ವಸಿಷ್ಠಸ್ಯ ವಚಶ್ಶ್ರುತ್ವಾ ಭರತೋ ಧಾರಣಾಂ ಗತಃ ॥ ಪ್ರೇತಕಾರ್ಯಾಣಿ ಸರ್ವಾಣಿ ಕಾರಯಾಮಾಸ ಧರ್ಮವಿತ್ ॥ ೩ ॥ ಉದ್ಧೃತಂ ತೈಲಸಂರೋಧಾ ತ್ಸತು ಭೂಮೌ ನಿವೇಶಿತಂ ॥ ಆಪೀತವರ್ಣ

ಏವಂ-ಈಪರಿಯಾಗಿ, ಶೋಕಸಂತಪ್ತಂ ವ್ಯಸನದಿಂದ ಪರಿತಪಿಸುತ್ತಿರುವ, ಕೈಕಯೀಸುತಂ-ಕೈಕೇಯಿಯ ಮಗನಾದ, ತಂಭರತಂ-ಆ ಭರತನನ್ನು ಕುರಿತು, ಶ್ರೇಷ್ಠವಾಕ್ - (ಗೋ) ದುಃಖವನ್ನು ಹೋಗಲಾಡಿಸುವದರಲ್ಲಿ ಶ್ರೇಷ್ಠವಾದ ವಾಕ್ಕುಗಳುಳ್ಳ, ವದತಾಂ - ಮಾತನಾಡುವುದರಲ್ಲಿ ಮುಂದಾಳಾದ, ವಸಿಷ್ಠಃಋಷಿಃ - ವಸಿಷ್ಠಋಷಿಯು, ಉವಾಚ - ಹೇಳಿದನು. ॥ ೧ ॥ ಹೇ ರಾಜಪುತ್ರ - ಎಲೈ ರಾಜನಮಗನೆ, ಹೇ ಮಹಾಯಶಃ - ಎಲೈ ಒಳ್ಳೇಕೀರ್ತಿವಂತನೆ, ತೇ - ನಿನಗೆ, ಭದ್ರಂ - ಮಂಗಳವು, ಅಸ್ತು - ಆಗಲಿ, ಶೋಕೇನ - ವ್ಯಸನದಿಂದ, ಅಲಂ - ಸಾಕು, ನರಪತೇಃ - ಅರಸಾದ ದಶರಥರಾಯನಿಗೆ, ಪ್ರಾಪ್ತಕಾಲಂ - ಕಾಲತಃಪ್ರಾಪ್ತವಾದ, ಉತ್ತಮಂ - ಉತ್ಕೃಷ್ಟವಾದ, ಸಂಯಾನಂ - ಸ್ವರ್ಗಪ್ರಾಪಕ ಪಾರಲೌಕಿಕಕೃತ್ಯಗಳನ್ನು, ಕುರು - ಮಾಡು. ॥ ೨ ॥ ಧರ್ಮವಿತ್ - ಧರ್ಮಜ್ಞನಾದ, ಭರತಃ - ಭರತನು, ವಸಿಷ್ಠಸ್ಯ - ವಸಿಷ್ಠಋಷಿಯ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಧಾರಣಾಂ - ಚಿತ್ತಸ್ವಾಸ್ಥ್ಯವನ್ನು, ಗತಃ - ಹೊಂದಿ, ಸರ್ವಾಣಿ - ಸಮಸ್ತಗಳಾದ, ಪ್ರೇತಕರ್ಮಾಣಿ - ಪ್ರೇತಕರ್ಮಗಳನ್ನು, ಕಾರಯಾಮಾಸ - ಮಾಡಿಸಿದನು. ॥ ೩ ॥ ಸಃ - ಆ ಭರತನು, ತೈಲಸಂರೋಧಾತ್ - ತೈಲದ್ರೋಣಿಯಿಂದ, ಉದ್ಧೃತಂ - ಮೇಲಕ್ಕೆತ್ತಲ್ಪಟ್ಟ, ಭೂಮೌ - ನೆಲದಲ್ಲಿ, ನಿವೇಶಿತಂ - ಇರಿಸಲ್ಪಟ್ಟ, ಆಪೀತವರ್ಣವದನಂ - ಎಲ್ಲಾ ಕಡೆಗಳಲ್ಲಿಯೂ ಹಚ್ಚಗಿರುವ ಮುಖವುಳ್ಳ, ಪ್ರಸುಪ್ತಮಿವ - ನಿದ್ದೆಹೋಗುವವನಂತಿರುವ, ಭೂಪತಿಂ-ಭೂಪತಿಯಾದ,

---

ಮಾರನೆಯ ದಿನ ಪ್ರಾತಃಕಾಲವಾಗಲು ಪೂಜ್ಯನಾದ ವಸಿಷ್ಠ ಮುನೀಶ್ವರನು, ಈ ರೀತಿ ಶೋಕಾಕ್ರಾಂತನೂ ಕೈಕೇಯಿಯ ಕುಮಾರನೂ ಆದ ಭರತನನ್ನು ಕುರಿತು, "ಎಲೈ ಮಹಾ ಕೀರ್ತಿವಂತನಾದ ರಾಜಪುತ್ರನೆ! ನಿನಗೆ ಮಂಗಳವಾಗಲಿ! ಈ ದುಃಖವನ್ನು ತೊರೆದವನಾಗು. ಮಹಾರಾಜನಿಗೆ ಕಾಲತಃ ಒದಗಿಬಂದಿರುವದೂ, ಪರಲೋಕಗತಿ ಪ್ರಾಪಕವಾದುದೂ ಆದ ಉತ್ತರಕ್ರಿಯೆಗಳನ್ನು ಮಾಡುವವನಾಗು" ಎಂದನು. ಮಹಾತ್ಮನಾದ ವಸಿಷ್ಠಮುನಿಯೀರೀತಿ ಹೇಳಲು, ಆ ಭರತನು ಚಿತ್ತಸ್ಥೈರ್ಯವೊಂದಿ ಪ್ರೇತಕಾರ್ಯಗಳನ್ನೀರೀತಿ ಮಾಡಲಾರಂಭಿಸಿದನು. ಎಣ್ಣೆಯದೋಣಿಯಿಂದ ಹೊರತೆಗೆದು ಭೂಮಿಯಲ್ಲಿ

ನಿವ ಭೂಪತಿಂ ॥ ೪ ॥ ಸಂವೇಶ್ಯ ಶಯನೇ ಚಾಗ್ರ್ಯೇ ನಾನಾರತ್ನ ಪರಿಷ್ಕೃತೇ ॥ ತತೋ ದಶರಥಂ ಪುತ್ರೋ ವಿಲಲಾಪ ಸುದುಃಖಿತಃ ॥ ೫ ॥ ಕಿಂತೇ ವ್ಯವಸಿತಂ ರಾಜನ್! ಪ್ರೋಷಿತೇ ಮಯ್ಯನಾಗತೇ ॥ ವಿವಾಸ್ಯ ರಾಮಂ ಧರ್ಮಜ್ಞಂ ಲಕ್ಷ್ಮಣಂಚ ಮಹಾಬಲಂ ॥ ೬ ॥ ಕ್ವಯಾಸ್ಯಸಿ ಮಹಾರಾಜ! ಹಿತ್ವೇಮಂ ದುಃಖಿತಂ ಜನಂ? ॥ ಹೀನಂ ಪುರುಷಸಿಂಹೇನ ರಾಮೇಣಾಽಕ್ಲಿಷ್ಟಕರ್ಮಣಾ ॥ ೭ ॥ ಯೋಗಕ್ಷೇಮಂ ತು ತೇರಾಜನ್!

ದಶರಥಂ - ದಶರಥರಾಯನನ್ನು, ಅಗ್ರ್ಯೇ - ಶ್ರೇಷ್ಠವಾದ, ನಾನಾರತ್ನಪರಿಷ್ಕೃತೇ - ಅನೇಕ ಬಗೆಗಳಾದ ರತ್ನಗಳಿಂದಲಂಕರಿಸಲಾದ, ಶಯನೇ - ಹಾಸಿಗೆಯಲ್ಲಿ, ಸಂವೇಶ್ಯ - ಮಲಗಿಸಿ, ತತಃ ಬಳಿಕ, ಪುತ್ರಃ - ಮಗನಾದಕಾರಣ, ಸುದುಃಖಿತಃ - ಬಹಳ ದುಃಖಗೊಂಡವನಾಗಿ, ವಿಲಲಾಪ - ವಿಲಾಪವನ್ನು ಮಾಡಿದನು. ॥ ೫ ॥ ಹೇ ರಾಜನ್ - ಎಲೈ ರಾಜನೇ, ಪ್ರೋಷಿತೇ - ಹೊರಟುಹೋದ, ಮಯಿ - ನಾನು, ಅನಾಗತೇ - ಬಾರದೇ ಇರುವಾಗಲೇ, ಧರ್ಮಜ್ಞಂ - ಧರ್ಮಿಷ್ಠನಾದ, ರಾಮಂ - ಶ್ರೀರಾಮನನ್ನು, ಮಹಾಬಲಂ - ಮಹಾ ಬಲವಂತನಾದ, ಲಕ್ಷ್ಮಣಂಚ - ಲಕ್ಷ್ಮಣನನ್ನೂ, ವಿವಾಸ್ಯ- ಅರಣ್ಯಕ್ಕೆ ಹೊರಡಿಸಿ, ತೇ - ನಿನ್ನ, ಸ್ವರ್ಗಗಮನಾಯ - ಸ್ವರ್ಗಕ್ಕೆಹೋಗಲು, ಕಿಂವ್ಯವಸಿತಂ - ಏನು ಉದ್ಯೋಗಿಮಾಡಿದೆ. ॥ ೬ ॥ ಹೇ ಮಹಾರಾಜ - ಎಲೈ ಮಹಾರಾಜನೆ, ದುಃಖಿತಂ - ದುಃಖಗೊಂಡಿರುವ, ಪುರುಷಸಿಂಹೇನ - ಪುರುಷಶ್ರೇಷ್ಠನಾದ, ಅಕ್ಲಿಷ್ಟಕರ್ಮಣಾ - ಕ್ಲೇಶರಹಿತವಾದ ವ್ಯಾಪಾರವನ್ನು ಮಾಡುತ್ತಿರುವ, ರಾಮೇಣ - ಶ್ರೀರಾಮನಿಂದ, ಹೀನಂ - ವರ್ಜಿತವಾದ, ಇಮಂ ಜನಂ - ಈ ಜನವನ್ನು, ಹಿತ್ವಾ - ಬಿಟ್ಟು, ಕ್ವಯಾಸ್ಯಸಿ - ಎಲ್ಲಿಹೋದೆ. ॥ ೭ ॥ ಹೇ ರಾಜನ್ - ಎಲೈ ಅರಸೇ, ತ್ವಯಿ - ನೀನು, ಸ್ವಃ - ಸ್ವರ್ಲೋಕವನ್ನು ಕುರಿತು, ಪ್ರಯಾತೇ - ಹೊರಟುಹೋಗಲು, ಹೇ ತಾತ - ಎಲೈ ತಂದೆಯೇ, ರಾಮೇಚ - ಶ್ರೀರಾಮನೂ, ವನಂ - ಅರಣ್ಯವನ್ನು, ಆಶ್ರಿತೇ - ಹೊಂದಲು, ತೇ - ನಿನ್ನ, ಅಸ್ಮಿಂಪುರೇ - ಈ ಪಟ್ಟಣದಲ್ಲಿ, ಕಃ - ಯಾವ ಪುರುಷನು, ಯೋಗಕ್ಷೇಮಂ - ಪರಿಪಾಲನ ಕಾರ್ಯವನ್ನು, ಕಲ್ಪಯಿತ್ವಾ - ಮಾಡುತ್ತಾನೆ. ॥ ೮ ॥ ಹೇ

ಮಲಗಿರುವವನೂ, ಎಲ್ಲ ಕಡೆಯಲ್ಲಿಯೂ ಹಚ್ಚಗಿರುವ ಮುಖವುಳ್ಳವನೂ, ನಿದ್ರಿಸುತ್ತಿರುವನೋ ಎಂಬಂತಿರುವವನೂ, ಸಾಕೇತರಾಜ್ಯಾಧಿಪನೂ ಆದ ಆ ದಶರಥರಾಯನನ್ನು ಉತ್ತಮವಾದ ರನ್ನಗಂಬಳಿಗಳನ್ನು ಹಾಸಿರುವ ಹಾಸಿಗೆಯಲ್ಲಿ ಮಲಗಿಸಿ ಬಹು ದುಃಖಿತನಾದಾ ಭರತಕುಮಾರನು ಈರೀತಿ ಪ್ರಲಪಿಸಿದನು. ॥ ೧-೫ ॥ "ಎಲೈ ಮಹಾರಾಜನೆ! ಕೇಕಯದೇಶಗಳಿಗೆ ಹೊರಟುಹೋಗಿದ್ದ ನಾನಿತ್ತಬಾರದಿರಲು, ಧರ್ಮಾತ್ಮನಾದ ಶ್ರೀರಾಮನನ್ನೂ, ಮಹಾಭುಜ ಬಲಶಾಲಿಯಾದ ಲಕ್ಷ್ಮಣನನ್ನೂ ಸಹ ಅರಣ್ಯಕ್ಕೆ ಕಳುಹಿದೆಯಲ್ಲವೆ? ಹೀಗೆ ಕಳುಹಲು ನಿನ್ನ ಅಭಿಪ್ರಾಯವಾವದೊ? ಓ ದಶರಥರಾಜನೆ! ಸುಖಕರವಾದ ವ್ಯಾಪಾರಗಳನ್ನು ಮಾಡುವಾತನೂ, ಪುರುಷಸಿಂಹನೂ ಆದ ಶ್ರೀರಾಮನಿಂದ ವಿರಹಿತರಾದುದರಿಂದ ವ್ಯಸನಪಡುತ್ತಿರುವ ನಮ್ಮೆಲ್ಲರನ್ನೂ ತೊರೆದು ನೀನೆಲ್ಲಿಗೆ ಹೋಗುತ್ತಿಯೆ? ತಂದೆ; ದಶರಥರಾಜನೆ! ನೀನು ಮರಣವನ್ನುಹೊಂದಿದೆ; ಶ್ರೀರಾಮನು ಅರಣ್ಯಕ್ಕೆ ಹೋದನಲ್ಲ?

ಕೋಸ್ಮಿನ್ ಕಲ್ಪಯಿತಾ ಪುರೇ? ॥ ತ್ವಯಿ ಪ್ರಯಾತೇ ಸ್ವಸ್ಸಾತ ರಾಮೇಚ ವನ ಮಾಶ್ರಿತೇ ॥೮॥ ವಿಧವಾ ಪೃಥಿವೀ ರಾಜನ್! ತ್ವಯಾ ಹೀನಾ ನರಾಜತೇ॥ ಹೀನಚಂದ್ರೇವ ರಜನೀ ನಗರೀ ಪ್ರತಿಭಾತಿ ಮಾ ॥೯॥ ಏವಂ ವಿಲಪ ಮಾನಂ ತಂ ಭರತಂ ದೀನಮಾನಸಂ ॥ ಅಬ್ರವೀ ದ್ವಚನಂ ಭೂಯೋ ವಸಿ ಷ್ಠಸ್ತು ಮಹಾಮುನಿಃ ॥೧೦॥ ಪ್ರೇತಕಾರ್ಯಾಣಿ ಯಾನ್ಯಸ್ಯ ಕರ್ತವ್ಯಾನಿ ವಿಶಾಂಪತೇ! ॥ ತಾನ್ಯವ್ಯಗ್ರಂ ಮಹಾಬಾಹೋ ಕ್ರಿಯಂತಾ ಮವಿಚಾರಿತಂ ॥೧೧॥ ತಥೇತಿ ಭರತೋ ವಾಕ್ಯಂ ವಸಿಷ್ಠಸ್ಯಾಽಭಿಪೂಜ್ಯ ತತ್ ॥ ಋತ್ವಿ

ರಾಜನ್ - ಎಲೈ ಅರಸೇ, ತ್ವಯಾ - ನಿನ್ನಿಂದ, ಹೀನಾ - ರಹಿತವಾದ, ಪೃಥಿವೀ - ಭೂಮಿಯು, ವಿಧವೇವ - ಪತಿಹೀನಳಂತೆ, ನರಾಜತೇ - ಪ್ರಕಾಶಿಸುವದಿಲ್ಲ, ನಗರೀ - ಪಟ್ಟಣವು, ತ್ವಯಾ - ನಿನ್ನಿಂದ, ಹೀನಾ - ರಹಿತವಾಗಿ, ಹೀನಚಂದ್ರಾ - (ಮ + ತಿ) ನಷ್ಟವಾದ ಚಂದ್ರನುಳ್ಳ, ರಜನೀವ - ರಾತ್ರಿಯಂತೆ, ಮಾಪ್ರತಿಭಾತಿ - ಪ್ರಕಾಶಿಸುವದಿಲ್ಲ, (ಗೋ) ಮಾ - ನನ್ನನ್ನು ಕುರಿತು, ಪ್ರತಿ ಭಾತಿ - ನಷ್ಟಚಂದ್ರನುಳ್ಳ ರಾತ್ರಿಯಂತೆ ತೋರುತ್ತದೆ. ॥೯॥ ಮಹಾಮುನಿಃ - ಮಹರ್ಷಿಯಾದ, ವಸಿಷ್ಠಸ್ತು - ವಸಿಷ್ಠಋಷಿಯಾದರೆ, ಏವಂ - ಈಪರಿಯಾಗಿ, ವಿಲಪಮಾನಂ - ವಿಲಪಿಸುತ್ತಿರುವ, ದೀನಮಾನಸಂ - ತಗ್ಗಿಹೋದ ಮನಸ್ಸುಳ್ಳ, ತಂಭರತಂ - ಆ ಭರತನನ್ನು ಕುರಿತು, ಭೂಯಃ - ಮತ್ತು, ವಚನಂ - ಮಾತನ್ನು, ಅಬ್ರವೀತ್ - ನುಡಿದನು. ॥೧೦॥ ಹೇ ವಿಶಾಂಪತೇ - ಎಲೈ ಅರಸೇ, ಹೇ ಮಹಾಬಾಹೋ - ಎಲೈ ಮಹಾಭುಜಪರಾಕ್ರಮಶಾಲಿಯೇ, ಅಸ್ಯ - ಈ ರಾಜನಿಗೆ, ಯಾನಿ - ಯಾವ, ಪ್ರೇತಕಾರ್ಯಾಣಿ - ಪ್ರೇತೋದ್ದೇಶಕ ಕಾರ್ಯಗಳು, ಕರ್ತವ್ಯಾನಿ - ಮಾಡತಕ್ಕವುಗಳೋ, ತಾನಿ - ಆ ಕರ್ಮಗಳು, ಅವ್ಯಗ್ರಂ - ತ್ವರೆಯಿಲ್ಲದಂತೆ, ಕ್ರಿಯಂತಾಂ - ಮಾಡಲ್ಪಡಲಿ. ಭರತಃ - ಭರತನು, ತಥೇತಿ - ಹಾಗೆಯೇ ಆಗಲೆಂದು, ವಸಿಷ್ಠಸ್ಯ - ವಸಿಷ್ಠಋಷಿಯ, ತದ್ವಾಕ್ಯಂ - ಆ ಮಾತನ್ನು, ಅಭಿಪೂಜ್ಯ - ಶ್ಲಾಘಿಸಿ, ಋತ್ವಿಕ್ಪುರೋಹಿತಾಚಾರ್ಯಾನ್ - (೧) ಯಜ್ಞಕರ್ಮಪ್ರವ

ಇನ್ನು ಈ ರಾಜ್ಯಕ್ಕೆ ಹಾನಿತಟ್ಟದಂತೆ ಕಾಪಾಡುವವರಾದಿದ್ದಾರೆ? ತಂದೆಯೇ! ನೀನು ಮರಣವನ್ನು ಹೊಂದಿದುದರಿಂದ ನಿನ್ನ ರಾಜ್ಯವೆಲ್ಲವೂ ವಿಧವಾಂಗನೆಯಂತೆ ಪ್ರಕಾಶಿಸುತ್ತಿದೆ. ಅಲ್ಲದೆ ಈ ಪಟ್ಟಣವೆಲ್ಲವೂ ನೀನಿಲ್ಲದಿರುವುದರಿಂದ ಚಂದ್ರನಿಲ್ಲದ ರಾತ್ರಿಯಂತೆ ಪ್ರಕಾಶಿಸುತ್ತಿಲ್ಲ" ಈರೀತಿಯಾಗಿ ಪ್ರಲಪಿಸುತ್ತಿರುವವನೂ, ದೀನಮಾನಸನೂ ಆದ ಆ ಭರತನನ್ನು ನೋಡಿ, ಮುನಿಶ್ರೇಷ್ಠನಾದ ವಸಿಷ್ಠ ಮಹಾಮುನಿಯು ಹೀಗೆಂದನು. ॥೬-೧೦॥ "ಮಹಾ ಭುಜಬಲಪರಾಕ್ರಮಶಾಲಿಯಾದ ಎಲೈ ಭರತನೆ! ಈ ದಶರಥ ಮಹಾರಾಜನಿಗೆ ಮಾಡಬೇಕಾದ ಪ್ರೇತಕಾರ್ಯಗಳೆಲ್ಲವನ್ನೂ ಮೊದಲು ಏನೊಂದೂ ವಿಚಾರ

---

(೧) ರಾಜಪುರೋಹಿತ ಮತ್ತು ಕುಲಾಚಾರ್ಯನ ಲಕ್ಷಣಗಳು.

ಶ್ಲೋ॥ ತ್ರಯ್ಯಾಂಚ ಧರ್ಮಕೃತ್ಯೇಚ ಶಾಂತಿಕರ್ಮಣಿ ಪೌಷ್ಟಿಕೇ।
ಅಧ್ವರೇಯಶ್ಚ ಕುಶಲಸ್ಸಸ್ಯಾದ್ರಾಜ ಪುರೋಹಿತಃ।
ಉಪನೀಯ ವದೇದ್ವೇದಮಾಚಾರ್ಯಸ್ಸ ಉದಾಹೃತಃ॥

ಕ್ಪುರೋಹಿತಾಚಾರ್ಯಂ ಸ್ತ್ವರಯಾಮಾಸ ಸರ್ವಶಃ ||೧೨|| ಯೇತ್ವಗ್ನಯೋ ನರೇಂದ್ರಸ್ಯ ಚಾಗ್ನ್ಯಗಾರಾ ದ್ಬಹಿಷ್ಕೃತಾಃ || ಋತ್ವಿಗ್ಭಿ ರ್ಯಾಜಕೈಶ್ಚೈವ ತೇಹ್ರಿಯಂತ ಯಥಾವಿಧಿ || ೧೩ || ಶಿಬಿಕಾಯಾ ಮಥಾರೋಪ್ಯ ರಾಜಾನಂ ಗತಚೇತಸಂ || ಬಾಷ್ಪಕಂಠಾ ವಿಮನಸ ಸ್ತಮೂಹುಃ ಪರಿಚಾರಕಾಃ || ೧೪ || ಹಿರಣ್ಯಂಚ ಸುವರ್ಣಂಚ ವಾಸಾಂಸಿ ವಿವಿಧಾನಿಚ || ಪ್ರಕಿರಂತೋ ಜನಾ ಮಾರ್ಗಂ ನೃಪತೇ ರಗ್ರತೋ ಯಯುಃ ||೧೫|| ಚಂದನಾಗರು ನಿರ್ಯಾಸಾ

ರ್ತಕರಾದ ಋತ್ವಿಕ್ಕುಗಳನ್ನು ಶಾಂತಿಪೌಷ್ಟಿಕಾದಿ ಕರ್ಮಪ್ರವರ್ತಕರನ್ನು ಕುಲಾಚಾರ್ಯರಾದ ವಸಿಷ್ಠಾದಿಗಳನ್ನು, ಸರ್ವತಃ - ಎಲ್ಲ ರೀತಿಗಳಲ್ಲಿಯೂ, ತ್ವರಯಾಮಾಸ - ಜಾಗ್ರತೆಗೊಳಿಸಿದನು. || ೧೨ || ನರೇಂದ್ರಸ್ಯ - ರಾಜಶ್ರೇಷ್ಠನಾದ ದಶರಥರಾಯನ, ಅಗ್ನಯಃ - ಅಗ್ನಿಗಳು, ಯೇ - ಯಾವುವೋ, ತೇ - ಆಹವನೀಯ ಗಾರ್ಹಪತ್ಯ, ದಕ್ಷಿಣಾಗ್ನಿಗಳೆಂಬ ಮೂರು ಅಗ್ನಿಗಳೂ, ಯಾಜಕೈಶ್ಚೈವ-ಯಜ್ಞಮಾಡಿಸುವವರಿಂದಲೂ, ಋತ್ವಿಗ್ಭಿಃ - ಆರ್ತ್ವಿಜ್ಯಮಾಡುವವರಿಂದಲೂ, ಅಗ್ನ್ಯಗಾರಾತ್ - ಅಗ್ನಿಹೋತ್ರದ ಗೃಹದಿಂದ, ಬಹಿಷ್ಕೃತಾಃ - ಹೊರಗೆ ತರಿಸಲ್ಪಟ್ಟವಾಗಿ, ಯಥಾವಿಧಿ - ಯಥಾ ಶಾಸ್ತ್ರವಾಗಿ, ಅಹ್ರಿಯಂತ-ತೆಗೆದುಕೊಂಡು ಹೋಗಲಾದುವು. || ೧೩ || ಅಥ-ಬಳಿಕ, ಗತಚೇತಸಂ-ಕಳೆದು ಹೋದ ಪ್ರಾಣಗಳುಳ್ಳ, ರಾಜಾನಂ - ಅರಸನನ್ನು, ಶಿಬಿಕಾಯಾಂ - ಪಲ್ಲಕ್ಕಿಯಲ್ಲಿ, ಆರೋಪ್ಯ-ಹತ್ತಿಸಿ, ಪರಿಚಾರಕಾಃ-ಪರಿಚಾರಕರು, ಬಾಷ್ಪಕಂಠಾಃ-ಕಂಬನಿಗಳಿಂದ ವಿಸ್ವರವಾದಕಂಠವುಳ್ಳವರಾಗಿ,ವಿಮನಸಃ-ದೀನಮನಸ್ಕರಾಗಿ, ತಂ - ಆ ದಶರಥರಾಯನನ್ನು, ಊಹುಃ-ಹೊತ್ತುಕೊಂಡರು. || ೧೪ || ತಥಾ-ಹಾಗೆಯೇ, ಜನಾಃ - ಜನರು, ನೃಪತೇಃ - ಅರಸನ, ಅಗ್ರತಃ - ಮುಂಗಡೆ, ಮಾರ್ಗಂ - ಮಾರ್ಗದಲ್ಲಿ, ಹಿರಣ್ಯಂಚ - (೧) ಹಿರಣ್ಯವನ್ನು, ಸುವರ್ಣಂಚ - ಸುವರ್ಣನಾಣ್ಯವನ್ನು, ವಿವಿಧಾನಿ - ನಾನಾ ಬಗೆಗಳಾದ, ವಾಸಾಂಸಿ - ವಸ್ತ್ರಗಳನ್ನೂ, ಪ್ರಕಿರಂತಃ - ಎರಚುತ್ತ, ಯಯುಃ - ತೆರಳಿದರು, ತಥಾ - ಹಾಗೆಯೆ, ಅಪರೇ - ಮತ್ತೆ ಕೆಲವರು, ಚಂದನಾಗರುನಿರ್ಯಾಸಾ, ಚಂದನ - ಶ್ರೀಗಂಧ, ಅಗರು-

ವಿಲ್ಲಸಿ ಮಾಡುವವನಾಗು ” ಈ ರೀತಿ ನುಡಿದ ವಸಿಷ್ಠಋಷಿಯ ಮಾತುಗಳನ್ನು ಕೇಳಿದ ಆ ಭರತನು ಒಳ್ಳೆಯದೆಂದಾತನ ನುಡಿಯನ್ನು ಗೌರವಿಸಿ ಮಾಡಬೇಕಾದ ಕಾರ್ಯಗಳೆಲ್ಲವನ್ನೂ ಮಾಡಿಸುವಂತೆ ಋತ್ವಿಕ್ಪುರೋಹಿತರನ್ನೂ, ಆಚಾರ್ಯರನ್ನೂ ತ್ವರೆಗೊಳಿಸಿದನು. ಆಗಲಾ ಋತ್ವಿಜರೆಲ್ಲರೂ ದಶರಥರಾಜನ ಶ್ರೌತಾಗ್ನಿಗಳೆಲ್ಲವನ್ನೂ ಶಾಸ್ತ್ರೋಕ್ತರೀತಿಯಲ್ಲಿ ಅಗ್ನಿಹೋತ್ರ ಗೃಹದಿಂದ ಹೊರಕ್ಕೆ ತೆಗೆದುಕೊಂಡು ಬಂದರು. ಆ ಬಳಿಕ ಪರಿಚಾರಕರು ಮೃತನಾದ ದಶರಥಮಹಾರಾಜನ ಶರೀರವನ್ನು ಪಲ್ಲಕ್ಕಿಯಲ್ಲಿಟ್ಟು ಕಂಗಳಲ್ಲಿ ಕಂಬನಿಯು ಧಾರೆಧಾರೆಯಾಗಿ ಪ್ರವಹಿಸುತ್ತಿರಲು ರೋದಿಸುತ್ತ ಮಹಾ ದುಃಖದಿಂದ ಆ ರಾಜನ ಕಳೇಬರವಿದ್ದ ಆ ಪಲ್ಲಕ್ಕಿಯನ್ನು ಹೊತ್ತುಕೊಂಡು ಹೋದರು. || ೧೧-೧೪ || ಆಗ ಪಟ್ಟಣದಲ್ಲಿನ ಜನರೆಲ್ಲರೂ ಪಲ್ಲಕ್ಕಿಯ ಮೇಲೆ ಹೊತ್ತುಕೊಂಡು ಹೋಗುತ್ತಿದ್ದ ದಶರಥರಾಜನ ಕಳೇ

(೧) ಹಿರಣ್ಯವೆಂದರ ಬೆಳ್ಳಿನಾಣ್ಯ, ಸುವರ್ಣವೆಂದರೆ ಚಿನ್ನದನಾಣ್ಯ.

ಸರಳಂ ಪದ್ಮಕಂ ತಥಾ ॥ ದೇವದಾರೂಣಿ ಚಾಹೃತ್ಯ ಕ್ಷೇಪಯಂತಿ ತಥಾಪರೇ
॥ ೧೬ ॥ ಗಂಧಾನುಚ್ಚಾವಚಾಂ ಶ್ಚಾನ್ಯಾಂ ಸ್ತತ್ರಗತ್ವಾಥ ಭೂಮಿಪಂ ॥ ತತ
ಸ್ಸಂವೇಶಯಾಮಾಸು ಶ್ಚಿತಾಮಧ್ಯೇ ತಮೃತ್ವಿಜಃ ॥ ೧೭ ॥ ತಥಾ ಹುತಾಶನಂ
ದತ್ವಾ ಜೇಪು ಸ್ತಸ್ಯ ತಮೃತ್ವಿಜಃ ॥ ಜಗುಶ್ಚ ತೇ ಯಥಾ ಶಾಸ್ತ್ರಂ ತತ್ರ ಸಾಮಾನಿ
ಸಾಮಗಾಃ ॥ ೧೮ ॥ ಶಿಬಿಕಾಭಿಶ್ಚ ಯಾನೈಶ್ಚ ಯಥಾರ್ಹಂ ತಸ್ಯ ಯೋಷಿತಃ ॥
ನಗರಾ ನ್ನಿರ್ಯಯು ಸ್ತತ್ರ ವೃದ್ಧೈಃ ಪರಿವೃತಾ ಸ್ತದಾ ॥ ೧೯ ॥ ಪ್ರಸವ್ಯಂ

ಕೃಷ್ಣಾಗುರುವಿನ, ನಿರ್ಯಾಸಾನ್ - ಧೂಪದ್ರವ್ಯಗಳನ್ನು, ಸರಳಂ - ಧೂಪಪಾತ್ರೆಯನ್ನು, ಪದ್ಮಕಂ - ಸುವಾಸನೆಯುಳ್ಳ ಕಾಷ್ಠವಿಶೇಷಗಳನ್ನೂ, ತಥಾ - ಹಾಗೆಯೇ, ದೇವದಾರೂಣಿಚ - ದೇವದಾರು ಚಕ್ಕೆಗಳನ್ನೂ, ಆಹೃತ್ಯ - ತೆಗದುಕೊಂಡು, ಕ್ಷೇಪಯಂತಿ - ಚಿತಿಯಲ್ಲಿ ಎತ್ತಿಹಾಕುತ್ತ ಬಂದರು. ॥ ೧೬ ॥ ಅಥ - ಬಳಿಕ, ತತ್ರ - ಆ ಮಾರ್ಗದಲ್ಲಿ, ಉಚ್ಚಾವಚಾನ್ - ಅನೇಕ ಭೇದಗಳುಳ್ಳ, ಅನ್ಯಾನ್ - ಮತ್ತು ಕೆಲವಾದ, ಗಂಧಾನ್-ಸುಗಂಧದ್ರವ್ಯಗಳನ್ನು, ಪರಿಗೃಹ್ಯ - ತೆಗದುಕೊಂಡು, ಗತ್ವಾ-ಹೋಗಿ, ತತಃ - ಬಳಿಕ, ಋತ್ವಿಜಃ - ಋತ್ವಿಜರು, ತಂಭೂಮಿಪಂ - ಆ ದಶರಥರಾಯನನ್ನು, ಚಿತಾಮಧ್ಯೇ - ಚಿತಿಯ ಮಧ್ಯದಲ್ಲಿ, ಸಂವೇಶಯಾಮಾಸುಃ - ಮಲಗಿಸಿದರು. ॥ ೧೭ ॥ ತಥಾ - ಹಾಗೆಯೆ, ಋತ್ವಿಜಃ - ಆರ್ತ್ವಿಜ್ಯಮಾಡುವರು, ತಸ್ಯ - ಆ ದಶರಥರಾಯನಿಗೆ, ಹುತಾಶನಂ - ಅಗ್ನಿಯನ್ನು, ದತ್ವಾ - ಭರತನಿಂದ ಕೊಡಿಸಿ, ತಂ - ಆ ದಶರಥರಾಯನನ್ನು ಕುರಿತು, ಜೇಪುಃ - ಮಂತ್ರಜಪಗಳನ್ನು ಮಾಡುತ್ತಿದ್ದರು, ತತ್ರ - ಋತ್ವಿಕ್ಕುಗಳಲ್ಲಿ, ಯೇಸಾಮಗಾಃ - ಯಾರು ಸಾಮವೇದಜ್ಞರೋ, ತೇ - ಆ ಉದ್ಗಾತನೆ ಮೊದಲಾಗುಳ್ಳವರು, ಸಾಮಾನಿ - ಸಾಮಮಂತ್ರಗಳನ್ನು, ಯಥಾಶಾಸ್ತ್ರಂ - ಶಾಸ್ತ್ರಾನುಸಾರವಾಗಿ, ಜಗುಃ - ಗಾನಮಾಡಿದರು. ॥ ೧೮ ॥ ತಸ್ಯ - ಆ ದಶರಥರಾಯನ, ಯೋಷಿತಃ - ಸ್ತ್ರೀಯರು, ಯಥಾರ್ಹಂ - ಯಥಾಯೋಗ್ಯವಾಗಿ, ವೃದ್ಧೈಃ - ಮುದುಕರಿಂದ, ತದಾ - ಆಕಾಲದಲ್ಲಿ, ಪರಿವೃತಾಃ - ಸುತ್ತಿಕೊಳ್ಳಲ್ಪಟ್ಟವರಾಗಿ, ಶಿಬಿಕಾಭಿಃ - ಪಲ್ಲಕ್ಕಿಗಳಿಂದಲೂ, ಯಾನೈಶ್ಚ - ಇತರ ವಾಹನಗಳಿಂದಲೂ, ತತ್ರ - ಆ ಮಾರ್ಗದಲ್ಲಿ, ನಗರಾತ್ - ನಗರದಿಂದ, ನಿರ್ಯಯುಃ - ಹೊರಟರು. ॥ ೧೯ ॥ ಅಗ್ನಿಚಿತಂ - ಅಗ್ನಿಚಯನವನ್ನು ಮಾಡಿರುವ,

---

ಬರದ ಮೇಲೆ ಬೆಳ್ಳಿಯ ಮತ್ತು ಭಂಗಾರದ ಪಾತ್ರೆಗಳನ್ನಿರಚುತ್ತಿದ್ದರು; ಅನೇಕ ವಸ್ತ್ರಗಳನ್ನೂ ಹಾಕುತ್ತಿದ್ದರು. ಮತ್ತೆ ಕೆಲವರು ಅದೇ ರೀತಿಯಲ್ಲಿಯೆ ಚಂದನಾಗುರು, ಧೂಪಪಾತ್ರೆ, ಸುವಾಸನೆಯುಳ್ಳ ಕಾಷ್ಠವಿಶೇಷ, ದೇವದಾರು ಎಂಬಿವುಗಳಿಂದ ಚಿತಿಯನ್ನು ಮಾಡಿದರು. ಆ ಬಳಿಕಲಾ ಋತ್ವಿಜರು ಬಹು ಬಗೆಗಳಾದ ಗಂಧ ದ್ರವ್ಯಗಳನ್ನು ತೆಗೆದುಕೊಂಡುಹೋಗಿ ಮಹಾರಾಜನನ್ನು ಚಿತಿಯಮಧ್ಯದಲ್ಲಿ ಮಲಗಿಸಿ ಆ ಬಳಿಕ ಭರತನಿಂದ ಅಗ್ನಿಸಂಸ್ಕಾರಮಾಡಿಸಿದರು. ಆಗ ಸಾಮಕರು ಯಥಾಶಾಸ್ತ್ರವಾಗಿ ಸಾಮಗಾನವನ್ನು ಮಾಡಿದರು. ಆಗ ದಶರಥನ ಅಂತಃಪುರಸ್ತ್ರೀಯರು ಯಥಾಯೋಗ್ಯವಾಗಿ ವೃದ್ಧರಿಂದ ಪರಿವೃತರಾಗಿ ವಾಹನಗಳಲ್ಲಿ ಕುಳಿತು ಆ ಮಾರ್ಗದಲ್ಲಿ ಊರಿಂದ ಹೊರಹೊರಟು ಬಂದರು. ॥ ೧೪-೧೯ ॥ ಆಗ ಮಂತ್ರಿಗಳೂ, ಕೌಸಲ್ಯೆಯೇ ಮೊದಲಾದ ಪಟ್ಟಮಹಿಷಿಯರೂ ಆ

ಚಾಪಿ ತಂ ಚಕ್ರುಃ ಋತ್ವಿಜೋಗ್ನಿಚಿತಂ ನೃಪಂ ॥ ಸ್ತ್ರಿಯಶ್ಚ ಶೋಕಸಂತಪ್ತಾಃ ಕೌಸಲ್ಯಾಪ್ರಮುಖಾ ಸ್ತಥಾ ॥ ೨೦ ॥ ಕ್ರೌಂಚೀನಾಮಿವ ನಾರೀಣಾಂ ನಿನಾದ ಸ್ತತ್ರ ಶುಶ್ರುವೇ ॥ ಆರ್ತಾನಾಂ ಕರುಣಂ ಕಾಲೇ ಕ್ರೋಶಂತೀನಾಂ ಸಹಸ್ರಶಃ ॥ ೨೧ ॥ ತತೋ ರುದಂತ್ಯೋ ವಿವಶಾ ವಿಲಪ್ಯ ಚ ಪುನಃ ಪುನಃ ॥ ಯಾನೇಭ್ಯ ಸ್ಸರಯೂತೀರ ಮವತೇರು ರ್ವರಾಂಗನಾಃ ॥ ೨೨ ॥

(೧) ಕೃತ್ವೋದಕಂ ತೇ ಭರತೇನ ಸಾರ್ಧಂ
ನೃಪಾಂಗನಾ ಮಂತ್ರಿಪುರೋಹಿತಾಶ್ಚ ॥

ತಂನೃಪಂ - ಆ ಅರಸನನ್ನು, ಋತ್ವಿಜಃ - ಋತ್ವಿಕ್ಕುಗಳೂ, ಕೌಸಲ್ಯಾಪ್ರಮುಖಾಃ - ಕೌಸಲ್ಯಾದೇವಿಯೇ ಮೊದಲಾಗುಳ್ಳ, ಸ್ತ್ರಿಯಶ್ಚ - ಸ್ತ್ರೀಯರು, ಶೋಕಸಂತಪ್ತಾಃ - ವ್ಯಸನದಿಂದ ಪರಿತಪ್ತರಾಗಿ, ಪ್ರಸವ್ಯಂಚಾಪಿ - ಸವ್ಯಾಪಸವ್ಯಪ್ರದಕ್ಷಿಣೆಯನ್ನು, ಚಕ್ರುಃ - ಮಾಡಿದರು. ॥ ೨೦ ॥ ತತ್ರ - ಆ ಸ್ಥಳದಲ್ಲಿ, ಕ್ರೌಂಚೀನಾಮಿವ - ಸ್ತ್ರೀಕ್ರೌಂಚಪಕ್ಷಿಗಳೋಪಾದಿಯಲ್ಲಿ, ಆರ್ತಾನಾಂ - ದೀನರಾಗಿ, ಕ್ರೋಶಂತೀನಾಂ - ಅಳುತ್ತಿರುವ, ಸಹಸ್ರಶಃ - ಸಹಸ್ರಾರು ಸಂಖ್ಯೆಯಷ್ಟು, ನಾರೀಣಾಂ - ಸ್ತ್ರೀಯರ, ನಿನಾದಃ - ಧ್ವನಿಯು, ಕಾಲೇ - ಆಕಾಲದಲ್ಲಿ, ಕರುಣಂ - ದೀನವಾಗಿ, ಶುಶ್ರುವೇ - ಕೇಳಲಾಯಿತು. ॥ ೨೧ ॥ ತತಃ - ಬಳಿಕ, ವರಾಂಗನಾಃ - ಶ್ರೇಷ್ಠಸ್ತ್ರೀಯರು, ವಿವಶಾಃ-ಶೋಕಪರಾಧೀನರಾಗಿ, ರುದಂತ್ಯಃ - ರೋದನಮಾಡುತ್ತ, ಪುನಃಪುನಃ - ಬಾರಿಬಾರಿಗೂ, ವಿಲಪ್ಯ-ಪ್ರಲಾಪಮಾಡಿ, ಯಾನೇಭ್ಯಃ - ವಾಹನಗಳಿಂದ, ಸರಯೂತೀರಂ - ಸರಯೂನದಿಯ ದಡವಲ್ಲಿ, ಅವತೇರುಃ-ಇಳಿದರು. ॥ ೨೨ ॥ ತೇಮಂತ್ರಿಪುರೋಹಿತಾಶ್ಚ - ಆ ಮಂತ್ರಿಗಳೂ ಪುರೋಹಿತರೂ, ನೃಪಾಂಗನಾಃ - ರಾಜಸ್ತ್ರೀಯರೂ, ಭರತೇನಸಾರ್ಧಂ - ಭರತನೊಡನೆ, ಉದಕಂ - ತಿಲೋದಕಗಳನ್ನು, ಕೃತ್ವಾ - ಮಾಡಿ, ಅಶ್ರುಪರೀತನೇತ್ರಾಃ - ಕಂಬನಿಯಿಂದ ತುಂಬಿದ ನೇತ್ರಗಳುಳ್ಳವರಾಗಿ, ಪುರಂ - ಅಯೋಧ್ಯಾ

ರಾಯನಿಗೆ ಅಗ್ನಿಚಯನವನ್ನು ಮಾಡಿ ಶೋಕಾಕ್ರಾಂತರಾಗಿ ಸವ್ಯಾಪಸವ್ಯವಾಗಿ ಪ್ರದಕ್ಷಿಣೆಗಳನ್ನು ಮಾಡಿದರು. ॥ ೨೦ ॥ ಆ ಸ್ಥಳದಲ್ಲಿ ದುಃಖಗೊಂಡ ಅಸಂಖ್ಯಾತ ಸ್ತ್ರೀಯರ ರೋದನ ಧ್ವನಿಯು ಕ್ರೌಂಚಪಕ್ಷಿಗಳ ಧ್ವನಿಯಂತೆ ದೀನವಾಗಿ ಕೇಳಿಸುತ್ತಿದ್ದಿತು. ಆ ಬಳಿಕ ರಾಣೀವಾಸದ ಹೆಂಗಸರು, ಶೋಕಾಕ್ರಾಂತರಾಗಿ ಅಡಿಗಡಿಗೂ ಪ್ರಲಾಪಿಸಿ ಸರಯೂನದೀತೀರದಲ್ಲಿ ವಾಹನಗಳಿಂದಿಳಿದು ಭರತನೊಡನೆಯೂ, ಮಂತ್ರಿಗಳೊಡನೆಯೂ ತಿಲೋ

---

(೧) ಟಿ. ಈ ಶ್ಲೋಕದಲ್ಲಿ ಹೆಂಗಸಿರಿಗೆ ಪ್ರೇತಪ್ರದಕ್ಷಿಣೆವೂ ಉದಕದಾನವೂ ಸೂತ್ರಾಂತರೋಕ್ತಿ ಪ್ರಾಮಾಣ್ಯದಿಂದಲೆಂದು ತಿಳಿದುಕೊಳ್ಳಬೇಕು. ಇದಕ್ಕೋಸ್ಕರವಾಗಿಯೇ ಬೋಧಾಯನರು " ಪ್ರದಕ್ಷಿಣಮುಪಿ ಬಾಂದವಾಃ ಕುರ್ವಂತ್ಯೇವಂ ಮಾರ್ಗೇಪಿ ಚಿತಾಮಾರೋಪ್ಯ ಚಿತಾಯಾಮುೇವೇತ್ಯೇಕೇ " ಎಂದು ಹೇಳಿದ್ದಾರೆ.

ಪುರಂ ಪ್ರವಿಶ್ಯಾಶ್ರು ಪರೀತನೇತ್ರಾ
ಭೂಮೌ ದಶಾಹಂ ವ್ಯನಯಂತ ದುಃಖಿತಂ ॥ ೨೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಟ್ಸಪ್ತತಿತಮಸ್ಸರ್ಗಃ.

ಪಟ್ಟಣವನ್ನು, ಪ್ರವಿಶ್ಯ - ಹೊಕ್ಕು, ಭೂಮೌ - (೧) ನೆಲದಲ್ಲಿ, ಶಯಾನಃ - ಮಲಗಿದವರಾಗಿ, ದುಃಖಿತಂ-ದುಃಖವಾಗಿ, ದಶಾಹಂ - (೨) ಹತ್ತು ದಿವಸಗಳನ್ನು, ನಿನಯಂತ - ಕಳೆದರು ॥ ೨೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಟ್ಸಪ್ತತಿತಮಸ್ಸರ್ಗಃ.

ದಕಪಿತ್ತು ಕಂಬನಿಗಳಿಂದ ವ್ಯಾಪ್ತವಾದ ಕಂಗಳುಳ್ಳವರಾಗಿ ಪುನಃ ಊರಿಗೆ ಬಂದು ದುಃಖಿತರಾಗಿ ದಶಾಹವನ್ನು ಕಳೆದವರಾದರು. ॥ ೨೧-೨೨ ॥

ಇಂತಿದು ಭರತಕುಮಾರ ಕೃತ ಸ್ವಪಿತೃಕಳೇವರ ದಹನ
ಕಥನವೆಂಬ ಎಪ್ಪತ್ತಾರನೆಯ ಸರ್ಗವು ಸಮಾಪ್ತವಾದುದು.

---

(೧) ಟಿ. "ಕಿಯಲ್ಲಬ್ಧಾಶನಾಭೂಮೌ ಸ್ವಪೇಯುಸ್ತೇ ಪೃಥಕ್ಪೃಥಕ್" ಎಂಬ ವಚನ ಪ್ರಮಾಣ್ಯದಿಂದ ಶೌಚಿಗಳಿಗೆ ಭೂಮಿಯಲ್ಲಿ ಪೃಥಕ್ಶಯನವು ವಿಹಿತವಾಗಿಯೇ ಇರುವುದು. ಆದುದರಿಂದ "ರಾಜಾಂತಃಪುರ ಸ್ತ್ರೀಯರಿಗೂ ರಾಜಪುತ್ರರಾದ ಭರತ ಶತ್ರುಘ್ನರಿಬ್ಬರಿಗೂ ಭೂಶಯನವೆಲ್ಲಿಯಾದರೂ ಉಂಟೆ ?" ಎಂಬ ಸಂಶಯವು ದೂರವಾಗುತ್ತದೆ.

(೨) ಟಿ. "ಷೋಡಶಾಹೇನ ಭೂಪಾಲಾಃ ಎಂದಿರುವುದರಿಂದ ಇಲ್ಲಿ ಹೇಳಿರುವಂತೆ ಹತ್ತು ದಿನಗಳೆಂಬುದು ಹೇಗೆ" ಎಂಬ ಶಂಕೆಯು ತಲೆದೋರಿದರೆ "ಕ್ಷತ್ರಿಯಸ್ತು ದಶಾಹೇನ ಸ್ವಕರ್ಮನಿರತಶ್ಶುಚಿಃ" ಇತ್ಯಾದಿ ವಿಶೇಷ ಶಾಸ್ತ್ರಾನುಸಾರದಿಂದ ಹೇಳಲಾಯಿತೆಂದು ಸಮಾಧಾನ ಹೇಳಲಾಗಿದೆ.

ಅಯೋಧ್ಯಾಕಾಂಡೇ ಸಪ್ತಸಪ್ತತಿತಮಸ್ಸರ್ಗಃ.

ತತೋ ದಶಾಹೇಽತಿಗತೇ ಕೃತಶೌಚೋ ನೃಪಾತ್ಮಜಃ ॥ ದ್ವಾದಶೇಹನಿ ಸಂಪ್ರಾಪ್ತೇ ಶ್ರಾದ್ಧ ಕರ್ಮಾಣ್ಯ ಕಾರಯತ್ ॥ ೧ ॥ ಬ್ರಾಹ್ಮಣೇಭ್ಯೋ ದದೌ ರತ್ನಂ ಧನಮನ್ನಂ ಚ ಪುಷ್ಕಲಂ ॥ ವಾಸಾಂಸಿ ಚ ಮಹಾರ್ಹಾಣಿ ರತ್ನಾನಿ ವಿವಿಧಾನಿಚ ॥ ೨ ॥ ಬಾಸ್ತಿಕಂ ಬಹುಶುಕ್ಲಂಚ ಗಾಶ್ಚಾಪಿ ಶತಶ ಸ್ತದಾ ॥ ದಾಸೀದಾಸಂಚ ಯಾನಂಚ ವೇಶ್ಮಾನಿ ಸುಮಹಾಂತಿಚ ॥೩॥ ಬ್ರಾಹ್ಮಣೇಭ್ಯೋ ದದೌ ಪುತ್ರೋ ರಾಜ್ಞಸ್ತಸ್ಯೌ ರ್ಧ್ವದೈಹಿಕಂ ॥ ತತಃ ಪ್ರಭಾತಸಮಯೇ ದಿವಸೇಥ

ತತಃ - ಬಳಿಕ, ದಶಾಹೇ - ಹತ್ತುದಿವಸಗಳು, ಅತಿಗತೇ - ಕಳೆದುಹೋಗಲು, ಕೃತಶೌಚಃ- (ಗೋ + ತಿ) ಮಾಡಲ್ಪಟ್ಟ ಪುಣ್ಯಾಹವಾಚನಾದಿ ಶುಚಿತ್ವಾಪಾದಕ ಕರ್ಮಗಳುಳ್ಳವನಾದ, ನೃಪಾತ್ಮಜಃ- ರಾಜಕುವರನಾದ ಭರತನು, ಸಂಪ್ರಾಪ್ತೇ - ಕ್ರಮಪ್ರಾಪ್ತವಾದ, ದ್ವಾದಶೇಹನಿ - ಹನ್ನೆರಡನೇ ದಿವಸದಲ್ಲಿ, ಶ್ರಾದ್ಧಕರ್ಮಾಣಿ - ಶ್ರಾದ್ಧಕರ್ಮಗಳನ್ನು, ಅಕರೋತ್ - ಮಾಡಿದನು. ॥ ೧ ॥ ಬ್ರಾಹ್ಮಣೇಭ್ಯಃ - ಬ್ರಾಹ್ಮಣರಿಗೆ, ರತ್ನಂ - ರತ್ನಗಳನ್ನು, ಧನಂ - ಧನವನ್ನು, ಪುಷ್ಕಲಂ - ಸಮಗ್ರವಾದ, ಅನ್ನಂಚ - ಅನ್ನವನ್ನು, ಮಹಾರ್ಹಾಣಿ - ಶ್ರೇಷ್ಠಗಳಾದ, ವಾಸಾಂಸಿಚ - ವಸ್ತ್ರಗಳೂ, ವಿವಿಧಾನಿ - ನಾನಾಬಗೆಗಳಾದ, ರತ್ನಾನಿ - ಶ್ರೇಷ್ಠವಸ್ತುಗಳನ್ನೂ, ಬಹು - ಬಹಳವಾದ, ಶುಕ್ಲಂ - ಬೆಳ್ಳಗಿರುವ, ಬಾಸ್ತಿಕಂಚ - ಛಾಗಸಮುದಾಯವನ್ನು, ತದಾ - ಆ ಕಾಲದಲ್ಲಿ, ಶತಶಃ - ಅನೇಕಗಳಾದ, ಗಾಶ್ಚಾಪಿ - ಗೋವುಗಳನ್ನೂ, ದಾಸೀದಾಸಂಚ - ಚಾಕರಿಮಾಡತಕ್ಕ ಹೆಂಗಸರನ್ನೂ, ದಾಸಂಚ - ಗಂಡಸರನ್ನೂ, ಸುಮಹಾಂತಿ - ಬಹಳ ದೊಡ್ಡವುಗಳಾದ, ವೇಶ್ಮಾನಿಚ - ಮನೆಗಳನ್ನೂ, ದದೌ - ಕೊಟ್ಟನು. ॥ ೨ ॥ ರಾಜ್ಞಃಪುತ್ರಃ - ರಾಜಪುತ್ರನಾದ ಭರತನು, ಬ್ರಾಹ್ಮಣೇಭ್ಯಃ - ಬ್ರಾಹ್ಮಣರಿಗೆ, ತಸ್ಯ - ಆ ದಶರಥರಾಯನಿಗೆ, ಔರ್ಧ್ವದೈಹಿಕಂ - (ಗೋ) ಊರ್ಧ್ವದೇಹೋತ್ಪಾದಕವಾದ ಕರ್ಮಾಂಗದ ದ್ರವ್ಯಗಳನ್ನು, ದದೌ - ಕೊಟ್ಟನು. ॥ ೩ ॥ ತತಃ - ಬಳಿಕ, ತ್ರಯೋದಶೇ ದಿವಸೇ - ಹದಿಮೂರನೆಯ ದಿವಸದಲ್ಲಿ, ಪ್ರಭಾತಸಮಯೇ - ಪ್ರಾತಃಕಾಲದಲ್ಲಿ, ಅಥ - ಬಳಿಕ,

---

ಈ ರೀತಿ ದಶಾಹವು ಕಳೆದ ಮೇಲೆ ಹನ್ನೆರಡನೆಯ ದಿವಸದಲ್ಲಿ ಆ ಭರತನು ಪಾರಿಶುದ್ಧ್ಯವನ್ನುಂಟುಮಾಡುವ ಪುಣ್ಯಾಹವಾಚನವನ್ನು ಪ್ರಥಮತಃ ಮಾಡಿಸಿ, ಶ್ರಾದ್ಧಕರ್ಮಗಳನ್ನು ಮಾಡಿಸಿದವನಾಗಿ ಬ್ರಾಹ್ಮಣರಿಗೆ, ರತ್ನ, ಧನ, ಅನ್ನ, ವಸ್ತ್ರಗಳೇ ಮೊದಲಾದುವುಗಳನ್ನೂ ಬೆಳ್ಳಗಿರುವ ಮೇಕೆಗಳ ತಂಡಗಳನ್ನೂ, ಅನೇಕ ಗೋವುಗಳನ್ನೂ, ಸೇವೆ ಮಾಡುವ ಸ್ತ್ರೀಪುರುಷರನ್ನೂ ಔರ್ಧ್ವದೈಹಿಕ ಕರ್ಮಾಂಗವಾದ ದ್ರವ್ಯವನ್ನೂ ಕೊಟ್ಟವನಾದನು. ॥ ೧-೩ ॥ ಆ ಬಳಿಕ ಹದಿಮೂರನೆಯ ದಿನದ ಪ್ರಾತಃಕಾಲದಲ್ಲಿ ಮಹಾಭುಜಬಲಪರಾಕ್ರಮಶಾಲಿಯಾದಾಭರತನು ದಹನಪ್ರದೇಶವನ್ನು ಶೋಧಿಸುವವನಾಗಿ (ಅಸ್ಥಿ

ತ್ರಯೋದಶೇ ||೪|| ವಿಲಲಾಪ ಮಹಾಬಾಹು ರ್ಭರತ ಶ್ಶೋಕಮೂರ್ಛಿತಃ || ಶಬ್ದಾಪಿಹಿತಕಂಠಸ್ತು ಶೋಧನಾರ್ಥ ಮುಪಾಗತಃ ||೫|| ಚಿತಾಮೂಲೇ ಪಿತುರ್ವಾಕ್ಯ ಮಿದಮಾಹ ಸುದುಃಖಿತಃ || ತಾತ! ಯಸ್ಮಿನ್ನಿಸೃಷ್ಟೋಽಹಂ ತ್ವಯಾ ಭ್ರಾತರಿ ರಾಘವೇ ||೬|| ತಸ್ಮಿನ್ ವನಂ ಪ್ರವ್ರಜಿತೇ ಶೂನ್ಯೇ ತ್ಯಕ್ತೋಽಸ್ಮ್ಯಹಂ ತ್ವಯಾ || ಯಸ್ಯಾ ಗತಿರನಾಥಾಯಾಃ ಪುತ್ರಃ ಪ್ರವ್ರಾಜಿತೋ ವನಂ ||೭|| ತಾಮಂಬಾಂ ತಾತ! ಕೌಸಲ್ಯಾಂ ತ್ಯಕ್ತ್ವಾ ತ್ವಂ ಕ್ವಗತೋ ನೃಪ? || ದೃಷ್ಟ್ವಾ ಭಸ್ಮಾರುಣಂ ತಚ್ಚ ದಗ್ಧಾಸ್ಥಿ ಸ್ಥಾನ

ಮಹಾಬಾಹುಃ - ಮಹಾ ಪರಾಕ್ರಮಶಾಲಿಯಾದ, ಭರತಃ - ಭರತನು, ಶೋಕಮೂರ್ಛಿತಃ - ವ್ಯಸನದಿಂದ ಮೂರ್ಛಾಕ್ರಾಂತನಾಗಿ, ಶಬ್ದಾಪಿಹಿತಕಂಠಸ್ತು, ಶಬ್ದ - ರೋದನಧ್ವನಿಯಿಂದ, ಪಿಹಿತ - ಆಚ್ಛಾದಿತವಾದ, ಕಂಠಸ್ತು - ಕಂಠವುಳ್ಳವನಾಗಿ, ಶೋಧನಾರ್ಥಂ-ಸ್ಥಳಶುದ್ಧಿಗೋಸ್ಕರ, ಉಪಾಗತಃ-ಬಂದವನಾಗಿ, ವಿಲಲಾಪ - ಅಳುತ್ತಿದ್ದನು, ಸುದುಃಖಿತಃ - ಬಹಳ ದುಃಖಿತನಾಗಿ, ಪಿತುಃ - ತಂದೆಯ, ಚಿತಾಮೂಲೇ - ಚಿತಿಯ ಬುಡದಲ್ಲಿ, ಇದಂವಾಕ್ಯಂ - ಈ ವಕ್ಷ್ಯಮಾಣ ವಚನವನ್ನು, ಆಹ - ಹೇಳಿದನು. ||೫|| ಹೇ ತಾತ - ಎಲೈ ತಂದೆಯೇ, ತ್ವಯಾ - ನಿನ್ನಿಂದ, ಯಸ್ಮಿನ್ - ಯಾವ ದಿವಸದಲ್ಲಿ, ಅಹಂ - ನಾನು, ನಿಸೃಷ್ಟಃ - ಕಳುಹಲಾದೆನೋ, ಭ್ರಾತರಿ - ಅಣ್ಣನಾದ, ರಾಘವೇ - ಶ್ರೀರಾಮನು, ತಸ್ಮಿನ್ - ಅದೇ ದಿವಸದಲ್ಲಿಯೇ, ವನಂ-ಅರಣ್ಯವನ್ನು ಕುರಿತು, ಪ್ರವ್ರಜಿತೇ-ಕಳುಹಲು, ಶೂನ್ಯೇ - ನಿರ್ಜನಸ್ಥಳದಲ್ಲಿ, ಅಹಂ - ನಾನು, ತ್ವಯಾ - ನಿನ್ನಿಂದ, ತ್ಯಕ್ತಃ - ಬಿಡಲ್ಪಟ್ಟವನು, ಅಸ್ಮಿ - ಆದೆನು. ||೬|| ಹೇ ತಾತ - ಎಲೈ ತಂದೆಯೇ, ಅನಾಥಾಯಾಃ - ಭರ್ತೃಹೀನಳಾದ, ಯಸ್ಯಾಃ - ಯಾವ ಕೌಸಲ್ಯಾದೇವಿಗೆ, ಗತಿಃ - ರಕ್ಷಕನಾದ, ಪುತ್ರಃ - ಮಗನು, ವನಂ - ಅರಣ್ಯವನ್ನು ಕುರಿತು, ಪ್ರವ್ರಾಜಿತಃ - ಹೊರಡಿಸಲ್ಪಟ್ಟನೋ, ತಾಂಅಂಬಾಂ - ಅಂತಹ ತಾಯಿಯಾದ, ಕೌಸಲ್ಯಾಂ - ಕೌಸಲ್ಯಾದೇವಿಯನ್ನು, ತ್ಯಕ್ತ್ವಾ - ಬಿಟ್ಟು, ಹೇ ನೃಪ - ಎಲೈ ಅರಸನೇ, ತ್ವಂ - ನೀನು, ಕ್ವಗತಃ - ಎಲ್ಲಿಗೆಹೋದೆ. ||೭|| ಸಃ - ಆ ಭರತನು, ಪಿತುಃ- ತಂದೆಯ, ಶರೀರನಿರ್ವಾಣಂ - ಶರೀರವನ್ನು ನಾಶಗೊಳಿಸಿದ, ಭಸ್ಮಾರುಣಂ, ಭಸ್ಮ - ಬೂದಿಯಿಂದ, ಅರುಣಂ - ಕೆಂಪಾಗಿರುವ, ದಗ್ಧಾಸ್ಥಿ - ದಹಿಸಲ್ಪಟ್ಟ ಎಲವುಗಳುಳ್ಳ, ಸ್ಥಾನಮಂಡಲಂ - ದಹನ

ಸಂಚಯನಕ್ಕೋಸ್ಕರ) ಚಿತಿಯಮೂಲಕ್ಕೆ ಬಂದು ಹೀಗೆ ಹೇಳಿದನು. "ಓ ತಂದೆಯೆ! ನನ್ನನ್ನು ಯಾರಿಗೊಪ್ಪಿಸಿದೆ? ಮೊದಲೇ ನೀನು ನಮ್ಮಣ್ಣನಾದ ರಘುರಾಮನನ್ನು ಅರಣ್ಯಕ್ಕೆ ಕಳುಹಿದೆಯಲ್ಲವೆ? ಇನ್ನು ನಾನು ಯಾರಪಾಲಾಗಲಿ! ತಂದೆಯೆ; ಮಹಾರಾಜನೆ! ಅನಾಥಳಾದ ಕೌಸಲ್ಯಾದೇವಿಯ ಕುಮಾರನಾದ ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿದೆ; ಇಂತಹ ನನ್ನ ಜನನಿಯಾದ ಕೌಸಲ್ಯೆಯನ್ನು ತೊರೆದು ನೀನೆಲ್ಲಿಗೆ ಹೋದೆ! ಹಾ ಜನಕನೆ! ಈ ದುಃಖವನ್ನು ನಾನೆಂತು ಸಹಿಸಲಿ" ಎಂಬೀ ಪ್ರಕಾರವಾಗಿ ಬಿಸುಸುಯ್ದು ಆ ಭರತಕುಮಾರನು ಬೂದಿಯಾಗಿ ಕೆಂಪಗಾಗಿರುವುದೂ, ದಹಿಸಿಹೋದ ಅಸ್ಥಿಗಳುಳ್ಳುದೂ, ತಂದೆಯ ಶರೀರವನ್ನು ನಶಿಸಿಹೋಗುವಂತೆ ಮಾಡಿದುದೂ ಆದ ಆ ಚಿತಿಯನ್ನು ನೋಡಿದ ಕೂಡಲೇ

ಮಂಡಲಂ ॥ ೮ ॥ ಪಿತುಶ್ಶರೀರ ನಿರ್ವಾಣಂ ನಿಷ್ಟನರ್ ವಿಷಸಾದ ಸಃ ॥ ಸತು ದೃಷ್ಟ್ವಾ ರುರ್ದ ದೀನಃ ಪಪಾತ ಧರಣೀ ತಲೇ ॥ ೯ ॥ ಉತ್ಥಾಪ್ಯ ಮಾನ ಶ್ಶಕ್ರಸ್ಯ ಯಂತ್ರಧ್ವಜ ಇವ ಚ್ಯುತಃ ॥ ಅಭಿಪೇತು ಸ್ತತಸ್ಸರ್ವೇ ತಸ್ಯಾಮಾತ್ಯಾ ಶ್ಶುಚಿವ್ರತಂ ॥೧೦॥ ಅಂತಕಾಲೇ ನಿಪತಿತಂ ಯಯಾತಿ ಮೃಷಯೋ ಯಥಾ ॥ ಶತ್ರುಘ್ನಶ್ಚಾಪಿ ಭರತಂ ದೃಷ್ಟ್ವಾ ಶೋಕ ಪರಿಪ್ಲುತಂ ॥ ೧೧ ॥ ವಿಸಂಜ್ಞೋ ನ್ಯಪತದ್ಭೂಮೌ ಭೂಮಿಪಾಲ ಮನುಸ್ಮರ್ರ ॥ ಉನ್ಮತ್ತ ಇವ ನಿಶ್ಚೇತಾ ವಿಲಲಾಪ ಸುದುಃಖಿತಃ ॥ ೧೨ ॥ ಸ್ಮೃತ್ವಾಪಿತು ರ್ಗುಣಾಂಗಾನಿ ತಾನಿ ತಾನಿ ತದಾ ತದಾ ॥

ಸ್ಥಾನ ಪ್ರದೇಶವನ್ನು, ದೃಷ್ಟ್ವಾ - ಕಂಡು, ನಿಷ್ಟನರ್ - ಘಟ್ಟಿಯಾಗಿ ವಿಲಾಪಮಾಡುತ್ತಿರುವನಾಗಿ, ವಿಷಸಾದ - ವ್ಯಸನಗೊಂಡನು. ॥ ೮ ॥ ಸತು - ಆ ಭರತನಾದರೆ, ದೀನಃ - ದೀನನಾಗಿ, ರುರ್ದ - ಅಳುತ್ತ, ದೃಷ್ಟ್ವಾ - ಚಿತಿಮೂಲವನ್ನು ಕಂಡು, ಉತ್ಥಾಪ್ಯಮಾನಃ - ಎಬ್ಬಿಸಲ್ಪಟ್ಟವನಾದರೂ, ಚ್ಯುತಃ - ಜಾರಿಬಿದ್ದ, ಯಂತ್ರಧ್ವಜಇವ - ಹಗ್ಗದಿಂದ ಕಟ್ಟಿದ ಧ್ವಜದಂತೆ. ಧರಣೀತಲೇ - ಭೂಪ್ರದೇಶದಲ್ಲಿ, ಪಪಾತ - ಬಿದ್ದನು. ॥ ೯ ॥ ತತಃ - ಬಳಿಕ, ತಸ್ಯ-ಆ ಭರತನಿಗೆ, ಅಮಾತ್ಯಾಃ- ಮಂತ್ರಿಗಳು, ಸರ್ವೇ - ಎಲ್ಲರೂ, ಶುಚಿವ್ರತಂ - ಪರಿಶುದ್ಧನಿಯಮವುಳ್ಳ ಭರತನನ್ನು ಕುರಿತು, ಅಂತಕಾಲೇ - ಪುಣ್ಯನಾಶ ಕಾಲದಲ್ಲಿ, ನಿಪತಿತಂ - ಬಿದ್ದಿರುವ, ಯಯಾತಿಂ-ಯಯಾತಿರಾಯನನ್ನು, ಋಷಯೋಯಥಾ - ಋಷಿಗಳಂತೆ, ಅಭಿಪೇತುಃ - ಹತ್ತಿರಕ್ಕೆ ಬಂದರು. ॥ ೧೦ ॥ ಶತ್ರುಘ್ನಶ್ಚ - ಶತ್ರುಘ್ನನೂ, ಶೋಕಪರಿಪ್ಲುತಂ - ವ್ಯಸನದಿಂದ ಬಳಲಿದ, ತಂ - ಆ ಭರತನನ್ನು, ದೃಷ್ಟ್ವಾ - ಕಂಡು, ವಿಸಂಜ್ಞಃ - ಪ್ರಜ್ಞಾಶೂನ್ಯನಾಗಿ, ಭೂಮಿಪಾಲಂ - ದಶರಥರಾಯನನ್ನು, ಅನುಸ್ಮರ್ರ - ಜ್ಞಾಪಿಸಿಕೊಂಡು, ಭೂಮೌ - ನೆಲದಲ್ಲಿ, ನ್ಯಪತತ್ - ಬಿದ್ದನು. ॥ ೧೧ ॥ ಸುದುಃಖಿತಃ - ಬಹಳ ದುಃಖಗೊಂಡವನಾದ ಶತ್ರುಘ್ನನು, ನಿಶ್ಚೇತಾಃ - ಚೈತನ್ಯರಹಿತನಾಗಿ, ತದಾತದಾ-ಆಯಾಯ ಕಾಲಗಳಲ್ಲಿ, ತಾನಿತಾನಿ - ಆಯಾಯ, ಪಿತುಃ - ತಂದೆಯ, ಗುಣಾಂಗಾನಿ - ಗುಣಗಳನ್ನು ಅವಯವ ಗಳನ್ನೂ, ಸ್ಮೃತ್ವಾ - ಸ್ಮರಿಸಿಕೊಂಡು, ಉನ್ಮತ್ತಇವ - ಹುಚ್ಚಿಡಿದವನಂತೆ, ವಿಲಲಾಪ - ಪ್ರಲಾಪ ಮಾಡಿದನು. ॥ ೧೨ ॥ ಮಂಥರಾಪ್ರಭವಃ, ಮಂಥರಾ - ಮಂಥರೆಯೆಂಬ ಮೂಲಸ್ಥಾನದಿಂದ,

ಗಟ್ಟಿಯಾಗಿ ಕೂಗುತ್ತ ದುಃಖಿಸಿದನು. ಆ ಭರತನು ಆ ರೀತಿಯಾಚಿತಿಯನ್ನು ನೋಡಿ ದೊಡನೆಯೇ ಆ ರೀತಿ ಅಳುತ್ತ, "ಮೇಲಕ್ಕೆತುತ್ತಿದ್ದರೂ ಕೆಳಕ್ಕೆ ಜಾರಿದುದಾದ ಇಂದ್ರನ ಯಂತ್ರಬದ್ಧವಾದ ಧ್ವಜದಂತೆ "ತಟಕ್ಕನೆ ಭೂಮಿಗೆ ಬಿದ್ದನು. ಇಂತಾಗಲು ಆತನ ಮಂತ್ರಿಗಳೆಲ್ಲರೂ ಪುಣ್ಯವ್ರತನಾದ ಭರತನನ್ನು ಮೇಲಕ್ಕೆಬ್ಬಿಸಲು, "ಪುಣ್ಯವು ನಶಿಸಿ ಕೆಳಕ್ಕೆ ಬಿದ್ದ ಯಯಾತಿಯನ್ನು ಮೇಲಕ್ಕೆಬ್ಬಿಸಲು ಬಳಿಸಾರಿದ ಋಷಿಗಳಂತೆ" ಸಮೀಪಿಸಿದವರಾದರು. ॥ ೮-೧೦ ॥ ಆಗ ಶತ್ರುಘ್ನನು ಶೋಕಾಕ್ರಾಂತನಾದ ಆ ಭರತ ನನ್ನು ಕಂಡು, ತನ್ನ ತಂದೆಯಾದ ದಶರಥಭೂಪಾಲನನ್ನು ಸ್ಮರಿಸಿಕೊಂಡು, ಮೂರ್ಛೆ ಯೊಂದಿ ನೆಲದಲ್ಲಿ ಬಿದ್ದು ಪ್ರಜ್ಞೆಯಿಲ್ಲದೆ ತನ್ನ ಜನಕನ ಗುಣಗಳನ್ನೂ, ದೇಹದ ಸೊಬ ಗನ್ನೂ ಬಾರಿಬಾರಿಗೂ ನೆನಸಿಕೊಂಡು ಹುಚ್ಚನಂತೆ ಪ್ರಲಪಿಸಿದವನಾದನು. "ಅಯ್ಯೋ!

ಮಂಥರಾ ಪ್ರಭವ ಸ್ತೀವ್ರಃ ಕೈಕೇಯೀ ಗ್ರಾಹ ಸಂಕುಲಃ ॥ ೧೩ ॥ ವರದಾನ ಮಯೋ ಕ್ಷೋಭ್ಯೋ ಮಜ್ಜಯ ಚ್ಛೋಕಸಾಗರಃ ॥ ಸುಕುಮಾರಂಚ ಬಾಲಂಚ ಸತತಂ ಲಾಲಿತಂ ತ್ವಯಾ ॥ ೧೪ ॥ ಕ್ವ ತಾತ! ಭರತಂ ಹಿತ್ವಾ ವಿಲಪಂತಂ ಗತೋ ಭವಾನ್? ॥ ನಸು ಭೋಜ್ಯೇಷು ಪಾನೇಷು ವಸ್ತ್ರೇಷ್ವಾಭರಣೇಷುಚ ॥೧೫॥ ಪ್ರವಾರಯಸಿ ನಸ್ಸರ್ವಾಂ ಸ್ತನ್ನಃ ಕೋನ್ಯಃ ಕರಿಷ್ಯತಿ? ॥ ಅವದಾರಣ ಕಾಲೇತು ಪೃಥಿವೀ ನಾವದೀರ್ಯತೇ ॥ ೧೬ ॥ ಯಾ ವಿಹೀನಾ ತ್ವಯಾ

ಪ್ರಭವಃ - ಹುಟ್ಟಿದ, ತೀವ್ರಃ - ತೀಕ್ಷ್ಣವಾದ, ಕೈಕೇಯೀಗ್ರಾಹಸಂಕುಲಃ, ಕೈಕೇಯೀ - ಕೈಕೇಯೀ ಯೆಂಬ, ಗ್ರಾಹ - ಬಳ್ಳಿಮೀನಿನಿಂದ, ಸಂಕುಲಃ - ವ್ಯಾಪ್ತವಾದ, ವರದಾನಮಯಃ - ದಶರಥ ರಾಯನ ವರಪ್ರದಾನ ವಿಕಾರವಾದ, ಅಕ್ಷೋಭ್ಯಃ - ಕ್ಷೋಭಿಸಲಸಾಧ್ಯವಾದ, ಶೋಕಸಾಗರಃ - ಶೋಕವೆಂಬ ಸಮುದ್ರವು, ಅಸ್ಮಾನ್ - ನಮ್ಮನ್ನು, ಅಮಜ್ಜಯತ್ - ಮುಳುಗಿಸಿತು. ॥ ೧೩ ॥ ಹೇ ತಾತ - ಎಲೈ ತಂದೆಯೇ, ಸುಕುಮಾರಂಚ - ಮೃದುಸ್ವಭಾವವುಳ್ಳ, ಬಾಲಂಚ - ಹುಡುಗ ನಾದ, ಸತತಂ - ನಿರಂತರವೂ, ತ್ವಯಾ - ನಿನ್ನಿಂದ, ಲಾಲಿತಂ - ಲಾಲಿಸಲ್ಪಟ್ಟ, ವಿಲಪಂತಂ - ಅಳುತ್ತಿರುವ, ಭರತಂ - ಭರತನನ್ನು, ಹಿತ್ವಾ - ಬಿಟ್ಟು, ಭವಾನ್ - ನೀನು, ಕ್ವಗತಃ - ಎಲ್ಲಿಹೋದೆ. ॥ ೧೪ ॥ ಭೋಜ್ಯೇಷು - ಭೋಜನಮಾಡತಕ್ಕ ಪದಾರ್ಥಗಳಲ್ಲಿಯೂ, ಪಾನೇಷು - ಪಾನಮಾಡತಕ್ಕ ಪದಾರ್ಥಗಳಲ್ಲಿಯೂ, ವಸ್ತ್ರೇಷು - ವಸ್ತ್ರಗಳಲ್ಲಿಯೂ, ಆಭರಣೇಷುಚ - ಒಡಿವೆಗಳಲ್ಲಿಯೂ, ಸರ್ವಾನ್ - ಸಮಸ್ತರಾದ, ನಃ - ನಮ್ಮನ್ನು, ಪ್ರವಾರಯಸಿನನು - ಯಾವುದಿಷ್ಟವೆಂದು ಕೇಳಿ ತೊಡಗಿಸುತ್ತಿದ್ದೆ ಯಷ್ಟೆ, ತತ್ - ಆ ಕಾರ್ಯವನ್ನು, ನಃ - ನಮಗೆ, ಅನ್ಯಃಕಃ - ಮತ್ತೊಬ್ಬನಾವನು, ಕರಿಷ್ಯತಿ - ಮಾಡುವನು. ॥ ೧೫ ॥ ಯಾ - ಯಾವ ಪೃಥಿವಿಯು, ಮಹಾತ್ಮನಾ - ಮಹಾತ್ಮನಾದ, ಧರ್ಮ ಜ್ಞೇನ - ಧರ್ಮವೇತ್ತನಾದ, ರಾಜ್ಞಾ - ಅರಸಾದ, ತ್ವಯಾ - ನಿನ್ನಿಂದ, ವಿಹೀನಾ - ರಹಿತವಾಗಿ ರುವುದೋ, ಸಾಪೃಥಿವೀ - ಅಂತಹ ಈ ಭೂಮಿಯು, ಅವದಾರಣಕಾಲೇತು - ಪ್ರಳಯಕಾಲದಲ್ಲಿಯೂ, ನಾವದೀರ್ಯತೇ - ಸೀಳಿಹೋಗಲಾರದು. ॥ ೧೬ ॥ ಪಿತಾ - ತಂದೆಯು, ಸ್ವರ್ಗಂ - ಸ್ವರ್ಗವನ್ನು,

---

ತಂದೆಯೆ! ಮಂಥರೆಯಿಂದ ಜನಿಸಿದುದೂ, ತೀವ್ರವಾಗಿರುವುದೂ, ಕೈಕೇಯಿಯೆಂಬ ಮಹಾ ಮೀನುಗಳುಳ್ಳದೂ, ತಡೆಯಲಸದಳವಾದುದೂ ಆದ ವರದಾನವೆಂಬ ಶೋಕಸಾಗರವು ನಮ್ಮೆಲ್ಲರನ್ನೂ ಮುಳುಗಿಸಿಬಿಟ್ಟಿತು. ಮೃದುಸ್ವಭಾವವುಳ್ಳವನೂ, ಬಾಲನಾಗಿ ನಿನ್ನಿಂದ ಲಾಲಿತನೂ, ವಿಲಪಿಸುತ್ತಿರುವವನೂ ಆದ ಈ ಭರತನನ್ನುಳಿದು ನೀನೆತ್ತಪೋದೆ? ತಂದೆ ಯೆ; ದಶರಥಧರಾವಲ್ಲಭನೆ! ನಮಗಿಷ್ಟವಾದ ಭೋಜ್ಯಪದಾರ್ಥಗಳನ್ನೂ, ವಾಹನಯೋ ಗ್ಯಗಳಾದ ವಸ್ತುಗಳನ್ನೂ, ಬಹು ರಮಣೀಯವಾದ ವಸ್ತ್ರಾಭರಣಗಳನ್ನೂ ತೆಗೆದುಕೊಳ್ಳಿ ರೆಂದು ಬಲಾತ್ಕರಿಸುತ್ತಿದ್ದೆಯಲ್ಲವೆ? ಅಂತಹ ನೀನೀಗ ಎಲ್ಲಿಗೆ ಹೋದೆ? ಇನ್ನು ನಮ ಗಂತಹ ವಸ್ತುಗಳನ್ನು ಕೊಡುವವನಾವನಿರುವನು? ರಾಜನೂ, ಧರ್ಮಜ್ಞನೂ, ಮಹಾ ತ್ಮನೂ ಆದ ನೀನು ಮರಣವನ್ನು ಹೊಂದಿದಾಗ ಈ ಭೂಮಿಯು ಇಭ್ಭಾಗವಾಗಿ ಒಡೆದು ಹೋಗದಿದ್ದುದನ್ನು ನೋಡಿದರೆ, ಪ್ರಳಯಕಾಲದಲ್ಲಿಯೂ ಸಹ ಈ ಭೂಮಿಯು ಸೀಳಿ

ರಾಜ್ಞಾ ಧರ್ಮಜ್ಞೇನ ಮಹಾತ್ಮನಾ || ಪಿತರಿ ಸ್ವರ್ಗಮಾಪನ್ನೇ ರಾಮೇಚಾರಣ್ಯ ಮಾಶ್ರಿತೇ || ೧೭ || ಕಿಂ ಮೇ ಜೀವಿತ ಸಾಮರ್ಥ್ಯಂ ಪ್ರವೇಕ್ಷ್ಯಾಮಿ ಹುತಾಶನಂ || ಹೀನೋ ಭ್ರಾತ್ರಾಚ ಪಿತ್ರಾಚ ಶೂನ್ಯಾ ಮಿಕ್ಷ್ವಾಕು ಪಾಲಿತಾಂ ||೧೮|| ಅಯೋಧ್ಯಾಂ ನಪ್ರವೇಕ್ಷ್ಯಾಮಿ ಪ್ರವೇಕ್ಷ್ಯಾಮಿ ತಪೋವನಂ || ತಯೋರ್ವಿಲಪಿತಂ ಶ್ರುತ್ವಾ ವ್ಯಸನಂಚಾ ನ್ವವೇಕ್ಷ್ಯ ತತ್ || ೧೯ || ಭೃಶಮಾರ್ತತರಾ ಭೂಯ ಸ್ಸರ್ವಏವಾ ನುಗಾಮಿನಃ || ತತೋ ವಿಷಣ್ಣೌ ಶ್ರಾಂತೌಚ ಶತ್ರುಘ್ನ ಭರತಾವುಭೌ ||೨೦|| ಧರಣ್ಯಾಂ ಸಂವ್ಯವೇಷ್ಟೇತಾಂ ಭಗ್ನಶೃಂಗಾವಿ ವರ್ಷಭೌ ||

ಆಪನ್ನೇ - ಹೊಂದಲು, ರಾಮೇಚ - ಶ್ರೀರಾಮನೂ, ಅರಣ್ಯಂ - ವನವನ್ನು, ಆಶ್ರಿತೇ - ಆಶ್ರಯಿಸಿದವನಾಗಲು, ಮೇ - ನನಗೆ, ಜೀವಿತಸಾಮರ್ಥ್ಯಂ - ಜೀವನ ಶಕ್ತಿಯು, ಕಿಂ - ಎಲ್ಲಿಂದ ಬರಬೇಕು, ಹುತಾಶನಂ - ಅಗ್ನಿಯನ್ನು, ಪ್ರವೇಕ್ಷ್ಯಾಮಿ - ಪ್ರವೇಶಿಸುವೆನು, ಭ್ರಾತ್ರಾ - ಅಣ್ಣನಿಂದಲೂ, ಪಿತ್ರಾಚ - ತಂದೆಯಿಂದಲೂ, ಹೀನಃ - ವರ್ಜಿತನಾಗಿ, ಶೂನ್ಯಾಂ - ಜನವರ್ಜಿತವಾದ, ಇಕ್ಷ್ವಾಕುಪಾಲಿತಾಂ - ಇಕ್ಷ್ವಾಕುವಂಶೋತ್ಪನ್ನರಿಂದ ಸಂರಕ್ಷಿಸಲ್ಪಟ್ಟ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು, ನಪ್ರವೇಕ್ಷ್ಯಾಮಿ - ಪ್ರವೇಶಿಸಲಾರೆನು, ತಪೋವನಂ - ತಪೋವನವನ್ನು ಕುರಿತು, ಪ್ರವೇಕ್ಷ್ಯಾಮಿ - ಪ್ರವೇಶಿಸುವೆನು. || ೧೮ || ತಯೋಃ - ಆ ಭರತಶತ್ರುಘ್ನರಿಬ್ಬರ, ವಿಲಪಿತಂ - ವಿಲಾಪವನ್ನು, ಶ್ರುತ್ವಾ - ಕೇಳಿ, ತದ್ವ್ಯಸನಂಚ - ಆ ವ್ಯಸನವನ್ನೂ, ಅನ್ವವೇಕ್ಷ್ಯ - ನೋಡಿ, ಸರ್ವೇ - ಸಮಸ್ತರಾದ, ಅನುಗಾಮಿನಃ - ಸೇವಕರು, ಭೂಯಃ - ಮತ್ತೂ, ಭೃಶಂ-ಅಧಿಕವಾಗಿ, ಆರ್ತತರಾಃ - ಮತ್ತೂ ಅತಿಶಯವಾದ ದೀನಧ್ವನಿಯುಳ್ಳವರಾದರು. || ೧೯ || ತತಃ - ಬಳಿಕ, ವಿಷಣ್ಣೌ - ವಿಷಾದಗೊಂಡಿರುವ, ಶ್ರಾಂತೌ - ಬಳಲಿದ, ಉಭೌ - ಇಬ್ಬರಾದ, ಶತ್ರುಘ್ನಭರತೌ - ಭರತಶತ್ರುಘ್ನರು, ಭಗ್ನಶೃಂಗೌ - ಮುರಿದುಹೋದ ಕೊಂಬುಗಳುಳ್ಳ, ಋಷಭಾವಿವ - ಎತ್ತುಗಳಂತೆ, ಧರಣ್ಯಾಂ - ನೆಲದಲ್ಲಿ, ಸಂವ್ಯವೇಷ್ಟೇತಾಂ - ಹೊರಳಾಡುತ್ತಿದ್ದರು. || ೨೦ || ತತಃ - ಬಳಿಕ, ಪ್ರಕೃತಿಮಾನ್ - ಪ್ರಶಸ್ತಸ್ವಭಾವವುಳ್ಳ, ವೈದ್ಯಃ - (ಗೋ + ಮ + ತಿ) ತತ್ವ ಜ್ಞಾನಸಾಧಕವಾದ ವೇದಾಂತ ಶಾಸ್ತ್ರಜ್ಞನಾದ, ಏಷಾಂ - ಇವರ, ಪಿತುಃ - ತಂದೆಗೆ, ಪುರೋಹಿತಃ - ಪುರೋಹಿತನಾದ, ವಸಿಷ್ಠಃ - ವಸಿಷ್ಠ

ಹೋಗಲಾರದೆಂದು ತೋರುವುದು. || ೧೧-೧೬ || ತಂದೆಯಾದ ನೀನು ಸ್ವರ್ಗಸ್ಥನಾದೆ! ಅಣ್ಣನಾದ ಶ್ರೀರಾಮಮೂರ್ತಿಯೂ ನನ್ನನ್ನುಳಿದು ಅಟವಿಯಂ ಸಾರಿದನು. ಎಂದ ಮೇಲೆ ನಾನೆಂತು ಜೀವಿಸಿರಲಿ! ಅಕಟ!! ತಂದೆಯಿಂದಲೂ ಅಣ್ಣದೇವನಾದ ಶ್ರೀರಾಮನಿಂದಲೂ ತೊರೆಯುಲಾದ ನಾನು, ಅಯೋಧ್ಯಾನಗರವನ್ನೆಂತು ಹೊಗಲಿ; ಪ್ರವೇಶಿಸುವುದೇ ಇಲ್ಲ; ಅಗ್ನಿಪ್ರವೇಶವನ್ನಾದರೂ ಮಾಡುತ್ತೇನೆ; ತಪೋವನವನ್ನಾದರೂ ಸಾರುತ್ತೇನೆ." ಈ ರೀತಿ ರೋದಿಸುತ್ತಿರುವ ಆ ಭರತಶತ್ರುಘ್ನರ ಮಹತ್ತರವಾದ ವಿಲಾಪವನ್ನೂ, ವ್ಯಸನವನ್ನೂ ಕಂಡು ಅವರ ಬಂಧುಗಳು ಬಹಳವಾಗಿ ಕಂಗೆಟ್ಟರು. ಆ ಬಳಿಕ ವಿಷಾದವನ್ನೂ, ಬಳಲಿಕೆಯನ್ನೂ ಹೊಂದಿದ ಆ ಭರತಶತ್ರುಘ್ನರೀರ್ವರೂ ಮುರಿದುಹೋದ ಕೊಂಬುಗಳುಳ್ಳ ವೃಷಭಗಳಂತೆ ಭೂಮಿಯಲ್ಲಿ ಹೊರಳಾಡುತ್ತಿದ್ದರು. || ೧೭-೨೦ || ಅನಂತರದಲ್ಲಿ

ತತಃ ಪ್ರಕೃತಿವರ್ಗಾನ್ವೈದ್ಯಃ ಪಿತುರೇಷಾಂ ಪುರೋಹಿತಃ ॥ ೨೧ ॥ ವಸಿಷ್ಠೋ ಭರತಂ ವಾಕ್ಯ ಮುತ್ಥಾಪ್ಯ ತಮುವಾಚಹ ॥ ತ್ರಯೋದಶೋಽಯಂ ದಿವಸಃ ಪಿತುರ್ವೃತ್ತಸ್ಯ ತೇವಿಭೋ ॥ ೨೨ ॥ ಸಾವಶೇಷಾಸ್ಥಿನಿಚಯೇ ಕಿಮುಹತ್ವಂ ವಿಲಂಬಸೇ ? ॥ ತ್ರೀಣಿ ದ್ವಂದ್ವಾನಿ ಭೂತೇಷು ಪ್ರವೃತ್ತಾನ್ಯವಿಶೇಷತಃ ॥ ೨೩ ॥ ತೇಷು ಚಾಪರಿಹಾರ್ಯೇಷು ನೈವಂ ಭವಿತು ಮರ್ಹಸಿ ॥ ಸುಮಂತ್ರಶ್ಚಾಪಿ

ಋಷಿಯು, ಭರತಂ - ಭರತನನ್ನು, ಉತ್ಥಾಪ್ಯ - ಎಬ್ಬಿಸಿ, ತಂ - ಅವನನ್ನು ಕುರಿತು, ಉವಾಚ - ಹೇಳಿದನು. ॥ ೨೧ ॥ ಹೇ ವಿಭೋ - ಎಲೈ ಪ್ರಭುವೇ, ವೃತ್ತಸ್ಯ - ಸಂಸ್ಕಾರಮಾಡಲ್ಪಟ್ಟ, ತೇ ಪಿತುಃ ನಿಮ್ಮ ತಂದೆಗೆ, ಅಯಂದಿವಸಃ - ಈ ದಿವಸವು, ತ್ರಯೋದಶಃ - ಹದಿಮೂರನೆಯದು, ಇಹ - ಈ ದಿವಸದಲ್ಲಿ, ಸಾವಶೇಷಾಸ್ಥಿನಿಚಯೇ, ಸಾವಶೇಷ - ಅವಶಿಷ್ಟವಾದ, ಅಸ್ಥಿನಿಚಯೇ - ಅಸ್ಥಿಸಂಚಯನಾಖ್ಯಕರ್ಮವಿಷಯದಲ್ಲಿ, ತ್ವಂ - ನೀನು, ಕಿಂವಿಲಂಬಸೇ - ಏಕೆ ಸಾವಕಾಶಮಾಡುತ್ತಿರುವೆ ॥ ೨೨ ॥ ಭೂತೇಷು - ಪ್ರಾಣಿಗಳಲ್ಲಿ, ತ್ರೀಣಿದ್ವಂದ್ವಾನಿ - (೧) ಹಸಿವು ಬಾಯಾರಿಕೆಗಳು, ಶೋಕಮೋಹಗಳೂ ಜರಾಮರಣಗಳು ಎಂಬ ಮೂರುದ್ವಂದ್ವಗಳು, ಅವಿಶೇಷತಃ - ಸಾಮಾನ್ಯಾಕಾರವಾಗಿ ಎಲ್ಲರಲ್ಲಿಯೂ, ಪ್ರವೃತ್ತಾನಿ - ಪ್ರವರ್ತಿಸಿರುವುದೊ, ತೇಷು - ಅವು, ಅಪರಿಹಾರ್ಯೇಷು - ಪರಿಹಾರಮಾಡಲಸಾಧ್ಯವಾಗಿರುವಾಗ, ಏವಂ - ಈಪರಿಯಾಗಿ, ಭವಿತುಂ - ವ್ಯಸನಪಡುವುದಕ್ಕೆ, ನಾರ್ಹಸಿ - ಯೋಗ್ಯನಾಗಬೇಡ. ॥ ೨೩ ॥ ತತ್ವಜ್ಞಃ - ತತ್ವವನ್ನು ತಿಳಿದಿರುವ, ಸುಮಂತ್ರಶ್ಚಾಪಿ - ಸುಮಂತ್ರನೂ ಕೂಡ, ಶತ್ರುಘ್ನಂ - ಶತ್ರುಘ್ನನನ್ನು, ಉತ್ಥಾಪ್ಯ - ಮೇಲಕ್ಕೆಬ್ಬಿಸಿ, ಅಭಿಪ್ರಸಾದ್ಯಚ - ಸಮಾಧಾನ ಪಡಿಸಿ, ಸರ್ವಭೂತಭವಾಭವಂ -

ಉತ್ತಮಸ್ವಭಾವವುಳ್ಳವನಾಗಿಯೂ, ತತ್ವಜ್ಞಾನ ಸಾಧನಕರವಾದ ವೇದಾಂತ ಶಾಸ್ತ್ರವನ್ನು ತಿಳಿದವನಾಗಿಯೂ, ದಶರಥಮಹಾರಾಜನಿಗೆ ಪುರೋಹಿತನಾಗಿಯೂ ಇರುವ ವಸಿಷ್ಠಮಹಾ ಮುನಿಯು ಭರತಕುಮಾರನನ್ನೆಬ್ಬಿಸಿ, ಆತನನ್ನು ಕುರಿತು, “ಎಲೈ ವಿಭುವೆ! ನಿನ್ನ ತಂದೆಯಾದ ದಶರಥಮಹಾರಾಯನು ಮರಣವೊಂದಿ ಇಂದಿಗೆ ಹದಿಮೂರು ದಿನಗಳಾದುವು. ಇದು ಹದಿಮೂರನೆಯ ದಿನವು. ಇನ್ನು ಅಸ್ಥಿಸಂಚಯನ ಕರ್ಮವೊಂದು ಮಾತ್ರ ಉಳಿದಿರುವುದು. ಈ ಕರ್ಮವನ್ನು ಕುರಿತು ಸಾವಕಾಶ ಮಾಡುವುದು ರಾಜಪುತ್ರನಾದ ನಿನಗೆ ಯೋಗ್ಯವಲ್ಲ. ಹಸಿವು ಬಾಯಾರಿಕೆಗಳು. ಶೋಕಮೋಹಗಳು, ಜರಾಮರಣಗಳು ಎಂಬ ಪಿಶಾಚಗಳು ಸಕಲ ಜಂತುಗಳನ್ನೂ ಭೇದವಿಲ್ಲದೆ ಬಾಧಿಸುತ್ತದೆ. ಇವುಗಳಿಲ್ಲದ ಜಂತುವು ಈ ಲೋಕದಲ್ಲಾವುದೂ ಇಲ್ಲವು. ಆದುದರಿಂದ ಸಹಜವಾದ ಈ ವ್ಯಸನಕ್ಕೆ ನಿನ್ನಂತಹ ಮಹಾನುಭಾವನು ಮೂಢನಂತೆ ದುಃಖಿಸಕೂಡದು” ಎಂದು ಹೇಳಿದನು. ಈ ರೀತಿಯಾಗಿಯೇ ಸುಮಂತ್ರನು ಶತ್ರುಘ್ನನನ್ನೆಬ್ಬಿಸಿ ಪ್ರಸನ್ನನನ್ನಾಗಿ ಮಾಡಲು, “ಓ ದಶರಥರಾಜನಂದನನಾದ ಶತ್ರುಘ್ನನೆ! ಸಕಲ ಜಂತುಗಳಿಗೂ ಜನನಮರಣಗಳು ಸಹಜವಾದುವೆಂಬು

(೧) ಟಿ. ಅಶನಾಯಾ ಪಿಪಾಸೇಚ ಶೋಕಮೋಹೌ ಜರಾಮೃತೀ । (ಇತಿ ಭಾರತೋಕ್ತಿಃ)

ಶತ್ರುಘ್ನ ಮುತ್ಥಾಪ್ಯಾ ಭಿಪ್ರಸಾದ್ಯ ಚ ॥ ೨೪ ॥ ಶ್ರಾವಯಾಮಾಸ ತತ್ವಜ್ಞ ಸ್ಸರ್ವಭೂತ ಭವಾಭವಂ ॥ ಉತ್ಥಿತೌ ಚ ನರವ್ಯಾಘ್ರೌ ಪ್ರಕಾಶೇತೇ ಯಶಸ್ವಿನೌ ॥ ೨೫ ॥ ವರ್ಷಾತಪ ಪರಿಕ್ಲಿನ್ನೌ ಪೃಥಗಿಂದ್ರ ಧ್ವಜಾವಿವ ॥ ಅಶ್ರೂಣಿ ಪರಿಮೃಧ್ನಂತೌ ರಕ್ತಾಕ್ಷೌ ದೀನಭಾಷಿಣೌ ॥ ೨೬ ॥ ಅಮಾತ್ಯಾ ಸ್ತ್ವರಯಂತಿಸ್ಮ ತನಯೌ ಚಾಪರಾ ಕ್ರಿಯಾಃ ॥ ೨೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಸಪ್ತತಿತಮಸ್ಸರ್ಗಃ.

ಸಮಸ್ತ ಪ್ರಾಣಿಗಳ ಉತ್ಪತ್ತಿನಾಶಗಳನ್ನು, ಶ್ರಾವಯಾಮಾಸ - ಕೇಳಿಸಿದನು. ॥ ೨೪ ॥ ಉತ್ಥಿತೌ - ಮೇಲಕ್ಕೆದ್ದ, ಯಶಸ್ವಿನೌ - ಕೀರ್ತಿವಂತರಾದ, ನರವ್ಯಾಘ್ರೌ - ನರಶ್ರೇಷ್ಠರಾದ ಭರತಶತ್ರುಘ್ನರು, ಪೃಥಕ್ - ಪ್ರತ್ಯೇಕವಾಗಿ, ವರ್ಷಾತಪಪರಿಕ್ಲಿನ್ನೌ - ಮಳೆಯಿಂದಲೂ ಬಿಸಿಲಿನಿಂದಲೂ ಒಣಗಿಹೋದ, ಇಂದ್ರಧ್ವಜಾವಿವ - ದೇವೇಂದ್ರನ ಧ್ವಜಗಳಂತೆ, ಪ್ರಕಾಶೇತೇ - ಹೊಳೆಯುತ್ತಿದ್ದರು. ॥ ೨೫ ॥ ಅಶ್ರೂಣಿ - ಕಂಬನಿಗಳನ್ನು, ಪರಿಮೃಧ್ನಂತೌ - ಒರಸುತ್ತಿರುವ, ರಕ್ತಾಕ್ಷೌ - ಕೆಂಗಣ್ಣುಗಳುಳ್ಳ, ದೀನಭಾಷಿಣೌ - ದೈನ್ಯಯುಕ್ತವಾಗಿ ಮಾತನಾಡುತ್ತಿರುವ, ತನಯೌ - ರಾಜಪುತ್ರರನ್ನು, ಅಮಾತ್ಯಾಃ - ಮಂತ್ರಿಗಳು, ಅಪರಾಃಕ್ರಿಯಾಃ - ಅವಶಿಷ್ಟವಾದ ಕರ್ಮಗಳನ್ನು ಕುರಿತು, ತ್ವರಯಂತಿಸ್ಮ - ಜಾಗ್ರತೆಪಡಿಸಿದರು. ॥ ೨೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಸಪ್ತತಿತಮಸ್ಸರ್ಗಃ.

ದನ್ನು ನೀನರಿಯೆಯಾ! ಆದುದರಿಂದ ಮೃತನಾದ ನಿನ್ನ ತಂದೆಯನ್ನು ಕುರಿತು ದುಃಖಿಸುವುದು ನಿನಗೆ ಸರಿಯಾದುದಲ್ಲ. ಆ ದುಃಖವನ್ನಿನ್ನು ದೂರ ಮಾಡು” ಎಂದನು. ಆಗ ಶ್ರೇಷ್ಠವಾದ ಕೀರ್ತಿಯುಳ್ಳವರೂ, ಪುರುಷೋತ್ತಮರೂ ಆದ ಆ ಭರತಶತ್ರುಘ್ನರೀರ್ವರೂ ಮಳೆಯಿಂದಲೂ, ಗಾಳಿಯಿಂದಲೂ, ಬಿಸಿಲಿನಿಂದಲೂ ಬತ್ತಿಹೋದ ಇಂದ್ರಧ್ವಜಗಳಂತೆ ಹೊಳೆಯುತ್ತಿದ್ದರು. ॥ ೨೧-೨೫ ॥ ಆ ವೇಳೆಯಲ್ಲಿ ಮಂತ್ರಿಗಳೂ ಕಣ್ಣೀರನ್ನು ಒರಸಿಕೊಂಡು, ಕೆಂಪಾದ ಕಣ್ಣುಗಳುಳ್ಳವರೂ, ದೈನ್ಯಹುಟ್ಟುವಂತೆ ಮಾತುಗಳನ್ನಾಡುತ್ತಿರುವವರೂ ಆದ ಆ ಭರತಶತ್ರುಘ್ನರಿಂದ ಮಾಡಬೇಕಾದ ಕಾರ್ಯಗಳನ್ನು ಕುರಿತು ತ್ವರೆಗೊಳಿಸಿದರು. ॥ ೨೬-೨೭ ॥

ಇಂತಿದು ದಶರಥರಾಜಾಸ್ಥಿ ಸಂಚಯನ ಸಮಯವಿಲಪಿತ ಭರತಶತ್ರುಘ್ನವಿಲಾಸ ನಿರೂಪಣವೆಂಬ ಎಪ್ಪತ್ತೇಳನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಅಷ್ಟಸಪ್ತತಿತಮಸ್ಸರ್ಗಃ.

ಅಥ ಯಾತ್ರಾಂ ಸಮೀಹಂತಂ ಶತ್ರುಘ್ನೋ ಲಕ್ಷ್ಮಣಾನುಜಃ ॥ ಭರತಂ ಶೋಕಸಂತಪ್ತ ಮಿದಂ ವಚನ ಮಬ್ರವೀತ್ ॥ ೧ ॥ ಗತಿರ್ಯಸ್ಸರ್ವ ಭೂತಾನಾಂ ದುಃಖೇ ಕಿಂಪುನ ರಾತ್ಮನಃ ॥ ಸರಾಮ ಸ್ಸತ್ವಸಂಪನ್ನಃ ಸ್ತ್ರಿಯಾ ಪ್ರವ್ರಾಜಿತೋ ವನಂ ! ॥ ೨ ॥ ಬಲವಾ ವೀರ್ಯಸಂಪನ್ನೋ ಲಕ್ಷ್ಮಣೋ ನಾಮ ಯೋಪ್ಯಸೌ ॥ ಕಿನ್ನಮೋಚಯತೇ ರಾಮಂ ಕೃತ್ವಾಸ್ಮ ಪಿತೃನಿಗ್ರಹಂ॥೩॥ ಪೂರ್ವಮೇವತು ನಿಗ್ರಾಹ್ಯ ಸ್ಸಮವೇಕ್ಷ್ಯ ನಯಾನಯೌ ॥ ಉತ್ಪಥಂ ಯಸ್ಸ

ಅಥ - ಬಳಿಕ, ಲಕ್ಷ್ಮಣಾನುಜಃ - ಲಕ್ಷ್ಮಣನಿಗೆ ತಮ್ಮನಾದ, ಶತ್ರುಘ್ನಃ - ಶತ್ರುಘ್ನನು, ಯಾತ್ರಾಂ - ಶ್ರೀರಾಮನನ್ನು ಕರೆತರುವುದಕ್ಕೆ ಪ್ರಯಾಣವನ್ನು, ಸಮೀಹಂತಂ - ಅಪೇಕ್ಷಿಸುತ್ತಿರುವ, ಶೋಕಸಂತಪ್ತಂ - ವ್ಯಸನಗೊಂಡಿರುವ, ಭರತಂ - ಭರತನನ್ನು ಕುರಿತು, ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೧ ॥ ಸರ್ವಭೂತಾನಾಂ - ಸಮಸ್ತ ಪ್ರಾಣಿಗಳಿಗೂ, ದುಃಖೇ - ದುಃಖಾವಸ್ಥೆಯಲ್ಲಿ, ಯಃ - ಯಾವ ಶ್ರೀರಾಮನು, ಗತಿಃ - ನಿವಾರಕನಾಗಿ ಹೊಂದತಕ್ಕವನೋ. ಆತ್ಮನಃ - ತನಗೆ, ದುಃಖೇ - ದುಃಖಕಾಲದಲ್ಲಿ, ಗತಿಃ - ನಿವಾರಕನಾಗಿರುತ್ತಾನೆಂಬ ವಿಷಯದಲ್ಲಿ, ಕಿಂಪುನಃ - ಏನು ಹೇಳತಕ್ಕದು, ಸತ್ವಸಂಪನ್ನಃ - ಬಲದಿಂದ ಕೂಡಿರುವ, ಸರಾಮಃ- ಅಂತಹ ಶ್ರೀರಾಮನು, ಸ್ತ್ರಿಯಾ - ಸ್ತ್ರೀಯಿಂದ, ವನಂ - ವನವನ್ನು ಕುರಿತು, ಪ್ರವ್ರಾಜಿತಃ - ಹೊರಡಿಸಲಾದನು. ॥ ೨ ॥ ಯಃ - ಯಾವ ಪುರುಷನು, ಲಕ್ಷ್ಮಣೋನಾಮ - ಲಕ್ಷ್ಮಣನೆಂದು ಪ್ರಸಿದ್ಧನಾಗಿ, ಬಲವಾ - ದೇಹತ್ರಾಣವುಳ್ಳವನೋ, ವೀರ್ಯಸಂಪನ್ನಃ - ಪರಾಕ್ರಮದಿಂದ ಕೂಡಿದವನೋ, ಅಸೌ - ಈ ಲಕ್ಷ್ಮಣನು, ಪಿತೃನಿಗ್ರಹಂ - ತಂದೆಯ ನಿಗ್ರಹವನ್ನು, ಕೃತ್ವಾ - ಮಾಡಿ, ರಾಮಂ - ಶ್ರೀರಾಮನನ್ನು, ಕಿಂನಮೋಚಯತೇಸ್ಮ - ಏಕೆ ಬಿಡಿಸಲಿಲ್ಲವೋ. ॥ ೩ ॥ ಯಃ ರಾಜಾ - ಯಾವ ಅರಸು, ನಾರ್ಯಾಃ - ಹೆಂಗಸಿನ, ವಶಂಗತಃ - ಸ್ವಾಧೀನನಾಗಿ, ಉತ್ಪಥಂ -

---

ಆ ಬಳಿಕ ಲಕ್ಷ್ಮಣಸ್ವಾಮಿಗೆ ತಮ್ಮನಾದ ಶತ್ರುಘ್ನನು ಮನೆಗೆ ಹೋದ ಮೇಲೆ ಶ್ರೀರಾಮಮೂರ್ತಿಯ ಬಳಿ ಸಾರಬೇಕೆಂದು ಯೋಚಿಸುತ್ತಿದ್ದವನೂ, ದುಃಖಿತನಾದವನೂ ಆದ ಭರತನನ್ನು ಕುರಿತು ಹೀಗೆಂದನು. “ಅಣ್ಣ ! ಭರತನೆ ! ಸಕಲ ಭೂತಗಳ ದುಃಖವನ್ನು ಹೋಗಲಾಡಿಸುವ ಶ್ರೀರಾಮನು ತನ್ನ ದುಃಖವನ್ನು ಪರಿಹರಿಸಿಕೊಳ್ಳಲು ಶಕ್ತನಾಗಲಿಲ್ಲವೆಂದು ಹೇಳಲಾಗುವುದೇ ? ಅಂತಹ ಮಹಾ ಭುಜಬಲ ಪರಾಕ್ರಮಶಾಲಿಯಾದ ಶ್ರೀರಾಮನು ಹೆಂಗಸಿನಿಂದ ಕಾಡಿಗೆ ಕಳುಹಲಾದನಲ್ಲವೆ ? ಇದು ಬಹಳ ವಿಚಿತ್ರವಾದ ವಿಷಯವಾಗಿರುವುದು. ಅಧಿಕವಾದ ಬಲವುಳ್ಳವನೂ, ಅಧಿಕವಾದ ಪರಾಕ್ರಮವುಳ್ಳವನೂ ಆದ ಲಕ್ಷ್ಮಣನು ತಂದೆಯಾದ ದಶರಥನನ್ನು ನಿಗ್ರಹಿಸಿ ರಾಮನರಣ್ಯಕ್ಕೆ ಹೋಗದಂತೆ ಮಾಡಲಿಲ್ಲ

ಮಾರೂಢೋ ನಾರ್ಯಾ ರಾಜಾ ವಶಂಗತಃ ॥ ೪ ॥ ಇತಿ ಸಂಭಾಷಮಾಣೇತು ಶತ್ರುಘ್ನೇ ಲಕ್ಷ್ಮಣಾನುಜೇ ॥ ಪ್ರಾಗ್ದ್ವಾರೇಽಭೂತ್ತದಾ ಕುಬ್ಜಾ ಸರ್ವಾಭರಣ ಭೂಷಿತಾ ॥ ೫ ॥ ಲಿಪ್ತಾ ಚಂದನಸಾರೇಣ ರಾಜವಸ್ತ್ರಾಣಿ ಬಿಭ್ರತೀ ॥ ವಿವಿಧಂ ವಿವಿಧೈ ಸ್ತೈಸ್ತೈ ರ್ಭೂಷಣೈಶ್ಚ ವಿಭೂಷಿತಾ ॥ ೬ ॥ ಮೇಖಲಾ ದಾಮಭಿ ಶ್ಚಿತ್ರೈ ರನ್ಯೈಶ್ಚ ಶುಭಭೂಷಣೈಃ ॥ ಬಭಾಸೇ ಬಹುಭಿ ರ್ಬದ್ಧಾ ರಜ್ಜು ಬದ್ಧೇವ ವಾನರೀ ॥ ೭ ॥ ತಾಂ ಸಮೀಕ್ಷ್ಯ ತದಾ ದ್ವಾತ್ಸ್ಥಾಸ್ಸುಭೃಶಂ

ಸನ್ಮಾರ್ಗಾತಿಕ್ರಮಣವನ್ನು, ಸಮಾರೂಢಃ - ಏರಿದನೋ, ಸಃ - ಆ ಅರಸು, ನಯಾನಯೌ - ನೀತಿ ದುರ್ನೀತಿಗಳನ್ನು, ಸಮವೇಕ್ಷ್ಯ - ಕಂಡು, ಪೂರ್ವಮೇವತು - ಮೊದಲೇ, ನಿಗ್ರಾಹ್ಯಃ - ನಿಗ್ರಹಿಸ ತಕ್ಕವನು, ಇತಿ - ಇಂತೆಂದು, ಲಕ್ಷ್ಮಣಾನುಜೇ - ಲಕ್ಷ್ಮಣನಿಗೆ ತಮ್ಮನಾದ, ಶತ್ರುಘ್ನೇ - ಶತ್ರುಘ್ನನು, ಸಂಭಾಷಮಾಣೇತು - ಮಾತನಾಡುತ್ತಿರಲು, ಸರ್ವಾಭರಣಭೂಷಿತಾ - ಸಮಸ್ತಾಭರಣ ಗಳಿಂದಲಂಕೃತಳಾದ, ಕುಬ್ಜಾ - ಮಂಥರೆಯು, ತದಾ - ಆ ಕಾಲದಲ್ಲಿ, ಪ್ರಾಕ್‌ದ್ವಾರೇ - ಪೂರ್ವದ್ವಾರ ದಲ್ಲಿ, ಅಭೂತ್ - ಬಂದಳ. ॥ ೫ ॥ ಚಂದನಸಾರೇಣ - ಶ್ರೀಗಂಧದಿಂದ, ಲಿಪ್ತಾ - ಲೇಪನೆ ಮಾಡಲ್ಪಟ್ಟ, ರಾಜವಸ್ತ್ರಾಣಿ - ರಾಣಿಯರು ಉಡತಕ್ಕ ವಸ್ತ್ರಗಳನ್ನು, ಬಿಭ್ರತೀ - ಧರಿಸಿರುವ, ವಿವಿಧಂವಿವಿಧೈಃ - ನಾನಾವಿಧಗಳಾದ, ತೈಸ್ತೈರ್ಭೂಷಣೈಃ-ಆಯಾಯ ಒಡಿವೆಗಳಿಂದ, ವಿಭೂಷಿತಾ- ಅಲಂಕೃತಳಾದ, ಚಿತ್ರೈಃ - ನಾನಾ ಬಣ್ಣಗಳಾದ, ಮೇಖಲಾದಾಮಭಿಃ - ಓಡ್ಯಾಣದಿಂದಲೂ ಹಾರ ಗಳಿಂದಲೂ, ಅನ್ಯೈಶ್ಚ - ಮತ್ತೆ ಕೆಲವಾದ, ಬಹುಭಿಃ - ಅನೇಕವಾದ, ಶುಭಭೂಷಣೈಃ - ಶುಭಕರ ವಾದ ಒಡಿವೆಗಳಿಂದ, ಬದ್ಧಾ - ಕಟ್ಟಲ್ಪಟ್ಟ ಮಂಥರೆಯು, ರಜ್ಜುಬದ್ಧಾ - ರಜ್ಜುವಿನಿಂದ ಕಟ್ಟಲ್ಪಟ್ಟ, ವಾನರೀವ - ಹೆಣ್ಣು ಕೋತಿಯಂತೆ, ಬಭಾಸೇ - ಹೊಳೆಯುತಿದ್ದಳು, ॥ ೬-೭ ॥ ತದಾ - ಆ ಕಾಲದಲ್ಲಿ, ದ್ವಾಸ್ಸ್ಥಾಃ - ದ್ವಾರಪಾಲಕರು, ಸುಭೃಶಂ - ಬಹಳವಾಗಿ, ಪಾಪಕಾರಿಣೀಂ - ಪಾಪ ಕಾರ್ಯವನ್ನು ನಡೆಯಿಸಿರುವ, ಅಕರುಣಾಂ - ದಯಾಹೀನಳಾದ, ತಾಂಕುಬ್ಜಾಂ - ಆ ಮಂಥರೆ

ವೇಕೆ ? ದುರ್ಮಾರ್ಗ ಪ್ರವರ್ತಕಳಾದ ಕೈಕೇಯಿಯು ವಶನಾಗಿ, ದುರ್ಮಾರ್ಗದಲ್ಲಿಯೇ ಪ್ರವೇಶಿಸಿದ ದಶರಥ ಮಹಾರಾಜನನ್ನು ನ್ಯಾಯಾನ್ಯಾಯಗಳನ್ನು ವಿಮರ್ಶಿಸಿ ನಿಗ್ರಹಿಸುವುದು ತಕ್ಕುದೇ ಅಲ್ಲವೆ? ಇಂತಹ ಕೆಲಸವನ್ನು ಮಾಡಲೇ ಬೇಕಾಗಿದ್ದ ಲಕ್ಷ್ಮಣನು ಅದನ್ನು ಮಾಡ ದಿರಲು ಕಾರಣವೇನಿರಬಹುದು " ? ಎಂಬೀ ಪ್ರಕಾರವಾಗಿ ಶತ್ರುಘ್ನನು ನುಡಿಯುತ್ತಿರಲು ಆ ಮಂಥರೆಯು ಸರ್ವಾಭರಣಗಳಿಂದಲಂಕೃತಳಾದವಳಾಗಿ ದೈವವಶದಿಂದ ಆ ಭರತಶತ್ರುಘ್ನ ರಿದ್ದ ಮನೆಗಿದುರಾಗಿ ಬಂದಳು. ॥೧-೫॥ ಆಗಲಾ ಕುಬ್ಜೆಯು ಸರ್ವೋತ್ತಮವಾದ ಚಂದನ ಗಂಧದಿಂದಲೇಪಿತವಾದ ಶರೀರವುಳ್ಳವಳಾಗಿ, ರಾಜಯೋಗ್ಯವಾದ ವಸ್ತ್ರಗಳನ್ನು ಧರಿಸಿ, ನಾನಾವಿಧಗಳಾದ ರಮಣೀಯವಾದ ಆಭರಣಗಳನ್ನಲಂಕರಿಸಿಕೊಂಡು ಬಂದಿದ್ದಳು. ಅಲ್ಲದೆ ಆ ಮಂಥರೆಯು, ಕಂಠಮಾಲೆ, ಒಡ್ಯಾಣ ಮತ್ತೂ ಅನೇಕ ಆಭರಣಗಳಿಂದಲಂಕೃತಳಾಗಿ ಹಗ್ಗಗಳಿಂದ ಬಂಧಿತವಾದ ಹೆಣ್ಣುಕೋತಿಯಂತಿದ್ದಳು. ಆಗ ದ್ವಾರಪಾಲಕರು ಮಹಾ ಪಾಪ ಕೃತ್ಯವನ್ನು ಮಾಡಿದ ಆ ಮಂಥರೆಯನ್ನು ಕಂಡು ಅವಳನ್ನು ಹಿಡಿದುಕೊಂಡು ಶತ್ರುಘ್ನನ

ಪಾಪಕಾರಿಣೀಂ ॥ ಗೃಹೀತ್ವಾ ಕರುಣಾಂ ಕುಬ್ಜಾಂ ಶತ್ರುಘ್ನಾಯ ನ್ಯವೇದಯನ್
॥ ೮ ॥ ಯಸ್ಯಾಃ ಕೃತೇ ವನೇ ರಾಮೋ ನ್ಯಸ್ತದೇಹಶ್ಚ ವಃಪಿತಾ ॥ ಸೇಯಂ
ಪಾಪಾ ನೃಶಂಸಾಚ ತಸ್ಯಾಃ ಕುರು ಯಥಾಮತಿ ॥ ೯ ॥ ಶತ್ರುಘ್ನಶ್ಚ ತದಾ
ಜ್ಞಾಯ ವಚನಂ ಭೃಶದುಃಖಿತಃ ॥ ಅಂತಃಪುರಚರಾನ್ಸರ್ವಾನ್ ಇತ್ಯುವಾಚ
ಧೃತವ್ರತಃ ॥ ೧೦ ॥ ತೀವ್ರ ಮುತ್ಪಾದಿತಂ ದುಃಖಂ ಭ್ರಾತೄಣಾಂ ಮೇ
ತಥಾ ಪಿತುಃ ॥ ಯಯಾ ಸೇಯಂ ನೃಶಂಸಸ್ಯ ಕರ್ಮಣಃ ಫಲಮಶ್ನುತಾಂ॥೧೧॥

ಯನ್ನು, ಸಮಾಕ್ಷ್ಯ - ಕಂಡು, ಗೃಹೀತ್ವಾ - ಹಿಡಿದುಕೊಂಡು, ಶತ್ರುಘ್ನಾಯ - ಶತ್ರುಘ್ನನಿಗೆ, ನ್ಯವೇದಯನ್ - ತಿಳಿಸಿದರು. ॥ ೮ ॥ ಯಸ್ಯಾಃಕೃತೇ - ಯಾವಳ ನಿಮಿತ್ತವಾಗಿ, ರಾಮಃ - ಶ್ರೀರಾಮನು, ವನೇ - ಅರಣ್ಯದಲ್ಲಿ, ಅಭೂತ್ - ಇದ್ದವನಾದನೋ, ವಃ - ನಿಮ್ಮ ಪಿತಾ - ತಂದೆಯು, ನ್ಯಸ್ತದೇಹಃ - ದೇಹಪರಿತ್ಯಾಗವನ್ನು ಮಾಡಿದನೋ, ಸಾ - ಅಂತಹ, ಪಾಪಾ - ಪಾಪಿಷ್ಠಳಾದ, ನೃಶಂಸಾಚ - ಘಾತಕಳೂ ಆದ ಮಂಥರೆಯು, ಇಯಂ - ಇವಳೇ, ತಸ್ಯಾಃ - ಅಂತಹ ಈ ಮಂಥರೆಗೆ, ಯಥಾಮತಿ - ಬುದ್ಧ್ಯನುಸಾರವಾಗಿ, ಶಿಕ್ಷಾಂ - ಶಿಕ್ಷೆಯನ್ನು, ಕುರು - ಮಾಡು. ॥ ೯ ॥ ಶತ್ರುಘ್ನಶ್ಚ - ಶತ್ರುಘ್ನನು, ತದ್ವಚನಂ - ಆ ಮಾತನ್ನು, ಆಜ್ಞಾಯ - ತಿಳಿದು, ಭೃಶದುಃಖಿತಃ - ಬಹಳ ದುಃಖಗೊಂಡವನಾಗಿ, ಧೃತವ್ರತಃ - ಧರಿಸಲ್ಪಟ್ಟ, ಸತ್ಯವ್ರತವುಳ್ಳವನಾಗಿ, ಅಂತಃಪುರಚರಾನ್ - ಅಂತಃಪುರದಲ್ಲಿ ಸಂಚಾರಮಾಡುವ, ಸರ್ವಾನ್ - ಸಮಸ್ತರನ್ನೂ ಕುರಿತು, ಇತಿ - ಈ ವಕ್ಷ್ಯಮಾಣಪ್ರಕಾರವಾಗಿ, ಉವಾಚ - ಹೇಳಿದನು. ॥ ೧೦ ॥ ಯಯಾ - ಯಾವ ಮಂಥರೆಯಿಂದ, ಮೇ - ನನ್ನ, ಭ್ರಾತೄಣಾಂ - ಅಣ್ಣಂದಿರಿಗೆ, ತಥಾ - ಹಾಗೆಯೇ, ಪಿತುಃ - ತಂದೆಗೂ, ತೀವ್ರಂ - ಸಹಿಸಲಸಾಧ್ಯವಾದ, ದುಃಖಂ - ದುಃಖವು, ಉತ್ಪಾದಿತಂ - ಹುಟ್ಟಿಸಲ್ಪಟ್ಟಿತೋ, ಸೇಯಂ - ಆ ಈ ಮಂಥರೆಯು, ನೃಶಂಸಸ್ಯ - ಘಾತಕವಾದ, ಕರ್ಮಣಃ - ವ್ಯಾಪಾರಕ್ಕೆ ಫಲಂ - ಫಲವನ್ನು, ಅಶ್ನುತಾಂ - ಅನುಭವಿಸಲಿ. ॥ ೧೧ ॥ ತೇನ - ಆ ಶತ್ರುಘ್ನನಿಂದ, ಏವಂ - ಈ ಪರಿಯಾಗಿ, ಉಕ್ತಾ - ಹೇಳಲ್ಪಟ್ಟವಳಾಗಿ, ಆಶು - ಜಾಗ್ರತೆಯಾಗಿ, ಬಲವತ್ - ಬಲವಾಗಿ, ಗೃಹೀತಾ - ಹಿಡಿದುಕೊಳ್ಳ

ಬಳಿಗೆ ಎಳೆದುಕೊಂಡು ಹೋಗಿ “ ಎಲೈ ಶತ್ರುಘ್ನನೆ! ಯಾವ ಹೆಂಗಸಿನ ನಿಮಿತ್ತವಾಗಿ ನಿಮ್ಮ ಜನಕನು ಶ್ರೀರಾಮನನ್ನು ಅರಣ್ಯಕ್ಕೆ ಕಳುಹಿದನೋ, ಇನ್ನಾವಳ ನಿಮಿತ್ತವಾಗಿ ನಿಮ್ಮ ತಂದೆಯಾದ ದಶರಥ ಮಹೀಪಾಲನು ನಾಶವೊಂದಿದನೋ, ಆ ಹೆಂಗಸೇ ಇವಳು. ಇವಳು ಮಹಾ ಪಾಪಿ; ಮಹಾಘಾತಕಳು; ಇವಳ ಹೆಸರೇ ಮಂಥರೆ. ಈ ದುರಾತ್ಮಳನ್ನು ನಿನ್ನ ಬುದ್ಧಿಗೆ ತೋರಿದಂತೆ ಶಿಕ್ಷಿಸುವನಾಗು ” ಎಂದರು. ಆಗ ಶತ್ರುಘ್ನನು ಆ ದ್ವಾರಪಾಲಕರ ಮಾತುಗಳನ್ನು ಕೇಳಿ ಬಹಳವಾಗಿ ದುಃಖಿಸಿ ಅಂತಃಪುರ ಸ್ತ್ರೀಯರನ್ನುಕುರಿತು, “ಯಾವ ಸ್ತ್ರೀಯಿಂದ ನನಗೂ, ನಮ್ಮಣ್ಣನಿಗೂ, ಶ್ರೀರಾಮಮೂರ್ತಿಗೂ, ತಂದೆಯಾದ ದಶರಥರಾಯನಿಗೂ ಸಹ ಸಹಿಸಲಸದಳವಾದ ದುಃಖವು ಸಂಪ್ರಾಪ್ತವಾಯಿತೋ, ಅಂತಹ ದುಷ್ಟಳಾದ ಈ ಪಾಪಿಯು ತಾನುಮಾಡಿದ ಪಾಪಕರ್ಮಕ್ಕೆ ತಕ್ಕಫಲವನ್ನುಸವಿಯಲಿ” ಎಂದು ಹೇಳಿದನು. ॥ ೬-೧೧ ॥ ಶತ್ರುಘ್ನನೀರೀತಿಯಾಗಿ ಹೇಳಿ ಸಖೀಜನರಿಂದ ಸುತ್ತುವರೆಯಲ್ಪಟ್ಟ ಆ ಮಂಥ

ಏವ ಮುಕ್ತಾತು ತೇನಾಶು ಸಖೀಜನ ಸಮಾವೃತಾ ‖ ಗೃಹೀತಾ ಬಲವ
ತ್ಕುಬ್ಜಾ ಸಾತದ್ಗೃಹ ಮನಾದಯತ್ ‖ ೧೨ ‖ ತತಸ್ತು ಭೃಶಸಂತಪ್ತ ಸ್ತಸ್ಯಾ
ಸ್ಸರ್ವಸ್ಸಖೀಜನಃ ‖ ಕ್ರುದ್ಧಮಾಜ್ಞಾಯ ಶತ್ರುಘ್ನಂ ವಿಲಾಪಯತ ಸರ್ವಶಃ
‖ ೧೩ ‖ ಆಮಂತ್ರಯತ ಕೃತ್ಸ್ನಶ್ಚ ತಸ್ಯಾ ಸ್ಸರ್ವ ಸ್ಸಖೀಜನಃ ‖ ಯಥಾಯಂ
ಸಮುಪಕ್ರಾಂತೋ ನಿಶ್ಶೇಷಂ ನಃ ಕರಿಷ್ಯತಿ ‖ ೧೪ ‖ ಸಾನುಕ್ರೋಶಾಂ ವದಾ
ನ್ಯಾಂಚ ಧರ್ಮಜ್ಞಾಂ ಚ ಯಶಸ್ವಿನೀಂ ‖ ಕೌಸಲ್ಯಾಂ ಶರಣಂ ಯಾಮ ಸಾಹಿ
ನೋಽಸ್ತು ಧ್ರುವಾಗತಿಃ ‖ ೧೫ ‖ ಸಚ ರೋಷೇಣ ತಾಮ್ರಾಕ್ಷ ಶ್ಶತ್ರುಘ್ನ

ಲ್ಪಟ್ಟ, ಸಾಕುಬ್ಜಾ - ಆ ಮಂಥರೆಯು, ಸಖೀಜನಸಮಾವೃತಾ - ಸಖಿಯರಿಂದ ಸುತ್ತುವರೆಯಲ್ಪಟ್ಟವ ಳಾಗಿ, ತದ್ಗೃಹಂ - ಆ ರಾಜಗೃಹವನ್ನು, ಅನಾದಯತ್ - ಧ್ವನಿಗೊಳಿಸಿದಳು. ‖ ೧೨ ‖ ತತಃ - ಬಳಿಕ, ಸುಭೃಶಸಂತಪ್ತಾಃ - ಬಹಳ ಸಂತಾಪಗೊಂಡ, ಸರ್ವಃ - ಸಮಸ್ತವಾದ, ತಸ್ಯಾಃ - ಆ ಮಂಥ ರೆಯ, ಸಖೀಜನಃ - ಸ್ನೇಹಿತಜನರು, ಶತ್ರುಘ್ನಂ - ಶತ್ರುಘ್ನನನ್ನು, ಕೃದ್ಧಂ - ಕೋಪಿಷ್ಠನನ್ನಾಗಿ ಆಜ್ಞಾಯ - ತಿಳಿದು, ಸರ್ವಶಃ - ಸರ್ವಪ್ರಕಾರವಾಗಿ, ವಿಲಾಪಯತ - ವಿಲಪಿಸಿದರು. ‖ ೧೩ ‖ ತಸ್ಯಾಃ - ಆ ಮಂಥರೆಯ, ಕೃತ್ಸ್ನಃ - ಅಶೇಷವಾದ, ಸರ್ವಃ - ಸಮಸ್ತವಾದ, ಸಖೀಜನಃ - ಸಖೀ ಜನವು, ಅಮಂತ್ರಯತ - ಆಲೋಚಿಸಿತು, ಅಯಂ - ಈ ಶತ್ರುಘ್ನನು, ಯಥಾ - ಯಾವಪ್ರಕಾರ ವಾಗಿ, ಸಮುಪಕ್ರಾಂತಃ - ಆರಂಭಮಾಡಿದನೊ, ತಥಾ - ಹಾಗೆಯೇ, ನಃ - ನಮ್ಮನ್ನು, ನಿಶ್ಶೇಷಂ - ಉಳಿಯದಂತೆ, ಕರಿಷ್ಯತಿ - ಮಾಡುವನು. ‖ ೧೪ ‖ ಸಾನುಕ್ರೋಶಾಂ - ದಯೆಯಿಂದೊಡಗೂಡಿದ, ವದಾನ್ಯಾಂ - ದಾತೃವಾದ, (ಗೋ) ಇಂಪಾದ ಮಾತುಗಳುಳ್ಳ, ಧರ್ಮಜ್ಞಾಂ - ಧರ್ಮವನ್ನು ತಿಳಿದಿ ರುವ, ಯಶಸ್ವಿನೀಂ - ಕೀರ್ತಿವಂತಳಾದ, ಕೌಸಲ್ಯಾ - ಕೌಸಲ್ಯಾದೇವಿಯನ್ನು, ಶರಣಂ - ಗತಿಯ ನ್ನಾಗಿ, ಯಾಮ - ಹೊಂದೋಣ, ಸಾಹಿ - ಆ ಕೌಸಲ್ಯಾದೇವಿಯಾದರೆ, ನಃ - ನಮಗೆ, ಧ್ರುವಂ - ನಿಶ್ಚಯವಾಗಿಯೂ, ಗತಿಃ - ರಕ್ಷಣಾರ್ಥವಾಗಿ ಹೊಂದತಕ್ಕವಳು, ಅಸ್ತು - ಆಗಲಿ. ಇತಿ ಇಂತೆಂದು ಆಲೋಚಿಸಿತು. ‖ ೧೫ ‖ ಶತ್ರುತಾಪನಃ - ಶತ್ರುಗಳಿಗೆ ಭಯವನ್ನುಂಟುಮಾಡುವ, ಸಶತ್ರುಘ್ನಶ್ಚ ಆ ಶತ್ರುಘ್ನನೂಕೂಡ, ರೋಷೇಣ - ಕ್ರೋಧದಿಂದ ತಾಮ್ರಾಕ್ಷಃ - ಕೆಂಗಣ್ಣುಗಳುಳ್ಳವನಾಗಿ, ತದಾ-

ರೆಯನ್ನು ಹಿಡಿದು ಕೊಳ್ಳಲು, ಅವಳು ಮನೆಯೆಲ್ಲವೂ ಪ್ರತಿಧ್ವನಿತ ವಾಗುವಂತೆ ಘಟ್ಟಿಯಾಗಿ ಕೂಗಿಕೊಂಡಳು. ಆಗಲಾ ಕುಬ್ಜ ಮಂಥರೆಯ ಸಖೀಜನರೆಲ್ಲರೂ ಮಹಾ ದುಃಖವುಳ್ಳವ ರಾಗಿ ಶತ್ರುಘ್ನನಿಗೆ ಮಹಾ ಕೋಧವುಂಟಾಗಿರುವುದೆಂದು ತಿಳಿದುಕೊಂಡು ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಪಲಾಯನ ಸೂಕ್ತಿಯನ್ನು ಪಠಿಸಿದವರಾಗಿ "ಈ ಶತ್ರುಘ್ನನು ಆರಂಭಿಸಿ ರುವುದನ್ನು ನೋಡಿದರೆ ನಮ್ಮೆಲ್ಲರನ್ನೂ ನಿರ್ಮೂಲ ಗೊಳಿಸುವಂತೆ ತೋರುತ್ತದೆ. ನಾವು ದಯಾವತಿಯೂ, ದಾತಳೂ ಧರ್ಮಜ್ಞಳೂ, ಕೀರ್ತಿವಂತಳೂ ಆದ ಕೌಸಲ್ಯಾದೇವಿಯನ್ನು ಶರಣು ಹೊಂದೋಣ. ಆ ದೇವಿಯು ನಮ್ಮನ್ನು ಪರಿಪಾಲಿಸುತ್ತಾಳೆ." ಎಂದು ಮಾತನಾಡಿ ಕೊಂಡು ಆಕೆಯನ್ನು ಹೊಂದಿದರು. ‖ ೧೨-೧೫ ‖ ಆ ಬಳಿಕ ಶತ್ರುನಾಶಕನಾದ ಆಶತ್ರು ಘ್ನನು ಕೋಪದಿಂದ ಕೆಂಪಡರಿದ ಕಂಗಳುಳ್ಳವನಾಗಿ; ಆ ಸಮಯದಲ್ಲಿಯೇ ರೋದಿಸುತ್ತಿ

ಶತ್ರುತಾಪನಃ॥ ವಿಚಕರ್ಷ ತದಾ ಕುಬ್ಜಾಂ ಕ್ರೋಶಂತೀಂ ಧರಣೀತಲೇ ॥೧೬॥ ತಸ್ಯಾಹ್ಯಾಕೃಷ್ಯಮಾಣಾಯಾ ಮಂಥರಾಯಾ ಸ್ತತಸ್ತತಃ ॥ ಚಿತ್ರಂ ಬಹುವಿಧಂ ಭಾಂಡಂ ಪೃಥಿವ್ಯಾಂ ತದ್ವ್ಯಶೀರ್ಯತ ॥ ೧೭ ॥ ತೇನ ಭಾಂಡೇನ ಸಂಸ್ತೀರ್ಣಂ ಶ್ರೀಮದ್ರಾಜನಿವೇಶನಂ ॥ ಅಶೋಭತ ತದಾ ಭೂಯ ಶ್ಶಾರದಂ ಗಗನಂ ಯಥಾ ॥ ೧೮ ॥ ಸಬಲೀ ಬಲವತ್ಕ್ರೋಧಾದ್ಗೃಹೀತ್ವಾ ಪುರುಷರ್ಷಭಃ॥ ಕೈಕೇಯೀ ಮಭಿನಿರ್ಭರ್ತ್ಸ್ಯ ಬಭಾಷೇ ಪರುಷಂ ವಚಃ ॥ ೧೯ ॥ ತೈರ್ವಾಕ್ಯೈಃ ಪರುಷೈ ರ್ದುಃಖೈಃ ಕೈಕೇಯೀ ಭೃಶದುಃಖಿತಾ ॥ ಶತ್ರುಘ್ನ ಭಯಸಂತ್ರಸ್ತಾ ಪುತ್ರಂ ಶರಣ ಮಾಗತಾ ॥ ೨೦ ॥ ತಾಂ ಪ್ರೇಕ್ಷ್ಯ ಭರತಃ ಕ್ರುದ್ಧಂ ಶತ್ರುಘ್ನ

ಆಕಾಲದಲ್ಲಿ, ಕ್ರೋಶಂತೀಂ - ರೋದನಧ್ವನಿಯನ್ನು ಮಾಡುತ್ತಿರುವ, ಕುಬ್ಜಾಂ - ಮಂಥರೆಯನ್ನು, ಧರಣೀತಲೇ - ಭೂಪ್ರದೇಶದಲ್ಲಿ, ವಿಚಕರ್ಷತ - ಸೆಳೆದನು. ॥ ೧೬ ॥ ತತಸ್ತತಃ - ಅಲ್ಲಿಲ್ಲಿ, ಆಕೃಷ್ಯಮಾಣಾಯಾಃ - ಸೆಳೆಯಲ್ಪಡುತ್ತಿರುವ, ತಸ್ಯಾಮಂಥರಾಯಾಃ - ಆ ಮಂಥರೆಯ ಚಿತ್ರಂ - ನಾನಾಬಣ್ಣಗಳುಳ್ಳ, ಬಹುವಿಧಂ - ಬಹುಬಗೆಯಾದ, ತದ್ಭಾಂಡಂ - ಆ ಒಡಿವೆಗಳತಂಡವು, ಪೃಥಿವ್ಯಾಂ - ನೆಲದಲ್ಲಿ, ವ್ಯಶೀರ್ಯತ - ಎರಚಲಾಯಿತು. ॥ ೧೭ ॥ ತೇನಭಾಂಡೇನ - ಆ ಒಡಿವೆಗಳ ಸಮೂಹದಿಂದ, ಸಂಸ್ತೀರ್ಣಂ - ಎರಚಲ್ಪಟ್ಟ, ಶ್ರೀಮತ್ - ಸಂಪದ್ಯುಕ್ತವಾದ, ರಾಜನಿವೇಶನಂ - ಅರಮನೆಯು, ತದಾ - ಆ ಕಾಲದಲ್ಲಿ, ಭೂಯಃ - ಮತ್ತು, ಶಾರದಂ - ಶರತ್ಕಾಲಿಕವಾದ, ಗಗನಂ ಯಥಾ - ಆಕಾಶದಂತೆ, ಅಶೋಭತ - ಹೊಳೆಯುತ್ತಿದ್ದಿತು. ॥ ೧೮ ॥ ಬಲೀ - ಬಲವಂತನಾದ, ಪುರುಷರ್ಷಭಃ - ಪುರುಷಶ್ರೇಷ್ಠನಾದ, ಸಃ - ಆ ಶತ್ರುಘ್ನನು, ಕ್ರೋಧಾತ್ - ಕೋಪದಿಂದ, ಬಲವತ್ - ಬಲವಾಗಿ, ಗೃಹೀತ್ವಾ - ಹಿಡಿದುಕೊಂಡು, ಕೈಕೇಯೀಂ - ಕೈಕೇಯೀದೇವಿಯನ್ನು, ಅಭಿನಿರ್ಭರ್ತ್ಸ್ಯ - ಅಭಿಮುಖವಾಗಿ ಗರ್ಜಿಸಿ, ಪರುಷಂ - ಕ್ರೂರವಾದ, ವಚಃ - ಮಾತನ್ನು, ಬಭಾಷೇ - ನುಡಿದನು. ॥ ೧೯ ॥ ಕೈಕೇಯೀ - ಕೈಕೇಯೀದೇವಿಯು, ದುಃಖೈಃ - ದುಃಖಕರವಾದ, ಪರುಷೈಃ - ಕ್ರೂರಗಳಾದ, ತೈರ್ವಾಕ್ಯೈಃ - ಆ ಮಾತುಗಳಿಂದ, ಭೃಶದುಃಖಿತಾ - ಬಹಳ ಸಂಕಟಗೊಂಡವಳಾಗಿ, ಶತ್ರುಘ್ನಭಯಸಂತ್ರಸ್ತಾ - ಶತ್ರುಘ್ನನ ಭಯದಿಂದ ಹೆದರಿ, ಪುತ್ರಂ - ಮಗನನ್ನು, (ಭರತನನ್ನು) ಶರಣಂ - ರಕ್ಷಕನನ್ನಾಗಿ, ಆಗತಃ - ಹೊಂದಿದಳು. ॥ ೨೦ ॥ ಭರತಃ-ಭರತನು. ತಾಂ-ಆ ಕೈಕೇಯೀ

ರುವ ಆ ಮಂಥರೆಯನ್ನು ನೆಲದಲ್ಲಿ ಸೆಳೆದು ಕೊಂಡುಹೋಗಲು, ಆಕೆಯ ಭಾಂಡವೂ, ಅವಳು ತೊಟ್ಟಿದ್ದ ಆಭರಣಗಳ ತಂಡವೂ ಸಹ ತುಂಡುತುಂಡಾಗಿ ನೆಲದಮೇಲೆ ಚೆದರಿ ಹೋದುವು. ಆಗ ಆ ಭಾಂಡದ, ಆಭರಣಗಳ ಚೂರುಗಳಿಂದ ತುಂಬಿಹೋಗಿದ್ದ ಆ ಅರಮನೆಯು ಶರತ್ಕಾಲೀನವಾದ ಗಗನ ಮಂಡಲದಂತೆ ಬೆಳಗುತ್ತಲಿದ್ದಿತು. ಮಹಾ ಬಲಶಾಲಿಯಾದ ಆ ಶತ್ರುಘ್ನನು ಕ್ರೋಧದಿಂದ ಕುಬ್ಜ ಮಂಥರೆಯನ್ನು ಸೆಳೆದೊಯ್ದು ಕೈಕೇಯಿಯಿಂದ ಗದುಗದುರಿಸಲಾಗಿ, ಕಠಿನವಾಕ್ಯವನ್ನು ನುಡಿಯಲು, ಆ ಕೈಕೇಯಿಯು ಆ ಶತ್ರುಘ್ನನ ಪರುಷವಾಕ್ಕುಗಳಿಂದ ಬಹಳವಾಗಿ ಸಂಕಟ ಬಿದ್ದು ಶತ್ರುಘ್ನನಿಗೆ ಹೆದರಿ ಭರತಕುಮಾರನನ್ನು ಶರಣು ಹೊಂದಿದಳು. ॥ ೧೬-೨೦ ॥ ಆಗಲಾ ಭರತನು ನಿಜಜನನಿಯಾದ ಆ ಕೈಕೇಯಿಯನ್ನು

ಮಿದ ಮಬ್ರವೀತ್ ॥ ಅವಧ್ಯಾ ಸ್ಸರ್ವಭೂತಾನಾಂ ಪ್ರಮದಾಃ ಕ್ಷಮ್ಯತಾಮಿತಿ
॥ ೨೧ ॥ ಹನ್ಯಾಮಹ ಮಿಮಾಂ ಪಾಪಾಂ ಕೈಕೇಯೀಂ ದುಷ್ಟಚಾರಿಣೀಂ ॥
ಯದಿಮಾಂ ಧಾರ್ಮಿಕೋ ರಾಮೋ ನಾಸೂಯೇ ನ್ಮಾತೃಘಾತಕಂ ॥ ೨೨ ॥
ಇಮಾಮಪಿ ಹತಾಂ ಕುಬ್ಜಾಂ ಯದಿ ಜಾನಾತಿ ರಾಘವಃ ॥ ತ್ವಾಂಚ ಮಾಂಚ
ಹಿ ಧರ್ಮಾತ್ಮಾ ನಾಭಿಭಾಷಿಷ್ಯತೇ ಧ್ರುವಂ ॥ ೨೩ ॥ ಭರತಸ್ಯ ವಚಶ್ಶ್ರುತ್ವಾ
ಶತ್ರುಘ್ನೋ ಲಕ್ಷ್ಮಣಾನುಜಃ ॥ ನ್ಯವರ್ತತ ತತೋ ರೋಷಾ ತ್ತಾಂ ಮುಮೋಚ
ಚ ಮಂಥರಾಂ ॥ ೨೪ ॥ ಸಾಪಾದ ಮೂಲೇ ಕೈಕೇಯ್ಯಾ ಮಂಥರಾ ನಿಪ
ಪಾತಹ ॥ ನಿಶ್ವಸಂತೀ ಸುದುಃಖಾರ್ತಾ ಕೃಪಣಂ ವಿಲಲಾಪಚ ॥ ೨೫ ॥

ದೇವಿಯನ್ನು, ಪ್ರೇಕ್ಷ್ಯ - ಕಂಡು, ಕೃದ್ಧಂ - ಕೋಪಿಷ್ಠನಾದ, ಶತ್ರುಘ್ನಂ ಶತ್ರುಘ್ನನನ್ನು ಕುರಿತು, ಪ್ರಮದಾಃ-ಹೆಂಗಳು, ಸರ್ವಭೂತಾನಾಂ-ಸರ್ವಪ್ರಾಣಿಗಳಿಗೂ, ಅವಧ್ಯಾಃ-ವಧಾರ್ಹರಲ್ಲ, ಕ್ಷಮ್ಯತಾಂ-ಕ್ಷಮಿಸಲ್ಪಡಲಿ, ಇತಿ-ಇಂತೆಂದು, ಇದಂವಚನಂ-ಈ ಮಾತನ್ನು, ಅಬ್ರವೀತ್-ನುಡಿದನು. ॥ ೨೧ ॥ ಧಾರ್ಮಿಕಃ-ಧರ್ಮಿಷ್ಠನಾದ, ರಾಮಃ-ಶ್ರೀರಾಮನು, ಮಾತೃಘಾತಕಂ-ಮಾತೃಹತ್ಯೆಮಾಡಿದವನೆಂದು, ನನ್ನನ್ನು, ನಾಸೂಯೇದ್ಯದಿ - ಜಿಗುಪ್ಸೆಗೊಂಡವನಾಗದೆ ಹೋದರೆ, ಅಹಂ - ನಾನು, ಪಾಪಾಂ - ಪಾಪಿಷ್ಠಳಾದ, ದುಷ್ಟಚಾರಿಣೀಂ - ದುರ್ವ್ಯಾಪಾರವನ್ನು ಮಾಡಿರುವ, ಇಮಾಂಕೈಕೇಯೀಂ - ಈ ಕೈಕೇಯೀದೇವಿಯನ್ನು, ಹನ್ಯಾಂ-ಆಗಲೇ ಕೊಲ್ಲುತ್ತಿದ್ದೆನು. ॥ ೨೨ ॥ ಧರ್ಮಾತ್ಮಾ-ಧರ್ಮಿಷ್ಠನಾದ, ರಾಘವಃ - ಶ್ರೀರಾಮನು, ಇಮಾಂಕುಬ್ಜಾಮಪಿ - ಈ ಮಂಥರೆಯನ್ನೂ, ಹತಾಂ - ಕೊಲ್ಲಲ್ಪಟ್ಟವಳನ್ನಾಗಿ, ಜಾನಾತೀತಿ - ತಿಳಿದವನೇ ಆದರೆ, ತ್ವಾಂಚ - ನಿನ್ನನ್ನೂ, ಮಾಂಚ - ನನ್ನನ್ನೂ ಕೂಡ, ನಾಭಿಭಾಷಿಷ್ಯತೇಹಿ - ಮಾತಾಡಿಸಲಾರನಷ್ಟೆ, ಧ್ರುವಂ - ನಿಶ್ಚಯವು. ॥ ೨೩ ॥ ಭರತಸ್ಯ - ಭರತನ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಲಕ್ಷ್ಮಣಾನುಜಃ - ಲಕ್ಷ್ಮಣನ ತಮ್ಮನಾದ, ಶತ್ರುಘ್ನಃ - ಶತ್ರುಘ್ನನು, ತತಃ - ಬಳಿಕ, ರೋಷಾತ್ - ರೋಷದಿಂದ, ನ್ಯವರ್ತತ - ಹಿಂತಿರುಗಿದೆನು, ತಾಂಮಂಥರಾಂಚ - ಆ ಮಂಥರೆಯನ್ನು, ಮುಮೋಚ - ಬಿಟ್ಟನು. ॥ ೨೪ ॥ ಸಾಮಂಥರಾ-ಆ ಮಂಥರೆಯು, ಕೈಕೇಯ್ಯಾಃ - ಕೈಕೇಯೀದೇವಿಯ, ಪಾದಮೂಲೇ - ಪಾದ ಪ್ರದೇಶದಲ್ಲಿ, ನಿಪಪಾತಹ - ಬಿದ್ದಳು, ನಿಶ್ವಸಂತೀ - ನಿಟ್ಟುಸಿರು ಬಿಡುತ್ತ, ಸುದುಃಖಾರ್ತಾ - ಬಹಳ ದುಃಖದಿಂದ ಬಾಧಿತಳಾಗಿ, ಕೃಪಣಂ - ದೈನ್ಯವಾಗಿ, ವಿಲಲಾಪಚ - ವಿಲಾಪಮಾಡಿದಳು. ॥ ೨೫ ॥ ಭರತಸ್ಯ -

---

ಕಂಡು, ಕುಪಿತನಾದ ಶತ್ರುಘ್ನನನ್ನು ಕುರಿತು, "ಶತ್ರುಘ್ನ! ಸ್ವಲ್ಪ ನಿಧಾನಿಸು ಸ್ತ್ರೀಹತ್ಯೆಯನ್ನು ಮಾಡಬಾರದು; ಧರ್ಮಿಷ್ಠನಾದ ಶ್ರೀರಾಮನು ಮಾತೃಹತ್ಯೆಯನ್ನು ಮಾಡಿದವನೆಂದು ನನ್ನನ್ನು ಆಕ್ಷೇಪಿಸುವನಾಗದಿದ್ದರೆ, ದುರಾತ್ಮಳಾದ ಈ ನನ್ನ ತಾಯಿಯನ್ನು ನಾನೇ ಮೊದಲು ಕೊಲ್ಲುತ್ತಿರಲಿಲ್ಲವೆ? ಕೊಲ್ಲೇ ಕೊಲ್ಲುತ್ತಿದ್ದೆನು. ಆ ಮಹಾತ್ಮನು ಈ ಕುಬ್ಜ ಮಂಥರೆಯು ಹತಳಾದಳೆಂದು ಕೇಳಿದರೆ ನನ್ನನ್ನೂ ನಿನ್ನನ್ನೂ ತೊರೆದಾನು" ಎಂದು ಹೇಳಿದನು. ಆಗ ಶತ್ರುಘ್ನನು ಅಣ್ಣನ ಮಾತನ್ನಾಲಿಸಿ ಕೋಪವನ್ನುಳಿದು ಆ ಮಂಥರೆಯನ್ನು ತೊರೆದು ಹಿಂತಿರುಗಿದವನಾದನು. ॥ ೨೧-೨೪ ॥ ಆ ಬಳಿಕಲಾ ಮಂಥರೆಯು

ಶತ್ರುಘ್ನ ವಿಕ್ಷೇಪ ವಿಮೂಢ ಸಂಜ್ಞಾಂ
ಸಮೀಕ್ಷ್ಯ ಕುಬ್ಜಾಂ ಭರತಸ್ಯ ಮಾತಾ ॥
ಶನೈ ಸ್ಸಮಾಶ್ವಾಸಯ ದಾರ್ತ ರೂಪಾಂ
ಕ್ರೌಂಚೀಂ ವಿಲಗ್ನಾಮಿವ ವೀಕ್ಷಮಾಣಾಂ ॥ ೨೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಸಪ್ತತಿತಮಸ್ಸರ್ಗಃ.

ಭರತಸ, ಮಾತಾ - ತಾಯಿಯು, ಶತ್ರುಘ್ನವಿಕ್ಷೇಪವಿಮೂಢಸಂಜ್ಞಾಂ, ಶತ್ರುಘ್ನ - ಶತ್ರುಘ್ನನ, ವಿಕ್ಷೇಪ - ಸೆಳತದಿಂದ, ವಿಮೂಢಸಂಜ್ಞಾಂ - ಶೂನ್ಯವಾದ ಪ್ರಜ್ಞೆಯುಳ್ಳ, ಆರ್ತರೂಪಾಂ - ದೀನವಾದ ಸ್ವರೂಪವುಳ್ಳ, ವಿಲಗ್ನಾಂ - ಪಂಜರದಲ್ಲಿ ಸಿಲುಕಿದ, ಕ್ರೌಂಚೀಮಿವ - ಕ್ರೌಂಚಪಕ್ಷಿಯಂತೆ, ವೀಕ್ಷಮಾಣಾಂ - ನೋಡುತ್ತಿರುವ, ಕುಬ್ಜಾಂ - ಮಂಥರೆಯನ್ನು, ಸಮೀಕ್ಷ್ಯ - ಕಂಡು, ಶನೈಃ - ಮೆಲ್ಲಗೆ, ಸಮಾಶ್ವಾಸಯತ್ - ಸಮಾಧಾನಗೊಳಿಸಿದಳು. ॥ ೨೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಸಪ್ತತಿತಮಸ್ಸರ್ಗಃ.

ದುಃಖದಿಂದ ಪೀಡಿತಳಾಗಿ, ನಿಟ್ಟುಸಿರುಗಳನ್ನು ಬಿಡುತ್ತ ಕೈಕೇಯಿಯ ಪಾದಮೂಲದಲ್ಲಿ ಪಸಾತಳಾದಳು. ಆ ಸಮಯದಲ್ಲಿ ಶತ್ರುಘ್ನ ಪೀಡಿತಳಾದ ಆ ಕುಬ್ಜೆಯನ್ನು ಭರತ ಮಾತೆಯಾದ ಕೈಕೇಯಿಯು ಸಮಾಧಾನ ವಚನಗಳನ್ನು ಹೇಳಿದವಳಾದಳು. ॥ ೨೫-೨೬ ॥

ಇಂತಿದು ಶತ್ರುಘ್ನಕೃತ ಮಂಥರಾ ಗರ್ವಭಂಗವೆಂಬ
ಎಪ್ಪತ್ತೆಂಟನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕೋನಾಶೀತಿತಮಸ್ಸರ್ಗಃ.

ತತಃ ಪ್ರಭಾತಸಮಯೇ ದಿವಸೇಚ ಚತುರ್ದಶೇ ॥ ಸಮೇತ್ಯ ರಾಜ ಕರ್ತಾರೋ ಭರತಂ ವಾಕ್ಯ ಮಬ್ರುವನ್ ॥ ೧ ॥ ಗತೋ ದಶರಥ ಸ್ಸ್ವರ್ಗಂ ಯೋನೋ ಗುರುತರೋ ಗುರುಃ॥ರಾಮಂ ಪ್ರವ್ರಾಜ್ಯ ವೈ ಜ್ಯೇಷ್ಠಂ ಲಕ್ಷ್ಮಣಂಚ ಮಹಾಬಲಂ ॥ ೨ ॥ ತ್ವಮದ್ಯ ಭವ ನೋ ರಾಜಾ ರಾಜಪುತ್ರ ! ಮಹಾಯಶಃ ॥ ಸಂಗತ್ಯಾ ನಾಪರಾಧ್ನೋತಿ ರಾಜ್ಯಮೇತ ದನಾಯಕಂ ॥ ೩ ॥ ಆಭಿಷೇಚನಿಕಂ ಸರ್ವಮಿದ ಮಾದಾಯ ರಾಘವ ! ॥ ಪ್ರತೀಕ್ಷತೇ ತ್ವಾಂ

ತತಃ - ಬಳಿಕ, ಪ್ರಭಾತಸಮಯೇ - ಪ್ರಾತಃಕಾಲದಲ್ಲಿ, ಚತುರ್ದಶೇದಿವಸೇಚ - ಹದಿನಾಲ್ಕನೆಯ ದಿವಸದಲ್ಲಿ, ರಾಜಕರ್ತಾರಃ - ರಾಜಾಭಿಷೇಕಮಾಡತಕ್ಕ ಜನರು, ಸಮೇತ್ಯ - ಬಂದು, ಭರತಂ- ಭರತನನ್ನು ಕುರಿತು, ವಾಕ್ಯಂ - ಮಾತನ್ನು, ಆಬ್ರುವಿತ್ - ನುಡಿದನು. ॥ ೧ ॥ ಯಃ - ಯಾವ ದಶರಥರಾಯನು, ನಃ - ನಮಗೆ, ಗುರುತರೋಗುರುಃ - ಪರಮಗುರುವಾದವನೋ, ಸಃ - ಅಂತಹ, ದಶರಥರಾಯನು, ಜ್ಯೇಷ್ಠಂ - ದೊಡ್ಡಮಗನಾದ, ರಾಮಂ - ಶ್ರೀರಾಮನನ್ನು, ಮಹಾಬಲಂ - ಮಹಾ ಬಲವಂತನಾದ, ಲಕ್ಷ್ಮಣಂಚ - ಲಕ್ಷ್ಮಣನನ್ನೂ, ಪ್ರವ್ರಾಜ್ಯ - ಅರಣ್ಯಕ್ಕೆಹೊರಡಿಸಿ, ಸ್ವರ್ಗಂ- ಸ್ವರ್ಗವನ್ನು, ಗತಃ - ಹೊಂದಿದನು. ॥ ೨ ॥ ಹೇ ರಾಜಪುತ್ರ - ಎಲೈ ಭರತನೇ, ಹೇ ಮಹಾಯಶಃ - ಎಲೈ ಮಹಾ ಕೀರ್ತಿವಂತನೇ, ತ್ವಂ - ನೀನು, ಅದ್ಯ - ಈಗ, ನಃ - ನಮಗೆ, ರಾಜಾ - ಅರಸು, ಭವ - ಆಗು, ಏತದ್ರಾಜ್ಯಂ - ಈ ರಾಜ್ಯಸ್ಥಜನಸಮೂಹವು, ಅನಾಯಕಂ - ನಾಯಕನಾದ ರಾಜನಿಲ್ಲದ್ದಾದರೂ, ಸಂಗತ್ಯಾ - ದೇವಗತಿಯಿಂದ, ನಾಪರಾಧ್ನೋತಿ - ಒಬ್ಬರಿಗೊಬ್ಬರು ದ್ರೋಹ ಮಾಡುವದಿಲ್ಲ. ॥ ೩ ॥ ಹೇ ರಾಘವ - ಎಲೈ ರಘುವಂಶೋತ್ಪನ್ನನೇ, ಹೇ ನೃಪಾತ್ಮಜ - ಎಲೈ ಅರಸು ಮಗನೇ, ಸ್ವಜನಃ - ಸ್ವಕೀಯವಾದ ಜನವು, ಆಭಿಷೇಚನಿಕಂ - ಅಭಿಷೇಕಕ್ಕೆ ಉಪಯುಕ್ತ

ಆ ಮೇಲೆ ಹದಿನಾಲ್ಕನೆಯ ದಿನದ ಪ್ರಾತಃಕಾಲದಲ್ಲಿ ರಾಜನನ್ನಾಗಿ ಮಾಡಲು ಯೋಗ್ಯರಾದವರೆಲ್ಲರೂ, ಒಂದು ಕಡೆಸೇರಿ ಯೋಚಿಸಿದವರಾಗಿ, ಭರತಕುಮಾರನಿದ್ದೆಡೆಗೆ ಬಂದು ಹೀಗೆಂದರು. " ಓ ದಶರಥರಾಜ ನಂದನನಾದ ಭರತಕುಮಾರನೆ ! ನಮ್ಮೆಲ್ಲರಿಗೂ ಗುರುವೂ, ಶ್ರೇಷ್ಠನೂ ಆದ ದಶರಥಮಹಾರಾಜನು ಜ್ಯೇಷ್ಠಪುತ್ರನಾದ ಶ್ರೀರಾಮಮೂರ್ತಿಯನ್ನೂ, ಮಹಾ ಬಲನಾದ ಲಕ್ಷ್ಮಣಸ್ವಾಮಿಯನ್ನು ಅರಣ್ಯಕ್ಕೆ ಕಳುಹಿದನು. ಆಮೇಲೆ ತಾನೂ ಮರಣವಾಂತನು. ಅಧಿಕವಾದ ಕೀರ್ತಿಯುಳ್ಳವನೂ, ರಾಜಕುಮಾರನೂ ಆದ ಎಲೈ ಭರತನೆ ! ನೀನು ನಮ್ಮೆಲರಿಗೂ ಮಹಾರಾಜನಾಗು. ಇಷ್ಟು ದಿನಗಳವರೆವಿಗೂ ರಾಜನಿಲ್ಲದಿದ್ದರೂ ನಮ್ಮ ರಾಜ್ಯವು ದೈವಯೋಗದಿಂದ ಪರರಾಯರ ಪಾಲಾಗದಿರುವುದು. ಆದುದರಿಂದ ಆಲಸ್ಯಮಂಗೈಯದೆ ನೀನು ಪಟ್ಟಾಭಿಷಿಕ್ತನಾಗಬೇಕು. ಅಯ್ಯಾ ಭರತನೆ !

ಸ್ವಜನಶ್ಶ್ರೇಣಯಶ್ಚ ನೃಪಾತ್ಮಜ! ॥ ೪ ॥ ರಾಜ್ಯಂ ಗೃಹಾಣ ಭರತ! ಪಿತೃ
ಪೈತಾಮಹಂ ಧ್ರುವಂ ॥ ಅಭಿಷೇಚಯ ಚಾತ್ಮಾನಂ ಪಾಹಿ ಚಾಸ್ಮಾನ್ನರ
ರ್ಷಭ! ॥ ೫ ॥ ಆಭಿಷೇಚನಿಕಂ ಭಾಂಡಂ ಕೃತ್ವಾ ಸರ್ವಂ ಪ್ರದಕ್ಷಿಣಂ ॥
ಭರತಸ್ತಂಜನಂ ಸರ್ವಂ ಪ್ರತ್ಯುವಾಚ ಧೃತವ್ರತಃ ॥ ೬ ॥ ಜ್ಯೇಷ್ಠಸ್ಯ ರಾಜತಾ
ನಿತ್ಯಮುಚಿತಾಹಿ ಕುಲಸ್ಯ ನಃ ॥ ನೈವಂ ಭವಂತೋ ಮಾಂ ವಕ್ತುಮರ್ಹಂತಿ
ಕುಶಲಾ ಜನಾಃ ॥ ೭ ॥ ರಾಮಃ ಪೂರ್ವೋಹಿ ನೋ ಭ್ರಾತಾ ಭವಿಷ್ಯತಿ

ವಾದ, ಸರ್ವಂ - ಸಮಸ್ತವಾದ, ಇದಂ - ಈ ದ್ರವ್ಯಜಾತವನ್ನು, ಆದಾಯ - ತೆಗೆದುಕೊಂಡು, ತ್ವಾಂ - ನಿನ್ನನ್ನು, ಪ್ರತೀಕ್ಷತೇ - ನಿರೀಕ್ಷಣೆಮಾಡಿಕೊಂಡಿರುವುದು, ಶ್ರೇಣಯಶ್ಚ - ಪ್ರಜೆಗಳೂ, ನಿರೀಕ್ಷಂತೆ - ಎದುರು ನೋಡಿಕೊಂಡಿದ್ದಾರೆ. ಹೇ ಭರತ - ಎಲೈ ಭರತನೇ, ಆತ್ಮಾನಂ - ನಿನ್ನನ್ನು, ಅಭಿಷೇಚಯ - ಅಭಿಷೇಕಮಾಡಿಕೋ, ಅಸ್ಮಾಂಶ್ಚ - ನಮ್ಮನ್ನೂ, ಪಾಹಿ - ಸಂರಕ್ಷಣೆಮಾಡು. ॥ ೫ ॥ ಭರತಃ - ಭರತನು, ಧೃತವ್ರತಃ - ಧರಿಸಲ್ಪಟ್ಟ ಸತ್ಯವ್ರತವುಳ್ಳವನಾಗಿ, ಸರ್ವಂ - ಸಮಸ್ತವಾದ, ಆಭಿಷೇಚನಿಕಂ - ಅಭಿಷೇಕೋಪಯುಕ್ತವಾದ, ಭಾಂಡಂ - ಸಾಮಗ್ರಿಯನ್ನು, ಪ್ರದಕ್ಷಿಣಂ ಕೃತ್ವಾ - ಪ್ರದಕ್ಷಿಣ ನಮಸ್ಕಾರವನ್ನುಮಾಡಿ, ಸರ್ವಂ - ಸಮಸ್ತವಾದ, ತಂಜನಂ - ಆ ಜನವನ್ನು ಕುರಿತು, ಪ್ರತ್ಯುವಾಚ - ಪ್ರತ್ಯುತ್ತರಕೊಟ್ಟನು. ॥ ೬ ॥ ಹೇ ಕುಶಲಾಃ - ಎಲೈ ಬುದ್ಧಿವಂತರಾದ, ಜನಾಃ - ಜನಗಳಿರಾ, ನಃ - ನಮ್ಮ, ಕುಲಸ್ಯ - ಕುಲದ, ಜ್ಯೇಷ್ಠಸ್ಯ - ಜ್ಯೇಷ್ಠಪುತ್ರನಿಗೆ, ರಾಜತಾ - ರಾಜತ್ವವು, ನಿತ್ಯಂ - ಸರ್ವಕಾಲದಲ್ಲಿಯೂ, ಉಚಿತಾಹಿ - ಯೋಗ್ಯವಷ್ಟೆ, ಭವಂತಃ - ನೀವು, ಮಾಂ - ನನ್ನನ್ನು ಕುರಿತು, ಏವಂ - ಈಪರಿಯಾಗಿ, ವಕ್ತುಂ - ಹೇಳಲು, ನಾರ್ಹಂತಿ - ಅರ್ಹರಾಗಬೇಡಿರಿ. ॥ ೭ ॥ ಹಿ - ಯಾವ ಕಾರಣ, ನಃ - ನಮಗೆ, ರಾಮಃ - ಶ್ರೀರಾಮನು, ಪೂರ್ವಃಭ್ರಾತಾ - ಹಿರಿಯಣ್ಣನಾದವನೋ, ತಸ್ಮಾತ್ - ಆ ಕಾರಣ, ಸಃ - ಆ ಶ್ರೀರಾಮನು, ಮಹೀ

ಪಟ್ಟಾಭಿಷೇಕ ಯೋಗ್ಯವಾದ ಪದಾರ್ಥಗಳೆಲ್ಲವನ್ನೂ ತೆಗೆದುಕೊಂಡು ನಿನ್ನ ಬಂಧುಜನರೆಲ್ಲರೂ ನಿನ್ನನ್ನೇ ಎದುರು ನೋಡುತ್ತಿದ್ದಾರೆ. ಪುರನಿವಾಸಿಗಳೂ ಸಹ ನಿನ್ನಾಗಮನವನ್ನೇ ನಿರೀಕ್ಷಿಸುತ್ತಿರುವರು. ಇಷ್ಟೆಯಲ್ಲದೆ ಕೇಳೈ ಭರತನೆ! ತಂದೆ ತಾತಂದಿರ ಕಾಲದಿಂದಲೂ ಬಂದಿರುವುದೂ, ಅಚಲವಾದುದೂ ಆದ ಈ ಸಾಕೇತರಾಜ್ಯವನ್ನಂಗೀಕರಿಸು. ನೀನೀರಾಜ್ಯದಲ್ಲಿ ಅಭಿಷಿಕ್ತನಾಗು; ಇಂತು ರಾಜ್ಯಭಿಷಿಕ್ತನಾಗಿ ನಮ್ಮೆಲ್ಲರನ್ನೂ ಪರಿಪಾಲಿಸುವವನಾಗು.'' ॥ ೧-೫ ॥ ಹೀಗೆ ಹೇಳಿದ ರಾಜಕಾರ್ಯಧುರಂಧರರ ನುಡಿಗಳನ್ನಾಲಿಸಿದ ಭರತನು ದೃಢಪ್ರತಿಜ್ಞೆಯುಳ್ಳವನಾಗಿ ಆ ರಾಜಾಭಿಷೇಕ ಸಾಮಾಗ್ರಿಗಳಿಗೆ ಪ್ರದಕ್ಷಿಣ ನಮಸ್ಕಾರವಂಗೈದು ಆ ಜನರನ್ನು ಕುರಿತು ಈ ರೀತಿ ಹೇಳಿದನು. “ಓ ಸತ್ಪುರುಷರಿರಾ! ಈ ನಮ್ಮ ಮನೆತನದವರಲ್ಲಿ ಬಹು ಕಾಲದಿಂದಲೂ ಹಿರಿಮಗನು ರಾಜ್ಯಾಭಿಷೇಕಕ್ಕೆ ತಕ್ಕವನೆನಿಸಿದ್ದಾನೆ. ನಮ್ಮ ವಂಶದವರ ಪದ್ಧತಿಯೀರೀತಿಯಿರುವಾಗ ಮಹಾ ಸಮರ್ಥರಾದ ನೀವು ಹೀಗೆ ಹೇಳಬಹುದೆ? ಶ್ರೀರಾಮನು ನಮ್ಮೆಲ್ಲರಿಗೂ ಹಿರಿಯನು; ಆದುದರಿಂದ ಆತನು ರಾಜ್ಯಾಧಿಕಾರದಲ್ಲಿ ಅಭಿಷಿಕ್ತನಾಗಿ ರಾಜ್ಯಪರಿಪಾಲನೆಯನ್ನು ಮಾಡುವಂತೆ ಮಾಡಬೇಕು. ಶ್ರೀರಾಮ

ಮಹೀಪತಿಃ ॥ ಅಹಂ ತ್ವರಣ್ಯೇ ವತ್ಸ್ಯಾಮಿ ವರ್ಷಾಣಿ ನವಪಂಚಚ ॥ ೮ ॥
ಯುಜ್ಯತಾಂ ಮಹತೀ ಸೇನಾ ಚತುರಂಗ ಮಹಾಬಲಾ ॥ ಆನಯಿಷ್ಯಾಮ್ಯಹಂ
ಜ್ಯೇಷ್ಠಂ ಭ್ರಾತರಂ ರಾಘವಂ ವನಾತ್ ॥ ೯ ॥ ಅಭಿಷೇಚನಕಂ ಚೈವ ಸರ್ವ
ಮೇತ ದುಪಸ್ಕೃತಂ ॥ ಪುರಸ್ಕೃತ್ಯ ಗಮಿಷ್ಯಾಮಿ ರಾಮಹೇತೋ ರ್ವನಂ
ಪ್ರತಿ ॥ ೧೦ ॥ ತತ್ರೈವ ತಂ ನರವ್ಯಾಘ್ರ ಮಭಿಷಿಚ್ಯ ಪುರಸ್ಕೃತಂ ॥ ಆನೇ
ಷ್ಯಾಮಿತು ವೈ ರಾಮಂ ಹವ್ಯವಾಹ ಮಿವಾಧ್ವರಾತ್ ॥ ೧೧ ॥ ನ ಸಕಾಮಾಂ
ಕರಿಷ್ಯಾಮಿ ಸ್ವಾ ಮಿಮಾಂ ಮಾತೃಗಂಧಿನೀಂ ॥ ವನೇ ವತ್ಸ್ಯಾಮ್ಯಹಂ ದುರ್ಗೇ

ಪತಿಃ - ಅರಸು, ಭವಿಷ್ಯತಿ - ಆಗುವನು, ಅಹಂತು - ನಾನಾದರೆ, ಅರಣ್ಯೇ - ವನದಲ್ಲಿ, ನವಪಂಚಚ- ಹದಿನಾಲ್ಕಾದ, ವರ್ಷಾಣಿ - ವರ್ಷಗಳು, ವತ್ಸ್ಯಾಮಿ - ಇರುತ್ತೇನೆ, ಚತುರಂಗಮಹಾಬಲಾ, ಚತುಃ- ನಾಲ್ಕಾದ, ಅಂಗ - ಆನೆ ಕುದುರೆ ರಥ ಕಾಲುಬಲಗಳೇ, ಮಹಾಬಲಾ - ದೊಡ್ಡಬಲವಾಗುಳ್ಳ, ಮಹತೀ - ದೊಡ್ಡದಾದ, ಸೇನಾ - ಸೈನ್ಯವು, ಯುಜ್ಯತಾಂ - ಸಿದ್ಧಪಡಿಸಲಾಗಲಿ, ಜ್ಯೇಷ್ಠಂಭ್ರಾತರಂ- ದೊಡ್ಡಣ್ಣನಾದ, ರಾಘವಂ - ಶ್ರೀರಾಮುನನ್ನು, ಅಹಂ - ನಾನು, ವನಾತ್ - ಅರಣ್ಯದಿಂದ, ಆನಯಿಷ್ಯಾಮಿ - ಕರೆದುಕೊಂಡು ಬರುವೆನು. ॥ ೯ ॥ ಸರ್ವಂ - ಸಮಸ್ತವಾದ, ಉಪಸ್ಕೃತಂ - ಮಂತ್ರಗಳಿಂದ ಪ್ರೋಕ್ಷಿತವಾದ, ಏತತ್ ಅಭಿಷೇಚನಿಕಂ - ಈ ಅಭಿಷೇಕ ಸಾಮಗ್ರಿಯನ್ನು, ರಾಮ ಹೇತೋಃ - ಶ್ರೀರಾಮನ ನಿಮಿತ್ತವಾಗಿ, ಪುರಸ್ಕೃತ್ಯ - ಮುಂದೆಮಾಡಿಕೊಂಡು, ವನಂಪ್ರತಿ - ವನ ವನ್ನು ಕುರಿತು, ಗಮಿಷ್ಯಾಮಿ - ಹೋಗುವೆನು. ॥ ೧೦ ॥ ನರವ್ಯಾಘ್ರಂ - ಪುರುಷಶ್ರೇಷ್ಠನಾದ, ಪುರಸ್ಕೃತಂ - ಪೂಜಿಸಲ್ಪಟ್ಟ, ತಂರಾಮಂ - ಆ ಶ್ರೀರಾಮುನನ್ನು, ತತ್ರೈವ - ಅಲ್ಲಿಯೇ, ಅಭಿಷಿಚ್ಯ- ಅಭಿಷೇಕಮಾಡಿ, ಅಧ್ವರಾತ್ - ಯಜ್ಞಶಾಲೆಯಿಂದ, ಹವ್ಯವಾಹಮಿವ - ಅಗ್ನಿಯನ್ನಂತೆ, ಆನೇಷ್ಯಾಮಿವೈ - ಕರೆದುಕೊಂಡು ಬರುವೆನಷ್ಟೆ. ॥ ೧೧ ॥ ಸ್ವಾಂ - ಸ್ವಕೀಯಗಳಾದ, ಮಾತೃ ಗಂಧಿನೀಂ - ಸ್ವಲ್ಪಮಾತ್ರವಾದ ಮಾತೃಭಾವವುಳ್ಳ, ಇಮಾಂ - ಈ ಕೈಕೇಯಿಯಾದೇವಿಯನ್ನು, ಸಕಾಮಾಂ - ಕೋರಿಕೆಯಿಂದೊಡಗೂಡಿದವಳನ್ನಾಗಿ, ನಕರಿಷ್ಯಾಮಿ - ಮಾಡಲಾರೆನು, ಅಹಂ -

ಮೂರ್ತಿಗೆ ಬದಲಾಗಿ ಆತನ ತಮ್ಮನಾದ ನಾನು ಹದಿನಾಲ್ಕುವರುಷಗಳ ವನವಾಸವನ್ನು ಮಾಡುತ್ತೇನೆ. ಗಜ, ತುರಗ, ರಥ, ಪದಾತಿಗಳೆಂಬ ಮಹಾ ಬಲವುಳ್ಳದೂ ಆದ ನಮ್ಮ ಅಪಾರಸೇನೆಯನ್ನು ಒಟ್ಟುಗೂಡಿಸಿರಿ. ನಾನೀ ಸೈನ್ಯವೆಲ್ಲವನ್ನೂ ಹಿಂದಿ ಟ್ಟುಕೊಂಡು, ಜ್ಯೇಷ್ಠನೂ, ಒಡಹುಟ್ಟಿದವನೂ ಆದ ಶ್ರೀರಾಮುನನ್ನು ಕರೆದು ಕೊಂಡು ಬರುತ್ತೇನೆ. ಈಗ ಶೇಖರಿಸಲಾಗಿರುವ ಸಾಕೇತರಾಜ್ಯಾಭಿಷೇಕ ಸಾಮಾಗ್ರಿಯೆಲ್ಲ ವನ್ನೂ ಜತೆಯಲ್ಲಿಯೇ ತೆಗೆದುಕೊಂಡು ಶ್ರೀರಾಮಮೂರ್ತಿಯ ನಿಮಿತ್ತವಾಗಿ ಅರಣ್ಯವನ್ನು ಸಾರುತ್ತೇನೆ. ॥ ೬-೧೦ ॥ ಈ ರೀತಿ ಅಡವಿಯನ್ನು ಸಾರಿದವನಾಗಿ ಆ ಅಡವಿಯಲ್ಲಿಯೇ ಪುರುಷ ಪುಂಗವನಾದ ಶ್ರೀರಾಮುನಿಗೆ ರಾಜ್ಯಾಭಿಷೇಕ ಮಹೋತ್ಸವವನ್ನು ಆಗುಮಾಡಿ, “ ಯಜ್ಞಶಾಲೆಯಿಂದ ಸ್ವಗೃಹಕ್ಕೆ ಅಗ್ನಿಹೋತ್ರವನ್ನು ತೆಗೆದುಕೊಂಡು ಬರುವಂತೆ ” ನಮ್ಮ ಣ್ಣನಾದ ಶ್ರೀರಾಮುಮೂರ್ತಿಯನ್ನು ಈ ಅಯೋಧ್ಯಾನಗರಿಗೆ ಕರೆದುಕೊಂಡು ಬರು

ರಾಮೋ ರಾಜಾ ಭವಿಷ್ಯತಿ ॥ ೧೨ ॥ ಕ್ರಿಯತಾಂ ಶಿಲ್ಪಿಭಿಃ ಪಂಥಾ ಸಮಾನಿ ವಿಷಮಾಣಿಚ ॥ ರಕ್ಷಿಣಶ್ಚಾನುಸಂಯಾಂತು ಪಥಿ ದುರ್ಗ ವಿಚಾರಕಾಃ ॥೧೩॥ ಏವಂ ಸಂಭಾಷಮಾಣಂ ತಂ ರಾಮಹೇತೋರ್ನೃಪಾತ್ಮಜಂ ॥ ಪ್ರತ್ಯುವಾಚ ಜನಸ್ಸರ್ವ ಶ್ರೀಮದ್ವಾಕ್ಯ ಮನುತ್ತಮಂ ॥ ೧೪ ॥ ಏವಂ ತೇ ಭಾಷಮಾಣಸ್ಯ ಪದ್ಮಾಶ್ರೀರುಪತಿಷ್ಠತಾತ್ ॥ ಯಸ್ತ್ವಂ ಜ್ಯೇಷ್ಠೇ ನೃಪಸುತೇ ಪೃಥಿವೀಂ ದಾತು

ನಾನು, ದುರ್ಗೇ - ಹೋಗಲಸಾಧ್ಯವಾದ, ವನೇ - ಅರಣ್ಯದಲ್ಲಿ, ಪತ್ಸ್ಯಾಮಿ - ಇರುತ್ತೇನೆ, ರಾಮಃ - ಶ್ರೀರಾಮನು, ರಾಜಾ - ಅರಸು, ಭವಿಷ್ಯತಿ - ಆಗುವನು. ॥ ೧೨ ॥ ಶಿಲ್ಪಿಭಿಃ - ಮಾರ್ಗಕಾರರಿಂದ, ಪಂಥಾಃ - ಮಾರ್ಗಗಳು, ಕ್ರಿಯತಾಂ - ಮಾಡಲ್ಪಡಲಿ, ವಿಷಮಾಣಿ - ನಿಮ್ನೋನ್ನತ ಪ್ರದೇಶಗಳು, ಸಮಾನಿ - ಸಮವಾಗಿ, ಕ್ರಿಯಂತಾಂ - ಮಾಡಲ್ಪಡಲಿ, ಪಥಿ - ಮಾರ್ಗದಲ್ಲಿ, ದುರ್ಗವಿಚಾರಕಾಃ - ದುರ್ಗಸ್ಥಳಗಳನ್ನು ವಿಚಾರಮಾಡಿ ಶೋಧನೆಮಾಡುವವರು, ರಕ್ಷಿಣಶ್ಚ - ಮರ್ಗಸಂರಕ್ಷಕರೂ, ಸಂಯಾಂತು - ಹೋಗಲಿ. ॥ ೧೩ ॥ ಏವಂ - ಈಪರಿಯಾಗಿ, ರಾಮಹೇತೋಃ - ಶ್ರೀರಾಮನ ನಿಮಿತ್ತವಾಗಿ, ಸಂಭಾಷಮಾಣಂ - ಮಾತನಾಡುತ್ತಿರುವ, ನೃಪಾತ್ಮಜಂ - ಅರಸುಮಗನಾದ, ತಂ - ಆ ಭರತನನ್ನು ಕುರಿತು, ಸರ್ವಃ - ಸಮಸ್ತವಾದ, ಜನಃ - ಜನವು, ಶ್ರೀಮತ್ - ಸಂಪದ್ಯುಕ್ತವಾದ, ಅನುತ್ತಮಂ - ಸರ್ವೋತ್ತಮವಾದ, ವಾಕ್ಯಂ - ಮಾತನ್ನು, ಪ್ರತ್ಯುವಾಚ - ಪ್ರತ್ಯುತ್ತರವನ್ನು ಕೊಟ್ಟಿತು. ॥ ೧೪ ॥ ಯಸ್ತ್ವಂ - ಯಾವ ನೀನು, ಜ್ಯೇಷ್ಠೇ - ಹಿರಿಯಣ್ಣನಾದ, ನೃಪಸುತೇ - ರಾಜಕುವರನಾದ ರಾಮನಲ್ಲಿ, ಪೃಥಿವೀಂ - ನೆಲವನ್ನು, ದಾತುಂ - ಕೊಡಲು, ಇಚ್ಛಸಿ - ಇಚ್ಛಿಸುವೆಯೋ, ತಸ್ಯ - ಅಂತಹ, ಏವಂಭಾಷಮಾಣಸ್ಯ - ಈಪರಿಮಾತನಾಡುತ್ತಿರುವ, ತೇ-ನಿನಗೆ,

---

ತ್ತೇನೆ ಅಲ್ಲದೆ ನಾನು ನನ್ನ ತಾಯಿಯಾದ (ತಾಯಿಯೆಂಬ ಚಿಹ್ನೆಯನ್ನು ಧರಿಸಿರುವ) ಕೈಕೇಯಿಯ ಕೋರಿಕೆಯನ್ನೆಂದಿಗೂ ಸಫಲವಾದುದನ್ನಾಗಿ ಮಾಡುವುದಿಲ್ಲ. ನಾನು ಇನ್ನುಮೇಲೆ ಪ್ರವೇಶಿಸಲಸದಳವಾದ ಅರಣ್ಯದಲ್ಲಿಯೇ ವಾಸ ಮಾಡುತ್ತೇನೆ. ಶ್ರೀರಾಮಮೂರ್ತಿಯಿನ್ನುಮೇಲೆ ಸಾಕೇತ ಸಿಂಹಾಸನಾಧೀಶನಾಗಲು ಅರ್ಹನಾಗುತ್ತಾನೆ. ಅಯ್ಯಾ ಪುರುಷಶ್ರೇಷ್ಠರೆ! ಮತ್ತೂ ಹೇಳುತ್ತೇನೆ; ಕೇಳಿರಿ; ಶಿಲ್ಪಿಗಳಿಂದ ಮಾರ್ಗದಲ್ಲಿರುವ ಹಳ್ಳತಿಟ್ಟಿಗಳನ್ನು ಸಮನಾಗುವಂತೆ ಮಾಡಿಸಿರಿ. ಅಲ್ಲದೆ ಮಾರ್ಗದಲ್ಲಿ ದುರ್ಗಪ್ರಚಾರವನ್ನು ತಿಳಿದ ರಕ್ಷಕ ಭಟರು ನಮ್ಮನ್ನು, ಹಿಂಬಾಲಿಸುವಂತೆ ಮಾಡಿರಿ. ನಾನು ಹೋಗಿ ಶ್ರೀರಾಮನನ್ನು ಕರೆದುಕೊಂಡು ಬರುತ್ತೇನೆ. ಆತನು ಅಯೋಧ್ಯಾನಗರಿಗೆ ಅರಸಾಗುತ್ತಾನೆ" ಈ ಪ್ರಕಾರವಾಗಿ ಶ್ರೀರಾಮನಿಗೋಸುಗ ನುಡಿಯುತ್ತಿರುವ ರಾಜಕುವರನಾದ ಭರತನ ಮಾತುಗಳನ್ನು ಕೇಳಿ ಅಲ್ಲಿಗೆ ಬಂದಿದ್ದ ಜನವೆಲ್ಲವೂ, ಸರ್ವೋತ್ತಮವಾದುದೂ, ಶುಭಕರವಾದುದೂ ಆದ ಈ ಮಾತನ್ನಾಡಿದರು. "ಓ ದಶರಥರಾಜನಂದನನೆ! ಭರತನೆ! ಈ ಸಾಕೇತರಾಜ್ಯಸಂಪದವು ನಿನ್ನ ಕರಗತವಾಗಿರುವುದು. ಇಂತಹ ರಾಜ್ಯವನ್ನು ನೀನು ಧರ್ಮಮಾರ್ಗಾನುವರ್ತಿಯಾಗಿ ಅಣ್ಣನಾದ ಶ್ರೀರಾಮಮೂರ್ತಿಗೆ ಕೊಡಲಪೇಕ್ಷಿಸಿರುತ್ತೀಯೆ. ಇಂತಹ ಧರ್ಮಸ್ವಭಾವವುಳ್ಳ ನಿನಗೆ ಕಮಲನಿವಾಸಿನಿಯಾದ ಲಕ್ಷ್ಮಿಯು ಒಲಿಯುತ್ತಾಳೆ." ಆ ಬಳಿಕ ಆ

ನಿಚ್ಛಸಿ ॥ ೧೫ ॥ ಅನುತ್ತಮಂ ತದ್ವಚನಂ ನೃಪಾತ್ಮಜ ಪ್ರಭಾಷಿತಂ ಸಂಶ್ರವಣೇ ನಿಶಮ್ಯಚ॥ಪ್ರಹರ್ಷಜಾ ಸ್ತಂ ಪ್ರತಿ ಬಾಷ್ಪಬಿಂದವೋ ನಿಪೇತು ರಾರ್ಯಜನನ ನೇತ್ರಸಂಭವಾಃ ॥ ೧೬ ॥

ಊಚುಸ್ತೇ ವಚನಮಿದಂ ನಿಶಮ್ಯ ಹೃಷ್ಟಾ
ಸ್ಸಾಮಾತ್ಯಾ ಸ್ಸಪರಿಷದೋ ವಿಯಾತ ಶೋಕಾಃ ॥
"ಪಂಥಾನಂ ನರವರ ! ಭಕ್ತಿಮಾ‌ರ್ಜ ಜನಶ್ಚ
ವ್ಯಾದಿಷ್ಟ ಸ್ತವ ವಚನಾಚ್ಚ ಶಿಲ್ಪಿವರ್ಗಃ" ॥ ೧೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನಾಶೀತಿತಮಸ್ಸರ್ಗಃ.

ಪದ್ಮಾ - ಕಮಲಾಶ್ರಯಳಾದ, ಶ್ರೀಃ - ಲಕ್ಷ್ಮೀದೇವಿಯು, ಉಪತಿಷ್ಠತಾತ್ - ಸಮಿಾಪವರ್ತಿಯಾಗಿರಲಿ. ॥ ೧೫ ॥ ಅನುತ್ತಮಂ - ಸರ್ವೋತ್ತಮವಾದ, ನೃಪಾತ್ಮಜಪ್ರಭಾಷಿತಂ - ರಾಜಕುಮಾರನಾದ ಭರತನಿಂದ ಹೇಳಲಾದ, ಸಂಶ್ರವಣೇ - ಶ್ರೀರಾಮನನ್ನು ಕರೆತರುವ ಪ್ರತಿಜ್ಞಾವಿಷಯದಲ್ಲಿ, ತದ್ವಚನಂ - ಆ ಮಾತನ್ನು, ನಿಶಮ್ಯ - ಕೇಳಿ, ತಂಪ್ರತಿ-ಆ ಭರತನನ್ನು ಕುರಿತು, ಆರ್ಯಜನನೇತ್ರಸಂಭವಾಃ-ಪೂಜ್ಯರಾದ ಜನರ ಮುಖದಲ್ಲಿಯ ಕಣ್ಣುಗಳಿಂದ ಹುಟ್ಟಿದ, ಪ್ರಹರ್ಷಜಾಃಬಾಷ್ಪಬಿಂದವಃ-ಆನಂದಬಾಷ್ಪಗಳು, ನಿಪೇತುಃ - ಬಿದ್ದುವು. ॥ ೧೬ ॥ ಸಾಮಾತ್ಯಾಃ - ಮಂತ್ರಿಗಳಿಂದೊಡಗೂಡಿದ, ಸಪರಿಷದಃ - ಆ ಸಭಾಜನರಿಂದೊಡಗೂಡಿದ, ತೇ - ಆ ಜನರು, ಇದಂವಚನಂ - ಈ ಮಾತನ್ನು, ನಿಶಮ್ಯ - ಕೇಳಿ, ಹೃಷ್ಟಾಃ - ಸಂತೋಷಗೊಂಡವರಾಗಿ, ವಿಯಾತಶೋಕಾಃ - ಹೋಗಲಾಡಿಸಲ್ಪಟ್ಟ ವ್ಯಸನವುಳ್ಳವರಾಗಿ, ಹೇ ನರವರ - ಎಲೈ ಮನುಷ್ಯಶ್ರೇಷ್ಠನೇ, ತವ - ನಿನ್ನ, ವಚನಾತ್ - ಮಾತಿನಿಂದ, ಭಕ್ತಿಮಾರ್ಜ-ರಾಜಭಕ್ತಿಯುಳ್ಳ, ಜನಶ್ಚ-ರಕ್ಷಕಜನವೂ, ಶಿಲ್ಪಿವರ್ಗಃ - ಮಾರ್ಗಕಾರರ ಗುಂಪು, ಪಂಥಾನಂ - ಮಾರ್ಗವನ್ನು ಕುರಿತು, ವ್ಯಾದಿಷ್ಟಃ - ಆಜ್ಞಾಪಿಸಲಾಯಿತು, ಇತಿ - ಇಂತೆಂದು, ಊಚುಃ - ಹೇಳಿದರು. ॥ ೧೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನಾಶೀತಿತಮಸ್ಸರ್ಗಃ.

ಸಭೆಯಲ್ಲಿದ್ದವರೆಲ್ಲರೂ, ದುಃಖವಿವರ್ಜಿತರಾಗಿ ಭರತನನ್ನು ನೋಡಿ, "ಭಲಾ ! ಭರತಕುಮಾರ ! ನೀನೀಗ ಹೇಳಿದ ಮಾತುಗಳು ಮಮನೋಹರವಾಗಿರುವುವು." ಎಂದು ಹೇಳಿ ಪೂಜ್ಯರಾದ ಆ ರಾಜ್ಯಾಭಿಷೇಕಕರ್ತರೆಲ್ಲರೂ ಸಂತೋಷದಿಂದ ಆನಂದಬಾಷ್ಪಗಳನ್ನು ಸುರಿಸಿದರು. ಆ ಬಳಿಕ ಮಂತ್ರಿಗಳೆಲ್ಲರೂ, ರಾಜ್ಯಾಭಿಷೇಕಕರ್ತರೊಡನೆಯೂ, ಸಭಿಕರೊಡನೆಯೂ ಒಡಗೂಡಿದವರಾಗಿ ಪರಮಾನಂದವನ್ನಾಂತು ಶೋಕವನ್ನು ತೊರೆದು ಭರತಕುಮಾರನನ್ನು ನೋಡಿ, "ಪುರುಷೋತ್ತಮನಾದ ಭರತನೆ ! ನೀನೀಗ ಹೇಳಿದ ನುಡಿಯನ್ನಾಲಿಸಿದವರೂ, ರಾಜಭಕ್ತಿಯುಳ್ಳವರೂ ಆದ ಜನರೆಲ್ಲರಿಗೂ, ಶ್ರೀರಾಮನನ್ನುಕುರಿತು ಪಯಣಿಸುವ ಮಾರ್ಗವನ್ನು ಸಮಗೊಳಿಸುವ ಶಿಲ್ಪಿಗಳೂ ಪರಮ ಸಂತೋಷದಿಂದ ನಿನ್ನಾಣತಿಯನ್ನು ಕೈಗೊಂಡು ತಮ್ಮ ತಮ್ಮ ಕಾರ್ಯವನ್ನು ಮಾಡುತ್ತಾರೆ" ಎಂದು ಹೇಳಿದರು. ॥ ೧೧-೧೭ ॥

ಇಂತಿದು ಭರತಕುಮಾರಗದಿತ ಶ್ರೀರಾಮಾನಯನ ಸಂಕಲ್ಪವಿಧಾನ ವಿವರಣವೆಂಬ ಎಪ್ಪತ್ತೊಂಭತ್ತನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಅಶೀತಿತಮಸ್ಸರ್ಗಃ.

ಅಥ ಭೂಮಿಪ್ರದೇಶಜ್ಞಾ ಸ್ಸೂತ್ರಕರ್ಮ ವಿಶಾರದಾಃ ॥ ಸ್ವಕರ್ಮಾಭಿರತಾ ಶ್ಶೂರಾಃ ಖನಕಾ ಯಂತ್ರಕಾ ಸ್ತಥಾ ॥ ೧ ॥ ಕರ್ಮಾಂತಿಕಾ ಸ್ಥಪತಯಃ ಪುರುಷಾ ಯಂತ್ರ ಕೋವಿದಾಃ॥ ತಥಾ ವರ್ಧಕಯ ಶ್ಚೈವ ಮಾರ್ಗಿಣೋ ವೃಕ್ಷ ತಕ್ಷಕಾಃ ॥ ೨ ॥ ಕೂಪಕಾರಾ ಸ್ಸುಧಾಕಾರಾ ವಂಶಕರ್ಮಕೃತ ಸ್ತಥಾ॥ ಸಮರ್ಥಾ ಯೇಚ ದ್ರಷ್ಟಾರಃ ಪುರತಸ್ತೇ ಪ್ರತಸ್ಥಿರೇ ॥ ೩ ॥ ಸತು ಹರ್ಷಾ

ಅಥ - ಬಳಿಕ, ಭೂಮಿಪ್ರದೇಶಜ್ಞಾಃ - ನಿಮ್ನೋನ್ನತ ಪ್ರದೇಶಗಳನ್ನು ಕಂಡಿರುವ, (ಗೋ + ಮ) ನಾನಾ ಪ್ರದೇಶಗಳನ್ನು ತಿಳಿದಿರುವ, ಸೂತ್ರಕರ್ಮವಿಶಾರದಾಃ, ಸೂತ್ರಕರ್ಮ - ನೂಲು ಮಟ್ಟವಾಗಿ ಕೆಲಸ ಮಾಡುವದರಲ್ಲಿ, ವಿಶಾರದಾಃ-ಬುದ್ಧಿವಂತರಾದ, (ಗೊ) ನೇಯುವುದರಲ್ಲಿ ಸಮರ್ಥರಾದ (ಗೋ + ಮ) ಪಾಲಕ್ಕಿಮೊದಲಾದ ಪದಾರ್ಥನಿರ್ಮಾಣದಲ್ಲಿಯೂ ಸೂತ್ರಗ್ರಹಣದಲ್ಲಿಯೂ ಸಮರ್ಥರಾದ, ಸ್ವಕರ್ಮಾಭಿರತಾಃ - ತಮಗೆ ಒಪ್ಪಿಸಿದ ಕೆಲಸಗಳಲ್ಲಿ ಆಸಕ್ತರಾದ, ಶೂರಾಃ - ಶೂರರಾದ, ಖನಕಾಃ - ಅಗೆಯುವವರು, ಯಂತ್ರಕಾಃ - ಮೃಗಗಳನ್ನೂ ಪಕ್ಷಿಗಳನ್ನೂ ಹಿಡಿಯುವದಕ್ಕೆ ಸಾಧಕವಾದ ಬಲೆ ಮುಂತಾದವುಗಳನ್ನು ಮಾಡುವದರಲ್ಲಿ ಸಮರ್ಥರಾದ, ತಥಾ - ಹಾಗೆಯೇ, ಕರ್ಮಾಂತಿಕಾಃ - ಚಂಗೂಲಿ ಜನರು, ಸ್ಥಪತಯಃ-ಕೆಲಸಗಾರರ ಮುಖಂಡರು, ಯಂತ್ರಕೋವಿದಾಃ-ಮರದಲ್ಲಿಮಾಡತಕ್ಕ ದಪ್ಪದ ಕಂಭಗಳೇ ಮೊದಲಾದ ಕೆಲಸಗಳಲ್ಲಿ ಸಮರ್ಥರಾದವರೂ, ಪುರುಷಾಃ - ರಾಜಪುರುಷರೂ, ವರ್ಧಕಯಶ್ಚೈವ - ಮರಗೆಲಸ ಮಾಡುವವರೂ, ಮಾರ್ಗಿಣಃ-ಮಾರ್ಗಶೋಧಕರೂ, ವೃಕ್ಷತಕ್ಷಕಾಃ - ಗಿಡಗಳನ್ನು ಛೇದಿಸುವವರೂ, ಕೂಪಕಾರಾಃ - ಭಾವಿಗಳನ್ನು ಅಗೆಯುವವರೂ, ತಥಾ - ಹಾಗೆಯೇ, ವಂಶಕರ್ಮಕೃತಃ - ಬಿದುರಿನಿಂದ ಮಾಡತಕ್ಕ ಚಾಪೆ ಮಕ್ಕರಿ ಮುಂತಾದವುಗಳನ್ನು ಮಾಡುವವರೂ, (ಮ್ಯಾದರೂ,) ಸಮರ್ಥಾಃ - ಸಮರ್ಥರಾದ, ದ್ರಷ್ಟಾರಃ - ಮಾರ್ಗವನ್ನು ನೋಡತಕ್ಕವರು, ಯೇ - ಯಾರೋ, ತೇ - ಅವರೆಲ್ಲರೂ, ಪುರತಃ - ಮುಂಭಾಗದಲ್ಲಿ, ಪ್ರತಸ್ಥಿರೇ - ಹೊರಟರು. ॥ ೩ ॥ ವಿಪುಲಃ - ವಿಸ್ತಾರವಾದ, ಸಃಜನೋಘಃ - ಆ ಜನಸಮುದಾ

ಅನಂತರದಲ್ಲಿ ಭೂಪ್ರದೇಶಗಳೆಲ್ಲವನ್ನೂ ಚೆನ್ನಾಗಿ ತಿಳಿದವರೂ, ನೂಲು ಮಟ್ಟವನ್ನು ಅನುಸರಿಸಿ ಮಾಡಬೇಕಾದ ಕಾರ್ಯವನ್ನು ಮಾಡುವುದರಲ್ಲಿ ಮಹಾ ಸಾಮರ್ಥ್ಯವಂತರೂ, ತಮ್ಮ ತಮ್ಮ ಕೆಲಸಗಳನ್ನು ನಾಜೋಕಾಗಿ ಮಾಡಬಲ್ಲವರೂ, ಯುದ್ಧರಂಗಗಳಲ್ಲಿ ಸ್ವಲ್ಪವಾದರೂ ಭಯವಿಲ್ಲದೆ ಯುದ್ಧ ಮಾಡುವವರೂ, ಅಗೆಯುವುದರಲ್ಲಿ ಮಹಾ ಸಾಮರ್ಥ್ಯವುಳ್ಳವೂ, ಯಂತ್ರಗಳನ್ನು ಮಾಡುವುದರಲ್ಲಿ ನಿಪುಣರಾದವರೂ, ಮಾರ್ಗವನ್ನು ಮಾಡುವವರೂ, ಗಿಡಮರಗಳನ್ನು ಕತ್ತರಿಸುವುದರಲ್ಲಿ ಶಕ್ತಿಯುಳ್ಳವರೂ, ಗಾರೆಗೆಲಸವನ್ನು ಮಾಡುವವರೂ, ಬಿದಿರುಗೆಲಸದಲ್ಲಿ ಚತುರತೆಯುಳ್ಳವರೂ, ಎಲ್ಲ ಕೆಲಸಗಳಲ್ಲಿಯೂ ಹೆಚ್ಚಾದ ಸಾಮರ್ಥ್ಯವುಳ್ಳವರೂ, ಮಾರ್ಗವನ್ನು ಚೆನ್ನಾಗಿ ನದಿಯುವರೆವಿಗೆ ನೋಡಿರುವವರೂ ಆದ

ತ್ತಮುದ್ದೇಶಂ ಜನೌಘೋ ವಿಪುಲಃ ಪ್ರಯಾನ್ ॥ ಅಶೋಭತ ಮಹಾವೇಗ
ಸ್ಸಮುದ್ರ ಇವ ಪರ್ವಣಿ ॥ ೪ ॥ ತೇ ಸ್ವವಾರಂ ಸಮಾಸ್ಥಾಯ ವರ್ತ್ಮಕರ್ಮಣಿ
ಕೋವಿದಾಃ ॥ ಕರಣೈರ್ವಿವಿಧೋಪೇತೈಃ ಪುರಸ್ತಾತ್ಸಂಪ್ರತಸ್ಥಿರೇ ॥ ೫ ॥
ಲತಾವಲ್ಲೀಶ್ಚ ಗುಲ್ಮಾಂಶ್ಚ ಸ್ಥಾಣೂನಶ್ಮನ ಏವಚ ॥ ಜನಯಾಂಚಕ್ರಿರೇ
ಮಾರ್ಗಂ ಛಿಂದಂತೋ ವಿವಿಧಾನ್ ದ್ರುಮಾನ್ ॥ ೬ ॥ ಅವೃಕ್ಷೇಷು ಚ ದೇಶೇಷು
ಕೇಚಿದ್ವೃಕ್ಷಾನರೋಪಯನ್ ॥ ಕೇಚಿತ್ಕುಠಾರೈಷ್ಟಂಕೈಶ್ಚ ದಾತ್ರೈಶ್ಛಿಂದನ್
ಕ್ವಚಿತ್ಕ್ವಚಿತ್ ॥ ೭ ॥ ಅಪರೇ ವೀರಿಣಸ್ತಂಬಾನ್ ಬಲಿನೋ ಬಲವತ್ತರಾಃ ॥

ಯುವು, ಹರ್ಷಾತ್ - ಸಂತೋಷದಿಂದ, ತಮುದ್ದೇಶಂ - ಆ ಶ್ರೀರಾಮನಿರುವ ಪ್ರದೇಶವನ್ನು ಕುರಿತು, ಪ್ರಯಾನ್ - ಹೋಗುತ್ತಿರುವದಾಗಿ, ಪರ್ವಣಿ - ಪೂರ್ಣಿಮಾಸ್ಯೆಯಲ್ಲಿ, ಮಹಾವೇಗಃ - ಮಹಾ ವೇಗವುಳ್ಳ, ಸಮುದ್ರ ಇವ - ಕಡಲಿನಂತೆ, ಅಶೋಭತ - ಹೊಳೆಯುತ್ತಿದ್ದಿತು, ವರ್ತ್ಮಕರ್ಮಣಿ - ಮಾರ್ಗವನ್ನು ಮಾಡುವುದರಲ್ಲಿ, ಕೋವಿದಾಃ - ಬುದ್ಧಿಶಾಲಿಗಳಾದ, ತೇ - ಆ ಜನರು, ಸ್ವವಾರಂ - ತಮ್ಮ ತಮ್ಮ ಗುಂಪನ್ನು, ಸಮಾಸ್ಥಾಯ-ಕರೆದುಕೊಂಡು, ವಿವಿಧೋಪೇತೈಃ - ನಾನಾಬಗೆಗಳಾದ, ಕರಣೈಃ- ಆಯುಧಗಳೊಡನೆ, ಪುರಸ್ತಾತ್ - ಮುಂಗಡೆ, ಸಂಪ್ರತಸ್ಥಿರೇ - ಹೊರಟರು. ॥ ೪-೫ ॥ ಲತಾಃ - ಲತೆಗಳನ್ನು, ವಲ್ಲೀಶ್ಚ - ಬಳ್ಳಿಗಳನ್ನು, ಗುಲ್ಮಾಂಶ್ಚ - ಬೀಲಿಗಳನ್ನು, ಸ್ಥಾಣೂನ್ - ಗೂಟಗಳನ್ನು, ಅಶ್ಮನಏವಚ - ಪಾಷಾಣಗಳನ್ನೂ, ವಿವಿಧಾನ್ - ನಾನಾಬಗೆಗಳಾದ, ದ್ರುಮಾನ್ - ಗಿಡಗಳನ್ನು, ಛಿಂದಂತಃ - ಕತ್ತರಿಸುತ್ತ, ಮಾರ್ಗಂ - ಮಾರ್ಗವನ್ನು, ಜನಯಾಂಚಕ್ರೇ - ಮಾಡಿದರು. ॥ ೬ ॥ ಕೇಚಿತ್ - ಕೆಲವರು, ಅವೃಕ್ಷೇಷು - ಗಿಡಗಳಿಲ್ಲದಿರುವ, ದೇಶೇಷು - ಪ್ರದೇಶಗಳಲ್ಲಿ, ವೃಕ್ಷಾನ್ - ಗಿಡಗಳನ್ನು, ಅರೋಪಯನ್ - ನಾಟಿಸಿದರು, ಕೇಚಿತ್ - ಕೆಲವರು, ಕುಠಾರೈಃ - ಕೊಡಲಿಗಳಿಂದ, ಟಂಕೈಶ್ಚ - ಟಂಕಾಯುಧಗಳಿಂದಲೂ, ದಾತ್ರೈಃ - ಕುಡುಗೋಲುಗಳಿಂದಲೂ ಮಚ್ಚುಗಳಿಂದಲೂ, ಕ್ವಚಿತ್ಕ್ವಚಿತ್ - ಒಂದೊಂದು ಕಡೆ, ಛಿಂದನ್ - ಛೇದಿಸಿದರು. ॥ ೭ ॥ ಬಲಿನಃ - ಬಲವಂತರಾದ, ಅಪರೇ - ಮತ್ತೆ ಕೆಲವರು, ವೀರಿಣಸ್ತಂಬಾನ್ - ಲಾವಂಚವೇ ಮೊದಲಾಗುಳ್ಳ ತೃಣವಿಶೇಷ

ಹಾನನನೆಲ್ಲರೂ ಮುಂದಾಗಿ ಹೊರಟವರಾದರು. ಆ ಬಳಿಕಲಾ ಜನಸಮೂಹವೆಲ್ಲ ಸಂತೋಷದಿಂದ ಆ ಪ್ರದೇಶವನ್ನು ಕುರಿತು ತೆರಳುತ್ತಿದ್ದರು. ಆಗಲಾ ಸೈನ್ಯವು, "ಪರ್ವಕಾಲದಲ್ಲಿ ಮಹಾವೇಗದಿಂದ ಬರುತ್ತಿರುವ ಮಹಾ ಸಾಗರದಂತೆ" ಕಾಣುತ್ತಿದ್ದಿತು. ಇಷ್ಟೆಯಲ್ಲದೆ ಮಾರ್ಗವನ್ನು ವಿಂಗಡಿಸುವುದರಲ್ಲಿ ಪಂಡಿತರಾದವರೆಲ್ಲ ತಮ್ಮ ಸಮೂಹದೊಡಗೂಡಿ, ನಾನಾ ವಿಧಗಳಾದ ಆಯುಧಗಳಿಂದ ಹೊರಟವರಾದರು. ಆಮೇಲೆ ಅವರೆಲ್ಲರೂ, ಬಳ್ಳಿಗಳನ್ನೂ, ಗುಲ್ಮಗಳನ್ನೂ, ಕಲ್ಲುಗಳನ್ನೂ, ಗುಂಡುಗಳನ್ನೂ, ಇನ್ನೂ ಅನೇಕ ವಿಧಗಳಾದ ವೃಕ್ಷಗಳನ್ನೂ ಕತ್ತರಿಸಿ ಮಾರ್ಗವನ್ನುಸಮಗೊಳಿಸಿದರು. ॥ ೧-೬ ॥ ಅವರಲ್ಲಿ ಕೆಲವರು ವೃಕ್ಷಗಳಿಲ್ಲದ ಪ್ರದೇಶಗಳಲ್ಲಿ ವೃಕ್ಷಗಳನ್ನು ನೆಟ್ಟವರಾದರು ; ಇನ್ನು ಕೆಲವರು ದಾರಿಗೆ ಅಡ್ಡವಾಗಿ ಬಂದ ವೃಕ್ಷಗಳನ್ನು ಕೊಡಲಿಗಳಿಂದಲೂ, ಗಡಾರಿಗಳಿಂದಲೂ ಮೇಲಕ್ಕೆಬ್ಬಿಸಿ ಸಮಗಟ್ಟಿದರು ; ಮತ್ತೆ ಕೆಲ ಬಲಶಾಲಿಗಳಾದವರು ಮಾರ್ಗದಲ್ಲಿ ದಟ್ಟವಾಗಿ ಬೆಳೆದುಕೊಂಡಿದ್ದ

ವಿಧಮಂತಿಸ್ಮ ದುರ್ಗಾಣಿ ಸ್ಥಲಾನಿಚ ತತಸ್ತತಃ ॥ ೮ ॥ ಅಪರೇ ಪೂರಯನ್ ಕೂಪಾನ್ ಪಾಂಸುಭಿ ಶ್ಶ್ವಭ್ರ ಮಾಯತಂ ॥ ನಿಮ್ನಭಾಗಾಂ ಸ್ತತಃಕೇಚಿತ್ ಸಮಾಂ ಶ್ಚಕ್ರು ಸ್ಸಮಂತತಃ ॥ ೯ ॥ ಬಬಂಧು ರ್ಬಂಧನೀಯಾಂಶ್ಚ ಕ್ಷೋದ್ಯಾನ್ ಸಂಚುಕ್ಷುದು ಸ್ತದಾ ॥ ಬಿಭಿದು ರ್ಭೇದನೀಯಾಂಶ್ಚ ತಾಂಸ್ತಾನ್ ದೇಶಾ ನ್ನರಾ ಸ್ತದಾ ॥ ೧೦ ॥ ಅಚಿರೇಣೈವ ಕಾಲೇನ ಪರಿವಾಹಾನ್ ಬಹೂದಕಾನ್ ॥ ಚಕ್ರು ರ್ಬಹುವಿಧಾಕಾರಾನ್ ಸಾಗರಪ್ರತಿಮಾನ್ ಬಹೂನ್ ॥ ೧೧ ॥ ನಿರ್ಜಲೇಷುಚ ದೇಶೇಷು ಖಾನಯಾಮಾಸು ರುತ್ತಮಾನ್ ॥ ಉದಪಾನಾನ್ ಬಹುವಿಧಾನ್ ವೇದಿಕಾ ಪರಿಮಂಡಿತಾನ್ ॥ ೧೨ ॥ ಸಸುಧಾ ಕುಟ್ಟಿಮತಲಃ ಪ್ರಪು

ಗಳನ್ನು, ವಿಧಮಂತಿ - ಕತ್ತರಿಸಿದರು, ಬಲವತ್ತರಾಃ - ಬಹಳ ಬಲಿಷ್ಠರು, ತತಸ್ತತಃ - ಅಲ್ಲಲ್ಲಿ, ದುರ್ಗಾಣಿ - ಬೆಟ್ಟದ ದುರ್ಗಗಳನ್ನು, ಸ್ಥಲಾನಿಚ - ಪ್ರದೇಶಗಳನ್ನು, ವಿಧಮಂತಿಸ್ಮ - ಹೊಡೆದು ಸಮಮಾಡಿದರು (ಗೋ) ಸಮಭೂಮಿಗಳನ್ನಾಗಿ ಮಾಡಿದರು. ॥ ೮ ॥ ಅಪರೇ - ಕೆಲವರು, ಕೂಪಾನ್ - ಭಾವಿಗಳನ್ನು, ಆಯತಂ - ವಿಸ್ತಾರವಾದ, ಶ್ವಭ್ರಂ - ಗುಣಿಗಳನ್ನು, ಪಾಂಸುಭಿಃ - ಧೂಳಿಗಳಿಂದ, ಅಪೂರಯನ್ - ತುಂಬಿಸಿದರು, ತತಃ - ಬಳಿಕ, ಕೇಚಿತ್-ಕೆಲವರು, ನಿಮ್ನಭಾಗಾಂಶ್ಚ-ತಗ್ಗಾಗಿರುವ ಭೂಮಿಗಳನ್ನು, ಸಮಂತತಃ - ಎಲ್ಲಾ ಕಡೆಯಲ್ಲಿಯೂ, ಸಮಾನ್ - ಸಮಭೂಮಿಗಳನ್ನಾಗಿ, ಚಕ್ರುಃ - ಮಾಡಿದರು. ॥ ೯ ॥ ತದಾ - ಆಗ, ನರಾಃ - ಮನುಷ್ಯರು, ಬಂಧನೀಯಾನ್ - ಕಟ್ಟತಕ್ಕ ಸ್ಥಳಗಳನ್ನು, ಬಬಂಧುಃ - ಕಟ್ಟಿದರು, ಕ್ಷೋಧ್ಯಾನ್ - ಚೂರ್ಣಮಾಡತಕ್ಕ ಸ್ಥಳಗಳನ್ನು, ಸಂಚಿಕ್ಷುದುಃ - ಚೂರ್ಣಮಾಡಿದರು, ಭೇದನೀಯಾನ್ - ಹೊಡಿಯತಕ್ಕ, ತಾಂಸ್ತಾನ್ದೇಶಾನ್ - ಆಯಾಯ ಪ್ರದೇಶಗಳನ್ನು, ಬಿಭಿದುಃ - ಒಡೆದರು. ॥ ೧೦ ॥ ಅಚಿರೇಣೈವಕಾಲೇನ - ಸ್ವಲ್ಪ ಕಾಲದಲ್ಲಿಯೇ, ಬಹೂದಕಾನ್ - ಬಹಳ ನೀರುನಿಲ್ಲತಕ್ಕ, ಪ್ರವಾಹಾನ್ - ಪ್ರವಾಹಗಳನ್ನು, ಬಹುವಿಧಾಕಾರಾನ್ - ನಾನಾಬಗೆಗಳಾದ ಆಕಾರವುಳ್ಳವುಗಳನ್ನಾಗಿಯೂ, ಚಕ್ರುಃ - ಮಾಡಿದರು. ॥ ೧೧ ॥ ನಿರ್ಜಲೇಷು - ಜನರಹಿತವಾದ, ದೇಶೇಷು - ಪ್ರದೇಶಗಳಲ್ಲಿ, ಉತ್ತಮಾನ್ - ಶ್ರೇಷ್ಠವಾದ, ವೇದಿಕಾಪರಿಮಂಡಿತಾನ್ - ಜಗುಲಿಗಳಿಂದ ಶೋಭಿತವಾದ, ಬಹುವಿಧಾನ್ - ನಾನಾಬಗೆಗಳಾದ, ಉದಪಾನಾನ್-ಸರೋವರಗಳನ್ನು, ಖಾನಯಾಮಾಸುಃ - ಅಗೆದರು. ॥ ೧೨ ॥ ಸಸುಧಾಕುಟ್ಟಿಮತಲಃ - ಸುಣ್ಣ

ದುರ್ಗಸ್ಥಾನಗಳನ್ನು ಒಡೆದು ಸಮಭೂಮಿಯನ್ನಾಗಿ ಮಾಡಿದರು. ಈ ಜನರೆಲ್ಲರೂ ಈರೀತಿ ಮಾರ್ಗದಲ್ಲಿ ನಡೆಯುವುದಕ್ಕೆ ತಕ್ಕ ದಾರಿಯನ್ನೇರ್ಪಡಿಸಿದರು. ಮತ್ತೆ ಕೆಲವರು ವಿಸ್ತಾರವಾದ ಭಾವಿಗಳನ್ನೂ ನಿರ್ಮಿಸಿದವರಾಗಿ, ಗುಣಿಗಳನ್ನು ಮುಚ್ಚಿ, ತಗ್ಗಿನ ನೆಲವನ್ನು ಎಲ್ಲಾ ಕಡೆಯಲ್ಲಿಯೂ ಸಮಗಟ್ಟಿದರು. ಆ ಸಮಯದಲ್ಲಿ ಇನ್ನೂ ಕೆಲಕೆಲಸಗಾರರು ಕೆಲವೆಡೆಗಳಲ್ಲಿ ನಾವೆಗಳನ್ನು ಕಟ್ಟಿದರು; ಕೆಲವೆಡೆಗಳಲ್ಲಿ ತಿಟ್ಟಿಗಳನ್ನೊಡೆದು ಪುಡಿಮಾಡಿದರು; ಇನ್ನೂ ಕೆಲಸ್ಥಳಗಳಲ್ಲಿ ಜಗುಲಿಗಳಿಂದ ಶೋಭಿಸುವ ಬಹುವಿಧಗಳಾದ ಸರೋವರಗಳನ್ನು ನಿರ್ಮಿಸಿದರು. ಆ ಮೇಲೆ ಆ ಸೈನ್ಯವೆಲ್ಲವೂ ಸಮಗೊಳಿಸಿದ ಆ ಮಾರ್ಗವು ಚೆನ್ನಾಗಿ ಹೂಮೊಳೆತ ವೃಕ್ಷಗಳುಳ್ಳದಾಗಿಯೂ, ಮದಿಸಿದುದಾಗಿಯೂ, ಮನೋಹರವಾಗಿ ಕೂಗುತ್ತಿ

ಷ್ಪಿತ ಮಹೀರುಹಃ ॥ ಮತ್ತೋದ್ಘುಷ್ಟ ದ್ವಿಜಗಣಃ ಪತಾಕಾಭಿ ರಲಂಕೃತಃ॥೧೩॥ ಚಂದನೋದಕ ಸಂಸಿಕ್ತೋ ನಾನಾಕುಸುಮ ಭೂಷಿತಃ ॥ ಬಹ್ವಶೋಭತ ಸೇನಾಯಾಃ ಪಂಥಾ ಸ್ಸುರಪಥೋಪಮಃ ॥ ೧೪ ॥ ಆಜ್ಞಾಪ್ಯಾಥ ಯಥಾಜ್ಞಪ್ತಿ ಯುಕ್ತಾಸ್ತೇಽಧಿಕೃತಾ ನರಾಃ ॥ ರಮಣೀಯೇಷು ದೇಶೇಷು ಬಹುಸ್ವಾದು ಫಲೇಷುಚ ॥ ೧೫ ॥ ಯೋ ನಿವೇಶ ಸ್ತ್ವಭಿಪ್ರೇತೋ ಭರತಸ್ಯ ಮಹಾತ್ಮನಃ ॥ ಭೂಯಸ್ತಂ ಶೋಭಯಾಮಾಸು ರ್ಭೂಷಾಭಿ ರ್ಭೂಷಣೋಪಮಂ ॥ ೧೬ ॥ ನಕ್ಷತ್ರೇಷು ಪ್ರಶಸ್ತೇಷು ಮುಹೂರ್ತೇಷುಚ ತದ್ವಿದಃ ॥ ನಿವೇಶಾನ್

ವನ್ನು ಬಳೆದಿರುವ ನಿಬದ್ಧಭೂಮಿಯಿಂದೊಡಗೂಡಿದ, ಪ್ರಪುಷ್ಪಿತಮಹೀರುಹಃ - ಬಹಳವಾಗಿ ಹೂವೊಳೆತ ಗಿಡಗಳುಳ್ಳ, ಮತ್ತೋದ್ಘುಷ್ಟದ್ವಿಜಗಣಃ - ಮದವೇರಿ ಧ್ವನಿಗೈಯುತ್ತಿರುವ ಹಕ್ಕಿಗಳ ಗುಂಪುಳ್ಳ, ಪತಾಕಾಭಿಃ - ಧ್ವಜಗಳಿಂದ, ಅಲಂಕೃತಃ-ಅಲಂಕರಿಸಲಾದ, ಚಂದನೋದಕಸಂಸ್ತಿಕ್ತಃ-ಶ್ರೀಗಂಧದ ನೀರಿನಿಂದ ಚಿಮುಕಿಸಲಾದ, ನಾನಾಕುಸುಮಭೂಷಿತಃ - ಅನೇಕ ಬಗೆಗಳಾದ ಹುವ್ವುಗಳಿಂದ ಅಲಂಕರಿಸಲ್ಪಟ್ಟ, ಸೇನಾಯಾಃ - ಭರತನ ಸೈನ್ಯದ, ಪಂಥಾಃ - ಮಾರ್ಗವು, ಸುರಪಥೋಪಮಃ - ದೇವಮಾರ್ಗಕ್ಕೆ ಸಮಾನವಾಗಿ, ಬಹು - ಬಹಳವಾಗಿ, ಅಶೋಭತ - ಕಂಗೊಳಿಸುತ್ತಿದ್ದಿತು. ॥ ೧೪ ॥ ಅಥ - ಬಳಿಕ, ಅಧಿಕೃತಾಃ - ಅಧಿಕಾರಿಗಳಾದ, ನರಾಃ - ಪುರುಷರು, ಯುಕ್ತಾಃ - ಅವರವರ ಕೆಲಸಗಳಲ್ಲಿ, ಯಥಾಜ್ಞಪ್ತಿ - ಆಜ್ಞಾನುಸಾರ, ಆಜ್ಞಾಪ್ಯ - ಆಜ್ಞಾಪಿಸಿ, ಬಹುಸ್ವಾದುಫಲೇಷು - ಬಹಳ ರುಚಿಕರವಾದ ಫಲಗಳುಳ್ಳ, ರಮಣೀಯೇಷು - ಮನಸ್ಸಿಗಿಂಪಾಗಿರುವ, ದೇಶೇಷು - ಪ್ರದೇಶಗಳಲ್ಲಿ, ಮಹಾತ್ಮನಃ - ಮಹಾ ಮನಸ್ವಿಯಾದ, ಭರತಸ್ಯ - ಭರತನಿಗೆ, ಯೋನಿವೇಶಃ - ಯಾವ ಸ್ಥಳವು, ಅಭಿಪ್ರೇತಃ - ಸಮ್ಮತವಾದುದೋ, ಭೂಯಃ - ಮತ್ತೂ, ತಂ - ಆ ಪ್ರದೇಶವನ್ನು, ಭೂಷಾಭಿಃ - ಅಲಂಕಾರಗಳಿಂದ, ಭೂಷಣೋಪಮಂ - ಅಲಂಕಾರಪ್ರಾಯವಾಗಿ, ಶೋಭಯಾಮಾಸುಃ - ಕಂಗೊಳಿಸುವಂತೆ ಮಾಡಿದರು. ॥ ೧೬ ॥ ಪ್ರಶಸ್ತೇಷು - ಶ್ಲಾಘ್ಯಗಳಾದ, ನಕ್ಷತ್ರೇಷು-ನಕ್ಷತ್ರಗಳಲ್ಲಿ, ಮುಹೂರ್ತೇಷುಚ - ಶುಭಮುಹೂರ್ತಗಳಲ್ಲಿಯೂ, ತದ್ವಿದಃ - ಆ ಜ್ಯೋತಿಷವನ್ನು ತಿಳಿದವರು, ಮಹಾತ್ಮನಃ - ಮಹಾ ಮನಸ್ವಿಯಾದ, ಭರತಸ್ಯ - ಭರತನಿಗೆ, ನಿವೇಶಾನ್ - ಇಳಿಯು

ರುವ ಪಕ್ಷಿಗಳುಳ್ಳುದಾಗಿಯೂ, ಪತಾಕೆಗಳಿಂದಲಂಕೃತವಾಗಿಯೂ, ನಾನಾವಿಧಗಳಾದ ಹೂಗಳಿಂದಲಂಕೃತವಾಗಿಯೂ ಆಗಿ, ದೇವತೆಗಳ ಮಾರ್ಗದಂತೆ ಶೋಭಿಸುತ್ತ ಬಹು ರಮಣೀಯವಾಗಿದ್ದಿತು. ॥ ೭-೧೪ ॥ ಆಗಲಾ ಸೈನ್ಯದಲ್ಲಿದ್ದ ಅಧಿಕಾರಿಗಳೆಲ್ಲರೂ ತಮ್ಮ ಬುದ್ಧಿಗೆ ತೋರಿದಂತೆ ಆಜ್ಞಾಪಿಸಿ, ಮಹಾ ಸಂತೋಷವನ್ನುಂಟುಮಾಡುವುದೂ, ರಮಣೀಯವೂ ಆದ ಪ್ರದೇಶಗಳಲ್ಲಿ ಮಹಾನುಭಾವನಾದ ಭರತಕುಮಾರನಿಗೆ ಪ್ರಿಯಕರವಾದ ಪ್ರದೇಶಗಳಲ್ಲಿ ನಾನಾವಿಧಗಳಾದ ಅಲಂಕಾರಗಳನ್ನು ಮಾಡಿಸಿದವರಾದರು. ಜ್ಯೋತಿಶ್ಶಾಸ್ತ್ರವೇತ್ತರಾದವರು ಮಹಾ ಮಂಗಳಕರವಾದ ನಕ್ಷತ್ರಗಳಲ್ಲಿಯೂ, ಒಳ್ಳೆಯ ಶುಭಮುಹೂರ್ತಗಳಲ್ಲಿಯೂ ಮಹಾನುಭಾವನಾದ ಭರತನು ಇಳಿದುಕೊಳ್ಳುವ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಿಸಿದವರಾದರು. ಮತ್ತಮಾ ಮಾರ್ಗದಲ್ಲಿ ಅಧಿಕವಾದ ಮರಳುಳ್ಳವೂ ;

ಸ್ಥಾಪಯಾಮಾಸು ರ್ಭರತಸ್ಯ ಮಹಾತ್ಮನಃ ॥ ೧೭ ॥ ಬಹುಪಾಂಸುಚಯಾ ಶ್ಚಾಪಿ ಪರಿಖಾ ಪರಿವಾರಿತಾಃ ॥ ತತ್ರೇಂದ್ರಕೀಲಪ್ರತಿಮಾಃ ಪ್ರತೋಳೀ ವರ ಶೋಭಿತಾಃ ॥ ೧೮ ॥ ಪ್ರಾಸಾದಮಾಲಾ ವಿತತಾ ಸ್ಸೌಧ ಪ್ರಾಕಾರ ಸಂವೃತಾಃ ॥ ಪತಾಕಾ ಶೋಭಿತಾ ಸ್ಸರ್ವೇ ಸುನಿರ್ಮಿತ ಮಹಾಪಥಾಃ ॥ ೧೯ ॥ ವಿಸರ್ಪದ್ಭಿ ರಿವಾಕಾಶೇ ವಿಟಂಕಾಗ್ರ ವಿಮಾನಕೈಃ ॥ ಸಮುಚ್ಛ್ರಿತೈ ರ್ನಿವೇಶಾಸ್ತೇ ಬಭು ಶ್ಶಕ್ರಪುರೋಪಮಾಃ ॥ ೨೦ ॥ ಜಾಹ್ನವೀಂತು ಸಮಾಸಾದ್ಯ ವಿವಿಧ ದ್ರುಮ ಕಾನನಾಂ ॥ ಶೀತಲಾಮಲ ಪಾನೀಯಾಂ ಮಹಾಮೀನ ಸಮಾಕುಲಾಂ ॥೨೧॥

ಸಚಂದ್ರ ತಾರಾಗಣ ಮಂಡಿತಂ ಯಥಾ
ನಭಃ ಕ್ಷಪಾಯಾ ಮಮಲಂ ವಿರಾಜತೇ ॥

ತಕ್ಕ ಸ್ಥಳಗಳನ್ನು, ಸ್ಥಾಪಯಾಮಾಸುಃ - ಸಜ್ಜೆಗೊಳಿಸಿದರು. ॥ ೧೭ ॥ ತತ್ರ - ಆ ಮಾರ್ಗದಲ್ಲಿ, ಬಹುಪಾಂಸುಚಯಾಶ್ಚಾಪಿ - ಪ್ರಚುರವಾದ ಮರಳು ಸಮೂಹಗಳುಳ್ಳ, ಪರಿಖಾಪರಿವಾರಿತಾಃ - ಕದ ಗಳಿಂದ ಸುತ್ತುವರೆಯಲಾದ, ಇಂದ್ರಕೀಲಪ್ರತಿಮಾಃ - ಇಂದ್ರಕೀಲಪರ್ವತಕ್ಕೆ ಸಮಾನಗಳಾದ, ಪ್ರತೋಳೀವರಶೋಭಿತಾಃ - ದೊಡ್ಡಮಾರ್ಗಗಳಿಂದ ಪ್ರಕಾಶಿಸುತ್ತಿರುವ, ಪ್ರಾಸಾದಮಾಲಾವಿತತಾಃ - ರಾಜಗೃಹಗಳ ಪಜ್'ಗಳಿಂದಲೂ, ಸಂವೃತಾಃ-ಸುತ್ತಿಕೊಂಡಿರುವ, ಪತಾಕಾಶೋಭಿತಾಃ - ಧ್ವಜಪಟ ಗಳಿಂದ ಅಲಂಕರಿಸಲಾದ, ಸುನಿರ್ಮಿತಮಹಾಪಥಾಃ - ಚನ್ನಾಗಿ ಮಾಡಲ್ಪಟ್ಟ ರಾಜಮಾರ್ಗಗಳುಳ್ಳ, ಸರ್ವೇ - ಸಮಸ್ತವಾದ, ತೇನಿವೇಶಾಃ - ಆ ಸ್ಥಾನಭೂಮಿಗಳು, ಆಕಾಶೇ - ಅಂತರಿಕ್ಷಮಾರ್ಗದಲ್ಲಿ, ವಿಸರ್ಪದ್ಭಿರಿವ - ನಡೆದುಹೋಗುತ್ತವೋ ಎಂಬಂತಿರುವ, ಸಮುಚ್ಛ್ರಿತೈಃ - ಅತ್ಯುನ್ನತಗಳಾದ, ವಿಟಂಕಾಗ್ರವಿಮಾನಕೈಃ - ಮನೆಗಳ ಸೂರಿನ ಕೆಳಗಿನ ಮರಗಳಿಂದ ಕೂಡಿರುವ ವಿಮಾನಗಳಂತಿರುವ, ಶಕ್ರಪುರೋಪಮಾಃ - ಅಮರಾವತೀಪಟ್ಟಣಕ್ಕೆ ಸಮಾನಗಳಾಗಿ, ಬಭುಃ - ಹೊಳೆಯುತ್ತಿದ್ದುವು. ॥ ೨೦ ॥ ವಿವಿಧದ್ರುಮಕಾನನಾಂ - ನಾನಾಬಗೆಗಳಾದ ವೃಕ್ಷಗಳುಳ್ಳ ಅರಣ್ಯಗಳುಳ್ಳ, ಶೀತಲಾಮಲ ಪಾನೀಯಾಂ - ತಣ್ಣಗಿರುವ ನಿರ್ಮಲವಾದ ಉದಕವುಳ್ಳ, ಮಹಾಮೀನಸಮಾಕುಲಾಂ - ದೊಡ್ಡ ಮೀನುಗಳಿಂದ ತುಂಬಿರುವ, ಜಾಹ್ನವೀಂ - ಗಂಗಾನದಿಯನ್ನು, ಸಮಾಸಾದ್ಯ - ಹೊಂದಿ, ಬಭುಃ -

---

ಅಗಳ್ತೆಗಳಿಂದ ಸುತ್ತುವರೆಯಲಾದುವೂ, ಇಂದ್ರಕೀಲಪರ್ವತಕ್ಕೆ ಸಮಾನವಾದುವೂ; ಮಾರ್ಗಗಳಲ್ಲಿ ಉತ್ತಮವಾದುವೂ, ಶ್ರೇಷ್ಠವಾದ ಪದಾರ್ಥ ರಾಶಿಗಳಿಂದಲಂಕೃತವಾದುವೂ, ದೇವಾಲಯ ಪಜ್'ಗಳಿಂದ ವ್ಯಾಪಿಸಲಾದುವೂ, ಸುಣ್ಣದಿಂದ ಲೇಪಿತವಾದ ಪ್ರಾಕಾರಗಳುಳ್ಳವೂ, ಉಪ್ಪರಿಗೆಗಳಿಂದಲೂ, ಪೌಳೀಗೋಡೆಗಳಿಂದಲೂ, ಧ್ವಜಪಟಗಳಿಂದಲೂ ಅಲಂಕರಿಸ ಲಾದ ರಾಜವೀಥಿಗಳುಳ್ಳ ಆ ಆಸ್ಥಾನ ಭವನಗಳು, ಆಕಾಶದಲ್ಲಿ ವ್ಯಾಪಿಸಿರುವುವೊ ಎಂಬಂತೆ ಶೋಭಿಸುವ ಎತ್ತರವಾಗಿ ಎತ್ತಿ ಕಟ್ಟಲ್ಪಟ್ಟ, ಮನೆಗಳ ಸೂರಿನ ಕೆಳಮರಗಳುಳ್ಳವಾಗಿ, ಇಂದ್ರನ ರಾಜಧಾನಿಯಾದ ಅಮರಾವತೀಪಟ್ಟಣಕ್ಕೆ ಸಮಾನವಾಗಿ ಬೆಳಗುತ್ತಿದ್ದುವು. ॥ ೧೫-೨೦ ॥ ಆ ಬಳಿಕ ಶಿಲ್ಪಿಗಳಿಂದ ಈ ರೀತಿಯಾಗಿ ನಿರ್ಮಿಸಲಾದ ಆ ರಾಜಮಾರ್ಗವು ನಾನಾಬಗೆಗಳಾದ ವೃಕ್ಷಗಳಿಂದ ಕೂಡಿದ ಕಾಡುಗಳುಳ್ಳದಾಗಿಯೂ, ಶೀತಳವೂ, ಸ್ವಚ್ಛವೂ

ನರೇಂದ್ರ ಮಾರ್ಗ ಸ್ಸತಥಾ ವ್ಯರಾಜತ
ಕ್ರಮೇಣ ರಮ್ಯ ಶ್ಶುಭಶಿಲ್ಪಿ ನಿರ್ಮಿತಃ ‖ ೨೨ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಶೀತಿತಮಸ್ಸರ್ಗಃ.

ಪ್ರಕಾಶಿಸಿದವು. ‖ ೨೧ ‖ ಸಚಂದ್ರತಾರಾಗಣಮಂಡಿತಂ - ಚಂದ್ರನಿಂದೊಡಗೂಡಿದ ನಕ್ಷತ್ರಗಳ ಗುಂಪುಗಳಿಂದಲಂಕರಿಸಲ್ಪಟ್ಟ, ಅಮಲಂ - ನಿರ್ಮಲವಾದ ನಭಃ-ನಕ್ಷತ್ರಮಂಡಲವು, ಕ್ಷಪಾಯಾಂ-ರಾತ್ರಿಯಲ್ಲಿ, ಯಥಾ - ಹೇಗೆ, ವಿರಾಜತೇ - ಪ್ರಕಾಶಿಸುವುದೋ, ತಥಾ - ಹಾಗೆಯೇ, ರಮ್ಯಃ - ಇಂಪಾಗಿರುವ, ಕ್ರಮೇಣ - ಕ್ರಮವಾಗಿ, ಶುಭಶಿಲ್ಪಿನಿರ್ಮಿತಃ - ಕುಶಲರಾದ ಕಾಮಾಟಿಗಳಿಂದ ಮಾಡಲ್ಪಟ್ಟ, ಸಃನರೇಂದ್ರಮಾರ್ಗಃ - ಆ ರಾಜಮಾರ್ಗವು, ತಥಾ - ಆ ಪರಿಯಾಗಿ, ವ್ಯರಾಜತ - ಹೊಳೆಯುತ್ತಿದ್ದಿತು. ‖ ೨೨ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಶೀತಿತಮಸ್ಸರ್ಗಃ.

ಆದ ಉದಕವುಳ್ಳದಾಗಿಯೂ, ದೊಡ್ಡದೊಡ್ಡ ಮೀನುಗಳಿಂದ ವ್ಯಾಪ್ತವಾದುದಾಗಿಯೂ ಇರುವ ಗಂಗಾನದಿಯನ್ನು ಹೊಂದಿ ರಾತ್ರಿಯಲ್ಲಿ ಚಂದ್ರನಿಂದಲೂ, ನಕ್ಷತ್ರಗಳಿಂದಲೂ ಬೆಳಗುವ ಗಗನದಂತೆ ರಾರಾಜಿಸುತ್ತಲಿದ್ದಿತು. ‖ ೨೧-೨೨ ‖

ಇಂತಿದು ಪುರಜನ ಪರಿಜನ ಕೃತ ಶ್ರೀರಾಮಾನಯನ ಮಾರ್ಗಕರಣ ವೃತ್ತಾಂತ
ಕಥನವೆಂಬ ಎಂಭತ್ತನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕಾಶೀತಿತಮಸ್ಸರ್ಗಃ.

ತತೋ ನಾಂದೀಮುಖೀಂ ರಾತ್ರಿಂ ಭರತಂ ಸೂತ ಮಾಗಧಾಃ ॥ ತುಷ್ಟುವು ರ್ವಾಗ್ವಿಶೇಷಜ್ಞಾ ಸ್ತವೈ ರ್ಮಂಗಳ ಸಂಹಿತೈಃ ॥ ೧ ॥ ಸುವರ್ಣ ಕೋಣಾಭಿಹತಃ ಪ್ರಾಣದ ದ್ಯಾಮದುಂದುಭಿಃ ॥ ದಧ್ಮುಃ ಶ್ಶಂಖಾಂಶ್ಚ ಶತಶೋ ನಾದಾಂಶ್ಚೋಚ್ಚಾವಚ ಸ್ವರಾ ॥ ೨ ॥ ಸತೂರ್ಯಘೋಷ ಸ್ಸುಮಹಾ ದಿವಮಾಪೂರಯನ್ನಿವ ॥ ಭರತಂ ಶೋಕಸಂತಪ್ತಂ ಭೂಯ ಶ್ಶೋಕೈ ರರಂಧ್ರಯತ್ ॥ ೩ ॥ ತತಃಪ್ರಬುದ್ಧೋ ಭರತ ಸ್ತಂಘೋಷಂ ಸನ್ನಿವರ್ತ್ಯಚ ॥

ತತಃ - ಬಳಿಕ, ನಾಂದಿಮುಖೀಂ - (ಗೋ + ಮ) ಶ್ರೀರಾಮನಾನಯನ ಪ್ರಯುಕ್ತವಾದ ಅಭ್ಯುದಯವೇ ಮೊದಲಾಗುಳ್ಳ, ರಾತ್ರಿಂ - ರಾತ್ರಿಯಲ್ಲಿ, ವಾಗ್ವಿಶೇಷಜ್ಞಾಃ - ವಾಗ್ವೈಖರಿಗಳನ್ನು ತಿಳಿದಿರುವ, ಸೂತಮಾಗಧಾಃ - ಪೌರಾಣಿಕರಾದ ಸ್ತುತಿಪಾಠಕರೂ, ವಂಶಪರಂಪರೆಯನ್ನು ಹೊಗಳುವವರೂ, ಮಂಗಳಸಂಹಿತೈಃ - ಶುಭಕರವಾದ ವಾರ್ತೆಗಳಿಂದೊಡಗೂಡಿದ, ಸ್ತವೈಃ - ಸ್ತೋತ್ರಗಳಿಂದ, ಭರತಂ - ಭರತನನ್ನು, ತುಷ್ಟುವುಃ - ಸ್ತುತಿಸಿದರು. ॥ ೧ ॥ ಸುವರ್ಣಕೋಣಾಭಿಹತಃ - ಚಿನ್ನದ ಕೋಲಿನಿಂದ ಹೊಡೆಯಲ್ಪಟ್ಟ, ಯಾಮದುಂದುಭಿಃ - ಯಾಮಪೂರ್ತಿಯನ್ನು ಸೂಚಿಸುತ್ತಿರುವ ಭೇರಿಯು, ಪ್ರಾಣದತ್ - ಧ್ವನಿಗೊಂಡಿತು, ಶತಶಃ - ಅನೇಕಗಳಾದ, ಉಚ್ಚಾವಚಸ್ವರಾ - ಅನೇಕ ಬಗೆಗಳಾದ ಸ್ವರಗಳುಳ್ಳ, ನಾದಾ - ಧ್ವನಿಗಳನ್ನು, ಚಕ್ರುಃ - ಮಾಡಿದರು, ಶಂಖಾಂಶ್ಚ - ಶಂಖಗಳನ್ನು, ದಧ್ಮುಃ - ಪೂರಿಸಿದರು. ॥ ೨ ॥ ಸುಮಹಾ - ಬಹಳ ದೊಡ್ಡದಾದ, ಸತೂರ್ಯಘೋಷಃ - ಆ ಭೇರಿಯ ಧ್ವನಿಯು, ದಿವಂ - ಅಂತರಿಕ್ಷವನ್ನು, ಆಪೂರಯನ್ನಿವ - ತುಂಬಿಸುತ್ತದೆಯೋ ಎಂಬಂತಿರುವದಾಗಿ, ಶೋಕಸಂತಪ್ತಂ - ಶೋಕದಿಂದ ಪರಿತಪಿಸುತ್ತಿರುವ, ಭರತಂ - ಭರತನನ್ನು, ಭೂಯಃ - ಮತ್ತೂ, ಶೋಕೈಃ - ವ್ಯಸನಗಳಿಂದ, ಅರಂಧ್ರಯತ್ - ಸೀಳಿಹೋಗುವ ಹಾಗೆ ಮಾಡಿತು. ॥ ೩ ॥ ತತಃ - ಬಳಿಕ, ಭರತಃ - ಭರತನು, ಪ್ರಬುದ್ಧಃ - ಎಚ್ಚರಗೊಂಡವನಾಗಿ, ಅಹಂ - ನಾನು, ರಾಜಾ - ಅರಸು, ನೇತಿಚಾಪ್ಯುಕ್ತ್ವಾ - ಅಲ್ಲವೆಂದು ಹೇಳಿ, ತಂಘೋಷಂ-

---

ಆ ಬಳಿಕ ಶ್ರೀರಾಮಮೂರ್ತಿಯನ್ನು ಕರೆತರುವ ಅಭ್ಯುದಯಕ್ಕೆ ಮೊದಲಾದ ರಾತ್ರಿಯಲ್ಲಿ, ವಾಕ್ಯವಿಶೇಷಗಳನ್ನು ಬಹು ಚೆನ್ನಾಗಿ ತಿಳಿದ ವಂದಿಮಾಗಧರು, ಮಂಗಳಕರವಾದ ಸ್ತೋತ್ರಗಳಿಂದ ಆ ಭರತಕುಮಾರನನ್ನು ಸ್ತುತಿಸಿದರು. ಮತ್ತೆ ಕೆಲವರು ರಾತ್ರಿಯ ಕಾಲಗಳಲ್ಲಿ ಯಾಮಗಳನ್ನು ತಿಳಿಸಲೋಸುಗ ಭೇರಿಯನ್ನು ಕನಕದಂಡಗಳಿಂದ ಬಾರಿಸಿ, ಧ್ವನಿಯಾಗುವಂತೆ ಮಾಡಿದರು; ಅನೇಕ ನೂರು ಶಂಖಗಳನ್ನು "ಭಂ ಭಂ" ನಾದದಿಂದ ತುಂಬಿಸಿದರು. ಇಷ್ಟುಮಾತ್ರವಲ್ಲದೆ ನಾನಾಧ್ವನಿಗಳು, ಕಹಾಳಗಳು ಮೊದಲಾದ ವಾದ್ಯಗಳನ್ನು ನುಡಿಸಿದರು. ಬಹು ದೊಡ್ಡದಾದುದೂ, ಗಗನವನ್ನು ತುಂಬಿಸುತ್ತಿರುವ ಧ್ವನಿಯು

ನಾಹಂ ರಾಜೇತಿ ಚಾಪ್ಯುಕ್ತ್ವಾ ಶತ್ರುಘ್ನಮಿದಮಬ್ರವೀತ್ ॥ ೪ ॥ ಪಶ್ಯ ಶತ್ರುಘ್ನ! ಕೈಕೇಯ್ಯಾ ಲೋಕಸ್ಯಾಪಕೃತಂ ಮಹತ್ ॥ ವಿಸೃಜ್ಯ ಮಯಿ ದುಃಖಾನಿ ರಾಜಾ ದಶರಥೋಗತಃ ॥ ೫ ॥ ತಸ್ಯೈಷಾ ಧರ್ಮರಾಜಸ್ಯ ಧರ್ಮ ಮೂಲಾ ಮಹಾತ್ಮನಃ ॥ ಪರಿಭ್ರಮತಿ ರಾಜಶ್ರೀ ರ್ನೌರಿವಾಽಕರ್ಣಿಕಾ ಜಲೇ ॥೬॥ ಯೋಹಿ ನಸ್ಸುಮಹಾನ್ನಾಥ ಸ್ಸೋಽಪಿ ಪ್ರವ್ರಾಜಿತೋ ವನಂ ॥ ಅನಯಾ ಧರ್ಮಮುತ್ಸೃಜ್ಯ ಮಾತ್ರಾ ಮೇ ರಾಘವಸ್ಸ್ವಯಂ ॥ ೭ ॥ ಇತ್ಯೇವಂ

ಆ ಭೇರಿಯ ಧ್ವನಿಯನ್ನು, ಸನ್ನಿವರ್ತ್ಯಚ - ತಡೆಸಾಡಿ, ಶತ್ರುಘ್ನಂ - ಶತ್ರುಘ್ನನನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೪ ॥ ಹೇ ಶತ್ರುಘ್ನ - ಎಲೈ ಶತ್ರು ಸಂಹಾರಕನೇ, ಲೋಕಸ್ಯ - ಲೋಕಕ್ಕೆ, ಕೈಕೇಯ್ಯಾ - ಕೈಕೇಯಿಾದೇವಿಯಿಂದ, ಮಹತ್ - ದೊಡ್ಡ ದಾದ, ಅಪಕೃತಂ - ಅಪಕಾರವು ಮಾಡಲಾಗಿದೆ, ಪಶ್ಯ - ನೋಡು, ದಶರಥೋರಾಜಾ - ದಶರಥ ರಾಯನು, ಮಯಿ - ನನ್ನಲ್ಲಿ, ದುಃಖಾನಿ - ದುಃಖಗಳನ್ನು, ವಿಸೃಜ್ಯ - ಬಿಟ್ಟು, ಗತಃ - ಹೊರಟು ಹೋದನು, ಧರ್ಮರಾಜಶ್ಚ - ಧರ್ಮಪ್ರಧಾನನಾದ ರಾಜನು, ಮಹಾತ್ಮನಃ - ಮಹಾ ಮನವುಳ್ಳ, ತಸ್ಯ - ಆ ದಶರಥರಾಯನ. ಧರ್ಮಮೂಲಾ - ಧರ್ಮಪ್ರಧಾನವಾದ, ಏಷಾರಾಜಶ್ರೀಃ - ಈ ರಾಜ್ಯ ಲಕ್ಷ್ಮಿಯು, ಜಲೇ - ನೀರಿನಲ್ಲಿ, ಅಕರ್ಣಿಕಾ - ನಾವಿಕನಿಲ್ಲದ, ನೌರಿವ - ನಾವೆಯಂತೆ, ಪರಿಭ್ರ ಮತಿ - ಅಲೆದಾಡುತ್ತದೆ. ॥ ೫-೬ ॥ ಸುಮಹಾನ್ - ಮಹಾ ಮಹಿಮಾಶಾಲಿಯಾದ, ನಃ - ನಮಗೆ, ನಾಥಃ - ಸ್ವಾಮಿಯು, ಯಃ - ಯಾವನೋ, ಸಃರಾಘವೋಽಪಿ - ಆ ಶ್ರೀರಾಮನೂ, ಮೇ - ನನ್ನ, ಮಾತ್ರಾ - ತಾಯಿಯಾದ, ಅನಯಾ - ಈ ಕೈಕೇಯಿಯಿಂದ, ಧರ್ಮಂ - ಕುಲಕ್ರಮದಿಂದ ಬಂದ ಧರ್ಮವನ್ನು, ಉತ್ಸೃಜ್ಯ - ತೊರೆದು, ಸ್ವಯಂ - ತಾನು, ವನಂ - ಅರಣ್ಯವನ್ನು ಕುರಿತು, ಪ್ರವ್ರಾಜಿತಃ ಹೊರಡಿಸಲಾದನು. ॥ ೭ ॥ ಇತ್ಯೇವಂ - ಈ ಪರಿಯಾಗಿ, ವಿಲಪಂತಂ - ಅಳುತ್ತಿ

ಳ್ಳುದೂ ಆದ ಮಂಗಳವಾದ್ಯ ಧ್ವನಿಗಳು ಆ ಭರತನಿಗೆ ಮೊದಲಿಗಿಂತ ಅಧಿಕ ದುಃಖವನ್ನುಂಟು ಮಾಡಿದುವು. ಆಗ ಸ್ವಲ್ಪ ಹೊತ್ತಾದಮೇಲೆ ಎಚ್ಚರಗೊಂಡ ಆ ಭರತನು "ಮಂಗಳವಾದ್ಯ ಗಳನ್ನು ನುಡಿಸಲಾಗದು; ನಾನು ಪ್ರಭುವಲ್ಲ" ಎಂದು ಅವುಗಳನ್ನು ನಿವಾರಿಸಿ, ತಮ್ಮನಾದ ಶತ್ರುಘ್ನನನ್ನು ಕುರಿತು ಹೀಗೆಂದನು. ॥ ೧-೪ ॥ "ತಮ್ಮ! ಶತ್ರುಘ್ನ! ನಾನು ಈ ಮಂಗಳವಾದ್ಯ ಧ್ವನಿಗಳಿಂದ ಎಚ್ಚರಗೊಳ್ಳತಕ್ಕವನಾಗಿಲ್ಲ. ಓ ಶತ್ರುಘ್ನನೆ! ಕೈಕೇಯಿಯಿಂದ ಲೋಕಕ್ಕೆ ಮಹದಪಕಾರವು ಮಾಡಲಾಗಿದೆ; ಈ ವಿಷಯವನ್ನು ನೋಡು, ದಶರಥಮಹೀ ಪಾಲನು ಸಮಸ್ತ ದುಃಖಗಳನ್ನೂ ನನ್ನಲ್ಲಿರಿಸಿ ತಾನು ಸ್ವರ್ಗಲೋಕಕ್ಕೆ ಹೋಗಿ ಸೇರಿದನು. ಮಹಾನುಭಾವನೂ, ಧರ್ಮರಾಯನೂ ಆದ ದಶರಥರಾಜನ ಧರ್ಮವೇ ಕಾರಣವಾಗುಳ್ಳ ಈ ರಾಜ್ಯಲಕ್ಷ್ಮಿಯು, ನೀರಿನಲ್ಲಿ ದೋಣಿ ನಡಿಸುವನಿಲ್ಲದ ದೋಣಿಯಂತೆ ಅಲಗಾಡುತ್ತಿರು ವುದು. ನಮ್ಮೆಲ್ಲರಿಗೂ ಪ್ರಭುವೂ, ಮಹಾನುಭಾವನೂ ಆದ ಶ್ರೀರಾಮನು, ಧರ್ಮವನ್ನು ಎಳ್ಳಷ್ಟೂ ಆಲೋಚಿಸದ ನಮ್ಮ ತಾಯಿಯಾದ ಕೈಕೇಯಿಯಿಂದ ವನಕ್ಕೆ ಕಳುಹಲಾದನು. ಅಯ್ಯೋ! ನಾನೇನುಮಾಡಲಿ?" ಭರತಕುಮಾರನೀರೀತಿ ಹೇಳಿ ವಿಲಪಿಸಿ ಮೂರ್ಛೆಯೊಂದಲು,

ಭರತಂ ಪ್ರೇಕ್ಷ್ಯ ವಿಲಪಂತಂ ವಿಚೇತಸಂ ॥ ಕೃಪಣಂ ರುರುದು ಸ್ಸರ್ವಾ ಸ್ಸಸ್ವರಂ ಯೋಷಿತ ಸ್ತದಾ ॥ ೮ ॥ ತಥಾ ತಸ್ಮಿನ್ ವಿಲಪತಿ ವಸಿಷ್ಠೋ ರಾಜಧರ್ಮವಿತ್ ॥ ಸಭಾ ಮಿಕ್ಷ್ವಾಕುನಾಥಸ್ಯ ಪ್ರವಿವೇಶ ಮಹಾಯಶಾಃ ॥ ೯ ॥ ಶಾತಕುಂಭ ಮಯೀಂ ರಮ್ಯಾಂ ಮಣಿರತ್ನ ಸಮಾಕುಲಾಂ ॥ ಸುಧರ್ಮಾಮಿವ ಧರ್ಮಾತ್ಮಾ ಸಗಣಃ ಪ್ರತ್ಯಪದ್ಯತ ॥ ೧೦ ॥ ಸಕಾಂಚನಮಯಂ ಪೀಠಂ ಸುಖಾಸ್ತರಣ ಸಂವೃತಂ ॥ ಅಧ್ಯಾಸ್ತ ಸರ್ವವೇದಜ್ಞೋ ದೂತಾ ನನುಶಶಾಸಚ ॥ ೧೧ ॥

ರುವ, ವಿಚೇತಸಂ - ಪ್ರಜ್ಞೆಯಿಲ್ಲದಿರುವ, ಭರತಂ - ಭರತನನ್ನು, ಪ್ರೇಕ್ಷ್ಯ - ಕಂಡು, ತದಾ - ಆ ಸಮಯದಲ್ಲಿ, ಸರ್ವಾಃ - ಸಮಸ್ತರಾದ, ಯೋಷಿತಃ - ಹೆಂಗಳು, ಕೃಪಣಂ - ದೈನ್ಯವಾಗಿ, ಸಸ್ವರಂ- ದೀನಧ್ವನಿಯಿಂದೊಡಗೂಡಿದಂತೆ, ರುರುದುಃ - ಅಳುತ್ತಿದ್ದರು. ॥ ೮ ॥ ತಸ್ಮಿನ್ - ಆ ಭರತನು, ತಥಾ - ಆ ಪರಿಯಾಗಿ, ವಿಲಪತಿ - ವಿಲಾಪ ಮಾಡುತ್ತಿರಲು, ರಾಜಧರ್ಮವಿತ್-ರಾಜಧರ್ಮಗಳನ್ನು ತಿಳಿದಿರುವ, ಮಹಾಯಶಾಃ - ಮಹಾ ಕೀರ್ತಿವಂತನಾದ, ವಸಿಷ್ಠಃ - ವಸಿಷ್ಠಋಷಿಯು, ಇಕ್ಷ್ವಾಕು ನಾಥಸ್ಯ - ಇಕ್ಷ್ವಾಕುವಂಶಕ್ಕೆ ದೊರೆಯಾದ ದಶರಥರಾಯನ, ಸಭಾಂ - ಆಸ್ಥಾನವನ್ನು, ಪ್ರವಿವೇಶ- ಹೊಕ್ಕನು. ॥ ೯ ॥ ಧರ್ಮಾತ್ಮಾ - ಧರ್ಮದಲ್ಲಿಯೇ ಮನವುಳ್ಳ ವಸಿಷ್ಠಋಷಿಯು, ಸಗಣಃ - ತನ್ನ ಶಿಷ್ಯಮಂಡಲಿಯೊಡಗೂಡಿ, ಶಾತಕುಂಭಮಯೀಂ - ಸುವರ್ಣಕುಂಭಮಯವಾದ ಮಣಿರತ್ನ ಸಮಾಕುಲಾಂ - ಶ್ರೇಷ್ಠವಾದ ನವರತ್ನಗಳಿಂದ ಖಚಿತವಾದ, ಸುಧರ್ಮಾಮಿವ - ದೇವಸಭೆಯಂತೆ, ರಮ್ಯಾಂ - ಮನೋಹರವಾದ, ಸಭಾಂ - ಸಭೆಯನ್ನು, ಪ್ರತ್ಯಪದ್ಯತ - ಹೊಂದಿದನು. ॥ ೧೦ ॥ ಸರ್ವವೇದಜ್ಞಃ - ಸಮಸ್ತ ವೇದಗಳನ್ನೂ ತಿಳಿದಿರುವ, ಸಃ - ಆ ವಸಿಷ್ಠಋಷಿಯು, ಸುಖಾಸ್ತರಣ ಸಂವೃತಂ - ಸುಖಕರವಾದ ಮೆತ್ತೆಯಿಂದ ಕೂಡಿರುವ, ಕಾಂಚನಮಯಂ - ಚಿನ್ನದ, ಪೀಠಂ - ಪೀಠದಲ್ಲಿ, ಅಧ್ಯಾಸ್ತ - ಕುಳಿತುಕೊಂಡನು. ॥ ೧೧ ॥ ದೂತಾನ್ - ರಾಜಭೃತ್ಯರನ್ನು ಕುರಿತು, ಅನುಶಶಾಸಚ - ಆಜ್ಞಾಪಿಸಿಯೂ ಆಜ್ಞಾಪಿಸಿದನು, ಬ್ರಾಹ್ಮಣಾನ್ - ಬ್ರಾಹ್ಮಣರನ್ನು, ಕ್ಷತ್ರಿಯಾನ್ -

---

ಅದನ್ನು ನೋಡಿ ರಾಜಾಂತಃಪುರ ಸ್ತ್ರೀಯರೆಲ್ಲರೂ, ದುಃಖವುಂಟಾಗುವಂತೆಯೂ ಮಹಾ ಧ್ವನಿಯುಂಟಾಗುವಂತೆಯೂ ರೋದಿಸಿದರು. ॥ ೫-೮ ॥ ಆ ರೀತಿ ಭರತನೂ, ಅಂತಃಪುರ ಸ್ತ್ರೀಯರೂ ರೋದಿಸುತ್ತಿರುವ ಸಮಯದಲ್ಲಿ, ರಾಜಧರ್ಮಗಳೆಲ್ಲವನ್ನೂ ತಿಳಿದವನೂ, ಕೀರ್ತಿವಂತನೂ ಆದ ವಸಿಷ್ಠಮುನೀಶ್ವರನು ಇಕ್ಷ್ವಾಕುನಾಥನ ಸಭೆಯನ್ನು ಪ್ರವೇಶಿಸಿದವ ನಾದನು. ಆಗ ಧರ್ಮಸ್ವಭಾವವುಳ್ಳ ವಸಿಷ್ಠ ಮಹಾ ಮುನಿಯು, ಶಿಷ್ಯಸಮುದಾಯ ದಿಂದೊಡಗೂಡಿ ಸುವರ್ಣಮಯವಾದುದೂ, ಮಹಾ ಸುಂದರವಾದುದೂ, ಶ್ರೇಷ್ಠಗಳಾದ ಮಹಾ ಮಣಿಗಳಿಂದೊಪ್ಪಿ ಮೆರೆಯುತ್ತಿರುವುದೂ, ದೇವಸಭೆಯನ್ನು ಹೋಲುತ್ತಿರು ವುದೂ ಆದ ಆ ಸಭೆಯನ್ನು ಸಮೀಪಿಸಿದನು. ಇಂತು ಪ್ರವೇಶಿಸಿ ಸಕಲ ವೇದಗಳನ್ನೂ ತಿಳಿದಿರುವ ಆ ಮುನಿಯು, ಸುಖಕರವಾದ ಶಯ್ಯೆಯಿಂದ ಮೃದುವಾಗಿಯೂ, ಸುವರ್ಣ ಮಯವಾಗಿಯೂ ಆದ ಆಸನದಲ್ಲಿ ಕುಳಿತುಕೊಂಡು ರಾಜಭಟರನ್ನು ಕರೆದು ಹೀಗೆಂದನು. ॥ ೯-೧೧ ॥ “ ಎಲೈ ದೂತರಿರಾ ! ನೀವು ಶೀಘ್ರವಾಗಿ ತೆರಳಿ ಇನ್ನು ಮೇಲೆ ನಡೆಯು

ಬ್ರಾಹ್ಮಣಾನ್ ಕ್ಷತ್ರಿಯಾನ್ ವೈಶ್ಯಾನಮಾತ್ಯಾನ್ ಗಣವಲ್ಲಭಾನ್ ॥ ಕ್ಷಿಪ್ರಮಾನಯ ತಾವ್ಯಗ್ರಾಃ ಕೃತ್ಯಮಾತ್ಯಯಿಕಂ ಹಿ ನಃ ॥ ಸರಾಜಪುತ್ರಂ ಶತ್ರುಘ್ನಂ ಭರತಂಚ ಯಶಸ್ವಿನಂ ॥ ಯುಧಾಜಿತಂ ಸುಮಂತ್ರಂಚ ಯೇಚ ತತ್ರ ಹಿತಾ ಜನಾಃ॥೧೩॥ ತತೋ ಹಲಹಲಾ ಶಬ್ದಸ್ಸುಮಹಾನ್ ಸಮುಪದ್ಯತ ॥ ರಥೈ ರಶ್ವೈ ರ್ಗಜೈಶ್ಚಾಪಿ ಜನಾನಾ ಮುಪಗಚ್ಛತಾಂ ॥೧೪॥ ತತೋ ಭರತಮಾಯಾಂತಂ ಶತಕ್ರತು ಮಿವಾಮರಾಃ ॥ ಪ್ರತ್ಯನಂದನ್ ಪ್ರಕೃತಯೋ ಯಥಾ ದಶರಥಂ ತಥಾ ॥೧೫॥

ಕ್ಷತ್ರಿಯರನ್ನು, ವೈಶ್ಯಾನ್ - ವೈಶ್ಯರನ್ನು, ಅಮಾತ್ಯಾನ್ - ಮಂತ್ರಿಗಳನ್ನು, ಗಣವಲ್ಲಭಾನ್ - ಗುಂಪಿನಲ್ಲಿ ಶ್ರೇಷ್ಠರಾಗಿರುವ ಜನರನ್ನು, ಕ್ಷಿಪ್ರಂ - ಜಾಗ್ರತೆಯಾಗಿ, ಅವ್ಯಗ್ರಾಃ - ತಾಮಸವಿಲ್ಲದವರಾಗಿ, ಆನಯತ - ಕರೆದುಕೊಂಡು ಬನ್ನಿರಿ, ನಃ - ನಮಗೆ, ಆತ್ಯಯಿಕಂ - ಮುಂದೆ ಮಾಡತಕ್ಕ, ಕೃತ್ಯಂ - ಕಾರ್ಯವು, ಅಸ್ತಿಹಿ - ಇರುವುದಷ್ಟೆ, ಆತ್ಯಯಿಕಂ - (ಗೋ) ಮುಂದೆ ಬಹಳ ಪ್ರಯತ್ನದಿಂದ ಮಾಡತಕ್ಕ ಕಾರ್ಯವು ಇದೆಯಷ್ಟೆ. ॥೧೨॥ ಸರಾಜಪುತ್ರಂ - ರಾಜಗುರುವರರಿಂದೊಡಗೂಡಿದ, ಶತ್ರುಘ್ನಂ - ಶತ್ರುಘ್ನನನ್ನು, ಯಶಸ್ವಿನಂ - ಕೀರ್ತಿವಂತನಾದ, ಭರತಂಚ - ಭರತನನ್ನೂ ಕೂಡ, ಯುಧಾಜಿತಂ - ಯುಧಾಜಿತ್ತು ಎಂದು ನಾಮಾಂತರವುಳ್ಳ ವಿಜಯನನ್ನು, ಸುಮಂತ್ರಂಚ-ಸುಮಂತ್ರನನ್ನು, ಯೇಚ - ಯಾರು, ತತ್ರ - ಆ ಭರತನಲ್ಲಿ, ಹಿತಾಃ - ಹಿತಕರರಾದ, ಜನಾಃ - ಜನಗಳೋ, ತಾನ್ - ಅವರನ್ನು, ಆನಯತ - ಕರೆದುಕೊಂಡು ಬನ್ನಿರಿ. ॥೧೩॥ ತತಃ - ಬಳಿಕ, ಅಶ್ವೈಃ - ಕುದುರೆಗಳಿಂದಲೂ, ಗಜೈಶ್ಚಾಪಿ - ಆನೆಗಳಿಂದಲೂ, ಅಪಗಚ್ಛತಾಂ - ಬರುತ್ತಿರುವ, ಜನನಾಂ - ಜನರ, ಸುಮಹಾನ್ - ದೊಡ್ಡದಾದ, ಹಲಹಲಾಶಬ್ದಃ - ಕೋಲಾಹಲ ಧ್ವನಿಯು, ಸಮುಪದ್ಯತ - ಹುಟ್ಟಿತು. ॥೧೪॥ ತತಃ - ಬಳಿಕ, ಆಯಾಂತಂ - ಬರುತ್ತಿರುವ, ಭರತಂ - ಭರತನನ್ನು, ಶತಕ್ರತುಂ - ದೇವೇಂದ್ರನನ್ನು, ಅಮರಾಇವ - ದೇವತೆಗಳಂತೆ, ದೃಷ್ಟ್ವಾ - ಕಂಡು, ಪ್ರಕೃತಯಃ - ಆ ಮಂತ್ರಿಗಳು, ದಶರಥಂ - ದಶರಥಮಹಾರಾಯನನ್ನು ಕುರಿತು, ಯಥಾ - ಹೇಗೋ, ತಥಾ - ಹಾಗೆಯೇ, ಪ್ರತ್ಯನಂದನ್-ಸಂತೋಷಗೊಂಡರು. ॥೧೫॥ ತಿಮಿನಾಗಸಂವೃತಃ, ತಿಮಿ - ತಿಮಿಂಗಿಲಗಳಿಂ

ಬೇಕಾದ ರಾಜಕಾರ್ಯವನ್ನು ಕುರಿತು ಆಲೋಚಿಸಬೇಕಾಗಿರುವುದರಿಂದ ನಾನು ಕರೆದೆನೆಂದು ಹೇಳಿ, ಬ್ರಹ್ಮ ಕ್ಷತ್ರ ವೈಶ್ಯರನ್ನೂ, ಮಂತ್ರಿಗಳನ್ನೂ, ಗಣಾಧ್ಯಕ್ಷರನ್ನೂ, ಕರೆದುಕೊಂಡು ಬನ್ನಿರಿ. ಅಲ್ಲದೆ ಮಹಾರಾಜನಿಗೆ ಅಂತರಂಗಬಂಧುಗಳಾದ ಭರತಶತ್ರುಘ್ನರನ್ನೂ, ಯುಧಾಜಿತುವನ್ನೂ, ಸುಮಂತ್ರನನ್ನೂ, ಇನ್ನೂ ಇತರ ಹಿತಚಿಂತಕರನ್ನೂ, ಕರೆದುಕೊಂಡು ಬರುವವರಾಗಿರಿ." ವಸಿಷ್ಠಮುನೀಶ್ವರನಾಣತಿಯಾಗಲು ಆ ದೂತರು ಅಂತೆಯೇ ಎಲ್ಲರಿಗೂ ತಿಳಿಸಿದವರಾದರು. ಆ ಬಳಿಕ ಎಲ್ಲರೂ ತಮ್ಮ ತಮ್ಮ ಗೌರವಕ್ಕೆ ತಕ್ಕ ವಿಧಗಳಲ್ಲಿ ರಥ, ಗಜವಾಹನಗಳೊಡಗೂಡಿ ಹೊರಟುಬರುತ್ತಿದ್ದರು. ॥೧೨-೧೪॥ ಹೀಗೆ ಹೊರಟುಬರುತ್ತಿರುವ ಜನರ ಹಲಹಲಾ ಶಬ್ದವು, ಭೂಮ್ಯಂತರಿಕ್ಷಗಳಲ್ಲಿ ಪ್ರತಿಧ್ವನಿತವಾಯಿತು. ಮಾತ್ರವಲ್ಲದೆ ಆ ಧ್ವನಿಯು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿತು. ಹೀಗೆ ಕಲಕಲಧ್ವನಿಯಿಂದ ವಸಿಷ್ಠಮುನಿಪುಂಗವನಿಂದಾಜ್ಞಪ್ತರಾದ ಸಮಸ್ತ ಜನರೂ ಸಭೆಗೈತಂದರು. ಆಗ ಭರತನೂ ಕೂಡ

ಹ್ರದಇವ ತಿಮಿ ನಾಗ ಸಂವೃತ
ಸ್ತಿಮಿತ ಜಲೋ ಮಣಿಶಂಖ ಶರ್ಕರಃ ||
ದಶರಥಸುತ ಶೋಭಿತಾ ಸಭಾ
ಸದಶರಥೇವ ಬಭೌ ಯಥಾ ಪುರಾ || ೧೬ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಾಶೀತಿತಮಸ್ಸರ್ಗಃ.

ದಲೂ ಮತ್ಸ್ಯಗಳಿಂದಲೂ, ನಾಗ - ಸರ್ಪಗಳಿಂದಲೂ, ಸಂವೃತಃ - ಕೂಡಿರುವ, ಸ್ತಿಮಿತಜಲಃ - ನಿಶ್ಚಲವಾದ ನೀರುಳ್ಳ, ಮಣಿಶಂಖಶರ್ಕರಃ - ಮಣಿಗಳು ಶಂಖಗಳೆಂಬ ದೊಡ್ಡ ಮರಳುಗಳುಳ್ಳ, ಹ್ರದ ಇವ - ಸಮುದ್ರದ ಬಳಿಯಿರುವ ಮಡುವಿನಂತೆ, ದಶರಥಸುತಶೋಭಿತಾ - ಭರತ ಶತ್ರುಘ್ನರಿಂದ ಶೋಭಿಸಿದ, ಸಭಾ - ಆಸ್ಥಾನವು, ಸದಶರಥೇವ - ದಶರಥರಾಯನೊಡಗೂಡಿದಂತೆ, ಪುರಾಯಥಾ - ಪೂರ್ವದಂತೆ, ಬಭೌ - ಹೊಳೆಯುತ್ತಿದ್ದಿತು. || ೧೬ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಾಶೀತಿತಮಸ್ಸರ್ಗಃ.

ಅನೇಕ ಸಾವಿರ ಮಂದಿಯೊಡಗೂಡಿ ಸಭೆಗೆ ಬರುತ್ತಿದ್ದನು. ಇಂತು ಆಗಮಿಸುತ್ತಿರುವ ಭರತನನ್ನು ನೋಡಿ ಅಲ್ಲಿದ್ದ ಎಲ್ಲರೂ, "ದೇವತೆಗಳು ಇಂದ್ರನಿಗೆ ನಮಸ್ಕರಿಸಿದ" ರೀತಿಯಲ್ಲಿ ನಮಸ್ಕರಿಸಿದರು. ಆ ಕಾಲದಲ್ಲಿ ದಶರಥರಾಜ ಕುಮಾರನಾದ ಭರತನಿಂದ ಹೊಳೆಯುತ್ತಿರುವ ಆ ಸಭೆಯು, ದಶರಥಮಹಾರಾಜನ ಕಾಲದಲ್ಲಿ ಯಾವ ರೀತಿ ಬೆಳಗುತ್ತಲಿದ್ದಿತೋ, ಆ ರೀತಿ ಬೆಳಗುತ್ತಲಿದ್ದಿತಲ್ಲದೆ, ತಿಮಿಂಗಲಗಳಿಂದಲೂ, ಮೀನುಗಳಿಂದಲೂ, ಸರ್ಪಗಳಿಂದಲೂ, ಶಂಖಗಳಿಂದಲೂ, ಮಹಾಮಣಿಗಳಿಂದಲೂ, ಪ್ರಶಾಂತಜಲದಿಂದಲೂ, ಸೈಕತದಿಂದಲೂ ಒಡಗೂಡಿದ ಸರೋವರದಂತೆ ರಾರಾಜಿಸುತ್ತಲಿದ್ದಿತು. || ೧೨-೧೬ ||

ಇಂತಿದು ಭರತಸಂತಾಪ, ವಸಿಷ್ಠಾಜ್ಞಾ, ಭರತನ ಸಭಾಪ್ರವೇಶಾದಿ ಕಥನವೆಂಬ ಎಂಭತ್ತೊಂದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ದ್ವ್ಯಶೀತಿತಮಸ್ಸರ್ಗಃ.

ತಾನಾರ್ಯಗಣ ಸಂಪೂರ್ಣಾಂ ಭರತಃ ಪ್ರಗ್ರಹಾಂ ಸಭಾಂ ॥ ದದರ್ಶ ಬುದ್ಧಿಸಂಪನ್ನಃ ಪೂರ್ಣಚಂದ್ರೋ ನಿಶಾಮಿವ ॥೧॥ ಆಸನಾನಿ ಯಥಾನ್ಯಾಯ ಮಾರ್ಯಾಣಾಂ ವಿಶತಾಂ ತದಾ ॥ ವಸ್ತ್ರಾಂಗರಾಗ ಪ್ರಭಯಾ ದ್ಯೋತಿತಾ ಸಾ ಸಭೋತ್ತಮಾ ॥ ೨ ॥ ಸಾ ವಿದ್ವಜ್ಜನ ಸಂಪೂರ್ಣಾ ಸಭಾ ಸುರುಚಿರಾ ತದಾ ॥ ಅದೃಶ್ಯತ ಘನಾಪಾಯೇ ಪೂರ್ಣಚಂದ್ರೇವ ಶರ್ವರೀ ॥ ೩ ॥ ರಾಜ್ಞಸ್ತು ಪ್ರಕೃತೀ ಸ್ಸರ್ವಾ ಸ್ಸಮಗ್ರಾಃ ಪ್ರೇಕ್ಷ್ಯ ಧರ್ಮವಿತ್ ॥ ಇದಂ ಪುರೋಹಿತೋ

ಬುದ್ಧಿಸಂಪನ್ನಃ - ಬುದ್ಧಿವಂತನಾದ, ಭರತಃ-ಭರತನು, ಆರ್ಯಗಣಸಂಪೂರ್ಣಾಂ-ಪೂಜ್ಯರಾದ ವಸಿಷ್ಠಋಷಿಯೇ ಮೊದಲಾದವರ ಸಮೂಹದಿಂದ, ಸಂಪೂರ್ಣಾಂ - ತುಂಬಿರುವ, ಪ್ರಗ್ರಹಾಂ - ನಿಶ್ಚಂಚಲವಾದ, ಪ್ರಗ್ರಹಾಂ - (ಗೋ) ಶ್ರೇಷ್ಠರಾದ ಬೃಹಸ್ಪತಿ ಶುಕ್ರರಿಂದ ಕೂಡಿರುವ, ನಿಶಾಂ - ರಾತ್ರಿಯನ್ನು, ಪೂರ್ಣಚಂದ್ರಃ ಇವ-ಸಂಪೂರ್ಣ ಚಂದ್ರನಂತೆ, ತಾಂಸಭಾಂ-ಆ ಸಭೆಯನ್ನು, ದದರ್ಶ-ಕಂಡನು ॥೧॥ ತದಾ - ಆ ಕಾಲದಲ್ಲಿ, ಆಸನಾನಿ - ಪೀಠಗಳಲ್ಲಿ, ಯಥಾನ್ಯಾಯಂ - ಅವರವರ ಯೋಗ್ಯತೆಗೆತಕ್ಕಂತೆ, ವಿಶತಾಂ-ಕುಳಿತುಕೊಂಡಿರುವ, ಆರ್ಯಾಣಾಂ-ಪೂಜ್ಯರಾದ ವಸಿಷ್ಠಾದಿಋಷಿಗಳ, ವಸ್ತ್ರಾಂಗರಾಗಪ್ರಭಯಾ - ವಸ್ತ್ರಗಳ ಅಂಗಲೇಪನ ಕಾಂತಿಯಿಂದ, ಉತ್ತಮಾ - ಉತ್ಕೃಷ್ಟವಾದ, ಸಾಸಭಾ - ಆ ಸಭೆಯು, ದ್ಯೋತಿತಾ - ಹೊಳೆಯಲ್ಪಟ್ಟಿತು. ॥೨॥ ವಿದ್ವಜ್ಜನಸಂಪೂರ್ಣಾ - ವಿದ್ವಾಂಸರಾದ ಜನರಿಂದ ತುಂಬಿರುವ, ಸುರುಚಿರಾ - ಬಹಳ ಮನೋಹರವಾದ, ಸಾಸಭಾ - ಆ ಸಭೆಯು, ತದಾ-ಆಗ, ಘನಾಪಾಯೇ - ವರ್ಷಋತುವಿನ ತುದಿಯಲ್ಲಿ, ಪೂರ್ಣಚಂದ್ರಾ - ಸಂಪೂರ್ಣ ಚಂದ್ರನುಳ್ಳ, ಶರ್ವರೀವ - ರಾತ್ರಿಯಂತೆ, ಅದೃಶ್ಯತ - ಕಾಣಲ್ಪಟ್ಟಿತು. ॥೩॥ ಧರ್ಮವಿತ್ - ಧರ್ಮಜ್ಞನಾದ, ಪುರೋಹಿತಃ - ಪುರೋಹಿತನಾದ ವಸಿಷ್ಠಋಷಿಯು, ರಾಜ್ಞಃ - ಅರಸನಿಗೆ,

ಆ ಬಳಿಕ ಬುದ್ಧಿವಂತರಲ್ಲಿ ಉತ್ತಮನಾದ ಭರತಕುಮಾರನು ಪೂಜ್ಯರಾದ ಪ್ರಜೆಗಳ ಸಮೂಹಗಳಿಂದ ಸಂಪೂರ್ಣವಾದ ಆ ಸಭೆಯನ್ನು, ಪೂರ್ಣಿಮಾಚಂದ್ರನು ಬೃಹಸ್ಪತಿಯೇ ಮೊದಲಾದ ಗ್ರಹಗಳೊಡಗೂಡಿದ ರಾತ್ರಿಯನ್ನು ನೋಡಿದ ರೀತಿಯಲ್ಲಿ ನೋಡಿ, ಬಹಳವಾದ ಸಂತೋಷವನ್ನು ಹೊಂದಿದನು. ಅಲ್ಲದೆ ಆ ರಾಜಸಭೆಯಲ್ಲಿ ಪೂಜ್ಯರಾದ ಅವರೆಲ್ಲರಿಗೂ, ಅವರವರ ಯೋಗ್ಯತಾನುಸಾರವಾಗಿ ಆಸನಗಳನ್ನು ಕಲ್ಪಿಸಿದವನಾದನು. ಆಗಲಾ ರಾಜಸಭೆಯು ಅವರೆಲ್ಲರ ವಸ್ತ್ರಾಭರಣಾದಿಗಳಿಂದ ಬಹಳವಾಗಿ ಕಂಗೊಳಿಸುತ್ತಲಿದ್ದಿತು. ಇಷ್ಟುಮಾತ್ರವಲ್ಲದೆ ಆ ಸಮಯದಲ್ಲಿ, ವಿದ್ವಾಂಸರಿಂದ ಪೂರ್ಣವಾದುದೂ, ಮಹಾ ರಮಣೀಯವಾದುದೂ ಆದ ಆ ಸಭೆಯು "ಶರತ್ಕಾಲದಲ್ಲಿ ಪೂರ್ಣಚಂದ್ರನೊಡಗೂಡಿದ ನಿಶೆಯಂತೆ" ಪ್ರಕಾಶಿಸುತಲಿದ್ದಿತು.॥೧-೩॥ಆಗ ಸಕಲ ಧರ್ಮಗಳನ್ನು ತಿಳಿದಿರುವವನೂ, ಕುಲ

ವಾಕ್ಯಂ ಭರತಂ ಮೃದು ಚಾಬ್ರವೀತ್॥೪॥ತಾತ! ರಾಜಾ ದಶರಥ ಸ್ಸ್ವರ್ಗತೋ ಧರ್ಮಮಾಚರನ್ ॥ ಧನಧಾನ್ಯವತೀಂ ಸ್ಫೀತಾಂ ಪ್ರದಾಯ ಪೃಥಿವೀಂ ತವ ॥೫॥ ರಾಮ ಸ್ತಥಾ ಸತ್ಯಧೃತಿ ಸ್ಸತಾಂ ಧರ್ಮ ಮನುಸ್ಮರನ್ ॥ ನಾಜಹ ತ್ಪಿತುರಾದೇಶಂ ಶಶೀ ಜ್ಯೋತ್ಸ್ನಾ ಮಿವೋದಿತಃ ॥೬॥ ಪಿತ್ರಾ ಭ್ರಾತ್ರಾಚ ತೇದತ್ತಂ ರಾಜ್ಯಂ ನಿಹತ ಕಂಟಕಂ! ॥ ತದ್ಭುಙ್‌ಕ್ಷ್ವ ಮುದಿತಾಮಾತ್ಯಃ ಕ್ಷಿಪ್ರ ಮೇವಾ ಭಿಷೇಚಯ ॥೭॥ ಉದೀಚ್ಯಾಶ್ಚ ಪ್ರದೀಚ್ಯಾಶ್ಚ ದಾಕ್ಷಿಣಾತ್ಯಾಶ್ಚ

ಪ್ರಕೃತೀಃ - ಮಂತ್ರಿಗಳಾದ, ಸಮಗ್ರಾಃ - ಅಶೇಷರಾದ, ಸರ್ವಾಃ - ಎಲ್ಲರನ್ನೂ, ಪ್ರೇಕ್ಷ್ಯತು - ನೋಡಿ, ಭರತಂ - ಭರತನನ್ನು ಕುರಿತು, ಮೃದು - ಮನೋಹರವಾದ, ಇದಂವಾಕ್ಯಂ ಈ ಮಾತನ್ನು, ಅಬ್ರವೀಚ್ಚ - ನುಡಿಯಲೂ ನುಡಿದನು. ॥೪॥ ಹೇ ತಾತ - ಎಲೈ ವತ್ಸನೆ! ದಶರಥೋರಾಜಾ- ದಶರಥರಾಯನು, ಧರ್ಮಂ - ಧರ್ಮವನ್ನು, ಆಚರನ್ - ಆಚರಣೆಮಾಡುತ್ತ, ಧನಧಾನ್ಯವತೀಂ - ಧನವೂ ಧಾನ್ಯವೂ ಉಳ್ಳ, ಸ್ಫೀತಾಂ - ಸಮೃದ್ಧವಾದ, ಪೃಥಿವೀಂ - ಭೂಮಿಯನ್ನು, ತವ - ನಿನಗೆ, ಪ್ರದಾಯ - ಕೊಟ್ಟು, ಸ್ವರ್ಗತಃ - ಸ್ವರ್ಗಸ್ಥನಾದನು. ॥೫॥ ತಥಾ - ಹಾಗೆಯೇ, ಸತ್ಯಧೃತಿಃ- ಸತ್ಯದಲ್ಲಿಯೇ ಪ್ರೀತಿಯುಳ್ಳ, ರಾಮಃ - ಶ್ರೀರಾಮನು, ಸತಾಂ-ಸತ್ಪುರುಷರ, ಧರ್ಮಂ-ಧರ್ಮವನ್ನು, ಅನುಸ್ಮರನ್ - ಸ್ಮರಿಸಿದವನಾಗಿ, ಉದಿತಃ - ಉದಯಿಸಿದ, ಜ್ಯೋತ್ಸ್ನಾಮಿವ - ಬೆಳದಿಂಗಳನಂತೆ, ಪಿತುಃ - ತಂದೆಯ, ಆದೇಶಂ - ಆಜ್ಞೆಯನ್ನು, ನಾಜಹತ್ - ಬಿಡಲಿಲ್ಲ. ॥೬॥ ತೇ - ನಿನಗೆ, ಪಿತ್ರಾ - ತಂದೆಯಿಂದಲೂ, ಭ್ರಾತ್ರಾಚ - ಅಣ್ಣನಿಂದಲೂ, ದತ್ತಂ - ಕೊಡಲ್ಪಟ್ಟ, ನಿಹತಕಂಟಕಂ- ನಿಷ್ಕಂಟಕವಾದ, ತದ್ರಾಜ್ಯಂ - ಆ ರಾಜ್ಯವನ್ನು, ಮುದಿತಾಮಾತ್ಯಃ - ಸಂತೋಷಗೊಳಿಸಲ್ಪಟ್ಟ ಮಂತ್ರಿಗಳುಳ್ಳವನಾಗಿ, ಕ್ಷಿಪ್ರಮೇವಭುಙ್‌ಕ್ಷ್ವ - ಜಾಗ್ರತೆಯಾಗಿಯೇ ಅನುಭವಿಸು, ಅಭಿಷೇಚಯ - ಅಭಿಷೇಕಮಾಡಿಸಿಕೋ. ॥೭॥ ಉದೀಚ್ಯಾಶ್ಚ-ಉತ್ತರದಿಕ್ಕಿನಲ್ಲಿರುವ ರಾಜರೂ, ಪ್ರತೀಚ್ಯಾಶ್ಚ-ಪಶ್ಚಿಮ ದೇಶವಾಸಿಗಳಾದ ರಾಜರೂ, ದಾಕ್ಷಿಣಾತ್ಯಾಶ್ಚ - ದಕ್ಷಿಣದೇಶವಾಸಿಗಳಾದ ರಾಜರೂ, ಕೇವಲಾಃ -

ಪುರೋಹಿತನೂ ಆದ ವಸಿಷ್ಠಮಹಾಮುನಿಯು, ಆ ಸಭೆಯಲ್ಲಿದ್ದ ರಾಜರನ್ನೂ, ಸಮಸ್ತ ಜನರನೂ, ಭರತಕುಮಾರನನ್ನೂ ನೋಡಿ ಮೃದುಮಧುರವಾಗಿ ನುಡಿಯುತ್ತ, "ವತ್ಸ; ಭರತಕುಮಾರ! ನಮ್ಮೆಲ್ಲರಿಗೂ ಅರಸಾಗಿದ್ದ ದಶರಥರಾಯನು ಧರ್ಮವನ್ನು ತಪ್ಪದೆ ರಾಜ್ಯ ವನ್ನು ಪರಿಪಾಲಿಸುತ್ತ, ಧನಧಾನ್ಯಗಳಿಂದ ಪೂರ್ಣವಾದುದೂ, ಸಮೃದ್ಧವಾದುದೂ ಆದ ಈ ಸಾಕೇತರಾಜ್ಯವನ್ನು ನಿನಗಾಗಿತ್ತು, ಸ್ವರ್ಗಕ್ಕೆ ತೆರಳಿದನು. ಅಲ್ಲದೆ ಸತ್ಯದಲ್ಲಿಯೇ ಪರಮ ಪ್ರೀತಿಯುಳ್ಳ ಶ್ರೀರಾಮಮೂರ್ತಿಯು ಸತ್ಪುರುಷರಿಂದಾಚರಿತವಾದ ಧರ್ಮವನ್ನು ಸ್ಮರಿಸಿ ಜನಕನಾಣತಿಯನ್ನು "ಚಂದ್ರನು ಬೆಳದಿಂಗಳನ್ನು ಎಡೆಬಿಡದಿರುವಂತೆ" ಹೊಂದಿ ಅರಣ್ಯವನ್ನು ಸೇರಿದನು. ಆದುದರಿಂದ ತಂದೆಯಾದ ದಶರಥರಾಜನಿಂದಲೂ, ಅಣ್ಣನಾದ ಶ್ರೀರಾಮನಿಂದಲೂ ಕೊಡಲಾದ ನಿಷ್ಕಂಟಕವಾದೀ ರಾಜ್ಯವನ್ನು ನೀನು ಸ್ವೀಕರಿಸಿ, ಮಂತ್ರಿ ಗಳೆಲ್ಲರಿಗೂ ಆನಂದವಾಗುವಂತೆ ಪರಿಪಾಲಿಸುವವನಾಗು; ಪಟ್ಟಾಭಿಷಿಕ್ತನಾಗು; ॥೪-೭॥ ಉತ್ತರದೇಶದ ರಾಜರೂ, ಪಶ್ಚಿಮದೇಶದ ರಾಜರೂ, ದಕ್ಷಿಣದೇಶದ ರಾಜರೂ, ಅಲ್ಲದೆ

ಕೇವಲಾಃ ‖ ಕೋಟ್ಯಾಪರಾಂತಾ ಸ್ಸಾಮುದ್ರಾ ರತ್ನಾ ನ್ಯಭಿಹರಂತು ತೇ ‖ ೮ ‖
ತಚ್ಛ್ರುತ್ವಾ ಭರತೋ ವಾಕ್ಯಂ ಶೋಕೇನಾಽಭಿಪರಿಪ್ಲುತಃ ‖ ಜಗಾಮ ಮನಸಾ
ರಾಮಂ ಧರ್ಮಜ್ಞೋ ಧರ್ಮಕಾಂಕ್ಷಯಾ ‖ ೯ ‖ ಸಬಾಷ್ಪಕಲಯಾ ವಾಚಾ
ಕಲಹಂಸ ಸ್ವರೋ ಯುವಾ ‖ ವಿಲಲಾಪ ಸಭಾಮಧ್ಯೇ ಜಗರ್ಹೇಚ ಪುರೋಹಿತಂ
‖ ೧೦ ‖ ಚರಿತಬ್ರಹ್ಮಚರ್ಯಸ್ಯ ವಿದ್ಯಾಸ್ನಾತಸ್ಯ ಧೀಮತಃ ‖ ಧರ್ಮೇಪ್ರಯತ

ಸಿಂಹಾಸನ ರಹಿತರಾದ, ಅಪರಾಂತಾಃ - ಅಪರಾಂತ ದೇಶವಾಸಿಗಳಾದ ಯವನೀಯ್ಯರೆಂಬ ಜನರು, ಸಾಮುದ್ರಾಃ - ಸಮುದ್ರದೇಶವಾಸಿಗಳೂ, ತೇ - ನಿನಗೆ, ಕೋಟ್ಯಾ - ಕೋಟಿಸಂಖ್ಯೆಯಿಂದ, ರತ್ನಾನಿ - ರತ್ನಗಳನ್ನು, ಅಭಿಹರಂತು - ಕಾಣಿಕೆಯಾಗಿ ತಂದುಕೊಡಲಿ. ‖ ೮ ‖ ಧರ್ಮಜ್ಞಃ - ಧರ್ಮಜ್ಞನಾದ, ಭರತಃ - ಭರತನು, ತದ್ವಾಕ್ಯಂ - ಆ ಮಾತನ್ನು, ಶ್ರುತ್ವಾ - ಕೇಳಿ, ಶೋಕೇನ - ವ್ಯಸನದಿಂದ, ಅಭಿಪರಿಪ್ಲುತಃ - ಬಹಳ ಬಳಲಿದವನಾಗಿ, ಧರ್ಮಕಾಂಕ್ಷಯಾ - ಜ್ಯೇಷ್ಠಾನುವರ್ತನ ಧರ್ಮದ ಕೋರಿಕೆಯಿಂದ, ಮನಸಾ - ಮನದಿಂದ, ರಾಮಂ - ಶ್ರೀರಾಮನನ್ನು, ಜಗಾಮ - ಹೊಂದಿದನು. ‖ ೯ ‖ ಕಲಹಂಸಸ್ವರಃ - ಕಲಹಂಸಪಕ್ಷಿಯ ಧ್ವನಿಯಂತೆ ಕಂಠಧ್ವನಿಯುಳ್ಳ, ಯುವಾ - ಯುವಕನಾದ, ಸಃ - ಆ ಭರತನು, ಬಾಷ್ಪಕಲಯಾ - ಕಂಬನಿಯಿಂದ ಸೂಕ್ಷ್ಮವಾದ, ವಾಚಾ - ವಾಕ್ಕಿನಿಂದ, ಸಭಾಮಧ್ಯೇ - ಸಭೆಯ ಮಧ್ಯದಲ್ಲಿ, ವಿಲಲಾಪ - ವಿಲಪಿಸಿದನು, ಪುರೋಹಿತಂಚ - ಪುರೋಹಿತನನ್ನೂ ಕೂಡ, ಜಗರ್ಹೇ - ಹೀಯಾಳಿಸಿದನು. ‖ ೧೦ ‖ ಚರಿತಬ್ರಹ್ಮಚರ್ಯಸ್ಯ- ಆಚರಿಸಲ್ಪಟ್ಟ ನಿಯಮಾಧ್ಯಯನವುಳ್ಳ, ವಿದ್ಯಾಸ್ನಾತಸ್ಯ - ವಿದ್ಯಾಭ್ಯಾಸಾನಂತರದಲ್ಲಿ ಸ್ನಾತಕವ್ರತ ಮಾಡಿರುವ, ಧರ್ಮೇ - ಧರ್ಮದಲ್ಲಿ, ಪ್ರಯತಮಾನಸ್ಯ - ಯತ್ನವನ್ನು ಮಾಡುತ್ತಿರುವ, ಧೀಮತಃ- ಬುದ್ಧಿಶಾಲಿಯಾದ ಶ್ರೀರಾಮನ, ರಾಜ್ಯಂ - ರಾಜ್ಯವನ್ನು, ಮದ್ವಿಧಃ - ನನ್ನಂತಹ, ಕಃ - ಯಾವನು

ಸಾಮಾನ್ಯ ರಾಜರೂ, ಪಶ್ಚಿಮದೇಶವಾಸಿಗಳಾದ ಯವನರೂ, ಸಮುದ್ರ ಮಧ್ಯದಲ್ಲಿರುವ ದ್ವೀಪಾಂತರಗಳ ರಾಜರೂ ಅನೇಕ ಕೋಟಿ ಸಂಖ್ಯೆಯುಳ್ಳ ರತ್ನಗಳನ್ನು ನಿನಗೆ ಕಾಣಿಕೆಯಾಗಿ ತಂದೊಪ್ಪಿಸಲಿ" ಎಂದು ಹೇಳಿದನು.‖೮‖ವಸಿಷ್ಠಮುನೀಶ್ವರನೀರೀತಿಯಾಗಿ ಹೇಳಿದವನಾಗಲು, ಆ ಮಾತುಗಳೆಲ್ಲವನ್ನೂ ಕೇಳಿದ ಧರ್ಮಾತ್ಮನಾದ ಆ ಭರತಕುಮಾರನು ದುಃಖದಲ್ಲಿ ಮುಳುಗಿದವನಾಗಿ, ಧರ್ಮದಲ್ಲಿನ ಅಭಿಲಾಷೆಯಿಂದ ಮನಸ್ಸಿನಲ್ಲಿಯೇ ಶ್ರೀರಾಮಮೂರ್ತಿಯನ್ನು ಸ್ಮರಣೆ ಮಾಡಿದವನಾದನು. ಹೀಗೆ ಮನಸ್ಸಿನಲ್ಲಿಯೇ ಶ್ರೀರಾಮನನ್ನು ಧ್ಯಾನ ಮಾಡಿಕೊಂಡು, ಕಲಹಂಸದ ಕಂಠಧ್ವನಿಯಂತೆ ಮನೋಹರವಾದ ಕಂಠಧ್ವನಿಯುಳ್ಳವನೂ, ಯೌವನವಂತನೂ ಆದ ಆತನು ರಾಜ್ಯವೇ ಮೊದಲಾದ ಭೋಗ್ಯ ವಸ್ತುಗಳಲ್ಲಿನ ಅಪೇಕ್ಷೆಯಿಲ್ಲದವನಾಗಿ, ಮಹಾ ದುಃಖದಿಂದ ಕಣ್ಣೀರು ಧಾರಾಧಾರೆಯಾಗಿ ಪ್ರವಹಿಸುತ್ತಿರಲು, ಗಟ್ಟಿಯಾಗಿ ಆ ಸಭೆಯ ಮಧ್ಯದಲ್ಲಿಯೇ ರೋದಿಸಿದನು. ಅಲ್ಲದೆ ವಸಿಷ್ಠ ಮಹರ್ಷಿಯನ್ನು ಕುರಿತು,‖೯-೧೦‖"ಓ ವಸಿಷ್ಠರೆ! ನೀವಿಂತಹ ಕಠಿನವಾಕ್ಯಗಳನ್ನು ನುಡಿಯಬಹುದೆ? ಬ್ರಹ್ಮಚರ್ಯವ್ರತವನ್ನಾಚರಿಸಿದವನೂ, ವೇದಾಧ್ಯಯನಾನಂತರದಲ್ಲಿ ಸ್ನಾತಕ ವ್ರತವನ್ನಾಚರಿಸಿದವನೂ, ಮಹಾ ಮತಿಯುಳ್ಳವನೂ, ಧರ್ಮಗಳನ್ನಾಚರಿಸಲು ಪ್ರಯತ್ನ ಮಾಡುತ್ತಿರು

ಮಾನಸ್ಯ ಕೋರಾಜ್ಯಂ ಮದ್ವಿಧೋ ಹರೇತ್ ? ॥ ೧೧ ॥ ಕಥಂ ದಶರಥಾಜ್ಜಾತೋ ಭವೇದ್ರಾಜ್ಯಾಪಹಾರಕಃ ॥ ರಾಜ್ಯಂ ಚಾಹಂ ಚ ರಾಮಸ್ಯ ಧರ್ಮಂ ವಕ್ತು ಮಿಹಾರ್ಹಸಿ ॥ ೧೨ ॥ ಜ್ಯೇಷ್ಠ ಶ್ಶ್ರೇಷ್ಠಶ್ಚ ಧರ್ಮಾತ್ಮಾ ದಿಲೀಪನಹುಷೋಪಮಃ ॥ ಲಬ್ಧುಮರ್ಹತಿ ಕಾಕುತ್ಸ್ಥೋ ರಾಜ್ಯಂ ದಶರಥೋ ಯಥಾ ॥ ೧೩ ॥ ಅನಾರ್ಯಜುಷ್ಟ ಮಸ್ವರ್ಗ್ಯಂ ಕುರ್ಯಾಂ ಪಾಪಮಹಂ

ತಾನೆ, ಹರೇತ್ - ಅಪಹರಿಸಿಯಾನು. ॥ ೧೧ ॥ (೧) ದಶರಥಾತ್ - ದಶರಥರಾಯನಿಂದ, ಜಾತಃ- ಹುಟ್ಟಿದವನು, ರಾಜ್ಯಾಪಹಾರಕಃ - ರಾಜ್ಯವನ್ನು ಅಪಹರಿಸುವವನು, ಕಥಂಭವೇತ್ - ಹೇಗೆ ತಾನೇ ಆಗುತ್ತಾನೆ, ರಾಜ್ಯಂಚ - ರಾಜ್ಯವೂ, ಅಹಂಚ - ನಾನೂ, ರಾಮಸ್ಯ - ಶ್ರೀರಾಮನ ಸಂಬಂಧಿಗಳು, ಅತಃ - ಆದಕಾರಣ, ಇಹ - ಈ ನನ್ನ ವಿಷಯದಲ್ಲಿ, ಧರ್ಮಂ - ಧರ್ಮವನ್ನು, ವಕ್ತುಂ - ಹೇಳಲು, ಅರ್ಹಸಿ - ಯೋಗ್ಯನಾಗು. ॥ ೧೨ ॥ ಜ್ಯೇಷ್ಠಃ - ಜ್ಯೇಷ್ಠನಾದ, ಶ್ರೇಷ್ಠಃ - ನನಗಿಂತಲೂ ಉತ್ಕೃಷ್ಟನಾದ, ಧರ್ಮಾತ್ಮಾ - ಧರ್ಮದಲ್ಲಿಯೇ ಬುದ್ಧಿಯುಳ್ಳ, ದಿಲೀಪನಹುಷೋಪಮಃ - ದಿಲೀಪರಾಯನಿಗೂ, ನಹುಷರಾಯನಿಗೂ ಸಮಾನನಾದ, ಕಾಕುತ್ಸ್ಥಃ - ಶ್ರೀರಾಮನು, ದಶರಥೋಯಥಾ - ದಶರಥರಾಯನಂತೆ, ರಾಜ್ಯಂ - ರಾಜ್ಯವನ್ನು, ಲಬ್ಧುಂ - ಹೊಂದಲು, ಅರ್ಹತಿ - ಯೋಗ್ಯನಾಗುತ್ತಾನೆ, ಅಹಂ - ನಾನು, ಅನಾರ್ಯಜುಷ್ಟಂ - ಸತ್ಪುರುಷರಿಂದ ಅಂಗೀಕರಿಸದಿರುವ, ಅಸ್ವರ್ಗ್ಯಂ - ಸ್ವರ್ಗಸಂಪಾದಕವಲ್ಲದಿರುವ, ಪಾಪಂ - ಪಾಪವನ್ನು, ಕುರ್ಯಾಂಯದಿ - ಮಾಡಿದವನಾದರೆ,

ವನೂ, ವೇದೋಕ್ತ ಕರ್ಮಾನುಷ್ಠಾನವನ್ನು ಮಾಡುತ್ತಿರುವವನೂ ಆದ ನಮ್ಮಣ್ಣನಾದ ಶ್ರೀರಾಮಚಂದ್ರನ ರಾಜ್ಯವನ್ನು ಯಾವನುತಾನೆ ಅಪಹರಿಸುತ್ತಾನೆ? ನಿಜವಾಗಿಯೂ ದಶರಥ ರಾಜನಿಗೆ ಹುಟ್ಟಿದವನು ತನ್ನಣ್ಣನಿಗೆ ಸೇರಬೇಕಾದ ರಾಜ್ಯವನ್ನು ಅಪಹರಿಸುತ್ತಾನೆಯೆ ? ಈ ರಾಜ್ಯವೆಲ್ಲವು ಶ್ರೀರಾಮನದು. ನಾನೂ ನಮ್ಮಣ್ಣನಾದ ಶ್ರೀರಾಮನಿಗೆ ಸೇರಿದವನೆ ! ಆದುದರಿಂದೆಲೈ ಮುನಿಶ್ರೇಷ್ಠನಾದ ವಸಿಷ್ಠಋಷಿಯೆ ! ನೀನೀವಿಷಯದಲ್ಲಿ ಧರ್ಮವನ್ನು ಹೇಳಬೇಕು.॥೧೧-೧೨॥ಅಲ್ಲದೆ ಹಿರಿಯನೂ ಶ್ರೇಷ್ಠನೂ, ಧರ್ಮಸ್ವಭಾವವುಳ್ಳವನೂ,ದಿಲೀಪ ನಹುಷರಿಗೆ ಸಮಾನನಾದವನೂ ಆದ ಶ್ರೀರಾಮನು, ತಂದೆಯಾದ ದಶರಥರಾಜನಂತೆ ರಾಜ್ಯವನ್ನು ಪಡೆಯಲು ತಕ್ಕವನಾಗಿದ್ದಾನೆ. ಎಲೈ ಮುನಿಶ್ರೇಷ್ಠನೆ ! ನಾನು ದುಷ್ಟರಿಂದ ಸೇವಿಸ

ಟಿ. (೧) " ಎಲೈ ಪುರೋಹಿತನೆ ! ಶ್ರೀರಾಮಮೂರ್ತಿಯು ಅರಣ್ಯವನ್ನು ಸಾರಿದ ಮರುಕ್ಷಣದಲ್ಲಿಯೇ ನಮ್ಮ ತಂದೆಯಾದ ದಶರಥರಾಜನು ಸ್ವರ್ಗದ ಪಾಲಾದನು. ಅಂತಹ ರಾಯನ ಉದರದಲ್ಲಿ ಜನಿಸಿದ ನಾನು, ಆತನಿಂದ ಶ್ರೀರಾಮಮೂರ್ತಿಗೋಸುಗವಾಗಿ ತೊರೆಯಲಾದ ಈ ರಾಜ್ಯವನ್ನು ಹೇಗೆತಾನೇ ಪರಿಗ್ರಹಿಸಲಿ ? ನನ್ನನ್ನು ನಾನು ನೋಡಿಕೊಂಡರೆ ನಾನೀರಾಜ್ಯಶ್ರೀಯನ್ನು ಎಂದಿಗೂ ಬಯಸುವುದಿಲ್ಲ. ಈ ರಾಜ್ಯವೂ ಹಾಗೆಯೇ ಇದೆ. ಅಂದರೆ ನಾವಿಬ್ಬರೂ ಶ್ರೀರಾಮನ ಸಂಬಂಧಿಗಳಾಗಿದ್ದೇವೆ. ಆದುದರಿಂದ ರಾಮಾಜ್ಞೆಯಿಲ್ಲದೆ ರಾಮರಾಜ್ಯವನ್ನು ನಾನು ಕೈಹಿಡಿವುದೆಂತು ? ಈ ನನ್ನ ಅಭಿಪ್ರಾಯವನ್ನು ತಿಳಿದು ಉಚಿತವಾದ ಧರ್ಮವನ್ನು ಹೇಳಲರ್ಹನಾಗು. ಹಾಗೆ ನೀನದನ್ನರಿಯದೆ ಹೇಳುವೆಯಾದರೆ ನಮ್ಮ ಕುಲಕ್ರಮಾಗತ ಧರ್ಮವನ್ನು ನೀನು ತಿಳಿದಿಲ್ಲವೆಂದು ಹೇಳಬೇಕಾದೀತು !" (ಎಂಬುದೇ ಇಲ್ಲಿನ ಅಭಿಪ್ರಾಯ.)

ಯದಿ ॥ ಇಕ್ಷ್ವಾಕೂಣಾಮಹಂ ಲೋಕೇ ಭವೇಯಂ ಕುಲಪಾಂಸನಃ ॥೧೪॥
ಯದ್ಧಿ ಮಾತ್ರಾ ಕೃತಂ ಪಾಪಂ ನಾಹಂ ತದಪಿ ರೋಚಯೇ ॥ ಇಹಸ್ಥೋ
ವನದುರ್ಗಸ್ಥಂ ನಮಸ್ಯಾಮಿ ಕೃತಾಂಜಲಿಃ ॥೧೫॥ ರಾಮಮೇವಾ ನುಗ
ಚ್ಛಾಮಿ ರಾಜಾ ಸ ದ್ವಿಪದಾಂವರಃ ॥ ತ್ರಯಾಣಾಮಪಿ ಲೋಕಾನಾಂ ರಾಜ್ಯ
ಮರ್ಹತಿ ರಾಘವಃ ॥೧೬॥ ತದ್ವಾಕ್ಯಂ ಧರ್ಮಸಂಯುಕ್ತಂ ಶ್ರುತ್ವಾ ಸರ್ವೇ
ಸಭಾಸದಃ ॥ ಹರ್ಷಾ ನ್ಮುಮುಚುರಶ್ರೂಣಿ ರಾಮೇ ನಿಹಿತ ಚೇತಸಃ ॥೧೭॥

ಇಕ್ಷ್ವಾಕೂಣಾಂ - ಇಕ್ಷ್ವಾಕುವಂಶದ ರಾಜರಲ್ಲಿ, ಅಹಂ - ನಾನು, ಕುಲಪಾಂಸನಃ - ಕುಲದೂಷ ಕನು, ಭವೇಯಂ - ಆದೇನು. ॥೧೪॥ ಅಹಂಪಿ - ನಾನಾದರೇ, ಮಾತ್ರಾ - ತಾಯಿಯಾದ ಕೈಕೇಯಿಯಿಂದ, ಯತ್ಪಾಪಂ - ಯಾವ ಪಾಪಕೃತ್ಯವು, ಕೃತಂ - ಮಾಡಲಾಯಿತೋ, ತದಪಿ - ಅದನ್ನೂ ಕೂಡ, ನರೋಚಯೇ - ಸಮ್ಮತಿಸಲಾರೆನು, ಇಹಸ್ಥಃ - ಇಲ್ಲಿರುವ, ಅಹಂ - ನಾನು, ಕೃತಾಂಜಲಿಃ - ಅಂಜಲಿಬದ್ಧನಾಗಿ, ವನದುರ್ಗಸ್ಥಂ - ವನರೂಪವಾದ ದುರ್ಗಮ ಪ್ರದೇಶದಲ್ಲಿರುವ ರಾಮನನ್ನು ಕುರಿತು, ನಮಸ್ಯಾಮಿ - ನಮಸ್ಕಾರಮಾಡುವೆನು. ॥೧೫॥ ರಾಮಮೇವ - ಶ್ರೀರಾಮ ನನ್ನೇ, ಅನುಗಚ್ಛಾಮಿ - ಅನುಸರಿಸಿಹೋಗುತ್ತೇನೆ, ದ್ವಿಪದಾಂ - ಮನುಷ್ಯರಲ್ಲಿ, ವರಃ - ಶ್ರೇಷ್ಠ ನಾದ, ಸರಾಘವಃ - ಆ ಶ್ರೀರಾಮನು, ತ್ರಯಾಣಾಂ - ಮೂರಾದ, ಲೋಕಾನಾಮಪಿ - ಲೋಕಗ ಳಿಗೂ, ರಾಜಾ - ಅರಸಾಗಿ, ರಾಜ್ಯಂ - ರಾಜ್ಯವನ್ನು ಕುರಿತು, ಅರ್ಹತಿ - ಯೋಗ್ಯನಾಗುತ್ತಾನೆ. ॥೧೬॥ ಸರ್ವೇ - ಸಮಸ್ತರಾದ, ಸಭಾಸದಃ - ಸಭಿಕರು, ಧರ್ಮಸಂಯುಕ್ತಂ - ಧರ್ಮದಿಂದ ಕೂಡಿದ, ತದ್ವಾಕ್ಯಂ - ಆ ಮಾತನ್ನು, ಶ್ರುತ್ವಾ-ಕೇಳಿ, ರಾಮೇ - ಶ್ರೀರಾಮನಲ್ಲಿ, ನಿಹಿತಚೇತಸಃ - ಇರಿಸಲ್ಪಟ್ಟ ಮನವುಳ್ಳವರಾಗಿ, ಹರ್ಷಾತ್ - ಸಂತೋಷದಿಂದ, ಅಶ್ರೂಣಿ - ಕಂಬನಿಗಳನ್ನು, ಮುಮುಚುಃ - ಬಿಟ್ಟರು. ॥೧೭॥ ಆರ್ಯಂ - ಪೂಜ್ಯನಾದ ಶ್ರೀರಾಮನನ್ನು, ವನಾತ್ - ವನ

ಲಾಮದೂ, ಸ್ವರ್ಗಲೋಕಕ್ಕೆ ಹಾನಿಯುಂಟುಮಾಡುವುದೂ ಆದ ಈ ಪಾಪವನ್ನು ಮಾಡಿದ್ದೇ ಆದರೆ, ಇಕ್ಷ್ವಾಕು ವಂಶದಲ್ಲಿ ಹುಟ್ಟಿದವರಲ್ಲಿ, ಕುಲವನ್ನು ಹಾಳುಮಾಡಲು ಹುಟ್ಟಿದವ ನೆಂಬ ಅಪಕೀರ್ತಿಗೆ ಪಾತ್ರನಾಗುತ್ತೇನೆ. ನಮ್ಮ ತಾಯಿಯಾದ ಕೈಕೇಯಿಯು ಮಾಡಿ ದಂತೆಯೇ ನಾನೂ ಸಹ ಪಾಪಕೃತ್ಯವನ್ನು ಮಾಡಲು ಸಮ್ಮತಿಯುಳ್ಳವನಾಗಿಲ್ಲ, ನಾನಿ ಲ್ಲಿಂದಲೇ ಕೃತಾಂಜಲಿಯುಳ್ಳವನಾಗಿ, ಗೊಂಡಾರಣ್ಯವಾಸಿಯಾದ ಶ್ರೀರಾಮನಿಗೆ ನಮಸ್ಕಾರ ವನ್ನು ಮಾಡುತ್ತೇನೆ. ನಾನು ಶ್ರೀರಾಮಮೂರ್ತಿಯನ್ನೇ ಸೇವಿಸುತ್ತೇನೆ. ಸಜ್ಜನರಲ್ಲಿ ಅಗ್ರಗಣ್ಯನಾದ ಶ್ರೀರಾಮನೇ ನಮ್ಮೆಲ್ಲರಿಗೂ ರಾಜನಾಗಿರಬೇಕು. ಇಷ್ಟೆಯಲ್ಲದೆ ಶ್ರೀ ರಾಮನು ಮೂರು ಲೋಕಗಳನ್ನೂ ಪಾಲಿಸುವಂತಹ ಪ್ರಭುತ್ವವನ್ನು ಹೊಂದಲು ಯೋಗ್ಯ ನಾಗಿದ್ದಾನೆ” ಎಂದು ಹೇಳಿದನು. ॥೧೪-೧೬॥ ಹೀಗೆ ಭರತಕುಮಾರನು ನುಡಿದ ಮಾತು ಗಳನ್ನು ಕೇಳಿ ಆ ಸಭೆಯವರೆಲ್ಲರೂ, ಶ್ರೀರಾಮನಲ್ಲಿಯೇ ನೆಟ್ಟಮನಸ್ಸುಳ್ಳವರಾಗಿ ಆನಂದ ಬಾಷ್ಪಗಳನ್ನು ಸುರಿಸುತ್ತ, “ಆಹ! ಭರತನು ಧರ್ಮಯುಕ್ತವಾದ ಮಾತನ್ನೇ ಆಡಿದನು” ಎಂದು ಆತನ ನುಡಿಗಳನ್ನು ಶ್ಲಾಘಿಸಿದವರಾದರು. ಆಗ ಭರತನು ಮತ್ತೂ ಹೀಗೆ ಹೇಳಿ

ಯದಿ ತ್ವಾರ್ಯಂ ನಶಕ್ಷ್ಯಾಮಿ ವಿನಿವರ್ತಯಿತುಂ ವನಾತ್ ॥ ವನೇ ತತ್ರೈವ ವತ್ಸ್ಯಾಮಿ ಯಥಾರ್ಯೋ ಲಕ್ಷ್ಮಣ ಸ್ತಥಾ ॥ ೧೮ ॥ ಸರ್ವೋಪಾಯಂತು ವರ್ತಿಷ್ಯೇ ವಿನಿವರ್ತಯಿತುಂ ಬಲಾತ್ ॥ ಸಮಕ್ಷ ಮಾರ್ಯ ಮಿಶ್ರಾಣಾಂ ಸಾಧೂನಾಂ ಗುಣವರ್ತಿನಾಂ ॥ ೧೯ ॥ ವಿಷ್ಟಿಕರ್ಮಾಂತಿಕಾ ಸ್ಸರ್ವೇ ಮಾರ್ಗ ಶೋಧಕ ರಕ್ಷಕಾಃ ॥ ಪ್ರಸ್ಥಾಪಿತಾ ಮಯಾ ಪೂರ್ವಂ ಯಾತ್ರಾಪಿ ಮಮ ರೋಚತೇ ॥೨೦॥ ಏವಮುಕ್ತ್ವಾತು ಧರ್ಮಾತ್ಮಾ ಭರತೋ ಭ್ರಾತೃವತ್ಸಲಃ ॥ ಸಮೀಪಸ್ಥ ಮುವಾಚೇದಂ ಸುಮಂತ್ರಂ ಮಂತ್ರಕೋವಿದಂ ॥ ೨೧ ॥ ತೂರ್ಣ

ದಿಂದ, ವಿನಿವರ್ತಯಿತುಂ - ಹಿಂತಿರುಗಿಸುವದಕ್ಕೆ, ನಶಕ್ಷ್ಯಾಮಿಯದಿ - ಸಮರ್ಥನಾಗದೇಹೋದರೆ, ತತ್ರೈವವನೇ - ಅದೇ ವನದಲ್ಲಿಯೇ, ಆರ್ಯಃ - ಪೂಜ್ಯನಾದ, ಲಕ್ಷ್ಮಣಃ - ಲಕ್ಷ್ಮಣನು, ಯಥಾ - ಹೇಗೋ, ತಥಾ - ಹಾಗೆಯೇ, ವತ್ಸ್ಯಾಮಿ - ಇರುತ್ತೇನೆ. ॥ ೧೮ ॥ ಆರ್ಯಮಿಶ್ರಾಣಾಂ - ಸಭಿಕರಾದ, ಗುಣವರ್ತಿನಾಂ - ಗುಣಶಾಲಿಗಳಾದ, ಸಾಧೂನಾಂ - ಸತ್ಪುರುಷರ, ಸಮಕ್ಷಮಂ - ಮುಂಗಡೆ, ಬಲಾತ್ - ಬಲಾತ್ಕಾರದಿಂದ, ರಾಮಂ - ಶ್ರೀರಾಮನನ್ನು, ನಿವರ್ತಯಿತುಂ - ಹಿಂತಿರುಗಿಸಲು, ಸರ್ವೋಪಾಯಂತು - ಎಲ್ಲ ಉಪಾಯಗಳನ್ನೂ, ವರ್ತಿಷ್ಯೇ-ಪ್ರಯತ್ನಮಾಡಿ ನೋಡುತ್ತೇನೆ. ॥ ೧೯ ॥ ವಿಷ್ಟಿಕರ್ಮಾಂತಿಕಾಃ, ವಿಷ್ಟಿ - ಬಿಟ್ಟೀಜನರು, ಕರ್ಮಾಂತಿಕಾಃ - ದಿನಕೂಲಿಗಾರರು, ಸರ್ವೇ - ಸಮಸ್ತರಾದ, ಮಾರ್ಗಶೋಧಕರಕ್ಷಕಾಃ - ಮಾರ್ಗದಲ್ಲಿ ಕಾಮಗಾರಿಮಾಡುವವರು ಅವರ ರಕ್ಷಕರೂ, ಮಯಾ - ನನ್ನಿಂದ, ಪೂರ್ವಂ - ಮೊದಲು, ಪ್ರಸ್ಥಾಪಿತಾಃ - ಕಳುಹಲಾಗಿರುವರು, ಮಮ - ನನಗೆ, ಯಾತ್ರಾಪಿ - ಯಾತ್ರೆಯೂ (ಪ್ರಯಾಣವೂ,) ರೋಚತೇ - ಸಮ್ಮತವಾಗಿದೆ. ॥ ೨೦ ॥ ಏವಂ - ಈಪರಿಯಾಗಿ, ಧರ್ಮಾತ್ಮಾ - ಧರ್ಮದಲ್ಲಿ ಮನವುಳ್ಳ, ಭ್ರಾತೃವತ್ಸಲಃ- ಹಿರಿಯಣ್ಣನಲ್ಲಿ ಭಕ್ತಿವಂತನಾದ, ಭರತಸ್ತು - ಭರತನಾದರೆ, ಉಕ್ತ್ವಾ - ಹೇಳಿ, ಸಮೀಪಸ್ಥಂ - ಸಮೀಪವರ್ತಿಯಾದ, ಮಂತ್ರಕೋವಿದಂ - ಆಲೋಚನೆಯಲ್ಲಿ ಸಮರ್ಥನಾದ, ಸುಮಂತ್ರಂ - ಸುಮಂತ್ರನನ್ನು ಕುರಿತು, ಇದಂ - ಈಮಾತನ್ನು, ಉವಾಚ - ಹೇಳಿದನು. ॥ ೨೧ ॥ ಹೇ

ದನು. "ಓ ವಸಿಷ್ಠ ಮುನೀಶ್ವರನೆ! ಒಂದು ವೇಳೆ ಪೂಜ್ಯನಾದ ಶ್ರೀರಾಮನು ಅರಣ್ಯದಿಂದಿಲ್ಲಿಗೆ ಬಾರದಿದ್ದರೆ, ನಾನೂ ಸಹ ಲಕ್ಷ್ಮಣನಂತೆ ಆ ಶ್ರೀರಾಮನೊಡನೆ ಅರಣ್ಯದಲ್ಲಿಯೇ ವಾಸ ಮಾಡುತ್ತೇನೆ. ಸದ್ಗುಣಿಗಳೂ, ಸದ್ಗುಣಗಳನ್ನು ಅವಲಂಬಿಸಿದವರೂ ಆದ ಈ ಸಭಿಕರೆಲ್ಲರ ಸಮಕ್ಷಮದಲ್ಲಿಯೇ ಬಲಾತ್ಕಾರದಿಂದಲಾದರೂ ಆತನನ್ನು ಹಿಂತಿರುಗಿಸಲು ಅನೇಕ ಉಪಾಯಗಳನ್ನುಮಾಡುತ್ತೇನೆ. ಮಾರ್ಗಗಳನ್ನು ಚನ್ನಾಗಿ ಏರ್ಪಡಿಸುವವರೂ ಮಾರ್ಗಗಳಲ್ಲಿ ಕಾಪಾಡಲು ಸಾಮರ್ಥ್ಯವುಳ್ಳವರೂ, ಕೂಲಿಗೋಸುಗ ಹಳ್ಳಿಗಳಿಂದ ಬಂದವರೂ ಆದ ಅನೇಕ ಜನರನ್ನು ನಾನು ಮೊದಲೇ ಮಾರ್ಗವನ್ನು ಸರಿಮಾಡಿರೆಂದು ಕಳುಹಿದ್ದೇನೆ. ಆದುದರಿಂದ ನಾನು ಶ್ರೀರಾಮಮೂರ್ತಿಯಿರುವ ಸ್ಥಳಕ್ಕೆ ಹೋಗಲು ಬಹಳ ಕುತೂಹಲವುಳ್ಳವನಾಗಿದ್ದೇನೆ." ॥೧೭-೨೦॥ ಭ್ರಾತೃವತ್ಸಲನೂ, ಧರ್ಮಾತ್ಮನೂ ಆದ ಭರತನೀರೀತಿ ಹೇಳಿ, ಸಮೀಪದಲ್ಲಿಯೇ ಇದ್ದ, ಮಂತ್ರಾಲೋಚನೆ ಮಾಡುವವರಲ್ಲಿ ಮಹಾ ಸಮರ್ಥನಾದ ಸುಮಂತ್ರ

ಮುತ್ಥಾಯ ಗಚ್ಛತ್ವಂ ಸುಮಂತ್ರ! ಮಮ ಶಾಸನಾತ್ ॥ ಯಾತ್ರಾಮಾಜ್ಞಾಪಯ ಕ್ಷಿಪ್ರಂ ಬಲಂಚೈವ ಸಮಾನಯ ॥ ೨೨ ॥ ಏವಮುಕ್ತ ಸ್ಸುಮಂತ್ರಸ್ತು ಭರತೇನ ಮಹಾತ್ಮನಾ ॥ ಹೃಷ್ಟ ಸ್ತದಾದಿಶ ತ್ಸರ್ವಂ ಯಥಾಸಂದಿಷ್ಟಮಿಷ್ಟವತ್ ॥ ೨೩ ॥ ತಾಃ ಪ್ರಹೃಷ್ಟಾಃ ಪ್ರಕೃತಯೋ ಬಲಾಧ್ಯಕ್ಷಾ ಬಲಸ್ಯಚ ॥ ಶ್ರುತ್ವಾ ಯಾತ್ರಾಂ ಸಮಾಜ್ಞಪ್ತಾಂ ರಾಘವಸ್ಯ ನಿವರ್ತನೇ ॥ ೨೪ ॥ ತತೋಯೋಧ್ಯಾಂಗನಾ ಸ್ಸರ್ವಾ ಭರ್ತ್ರೂರ್ನ್ ಸರ್ವಾನ್ ಗೃಹೇ ಗೃಹೇ ॥ ಯಾತ್ರಾಗಮನ ಮಾಜ್ಞಾಯ ತ್ವರಯಂತಿಸ್ಮ ಹರ್ಷಿತಾಃ ॥ ೨೫ ॥ ತೇಹಯೈ

ಸುಮಂತ್ರ - ಎಲೈ ಸುಮಂತ್ರನೇ, ತ್ವಂ - ನೀನು, ತೂರ್ಣಂ - ಜಾಗ್ರತೆಯಾಗಿ, ಉತ್ಥಾಯ - ಎದ್ದು, ಗಚ್ಛ - ಹೋಗು, ಮಮ - ನನ್ನ, ಶಾಸನಾತ್ - ಆಜ್ಞೆಯಿಂದ, ಯಾತ್ರಾಂ - ಪ್ರಯಾಣವನ್ನು, ಆಜ್ಞಾಪಯ - ಅಪ್ಪಣೆಮಾಡು, ಕ್ಷಿಪ್ರಂ - ಜಾಗ್ರತೆಯಾಗಿ, ಬಲಂಚೈವ - ಸಮಸ್ತ ಸೈನ್ಯವನ್ನೂ, ಸಮಾನಯ - ಕರೆದುಕೊಂಡುಬಾ. ॥ ೨೨ ॥ ಮಹಾತ್ಮನಃ - ಮಹಾತ್ಮನಾದ, ಭರತೇನ- ಭರತನಿಂದ, ಏವಂ - ಈಪರಿಯಾಗಿ, ಉಕ್ತಃ - ಹೇಳಲಾದ, ಸುಮಂತ್ರಸ್ತು - ಸುಮಂತ್ರನಾದರೆ, ಹೃಷ್ಟಃ - ಸಂತೋಷಗೊಂಡವನಾಗಿ, ಇಷ್ಟವತ್ - ಇಷ್ಟದಂತೆ, ಸರ್ವಂ - ಸಮಸ್ತವಾದ ಸೈನ್ಯವನ್ನು ಕುರಿತು, ಯಥಾಸಂದಿಷ್ಟಂ-ಭರತನ ಆಜ್ಞೆಯಂತೆ, ತದಾ-ತತ್‌ಕ್ಷಣದಲ್ಲಿ, ಆದಿಶತ್-ಆಜ್ಞಾಪಿಸಿದನು. ॥ ೨೩ ॥ ಬಲಾಧ್ಯಕ್ಷಾಃ - ಸೈನ್ಯಾಧಿಪತಿಗಳು, ತಾಃಪ್ರಕೃತಯಃ - ಆ ಮಂತ್ರಿಗಳು, ರಾಘವಸ್ಯ - ಶ್ರೀರಾಮನ, ನಿವರ್ತನೇ - ಹಿಂತಿರುಗಿಸುವ ವಿಷಯದಲ್ಲಿ, ಸಮಾಜ್ಞಪ್ತಾಂ - ಆಜ್ಞಾಪಿಸಿದ, ಬಲಸ್ಯ - ಸೈನ್ಯದ, ಯಾತ್ರಾಂ - ಪ್ರಯಾಣವನ್ನು, ಶ್ರುತ್ವಾ - ಕೇಳಿ, ಪ್ರಹೃಷ್ಟಾಃ - ಸಂತೋಷಗೊಂಡರು. ॥೨೪॥ ತತ -ಅನಂತರದಲ್ಲಿ, ಸರ್ವಾಃ - ಸಮಸ್ತರಾದ, ಅಯೋಧ್ಯಾಂಗನಾಃ-ಅಯೋಧ್ಯಾಪಟ್ಟಣದ ಸ್ತ್ರೀಯರು, ಯಾತ್ರಾಗಮನಂ-ಸೈನ್ಯಪ್ರಯಾಣವನ್ನು, ಆಜ್ಞಾಯ - ತಿಳಿದು, ಹರ್ಷಿತಾಃ - ಸಂತೋಷಗೊಂಡವರಾಗಿ, ಗೃಹೇಗೃಹೇ-ಮನೆ ಮನೆಯಲ್ಲಿಯೂ, ಸರ್ವಾನ್-ಸಮಸ್ತರಾದ, ಭರ್ತ್ರೂರ್ನ್- ತಮ್ಮ ತಮ್ಮ ಪತಿಗಳನ್ನು, ತ್ವರಯಂತಿಸ್ಮ - ತ್ವರೆಗೊಳಿಸಿದರಷ್ಟೆ. ॥ ೨೫ ॥ ತೇಬಲಾಧ್ಯಕ್ಷಾಃ -

---

ನನ್ನು ಕುರಿತು ಹೀಗೆಂದನು. ॥ ೨೧ ॥ "ಎಲೈ ಸುಮಂತ್ರನೆ! ನೀನು ಶೀಘ್ರವಾಗಿ ಹೋಗಿ, ನಾನು ಹೇಳಿದೆನೆಂದು ಹೇಳಿ, ಚತುರಂಗಬಲವನ್ನು ಪಯಣಮಾಡಿಸಿ, ತೆಗೆದುಕೊಂಡು ಬರುವವನಾಗು. ಯಾವುದೊಂದು ಆಲಸ್ಯವನ್ನೂ ಮಾಡಬೇಡ." ಈ ರೀತಿಯಾ ಮಹಾನುಭಾವನಾದ ಭರತನು ಹೇಳಿದ ನುಡಿಗಳನ್ನಾಲಿಸಿದ ಆ ಸುಮಂತ್ರನು ಮಹಾ ಸಂತೋಷವುಳ್ಳವನಾಗಿ ಆತನು ಹೇಳಿದ ಪ್ರಕಾರ ಎಲ್ಲರಿಗೂ ಅಪ್ಪಣೆ ಮಾಡಿದನು. ಆಗ ಸಕಲ ಪ್ರಜೆಗಳೂ, ಗಣಾಧ್ಯಕ್ಷರೂ ಆ ವೃತ್ತಾಂತವನ್ನು ಕೇಳಿ "ಶ್ರೀರಾಮಮೂರ್ತಿಯು ಅರಣ್ಯದಿಂದ ಪುನಃ ನಗರಕ್ಕೆ ಬರುತ್ತಾನಲ್ಲವೆ!" ಎಂದು ಮಹದಾನಂದವನ್ನು ಹೊಂದಿದರು. ಆಮೇಲೆ, ಪ್ರತಿ ಗೃಹದಲ್ಲಿಯೂ ಭೃತ್ಯರು ಮೊದಲ್ಗೊಂಡು, ಅವರ ಭಾರ್ಯೆಯರು ತಮ್ಮ ತಮ್ಮ ಪತಿಗಳು ಶ್ರೀರಾಮನ ಬಳಿಗೆ ಹೋಗಬೇಕಾದ ಪ್ರಯಾಣವೊದಗಿತೆಂಬ ಸಂತೋಷದಿಂದ ತಮ್ಮ ಪತಿಗಳಿಗೆ ಪಯಣ ಬೆಳಿಸಿರೆಂದು ತ್ವರೆಗೊಳಿಸಿದರು. ॥೨೨-೨೫॥ ಅಷ್ಟರಲ್ಲಿ ಸೇನಾಧ್ಯಕ್ಷರೆಲ್ಲರೂ

ಗೋರಥೈಶ್ಶೀಘ್ರೈಸ್ಸ್ಯಂದನೈಶ್ಚ ಮಹಾಜವೈಃ ॥ ಸಹಯೋಧೈರ್ಬಲಾಧ್ಯಕ್ಷಾ ಬಲಂ ಸರ್ವಮಚೋದಯನ್ ॥ ೨೬ ॥ ಸಜ್ಜಂತು ತದ್ಬಲಂ ದೃಷ್ಟ್ವಾ ಭರತೋ ಗುರುಸನ್ನಿಧೌ ॥ ರಥಂ ಮೇ ತ್ವರಯಸ್ವೇತಿ ಸುಮಂತ್ರಂ ಪಾರ್ಶ್ವತೋಽಬ್ರವೀತ್ ॥ ೨೭ ॥ ಭರತಸ್ಯತು ತಸ್ಯಾಜ್ಞಾಂ ಪ್ರತಿಗೃಹ್ಯಚ ಹರ್ಷಿತಃ ॥ ರಥಂ ಗೃಹೀತ್ವಾ ಪ್ರಯಯೌ ಯುಕ್ತಂ ಪರಮವಾಜಿಭಿಃ ॥ ೨೮ ॥ ಸರಾಘವಸ್ಸತ್ಯಧೃತಿಃ ಪ್ರತಾಪವಾನ್ ಬ್ರುವನ್ ಸುಯುಕ್ತಂ ದೃಢಸತ್ಯ ವಿಕ್ರಮಃ ॥ ಗುರುಂ

ಆ ಸೈನ್ಯಾಧಿಪತಿಗಳು, ಮಹಾಜವೈಃ - ಮಹಾ ವೇಗವುಳ್ಳ, ಹಯೈಃ - ಕುದುರೆಗಳಿಂದಲೂ, ಗೋರಥೈಃ-ಎತ್ತುಗಳ ಭಂಡಿಗಳಿಂದಲೂ, ಶೀಘ್ರೈಃ - ವೇಗವತ್ತಾದ, ಸ್ಯಂದನೈಶ್ಚ - ರಥಗಳಿಂದಲೂ, ಯೋಧೈಸ್ಸಹ - ಭಟರೊಡಗೂಡಿ, ಸರ್ವಂ - ಸಮಸ್ತವಾದ, ಬಲಂ - ಸೈನ್ಯವನ್ನು, ಅಚೋದಯನ್-ಪ್ರೇರಿಸಿದರು. ॥ ೨೬ ॥ ಭರತಃ - ಭರತನು, ಸಜ್ಜಂ - ಸಿದ್ಧಗೊಳಿಸಿದ, ತದ್ಬಲಂತು, ಆ ಬಲವನ್ನು, ದೃಷ್ಟ್ವಾ - ಕಂಡು, ಗುರುಸನ್ನಿಧೌ - ವಸಿಷ್ಠಋಷಿಯ ಸನ್ನಿಧಿಯಲ್ಲಿ, ಪಾರ್ಶ್ವತಃ - ಪಾರ್ಶ್ವಭಾಗದಲ್ಲಿರುವ, ಸುಮಂತ್ರಂ - ಸುಮಂತ್ರನನ್ನು ಕುರಿತು, ಮೇ - ನನ್ನ, ರಥಂ - ರಥವನ್ನು, ತ್ವರಯಸ್ವೇತಿ - ಜಾಗ್ರತೆಯಾಗಿ ಸಿದ್ಧಗೊಳಿಸೆಂದು, ಅಬ್ರವೀತ್ - ನುಡಿದನು. ॥೨೭॥ ತಸ್ಯಭರತಸ್ಯ - ಆ ಭರತನ, ಆಜ್ಞಾಂತು - ಆಜ್ಞಾವಚನವನ್ನಾದರೋ, ಪ್ರತಿಗೃಹ್ಯ - ಸ್ವೀಕರಿಸಿ, ಹೃಷಿತಶ್ಚ - ಸಂತೋಷವುಳ್ಳವನಾಗಿ, ಪರಮವಾಜಿಭಿಃ - ಉತ್ತಮಾಶ್ವಗಳಿಂದ, ಯುಕ್ತಂ - ಕೂಡಿರುವ, ರಥಂ - ತೇರನ್ನು, ಗೃಹೀತ್ವಾ - ತೆಗೆದುಕೊಂಡು. ॥ ೨೮ ॥ ಪ್ರತಾಪವಾನ್ - ಮಹಾ ಪರಾಕ್ರಮಶಾಲಿಯಾದ, ಸತ್ಯಧೃತಿಃ - ಸತ್ಯದಲ್ಲಿಯೇ ಧಾರ್ಢ್ಯವುಳ್ಳ, ದೃಢಸತ್ಯವಿಕ್ರಮಃ - ದೃಢವಾದ ಸತ್ಯವೂ ಪರಾಕ್ರಮವೂವುಳ್ಳ, ರಾಘವಃ - ರಘುಕುಲೋತ್ಪನ್ನನಾದ, ಸಭರತಃ - ಆ ಭರತನು, ಮಹಾರಣ್ಯಗತಂ - ದೊಡ್ಡ ಆರಣ್ಯವನ್ನು ಹೊಂದಿರುವ, ಯಶಸ್ವಿನಂ - ಕೀರ್ತಿವಂತನಾದ, ಗುರುಂ - ಜ್ಯೇಷ್ಠನಾದ ಶ್ರೀರಾಮನನ್ನು, ಪ್ರಸಾದಯಿಷ್ಯನ್ - ಪ್ರಸನ್ನನಾಗಿಮಾಡಿಕೊಳ್ಳಲಿಚ್ಛೆಯುಳ್ಳವನಾಗಿ, ತದಾ-ಆಗ, ಸುಯುಕ್ತಂ-

ಪರಮಸಂತೋಷವುಳ್ಳವರಾಗಿ ಕುದುರೆಗಳನ್ನೂ,ಎತ್ತುಗಳನ್ನೂ,ರಥಗಳನ್ನೂ,ಭಂಡಿಗಳನ್ನೂ, ಗಜಗಳನ್ನೂ, ಕಾಲ್ಬಲಗಳನ್ನೂ, ಇನ್ನೂ ಬೇಕಾದ ಸಾಮಗ್ರಿಗಳೆಲ್ಲವನ್ನೂ ಸಿದ್ಧಗೊಳಿಸಿಕೊಂಡರು. ಆಗಲಾ ಭರತನು ಸನ್ನದ್ಧವಾದ ಆ ಸೈನ್ಯವನ್ನು ನೋಡಿ ವಸಿಷ್ಠ ಮಹಾಮುನಿಯು ಜತೆಯಲ್ಲಿರುವ ಹಾಗೆಯೇ, ಪಾರ್ಶ್ವವರ್ತಿಯಾದ ಸುಮಂತ್ರನನ್ನು ನೋಡಿ, "ಓ ಸುಮಂತ್ರನೆ! ನನ್ನ ರಥವನ್ನು ಕೂಡ ತೆಗೆದುಕೊಂಡು ಬರುವವನಾಗು" ಎಂದು ಹೇಳಿದನು. ಆಗಲಾ ಸುಮಂತ್ರನು ಭರತನ ಆಜ್ಞೆಯನ್ನು ಕೈಕೊಂಡು ಸಂತೋಷವನ್ನು ಹೊಂದಿ ಉತ್ತಮಾಶ್ವಗಳಿಂದ ಕಟ್ಟಲಾದ ಆತನ ರಥವನ್ನು ತೆಗೆದುಕೊಂಡು ಬಂದವನಾದನು. ಆಗ ರಘುಕುಲದಲ್ಲಿ ಜನಿಸಿದವನೂ, ಎಲ್ಲ ಕಾಲಗಳಲ್ಲಿಯೂ ಧೈರ್ಯವನ್ನವಲಂಬಿಸಿರುವವನೂ, ಮಹಾ ಪರಾಕ್ರಮಶಾಲಿಯಾದವನೂ, ದೃಢವಾದುದೂ, ಸತ್ಯವಾದುದೂ ಆದ ವಿಕ್ರಮವುಳ್ಳವನೂ ಆದ ಭರತನು ಸವಿನುಡಿಗಳನ್ನಾಡುತ್ತ ಮಹಾರಣ್ಯಕ್ಕೆ ಹೊರಟುಹೋದವನೂ, ಅಧಿಕವಾದ ಕೀರ್ತಿಯುಳ್ಳವನೂ ಆದ ಶ್ರೀರಾಮಮೂರ್ತಿಯು ಪ್ರಸನ್ನನಾಗಲು

ಮಹಾರಣ್ಯಗತಂ ಯಶಸ್ವಿನಂ ಪ್ರಸಾದಯಿಷ್ಯನ್ ಭರತೋಽಬ್ರವೀತ್ತದಾ ||೨೯||
ತೂರ್ಣಂ ಸಮುತ್ಥಾಯ ಸುಮಂತ್ರ! ಗಚ್ಛ ಬಲಸ್ಯ ಯೋಗಾಯ ಬಲಪ್ರಧಾನಾನ್ || ಆನೇತು ಮಿಚ್ಛಾಮಿ ಹಿ ತಂ ವನಸ್ಥಂ ಪ್ರಸಾದ್ಯ ರಾಮಂ ಜಗತೋ ಹಿತಾಯ ||೩೦|| ಸಸೂತ ಪುತ್ರೋ ಭರತೇನ ಸಮ್ಯಕ್ ಆಜ್ಞಾಪಿತಸ್ಸಂಪರಿಪೂರ್ಣ ಕಾಮಃ || ಶಶಾಸ ಸರ್ವಾನ್ ಪ್ರಕೃತಿಪ್ರಧಾನಾನ್ ಬಲಸ್ಯ ಮುಖ್ಯಾಂಶ್ಚ ಸುಹೃಜ್ಜನಂಚ ||೩೧||

ತತಸ್ಸಮುತ್ಥಾಯ ಕುಲೇ ಕುಲೇ ತೇ
ರಾಜನ್ಯ ವೈಶ್ಯಾ ವೃಷಲಾಶ್ಚ ವಿಪ್ರಾಃ ||

ಯುಕ್ತ್ವಾದ ಮಾತನ್ನು, ಬ್ರುವನ್ - ಹೇಳುವನಾಗಿ, ಅಬ್ರವೀತ್ - ನುಡಿದನು. ||೨೯|| ಹೇ ಸುಮಂತ್ರ - ಎಲೈ ಸುಮಂತ್ರನೇ, ತೂರ್ಣಂ - ಜಾಗ್ರತೆಯಾಗಿ, ಸಮುತ್ಥಾಯ - ಎದ್ದು, ಬಲಸ್ಯ - ಸೈನ್ಯದ, ಯೋಗಾಯ - ಸನ್ನಾಹಕ್ಕೋಸ್ಕರ, ಬಲಪ್ರಧಾನಾನ್ - ಬಲಾಧ್ಯಕ್ಷರನ್ನು ಕುರಿತು, ಗಚ್ಛ - ಹೋಗು, ಜಗತಃ - ಲೋಕಕ್ಕೆ, ಹಿತಾಯ - ಹಿತಕ್ಕೋಸ್ಕರ, ವನಸ್ಥಂ - ವನದಲ್ಲಿರುವ, ತಂರಾಮಂ - ಆ ಶ್ರೀರಾಮನನ್ನು, ಪ್ರಸಾದ್ಯ - ಸಮಾಧಾನಗೊಳಿಸಿ, (ಪುರಕ್ಕೆ ಕರೆದುಕೊಂಡು ಬರುವದಕ್ಕೆ) ಇಚ್ಛಾಮಿಹೇ - ಅಪೇಕ್ಷಿಸುತ್ತೇನೆಯಷ್ಟೆ ? ||೩೦|| ಭರತೇನ - ಭರತನಿಂದ, ಸಮ್ಯಕ್ - ಚನ್ನಾಗಿ, ಆಜ್ಞಾತಃ - ಆಜ್ಞಾಪಿಸಲ್ಪಟ್ಟ, ಸಸೂತಪುತ್ರಃ - ಆ ಸಾರಥಿಯ ಮಗನಾದ ಸುಮಂತ್ರನು, ಸಂಪರಿಪೂರ್ಣಕಾಮಃ - ಸಂಪೂರ್ಣವಾದ ಕೋರಿಕೆಯುಳ್ಳವನಾಗಿ, ಸರ್ವಾನ್ - ಸಮಸ್ತರಾದ, ಪ್ರಕೃತಿಪ್ರಧಾನಾನ್ - ಮುಖ್ಯ ಮಂತ್ರಿಗಳನ್ನು, ಬಲಸ್ಯ - ಸೈನ್ಯಕ್ಕೆ, ಮುಖ್ಯಾಂಶ್ಚ - ಅಧ್ಯಕ್ಷರನ್ನು, ಸುಹೃಜ್ಜನಂಚ - ಮಿತ್ರಜನರನ್ನೂ ಕುರಿತು, ಶಶಾಸ - ಆಜ್ಞಾಪಿಸಿದನು. ||೩೧|| ತೇವಿಪ್ರಾಃ - ಆ ಬ್ರಾಹ್ಮಣರು, ತತಃ - ಬಳಿಕ, ಸಮುತ್ಥಾಯ - ಎದ್ದು, ರಾಜನ್ಯವೈಶ್ಯಾಃ - ಅರಸುಮಕ್ಕಳೂ ವೈಶ್ಯರೂ, ವೃಷಲಾಶ್ಚ - ಶೂದ್ರರೂ, ಕುಲೇಕುಲೇ-ಮನೆ ಮನೆಯಲ್ಲಿಯೂ, ಉಷ್ಟ್ರಖರಾನ್-ಒಂಟೆಗಳನ್ನೂ ಹೇಸರಕತ್ತೆಗಳನ್ನೂ, ರಥಾಂಶ್ಚ-ರಥಗಳನ್ನೂ, ನಾಗಾನ್-ಆನೆಗಳನ್ನೂ, ಕುಲಪ್ರಧಾನಾನ್-

---

ಯೋಚಿಸಿ ಸುಮಂತ್ರನನ್ನು ನೋಡಿ, ||೨೬-೨೯|| "ಎಲೈ ಸುಮಂತ್ರನ! ಜಾಗ್ರತೆಯಾಗಿ ಎದ್ದು ಸೈನ್ಯವೆಲ್ಲವೂ ಒಂದು ಕಡೆ ಸೇರುವಂತೆ ಮಾಡಬೇಕೆಂದು ಸೇನಾಧ್ಯಕ್ಷರಿಗೆ ಅಪ್ಪಣೆ ಮಾಡು. ನಾನು ಶೀಘ್ರವಾಗಿ ತೆರಳಿ ಲೋಕದ ಹಿತಕ್ಕೋಸುಗ ಅರಣ್ಯವಾಸಿಯಾದ ಶ್ರೀರಾಮನನ್ನು ಪ್ರಸನ್ನನನ್ನಾಗಿ ಮಾಡಿ ಕರೆದುಕೊಂಡು ಬರಲಿಷ್ಟವುಳ್ಳವನಾಗಿದ್ದೇನೆ" ಎಂದನು. ಆ ಮಾತನ್ನು ಕೇಳಿದ ಸುಮಂತ್ರನು ಭರತನಾಣತಿಯನ್ನು ಶಿರಸಾ ವಹಿಸಿ, ತನ್ನ ಕೋರಿಕೆಗಳೆಲ್ಲವೂ ನೆರವೇರಿದುದರಿಂದ ಮಹದಾನಂದಭರಿತನಾಗಿ, ಪ್ರಜಾಮುಖಂಡರಿಗೂ, ಸೇನಾನಾಯಕರಿಗೂ, ಸ್ನೇಹಿತರಿಗೂ, ಮತ್ತೂ ಇತರರಿಗೂ ಶೀಘ್ರವಾಗಿ ಪಯಣವಾಗಬೇಕೆಂಬ ಭರತನಾಣತಿಯನ್ನು ತಿಳುಹಿದನು. ||೩೦-೩೧|| ಆಗ ಪ್ರತಿ ಗೃಹದಲ್ಲಿಯ ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ ಜಾಗ್ರತೆಗೊಂಡು, ಒಂಟೆಗಳನ್ನೂ, ಹೇಸರಕತ್ತೆ

ಅಯೂಯುಜ ನ್ನುಷ್ಟ್ರ ಖರಾ ರಥಾಂಶ್ಚ
ನಾಗಾ ಹಯಾಂಶ್ಚೈವ ಕುಲಪ್ರಸೂತಾ || ೩೨ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವ್ಯಶೀತಿತಮಸ್ಸರ್ಗಃ.

ಒಳ್ಳೆಯ ಕುಲದಲ್ಲಿ ಹುಟ್ಟಿದ, ಹಯಾಂಶ್ಚೈವ - ಕುದುರೆಗಳನ್ನೂ, ಅಯೂಯುಜ - ಸಿದ್ಧಪಡಿಸಿದರು. || ೩೨ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವ್ಯಶೀತಿತಮಸ್ಸರ್ಗಃ.

ಗಳನ್ನೂ, ರಥಗಳನ್ನೂ, ಆನೆಗಳನ್ನೂ, ಒಳ್ಳೆಯ ಜಾತಿಯುವುಗಳಾದ ಕುದುರೆಗಳನ್ನೂ ಸಜ್ಜುಗೊಳಿಸಿದವರಾದರು. || ೩೨ ||

ಇಂತಿದು ಭರತಕುಮಾರಕೃತ ಪುರಜನಸಹಿತ ವನಪ್ರಯಾಣೋದ್ಯಮ ಕಥಾಕಥನವೆಂಬ
ಎಂಭತ್ತೆರಡನೆಯ ಸರ್ಗವು ಸಮಾಪ್ತವಾದುದು.



भरत वनप्रयाण

A 7515—Lakshmi Art, Bombay, 8.

ಅಯೋಧ್ಯಾಕಾಂಡೇ ತ್ರ್ಯಶೀತಿತಮಸ್ಸರ್ಗಃ.

ತತಸಮುತ್ಥಿತಃ ಕಾಲ್ಯ ಮಾಸ್ಥಾಯ ಸ್ಯಂದನೋತ್ತಮಂ ॥ ಪ್ರಯಯೌ ಭರತ ಶ್ಶೀಘ್ರಂ ರಾಮದರ್ಶನ ಕಾಂಕ್ಷಯಾ ॥ ೧ ॥ ಅಗ್ರತಃ ಪ್ರಯಯು ಸ್ತಸ್ಯ ಸರ್ವೇ ಮಂತ್ರಿಪುರೋಧಸಃ ॥ ಅಧಿರುಹ್ಯ ಹಯೈ ರ್ಯುಕ್ತಾ೯ ರಥಾ೯ ಸೂರ್ಯರಥೋಪಮಾ೯ ॥ ೨ ॥ ನವನಾಗ ಸಹಸ್ರಾಣಿ ಕಲ್ಪಿತಾನಿ ಯಥಾ ವಿಧಿ ॥ ಅನ್ವಯು ರ್ಭರತಂ ಯಾಂತ ಮಿಕ್ಷ್ವಾಕು ಕುಲನಂದನಂ ॥ ೩ ॥ ಷಷ್ಟೀರಥ ಸಹಸ್ರಾಣಿ ಧನ್ವಿನೋ ವಿವಿಧಾಯುಧಾಃ ॥ ಅನ್ವಯು ರ್ಭರತಂ

ತತಃ - ಬಳಿಕ, ಭರತಃ - ಭರತನು, ಕಾಲ್ಯಂ - ಪ್ರಾತಃಕಾಲದಲ್ಲಿ, ಸಮುತ್ಥಿತಃ - ಎಚ್ಚರಗೊಂಡು, ಸ್ಯಂದನೋತ್ತಮಂ - ಉತ್ತಮವಾದ ರಥದಲ್ಲಿ, ಆಸ್ಥಾಯ - ಕುಳಿತುಕೊಂಡು, ರಾಮದರ್ಶನಂ - ಶ್ರೀರಾಮನನ್ನು ನೋಡುವಿಕೆಯಲ್ಲಿ ಆಸಕ್ತಿಯಿಂದ, ಶೀಘ್ರಂ - ಜಾಗ್ರತೆಯಾಗಿ, ಪ್ರಯಯೌ - ಹೊರಟನು. ॥ ೧ ॥ ತಸ್ಯ - ಆ ಭರತನ, ಅಗ್ರತಃ - ಮುಂಗಡೆ, ಸರ್ವೇ - ಸಮಸ್ತರಾದ, ಮಂತ್ರಿಪುರೋಧಸಃ-ಮಂತ್ರಿಗಳೂ ಪುರೋಹಿತರಾದ ವಸಿಷ್ಠಾದಿಗಳು, ಸೂರ್ಯರಥೋಪಮಾ೯-ಸೂರ್ಯನರಥಕ್ಕೆ ಸಮಾನಗಳಾದ, ಹಯೈಃ - ಕುದುರೆಗಳಿಂದ, ಯುಕ್ತಾ೯ - ಕೂಡಿರುವ, ರಥಾ೯ - ರಥಗಳನ್ನು, ಅಧಿರುಹ್ಯ - ಏರಿ, ಪ್ರಯಯುಃ - ಹೊರಟರು. ॥ ೨ ॥ ಯಾಂತಂ - ಪ್ರಯಾಣಮಾಡುತ್ತಿರುವ, ಇಕ್ಷ್ವಾಕುನಂದನಂ - ಇಕ್ಷ್ವಾಕುಕುಲಕ್ಕೆ ಆನಂದಕರನಾದ, ಭರತಂ - ಭರತನನ್ನು, ನವನಾಗಸಹಸ್ರಾಣಿ - ಒಂಭತ್ತುಸಾವಿರ ಆನೆಗಳು, ಯಥಾವಿಧಿ - ವಿಧ್ಯುಕ್ತವಾಗಿ, ಕಲ್ಪಿತಾನಿ - ಅಲಂಕೃತಗಳಾಗಿ (ಗೋ) ಸನ್ನದ್ಧಗಳಾಗಿ, ಅನ್ವಯುಃ - ಅನುಸರಿಸಿದವು. ॥ ೩ ॥ ಷಷ್ಟಿಃ - ಅರವತ್ತಾದ, ರಥಸಹಸ್ರಾಣಿ - ರಥಗಳ ಸಹಸ್ರಗಳು, ವಿವಿಧಾಯುಧಾಃ - ನಾನಾಬಗೆಗಳಾದ ಆಯುಧಗಳುಳ್ಳ, ಧನ್ವಿನಃ - ಧನುರ್ಧಾರಿಗಳೂ, ಯಾಂತಂ - ಹೋಗುತ್ತಿರುವ, ಯಶಸ್ವಿನಂ-ಕೀರ್ತಿವಂತನಾದ, ರಾಜಪುತ್ರಂ - ಅರಸುಮಗನಾದ, ಭರತಂ - ಭರತನನ್ನು, ಅನ್ವಯುಃ - ಅನು

ಆ ಬಳಿಕ ಭರತಕುಮಾರನು, ಪ್ರಾತಃಕಾಲದಲ್ಲಿ ಎದ್ದವನಾಗಿ ಶ್ರೇಷ್ಠವಾದ ರಥವನ್ನೇರಿ, ಶ್ರೀರಾಮಮೂರ್ತಿಯನ್ನು ನೋಡಬೇಕೆಂಬ ಅಭಿಲಾಷೆಯಿಂದ ಜಾಗ್ರತೆಯಾಗಿ ಹೊರಟನು. ಆ ಸಮಯದಲ್ಲಿ, ಮಂತ್ರಿಗಳು, ಪುರೋಹಿತರು ಇವರೇ ಮೊದಲಾದವರೆಲ್ಲರೂ ಅಶ್ವಗಳಿಂದ ರಾರಾಜಿಸುತ್ತಿರುವ ಸೂರ್ಯನ ರಥಕ್ಕೆ ಸಮಾನವಾದ, ರಥಗಳನ್ನೇರಿದವರಾಗಿ ಭರತನ ಮುಂಗಡೆ ತೆರಳಿದವರಾದರು. ಭರತನಾಣತಿಯಂತೆ ಅಯೋಧ್ಯಾಪಟ್ಟಣದಲ್ಲಿನ ಗಜ ಶ್ರೇಷ್ಠಗಳಲ್ಲಿ ಒಂಭತ್ತು ಸಾವಿರ ಆನೆಗಳು, ಇಕ್ಷ್ವಾಕುವಂಶ ಪ್ರಸೂತನಾದ ಆತನೊಡಗೂಡಿ ಹೊರಟವು. ಇಷ್ಟೆಯಲ್ಲದೆ ಅರವತ್ತುಸಾವಿರ ರಥಗಳೂ ಅಷ್ಟೇ ಸಂಖ್ಯೆಯುಳ್ಳ ಧನುರ್ಧಾರಿಗಳೂ, ನಾನಾವಿಧಗಳಾದ ಆಯುಧಗಳುಳ್ಳಯೋಧರೂ, ಪಯಣ ಬೆಳೆಯಿಸಿ

ಯಾಂತಂ ರಾಜಪುತ್ರಂ ಯಶಸ್ವಿನಂ ॥ ೪ ॥ ಶತಂ ಸಹಸ್ರಾಣ್ಯಶ್ವಾನಾಂ ಸಮಾರೂಢಾನಿ ರಾಘವಂ ॥ ಅನ್ವಯುು ರ್ಭರತಂ ಯಾಂತಂ ಸತ್ಯಸಂಧಂ ಜಿತೇಂದ್ರಿಯಂ ॥ ೫ ॥ ಕೈಕೇಯೀಚ ಸುಮಿತ್ರಾಚ ಕೌಸಲ್ಯಾಚ ಯಶಸ್ವಿನೀ ॥ ರಾಮಾನಯನ ಸಂಹೃಷ್ಟಾ ಯಯುು ರ್ಯಾನೇನ ಭಾಸ್ವತಾ ॥ ೬ ॥ ಪ್ರಯಾತಾಃಶ್ಚಾರ್ಯ ಸಂಘಾತಾ ರಾಮಂ ದ್ರಷ್ಟುಂ ಸಲಕ್ಷ್ಮಣಂ ॥ ತಸ್ಯೈವಚ ಕಥಾಶ್ಚಿತ್ರಾಃ ಕುರ್ವಾಣಾ ಹೃಷ್ಟಮಾನಸಾಃ ॥ ೭ ॥ ಮೇಘಶ್ಯಾಮಂ ಮಹಾಬಾಹುಂ ಸ್ಥಿರಸತ್ವಂ ದೃಢವ್ರತಂ ॥ ಕದಾ ದ್ರಕ್ಷ್ಯಾಮಹೇ ರಾಮಂ ! ಜಗತಶ್ಶೋಕ

ಸರಿಸಿಹೊರಟರು. ॥ ೪ ॥ ಸಮಾರೂಢಾನಿ - ಸವಾರಿಯ; ಅಶ್ವಾನಾಂ - ಕುದುರೆಗಳ, ಶತಂಸಹಸ್ರಾಣಿ - ನೂರು ಸಾವಿರಗಳು, ಯಾಂತಂ - ಪ್ರಯಾಣಮಾಡುತ್ತಿರುವ, ಸತ್ಯಸಂಧಂ-ಸತ್ಯ ಪ್ರತಿಜ್ಞೆಯುಳ್ಳ, ಜಿತೇಂದ್ರಿಯಂ - ಜಿತೇಂದ್ರಿಯನಾದ, ರಾಘವಂ - ರಘುವಂಶೋತ್ಪನ್ನನಾದ, ಭರತಂ - ಭರತನನ್ನು, ಅನ್ವಯುಃ - ಅನುಸರಿಸಿಹೋದುವು. ॥ ೫ ॥ ಕೈಕೇಯೀಚ - ಕೈಕೇಯೀದೇವಿಯು, ಸುಮಿತ್ರಾಚ - ಸುಮಿತ್ರಾದೇವಿಯೂ, ಯಶಸ್ವಿನೀ - ಕೀರ್ತಿವಂತಳಾದ, ಕೌಸಲ್ಯಾಚ - ಕೌಸಲ್ಯಾದೇವಿಯೂ, ರಾಮಾನಯನಸಂಹೃಷ್ಟಾಃ - ಶ್ರೀರಾಮನ, - ಕರೆದುಕೊಂಡು ಬರುವವಿಷಯದಲ್ಲಿ, ಸಂತೋಷಗೊಂಡವರಾಗಿ, ಭಾಸ್ವತಾ - ಹೊಳೆಯುತ್ತಿರುವ, ಯಾನೇನ - ಪ್ರತ್ಯೇಕವಾದ ರಥದಿಂದ, ಯಯುಃ - ಹೊರಟರು. ॥ ೬ ॥ ಆರ್ಯಸಂಘಾತಾಃ - (ಗೋ + ಮ) ಬ್ರಹ್ಮಕ್ಷತ್ರಿಯ ವೈಶ್ಯರೆಂಬ ಮೂರುವರ್ಣದವರ, ಸಂಘಾತಾಃ - ತಂಡಗಳು, ಸಲಕ್ಷ್ಮಣಂ - ಲಕ್ಷ್ಮಣನಿಂದೊಡಗೂಡಿದ, ರಾಮಂ - ಶ್ರೀರಾಮನನ್ನು, ದ್ರಷ್ಟುಂ - ನೋಡುವದಕ್ಕೆ, ತಸ್ಯ - ಆ ಶ್ರೀರಾಮನ, ಚಿತ್ರಾಃ - ಆಶ್ಚರ್ಯಕರವಾದ, ಕಥಾಶ್ಚೈವ - ಕಥೆಗಳನ್ನೇ, ಕುರ್ವಾಣಾಃ - ಮಾತನಾಡುತ್ತ, ಹೃಷ್ಟಮಾನಸಾಃ - ಸಂತೋಷಗೊಂಡ ಮನವುಳ್ಳವರಾಗಿ, ಪ್ರಯಾತಾಃ - ಹೊರಟರು. ॥ ೭ ॥ ಮೇಘಶ್ಯಾಮಂ - ಮೇಘದಂತೆ ಕಪ್ಪಗಿರುವ (ಗೋ) ದರ್ಶನಮಾತ್ರದಿಂದ ಮೇಘದಂತೆ ಸಂತಾಪವನ್ನು ಪರಿಹಾರಮಾಡುತ್ತಿರುವ, ಮಹಾಬಾಹುಂ - (ಗೋ + ತಿ) ಬಹಳ ದೊಡ್ಡದಾದಕಾರಣ ಮಹಾ ಸೌದರ್ಯಾನುಭವವನ್ನು ಕೊಡುವದರಲ್ಲಿ ಸಮರ್ಥನಾದ, ಸ್ಥಿರಸತ್ವಂ - ಸ್ಥಿರವಾದ ಚಿತ್ತವುಳ್ಳ, ದೃಢವ್ರತಂ - ನಿಶ್ಚಯವಾದ ಆಶ್ರಿತರಕ್ಷಣದೀಕ್ಷೆಯುಳ್ಳ, ಜಗತಃ - ಜಗತ್ತಿಗೆ, ಶೋಕ

ಮುಂಬರಿಯುತ್ತಿರುವವನೂ, ಕೀರ್ತಿವಂತನೂ, ರಾಜಪುತ್ರನೂ ಆದ ಭರತನೊಡನೆ ಪಯಣಬೆಳೆಸಿದರು. ಅಲ್ಲದೆ ರಾಜಭೃತ್ಯರಲ್ಲಿ ಒಂದುಲಕ್ಷ ಮಂದಿ ಕುದುರೆಗಳನ್ನೇರಿ, ಶ್ರೀರಾಮಾನಯನಕ್ಕಾಗಿ ಹೊರಡುತ್ತಿರುವವನೂ, ಸತ್ಯಸಂಧನೂ, ಜಿತೇಂದ್ರಿಯನೂ ಆದ ಆ ಭರತನನ್ನು ಹಿಂಬಾಲಿಸಿದರು. ಆಗ ಶ್ರೀರಾಮ ಜನನಿಯಾದ ಕೌಸಲ್ಯಾದೇವಿಯೂ ಸುಮಿತ್ರೆಯರೂ, ಕೈಕೇಯಿಯೂ ಶ್ರೀರಾಮನನ್ನು ಕರೆದುಕೊಂಡು ಬರುವ ವಿಷಯದಲ್ಲಿ ಮಹಾ ಸಂತೋಷವುಳ್ಳವರಾಗಿ ಯಾನಗಳಲ್ಲಿ ಕುಳಿತು ಹೊರಟರು. ॥ ೧-೬ ॥ ಬ್ರಹ್ಮ, ಕ್ಷತ್ರಿಯ, ವೈಶ್ಯರೆಂಬ ತ್ರೈವರ್ಣಿಕರ ಗುಂಪುಗಳು ಲಕ್ಷ್ಮಣಸಹಿತನಾದ ಶ್ರೀರಾಮನನ್ನು ನೋಡಲು, ಶ್ರೀರಾಮಸಂಬಂಧವಾದ ಆಶ್ಚರ್ಯಕರವಾದ ಕಥೆಗಳನ್ನೀರೀತಿ ಹೇಳಿಕೊಳ್ಳುತ್ತ

ನಾಶನಂ ॥ ೮ ॥ ದೃಷ್ಟ್ವಏವಹಿ ನಶ್ಶೋಕ ಮಪನೇಷ್ಯತಿ ರಾಘವಃ ॥ ತಮ ಸ್ಸರ್ವಸ್ಯ ಲೋಕಸ್ಯ ಸಮುದ್ಯನ್ನಿವ ಭಾಸ್ಕರಃ ॥ ೯ ॥ ಇತ್ಯೇವಂ ಕಥಯಂತಸ್ತೇ ಸಂಪ್ರಹೃಷ್ಟಾಃ ಕಥಾ ಶ್ಶುಭಾಃ ॥ ಪರಿಷ್ವಜಾನಾ ಶ್ಚಾನ್ಯೋನ್ಯಂ ಯಯು ರ್ನಾಗರಿಕಾ ಜನಾಃ ॥ ೧೦ ॥ ಯೇಚ ತತ್ರಾಪರೇ ಸರ್ವೇ ಸನ್ಮತಾ ಯೇಚ ನೈಗಮಾಃ ॥ ರಾಮಂಪ್ರತಿ ಯಯು ರ್ಹೃಷ್ಟಾ ಸ್ಸರ್ವಾಃ ಪ್ರಕೃತಯ ಸ್ತಥಾ ॥ ೧೧ ॥ ಮಣಿಕಾರಾಶ್ಚ ಯೇಕೇಚಿ ತ್ಕುಂಭಕಾರಾಶ್ಚ ಶೋಭನಾಃ ॥ ಸೂತ್ರ

ನಾಶನಂ - ಸಂತಾಪವನ್ನು ಹೋಗಲಾಡಿಸುವ, ರಾಮಂ - ಶ್ರೀರಾಮನನ್ನು, ಕದಾ - ಯಾವಾಗ, ದ್ರಕ್ಷ್ಯಾಮಹೇ - ನೋಡುವೆವೊ. ॥ ೮ ॥ ರಾಘವಃ - ಶ್ರೀರಾಮನು, ದೃಷ್ಟ್ವಏವ - ನೋಡಿದೊಡನೆಯೇ, ಸಮುದ್ಯನ್ - ಉದಯಿಸುತ್ತಿರುವ, ಭಾಸ್ಕರಃ - ಸೂರ್ಯನು, ಸರ್ವಸ್ಯಲೋಕಸ್ಯ - ಸಮಸ್ತ ಲೋಕದ, ತಮ ಇವ - ಅಂಧಕಾರವನ್ನಂತೆ, ನಃ - ನಮ್ಮ, ಶೋಕಂ-ವ್ಯಸನವನ್ನು, ಅಪನೇಷ್ಯತಿಹಿ- ಹೋಗಲಾಡಿಸುವನಷ್ಟೆ. ॥ ೯ ॥ ಇತ್ಯೇವಂ - ಈಪರಿಯಾಗಿ, ಶುಭಾಃ - ಶುಭಕರಗಳಾದ, ಕಥಾಃ- ಕಥೆಗಳನ್ನು, ಕಥಯಂತಃ - ಹೇಳುತ್ತಿರುವ, ನಾಗರಿಕಾಃ - ಆ ಪಟ್ಟಣವಾಸಿಗಳಾದ, ತೇಜನಾಃ - ಆ ಜನರು, ಸಂಪ್ರಹೃಷ್ಟಾಃ - ಸಂತೋಷಗೊಂಡವರಾಗಿ, ಅನ್ಯೋನ್ಯಂ - ಒಬ್ಬರಿಗೊಬ್ಬರು, ಪರಿಷ್ವಜಾನಾಶ್ಚ - ಅಪ್ಪಿಕೊಂಡವರಾಗಿ, ಯಯುಃ - ಪ್ರಯಾಣಮಾಡಿದರು. ॥ ೧೦ ॥ ತತ್ರ - ಆ ಪಟ್ಟಣದಲ್ಲಿ, ಸರ್ವೇ - ಸಮಸ್ತರಾದ, ಅಪರೇ - ಮತ್ತೆ ಕೆಲವರಾದ, ನೈಗಮಾಃ - ವೈಶ್ಯರು, ಯೇ - ಯಾರೋ, ಯೇಚ - ಯಾರು, ಸನ್ಮತಾಃ - ಶ್ರೀರಾಮನಿಗೆ ಇಷ್ಟರೋ, ತೇಚ - ಅವರು, ರಾಮಂಪ್ರತಿ - ಶ್ರೀರಾಮನನ್ನು ಕುರಿತು, ಯಯುಃ - ತೆರಳಿದರು, ತಥಾ - ಹಾಗೆಯೆ, ಸರ್ವಾಃ - ಸಮಸ್ತರಾದ, ಪ್ರಕೃತಯಃ - ಪ್ರಜೆಗಳು, ಹೃಷ್ಟಾಃ - ಸಂತೋಷಗೊಂಡವರಾಗಿ, ಯಯುಃ - ತೆರಳಿದರು. ॥ ೧೧ ॥ ಮಣಿಕಾರಾಃ - ರತ್ನಗಳನ್ನು ಸಾಣೆಹಿಡಿಯುವವರು, ಯೇಕೇಚಿತ್ - ಯಾರುಂಟೊ, ತೇಚ- ಅವರೂ, ಶೋಭನಾಃ - ಶುಭಕರರಾದ, ಕುಂಭಕಾರಾಶ್ಚ - ಕುಲಾಲರೂ, ಸೂತ್ರಕರ್ಮಕೃತಶ್ಚೈವ - ನೈಗೆಯುವರು, ಯೇ - ಯಾರು, ಶಸ್ತ್ರೋಪಜೀವಿನಃ - ಶಸ್ತ್ರಗಳನ್ನು ಮಾಡುವವರೋ, ಕ್ರಾಕಚಿಕಾಃ -

ಮುಂಬರಿದರು. ಮೇಘಶ್ಯಾಮಲ ವರ್ಣನಾಗಿಯೂ, ಉಸ್ಥವಾದ ತೋಳುಗಳಿಂದುಪರಂಜಿಸುವವನಾಗಿಯೂ, ಸ್ಥಿರಚಿತ್ತನಾಗಿಯೂ, ದೃಢವ್ರತನಾಗಿಯೂ, ಜಗತ್ತಿನ ಶೋಕವನ್ನೇ ಹೋಗಲಾಡಿಸುವವನೂ ಆದ ಶ್ರೀರಾಮಮೂರ್ತಿಯನ್ನಾವಗ ನೋಡುವೆವೊ! ಸೂರ್ಯನುದಯಿಸಿದೊಡನೆಯೆ, ಅಂಧಕಾರವನ್ನು ಹೋಗಲಾಡಿಸುವಂತೆ, ನಾವು ಶ್ರೀರಾಮಮೂರ್ತಿಯನ್ನು ನೊಡಿದೊಡನೆಯೇ ಆತನು ನಮ್ಮ ವ್ಯಸನವನ್ನು ಹೋಗಲಾಡಿಸುತ್ತಾನೆ." ಎಂಬೀ ಪ್ರಕಾರವಾಗಿ ಹೇಳಿಕೊಳ್ಳುತ್ತಿದ್ದ ಆ ಜನರು, ಸಂತೋಷದಿಂದ ಒಬ್ಬರನೊಬ್ಬರು ಆಲಿಂಗಿಸಿಕೊಳ್ಳುತ್ತ ಪ್ರಯಾಣ ಮಾಡಿದರು. ॥ ೭-೧೦ ॥ ಇಷ್ಟು ಮಾತ್ರವಲ್ಲದೆ ಭರತನಿಗೆ ಪ್ರಿಯತಮರಾದ ಕೆಲ ವರ್ತಕರೂ ಶ್ರೀರಾಮನ ಸಂಬಂಧವಾದ ಕಥೆಗಳನ್ನು ಹೇಳಿಕೊಂಡು ಶ್ರೀರಾಮನನ್ನು ಕರೆತರುವ ವಿಚಾರದಲ್ಲಿ ಸಂತೋಷದಿಂದ ಮುಂಬರಿಯುತ್ತಿದ್ದರು. ರತ್ನಗಳನ್ನು ಸಾಣೆಹಿಡಿಯುವವರೂ, ಮಂಗಳಕರರಾದ ಕುಂಭಕಾರರೂ, ನೈಗೆಯುವರೂ, ಆಯುಧ

ಕರ್ಮಕೃತಶ್ಚೈವ ಯೇಚ ಶಸ್ತ್ರೋಪಜೀವಿನಃ ॥೧೨॥ ಮಾಯೂರಕಾಃ ಕ್ರಾಕಚಿಕಾ ರೋಚಕಾ ವೇಧಕಾ ಸ್ತಥಾ ॥ ದಂತಕಾರಾ ಸ್ಸುಧಾಕಾರಾ ಸ್ತಥಾ ಗಂಧೋಪಜೀವಿನಃ ॥೧೩॥ ಸುವರ್ಣಕಾರಾಃ ಪ್ರಖ್ಯಾತಾ ಸ್ತಥಾ ಕಂಬಳ ಧಾವಕಾಃ ॥ ಸ್ನಾಪಕಾ ಚ್ಛಾದಕಾ ವೈದ್ಯಾ ಧೂಪಕಾ ಶ್ಶೌಂಡಿಕಾ ಸ್ತಥಾ ॥೧೪॥ ರಜಕಾ ಸ್ತುನ್ನವಾಯಾಶ್ಚ ಗ್ರಾಮಘೋಷ ಮಹತ್ತರಾಃ ॥ ಶೈಲೂಷಾಶ್ಚ ಸಹ ಸ್ತ್ರೀಭಿ ರ್ಯಯುಃ ಕೈವರ್ತಕಾ ಸ್ತಥಾ ॥೧೫॥ ಸಮಾಹಿತಾ ವೇದವಿದೋ ಬ್ರಾಹ್ಮಣಾ ವೃತ್ತಸಮ್ಮತಾಃ ॥ ಗೋರಥೈ ರ್ಭರತಂ ಯಾಂತ ಮನುಜಗ್ಮು

ಗರಗಸದವರು, ರೋಚಕಾಃ - ಚೀನಗಾರರು, ತಥಾ - ಹಾಗೆಯೇ, ಪಥಕಾಃ - ಮರಗಳಿಗೂ ರತ್ನಗಳಿಗೂ ಬೈರಿಗೆಹಿಡಿಯುವವರು, ದಂತಕಾರಾಃ - ದಂತದ ಕೆಲಸದಿಂದ ಪೆಟ್ಟಿಗೆ ಮೊದಲಾದವುಗಳನ್ನು ಮಾಡುವವರು, ಸುಧಾಕಾರಾಃ - ಸುಣ್ಣ ಬಳೆಯುವವರು, ತಥಾ - ಹಾಗೆಯೇ, ಗಂಧೋಪಜೀವಿನಃ - ಸುಗಂಧದ್ರವ್ಯಗಳಿಂದ ಜೀವನಮಾಡುವವರು, ಪ್ರಖ್ಯಾತಾಃ - ಪ್ರಸಿದ್ಧರಾದ, ಸುವರ್ಣಕಾರಾಃ - ಅಗಸಾಲರು, ತಥಾ - ಹಾಗೆಯೇ, ಕಂಬಳಧಾವಕಾಃ - ಕುರುಬರು, ಸ್ನಾಪಕೋಚ್ಛಾದಕಾಃ, ಸ್ನಾಪಕ - ಜಟ್ಟಿಯವರು, ಉಚ್ಛಾದಕಾಃ - ಅಂಗಮರ್ದಕರು, ವೈದ್ಯಾಃ - ವೈದ್ಯರು, ಧೂಪಕಾಃ - ಧೂಪಹಾಕುವರು, ತಥಾ - ಹಾಗೆಯೆ, ಶೌಂಡಿಕಾಃ - ಈಡಿಗರು, ತಥಾ - ಹಾಗೆಯೇ, ರಜಕಾಃ - ಅಗಸರು, ತುನ್ನವಾಯಾಶ್ಚ - ದರ್ಜಿಯವರು, ಗ್ರಾಮಘೋಷಮಹತ್ತರಾಃ-ಗ್ರಾಮಗಳಲ್ಲಿಯೂ ಹಳ್ಳಿಗಳಲ್ಲಿಯೂ ಶ್ರೇಷ್ಠರಾದವರು, ಶೈಲೂಷಾಶ್ಚ - ವೇಷಧಾರಿಗಳು, ಸ್ತ್ರೀಭಿಸ್ಸಹ - ಹೆಂಗಸರಿಂದೊಡಗೂಡಿ, ತಥಾ - ಹಾಗೆಯೇ, ಕೈವರ್ತಕಾಃ - ಬೆಸ್ತರು, ತಥಾ - ಹಾಗೆಯೇ, ಯಯುಃ - ಹೊರಟರು, ಸಮಾಹಿತಃ - ಸಮಾಧಾನಚಿತ್ತರಾದ ಯೋಗಿಗಳು, ವೇದವಿದಃ - ವೇದಜ್ಞರಾದ, ವೃತ್ತಸಮ್ಮತಾಃ - ಸತ್ಕರ್ಮನಿಷ್ಠರಾಗಿರುವ, ಬ್ರಾಹ್ಮಣಾಃ - ಬ್ರಾಹ್ಮಣರೂ, ಯಾಂತಂ - ಹೋಗುತ್ತಿರುವ, ಭರತಂ - ಭರತನನ್ನು, ಗೋರಥೈಃ - ಎತ್ತಿನಗಾಡಿಗಳಿಂದ, ಸಹಸ್ರಶಃ - ಸಾವಿರಾರು ಜನರು, ಅನುಜಗ್ಮುಃ - ಅನುಸರಿಸಿ

ಗಳನ್ನು ಧರಿಸಿ ಜೀವನಮಾಡುವವರೂ, ನವಿಲುಗರಿಗಳೇ ಮೊದಲಾದವುಗಳಿಂದ ಬೀಸಣಿಗೆಗಳೇ ಮೊದಲಾದ ಸಾಮಾನುಗಳನ್ನು ಮಾಡುವವರೂ, ಗರಗಸದಕೆಲಸ ಮಾಡುವವರೂ, ರತ್ನಗಳಿಗೂ, ಮರಗಳಿಗೂ, ರಂಧ್ರಗಳನ್ನು ಕೊರೆಯುವವರೂ, ದಂತದ ಕೆಲಸವನ್ನು ಮಾಡುವುದರಲ್ಲಿ ಸಮರ್ಥರಾದವರೂ, ಗಾರೆಗೆಲಸದವರೂ, ಗಂಧದ್ರವ್ಯಗಳನ್ನು ಆಶ್ರಯಿಸಿ ಜೀವನಮಾಡುವವರೂ, ಮಹಾನಿಪುಣರಾದ ಅಕ್ಕಸಾಲಿಗರು, ಕಂಬಳಿಗಳನ್ನು ಮಾಡುವುದರಲ್ಲಿ ಚತುರತೆಯುಳ್ಳ ಕುರುಬರೂ, ತೈಲಾಭ್ಯಂಗನವನ್ನು ಮಾಡಿಸುವುದರಲ್ಲಿ ಮಹಾ ಸಾಮರ್ಥ್ಯವುಳ್ಳ ಜಟ್ಟಿಗರೂ, ವೈದ್ಯರೂ, ಧೂಪದಕೆಲಸ ಮಾಡುವವರೂ, ಮಾದಕದ್ರವ್ಯಗಳನ್ನು ಮಾಡುವುದರಲ್ಲಿ ಕುಶಲರಾದ ಈಡಿಗರೂ, ಬಟ್ಟೆಗಳನ್ನು ಶುಭ್ರವಾಗಿ ಒಗೆವುದರಲ್ಲಿ ನಿಪುಣರಾದ ಅಗಸರವರೂ, ದರ್ಜಿಯವರೂ, ಗ್ರಾಮಗಳಲ್ಲಿಯೂ, ಹಳ್ಳಿಗಳಲ್ಲಿಯೂ ಮುಖಂಡರಾದವರೂ, ಹೆಂಗಸರಿಂದೊಡಗೂಡಿದ ವೇಷಧಾರಿಗಳೂ, ಬೆಸ್ತರೂ, ವೇದಜ್ಞರೂ, ಸತ್ಕರ್ಮನಿಷ್ಠರೂ ಆದ ವಿಪ್ರೋತ್ತಮರೂ, ಇವರೇ ಮೊದಲಾದ ಅನೇಕಮಂದಿ ಪ್ರಜೆಗಳು ಶ್ರೀರಾಮನಿದ್ದೆಡೆಗೆ

ಸ್ಸಹಸ್ರಶಃ ॥ ೧೬ ॥ ಸುವೇಷಾ ಶ್ಶುದ್ಧವಸನಾ ಸ್ತಾಮ್ರಮೃಷ್ಟಾನುಲೇಪನಾಃ ॥ ಸರ್ವೇ ತೇ ವಿವಿಧೈ ರ್ಯಾನೈ ಶ್ಶನೈ ರ್ಭರತಮನ್ವಯುಃ ॥ ೧೭ ॥ ಪ್ರಹೃಷ್ಟಮುದಿತಾ ಸೇನಾ ಸಾನ್ವಯಾ ತ್ಕೈಕಯೀಸುತಂ ॥ ಭ್ರಾತುರಾನಯನೇ ಯಾಂತಂ ಭರತಂ ಭ್ರಾತೃವತ್ಸಲಂ ॥ ೧೮ ॥ ತೇಗತ್ವಾ ದೂರಮಧ್ವಾನಂ ರಥಯಾನಾಶ್ವಕುಂಜರೈಃ ॥ ಸಮಾಸೇದು ಸ್ತತೋಗಂಗಾಂ ಶೃಂಗೀಬೇರಪುರಂ ಪ್ರತಿ ॥ ೧೯ ॥ ಯತ್ರ ರಾಮಸಖೋ ವೀರೋ ಗುಹೋ ಜ್ಞಾತಿಗಣೈರ್ವೃತಃ ॥

ಹೊರಟರು. ॥ ೧೬ ॥ ಸುವೇಷಾಃ - ಒಳ್ಳೆಯ ಅಲಂಕಾರವುಳ್ಳ, ಶುದ್ಧವಸನಾಃ - ಶುಭ್ರವಾದ ವಸ್ತ್ರಗಳನ್ನು ಧರಿಸಿರುವ, ತೇಸರ್ವೇ - ಆ ಸಮಸ್ತ ಜನವೂ, ತಾಮ್ರಮೃಷ್ಟಾನುಲೇಪನಾಃ - ಕೆಂಪಾಗಿ ಅರೆಯಲ್ಪಟ್ಟ ಗಂಧಲೇಪನವುಳ್ಳವರಾಗಿ, ವಿವಿಧೈಃ - ನಾನಾಬಗೆಗಳಾದ, ಯಾನೈಃ - ವಾಹನಗಳಿಂದ, ಶನೈಃ - ಮೆಲ್ಲಮೆಲ್ಲಗೆ, ಬರತಂ - ಭರತನನ್ನು ಕುರಿತು, ಅನ್ವಯುಃ - ಅನುಸರಿಸಿಹೋದರು. ॥ ೧೭ ॥ ಪ್ರಹೃಷ್ಟಮುದಿತಾ - ಮನಃಪೂರ್ವಕವಾಗಿ ಸಂತೋಷಗೊಂಡ, ಸಾಸೇನಾ - ಆ ಸೈನ್ಯವು, ಭ್ರಾತುಃ - ಅಣ್ಣನಾದ ಶ್ರೀರಾಮನ, ಆನಯನೇ - ಕರೆದುಕೊಂಡು ಬರುವ ವಿಷಯದಲ್ಲಿ, ಯಾಂತಂ- ಹೋಗುತ್ತಿರುವ, ಭ್ರಾತೃವತ್ಸಲಂ - ಅಣ್ಣನಲ್ಲಿ ಬಹಳವಾದ ಪ್ರೇಮವುಳ್ಳ, ಕೈಕೇಯೀಸುತಂ - ಕೈಕೇಯಿಯ ಮಗನಾದ, ಭರತಂ - ಭರತನನ್ನು ಕುರಿತು, ಅನ್ವಯಾತ್ - ಅನುಸರಿಸಿಹೋಯಿತು. ॥ ೧೮ ॥ ತೇ - ಆ ಸೇನಾಜನರು, ರಥಯಾನಾಶ್ವಕುಂಜರೈಃ - ರಥಗಳಿಂದಲೂ ವಾಹನಗಳಿಂದಲೂ ಕುದುರೆಗಳಿಂದಲೂ ಆನೆಗಳಿಂದಲೂ, ಶೃಂಗಿಬೇರಪುರಂಪ್ರತಿ - ಶೃಂಗಬೇರಪುರವನ್ನು ಕುರಿತು, ದೂರ ಮಧ್ವಾನಂ - ದೂರವಾದ ಮಾರ್ಗವನ್ನು, ಗತ್ವಾ - ಹೋಗಿ, ತತಃ - ಬಳಿಕ, ಗಂಗಾಂ - ಗಂಗಾನದಿ ಯನ್ನು, ಸಮಾಸೇದುಃ - ಹೊಂದಿದರು. ॥ ೧೯ ॥ ಯತ್ರ - ಯಾವ ಪಟ್ಟಣದಲ್ಲಿ, ರಾಮಸಖಃ - ಶ್ರೀರಾಮನಿಗೆ ಸ್ನೇಹಿತನಾದ, ವೀರಃ - ಶೂರನಾದ, ಗುಹಃ - ಗುಹನು, ಜ್ಞಾತಿಗಣೈಃ - ಬಂದುಗಳ ಸಮುದಾಯಗಳಿಂದ, ವೃತಃ - ಸುತ್ತುವರೆದುಕೊಂಡು, ತಂದೇಶಂ - ಆ ದೇಶವನ್ನು, ಪರಿಪಾಲಯನ್- ಪರಿಪಾಲಿಸುತ್ತ, ಅಪ್ರಮಾದೇನ - ಜಾಗ್ರತೆಯಿಂದ, ನಿವಸತಿ - ಇರುವನೋ, ತತ್ರ - ಅಲ್ಲಿಗೆ ಸೇರಿ

ಹೋಗುತ್ತಿದ್ದ ಭರತನನ್ನು ಹಿಂಬಾಲಿಸಿದರು. ॥ ೧೧-೧೬ ॥ ಮತ್ತೆ ಕೆಲವರು ಚೆನ್ನಾಗಿ ಅಲಂಕರಿಸಿಕೊಂಡು, ನಿರ್ಮಲವಾದ ವಸ್ತ್ರಗಳನ್ನು ಧರಿಸಿಕೊಂಡು, ನಾನಾವಿಧಗಳಾದ ವಾಹನಗಳನ್ನೇರಿ ಭರತನೊಡನೆ ಹೊರಟವರಾದರು. ಅಲ್ಲದೆ, ಆ ರೀತಿಯಾಗಿಯೇ ಅನೇಕ ಸಾವಿರ ಮಂದಿ ಸೈನಿಕರು ಶ್ರೀರಾಮನನ್ನು ಕರೆತರುವ ವಿಷಯದಲ್ಲಿ ಮಹಾ ಸಂತೋಷಭರಿತರೂ, ರೋಮಾಂಚವುಳ್ಳ ಶರೀರವುಳ್ಳವರೂ ಆಗಿ, ಶ್ರೀರಾಮಾನಯನ ಕಾರ್ಯಕ್ಕಾಗಿಯೇ ಹೊರಡುತ್ತಿರುವವನೂ, ಭ್ರಾತೃವತ್ಸಲನೂ ಆದ ಭರತನೊಡನೆ ಪಯಣ ಬೆಳೆಸಿದರು. ಹೀಗೆ ರಥಗಳನ್ನೂ, ಕುದುರೆಗಳನ್ನೂ, ಗಜಗಳನ್ನೂ ಏರಿ ಪಯಣಿಸಿದವರೆಲ್ಲರೂ ಬಹಳ ದೂರ ನಡೆದು, ಶ್ರೀರಾಮಮೂರ್ತಿಗೆ ಪರಮ ಮಿತ್ರನೂ, ಬಂಧುಜನರೊಡಗೂಡಿದವನೂ, ಸ್ವದೇಶಕ್ಕೆ ಯಾವ ವಿಧವಾದ ಈತಿಬಾಧೆಗಳೂ ತಲೆದೋರದಂತೆ ಕಾಪಾಡುತ್ತಿರುವವನೂ ಆದ ಗುಹನು ವಾಸಮಾಡುತ್ತಿದ್ದ ಶೃಂಗೀಬೇರಪುರದ

ನಿವಸತ್ಯಪ್ರಮಾದೇನ ದೇಶಂ ತಂ ಪರಿಪಾಲಯನ್ ॥ ೨೦ ॥ ಉಪೇತ್ಯ ತೀರಂ ಗಂಗಾಯಾ ಶ್ಚಕ್ರವಾಕೈ ರಲಂಕೃತಂ ॥ ವ್ಯವಾತಿಷ್ಠತ ಸಾ ಸೇನಾ ಭರತಸ್ಯಾಽನುಯಾಯಿನೀ ॥ ೨೧ ॥ ನಿರೀಕ್ಷ್ಯಾನುಗತಾಂ ಸೇನಾಂ ತಾಂಚ ಗಂಗಾಂ ಶಿವೋದಕಾಂ ॥ ಭರತ ಸ್ಸಚಿವಾನ್ ಸರ್ವಾನಬ್ರವೀ ದ್ವಾಕ್ಯಕೋವಿದಃ ॥ ೨೨ ॥ ನಿವೇಶಯತ ಮೇಸೈನ್ಯ ಮಭಿಪ್ರಾಯೇಣ ಸರ್ವತಃ ॥ ವಿಶ್ರಾಂತಾಃ ಪ್ರತರಿಷ್ಯಾಮ ಇದಾನೀಮಿಮಾಂ ನದೀಂ ॥ ೨೩ ॥ ದಾತುಂ ಚ ತಾವದಿಚ್ಛಾಮಿ ಸ್ವರ್ಗತಸ್ಯ ಮಹೀಪತೇಃ ॥ ಔರ್ಧ್ವದೇಹ ನಿಮಿತ್ತಾರ್ಥ ಮವತೀರ್ಯೋದಕಂ ನದೀಂ ॥ ೨೪ ॥ ತಸ್ಯೈವಂ ಬ್ರುವತೋಽಮಾತ್ಯಾ ಸ್ತಥೇತ್ಯುಕ್ತ್ವಾ ಸಮಾ

ದರು. ॥ ೨೧ ॥ ಭರತಸ್ಯ - ಭರತನನ್ನು, ಅನುಯಾಯಿನೀ-ಅನುಸರಿಸಿ ಬರುತ್ತಿರುವ, ಸಾಸೇನಾ-ಆ ಸೇನೆಯು, ಚಕ್ರವಾಕೈಃ - ಚಕ್ರವಾಕ ಪಕ್ಷಿಗಳಿಂದ, ಅಲಂಕೃತಂ - ಅಲಂಕರಿಸಲಾದ, ಗಂಗಾಯಾಃ - ಗಂಗಾನದಿಯ, ತೀರಂ - ದಡವನ್ನು, ಉಪೇತ್ಯ - ಹೊಂದಿ, ವ್ಯವಾತಿಷ್ಠತ - ವಾಸವನ್ನು ಮಾಡಿತು. ॥ ೨೧ ॥ ಅನುಗತಾಂ - ಹಿಂದೆಬಂದಿರುವ, ಸೇನಾಂ - ಸೇನೆಯನ್ನು, ಶಿವೋದಕಾಂ - ಪರಿಶುದ್ಧವಾದ ಉದಕವುಳ್ಳ, ತಾಂಗಂಗಾಂಚ - ಆ ಗಂಗಾನದಿಯನ್ನು, ನಿರೀಕ್ಷ್ಯ - ಕಂಡು, ವಾಕ್ಯಕೋವಿದಃ - ಮಾತನಾಡುವುದರಲ್ಲಿ ಪಂಡಿತನಾದ, ಭರತಃ - ಭರತನು, ಸರ್ವಾನ್ - ಸಮಸ್ತರಾದ, ಸಚಿವಾನ್ - ಮಂತ್ರಿಗಳನ್ನು ಕುರಿತು, ಅಬ್ರವೀತ್ - ನುಡಿದನು. ॥ ೨೨ ॥ ಮೇ - ನನ್ನ, ಅಭಿಪ್ರಾಯೇಣ - ಅಭಿಪ್ರಾಯದಿಂದ, ಸೈನ್ಯಂ - ಸೇನೆಯನ್ನು, ಸರ್ವತಃ - ಎಲ್ಲ ಪ್ರದೇಶಗಳಲ್ಲಿಯೂ, ನಿವೇಶಯತ - ಇಳಿಸಿರಿ, ಇದಾನೀಂ - ಈ ದಿನದಲ್ಲಿ, ವಿಶ್ರಾಂತಾಃ - ಶ್ರಮವನ್ನು ಪರಿಹರಿಸಿಕೊಂಡು, ಶ್ವಃ - ನಾಳೆಯದಿನ, ಇಮಾಂನದೀಂ - ಈ ನದಿಯನ್ನು, ಪ್ರತರಿಷ್ಯಾಮಃ - ದಾಟೋಣ. ॥ ೨೩ ॥ ನದೀಂ - ನದಿಯಲ್ಲಿ, ಅವತೀರ್ಯ - ಇಳಿದು, ಸ್ವರ್ಗತಸ್ಯ - ಸ್ವರ್ಗವನ್ನು ಹೊಂದಿರುವ, ಮಹೀಪತೇಃ - ದಶರಥರಾಯನಿಗೆ, ಔರ್ಧ್ವದೇಹನಿಮಿತ್ತಾರ್ಥಂ - ಊರ್ಧ್ವದೇಹದ ಸಂಬಂಧವಾದ ಸುಖನಿಮಿತ್ತವಾಗಿ, ಉದಕಂತಾವತ್ - ತಿಲೋದಕವನ್ನಾದರೆ, ದಾತುಂಚ ಕೊಡುವದಕ್ಕೂ, ಇಚ್ಛಾಮಿ-ಇಚ್ಛಿಸುತ್ತೇನೆ. ॥ ೨೪ ॥ ತಸ್ಯ - ಆ ಭರತನು, ಏವಂಬ್ರುವತಃ - ಈ ರೀತಿ ನುಡಿಯುತ್ತಿರಲು,

---

ಸಮೀಪದಲ್ಲಿ ಗಂಗಾನದಿಯನ್ನು ನೋಡಿದವರಾದರು. ॥ ೧೭-೨೦ ॥ ಭರತನೊಡಗೂಡಿದ ಆ ಸೈನ್ಯವೆಲ್ಲವೂ, ಚಕ್ರವಾಕಗಳಿಂದಲಂಕೃತವಾದ ಆ ಗಂಗಾತೀರವನ್ನು ಸೇರಿದುದಾಯಿತು. ಆಗ ಮನೋಹರವಾಗಿ ಮಾತನಾಡುವುದರಲ್ಲಿ ಮಹಾ ಸಮರ್ಥನಾದ ಭರತನು, ತನ್ನನ್ನು ಹಿಂಬಾಲಿಸಿ ಬಂದಿದ್ದ ಸೈನ್ಯವನ್ನೂ, ನಿರ್ಮಲೋದಕವುಳ್ಳ ಗಂಗಾನದಿಯನ್ನೂ ನೋಡಿ ಮಂತ್ರಿಗಳೊಡನೆ ಹೀಗೆಂದನು. "ಎಲೈ ಮಂತ್ರಿಶ್ರೇಷ್ಠರೆ! ಸಕಲ ಸೈನ್ಯವನ್ನೂ, ನಾನು ಹೇಳಿದೆನೆಂದು ಹೇಳಿ, ಇಲ್ಲಿಯೇ ತಂಗುವಂತೆ ಮಾಡಿರಿ. ಈಗಲೀ ಪ್ರದೇಶದಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಂಡು, ನಾಳೆಯ ದಿನ ಗಂಗಾನದಿಯನ್ನು ದಾಟೋಣ. ಅಲ್ಲದೆ ನಾನು ಈ ಗಂಗಾನದಿಯಲ್ಲಿಳಿದು ಸ್ವರ್ಗಸ್ಥನಾದ, ನನ್ನ ತಂದೆ, ದಶರಥಭೂಪಾಲನಿಗೆ ಸ್ವರ್ಗಸೌಖ್ಯವುಂಟಾಗಲೋಸುಗ ಉದಕತರ್ಪಣವನ್ನೀಯುವವನಾಗಿದ್ದೇನೆ." ಈ ರೀತಿ ಹೇಳಿದ ಭರತನ

ಹಿತಾಃ ॥ ನ್ಯವೇಶಯಂಸ್ತಾಂ ಛಂದೇನ ಸ್ವೇನಸ್ವೇನ ಪೃಥಕ್ಪೃಥಕ್ ॥ ೨೫ ॥

ನಿವೇಶ್ಯ ಗಂಗಾ ಮನುತಾಂ ಮಹಾನದೀಂ
ಚಮೂಂ ವಿಧಾನೈಃ ಪರಿಬರ್ಹ ಶೋಭಿನೀಂ ॥
ಉವಾಸ ರಾಮಸ್ಯ ತದಾ ಮಹಾತ್ಮನೋ
ವಿಚಿಂತಯಾನೋ ಭರತೋ ನಿವರ್ತನಂ ॥ ೨೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರ್ಯಶೀತಿತಮಸ್ಸರ್ಗಃ.

ಅಮಾತ್ಯಾಃ ಮಂತ್ರಿಗಳು, ಸಮಾಹಿತಾಃ - ಸಮಾಧಾನಚಿತ್ತರಾಗಿ, ತಥೇತಿ-ಹಾಗೆಯೇ ಆಗಲೆಂದು, ಉಕ್ತ್ವಾ - ಹೇಳಿ, ಸ್ವೇನಸ್ವೇನ - ತಮ್ಮ ತಮ್ಮ, ಛಂದೇನ - ಇಚ್ಛೆಯಿಂದ, ಪೃಥಕ್ಪೃಥಕ್ - ಪ್ರತ್ಯೇಕ ಪ್ರತ್ಯೇಕವಾಗಿ, ತಾಂ - ಆ ಸೈನ್ಯವನ್ನು, ನ್ಯವೇಶಯನ್ - ಇಳಿಸಿದರು. ॥ ೨೫ ॥ ಮಹಾನದೀಂ - ಮಹಾ ನದಿಯಾದ, ಗಂಗಾಮನು - ಗಂಗಾನದಿಯನ್ನು ಅನುಸರಿಸಿ ತೀರದಲ್ಲಿ, ಪರಿಬರ್ಹ ಶೋಭಿನೀಂ - ಯಾತ್ರಾನುಕೂಲವಾದ ಗುಡಾರಗಳೇ ಮೊದಲಾದ ಸಾಮಗ್ರಿಗಳಿಂದ ಶೋಭಿಸುತ್ತಿರುವ ತಾಂಚಮೂಂ-ಆ ಸೈನ್ಯವನ್ನು, ವಿಧಾನೈಃ - (ಗೋ)ಆಯಾಯ ಜಾತಿಕಟ್ಟಲೆಗಳಂತೆ, ನಿವೇಶ್ಯ-ಇಳಿಸಿ, ತದಾ - ಆಗ, ಭರತಃ - ಭರತನು, ಮಹಾತ್ಮನಃ - ಮಹಾ ಮನಸ್ವಿಯಾದ, ರಾಮಸ್ಯ - ಶ್ರೀರಾಮನ, ನಿವರ್ತನಂ-ಹಿಂತಿರುಗಿಸುವದನ್ನು, ವಿಚಿಂತಯಾನಃ-ಆಲೋಚಿಸುತ್ತ, ಉವಾಸ-ಕುಳಿತಿದ್ದನು. ॥೨೬॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರ್ಯಶೀತಿತಮಸ್ಸರ್ಗಃ.

ನುಡಿಗಳನ್ನು ಕೇಳಿ ಅದಕ್ಕೆ ಸಮ್ಮತಿಸಿದ ಆ ಮಂತ್ರಿಗಳೆಲ್ಲರೂ, ಬಹು ಜಾಗರೂಕತೆಯಿಂದ ತಮ್ಮ ಇಷ್ಟಾನುಸಾರವಾಗಿ ಹಿಂದೆ ಬಂದಿದ್ದ ಸೈನ್ಯವೆಲ್ಲಕ್ಕೂ ಇಳಿದುಕೊಳ್ಳಲು ಸ್ಥಳಗಳನ್ನು ಕಲ್ಪಿಸಿದವರಾದರು. ಆಗಲಾ ಭರತನು ಮಹಾ ನದಿಯಾದ ಗಂಗಾನದಿಯನ್ನನುಸರಿಸಿ, ಗುಡಾರಗಳಿಂದ ಪ್ರಕಾಶಿಸುತ್ತಿದ್ದ ಸೈನ್ಯವೆಲ್ಲಕ್ಕೂ ತಕ್ಕ ಏರ್ಪಾಡುಗಳನ್ನು ಮಾಡಿಸಿ ಶ್ರೀರಾಮನನ್ನುಕರೆದುಕೊಂಡು ಬರಲು ಉಪಾಯಗಳನ್ನುಆಲೋಚಿಸುತ್ತಿದ್ದನು.॥೨೧-೨೬॥

ಇಂತಿದು ಭರತಕೃತ ಶೃಂಗೀಬೇರಪುರ ಸಮಾಗಮನ ವೃತ್ತಾಂತ ಕಥನವೆಂಬ ಎಂಭತ್ತಮೂರನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಚತುರಶೀತಿತಮಸ್ಸರ್ಗಃ.

ತತೋ ನಿವಿಷ್ಟಾಂ ಧ್ವಜಿನೀಂ ಗಂಗಾಮನ್ವಾಶ್ರಿತಾಂ ನದೀಂ ॥ ನಿಷಾದ ರಾಜೋ ದೃಷ್ಟ್ವೈವ ಜ್ಞಾತೀನ್ ಸಂತ್ವರಿತೋಽಬ್ರವೀತ್ ॥ ೧ ॥ ಮಹ ತೀಯ ಮಿತಸ್ಸೇನಾ ಸಾಗರಾಭಾ ಪ್ರದೃಶ್ಯತೇ ॥ ನಾಸ್ಯಾಂತ ಮಧಿಗಚ್ಛಾಮಿ ಮನಸಾಪಿ ವಿಚಿಂತಯನ್ ॥ ೨ ॥ ಯಥಾತು ಖಲು ದುರ್ಬುದ್ಧಿ ರ್ಭರತ ಸ್ಸ್ವಯಮಾಗತಃ ॥ ಸಏಷಹಿ ಮಹಾಕಾಯಃ ಕೋವಿದಾರಧ್ವಜೋ

ತತಃ - ಬಳಿಕ, ಗಂಗಾನದೀಂ - ಗಂಗಾನದಿಯನ್ನು, ಅನ್ವಾಶ್ರಿತಾಂ - ಅನುಸರಿಸಿ, ನಿವಿಷ್ಟಾಂ - ಇಳಿಸಿದ, ಧ್ವಜಿನೀಂ - ಸೈನ್ಯವನ್ನು, ದೃಷ್ಟ್ವೈವ - ಕಂಡೊಡನೆಯೆ, ನಿಷಾದರಾಜಃ - ನಿಷಾದರಿಗೆಲ್ಲಾ ದೊರೆಯಾದ ಗುಹನು, ಸಂತ್ವರಿತಃ - ತ್ವರೆಯುಳ್ಳವನಾಗಿ, ಜ್ಞಾತೀನ್ - ತನ್ನ ಸಂಬಂಧಿಗಳನ್ನು ಕುರಿತು, ಅಬ್ರವೀತ್ - ನುಡಿದನು. ॥ ೧ ॥ ಇತಃ - ಇತ್ತಕಡೆ, ಇಯಂ - ಈ ಕಾಣಿಸುತ್ತಿರುವ, ಸಾಗರಾಭಾ - ಕಡಲಿನಂತೆ ಹೊಳೆಯುತ್ತಿರುವ, ಮಹತೀ - ದೊಡ್ಡದಾದ, ಸೇನಾ - ಸೈನ್ಯವು, ಪ್ರದೃಶ್ಯತೇ - ಕಾಣುತ್ತದೆ, ಅಸ್ಯಾಃ - ಈ ಸೇನೆಗೆ, ಮನಸಾ - ಮನದಿಂದ, ವಿಚಿಂತಯನ್ನಪಿ - ಆಲೋಚಿಸುದರೂ, ಅಂತಂ - ಪಾರವನ್ನು, ನಾಧಿಗಚ್ಛಾಮಿ - ತಿಳಿಯದೆ ಹೋದೆನು. ॥ ೨ ॥ ಭರತಃ - ಭರತನು, ರಥೀ - ರಥದಲ್ಲಿ, ಯಥಾ - ಯಾವ ಪ್ರಕಾರ ಸ್ವಯಂ - ತಾನು, ಆಗತಃಖಲು - ಬಂದವನಾದನಷ್ಟೆ, ಸಏಷಃ - ಆ ಈ, ಮಹಾಕಾಯಃ - ಮಹಾ ಶರೀರವುಳ್ಳ, ಕೋವಿದಾರಧ್ವಜಃ - ಸುವರ್ಣದ ವೃಕ್ಷವೇ ಧ್ವಜವಾಗುಳ್ಳ, ದುರ್ಬುದ್ಧಿಃ - ದುಷ್ಟ ಬುದ್ಧಿಯುಳ್ಳವನಾಗಿ, ಆಗತಃ - ಬಂದವನು, (ಗೋ) ಹಿ - ಯಾವ ಕಾರಣ, ರಥಃ - ರಥವಲ್ಲಿ, ಕೋವಿದಾರಧ್ವಜಃ - ಕೋವಿದಾರ ವೃಕ್ಷರೂಪವಾದ ಧ್ವಜವು, ದೃಶ್ಯತೇ - ಕಾಣುತ್ತದೆಯೋ, ತಸ್ಮಾತ್ - ಆ ಕಾರಣ, ಮಹಾಕಾಯಃ - ಮಹಾ ಶರೀರವುಳ್ಳ, ಸಏಷಭರತಃ - ಆ ಈ ಭರತನು,

ಆ ಬಳಿಕ ಕಿರಾತರಾಜನಾದ ಗುಹನು, ಗಂಗಾನದಿಯನ್ನಾಶ್ರಯಿಸಿ, ಇಳಿದಿರುವ ಸೈನ್ಯವೆಲ್ಲವನ್ನೂ ನೋಡಿದೊಡನೆಯೇ, ಬಹಳ ಬೇಗನೆ ತನ್ನ ಬಂಧುಗಳನ್ನು ಕುರಿತು ಹೀಗೆಂದನು. "ಓ ಬಂಧುಗಳಿರಾ! ಈ ಮಹಾ ಸೈನ್ಯವು ನೋಡಲು ಮಹಾ ಸಮುದ್ರ ದಂತೆ ಕಾಣುತ್ತಿರುವುದು. ಎಷ್ಟು ದೂರ ಯೋಚಿಸಿದರೂ, ಮನಸ್ಸಿನಿಂದಲೂ, ಈ ಸೈನ್ಯದ ಪಾರವು ಕಾಣದಿರುವುದು. ಇದು ಶ್ರೀರಾಮನ ತಮ್ಮನಾದ ಭರತನ ಸೈನ್ಯವೇಬಹುದು. ದುರ್ಬುದ್ಧಿಯುಳ್ಳ ಆ ಭರತನು ಸ್ವೇಚ್ಛೆಯಿಂದ ಬಂದಿದ್ದಾನೆ. ಅವನು ಮಹಾಕಾಯನಾಗಿರ ಬಹುದು. ಅಲ್ಲದೆ ಕಾಂಚನವೃಕ್ಷದ ರೂಪದಂತೆ ರೂಪವುಳ್ಳ, ಧ್ವಜದಿಂದೊಡಗೂಡಿದ ರಥ ದಲ್ಲಿ ಕುಳಿತಿರಬಹುದು. ಈ ಭರತನು ಬೇಡರೆಲ್ಲರನ್ನೂ ಸೆರೆ ಹಿಡಿಯುವುದಕ್ಕೋ, ಇಲ್ಲದೆ ಸಂಹರಿಸುವುದಕ್ಕೋ ಬಂದಿರಬಹುದು. ಕೈಕೇಯಿಯ ಮಗನಾದ ಈ ಭರತನು, ಮಹಾ

ರಥೇ ॥ ೩ ॥ ಬಂಧಯಿಷ್ಯತಿ ವಾ? ದಾಶಾನಥವಾಽಸ್ಮಾನ್ವಧಿಷ್ಯತಿ? ॥ ಅಥ ದಾಶರಥಿಂ ರಾಮಂ ಪಿತ್ರಾ ರಾಜ್ಯಾ ದ್ವಿವಾಸಿತಂ ॥ ೪ ॥ ಸಂಪನ್ನಾಂ ಶ್ರಿಯಮನ್ವಿಚ್ಛಂ ಸ್ತಸ್ಯ ರಾಜ್ಞಸ್ಸು ದುರ್ಲಭಾಂ ॥ ಭರತಃ ಕೈಕಯಿಪುತ್ರೋ ಹಂತುಂ ಸಮಧಿಗಚ್ಛತಿ! ॥ ೫ ॥ ಭರ್ತಾಚೈವ ಸಖಾಚೈವ ರಾಮೋ ದಾಶರಥಿರ್ಮಮ ॥ ತಸ್ಯಾರ್ಥಕಾಮಾ ಸ್ಸನ್ನದ್ಧಾ ಗಂಗಾನೂಪೇ ಪ್ರತಿಷ್ಠತ! ॥ ೬ ॥ ತಿಷ್ಠಂತು ಸರ್ವೇ ದಾಶಾಶ್ಚ ಗಂಗಾ ಮನ್ವಾಶ್ರಿತಾ ನದೀಂ ॥ ಬಲ ಯುಕ್ತಾ ನದೀರಕ್ಷಾ ಮಾಂಸಮೂಲಫಲಾಶನಾಃ ॥ ೭ ॥ ನಾವಾಂ ಶತಾನಾಂ

ದುರ್ಬುದ್ಧಿಃ - ದುಷ್ಟಬುದ್ಧಿಯುಳ್ಳವನಾಗಿ, ಸ್ವಯಂ - ತಾನು, ಆಗತಃ - ಬಂದನು, ಯಥಾತುಖಲು- ಹೇಗೂ ನಿಶ್ಚಯವೇ. ॥ ೩ ॥ ದಾಶಾ - ಬೆಸ್ತರನ್ನು, ಬಂಧಯಿಷ್ಯತಿವಾ - ಹಿಂಗಟ್ಟು ಮುಂಗಟ್ಟು ಕಟ್ಟುವನೋ ಏನೋ, ಅಥವಾ - ಹಾಗಲ್ಲದಿದ್ದರೆ, ಅಸ್ಮಾ - ನಮ್ಮನ್ನು, ವಧಿಷ್ಯತಿ - ಸಂಹಾರ ಮಾಡುವನೋ, ಅಥ - ಬಳಿಕ, ಕೈಕಯಿಪುತ್ರಃ - ಕೈಕೇಯಿಯಮಗನಾದ, ಭರತಃ - ಭರತನು, ಪಿತ್ರಾ - ತಂದೆಯಿಂದ, ರಾಜ್ಯಾತ್ - ರಾಜ್ಯದಿಂದ, ವಿವಾಸಿತಂ - ಹೊರಡಿಸಿದ, ದಾಶರಥಿಂ - ದಶರಥ ರಾಜ ಕುವರನಾದ, ರಾಮಂ-ಶ್ರೀರಾಮನನ್ನು, ಹಂತುಂ-ಹೊಡೆಯಲು, ತಸ್ಯರಾಜ್ಞಃ - ಆ ರಾಯನಿಗೆ, ಸುದುರ್ಲಭಾಂ - ಲಭಿಸಲಸಾಧ್ಯವಾದ, ಸಂಪನ್ನಾಂ - ಸಮೃದ್ಧವಾದ, ಶ್ರಿಯಂ - ಐಶ್ವರ್ಯವನ್ನು, ಅನ್ವಿಚ್ಛ-ಕೋರುತ್ತ, ಸಮಧಿಗಚ್ಛತಿ-ಬರುತ್ತಾನೆ. ॥ ೫ ॥ ದಾಶರಥಿಃ-ದಶರಥರಾಯನ ಪುತ್ರನಾದ, ರಾಮಃ - ಶ್ರೀರಾಮನು, ಮಮ - ನನಗೆ, ಭರ್ತಾಚೈವ - ಸ್ವಾಮಿಯೂ, ಸಖಾಚೈವ - ಮಿತ್ರನು, ತಸ್ಯ - ಆ ಶ್ರೀರಾಮನಿಗೆ, ಅರ್ಥಕಾಮಾಃ - ಪ್ರಯೋಜನವನ್ನು ಬೇಡುತ್ತ, ಸನ್ನದ್ಧಾಃ - ಯುದ್ಧ ಸನ್ನದ್ಧರಾಗಿ, ಗಂಗಾನೂಪೇ - ಗಂಗಾನದಿಯ ಜಲಪ್ರಾಯವಾದ ದಡದಲ್ಲಿ, ಪ್ರತಿಷ್ಠತ - ಇರುವವ ರಾಗಿರಿ. ॥ ೬ ॥ ಸರ್ವೇದಾಶಾಶ್ಚ - ಸಮಸ್ತ ಬೆಸ್ತರೂ, ಗಂಗಾನದೀಂ - ಗಂಗಾನದಿಯನ್ನು, ಅನ್ವಾಶ್ರಿತಾಃ - ಅನುಸರಿಸಿ, ಬಲಯುಕ್ತಾಃ - ಸೈನ್ಯಯುಕ್ತರಾಗಿ, ನದೀರಕ್ಷಾಃ - ನದೀ ತರಣಮಾರ್ಗಕ್ಕೆ ಸಂರಕ್ಷಕರಾಗಿ, ಮಾಂಸಮೂಲಫಲಾಶನಾಃ - ಮಾಂಸವೂ ಕೆಂದಮೂಲವೂ ಫಲ ಗಳೂ ಇವೇ ಮೊದಲಾದ ಅಶನವುಳ್ಳವರಾಗಿ, ತಿಷ್ಠಂತು - ಇರಲಿ. ॥ ೭ ॥ ಶತಾನಾಂಪಂಚಾನಾಂ-

---

ರಾಜನಾಗಲರ್ಹನಾದ ಶ್ರೀರಾಮನ ಸಂಬಂಧವಾದ, ದುರ್ಲಭವು, ಸಂಪೂರ್ಣವೂ ಆದ ರಾಜ್ಯವನ್ನು ಅಪಹರಿಸಿ, ಶಾಶ್ವತವಾಗಿ ಪರಿಪಾಲಿಸಲಪೇಕ್ಷಿಸಿದವನಾಗಿ, ತಂದೆಯಾಣತಿ ಯಂತೆ ಅರಣ್ಯಕ್ಕೆ ತೆರಳಿದ, ದಶರಥನಂದನನಾದ ಶ್ರೀರಾಮನನ್ನು ಸಂಹರಿಸಲು ಪಯಣಿಸಿ ಬಂದಿರಬಹುದು. ದಶರಥರಾಜ ಕುಮಾರನಾದ ಶ್ರೀರಾಮನು ನಮಗೆ ಸ್ನೇಹಿತನು; ಅಲ್ಲದೆ ನಮಗೆ ಒಡೆಯನೂ ಆಗಿದ್ದಾನೆ. ಆದುದರಿಂದ ನೀವೆಲ್ಲರೂ, ಅರ್ಥಕಾಮಗಳನ್ನು ಕೋರು ವವರೂ, ಸಕಲ ಸನ್ನಾಹಗಳಿಂದ ಕೂಡಿದವರೂ ಆಗಿ ಗಂಗಾತೀರದಲ್ಲಿ ಸನ್ನದ್ಧರಾಗಿರಿ. ಇಷ್ಟೆಯಲ್ಲದೆ, ಬೇಡರೆಲ್ಲರೂ, ಗಂಗಾನದಿಯನ್ನು ಸೇರಿ, ಸೈನ್ಯಸಮೇತರೂ, ಮಾಂಸ ಮೂಲ ಫಲಾಶನರೂ ಆಗಿ, ನಾವೆಗಳಲ್ಲಿಯೇ ಭುಜಿಸುತ್ತ ನಿರೀಕ್ಷಿಸುತ್ತಿರುವಂತೆ ಮಾಡಿರಿ. ॥ ೧-೭ ॥ ಈ ದಿನವೂ, ನಾಳೆಯೂ ರಕ್ಷಿಸಿಕೊಂಡಿದ್ದಮೇಲೆ ಮುಂದಿನ ಸಂಗತಿಯನ್ನು

ಪಂಚಾನಾಂ ಕೈವರ್ತಾನಾಂ ಶತಂ ಶತಂ ‖ ಸನ್ನದ್ಧಾನಾಂ ತಥಾ ಯೂನಾಂ ತಿಷ್ಠಂತ್ವಿತ್ಯಭ್ಯಚೋದಯತ್ ‖ ೮ ‖ ಯದಾ ತುಷ್ಟಸ್ತು ಭರತೋ ರಾಮಸ್ಯೇಹ ಭವಿಷ್ಯತಿ ‖ ಸೇಯಂ ಸ್ವಸ್ತಿಮತೀ ಸೇನಾ ಗಂಗಾಮದ್ಯ ತರಿಷ್ಯತಿ ‖ ೯ ‖ ಇತ್ಯುಕ್ತ್ವೋಪಾಯನಂ ಗೃಹ್ಯ ಮತ್ಸ್ಯ ಮಾಂಸ ಮಧೂನಿಚ ‖ ಅಭಿಚಕ್ರಾಮ ಭರತಂ ನಿಷಾದಾಧಿಪತಿ ರ್ಗುಹಃ ‖ ೧೦ ‖ ತಮಾಯಾಂತಂ ತು ಸಂಪ್ರೇಕ್ಷ್ಯ ಸೂತಪುತ್ರಃ ಪ್ರತಾಪವಾನ್‖ಭರತಾಯಾಚಚಕ್ಷೇಽಥ ವಿನಯಜ್ಞೋ ವಿನೀತವತ್ ‖ ೧೧ ‖ ಏಷ ಜ್ಞಾತಿಸಹಸ್ರೇಣ ಸ್ಥಪತಿಃ ಪರಿವಾರಿತಃ ‖ ಕುಶಲೋ

ಐದುನೂರು ಸಂಖ್ಯೆಯುಳ್ಳ. ನಾವಾಂ - ನಾವೆಗಳಲ್ಲಿ, ಸನ್ನದ್ಧಾನಾಂ - ಯುದ್ಧ ಸನ್ನದ್ಧರಾದ, ತಥಾ - ಹಾಗೆಯೇ, ಯೂನಾಂ - ಯೌವನಸ್ಥರಾದ, ಕೈವರ್ತಾನಾಂ - ಬೆಸ್ತರ, ಶತಂಶತಂ - ಒಂದೊಂದು ನಾವೆಗೆ ನೂರು ನೂರು ಜನರು, ತಿಷ್ಠಂತ್ವಿತಿ - ಇರಲೆಂದು, ಅಭ್ಯಚೋದಯತ್ - ಆಜ್ಞಾಪಿಸಿದನು. ‖ ೮ ‖ ಇಹ - ಈಗ, ಭರತಸ್ತು - ಭರತನಾದರೆ, ರಾಮಸ್ಯ - ಶ್ರೀರಾಮನ ವಿಷಯದಲ್ಲಿ, ತುಷ್ಟಃ - ಸಂತೋಷಗೊಂಡು, ಯದಾ - ಯಾವಾಗ, ಭವಿಷ್ಯತಿ - ಆಗುವನೋ, ತದಾ - ಆ ಕಾಲದಲ್ಲಿ, ಸೇಯಂಸೇನಾ - ಆ ಈ ಭರತನಸೈನ್ಯವು, ಸ್ವಸ್ತಿಮತೀ - ಕ್ಷೇಮವುಳ್ಳುದಾಗಿ, ಗಂಗಾಂ - ಗಂಗಾನದಿಯನ್ನು, ತರಿಷ್ಯತಿ - ದಾಟುವದು. ‖ ೯ ‖ ಇತ್ಯುಕ್ತ್ವಾ - ಈಪ್ರಕಾರವಾಗಿ ಹೇಳಿ, ನಿಷಾದಾಧಿಪತಿಃ - ನಿಷಾದರಿಗೆ ದೊರೆಯಾದ, ಗುಹಃ - ಗುಹನು, ಮತ್ಸ್ಯಮಾಂಸಮಧೂನಿಚ - ಮತ್ಸ್ಯಗಳನ್ನೂ ಮಾಂಸಗಳನ್ನೂ ಜೇನುತುಪ್ಪಗಳನ್ನೂ, ಉಪಾಯನಂ - ಕಾಣಿಕೆಯನ್ನಾಗಿ, ಗೃಹ್ಯ - ತೆಗದುಕೊಂಡು, ಭರತಂ - ಭರತನನ್ನು ಕುರಿತು, ಅಭಿಚಕ್ರಾಮ - ಇದಿರಾಗಿ ಬಂದನು. ‖ ೧೦ ‖ ಆಯಾಂತಂ - ಬರುತ್ತಿರುವ, ತಂ - ಆ ಗುಹನನ್ನು, ಪ್ರತಾಪವಾನ್ - ಪರಾಕ್ರಮಶಾಲಿಯಾದ, ವಿನಯಜ್ಞಃ - ವಿನಯವನ್ನು ತಿಳಿದಿರುವ, ಸೂತಪುತ್ರಃ - ಸುಮಂತ್ರನು, ಸಂಪ್ರೇಕ್ಷ್ಯ - ಕಂಡು, ಅಥ - ಬಳಿಕ, ಭರತಾಯ - ಭರತನಿಗೆ, ವಿನೀತವತ್ - ನಮ್ರತೆಯಿಂದ, ಆಚಚಕ್ಷೇ - ಹೇಳಿದನು. ‖ ೧೧ ‖ ಏಷಃ - ಇಲ್ಲಿ ಬರುತ್ತಿರುವ, ಸ್ಥಪತಿಃ - ನಿಷಾದನು, ಜ್ಞಾತಿಸಹಸ್ರೇಣ -

---

ತಿಳಿಮುಕೊಳ್ಳೋಣ. ಐದುನೂರು ದೋಣಿಗಳನ್ನು ಸಿದ್ಧಗೊಳಿಸಿ, ಅವುಗಳಲ್ಲಿ ಯೌವನಸ್ಥರೂ, ಬಲಿಷ್ಠರೂ ಆದ ಅನೇಕ ನೂರು ಮಂದಿ ಬೆಸ್ತರು ಯುದ್ಧಸನ್ನದ್ಧರಾಗಿರುವಂತೆ ಮಾಡಿರಿ. ಈ ಭರತನು ಶ್ರೀರಾಮನ ವಿಷಯದಲ್ಲಿ ದುರ್ಮಾರ್ಗಪ್ರವರ್ತನೆಯನ್ನು ಮಾಡದಿದ್ದಲ್ಲಿ ನಮ್ಮ ಸೈನ್ಯವೆಲ್ಲವೂ ದೋಣಿಗಳನ್ನು ಬಿಟ್ಟು ಹಿಂತಿರುಗಬಹುದು. ಹಾಗಿಲ್ಲದೆ ಈತನು ನಮ್ಮ ಶ್ರೀರಾಮನ ವಿಷಯದಲ್ಲಿ ದುಷ್ಕೃತ್ಯವನ್ನು ಮಾಡುವವನೇ ಆದರೆ ನಾವೆಲ್ಲರೂ ಒಟ್ಟುಗೂಡಿ ಸೈನ್ಯಸಮೇತರಾಗಿ ಇವನನ್ನು ನಾಶ ಹೊಂದಿಸೋಣ.” ನಿಷಾದಾಧಿಪತಿಯಾದ ಗುಹನೀರೀತಿ ನುಡಿದು, ಮತ್ಸ್ಯಗಳನ್ನೂ, ಮಾಂಸಗಳನ್ನೂ, ಮಧುವನ್ನೂ ಕಾಣಿಕೆಯಾಗಿ ತೆಗೆದುಕೊಂಡು ಭರತನಿದಿರಾಗಿ ಹೊರಟನು. ‖ ೮-೧೦ ‖ ಆಮೇಲೆ ಮಹಾಪ್ರತಾಪವುಳ್ಳವನೂ, ವಿನಯವನ್ನು ಬಹು ಚೆನ್ನಾಗಿ ತಿಳಿದವನೂ ಆದ ಸುಮಂತ್ರನು, ತಾವಿದ್ದ ಸ್ಥಳಕ್ಕೆ ಬರುತ್ತಿದ್ದ ಗುಹನನ್ನು ನೋಡಿದವನಾದನು. ಹೀಗೆ ನೋಡಿದೊಡನೆಯೇ

ದಂಡಕಾರಣ್ಯೇ ವೃದ್ಧೋ ಭ್ರಾತುಶ್ಚ ತೇ ಸಖಾ ‖ ೧೨ ‖ ತಸ್ಮಾತ್ಪಶ್ಯತು ಕಾಕುತ್ಸ್ಥ! ತ್ವಾಂ ನಿಷಾದಾಧಿಪೋ ಗುಹಃ ‖ ಅಸಂಶಯಂ ವಿಜಾನೀತೇ ಯತ್ರ ತೌ ರಾಮಲಕ್ಷ್ಮಣೌ ‖ ೧೩ ‖ ಏತತ್ತು ವಚನಂ ಶ್ರುತ್ವಾ ಸುಮಂತ್ರಾದ್ಭರತ ಶ್ಶುಭಂ ‖ ಉವಾಚ ವಚನಂ ಶೀಘ್ರಂ ಗುಹಃ ಪಶ್ಯತು ಮಾಮಿತಿ‖೧೪‖ ಲಬ್ಧ್ವಾಽಭ್ಯನುಜ್ಞಾಂ ಸಂಹೃಷ್ಟೋ ಜ್ಞಾತಿಭಿಃ ಪರಿವಾರಿತಃ ‖ ಆಗಮ್ಯ ಭರತಂ ಪ್ರಹ್ವೋ ಗುಹೋ ವಚನ ಮಬ್ರವೀತ್ ‖೧೫‖ ನಿಷ್ಕುಟಶ್ಚೈವ ದೇಶೋಽಯಂ

ಬಂಧುಗಳ ಸಹಸ್ರದಿಂದ, ಪರಿವಾರಿತಃ - ಸುತ್ತುವರೆದವನಾಗಿ, ದಂಡಕಾರಣ್ಯೇ - ದಂಡಕಾರಣ್ಯ ಸಂಚಾರ ವಿಷಯದಲ್ಲಿ, ಕುಶಲಃ - ಚಾತುರ್ಯವುಳ್ಳವನು, ವೃದ್ಧಃ-ವಯೋವೃದ್ಧನು, ತೇಭ್ರಾತುಃಶ್ಚ- ನಿಮ್ಮಣ್ಣನಿಗೆ, ಸಖಾಚ - ಸ್ನೇಹಿತನೂ ಆಗಿದ್ದಾನೆ, ತಸ್ಮಾತ್ - ಆದುದರಿಂದ, ಹೇ ಕಾಕುತ್ಸ್ಥ - ಎಲೈ ಭರತನೇ, ನಿಷಾದಾಧಿಪಃ - ನಿಷಾದಾಧಿಪತಿಯಾದ, ಗುಹಃ - ಗುಹನು, ತ್ವಾಂ - ನಿನ್ನನ್ನು, ಪಶ್ಯತು - ನೋಡಲಿ. ‖ ೧೨ ‖ ತೌರಾಮಲಕ್ಷ್ಮಣೌ - ಆ ರಾಮಲಕ್ಷ್ಮಣರು, ಯತ್ರ - ಯಾವ ಸ್ಥಳದಲ್ಲಿ, ಸ್ಥಿತೌ - ಇರುತ್ತಾರೆಯೋ, ತಂದೇಶಂ - ಆ ಸ್ಥಳವನ್ನು, ವಿಜಾನೀತೇ - ಈತನು ತಿಳಿದಿದ್ದಾನೆ. ‖ ೧೩ ‖ ಭರತಃ - ಭರತನು, ಸುಮಂತ್ರಾತ್ - ಸುಮಂತ್ರನಿಂದ, ಶುಭಂ - ಮಂಗಳಕರವಾದ, ಏತದ್ವಚನಂತು - ಈ ಮಾತನ್ನು, ಶ್ರುತ್ವಾ - ಕೇಳಿ, ಗುಹಃ - ಗುಹನು, ಮಾಂ-ನನ್ನನ್ನು, ಶೀಘ್ರಂ - ಜಾಗ್ರತೆಯಾಗಿ, ಪಶ್ಯತು - ನೋಡಲಿ, ಇತಿ - ಇಂತೆಂದು, ವಚನಂ - ಮಾತನ್ನು, ಉವಾಚ - ಹೇಳಿದನು. ‖ ೧೪ ‖ ಗುಹಃ - ಗುಹನು, ಅಭ್ಯನುಜ್ಞಾಂ - ಭರತನ ಸಮ್ಮತಿಯನ್ನು, ಲಬ್ಧ್ವಾ - ಹೊಂದಿ, ಸಂಹೃಷ್ಟಃ - ಸಂತೋಷಗೊಂಡವನಾಗಿ, ಜ್ಞಾತಿಭಿಃ - ಬಂಧುಜನರಿಂದಲೂ, ಪರಿವಾರಿತಃ - ಪರಿವಾರಿತನಾಗಿ, ಭರತಂ - ಭರತನನ್ನು ಕುರಿತು, ಆಗಮ್ಯ - ಬಂದು, ಪ್ರಹ್ವಃ - ನಮ್ರನಾಗಿ, ವಚನಂ - ಮಾತನ್ನು, ಅಬ್ರವೀತ್ - ನುಡಿದನು. ‖ ೧೫ ‖ ಅಯಂದೇಶಃ - ಈ ದೇಶವು, ತೇ - ನಿನಗೆ, ನಿಷ್ಕುಟಶ್ಚೈವ - (ಗೋ) ಮನೆತೋಟವು, ತೇ-ನಿನ್ನಿಂದ, ವಯಂ - ನಾವು,

---

ಮಹಾ ವಿನಯವುಳ್ಳವನಾಗಿ ಭರತನೊಡನೆ ಗುಹನು ಬರುತ್ತಿರುವನೆಂದು ಹೇಳಿ ಮತ್ತೆ ಹೀಗೆಂದನು. “ಎಲೈ ಭರತನೆ! ನಿಷಾದರಾಜನಾದ ಈ ಗುಹನು ಅನೇಕ ಸಾವಿರ ಬಂಧುಜನಗಳೊಡಗೂಡಿ ಬಂದಿದ್ದಾನೆ. ಈತನು ಬಹಳ ವೃದ್ಧನಾದವನು; ದಂಡಕಾರಣ್ಯ ಸಂಚಾರದಲ್ಲಿ ಮಹಾ ಸಾಮರ್ಥ್ಯವುಳ್ಳವನು. ನಿನಗೆ ಅಣ್ಣನಾದ ಶ್ರೀರಾಮನಿಗೆ ಪರಮಮಿತ್ರನಾದವನು. ಕಕುತ್ಸ್ಥಕುಲಸಂಭವನಾದ ಎಲೈ ಭರತಕುಮಾರನೆ! ಆದುದರಿಂದ ನೀನೀಗ ನಿಷಾದಾಧಿಪತಿಯಾದ ಈ ಗುಹನಿಗೆ ದರ್ಶನವನ್ನು ಕೊಡಬೇಕು. ನಮ್ಮ ಶ್ರೀರಾಮಲಕ್ಷ್ಮಣರಿರುವ ಸ್ಥಳವು ಈತನಿಗೆ ಚೆನ್ನಾಗಿ ತಿಳಿದಿರಬಹುದು.” ಸುಮಂತ್ರನೀರೀತಿ ನುಡಿಯಲು ಭರತನಾಮಾತುಗಳನ್ನುಕೇಳಿ, “ನಾನು ಗುಹನನ್ನು ನೋಡಲಪೇಕ್ಷಿಸುತ್ತೇನೆ. ಬೇಗನೆ ಕರೆದುಕೊಂಡು ಬರುವವನಾಗು” ಎಂದು ಹೇಳಿದನು. ಆ ಸಮಯದಲ್ಲಿ ಶ್ರೀರಾಮ ಮಿತ್ರನಾದ ಗುಹನು ಭರತನ ಅಪ್ಪಣೆಯನ್ನು ಪಡೆದು, ಆತನಿದ್ದ ಸ್ಥಳಕ್ಕೆ ಹೋದನು. ಆಮೇಲೆ ಆ ಗುಹನು ಮಹಾ ವಿನಯವುಳ್ಳವನಾಗಿ ಆ ಭರತನನ್ನು ಕುರಿತು ಹೀಗೆಂದನು. ‖೧೧-೧೫‖

ವಂಚಿತಾಶ್ಚಾಪಿ ತೇ ವಯಂ ॥ ನಿವೇದಯಾಮ ಸ್ತೇಸರ್ವೇ ಸ್ವಕೇ ದಾಸಕುಲೇ ವಸ! ॥ ೧೬ ॥ ಅಸ್ತಿ ಮೂಲಂ ಫಲಂಚೈವ ನಿಷಾದೈ ಸ್ಸಮುಪಾಹೃತಂ ॥ ಆರ್ದ್ರಂಚ ಮಾಂಸಂ ಶುಷ್ಕಂಚ ವನ್ಯಂ ಚೋಚ್ಚಾವಚಂ ಮಹತ್ ॥ ೧೭ ॥ ಆಶಂಸೇ ಸ್ವಾಶ್ರಿತಾ ಸೇನಾ ವತ್ಸ್ಯತೀಮಾಂ ವಿಭಾವರೀಂ ॥ ಅರ್ಚಿತೋ ವಿವಿಧೈಃ ಕಾಮ್ಯೈ ಶ್ಯ್ವ ಸ್ಸಸೈನ್ಯೋ ಗಮಿಷ್ಯಸಿ ॥ ೧೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರಶೀತಿತಮಸ್ಸರ್ಗಃ.

ವಂಚಿತಾಶ್ಚ - ಮೋಸಹೋದೆವು, ಸರ್ವೇ - ಸಮಸ್ತರಾದ ನಾವು, ತೇ - ನಿನ್ನ ಸಂಬಂಧಿಗಳ, ಸ್ವಕೇ- ಸ್ವಕೀಯವಾದ, ದಾಸಕುಲೇ - ದಾಸನಮನೆಯಲ್ಲಿ, ವಸ - ಇರುವವನಾಗು, ನಿವೇದಯಾಮಃ - ವಿಜ್ಞಾಪನೆ ಮಾಡುತ್ತೇವೆ. ॥೧೬॥ ಮೂಲಂ-ಕಂದಮೂಲಗಳು, ಫಲಂಚೈವ - ಫಲಗಳೂ, ವನ್ಯಂ - ವನದಲ್ಲಿ ಹುಟ್ಟಿದ, ಆರ್ದ್ರಂಚ - ಹಸಿಯಾಗಿರುವ, ಶುಷ್ಕಂಚ - ಒಣಗಿರುವ, ಉಚ್ಚಾವಚಂ - ನಾನಾಬಗೆಗಳುಳ್ಳ, ಮಹತ್ - ದೊಡ್ಡದಾದ, ಮಾಂಸಂ-ಮಾಂಸವು, ನಿಷಾದೈಃ-ವ್ಯಾಧರಿಂದ, ಸಮುಪಾಹೃತಂ- ತರಿಸಲ್ಪಟ್ಟದಾಗಿ, ಅಸ್ತಿ - ಇರುವುದು. ॥ ೧೭ ॥ ಸ್ವಾಶಿತಾ - ಸುಖವಾಗಿ ಊಟಮಾಡಿದ, ಸೇನಾ - ಸೈನ್ಯವು, ಇಮಾಂವಿಭಾವರೀಂ - ಈ ರಾತ್ರಿಯಲ್ಲಿ, ವತ್ಸ್ಯತಿ - ಇರಲಿ, ಆಶಂಸೇ - ಪ್ರಾರ್ಥಿಸುತ್ತೇನೆ, ವಿವಿಧೈಃ - ನಾನಾಬಗೆಗಳಾದ, ಕಾಮ್ಯೈಃ - ಕೋರಿಕೆಗಳಿಂದ, ಅರ್ಚಿತಃ - ಪೂಜಿತನಾಗಿ, ಶ್ವಃ-ನಾಳೆ, ಸಸೈನ್ಯಃ - ಸೈನ್ಯಸಮೇತನಾಗಿ, ಗಮಿಷ್ಯಸಿ - ಪ್ರಯಾಣ ಮಾಡುವೆಯಂತೆ. ॥ ೧೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರಶೀತಿತಮಸ್ಸರ್ಗಃ.

" ದಶರಥರಾಜನಂದನನಾದ ಎಲೈ ಭರತನೆ! ನಮ್ಮ ದೇಶವೆಲ್ಲವೂ ನಿನ್ನ ಹೆಸರಿನಿಂದಲೇ ಪ್ರಸಿದ್ಧಿಯನ್ನು ಹೊಂದಿರುವುದು. ನೀನು ಬಂದುದನ್ನು ನಾವು ಮೊದಲು ಗುರುತಿಸದೇ ಹೋದುದರಿಂದ ವಂಚಿತರಾದೆವು. ಇದುವರೆವಿಗೆ ಮೊದಲೇ ನೀನು ಸಸೈನ್ಯನಾಗಿ ಇಲ್ಲಿಗೆ ಬಂದುದು ನಮಗೆ ತಿಳಿದಿದ್ದರೆ ನಮ್ಮ ಶಕ್ತ್ಯನುಸಾರವಾಗಿ ಅಭ್ಯುತ್ಥಾನಾದಿ ಸಕಲ ಮರ್ಯಾದೆಗಳನ್ನೂ ಮಾಡಿರುತ್ತಿದ್ದೆವು. ಅಂತಹ ಭಾಗ್ಯವು ನಮಗುಂಟಾಗಲಿಲ್ಲ. ಆದರೂ ದಾಸನಾದ ನನ್ನ ಮನೆಯಲ್ಲಿ ವಾಸಿಸಲು ಪ್ರಾರ್ಥಿಸುತ್ತೇನೆ. ನಿಷಾದರಾದ ನಮ್ಮಿಂದ ಭಕ್ತಿಪುರಸ್ಸರವಾಗಿ ಸಂಪಾದಿಸಲಾದ ಕಂದಮೂಲ ಫಲಾದಿಗಳನ್ನೂ, ಆರ್ದ್ರವಾದ ಮಾಂಸವನ್ನೂ, ಶುಷ್ಕಮಾಂಸವನ್ನೂ, ನಾನಾವಿಧಗಳಾದ, ವನದಲ್ಲಿ ಹುಟ್ಟಿದ ಪದಾರ್ಥಗಳನ್ನೂ ತೆಗೆದುಕೊಂಡು ಅನುಗ್ರಹಿಸಲು ಪ್ರಾರ್ಥಿಸುತ್ತೇನೆ. ಅಲ್ಲದೆ ನಿನ್ನ ಸೈನ್ಯವೆಲ್ಲಕ್ಕೂ ಚೆನ್ನಾಗಿ ಅನ್ನಪಾನಾದಿಗಳನ್ನು ಕಲ್ಪಿಸಿ ಈ ರಾತ್ರಿಯಲ್ಲಿ ಈ ಸ್ಥಳದಲ್ಲಿ ವಾಸ ಮಾಡುವಂತೆ ಆಜ್ಞೆ ಮಾಡು. ಮಾತ್ರವಲ್ಲದೆ, ನಾನಾವಿಧಗಳಾಗಿಯೂ, ಅಪೇಕ್ಷಿಸಲು ಯೋಗ್ಯವಾದುವೂ ಆದ ಪದಾರ್ಥಗಳಿಂದ ನಮ್ಮಿಂದ ಪೂಜಿತನಾಗಿ ನಾಳೆಯ ದಿನದವರೆವಿಗೆ ಇಲ್ಲಿಯೇ ಇರಲು ಪ್ರಾರ್ಥಿಸುತ್ತಿದ್ದೇನೆ." ॥ ೧೬-೧೮ ॥

ಇಂತಿದು ಗುಹಕೃತ ಭರತ ಸಮಾಪಾಗಮನ ವೃತ್ತಾಂತ ವಿವರಣವೆಂಬ ಎಪ್ಪತ್ತನಾಲ್ಕನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಪಂಚಾಶೀತಿತಮಸ್ಸರ್ಗಃ.

ಏವಮುಕ್ತಸ್ತು ಭರತೋ ನಿಷಾದಾಧಿಪತಿಂ ಗುಹಂ ॥ ಪ್ರತ್ಯುವಾಚ ಮಹಾಪ್ರಾಜ್ಞೋ ವಾಕ್ಯಂ ಹೇತ್ವರ್ಥ ಸಂಹಿತಂ ॥ ೧ ॥ ಊರ್ಜಿತಃಖಲು ತೇಕಾಮಃ ಕೃತೋ ಮಮ ಗುರೋ ಸ್ಸಖೇ! ॥ ಯೋಮೇ ತ್ವಮೀದೃಶೀಂ ಸೇನಾ ಮೇಕೋ ಭ್ಯರ್ಚಿತು ಮಿಚ್ಛಸಿ ॥ ೨ ॥ ಇತ್ಯುಕ್ತ್ವಾತು ಮಹಾತೇಜಾ ಗುಹಂ ವಚನ ಮುತ್ತಮಂ ॥ ಅಬ್ರವೀ ದ್ಭರತ ಶ್ಶ್ರೀಮಾ ನ್ನಿಷಾದಾಧಿಪತಿಂ ಪುನಃ॥೩॥ ಕತರೇಣ ಗಮಿಷ್ಯಾಮಿ ಭರದ್ವಾಜಾಶ್ರಮಂ ಗುಹ! ॥ ಗಹನೋಯಂ ಭೃಶಂ

ಏವಂ - ಈಪರಿಯಾಗಿ, ಉಕ್ತಃ - ಹೇಳಲ್ಪಟ್ಟ, ಮಹಾಪ್ರಾಜ್ಞಃ - ಮಹಾ ಬುದ್ಧಿಶಾಲಿಯಾದ, ಭರತಃ - ಭರತನು, ನಿಷಾದಾಧಿಪತಿಂ - ಬೇಡರಿಗೆ ದೊರೆಯಾದ, ಗುಹಂ - ಗುಹನನ್ನು ಕುರಿತು, ಹೇತ್ವರ್ಥಸಂಹಿತಂ - ಉಪಪತ್ತಿಪ್ರಯೋಜನಗಳಿಂದ ಕೂಡಿದಂತೆ, ಪ್ರತ್ಯುವಾಚ - ಪ್ರತ್ಯುತ್ತರ ಕೊಟ್ಟನು. ॥ ೧ ॥ ಮಮ - ನನ್ನ, ಗುರೋಃ - ಅಣ್ಣನಾದ ಶ್ರೀರಾಮನಿಗೆ, ಹೇ ಸಖೇ - ಎಲೈ ಸ್ನೇಹಿತನಾದವನೇ, ಊರ್ಜಿತಃ - ಪ್ರಸಿದ್ಧವಾದ, ತೇ - ನಿನ್ನ, ಕಾಮಃ - ಕೋರಿಕೆಯು, ಕೃತಃಖಲು - ಮಾಡಲ್ಪಟ್ಟಿತಷ್ಟೆ, ಯಃ - ಯಾವ, ತ್ವಂ - ನೀನು, ಏಕಃ - ಒಬ್ಬನೇ, ಮೇ - ನನ್ನ, ಈದೃಶೀಂಸೇನಾಂ - ಇಂತಹ ಅಪಾರವಾದ ಸೈನ್ಯವನ್ನು, ಅಭ್ಯರ್ಚಿತುಂ - ಮರ್ಯಾದಿಸಲು, ಇಚ್ಛಸಿ - ಅಪೇಕ್ಷಿಸುತ್ತೀಯೋ. ॥ ೨ ॥ ಮಹಾತೇಜಾಃ - ಮಹಾ ತೇಜೋವಂತನಾದ, ಶ್ರೀಮಾನ್ - ಸಂಪದ್ಯುಕ್ತನಾದ, ಭರತಃ - ಭರತನು, ಇತ್ಯುಕ್ತ್ವಾ - ಈಪರಿಯಾಗಿ ಹೇಳಿ, ನಿಷಾದಾಧಿಪತಿಂ - ಬೇಡರಿಗೆ ಅಧಿಪತಿಯಾದ, ಗುಹಂ - ಗುಹನನ್ನು ಕುರಿತು, ಉತ್ತಮಂ - ಉತ್ತಮವಾದ, ವಚನಂ - ಮಾತನ್ನು, ಪುನಃ - ಮತ್ತೂ, ಅಬ್ರವೀತ್ - ನುಡಿದನು. ॥ ೩ ॥ ಹೇ ಗುಹ - ಎಲೈ ಗುಹನೆ, ಅಯಂದೇಶಃ - ಈ ಅರಣ್ಯಪ್ರದೇಶವು, ಗಂಗಾನೂಪಃ - ಗಂಗಾನದಿಯ ಜಲಪ್ರಾಯಭೂಮಿಯಾದ ಕಾರಣ, ಭೃಶಂ - ಬಹಳವಾಗಿ, ದುರತ್ಯಯಃ - ದಾಟಲಸಾಧ್ಯವಾದ, ಭರದ್ವಾಜಾಶ್ರಮಂ - ಭರ

ಪಂಡಿತರಲ್ಲಿ ಉತ್ತಮನಾದ ಭರತನು, ಗುಹನೀರೀತಿ ನುಡಿದ ನುಡಿಗಳನ್ನು ಕೇಳಿ, ನಿಷಾದಾಧಿಪನಾದ ಆತನನ್ನು ಕುರಿತು, ಅರ್ಥಯುಕ್ತವಾದ ಈ ಮಾತುಗಳನ್ನಾಡಿದನು; "ಎಲೈ ನಿಷಾದಾಧಿಪತಿಯೆ; ಗುಹನೆ! ನಮ್ಮಣ್ಣನಾದ ಶ್ರೀರಾಮಮೂರ್ತಿಗೆ ಪರಮಮಿತ್ರನಾದವನೆ! ನೀನೊಬ್ಬನೇ ಆದರೂ ಈ ಮಹಾ ಸೇನೆಯೆಲ್ಲವನ್ನೂ ಸನ್ಮಾನಿಸಲು ಅಪೇಕ್ಷೆಯುಳ್ಳವನಾದೆ. ಆದುದರಿಂದ ನೀನು ನಮ್ಮೆಲ್ಲರನ್ನೂ ಪೂಜಿಸಿದ ಹಾಗೆಯೇ ಸಂತೋಷವಾಯಿತು." ಮಹಾ ತೇಜಸ್ವಿಯಾದ ಭರತನು ಆ ಗುಹನನ್ನು ಕುರಿತು ಈ ರೀತಿಯಾಗಿ ಹೇಳಿ ಮತ್ತೆ ಆ ಕಿರಾತರಾಜನನ್ನು ಕುರಿತು, "ಎಲೈ ಗುಹನೆ! ನಾನು ಭರದ್ವಾಜಾಶ್ರಮಕ್ಕೆ ಹೋಗಲಪೇಕ್ಷಿಸುತ್ತೇನೆ. ನಾನು ಆ ಭರದ್ವಾಜಾಶ್ರಮಕ್ಕೆ ಯಾವ ಮಾರ್ಗದಿಂದ ಹೋಗ

ದೇಶೋ ಗಂಗಾನೂಪೋ ದುರತ್ಯಯಃ ॥೪॥ ತಸ್ಯ ತದ್ವಚನಂ ಶ್ರುತ್ವಾ ರಾಜ ಪುತ್ರಸ್ಯ ಧೀಮತಃ ॥ ಅಬ್ರವೀ ತ್ಪ್ರಾಂಜಲಿ ರ್ವಾಕ್ಯಂ ಗುಹೋ ಗಹನಗೋ ಚರಃ ॥ ೫ ॥ ದಾಶಾ ಸ್ತ್ವಾನುಗಮಿಷ್ಯಂತಿ ಧನ್ವಿನ ಸ್ಸುಸಮಾಹಿತಾಃ ॥ ಅಹಂ ತ್ವಾಽನುಗಮಿಷ್ಯಾಮಿ ರಾಜಪುತ್ರ! ಮಹಾಯಶಃ! ॥೬॥ ಕಚ್ಚಿನ್ನದುಷ್ಟೋ ವ್ರಜಸಿ? ರಾಮಸ್ಯಾಽಕ್ಲಿಷ್ಟ ಕರ್ಮಣಃ ॥ ಇಯಂ ತೇ ಮಹತೀ ಸೇನಾ ಶಂಕಾಂ ಜನಯತೀವ ಮೇ ॥ ೭ ॥ ತಮೇವ ಮಭಿಭಾಷಂತ ಮಾಕಾಶಇವ ನಿರ್ಮಲಃ ॥ ಭರತ ಶ್ಶ್ಲಕ್ಷ್ಣಯಾ ವಾಚಾ ಗುಹಂ ವಚನ ಮಬ್ರವೀತ್ ॥ ೮ ॥ ಮಾಭೂ

ದ್ವಾಜಋಷಿಯ ಆಶ್ರಮವನ್ನು ಕುರಿತು, ಕತರೇಣ - ಯಾವ ಮಾರ್ಗದಿಂದ, ಗಮಿಷ್ಯಾಮಿ - ಹೋಗು ವೆನು, ಇತಿ-ಇಂತೆಂದು, ಅಬ್ರವೀತ್-ನುಡಿದನು. ॥೪॥ ಗಹನಗೋಚರಃ-ಅರಣ್ಯವನ್ನು ತಿಳಿದವನಾದ, ಗುಹಃ-ಗುಹನು, ಧೀಮತಃ-ಬುದ್ಧಿಶಾಲಿಯಾದ, ರಾಜಪುತ್ರಸ್ಯ-ಅರಸುಮಗನಾದ, ತಸ್ಯ - ಆ ಭರತನ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಪ್ರಾಂಜಲಿಃ-ಅಂಜಲಿಬದ್ಧನಾಗಿ, ವಾಕ್ಯಂ-ಮಾತನ್ನು, ಅಬ್ರವೀತ್ - ನುಡಿದನು. ॥ ೫ ॥ ಹೇ ರಾಜಪುತ್ರ - ಎಲೈ ಅರಸುಮಗನೇ, ಹೇ ಮಹಾಯಶಃ - ಎಲೈ ಮಹಾಕೀರ್ತಿವಂತನೇ, ಸುಸಮಾಹಿತಾಃ - ಅರಣ್ಯಮಾರ್ಗವನ್ನು ಚೆನ್ನಾಗಿ ತಿಳಿದ, ದಾಶಾಃ - ಬೇಡರು, ಧನ್ವಿನಃ-ಧನುರ್ಧಾರಿಗಳಾಗಿ, ತ್ವಾಂ-ನಿನ್ನನ್ನು, ಅನುಗಮಿಷ್ಯಂತಿ - ಅನುಸರಿಸಿ ಬರುವರು, ಅಹಂ-ನಾನೂ ಸಹ, ತ್ವಾಂ-ನಿನ್ನನ್ನು, ಅನುಗಮಿಷ್ಯಾಮಿ - ಅನುಸರಿಸಿ ಬರುತ್ತೇನೆ. ॥೬॥ ತೇ-ನಿನ್ನ ಸಂಬಂಧವಾದ, ಮಹತೀ - ಬಹಳವಾದ, ಇಯಂಸೇನಾ - ಈ ಸೇನೆಯು, ಮೇ - ನನಗೆ, ಶಂಕಾಂ - ಸಂಶಯವನ್ನು, ಜನಯತೀವ - ಹುಟ್ಟಿಸುವಂತಿದೆ, ಅಕ್ಲಿಷ್ಟಕರ್ಮಣಃ - ಕ್ಲೇಶವಿಲ್ಲದ ವ್ಯಾಪಾರವುಳ್ಳ, ರಾಮಸ್ಯ-ಶ್ರೀರಾಮನ ವಿಷಯದಲ್ಲಿ, ಅದುಷ್ಟಃ - ದೋಷರಹಿತನಾಗಿ, ವ್ರಜಸಿಕಚ್ಚಿತ್-ಹೋಗುತ್ತಿರುವೆ ಯಷ್ಟೆ. ॥ ೭ ॥ ಏವಂ - ಈಪರಿಯಾಗಿ, ಅಭಿಭಾಷಂತಂ-ಮಾತನಾಡುತ್ತಿರುವ, ತಂಗುಹಂ-ಆ ಗುಹ

ಬಹುದು. ಗಂಗಾಜಲದಿಂದ ವ್ಯಾಪ್ತವಾದ ಈ ದೇಶವು ಬಹು ದುರ್ಲಭವಾಗಿ ತೋರು ತ್ತಿರುವುದು. ಅಲ್ಲದೆ ಈ ಗಂಗಾಜಲವನ್ನು ನೋಡಿದರೆ, ಇದನ್ನು ದಾಟುವ ಬಗೆಯೆಂ ತೆಂದು ನನಗೆ ಸಂಶಯವಾಗುತ್ತಿರುವುದು" ಎಂದು ಹೇಳಿದನು. ಆಗ ಅರಣ್ಯದಲ್ಲಿ ಸಂಚಾರ ಮಾಡುವವನಾದ ಗುಹನು, ರಾಜಪುತ್ರನೂ, ಬುದ್ಧಿವಂತನೂ ಆದ ಭರತನ ಮಾತನ್ನುಕೇಳಿ, ಅಂಜಲಿಬದ್ಧನಾಗಿ, "ಎಲೈ ಮಹಾ ಕೀರ್ತಿವಂತನಾದ ಭರತನೆ! ದೋಣಿಗಳೊಡಗೂಡಿದ ಬೆಸ್ತರೆಲ್ಲರೂ ಧನುರ್ಧಾರಿಗಳಾಗಿ ಮಹಾ ಜಾಗರೂಕತೆಯಿಂದ ನಿನ್ನೊಡನೆ ಬರುತ್ತಾರೆ. ನಾನೂ ನಿನ್ನೊಡನೆಯೇ ಬರುತ್ತೇನೆ" ಎಂದು ಹೇಳಿ ಮತ್ತೂ ಹೀಗೆಂದನು. ॥ ೧-೫ ॥ "ಓ ರಘುಕುಲನಂದನನಾದ ಭರತನೆ! ಸಕಲ ಭೂತಗಳಿಗೂ, ಸೌಖ್ಯವನ್ನುಂಟುಮಾಡುವ ವ್ಯಾಪಾರವುಳ್ಳ ಶ್ರೀರಾಮನ ವಿಷಯದಲ್ಲಿ ಕೆಟ್ಟುದನ್ನು ಮಾಡುವ ಯೋಚನೆಯಿಂದ ನೀನು ಹೊರಟಿಲ್ಲವಷ್ಟೆ? ನೀನೀರೀತಿ ಚತುರಂಗಬಲದಿಂದೊಡಗೂಡಿ ಹೊರಟಿರುವುದರಿಂದ ನನ್ನ ಮನಸ್ಸಿಗೆ ಸಂದೇಹವುಂಟಾಗಿರುವುದು." ಈ ಪ್ರಕಾರವಾಗಿ ನುಡಿದ ಗುಹನ ಮಾತುಗಳನ್ನು ಕೇಳಿದ, ಆಕಾಶದಂತೆ ನಿರ್ಮಲವಾದ ಸ್ವಭಾವವುಳ್ಳ ಆ ಭರತನು ಮೃದುಮಧುರವಾದ

ತ್ಸಕಾಲೋ ಯತ್ಕಷ್ಟಂ ನಮಾಂ ಶಂಕಿತು ಮರ್ಹಸಿ || ರಾಘವ ಸ್ಸಹಿಮೇ ಭ್ರಾತಾ ಜ್ಯೇಷ್ಠಃ ಪಿತೃಸಮೋ ಮತಃ || ೯ || ತಂ ನಿವರ್ತಯಿತುಂ ಯಾಮಿ ಕಾಕುತ್ಸ್ಥಂ ವನವಾಸಿನಂ || ಬುದ್ಧಿರನ್ಯಾ ನತೇ ಕಾರ್ಯಾ ಗುಹ! ಸತ್ಯಂ ಬ್ರವೀಮಿತೇ || ೧೦ || ಸತು ಸಂಹೃಷ್ಟ ವದನ ಶ್ಶ್ರುತ್ವಾ ಭರತ ಭಾಷಿತಂ ||

ನನ್ನು ಕುರಿತು, ಆಕಾಶಇವ - ಆಕಾಶವಂತೆ, ನಿರ್ಮಲಃ - (೧) ನಿರ್ದೋಷನಾದ, ಭರತಃ - ಭರತನು, ಶ್ಲಕ್ಷ್ಣಯಾ - ಮೃದುವಾದ, ವಾಚಾ - ಮಾತಿನಿಂದ, ವಚನಂ - ಮಾತನ್ನು, ಅಬ್ರವೀತ್ - ನುಡಿದನು. || ೮ || ಯತ್ - ಯಾವ ಕಾಲದಲ್ಲಿ, ಕಷ್ಟಂ - ನಿನ್ನಿಂದ ಊಹಿಸಲ್ಪಟ್ಟ ಕಷ್ಟವುಂಟಾಗುವದೋ, ಸಕಾಲಃ - ಆ ಕಾಲವು, ಮಾಭೂತ್ - ಆಗದಿರಲಿ, ಮಾಂ - ನನ್ನನ್ನು ಕುರಿತು, ಶಂಕಿತುಂ - ಸಂಶಯಗೊಳ್ಳಲು, ನಾರ್ಹಸಿ - ಅರ್ಹನಾಗಬೇಡ, ಹಿ - ಯಾವ ಕಾರಣ, ಸಃರಾಘವಃ - ಆ ಶ್ರೀರಾಮನು, ಮೇ - ನನಗೆ, ಜ್ಯೇಷ್ಠಭ್ರಾತಾ - ಹಿರಿಯಣ್ಣನಾದ ಕಾರಣ, ಪಿತೃಸಮಃ - ತಂದೆಗೆ ಸಮಾನನಾಗಿ, ಮತಃ - ಇಷ್ಟನೋ, ತಸ್ಮಾತ್ - ಆ ಕಾರಣ, ವನವಾಸಿನಂ - ಅರಣ್ಯವಾಸವನ್ನು ಮಾಡುತ್ತಿರುವ, ಕಾಕುತ್ಸ್ಥಂ - ಕಕುತ್ಸ್ಥವಂಶೋತ್ಪನ್ನನಾದ, ತಂ - ಆ ಶ್ರೀರಾಮನನ್ನು, ನಿವರ್ತಇತುಂ - ಹಿಂತಿರುಗಿಸಲು, ಯಾಮಿ - ಹೋಗುವೆನು, ತೇ - ನಿನಗೆ, ಸತ್ಯಂ - ಯಥಾರ್ಥವಾಗಿ, ಬ್ರವೀಮಿ - ಹೇಳುತ್ತೇನೆ, ಹೇ ಗುಹ - ಎಲೈ ಗುಹನೇ, ತೇ - ನಿನ್ನಿಂದ, ಅನ್ಯಾಃಬುದ್ಧಿಃ - ಬೇರೊಂದು ವಿಧವಾದ ಬುದ್ಧಿಯು, ನಕಾರ್ಯಾ-ಮಾಡತಕ್ಕದಲ್ಲ. ||೧೦|| ಸತು - ಆ ಗುಹನಾದರೆ, ಭರತಭಾಷಿತಂ - ಆ ಭರತನ ಮಾತನ್ನು, ಶ್ರುತ್ವಾ - ಕೇಳಿ, ಸಂಹೃಷ್ಟವದನಃ - ಮುಗುಳುನಗೆಯುಳ್ಳ ಮುಖವುಳ್ಳವನಾಗಿ, ಭರತಂಪ್ರತಿ - ಭರತನನ್ನು ಕುರಿತು, ಹರ್ಷಿತಃ - ಮನವಲ್ಲಿ ಸಂತೋಷಗೊಂಡವನಾಗಿ, ವಾಕ್ಯಂ - ಮಾತನ್ನು, ಪುನರೇವ - ಮತ್ತೂ, ಅಬ್ರವೀತ್ - ನುಡಿದನು. || ೧೧ || ತ್ವಂ-

---

ಮಾತುಗಳಿಂದ ಆತನನ್ನು ಕುರಿತು ಹೀಗೆಂದನು. || ೬-೮ || "ಎಲೈ ಬೇಡರೊಡೆಯನಾದ ಗುಹನೆ! ಶ್ರೀರಾಮನಿಗೆ ನಾನು ಅಪಕಾರವನ್ನು ಮಾಡುವೆನೇನೊ, ಎಂಬ ಸಂದೇಹವು ನಿನಗುಂಟಾಗಿರುವುದಲ್ಲ! ಇದಕ್ಕಾಗಿ ನಾನು ದುಃಖಿಸುತ್ತೇನೆ. ಇನ್ನುಮೇಲೆ ಎಂದಿಗೂ ನನ್ನಲ್ಲಿ ಇಂತಹ ಸಂದೇಹವು ಹುಟ್ಟದಿರಲಿ! ರಘುಕುಲೋದ್ಭವನಾದ ಶ್ರೀರಾಮನು ನನಗೆ ಅಣ್ಣನು; ಅದೂ ಅಲ್ಲದೆ ಜ್ಯೇಷ್ಠನೂ ಆಗಿದ್ದಾನೆ. ಆದುದರಿಂದಾತನು ನನಗೆ ತಂದೆಗೆ ಸಮನಾದವನು. ವನದಲ್ಲಿ ವಾಸ ಮಾಡುತ್ತಿರುವವನೂ, ಕಕುತ್ಸ್ಥಕುಲದಲ್ಲಿ ಜನಿಸಿದವನೂ ಆದ ಆ ಶ್ರೀರಾಮಮೂರ್ತಿಯನ್ನು ಅರಣ್ಯದಿಂದ ಅಯೋಧ್ಯಾಪಟ್ಟಣಕ್ಕೆ ಕರೆದುಕೊಂಡು ಹೋಗಲು ನಾನೀಗ ಹೊರಟಿರುವೆನು. ಆದುದರಿಂದೆಲೈ ಗುಹನೆ! ನಿನ್ನ ಮನಸ್ಸು ಬೇರೇ ವಿಧವಾಗದಿರಲಿ! ನಾನು ಸತ್ಯವಾಗಿಯೂ ಹೇಳುತ್ತಿದ್ದೇನೆ" ಭರತಕುಮಾರನೀರೀತಿ ಹೇಳಲು

ಟಿ. (೧) "ಆಕಾಶಇವ ನಿರ್ಮಲಃ" ಎಂಬ ಕಡೆ ಗೋವಿಂದರಾಜರ ಅಭಿಪ್ರಾಯ. ಆಕಾಶದಂತೆ ನಿರ್ಮಲನಾದ ಭರತನಲ್ಲಿ ಗುಹನು ಸಂಶಯಪಟ್ಟುದು ಅವನಲ್ಲಿ ಕೂಡುವುದೇ ಇಲ್ಲವೆಂದು ತಾತ್ಪರ್ಯ. "ಏಕೆಂದರೆ ಆಕಾಶದಲ್ಲಿ ಕೆಸರನ್ನೆಸೆದರೆ ಅದು ಆಕಾಶಕ್ಕೇನೂ ಹತ್ತುವುದಿಲ್ಲ. ಆದರಿಂದ ಎಸೆದವನ ಕೈಯೇ ಕೆಸರಾಗುತ್ತದೆ." ಎಂಬುದೇ ಇಲ್ಲಿನ ಅರ್ಥ ಸ್ವಾರಸ್ಯ.

ಪುನರೇವಾಽಬ್ರವೀದ್ವಾಕ್ಯಂ ಭರತಂ ಪ್ರತಿಹರ್ಷಿತಃ ॥೧೧॥ ಧನ್ಯಸ್ತ್ವಂ! ನತ್ವಯಾತುಲ್ಯಂ ಪಶ್ಯಾಮಿ ಜಗತೀತಲೇ ॥ ಅಯತ್ನಾದಾಗತಂ ರಾಜ್ಯಂ ಯಸ್ತ್ವಂ ತ್ಯಕ್ತುಮಿಹೇಚ್ಛಸಿ! ॥೧೨॥ ಶಾಶ್ವತೀ ಖಲು ತೇ ಕೀರ್ತಿ ರ್ಲೋಕಾನನುಚರಿಷ್ಯತಿ ॥ ಯಸ್ತ್ವಂ ಕೃಚ್ಛ್ರಗತಂ ರಾಮಂ ಪ್ರತ್ಯಾನಯಿತುಮಿಚ್ಛಸಿ ॥೧೩॥ ಏವಂ ಸಂಭಾಷಮಾಣಸ್ಯ ಗುಹಸ್ಯ ಭರತಂ ತದಾ ॥ ಬಭೌ ನಷ್ಟಪ್ರಭಸ್ಸೂರ್ಯೋ ರಜನೀ ಚಾಭ್ಯವರ್ತತ ॥೧೪॥ ಸನ್ನಿವೇಶ್ಯ ಸ ತಾಂ ಸೇನಾಂ ಗುಹೇನ ಪರಿತೋಷಿತಃ ॥ ಶತ್ರುಘ್ನೇನ ಸಹಶ್ರೀಮಾನ್ ಶಯನಂ ಪುನರಾಗ

ನೀನು, ಧನ್ಯಃ - ಧನ್ಯನು, ಯಃ - ಯಾವ, ತ್ವಂ - ನೀನು, ಅಯತ್ನಾತ್ - ಅಪ್ರಯತ್ನವಾಗಿ, ಆಗತಂ - ಬಂದ, ರಾಜ್ಯಂ - ರಾಜ್ಯವನ್ನು, ತ್ಯಕ್ತುಂ - ಬಿಡಲು, ಇಹ - ಈಗ, ಇಚ್ಛಸಿ - ಇಚ್ಛಿಸುವೆಯೋ, ತ್ವಯಾ - ನಿನ್ನೊಡನೆ, ತುಲ್ಯಂ - ಸಮಾನವಾದ ಪುರುಷನು, ಜಗತೀತಲೇ-ಭೂಪ್ರದೇಶದಲ್ಲಿ, ನಪಶ್ಯಾಮಿ - ಕಾಣಲಾರೆನು. ॥೧೨॥ ಯಃ - ಯಾವ, ತ್ವಂ - ನೀನು, ಕೃಚ್ಛ್ರಗತಂ - ಅರಣ್ಯಗಮನ ರೂಪವಾದ ಕಷ್ಟಾವಸ್ಥೆಯನ್ನು ಪಡದಿರುವ, ರಾಮಂ - ಶ್ರೀರಾಮನನ್ನು, ಪ್ರತ್ಯಾನಯಿತುಂ - ಹಿಂತಿರುಗಿಸಲು, ಇಚ್ಛತಿ - ಇಚ್ಛಿಸುವೆಯೋ ಅಂತಹ, ತೇ - ನಿನ್ನ, ಕೀರ್ತಿಃ - ಯಶಸ್ಸು, ಶಾಶ್ವತೀ - ಶಾಶ್ವತವಾದುದಾಗಿ, ಲೋಕಾನ್ ಲೋಕಗಳಲ್ಲಿ, ಅನುಚರಿಷ್ಯತಿ - ಅನುಸರಿಸಿ ಸಂಚಾರಮಾಡುತ್ತದೆ. ॥೧೩॥ ಏವಂ - ಈಪರಿಯಾಗಿ, ತದಾ - ಆ ಕಾಲದಲ್ಲಿ, ಗುಹಸ್ಯ - ಗುಹನು, ಭರತಂ - ಭರತನನ್ನು ಕುರಿತು, ಸಂಭಾಷಮಾಣಸ್ಯ - ಮಾತಾಡುತ್ತಿರಲು, ಸೂರ್ಯಃ- ಸೂರ್ಯನು, ನಷ್ಟಪ್ರಭಃ - ನಷ್ಟವಾದ ಕಾಂತಿಯುಳ್ಳವನಾಗಿ, ಬಭೌ - ಹೋಗುತ್ತಿದ್ದನು. ॥೧೪॥ ಶ್ರೀಮಾನ್ - ಸಂಪದ್ಯುಕ್ತನಾದ, ಸಃ - ಆ ಭರತನು, ಗುಹೇನ - ಗುಹನೊಡನೆ, ಪರಿತೋಷಿತಃ -

---

ಗುಹನು ಪರಮಾನಂದವನ್ನು ಪಡೆದವನಾಗಿ, ಆ ಭರತನನ್ನು ಕುರಿತು ಈ ಮಾತನ್ನಾಡಿದನು. ॥ ೯-೧೧ ॥ "ಎಲೈ ರಘುಕುಲೋತ್ತಮನಾದ ಭರತನೆ! ನೀನೇ ಧನ್ಯನು; ಅಪ್ರಯತ್ನವಾಗಿ ದೊರಕಿದ ರಾಜ್ಯವನ್ನು ಅನುಭವಿಸದೆ, ಅದನ್ನು ತೊರೆಯಲು ಬಯಸಿರುವೆಯಲ್ಲವೆ? ನೀನು ಮಹಾ ಧರ್ಮಾತ್ಮನು; ಮಹಾನುಭಾವನು; ಇಂತಹ ಮಹಾನುಭಾವನು ಈ ಲೋಕದಲ್ಲಿ ಯಾವನೂ ಇರುವುದಿಲ್ಲ. ನಾನು ನೋಡಿಯೂ ಇರಲಿಲ್ಲ. ಎಲೈ ಭರತನೆ! ನೀನು ಬಹು ಕಷ್ಟಗಳನ್ನು ಹೊಂದಿದ ಶ್ರೀರಾಮನನ್ನು ಅರಣ್ಯದಿಂದ ಕರೆದುಕೊಂಡು ಬಂದು, ಸುಖಿಯನ್ನಾಗಿ ಮಾಡಲು ಕೋರಿರುವೆಯಾದುದರಿಂದ ನಿನ್ನ ಕೀರ್ತಿಯು ಸಕಲ ಲೋಕಗಳಲ್ಲಿಯೂ ಶಾಶ್ವತವಾಗಿರುವಂತೆ ಪ್ರಸಿದ್ಧಿಯನ್ನು ಹೊಂದುತ್ತದೆ." ಈ ಪ್ರಕಾರವಾಗಿ ಹೇಳುತ್ತಿರುವ ಗುಹನ ಮಾತುಗಳನ್ನು ಕೇಳಿದ ಆ ಭರತನು ಪರಮಾನಂದವನ್ನು ಹೊಂದಿದನು. ॥೧೨-೧೩॥ ಈ ರೀತಿ ಭರತನೂ, ಗುಹನೂ ಮಾತನಾಡುತ್ತಿರುವ ಹಾಗೆಯೇ ಸೂರ್ಯನು ಅಸ್ತಮಿಸಿದನು. ರಾತ್ರಿಯಾಯಿತು. ಆಗ ಮಹಾ ಭಾಗ್ಯವಂತನಾದ ಭರತನು ತನ್ನ ಸೇನೆಯೆಲ್ಲವನ್ನೂ ಅಂದಿನ ರಾತ್ರಿ ಆ ಶೃಂಗೀಬೇರಪುರದಲ್ಲಿ ತಂಗುವಂತೆ ಮಾಡಿದನು. ಆ ಬಳಿಕ

ಮತ್ ‖ ೧೫ ‖ ರಾಮಚಿಂತಾಮಯ ಶ್ಶೋಕೋ ಭರತಸ್ಯ ಮಹಾತ್ಮನಃ ‖
ಉಪಸ್ಥಿತೋ ಹ್ಯನರ್ಹಸ್ಯ ಧರ್ಮಪ್ರೇಕ್ಷಸ್ಯ ತಾದೃಶಃ ‖ ೧೬ ‖ ಅಂತರ್ದಾ
ಹೇನ ದಹನ ಸ್ಸಂತಾಪಯತಿ ರಾಘವಂ ‖ ವನದಾಹಾಭಿಸಂತಪ್ತಂ ಗೂಢೋಗ್ನಿ
ರಿವ ಪಾದಪಂ ‖ ೧೭ ‖ ಪ್ರಸೃತ ಸ್ಸರ್ವಗಾತ್ರೇಭ್ಯ (೧) ಸ್ಸ್ವೇದಂ ಶೋಕಾಗ್ನಿ
ಸಂಭವಂ ‖ ಯಥಾ ಸೂರ್ಯಾಂಶು ಸಂತಪ್ತೋ ಹಿಮವಾನ್ ಪ್ರಸೃತೋ ಹಿಮಂ
‖ ೧೮ ‖ ಧ್ಯಾನನಿರ್ದರ ಶೈಲೇನ ವಿನಿಶ್ಶ್ವಸಿತ ಧಾತುನಾ ‖ ದೈನ್ಯ ಪಾದಪ

ಸಂತೋಷಗೊಂಡವನಾಗಿ, ತಾಂಸೇನಾಂ - ಆ ಸೈನ್ಯವನ್ನು, ಸನ್ನಿವೇಶ್ಯ - ಇಳಿಸಿ, ಶತ್ರುಘ್ನೇನ ಸಹ - ಶತ್ರುಘ್ನನೊಡಗೂಡಿ, ಶಯನಂ - ಶಯನವನ್ನು, ಅಗಮತ್ - ಹೊಂದಿದನು. ‖ ೧೫ ‖ ಮಹಾತ್ಮನಃ - ಮಹಾಮನವುಳ್ಳ, ಅನರ್ಹಸ್ಯ - ಶೋಕಕ್ಕೆ ಅರ್ಹನಾಗದಿರುವ, ಧರ್ಮಪ್ರೇಕ್ಷಸ್ಯ - ಧರ್ಮದಲ್ಲಿಯೇ ದೃಷ್ಟಿಯುಳ್ಳ, ಭರತಸ್ಯ - ಭರತನಿಗೆ, ರಾಮಚಿಂತಾಮಯಃ - ಶ್ರೀರಾಮನ ಧ್ಯಾನ ವಿಕಾರವಾದ, ತಾದೃಶಃ - ಅಂತಹ ವಾಚಾಮಗೋಚರವಾದ, ಶೋಕಃ - ಶೋಕವು, ಉಪಸ್ಥಿತಃ - ಪ್ರಾಪ್ತವಾಯಿತು. ‖ ೧೬ ‖ ದಹನಃ - ಶೋಕಾಗ್ನಿಯು, ರಾಘವಂ - ರಘುವಂಶೋತ್ಪನ್ನನಾದ ಭರತನನ್ನು, ಗೂಢಃ - ಗುಪ್ತವಾದ, ಅಗ್ನಿಃ - ಅಗ್ನಿಯು, ವನದಾಹಾಭಿಸಂತಪ್ತಂ - ಅರಣ್ಯದ ಸುಡುವಿಕೆಯಿಂದ ಸಂತಾಪಿಸಲ್ಪಟ್ಟ, ಪಾದಪಮಿವ - ಗಿಡವನ್ನಂತೆ, ಅಂತರ್ದಾಹೇನ - ಒಳಗೇ ಸುಡುವಿಕೆಯಿಂದ, ಸಂತಾಪಯತಿ - ಸಂಕಟಗೊಳಿಸಿತು ‖ ೧೭ ‖ ಭರತಃ - ಭರತನು, ಯಥಾ - ಹೇಗೆ, ಸೂರ್ಯಾಂಶುಸಂತಪ್ತಃ - ಸೂರ್ಯಕಿರಣಗಳಿಂದ ತಪಿಸಲ್ಪಟ್ಟ, ಹಿಮವಾನ್ - ಹಿಮವತ್ಪರ್ವತವು, ಹಿಮಂ - ಹಿಮವನ್ನು, ಪ್ರಸೃತಃ - ಸುರಿಯುತ್ತದೆಯೋ, ತಥಾ-ಹಾಗೆಯೇ, ಸರ್ವಗಾತ್ರೇಭ್ಯಃ- ಸಮಸ್ತ ಅವಯವಗಳಿಂದ, ಶೋಕಾಗ್ನಿಸಂಭವಂ - ಶ್ರೀರಾಮನ ವಿಷಯವಾದ ಮನಶ್ಶೋಕವೆಂಬ, ಅಗ್ನಿಃ - ಅಗ್ನಿಯಿಂದ, ಸಂಭವಂ - ಹುಟ್ಟಿದ, ಸ್ವೇದಂ - ಬೆವರನ್ನು, ಪ್ರಸೃತಃ - ಸುರಿಸಿದವನಾ

ತಾನೂ ಕೂಡ ಗುಹನೊಡನೆ ಶಯ್ಯೆಯಲ್ಲಿ ಪವಳಿಸಿದವನಾದನು. ಆಗ ಮಹಾನುಭಾವನೂ, ದುಃಖವನ್ನು ಹೊಂದಲು ಅರ್ಹನಲ್ಲದವನೂ, ಧರ್ಮಬುದ್ಧಿಯುಳ್ಳವನೂ ಆದ ಭರತನಿಗೆ ಮಿತಿಯಿಲ್ಲದುದೂ, ಶ್ರೀರಾಮನ ವಿಷಯಕವಾದುದೂ ಆದ ದುಃಖವು ಅಧಿಕವಾಗಿ ಬಾಧಿಸು ತ್ತಿದ್ದಿತು. ಹಾಗೆ ದುಃಖಾಗ್ನಿಯು, ರಘುಕುಲೋದ್ಭವನಾದ ಭರತನನ್ನು, "ದಾವಾನಲವು, ವನವೃಕ್ಷಗಳನ್ನಂತೆ" ದಹಿಸುತ್ತಲಿದ್ದಿತು ಇಷ್ಟೆಯಲ್ಲದೆ ಆ ಸಮಯದಲ್ಲಿ, ಸೂರ್ಯ ಕಿರಣಗಳ ತಾಪದಿಂದ ಹಿಮವತ್ಪರ್ವತದಿಂದ ಮಂಜುನೀರು ಸುರಿವಂತೆ ಶೋಕಾಗ್ನಿಯಿಂದ ಜನಿಸಿದ ಬೆವರುನೀರು ಭರತನ ಶರೀರದಿಂದ ಬಹಳವಾಗಿ ಸುರಿಯುತ್ತಿದ್ದಿತು ಇಷ್ಟೆಯಲ್ಲದೆ ಕೈಕೇಯಿಯ ಮಗನಾದ ಆ ಭರತನು ಆರೀತಿ ಧ್ಯಾನಿಸುತ್ತಿರಲು, ಆತನ ನಿಟ್ಟುಸಿರುಗಳೆಂಬ

ಟಿ. (೧) "ಸ್ವೇದಶ್ಶೋಕಾಗ್ನಿ ಸಂಭವಃ" ಎಂದು ಪಾಠಾಂತರ. ಈ ಪಾಠವು ದೃಷ್ಟಾಂತಕ್ಕೆ ಅನುರೂಪ ವಾಗಿರುವುದಿಲ್ಲ.

ಸಂಘೇನ ಶೋಕಾಯಾಸಾಧಿ ಶೃಂಗಿಣಾ ॥ ೧೯ ॥ ಪ್ರಮೋಹಾನಂತ ಸತ್ವೇನ ಸಂತಾಪೌಷಧಿ ವೇಣುನಾ ॥ ಆಕ್ರಾಂತೋ ದುಃಖಶೈಲೇನ ಮಜ್ಜತಾ ಕೈಕಯೀಸುತಃ ॥ ೨೦ ॥ ವಿನಿಶ್ವಸನ್ವೈ ಭೃಶದುರ್ಮನಾ ಸ್ತತಃ ಪ್ರಮೂಢ ಸಂಜ್ಞಃ ಪರಮಾಪದಂ ಗತಃ ॥ ಶಮಂ ನಲೇಭೇ ಹೃದಯಜ್ವರಾರ್ದಿತೋ ನರರ್ಷಭೋ ಯೂಥಗತೋ ಯಥರ್ಷಭಃ ॥ ೨೧ ॥

ದನು. ॥ ೧೮ ॥ ಕೈಕಯೀಸುತಃ - ಕೈಕೇಯಿಯಮಗನಾದ ಭರತನು, ಧ್ಯಾನನಿರ್ದರಶೈಲೇನ, ಧ್ಯಾನ - ಧ್ಯಾನವೆಂಬ, ನಿರ್ದರ - ಶೀಳಿಹೋಗದಿರುವ, ಶೈಲೇನ - ಪಾಷಾಣ ಸಮುದಾಯಗಳುಳ್ಳ, ವಿನಿಶ್ವಸಿತ ಧಾತುನಾ - ನಿಟ್ಟುಸಿರುಗಳೆಂಬ ಗೈರಿಕಾದಿಧಾತುಗಳುಳ್ಳ, ದೈನ್ಯಪಾದಪಸಂಘೇನ - ದೈನ್ಯವೆಂಬ ಗಿಡಗಳ ತಂಡಗಳುಳ್ಳ, ಶೋಕಾಯಾಸಾಧಿಶೃಂಗಿಣಾ, ಶೋಕ - ಬಾಹ್ಯದುಃಖವೂ ಅದರಿಂದ ಹುಟ್ಟಿದ, ಆಯಾಸ - ಆಯಾಸವೂ, ಆಧಿ - ಮನೋವ್ಯಥೆಯು ಇವುಗಳೇ ಶಿಖರಗಳಾಗುಳ್ಳ, ಪ್ರಮೋಹಾನಂತ ಸತ್ವೇನ - ಪ್ರಬಲವಾದ ಮೋಹವೆಂಬ ಅಸಂಖ್ಯಾಕ ಜಂತುಗಳುಳ್ಳ, ಸಂತಾಪೌಷಧಿವೇಣುನಾ, ಸಂತಾಪ - ಸಂಕಟಗಳೆಂಬ, ಓಷಧಿ - ಲತೆಗಳೂ ಮೂಲಿಕೆಗಳೂ, ವೇಣುನಾ - ಬಿದುಗಳೂವುಳ್ಳ, ಮಜ್ಜತಾ - ಮುಳುಗಿಸುತ್ತಿರುವ, ದುಃಖಶೈಲೇನ - ದುಃಖವೆಂಬ ಪರ್ವತದಿಂದ, ಆಕ್ರಾಂತಃ - ಆಕ್ರಮಿಸಲ್ಪಟ್ಟನು. ॥ ೧೯ ॥ ತತಃ - ಬಳಿಕ, ಭೃಶದುರ್ಮನಾಃ - ಬಹಳ ದುಃಖಗೊಂಡಮನವುಳ್ಳವನಾಗಿ, ವಿನಿಶ್ವಸನ್ - ನಿಟ್ಟುಸಿರುಬಿಡುತ್ತಿರುವ, ಪ್ರಮೂಢಸಂಜ್ಞಃ - ಬಹಳ ಮೋಹಾಕ್ರಾಂತನಾದ ಪ್ರಜ್ಞಾಶೂನ್ಯನಾಗಿ, ಪರಂ - ಅತ್ಯಂತವಾಗಿ, ಆಪದಂ - ವಿಪತ್ತನ್ನು, (ಗೋ) ಪರಮಾಪದಂ, ಪರಮ - ಬಹಳವಾದ, ಆಪದಂ - ಅರ್ಥಪ್ರಾಪ್ತಿರೂಪ ಮೂರ್ಛೆಯನ್ನು, ಗತಃ - ಹೊಂದಿ, ಹೃದಯಜ್ವರಾರ್ದಿತಃ, ಹೃದಯ - ಮನಸ್ಸಿನ, ಜ್ವರ - ಜ್ವರದಿಂದ, ಅರ್ದಿತಃ - ಬಾಧಿತನಾಗಿ, ನರರ್ಷಭಃ - ನರಶ್ರೇಷ್ಠನಾದ ಭರತನು, ಯೂಥಗತಃ - ಗುಂಪಿನಲ್ಲಿ ಸೇರದ, ವೃಷಭೋಯಥಾ - ವೃಷಭದಂತೆ, ಶಮಂ - (ಗೋ) ಜ್ವರಶಾಂತಿಯನ್ನು ತಾಪಶಾಂತಿಯನ್ನೂ, ನಲೇಭೇ - ಹೊಂದಲಿಲ್ಲ. ॥ ೨೦ ॥ ಮಹಾನುಭಾವಃ - ಮಹಾ ಪ್ರಭಾವವುಳ್ಳ, ಸಜನಃ - ಪರಿವಾರಜನರಿಂದೊಡಗೂಡಿದ, ಭರತಃ - ಭರತನು, ಗುಹೇನಸಾರ್ಧಂ - ಗುಹನೊಡಗೂಡಿ, ಸಮಾಹಿತಃ - ಕೂಡಿದವನಾಗಿ, (ಮ + ಗೋ) ಏಕಾಗ್ರಚಿತ್ತನಾಗಿ, ಸುದುರ್ಮನಾಃ - ಬಹಳ ದುಃಖಗೊಂಡ ಮನವುಳ್ಳವನು, ಅಭೂತ್ - ಆದನು, ತದಾ -

ನಾನಾವಿಧಗಳಾದ ಗೈರಿಕಾದಿ ಧಾತುಗಳಿಂದಲೂ, ದೈನ್ಯವೆಂಬ ವೃಕ್ಷಗಳಿಂದಲೂ, ದುಃಖವೂ, ಅದರಿಂದಜನಿಸಿದಆಯಾಸವೂ, ಮನೋವ್ಯಥೆಎಂಬ ಶಿಖರಗಳಿಂದಲೂ, ಪ್ರಗಲ್ಭವಾದ ಮೋಹವೆಂಬ ಅಪಾರ ಮೃಗಗಳಿಂದಲೂ, ಸಂತಾಪ, ಸಂಕಟಗಳೆಂಬ ಓಷಧಿಗಳು, ಲತೆಗಳಿಂದಲೂ, ಬಿದಿರುಗಳಿಂದಲೂ, ಮುಳುಗಿಸುತ್ತಿರುವ ದುಃಖವೆಂಬ ಪರ್ವತದಿಂದಾಕ್ರಮಿಸಲ್ಪಟ್ಟು, ಪ್ರಜ್ಞಾಶೂನ್ಯನಂತೆ, ಪರಮಾಪದರೂಪವಾದ ಮೂರ್ಛೆಯನ್ನುಹೊಂದಿ ಮನೋಜ್ವರಪೀಡಿತನಾಗಿ ಗುಂಪನ್ನಗಲಿದ ವೃಷಭದಂತೆ ಜ್ವರಶಾಂತಿಯನ್ನು ಹೊಂದದವನಾದನು. ॥೧೪-೨೧॥ ಅಲ್ಲದೆ ಮಹಾನುಭಾವನಾದವನೂ, ಪರಿವಾರದವರಿಂದೊಡಗೂಡಿದವನೂ, ಸಮಾಹಿತನೂ ಆದ ಭರತನು ಗುಹನೊಡನೆ ವಿಚಾರವುಳ್ಳವನಾಗಿದ್ದನು. ಆಗ ಗುಹನು ಅಣ್ಣನಾದ ಶ್ರೀರಾಮ

ಗುಹೇನ ಸಾರ್ಧಂ ಭರತ ಸ್ಸಮಾಗತೋ
ಮಹಾನುಭಾವ ಸ್ಸಜನ ಸ್ಸಮಾಹಿತಃ ॥
ಸುದುರ್ಮನಾಸ್ತಂ ಭರತಂ ತದಾ ಪುನ
ರ್ಗುಹ ಸ್ಸಮಾಶ್ವಾಸಯ ದಗ್ರಜಂಪ್ರತಿ ॥ ೨೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಾಶೀತಿತಮಸ್ಸರ್ಗಃ.

ಆಗ, ಗುಹಃಪುನಃ - ಗುಹನಾದರೆ, ಅಗ್ರಜಂಪ್ರತಿ - ಶ್ರೀರಾಮನನ್ನು ಕುರಿತು ಸಂತಪಿಸುತ್ತಿರುವ, ತಂಭರತಂ - ಆ ಭರತನನ್ನು, ಸಮಾಶ್ವಾಸಯತ್ - ಸಮಾಧಾನಗೊಳಿಸಿದನು. ॥ ೨೧-೨೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚಾಶೀತಿತಮಸ್ಸರ್ಗಃ.

ನನ್ನು ಕುರಿತು ದುಃಖಿಸುತ್ತಿದ್ದ ಆ ಭರತನನ್ನು, ಮೃದುಮಧುರವಾದ ಮಾತುಗಳಿಂದ ಸಮಾಧಾನಗೊಳಿಸಿದನು. ॥ ೨೧-೨೨ ॥

ಇಂತಿದು ಭರತಕುಮಾರಗದಿತ ಶ್ರೀರಾಮಾನಯನಾರ್ಥಕ ನಿಜಾಗಮನ ವಿಧಾನ
ವಿವರಣವೆಂಬ ಎಂಭತ್ತೈದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಷಡಶೀತಿತಮಸ್ಸರ್ಗಃ.

ಆಚಚಕ್ಷೇಥ ಸದ್ಭಾವಂ ಲಕ್ಷ್ಮಣಸ್ಯ ಮಹಾತ್ಮನಃ ॥ ಭರತಾಯಾಽಪ್ರಮೇಯಾಯ ಗುಹೋ ಗಹನಗೋಚರಃ ॥ ೧ ॥ ತಂ ಜಾಗ್ರತಂ ಗುಣೈರ್ಯುಕ್ತಂ ಶರಚಾಪಾಸಿ ಧಾರಿಣಂ ॥ ಭ್ರಾತೃಗುಪ್ತ್ಯರ್ಥ ಮತ್ಯಂತಮಹಂ ಲಕ್ಷ್ಮಣಮಬ್ರುವಂ ॥ ೨ ॥ ಇಯಂ ತಾತ! ಸುಖಾ ಶಯ್ಯಾ ತ್ವದರ್ಥ

ಅಥ - (೧) ಬಳಿಕ, ವನಗೋಚರಃ - ವನದಲ್ಲಿಸಂಚಾರಮಾಡುವುದರಲ್ಲಿನಿಪುಣನಾದ, ಗುಹಃ- ಗುಹನು, ಮಹಾತ್ಮನಃ - ಮಹಾತ್ಮನಾದ, ಲಕ್ಷ್ಮಣಸ್ಯ - ಲಕ್ಷ್ಮಣನ, ಸದ್ಭಾವಂ - ಜ್ಯೇಷ್ಠಾನುವರ್ತನ ರೂಪ ಸತ್ಸ್ವಭಾವವನ್ನು, ಅಪ್ರಮೇಯಾಯ-ಗಂಭೀರಚಿತ್ತನಾದ, ಭರತಾಯ-ಭರತನಿಗೆ, ಆಚಚಕ್ಷೇ- ಹೇಳಿದನು. ॥ ೧ ॥ ಅಹಂ - ನಾನು, ಭ್ರಾತೃಗುಪ್ತ್ಯರ್ಥಂ - ಅಣ್ಣನಾದ ಶ್ರೀರಾಮನ ಸಂರಕ್ಷಣಾರ್ಥ ವಾಗಿ, ಜಾಗ್ರತಂ - ನಿದ್ದೆಹೋಗದಿರುವ, ಗುಣೈಃ-ಸ್ನೇಹಸೌಶೀಲ್ಯಾದಿ ಗುಣಗಳಿಂದ, (ಗೋ) ಭಕ್ತ್ಯಾದಿ ಗುಣಗಳಿಂದ, ಯುಕ್ತಂ - ಕೂಡಿರುವ, ಶರಚಾಪಾಸಿಧಾರಿಣಂ - ಬಾಣಗಳನ್ನೂ ಬಿಲ್ಲುಗಳನ್ನೂ ಖಡ್ಗ ಗಳನ್ನೂ ಧರಿಸಿರುವ, ತಂಲಕ್ಷ್ಮಣಂ - ಆ ಲಕ್ಷ್ಮಣನನ್ನು ಕುರಿತು, ಅತ್ಯಂತಂ-ಬಹಳವಾಗಿ, ಅಬ್ರುವಂ - ಹೇಳಿದನು. ॥ ೨ ॥ ಹೇ ತಾತ - ಎಲೈ ಅಪ್ಪನೇ, ತ್ವದರ್ಥಂ - ನಿನ್ನ ನಿಮಿತ್ತವಾಗಿ, ಸುಖಾ - ಸುಖ

ಆ ಮೇಲೆ ಅರಣ್ಯದಲ್ಲಿ ಸಂಚಾರಮಾಡುತ್ತಿದ್ದ ಆ ಗುಹನು, ಮಹಾನುಭಾವನಾದ ಲಕ್ಷ್ಮಣನ ಸತ್ಸ್ವಭಾವವನ್ನು ಕುರಿತು, ಭರತನೊಡನೆ ಈ ರೀತಿಯಾಗಿ ಹೇಳಿದನು. "ಅಯ್ಯಾ ಭರತನೆ! ಲಕ್ಷ್ಮಣಸ್ವಾಮಿಯು ಶ್ರೀರಾಮನನ್ನು ಸಂರಕ್ಷಿಸಲೋಸುಗ ಧನುರ್ಧಾರಿಯಾಗಿ ಕಣ್ರೆಪ್ಪೆಯನ್ನು ಕೂಡ ಅಲುಗಿಸದೆ ಎಚ್ಚರಗೊಂಡೇ ಇರುವನು. ಇದು ಮಾತ್ರವಲ್ಲದೆ ಮಹಾ

ಟಿ. (೧) "ಭರತನ ನಿಷ್ಕಲ್ಮಷವಾದ ಅಂತರಂಗವನ್ನು ತಿಳಿದುಕೊಂಡಮೇಲೆ ಬೇಡರೊಡೆಯನಾದ ಆ ಗುಹನು ಆತನಿಗೆ ಜ್ಯೇಷ್ಠಾನುವರ್ತನರೂಪ ಸದ್ಧರ್ಮವನ್ನರುಹಲೋಸುಗ, ಮಹಾಮನಸ್ವಿಯಾದ ಲಕ್ಷ್ಮಣಸ್ವಾಮಿಯು ಬಾಲ್ಯ ದಿಂದಲೂ ಅಣ್ಣನಸೇವೆಯಲ್ಲಿಯೇಇದ್ದುಕೊಂಡು, ಜ್ಯೇಷ್ಠಾನುವರ್ತನವಂಗೈದ ಸದ್ಭಾವವನ್ನರುಹಿದನು" ಎಂಬುದೇ ಇಲ್ಲಿನ ವಿಶೇಷಾರ್ಥ.

ಆದರೆ ಈ ವಿಷಯದಲ್ಲಿ ವಾಚಕರಿಗೆ, "ಭರತನು ಶ್ರೀರಾಮಾನಯನಕ್ಕಾಗಿಯೇ ಬಂದಿದ್ದೇನೆಂದು ಗುಹನೊಡನೆ ಹೇಳಿದರೂ, ಆತನೀರೀತಿಭರತನಿಗೆ ಹಿತೋಪದೇಶವನ್ನುಮಾಡಲು ಕಾರಣವೇನು" ಎಂಬ ಸಂದೇಹವು ತಲೆದೋರದಿರ ಲಾರದು. ಅದಕ್ಕೆಸಮಾಧಾನವೀರೀತಿ:—"ಹಿತೋಪದೇಶವನ್ನು ಮಾಡುವವರೆಲ್ಲ ದೇಶಿಕರೆ! ಅದನ್ನು ಆದರಿಸುವವರೆಲ್ಲರೂ ಶ್ರೋತೃಗಳೆ (ದೇಶಿಕಾವಕ್ತಾರಃ-ಸಾದರಾಶ್ಶ್ರೋತಾರಃ) ಎಂಬ ನ್ಯಾಯವುಂಟು. ಅಲ್ಲದೆ ಭರತನು ಅಣ್ಣನನ್ನು ಕರೆತರುವುದ ಕ್ಕಾಗಿ ಹೊರಟಿದ್ದೇನೆಂದುಹೇಳಿದರೂ, ಕೇವಲ ವನತರುಗಳ ತಾರತಮ್ಯವನ್ನು ಮಾತ್ರತಿಳಿದು, ಭರತನ ಮನೋಭಾವವನ್ನು ತಿಳಿಯದೆ, ಅಪಾರಸೈನ್ಯದಿಂದೊಡಗೂಡಿ ಬಂದಿದ್ದನಾದುದರಿಂದ, ಗುಹನಿಗೆ ಸಂಶಯವಿನ್ನೂ ಇದ್ದುದರಿಂದ ಜ್ಯೇಷ್ಠಾನು ವರ್ತನರೂಪ ಧರ್ಮವನ್ನು, ಅಣ್ಣನಲ್ಲಿ ತನಗಿದ್ದರಹಸ್ಯಭಕ್ತಿಯನ್ನು ಬೇರೊಬ್ಬರಿಗೆ ತಿಳಿಸದಿರುವ ಭರತನಿಗೆ ಹೇಳಿದ ನೆಂಬುದರಿಂದ ಈ ಅರ್ಥವು ಸಮಾಚೀನವಾಗಿಯೇ ಇರುವುದೆಂದು ತಿಳಿಯತಕ್ಕದು.

ಮುಪಕಲ್ಪಿತಾ ॥ ಪ್ರತ್ಯಾಶ್ವಸಿಹಿ ಶೇಷ್ವಸ್ಯಾಂ ಸುಖಂ ರಾಘವನಂದನ ! ॥ ೩ ॥
ಉಚಿತೋಽಯಂ ಜನಸ್ಸರ್ವೋ ದುಃಖಾನಾಂ ತ್ವಂ ಸುಖೋಚಿತಃ ॥ ಧರ್ಮಾ
ತ್ಮಂಸ್ತಸ್ಯ ಗುಪ್ತ್ಯರ್ಥಂ ಜಾಗರಿಷ್ಯಾಮಹೇ ವಯಂ ॥ ೪ ॥ ನಹಿ ರಾಮಾತ್ಪ್ರಿ
ಯತರೋ ಮಮಾಸ್ತಿ ಭುವಿ ಕಶ್ಚನ ॥ ಮೋತ್ಸುಕೋ ಭೂರ್ಬ್ರವೀಮ್ಯೇತ
ದಪ್ಯಸತ್ಯಂ ತವಾಗ್ರತಃ ॥ ೫ ॥ ಅಸ್ಯ ಪ್ರಸಾದಾ ದಾಶಂಸೇ ಲೋಕೇಸ್ಮಿ

ಕರವಾದ, ಇಯಂಶಯ್ಯಾ - ಈ ಹಾಸಿಗೆಯು, ಉಪಕಲ್ಪಿತಾ - ನಿರ್ಮಿಸಲ್ಪಟ್ಟಿರುವುದು, ಹೇ ರಾಘವ ನಂಧನ - ಎಲೈ ದಶರಥರಾಜಕುಮಾರನೆ, ಅಸ್ಯಾಂ - ಈ ಹಾಸಿಗೆಯಲ್ಲಿ, ಸುಖಂ-ಸುಖವಾಗಿ, ಶೇಷ್ವ-ಮಲಗು, ಪ್ರತ್ಯಾಶ್ವಸಿಹಿ - ಸಮಾಧಾನವನ್ನು ಹೊಂದು. ॥ ೩ ॥ ಸರ್ವಃ - ಸಮಸ್ತವಾದ, ಅಯಂಜನಃ- ಈ ಜನವು, ದುಃಖಾನಾಂ - ದುಃಖಗಳಿಗೆ, ಉಚಿತಃ - ಯೋಗ್ಯವಾದದ್ದು, ತ್ವಂ-ನೀನು, ಸುಖೋಚಿತಃ-ಸುಖಕ್ಕೇ ಅರ್ಹನು, ಹೇ ಧರ್ಮಾತ್ಮನ್ - ಎಲೈ ಧರ್ಮಿಷ್ಠನೇ, ತಸ್ಯ - ಆ ಶ್ರೀರಾಮನ, ಗುಪ್ತ್ಯರ್ಥಂ - ರಕ್ಷಣಾರ್ಥವಾಗಿ, ವಯಂ - ನಾವು, ಜಾಗರಿಷ್ಯಾಮಹೇ - ಎಚ್ಚರದಿಂದಿರುತ್ತೇವೆ. ॥ ೪ ॥ ಹಿ-ಯಾವ ಕಾರಣ, ಮಮ - ನನಗೆ, ಭುವಿ - ಈ ಲೋಕದಲ್ಲಿ, ರಾಮಾತ್-ಶ್ರೀರಾಮನಿಗಿಂತಲೂ, ಪ್ರಿಯತರಃ - ಬಹಳ ಇಷ್ಟನಾದವನು, ಕಶ್ಚನ - ಒಬ್ಬನೂ, ನಾಸ್ತಿ - ಇಲ್ಲವೋ, ತಸ್ಮಾತ್ - ಆಕಾರಣ, ಉತ್ಸುಕಃ-ರಾಮಸಂರಕ್ಷಣವಿಷಯದಲ್ಲಿ ಉತ್ಕಂಠೆಯುಳ್ಳವನು, ಮಾಭೂಃ - ಆಗಬೇಡ, ಏತತ್-ಇದನ್ನು ಕುರಿತು, ತವ - ನಿನ್ನ, ಅಗ್ರತಃ - ಮುಂಗಡೆ, ಅಸತ್ಯಂ - ಸುಳ್ಳುಮಾತನ್ನು, ಬ್ರವೀಮ್ಯಪಿ - ಹೇಳುತ್ತೇನೆಯೆ. ॥ ೫ ॥ ಅಸ್ಯ - ಈ ಶ್ರೀರಾಮನ, ಪ್ರಸಾದಾತ್ - ಅನುಗ್ರಹದಿಂದ, ಅಸ್ಮಿನ್ಲೋಕೇ - ಈ ಭೂಲೋಕದಲ್ಲಿ, ಸುಮಹತ್ - ಬಹಳವಾದ, ಯಶಃ - ಕೀರ್ತಿಯನ್ನು, ಧರ್ಮಾವಾಪ್ತಿಂಚ-ಧರ್ಮಪ್ರಾಪ್ತಿಯನ್ನು, ವಿಪುಲಾಂ - ವಿಸ್ತಾರವಾದ, ಕೇವಲಾಂ - ಉತ್ಕೃಷ್ಟವಾದ, ಅರ್ಥಾವಾಪ್ತಿಂ - ಸ್ವರ್ಗಾದಿ ಪುರುಷಾರ್ಥ

ಜಾಗರೂಕತೆಯಿಂದ ಸಂಚರಿಸುತ್ತಲೂ ಇರುವನು. ಹಾಗಿದ್ದುದನ್ನು ನಾನು ಪ್ರತ್ಯಕ್ಷವಾಗಿ ನೋಡಿದುದು ಮಾತ್ರವಲ್ಲದೆ, ಆತನು ಶ್ರೀರಾಮನಲ್ಲಿ ಅಧಿಕವಾದ ವಿಶ್ವಾಸವನ್ನೊಳಗೊಂಡಿರುವನೆಂದು ತಿಳಿದು ಆತನೊಡನೆ, “ ರಘುಕುಲ ನಂದನನಾದ ಲಕ್ಷ್ಮಣನೆ! ವತ್ಸ ! ಸುಖಕರವಾದ ಈ ಶಯ್ಯೆಯು ನಿನಗಾಗಿ ಅಣಿಮಾಡಲಾಗಿದೆ. ಆದುದರಿಂದ ನೀನು ಸ್ವಲ್ಪಹೊತ್ತು ನಿದ್ರಿಸುವವನಾಗು. ಈ ಹಾಸಿಗೆಯಮೇಲೆ ಸ್ವಲ್ಪಹೊತ್ತು ಸುಖವಾಗಿ ವಿಶ್ರಮಿಸಿಕೊ. ಎಲೈ ಧರ್ಮಾತ್ಮನಾದ ಲಕ್ಷ್ಮಣನೆ ! ನಾವೆಲ್ಲರೂ, ದುಃಖಿತರಾದವರೇ ಆಗಿದ್ದೇವೆ. ಆದರೆ ನಾವು ಯಾವಾಗಲೂ ಕಷ್ಟಪಡಲು ತಕ್ಕವರು ನೀನು ಮಾತ್ರ, ಸುಖವನ್ನನುಭವಿಸಲು, ಅರ್ಹನಾಗಿದ್ದೀಯೆ. ಆದುದರಿಂದ ಸ್ವಲ್ಪಹೊತ್ತು ನಿದ್ರಿಸುವವನಾಗು. ಶ್ರೀರಾಮನನ್ನು ಸಂರಕ್ಷಿಸಲು ನಾವೆಲ್ಲರೂ ಮಹಾ ಜಾಗರೂಕತೆಯಿಂದ, ಸ್ವಲ್ಪವೂ ನಿದ್ರಿಸದೆ ಎಚ್ಚರದಿಂದಿರುತ್ತೇವೆ. ಆದುದರಿಂದ ಶ್ರೀರಾಮನನ್ನು ರಕ್ಷಿಸಲು ನೀನು ಎಚ್ಚರಗೊಂಡಿರಬೇಕಾಗಿರುವುದಿಲ್ಲ. ಸತ್ಯವಾಗಿಯೂ ಹೇಳುತ್ತಿದ್ದೇನೆಂದು ತಿಳಿ. ನಾನು ಶ್ರೀರಾಮನ ದಯೆಯಿಂದ, ಈ ಭೂಲೋಕದಲ್ಲಿ, ಮಹೋನ್ನತವಾದ ಕೀರ್ತಿಯನ್ನೂ, ಸರ್ವಶ್ರೇಷ್ಠವಾದ ಧರ್ಮಪ್ರಾಪ್ತಿಯನ್ನೂ, ನ್ಯಾಯದಿಂದ ಆರ್ಜಿಸಿದ ಧನವನ್ನೂ ಹೊಂದ

ಸುಮಹದ್ಯಶಃ ॥ ಧರ್ಮಾವಾಪ್ತಿಂಚ ವಿಪುಲಾಮರ್ಥಾವಾಪ್ತಿಂಚ ಕೇವಲಾಂ ॥ ೬ ॥ ಸೋಹಂ ಪ್ರಿಯಸಖಂ ರಾಮಂ ಶಯಾನಂ ಸಹಸೀತಯಾ ॥ ರಕ್ಷಿಷ್ಯಾಮಿ ಧನುಷ್ಪಾಣಿ ಸ್ಸರ್ವೈ ಸ್ಸ್ವೈರ್ಜ್ಞಾತಿಭಿಸ್ಸಹ ॥೭॥ ನಹಿಮೇಽವಿದಿತಂ ಕಿಂಚಿದ್ವನೇಽಸ್ಮಿಂ ಚರತ ಸ್ಸದಾ ॥ ಚತುರಂಗಂಹ್ಯಪಿ ಬಲಂ ಪ್ರಸಹೇಮ ವಯಂ ಯುಧಿ ॥ ೮ ॥ ಏವಮಸ್ಮಾಭಿರುಕ್ತೇನ ಲಕ್ಷ್ಮಣೇನ ಮಹಾತ್ಮನಾ ॥ ಅನುನೀತಾ ವಯಂ ಸರ್ವೇ ಧರ್ಮಮೇವಾಽನುಪಶ್ಯತಾ ॥ ೯ ॥ ಕಥಂ ದಾಶರಥೌ ಭೂಮೌ ಶಯಾನೇ ಸಹಸೀತಯಾ ॥ ಶಕ್ಯಾ ನಿದ್ರಾಮಯಾ ಲಬ್ಧುಂ ಜೀವಿತಂವಾ ಸುಖಾನಿವಾ ॥ ೧೦ ॥ ಯೋ ಸದೇವಾಸುರೈ ಸ್ಸರ್ವೈಶ್ಶಕ್ಯಃ ಪ್ರಸಹಿತುಂ

ಪ್ರಾಪ್ತಿಯನ್ನು, ಆಶಂಸೇ - ಕೋರುತ್ತೇನೆ. ॥ ೬ ॥ ಸೋಹಂ - ಅಂತಹ ನಾನು, ಧನುಷ್ಪಾಣಿಃ-ಧನುರ್ಧಾರಿಯಾಗಿ, ಸರ್ವೈಃ - ಸಮಸ್ತರಾದ, ಸ್ವೈಃ - ಸ್ವಕೀಯರಾದ, ಜ್ಞಾತಿಭಿಸ್ಸಹ - ಜ್ಞಾತಿಗಳೊಡನೆ, ಸೀತಯಾಸಹ - ಸೀತಾದೇವಿಯೊಡನೆ, ಶಯಾನಂ - ಮಲಗಿರುವ, ಪ್ರಿಯಸಖಂ - ಪ್ರಿಯಸ್ನೇಹಿತನಾದ, ರಾಮಂ - ಶ್ರೀರಾಮನನ್ನು, ರಕ್ಷಿಷ್ಯಾಮಿ - ಸಂರಕ್ಷಣೆಮಾಡುತ್ತೇನೆ. ॥ ೭ ॥ ಅಸ್ಮಿನ್ವನೇ - ಈ ವನದಲ್ಲಿ, ಸದಾ - ನಿರಂತರವು, ಚರತಃ - ಸಂಚರಿಸುತ್ತಿರುವ, ಮೇ - ನನಗೆ, ಕಿಂಚಿತ್ - ಸ್ವಲ್ಪವಾದರೂ, ಅವಿದಿತಂ - ತಿಳಿಯದಿರುವದು, ನಹಿ-ಇಲ್ಲವಷ್ಟೆ, ವಯಂ - ನಾವು, ಯುಧಿ-ಕಾಳೆಗದಲ್ಲಿ, ಚತುರಂಗಂ - ರಥ ಆನೆ ಕುದುರೆ ಕಾಲಾಳುಗಳೆಂಬ ನಾಲ್ಕು ಅಂಗಗಳುಳ್ಳ, ಬಲಮಪಿ-ಸೈನ್ಯವನ್ನಾದರೂ, ಪ್ರಸಹೇಮ, ಸಹಿಸುತ್ತೇವೆ. ॥ ೮ ॥ ಏವಂ - ಈಪರಿಯಾಗಿ, ಅಸ್ಮಾಭಿಃ - ನಮ್ಮಿಂದ, ಉಕ್ತೇನ-ಹೇಳಲ್ಪಟ್ಟ, ಮಹಾಮನಾಃ - ಉದಾರಮನಸ್ಕನಾದ, ಲಕ್ಷ್ಮಣೇನ - ಲಕ್ಷ್ಮಣನಿಂದ, ಧರ್ಮಮೇವ - ಧರ್ಮವನ್ನೇ, ಅನುಪಶ್ಯತಾ - ಅನುಸರಿಸಿರುವನಾದಕಾರಣ, ಸರ್ವೇ - ಸಮಸ್ತರಾದ, ವಯಂ - ನಾವು, ಅನುನೀತಾಃ - ಸಮಾಧಾನಗೊಳಿಸಲಾದೆವಷ್ಟೆ. ॥ ೯ ॥ ದಾಶರಥೌ - ಶ್ರೀರಾಮನು, ಭೂಮೌ - ನೆಲದಲ್ಲಿ, ಸೀತಯಾಸಹ - ಸೀತಾದೇವಿಯೊಡನೆ, ಶಯಾನೇ - ಮಲಗಿರಲು, ಮಯಾ - ನನ್ನಿಂದ, ನಿದ್ರಾ - ನಿದ್ದೆಯು, ಲಬ್ಧುಂ - ಹೊಂದಲು, ಕಥಂಶಕ್ಯಾ-ಹೇಗೆತಾನೆ ಆದೀತು, ಜೀವಿತಂವಾ-ಬದುಕುವಿಕೆಯನ್ನು, ಲಬ್ಧುಂ-ಹೊಂದುವದಕ್ಕೆ, ಸುಖಾನಿವಾ - ಸುಖಗಳನ್ನೇ ಆಗಲಿ, ಲಬ್ಧುಂ-ಹೊಂದುವದಕ್ಕಾದರೂ, ಕಥಂಶಕ್ಯಂ-ಹೇಗೆಸಾಧ್ಯವಾದೀತು. ॥ ೧೦ ॥ ಯಃ - ಯಾವ ಪುರುಷನು, ಯುಧಿ - ಕಾಳೆಗದಲ್ಲಿ, ಸರ್ವೈಃ-ಸಮಸ್ತ

ಬೇಕೆಂದು ಕೋರಿದ್ದೇನೆ. ಅಲ್ಲದೆ ಅಂತಹ ನಾನು ಧನಸ್ಸನ್ನು ಕೈಯಲ್ಲಿ ಹಿಡಿದು ನನ್ನ ಬಂಧುಗಳೆಲ್ಲರೊಡಗೂಡಿ, ಸೀತಾದೇವಿಯೊಡನೆ ಮಲಗಿರುವ, ನನ್ನ ಪರಮ ಮಿತ್ರನಾದ ಶ್ರೀರಾಮಮೂರ್ತಿಯನ್ನು ರಕ್ಷಿಸುತ್ತೇನೆ. ನಾನು ಈ ಅರಣ್ಯದಲ್ಲಿ ಯಾವಾಗಲೂ ಸಂಚರಿಸುವವನು. ಆದುದರಿಂದ ನನಗೀಸ್ಥಳದಲ್ಲಿ ತಿಳಿಯದಿರುವ ವಿಷಯವು ಯಾವುದೂ ಇರುವುದಿಲ್ಲ. ನಾವೀ ಅರಣ್ಯದಲ್ಲಿ ಚತುರಂಗ ಬಲದಿಂದೊಡಗೂಡಿದ "ಸೈನ್ಯವನ್ನಾದರೂ ಜಯಿಸ ಬಲ್ಲೆನು." ಎಂದು ಹೇಳಿದನು. ॥ ೧-೮ ॥ ಎಲೈ ಭರತ ಕುಮಾರನೆ ! ಈ ರೀತಿಯಾಗಿ ನಾವೆಲ್ಲರೂ ಹೇಳಿದ ಮಾತುಗಳನ್ನು ಕೇಳಿದ, ಮಹಾನುಭಾವನೂ, ಧರ್ಮದಲ್ಲಿಯೇ ದೃಷ್ಟಿಯುಳ್ಳವನೂ ಆದ ಲಕ್ಷ್ಮಣನು, ಪುನಃ ನಮ್ಮೆಲ್ಲರನ್ನೂ ಕುರಿತು ಹೀಗೆ ಹೇಳಿದನು. "ಎಲೈ ಕಿರಾತ ರಾಜ

ಯುಧಿ ‖ ತಂಪಶ್ಯಗುಹ! ಸಂವಿಷ್ಟಂ ತೃಣೇಷು ಸಹಸೀತಯಾ ‖ ೧೧ ‖
ಮಹತಾ ತಪಸಾ ಲಬ್ಧೋ ವಿವಿಧೈಶ್ಚ ಪರಿಶ್ರಮೈಃ ‖ ಏಕೋ ದಶರಥಸ್ಯೈಷ
ಪುತ್ರ ಸ್ಸದೃಶ ಲಕ್ಷಣಃ ‖ ೧೨ ‖ ಅಸ್ಮಿನ್ ಪ್ರವ್ರಜಿತೇ ರಾಜಾನಚಿರಂವರ್ತ
ಯಿಷ್ಯತಿ ‖ ವಿಧವಾ ಮೇದಿನೀ ನೂನಂ ಕ್ಷಿಪ್ರಮೇವ ಭವಿಷ್ಯತಿ ‖ ೧೩ ‖
ವಿನದ್ಯ ಸುಮಹಾ ನಾದಂ ಶ್ರಮೇಣೋಪರತಾ ಸ್ಸ್ತ್ರಿಯಃ ‖ ನಿರ್ಘೋಷೋ

ದೇವಾಸುರೈಃ - ದೇವತೆಗಳಿಂದಲೂ ರಾಕ್ಷಸರಿಂದಲೂ, ಪ್ರಸಹಿತುಂ - ಸಹಿಸಲು, ನಶಕ್ಯಃ - ಸಾಧ್ಯನ ಲ್ಲವೋ, ಹೇ ಗುಹ - ಎಲೈ ಗುಹನೇ, ತಂ - ಅಂತಹ ಪುರುಷನನ್ನು, ಸೀತಯಾಸಹ - ಸೀತಾದೇವಿಯೊ ಡನೆ, ತೃಣೇಷು - ಹುಲ್ಲಿನಹಾಸಿಗೆಯಲ್ಲಿ, ಸಂವಿಷ್ಟಂ - ನಿದ್ರಿಸಿರುವುದನ್ನು, ಪಶ್ಯ - ನೋಡು. ‖ ೧೧ ‖ ಮಹತಾ - ದೊಡ್ಡದಾದ, ತಪಸಾ - ತಪಸ್ಸಿನಿಂದ, ವಿವಿಧೈಃ - ನಾನಾಬಗೆಗಳಾದ, ಪರಿಶ್ರಮೈಃ-ಯಜ್ಞಾ ದಿಗಳನ್ನುಮಾಡುವುದರಿಂದ ಜನಿಸಿದ ಆಯಾಸಗಳಿಂದ, ದಶರಥಸ್ಯ-ದಶರಥರಾಯನಿಗೆ, ಸದೃಶಲಕ್ಷಣಃ- ಸಮಾನವಾದ ಲಕ್ಷಣಗಳುಳ್ಳ, ಏಕಃ - ಒಬ್ಬನಾದ, ಏಷಪುತ್ರಃ - ಈ ಮಗನು, ಲಬ್ಧಃ - ಹೊಂದಲ್ಪ ಟ್ಟನು. ‖ ೧೨ ‖ ಅಸ್ಮಿನ್ - ಈ ಶ್ರೀರಾಮನು, ಪ್ರವ್ರಜಿತೇ - ಹೊರಡಿಸಲ್ಪಡಲು, ರಾಜಾ-ಅರಸು, ಚಿರಂ- ಬಹಳಕಾಲ, ನವರ್ತಯಿಷ್ಯತಿ - ಇರಲಾರನು, ಮೇದಿನೀ - ಭೂಮಿಯು, ಕ್ಷಿಪ್ರಮೇವ - ಜಾಗ್ರತೆಯಾ ಗಿಯೇ, ವಿಧವಾ - ಪತಿಹೀನಳಾದವಳು, ಭವಿಷ್ಯತಿ - ಆಗುತ್ತಾಳೆ, ನೂನಂ - ನಿಶ್ಚಯವು. ‖ ೧೩ ‖ ಹೇ ತಾತ - ಎಲೈ ವತ್ಸನೇ, ಸ್ತ್ರಿಯಃ - ಹೆಂಗಳು, ಸುಮಹಾನಾದಂ-ಬಹಳ ಧ್ವನಿಯುಳ್ಳಂತೆ, ವಿನದ್ಯ- ಕೂಗಿ, ಶ್ರಮೇಣ - ಬಳಲಿಕೆಯಿಂದ, ಉಪರತಾಃ - ಸುಮ್ಮನಾಗುತ್ತಾರೆ, ರಾಜನಿವೇಶನಂ - ಅರಮ ನೆಯು, ನಿರ್ಘೋಷೋಪರತಂ - ರೋದನಧ್ವನಿಯಿಂದ ವಿರಾಮವನ್ನು ಹೊಂದಿದೆ, ಇತಿ - ಇಂತೆಂದು, ಮನ್ಯೇ - ತಿಳಿಯುತ್ತೇನೆ. ‖ ೧೪ ‖ ಕೌಸಲ್ಯಾಚೈವ - ಕೌಸಲ್ಯಾದೇವಿಯೂ, ರಾಜಾಚ - ದಶರಥ

ನಾದ ಗುಹನೆ! ದಶರಥರಾಜ ನಂದನನಾದ ಶ್ರೀರಾಮನು, ಸೀತಾದೇವಿಯೊಡಗೂಡಿ ಭೂ ಶಾಯಿಯಾಗಿರುವಾಗ ನಾನು ಸುಖವಾಗಿ ನಿದ್ರಿಸುವುದೆಂತು? ನಾನು ಪ್ರಾಣಗಳನ್ನು ತಾನೆ ಹೇಗೆ ಧರಿಸಿಕೊಂಡಿರಲಿ? ನನಗೆ ಸುಖವುಂಟಾಗುವುದು ಹೇಗೆ? ಯುದ್ಧದಲ್ಲಿ ದೇವದಾನ ವರನ್ನೂ ಸಹ ಜಯಿಸುವಂತಹ ಸಾಮರ್ಥ್ಯವುಳ್ಳವನೂ, ಮಹಾನುಭಾವನೂ ಆದ ಶ್ರೀ ರಾಮನು, ಹಸುರುಹುಲ್ಲುಳ್ಳ ನೆಲದಮೇಲೆ, ಸೀತಾದೇವಿಯೊಡನೆ ಮಲಗಿಕೊಂಡಿರುವನಲ್ಲ! ದಶರಥಮಹಾರಾಜನು ಬಹು ವಿಧಗಳಿಂದ ಶ್ರಮಗಳನ್ನುಪಟ್ಟು ಅಧಿಕವಾದ ತಪವಂಗೈದು ತನಗೆ ಸಮಾನವಾದ ಲಕ್ಷಣಗಳುಳ್ಳ ಈ ಮಗನನ್ನು ಹೊಂದಿದನು. ಈ ಶ್ರೀರಾಮನು ಸಕಲ ಸದ್ಗುಣಗಳನ್ನೊಳಗೊಂಡಿರುವಾತನೂ, ಅಲ್ಲದೆ ನನ್ನ ತಂದೆಯಾದ ದಶರಥರಾಯನಿಗೆ ಈತನು ಬಹು ಮುಖ್ಯನಾದವನು. ಈ ಪ್ರಿಯಪುತ್ರನಿಗೆ ಅರಣ್ಯವಾಸವು ಸಂಭವಿಸಿದುದ ರಿಂದ ಆ ರಾಜನು, ಬಹಳವಾದ ದುಃಖವನ್ನು ಹೊಂದಿರುವನು. ಆದುದರಿಂದ ಆತನೀಪುತ್ರ ವಿಯೋಗ ದುಃಖವನ್ನು ಸಹಿಸಲಾರದೆ ಮರಣವನ್ನು ಹೊಂದುತ್ತಾನೆ. ಆದುದರಿಂದೀ ಭೂಮಿಯು ಇತಃಪರ ನಾಥನಿಲ್ಲದುದಾಗುತ್ತದೆ. ‖ ೯-೧೩ ‖ ಎಲೈ ಗುಹನೆ! ನಮ್ಮಣ್ಣ ನಾದ ಶ್ರೀರಾಮನು ಪಟ್ಟಣದಿಂದ ಅರಣ್ಯವನ್ನು ಕುರಿತು ಹೊರಟಾಗ, ಅಯೋಧ್ಯಾಪಟ್ಟಣದ

ಪರತಂ ತಾತ! ಮನ್ಯೇ ರಾಜನಿವೇಶನಂ ॥ ೧೪ ॥ ಕೌಸಲ್ಯಾಚೈವ ರಾಜಾಚ ತಥೈವ ಜನನೀ ಮಮ ॥ ನಾಶಂಸೇ ಯದಿ ಜೀವೇಯು ಸ್ಸರ್ವೇತೇ ರಜನೀ ಮಿಮಾಂ ॥ ೧೫ ॥ ಜೀವೇದಪಿಚ ಮೇ ಮಾತಾ ಶತ್ರುಘ್ನಸ್ಯಾಽನ್ವವೇಕ್ಷಯಾ ॥ ದುಃಖಿತಾ ಯಾತು ಕೌಸಲ್ಯಾ ವೀರಸೂ ರ್ವಿನಶಿಷ್ಯತಿ ॥ ೧೬ ॥ ಅತಿಕ್ರಾಂತ ಮತಿಕ್ರಾಂತ ಮನವಾಪ್ಯ ಮನೋರಥಂ ॥ ರಾಜ್ಯೇ ರಾಮಮನಿಕ್ಷಿಪ್ಯ ಪಿತಾ ಮೇ ವಿನಶಿಷ್ಯತಿ ॥ ೧೭ ॥ ಸಿದ್ಧಾರ್ಥಾಃ ಪಿತರಂ ವೃತ್ತಂ ತಸ್ಮಿನ್ ಕಾಲೇಹ್ಯುಪಸ್ಥಿತೇ ॥ ಪ್ರೇತಕಾರ್ಯೇಷು ಸರ್ವೇಷು ಸಂಸ್ಕರಿಷ್ಯಂತಿ ಭೂಮಿಪಂ ॥ ೧೮ ॥

ರಾಯನೂ, ತಥೈವ - ಹಾಗೆಯೆ, ಮಮ - ನನ್ನ, ಜನನೀ - ತಾಯಿಯೂ, ತೇಸರ್ವೇ - ಅವರೆಲ್ಲರೂ, ಜೀವೇಯುರಿತಿ-ಬದುಕಿರುವರೆಂದು, ನಾಶಂಸೇ-ಹೇಳಲಾರೆನು, ಯದಿಜೀವೇಯುಃ-ಒಂದುವೇಳೆ ಬದುಕಿದ್ದರೆ, ಇಮಾಂರಜನೀಮೇವ - ಈ ರಾತ್ರಿಯಲ್ಲೇ. ॥ ೧೫ ॥ ಮೇ - ನನ್ನ, ಮಾತಾ - ತಾಯಿಯು, ಶತ್ರುಘ್ನಸ್ಯ - ಶತ್ರುಘ್ನನ, ಅನ್ವವೇಕ್ಷಯಾ - ಅನುಸರಣೆಯ ಅಪೇಕ್ಷೆಯಿಂದ, ಜೀವೇದಪಿ - ಬದುಕಿಯಾಳು, ವೀರಸೂಃ - ವೀರನಾದ ಶ್ರೀರಾಮನನ್ನು ಹಡೆದ, ಕೌಸಲ್ಯಾ - ಕೌಸಲ್ಯಾದೇವಿಯು, ಯಾ - ಯಾವಳೋ, ಸಾ - ಆ ಕೌಸಲ್ಯಾದೇವಿಯು, ದುಃಖಿತಾ-ದುಃಖಗೊಂಡವಳಾಗಿ, ವಿನಶಿಷ್ಯತಿ-ನಶಿಸುವಳು. ॥ ೧೬ ॥ ಅತಿಕ್ರಾಂತಮತಿಕ್ರಾಂತಂ - ಆದುದುಆಗಿಯೇಹೋಯಿತು, ಮನೋರಥಂ - ಮನೋರಥವನ್ನು, ಅನವಾಪ್ಯ - ಹೊಂದದೆ, ರಾಜ್ಯೇ - ರಾಜ್ಯದಲ್ಲಿ, ರಾಮಂ - ಶ್ರೀರಾಮನನ್ನು, ಅನಿಕ್ಷಿಪ್ಯ - ಪಟ್ಟಾಭಿಷೇಕಮಾಡದೆ, ಮೇ - ನನ್ನ, ಪಿತಾ - ತಂದೆಯು, ವಿನಶಿಷ್ಯತಿ - ನಶಿಸಿಹೋಗುವನು. ॥ ೧೭ ॥ ಸರ್ವೇಷು - ಸಮಸ್ತವಾದ, ಪ್ರೇತಕಾರ್ಯೇಷು - ಪ್ರೇತಕಾರ್ಯಗಳವಿಷಯವಾಗಿ, ತಸ್ಮಿನ್ಕಾಲೇ - ಆ ಕಾಲವು, ಉಪಸ್ಥಿತೇ - ಪ್ರಾಪ್ತವಾಗಲು, ವೃತ್ತಂ - ಮರಣವೊಂದಿದ, ಭೂಮಿಪಂ - ಅರಸನಾದ, ಪಿತರಂ - ತಂದೆಯನ್ನು, ಸಿದ್ಧಾರ್ಥಾಃ - ಪುಣ್ಯಮಾಡಿದವರು, ಸಂಸ್ಕರಿಷ್ಯಂತಿ - ಸಂಸ್ಕಾರಮಾಡುತ್ತಾರೆ. ॥ ೧೮ ॥ ರಮ್ಯಚತ್ವರಸಂಸ್ಥಾನಾಂ - ಮನೋಹರವಾದ ವನಗಳೂ ಆಸ್ಥಾನಗಳೂವುಳ್ಳ ಸುವಿ

ಹೆಂಗಸರೆಲ್ಲರೂ, ಅತಿ ದೈನ್ಯವಾಗಿ ಕೂಗಿಕೊಂಡು ಆಯಾಸಗೊಂಡು, ರೋದಿಸಲು ಕೈಲಾಗದೆ ವಿರಾಮವನ್ನು ಹೊಂದಿದರು. ಆಗ ರಾಜಗೃಹದಲ್ಲಿ ಧ್ವನಿಯಿಲ್ಲದಿದ್ದುದರಿಂದಲೇ ಹಾಳುಬಿದ್ದಂತಿದ್ದಿತು. ಈ ರಾತ್ರಿಯಲ್ಲಿ ಶ್ರೀರಾಮಜನನಿಯಾದ ಕೌಸಲ್ಯೆಯೂ, ನಮ್ಮ ತಂದೆಯಾದ ದಶರಥರಾಯನೂ, ನನ್ನ ತಾಯಿಯಾದ ಸುಮಿತ್ರಾದೇವಿಯೂ ಜೀವಿಸಲಾರರೆಂದೂಹಿಸುತ್ತೇನೆ! ಒಂದುವೇಳೆ ಬದುಕಿದರೆ, ಶತ್ರುಘ್ನನ ಮೇಲಣ ಪ್ರೇಮೆಯಿಂದ ನನ್ನ ತಾಯಿಯಾದ ಸುಮಿತ್ರೆಯು ಬದುಕಿಯಾಳು. ವೀರಮಾತೆಯಾದ ಕೌಸಲ್ಯಾದೇವಿಯು, ಏಕಮಾತ್ರ ಪುತ್ರವತಿಯಾದುದರಿಂದ, ಈ ದುಃಖವನ್ನು ಸಹಿಸಲಾರದೆ ನಿಶ್ಚಯವಾಗಿಯೂ ಮರಣವನ್ನು ಹೊಂದಿಯೇ ಹೊಂದುವಳು. ಈಗ ಏನನ್ನುತಾನೆ ಮಾಡಲಾದೀತು. ॥ ೧೪-೧೬ ॥ ಎಲೈ ಗುಹನೆ! ಈಗ ಅತಿಕ್ರಮಿಸಿಹೋದುದೆಲ್ಲವೂ ಅತಿಕ್ರಮಿಸಿಹೋದುವು. ಆದುದರಿಂದ ಎಲ್ಲ ಕೆಲಸಗಳೂ ನಿರರ್ಥಕಗಳಾಗಿ ಹೋದುವು. ಎಲ್ಲವೂ ವ್ಯರ್ಥವಾಗಿ ಹೋಯಿತು. ನನ್ನ ತಂದೆಯಾದ ದಶರಥಮಹೀಪಾಲನು, ಶ್ರೀರಾಮನಿಗೆ ಸಲ್ಲುವ ರಾಜ್ಯಪಟ್ಟಾಭಿಷೇಕವನ್ನು ಮಾಡಿ,

ರಮ್ಯಚತ್ವರ ಸಂಸ್ಥಾನಾಂ ಸುವಿಭಕ್ತ ಮಹಾಪಥಾಂ ॥ ಹರ್ಮ್ಯಪ್ರಾಸಾದ ಸಂಪನ್ನಾಂ ಸರ್ವರತ್ನ ವಿಭೂಷಿತಾಂ ॥ ೧೯ ॥ ಗಜಾಶ್ವ ರಥಸಂಬಾಧಾಂ ತೂರ್ಯನಾದ ವಿನಾದಿತಾಂ ॥ ಸರ್ವಕಲ್ಯಾಣ ಸಂಪೂರ್ಣಾಂ ಹೃಷ್ಟಪುಷ್ಟ ಜನಾಕುಲಾಂ ॥ ೨೦ ॥ ಆರಾಮೋದ್ಯಾನ ಸಂಪೂರ್ಣಾಂ ಸಮಾಜೋತ್ಸವ ಶಾಲಿನೀಂ ॥ ಸುಖಿತಾ ವಿಚರಿಷ್ಯಂತಿ ರಾಜಧಾನೀಂ ಪಿತುರ್ಮಮ ॥ ೨೧ ॥ ಅಪಿ ಸತ್ಯಪ್ರತಿಜ್ಞೇನ ಸಾರ್ಧಂ ಕುಶಲಿನಾ ವಯಂ ॥ ನಿವೃತ್ತೇ ಸಮಯೇ ಹ್ಯಸ್ಮಿನ್ ಸುಖಿತಾಃ ಪ್ರವಿಶೇಮಹಿ ॥ ೨೨ ॥ ಪರಿದೇವಯಮಾನಸ್ಯ ತಸ್ಯೈವಂ

ಭಕ್ತಮಹಾಪಥಾಂ, ಸುವಿಭಕ್ತ - ವಿಂಗಡಿಸಿದ, ಮಹಾಪಥಾಂ - ರಾಜವೀಧಿಗಳುಳ್ಳ, ಹರ್ಮ್ಯಪ್ರಾಸಾದ ಸಂಪನ್ನಾಂ - ಧನಿಕರಮನೆಗಳಿಂದಲೂ ರಾಜಗೃಹಗಳಿಂದಲೂ ಕೂಡಿದ, ಸರ್ವರತ್ನವಿಭೂಷಿತಾಂ - ಸಮಸ್ತ ರತ್ನಶ್ರೇಷ್ಠಗಳಿಂದಲಂಕೃತವಾದ, ಗಜಾಶ್ವರಥಸಂಬಾಧಾಂ - ಆನೆಗಳಿಂದಲೂ ಕುದುರೆಗಳಿಂದಲೂ ರಥಗಳಿಂದಲೂ ತುಂಬಿರುವ, ತೂರ್ಯನಾದವಿನಾದಿತಾಂ - ತುತ್ತೂರಿಯ ಧ್ವನಿಗಳಿಂದ ಧ್ವನಿಗೊಳಿಸುತ್ತಿರುವ, ಸರ್ವಕಲ್ಯಾಣಸಂಪೂರ್ಣಾಂ - ಸಮಸ್ತ ಮಂಗಳವಾದ್ಯಗಳಿಂದ ತುಂಬಿರುವ, ಹೃಷ್ಟಪುಷ್ಟಜನಾಕುಲಾಂ - ಹರ್ಷಯುಕ್ತರಾದ ಅನ್ನಪಾನಾದಿಗಳಿಂದಕೊಬ್ಬಿರುವ ಜನರಿಂದ ವ್ಯಾಪ್ತವಾದ, ಆರಾಮೋದ್ಯಾನಸಂಪೂರ್ಣಾಂ - ಪೂದೋಟಗಳಿಂದಲೂ ವಿಲಾಸವನಗಳಿಂದಲೂ ತುಂಬಿರುವ, ಸಮಾಜೋತ್ಸವಶಾಲಿನೀಂ - ಸಭೆಗಳ ಸಂತೋಷಗಳಿಂದ ಒಪ್ಪುತ್ತಿರುವ, ಮಮ - ನನ್ನ, ಪಿತುಃ - ತಂದೆಯ, ರಾಜಧಾನೀಂ - ಪ್ರಧಾನನಗರವಾದ ಅಯೋಧ್ಯಾಪಟ್ಟಣವಲ್ಲಿ, ಸುಖಿತಾಃ - ಸುಖವುಳ್ಳವರಾಗಿ, ವಿಚರಿಷ್ಯಂತಿ - ಸಂಚರಿಸುತ್ತಾರೆ. ॥ ೨೧ ॥ ವಯಮಪಿ - ನಾವೂ, ಅಸ್ಮಿನ್ಸಮಯೇ - ಈ ನಿಬಂಧನಕಾಲವು, ನಿವೃತ್ತೇ - ಕಳೆಯಮೋಗಲು, ಕುಶಲಿನಾ - ಕ್ಷೇಮವಂತನಾದ, ಸತ್ಯಪ್ರತಿಜ್ಞೇನ ಸಾರ್ಧಂ - ಸಫಲವಾದ ಪ್ರತಿಜ್ಞೆಯುಳ್ಳ ಶ್ರೀರಾಮನೊಡಗೂಡಿ, ಸುಖಿತಾಃ - ಸುಖವಂತರಾಗಿ, ಪ್ರವಿಶೇ

ತನ್ನ ಸಂಕಲ್ಪವನ್ನು ಈಡೇರಿಸಿಕೊಳ್ಳಲಾರದೆ ದುಃಖದಿಂದ ಮರಣವನ್ನು ಹೊಂದುವನಲ್ಲ ! ಅಯ್ಯೋ ! ನಾನೇನುಮಾಡಲಿ ! ಹಾಗೆ ನಮ್ಮ ತಂದೆಯು ಮರಣವನ್ನು ಹೊಂದಿದರೆ ಧನ್ಯರಾದವರು ಆತನ ಪ್ರೇತಕಾರ್ಯಗಳನ್ನು ಮಾಡುತಾರೆ! ಮನೋಹರವಾದ ಅಂಗಗಳೂ, ಸ್ಥಾನಗಳೂ ಉಳ್ಳದಾಗಿಯು, ಸೂತ್ರಮಟ್ಟವಾಗಿ ವಿಭಾಗಿಸಿದ ರಾಜವೀಧಿಗಳುಳ್ಳದಾಗಿಯು, ಉತ್ತಮವಾದ ರತ್ನಗಳಿಂದಲಂಕೃತವಾಗಿಯು, ಆನೆ,ರಥ,ಕುದುರೆ ಇವುಗಳಿಂದ ತುಂಬಿರುವುದಾಗಿಯು, ಹರ್ಷಯುಕ್ತರಾದವರೂ ಅನ್ನಪಾನಾದಿಗಳಿಂದ ಮದಿಸಿದವರೂಆದ ಜನಗಳಿಂದ ವ್ಯಾಪ್ತವಾದುದಾಗಿಯು,ವನಗಳಿಂದಲೂ ಉದ್ಯಾನವನಗಳಿಂದಲೂ ನಿಬಿಡಿತವಾದುದಾಗಿಯೂ, ಸಭೆಗಳಲ್ಲಿ ಸಂತೋಷದಿಂದೊಡಗೂಡಿರುವುದಾಗಿಯೂಇರುವ ನನ್ನತಂದೆಯ ರಾಜಧಾನಿಯಾದ ಅಯೋಧ್ಯಾಪಟ್ಟಣದಲ್ಲಿ ಪುಣ್ಯಾತ್ಮರಾದವರು ಸುಖವುಳ್ಳವರಾಗಿ ಸಂಚರಿಸುತಾರೆ. ॥ ೧೭-೨೧ ॥ ನಿಯಮಿತಕಾಲವಾದ ಹದಿನಾಲ್ಕು ಸಂವತ್ಸರಗಳು ಕಳೆದ ಮೇಲೆ ನಾವು, ಕ್ಷೇಮವಂತನೂ, ಸತ್ಯಪ್ರತಿಜ್ಞೆಯುಳ್ಳವನೂ ಆದ ಶ್ರೀರಾಮ

ಸುಮಹಾತ್ಮನಃ ॥ ತಿಷ್ಠತೋ ರಾಜಪುತ್ರಸ್ಯ ಶರ್ವರೀ ಸಾತ್ಯವರ್ತತ ॥ ೨೩ ॥
ಪ್ರಭಾತೇ ವಿಮಲೇ ಸೂರ್ಯೇ ಕಾರಯಿತ್ವಾ ಜಟಾವುಭೌ ॥ ಅಸ್ಮಿನ್ ಭಾಗೀ
ರಥೀತೀರೇ ಸುಖಸಂತಾರಿತೌ ಮಯಾ ॥ ೨೪ ॥
ಜಟಾಧರೌ ತೌ ದ್ರುಮಚೀರವಾಸಸೌ
ಮಹಾಬಲೌ ಕುಂಜರ ಯೂಥಪೋಪಮೌ ॥
ವರೇಷು ಚಾಪಾಸಿಧರೌ ಪರಂತಪೌ
ವ್ಯವೇಕ್ಷಮಾಣೌ ಸಹಸೀತಯಾ ಗತೌ ॥ ೨೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಡಶೀತಿತಮಸ್ಸರ್ಗಃ.

ಮಹೆ - ಪಟ್ಟಣಪ್ರವೇಶಮಾಡುವೆವಷ್ಟೆ. ॥ ೨೨ ॥ ಏವಂ - ಹೀಗೆ. ಪರಿದೇವಯಮಾನಸ್ಯ - ಪರಿತಪಿಸುತ್ತಿರುವ, ಸುಮಹಾತ್ಮನಃ - ಮಹಾ ಧೈರ್ಯಶಾಲಿಯಾದ, ರಾಜಪುತ್ರಸ್ಯ-ಅರಸುಮಗನಾದ, ತಸ್ಯ - ಆ ಲಕ್ಷ್ಮಣನು, ತಿಷ್ಠತಃ - ಕುಳಿತುಕೊಂಡಿರಲು, ಸಾಶರ್ವರೀ - ಆ ರಾತ್ರಿಯು, ಅತ್ಯವರ್ತತ - ಕಳೆದುಹೋಯಿತು. ॥ ೨೩ ॥ ಪ್ರಭಾತೇ-ಪ್ರಾತಃಕಾಲದಲ್ಲಿ, ವಿಮಲೇ-ನಿರ್ಮಲವಾದ, ಸೂರ್ಯೇ-ಸೂರ್ಯನು, ಉದಿತೇ - ಉದಯಿಸಲು, ಜಟಾಃ - ಜಡೆಗಳನ್ನು, ಕಾರಯಿತ್ವಾ - ಮಾಡಿಕೊಂಡು, ಅಸ್ಮಿನ್‌ಭಾಗೀರಥೀತೀರೇ - ಈ ಗಂಗಾನದಿಯ ದಡದಲ್ಲಿ, ಮಯಾ - ನನ್ನಿಂದ, ಸುಖಸಂತಾರಿತೌ - ಸುಖವಾಗಿದಾಟಿಸಲ್ಪಟ್ಟರು. ॥ ೨೪ ॥ ಜಟಾಧರೌ - ಜಡೆಗಳನ್ನುಧರಿಸಿರುವ, ಮಹಾಬಲೌ - ಮಹಾತ್ರಾಣವುಳ್ಳ, ಕುಂಜರಯೂಥಪೋಪಮೌ-ಆನೆಯಹಿಂಡುಗಳಿಗೆ ಅಧಿಪತಿಯಾದ ಗಜಶ್ರೇಷ್ಠಕ್ಕೆಸಮಾನರಾದ,ವರೇಷುಚಾಪಾಸಿಧರೌ - ಶ್ರೇಷ್ಠವಾದ ಧನುರ್ಬಾಣಗಳನ್ನೂ ಖಡ್ಗಗಳನ್ನೂಧರಿಸಿರುವ, ವ್ಯವೇಕ್ಷಮಾಣೌ - ವನಗಳನ್ನೇ ನೋಡುತ್ತಿರುವ, ತೌ - ಆ ರಾಮಲಕ್ಷ್ಮಣರಿಬ್ಬರೂ, ದ್ರುಮಚೀರವಾಸಸೌ - ಗಿಡಗಳನಾರುಗಳೆ ವಸ್ತ್ರಗಳಾಗುಳ್ಳವರಾಗಿ, ಸೀತಯಾಸಹ - ಸೀತಾದೇವಿಯೊಡಗೂಡಿ, ಗತೌ - ಹೊರಟುಹೋದರು. ॥ ೨೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಡಶೀತಿತಮಸ್ಸರ್ಗಃ.

ನೊಡನೆ ಸುಖವಾಗಿ ಪುರಪ್ರವೇಶಮಾಡುವೆವು. ಅಯ್ಯಾ ಭರತನೆ ! ಮಹಾತ್ಮನೂ, ಮಹಾನುಭಾವನೂ, ಮಹಾಧೈರ್ಯಶಾಲಿಯೂ ಆದ ಲಕ್ಷ್ಮಣಸ್ವಾಮಿಯು ಈರೀತಿ ಪರಿತಪಿಸುತ್ತ ಸ್ವಲ್ಪವೂ ನಿದ್ರಿಸದೆ ಕುಳಿತಿರಲು ರಾತ್ರಿಯು ಕಳೆದುಹೋಯಿತು. ॥ ೨೨-೨೩ ॥ ಬಳಿಕ ಪ್ರಾತಃಕಾಲವಾಗಲು, ಸೂರ್ಯನುದಯಿಸಿದನು. ಆ ಸಮಯದಲ್ಲಿ ಶ್ರೀರಾಮಲಕ್ಷ್ಮಣರು ಜಡೆಗಳನ್ನು ಧರಿಸಿದವರಾಗಿ, ಈ ಗಂಗಾನದಿಯಲ್ಲಿ ನನ್ನಿಂದಲೇ ದಾಟಿಸಲ್ಪಟ್ಟವರಾದರು. ಆಗಲಾ ಶ್ರೀರಾಮಲಕ್ಷ್ಮಣರು ಉತ್ತಮವಾದ ಕೋದಂಡಗಳನ್ನೂ, ಖಡ್ಗಗಳನ್ನೂ ಧರಿಸಿದವರಾಗಿ ವನೋಪವನಗಳನ್ನು ನೋಡುತ್ತ, ಗಜಯೂಥಪತಿಗಳಂತೆ ಸೀತಾಸಮೇತರಾಗಿ ಮುಂಬರಿದವರಾದರು. ॥ ೨೪-೨೫ ॥

ಇತಿ ಶ್ರೀಮ ಗುಹವಿಸ್ತೃತ ಕೃತವೃತ್ತಾನುಷ್ಠಾನ ಲಕ್ಷ್ಮಣವಿವರಣವೆಂಬ
ಎಂಭತ್ತಾರನೆಯ ಸರ್ಗವು ಸಮಾಪ್ತವಾದುದು

ಅಯೋಧ್ಯಾಕಾಂಡೇ ಸಪ್ತಾಶೀತಿತಮಸ್ಸರ್ಗಃ.

ಗುಹಸ್ಯ ವಚನಂ ಶ್ರುತ್ವಾ ಭರತೋ ಭೃಶಮಪ್ರಿಯಂ ‖ ಧ್ಯಾನಂ ಜಗಾಮ ತತ್ರೈವ ಯತ್ರ ತಚ್ಛ್ರುತ ಮಪ್ರಿಯಂ ‖ ೧ ‖ ಸುಕುಮಾರೋ ಮಹಾಸತ್ವ ಸ್ಸಿಂಹಸ್ಕಂಧೋ ಮಹಾಭುಜಃ ‖ ಪುಂಡರೀಕ ವಿಶಾಲಾಕ್ಷ ಸ್ತರುಣಃ ಪ್ರಿಯದರ್ಶನಃ ‖ ೨ ‖ ಪ್ರತ್ಯಾಶ್ವಸ್ಯ ಮುಹೂರ್ತಂತು ಕಾಲಂ ಪರಮ ದುರ್ಮನಾಃ ‖ ಪಪಾತ ಸಹಸಾ ತೋತ್ರೈ ರ್ಹ್ಯತಿವಿದ್ಧ ಇವದ್ವಿಪಃ ‖ ೩ ‖ ತದವಸ್ಥಂತು ಭರತಂ ಶತ್ರುಘ್ನೋಽನಂತರಸ್ಥಿತಃ ‖ ಪರಿಷ್ವಜ್ಯ ರುರೋದೋಚ್ಚೈ

ಭರತಃ - ಭರತನು, ಗುಹಸ್ಯ - ಗುಹನ, ಭೃಶಂ - ಬಹಳವಾಗಿ, ಅಪ್ರಿಯಂ - ದುಃಖಜನಕ ವಾದ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಯತ್ರ - ಯಾವ ಪ್ರದೇಶದಲ್ಲಿ, ಅಪ್ರಿಯಂ - ಅನಿಷ್ಟ ಕರವಾದ, ತತ್ - ಆ ಮಾತು, ಶ್ರುತಂ - ಕೇಳಲಾಯಿತೊ, ತತ್ರೈವ - ಅಲ್ಲಿಯೇ, ಧ್ಯಾನಂ - ರಾಮನ ವಿಷಯಕಧ್ಯಾನವನ್ನು, ಜಗಾಮ - ಹೊಂದಿದನು. ‖ ೧ ‖ ಸುಕುಮಾರಃ-ಮೃದುಸ್ವಭಾವವುಳ್ಳ, ಮಹಾ ಸತ್ವಃ - ಮಹಾ ಪರಾಕ್ರಮಶಾಲಿಯಾದ, ಸಿಂಹಸ್ಕಂಧಃ-ಸಿಂಹದಂತೆ ಭುಜಶಿರಸ್ಸುಗಳುಳ್ಳ, ಪುಂಡರೀಕ ವಿಶಾಲಾಕ್ಷಃ - ಕಮಲಗಳಂತೆ ವಿಶಾಲವಾದ ನೇತ್ರಗಳುಳ್ಳ, ತರುಣಃ - ಯೌವನಶಾಲಿಯಾದ, ಪ್ರಿಯ ದರ್ಶನಃ - ಕಣ್ಗಿಂಪಾದ ನೋಟವುಳ್ಳ ಆ ಭರತನು, ಪ್ರತ್ಯಾಶ್ವಸ್ಯ - ಸಮಾಧಾನಮಾಡಿಕೊಂಡು, ಮುಹೂರ್ತಕಾಲಂತು - ಒಂದು ಮುಹೂರ್ತಕಾಲ, ಪರಮದುರ್ಮನಾಃ - ಬಹಳ ದುಃಖಾಕ್ರಾಂತಮನ ವುಳ್ಳವನಾಗಿ, ಸಹಸಾ - ಜಾಗ್ರತೆಯಾಗಿ, ತೋತ್ರೈಃ ಅಂಕುಶಾಯುಧಗಳ ಕೊನೆಗಳಿಂದ, ಅತಿವಿದ್ಧಃ - ತಿವಿಯಲ್ಪಟ್ಟ, ದ್ವಿಪಃಇವ - ಆನೆಯಂತೆ, ಪಪಾತ - ಬಿದ್ದನು. ‖ ೩ ‖ ತದವಸ್ಥಂ - ಅಂತಹ ದುಃಖಾ ವಸ್ಥೆಯುಳ್ಳ, ಭರತಂ - ಭರತನನ್ನು, ಅನಂತರಸ್ಥಿತಃ - ಸಮೀಪವರ್ತಿಯಾದ, ಶತ್ರುಘ್ನಃ - ಶತ್ರು ಘ್ನನು, ಪರಿಷ್ವಜ್ಯ - ಅಪ್ಪಿಕೊಂಡು, ವಿಸಂಜ್ಞಃ - ಪ್ರಜ್ಞಾಹೀನನಾಗಿ, ಶೋಕಕರ್ಶಿತಃ-ಮನೋದುಃಖ

ಈಪ್ರಕಾರವಾಗಿ ಗುಹನುಹೇಳಿದ ವ್ಯಸನಕರವಾದ ಮಾತುಗಳನ್ನು ಕೇಳಿ, ಶ್ರೀ ರಾಮಲಕ್ಷ್ಮಣರು ಜಟೆಗಳನ್ನುಧರಿಸಿ ಅರಣ್ಯಕ್ಕೆಹೋದರೆಂಬುದನ್ನೂಕೇಳಿದ ಭರತನು ಅಧಿಕ ವಾದ ದುಃಖವನ್ನು ಹೊಂದಿದನು. ತನ್ನಮನೋಭೀಷ್ಟವು ನೆರವೇರುವುದೋ ಇಲ್ಲವೋ ಎಂದೂ ಸಹ ಚಿಂತಿಸಿದನು. ಅಲ್ಲದೆ ಬಹುಮೃದುವಾದ ಸ್ವಭಾವವುಳ್ಳವನೂ ಅಧಿಕವಾದಬಲ ವುಳ್ಳವನೂ, ಸಿಂಹದಂತೆ ಭುಜಶಿರಸ್ಸುಗಳುಳ್ಳವನೂ, ಕಮಲಗಳಂತೆ ವಿಶಾಲವಾದ ನೇತ್ರಗಳು ಳ್ಳವನೂ, ನವನವೋನ್ಮೀಲಿತವಾದ ಯೌವನವುಳ್ಳವನೂ, ಸಕಲಜನರಿಂದಲೂ ಸಂತೋಷ ಕರವಾಗಿನೋಡಲು ಯೋಗ್ಯನಾದವನೂ ಆದ ಆಭರತನು, ಬಹಳವಾದದುಃಖವನ್ನುಹೊಂದಿ, ಸ್ವಲ್ಪಹೊತ್ತು ಶೂಲಗಳಿಂದತಿವಿಯಲ್ಪಟ್ಟ ಗಜವು ಕೆಳಗೆಬಿದ್ದಂತೆ, ವ್ಯಸನವನ್ನು ತಡಿಯಲಾ ರದೆ ಕೆಳಕ್ಕೆಬಿದ್ದವನಾದನು ಆರೀತಿಯಾಗಿ ದುಃಖವನ್ನುತಡಿಯಲಾರದೆ ಕೆಳಕ್ಕೆಬಿದ್ದಿರುವ

ರ್ವಿಸಂಜ್ಞಃ ಶೋಕಕರ್ಶಿತಃ ॥ ೪ ॥ ತತಸ್ಸರ್ವಾಸ್ಸಮಾಪೇತುರ್ಮಾತರೋ ಭರತಸ್ಯ ತಾಃ ॥ ಉಪವಾಸಕೃಶಾ ದೀನಾ ಭರ್ತುರ್ವ್ಯಸನಕರ್ಶಿತಾಃ ॥೫॥ ತಾಶ್ಚ ತಂ ಪತಿತಂ ಭೂಮೌ ರುದಂತ್ಯಃ ಪರ್ಯವಾರಯನ್ ॥ ಕೌಸಲ್ಯಾ ತ್ವನುಸೃತ್ಯೈನಂ ದುರ್ಮನಾಃ ಪರಿಷಸ್ವಜೇ ॥ ೬ ॥ ವತ್ಸಲಾ ಸ್ವಂ ಯಥಾ ವತ್ಸಮುಪಗೂಹ್ಯ ತಪಸ್ವಿನೀ ॥ ಪರಿಪಪ್ರಚ್ಛ ಭರತಂ ರುದಂತೀ ಶೋಕಲಾಲಸಾ॥೭॥ ಪುತ್ರ! ವ್ಯಾಧಿರ್ನ ತೇ ಕಚ್ಚಿಚ್ಛರೀರಂ ಪರಿಬಾಧತೇ ॥ ಅದ್ಯ ರಾಜಕುಲಸ್ಯಾಸ್ಯ

ದಿಂದ ಕೃಶೀಭಾವವನ್ನು ಹೊಂದಿ, ಉಚ್ಚೈಃ - ಗಟ್ಟಿಯಾಗಿ, ರುರೋದ - ಅಳುತ್ತಿದ್ದನು. ॥ ೪೪ ॥ ತತಃ - ಬಳಿಕ, ಸರ್ವಾಃ - ಸಮಸ್ತರಾದ, ಉಪವಾಸಕೃಶಾಃ - ನಿರಶನವ್ರತದಿಂದ ಸವೆದುಹೋದ, ದೀನಾಃ - ದೀನಮುಖರಾದ, ಭರ್ತುರ್ವ್ಯಸನಕರ್ಶಿತಾಃ - ಪತಿವಿರಹದಿಂದಹುಟ್ಟಿದ ವ್ಯಸನದಿಂದ ಕೃಶೀಭೂತರಾದ, ತಾಃ - ಆ, ಭರತಸ್ಯ - ಭರತನ, ಮಾತರಃ - ಆ ತಾಯಿಯರು, ಸಮಾಪೇತುಃ-ಬಂದರು. ॥ ೫ ॥ ತಾಶ್ಚ - ಆ ತಾಯಿಯರು, ಭೂಮೌ - ನೆಲದಲ್ಲಿ, ಪತಿತಂ - ಬಿದ್ದಿರುವ, ತಂ-ಆ ಭರತನನ್ನು, ರುದಂತ್ಯಃ - ರೋದನಮಾಡುತ್ತ, ಪರ್ಯವಾರಯನ್ - ಸುತ್ತುವರೆದುಕೊಂಡರು, ಕೌಸಲ್ಯಾತು - ಕೌಸಲ್ಯಾದೇವಿಯಾದರೆ, ದುರ್ಮನಾಃ - ದುಃಖಾಕ್ರಾಂತಮನವುಳ್ಳವಳಾಗಿ, ಏನಂ - ಈ ಭರತನನ್ನು, ಅನುಸೃತ್ಯ - ಅನುಸರಿಸಿಬಂದು, ಪರಿಷಸ್ವಜೇ - ಅಪ್ಪಿಕೊಂಡಳು. ॥ ೬ ॥ ವತ್ಸಲಾ - ವಾತ್ಸಲ್ಯವುಳ್ಳ, ತಪಸ್ವಿನೀ - ಬಹಳ ದೈನ್ಯಗೊಂಡ ಕೌಸಲ್ಯಾದೇವಿಯು, ಸ್ವಂ - ತನ್ನ, ವತ್ಸಂಯಥಾ-ಮಗನಂತೆ, ಭರತಂ - ಭರತನನ್ನು, ಉಪಗೂಹ್ಯ - ಅಪ್ಪಿಕೊಂಡು, ರುದಂತೀ - ರೋದನಮಾಡುತ್ತ, ಶೋಕಲಾಲಸಾ - ಶೋಕಾಕ್ರಾಂತಳಾಗಿ, ಪರಿಪ್ರಚ್ಛ - ಕೇಳಿದಳು. ॥ ೧೭ ॥ ಹೇ ಪುತ್ರ - ಎಲೈ ಮಗನೆ, ತೇ - ನಿನಗೆ, ವ್ಯಾಧಿಃ - ರೋಗವು, ಶರೀರಂ - ದೇಹವನ್ನು, ಪರಿಬಾಧತೇಕಚ್ಚಿತ್-ಪೀಡಿಸುತ್ತಿರುವುವೆ, ಅದ್ಯ - ಈಗ, ಅಸ್ಯ - ಈ, ರಾಜಕುಲಸ್ಯ - ರಾಜವಂಶದ, ಜೀವಿತಂ-ಬದುಕುವಿಕೆಯು, ತ್ವದಧೀನಂಹಿ-

ಭರತನನ್ನುನೋಡಿ, ಆತನಸಮೀಪದಲ್ಲಿಯೇ ಇದ್ದ ಶತ್ರುಘ್ನನು, ಸ್ಮೃತಿಯಿಲ್ಲದವನೂ, ದುಃಖದಿಂದಪೀಡಿತನಾದವನೂ ಆದ ಆಭರತನನ್ನು ಆಲಿಂಗನೆಯನ್ನು ಮಾಡಿಕೊಂಡು ಎತ್ತಿದಕಂಠದಿಂದ ಬಲವಾಗಿರೋದಿಸಿದನು. ಆಬಳಿಕ ಉಪವಾಸಗಳಿಂದ ಕೃಶಿಸಿಹೋಗಿದ್ದವರೂ, ದೈನ್ಯವನ್ನು ಹೊಂದಿದ್ದವರೂ, ಒಡೆಯನಾದ ದಶರಥರಾಜನಮೃತಿಯಿಂದ ಮೊದಲೇ ಅಪರಿಮಿತವಾದ ದುಃಖವನ್ನುಹೊಂದಿದ್ದವರೂ ಆದ ಆಭರತಕುಮಾರನ ಜನನಿಯರೆಲ್ಲರೂ ಶತ್ರುಘ್ನನರೋದನಧ್ವನಿಯನ್ನುಕೇಳಿ ಬಹುಜಾಗ್ರತೆಯಾಗಿ ಸಮೀಪಕ್ಕೆ ಓಡಿಬಂದವರಾದರು. ಆ ಬಳಿಕಲವರೆಲ್ಲರೂ, ಕೆಳಗೆಬಿದ್ದಿದ್ದ ಆಭರತನ ಸುತ್ತಲೂ ಸುತ್ತಿಕೊಂಡರು. ಆಗ ತಪಸ್ವಿನಿಯಾದ ಕೌಸಲ್ಯೆಯು ಅಧಿಕವಾದದುಃಖವನ್ನು ಹೊಂದುತ್ತ, ಆಕಳುತನ್ನ ಕರುವಿನಲ್ಲಿನವಾತ್ಸಲ್ಯದಿಂದ ಅಪ್ಪಿಕೊಳ್ಳುವಂತೆ ಅಪ್ಪಿಕೊಂಡು ಆತನನ್ನುಆಲಿಂಗಿಸಿಕೊಂಡು." ॥ ೧-೭ ॥ ಮಗನೆ ! ಭರತಕುಮಾರ ! ನಿನ್ನಶರೀರದಲ್ಲಿ ಯಾವವಿಧವಾದ ವ್ಯಾಧಿಯಾದರೂ ಸೇರಿ ಬಾಧಿಸುತ್ತಿರುವುದೆ ? ಈಗಲೀರಾಜಕುಲದ ಜೀವನವೆಲ್ಲವೂ ನಿನ್ನಧೀನವಾಗಿರುವುದಲ್ಲವೆ ? ಅಲ್ಲದೆ ಎಲೈ ಭರತನೆ ! ತಮ್ಮನೊಡಗೂಡಿ ಶ್ರೀರಾಮನು ಅರಣ್ಯಕ್ಕೆಹೋದನು. ಪತಿದೇವನಾದ ದಶ

ತ್ವದಧೀನಂಹಿ ಜೀವಿತಂ ॥ ೮ ॥ ತ್ವಾಂ ದೃಷ್ಟ್ವಾ ಪುತ್ರ ಜೀವಾಮಿ ರಾಮೇ ಸಭ್ರಾತೃಕೇ ಗತೇ ॥ ವೃತ್ತೇ ದಶರಥೇ ರಾಜ್ಞಿ ನಾಥಏವ ತ್ವಮದ್ಯನಃ ॥ ೯ ॥ ಕಚ್ಚಿನ್ನ ಲಕ್ಷ್ಮಣೇ ಪುತ್ರ ! ಶ್ರುತಂ ತೇ ಕಿಂಚಿದಪ್ರಿಯಂ ॥ ಪುತ್ರೇವಾ ಹ್ಯೇಕ ಪುತ್ರಾಯಾ ಸ್ಸಹಭಾರ್ಯೇ ವನಂ ಗತೇ ॥ ೧೦ ॥ ಸಮುಹೂರ್ತಂ ಸಮಾ ಶ್ವಸ್ಯ ರುದನ್ನೇವ ಮಹಾಯಶಾಃ ॥ ಕೌಸಲ್ಯಾಂ ಪರಿಸಾಂತ್ವ್ಯೇದಂ ಗುಹಂ ವಚನ ಮಬ್ರವೀತ್ ॥ ೧೧ ॥ ಭ್ರಾತಾ ಮೇ ಕ್ವಾವಸ ದ್ರಾತ್ರೌ? ಕ್ವಸೀತಾ ಕ್ವಚ ಲಕ್ಷ್ಮಣಃ? ॥ ಅಸ್ವಪಚ್ಛಯನೇ ಕಸ್ಮಿನ್? ಕಿಂಭುಕ್ತ್ವಾ ಗುಹ! ಶಂಸ

ನಿನ್ನ ಅಧೀನವಾಗಿರುವುವಷ್ಟೆ, ಹೇ ಪುತ್ರ - ಎಲೈ ಮಗನೆ, ಸಭ್ರಾತೃಕೇ - ತಮ್ಮನಿಂದೊಡಗೂಡಿದ, ರಾಮೇ - ಶ್ರೀರಾಮನು, ಗತೇ - ಹೊರಟುಹೋಗಲು, ದಶರಥೇರಾಜ್ಞಿ - ದಶರಥರಾಯನು, ವೃತ್ತೇ - ಮರಣವನ್ನುಹೊಂದಲು, ತವಂ - ನೀನು, ಏಕಃ - ಒಬ್ಬನೇ, ಅದ್ಯ - ಈಗ, ನಃ - ನಮಗೆ, ನಾಥಃ - ರಕ್ಷಕನು, ತ್ವಾಂ - ನಿನ್ನನ್ನು, ದೃಷ್ಟ್ವಾ - ಕಂಡು, ಜೀವಾಮಿ - ಬದುಕಿದ್ದೇನೆ, ಹೇ ಪುತ್ರ - ಎಲೈ ಮಗನೇ, ಲಕ್ಷ್ಮಣೇ - ಲಕ್ಷ್ಮಣನವಿಷಯದಲ್ಲಿ, ಕಿಂಚಿತ್ - ಯಾವುದಾದರೂ, ಅಪ್ರಿಯಂ - ಅಹಿತಕರ ವಾದವಾತು, ತೇ - ನಿನ್ನಿಂದ, ಶ್ರುತಂಕಚ್ಚಿತ್ - ಕೇಳಲ್ಪಟ್ಟಿತೇ, ಏಕಪುತ್ರಾಯಾಃ - ಒಬ್ಬನೇ ಮಗ ನುಳ್ಳ, ಮಮ - ನನ್ನ, ಸಹಭಾರ್ಯೇ - ಭಾರ್ಯಾಸಮೇತನಾದ, ವನಂಗತೇ - ವನವಾಸಿಯಾದ, ಪುತ್ರೇವಾ - ಪುತ್ರನವಿಷಯದಲ್ಲಾದರೂ, ಕಿಂಚಿತ್ - ಯಾವುದಾದರೊಂದು, ಅಪ್ರಿಯಂ - ಅನಿಷ್ಟವಚ ನವು, ಶ್ರುತಂಕಚ್ಚಿತ್ - ಕೇಳಲ್ಪಟ್ಟಿತೇ. ॥ ೧೦ ॥ ಮಹಾಯಶಾಃ - ಮಹಾಕೀರ್ತಿವಂತನಾದ, ಸಃ - ಆ ಭರತನು, ಮುಹೂರ್ತಂ - ಒಂದು ಮುಹೂರ್ತಕಾಲ, ಸಮಾಶ್ವಸ್ಯ - ಸಮಾಧಾನಮಾಡಿಕೊಂಡು, ರುದನ್ನೇವ - ಅಳುತ್ತಲೇ, ಕೌಸಲ್ಯಾಂ - ಕೌಸಲ್ಯಾದೇವಿಯನ್ನು, ಪರಿಸಾಂತ್ವ್ಯ-ಸಮಾಧಾನಗೊಳಿಸಿ, ಗುಹಂ - ಗುಹನನ್ನುಕುರಿತು, ಇದಂವಚನಂ - ಈ ಮಾತನ್ನು, ಅಬ್ರವೀತ್-ನುಡಿದನು. ॥ ೧೧ ॥ ಹೇ ಗುಹ - ಎಲೈ ಗುಹನೇ, ಮೇ - ನನ್ನ, ಭ್ರಾತಾ - ಅಣ್ಣನಾದ ಶ್ರೀರಾಮನು, ರಾತ್ರೌ - ರಾತ್ರಿಯಲ್ಲಿ, ಕ್ವ - ಎಲ್ಲಿ, ಅವಸತ್ - ವಾಸಾವಮಾಡಿದನು, ಸೀತಾ - ಸೀತಾದೇವಿಯು, ಕ್ವ - ಎಲ್ಲಿ, ಲಕ್ಷ್ಮಣಶ್ಚ -

ರಥರಾಯನೂ ಮರಣವನ್ನುಹೊಂದಿದನು. ಹಾಗೆ ಮಗನು, ಪತಿಯೂಹೋದರೂ ನೀನು ಆಧಾರವಾಗಿರುವೆಯೆಂದು ತಿಳಿದುಕೊಂಡು ನಾನು ಜೀವವನ್ನಿಟ್ಟುಕೊಂಡಿದ್ದೇನೆ. ನನಗೆ ಈಗ ನೀನೊಬ್ಬನೇಗತಿಯಾಗಿದ್ದೀಯೆ! ಭರತ; ಶ್ರೀರಾಮಲಕ್ಷ್ಮಣಸೀತೆಯರ ಅರಣ್ಯಗಮನವಿಷಯ ದಲ್ಲಿ ಶೋಕವಾರ್ತೆಯೇನಾದರೂ ತಲೆದೋರಿದೆಯೇನು ? ನಾನೊಬ್ಬನೇಮಗನುಳ್ಳವಳಾದು ದರಿಂದ, ದಿಕ್ಕಿಲ್ಲದವಳಾಗಿಹೋದೆನೆಂದು ದುಃಖವನ್ನುಹೊಂದುತ್ತಿರುವೆಯೋ? ನಿನ್ನದುಃಖ ಕ್ಕೆನಿಮಿತ್ತವೇನು " ಎಂದುಕೇಳಿದಳು. ॥ ೮-೧೦ ॥ ಕೌಸಲ್ಯಾದೇವಿಯೀರೀತಿ ಕೇಳಿದಮೇಲೆ ಅಪಾರವಾದಕೀರ್ತಿಯುಳ್ಳ ಆಭರತನು ಸ್ವಲ್ಪಹೊತ್ತು ಸುಮ್ಮನಿದ್ದು, ರೋದಿಸುತ್ತಲಿದ್ದ ಆ ದೇವಿಯನ್ನುಸಮಾಧಾನಗೊಳಿಸಿ ಸಮೀಪದಲ್ಲಿಯೇಇದ್ದ ನಿಷಾದಾಧಿಪತಿಯಾದ ಗುಹ ನನ್ನು ಕುರಿತು, " ಎಲೈಗುಹನೆ! ನಮ್ಮಣ್ಣನಾದ ಶ್ರೀರಾಮನು ಅಂದಿನರಾತ್ರಿ, ಎಲ್ಲಿವಾಸ ಮಾಡಿದನು? ಸೀತಾದೇವಿಯೆಲ್ಲಿದ್ದಳು? ಲಕ್ಷ್ಮಣಸ್ವಾಮಿಯೆಲ್ಲಿವಾಸಮಾಡಿದನು? ಶ್ರೀ

ಮೇ ॥ ೧೨ ॥ ಸೋಬ್ರವೀ ದ್ಭರತಂ ಹೃಷ್ಟೋ ನಿಷಾದಾಧಿಪತಿ ರ್ಗುಹಃ ॥
ಯದ್ವಿಧಂ ಪ್ರತಿಪೇದೇಚ ರಾಮೇ ಪ್ರಿಯಹಿತೇಽತಿಥೌ ॥ ೧೩ ॥ ಅನ್ನಮುಚ್ಚಾ
ವಚಂ ಭಕ್ಷ್ಯಾಃ ಫಲಾನಿ ವಿವಿಧಾನಿಚ ॥ ರಾಮಾಯಾಽಭ್ಯವಹಾರಾರ್ಥಂ ಬಹು
ಚೋಪಹೃತಂ ಮಯಾ ॥ ೧೪ ॥ ತತ್ಸರ್ವಂ ಪ್ರತ್ಯನುಜ್ಞಾಸೀ ದ್ರಾಮ ಸ್ಸತ್ಯ

ಲಕ್ಷ್ಮಣನೂ, ಅವಸತ್ - ಇದ್ದನು, ಕಿಂ - ಯಾವಸ್ಥಳದಲ್ಲಿ, ಭುಕ್ತ್ವಾ - ಭೋಜನಮಾಡಿ, ಕಸ್ಮಿಂ ಶಯನೇ - ಯಾವಹಾಸಿಗೆಯಲ್ಲಿ, ಅಸ್ವಪತ್ - ನಿದ್ರೆಹೋದನು, ಮೇ - ನನಗೆ, ಶಂಸ-ಹೇಳು. ॥ ೧೨ ॥ ನಿಷಾದಾಧಿಪತಿಃ - ಬೇಡರಿಗೆ ರಾಜನಾದ, ಸಗುಹಃ - ಆ ಗುಹನು, ಹೃಷ್ಟಃ-ಸಂತೋಷಗೊಂಡವನಾಗಿ, ಭರತಂ - ಭರತನನ್ನು ಕುರಿತು, ಪ್ರಿಯಹಿತೇ - ಪ್ರಿಯನೂ ಹಿತನೂ ಆದ, ಅತಿಥೌ - ಅಭ್ಯಾಗತನಾಗಿಬಂದ, ರಾಮೇ - ಶ್ರೀರಾಮನ ವಿಷಯದಲ್ಲಿ, ಯದ್ವಿಧಂ - ಯಾವರೀತಿಯನ್ನು, ಪ್ರತಿಪೇದೇ - ಪಡೆದನೋ, ತದ್ವಿಧಂ - ಆರೀತಿಯನ್ನು, ಅಬ್ರವೀತ್ - ನುಡಿದನು. ॥ ೧೩ ॥ ಉಚ್ಚಾವಚಂ - ನಾನಾಬಗೆಗಳುಳ್ಳ, ಅನ್ನಂ - ಅನ್ನವು, ಭಕ್ಷ್ಯಾಃ - ಭಕ್ಷ್ಯಗಳು, ವಿವಿಧಾನಿ - ನಾನಾಬಗೆಗಳಾದ, ಫಲಾನಿಚ-ಫಲಗಳೂ, ರಾಮಾಯ - ಶ್ರೀರಾಮನಿಗೆ, ಅಭ್ಯವಹಾರಾರ್ಥಂ-ಆಹಾರನಿಮಿತ್ತವಾಗಿ, ಬಹು-ಬಹಳವಾಗಿ, ಮಯಾ-ನನ್ನಿಂದ, ಉಪಹೃತಂ - ಸಮರ್ಪಿಸಲಾಯಿತು, ಸತ್ಯಪರಾಕ್ರಮಃ - ಸತ್ಯದಿಂದಲೇ ಶತ್ರುನಿಗ್ರಹವನ್ನು ಮಾಡತಕ್ಕ, ರಾಮಃ - ಶ್ರೀರಾಮನು, ತತ್ಸರ್ವಂ-ಆ ಸಮಸ್ತವನ್ನು, ಪ್ರತ್ಯನುಜ್ಞಾಸೀತ್-(೧)ಹಿಂದಕ್ಕೆ

ರಾಮಮೂರ್ತಿಯು ಯಾವಯಾವಪದಾರ್ಥಗಳನ್ನು ಭುಜಿಸಿ ಎಲ್ಲಿ ಮಲಗಿದನು? ಈ ಸಂಗತಿಗಳೆಲ್ಲವನ್ನೂ ನನಗರುಹುವವನಾಗು" ಎಂದು ಕೇಳಿದನು. ಭರತನೀರೀತಿಕೇಳಲು, ನಿಷಾದರೊಡೆಯನಾದ ಆ ಗುಹನು ತನಗೆ ಅತಿಥಿಯಾದಶ್ರೀರಾಮನು ಯಾವವಿಧದಲ್ಲಿ ತನ್ನಿಂದ ಪೂಜಿತನಾದನೋ, ಆ ವಿಧವೆಲ್ಲವನ್ನೂ ಹೇಳಲಪೇಕ್ಷಿಸಿ, "ಅಯ್ಯಾ ಭರತನೆ! ನಾನು ಶ್ರೀರಾಮನಿಗೆ ಭೋಜನಾರ್ಥವಾಗಿ ನಾನಾವಿಧಗಳಾದ ಫಲಗಳನ್ನೂ, ನಾನಾವಿಧಗಳಾದ ಅನ್ನಗಳನ್ನೂ, ಬಹುವಿಧಗಳಾದಭಕ್ಷ್ಯಗಳನ್ನೂ, ಅಧಿಕವಾಗಿಸಂಪಾದಿಸಿ ತಂದುಕೊಟ್ಟೆನು. ಆಗ

ಟಿ. (೧) "ಪ್ರತ್ಯನುಜ್ಞಾಸೀತ್" ಎಂಬಕಡೆಯಲ್ಲಿ ಶ್ರೀಮದ್ವಾಲ್ಮೀಕಿಮುನಿಗಳ ಹೃದಯವಿಂತಿರಬಹುದು.

"ಶಬರೀವಿದುರಾದಿ ಪರಮಭಾಗವತರಿಂದ ಸಮರ್ಪಿತವಾದ ಸತ್ಕಾರವನ್ನಂತೆ, ಶ್ರೀರಾಮನು ಗುಹನಿಂದ ಕೊಡಲಾದುದೂ, ಭಕ್ತಿಪೂತವಾದುದೂ ಆದ ಫಲಾದಿಗಳನ್ನೇಕೆ ಪರಿಗ್ರಹಿಸಲಿಲ್ಲ?" ಎಂಬ ಸಂಶಯವು ವಾಚಕರಿಗೆ ಬರಬಹುದು.

ಇದಕ್ಕೆ ಸಮಾಧಾನ:—ತನಗೆ ಪ್ರಿಯಂಕರರಾದ ಪಿತೃಮಾತೃಪ್ರಮುಖ ಬಂಧುಜನರ ವಿರಹದಿಂದ ಜನಿಸಿದ ಸಂತಾಪದಿಂದಲೂ, ಪುಣ್ಯನದೀತೀರದಲ್ಲಿ ಉಪವಾಸವ್ರತವನ್ನು ಮಾಡಬೇಕೆಂಬ ಅಭಿಲಾಷೆಯಿಂದಲೂ, ಶ್ರೀರಾಮಮೂರ್ತಿಯು ಆ ಗುಹನು ಸಮರ್ಪಿಸಿದ ಫಲಗಳನ್ನು ಸ್ವೀಕರಿಸಲಿಲ್ಲ. ಈ ವಿಷಯವು ಗುಹನಿಗೂ ತಿಳಿದಿದ್ದಿತಾದುದರಿಂದ, ಅವನ ಮನಸ್ಸಿನಲ್ಲಿ ವಿಕಾರವುಂಟಾಗಲಿಲ್ಲವೆಂದು ಭಾವ.

(ಇದು ಗೋವಿಂದರಾಜರದು.)

ಆದರೆ ತಿಲಕವ್ಯಾಖ್ಯಾನಕಾರರಾದ ರಾಮಪಂಡಿತರ ಅಭಿಪ್ರಾಯವು ಇದರಿಂದ ಬೇರ್ಪಡುತ್ತದೆ. ಅದು ಹೀಗೆ:—

"ಗುಹನು ತೆಗೆದುಕೊಂಡು ಬಂದ ಫಲಗಳನ್ನು ಪರಿಗ್ರಹಿಸದ ಶ್ರೀರಾಮಮೂರ್ತಿಯು, ಭರದ್ವಾಜಾದಿಗಳಿಂದ ಕೊಡಲಾದ ಸತ್ಕಾರವನ್ನು ಅಂಗೀಕರಿಸಿದುದೆಂತು?" ಎಂದರೆ, ಅದೇ ಧರ್ಮವೆಂದು ಪ್ರತಿಪಾದಿಸುತ್ತಾರೆ. ಮಧುಪರ್ಕಾದಿ

ಪರಾಕ್ರಮಃ ॥ ನತು ತತ್ಪ್ರತ್ಯಗೃಹ್ಣಾತ್ ಸಃ ಕ್ಷತ್ರಧರ್ಮ ಮನುಸ್ಮರನ್ ॥೧೫॥
ನಹ್ಯಸ್ಮಾಭಿಃ ಪ್ರತಿಗ್ರಾಹ್ಯಂ ಸಖೇ! ದೇಯಂತು ಸರ್ವದಾ ॥ ಇತಿತೇನ ವಯಂ
ರಾಜ! ನ್ನನುನೀತಾ ಮಹಾತ್ಮನಾ ॥೧೬॥ ಲಕ್ಷ್ಮಣೇನ ಸಮಾನೀತಂ ಪೀತ್ವಾ
ವಾರಿ ಮಹಾಯಶಾಃ ॥ ಔಪವಾಸ್ಯಂ ತದಾಕಾರ್ಷೀ ದ್ರಾಘವ ಸ್ಸಹಸೀತಯಾ
॥ ೧೭ ॥ ತತಸ್ತು ಜಲಶೇಷೇಣ ಲಕ್ಷ್ಮಣೋ ಪ್ಯಕರೋತ್ತದಾ ॥ ವಾಗ್ಯತಾಸ್ತೇ

ತೆಗೆದುಕೊಂಡು ಹೋಗೆಂದಾಜ್ಞಾಪಿಸಿದನು, ಸಃ - ಆ ಶ್ರೀರಾಮನು, ಕ್ಷತ್ರಧರ್ಮಂ-ರಾಜಧರ್ಮವನ್ನು, ಅನುಸ್ಮರನ್ - ಜ್ಞಾಪಿಸಿಕೊಂಡು, ತತ್ - ಆ ಪದಾರ್ಥಸಮುದಾಯವನ್ನು, ನಪ್ರತ್ಯಗೃಹ್ಣಾತ್ - ಪರಿಗ್ರಹಿಸಲಿಲ್ಲ. ॥ ೧೪-೧೫ ॥ ಹೇ ಸಖೇ - ಎಲೈ ಸಖನೆ, ಹೇ ರಾಜನ್-ಎಲೈ ಅರಸೆ, ಹಿ-ಯಾವಕಾರಣ, ಅಸ್ಮಾಭಿಃ-ನಮ್ಮಿಂದ, ನಪ್ರತಿಗ್ರಾಹ್ಯಂ - ಪ್ರತಿಗ್ರಹಿಸತಕ್ಕದಲ್ಲವೋ, ತಸ್ಮಾತ್-ಆಕಾರಣ, ಸರ್ವದಾ - ಎಲ್ಲಕಾಲದಲ್ಲಿಯೂ, ದೇಯಂ - ಕೊಡತಕ್ಕದೇಸರಿ, ಇತಿ - ಇಂತೆಂದು, ಮಹಾತ್ಮನಾ - ಮಹಾನುಭಾವನಾದ, ತೇನ - ಆ ಶ್ರೀರಾಮನಿಂದ, ವಯಂ - ನಾವು, ಅನುನೀತಾಃ-ಸಮಾಧಾನಗೊಳಿಸಲ್ಪಟ್ಟವು. ॥ ೧೬ ॥ ಮಹಾಯಶಾಃ - ಮಹಾಕೀರ್ತಿವಂತನಾದ, ರಾಘವಃ - ಶ್ರೀರಾಮನು, ಸೀತಯಾಸಹ-ಸೀತಾದೇವಿಯೊಡನೆ, ಲಕ್ಷ್ಮಣೇನ - ಲಕ್ಷ್ಮಣನಿಂದ, ಸಮಾನೀತಂ-ತರಲ್ಪಟ್ಟ, ವಾರಿ-ಉದಕವನ್ನು, ಪೀತ್ವಾ-ಪಾನಮಾಡಿ, ತದಾ - ಆಕಾಲದಲ್ಲಿ, ಔಪವಾಸ್ಯಂ - ಉಪವಾಸವ್ರತವನ್ನು, ಅಕಾರ್ಷೀತ್-ಮಾಡಿದನು. ॥ ೧೭ ॥ ತತಃ - ಬಳಿಕ, ಲಕ್ಷ್ಮಣೋಪಿ - ಲಕ್ಷ್ಮಣನು, ಜಲಶೇಷೇಣ - ರಾಮನುಮಾಡಿದ ಜಲಪಾನಶೇಷದಿಂದ, ತದಾ - ಆಗ, ಪಾನಂ-ಪಾನವನ್ನು, ಅಕರೋತ್-ಮಾಡಿದನು, ತೇತ್ರಯಃ-ಆ ಮೂವರೂ,

ಸತ್ಯಪರಾಕ್ರಮಿಯಾದ ಆ ಶ್ರೀರಾಮಮೂರ್ತಿಯು "ಎಲ್ಲವನ್ನೂ ನೀನೇ ತೆಗೆದುಕೋ" ಎಂದು ಹೇಳಿದನು. ಈರೀತಿಹೇಳಿ ಕ್ಷತ್ರಿಯಧರ್ಮವನ್ನೇ ಸ್ಮರಿಸುತ್ತಾ ಒಂದನ್ನಾದರೂ ಪರಿಗ್ರಹಿಸದೆ ಹೋದನು. ಮಾತ್ರವಲ್ಲ; ಆತನು ನನ್ನನ್ನು ನೋಡಿ, "ಎಲೈ ಮಿತ್ರನಾದ ಗುಹನೆ! ನಾವು ಕ್ಷತ್ರಿಯರಾದುದರಿಂದ ಪ್ರತಿಗ್ರಹಕ್ಕೆ ಪಾತ್ರರಲ್ಲ. ದಾನಮಾಡಲು ಎಲ್ಲಕಾಲದಲ್ಲಿಯೂ ಯೋಗ್ಯರಾದವರು" ಎಂದು ಸಮಾಧಾನಗೊಳಿಸಿಬಿಟ್ಟನು. ॥ ೧೧-೧೬ ॥ ಇವಲ್ಲದೆ ಮಹಾಕೀರ್ತಿವಂತನಾದ ಆ ಶ್ರೀರಾಮಚಂದ್ರನು ಸೀತಾದೇವಿಯೊಡಗೂಡಿ, ತಮ್ಮನಾದ ಲಕ್ಷ್ಮಣಸ್ವಾಮಿಯಿಂದ ತರಲಾದ ಉದಕವನ್ನು ಪಾನಮಾಡಿ ಉಪವಾಸವ್ರತವನ್ನಾಚರಿಸಿದನು. ಆಮೇಲೆ ಆ ಸಮಯದಲ್ಲಿ ಲಕ್ಷ್ಮಣನೂಸಹ ಸೀತಾರಾಮರು ಪಾನಮಾಡಿ ಮಿಕ್ಕ ಉದಕವನ್ನೇ

ಗಳಿಂದ ರಾಜನಾದವನನ್ನು ಪೂಜಿಸುವ ಅಧಿಕಾರವು ಬ್ರಾಹ್ಮಣನಿಗಿರುವುದರಿಂದಲೂ, ಅದನ್ನಂಗೀಕರಿಸುವುದರಿಂದ ರಾಜನಾದವನಿಗೆ ಅಭ್ಯುದಯವಾಗುವುದರಿಂದಲೂ, ಇದನ್ನು ಶ್ರೀರಾಮನರಿತಿದ್ದನಾದುದರಿಂದಲೂ, ಅದು ನ್ಯಾಯಸಮ್ಮತವಾದುದೇ ಆಯಿತು. ಗುಹನು ನಿಷಾದನಾದುದರಿಂದಲೂ, ರಾಜನನ್ನು ಮಧುಪರ್ಕಾದಿಗಳಿಂದ ಪೂಜಿಸಲು ಅನಧಿಕಾರಿಯೂ ಕರಗ್ರಹಣಕ್ಕೆ ಯೋಗ್ಯನಲ್ಲದವನೂ ಆದುದರಿಂದ, ಶ್ರೀರಾಮನು ಆತನು ಮಾಡಿದ ಫಲಸಮರ್ಪಣಾದಿಗಳನ್ನು ಸ್ವೀಕರಿಸಲಿಲ್ಲ.

"ಭಗವದ್ಭಕ್ತರಾದವರಲ್ಲಿ ಈ ಭೇದಗಳ ಅಸ್ತಿತ್ವವೆಂತು ಕೂಡುತ್ತದೆ?" ಎಂಬ ಪ್ರಶ್ನೆಯಿದ್ದೇ ಇರುವುದು. ಭಗವದ್ಭಕ್ತನಿಗೆ ಅಧಿಕಾರವುಂಟೆಂದು ಹೇಳಿದರೂ, ಶ್ರೀರಾಮನು ಪುಣ್ಯನದೀತೀರವಾಸದಿಂದಲೂ, ಅವಶ್ಯಂಕರಣೀಯವಾದ ಉಪವಾಸವ್ರತದಿಂದಲೂ, ಗುಹನೆಸಗಿದಸತ್ಕಾರಕ್ಕೆ ಸಮ್ಮತಿಸಲಿಲ್ಲವೆಂಬುವೇ ಇಲ್ಲಿನ ಪರಮಾರ್ಥ. "ಇತ್ಯನುನೀತಾವಯಂ" ಎಂಬುದರ ರಹಸ್ಯಾರ್ಥವೂ ಇದೇ ಆಗಿರುತ್ತದೆ.

ತ್ರಯಸ್ಸಂಧ್ಯಾಂ ಸಮುಪಾಸತ ಸಂಹಿತಾಃ ॥ ೧೮ ॥ ಸೌಮಿತ್ರಿಸ್ತು ತತಃ ಪಶ್ಚಾದಕರೋತ್ಸ್ವಾಸ್ತರಂ ಶುಭಂ ॥ ಸ್ವಯಮಾನೀಯ ಬರ್ಹೀಂಷಿ ಕ್ಷಿಪ್ರಂ ರಾಘವಕಾರಣಾತ್ ॥ ೧೯ ॥ ತಸ್ಮಿನ್ ಸಮಾವಿಶ ದ್ರಾಮ ಸ್ಸ್ವಾಸ್ತರೇ ಸಹಸೀತಯಾ ॥ ಪ್ರಕ್ಷಾಳ್ಯಚ ತಯೋಃ ಪಾದಾನಪಚಕ್ರಾಮ ಲಕ್ಷ್ಮಣಃ ॥ ೨೦ ॥ ಏತತ್ತದಿಂಗುದೀಮೂಲ ಮಿದಮೇವಚ ತತ್ತೃಣಂ ॥ ಯಸ್ಮಿನ್ ರಾಮಶ್ಚ ಸೀತಾಚ ರಾತ್ರಿಂ ತಾಂ ಶಯಿತಾ ವುಭೌ ॥ ೨೧ ॥ ನಿಯಮ್ಯ ಪೃಷ್ಠೇತು ತಲಾಂಗುಳಿತ್ರವಾನ್ ಶರೈ ಸ್ಸುಪೂರ್ಣಾ ವಿಷುಧೀ ಪರಂತಪಃ ॥ ಮಹದ್ಧನು ಸ್ಸಜ್ಯಮುಪೋಹ್ಯ ಲಕ್ಷ್ಮಣೋ ನಿಶಾಮತಿಷ್ಠತ್ ಪರಿತೋಸ್ಯ ಕೇವಲಂ ॥ ೨೨ ॥

ವಾಗ್ಯತಾಃ - ವಾಙ್ನಿಯಮವುಳ್ಳವರಾಗಿ, ಸಂಹಿತಾಃ-ಸಮಾಧಾನಗೊಂಡು, ಸಂಧ್ಯಾಂ-ಸಂಧ್ಯಾವಂದನೆಯನ್ನು, ಸಮುಪಾಸತ - ಮಾಡಿದರು. ॥ ೧೮ ॥ ತತಃಪಶ್ಚಾತ್ - ಆಬಳಿಕ, ಸೌಮಿತ್ರಸ್ತು - ಲಕ್ಷ್ಮಣನಾದರೆ, ರಾಘವಕಾರಣಾತ್ - ಶ್ರೀರಾಮನ ನಿಮಿತ್ತವಾಗಿ, ಕ್ಷಿಪ್ರಂ - ಜಾಗ್ರತೆಯಾಗಿ, ಸ್ವಯಂ-ತಾನೆ, ಬರ್ಹೀಂಷಿ - ಕುಶಗಳನ್ನು, ಆಹೃತ್ಯ - ತೆಗದುಕೊಂಡು ಬಂದು, ಶುಭಂ-ಶುಭಕರವಾದ, ಸ್ವಾಸ್ತರಂ - ಹಾಸಿಗೆಯನ್ನು, ಅಕರೋತ್ - ಮಾಡಿದನು. ॥ ೧೯ ॥ ತಸ್ಮಿನ್ - ಆಕಾಲದಲ್ಲಿ, ಸ್ವಾಸ್ತರೇ-ಹಾಸಲ್ಪಟ ದರ್ಭೆಗಳ ಶಯನದಲ್ಲಿ, ರಾಮಃ - ಶ್ರೀರಾಮನು, ಸೀತಯಾಸಹ - ಸೀತಾದೇವಿಯೊಡಗೂಡಿ, ಸಮಾವಿಶತ್ - ಕುಳಿತುಕೊಂಡನು, ಲಕ್ಷ್ಮಣಃ - ಲಕ್ಷ್ಮಣನು, ತಯೋಃ - ಆ ಸೀತಾರಾಮದೇವರ, ಪಾದೌ - ಚರಣಗಳನ್ನು, ಪ್ರಕ್ಷಾಳ್ಯ-(೧)ತೊಳದು, ಅಪಚಕ್ರಾಮ-ಹೊರಟುಬಂದನು. ॥ ೨೦ ॥ ಯಸ್ಮಿನ್ - ಯಾವ ಹಾಸಿಗೆಯಲ್ಲಿ, ಸೀತಾರಾಮಶ್ಚ - ಆ ಸೀತಾರಾಮರಿಬ್ಬರೂ, ತಾಂರಾತ್ರಿಂ - ಆ ರಾತ್ರಿಯಲ್ಲಿ, ಶಯಿತೌ - ಮಲಗಿದ್ದರೋ, ತದೇತತ್ - ಆ ಈ ಸ್ಥಳವು, ಇಂಗುದೀಮೂಲಂ - ಇಂಗುದೀವೃಕ್ಷಮೂಲಪ್ರದೇಶವು, ತತ್ತೃಣಂ - ಅದೇತೃಣವು, ಇದಮೇವ - ಇದೇ. ॥ ೨೧ ॥ ತಲಾಂಗುಳಿತ್ರವಾನ್-ಅಂಗೈಮುಚ್ಚಳವೂ ಬೆರಳಿನಕವಚಗಳೂವುಳ್ಳವನಾಗಿ, ಪರಂತಪಃ - ಶತ್ರುಸಂಹಾರಕನಾದ, ಲಕ್ಷ್ಮಣಃ-ಲಕ್ಷ್ಮಣನು, ಶರೈಃ-ಬಾಣಗಳಿಂದ, ಸಂಪೂರ್ಣೌ - ತುಂಬಿರುವ, ಇಷುಧೀ - ಬತ್ತಳಿಕೆಗಳನ್ನು, ಪೃಷ್ಠೇತು - ಹಿಂಭಾಗದಲ್ಲಿ,

ಪಾನಮಾಡಿ, ಶ್ರೀರಾಮನಿಗೋಸುಗ ಮಂಗಳಕರವಾದ ದರ್ಭೆಯಹಾಸಿಗೆಯನ್ನು ನಿರ್ಮಿಸಿದನು. ಆಗ ಶ್ರೀರಾಮನು ಸೀತಾದೇವಿಯೊಡಗೂಡಿ ಆ ಶಯ್ಯೆಯಲ್ಲಿ ಪವಳಿಸಿದನು. ಆ ಸಮಯದಲ್ಲಿ ಲಕ್ಷ್ಮಣನು, ಗಂಗಾನದಿಯ ಕೆಸರಿನಿಂದಮಲಿನವಾಗಿದ್ದ ಆ ದೇವೀದೇವರಪಾದಕಮಲಗಳನ್ನು ತೊಳೆದು ಸ್ವಲ್ಪದೂರದಲ್ಲಿದ್ದ ಬೇರೊಂದುಪ್ರದೇಶದಲ್ಲಿ, ಶ್ರೀಸೀತಾರಾಮರಲ್ಲಿಯೇ ದೃಷ್ಟಿಯುಳ್ಳವನಾಗಿ ಕಾದುಕೊಂಡಿದ್ದನು. ಅಂದಿನರಾತ್ರಿಯಲ್ಲಿ ಆ ಶ್ರೀಸೀತಾರಾಮರು, ಇದೋ ಈ ಗಾರೆಯಗಿಡದಬುಡದಲ್ಲಿಯೇ ಮಲಗಿದ್ದರು. ॥ ೧೭-೨೧ ॥ ಅವರೀರ್ವರೂ ಪವಳಿಸಿದ್ದ ದರ್ಭಶಯನವಿದೇ! ಎಲೈ ಭರತನೇ! ಕೇಳು; ಹಾಗೆ ಆ ಶ್ರೀಸೀತಾರಾಮರು

ಟಿ. (೧) ಇಲ್ಲಿ ಲಕ್ಷ್ಮಣನು ಸೀತಾದೇವಿಯ ಪಾದಗಳನ್ನೂ ತೊಳೆದನೆಂದು ತಿಳಿಯಬಾರದು. ಶ್ರೀರಾಮನ ಪಾದಗಳನ್ನು ಲಕ್ಷ್ಮಣನೇ ತೊಳೆದನು. ಸೀತಾದೇವಿಗೆ ಉದಕಪ್ರದಾನದಿಂದ ಸತ್ಕಾರ ಮಾಡಿದನು ಎಂದು ಅಭಿಪ್ರಾಯ.

ತತಸ್ತ್ವಹಂ ಚೋತ್ತಮ ಬಾಣಚಾಪಧೃತ್
ಸ್ಥಿತೋಽಭವಂ ತತ್ರ ಸಯತ್ರ ಲಕ್ಷ್ಮಣಃ ||
ಅತಂದ್ರಿಭಿ ರ್ಜ್ಞಾತಿಭಿ ರಾತ್ತ ಕಾರ್ಮುಕೈ
ರ್ಮಹೇಂದ್ರಕಲ್ಪಂ ಪರಿಪಾಲಯಂ ಸ್ತದಾ || ೨೩ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಾಶೀತಿತಮಸ್ಸರ್ಗಃ.

ನಿಯಮ್ಯ - ಕಟ್ಟಿಕೊಂಡು, ಮಹತ್ - ದೊಡ್ಡದಾದ, ಧನುಃ - ಧನುಸ್ಸನ್ನು, ಸಜ್ಜಂ-ಹೆದೆಹಗ್ಗವನ್ನು, ಉಪೋಹ್ಯ - ಧರಿಸಿ, ನಿಶಾಂ - ರಾತ್ರಿಯಲ್ಲಿ, ಅಸ್ಯ - ಈ ಶ್ರೀರಾಮನ, ಪರಿತಃ - ಸುತ್ತುಮುತಲೂ, ಕೇವಲಂ - ಬಹಳ ಜಾಗರೂಕತೆಯಿಂದ, ಅತಿಷ್ಠತ್ - ನಿಂತಿದ್ದನು. || ೨೨ || ತತಸ್ತು-ಆಬಳಿಕಲಾದರೆ ಯತ್ರ - ಯಾವಸ್ಥಳದಲ್ಲಿ, ಸಲಕ್ಷ್ಮಣಃ - ಆ ಲಕ್ಷ್ಮಣನು, ಸ್ಥಿತಃ - ನಿಂತಿದ್ದನೋ, ತತ್ರ - ಆ ಸ್ಥಳ ದಲ್ಲಿ, ಅಹಂಚ - ನಾನೂ, ಉತ್ತಮಬಾಣಚಾಪಧೃತ್ - ಉತ್ತಮಗಳಾದ ಬಾಣಗಳನ್ನು ಬಿಲ್ಲನ್ನೂ ಧರಿಸಿದವನಾಗಿ, ಆತ್ತಕಾರ್ಮುಕೈಃ - ಎತ್ತಿಹಿಡಿದ ಧನುಸ್ಸುಳ್ಳ, ಅತಂದ್ರಿಭಿಃ - ಎಚ್ಚರಗೊಂಡಿರುವ, ಜ್ಞಾತಿಭಿಃ - ಬಂಧುಜನರೊಡಗೂಡಿ, ತದಾ - ಆಕಾಲದಲ್ಲಿ, ಮಹೇಂದ್ರಕಲ್ಪಂ - ದೇವೇಂದ್ರನಿಗೆ ಸಮಾ ನನಾದ ಶ್ರೀರಾಮನನ್ನು, ಪರಿಪಾಲಯನ್ - ಪರಿಪಾಲಿಸುತ್ತ, ಸ್ಥಿತಃ - ನಿಂತವನು, ಅಭವಂ-ಆದೆನು. ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತಾಶೀತಿತಮಸ್ಸರ್ಗಃ.

ಶಯನಿಸಿದ್ದ ಕಾಲದಲ್ಲಿ, ಶತ್ರುಗಳೆಲ್ಲರೂ ಪರಿತಪಿಸುವಂತೆಮಾಡುವ ಮಹಾಪರಾಕ್ರಮಶಾಲಿ ಯಾದ ಆ ಲಕ್ಷ್ಮಣನು ಅಂಗಮುಚ್ಚಳವೂ, ಬೆರಳ್ಕವಚವೂ ಉಳ್ಳವನಾಗಿ, ಬಾಣಬತ್ತಳಿಕೆ ಗಳೊಡಗೂಡಿದ ಧನುಸನ್ನುಹಿಡಿದುಕೊಂಡು, ಶ್ರೀಸೀತಾರಾಮರ ಸಂರಕ್ಷಣಾರ್ಥವಾಗಿ ಅವರ ಸುತ್ತಲೂ ಪ್ರದಕ್ಷಿಣಮಾಡುತ್ತಿದ್ದನು. ಆಗ ನಾನೂಸಹ ಆ ಸಮಯದಲ್ಲಿ ಸರ್ವೋತ್ತಮ ಗಳಾದ ಧನುರ್ಬಾಣಗಳನ್ನುಧರಿಸಿ, ಲಕ್ಷ್ಮಣಸ್ವಾಮಿಯಿದ್ದಸ್ಥಳದಲ್ಲಿಯೇ ಮಹಾಜಾಗರೂ ಕತೆಯಿಂದಿರುವವರೂ, ಧನುರ್ಧಾರಿಗಳಾದವರೂಆದ ಬಂಧುಜನರಿಂದ ಪರಿವೃತನಾಗಿ ದೇವೇಂ ದ್ರನಿಗೆಸಮಾನನಾದ ಶ್ರೀರಾಮನನ್ನು ಎಚ್ಚರದಿಂದ ಕಾದುಕೊಂಡಿದ್ದೆನು. || ೨೨-೨೩ ||

ಇಂತಿದು ಗುಹಗದಿತ ಶ್ರೀರಾಮಕೃತ ಶೃಂಗೀಬೇರಪುರನಿವಾಸ ವಿಧಾನಕಥನವೆಂಬ
ಎಂಭತ್ತೇಳನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಅಷ್ಟಾಶೀತಿತಮಸ್ಸರ್ಗಃ.

ತಚ್ಛ್ರುತ್ವಾ ನಿಪುಣಂ ಸರ್ವಂ ಭರತ ಸ್ಸಹಮಂತ್ರಿಭಿಃ ॥ ಇಂಗುದೀ ಮೂಲಮಾಗಮ್ಯ ರಾಮಶಯ್ಯಾ ಮವೇಕ್ಷ್ಯ ತಾಂ ॥ ೧ ॥ ಅಬ್ರವೀ ಜ್ಜನನೀ ಸ್ಸರ್ವಾ ಇಹತೇನ ಮಹಾತ್ಮನಾ ॥ ಶರ್ವರೀ ಶಯಿತಂ ಭೂಮಾವಿದಮಸ್ಯ ವಿಮರ್ದಿತಂ ॥ ೨ ॥ ಮಹಾಭಾಗ! ಕುಲೀನೇನ ಮಹಾಭಾಗೇನ ಧೀಮತಾ ॥ ಜಾತೋ ದಶರಥೇ ನೋರ್ವ್ಯಾಂ ನರಾಮ ಸ್ಸ್ವಪ್ತು ಮರ್ಹತಿ ॥ ೩ ॥ ಅಜಿನೋತ್ತರ ಸಂಸ್ತೀರ್ಣೇ ವರಾಸ್ತರಣ ಸಂಚಯೇ ॥ ಶಯಿತ್ವಾ ಪುರುಷವ್ಯಾಘ್ರಃ ಕಥಂ ಶೇತೇ ಮಹೀತಲೇ ॥ ೪ ॥ ಪ್ರಾಸಾದಾಗ್ರ ವಿಮಾನೇಷು ವಲಭೀಷುಚ

ಭರತಃ - ಭರತನು, ನಿಪುಣಂ - ಸಾವಧಾನವಾಗಿ, ತತ್ಸರ್ವಂ - ಆವೃತ್ತಾಂತವೆಲ್ಲವನ್ನೂ, ಶ್ರುತ್ವಾ - ಕೇಳಿ, ಮಂತ್ರಿಭಿಸ್ಸಹ - ಮಂತ್ರಿಗಳೊಡನೆ, ಇಂಗುದೀಮೂಲಂ - ಗಾರೇಗಿಡದಮೂಲವನ್ನು ಕುರಿತು, ಆಗಮ್ಯ - ಬಂದು, ತಾಂರಾಮಶಯ್ಯಾಂ - ಆ ಶ್ರೀರಾಮನ ಹಾಸಿಗೆಯನ್ನು, ಅವೇಕ್ಷ್ಯ - ಕಂಡು, ಸರ್ವಾಃ - ಸಮಸ್ತರಾದ, ಜನನೀಃ - ತಾಯಿಯರನ್ನುಕುರಿತು, ಅಬ್ರವೀತ್-ನುಡಿದನು. ॥ ೧ ॥ ಇಹ - ಈ ಸ್ಥಳದಲ್ಲಿ, ಮಹಾತ್ಮನಾ - ಮಹಾ ಪ್ರಭಾವವಂತನಾದ, ತೇನ - ಆ ಶ್ರೀರಾಮನಿಂದ, ಇಹ ಭೂಮೌ - ಈ ನೆಲದಲ್ಲಿ, ಶರ್ವರೀ - ರಾತ್ರಿಯು, ಶಯಿತಂ - ನಿದ್ರಿಸಲಾಯಿತು, ಅಸ್ಯ - ಈ ಶ್ರೀರಾಮನಿಂದ, ಇದಂ - ಈ ಸ್ಥಳವು, ವಿಮರ್ದಿತಂ - ಘರ್ಷಣೆಮಾಡಲ್ಪಟ್ಟಿತು. ॥ ೨ ॥ ಮಹಾಭಾಗಕುಲೀನೇನ- ಪುಣ್ಯವಂತನ ಕುಲದಲ್ಲಿಹುಟ್ಟಿದ, ಮಹಾಭಾಗೇನ - ಪುಣ್ಯವಂತನಾದ, ಧೀಮತಾ - ಜ್ಞಾನಿಯಾದ, ದಶರಥೇನ - ದಶರಥಮಹಾರಾಯನಿಂದ, ಜಾತಃ - ಹುಟ್ಟಿದ, ರಾಮಃ - ಶ್ರೀರಾಮನು, ಉರ್ವ್ಯಾಂ - ಭೂಮಿಯಲ್ಲಿ, ಸ್ವಪ್ತುಂ - ಮಲಗಲು, ನಾರ್ಹತಿ - ಯೋಗ್ಯನಲ್ಲ. ॥ ೩ ॥ ಪುರುಷವ್ಯಾಘ್ರಃ - ಪುರುಷ ಶ್ರೇಷ್ಠನಾದ ಶ್ರೀರಾಮನು, ಅಜಿನೋತ್ತರಸಂಸ್ತೀರ್ಣೇ - ಕೃಷ್ಣಾಜಿನವೆಂಬ ಉತ್ತರಾಚ್ಛಾದನೆಯಿಂದ ಹಾಸಿದ, ವರಾಸ್ತರಣಸಂಚಯೇ - ಶ್ರೇಷ್ಠವಾದ ಹಾಸಿಗೆಗಳ ಸಮೂಹದಲ್ಲಿ, ಶಯಿತ್ವಾ - ಮಲಗು

ಗುಹನುರೀತಿಯಾಗಿ ಹೇಳಿದುದೆಲ್ಲವನ್ನೂ ಸಾವಧಾನದಿಂದಾಲಿಸಿದ ಭರತಕುಮಾರನು ಮಂತ್ರಿಗಳೊಡಗೂಡಿ, ಆಗಾರೇಗಿಡದಬುಡಕ್ಕೆಹೋಗಿ, ಶ್ರೀರಾಮಮೂರ್ತಿಯು ಪವಳಿಸಿದ್ದಹಾಸಿಗೆಯನ್ನುನೋಡಿ ತನ್ನತಾಯಿಯರೆಲ್ಲರನ್ನೂನೋಡಿಹೀಗೆಂದನು. “ಓ ಜನನಿಯರೆ! ಮಹಾನುಭಾವನಾದಶ್ರೀರಾಮನು ಈ ಹಾಸಿಗೆಯಲ್ಲಿಯೇ ಮಲಗಿದ್ದನು. ಆದುದರಿಂದಲೇ ಈ ಶಯ್ಯೆಯು ಬಹಳವಾಗಿ ಮರ್ದಿತವಾಗಿರುವುದು. ನೋಡಿರಿ; ಮಹಾಪೂಜ್ಯನಾದ ಇಕ್ಷ್ವಾಕುಮಹಾರಾಜನ ಸತ್ಕುಲದಲ್ಲಿಜನ್ಮವೆತ್ತಿದವನೂ, ಮಹಾನುಭಾವನೂ ಪೂಜನೀಯನೂ, ಮಹಾಬುದ್ಧಿವಂತನೂಆದ ಮಹಾರಾಜ ದಶರಥನಪುತ್ರನಾದ ಶ್ರೀರಾಮನು ಭೂಮಿಯಮೇಲೆಪವಳಿಸಲು ತಕ್ಕವನಲ್ಲ. ಅಲ್ಲದೆ ಪುರುಷೋತ್ತಮನಾದ ಆತನು ಶ್ರೇಷ್ಠ

ಸರ್ವದಾ ‖ ಹೈಮ ರಾಜತ ಭೌಮೇಷು ವರಾಸ್ತರಣ ಶಾಲೀಷು ‖ ೫ ‖ ಪುಷ್ಪಸಂಚಯ ಚಿತ್ರೇಷು ಚಂದನಾಗರು ಗಂಧಿಷು ‖ ಪಾಂಡರಾಭ್ರ ಪ್ರಕಾಶೇಷು ಶುಕಸಂಘ ರುತೇಷುಚ ‖ ೬ ‖ ಪ್ರಾಸಾದ ವರವರ್ಯೇಷು ಶೀತವತ್ಸು ಸುಗಂಧಿಷು ‖ ಉಷಿತ್ವಾ ಮೇರುಕಲ್ಪೇಷು ಕೃತಕಾಂಚನ ಭಿತ್ತಿಷು ‖ ೭ ‖ ಗೀತ ವಾದಿತ್ರ ನಿರ್ಘೋಷೈ ರ್ವರಾಭರಣ ನಿಸ್ಸ್ವನೈಃ ‖ ಮೃದಂಗ ವರಶಬ್ದೈಶ್ಚ ಸತತ್ರ ಪ್ರತಿಬೋಧಿತಃ ‖ ೮ ‖ ವಂದಿಭಿ ರ್ವಂದಿತಃ ಕಾಲೇ

ತ್ತಿದ್ದು, ಮಹೀತಲೇ - ನೆಲದಲ್ಲಿ, ಕಥಂಶೇತೇ-ಮಲಗಿದನೆಂತೋ. ‖ ೪ ‖ ಪ್ರಾಸಾದಾಗ್ರವಿಮಾನೇಷು-ವಿಮಾನಗಳಂತಿರುವ ಉಪ್ಪರಿಗೆಗಳ ತುದಿಗಳಲ್ಲಿ, ವಲಭೀಷು - ವಿಲಾಸಾರ್ಥವಾಗಿಮಾಡಿಕೊಂಡಿರುವ ಮನೆಗಳಲ್ಲಿಯೂ, ಹೈಮರಾಜತಭೌಮೇಷು ಸುವರ್ಣರಜತಮಣಿವಿಕಾರಗಳಾದ, ವರಾಸ್ತರಣಶಾಲಿಷು - ಶ್ರೇಷ್ಠಗಳಾದ ಹಾಸಿಗೆಗಳಿಂದೊಪ್ಪುತ್ತಿರುವ, ಪುಷ್ಪಸಂಚಯಚಿತ್ರೇಷು-ಹೂಗಳಸಮುದಾಯದಿಂದ ಆಶ್ಚರ್ಯಕರವಾದ, ಚಂದನಾಗರುಗಂಧಿಷು-ಶ್ರೀಗಂಧ ಕೃಷ್ಣಾಗರು ಇವುಗಳವಾಸನೆಯುಳ್ಳ, ಪಾಂಡರಾಭ್ರಪ್ರಕಾಶೇಷು - ಮೇಘಗಳಂತೆ ಬೆಳ್ಳಗಿರುವ, ಶುಕಸಂಘರುತೇಷುಚ - ಗಿಣಿಗಳ ಗುಂಪಿನ ಧ್ವನಿಗಳುಳ್ಳ, ಶೀತವತ್ಸು - ತಣ್ಣಗಿರುವ, ಸುಗಂಧಿಷು - ಸುವಾಸನೆಗಳುಳ್ಳ, ಮೇರುಕಲ್ಪೇಷು-ಮೇರುಪರ್ವತಕ್ಕೆ ಸಮಾನವಾದ, ಕೃತಕಾಂಚನಭಿತ್ತಿಷು - ಮಾಡಲ್ಪಟ್ಟಚಿನ್ನದ ಗೋಡೆಗಳುಳ್ಳ, ಪ್ರಾಸಾದವರವರ್ಯೇಷು - ಶ್ರೇಷ್ಠಗಳಾದ ಉಪ್ಪರಿಗೆಗಳಲ್ಲಿ, ಉಷಿತ್ವಾ - ಮಲಗಿ, ಗೀತವಾದಿತ್ರನಿರ್ಘೋಷೈಃ - ಗಾನಗಳಿಂದಲೂ ವಾದ್ಯವಿಶೇಷಧ್ವನಿಗಳಿಂದಲೂ, ವರಾಭರಣನಿಸ್ಸ್ವನೈಃ ಶ್ರೇಷ್ಠಗಳಾದಒಡವೆಗಳ ಧ್ವನಿಗಳಿಂದಲೂ, ಮೃದಂಗವರಶಬ್ದೈಶ್ಚ - ಶ್ರೇಷ್ಠವಾದ ಮದ್ದಳೆಗಳಧ್ವನಿಗಳಿಂದಲೂ, ತತ್ರ-ಆ ಮನೆಯಲ್ಲಿ, ಪ್ರತಿಬೋಧಿತಃ - ನಿದ್ದೆಯಿಂದೆಬ್ಬಿಸಲ್ಪಟ್ಟ, ಪರಂತಪಃ - ಶತ್ರುಸಂಹಾರಕನಾದ ಶ್ರೀರಾಮನು, ಕಾಲೇ-ಪ್ರಾತಃಕಾಲದಲ್ಲಿ, ವಂದಿಭಿಃ - ಸ್ತುತಿಪಾಠಕರಿಂದಲೂ, ಬಹುಭಿಃ - ಅನೇಕರಾದ. ಸೂತಮಾಗಧೈಃ - ಪುರಾಣದಕಥೆಗಳನ್ನು ಹೇಳುವವರಿಂದಲೂ ವಂಶವನ್ನುಹೊಗಳುವ ಸ್ತುತಿಪಾಠಕರಿಂದಲೂ, ಅನುರೂ

ವಾದ ಚರ್ಮಾಕಾರವಾದ ವಸ್ತ್ರಗಳಿಂದಹಾಸಲಾದುದೂ, ಬಹುಮೃದುವಾದ ಹಾಸುವ ವಸ್ತ್ರಗಳುಳ್ಳುದೂ, ಮೃದುವಾದ ಸ್ಪರ್ಶವುಳ್ಳುದೂಆದ ಶಯನದಲ್ಲಿ ಮಲಗುತ್ತಿದ್ದನಲ್ಲವೆ? ಅಂತಹ ಶ್ರೀರಾಮನು ಈಗ ಭೂಮಿಯಮೇಲೆ ಹೇಗೆಮಲಗಿದನೋ ? ಶತ್ರುಗಳನ್ನು ಪರಿತಪಿಸುವಂತೆಮಾಡುವ ಶ್ರೀರಾಮನು ಯಾವಾಗಲೂ, ವಿಮಾನಾಕಾರಗಳಾದ ಪ್ರಾಸಾದಗಳ ಅಗ್ರಭಾಗಗಳಲ್ಲಿಯೂ, ವಿಲಾಸಭವನಗಳಲ್ಲಿಯೂ ಸುವರ್ಣಮಯಗಳೂ, ಶ್ರೇಷ್ಠಗಳಾದ ಆಸ್ತರಣಗಳುಳ್ಳವೂ, ವಿಚಿತ್ರವಾದುವೂ, ಚಂದನಗಂಧದ, ಅಗರುಧೂಪದ ಪರಿಮಳವುಳ್ಳವೂ, ಬಿಳಿಮುಗಿಲುಗಳಿಗೆ ಸಮಾನವಾದುವೂ, ಗಿಳಿಗಳಗುಂಪಿನ ಧ್ವನಿಗಳುಳ್ಳವೂ, ಮೇರುಪರ್ವತಕ್ಕೆ ಉಪಮಾನಭೂತವಾದುವೂ, ಸುವರ್ಣಮಯವಾದ ಗೋಡೆಗಳುಳ್ಳವೂ, ತಣ್ಣಗಿರುವುವೂ, ಪರಿಮಳವುಳ್ಳವೂ ಆದ ಮಹಾಶ್ರೇಷ್ಠವಾದ ಉಪ್ಪರಿಗೆಗಳಲ್ಲಿಯೂ ವಾಸಿಸುತ್ತಿದ್ದನು. ಅಲ್ಲದೆ ವೀಣಾವೇಣುಪಣವಾದಿ ವಾದ್ಯಗಳ ಧ್ವನಿಗಳಿಂದಲೂ, ಶ್ರೇಷ್ಠವಾದ ಭೂಷಣಗಳ ಶಬ್ದಗಳಿಂದಲೂ ನಿದ್ರೆಯಿಂದೆಚ್ಚೆತ್ತು, ಸೂತಮಾಗಧರಿಂದ ಅನೇಕ

ಬಹುಭಿ ಸ್ಸ್ತುತಮಾಗಸ್ತೈಃ ॥ ಗಾಥಾಭಿ ರನುರೂಪಾಭಿಃ ಸ್ತುತಿಭಿಶ್ಚ ಪರಂತಪಃ ॥ ೯ ॥ ಅಶ್ರದ್ಧೇಯಮಿದಂ ಲೋಕೇ ನಸತ್ಯಂ ಪ್ರತಿಭಾತಿಮಾ ॥ ಮುಹ್ಯತೇ ಖಲು ಮೇಭಾವ ಸ್ಸ್ವಪ್ನೋಽಯಮಿತಿ ಮೇ ಮತಿಃ ॥ ೧೦ ॥ ನನೂನಂ ದೈವತಂ ಕಿಂಚಿತ್ ಕಾಲೇನ ಬಲವತ್ತರಂ ॥ ಯತ್ರ ದಾಶರಥೀ ರಾಮೋ ಭೂಮಾವೇವ ಶಯೀತ ಸಃ ॥ ೧೧ ॥ ವಿದೇಹರಾಜಸ್ಯ ಸುತಾ ಸೀತಾಚ ಪ್ರಿಯದರ್ಶನಾ ॥ ದಯಿತಾ ಶಯಿತಾ ಭೂಮೌ ಸ್ನುಷಾ ದಶರಥಸ್ಯಚ ॥ ೧೨ ॥ ಇಯಂ ಶಯ್ಯಾ

ಪಾಭಿಃ - ಯೋಗ್ಯವಾದ, ಗಾಥಾಭಿಃ - ಕತೆಗಳಿಂದಲೂ, ಸ್ತುತಿಭಿಶ್ಚ-ಸ್ತೋತ್ರಗಳಿಂದಲೂ, ವಂದಿತಃ - ನಮಸ್ಕರಿಸಲ್ಪಲುತ್ತಿದ್ದನು. ॥ ೯ ॥ ಲೋಕೇ-ಲೋಕದಲ್ಲಿ, ಇದಂ-ಈ ನೆಲದಲ್ಲಿಮಲಗಿದನೆಂಬ ಮಾತು, ಅಶ್ರದ್ಧೇಯಂ - ಕೇಳತಕ್ಕದಲ್ಲವಾತದುವುದು, ಮಾ - ನನಗೆ, ಸತ್ಯಂ ಯಥಾರ್ಥವಾಗಿ, ನಪ್ರತಿಭಾತಿ-ತೋರುವದಿಲ್ಲ, ಮೇ - ನನ್ನ, ಭಾವಃ-ಬುದ್ಧಿಯು, ಮುಹ್ಯತೇಖಲು-ಮಂಕಾಗುತ್ತಿರುವುದು, ಅಯಂ-ಇದು, ಸ್ವಪ್ನ ಇತಿ - ಸ್ವಪ್ನವೆಂದು, ಮೇ - ನನ್ನ, ಮತಿಃ - ಬುದ್ಧಿಯು. ॥೧೦॥ ದಾಶರಥಿಃ-ದಶರಥ ರಾಯನ ಮಗನಾದ, ಸಃರಾಮಃ - ಆ ಶ್ರೀರಾಮನು, ಯತ್ರ - ಯಾವಕಾರಣ, ಭೂಮಾವೇವ-ಭೂಮಿ ಯಲ್ಲಿಯೇ, ಶಯಿತಾ ಮಲಗಿದವನಾದನೋ, ತಸ್ಮಾತ್ - ಆ ಕಾರಣ, ಕಾಲಾತ್ - ಕಾಲಕ್ಕಿಂತಲೂ, ದೈವಂ - ಅದೃಷ್ಟವು, ಬಲವತ್ತರಂ - ಬಲವತ್ತರವಾದುದು, ಕಿಂಚಿತ್-ಯಾವುದು, ನ-ಅಲ್ಲ, ನೂನಂ-ನಿಶ್ಚಯವು. ॥ ೧೧ ॥ ವಿದೇಹರಾಜಸ್ಯ - ಜನಕರಾಯನಿಗೆ, ಸುತಾ - ಮಗಳಾದ, ಪ್ರಿಯದರ್ಶನಾ - ಮನೋಹರವಾದ ನೋಟವುಳ್ಳ, ದಶರಥಸ್ಯ - ದಶರಥರಾಯನಿಗೆ, ಸ್ನುಷಾ - ಸೊಸೆಯಾದ, ದಯಿತಾ-ಪ್ರೇಮಪಾತ್ರಳಾದ, ಸೀತಾ - ಸೀತಾದೇವಿಯು, ಭೂಮೌ - ನೆಲದಲ್ಲಿ, ಶಯಿತಾ - ಮಲಗಿದಳು. ॥೧೨॥ ಮಮ - ನನ್ನ, ಭ್ರಾತುಃ - ಅಣ್ಣನಿಗೆ, ಇಯಂ - ಇದೆ, ಶಯ್ಯಾ - ಹಾಸಿಗೆಯು, ಇದಂಹಿ-ಈ ಸ್ಥಳವೆ, ಪರಿವರ್ತಿತಂ - ಹಾಸಿಗೆಯಾಗಿ ಪರಿಣಮಿಸಿತು, ಕಠಿನೇ - ಕಠಿನವಾದ, ಸ್ಥಲೇ-ಪ್ರದೇಶದಲ್ಲಿ, ಗಾತ್ರೈಃ-ಅವಯವಗಳಿಂದ, ಸರ್ವಂ - ಸಮಸ್ತವಾದ, ತೃಣಂ - ಹುಲ್ಲು, ವಿಮೃದಿತಂ ಮರ್ದನಮಾಡಲ್ಪಟ್ಟಿತು. ॥ ೧೩ ॥ ಸೀತಾ - ಸೀತಾದೇವಿಯು, ಸಾಭರಣಾ-ಒಡವೆಗಳಿಂದೊಡಗೂಡಿದವಳಾಗಿ, ಅಸ್ಮಿಂಶಯನೇ

ಪ್ರಕಾರವಾಗಿ ಸ್ತುತಿಗೈಸಿಕೊಳ್ಳುತ್ತಿದ್ದ ನಮ್ಮಣ್ಣನಾದಶ್ರೀರಾಮನು ಈ ಸ್ಥಳದಲ್ಲಿ ಹೇಗೆ ವಾಸಮಾಡಿದನೊ? ಈ ವಿಷಯವು ನನ್ನಮನಸ್ಸಿಗೆ ನಂಬಿಕೆಯನ್ನುಂಟುಮಾಡದಿರುವುದು. ನನ್ನಮನಸ್ಸು ಭ್ರಾಂತವಾಗಿ ಹೋಗಿರುವುದು. ಇದು ಸ್ವಪ್ನವಿರಬಹುದೆ? ॥ ೧-೧೦ ॥ ವಾಸ್ತವವಾಗಿದ್ದರೆ ನನಗೀರೀತಿಯಾಗಿ ತೋರಲು ಕಾರಣವೇನು? ದಶರಥರಾಜನಂದನನಾದ ಶ್ರೀರಾಮನು ನೆಲದಮೇಲೆ ಮಲಗಿದ್ದನೆಂಬ ಸಂಗತಿಯನ್ನು ವಿಚಾರಮಾಡಿನೋಡಿದರೆ ದೈವಕ್ಕಿಂತಲೂ ಕಾಲಗತಿಯು ಮಿಗಿಲಾದುದೆಂದು ಯೋಚಿಸುತ್ತಿದ್ದೇನೆ. ಅಹ! ದೈವವು ಶ್ರೀರಾಮನನ್ನು ನೆಲದಮೇಲೆ ಮಲಗುನಂತೆ ಮಾಡಿತಲ್ಲವೆ? ಆಹ! ದಶರಥರಾಯನಸೊಸೆಯೂ, ವಿದೇಹರಾಜನಾದ ಜನಕಚಕ್ರೇಶ್ವರನಪುತ್ರಿಯೂ, ನೋಡಲು ಮನೋಹರಳಾದವಳೂ, ಶ್ರೀರಾಮಮೂರ್ತಿಯ ಭಾರ್ಯೆಯಾದವಳೂ ಆದ ಸೀತಾದೇವಿಯು ಭೂಮಿಯಮೇಲೆ ಮಲಗಿಕೊಂಡು ನಿದ್ರಿಸಿದಳಲ್ಲವೆ? ॥ ೧೧-೧೨ ॥ ಓ ಜನನಿಯರಿರಾ! ಇದು ನಮ್ಮಣ್ಣನಾದ ಶ್ರೀ

ಮನು ಭ್ರಾತುರಿದಂಹಿ ಪರಿವರ್ತಿತಂ ॥ ಸ್ಥಂಡಿಲೇ ಕಠಿನೇ ಸರ್ವಂ ಗಾತ್ರೈ ರ್ವಿಮೃದಿತಂ ತೃಣಂ ॥ ೧೩ ॥ ಮನ್ಯೇ ಸಾಭರಣಾ ಸುಪ್ತಾ ಸೀತಾಸ್ಮಿನ್ಶಯ ನೋತ್ತಮೇ ॥ ತತ್ರತತ್ರಹಿ ದೃಶ್ಯಂತೇ ಸಕ್ತಾಃ ಕನಕಬಿಂದವಃ ॥ ೧೪ ॥ ಉತ್ತರೀಯ ಮಿಹಾಸಕ್ತಂ ಸುವ್ಯಕ್ತಂ ಸೀತಯಾ ತದಾ ॥ ತಥಾಹ್ಯೇತೇ ಪ್ರಕಾ ಶಂತೇ ಸಕ್ತಾಃ ಕೌಶೇಯ ತಂತವಃ ॥ ೧೫ ॥ ಮನ್ಯೇ ಭರ್ತುಸ್ಸುಖಾ ಶಯ್ಯಾ ಯೇನ ಬಾಲಾ ತಪಸ್ವಿನೀ ॥ ಸುಕುಮಾರೀ ಸತೀ ದುಃಖಂ ನವಿಜಾನಾತಿ ಮೈಥಿಲೀ ॥ ೧೬ ॥ ಹಾ! ಹಂತಾಸ್ಮಿ! ನೃಶಂಸೋಽಹಂ! ಯತ್ಸಭಾರ್ಯಃ

ತ್ತಮೇ - ಈ ಉತ್ತಮವಾದ ತೃಣರೂಪಶಯನದಲ್ಲಿ, ಸುಪ್ತಾ-ಮಲಗಿದಳು, ಇತಿ-ಇಂತೆಂದು, ಮನ್ಯೇ-ಎಣಿಸುತ್ತೇನೆ, ಹಿ - ಯಾವಕಾರಣ, ತತ್ರತತ್ರ - ಅಲ್ಲಲ್ಲಿ, ಸಕ್ತಾಃ - ಅಂಟಿಕೊಂಡಿರುವ, ಕನಕಬಿಂದವಃ - ಚಿನ್ನದತುಂಡುಗಳು, ದೃಶ್ಯಂತೇ - ಕಾಣಲ್ಪಡುತ್ತವೆ. ॥ ೧೪ ॥ ಇಹ-ಈ ಸ್ಥಳದಲ್ಲಿ, ಸೀತಯಾ-ಸೀತಾದೇವಿಯಿಂದ, ಉತ್ತರೀಯಂ - ಸೆರಗು, ತದಾ-ಆ ಮಲಗುವಕಾಲದಲ್ಲಿ, ಸಕ್ತಂ-ತಗುಲಿಕೊಂಡಿತು, ಸುವ್ಯಕ್ತಂ - ಸ್ಪಷ್ಟವು, ತಥಾಹಿ - ಹಾಗೆಯೇಸರಿ, ಏತೇ-ಈ, ಸಕ್ತಾಃ-ತಗುಲಿಕೊಂಡಿರುವ, ಕೌಶೇಯ ತಂತವಃ - ಪಟ್ಟುವಸ್ತ್ರದ ಎಳೆಗಳು, ಪ್ರಕಾಶಂತೇ - ಕಾಣುತ್ತಲಿವೆ. ॥ ೧೫ ॥ ಯೇನ - ಯಾವಕಾರಣ, ಬಾಲಾ - ಬಾಲ್ಯಾವಸ್ಥೆಯುಳ್ಳ, ತಪಸ್ವಿನೀ - ದೈನ್ಯವಂತಳಾದ, ಸುಕುಮಾರೀ - ಮೃದುಶರೀರವುಳ್ಳ, ಸತೀ - ಪತಿವ್ರತೆಯಾದ, ಮೈಥಿಲೀ - ಸೀತಾದೇವಿಯು, ದುಃಖಂ - ದುಃಖವನ್ನು, ನಜಾನಾತಿ - ಅರಿಯಳೋ, ತಸ್ಮಾತ್ - ಆ ಕಾರಣ, ಸ್ತ್ರಿಯಃ - ಹೆಂಗಸಿಗೆ, ಭರ್ತುಃ - ಗಂಡನ, ಶಯ್ಯಾ - ಹಾಸಿಗೆಯು, ಸುಖಾ - ಸುಖಕರವಾದುದೆಂದು, ಮನ್ಯೇ - ತಿಳಿದಿದ್ದೇನೆ. ॥ ೧೬ ॥ ರಾಘವಃ - ಶ್ರೀರಾಮನು, ಯತ್-ಯಾವಕಾರಣ, ಮಮಕೃತೇ - ನನ್ನನಿಮಿತ್ತವಾಗಿ, ಸಭಾರ್ಯಃ-ಹೆಂಡತಿಯೊಡಗೂಡಿ, ಅನಾಥವತ್-ದಿಕ್ಕಿಲ್ಲದವನಂತೆ, ಈದೃಶೀಂ - ಇಂತಹ ತೃಣರೂಪವಾದ, ಶಯ್ಯಾಂ-ಹಾಸಿಗೆಯಲ್ಲಿ, ಅಧಿಶೇತೇ-ಮಲಗಿದನೋ, ತಸ್ಮಾತ್ - ಆ ಕಾರಣ, ಅಹಂ - ನಾನು, ನೃಶಂಸಃ - ಕೃತಘ್ನನು, ಅಸ್ಮಿ - ಆದೆನು. ॥೧೭॥

ರಾಮನ ಶಯ್ಯೆಯು; ಈ ಶಯ್ಯೆಯಲ್ಲಿಯೇ ನಮ್ಮಣ್ಣನಾದ ಆತನುಶಯನಿಸಿದ್ದನು; ಆದುದರಿಂದಲೇ, ಕಠಿನವಾದ ಈ ನೆಲದಲ್ಲಿರುವ ಹುಲ್ಲೆಲ್ಲವೂ ಮರ್ದಿತವಾಗಿರುವುದು. ಶ್ರೇಷ್ಠವಾದ ಈ ಶಯ್ಯೆಯಲ್ಲಿಯೇ ಸೀತಾದೇವಿಯು ಮಾರ್ಗಾಯಾಸದಿಂದ ಆಭರಣಗಳನ್ನು ತೆಗೆಯಲಾರದೆ, ಅವುಗಳೊಡನೆಯೇ ಮಲಗಿದ್ದಂತೆ ತೋರುತ್ತದೆ. ಆದುರಿಂದಲೇ ಈ ಶಯ್ಯೆಯಲ್ಲಿ, ಅಲ್ಲಲ್ಲಿ ಕನಕಾಭರಣಗಳ ಸಮ್ಮರ್ದವು ಕಾಣುತ್ತಿರುವುದು. ಆಗಲೇ ಸೀತಾದೇವಿಯ ಉತ್ತರೀಯವು ಇಲ್ಲಿತಗುಲಿಕೊಂಡಿದ್ದುದು ಸ್ಪಷ್ಟವಾಗಿ ಕಾಣುತ್ತಿರುವುದು. ಈ ಹಾಸಿಗೆಯಲ್ಲಿ ಪಟ್ಟುವಸ್ತ್ರದೆಳೆಗಳು ಅಲ್ಲಲ್ಲಿ ತಗುಲಿಕೊಂಡಿವೆ. ಇವೂ ಸ್ಪಷ್ಟವಾಗಿ ಕಾಣುತ್ತಿವೆ; ನೋಡಿರಿ; ವಯಸ್ಸಿನಲ್ಲಿ ಚಿಕ್ಕವಳೂ, ಕರುಣಿಸಲು ತಕ್ಕವಳೂ, ಕೋಮಲವಾದ ಅವಯವಗಳುಳ್ಳವಳೂ, ಪತಿವ್ರತೆಯೂ, ಮಿಥಿಲಾಧಿಪನಾದ ಜನಕರಾಯನಕುಮಾರಿಯೂ ಆದ ಸೀತಾದೇವಿಗೆ ಪತಿಯೆಲ್ಲಿರುವನೋ, ಅಲ್ಲಿಯೇ ಸುಖವುಂಟಾಗಿರುವುದೆಂಬುದು ನಿಜವೆಂದು ಯೋಚಿಸುತ್ತಿದ್ದೇನೆ. ಅಯ್ಯೋ! ಶ್ರೀರಾಮನು ನನ್ನನಿಮಿತ್ತದಿಕ್ಕಿಲ್ಲದವನಂತೆ ಭಾರ್ಯೆಯೊಡಗೂಡಿ ಇಂತಹ ಕಠಿನ

ಕೃತೇ ಮಮ ॥ ಈದೃಶೀಂ ರಾಘವ ಶ್ಯಯ್ಯಾ ಮಧಿಶೇತೇ ಹ್ಯನಾಥವತ್ ॥೧೭॥ ಸಾರ್ವಭೌಮಕುಲೇ ಜಾತ ಸ್ಸರ್ವಲೋಕಸ್ಯ ಸಮ್ಮತಃ ॥ ಸರ್ವಲೋಕಪ್ರಿಯ ಸ್ತ್ಯಕ್ತ್ವಾ ರಾಜ್ಯಂ ಸುಖಮನುತ್ತಮಂ ॥ ೧೮ ॥ ಕಥಮಿಂದೀವರಶ್ಯಾಮೋ ರಕ್ತಾಕ್ಷಃ ಪ್ರಿಯದರ್ಶನಃ ॥ ಸುಖಭಾಗೀ ನದುಃಖಾರ್ಹಃ ಶಯಿತೋ ಭುವಿ ರಾಘವಃ ॥ ೧೯ ॥ ಧನ್ಯಃಖಲು! ಮಹಾಭಾಗೋ ಲಕ್ಷ್ಮಣ ಶ್ಶುಭಲಕ್ಷಣಃ ॥ ಭ್ರಾತರಂ ವಿಷಮೇ ಕಾಲೇ ಯೋ ರಾಮ ಮನುವರ್ತತೇ ॥ ೨೦ ॥ ಸಿದ್ಧಾರ್ಥಾ ಖಲು ವೈದೇಹೀ ಪತಿಂ ಯಾಽನುಗತಾ ವನಂ ॥ ವಯಂ ಸಂಶಯಿತಾ ಸ್ಸರ್ವೇ ಹೀನಾಸ್ತೇನ ಮಹಾತ್ಮನಾ ॥ ೨೧ ॥ ಅಕರ್ಣಧಾರಾ ಪೃಥಿವೀ ನೌರಿವ ಪ್ರತಿ

ಸಾರ್ವಭೌಮಕುಲೇ - ಚಕ್ರವರ್ತಿಗಳವಂಶದಲ್ಲಿ, ಜಾತಃ - ಹುಟ್ಟಿದ, ಸರ್ವಲೋಕಸ್ಯ - ಎಲ್ಲಜನಕ್ಕೂ, ಸಮ್ಮತಃ - ಇಷ್ಟನಾದ, ಸರ್ವಲೋಕಪ್ರಿಯಃ-ಎಲ್ಲಲೋಕಕ್ಕೂ ಪ್ರಿಯಂಕರನಾದ, ಇಂದೀವರಶ್ಯಾಮಃ-ನೀಲೋತ್ಪಲದಂತೆ ಶ್ಯಾಮಲವರ್ಣನಾಗಿರುವ, ರಕ್ತಾಕ್ಷಃ - ಕೆಂಗಣ್ಣುಗಳುಳ್ಳ, ಪ್ರಿಯದರ್ಶನಃ - ಇಷ್ಟವಾದ ನೋಟವುಳ್ಳ, ಸುಖಭಾಗೀ - ಸುಖಕ್ಕೆಪಾತ್ರನಾದ, ನದುಃಖಾರ್ಹಃ - ದುಃಖದಿಂದ ಬಾಧಿತನಾಗದಿರುವ, ರಾಘವಃ - ಶ್ರೀರಾಮನು, ಸುಖಂ - ಸುಖಕರವಾದ, ಅನುತ್ತಮಂ - ಸರ್ವೋತ್ತಮವಾದ, ರಾಜ್ಯಂ - ರಾಜ್ಯವನ್ನು, ತ್ಯಕ್ತ್ವಾ - ಬಿಟ್ಟು, ಭುವಿ - ನೆಲದಲ್ಲಿ, ಶಯಿತಃ-ಮಲಗಿದನೋ, ತಸ್ಮಾತ್ - ಆ ಕಾರಣ, ಅಹಂ - ನಾನು, ನೃಶಂಸಃ - ಕೃತಘ್ನನು. ॥ ೧೯ ॥ ಶುಭಲಕ್ಷಣಃ - ಶುಭಕರವಾದಲಕ್ಷಣಗಳುಳ್ಳ, ಯಃ - ಯಾವಲಕ್ಷ್ಮಣನು, ವಿಷಮೇಕಾಲೇ-ಕಷ್ಟಕಾಲದಲ್ಲಿ, ಭ್ರಾತರಂ-ಅಣ್ಣನಾದ, ರಾಮಂ-ಶ್ರೀರಾಮನನ್ನು, ಅನುವರ್ತತೇ - ಅನುಸರಿಸಿರುವನೊ, ಮಹಾಭಾಗಃ - ಮಹಾಪುಣ್ಯವಂತನಾದ, ಸಃ ಲಕ್ಷ್ಮಣಃ - ಆ ಲಕ್ಷ್ಮಣನು, ಧನ್ಯಃಖಲು - ಕೃತಾರ್ಥನಲ್ಲವೆ. ॥ ೨೦ ॥ ವನಂ - ಅರಣ್ಯವನ್ನು. ಯಾ-ಯಾವಸೀತಾದೇವಿಯು, ಪತಿಂ - ಗಂಡನನ್ನು, ಅನುಗತಾ - ಅನುಸರಿಸಿಹೋದಳೋ, ಸಾವೈದೇಹೀ - ಆ ಸೀತಾದೇವಿಯು, ಸಿದ್ಧಾರ್ಥಾಖಲು - ಕೃತಾರ್ಥಳಲ್ಲವೆ, ಸರ್ವೇ - ಸಮಸ್ತರಾದ, ವಯಂ - ನಾವು, ಮಹಾತ್ಮನಾ - ಮಹಾತ್ಮನಾದ, ತೇನ - ಆ ಶ್ರೀರಾಮನಿಂದ, ಹೀನಾಃ - ರಹಿತರಾದೆವು, ಸಂಶಯಿತಾಃ-ನಮ್ಮಸೇವೆಯನ್ನು ಆತನು ಗ್ರಹಿಸುವನೋ ಇಲ್ಲವೋ ಎಂಬ ಸಂಶಯಗ್ರಸ್ತರಾಗಿದ್ದೇವೆ. ॥ ೨೧ ॥ ದಶ

ವಾದ ಶಯ್ಯೆಯಲ್ಲಿ ಮಲಗಿಸಿದ್ದಿಸಿದನಲ್ಲವೆ? ಅಯ್ಯೋ; ನಾನು ಘಾತಕನು : ಅನ್ಯಾಯವಾಗಿ ಹತನಾದೆನು! ಸಾರ್ವಭೌಮರವಂಶದಲ್ಲಿಜನಿಸಿದವನೂ, ಸಕಲಲೋಕಗಳಿಗೂ ಸಮ್ಮತನಾದವನೂ, ಎಲ್ಲಲೋಕದವರಿಗೂ ಪ್ರಿಯಂಕರನಾದವನೂ, ಕನ್ನೈದಿಲೆಯಂತೆ ಶ್ಯಾಮಲವರ್ಣವುಳ್ಳವನೂ, ಕೆಂಪಾದಕಂಗಳುಳ್ಳವನೂಆದ ಶ್ರೀರಾಮನು ಈರೀತಿ ಕಠಿನವಾದ ಹಾಸಿಗೆಯಲ್ಲಿ ಮಲಗಿಕೊಂಡನಲ್ಲವೆ? ಶುಭಲಕ್ಷಣಗಳುಳ್ಳವನಾದ ಲಕ್ಷ್ಮಣನು ಕಷ್ಟಕಾಲದಲ್ಲಿ ಅಣ್ಣನಾದ ಶ್ರೀರಾಮನನ್ನುಸೇವಿಸುವುದರಿಂದ ಧನ್ಯನಾದವನೆಂದು ಯೋಚಿಸುತ್ತೇನೆ. ಆತನನ್ನುಹಿಂಬಾಲಿಸಿ ಅರಣ್ಯಕ್ಕೆನಡೆದ ಸೀತಾದೇವಿಯೂ ಧನ್ಯಳಾದಳು. ಶ್ರೀರಾಮನನ್ನಗಲಿದ ನಾವೆಲ್ಲರೂ ಕೀಳಾದೆವು. ಈಗನಾವೆಲ್ಲರೂಆತನಿಗೆಸೇವಕರಾಗಿರುವದನ್ನುಆತನುಅಂಗೀಕರಿಸುತ್ತಾನೆಯೇ ಇಲ್ಲವೊ ಎಂಬ ಸಂಶಯವು ನನಗುಂಟಾಗಿರುವುದು. ॥ ೧೩-೨೧ ॥ ಎಂದೆಮ ಮರಣ, ಅಣ್ಣನ

ಭಾತಿ ಮಾ || ಗತೇ ದಶರಥೇ ಸ್ವರ್ಗಂ ರಾಮೇಚಾರಣ್ಯ ಮಾಶ್ರಿತೇ || ೨೨ ||
ನಚ ಪ್ರಾರ್ಥಯತೇ ಕಶ್ಚಿನ್ಮನಸಾಪಿ ವಸುಂಧರಾಂ || ವನೇಪಿ ವಸತಸ್ತಸ್ಯ ಬಾಹು
ವೀರ್ಯಾಭಿ ರಕ್ಷಿತಾಂ || ೨೩ || ಶೂನ್ಯಸಂವರಣಾರಕ್ಷಾ ಮಯಂತ್ರಿತ ಹಯ
ದ್ವಿಪಾಂ || ಅಪಾವೃತ ಪುರದ್ವಾರಾಂ ರಾಜಧಾನೀ ಮರಕ್ಷಿತಾಂ || ೨೪ ||
ಅಪ್ರಹೃಷ್ಟ ಬಲಾನ್ಯೂನಾಂ ವಿಷಮಸ್ಥಾ ಮನಾವೃತಾಂ || ಶತ್ರವೋ ನಾಭಿಮ
ನ್ಯಂತೇ ಭಕ್ಷ್ಯಾ ನ್ವಿಷಕೃತಾನಿವ || ೨೫ || ಅದ್ಯ ಪ್ರಭೃತಿ ಭೂಮೌತು ಶಯಿ
ಷ್ಯೇಹಂ ತೃಣೇಷು ವಾ || ಫಲಮೂಲಾಶನೋ ನಿತ್ಯಂ ಜಟಾಚೀರಾಣಿ
ಧಾರಯನ್ || ೨೬ || ತಸ್ಯಾರ್ಥ ಮುತ್ತರಂ ಕಾಲಂ ನಿವತ್ಸ್ಯಾಮಿ ಸುಖಂ ವನೇ ||

ರಥೇ - ದಶರಥರಾಯನು, ಸ್ವರ್ಗಂ - ಸ್ವರ್ಗವನ್ನು, ಗತೇ - ಹೊಂದಲು, ರಾಮೇಚ - ಶ್ರೀರಾಮನೂ, ಅರಣ್ಯಂ - ಅರಣ್ಯವನ್ನು, ಆಶ್ರಿತೇ - ಹೊಂದಲು, ಪೃಥಿವೀ - ಭೂಮಿಯು, ಅಕರ್ಣಧಾರಾ - ನಾವಿಕ ನಿಲ್ಲದ, ನೌರಿವ - ನಾವೆಯಂತೆ, ನಪ್ರತಿಭಾತಿ - ಪ್ರಕಾಶಿಸುವುದಿಲ್ಲ || ೨೨ || ವನೇ - ಅರಣ್ಯ ದಲ್ಲಿ, ವಸತೋಪಿ - ವಾಸಮಾಡುತ್ತಿದ್ದರೂ, ತಸ್ಯ - ಆ ಶ್ರೀರಾಮನ, ಬಾಹುವೀರ್ಯಾಭಿರಕ್ಷಿತಾಂ - ಭುಜಪರಾಕ್ರಮದಿಂದ ಸಂರಕ್ಷಿಸಲಾದ, ವಸುಂಧರಾಂ - ಭೂಮಿಯನ್ನು, ಕಚ್ಚಿತ್-ಯಾವನೊಬ್ಬನು, ಮನಸಾಪಿ - ಮನಸ್ಸಿನಿಂದಲೂ, ನಪ್ರಾರ್ಥಯತೇಚ - ಕೋರುವದಿಲ್ಲ. || ೨೩ || ಶೂನ್ಯಸಂವರಣಾ ರಕ್ಷಾಂ - ಪ್ರಾಕಾರರಕ್ಷಕರಿಲ್ಲದಿರುವ, ಅಯಂತ್ರಿತಹಯದ್ವಿಪಾಂ-ಕಟ್ಟಲ್ಪಡದಿರುವ ಕುದುರೆಗಳೂ ಆನೆ ಗಳೂ ಉಳ್ಳ, ಅಪಾವೃತಪುರದ್ವಾರಾಂ-ತೆಗೆಯಲ್ಪಟ್ಟ ಊರಿನದಿಡ್ಡೀಬಾಗಿಲುಗಳುಳ್ಳ, ಅರಕ್ಷಿತಾಂ-ಸಂರ ಕ್ಷಣೆಯಿಲ್ಲದಿರುವ, ಅಪ್ರಹೃಷ್ಟಬಲಾಂ - ಸಂತೋಷವಿಲ್ಲದಿರುವ ಸೈನ್ಯವುಳ್ಳ, ನ್ಯೂನಾಂ - ಸಾಧನವಿಹೀ ನವಾದ, ವಿಷಮಸ್ಥಾಂ - ದುರ್ದಶೆಯನ್ನು ಹೊಂದಿದ, ಅನಾವೃತಾಂ - ಬಾಹ್ಯರಕ್ಷಕರಿಲ್ಲದಿರುವ, ರಾಜ ಧಾನೀಂ - ಅಯೋಧ್ಯಾಪಟ್ಟಣವನ್ನು, ಶತ್ರವಃ - ಶತ್ರುಗಳು, ವಿಷಕೃತಾನ್ - ವಿಷದಿಂದಮಿಶ್ರವಾದ, ಭಕ್ಷ್ಯಾನಿವ - ಭಕ್ಷ್ಯಗಳನ್ನಂತೆ, ನಾಭಿಮನ್ಯಂತೇ-ಅಪೇಕ್ಷಿಸುವುದಿಲ್ಲ. ||೨೪-೨೫|| ಅದ್ಯಪ್ರಭೃತಿ - ಈ ದಿನವೊದಲ್ಗೊಂಡು, ನಿತ್ಯಂ - ಯಾವಾಗಲೂ, ಫಲಮೂಲಾಶನಃ - ಫಲಗಳೂ ಕಂದಮೂಲಗಳೂ ಅಶನ ವುಳ್ಳವನಾಗಿ, ಜಟಾಃ - ಜಡೆಗಳನ್ನೂ, ಚೀರಾಣಿಚ-ನಾರುಮಡಿಗಳನ್ನೂ ಉಟ್ಟವನಾಗಿ, ಅಹಂ-ನಾನು, ಭೂಮೌ - ನೆಲದಲ್ಲಾಗಲಿ, ತೃಣೇಷುವಾ ಹುಲ್ಲಿನಮೇಲಾಗಲಿ, ಶಯಿಷ್ಯೇ-ಮಲಗುತ್ತೇನೆ, ತಸ್ಯಾರ್ಥಂ- ಆ ಶ್ರೀರಾಮನಿಗೋಸ್ಕರ, ಉತ್ತರಂಕಾಲಂ - ಆತನಿಂದ ಪ್ರತಿಜ್ಞಾತವಾದ ಹದಿನಾಲ್ಕುಸಂವತ್ಸರಗಳು

ವನವಾಸ ಇವ್ರು ಒದಗಿದುದರಿಂದ ಈ ಸಾಕೇತಸಾಂಮ್ರಾಜವು ನಾವಿಕನಿಲ್ಲದ ನಾವೆಯಂತೆ ಅನಾಯಕವಾಗಿರುವಂತೆಕಾಣುತ್ತದೆ. ಅರಣ್ಯದಲ್ಲಿದ್ದರೂ ಶ್ರೀರಾಮನು, ತೋಳ್ಬಲದಿಂದಸಂರ ಕ್ಷಿತವಾದ ಈ ಭೂಮಿಯನ್ನು ಮನಸ್ಸಿನಲ್ಲಿಯೂ ಎಣಿಸನು. ಈ ಪ್ರಕಾರ ರಕ್ಷಕರಿಲ್ಲದೆಯೂ, ಆನೆಕುದುರೆಗಳನ್ನು ಕಟ್ಟದೆ, ತೆಗೆದೇಇರುವ ಊರಿನದಿಡ್ಡೀಬಾಗಿಲುಗಳಿಂದಲೂ ಸಂತೋಷ ವಿಲ್ಲದ ದುರ್ಗಮಸ್ಥಾನವಾದ ಅಯೋಧ್ಯಾಪಟ್ಟಣವನ್ನು ಶತ್ರುಗಳು ವಿಷಮಿಶ್ರಿತವಾದ ಭಕ್ಷ್ಯ ವನ್ನಂತೆ ಅಪೇಕ್ಷಿಸುವುದಿಲ್ಲ. ||೨೨-೨೫|| ಇಂದು ಮೊದಲು ಕಂದಮೂಲಫಲಗಳನ್ನು ಭುಜಿ ಸುತ್ತ ಜಟಾಧಾರಿಯಾಗಿ ಭೂಮಿಯಲ್ಲಿ ಮಲಗುತ್ತೇನೆ! ಶ್ರೀರಾಮನವನವಾಸಕಾಲವಾದ ಹದಿನಾಲ್ಕುವರುಷಗಳು ನಾನು ಅರಣ್ಯದಲ್ಲಿಯೇ ವಾಸಮಾಡುತ್ತೇನೆ; ಇದು ನಿಶ್ಚಯ.

ತಂಪ್ರತಿಶ್ರವ ಮಾಮುಚ್ಯ ನಾಸ್ಯ ಮಿಥ್ಯಾ ಭವಿಷ್ಯತಿ ॥ ೨೭ ॥ ವಸಂತಂ
ಭ್ರಾತುರರ್ಥಾಯ ಶತ್ರುಘ್ನೋ ಮಾಽನುವತ್ಸ್ಯತಿ ॥ ಲಕ್ಷ್ಮಣೇನ ಸಹ
ತ್ವಾರ್ಯೋ ಹ್ಯಯೋಧ್ಯಾಂ ಪಾಲಯಿಷ್ಯತಿ ॥೨೮॥ ಅಭಿಷೇಕ್ಷ್ಯಂತಿ ಕಾಕುತ್ಸ್ಥ
ಮಯೋಧ್ಯಾಯಾಂ ದ್ವಿಜಾತಯಃ ॥ ಅಪಿಮೇ ದೇವತಾಃ ಕುರ್ಯು ರಿಮಂ
ಸತ್ಯಂ ಮನೋರಥಂ ॥ ೨೯ ॥

ಪ್ರಸಾದ್ಯಮಾನ ಶ್ಶಿರಸಾ ಮಯಾ ಸ್ವಯಂ
ಬಹುಪ್ರಕಾರಂ ಯದಿ ನಾಭಿಪತ್ಸ್ಯತೇ ॥
ತತೋ ನು ವತ್ಸ್ಯಾಮಿ ಚಿರಾಯ ರಾಘವಂ
ವನೇ ವಸನ್ನಾರ್ಹತಿ ಮಾಮುಪೇಕ್ಷಿತುಂ ॥ ೩೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಾಶೀತಿತಮಸ್ಸರ್ಗಃ.

ಕಳೆದಬಳಿಕ, ವನೇ - ಅರಣ್ಯದಲ್ಲಿ, ಅಸ್ಯ - ಈ ಶ್ರೀರಾಮನಿಗೆ, ತಂಪ್ರತಿಶ್ರವಂ - ಆ ಪ್ರತಿಜ್ಞೆಯನ್ನು, ಆಮುಚ್ಯ - ನಾನುಕಟ್ಟಿಕೊಂಡು, ವನೇ - ಅರಣ್ಯದಲ್ಲಿ, ಸುಖಂ - ಸುಖವಾಗಿರುತ್ತೇನೆ, ಪ್ರತಿಜ್ಞಾ - ಪ್ರತಿಜ್ಞೆಯು, ಮಿಥ್ಯಾ - ಸುಳ್ಳು, ನಭವಿಷ್ಯತಿ - ಆಗಲಾರದು. ॥ ೨೬-೨೭ ॥ ಭ್ರಾತುರರ್ಥಾಯ-ಅಣ್ಣನಿಗೋಸುಗ, ವಸಂತಂ - ವನದಲ್ಲಿರುತ್ತಿರುವ, ಮಾ - ನನ್ನನ್ನು, ಶತ್ರುಘ್ನಃ - ಶತ್ರುಘ್ನನು, ಅನುವತ್ಸ್ಯತಿ - ಅನುಸರಿಸಿರುತ್ತಾನೆ, ಆರ್ಯಃ - ಪೂಜ್ಯನಾದಅಣ್ಣನು, ಲಕ್ಷ್ಮಣೇನಸಹ - ಲಕ್ಷ್ಮಣನೊಡಗೂಡಿ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು, ಪಾಲಯಿಷ್ಯತಿಹಿ-ಸಂರಕ್ಷಣೆಮಾಡುವನಷ್ಟೆ. ॥೨೮॥ ದ್ವಿಜಾತಯಃ - ಬ್ರಾಹ್ಮಣರು, ಕಾಕುತ್ಸ್ಥಂ - ಶ್ರೀರಾಮನನ್ನು, ಅಯೋಧ್ಯಾಯಾಂ - ಅಯೋಧ್ಯಾಪಟ್ಟಣದಲ್ಲಿ, ಅಭಿಷೇಕ್ಷ್ಯಂತಿ - ಅಭಿಷೇಕಮಾಡುವರು, ದೇವತಾಅಪಿ - ದೇವತೆಗಳೂಕೂಡ, ಮೇ - ನನ್ನ, ಇಮಂಮನೋರಥಂ - ಈ ಸಂಕಲ್ಪವನ್ನು, ಸತ್ಯಂ - ಸಫಲವನ್ನಾಗಿ, ಕುರ್ಯುಃ-ಮಾಡಿಯಾರು, ॥ ೨೯ ॥ ಮಯಾ - ನನ್ನಿಂದ, ಶಿರಸಾ - ಮಂಡೆಯಿಂದ, ಸ್ವಯಂ - ತಾನು, ಬಹುಪ್ರಕಾರಂ - ಬಹುಬಗೆಯಾಗಿ, ಪ್ರಸಾದ್ಯಮಾನಃ - ಕೇಳಿಕೊಂಡವನಾದರೂ, ನಾಭಿಪತ್ಸ್ಯತೇಯದಿ - ಸಮ್ಮತಿಸಲ್ಪಡದೇ ಹೋದರೆ, ತತಃ - ಬಳಿಕ. ಚಿರಾಯ - ಬಹಳಕಾಲ, ರಾಘವಂ - ಶ್ರೀರಾಮನನ್ನು, ಅನುವತ್ಸ್ಯಾಮಿ - ಅನುಸರಿಸಿರುವೆನು, ವನೇ - ಅರಣ್ಯದಲ್ಲಿ, ವರ್ಸ - ಇರುತ್ತ, ಮಾಂ - ನನ್ನನ್ನು, ಉಪೇಕ್ಷಿತುಂ ಉದಾಸೀನಮಾಡಲು, ನಾರ್ಹತಿ - ಅರ್ಹನಾಗಲಾರನು. ॥ ೩೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಾಶೀತಿತಮಸ್ಸರ್ಗಃ.

ಅಣ್ಣನನಿಮಿತ್ತವಾಗಿ ವನದಲ್ಲಿರುವ ನನ್ನೊಡನೆಶತ್ರುಘ್ನನೂ ವಾಸಮಾಡುತ್ತಾನೆ. ಲಕ್ಷ್ಮಣನೊಡಗೂಡಿದಶ್ರೀರಾಮನು ರಾಜ್ಯವಾಳುತ್ತಾನೆ. ವಿಪ್ರವರೇಣ್ಯರೆಲ್ಲರೂ ಶ್ರೀರಾಮನಿಗೆ ರಾಜ್ಯಾಭಿಷೇಕಮಂಗೈಯ್ಯುತ್ತಾರೆ. ದೇವತೆಗಳುನನ್ನಮನೋರಥವನ್ನೀಡೇರಿಸುತ್ತಾರೆ. ನಾನು ಎಷ್ಟುಬಗೆಯಿಂದಬೇಡಿಕೊಂಡರೂಶ್ರೀರಾಮನುರಾಜ್ಯಾಭಿಷೇಕಕ್ಕೊಪ್ಪದಿದ್ದರೆ,ನಾನುಆತನನ್ನೇ ಹಿಂಬಾಲಿಸುತ್ತೇನೆ. ಆತನುನನ್ನನ್ನುಉದಾಸೀನ ಮಾಡಲಾರನೆಂದೂಹಿಸುತ್ತೇನೆ.॥ ೨೬-೩೦॥

ಇಂತಿದು ಭರತಸಂತಾಪ ವಿವರಣವೆಂಬ ಎಂಭತ್ತೆಂಟನೆಯ ಸರ್ಗವು
ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕೋನನವತಿತಮಸ್ಸರ್ಗಃ.

ವ್ಯುಷ್ಯ ರಾತ್ರಿಂತು ತತ್ರೈವ ಗಂಗಾಕೂಲೇ ಸರಾಘವಃ ॥ ಭರತಃ ಕಾಲ್ಯಮುತ್ಥಾಯ ಶತ್ರುಘ್ನ ಮಿದ ಮಬ್ರವೀತ್ ॥ ೧ ॥ ಶತ್ರುಘ್ನೋತ್ತಿಷ್ಠ ! ಕಿಂಶೇಷೇ ನಿಷಾದಾಧಿಪತಿಂ ಗುಹಂ ॥ ಶೀಘ್ರಮಾನಯ ಭದ್ರಂತೇ ತಾರಯಿಷ್ಯತಿ ವಾಹಿನೀಂ ॥ ೨ ॥ ಜಾಗರ್ಮಿ ನಾಹಂ ಸ್ವಪಿಮಿ ತಮೇವಾರ್ಯಂ ವಿಚಿಂತಯ‌ರ್ ॥ ಇತ್ಯೇವ ಮಬ್ರವೀ ದ್ಭ್ರಾತ್ರಾ ಶತ್ರುಘ್ನೋಪಿ ಪ್ರಚೋದಿತಃ ॥ ೩ ॥ ಇತಿ ಸಂವದತೋರೇವ ಮನ್ಯೋನ್ಯಂ ನರಸಿಂಹಯೋಃ ॥ ಆಗಮ್ಯ ಪ್ರಾಂಜಲಿಃ

ರಾಘವಃ - ರಘುವಂಶೋತ್ಪನ್ನನಾದ, ಸಭರತಃ - ಆ ಭರತನು, ತತ್ರೈವ - ಆ ಗಾರೆಗಿಡದ ಬುಡದಲ್ಲಿಯೇ, ಗಂಗಾಕೂಲೇ - ಗಂಗಾತೀರದಲ್ಲಿ, ರಾತ್ರಿಂ-ರಾತ್ರಿಯನ್ನು, ವ್ಯುಷ್ಯ ಕಳೆದು, ಕಾಲ್ಯಂ-ಪ್ರಾತಃಕಾಲದಲ್ಲಿ, ಉತ್ಥಾಯ - ಎದ್ದು, ಶತ್ರುಘ್ನಂ - ಶತ್ರುಘ್ನನನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೧ ॥ ಹೇ ಶತ್ರುಘ್ನ - ಎಲೈ ಶತ್ರುಘ್ನನೇ, ಉತ್ತಿಷ್ಠ - ಏಳು, ಕಿಂಶೇಷೇ-ಮಲಗಿರುವೆಯೇಕೆ, ತೇ - ನಿನಗೆ, ಭದ್ರಂ - ಮಂಗಳವು, ಅಸ್ತು - ಆಗಲಿ, ನಿಷಾದಾಧಿಪತಿಂ-ಬೇಡರಿಗೆ ದೊರೆಯಾದ, ಗುಹಂ - ಗುಹನನ್ನು, ಶೀಘ್ರಂ - ಜಾಗ್ರತೆಯಾಗಿ, ಆನಯ - ಕರೆದುಕೊಂಡುಬಾ, ವಾಹಿನೀಂ - ಸೈನ್ಯವನ್ನು, ವಾಹಿನೀಂ - ನದಿಯನ್ನು, ತಾರಯಿಷ್ಯತಿ - ದಾಟಿಸಲಿ. ॥ ೨ ॥ ಇತ್ಯೇವ - ಈಪರಿಯಾಗಿ, ಭ್ರಾತ್ರಾ - ಅಣ್ಣನಿಂದ, ಪ್ರಚೋದಿತಃ - ಪ್ರೇರಿಸಲ್ಪಟ್ಟ, ಶತ್ರುಘ್ನೋಪಿ-ಶತ್ರುಘ್ನನೂ, ಅಹಂ - ನಾನು, ಆರ್ಯಂ - ಪೂಜ್ಯನಾದ, ತಮೇವ - ಆ ಶ್ರೀರಾಮನನ್ನೇ, ವಿಚಿಂತಯ‌ರ್ - ಧ್ಯಾನ ಮಾಡುತ್ತ, ಜಾಗರ್ಮಿ - ಎಚ್ಚರವಾಗಿಯೇ ಇರುವೆನು, ನಸ್ವಪಿಮಿ-ನಿದ್ದೆಹೋಗಲಿಲ್ಲ, ಇತಿ-ಇಂತೆಂದು, ಅಬ್ರವೀತ್ - ನುಡಿದನು. ॥ ೩ ॥ ಇತ್ಯೇವಂ - ಈಪರಿಯಾಗಿ, ನರಸಿಂಹಯೋಃ-ಮನುಷ್ಯಶ್ರೇಷ್ಠರಾದ ಭರತಶತ್ರುಘ್ನರು, ಅನ್ಯೋನ್ಯಂ ಒಬ್ಬರಿಗೊಬ್ಬರು, ಸಂವದತೋಃ - ಮಾತನಾಡುತ್ತಿರಲು, ಗುಹಃ-

---

ಈ ಪ್ರಕಾರವಾಗಿ ರಘುಕುಲೋದ್ಭವನಾದ ಆ ಭರತನು ಶ್ರೀರಾಮಮೂರ್ತಿಯನ್ನೇ ಕುರಿತು ದುಃಖಪಡುತ್ತ ಆ ರಾತ್ರಿಯಲ್ಲಿ ವಾಸಮಾಡಿದನು. ಆ ಬಳಿಕ ಪ್ರಾತಃಕಾಲಕ್ಕೆ ಮೊದಲೆ ನಿದ್ರೆಯಿಂದೆಚ್ಚತ್ತ ಆತನು ತಮ್ಮನಾದ ಶತ್ರುಘ್ನನನ್ನು ಕುರಿತು, “ ತಮ್ಮ ; ಶತ್ರುಘ್ನನೇ ! ನಿದ್ರೆಯಿಂದೇಳು ; ಇನ್ನೂ ನಿದ್ರಿಸುತ್ತಿರುವೆಯೇಕೆ ? ಗುಹನನ್ನು ಜಾಗ್ರತೆಯಾಗಿ ಕರೆದುಕೊಂಡು ಬರುವವನಾಗು. ಇನ್ನು ನಾವು ಈ ಗಂಗಾನದಿಯನ್ನು ಜಾಗ್ರತೆಯಾಗಿ ದಾಟೋಣ ” ಎಂದನು. ಭರತನೀರೀತಿ ನುಡಿಯಲು ಶತ್ರುಘ್ನನು ಅದನ್ನು ಕೇಳಿ, “ ಅಣ್ಣ ; ರಘುಕುಲೋತ್ತಮಾ ; ನಾನು ಪೂಜ್ಯನಾದ ಶ್ರೀರಾಮನನ್ನೇ ಸ್ಮರಿಸುತ್ತ ಎಚ್ಚರದಿಂದಿರುವೆನೇ ಹೊರ್ತು ಸ್ವಲ್ಪನಾದರೂ ನಿದ್ರೆಯನ್ನು ಹೊಂದಲಿಲ್ಲವಲ್ಲ” ಎಂದನು. ಹೀಗೆ ಮಾನವೋತ್ತಮರಾದ ಆ ಭರತಶತ್ರುಘ್ನರು ಸಂಭಾಷಿಸುತ್ತಿರುವ ಸಮಯದಲ್ಲಿಯೇ ನಿಷಾದಾಧಿಪನಾದ

ಕಾಲೇ ಗುಹೋ ಭರತ ಮಬ್ರವೀತ್ ||೪|| ಕಚ್ಚಿತ್ಸುಖಂ ನದೀತೀರೇಽವಾತ್ಸೀಃ
ಕಾಕುತ್ಸ್ಥ! ಶರ್ವರೀಂ || ಕಚ್ಚಿತ್ತೇ ಸಹಸೈನ್ಯಸ್ಯ ತಾವತ್ ಸರ್ವ ಮನಾ
ಮಯಂ ||೫|| ಗುಹಸ್ಯ ವಚನಂ ಶ್ರುತ್ವಾ ತತ್ತು ಸ್ನೇಹಾ ದುದೀರಿತಂ ||
ರಾಮಸ್ಯಾನುವಶೋ ವಾಕ್ಯಂ ಭರತೋಽಪೀದ ಮಬ್ರವೀತ್ ||೬|| ಸುಖಾ
ನಶ್ಶರ್ವರೀ ರಾಜನ್! ಪೂಜಿತಾಶ್ಚಾಪಿ ತೇ ವಯಂ || ಗಂಗಾಂತು ನೌಭಿರ್ಬ
ಹ್ವೀಭಿ ರ್ದಾಶಾ ಸ್ಸಂತಾರಯಂತು ನಃ ||೭|| ತತೋ ಗುಹಸ್ಸಂತ್ವರಿತಂ
ಶ್ರುತ್ವಾ ಭರತಶಾಸನಂ || ಪ್ರತಿಪ್ರವಿಶ್ಯ ನಗರಂ ತಂಜ್ಞಾತಿ ಜನಮಬ್ರವೀತ್
||೮|| ಉತ್ತಿಷ್ಠತ! ಪ್ರಬುಧ್ಯಧ್ವಂ! ಭದ್ರಮಸ್ತು ಚ ವಸ್ಸದಾ! || ನಾವ ಸ್ಸಮುಪ

ಗುಹನು, ಆಗಮ್ಯ - ಬಂದು, ಪ್ರಾಂಜಲಿಃ - ಅಂಜಲಿಬದ್ಧನಾಗಿ, ಭರತಂ - ಭರತನನ್ನು ಕುರಿತು, ಅಬ್ರವೀತ್ - ನುಡಿದನು. || ೪ || ಹೇ ಕಾಕುತ್ಸ್ಥ-ಎಲೈ ಭರತನೆ, ನದೀತೀರೇ-ಗಂಗಾತೀರದಲ್ಲಿ, ಶರ್ವರೀಂ-ರಾತ್ರಿಯಲ್ಲಿ, ಸುಖಂ - ಸುಖವಾಗಿ, ಅವಾತ್ಸೀಃಕಚ್ಚಿತ್ - ವಾಸಮಾಡಿದೆಯಷ್ಟೆ, ಸಹಸೈನ್ಯಸ್ಯ-ಸೈನ್ಯಸಮೇತನಾದ, ತೇತಾವತ್ - ನಿನಗಾದರೆ, ಸರ್ವಂ - ಸಮಸ್ತವೂ, ಅನಾಮಯಂಕಚ್ಚಿತ್ - ಕುಶಲವಷ್ಟೆ. || ೫ || ಸ್ನೇಹಾತ್ - ಸ್ನೇಹದಿಂದ, ಉದೀರಿತಂ - ಹೇಳಲ್ಪಟ್ಟ, ಗುಹಸ್ಯ - ಗುಹನ, ತದ್ವಚನಂ-ಆ ಮಾತನ್ನು, ಶ್ರುತ್ವಾ - ಕೇಳಿ, ರಾಮಸ್ಯ - ಶ್ರೀರಾಮನಿಗೆ, ಅನುವಶಃ-ಸ್ವಾಧೀನನಾದ, ಭರತೋಽಪಿ-ಭರತನೂ, ಇದಂವಾಕ್ಯಂ - ಈ ಮಾತನ್ನು, ಅಬ್ರವೀತ್ - ನುಡಿದನು. || ೬ || ಹೇ ರಾಜನ್ - ಎಲೈ ಅರಸನೆ, ನಃ - ನಮಗೆಲ್ಲರಿಗೂ, ಶರ್ವರೀ - ರಾತ್ರಿಯು, ಸುಖಾ - ಸುಖಕರವಾಗಿತ್ತು, ವಯಮಪಿ - ನಾವೂ, ತೇ - ನಿನ್ನಿಂದ, ಪೂಜಿತಾಃ - ಪೂಜಿಸಲ್ಪಟ್ಟವು, ದಾಶಾಃ-ಬೆಸ್ತರು, ನಃ-ನಮ್ಮನ್ನು, ಬಹ್ವೀಭಿಃ ನೌಭಿಃ - ಅನೇಕನಾವೆಗಳಿಂದ, ಗಂಗಾಂ - ಗಂಗಾನದಿಯನ್ನು, ಸಂತಾರಯಂತು - ದಾಟಿಸಲಿ. ||೭|| ತತಃ - ಬಳಿಕ, ಗುಹಃ - ಗುಹನು, ಸಂತ್ವರಿತಂ-ಜಾಗ್ರತೆಯಾಗಿ, ಭರತಶಾಸನಂ-ಭರತನಾಜ್ಞೆಯನ್ನು, ಶ್ರುತ್ವಾ - ಕೇಳಿ, ನಗರಂ - ಪಟ್ಟಣವನ್ನು ಕುರಿತು, ಪ್ರತಿಪ್ರವಿಶ್ಯ-ಇನ್ನೊಮ್ಮೆ ಪ್ರವೇಶಮಾಡಿ ತಂಜ್ಞಾತಿ ಜನಂ - ಆ ಸ್ವಜನರನ್ನು ಕುರಿತು, ಅಬ್ರವೀತ್ - ನುಡಿದನು. || ೮ || ವಃ - ನಿಮಗೆ, ಸದಾ - ಎಲ್ಲಕಾಲ

ಆ ಗುಹನು ಅಲ್ಲಿಗೆ ಬಂದು ಕೈಗಳನ್ನು ಜೋಡಿಸಿಕೊಂಡು ಭರತಕುಮಾರನನ್ನು ಕುರಿತು, "ಎಲೈ ಕಕುತ್ಸ್ಥಕುಲೋತ್ಪನ್ನನಾದ ಭರತನೆ! ಈ ರಾತ್ರಿಯಲ್ಲಿ ಈ ಗಂಗಾನದೀತೀರದಲ್ಲಿ ಸುಖವಾಗಿ ನಿದ್ರಿಸಿದೆಯಾ? ನಿನ್ನ ಸೈನ್ಯವೆಲ್ಲವೂ ಸುಖವಾಗಿರುವುದೆ?" ಎಂದು ಸ್ನೇಹಪೂರಿತವಾಗಿ ನುಡಿದನು. ಆ ಮಾತುಗಳನ್ನು ಕೇಳಿ ಶ್ರೀರಾಮನನ್ನೇ ಧ್ಯಾನಿಸುತ್ತಿದ್ದ ಆ ಭರತನು ಅವನನ್ನು ಕುರಿತು, "ಎಲೈ ಬೇಡರೊಡೆಯನಾದ ಗುಹನೆ! ನಮಗೆ ರಾತ್ರಿಯೆಲ್ಲವೂ ಸುಖವಾಗಿ ಕಳೆಯಿತು; ನಮಗೆ ನಾನಾ ವಿಧವಾಗಿ ಪೂಜೆಯನ್ನು ಮಾಡಿದೆ. ಅಂತಹ ನೀನು ಈಗ ನಿನ್ನ ಬಂಧುಗಳಾದ ನಿಷಾದರೊಡಗೂಡಿ ಅನೇಕ ದೋಣಿಗಳನ್ನು ತಂದು ನಾನು ಸೈನ್ಯಸಮೇತನಾಗಿ ಈ ಗಂಗಾನದಿಯನ್ನು ದಾಟುವಂತೆ ಮಾಡುವವನಾಗು" ಎಂದು ಹೇಳಿದನು. || ೬-೭ || ಈ ಪ್ರಕಾರವಾಗಿ ಹೇಳಿದ ಭರತನ ಆಜ್ಞಾವಚನವನ್ನು ಕೇಳಿದ ಆ ಗುಹನು ತನ್ನ ಪಟ್ಟಣಕ್ಕೆ ಬಂದು ತನ್ನವರೆಲ್ಲರನ್ನೂ ನೋಡಿ, "ಎಲೈ ಬಂಧುಗಳಿರಾ! ಜಾಗ್ರತೆಯಾಗಿ ಏಳಿರಿ; ನಿಮಗೆ ಸರ್ವಕಾಲದಲ್ಲಿಯೂ ಮಂಗಳವಾಗಲಿ.



गंगा अवतरण

A 7515—Lakshmi Art, Bombay, 8

ಕರ್ಷಧ್ವಂ ತಾರಯಿಷ್ಯಾಮ ವಾಹಿನೀಂ ‖ ೯ ‖ ತೇತಥೋಕ್ತಾ ಸ್ಸಮುತ್ಥಾಯ ತ್ವರಿತಾ ರಾಜಶಾಸನಾತ್ ‖ ಪಂಚನಾವಾಂ ಶತಾನ್ಯಾಶು ಸಮಾನಿನ್ಯು ಸ್ಸಮಂ ತತಃ ‖ ೧೦ ‖ ಅನ್ಯಾ ಸ್ಸ್ವಸ್ತಿಕ ವಿಜ್ಞೇಯಾ ಮಹಾಘಂಟಾಧರಾ ವರಾಃ ‖ ಶೋಭಮಾನಾಃ ಪತಾಕಾಭಿ ರ್ಯುಕ್ತವಾತಾ ಸ್ಸುಸಂಹತಾಃ ‖ ೧೧ ‖ ತತ ಸ್ಸ್ವಸ್ತಿಕ ವಿಜ್ಞೇಯಾಂ ಪಾಂಡುಕಂಬಳ ಸಂವೃತಾಂ ‖ ಸನಂದಿಘೋಷಾಂ ಕಲ್ಯಾಣೀಂ ಗುಹೋ ನಾವಮುಪಾಹರತ್ ‖ ೧೨ ‖ ತಾಮಾರುರೋಹ ಭರತ

ದಲ್ಲಿಯೂ, ಭದ್ರಂ - ಶುಭವು, ಅಸ್ತು - ಆಗಲಿ, ಉತ್ತಿಷ್ಠತ - ಏಳಿರಿ, ಪ್ರಬುಧ್ಯತ-ಎಚ್ಚರಗೊಳ್ಳಿರಿ, ನಾವಃ - ನಾವೆಗಳನ್ನು, ಸಮನುಕರ್ಷಧ್ವಂ - ಎಳೆದುಕೊಂಡುಬನ್ನಿರಿ, ವಾಹಿನೀಂ - ನದಿಯನ್ನು, ತಾರಯಿಷ್ಯಾಮಃ - ದಾಟಿಸೋಣ ‖ ೯ ‖ ತೇ - ಆ ಬೆಸ್ತರು, ತಥಾ - ಆಪರಿಯಾಗಿ, ಉಕ್ತಾಃ - ಹೇಳಲ್ಪಡಲು, ಸಮುತ್ಥಾಯ - ಎದ್ದು, ರಾಜಶಾಸನಾತ್-ರಾಜಾಜ್ಞೆಯಿಂದ, ತ್ವರಿತಾಃ-ತ್ವರೆಗೊಂಡು, ಆಶು - ಜಾಗ್ರತೆಯಾಗಿ, ಸಮಂತತಃ - ಎಲ್ಲಾಕಡೆಯಿಂದಲೂ, ನಾವಾಂ - ನಾವೆಗಳ, ಪಂಚಶತಾನಿ - ಐದುನೂರುಗಳನ್ನು, ಸಮಾನಿನ್ಯುಃ - ತೆಗೆದುಕೊಂಡುಬಂದರು. ‖ ೧೦ ‖ ಅನ್ಯಾಃ- ಈ ಐನೂರುನಾವೆಗಳಿಗಿಂತಲೂ ಭಿನ್ನಗಳಾದ, ಸ್ವಸ್ತಿಕವಿಜ್ಞೇಯಾಃ - ನಾಲ್ಕುಮೂಲೆಗಳೂ ನಾಲ್ಕುಬಾಗಿಲುಗಳೂ ಉಳ್ಳ ಮನೆಯಂತೆತೋರುವ, ಮಹಾಘಂಟಾಧರಾಃ - ದೊಡ್ಡದೊಡ್ಡಘಂಟೆಗಳನ್ನೂ ಧರಿಸಿರುವ, ವರಾಃ-ಶ್ರೇಷ್ಠಗಳಾದ, ಪತಾಕಾಭಿಃ - ಧ್ವಜಗಳಿಂದ, ಶೋಭಮಾನಾಃ- ಹೊಳೆಯುತ್ತಿರುವ, ಯುಕ್ತವಾತಾಃ-ಯಥಾಯೋಗ್ಯವಾದ ಗಾಳಿಯುಳ್ಳ, ಸುಸಂಹತಾಃ - ಚೆನ್ನಾಗಿಬಿಗಿಸಿಕಟ್ಟಿದ, ನಾವಃ - ನಾವೆಗಳನ್ನು, ಸಮಾನಿನ್ಯುಃ - ತೆಗದುಕೊಂಡುಬಂದರು. ‖ ೧೧ ‖ ತತಃ - ಆ ಬಳಿಕ, ಗುಹಃ - ಗುಹನು, ಸ್ವಸ್ತಿಕವಿಜ್ಞೇಯಾಂ - ಸ್ವಸ್ತಿಕವೆಂದು ತಿಳಿಯತಕ್ಕ, ಪಾಂಡುಕಂಬಳಸಂವೃತಾಂ - ಬೆಳ್ಳಗಿರುವ ಕಂಬಳಿಗಳಿಂದಹೊದಿಸಲ್ಪಟ್ಟ, ಸನಂದಿಘೋಷಾಂ - ಗೆಜ್ಜೆಗಳಧ್ವನಿಯಿಂದಕೂಡಿರುವ, ಕಲ್ಯಾಣೀಂ-ಶುಭಕರವಾದ, ನಾವಂ-ನಾವೆಯನ್ನು, ಉಪಾಹರತ್ - ತೆಗದುಕೊಂಡುಬಂದನು, ಮಹಾಬಲಃ - ಮಹಾಪರಾಕ್ರಮಿಯಾದ, ಭರತಃ - ಭರತನು, ಶತ್ರುಘ್ನಶ್ಚ - ಶತ್ರುಘ್ನನೂ, ತಾಂ - ಆ ನಾವೆಯನ್ನು, ಆರುರೋಹ-ಹತ್ತಿದನು. ‖ ೧೨ ‖ ಕೌಸಲ್ಯಾಚ - ಕೌಸಲ್ಯಾದೇವಿಯೂ, ಸುಮಿತ್ರಾಚ - ಸುಮಿತ್ರಾದೇವಿಯೂ, ಅನ್ಯಾಃ-ಮತ್ತೆ

ಭರತಕುಮಾರನು ಸಕಲವಾದ ತನ್ನಸೇನೆಯೊಡಗೂಡಿ ಗಂಗಾನದಿಯುನ್ನುದಾಟಲು ಆಪೇಕ್ಷಿಸುತ್ತಾನೆ. ಆದುದರಿಂದ ಸೈನ್ಯಸಮೇತನಾದ ಆತನನ್ನೀಗಂಗಾನದಿಯಿಂದ ದಾಟಿಸೋಣ. ದೋಣಿಗಳನ್ನುತೆಗೆದುಕೊಂಡು ಬರುವವರಾಗಿರಿ" ಎಂದನು. ಆ ಬಳಿಕ ಒಡೆಯನಾಣತಿಯಂತೆ ಐದುನೂರುದೋಣಿಗಳನ್ನಾಸಿಷಾದರು ರೇವಿನೊಳಕ್ಕೆತೆಗೆದುಕೊಂಡುಬಂದರು. ಅಲ್ಲದೆ ದೊಡ್ಡದೊಡ್ಡಗಂಟೆಗಳನ್ನುಧರಿಸಿರುವುವೂ,ಸರ್ವೋತ್ತಮವಾದುವೂ, ನಾಲ್ಕುಮೂಲೆಗಳೂ, ನಾಲ್ಕುಬಾಗಿಲುಗಳೂ ಉಳ್ಳವೂ, ಮನೆಯಂತಿರುವುವೂ, ಅನುಕೂಲವಾಯುವಿನಿಂದೊಡಗೂಡಿದುವೂ, ಸ್ವಸ್ತಿಕಗಳೆಂದು ಪ್ರಸಿದ್ಧವಾದುವೂ ಆದ ಮತ್ತೆ ಕೆಲದೋಣಿಗಳನ್ನೂ ತೆಗೆದುಕೊಂಡು ಬಂದರು. ಆ ಬಳಿಕ ಕಿರಾತರಾಜನಾದ ಗುಹನು ಸ್ವಸ್ತಿಕವೆಂದು ತಿಳಿಯತಕ್ಕದೂ ಬಿಳಿಗಂಬಳಿಗಳಿಂದ ಹೊದಿಸಿರುವುದೂ, ಬಹಳವಾದ ಆಹ್ಲಾದನನ್ನುಂಟುಮಾಡುವ ಗಂಟೆಗಳ

ಶ್ಚತ್ರುಘ್ನಶ್ಚ ಮಹಾಬಲಃ ॥ ಕೌಸಲ್ಯಾಚ ಸುಮಿತ್ರಾಚ ಯಾಶ್ಚಾನ್ಯಾ ರಾಜಯೋಷಿತಃ ॥ ೧೩ ॥ ಪುರೋಹಿತಶ್ಚ ತತ್ಪೂರ್ವಂ ಗುರವೋ ಬ್ರಾಹ್ಮಣಾಶ್ಚಯೇ ॥ ಅನಂತರಂ ರಾಜದಾರಾ ಸ್ತಥೈವ ಶಕಟಾಪಣಾಃ ॥ ೧೪ ॥ ಆವಾಸಮಾದೀಪಯತಾಂ ತೀರ್ಥಂ ಚಾಪ್ಯವಗಾಹತಾಂ ॥ ಭಾಂಡಾನಿ ಚಾದದಾನಾನಾಂ ಘೋಷ ಸ್ತ್ರಿದಿವ ಮಸ್ಪೃಶತ್ ॥ ೧೫ ॥ ಪತಾಕಿನ್ಯಸ್ತು ತಾನಾವ ಸ್ಸ್ವಯಂ ದಾಶೈ ರಧಿಷ್ಠಿತಾಃ ॥ ವಹಂತ್ಯೋ ಜನಮಾರೂಢಂ ತದಾ ಸಂಪೇತು ರಾಶುಗಾಃ ॥ ೧೬ ॥ ನಾರೀಣಾ ಮಭಿಪೂರ್ಣಾಸ್ತು ಕಾಶ್ಚಿತ್ಕಾಶ್ಚಿಚ್ಚ ವಾಜಿನಾಂ ॥

ಕೆಲವರಾದ, ರಾಜಯೋಷಿತಃ - ರಾಜಸ್ತ್ರೀಯರೂ, ಯಾಃ - ಯಾರೋ, ತತ್ಪೂರ್ವಂ - ಆ ಸ್ತ್ರೀಯರಿಗಿಂತಮೊದಲೇ, ಪುರೋಹಿತಶ್ಚ - ಪುರೋಹಿತನೂ, ಗುರವಃ - ಗುರುಗಳಾದವಸಿಷ್ಠರೂ, ಬ್ರಾಹ್ಮಣಾಶ್ಚ-ಬ್ರಾಹ್ಮಣರೂ, ಯೇ - ಯಾರೋ, ತೇಪಿ - ಅವರೂ, ಆರುರುಹುಃ - ಹತ್ತಿದರು. ॥ ೧೩ ॥ ಅನಂತರಂ-ಆ ಬಳಿಕ, ರಾಜದಾರಾಃ - ರಾಜಸ್ತ್ರೀಯರುಹತ್ತಿದವರಾದರು, ತಥೈವ - ಹಾಗೆಯೇ, ಶಕಟಾಪಣಾಃ - ಭಂಡಿಗಳೂ ಪದಾರ್ಥಗಳೂ, ಆರುರುಹುಃ - ಏರಿದವು. ॥ ೧೪ ॥ ಆವಾಸಂ - ಸೇನಾನಿವೇಶವನ್ನು, ಆದೀಪಯತಾಂ - ಬೆಳಗುತ್ತಿರುವ, ತೀರ್ಥಂಚಾಪಿ-ಗಂಗಾಜಲದಲ್ಲಿ, ಅವಗಾಹತಾಂ-ಸ್ನಾನಮಾಡುತ್ತಿರುವ, ಭಾಂಡಾನಿಚ-ಗಡಿಗೆಗಳನ್ನು, ಆದದಾನಾನಾಂ-ತೆಗದುಕೊಳ್ಳುತ್ತಿರುವವರ, ಘೋಷಃ-ಶಬ್ದವು, ತ್ರಿದಿವಂ-ಅಂತರಿಕ್ಷವನ್ನು, ಅಸ್ಪೃಶತ್ - ಮುಟ್ಟಿತು. ॥ ೧೫ ॥ ಪತಾಕಿನ್ಯಃ - ಧ್ವಜಪಟಗಳುಳ್ಳ, ತಾನಾವಃ - ಆ ನಾವೆಗಳು, ಸ್ವಯಂ - ತಮ್ಮಷ್ಟಕ್ಕೆತಾವೇ, ದಾಶೈಃ - ಬೆಸ್ತರಿಂದ, ಅಧಿಷ್ಠಿತಾಃ-ಕೂಡಲ್ಪಟ್ಟವುಗಳಾಗಿ, ಆರೂಢಂ - ಏರಿದ, ಜನಂ - ಜನವನ್ನು, ವಹತ್ಯಃ-ಹೊತ್ತಿರುವುಗಳಾಗಿ, ತದಾ-ಆ ಕಾಲದಲ್ಲಿ, ಆಶುಗಾಃ-ಜಾಗ್ರತೆಯಾಗಿಹೋಗುತ್ತಿರುವವುಗಳಾಗಿ, ಸಂಪೇತುಃ - ಹೊರಟವು. ॥ ೧೬ ॥ ಅತ್ರ - ಈ ನಾವೆಗಳಲ್ಲಿ, ಕಾಶ್ಚಿತ್ - ಕೆಲವುನಾವೆಗಳು, ಯಾನಯುಗ್ಯಂ, ಯಾನ - ರಥಗಳು, ಯುಗ್ಯಂ - ಎತ್ತುಗಳೇಮೊದಲಾಗುಳ್ಳುದು, ಮಹಾಧನಃ - ಬಹುಮೂಲ್ಯವುಳ್ಳ ದ್ರವ್ಯಗಳನ್ನು, ವಹಂತಿಸ್ಮ - ಹೊತ್ತಿದವಷ್ಟೆ. ॥ ೧೭ ॥

ಧ್ವನಿಯುಳ್ಳುದೂ. ಮಂಗಳಕರವಾದುದೂ ಆದ ನಾವೆಯನ್ನು ತೆಗೆದುಕೊಂಡು ಬಂದನು. ॥೮-೧೨॥ ಆಗ ಮಹಾಪ್ರತಾಪಶಾಲಿಗಳಾದ ಭರತಶತ್ರುಘ್ನರಿಬ್ಬರೂ ಆ ನಾವೆಯನ್ನೇರಿದರು; ಆಮೇಲೆ, ಕೌಸಲ್ಯಾಸುಮಿತ್ರೆಯರೂ, ಇನ್ನೂ ಇತರರೂ. ರಾಜಭಾರ್ಯೆಯರೂ, ಪುರೋಹಿತರೂ, ವಸಿಷ್ಠಾದಿಗುರುಗಳೂ, ಇನ್ನೂ ಇತರವಿಪ್ರೋತ್ತಮರೂ, ರಥ, ಗಜ, ತುರಗ, ಶಕಟ ಪದಾತಿಗಳೂ ಅವರವರಿಗೆಯೋಗ್ಯವಾದನಾವೆಗಳನ್ನೇರಿದವರಾದರು. ಆಗ ನಿವಾಸಸ್ಥಾನವನ್ನು ಪ್ರಕಾಶಗೊಳ್ಳುವಂತೆಮಾಡುವವರೂ, ರೇವುಗಳಲ್ಲಿತಿರುಗುತ್ತಿರುವವರೂ, ತಮ್ಮತಮ್ಮ ಸಾಧನಗಳನ್ನು ಸಜ್ಜಗೊಳಿಸುತ್ತಿರುವವರೂಆದ ಜನವರಧ್ವನಿಯು ಸ್ವರ್ಗಲೋಕದವರೆವಿಗೂ ವ್ಯಾಪಿಸಿತು. ॥ ೮-೧೫ ॥ ಅಲ್ಲದೆಯಾಸಮಯದಲ್ಲಿ ಧ್ವಜಗಳಿಂದೊಡಗೂಡಿದನಾವೆಗಳಮೇಲೆ ಬೆಸ್ತರ ಸಹಾಯದಿಂದ ಅನೇಕರುಹತ್ತಿದವರಾದರು. ಆಗಬಳ್ಳಿಯು ಪ್ರಯಾಣಯೋಗ್ಯವಾದವಾಯುವು ಬೀಸಿದುದರಿಂದನಾವಿಕರಿಂದನಡೆಯಿಸದೆಯೇ ಆನಾವೆಗಳೆಲ್ಲವೂಬೇಗನೆಮುಂದೆಸಾಗಿದುವು. ಆ ನಾವೆಗಳಲ್ಲಿ ಕೆಲವು ಸ್ತ್ರೀಯರಿಂದತುಂಬಿದ್ದುವು, ಕೆಲವುಕುದುರೆಗಳಿಂದ ಪೂರ್ಣವಾಗಿದ್ದುವು,

ಕಾಶ್ಚಿದತ್ರ ವಹಂತಿಸ್ಮ ಯಾನಯುಗ್ಯಂ ಮಹಾಧನಂ ॥ ೧೭ ॥ ತಾಶ್ಚ ಗತ್ವಾ
ಪರಂ ತೀರ ಮವರೋಪ್ಯಚ ತಂಜನಂ ॥ ನಿವೃತ್ತಾಃ ಕಾಂಡಚಿತ್ರಾಣಿ ಕ್ರಿಯಂತೇ
ದಾಶ ಬಂಧುಭಿಃ ॥ ೧೮ ॥ ಸವೈ ಜಯಂತಾಸ್ತು ಗಜಾ ಗಜಾರೋಹ ಪ್ರಚೋ
ದಿತಾಃ ॥ ತರಂತಸ್ಸ್ಮ ಪ್ರಕಾಶಂತೇ ಸಧ್ವಜಾಇವ ಪರ್ವತಾಃ ॥ ೧೯ ॥ ನಾವ
ಶ್ಚಾರುರುಹುಶ್ಚಾನ್ಯೇ ಪ್ಲವೈ ಸ್ತೇರು ಸ್ತಥಾಪರೇ ॥ ಅನ್ಯೇ ಕುಂಭಘಟೈ ಸ್ತೇರು
ರನ್ಯೇ ತೇರುಶ್ಚ ಬಾಹುಭಿಃ ॥ ೨೦ ॥ ಸಾಪುಣ್ಯಾ ಧ್ವಜಿನೀ ಗಂಗಾಂ ದಾಶೈ
ಸ್ಸಂತಾರಿತಾ ಸ್ವಯಂ ॥ ಮೈತ್ರೇ ಮುಹೂರ್ತೇ ಪ್ರಯಯೌ ಪ್ರಯಾಗವನ
ಮುತ್ತಮಂ ॥೨೧॥ ಆಶ್ವಾಸಯಿತ್ವಾಚ ಚಮೂಂ ಮಹಾತ್ಮಾ ನಿವೇಶಯಿತ್ವಾಚ

ತಾಃ - ಆ ನಾವೆಗಳು, ಪರಂತೀರಂ - ಆಚೆಯಘಟ್ಟವನ್ನು, ಗತ್ವಾ - ಹೊಂದಿ, ತಂಜನಂ - ಆ ಜನವನ್ನು, ಅವರೋಪ್ಯ - ಇಳಿಸಿ, ನಿವೃತ್ತಾಃ ಹಿಂತಿರುಗಿದವುಗಳಾಗಿ, ದಾಶಬಂಧುಭಿಃ - ಬೆಸ್ತರಬಂಧುಗಳಿಂದ, ಕಾಂಡಚಿತ್ರಾಣಿ - ಉದಕದಲ್ಲಿ ಚಿತ್ರಗಮನವನ್ನು, ಕ್ರಿಯಂತೇ-ಮಾಡಿಸಲ್ಪಟ್ಟವು. ॥ ೧೮ ॥ ಗಜಾಸ್ತು-ಆನೆಗಳಾದರೆ, ಸವೈಜಯಂತಾಃ - ಧ್ವಜಪಟಗಳಿಂದಕೂಡಿರುವವುಗಳಾಗಿ, ಗಜ ರೋಹಪ್ರಚೋದಿತಾಃ-ಗಜಸಾದಿಗಳಿಂದ ಪ್ರೇರೇಪಿಸಿದುವಾಗಿ, ತರಂತಃ - ದಾಟುತ್ತ, ಸಧ್ವಜಾಃ - ಧ್ವಜಗಳಿಂದೊಡಗೂಡಿದ, ಪರ್ವತಾಇವ - ಬೆಟ್ಟಗಳಂತೆ, ಪ್ರಕಾಶಂತೇಸ್ಮ - ಹೊಳೆಯುತ್ತಿದ್ದುವಷ್ಟೆ. ॥ ೧೯ ॥ ಅನ್ಯೇ - ಮತ್ತೆ ಕೆಲವರು, ನಾವಶ್ಚ - ನಾವೆಗಳನ್ನು, ಆರುರುಹುಃ - ಏರಿದರು, ತಥಾ - ಹಾಗೆಯೆ, ಅಪರೇ-ಇನ್ನು ಕೆಲವರು, ಪ್ಲವೈಃ - ತೆಪ್ಪಗಳಿಂದ, ತೇರುಃ - ದಾಟಿದರು, ಅನ್ಯೇ - ಮತ್ತೂ ಕೆಲವರು, ಕುಂಭಘಟೈಃ - ದೊಡ್ಡಹರಿವಾಣಗಳಿಂದಲೂ ಚಿಕ್ಕಚಿಕ್ಕಗಡಿಗೆಗಳಿಂದಲೂ, ತೇರುಃ - ದಾಟಿದರು, ಅನ್ಯೇ - ಇನ್ನು ಕೆಲವರು, ಬಾಹುಭಿಃ - ಭುಜಗಳಿಂದ, ತೇರುಃ - ಈಜಿಕೊಂಡುಹೋದರು. ॥ ೨೦ ॥ ಪುಣ್ಯಾ - ಪುಣ್ಯಕರವಾದ, ಸಾಧ್ವಜಿನೀ - ಆ ಭರತನಸೈನ್ಯವು, ದಾಶೈಃ - ಬೆಸ್ತರಿಂದ, ಸ್ವಯಂ - ತಾನು, ಗಂಗಾಂ - ಗಂಗಾನದಿಯನ್ನು, ಸಂತಾರಿತಾ-ದಾಟಿಸಲ್ಪಟ್ಟದಾಗಿ, ಮೈತ್ರೇ-ಮಿತ್ರದೇವತಾಕವಾದ, ಮುಹೂರ್ತೇ-ಮುಹೂರ್ತದಲ್ಲಿ, ಉತ್ತಮಂ - ಉತ್ಕೃಷ್ಟವಾದ, ಪ್ರಯಾಗವನಂ-ಪ್ರಯಾಗಕ್ಷೇತ್ರದ ವನವನ್ನು ಕುರಿತು, ಪ್ರಯಯೌ - ತೆರಳಿತು. ॥ ೨೧ ॥ ಮಹಾತ್ಮಾ - ಮಹಾತ್ಮನಾದ, ಭರತಃ-ಭರತನು, ಆಶ್ವಾಸಯಿತ್ವಾ-

ಇನ್ನುಕೆಲವು ಬಹುಬೆಲೆಬಾಳುವ ಎತ್ತುಗಳೇಮೊದಲಾದುವುಗಳಿಂದ ನಿಬಿಡಿತವಾಗಿದ್ದುವು. ಇಂತಹನಾವೆಗಳೆಲ್ಲ ಬಹುವೇಗವಾಗಿ ಆಚೆಯಪಡಕ್ಕೆಹೋದುವು. ಆಗಲಾನಾವಿಕರೆಲ್ಲರೂ ನಾವೆಗಳಲ್ಲಿದ್ದವರೆಲ್ಲರನ್ನೂ ತೀರದಲ್ಲಿಳಿಸಿದರು. ಹೀಗೆಜನರನ್ನಿಳಿಸಿ ಹಿಂತಿರಿಗಿಬರುತ್ತಿರುವ, ಬೆಸ್ತರಿಂದೊಡಗೂಡಿದನಾವೆಗಳಗಮನವು ಬಹುಚಿತ್ರಕರವಾಗಿದ್ದುವು.॥೧೭-೧೮॥ಆನೆಗಳು ಧ್ವಜಸಮೇತಗಳಾಗಿ ಮಾವಟಿಗರಿಂದಪ್ರೇರಿತಗಳಾಗಿ ನದಿಯನ್ನುದಾಟುತ್ತ ಬೆಟ್ಟಗಳಂತೆಕಂಗೊಳಿಸುತ್ತಿದ್ದುವು. ಕೆಲವರುನಾವೆಗಳಿಂದಲೂ, ಕೆಲವರುಹರಿಗೋಲುಗಳಿಂದಲೂ, ಇನ್ನುಕೆಲವರುತೆಪ್ಪಗಳಿಂದಲೂ,ಮತ್ತೂ ಕೆಲವರು ದೊಡ್ಡಮಡಿಕೆಗಳಿಂದಲೂ, ಚಿಕ್ಕಚಿಕ್ಕಗಡಿಗೆಗಳಿಂದಲೂ ಈಜುತ್ತ ಗಂಗಾನದಿಯನ್ನುದಾಟಿದರು.॥೧೯-೨೦॥ಈಪ್ರಕಾರವಾಗಿ ಆಭರತನಸೇನೆಯು ಆ ಬೆಸ್ತರಿಂದ ದಾಟಿಸಲ್ಪಟ್ಟು,ಮೈತ್ರವೆಂಬಶುಭಮುಹೂರ್ತದಲ್ಲಿ ಪ್ರಯಾಗವನವನ್ನುಕುರಿತುತೆರಳಿತು.ಮಹಾ

ಯಥೋಪಜೋಷಂ ॥ ದ್ರಷ್ಟುಂ ಭರದ್ವಾಜ ಮೃಷಿಪ್ರವರ್ಯ ಮೃತ್ವಿಗ್ವೃತಸ್ಸನ್
ಭರತಃ ಪ್ರತಸ್ಥೇ ॥ ೨೨ ॥

ಸಬ್ರಾಹ್ಮಣಸ್ಯಾ ಶ್ರಮಮಭ್ಯುಪೇತ್ಯ
ಮಹಾತ್ಮನೋ ದೇವಪುರೋಹಿತಸ್ಯ ॥
ದದರ್ಶ ರಮ್ಯೋಟಜ ವೃಕ್ಷಷಂಡಂ
ಮಹದ್ವನಂ ವಿಪ್ರವರಸ್ಯ ರಮ್ಯಂ ॥ ೨೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನನವತಿತಮಸ್ಸರ್ಗಃ.

ಸಮಾಧಾನಗೊಳಿಸಿ, ಯಥೋಪಜೋಷಂ - ಯಥಾಸುಖವಾಗಿ, (ಗೋ + ಮ) ತೂಷ್ಣೀಂಭಾವದಿಂದ, ನಿವೇಶಯಿತ್ವಾಚ - ಇಳಿಸಿ, ಋಷಿಪ್ರವರ್ಯಂ - ಋಷಿಶ್ರೇಷ್ಠನಾದ, ಭರದ್ವಾಜಂ - ಭರದ್ವಾಜಋಷಿಯನ್ನು, ದ್ರಷ್ಟುಂ - ನೋಡಲು, ಋತ್ವಿಗ್ವೃತಸ್ಸನ್ - ಋತ್ವಿಕ್ಕುಗಳಿಂದ ಪರಿವೃತನಾಗಿ, ಪ್ರತಸ್ಥೇ - ಹೊರಟನು. ॥ ೨೨ ॥ ಸಃ - ಆ ಭರತನು, ಬ್ರಾಹ್ಮಣಸ್ಯ - ವೇದಜ್ಞನಾದ, (ಗೋ) ಬ್ರಹ್ಮಜ್ಞಾನಿಯಾದ, ಮಹಾತ್ಮನಃ - ಮಹಾಪ್ರಭಾವವಂತನಾದ, ದೇವಪುರೋಹಿತಸ್ಯ - ದೇವತೆಗಳಿಗೆ ಪುರೋಹಿತನಾದ ಬೃಹಸ್ಪತಿಯಪುತ್ರನಾದ, ವಿಪ್ರವರಸ್ಯ-ಬ್ರಾಹ್ಮಣೋತ್ತಮನಾದ ಭರದ್ವಾಜಋಷಿಯ, ರಮ್ಯೋಟಜವೃಕ್ಷಷಂಡಂ - ರಮಣೀಯವಾದ ಆಶ್ರಮಗಳೂ ಗಿಡಗಳಗುಂಪೂಉಳ್ಳ, ರಮ್ಯಂ - ಮನಸ್ಸಿಗಿಂಪಾಗಿರುವ, ಮಹತ್ - ದೊಡ್ಡದಾದ, ವನಂ - ಅರಣ್ಯವನ್ನು, ದದರ್ಶ - ಕಂಡನು. ॥ ೨೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನನವತಿತಮಸ್ಸರ್ಗಃ.

ತ್ಮನಾದ ಭರತನಾಸಮಯದಲ್ಲಿ ಭರದ್ವಾಜಮುನಿಯನ್ನು ನೋಡಲೋಸುಗ ಋತ್ವಿಕ್ಕುಗಳೊಡನೆ ಹೊರಟು, ನಾನಾವಿಧಗಳಾದವೃಕ್ಷಗಳಿಂದ ಶೋಭಿಸುತ್ತಿರುವ ಆತನ ಆಶ್ರಮವನ್ನು ಕಂಡವನಾದನು. ॥ ೨೩ ॥

ಇಂತಿದು ಭರತಕೃತ ಗಂಗಾವತರಣ ವೃತ್ತಾಂತ ಕಥನವೆಂಬ
ಎಂಭತ್ತೊಂಭತ್ತನೆಯಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ನವತಿತಮಸ್ಸರ್ಗಃ.

ಭರದ್ವಾಜಾಶ್ರಮಂ ದೃಷ್ಟ್ವಾ ಕ್ರೋಶಾದೇವ ನರರ್ಷಭಃ ॥ ಬಲಂ ಸರ್ವ ಮವಸ್ಥಾಪ್ಯ ಜಗಾಮ ಸಹಮಂತ್ರಿಭಿಃ ॥ ೧ ॥ ಪದ್ಭ್ಯಾಮೇವಹಿ ಧರ್ಮಜ್ಞೋ ನ್ಯಸ್ತ ಶಸ್ತ್ರ ಪರಿಚ್ಛದಃ ॥ ವಸಾನೋ ವಾಸಸೀ ಕ್ಷೌಮೇ ಪುರೋಧಾಯ ಪುರೋಧಸಂ ॥ ೨ ॥ ತತ ಸ್ಸಂದರ್ಶನೇ ತಸ್ಯ ಭರದ್ವಾಜಸ್ಯ ರಾಘವಃ ॥ ಮಂತ್ರಿಣ ಸ್ತಾನವಸ್ಥಾಪ್ಯ ಜಗಾಮಾಽನುಪುರೋಹಿತಂ ॥ ೩ ॥ ವಸಿಷ್ಠಮಥ ದೃಷ್ಟ್ವೈವ ಭರದ್ವಾಜೋ ಮಹಾತಪಾಃ ॥ ಸಂಚಚಾಲಾಽಸನಾತ್ತೂರ್ಣಂ

ಧರ್ಮಜ್ಞಃ - ಸಮಸ್ತ ಧರ್ಮಗಳನ್ನೂ ತಿಳಿದಿರುವ, ನರರ್ಷಭಃ - ಪುರುಷಶ್ರೇಷ್ಠನಾದ ಭರತನು, ಕ್ರೋಶಾದೇವ - ಒಂದು ಹರಿದಾರಿದೂರದಲ್ಲಿಯೇ, ಭರದ್ವಾಜಾಶ್ರಮಂ - ಭರದ್ವಾಜನ ಆಶ್ರಮವನ್ನು, ದೃಷ್ಟ್ವಾ - ಕಂಡು, ಸರ್ವಂ - ಸಮಸ್ತವಾದ, ಬಲಂ - ಸೈನ್ಯವನ್ನು, ಅವಸ್ಥಾಪ್ಯ - ಇಳಿಯಿಸಿ, ನ್ಯಸ್ತಶಸ್ತ್ರಪರಿಚ್ಛದಃ - ಕೆಳಗಿರಿಸಲ್ಪಟ್ಟ ಶಸ್ತ್ರಗಳೂ ಆಭರಣಗಳೂ ಉಳ್ಳವನಾಗಿ, ಕ್ಷೌಮೇ- ದುಕೂಲಗಳನ್ನು, ವಾಸಸೀ - ವಸ್ತ್ರಗಳನ್ನೂ, ವಸಾನಃ-ಉತ್ತರೀಯವನ್ನಾಗಿ ಉಟ್ಟು. ಪುರೋಧಸಂ - ಪುರೋಹಿತರಾದ ವಸಿಷ್ಠರನ್ನು, ಪುರೋಧಾಯ - ಮುಂದುಮಾಡಿಕೊಂಡು, ಮಂತ್ರಿಭಿಸ್ಸಹ - ಸುಮಂತ್ರಾದಿ ಮಂತ್ರಿಗಳೊಡನೆ, ಪದ್ಭ್ಯಾಮೇವ - ಕಾಲ್ನಡಿಗೆಯಿಂದಲೇ, ಪ್ರತಸ್ಥೇ - ಹೊರಟನು. ॥ ೧-೨ ॥ ತತಃ - ಬಳಿಕ, ರಾಘವಃ - ಭರತನು, ತಸ್ಯಭರದ್ವಾಜಸ್ಯ - ಆ ಭರದ್ವಾಜಋಷಿಯ, ಸಂದರ್ಶನೇ - ದರ್ಶನವಾಗಲು, ತಾನ್‌ಮಂತ್ರಿಣಃ - ಆ ಮಂತ್ರಿಗಳನ್ನು, ಅವಸ್ಥಾಪ್ಯ - ಹಿಂದಿರಿಸಿ, ಪುರೋಹಿತಮನು - ಪುರೋಹಿತರಾದ ವಸಿಷ್ಠಋಷಿಯನ್ನನುಸರಿಸಿ, ಜಗಾಮ - ತೆರಳಿದನು. ॥ ೩ ॥ ಅಥ - ಅನಂತರದಲ್ಲಿ, ಮಹಾತಪಾಃ - ಮಹಾತಪೋವಂತನಾದ, ಭರದ್ವಾಜಃ - ಭರದ್ವಾಜಋಷಿಯು, ವಸಿಷ್ಠಂ - ವಸಿಷ್ಠ ಋಷಿಯನ್ನು, ದೃಷ್ಟ್ವೈವ - ಕಾಣುತ್ತಲೆ, ಆಸನಾತ್ - ಪೀಠದಿಂದ, ಶಿಷ್ಯಾನ್ - ಶಿಷ್ಯರನ್ನು ಕುರಿತು,

---

ಆಬಳಿಕ ಪುರುಷೋತ್ತಮನೂ, ಧರ್ಮಗಳನ್ನುಬಹುಚೆನ್ನಾಗಿತಿಳಿದವನೂಆದ ಭರತ ಕುಮಾರನು ಭರದ್ವಾಜಮುನೀಂದ್ರನ ಆಶ್ರಮವನ್ನುನೋಡಿ, ಸಕಲಸೇನೆಯನ್ನೂದೂರದಲ್ಲಿಯೆ ನಿಲ್ಲಿಸಿ, ವರ್ಜಿಸಿದ ಸರ್ವಾಯುಧಗಳೂ, ಆಭರಣಗಳೂಉಳ್ಳವನಾಗಿ ಪರಿಶುದ್ಧವಾದಉಡುಗೆ ಗಳನ್ನುಟ್ಟು, ತನ್ನಸೇನೆಯನ್ನು ಒಂದುಕ್ರೋಶದೂರದಲ್ಲಿಯೇಇರಿಸಿದವನಾಗಿ, ಪುರೋಹಿತನಾದ ವಸಿಷ್ಠಮುನಿಯನ್ನುಮುಂದಿಟ್ಟುಕೊಂಡು, ಮಂತ್ರಿಗಳೊಗೂಡಿ ಪಾದಚಾರಿಯಾಗಿಯೇ ಹೊರಟನು. ಆ ಮೇಲೆ ರಘುಕುಲೋದ್ಭವನಾದಭರತನು ಆ ಮುನಿಪುಂಗವನನ್ನು ನೋಡ ಲಪೇಕ್ಷೆಯುಳ್ಳವನಾಗಿ ಮಂತ್ರಿಗಳನ್ನುಸ್ವಲ್ಪದೂರದಲ್ಲಿಯೇನಿಲ್ಲಿಸಿ ಪುರೋಹಿತನಾದ ವಸಿಷ್ಠ ಮುನಿಯೊಡನೆ ಆ ಭರದ್ವಾಜಮುನಿಯ ಆಶ್ರಮಕ್ಕೆಹೋದನು. ಆಗ ತಪೋನಿಷ್ಠರಲ್ಲಿ ಗರಿಷ್ಠ ನಾದ ಭರದ್ವಾಜಮುನಿಯು ತನ್ನಾಶ್ರಮಕ್ಕೆ ಬರುತ್ತಿರುವ ವಸಿಷ್ಠ ಮಹಾಮುನಿಯನ್ನು

ಶಿಷ್ಯಾ ನರ್ಘ್ಯಮಿತಿ ಬ್ರುವನ್ ॥ ೪ ॥ ಸಮಾಗಮ್ಯ ವಸಿಷ್ಠೇನ ಭರತೇನಾಽಭಿ
ವಾದಿತಃ ॥ ಅಬುಧ್ಯತ ಮಹಾತೇಜಾ ಸ್ಸುತಂ ದಶರಥಸ್ಯ ತಂ ॥ ೫ ॥ ತಾಭ್ಯಾ
ಮರ್ಘ್ಯಂಚ ಪಾದ್ಯಂಚ ದತ್ವಾ ಪಶ್ಚಾತ್ ಫಲಾನಿಚ ॥ ಆನುಪೂರ್ವ್ಯಾಚ್ಚ
ಧರ್ಮಜ್ಞಃ ಪಪ್ರಚ್ಛ ಕುಶಲಂ ಕುಲೇ ॥ ೬ ॥ ಅಯೋಧ್ಯಾಯಾಂ ಬಲೇ
ಕೋಶೇ ಮಿತ್ರೇಷ್ವಪಿಚ ಮಂತ್ರಿಷು ॥ ಜಾನನ್ ದಶರಥಂ ವೃತ್ತಂ ನರಾಜಾನ
ಮುದಾಹರತ್ ॥ ೭ ॥ ವಸಿಷ್ಠೋ ಭರತಶ್ಚೈನಂ ಪಪ್ರಚ್ಛತು ರನಾಮಯಂ ॥

ಅರ್ಘ್ಯಂ - ಪೂಜಾದ್ರವ್ಯವನ್ನು, (ಆನಯತೇತಿ - ತೆಗದುಕೊಂಡು ಬನ್ನಿರೆಂದು,) ಬ್ರುವನ್-ಹೇಳುತ್ತ, ತೂರ್ಣಂ - ಜಾಗ್ರತೆಯಾಗಿ, ಸಂಚಚಾಲ - ಎದ್ದವನಾದನು. ॥ ೪ ॥ ವಸಿಷ್ಠೇನ - ವಸಿಷ್ಠಮಹರ್ಷಿ ಯೊಡನೆ, ಸಮಾಗಮ್ಯ - ಸೇರಿ, ಮಹಾತೇಜಾಃ - ಮಹಾ ಬ್ರಹ್ಮತೇಜಸ್ಸುಳ್ಳ ಭರದ್ವಾಜಋಷಿಯು, ಭರತೇನ - ಭರತನಿಂದ, ಅಭಿವಾದಿತಃ - ನಮಸ್ಕೃತನಾಗಿ, ತಂ - ಆತನನ್ನು, ದಶರಥಸ್ಯ - ದಶರಥ ರಾಯನ, ಸುತಂ - ಕುವರನನ್ನಾಗಿ, ಅಬುಧ್ಯತ - ತಿಳಿದನು. ॥ ೫ ॥ ತಾಭ್ಯಾಂ - ಆ ವಸಿಷ್ಠ ಭರತ ರಿಬ್ಬರಿಗೋಸುಗ, ಅರ್ಘ್ಯಂಚ - ಅರ್ಘ್ಯವನ್ನು, ಪಾದ್ಯಂಚ - ಪಾದ್ಯವನ್ನು, ಪಶ್ಚಾತ್ - ಬಳಿಕ, ಫಲಾನಿಚ - ಫಲಗಳನ್ನೂ, ದತ್ವಾ - ಕೊಟ್ಟು, ಧರ್ಮಜ್ಞಃ - ಸಕಲ ಧರ್ಮಗಳನ್ನೂ ತಿಳಿದಿರುವ ಭರ ದ್ವಾಜನು, ಆನುಪೂರ್ವ್ಯಾಚ್ಚ-ಕ್ರಮಾನುಸಾರವಾಗಿ, ಕುಲೇ - ಕುಲದಲ್ಲಿಯೂ, ಅಯೋಧ್ಯಾಯಾಂ - ಅಯೋಧ್ಯಾಪಟ್ಟಣದಲ್ಲಿಯೂ, ಬಲೇ - ಸೈನ್ಯದಲ್ಲಿಯೂ, ಕೋಶೇ - ಬೊಕ್ಕಸದಲ್ಲಿಯೂ, ಮಿತ್ರೇಷ್ವ ಪಿಚ - ಮಿತ್ರರಲ್ಲಿಯೂ, ಮಂತ್ರಿಷು - ಮಂತ್ರಿಗಳಲ್ಲಿಯೂ, ಕುಶಲಂ - ಕ್ಷೇಮವನ್ನು, ಪ್ರಪಚ್ಛ - ಕೇಳಿ ದನು, ದಶರಥಂರಾಜಾನಂ - ದಶರಥರಾಯನನ್ನು, ವೃತ್ತಂ - ಮೃತನನ್ನಾಗಿ, ಜಾನನ್ - ತಿಳಿದವನಾದ ಕಾರಣ, ನೋದಾಹರತ್ - ಹೆಸರೆತ್ತಲಿಲ್ಲ. ॥ ೬-೭ ॥ ವಸಿಷ್ಠಃ - ವಸಿಷ್ಠಋಷಿಯೂ, ಭರತಶ್ಚ - ಭರ ತನೂ, ಶರೀರೇ - ದೇಹದಲ್ಲಿ, ಅಗ್ನಿಷು - ಅಗ್ನಿತ್ರಯದಲ್ಲಿ, ವೃಕ್ಷೇಷು - ಗಿಡಗಳಲ್ಲಿ, ಶಿಷ್ಯೇಷು - ಶಿಷ್ಯ ರಲ್ಲಿ, ಮೃಗಪಕ್ಷಿಷು - ಮೃಗಗಳಲ್ಲಿಯೂ ಹಕ್ಕಿಗಳಲ್ಲಿಯೂ ಇವುಗಳ ವಿಷಯವಾಗಿ, ಅನಾಮಯಂ -

ನೋಡಿ, ತನ್ನಶಿಷ್ಯರನ್ನುಕುರಿತು ಜಾಗ್ರತೆಯಾಗಿಅರ್ಘ್ಯವನ್ನುತೆಗೆದುಕೊಂಡುಬನ್ನಿರೆಂದು ಹೇಳಿ ತನ್ನಆಸನದಿಂದಮೇಲಕ್ಕೆದ್ದು, ಆ ಬಳಿಕ ಭರತನೊಡಗೂಡಿದವನಾದನು. ಆಗ ಭರತನು ಮಹಾತಪಸ್ವಿಯೂ. ತೇಜೋವಂತನೂ ಆದ ಭರದ್ವಾಜಮುನೀಶ್ವರನಿಗೆ ಸಾಷ್ಟಾಂಗನಮಸ್ಕಾ ರವಂಗೈದನು. ಈರೀತಿ ವಂದನೆಯಂಗೈದ ಭರತಕುಮಾರನನ್ನು ನೋಡಿ, ಆ ಮುನಿಯು ಈತನು ದಶರಥರಾಜಕುಮಾರನಾದ ಭರತನೆಂದು ತನ್ನ ಜ್ಞಾನದೃಷ್ಟಿಯಿಂದರಿತುಕೊಂಡನು. ॥ ೧ ೫ ॥ ಇದಾದಬಳಿಕ ಆ ಭರದ್ವಾಜಮುನಿಯು ಆ ಭರತನಿಗೂ, ಆತನ ಪುರೋಹಿತನಾದ ವಸಿಷ್ಠಮಹಾಮುನಿಗೂ ಅರ್ಘ್ಯವಿತ್ತು ಫಲಗಳನ್ನು ಸಮರ್ಪಿಸಿದವನಾದನು. ಬಳಿಕ ಸಕಲವನ್ನೂತಿಳಿದಿರುವ ಆ ಮುನಿಪುಂಗವನುಪೌರ್ವಾಪರ್ಯಕ್ರಮವನ್ನನುಸರಿಸಿ ಎಲ್ಲರಕ್ಷೇಮ ಸಮಾಚಾರವನ್ನೂ ಕೇಳಿದನು. ಅಲ್ಲದೆ " ಎಲೈ ಭರತನೆ ! ಅಯೋಧ್ಯಾನಗರದಲ್ಲಿ, ಬಲಕೋಶ ಗಳು ಕುಶಲದಿಂದಿರುವುದೆ ? " ಎಂದೂ ಕೇಳಿದನು. ಹೀಗೆ ಎಲ್ಲವಿಷಯಗಳನ್ನು ಕೇಳುತ್ತ "ದಶರಥಮಹಾರಾಜನುಕುಶಲದಿಂದಿರುವನೆ?" ಎಂದುಕೇಳದೆ ಸುಮ್ಮನಿದ್ದನು. ಆ ಸಮಯದಲ್ಲಿ

ಶರೀರೇಽಗ್ನಿಷು ವೃಕ್ಷೇಷು ಶಿಷ್ಯೇಷು ಮೃಗಪಕ್ಷಿಷು ॥ ೮ ॥ ತಥೇತಿ ತತ್ಪ್ರತಿಜ್ಞಾಯ ಭರದ್ವಾಜೋ ಮಹಾತಪಾಃ ॥ ಭರತಂ ಪ್ರತ್ಯುವಾಚೇದಂ ರಾಘವಸ್ನೇಹಬಂಧನಾತ್ ॥ ೯ ॥ ಕಿಮಿಹಾಗಮನೇ ಕಾರ್ಯಂ? ತವ ರಾಜ್ಯಂ ಪ್ರಶಾಸತಃ ॥ ಏತದಾಚಕ್ಷ್ವ ಮೇ ಸರ್ವಂ ನಹಿಮೇ ಶುಧ್ಯತೇ ಮನಃ ॥ ೧೦ ॥ ಸುಷುವೇಯ ಮಮಿತ್ರಘ್ನಂ ಕೌಸಲ್ಯಾಽನಂದವರ್ಧನಂ ॥ ಭ್ರಾತ್ರಾಸಹ ಸಭಾರ್ಯೋಯ ಶ್ಚಿರಂ ಪ್ರವ್ರಾಜಿತೋ ವನಂ ॥ ೧೧ ॥ ನಿಯುಕ್ತಃ ಸ್ತ್ರೀನಿಯುಕ್ತೇನ ಪಿತ್ರಾ ಯೋಽಸೌ ಮಹಾಯಶಾಃ ॥ ವನವಾಸೀ ಭವೇತೀಹ ಸಮಾಃಕಿಲ ಚತುರ್ದಶ! ॥ ೧೨ ॥ ಕಚ್ಚಿನ್ನ ತಸ್ಯಾಽಪಾಪಸ್ಯ ಪಾಪಂ ಕರ್ತುಂ ಮಿಹೇಚ್ಛಸಿ? ॥

ಆರೋಗ್ಯವನ್ನು, ಪಪ್ರಚ್ಛತುಃ - ಕೇಳಿದರು. ॥ ೮ ॥ ಮಹಾತಪಾಃ-ಮಹಾತಪಸ್ವಿಯಾದ, ಭರದ್ವಾಜಃ-ಭರದ್ವಾಜಋಷಿಯು, ತಥೇತಿ - ಹಾಗೇ ಸರಿಯೆಂದು, ತತ್ - ಆ ವಸಿಷ್ಠ ಭರತರ ವಚನವನ್ನು ಕುರಿತು, ಪ್ರತಿಜ್ಞಾಯ - ಪ್ರತ್ಯುತ್ತರಕೊಟ್ಟು, ರಾಘವಸ್ನೇಹಬಂಧನಾತ್ - ಶ್ರೀರಾಮನಲ್ಲಿನ ಪ್ರೇಮಾತಿಶಯದಿಂದ, ಭರತಂಪ್ರತಿ - ಭರತನನ್ನು ಕುರಿತು, ಇದಂ - ಈ ಮಾತನ್ನು, ಪ್ರತ್ಯುವಾಚ-ಹೇಳಿದನು. ॥೯॥ ಹಿ - ಯಾವಕಾರಣ, ಮೇ - ನನ್ನ, ಮನಃ-ಮನವು, ನಶುಧ್ಯತೇ - ನಂಬಿಕೆಯನ್ನು ಹೊಂದಲಾರದೊ, (ಆ ಕಾರಣ) ಇಹ - ಈಗ, ರಾಜ್ಯಂ-ರಾಜ್ಯವನ್ನು, ಪ್ರಶಾಸತಃ - ಪರಿಪಾಲಿಸುತ್ತಿರುವ, ತವ - ನಿನ್ನ, ಆಗಮನೇ - ಬರುವಿಕೆಯಲ್ಲಿ, ಕಿಂಕಾರ್ಯಂ - ಏನುಪ್ರಯೋಜನ, ಏತತ್ - ಇದನ್ನು, ಮೇ - ನನಗೆ, ಆಚಕ್ಷ್ವ - ಹೇಳು. ॥ ೧೦ ॥ ಕೌಸಲ್ಯಾ - ಕೌಸಲ್ಯಾದೇವಿಯು, ಆನಂದವರ್ಧನಂ-ಆನಂದಕರನಾದ, ಅಮಿತ್ರಘ್ನಂ - ಶತ್ರುಸಂಹಾರಕನಾದ, ಯಂ - ಯಾವ ಶ್ರೀರಾಮನನ್ನು, ಸುಷುವೇ - ಹಡೆದಳೋ, ಯಃ - ಯಾವ ಶ್ರೀರಾಮನು, ಸಭಾರ್ಯಃ-ಹೆಂಡತಿಯೊಡಗೂಡಿ, ಭ್ರಾತ್ರಾಸಹ - ತಮ್ಮನಾದ ಲಕ್ಷ್ಮಣನೊಡನೆ, ಚಿರಂ - ಬಹಳಕಾಲ, ವನಂ - ಅರಣ್ಯವನ್ನು ಕುರಿತು, ಪ್ರವ್ರಾಜಿತಃ - ಹೊರಡಿಸಲ್ಪಟ್ಟನೋ, ಮಹಾಯಶಾಃ - ಮಹಾ ಕೀರ್ತಿವಂತನಾದ, ಯೋಽಸೌ - ಯಾವ ಶ್ರೀರಾಮನು, ಸ್ತ್ರೀನಿಯುಕ್ತೇನ - ಹೆಂಗಸಿಗೆ ಪರವಶನಾದ, ಪಿತ್ರಾ - ತಂದೆಯಿಂದ, ಚತುರ್ದಶಸಮಾಃ - ಹದಿನಾಲ್ಕುವರುಷಗಳು, ವನವಾಸೀ - ವನದಲ್ಲಿರುವನು, ಭವೇತಿ - ಆಗೆಂದು, ನಿಯುಕ್ತಃ - ನಿಯಮಿತನಾದನೋ, ಅಪಾಪಸ್ಯ -

---

ವಸಿಷ್ಠಮುನಿಯೂ, ಭರತನೂ, ಆ ಭರದ್ವಾಜಮುನಿಯನ್ನುಕುರಿತು “ ಓ ಮುನಿಶ್ರೇಷ್ಠನೆ ! ನಿಮ್ಮ ಶರೀರದಲ್ಲಿ ರೋಗಬಾಧೆಗಳೇನೂಇಲ್ಲದೆ ಸುಖವಾಗಿರುವುದೆ? ನಿಮ್ಮಅಗ್ನಿಹೋತ್ರಗಳೂ, ನಿಮ್ಮ ತಪೋವನದ ವೃಕ್ಷಗಳೂ, ಶಿಷ್ಯರೂ, ಮೃಗಗಳೂ, ಪಕ್ಷಿಗಳೂ ಸುಖವಾಗಿರುವುವಷ್ಟೆ?” ಎಂದನು. ಹೀಗೆಂದ ಬಳಿಕ ತಪೋವಂತರಲ್ಲಿ ಮಹಾಶ್ರೇಷ್ಠನಾದ ಆ ಭರದ್ವಾಜಮುನಿಯು “ನನಗೆ ಸರ್ವಪ್ರಕಾರದಲ್ಲಿಯೂ ಸುಖವಾಗಿರುವುದು.” ॥೬-೧೦॥ ಎಂದು ಹೇಳಿ, ಶ್ರೀರಾಮಮೂರ್ತಿಯಲ್ಲಿನ ಸ್ನೇಹದಿಂದ ಭರತನನ್ನು ಕುರಿತು ಹೀಗೆಂದನು. “ ಓ ಭರತಕುಮಾರಾ ! ಸಾಕೇತಸಾಂಮ್ರಾಜ್ಯವನ್ನು ಪರಿಪಾಲಿಸುತ್ತಿದ್ದ ನೀನು ಈ ತಪೋವನಕ್ಕೆಬರಲು ಕಾರಣವೇನು? ಈ ವಿಷಯವೆಲ್ಲವನ್ನು ನನಗೆ ತಿಳಿಸು. ಇದು ತಿಳಿದಬಳಿಕ ನನ್ನಮನಸ್ಸುನಿರ್ಮಲವಾಗುತ್ತದೆ. ಎಲೈ ಭರತನೆ! ಶತ್ರುಗಳನ್ನು ನಶಿಸುವಂತೆಮಾಡುವವನೂ, ಸಂತೋಷವನ್ನು ವೃದ್ಧಿ

ಅಕಂಟಕಂ ಭೋಕ್ತುಮನಾ ರಾಜ್ಯಂ ತಸ್ಯಾನುಜಸ್ಯಚ || ೧೩ || ಏವಮುಕ್ತೋ ಭರದ್ವಾಜಂ ಭರತಃ ಪ್ರತ್ಯುವಾಚಹ || ಪರ್ಯಶ್ರುನಯನೋ ದುಃಖಾ ದ್ವಾಚಾ ಸಂಸಜ್ಜಮಾನಯಾ || ೧೪ || ಹತೋಸ್ಮಿ! ಯದಿ ಮಾಮೇವಂ ಭಗ ವಾನಪಿ ಮನ್ಯತೇ! || ಮತ್ತೋ ನದೋಷ ಮಾಶಂಕೇ ನೈವಂ ಮಾಮನುಶಾ ಸ್ತುಹಿ! || ೧೫ || ನಚೈತದಿಷ್ಟಂ ಮಾತಾ ಮೇ ಯದವೋಚ ನ್ಮದಂತರೇ! ||

ಪಾಪರಹಿತನಾದ, ತಸ್ಯ - ಅಂತಹ ಶ್ರೀರಾಮನ, ತಸ್ಯ - ಆತನ, ಅನುಜಸ್ಯ - ತಮ್ಮನಾದ ಲಕ್ಷ್ಮಣನ, ರಾಜ್ಯಂ - ರಾಜ್ಯವನ್ನು, ಅಕಂಟಕಂ - ನಿಷ್ಕಂಟಕವಾಗಿ, ಭೋಕ್ತುಮನಾಃ - ಅನುಭವಿಸಲು ಮನವುಳ್ಳವನಾಗಿ, ಪಾಪಂ - ಪಾಪಕಾರ್ಯವನ್ನು, ಕರ್ತುಂ - ಮಾಡುವದಕ್ಕೆ, ನೇಚ್ಛಸಿಕಚ್ಚಿತ್ - ಇಚ್ಛಿಸಲಿಲ್ಲವಷ್ಟೆ. || ೧೧ ೧೩ || ಏವಂ - ಈಪರಿಯಾಗಿ, ಭರತಃ - ಭರತನು, ಉಕ್ತಃ - ಹೇಳಲ್ಪಡಲು, ದುಃಖಾತ್ - ದುಃಖದಿಂದ, ಪರ್ಯಶ್ರುನಯಃ - ಸುರಿಸುತ್ತಿರುವ ಕಂಬನಿಗಳುಳ್ಳ ನೇತ್ರಗಳುಳ್ಳವನಾಗಿ, ಸಂಸಜ್ಜಮಾನಯಾ - ಕಂಠದಲ್ಲಿಯೇ ಜಾರಿಹೋಗುತ್ತಿರುವ, ವಾಚಾ-ವಾಕ್ಕಿನಿಂದ, ಭರದ್ವಾಜಂ-ಭರದ್ವಾಜಋಷಿಯನ್ನು ಕುರಿತು, ಪ್ರತ್ಯುವಾಚಹ - ಪ್ರತ್ಯುತ್ತರಕೊಟ್ಟನು. || ೧೪ || ಭಗವಾನಪಿ - (೧) ಷಡ್ಗುಣೈಶ್ವರ್ಯಸಂಪನ್ನನಾದ ನೀನೂ, ಏವಂ - ಈಪರಿಯಾಗಿ, ಮಾಂ - ನನ್ನನ್ನು, ಮನ್ಯತೇ ಯದಿ - ತಿಳಿದವನೇ ಆದರೆ, ಹತಃ - ಕೆಟ್ಟವನು, ಅಸ್ಮಿ-ಆದೆನು, ಮತ್ತಃ-ನನ್ನಿಂದ, ದೋಷಂ-ದೋಷ

ಗೊಳಿಸುವವನೂ ಆದ ಶ್ರೀರಾಮನನ್ನು, ಕೌಸಲ್ಯಾದೇವಿಯು ಮಗನನ್ನಾಗಿಪಡೆದಳು. ಅಂತಹ ಶ್ರೀರಾಮಮೂರ್ತಿಯನ್ನು ದಶರಥರಾಜನು, ತನ್ನ ಹೆಂಡತಿಯಾದ ಕೈಕೇಯಿಯ ಮಾಯಾ ವಚನಗಳಿಂದ ಕಟ್ಟುಬಿದ್ದು ಹದಿನಾಲ್ಕುಸಂವತ್ಸರಗಳು ಅರಣ್ಯದಲ್ಲಿರುವಂತೆ ನಿಯಮಿಸಿದನು. ಆದುದರಿಂದ ಮಹಾಕೀರ್ತಿವಂತನಾದ ಶ್ರೀರಾಮನು ತನ್ನ ಪ್ರಿಯಪತ್ನಿಯಾದ ಸೀತೆ, ತಮ್ಮನಾದ ಲಕ್ಷ್ಮಣ ಇವರೊಡಗೂಡಿ, ಹದಿನಾಲ್ಕುಸಂವತ್ಸರಗಳು ವನದಲ್ಲಿರಲು ಹೊರಟುಹೋದನು.ಹಾಗೆ ಅರಣ್ಯಕ್ಕೆತೆರಳಿದವನೂ, ನಿಷ್ಕಲ್ಮಷನೂಆದ, ಶ್ರೀರಾಮನಿಗೆ ಅಪಕಾರವನ್ನುಮಾಡಿ ಆತನಿಗೆ ಸಲ್ಲಬೇಕಾದ ಸಾಕೇತರಾಜ್ಯವನ್ನು, ನಿಷ್ಕಂಟಕವಾಗಿಆಳಬೇಕೆಂದು ಅಪೇಕ್ಷಿಸಿ, ನೀನು ಈ ಚತುರಂಗಬಲಸಮೇತನಾಗಿ ಹೊರಟಿರುವೆಯಾ ? ನಿನ್ನ ಅಭಿಪ್ರಾಯವೇನು ? ಅದನ್ನು ನನಗೆ ತಿಳಿಸುವವನಾಗು" ಭರದ್ವಾಜಮುನಿಯಾಡಿದ ಈ ನುಡಿಗಳನ್ನು ಕೇಳಿ ಭರತನು ಮಹಾ ದುಃಖದಿಂದ, ಕಣ್ಣೀರಿಡುತ್ತಾ ಗದ್ಗದಸ್ವರಭರಿತನಾಗಿ ಆ ಮುನಿಯನ್ನು ಕುರಿತು ಹೀಗೆಂದನು."ಮಹಾಮನಸ್ವಿಯಾದೆಲೈ ಭರದ್ವಾಜಮುನಿ ಶ್ರೇಷ್ಠನೆ! ನೀನೂ ನನ್ನನ್ನುಕುರಿತು ಈರೀತಿ ಯೋಚಿಸಿದುದೇ ಆದರೆ, ನಾನು ಹತನಾದೆನು. ನೀನು ಹೇಳಿದಂತಹ ಕ್ರೂರಕೃತ್ಯ

ಟಿ. (೧) ಎಲೈ ಮುನಿಯೆ ! ನನ್ನ ಗುಣಾವಳಿಗಳನ್ನರಿಯದ ಪಾಮರರೆಲ್ಲರೂ ನನ್ನನ್ನು ಭ್ರಾತೃದ್ರೋಹಿಯೆಂದೆಣಿಸಿದರು. ಕೃತಸಂಕಲ್ಪನಾದ ನನ್ನ ಉದ್ಯಮವನ್ನು ನೋಡಿದ ಅವರೆಲ್ಲರೂ ಆಮೇಲೆ ನನ್ನನ್ನು ಭ್ರಾತೃಪ್ರಿಯನನ್ನಾಗಿ ತಿಳಿದರು. ಅವರ ಮಾತದಂತಿರಲಿ. ನೀನು ಮಹಾತ್ಮನು; ಭೂತಭವಿಷ್ಯದ್ವರ್ತಮಾನಗಳನ್ನರಿತವನು ; ಇಂತಹ ನೀನು ನನ್ನ ಸ್ವಭಾವದ ವಿಷಯವಾಗಿ ಸಂಶಯಪಟ್ಟೆ. ಆದುದರಿಂದ ನಾನು ಬಹು ಪಾಪಿಷ್ಠನಾದೆ. ನೀನು ಹಾಗೆ ತಿಳಿಯಲು ಯಾವ ಮಾರ್ಗವೂ ಇಲ್ಲ. ನಾನು ನಮ್ಮಣ್ಣ ದೇವನ ಅಡಿಯಾಳಾಗಿರುವೆನು." ಎಂಬುದೇ ಇಲ್ಲಿನ ಅಭಿಪ್ರಾಯವೆಂದು ರಾಮಪಂಡಿತರ ವ್ಯಾಖ್ಯಾನ.

ನಾಹಮೇತೇನ ತುಷ್ಟಶ್ಚ ನತದ್ವಚನ ಮಾದದೇ ॥ ೧೬ ॥ ಅಹಂತು ತಂ ನರ
ವ್ಯಾಘ್ರ ಮುಪಯಾತಃ ಪ್ರಸಾದಕಃ ॥ ಪ್ರತಿನೇತು ಮಯೋಧ್ಯಾಂಚ ಪಾದೌ
ತಸ್ಯಾಭಿವಂದಿತುಂ ॥ ೧೭ ॥ ತ್ವಂ ಮಾಮೇವಂ ಗತಂ ಮತ್ವಾ ಪ್ರಸಾದಂ
ಕರ್ತು ಮರ್ಹಸಿ!॥ಶಂಸಮೇ ಭಗವನ್! ರಾಮಃ ಕ್ವ ಸಂಪ್ರತಿ ಮಹೀಪತಿಃ?॥೧೮॥
ವಸಿಷ್ಠಾದಿಭಿ ಋತ್ವಿಗ್ಭಿ ರ್ಯಾಚತೋ ಭಗವಾಂ ಸ್ತತಃ ॥ ಉವಾಚ ತಂ ಭರ
ದ್ವಾಜಃ ಪ್ರಸಾದಾ ದ್ಭರತಂ ವಚಃ ॥ ೧೯ ॥ ತ್ವಯ್ಯೇತ ತ್ಪುರುಷವ್ಯಾಘ್ರ!

ವನ್ನು, ನಾಶಂಕೇ - ತಿಳಿದುಕೊಳ್ಳಬೇಡ, ಏವಂ - ಈಪರಿಯಾಗಿ, ಮಾಂ - ನನ್ನನ್ನು ಕುರಿತು, ನಾನು ಶಾಸ್ತುಹಿ - ಆಜ್ಞಾಪಿಸಬೇಡ. ॥ ೧೫ ॥ ಮೇ - ನನ್ನ, ಮಾತಾ - ತಾಯಿಯು, ಮದಂತರೇ-ನಾನು ಇಲ್ಲದಕಾಲದಲ್ಲಿ, ಯತ್ - ಯಾವ ಮಾತನ್ನು, ಅವೋಚತ್ - ನುಡಿದಳೋ, ಏತತ್ - ಈ ಮಾತು, ಮೇ - ನನಗೆ, ನೇಷ್ಟಂ - ಪ್ರಿಯವಾದುದಲ್ಲ, ಅಹಂ - ನಾನು, ಏತೇನ-ಈ ಮಾತಿನಿಂದ, ನತುಷ್ಟಶ್ಚ-ಸಂತೋಷಗೊಂಡವನೂ ಅಲ್ಲ, ತದ್ವಚನಂ - ಆ ಕೈಕೇಯಿಯ ವಚನವನ್ನು, ನಾದದೇ - ನಾನು ಗ್ರಹಿಸಿದವನಲ್ಲವು. ॥ ೧೬ ॥ ಅಹಂತು - ನಾನಾದರೆ, ನರವ್ಯಾಘ್ರಂ - ಪುರುಷಶ್ರೇಷ್ಠನಾದ, ತಂ - ಆ ಶ್ರೀರಾಮನನ್ನು. ಪ್ರಸಾದಕಃ - ಪ್ರಸನ್ನನಾಗಿ ಮಾಡಿಕೊಳ್ಳಲಿಚ್ಛಿಸಿ, ತಸ್ಯ - ಆ ಶ್ರೀರಾಮನ, ಪಾದೌ-ಚರಣಗಳನ್ನು, ಅಭಿವಂದಿತುಂ - ನಮಸ್ಕರಿಸಲು, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ಪ್ರತಿನೇತುಂಚ - ಹಿಂದಕ್ಕೆಕರೆದುಕೊಂಡು ಹೋಗುವದಕ್ಕೂ, ಉಪಯಾತಃ - ಬಂದೆನು. ॥ ೧೭ ॥ ಹೇ ಭಗವನ್ - ಎಲೈ ಪೂಜ್ಯನೇ, ತ್ವಂ - ನೀನು, ಮಾಂ - ನನ್ನನ್ನು, ಏವಂ-ಈಪರಿಯಾಗಿ, ಆಗತಂ-ಬಂದವನನ್ನಾಗಿ, ಮತ್ವಾ - ತಿಳಿದು, ಪ್ರಸಾದಂ - ಅನುಗ್ರಹವನ್ನು, ಕರ್ತುಂ - ಮಾಡಲು, ಅರ್ಹಸಿ - ಯೋಗ್ಯನಾಗು, ಮಹೀಪತಿಃ - ಪೃಥಿವೀಪತಿಯಾದ, ರಾಮಃ - ಶ್ರೀರಾಮನು, ಸಂಪ್ರತಿ - ಈಗ, ಕ್ವ-ಎಲ್ಲಿದ್ದಾನೆ, ಮೇ - ನನಗೆ, ಶಂಸ - ಹೇಳು. ॥ ೧೮ ॥ ವಸಿಷ್ಠಾದಿಭಿಃ-ವಸಿಷ್ಠಋಷಿಯೇ ಮೊದಲಾದ, ಋತ್ವಿಗ್ಭಿಃ - ಋತ್ವಿಕ್ಕುಗಳಿಂದ, ಯಾಚಿತಃ - ಪ್ರಾರ್ಥಿತನಾದ, ಭಗವಾನ್-ಪೂಜ್ಯನಾದ, ಭರದ್ವಾಜಃ - ಭರದ್ವಾಜಋಷಿಯು, ತತಃ - ಬಳಿಕ, ಪ್ರಸಾದಾತ್ - ಅನುಗ್ರಹದಿಂದ, ತಂಭರತಂ - ಆ ಭರತನನ್ನು ಕುರಿತು, ವಚಃ - ಮಾತನ್ನು, ಉವಾಚ - ಹೇಳಿದನು. ॥ ೧೯ ॥ ಹೇ ಪುರುಷವ್ಯಾಘ್ರ-ಎಲೈ

ಗಳನ್ನು ಮಾಡಲೋಸುಗ ಹೊರಟವನಲ್ಲ. ॥೧೧-೧೫॥ ರಾಜ್ಯದಿಂದ ಹೊರಹೊರಟ ಮಾತ್ರಕ್ಕೇ ದುಷ್ಕೃತ್ಯಗಳಪಾಲಾದನೆಂದು ತಿಳಿಯಕೂಡದು. ಅಲ್ಲದೆ ಎಲೈ ಮುನಿಕುಲೋತ್ತಂಸನಾದ ಭರದ್ವಾಜಮುನಿಯೆ ! ನಾನಿಲ್ಲದ ಸಮಯದಲ್ಲಿ ನನ್ನ ತಾಯಿಯಾದ ಕೈಕೇಯೀದೇವಿಯು ಹೇಳಿದ ಮಾತುಗಳು ನನಗೆ ಸಮ್ಮತವಾದುವಲ್ಲ. ನನ್ನ ತಾಯಿಯಾದ ಆಕೆಯಮಾತುಗಳನ್ನು ಕುರಿತು ನಾನು ಸಂತೋಷಪಟ್ಟವನಲ್ಲ; ಆಕೆಯು ಹೇಳಿದಮಾತುಗಳನ್ನು ನಾನು ಸ್ವೀಕರಿಸಲಿಲ್ಲ. ನಾನು ಪುರುಷೋತ್ತಮನಾದ ಶ್ರೀರಾಮಮೂರ್ತಿಯ ಪಾದಗಳಿಗೆರಗಿ, ಪುನಃ ಅಯೋಧ್ಯಾಪಟ್ಟಣಕ್ಕೆಕರೆದುಕೊಂಡು ಹೋಗಲಪೇಕ್ಷಿಸಿ ಬಂದಿದ್ದೇನೆ. ಶ್ರೀರಾಮಮೂರ್ತಿಯನ್ನಾರೀತಿ ಹಿಂದಕ್ಕೆ ಕರೆದುಕೊಂಡುಹೋಗುವ ಪ್ರಯತ್ನದಲ್ಲಿ ಅನುಗ್ರಹಿಸು. ಓ ಮುನಿಯೆ ! ನನ್ನಲ್ಲನುಗ್ರಹವುಳ್ಳವನಾಗಿ, ಭೂಪಾಲನಾದ ಶ್ರೀರಾಮನು ಎಲ್ಲಿರುವನೆಂಬು

ಯುಕ್ತಂ ರಾಘವ ವಂಶಜೇ ॥ ಗುರುವೃತ್ತಿ ರ್ದಮಶ್ಚೈವ ಸಾಧೂನಾ ಮನು
ಯಾಯಿತಾ ॥ ೨೦ ॥ ಜಾನೇ ಚೈತನ್ಮನಸ್ಸ್ಥಂ ತೇ ದೃಢೀಕರಣ ಮಸ್ತ್ವಿತಿ ॥
ಅಪೃಚ್ಛಂ ತ್ವಾಂ ತದಾತ್ಯರ್ಥಂ ಕೀರ್ತಿಂ ಸಮಭಿವರ್ಧಯ ॥ ೨೧ ॥ ಜಾನೇಚ
ರಾಮಂ ಧರ್ಮಜ್ಞಂ ಸಸೀತಂ ಸಹಲಕ್ಷ್ಮಣಂ ॥ ಅಸೌ ವಸತಿ ತೇ ಭ್ರಾತಾ
ಚಿತ್ರಕೂಟೇ ಮಹಾಗಿರೌ ॥ ೨೨ ॥ ಶ್ವಸ್ತು ಗಂತಾಸಿ ! ತಂ ದೇಶಂ ವಸಾದ್ಯ

ಪುರುಷಶ್ರೇಷ್ಠನೇ, ರಾಘವವಂಶಜೇ - ರಘುವಂಶೋತ್ಪನ್ನನಾದ, ತ್ವಯಿ - ನಿನ್ನಲ್ಲಿ, ಗುರುವೃತ್ತಿಃ - ಗುರುಗಳ ಅನುವರ್ತನವೂ, ದಮಶ್ಚೈವ - ಇಂದ್ರಿಯನಿಗ್ರಹವೂ, ಸಾಧೂನಾಂ - ಸತ್ಪುರುಷರಿಗೆ, ಅನುಯಾಯಿತಾ - ಅನುಸರಣೆಯನ್ನುಮಾಡುವಿಕೆಯೂ, ಏತತ್ - ಇದು, ಯುಕ್ತಂ - ಯುಕ್ತವು. ॥ ೨೦ ॥ ತೇ - ನಿನ್ನ, ಮನಸ್ಥಂ - ಮನಸ್ಸಿನಲ್ಲಿರುವ, ಏತತ್ಕಾರ್ಯಂ - ಈ ಕಾರ್ಯವನ್ನು, ಜಾನೇ- ತಿಳಿದಿದ್ದೇನೆ, ದೃಢೀಕರಣಂ - ದೃಢಪಾದುದು, ಅಸ್ತು - ಆಗಲಿ, ಇತಿ - ಇಂತೆಂದು, ತದಾ - ಆ ಕಾಲ ದಲ್ಲಿ, ಅತ್ಯರ್ಥಂ - ಬಹಳವಾಗಿ, ಕೀರ್ತಿಂ - ಯಶಸ್ಸನ್ನು, ಸಮಭಿವರ್ಧಯ - ವೃದ್ಧಿಗೊಳಿಸುತ್ತ, ತ್ವಾಂ - ನಿನ್ನನ್ನು, ಅಪೃಚ್ಛಂ - ಕೇಳಿದೆನು. ॥ ೨೧ ॥ ಧರ್ಮಜ್ಞಂ - ಧರ್ಮದಲ್ಲಿಯೇ ಬುದ್ಧಿಯುಳ್ಳ, ಸಸೀತಂ - ಸೀತಾದೇವಿಯೊಡಗೂಡಿದ, ಸಹಲಕ್ಷ್ಮಣಂ-ಲಕ್ಷ್ಮಣನೊಡಗೂಡಿರುವ, ರಾಮಂ-ಶ್ರೀರಾಮ ನನ್ನು, ಜಾನೇಚ - ತಿಳಿದೇಇದ್ದೇನೆ, ತೇ - ನಿನ್ನ, ಭ್ರಾತಾ - ಅಣ್ಣನಾದ, ಅಸೌ - ಈ ಶ್ರೀರಾಮನು, ಚಿತ್ರಕೂಟೇ - ಚಿತ್ರಕೂಟವೆಂಬ, ಮಹಾಗಿರೌ - ಮಹಾ ಪರ್ವತದಲ್ಲಿ, ವಸತಿ - ಇರುವನು, ಶ್ವಸ್ತು - ನಾಳೆಯಾದರೆ, ತಂದೇಶಂ-ಆ ಪ್ರದೇಶವನ್ನು ಕುರಿತು, ಗಂತಾಸಿ-ಹೋಗುವನಾಗುವೆ, ಹೇ ಸುಪ್ರಾಜ್ಞ- ಎಲೈ ಪ್ರಜ್ಞಾವಂತನೇ, ಹೇ ಕಾಮಾರ್ಥಕೋವಿದ - ಎಲೈ ಇಷ್ಟಾರ್ಥವನ್ನು ನೆರವೇರಿಸುವುದರಲ್ಲಿ ಸಮ

ದನ್ನು ಹೇಳುವವನಾಗು.'' ಭರತನಿಂತು ನುಡಿದಮೇಲೆ ವಸಿಷ್ಠಾದಿ ಮುನಿಶ್ರೇಷ್ಠರೂ ಸಹ ಆ ಭರದ್ವಾಜಮುನಿಯನ್ನು ಅನೇಕ ವಿಧಗಳಿಂದ ಪ್ರಾರ್ಥಿಸಿದರು. ॥ ೧೬-೨೦ ॥ ಆಗಲಾ ಭರದ್ವಾಜಮುನೀಂದ್ರನು ಪ್ರಸನ್ನನಾಗಿ ಆಭರತನನ್ನುನೋಡಿ ಈ ರೀತಿ ನುಡಿದನು. "ಎಲೈ ಪುರುಷೋತ್ತಮನಾದ ಭರತನೆ! ರಘುಕುಲದಲ್ಲಿ ಹುಟ್ಟಿದ ನಿನಗೆ, ಗುರುವಾದ ನಿಮ್ಮ ಣ್ಣನಿಗೆ ಶುಶ್ರೂಷೆಯನ್ನು ಮಾಡುವುದು,ಇಂದ್ರಿಯನಿಗ್ರಹಮಾಡುವುದು, ಹಿರಿಯರಮಾರ್ಗವನ್ನ ನುಸರಿಸುವುದು ಇವೇ ಮೊದಲಾದ ಸತ್ಕಾರ್ಯಗಳು ತಕ್ಕುವಾಗಿಯೇ ಇರುವುದು. ಎಲೈ ಭರತನೆ! ನಿನ್ನಭಿಪ್ರಾಯವನ್ನು ನಾನು ತಿಳಿದಿದ್ದೇನೆ. ಆದರೂ, ನಿನ್ನಭಿಪ್ರಾಯವನ್ನು ನೀನೇ ದೃಢವಾಗಿ ತಿಳಿಸಲೆಂಬುದಕ್ಕಾಗಿ ಈರೀತಿ ನುಡಿದೆನು. ನೀನು ಅಣ್ಣನಾದ ಶ್ರೀರಾಮನಲ್ಲಿ ಮಹಾ ಪ್ರೇಮೆಯುಳ್ಳವನೆಂಬ ಕೀರ್ತಿಯನ್ನು ಪ್ರಕಟಗೊಳಿಸಲೀರೀತಿ ಕೇಳಿದೆನೇಹೊರ್ತು ಮತ್ತೇನೂಅಲ್ಲ. ಸೀತಾಲಕ್ಷ್ಮಣರೊಡಗೂಡಿದವನೂ, ಧರ್ಮಗಳನ್ನರಿತಿರುವವನೂಆದ ಶ್ರೀರಾಮನು ಯಾವ ಸ್ಥಳದಲ್ಲಿರುವನೆಂಬುದನ್ನು ನಾನು ತಿಳಿದಿದ್ದೇನೆ. ನಿನ್ನಣ್ಣನಾದ ಶ್ರೀ ರಾಮನು ಸೀತಾಲಕ್ಷ್ಮಣ ಸಹಿತನಾಗಿ ಚಿತ್ರಕೂಟವೆಂದು ಹೆಸರುಳ್ಳ ಮಹಾಪರ್ವತದಲ್ಲಿ ವಾಸಮಾಡುತ್ತಿದ್ದಾನೆ. ಇಂದು ನಮ್ಮಾಶ್ರಮದಲ್ಲಿ ತಂಗಿದ್ದು, ನಾಳೆ ಮಂತ್ರಿಗಳೇ ಮೊದ ಲಾದವರೊಡನೆ ಆ ಸ್ಥಳಕ್ಕೆ ತೆರಳುವೆ. ಕಾಮಾರ್ಥಗಳನ್ನು ತಿಳಿದವನೂ, ಮಹಾ

ಸಹಮಂತ್ರಿಭಿಃ ‖ ಏತಂ ಮೇ ಕುರು ಸುಪ್ರಾಜ್ಞ! ಕಾಮಂ ಕಾಮಾರ್ಥ ಕೋವಿದ! ‖ ೨೩ ‖

ತತ ಸ್ತಥೇತ್ಯೇವ ಮುದಾರದರ್ಶನಃ
ಪ್ರತೀತ ರೂಪೋ ಭರತೋ ಬ್ರವೀ ದ್ವಚಃ ‖
ಚಕಾರ ಬುದ್ಧಿಂ ಚ ತದಾ ತದಾಶ್ರಮೇ
ನಿಶಾ ನಿವಾಸಾಯ ನರಾಧಿಪಾತ್ಮಜಃ ‖ ೨೪ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ನವತಿತಮಸ್ಸರ್ಗಃ.

ರ್ಥನಾದವನೇ, ಮಂತ್ರಿಭಿಸ್ಸಹ - ಮಂತ್ರಿಗಳೊಡನೆ, ಅದ್ಯ - ಈ ದಿನದಲ್ಲಿ, ವಸ - ಇರು, ಏತಂ - ಈ, ಮೇ - ನನ್ನ, ಕಾಮಂ - ಕೋರಿಕೆಯನ್ನು, ಕುರು - ಮಾಡು. ‖ ೨೨-೨೩ ‖ ತತಃ - ಬಳಿಕ, ಉದಾರ ದರ್ಶನಃ - ಗಂಭೀರವಾದ ದೂರದೃಷ್ಟಿಯುಳ್ಳ, ಪ್ರತೀತರೂಪಃ - ಪ್ರಸಿದ್ಧವಾದ ಕೀರ್ತಿಯುಳ್ಳ, ನರಾಧಿಪಾತ್ಮಜಃ - ರಾಜಕುವರನಾದ, ಭರತಃ - ಭರತನು, ತಥೇತ್ಯೇವ - ಹಾಗೆಯೇ ಆಗಲೆಂದು, ವಚಃ- ಮಾತನ್ನು, ಅಬ್ರವೀತ್ - ನುಡಿದನು, ತದಾ - ಆ ಕಾಲದಲ್ಲಿ, ತದಾಶ್ರಮೇ - ಆ ಭರದ್ವಾಜಾಶ್ರಮದಲ್ಲಿ, ನಿವಾಸಾಯ - ಇರುವದಕ್ಕೋಸುಗ, ಬುದ್ಧಿಂಚ - ಮನಸ್ಸನ್ನೂ, ಚಕಾರ-ಮಾಡಿದನು ‖೨೪‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ನವತಿತಮಸ್ಸಗಃ.

ಪಂಡಿತನೂ ಆದ ಎಲೈ ಭರತನೆ! ನನ್ನ ಅಭಿಪ್ರಾಯವನ್ನು ಸಫಲವಾದುದನ್ನಾಗಿಮಾಡು" ಭರದ್ವಾಜಮುನಿಯು ಈ ರೀತಿ ನುಡಿದ ಬಳಿಕ ಮಹಾ ಬುದ್ಧಿವಂತನೂ, ರಾಜಪುತ್ರನೂಆದ ಆ ಭರತನು ಬಹಳವಾದ ಸಂತೋಷವನ್ನುಹೊಂದಿ ಆತನನ್ನುನೋಡಿ "ಓ ಮುನಿವರ್ಯನೆ! ನಿನ್ನ ಅಭಿಪ್ರಾಯದಂತೆಯೇ ಆಗುವದು" ಎಂದನು. ಭರತನಿಂತುನುಡಿದು, ಆ ರಾತ್ರಿಯೆಲ್ಲವನ್ನೂ ಆ ಮುನಿಯ ಆಶ್ರಮದಲ್ಲಿಯೇ ಕಳೆಯಲು ಮನಸ್ಸು ಮಾಡಿದನು. ‖೧೩-೨೪‖

ಇಂತಿದು ಭರತಕೃತ ಭರದ್ವಾಜಾಶ್ರಮ ಪ್ರವೇಶ ಕಥಾಕಥನವೆಂಬ
ತೊಂಭತ್ತನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕನವತಿತಮಸ್ಸರ್ಗಃ.

ಕೃತಬುದ್ಧಿಂ ನಿವಾಸಾಯ ತತ್ರೈವ ಸಮುನಿ ಸ್ತದಾ ॥ ಭರತಂ ಕೈಕಯೀಪುತ್ರ ಮಾತಿಥ್ಯೇನ ನ್ಯಮಂತ್ರಯತ್ ॥ ೧ ॥ ಅಬ್ರವೀ ದ್ಭರತ ಸ್ತ್ವೇನಂ ನನ್ವಿದಂ ಭವತಾ ಕೃತಂ ॥ ಪಾದ್ಯಮರ್ಘ್ಯಂ ತಥಾತಿಥ್ಯಂ ವನೇ ಯದುಪಪದ್ಯತೇ ॥ ೨ ॥ ಅಥೋವಾಚ ಭರದ್ವಾಜೋ ಭರತಂ ಪ್ರಹಸನ್ನಿವ ॥ ಜಾನೇ ತ್ವಾಂ ಪ್ರೀತಿಸಂಯುಕ್ತಂ ತುಷ್ಯೇ ತ್ವಂ ಯೇನ ಕೇನಚಿತ್ ॥ ೩ ॥ ಸೇನಾಯಾಸ್ತು ತವೈತಸ್ಯಾಃ ಕರ್ತುಮಿಚ್ಛಾಮಿ ಭೋಜನಂ ॥ ಮಮ ಪ್ರೀತಿರ್ಯಥಾ

ಸಮುನಿಃ - ಆ ಭರದ್ವಾಜಋಷಿಯು, ತದಾ - ಆ ಕಾಲದಲ್ಲಿ, ತತ್ರೈವ - ಆ ಆಶ್ರಮದಲ್ಲಿಯೇ, ನಿವಾಸಾಯ - ಇರುವದಕ್ಕೋಸ್ಕರ, ಕೃತಬುದ್ಧಿಂ - ನಿಶ್ಚಯಿಸಿದ, ಕೈಕಯೀಪುತ್ರಂ - ಕೈಕೇಯೀದೇವಿಯ ಮಗನಾದ, ಭರತಂ - ಭರತನನ್ನು, ಆತಿಥ್ಯೇನ - ಭೋಜನಪರ್ಯಂತಾತಿಥಿ ಸತ್ಕಾರಕ್ಕೋಸ್ಕರ, ನ್ಯಮಂತ್ರಯತ್ - ಬೇಡಿಕೊಂಡನು. ॥ ೧ ॥ ಭರತಃ - ಭರತನು, ಏನಂ - ಈ ಭರದ್ವಾಜಋಷಿಯನ್ನು ಕುರಿತು, ಭವತಾ - ನಿನ್ನಿಂದ, ವನೇ - ಅರಣ್ಯದಲ್ಲಿ, ಯತ್ - ಯಾವದು, ಉಪಪದ್ಯತೇ - ಲಭ್ಯವಾಗುದೋ, ಇದಂತತ್ - ಆ ಈ, ಪಾದ್ಯಂ - ಪಾದೋದಕವು, ಅರ್ಘ್ಯಂಚ - ಅರ್ಘ್ಯವೂ, ತಥಾ - ಹಾಗೆಯೇ, ಆತಿಥ್ಯಂಚ - ಫಲರೂಪ ಆತಿಥ್ಯವು, ಕೃತಂನನು - ಮಾಡಲ್ಪಟ್ಟಿತಷ್ಟೆ ॥ ೨ ॥ ಅಥ - ಬಳಿಕ, ಭರದ್ವಾಜಃ - ಭರದ್ವಾಜಋಷಿಯು, ಪ್ರಹಸನ್ನಿವ - ನಗುತ್ತ, ತ್ವಂ - ನೀನು, ಯೇನಕೇನಚಿತ್ - ಯಾವುದಾದರೂ ಒಂದುಪದಾರ್ಥದಿಂದಲೇ, ತುಷ್ಯೇಃ - ತೃಪ್ತನಾಗುವೆ, ತ್ವಾಂ - ನಿನ್ನನ್ನು, ಪ್ರೀತಿಸಂಯುಕ್ತಂ - ಸಂತೋಷದಿಂದ ಯುಕ್ತನನ್ನಾಗಿ, ಜಾನೇ - ತಿಳಿದಿದ್ದೇನೆ, ಇತಿ - ಇಂತೆಂದು, ಭರತಂ - ಭರತನನ್ನು ಕುರಿತು, ಉವಾಚ - ಹೇಳಿದನು. ॥ ೩ ॥ ಹೇ ಮನುಜರ್ಷಭ - ಎಲೈ ಮನುಜ

ಆ ಬಳಿಕ ತನ್ನಾಶ್ರಮಕ್ಕೆ ಬಂದು ಅಲ್ಲಿಯೇ ವಾಸಮಾಡಲು ನಿಶ್ಚಯಿಸಿದ, ಕೈಕೇಯೀಪುತ್ರನಾದ ಭರತಕುಮಾರನನ್ನು ಕುರಿತು, ಅತಿಥಿಸತ್ಕಾರವನ್ನು ಕೈಕೊಳ್ಳಬೇಕೆಂದು ಪ್ರಾರ್ಥಿಸಿದ ಭರದ್ವಾಜಮುನಿಯನ್ನು ಕುರಿತು, ಆ ಭರತನಿಂತೆಂದನು. "ಓ ಭರದ್ವಾಜಮುನಿಯೆ! ವನದಲ್ಲಿ ದೊರಕುವ ದ್ರವ್ಯಗಳಿಂದ, ಪಾದ್ಯಾರ್ಘ್ಯಗಳನ್ನೆನಗೆ ಕೊಟ್ಟದ್ದೀರಿ! ನೀವು ಎಲ್ಲ ವಿಧಗಳಿಂದಲೂ ನನ್ನನ್ನು ಗೌರವಿಸಿದಂತೆಯೇ ಆಯಿತು." ಇಂತು ನುಡಿದ ಭರತನನ್ನು ಕುರಿತು, ಭರದ್ವಾಜಮುನಿಯು ನಗುತ್ತ, "ಭರತಕುಮಾರಾ! ನೀನು ಸಂತಸಗೊಂಡಿರುವೆಯೆಂಬುದನ್ನು ನಾನು ಬಲ್ಲೆನು. ನೀನು ಅತ್ಯಲ್ಪವಾದ ಪೂಜೆಯಿಂದಲೇ ಸಂತೋಷಗೊಳ್ಳುವನೆಂಬುದನ್ನೂ ತಿಳಿದಿದ್ದೇನೆ. ಆದರೆ ನಾನೀಗ ನಿನ್ನ ಸೇನೆಗೂ, ನಿನಗೂ ಭೋಜನದಿಂದ ಸತ್ಕರಿಸಲು ಪ್ರಯತ್ನಿಸಬೇಕೆಂದಪೇಕ್ಷಿಸುತ್ತೇನೆ. ನನಗಾವ ವಿಧದಿಂದ ಪ್ರೀತಿಯುಂಟಾಗುವುದೋ ಆ ರೀತಿ ಸನ್ಮತಿಸಿ ನನ್ನ ಮನೋಭೀಷ್ಟವನ್ನು ನೆರವೇರಿಸುವವನಾಗು. ನೀನು ನಿನ್ನ ಸೇನೆ

ರೂಪಾ ತಥಾರ್ಹೋ ಮನುಜರ್ಷಭ! ॥೪॥ ಕಿಮರ್ಥಂ ಚಾಪಿ ನಿಕ್ಷಿಪ್ಯ
ದೂರೇ ಬಲ ಮಿಹಾಗತಃ ॥ ಕಸ್ಮಾನ್ನೇಹೋಪಯಾತೋಸಿ ಸಬಲಃ ಪುರುಷ
ರ್ಷಭ! ॥೫॥ ಭರತಃ ಪ್ರತ್ಯುವಾಚೇದಂ ಪ್ರಾಂಜಲಿಸ್ತಂ ತಪೋಧನಂ ॥
ಸಸೈನ್ಯೇನೋಪಯಾತೋಸ್ಮಿ ಭಗವನ್! ಭಗವ ದ್ಭಯಾತ್ ॥೬॥ ರಾಜ್ಞಾಚ
ಭಗವನ್! ನಿತ್ಯಂ ರಾಜಪುತ್ರೇಣ ವಾ ಸದಾ ॥ ಯತ್ನತಃ ಪರಿಹರ್ತವ್ಯಾ ವಿಷ
ಯೇಷು ತಪಸ್ವಿನಃ ॥೭॥ ವಾಜಿಮುಖ್ಯಾ ಮನುಷ್ಯಾಶ್ಚ ಮತ್ತಾಶ್ಚ ವರ
ವಾರಣಾಃ ॥ ಪ್ರಚ್ಛಾದ್ಯ ಭಗವನ್ ಭೂಮಿಂ ಮಹತೀ ಮನುಯಾಂತಿ ಮಾಂ॥೮॥

ಶ್ರೇಷ್ಠನೆ, ತವ - ನಿನ್ನ, ಏತಸ್ಯಾಸ್ಸೇನಾಯಾಸ್ತು - ಈ ಸೇನೆಯೆಲ್ಲಕ್ಕೂ, ಭೋಜನಂ ಆತಿಥ್ಯವನ್ನು, ಕರ್ತುಂ - ಮಾಡಲು, ಇಚ್ಛಾಮಿ - ಇಚ್ಛಿಸುತ್ತೇನೆ, ಮಮ - ನನಗೆ, ಪ್ರೀತಿಃ - ವಿಶ್ವಾಸವು, ಯಥಾ ರೂಪಾ - ಯಾವಬಗೆಯಾಗುಳ್ಳದೋ, ತಥಾ - ಹಾಗೆ, ತ್ವಂ - ನೀನು, ಅರ್ಹಃ-ಯೋಗ್ಯನು. ॥೪॥ ಹೇ ಪುರುಷರ್ಷಭ - ಎಲೈ ಪುರುಷಶ್ರೇಷ್ಠನೆ, ದೂರೇ - ದೂರದಲ್ಲಿ, ಬಲಂ - ಸೈನ್ಯವನ್ನು, ನಿಕ್ಷಿಪ್ಯ - ಇರಿಸಿ, ಇಹ - ಇಲ್ಲಿಗೆ, ಕಿಮರ್ಥಂ - ಯಾವ ನಿಮಿತ್ತವಾಗಿ, ಆಗತಃ - ಬಂದೆ, ಸಬಲಃ - ಸೈನ್ಯಸಮೇತನಾಗಿ, ಇಹ - ಇಲ್ಲಿ, ಕಸ್ಮಾತ್ - ಯಾವ ನಿಮಿತ್ತದಿಂದ, ನೋಪಯಾತಃ - ಬಾರದಿರುವನು, ಅಸಿ - ಆದೆ. ॥೫॥ ಭರತಃ - ಭರತನು, ತಂತಪೋಧನಂ ಆ ಭರದ್ವಾಜಋಷಿಯನ್ನು ಕುರಿತು, ಪ್ರಾಂಜಲಿಃ- ಅಂಜಲಿಬದ್ಧನಾಗಿ, ಹೇ ಭಗವನ್ - ಎಲೈ ಪೂಜ್ಯನೇ, ಭಗವದ್ಭಯಾತ್-ನಿನ್ನ ಭಯದಿಂದ, ಸಸೈನ್ಯಃ- ಸೈನ್ಯಸಮೇತನಾಗಿ, ಉಪಯಾತಃ - ಬಂದವನು, ನಾಸ್ಮಿ - ಆಗಲಿಲ್ಲವು, ಇತಿ - ಇಂತೆಂದು, ಇದಂ - ಈ ಮಾತನ್ನು, ಪ್ರತ್ಯುವಾಚ - ಪ್ರತ್ಯುತ್ತರಕೊಟ್ಟನು. ॥೬॥ ಹೇ ಭಗವನ್ - ಎಲೈ ಪೂಜ್ಯನೇ, ರಾಜ್ಞಾಚ - ಅರಸನಿಂದಲೇ ಆಗಲಿ, ರಾಜಪುತ್ರೇಣವಾ - ಅರಸುಮಗನಿಂದಲೇ ಆಗಲಿ, ತಪಸ್ವಿನಃ - ಋಷಿಗಳು, ವಿಷಯೇಷು ದೇಶಗಳಲ್ಲಿ, ಯತ್ನತಃ-ಪ್ರಯತ್ನದಿಂದ, ನಿತ್ಯಂ-ನಿರಂತರವೂ, ಪರಿಹರ್ತವ್ಯಾಃ- ಬಿಡತಕ್ಕವರು ॥೭॥ ಹೇ ಭಗವನ್ - ಎಲೈ ಪೂಜ್ಯನೇ, ವಾಜಿಮುಖ್ಯಾಃ - ಶ್ರೇಷ್ಠಗಳಾದ ಕುದುರೆ ಗಳೂ, ಮನುಷ್ಯಾಶ್ಚ - ಆಳುಗಳೂ, ಮತ್ತಾಃ - ಮದವೇರಿದ, ವರವಾರಣಾಶ್ಚ - ಶ್ರೇಷ್ಠವಾದ ಆನೆ ಗಳೂ, ಮಹತೀಂ - ಬಹಳ ವಿಸ್ತಾರವಾದ, ಭೂಮಿಂ - ನೆಲವನ್ನು, ಪ್ರಚ್ಛಾದ್ಯ - ಆವರಿಸಿ, ಮಾಂ -

---

ಯೊಡಗೂಡಿ ಬರದೆ, ಅದೆಲ್ಲವನ್ನೂ ಹಿಂದಿರಿಸಿ ಬಂದುದೇಕೆ?” ಎಂದು ಹೇಳಿದನು. ಈ ಪ್ರಕಾರವಾಗಿ ನುಡಿದ ಭರದ್ವಾಜ ಮಹಾಮುನಿಯ ಮಾತುಗಳನ್ನುಕೇಳಿ, ಆ ಭರತನು ಕೈ ಗಳನ್ನು ಜೋಡಿಸಿಕೊಂಡು, “ಎಲೈ ಷಡ್ಗುಣ್ಯೈಶ್ವರ್ಯಸಂಪನ್ನನಾದ ಭರದ್ವಾಜ ಮುನಿಯೆ! ಭಗವಂತನಾದ ನಿನ್ನ ಭಯದಿಂದ ಸೇನೆಯೊಡಗೂಡಿ ಈ ಆಶ್ರಮಪ್ರದೇಶಕ್ಕೆ ಬರಲಿಲ್ಲವು. ಎಲೈ ಮುನಿಪುಂಗವನೆ! ರಾಜರೂ, ರಾಜಪುತ್ರರೂ ಪ್ರಯಾಣ ಸಮಯಗಳಲ್ಲಿ ತಮ್ಮರಾಜ್ಯ ದಲ್ಲಿ ಮುನಿಗಳು ವಾಸಮಾಡುವ ಮಾರ್ಗಗಳನ್ನುಬಿಟ್ಟು, ಆ ಮುನಿಗಳಿಗೆ ಬಾಧೆಯುಂಟಾಗ ದಂತೆ ಸೇನೆಯೊಡಗೂಡಿ ಹೋಗಬೇಕು. ॥೧-೭॥ ಎಲೈ ಭರದ್ವಾಜನೆ! ಶ್ರೇಷ್ಠಗಳಾದ ಕುದುರೆಗಳೂ, ಪದಾತಿಗಳೂ, ಮದ್ದಾನೆಗಳೂ ಇವೇ ಮೊದಲಾದ ಚತುರಂಗಬಲವು ಸಂಖ್ಯೆ ಯಿಲ್ಲದಷ್ಟು ನನ್ನೊಡನೆ ಬರುತ್ತಿರುವುದು.ಆದುದರಿಂದ ನನ್ನ ಸೈನ್ಯವೆಲ್ಲವೂ,ತಮ್ಮ ಆಶ್ರಮದ

ತೇವೃಕ್ಷಾನುದಕಂ ಭೂಮಿ ಮಾಶ್ರಮೇಷೂ ಟಜಾಂಸ್ತಥಾ ॥ ನಹಿಂಸ್ಯುರಿತಿ ತೇನಾಹ ಮೇಕಏವ ಸಮಾಗತಃ ॥ ೯ ॥ ಆನೀಯತಾ ಮಿತಸ್ಸೇನೇ ತ್ಯಾಜ್ಞಪ್ತಃ ಪರಮರ್ಷಿಣಾ ॥ ತತಸ್ತು ಚಕ್ರೇ ಭರತ ಸ್ಸೇನಾಯಾ ಸ್ಸಮುಪಾಗಮಂ ॥೧೦॥ ಅಗ್ನಿಶಾಲಾಂ ಪ್ರವಿಶ್ಯಾಥ ಪೀತ್ವಾಪಃ ಪರಿಮೃಜ್ಯಚ ॥ ಆತಿಥ್ಯಸ್ಯ ಕ್ರಿಯಾ ಹೇತೋ ರ್ವಿಶ್ವಕರ್ಮಾಣ ಮಾಹ್ವಯತ್ ॥ ೧೧ ॥ ಆಹ್ವಯೇ ವಿಶ್ವಕರ್ಮಾಣ ಮಹಂ ತ್ವಷ್ಟಾರ ಮೇವಚ ॥ ಆತಿಥ್ಯಂ ಕರ್ತು ಮಿಚ್ಛಾಮಿ ತತ್ರ ಮೇ ಸಂವಿಧೀ

ನನ್ನನ್ನು ಕುರಿತು, ಅನುಯಾಂತಿ - ಅನುಸರಿಸಿ ಬರುತ್ತಿವೆ. ॥ ೮ ॥ ತೇ - ಆ ಗಜಾದಿಗಳು, ವೃಕ್ಷಾ-ಗಿಡಗಳನ್ನು, ಆಶ್ರಮೇಷು - ಆಶ್ರಮಗಳಲ್ಲಿಯ, ಉದಕಂ - ನೀರನ್ನು, ಭೂಮಿಂ - ನೆಲವನ್ನು, ತಥಾ-ಹಾಗೆಯೇ, ಉಟಜಾ - ಪರ್ಣಶಾಲೆಗಳನ್ನು, ನಹಿಂಸ್ಯುಃ - ಹಿಂಸೆಮಾಡದಿರವು, ಇತಿ - ಇಂತೆಂದು, ತೇನ - ಆ ಕಾರಣದಿಂದ, ಅಹಂ - ನಾನು, ಏಕಏವ - ಒಬ್ಬನೇ, ಸಮಾಗತಃ - ಬಂದೆನು. ॥ ೯ ॥ ಸೇನಾ - ಸೇನೆಯು, ಇತಃ-ಇಲ್ಲಿಗೆ, ಆನೀಯತಾಂ-ಕರೆಯಿಸಲ್ಪಡಲಿ, ಇತಿ-ಇಂತೆಂದು, ಪರಮರ್ಷಿಣಾ-ಭರದ್ವಾಜಋಷಿಯಿಂದ, ಆಜ್ಞಪ್ತಃ - ಆಜ್ಞಾಪಿತನಾಗಿ, ತತಃ - ಬಳಿಕ, ಭರತಃ - ಭರತನು, ಸೇನಾಯಾಃ - ದಂಡಿನ, ಸಮುಪಾಗಮಂ - ತರಿಸುವಿಕೆಯನ್ನು, ಚಕ್ರೇ - ಮಾಡಿದನು. ॥ ೧೦ ॥ ಅಥ - ಬಳಿಕ, ಅಗ್ನಿಶಾಲಾಂ-ಅಗ್ನಿಶಾಲೆಯನ್ನು, ಪ್ರವಿಶ್ಯ-ಪ್ರವೇಶಮಾಡಿ, ಪರಿಮೃಜ್ಯ-ಓಷ್ಠಗಳನ್ನು ಎರಡಾವರ್ತಿ ಪರಿಮಾರ್ಜನೆಮಾಡಿಕೊಂಡು, ಆಪಃ-ಉದಕವನ್ನು, ಪೀತ್ವಾ - ಪಾನಮಾಡಿ, (ಅಂದರೆ ಆಚಮನ ಮಾಡಿ) ಆತಿಥ್ಯಸ್ಯ - ಅತಿಥಿಸತ್ಕಾರದ, ಕ್ರಿಯಾಹೇತೋಃ - ಮಾಡುವನಿಮಿತ್ತದಿಂದ, ವಿಶ್ವಕರ್ಮಾಣಂ - ವಿಶ್ವಕರ್ಮಬ್ರಹ್ಮನನ್ನು, ಆಹ್ವಯತ್ - ಕರೆಯಿಸಿದನು. ॥ ೧೧ ॥ ಅಹಂ - ನಾನು, ವಿಶ್ವಕರ್ಮಾಣಂ - ವಿಶ್ವಕರ್ಮನನ್ನು, ತ್ವಷ್ಟಾರಮೇವಚ - ತತ್‌ಕ್ಷಣದ ಗೃಹನಿರ್ಮಾಣದಲ್ಲಿ ಶಕ್ತನಾದ ತ್ವಷ್ಟೃವನ್ನು, ಆಹ್ವಯೇ - ಕರೆಯುತ್ತೇನೆ, ಆತಿಥ್ಯಂ - ಅತಿಥಿಗಳಿಗೆ ಭೋಜನಾದ್ಯುಪ

ವೃಕ್ಷಗಳಿಗೂ, ಸರೋವರಗಳಿಗೂ, ಮನೋಹರವಾದ ಪ್ರದೇಶಗಳಿಗೂ, ಆಶ್ರಮಸ್ಥಳಗಳಿಗೂ, ಗಿರಿಮಲ್ಲಿಕಾದಿ ವೃಕ್ಷಗಳಿಗೂ ಬಾಧೆಯುಂಟುಮಾಡೀತೆಂದು ಯೋಚಿಸಿ, ದೂರದಲ್ಲಿಯೇ ಇರುವಂತೆ ಮಾಡಿ, ನಾನು ಮಾತ್ರ ವಸಿಷ್ಠ ಮಹರ್ಷಿಯೇ ಮೊದಲಾದವರೊಡಗೂಡಿ ಈ ಆಶ್ರಮಸ್ಥಳಕ್ಕೈತಂದೆನು" ಎಂದನು. ಆಗಲಾ ಭರದ್ವಾಜಮುನಿಯು, "ಅಯ್ಯಾ ಭರತನೆ! ನಿನ್ನ ಸೇನೆಯೆಲ್ಲವನ್ನೂ ಇಲ್ಲಿಗೆ ಬರಮಾಡು" ಎಂದಾಜ್ಞಾಪಿಸಿದನು. ಆಗ ಭರತಕುಮಾರನು ಆ ಮುನಿಯಾಣತಿಯಂತೆ ತನ್ನ ಸೇನೆಯೆಲ್ಲವನ್ನೂ ಅಲ್ಲಿ ಬರುವಂತಾಜ್ಞಾಪಿಸಿದನು. ಆ ಬಳಿಕ ಆ ಭರದ್ವಾಜ ಮುನಿಪುಂಗವನು ಅಗ್ನಿಹೋತ್ರಶಾಲೆಯನ್ನು ಪ್ರವೇಶಿಸಿ, ಆಚಮನವನ್ನು ಮಾಡಿ, ಓಷ್ಠವನ್ನೊರಸಿಕೊಂಡು, ಭರತನಿಗೂ, ಆತನ ಸೇನೆಗೂ ಆತಿಥ್ಯವನ್ನು ಮಾಡಲಪೇಕ್ಷಿಸಿದವನಾಗಿ ವಿಶ್ವಕರ್ಮಬ್ರಹ್ಮನನ್ನು ಕರೆದನು. ಹೀಗೆ ಕರೆಯುವಾಗ ಈ ಮಾತುಗಳನ್ನಾಡಿದನು. ॥ ೮-೧೧ ॥ "ನಾನು ಗೃಹಾದಿಗಳನ್ನು ನಿರ್ಮಾಣ ಮಾಡುವ ಸಾಮರ್ಥ್ಯವುಳ್ಳ ವಿಶ್ವಕರ್ಮಬ್ರಹ್ಮನನ್ನು ಕರೆಯುತ್ತಿದ್ದೇನೆ. ಆದುದರಿಂದ ಆತನಿಲ್ಲಿಗೆ ಬಂದು ಭರತನಿಗೆ ಮಾಡುವ ಆತಿಥ್ಯವೆಲ್ಲವನ್ನೂ ನೆರವೇರಿಸುವವನಾಗಲಿ. ಅಲ್ಲದೆ ಯಮ, ವರುಣ, ಕುಬೇರ

ಯತಾಂ ॥ ೧೨ ॥ ಆಹ್ವಯೇ ಲೋಕಪಾಲಾಂಸ್ತ್ರೀನ್ ದೇವಾನ್ ಶಕ್ರಮುಖಾಂ
ಸ್ತಥಾ ॥ ಆತಿಥ್ಯಂ ಕರ್ತುಮಿಚ್ಛಾಮಿ ತತ್ರ ಮೇ ಸಂವಿಧೀಯತಾಂ ॥ ೧೩ ॥
ಪ್ರಾಕ್ಸ್ರೋತಸಶ್ಚ ಯಾ ನದ್ಯಃ ಪ್ರತ್ಯಕ್ಸ್ರೋತಸ ಏವಚ ॥ ಪೃಥಿವ್ಯಾ
ಮಂತರಿಕ್ಷೇಚ ಸಮಾಯಾಂತ್ವದ್ಯ ಸರ್ವಶಃ ॥ ೧೪ ॥ ಅನ್ಯಾಸ್ಸ್ರವಂತು
ಮೈರೇಯಂ ಸುರಾಮನ್ಯಾಸ್ಸುನಿಷ್ಠಿತಾಃ ॥ ಅಪರಾಶ್ಚೋದಕಂ ಶೀತ ಮಿಕ್ಷು
ಕಾಂಡ ರಸೋಪಮಂ ॥ ೧೫ ॥ ಆಹ್ವಯೇ ದೇವಗಂಧರ್ವಾನ್ ವಿಶ್ವಾವಸು

ಚಾರವನ್ನು, ಕರ್ತುಂ - ಮಾಡಲು, ಇಚ್ಛಾಮಿ - ಅಪೇಕ್ಷಿಸುತ್ತೇನೆ, ತತ್ರ - ಆ ಆತಿಥ್ಯವಿಷಯದಲ್ಲಿ, ಸಂವಿಧೀಯತಾಂ - ಸಹಾಯಮಾಡಲ್ಪಡಲಿ. ॥ ೧೨ ॥ ತಥಾ - ಹಾಗೆಯೇ, ಶಕ್ರಮುಖಾನ್-ಇಂದ್ರನೇ ಪ್ರಧಾನವಾಗುಳ್ಳ, ತ್ರೀನ್ - ಮೂವರಾದ, ಲೋಕಪಾಲಾನ್ - ಯಮ ವರುಣ ಕುಬೇರರನ್ನು, ದೇವಾನ್-ಅಗ್ನಿವಾಯ್ವಾದಿಗಳನ್ನು, ಆಹ್ವಯೇ - ಕರೆಯುತ್ತೇನೆ, ಆತಿಥ್ಯಂ - ಅತಿಥಿಸತ್ಕಾರವನ್ನು, ಕರ್ತುಂ - ಮಾಡಲು, ಇಚ್ಛಾಮಿ - ಇಚ್ಛಿಸುತ್ತೇನೆ, ಮೇ - ನನ್ನ ಸಂಬಂಧವಾದ, ತತ್ರ - ಆ ಆತಿಥ್ಯವಿಷಯದಲ್ಲಿ, ಸಂವಿಧೀಯತಾಂ - ಪರಿಪಾಲನೆಮಾಡಲ್ಪಡಲಿ. ॥ ೧೩ ॥ ಯಾಃ - ಯಾವ, ನದ್ಯಃ - ನದಿಗಳು, ಪ್ರಾಕ್ಸ್ರೋತಸಶ್ಚ - ಪೂರ್ವಪ್ರವಾಹವುಳ್ಳವುಗಳೋ, ಯಾಃ - ಯಾವ ನದಿಗಳು, ಪ್ರತ್ಯಕ್ಸ್ರೋತಸಏವಚ - ಪಶ್ಚಿಮಪ್ರವಾಹವುಳ್ಳವುಗಳೋ, ಯಾಃ - ಯಾವುವು, ಪೃಥಿವ್ಯಾಂ - ಭೂಮಿಯಲ್ಲಿ, ಅಂತರಿಕ್ಷೇಚ - ಅಂತರಿಕ್ಷದಲ್ಲಿಯೂ, ಸಂತಿ - ಇವೆಯೋ, ತಾಃ - ಆ ನದಿಗಳು, ಸರ್ವಶಃ - ಸರ್ವಪ್ರಕಾರವಾಗಿ, ಅದ್ಯ - ಈಗ, ಸಮಾಯಾಂತು - ಬರಲಿ. ॥ ೧೪ ॥ ಅನ್ಯಾಃ - ಮತ್ತೆ ಕೆಲದಿನಗಳು, ಮೈರೇಯಂ - ಖರ್ಜೂರಾದಿ ರಸದಿಂದಮಾಡಿದ ಮದ್ಯವನ್ನೂ, ಅನ್ಯಾಃ - ಮತ್ತೆ ಕೆಲನದಿಗಳು, ಸುರಾಂ-ಜೇನುತುಪ್ಪದ ಸಂಬಂಧವಾದ ಮದ್ಯವನ್ನು, ಸುನಿಷ್ಠಿತಾಂ-ಚನ್ನಾಗಿಮಾಡಲ್ಪಟ್ಟುದನ್ನಾಗಿ, ಸ್ರವಂತು-ಸುರಿಸಲಿ, ಅಪರಾಶ್ಚ - ಇನ್ನು ಕೆಲನದಿಗಳು, ಇಕ್ಷುಕಾಂಡರಸೋಪಮಂ - ಕಬ್ಬಿನಜಲ್ಲೆಗಳಲ್ಲಿನ ರಸಕ್ಕೆ ಸಮಾನವಾದ, ಶೀತಂ - ತಣ್ಣಗಿರುವ, ಉದಕಂ - ನೀರನ್ನು, ಸ್ರವಂತು-ಸುರಿಸಲಿ, ವಿಶ್ವಾವಸು

ರೆಂಬ ಮೂವರು ದಿಕ್ಪಾಲಕರನ್ನೂ, ದೇವೇಂದ್ರನೇ ಮೊದಲಾದ ದೇವತೆಗಳನ್ನೂ ಕರೆಯು ತ್ತಿದ್ದೇನೆ. ಇವರೆಲ್ಲರೂ ಈ ಸ್ಥಳಕ್ಕೆ ಬಂದು ಭರತನಾತಿಥ್ಯಕ್ಕೆ ತಕ್ಕ ಸಾಮಗ್ರಿಗಳೆಲ್ಲವನ್ನೂ ಸಂಪಾದಿಸಿ ಕೊಡುವವರಾಗಲಿ. ಪೂರ್ವಮುಖವಾಗಿ ಪ್ರವಹಿಸುತ್ತಿರುವುವೂ, ಪಶ್ಚಿಮಾಭಿ ಮುಖವಾಗಿ ಪ್ರವಹಿಸುತ್ತಿರುವುವೂ ಆದ ನದಿಗಳೂ, ಅಲ್ಲದೆ ಭೂಮ್ಯಾಕಾಶಗಳಲ್ಲಿ ಪ್ರವಾಹ ಗಳುಳ್ಳ ನದಿಗಳೂ ಈ ಸ್ಥಳಕ್ಕೆ ಬಂದು ಸಹಾಯವನ್ನು ಮಾಡುವುವಾಗಲಿ ಇಷ್ಟೆಯಲ್ಲದೆ ಇತರ ನದಿಗಳು, ಮಿರಾದೇಶದಲ್ಲಿ ಹುಟ್ಟಿದ ಮೈರೇಯವೆಂಬ ಮದ್ಯವನ್ನು ಹರಿಯುವಂತೆ ಮಾಡಲಿ. ಮಿಕ್ಕ ಇತರ ನದಿಗಳೂಕೂಡ ಕಬ್ಬಿನರಸದೊಡಗೂಡಿದುವೂ, ತಣ್ಣಗಿರುವಜಲಪ್ರ ವಾಹವುಳ್ಳುವೂ ಆಗಿ ಈ ಆಶ್ರಮಸ್ಥಳಗಳಲ್ಲಿ ಪ್ರವಹಿಸುವುವಾಗಲಿ.॥೧೨-೧೫॥ ಮಾತ್ರವಲ್ಲದೆ ದೇವಗಂಧರ್ವರೂ, ಹಾಹಾ ಹೂಹೂ ನಾಮಕಗಂಧರ್ವರೂ, ದೇವಗಂಧರ್ವ ಜಾತಿಯಲ್ಲಿ ಜನಿಸಿದ ಅಪ್ಸರಸ್ತ್ರೀಯರೂ ಇವರೆಲ್ಲರನ್ನೂ ಕರೆಯುತ್ತಿದ್ದೇನೆ. ಅಲ್ಲದೆ, ಘೃತಾಚಿ, ವಿಶ್ವಾಚಿ, ಮಿಶ್ರಕೇಶಿ, ಅಲಂಬುಸಾ, ನಾಗದಂತಾ, ಹೇಮ, ಹಿಮಾದ್ರಿಯಲ್ಲಿಯೇ ವಾಸ

ಹಹಾಹುಹೂರ್॥ತಥೈವಾಪ್ಸರಸೋ ದೇವೀ ರ್ಗಂಧರ್ವೀಶ್ಚಾಪಿ ಸರ್ವಶಃ ॥೧೬॥ ಘೃತಾಚೀಮಥ ವಿಶ್ವಾಚೀಂ ಮಿಶ್ರಕೇಶೀ ಮಲಂಬುಸಾಂ ॥ ನಾಗದಂತಾಂ ಚ ಹೇಮಾಂಚ ಹಿಮಾ ಮದ್ರಿಕೃತ ಸ್ಥಲಾಂ ॥ ೧೭ ॥ ಶಕ್ರಂ ಯಾಶ್ಚೋಪ ತಿಷ್ಠಂತಿ ಬ್ರಹ್ಮಾಣಂ ಯಾಶ್ಚ ಯೋಷಿತಃ ॥ ಸರ್ವಾ ಸ್ತುಂಬುರುಣಾ ಸಾರ್ಧಮಾ ಹ್ವಯೇ ಸಪರಿಚ್ಛದಾಃ ॥ ೧೮ ॥ ವನಂ ಕುರುಷು ಯದ್ದಿವ್ಯಂ ವಾಸೋ ಭೂಷಣ ಪತ್ರವತ್ ॥ ದಿವ್ಯನಾರೀಫಲಂ ಶಶ್ವತ್ತ ತ್ಕೌಬೇರ ಮಿಹೈತುಚ ॥ ೧೯ ॥ ಇಹ

ಹಹಾಹುಹೂರ್ - ವಿಶ್ವಾವಸು ಹಹಾ ಹುಹೂ ಎಂಬ, ದೇವಗಂಧರ್ವಾನ್ - ದೇವಗಾಯಕರನ್ನು, ಆಹ್ವಯೇ - ಕರೆಯುತ್ತೇನೆ, ತಥೈವ - ಹಾಗೆಯೇ, ದೇವೀಃ - ದೇವತಾಸಂಬಂಧಿಗಳಾದ, ಅಪ್ಸರಸಃ - ಅಪ್ಸರಸ್ತ್ರೀಯರನ್ನು, ಗಂಧರ್ವೀಃ - ಗಂಧರ್ವಜಾತಿಸ್ತ್ರೀಯರನ್ನು, ಸರ್ವಶಃ - ಸರ್ವಪ್ರಕಾರವಾಗಿ, ಆಹ್ವಯೇ - ಕರೆಯುತ್ತೇನೆ. ॥ ೧೬ ॥ ಅಥ - ಬಳಿಕ, ಘೃತಾಚೀಂ - ಘೃತಾಚೀ ಎಂದು ಪ್ರಸಿದ್ಧಳಾದ ಅಪ್ಸರಸ್ತ್ರೀಯನ್ನು, ವಿಶ್ವಾಚೀಂ - ವಿಶ್ವಾಚೀ ಎಂಬ ಅಪ್ಸರೆಯನ್ನು, ಮಿಶ್ರಕೇಶೀಂ - ಮಿಶ್ರಕೇಶೀ ಎಂಬವಳನ್ನು, ಅಲಂಬುಸಾಂ - ಅಲಂಬುಸಾ ಎಂಬವಳನ್ನು, ನಾಗದಂತಾಂಚ - ನಾಗದಂತಾ ಎಂಬುವಳನ್ನು, ಹೇಮಾಂಚ - ಹೇಮಾ ಎಂಬವಳನ್ನು, ಅದ್ರಿಕೃತಸ್ಥಲಾಂ - ಬೆಟ್ಟದಲ್ಲಿ ನಿವಾಸವುಳ್ಳ, ಹಿಮಾಂ - ತಣ್ಣಗಿರುವ ಶರೀರವುಳ್ಳ ಹಿಮಾ ಎಂಬುವಳನ್ನು, (ಗೋ) ಹಿಮಾಂ - ತಣ್ಣಗಿರುವ ಶರೀರವುಳ್ಳ, ಹೇಮಾಂಚ - ಹೇಮಾ ಎಂಬವಳನ್ನು, ಆಹ್ವಯೇ - ಕರೆಯುತ್ತೇನೆ. ॥ ೧೭ ॥ ಯಾಃ-ಯಾವ ಅಪ್ಸರಸ್ಸುಗಳು, ಶಕ್ರಂಚ - ದೇವೇಂದ್ರನನ್ನು, ಉಪತಿಷ್ಠಂತಿ - ಸೇವಿಸುತ್ತಿರುವರೋ, ಯಾಶ್ಚಯೋಷಿತಃ - ಯಾವ ಸ್ತ್ರೀಯರು, ಬ್ರಹ್ಮಾಣಂಚ - ಬ್ರಹ್ಮನನ್ನು, ಉಪತಿಷ್ಠಂತಿ - ಸೇವಿಸುತ್ತಿದ್ದಾರೋ, ತಾಸ್ಸರ್ವಾಃ - ಆ ಅಪ್ಸರಸ್ತ್ರೀಯರೆಲ್ಲರನ್ನು, ತುಂಬುರುಣಾಸಾರ್ಧಂ - ಗಾನಶಿಕ್ಷಕನಾದ ತುಂಬುರಋಷಿಯೊಡಗೂಡಿ, ಸಪರಿಚ್ಛದಾಃ - ಪರಿವಾರದೊಡನೆ, ಆಹ್ವಯೇ - ಕರೆಯುತ್ತೇನೆ. ॥ ೧೮ ॥ ಕುರುಷು-ಕುರುದೇಶಗಳಲ್ಲಿ, ದಿವ್ಯಂ - ದೇವತಾಸಂಬಂಧವಾದ, ವಾಸೋಭೂಷಣಪತ್ರವತ್ - ವಸ್ತ್ರಗಳನ್ನೂ ಒಡಿವೆಗಳನ್ನೂ ಪರ್ಣಗಳಾಗುಳ್ಳ, ವನಂ-ವನವು, ಯತ್-ಯಾವದುಂಟೋ, ದಿವ್ಯನಾರೀಫಲಂ-ಮನೋಹರವಾದ ಸ್ತ್ರೀಯರೇ ಫಲಗಳಾಗುಳ್ಳ, ತತ್ - ಆ, ಕೌಬೇರಂ-ಕುಬೇರಸಂಬಂಧಿಯಾದ ವನವು, ಇಹ-ಇಲ್ಲಿಗೆ, ಶಶ್ವತ್ - ಬಾರಿಬಾರಿಗೂ, ಏತು - ಬರಲಿ. ॥ ೧೯ ॥ ಇಹ - ಇಲ್ಲಿ, ಭಗವಾನ್ - ಪೂಜ್ಯನಾದ,

---

ಮಾಡುವ ಹಿಮಾ, ಇವರೇ ಮೊದಲಾದ ಅಪ್ಸರಸ್ತ್ರೀಯರನ್ನೂ ಕರೆಯುತ್ತಿದ್ದೇನೆ. ಇಷ್ಟೆಯಲ್ಲದೆ ದೇವೇಂದ್ರನನ್ನು ಆಶ್ರಯಿಸಿಕೊಂಡಿರುವ ಸ್ತ್ರೀಯರನ್ನೂ, ಬ್ರಹ್ಮದೇವನನ್ನಾಶ್ರಯಿಸಿಕೊಂಡು ಸೇವಿಸುತ್ತಿರುವ ಸ್ತ್ರೀಯರನ್ನೂ ತಮ್ಮ ತಮ್ಮ ಆಯುಧಗಳಿಂದಲೂ, ತುಂಬರನೇ ಮೊದಲಾದವರೊಡನೆಯೂ ಈ ಆಶ್ರಮಸ್ಥಳಕ್ಕೆ ಬರಬೇಕೆಂದು ಕರೆಯುತ್ತಿದ್ದೇನೆ. ಶ್ರೇಷ್ಠವಾದ ವಸ್ತ್ರಗಳನ್ನೂ, ಆಭರಣಗಳನ್ನೂ ಪರ್ಣಗಳನ್ನಾಗಿಯು, ಸ್ತ್ರೀಯರೇ ಫಲಗಳನ್ನಾಗಿ ಉಂಟಾಗಿರುವುದೂ, ಉತ್ತರಕುರುಭೂಪ್ರದೇಶಗಳಲ್ಲಿ ಪ್ರಕಾಶಿಸುತ್ತಿರುವುದೂ, ದೇವತೆಗಳುವಾಸಮಾಡಲು ಯೋಗ್ಯವಾದುದೂ ಆದ ಕುಬೇರನಚೈತ್ರರಥವೆಂದು ಹೆಸರುಳ್ಳ ಉದ್ಯಾನವನವಿಲ್ಲಿಗೆ ಬರಲಿ. ಷಡ್ಗುಣೈಶ್ವರ್ಯಸಂಪನ್ನನಾದಚಂದ್ರನು ಈ

ಮೇ ಭಗವಾನ್ ಸೋಮೋ ವಿಧತ್ತಾ ಮನ್ನಮುತ್ತಮಂ ॥ ಭಕ್ಷ್ಯಂ ಭೋಜ್ಯಂಚ ಚೋಷ್ಯಂಚ ಲೇಹ್ಯಂಚ ವಿವಿಧಂ ಬಹು ॥ ೨೦ ॥ ವಿಚಿತ್ರಾಣಿಚ ಮಾಲ್ಯಾನಿ ಪಾದಪ ಪ್ರಚ್ಯುತಾನಿಚ ॥ ಸುರಾದೀನಿಚ ಪೇಯಾನಿ ಮಾಂಸಾನಿ ವಿವಿಧಾನಿಚ ॥ ೨೧ ॥ ಏವಂ ಸಮಾಧಿನಾ ಯುಕ್ತ ಸ್ತೇಜಸಾಽಪ್ರತಿಮೇನಚ ॥ ಶಿಕ್ಷಾಸ್ವರ ಸಮಾಯುಕ್ತಂ ತಪಸಾ ಚಾಬ್ರವೀ ನ್ಮುನಿಃ ॥ ೨೨ ॥ ಮನಸಾ ಧ್ಯಾಯತ ಸ್ತಸ್ಯ ಪ್ರಾಙ್ಮುಖಸ್ಯ ಕೃತಾಂಜಲೇಃ ॥ ಆಜಗ್ಮು ಸ್ತಾನಿ ಸರ್ವಾಣಿ ದೈವತಾನಿ ಪೃಥಕ್ಪೃಥಕ್ ॥ ೨೩ ॥ ಮಲಯಂ ದರ್ದುರಂಚೈವ ತತಸ್ಸ್ವೇದ ನುದೋ

ಸೋಮಃ - ಚಂದ್ರನು, ಮೇ - ನನಗೆ, ಉತ್ತಮಂ - ಸರ್ವೋತ್ತಮವಾದ, ಭಕ್ಷ್ಯಂ - ತಿನ್ನುವದಕ್ಕೆ ಯೋಗ್ಯವಾದ, ಭೋಜ್ಯಂ - ಭೋಜನಮಾಡತಕ್ಕ, ಚೋಷ್ಯಂ - ದಂತಗಳಿಂದ ಕಡಿಯತಕ್ಕ ಪದಾರ್ಥವು, ವಿವಿಧಂ - ಅನೇಕ ಬಗೆಗಳುಳ್ಳ ಬಹು - ಅನೇಕ ವಿಧವಾದ, ಅನ್ನಂ - ಅನ್ನವನ್ನು, ವಿಧತ್ತಾಂ - ಸಿದ್ಧಮಾಡಲಿ. ॥ ೨೦ ॥ ಪಾದಪಪ್ರಚ್ಯುತಾನಿ - ಗಿಡಗಳಿಂದ, ಪ್ರಚ್ಯುತಾನಿ - ಸುರಿಯುತ್ತಿರುವ, ವಿಚಿತ್ರಾಣಿ - ನಾನಾಬಣ್ಣಗಳುಳ್ಳ, ಮಾಲ್ಯಾನಿ-ಪುಷ್ಪಗಳೂ, ಸುರಾದೀನಿ - ಮದ್ಯವೇ ಮೊದಲಾಗುಳ್ಳ, ಪೇಯಾನಿ - ಪಾನಮಾಡತಕ್ಕ ಪದಾರ್ಥಗಳೂ, ವಿವಿಧಾನಿ - ನಾನಾಬಗೆಗಳಾದ, ಮಾಂಸಾನಿಚ - ಮಾಂಸಗಳೂ, ಆಗಚ್ಛಂತು - ಬರಲಿ. ॥ ೨೧ ॥ ಏವಂ - ಈಪರಿಯಾಗಿ, ಸಮಾಧಿನಾ- ಸಮಾಧಿಯೋಗದಿಂದ, ಅಪ್ರತಿಮೇನ-ಸಮಾನರಹಿತವಾದ, ತೇಜಸಾ ಸಾಮರ್ಥ್ಯದಿಂದಲೂ,ತಪಸಾಚ- ಕೃಚ್ಛ್ರಚಾಂದ್ರಾಯಣಾದಿ ವ್ರತಜನ್ಯತಪೋಮಾಹಾತ್ಮ್ಯದಿಂದಲೂ, ಮುನಿಃ - ಭರದ್ವಾಜಋಷಿಯು, ಶಿಕ್ಷಾಸ್ವರಸಮಾಯುಕ್ತಂ - ಶಾಸ್ತ್ರದಿಂದಹೇಳಲ್ಪಟ್ಟ ಸ್ವರನಿಯಮದಿಂದಕೂಡಿರುವ, ಮಂತ್ರಂ-ಮಂತ್ರ ವನ್ನು, ಅಬ್ರವೀತ್ - ಜಪಮಾಡಿದನು. ॥ ೨೨ ॥ ಮನಸಾ - ಮನಸ್ಸಿನಿಂದ, ಧ್ಯಾಯತಃ - ಧ್ಯಾನ ಮಾಡುತ್ತಿರುವ. ಪ್ರಾಙ್ಮುಖಸ್ಯ - ಪೂರ್ವಾಭಿಮುಖನಾದ, ಕೃತಾಂಜಲಿಃ - ಅಂಜಲಿಬದ್ಧನಾದ, ತಸ್ಯ- ಆ ಭರದ್ವಾಜಋಷಿಗೆ ಅಭಿಮುಖವಾಗಿ, ತಾನಿ - ಆ, ಸರ್ವಾಣಿ - ಸಮಸ್ತರಾದ, ದೇವತಾನಿ - ದೇವತೆ ಗಳು, ಪೃಥಕ್‌ಪೃಥಕ್ - ಪ್ರತ್ಯೇಕ ಪ್ರತ್ಯೇಕವಾಗಿ, ಆಜಗ್ಮುಃ - ಬಂದರು. ॥ ೨೩ ॥ ತತಃ - ಬಳಿಕ,

---

ಳಕ್ಕೆ ಬಂದು ಸರ್ವೋತ್ತಮವಾದ ಅನ್ನವನ್ನೂ, ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯಗಳನ್ನೂ ಇನ್ನೂ ನಾನಾವಿಧಮೃಷ್ಟಾನ್ನಗಳನ್ನೂ ಸಂಪಾದಿಸಿಕೊಡಲಿ. ಅಲ್ಲದೆ, ಆ ಚಂದ್ರನು, ವಿಚಿತ್ರ ಗಳೂ, ವೃಕ್ಷಗಳಿಂದಜಾರಿದವುಗಳೂ ಆದ ಪೂಮಾಲಿಕೆಗಳೇ ಮೊದಲಾದವುಗಳನ್ನೂ, ಅಮೃ ತವೇಮೊದಲಾದವುಗಳನ್ನೂ, ಪಾನದ್ರವ್ಯಗಳನ್ನೂ, ನಾನಾವಿಧಗಳಾದ ಮಾಂಸದ್ರವ್ಯಗಳನ್ನೂ ಸಿದ್ಧಪಡಿಸುವವನಾಗಲಿ." ಈಪ್ರಕಾರವಾಗಿ ಷಡ್ಗುಣೈಶ್ವರ್ಯಸಂಪನ್ನನಾದವನೂ, ಯೋಗ ಮಹಿಮೆ, ತಪೋಬಲ, ಅಪಾರವಾದತೇಜಸ್ಸು ಇವುಗಳಿಂದೊಡಗೂಡಿದವನೂ ಆದ ಆ ಭರ ದ್ವಾಜಮುನಿಯು ಶಿಕ್ಷಾಪ್ರಕರಣದಲ್ಲಿ ಹೇಳಿದ ಸ್ವರಗಳಿಂದಯುಕ್ತವಾಗಿ ಹೇಳಿದನು. ಹೀಗೆ ಆ ಮುನಿವರ್ಯನು ಪ್ರಾಙ್ಮುಖನೂ, ಕೃತಾಂಜಲಿಯೂ ಆಗಿ ಧ್ಯಾನಮಾಡುತ್ತಿರಲು, ಆತ ನುದ್ದೇಶಿಸಿಕರೆದ ದೇವತೆಗಳೆಲ್ಲರೂ ಆತನಾಶ್ರಮಕ್ಕೆಬಂದವರಾದರು. ॥ ೧೨-೨೩ ॥ ಆಗ ವಾಯುವು, ಮಲಯದರ್ದರಪರ್ವತಮಾರ್ಗವಾಗಿ ಹೊರಹೊರಟುಬಂದುದರಿಂದ, ಬಹಳ

ನಿಲಃ || ಉಪಸ್ಪೃಶ್ಯ ವವೌ ಯುಕ್ತ್ಯಾ ಸುಪ್ರಿಯಾತ್ಮಾ ಸುಖಶ್ಶಿವಃ || ೨೫ || ತತೋಭ್ಯವರ್ತಂತ ಘನಾ ದಿವ್ಯಾಃ ಕುಸುಮವೃಷ್ಟಯಃ || ದಿವ್ಯದುಂದುಭಿ ಘೋಷಶ್ಚ ದಿಕ್ಷು ಸರ್ವಾಸು ಶುಶ್ರುವೇ || ೨೫ || ಪ್ರವವು ಶ್ಚೋತ್ತಮಾ ವಾತಾ ನನೃತು ಶ್ಚಾಪ್ಸರೋಗಣಾಃ || ಜಗುಶ್ಚ ದೇವಗಂಧರ್ವಾ ವೀಣಾಃ ಪ್ರಮುಮುಚು ಸ್ಸ್ವರಾನ್ || ೨೬ || ಸಶಬ್ದೋ ದ್ಯಾಂಚ ಭೂಮಿಂಚ ಪ್ರಾಣಿನಾಂ ಶ್ರವಣಾನಿಚ || ವಿವೇಶೋಚ್ಚಾರಿತ ಶ್ಲಕ್ಷ್ಣ ಸ್ಸಮೋ ಲಯಗುಣಾನ್ವಿತಃ || ೨೭ ||

ಮಲಯಂ - ಮಲಯಪರ್ವತವನ್ನು, ದರ್ದುರಂ - ಚಂದನಕಾಷ್ಟಗಳಿಗೆ ಉತ್ಪತ್ತಿಸ್ಥಾನವಾದ ದರ್ದುರ ಪರ್ವತವನ್ನು, ಉಪಸ್ಪೃಶ್ಯ - ಸ್ಪರ್ಶಮಾಡಿ, ಯುಕ್ತ್ಯಾ - ಸಂಬಂಧಮಾತ್ರದಿಂದ, ಸ್ವೇದನುದಃ - ಬೆಮರನ್ನು ಹೋಗಲಾಡಿಸುವ, ಸುಪ್ರಿಯಾತ್ಮಾ - ಬಹಳ ಇಂಪಾದ ಸ್ವಭಾವವುಳ್ಳ, ಸುಖಃ - ಸುಖ ಸ್ಪರ್ಶವುಳ್ಳ, ಶಿವಃ - ಶುಭಕರವಾದ, ಅನಿಲಃ - ವಾಯುವು, ವವೌ - ಬೀಸಿತು. || ೨೪ || ತತಃ-ಬಳಿಕ, ಘನಾಃ - ಪರಸ್ಪರಸಂಮರ್ದವಾಗಿ ನಿಬಿಡವಾದ, ದಿವ್ಯಾಃ - ದೇವತಾಸಂಬಂಧಗಳಾದ, ಕುಸುಮವೃಷ್ಟಯಃ - ಪುಷ್ಪವರ್ಷಗಳು, ಅಭ್ಯವರ್ತಂತ - ಆದುವು, ಸರ್ವಾಸು - ಸಮಸ್ತವಾದ, ದಿಕ್ಷು - ದಿಕ್ಕುಗಳಲ್ಲಿ, ದಿವ್ಯದುಂದುಭಿಘೋಷಶ್ಚ - ದೇವತಾಸಂಬಂಧವಾದ ಭೇರಿಗಳ ಧ್ವನಿಯು, ಶುಶ್ರುವೇ-ಕೇಳಲ್ಪಟ್ಟವು. || ೨೫ || ಉತ್ತಮಾಃ - ಸರ್ವೋತ್ತಮವಾದ, ವಾತಾಃ - ಗಾಳಿಗಳು, ಪ್ರವವುಃ - ಬೀಸಿದವು, ಅಪ್ಸರೋಗಣಾಶ್ಚ - ಅಪ್ಸರಸ್ತ್ರೀಯರ ತಂಡಗಳು, ನನೃತುಃ - ನರ್ತನಮಾಡಿದವು, ದೇವಗಂಧರ್ವಾಃ - ದೇವಜಾತೀಯರಾದ ಗಂಧರ್ವರು, ವೀಣಾಃ - ವೀಣಾಪಾಣಿಗಳಾಗಿ, ಜಗುಶ್ಚ - ಗಾನಮಾಡಿದರು, (ಗೋ) ವೀಣೆಗಳು ಷಡ್ಜಾದಿಸ್ವರಗಳನ್ನು ಉತ್ಪತ್ತಿಮಾಡಿದುವು. || ೨೬ || ಉಚ್ಚಾರಿತಃ - ವೀಣಾದಿಗಳಿಂದ ಉತ್ಪತ್ತಿಮಾಡಲ್ಪಟ್ಟ, (ಗೋ) ಕಂಠಗಳಿಂದ ಉಚ್ಚಾರಣೆಮಾಡಲ್ಪಟ್ಟ, ಶ್ಲಕ್ಷ್ಣಃ - ಮೃದುವಾದ, ಸಮಃ - ನಿಷಾದಋಷಭಾದಿ ಸ್ವರಗಳಲ್ಲಿ ಸಾಮ್ಯವುಳ್ಳ, ಲಯಗುಣಾನ್ವಿತಃ - ಸ್ವರಗಳ ವಿಶ್ರಾಂತಿಸ್ಥಾನ ವೆಂಬ ಗುಣದಿಂದ ಕೂಡಿರುವ, ಶಬ್ದಃ - ಆ ಶಬ್ದವು, ಪ್ರಾಣಿನಾಂ - ಮನುಜರ, ಶ್ರವಣಾನಿಚ-ಶ್ರೋತ್ರಗಳನ್ನು, ದ್ಯಾಂಚ - ಅಂತರಿಕ್ಷವನ್ನು, ಭೂಮಿಂಚ - ನೆಲವನ್ನೂ, ವಿವೇಶ - ಹೊಕ್ಕಿತು. || ೨೭ || ನೃಣಾಂ - ಮನುಷ್ಯರಿಗೆ, ಶ್ರೋತ್ರಸುಖೇ - ಕಿವಿಗಳಿಗಿಂಪಾಗಿರುವ, ದಿವ್ಯೇ - ಮನೋಹರವಾದ, ತಸ್ಮಿನ್ ಶಬ್ದೇ - ಆ ಶಬ್ದವು, ಉಪರತೇ - ನಿಲ್ಲಲು, ಭಾರತಂ - ಭರತಸಂಬಂಧವಾದ, ಸೈನ್ಯಂ - ಸೇನೆಯಲ್ಲಿ

ವಾದ ಪರಿಮಳದಿಂದಕೂಡಿ ಭರತಾದಿಗಳಮಾರ್ಗಾಯಾಸದಿಂದುಂಟಾದ ಬೆಮರನ್ನು ಹೋಗಲಾಡಿಸುತ್ತ ಬೀಸುತ್ತಿದ್ದನು. ಅಲ್ಲದೆ ಉತ್ತಮಗಳಾದ, ಶೈತ್ಯ, ಮಾಂದ್ಯ, ಸೌರಭ್ಯಗಳುಳ್ಳ ಮಂದಮಾರುತವು ಬೀಸುತ್ತಿದ್ದಿತು, ಅಪ್ಸರೋಗಣಗಳು ನಾಟ್ಯವಾಡಿದುವು; ದೇವತೆಗಳೂ, ಗಂಧರ್ವರೂಗಾನಮಾಡಿದರು; ವೀಣಾವಾದನವಾಯಿತು; ವೀಣಾದಿಗಳಿಂದ ಜನಿಸಿದುವೂ, ಶ್ರುತಿಸಾಮ್ಯವೂ, ಲಯಕ್ಕನುಗುಣವಾದುವೂ ಆದ ಆ ಧ್ವನಿಗಳು, ಭೂಮ್ಯಾಕಾಶಗಳಲ್ಲಿ ಸಂಚರಿಸುತ್ತಿದ್ದ ಪ್ರಾಣಿಗಳಕಿವಿಗಳಿಗೆ ಆನಂದವನ್ನುಂಟುಮಾಡುತ್ತಿದ್ದುವು. ಸಕಲ ಜಂತುಗಳ ಶ್ರವಣೇಂದ್ರಿಯಕ್ಕಿಂಪಾದುದೂ, ಸರ್ವೋತ್ತಮವಾದುದೂ ಆದ ಆ ಧ್ವನಿಗಳು ನಿಲ್ಲುವುದರೊಳಗಾಗಿಯೇ, ಆ ಭರತಕುಮಾರನಸೈನ್ಯವೆಲ್ಲವೂ ವಿಶ್ವಕರ್ಮಬ್ರಹ್ಮನ ನಿರ್ಮಾಣವನ್ನು

ತಸ್ಮಿನ್ನುಪರತೇ ಶಬ್ದೇ ದಿವ್ಯೇ ಶ್ರೋತ್ರಸುಖೇ ನೃಣಾಂ ॥ ದದರ್ಶ ಭಾರತಂ ಸೈನ್ಯಂ ವಿಧಾನಂ ವಿಶ್ವಕರ್ಮಣಃ ॥ ೨೮ ॥ ಬಭೂವಹಿ ಸಮಾ ಭೂಮಿ ಸ್ಸಮಂತಾತ್ಪಂಚಯೋಜನಾ ॥ ಶಾದ್ವಲೈ ರ್ಬಹುಭಿಶ್ಛನ್ನಾ ನೀಲವೈಡೂರ್ಯ ಸನ್ನಿಭೈಃ ॥ ೨೯ ॥ ತಸ್ಮಿನ್ ಬಿಲ್ವಾಃ ಕಪಿತ್ಥಾಶ್ಚ ಪನಸಾ ಬೀಜಪೂರಕಾಃ ॥ ಆಮಲಕ್ಯೋ ಬಭೂವುಶ್ಚ ಚೂತಾಶ್ಚ ಫಲಭೂಷಣಾಃ ॥ ೩೦ ॥ ಉತ್ತರೇಭ್ಯಃ ಕುರುಭ್ಯಶ್ಚ ವನಂ ದಿವ್ಯೋಪಭೋಗವತ್ ॥ ಆಜಗಾಮ ನದೀ ದಿವ್ಯಾ ತೀರಜೈ ರ್ಬಹುಭಿ ರ್ವೃತಾ ॥ ೩೧ ॥ ಚತುಶ್ಶಾಲಾನಿ ಶುಭ್ರಾಣಿ ಶಾಲಾಶ್ಚ ಗಜವಾಜಿನಾಂ ॥ ಹರ್ಮ್ಯಪ್ರಾಸಾದ ಸಂಬಾಧಾ ಸ್ತೋರಣಾನಿ ಶುಭಾನಿಚ ॥ ೩೨ ॥

ರುವ ಜನವು, ವಿಶ್ವಕರ್ಮಣಃ - ವಿಶ್ವಕರ್ಮನೆಂಬ ದೇವಶಿಲ್ಪಿಯ, ವಿಧಾನಂ - ನಿರ್ಮಾಣವನ್ನು, ದದರ್ಶ - ಕಂಡಿತು. ॥ ೨೮ ॥ ಸಮಂತಾತ್ - ಎಲ್ಲ ದಿಕ್ಕುಗಳಲ್ಲಿಯೂ, ಸಮಾ - ಹಳ್ಳದಿಣ್ಣೆಗಳಿಲ್ಲದಿರುವ, ಪಂಚಯೋಜನಾ - ಐದುಯೋಜನಗಳುಳ್ಳ, ಭೂಮಿಃ - ನೆಲವು, ನೀಲವೈಡೂರ್ಯಸನ್ನಿಭೈಃ - ಇಂದ್ರನೀಲಮಣಿಗಳಿಗೂ ವೈಡೂರ್ಯಮಣಿಗಳಿಗೂ, ಸನ್ನಿಭೈಃ - ಸಮಾನಗಳಾದ, ಬಹುಭಿಃ - ಬಹಳಗಳಾದ, ಶಾದ್ವಲೈಃ - ಹುಲ್ಲುಗಳಿಂದ, ಛನ್ನಾ - ಹೊದಿಸಲ್ಪಟ್ಟದಾಯಿತು. ॥ ೨೯ ॥ ತಸ್ಮಿನ್ - ಆ ನೆಲದಲ್ಲಿ, ಬಿಲ್ವಾಃ - ಬಿಲ್ವವೃಕ್ಷಗಳೂ, ಕಪಿತ್ಥಾಶ್ಚ - ಬೇಲದಗಿಡಗಳೂ, ಪನಸಾಃ - ಹಲಸಿನಗಿಡಗಳೂ, ಬೀಜಪೂರಕಾಃ - ಮಾದಾಳವಗಿಡಗಳೂ, ಆಮಲಕ್ಯಃ - ನೆಲ್ಲೀಗಿಡಗಳೂ, ಚೂತಾಶ್ಚ - ಮಾವಿನಗಿಡಗಳೂ, ಫಲಭೂಷಣಾಃ - ಫಲಗಳೇ ಅಲಂಕಾರಗಳಾಗುಳ್ಳವುಗಳು, ಬಭೂವುಃ - ಆದವು. ॥ ೩೦ ॥ ಉತ್ತರೇಭ್ಯಃಕುರುಭ್ಯಶ್ಚ - ಉತ್ತರದೇಶಗಳಿಂದ, ದಿವ್ಯೋಪಭೋಗವತ್ - ಮನೋಹರವಾದ ಭೋಗಯೋಗ್ಯವಾದ, ವನಂ - ವನವು, ಆಜಗಾಮ - ಬಂದಿತು. ದಿವ್ಯಾ - ದೇವತಾಸಂಬಂಧವಾದ, ನದೀ - ನದಿಯು, ಬಹುಭಿಃ - ಅನೇಕ ಬಗೆಗಳುಳ್ಳ, ತೀರಜೈಃ - ಗಿಡಗಳಿಂದ, ವೃತಃ - ಸುತ್ತಲ್ಪಟ್ಟುದಾಗಿ, ಆಜಗಾಮ - ಬಂದಿತು, ಶುಭ್ರಾಣಿ - ಬೆಳ್ಳಗಿರುವ, ಚತುಶ್ಶಾಲಾನಿ-ನಾಲ್ಕುಕಡೆಗಳಲ್ಲಿಯೂ ಬಾಗಿಲುಗಳುಳ್ಳ ಮನೆಗಳು, ಗಜವಾಜಿನಾಂ - ಆನೆಗಳ ಕುದುರೆಗಳ, ಶಾಲಾಶ್ಚ - ಮನೆಗಳೂ, ಹರ್ಮ್ಯಪ್ರಾಸಾದ

ನೋಡಿದುದಾಯಿತು. ಆರೀತಿ ವಿಶ್ವಕರ್ಮನಿರ್ಮಿತವಾದ ವಿಚಿತ್ರವಸ್ತುನಿಚಯವೆಲ್ಲವನ್ನೂ ನೋಡಿ, ಆ ಸೇನೆಯಲ್ಲಿದ್ದವರೆಲ್ಲರೂ ಮಹದಾಶ್ಚರ್ಯಭರಿತರಾದರು. ಆಗ ಐದುಯೋಜನಗಳ ವರೆವಿಗೂ ಭೂಮಿಯು ಹಳ್ಳತಿಟ್ಟಗಳಿಲ್ಲದೆ ಸಮಭೂಮಿಯಾಯಿತು. ಅಲ್ಲದೆಯಾಭೂಮಿಯು ನೀಲವೈಡೂರ್ಯಮಣಿಗಳ ಕಾಂತಿಯಂತಹ ಕಾಂತಿಯುಳ್ಳ, ನಾನಾವಿಧಗಳಾದ ಹುಲ್ಲುಗಳಿಂದವ್ಯಾಪ್ತವಾದುದಾಯಿತು. ಇಷ್ಟೆಯಲ್ಲದೆ ಆ ಆಶ್ರಮಪ್ರದೇಶದಲ್ಲಿ ಫಲಗಳೇ ಆಭರಣಗಳಾಗುಳ್ಳ, ಬೇಲ, ಹಲಸು, ಮಾದಳ, ನೆಲ್ಲಿ ಮಾವು ಮುಂತಾದ ವೃಕ್ಷಗಳುಂಟಾದುವು. ಅಲ್ಲದೆಯಾಸಮಯದಲ್ಲಿ ಉತ್ತರಕುರುಭೂಮಿಯಲ್ಲಿನ ದಿವ್ಯೋಪಭೋಗಗಳುಳ್ಳ ಚೈತ್ರರಥವನವೂ ಬಂದುದಾಯಿತು. ಮಾತ್ರವಲ್ಲದೆ ತೀರದಲ್ಲಿ ಕೋಮಲವಾಗಿ ಬೆಳೆದ ಫಲವೃಕ್ಷಗಳುಳ್ಳ ಅನೇಕ ಪ್ರವಾಹಗಳೂ ಅಲ್ಲಿಗೆ ಬಂದುವಾದುವು. ॥ ೨೮-೩೧ ॥

ಸಿತಮೇಘ ನಿಭಂಚಾಪಿ ರಾಜವೇಶ್ಮಸುತೋರಣಂ ॥ ಶುಕ್ಲ ಮಾಲ್ಯಕೃತಾಕಾರಂ ದಿವ್ಯಗಂಧ ಸಮುತ್ಕ್ಷಿತಂ ॥ ೩೩ ॥ ಚತುರಶ್ರಮಸಂಬಾಧಂ ಶಯನಾಸನ ಯಾನವತ್ ॥ ದಿವ್ಯೈಸ್ಸರ್ವರಸೈರ್ಯುಕ್ತಂ ದಿವ್ಯಭೋಜನ ವಸ್ತ್ರವತ್॥೩೪॥ ಉಪಕಲ್ಪಿತ ಸರ್ವಾನ್ನಂ ಧೌತ ನಿರ್ಮಲಭಾಜನಂ ॥ ಕ್ಲುಪ್ತಸರ್ವಾಸನಂ ಶ್ರೀಮತ್ ಸ್ವಾಸ್ತೀರ್ಣ ಶಯನೋತ್ತಮಂ ॥ ೩೫ ॥ ಪ್ರವಿವೇಶ ಮಹಾಬಾಹು ರನುಜ್ಞಾತೋ ಮಹರ್ಷಿಣಾ ॥ ವೇಶ್ಮ ತದ್ರತ್ನ ಸಂಪೂರ್ಣಂ ಭರತಃ ಕೈಕಯೀಸು

ಸಂಬಾಧಾಃ-ಧನಿಕರ ಮನೆಗಳಿಂದಲೂ ಅರಸುಗಳಮನೆಗಳಿಂದಲೂ ಕೂಡಿದುವುಗಳಾಗಿ, ಶುಭಾನಿ-ಶುಭಕರವಾದ, ತೋರಣಾನಿಚ - ಮೇಲ್ಕಟ್ಟುಗಳೂ, ಆಜಗ್ಮುಃ - ಬಂದವು ॥ ೩೨ ॥ ಸಿತಮೇಘನಿಭಂ - ಬೆಳ್ಳಗಿರುವ ಮೇಘಕ್ಕೆ ಸಮಾನವಾದ, ಸುತೋರಣಂ - ತೋರಣಗಳುಳ್ಳ, ಶುಕ್ಲಮಾಲ್ಯಕೃತಾಕಾರಂ - ಬೆಳ್ಳಗಿರುವ ಪುಷ್ಪಮಾಲಿಕೆಗಳಿಂದ ಮಾಡಲ್ಪಟ್ಟ ಆಕಾರವುಳ್ಳ, ದಿವ್ಯಗಂಧಸಮುಕ್ಷಿತಂ - ಮನೋಹರವಾದ ಗಂಧೋದಕದಿಂದ ನೆನೆಯಿಸಲ್ಪಟ್ಟ, ಚತುರಶ್ರಂ-ಚೌಕವಾಗಿರುವ, ಅಸಂಬಾಧಂ-ಒಂದಕ್ಕೊಂದು ತಗಲದಿರುವ, ಶಯನಾಸನಯಾನವತ್ - ಹಾಸಿಗೆಗಳೂ, ಪೀಠಗಳೂ, ಮಂಚಗಳೂ, ವಾಹನಗಳೂ ಉಳ್ಳ, ರಾಜವೇಶ್ಮ - ಅರಮನೆಯು, ದಿವ್ಯೈಃ - ದೇವತಾಸಂಬಂಧವಾದ, ಸರ್ವರಸೈಃ - ಸಮಸ್ತರಸಗಳಿಂದಲೂ, ಯುಕ್ತಂ - ಕೂಡಿದುದಾಗಿ, ದಿವ್ಯಭೋಜನವಸ್ತ್ರವತ್ - ಮನೋಹರವಾದ ಭೋಜನವೂ ವಸ್ತ್ರಗಳೂ ಉಳ್ಳುದಾಗಿ, ಅಭವತ್ - ಆಯಿತು. ॥ ೩೪ ॥ ಉಪಕಲ್ಪಿತಸರ್ವಾನ್ನಂ - ನಿಯಮಿಸಲ್ಪಟ್ಟ ಚತುರ್ವಿಧವಾದ ಅನ್ನವುಳ್ಳ, ಧೌತನಿರ್ಮಲಭಾಜನಂ - ತೊಳೆಯಲ್ಪಟ್ಟ ಮಾಲಿನ್ಯವಿಲ್ಲದ ಪಾತ್ರೆಗಳುಳ್ಳ, ಕ್ಲುಪ್ತಸರ್ವಾಸನಂ - ಮಾಡಲ್ಪಟ್ಟ ಸಮಸ್ತ ಆಸನಗಳೂಉಳ್ಳ, ಶ್ರೀಮತ್-ಸಂಪದ್ಯುಕ್ತವಾದ, ಸ್ವಾಸ್ತೀರ್ಣಶಯನೋತ್ತಮಂ-ಚನ್ನಾಗಿಹಾಸಲ್ಪಟ್ಟ ಉತ್ತಮವಾದ ಹಾಸಿಗೆಗಳುಳ್ಳ, ರತ್ನಸಂಪೂರ್ಣಂ-ರತ್ನಗಳಿಂದ ತುಂಬಿರುವ, ತದ್ವೇಶ್ಮ - ಅಂತಹ ಅರಮನೆಯನ್ನು, ಮಹರ್ಷಿಣಾ - ಭರದ್ವಾಜಋಷಿ

ಬಹುನಿರ್ಮಲವಾದ ಚತುಶ್ಶಾಲೆಗಳು, ಅಶ್ವಶಾಲೆಗಳು, ರಾಜಭವನಗಳು ಇವೇಮೊದಲಾದುವುಗಳೆಲ್ಲವೂ ಉಂಟಾದುವು. ಮಂಗಳಕರವಾದ ಬಾಗಿಲುಗಳುಳ್ಳ ಈ ಭವನಗಳುಳ್ಳ ಆ ಭರದ್ವಾಜಾಶ್ರಮ ಪ್ರದೇಶವು ದೊಡ್ಡನಗರದಂತೆ ಕಾಣುತ್ತಿದ್ದಿತು. ಇಷ್ಟೆಯಲ್ಲದೆ ಯಾಸ್ಥಳದಲ್ಲಿ ಶರತ್ಕಾಲೀನವಾದ ಬಿಳಿಮೋಡಗಳಿಗೆಸಮಾನವಾದುದೂ, ಬಹುಮನೋಹರವಾದುದೂ ಆದ ತೋರಣಗಳನ್ನುಳ್ಳುದೂ, ಬೆಳ್ಳಗಿರುವ ಪೂಮಾಲಿಕೆಗಳಿಂದರಚಿಕವಾದ ಆಕಾರವುಳ್ಳುದೂ, ಶ್ರೇಷ್ಠವಾದ ಚಂದನಗಂಧದಿಂದಪೂರ್ಣವಾದುದೂ ಚೌಕವಾಗಿರುವುದೂ,ವಿಶಾಲವಾದುದೂ, ಶಯನಾಸನಗಳುಳ್ಳುದೂ, ಸರ್ವೋತ್ತಮವಾದ ಅನೇಕವಿಧರಸಗಳಿಂದೊಡಗೂಡಿದುದೂ, ಸರ್ವೋತ್ಕೃಷ್ಟವಾದ ಭೋಜನವಸ್ತ್ರಗಳುಳ್ಳುದೂ, ಚಿತ್ರಾನ್ನಗಳುಳ್ಳುದೂ, ಚೆನ್ನಾಗಿತೊಳೆದಿರುವುವೂ, ನಿರ್ಮಲವಾದುವೂಆದ ಭೋಜನಪಾತ್ರೆಗಳುಳ್ಳುದೂ, ಏರ್ಪಡಿಸಿರುವ ನಾನಾವಿಧಗಳಾದ ಸಿಂಹಾಸನವುಳ್ಳುದೂ, ಹಾಸಿದ ಅತ್ಯುತ್ತಮಶಯ್ಯೆಯುಳ್ಳುದೂ, ಸ್ವರಸಂಪತ್ತಿಯಿಂದೊಡಗೂಡಿದುದೂ, ಆದ ರಾಜಮಂದಿರವೊಂದು ಏರ್ಪಡಿಸಲಾಗಿದ್ದಿತು. ಆಗ ಕೇಕಯೀಪುತ್ರನೂ, ಮಹಾಬಾಹುವೂಆದ ಭರತಕುಮಾರನು ಋಷಿಗಳಲ್ಲಿ ಶ್ರೇಷ್ಠನಾದ ಭರ

ಸುತಃ ॥ ೩೬ ॥ ಅನುಜಗ್ಮುಶ್ಚ ತಂ ಸರ್ವೇ ಮಂತ್ರಿಣ ಸ್ಸಪುರೋಹಿತಾಃ ॥ ಬಭೂವುಶ್ಚ ಮುದಾ ಯುಕ್ತಾ ದೃಷ್ಟ್ವಾ ತಂ ವೇಶ್ಮ ಸಂವಿಧಿಂ ॥ ೩೭ ॥ ತತ್ರ ರಾಜಾಸನಂ ದಿವ್ಯಂ ವ್ಯಜನಂ ಛತ್ರ ಮೇವಚ ॥ ಭರತೋ ಮಂತ್ರಿಭಿ ಸ್ಸಾರ್ಧ ಮಭ್ಯವರ್ತತ ರಾಜವತ್ ॥ ೩೮ ॥ ಆಸನಂ ಪೂಜಯಾಮಾಸ ರಾಮಾಯಾಽಭಿಪ್ರಣಮ್ಯಚ ॥ ವಾಲವ್ಯಜನಮಾದಾಯ ನ್ಯಷೀದ ತ್ಸಚಿವಾಸನೇ ॥೩೯॥ ಆನುಪೂರ್ವ್ಯಾ ನ್ನಿಷೇದುಶ್ಚ ಸರ್ವೇ ಮಂತ್ರಿ ಪುರೋಹಿತಾಃ ॥ ತತ ಸ್ಸೇನಾಪತಿಃ

ಯಿಂದ, ಅನುಜ್ಞಾತಃ - ಆಜ್ಞಾಪಿತನಾಗಿ, ಮಹಾಬಲಃ - ಬಹಳ ಪರಾಕ್ರಮಶಾಲಿಯಾದ, ಕೈಕಯೀಸುತಃ - ಕೈಕಯಿಪುತ್ರನಾದ, ಭರತಃ - ಭರತನು, ತದ್ವೇಶ್ಮ-ಆ ಮನೆಯನ್ನು, ಪ್ರವಿವೇಶ-ಹೊಕ್ಕನು. ॥ ೩೬ ॥ ಸರ್ವೇ - ಸಮಸ್ತರಾದ, ಮಂತ್ರಿಣಃ - ಮಂತ್ರಿಗಳು, ಸಪುರೋಹಿತಾಃ - ಪುರೋಹಿತರಾದ ವಸಿಷ್ಠರಿಂದೊಡಗೂಡಿದವರಾಗಿ, ತಂ - ಆ ಭರತನನ್ನು, ಅನುಜಗ್ಮುಃ - ಅನುಸರಿಸಿಬಂದರು, ತಂವೇಶ್ಮ ಸಂವಿಧಿಂ - ಆ ಮನೆಯನ್ನು ಕಟ್ಟಿರುವ ಅಲಂಕಾರವನ್ನು, ದೃಷ್ಟ್ವಾ - ಕಂಡು, ಮುದಾ - ಸಂತೋಷದಿಂದ, ಯುಕ್ತಾಃ - ಕೂಡಿದವರು, ಬಭೂವುಃ - ಆದರು. ॥ ೩೭ ॥ ತತ್ರ - ಆ ಮನೆಯಲ್ಲಿ, ಭರತಃ - ಭರತನು, ಮಂತ್ರಿಭಿಸ್ಸಾರ್ಧಂ - ಮಂತ್ರಿಗಳೊಡನೆ, ದಿವ್ಯಂ - ಮನೋಹರವಾದ, ರಾಜಾಸನಂ-ಭದ್ರಾಸನವನ್ನು, ವ್ಯಜನಂ - ಚಾಮರವನ್ನು, ಛತ್ರಮೇವಚ - ಛತ್ರವನ್ನು, ರಾಜವತ್ - ಅರಸಾದ ಶ್ರೀರಾಮನನ್ನಂತೆ, ಅಭ್ಯವರ್ತತ - ಪ್ರದಕ್ಷಿಣಮಾಡಿದನು. ॥ ೩೮ ॥ ರಾಮಾಯ - ಶ್ರೀರಾಮನಿಗೆ, ಅಭಿಪ್ರಣಮ್ಯಚ - ಪ್ರದಕ್ಷಿಣವನ್ನುಮಾಡಿ, ಆಸನಂ - ಭದ್ರಾಸನವನ್ನು, ಪೂಜಯಾಮಾಸ - ಪೂಜೆಮಾಡಿದನು, ವಾಲವ್ಯಜನಂ - ಚಾಮರವನ್ನು, ವ್ಯಜನವನ್ನೂ ಸಹ, ಆದಾಯ - ತೆಗದುಕೊಂಡು, ಸಚಿವಾಸನೇ - ಮಂತ್ರಿಗಳಿಗೆಹಾಕಿದ್ದ ಆಸನವಲ್ಲಿ, ನಿಷೀದತ್ - ಕುಳಿತುಕೊಂಡನು ॥ ೩೯ ॥ ಸರ್ವೇ-ಸಮಸ್ತರಾದ, ಮಂತ್ರಿಪುರೋಹಿತಾಃ - ಮಂತ್ರಿಗಳೂ ಪುರೋಹಿತರೂ, ಆನುಪೂರ್ವ್ಯಾತ್ - ಕ್ರಮ

ದ್ವಾಜಮುನಿಯ ಅಜ್ಞೆಯನ್ನುಹೊಂದಿ, ರತ್ನಾದಿದ್ರವ್ಯಗಳಿಂದ ಸಂಪೂರ್ಣವಾದ ಆ ರಾಜಮಂದಿರವನ್ನು ಪ್ರವೇಶಿಸಿದನು. ॥ ೩೨-೩೬ ॥ ಈ ರೀತಿ ಆ ಭರತಕುಮಾರನು ಭರದ್ವಾಜ ಮಹಾಮುನಿಯಿಂದ ನಿರ್ಮಿತವಾದ ಆ ರಾಜಭವನವನ್ನು ಪ್ರವೇಶಿಸುವಾಗ, ಸುಮಂತ್ರನೇ ಮೊದಲಾದ ಮಂತ್ರಿಗಳೂ, ವಸಿಷ್ಠಾದಿ ಪುರೋಹಿತರೂ ಆತನೊಡನೆಯೇ ಪ್ರವೇಶಿಸಿದರು. ಹೀಗೆ ಪ್ರವೇಶಿಸಿದ ಬಳಿಕ ಅವರೆಲ್ಲರೂ, ಆ ಪಟ್ಟಣಾಲಂಕಾರವನ್ನೂ, ರಾಜಭವನದ ಶೃಂಗಾರವನ್ನೂ ನೋಡಿ ಮಹದಾಶ್ಚರ್ಯಭರಿತರಾದರು. ಭರತನು ಸಪರಿವಾರನಾಗಿ ಆ ಮಂದಿರದೊಳಗೆ ಪ್ರವೇಶಮಾಡಿ, ಶ್ರೇಷ್ಠವಾದ ಸಿಂಹಾಸನಕ್ಕೂ, ಬಿಳಿ ಚಾಮರಗಳಿಗೂ, ಶ್ವೇತಛತ್ರಕ್ಕೂ, ಮಂತ್ರಿಗಳೊಡಗೂಡಿ ರಾಜರಂತೆ ಪ್ರದಕ್ಷಿಣ ನಮಸ್ಕಾರಮಂಗೈದನು; ಅಲ್ಲದೆ ಅಣ್ಣನಾದ ಶ್ರೀರಾಮಮೂರ್ತಿಗೆ ನಮಸ್ಕಾರವನ್ನು ಮಾಡಿ ಆ ಸಿಂಹಾಸನಕ್ಕೆ ಪೂಜೆಮಾಡಿ, ವಾಲವ್ಯಜನಗಳನ್ನು ಕೈಯಲ್ಲಿ ಹಿಡಿದುಕೊಂಡು ಮಂತ್ರಿಗಳು ಕುಳಿತುಕೊಳ್ಳಲು ಯೋಗ್ಯವಾದ ಸಿಂಹಾಸನದಲ್ಲಿ ಕುಳಿತುಕೊಂಡನು. ॥ ೩೭-೩೯ ॥ ಆಗ ಮಂತ್ರಿಗಳೂ, ಪುರೋಹಿತರೂ ತಾವು ಕುಳಿತುಕೊಳ್ಳಲು ಯೋಗ್ಯವಾದ ಪ್ರದೇಶಗಳಲ್ಲಿ ಕುಳಿತುಕೊಂಡರು. ಆಮೇಲೆ

ಪಶ್ಚಾತ್ ಪ್ರಶಾಸ್ತಾಚ ನಿಷೇದತುಃ ‖ ೪೦ ‖ ತತಸ್ತತ್ರ ಮುಹೂರ್ತೇನ ನದ್ಯಃ ಪಾಯಸ ಕರ್ದಮಾಃ ‖ ಉಪಾತಿಷ್ಠಂತ ಭರತಂ ಭರದ್ವಾಜಸ್ಯ ಶಾಸನಾತ್‖೪೧‖ ತಾಸಾ ಮುಭಯತಃ ಕೂಲಂ ಪಾಂಡುಮೃತ್ತಿಕ ಲೇಪನಾಃ ‖ ರಮ್ಯಾಶ್ಚಾವ ಸಥಾ ದಿವ್ಯಾ ಬ್ರಹ್ಮಣಸ್ತು ಪ್ರಸಾದಜಾಃ ‖ ೪೨ ‖ ತೇನೈವಚ ಮುಹೂರ್ತೇನ ದಿವ್ಯಾಭರಣ ಭೂಷಿತಾಃ ‖ ಆಗು ರ್ವಿಂಶತಿ ಸಾಹಸ್ರಾ ಬ್ರಹ್ಮಣಾ ಪ್ರಹಿತಾಃ ಸ್ತ್ರಿಯಃ ‖ ೪೩ ‖ ಸುವರ್ಣಮಣಿಮುಕ್ತೇನ ಪ್ರವಾಳೇನಚ ಶೋಭಿತಾಃ ‖

ದಿಂದ, ನಿಷೇದತುಃ - ಕುಳಿತುಕೊಂಡರು, ತತಃ - ಬಳಿಕ, ಸೇನಾಪತಿಃ - ಸೈನ್ಯಾಧಿಪತಿಯು, ಪಶ್ಚಾತ್- ಬಳಿಕ, ಪ್ರಶಾಸ್ತಾಚ - ಸೈನ್ಯಕ್ಕೆನಿಯಾಮಕನೂ, ನಿಷೇದತುಃ - ಕುಳಿತುಕೊಂಡರು. ‖ ೪೦ ‖ ತತಃ- ಬಳಿಕ, ತತ್ರ - ಆ ಮನೆಯಲ್ಲಿ, ಮುಹೂರ್ತೇನ - ಮುಹೂರ್ತಮಾತ್ರದಲ್ಲಿ, ನದ್ಯಾಃ - ನದಿಗಳು, ಪಾಯ ಸಕರ್ದಮಾಃ - ಕ್ಷೀರಮಿಶ್ರವಾದ ಅನ್ನವೇ ಕೆಸರಾಗುಳ್ಳವಾಗಿ, ಭರದ್ವಾಜಸ್ಯ - ಭರದ್ವಾಜಋಷಿಯ, ಶಾಸನಾತ್ - ಆಜ್ಞೆಯಿಂದ, ಭರತಂ - ಭರತನನ್ನು ಕುರಿತು, ಉಪಾತಿಷ್ಠಂತ-ಸಮೀಪವರ್ತಿಯಾದುವು. ‖ ೪೧ ‖ ತಾಸಾಂ - ಆ ನದಿಗಳ, ಉಭಯತಃ - ಎರಡಾದ, ಕೂಲಂ-ದಡಗಳಲ್ಲಿ, ಪಾಂಡುಮೃತ್ತಿಕ್ವಾಲೇ ಪನಾಃ - ಸುಣ್ಣದಲೇಪನೆಯುಳ್ಳ, ರಮ್ಯಾಃ - ಮನೋಹರವಾದ, ದಿವ್ಯಾಃ - ಮನಸ್ಸಿಗಿಂಪಾಗಿರುವ, ಆವಸಥಾಃ - ಮನೆಗಳು, ಬ್ರಹ್ಮಣಃ - ಬ್ರಹ್ಮಜ್ಞಾನಿಯಾದ ಭರದ್ವಾಜಋಷಿಯ, ಪ್ರಸಾದಜಾಃ - ಅನು ಗ್ರಹದಿಂದುಂಟಾದುವು. ‖ ೪೨ ‖ ತೇನೈವಚಮುಹೂರ್ತೇನ - ಅದೇ ಮುಹೂರ್ತದಲ್ಲಿಯೇ, ದಿವ್ಯಾ ಭರಣಭೂಷಿತಾಃ - ನಾನಾಭರಣಗಳಿಂದಲಂಕೃತರಾದ, ಬ್ರಹ್ಮಣಾ - ಬ್ರಹ್ಮದೇವರಿಂದ, ಪ್ರಹಿತಾಃ - ಕಳುಹಲಾದ, ವಿಂಶತಿಸಾಹಸ್ರಾಃ - ಇಪತ್ತುಸಾವಿರ ಸಂಖ್ಯೆಯುಳ್ಳ, ಸ್ತ್ರಿಯಃ - ಹೆಂಗಳು, ಆಗುಃ - ಬಂದರು. ‖ ೪೩ ‖ ಸುವರ್ಣಮಣಿಮುಕ್ತೇನ - ಸುವರ್ಣದೊಡಿವೆಗಳಿಂದಲು ರನ್ನದೊಡಿವೆಗ ಳಿಂದಲು ಮುತ್ತುಗಳೊಡಿವೆಗಳಿಂದಲು, ಪ್ರವಾಳೇನಚ - ಪವಳದೊಡಿವೆಗಳಿಂದಲೂ, ಶೋಭಿತಾಃ - ಹೊಳೆಯುತ್ತಿರುವ, ಕುಬೇರಪ್ರಹಿತಾಃ - ಕುಬೇರನಿಂದ ಕಳುಹಲಾದ, ವಿಂಶತಿಸಾಹಸ್ರಾಃ - ಇಪ್ಪತ್ತುಸಹಸ್ರ ಸಂಖ್ಯೆಯುಳ್ಳ, ಸ್ತ್ರಿಯಃ - ಹೆಂಗಳು, ಆಗುಃ - ಬಂದರು. ‖ ೪೪ ‖ ಯಾಭಿಃ-ಯಾವ

ಸೇನಾಪತಿಯು ತನಗೆ ತಕ್ಕುದಾದ ಆಸನವನ್ನಲಂಕರಿಸಿದನು. ಆತನ ಹಿಂದೆ ಶಿಬಿರಾಧಿ ಪತಿಯು ಕುಳಿತುಕೊಂಡನು. ಆ ಬಳಿಕಲಲ್ಲಿಗೆ ಭರದ್ವಾಜಮುನಿಯ ಆಜ್ಞೆಯಿಂದ ಬಹು ಜಾಗ್ರತೆಯಾಗಿ, ಕ್ಷೀರಾನ್ನವೇಪ್ರವಾಹಗಳಾಗುಳ್ಳನದಿಗಳು ಬಂದು ಭರತನಿದ್ದ ಮುಂದಿರದಲ್ಲಿ ಪ್ರವಹಿಸುತ್ತಆತನನ್ನುಸೇವಿಸಿದುವು. ಆ ನದಿಗಳ ಎರಡು ತೀರಗಳಲ್ಲಿಯೂ, ಬಿಳಿತಾದ ಗಾರೆ ಯಿಂದ ಸಾರಿಸಲ್ಪಟ್ಟುವೂ, ಮನೋಹರವಾದುವೂ, ಸರ್ವೋತ್ತಮವಾದುವೂ ಆದ ದಿವ್ಯ ಭವನಗಳು ಭರದ್ವಾಜಮುನಿಯಾಣತಿಯಂತೆ ಉದ್ಭವಿಸಿ ಪ್ರಕಾಶಿಸಲಾರಂಭಿಸಿದುವು. ಅದೇ ಸಮಯದಲ್ಲಿಯೇ ಬ್ರಹ್ಮದೇವನಿಂದ ಕಳುಹಲಾಗ ಇಪ್ಪತ್ತುಸಾವಿರಮಂದಿ ದೇವತಾಸ್ತ್ರೀ ಯರು, ಸರ್ವಾಭರಣಭೂಷಿತೆಯರಾಗಿ ಬಂದರು. ಮಾತ್ರವಲ್ಲದೆ ಕುಬೇರನಿಂದ ಕಳುಹಲ್ಪಟ್ಟ ಇಪ್ಪತ್ತುಸಾವಿರಮಂದಿ ಅಪ್ಸರಸ್ತ್ರೀಯರೂ, ಸುವರ್ಣಾಭರಣಗಳಿಂದಲೂ, ಮಣಿಮಯಾ ಭರಣಗಳಿಂದಲೂ, ಪ್ರವಾಳಾಭರಣಗಳಿಂದಲೂ ಅಲಂಕೃತರಾಗಿ ಬಂದರು. ಲೋಕದಲ್ಲಿರುವ

ಆಗು ರ್ವಿಂಶತಿಸಾಹಸ್ರಾಃ ಕುಬೇರ ಪ್ರಹಿತಾ ಸ್ಸ್ತ್ರಿಯಃ ॥ ೪೪ ॥ ಯಾಭಿ ರ್ಗೃಹೀತಃ ಪುರುಷ ಸ್ಸೋನ್ಮಾದ ಇವಲಕ್ಷ್ಯತೇ ॥ ಆಗು ರ್ವಿಂಶತಿಸಾಹಸ್ರಾ ನಂದನಾ ದಪ್ಸರೋಗಣಾಃ ॥ ೪೫ ॥ ನಾರದ ಸ್ತುಂಬುರು ರ್ಗೋಪಃ ಪ್ರವರಾ ಸ್ಸೂರ್ಯವರ್ಚಸಃ ॥ ಏತೇ ಗಂಧರ್ವರಾಜಾನೋ ಭರತಸ್ಯಾಽಗ್ರತೋ ಜಗುಃ ॥ ೪೬ ॥ ಅಲಂಬುಸಾ ಮಿಶ್ರಕೇಶೀ ಪುಂಡರೀಕಾಥ ವಾಮನಾ ॥ ಉಪಾನೃತ್ಯಂಸ್ತು ಭರತಂ ಭರದ್ವಾಜಸ್ಯ ಶಾಸನಾತ್ ॥ ೪೭ ॥ ಯಾನಿ ಮಾಲ್ಯಾನಿ ದೇವೇಷು ಯಾನಿ ಚೈತ್ರ ರಥೇ ವನೇ ॥ ಪ್ರಯಾಗೇ ತಾನ್ಯದೃಶ್ಯಂತ ಭರದ್ವಾ

ಸ್ತ್ರೀಯರಿಂದ, ಗೃಹೀತಃ-ಗ್ರಹಿಸಲ್ಪಟ್ಟ, ಪುರುಷಃ ಪುರುಷನು, ಸೋನ್ಮಾದಇವ-ಹುಚ್ಚನಂತೆ, ಲಕ್ಷ್ಯತೇ-ಕಾಣಲ್ಪಡುತ್ತಾನೋ, (ಅಂತಹ) ವಿಂಶತಿಸಾಹಸ್ರಾಃ - ಇಪ್ಪತ್ತುಸಾವಿರ ಸಂಖ್ಯೆಯುಳ್ಳ, ಅಪ್ಸರೋಗಣಾಃ - ಅಪ್ಸರಸ್ತ್ರೀಯರ ತಂಡಗಳು, ನಂದನಾತ್ - ಇಂದ್ರನ ನಂದನವನದಿಂದ, ಆಗುಃ - ಬಂದರು. ॥ ೪೫ ॥ ನಾರದಃ - ನಾರದನೆಂಬ ಗಂಧರ್ವನು, ತುಂಬುರಃ - ತುಂಬುರುಋಷಿಯೂ, ಗೋಪಃ - ಗೋಪನು, ಏತೇ-ಯಿವ,ಪ್ರವರಾಃ - ಶ್ರೇಷ್ಠರಾದ, ಸೂರ್ಯವರ್ಚಸಃ - ಸೂರ್ಯನತೇಜಸ್ಸಿನಂತೆ ತೇಜಸ್ಸುಳ್ಳ, ಗಂಧರ್ವರಾಜಾನಃ - ಗಾಯಕಶ್ರೇಷ್ಠರು, ಭರತಸ್ಯ - ಭರತನ, ಅಗ್ರತಃ - ಮುಂಗಡೆ, ಜಗುಃ-ಗಾನಮಾಡಿದರು. ॥ ೪೬ ॥ ಅಲಂಬುಸಾ - ಅಲಂಬುಸಾ ಎಂಬುವಳು, ಮಿಶ್ರಕೇಶೀ - ಮಿಶ್ರಕೇಶೀ ಎಂಬುವಳು, ಪುಂಡರೀಕಾ - ಪುಂಡರೀಕಾ ಎಂಬುವಳು, ಅಥ - ಬಳಿಕ, ವಾಮನಾ - ವಾಮನಾ ಎಂಬುವಳು, ಭರದ್ವಾಜಸ್ಯ - ಭರದ್ವಾಜಋಷಿಯ, ಶಾಸನಾತ್ - ಆಜ್ಞಾವಚನದಿಂದ, ಭರತಂ - ಭರತನನ್ನುದ್ದೇಶಿಸಿ, ಉಪಾನೃತ್ಯನ್ - ನರ್ತನಮಾಡಿದರು. ॥ ೪೭ ॥ ದೇವೇಷು - ದೇವತೆಗಳಲ್ಲಿ, ಮಾಲ್ಯಾನಿ - ಪುಷ್ಪಮಾಲಿಕೆಗಳು, ಯಾನಿ - ಯಾವುವುಂಟೋ, ಚೈತ್ರರಥೇ - ಕುಬೇರಸಂಬಂಧವಾದ ಚೈತ್ರರಥವೆಂಬ, ವನೇ - ವನದಲ್ಲಿ, ಯಾನಿ - ಯಾವ ಪುಷ್ಪಗಳುಂಟೋ, ತಾನಿ-ಆ ಹುವ್ವುಗಳು, ಭರದ್ವಾಜಸ್ಯ-ಭರದ್ವಾಜಋಷಿಯ, ತೇಜಸಾ - ಬ್ರಹ್ಮತೇಜಃಪ್ರಭಾವದಿಂದ, ಪ್ರಯಾಗೇ - ಪ್ರಯಾಗಕ್ಷೇತ್ರದಲ್ಲಿ,

ಪುರುಷರೆಲ್ಲರನ್ನೂ, ನೋಡಿದ ಕೂಡಲೇ ದಿಗ್ಭ್ರಮೆ ಹಿಡಿದವರಂತೆ ಮಾಡುವ ಇಪ್ಪತ್ತುಸಾವಿರ ದೇವವೇಶ್ಯೆಯರು ದೇವೇಂದ್ರನ ನಂದನವನದಿಂದ ಹೊರಟುಬಂದರು. ॥ ೪೦-೪೫ ॥ ಸೂರ್ಯನತೇಜಸ್ಸಿನಂತಿರುವತೇಜಸ್ಸಿನಿಂದ ಪ್ರಕಾಶಿಸುತ್ತಿರುವ ನಾರದತುಂಬುರುಗೋಪರೂ, ಮತ್ತೆ ಇತರರಾದ ಗಂಧರ್ವರಾಜರೂ ಬಂದು, ಭರತನ ಮುಂಗಡೆ ಮನೋಹರವಾದ ಗಾಯನವನ್ನು ಮಾಡಿದರು. ಭರದ್ವಾಜಋಷಿಯ ಅಪ್ಪಣೆಯಿಂದಲೇ, ಅಲಂಬುಸಾ, ಮಿಶ್ರಕೇಶೀ, ಪುಂಡರೀಕಾ, ವಾಮನಾ ಎಂಬ ಅಪ್ಸರಾಂಗನೆಯರು ಆ ಭರತಕುಮಾರನ ಮುಂಗಡೆ ನಾಟ್ಯಗಟ್ಟಿದರು. ಆ ಮುನಿವರನಾಣತಿಯಂತೆಯೇ ದೇವತೆಗಳು ಧರಿಸುವ ಪೂಮಾಲಿಕೆಗಳೂ, ಚೈತ್ರರಥವನದಲ್ಲಿನ ಪುಷ್ಪಮಾಲಿಕೆಗಳೂ ಆ ಪ್ರಯಾಗಕ್ಷೇತ್ರದಲ್ಲಿ ಕಾಣಬಂದುವು. ಅಲ್ಲದೆ, ಆ ಸಮಯದಲ್ಲಿ ಮಹಾಮುನಿಯಾದ ಆ ಭರದ್ವಾಜನ ಆಣತಿಯಿಂದ ಬಿಲ್ವವೃಕ್ಷಗಳು ಮೃದಂಗವನ್ನು ಬಾರಿಸುವವುಗಳಾದುವು; ಕಲಿವೃಕ್ಷಗಳು ತಾಳಹಾಕುವುವಾದುವು. ಅಶ್ವತ್ಥವೃಕ್ಷಗಳು ನರ್ತನಮಂಗೈಯುತ್ತಿದ್ದುವು. ಇಷ್ಟೆಯಲ್ಲದೆ ಆ ಮುನಿಯಾಜ್ಞೆಯಿಂದ ಸರಳ

ಜಸ್ಯ ತೇಜಸಾ ॥ ೪೮ ॥ ಬಿಲ್ವಾ ಮಾರ್ದಂಗಿಕಾ ಆಸನ್ ಶಮ್ಯಾ ಗ್ರಾಹಾ ವಿಭೀತಕಾಃ ॥ ಅಶ್ವತ್ಥಾ ನರ್ತಕಾಶ್ಚಾಸನ್ ಭರದ್ವಾಜಸ್ಯ ಶಾಸನಾತ್ ॥ ೪೯ ॥ ತತಸ್ಸರಳತಾಲಾಶ್ಚ ತಿಲಕಾನಕ್ತ ಮಾಲಕಾಃ ॥ ಪ್ರಹೃಷ್ಟಾ ಸ್ತತ್ರ ಸಂಪೇತುಃ ಕುಬ್ಜಾ ಭೂತ್ವಾಥ ವಾಮನಾಃ ॥ ೫೦ ॥ ಶಿಂಶುಪಾಽಮಲಕೀ ಜಂಬ್ವೋ ಯಾಶ್ಚಾನ್ಯಾಃ ಕಾನನೇಷು ತಾಃ ॥ ಮಾಲತೀ ಮಲ್ಲಿಕಾ ಜಾತಿ ರ್ಯಾಶ್ಚಾನ್ಯಾಃ ಕಾನನೇ ಲತಾಃ ॥ ೫೧ ॥ ಪ್ರಮದಾ ವಿಗ್ರಹಂ ಕೃತ್ವಾ ಭರದ್ವಾಜಾಶ್ರಮೇ

ಅದೃಶ್ಯಂತ - ಕಾಣಲ್ಪಟ್ಟುವು. ॥ ೪೮ ॥ ಬಿಲ್ವಾಃ - ಬಿಲ್ವವೃಕ್ಷಗಳು, ಮಾರ್ದಂಗಿಕಾಃ - ಮದ್ದಲೆಯನ್ನು ಬಾರಿಸುವವರು, ಆಸನ್ - ಆದರು, ವಿಭೀತಕಾಃ - ಗೇರುಗಿಡಗಳು, ಶಮ್ಯಾಗ್ರಾಹಾಃ - ತಾಳಹೊಡಿಯುವುವಾದುವು, ಆಸನ್ - ಆದವು, ಭರದ್ವಾಜಸ್ಯ - ಭರದ್ವಾಜಋಷಿಯ, ಶಾಸನಾತ್ - ಆಜ್ಞಾವಚನದಿಂದ, ಅಶ್ವತ್ಥಾಃ - ಅಶ್ವತ್ಥಗಿಡಗಳು, ನರ್ತಕಾಃ - ನರ್ತನಮಾಡುವವರು, ಆಸನ್ - ಆದರು. ॥ ೪೯ ॥ ತತಃ - ಬಳಿಕ, ಸರಳತಾಳಾಶ್ಚ - ದೇವದಾರು ವೃಕ್ಷಗಳೂ ತಾಳೇಗಿಡಗಳೂ, ತಿಲಕಾಃ-ತಿಲಕಗಿಡಗಳೂ, ನಕ್ತಮಾಲಾಶ್ಚ - ಹೊಂಗೇಗಿಡಗಳೂ, ಪ್ರಹೃಷ್ಟಾಃ - ಸಂತೋಷಗೊಂಡವುಗಳಾಗಿ, ತತ್ರ-ಆ ಭರತನ ಮನೆಯಲ್ಲಿ, ಕುಬ್ಜಾಃ - ಕುಬ್ಜಾಯೆಂಬ ಅಪ್ಸರಸ್ತ್ರೀಯರು, ವಾಮನಾಃ - ವಾಮನಾಯೆಂಬ ಅಪ್ಸರಸ್ತ್ರೀಯರು, ಭೂತ್ವಾ - ಆಗಿ, ಸಂಪೇತುಃ - ಬಂದರು, (ಗೋ) ಹ್ರಸ್ವಾಕಾರ ಉಳ್ಳವುಗಳಾಗಿ ಗಿಡ್ಡಾದವುಗಳಾಗಿ, ಶಂಶುಪಾಮಲಕೀಜಂಬ್ವಃ - ಶಿಂಶುಪಾವೃಕ್ಷವು ನೆಲ್ಲೀಗಿಡವೂ, ನೇರಿಳೇ ಗಿಡವೂ, ಅನ್ಯಾಃ - ಮತ್ತೆ ಕೆಲವಾದ, ಯಾಃ - ಯಾವ ಗಿಡಗಳು, ಕಾನನೇಷು - ಅರಣ್ಯಗಳಲ್ಲಿ, ಸಂತಿ - ಇದ್ದವೋ, ತಾಃ - ಅವುಗಳೂ, ಮಾಲತೀ - ಇರುವಂತಿಗೆ ಹುವ್ವಿನ ಗಿಡ, ಮಲ್ಲಿಕಾ - ಗುಂಡುಮಲ್ಲಿಗೆ ಗಿಡಗಳು, ಜಾತಿಃ - ಜಾಜೀಗಿಡಗಳು, ಅನ್ಯಾಃ - ಮತ್ತೆ ಕೆಲವಾದ, ಲತಾಃ - ಬಳ್ಳಿಗಳು, ಕಾನನೇ - ಅರಣ್ಯದಲ್ಲಿ, ಯಾಃ - ಯಾವುಗಳೋ, ತಾಃ - ಆ ಬಳ್ಳಿಗಳು, ಪ್ರಮದಾವಿಗ್ರಹಂ - ಸ್ತ್ರೀಯರ ಶರೀರವನ್ನು, ಕೃತ್ವಾ - ಮಾಡಿಕೊಂಡು, ಭರದ್ವಾಜಾಶ್ರಮೇ - ಭರದ್ವಾಜಋಷಿಯ ಆಶ್ರಮದಲ್ಲಿ, ಸುರಾಪಾಃ - ಮದ್ಯಪಾಯಿಗಳು, ಸುರಾಃ - ಮದ್ಯಗಳನ್ನು, ಪಿಬತ -

---

ವೃಕ್ಷಗಳು, ತಿಲಕವೃಕ್ಷಗಳು, ಕ್ಷುರಕವೃಕ್ಷಗಳು, ತಮಾಲವೃಕ್ಷಗಳೂ ಕುಬ್ಜವಾಮನಾಕಾರಗಳನ್ನು ತಾಳಿ ಪರಿಹಾಸವನ್ನು ಮಾಡುವವರಂತೆ ಸಂಚರಿಸುತ್ತಿದ್ದುವು. ಇದೂ ಅಲ್ಲದೆ ಆಯಾಶ್ರಮದಲ್ಲಿನ ಶಿಂಶಿಪಾವೃಕ್ಷಗಳೂ, ನೆಲ್ಲೀಗಿಡಗಳೂ, ನೇರಿಳೇಗಿಡಗಳೂ, ಮಲ್ಲಿಕಾ, ಮಾಲತೀ ಮೊದಲಾದ ಲತೆಗಳೂ, ಸುಂದರಾಂಗಿಯರ ಆಕಾರವನ್ನು ತಾಳಿ ವಿಚಿತ್ರವಾದ ಮಾತುಗಳನ್ನಾಡುತ್ತ ಭರತನ ಸೇನೆಯವರನ್ನು ಕುರಿತು, "ಎಲೈ ಮದ್ಯಪಾನಾಸಕ್ತರಾದ ಸೈನಿಕರೆ! ಮನೋಹರಗಳಾದ ಮದ್ಯಗಳನ್ನು ಪಾನಮಾಡಿರಿ; ಭೋಜನದಲ್ಲಿ ಅಭಿಲಾಷೆಯುಳ್ಳ ಓ ಸೈನಿಕರೆ! ಈ ಪರಮಾನ್ನವನ್ನು ಭುಜಿಸಿರಿ; ಅಲ್ಲದೆ ಬಹು ಪರಿಶುದ್ಧವಾದ ಈ ಮಾಂಸಗಳೆಲ್ಲವನ್ನೂ ಭಕ್ಷಿಸಿರಿ." ಎಂದು ಹೇಳಿದುವು. ॥ ೪೬-೫೦ ॥ ಇಷ್ಟುಮಾತ್ರವಲ್ಲದೆ ಆ ಭರದ್ವಾಜಮಹಾಮುನಿಯ ಆಜ್ಞೆಯಿಂದ ಒಬ್ಬೊಬ್ಬ ಪುರುಷನಿಗೆ ಏಳೆಂಟು ಸ್ತ್ರೀಯರಂತೆ ಸುತ್ತಿಕೊಂಡು ಆತನನ್ನುಪಚರಿಸಿ ನದೀತೀರಗಳಲ್ಲಿ ಸ್ನಾನಮಾಡಿಸಿದರು. ಇಷ್ಟೆಯಲ್ಲದೆ

ವರ್ದ ॥ ಸುರಾ ಸ್ಸುರಾಪಾಃ ಪಿಬತ! ಪಾಯಸಂಚ ಬುಭುಕ್ಷಿತಾಃ ॥ ೫೨ ॥
ಮಾಂಸಾನಿಚ ಸುಮೇಧ್ಯಾನಿ ಭಕ್ಷ್ಯಂತಾಂ ಯಾವದಿಚ್ಛತ ! ॥ ಉಚ್ಛಾದ್ಯ ಸ್ನಾಪ
ಯಂತಿಸ್ಮ ನದೀತೀರೇಷು ವಲ್ಗುಷು ॥ ೫೩ ॥ ಅಪ್ಯೇಕಮೇಕಂ ಪುರುಷಂ
ಪ್ರಮದಾ ಸ್ಸಪ್ತ ಚಾಷ್ಟಚ ॥ ಸಂವಾಹಂತ್ಯ ಸ್ಸಮಾಪೇತು ರ್ನಾರ್ಯೋ
ರುಚಿರಲೋಚನಾಃ ॥ ೫೪ ॥ ಪರಿಮೃಜ್ಯ ತಥಾಽನ್ಯೋನ್ಯಂ ಪಾಯಯಂತಿ
ವರಾಂಗನಾಃ ॥ ಹಯಾರ್ನ್ ಗಜಾರ್ನ್ ಖರಾನುಷ್ಟ್ರಾಂ ಸ್ತಥೈವ ಸುರಭೇ ಸ್ಸುತಾರ್ನ್
॥ ೫೫ ॥ ಅಭೋಜಯರ್ನ್ ವಾಹನಪಾಸ್ತೇಷಾಂ ಭೋಜ್ಯಂ ಯಥಾವಿಧಿ ॥

ಪಾನಮಾಡಿರಿ, ಬುಭುಕ್ಷಿತಾಃ - ಹಸಿವುಳ್ಳ ನೀವು, ಪಾಯಸಂಚ - ಪಾಯಸವನ್ನು, ಪಿಬತ - ಪಾನ ಮಾಡಿರಿ, ಸುಮೇಧ್ಯಾನಿ - ಬಹಳ ಪರಿಶುದ್ಧಗಳಾದ, ಮಾಂಸಾನಿಚ - ಮಾಂಸಗಳನ್ನು, ಯಾವತ್ - ಎಷ್ಟು, ಇಚ್ಛತ - ಇಚ್ಛಿಸುತ್ತೀರೊ, ತಾವತ್ - ಅಷ್ಟು, ಭಕ್ಷ್ಯಂತಾಂ - ಭುಜಿಸಿರಿ, ಇತಿ-ಇಂತೆಂದು, ಆವರ್ದ - ಹೇಳಿದವು. ॥ ೫೨ ॥ ವಲ್ಗುಷು - ಮನೋಹರಗಳಾದ, ನದೀತೀರೇಷು - ನದೀತೀರಗಳಲ್ಲಿ, ಏಕಮೇಕಂ - ಒಬ್ಬೊಬ್ಬ, ಪುರುಷಂ - ಪುರುಷನನ್ನು, ಸಪ್ತ - ಏಳುಸಂಖ್ಯೆಯುಳ್ಳ, ಅಷ್ಟಚ - ಎಂಟು ಸಂಖ್ಯೆಯುಳ್ಳ, ಪ್ರಮದಾಃ - ಸ್ತ್ರೀಯರು, ಉಚ್ಛಾದ್ಯ - (ಗೋ + ಮ) ಶೀಗೇಕಾಯಿಮೊದಲಾದ ದ್ರವ್ಯ ಗಳಿಂದ ಉದ್ವರ್ತನವನ್ನುಮಾಡಿ, ಸ್ನಾಪಯಂತಿಸ್ಮ - ಸ್ನಾನಮಾಡಿಸಿದರಷ್ಟೆ. ॥ ೫೩ ॥ ರುಚಿರಲೋಚ ನಾಃ - ಮನೋಹರವಾದ ನೇತ್ರಗಳುಳ್ಳ, ನಾರ್ಯಃ - ಸ್ತ್ರೀಯರು, ಸಂವಾಹಯಂತ್ಯಃ - ಕಾಲುಗಳು ಹಿಸುಕುವವರಾಗಿ, ಸಮಾಪೇತುಃ - ಬಂದರು, ತಥಾ - ಹಾಗೆಯೇ, ಅನ್ಯೋನ್ಯಂ-ಪರಸ್ಪರವಾಗಿ, ಪರಿ ಮೃಜ್ಯ - ವಸ್ತ್ರಾದಿಗಳಿಂದಒರೆಸಿ, ವರಾಂಗನಾಃ - ಶ್ರೇಷ್ಠರಾದ ಹೆಂಗಳು, ಪಾಯಯಂತಿಸ್ಮ - ಪಾನ ಮಾಡಿಸಿದರಷ್ಟೆ. ॥ ೫೪ ॥ ವಾಹನಪಾಃ - ವಾಹನಗಳ ಸಂರಕ್ಷಕರು, ಹಯಾರ್ನ್ - ಕುದುರೆಗಳನ್ನು, ಗಜಾರ್ನ್ - ಆನೆಗಳನ್ನು, ಖರಾರ್ನ್ - ಹೇಸರಕತ್ತೆಗಳನ್ನು, ಉಷ್ಟ್ರಾರ್ನ್ - ಒಂಟೆಗಳನ್ನು, ತಥೈವ-ಹಾಗೆಯೇ, ಸುರಭೇಃ - ಕಾಮಧೇನುವಿಗೆ, ಸುತಾರ್ನ್ - ಮಕ್ಕಳಾದ ಎತ್ತುಗಳನ್ನು, ಅಭೋಜಯರ್ನ್ - ಭೋಜನ ಮಾಡಿಸಿದರು, ಇಕ್ಷ್ವಾಕುವರಯೋಧಾನಾಂ - ಇಕ್ಷ್ವಾಕುವಂಶೋತ್ಪನ್ನರೊಳಗೆ ಶ್ರೇಷ್ಠನಾದ ಭರತನ

ಮನೋಹರವಾದ ನೇತ್ರಗಳುಳ್ಳವರೂ, ಸರ್ವಾಂಗಸುಂದರಿಯರೂ ಆದ ಆ ಸ್ತ್ರೀಯರು ಸ್ನಾನಮಾಡಿದ ಆ ಪುರುಷರ ಒದ್ದೆಯಾದವಸ್ತ್ರವನ್ನೊರಿಸಿ ಒಬ್ಬರಿಗೊಬ್ಬರು ಸುರಾಪಾನವನ್ನು ಮಾಡಿಸಿದರು. ಆ ಬಳಿಕ ಭರದ್ವಾಜಮುನೀಶ್ವರನಆಜ್ಞೆಯಂತೆ, ಆ ಭರತಕುಮಾರನ ಸೇನೆಯ ವಾಹನಗಳನ್ನು ವಿಚಾರಿಸಿಕೊಳ್ಳುವವರು, ಅಶ್ವಗಳು, ಒಂಟೆಗಳು, ಗೋವುಗಳು, ಎತ್ತು ಗಳು ಇವೇಮೊದಲಾದುವುಗಳೆಲ್ಲಕ್ಕೂ ಬೇಕಾದ ಆಹಾರವನ್ನುಕೊಟ್ಟು ಶಾಸ್ತ್ರೋಕ್ತಪ್ರಕಾ ರವಾಗಿ ನಡೆದುಕೊಂಡರು. ಆ ಬಳಿಕ ಮಹಾಬಲಶಾಲಿಗಳಾದ ವಾಹನಪಾಲಕರು, ರಘು ಕುಲದಲ್ಲಿ ಹುಟ್ಟಿದವರ ವಾಹನಗಳೆಲ್ಲಕ್ಕೂ, ಕಬ್ಬಿನಜಳವಿಗಳನ್ನೂ, ಜೇನುತುಪ್ಪದಿಂದ ಮಿಶ್ರಿತ ವಾದ ಅರಳುಗಳನ್ನೂ ತಿನ್ನುವಂತೆಮಾಡಿದರು. ಆ ಸೈನ್ಯದಲ್ಲಿದ್ದವರೆಲ್ಲರೂ, ಮದ್ಯಪಾನದಿಂದ ಮದಿಸಿದವರೂ, ಸಂತೋಷಭರಿತರಾದವರೂ ಆದುದರಿಂದ ಮೈಮರೆತಿದ್ದರು. ಆದುದರಿಂ ದಲೇ ಕುದುರೆಗಳನ್ನು ರಕ್ಷಿಸುವವರು ತಮ್ಮ ಕುದುರೆಗಳ ಸಂಗತಿಯನ್ನೇ ಮರೆತುಬಿಟ್ಟಿದ್ದರು.

ಇಕ್ಷೂಂಶ್ಚ ಮಧು ಲಾಜಾಂಶ್ಚ ಭೋಜಯಂತಿಸ್ಮ ವಾಹನಾನ್ ||೫೬|| ಇಕ್ಷ್ವಾಕು ವರಯೋಧಾನಾಂ ಚೋದಯಂತೋ ಮಹಾಬಲಾಃ || ನಾಶ್ವಬಂಧೋಽಶ್ವ ಮಾಜಾನಾ ನ್ನಗಜಂ ಕುಂಜರಗ್ರಹಃ || ೫೭ || ಮತ್ತಪ್ರಮತ್ತಮುದಿತಾ ಚಮೂ ಸ್ಸಾತತ್ರ ಸಂಬಭೌ || ತರ್ಪಿತಾ ಸ್ಸರ್ವಕಾಮೈ ಸ್ತೇ ರಕ್ತಚಂದನ ರೂಷಿತಾಃ||೫೮||ಅಪ್ಸರೋಗಣ ಸಂಯುಕ್ತಾ ಸ್ಸೈನ್ಯಾ ವಾಚ ಮುದೈರಯನ್ ||
ನೈವಾಯೋಧ್ಯಾಂ ಗಮಿಷ್ಯಾಮೋ ನಗಮಿಷ್ಯಾಮ ದಂಡಕಾನ್ || ೫೯ || ಕುಶಲಂ

ಭಟರ, ವಾಹನಾನ್ - ಗಜವೇಮೊದಲಾದ ವಾಹನಗಳನ್ನು, ಚೋದಯಂತಃ - ಪ್ರೇರೇಪಣೆಮಾಡುವವ ರಾಗಿ, ಇಕ್ಷೂನ್ - ಕಬ್ಬುಗಳನ್ನು, ಮಧು - ಜೇನುತುಪ್ಪಗಳನ್ನು, ಲಾಜಾಂಶ್ಚ - ಅರಳುಗಳನ್ನು, ಭೋಜಯಂತಿಸ್ಮ - ಭೋಜನಮಾಡಿದರಷ್ಟೆ. || ೫೬ || ಅಶ್ವಬಂಧಃ - ಅಶ್ವವನ್ನು ಕಟ್ಟಹಾಕ ತಕ್ಕವನು, ಅಶ್ವಂನಾಜಾನಾತ್ - ಕುದುರೆಯನ್ನು ಅರಿಯದೇಹೋದನು, ಕುಂಜರಗ್ರಹಃ - ಆನೆಯ ಮಾವಟಿಗನು, ಗಜಂ - ಆನೆಯನ್ನು, ನಾಜಾನಾತ್ - ತಿಳಿಯದೇಹೋದನು, ಸಾಚಮೂಃ - ಆಸೈನ್ಯವು, ಮತ್ತಪ್ರಮುದಿತಾ-ಮದಕರವಾದ ದ್ರವ್ಯದಿಂದ ಮದವೇರಿದುದಾಗಿಯೂ, ಪ್ರಮತ್ತಾ-ಸುರಾ ಪಾನಾದಿಗಳಿಂದ ಜ್ಞಾನಹೀನವಾಗಿಯೂ, ಮುದಿತಾ - ಸ್ರಕ್ಚಂದನವನಿತಾದಿ ಭೋಗದಿಂದ ಸಂತೋಷ ಗೊಂಡುದಾಗಿಯೂ, ತತ್ರ - ಆ ಭರದ್ವಾಜಾಶ್ರಮದಲ್ಲಿ, ಸಂಬಭೌ - ಹೊಳೆಯುತ್ತಿದ್ದಿತು || ೫೭ || ಸರ್ವಕಾಮೈಃ - ಸಮಸ್ತ ಕೋರಿಕೆಗಳಿಂದಲೂ, ತರ್ಪಿತಾಃ - ತೃಪ್ತಿಹೊಂದಿಸಲ್ಪಟ್ಟ, ತೇಸೈನ್ಯಾಃ - ಆ ಭರತನ ಸೇನಾಜನರು, ರಕ್ತಚಂದನರೂಷಿತಾಃ - ಕೆಂಪುಗಂಧದಿಂದ ಲೇಪನಮಾಡಲ್ಪಟ್ಟವರಾಗಿ, ಅಪ್ಸ ರೋಗಣಸಂಯುಕ್ತಾಃ - ಅಪ್ಸರಸ್ತ್ರೀಯರ ತಂಡದಿಂದ ಸಂಯೋಗವನ್ನುಹೊಂದಿದವರಾಗಿ, ವಾಚಂ - ಮಾತನ್ನು, ಉದೈರಯನ್ - ಹೇಳಿದರು. || ೫೮ || ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ನೈವಗಮಿಷ್ಯಾಮ - ಹೋಗಲಾರೆವು, ದಂಡಕಾನ್ - ದಂಡಕಾರಣ್ಯವನ್ನು ಕುರಿತು, ನೈವಗಮಿಷ್ಯಾಮ - ಹೋಗಲಾರೆವು, ಭರತಸ್ಯ - ಭರತನಿಗೆ, ಕುಶಲಂ - ಕ್ಷೇಮವು, ಅಸ್ತು - ಆಗಲಿ, ರಾಮಸ್ಯ-ಶ್ರೀರಾಮ ನಿಗೆ, ತಥಾ - ಹಾಗೆಯೇ, ಸುಖಂ - ಸುಖವು, ಅಸ್ತು - ಆಗಲಿ, ಇತಿ - ಇಂತೆಂದು, ಪಾದಾತಯೋ ಧಾಃ - ಕಾಲುಬಲಗಳು, ಭಟರೂ, ಹಸ್ತ್ಯಶ್ವಾರೋಹಬಂಧಕಾಃ - ಆನೆ ಕುದುರೆಗಳನ್ನು ಏರುವಂತಹರೂ

ಮಾವಟಿಗರು ಸ್ರಕ್ಚಂದನಾದಿ ಭೋಗಗಳಿಂದ ಮೈಮರೆತು ತಾವು ಅವಶ್ಯಕವಾಗಿಮಾಡಬೇ ಕಾದ ಕಾರ್ಯಗಳನ್ನು ಮರೆತುಬಿಟ್ಟರು. ಅಲ್ಲದೆ ಆ ಭರತನ ಸೇನೆಯಲ್ಲಿದ್ದವರೆಲ್ಲರೂ ವಿಷ ಯೋಪಭೋಗಗಳಿಂದ ಮೈಮರೆತವರಾಗಿ ಸಕಲವಿಧಗಳಾದ ಅಭಿಲಾಷೆಗಳನ್ನೂ ಈಡೇರಿಸಿ ಕೊಂಡರು. ಇಷ್ಟೆಯಲ್ಲದೆ ಶರೀರವನ್ನು ರಕ್ತಚಂದನದಿಂದ ಲೇಪಿಸಿಕೊಂಡು ದೇವವೇಶ್ಯೆ ಯರಾದ ಅಪ್ಸರೆಯರೊಡಗೂಡಿ ಇಚ್ಛಾನುಸಾರವಾಗಿ ಸಂಭಾಷಿಸುತ್ತಿದ್ದರು. ಹೀಗೆ ಸಂಭಾ ಷಿಸುತ್ತಿರುವಾಗ ಮಹಾಸಂತೋಷಭರಿತರಾದ ಅವರೆಲ್ಲರೂ ಹೀಗೆಂದರು. || ೫೧-೫೮ ||
“ನಾವು ಅಯೋಧ್ಯಾಪಟ್ಟಣಕ್ಕೆ ಹೋಗುವುದಿಲ್ಲ. ಭರತನಿಗೆ ಮಂಗಳವಾಗಲಿ ! ಶ್ರೀರಾಮ ಮೂರ್ತಿಗೆ ಯಾವಾಗಲೂ ಸುಖವುಂಟಾಗಲಿ.” ಈರೀತಿಯಾಗಿ ಆ ಭರತನ ಸೈನ್ಯದಲ್ಲಿನ ಪದಾತಿಗಳೂ, ಕುದುರೆಯವರೂ, ಮಾವಟಿಗರೂ ಭರದ್ವಾಜಮುನಿವರನಿಂದುಂಟಾದ ಸೌಖ್ಯ

ಭರತಸ್ಯಾಸ್ತು ರಾಮಸ್ಯಾಸ್ತು ತಥಾ ಸುಖಂ || ಇತಿ ಪಾದಾತ ಯೋಧಾಶ್ಚ
ಹಸ್ತ್ಯಶ್ವಾರೋಹ ಬಂಧಕಾಃ ||೬೦|| ಅನಾಥಾ ಸ್ತಂವಿಧಿಂ ಲಬ್ಧ್ವಾ ವಾಚಮೇತಾ
ಮುದೈರಯನ್ || ಸಂಪ್ರಹೃಷ್ಟಾನಿ ನೇದುಸ್ತೇ ನರಾಸ್ತತ್ರ ಸಹಸ್ರಶಃ || ೬೧ ||
ಭರತಸ್ಯಾನ್ವಯಾತಾರ ಸ್ಸ್ವರ್ಗೋಽಯಮಿತಿ ಚಾಬ್ರುವನ್ || ನೃತ್ಯಂತಿಸ್ಮ ಹಸಂ
ತಿಸ್ಮ ಗಾಯಂತಿಸ್ಮಚ ಸೈನಿಕಾಃ || ೬೨ || ಸಮಂತಾ ತ್ಪರಿಧಾವಂತಿ ಮಾಲ್ಯೋ
ಪೇತಾ ಸ್ಸಹಸ್ರಶಃ || ತತೋ ಭುಕ್ತವತಾಂ ತೇಷಾಂ ತದನ್ನ ಮಮೃತೋ
ಪಮಂ || ೬೩ || ದಿವ್ಯಾನುದ್ವೀಕ್ಷ್ಯ ಭಕ್ಷ್ಯಾಂಸ್ತಾ ನಭವ ದ್ಭಕ್ಷಣೇ ಮತಿಃ ||

ಅವುಗಳನ್ನು ಕಟ್ಟಿಹಾಕುವ ಚಾಕರಿದಾರರೂ, ಅನಾಥಾಃ - ಧಣಿಯಕೈಕೆಳಗೆ ತಿಂಡಿಗಿಲ್ಲದೆ ಜೀವನಾರ್ಥ ವಾಗಿ ಬಂದಿರುವವರೂ, ತಂವಿಧಿಂ - ಆ ಆತಿಥ್ಯವಿಧಾನವನ್ನು, ಲಬ್ಧ್ವಾ - ಹೊಂದಿ, ಏತಾಂವಾಚಂ - ಈ ವಾಕ್ಯವನ್ನು, ಉದೈರಯನ್ - ಹೇಳಿದರು. || ೬೦ || ನರಾಃ - ಮನುಷ್ಯರು, ತತ್ರ - ಆ ಸೈನ್ಯದಲ್ಲಿ, ಸಂಪ್ರಹೃಷ್ಟಾಃ - ಸಂತೋಷಗೊಂಡವರಾಗಿ, ವಿನೇದುಃ - ಘಟ್ಟಿಯಾಗಿ ಕೂಗಿದರು, ಭರತಸ್ಯ-ಭರತನ, ಸಹಸ್ರಶಃ - ಸಾವಿರಾರು ಸಂಖ್ಯೆಯುಳ್ಳ, ಅನುಯಾತಾರಃ - ಸೇವಕ ಜನರು, ಅಯಂ - ಇದು, ಸ್ವರ್ಗ ಇತಿ - ಸ್ವರ್ಗವೆಂದು, ಅಬ್ರುವಂಶ್ಚ - ಹೇಳಲೂ ಹೇಳಿದರು. || ೬೧ || ಸೈನಿಕಾಃ - ಸೇನಾಜನರು, ಸಮಂತಾತ್ - ಎಲ್ಲೆಡೆಯಲ್ಲಿಯೂ, ಸಹಸ್ರಶಃ - ಅನೇಕ ಜಗೆಯಾಗಿ, ಮಾಲ್ಯೋಪೇತಾಃ - ಪುಷ್ಪಗಳಿಂದ ಕೂಡಿದವರಾಗಿ, ನೃತ್ಯಂತಿಸ್ಮ - ನರ್ತನಮಾಡಿದರಷ್ಟೆ, ಹಸಂತಿಸ್ಮ - ನಕ್ಕರಷ್ಟೆ, ಗಾಯಂತಿಸ್ಮ-ಹಾಡಿದ ರಷ್ಟೆ, ಪರಿಧಾವಂತಿ - ಓಡಿದರು. || ೬೨ || ತತಃ - ಬಳಿಕ, ಅಮೃತೋಪಮಂ - ಅಮೃತಕ್ಕೆ ಸಮಾನ ವಾದ, ತದನ್ನಂ - ಆ ಅನ್ನವನ್ನು, ಭುಕ್ತವತಾಂ - ಭೋಜನಮಾಡಿದ, ತೇಷಾಂ - ಆ ಸೇನಾಜನ ರಿಗೆ, ದಿವ್ಯಾನ್ - ಮನೋಹರವಾದ, ತಾನ್‌ಭಕ್ಷ್ಯಾನ್ - ಆ ಭಕ್ಷಣಯೋಗ್ಯವಾದ ಪದಾರ್ಥಗಳನ್ನು ಉದ್ವೀಕ್ಷ್ಯ - ಕಂಡು, ಭಕ್ಷಣೇ - ಭಕ್ಷಿಸುವದರಲ್ಲಿ, ಮತಿಃ - ಬುದ್ಧಿಯು, ಅಭವತ್ - ಆಯಿತು. || ೬೩ || ಬಲಸ್ಥಾಃ - ಸೈನ್ಯದಲ್ಲಿರುವ, ಪ್ರೇಷ್ಯಾಃ - ಪರಿಚಾರಕರೂ, ಚೇಟ್ಯಶ್ಚ - ನೀರುತರುವ ಹೆಂಗ ಸರು, ಸಹಸ್ರಶಃ - ಅನೇಕಸಂಖ್ಯಾಕರಾದ, ವಧ್ವಶ್ಚ - ಹೆಂಗಸರೂ, ಸರ್ವೇ - ಸಮಸ್ತರಾದ, ತೇ - ಆ

ವನ್ನುಹೊಂದಿ ಮಹಾಸ್ವಾತಂತ್ರ್ಯವುಂಟಾದವರಾಗಿ, “ ಇದು ಸ್ವರ್ಗಲೋಕವೇ ಹೊರ್ತು ಮನುಷ್ಯಲೋಕವಲ್ಲವೇ ಅಲ್ಲ ” ಎಂದು ಹೇಳಿದರು. ಅಲ್ಲದೆ ಆ ಸೇನೆಯಲ್ಲಿ ಕೆಲವರು ಮಹಾ ಪರಿಮಳದಿಂದ ಘಮಘಮಿಸುತ್ತಿರುವ ಪೂಮಾಲಿಕೆಗಳನ್ನು ಧರಿಸಿಕೊಂಡು, ಸಾವಿರಾರು ಮಂದಿಯೊಡಗೂಡಿ ನರ್ತಿಸಿದರು. ಕೆಲವರು ಕಿಲಕಿಲನೆ ನಗುತ್ತಿದ್ದರು. ಇನ್ನು ಕೆಲವರು ಇಂಪಾದಗಾನವನ್ನುಮಾಡಿದರು; ಇನ್ನೂ ಕೆಲವರು ಸ್ವೇಚ್ಛೆಯಾಗಿ ಆ ಕಡೆಯಿಂದೀಕಡೆಗೆ ತಿರುಗಾಡುತ್ತಿದ್ದರು. ಆಮೇಲೆಯಾಸೈನಿಕರೆಲ್ಲರೂ ಅಮೃತಕ್ಕೆಸಮಾನವಾದ ಅನ್ನವನು ಭುಜಿಸಿದರು. ಆ ಮೇಲೆ ಮನೋಹರವಾದ ಭಕ್ಷ್ಯಗಳನ್ನು ನೋಡಿ ಅನುಭವಿಸಬೇಕೆಂಬ ಬಯಕೆಯುಳ್ಳವರಾದರು. ಅಲ್ಲದೆ ಪರಿಚಾರಕರೂ, ದಾಸೀಜನರೂ, ಸ್ತ್ರೀಯರೂ ಇವರೆಲ್ಲರೂ ಸೈನ್ಯದಲ್ಲಿದ್ದ ಮತ್ತೆ ಕೆಲವರೂ, ನೂತನವಾದ ವಸ್ತ್ರಾದ್ಯಾಭರಣಗಳುಳ್ಳವರಾಗಿ ಬಹಳ ವಾದ ಗರ್ವವನ್ನುಪಟ್ಟರು, ಮಾತ್ರವಲ್ಲದೆ ಆ ಸೇನೆಯಲ್ಲಿನ ಆನೆಗಳೂ, ಕುದುರೆಗಳು ಹೇಸರ

ಪ್ರೇಷ್ಯಾ ಶ್ಚೇಟ್ಯಶ್ಚ ವಧ್ವಶ್ಚ ಬಲಸ್ಥಾಶ್ಚ ಸಹಸ್ರಶಃ ॥ ೬೪ ॥ ಬಭೂವುಸ್ತೇ ಭೃಶಂ ದೃಪ್ತಾ ಸ್ಸರ್ವೇ ಚಾಹತ ವಾಸಸಃ ॥ ಕುಂಜರಾಶ್ಚ ಖರೋಷ್ಟ್ರಾಂಶ್ಚ ಗೋಶ್ವಾಶ್ಚ ಮೃಗಪಕ್ಷಿಣಃ ॥ ೬೫ ॥ ಬಭೂವು ಸ್ಸುಭೃತಾ ಸ್ತತ್ರ ನಾನ್ಯೋ ಹ್ಯನ್ಯ ಮಕಲ್ಪಯತ್ ॥ ನಾಶುಕ್ಲ ವಾಸಾ ಸ್ತತ್ರಾಸೀತ್ ಕ್ಷುಧಿತೋ ಮಲಿನೋಪಿವಾ ॥ ೬೬ ॥ ರಜಸಾ ಧ್ವಸ್ತ ಕೇಶೋವಾ ನರಃ ಕಶ್ಚಿ ದದೃಶ್ಯತ ॥ ಆಜೈಶ್ಚಾಪಿಚ ವಾರಾಹೈ ರ್ನಿಷ್ಠಾನ ವರಸಂಚಯೈಃ ॥ ೬೭ ॥ ಫಲನಿರ್ಯೂಹ ಸಂಸಿದ್ಧೈ ಸ್ಸೂಪೈ ರ್ಗಂಧ ರಸಾನ್ವಿತೈಃ ॥ ಪುಷ್ಪಧ್ವಜವತೀಃ ಪೂರ್ಣಾ ಶುಕ್ಲ

ಸೇನೆಯಲ್ಲಿರುವ ಪುರುಷರೂ, ಭೃಶಂ - ಬಹಳವಾಗಿ, ದೃಪ್ತಾಃ - ಗರ್ವಿತರು, ಬಭೂವುಃ - ಆದರು, ಸರ್ವೇ - ಸಮಸ್ತರೂ, ಅಹತವಾಸಸಃ - ನೂತನ ವಸ್ತ್ರಗಳನ್ನುಟ್ಟವರು, (ಗೋ) ತೊಳೆಯಲ್ಪಟ್ಟ ವಸ್ತ್ರಗಳುಳ್ಳವರೂ, ಬಭೂವುಃ - ಆದರು. ॥ ೬೪ ॥ ಕುಂಜರಾಶ್ಚ - ಆನೆಗಳೂ, ಖರೋಷ್ಟ್ರಾಶ್ಚ - ಕತ್ತೆಗಳೂ ಒಂಟೆಗಳೂ, ಗೋಶ್ವಾಶ್ಚ - ವೃಷಭಗಳೂ ಕುದುರೆಗಳೂ, ಮೃಗಪಕ್ಷಿಣಃ - ಮೃಗಗಳೂ ಪಕ್ಷಿಗಳೂ, ತತ್ರ - ಆ ಭರದ್ವಾಜಾಶ್ರಮದಲ್ಲಿ, ಸುಭೃತಾಃ - ಚೆನ್ನಾಗಿ ಹೊಟ್ಟೆತುಂಬಿದುವು, ಬಭೂವಃ - ಆದವು, ಅನ್ಯಃ-ಯಾವನೊಬ್ಬನೂ, ಅನ್ಯಂ-ಋಷಿಕೃತಾನ್ನಕ್ಕಿಂತಲೂ ಮತ್ತೊಂದಾದ ಆಹಾರವನ್ನು, ನಾಕಲ್ಪಯತ್ - ಮಾಡಲಿಲ್ಲ. ॥ ೬೫ ॥ ತತ್ರ - ಆ ಸೈನ್ಯದೊಳಗೆ, ಅಶುಕ್ಲವಾಸಾಃ-ಬಿಳಿಯವಸ್ತ್ರವಿಲ್ಲದವನು, ನಾಸೀತ್ - ಇರಲಿಲ್ಲ, ಕ್ಷುಧಿತಃ - ಹಸಿವುಳ್ಳವನು, ಮಲಿನೋಪಿವಾ - ಅಭ್ಯಂಗನ ಸ್ನಾನವಿಲ್ಲದವನು, ರಜಸಾ - ಧೂಳಿಯಿಂದ, ಧ್ವಸ್ತಕೇಶೋವಾ - ಧೂಳಿನಿಂದ ವ್ಯಾಪ್ತವಾದ, ಕೂದಲುಗಳುಳ್ಳವನಾದರೂ, ಕಶ್ಚಿತ್ - ಒಬ್ಬಾನೊಬ್ಬನಾದ, ನರಃ - ಮನುಷ್ಯನೂ, ನಾದೃಶ್ಯತ - ಕಾಣಲಿಲ್ಲ. ॥ ೬೬ ॥ ಆಜೈಶ್ಚಾಪಿ - ಆಡುಗಳ ಮಾಂಸಾದಿಗಳಿಂದಲೂ, ವಾರಾಹೈಃ - ವರಾಹಮಾಂಸಗಳಿಂದಲೂ, ನಿಷ್ಠಾನವರಸಂಚಯೈಃ - ಶ್ರೇಷ್ಠವಾದ ಶಾಕಾದಿಗಳ ಸಮೂಹಗಳಿಂದಲೂ, ಫಲನಿರ್ಯೂಹಸಂಸಿದ್ಧೈಃ - ಫಲಗಳಿಂದಲೂ, ಕಾಸಿದ ಶರ್ಕರಾದಿ ರಸಗಳಿಂದಲೂ ಮಾಡಲ್ಪಟ್ಟ, ಗಂಧರಸಾನ್ವಿತೈಃ - ಸುವಾಸನೆಗಳಿಂದಲೂ ಮಧುರಾದಿ ಷಡ್ರಸಗಳಿಂದಲೂ ಕೂಡಿರುವ, ಸೂಪೈಃ-ತೊವ್ವೆಗಳಿಂದ, ಪೂರ್ಣಾಃ-ತುಂಬಿರುವ, ಸಹಸ್ರಶಃ - ಸಾವಿರಾರು, ಪುಷ್ಪಧ್ವಜವತೀಃ - ಪುಷ್ಪಗಳೇ ಅಲಂಕಾರವಾಗುಳ್ಳ, ಲೌಹೀಃ-

ಕತ್ತೆಗಳು, ಒಂಟೆಗಳು, ಗೋವುಗಳು, ಮೃಗಗಳು, ಪಕ್ಷಿಗಳು ಇವೆಲ್ಲವೂ ಮಹಾ ಮುನಿಯಾದ ಭರದ್ವಾಜನ ಪ್ರಭಾವದಿಂದುಂಟಾದ ಪದಾರ್ಥಗಳಿಂದ ತೃಪ್ತಿಯನ್ನು ಹೊಂದಿದುವಲ್ಲದೆ, ಬೇರೆ ಯಾವ ಇತರ ಪದಾರ್ಥಗಳಿಂದಲೂ ತೃಪ್ತಿಹೊಂದಲಿಲ್ಲವು. ॥ ಶ್ಲೋ ೬೫ ॥ ಆ ಭರತನ ಸೇನೆಯಲ್ಲಿ ಮಲಿನವಾದ ವಸ್ತ್ರಗಳುಳ್ಳವನಾವನೂ ಇರಲಿಲ್ಲ ! ಧೂಳಿನಿಂದವ್ಯಾಪ್ತವಾದ ಶರೀರವುಳ್ಳವನಾವನೂ ಇರಲಿಲ್ಲ ! ಇಷ್ಟೆಯಲ್ಲದೆ ಆ ದಶರಥರಾಜಕುವರನಾದ ಭರತನ ಸೇನೆಯಲ್ಲಿದ್ದವರೆಲ್ಲರೂ ಅಜಮಾಂಸಗಳು, ವರಾಹಮಾಂಸಗಳು, ಸರ್ವೋತ್ತಮವಾದ ವ್ಯಂಜನಗಳು, ಸಕ್ಕರೆಯಿಂದೊಡಗೂಡಿದ ಫಲದರಸಗಳು, ಸುಗಂಧರಸಗಳೊಡಗೂಡಿದುದೂ, ಚೆನ್ನಾಗಿ ಬೇಯಿಸಿದುದೂ ಆದ ತೊವ್ವೆಗಳು, ಶುಭ್ರವಾದುದೂ, ಬಿಳಿತಾಗಿರುವುದೂಆದ ಅನ್ನಗಳು ಇವೇ ಮೊದಲಾದುವುಗಳಿಂದ ಒಡಗೂಡಿದುದೂ, ಲೆಕ್ಕವಿಲ್ಲದವುಗಳೂ ಆದ ಲೋಹ

ಸ್ಯಾನ್ನಸ್ಯ ಚಾಭಿತಃ ॥ ೬೮ ॥ ದದೃಶು ರ್ವಿಸ್ಮಿತಾ ಸ್ತತ್ರ ನರಾ ಲೌಹೀ ಸ್ಸಹ
ಸ್ರಶಃ ॥ ಬಭೂವು ರ್ವನಪಾರ್ಶ್ವೇಷು ಕೂಪಾಃ ಪಾಯಸ ಕರ್ದಮಾಃ ॥೬೯॥
ತಾಶ್ಚ ಕಾಮದುಘಾ ಗಾವೋ ದ್ರುಮಾಶ್ಚಾಸನ್ಮಧುಸ್ರುತಃ ॥ ವಾಪ್ಯೋ
ಮೈರೇಯ ಪೂರ್ಣಾಶ್ಚ ಮೃಷ್ಟ ಮಾಂಸಚಯೈ ರ್ವೃತಾಃ ॥ ೭೦ ॥ ಪ್ರತಪ್ತ
ಪಿಠರೈಶ್ಚಾಪಿ ಮಾರ್ಗ ಮಾಯೂರ ಕೌಕ್ಕುಟೈಃ ॥ ಪಾತ್ರೀಣಾಂ ಚ ಸಹಸ್ರಾಣಿ
ಸ್ಥಾಲೀನಾಂ ನಿಯುತಾನಿಚ ॥ ೭೧ ॥ ನ್ಯರ್ಬುದಾನಿಚ ಪಾತ್ರಾಣಿ ಶಾತಕುಂಭ

ಪಂಚಲೋಹನಿರ್ಮಿತವಾದ ಸುವರ್ಣಪಾತ್ರೆಗಳನ್ನು, ಶುಕ್ಲಸ್ಯ - ಬೆಳ್ಳಗಿರುವ, ಅನ್ನಸ್ಯ - ಅನ್ನದ, ಅಭಿತಃ - ಸುತ್ತುಮುತ್ತಲೂ, ತತ್ರ - ಆ ಆಶ್ರಮದಲ್ಲಿ, ನರಾಃ - ಮನುಷ್ಯರು, ವಿಸ್ಮಿತಾಃ - ಆಶ್ಚರ್ಯ ಗೊಂಡವರಾಗಿ, ದದೃಶುಃ - ಕಂಡರು. ॥ ೬೮ ॥ ವನಪಾರ್ಶ್ವೇಷು - ವನಗಳ ಅಕ್ಕಪಕ್ಕಸ್ಥಳಗಳಲ್ಲಿ, ಕೂಪಾಃ - ಭಾವಿಗಳು, ಪಾಯಸಕರ್ದಮಾಃ - ಪಾಯಸವೇ ಕೆಸರಾಗುಳ್ಳವುಗಳು, ಬಭೂವುಃ-ಆದುವು, ತಾಶ್ಚಗಾವಃ - ಆ ಗೋವುಗಳು, ಕಾಮದುಘಾಃ - ಕಾಮಧೇನುಗಳಾದವು, (ಗೋ) ಇಚ್ಛಾನುಸಾರ ವಾಗಿ ಕರೆಯುತ್ತಿರುವುಗಳಾದುವು, ದ್ರುಮಾಶ್ಚ - ಗಿಡಗಳೂ, ಮಧುಸ್ರುತಃ - ಮದ್ಯವನ್ನು ಜೇನುತುಪ್ಪ ವನ್ನೂ ಸುರಿಸುವುವು, ಆಸನ್ - ಆದವು. ॥ ೬೯ ॥ ವಾಪ್ಯಃ - ಇಳಿಯುವ ಭಾವಿಗಳು, ಮೈರೇಯ ಪೂರ್ಣಾಶ್ಚ - ಮದ್ಯಗಳಿಂದ ತುಂಬಿದುವಾಗಿ, ಮೃಷ್ಟಮಾಂಸಚಯೈಃ - ಪಕ್ವವಾದ, ಮಾಂ ಸಚಯೈಃ - ಮಾಂಸರಾಶಿಗಳಿಂದಲೂ, ಪ್ರತಪ್ತಪಿಠರೈಃ - ಕಾಯಿಸಲ್ಪಟ್ಟ ಮಡಿಕೆಗಳುಳ್ಳ, ಮಾರ್ಗಮಾ ಯೂರಕೌಕ್ಕುಟೈಃ, ಮಾರ್ಗ - ಜಿಗುಣೀಮಾಂಸಗಳಿಂದಲೂ, ಮಾಯೂರ - ನವಿಲುಮಾಂಸ ಗಳಿಂದಲೂ, ಕೌಕ್ಕುಟೈಃ - ಕೋಳೀಮಾಂಸಗಳಿಂದಲೂ, ವೃತಾಃ - ಸುತ್ತಲ್ಪಟ್ಟವುಗಳು, ಬಭೂವ - ಆದವು. ॥ ೭೦ ॥ ಪಾತ್ರೀಣಾಂ - ಪಾತ್ರೆಗಳ, ಸಹಸ್ರಾಣಿ - ಸಾವಿರಗಳು, ಸ್ಥಾಲೀನಾಂ - ಚಿಕ್ಕತಂಬಿಗೆ ಗಳ, ನಿಯುತಾನಿಚ - ಲಕ್ಷಗಳೂ, ಶಾತಕುಂಭಮಯಾನಿಚ - ಚಿನ್ನದವಿಕಾರವಾದ, ನ್ಯರ್ಬುದಾನಿ - ನ್ಯರ್ಬುದಸಂಖ್ಯೆಯುಳ್ಳ, ಪಾತ್ರಾಣಿ - ಪಾತ್ರೆಗಳೂ, ಸ್ಥಾಲ್ಯಃ - ಸ್ಥಾಲಿಗಳೂ, ಕುಂಭ್ಯಃ - ಕೊಡಗಳೂ, ದಧಿ - ಮೊಸರಿಂದ, ಪೂರ್ಣಾಃ ತುಂಬಿರುವ, ಸಂಸ್ಕೃತಾಃ - ಹಿಂಗು ಶೊಂಠಿ ಮೊದಲಾದವುಗಳಿಂದ ಸಂಸ್ಕಾರವಾದ, ಕರಂಭ್ಯಶ್ಚ - ಪಾಸಾಲೆಗಳೂ, ಬಭೂವುಃ - ಆದವು, ಯೌವನಸ್ಥಸ್ಯ - ಬಹಳ ಹಳೆ ಯದೂ ಬಹಳ ಹೊಸದೂ ಆಗದೇ ಇರುವ, ಗೌರಸ್ಯ - ಬೆಳ್ಳಗಿರುವ, ಸುಗಂಧಿನಃ - ಒಳ್ಳೆಯವಾಸನೆ

ಪಾತ್ರೆಗಳನ್ನುನೋಡಿ ಮಹದಾಶ್ಚರ್ಯವನ್ನುಹೊಂದಿದರು. ಆ ಸಮಯದಲ್ಲಿ ಆ ಭರದ್ವಾಜಾ ಶ್ರಮ ಸಮೀಪದಲ್ಲಿದ್ದ ಭಾವಿಗಳೆಲ್ಲವೂ ಪರಮಾನ್ನಗಳಿಂದ ತುಂಬಿದುವಾದುವು.ಅಲ್ಲಿನ ಗೋವು ಗಳೆಲ್ಲವೂ ಕಾಮಧೇನುಗಳಾದುವು. ವೃಕ್ಷಗಳೆಲ್ಲವೂ ಮಕರಂದವನ್ನು ಸುರಿಸುವುವಾದುವು. ಮಾತ್ರವಲ್ಲದೆ ಇಳಿಯುವ ಭಾವಿಗಳೆಲ್ಲವೂ ಮೈರೇಯವೆಂದು ಹೆಸರುಳ್ಳ ಮದ್ಯಗಳಿಂದ ತುಂಬಿದುವೂ, ಸರ್ವೋತ್ತಮವಾದ ಮಾಂಸಸಮೂಹಗಳಿಂದ ನಿಬಿಡಿತವಾದುವೂ, ಮಡಿಕೆ ಗಳಲ್ಲಿಯೇ ಬೇಯಿಸಿದ ಮೃಗಗಳ, ಮಾಂಸಗಳಿಂದ ತುಂಬಿದುವೂ ಆದುವು. ಅನೇಕ ಸಾವಿರ ಅನ್ನಪಾತ್ರೆಗಳು, ಕಾಯಿಪಲ್ಯಗಳ ಅನೇಕಲಕ್ಷಪಾತ್ರೆಗಳೂ ಭೋಜನಾರ್ಹಗಳೂ, ಭಂಗಾರ ದಿಂದ ಮಾಡಲ್ಪಟ್ಟುವೂ ಆದ ಭೋಜನ ಪಾತ್ರೆಗಳ ಕೋಟಿಸಂಖ್ಯೆಯೂ, ಚೆನ್ನಾಗಿ ಶುದ್ಧಿ ಮಾಡಲ್ಪಟ್ಟುವೂ, ಮೊಸರಿನಿಂದ ತುಂಬಿದುವೂ ಆದ ಅನೇಕ ಕೋಟಿಸ್ಥಾಲಿಗಳೂ ಆ ಸ್ಥಳದಲ್ಲಿ ದ್ದುವು. ಇಷ್ಟುಮಾತ್ರವಲ್ಲದೆ ಆಯಾಶ್ರಮದ ಮಡುವುಗಳೆಲ್ಲವೂ, ಹೊಸದೂ ಹಳೆಯದೂ

ಮಯಾನಿಚ ॥ ಸ್ಥಾಲ್ಯಃ ಕುಂಭ್ಯಃ ಕರಂಭ್ಯಶ್ಚ ದಧಿಪೂರ್ಣಾ ಸ್ಸುಸಂಸ್ಕೃತಾಃ ॥ ೭೨ ॥ ಯೌವನಸ್ಥಸ್ಯ ಗೌರಸ್ಯ ಕಪಿತ್ಥಸ್ಯ ಸುಗಂಧಿನಃ ॥ ಹ್ರದಾಃ ಪೂರ್ಣಾ ರಸಾಲಸ್ಯ ದಧ್ನ ಶ್ಶ್ವೇತಸ್ಯ ಚಾಪರೇ ॥೭೩॥ ಬಭೂವುಃ ಪಾಯಸಸ್ಯಾನ್ಯೇ ಶರ್ಕರಾ ಯಾವ ಸಂಚಯಾಃ ॥ ಕಲ್ಕಾಂ ಶ್ಚೂರ್ಣಕಷಾಯಾಂಶ್ಚ ಸ್ನಾನಾನಿ ವಿವಿಧಾನಿಚ ॥ ೭೪ ॥ ದದೃಶು ರ್ಭಾಜನಸ್ಥಾನಿ ತೀರ್ಥೇಷು ಸರಿತಾ ನ್ನರಾಃ ॥ ಶುಕ್ಲಾ ನಂಶುಮತಶ್ಚಾಪಿ ದಂತಧಾವನ ಸಂಚಯಾ ॥ ೭೫ ॥ ಶುಕ್ಲಾಂ ಶ್ಚಂದನ ಕಲ್ಕಾಂಶ್ಚ ಸಮುದ್ಗೇಷ್ವವತಿಷ್ಠತಃ ॥ ದರ್ಪಣಾ ನ್ಪರಿಮೃಷ್ಟಾಂಶ್ಚ ವಾಸಸಾಂ ಚಾಪಿ ಸಂಚಯಾ ॥ ೭೬ ॥ ಪಾದುಕೋಪಾನಹಂಚೈವ ಯುಗ್ಮಾನಿಚ

ಯುಳ್ಳ, ಕಪಿತ್ಥಸ್ಯ - ಮಜ್ಜಿಗೆಯಿಂದ, ಹ್ರದಾಃ - ಸರೋವರಗಳು, ಪೂರ್ಣಾಃ - ತುಂಬಿದವುಗಳು, ಬಭೂವುಃ - ಆದವು, ಅಪರೇ - ಮತ್ತೂ ಕೆಲಭಾವಿಗಳು, ರಸಾಲಸ್ಯ - ಮಾವಿನಹಣ್ಣಿನ ರಸದಿಂದಲೂ, ಶ್ವೇತಸ್ಯ - ಬೆಳ್ಳಗಿರುವ, ದಧ್ನಃ - ಮೊಸರಿನಿಂದಲೂ, ಪೂರ್ಣಾಃ - ತುಂಬಿದವುಗಳು, ಬಭೂವುಃ - ಆದುವು, ಅನ್ಯೇ - ಇನ್ನು ಕೆಲಸರೋವರಗಳು, ಪಾಯಸಸ್ಯ - ಪಾಯಸದಿಂದ, ಪೂರ್ಣಾಃ-ತುಂಬಿದವು, ಬಭೂವುಃ - ಆದವು. ॥ ೭೩ ॥ ಕಲ್ಕಾ - ಕಲ್ಕಗಳನ್ನು, ಚೂರ್ಣಕಷಾಯಾಂಶ್ಚ - ಚೂರ್ಣ ಗಳೂ ಕಷಾಯಗಳೂ, ವಿವಿಧಾನಿ - ನಾನಾಬಗೆಗಳಾದ, ಸ್ನಾನಾನಿ - ಸ್ನಾನಮಾಡತಕ್ಕ ರಸಗಳು ಎಂಬಿ ವುಗಳನ್ನು, ಸರಿತಾಂ - ನದಿಗಳ, ತೀರ್ಥೇಷು - ಜಲಗಳಲ್ಲಿ, ಭಾಜನಸ್ಥಾನಿ - ಪಾತ್ರೆಗಳಲ್ಲಿರಸಿದುವ ನ್ನಾಗಿ, ದದೃಶುಃ - ಕಂಡರು. ॥ ೭೪ ॥ ಶುಕ್ಲಾ - ಬೆಳ್ಳಗಿರುವ, ಅಂಶುಮತಃ - ಮೃದುವಾಗಿರುವ, ದಂತಧಾವನದಂಚಯಾ - ಹಲ್ಲುಜ್ಜುವ ಕಾಷ್ಠಗಳ ಸಮೂಹಗಳನ್ನು, ಶುಕ್ಲಾ - ನಿರ್ಮಲಗಳಾದ, ಚಂದನಕಲ್ಕಾಂಶ್ಚ - ಶ್ರೀಗಂಧೋದಕಗಳನ್ನು, ಸಮುದ್ಗೇಷು - ಸಂಪುಟಗಳಲ್ಲಿ, ಅವತಿಷ್ಠತಃ - ಇರು ವವುಗಳನ್ನಾಗಿ, ದದೃಶುಃ - ಕಂಡರು. ॥ ೭೫ ॥ ಪರಿಮೃಷ್ಟಾ - ಒರೆಸಲ್ಪಟ್ಟ, ದರ್ಪಣಾಃ - ಕನ್ನಡಿ ಗಳನ್ನೂ, ವಾಸಸಾಂ - ವಸ್ತ್ರಗಳ, ಸಂಚಯಾ - ರಾಶಿಗಳನ್ನು, ಸಹಸ್ರಶಃ - ಸಹಸ್ರವಾದ, ಪಾದು ಕೋಪಾನಹಾಂಚೈವ - ಕಾಷ್ಠಗಳಿಂದ ಚಮತ್ಕಾರವಾಗಿ ಮಾಡಲ್ಪಟ್ಟ ಪಾದರಕ್ಷೆಗಳ, ಯುಗ್ಮಾನಿಚ - ಜೋಡಿಗಳನ್ನೂ, ಅಂಜನೀಃ - ಕಾಡಿಗೆಭರಣಿಗಳನ್ನು, ಕಂಕತಾ - ಬಾಚಣಿಗೆಗಳನ್ನು, ಕೂರ್ಚಾ - ಮೀಸೆಗಳನ್ನತಿದ್ದುವ ಕಾಷ್ಠಗಳನ್ನು, ಶಸ್ತ್ರಾಣಿ - ಆಯುಧಗಳನ್ನು,

ಅಲ್ಲದೆ ಸಮವಾಗಿ ಪಕ್ವವಾಗಿರುವ ಮೊಸರಿನಿಂದ ತುಂಬಿದ್ದುವು. ಅಲ್ಲದೆ ಸುವಾಸನೆಯುಳ್ಳ ಕಪಿತ್ಥಮಿಶ್ರಿತವಾದ ಮಜ್ಜಿಗೆಯಿಂದ ತುಂಬಿದ ಸರೋವರಗಳೂ ಅನೇಕವಾಗಿದ್ದುವು. ಇನ್ನು ಕೆಲ ಮಡವುಗಳು ಪರಮಾನ್ನಗಳಿಂದ ತುಂಬಿದ್ದುವು. ಕೆಲವು ಸಕ್ಕರೆ, ಯವ ಇವೇ ಮೊದಲಾ ದವುಗಳಿಂದ ಮಾಡಲಾದ ಹಿಟ್ಟನಿಂದ ತುಂಬಿದ್ದುವು. ಆ ಯಾಶ್ರಮದಲ್ಲಿ ಅನೇಕ ಫಲಗಳ ಕಲ್ಕಗಳು ಗಂಧಪಾತ್ರೆಗಳೂ, ಸ್ನಾನಯೋಗ್ಯವಾದ ಪಾತ್ರೆಗಳು ತುಂಬಿದ್ದುವು. ಇವುಗಳೆಲ್ಲ ವನ್ನೂ ನೋಡಿ, ಆ ಭರತನ ಸೇನೆಯಲ್ಲಿದ್ದವರೆಲ್ಲರೂ, ಸ್ವಚ್ಛವಾದುವೂ, ಕೂರ್ಚಗಳಿಂದೊಡ ಗೂಡಿದುವೂ ಆದ ದಂತಧಾವನಯೋಗ್ಯಗಳಾದ ಕಾಷ್ಟಗಳ ಸಮೂಹಗಳನ್ನೂ, ದೊಡ್ಡ ದೊಡ್ಡ ದೊನ್ನೆಗಳಲ್ಲಿರುವುವೂ, ಬಿಳಿತಾಗಿರುವುವೂ ಆದ ಒಳ್ಳೆಯ ಗಂಧದಮುದ್ದೆಗಳನ್ನೂ, ಚೆನ್ನಾಗಿ ಶುದ್ಧಿಮಾಡಿದ ಕನ್ನಡಿಗಳನ್ನೂ, ವಸ್ತ್ರಗಳಸಮುದಾಯಗಳನ್ನೂ, ಅನೇಕ ಸಹಸ್ರ ಪಾದರಕ್ಷೆಗಳನ್ನೂ, ಕಾಡಿಗೆಯುನ್ನಿಡುವ ಭರಣಿಗಳನ್ನೂ, ಬಾಚಣಿಗೆಗಳನ್ನೂ, ಮೀಸೆಗಳನ್ನು

ಸಹಸ್ರಶಃ ॥ ಅಂಜನೀಃ ಕಂಕತಾನ್ ಕೂರ್ಚಾನ್ ಶಸ್ತ್ರಾಣಿಚ ಧನೂಂಷಿಚ ॥೭೭॥
ಮರ್ಮತ್ರಾಣಾನಿ ಚಿತ್ರಾಣಿ ಶಯನಾ ನ್ಯಾಸನಾನಿಚ ॥ ಪ್ರತಿಪಾನ ಹ್ರದಾನ್
ಪೂರ್ಣಾನ್ ಖರೋಷ್ಟ್ರ ಗಜವಾಜಿನಾಂ ॥ ೭೮ ॥ ಅವಗಾಹ್ಯ ಸುತೀರ್ಥಾಂಶ್ಚ
ಹ್ರದಾನ್ ಸೋತ್ಪಲ ಪುಷ್ಕರಾನ್ ॥ ಆಕಾಶ ವರ್ಣ ಪ್ರತಿಮಾನ್ ಸ್ವಚ್ಛತೋಯಾನ್
ಸುಖಪ್ಲವಾನ್ ॥ ೭೯ ॥ ನೀಲವೈಡೂರ್ಯ ವರ್ಣಾಂಶ್ಚ ಮೃದೂನ್ ಯವಸ
ಸಂಚಯಾನ್ ॥ ನಿರ್ವಾಪಾರ್ಥಾನ್ ಪಶೂನಾಂ ತೇ ದದೃಶು ಸ್ತತ್ರ ಸರ್ವಶಃ
॥ ೮೦ ॥ ವ್ಯಸ್ಮಯಂತ ಮನುಷ್ಯಾಸ್ತೇ ಸ್ವಪ್ನಕಲ್ಪಂ ತದದ್ಭುತಂ ॥ ದೃಷ್ಟ್ವಾ

ಮರ್ಮತ್ರಾಣಾನಿ - ಕವಚಗಳನ್ನು, ವಿಚಿತ್ರಾಣಿ ಆಶ್ಚರ್ಯಕರಗಳಾದ, ಶಯನಾನಿ - ಹಾಸಿಗೆಗಳನ್ನು, ಅಸನಾನಿಚ - ಚಿತ್ರಾಸನಗಳನ್ನು, ಪೂರ್ಣಾನ್ - ತುಂಬಿರುವ, ಪ್ರತಿಪಾನಹ್ರದಾನ್ - (ಗೋ) ಅಜೀರ್ಣದೋಷಪರಿಹಾರಕವಾದ ಕಡಲೇಹುಳಿ ಮುಂತಾದವುಗಳ ಸರೋವರಗಳನ್ನೂ, ಖರೋಷ್ಟ್ರಗಜವಾಜಿನಾಂ - ಕತ್ತೆಗಳಿಗೂ ಒಂಟೆಗಳಿಗೂ ಆನೆಗಳಿಗೂ ಕುದುರೆಗಳಿಗೂ, ಅವಗಾಹ್ಯಸುತೀರ್ಥಾಂಶ್ಚ - ಇಳಿವುದಕ್ಕೆ ಯೋಗ್ಯವಾದ ತೀರ್ಥಗಳುಳ್ಳ, ಸೋತ್ಪಲಪುಷ್ಕರಾನ್ - ನೈದಿಲೆ ತಾವರೇ ಹುವ್ವುಗಳಿಂದೊಡಗೂಡಿದ, ಆಕಾಶವರ್ಣಪ್ರತಿಮಾನ್ - ಅಂತರಿಕ್ಷವರ್ಣಕ್ಕೆ ಸಮಾನವಾದ ವರ್ಣವುಳ್ಳ, ಸುಖಪ್ಲವಾನ್ - ಸುಖಕರವಾದ ತೆಪ್ಪಗಳುಳ್ಳ, ಹ್ರದಾನ್ - ಸರೋವರಗಳನ್ನು, ನೀಲವೈಡೂರ್ಯವರ್ಣಾಂಶ್ಚ-ಇಂದ್ರನೀಲಮಾಣಿಕ್ಯಗಳ ವೈಡೂರ್ಯಮಣಿಗಳ ವರ್ಣದಂತೆ ವರ್ಣವುಳ್ಳ. ಮೃದೂನ್-ಮೆತ್ತಗಿರುವ, ಪಶೂನಾಂ - ಪಶುಗಳಿಗೆ, ನಿರ್ವಾಪಾರ್ಥಾನ್ - ಮಲಗುವದಕ್ಕೆ ಸಾಧಕಗಳಾದ, ಯವಸಸಂಚಯಾನ್ - ಹುಲ್ಲಿನರಾಶಿಗಳನ್ನು, ತೇ - ಆ ಮನುಷ್ಯರು, ಸರ್ವಶಃ - ಎಲ್ಲ ದಿಕ್ಕುಗಳಲ್ಲಿಯೂ, ತತ್ರ-ಆ ಭರದ್ವಾಜಾಶ್ರಮದಲ್ಲಿ, ದದೃಶುಃ - ಕಂಡರು. ॥೭೬-೮೦॥ ತೇಮನುಷ್ಯಾಃ - ಆ ಮನುಷ್ಯರು, ಮಹರ್ಷಿಣಾ - ಭರದಾಜಋಷಿಯಿಂದ, ಭರತಸ್ಯ - ಭರತನಿಗಾಗಿ, ಕೃತಂ-ಮಾಡಲ್ಪಟ್ಟ, ತಾದೃಕ್-ಅಂತಹ, ಅದ್ಭುತಂ - ಆಶ್ಚರ್ಯಕರವಾದ, ಸ್ವಪ್ನಕಲ್ಪಂ - ಸ್ವಪ್ನಪ್ರಾಯವಾದ, ತದಾತಿಥ್ಯಂ - ಆ ಅತಿಥಿಸತ್ಕಾರವನ್ನು, ದೃಷ್ಟ್ವಾ - ಕಂಡು, ವ್ಯಸ್ಮಯಂತ - ಆಶ್ಚರ್ಯಪಟ್ಟರು. ॥ ೮೧ ॥ ಇತ್ಯೇವಂ - ಈರೀತಿ, ನಂದನೇ - ನಂದನವನದಲ್ಲಿ, ದೇವತಾನಾಮಿವ - ದೇವತೆಗಳಂತೆ, ರಮ್ಯೇ - ಮನೋಹರವಾದ, ಭರದ್ವಾಜಾಶ್ರಮೇ - ಭರದ್ವಾಜಋಷಿಯ ಆಶ್ರಮದಲ್ಲಿ, ರಮಮಾಣಾನಾಂ-ವಿಹರಿಸುತ್ತಿರಲು, ಸಾರಾತ್ರಿಃ -

ತಿದ್ದಿಕೊಳ್ಳುವ ಕಾಷ್ಠಗಳನ್ನೂ, ನಾನಾವಿಧಗಳಾದ ಆಯುಧಗಳನ್ನೂ, ಕವಚಗಳನ್ನೂ, ಧನುಸ್ಸುಗಳನ್ನೂ, ನಾನಾವಿಧಗಳಾದ ಪಾನಕಗಳನ್ನೂ ಚಿತ್ರವಿಚಿತ್ರಗಳಾದ ಪೀಠಗಳನ್ನೂ, ಹೇಸರಕತ್ತೆ, ಕುದುರೆ ಮೊದಲಾದ ಜಂತುಗಳು ನೀರುಕುಡಿಯಲು ಯೋಗ್ಯವಾದ ಕುಂಟೆಗಳನ್ನೂ, ಸ್ನಾನಮಾಡಲು ಯೋಗ್ಯವಾದ ದಡಗಳುಳ್ಳವೂ, ನಿರ್ಮಲೋದಕಪೂರ್ಣವಾದುವೂ, ಸುಖವಾಗಿ ಸ್ನಾನಮಾಡಲು ಯೋಗ್ಯವಾದುವೂ, ಕಮಲಗಳಿಂದ ರಾರಾಜಿಸುತ್ತಿರುವುವೂ, ಆಕಾಶದಂತಹ ಛಾಯೆಯುಳ್ಳವೂ ಆದ ಮಡುವುಗಳನ್ನೂ, ಪಶುಗಳಿಗೆ ತಿನ್ನಿಸುವುದೇ ಪ್ರಯೋಜನವಾಗುಳ್ಳವೂ,ನೀಪವೃಕ್ಷಗಳು,ವೈಡೂರ್ಯರತ್ನಗಳು ಇವುಗಳಕಾಂತಿಯುಳ್ಳವೂ ಬೆಣ್ಣೆಯಂತಹ ಗರಿಕೆಯುಳ್ಳವೂ, ಮೆತ್ತಗಿರುವುವೂ ಆದ ನಾನಾವಿಧಗಳಾದ ಹುಲ್ಲುಗಳನ್ನೂ ನೋಡಿ ಪರಮಾನಂದವನ್ನು ಹೊಂದಿದರು. ॥ ೭೬-೮೦ ॥ ಅಲ್ಲದೆ ಆ ಭರತಕುಮಾರನ ಸೇನೆಯವರೆಲ್ಲರೂ, ಭರದ್ವಾಜಮುನಿಶ್ರೇಷ್ಠನು ಭರತನಿಗೆ ಸಮರ್ಪಿಸಿದ ಆತಿಥ್ಯವೆಲ್ಲವನ್ನೂ ನೋಡಿ

ತಿಥ್ಯಂ ಕೃತಂ ತಾದೃಗ್ಭರತಸ್ಯ ಮಹರ್ಷಿಣಾ ॥ ೮೧ ॥ ಪ್ರತಿಜಗ್ಮುಶ್ಚ ತಾನದ್ಯೋ ಗಂಧರ್ವಾಶ್ಚ ಯಥಾಗತಂ ॥ ಭರದ್ವಾಜ ಮನುಜ್ಞಾಪ್ಯ ತಾಶ್ಚ ಸರ್ವಾ ವರಾಂಗನಾಃ ॥ ೮೩ ॥

ತಥೈವಮತ್ತಾ ಮದಿರೋತ್ಕಟಾ ನರಾ
ಸ್ತಥೈವ ದಿವ್ಯಾಗರು ಚಂದನೋಕ್ಷಿತಾಃ ॥
ತಥೈವ ದಿವ್ಯಾ ವಿವಿಧಾ ಸ್ರಗುತ್ತಮಾಃ
ಪೃಥಕ್ಪ್ರಕೀರ್ಣಾ ಮನುಜೈಃ ಪ್ರಮರ್ದಿತಾಃ ॥ ೮೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕನವತಿತಮಸ್ಸರ್ಗಃ.

ಆ ರಾತ್ರಿಯು, ವ್ಯತ್ಯವರ್ತತ - ಕಳೆದುಹೋಯಿತು. ॥ ೮೨ ॥ ತಾನದ್ಯಃ - ಆ ನದಿಗಳು, ಗಂಧರ್ವಾಶ್ಚ - ಗಂಧರ್ವರೂ, ಸರ್ವಾಃ - ಸಮಸ್ತರಾದ, ತಾವರಾಂಗನಾಃ - ಆ ಶ್ರೇಷ್ಠರಾದ ಹೆಂಗಸರೂ, ಭರದ್ವಾಜಂ - ಭರದ್ವಾಜಋಷಿಯನ್ನು, ಅನುಜ್ಞಾಪ್ಯ - ಸಮ್ಮತಗೊಳಿಸಿ, ಯಥಾಗತಂ - ಬಂದಂತೆ, ಪ್ರತಿಜಗ್ಮುಃ - ಹೊರಟುಹೋದರು. ॥ ೮೩ ॥ ತಥೈವ - ಹಾಗೆಯೇ, ಮತ್ತಾಃ - ಗರ್ವಿಷ್ಠರಾದ, ಮದಿರೋತ್ಕಟಾಃ - ಮದ್ಯದಿಂದ ಮದವೇರಿದ. ತಥೈವ ಹಾಗೆಯೇ, ದಿವ್ಯಾಗರುಚಂದನೋಕ್ಷಿತಾಃ-ಮನೋಹರವಾದ ಕೃಷ್ಣಾಗರು ಶ್ರೀಗಂಧಗಳ ನೀರಿನಿಂದ ಸ್ನಾನಮಾಡಿಸಲ್ಪಟ್ಟ, ನರಾಃ-ಜನರು,ತಥೈವ-ಹಾಗೆಯೇ, ದಿವ್ಯಾಃ - ದೇವತಾಸಂಬಂಧಗಳಾದ, ವಿವಿಧಾಃ - ನಾನಾಜಗೆಗಳಾದ, ಸ್ರಗುತ್ತಮಾಃ - ಉತ್ತಮವಾದ ಪುಷ್ಪಮಾಲಿಕೆಗಳು, ಮನುಜೈಃ - ಮನುಷ್ಯರಿಂದ, ಪ್ರಮರ್ದಿತಾಃ - ಬಾಡಿಹೋದದಾಗಿ, ಪೃಥಕ್ - ಬೇರೆ ಬೇರೆ, ಪ್ರಕೀರ್ಣಾಃ - ಎರಚಲ್ಪಟ್ಟವು. ॥ ೮೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕನವತಿತಮಸ್ಸರ್ಗಃ.

ಅವೆಲ್ಲವನ್ನೂ ಕನಸ್ಸಿನಲ್ಲಿಹೊಂದಿದ ಸಂಪತ್ತಿನಂತೆ ಆಶ್ಚರ್ಯಕರವಾಗಿರುವುದೆಂದು ಯೋಚಿಸಿದರು. ಮಾತ್ರವಲ್ಲದೆ ಭರದ್ವಾಜಮುನಿಕೃತವಾದ ಈ ಆತಿಥ್ಯವು ಅಲ್ಲಿ ಸಕಲ ಮನುಜರಿಗೂ ಆಶ್ಚರ್ಯವನ್ನುಂಟುಮಾಡಿತು. ಈ ರೀತಿಯಾಗಿ ಆ ಭರತನ ಪರಿಚಾರಕರೇ ಮೊದಲಾದವರೆಲ್ಲರೂ ನಂದನವನದಲ್ಲಿ ದೇವತೆಗಳು ಸಂಚರಿಸುವಂತೆ, ಆ ಆಶ್ರಮಪದದಲ್ಲಿ ಆನಂದದಿಂದ ತಿರುಗುತ್ತಿದ್ದರು. ಹೀಗಿರಲು ಆ ರಾತ್ರಿಯು ಕಳೆದುಹೋಯಿತು. ಆ ಬಳಿಕ ಆ ಆಶ್ರಮದಲ್ಲಿ ಕಾಣುತ್ತಿದ್ದ ನದಿಗಳೂ, ಗಂಧರ್ವರೂ, ದೇವಾಂಗನೆಯರೂ, ಇನ್ನೂ ಇತರರೂ ಭರದ್ವಾಜಮುನಿಪುಂಗವನ ಆಜ್ಞೆಯನ್ನು ಹೊಂದಿ ತಮ್ಮ ತಮ್ಮ ವಾಸಸ್ಥಾನಗಳಿಗೆ ಹೊರಟುಹೋದರು. ಪ್ರಾತಃಕಾಲವಾದ ಬಳಿಕ ಆ ಸೈನಿಕರೆಲ್ಲರೂ ಆ ಪ್ರಕಾರವಾಗಿಯೆ ಮದ್ಯಪಾನದಿಂದ ಮೈಮರೆತವರಾಗಿ, ಹಿಂದಿನಂತೆಯೆ ದಿವ್ಯಾಗರು ಚಂದನಾಲಂಕಾರಗಳಿಂದ ಅಲಂಕೃತರಾಗಿದ್ದರು. ಅಲ್ಲದೆ ಅಲ್ಲಲ್ಲಿ ದಿವ್ಯವಾದ ಪೂಮಾಲಿಕೆಗಳು ಚೆಲ್ಲಿದುವಾಗಿ ಬಾಡಿದ್ದುವು. ॥

ಇಂತಿದು ಭರದ್ವಾಜ ಮುನಿಪುಂಗವಕೃತ ಭರತಾಥಿತ್ಯ ವಿಧಾನವಿವರಣವೆಂಬ
ತೊಂಭತ್ತೊಂದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ದ್ವಿನವತಿತಮಸ್ಸರ್ಗಃ.

ತತಸ್ತಾಂ ರಜನೀಂ ವ್ಯುಷ್ಯ ಭರತ ಸ್ಸಪರಿಚ್ಛದಃ ॥ ಕೃತಾತಿಥ್ಯೋ ಭರದ್ವಾಜಂ ಕಾಮಾದಭಿಜಗಾಮಹ ॥ ೧ ॥ ತಮೃಷಿಃ ಪುರುಷವ್ಯಾಘ್ರಂ ಪ್ರಾಂಜಲಿಂ ಪ್ರೇಕ್ಷ್ಯ ಽಽಗತಂ ॥ ಹುತಾಗ್ನಿಹೋತ್ರೋ ಭರತಂ ಭರದ್ವಾಜೋಽಭ್ಯಭಾಷತ ॥ ೨ ॥ ಕಚ್ಚಿದತ್ರ ಸುಖಾ ರಾತ್ರಿ ಸ್ತವಾಸ್ಮ ದ್ವಿಷಯೇ ಗತಾ ॥ ಸಮಗ್ರಸ್ತೇ ಜನಃ ಕಚ್ಚಿ ದಾತಿಥ್ಯೇ ಶಂಸ ಮೇಽನಘ! ॥ ೩ ॥ ತಮುವಾಚಾಂಜಲಿಂ ಕೃತ್ವಾ ಭರತೋಽಭಿಪ್ರಣಮ್ಯಚ ॥ ಆಶ್ರಮಾ ದಭಿನಿಷ್ಕ್ರಾಂತ

ತತಃ - ಬಳಿಕ, ಸಪರಿಚ್ಛೇದಃ - ಪರಿವಾರದಿಂದೊಡಗೂಡಿದ, ಭರತಃ-ಭರತನು, ಕೃತಾತಿಥ್ಯಃ-ಮಾಡಲ್ಪಟ್ಟ ಅತಿಥಿಸತ್ಕಾರವುಳ್ಳವನಾಗಿ, ತಾಂರಜನೀಂ-ಆ ರಾತ್ರಿಯಲ್ಲಿ, ವ್ಯುಷ್ಯ - ಇದ್ದು, ಕಾಮಾತ್-ಶ್ರೀರಾಮನ ದರ್ಶನಾಭಿಲಾಷೆಯಿಂದ, ಭರದ್ವಾಜಂ - ಭರದ್ವಾಜಋಷಿಯನ್ನು ಕುರಿತು, ಅಭಿಜಗಾಮಹ - ಇದಿರಾಗಿ ತೆರಳಿದನು. ॥ ೧ ॥ ಭರದ್ವಾಜೋಋಷಿಃ - ಭರದ್ವಾಜಋಷಿಯು, ಹುತಾಗ್ನಿಹೋತ್ರಃ - ಹೋಮಮಾಡಲ್ಪಟ್ಟ ಅಗ್ನಿಹೋತ್ರವುಳ್ಳವನಾಗಿ, ಆಗತಂ - ಬಂದಿರುವ, ಪ್ರಾಂಜಲಿಂ - ಬದ್ಧಾಂಜಲಿಯುಳ್ಳ, ಪುರುಷವ್ಯಾಘ್ರಂ - ಪುರುಷಶ್ರೇಷ್ಠನಾದ, ತಂಭರತಂ-ಆ ಭರತನನ್ನು ಪ್ರೇಕ್ಷ್ಯ-ಕಂಡು, ಅಭ್ಯಭಾಷತ - ಮಾತನಾಡಿದನು. ॥ ೨ ॥ ಹೇ ಅನಘ - ಎಲೈ ನಿರ್ದೋಷಿಯೇ, ಅತ್ರ - ಅಲ್ಲಿ, ಅಸದ್ವಿಷಯೇ - ನಮ್ಮ ಆಶ್ರಮಪ್ರದೇಶದಲ್ಲಿ, ತವ - ನಿನಗೆ, ರಾತ್ರಿಃ - ರಾತ್ರಿಯು, ಸುಖಾ - ಸುಖಕರವಾದುದಾಗಿ, ಗತಾಕಚ್ಚಿತ್ - ಕಳೆಯಿತು, ತೇ - ನಿನ್ನ ಸಂಬಂಧವಾದ, ಜನಃ - ಜನವು, ಆತಿಥ್ಯೇ - ಅತಿಥಿಸತ್ಕಾರದಲ್ಲಿ, ಸಮಗ್ರಃಕಚ್ಚಿತ್ - ಸಂಪೂರ್ಣವಾಯಿತೇ, ಮೇ - ನನಗೆ, ಶಂಸ - ಹೇಳು. ॥ ೩ ॥ ಭರತಃ - ಭರತನು, ಆಶ್ರಮಾತ್ - ಆಶ್ರಮದಿಂದ, ಅಭಿನಿಷ್ಕ್ರಾಂತಂ - ಹೊರಗೆ ಹೊರಟುಬರುತ್ತಿರುವ, ಉತ್ತಮತೇಜಸಂ - ಉತ್ಕೃಷ್ಟವಾದ ಬ್ರಹ್ಮತೇಜಸ್ಸುಳ್ಳ, ತಂಋಷಿಂ - ಆ ಭರದ್ವಾಜಋಷಿಯನ್ನು ಕುರಿತು, ಅಭಿಪ್ರಣಮ್ಯ - ನಮಸ್ಕಾರಮಾಡಿ, ಅಂಜಲಿಂ - ಅಂಜಲಿಯನ್ನು,

---

ಆ ಬಳಿಕಲಾ ಭರತನು ಪರಿವಾರದಿಂದೊಡಗೂಡಿ, ಭರದ್ವಾಜಮುನಿವರನಿತ್ತ ಆತಿಥ್ಯವನ್ನು ಕೈಕೊಂಡು ಆ ರಾತ್ರಿಯೆಲ್ಲವನ್ನೂ ಕಳೆದ ಬಳಿಕ, ಶ್ರೀರಾಮನನ್ನು ನೋಡಬೇಕೆಂಬ ಕೋರಿಕೆಯಿಂದ ಭರದ್ವಾಜಮುನಿಯ ಬಳಿಸಾರಿದನು. ಆಗ ಸಮಸ್ತವನ್ನೂ ತಿಳಿದ ಭರದ್ವಾಜ ಮುನಿಯು, ಪುರುಷೋತ್ತಮನು, ಕೈಗಳನ್ನು ಜೋಡಿಸಿಕೊಂಡಿರುವವನು, ತನ್ನನ್ನು ನೋಡಲು ಬಂದಿರುವವನೂ ಆದ ಭರತನನ್ನು ನೋಡಿ, ಅಗ್ನಿಹೋತ್ರಾದಿ ಸಕಲ ಕೃತ್ಯಗಳನ್ನೂ ನೇರವೇರಿಸಿಕೊಂಡು ಆತನನ್ನು ನೋಡಿ, "ಎಲೈ ನಿಷ್ಕಲ್ಮಷನಾದ ಭರತನೆ! ನಿನಗೆ ನನ್ನ ಆಶ್ರಮದಲ್ಲಿ ಈ ರಾತ್ರಿಯೆಲ್ಲವೂ ಸುಖವಾಗಿ ಕಳೆಯಿತೆ? ನಿಮ್ಮವರಿಗೆಲ್ಲರಿಗೂ ಆತಿಥ್ಯವು ಪೂರ್ಣವಾಗಿ ನಡೆದುದೆ? ಯಾವ ವಿಧವಾದ ತೊಂದರೆಗಳೂ ಉಂಟಾಗಲಿಲ್ಲವಷ್ಟೆ? ಈ

ನೃಷಿಮುತ್ತಮ ತೇಜಸಂ ॥ ೪ ॥ ಸುಖೋಷಿತೋಸ್ಮಿ ಭಗರ್ವ! ಸಮಗ್ರ
ಬಲವಾಹನಃ ॥ ತರ್ಪಿತ ಸ್ಸರ್ವಕಾಮೈಶ್ಚ ಸಾಮಾತ್ಯೋ ಬಲವ ತ್ತ್ವಯಾ ॥೫॥
ಅಪೇತ ಕ್ಲಮಸಂತಾಪಾ ಸ್ಸುಭಕ್ಷಾ ಸ್ಸುಪ್ರತಿಶ್ರಯಾಃ ॥ ಅಪಿಪ್ರೇಷ್ಯಾ ನುಪಾ
ದಾಯ ಸರ್ವೇಸ್ಮ ಸುಸುಖೋಷಿತಾಃ ॥ ೬ ॥ ಆಮಂತ್ರಯೇಽಹಂ ಭಗರ್ವ!
ಕಾಮಂ ತ್ವಾ ಮೃಷಿಸತ್ತಮ! ॥ ಸಮೀಪಂ ಪ್ರಸ್ಥಿತಂ ಭ್ರಾತು ರ್ಮೈತ್ರೇಣೇ
ಕ್ಷಸ್ವ ಚಕ್ಷುಷಾ ॥ ೭ ॥ ಆಶ್ರಮಂ ತಸ್ಯ ಧರ್ಮಜ್ಞ! ಧಾರ್ಮಿಕಸ್ಯ ಮಹಾ

ಕೃತ್ವಾ - ಮಾಡಿ, (ಅಂದರೆ ಕೈಮುಗಿದು) ತಂ - ಆ ಋಷಿಯನ್ನು ಕುರಿತು, ಉವಾಚ - ಹೇಳಿದನು. ॥ ೪ ॥ ಹೇ ಭಗರ್ವ - ಎಲೈ ಪೂಜ್ಯನೇ, ಪೂಜ್ಯನೇ, ಸಮಗ್ರಬಲವಾಹನಃ - ಸಂಪೂರ್ಣವಾದ ಸೈನ್ಯ ವಾಹನ ಇವುಗಳುಳ್ಳವರಾಗಿ, ಸಾಮಾತ್ಯಃ - ಮಂತ್ರಿಗಳಿಂದೊಡಗೂಡಿದ ನಾನು, ಸರ್ವಕಾಮೈಶ್ಚ - ಸಮಸ್ತವಾದ ಕೋರಿಕೆಗಳಿಂದಲೂ, ತ್ವಯಾ - ನಿನ್ನಿಂದ, ಬಲವತ್ - ಬಹಳವಾಗಿ, ತರ್ಪಿತಃ-ತೃಪ್ತಿಗೊಳಿಸಲ್ಪಟ್ಟ, ಸುಖೋಷಿತಃ - ಸುಖವಾಗಿದ್ದವನು, ಅಸ್ಮಿ - ಆದೆನು. ॥ ೫ ॥ ಅಪೇತಕ್ಲಮಸಂತಾಪಾಃ - ಕಳೆದುಹೋಗದಂತಹ, ಕ್ಲಮ - ಬಳಲಿಕೆಯು, ಸಂತಾಪಾಃ - ದೇಹತಾಪವೂ ಉಳ್ಳವರಾಗಿ, ಪ್ರೇಷ್ಯಾನಪಿ - ಭೃತ್ಯರನ್ನೂ ಕೂಡ, ಉಪಾದಾಯ - ಕರೆದುಕೊಂಡು, ಸರ್ವೇ - ಸಮಸ್ತರೂ, ಸುಭಕ್ಷಾಃ - ಒಳ್ಳೆಯ ಭೋಜನಗಳುಳ್ಳವರಾಗಿ, ಸುಪ್ರತಿಶ್ರಯಾಃ-ಒಳ್ಳೆಯ ಮನಸ್ಸುಳ್ಳವರಾಗಿ, ಸುಸುಖೋಷಿತಾಃ - ಸುಖವಾಗಿದ್ದವರು, ಸ್ಮ - ಆದೆವು. ॥ ೬ ॥ ಹೇ ಭಗರ್ವ - ಎಲೈ ಪೂಜ್ಯನೇ, ಹೇ ಋಷಿಸತ್ತಮ - ಎಲೈ ಋಷಿಶ್ರೇಷ್ಠನೇ, ತ್ವಾಂ - ನಿನ್ನನ್ನು, ಕಾಮಂ - ಬಹಳವಾಗಿ, ಅಹಂ - ನಾನು, ಆಮಂತ್ರಯೇ - ಕೇಳಿಕೊಳ್ಳುತ್ತೇನೆ, ಭ್ರಾತುಃ - ಅಣ್ಣನಾದ ಶ್ರೀರಾಮನ, ಸಮೀಪಂ - ಬಳಿಗೆ, ಪ್ರಸ್ಥಿತಂ - ಹೋಗುತ್ತಿರುವವನನ್ನು, ಮೈತ್ರೇಣ - ಮಿತ್ರಸಂಬಂಧವಾದ, ಚಕ್ಷುಷಾ - ದೃಷ್ಟಿಯಿಂದ, ಈಕ್ಷಸ್ವ-ನೋಡು. ॥ ೭ ॥ ಹೇಧರ್ಮಜ್ಞ - ಎಲೈ ಸಕಲ ಧರ್ಮಗಳನ್ನು ತಿಳಿದವನೇ, ಧಾರ್ಮಿಕಸ್ಯ - ಧರ್ಮಿಷ್ಠನಾದ, ಮಹಾತ್ಮನಃ - ಮಹಾಮನಸ್ವಿಯಾದ, ತಸ್ಯ - ಆ ಶ್ರೀರಾಮನ, ಆಶ್ರಮಂ - ಆಶ್ರಮವನ್ನು, ಆಚಕ್ಷ್ವ - ಹೇಳು, ಮಾರ್ಗಃ - ಮಾರ್ಗವು, ಕತಮಃ - ಯಾವದು, ಕಿಯರ್ - ಎಷ್ಟಿದೆ, ಮೇ-ನನಗೆ,

ವಿಷಯಗಳೆಲ್ಲವನ್ನೂ ನನಗೆಹೇಳು." ಎಂದನು. ಆಗ ಭರತನು ಆ ಮುನಿಗೆ ವಂದನೆಯಂಗೈದು ಕೈಗಳನ್ನು ಜೋಡಿಸಿಕೊಂಡು, ಆಶ್ರಮದಿಂದ ಹೊರಹೊರಟ ಆತನನ್ನು ಕುರಿತು, ॥೧-೩॥ "ಷಡ್ಗುಣೈಶ್ವರ್ಯಸಂಪನ್ನನಾದ ಓ ಭರದ್ವಾಜಮುನಿವರನೆ! ನಾನು ಮಂತ್ರಿಗಳೊಡನೆಯೂ, ಚತುರಂಗಬಲದೊಡನೆಯೂ ಕೂಡಿದವನಾಗಿ, ಅನೇಕವಿಧ ಸತ್ಕಾರಗಳಿಂದ ಸತ್ಕೃತನಾದೆನು. ವಿಧವಿಧಗಳಾದ ಮನಸೋಽಭೀಷ್ಟ ಪದಾರ್ಥಗಳು ನಮ್ಮನ್ನು ತೃಪ್ತಿಗೊಳಿಸಿದುವು. ಹೆಚ್ಚಾಗಿ ಹೇಳಬೇಕಾದುದೇನಿರುವುದು; ನಿನ್ನಿಂದಮಾಡಲ್ಪಟ್ಟ ಆತಿಥ್ಯವನ್ನು ಕೈಕೊಂಡ ನಾವೆಲ್ಲರೂ ಈ ರಾತ್ರಿಯಲ್ಲಿ ಸುಖವಾಗಿ ನಿದ್ರಿಸಿದೆವು. ಅಲ್ಲದೆ ಪರಿಚಾರಕರು ಮೊದಲುಗೊಂಡು ನನ್ನವರೆಗಿನ ಎಲ್ಲರೂ ನಿನ್ನಿಂದ ಕೊಡಲಾದ ಆತಿಥ್ಯವನ್ನು ಸ್ವೀಕರಿಸಿ, ಮಾರ್ಗಾಯಾಸವನ್ನು ಹೋಗಲಾಡಿಸಿಕೊಂಡು ಸಂತುಷ್ಟರಾದೆವು. ॥ ೪-೬ ॥ ಮಧುರವಾದ ಅನೇಕ ಭಕ್ಷ್ಯಗಳನ್ನು ಭುಜಿಸಿದೆವು. ಮಹಾರಮ್ಯಕರವಾದ ಗೃಹಗಳಲ್ಲಿ ವಾಸಮಾಡಿದೆವು. ಇಂತು ನಾವೆಲ್ಲರೂ

ತ್ಮನಃ ॥ ಆಚಕ್ಷ್ವ ಕತಮೋ ಮಾರ್ಗಃ ಕಿಯಾನಿತಿಚ ಶಂಸಮೇ? ॥ ೮ ॥ ಇತಿ ಪೃಷ್ಟಸ್ತು ಭರತಂ ಭ್ರಾತೃದರ್ಶನ ಲಾಲಸಂ ॥ ಪ್ರತ್ಯುವಾಚ ಮಹಾತೇಜಾ ಭರದ್ವಾಜೋ ಮಹಾತಪಾಃ ॥ ೯ ॥ ಭರತಾಽರ್ಧತೃತೀಯೇಷು ಯೋಜನೇಷ್ವಜನೇ ವನೇ ॥ ಚಿತ್ರಕೂಟೋ ಗಿರಿಸ್ತತ್ರ ರಮ್ಯನಿರ್ದರ ಕಾನನಃ ॥ ೧೦ ॥ ಉತ್ತರಂ ಪಾರ್ಶ್ವಮಾಸಾದ್ಯ ತಸ್ಯ ಮಂದಾಕಿನೀ ನದೀ ॥ ಪುಷ್ಪಿತದ್ರುಮ ಸಂಛನ್ನಾ ರಮ್ಯಪುಷ್ಪಿತ ಕಾನನಾ ॥ ೧೧ ॥ ಅನಂತರಂ ತತ್ಸರಿತ ಶ್ಚಿತ್ರಕೂಟಶ್ಚ ಪರ್ವತಃ ॥ ತಯೋಃ ಪರ್ಣಕುಟೀ ತಾತ! ತತ್ರ ತೌ ವಸತೋ ಧ್ರುವಂ ॥೧೨॥

ಶಂಸ - ಹೇಳು, ಇತಿ - ಇಂತೆಂದು, ಉವಾಚ - ಹೇಳಿದನು. ॥ ೮ ॥ ಮಹಾತಪಾಃ - ಬಹುತಪಸ್ವಿಯಾದ, ಮಹಾತೇಜಾಃ - ಬಹಳವಾದ ಬ್ರಹ್ಮತೇಜಸ್ಸುಳ್ಳ, ಭರದ್ವಾಜಃ - ಭರದ್ವಾಜಋಷಿಯು, ಇತಿ- ಈಪರಿಯಾಗಿ, ಪೃಷ್ಟಃ - ಕೇಳಲ್ಪಟ್ಟವನಾಗಿ, ಭ್ರಾತೃದರ್ಶನಲಾಲಸಂ - ಅಣ್ಣನ ದರ್ಶನದಲ್ಲಿ ಆಸಕ್ತನಾದ, ಭರತಂತು - ಭರತನನ್ನು ಕುರಿತು, ಪ್ರತ್ಯುವಾಚ-ಪ್ರತ್ಯುತ್ತರಕೊಟ್ಟನು. ॥ ೯ ॥ ಹೇ ಭರತ- ಎಲೈ ಭರತನೇ, ಅರ್ಧತೃತೀಯೇಷುಯೋಜನೇಷು - ಮೂರುವರೆ ಗಾವುದಗಳು, ಅತೀತೇಷು - ಕಳದರೆ, ಅಜನೇ - ವಿಜನವಾದ, ವನೇ - ವನದಲ್ಲಿ, ತತ್ರ - ಅಲ್ಲಿ, ರಮ್ಯನಿರ್ದರಕಾನನಃ - ಮನೋಹರವಾದ ಪಾಷಾಣಗಳ ಸಂಧಿಸ್ಥಾನಗಳುಳ್ಳ ಅರಣ್ಯವುಳ್ಳ, ಚಿತ್ರಕೂಟಃ - ಚಿತ್ರಕೂಟವೆಂಬ, ಗಿರಿಃ-ಬೆಟ್ಟವು, ವರ್ತತೇ - ಇರುತ್ತದೆ. ॥ ೧೦ ॥ ತಸ್ಯ - ಆ ಚಿತ್ರಕೂಟಪರ್ವತದ, ಉತ್ತರಂಪಾರ್ಶ್ವಂ - ಉತ್ತರಪಾರ್ಶ್ವವನ್ನು, ಆಸಾದ್ಯ - ಹೊಂದಿ, ಮಂದಾಕಿನೀ - ಮಂದಾಕಿನಿಯೆಂದು ಪ್ರಸಿದ್ಧವಾದ, ನದೀ - ನದಿಯು, ಪುಷ್ಪಿತದ್ರುಮಸಂಪನ್ನಾ-ಪುಷ್ಪಗಳುಳ್ಳ ಗಿಡಗಳಿಂದ ತುಂಬಿರುವದಾಗಿ, ರಮ್ಯಪುಷ್ಪಿತಕಾನನಾ- ಇಂಪಾಗಿರುವ ಸಂಜಾತಪುಷ್ಪಗಳುಳ್ಳ ವನಗಳುಳ್ಳದ್ದಾಗಿ, ಅಸ್ತಿ - ಇರುವುದು. ॥ ೧೧ ॥ ತತ್ಸರಿತಃ - ಆ ನದಿಗೆ, ಅನಂತರಂ - ಆಚೆಯಭಾಗದಲ್ಲಿ, ಚಿತ್ರಕೂಟಃ - ಚಿತ್ರಕೂಟವೆಂಬ, ಪರ್ವತಶ್ಚ - ಬೆಟ್ಟವೂ, ಅಸ್ತಿ - ಇದೆ, ಹೇ ತಾತ - ಎಲೈ ಅಪ್ಪನೇ, ತಯೋಃ - ಆ ನದೀಬೆಟ್ಟಗಳ ಮಧ್ಯದಲ್ಲಿ, ಪರ್ಣಕುಟೀ- ಪರ್ಣಶಾಲೆಯು, ಅಸ್ತಿ - ಇರುವುದು, ತತ್ರ - ಆ ಪರ್ಣಶಾಲೆಯಲ್ಲಿ, ತೌ - ಆ ರಾಮಲಕ್ಷ್ಮಣರು, ವಸತಃ - ವಾಸಮಾಡುತ್ತಿರುತ್ತಾರೆ, ಧ್ರುವಂ - ನಿಶ್ಚಯವು. ॥ ೧೨ ॥ ಹೇ ವಾಹಿನೀಪತೇ - ಎಲೈ

ಕಳೆದ ಈ ರಾತ್ರಿಯಲ್ಲಿ ಸುಖವಾಗಿ ನಿದ್ರಿಸಿದೆವು. ಆದುದರಿಂದೆಲೈ ಮಹಾತ್ಮನಾದ ಭರದ್ವಾಜ ಮುನಿಯೆ ! ನಾನು ನಮ್ಮಣ್ಣನಾದ ಶ್ರೀರಾಮನ ಸಮೀಪಕ್ಕೆ ಹೋಗಬೇಕೆಂಬ ಕೋರಿಕೆಯಿಂದೀಗ ಹೊರಟದ್ದೇನೆ. ನಮ್ಮಣ್ಣನಾದ ಆತನ ಬಳಿಗೈದಲು ಆಣತಿಯನ್ನು ನೀಡುವವನಾಗು. ನನ್ನನ್ನು ದಯಾರ್ದ್ರದೃಷ್ಟಿಯಿಂದನೋಡುವವನಾಗು. ಓ ಮುನಿಶ್ರೇಷ್ಠನೆ ! ಮಹಾನುಭಾವನೂ, ಧಾರ್ಮಿಕನೂಆದ ಶ್ರೀರಾಮನು ವಾಸಮಾಡುವ ಆಶ್ರಮಕ್ಕೆ ಯಾವ ಮಾರ್ಗವನ್ನು ಹಿಡಿದು ಹೋಗಬೇಕೊ ಅದನ್ನು ಹೇಳುವವನಾಗು " ಎಂದನು. ॥೭-೮॥ ಈ ಪ್ರಕಾರವಾಗಿ ಹೇಳುತ್ತಿರುವವನೂ, ಜ್ಯೇಷ್ಠಭ್ರಾತೃವಾದ ಶ್ರೀರಾಮನನ್ನುನೋಡಬೇಕೆಂಬ ಕೋರಿಕೆಯುಳ್ಳವನೂಆದ ಭರತಕುಮಾರನನ್ನು ನೋಡಿ ತೇಜೋವಂತನೂ, ತಪೋವಂತರಲ್ಲಿ ಗರಿಷ್ಠನಾದವನೂ ಆದ ಆ ಭರದ್ವಾಜಮುನಿಯು ಆತನನ್ನು ಕುರಿತು ಹೀಗೆಂದನು. "ಅಯ್ಯಾ

ದಕ್ಷಿಣೇನೈವ ಮಾರ್ಗೇಣ ಸವ್ಯ ದಕ್ಷಿಣಮೇವವಾ ॥ ಗಜವಾಜಿ ರಥಾಕೀರ್ಣಾಂ
ವಾಹಿನೀಂ ವಾಹಿನೀಪತೇ! ॥ ೧೩ ॥ ವಾಹಯಸ್ವ ಮಹಾಭಾಗ! ತತೋ
ದ್ರಕ್ಷ್ಯಸಿ ರಾಘವಂ ॥ ಪ್ರಯಾಣಮಿತಿ ತಚ್ಛ್ರುತ್ವಾ ರಾಜರಾಜಸ್ಯ ಯೋಷಿತಃ
॥ ೧೪ ॥ ಹಿತ್ವಾ ಯಾನಾನಿ ಯಾನಾರ್ಹಾ ಬ್ರಾಹ್ಮಣಂ ಪರ್ಯವಾರಯನ್ ॥
ವೇಪಮಾನಾ ಕೃಶಾ ದೀನಾ ಸಹದೇವ್ಯಾ ಸುಮಿತ್ರಯಾ ॥ ೧೫ ॥ ಕೌಸಲ್ಯಾ
ತತ್ರ ಜಗ್ರಾಹ ಕರಾಭ್ಯಾಂ ಚರಣೌ ಮುನೇಃ ॥ ಅಸಮೃದ್ಧೇನ ಕಾಮೇನ
ಸರ್ವಲೋಕಸ್ಯ ಗರ್ಹಿತಾ ॥ ೧೬ ॥ ಕೈಕೇಯಿಯಾ ತಸ್ಯ ಜಗ್ರಾಹ ಚರಣೌ ಸವ್ಯ
ಪತ್ರಪಾ ॥ ತಂ ಪ್ರದಕ್ಷಿಣಮಾಗಮ್ಯ ಭಗವಂತಂ ಮಹಾಮುನಿಂ ॥ ೧೭ ॥

ಸೇನಾಧ್ಯಕ್ಷನೇ, ದಕ್ಷಿಣೇನಮಾರ್ಗೇಣೈವ - ದಕ್ಷಿಣಮಾರ್ಗದಿಂದಲೇ ಆಗಲಿ, ಸವ್ಯದಕ್ಷಿಣಮೇವವಾ- ನೈಋತ್ಯದಿಗ್ಭಾಗವಲ್ಲಿಯಾದರೂ, ಗಜವಾಜಿರಥಕೀರ್ಣಾಂ - ಆನೆಗಳಿಂದಲೂ ಕುದುರೆಗಳಿಂದಲೂ ರಥಗಳಿಂದಲೂ ವ್ಯಾಪ್ತವಾದ, ವಾಹಿನೀಂ - ಸೈನ್ಯವನ್ನು, ವಾಹಯಸ್ವ - ನಡೆಯಿಸಿ, ಹೇ ಮಹಾಭಾಗ - ಎಲೈ ಪುಣ್ಯಶಾಲಿಯೆ, ತತಃ - ಬಳಿಕ, ರಾಘವಂ - ಶ್ರೀರಾಮನನ್ನು, ದ್ರಕ್ಷ್ಯಸಿ - ಕಾಣುವೆ. ॥ ೧೩ ॥ ಇತಿ - ಈಪ್ರಕಾರವಾಗಿ, ತತ್ಪ್ರಯಾಣಂ - ಆ ಪ್ರಯಾಣವನ್ನು, ಶ್ರುತ್ವಾ - ಕೇಳಿ, ಯಾನಾರ್ಹಾಃ - ವಾಹನಕ್ಕೆಯೋಗ್ಯರಾದ, ರಾಜರಾಜಸ್ಯ - ರಾಜಶ್ರೇಷ್ಠನಾದ ದಶರಥರಾಯನ, ಯೋಷಿತಃ - ಹೆಂಗಸರಾದ ಕೌಸಲ್ಯಾದೇವಿಯೇ ಮೊದಲಾದವರು, ಯಾನಾನಿ - ವಾಹನಗಳನ್ನು, ಹಿತ್ವಾ - ಬಿಟ್ಟು, ಬ್ರಾಹ್ಮಣಂ - ಬ್ರಹ್ಮಜ್ಞನಾದ ಭರದ್ವಾಜಋಷಿಯನ್ನು, ಪರ್ಯವಾರಯನ್ - ಸುತ್ತಿಕೊಂಡರು. ॥ ೧೪ ॥ ತತ್ರ - ಆ ಹೆಂಗಸರಲ್ಲಿ, ಕೃಶಾ - ಕೃಶೀಭೂತಳಾದ, ವೇಪಮಾನಾ - ನಡಗುತ್ತಿರುವ, ದೀನಾ - ದೈನ್ಯವುಳ್ಳ, ಕೌಸಲ್ಯಾ - ಕೌಸಲ್ಯಾದೇವಿಯು, ಸುಮಿತ್ರಾದೇವ್ಯಾಸಹ - ಸುಮಿತ್ರಾದೇವಿಯೊಡಗೂಡಿ ಕರಾಭ್ಯಾಂ - ಹಸ್ತಗಳಿಂದ, ಮುನೇಃ - ಭರದ್ವಾಜಋಷಿಯ, ಚರಣೌ - ಪಾದಗಳನ್ನು, ಜಗ್ರಾಹ-ಹಿಡಿದುಕೊಂಡಳು. ॥ ೧೫ ॥ ಕೈಕೇಯಿಯಾ - ಕೈಕೇಯಿಯಾದೇವಿಯು, ಅಸಮೃದ್ಧೇನ - ಸಂಪೂರ್ಣವಾಗದಿರುವ, ಕಾಮೇನ - ಕೋರಿಕೆಯಿಂದ, ಉಪಲಕ್ಷಿತಾ - ಕೂಡಿರುವಳಾಗಿ, ಸರ್ವಲೋಕಸ್ಯ - ಸರ್ವಜನಕ್ಕೂ, ಗರ್ಹಿತಾ - ನಿಂದಿತಳಾದಕಾರಣ, ಸವ್ಯಪತ್ರಪಾ - ನಾಚಿಕೆಯಿಂದೊಡಗೂಡಿ, ತಸ್ಯ - ಆ ಭರದ್ವಾಜಋಷಿಯ, ಚರಣೌ - ಪಾದಗಳನ್ನು, ಜಗ್ರಾಹ - ಹಿಡಿದುಕೊಂಡಳು. ॥ ೧೬ ॥ ಭಗವಂತಂ - ಪೂಜ್ಯ

ಭರತನೆ! ಇಲ್ಲಿಗೆ ಮೂರುವರೆಹರಿದಾರಿದೂರದಲ್ಲಿ ನಿರ್ಜನವಾದ ಅರಣ್ಯವೊಂದುಂಟು. ಆ ಅರಣ್ಯದಲ್ಲಿ ರಮ್ಯಗಳಾದ ಚಿಗುರೆಗಳೂ, ಮೃಗಗಳೂಉಳ್ಳ ಅರಣ್ಯಗಳನ್ನೊಳಗೊಂಡು ಶೋಭಿಸುತ್ತಿರುವ ಚಿತ್ರಕೂಟಪರ್ವತವೆಂಬೊಂದು ಪರ್ವತವಿರುವುದು. ಆ ಚಿತ್ರಕೂಟಪರ್ವತದ ಉತ್ತರದಿಕ್ಕಿನಲ್ಲಿ, ಮನೋಹರಗಳಾದ ಪುಷ್ಪಗಳೊಡಗೂಡಿದ ವೃಕ್ಷಗಳನ್ನೊಳಗೊಂಡುದೂ, ಸುತ್ತಲೂ ಮನೋಹರವಾದ ಅರಣ್ಯಗಳನ್ನೊಳಗೊಂಡಿರುವುದೂ ಆದ ಮಂದಾಕಿನೀ ನದಿಯೊಂದುಂಟು. ವತ್ಸ! ಭರತಾ! ಆ ಮಂದಾಕಿನೀನದಿಯ ಆಚೆಯಕಡೆಗೇ ಆ ಚಿತ್ರಕೂಟವೆಂದು ಹೆಸರುಳ್ಳ ಪರ್ವತವಿರುವುದು. ಆ ಪರ್ವತದಲ್ಲಿ ಒಂದು ಪರ್ಣಶಾಲೆಯು ನಿರ್ಮಿತವಾಗಿರುವುದು. ಆ ಪರ್ಣಶಾಲೆಯಲ್ಲಿ ಶ್ರೀ ಸೀತಾರಾಮಲಕ್ಷ್ಮಣರು ವಾಸಮಾಡುತ್ತಿರು

ಅದೂರಾ ದ್ಭರತಸ್ಯೈವ ತಸ್ಥೌ ದೀನಮನಾ ಸ್ತದಾ ॥ ತತಃ ಪಪ್ರಚ್ಛ ಭರತಂ ಭರದ್ವಾಜೋ ದೃಢವ್ರತಃ ॥ ೧೮ ॥ ವಿಶೇಷಂ ಜ್ಞಾತುಮಿಚ್ಛಾಮಿ ಮಾತೄಣಾಂ ತವ ರಾಘವ! ॥ ಏವಮುಕ್ತಸ್ತು ಭರತೋ ಭರದ್ವಾಜೇನ ಧೀಮತಾ ॥ ೧೯ ॥

ನಾದ, ಮಹಾಮುನಿಂ - ಮಹರ್ಷಿಯಾದ, ತಂ - ಆ ಭರದ್ವಾಜನಿಗೆ, ಪ್ರದಕ್ಷಿಣಂ - ಪ್ರದಕ್ಷಿಣವಾಗಿ, ಆಗಮ್ಯ - ಬಂದು, ಭರತಸ್ಯ - ಭರತನಿಗೆ, ಅದೂರಾದೇವ - ಸಮೀಪದಲ್ಲಿಯೇ, ದೀನಮನಾಃ-ಪರಿತಾಪ ಯುಕ್ತವಾದ ಮನವುಳ್ಳವಳಾಗಿ, ತದಾ - ಆಕಾಲದಲ್ಲಿ, ತಸ್ಥೌ - ನಿಂತಳು. ॥ ೧೭ ॥ ತತಃ - ಬಳಿಕ, ದೃಢವ್ರತಃ-ಅಚಲವಾದ ಬ್ರಹ್ಮಚರ್ಯಾದಿ ವ್ರತಗಳುಳ್ಳ, ಭರದ್ವಾಜಃ-ಭರದ್ವಾಜಋಷಿಯು, ಭರತಂ-ಭರತನನ್ನು ಕುರಿತು, ಹೇ ರಾಘವ - ಎಲೈ ಭರತನೇ, ತವ - ನಿನ್ನ, ಮಾತೄಣಾಂ - ತಾಯಿಯರಲ್ಲಿ, ವಿಶೇಷಂ - ವೈಲಕ್ಷಣ್ಯವನ್ನು, ಜ್ಞಾತುಂ-ತಿಳಿಯಲು, ಇಚ್ಛಾಮಿ-ಇಚ್ಛಿಸುತ್ತೇನೆ,(೧) ಇತಿ-ಇಂತೆಂದು, ಪಪ್ರಚ್ಛ - ಪ್ರಶ್ನೆಮಾಡಿದನು. ॥ ೧೮ ॥ ಏವಂ - ಈಪರಿಯಾಗಿ, ಧೀಮತಾ - ಜ್ಞಾನಿಯಾದ, ಭರದ್ವಾಜೇನ - ಭರದ್ವಾಜಋಷಿಯಿಂದ, ಉಕ್ತಃ - ಹೇಳಲ್ಪಟ್ಟ, ವಚನಕೋವಿದಃ - ಮಾತನಾಡುವದರಲ್ಲಿ

ತಾರೆ. ಮಹಾನುಭಾವನಾದ ಎಲೈ ಭರತನೆ! ಇಲ್ಲಿಂದ ದಕ್ಷಿಣಮಾರ್ಗದಿಂದಲಾದರೂ, ನಿರ್ಋತಿಮಾರ್ಗದಿಂದಲಾದರೂ ಚತುರಂಗಬಲಸಮೇತವಾದ ನಿನ್ನಸೈನ್ಯವನ್ನು ಕರೆದುಕೊಂಡು ಹೋಗು. ಆ ಚಿತ್ರಕೂಟಪರ್ವತದಲ್ಲಿ ರಘುಕುಲೋತ್ತಮನಾದ ಶ್ರೀರಾಮನನ್ನು ನೋಡುತ್ತೀಯೆ." ॥ ೩ ॥ ಈ ರೀತಿ ಭರದ್ವಾಜಮುನಿಯು ನಿರ್ದೇಶಿಸಿದ ಪ್ರಯಾಣಪ್ರದೇಶಗಳನ್ನು ಕೇಳಿ, ದಶರಥಮಹೀಪಾಲನ ಭಾರ್ಯೆಯರು ವಾಹನಗಳನ್ನೇರಿ ಪ್ರಯಾಣಮಾಡಲು ತಕ್ಕವರಾದರು, ತಮ್ಮತಮ್ಮ ವಾಹನಗಳನ್ನು ತೊರೆದು ಪಾದಚಾರಿಗಳಾಗಿ ಆ ಭರದ್ವಾಜಮುನಿಯ ಸುತ್ತಲೂ ನಿಂತವರಾದರು. ॥ ೪ ॥ ಆಗ ಸುಮಿತ್ರಾದೇವಿಯೊಡಗೂಡಿದವಳೂ, ಪುತ್ರಶೋಕದಿಂದ ಕೃಶಿಸಿಹೋದವಳೂ, ಅದುದರಿಂದಲೇ ನಡುಗುತ್ತಿರುವವಳೂ ಆದ ಕೌಸಲ್ಯಾದೇವಿಯು ಆ ಭರದ್ವಾಜಮುನಿವರನ ಪಾದಗಳನ್ನು ಹಿಡಿದುಕೊಂಡು ನಮಸ್ಕಾರ ಮಾಡಿದಳು. ॥ ೧೫ ॥ ಅಲ್ಲದೆ ಆ ಸಮಯದಲ್ಲಿ, ಸಫಲವಾಗದ ಕೋರಿಕೆಯುಳ್ಳ ಕೈಕೇಯಿಯೂ, ತಾನುಮಾಡಿದ ಕ್ರೂರ ಕಾರ್ಯಗಳನ್ನು ಕುರಿತು ನಾಚಿಕೆಪಟ್ಟು ಆ ಮುನಿವರನ ಪಾದಗಳನ್ನು ಹಿಡಿದು ನಮಸ್ಕಾರಮಾಡಿದಳು. ಅಲ್ಲದೆಯಾದೇವಿಯು ಆ ಸಮಯದಲ್ಲಿ ದೀನವಾದ ಮನವುಳ್ಳವಳಾಗಿ ಮಹಾತ್ಮನಾದ ಭರದ್ವಾಜಮುನಿವರನಿಗೆ ಪ್ರದಕ್ಷಿಣನಮಸ್ಕಾರವನ್ನುಮಾಡಿ ಭರತನ ಸಮೀಪದಲ್ಲಿ ಸ್ವಲ್ಪ ದೂರದಲ್ಲಿ ನಿಂತಿದ್ದಳು. ॥೧೬-೧೭॥ ಆ ಬಳಿಕ ನಿಶ್ಚಲವಾದ ತಪಸ್ಸೇ ವ್ರತವಾ


ಟಿ. (೧) ಇಲ್ಲಿ ಮುನಿಭಾವ ಬೋಧಿನೀಕಾರರು ಹೀಗೆ ಹೇಳುತ್ತಾರೆ. "ಮಾತೄಣಾಂ ವಿಶೇಷಂ ಜ್ಞಾತುಮಿಚ್ಛಾಮಿ" ಎಂಬ ಭರದ್ವಾಜರ ಪ್ರಶ್ನೆಯು ಭರತನನ್ನು ಪರೀಕ್ಷಿಸಲೋಸುಗವೆ. ಇಲ್ಲದಿದ್ದರೆ ಮೊದಲೇ ಭರತನ ಭಾವವನ್ನು ತಿಳಿದುಕೊಂಡ ಮುನಿಯು ಈ ಪ್ರಶ್ನೆಯನ್ನು ಹಾಕಬೇಕಾಗಿರಲಿಲ್ಲ. ಅಲ್ಲದೆ ಭರತಕುಮಾರನಿಗೆ ನಿಜಜನನಿಯಾದ ಕೈಕೇಯಿಯಲ್ಲಿ ತುಚ್ಛಭಾವವಿರುವುದೆಂದು ಯೋಗದೃಷ್ಟಿಯಿಂದರಿತ ಮುನಿಯು ಆ ಭಾವವನ್ನು ದೂರಮಾಡಲು ಈ ಪ್ರಶ್ನೆಯನ್ನು ಹಾಕಿರಬಹುದೆಂದು ತೋರುತ್ತದೆ.

ಉವಾಚ ಪ್ರಾಂಜಲಿ ರ್ಭೂತ್ವಾ ವಾಕ್ಯಂ ವಚನಕೋವಿದಃ ॥ ಯಾಮಿಮಾಂ
ಭಗವನ್! ದೀನಾಂ ಶೋಕಾನಶನ ಕರ್ಶಿತಾಂ ॥ ೨೦ ॥ ಪಿತುರ್ಹಿ ಮಹಿಷೀಂ
ದೇವೀಂ ದೇವತಾಮಿವ ಪಶ್ಯಸಿ ॥ ಏಷಾ ತಂ ಪುರುಷವ್ಯಾಘ್ರಂ ಸಿಂಹವಿಕ್ರಾಂತ
ಗಾಮಿನಂ ॥ ೨೧ ॥ ಕೌಸಲ್ಯಾ ಸುಷುವೇ ರಾಮಂ ಧಾತಾರ ಮದಿತಿರ್ಯಥಾ ॥
ಅಸ್ಯಾ ವಾಮಭುಜಂ ಶ್ಲಿಷ್ಟಾ ಯೈಷಾ ತಿಷ್ಠತಿ ದುರ್ಮನಾಃ ॥೨೨॥ ಕರ್ಣಿಕಾ

ಚತುರನಾದ, ಭರತಸ್ತು - ಭರತನಾದರೆ, ಪ್ರಾಂಜಲಿರ್ಭೂತ್ವಾ - ಅಂಜಲಿಬದ್ಧನಾಗಿ, ವಾಕ್ಯಂ - ಮಾತನ್ನು, ಉವಾಚ - ನುಡಿದನು, ಹೇ ಭಗವನ್ - ಎಲೈ ಪೂಜ್ಯನೇ! ಇಮಾಂ - ಈ ಇದುರಾಗಿರುವ, ದೀನಾಂ - ಪರಿತಪಿಸುತ್ತಿರುವ, ಶೋಕಾನಶನಕರ್ಶಿತಾಂ - ಪುತ್ರವ್ಯಸನದಿಂದಲೂ ಉಪವಾಸವ್ರತದಿಂದಲೂ ಕೃಶೀಭೂತಳಾದ, ದೇವತಾಮಿವ - ದೇವತೆಯಂತಿರುವ, ಪಿತುಃ - ನಮ್ಮ ತಂದೆಗೆ, ಮಹಿಷೀಂ - ರಾಣಿಯಾದ, ಯಾಂದೇವೀಂ - ಯಾವಪಟ್ಟಣದ ರಾಣಿಯನ್ನು, ಪಶ್ಯಸಿ-ನೋಡುತ್ತೀಯೋ, ಏಷಾಂ- ಇವಳೇ, ಕೌಸಲ್ಯಾ - ಕೌಸಲ್ಯಾದೇವಿಯು, ಸಿಂಹವಿಕ್ರಾಂತಗಾಮಿನಂ- ಸಿಂಹದಂತೆ ಪರಾಕ್ರಮಯುಕ್ತವಾಗಿ, ಗಾಮಿನಂ - ಹೋಗುತ್ತಿರುವ, ಪುರುಷವ್ಯಾಘ್ರಂ - ಪುರುಷಶ್ರೇಷ್ಠನಾದ, ತಂರಾಮಂ - ಆ ಶ್ರೀರಾಮನನ್ನು, ಅದಿತಿಃ - ಅದಿತೀದೇವಿಯು, ಧಾತಾರಂಯಥಾ - ಶ್ರೀಮಹಾವಿಷ್ಣುವನ್ನಂತೆ, ಸುಷುವೇ-ಹೆತ್ತಳು. ॥ ೨೧ ॥ ಅಸ್ಯಾಃ - ಈ ಕೌಸಲ್ಯಾದೇವಿಯ, ವಾಮಭುಜಂ - ಎಡಭುಜವನ್ನು, ಶ್ಲಿಷ್ಟಾ - ಅಪ್ಪಿಕೊಂಡಿರುವ, ದುರ್ಮನಾಃ - ಕೆಟ್ಟ ಮನಸ್ಸುಳ್ಳ, ಏಷಾ - ಈ ಸಮೀಪದಲ್ಲಿರುವ, ವನಾಂತರೇ - ವನಮಧ್ಯದಲ್ಲಿ, ಶೀರ್ಣಪುಷ್ಪಾ - ಮುಗ್ಗಿಹೋದ ಹೂವುಗಳುಳ್ಳ, ಕರ್ಣಿಕಾರಸ್ಯ - ಬೆಟ್ಟದ ತಾವರೇಗಿಡದ, ಶಾಖೇವ - ಕೊಂಬೆಯಂತೆ, ಯಾ - ಯಾವಳು, ತಿಷ್ಠತಿ - ಇರುವಳೋ. ॥ ೨೨ ॥ ಏತಸ್ಯಾಃದೇವ್ಯಾಃ - ಈ ಸುಮಿತ್ರಾದೇವಿಯ, ಸುತೌ - ಮಕ್ಕಳು, ದೇವವರ್ಣಿನೌ -

---

ಗುಳ್ಳ ಭರದ್ವಾಜಮುನಿಯು ಆ ಭರತನನ್ನುಕುರಿತು, "ಎಲೈ ರಘುವಂಶೋತ್ಪನ್ನನೆ; ಭರತನೆ! ನಿನ್ನ ತಾಯಿಯರೆಲ್ಲರೂ ಇವರೇ ಎಂದು ತೋರುತ್ತಿರುವುದು. ॥ ೧೮ ॥ ಆದುದರಿಂದ ಇವರ ಹೆಸರುಗಳನ್ನು ಬೇರೆಬೇರೆಯಾಗಿ ತಿಳಿದುಕೊಳ್ಳಬೇಕೆಂದು ಅಭಿಲಕ್ಷಿಸುತ್ತಿದ್ದೇನಾದ ಕಾರಣ ಈ ವೃತ್ತಾಂತವನ್ನು ವಿಶದವಾಗಿ ತಿಳುಹಿಸುವವನಾಗು"ಎಂದು ಹೇಳಿದನು. ॥೧೯ ॥ ಈರೀತಿಯಾಗಿ ಮಹಾಬುದ್ಧಿಮಂತನಾದ ಭರದ್ವಾಜಮಹಾಮುನಿಯು ಕೇಳಲು, ಮಾತನಾಡುವುದರಲ್ಲಿ ಮಹಾಚತುರನಾದ ಭರತನು ಕೈಗಳನ್ನು ಜೋಡಿಸಿಕೊಂಡು ಹೀಗೆಂದನು. "ಎಲೈ ಮಹಾತ್ಮನಾದ ಭರದ್ವಾಜಮುನಿವರೇಣ್ಯನೆ! ಈ ನನ್ನ ತಾಯಿಯರಲ್ಲಿ ದೀನಳೂ, ದುಃಖದಿಂದಲೂ, ಉಪವಾಸವ್ರತಗಳಿಂದಲೂ ನಶಿಸಿಹೋದವಳೂ, ದೇವತೆಯಂತೆ ಪ್ರಕಾಶಿಸುತ್ತಿರುವವಳೂ ಆದ ಈ ಮಹಾನುಭಾವಳು " ಅದಿತಿಯು ಬ್ರಹ್ಮದೇವನನ್ನು ಪುತ್ರನನ್ನಾಗಿ ಪಡೆದಂತೆ " ಪುರುಷೋತ್ತಮನೂ, ಸಿಂಹದಂತೆ ಗಂಭೀರನಾದ ನಡಿಗೆಯುಳ್ಳವನೂ ಆದ ಶ್ರೀರಾಮನನ್ನುಮಗನನ್ನಾಗಿಪಡೆದಳು. ಈಕೆಯೇ ದಶರಥರಾಯನ ಜ್ಯೇಷ್ಠಭಾರ್ಯೆಯಾದ ಕೌಸಲ್ಯಾದೇವಿಯೆಂದು ತಿಳಿ. ಅರಣ್ಯಗಳಲ್ಲಿ ಉದುರಿದ ಹೂಗಳುಳ್ಳರೆಂಬೆಗಳಂತೆ ಕಾಂತಿವಿಹೀನಳೂ, ಕೌಸಲ್ಯಾದೇವಿಯ ವಾಮಭಾಗದಲ್ಲಿ ನಿಂತುಕೊಂಡಿರುವವಳೂ, ವ್ಯಸನಪಡುತ್ತಿರುವವಳೂ



माता अभिज्ञान

A 7515—Lakshmi Art, Bombay, 8.

ರಸ್ಯ ಶಾಖೇವ ಶೀರ್ಣ ಪುಷ್ಪಾ ವನಾಂತರೇ ॥ ಏತಸ್ಯಾಸ್ತು ಸುತೌ ದೇವ್ಯಾಃ ಕುಮಾರೌ ದೇವವರ್ಣಿನೌ ॥ ೨೩ ॥ ಉಭೌ ಲಕ್ಷ್ಮಣಶತ್ರುಘ್ನೌ ವೀರೌ ಸತ್ಯ ಪರಾಕ್ರಮೌ ॥ ಯಸ್ಯಾಃ ಕೃತೇ ನರವ್ಯಾಘ್ರೌ ಜೀವನಾಶ ಮಿತೋ ಗತೌ ॥೨೪॥ ರಾಜಾ ಪುತ್ರವಿಹೀನಶ್ಚ ಸ್ವರ್ಗಂ ದಶರಥೋ ಗತಃ ॥ ಕ್ರೋಧನಾಮಕೃತ ಪ್ರಜ್ಞಾಂ ದೃಪ್ತಾಂ ಸುಭಗಮಾನಿನೀಂ ॥ ೨೫ ॥ ಐಶ್ವರ್ಯಕಾಮಾಂ ಕೈಕೇಯೀ ಮನಾರ್ಯಾ ಮಾರ್ಯರೂಪಿಣೀಮ್ ॥ ಮಮೈತಾಂ ಮಾತರಂ ವಿದ್ಧಿ! ನೃಶಂ

ದೇವತಾತೇಜಸ್ಸಿನಂತೆ ಕಾಂತಿಯುಳ್ಳ, ಕುಮಾರೌ - ಕೌಮಾರವಯಸ್ಸುಳ್ಳ, ವೀರೌ-ಶೂರರಾದ, ಸತ್ಯ ಪರಾಕ್ರಮೌ - ಸತ್ಯದಿಂದಲೇ ಶತ್ರುನಿಗ್ರಾಹಕರಾದ, ಲಕ್ಷ್ಮಣಶತ್ರುಘ್ನೌ - ಲಕ್ಷ್ಮಣಶತ್ರುಘ್ನ ರೆಂಬ, ಉಭೌ - ಇಬ್ಬರೂ, (ವರ್ತೇತೇ - ಇರುತ್ತಾರೆ.) ॥ ೨೩ ॥ ಯಸ್ಯಾಃಕೃತೇ - ಯಾವಳ ನಿಮಿತ್ತವಾಗಿ, ನರವ್ಯಾಘ್ರೌ - ಪುರುಷಶ್ರೇಷ್ಠರಾದ ರಾಮಲಕ್ಷ್ಮಣರಿಬ್ಬರೂ, ಇತಃ - ಇಲ್ಲಿಂದ, ಜೀವನಾಶಂ - ಪ್ರಾಣನಾಶಕರವಾದ ದಂಡಕಾರಣ್ಯವನ್ನು ಕುರಿತು, ಗತೌ - ಹೋದರೋ, ದಶ ರಥೋರಾಜಾ - ದಶರಥರಾಯನು, ಪುತ್ರವಿಹೀನಶ್ಚ - ಮಕ್ಕಳಿಂದ ವಿರಹಿತನಾಗಿ, ಸ್ವರ್ಗಂ - ಸ್ವರ್ಗವನ್ನು, ಗತಃ - ಹೊಂದಿದನೋ, ಕ್ರೋಧನಾಂ - ಕೋಪಿಷ್ಠಳಾದ, ಅಕೃತಪ್ರಜ್ಞಾಂ - ಅಶಿಕ್ಷಿತ ಬುದ್ಧಿಯುಳ್ಳ, ದೃಪ್ತಾಂ - ಗರ್ವಿತಳಾದ, ಸುಭಗಮಾನಿನೀಂ - ತನ್ನನ್ನು ಸುಂದರಿಯನ್ನಾಗಿ ತಿಳಿದುಕೊಂಡಿರುವ, ಐಶ್ವರ್ಯಕಾಮಾಂ - ಐಶ್ವರ್ಯವನ್ನೇ ಆಶಿಸುತ್ತಿರುವ, ಅನಾರ್ಯಾಂ - ಅಪೂಜ್ಯಳಾದ, ಆರ್ಯರೂಪಿಣೀಂ - ಪೂಜ್ಯವಾದ ಆಕಾರವುಳ್ಳ, ಏತಾಂ - ಈ ಇದಿರಾಗಿರುವ, ನೃಶಂಸಾಂ - ಘಾತುಕಳಾದ, ಪಾಪನಿಶ್ಚಯಾಂ - ಪಾಪದಲ್ಲೇ ನಿಶ್ಚಯವಾದ ಮನವುಳ್ಳ, ಮಮ - ನನ್ನ, ಮಾತರಂ - ತಾಯಿಯನ್ನು, ಕೈಕೇಯೀಂ - ಕೈಕೇಯೀದೇವಿಯನ್ನಾಗಿ, ವಿದ್ಧಿ - ತಿಳಿದವ ನಾಗು, ಆತ್ಮನಃ - ನನಗೆ, ಮಹದ್ವ್ಯಸನಂ - ಮಹಾದುಃಖವನ್ನು, ಯತೋಮೂಲಂ - ಯಾವ

ಆದ ಈಕೆಯೇ ಸುಮಿತ್ರಾದೇವಿಯು. ಅಶ್ವಿನೀದೇವತೆಗಳಿಗೆ ಸಮಾನವಾದವರೂ, ವೀರರೂ, ಸಫಲವಾದ ಪರಾಕ್ರಮವುಳ್ಳವರೂ ಆದ ಲಕ್ಷ್ಮಣಶತ್ರುಘ್ನರಿಬ್ಬರೂ ಈ ಮಹಾನುಭಾವಳ ಪುತ್ರರು.॥೨೨-೨೩॥ ಕೇಳೈ ಮುನಿಶ್ರೇಷ್ಠನೆ! ಯಾವಳನಿಮಿತ್ತವಾಗಿ ಪುರುಷೋತ್ತಮರಾದ ಶ್ರೀರಾಮಲಕ್ಷ್ಮಣರು ಅಯೋಧ್ಯೆಯಿಂದ ಜೀವನಾಶವನ್ನು ಹೊಂದಿದರೋ, ದಶರಥಮಹೀ ಪಾಲನು ಯಾವಳನಿಮಿತ್ತವಾಗಿ ಪುತ್ರವಿಹೀನನಾಗಿ ಮರಣಹೊಂದಿದನೋ, ಅಂತಹ ಪಾಪಾ ತ್ಮಳೂ, ಎಲ್ಲ ಕಾಲಗಳಲ್ಲಿಯೂ ಕೋಪವನ್ನೊಳಗೊಂಡಿರುವವಳೂ, ಸಫಲವಾದ ಬಯಕೆಗಳು ಳ್ಳವಳೂ, ತಾನೇ ಸೌಂದರ್ಯವತಿಯೆಂದುಗರ್ವಪಡುವವಳೂ, ಐಶ್ವರ್ಯಬೇಕೆಂಬ ಸಂಕಲ್ಪ ವುಳ್ಳವಳೂ, ದುಷ್ಪ್ರವರ್ತನೆಯುಳ್ಳವಳೂ, ಪೂಜ್ಯಸ್ತ್ರೀರೂಪದಂತಹ ರೂಪವುಳ್ಳವಳೂ, ಘಾತುಕಳೂ, ಪಾಪವನ್ನುಮಾಡುವುದರಲ್ಲಿಯೇನಿಶ್ಚಯವುಳ್ಳವಳೂ, ಮದಿಸಿಹೋದ ಸ್ವಭಾವ ವುಳ್ಳವಳೂ ಆದ ಈ ಸ್ತ್ರೀಯೇ ಕೈಕೇಯಿಯೆಂದು ಕರೆಯಲ್ಪಡುತ್ತಾಳೆ. ಈಕೆಯು ನನ್ನ ತಾಯಿಯು. ಈಗ ನಮಗುಂಟಾಗಿರುವ ಎಲ್ಲ ಕಷ್ಟಗಳಿಗೂ ಈಕೆಯೇ ಮೂಲಕಾರಣಳು" ॥೨೪-೨೬॥ ಈರೀತಿ ನಿಷ್ಕಲ್ಮಷನಾದ ಭರತನು ತಾಯಿಯರ ವೃತ್ತಾಂತವೆಲ್ಲವನ್ನೂ, ಆ ಭರ

ಸಾಂ ಪಾಪ ನಿಶ್ಚಯಾಮ್ ॥ ೨೬ ॥ ಯತೋ ಮೂಲಂಹಿ ಪಶ್ಯಾಮಿ ವ್ಯಸನಂ ಮಹದಾತ್ಮನಃ ॥ ಇತ್ಯುಕ್ತ್ವಾ ನರಶಾರ್ದೂಲೋ ಬಾಷ್ಪಗದ್ಗದಯಾ ಗಿರಾ ॥ ೨೭ ॥ ಸನಿಶಶ್ವಾಸ ತಾಮ್ರಾಕ್ಷೋ ನಾಗಃ ಕ್ರುದ್ಧ ಇವ ಶ್ವಸನ್ ॥ ಭರದ್ವಾಜೋ ಮಹರ್ಷಿಸ್ತಂ ಬ್ರುವಂತಂ ಭರತಂ ತಥಾ ॥೨೮॥ ಪ್ರತ್ಯುವಾಚ ಮಹಾಬುದ್ಧಿ ರಿದಂ ವಚನ ಮರ್ಥವತ್ ॥ ನದೋಷೇಣಾಽವಗಂತವ್ಯಾ ಕೈಕೇಯಿಾ ಭರತ! ತ್ವಯಾ ॥ ೨೯॥ ರಾಮಪ್ರವ್ರಾಜನಂ ಹ್ಯೇತ ತ್ಸುಖೋದರ್ಕಂ ಭವಿಷ್ಯತಿ ॥ ದೇವಾನಾಂ ದಾನವಾನಾಂಚ ಋಷೀಣಾಂ ಭಾವಿತಾತ್ಮನಾಮ್ ॥೩೦॥

ಕೈಕೇಯಿಾದೇವಿಯೇ ಮೂಲವುಳ್ಳದನ್ನಾಗಿ, ಪಶ್ಯಾಮಿ - ಕಾಣುತ್ತೇನೆಯಷ್ಟೆ. ॥ ೨೪-೨೬ ॥ ಇತಿ - ಈ ಪರಿಯಾಗಿ, ನರಶಾರ್ದೂಲಃ - ಪುರುಷಶ್ರೇಷ್ಠನಾದ ಭರತನು, ಬಾಷ್ಪಗದ್ಗದಯಾ - ಕಂಬನಿಯಿಂದ ವಿಸ್ವರವಾದ, ಗಿರಾ - ಮಾತಿನಿಂದ, ಉಕ್ತ್ವಾ - ಹೇಳಿ, ಸಃ - ಆ ಭರತನು, ತಾಮ್ರಾಕ್ಷಃ - ಕೆಂಗಣ್ಣುಗಳುಳ್ಳವನಾಗಿ, ಕ್ರುದ್ಧಃ - ಕೋಪಗೊಂಡ, ನಾಗಇವ - ಸರ್ಪದಂತೆ, ಶ್ವಸನ್ - ನಿಟ್ಟುಸಿರುಬಿಡುತ್ತ, ನಿಶಶ್ವಾಸ - ದೀರ್ಘವಾಗಿ ಉಸಿರು ಬಿಡುತ್ತಿದ್ದನು. ॥ ೨೭ ॥ ಮಹರ್ಷಿಃ - ಮಹಾಮುನಿಯಾದ, ಮಹಾಬುದ್ಧಿಃ - ಮಹಾಪ್ರಜ್ಞಾಶಾಲಿಯಾದ, ಭರದ್ವಾಜಃ - ಭರದ್ವಾಜಋಷಿಯು, ತಥಾ - ಆ ಪರಿಯಾಗಿ, ಬ್ರುವಂತಂ - ಹೇಳುತ್ತಿರುವ, ತಂಭರತಂ - ಆ ಭರತನನ್ನು ಕುರಿತು, ಅರ್ಥವತ್ - ಪ್ರಯೋಜನಕಾರಿಯಾದ, ಇದಂವಚನಂ - ಈ ಮಾತನ್ನು, ಪ್ರತ್ಯುವಾಚ - ಹೇಳಿದನು. ॥ ೨೮ ॥ ಹೇ ಭರತ - ಎಲೈ ಭರತನೇ, ತ್ವಯಾ - ನಿನ್ನಿಂದ, ಕೈಕೇಯಿಾದೇವಿಯು, ದೋಷೇಣ - ದೋಷಬುದ್ಧಿಯಿಂದ, ನಾವಗಂತವ್ಯಾ - ತಿಳಿದುಕೊಳ್ಳತಕ್ಕವಳಲ್ಲ, ಏತತ್ - ಯಾವ ಕಾರಣ, ಈ ರಾಮಪ್ರವ್ರಾಜನಂ - ಶ್ರೀರಾಮನ ವನವಾಸವನ್ನು ಕುರಿತು ಹೊರಡಿಸುವಿಕೆಯು, ದೇವಾನಾಂ - ದೇವತೆಗಳಿಗೂ, ದಾನವಾನಾಂ - ರಾಕ್ಷಸರಿಗೂ, ಭಾವಿತಾತ್ಮನಾಂ - ಆತ್ಮಧ್ಯಾನವುಳ್ಳ, ಋಷೀಣಾಂಚ - ಋಷಿಗಳಿಗೂ, ಸುಖೋದರ್ಕಂ - ಸುಖನೇ ಉತ್ತರಫಲವಾಗುಳ್ಳುದು, ಭವಿಷ್ಯತಿ - ಆಗುವುದೊ, ಇಹ - ಈಗ, ರಾಮಪ್ರವ್ರಾಜನಾತ್ - ಶ್ರೀರಾಮನ ಹೊರಡಿಸುವಿಕೆಯಿಂದ, ಹಿತ

ದ್ವಾಜಮುನಿವರನಿಗೆ ಬಹು ನಮ್ರಭಾವಯುಕ್ತನಾಗಿ ತಿಳುಹಿದನು. ಹೀಗೆ ಹೇಳಿ ಪುರುಷೋತ್ತಮನಾದ ಆ ಭರತನು ಕಣ್ಣೀರಿಡುತ್ತಗದ್ಗದಸ್ವರಭರಿತನಾದನು. ಅಲ್ಲದೆ ಕೆಂಪಡರಿದಕಂಗಳುಳ್ಳವನಾಗಿ ಕೋಪವಾಂತಗಜದಂತೆ ನಿಟ್ಟುಸಿರುಗಳನ್ನು ಬಿಡುತ್ತಿದ್ದನು. ಈ ಪ್ರಕಾರವಾಗಿ ಮಾತನಾಡುತ್ತಿರುವ ಭರತನನ್ನು ನೋಡಿ ಮಹಾಬುದ್ಧಿಶಾಲಿಯಾದ ಆ ಭರದ್ವಾಜಮುನಿಯು ಮೃದುಮಧುರವಾದ ವಚನರಚನೆಯಿಂದ ಆತನನ್ನು ಕುರಿತು, "ಎಲೈ ಭರತನೆ! ನೀನು ನಿನ್ನ ತಾಯಿಯಾದ ಈ ದೇವಿಯನ್ನು ದೋಷವಂತಳೆಂದೆಣಿಸಬೇಡ. ಈಕೆಯು ಶ್ರೀರಾಮನನ್ನು ಅರಣ್ಯಕ್ಕೆಕಳುಹಿ ಲೋಕಕ್ಕೇ ಮಹದುಪಕಾರವನ್ನು ಮಾಡಿದ್ದಾಳೆ. ಆ ಉಪಕಾರವೆಲ್ಲ ಇನ್ನು ಮೇಲೆ ಎಲ್ಲರಿಗೂ ಚೆನ್ನಾಗಿ ತಿಳಿದುಬರುತ್ತದೆ. ಶ್ರೀರಾಮನು ದಂಡಕಾರಣ್ಯಕ್ಕೆಹೋದುದು ದೇವತೆಗಳಿಗೂ, ರಾಕ್ಷಸರಿಗೂ, ಮಹಾನುಭಾವರೂ, ಪರಮಾತ್ಮಧ್ಯಾನಾಸಕ್ತರಾದವರೂ ಆದ ಋಷಿಗಳಿಗೂ, ಬಹಳವಾದ ಕ್ಷೇಮವನ್ನುಂಟುಮಾಡುತ್ತದೆ. ಅಂತು

ಹಿತಮೇವ ಭವಿಷ್ಯದ್ಧಿ! ರಾಮ ಪ್ರವ್ರಾಜನಾದಿಹ ॥ ಅಭಿವಾದ್ಯತು ಸಂಸಿದ್ಧಃ ಕೃತ್ವಾ ಚೈನಂ ಪ್ರದಕ್ಷಿಣಮ್ ॥ ೩೦ ॥ ಆಮಂತ್ರ್ಯ ಭರತಸ್ಸೈನ್ಯಂ ಯುಜ್ಯತಾ ಮಿತ್ಯಚೋದಯತ್ ॥ ತತೋ ವಾಜಿರಥಾ ಯುಕ್ತಾ ದಿವ್ಯಾ ಹೇಮ ಪರಿಷ್ಕೃತಾಃ ॥ ೩೨ ॥ ಅಧ್ಯಾರೋಹ ತ್ಪ್ರಯಾಣಾರ್ಥೀ ಬಹೂನ್ಬಹುವಿಧೋಜನಃ ॥ ಗಜಕನ್ಯಾ ಗಜಾಶ್ಚೈವ ಹೇಮಕಕ್ಷ್ಯಾಃ ಪತಾಕಿನಃ ॥ ೩೩ ॥ ಜೀಮೂತಾಇವ ಘರ್ಮಾಂತೇ ಸಘೋಷಾ ಸ್ಸಂಪ್ರತಸ್ಥಿರೇ ॥ ವಿವಿಧಾನ್ಯಪಿ ಯಾನಾನಿ ಮಹಾಂತಿಚ ಲಘೂನಿಚ ॥ ೩೪ ॥ ಪ್ರಯಯು

ಮೇವ - ಇಷ್ಟವೇ, ಭವಿಷ್ಯದ್ಧಿ - ಆಗುತ್ತದೆಯಷ್ಟೆ. ॥ ೩೦ ॥ ಭರತಃ - ಭರತನು, ಸಂಸಿದ್ಧಃ - ಹೊಂದಲ್ಪಟ್ಟ ಆಶೀರ್ವಾದವುಳ್ಳವನಾಗಿ, ಏನಂ - ಈ ಭರದ್ವಾಜಋಷಿಯನ್ನು, ಪ್ರದಕ್ಷಿಣಂಕೃತ್ವಾಚ-ಪ್ರದಕ್ಷಿಣವನ್ನೂ ಮಾಡಿ, ಆಮಂತ್ರ್ಯ - ಅಪ್ಪಣೆ ತೆಗೆದುಕೊಂಡು, ಸೈನ್ಯಂ - ದಂಡನ್ನು, ಯುಜ್ಯತಾಮಿತಿ - ಸನ್ನದ್ಧವಾಗಲೆಂದು, ಅಚೋದಯತ್ - ಆಜ್ಞಾಪಿಸಿದನು. ॥ ೩೧ ॥ ತತಃ - ಬಳಿಕ, ಪ್ರಯಾಣಾರ್ಥೀ-ಪ್ರಯಾಣವನ್ನಪೇಕ್ಷಿಸುತ್ತಿರುವ, ಬಹುವಿಧಃ - ಅನೇಕ ಬಗೆಯಾದ, ಜನಃ-ಜನವು, ಯುಕ್ತಾಃ - ಕಟ್ಟಲ್ಪಟ್ಟ, ದಿವ್ಯಾಃ - ಮನೋಹರಗಳಾದ, ಹೇಮಪರಿಷ್ಕೃತಾಃ - ಭಂಗಾರದ ಹಗ್ಗಗಳಿಂದ ಅಲಂಕರಿಸಲ್ಪಟ್ಟ, ಬಹೂನ್ - ಅನೇಕ ವಿಧಗಳಾದ, ವಾಜಿರಥಾನ್ - ಕುದುರೆಗಳನ್ನು ರಥಗಳನ್ನು, ಅಧ್ಯಾರೋಹತ್ - ಏರಿತು. ॥ ೩೨ ॥ ಹೇಮಕಕ್ಷ್ಯಾಃ - ಭಂಗಾರದ ವಿಕಾರವಾದ ಕಟ್ಟುವ ಹಗ್ಗಗಳುಳ್ಳ, ಪತಾಕಿನಃ ಧ್ವಜಗಳಿಂದ ಕೂಡಿರುವ, ಗಜಕನ್ಯಾಃ - ಹೆಣ್ಣಾನೆಗಳು, ಗಜಾಶ್ಚೈವ - ಗಂಡಾನೆಗಳು, ಘರ್ಮಾಂತೇ - ವರ್ಷಾಕಾಲದಲ್ಲಿ, ಸಘೋಷಾಃ - ಘರ್ಜನೆಯಿಂದೊಡಗೂಡಿದ, ಜೀಮೂತಾಇವ - ಮೇಘಗಳಂತೆ, ಸಂಪ್ರತಸ್ಥಿರೇ - ತೆರಳಿದವು. ॥ ೩೩ ॥ ಮಹಾಂತಿ - ದೊಡ್ಡವುಗಳಾದ, ಲಘೂನಿಚ - ಚಿಕ್ಕವುಗಳಾದ, ಸುಮಹಾರ್ಹಾಣಿ - ಅಮೂಲ್ಯಗಳಾದ, ವಿವಿಧಾನಿ - ನಾನಾ ಬಗೆಗಳಾದ, ಯಾನಾನಿ - ವಾಹನಗಳು, ಪ್ರಯಯುಃ - ಹೊರಟವು, ಪದಾತಯಃ - ಕಾಲ್ಬಲಗಳು, ಪಾದೈರೇವ - ಪಾದಚಾರಿಗಳಾಗಿಯೇ, ಪ್ರಯಯುಃ - ಹೊರಟರು. ॥೩೪॥ ಅಥ - ಬಳಿಕ, ಕೌಸಲ್ಯಾ

ಶ್ರೀರಾಮನ ವನವಾಸವು ಬಹಳವಾದಕ್ಷೇಮಕ್ಕೇ ಎಂದು ತಿಳಿ,'' ಎಂದನು.॥೨೭-೩೦॥ ಈರೀತಿಯಾಗಿ ನುಡಿದ ಆ ಭರದ್ವಾಜಮುನಿಯ ಮಾತುಗಳನ್ನು ಕೇಳಿದ ಭರತನು ಆತನಿಗೆ ಪ್ರದಕ್ಷಿಣ ನಮಸ್ಕಾರವನ್ನುಮಾಡಿ ಆಶೀರ್ವಾದವನ್ನುಹೊಂದಿ, ಪುನಃ ನಮಸ್ಕಾರಮಾಡಿ ಅಲ್ಲಿಂದ ಮುಂದಕ್ಕೆ ಪಯಣಬೆಳೆಯಿಸಲು ತನ್ನ ಸೇನೆಯೆಲ್ಲವನ್ನೂ ಕರೆದು ಪ್ರಯಾಣಸನ್ನದ್ಧರಾಗಿರೆಂದು ಆಜ್ಞಾಪಿಸಿದನು. ॥೩೧॥ ಆಗಲಾ ಜನರೆಲ್ಲರೂ ಪಯಣವಾಗಲು ಸಮ್ಮತಿಸಿದವರಾಗಿ, ಭಂಗಾರದಿಂದಲಂಕೃತವಾದುವೂ, ಶ್ರೇಷ್ಠವಾದುವೂ ಸನ್ನದ್ಧವಾದುವೂ ಆದ ಕುದುರೆಗಳೊಡಗೂಡಿದ ರಥಗಳನ್ನೇರಿದರು ಆ ಸಮಯದಲ್ಲಿ ಹೆಣ್ಣಾನೆಗಳೂ ಗಂಡಾನೆಗಳೂ, ಸುವರ್ಣವಿಕಾರವಾದ ಸರಪಣಿಗಳುಳ್ಳವೂ, ಅಂಬಾರಿಗಳುಳ್ಳವುಗಳಾಗಿ, ವರ್ಷಾಕಾಲದಲ್ಲಿ ಘರ್ಜಿಸುತ್ತಿರುವ ಮೇಘಗಳಂತೆ ಮುಂಬರಿದವು. ಲೆಕ್ಕವಿಲ್ಲದಷ್ಟು ದೊಡ್ಡಚಿಕ್ಕವಾಹನಗಳೂ, ಕಾಲ್ಬಲವೂ ಸಹ ಪ್ರಯಾಣಮಾಡಿತು. ॥ ೩೨-೩೪ ॥ ಕೌಸಲ್ಯೆಯೇ ಮೊದಲಾದ ಸ್ತ್ರೀಯರೂ ಸಹ

ಸ್ಸ್ವಮಹಾರ್ಹಾಣಿ ಪಾದೈರೇವ ಪದಾತಯಃ ॥ ಅಥ ಯಾನಪ್ರವೇಕೈಸ್ತು ಕೌಸಲ್ಯಾ ಪ್ರಮುಖಾಸ್ಸ್ತ್ರಿಯಃ ॥ ೩೫ ॥ ರಾಮದರ್ಶನ ಕಾಂಕ್ಷಿಣ್ಯಃ ಪ್ರಯಯು ರ್ಮುದಿತಾ ಸ್ತದಾ ॥ ಚಂದ್ರಾರ್ಕ ತರುಣಾ ಭಾಸಾಂ ನಿಯುರ್ಕ್ತಾಂ ಶಿಬಿಕಾಂ ಶುಭಾಮ್ ॥ ೨೬॥ ಆಸ್ಥಾಯ ಪ್ರಯಯೌ ಶ್ರೀಮಾನ್ ಭರತ ಸ್ಸಪರಿಚ್ಛದಃ ॥ ಸಾ ಪ್ರಯಾತಾ ಮಹಾಸೇನಾ ಗಜವಾಜಿ ರಥಾಕುಲಾ ॥ ೩೭ ॥ ದಕ್ಷಿಣಾಂ ದಿಶಮಾವೃತ್ಯ ಮಹಾಮೇಘ ಇವೋತ್ಥಿತಃ ॥ ವನಾನಿ ತು ವ್ಯತಿಕ್ರಮ್ಯ ಜುಷ್ಟಾನಿ ಮೃಗಪಕ್ಷಿಭಿಃ ॥ ೩೮ ॥ ಗಂಗಾಯಾಃ ಪರವೇಲಾಯಾಂ ಗಿರಿಷ್ವಪಿ ನದೀಷುಚ ॥

ಸಾ ಸಂಪ್ರಹೃಷ್ಟದ್ವಿಪ ವಾಜಿ ಯೋಧಾ
ವಿತ್ರಾಸಯಂತೀ ಮೃಗಪಕ್ಷಿ ಸಂಘಾನ್ ॥

ಪ್ರಮುಖಾಃ - ಕೌಸಲ್ಯಾದೇವಿಯೇ ಮೊದಲಾಗುಳ್ಳ, ಸ್ತ್ರಿಯಃ - ಹೆಂಗಸರು, ರಾಮದರ್ಶನಕಾಂಕ್ಷಿಣ್ಯಃ-ಶ್ರೀರಾಮನ ನೋಡುವಿಕೆಯಲ್ಲಿ ಅಪೇಕ್ಷೆಯುಳ್ಳವರಾಗಿ, ತದಾ - ಆ ಕಾಲದಲ್ಲಿ, ಮುದಿತಾಃ-ಸಂತೋಷಗೊಂಡು, ಯಾನಪ್ರವೇಕೈಃ - ಶ್ರೇಷ್ಠವಾದ ವಾಹನಗಳಿಂದ, ಪ್ರಯಯುಃ - ತೆರಳಿದರು. ॥ ೩೫ ॥ ಶ್ರೀಮಾನ್ - ಸಂಪದ್ಯುಕ್ತನಾದ, ಭರತಃ - ಭರತನು, ಸಪರಿಚ್ಛದಃ - ಪರಿವಾರದಿಂದೊಡಗೂಡಿ, ಚಂದ್ರಾರ್ಕತರುಣಾಭಾಸಾಂ - ಆಗತಾನೇ ಹುಟ್ಟಿದ ಸೂರ್ಯಚಂದ್ರರಿಗೆ ಸಮಾನವಾದ ಪ್ರಕಾಶವುಳ್ಳ, ನಿಯುರ್ಕ್ತಾಂ - ವಸಿಷ್ಠಾದಿಗಳಿಂದ ಆಜ್ಞಾಪಿಸಲ್ಪಟ್ಟ, ಶುಭಾಂ - ಶುಭಕರವಾದ, ಶಿಬಿಕಾಂ - ಪಾಲಕ್ಕಿಯನ್ನು, ಆಸ್ಥಾಯ - ಏರಿ, ಪ್ರಯಯೌ - ತೆರಳಿದನು. ॥ ೩೬ ॥ ಪ್ರಯಾತಾ - ಹೋಗುತ್ತಿರುವ, ಗಜವಾಜಿರಥಾಕುಲಾ - ಆನೆಗಳಿಂದಲೂ ಕುದುರೆಗಳಿಂದಲೂ ರಥಗಳಿಂದಲೂ ಕೂಡಿರುವ, ಸಾಮಹಾಸೇನಾ - ಆ ದೊಡ್ಡ ಸೈನ್ಯವು, ಉತ್ಥಿತಃ - ಉದಯವಾದ, ಮಹಾಮೇಘಇವ - ದೊಡ್ಡಮೇಘದಂತೆ, ದಕ್ಷಿಣಾಂದಿಶಂ - ದಕ್ಷಿಣದಿಕ್ಕನ್ನು, ಆವೃತ್ಯ - ವ್ಯಾಪಿಸಿ, ಮೃಗಪಕ್ಷಿಭಿಃ - ಮೃಗಗಳಿಂದಲೂ ಪಕ್ಷಿಗಳಿಂದಲೂ, ಜುಷ್ಟಾನಿ - ವ್ಯಾಪ್ತವಾದ, ಗಂಗಾಯಾಃ - ಗಂಗಾನದಿಯ, ಪರವೇಲಾಯಾಂ - ಆಚಿನ ದಡದಲ್ಲಿ, ಗಿರಿಷ್ವಪಿ - ಬೆಟ್ಟಗಳಲ್ಲಿಯೂ, ನದೀಷುಚ - ನದಿಗಳಲ್ಲಿಯೂ, ವನಾನಿ-ಅರಣ್ಯಗಳನ್ನು, ವ್ಯತಿಕ್ರಮ್ಯ - ದಾಟಿ, ಪ್ರಯಾತಾ - ಹೊರಟಿತು. ॥ ೩೭-೩೮ ॥ ಸಂಪ್ರಹೃಷ್ಟದ್ವಿಪವಾಜಿಯೋಧಾ - ಸಂತೋಷಗೊಂಡ ಆನೆಗಳನ್ನೂ ಕುದುರೆಗಳನ್ನೂ ಕಾಲ್ಬಲಗಳನ್ನುಉಳ್ಳ, ಮೃಗಪಕ್ಷಿಸಂಘಾನ್ - ಮೃಗಗಳ ಮತ್ತು ಹಕ್ಕಿಗಳ ತಂಡಗಳನ್ನು, ವಿತ್ರಾಸಯಂತೀ - ಹೆದರಿಸುತ್ತಿರುವ. ಭರತಸ್ಯ - ಭರತನ,

---

ಶ್ರೀರಾಮದರ್ಶನಾಸಕ್ತರಾಗಿ, ವಾಹನಗಳನ್ನೇರಿದವರಾಗಿ ಸಂತೋಷದಿಂದ ತೆರಳಿದರು. ಆಗ ಸಂಪದ್ಯುಕ್ತನಾದ ಭರತನು ವಸಿಷ್ಠಋಷಿಗಳ ಆಣತಿಯನ್ನು ಕೈಕೊಂಡು, ಬಾಲಚಂದ್ರಸೂರ್ಯರಂತೆ ಕಾಂತಿಯುಕ್ತವಾದ ಮಂಗಳಕರವಾದ ಅಂದಳವನ್ನೇರಿ ಪ್ರಯಾಣ ಮಾಡಿದನು. ಆನೆ, ಕುದುರೆ, ರಥಗಳಿಂದೊಡಗೂಡಿ ಹೋಗುತಿ್ತರುವ ಆ ಸೇನೆಯು ದೊಡ್ಡ ಮೇಘದಂತೆ ದಕ್ಷಿಣದಿಗ್ಭಾಗವನ್ನುವ್ಯಾಪಿಸಿ, ಗಂಗಾನದಿಯ ತೀರಪರ್ವತವನ್ನೂ, ಅರಣ್ಯ

ಮಹದ್ವನಂ ತತ್ ಪ್ರತಿಗಾಹಮಾನಾ
ರರಾಜ ಸೇನಾ ಭರತಸ್ಯ ತತ್ರ ॥ ೩೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿನವತಿತಮಸ್ಸರ್ಗಃ.

ಸೇನಾ - ಸೈನ್ಯವು, ತತ್ರ - ಆ ಗಂಗಾತೀರದಲ್ಲಿ, ಮಹತ್ - ದೊಡ್ಡದಾದ, ತದ್ವನಂ - ಆ ಅರಣ್ಯವನ್ನು, ಪ್ರತಿಗಾಹಮಾನಾ - ಹೊಗುತ್ತಿರುವುದಾಗಿ, ರರಾಜ - ಹೊಳೆಯುತ್ತಿದ್ದಿತು. ॥ ೩೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಿನವತಿತಮಸ್ಸರ್ಗಃ.

ಗಳನ್ನೂದಾಟ, ಸಂತೋಷದಿಂದ, ಮೃಗಪಕ್ಷಿಗಳ ಸಮೂಹಗಳನ್ನು ಬೆದರಿಸುತ್ತ ಗಂಗಾತೀರದಲ್ಲಿದ್ದ ಮಹಾವನವನ್ನು ಪ್ರವೇಶಿಸುತ್ತ ಹೊಳೆಯುತ್ತಿದ್ದಿತು. ॥ ೩೫-೩೯ ॥

ಇಂತಿದು ಭರತಕುಮಾರಕೃತ ಮಾತೃನಿರ್ದೇಶ, ಪುನಃ ಶ್ರೀರಾಮಾನ್ವೇಷಣ
ಪ್ರಯಾಣ ವಿವರಣವೆಂಬ ತೊಂಭತ್ತೆರಡನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ತ್ರಿನವತಿತಮಸ್ಸರ್ಗಃ.

ತಯಾ ಮಹತ್ಯಾ ಯಾಯಿನ್ಯಾ ಧ್ವಜಿನ್ಯಾ ವನವಾಸಿನಃ ॥ ಅರ್ದಿತಾ ಯೂಥಪಾ ಮತ್ತಾ ಸ್ಸಯೂಥಾ ಸ್ಸಂಪ್ರದುದ್ರುವುಃ ॥ ೧ ॥ ಋಕ್ಷಾಃ ಪೃಷತ ಸಂಘಾಶ್ಚ ರುರವಶ್ಚ ಸಮಂತತಃ ॥ ದೃಶ್ಯಂತೇ ವನರಾಜೀಷು ಗಿರಿಷ್ವಪಿ ನದೀಷುಚ ॥ ೨ ॥ ಸಸಂಪ್ರತಸ್ಥೇ ಧರ್ಮಾತ್ಮಾ ಪ್ರೀತೋ ದಶರಥಾತ್ಮಜಃ ॥ ವೃತೋ ಮಹತ್ಯಾ ನಾದಿನ್ಯಾ ಸೇನಯಾ ಚತುರಂಗಯಾ ॥ ೩ ॥ ಸಾಗರೌಘ ನಿಭಾ ಸೇನಾ ಭರತಸ್ಯ ಮಹಾತ್ಮನಃ ॥ ಮಹೀಂ ಸಂಛಾದಯಾಮಾಸ ಪ್ರಾವೃಷಿ ದ್ಯಾಮಿವಾಂಬುದಃ ॥ ೪ ॥ ತುರಂಗೌಘೈ ರವತತಾ ವಾರಣೈಶ್ಚ ಮಹಾಜವೈಃ ॥

ಯಾಯಿನ್ಯಾ - ಹೋಗುತ್ತಿರುವ, ಮಹತ್ಯಾ - ದೊಡ್ಡದಾದ, ತಯಾಧ್ವಜಿನ್ಯಾ - ಆ ಸೈನ್ಯದಿಂದ, ಅರ್ದಿತಾಃ-ಕೆರಳಿಸಲ್ಪಟ್ಟ, ಮತ್ತಾಃ - ಮದವೇರಿದ, ಯೂಥಪಾಃ-ಸಲಗಗಳು, ಸಯೂಥಾಃ - ತಮ್ಮತಮ್ಮ ತಂಡಗಳಿಂದೊಡಗೂಡಿ, ಸಂಪ್ರದುದ್ರುವುಃ - ಓಡಿದುವು. ॥ ೧ ॥ ಋಕ್ಷಾಃ - ಕರಡಿಗಳು, ಪೃಷತಸಂಘಾಶ್ಚ - ಬಿಳೀಚುಕ್ಕೆಗಳಿಂದ ಕೂಡಿರುವ ಚಿಗುರೆಗಳ ಗುಂಪುಗಳು, ರುರವಶ್ಚ-ಒಂದೇ ಬಣ್ಣವುಳ್ಳ ಜಿಂಕೆಗಳು, ಸಮಂತತಃ - ಎಲ್ಲೆಡೆಗಳಲ್ಲಿಯು, ವನರಾಜೀಷು - ವನಪಙ್ತಿಗಳಲ್ಲಿಯು, ಗಿರಿಷ್ವಪಿ - ಬೆಟ್ಟಗಳಲ್ಲಿಯು, ನದೀಷುಚ - ನದಿಗಳಲ್ಲಿಯೂ, ದೃಶ್ಯಂತೇ-ಕಾಣುತ್ತಿದ್ದುವು. ॥ ೨ ॥ ಧರ್ಮಾತ್ಮಾ - ಧರ್ಮಿಷ್ಠನಾದ, ದಶರಥಾತ್ಮಜಃ - ದಶರಥರಾಯನ ಮಗನಾದ, ಸಃ - ಆ ಭರತನು, ಪ್ರೀತಃ - ಸಂತೋಷಗೊಂಡು, ನಾದಿನ್ಯಾಃ - ಉದ್ಘೋಷಿಸುತ್ತಿರುವ, ಮಹತ್ಯಾ - ದೊಡ್ಡದಾದ, ಚತುರಂಗಯಾ - ಗಜ, ತುರಗ, ರಥ, ಪದಾತಿಗಳೆಂಬ ನಾಲ್ಕು ಅಂಗಗಳುಳ್ಳ, ಸೇನಯಾ - ಸೈನ್ಯದಿಂದ, ವೃತಃ - ಸುತ್ತುವರೆಯಲ್ಪಟ್ಟು, ಸಂಪ್ರತಸ್ಥೇ - ಹೊರಟನು. ॥ ೩ ॥ ಸಾಗರೌಘನಿಭಾ - ಕಡಲಿನ ಪ್ರವಾಹಕ್ಕೆ ಸಮಾನವಾದ, ಮಹಾತ್ಮನಃ - ಮಹಾಮನಸ್ವಿಯಾದ, ಭರತಸ್ಯ - ಭರತನ, ಸೇನಾ - ಸೈನ್ಯವು, ಪ್ರಾವೃಷಿ - ವರ್ಷಾಕಾಲದಲ್ಲಿ, ಅಂಬುದಃ - ಮೇಘವು, ದ್ಯಾಮಿವ - ಅಂತರಿಕ್ಷವನ್ನಂತೆ,

---

ಈಪ್ರಕಾರವಾಗಿ ತೆರಳಿದುದೂ, ಬಹು ದೊಡ್ಡದಾದುದೂ ಆದ ಭರತನಸೈನ್ಯದಿಂದ ವನದಲ್ಲಿ ಸಂಚರಿಸುತ್ತಿದ್ದ ಮದ್ದಾನೆಗಳೆಲ್ಲವೂ ಭಯಗೊಂಡುವಾಗಿ ತಮ್ಮ ತಮ್ಮ ಹಿಂಡುಗಳೊಡಗೂಡಿದುವಾಗಿ ಓಡಿಹೋದುವು.॥೧॥ಕರಡಿಗಳೂ, ಬಿಳೀಚುಕ್ಕೆಗಳುಳ್ಳವೂ,ಒಂದೇ ಸಮನಾದ ಬಣ್ಣವುಳ್ಳವೂಆದ ಚಿಗುರೆಗಳೂ, ಪರ್ವತಗಳಲ್ಲಿಯೂ, ನದಿಗಳಲ್ಲಿಯೂ ಓಡಿಹೋಗುತ್ತಿರುವುವಾಗಿ ಕಾಣಿಸಿದುವು. ॥೨॥ ಧರ್ಮಿಷ್ಠನಾದ ಭರತಕುಮಾರನು ಸಂತೋಷಗೊಂಡು, ಸೇನಾಸಮೇತನಾಗಿ ಹೊರಟನು. ಹೀಗೆ ಮುಂಬರಿಯುತ್ತಿರುವ ಆ ಭರತನ ಸೇನೆಯು, ವರ್ಷಕಾಲದಲ್ಲಿ ಅಂತರಿಕ್ಷವನ್ನಾಕ್ರಮಿಸುವ ಮೇಘದಂತೆ ಭೂಮಿಯನ್ನು ಮುಚ್ಚಿದುದರಿಂದ ಬಹಳಹೊತ್ತು ನೆಲವೇ ಕಾಣಿಸದಂತಿದ್ದಿತು.॥೩-೪॥ಆ ಬಳಿಕ ಭರತನು ಬಹಳದೂರ ಪ್ರಯಾಣ

ಅನಾಲಕ್ಷ್ಯಾಚಿರಂ ಕಾಲಂ ತಸ್ಮಿನ್ ಕಾಲೇ ಬಭೂವ ಭೂಃ ‖ ೫ ‖ ಸಯಾತ್ವಾ ದೂರ ಮಧ್ವಾನಂ ಸುಪರಿಶ್ರಾಂತ ವಾಹನಃ ‖ ಉವಾಚ ಭರತ ಶ್ಶ್ರೀಮಾನ್ ವಸಿಷ್ಠಂ ಮಂತ್ರಿಣಾಂ ವರಂ ‖ ೬ ‖ ಯಾದೃಶಂ ಲಕ್ಷ್ಯತೇ ರೂಪಂ ಯಥಾ ಚೈವ ಶ್ರುತಂ ಮಯಾ ‖ ವ್ಯಕ್ತಂ ಪ್ರಾಪ್ತಾಸ್ಸ್ಮ ತಂದೇಶಂ ಭರದ್ವಾಜೋಯ ಮಬ್ರವೀತ್ ‖ ೭ ‖ ಅಯಂ ಗಿರಿಶ್ಚಿತ್ರಕೂಟ ಇಯಂ ಮಂದಾಕಿನೀ ನದೀ ‖ ಏತತ್ಪ್ರಕಾಶತೇ ದೂರಾ ನ್ನೀಲಮೇಘ ನಿಭಂ ವನಂ ‖ ೮ ‖ ಗಿರೇ ಸ್ಸಾನೂನಿ ರಮ್ಯಾಣಿ ಚಿತ್ರಕೂಟಸ್ಯ ಸಂಪ್ರತಿ ‖ ವಾರಣೈ ರವಮೃದ್ಯಂತೇ ಮಾಮಕೈಃ ಪರ್ವತೋಪಮೈಃ ‖ ೯ ‖ ಮುಂಚಂತಿ ಕುಸುಮಾನ್ಯೇತೇ

ಮಹೀಂ - ನೆಲವನ್ನು, ಸಂಛಾದಯಾಮಾಸ - ಹೊದಿಸಿತು. ‖ ೪ ‖ ತುರಂಗೌಘೈಃ - ಕುದುರೆಗಳ ಸಮೂಹಗಳಿಂದ, ಮಹಾಜವೈಃ - ಮಹಾವೇಗವುಳ್ಳ, ವಾರಣೈಶ್ಚ - ಆನೆಗಳಿಂದಲೂ, ತಸ್ಮಿನ್‌ಕಾಲೇ - ಆ ಕಾಲದಲ್ಲಿ, ಅವತತಾ - ತುಂಬಿರುವ, ಭೂಃ - ಭೂಮಿಯು, ಚಿರಂಕಾಲಂ - ಬಹಳ ಹೊತ್ತು, ಅನಾಲಕ್ಷ್ಯಾ - ಕಾಣದಿರುವುದು, ಬಭೂವ - ಆಯಿತು. ‖ ೫ ‖ ಶ್ರೀಮಾನ್ - ಸಂಪದ್ಯುಕ್ತನಾದ, ಸಭರತಃ - ಆ ಭರತನು, ದೂರಂ - ಬಹು ದೂರವಾದ, ಅಧ್ವಾನಂ - ಮಾರ್ಗವನ್ನು, ಯಾತ್ವಾ - ಹೋಗಿ, ಸುಪರಿಶ್ರಾಂತವಾಹನಃ - ಬಹಳವಾಗಿ ಬಳಲಿದ ವಾಹನಗಳುಳ್ಳವನಾಗಿ, ಮಂತ್ರಿಣಾಂ-ಮಂತ್ರಿಗಳಲ್ಲಿ, ವರಂ - ಶ್ರೇಷ್ಠನಾದ, ವಸಿಷ್ಠಂ-ವಸಿಷ್ಠಋಷಿಯನ್ನು ಕುರಿತು, ಉವಾಚ - ಹೇಳಿದನು. ‖ ೬ ‖ ಭರದ್ವಾಜಃ - ಭರದ್ವಾಜಋಷಿಯು, ಯಂ - ಯಾವಪ್ರದೇಶವನ್ನು ಕುರಿತು, ಅಬ್ರವೀತ್-ಹೇಳಿದನೋ, ಯಾದೃಶಂ - ಎಂತಹ, ರೂಪಂ - ಆಕಾರವು, ಯಥಾಚೈವ - ಯಾವ ಪ್ರಕಾರದಂತೆ, ಮಯಾ - ನನ್ನಿಂದ, ಶ್ರುತಂ - ಕೇಳಲಾಯಿತೋ, ತಾದೃಶಂರೂಪಂ - ಅಂತಹ ಆಕಾರವು, ಲಕ್ಷ್ಯತೇ - ಕಾಣುತ್ತದೆ, ವ್ಯಕ್ತಂ - ಸ್ಪಷ್ಟವು, ತಂದೇಶಂ - ಅಂತಹ ಪ್ರದೇಶವನ್ನು, ಪ್ರಾಪ್ತಾಸ್ಮ - ಹೊಂದಿದೆವು. ‖ ೭ ‖ ಅಯಂಗಿರಿಃ - ಈ ಬೆಟ್ಟವು, ಚಿತ್ರಕೂಟಃ - ಚಿತ್ರಕೂಟವು, ಇಯಂನದೀ - ಈ ನದಿಯು, ಮಂದಾಕಿನೀ - ಗಂಗೆಯು, ನೀಲಮೇಘನಿಭಂ - ಕಾಲಮೇಘಕ್ಕೆ ಸಮಾನವಾದ, ಏತದ್ವನಂ - ಈ ವನವು, ದೂರಾತ್ - ದೂರದಲ್ಲಿಯೇ, ಪ್ರಕಾಶತೇ - ಹೊಳೆಯುತ್ತದೆ. ‖ ೮ ‖ ಸಂಪ್ರತಿ - ಈಗ, ಚಿತ್ರಕೂಟಸ್ಯ - ಚಿತ್ರಕೂಟವೆಂಬ, ಗಿರೇಃ - ಬೆಟ್ಟದ, ರಮ್ಯಾಣಿ - ಮನೋಹರಗಳಾದ, ಸಾನೂನಿ - ತಪ್ಪಲುಗಳು, ಪರ್ವತೋಪಮೈಃ - ಬೆಟ್ಟಗಳಿಗೆ ಸಮಾನವಾದ, ಮಾಮಕೈಃ - ನನ್ನ ಸಂಬಂಧಿಗಳಾದ, ವಾರಣೈಃ - ಆನೆಗಳಿಂದ, ಅವಮೃದ್ಯಂತೇ - ಮುರಿಯಲ್ಪಡುತ್ತಿವೆ. ‖ ೯ ‖ ಪರ್ವತಸಾನುಷು -

ಮಾಡಿ, ಬಳಲಿದ ವಾಹನಗಳುಳ್ಳವನಾಗಿ ಗುರುಗಳಾದ ವಸಿಷ್ಠರನ್ನು ಕುರಿತು, "ಓ ಮುನಿಶ್ರೇಷ್ಠನೆ! ಭರದ್ವಾಜಮುನೀಶ್ವರನು ಹೇಳಿದ ಪ್ರದೇಶವಿದೇ! ಇಲ್ಲಿ ಕಾಣುತ್ತಿರುವ ಈ ಪರ್ವತವೇ ಚಿತ್ರಕೂಟಪರ್ವತವು; ಇಲ್ಲಿ ಹರಿಯುತ್ತಿರುವ ನದಿಯೇ ಗಂಗಾನದಿಯು. ಕಾಲಮೇಘೋಪಮವಾದ ಈ ಪರ್ವತೋಪವನವು ದೂರದಲ್ಲಿ ಪ್ರಕಾಶಿಸುತ್ತಿರುವುದು. ‖ ೫-೮ ‖ ಇಷ್ಟುಮಾತ್ರವಲ್ಲದೆ ಈ ಪರ್ವತಪ್ರಾಂತದಲ್ಲಿ ಕೃಷ್ಣಮೇಘದಂತೆ ಪ್ರಕಾಶಿಸುತ್ತಿರುವ ವನವೇ ದಂಡಕಾರಣ್ಯವು. ಇದರಲ್ಲಿ ಯಾವ ವಿಧವಾದ ಸಂಶಯವೂ ಇಲ್ಲ. ಈಗ

ನಗಾಃ ಪರ್ವತಸಾನುಷು ॥ ನೀಲಾ ಇವಾತಪಾಪಾಯೇ ತೋಯಂ ತೋಯ
ಧರಾ ಘನಾಃ ॥೧೦॥ ಕಿನ್ನರಾಽಚರಿತಂ ದೇಶಂ ಪಶ್ಯ ಶತ್ರುಘ್ನ! ಪರ್ವತಂ ॥
ಮೃಗೈ ಸ್ಸಮಂತಾ ದಾಕೀರ್ಣಂ ಮಕರೈರಿವ ಸಾಗರಂ ॥ ೧೧ ॥ ಏತೇ ಮೃಗ
ಗಣಾ ಭಾಂತಿ ಶೀಘ್ರವೇಗಾಃ ಪ್ರಚೋದಿತಾಃ ॥ ವಾಯುಪ್ರವಿದ್ಧಾ ಶರದಿ
ಮೇಘರಾಜಿರಿವಾಂಬರೇ ॥ ೧೨ ॥ ಕುರ್ವಂತಿ ಕುಸುಮಾಪೀಡಾ೯ ಶಿರಸ್ಸು

ಬೆಟ್ಟದ ಜರಿತೆಗಳಲ್ಲಿ, ಏತೇನಗಾಃ - ಈ ಗಿಡಗಳು, ನೀಲಾಃ - ಕಪ್ಪಾಗಿರುವ, ತೋಯಧರಾಃ-ಉದಕವನ್ನು ಧರಿಸಿರುವ, ಘನಾಃ - ಮೇಘಗಳು, ಆತಪಾಪಾಯೇ - ಬಿಸಿಲುಕಾಲವು ಕಳೆದ ಹೋಗಲು, ತೋಯಮಿವ - ಉದಕವನ್ನಂತೆ, ಕುಸುಮಾನಿ - ಹುವ್ವುಗಳನ್ನು, ಮುಂಚಂತಿ - ಬಿಡುತ್ತಾವೆ. ॥ ೧೦ ॥ ಹೇ ಶತ್ರುಘ್ನ - ಎಲೈ ಶತ್ರುಘ್ನನೇ, ಕಿನ್ನರಾಚರಿತಂ - ಕಿನ್ನರರೆಂಬ ದೇವತಾವಿಶೇಷಗಳಿಂದ ಸಂಚರಿಸಲ್ಪಟ್ಟ, ಮಕರೈಃ - ಮೊಸಳೆಗಳಿಂದ, ಆಕೀರ್ಣಂ - ತುಂಬಿರುವ, ಸಾಗರಮಿವ - ಸಮುದ್ರದಂತೆ, ಮೃಗೈಃ - ಮೃಗಗಳಿಂದ, ಸಮಂತಾತ್ - ಎಲ್ಲೆಡೆಯಲ್ಲಿಯೂ, ಆಕೀರ್ಣಂ - ತುಂಬಿರುವ, ಪರ್ವತಂದೇಶಂ - ಪರ್ವತಪ್ರದೇಶವನ್ನು, ಪಶ್ಯ - ನೋಡು. ॥ ೧೧ ॥ ಶೀಘ್ರವೇಗಾಃ - ಶೀಘ್ರವಾದ ವೇಗವುಳ್ಳ, ಏತೇ - ಈ ಕಾಣಿಸುತ್ತಿರುವ, ಮೃಗಗಣಾಃ-ಜಿಗುರೆಗಳ ಗುಂಪುಗಳು, ಪ್ರಚೋದಿತಾಃ - ಪ್ರೇರಿಸಲ್ಪಟ್ಟವಾಗಿ, ಶರದಿ - ಶರತ್ಕಾಲದಲ್ಲಿ, ಅಂಬರೇ - ಅಂತರಿಕ್ಷದಲ್ಲಿ, ವಾಯುಪ್ರವಿದ್ಧಾ-ಘಾಳಿಯಿಂದ ತಳ್ಳಲ್ಪಟ್ಟ, ಮೇಘರಾಜಿರಿವ - ಮೇಘಗಳ ಪಙ್ತಿಯಂತೆ, ಭಾಂತಿ-ಹೊಳೆಯುತ್ತಿವೆ. ॥ ೧೨ ॥ ಅಮೀ - ಈ ಭಟರು, ಮೇಘಪ್ರಕಾಶೈಃ - ಮೇಘದಂತೆ ಕಪ್ಪಾಗಿ ಹೊಳೆಯುತ್ತಿರುವ, ಫಲಕೈಃ - ಕೂದಲುಗಳ ಸಮೂಹದಿಂದ, ಉಪಲಕ್ಷಿತಾಃ - ಕೂಡಿದವರಾಗಿ, ದಾಕ್ಷಿಣಾತ್ಯಾಃ - ದಕ್ಷಿಣದೇಶವಾಸಿಗಳಾದ, ನರಾಯಥಾ - ಮನುಷ್ಯರಂತೆ, ಶಿರಸ್ಸು - ಮಂಡೆಗಳಲ್ಲಿ, ಸುರಭೀ೯ - ಪರಿಮಳವಾದ, ಕುಸುಮಾಪೀಡಾ೯ - ಪುಷ್ಪಗಳ ಅಲಂಕಾರಗಳನ್ನು, ಕುರ್ವಂತಿ - ಮಾಡು

ಪರ್ವತಕ್ಕೆ ಸಮಾನಗಳಾದುವೂ, ನನ್ನ ಸಂಬಾಧವಾದುವೂ ಆದ ಆನೆಗಳಿಂದ ಚಿತ್ರಕೂಟಪರ್ವತದ ರಮ್ಯವಾದ ಸಾನುಪ್ರದೇಶಗಳು ಘರ್ಷಿಸಲ್ಪಡುತ್ತಿರುವುದು. ಅಲ್ಲದೆ ಈ ವೃಕ್ಷಗಳು ವರ್ಷಾಕಾಲದಲ್ಲಿ, ಕಪ್ಪಾಗಿರುವುವೂ, ದೊಡ್ಡವಾದುವೂ ಆದ ಮೇಘಗಳು ಜಲವನ್ನು ಸುರಿಸುವಂತೆ, ಈ ಪರ್ವತಪ್ರಾಂತ್ಯದ ಜರಿಕೆಗಳಲ್ಲಿ ಪುಷ್ಪಗಳನ್ನು ಸುರಿಸುತ್ತಿರುವುವು" ಎಂದು ಹೇಳುತ್ತ ತಮ್ಮನಾದ ಶತ್ರುಘ್ನನನ್ನು ನೋಡಿ ಹೀಗೆಂದನು. "ಓ ಶತ್ರುಘ್ನನೆ! ಮೊಸಳೆಗಳಿಂದ ವ್ಯಾಪಿಸಲ್ಪಟ್ಟ ಸಮುದ್ರದಂತೆ, ಈ ದಂಡಕಾರಣ್ಯವೆಲ್ಲವೂ ಕ್ರೂರಮೃಗಗಳಿಂದ ವ್ಯಾಪ್ತವಾಗಿರುವುದು. ಈ ಚಿತ್ರಕೂಟಪರ್ವತದಲ್ಲಿ ಕಿನ್ನರರು ಸಂಚರಿಸುತ್ತಾರೆ. ಇಂತಹ ದಂಡಕಾರಣ್ಯವನ್ನೂ, ಮನೋಹರವಾದ ಚಿತ್ರಕೂಟಪರ್ವತವನ್ನು ನೋಡುವವನಾಗು. ॥೯-೧೦॥ ಶರತ್ಕಾಲೀನವಾದ ಆಕಾಶದಲ್ಲಿ ಗಾಳಿಯಿಂದ ಪ್ರೇರಿತವಾದ ಮೇಘಸಮುದಾಯದಂತೆ ಈ ಮೃಗಗಳೆಲ್ಲವೂ ನಮ್ಮ ಸೈನ್ಯದಿಂದ ಪ್ರೇರೇಪಿತವಾಗಿ ಅಧಿಕವಾದ ವೇಗವುಳ್ಳವಾಗಿ ಆಮೆಗಳೊಡಗೂಡಿದಸಾಗರದಂತೆ ಬಹು ಪ್ರಕಾಶಯುಕ್ತಗಳಾಗಿ ಕಾಣುತ್ತಿವೆ. ಶತ್ರುಘ್ನ! ನೋಡಿದೆಯಾ; ಈ ಭಟರೆಲ್ಲವೂ ದಕ್ಷಿಣದೇಶದಲ್ಲಿನ ಜನರು ಮೇಘದಂತೆ ಕಪ್ಪಾ

ಸುಂರಭೀನನಿಮಾ || ಮೇಘಪ್ರಕಾಶೈಃ ಫಲಕೈ ರ್ದಾಕ್ಷಿಣಾತ್ಯಾ ಯಥಾ ನರಾಃ || ೧೩ || ನಿಷ್ಕೂಜಮಿವ ಭೂತ್ವೇದಂ ವನಂ ಘೋರ ಪ್ರದರ್ಶನಂ || ಅಯೋಧ್ಯೇವ ಜನಾಕೀರ್ಣಾ ಸಂಪ್ರತಿ ಪ್ರತಿಭಾತಿ ಮಾ || ೧೪ || ಖುರೈ ರುದೀರಿತೋ ರೇಣು ರ್ದಿವಂ ಪ್ರಚ್ಛಾದ್ಯ ತಿಷ್ಠತಿ || ತಂ ವಹತ್ಯನಿಲ ಶ್ಶೀಘ್ರಂ ಕುರ್ವನ್ನಿವ ಮಮ ಪ್ರಿಯಂ || ೧೫ || ಸ್ಯಂದನಾಂ ಸ್ತುರಗೋಪೇತಾನ್ ಸೂತಮುಖ್ಯೈ ರಧಿಷ್ಠಿತಾನ್ || ಏತಾನ್ ಸಂಪತತ ಶ್ಶೀಘ್ರಂ ಪಶ್ಯ ಶತ್ರುಘ್ನ! ಕಾನನೇ || ೧೬ || ಏತಾನ್ ವಿತ್ರಾಸಿತಾನ್ ಪಶ್ಯ ಬರ್ಹಿಣಃ ಪ್ರಿಯದರ್ಶನಾನ್ ||

ತ್ರಾರೆ. || ೧೩ || ಘೋರಪ್ರದರ್ಶನಂ - ಭಯಂಕರವಾದ ನೋಟವುಳ್ಳ, ಇದಂವನಂ - ಈ ವನವು, ನಿಷ್ಕೂಜಮಿವ - ಜನರ ಘೋಷವಿಲ್ಲದಂತೆ, ಭೂತ್ವಾ - ಆಗಿ, ಸಂಪ್ರತಿ - ಈಗ, ಜನಾಕೀರ್ಣಾ - ಜನರಿಂದ ತುಂಬಿರುವ, ಅಯೋಧ್ಯೇವ - ಅಯೋಧ್ಯಾಪಟ್ಟಣದಂತೆ, ಮಾ - ನನಗೆ, ಪ್ರತಿಭಾತಿ - ತೋರುತ್ತದೆ. || ೧೪ || ಖುರೈಃ - ಕುದುರೆಗಳ ಗೊರಸುಗಳಿಂದ, ಉದೀರಿತಃ-ಎಬ್ಬಿಸಲ್ಪಟ್ಟ, ರೇಣುಃ- ಧೂಳಿಯು, ದಿವಂ - ಅಂತರಿಕ್ಷವನ್ನು, ಪ್ರಚ್ಛಾದ್ಯ - ಮುಚ್ಚಿಕೊಂಡು, ತಿಷ್ಠತಿ - ಇರುವುದು, ತಂ - ಆ ಧೂಳಿಯನ್ನು, ಅನಿಲಃ - ಗಾಳಿಯು, ಮಮ - ನನಗೆ, ಪ್ರಿಯಂ - ಇಷ್ಟವನ್ನು, ಕುರ್ವನ್ನಿವ - ಮಾಡುವಂತೆ, ಶೀಘ್ರಂ - ಜಾಗ್ರತೆಯಾಗಿ, ವಹತಿ - ಹೊತ್ತುಕೊಂಡು ಹೋಗುತ್ತಿದೆ. || ೧೫ || ಹೇ ಶತ್ರುಘ್ನ - ಎಲೈ ಶತ್ರುಘ್ನನೇ, ಕಾನನೇ - ಅರಣ್ಯದಲ್ಲಿ, ಶೀಘ್ರಂ - ಜಾಗ್ರತೆಯಾಗಿ, ಸಂಪತತಃ-ಬರುತ್ತಿರುವ, ಸೂತಮುಖ್ಯೈಃ - ಶ್ರೇಷ್ಠರಾದ ಸಾರಥಿಗಳಿಂದ, ಅಧಿಷ್ಠಿತಾನ್ - ಕುದುರೆಗಳೊಡಗೂಡಿದ, ಏತಾನ್‌ಸ್ಯಂದನಾನ್ - ಈ ರಥಗಳನ್ನು, ಪಶ್ಯ - ನೋಡು. || ೧೬ || ಪ್ರಿಯದರ್ಶನಾನ್ - ಇಂಪಾದ ನೋಡುವಿಕೆಯುಳ್ಳ, ವಿತ್ರಾಸಿತಾನ್ - ಭಯಗೊಂಡ, ಏತಾನ್‌ಬರ್ಹಿಣಃ - ಈ ನವಿಲುಗಳನ್ನು, ಪಶ್ಯ - ನೋಡು, ಅಧಿವಾಸಂ - ವಾಸಸ್ಥಾನವಾದ, ಏನಂ - ಈ ಬೆಟ್ಟವನ್ನು, ಶೀಘ್ರಂ - ಜಾಗ್ರತೆಯಾಗಿ, ಆವಿಶತಃ - ಹೊಗುತ್ತಿರುವ, ಪತತ್ರಿಣಃ - ಪಕ್ಷಿಗಳನ್ನು, ಪಶ್ಯ - ನೋಡು. || ೧೭ ||

ಗಿರುವ ತಲೆಗೂದಲನ್ನು ಗಂಟುಹಾಕಿಕೊಂಡು ಹುವ್ವುಗಳನ್ನು ಧರಿಸಿಕೊಂಡಿರುವಂತೆ, ತುದಿಗಳಲ್ಲಿ ಹೂಗಳನ್ನು ಧರಿಸಿಕೊಂಡಿದ್ದಾರೆ. ನೋಡಲು ಮಹಾ ಭಯಂಕರವಾದುದೂ ದಟ್ಟವಾದುದೂ ಆದ ಈ ಅರಣ್ಯವೆಲ್ಲವೂ ನಾವು ಬರುವುದಕ್ಕೆಮುಂಚೆ ನಿಶ್ಶಬ್ದವಾಗಿದ್ದಂತೆ ತೋರುವುದು. ಅಂತಹ ಈ ವನವು ಈಗ ಜನಸಮುದಾಯದಿಂದ ತುಂಬಿದ ಅಯೋಧ್ಯೆಯಂತೆ ಪ್ರಕಾಶಿಸುತ್ತಿರುವುದು. ಅಯ್ಯಾ ಶತ್ರುಘ್ನನೆ! ನಮ್ಮ ಕುದುರೆಗಳ ಕಾಲ್ಗೊರಸುಗಳಿಂದ ಎಬ್ಬಿಸಲ್ಪಟ್ಟ ಧೂಳಿಯು ಈ ಅರಣ್ಯವೆಲ್ಲವನ್ನೂವ್ಯಾಪಿಸಿರುವುದು. ಈ ಧೂಳಿಯೆಲ್ಲವನ್ನೂ ವಾಯುವು ನನಗೆ ಪ್ರಿಯವನ್ನುಂಟುಮಾಡಿದವನಂತೆ ಬಹು ಜಾಗ್ರತೆಯಾಗಿ ತೆಗೆದುಕೊಂಡು ವೇಗವಾಗಿ ಬೀಸುತ್ತಿರುವುದು.||೧೧-೧೫||ಶತ್ರುಘ್ನಾ! ಕುದುರೆಗಳಿಂದಕೂಡಿದುವೂ, ಶ್ರೇಷ್ಠರಾದ ಸಾರಥಿಗಳಿಂದ ಧಿಷ್ಠಿತವಾದುವೂ ಆದ ಈ ರಥಗಳೆಲ್ಲವೂ ಈ ದಂಡಕಾರಣ್ಯದಲ್ಲಿ ಮಹಾವೇಗದಿಂದ ಹೋಗುತ್ತಿರುವುವು; ನೋಡು. ಅಲ್ಲದೆ ನಮ್ಮ ಸೈನ್ಯದಿಂದ ಭಯಗೊಂಡವೂ, ನೋಡಲು ಮನೋಹರವಾಗಿರುವುವೂ ಆದ ಈ ಮಯೂರಗಳನ್ನು ನೋಡಿದೆಯಾ! ಇವೆಲ್ಲವೂ ಬಹು

ಏತ ಮಾವಿಶತ ಶ್ಮೀಘ್ರ ಮಧಿವಾಸಂ ಪತತ್ರಿಣಃ ॥೧೭॥ ಅತಿಮಾತ್ರ ಮಯಂ ದೇಶೋ ಮನೋಜ್ಞಃ ಪ್ರತಿಭಾತಿ ಮಾ ॥ ತಾಪಸಾನಾಂ ನಿವಾಸೋಯಂ ವ್ಯಕ್ತಂ ಸ್ವರ್ಗಪಥೋ ಯಥಾ ॥೧೮॥ ಮೃಗಾ ಮೃಗೀಭಿ ಸ್ಸಹಿತಾ ಬಹವಃ ಪೃಷತಾ ವನೇ ॥ ಮನೋಜ್ಞರೂಪಾ ಲಕ್ಷ್ಯಂತೇ ಕುಸುಮ್ಯೈರಿವ ಚಿತ್ರಿತಾಃ ॥೧೯॥ ಸಾಧು ಸೈನ್ಯಾಃ ಪ್ರತಿಷ್ಠಂತಾಂ ವಿಚಿನ್ವಂತು ಚ ಕಾನನೇ ॥ ಯಥಾ ತೌ ಪುರುಷವ್ಯಾಘ್ರೌ ದೃಶ್ಯೇತೇ ರಾಮಲಕ್ಷ್ಮಣೌ ॥೨೦॥ ಭರತಸ್ಯ ವಚ ಶ್ಶ್ರುತ್ವಾ ಪುರುಷಾ ಶ್ಶಸ್ತ್ರಪಾಣಯಃ ॥ ವಿವಿಶು ಸ್ತದ್ವನಂ ಶೂರಾ ಧೂಮಂಚ ದದೃಶು ಸ್ತತಃ ॥೨೧॥ ತೇ ಸಮಾಲೋಕ್ಯ ಧೂಮಾಗ್ರ ಮೂಚು

ತಾಪಸಾನಾಂ - ಋಷಿಗಳಿಗೆ, ಅಯಂ-ಇದು, ನಿವಾಸಃ-ವಾಸಸ್ಥಳವು, ವ್ಯಕ್ತಂ - ಸ್ಪಷ್ಟವಾಗಿ, ಸ್ವರ್ಗಪಥೋಯಥಾ - ಸ್ವರ್ಗದಹೆಬ್ಬಾರಿಯಂತೆ, ಅಯಂದೇಶಃ - ಈ ಪ್ರದೇಶವು, ಅತಿಮಾತ್ರಂ - ಬಹಳವಾಗಿ, ಮಾ - ನನಗೆ, ಮನೋಜ್ಞಃ - ಮನೋಹರವಾಗಿ, ಪ್ರತಿಭಾತಿ - ತೋರುತ್ತದೆ. ॥೧೮॥ ವನೇ-ವನದಲ್ಲಿ, ಮನೋಜ್ಞರೂಪಾಃ - ಸುಂದರವಾದ ಆಕಾರವುಳ್ಳ. ಬಹವಃ - ಅನೇಕಗಳಾದ, ಪೃಷತಾಃ-ಬಿಳೀಮಚ್ಚೆಗಳಿಂದ ಕೂಡಿರುವ, ಮೃಗಾಃ - ಜಿಗುರೆಗಳು, ಮೃಗೀಭಿಃ - ಹೆಣ್ಣುಜಿಗುರೆಗಳಿಂದ, ಸಹಿತಾಃ - ಕೂಡಿ, ಕುಸುಮೈಃ - ಹೂಗಳಿಂದ, ಚಿತ್ರಿತಾಇವ - ಚಿತ್ರವಿಚಿತ್ರ ಬಣ್ಣವುಳ್ಳವುಗಳಂತೆ, ಲಕ್ಷ್ಯಂತೇ - ಕಾಣಲ್ಪಡುತ್ತವೆ. ॥೧೯॥ ಸೈನ್ಯಾಃ - ಸೇನಾಜನರು, ಕಾನನೇ - ವನದಲ್ಲಿ, ಪ್ರತಿಷ್ಠಂತಾಂ - ನಿಲ್ಲಲಿ, ಯಥಾ - ಹೇಗೆ, ಪುರುಷವ್ಯಾಘ್ರೌ - ಪುರುಷಶ್ರೇಷ್ಠರಾದ, ತೌರಾಮಲಕ್ಷ್ಮಣೌ - ಆ ರಾಮಲಕ್ಷ್ಮಣರು, ದೃಶ್ಯೇತೇ - ಕಾಣಲ್ಪಡುವರೋ, ತಥಾ - ಹಾಗೆಯೇ, ಸಾಧು - ಚನ್ನಾಗಿ, ವಿಚಿನ್ವಂತು - ಹುಡುಕಲಿ. ॥೨೦॥ ಭರತಸ್ಯ - ಭರತನ, ವಚಃ - ಮಾತನ್ನು, ಶ್ರುತ್ವಾ-ಕೇಳಿ, ಶೂರಾಃ - ಶೂರರಾದ, ಪುರುಷಾಃ - ರಾಜಪುರುಷರು, ಶಸ್ತ್ರಪಾಣಯಃ - ಆಯುಧಪಾಣಿಗಳಾಗಿ, ತದ್ವನಂ - ಆ ವನವನ್ನು, ವಿವಿಶುಃ - ಪ್ರವೇಶಿಸಿದರು, ತತಃ - ಬಳಿಕ, ಧೂಮಂಚ - ಹೊಗೆಯನ್ನೂ, ದದೃಶುಃ - ಕಂಡರು. ॥೨೧॥ ತೇ - ಆ ಭಟರು, ಧೂಮಾಗ್ರಂ - ಹೊಗೆಯ ತುದಿಯನ್ನು,

---

ಶೀಘ್ರವಾಗಿ ತಮ್ಮ ತಮ್ಮ ನಿವಾಸಸ್ಥಾನಗಳಿಗೆ ಹೋಗುತ್ತಿವೆ. ಶತ್ರುಘ್ನ! ಹೆಚ್ಚೇನು! ಈ ಮಾರ್ಗವು ಬಹು ಮನೋಹರವಾಗಿ ತೋರುತ್ತಿರುವುದು. ಇಷ್ಟೆಯಲ್ಲದೆ ತಪೋನಿಷ್ಠರಾದ ಋಷಿಪುಂಗವರು ವಾಸಮಾಡಲು ತಕ್ಕುದಾದ ಈ ಅರಣ್ಯಸ್ಥಳವು ಸ್ವರ್ಗರಾಜನ ಅಮರಾವತಿಗೆ ಸಮಾನವಾಗಿರುವಂತಿರುವುದು. ಈ ಅರಣ್ಯದಲ್ಲಿ ಬಿಳೀಚುಕ್ಕೆಗಳುಳ್ಳ ಜಿಂಕೆಗಳು ಸ್ತ್ರೀಮೃಗಗಳೊಡಗೂಡಿ, ಮನೋಹರಗಳಾದ ಆಕಾರಗಳನ್ನುಳ್ಳುವಾಗಿ ಪುಷ್ಪಗಳಿಂದಲಂಕೃತವಾದುವಂತೆಕಾಣುತ್ತಿರುವುದು. ತಮ್ಮ!ಶತ್ರುಘ್ನ! ಪುರುಷೋತ್ತಮರಾದ ಶ್ರೀರಾಮಲಕ್ಷ್ಮಣರು ಯಾವ ಸ್ಥಳದಲ್ಲಿ ವಾಸಮಾಡುತ್ತಿರುವರೋ ಆ ಸ್ಥಳವನ್ನು ಹುಡುಕಿಕೊಂಡು ಬರಲು ಸೈನಿಕರೆಲ್ಲರನ್ನುಕಳುಹು.॥೧೬-೨೦॥ಎಲ್ಲರೂಹೋಗಿ, ಈ ದಂಡಕಾರಣ್ಯದಲ್ಲಿಶ್ರೀರಾಮಲಕ್ಷ್ಮಣರಿರುವ ಸ್ಥಳವನ್ನು ತಿಳಿದುಕೊಂಡು ಬರುವುದುಚಿತವು.” ಈ ಪ್ರಕಾರವಾಗಿ ಭರತನು ನುಡಿದ ಮಾತುಗಳೆಲ್ಲವನ್ನೂ ಕೇಳಿ, ಆಯುಧಪಾಣಿಗಳಾದ ವೀರಪುರುಷರೆಲ್ಲರೂ ತಕ್ಷಣದಲ್ಲಿಯೇ ಹೋಗಿ



पर्णकुटीदर्शन

A 7515—Lakshmi Art, Bombay, 8.

ರ್ಭರತ ಮಾಗತಾಃ ‖ ನಾऽಮನುಷ್ಯೇ ಭವತ್ಯಗ್ನಿ ರ್ವ್ಯಕ್ತ ಮತ್ರೈವ ರಾಘವೌ ‖ ೨೨ ‖ ಅಥವಾऽತ್ರ ನರವ್ಯಾಘ್ರೌ ರಾಜಪುತ್ರೌ ಪರಂತಪೌ ‖ ಮನ್ಯೇ ರಾಮೋಪಮಾ ಸ್ಸಂತಿ ವ್ಯಕ್ತಮತ್ರ ತಪಸ್ವಿನಃ ‖ ೨೩ ‖ ತಚ್ಛ್ರುತ್ವಾ ಭರತ ಸ್ತೇಷಾಂ ವಚನಂ ಸಾಧುಸಮ್ಮತಂ ‖ ಸೈನ್ಯಾನುವಾಚ ಸರ್ವಾಂಸ್ತಾ ನಮಿತ್ರ ಬಲಮರ್ದನಃ ‖ ೨೪ ‖ ಯತ್ತಾ ಭವಂತ ಸ್ತಿಷ್ಠಂತು ನೇತೋ ಗಂತವ್ಯ ಮಗ್ರತಃ ‖ ಅಹಮೇವ ಗಮಿಷ್ಯಾಮಿ ಸುಮಂತ್ರೋ ಗುರುರೇವಚ ‖ ೨೫ ‖

ಸಮಾಲೋಕ್ಯ - ಕಂಡು, ಆಗತಾಃ - ಬಂದು, ಭರತಂ - ಭರತನನ್ನು ಕುರಿತು, ಊಚುಃ - ಹೇಳಿದರು, ಅಮನುಷ್ಯೇ - ಮನುಷ್ಯರಿಲ್ಲದ ಪ್ರದೇಶದಲ್ಲಿ, ಅಗ್ನಿಃ - ಬೆಂಕಿಯು, ನಭವತಿ - ಇರುವದಿಲ್ಲವಷ್ಟೆ, ಅತ್ರೈವ - ಇಲ್ಲಿಯೇ, ರಾಘವೌ - ರಘುವಂಶೋತ್ಪನ್ನರಾದ, ನರವ್ಯಾಘ್ರೌ - ಪುರುಷಶ್ರೇಷ್ಠರಾದ, ಪರಂತಪೌ - ಶತ್ರುಸಂಹಾರಕರಾದ, ರಾಜಪುತ್ರೌ - ರಾಜಪುತ್ರರಾದ ರಾಮಲಕ್ಷ್ಮಣರಿಬ್ಬರೂ, ವ್ಯಕ್ತಂ - ಸ್ಪಷ್ಟವಾಗಿ, ಸ್ತಃ - ಇರುತ್ತಾರೆ, ಅಥವಾ - ಅವರಿಲ್ಲದೇ ಹೋದರೆ, ಅತ್ರ - ಈ ಸ್ಥಳದಲ್ಲಿ, ರಾಮೋಪಮಾಃ - ಶ್ರೀರಾಮನಿಗೆ ಸಮಾನರಾದ, ತಪಸ್ವಿನಃ - ಋಷಿಗಳಾದರೂ, ಸಂತಿ - ಇರುತ್ತಾರೆ, ವ್ಯಕ್ತಂ-ಸ್ಪಷ್ಟವು. ‖೨೨-೨೩‖ ಅಮಿತ್ರಬಲಮರ್ದನಃ-ಶತ್ರುಸೈನ್ಯ ಸಂಹಾರಕನಾದ, ಭರತಃ-ಭರತನು, ಸಾಧುಸಮ್ಮತಂ - ಸತ್ಪುರುಷರಿಗೆ ಇಷ್ಟವಾದ, ತೇಷಾಂ - ಆ ರಾಜಭೃತ್ಯರ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಸರ್ವಾನ್ - ಸಮಸ್ತರಾದ, ತಾನ್‌ಸೈನ್ಯಾನ್ - ಆ ಸೇನಾಜನರನ್ನು ಕುರಿತು, ಉವಾಚ - ಹೇಳಿದನು. ‖ ೨೪ ‖ ಭವಂತಃ - ನೀವು, ಯತ್ತಾಃ - ನಿಶ್ಶಬ್ದವಾಗಿ, ತಿಷ್ಠಂತು-ಇರಿ, ಇತಃ - ಇಲ್ಲಿಂದ, ಅಗ್ರತಃ - ಮುಂಗಡೆ, ನಗಂತವ್ಯಂ - ಹೋಗತಕ್ಕದಲ್ಲ, ಅಹಮೇವ - ನಾನೊಬ್ಬನೇ, ಗಮಿಷ್ಯಾಮಿ - ಹೋಗುವೆನು, ಸುಮಂತ್ರಃ - ಸುಮಂತ್ರನು, ಗುರುರೇವಚ - ವಸಿಷ್ಠ

ದಂಡಕಾರಣ್ಯವನ್ನು ಪ್ರವೇಶಿಸಿ ಹುಡುಕುತ್ತ ಹುಡುಕುತ್ತ, ಸ್ವಲ್ಪಹೊತ್ತಿನ ಮೇಲೆ ಒಂದು ಕಡೆ ಹೊಗೆಯೇಳುವುದನ್ನು ನೋಡಿದರು. ಇಂತು ನೋಡಿದವರಾಗಿ ಭರತನಸಮೀಪಕ್ಕೆ ಬಂದು “ ಈ ಅರಣ್ಯದಲ್ಲಿ ಒಂದಾನೊಂದು ಕಡೆ ಹೊಗೆಯು ಕಾಣುತ್ತಿರುವುದು ” ಎಂದು ಹೇಳಿ ಮತ್ತೂ ಹೀಗೆಂದರು. “ ಅಯ್ಯಾ ಭರತಕುಮಾರನೆ ! ಮನುಷ್ಯರಿಲ್ಲದ ಪ್ರದೇಶದಲ್ಲಿ ಬೆಂಕಿಯಿರಲಾರದು. ಬೆಂಕಿಯಿಲ್ಲದೆ ಹೊಗೆಯು ಹೊರಹೊರಡಲಾರದು. ಆದುದರಿಂದೀ ಸ್ಥಳದಲ್ಲಿ ಶ್ರೀರಾಮಲಕ್ಷ್ಮಣರಿದ್ದಾರೆಂದು ಸ್ಪಷ್ಟವಾಗಿ ತೋರುತ್ತಿರುವುದು. ಒಂದುವೇಳೆ ಶತ್ರುಗಳನ್ನು ಹಿಂಸಿಸುವವರೂ, ಪುರುಷೋತ್ತಮರಾದವರೂ ಆದ ಶ್ರೀರಾಮಲಕ್ಷ್ಮಣರಿಲ್ಲದಿದ್ದರೂ, ಅವರಿಗೆ ಸಮಾನರಾದ ತಪೋವಂತರಾದರೂ ಇದ್ದಾರೆಂದು ಯೋಚಿಸುತ್ತಿದ್ದೇವೆ. ” ಆ ಬಳಿಕ ಶತ್ರುಮರ್ದನೆಯಲ್ಲಿ ಮಹಾ ಸಮರ್ಥನಾದ ಭರತನು ಸೈನಿಕರು ಹೇಳಿದ ಮಾತುಗಳನ್ನು ಕೇಳಿ ಅವರನ್ನು ಕುರಿತು “ ಎಲೈ ಸೈನಿಕರೆ ! ನೀವೆಲ್ಲರೂ ನಿಶ್ಶಬ್ದವಾಗಿ ಇಲ್ಲಿಯೇ ಇರುವವರಾಗಿರಿ. ನಾನು ವಸಿಷ್ಠನೇ ಮೊದಲಾದ ಮಂತ್ರಿಗಳೊಡಗೂಡಿದವನಾಗಿ ಮೊದಲು ಹೊರಡುತ್ತೇನೆ ” ಎಂದನು. ಆ ಮಾತನ್ನು ಕೇಳಿದ ಸೈನಿಕರೆಲ್ಲರೂ ಭರತನಾಣತಿಯಂತೆ ಅಲ್ಲಿಯೇ ಇದ್ದರು. ‖ ೨೧-೨೫ ‖ ಆ ಬಳಿಕ ಭರತನು ಹೊಗೆಯು ಕಾಣುತ್ತಿದ್ದ ಪ್ರದೇಶವನ್ನು

ಏವಮುಕ್ತ್ವಾ ಸ್ತತಸ್ಸರ್ವೇ ತತ್ರ ತಸ್ಥು ಸ್ಸಮಂತತಃ ॥ ಭರತೋ ಯತ್ರ ಧೂಮಾಗ್ರಂ ತತ್ರ ದೃಷ್ಟಿಂ ಸಮಾದಧಾತ್ ॥ ೨೬ ॥

ವ್ಯವಸ್ಥಿತಾಯಾ ಭರತೇನ ಸಾ ಚಮೂ
ನಿರೀಕ್ಷಮಾಣಾಪಿಚ ಧೂಮ ಮಗ್ರತಃ ॥
ಬಭೂವ ಹೃಷ್ಟಾ ನಚಿರೇಣ ಜಾನತೀ
ಪ್ರಿಯಸ್ಯ ರಾಮಸ್ಯ ಸಮಾಗಮಂ ತದಾ ॥ ೨೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಿನವತಿತಮಸ್ಸರ್ಗಃ.

ಋಷಿಯೂ, ಆಗಚ್ಛತು - ಬರಲಿ. ॥ ೨೫ ॥ ತತಃ - ಬಳಿಕ, ಏವಂ - ಈಪರಿಯಾಗಿ, ಉಕ್ತ್ವಾ-ಹೇಳಲ್ಪಟ್ಟ, ಸರ್ವೇ - ಸಮಸ್ತರೂ, ತತ್ರ - ಆ ಪ್ರದೇಶಲ್ಲ, ಸಮಂತತಃ - ಎಲ್ಲೆಡೆಯಲ್ಲಿಯೂ, ತಸ್ಥುಃ - ನಿಂತರು, ಭರತಃ - ಭರತನು, ಯತ್ರ - ಯಾವ ಸ್ಥಳದಲ್ಲಿ, ಧೂಮಾಗ್ರಂ - ಹೊಗೆಯಕೊನೆಯು, ದೃಶ್ಯತೇ - ಕಾಣುತ್ತದೆಯೋ, ತತ್ರ - ಅಲ್ಲಿ, ದೃಷ್ಟಿಂ - ದೃಷ್ಟಿಯನ್ನು, ಸಮಾದಧಾತ್ - ಇಟ್ಟನು. ॥ ೨೬ ॥ ಯಾ - ಯಾವ ಸೈನ್ಯವು, ಭರತೇನ - ಭರತನಿಂದ, ವ್ಯವಸ್ಥಿತಾ - ನಿಲ್ಲಿಸಲ್ಪಟ್ಟಿತೋ, ಸಾಚಮೂಃ - ಆ ಸೈನ್ಯವು, ಅಗ್ರತಃ - ಮುಂದುಗಡೆ, ಧೂಮಮಪಿ - ಹೊಗೆಯನ್ನೂ, ನಿರೀಕ್ಷ್ಯಮಾಣಾ - ನೋಡುತ್ತಿರುವದಾಗಿಯೇ, ಪ್ರಿಯಸ್ಯ - ಇಷ್ಟನಾದ, ರಾಮಸ್ಯ - ಶ್ರೀರಾಮನ, ಸಮಾಗಮಂ - ಪ್ರಾಪ್ತಿಯನ್ನು, ಜಾನತೀ - ತಿಳದುಕೊಂಡದುದಾಗಿ, ತದಾ - ಆಗ, ನಚಿರೇಣ - ಜಾಗ್ರತೆಯಾಗಿ, ಹೃಷ್ಟಾ - ಸಂತೋಷಗೊಂಡುದು, ಬಭೂವ - ಆಯಿತು. ॥ ೨೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಿನವತಿತಮಸ್ಸರ್ಗಃ.

ದೃಷ್ಟಿಯಿಟ್ಟು ನೋಡಿದನು. ಆಗ ಭರತನಿಂದ ನಿಯಮಿತವಾದ ಸೈನ್ಯವೆಲ್ಲವೂ ಬೇಗನೆ ಶ್ರೀರಾಮನನ್ನು ನೋಡುತ್ತೇವೆಯೆಂಬ ಕೋರಿಕೆಯಿಂದ ಮಹಾ ಸಂತೋಷವನ್ನು ಹೊಂದಿ ಹೊಗೆಯ ತುದಿಯನ್ನೇಲಕ್ಷಿಸಿ ನೋಡುತ್ತಿದ್ದರು. ॥೨೬-೨೭॥

ಇಂತಿದು ಭರತಕೃತ ಧೂಮಾಗ್ರದರ್ಶನ ವಿವರಣವೆಂಬ
ತೊಂಭತ್ತಮೂರನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಚತುರ್ನವತಿತಮಸ್ಸರ್ಗಃ.

ದೀರ್ಘಕಾಲೋಷಿತ ಸ್ತಸ್ಮಿ ಗಿರೌ ಗಿರಿವನಪ್ರಿಯಃ ॥ ವೈದೇಹ್ಯಾ ಪ್ರಿಯಮಾಕಾಂಕ್ಷ ಸ್ಸಂ ಚ ಚಿತ್ತಂ ವಿಲೋಭಯನ್ ॥ ೧ ॥ ಅಥ ದಾಶರಥಿ ಶ್ಚಿತ್ರಂ ಚಿತ್ರಕೂಟ ಮದರ್ಶಯತ್ ॥ ಭಾರ್ಯಾ ಮಮರ ಸಂಕಾಶ ಶ್ಯಚೀ ಮಿವ ಪುರಂದರಃ ॥ ೨ ॥ ನ ರಾಜ್ಯಾ ದ್ಭ್ರಂಶನಂ ಭದ್ರೇ! ನ ಸುಹೃದ್ಭಿ ರ್ವಿನಾ ಭವಃ ॥ ಮನೋ ಮೇ ಬಾಧತೇ ದೃಷ್ಟ್ವಾ ರಮಣೀಯ ಮಿಮಂ ಗಿರಿಂ ॥ ೩ ॥ ಪಶ್ಯೇಮಮಚಲಂ ಭದ್ರೇ! ನಾನಾದ್ವಿಜ ಗಣಾಯುತಂ ॥ ಶಿಖರೈಃ ಖಮಿವೋ

ಅಥ - ಆ ಬಳಿಕ, ತಸ್ಮಿಗಿರೌ-ಆ ಚಿತ್ರಕೂಟದಲ್ಲಿ, ದೀರ್ಘಕಾಲೋಷಿತಃ-ಬಹುಕಾಲದಿಂದ (ಒಂದುತಿಂಗಳಿನಿಂದ)ಇರುತ್ತಿರುವ,ಗಿರಿವನಪ್ರಿಯಃ-ಬೆಟ್ಟಗಳಲ್ಲಿಯೂ ಅರಣ್ಯಗಳಲ್ಲಿಯೂ ವಿಶ್ವಾಸವುಳ್ಳ, ವೈದೇಹ್ಯಾಃ-ಸೀತಾದೇವಿಗೆ, ಪ್ರಿಯಂ - ಇಷ್ಟವನ್ನು, ಆಕಾಂಕ್ಷ - ಕೋರುತ್ತಿರುವ, ಸ್ವಂ - ಸ್ವಕೀಯ ವಾದ, ಚಿತ್ತಂಚ - ಮನವನ್ನು, ವಿಲೋಭಯನ್ - ವಿಷಯಾಂತರ ವ್ಯಾಪಾರದಿಂದ ಆನಂದಗೊಳಿಸುತ್ತ, ಅಮರಸಂಕಾಶಃ-ದೇವತೆಗಳಿಗೆ ಸಮಾನನಾದ, ದಾಶರಥಿಃ-ದಶರಥ ಪುತ್ರನಾದ ಶ್ರೀರಾಮನು, ಶಚೀಂ-ಶಚೀದೇವಿಯನ್ನು, ಪುರಂದರಇವ - ದೇವೇಂದ್ರನಂತೆ, ಭಾರ್ಯಾಂ - ಹೆಂಡತಿಯಾದ ಸೀತಾದೇವಿಯನ್ನು ಕುರಿತು, ಚಿತ್ರಂ - ಆಶ್ಚರ್ಯಕರವಾದ, ಚಿತ್ರಕೂಟಂ - ಚಿತ್ರಕೂಟಪರ್ವತವನ್ನು, ಅದರ್ಶಯತ್ - ತೋರಿದನು. ॥ ೧-೨ ॥ ಹೇ ಭದ್ರೇ - ಎಲೌ ಶುಭಕರಳೇ, ರಾಜ್ಯಾತ್ - ರಾಜ್ಯದಿಂದ, ಭ್ರಂಶನಂ - ಪರಿತ್ಯಾಗವು, ಮೇ - ನನ್ನ, ಮನಃ - ಮನಸ್ಸನ್ನು, ನಬಾಧತೇ - ಬಾಧಿಸುವದಿಲ್ಲ, ಇಮಂಗಿರಿಂ - ಈ ಪರ್ವತವನ್ನು, ರಮಣೀಯಂ - ಮನಸ್ಸಿಗೆ ಇಂಪಾದುದನ್ನಾಗಿ, ದೃಷ್ಟ್ವಾ-ಕಂಡು, ಸುಹೃದ್ಭಿರ್ವಿನಾ - ಸ್ನೇಹಿತರನ್ನು ಬಿಟ್ಟು (ಗೋ) ಗರುಡನೇ ಮೊದಲಾದ ಸ್ನೇಹಿತರನ್ನುಳಿದು, ಭವಃ - ಇರುವಿಕೆಯು, ಮೇ - ನನ್ನ, ಮನಃ - ಮನಸ್ಸನ್ನು, ನಬಾಧತೇ - ಬಾಧಿಸುವದಿಲ್ಲ. ॥ ೩ ॥

ಆ ಬಳಿಕಲಾ ಚಿತ್ರಕೂಟಪರ್ವತಸ್ಥಳದಲ್ಲಿ, ದೇವತೆಗಳಿಗೆ ಸಮಾನನಾದವನೂ, ಪರ್ವತಗಳಲ್ಲಿನ ವನದಲ್ಲಿ ಪ್ರೇಮೆಯುಳ್ಳವನೂ, ಆದ ಶ್ರೀರಾಮಮೂರ್ತಿಯು ಒಂದು ತಿಂಗಳ ದಿನಗಳು ಅಲ್ಲಿ ವಾಸ ಮಾಡುತ್ತಿದ್ದು, "ಶಚೀದೇವಿಗೆ ದೇವೇಂದ್ರನು ಚಿತ್ರವಿಚಿತ್ರಗಳಾದ ವಸ್ತುಗಳನ್ನು ತೋರಿಸಿದಂತೆ, ಸೀತಾದೇವಿಗೆ ಆ ಚಿತ್ರಕೂಟಪರ್ವತವನ್ನು ತೋರಿಸಿ ಸಂತಸಗೊಳಿಸುತ್ತ, ತಾನೂ ಸಹ ಆನಂದಪಡುತ್ತ ಆಕೆಯನ್ನು ಕುರಿತು ಹೀಗೆಂದನು. "ಮಂಗಳಸ್ವರೂಪಿಣಿಯಾದ ಓ ಸೀತಾದೇವಿಯೆ! ನಾನು ರಾಜ್ಯಭ್ರಷ್ಟನಾದೆನೆಂದಾಗಲಿ, ಸ್ನೇಹಿತರನ್ನುತೊರೆದೆನೆಂದಾಗಲಿ, ಸ್ವಲ್ಪವಾದರೂ ವ್ಯಸನಪಡಲಿಲ್ಲವು; ಪಡಬೇಕಾದುದೂ ಇಲ್ಲವು. ಮಹಾರಮ್ಯವಾದ ಈ ಚಿತ್ರಕೂಟಪರ್ವತವನ್ನು ನೋಡುವುದರಿಂದ ನನ್ನಮನಸ್ಸು, ಎಲ್ಲವನ್ನೂ ಮರೆತು ಅಧಿಕವಾದ ಆನಂದವನ್ನು ಹೊಂದುತ್ತಿರುವುದು. ॥ ೧-೩ ॥ ಎಲೌ ಮಂಗಳಕರಳೆ!

ದ್ವಿದ್ಭಿ ರ್ಧಾತುಮದ್ಭಿ ರ್ವಿಭೂಷಿತಂ ॥ ೪ ॥ ಕೇಚಿ ದ್ರಜತ ಸಂಕಾಶಾಃ ಕೇಚಿತ್ ಕ್ಷತಜ ಸನ್ನಿಭಾಃ ॥ ಪೀತ ಮಾಂಜಿಷ್ಠ ವರ್ಣಾಶ್ಚ ಕೇಚಿನ್ಮಣಿವರ ಪ್ರಭಾಃ ॥ ೫ ॥ ಪುಷ್ಯಾರ್ಕ ಕೇತಕಾಭಾಶ್ಚ ಕೇಚಿಜ್ಜ್ಯೋತೀ ರಸಪ್ರಭಾಃ ॥ ವಿರಾಜಂತೇಽಚಲೇಂದ್ರಸ್ಯ ದೇಶಾ ಧಾತು ವಿಭೂಷಿತಾಃ ॥ ೬ ॥ ನಾನಾ ಮೃಗ ಗಣ ದ್ವೀಪಿತರಕ್ಷ್ವೃಕ್ಷ ಗಣೈರ್ವೃತಃ ॥ ಅದುಷ್ಟೈ ರ್ಭಾತ್ಯಯಂ ಶೈಲೋ ಬಹುಪಕ್ಷಿ ಸಮಾಯುತಃ ॥ ೭ ॥ ಆಮ್ರ ಜಂಬ್ವಸನೈ ರ್ಲೋಧ್ರೈಃ

ಹೇಭದ್ರೇ - ಎಲೌ ಶುಭಕರಳೇ, ಖಂ - ಅಂತರಿಕ್ಷವನ್ನು, ಉದ್ವಿದ್ಭಿರಿವ-ಚುಚ್ಚುವಂತಿರುವ, ಧಾತುಮದ್ಭಿಃ - ಗೈರಿಕಾದಿ ಧಾತುಗಳುಳ್ಳ, ಶಿಖರೈಃ - ಅಗ್ರಭಾಗಗಳಿಂದ, ವಿಭೂಷಿತಂ - ಅಲಂಕರಿಸಲ್ಪಟ್ಟ, ನಾನಾದ್ವಿಜಗಣಾಯುತಂ - ಅನೇಕಜಾತಿ ಪಕ್ಷಿಗಳ ಗುಂಪಿನಿಂದ ಕೂಡಿರುವ, ಇಮಮಚಲಂ - ಈ ಬೆಟ್ಟವನ್ನು, ಪಶ್ಯ - ನೋಡು. ॥ ೪ ॥ ಧಾತುವಿಭೂಷಿತಾಃ, ಧಾತು - ಗೈರಿಕಾದಿ ಧಾತುಗಳಿಂದ, ವಿಭೂಷಿತಾಃ - ಅಲಂಕರಿಸಲ್ಪಟ್ಟವುಗಳಾದುದರಿಂದಲೇ, ಅಚಲೇಂದ್ರಸ್ಯ - ಪರ್ವತಶ್ರೇಷ್ಠವಾದ ಚಿತ್ರಕೂಟದ, ಕೇಚಿತ್‍ದೇಶಾಃ - ಕೆಲಪ್ರದೇಶಗಳು, ರಜತಸಂಕಾಶಾಃ - ಬೆಳ್ಳಿಗೆ ಸಮಾನಗಳು, ಕೇಚಿತ್ - ಕೆಲಪ್ರದೇಶಗಳು, ಕ್ಷತಜಸನ್ನಿಭಾಃ - ರಕ್ತಕ್ಕೆಸಮಾನವಾದ ಬಣ್ಣವುಳ್ಳವು, ಕೇಚಿತ್ - ಕೆಲ ಪ್ರದೇಶಗಳು, ಪೀತಮಾಂಜಿಷ್ಠವರ್ಣಾಶ್ಚ - ಅರಿಶಿನಬಣ್ಣವೂ ಊದಾಬಣ್ಣವೂ ಉಳ್ಳವುಗಳು, ಕೇಚಿತ್- ಕೆಲಪ್ರದೇಶಗಳು, ಮಣಿವರಪ್ರಭಾಃ-ನೀಲಮಣಿಗಳ ಕಾಂತಿಯಂತೆ ಕಾಂತಿಯುಳ್ಳವಾಗಿಯೂ, ಕೇಚಿತ್- ಕೆಲವೆಡೆಯಲ್ಲಿ, ಪುಷ್ಯಾರ್ಕಕೇತಕಾ - ಪುಷ್ಯರಾಗವೆಂಬ ಮಣಿಗಳ ಸ್ಫಟಿಕಮಣಿಗಳ ಕೇದಿಗೆ ಹೂಗಳ, ಆಭಾಃ - ಕಾಂತಿಯಂತೆ ಕಾಂತಿಯುಳ್ಳವುಗಳಾಗಿಯೂ, ಕೇಚಿತ್ - ಕೆಲಪ್ರದೇಶಗಳು, ಜ್ಯೋತೀರಸಪ್ರಭಾಃ - ನಕ್ಷತ್ರಗಳ ಪಾದರಸದ, ಪ್ರಭಾಃ - ಕಾಂತಿಯಂತೆ ಕಾಂತಿಯುಳ್ಳವುಗಳಾಗಿಯೂ, ವಿರಾಜಂತೇ - ಹೊಳೆಯುತ್ತವೆ. ॥ ೬ ॥ ಬಹುಪಕ್ಷಿಸಮಾಯುತಃ-ಅನೇಕ ಬಗೆಗಳಾದ ಹಕ್ಕಿಗಳಿಂದ ಕೂಡಿರುವ, ಅಯಂಶೈಲಃ - ಈ ಬೆಟ್ಟವು, ಅದುಷ್ಟೈಃ - ದೌಷ್ಟ್ಯವನ್ನು ಬಿಟ್ಟಿರುವ, ನಾನಾಮೃಗಗಣದ್ವೀಪಿತರಕ್ಷ್ವೃಕ್ಷಗಣೈಃ-ಅನೇಕವಿಧವಾದ ಮೃಗಗಳ ಸಮೂಹದಿಂದಲೂ, ವ್ಯಾಘ್ರ

ನಾನಾವಿಧಗಳಾದ ವೃಕ್ಷಸಮೂಹಗಳಿಂದ ಕೂಡಿಕೊಂಡಿರುವುದೂ, ಗೈರಿಕಾದಿ ಧಾತು ವಿಶೇಷಗಳನ್ನೊಳಗೊಂಡಿರುವುದೂ, ಅಂತರಿಕ್ಷವನ್ನು ಮುಟ್ಟುತ್ತಿರುವುದೋ ಎಂಬಂತಿರುವ ಶಿಖರಗಳಿಂದೊಪ್ಪುತ್ತಿರುವುದೂ ಆದ ಈ ಚಿತ್ರಕೂಟವನ್ನು ನೋಡು. ಎಲೌ ದೇವಿಯೆ! ಇಷ್ಟೆಯಲ್ಲದೆ ಈ ಚಿತ್ರಕೂಟಪರ್ವತದಲ್ಲಿ ಕೆಲಪ್ರದೇಶಗಳು ಬೆಳ್ಳಿಗೆ ಸಮಾನಗಳಾಗಿರುವುವು. ಇನ್ನು ಕೆಲಪ್ರದೇಶಗಳು ರಕ್ತವರ್ಣವುಳ್ಳುವಾಗಿವೆ. ಇನ್ನೂಕೆಲಪ್ರದೇಶಗಳು ಅರಿಶಿನ ಬಣ್ಣದು ವಾಗಿವೆ; ಅಲ್ಲದೆ ಚಿತ್ರವರ್ಣದುವಾಗಿಯೂ ಇರುವುವು. ಮತ್ತೆ ಕೆಲಪ್ರದೇಶಗಳು ರತ್ನ ಶ್ರೇಷ್ಠಗಳಾದ ಇಂದ್ರನೀಲಮಣಿಗಳ ಕಾಂತಿಗಳನ್ನೊಳಗೊಂಡುವಾಗಿರುವುವು. ॥೪-೫॥ ಕೆಲವು ಕಡೆಗಳಲ್ಲಿ ಪುಷ್ಯರಾಗಮಣಿಗಳ, ಸ್ಫಟಿಕಮಣಿಗಳ ಕಾಂತಿಯುಳ್ಳವಾಗಿವೆ. ಮತ್ತೂ ಕೆಲವೆಡೆ ಗಳು ನಕ್ಷತ್ರಗಳ, ಪಾದರಸದ ಕಾಂತಿಯುಳ್ಳವಾಗಿರುವುವು. ಇನ್ನು ಕೆಲಪ್ರದೇಶಗಳು ಬಹು ಮನೋಹರಗಳಾದ ಕಾಂತಿಗಳನ್ನೊಳಗೊಂಡಿವೆ. ಎಲೌ ದೇವಿಯೆ! ನಾನಾವಿಧಗಳಾದ

ಪ್ರಿಯಾಲೈಃ ಪನಸೈರ್ಧವೈಃ ॥ ಅಂಕೋಲೈರ್ಭವ್ಯತಿನಿಶೈ ರ್ಬಿಲ್ವ ತಿಂದುಕ ವೇಣುಭಿಃ ॥ ೮ ॥ ಕಾಶ್ಮರ್ಯರಿಷ್ಟ ವರುಣೈ ರ್ಮಧೂಕೈ ಸ್ತಿಲಕೈ ಸ್ತಥಾ ॥ ಬದರ್ಯಾಮಲಕೈ ರ್ನೀಪೈ ರ್ವೇತ್ರೇ ಧನ್ವನ ಬೀಜಕೈಃ ॥ ೯ ॥ ಪುಷ್ಪವದ್ಭಿಃ ಫಲೋಪೇತೈ ಶ್ಛಾಯಾವದ್ಭಿ ರ್ಮನೋರಮೈಃ ॥ ಏವಮಾದಿಭಿ ರಾಕೀರ್ಣ ಶ್ರಿಯಂ ಪುಷ್ಯತ್ಯಯಂ ಗಿರಿಃ ॥ ೧೦ ॥ ಶೈಲಪ್ರಸ್ಥೇಷು ರಮ್ಯೇಷು ಪಶ್ಯೇಮಾ ರೋಮಹರ್ಷಣಾ ॥ ಕಿನ್ನರಾ ದ್ವಂದ್ವಶೋ ಭದ್ರೇ ! ರಮಮಾಣಾ ಮನ

ಗಳ, ಚಿರತೆಗಳ, ಕರಡಿಗಳ, ಸಮೂಹಗಳಿಂದಲೂ, ಸುತ್ತುವರೆದುದಾಗಿ, ಭಾತಿ - ಪ್ರಕಾಶಿಸುತ್ತದೆ. ॥ ೭ ॥ ಪುಷ್ಪವದ್ಭಿಃ - ಹೂ ಹೊಳೆತಿರುವ, ಆಮ್ರಜಂಬ್ವಸನೈಃ - ಮಾವಿನಗಿಡಗಳಿಂದಲೂ, ನೇರಳೇಮರಗಳಿಂದಲೂ, ಹೊನ್ನೇಗಿಡಗಳಿಂದಲೂ, ಲೋಧ್ರೈಃ - ಲೋಧ್ರುಮರಗಳಿಂದಲೂ, ಪ್ರಿಯಾಳೈಃ - ಮೊರಟೇಗಿಡಗಳಿಂದಲೂ, ಪನಸೈಃ - ಹಲಸಿನಗಿಡಗಳಿಂದಲೂ, ಧವೈಃ - ಕಗ್ಗಲೀ ಮರಗಳಿಂದಲೂ, ಅಂಕೋಲೈಃ - ಅಂಕೋಲೇಗಿಡಗಳಿಂದಲೂ, ಭವ್ಯತಿನಿಶೈಃ - ಶುಭಕರವಾದ ಹುಲಿಗೆ ಮರಗಳಿಂದಲೂ, ಬಿಲ್ವತಿಂದುಕವೇಣುಭಿಃ - ಬಿಲ್ವದಮರಗಳಿಂದಲೂ, ಹೊಂಗೇಮರಗಳಿಂದಲೂ, ಬಿದಿರುಮೆಳೆಗಳಿಂದಲೂ, ಕಾಶ್ಮರ್ಯರಿಷ್ಟವರುಣೈಃ - ಕುಂಬಳೀ, ಬೇವು, ವಸಲೇ ಈ ಗಿಡಗಳಿಂದಲೂ, ತಥಾ - ಹಾಗೆಯೇ, ಮಧೂಕೈಃ - ಇಪ್ಪೇಗಿಡಗಳಿಂದಲೂ, ತಿಲಕೈಃ - ತಿಲಕದಮರಗಳಿಂದಲೂ, ಬದರ್ಯಾಮಲಕೈಃ - ಎಳಚೀಮರಗಳಿಂದಲೂ, ನೆಲ್ಲೀಗಿಡಗಳಿಂದಲೂ, ನೀಪೈಃ - ಈಚಲು ಗಿಡಗಳಿಂದಲೂ, ವೇತ್ರಧನ್ವನಬೀಜಕೈಃ - ಬೆತ್ತದಗಿಡಗಳಿಂದಲೂ, ರಕ್ತಾರ್ಜುನವೃಕ್ಷಗಳಿಂದಲೂ, ದಾಳಿಂಬೇಮರಗಳಿಂದಲೂ, ಏವಮಾದಿಭಿಃ - ಇವೇ ಮೊದಲಾದ, ಫಲೋಪೇತೈಃ - ಫಲಗಳಿಂದ ಕೂಡಿರುವ, ಛಾಯಾವದ್ಭಿಃ - ನೆರಳುಳ್ಳ, ಮನೋರಮೈಃ - ಮನಸ್ಸಿಗಿಂಪಾಗಿರುವ ವೃಕ್ಷಗಳಿಂದ, ಆಕೀರ್ಣಃ ತುಂಬಿರುವ, ಅಯಂಗಿರಿಃ - ಈ ಪರ್ವತವು, ಶ್ರಿಯಂ-ಕಾಂತಿಯನ್ನು, ಪುಷ್ಯತಿ-ವೃದ್ಧಿಹೊಂದಿಸುತ್ತದೆ. ॥ ೮-೧೦ ॥ ಹೇ ಭದ್ರೇ - ಎಲೌ ಶುಭಕರಳೇ, ರಮ್ಯೇಷು - ಮನೋಹರಗಳಾದ, ಶೈಲಪ್ರಸ್ಥೇಷು - ಬೆಟ್ಟದ ಜರಿತೆಗಳಲ್ಲಿ, ರೋಮಹರ್ಷಣಾ - ರೋಮಾಂಚವುಳ್ಳ, ದ್ವಂದ್ವಶಃ - ಇಬ್ಬಿಬ್ಬರಾಗಿ, ರಮ

ಪಕ್ಷಿಗಳ ಸಮುದಾಯದಿಂದೊಡಗೂಡಿದ ಈ ಚಿತ್ರಕೂಟಪರ್ವತದಲ್ಲಿ ಅನೇಕ ವಿಧಗಳಾದ ಮೃಗಗಳ, ದೊಡ್ಡದೊಡ್ಡ ಹುಲಿಗಳ, ಚಿರುತೆಗಳ, ಗುಂಪುಗಳು ತಾವೇತಾವಾಗಿ ಸಂಚರಿಸುತ್ತಿರುವುವು. ಅಲ್ಲದೆ ಉಗ್ರಗಳಲ್ಲದ ಕೆಲವು ಸಾಧುಮೃಗಗಳೂ ಸಂಚರಿಸುತ್ತಿವೆ. ಇವುಗಳೆಲ್ಲವನ್ನೂ ನೋಡು. ಸೀತಾದೇವೀ! ಈ ಚಿತ್ರಕೂಟಪರ್ವತವು ಬಹು ಚೆನ್ನಾಗಿ ಹೂ ಹೊಳೆತಿರುವುವೂ, ಫಲಭರಿತವಾದುವೂ ಆಗಿ ಶೋಭಿಸುತ್ತಿರುವ, ಮಾವು, ನೇರಳೆ, ಹೊನ್ನೆ, ಲೊಡ್ಡುಗ, ಮೊರಟೆ, ಹಲಸು, ಅಂಕೋಲೆ, ಹುಲಿಗೆ, ಬಿಲ್ವ, ಹೊಂಗೆ, ಬಿದಿರು, ಕುಂಬಳ, ಬೇವು, ವಸಲೆ, ಇಪ್ಪೆ, ತಿಲಕ, ಎಳಚೆ, ನೆಲ್ಲಿ, ಈಚಲು, ಬೆತ್ತ, ರಕ್ತಾರ್ಜುನ, ದಾಳಿಂಬೆ ಮೊದಲಾದ ವೃಕ್ಷಸಮೂಹದಿಂದ ಬಹು ಮನೋಹರವಾಗಿ ಕಾಣುತ್ತಿರುವುದು, ನೋಡಿದೆಯಾ! ॥೬-೧೦॥ ಬಹು ಮನೋಹರಗಳಾದ ಈ ಗಿರಿಶಿಖರಗಳಲ್ಲಿ ಕಿನ್ನರರ ಮಿಥುನಗಳು ವಿಹರಿಸುತ್ತ, ನೋಡುವ ನೋಟಕರಲ್ಲಿ ವಿಕಾರವನ್ನು ಹುಟ್ಟಿಸುವುವಾಗಿರುವುವು. ಇವು

ಸ್ವಿನಃ ॥ ೧೧ ॥ ಶಾಖಾವಸಕ್ತಾ೯ ಖಡ್ಗಾಂಶ್ಚ ಪ್ರವರಾಣ್ಯಂಬರಾಣಿಚ ॥ ಪಶ್ಯ! ವಿದ್ಯಾಧರಸ್ತ್ರೀಣಾಂ ಕ್ರೀಡೋದ್ದೇಶಾ ನ್ಮನೋರಮಾ೯ ॥ ೧೨ ॥ ಜಲ ಪ್ರಪಾತೈ ರುದ್ಭೇದೈ ರ್ನಿಷ್ಯಂದೈಶ್ಚ ಕ್ವಚಿ ತ್ಕ್ವಚಿತ್ ॥ ಸ್ರವದ್ಭಿ ರ್ಭಾತ್ಯಯಂ ಶೈಲ ಸ್ಸ್ರವ ನ್ಮದಇವ ದ್ವಿಪಃ ॥ ೧೩ ॥ ಗುಹಾ ಸಮೀರಣೋ ಗಂಧಾ೯ ನಾನಾ ಪುಷ್ಪ ಭವಾನ್ವಹ೯ ॥ ಘ್ರಾಣ ತರ್ಪಣ ಮಭ್ಯೇತ್ಯ ಕಂ ನರಂ ನಪ್ರಹರ್ಷ ಯೇತ್ ? ॥ ೧೪ ॥ ಯದೀಹ ಶರದೋನೇಕಾ ಸ್ತ್ವಯಾ ಸಾರ್ಧ ಮನಿಂದಿತೇ!॥

ಮಾಣಾ೯ - ವಿಹರಿಸುತ್ತಿರುವ, ಮನಸ್ವಿನಃ - ಒಳ್ಳೆಯ ಮನಸ್ಸುಳ್ಳ, ಇಮಾ೯ಕಿನ್ನರಾ೯ - ಈ ಕಿನ್ನರರನ್ನು, ಪಶ್ಯ - ನೋಡು. ॥ ೧೧ ॥ ಶಾಖಾವಸಕ್ತಾ೯ - ಕೊಂಬೆಗಳಲ್ಲಿ ಸಂಬಂಧಿಸಿರುವ, ಖಡ್ಗಾಂಶ್ಚ - ಕತ್ತಿಗಳನ್ನು, ಪ್ರವರಾಣಿ - ಶ್ರೇಷ್ಠವಾದ, ಅಂಬರಾಣಿಚ - ವಸ್ತ್ರಗಳನ್ನು, ಪಶ್ಯ - ನೋಡು, ವಿದ್ಯಾಧರ ಸ್ತ್ರೀಣಾಂ - ವಿದ್ಯಾಧರರ ಸ್ತ್ರೀಯರ, ಮನೋರಮಾ೯ - ಮನೋಹರಗಳಾದ, ಕ್ರೀಡೋದ್ದೇಶಾ೯ - ವಿಹಾರಸ್ಥಾನಗಳನ್ನು, (ಪಶ್ಯ - ನೋಡು.) ॥ ೧೨ ॥ ಅಯಂಶೈಲಃ - ಈ ಬೆಟ್ಟವು, ಕ್ವಚಿತ್-ಒಂದಾನೊಂದು ಸ್ಥಳದಲ್ಲಿ, ಉದ್ಭೇದೈಃ - ನೆಲವನ್ನು ಭೇದಿಸಿಕೊಂಡು ಹುಟ್ಟಿರುವ, ಜಲಪ್ರಪಾತೈಃ - ಜಲಪ್ರವಾಹಗಳಿಂದಲೂ, ಕ್ವಚಿತ್-ಒಂದೊಂದುಕಡೆ, ಸ್ರವದ್ಭಿಃ-ಸುರಿಯುತ್ತಿರುವ, ನಿಷ್ಯಂದೈಃ - ಪ್ರವಾಹಗಳಿಂದಲೂ, ಸ್ರವನ್ಮದಃ - ಸುರಿಯುತ್ತಿರುವ ಮದೋದಕವುಳ್ಳ, ದ್ವಿಪಇವ - ಆನೆಯಂತೆ, ಭಾತಿ - ಹೊಳೆಯುತ್ತದೆ. ॥ ೧೩ ॥ ಗುಹಾಸಮೀರಣಃ - ಈ ಗುಹೆಯಿಂದ ಬರುತ್ತಿರುವ ವಾಯುವು, ನಾನಾಪುಷ್ಪಭವಾ೯ - ಅನೇಕ ವಿಧವಾದ ಪುಷ್ಪಗಳಿಂದ ಹುಟ್ಟಿದ, ಗಂಧಾ೯-ಸುವಾಸನೆಗಳನ್ನು, ವಹ೯ - ವಹಿಸುತ್ತ, ಘ್ರಾಣತರ್ಪಣಂ - ಘ್ರಾಣೇಂದ್ರಿಯಕ್ಕೆ ತೃಪ್ತಿಯಾಗಿ, ಅಭ್ಯೇತ್ಯ - ಬಂದು, ಕಂನರಂ-ಯಾವ ಮನುಷ್ಯನನ್ನು ತಾನೇ, ನಪ್ರಹರ್ಷಯೇತ್ - ಸಂತೋಷಪಡಿಸದೆ ಇದ್ದೀತು. ॥೧೪॥ ಹೇ ಅನಿಂದಿತೇ - ಎಲೌ ನಿರ್ದೋಷಳೇ, ಇಹ - ಈ ವನದಲ್ಲಿ, ತ್ವಯಾಸಾರ್ಧಂ - ನಿನ್ನೊಡನೆಯೂ, ಲಕ್ಷ್ಮಣೇನಚ - ಲಕ್ಷ್ಮಣನೊಡನೆಯೂ, ಅನೇಕಾಶ್ಶರದಃ - ಅನೇಕ ಸಂವತ್ಸರಗಳು, ವತ್ಸ್ಯಾಮಿಯದಿ - ಇದ್ದವನಾ

ಕ್ರೀಡೆಯು ಬಹು ಮನೋಹರವಾದುದು. ಇಂತಹ ಈ ಕಿನ್ನರರನ್ನು ನೋಡಿದೆಯಾ? ಸೀತೆ! ವಿದ್ಯಾಧರರು ಗಿಡದ ರೆಂಬೆಗಳಲ್ಲಿ ಒಗೆದ ವಸ್ತ್ರಗಳನ್ನು ಕಟ್ಟಿದ್ದಾರೆ; ಕೆಲವೃಕ್ಷಗಳ ರೆಂಬೆಗಳಲ್ಲಿ ದಿವ್ಯಗಳಾದ ಆಯುಧಗಳನ್ನು ನೇತುಹಾಕಿ ವಿಚಿತ್ರವಾಗಿ ಕ್ರೀಡಿಸುತ್ತಿದ್ದಾರೆ; ಇಂತಹ ವಿದ್ಯಾಧರ ಮಿಥುನಗಳನ್ನುನೋಡಿದೆಯಾ? ಈ ಚಿತ್ರಕೂಟಪರ್ವತವು, ಒಂದೊಂದು ಕಡೆ ಪ್ರವಹಿಸುತ್ತಿರುವ ಜರಿತೆಗಳಿಂದಲೂ, ಭೂಮಿಯನ್ನು ಭೇದಿಸಿಕೊಂಡು ಬರುತ್ತಿರುವ ಸಿಹಿನೀರಿನ ಊಟೆಗಳಿಂದಲೂ, ಮದೋದಕವನ್ನು ಸ್ರವಿಸುತ್ತಿರುವ ಆನೆಗಳಂತೆ ಪ್ರಕಾಶಿಸುತ್ತಿರುವುದು.॥೧೧-೧೩॥ಅಲ್ಲದೆ, ನಾನಾವಿಧಗಳಾದ ಪುಷ್ಪನಿಚಯಗಳ ಸೌರಭ್ಯವನ್ನುಹೊತ್ತುಕೊಂಡು ಬರುತ್ತಿರುವುದೂ, ಗುಹೆಗಳಿಂದ ಹೊರಹೊರಡುತ್ತಿರುವುದೂ, ಘ್ರಾಣೇಂದ್ರಿಯಕ್ಕೆ ತೃಪ್ತಿಯುಂಟುಮಾಡುತ್ತಿರುವುದೂ ಆದ ವಾಯುವು ಬೀಸುತ್ತನಮಗೆಬಹಳವಾದ ಸೌಖ್ಯವನ್ನುಂಟುಮಾಡುತ್ತಿರುವುದು. ಪೂಜ್ಯಳಾದ ಸೀತಾದೇವಿಯೆ! ಇಲ್ಲಿ ನಾನೂ,ನೀನೂ,ಲಕ್ಷ್ಮಣನೂ ಅನೇಕ ಸಂವತ್ಸರಗಳವರೆಗೆ ವಾಸ ಮಾಡಿಕೊಂಡಿದ್ದರೂ, ರಾಜ್ಯಭ್ರಷ್ಟತ್ವದಿಂದ

ಲಕ್ಷ್ಮಣೇನಚ ವತ್ಸ್ಯಾಮಿ ನ ಮಾಂ ಶೋಕಃ ಪ್ರಧಕ್ಷ್ಯತಿ ॥ ೧೫ ॥ ಬಹು ಪುಷ್ಪ ಫಲೇ ರಮ್ಯೇ ನಾನಾದ್ವಿಜ ಗಣಾಯುತೇ ॥ ವಿಚಿತ್ರ ಶಿಖರೇಹ್ಯಸ್ಮಿ ರತವಾನಸ್ಮಿ ಭಾಮಿನಿ ! ॥ ೧೬ ॥ ಅನೇನ ವನವಾಸೇನ ಮಯಾ ಪ್ರಾಪ್ತಂ ಫಲದ್ವಯಂ ॥ ಪಿತುಶ್ಚಾನೃಣತಾ ಧರ್ಮೇ ಭರತಸ್ಯ ಪ್ರಿಯಂ ತಥಾ ॥ ೧೭ ॥ ವೈದೇಹಿ ! ರಮಸೇ ಕಚ್ಚಿ ಚ್ಚಿತ್ರಕೂಟೇ ಮಯಾಸಹ ? ॥ ಪಶ್ಯಂತೀ ವಿವಿಧಾ

ದರೂ, ಮಾಂ - ನನ್ನನ್ನು, ಶೋಕಃ - ವ್ಯಸನವು, ನಪ್ರಧಕ್ಷ್ಯತಿ - ಬಾಧೆಗೊಳಿಸುವುದಿಲ್ಲ. ॥ ೧೫ ॥ ಹೇ ಭಾಮಿನಿ - ಎಲೌ ಕುಲಾಂಗನೆಯೆ ! ಬಹುಪುಷ್ಪಫಲೇ - ಅನೇಕವಾದ ಪುಷ್ಪಗಳೂ ಫಲಗಳೂ ಉಳ್ಳ, ರಮ್ಯೇ - ಮನೋಹರವಾದ, ನಾನಾದ್ವಿಜಗಣಾಯುತೇ - ಅನೇಕ ಬಗೆಗಳಾದ ಪಕ್ಷಿಗಳ ತಂಡಗಳಿಂದ ಕೂಡಿರುವ, ವಿಚಿತ್ರಶಿಖರೇ - ಆಶ್ಚರ್ಯಕರವಾದ ಶೃಂಗಗಳುಳ್ಳ, ಅಸ್ಮಿ - ಈ ಬೆಟ್ಟದಲ್ಲಿ, ರತವಾ - ವಿಹಾರವುಳ್ಳವನಾಗಿ, ಅಸ್ಮಿ - ಇದ್ದೇನೆ. ॥ ೧೬ ॥ ಮಯಾ - ನನ್ನಿಂದ, ಅನೇನ ವನವಾಸೇನ - ಈ ವನವಾಸದಿಂದ, ಧರ್ಮೇ - ಧರ್ಮವಿಷಯದಲ್ಲಿ, ಪಿತುಃ - ತಂದೆಯ, ಅನೃಣತಾಚ - ಋಣವಿಮೋಚನವೂ, ತಥಾ - ಹಾಗೆಯೇ, ಭರತಸ್ಯ - ಭರತನಿಗೆ, ಪ್ರಿಯಂ - ಇಷ್ಟವೆಂಬ, ಫಲದ್ವಯಂ - ಎರಡು ಪಯೋಜನಗಳು, ಪ್ರಾಪ್ತಂ - ಹೊಂದಿದುದಾಯಿತು. ॥ ೧೭ ॥ ಹೇ ವೈದೇಹಿ- ಎಲೌ ವಿದೇಹರಾಜನಮಗಳೇ, ಚಿತ್ರಕೂಟೇ - ಚಿತ್ರಕೂಟಪರ್ವತದಲ್ಲಿ, ಮನೋವಾಕ್ಕಾಯಸಂಯತಾ - (೧) ತನಗೆ ಸ್ವಾಧೀನವಾದ ಮನೋವಾಕ್ಶರೀರವ್ಯಾಪಾರಗಳುಳ್ಳ, ವಿವಿಧಾ - ಅನೇಕಬಗೆಗಳಾದ, ಭಾವಾ - (ಗೋ) ಮಲಯಮಾರುತ, ಕೋಕಿಲಾಲಾಪ, ಭ್ರಮರಝೇಂಕಾರ, ಪುಷ್ಪಹಾಸಗಳಿಂದ, ಶೃಂಗಾರ ರಸೋದ್ದೀಪಕವಾದ ಭಾವಗಳನ್ನು, ಪಶ್ಯಂತೀ - ನೋಡುತ್ತ, ಮಯಾಸಹ -

ಉಂಟಾದ ವ್ಯಸನವು ನನ್ನನ್ನು ಸ್ವಲ್ಪವಾದರೂ ಬಾಧಿಸಲಾರದು.॥೧೪-೧೫॥ದೇವಿ! ನಾನಾವಿಧಗಳಾದ ಹೂಗಳನ್ನೂ, ಫಲಗಳನ್ನೂ ಒಳಗೊಂಡಿರುವುದೂ, ಮನೋಹರವಾದುದೂ, ನಾನಾವಿಧಗಳಾದ ಪಕ್ಷಿಗಳ ಗುಂಪುಗಳನ್ನೊಳಗೊಂಡುದೂ, ವಿಚಿತ್ರಗಳಾದ ಶಿಖರಗಳುಳ್ಳದೂ ಆದ ಈ ಪರ್ವತದಲ್ಲಿ ಎಲ್ಲ ಕಾಲಗಳಲ್ಲಿಯೂ ವಾಸ ಮಾಡಬೇಕೆಂಬ ಅಭಿಪ್ರಾಯವು ನನಗಿರುವುದು. ಓ ದೇವಿಯೆ ! ನಾನು ವನವಾಸ ಮಾಡುವುದರಿಂದ, ಪಿತೃವಾಕ್ಯಪರಿಪಾಲನೆ ಮಾಡುವುದರಿಂದುಂಟಾಗುವ ಫಲವನ್ನೂ, ತಮ್ಮನಾದ ಭರತನಿಗೆ ಹಿತವನ್ನುಂಟುಮಾಡಿದ ಫಲವನ್ನೂ ಹೊಂದಿದವನಾದೆನಲ್ಲವೆ ? ಜನಕರಾಜನಂದಿನಿಯಾದ ಎಲೌ ದೇವಿಯೆ ! ಮನೋವಾಕ್ಕಾಯಗಳಿಗೆ ಆನಂದವನ್ನುಂಟುಮಾಡುವುದೂ, ನಾನಾವಿಧಗಳಾದುವೂ ಆದ ಮಲಯಾದಿ ಭಾವಗಳನ್ನು ನೋಡುತ್ತ ಈ ಚಿತ್ರಕೂಟಪರ್ವತದಲ್ಲಿ ನನ್ನೊಡಗೂಡಿ ವಿಹರಿಸು

ಟಿ. (೧) ಮನೋವಾಕ್ಕಾಯ ಸಂಯತೇತಿ ಪಾಠಾಂತರಂ—ಆ ಪಾಠದಲ್ಲಿ "ನಿಯಮಿಸಲ್ಪಟ್ಟ ಮನೋವ್ಯಾಪಾರವೂ, ವಾಗ್ವ್ಯಾಪಾರವೂ, ಶರೀರವ್ಯಾಪಾರವೂ ಉಳ್ಳವಳಾಗಿ, ವಿವಿಧಾ - ನಾನಾಬಗೆಗಳಾದ, ಭರ್ವಾ - ಕಿನ್ನರರು ಮಾಡತಕ್ಕ ಲೀಲಾಚೇಷ್ಟಾದಿ ವಿಶೇಷಗಳನ್ನು, ಪಶ್ಯಂತೀ - ನೋಡುತ್ತ, ಮಯಾಸಹ - ನನ್ನೊಡನೆ, ರಮಸೇಕಚ್ಚಿತ್ - ವಿಹರಿಸುವೆಯಷ್ಟೆ" ಎಂದು ಅರ್ಥವು.

ಭಾರ್ಯಾ ಮನೋವಾಕ್ಕಾಯ ಸಂಯತೇಯಾ ॥ ೧೮ ॥ ಇದಮೇವಾಮೃತಂ ಪ್ರಾಹೂ ರಾಜ್ಞಿ! ರಾಜರ್ಷಯಃ ಪರೇ ॥ ವನವಾಸಂ ಭವಾರ್ಥಾಯ ಪ್ರೇತ್ಯ ಮೇ ಪ್ರಪಿತಾಮಹಾಃ ॥ ೧೯ ॥ ಶಿಲಾ ಶೈಲಸ್ಯ ಶೋಭಂತೇ ವಿಶಾಲಾ ಶ್ಶತಶೋಽಭಿತಃ ॥ ಬಹುಳಾ ಬಹುಳೈ ರ್ವರ್ಣೈ ರ್ನೀಲ ಪೀತ ಸಿತಾರುಣೈಃ ॥೨೦॥ ನಿಶಿ ಭಾಂತ್ಯಚಲೇಂದ್ರಸ್ಯ ಹುತಾಶನ ಶಿಖಾ ಇವ ॥ ಓಷಧ್ಯಃ ಸ್ವಪ್ರಭಾಲಕ್ಷ್ಮ್ಯಾ ಭ್ರಾಜಮಾನಾ ಸ್ಸಹಸ್ರಶಃ ॥ ೨೧ ॥ ಕೇಚಿತ್ ಕ್ಷಯನಿಭಾ ದೇಶಾಃ ಕೇಚಿದುದ್ಯಾನ ಸನ್ನಿಭಾಃ॥ಕೇಚಿದೇಕ ಶಿಲಾಭಾಂತಿ ಪರ್ವತ ಸ್ಯಾಸ್ಯ ಭಾಮಿನಿ! ॥೨೨॥

ನನ್ನೊಡಗೂಡಿ, ರಮಸೇ ಕಚ್ಚಿತ್ - ವಿಹರಿಸುತ್ತೀಯಷ್ಟೆ. ॥ ೧೮ ॥ ಹೇ ರಾಜ್ಞಿ - ಎಲೌ ರಾಜಕುಮರಿಯೇ, ಪರೇರಾಜರ್ಷಯಃ-ಹಿಂದಿನರಾಜರ್ಷಿಗಳು, ಇದಂವನವಾಸಂ-ಈ ವನವಾಸವನ್ನು, ಅಮೃತಂ-ಮೋಕ್ಷಸಂಪಾದಕವನ್ನಾಗಿ, ಪ್ರಾಹುಃ - ಹೇಳಿದರು, ಮೇ - ನನ್ನ, ಪ್ರಪಿತಾಮಹಾಸ್ತು-ತಾತಂದಿರೇ ಮೊದಲಾದ ಹಿರಿಯರು, ಪ್ರೇತ್ಯ - ಮರಣವನ್ನುಹೊಂದಿ, ಭವಾರ್ಥಾಯ - ದಿವ್ಯದೇಹಪ್ರಾಪ್ತಿರೂಪ ಪ್ರಯೋಜನಕ್ಕೋಸ್ಕರವೆಂದು, ಪ್ರಾಹುಃ - ಹೇಳುತ್ತಾರೆ. ॥ ೧೯ ॥ ಶತಶಃ - ನೂರಾರಾದ, ವಿಶಾಲಾಃ-ವಿಸ್ತಾರವಾದ, ಬಹುಳಾಃ - ಅನೇಕವಾದ, ಶೈಲಸ್ಯ - ಬೆಟ್ಟದ, ಶಿಲಾಃ - ಕಲ್ಲುಗಳು, ಬಹುಳೈಃ - ಬಹಳ ಬಗೆಯಾಗಿ, ನೀಲಪೀತಸಿತಾರುಣೈಃ - ಕಪ್ಪು, ಹಸರು, ಬಿಳುಪು, ಕೆಂಪು ಎಂಬ, ವರ್ಣೈಃ-ಬಣ್ಣಗಳಿಂದ, ಶೋಭಂತೇ - ಹೊಳೆಯುತ್ತವೆ. ॥ ೨೦ ॥ ಅಚಲೇಂದ್ರಸ್ಯ - ಪರ್ವತಶ್ರೇಷ್ಠನಾದ ಚಿತ್ರಕೂಟದ ಸಂಬಂಧಿಗಳಾದ, ಸ್ವಪ್ರಭಾಲಕ್ಷ್ಮ್ಯಾ - ತಮ್ಮಕಾಂತಿಯಿಂದ ನೋಡತಕ್ಕವುಗಳಾದಕಾರಣ, ಭ್ರಾಜಮಾನಾಃ - ಹೊಳೆಯುತ್ತಿರುವ, ಸಹಸ್ರಶಃ - ಸಹಸ್ರ ಸಂಖ್ಯೆಯುಳ್ಳ, ಓಷಧ್ಯಃ - ಲತೆಗಳು, ನಿಶಿ - ರಾತ್ರಿಯು, ಹುತಾಶನಶಿಖಾಇವ - ಅಗ್ನಿಜ್ವಾಲೆಗಳಂತೆ, ಭಾಂತಿ - ಹೊಳೆಯುತ್ತವೆ. ॥ ೨೧ ॥ ಹೇ ಭಾಮಿನಿ - ಓ ರಮಣಿ, ಅಸ್ಯಪರ್ವತಸ್ಯ - ಈ ಬೆಟ್ಟದ, ಕೇಚಿತ್‌ದೇಶಾಃ - ಕೆಲಪ್ರದೇಶಗಳು, ಕ್ಷಯನಿಭಾಃ-ಅರಮನೆಗಳಿಗೆ ಸಮಾನವಾಗಿ, ಭಾಂತಿ-ಹೊಳೆಯುತ್ತಿವೆ, ಕೇಚಿತ್-ಕೆಲವು ಪ್ರದೇಶಗಳು, ಉದ್ಯಾನಸನ್ನಿಭಾಃ-ಹೂದೋಟಗಳಿಗೆ ಸಮಾನವಾಗಿವೆ, ಕೇಚಿತ್-ಕೆಲವು ಪ್ರದೇಶಗಳು, ಏಕಶಿಲಾಃ - ಒಂದೇ ಜಾತಿಯಾದ ಕಲ್ಲುಗಳುಳ್ಳವಾಗಿ, ಭಾಂತಿ - ಹೊಳೆಯುತ್ತವೆ. ॥ ೨೨ ॥ ಸರ್ವತಃ - ಎಲ್ಲ

ತ್ತಿರಲು ನಿನಗೆ ಸಂತೋಷವಾಗಿರುವುದಷ್ಟೆ? ನಿನ್ನಭಿಪ್ರಾಯವನ್ನು ಹೇಳು. ॥ ೧೬-೧೮ ॥ ರಾಣಿಯಾದ ಓ ಸೀತಾದೇವಿಯೆ! ನನ್ನ ತಾತಮುತ್ತಾತಂದಿರೇ ಮೊದಲಾದ ರಾಜರ್ಷಿಗಳೆಲ್ಲರೂ, ದೇಹವನ್ನುತೊರೆದಮೇಲೆ, ಮೋಕ್ಷವುಂಟಾಗಲೋಸುಗ ವನವಾಸವನ್ನೇ ಕಾರಣವನ್ನಾಗಿ ಹೇಳಿದರು. ಸೀತೆ! ಈ ಚಿತ್ರಕೂಟಪರ್ವತದ ಸಮೀಪದಲ್ಲಿ, ವಿವಿಧಗಳೂ, ಅಸಂಖ್ಯಾತಗಳೂ, ವಿಶಾಲಗಳೂ ಆದ ಶಿಲೆಗಳು, ಕಪ್ಪು, ಬಿಳುಪು, ಕೆಂಪು ಮೊದಲಾದ ವರ್ಣಗಳಿಂದ ಬಹು ಮನೋಹರವಾಗಿ ಪ್ರಕಾಶಿಸುತ್ತಿರುವುವು. ನೋಡಿದೆಯಾ! ರಾತ್ರಿಯ ಕಾಲದಲ್ಲಿ ಈ ಪರ್ವತದಲ್ಲಿ ಅನೇಕಗಳಾದ ತೃಣಜ್ಯೋತಿಸ್ಸುಗಳೆಂಬ ಓಷಧಿಗಳು ತಮ್ಮ ಕಾಂತಿಗಳಿಂದ ದೀಪಗಳಂತೆ ಪ್ರಕಾಶಿಸುತ್ತಿರುವುವು. ಇಲ್ಲಿನ ಕೆಲವೆಡೆಗಳು, ಗೃಹಗಳಿಗೆ ಸಮಾನಗಳಾಗಿರುವುವು; ಇನ್ನು ಕೆಲವೆಡೆಗಳು ಉದ್ಯಾನವನಗಳಿಗೆ ಸಮಾನಗಳಾಗಿರುವುವು.

ಭಿತ್ವೇವ ವಸುಧಾಂ ಭಾತಿ ಚಿತ್ರಕೂಟ ಸ್ಸಮುತ್ಥಿತಃ ॥ ಚಿತ್ರಕೂಟಸ್ಯ ಕೂಟೋಽಸೌ ದೃಶ್ಯತೇ ಸರ್ವತ ಶ್ಶುಭಾಃ ॥ ೨೩ ॥ ಕುಷ್ಠ ಪುನ್ನಾಗ ಸ್ಥಗರ ಭೂರ್ಜಪತ್ರೋತ್ತರಚ್ಛದಾ ॥ ಕಾಮಿನಾಂ ಸ್ವಾಸ್ತರಾ ಪಶ್ಯ! ಕುಶೇಶಯ ದಳಾಯುತಾ ॥ ೨೪ ॥ ಮೃದಿತಾ ಶ್ಚಾಪವಿದ್ಧಾಶ್ಚ ದೃಶ್ಯಂತೇ ಕಮಲಸ್ರಜಃ ॥ ಕಾಮಿಭಿ ರ್ವನಿತೇ! ಪಶ್ಯ ಫಲಾನಿ ವಿವಿಧಾನಿಚ ॥ ೨೫ ॥ ವಸ್ವೌಕಸಾರಾಂ ನಳಿನೀ ಮತ್ಯೇತೀವೋತ್ತರಾ ಕುರೂ ॥ ಪರ್ವತ ಶ್ಚಿತ್ರಕೂಟೋಽಸೌ ಬಹು ಮೂಲ ಫಲೋದಕಃ ॥ ೨೬ ॥

ಕಡೆಯಲ್ಲಿಯೂ, ಶುಭಾಃ - ಶುಭಕರವಾದ, ಚಿತ್ರಕೂಟಸ್ಯ - ಚಿತ್ರಕೂಟಪರ್ವತದ, ಅಸೌಕೂಟಃ - ಈ ಶಿಖರವು, ವಸುಧಾಂ - ನೆಲವನ್ನು, ಭಿತ್ವಾ - ಭೇದಿಸಿ, ಸಮುತ್ಥಿತಃ - ಮೇಲಕ್ಕೆದ್ದಿರುವ, ಚಿತ್ರ ಕೂಟಇವ - ಎರಡನೆಯ ಚಿತ್ರಕೂಟದಂತೆ, ಭಾತಿ - ಹೊಳೆಯುತ್ತದೆ. ॥ ೨೩ ॥ ಕುಷ್ಠ ಪುನ್ನಾಗ.... ಚ್ಛದಾ - ಚಂದನಕೋಷ್ಠ, ಸುರಪುನ್ನಾಗೆ ವೃಕ್ಷಗಳು, ಸ್ಥಗರಗಳೆಂಬ ವೃಕ್ಷವಿಶೇಷಗಳು, ಭುಜ ಪತ್ರೇ ಗಿಡಗಳ ಎಲೆಗಳೇ ಮೇಲ್‌ಹೊದಿಕೆಗಳಾಗುಳ್ಳ, ಕುಶೇಶಯದಳಾಯುತಾ - ಕಮಲಗಳ ರೇಖೆಗಳಿಂದ ಕೂಡಿರುವ, ಕಾಮಿನಾಂ - ಕಾಮುಕರ, ಸ್ವಾಸ್ತರಾ - ಹಾಸಿಗೆಗಳನ್ನು, ಪಶ್ಯ - ನೋಡು. ॥ ೨೪ ॥ ಹೇ ವನಿತೇ - ಎಲೌ ಪ್ರಿಯಳೆ! ಕಾಮಿಭಿಃ - ಕಾಮುಕರಿಂದ, ಮೃದಿತಾಃ - ತುಳಿಯಲ್ಪಟ್ಟ, ಅಪವಿದ್ಧಾಶ್ಚ-ಹೊಡೆಯಲ್ಪಟ್ಟ, ಕಮಲಸ್ರಜಃ-ಕಮಲಗಳ ಮಾಲಿಕೆಗಳು, ದೃಶ್ಯಂತೇ - ಕಾಣಲ್ಪಡುತ್ತವೆ, ವಿವಿಧಾನಿ - ನಾನಾಬಗೆಗಳಾದ, ಫಲಾನಿ - ಫಲಗಳನ್ನು, ಮೃದಿತಾನಿ - ಮರ್ದನ ಮಾಡಲ್ಪಟ್ಟುವುಗಳನ್ನಾಗಿ, ಪಶ್ಯ-ನೋಡು. ॥ ೨೫ ॥ ಬಹುಮೂಲಫಲೋದಕಃ - ಬಹಳವಾದ ಕಂದ ಮೂಲಗಳೂ, ಫಲಗಳೂ, ಉದಕವೂ ಉಳ್ಳ, ಅಸೌಚಿತ್ರಕೂಟಃಪರ್ವತಃ - ಈ ಚಿತ್ರಕೂಟಪರ್ವತವು, ವಸ್ವೌಕಸಾರಾಂ - (ಮ + ತಿ) ಪೂರ್ವದಿಕ್ಕಿನಲ್ಲಿರುವ ದೇವೇಂದ್ರನ ಪಟ್ಟಣವನ್ನು, (ಗೋ) ಕುಬೇರ ನಗರವನ್ನು, ನಳಿನೀಂ - ಮಾನಸಸರೋವರವನ್ನೂ (ಗೋ + ಮ) ಸೌಗಂಧಿಕಾಖ್ಯ ಪುಷ್ಪಗಳ ಸರೋ ವರವನ್ನು, ಉತ್ತರಾಕುರೂ - ಉತ್ತರ ಕುರುದೇಶಗಳನ್ನು, ಅತ್ಯೇತೀವ - ಅತಿಕ್ರಮಿಸಿರುವುದೋ ಎಂಬಂತಿರುವುದು. ॥ ೨೬ ॥ ಹೇ ವನಿತೇ - ಎಲೌ ಸೀತೇ, ಪರ್ವೈಃ - ಶ್ರೇಷ್ಠಗಳಾದ, ನಿಯಮೈಃ -

---

ಇನ್ನೂ ಕೆಲವೆಡೆಗಳಲ್ಲಿ ಒಂದು ಶಿಲೆಯೇ, ಬಹು ವಿಶಾಲವಾದ, ಅಡ್ಡಳತೆಯುಳ್ಳದಾಗಿ, ಕುಳಿತುಕೊಳ್ಳುವುದಕ್ಕೂ, ಮಲಗಿಕೊಳ್ಳುವುದಕ್ಕೂ ಉಪಯುಕ್ತವಾಗಿ ಶೋಭಿಸುತ್ತಿರು ವುದು. ಅಲ್ಲದೆ, ಈ ಚಿತ್ರಕೂಟಪರ್ವತವು, ಭೂಮಿಯನ್ನು ಭೇದಿಸಿಕೊಂಡು ಬಂದಂತೆ ಕಾಣುತ್ತಿರುವುದು. ಇದರ ಶಿಖರಪ್ರದೇಶವು ಬಹು ಸುಂದರವಾದುದು. ಈ ಪರ್ವತದಲ್ಲಿ ಕಾಮುಕರಾದವರು, ಚಂದನ, ಪುನ್ನಾಗ, ಪುತ್ರಜೀವಿ, ಎಂಬ ಗಿಡಗಳ ಹೂಗಳನ್ನೂ, ಹಾಸಿ ಗೆಯ ಮೇಲೆ ಹಾಸುವ ವಸ್ತ್ರಗಳನ್ನಾಗಿಯೂ, ತಾವರೆಯ ಎಲೆಯನ್ನು ಹಾಸಿಗೆಯನ್ನಾ ಗಿಯೂ ಮಾಡಿಕೊಂಡು ಮಲಗಿದ್ದಾರೆ. ಈ ಹಾಸಿಗೆಗಳನ್ನು ನೋಡು. ಓ ಸೀತಾದೇವಿ! ಈ ಹಾಸಿಗೆಗಳಲ್ಲಿರುವ, ಕಾಮುಕರಿಂದ ಅನುಭವಿಸಲ್ಪಟ್ಟು, ಬಿಸುಡಲಾದ, ಪೂಮಾಲಿಕೆ ಗಳೂ, ನಾನಾವಿಧಗಳಾದ ಫಲಗಳೂ, ಕೆಳಗೆ ಬಿದ್ದಿರುವುವು. ಇವುಗಳನ್ನು ನೋಡಿದೆಯಾ?

ಇಮಂತು ಕಾಲಂ ವನಿತೇ! ವಿಜಹ್ರಿವಾ
ತ್ವಯಾಚ ಸೀತೇ! ಸಹಲಕ್ಷ್ಮಣೇನಚ ||
ರತಿಂ ಪ್ರಪತ್ಸ್ಯೇ ಕುಲ ಧರ್ಮ ವರ್ಧಿನೀಂ
ಸತಾಂ ಪಥಿ ಸ್ವೈರ್ನಿಯಮೈಃ ಪರೈಃ ಸ್ಥಿತಃ || ೨೭ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರ್ನವತಿತಮಸ್ಸರ್ಗಃ.

ನಿಯಮಗಳಿಂದ, ಸತಾಂ - ಸತ್ಪುರುಷರಾದ ರಾಜರ್ಷಿಗಳ, ಪಥಿ - ಮಾರ್ಗದಲ್ಲಿ, ಸ್ಥಿತಃ - ಇರುವನಾಗಿ, ತ್ವಯಾಚ - ನಿನ್ನೊಡನೆಯೂ, ಲಕ್ಷ್ಮಣೇನಚಸಹ - ಲಕ್ಷ್ಮಣನೊಡನೆಯೂ, ಇಮಂಕಾಲಂ- ಈ ಹದಿನಾಲ್ಕುವರುಷಗಳ ಪರಿಮಿತವಾದ ಕಾಲವನ್ನು, ವಿಜಹ್ರಿವಾ-ವಿಹರಿಸಿ, ಕುಲಧರ್ಮವರ್ಧಿನೀಂ- ರಾಜಕುಲಧರ್ಮವನ್ನುವೃದ್ಧಿಗೊಳಿಸುತ್ತಿರುವ, ರತಿಂ - ರಾಜಸೌಖ್ಯರೂಪವಾದ ವಿಲಾಸವನ್ನು, ಪ್ರಪತ್ಸ್ಯೇ - ಹೊಂದುತ್ತೇನೆ. || ೨೭ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರ್ನವತಿತಮಸ್ಸರ್ಗಃ.

ಅನೇಕ ವಿಧಗಳಾದ ಕಂದಮೂಲಗಳನ್ನೂ, ಫಲಗಳನ್ನೂ, ಉದಕಧಾರೆಗಳನ್ನೂ ಒಳಗೊಂಡಿರುವ ಈ ಚಿತ್ರಕೂಟಪರ್ವತವು, ಸಕಲೈಶ್ವರ್ಯಕ್ಕೂಆಧಾರವಾದ ಅಲಕಾಪಟ್ಟಣಕ್ಕಿಂತಲೂ, ಸೌಗಂಧಿಕಾ ಸರಸ್ಸಿಗಿಂತಲೂ, ಉತ್ತರಕುರುದೇಶಗಳಿಗಿಂತಲೂ ಅಧಿಕವಾಗಿ ಪ್ರಕಾಶಿಸುತ್ತಿರುವುದು. ದೇವಿ! ನಾನು ಸರ್ವೋತ್ತಮಗಳಾದ ನಿಯಮಗಳಿಂದ ಹಿರಿಯ ದಾರಿಯಲ್ಲಿಯೇ ಸಂಚರಿಸುವವನಾಗಿ, ನಿನ್ನೊಡನೆಯೂ, ಲಕ್ಷ್ಮಣಸ್ವಾಮಿಯೊಡನೆಯೂ, ಹದಿನಾಲ್ಕು ಸಂವತ್ಸರಗಳವರೆಗೂ ಈ ಅರಣ್ಯದಲ್ಲಿ ಸಂಚರಿಸುತ್ತೇನೆ. ಅಲ್ಲದೆ ನಮ್ಮ ರಘುಕುಲಕ್ಕಭಿವೃದ್ಧಿಯನ್ನುಂಟುಮಾಡುವ ಸಂತೋಷವನ್ನು ಹೊಂದುತ್ತೇನೆ. || ೧೯-೨೭ ||

ಇಂತಿದು ಶ್ರೀರಾಮಕೃತ ಚಿತ್ರಕೂಟ ಸೌಂದರ್ಯಾನುವರ್ಣನವೆಂಬ
ತೊಂಭತ್ತನಾಲ್ಕನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಪಂಚನವತಿತಮಸ್ಸರ್ಗಃ.

ಅಥ ಶೈಲಾ ದ್ವಿನಿಷ್ಕ್ರಮ್ಯ ಮೈಥಿಲೀಂ ಕೋಸಲೇಶ್ವರಃ ॥ ಆದರ್ಶಯ ಚ್ಛುಭಜಲಾಂ ರಮ್ಯಾಂ ಮಂದಾಕಿನೀಂ ನದೀಂ ॥ ೧ ॥ ಅಬ್ರವೀಚ್ಚ ವರಾ ರೋಹಾಂ ಚಾರುಚಂದ್ರ ನಿಭಾನನಾಂ ॥ ವಿದೇಹರಾಜಸ್ಯ ಸುತಾಂ ರಾಮೋ ರಾಜೀವಲೋಚನಃ ॥ ೨ ॥ ವಿಚಿತ್ರಪುಳಿನಾಂ ರಮ್ಯಾಂ ಹಂಸಸಾರಸು ಸೇವಿತಾಂ ॥ ಕಮಲೈ ರುಪಸಂಪನ್ನಾಂ ಪಶ್ಯ! ಮಂದಾಕಿನೀಂ ನದೀಂ ॥ ೩ ॥ ನಾನಾವಿಧೈ ಸ್ತೀರರುಹೈ ರ್ವೃತಾಂ ಪುಷ್ಪ ಫಲ ದ್ರುಮೈಃ ॥ ರಾಜಂತೀಂ ರಾಜ

ಅಥ - ಬಳಿಕ, ಕೋಸಲೇಶ್ವರಃ - ಕೋಸಲದೇಶಾಧಿಪತಿಯಾದ ಶ್ರೀರಾಮನು, ಶೈಲಾತ್ - ಚಿತ್ರಕೂಟಪರ್ವತದಿಂದ, ವಿನಿಷ್ಕ್ರಮ್ಯ - ಹೊರಟುಬಂದು, ಮೈಥಿಲೀಂ-ಸೀತಾದೇವಿಯನ್ನು ಕುರಿತು, ಶುಭಜಲಾಂ - ಮಂಗಳಕರವಾದ ಉದಕಗಳುಳ್ಳ, ರಮ್ಯಾಂ - ಮನೋಹರವಾದ, ಮಂದಾಕಿನೀಂ ನದೀಂ - ಗಂಗಾನದಿಯನ್ನು, ಅದರ್ಶಯತ್ - ತೋರಿಸಿದನು. ॥ ೧ ॥ ರಾಜೀವಲೋಚನಃ - ಕಮಲ ಗಳಿಗೆ ಸದೃಶವಾದ ನೇತ್ರಗಳುಳ್ಳ, ರಾಮಃ - ಶ್ರೀರಾಮನು, ವಿದೇಹರಾಜಸ್ಯ - ಜನಕರಾಯನಿಗೆ, ಸುತಾಂ - ಕುವರಿಯಾದ, ಚಾರುಚಂದ್ರನಿಭಾನನಾಂ - ಮನೋಹರವಾದ ಚಂದ್ರನಿಗೆ ಸಮಾನವಾದ, ಮುಖವುಳ್ಳ, ವರಾರೋಹಾಂ - ಉತ್ತಮ ಸ್ತ್ರೀಯಾದ ಸೀತಾದೇವಿಯನ್ನು ಕುರಿತು, ಅಬ್ರವೀತ್ - ನುಡಿದನು. ॥ ೨ ॥ ವಿಚಿತ್ರಪುಳಿನಾಂ - ಆಶ್ಚರ್ಯಕರವಾದ ಮರುಳುದಿಣ್ಣೆಗಳುಳ್ಳ, ಹಂಸಸಾರಸ ಸೇವಿತಾಂ - ಹಂಸಪಕ್ಷಿಗಳಿಂದಲೂ ಸಾರಸಪಕ್ಷಿಗಳಿಂದಲೂ ಸೇವಿಸಲ್ಪಟ್ಟ, ಕಮಲೈಃ-ಕಮಲಗಳಿಂದ, ಉಪಸಂಪನ್ನಾಂ - ಕೂಡಿರುವ, ರಮ್ಯಾಂ-ಮನಸ್ಸಿಗಿಂಪಾಗಿರುವ, ತೀರರುಹೈಃ-ದಡದಲ್ಲಿ ಹುಟ್ಟಿರುವ, ನಾನಾವಿಧೈಃ - ಅನೇ ಬಗೆಗಳಾದ, ಪುಷ್ಪಫಲದ್ರುಮೈಃ-ಹುವ್ವುಗಳಿಂದಲೂ ಫಲಗಳಿಂದಲೂ ಯುಕ್ತ ವಾದ ಗಿಡಗಳಿಂದ, ವೃತಾಂ - ಸುತ್ತುವರೆಯಲ್ಪಟ್ಟುದಾದಕಾರಣ, ರಾಜರಾಜಸ್ಯ - ಕುಬೇರನ

ಈ ಪ್ರಕಾರವಾಗಿ, ಕೋಸಲ ದೇಶಾಧೀಶ್ವರನಾದ ಶ್ರೀರಾಮನು ಸೀತಾದೇವಿಗೆ ಅನೇಕ ವಿಚಿತ್ರಗಳನ್ನು ತೋರಿಸುತ್ತ, ಸ್ವಲ್ಪಹೊತ್ತು ಸಂಚರಿಸಿದ ಬಳಿಕ, ಆ ಚಿತ್ರಕೂಟ ಪರ್ವತದಿಂದ ಕೆಳಕ್ಕಿಳಿದು, ಪಾವನವಾದ ಜಲವನ್ನೊಳಗೊಂಡುದೂ, ಬಹು ಮನೋಹರ ವಾದುದೂ ಆದ ಮಂದಾಕಿನೀ ನದಿಯನ್ನಾಕೆಗೆ ತೋರಿಸಿದನು. ಕಮಲಪುಷ್ಪಗಳಂತೆ ಸುಂದರವೂ, ವಿಶಾಲವೂ ಆದ ನೇತ್ರಗಳುಳ್ಳ ಶ್ರೀರಾಮನು ಆ ಬಳಿಕ, ಆಹ್ಲಾದಕರನಾದ ಪೂರ್ಣಚಂದ್ರನಂತೆ ಮುಖವುಳ್ಳವಳೂ, ವಿದೇಹರಾಜನಂದಿನಿಯೂ ಆದ ಆ ದೇವಿಯನ್ನು ಕುರಿತು ಹೀಗೆಂದನು. ॥೧-೨॥ "ಓ ಸೀತಾದೇವಿ! ಈ ಮಂದಾಕಿನೀ ನದಿಯು ಬಹು ವಿಚಿತ್ರ ಗಳಾದ ಮರಳು ದಿಬ್ಬಗಳನ್ನುಳ್ಳುದಾಗಿಯೂ, ಬಹು ಮನೋಹರವಾದ, ಹಂಸ, ಸಾರಸ ಇವೇ ಮೊದಲಾದ ಪಕ್ಷಿಗಳಿಂದ ನಿಬಿಡೀಕೃತವಾಗಿಯೂ, ಕಮಲಗಳನ್ನೊಳಗೊಂಡುದೂ ಆಗಿ

ರಾಜಸ್ಯ ನಳಿನೀಮಿವ ಸರ್ವತಃ ॥ ೪ ॥ ಮೃಗಯೂಥ ನಿಪೀತಾನಿ ಕಲು ಷಾಂಭಾಂಸಿ ಸಾಂಪ್ರತಂ ॥ ತೀರ್ಥಾನಿ ರಮಣೀಯಾನಿ ರತಿಂ ಸಂಜನಯಂತಿ ಮೇ ॥ ೫ ॥ ಜಟಾಜಿನಧರಾಃ ಕಾಲೇ ವಲ್ಕಲೋತ್ತರ ವಾಸಸಃ ॥ ಋಷಯ ಸ್ತ್ವವಗಾಹಂತೇ ನದೀಂ ಮಂದಾಕಿನೀಂ ಪ್ರಿಯೇ! ॥ ೬ ॥ ಆದಿತ್ಯ ಮುಪ ತಿಷ್ಠಂತೇ ನಿಯಮಾ ದೂರ್ಧ್ವ ಬಾಹವಃ ॥ ಏತೇ ಪರೇ ವಿಶಾಲಾಕ್ಷಿ! ಮುನಯ ಸ್ಸಂಶಿತವ್ರತಾಃ ॥ ೭ ॥ ಮಾರುತೋ ದ್ಧೂತ ಶಿಖರೈಃ ಪ್ರನೃತ್ತ ಇವ ಪರ್ವತಃ ॥

ನಳಿನೀಮಿವ - ಸೌಗಂಧಿಕಾ ಕುಸುಮಗಳ ಸರೋವರದಂತೆ, ಸರ್ವತಃ-ಎಲ್ಲೆಡೆಗಳಲ್ಲಿಯೂ, ರಾಜಂತೀಂ-ಹೊಳೆಯುತ್ತಿರುವ, ಮಂದಾಕಿನೀಂನದೀಂ - ಗಂಗಾನದಿಯನ್ನು, ಪಶ್ಯ - ನೋಡು. ॥ ೪ ॥ ಮೃಗಯೂಥನಿಪೀತಾನಿ - ಜಿಂಕೆಗಳ ಗುಂಪುಗಳಿಂದ ಪಾನಮಾಡಲ್ಪಟ್ಟ, ಸಾಂಪ್ರತಂ - ಈಗ, ಕಲುಷಾಂಭಾಂಸಿ - ಕುಂಕುಮರಜದಿಂದ ಕಸರಾದ ನೀರುಳ್ಳ, ರಮಣೀಯಾನಿ-ಮನೋಹರಗಳಾದ, ತೀರ್ಥಾನಿ-ತೀರ್ಥಗಳು, ಮೇ - ನನಗೆ, ರತಿಂ - ಅನುರಾಗವನ್ನು, ಸಂಜನಯಂತಿ-ಹುಟ್ಟಿಸುತ್ತವೆ. ॥ ೫ ॥ ಹೇ ಪ್ರಿಯೇ - ಎಲೌ ಪ್ರಿಯಕರಳೇ, ಕಾಲೇ - ಪ್ರಾತಃಕಾಲದಲ್ಲಿ, ಜಟಾಜಿನಧರಾಃ - ಜಡೆಗಳನ್ನೂ ಕೃಷ್ಣಾಜಿನವನ್ನೂ ಧರಿಸಿರುವ, ವಲ್ಕಲೋತ್ತರವಾಸಸಃ - ನಾರುಮಡಿಗಳೇ ಉತ್ತರೀಯಗಳಾಗುಳ್ಳ, ಋಷಯಸ್ತು - ಋಷಿಗಳಾದರೆ, ಮಂದಾಕಿನೀಂನದೀಂ - ಗಂಗಾನದಿಯನ್ನು, ಅವಗಾಹಂತೇ-ಸ್ನಾನಾರ್ಥವಾಗಿ ಪ್ರವೇಶಿಸುತ್ತಾರೆ. ॥ ೬ ॥ ಹೇ ವಿಶಾಲಾಕ್ಷಿ - ಎಲೌ ವಿಸ್ತಾರವಾದ ನೇತ್ರಗಳುಳ್ಳವಳೇ, ಪರೇ - ಮತ್ತೆ ಕೆಲವರಾದ, ಏತೇಮುನಯಃ - ಈ ಋಷಿಗಳು, ಊರ್ಧ್ವಬಾಹವಃ - ಮೇಲಕ್ಕೆತ್ತಿದ ಭುಜಗಳುಳ್ಳವರಾಗಿ, ಸಂಶಿತವ್ರತಾಃ - ತೀಕ್ಷ್ಣವಾದ ನಿಯಮವುಳ್ಳವರಾಗಿ, ನಿಯಮಾತ್ - ನಿಯಮದಿಂದ, ಆದಿತ್ಯಂ - ಸೂರ್ಯನನ್ನು, ಉಪತಿಷ್ಠಂತೇ - ಉಪಸ್ಥಾನವನ್ನು ಮಾಡುತ್ತಿದ್ದಾರೆ. ॥ ೭ ॥ ಪರ್ವತಃ - ಬೆಟ್ಟವು, ಮಾರುತೋದ್ಧೂತಶಿಖರೈಃ - ಗಾಳಿಯಿಂದ ಕೊಡಹಲ್ಪಟ್ಟ ತುದಿಗಳುಳ್ಳ, ನದೀಮಭಿತಃ - ನದಿಯಸುತ್ತಮುತ್ತಲೂ, ಪತ್ರಪುಷ್ಪಾಣಿ - ಎಲೆಗಳನ್ನೂ ಹೂವುಗಳನ್ನೂ, ಸೃಜದ್ಭಿಃ -

---

ಶೋಭಿಸುತ್ತದೆ; ನೋಡು. ಈ ನದಿಯು, ನೀನು ನನಗೆ ಸಂತೋಷವನ್ನುಂಟುಮಾಡುವಂತೆ, ಸಂತೋಷವನ್ನುಂಟುಮಾಡುತ್ತಿರುವುದು. ಅಲ್ಲದೆ ಈ ಪುಣ್ಯನದಿಯು ನಾನಾವಿಧಗಳಾದ, ತೀರದಲ್ಲಿ ಹುಟ್ಟಿದ ಪುಷ್ಪಗಳಿಂದಲೂ, ಫಲಗಳಿಂದಲೂ ತುಂಬಿರುವ ವೃಕ್ಷಗಳಿಂದಾವೃತವಾಗಿ, ಮನೋಹರವಾಗಿ ಪ್ರಕಾಶಿಸುತ್ತಿರುವ ಕುಬೇರನ ಸೌಗಂಧಿಕಾ ಸರಸ್ಸಿನಂತೆ ರಾರಾಜಿಸುತ್ತಿರುವುದು. ಈಗತಾನೇ ಈ ಮಂದಾಕಿನೀನದಿಯ ತೀರದಲ್ಲಿ ಜಿಂಕೆಗಳ ಗುಂಪುಗಳು, ನೀರನ್ನು ಕುಡಿವುದರಿಂದ ನೀರನ್ನು ಕಲುಷಿತವನ್ನಾಗಿ ಮಾಡುತ್ತಿರುವುವು. ಆದುದರಿಂದಲೇ ಈ ಮನೋಹರವಾದ ತೀರಪ್ರದೇಶಗಳು ನನಗೆ ಪ್ರೀತಿಯನ್ನುಂಟುಮಾಡುತ್ತಿರುವುವು. ಅಲ್ಲದೆ, ಪ್ರಿಯಂಕರಳಾದ ಓ ಸೀತಾದೇವಿಯೆ! ಈ ಮಂದಾಕಿನೀನದಿಯಲ್ಲಿ, ಜಟಾಜಿನಗಳನ್ನು ಧರಿಸಿದವರೂ, ನಾರುಮಡಿಗಳನ್ನುತ್ತರೀಯವನ್ನಾಗುಳ್ಳವರೂ ಆದ ಋಷಿಗಳು ಯುಕ್ತಕಾಲಗಳಲ್ಲಿ ಸ್ನಾನವನ್ನಾಚರಿಸುತ್ತಿರುವರು. ॥೩-೬॥ ವಿಶಾಲನೇತ್ರೆಯಾದ ಸೀತಾದೇವಿಯೆ! ಮತ್ತೆ ಕೆಲವು ಋಷಿಗಳು ನಿಯಮದಿಂದ ಭುಜಗಳನ್ನು ಮೇಲಕ್ಕೆತ್ತಿಕೊಂಡು, ತೀಕ್ಷ್ಣ

ಪಾದಪೈಃ ಪತ್ರಪುಷ್ಪಾಣಿ ಸೃಜದ್ಭಿ ರಭಿತೋ ನದೀಂ ‖ ೮ ‖ ಕ್ವಚಿನ್ಮಣಿ
ನಿಕಾಶೋದಾಂ ಕ್ವಚಿತ್ ಪುಳಿನ ಶಾಲಿನೀಂ ‖ ಕ್ವಚಿತ್ ಸಿದ್ಧಜನಾಕೀರ್ಣಾಂ
ಪಶ್ಯ ಮಂದಾಕಿನೀಂ ನದೀಂ ‖ ೯ ‖ ನಿರ್ಧೂತಾ ನ್ವಾಯುನಾ ಪಶ್ಯ! ವಿತತಾ
ಪುಷ್ಪ ಸಂಚಯಾ ‖ ಪೋಪ್ಲೂಯಮಾನಾ ನಪರಾ ಪಶ್ಯ! ತ್ವಂ ಜಲ
ಮಧ್ಯಗಾ ‖೧೦‖ ತಾಂಶ್ಚಾತಿ ವಲ್ಗುವಚಸೋ ರಥಾಂಗಾಹ್ವಯನಾ ದ್ವಿಜಾಃ ‖
ಅಧಿರೋಹಂತಿ ಕಲ್ಯಾಣಿ! ವಿಕೂಜಂತ ಶ್ಶುಭಾ ಗಿರಃ ‖ ೧೧ ‖ ದರ್ಶನಂ

ಬಿಡುತ್ತಿರುವ, ಪಾದಪೈಃ - ಗಿಡಗಳಿಂದ, ಪ್ರನೃತ್ತ ಇವ - ನರ್ತನಮಾಡುತ್ತದೆಯೋ ಎಂಬಂತಿರುವುದು. ‖ ೮ ‖ ಕ್ವಚಿತ್ - ಒಂದೊಂದುಕಡೆ, ಮಣಿನಿಕಾಶೋದಾಂ - ಮುತ್ತಿನಮಣಿಗೆ ಸಮಾನವಾದ ಉದಕವುಳ್ಳ, ಕ್ವಚಿತ್ ಒಂದೊಂದುಕಡೆ, ಪುಳಿನಶಾಲಿನೀಂ - ಮರಳುದಿನ್ನೆಗಳಿಂದೊಪ್ಪುತ್ತಿರುವ, ಕ್ವಚಿತ್ - ಒಂದೊಂದುಕಡೆ, ಸಿದ್ಧಜನಾಕೀರ್ಣಾಂ - (ಮ) ಸಿದ್ಧಜನರಿಂದ ತುಂಬಿರುವ, (ಗೋ + ತ) ಸ್ನಾನದಲ್ಲಿ ಕೃತನಿಶ್ಚಯರಾದ ಜನರಿಂದ ತುಂಬಿರುವ, ಮಂದಾಕಿನೀಂನದೀಂ - ಗಂಗಾನದಿಯನ್ನು, ಪಶ್ಯ - ಕಾಣು. ‖ ೯ ‖ ವಾಯುನಾ - ಗಾಳಿಯಿಂದ, ನಿರ್ಧೂತಾ - ಕೊಡಹಲ್ಪಟ್ಟ, ವಿತತಾ - ತೀರದಲ್ಲಿ ವಿಸ್ತಾರಗಳಾದ, ಪುಷ್ಪಸಂಚಯಾ - ಹೂಗಳ ತಂಡಗಳನ್ನು, ಪಶ್ಯ - ನೋಡು, ತ್ವಂ - ನೀನು, ಜಲಮಧ್ಯಗಾ - ನೀರಿನ ಮಧ್ಯದಲ್ಲಿರುವ, ಪೋಪ್ಲೂಯಮಾನಾ-ತೇಲಾಡುತ್ತಿರುವ, ಅಪರಾ - ಮತ್ತೆ ಕೆಲವು ಹೂಗಳರಾಶಿಗಳನ್ನೂ, ಪಶ್ಯ - ನೋಡು. ‖ ೧೦ ‖ ಹೇ ಕಲ್ಯಾಣಿ - ಒಳ್ಳೆಯ ಅವಯವಗಳುಳ್ಳವಳೇ, ಅತಿವಲ್ಗುವಚಸಃ - ಬಹು ಮನೋಹರವಾದ ವಾಕ್ಕುಗಳುಳ್ಳ, ರಥಾಂಗಾಹ್ವಯನಾಃ - ಚಕ್ರವಾಕಗಳೆಂಬ ಹೆಸರುಳ್ಳ, ದ್ವಿಜಾಃ - ಪಕ್ಷಿಗಳು, ಶುಭಾಃ - ಶುಭಕರವಾದ, ಗಿರಃ - ಮಾತುಗಳನ್ನು, ವಿಕೂಜಂತಃ - ಚಿತ್ರವಿಚಿತ್ರವಾಗಿ ಕೂಗುತ್ತಿರುವುಗಳಾಗಿ, ತಾಂಶ್ಚ - ಆ ಪುಷ್ಪತಂಡಗಳನ್ನು, ಅಧಿರೋಹಂತಿ - ಹತ್ತುತ್ತಿವೆ. ‖ ೧೧ ‖ ಹೇ ಶೋಭನೇ - ಎಲೌ ಶುಭಕರಳೇ, ತವ - ನಿನ್ನ, ದರ್ಶನಾತ್ - ನೋಟದಿಂದ, ಚಿತ್ರಕೂಟಸ್ಯ - ಚಿತ್ರಕೂಟಪರ್ವತದ,

---

ವಾದ ವ್ರತಾನುಷ್ಠಾನವುಳ್ಳವರಾಗಿ, ದಿನಕರನಿದಿರಾಗಿ ನಿಂತು ಸ್ತೋತ್ರವನ್ನು ಮಾಡುತ್ತಿದ್ದಾರೆ; ನೋಡು. ಅಲ್ಲದೆ ಈ ಚಿತ್ರಕೂಟಪರ್ವತವು, ನರ್ತಿಸುತ್ತಿರುವ ನಾಟ್ಯಗಾರರಿಂದ ಹೂಗಳೆರಚಲ್ಪಡುವಂತೆ, ಮಲಯಮಾರುತದಿಂದ ಚಲಿಸಲ್ಪಟ್ಟ ತುದಿಗಳುಳ್ಳ ವೃಕ್ಷಗಳಿಂದ ಪತ್ರಗಳನ್ನೂ, ಹೂಗಳನ್ನೂ ಸುರಿಸುತ್ತಿದೆ. ಓ ಸೀತಾದೇವಿಯೆ! ಈ ಮಂದಾಕಿನೀನದಿಯು ಕೆಲವು ಸ್ಥಳಗಳಲ್ಲಿ ಮುತ್ತುಗಳ ಕಾಂತಿಯನ್ನೊಳಗೊಂಡ ಜಲವುಳ್ಳದಾಗಿದೆ. ಇನ್ನು ಕೆಲವು ಸ್ಥಳಗಳಲ್ಲಿ ಮರಳುದಿಣ್ಣೆಗಳಿಂದ ಮನೋಹರವಾಗಿ ಕಂಗೊಳಿಸುತ್ತಿರುವುದು; ಇನ್ನೂ ಕೆಲ ಸ್ಥಳಗಳಲ್ಲಿ ಸಿದ್ಧಪುರುಷರ ಸಂಚಾರವನ್ನೊಳಗೊಂಡಿರುವುದು. ನೋಡಿದೆಯಾ? ಅಲ್ಲದೆ ಕೆಲ ಹೂಗಳು ವಾಯುವಿನಿಂದ ಕೆಳಕ್ಕುದುರಿ ಬಿದ್ದಿರುವುವು; ಕೆಲ ಹೂಗಳು ನೀರಿನಲ್ಲಿ ಬಿದ್ದು ಚಲಿಸುತ್ತಿವೆ: ಇನ್ನೂ ಕೆಲ ಹೂವಿನ ರಾಶಿಗಳು ನೀರಿನ ಪ್ರವಾಹಮಧ್ಯದಲ್ಲಿರುವುವಾಗಿ ಚಲಿಸುತ್ತಿವೆ. ಇದು ಮನಸ್ಸಿಗೆ ಬಹಳ ಸಂತೋಷವನ್ನುಂಟುಮಾಡುತ್ತಿರುವುದು. ಈ ವಿಚಿತ್ರಗಳೆಲ್ಲವನ್ನೂ ನೋಡು, ಮಂಗಳಪ್ರದಳಾದ ಓ ಸೀತಾ

ಚಿತ್ರಕೂಟಸ್ಯ ಮಂದಾಕಿನ್ಯಾಶ್ಚ ಶೋಭನೇ! ॥ ಅಧಿಕಂ ಪುರವಾಸಾಚ್ಚ ಮನ್ಯೇ ಚ ತವದರ್ಶನಾತ್ ॥೧೨॥ ವಿಧೂತ ಕಲುಷೈ ಸ್ಸಿದ್ಧೈ ಸ್ತಪೋದಮ ಶಮಾನ್ವಿತೈಃ ॥ ನಿತ್ಯವಿಕ್ಷೋಭಿತಜಲಾಂ ವಿಗಾಹಸ್ವ ಮಯಾಸಹ ॥೧೩॥ ಸಖೀವಚ್ಚವಿಗಾಹಸ್ವ ಸೀತೇ! ಮಂದಾಕಿನೀಂ ನದೀಂ ॥ ಕಮಲಾನ್ಯವಮಜ್ಜಂತೀ ಪುಷ್ಕರಾಣಿಚ ಭಾಮಿನಿ! ॥೧೪॥ ತ್ವಂ ಪೌರಜನವ ದ್ವ್ಯಾಳಾ ನಯೋಧ್ಯಾಮಿವ ಪರ್ವತಂ ॥ ಮನ್ಯಸ್ವ ವನಿತೇ! ನಿತ್ಯಂ ಸರಯೂವದಿಮಾಂ ನದೀಂ ॥೧೫॥ ಲಕ್ಷ್ಮಣಶ್ಚಾಪಿ ಧರ್ಮಾತ್ಮಾ ಮನ್ನಿದೇಶೇ ವ್ಯವಸ್ಥಿತಃ ॥ ತ್ವಂ ಚಾನು

ಮಂದಾಕಿನ್ಯಾಶ್ಚ - ಈ ಗಂಗಾನದಿಯ, ದರ್ಶನಂ - ನೋಡುವಿಕೆಯನ್ನು, ಪುರವಾಸಾತ್ - ಪಟ್ಟಣವಾಸಕ್ಕಿಂತಲೂ, ಅಧಿಕಂ - ಹೆಚ್ಚಾದುದನ್ನಾಗಿ, ಮನ್ಯೇ - ಎಣಿಸುತ್ತೇನೆ. ॥೧೨॥ ವಿಧೂತಕಲುಷೈಃ- ಕೊಡಹಲ್ಪಟ್ಟ ಪಾಪಗಳುಳ್ಳ, ತಪೋದಮಶಮಾನ್ವಿತೈಃ - ತಪಸ್ಸಿನಿಂದಲೂ, ಇಂದ್ರಿಯನಿಗ್ರಹದಿಂದಲೂ, ಅಂತರಿಂದ್ರಿಯ ನಿಗ್ರಹದಿಂದಲೂ ಕೂಡಿರುವ, ಸಿದ್ಧೈಃ-ಸಿದ್ಧಪುರುಷರಿಂದ, ನಿತ್ಯವಿಕ್ಷೋಭಿತಜಲಾಂ - ನಿರಂತರವೂ ಕ್ಷೋಭೆಗೊಳಿಸಲ್ಪಟ್ಟ ಉದಕವುಳ್ಳ ಈ ನದಿಯನ್ನು, ಮಯಾಸಹ - ನನ್ನೊಡನೆ, ವಿಗಾಹಸ್ವ - ಪ್ರವೇಶಿಸು. ॥೧೩॥ ಹೇ ಸೀತೇ - ಎಲೌ ಸೀತೆಯೇ, ಹೇ ಭಾಮಿನಿ - ಎಲೌ ಕುಲಸ್ತ್ರೀಯೆ, ಮಂದಾಕಿನೀಂನದೀಂ - ಗಂಗಾನದಿಯನ್ನು, ಸಖೀವಚ್ಚ - ಸ್ನೇಹಿತಳಂತೆ, ಕಮಲಾನಿ - ಕಮಲಗಳನ್ನು, ಪುಷ್ಕರಾಣಿಚ - ಬಿಳೀ ಕಮಲಗಳನ್ನು, ಅವಮಜ್ಜಂತೀ - ಮುಳುಗಿಸುವವಳಾಗಿ, ವಿಗಾಹಸ್ವ - ಪ್ರವೇಶಿಸು. ॥೧೪॥ ಹೇ ವನಿತೇ - ಎಲೌ ಪ್ರಿಯಳೆ, ತ್ವಂ - ನೀನು, ವ್ಯಾಳಾನ್ - ಸರ್ಪಗಳನ್ನು, ಪೌರಜನವತ್ - ಪಟ್ಟಣಸ್ಥರಾದ ಜನರನ್ನಂತೆಯೂ, ಪರ್ವತಂ - ಬೆಟ್ಟವನ್ನು, ಅಯೋಧ್ಯಾಮಿವ - ಅಯೋಧ್ಯಾಪಟ್ಟಣವನ್ನಂತೆಯೂ, ಇಮಾಂನದೀಂ-ಈ ನದಿಯನ್ನು ಸರಯೂವತ್ - ಸರಯೂನದಿಯನ್ನಂತೆಯೂ, ನಿತ್ಯಂ - ನಿರಂತರವೂ, ಮನ್ಯಸ್ವ-ತಿಳಿದುಕೋ. ॥೧೫॥

ದೇವಿಯೆ ! ಬಹು ಮನೋಹರವಾದ ಧ್ವನಿಗಳುಳ್ಳ ಚಕ್ರವಾಕ ಪಕ್ಷಿಗಳು ಕಿವಿಗಿಂಪಾಗಿ ನುಡಿಯುತ್ತ ಹೂಗಳ ರಾಶಿಗಳನ್ನೇರಿ ಸಂಚರಿಸುತ್ತಿರುವುವು; ಇವುಗಳನ್ನು ನೋಡು. ಎಲೌ ಶುಭಕರಳೆ ! ಈ ಚಿತ್ರಕೂಟಪರ್ವತ, ಈ ಮಂದಾಕಿನೀನದಿ, ಇವೆರಡೂ, ಪಟ್ಟಣದಲ್ಲಿರುವುದಕ್ಕಿಂತಲೂ, ನಿನ್ನನ್ನು ನೋಡುವುದಕ್ಕಿಂತಲೂ ನನಗೆ ಅಧಿಕವಾದ ಆನಂದವನ್ನುಂಟುಮಾಡುತ್ತಿರುವುವು. ತಮ್ಮಮಾಹಾತ್ಮ್ಯದಿಂದ ಪಾಪನಿವಾರಣೆ ಮಾಡಿಕೊಂಡವರೂ, ತಪಸ್ಸು, ಬಾಹ್ಯೇಂದ್ರಿಯನಿಗ್ರಹ, ಅಂತರಿಂದ್ರಿಯನಿಗ್ರಹ ಇವುಗಳನ್ನುಳ್ಳವರೂ ಆದ ಸಿದ್ಧಪುರುಷರಿಂದ ಪ್ರತಿದಿನವೂ, ಸ್ನಾನಕಾಲದಲ್ಲಿ ಕಲುಷಿತವಾಗಿ ಮಾಡಲಾದ ಉದಕವುಳ್ಳ ಈ ಮಂದಾಕಿನೀ ನದಿಯು ಬಹು ಪುಣ್ಯಪ್ರದವಾದುದು. ಆದುದರಿಂದೆಲೌ ಜನಕರಾಜನಂದಿನಿಯೆ ! ನೀನು ನನ್ನೊಡಗೂಡಿ ಈ ಪುಣ್ಯನದಿಯಲ್ಲಿ ಸ್ನಾನವನ್ನು ಮಾಡುವವಳಾಗು, ಸೀತೇ ! ನೀನು ನನ್ನೊಡನೆ ಸ್ನೇಹಿತಳಂತೆ, ಈ ಮಂದಾಕಿನೀ ಜಲದಲ್ಲಿ ಮುಳುಗುವವಳಾಗು. ಓ ಸೀತಾದೇವಿಯೆ ! ನೀನು ಈ ಅರಣ್ಯದಲ್ಲಿರುವ ಮೃಗಗಳನ್ನು ಪುರಜನರಂತೆಯೂ, ಈ ಚಿತ್ರಕೂಟ

ಕೂಲಾ ವೈದೇಹಿ ! ಪ್ರೀತಿಂ ಜನಯಥೋ ಮಮ ॥ ೧೬ ॥ ಉಪಸ್ಪೃಶಂ
ಸ್ತ್ರಿಷವಣಂ ಮಧು ಮೂಲ ಫಲಾಶನಃ ॥ ನಾಯೋಧ್ಯಾಯೈ ನ ರಾಜ್ಯಾಯ
ಸ್ಪೃಹಯೇದ್ಯ ತ್ವಯಾ ಸಹ ॥ ೧೭ ॥ ಇಮಾಂ ಹಿ ರಮ್ಯಾಂ ಗಜಯೂಥ
ಮಾಲಿನೀಂ ನಿಪೀತ ತೋಯಾಂ ಗಜಸಿಂಹವಾನರೈಃ ॥ ಸುಪುಷ್ಪಿತೈಃ ಪುಷ್ಪಧರೈ
ರಲಂಕೃತಾಂ ನಸೋಸ್ತಿ ಯಸ್ಸ್ಯಾದಗತಕ್ಲಮ ಸ್ಸುಖೀ ॥ ೧೮ ॥

ಧರ್ಮಾತ್ಮಾ - ಧರ್ಮಿಷ್ಠನಾದ, ಲಕ್ಷ್ಮಣಶ್ಚಾಪಿ - ಲಕ್ಷ್ಮಣನೂ ಕೂಡ, ಮನ್ನಿದೇಶೇ - ನನ್ನ ಆಜ್ಞೆಯಲ್ಲಿ, ವ್ಯವಸ್ಥಿತಃ - ಇರುವನಾಗಿದ್ದಾನೆ, ಹೇ ವೈದೇಹಿ - ಎಲೌ ಸೀತಾದೇವಿಯೇ, ತ್ವಂಚ - ನೀನೂ, ಅನುಕೂಲಾ - ಅನುಕೂಲಳಾಗಿರುವೆ, (ಉಭೌ-ಇಬ್ಬರೂ,) ಮಮ-ನನಗೆ, ಪ್ರೀತಿಂ - ವಿಶ್ವಾಸವನ್ನು, ಜನಯಥಃ - ಉಂಟುಮಾಡುತ್ತಿರುವಿರಿ. ॥ ೧೬ ॥ ತ್ರಿಷವಣಂ - ಮೂರುಕಾಲುಗಳಲ್ಲಿಯೂ, ಉಪಸ್ಪೃಶರ್ - ಸ್ನಾನಮಾಡಿ, ತ್ವಯಾಸಹ - ನಿನ್ನೊಡನೆ, ಮಧುಮೂಲಫಲಾಶನಃ - ಜೇನುತುಪ್ಪ, ಕಂದಮೂಲಗಳು, ಫಲಗಳೂ ಆಹಾರವಾಗುಳ್ಳವನಾಗಿ, ಅದ್ಯ - ಈಗ, ಅಯೋಧ್ಯಾಯೈ - ಅಯೋಧ್ಯಾಪಟ್ಟಣಕ್ಕೆ, ನಸ್ಪೃಹಯೇ - ಕೋರುವನಲ್ಲ, ರಾಜ್ಯಾಯ-ರಾಜ್ಯಕ್ಕೋಸ್ಕರ, (ನಸ್ಪೃಹಯೇ-ಕೋರುವನಲ್ಲವು) ॥ ೧೭ ॥ ಗಜಯೂಥಮಾಲಿನೀಂ - ಆನೆಗಳ ಸಮೂಹಗಳಿಂದ ಒಪ್ಪುತ್ತಿರುವ, ಗಜಸಿಂಹವಾನರೈಃ-ಆನೆಗಳಿಂದಲೂ, ಸಿಂಹಗಳಿಂದಲೂ, ಕೋತಿಗಳಿಂದಲು, ನಿಪೀತತೋಯಾಂ-ಪಾನಮಾಡಲ್ಪಟ್ಟ ಉದಕವುಳ್ಳ, ಸುಪುಷ್ಪಿತೈಃ - ಚನ್ನಾಗಿ ಹೂವೊಳೆತಿರುವ, ಪುಷ್ಪಧರೈಃ - ಪುಷ್ಪವೃಕ್ಷಗಳಿಂದಲೂ, ಅಲಂಕೃತಾಂ - ಅಲಂಕರಿಸಲಾದ, ರಮ್ಯಾಂ - ಮನಸ್ಸಿಗಿಂಪಾಗಿರುವ, ಇಮಾಂ - ಈ ಗಂಗಾನದಿಯಲ್ಲಿ, ಉಪಸ್ಪೃಶ್ಯ - ಸ್ನಾನಮಾಡಿದ, ಯಃ - ಯಾವ ಪುರುಷನು, ಸುಖೀ - ಸುಖವಂತನಾಗಿ, ಅಗತಕ್ಲಮಃ - ಹೋಗದಿರುವ ಬಳಲಿಕೆಯಿಲ್ಲದೇ ಇರುವನು, ಸ್ಯಾತ್ - ಆದಾನು, ಸಃ - ಆ ಪುರುಷನು, ನಾಸ್ತಿ - ಇಲ್ಲ. ॥ ೧೮ ॥ ಇತೀವ - ಈಪರಿಯಾಗಿಯೇ, ಸರಿತಂಪ್ರತಿ - ಈ ನದಿಯನ್ನು ಕುರಿತು, ಬಹುಸಂಗತಂ - ಬಹಳವಾದ ಲಾಲನೆಯಿಂದ ಕೂಡಿರುವ, ವಚಃ - ಮಾತನ್ನು, ಬ್ರುವ -

ಪರ್ವತವನ್ನು ಅಯೋಧ್ಯಾಪಟ್ಟಣವನ್ನಾಗಿಯೂ, ಈ ಮಂದಾಕಿನೀನದಿಯನ್ನು ಸರಯೂನದಿಯನ್ನಾಗಿಯೂ, ಎಣಿಸುವವಳಾಗು. ಜನಕಮಹಾರಾಜನ ಕುಮಾರಿಯೆ! ಧರ್ಮಾತ್ಮನಾದ ಲಕ್ಷ್ಮಣನು ನನ್ನೊಡನಿದ್ದಾನೆ; ನೀನು ನನಗೆ ಅನುಕೂಲಳಾಗಿದ್ದೀಯೆ! ಆದುದರಿಂದ ನೀವಿಬ್ಬರೂ ನನಗೆ ಪ್ರೀತಿಯನ್ನುಂಟುಮಾಡುತಿದ್ದೀರಿ. ಆದಕಾರಣ ನಾನು ನಿನ್ನೊಡನೆಯೂ, ತಮ್ಮನಾದ ಲಕ್ಷ್ಮಣಸ್ವಾಮಿಯೊಡನೆಯೂ ಕೂಡಿದವನಾಗಿ, ತ್ರಿಕಾಲಗಳಲ್ಲಿಯೂ ಈ ಮಂದಾಕಿನೀನದಿಯಲ್ಲಿ ಸ್ನಾನವನ್ನಾಚರಿಸುತ್ತಾ, ಕಂದಮೂಲಫಲಾದಿಗಳನ್ನು ಭುಜಿಸಿಕೊಂಡು, ಅಯೋಧ್ಯಾಪಟ್ಟಣವನ್ನು ಕುರಿತಾಗಲಿ, ರಾಜ್ಯೈಶ್ವರ್ಯಗಳನ್ನು ಕುರಿತಾಗಲಿ ಸ್ವಲ್ಪವಾದರೂ ದುಃಖಪಡುವುದಿಲ್ಲ. ಬಹು ಮನೋಹರವಾದುದೂ, ಜಿಂಕೆಗಳ ಗುಂಪುಗಳಿಂದ ಕಂಗೊಳಿಸುತ್ತಿರುವುದೂ, ಆನೆ, ಸಿಂಹ, ವಾನರ ಇವೇ ಮೊದಲಾದ ಜಂತುಗಳಿಂದ ಪಾನ ಮಾಡಲ್ಪಟ್ಟ ಉದಕವುಳ್ಳುದೂ, ಚೆನ್ನಾಗಿ ಹೂ ವೊಳೆತ ವೃಕ್ಷಗಳಿಂದಲಂಕೃತವಾದುದೂ ಆದ ಈ ಮಂದಾಕಿನೀನದಿಯು ಎಲ್ಲ ಜನರಿಗೂ ಮಾರ್ಗಾಯಾಸವನ್ನು ಹೋಗ

ಇತೀವ ರಾಮೋ ಬಹುಸಂಗತಂ ವಚಃ
ಪ್ರಿಯಾ ಸಹಾಯ ಸ್ಸರಿತಂ ಪ್ರತಿ ಬ್ರುವನ್ ||
ಚಚಾರ ರಮ್ಯಂ ನಯನಾಂಜನಪ್ರಭಂ
ಸಚಿತ್ರಕೂಟಂ ರಘುವಂಶ ವರ್ಧನಃ || ೧೯ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚನವತಿತಮಸ್ಸರ್ಗಃ.

ಹೇಳುತ್ತಿರುವ, ಪ್ರಿಯಾಸಹಾಯಃ - ಸೀತಾದೇವಿಯೇ ಸಹಾಯವಾಗುಳ್ಳ, ರಘುವಂಶವರ್ಧನಃ - ರಘುಕುಲವನ್ನು ವೃದ್ಧಿಗೊಳಿಸುತ್ತಿರುವ, ಸರಾಮಃ - ಆ ಶ್ರೀರಾಮನು, ನಯನಾಂಜನಪ್ರಭಂ - ನೇತ್ರಗಳಿಗೆ ಕಾಡಿಗೆಯಂತೆ ಕಪ್ಪಾಗಿರುವ ಕಾಂತಿಯುಳ್ಳ, ರಮ್ಯಂ - ಮನೋಹರವಾದ, ಚಿತ್ರಕೂಟಂ - ಚಿತ್ರಕೂಟಪರ್ವತದಲ್ಲಿ, ಚಚಾರ - ಸಂಚರಿಸಿದನು. || ೧೯ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚನವತಿತಮಸ್ಸರ್ಗಃ.

ಲಾಡಿಸುತ್ತದೆ. ಆದುದರಿಂದ ನಿನಗುಂಟಾಗಿರುವ ಆಯಾಸವನ್ನು ಈ ನದಿಯು ಹೋಗಲಾಡಿಸಬಲ್ಲದು.'' ಈ ಪ್ರಕಾರ ಶ್ರೀರಾಮಮೂರ್ತಿಯು ಅನೇಕ ವಿಧಗಳಿಂದ, ಮಂದಾಕಿನೀ ನದಿಯ ವಿಷಯಕಗಳಾದ ಯುಕ್ತವಚನಗಳನ್ನು ಪ್ರಿಯೆಯಾದ ಸೀತಾದೇವಿಯೊಡನೆ ಹೇಳುತ್ತ, ಆ ನದೀತೀರದಲ್ಲಿಯೇ ಸಂಚಾರ ಮಾಡುತ್ತಿದ್ದನು. || ೧೫-೧೯ ||

ಇಂತು ಶ್ರೀರಾಮಕೃತ ಮಂದಾಕಿನೀ ನದ್ಯಾನುವರ್ಣನವೆಂಬ
ತೊಂಭತ್ತೈದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಷಣ್ಣವತಿತಮಸ್ಸರ್ಗಃ.

ತಾಂ ತಥಾ ದರ್ಶಯಿತ್ವಾತು ಮೈಥಿಲೀಂ ಗಿರಿನಿಮ್ನಗಾಂ ॥ ನಿಷಸಾದ ಗಿರಿಪ್ರಸ್ಥೇ ಸೀತಾಂ ಮಾಂಸೇನ ಛಂದಯನ್ ॥ ೧ ॥ ಇದಂ ಮೇಧ್ಯ ಮಿದಂ ಸ್ವಾದು ನಿಷ್ಟಪ್ತ ಮಿದ ಮಗ್ನಿನಾ ॥ ಏವಮಾಸ್ತೇ ಸ ಧರ್ಮಾತ್ಮಾ ಸೀತಯಾ ಸಹ ರಾಘವಃ ॥ ೨ ॥ ತಥಾ ತತ್ರಾಸತ ಸ್ತಸ್ಯ ಭರತಸ್ಯೋ ಪಯಾಯಿನಃ ॥ ಸೈನ್ಯರೇಣುಶ್ಚ ಶಬ್ದಶ್ಚ ಪ್ರಾದುರಾಸ್ತಾಂ ನಭಸ್ಪೃಶೌ ॥ ೩ ॥ ಏತಸ್ಮಿನ್ನಂತರೇ ತ್ರಸ್ತಾ ಶಬ್ದೇನ ಮಹತಾ ತತಃ ॥ ಅರ್ದಿತಾ ಯೂಥಪಾ ಮತ್ತಾ ಸ್ಸಯೂಥಾ

ತಥಾ - ಆಪರಿಯಾಗಿ, ಮೈಥಿಲೀಂ-ಜನಕರಾಯನ ಮಗಳಾದ, ಸೀತಾಂ-ಸೀತಾದೇವಿಯನ್ನು ಕುರಿತು, ತಾಂ - ಆ ಗಂಗಾನದಿಯನ್ನು, ದರ್ಶಯಿತ್ವಾ - ತೋರಿಸಿ, ಗಿರಿನಿಮ್ನಗಾಂ - ಬೆಟ್ಟದಿಂದಿಳಿದು ಬರುವ ನದಿಯಬಳಿಯಲ್ಲಿ, ಮಾಂಸೇನ - ಮಾಂಸದಿಂದ, ಛಂದಯನ್ - ಸ್ವಾಧೀನಗೊಳಿಸಿಕೊಂಡವನಾಗಿ, ಗಿರಿಪ್ರಸ್ಥೇ - ಬೆಟ್ಟದ ಝರಿಯಲ್ಲಿ, ನಿಷಸಾದ - ಕುಳಿತುಕೊಂಡನು. ॥ ೧ ॥ ಧರ್ಮಾತ್ಮಾ-ಧರ್ಮಿಷ್ಠನಾದ, ರಾಘವಃ - ಶ್ರೀರಾಮನು, ಸೀತಯಾಸಹ - ಸೀತಾದೇವಿಯೊಡನೆ, ಏವಂ - ಈಪರಿಯಾಗಿ, ಇದಂ - ಈ ಮಾಂಸವು, ಮೇಧ್ಯಂ - ಪರಿಶುದ್ಧವಾದುದು, ಇದಂ - ಇದು, ಸ್ವಾದು-ರುಚಿಕರವಾದುದು, ಇದಂ - ಇದು, ಅಗ್ನಿನಾ - ಅಗ್ನಿಯಿಂದ, ನಿಷ್ಟಪ್ತಂ - ಕಾಸಲ್ಪಟ್ಟುದು, ಇತಿ-ಈಪರಿಯಾಗಿ, ಆಸ್ತೇ - ಇರುವನು. ॥ ೨ ॥ ತತ್ರ - ಆ ನದೀತೀರದಲ್ಲಿ, ತಸ್ಯ - ಆ ಶ್ರೀರಾಮನು, ತಥಾ - ಆಪರಿಯಾಗಿ, ಆಸತಃ - ಇರುತ್ತಿರಲು, ಉಪಯಾಯಿನಃ - ಸಮೀಪದಲ್ಲಿ ಬರುತ್ತಿರುವ, ಭರತಸ್ಯ - ಭರತನ, ಸೈನ್ಯರೇಣುಶ್ಚ - ಸೇನೆಯಧೂಳಿ, ಶಬ್ದಶ್ಚ - ಕೋಲಾಹಲಧ್ವನಿ, (ಉಭೌ - ಇವೆರಡೂ,) ನಭಸ್ಪೃಶೌ - ಅಂತರಿಕ್ಷವನ್ನು ಮುತ್ತುತ್ತಿರುವುಗಳಾಗಿ, ಪ್ರಾದುರಾಸ್ತಾಂ-ಆವಿರ್ಭವಿಸಿದವು. ॥ ೩ ॥ ಏತಸ್ಮಿನ್ನಂತರೇ - ಈ ಸಮಯದಲ್ಲಿ, ಮಹತಾ - ದೊಡ್ಡದಾದ, ತತಶ್ಶಬ್ದೇನ - ಆ ಶಬ್ದದಿಂದ, ತ್ರಸ್ತಾಃ - ಹೆದರಿ, ಮತ್ತಾಃ - ಮದವೇರಿದ, ಯೂಥಪಾಃ - ಆನೆಗಳ

ಈ ಪ್ರಕಾರವಾಗಿ ಧರ್ಮಾತ್ಮನಾದಾ ಶ್ರೀರಾಮಮೂರ್ತಿಯು, ಮಿಥಿಲಾನಗರಾಧಿಪತಿಯಾದ, ಜನಕರಾಜನ ಪುತ್ರಿಕಾಮಣಿಯಾದ ಸೀತಾದೇವಿಗೆ, ಮಂದಾಕಿನೀನದಿಯೇ ಮೊದಲಾದುವುಗಳನ್ನು ತೋರಿಸುತ್ತ, ಚಿತ್ರಕೂಟಪರ್ವತದ ಮೇಲ್ಭಾಗದಲ್ಲಿ ಕುಳಿತುಕೊಂಡು ರುಚಿರುಚಿಯಾದ ಮಾಂಸಗಳನ್ನು ಕುರಿತು ಸೀತಾದೇವಿಗೆ ಅತ್ಯಾನಂದವನ್ನುಂಟುಮಾಡುತ್ತ, “ದೇವಿ! ಈ ಮಾಂಸವು ಬಹು ಪವಿತ್ರವಾದುದು; ಇದು ಬಹು ರುಚಿಕರವಾದುದು. ಈ ಮಾಂಸವು ಅಗ್ನಿಯಿಂದ ಪಕ್ವಗೊಳಿಸಲ್ಪಟ್ಟದೆ” ಎಂದು ಹೇಳುತ್ತಲಿದ್ದನು. ಹೀಗೆ ಕುಳಿತುಕೊಂಡಿದ್ದ ಶ್ರೀರಾಮನು ತನ್ನ ಸಮೀಪಕ್ಕೆ ಬರುತ್ತಿದ್ದ ಭರತಕುಮಾರನ ಸೇನೆಯುಲ್ಲಿನ ಕಲಕಲನಾದವನ್ನು ಕೇಳಿದನು. ಅಲ್ಲದೆ ಸೈನ್ಯದ ತುಳಿತದಿಂದ

ದುದ್ರುವುರ್ದಿಶಃ ॥ ೪ ॥ ಸತಂ ಸೈನ್ಯ ಸಮುದ್ಧೂತಂ ಶಬ್ದಂ ಶುಶ್ರಾವ ರಾಘವಃ ॥ ತಾಂಶ್ಚ ವಿಪ್ರದ್ರುತಾನ್ಸರ್ವಾನ್ ಯೂಥಪಾನನ್ವವೈಕ್ಷತ ॥ ೫ ॥ ತಾಂಶ್ಚ ವಿದ್ರವತೋ ದೃಷ್ಟ್ವಾ ತಂಚ ಶ್ರುತ್ವಾಚ ನಿಸ್ವನಂ ॥ ಉವಾಚ ರಾಮ ಸ್ಸೌಮಿತ್ರಿಂ ಲಕ್ಷ್ಮಣಂ ದೀಪ್ತತೇಜಸಂ ॥ ೬ ॥ ಹಂತ! ಲಕ್ಷ್ಮಣ! ಪಶ್ಯೇಹ ಸುಮಿತ್ರಾ ಸುಪ್ರಜಾ ಸ್ತ್ವಯಾ ॥ ಭೀಮ ಸ್ತನಿತಗಂಭೀರ ಸ್ತುಮುಲ ಶ್ಶ್ರೂಯತೇ ಸ್ವನಃ ॥ ೭ ॥ ಗಜಯೂಥಾನಿ ವಾಽರಣ್ಯೇ ಮಹಿಷಾ ವಾ

ಯೂಥಪತಿಗಳಾದ ದೊಡ್ಡಾನೆಗಳು, ಸಯೂಥಾಃ - ತಮ್ಮ ಗುಂಪುಗಳಿಂದಕೂಡಿ, ಅರ್ದಿತಾಃ - ಹೊಡೆಯಲ್ಪಟ್ಟವುಗಳಾಗಿ, ದಿಶಃ - ದಿಕ್ಕುಗಳಲ್ಲಿ, ದುದ್ರುವುಃ - ಓಡಿಬಂದವು. ॥ ೪ ॥ ಸರಾಘವಃ - ಆ ಶ್ರೀರಾಮನು, ಸೈನ್ಯಸಮುದ್ಧೂತಂ - ಸೈನ್ಯದಿಂದ ಹುಟ್ಟಿದ, ತಂಶಬ್ದಂ - ಆ ಶಬ್ದವನ್ನು, ಶುಶ್ರಾವ- ಕೇಳಿದನು, ವಿಪ್ರದ್ರುತಾನ್ - ಓಡಿಬರುತ್ತಿರುವ, ಸರ್ವಾನ್ - ಸಮಸ್ತಗಳಾದ, ತಾನ್‌ಯೂಥಪಾನ್ - ಆ ದೊಡ್ಡಾನೆಗಳನ್ನು, ಅನ್ವವೈಕ್ಷತ - ಕಂಡನು. ॥ ೫ ॥ ರಾಮಃ - ಶ್ರೀರಾಮನು, ವಿದ್ರವತಃ - ಓಡಿಬರುತ್ತಿರುವ, ತಾನ್ - ಆ ಆನೆಗಳನ್ನು, ದೃಷ್ಟ್ವಾ - ಕಂಡು, ತನ್ನಿಸ್ವನಂಚ - ಆ ಧ್ವನಿಯನ್ನು, ಶ್ರುತ್ವಾ - ಕೇಳಿ, ದೀಪ್ತತೇಜಸಂ - ಪ್ರಕಾಶವಾದ ಪರಾಕ್ರಮವುಳ್ಳ, ಸೌಮಿತ್ರಿಂ - ಸುಮಿತ್ರಾದೇವಿಗೆ ಕುವರನಾದ, ಲಕ್ಷ್ಮಣಂ - ಲಕ್ಷ್ಮಣನನ್ನು ಕುರಿತು, ಉವಾಚ - ಹೇಳಿದನು. ॥ ೬ ॥ ಹೇ ಲಕ್ಷ್ಮಣ- ಎಲೈ ಲಕ್ಷ್ಮಣನೇ, ಸುಮಿತ್ರಾ - ಸುಮಿತ್ರಾದೇವಿಯು, ತ್ವಯಾ - ನಿನ್ನಿಂದ, ಸಪ್ರಜಾಃ - ಒಳ್ಳೆಯ ಮಗನುಳ್ಳವಳಾದಳು, ಇಹ - ಇಲ್ಲಿ, ಪಶ್ಯ - ನೋಡು, ಹಂತ-ಆಶ್ಚರ್ಯವು, ಭೀಮಸ್ತನಿತಗಂಭೀರಃ, ಭೀಮ - ಭಯಂಕರವಾದ, ಸ್ತನಿತ - ಮೇಘಘರ್ಜನೆಯಂತೆ, ಗಂಭೀರಃ - ಗಂಭೀರವಾದ, ತುಮುಲಃ - ಬಹು ದೊಡ್ಡದಾದ, ಸ್ವನಃ - ಧ್ವನಿಯು, ಶ್ರೂಯತೇ - ಕೇಳಲ್ಪಡುತ್ತದೆ. ॥ ೭ ॥ ಅರಣ್ಯೇ - ಕಾಡಿನಲ್ಲಿ, ಗಜಯೂಥಾನಿವಾ - ಆನೆಗಳ ಗುಂಪುಗಳಾದರೂ, ಮಹಾವನೇ - ದೊಡ್ಡ ಅರಣ್ಯದಲ್ಲಿ, ಮಹಿಷಾವಾ - ಎಮ್ಮೆಕೋಣಗಳಾದರೂ, ಸಿಂಹೈಃ - ಸಿಂಹಗಳಿಂದ, ಸಹಸಾ - ಜಾಗ್ರತೆಯಾಗಿ, ವಿತ್ರಾಸಿತಾಃ - ಹೆದರಿಕೊಳ್ಳಲ್ಪಟ್ಟುವಾಗಿವೆ, ಮೃಗಾಃ - ಮೃಗಗಳು, ದಿಶಃ - ದಿಕ್ಕುಗ

ಬರುತ್ತಿದ್ದ ಧೂಳಿಯುನ್ನು ನೋಡಿದನು. ಆಗಲಾ ಧೂಳಿಯೂ, ಸೈನ್ಯದ ಧ್ವನಿಯೂ ಮುಗಿಲನ್ನು ಮುಟ್ಟುತ್ತಿದ್ದಿತು. ಆ ಸಮಯದಲ್ಲಿ, ಆ ಸೈನ್ಯದ ಧ್ವನಿಯಿಂದ ಭಯಪಟ್ಟುವೂ, ಓಡಿಸಲಾದುವೂ ಆದ ಮದ್ದಾನೆ, ಮದ್ದಾನೆಗಳ ಗುಂಪುಗಳೊಡಗೂಡಿದ ಗಂಡಾನೆಗಳು ನಾನಾದಿಕ್ಕುಗಳಿಗೂ ಓಡಿಹೋಗುತ್ತಿದ್ದುವು. ಆಗ ಶ್ರೀರಾಮನು, ಆ ಸೇನೆಯಿಂದ ಬರುತ್ತಿರುವುದೂ ಬಹು ದೊಡ್ಡದಾದುದೂ ಆದ ಕಲಕಲ ಧ್ವನಿಯನ್ನು ಕೇಳಿದನು. ಅಲ್ಲದೆ ನಾನಾದಿಕ್ಕುಗಳಿಗೆ ಓಡಿಹೋಗುತ್ತಿರುವ ಮದ್ದಾನೆಗಳ ಹಿಂಡುಗಳನ್ನೂ ನೋಡಿದನು. ಈ ಪ್ರಕಾರವಾಗಿ ನೋಡಿದವನಾಗಿ ಮಹದಾಶ್ಚರ್ಯಭರಿತನಾಗಿ, ಅಧಿಕವಾದ ತೇಜಸ್ಸಿನಿಂದ ಬೆಳಗುತ್ತಿರುವ ಸುಮಿತ್ರಾದೇವಿಯುಮಗನಾದಲಕ್ಷ್ಮಣಸ್ವಾಮಿಯುನ್ನುನೋಡಿ ಹೀಗೆಂದನು. ॥೧-೬॥ "ತಮ್ಮ ; ಲಕ್ಷ್ಮಣನೆ! ಇದೇನಾಶ್ಚರ್ಯ ; ಇಲ್ಲಿ ನೋಡು ; ನಿನ್ನ ಮೂಲಕ ಸುಮಿತ್ರಾದೇವಿಯು ಸತ್ಪುತ್ರಸಂತಾನವುಳ್ಳವಳಾದಳು ! ಭಯಂಕರವಾದುದೂ, ಜನರ ಗುಂಪಿ

ಮಹಾವನೇ ॥ ವಿತ್ರಾಸಿತಾ ಮೃಗಾ ಸ್ಸಿಂಹೈ ಸ್ಸಹಸಾ ಪ್ರದ್ರುತಾದಿಶಃ ॥ ೮ ॥
ರಾಜಾ ವಾ ರಾಜಮಾತ್ರೋವಾ ಮೃಗಯಾ ಮಟತೇ ವನೇ ॥ ಅನ್ಯದ್ವಾ
ಶ್ವಾಪದಂ ಕಿಂಚಿ ತ್ಸೌಮಿತ್ರೇ! ಜ್ಞಾತು ಮರ್ಹಸಿ ॥ ೯ ॥ ಸುದುಶ್ಚರೋ
ಗಿರಿಶ್ಚಾಯಂ ಪಕ್ಷಿಣಾಮಪಿ ಲಕ್ಷ್ಮಣ! ॥ ಸರ್ವಮೇತದ್ಯಥಾ ತತ್ವ ಮಚಿ
ರಾದ್ ಜ್ಞಾತು ಮರ್ಹಸಿ ॥ ೧೦ ॥ ಸಲಕ್ಷ್ಮಣ ಸ್ಸಂತ್ವರಿತ ಸ್ಸಾಲ ಮಾರುಹ್ಯ
ಪುಷ್ಪಿತಂ ॥ ಪ್ರೇಕ್ಷಮಾಣೋ ದಿಶ ಸ್ಸರ್ವಾಃ ಪೂರ್ವಾಂ ದಿಶಮುದೈಕ್ಷತ ॥೧೧॥
ಉದಙ್ಮುಖಃ ಪ್ರೇಕ್ಷಮಾಣೋ ದದರ್ಶ ಮಹತೀಂ ಚಮೂಂ ॥ ರಥಾಶ್ವ ಗಜ

ಳಲ್ಲಿ, ಪ್ರದ್ರುತಾಃ - ಓಡಿಬರುತ್ತವೆ. ॥ ೮ ॥ ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ರಾಜಾವಾ-ಅರಸೇ ಆಗಲೀ, ರಾಜಮಾತ್ರೋವಾ - ಅರಸಿಗೆ ಸಮಾನನೇ ಆಗಲೀ, ವನೇ - ಆರಣ್ಯದಲ್ಲಿ, ಮೃಗಯಾಂ - ಬೇಟೆಯನ್ನು ಕುರಿತು, ಅಟತೇ - ಸಂಚಾರಮಾಡುತ್ತಾನೆ, ಅನ್ಯತ್ - ಮತ್ತೊಂದಾದ, ಕಿಂಚಿತ್ - ಯಾವದೋ ಒಂದಾದ, ಶ್ವಾಪದಂವಾ - ಘಾತುಕಮೃಗವೇ ಆಗಲಿ, ಅಟತೇ - ಸಂಚಾರಮಾಡುತ್ತಿದೆ, ಜ್ಞಾತುಂ - ತಿಳಿಯಲು, ಅರ್ಹಸಿ - ಯೋಗ್ಯನಾಗು. ॥ ೯ ॥ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ಅಯಂಗಿರಿಶ್ಚ - ಈ ಬೆಟ್ಟವು, ಪಕ್ಷಿಣಾಮಪಿ - ಪಕ್ಷಿಗಳಿಗೂ, ಸುದುಶ್ಚರಃ - ಸಂಚರಿಸುವದಕ್ಕೆ ಶಕ್ಯವಲ್ಲ, ಏತತ್ಸರ್ವಂ - ಈ ಸಮಸ್ತವನ್ನು, ಯಥಾತತ್ವಂ - ಇದ್ದುದನ್ನಿದ್ದಹಾಗೆ, ಅಚಿರಾತ್ - ಜಾಗ್ರತೆಯಾಗಿ, ಜ್ಞಾತುಂ - ತಿಳಿಯುವದಕ್ಕೋಸ್ಕರ, ಅರ್ಹಸಿ - ಯೋಗ್ಯನಾಗು. ॥ ೧೦ ॥ ಸಲಕ್ಷ್ಮಣಃ - ಆ ಲಕ್ಷ್ಮಣನು, ಸಂತ್ವರಿತಃ-ಜಾಗ್ರತನಾಗಿ, ಪುಷ್ಪಿತಂ-ಹೂಬಿಟ್ಟಿರುವ, ಸಾಲಂ ಸಾಲವೃಕ್ಷವನ್ನು, ಆರುಹ್ಯ - ಏರಿ, ಸರ್ವಾಃ - ಸಮಸ್ತಗಳಾದ, ದಿಶಃ - ದಿಕ್ಕುಗಳನ್ನು, ಪ್ರೇಕ್ಷಮಾಣಃ-ನೋಡುತ್ತ, ಪೂರ್ವಾಂದಿಶಂ - ಪೂರ್ವದಿಕ್ಕನ್ನು, ಉದೈಕ್ಷತ - ಕಂಡನು. ॥ ೧೧ ॥ ಉದಙ್ಮುಖಃ - ಉತ್ತರಾಭಿಮುಖನಾಗಿ, ಪ್ರೇಕ್ಷಮಾಣಃ - ನೋಡುತ್ತ, ರಥಾಶ್ವಗಜಸಂಬಾಧಾಂ - ರಥಗಳಿಂದಲೂ ಆನೆಗಳಿಂದಲೂ ಕೂಡಿರುವ, ಯತ್ತೈಃ - ಸನ್ನದ್ಧರಾದ, ಪದಾತಿಭಿಃ - ಕಾಲಾಳುಗಳಿಂದ, ಯುಕ್ತಾಂ-

ನಿಂದುಂಟಾದುದೂ ಆದ ಒಂದು ಧ್ವನಿಯು ಕೇಳಬರುತ್ತಿರುವುದು; ಚೆನ್ನಾಗಿ ಕೇಳು. ಅಲ್ಲದೆ ಎಲೈ ಲಕ್ಷ್ಮಣನೆ! ಬಹು ದೊಡ್ಡದಾದ ಈ ಅರಣ್ಯದಲ್ಲಿ ಆನೆಗಳ ಗುಂಪುಗಳೂ, ಮಹಿಷಗಳೂ, ಸಿಂಹಗಳೂ, ಮತ್ತೂ ಇತರ ಮೃಗಗಳೂ ಅಟ್ಟಿದುವಾಗಿ ಬಹಳ ವೇಗದಿಂದ ಓಡಿಹೋಗುತ್ತಿವೆ. ಇದೆಲ್ಲವನ್ನೂ ನೋಡಿದರೆ, ಮಹಾರಾಜನೋ, ಇಲ್ಲದಿದ್ದರೆ ರಾಜನಿಗೆ ಸಮಾನನಾದ ಇನ್ನಾವನೋ ಬೇಟೆಗಾಗಿ ಈ ವನಕ್ಕೆ ಬಂದಿರಬಹುದೆಂದು ತೋರುತ್ತಿರುವುದು. ಹಾಗಿಲ್ಲದಿದ್ದರೆ, ಯಾವುದೋ ಒಂದು ದೊಡ್ಡ ಕ್ರೂರ ಮೃಗವು ಸಂಚರಿಸುತ್ತಿರಬಹುದು. ಈ ವಿಷಯವೆಲ್ಲವನ್ನೂ ತಿಳಿದುಕೊಳ್ಳಲು ಪ್ರಯತ್ನ ಮಾಡುವವನಾಗು. ತಮ್ಮ, ಲಕ್ಷ್ಮಣ! ಈ ಚಿತ್ರಕೂಟಪರ್ವತವು, ಪಕ್ಷಿಗಳಿಗೂ ಸಹ ಪ್ರವೇಶಿಸಲು ಅಶಕ್ಯವಾಗಿರುವುದು. ಆದುದರಿಂದ ಇದೇನೆಂಬುದನ್ನು ವಿಶದವಾಗಿಯೂ, ಜಾಗ್ರತೆಯಾಗಿಯೂ ತಿಳಿದುಕೊಳ್ಳುವವನಾಗು." ಶ್ರೀರಾಮನಿಂತು ನುಡಿಯಲು, ಲಕ್ಷ್ಮಣನು ಬಹು ಜಾಗ್ರತೆಯಿಂದ ಬಹು ಚೆನ್ನಾಗಿ ಹೂ ಬಿಟ್ಟಿರುವ ಸಾಲವೃಕ್ಷವನ್ನೇರಿ ಎಲ್ಲ ದಿಕ್ಕುಗಳನ್ನೂ ದೃಷ್ಟಿಸಿ ನೋಡಿ ಪೂರ್ವ

ಸಂಬಾಧಾಂ ಯತ್ತೈರ್ಯುಕ್ತಾಂ ಪದಾತಿಭಿಃ ॥೧೨॥ ತಾಮುಶ್ವ ಗಜ ಸಂಪೂರ್ಣಾಂ ರಥ ಧ್ವಜ ವಿಭೂಷಿತಾಂ ॥ ಶಶಂಸ ಸೇನಾಂ ರಾಮಾಯ ವಚನಂ ಚೇದ ಮಬ್ರವೀತ್ ॥೧೩॥ ಅಗ್ನಿಂ ಸಂಶಮಯ ತ್ವಾರ್ಯ! ಸ್ಸೀತಾಚ ಭಜತಾಂ ಗುಹಾಂ ॥ ಸಜ್ಜಂ ಕುರುಷ್ವ ಚಾಪಂಚ ಶರಾಂಶ್ಚ ಕವಚಂ ತಥಾ ॥೧೪॥ ತಂ ರಾಮಃ ಪುರುಷವ್ಯಾಘ್ರೋ ಲಕ್ಷ್ಮಣಂ ಪ್ರತ್ಯುವಾಚಹ ॥ ಅಂಗಾ ವೇಕ್ಷಸ್ವ ಸೌಮಿತ್ರೇ! ಕಸ್ಯೇ ಮಾಂ ಮನ್ಯಸೇ ಚಮೂಂ?॥೧೫॥ಏವ ಮುಕ್ತಸ್ತು ರಾಮೇಣ ಲಕ್ಷ್ಮಣೋ ವಾಕ್ಯ ಮಬ್ರವೀತ್ ॥ ದಿಧಕ್ಷನ್ನಿವ ತಾಂ ಸೇನಾಂ

ಕೂಡಿರುವ, ಮಹತೀಂ - ದೊಡ್ಡದಾದ, ಚಮೂಂ - ದಂಡನ್ನು, ದದರ್ಶ - ಕಂಡನು. ॥೧೨॥ ಅಶ್ವಗಜಸಂಪೂರ್ಣಾಂ - ಕುದುರೆಗಳಿಂದಲೂ ಆನೆಗಳಿಂದಲೂ ತುಂಬಿರುವ, ರಥಧ್ವಜವಿಭೂಷಿತಾಂ- ತೇರುಗಳ ಧ್ವಜಪಟಗಳಿಂದ ಅಲಂಕೃತವಾದ, ತಾಂಸೇನಾಂ - ಆ ಸೇನೆಯನ್ನು, ರಾಮಾಯ - ಶ್ರೀ ರಾಮನಿಗೆ, ಶಶಂಸ - ಹೇಳಿದನು, ಇದಂವಚನಂಚ - ಈ ಮಾತನ್ನೂ, ಅಬ್ರವೀತ್ - ನುಡಿದನು. ॥೧೩॥ ಆರ್ಯಃ - ಪೂಜ್ಯನಾದ ನೀನು, ಅಗ್ನಿಂ - ಅಗ್ನಿಯನ್ನು, ಸಂಶಮಯತು-ತಣ್ಣಗೆಮಾಡು, ಸೀತಾಚ - ಸೀತಾದೇವಿಯು, ಗುಹಾಂ-ಗುಹೆಯನ್ನು, ಭಜತಾಂ - ಹೊಂದಲಿ, ಚಾಪಂ-ಬಿಲ್ಲನ್ನು, ಸಜ್ಜ್ಯಂ-ಹೆದೆಯಿಂದ ಕೂಡಿದುದನ್ನಾಗಿ, ಕುರುಷ್ವ - ಮಾಡು, ಶರಾಂಶ್ಚ-ಬಾಣಗಳನ್ನು, ಗೃಹಾಣ- ತೆಗದುಕೋ, ತಥಾ - ಹಾಗೆಯೇ, ಕವಚಂಚ - ಕವಚವನ್ನೂ, ಧಾರಯ - ತೊಟ್ಟುಕೋ, ಇತಿ - ಇಂತೆಂದು, ಅಬ್ರವೀತ್ - ನುಡಿದನು. ॥೧೪॥ ಪುರುಷವ್ಯಾಘ್ರಃ - ಪುರುಷಶ್ರೇಷ್ಠನಾದ, ರಾಮಃ- ಶ್ರೀರಾಮನು, ತಂಲಕ್ಷ್ಮಣಂ - ಆ ಲಕ್ಷ್ಮಣನನ್ನು ಕುರಿತು, ಅಂಗಹೇಸೌಮಿತ್ರೇ - ಎಲೈ ಲಕ್ಷ್ಮ ಣನೇ, ಕಸ್ಯ - ಯಾರಸಂಬಧವನ್ನಾಗಿ, ಇಮಾಂಚಮೂಲಂ - ಈ ಸೈನ್ಯವನ್ನು, ಮನ್ಯಸೇ - ತಿಳಿದಿರುವೆ, ಅವೇಕ್ಷಸ್ವ - ನೋಡು, ಇತಿ - ಇಂತೆಂದು, ಪ್ರತ್ಯುವಾಚಹ - ಪ್ರತ್ಯುತ್ತರಕೊಟ್ಟ ನಷ್ಟೆ. ॥೧೫॥ ರಾಮೇಣ - ಶ್ರೀರಾಮನಿಂದ, ಏವಮುಕ್ತಃ - ಈಪರಿಯಾಗಿ ಹೇಳಲ್ಪಟ್ಟ, ಲಕ್ಷ್ಮ ಣಸ್ತು - ಲಕ್ಷ್ಮಣನಾದರೆ, ತಾಂಸೇನಾಂ - ಆ ಸೈನ್ಯವನ್ನು, ದಿಧಕ್ಷನ್ನಿವ - ದಹಿಸುವನೋ ಎಂಬಂ ತಿರುವನಾಗಿ, ಪಾವಕೋಯಥಾ - ಅಗ್ನಿಯಂತೆ, ರುಷಿತಃ - ಕೋಪಿಷ್ಠನಾಗಿ, ವಾಕ್ಯಂ - ಮಾತನ್ನು,

---

ದಿಕ್ಕನ್ನುನೋಡಿದನು.॥೭-೧೧॥ ಆ ಬಳಿಕಲಾತನು ಉತ್ತರಾಭಿಮುಖವಾಗಿಯೂ, ಅರಣ್ಯಪ್ರ ದೇಶವನ್ನು ನೋಡುತ್ತ, ಕುದುರೆಗಳು, ಆನೆಗಳು, ಮೊದಲಾದುವುಗಳಿಂದ ತುಂಬಿದುದೂ, ರಥಗಳು, ಧ್ವಜಗಳು ಇವುಗಳಿಂದ ಅಲಂಕೃತವಾದುದೂ ಆದ ಆ ಭರತನ ಸೈನ್ಯವೆಲ್ಲವನ್ನೂ ನೋಡಿ ಅಣ್ಣನೊಡನಿಂತೆಂದನು. "ಅಣ್ಣಾ; ಶ್ರೀರಾಮನೇ! ಇನ್ನುಅಗ್ನಿಹೋತ್ರವನ್ನಾರಿಸಿಬಿಡು; ಸೀತಾದೇವಿಯನ್ನು ಗುಹೆಯೊಳಕ್ಕೆ ಕಳುಹಿಬಿಡು. ಧನುಸ್ಸಿಗೆ ನಾರಿಯನ್ನು ಬಿಗಿದು ಬಾಣಸಂ ಧಾನವನ್ನುಮಾಡು. ಕವಚವನ್ನುಧರಿಸು. ಆಲಸ್ಯವನ್ನು ಮಾಡಬೇಡ," ಲಕ್ಷ್ಮಣನೀರೀತಿ ನುಡಿ ಯಲು ಶ್ರೀರಾಮನಾತನನ್ನುಕುರಿತು, "ತಮ್ಮ; ಲಕ್ಷ್ಮಣ! ಈ ಸೈನ್ಯವಾರದೆಂಬುದನ್ನುಚೆನ್ನಾಗಿ ಯೋಚಿಸು. ಈ ಸೈನ್ಯವು ಯಾರದೆಂದು ನಿನಗೆ ತೋರುತ್ತಿದೆ?" ಎಂದನು. ॥೧೨-೧೫॥ ಆಗಲಾ ಲಕ್ಷ್ಮಣನು ಮಹಾ ಕೋಪವುಳ್ಳವನಾಗಿ, ಯಜ್ಞೇಶ್ವರನಂತೆ ಆ ಸೈನ್ಯವೆಲ್ಲವನ್ನೂ



लक्ष्मण-सांत्वन

A 7515—Lakshmi Art, Bombay, 8.

ರುಷಿತಃ ಪಾವಕೋ ಯಥಾ ॥ ೧೬ ॥ ಸಂಪನ್ನಂ ರಾಜ್ಯಮಿಚ್ಛಂಸ್ತು ವ್ಯಕ್ತಂ ಪ್ರಾಪ್ಯಾಽಭಿಷೇಚನಂ ॥ ಆವಾಂ ಹಂತುಂ ಸಮಭ್ಯೇತಿ ಕೈಕೇಯ್ಯಾ ಭರತಸ್ಸುತಃ ॥ ೧೭ ॥ ಏಷವೈ ಸುಮಹಾಂ ಚ್ಛ್ರೀಮಾನ್ ವಿಟಪೀ ಸಂಪ್ರಕಾಶತೇ ॥ ವಿರಾಜ ತ್ಯುದ್ಗತಸ್ಕಂಧಃ ಕೋವಿದಾರ ಧ್ವಜೋ ರಥೇ ॥೧೮॥ (೧) (ಅಸೌ ಹಿ ಸುಮಹಾಸ್ಕಂಧೋ ವಿಟಪೀ ಚ ಮಹಾದ್ರುಮಃ ॥ ವಿರಾಜತೇ ಮಹಾಸೈನ್ಯೇ ಕೋವಿದಾರ ಧ್ವಜೋ ರಥೇ) ಭಜಂತ್ಯೇತೇ ಯಥಾ ಕಾಮ ಮಶ್ವಾನಾರುಹ್ಯ ಶೀಘ್ರಗಾನ್ ॥ ಏತೇ ಭ್ರಾಜಂತಿ ಸಂಹೃಷ್ಟಾ ಗಜಾನಾರುಹ್ಯಸಾದಿನಃ ॥ ೧೯ ॥

ಅಬ್ರವೀತ್ - ನುಡಿದನು. ॥ ೧೬ ॥ ಸಂಪನ್ನಂ - ಸರ್ವಸಮೃದ್ಧಿಯುಕ್ತವಾದ, ರಾಜ್ಯಂ - ರಾಜ್ಯವನ್ನು, ಇಚ್ಛನ್ - ಅಪೇಕ್ಷಿಸುತ್ತ, ವ್ಯಕ್ತಂ - ಸ್ಪಷ್ಟವಾಗಿ, ಅಭಿಷೇಚನಂ - ಪಟ್ಟಾಭಿಷೇಕವನ್ನು, ಪ್ರಾಪ್ಯ - ಹೊಂದಿ, ಕೈಕೇಯ್ಯಾಃ - ಕೈಕೇಯಿಾದೇವಿಯ, ಸುತಃ - ಮಗನಾದ, ಭರತಃ - ಭರತನು, ಆವಾಂ - ನಮ್ಮನ್ನು, ಹಂತುಂ - ಹೊಡೆಯಲು, ಸಮಭ್ಯೇತಿ - ಬರುತ್ತಾನೆ. ॥ ೧೭ ॥ ಸುಮಹಾನ್-ಬಹಳ ದೊಡ್ಡದಾದ, ಶ್ರೀಮಾನ್ - ಸಂಪದ್ಯುಕ್ತವಾದ, ಏಷವಿಟಪೀ - ಈ ಕೆಂಪು ಕಂಚವಾಳದಗಿಡವು, ಸಂಪ್ರಕಾಶತೇ - ಹೊಳೆಯುತ್ತಿದೆ, ಉದ್ಗತಸ್ಕಂಧಃ - ಉನ್ನತವಾದ ಕೊಂಬೆಗಳುಳ್ಳ, ಕೋವಿದಾರ ಧ್ವಜಃ - ಆ ಕಂಚಿವಾಳ ಗಿಡದಿಂದಕೂಡಿದ ಧ್ವಜವು, ರಥೇ - ರಥದಲ್ಲಿ, ವಿರಾಜತಿ - ಹೊಳೆಯುತ್ತಿದೆ, ಏತೇಸಾದಿನಃ - ಈ ಕುದುರೆಸವಾರರು, ಶೀಘ್ರಗಾನ್-ಶೀಘ್ರಗಮನವುಳ್ಳ, ಅಶ್ವಾನ್ - ಕುದುರೆಗಳನ್ನು, ಆರುಹ್ಯ - ಏರಿ, ಯಥಾಕಾಮಂ - ಸ್ವೇಚ್ಛೆಯಾಗಿ, ಭಜಂತಿ - ಬರುತ್ತಾರೆ, ಏತೇಸಾದಿನಃ-ಈ ಮಾವಟಿಗರು, ಗಜಾನ್ - ಆನೆಗಳನ್ನು, ಆರುಹ್ಯ - ಏರಿ, ಸಂಹೃಷ್ಟಾಃ ಸಂತೋಷಗೊಂಡವರಾಗಿ, ಭ್ರಾಜಂತಿ - ಕಂಗೊಳಿಸುತ್ತಿದ್ದಾರೆ. ॥ ೧೯ ॥ ಹೇ ವೀರ - ಎಲೈ ಶೂರನೇ, ಆವಾಂ - ನಾವು, ಗೃಹೀತಧನುಷೌ - ಗ್ರಹಿಸಲ್ಪಟ್ಟ ಬಿಲ್ಲುಗಳುಳ್ಳವರಾಗಿ, ಗಿರಿಂ - ಬೆಟ್ಟವನ್ನು, ಶ್ರಯಾವಹೈ-ಆಶ್ರಯಿಸೋಣ,

ಸುಡುವನೋ ಎಂಬಂತೆ ಈ ನುಡಿಗಳನ್ನಾಡಿದನು. "ಅಣ್ಣಾ! ಕೈಕೇಯಿಾಪುತ್ರನಾದ ಭರತನು, ಸಾಕೇತರಾಜ್ಯದಲ್ಲಿ ಪಟ್ಟಾಭಿಷಿಕ್ತನಾಗಿ, ಇನ್ನುಮೇಲೆ ಯಾವಾಗಲೂ, ನಿರಾತಂಕವಾಗಿ ರಾಜ್ಯವಾಳಬೇಕೆಂಬ ಕೋರಿಕೆಯಿಂದ, ನಮ್ಮನ್ನು ಕೊಲ್ಲಲೋಸುಗ ಚತುರಂಗಬಲಸಮೇತನಾಗಿ ಬರುತ್ತಿದ್ದಾನೆ. ಅಲ್ಲದೆ, ಎಲೈ ಶ್ರೀರಾಮನೆ! ನೋಡು; ಬಹು ದೊಡ್ಡದೂ, ಕಾಂತಿಯುಳ್ಳದೂ, ಶಾಖೆಗಳುಳ್ಳದೂ, ಬಹು ದೊಡ್ಡಬೋದಿಗೆಗಳುಳ್ಳದೂ ಆದ ಕೋವಿದಾರ ಧ್ವಜವು ರಥದಲ್ಲಿ ಅದೋ, ಪ್ರಕಾಶಿಸುತ್ತಿರುವುದು. ಅಲ್ಲದೆ ಅಪಾರವಾದೀಸೈನ್ಯದಲ್ಲಿ ಬೋದಿಗೆಗಳನ್ನುಳ್ಳದೂ, ರೆಂಬೆಗಳನ್ನುಳ್ಳದೂ ಆದ ಕಂಚವಾಳದ ಗಿಡವು ಪ್ರಕಾಶಿಸುತ್ತಿರುವುದು. ಕುದುರೆಯ ರಾವುತರಲ್ಲಿ ಕೆಲವರು ಬಹುವೇಗವಾಗಿ ಕುದುರೆಗಳನ್ನೇರಿ ಬರುತ್ತಿರುವರು. ಇದೋ ನೋಡು! ಮಾವಟಿಗರು, ಮದ್ದಾನೆಗಳನ್ನೇರಿ ಬರುತ್ತಿದ್ದಾರೆ. ॥೧೬-೧೯॥ ಆದುದರಿಂದಲೆ ವೀರನಾದ ಶ್ರೀರಾಮಮೂರ್ತಿಯೆ! ನಾವಿಬ್ಬರೂ ಧನುರ್ಬಾಣಗಳನ್ನು ಧರಿಸಿ ಆ ಚಿತ್ರಕೂಟಪರ್ವತವನ್ನು ಆಶ್ರಯಿಸೋಣ. ಹಾಗಾಗದಿದ್ದರೆ, ಆಯುಧ

ಟಿ. (೧) ಅಧಿಕ ಪಾಠವಾದುದರಿಂದ ಪ್ರತಿಪದಾರ್ಥ ಬರೆಯಲಿಲ್ಲ.

ಗೃಹೀತ ಧನುಷೌ ಚಾವಾಂ ಗಿರಿಂ ವೀರ ಶ್ರಯಾವಹೈ ॥ ಅಥವೇಹೈವ ತಿಷ್ಠಾವ ಸ್ಸನದ್ಧಾ ವುದ್ಯತಾಯುಧೌ ॥ ೨೦ ॥ ಅಪಿ ನೌ ವಶಮಾಗಚ್ಛೇ ತ್ಕೋವಿದಾರ ಧ್ವಜೋ ರಣೇ ॥ ಅಪಿ ದ್ರಕ್ಷ್ಯಾಮಿ ಭರತಂ ಯತ್ಕೃತೇ ವ್ಯಸನಂ ಮಹತ್ ॥ ೨೧ ॥ ತ್ವಯಾ ರಾಘವ ಸಂಪ್ರಾಪ್ತಂ ಸೀತಯಾಚ ಮಯಾ ತಥಾ ॥ ಯನ್ನಿಮಿತ್ತಂ ಭವಾನ್ರಾಜ್ಯಾ ಚ್ಚ್ಯುತೋ ರಾಘವ! ಶಾಶ್ವತಾತ್ ॥ ೨೨ ॥ ಸಂಪ್ರಾಪ್ತೋಽಯ ಮರಿರ್ವೀರ! ಭರತೋ ವಧ್ಯ ಏವ ಮೇ ॥ ಭರತಸ್ಯ ವಧೇ ದೋಷಂ ನಾಹಂ ಪಶ್ಯಾಮಿ ರಾಘವ! ॥ ೨೩ ॥ ಪೂರ್ವಾಪಕಾರಿಣಾಂ ತ್ಯಾಗೇ

ಅಥವಾ - ಹಾಗಲ್ಲದೇಹೋದರೆ, ಉದ್ಯತಾಯುಧೌ-ಸನ್ನದ್ಧವಾದ ಆಯುಧಗಳುಳ್ಳವರಾಗಿ, ಸನ್ನದ್ಧೌ-ಯುದ್ಧಸನ್ನದ್ಧರಾಗಿ, ಇಹೈವ - ಇಲ್ಲಿಯೇ, ತಿಷ್ಠಾವಃ - ಇರೋಣ. ॥ ೨೦ ॥ ಹೇ ರಾಘವ - ಎಲೈ ಶ್ರೀರಾಮನೇ, ಕೋವಿದಾರಧ್ವಜಃ - ಕೆಂಪು ಕಂಚವಾಳದಗಿಡವೇ ಧ್ವಜವಾಗುಳ್ಳ ಭರತನು, ನೌ - ನಮ್ಮ, ವಶಂ - ಸ್ವಾಧೀನವನ್ನು, ಆಗಚ್ಛೇದಪಿ - ಬಂದವನೇ ಆದರೆ, ರಣೇ - ಕಾಳಗದಲ್ಲಿ, ಭರತಂ-ಭರತನನ್ನು, ದ್ರಕ್ಷ್ಯಮಪಿ - ನೋಡುವೆನು, ಯತ್ಕೃತೇ - ಯಾವ ಭರತನ ನಿಮಿತ್ತವಾಗಿ, ತ್ವಯಾ-ನಿನ್ನಿಂದಲೂ, ಸೀತಯಾಚ - ಸೀತಾದೇವಿಯಿಂದಲೂ, ತಥಾ - ಹಾಗೆಯೇ, ಮಯಾಚ - ನನ್ನಿಂದಲೂ, ಮಹತ್ - ದೊಡ್ಡದಾದ, ವ್ಯಸನಂ - ವ್ಯಸನವು, ಸಂಪ್ರಾಪ್ತಂ - ಹೊಂದಲ್ಪಟ್ಟಿತೋ. ॥೨೧॥ ಹೇ ರಾಘವ - ಎಲೈ ಶ್ರೀರಾಮನೇ, ಭವಾನ್ - ನೀನು, ಯನ್ನಿಮಿತ್ತಂ - ಯಾವ ಭರತನ ನಿಮಿತ್ತವಾಗಿ, ಶಾಶ್ವತಾತ್ - ಸ್ಥಿರವಾದ, ರಾಜ್ಯಾತ್ - ರಾಜ್ಯದಿಂದ, ಚ್ಯುತಃ - ಬಿಡಲ್ಪಟ್ಟಿಯೋ, ಹೇ ವೀರ-ಎಲೈ ಶೂರನೇ, ಅಯಂಭರತಃ - ಈ ಭರತನು, ಅರಿಃ - ಶತ್ರುವಾಗಿ, ಸಂಪ್ರಾಪ್ತಃ - ಬಂದವನಾದ ಕಾರಣ, ಮೇ - ನನಗೆ, ವಧ್ಯಏವ - ವಧಿಸತಕ್ಕವನಷ್ಟೆ. ॥ ೨೨ ॥ ಹೇ ರಾಘವ - ಎಲೈ ರಘುವಂಶೋತ್ಪನ್ನನೇ, ಹಿ - ಯಾವ ಕಾರಣ, ಪೂರ್ವಾಪಕಾರಿಣಾಂ - ಹಿಂದೆ ಅಪಕಾರವಮಾಡಿದವರ, ತ್ಯಾಗೇ - ಸಂಹಾರದಲ್ಲಿ, ಅಧರ್ಮಃ - ಅಧರ್ಮವು, ನವಿಧೀಯತೇ - ವಿಧಿಸಲಾಗುವುದಿಲ್ಲವೊ, ತಸ್ಮಾತ್ - ಆ ಕಾರಣ, ಅಹಂ - ನಾನು, ಭರತಸ್ಯ - ಭರತನ, ವಧೇ - ಸಂಹಾರದಲ್ಲಿ, ದೋಷಂ - ತಪ್ಪನ್ನು, ನಪಶ್ಯಾಮಿ - ಕಾಣುವುದಿಲ್ಲ. ॥ ೨೩ ॥ ಹೇ ರಾಘವ - ಎಲೈ ಶ್ರೀರಾಮನೇ. ಭರತಃ - ಭರತನು, ಪೂರ್ವಾಪಕಾರಿನಾಂ - ಹಿಂದೆ ಅಪಕಾರವಮಾಡಿದವನು, ತ್ಯಕ್ತಧರ್ಮಸ್ಯ - ಧರ್ಮವನ್ನುತೊರೆದ,

---

ಗಳನ್ನು ಧರಿಸಿ ಯುದ್ಧಸನ್ನದ್ಧರಾಗಿ ಈ ಪರ್ವತವನ್ನು ಏರೋಣ. ನಾವೀರೀತಿ ಯುದ್ಧಸನ್ನದ್ಧರಾಗಿದ್ದರೆ, ಕೋವಿದಾರಧ್ವಜವನ್ನುಳ್ಳ ಭರತನು ರಣಾಂಗಣದಲ್ಲಿ ನಮ್ಮಿರ್ವರಿದಿರಿಗೆಷ್ಟು ಮಾತ್ರಕ್ಕೂ ನಿಲ್ಲಲಾರನು. "ಸೀತಾದೇವಿಯೂ, ನೀನೂ, ನಾನೂ ಯಾರನಿಮಿತ್ತವಾಗಿ, ಬಹುದೊಡ್ಡದಾದುದೂ, ಭಯಂಕರವಾದುದೂ ಆದ ವ್ಯಸನವನ್ನು ಹೊಂದುತ್ತಿರುವೆವೋ, ಆ ಭರತನನ್ನು ಇದೀಗ ರಣರಂಗದಲ್ಲಿ ನೋಡುತ್ತೇವೆಯಲ್ಲವೆ?" ಎಂದು ನನಗೆಸಂತೋಷವಾಗುತ್ತಿರುವುದು. ಎಲೈ ರಘುಕುಲೋದ್ಭವನಾದ ಶ್ರೀರಾಮನೆ! ನೀನಾರ ಮೂಲಕ ಶಾಶ್ವತವಾದ ರಾಜೈಶ್ವರ್ಯದಿಂದ ಭ್ರಷ್ಟನಾಗಿಹೋದೆಯೊ, ಅಂತಹ ಪರಮಶತ್ರುವೂ, ವೀರನೂ ಆದ ಭರತನು ಈಗಲಿಲ್ಲಿಗೆ ಬರುತ್ತಿದ್ದಾನೆ. ಆದುದರಿಂದಿವನು ನನ್ನಿಂದವಶ್ಯವಾಗಿ ಕೊಲ್ಲಲರ್ಹನಾದವನು. ॥ ೨೦-೨೩ ॥ ಅಲ್ಲದೆ ಭರತನನ್ನು ಕೊಲ್ಲುವುದರಿಂದ ದೋಷವೇನೂ ಉಂಟಾ

ನಹ್ಯಧರ್ಮೋ ವಿಧೀಯತೇ ॥ ಪೂರ್ವಾಪಕಾರೀ ಭರತ ಸ್ತ್ಯಕ್ತಧರ್ಮಶ್ಚ ರಾಘವ! ॥ ೨೪ ॥ ಏತಸ್ಮಿನ್ನಿಹತೇ ಕೃತ್ಸ್ನಾ ಮನುಶಾಧಿ ವಸುಂಧರಾಂ ॥ ಅದ್ಯ ಪುತ್ರಂ ಹತಂ ಸಂಖ್ಯೇ ಕೈಕೇಯಿೀ ರಾಜ್ಯಕಾಮುಕಾ ॥ ೨೫ ॥ ಮಯಾ ಪಶ್ಯೇತು ದುಃಖಾರ್ತಾ ಹಸ್ತಿಭಗ್ನಮಿವ ದ್ರುಮಂ ॥ ಕೈಕೇಯಿೀಂ ಚ ವಧಿಷ್ಯಾಮಿ ಸಾನುಬಂಧಾಂ ಸ ಬಾಂಧವಾಂ ॥ ೨೬ ॥ ಕಲುಷೇಣಾದ್ಯ ಮಹತಾ ಮೇದಿನೀ ಪರಿಮುಚ್ಯತಾಂ ॥ ಅದ್ಯೇಮಂ ಸಂಯತಂ ಕ್ರೋಧ ಮಸತ್ಕಾರಂ ಚ ಮಾನದ! ॥ ೨೭ ॥ ಮೋಕ್ಷ್ಯಾಮಿ ಶತ್ರುಸೈನ್ಯೇಷು ಕಕ್ಷೇಷ್ವಿವ ಹುತಾಶನಂ ॥

ಏತಸ್ಮಿನ್ - ಈ ಭರತನು, ನಿಹತೇ - ಕೊಲ್ಲಲ್ಪಡಲು, ಕೃತ್ಸ್ನಾಂ - ಸಮಸ್ತವಾದ, ವಸುಂಧರಾಂ - ಭೂಮಿಯನ್ನು, ಅನುಶಾಧಿ - ಸಂರಕ್ಷಣೆಮಾಡು. ॥ ೨೪ ॥ ಹೇ ಆರ್ಯ - ಎಲೈ ಪೂಜ್ಯನೇ, ರಾಜ್ಯಕಾಮುಕಾ - ರಾಜ್ಯವನ್ನು ಕೋರುತ್ತಿರುವ, ಕೈಕೇಯಿೀ - ಕೈಕೇಯಿೀದೇವಿಯು, ಸಂಖ್ಯೇ - ಕಾಳೆಗದಲ್ಲಿ, ಮಯಾ - ನನ್ನಿಂದ, ಹತಂ - ವಧಿಸಲಾದ, ಪುತ್ರಂ - ಕುವರನನ್ನು, ಸುದುಃಖಾರ್ತಾ - ಬಹಳ ವ್ಯಸನಗೊಂಡು, ಹಸ್ತಿಭಗ್ನಂ - ಆನೆಯಿಂದ ಮುರಿಯಲ್ಪಟ್ಟ, ದ್ರುಮಮಿವ - ಗಿಡವನ್ನಂತೆ, ಪಶ್ಯೇತು - ನೋಡಲಿ. ॥೨೫॥ ಸಾನುಬಂಧಾಂ-ಮಂಥರೆಯೇ ಮೊದಲಾದ ಬಂಧುಜನರೊಡಗೂಡಿದ, ಸಬಾಂಧವಾಂ - ಕುವರನಿಂದೊಡಗೂಡಿದ, ಕೈಕೇಯಿೀಂಚ - ಕೈಕೇಯಿೀದೇವಿಯನ್ನು, ವಧಿಷ್ಯಾಮಿ - ಸಂಹಾರಮಾಡುತ್ತೇನೆ, ಅದ್ಯ - ಈಗ, ಮೇದಿನೀ - ಭೂಮಿಯು, ಮಹತಾ - ದೊಡ್ಡದಾದ, ಕಲುಷೇಣ - ಪಾಪದಿಂದ, ಪರಿಮುಚ್ಯತಾಂ - ಬಿಡಲ್ಪಡಲಿ. ॥ ೨೬ ॥ ಹೇ ಮಾನದ - ಎಲೈ ಮಾನಪ್ರದಾಯಕನೇ, ಸಂಯತಂ - ಬಹಳ ದಿವಸಗಳಿಂದ ತಡೆಯಲ್ಪಟ್ಟ, ಇಮಂ - ಈ, ಕ್ರೋಧಂ - ಕ್ರೋಧವನ್ನು, ಅಸತ್ಕಾರಂಚ - ತಿರಸ್ಕಾರವನ್ನು, ಶತ್ರುಸೈನ್ಯೇಷು - ಶತ್ರುಗಳ ಸೈನ್ಯಗಳಲ್ಲಿ, ಕಕ್ಷೇಷು - ಜೇಲಿಗಳಲ್ಲಿ, ಹುತಾಶನಮಿವ - ಅಗ್ನಿಯನ್ನಂತೆ, ಮೋಕ್ಷ್ಯಾಮಿ - ಬಿಡುವೆನು. ॥ ೨೭ ॥ ಅದ್ಯ - ಈಗ, ನಿಶಿತೈಃ - ತೀಕ್ಷ್ಣಗಳಾದ, ಶರೈಃ - ಬಾಣಗಳಿಂದ, ಶತ್ರುಶರೀರಾಣಿ-ಶತ್ರುಗಳ ಶರೀರಗಳನ್ನು, ಭಿಂದನ್ - ಭೇದಿಸುತ್ತಿರುವನಾಗಿ, ಏತತ್ - ಈ, ಚಿತ್ರಕೂಟಸ್ಯ - ಚಿತ್ರಕೂಟಪರ್ವತದ, ಕಾನನಂ -

---

ಗುವುದಿಲ್ಲ. ಮೊದಲೇ ಅಪಕಾರವನ್ನು ಮಾಡಿದವರನ್ನು, ತೊರೆದರೂ, ಕೊಂದರೂ ದೋಷವಿಲ್ಲವೆಂದು ಶಾಸ್ತ್ರಗಳು ವಿಧಿಸಿರುವುದರಿಂದ ದೋಷವೇನೂ ಇರುವುದಿಲ್ಲವೆಂದು ತೋರುತ್ತಿರುವುದು. ಎಲೈ ರಘುಕುಲೋದ್ಭವನಾದ ಶ್ರೀರಾಮನೆ! ಇದುಮಾತ್ರವದದೆ, ಭರತನು ಧರ್ಮವನ್ನು ತೊರೆದು ಮೊದಲೇ ಅಪಕಾರವನ್ನುಮಾಡಿದನು. ಆದುದರಿಂದಲೇ ಇವನು ವಧ್ಯನೆಂಬುದರಲ್ಲಿ ಲೇಶಮಾತ್ರವೂ ಸಂಶಯವಿಲ್ಲವು. ಇವನನ್ನು ವಧಿಸಿ ಇಡೀಭೂಮಂಡಲವೆಲ್ಲವನ್ನೂ ನಿಷ್ಕಂಟಕವಾಗಿ ಆಳುವವನಾಗು. ನಾನೀಗ ಭರತನನ್ನುಕೊಂದರೆ, ಆವನ ತಾಯಿಯಾದ ಕೈಕೇಯಿಯು, ಮದ್ದಾನೆಯಿಂದ ಮುರಿಯಲಾದ ವೃಕ್ಷವನ್ನು ನೋಡಿದಂತೆ, ಅವನನ್ನು ನೋಡಿ ಅಧಿಕವಾದ ದುಖವನ್ನು ಹೊಂದುತ್ತಾಳೆ, ಹಾಗೆ ಸ್ವಲ್ಪಹೊತ್ತು ದುಃಖಿಸಿದ ಮೇಲೆ ಬಂಧು ಮಿತ್ರರೊಡಗೂಡಿದ ಅವಳನ್ನೂ ಸಂಹರಿಸುತ್ತೇನೆ.॥೨೪-೨೬॥ಇಷ್ಟುಮಾಡಿದರೆ ಈ ಭೂಮಿಯಲ್ಲಿ ಪಾಪಾತ್ಮರೆಲ್ಲರೂ ಮಡಿದಂತಾಗುತ್ತದೆ.ಪಾಪಿಗಳು ಸಾಯುವುದರಿಂದ

ಅದ್ಯೈತ ಚ್ಚಿತ್ರಕೂಟಸ್ಯ ಕಾನನಂ ನಿಶಿತೈ ಶ್ಶರೈಃ ॥ ೨೮ ॥ ಭಿಂದರ್ ಶತ್ರು ಶರೀರಾಣಿ ಕರಿಷ್ಯೇ ಶೋಣಿತೋಕ್ಷಿತಂ ॥ ಶರೈ ರ್ನಿರ್ಭಿನ್ನ ಹೃದಯಾರ್ ಕುಂಜರಾಂ ಸ್ತುರಗಾಂ ಸ್ತಥಾ ॥ ೨೯ ॥ ಶ್ವಾಪದಾಃ ಪರಿಕರ್ಷಂತು ನರಾಂಶ್ಚ ನಿಹತಾನ್ಮಯಾ ॥ ಶರಾಣಾಂ ಧನುಷಶ್ಚಾಹ ಮನೃಣೋಽಸ್ಮಿ ಮಹಾಮೃಧೇ ॥ ೩೦ ॥ ಸಸೈನ್ಯಂ ಭರತಂ ಹತ್ವಾ ಭವಿಷ್ಯಾಮಿ ನಸಂಶಯಃ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಣ್ಣವತಿತಮಸ್ಸರ್ಗಃ.

ವನವನ್ನು, ಶೋಣಿತೋಕ್ಷಿತಂ - ರಕ್ತದಿಂದ ತೋಯಿಸಿದುದಾಗಿ, ಕರಿಷ್ಯೇ - ಮಾಡುತ್ತೇನೆ. ॥೨೮॥ ಕುಂಜರಾರ್ - ಆನೆಗಳನ್ನು, ತಥಾ - ಹಾಗೆಯೇ, ತುರಗಾರ್ - ಕುದುರೆಗಳನ್ನು, ಶರೈಃ - ಬಾಣಗಳಿಂದ, ನಿರ್ಭಿನ್ನಹೃದಯಾರ್ - ಭೇದಿಸಲ್ಪಟ್ಟ ವೃಕ್ಷಗಳುಳ್ಳ, ಮಯಾ - ನನ್ನಿಂದ, ನಿಹತಾರ್-ಹೊಡೆಯಲ್ಪಟ್ಟ, ನರಾಂಶ್ಚ - ಮನುಜರನ್ನು, ಶ್ವಾಪದಾಃ - ಶ್ವಾನವೇ ಮೊದಲಾಗುಳ್ಳ ಕ್ಷುದ್ರಜಂತುಗಳು, ಪರಿಕರ್ಷಂತು - ಕಿತ್ತುಕೊಂಡು ಹೋಗಲಿ. ॥ ೨೯ ॥ ಅಹಂ - ನಾನು, ಮಹಾಮೃಧೇ - ಈ ಮಹಾಯುದ್ಧದಲ್ಲಿ, ಸಸೈನ್ಯಂ - ಸೈನ್ಯಸಮೇತನಾದ, ಭರತಂ - ಭರತನನ್ನು, ಹತ್ವಾ - ಕೊಂದು, ಶರಾಣಾಂ - ಬಾಣಗಳ, ಧನುಷಶ್ಚ - ಧನುಸ್ಸಿನ, ಅನೃಣಃ - ಋಣವಿಮುಕ್ತನಾದವನು, ಭವಿಷ್ಯಾಮಿ - ಆಗುವೆನು, ಸಂಶಯಃ - ಸಂದೇಹವು, ನ - ಇಲ್ಲ, ಅತಃ - ಈ ಕಾರಣ, ಅಸ್ಮಿ - ಸಿದ್ಧವಾಗಿದ್ದೇನೆ. ॥ ೩೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಣ್ಣವತಿತಮಸ್ಸರ್ಗಃ.

ಭೂಮಿಯೆಲ್ಲವೂ ಪಾಪರಹಿತವಾಗುವುದು. ಎಲೈ ಮಾನಪ್ರದಾತನೆ! ಶ್ರೀರಾಮನೆ! ಈಗ ನನಗುಂಟಾಗಿರುವ ಅಧಿಕ ಕ್ರೋಧವು, ಈ ಶತ್ರುಸೈನ್ಯವನ್ನು, ಒಣಗಿದ ಬೇಲಿಗಳಲ್ಲಿ ಬೆಂಕಿಯನ್ನು ಹಾಕಿದಂತೆ ಉರುಳಿಸುತ್ತದೆ. ಈಗ ತೀಕ್ಷ್ಣವಾದ ನನ್ನ ಬಾಣಗಳಿಂದ ಶತ್ರುಗಳ ಶರೀರಗಳನ್ನು ಸೀಳಿ ಚಿತ್ರಕೂಟಪರ್ವತದ ಈ ಅರಣ್ಯವೆಲ್ಲವನ್ನೂ ರಕ್ತದಿಂದ ತೋಯಿಸುತ್ತೇನೆ. ಅಲ್ಲದೆ ಅತಿ ತೀಕ್ಷ್ಣಗಳಾದ ನನ್ನ ಬಾಣಗಳಿಂದ, ಆನೆಗಳ, ಕುದುರೆಗಳ, ಪದಾತಿಗಳ ಹೃದಯಗಳನ್ನು ಛೇದಿಸುತ್ತೇನೆ. ನಾನಿಂತು ಮಾಡುವುದಾದರೆ ಅವುಗಳ ಮಾಂಸಗಳೆಲ್ಲವನ್ನೂ ಈ ಅರಣ್ಯದಲ್ಲಿರುವ ಕ್ರೂರಮೃಗಗಳು ತಿಂದು ತೇಗಿ ಮಹದಾನಂದಭರಿತಗಳಾಗುತ್ತವೆ. ಅಷ್ಟುಮಾತ್ರವಲ್ಲದೆ, ಲಕ್ಷ್ಮಣನಾದ ನಾನು ಧನುರ್ಬಾಣಗಳನ್ನು ಧರಿಸಿದುದು ಸಫಲವೆನಿಸುತ್ತವೆ. ಈ ಭರತನ ಸೇನೆಯೊಡನೆ ನಾನು ಯುದ್ಧಮಾಡುವೆನಾದರೆ ಮದೀಯ ಧನುರ್ಬಾಣಗಳು ತೃಪ್ತಿಹೊಂದುತ್ತವೆ. ॥ ೨೭-೩೦ ॥

ಇಂತಿದು ಲಕ್ಷ್ಮಣ ಕೋಪಾನುವರ್ಣನವೆಂಬ
ತೊಂಭತಾರನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಸಪ್ತನವತಿತಮಸ್ಸರ್ಗಃ.

ಸುಸಂರಬ್ಧಂತು ಸೌಮಿತ್ರಿಂ ಲಕ್ಷ್ಮಣಂ ಕ್ರೋಧಮೂರ್ಛಿತಂ ॥ ರಾಮಸ್ತು ಪರಿಸಾಂತ್ವ್ಯಾಥ ವಚನಂ ಚೇದಮಬ್ರವೀತ್ ॥ ೧ ॥ ಕಿಮತ್ರ ಧನುಷಾ ಕಾರ್ಯಮಸಿನಾ ವಾ ಸ ಚರ್ಮಣಾ॥ ಮಹೇಷ್ವಾಸೇ ಮಹಾಪ್ರಾಜ್ಞೇ ಭರತೇ ಸ್ವಯಮಾಗತೇ ॥ ೨ ॥ ಪಿತುಸ್ಸತ್ಯಂ ಪ್ರತಿಶ್ರುತ್ಯ ಹತ್ವಾ ಭರತ ಮಾಗತಂ ॥ ಕಿಂ ಕರಿಷ್ಯಾಮಿ ರಾಜ್ಯೇನ ಸಾಪವಾದೇನ ಲಕ್ಷ್ಮಣ! ॥ ೩ ॥ ಯದ್ದ್ರವ್ಯಂ ಬಾಂಧವಾನಾಂವಾ ಮಿತ್ರಾಣಾಂವಾ ಕ್ಷಯೇ ಭವೇತ್ ॥ ನಾಹಂ

ರಾಮಸ್ತು - ಶ್ರೀರಾಮನಾದರೆ, ಸುಸಂರಬ್ಧಂ - ಮೊದಲೇ ಮಹಾಪ್ರೀತಿಯುಳ್ಳ, ಕ್ರೋಧ ಮೂರ್ಛಿತಂ - ಮಹಾ ಕೋಪಿಷ್ಠನಾದ, ಸೌಮಿತ್ರಿಂ - ಸುಮಿತ್ರಾಪುತ್ರನಾದ, ಲಕ್ಷ್ಮಣಂ - ಲಕ್ಷ್ಮಣ ಸ್ವಾಮಿಯನ್ನು, ಪರಿಸಾಂತ್ವ್ಯ - ಸಮಾಧಾನಗೊಳಿಸಿ, ಇದಂವಚನಂಚ - ಈ ಮಾತನ್ನು, ಅಥ - ಬಳಿಕ, ಅಬ್ರವೀತ್ - ನುಡಿದನು. ॥ ೧ ॥ ಮಹೇಷ್ವಾಸೇ - ಮಹಾ ಧನುರ್ಧಾರಿಯಾದ, ಮಹಾ ಪ್ರಾಜ್ಞೇ - ಮಹಾ ಬುದ್ಧಿಶಾಲಿಯಾದ, ಭರತೇ - ಭರತನು, ಸ್ವಯಂ - ತನಗೆ ತಾನೇ, ಆಗತೇ - ಬಂದಿರಲಿ, ಅತ್ರ - ಈಗ, ಧನುಷಾ - ಧನುಸ್ಸಿನಿಂದ, ಸಚರ್ಮಣಾ - ಖೇಡ್ಯದಿಂದ ಕೂಡಿರುವ, ಅಸಿನಾವಾ - ಕತ್ತಿಯಿಂದಲೇ ಆಗಲಿ, ಕಾರ್ಯಂ - ಮಾಡತಕ್ಕುದು, ಕಿಂ - ಏನುತಾನೆ ಪ್ರಯೋಜನ. ॥ ೨ ॥ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ಸತ್ಯಂ - ಯಥಾರ್ಥವಾಗಿ, ಪಿತುಃ - ತಂದೆಗೆ, ಪ್ರತಿ ಶ್ರುತ್ಯ - ಪ್ರತಿಜ್ಞೆಮಾಡಿ, ಆಗತಂ - ಬಂದ, ಭರತಂ - ಭರತನನ್ನು, ಹತ್ವಾ - ಕೊಂದು, ಸಾಪವಾ ದೇನ - ಅಪವಾದದಿಂದೊಡಗೂಡಿದ, ರಾಜ್ಯೇನ - ರಾಜ್ಯದಿಂದ, ಕಿಂಕರಿಷ್ಯಾಮಿ - ಏನುಮಾಡಲಿ, ಯದ್ದ್ರವ್ಯಂ - ಯಾವ ದ್ರವ್ಯವು, ಬಾಂಧವಾನಾಂವಾ - ಬಂಧುಗಳಾದರೂ, ಮಿತ್ರಾಣಾಂವಾ-ಸ್ನೇಹಿ ತರಾದರೂ, ಕ್ಷಯೇ - ನಾಶಾನಂತರ, ಭವೇತ್ - ಪ್ರಾಪ್ತವಾಗುವದೋ, ಅಹಂ - ನಾನು, ವಿಷ

ಲಕ್ಷ್ಮಣನೀರೀತಿ ನುಡಿದ ಮಾತುಗಳನ್ನು ಕೇಳಿದ ಶ್ರೀರಾಮನು, ಯುದ್ಧಸನ್ನದ್ಧ ನಾದವನೂ, ಕ್ರೋಧೋದ್ರಿಕ್ತನಾದವನೂ ಆದ ಲಕ್ಷ್ಮಣನನ್ನು ಒಳ್ಳೆಯಮಾತುಗಳಿಂದ ಸಮಾಧಾನಗೊಳಿಸಿ ಮೃದುಮಧುರ ವಚನರಚನೆಯಿಂದಾತನನ್ನು ಕುರಿತು ಹೀಗೆಂದನು. “ ತಮ್ಮ ಲಕ್ಷ್ಮಣ ! ಧನುರ್ಧಾರಿಗಳಲುತ್ತಮನೂ, ಪಂಡಿತರಲ್ಲಿ ಶ್ರೇಷ್ಠನೂ ಆದ ಭರತನು ತಾನಾಗಿಯೇ ಇಲ್ಲಿಗೆ ಬಂದಿದ್ದಾನೆ. ಭರತನೀರೀತಿಯಾಗಿ ಬಂದಿರಲು ಧನುಸ್ಸಿನಿಂದೇನು ಮಾಡಬೇಕು ? ನಾನು ತಂದೆಯಾದ ದಶರಥರಾಜನ ಸತ್ಯವನ್ನು ಪರಿಪಾಲಿಸಲು ಇಲ್ಲಿಗೆ ಬಂದಿದ್ದೇನೆ; ಹಾಗೆ ಪ್ರತಿಜ್ಞೆಯನ್ನೂ ಮಾಡಿದ್ದೇನೆ. ಇಂತಹ ನಾನು ನನ್ನ ತಮ್ಮನಾದ ಭರತ ನನ್ನು ಕೊಂದುದೇ ಆದರೆ ಪ್ರಜೆಗಳೆಲ್ಲರೂ ನನ್ನನ್ನು ನಿಂದಿಸುತ್ತಾರೆ. ಇಂತು ಲೋಕನಿಂದೆ ಗೀಡಾಗಿ ಈ ರಾಜ್ಯದಿಂದ ಯಾವ ಲಾಭವನ್ನು ತಾನೆ ಹೊಂದಲಾದೀತು. ಬಂಧುಗಳನ್ನೂ,

ತತ್ಪ್ರತಿಗೃಹ್ಣೀಯಾಂ ಭಕ್ಷ್ಯಾನ್ವಿಷಕೃತಾನಿವ ॥೪॥ ಧರ್ಮ ಮರ್ಥಂಚ
ಕಾಮಂಚ ಪೃಥಿವೀಂ ಚಾಪಿ ಲಕ್ಷ್ಮಣ! ॥ ಇಚ್ಛಾಮಿ ಭವತಾಮರ್ಥೇ ಏತ
ತ್ಪ್ರತಿಶೃಣೋಮಿ ತೇ ॥೫॥ ಭ್ರಾತೄಣಾಂ ಸಂಗ್ರಹಾರ್ಥಂಚ ಸುಖಾ
ರ್ಥಂಚಾಪಿ ಲಕ್ಷ್ಮಣ! ॥ ರಾಜ್ಯಮಪ್ಯಹ ಮಿಚ್ಛಾಮಿ ಸತ್ಯೇನಾಯುಧ ಮಾ
ಲಭೇ ॥೬॥ ನೇಯಂ ಮಮ ಮಹೀ ಸೌಮ್ಯ! ದುರ್ಲಭಾ ಸಾಗರಾಂಬರಾ ॥
ನಹೀಚ್ಛೇಯಮಧರ್ಮೇಣ ಶಕ್ರತ್ವಮಪಿ ಲಕ್ಷ್ಮಣ! ॥೭॥ ಯದ್ವಿನಾ
ಭರತಂ ತ್ವಾಂಚ ಶತ್ರುಘ್ನಂಚಾಪಿ ಮಾನದ! ॥ ಭವೇನ್ಮಮ ಸುಖಂ ಕಿಂಚಿ

ಕೃತಾನ್ - ವಿಷಮಿಶ್ರಿತವಾದ, ಭಕ್ಷ್ಯಾನಿವ - ಭಕ್ಷ್ಯಗಳನ್ನಂತೆ, ತತ್ - ಆ ದ್ರವ್ಯವನ್ನು, ನಪ್ರತಿ
ಗೃಹ್ಣೀಯಾಂ - ಪರಿಗ್ರಹಿಸಲಾರೆನು. ॥೪॥ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ಧರ್ಮಂ-ಧರ್ಮ
ವನ್ನು, ಅರ್ಥಂಚ - ರತ್ನಾದಿರೂಪ ಪದಾರ್ಥಗಳನ್ನು, ಕಾಮಂಚ - ಇತರ ಶುಭಕಾರ್ಯಗಳ ಕೋರಿ
ಕೆಯನ್ನು, ಪೃಥಿವೀಂಚಾಪಿ - ಭೂಮಿಯನ್ನೂ, ಭವತಾಮರ್ಥೇ - ತಮ್ಮಂದಿರಾದ ನಿಮ್ಮ ನಿಮಿತ್ತ
ವಾಗಿ, ಇಚ್ಛಾಮಿ - ಇಚ್ಛಿಸುತ್ತೇನೆ, ತೇ - ನಿನಗೆ, ಏತತ್ - ಇದನ್ನು, ಪ್ರತಿಶೃಣೋಮಿ - ಶಪಥ
ಮಾಡುತ್ತೇನೆ. ॥೫॥ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ಭ್ರಾತೄಣಾಂ - ತಮ್ಮಂದಿರ, ಸಂಗ್ರ
ಹಾರ್ಥಂ - ಕೋರಿಕೆಯನ್ನು ಪೂರ್ತಿಗೊಳಿಸಲು, ಸುಖಾರ್ಥಂಚಾಪಿ - ಅವರಿಗೆ ಸಂತೋಷವನ್ನುಂಟು
ಮಾಡಲೋಸುಗ, ಅಹಂ - ನಾನು, ರಾಜ್ಯಮಪಿ - ರಾಜ್ಯವನ್ನೂ ಕೂಡ, ಇಚ್ಛಾಮಿ-ಇಚ್ಛಿಸುತ್ತೇನೆ,
ಸತ್ಯೇನ - ಯಥಾರ್ಥದಿಂದ, ಆಯುಧಂ - ಆಯುಧವನ್ನು, ಆಲಭೇ - ಹಿಡಿದು ಪ್ರಮಾಣಮಾಡು
ತ್ತೇನೆ. ॥೬॥ ಹೇ ಸೌಮ್ಯ - ಎಲೈ ಸೌಮ್ಯನೇ, ಮಮ - ನನಗೆ, ಸಾಗರಾಂಬರಾ - ಸಮುದ್ರವೇ
ವಸನವಾಗುಳ್ಳ, ಇಯಂಮಹೀ - ಈ ಭೂಮಿಯು, ನದುರ್ಲಭಾ-ದುರ್ಲಭವಾದುದಲ್ಲ, ಅಧರ್ಮೇಣ-
ಅಧರ್ಮದಿಂದ, ಶಕ್ರತ್ವಮಪಿ - ದೇವೇಂದ್ರಪದವಿಯನ್ನೂ ಕೂಡ, ನೇಚ್ಛೇಯಂ - ಇಚ್ಛಿಸಲಾರೆನು.
॥೭॥ ಹೇ ಮಾನದ - ಎಲೈ ಮಾನಪ್ರದಾಯಕನೇ, ಮಮ - ನನಗೆ, ಭರತಂ - ಭರತನನ್ನು,
ತ್ವಾಂಚ - ನಿನ್ನನ್ನು, ಶತೃಘ್ನಂಚಾಪಿವಿನಾ - ಶತೃಘ್ನನನ್ನೂ ಬಿಟ್ಟು, ಯತ್ಸುಖಂ - ಯಾವ

ಮಿತ್ರರನ್ನೂ ವಧಿಸಿ ಅವರ ಐಶ್ವರ್ಯವೆಲ್ಲವನ್ನೂ ಅನುಭವಿಸಲು ನಾನು ಸಮ್ಮತಿಪಡುವುದಿ
ಲ್ಲವು. ಬಂಧುವಧೆಯಿಂದ ಲಭಿಸತಕ್ಕ ಸಂಪತ್ತು, ವಿಷಮಿಶ್ರವಾದ ಅನ್ನದಂತೆ ಭಾವಿಸು
ತ್ತೇನೆ. ತಮ್ಮ ಲಕ್ಷ್ಮಣಾ! ನಾನು ಪ್ರತಿಜ್ಞೆ ಮಾಡಿ ಸತ್ಯವಾಗಿ ಹೇಳುತ್ತೇನೆ. ಧರ್ಮಾ
ರ್ಥಗಳನ್ನೂ ಈ ಭೂಮಿಯನ್ನು ನಿಮಗೋಸುಗ ಕಾಮಿಸುವೆನೇ ಹೊರತು ನನಗೋಸುಗ
ನಾನೆಂದಿಗೂ ಕಾಮಿಸಲಾರೆನು. ॥೧-೭॥ ಅಲ್ಲದೆ ಈ ಆಯುಧ ಸಾಕ್ಷಿಯಾಗಿಯೂ ತಮ್ಮಂದಿ
ರಾದ ನಿಮಗೆ ಈ ಧನವನ್ನು ಸೇರಿಸುವುದಕ್ಕೂ, ನಿಮ್ಮನ್ನು ಸುಖದಿಂದಿರಿಸುವುದಕ್ಕೂ ನಾನು
ಸಾಕೇತಸಾಂಮ್ರಾಜ್ಯವನ್ನು ಕೋರುತ್ತಿರುವೆನೇ ಹೊರತು ನನಗೋಸುಗವಲ್ಲ. ಆದುದರಿಂದ
ನನ್ನ ಮಾತನ್ನು ಸತ್ಯವೆಂದು ನಂಬು. ಸತ್ಸ್ವಭಾವವುಳ್ಳ ಲಕ್ಷ್ಮಣನೆ! ನಾಲ್ಕುಸಮುದ್ರಗಳ
ವರೆವಿಗೂ ಇರುವ ಈ ಭೂಮಿಯೆಲ್ಲ, ಅನ್ಯಾಯವಾಗಿ ಲಭಿಸಿದರೆ ನಾನು ಸ್ವೀಕರಿಸಲಾರೆನು.
ಅಲ್ಲದೆ ಅನ್ಯಾಯದಿಂದ ಲಭಿಸಿದ ಇಂದ್ರತ್ವವನ್ನಾದರೂ ನಾನು ಕಾಮಿಸುವುದಿಲ್ಲ. ಎಲೈ

ದ್ಭಸ್ಮ ತತ್ಕುರುತೇ ಶಿಖೀ ॥ ೮ ॥ ಮನ್ಯೇಽಹ ಮಾಗತೋಽಯೋಧ್ಯಾಂ ಭರತೋ
ಭ್ರಾತೃವತ್ಸಲಃ ॥ ಮಮ ಪ್ರಾಣಾ ತ್ಪ್ರಿಯತರಃ ಕುಲಧರ್ಮ ಮನುಸ್ಮರ್ನ್
॥ ೯ ॥ ಶ್ರುತ್ವಾ ಪ್ರವ್ರಾಜಿತಂ ಮಾಂಹಿ ಜಟಾವಲ್ಕಲಧಾರಿಣಂ ॥ ಜಾನಕ್ಯಾ
ಸಹಿತಂ ವೀರ! ತ್ವಯಾಚ ಪುರುಷರ್ಷಭ! ॥ ೧೦ ॥ ಸ್ನೇಹೇನಾಕ್ರಾಂತ
ಹೃದಯ ಶ್ಶೋಕೇನಾಽಕುಲಿತೇಂದ್ರಿಯಃ ॥ ದ್ರಷ್ಟು ಮಭ್ಯಾಗತೋ ಹ್ಯೇಷ
ಭರತೋ ನಾನ್ಯಥಾಗತಃ ॥ ೧೧ ॥ ಅಂಬಾಂಚ ಕೈಕಯೀಂ ರುಷ್ಯ ಪರುಷಂ
ಚಾಪ್ರಿಯಂ ವದನ್ ॥ ಪ್ರಸಾದ್ಯ ಪಿತರಂ ಶ್ರೀಮಾನ್ ರಾಜ್ಯಂ ಮೇ ದಾತು

ಸುಖವು, ಭವೇತ್ - ದೊರಕೀತೋ, ತತ್ಸುಖಂ - ಆ ಸುಖವನ್ನು, ಶಿಖೀ - ಅಗ್ನಿಯು, ಭಸ್ಮಕುರುತಾಂ – ಭಸ್ಮವನ್ನಾಗಿಮಾಡಲಿ. ॥ ೮ ॥ ಭ್ರಾತೃವತ್ಸಲಃ - ಅಣ್ಣತಮ್ಮಂದಿರಲ್ಲಿ ನಿಶ್ವಾಸವುಳ್ಳ, ಮಮ-ನನಗೆ, ಪ್ರಾಣಾತ್ - ಪ್ರಾಣಕ್ಕಿಂತಲೂ, ಪ್ರಿಯತರಃ - ಪ್ರಿಯಕರನಾದ, ಭರತಃ - ಭರತನು, ಅಯೋಧ್ಯಾಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ಆಗತಃ - ಬಂದವನಾಗಿ, ಕುಲಧರ್ಮಂ - ನಮ್ಮ ಪೂರ್ವೀಕರ ಧರ್ಮವನ್ನು, ಅನುಸ್ಮರನ್-ಸ್ಮರಿಸುತ್ತ, ಹೇ ಪುರುಷರ್ಷಭ-ಎಲೈ ಪುರುಶ್ರೇಷ್ಠನೇ, ಹೇ ವೀರ - ಎಲೈ ಶೂರನೇ, ಜಟಾವಲ್ಕಲಧಾರಿಣಂ - ಜಡೆಗಳನ್ನೂ ನಾರುಮುಡಿಗಳನ್ನೂ ಧರಿಸಿರುವ, ಜಾನಕ್ಯಾ - ಸೀತಾದೇವಿಯೊಡನೆಯೂ, ತ್ವಯಾಚ - ನಿನ್ನೊಡನೆಯೂ, ಸಹಿತಂ - ಕೂಡಿರುವ, ಮಾಂ - ನನ್ನನ್ನು, ಪ್ರವ್ರಾಜಿತಂ - ವನವಾಸವನ್ನು ಕುರಿತು ಹೊರಡಿಸಲ್ಪಟ್ಟವನನ್ನಾಗಿ, ಶ್ರುತ್ವಾ - ಕೇಳಿ, ಸ್ನೇಹೇನ - ಸ್ನೇಹದಿಂದ, ಆಕ್ರಾಂತಹೃದಯಃ - ವ್ಯಾಪ್ತವಾದ ಮನವುಳ್ಳವನಾಗಿ, ಶೋಕೇನ-ದುಃಖದಿಂದ, ಆಕುಲಿತೇಂದ್ರಿಯಃ - ವ್ಯಾಕುಲವಾದ ಇಂದ್ರಿಯಗಳುಳ್ಳವನಾಗಿ, ಏಷಭರತಃ - ಈ ಭರತನು, ದ್ರಷ್ಟುಂ - ನೋಡಲೋಸುಗ, ಅಭ್ಯಾಗತೋಹಿ - ಬಂದನಷ್ಟೆ, ಏಷಃಭರತಃ- ಈ ಭರತನು, ಅನ್ಯಥಾ - ಮತ್ತೊಂದು ಬಗೆಯಾಗಿ, ನಾಗತಃ - ಬಂದವನಲ್ಲ, ಇತಿ - ಇಂತೆಂದು, ಅಹಂ-ನಾನು, ಮನ್ಯೇ - ತಿಳಿಯುತ್ತೇನೆ. ॥ ೯-೧೧ ॥ ಅಂಬಾಂ - ತಾಯಿಯಾದ, ಕೈಕೇಯೀಂ - ಕೈಕೇಯಿಯನ್ನು ಕುರಿತು, ರುಷ್ಯ - ಕೋಪಿಸಿಕೊಂಡು, ಅಪ್ರಿಯಂ - ಅನಿಷ್ಟಕರವಾದ, ಪರುಷಂಚ - ಕ್ರೂರವಾದ

ಮಾನದನೆ! ಲಕ್ಷ್ಮಣನೆ ನಿನಗೂ, ಭರತನಿಗೂ, ಶತ್ರುಘ್ನನಿಗೂ ಇಲ್ಲದೆ ನನಗೆಮಾತ್ರ, ಸುಖವುಂಟಾದರೆ ನಾನು ಸಂತುಷ್ಟನಾದೇನೆ? ಅಂತಹ ಸಂತೋಷವು ನೆಗೆದುಬಿದ್ದುಹೋಗಲಿ. ಅಣ್ಣತಮ್ಮಂದಿರಲ್ಲಿ ವಾತ್ಸಲ್ಯವುಳ್ಳವನೂ, ನನ್ನ ಪ್ರಾಣಗಳಿಗಿಂತಲೂ ಅಧಿಕನಾದವನೂ ಆದ ಭರತನು, ಜಡೆಗಳನ್ನೂ, ನಾರುಮುಡಿಗಳನ್ನೂ ಧರಿಸಿದ ನಾನು ಸೀತಾಲಕ್ಷ್ಮಣರೊಡಗೂಡಿ ಅರಣ್ಯಕ್ಕೆ ಬಂದುದನ್ನು ಕೇಳಿ,ಕುಲಧರ್ಮಗಳನ್ನೆಣಿಸಿಕೊಂಡು,ನನ್ನಲ್ಲಿನ ಸ್ನೇಹದಿಂದ ಆಕ್ರಮಿಸಲಾದ ಹೃದಯವುಳ್ಳವನೂ, ವ್ಯಾಕುಲವಾದ ಇಂದ್ರಿಯಗಳುಳ್ಳವನೂ ಆಗಿ ನನ್ನನ್ನು ನೋಡಲೋಸುಗವೇ ಬಂದಿದ್ದಾನೆಂದು ತಿಳಿಯುತ್ತಿದ್ದೇನೆ. ॥೮-೧೧॥ ಲಕ್ಷ್ಮಣಾ! ಶ್ರೀಮಂತನಾದ ಭರತನೂ ತಾಯಿಯಾದ ಕೈಕೇಯಿಯ ಮೇಲೆ ಅಧಿಕವಾದ ಕೋಪವುಳ್ಳವನಾಗಿ ಕಠಿನವಚನಗಳನ್ನು ನುಡಿಯುತ್ತ, ತಂದೆಯಾದ ದಶರಥಮಹೀಪಾಲನನ್ನು ಸಮಾಧಾನಗೊಳಿಸಿ, ನನಗೆ ಪುನಃ ರಾಜ್ಯವನ್ನು ಅರ್ಪಿಸಲು ಬಂದಿದ್ದಾನೆ. ಈಗ ನಾವು ರಾಜ್ಯಭ್ರಷ್ಟರಾಗಿ ಅರಣ್ಯಕ್ಕೆ ಬಂದಿ

ಮಾಗತಃ ॥ ೧೨ ॥ ಪ್ರಾಪ್ತಕಾಲಂ ಯದೇಷೋಽಸ್ಮಾನ್ ಭರತೋ ದ್ರಷ್ಟು
ಮಿಚ್ಛತಿ ॥ ಅಸ್ಮಾಸು ಮನಸಾಪ್ಯೇಷಾ ನಾಪ್ರಿಯಂ ಕಿಂಚಿದಾಚರೇತ್ ॥ ೧೩ ॥
ವಿಪ್ರಿಯಂ ಕೃತಪೂರ್ವಂತೇ ಭರತೇನ ಕದಾನು ಕಿಂ ॥ ಈದೃಶಂವಾ ಭಯಂ
ತೇಽದ್ಯ ಭರತಂ ಯೋತ್ರ ಶಂಕಸೇ ॥ ೧೪ ॥ ನಹಿ ತೇ ನಿಷ್ಠುರಂ ವಾಚ್ಯೋ
ಭರತೋ ನಾಪ್ರಿಯಂ ವಚಃ ॥ ಅಹಂ ಹ್ಯಪ್ರಿಯ ಮುಕ್ತಸ್ಸ್ಯಾಂ ಭರತಸ್ಯಾಽ
ಪ್ರಿಯೇ ಕೃತೇ ॥ ೧೫ ॥ ಕಥಂ ಸುಪುತ್ರಾಃ ಪಿತರಂ ಹನ್ಯುಃ ಕಸ್ಯಾಂ ಚಿದಾ

ಮಾತನ್ನು, ವದನ್ - ಹೇಳುತ್ತ, ಪಿತರಂ - ತಂದೆಯನ್ನು, ಪ್ರಸಾದ್ಯ - ಸಮ್ಮತಿಗೊಳಿಸಿ, ಶ್ರೀಮಾನ್ - ಸಂಪದ್ಯುಕ್ತನಾದ ಭರತನು, ಮೇ - ನನಗೆ, ರಾಜ್ಯಂ - ರಾಜ್ಯವನ್ನು, ದಾತುಂ - ಕೊಡಲು ಆಗತಃ- ಬಂದನು. ॥ ೧೨ ॥ ಏಷಃಭರತಃ - ಈ ಭರತನು, ಅಸ್ಮಾನ್ - ನಮ್ಮನ್ನು, ದ್ರಷ್ಟುಂ - ನೋಡುವದಕ್ಕೆ, ಇಚ್ಛತೀತಿಯತ್ - ಇಚ್ಛಿಸುವನೆಂಬದಾವದುಂಟೋ, ಏತತ್ - ಇದು, ಪ್ರಾಪ್ತಕಾಲಂ - ಕಾಲೋಚಿತವಾಗಿದೆ, ಏಷಃ - ಈ ಭರತನು, ಅಸ್ಮಾಸು - ನಮ್ಮ ವಿಷಯದಲ್ಲಿ, ಮನಸಾಪಿ - ಮನದಿಂದಲೂ, ಕಿಂಚಿತ್ - ಸ್ವಲ್ಪವಾದರೂ, ಅಪ್ರಿಯಂ - ಅಹಿತವನ್ನು, ನಾಚರೇತ್ - ಮಾಡಲಾರನು. ॥ ೧೩ ॥ ಭರತೇನ - ಭರತನಿಂದ, ತೇ - ನಿನಗೆ, ವಿಪ್ರಿಯಂ - ಅನಿಷ್ಟವು, ಕದಾನು - ಯಾವಾಗಲಾದರೂ, ಕೃತಪೂರ್ವಂಕಿಂ - ಪೂರ್ವದಲ್ಲಿ ಮಾಡಲ್ಪಟ್ಟಿರುವುದೇನು, ಈದೃಶಂ ಇಂತಹುದಾದ, ಭಯಂವಾ - ಭಯವೂತಾನೆ, ಅದ್ಯ - ಈಗ, ಕಿಂ - ಏನು, ಯಃ - ಯಾವ ನೀನು, ಅತ್ರ - ಈ ಸ್ಥಳದಲ್ಲಿ, ಭರತಂ- ಭರತನನ್ನು ಕುರಿತು, ಶಂಕಸೇ - ಸಂಶಯಪಡುತ್ತೀಯೆ. ॥ ೧೪ ॥ ತೇ - ನಿನ್ನಿಂದ, ಭರತಃ - ಭರತನು, ನಿಷ್ಠುರಂ - ಪರುಷವಾಗಿ, ನವಾಚ್ಯಃ - ಹೇಳತಕ್ಕವನಲ್ಲ, ಅಪ್ರಿಯಂ - ಪ್ರಿಯವಲ್ಲದಿರುವ, ವಚಃ - ಮಾತನ್ನು, ನವಾಚ್ಯಂ - ಹೇಳತಕ್ಕದಲ್ಲ, ಭರತಸ್ಯ - ಭರತನಿಗೆ, ಅಪ್ರಿಯೇ - ಅನಿಷ್ಟವಚನವು, ಕೃತೇಸತಿ - ಮಾಲ್ಪಟ್ಟದಾದರೆ, ಅಹಂ - ನಾನು, ಅಪ್ರಿಯಂ - ಅರಿಷ್ಟವಚನವನ್ನು, ಉಕ್ತಃ- ಹೇಳಲ್ಪಟ್ಟವನು, ಸ್ಯಾಂ - ಆಗುತ್ತೇನೆ, ॥ ೧೫ ॥ ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ಪುತ್ರಾಃ - ಮಕ್ಕಳು, ಪಿತರಂ - ತಂದೆಯನ್ನು, ಕಸ್ಯಾಂಚಿದಾಪದಿ - ಯಾವ ಆಪತ್ತಿನಲ್ಲಿ, ಕಥಂಹನ್ಯಾಃ - ಹೇಗೆ

ರುವುದರಿಂದ, ಎಲ್ಲ ವಿಧದಲ್ಲಿಯೂ ನಮ್ಮನ್ನು ಸಮಾಧಾನಗೊಳಿಸಲು ಇದು ಸುಸಮಯವಾಗಿರುವುದು. ಈ ಭರತನು ನನ್ನ ವಿಷಯದಲ್ಲಿ ಸ್ವಲ್ಪವಾದರೂ ಅಪಕಾರವನ್ನು ಮಾಡುವವನಲ್ಲವು. ಭರತನಿದುವರೆವಿಗೆ ಯಾವಾಗಲಾದರೂ ನಿನ್ನನ್ನು ಕುರಿತು ನಿಂದಿಸಿದ್ದಾನೆಯೆ ? ಇಲ್ಲದಿದ್ದರೆ ನಿನಗೇನಾದರೂ ಅಪಕಾರವನ್ನು ಮಾಡಿದ್ದಾನೆಯೆ? ಇದೊಂದೂ ಇಲ್ಲದಿದ್ದ ಮೇಲೆ ನೀನಾವಕಾರಣದಿಂದ ಭರತನ ವಿಷಯದಲ್ಲಿ ಸಂದೇಹಪಡುತ್ತಿರುವೆ? ನೀನಿನ್ನು ಭರತನ ವಿಷಯದಲ್ಲಿ ಕಠಿನವಾಕ್ಕುಗಳನ್ನಾಡಬೇಡ. ಭರತನಿಗೇನಾದರೂ ಅಪಕಾರವನ್ನುಮಾಡಿದೆಯಾದರೆ ಆ ಅಪಕಾರವು ನನಗೆ ಮಾಡಿದಂತಾಗುತ್ತದೆ. ॥೧೨-೧೫॥ ಲಕ್ಷ್ಮಣ ! ಎಂತಹ ವಿಪತ್ತು ಬಂದರೂ, ಮಕ್ಕಳು ತಂದೆಯನ್ನು ಕೊಲ್ಲುವುದುಂಟೆ? ತನಗೆ ಪ್ರಾಣಪ್ರಿಯನಾದ ತಮ್ಮನನ್ನು ಕೊಲ್ಲುವವನಾವನಾದರೂ ವುಂಟೆ ? ಒಂದುವೇಳೆ ನೀನು “ ನನಗೆ ರಾಜ್ಯವು ಬೇಕು ” ಎಂದು ಹೇಳಿದೆಯಾದರೆ, ನಾನು “ ಲಕ್ಷ್ಮಣನಿಗೆ ರಾಜ್ಯವನ್ನು ಕೊಟ್ಟುಬಿಡು ” ಎಂದು

ಪದಿ? ॥ ಭ್ರಾತಾವಾ ಭ್ರಾತರಂ ಹನ್ಯಾ ತ್ಸೌಮಿತ್ರೇ! ಪ್ರಾಣಮಾತ್ಮನಃ ॥೧೬॥ ಯದಿ ರಾಜ್ಯಸ್ಯ ಹೇತೋಸ್ತ್ವ ಮಿಮಾಂ ವಾಚಂ ಪ್ರಭಾಷಸೇ ॥ ವಕ್ಷ್ಯಾಮಿ ಭರತಂ ದೃಷ್ಟ್ವಾ ರಾಜ್ಯ ಮಸ್ಮೈ ಪ್ರದೀಯತಾಮ್ ॥ ೧೭ ॥ ಉಚ್ಯಮಾನೋಪಿ ಭರತೋ ಮಯಾ ಲಕ್ಷ್ಮಣ ತತ್ತ್ವತಃ ॥ ರಾಜ್ಯ ಮಸ್ಮೈ ಪ್ರಯಚ್ಛೇತಿ ಬಾಢಮಿತ್ಯೇವ ವಕ್ಷ್ಯತಿ ॥ ೧೮ ॥ ತಥೋಕ್ತೋ ಧರ್ಮಶೀಲೇನ ಭ್ರಾತ್ರಾ ತಸ್ಯ ಹಿತೇ ರತಃ ॥ ಲಕ್ಷ್ಮಣಃ ಪ್ರವಿವೇಶೇವ ಸ್ವಾನಿ ಗಾತ್ರಾಣಿ ಲಜ್ಜಯಾ॥೧೯॥

ಹೊಡೆದಾರು, ಭ್ರಾತಾವಾ - ಅಣ್ಣನೇ ಆಗಲಿ, ಆತ್ಮನಃ - ತನಗೆ, ಪ್ರಾಣಂ - ಪ್ರಾಣಪ್ರಾಯನಾದ, ಭ್ರಾತರಂ - ತಮ್ಮನನ್ನು, ಕಥಮ್ಹನ್ಯಾತ್ - ಹೇಗೆ ಕೊಂದಾನು? ತೇ - ನೀನು, ರಾಜ್ಯಸ್ಯ-ರಾಜ್ಯದ, ಹೇತೋಃ - ನಿಮಿತ್ತವಾಗಿ, ಇಮಾಂವಾಚಂ - ಈ ಮಾತನ್ನು, ಪ್ರಭಾಷಸೇ ಯದಿ - ಮಾತನಾಡುವೆಯಾದರೆ, ಭರತಂ - ಭರತನನ್ನು, ದೃಷ್ಟ್ವಾ - ಕಂಡು, ರಾಜ್ಯಂ - ರಾಜ್ಯವನ್ನು, ಅಸ್ಮೈ-ಈ ಲಕ್ಷ್ಮಣನಿಗೆ, ಪ್ರದೀಯತಾಂ - ಕೊಡಲ್ಪಡಲಿ, ಇತಿ - ಇಂತೆಂದು, ವಕ್ಷ್ಯಾಮಿ - ಹೇಳುವೆನು. ॥ ೧೭ ॥ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ಮಯಾ - ನನ್ನಿಂದ, ಭರತಃ - ಭರತನು, ರಾಜ್ಯಂ-ರಾಜ್ಯವನ್ನು. ಅಸ್ಮೈ - ಈ ಲಕ್ಷ್ಮಣನಿಗೆ, ಪ್ರಯಚ್ಛೇತಿ - ಕೊಡೆಂದು, ಉಚ್ಯಮಾನೋಪಿ - ಹೇಳಲಾಯಿತೋ, ತತ್ತ್ವತಃ - ಯಥಾರ್ಥವಾಗಿ, ಬಾಢಮಿತ್ಯೇವ - ಹಾಗೆಯೇ ಸರಿಯೆಂಬದಾಗಿ ವಕ್ಷ್ಯತಿ - ಹೇಳುತ್ತಾನೆ. ॥೧೮॥ ತಥಾ ಆಪರಿಯಾಗಿ, ಧರ್ಮಶೀಲೇನ - ಧರ್ಮದಲ್ಲಿಯೇ ಸ್ವಭಾವವುಳ್ಳ, ಭ್ರಾತ್ರಾ - ಅಣ್ಣನಿಂದ, ಉಕ್ತಃ - ಹೇಳಲ್ಪಟ್ಟ, ಲಕ್ಷ್ಮಣಃ - ಲಕ್ಷ್ಮಣನು, ತಸ್ಯ - ಆ ಶ್ರೀರಾಮನ, ಹಿತೇ - ಹಿತದಲ್ಲಿ, ರತಃ - ಆಸಕ್ತನಾಗಿ, ಲಜ್ಜಯಾ - ನಾಚಿಕೆಯಿಂದ, ಸ್ವಾನಿಗಾತ್ರಾಣಿ - ಸ್ವಕೀಯವಾದ ಅವಯವಗಳಲ್ಲಿ, ಪ್ರವಿವೇಶೇವ - ಹೊಕ್ಕನೋ ಎಂಬಂತೆ ನಿಂತನು. ॥ ೧೯ ॥ ಲಕ್ಷ್ಮಣಃ - ಲಕ್ಷ್ಮಣಸ್ವಾಮಿಯು, ತದ್ವಾಕ್ಯಂ-ಆ ಮಾತನ್ನು, ಶ್ರುತ್ವಾ - ಕೇಳಿ, ವ್ರೀಳಿತಃ-ನಾಚಿಕೆಗೊಂಡು, ತ್ವಾಂ - ನಿನ್ನನ್ನು, ದ್ರಷ್ಟುಂ - ನೋಡುವದಕ್ಕೆ, ಪಿತಾ - ತಂದೆಯಾದ, ದಶರಥಃ-

---

ಭರತನಿಗೆ ಹೇಳುತ್ತೇನೆ. ನೀನಿನ್ನು ಕೋಪವನ್ನು ಹೊಂದಬೇಡ ? ಲಕ್ಷ್ಮಣ ! ನಾನು ಭರತನನ್ನು ಕುರಿತು, “ ಎಲೈ ಭರತನೆ ! ನೀನು ಈ ಸಾಕೇತರಾಜ್ಯವನ್ನು ಲಕ್ಷ್ಮಣನಿಗೆ ಕೊಟ್ಟುಬಿಡು” ಎಂದು ನಿಜವಾಗಿಯೂ ಹೇಳಿದೆನಾದರೆ,ಆತನು ನಿನಗೆ ಖಂಡಿತವಾಗಿಯೂ ರಾಜ್ಯವನ್ನು ಕೊಟ್ಟುಬಿಡುತ್ತಾನೆ.”॥೧೭-೧೮॥ ಧರ್ಮಸ್ವಭಾವವುಳ್ಳವನೂ, ಅಗ್ರಜನೂ ಆದ ಶ್ರೀರಾಮನು ಈರೀತಿ ನುಡಿದ ಮಾತುಗಳನ್ನು ಕೇಳಿ ಲಕ್ಷ್ಮಣನು ಬಹಳವಾದ ನಾಚಿಕೆಯನ್ನು ಹೊಂದಿದನು. ಅಲ್ಲದೆ ಅಣ್ಣನಾದ ಶ್ರೀರಾಮನು ನುಡಿದ ಆ ಮಾತುಗಳೆಲ್ಲವನ್ನೂ ಕೇಳಿ, ಬಹಳವಾದ ನಾಚಿಕೆಯಿಂದ ತಲೆ ಬಗ್ಗಿಸಿಕೊಂಡು, ಆತನನ್ನು ನೋಡಿ, “ ಪೂಜ್ಯನಾದ ಶ್ರೀರಾಮನೆ ! ನಮ್ಮ ತಂದೆಯಾದ ದಶರಥರಾಯನು ತಾನಾಗಿಯೇ ನಿನ್ನನ್ನು ನೋಡಲು ಬಂದಿದ್ದಾನೆಂದು ಯೋಚಿಸುತ್ತೇನೆ” ಎಂದನು.॥೧೯-೨೦॥ ಆರೀತಿಯಾಗಿ ನಾಚಿಕೆಯಿಂದ ತಲೆಬಗ್ಗಿಸಿಕೊಂಡು ಹೇಳುತ್ತಿರುವ ಲಕ್ಷ್ಮಣನನ್ನು ನೋಡಿ, ರಘುಕುಲೋದ್ಭವನಾದ ಶ್ರೀರಾಮನಿಂತೆಂದನು. “ ತಮ್ಮ ; ಲಕ್ಷ್ಮಣ ! ಮಹಾಬಾಹುವಾದ ದಶರಥಮಹಾರಾಜನೇ ನಮ್ಮನ್ನು ನೋಡಲು

ತದ್ವಾಕ್ಯಂ ಲಕ್ಷ್ಮಣ ಶ್ಶ್ರುತ್ವಾ ವ್ರೀಳಿತಃ ಪ್ರತ್ಯುವಾಚಹ ‖ ತ್ವಾಂ ಮನ್ಯೇ ದ್ರಷ್ಟುಮಾಯಾತಃ ಪಿತಾ ದಶರಥ ಸ್ಸ್ವಯಮ್ ‖ ೨೦ ‖ ವ್ರೀಳಿತಂ ಲಕ್ಷ್ಮಣಂ ದೃಷ್ಟ್ವಾ ರಾಘವಃ ಪ್ರತ್ಯುವಾಚಹ ‖ ಏಷ ಮನ್ಯೇ ಮಹಾಬಾಹು ರಿಹಾಸ್ಮಾ ದ್ರಷ್ಟು ಮಾಗತಃ ‖ ೨೧ ‖ ಅಥವಾ ನೌ ಧ್ರುವಂ ಮನ್ಯೇ ಮನ್ಯಮಾನ ಸ್ಸುಖೋಚಿತೌ ‖ ವನವಾಸ ಮನುಧ್ಯಾಯ ಗೃಹಾಯ ಪ್ರತಿನೇಷ್ಯತಿ ‖ ೨೨ ‖ ಇಮಾಂವಾಪ್ಯೇಷ ವೈದೇಹೀ ಮತ್ಯಂತ ಸುಖಸೇವಿನೀಮ್ ‖ ಪಿತಾ ಮೇ ರಾಘವ ಶ್ಶ್ರೀಮಾ ವನಾದಾದಾಯ ಯಾಸ್ಯತಿ ‖ ೨೩ ‖ ಏತೌ ತೌ ಸಂಪ್ರಕಾಶೇತೇ ಗೋತ್ರವಂತೌ ಮನೋರಮೌ ‖ ವಾಯುವೇಗ ಸಮೌ ವೀರ !

ದಶರಥರಾಯನು, ಸ್ವಯಂ - ತಾನು, ಆಯಾತಃ - ಬಂದನೆಂದು, ಮನ್ಯೇ - ತಿಳಿದುಕೊಂಡಿದ್ದೇನೆ, ಇತಿ - ಇಂತೆಂದು, ಪ್ರತ್ಯುವಾಚಹ - ಹೇಳಿದನಷ್ಟೆ. ‖ ೨೦ ‖ ರಾಘವಃ - ಶ್ರೀರಾಮನು, ವ್ರೀಳಿತಂ- ನಾಚಿಗೊಂಡ, ಲಕ್ಷ್ಮಣಂ - ಲಕ್ಷ್ಮಣನನ್ನು, ದೃಷ್ಟ್ವಾ - ಕಂಡು, ಪ್ರತ್ಯುವಾಚಹ - ಪ್ರತ್ಯುತ್ತರ ಕೊಟ್ಟನು, ಮಹಾಬಾಹುಃ - ಮಹಾಭುಜಶಾಲಿಯಾದ, ಏಷಃ - ಈ ಭರತನು, ಇಹ-ಈಗ, ಅಸ್ಮಾನ್- ನಮ್ಮನ್ನು, ದ್ರಷ್ಟುಂ - ನೋಡುವದಕ್ಕೋಸ್ಕರ, ಆಗತಃ - ಬಂದನು, ಇತಿ - ಇಂತೆಂದು, ಮನ್ಯೇ - ತಿಳಿದಿದ್ದೇನೆ, ಅಥವಾ - ಹಾಗಲ್ಲದೆಹೋದರೆ, ನೌ - ನಮ್ಮಿಬ್ಬರನ್ನು, ಸುಖೋಚಿತೌ - ರಾಜ್ಯ ಸೌಖ್ಯಕ್ಕೆ ಅರ್ಹರನ್ನಾಗಿ, ಮನ್ಯಮಾನಃ - ತಿಳಿದುಕೊಂಡವನಾಗಿ, ವನವಾಸಂ-ವನದಲ್ಲಿ ವಾಸವನ್ನು, ಅನುಧ್ಯಾಯ - ಕಷ್ಟವೆಂದು ತಿಳಿದು, ಗೃಹಾಯ - ಮನೆಗೆ, ಪ್ರತಿನೇಷ್ಯತಿ - ಕರೆದುಕೊಂಡು ಹೋಗುತ್ತಾನೆ, ಇತಿ - ಇಂತೆಂದು, ಧ್ರುವಂ - ನಿಶ್ಚಯವಾಗಿ, ಮನ್ಯೇ - ತಿಳಿದಿದ್ದೇನೆ. ‖ ೨೧-೨೨ ‖ ಏಷಃ- ಈ ಭರತನು, ಅತ್ಯಂತಸುಖಸೇವಿನೀಂ-ಬಹಳವಾಗಿ ಸುಖವನ್ನು ಹೊಂದುತ್ತಿರುವ, ಇಮಾಂವೈದೇಹೀಂ- ಈ ಸೀತಾದೇವಿಯನ್ನು, ಅಥವಾ - ಹಾಗಲ್ಲದೇಹೋದರೆ, ಮೇ - ನನ್ನ, ಪಿತಾ - ತಂದೆಯಾದ, ಶ್ರೀಮಾನ್ - ಸಂಪದ್ಯುಕ್ತನಾದ, ರಾಘವಃ - ರಘುವಂಶೋತ್ಪನ್ನನಾದ ದಶರಥರಾಯನು, ವನಾತ್ - ವನದಿಂದ, ಆದಾಯ - ಕರೆದುಕೊಂಡು, ಯಾಸ್ಯತಿ - ಹೋಗುತ್ತಾನೆ, ಹೇ ವೀರ - ಎಲೈ ಶೂರನೇ, ಗೋತ್ರವಂತೌ - (ಗೋ) ಪ್ರಶಸ್ತವಾದ ಹೆಸರುಗಳುಳ್ಳ, (ಗೋ + ಮ) ಗೋತ್ರವಂತೌ - ಒಳ್ಳೆಯ

ಬಂದಿದ್ದಾನೆಂದು ನನಗೂ ತೋರುತ್ತಿರುವುದು. ಅಲ್ಲದೆ ಸುಖವನ್ನನುಭವಿಸಲು ಅರ್ಹರಾದ ನಾವು ದಂಡಕಾರಣ್ಯಕ್ಕೆ ಬಂದು ದುಃಖವನ್ನನುಭವಿಸುತ್ತಿದ್ದೇವೆಂದು ತಿಳಿದು ನಮ್ಮನ್ನು ಪುನಃ ಅಯೋಧ್ಯಾಪಟ್ಟಣಕ್ಕೆ ಕರೆದುಕೊಂಡು ಹೋಗಲು ನಮ್ಮ ತಂದೆಯಾದ ದಶರಥಭೂಪಾಲನು ಬಂದಿದ್ದಾನೆಂದು ತೋರುತ್ತದೆ. ಹಾಗಿಲ್ಲದಿದ್ದರೆ, ಎಲೈ ಲಕ್ಷ್ಮಣನೆ! ರಘುಕುಲೋದ್ಭವನೂ, ಶ್ರೀಮಂತನೂ, ನಮಗೆ ತಂದೆಯಾದವನೂ ಆದ ದಶರಥಮಹಾರಾಜನು, ಎಲ್ಲಾ ಕಾಲದಲ್ಲಿಯೂ ಸುಖವನ್ನೇ ಅನುಭವಿಸಲು ತಕ್ಕವಳಾದ ಸೀತಾದೇವಿಯನ್ನಾದರೂ ಹಿಂದಕ್ಕೆ ಕರೆದುಕೊಂಡು ಹೋಗಲು ಬಂದಿರಬಹುದೆಂದು ತೋರುತ್ತದೆ.‖೨೧-೨೩‖ ಎಲೈ ಪರಾಕ್ರಮಶಾಲಿಯೆ! ಸತ್ಕುಲದಲ್ಲಿ ಹುಟ್ಟಿದುವೂ, ಮನೋಹರಗಳಾದುವೂ, ವಾಯುವೇಗದಂತಹ ವೇಗವುಳ್ಳುವೂ ಆದ ಕುದುರೆಗಳೆರಡು ಪ್ರಕಾಶಿಸುತ್ತಿವೆ; ನೋಡು.

ಜವನೌ ತುರಗೋತ್ತಮೌ ॥ ೨೪ ॥ ಸ ಏಷ ಸುಮಹಾಕಾಯಃ ಕಂಪತೇ ವಾಹಿನೀಮುಖೇ ॥ ನಾಗಶ್ಶತ್ರುಂಜಯೋ ನಾಮ ವೃದ್ಧಸ್ತಾತಸ್ಯ ಧೀಮತಃ ॥ ೨೫ ॥ ನತು ಪಶ್ಯಾಮಿ ತಚ್ಛತ್ರಂ ಪಾಂಡರಂ ಲೋಕಸತ್ಕೃತಮ್ ॥ ಪಿತುರ್ದಿವ್ಯಂ ಮಹಾಬಾಹೋ! ಸಂಶಯೋ ಭವತೀಹ ಮೇ ॥ ೨೬ ॥ ವೃಕ್ಷಾಗ್ರಾದವರೋಹತ್ವಂ ಕುರು ಲಕ್ಷ್ಮಣ! ಮದ್ವಚಃ ॥ ಇತೀವ ರಾಮೋ ಧರ್ಮಾತ್ಮಾ ಸೌಮಿತ್ರಿಂ ತಮುವಾಚಹ ॥ ೨೭ ॥ ಅವತೀರ್ಯ ತು ಸಾಲಾಗ್ರಾತ್ತಸ್ಮಾತ್ಸಸ

ಕುಲದಲ್ಲಿ ಹುಟ್ಟಿರುವ, ಮನೋರಮೌ - ಮನೋಹರಗಳಾದ, ವಾಯುವೇಗಸಮೌ-ವಾಯುವೇಗಕ್ಕೆ ಸಮಾನವಾದ ವೇಗವುಳ್ಳ, ಜವನೌ - ವೇಗವತ್ತುಗಳಾದ, ತಾವೇತೌ - ಆ ಈ, ತುರಗೋತ್ತಮೌ - ಶ್ರೇಷ್ಠವಾದ ಕುದುರೆಗಳು, ಸಂಪ್ರಕಾಶಂತೇ - ಪ್ರಕಾಶಿಸುತ್ತವೆ, ಧೀಮತಃ - ಬುದ್ಧಿಶಾಲಿಯಾದ, ತಾತಸ್ಯ - ತಂದೆಯ ಸಂಬಂಧವಾದ, ಸುಮಹಾಕಾಯಃ - ದೊಡ್ಡಶರೀರವುಳ್ಳ, ವೃದ್ಧಃ - ಬಹಳಕಾಲದ್ದಾದ, ಶತ್ರುಜಂಯೋನಾಮ - ಶತ್ರುಂಜಯನೆಂದು ಪ್ರಸಿದ್ಧವಾದ, ಸಏಷಃನಾಗಃ-ಆ ಈ ಆನೆಯು, ಕಂಪತೇ - ಚಲಿಸುತ್ತಿದೆ, ಹೇ ಮಹಾಬಾಹೋ - ಎಲೈ ಮಹಾಭುಜಪರಾಕ್ರಮಶಾಲಿಯೇ, ಲೋಕಸತ್ಕೃತಂ - ಸಮಸ್ತ ಜನರಿಂದಲೂ ಶ್ಲಾಘನೆಮಾಡಲ್ಪಟ್ಟ, ಪಾಂಡರಂ - ಬೆಳ್ಳಗಿರುವ, ಮೇ - ನನ್ನ, ಪಿತುಃ - ತಂದೆಯಾದ ದಶರಥರಾಯನ, ದಿವ್ಯಂ - ಮನೋಹರವಾದ, ತಚ್ಛತ್ರಂತು - ಆಶ್ವೇತಛತ್ರವನ್ನಾದರೆ, ನಪಶ್ಯಾಮಿ - ನೋಡಲಿಲ್ಲ, ಇಹ - ಈಗ, ಸಂಶಯಃ - ಸಂದೇಹವು, ಮೇ - ನನಗೆ, ಭವತಿ-ಹುಟ್ಟುತ್ತದೆ. ॥ ೨೫-೨೬ ॥ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ತ್ವಂ - ನೀನು, ವೃಕ್ಷಾಗ್ರಾತ್-ಮರದತುದಿಯಿಂದ, ಅವರೋಹ - ಇಳಿದುಬಾ, ಮದ್ವಚಃ - ನನ್ನ ಮಾತನ್ನು, ಕುರು - ನಡೆಯಿಸು, ಇತೀವ - ಇಂತೆಂದು, ಧರ್ಮಾತ್ಮಾ - ಧರ್ಮಿಷ್ಠನಾದ, ರಾಮಃ - ಶ್ರೀರಾಮನು, ತಂಸೌಮಿತ್ರಿಂ - ಆ ಲಕ್ಷ್ಮಣನನ್ನು ಕುರಿತು, ಉವಾಚಹ - ಹೇಳಿದನಷ್ಟೆ. ॥ ೨೭ ॥ ಸಮಿತಿಂಜಯಃ - ಯುದ್ಧದಲ್ಲಿ ಶತ್ರುಸಂಹಾರಕನಾದ, ಸಲಕ್ಷ್ಮಣಃ - ಆ ಲಕ್ಷ್ಮಣನು, ತಸ್ಮಾತ್ಸಾಲಾಗ್ರಾತ್ - ಆ ತಾಳೇಮರದ ತುದಿಯಿಂದ, ಅವತೀರ್ಯ - ಇಳಿದು, ಪ್ರಾಂಜಲಿಃ - ಅಂಜಲಿಬದ್ಧನು, ಭೂತ್ವಾ - ಆಗಿ, ರಾಮಸ್ಯ-

---

ಲಕ್ಷ್ಮಣಾ ! ಮಹಾ ಬುದ್ಧಿವಂತನೂ, ವೃದ್ಧನೂ, ನಮ್ಮ ತಂದೆಯೂ ಆದ ದಶರಥರಾಜನ ಸಂಬಂಧವಾದ, ದೊಡ್ಡ ಶರೀರವುಳ್ಳ ಶತ್ರುಂಜಯನೆಂಬ ಗಜಶ್ರೇಷ್ಠವು ನಮಗಿದಿರಾಗಿ ಬರುತ್ತಿರುವ ಈ ಸೇನೆಯ ಮುಂಭಾಗದಲ್ಲಿ ಪ್ರಕಾಶಿಸುತ್ತಿರುವುದು; ನೋಡು.॥೨೪-೨೫॥ ಮಹಾಬಾಹುವಾದ ಲಕ್ಷ್ಮಣನೆ! ಲೋಕದಲ್ಲಿ ಗೌರವಿಸಲಾದುದೂ, ಬಹು ಬೆಳ್ಳಗಿರುವುದೂ, ಶ್ರೇಷ್ಠವಾದುದೂ ಆದ ನಮ್ಮ ತಂದೆಯ ಶ್ವೇತಛತ್ರವು ಈ ಸೇನಾಗ್ರದಲ್ಲಿ ಪ್ರಕಾಶಿಸುತ್ತಿಲ್ಲವು. ಇದರಿಂದ ನನ್ನ ಮನಸ್ಸಿನಲ್ಲಿ ಸಂದೇಹವು ತಲೆದೋರುತ್ತಿದೆ. ಆದುದರಿಂದೆಲೈ ಲಕ್ಷ್ಮಣನೆ! ನನ್ನ ಮಾತನ್ನು ಕೇಳಿ, ನೀನು ಜಾಗ್ರತೆಯಾಗಿ ವೃಕ್ಷಾಗ್ರದಿಂದಿಳಿದು ಬಾ !" ಶ್ರೀರಾಮಮೂರ್ತಿಯು ಈ ರೀತಿಯಾಗಿ ನುಡಿಯಲು ಯುದ್ಧಗಳಲ್ಲಿ ಜಯವನ್ನು ಹೊಂದತಕ್ಕ ಲಕ್ಷ್ಮಣನು, ಧರ್ಮಾತ್ಮನಾದ ಅಣ್ಣನ ಮಾತುಗಳನ್ನು ಕೇಳಿ ಆ ವೃಕ್ಷದ ತುದಿಯಿಂದಿಳಿದು ಬಂದು, ಕೈಗಳನ್ನು ಜೋಡಿಸಿಕೊಂಡು, ಶ್ರೀರಾಮ ಪಾರ್ಶ್ವದಲ್ಲಿ ನಿಂತು

ಮಿತಿಂ ಜಯಃ ॥ ಲಕ್ಷ್ಮಣಃ ಪ್ರಾಂಜಲಿ ರ್ಭೂತ್ವಾ ತಸ್ಥೌ ರಾಮಸ್ಯ ಪಾರ್ಶ್ವತಃ ॥ ೨೮ ॥ ಭರತೇನಾಪಿ ಸಂದಿಷ್ಟಾ ಸಂಮರ್ದೋ ನಭವೇದಿತಿ ॥ ಸಮಂತಾ ತ್ತಸ್ಯ ಶೈಲಸ್ಯ ಸೇನಾವಾಸ ಮಕಲ್ಪಯತ್ ॥ ೨೯ ॥ ಅಧ್ಯರ್ಧ ಮಿಕ್ಷ್ವಾಕು ಚಮೂ ರ್ಯೋಜನಂ ಪರ್ವತಸ್ಯ ಸಾ ॥ ಪಾರ್ಶ್ವೇ ನ್ಯವಿಶದಾವೃತ್ಯ ಗಜವಾಜಿ ರಥಾಕುಲಾ ॥ ೩೦ ॥

ಸಾಚಿತ್ರಕೂಟೇ ಭರತೇನ ಸೇನಾ
ಧರ್ಮಂ ಪುರಸ್ಕೃತ್ಯ ವಿಧೂಯ ದರ್ಪಂ ॥
ಪ್ರಸಾದನಾರ್ಥಂ ರಘುನಂದನಸ್ಯ
ವಿರಾಜತೇ ನೀತಿಮತಾ ಪ್ರಣೀತಾ ॥ ೩೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತನವತಿತಮಸ್ಸರ್ಗಃ.

ಶ್ರೀರಾಮನ, ಪಾರ್ಶ್ವತಃ - ಪಕ್ಕದಲ್ಲಿ, ತಸ್ಥೌ - ನಿಂತನು. ॥ ೨೮ ॥ ಸಂಮರ್ದಃ - ಸನ್ನದ್ಧವು, ನಭವೇತ್ - ಆಗಬೇಡ, ಇತಿ - ಇಂತೆಂದು, ಭರತೇನಾಪಿ - ಭರತನಿಂದಲೂ, ಸಂದಿಷ್ಟಾ - ಆಜ್ಞಾಪಿಸಲ್ಪಟ್ಟದಾಗಿ, ಸೇನಾ - ಸೇನೆಯು, ತಸ್ಯಶೈಲಸ್ಯ - ಆ ಚಿತ್ರಕೂಟಪರ್ವತದ, ಸಮಂತಾತ್- ಸುತ್ತುಮುತ್ತಲೂ, ವಾಸಂ - ವಾಸವನ್ನು, ಅಕಲ್ಪಯತ್ - ಮಾಡಿತು. ॥೨೯॥ ಸಾ-ಆ, ಇಕ್ಷ್ವಾಕು ಚಮೂಃ - ಇಕ್ಷ್ವಾಕುಮಹಾರಾಜನ ಸೈನ್ಯವು, ಪರ್ವತಸ್ಯ - ಬೆಟ್ಟದ, ಪಾರ್ಶ್ವೇ - ಪಾರ್ಶ್ವಭಾಗ ದಲ್ಲಿ, ಅಧ್ಯರ್ಧಂಯೋಜನಂ - ಒಂದೂವರೆ ಯೋಜನದೂರದಲ್ಲಿ, ಆವೃತ್ಯ - ಸುತ್ತಿಕೊಂಡು, ಗಜ ವಾಜಿರಥಾಕುಲಾ-ಆನೆಗಳಿಂದಲೂ, ಕುದುರೆಗಳಿಂದೂ, ರಥಗಳಿಂದಲೂ ವ್ಯಾಪ್ತವಾದುದಾಗಿ, ನ್ಯವಿಶತ್- ವಾಸಮಾಡಿತು. ॥ ೩೦ ॥ ನೀತಿಮತಾ - ನೀತಿಯನ್ನು ತಿಳಿದಿರುವ, ಭರತೇನ-ಭರತನಿಂದ, ಧರ್ಮಂ- ಧರ್ಮವನ್ನು, ಪುರಸ್ಕೃತ್ಯ - ಮುಂದುಮಾಡಿ, ದರ್ಪಂ - ಗರ್ವವನ್ನು, ವಿಧೂಯ - ಒದರಿ, ರಘು ನಂದನಸ್ಯ - ಶ್ರೀರಾಮನ, ಪ್ರಸಾದನಾರ್ಥಂ - ಅನುಗ್ರಹವನ್ನು ಸಂಪಾದಿಸುವನಿಮಿತ್ತ, ಪ್ರಣೀತಾ - ತೆಗದುಕೊಂಡು ಬಂದ, ಸಾಸೇನಾ - ಆ ಸೈನ್ಯವು, ಚಿತ್ರಕೂಟೇ - ಚಿತ್ರಕೂಟಪರ್ವತದಲ್ಲಿ, ವಿರಾ ಜತೇ - ಹೊಳೆಯುತ್ತಿದ್ದಿತು. ॥ ೩೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತನವತಿತಮಸ್ಸರ್ಗಃ.

ಕೊಂಡನು. ಆ ಸಮಯದಲ್ಲಿ ಭರತನು, ಶ್ರೀರಾಮಾಶ್ರಮಕ್ಕೆ ಯಾವ ಬಾಧೆಯೂ ಉಂಟಾ ಗದಿರುವುದಕ್ಕೋಸ್ಕರ ತನ್ನ ಸೇನೆಯವರನ್ನು ಕುರಿತು, ಚಿತ್ರಕೂಟಪರ್ವತದ ಸುತ್ತಲೂ ನಿಂತುಕೊಳ್ಳುವಂತೆ ಆಜ್ಞಾಪಿಸಿದನು. ಆನೆಗಳಿಂದಲೂ, ಕುದುರೆಗಳಿಂದಲೂ, ತುಂಬಿದ್ದ ಆ ಭರತನ ಸೈನ್ಯವು ಚಿತ್ರಕೂಟಪರ್ವತದ ಸುತ್ತಲೂ ನಾಲ್ಕುಕ್ರೋಶಗಳ ದೂರದವರೆವಿಗೂ ವ್ಯಾಪಿಸಿದ್ದಿತು. ॥ ೨೬-೩೦ ॥ ನೀತಿವಂತರಲ್ಲಿ ಉತ್ತಮನಾದ ಭರತನ ಸೈನ್ಯವೆಲ್ಲವೂ ಆತನ ಆಜ್ಞೆಯನ್ನು ಹೊಂದಿ ಧರ್ಮವನ್ನನುಸರಿಸಿ, ತನ್ನ ದರ್ಪವೆಲ್ಲವನ್ನೂ ತೊರೆದು ಶ್ರೀರಾಮ ಮೂರ್ತಿಯ ಅನುಗ್ರಹವನ್ನು ಸಂಪಾದಿಸಲೋಸುಗ ಆ ಚಿತ್ರಕೂಟಪರ್ವತದ ಸುತ್ತಲೂ ಪ್ರಕಾಶಿಸುತಿದ್ದಿತು. ॥ ೨೬-೩೧ ॥

ಇಂತಿದು ಲಕ್ಷ್ಮಣಸಾಂತ್ವನ ವಿಧಾನ ನಿರೂಪಣವೆಂಬ
ತೊಂಭತ್ತೇಳನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಅಷ್ಟನವತಿತಮಸ್ಸರ್ಗಃ.

ನಿವೇಶ್ಯ ಸೇನಾಂತು ವಿಭುಃ ಪದ್ಭ್ಯಾಂ ಪಾದವತಾಂ ವರಃ ॥ ಅಭಿಗಂತುಂ ಸ ಕಾಕುತ್ಸ್ಥ ಮಿಯೇಷ ಗುರುವರ್ತಕಮ್ ॥ ೧ ॥ ನಿವಿಷ್ಟಮಾತ್ರೇ ಸೈನ್ಯೇತು ಯಥೋದ್ದೇಶಂ ವಿನೀತವತ್ ॥ ಭರತೋ ಭ್ರಾತರಂ ವಾಕ್ಯಂ ಶತ್ರುಘ್ನ ಮಿದ ಮಬ್ರವೀತ್ ॥ ೨ ॥ ಕ್ಷಿಪ್ರಂ ವನಮಿದಂ ಸೌಮ್ಯ! ನರಸಂಘೈ ಸ್ಸಮಂತತಃ ॥ ಲುಬ್ಧೈಶ್ಚ ಸಹಿತೈ ರೇಭಿ ಸ್ತ್ವಮನ್ವೇಷಿತು ಮರ್ಹಸಿ ॥ ೩ ॥ ಗುಹೋ ಜ್ಞಾತಿ ಸಹಸ್ರೇಣ ಶರಚಾಪಾಸಿ ಧಾರಿಣಾ ॥ ಸಮನ್ವೇಷತು

ವಿಭುಃ - (ಗೋ) ತತ್ತ್ವಾವಧಾರಣ ಸಮರ್ಥನಾದ, ಪಾದವತಾಂ - ಪಾದಚಾರಿಗಳಲ್ಲಿ, ವರಃ- ಶ್ರೇಷ್ಠನಾದ, ಸಃ - ಆ ಭರತನು, ಸೇನಾಂತು - ಸೈನ್ಯವನ್ನು, ನಿವೇಶ್ಯ - ಇರಿಸಿ, ಗುರುವರ್ತಕಂ - ಗುರುವಚನಾನುಷ್ಠಾನಪರನಾದ, ಕಾಕುತ್ಸ್ಥಂ - ಶ್ರೀರಾಮನನ್ನು ಕುರಿತು, ಪದ್ಭ್ಯಾಂ - ಪಾದಗಳಿಂದ, ಅಭಿಗಂತುಂ - ಹೋಗುವದಕ್ಕೆ, ಇಯೇಷ - ಇಚ್ಛಿಸಿದನು. ॥ ೧ ॥ ಸೈನ್ಯೇತು - ಸೈನ್ಯವಾದರೆ, ಯಥೋದ್ದೇಶಂ - ಉದ್ದೇಶಾನುಸಾರವಾಗಿ, ನಿವಿಷ್ಟಮಾತ್ರೇ - ಇರಿಸಲ್ಪಟ್ಟದಾಗುತ್ತಿರಲು, ಭರತಃ - ಭರತನು, ವಿನೀತವತ್ - ದೀನನಾದ, ಭ್ರಾತರಂ - ತಮ್ಮನಾದ, ಶತ್ರುಘ್ನಂ - ಶತ್ರುಘ್ನನನ್ನು ಕುರಿತು, ಇದಂವಾಕ್ಯಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೨ ॥ ಹೇ ಸೌಮ್ಯ - ಎಲೈ ಸೌಮ್ಯನೇ, ತ್ವಂ - ನೀನು, ನರಸಂಘೈಃ - ಮನುಷ್ಯರ ಗುಂಪುಗಳಿಂದ, ಸಮಂತತಃ - ಎಲ್ಲೆಡೆಯಲ್ಲಿಯೂ, ವ್ಯಾಪ್ತಂ - ಆವರಿಸಿ, ಸಹಿತೈಃ - ಗುಂಪುಗೂಡಿರುವ, ಏಭಿಃಲುಬ್ಧೈಶ್ಚ - ಈ ಬೇಡರೊಡಗೂಡಿ, ಇದಂವನಂ - ಈ ವನವನ್ನು, ಕ್ಷಿಪ್ರಂ - ಜಾಗ್ರತೆಯಾಗಿ, ಅನ್ವೇಷಿತುಂ - ಹುಡುಕುವದಕ್ಕೆ, ಅರ್ಹಸಿ - ಯೋಗ್ಯನಾಗು. ॥ ೩ ॥ ಗುಹಃ - ಗುಹನು, ಶರಚಾಪಾಸಿಧಾರಿಣಾ - ಧನುರ್ಬಾಣಗಳನ್ನೂ ಕತ್ತಿಗಳನ್ನೂ ಧರಿಸಿರುವ, ಜ್ಞಾತಿಸಹಸ್ರೇಣ - ಬಂಧುಗಳಾದ ಬೇಡರಸಹಸ್ರಗಳಿಂದ, ಪರಿವೃತಃ -

---

ಆ ಬಳಿಕ ರಘುಕುಲೋದ್ಭವನಾದ ಭರತಕುಮಾರನು ತನ್ನ ಸೇನೆಯೆಲ್ಲವನ್ನೂ ಆ ಚಿತ್ರಕೂಟಪರ್ವತದ ಸುತ್ತಲೂ ನಿಲ್ಲಿಸಿದವನಾಗಿ ಅಣ್ಣದೇವನಾದ ಶ್ರೀರಾಮಮೂರ್ತಿಯನ್ನು, ನೋಡಲೋಸುಗ ಕಾಲ್ನಡೆಗೆಯಿಂದಲೇ ಹೋಗಲಿಚ್ಛಿಸಿದನು. ಇಂತು ರಾಮದರ್ಶನಾಕಾಂಕ್ಷಿಯಾಗಿ ತನ್ನ ಸೈನ್ಯವನ್ನು ಆ ಸ್ಥಳದಲ್ಲಿ ನಿಲ್ಲುವಂತೆ ಆಜ್ಞಾಪಿಸಿದ ಮೇಲೆ ತಮ್ಮನಾದ ಶತ್ರುಘ್ನನನ್ನುಕುರಿತು ವಿನಯದಿಂದೊಡಗೂಡಿ " ಓ ಸೌಮ್ಯನಾದ ಶತ್ರುಘ್ನನೇ! ಈ ಪದಾತಿ ಸಂಘಗಳಿಂದಲೂ, ಈ ಬೇಡರ ತಂಡಗಳಿಂದಲೂ ಒಡಗೂಡಿದವನಾಗಿ ಅಣ್ಣನಾದ ಶ್ರೀರಾಮಮೂರ್ತಿಯಿರುವ ಸ್ಥಳವನ್ನು ಹುಡುಕುವವನಾಗು. ॥ ೧-೩ ॥ ಬಂಧುಗಳ ಸಹಸ್ರದಿಂದ ಪರಿವೃತನಾದ ಈ ಗುಹನೂ ಬಿಲ್ಲುಬಾಣಗಳನ್ನೂ, ಖಡ್ಗವನ್ನೂ ಧರಿಸಿದವನಾಗಿ ಶ್ರೀರಾಮಲಕ್ಷ್ಮಣರನ್ನು ತಾನಾಗಿಯೇ ಹುಡುಕುವವನಾಗುವನು. ನಾನೂ ಸಹ

ಕಾಕುತ್ಸ್ಥಾ ವಸ್ಮಿಸ್ಪರಿವೃತ ಸ್ಸ್ವಯಮ್ ॥ ೪ ॥ ಅಮಾತ್ಯೈ ಸ್ಸಹ ಪೌರೈಶ್ಚ ಗುರುಭಿಶ್ಚ ದ್ವಿಜಾತಿಭಿಃ ॥ ವನಂ ಸರ್ವಂ ಚರಿಷ್ಯಾಮಿ ಪದ್ಭ್ಯಾಂ ಪರಿವೃತ ಸ್ಸ್ವಯಮ್ ॥ ೫ ॥ ಯಾವನ್ನ ರಾಮಂ ದ್ರಕ್ಷ್ಯಾಮಿ ಲಕ್ಷ್ಮಣಂವಾ ಮಹಾಬಲಮ್ ॥ ವೈದೇಹೀಂ ವಾ ಮಹಾಭಾಗಾಂ ನ ಮೇ ಶಾಂತಿ ರ್ಭವಿಷ್ಯತಿ ॥ ೬ ॥ ಯಾವನ್ನ ಚಂದ್ರಸಂಕಾಶಂ ದ್ರಕ್ಷ್ಯಾಮಿ ಶುಭ ಮಾನನಮ್ ॥ ಭ್ರಾತುಃ ಪದ್ಮ ಪಲಾಶಾಕ್ಷಂ ನ ಮೇ ಶಾಂತಿ ರ್ಭವಿಷ್ಯತಿ ॥ ೭ ॥ ಯಾವನ್ನ ಚರಣೌ ಭ್ರಾತುಃ

ಸುತ್ತುವರೆಯಲ್ಪಟ್ಟವನಾಗಿ, ಅಸ್ಮಿನ್ - ಈ ಬೆಟ್ಟದಲ್ಲಿ, ಸ್ವಯಂ - ತಾನು, ಕಾಕುತ್ಸ್ಥೌ - ಶ್ರೀರಾಮ ಲಕ್ಷ್ಮಣರನ್ನು, ಸಮನ್ವೇಷಿತೌ-ಚನ್ನಾಗಿ ಹುಡುಕಲಿ. ॥೪॥ ಸ್ವಯಂ-ನಾನು, ಅಮಾತ್ಯೈಃ-ಮಂತ್ರಿಗಳೊಡನೆ, ಪೌರೈಃ - ಪಟ್ಟಣಸ್ಥರಿಂಡಲೂ, ಗುರುಭಿಃ - ಗುರುಗಳಾದ, ದ್ವಿಜಾತಿಭಿಸ್ಸಹ - ವಸಿಷ್ಠಾದಿ ಬ್ರಾಹ್ಮಣರೊಡನೆ, ಪರಿವೃತಃ - ಸುತ್ತುವರೆದವನಾಗಿ, ಸರ್ವಂ - ಸಮಸ್ತವಾದ, ವನಂ - ಅರಣ್ಯದಲ್ಲಿ, ಪದ್ಭ್ಯಾಂ - ಪಾದಗಳಿಂದ, ಚರಿಷ್ಯಾಮಿ - ಸಂಚಾರಮಾಡುತ್ತೇನೆ, ರಾಮಂ - ಶ್ರೀರಾಮನನ್ನು, ಮಹಾಬಲಂ - ಮಹಾಬಲಶಾಲಿಯಾದ, ಲಕ್ಷ್ಮಣಂವಾ - ಲಕ್ಷ್ಮಣನನ್ನೇ ಆಗಲಿ, ಮಹಾಭಾಗಾಂ - ಮಹಾಪುಣ್ಯಶಾಲಿಯಾದ, ವೈದೇಹೀಂವಾ - ಸೀತಾದೇವಿಯನ್ನೇ ಅಗಲಿ, ಯಾವತ್ - ಎಷ್ಟುಪರಿಯಂತ, ನದ್ರಕ್ಷ್ಯಾಮಿ - ಕಾಣುವದಿಲ್ಲವೋ, ತಾವತ್ - ಅಷ್ಟುಪರಿಯಂತರವೂ, ಮೇ - ನನಗೆ, ಶಾಂತಿಃ - ದುಃಖಶಮನವು, ನಭವಿಷ್ಯತಿ - ಆಗುವದಿಲ್ಲ, ಭ್ರಾತುಃ - ಅಣ್ಣನಾದ ಶ್ರೀರಾಮನ, ಚಂದ್ರಸಂಕಾಶಂ - ಚಂದ್ರನಿಗೆ ಸಮಾನವಾದ, ಶುಭಂ - ಮನೋಹರವಾದ, ಪದ್ಮಪಲಾಶಾಕ್ಷಂ - ಕಮಲದಳಗಳಿಗೆ ಸಮಾನಗಳಾದ ನೇತ್ರಗಳುಳ್ಳ, ಆನನಂ - ಮುಖವನ್ನು, ಯಾವತ್ - ಎಷ್ಟುಪರ್ಯಂತ, ನದ್ರಕ್ಷ್ಯಾಮಿ-ಕಾಣುವುದಿಲ್ಲವೋ, ತಾವತ್ - ಅದುವರಿವಿಗೂ, ಮೇ - ನನಗೆ, ಶಾಂತಿಃ - ದುಃಖಶಮನವು, ನಭವಿಷ್ಯತಿ - ಆಗುವದಿಲ್ಲ. ॥ ೭ ॥ ಭ್ರಾತುಃ - ಅಣ್ಣನ, ಪಾರ್ಥಿವವ್ಯಂಜನಾನ್ವಿತೌ - ರಾಜಲಕ್ಷಣಗಳಿಂದ ಕೂಡಿರುವ, ಚರಣೌ - ಪಾದಗಳನ್ನು, ಶಿರಸಾ - ಮಂಡೆಯಿಂದ, ಯಾವತ್ - ಎಷ್ಟರವರಿವಿಗ, ನಧಾರ

ಮಂತ್ರಿಗಳಿಂದಲೂ, ಪುರಜನ, ಪರಿಜನರಿಂದಲೂ, ಬ್ರಾಹ್ಮಣರಿಂದಲೂ, ಗುರುಗಳಿಂದ ವಸಿಷ್ಠರಿಂದಲೂ ಪರಿವೃತನಾಗಿ ಈ ವನವೆಲ್ಲವನ್ನೂಕಾಲ್ನಡೆಗೆಯಿಂದಲೇ ಸಂಚರಿಸುತ್ತೇನೆ.॥೪-೫॥ ಎದುವರೆವಿಗೆ ಶ್ರೀರಾಮನನ್ನೂ, ಲಕ್ಷ್ಮಣಸ್ವಾಮಿಯನ್ನೂ, ಸಂಪದ್ಯುಕ್ತಳಾದ ಸೀತಾದೇವಿಯನ್ನೂ ನೋಡುವುದಿಲ್ಲವೋ ಅದುವರೆವಿಗೂ ನನ್ನಮನಸ್ಸು ಶಾಂತಿಯನ್ನುಹೊಂದಲಾರದು. ಎದುವರೆಗೂ ಷೋಡಶ ಕಲಾಪರಿಪೂರ್ಣನಾದ ಚಂದ್ರನಕಾಂತಿಯಂತೆ ಕಾಂತಿಯುಳ್ಳ ಮುಖವುಳ್ಳವನೂ ಕಮಲದೆಲೆಗಳಂತೆ ಬಹು ವಿಶಾಲವಾದ ಕಂಗಳುಳ್ಳವನೂ ಆದ ಶ್ರೀರಾಮಮೂರ್ತಿಯ ಸಂದರ್ಶನವನ್ನುಮಾಡುವುದಿಲ್ಲವೋ ಅದುವರೆವಿಗೂ ನನ್ನಮನಸ್ಸಿಗೆ ಶಾಂತಿಯುಂಟಾಗಲಾರದು.॥೬-೭॥ಎದುವರೆವಿಗೂ ರಾಜಚಿಹ್ನೆಗಳಿಂದೊಡಗೂಡಿದ ನಮ್ಮ ಅಣ್ಣದೇವನ ಚರಣಯುಗಳವನ್ನು ತಲೆಯಮೇಲೆ ಧರಿಸುವುದಿಲ್ಲವೋ ಅದುವರೆವಿಗೂ ನನಗೆ ಶಾಂತಿಯುಂಟಾಗಲಾರದು. ಎದುವರೆವಿಗೂ ರಾಜ್ಯಾಭಿಷೇಕಕ್ಕರ್ಹನಾದ ನಮ್ಮಣ್ಣನನ್ನು ಪಿತೃ, ಪಿತಾಮಹರಾದಿಯಾಗಿ ನಡೆದುಕೊಂಡು ಬಂದಿರತಕ್ಕ ಸಾಕೇತಸಾಂಮ್ರಾಜ್ಯ ಸಿಂಹಾಸನದಲ್ಲಿ ಕುಳ್ಳಿರಿಸಿ

ಪಾರ್ಥಿವ ವ್ಯಂಜನಾನ್ವಿತೌ ॥ ಶಿರಸಾ ಧಾರಯಿಷ್ಯಾಮಿ ನ ಮೇ ಶಾಂತಿ ರ್ಭವಿಷ್ಯತಿ ॥ ೮ ॥ ಯಾವನ್ನರಾಜ್ಯೇ ರಾಜ್ಯಾರ್ಹಃ ಪಿತೃ ಪೈತಾಮಹೇ ಸ್ಥಿತಃ ॥ ಅಭಿಷೇಕ ಜಲಕ್ಲಿನ್ನೋ ನ ಮೇ ಶಾಂತಿ ರ್ಭವಿಷ್ಯತಿ ॥ ೯ ॥ ಸಿದ್ಧಾರ್ಥಃ ಖಲು ಸೌಮಿತ್ರಿ ರ್ಯಶ್ಚಂದ್ರ ವಿಮಲೋಪಮಮ್ ॥ ಮುಖಂ ಪಶ್ಯತಿ ರಾಮಸ್ಯ ರಾಜೀವಾಕ್ಷಂ ಮಹಾದ್ಯುತಿ ॥ ೧೦ ॥ ಕೃತಕೃತ್ಯಾ ಮಹಾಭಾಗಾ ವೈದೇಹೀ ಜನಕಾತ್ಮಜಾ ॥ ಭರ್ತಾರಂ ಸಾಗರಾಂತಾಯಾಃ ಪೃಥಿವ್ಯಾ ಯಾನುಗಚ್ಛತಿ॥೧೧॥

ಯಿಷ್ಯಾಮಿ - ಧರಿಸುವನಾಗುವದಿಲ್ಲವೋ, ತಾವತ್ - ಅಷ್ಟರವರೆವಿಗೂ, ಮೇ - ನನಗೆ, ಶಾಂತಿಃ - ದುಃಖಪರಿಹಾರವು, ನಭವಿಷ್ಯತಿ - ಅಗಲಾರದು. ॥ ೮ ॥ ರಾಜ್ಯಾರ್ಹಃ - ರಾಜ್ಯಕ್ಕೆಅರ್ಹನಾದ ಶ್ರೀರಾಮನು, ಪಿತೃಪೈತಾಮಹೇ - ತಂದೆತಾತಂದರಿಂದ ಸಂಪಾದಿಸಲ್ಪಟ್ಟ, ರಾಜ್ಯೇ - ರಾಜ್ಯದಲ್ಲಿ, ಸ್ಥಿತಃ- ನಿಂತವನಾಗಿ, ಯಾವತ್ - ಎಷ್ಟುಪರ್ಯಂತರವೂ, ಅಭಿಷೇಕಪರಿಕ್ಲಿನ್ನಃ - ಪಟ್ಟಾಭಿಷೇಕೋದಕದಿಂದ ನೆನಿಸಲ್ಪಡುವನು, ನ-ಆಗುವದಿಲ್ಲವೋ, ತಾವತ್-ಅಷ್ಟುಪರಿಯಂತವೂ, ಮೇ-ನನಗೆ, ಶಾಂತಿಃ- ದುಃಖಶಮನವು, ನಭವಿಷ್ಯತಿ - ಆಗುವದಿಲ್ಲ. ॥ ೯ ॥ ಯಃ - ಯಾವ ಲಕ್ಷ್ಮಣನು, ಚಂದ್ರವಿಮಲೋಪಮಂ - ಚಂದ್ರನಂತೆ ನಿರ್ಮಲವಾಗಿಯೂ, ಸಮಾನವಾಗಿಯೂ ಇರುವ, ರಾಜೀವಾಕ್ಷಂ - ಕಮಲಗಳಂತೆ ನೇತ್ರಗಳುಳ್ಳ, ಮಹಾದ್ಯುಮತಿ - ಮಹಾ ಕಾಂತಿಯುಳ್ಳ, ರಾಮಸ್ಯ - ಶ್ರೀರಾಮನ, ಮುಖಂ - ವದನವನ್ನು, ಪಶ್ಯತಿ - ನೋಡುತ್ತಾನೆಯೋ, ಸಸೌಮಿತ್ರಿಃ - ಆ ಲಕ್ಷ್ಮಣನು, ಸಿದ್ಧಾರ್ಥಃ ಖಲು - ಕೃತಾರ್ಥನಷ್ಟೆ. ॥ ೧೦ ॥ ಯಾ - ಯಾವ ಸೀತಾದೇವಿಯು, ಸಾಗರಾಂತಾಯಾಃ - ಸಮುದ್ರಗಳೇ ತುದಿಯಾಗುಳ್ಳ, ಪೃಥಿವ್ಯಾಃ - ಭೂಮಿಗೆ, ಭರ್ತಾರಂ - ಅಧಿಪತಿಯಾದ ಗಂಡನನ್ನು ಕುರಿತು, ಅನುಗಚ್ಛತಿ - ಅನುಸರಿಸಿಹೋದಳೋ, ಜನಕಾತ್ಮಜಾ - ಜನಕರಾಯನ ಮಗಳಾದ, ಮಹಾಭಾಗಾ - ಪುಣ್ಯಶಾಲಿಯಾದ, ಸಾವೈದೇಹೀ - ಆ ಸೀತಾದೇವಿಯು, ಕೃತಕೃತ್ಯಾ - ಕೃತಾರ್ಥಳು. ॥ ೧೧ ॥ ಕಾಕುತ್ಸ್ಥಃ - ಶ್ರೀರಾಮನು, ನಂದನೇ - ಕುಬೇರನ ನಂದನವನದಲ್ಲಿ, ಕುಬೇರಇವ - ಕುಬೇರನಂತೆ, (ಗೋ) ವೈಕುಂಠದಲ್ಲಿ, ಕುಬೇರಇವ - ಪೃಥಿವಿಯೇ ಶರೀರವಾಗುಳ್ಳ ಶ್ರೀಮನ್ನಾರಾಯಣನಂತೆ,

---

ಅಭಿಷೇಕೋದಕದಿಂದ ತೋಯಿಸಿದವನಾಗುವುದಿಲ್ಲವೋ ಅದುವರೆವಿಗೂ ನನಗೆ ಶಾಂತಿಯುಂಟಾಗುವುದಿಲ್ಲ. ಅಹಹ! ಲಕ್ಷ್ಮಣನು ಎಷ್ಟು ಕೃತಾರ್ಥನೋ! ಚಂದ್ರನಂತೆ ನಿರ್ಮಲವಾದ ಮುಖವುಳ್ಳವನೂ, ರಾಜೀವಾಕ್ಷನೂ, ಮಹಾ ಕಾಂತಿವಂತನೂ ಆದ ಶ್ರೀರಾಮಮೂರ್ತಿಯ ಮುಖಾರವಿಂದವನ್ನುಯಾವಾಗಲೂ ದರ್ಶನಮಾಡಿಕೊಳ್ಳುತ್ತಿರುವನಲ್ಲವೆ! ॥೮-೧೦॥ ಮಹಾ ಭಾಗ್ಯವಂತಳೂ, ಜನಕರಾಜ ಕುಮಾರಿಯೂ ಆದ ಸೀತಾದೇವಿಯು ಎಷ್ಟು ಕೃತಾರ್ಥಳೋ? ಆ ಮಹಾ ಪತಿವ್ರತೆಯು ಪತಿದೇವನನ್ನು ಚತುಸ್ಸಮುದ್ರಗಳವರೆಗೂ ಇರುವ ಈ ಭೂಮಂಡಲನ್ನು ಕುರಿತು ಅನುವರ್ತಿಸುವಳಲ್ಲವೆ! ॥ ೧೧ ॥ ಗಿರಿರಾಜನಾದ ಹಿಮವತ್ಪರ್ವತಕ್ಕೆ ಸಮಾನವಾದ ಈ ಚಿತ್ರಕೂಟವು ಎಷ್ಟು ಭಾಗ್ಯಶಾಲಿಯು. ನಮ್ಮಣ್ಣದೇವನಾದ ಶ್ರೀರಾಮಮೂರ್ತಿಯು ಈ ಚಿತ್ರಕೂಟಪರ್ವತದಲ್ಲಿ "ಕುಬೇರನು ನಂದನವನದಲ್ಲಿರುವಂತೆ ವಾಸ ಮಾಡಿಕೊಂಡಿರುವನಲ್ಲವೆ! ಈ ದುರ್ಗಪ್ರದೇಶವೂ, ಮಹಾ

ಸುಭಗ ಶ್ಚಿತ್ರಕೂಟೋಽಸೌ ಗಿರಿರಾಜೋಪಮೋ ಗಿರಿಃ ॥ ಯಸ್ಮಿನ್ ವಸತಿ ಕಾಕುತ್ಸ್ಥಃ ಕುಬೇರಇವ ನಂದನೇ ॥ ೧೨ ॥ ಕೃತಕಾರ್ಯಮಿದಂ ದುರ್ಗಂ ವನಂ ವ್ಯಾಳ ನಿಷೇವಿತಮ್ ॥ ಯದಧ್ಯಾಸ್ತೇ ಮಹಾತೇಜಾ ರಾಮ ಶ್ಶಸ್ತ್ರಭೃತಾಂ ವರಃ ॥ ೧೩ ॥ ಏವಮುಕ್ತ್ವಾ ಮಹಾತೇಜಾ ಭರತಃ ಪುರುಷರ್ಷಭಃ ॥ ಪದ್ಭ್ಯಾಮೇವ ಮಹಾಬಾಹುಃ ಪ್ರವಿವೇಶ ಮಹದ್ವನಮ್ ॥ ೧೪ ॥ ಸ ತಾನಿ ದ್ರುಮಜಾಲಾನಿ ಜಾತಾನಿ ಗಿರಿಸಾನುಷು ॥ ಪುಷ್ಪಿತಾಗ್ರಾಣಿ ಮಧ್ಯೇನ ಜಗಾಮ ವದತಾಂ ವರಃ ॥ ೧೫ ॥ ಸಗಿರೇಶ್ಚಿತ್ರಕೂಟಸ್ಯ ಸಾಲಮಾಸಾದ್ಯ ಪುಷ್ಪಿತಂ

ಯಸ್ಮಿನ್ - ಯಾವ ಚಿತ್ರಕೂಟದಲ್ಲಿ, ವಸತಿ - ಇರುತ್ತಾನೆಯೋ, ಗಿರಿರಾಜೋಪಮಃ - ಹಿಮವಂತನಿಗೆ ಸಮಾನವಾದ, ಚಿತ್ರಕೂಟಃ - ಚಿತ್ರಕೂಟವೆಂಬ, ಸಗಿರಿಃ - ಆ ಬೆಟ್ಟವು, ಸುಭಗಃ - ಅತಿರಮಣೀಯ ವಾದುದು. ॥ ೧೨ ॥ ಶಸ್ತ್ರಭೃತಾಂ - ಶಸ್ತ್ರಧಾರಿಗಳಲ್ಲಿ, ವರಃ - ಶ್ರೇಷ್ಠನಾದ, ಮಹಾತೇಜಾಃ-ಮಹಾ ಪರಾಕ್ರಮಶಾಲಿಯಾದ, ರಾಮಃ - ಶ್ರೀರಾಮನು, ಯತ್ - ಯಾವ ದುರ್ಗದಲ್ಲಿ, ಅಧ್ಯಾಸ್ತೇ - ವಾಸ ಮಾಡಿಕೊಂಡಿರುವನೋ, ವ್ಯಾಳನಿಷೇವಿತಂ - ಸರ್ಪಗಳಿಂದ ಸೇವಿಸಲ್ಪಟ್ಟ, ದುರ್ಗಂ - ಹೊಗುವದಕ್ಕೆ ಅಶಕ್ಯವಾದ, ಇದಂವನಂ - ಈ ಅರಣ್ಯವು, ಕೃತಕಾರ್ಯಂ - ಸಫಲವಾದುದು. ॥ ೧೩ ॥ ಏವಂ - ಈಪರಿಯಾಗಿ, ಉಕ್ತ್ವಾ - ಹೇಳುತ್ತಲೇ, ಮಹಾತೇಜಾಃ-ಮಹಾ ಪರಾಕ್ರಮಶಾಲಿಯಾದ, ಪುರುಷರ್ಷಭಃ - ಮನುಜಶ್ರೇಷ್ಠನಾದ, ಮಹಾಬಾಹುಃ - ದೊಡ್ಡಭುಜಗಳುಳ್ಳ, ಭರತಃ - ಭರತನು, ಪದ್ಭ್ಯಾಮೇವ - ಕಾಲುಗಳಿಂದಲೇ, ಮಹದ್ವನಂ - ಮಹಾರಣ್ಯವನ್ನು, ಪ್ರವಿವೇಶ - ಹೊಕ್ಕನು. ॥ ೧೪ ॥ ವದತಾಂ - ಮಾತನಾಡುವರೊಳಗೆ, ವರಃ - ಶ್ರೇಷ್ಠನಾದ, ಸಃ-ಆ ಭರತನು, ಗಿರಿಸಾನುಷು- ಬೆಟ್ಟದ ಜರಿತೆಗಳಲ್ಲಿ, ಜಾತಾನಿ - ಹುಟ್ಟಿರುವ, ಪುಷ್ಪಿತಾಗ್ರಾಣಿ - ಹೂಬಿಟ್ಟಿರುವ ತುದಿಭಾಗಗ ಳುಳ್ಳ, ತಾನಿದ್ರುಮಜಾಲಾನಿ - ಆ ವೃಕ್ಷತಂಡಗಳ, ಮಧ್ಯೇನ - ಮಧ್ಯಪ್ರದೇಶದಲ್ಲಿ, ಜಗಾಮ - ತೆರ ಳಿದನು. ॥ ೧೫ ॥ ಸಃ - ಆ ಭರತನು, ಚಿತ್ರಕೂಟಸ್ಯಗಿರೇಃ-ಚಿತ್ರಕೂಟದ ಸಂಬಂಧವಾದ, ಪುಷ್ಪಿತಂ- ಹೂಗಳುಳ್ಳ, ಸಾಲಂ - ಸಾಲವೃಕ್ಷವನ್ನು, ಆಸಾದ್ಯ - ಹತ್ತಿ, ರಾಮಾಶ್ರಮಗತಸ್ಯ - ಶ್ರೀರಾಮನ ಆಶ್ರಯದಲ್ಲಿರುವ, ಅಗ್ನೇಃ - ಯಜ್ಞೇಶ್ವರನ, ಉಚ್ಛ್ರಿತಂ - ಉನ್ನತವಾದ, ಧ್ವಜಂ - ಧ್ವಜದಂತಿ

ಸರ್ಪಾದಿಗಳಿಂದೊಡಗೂಡಿದ ಈ ವನವು ಶಸ್ತ್ರಧಾರಿಗಳಲ್ಲಿ ಮಹಾಶ್ರೇಷ್ಠನಾದವನೂ, ಮಹಾ ತೇಜಸ್ವಿಯೂ ಆದ ಶ್ರೀರಾಮಮೂರ್ತಿಯು ವಾಸಮಾಡುವುದರಿಂದ ಕೃತಕೃತ್ಯಗಳೆನಿಸಿದುವು" ಎಂದನು. ॥ ೧೨-೧೩ ॥ ಮಹಾ ತೇಜಸ್ವಿಯೂ, ಮಹಾಬಾಹುವೂ, ಪುರುಷಶ್ರೇಷ್ಠನೂ ಆದ ಭರತಕುಮಾರನು ಈ ರೀತಿಯಾಗಿ ಹೇಳಿ ಆ ದಂಡಕಾರಣ್ಯವನ್ನು ಪ್ರವೇಶಿಸಿದನು. ಇಂತು ಆ ಅರಣ್ಯವನ್ನು ಕಾಲ್ನಡಿಗೆಯಿಂದಲೇ ಪ್ರವೇಶಿಸಿ ಚಿತ್ರಕೂಟಪರ್ವತದ ತಪ್ಪಲಿನಲ್ಲಿದ್ದ ವೃಕ್ಷನಿವಹಗಳ ಹೂ ಮೊಳೆತ ಗಿಡಗಳ ಮಧ್ಯದಲ್ಲಿಯೇ ಮಾರ್ಗವನ್ನು ಕಲ್ಪಿಸಿಕೊಂಡು ॥೧೪-೧೫॥ ಮುಂಬರಿದನು. ಆ ಬಳಿಕಲಾತನು ಚೆನ್ನಾಗಿ ಹೂ ಬಿಟ್ಟಿದ್ದ ಚಿತ್ರಕೂಟಪರ್ವತ ಸಂಬಂಧವಾದ ಸಾಲವೃಕ್ಷದ ಬಳಿಸಾರಿ ರಾಮಾಶ್ರಮದಿಂದ ಹೊರಬರುತಿದ್ದ, ಎತ್ತಿ ಹಿಡಿಯಲ್ಪಟ್ಟ ಅಗ್ನಿಧ್ವಜವನ್ನು ನೋಡಿ, ಬಂಧುಜನರೊಡನೆ ಮೂರ್ಛಿತನಾದನು. ॥ ೧೬ ॥

ರಾಮಾಶ್ರಮ ಗತಸ್ಯಾಗ್ನೇ ರ್ದದರ್ಶ ಧ್ವಜ ಮುಚ್ಛ್ರಿತಂ ‖ ೧೬ ‖ ತಂ ದೃಷ್ಟ್ವಾ
ಭರತ ಶ್ರ್ಶ್ರೀಮಾ ಮುಮೋಹ ಸಹಬಾಂಧವಃ ‖ ಅತ್ರ ರಾಮ! ಇತಿಜ್ಞಾತ್ವಾ
ಗತಃಪಾರ ಮಿವಾಂಭಸಃ ‖ ೧೭ ‖

ಸ ಚಿತ್ರಕೂಟೇತು ಗಿರೌ ನಿಶಮ್ಯ
ರಾಮಾಶ್ರಮಂ ಪುಣ್ಯಜನೋಪಪನ್ನಮ್ ‖
ಗುಹೇನ ಸಾರ್ಧಂ ತ್ವರಿತೋ ಜಗಾಮ
ಪುನರ್ನಿವೇಶ್ಯೈವ ಚಮೂಂ ಮಹಾತ್ಮಾ ‖ ೧೮ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟನವತಿತಮಸ್ಸರ್ಗಃ.

ರುವ ಹೊಗೆಯನ್ನು, ಅಗ್ರೇ - ಕೊನೆಯಲ್ಲಿ, ದದರ್ಶ - ಕಂಡನು. ‖ ೧೬ ‖ ಶ್ರೀಮಾ - ಸಂಪದ್ಯುಕ್ತನಾದ, ಭರತಃ - ಭರತನು, ಸಹಬಾಂಧವಃ - ಪರಿವಾರದೊಡನೆ, ಅತ್ರ - ಈ ಸ್ಥಳದಲ್ಲಿ, ರಾಮ ಇತಿ - ಶ್ರೀರಾಮನಿದ್ದಾನೆಂದು, ಜ್ಞಾತ್ವಾ - ತಿಳಿದು, ಅಂಭಸಃ - ಕಡಲಿನ, ಪಾರಂ - ದಡವನ್ನು, ಗತಇವ - ಹೊಂದಿದವನಂತೆ, ಮುಮೋಹ - ಮೋಹಪಾರವಶ್ಯವನ್ನು ಹೊಂದಿದನು.‖೧೭‖ (೧) ಮಹಾತ್ಮಾ - ಮಹಾತ್ಮನಾದ, ಸಃ - ಆ ಭರತನು, ಚಿತ್ರಕೂಟೇಗಿರೌತು-ಚಿತ್ರಕೂಟಪರ್ವತದಲ್ಲಿ, ಪುಣ್ಯಜನೋಪಪನ್ನಂ - ಪುಣ್ಯಕರವಾದ ಜನರಿಂದ ಕೂಡಿರುವ, ರಾಮಾಶ್ರಮಂ - ಶ್ರೀರಾಮನ ಪರ್ಣಶಾಲೆಯನ್ನು, ನಿಶಮ್ಯ - ನೋಡಿ, ತ್ವರಿತಃ - ಜಾಗ್ರತೆಯುಳ್ಳವನಾಗಿ, ಚಮೂಂಪುನಃ - ಶ್ರೀರಾಮಾನ್ವೇಷಣಕ್ಕಾಗಿ ಬಂದಿರುವ ಸೇನೆಯನ್ನೂ ಕೂಡ, ನಿವೇಶ್ಯೈವ - ಒಂದು ಸ್ಥಳದಲ್ಲಿ ಇರಿಸಿ, ಗುಹೇನ ಸಾರ್ಧಂ - ಗುಹನೊಡಗೂಡಿ, ಜಗಾಮ - ಹೊರಟನು. ‖ ೧೮ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟನವತಿತಮಸ್ಸರ್ಗಃ.

ಆ ಬಳಿಕ ಮಹಾತ್ಮನೂ, ದಶರಥರಾಜನಂದನನೂ ಆದ, ಭರತಕುಮಾರನು "ಇದೋ ಇಲ್ಲಿ ಶ್ರೀರಾಮನಿದ್ದಾನೆ" ಎಂದು ಹೇಳಿ, ಅಗಾಧವಾದ ಕಡಲಿನ ಆಚಿನ ದಡವನ್ನು ಹೊಂದಿದವನಂತೆ ಸಂತುಷ್ಟನಾದನು. ಹೀಗೆ ಆ ಭರತಕುಮಾರನು ಚಿತ್ರಕೂಟಪರ್ವತದಲ್ಲಿ, ಪುಣ್ಯಸಂಪಾದಕರಾದ ಸಜ್ಜನರಿಂದ ಹೊಂದಲು ತಕ್ಕುದಾದ ಶ್ರೀರಾಮಾಶ್ರಮವನ್ನು ತಿಳಿದು ತನ್ನ ಸೇನೆಯನ್ನು ಆ ಕಾಡಿನಲ್ಲಿಯೇ ಇರಿಸಿದವನಾಗಿ ಗುಹನೊಡಗೂಡಿ ಜಾಗ್ರತೆಯಾಗಿ ಮುಂಬರಿದವನಾದನು. ‖ ೧೭-೧೮ ‖

ಇಂತಿದು ಭರತಕುಮಾರಕೃತ ಶ್ರೀರಾಮಾನ್ವೇಷಣ ವಿಧಾನ ಕಥನವೆಂಬ
ತೊಂಭತ್ತೆಂಟನೆಯ ಸರ್ಗವು ಸಮಾಪ್ತವಾದುದು.

ಟಿ. (೧) "ಮುಮೋದ" ಎಂದು ಪಾಠಾಂತರ.

ಅಯೋಧ್ಯಾಕಾಂಡೇ ಏಕೋನಶತತಮಸ್ಸರ್ಗಃ.

ನಿವಿಷ್ಟಾಯಾಂತು ಸೇನಾಯಾ ಮುತ್ಸುಕೋ ಭರತ ಸ್ತದಾ ॥ ಜಗಾಮ ಭ್ರಾತರಂ ದ್ರಷ್ಟುಂ ಶತ್ರುಘ್ನ ಮನುದರ್ಶಯರ್ ॥ ೧ ॥ ಋಷಿಂ ವಸಿಷ್ಠಂ ಸಂದಿಶ್ಯ ಮಾತೄ ರ್ಮೇ ಶೀಘ್ರ ಮಾನಯ ॥ ಇತಿ ತ್ವರಿತಮಗ್ರೇ ಸ ಜಗಾಮ ಗುರುವತ್ಸಲಃ ॥ ೨ ॥ ಸುಮಂತ್ರಸ್ತ್ವಪಿ ಶತ್ರುಘ್ನ ಮದೂರಾ ದನ್ವಪದ್ಯತ ॥

ಸೇನಾಯಾಂತು-ಸೈನ್ಯವನ್ನಾದರೆ, ನಿವಿಷ್ಟಾಯಾಂ-ಇಳಿಸಲ್ಪಟ್ಟುದಾಗಲು, ಉತ್ಸುಕಃ-ಉತ್ಕಂಠಾವಿಷ್ಟವಾದ, ಭರತಃ-ಭರತನು, ತದಾ-ಆಕಾಲದಲ್ಲಿ, ಭ್ರಾತರಂ-ಅಣ್ಣನಾದಶ್ರೀರಾಮನನ್ನು,ದ್ರಷ್ಟುಂ-ನೋಡಲು, ಶತ್ರುಘ್ನಂ - ಶತ್ರುಘ್ನನನ್ನು ಕುರಿತು, ಅನುದರ್ಶಯರ್-ರಾಮಾಶ್ರಮದ ಗುರುತುಗಳನ್ನು ತೋರಿಸುತ್ತ, ಜಗಾಮ - ತೆರಳಿದನು. ॥೧॥ ಗುರುವತ್ಸಲಃ-ಅಣ್ಣನಲ್ಲಿ ಪರಮ ವಿಶ್ವಾಸವುಳ್ಳ, (ಗೋ) ಗುರುವಾದುದರಿಂದ ಗೌರವವುಳ್ಳ, ಸಃ - ಆ ಭರತನು, ಮೇ - ನನ್ನ, ಮಾತೄಃ - ತಾಯಿಯರನ್ನು, ಶೀಘ್ರಂ-ಜಾಗ್ರತೆಯಾಗಿ, ಆನಯೇತಿ - (೧) ಕರೆದುಕೊಂಡು ಬನ್ನಿರೆಂದು, ವಸಿಷ್ಠಂ ಋಷಿಂ - ವಸಿಷ್ಠ ಋಷಿಯನ್ನು ಕುರಿತು, ಸಂದಿಶ್ಯ - ಆಜ್ಞಾಪಿಸಿ, ಅಗ್ರೇ - ಮುಂದೆ, ತ್ವರಿತಂ - ಜಾಗ್ರತೆಯಾಗಿ, ಜಗಾಮ - ಹೊರಟನು. ॥ ೨ ॥ ಸುಮಂತ್ರಸ್ತ್ವಪಿ - ಸುಮಂತ್ರನೂ ಕೂಡ, ಅದೂರಾತ್ - ಸಮೀಪದಲ್ಲಿಯೇ, ಶತ್ರುಘ್ನಂ - ಶತ್ರುಘ್ನನನ್ನು, ಭರತಸ್ಯೇವ - ಭರತನಿಗೆ ಹೇಗೋ ಹಾಗೆ, ತಸ್ಯಚ - ಆ ಸುಮಂತ್ರನಿಗೂ, ರಾಮದರ್ಶನಜಃ - ರಾಮನನ್ನು ನೋಡಬೇಕೆಂಬ ಅಭಿಲಾಷೆಯಿಂದ ಹುಟ್ಟಿರುವ,

---

ಆರೀತಿಯಾಗಿ ಭರತಕುಮಾರನು ತನ್ನ ಸೇನೆಯೆಲ್ಲವನ್ನೂ ನಿಯಮಿಸಿದವನಾಗಿ, ತಮ್ಮನಾದ ಶತ್ರುಘ್ನನಿಗೆ ಶ್ರೀರಾಮಾಶ್ರಮದ ಚಿಹ್ನೆಗಳೆಲ್ಲವನ್ನೂ ತೋರುತ್ತಾ, ಅಣ್ಣನನ್ನು ನೋಡಬೇಕೆಂಬ ಕುತೂಹಲವುಳ್ಳವನಾಗಿ, ಬಹು ಜಾಗ್ರತೆಯಾಗಿ ಮುಂಬರಿದವನಾದನು. ಇಂತು ಹೊರಟ ಭರತನು, ಗುರುವಾದ ವಸಿಷ್ಠಮುನೀಶ್ವರನಲ್ಲಿ ವಾತ್ಸಲ್ಯವುಳ್ಳವನಾದುದರಿಂದಾತನನ್ನು ಕರೆದು “ ಅಯ್ಯಾ ಮುನಿಶ್ರೇಷ್ಠನೆ ! ನನ್ನ ತಾಯಿಯರೆಲ್ಲರನ್ನೂ ಜಾಗ್ರತೆಯಾಗಿ ಕರೆದುಕೊಂಡು ಬರುವವನಾಗು ” ಎಂದು ಹೇಳಿ ತಾನು ಬಹು ಜಾಗ್ರತೆಯಾಗಿ ಹೊರಟನು. ॥೧-೨॥ ಆಗ ಸುಮಂತ್ರನು ಶತ್ರುಘ್ನನನ್ನು ಹಿಂಬಾಲಿಸಿದನು. ಆ ಸಮಯದಲ್ಲಿ ಶ್ರೀರಾಮನನ್ನು ನೋಡಬೇಕೆಂಬ ಆದರವು ಭರತಕುಮಾರನಿಗೆ ಎಷ್ಟಿದ್ದಿತೋ, ಸುಮಂತ್ರ

ಟಿ. (೧) “ ಮಾತೄರ್ಮೇ ಶೀಘ್ರಮಾನಯ ” ಎಂಬ ಕಡೆಯಲ್ಲಿ, “ ಭರತನು ಹಿಂದಿನ ಸೇನಾನಿವೇಶನದಲ್ಲಿ ತನ್ನತಾಯಿಯರನ್ನೂ ಅಲ್ಲಿಯೇ ಇರಗೊಳಿಸಿ, ಶ್ರೀರಾಮಾವಾಸವನ್ನು ತಿಳಿದು ಆಮೇಲೆ ಕರೆಯಿಸಿಕೊಳ್ಳುವೆನೆಂದು ಹೇಳಿದ್ದಂತೆ ತೋರುತ್ತದೆ ” ಎಂದು **ಗೋವಿಂದರಾಜರು** ಗಮ್ಯಾರ್ಥವನ್ನು ಬರೆದರು. ಪೌರ್ವಾಪರ್ಯದಿಂದ ಈ ಅರ್ಥವು ತಿಳಿದೇ ತಿಳಿಯುತ್ತದೆಯಾದುದರಿಂದ ಈ ಗಮ್ಯಾರ್ಥವು ಬೇಕಾಗಿರಲಿಲ್ಲ. ಆದರೂ ಅಧಿಕಂ ಫಲತ್ವೇನ ಸಾಧುವೆಂದು ಹೇಳುತ್ತೇವೆ.

ರಾಮದರ್ಶನಜಸ್ತರ್ಷೋ ಭರತಸ್ಯೇವ ತಸ್ಯಚ ॥ ೩ ॥ ಗಚ್ಛನ್ನೇವಾಥ ಭರತ ಸ್ತಾಪಸಾಲಯ ಸಂಸ್ಥಿತಾಂ ॥ ಭ್ರಾತುಃ ಪರ್ಣಕುಟೀಂ ಶ್ರೀಮಾ ನುಟಜಂಚ ದದರ್ಶಹ ॥ ೪ ॥ ಶಾಲಾಯಾ ಸ್ತ್ವಗ್ರತಸ್ತಸ್ಯ ದದರ್ಶ ಭರತ ಸ್ತದಾ ॥ ಕಾಷ್ಠಾನಿ ಚಾವಭಗ್ನಾನಿ ಪುಷ್ಪಾಣ್ಯುಪಚಿತಾನಿಚ ॥ ೫ ॥ ಸಲಕ್ಷ್ಮಣಸ್ಯ ರಾಮಸ್ಯ ದದರ್ಶಾಶ್ರಮ ಮಾಯುಷಃ ॥ ಕೃತಂ ವೃಕ್ಷೇಷ್ವಭಿಜ್ಞಾನಂ ಕುಶಚೀರೈಃ ಕ್ವಚಿ ತ್ಕ್ವಚಿತ್ ॥ ೬ ॥ ದದರ್ಶ ಚ ವನೇ ತಸ್ಮಿ ನ್ಮಹತ ಸ್ಸಂಚಯಾ

ತರ್ಷಃ - ಅಭಿಲಾಷೆಯು, ಅಭೂತ್ - ಆಯಿತು. ॥ ೩ ॥ ಅಥ - ಬಳಿಕ, ಶ್ರೀಮಾನ್ - ಸಂಪದ್ಯುಕ್ತನಾದ, ಭರತಃ - ಭರತನು, ಗಚ್ಛನ್ನೇವ - ಮುಂಬರಿಯುತ್ತ, ತಾಪಸಾಲಯಸಂಸ್ಥಿತಾಂ - ಋಷ್ಯಾಶ್ರಮಗಳಂತಿರುವ, ಭ್ರಾತುಃ - ಅಗ್ರಜನಾದ ಶ್ರೀರಾಮನ, ಪರ್ಣಕುಟೀಂ - (೧) ಪರ್ಣಶಾಲಾರೂಪವಾದ, ಉಟಜಂ ಆಶ್ರಮವನ್ನೂಕೂಡ, ದದರ್ಶಹ - ಕಂಡನಷ್ಟೆ. ॥೪॥ ತದಾ - ಆ ಸಮಯದಲ್ಲಿ, ಭರತಃ - ಭರತನು, ತಸ್ಯಾಶ್ಶಾಲಾಯಾಃ - ಆ ಪರ್ಣಶಾಲೆಯ, ಅಗ್ರತಃ - ಮುಂಗಡೆ, ಅವಭಗ್ನಾನಿ-ಮುರಿಯಲ್ಪಟ್ಟ, ಕಾಷ್ಠಾನಿಚ - ಹೋಮಾರ್ಥವಾದ ಇಂಧನಗಳನ್ನು, ಉಪಚಿತಾನಿಚ - ಪೂಜಾರ್ಥವಾಗಿ ಸಂಪಾದಿಸಲ್ಪಟ್ಟ, ಪುಷ್ಪಾಣಿ - ಹೂವುಗಳನ್ನು, ದದರ್ಶ - ಕಂಡನು. ॥ ೫ ॥ ಸಲಕ್ಷ್ಮಣಸ್ಯ-ಲಕ್ಷ್ಮಣನಿಂದೊಡಗೂಡಿದ, ಆಶ್ರಮಂ - ಆಶ್ರಮವನ್ನು ಕುರಿತು ಬಂದಿರುವ, ರಾಮಸ್ಯ - ಶ್ರೀರಾಮನ ಸಂಬಂಧವಾದ, ವೃಕ್ಷೇಷು - ಗಿಡಗಳಲ್ಲಿ, ಕುಶಚೀರೈಃ - ದರ್ಭೆಗಳಿಂದಲೂ, ನಾರುಮಡಿಗಳಿಂದಲೂ, ಕ್ವಚಿತ್ಕ್ವಚಿತ್ - ಒಂದೊಂದುಕಡೆ, ಕೃತಂ - ಮಾಡಲ್ಪಟ್ಟ, ಅಭಿಜ್ಞಾನಂ - ಗುರುತುಗಳನ್ನು, ದದರ್ಶ - ಕಂಡನು. ॥ ೬ ॥ ತಸ್ಮಿನ್ವನೇ - ಆ ವನದಲ್ಲಿ, ಶೀತಕಾರಣಾತ್ - ಛಳಿಯನ್ನು ಹೋಗಲಾಡಿಸಲೋಸುಗ, ಮೃಗಾಣಾಂ - ಮೃಗಗಳ, ಮಹಿಷಾಣಾಂಚ - ಕೋಣಗಳ, ಕರೀಷೈಃ - ಒಣಗಿದ

ನಿಗೂ ಸಹ ಅಷ್ಟೇ ಇದ್ದಿತು. ಶ್ರೀಮಂತನಾದ ಭರತನೀರೀತಿ ಅಣ್ಣದೇವನಾದ ಶ್ರೀರಾಮಮೂರ್ತಿಯನ್ನು ನೋಡಲೋಸುಗ ಪಾದಚಾರಿಯಾಗಿಯೇ ಮುಂಬರಿಯುತ್ತ, ತಪಸ್ವಿಗಳ ಗೃಹಗಳಿಗೆ ಸಮಾನವಾಗಿರುವುದೂ, ಪರ್ಣಗಳಿಂದಲಂಕೃತವಾದುದೂ ಆದ ಶ್ರೀರಾಮನ ಪರ್ಣಶಾಲೆಯನ್ನು ಕಂಡವನಾದನು. ॥೩-೫॥ ಆ ಮೇಲೆ ಆ ಪರ್ಣಶಾಲೆಯ ಸಮೀಪದಲ್ಲಿಯೇ ರಾತ್ರಿಯ ಕಾಲಗಳಲ್ಲಿ ಬೆಳಕಿಗೋಸುಗವೂ, ಚಳಿಯಾಗದಿರಲೋಸುಗವೂ, ಉರಿಹಾಕಲು ಅನುಕೂಲವಾಗಿರುವಂತೆ ಕಟ್ಟುಗಳನ್ನು ಕಟ್ಟದ ಕಟ್ಟಿಗೆಗಳ ಹೊರೆಗಳನ್ನೂ, ದೇವಪೂಜೆಗೋಸುಗ ಕುಯ್ದಿಡಲಾಗಿರುವ ಹೂಗಳ ರಾಶಿಗಳನ್ನೂ ಕಂಡವನಾದನು. ಅಲ್ಲದೆ ಆ ಭರತಕುಮಾರನು ತಪೋವನವನ್ನು ಹೊಂದಿರುವ, ಶ್ರೀರಾಮಲಕ್ಷ್ಮಣರ ನಾರುಮಡಿಗಳು ಗಿಡಗಳ

ಟಿ. (೧) "ಪರ್ಣಕುಟೀಂ" ಎಂಬೆಡೆಯಲ್ಲಿ **ಗೋವಿಂದರಾಜರ** ಅರ್ಥಕಲ್ಪನೆಯು "ಉಟಜವನ್ನು ನೋಡಲೋಸುಗ ಬರುವ ತಪಸ್ವಿಗಳೊಡನೆ ಸುಖವಾಗಿ ಕುಳಿತುಕೊಳ್ಳಲು ನಿರ್ಮಿಸಿದ ಪರ್ಣಶಾಲೆ" ಎಂದಿದೆ. ಶ್ರೀಮಾನ್ - ಶ್ರೀರಾಮನ ಪರ್ಣಶಾಲೆಯನ್ನು ನೋಡುವಿಕೆಯಲ್ಲಿ ಪ್ರೀತಿಯುಳ್ಳುದರಿಂದ ಉಂಟಾದ ಕಾಂತಿಸಮನ್ವಿತನು, ಉಟಜಂ - ಬಿಸಿಲು ಹೊತ್ತುಗಳಲ್ಲಿ ವಾಸಮಾಡಲು ಕಲ್ಪಿಸಿದ ಪರ್ಣಮಂಟಪ, ಅಥವ ಪರ್ಣಶಾಲೆಯ ಮಧ್ಯದಲ್ಲಿ ಯಾವಾಗಲೂ ವಾಸಮಾಡಲು ಯೋಗ್ಯವಾಗಿ ನಿರ್ಮಿತವಾದ ಅಂತರ್ಗೃಹ" ಎಂದರ್ಥ.

ಕೃತಾರ್ ॥ ಮೃಗಾಣಾಂ ಮಹಿಷಾಣಾಂಚ ಕರೀಷೈಃ ಶ್ರಿತ ಕಾರಣಾತ್ ॥ ೭ ॥ ಗಚ್ಛನ್ನೇವ ಮಹಾಬಾಹು ರ್ದ್ಯುತಿಮಾನ್ ಭರತ ಸ್ತದಾ ॥ ಶತ್ರುಘ್ನಂ ಚಾಬ್ರವೀ ದ್ಧೃಷ್ಟ ಸ್ತಾನಮಾತ್ಯಾಂಶ್ಚ ಸರ್ವಶಃ ॥ ೮ ॥ ಮನ್ಯೇ ಪ್ರಾಪ್ತಾಸ್ಸ್ಮ ತಂ ದೇಶಂ ಭರದ್ವಾಜೋಯ ಮಬ್ರವೀತ್ ॥ ನಾತಿದೂರೇಹಿ ಮನ್ಯೇಹಂ ನದೀಂ ಮಂದಾಕಿನೀ ಮಿತಃ ॥೯॥ ಉಚ್ಚೈ ರ್ಬದ್ಧಾನಿ ಚೀರಾಣಿ ಲಕ್ಷ್ಮಣೇನ ಭವೇದಯಮ್ ॥

ಸಗಣಿಗಳಿಂದ, ಕೃತಾರ್ - ಮಾಡಲ್ಪಟ್ಟ, ಮಹಾರ್ - ಬಹಳವಾದ, ಸಂಚಯಾರ್ - ಸಾಮಗ್ರಿಗಳನ್ನು, **ದದರ್ಶ** - ಕಂಡನು. ॥ ೭ ॥ ತದಾ - ಆ ಕಾಲದಲ್ಲಿ, ದ್ಯುತಿಮಾನ್ - ತೇಜೋವಂತನಾದ, ಮಹಾ **ಬಾಹುಃ** - ಮಹಾ ಭುಜಬಲಶಾಲಿಯಾದ, ಭರತಃ - ಭರತನು, ಗಚ್ಛನ್ನೇವ - ಹೋಗುತ್ತಿರುವನಾ **ಗಿಯೇ, ಹೃಷ್ಟಃ** - ಸಂತೋಷಗೊಂಡವನಾಗಿ, ಶತ್ರುಘ್ನಂಚ - ಶತ್ರುಘ್ನನನ್ನು, ಸರ್ವಶಃ - ಸಮಸ್ತ **ರಾದ, ತಾನಮಾತ್ಯಾಂಶ್ಚ** - ಆ ಮಂತ್ರಿಗಳನ್ನೂ ಕುರಿತು, ಅಬ್ರವೀತ್ - ನುಡಿದನು. ॥ ೮ ॥ **ಭರ ದ್ವಾಜಃ** - ಭರದ್ವಾಜಋಷಿಯು, ಯಂ-ಯಾವ ಪ್ರದೇಶವನ್ನು ಕುರಿತು, ಅಬ್ರವೀತ್-ನುಡಿದಿದ್ದನೋ. **ತಂದೇಶಂ** - ಆ ಪ್ರದೇಶವನ್ನು, ಪ್ರಾಪ್ತಾಃ - ಹೊಂದಿದವರು, ಸ್ಮ - ಆಗಿದ್ದೇವೆ, ಇತಿ - ಇಂತೆಂದು, **ಮನ್ಯೇ** - (೧) ತಿಳಿಯುತ್ತೇನೆ. ಇತಃ - ಇಲ್ಲಿಗೆ, ಮಂದಾಕಿನೀಂನದೀಂ - ಗಂಗಾನದಿಯನ್ನು, ನಾತಿ **ದೂರೇ** - ಸ್ವಲ್ಪ ದೂರದಲ್ಲಿಯೇ ಇರುವದನ್ನಾಗಿ, ಅಹಂ-ನಾನು, ಮನ್ಯೇಹಿ - ತಿಳಿದಿದ್ದೇನಷ್ಟೆ. ॥೯॥

ರೆಂಬೆಗಳಲ್ಲಿ ಒಣಗಲು ಹಾಕಿರುವುದನ್ನು ನೋಡಿದನು. ಮಾತ್ರವಲ್ಲದೆ ಶೀತನಿವಾರಣಾರ್ಥ **ವಾಗಿ ಉರಿಹಾಕಲು** ಪ್ರಯೋಜನಕರವಾದ ಜಿಂಕೆ, ಎಮ್ಮೆ ಮೊದಲಾದವುಗಳ ಒಣಗಿದ **ಬೆರಣಿಗಳ** ರಾಶಿಗಳನ್ನೂ ನೋಡಿದನು. ॥೬-೭॥ ಆಗ ಮಹಾಬಾಹುವೂ, ಕಾಂತಿಮಂತನೂ **ಆದ ಭರತನು** ಮುಂದು ಮುಂದಕ್ಕೆ ಹೋಗುತ್ತ, ರಾಮಾಶ್ರಮದ ಶುಭ ಚಿಹ್ನೆಗಳೆಲ್ಲವನ್ನೂ **ನೋಡಿ** ಮಹದಾನಂದಭರಿತನಾಗಿ, ಶತ್ರುಘ್ನನನ್ನೂ, ಮಂತ್ರಿಗಳಾದ ಸುಮಂತ್ರನೇ ಮೊದ ಲಾದವರನ್ನೂ ಹಿಂದೆಬಂದಿದ್ದ ಇತರ ಪ್ರಜೆಗಳನ್ನೂ ಕುರಿತು ಹೀಗೆಂದನು. “ ಎಲೈ ಪುರು **ಷೋತ್ತಮರಿರಾ** ! ಭರದ್ವಾಜಮುನಿಯು ಯಾವ ಪ್ರದೇಶವನ್ನು ಹೇಳಿದ್ದನೋ ಆ ಪ್ರದೇ ಶಕ್ಕೆ ಬಂದಿದ್ದೇವೆಂದು ತೋರುತ್ತದೆ. ಅಲ್ಲದೆ ಮಂದಾಕಿನೀನದಿಯು ಇಲ್ಲಿಗೆ ಸಮೀಪದ **ಲ್ಲಿಯೇ** ಇರುವುದೆಂದೂ ಯೋಚಿಸುತ್ತಿದ್ದೇನೆ. ಇದೋ ನೋಡಿರಿ. ಲಕ್ಷ್ಮಣಸ್ವಾಮಿಯಿಂದ **ಸಂಧ್ಯಾದಿ** ಕಾಲಗಳಲ್ಲಿ ಸುಲಭವಾಗಿ ಗುರುತುಹಿಡಿದು ಆಶ್ರಮವನ್ನು ಸೇರಲೋಸುಗ ಗಿಡದ ರೆಂಬೆಗಳಿಗೆ ಬಿಗಿದುಕಟ್ಟಿರುವ ಹಳೆಯ ಬಟ್ಟೆಯ ತುಂಡುಗಳು ಕಾಣಿಸುತ್ತವೆ. ಅಲ್ಲದೆ

ಟಿ. (೧) “ ಪ್ರಾಪ್ತಾಸ್ಮ ” ಎಂದು ಇಲ್ಲಿ ಭರತನು ಹೇಳಬೇಕಿತ್ತು. ಆದರೆ “ ಪ್ರಾಪ್ತಾಸ್ಮೇತಿ ಮನ್ಯೇ ” ಎಂದು ಹೇಳಿದ್ದಾನೆ. ಇದರ ಸ್ವಾರಸ್ಯವು ಹೀಗೆ—“ಕೈಕೇಯಿಯು ನನ್ನನ್ನು “ ಮಹಾರಾಜ ! ” ಎಂದು ಕರೆದುಬಿಟ್ಟಳು. ಇಷ್ಟರಿಂದಲೇ ನಾನು ದುರ್ಭಗನಾಗಿ ಹೋದೆನು. ಇಂತಹ ನನಗೆ ಪೂಜ್ಯತಮನೂ, ಗುರುಸ್ವರೂಪನೂ ಆದ ಶ್ರೀರಾಮನು ವಾಸ ಮಾಡುವ ಸ್ಥಳದ ಸಂದರ್ಶನವಾಗುವುದೆಂತು ? ಆದುದರಿಂದ ಈಗ ಕಾಣುತ್ತಿರುವುದು ಭ್ರಮೆಯೋ, ಸ್ವಪ್ನವೋ ಆಗಿರಬೇಕು, ಯಥಾರ್ಥವಲ್ಲ.”

ಅಭಿಜ್ಞಾನ ಕೃತಃಪಂಥಾ ವಿಕಾಲೇ ಗಂತು ಮಿಚ್ಛತಾ ॥೧೦॥ ಇದಂ ಚೋದಾತ್ತ ದಂತಾನಾಂ ಕುಂಜರಾಣಾಂ ತರಸ್ವಿನಾಮ್ ॥ ಶೈಲಪಾರ್ಶ್ವೇ ಪರಿಕ್ರಾಂತ ಮನ್ಯೋನ್ಯ ಮಭಿಗರ್ಜತಾಮ್ ॥೧೧॥ ಯಮೇವಾಧಾತು ಮಿಚ್ಛಂತಿ ತಾಪಸಾ ಸ್ಸತತಂ ವನೇ ॥ ತಸ್ಯಾಸೌ ದೃಶ್ಯತೇ ಧೂಮ ಸ್ಸಂಕುಲಃ ಕೃಷ್ಣವರ್ತ್ಮನಃ॥೧೨॥ಅತ್ರಾಹಂ ಪುರುಷವ್ಯಾಘ್ರಂ ಗುರುಸಂಸ್ಕಾರ ಕಾರಿಣಮ್॥

ಉಚ್ಚೈಃ - ಉನ್ನತಪ್ರದೇಶಗಳಲ್ಲಿ, ಲಕ್ಷ್ಮಣೇನ - ಲಕ್ಷ್ಮಣಸ್ವಾಮಿಯಿಂದ, ಚೀರಾಣಿ - ನಾರುಮಡಿಗಳು, ಬದ್ಧಾನಿ - ಕಟ್ಟಲ್ಪಟ್ಟವೆ, ಅಯಂ - ಇದೇ, ವಿಕಾಲೇ - ಅಕಾಲದಲ್ಲಿ, ಗಂತುಂ - ಹೋಗುವುದಕ್ಕೆ, ಇಚ್ಛತಾ - ಅಪೇಕ್ಷಿಸುತ್ತಿರುವುದರಿಂದ, ಅಯಂಪಂಥಾಃ - ಈ ಮಾರ್ಗವು, ಅಭಿಜ್ಞಾನಕೃತಃ - ಗುರುತಿಗೋಸುಗ ಮಾಡಲ್ಪಟ್ಟಿದೆ. ॥೧೦॥ ಉದಾತ್ತದಂತಾನಾಂ - ದೊಡ್ಡದೊಡ್ಡ ದಂತಗಳುಳ್ಳ, ತರಸ್ವಿನಾಂ - ವೇಗಶಾಲಿಗಳಾದ, ಅನ್ಯೋನ್ಯಂ - ಪರಸ್ಪರವಾಗಿ, ಅಭಿಗರ್ಜತಾಂ - ಗರ್ಜನೆ ಮಾಡುತ್ತಿರುವ, ಕುಂಜರಾಣಾಂ - ಆನೆಗಳ, ಶೈಲಪಾರ್ಶ್ವೇ - ಪರ್ವತಪ್ರಾಂತ್ಯ ಭೂಮಿಗಳಲ್ಲಿ, ಪರಿಕ್ರಾಂತಂ - ಸಂಚಾರ ಸ್ಥಳವು, ಇದಂ - ಇದು. ॥೧೧॥ ತಾಪಸಾಃ - ಋಷಿಗಳು, ಸತತಂ - ನಿರಂತರವೂ, ವನೇ - ವನದಲ್ಲಿ, ಯಮೇವ - ಯಾವ ಅಗ್ನಿಯನ್ನೇ, ಆಧಾತುಂ - ಆಧಾನ ಮಾಡಲು, ಇಚ್ಛಂತಿ - ಅಪೇಕ್ಷಿಸುತ್ತಾರೋ, ತಸ್ಯಕೃಷ್ಣವರ್ತ್ಮನಃ - (೧) ಅಂತಹ ಅಗ್ನಿಯ, ಸಂಕುಲಃ - ನಿಬಿಡವಾದ, ಅಸೌಧೂಮಃ - ಈ ಹೊಗೆಯು, ದೃಶ್ಯತೇ-ಕಾಣಲ್ಪಡುತ್ತದೆ. ॥೧೨॥ ಅತ್ರ - ಈ ಆಶ್ರಮದಲ್ಲಿ,

ಲಕ್ಷ್ಮಣಸ್ವಾಮಿಯು ರಾತ್ರಿಯ ಕಾಲಗಳಲ್ಲಿ ಉದಕವೇ ಮೊದಲಾದುವುಗಳನ್ನು ತೆಗೆದುಕೊಂಡು ಬರಬೇಕಾಗುವುದರಿಂದ, ದಾರಿಯಗುರುತಿಗಾಗಿ ಈ ಬಟ್ಟೆಯ ತುಂಡುಗಳನ್ನು ಈರೀತಿ ಕಟ್ಟಿರಬಹುದು. ॥೮-೧೦॥ ದೊಡ್ಡದೊಡ್ಡ ದಂತಗಳುಳ್ಳವೂ, ಮಹಾ ಬಲಶಾಲಿಗಳಾದುವೂ ಆದ ಆನೆಗಳು ಪರಸ್ಪರವಾಗಿ ಗರ್ಜಿಸುತ್ತ ಈ ಚಿತ್ರಕೂಟಪರ್ವತದ ಪಾರ್ಶ್ವಪ್ರದೇಶಗಳಲ್ಲಿ ಸಂಚರಿಸುತ್ತಿವೆ. ಎಲೈ ಮಾನವಶ್ರೇಷ್ಠರೆ ! ತಪೋನಿಷ್ಠರಾದ ಮುನಿಗಳು ಯಾವಾಗಲೂ ವನದಲ್ಲಿಯೇ ವಾಸಮಾಡಿಕೊಂಡು ಯಾವ ಅಗ್ನಿಹೋತ್ರಗಳನ್ನು ಸೇವಿಸುತ್ತಿರುವರೋ, ಆ ಅಗ್ನಿಹೋತ್ರದ ಧೂಮವು ನಿಮ್ನವಾಗಿ ಕಾಣಿಸುತ್ತಿರುವುದು, ನೋಡಿರಿ. ನಾನು ಮಹಾ ಸಂತೋಷವುಳ್ಳವನಾಗಿ, ಪುರುಷೋತ್ತಮನೂ, ಸರ್ವೋತ್ತಮವಾದ ಉಪದೇಶವನ್ನು ಮಾಡುವವನೂ, ಮಹರ್ಷಿಗಳಿಗೆ ಸಮಾನನಾದವನೂ, ಪೂಜ್ಯನೂ ಆದ ಶ್ರೀರಾಮಮೂರ್ತಿ

ಟಿ. (೧) ಈ ಶ್ಲೋಕದಲ್ಲಿ **ಗೋವಿಂದರಾಜರ** ಮತ್ತು **ತಿಲಕ** ವ್ಯಾಖ್ಯಾನಕಾರರ ವಿಶೇಷಾರ್ಥ ಸೂಚನೆಯು ಹೀಗೆ:—ತಪಸ್ವಿಗಳು ಸಾಯಂಪ್ರಾತಃ ಯಾವ ಅಗ್ನಿಯನ್ನು ಹೋಮಾರ್ಥವಾಗಿ ರಕ್ಷಿಸಲು ಅಪೇಕ್ಷಿಸುವರೋ ಅಂತಹ ಅಗ್ನಿಯ ಅತಿನಿಬಿಡವಾದ ಧೂಮವು ಕಾಣುತ್ತದೆ. ಪಚನಾಗ್ನಿ, ಹೋಮಾಗ್ನಿ, ಇವುಗಳೆರಡೂ ಇಲ್ಲಿ ಸೂಚಿತವಾಗಿ, ಯಾವಾಗಲೂ ಇರಬೇಕಾದ ಗಾರ್ಹಪತ್ಯಾಗ್ನಿಯನ್ನು ನಿರ್ದೇಶಿಸಲು " ಸಂಕುಲ " ಶಬ್ದವು ನಿವೇಶಿತವಾಗಿದೆ. ಪಚನಕ್ರಿಯೆಯಲ್ಲಿ ಜ್ವಾಲೆಗಳ, ಹೋಮಕ್ರಿಯೆಯಲ್ಲಿ ಶರೋಂಗಾರಗಳ ಅಸ್ತಿತ್ವವಿರುವಾಗ ಧೂಮನಿಬಿಡತ್ವವು ಕೂಡುವದಿಲ್ಲ. ಇದರಿಂದ ಶ್ರೀರಾಮನ ಅಗ್ನ್ಯಾಧಾನಾಭಾವದಿಂದ ಇಲ್ಲಿ ಶ್ರೌತಾಗ್ನಿಯು ಹೇಳಲಾಗುವದಿಲ್ಲ. ಆದರೆ ಸ್ಮಾರ್ತಾಗ್ನಿಯೇ ಇಲ್ಲಿ ಕೂಡುತ್ತದೆ. ಒಂದು ವೇಳೆ ತ್ರೇತಾಗ್ನಿಯನ್ನು ಸಾಧಿಸುವದಾದರೆ " ರಾಮಃ ಕಮಲಪತ್ರಾಕ್ಷಃ ಪುರೋಧ

ಆರ್ಯಂದ್ರಕ್ಷ್ಯಾಮಿ ಸಂಹೃಷ್ಟೋ ಮಹರ್ಷಿಮಿವ ರಾಘವಮ್ ‖ ೧೩ ‖
ಅಥ ಗತ್ವಾ ಮುಹೂರ್ತಂತು ಚಿತ್ರಕೂಟಂ ಸ ರಾಘವಃ ‖ ಮಂದಾಕಿನೀ
ಮನುಪ್ರಾಪ್ತ ಸ್ತಂಜನಂ ಚೇದ ಮಬ್ರವೀತ್ ‖ ೧೪ ‖ ಜಗತ್ಯಾಂ
ಪುರುಷವ್ಯಾಘ್ರ ಆಸ್ತೇ ವೀರಾಸನೇ ರತಃ ‖ ಜನೇಂದ್ರೋ ನಿರ್ಜನಂ ಪ್ರಾಪ್ಯ
ಧಿಙ್ಮೇಜನ್ಮ! ಸಜೀವಿತಮ್ ‖ ೧೫ ‖ ಮತ್ಕೃತೇ ವ್ಯಸನಂ ಪ್ರಾಪ್ತೋ ಲೋಕ

ಅಹಂ - ನಾನು, ಗುರುಸಂಸ್ಕಾರಕಾರಿಣಂ - ದೊಡ್ಡದಾದ ಮಂತ್ರೋಪದೇಶಾದಿ ಸಂಸ್ಕಾರಗಳನ್ನು ಮಾಡುತ್ತಿರುವ, ಪುರುಷವ್ಯಾಘ್ರಂ - ಮನುಷ್ಯಶ್ರೇಷ್ಠನಾದ, ಆರ್ಯಂ - ಪೂಜ್ಯನಾದ, ಮಹರ್ಷಿ ಮಿವ - ರಾಜರ್ಷಿಯಂತಿರುವ, ರಾಘವಂ - ಶ್ರೀರಾಮನನ್ನು, ದ್ರಕ್ಷ್ಯಾಮಿ - ನೋಡುತ್ತೇನೆ. ‖ ೧೩ ‖ ಅಥ - ಅನಂತರದಲ್ಲಿ, ರಾಘವಃ - ರಘುಕುಲೋತ್ಪನ್ನನಾದ, ಸಃ - ಆ ಭರತನು, ಮುಹೂರ್ತಂ - ಒಂದು ಮುಹೂರ್ತಕಾಲದಲ್ಲಿ, ಚಿತ್ರಕೂಟಂ - ಚಿತ್ರಕೂಟಪರ್ವತವನ್ನು ಕುರಿತು, ಗತ್ವಾ - ಹೋಗಿ, ಮಂದಾಕಿನೀಂ - ಗಂಗೆಯನ್ನು, ಅನುಪ್ರಾಪ್ತಾಃ - ಹೊಂದಿದವನಾಗಿ, ತಂಜನಂ - ಆ ಪರಿವಾರ ಜನವನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ‖ ೧೪ ‖ ಪುರುಷ ವ್ಯಾಘ್ರಂ - ಪುರುಷಶ್ರೇಷ್ಠನಾದ, ಜನೇಂದ್ರಃ - ಸಮಸ್ತ ಜನಗಳೂ ದೊರೆಯಾದ ಶ್ರೀರಾಮನು, ಜಗತ್ಯಾಂ - ಭೂಮಿಯ ಮೇಲೆ, ವೀರಾಸನೇ - ಭದ್ರಾಸನದಲ್ಲಿ, ರತಃ - ಆಸಕ್ತನಾಗಿ, ನಿರ್ಜನಂ - ಜನರಹಿತವಾದ ಪ್ರದೇಶವನ್ನು, ಪ್ರಾಪ್ಯ - ಹೊಂದಿ, ಆಸ್ತೇ - ಇರುತ್ತಾನೆ, ಸಜೀವಿತಂ - ಪ್ರಾಣ ದಿಂದೊಡಗೂಡಿದ, ಮೇ - ನನ್ನ, ಜನ್ಮ - ಉತ್ಪತ್ತಿಯನ್ನು, ಧಿಕ್ - ನಿಂದಿಸು. ‖ ೧೫ ‖

ಯನ್ನು ನೋಡುತ್ತೇನೆ. ಇನ್ನೊಂದುಕ್ಷಣಮಾತ್ರದಲ್ಲಿಯೇ ಚಿತ್ರಕೂಟಪರ್ವತಕ್ಕೆ ನಾವೆ ಲ್ಲರೂ ಹೋಗುವವರಾಗಿದ್ದೇವೆ. ಇಂತು ಚಿತ್ರಕೂಟಪರ್ವತದ ಬಳಿಸಾರಿ ಮಂದಾಕಿನೀ ನದಿ ಯನ್ನು ಹೊಂದುತ್ತೇವೆ." ‖೧೧-೧೩‖ ಭರತಕುಮಾರನೀರೀತಿ ನುಡಿದು ಮತ್ತೂ ಹೀಗೆಂ ದನು. "ಜನರಿಗೆ ಪ್ರಭುವಾದವನೂ, ಪುರುಷೋತ್ತಮನೂ ಆದ ಶ್ರೀರಾಮನು ಭೂಮಿಯಲ್ಲಿ ವೀರಾಸನವನ್ನವಲಂಬಿಸಿ ಕುಳಿತಿದ್ದಾನೆ. ಇನ್ನು ನನ್ನ ಜನ್ಮವೇತಕ್ಕೆ? ಅಯ್ಯೋ ! ಲೋಕಕ್ಕೆ ಪ್ರಭುವೂ, ಮಹಾತೇಜಸ್ವಿಯೂ, ರಘುಕುಲೋದ್ಭವನೂ ಆದ ಶ್ರೀರಾಮನು ನನ್ನ ನಿಮಿತ್ತ ವಾಗಿ ವ್ಯಸನವನ್ನು ಹೊಂದಿದವನಾದನು ! ಇಷ್ಟೆಯಲ್ಲದೆ ಸಕಲ ಕಾಮಗಳನ್ನೂ ತೊರೆದು ವನದಲ್ಲಿ ಶ್ರೀರಾಮನು ವಾಸಮಾಡುತ್ತಿರುವುದು ನನ್ನ ನಿಮಿತ್ತವಾಗಿಯೇ ಅಲ್ಲವೆ ? ಹೀಗೆ

ಸಮುಥಾಬ್ರವೀತ್" ‖ ಅಗ್ನಿಹೋತ್ರಂ ಪ್ರಜತ್ವಗ್ರೇಸರ್ಪಿರ್ಜ್ವಲಿತ ಪಾವಕಂ" ಎಂದು ಚರಮಯಾತ್ರೆಯಲ್ಲಿ ಅಗ್ನಿಹೋತ್ರ ಪುರಸ್ಕಾರ ಶ್ರವಣದಿಂದ ಈ ವನಯಾತ್ರೆಯಲ್ಲಿಯೂ ಕೂಡ ಹಾಗೆಯೇ ಇರಬೇಕು. ಆದರೆ "ಪೌರವೃದ್ಧಾಸ್ಸಾಗ್ನಯ ಏವಸಮಾಗತಾಃ" ಎಂದು ಹೇಳಿರುವದರಿಂದ ತ್ರೇತಾಗ್ನಿಯು ಕೂಡುವದಿಲ್ಲ. ಅಲ್ಲದೆ "ದೀಕ್ಷಿತಂ ವ್ರತಸಂಪನ್ನಂ ವರಾ ಜಿನಧರಂ ಶುಚಿಂ ‖ ಕುರಂಗಶೃಂಗಪಾಣಿಂಚ ಪಶ್ಯಂತೀ ತ್ವಾಂ ಭಜಾಮ್ಯಹಂ" ಎಂದು ಸೀತಾದೇವಿಯ ಮನೋರಥ ನಿರೂಪಣವಿರುವುದರಿಂದ ಶ್ರೀರಾಮನು ರಾಜ್ಯಾಭಿಷೇಕಕ್ಕಿಂತಲೂ ಪೂರ್ವದಲ್ಲಿ ಯಾಗ, ಯಜನಾದಿ ಕ್ರಿಯೆಗಳನ್ನು ಮಾಡಿರಲಿಲ್ಲವೆಂದು ತಿಳಿದು ಬರುತ್ತದೆ. ಆದುದರಿಂದ ಭರತಕುಮಾರನಿಗೆ ಕಾಣಿಸಿದ ಅಗ್ನಿಯು ಗೃಹ್ಯಾಗ್ನಿಯೇ ಹೊರ್ತು ತ್ರೇತಾಗ್ನಿಯಲ್ಲ.

ನಾಥೋ ಮಹಾದ್ಯುತಿಃ ॥ ಸರ್ವಾನ್ ಕಾಮಾನ್ ಪರಿತ್ಯಜ್ಯ ವನೇ ವಸತಿ ರಾಘವಃ ॥ ೧೬ ॥ ಇತಿ ಲೋಕ ಸಮಾಕೃಷ್ಟಃ ಪಾದೇಷ್ವದ್ಯ ಪ್ರಸಾದಯನ್ ॥ ರಾಮಸ್ಯ ನಿಪತಿಷ್ಯಾಮಿ ಸೀತಾಯಾ (೧) ಲಕ್ಷ್ಮಣಸ್ಯಚ ॥೧೭॥ ಏವಂ ಸವಿಲಪಂ ಸ್ತಸ್ಮಿನ್ವನೇ ದಶರಥಾತ್ಮಜಃ ॥ ದದರ್ಶ ಮಹತೀಂ ಪುಣ್ಯಾಂ ಪರ್ಣಶಾಲಾಂ

ಲೋಕನಾಥಃ - ಜಗತ್ಪ್ರಭುವಾದ, ಮಹಾದ್ಯುತಿಃ-ಮಹಾ ಪ್ರಕಾಶವಂತನಾದ, ರಾಘವಃ-ಶ್ರೀರಾಮನು, ಮತ್ಕೃತೇ - ನನಗೋಸುಗ, ವ್ಯಸನಂ - ರಾಜ್ಯಪರಿತ್ಯಾಗ, ಅರಣ್ಯವಾಸ ಇವುಗಳಿಂದ ಹುಟ್ಟಿದ ವ್ಯಸನಗಳನ್ನು, ಪ್ರಾಪ್ತಃ - ಹೊಂದಿ, ಸರ್ವಾನ್ಕಾಮಾನ್ - ಸಮಸ್ತ ಭೋಗಗಳನ್ನೂ, ಪರಿತ್ಯಜ್ಯ-ತೊರೆದು, ವನೇ - ಅರಣ್ಯದಲ್ಲಿ, ವಸತಿ - ಇರುತ್ತಾನೆ, ಇತಿ - ಇಂತೆಂದು, ಲೋಕಸಮಾಕೃಷ್ಟಃ - ಜನರಿಂದ ಅಪಕೀರ್ತಿಯನ್ನು ಹೊಂದಿ, ಅದ್ಯ - ಈಗ, ಪ್ರಸಾದಯನ್ - ಪ್ರಸನ್ನನಾಗಿ ಮಾಡಿಕೊಂಡು, ರಾಮಸ್ಯ - ಶ್ರೀರಾಮನ, ಸೀತಾಯಾಃ - ಸೀತಾದೇವಿಯ, ಲಕ್ಷ್ಮಣಸ್ಯಚ - (೨) ಕನಿಷ್ಠನಾದ ಲಕ್ಷ್ಮಣನ, ಪಾದೇಷು - ಚರಣಗಳ ಮೇಲೆ, ನಿಪತಿಷ್ಯಾಮಿ - ಬೀಳುತ್ತೇನೆ. ॥ ೧೬-೧೭ ॥ ಏವಂ - ಈಪರಿಯಾಗಿ, ತಸ್ಮಿನ್ವನೇ - ಆ ವನದಲ್ಲಿ, ವಿಲಪನ್ - ಪ್ರಲಪಿಸುತ್ತಿರುವ, ದಶರಥಾತ್ಮಜಃ-ದಶರಥನ ಮಗನಾದ, ಸಃ - ಆ ಭರತನು, ಮಹತೀಂ - ದೊಡ್ಡದಾದ, ಪುಣ್ಯಾಂ - ಪುಣ್ಯಕರವಾದ, ಮನೋರಮಾಂ - ಮನೋಹರವಾದ, ಸಾಲತಾಲಾಶ್ವಕರ್ಣಾಂ-ತಾಳೆ, ಶ್ರೀತಾಳೆ, ಬಿಳೀಮದ್ದಿ ಮುಂತಾದ ಗಿಡ

ಲೋಕನಿಂದೆಗೆ ತುತ್ತಾದ ನಾನು ಸೀತಾರಾಮಲಕ್ಷ್ಮಣರ ಪಾದಾರವಿಂದಗಳ ಮೇಲೆಬಿದ್ದು ಅವರ ಅನುಗ್ರಹವನ್ನು ಸಂಪಾದಿಸಿಕೊಳ್ಳುತ್ತೇನೆ. ಶ್ರೀರಾಮನು ಪ್ರಸನ್ನನಾಗಲು ಆತನ ಪಾದಾಭಿವಂದನೆಯನ್ನು ಮಾಡುತ್ತೇನೆ." ॥೧೪-೧೭॥ ಹೀಗೆ ದಶರಥರಾಜಕುಮಾರನಾದ ಭರತನು ಆ ಅರಣ್ಯದಲ್ಲಿ ವಿಲಪಿಸುತ್ತ, ಬೇವು, ಮದ್ದಿ, ತಾಳೆ ಮೊದಲಾದ ಗಿಡಗಳ ಎಲೆಗಳಿಂದ ಹೊದಿಸಲ್ಪಟ್ಟುದೂ, ವಿಶಾಲವಾದುದೂ, ಮೆತ್ತಗಿರುವ ದರ್ಭೆಹುಲ್ಲುಗಳಿಂದ ಹಾಸಲ್ಪಟ್ಟ

ಟಿ. (೧) "ಸೀತಾಯಾಶ್ಚ ಪುನಃ ಪುನಃ" ಎಂದು ಪಾಠಾಂತರ.

ಟಿ. (೨) " ಮತ್ಕೃತೇ ವ್ಯಸನಂಪ್ರಾಪ್ತಃ " " ಕೈಕೇಯಿಯು ನನಗೋಸುಗ ರಾಜ್ಯವನ್ನು ಬಯಸಿದುದರಿಂದ ಶ್ರೀರಾಮನು ರಾಜ್ಯಭ್ರಂಶನರೂಪ ವ್ಯಸನವನ್ನು ಹೊಂದಿದನು. " ಎಂಬ ಲೋಕಾಪವಾದವನ್ನು ನಾನು ಹೊಂದಿದೆನು. ಆದುದರಿಂದ " ಸೀತಾಯಾ ಲಕ್ಷ್ಮಣಸ್ಯಚ (ಪಾದಯೋಃ) ನಿಪತಿಷ್ಯಾಮಿ " ಇಲ್ಲಿ ಭರತನ ಹೃದಯವು ಹೀಗಿರುವುದು. ಲಕ್ಷ್ಮಣನು ಭರತನಗಿಂತ ಕಿರಿಯನನಾದರೂ ಆತನ ಪಾದಾಭಿವಂದನೆಯನ್ನು ಮಾಡಲು ಒಂದು ಕಾರಣವುಂಟು. ಶ್ರೀರಾಮನನ್ನು ಕುರಿತು ಈ ವನವಾಸವನ್ನು ತೊರೆದು ಅಯೋಧ್ಯಾಪಟ್ಟಣಕ್ಕೆ ಬಂದು ಸಾಕೇತಸಾಂಮ್ರಾಜ್ಯದಲ್ಲಿ ಪಟ್ಟಾಭಿಷಿಕ್ತನಾಗೆಂದು ಬೇಡಿಕೊಂಡಾಗ ಶ್ರೀರಾಮಾನುವರ್ತನ- ಶ್ರೀರಾಮನ ಪಾದಸೇವೆ (ಕೈಂಕರ್ಯ) ಇವುಗಳಲ್ಲಿಯೇ ನಿರತನಾಗಿದ್ದ ಲಕ್ಷ್ಮಣಸ್ವಾಮಿಯು ನನ್ನ ತಾಯಿಯಾದ ಕೈಕೇಯಿಯು ಮಾಡಿದ ಅಪರಾಧವನ್ನು ನನ್ನ ಮೇಲೆಯೇ ಹಾಕಿಕೊಂಡು ಅಣ್ಣನನ್ನು ಕುರಿತು ಬೇಡವೆಂದು ನಿರೋಧಿಸಿದರೆ ಮುಂದೆನಾಡುವದೇನೆಂದು ಯೋಚಿಸಿದ ಭರತನು ಆತನನ್ನೂ ಪ್ರಸನ್ನನನ್ನಾಗಿ ಮಾಡಿಕೊಳ್ಳಲು ಆತನಿಗೂ ಪಾದಾಭಿವಂದನೆಯನ್ನು ಮಾಡುತ್ತೇನೆಂದು ನಿರೂಪಿಸಿದ್ದಾನೆ- ಒಂದು ವೇಳೆ ರಾಮಾನಯನ ಕಾರ್ಯವು ಶ್ರಮವಿಲ್ಲದೆಯೇ ಸಾಧ್ಯವಾದರೆ ಲಕ್ಷ್ಮಣವಂದನೆಯು ಅನವಶ್ಯಕವೆಂದು ಅವನ ಭಾವ. ಇಲ್ಲಿ " ನಪರೀಕ್ಷ್ಯೌ ವಯೋವಂದ್ಯಾಃ " ಎಂಬ ವಚನಪ್ರಾಮಾಣ್ಯವನ್ನಂಗೀಕರಿಸಿ ಕಾರ್ಯಸಾಧನೆಯಲ್ಲಿಯೇ ಆಸಕ್ತನಾದ ಭರತನ ಈ ವಾಕ್ಯದಲ್ಲಿ ದೋಷವಿಲ್ಲವೆಂದು ಹೇಳಲು ಶಕ್ಯವಿದೆ.

ಮನೋರಮಾಮ್ ‖ ೧೮ ‖ ಸಾಲತಾಲಾಶ್ವಕರ್ಣಾನಾಂ ಪರ್ಣೈರ್ಬಹುಭಿರಾವೃತಾಮ್ ‖ ವಿಶಾಲಾಂ ಮೃದುಭಿಸ್ತೀರ್ಣಾಂ ಕುಶೈರ್ವೇದಿಮಿವಾಧ್ವರೇ ‖ ೧೯ ‖ ಶಕ್ರಾಯುಧನಿಕಾಶೈಶ್ಚ ಕಾರ್ಮುಕೈರ್ಭಾರಸಾಧನೈಃ ‖ ರುಕ್ಮಪೃಷ್ಠೈರ್ಮಹಾಸಾರೈಃ ಶೋಭಿತಾಂ ಶತ್ರುಬಾಧಕೈಃ ‖ ೨೦ ‖ ಅರ್ಕರಶ್ಮಿಪ್ರತೀಕಾಶೈರ್ಘೋರೈಸ್ತೂಣೀಗತೈಶ್ಶರೈಃ ‖ ಶೋಭಿತಾಂ ದೀಪ್ತವದನೈಸ್ಸರ್ಪೈರ್ಭೋಗವತೀಮಿವ ‖ ೨೧ ‖ ಮಹಾರಜತವಾಸೋಭ್ಯಾಮಸಿಭ್ಯಾಂಚ ವಿರಾಜಿತಾಂ ‖ ರುಕ್ಮಬಿಂದುವಿಚಿತ್ರಾಭ್ಯಾಂ ಚರ್ಮಭ್ಯಾಂ ಚಾಪಿ ಶೋಭಿತಾಂ ‖ ೨೨ ‖ ಗೋಧಾಂಗುಳಿತ್ರೈರಾಸಕ್ತೈಶ್ಚಿತ್ರೈಃ ಕಾಂಚನ

ಗಳ, ಬಹುಭಿಃ - ಬಹಳವಾದ, ಪರ್ಣೈಃ - ಎಲೆಗಳಿಂದ, ಆವೃತಾಂ - ಸುತ್ತುವರೆಯಲಾದ, ಅಧ್ವರೇ- ಯಜ್ಞದಲ್ಲಿ, ವೇದಿಮಿವ - ಬಹಿರ್ವೇದಿಯನ್ನಂತೆ, ಮೃದುಭಿಃ - ಮೃದುಗಳಾದ, ಕುಶೈಃ - ದರ್ಭೆಗಳಿಂದ, ತೀರ್ಣಾಂ - ಹಾಸಲ್ಪಟ್ಟ, ಶಕ್ರಾಯುಧನಿಕಾಶೈಶ್ಚ - ದೇವೇಂದ್ರನ ವಜ್ರಾಯುಧಗಳಿಗೆ ಸಮಾನವಾದ, ಭಾರಸಾಧನೈಃ - ನೂರುಪಲ ಪ್ರಮಾಣಗಳುಳ್ಳ ಸುವರ್ಣದ ಪೃಷ್ಠಪ್ರದೇಶವುಳ್ಳ, ಮಹಾಸಾರೈಃ - ಬಹಳ ದೃಢಗಳಾದ, ಶತ್ರುಬಾಧಕೈಃ - ಶತ್ರುಸಂಹಾರಕಗಳಾದ, ಕಾರ್ಮುಕೈಃ - ಧನುಸ್ಸುಗಳಿಂದ, ಶೋಭಿತಾಂ - ಹೊಳೆಯುತ್ತಿರುವ, ಅರ್ಕರಶ್ಮಿಪ್ರತೀಕಾಶೈಃ - ಸೂರ್ಯನಕಿರಣಗಳಿಗೆ ಸಮಾನಗಳಾದ, ಘೋರಂ - ಭಯಂಕರಗಳಾದ, ತೂಣೀಗತಾ - ಬತ್ತಳಿಕೆಗಳನ್ನು ಹೊಂದಿರುವ, ಶರೈಃ - ಬಾಣಗಳಿಂದ, ದೀಪ್ತೋದನೈಃ - ಹೊಳೆಯುತ್ತಿರುವ ಮುಖಗಳುಳ್ಳ, ಸರ್ಪೈಃ - ಸರ್ಪಗಳಿಂದ, ಭೋಗವತೀಮಿವ - ಭೋಗವತೀಪಟ್ಟಣದಂತೆ, ಶೋಭಿತಾಂ - ಹೊಳೆಯುತ್ತಿರುವ, ಮಹಾರಜತಶೋಭಿತಾಂ- ಭಂಗಾರವಿಕಾರವಾದ ಕೋಶಗಳುಳ್ಳ, ಅಸಿಭ್ಯಾಂ - ಕತ್ತಿಗಳಿಂದ, ವಿರಾಜಿತಾಂ - ಹೊಳೆಯುತ್ತಿರುವ, ರುಕ್ಮಬಿಂದುವಿಚಿತ್ರಾಭ್ಯಾಂ-ಭಂಗಾರದವಿಕಾರವಾದ ಬಿಂದುಗಳಿಂದ ಆಶ್ಚರ್ಯಕರವಾದ, ಚರ್ಮಭ್ಯಾಂ ಚಾಪಿ - ಖೇಡ್ಯಗಳಿಂದಲೂ ಕೂಡ, ಶೋಭಿತಾಂ - ಹೊಳೆಯುತ್ತಿರುವ, ಆಸಕ್ತೈಃ - ತಗಲಿಸಿರುವ,

ಭೂಪ್ರದೇಶವುಳ್ಳುದೂ, ಯಾಗಶಾಲೆಗಳಲ್ಲಿನ ಅಗ್ನಿವೇದಿಕೆಯಂತಿರುವುದೂ, ದೇವೇಂದ್ರನ ಆಯುಧಕ್ಕೆ ಸಮಾನವಾದುದೂ, ನೂರುಪಲಗಳ ಭಾರವುಳ್ಳುದೂ, ಮಹಾಬಲವುಳ್ಳುದೂ, ಬಂಗಾರದಿಂದ ತೋಯಿಸಲ್ಪಟ್ಟ ಹಿಂಭಾಗವುಳ್ಳುದೂ, ಶತ್ರುಗಳನ್ನು ಬಾಧೆಗೊಳಿಸುವುದರಲ್ಲಿ ಮಹಾಸಾಮರ್ಥ್ಯವುಳ್ಳುದೂ ಆದ ಧನುಸ್ಸುಗಳಿಂದ ಪ್ರಕಾಶಗೊಳಿಸಲಾದುದೂ, ಸೂರ್ಯಕಿರಣಗಳಂತೆ ಕಾಂತಿಯುಳ್ಳುದೂ, ಮಹಾಭಯಂಕರವಾದುದೂ, ಬತ್ತಳಿಕೆಗಳಲ್ಲಿರುವುದೂ ಆದ ಪ್ರಜ್ವಲಿಸುತ್ತಿರುವ ಬಾಣಗಳಿಂದ, “ಸರ್ಪಗಳಿಂದ ಪ್ರಕಾಶಿಸುತ್ತಿರುವ ಭೋಗವತೀಪಟ್ಟಣದಂತೆ” ಕಂಗೊಳಿಸುತ್ತಿರುವುದೂ, ಬಂಗಾರದಿಂದ ನಿರ್ಮಿಸಿದ ಕೈಪಿಡಿಗಳುಳ್ಳ ಖಡ್ಗಗಳಿಂದ ರಂಜಿಸುತ್ತಿರುವುದೂ, ಬಂಗಾರದ ಚುಕ್ಕೆಗಳಿಂದ ಮಹಾವಿಚಿತ್ರವಾಗಿ ನಿರ್ಮಿಸಲಾದ ಡಾಲುಗಳಿಂದ ಪ್ರಕಾಶಿಸುತ್ತಿರುವುದೂ, ಬಿಲ್ಲಿನನಾರಿಯುಪೆಟ್ಟುತಾಕದಂತೆ ನಿರ್ಮಿಸಲಾದ ಹಸ್ತಕವಚಗಳಿಂದ ಶೋಭಿಸುತ್ತಿರುವುದೂ, ಬೆರಳಿಗೆಹಾಕಿಕೊಳ್ಳುವ

ಭೂಷಿತೈಃ || ಅರಿಸಂಘೈ ರನಾಧೃಷ್ಯಾಂ ಮೃಗೈ ಸ್ಸಿಂಹ ಗುಹಾಮಿವ || ೨೩ ||
ಪ್ರಾಗುದಕ್ಪ್ರವಣಾಂ ವೇದೀಂ ವಿಶಾಲಾಂ ದೀಪ್ತಪಾವಕಾಂ || ದದರ್ಶ ಭರತ
ಸ್ತತ್ರ ಪುಣ್ಯಾಂ ರಾಮನಿವೇಶನೇ || ೨೪ || ನಿರೀಕ್ಷ್ಯ ಸ ಮುಹೂರ್ತಂತು
ದದರ್ಶ ಭರತೋ ಗುರುಂ || ಉಟಜೇ ರಾಮಮಾಸೀನಂ ಜಟಾಮಂಡಲ
ಧಾರಿಣಂ || ೨೫ || ತಂತು ಕೃಷ್ಣಾಜಿನಧರಂ ಚೀರವಲ್ಕಲ ವಾಸಸಮ್ ||

ಚೈತ್ರೈಃ - ನಾನಾಬಗೆಗಳಾದ, ಕಾಂಚನಭೂಷಿತೈಃ-ಚಿನ್ನದರೇಖೆಗಳಿಂದ ಅಲಂಕೃತವಾದ, ಗೋಧಾಂಗುಳಿತ್ರೈಃ - ಬೆರಳುಗಳಿಗೆ ಹಾಕತಕ್ಕ ಕೈಚೀಲಗಳಿಂದಲೂ, ಶೋಭಿತಾಂ-ಹೊಳೆಯುತ್ತಿರುವ, ಮೃಗೈಃ-ಮೃಗಗಳಿಂದ, ಸಿಂಹಗುಹಾಮಿವ - ಸಿಂಹದಗುಹೆಯಂತೆ, ಅರಿಸಂಘೈಃ - ಶತ್ರುಗಳ ತಂಡಗಳಿಂದ, ಅನಾಧೃಷ್ಯಾಂ - ತಿರಸ್ಕರಿಸಲಸಾಧ್ಯವಾದ, ಪರ್ಣಶಾಲಾಂ - ಪರ್ಣಶಾಲೆಯನ್ನು, ದದರ್ಶ-ಕಂಡನು. || ೧೮-೨೩ || ತತ್ರ - ಆ, ರಾಮನಿವೇಶನೇ - ಶ್ರೀರಾಮನ ಮನೆಯಲ್ಲಿ, ಪುಣ್ಯಾಂ - ಪುಣ್ಯಕರವಾದ, ಪ್ರಾಗುದಕ್ಪ್ರವಣಾಂ - ಪೂರ್ವೋತ್ತರಭಾಗಗಳಲ್ಲಿ ದಿಣ್ಣೆಯಾಗಿರುವ, ವಿಶಾಲಾಂ - ವಿಸ್ತಾರವಾದ, ದೀಪ್ತಪಾವಕಾಂ - ಪ್ರಜ್ವಲಿಸುತ್ತಿರುವ ಅಗ್ನಿಯುಳ್ಳ, ಪುಣ್ಯಾಂ - ಪುಣ್ಯಕರವಾದ, ವೇದೀಂ-ಜಗುಲಿಯನ್ನು, ದದರ್ಶ - ಕಂಡನು. || ೨೪ || ಸಭರತಃ - ಆ ಭರತನು, ಮುಹೂರ್ತಂ - ಮುಹೂರ್ತಕಾಲವು, ನಿರೀಕ್ಷ್ಯ - ಕಂಡು, ಗುರುಂ - ಜ್ಯೇಷ್ಠನಾದ, ಉಟಜೇ - ಪರ್ಣಶಾಲೆಯಲ್ಲಿ, ಆಸೀನಂ - ಕುಳಿತುಕೊಂಡಿರುವ, ಜಟಾಮಂಡಲಧಾರಿಣಂ - (೧) ಜಡೆಗಳ ತಂಡಗಳನ್ನು ಧರಿಸಿರುವ, ರಾಮಂ - ಶ್ರೀರಾಮನನ್ನು, ದದರ್ಶ - ಕಂಡನು. || ೨೫ || ಕೃಷ್ಣಾಜಿನಧರಂ - ಜಿಂಕೆಯ ಚರ್ಮವನ್ನು ಧರಿ

ಕವಚಗಳಿಂದ ಮನೋಹರವಾದುದೂ, ಸಿಂಹಗಳಿರುವ ಗುಹೆಯಲ್ಲಿ ಪ್ರವೇಶಿಸಲು ಇತರ ಮೃಗಗಳಿಗೆ ಅಸಾಧ್ಯವಾದಂತೆ ಯಾರಿಂದಲೂ ಪ್ರವೇಶಿಸಲಸಾಧ್ಯವಾದುದೂ, ಮಹಾಪೂಜ್ಯವಾದುದೂ, ಪುಣ್ಯಕರವಾದುದೂ, ಮನೋಹರವಾದುದೂ ಆದ ಶ್ರೀರಾಮಮೂರ್ತಿಯ ಪರ್ಣಶಾಲೆಯನ್ನು ನೋಡಿದವನಾದನು. ||೧೮-೨೩|| ಆಬಳಿಕಲಾಭರತನು, ಆ ರಾಮಾಶ್ರಮದಲ್ಲಿನ ಪರ್ಣಶಾಲೆಯಲ್ಲಿ ಬಹಳವಾಗಿ ಪ್ರಜ್ವಲಿಸುತ್ತಿದ್ದ ಅಗ್ನಿಹೋತ್ರವುಳ್ಳುದೂ, ಪಾವನವಾದುದೂ, ಈಶಾನ್ಯಭಾಗದಲ್ಲಿ ತಗ್ಗಾಗಿರುವುದೂ ಆದ ಅಗ್ನಿವೇದಿಕೆಯನ್ನು ನೋಡಿ, ಆ ಮೇಲೆ ಪರ್ಣಶಾಲೆಯಲ್ಲಿ ಕುಳಿತಿರುವವನೂ, ಜಡೆಗಳ ಸಮುದಾಯವನ್ನು ಧರಿಸಿರುವವನೂ, ನಾರುಮಡಿಗಳೇ ವಸ್ತ್ರಗಳಾಗುಳ್ಳವನೂ, ಸಿಂಹದ ಭುಜಶಿರಸ್ಸುಗಳಂತಹ ಭುಜಶಿರಸ್ಸುಗಳುಳ್ಳವನೂ, ಮಹಾಬಾಹುಗಳುಳ್ಳವನೂ, ಕಮಲಗಳಿಗೆ ಸಮಾನವಾದ ಕಂಗಳುಳ್ಳವನೂ, ಆದ

ಟಿ. (೧) "ಜಟಾಮಂಡಲಧಾರಿಣಂ" ಇಲ್ಲಿ ಗಾಯತ್ರಿಯ ಏಳನೆಯ ಅಕ್ಷರವಾದ **ಣ** ಕಾರವು ನಿವೇಶಿತವಾಗಿದೆ. ಇಲ್ಲಿಗೆ ಆರು ಸಾವಿರ ಶ್ಲೋಕಗಳು ಸಂಪೂರ್ಣವಾದುವು. ಮುಂದಿನ ಶ್ಲೋಕದಿಂದ ಏಳನೆಯ ಸಾವಿರವು ಪ್ರಾರಂಭವಾಗುತ್ತದೆ. ಗಾಯತ್ರೀ ಮಂತ್ರದ ಐದನೆಯ ಅಕ್ಷರವಾದ **ವ** ಕಾರವು ಇದೇ ಕಾಂಡದ ನಲವತ್ತನೆಯ ಸರ್ಗದಲ್ಲಿನ ಹದಿನೈದನೆಯ ಶ್ಲೋಕದ ಪ್ರಥಮಾಕ್ಷರವೆಂದೂ, ಆರನೆಯ ಅಕ್ಷರವಾದ **ರೆ** ಕಾರವು ಅರವತ್ತೇಳನೆಯ ಸರ್ಗದಲ್ಲಿನ ಮೂವತ್ತುನಾಲ್ಕನೆಯ ಶ್ಲೋಕದ ಪ್ರಥಮಾಕ್ಷರವೆಂದೂ ವ್ಯಾಖ್ಯಾನಕಾರರ ಅಭಿಮತ.

ದದರ್ಶ ರಾಮ ಮಾಸೀನ ಮಭಿತಃ ಪಾವಕೋಪಮಮ್ ॥ ೨೬ ॥ ಸಿಂಹ ಸ್ಕಂಧಂ ಮಹಾಬಾಹುಂ ಪುಂಡರೀಕ ನಿಭೇಕ್ಷಣಂ ॥ ಪೃಥಿವ್ಯಾ ಸ್ಸಾಗರಾಂತಾಯಾ ಭರ್ತಾರಂ ಧರ್ಮಚಾರಿಣಂ ॥ ೨೭ ॥ ಉಪವಿಷ್ಟಂ ಮಹಾಬಾಹುಂ ಬ್ರಹ್ಮಾಣಮಿವ ಶಾಶ್ವತಮ್ ॥ ಸ್ಥಂಡಿಲೇ ದರ್ಭಸಂಸ್ತೀರ್ಣೇ ಸೀತಯಾ ಲಕ್ಷ್ಮಣೇನಚ ॥ ೨೮ ॥ ತಂ ದೃಷ್ಟ್ವಾ ಭರತ ಶ್ರೀಮಾನ್ ದುಃಖ ಶೋಕ

ಸಿರುವ, ಚೀರವಲ್ಕಲವಾಸಸಂ - ನಾರುಮುಡಿಗಳೇ ವಸ್ತ್ರವಾಗುಳ್ಳ, ಆಸೀನಂ - ಕುಳಿತುಕೊಂಡಿರುವ, ಅಭಿತಃ - ಎಲ್ಲೆಡೆಯಲ್ಲಿಯೂ, ಪಾವಕೋಪಮಂ - ಅಗ್ನಿಗೆ ಸಮಾನವಾದ, ಸಿಂಹಸ್ಕಂಧಂ - ಸಿಂಹದ ಭುಜಗಳಂತೆ ಭುಜಗಳುಳ್ಳ, ಮಹಾಬಾಹುಂ - ದೊಡ್ಡ ಭುಜಗಳುಳ್ಳ, ಪುಂಡರೀಕನಿಭೇಕ್ಷಣಂ - ಬಿಳಿದಾವರೆಗಳಿಗೆ ಸಮಾನವಾದ ನೇತ್ರಗಳುಳ್ಳ, ಸಾಗರಾಂತಾಯಾಃ - ಸಮುದ್ರವೇ ತುದಿಯಾಗುಳ್ಳ, ಪೃಥಿವ್ಯಾಃ - ಭೂಮಿಗೆ, ಭರ್ತಾರಂ - ಅಧಿಪತಿಯಾದ, ಧರ್ಮಚಾರಿಣಂ - ಧರ್ಮವನ್ನೇ ನಡಿಸುತ್ತಿರುವ, ಮಹಾಬಾಹುಂ - ಮಹಾ ಭುಜಗಳುಳ್ಳವನೂ, ಸೀತಯಾ - ಸೀತಾದೇವಿಯೊಡನೆಯೂ, ಲಕ್ಷ್ಮಣೇನಚ - ಲಕ್ಷ್ಮಣನೊಡನೆಯೂ, ದರ್ಭಸಂಸ್ತೀರ್ಣೇ - ದರ್ಭೆಗಳಿಂದ ಹಾಸಲ್ಪಟ್ಟ, ಸ್ಥಂಡಿಲೇ - ನಿಯಮಿತಸ್ಥಳದಲ್ಲಿ, ಬ್ರಹ್ಮಾಣಮಿವ - ಬ್ರಹ್ಮದೇವರಂತೆ, ಶಾಶ್ವತಂ - ಸ್ಥಿರವಾಗಿ, ಉಪವಿಷ್ಟಂ - ಕುಳಿತುಕೊಂಡಿರುವ, ರಾಮಂ-ಶ್ರೀರಾಮನನ್ನು, ದದರ್ಶ - (೧) ಕಂಡನು. ॥ ೨೬-೨೮ ॥ ಶ್ರೀಮಾನ್ - ಸಂಪದ್ಯುಕ್ತನಾದ, ಕೈಕಯೀಸುತಃ - ಕೈಕೇಯಿಯ ಕುವರನಾದ, ಭರತಃ-

---

ಶ್ರೀರಾಮಮೂರ್ತಿಯನ್ನು ನೋಡಿದವನಾದನು. ಅಲ್ಲದೆ ಕೃಷ್ಣಮೃಗ ಚರ್ಮವನ್ನು ಧರಿಸಿದವನೂ, ನಾರುಮುಡಿಗಳೇವಸ್ತ್ರಗಳಾಗುಳ್ಳವನೂ, ಅಗ್ನಿಹೋತ್ರದಂತೆಪ್ರಕಾಶಿಸುತ್ತಿರುವವನೂ, ಸಿಂಹದಂತೆ ಭುಜಶಿರಸ್ಸುಗಳುಳ್ಳವನೂ, ನೀಳ್ತೋಳುಗಳುಳ್ಳವನೂ, ಚಿತ್ತಸ್ಥೈರ್ಯವುಳ್ಳವನೂ, ಸ್ಥಿರವಾಗಿರುವವನೂ, ಬಿಳಿದಾವರೆಗೆಸಮಾನವಾದ ಕಂಗಳುಳ್ಳವನೂ, ಸಪ್ತಸಮುದ್ರಗಳವರೆಗೂ ಪಸರಿಸಿರುವ ಭೂಭಾಗಕ್ಕೆ ಸ್ವಾಮಿಯಾಗಿರುವವನೂ, ಧರ್ಮಾಚರಣೆಯನ್ನೇ ಮಾಡುತ್ತಿರುವವನೂ, ಬ್ರಹ್ಮದೇವನಂತೆ ದರ್ಭೆಗಳಿಂದ ಮಾಡಲಾದ ಸ್ಥಂಡಿಲದಲ್ಲಿ ಸೀತಾಲಕ್ಷ್ಮಣರೊಡನೆ ಸ್ಥಿರವಾಗಿ ಕುಳಿತುಕೊಂಡಿರುವವನೂಆದ ಶ್ರೀರಾಮಮೂರ್ತಿಯನ್ನುನೋಡಿದನು.॥೨೪-೨೮॥ಧರ್ಮಾತ್ಮನೂ, ಶ್ರೀಮಂತನೂ, ದುಃಖಶೋಕಗಳುಳ್ಳವನೂ ಆದ ಆ ಭರತ

ಟಿ. (೧) ಇಲ್ಲಿ **ಗೋವಿಂದರಾಜರು** ವಿಷ್ಣು ಸರ್ವೋತ್ಕೃಷ್ಟತ್ವ ಪ್ರತಿಪಾದಕವಾದ ಅರ್ಥವನ್ನು ಈ ರೀತಿಯಾಗಿ ಪ್ರತಿಪಾದಿಸುತ್ತಾರೆ.

ಆಸೀನಂ - ಆಸನದಲ್ಲಿ ಸ್ವಲ್ಪ ವಿಶ್ರಾಂತನಾಗಿ ಕುಳಿತುಕೊಂಡು ತನ್ನನ್ನು ತಾನೇ ಧ್ಯಾನಿಸುತ್ತಿರುವ, ಅಭಿತಃ ಪಾವಕೋಪಮಂ - "ತನ್ನನ್ನು ತಾನೇ ಧ್ಯಾನಿಸುತ್ತ ಯೋಗದಲ್ಲಿ ಕುಳಿತಿದ್ದುದರಿಂದ ಶ್ರೀರಾಮನ ಸುತ್ತುಮುತ್ತಲೂ ವಿಶೇಷಾಕಾರವಾದ ತೇಜಸ್ಸು ವ್ಯಾಪ್ತವಾಗಿದ್ದಿತು" ಎಂದು ಭಾವ, ಅಥವ—"ನೀಲತೋಯದ ಮಧ್ಯಸ್ಥಾ ವಿದ್ಯುಲ್ಲೇಖೇವ ಭಾಸ್ವರಾ" ಎಂಬ ವಚನ ಪ್ರಾಮಾಣ್ಯದಿಂದ "ವಿದ್ಯುಲ್ಲೇಖೆಯ ಮಧ್ಯದಲ್ಲಿರುವ ನೀಲಮೇಘದಂತೆ ಕಂಗೊಳಿಸುತ್ತಿರುವವನು" ಎಂದರ್ಥ, ಸ್ವವಿರೋಧಿಗಳಿಗೆ ಅಗ್ನಿಜ್ವಾಲಾಸ್ವರೂಪನಾಗಿರುವವನೆಂದೂ ಅರ್ಥವಾಗುತ್ತದೆ, ಅಥವ ಉಟಜೇ ರಾಮಮಾಸೀನಂ - ಶ್ರೀರಾಮಮೂರ್ತಿಯು ಕುಳಿತಿದ್ದ ಚಿತ್ರಕೂಟಪರ್ವತ ಪ್ರದೇಶವು ಅಯೋಧ್ಯಾಪಟ್ಟಣದ **ರಾಜಸಭೆ**

ಪರಿಪ್ಲುತಃ ॥ ಅಭ್ಯಧಾವತ ಧರ್ಮಾತ್ಮಾ ಭರತಃ ಕೈಕಯೀಸುತಃ ॥ ೨೯ ॥
ದೃಷ್ಟ್ವೈವ ವಿಲಲಾಪಾರ್ತೋ ಬಾಷ್ಪಸಂದಿಗ್ಧಯಾ ಗಿರಾ ॥ ಅಶಕ್ನುವನ್
ಧಾರಯಿತುಂ ಧೈರ್ಯಾದ್ವಚನ ಮಬ್ರವೀತ್ ॥ ೩೦ ॥ ಯಸ್ಸಂಸದಿ ಪ್ರಕೃ
ತಿಭಿ ರ್ಭವೇದ್ಯುಕ್ತ ಉಪಾಸಿತುಂ ॥ ವನ್ಯೈ ರ್ಮೃಗೈ ರುಪಾಸೀನ ಸ್ಸೋಽಯ
ಮಾಸ್ತೇ ಮಮಾಗ್ರಜಃ ॥ ೩೧ ॥ ವಾಸೋಭಿ ರ್ಬಹುಸಾಹಸ್ರೈ ರ್ಯೋ

ಭರತನು, ತಂ - ಆ ಶ್ರೀರಾಮನನ್ನು, ದೃಷ್ಟ್ವಾ - ಕಂಡು, ದುಃಖಶೋಕಪರಿಪ್ಲುತಃ - ಮನೋದುಃಖದಿಂದಲೂ ಬಾಹ್ಯವ್ಯಸನದಿಂದಲೂ ವ್ಯಾಪ್ತನಾಗಿ, ಧರ್ಮಾತ್ಮಾ-ಧರ್ಮಿಷ್ಠನಾದುದರಿಂದ, ಅಭ್ಯಧಾವತ - ಸಮೀಪಕ್ಕೋಡಿದನು. ॥ ೨೯ ॥ ದೃಷ್ಟ್ವೈವ - ಅಣ್ಣನನ್ನು ಕಾಣುತ್ತಲೇ, ಆರ್ತಃ-ಪರಿತಪಿಸುತ್ತಿರುವನಾಗಿ, ಬಾಷ್ಪಸಂದಿಗ್ಧಯಾ - ಕಂಬನಿಗಳಿಂದ ವಿಸ್ವರವಾದ, ಗಿರಾ - ಮಾತಿನಿಂದ, ವಿಲಲಾಪ - ಅತ್ತನು, ಧಾರಯಿತುಂ - ಶೋಕವನ್ನು ಧರಿಸುವದಕ್ಕೆ, ಅಶಕ್ನುವನ್ - ಅಸಮರ್ಥನಾಗಿ, ಧೈರ್ಯಾತ್ - ಧೈರ್ಯವನ್ನು ಹೊಂದಿ, ವಚನಂ - ಮಾತನ್ನು, ಅಬ್ರವೀತ್ - ನುಡಿದನು. ॥೩೦॥ ಯಃ - ಯಾವ ಪುರುಷನು, ಸಂಸದಿ - ಸಭೆಯಲ್ಲಿ, ಪ್ರಕೃತಿಭಿಃ - ಮಂತ್ರಿಗಳಿಂದ, ಉಪಾಸಿತುಂ - ಸೇವಿಸುವದಕ್ಕೆ, ಯುಕ್ತಃ - ಯೋಗ್ಯನು, ಭವೇತ್ - ಆಗುವನೋ, ಸೋಽಯಂ - ಆ ಈ, ಮಮ - ನನ್ನ, ಅಗ್ರಜಃ - ಅಣ್ಣನು, ವನ್ಯೈಃ - ವನದಲ್ಲಿ ಹುಟ್ಟಿದ, ಮೃಗೈಃ - ಮೃಗಗಳಿಂದ, ಉಪಾಸೀನಃ-ಸೇವಿಸಲ್ಪಟ್ಟವನಾಗಿ, ಆಸ್ತೇ - ಇರುತ್ತಾನೆ. ॥ ೩೧ ॥ ಯಃಮಹಾತ್ಮಾ - ಯಾವ ಮಹಾ ಪುರು

ನೀರೀತಿ ಅಣ್ಣದೇವನಾದ ಶ್ರೀರಾಮನನ್ನು ನೋಡಿ ಮಹಾವೇಗದಿಂದಾತನ ಸಮೀಪವನ್ನು ಕುರಿತು ಓಡಿದನು. ಹೀಗೆ ಕೈಕೇಯಿಯ ಮಗನಾದ ಆ ಭರತನು ಓಡಿದವನಾಗಿ ಮಹಾದುಃಖದಿಂದ ಪೀಡಿತನಾಗಿ ಅಣ್ಣನನ್ನು ನೋಡಿ ಕಣ್ಣೀರಿಟ್ಟು, ಗದ್ಗದಸ್ವರಭರಿತನಾಗಿ ದುಃಖವನ್ನಡಗಿಸಿಕೊಳ್ಳಲಾರದವನಾಗಿ, ಹೇಗೋ ಧೈರ್ಯವನ್ನವಲಂಬಿಸಿಕೊಂಡು ಈ ಮಾತುಗಳನ್ನಾಡಿದನು.॥೨೯-೩೦॥"ಅಯ್ಯೋ! ಸರ್ವೋತ್ತಮವಾದ ಸಭೆಯಲ್ಲಿ, ಎಲ್ಲಜನರಿಂದಲೂ ಸಕಲಮರ್ಯಾದೆಗಳಿಂದಲೂ ಸೇವಿಸಲ್ಪಡತಕ್ಕವನೂ, ನನಗೆ ಅಣ್ಣನಾದವನೂ ಆದ ಶ್ರೀರಾಮನು ವನದಲ್ಲಿ ಹುಟ್ಟದ ಮೃಗಾದಿಗಳಿಂದ ಸೇವಿಸಲ್ಪಡುತ್ತಿರುವನಲ್ಲ! ಅಲ್ಲದೆ ಪೂಜ್ಯನಾದೀ

ಗಿಂತಲೂ ಸ್ವಲ್ಪವಾಗಿ ಕಾಣುತ್ತಿದ್ದರೂ ಮಹತ್ತಾಗಿ ಪರಿಣಮಿಸಿತು. "ಅಭಿತಃ ಪಾವಕೋಪಮಂ" ಎಂಬ ವಿಶೇಷಣವಿರುವುದರಿಂದ, ಮಹಾ ಸಭೆಯಾದ ಪ್ರಯುಕ್ತ, ಸಮೀಪಕ್ಕೆ ಬಂದಿದ್ದ ತಮ್ಮನಾದ ಭರತನಿಗೂ ಹೊಗಲಸದಳವಾಯಿತಾದುದರಿಂದ ಈ ಅರ್ಥವು ಹೇಳಲಾಯಿತು. "ಬೆಂಕಿಯು ಮಹದಾಕಾರವಾಗಿ ಉರಿಯುತ್ತಿರುವಾಗ ಯಾರೇ ಆಗಲಿ ಪ್ರವೇಶಿಸುವುದಕ್ಕೂ, ಬಳಿಸಾರುವುದಕ್ಕೂ ಸಾಧ್ಯವಾದೀತೆ?" ಎಂದು ಇಲ್ಲಿನ ಭಾವ. ಆದುದರಿಂದಲೇ ಪೂರ್ವ ಶ್ಲೋಕದಲ್ಲಿ "ಸನಿರೀಕ್ಷ್ಯ ಮುಹೂರ್ತಂತು" ಎಂದು ಹೇಳಿದ್ದಾರೆ. ಮತ್ತು "ಶಾಶ್ವತಂ" ಎಂಬ ಪದದಿಂದ ಬ್ರಹ್ಮಾಪೇಕ್ಷಯಾ ಶ್ರೀರಾಮನ ವೈಲಕ್ಷಣ್ಯವನ್ನು ಹೇಳಲಾಗಿದೆ.

ಮಹೇಶ್ವರ ತೀರ್ಥರು ಇತರ ವಿಶೇಷಣಗಳನ್ನು ಹೇಳಲೋಸುಗ "ದದರ್ಶ" ಎಂಬ ಪದದ ಪೌನರುಕ್ತ್ಯಯಾಗಿ ಇಲ್ಲಿ ನಿವೇಶಿತವಾಗಿದೆ. "ಅಭಿತಃ ಪಾವಕೋಪಮಂ" ಯಜ್ಞೇಶ್ವರನಂತೆ ಅಪ್ರಧೃಷ್ಯನು ಎಂಬ ಅರ್ಥವನ್ನು ಮಾತ್ರ ಬರೆದಿದ್ದಾರೆ.

ಮಹಾತ್ಮಾ ಪುರೋಚಿತಃ ॥ ಮೃಗಾಜಿನೇ ಸೋಽಯಮಿಹ ಪ್ರವಸ್ತೇ ಧರ್ಮ
ಮಾಚರನ್ ॥ ೩೨ ॥ ಅಧಾರಯದ್ಯೋ ವಿವಿಧಾಶ್ಚಿತ್ರಾಸ್ಸುಮನಸಸ್ತದಾ ॥
ಸೋಽಯಂ ಜಟಾಭಾರಮಿಮಂ ವಹತೇ ರಾಘವಃ ಕಥಂ? ॥ ೩೩ ॥ ಯಸ್ಯ
ಯಜ್ಞೈರ್ಯಥೋದ್ದಿಷ್ಟೈರ್ಯುಕ್ತೋ ಧರ್ಮಸ್ಯ ಸಂಚಯಃ ॥ ಶರೀರ
ಕ್ಲೇಶಸಂಭೂತಂ ಸ ಧರ್ಮಂ ಪರಿಮಾರ್ಗತೇ ॥ ೩೪ ॥ ಚಂದನೇನ ಮಹಾ
ರ್ಹೇಣ ಯಸ್ಯಾಂಗಮುಪಸೇವಿತಂ ॥ ಮಲೇನ ತಸ್ಯಾಂಗಮಿದಂ ಕಥಮಾ

ಷನು, ಪುರಾ - ಪೂರ್ವದಲ್ಲಿ, ಬಹುಸಾಹಸ್ರೈಃ - ಅನೇಕ ಸಹಸ್ರಗಳೇ ಮೌಲ್ಯವಾಗುಳ್ಳ, ವಾಸೋಭಿಃ- ವಸ್ತ್ರಗಳಿಂದ, ಅಲಂಕರ್ತುಂ - ಅಲಂಕಾರಮಾಡಿಕೊಳ್ಳುವುದಕ್ಕೆ, ಉಚಿತಃ - ಅರ್ಹನೋ, ಸೋಽಯಂ- ಅಂತಹ ಈ ನಮ್ಮಣ್ಣನು, ಇಹ- ಇಲ್ಲಿ, ಧರ್ಮಂ- ಋಷಿವೃತ್ತಿಯನ್ನು, ಆಚರನ್- ನಡಿಸುತ್ತ, ಮೃಗಾಜಿನೇ- ಕೃಷ್ಣಾಜಿನಗಳನ್ನು, ಪ್ರವಸ್ತೇ - ಹೊದ್ದಿರುತ್ತಾನೆ. ॥ ೩೨ ॥ ಯಃ - ಯಾವ ರಾಮನು, ತದಾ - ಆ ಕಾಲದಲ್ಲಿ, ವಿವಿಧಾಃ - ನಾನಾಬಗೆಗಳಾದ, ಚಿತ್ರಾಃ - ಚಿತ್ರವರ್ಣಗಳಾದ, ಸುಮನಸಃ - ಹೂಗಳನ್ನು, ಅಧಾರಯತ್ - ಧರಿಸಿದ್ದನೋ, ಸೋಽಯಂರಾಘವಃ - ಆ ಈ ಶ್ರೀರಾಮನು, ಇಮಂಜಟಾಭಾರಂ - ಈ ಜಡೆಗಳ ಸಮುದಾಯವನ್ನು, ಕಥಂವಹತೇ - ಹೇಗೆತಾನೆ ಧರಿಸುತ್ತಾನೆಯೋ? ॥ ೩೩ ॥ ಯಥೋದ್ದಿಷ್ಟೈಃ - ಶಾಸ್ತ್ರೋಕ್ತವಾಗಿ ಆಚರಿಸಲಾದ, ಯಸ್ಯ-ಯಾವ ಶ್ರೀರಾಮನ ಉದ್ದೇಶ್ಯಕವಾದ, ಯಜ್ಞೈಃ - ಯಜ್ಞಗಳಿಂದ, ಧರ್ಮಸ್ಯ - ಧರ್ಮದ, ಸಂಚಯಃ - ಸಂಗ್ರಹವು, ಯುಕ್ತಃ - ಅರ್ಹವಾದುದೋ, ಸಃ - ಅಂತಹ ಶ್ರೀರಾಮನು, ಶರೀರಕ್ಲೇಶಸಂಭೂತಂ - ಶರೀರಾಯಾಸದಿಂದ ಜನಿಸಿದ, ಧರ್ಮಂ - ಧರ್ಮವನ್ನು, ಪರಿಮಾರ್ಗತೇ - ಹುಡುಕುತ್ತಾನೆ. ॥ ೩೪ ॥ ಯಸ್ಯ - ಯಾವ ಶ್ರೀರಾಮನ, ಅಂಗಂ - ಶರೀರವು, ಮಹಾರ್ಹೇಣ - ಶ್ರೇಷ್ಠವಾದ, ಚಂದನೇನ - ಶ್ರೀಗಂಧದಿಂದ, ಉಪಸೇವಿತಂ - ಸೇವಿಸಲ್ಪಟ್ಟಿತೋ, ತಸ್ಯಾರ್ಯಸ್ಯ - ಅಂತಹ ನಮ್ಮಣ್ಣನ, ಇದಮಂಗಂ - ಈ ಶರೀರವು, ಮಲೇನ - ಮಾಲಿನ್ಯದಿಂದ, ಕಥಂ - ಹೇಗೆ, ಸೇವ್ಯತೇ - ಸೇವಿಸಲ್ಪಡುತ್ತದೆ. ॥ ೩೫ ॥

ಶ್ರೀರಾಮನು ಪೂರ್ವದಲ್ಲಿ ಬಹು ಬೆಲೆಬಾಳುವದೂ ಅನೇಕ ಸಹಸ್ರ ಸಂಖ್ಯೆಯುಳ್ಳವೂ ಆದ ವಸ್ತ್ರಗಳಿಂದ ರಚಿಸಲಾದ ಶಯ್ಯೆಯಲ್ಲಿ ಪವಳಿಸುತ್ತಿದ್ದನಲ್ಲವೆ! ಅಂತಹ ಆ ಮಹಾತ್ಮನೀಗ ಪಿತೃವಾಕ್ಯಪರಿಪಾಲನಾರೂಪ ಧರ್ಮವನ್ನಾಚರಿಸುತ್ತ ಮೃಗಗಳ ಚರ್ಮಗಳಲ್ಲಿ ವಾಸಿಸುತ್ತಿರುವನಲ್ಲವೆ! ಅಯ್ಯೋ! ಶ್ರೀರಾಮನಿಂತು ಮಹಾಕಷ್ಟವನ್ನು ನನ್ನ ನಿಮಿತ್ತವಾಗಿ ಅನುಭವಿಸುತ್ತಿರುವನಲ್ಲವೆ! ನಾನೇನುಮಾಡಲಿ." ಹೀಗೆ ವ್ಯಸನವನ್ನು ಹೊಂದಿದ ಭರತನು ಮತ್ತೂ ಈ ಮಾತುಗಳನ್ನಾಡಿದನು. "ಓ ಮಾನವೋತ್ತಮರಿರಾ! ಈ ಶ್ರೀರಾಮನು ಪೂರ್ವದಲ್ಲಿ ಅನೇಕ ವಿಧಗಳಾದುವೂ, ಬಹುಸುವಾಸನೆಯುಳ್ಳವೂ, ಚಿತ್ರವಿಚಿತ್ರಗಳಾದುವೂ ಆದ ಹೂಮಾಲಿಕೆಗಳನ್ನು ಶಿರಸ್ಸಿನಲ್ಲಿ ಧರಿಸುತ್ತಿದ್ದನು; ಅಂತಹನೀಗ ಹೊರಲಾಗದ ಈ ಜಡೆಗಳನ್ನಾವರೀತಿಯಲ್ಲಿ ಧರಿಸಿಕೊಂಡಿರುವನೋ? ಅಯ್ಯೋ! ಅನೇಕ ವಿಧಗಳಾದ ಯಜ್ಞಗಳನ್ನು ಶಾಸ್ತ್ರೋಕ್ತರೀತಿಯಲ್ಲಿ ಆಚರಿಸುವುದರಿಂದ ಧರ್ಮವನ್ನಾರ್ಜಿಸಲರ್ಹನಾದ ನಮ್ಮಣ್ಣನೀಗ ವಾನಪ್ರಸ್ಥಾಶ್ರಮಿಗಳಂತೆ ವನವಾಸಮಾಡುವುದರಿಂದ ಆ ಧರ್ಮವನ್ನು ಸಂಪಾದಿಸುತ್ತಿರುವ

ಯರ್ಸ್ಯ ಸೇವ್ಯತೇ? ॥ ೩೫ ॥ ಮನ್ನಿಮಿತ್ತಮಿದಂ ದುಃಖಂ ಪ್ರಾಪ್ತೋ ರಾಮ
ಸ್ಸುಖೋಚಿತಃ ॥ ಧಿಗ್ಜೀವಿತಂ ನೃಶಂಸಸ್ಯ ! ಮಮ ಲೋಕವಿಗರ್ಹಿತಂ ॥೩೬॥
ಇತ್ಯೇವಂ ವಿಲಪರ್ನ ದೀನಃ ಪ್ರಸ್ವಿನ್ನ ಮುಖಪಂಕಜಃ ॥ ಪಾದಾವಪ್ರಾಪ್ಯ
ರಾಮಸ್ಯ ಪಪಾತ ಭರತೋ ರುರ್ದ ॥ ೩೭ ॥ ದುಃಖಾಭಿತಪ್ತೋ ಭರತೋ
ರಾಜಪುತ್ರೋ ಮಹಾಬಲಃ ॥ ಉಕ್ತ್ವಾರ್ಯೇತಿ! ಸಕೃದ್ದೀನಂ ಪುನರ್ನೋ
ವಾಚ ಕಿಂಚನ ॥ ೩೮ ॥ ಬಾಷ್ಪಾಪಿಹಿತಕಂಠಶ್ಚ ಪ್ರೇಕ್ಷ್ಯ ರಾಮಂ ಯಶಸ್ವಿನಂ ॥

ಸುಖೋಚಿತಃ - ಸುಖಕ್ಕೇ ಯೋಗ್ಯನಾದ, ರಾಮಃ - ಶ್ರೀರಾಮನು, ಮನ್ನಿಮಿತ್ತಂ - ನನಗೋಸುಗಿ, ಇದಂದುಃಖಂ - ಈ ವ್ಯಸನವನ್ನು, ಪ್ರಾಪ್ತಃ - ಹೊಂದಿದನು, ನೃಶಂಸಸ್ಯ - ಘಾತುಕನಾದ, ಮಮ - ನನ್ನ, ಲೋಕಗರ್ಹಿತಂ - ಜನರಿಂದ ದೂಷಿಸಲ್ಪಟ್ಟ, ಜೀವಿತಂ - ಪ್ರಾಣವನ್ನು, ಧಿಕ್ - ನಿಂದಿಸು. ॥ ೩೬ ॥ ಇತ್ಯೇವಂ - ಈಪರಿಯಾಗಿ, ವಿಲಪರ್ನ - ಅಳುತ್ತ, ದೀನಃ - ಸಂಕಟಗೊಂಡಿರುವ, ಪ್ರಸ್ವಿನ್ನಮುಖಪಂಕಜಃ - ಬೆವರಿನಿಂದ ಬಾಡಿದ ಮುಖಕಮಲವುಳ್ಳ, ಭರತಃ-ಭರತನು, ರುರ್ದ - ಅಳುತ್ತ, ರಾಮಸ್ಯ - ಶ್ರೀರಾಮನ, ಪಾದೌ - ಚರಣಗಳನ್ನು, ಅಪ್ರಾಪ್ಯ - ಹೊಂದದೆಯೇ, ಪಪಾತ - ನೆಲದಲ್ಲಿ ಬಿದ್ದನು. ॥ ೩೭ ॥ ದುಃಖಾಭಿತಪ್ತಃ - ವ್ಯಸನದಿಂದ ತಪಿಸುತ್ತಿರುವ, ಮಹಾಬಲಃ - ಮಹಾ ಬಲವುಳ್ಳ, ರಾಜಪುತ್ರಃ - ಅರಸುಕುವರನಾದ, ಭರತಃ - ಭರತನು, ಆರ್ಯೇತಿ - ಅಣ್ಣನೇ ಎಂದು, ಸಕೃತ್ - ಒಂದಾವರ್ತಿ, ದೀನಂ - ದೈನ್ಯದಿಂದ, ಉಕ್ತ್ವಾ - ಹೇಳಿ, ಪುನಃ - ಮತ್ತು, ಕಿಂಚನ - ಸ್ವಲ್ಪವಾದರೂ, ನೋವಾಚ - ಮಾತನಾಡದೆಹೋದನು. ॥ ೩೮ ॥ ಬಾಷ್ಪಾಪಿಹಿತಕಂಠಶ್ಚ - ಕಂಬನಿಗಳಿಂದ ಹಿಡಿಯಲ್ಪಟ್ಟ ಕಂಠವುಳ್ಳವನಾಗಿ, ಯಶಸ್ವಿನಂ - ಕೀರ್ತಿವಂತನಾದ, ರಾಮಂ - ಶ್ರೀರಾಮನನ್ನು, ಪ್ರೇಕ್ಷ್ಯ - ಕಂಡು, ತದಾ - ಆಕಾಲದಲ್ಲಿ, ಆರ್ಯೇತಿ - ಅಣ್ಣನೇ ಎಂತಲೇ, ಸಂಕ್ರುಶ್ಯ - ಕೂಗಿ, ಅಥ - ಬಳಿಕ, ವ್ಯಾಹರ್ತುಂ - ಮಾತನಾಡುವದಕ್ಕೆ, ನಾಶಕತ್ - ಸಮರ್ಥನಾಗಲಿಲ್ಲ. ॥ ೩೯ ॥ ಶತ್ರುಘ್ನಶ್ಚಾಪಿ - ಶತ್ರುಘ್ನನೂ ಕೂಡ, ರುರ್ದ-ರೋದನಮಾಡುತ್ತ, ವವಂದೇ - ವಂದಿಸಿದನು, ಸರಾಮಶ್ಚ - ಆ ಶ್ರೀರಾಮನೂ, ತಾಉಭೌ - ಆ ಭರತ ಶತ್ರುಘ್ನರಿಬ್ಬ

ಸಲ್ಲವೆ ! ಸರ್ವೋತ್ತಮವಾದ ಗಂಧವನ್ನು ಲೇಪನಮಾಡಿಕೊಳ್ಳಲು ತಕ್ಕುದಾದ ಶ್ರೀರಾಮನ ಶರೀರವೀಗ ಧೂಳಿಯಿಂದ ವ್ಯಾಪ್ತವಾಗಿರುವುದಲ್ಲ ! ಅಯ್ಯೋ ! ಶ್ರೀರಾಮನೆಂತಹ ಕಷ್ಟವನ್ನು ಅನುಭವಿಸುತ್ತಿರುವನು. ಸುಖವನ್ನೇ ಎಲ್ಲ ಕಾಲಗಳಲ್ಲಿಯೂ ಅನುಭವಿಸಲು ತಕ್ಕವನಾದ ನಮ್ಮಣ್ಣನು ನನ್ನ ನಿಮಿತ್ತವಾಗಿಯೇ ಈ ಮಹತ್ಕಷ್ಟವನ್ನನುಭವಿಸುತ್ತಿರುವನಲ್ಲವೆ? ಅಹಹ!! ಪರಮಘಾತಕನಾದ ನನ್ನ ಜನ್ಮವು ಸುಡಲಿ !" ಹೀಗೆ ಅಧಿಕವಾದ ವ್ಯಸನವನ್ನು ಹೊಂದಿದವನೂ, ದೀನನೂ, ಬೆವರಿನಿಂದ ಕೂಡಿದ ಕಮಲದಂತಹ ಮುಖವುಳ್ಳವನೂ ಆದ ಆ ಭರತನು ಶ್ರೀರಾಮನ ಪಾದಕಮಲಗಳನ್ನು ಹಿಡಿದುಕೊಳ್ಳಲು ಹೋಗಿ, ಅಷ್ಟರಲ್ಲಿಯೇ ಹತ್ತಿರಕ್ಕೆಹೋಗಲಾರದೆ, ಅಳುತ್ತ ಕೆಳಕ್ಕೆಬಿದ್ದವನಾದನು. ಅಲ್ಲದೆ, ರಾಜಕುಮಾರನೂ, ಮಹಾಬಲಶಾಲಿಯೂ ಆದ ಆ ಭರತನು ದುಃಖದಿಂದ ಬಹಳವಾಗಿ ಪೀಡಿತನಾಗಿ "ಅಣ್ಣಾ ! ಆರ್ಯಾ !" ಎಂದು ನುಡಿಯುತ್ತ ದುಃಖವು ಉಕ್ಕಿಯುಕ್ಕಿ ಬರುತ್ತಿದ್ದುದರಿಂದ ಏನನ್ನೂ ಹೇಳಲಾರದೆ ಸುಮ್ಮನಿದ್ದನು. ಇಷ್ಟುಮಾತ್ರವಲ್ಲದೆ ಆ ಭರತನು ಕಣ್ಣೀರಿನಿಂದ ವ್ಯಾಪ್ತ

ಆರ್ಯೇತ್ಯೇವಾಥ ಸಂಕ್ರುಶ್ಯ ವ್ಯಾಹರ್ತುಂ ನಾಶಕತ್ತದಾ ॥ ೩೯ ॥ ಶತ್ರುಘ್ನ
ಶ್ಚಾಪಿ ರಾಮಸ್ಯ ವವಂದೇ ಚರಣೌ ರುದನ್ ॥ ತಾವುಭೌ ಸ ಸಮಾಲಿಂಗ್ಯ
ರಾಮೋ ಪ್ಯಶ್ರೂಣ್ಯವರ್ತಯತ್ ॥ ೪೦ ॥ ತತ ಸ್ಸುಮಂತ್ರೇಣ ಗುಹೇನಚೈವ
ಸಮೀಯತೂ ರಾಜಸುತಾವರಣ್ಯೇ ॥ ದಿವಾಕರಶ್ಚೈವ ನಿಶಾಕರಶ್ಚ ಯಥಾಂ
ಬರೇ ಶುಕ್ರ ಬೃಹಸ್ಪತಿಭ್ಯಾಂ ॥ ೪೧ ॥

ತಾನ್ ಪಾರ್ಥಿವಾನ್ ವಾರಣ ಯೂಥಪಾಭಾನ್
ಸಮಾಗತಾಂ ಸ್ತತ್ರ ಮಹತ್ಯರಣ್ಯೇ ॥
ವನೌಕಸಸ್ತೇಪಿ ಸಮೀಕ್ಷ್ಯ ಸರ್ವೇ
ಪ್ಯಶ್ರೂಣ್ಯಮುಂಚನ್ ಪ್ರವಿಹಾಯ ಹರ್ಷಂ ॥ ೪೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನಶತತಮಸ್ಸರ್ಗಃ.

ರನ್ನು, ಸಮಾಲಿಂಗ್ಯ - ಅಪ್ಪಿಕೊಂಡು, ಅಶ್ರೂಣಿ - ಕಂಬನಿಗಳನ್ನು, ಅವರ್ತಯತ್ - ಬಿಟ್ಟನು. ॥ ೪೦ ॥ ತತಃ - ಬಳಿಕ, ಅರಣ್ಯೇ - ಆ ಕಾಡಿನಲ್ಲಿ, ರಾಜಸುತೌ - ಅರಸುಕುವರರಾದ ರಾಮಲಕ್ಷ್ಮಣರು, ಸುಮಂತ್ರೇಣ - ಸುಮಂತ್ರನೊಡನೆ, ಗುಹೇನಚೈವ - ಗುಹನಿಂದೊಡಗೂಡಿದವರೂ ಆಗಿ, ದಿವಾಕರಶ್ಚೈವನಿಶಾಕರಶ್ಚ - ಸೂರ್ಯ ಚಂದ್ರರಿಬ್ಬರೂ, ಅಂಬರೇ - ಅಂತರಿಕ್ಷದಲ್ಲಿ, ಶುಕ್ರಬೃಹಸ್ಪತಿಭ್ಯಾಂಯಥಾ - ಶುಕ್ರ ಬೃಹಸ್ಪತಿಗಳಿಂದೊಡಗೂಡಿದಂತೆ, ಸಮೀಯತುಃ - ಕೂಡಿದರು. ॥ ೪೧ ॥ ಮಹತೀ - ದೊಡ್ಡದಾದ, ತತ್ರಾರಣ್ಯೇ - ಆ ಅರಣ್ಯದಲ್ಲಿ, ಸಮಾಗತಾನ್ - ಬಂದಿರುವ, ವಾರಣಯೂಥಪಾಭಾನ್-ಗಜಯೂಥಪತಿಗಳ ಪ್ರಕಾಶದಂತೆ ಪ್ರಕಾಶವುಳ್ಳ, ತಾನ್ಪಾರ್ಥಿವಾನ್ - ಆ ಅರಸುಮಕ್ಕಳನ್ನು, ಸಮೀಕ್ಷ್ಯ-ಕಂಡು, ಸರ್ವೇ-ಸಮಸ್ತರಾದ, ತೇವನೌಕಸೋಪಿ-ಆ ವನವಾಸಿಗಳೆಲ್ಲರೂ ಕೂಡ, (ಗೋ.+ಮ) ಅಂದರೆ ತಿರ್ಯಗ್ಜಂತುಗಳು ಮೊದಲ್ಗೊಂಡು ಋಷಿಗಳೆಲ್ಲರೂ ಕೂಡ, ಹರ್ಷಂ - ಸಂತೋಷವನ್ನು, ಪ್ರವಿಹಾಯ-ಬಿಟ್ಟು, ಅಶ್ರೂಣಿ-ಕಂಬನಿಗಳನ್ನು, ಅಮುಂಚನ್-ಬಿಟ್ಟರು. ॥ ೪೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋನಶತತಮಸ್ಸರ್ಗಃ.

ವಾದ ಕಂಠವುಳ್ಳವನಾಗಿ ಕೀರ್ತಿಸಂಪನ್ನನಾದ ಶ್ರೀರಾಮನನ್ನು ನೋಡಿ "ಓ ಪೂಜ್ಯನೆ! ಎಂದು ಕರೆದು ಮಿಕ್ಕವಿಷಯಗಳನ್ನು ಹೇಳಲು ಶಕ್ತಿಯಿಲ್ಲದವನಾದನು. ಆ ಸಮಯದಲ್ಲಿ ಶತ್ರುಘ್ನನೂ ಸಹ ರೋದನಮಂಗೈಯುತ್ತ ಶ್ರೀರಾಮನ ಪಾದಗಳಮೇಲೆ ಬಿದ್ದು ನಮಸ್ಕಾರಮಾಡಿದನು. ಆಗ ಶ್ರೀರಾಮನು ಅವರೀರ್ವರನ್ನೂ ಬರಸೆಳದಾಲಿಂಗಿಸಿಕೊಂಡು ಕಣ್ಣೀರಿಟ್ಟನು. ಅಲ್ಲದೆ ಆ ಸಮಯದಲ್ಲಿ ರಾಜನಂದನರಾದ ಶ್ರೀರಾಮಲಕ್ಷ್ಮಣರು ಆ ದಂಡಕಾರಣ್ಯದಲ್ಲಿ ಸುಮಂತ್ರನೊಡನೆಯೂ, ಗುಹನೊಡನೆಯೂ ಕೂಡಿದವರಾಗಿ, ಶುಕ್ರ ಬೃಹಸ್ಪತಿಗಳೊಡಗೂಡಿದ ಸೂರ್ಯಚಂದ್ರರಂತೆ ಪ್ರಕಾಶಿಸಿದರು. ಮದಿಸಿದ ಮದ್ದಾನೆಗಳಿಗೆ ಸಮಾನರಾದ ಆ ದಶರಥರಾಜಕುಮಾರರೆಲ್ಲರೂ ಆ ದಂಡಕಾರಣ್ಯದಲ್ಲಿ ಸೇರಿದುದನ್ನು ಆ ವನದಲ್ಲಿ ಸಂಚರಿಸುತ್ತಿದ್ದವರೆಲ್ಲರೂ ನೋಡಿ ಸಂತೋಷಹೀನರಾಗಿ ಕಣ್ಣೀರನ್ನು ಸುರಿಸಿದರು. ॥ ೩೧-೪೨ ॥

ಇಂತಿದು ಭರತಶತ್ರುಘ್ನಕೃತ ಶ್ರೀಸೀತಾರಾಮಲಕ್ಷ್ಮಣಸಂದರ್ಶನ ವಿಧಾನವಿವರಣವೆಂಬ ತೊಂಭತ್ತೊಂಭತ್ತನೆಯ ಸರ್ಗವು ಸಮಾಪ್ತವಾದುದು.



भरतादि भेट

A 7515—Lakshmi Art, Bombay, 8

(೧)ದುರ್ದರ್ಶಂ (೨)ಯುಗಾಂತೇ ಭಾಸ್ಕರಂ ಯಥಾ॥೧॥ಕಥಂಚಿದಭಿವಿಜ್ಞಾಯ ವಿವರ್ಣವದನಂ ಕೃಶಂ ॥ ಭ್ರಾತರಂ ಭರತಂ ರಾಮಃ ಪರಿಜಗ್ರಾಹ ಬಾಹುನಾ ॥ ೨ ॥ ಆಘ್ರಾಯ ರಾಮಸ್ತಂ ಮೂರ್ಧ್ನಿ ಪರಿಷ್ವಜ್ಯಚ ರಾಘವಃ ॥ ಅಂಕೇ

ಪ್ರಳಯಕಾಲದಲ್ಲಿ, ಭಾಸ್ಕರಂಯಥಾ - ಸೂರ್ಯನಂತೆ, ದುರ್ದಶಂ - ನೋಡಲಸಾಧ್ಯನಾದ. ॥ ೧ ॥ ರಾಮಃ - ಶ್ರೀರಾಮನು, ವಿವರ್ಣವದನಂ - ಬಳಲಿದ್ದುದರಿಂದ ಬಣ್ಣಗೆಟ್ಟ ಮುಖವುಳ್ಳ, ಕೃಶಂ-ಕೃಶೀಭೂತನಾದ, ಭ್ರಾತರಂ - ತಮ್ಮನಾದ, ಭರತಂ - ಭರತನನ್ನು, ಕಥಂಚಿತ್ - ಅತಿ ಪ್ರಯಾಸದಿಂದ, ಅಭಿವಿಜ್ಞಾಯ - ತಿಳಿದು, ಬಾಹುನಾ - ಭುಜದಿಂದ, ಪರಿಜಗ್ರಾಹ - ಗ್ರಹಿಸಿದನು. ॥ ೨ ॥

ನೋಡಲು ಕಾಂತಿಯಿಲ್ಲದವನೂ, ಕೃಶಿಸಿಹೋಗಿರುವವನೂ, ಭೂಮಿಯಲ್ಲಿ ಬಿದ್ದಿರುವವನೂ ಆದ ಭರತನನ್ನು ಶ್ರೀರಾಮನು ನೋಡಿದವನಾದನು ; ಇಂತು ನೋಡಿ ಆ ಭರತನ ಶಿರವನ್ನು

ನನ್ನ ತಮ್ಮನು ಈಗ ತಾನಾಗಿಯೇ ಏನನ್ನೋ ಬೇಡಲು ಕೈಜೋಡಿಸಿಕೊಂಡಿರುವನಲ್ಲ!" ಎಂದು ಶ್ರೀರಾಮನ ವಿಸ್ಮಯ! ನಮ್ಮ ತಂದೆಯು, "ಕುಸುಮಶಯ್ಯೆಯೂ ಕೂಡ ಭರತನ ಶಯನಕ್ಕೆ ಕಠಿಣವಾಗಿ ಪರಿಣಮಿಸೀತೆಂಬ ಸಂಶಯದಿಂದ," ತನ್ನ ತೊಡೆಯಮೇಲೆಕೂಡಿಸಿ ಲಾಲಿಸುತ್ತಿದ್ದನು. "ಅಂತಹವನೀಗ ಭೂಮಿಯಮೇಲೆ ಬಿದ್ದಿದ್ದಾನಲ್ಲವೆ!" ಎಂದು ರಾಮನು ಆಶ್ಚರ್ಯಗೊಂಡನು.

ಟಿ. (೧) ಈ ಪದಕ್ಕೆ, "(೧) ಶ್ರೀರಾಮನನ್ನು ಸಂದರ್ಶಿಸಲು ಶಕ್ತಿಸಾಲದೆ ವ್ಯಾಕುಲನಾಗಿರುವ, (೨) ಜಟಾವಲ್ಕಲಧಾರಣೆಯಿಂದ ಗುರುತಿಸಲಸದಳನಾದ, (೩) ದುಃಖಸಂತಪ್ತನಾಗಿ ಮುಖವಿವರ್ಣವಾಗಿದ್ದುದರಿಂದ ಬಹು ದುಃಖದಿಂದಲೇ ನೋಡಲು ತಕ್ಕವನಾದ, (೪) ಎಷ್ಟು ನೋಡಿದರೂ ಗುರುತೇ ಸಿಗದಿರುವ" ಎಂಬ ಅರ್ಥಗಳು ಸೂಚಿತವಾಗುತ್ತವೆ.

ಟಿ. (೨) ಪ್ರಳಯಕಾಲದಲ್ಲಿ ಕೆಳಗೆ ಬಿದ್ದಿರುವ ದಿನಕರನನ್ನು ನೋಡಲು ಯಾರಿಂದಲೂ ಆಗುವದಿಲ್ಲವೆಂತೋ, ಅಂತೆಯೇ ಭರತನೂ ಕೂಡ ನೋಡಲು ಅಶಕ್ಯನೆಂದು ಒಂದಭಿಪ್ರಾಯ. ಎರಡನೆಯದು, "ಯುಗಾಂತ್ಯದಲ್ಲಿ ಭೂಗತನಾಗಿರುವ ಭಾಸ್ಕರನಂತೆ ಹೊಳೆಯುತ್ತಿರುವವನು ; ಋಷಿಯೋಗ್ಯವಾದ ವೇಷ, ಆಚರಣೆ ಮೊದಲಾದವುಗಳಿಂದ" ಎಂದು. ಅರ್ಥಾತ್ ಪೂರ್ವದಲ್ಲಿ ಭರತನ ನಿರುಪಮ ತೇಜಸ್ಸು, ಈಗ ಅದೇ ತೇಜಸ್ಸಿನ ಅಭಾವ, ಮತ್ತು ಹಾಗಿರಲು ಅನರ್ಹತೆ ಇವು ಸೂಚಿತವಾದವು. "ಯುಗಾಂತೇ ಭುವಿಪತಿತಂ ಭಾಸ್ಕರಮಿವಸ್ಥಿತಂ" ಎಂದು ಪಾಠ ಭೇದವುಂಟು.

ಈ ಶ್ಲೋಕದಲ್ಲಿ **ತನಿ** ಶ್ಲೋಕೀಕಾರರು ಮತ್ತು **ಮಹೇಶ್ವರ ತೀರ್ಥರು** ಸಹ ಈ ಸಂಶಯವನ್ನು ಹೂಡಿ ಅದಕ್ಕೆ ಸಮಾಧಾನವನ್ನು ಬರೆಯುತ್ತಾರೆ.

ಸಂಶಯಃ—

ಗಂಗಾತೀರದಲ್ಲಿ ಭರತನು "ಅದ್ಯಪ್ರಭೃತಿ ಭೂಮೌತು ಶಯಿಷ್ಯೇಽಹಂ ತೃಣೇಷುವಾ ॥ ಫಲಮೂಲಾಶನೋ ನಿತ್ಯಂ ಜಟಾಚೀರಾಣಿ ಧಾರಯನ್ ॥" ಎಂದು ಪ್ರತಿಜ್ಞೆಗೈದ್ದನು. ಅಮೇಲೆ ತೊಂಭತ್ತನೆಯ ಸರ್ಗದಲ್ಲಿ ಭರದ್ವಾಜ ಮಹರ್ಷಿಗಳ ಸಂದರ್ಶನಸಮಯದಲ್ಲಿ "ವಸಾನೋವಾಸಸೀ ಕ್ಷೌಮೇ" ಎಂದು ಬಿಳೀ ವಸ್ತ್ರ ಧಾರಣೆಯು ಭರತನಿಗೆ ವಿಶೇಷಣ ಮಾಡಲಾಗಿದೆ. ಇಲ್ಲಿಯಾದರೋ "ಜಟಿಲಂ ಚೀರವಸನಂ" ಎಂಬುದಾಗಿ ಮೊದಲಿನಿಂದಲೂ, ಎಂದರೆ ಪ್ರತಿಜ್ಞಾಕಾಲದಿಂದಲೂ, ಈ ವೇಷದಿಂದಲೇ ಇದ್ದಂತೆ ಹೇಳಿದೆ. ಹೀಗಿರುವುದರಿಂದ ಪೌರ್ವಾಪರ್ಯ ದೋಷವು ಬಲಪಡುತ್ತದೆ.

ಸಮಾಧಾನಃ—ಗಂಗಾತೀರದಲ್ಲಿ ಭರತನು "ಅದ್ಯಪ್ರಭೃತಿ" ಎಂಬುದಾಗಿ ಪ್ರತಿಜ್ಞೆ ಮಾಡಿದುದು ರಾತ್ರಿಯ ಕಾಲದಲ್ಲಿ. ಆದುದರಿಂದ ಆಗ ಪ್ರತಿಜ್ಞಾಪೂರ್ತಿಯನ್ನು ಮಾಡಲು ಅವಕಾಶವಿಲ್ಲದುದರಿಂದ ಮಾರನೆಯ ದಿನ ಭರದ್ವಾಜ ಸಂದರ್ಶನಾನಂತರದಲ್ಲಿ ಜಟಾವಲ್ಕಲಧಾರಿಯಾದನೆಂಬುದರಿಂದ ಈ ಘಟ್ಟದಲ್ಲಿ ಮೇಲಿನ ಸಂಶಯವು ಕೂಡುವದಿಲ್ಲ.

ಭರತಮಾರೋಪ್ಯ ಪರ್ಯಪೃಚ್ಛ ತ್ಸಮಾಹಿತಃ ॥ ೩ ॥ ಕ್ವನು ತೇ ಭೂತ್ಪಿತಾ ತಾತ! ಯದರಣ್ಯಂ ತ್ವಮಾಗತಃ ॥ ನಹಿ ತ್ವಂ ಜೀವತ ಸ್ತಸ್ಯ ವನಮಾಗಂತು ಮರ್ಹಸಿ ॥ ೪ ॥ ಚಿರಸ್ಯ ಬತ ಪಶ್ಯಾಮಿ ದೂರಾ ದ್ಭರತಮಾಗತಂ ॥ ದುಷ್ಪ್ರ ತೀಕ ಮರಣ್ಯೇಸ್ಮಿನ್ ಕಿಂ ತಾತ! ವನಮಾಗತಃ ॥ ೫ ॥ ಕಚ್ಚಿದ್ಧಾರಯತೇ ತಾತ! ರಾಜಾ ಯತ್ತ್ವ ಮಿಹಾಗತಃ ॥ ಕಚ್ಚಿನ್ನದೀನ ಸ್ಸಹಸಾ ರಾಜಾ ಲೋಕಾಂತರಂ ಗತಃ ॥ ೬ ॥ ಕಚ್ಚಿ ತ್ಸೌಮ್ಯ! ನ ತೇ ರಾಜ್ಯಂ ಭ್ರಷ್ಟಂ ಬಾಲಸ್ಯ

ರಾಘವಃ - ರಘುವಂಶೋತ್ಪನ್ನನಾದ, ರಾಮಃ - ಶ್ರೀರಾಮನು, ತಂ - ಆ, ಭರತಂ - ಭರತನನ್ನು, ಪರಿಷ್ವಜ್ಯ - ಅಪ್ಪಿಕೊಂಡು, ಮೂರ್ಧ್ನಿ - ಮಂಡೆಯಲ್ಲಿ, ಆಘ್ರಾಯ - ಮೂಸಿನೋಡಿ, ಸಮಾಹಿತಃ- ಸಮಾಧಾನಚಿತ್ತನಾಗಿ, ಅಂಕೇ - ತೊಡೆಯಮೇಲೆ, ಆರೋಪ್ಯ-ಕೂಡಿಸಿಕೊಂಡು, ಪರ್ಯಪೃಚ್ಛತ್- ಪ್ರಶ್ನೆಮಾಡಿದನು, ಹೇ ತಾತ - ಎಲೈ ವತ್ಸನೆ, ಯತ್ - ಯಾವ ಕಾರಣ, ತ್ವಂ - ನೀನು, ಅರಣ್ಯಂ- ವನವನ್ನು ಕುರಿತು, ಆಗತಃ - ಬಂದೆಯೋ, ತತ್ - ಆ ಕಾರಣ, ತೇ - ನಿನ್ನ, ಪಿತಾ - ತಂದೆಯು, ಕ್ವನು - ಎಲ್ಲಿ, ಅಭೂತ್ - ಆದನು, ಹಿ - ಯಾವ ಕಾರಣದಿಂದ, ತಸ್ಯ - ಆ ತಂದೆಯು, ಜೀವತಃ - ಬದುಕಿರಲು, ತ್ವಂ - ನೀನು, ವನಂ - ಅರಣ್ಯವನ್ನು ಕುರಿತು, ಆಗಂತುಂ - ಬರುವುದಕ್ಕೆ, ನಾರ್ಹಸಿ- ಯೋಗ್ಯನಲ್ಲವೋ. ॥ ೩-೪ ॥ ಹೇ ತಾತ - ಎಲೈ ವತ್ಸನೇ, ಚಿರಸ್ಯ-ಬಹುಕಾಲಕ್ಕೆ, ಅಸ್ಮಿನ್ನರಣ್ಯೇ- ಈ ಅರಣ್ಯದಲ್ಲಿ, ದೂರಾತ್ - ಬಹು ದೂರದಿಂದ, ಆಗತಂ - ಬಂದ, ದುಷ್ಪ್ರತೀಕಂ - ವಿವರ್ಣ ವಾದ ಅವಯವಗಳುಳ್ಳ, ಭರತಂ - ಭರತನಾದ ನಿನ್ನನ್ನು, ಪಶ್ಯಾಮಿ - ನೋಡಿದೆನು, ಬತ - ಆಶ್ಚ ರ್ಯವು, ವನಂ - ವನವನ್ನು ಕುರಿತು, ಕಿಮಾಗತಃ - ಏತಕ್ಕೆ ಬಂದೆ. ॥ ೫ ॥ ಹೇ ತಾತ - ಎಲೈ ಮಗುವೇ, ರಾಜಾ - ಅರಸು, ಪ್ರಾಣಾನ್ - ಪ್ರಾಣಗಳನ್ನು, ಧಾರಯತೇಕಚ್ಚಿತ್ - ಧರಿಸಿರುವನಷ್ಟೆ, ಯತ್ - ಯಾವ ಕಾರಣ, ತ್ವಂ - ನೀನು, ಇಹ - ಇಲ್ಲಿಗೆ, ಆಗತಃ - ಬಂದೆಯೋ, ತಸ್ಮಾತ್ - ಆ ಕಾರಣ, ದೀನಃ - ಪರಿತಪಿಸುತ್ತಿರುವನಾಗಿ, ರಾಜಾ - ಅರಸು, ಸಹಸಾ - ಜಾಗ್ರತೆಯಾಗಿ, ಲೋಕಾಂ ತರಂ - ಪರಲೋಕವನ್ನು ಕುರಿತು, ನಗತಃಕಚ್ಚಿತ್ - ಹೊಂದದೇ ಇದ್ದಾನೆಯಷ್ಟೆ. ॥ ೬ ॥ ಹೇ

ಆಘ್ರಾಣಿಸಿ, ಆಲಿಂಗಿಸಿ, ಆತನನ್ನು ತನ್ನತೊಡೆಯಮೇಲೆ ಕುಳ್ಳಿರಿಸಿಕೊಂಡು, ಸಮಾಹಿತ ಚಿತ್ತವುಳ್ಳವನಾಗಿ ಆತನನ್ನು ಕುರಿತು ಈ ಮಧುರವಾದ ಮಾತುಗಳನ್ನಾಡಿದನು.“ ವತ್ಸ! ಭರ ತನೆ; ನೀನು ಅರಣ್ಯಕ್ಕೆ ಬಂದುದೇಕೆ? ನಮ್ಮ ತಂದೆಯಾದ ದಶರಥರಾಜನೇನಾದನು ? ನೀನು ವನಕ್ಕೆ ಬಂದುದನ್ನು ನೋಡಿದರೆ ದಶರಥಮಹಾರಾಜನು ಜೀವಂತನಾಗಿರುವಂತೆ ತೋರುವು ದಿಲ್ಲವಲ್ಲ! ಆಹ; ಬಹುಕಾಲದಮೇಲೆ ಈ ಅರಣ್ಯದಲ್ಲಿ, ಕೇಕಯರಾಜ ನಗರದಿಂದ ಬಂದಿರುವ ನಿನ್ನನ್ನುನೋಡಿದೆ. ॥೩-೪॥ ವತ್ಸ! ನೀನಾವಕಾರಣದಿಂದೀ ಅರಣ್ಯಕ್ಕೆಬಂದೆ? ದಶರಥರಾಯನು ಬದುಕಿದ್ದರೆ ನಿನ್ನನ್ನು ಅಗಲುತ್ತಿರಲಿಲ್ಲವಲ್ಲವೆ? ಅಂತಹ ಮಹಾರಾಜನು ಬದುಕಿರುವಾಗ ನೀನೆಂತು ಈ ಅರಣ್ಯಕ್ಕೆ ಬಂದವನಾದೆ? ನಮ್ಮ ತಂದೆಯು ಜೀವಂತನಾಗಿದ್ದಾನೆಯಷ್ಟೆ? ಬಾಲಕನಾದ ನಿನ್ನ ಸಂಬಂಧವಾದ ಶಾಶ್ವತ ಸಾಮ್ರಾಜ್ಯವು ಭ್ರಷ್ಟವಾಗಲಿಲ್ಲವಷ್ಟೆ? ನೀನು ಏನೂ ಅರಿಯದ ಹುಡುಗನೆಂದು ತಿಳಿದು ಶತ್ರುರಾಜರು ಬಂದು ನಿನ್ನ ರಾಜ್ಯವನ್ನಪಹರಿಸಿ

ಶಾಶ್ವತಂ ॥ ಕಚ್ಚಿಚ್ಛುಶ್ರೂಷಸೇ ತಾತ! ಪಿತರಂ ಸತ್ಯ ವಿಕ್ರಮಂ ॥ ೭ ॥
ಕಚ್ಚಿದ್ದಶರಥೋ ರಾಜಾ ಕುಶಲೀ ಸತ್ಯಸಂಗರಃ ॥ ರಾಜಸೂಯಾಶ್ವಮೇಧಾನಾ
ಮಾಹರ್ತಾ ಧರ್ಮ ನಿಶ್ಚಯಃ ॥ ೮ ॥ ಸಕಚ್ಚಿ ದ್ಬ್ರಾಹ್ಮಣೋ ವಿದ್ವಾನ್
ಧರ್ಮನಿತ್ಯೋ ಮಹಾದ್ಯುತಿಃ ॥ ಇಕ್ಷ್ವಾಕೂಣಾ ಮುಪಾಧ್ಯಾಯೋ ಯಥಾ
ವತ್ತಾತ! ಪೂಜ್ಯತೇ ॥ ೯ ॥ ಸಾ ತಾತ! ಕಚ್ಚಿ ತ್ಕೌಸಲ್ಯಾ ಸುಮಿತ್ರಾಚ
ಪ್ರಜಾವತೀ ॥ ಸುಖಿನೀ ಕಚ್ಚಿದಾರ್ಯಾಚ ದೇವೀ ನಂದತಿ ಕೈಕಯೀ? ॥೧೦॥

ಸೌಮ್ಯ - ಎಲೈ ಸೌಮ್ಯನೇ, ಬಾಲಸ್ಯ - ಹುಡುಗನಾದ, ತೇ - ನಿನ್ನ, ಶಾಶ್ವತಂ - ಕುಲಕ್ರಮವಾಗಿ ಬಂದಿರುವ, ರಾಜ್ಯಂ - ರಾಜ್ಯವು, ಭ್ರಷ್ಟಂನಕಚ್ಚಿತ್ - ತಪ್ಪಿಹೋಗಲಿಲ್ಲವೆ, ಹೇ ತಾತ - ಎಲೈ ವತ್ಸನೆ, ಸತ್ಯವಿಕ್ರಮಂ - ಸತ್ಯದಿಂದಲೇ ಪರಾಕ್ರಮವಂತನಾದ, ಪಿತರಂ - ತಂದೆಯನ್ನು, ಶುಶ್ರೂಷಸೇಕಚ್ಚಿತ್ - ಸೇವಿಸುತ್ತಿದ್ದೀಯಾ. ॥ ೭ ॥ ಸತ್ಯಸಂಗರಃ - ಸತ್ಯವಾದ ಪ್ರತಿಜ್ಞೆಯುಳ್ಳ, ರಾಜಸೂಯಾಶ್ವಮೇಧಾನಾಂ - ರಾಜ್ಯಸೂಯಾಶ್ವಮೇಧಾದಿ ಯಜ್ಞಗಳಿಗೆ, ಆಹರ್ತಾ - ಸಂಪಾದಕನಾದ, ಧರ್ಮತಶ್ಚೈವ - ಧರ್ಮದಲ್ಲಿಯೇ ಬುದ್ಧಿಯುಳ್ಳ, ದಶರಥೋರಾಜಾ - ದಶರಥರಾಯನು, ಕುಶಲೀಕಚ್ಚಿತ್ - ಕ್ಷೇಮವಾಗಿದ್ದಾನೆಯೇ. ॥ ೮ ॥ ಹೇ ತಾತ - ಎಲೈ ತಂದೆಯೇ, ಸಃ - ಪ್ರಸಿದ್ಧನಾದ, ಬ್ರಾಹ್ಮಣಃ - ಬ್ರಹ್ಮಜ್ಞನಾದ, ವಿದ್ವಾನ್ - ಸಕಲವೇತ್ತನಾದ, ಧರ್ಮನಿತ್ಯಃ - ಧರ್ಮದಲ್ಲೇ ನಿತ್ಯಬುದ್ಧಿಯುಳ್ಳ, ಮಹಾದ್ಯುತಿಃ - ಬಹಳ ತೇಜೋವಂತನಾದ, ಇಕ್ಷ್ವಾಕೂಣಾಂ - ಇಕ್ಷ್ವಾಕುವಂಶದ ರಾಜರಿಗೆ, ಉಪಾಧ್ಯಾಯಃ - ಕುಲಗುರುವಾದ ವಸಿಷ್ಠಋಷಿಯು, ಯಥಾವತ್ - ಪೂರ್ವಾನುಸಾರವಾಗಿ, ಪೂಜ್ಯತೇಕಚ್ಚಿತ್ - ನಿನ್ನಿಂದ ಪೂಜಿಸಲ್ಪಡುತ್ತಿರುವನಷ್ಟೆ. ॥ ೯ ॥ ಹೇ ತಾತ - ಎಲೈ ಅಪ್ಪನೇ, ಸಾಕೌಸಲ್ಯಾ - ಆ ಕೌಸಲ್ಯಾದೇವಿಯು, ಪ್ರಜಾವತೀ - ಸತ್ಪುತ್ರವತಿಯಾದ, ಸುಮಿತ್ರಾಚ-ಸುಮಿತ್ರಾದೇವಿಯೂ, ಸುಖಿನೀಕಚ್ಚಿತ್ - ಸುಖವಂತಳಾಗಿದ್ದಾಳೆಯೆ, ಆರ್ಯಾ - ಪೂಜ್ಯಳಾದ, ಕೈಕಯೀ - ಕೈಕೇಯಿಯಾದೇವಿಯು, ನಂದತಿಕಚ್ಚಿತ್ - ಸಂತೋಷಳಾಗಿದ್ದಾಳೆಯೇ. ॥ ೧೦ ॥ ವಿನಯಸಂಪನ್ನಃ-

---

ನಿನ್ನನ್ನು ರಾಜ್ಯಪದ ಭ್ರಷ್ಟನನ್ನಾಗಿ ಮಾಡಲಿಲ್ಲವಷ್ಟೆ? ವತ್ಸ! ಭರತಾ! ಸತ್ಯಪರಾಕ್ರಮಿಯಾದ ತಂದೆಗೆ ಶುಶ್ರೂಷೆಯನ್ನು ಲೋಪವಿಲ್ಲದೆ ಮಾಡುತ್ತಿರುವೆಯಲ್ಲವೆ? ॥೫-೭॥ ಸತ್ಯದಿಂದಲೇ ಯುದ್ಧವನ್ನು ಮಾಡುವಾತನೂ, ಅನೇಕ ರಾಜಸೂಯ ಯಾಗಗಳನ್ನೂ, ಅಶ್ವಮೇಧ ಯಾಗಗಳನ್ನೂ ಮಾಡಿರುವಾತನು, ಧರ್ಮಕಾರ್ಯಗಳಲ್ಲಿ ನಿಶ್ಚಯವುಳ್ಳವನೂಆದ ದಶರಥ ಮಹಾರಾಜನು ಕ್ಷೇಮದಿಂದಿರುವನೆ? ವತ್ಸ; ಭರತನೆ! ಬ್ರಾಹ್ಮಣಶ್ರೇಷ್ಠನೂ, ವಿದ್ವಾಂಸನೂ, ಎಲ್ಲ ಕಾಲಗಳಲ್ಲಿಯೂ ಧರ್ಮದಲ್ಲಿಯೇ ಬುದ್ಧಿಯುಳ್ಳವನೂ, ಮಹಾ ತೇಜಸ್ವಿಯೂ, ಇಕ್ಷ್ವಾಕು ವಂಶದ ರಾಯರಿಗೆ ಪುರೋಹಿತನೂ ಆದ ವಸಿಷ್ಠ ಮಹಾ ಮುನಿಯನ್ನು, ನಮ್ಮ ಪೂರ್ವಿಕರೆಲ್ಲರೂ ಪೂಜಿಸುತ್ತಿದ್ದಂತೆಯೇ ನೀನೂ ಪೂಜಿಸುತ್ತಿರುವೆಯಷ್ಟೆ? ॥೮-೯॥ ಭರತಾ; ಪ್ರಸಿದ್ಧಳಾದಕೌಸಲ್ಯಾದೇವಿಯೂ, ಸತ್ಪುತ್ರರತ್ನಗಳನ್ನುಪಡೆದ ಸುಮಿತ್ರಾದೇವಿಯೂ, ಪಟ್ಟದ ರಾಣಿಯಾದ ಕೈಕೇಯಿಯಾದೇವಿಯೂ ಸುಖವಾಗಿಯೂ ಸಂತೋಷವಾಗಿಯೂ ಇರುವರಲ್ಲವೆ? ವಿನಯಸಂಪನ್ನನೂ, ಸತ್ಕುಲದಲ್ಲಿ ಪುತ್ರನಾಗಿ ಹುಟ್ಟಿದವನೂ,

ಕಚ್ಚಿದ್ವಿನಯಸಂಪನ್ನಃ ಕುಲಪುತ್ರೋ ಬಹುಶ್ರುತಃ ॥ ಅನಸೂಯು ರನುದ್ರಷ್ಟಾ ಸತ್ಕೃತ ಸ್ತೇ ಪುರೋಹಿತಃ ॥ ೧೧ ॥ ಕಚ್ಚಿದಗ್ನಿಷು ತೇ ಯುಕ್ತೋ ವಿಧಿಜ್ಞೋ ಮತಿಮಾನೃಜುಃ ॥ ಹುತಂಚ ಹೋಷ್ಯಮಾಣಂಚ ಕಾಲೇ ವೇದಯತೇ ಸದಾ ॥ ೧೨ ॥ ಕಚ್ಚಿದ್ದೇವಾನ್ ಪಿತೄನ್ ಮಾತೄ ರ್ಗುರೂನ್ ಪಿತೃಸಮಾನಪಿ ॥ ವೃದ್ಧಾಂಶ್ಚ ತಾತ! ವೈದ್ಯಾಂಶ್ಚ ಬ್ರಾಹ್ಮಣಾಂಶ್ಚಾಭಿಮನ್ಯಸೇ? ॥ ೧೩ ॥ ಇಷ್ವಸ್ತ್ರ ವರಸಂಪನ್ನ ಮರ್ಥಶಾಸ್ತ್ರ ವಿಶಾರದಂ ॥ ಸುಧನ್ವಾನ ಮುಪಾಧ್ಯಾಯಂ

ವಿನಯದಿಂದ ಕೂಡಿರುವ, ಕುಲಪುತ್ರಃ - ಸತ್ಕುಲಪ್ರಸೂತನಾದ, ಬಹುಶ್ರುತಃ - ಬಹಳ ಶಾಸ್ತ್ರಜ್ಞನಾದ, ಅನಸೂಯುಃ - ಅಸೂಯಾರಹಿತನಾದ, ಅನುದ್ರಷ್ಟಾ - ಅನಂತರ ಕಾರ್ಯಗಳನ್ನು ನೋಡುತ್ತಿರುವ, ಪುರೋಹಿತಃ - ಪುರೋಹಿತನು, ತೇ - ನಿನ್ನಿಂದ, ಸತ್ಕೃತಃಕಚ್ಚಿತ್ - ಬಹುಮಾನಿಸಲ್ಪಟ್ಟದ್ದಾನೆಯೆ. ॥ ೧೧ ॥ ತೇ - ನಿನ್ನ, ಅಗ್ನಿಷು - ಶ್ರೌತಸ್ಮಾರ್ತಾಗ್ನಿಗಳಲ್ಲಿ, ಯುಕ್ತಃ - ನಿಯುಕ್ತನಾದ, ವಿಧಿಜ್ಞಃ - ಅನುಷ್ಠಾನವನ್ನು ತಿಳಿದಿರುವ, ಮತಿಮಾನ್ - ಬುದ್ಧಿವಂತನಾದ, ರುಜುಃ-ಕೌಟಿಲ್ಯಹೀನನಾದ ಪುರೋಹಿತನು, ಹುತಂ - ಹೋಮಮಾಡಲ್ಪಟ್ಟುದನ್ನು, ಕಾಲೇ - ತತ್ಕಾಲದಲ್ಲಿ, ಹೋಷ್ಯಮಾಣಂಚ - ಹೋಮಮಾಡತಕ್ಕುದ್ದನ್ನು, ಸದಾ - ನಿರಂತರವು, ವೇದಯತೇಕಚ್ಚಿತ್ - ತಿಳಿದಿದ್ದಾನೆಯೇ. ॥ ೧೨ ॥ ದೇವಾನ್ - ದೇವತೆಗಳನ್ನು, ಪಿತೄನ್ - ಪಿತೃಗಳನ್ನೂ, ಮಾತೄಃ - ತಾಯಿಯರನ್ನು, ಪಿತೃಸಮಾನ್ - ತಂದೆಗೆ ಸಮಾನರಾದ, ಗುರೂನ್ - ಆಚಾರ್ಯರನ್ನು, ವೃದ್ಧಾನ್ - ಜ್ಞಾನ, ಶೀಲ, ವಯಸ್ಸುಗಳಿಂದ ಮುದುಕರಾದವರನ್ನು, ವೈದ್ಯಾನ್ - ಔಷಧಕೊಡತಕ್ಕ ವಿದ್ಯಾವಂತರನ್ನು, (ಗೋ) ಬ್ರಾಹ್ಮಣಾನ್ - ಬ್ರಾಹ್ಮಣರನ್ನು, ಅಭಿಮನ್ಯಸೇಕಚ್ಚಿತ್ - ಬಹುಮತಿಮಾಡುತ್ತಿರುವೆಯಷ್ಟೆ. ॥ ೧೩ ॥ ಹೇ ತಾತ - ಎಲೈ ವತ್ಸನೆ! ಇಷ್ವಸ್ತ್ರವರಸಂಪನ್ನಂ - ಶ್ರೇಷ್ಠವಾದ ಬಾಣಗಳಲ್ಲಿಯೂ, ಶ್ರೇಷ್ಠವಾಗಿ ಅಭಿಮಂತ್ರಿಸಲ್ಪಟ್ಟ ಅಸ್ತ್ರಗಳಲ್ಲಿಯೂ ಜ್ಞಾನಸಂಪತ್ತಿಯುಳ್ಳ, ಅರ್ಥಶಾಸ್ತ್ರವಿಶಾರದಂ - ನೀತಿಶಾಸ್ತ್ರವನ್ನು ತಿಳಿದಿರುವ, ಸುಧನ್ವಾನಂ - ಸುಧನ್ವ

ಅನೇಕ ವಿಧಗಳಾದ ವಿದ್ಯೆಗಳನ್ನು ಅಧ್ಯಯನ ಮಾಡಿರುವವನೂ, ಕೋಪಿಷ್ಠನಲ್ಲದವನೂ, ಎಲ್ಲ ಕಾರ್ಯಗಳನ್ನೂ ವಿಧಿವತ್ತಾಗಿ ಮಾಡಿಸುವಾತನೂ ಆದ ನಿನ್ನಪುರೋಹಿತನನ್ನು ಚನ್ನಾಗಿ ಗೌರವಿಸುತ್ತಿರುವೆಯಷ್ಟೆ? ಎಲೈ ಭರತನೆ! ಅಗ್ನಿಹೋತ್ರ ಕರ್ಮಗಳಲ್ಲಿ ನಿಯೋಗಿತನಾದವನೂ, ಶಾಸ್ತ್ರೋಕ್ತ ವಿಧಿಗಳನ್ನು ಚೆನ್ನಾಗಿ ತಿಳಿದಿರುವವನೂ, ಮಹಾ ಬುದ್ಧಿಶಾಲಿಯೂ, ಸರಳಸ್ವಭಾವವುಳ್ಳವನೂ ಆದ ನಿನ್ನ ಪುರೋಹಿತನು ಆಯಾಯ ಕಾಲಗಳಲ್ಲಿ ಮಾಡಬೇಕಾದ ಹೋಮಗಳನ್ನೂ, ಹೋಮಮಾಡಿದುದನ್ನೂ ನಿನಗೆಚೆನ್ನಾಗಿತಿಳಿಸುತ್ತಿರುವನಲ್ಲವೆ?॥೧೦-೧೨॥ ವತ್ಸ! ದೇವತೆಗಳು, ಪಿತೃದೇವತೆಗಳು, ತಾಯಿಯರು, ತಂದೆಗೆ ಸಮಾನರಾದ ಗುರುಗಳು, ವೃದ್ಧರಾದ ವೈದ್ಯರು, ಬ್ರಾಹ್ಮಣರು ಇವರೆಲ್ಲರನ್ನೂ ಚೆನ್ನಾಗಿ ಪೂಜಿಸುತ್ತಿರುವೆಯಲ್ಲವೆ? ಶ್ರೇಷ್ಠಗಳಾದ ಬಾಣಗಳಲ್ಲಿಯೂ, ಅಸ್ತ್ರಗಳಲ್ಲಿಯೂ ಮಹಾ ಸಾಮರ್ಥ್ಯವುಳ್ಳವನೂ, ರಾಜನೀತಿಗಳನ್ನು ತಿಳಿಸುವ ಆನ್ವೀಕ್ಷಿಕೀಶಾಸ್ತ್ರದಲ್ಲಿ ಮಹಾ ತಿಳಿವಳಿಕೆಯುಳ್ಳವನೂ, ಶ್ರೇಷ್ಠನಾದ ಧನುರ್ಧಾರಿಯೂ ಆದ ಧನುರ್ವೇದಾಚಾರ್ಯನನ್ನು ಚೆನ್ನಾಗಿ ಗೌರವಿಸುತ್ತಿರುವೆ

ಕಚ್ಚಿತ್ತ್ವಂ ತಾತ! ಮನ್ಯಸೇ? ॥ ೧೪ ॥ ಕಚ್ಚಿದಾತ್ಮಸಮಾ ಶ್ಶೂರಾ ಶ್ಶ್ರುತವಂತೋ ಜಿತೇಂದ್ರಿಯಾಃ ॥ ಕುಲೀನಾ ಶ್ಚೇಂಗಿತಜ್ಞಾಶ್ಚ ಕೃತಾಸ್ತೇ ತಾತ! ಮಂತ್ರಿಣಃ ॥ ೧೫ ॥ ಮಂತ್ರೋ ವಿಜಯಮೂಲಂಹಿ ರಾಜ್ಞಾಂ ಭವತಿ ರಾಘವ! ॥ ಸುಸಂವೃತೋ ಮಂತ್ರಧರೈ ರಮಾತ್ಯೈ ಶ್ಶಾಸ್ತ್ರಕೋವಿದೈಃ ॥೧೬॥ ಕಚ್ಚಿನ್ನಿದ್ರಾವಶಂ ನೈಷೀಃ ಕಚ್ಚಿತ್ಕಾಲೇ ಪ್ರಬುಧ್ಯಸೇ॥ಕಚ್ಚಿಚ್ಚಾಪರರಾತ್ರೇಷು ಚಿಂತಯ ಸ್ಯರ್ಥನೈಪುಣಂ ॥ ೧೭ ॥ ಕಚ್ಚಿನ್ಮಂತ್ರಯಸೇ ನೈಕಃ ಕಚ್ಚಿನ್ನ

ನೆಂಬ, ಉಪಾಧ್ಯಾಯಂ - ಧನುರ್ವೇದಾಧ್ಯಯನೋಪದೇಶಕನನ್ನು, ತ್ವಂ - ನೀನು, ಮನ್ಯಸೇಕಚ್ಚಿತ್ - ಬಹುಮಾನಗೊಳಿಸುತ್ತಿರುವೆಯಲ್ಲವೆ. ॥ ೧೪ ॥ ಆತ್ಮಸಮಾಃ - ತಮಗೆ ಸಮಾನಸ್ಕಂಧರಾದ, ಶೂರಾಃ - ಪರಾಕ್ರಮಶಾಲಿಗಳಾದ, ಶ್ರುತವಂತಃ - ಶಾಸ್ತ್ರಜ್ಞರಾದ, ಜಿತೇಂದ್ರಿಯಾಃ - ಜಯಿಸಲ್ಪಟ್ಟ ಇಂದ್ರಿಯವ್ಯಾಪಾರವುಳ್ಳ, ಕುಲೀನಾಶ್ಚ - ಸತ್ಕುಲಪ್ರಸೂತರೂ ಆಗಿರುವ, ಇಂಗಿತಜ್ಞಾಶ್ಚ - ಪರಾಭಿಪ್ರಾಯವನ್ನು ತಿಳಿದವರಾದ, ಮಂತ್ರಿಣಃ - ಮಂತ್ರಿಗಳು, ತೇ - ನಿನ್ನಿಂದ, ಕೃತಾಶ್ಚ - ನಿಯಮಿಸಲ್ಪಟ್ಟಿರುವರೆ! ॥ ೧೫ ॥ ಹೇ ರಾಘವ - ಎಲೈ ರಘುವಂಶೋತ್ಪನ್ನನೇ, ರಾಜ್ಞಾಂ - ಅರಸರಿಗೆ, ವಿಜಯಮೂಲಂ - ಜಯಕ್ಕೆ ಕಾರಣವಾದ, ಮಂತ್ರಃ - ಆಲೋಚನೆಯು, ಮಂತ್ರಧರೈಃ - ಆಲೋಚನಾಪರರಾದ, ಶಾಸ್ತ್ರಕೋವಿದೈಃ - ನೀತಿಶಾಸ್ತ್ರದಲ್ಲಿ ಪಂಡಿತರಾದ, ಅಮಾತ್ಯೈಃ - ಮಂತ್ರಿಗಳಿಂದ, ಸುಸಂವೃತಃಕಚ್ಚಿತ್-ಸುತ್ತುವರೆಯಲ್ಪಟ್ಟವನಾಗಿರುವೆಯಾ! ॥೧೬॥ ನಿದ್ರಾವಶಂ - ನಿದ್ರೆಗೆ ಸ್ವಾಧೀನವನ್ನು, ನೈಷೀಃಕಚ್ಚಿತ್ - ಹೊಂದಿಲ್ಲವಲ್ಲವೆ, ಕಾಲೇ - ಪ್ರಾತಃಕಾಲದಲ್ಲಿ, ಪ್ರಬುಧ್ಯಸೇಕಚ್ಚಿತ್ - ಎಚ್ಚರಗೊಳ್ಳುತ್ತಿರುವೆಯಾ, ಅಪರರಾತ್ರೇಷು - ಅರ್ಧರಾತ್ರಿಗಳಲ್ಲಿ, ಅರ್ಥನೈಪುಣಂ - ದ್ರವ್ಯಪ್ರಾಪ್ತಿಯ ಉಪಾಯವನ್ನು, ಚಿಂತಯಸಿಕಚ್ಚಿತ್-ಆಲೋಚನೆ ಮಾಡುತ್ತೀಯಾ. ॥ ೧೭ ॥ ಏಕಃ - ಒಬ್ಬನೇ, ನಮಂತ್ರಯಸೇಕಚ್ಚಿತ್ - ಆಲೋಚನೆಮಾಡುವುದಿಲ್ಲವಷ್ಟೆ, ಬಹುಭಿಸ್ಸಹ - ಅನೇಕ ಮಂತ್ರಿಗಳೊಡನೆ, ನಮಂತ್ರಯಸೇಕಚ್ಚಿತ್ - ಮಂತ್ರಾಲೋಚನೆಮಾಡುವುದಿಲ್ಲ

ಯಷ್ಟೆ! ॥೧೩-೧೪॥ ಅಯ್ಯಾ ಭರತಕುಮಾರನೆ! ನಿನಗೆಸಮಾನರೂ, ಯುದ್ಧಗಳಲ್ಲಿ ಅಧಿಕವಾದ ಸಾಮರ್ಥ್ಯವನ್ನು ತೋರಿಸಲು ಬದ್ಧಕಂಕಣರಾದವರೂ, ನೀತಿಶಾಸ್ತ್ರಗಳನ್ನು ಚೆನ್ನಾಗಿ ಓದಿರುವವರೂ, ಇಂದ್ರಿಯಜಯವನ್ನು ಹೊಂದಿರುವವರೂ, ಸತ್ಕುಲಪ್ರಸೂತರೂ, ಪರೇಂಗಿತವನ್ನು ಅವರ ಚೇಷ್ಟಾವಿಶೇಷಗಳಿಂದಲೇ ತಿಳಿದುಕೊಳ್ಳುವವರೂ ಆದ ಮಹಾ ನಿಪುಣರನ್ನು ಮಂತ್ರಿಗಳನ್ನಾಗಿ ಮಾಡಿಕೊಂಡಿರುವೆಯಾ? ಓ ರಘುಕುಲೋದ್ಭವನಾದ ಭರತನೆ! ರಾಜರಿಗೆ ಮಂತ್ರಾಲೋಚನೆಯೇ ಅಲ್ಲವೆ ಜಯಪ್ರದವಾದುದು? ಆದುದರಿಂದ ರಾಜ್ಯಭಾರಕ್ಕೆ ಮಂತ್ರಿಗಳೇ ಮೂಲಭೂತರು. ಅಂತಹ ಆ ಆಲೋಚನೆಯು ಶಾಸ್ತ್ರವೇತ್ತರಾದ ಮಂತ್ರಿಗಳಿಂದ ಚೆನ್ನಾಗಿ ಆಲೋಚಿಸಲಾಗುತ್ತಿರುವುದಲ್ಲವೆ? ವತ್ಸ: ಎಲ್ಲ ಕಾಲಗಳಲ್ಲಿಯೂ ನಿಯಮವಿಲ್ಲದೆ ನೀನು ನಿದ್ರಿಸುವುದಿಲ್ಲವಲ್ಲವೆ? ಆಯಾಕಾಲಗಳಲ್ಲಿ ಎಚ್ಚರಗೊಳ್ಳುತ್ತಿರುವೆಯಲ್ಲವೆ? ಅರ್ಧ ರಾತ್ರಿ ಕಾಲಗಳಲ್ಲಿ ಮಾಡಬೇಕಾದ ದ್ರವ್ಯಾರ್ಜನೋಪಾಯಗಳನ್ನು ಚೆನ್ನಾಗಿ ಆಲೋಚಿಸುತ್ತಿರುವೆಯಲ್ಲವೆ? ॥೧೫-೧೭॥ ಭರತಾ: ನೀನೊಬ್ಬನೇ ಸ್ವತಂತ್ರಿಸಿ ಕಾರ್ಯಾಕಾರ್ಯ

ಬಹುಭಿಸ್ಸಹ ॥ ಕಚ್ಚಿತ್ತೇ ಮಂತ್ರಿತೋ ಮಂತ್ರೋ ರಾಷ್ಟ್ರಂ ನ ಪರಿಧಾವತಿ
॥ ೧೮ ॥ ಕಚ್ಚಿದರ್ಥಂ ವಿನಿಶ್ಚಿತ್ಯ ಲಘುಮೂಲಂ ಮಹೋದಯಂ ॥ ಕ್ಷಿಪ್ರ
ಮಾರಭಸೇ ಕರ್ತುಂ ನ ದೀರ್ಘಯಸಿ ರಾಘವ! ॥ ೧೯ ॥ ಕಚ್ಚಿತ್ತೇ ಸುಕೃ
ತಾನ್ಯೇವ ಕೃತರೂಪಾಣಿವಾ ಪುನಃ ॥ ವಿದುಸ್ತೇ ಸರ್ವಕಾರ್ಯಾಣಿ ನ ಕರ್ತ
ವ್ಯಾನಿ ಪಾರ್ಥಿವಾಃ ॥ ೨೦ ॥ ಕಚ್ಚಿನ್ನ ತರ್ಕೈರ್ಯುಕ್ತ್ಯಾವಾ ಯೇಚಾಪ್ಯ
ಪರಿಕೀರ್ತಿತಾಃ ॥ ತ್ವಯಾವಾ ತವವಾಮಾತ್ಯೈರ್ಬುಧ್ಯತೇ ತಾತ! ಮಂತ್ರಿತಂ
॥ ೨೧ ॥ ಕಚ್ಚಿತ್ಸಹಸ್ರಾನ್ಮೂರ್ಖಾಣಾಮೇಕಮಿಚ್ಛಸಿ ಪಂಡಿತಂ? ॥ ಪಂಡಿ

ವಲ್ಲವೆ, ತೇ - ನಿನ್ನಿಂದ, ಮಂತ್ರಿತಃ - ಆಲೋಚಿಸಲಾದ, ಮಂತ್ರಃ - ಆಲೋಚನೆಯು, ರಾಷ್ಟ್ರಂ- ದೇಶವನ್ನು, ನಪರಿಧಾವತಿಕಚ್ಚಿತ್ - ವ್ಯಾಪಿಸುವದಿಲ್ಲವಷ್ಟೆ. ॥ ೧೮ ॥ ಹೇ ರಾಘವ - ಎಲೈ ರಘುವಂಶೋತ್ಪನ್ನನೇ, ಲಘುಮೂಲಂ - ಸ್ವಲ್ಪವಾದ ಸಾಧನವುಳ್ಳ, ಮಹೋದಯಂ - ಬಹಳವಾದ ಫಲವುಳ್ಳ, ಅರ್ಥಂ - ಕಾರ್ಯವನ್ನು, ವಿನಿಶ್ಚಿತ್ಯ - ಆಲೋಚಿಸಿ, ಕರ್ತುಂ - ಮಾಡುವದಕ್ಕೆ, ಕ್ಷಿಪ್ರಂ- ಜಾಗ್ರತೆಯಾಗಿ, ಆರಭಸೇಕಚ್ಚಿತ್ - ಉಪಕ್ರಮಿಸುತ್ತಿರುವೆಯಾ, ನದೀರ್ಘಯಸಿಕಚ್ಚಿತ್ - ನಿದಾನ ಮಾಡುವದಿಲ್ಲವಷ್ಟೆ. ॥ ೧೯ ॥ ಪಾರ್ಥಿವಾಃ - ಸಾಮಂತರು, ತೇ - ನಿನ್ನ, ಸರ್ವಕಾರ್ಯಾಣಿ- ಸಮಸ್ತ ಕಾರ್ಯಗಳನ್ನು, ಸುಕೃತಾನ್ಯೆವ-ಚೆನ್ನಾಗಿಮಾಡಲ್ಪಟ್ಟಕಾರ್ಯಗಳನ್ನೇ, ಕೃತರೂಪಾಣೀವ- ಕೃತಪ್ರಾಯಗಳನ್ನೇ ಆಗಲೀ, ವಿದುಃಕಚ್ಚಿತ್ - ತಿಳಿದಿದ್ದಾರೆಯೋ, ತೇ - ನಿನ್ನ, ಕರ್ತವ್ಯಾನಿ - ಮುಂದೆಮಾಡತಕ್ಕ ಕಾರ್ಯಗಳನ್ನು, ನವಿದುಃಕಚ್ಚಿತ್ - ತಿಳಿಯದಿದ್ದಾರೆಯೋ. ॥ ೨೦ ॥ ಹೇ ತಾತ - ಎಲೈ ತಂದೆಯೇ, ತ್ವಯಾವಾ - ನಿನ್ನಿಂದಲೇ ಆಗಲಿ, ತವ - ನಿನ್ನ, ಅಮಾತ್ಯೈರ್ವಾ - ಮಂತ್ರಿಗಳಿಂದಲೇ ಆಗಲಿ, ಮಂತ್ರಿತಂ - ಆಲೋಚಿಸಲ್ಪಟ್ಟ ಕಾರ್ಯವು, ತರ್ಕೈಃ-ಊಹೆಗಳಿಂದಲೂ, ಯುಕ್ತ್ಯಾವಾ - ಯುಕ್ತಿಯಿಂದಲಾದರೂ, ಅಪರಿಕೀರ್ತಿತಾಃ - ಹೇಳಲ್ಪಡದಿರುವ ಚೇಷ್ಟಾದಿಗಳು,

---

ಗಳನ್ನು ಆಲೋಚಿಸುತ್ತಿಲ್ಲವಷ್ಟೆ? ಒಂದು ಕಾರ್ಯವನ್ನು ಕುರಿತು ಅನೇಕರೊಡನೆ ಆಲೋಚಿಸುತ್ತಿಲ್ಲವೆಂದು ನಾನು ತಿಳಿಯುತ್ತೇನೆ. ನೀನೂ, ನಿನ್ನ ಮಂತ್ರಿಗಳೂ ಮಾಡಿದ ಮಂತ್ರಾಲೋಚನೆಯು ನಿನ್ನ ರಾಜ್ಯವನ್ನು ಬಿಟ್ಟು ಪರರಾಯರ ರಾಜ್ಯಗಳಿಗೆ ತಿಳಿಯುತ್ತಿಲ್ಲವಷ್ಟೆ? ಎಲೈ ರಘುವಂಶೋತ್ಪನ್ನನಾದ ಭರತಕುಮಾರನೇ! ಆರಂಭದಲ್ಲಿ ಸ್ವಲ್ಪವಾಗಿ ಕಾಣುವುದೂ, ತುದಿಗೆ ಅದ್ಭುತವಾಗಿ ಪರಿಣಮಿಸುವುದೂ ಆದ ಕಾರ್ಯವನ್ನು ಚೆನ್ನಾಗಿ ಯೋಚಿಸಿ ಶೀಘ್ರವಾಗಿ ಆರಂಭಿಸುವೆಯಷ್ಟೆ? ಅಂತಹ ಕಾರ್ಯಗಳನ್ನು ಮಾಡುವ ವಿಷಯದಲ್ಲಿ ಆಲಸ್ಯವನ್ನು ಮಾಡಬಾರದಲ್ಲವೆ? ಭರತಾ; ಸಾಮಂತ ರಾಜರೇ ಮೊದಲಾದ ಪ್ರಬಲರು, ನಿನ್ನ ಕಾರ್ಯಭಾಗಗಳೆಲ್ಲವನ್ನೂ, ಚೆನ್ನಾಗಿ ನೆರವೇರಿಸಿದ ಮೇಲೆಯೋ, ಇಲ್ಲವೇ, ಫಲೋನ್ಮುಖವಾದ ಮೇಲೆಯೋ ತಿಳಿದುಕೊಳ್ಳುತ್ತಿರುವರಲ್ಲವೆ? ನೀನಾಗಲಿ, ನಿನ್ನ ಮಂತ್ರಿಗಳಾಗಲಿ ಆಲೋಚಿಸಿದ ಕಾರ್ಯಗಳನ್ನು ಇತರರು, ಯುಕ್ತಿಯಿಂದಾಗಲಿ, ಊಹೆಯಿಂದಾಗಲಿ ತಿಳಿದುಕೊಳ್ಳುತ್ತಿಲ್ಲವಲ್ಲವೆ? ॥೧೮-೨೧॥ ಎಲೈಭರತನೆ! ಎಲ್ಲಿಯಾದರೂ ಆಗಲಿ, ಅನೇಕ ಸಹಸ್ರ ಮೂರ್ಖ

ತೋಹ್ಯರ್ಥ ಕೃಚ್ಛ್ರೇಷು ಕುರ್ಯಾನ್ನಿಶ್ರೇಯಸಂ ಮಹತ್ ‖ ೨೨ ‖ ಸಹಸ್ರಾಣ್ಯಪಿ ಮೂರ್ಖಾಣಾಂ ಯದ್ಯುಪಾಸ್ತೇ ಮಹೀಪತಿಃ ‖ ಅಥವಾಪ್ಯಯುತಾನ್ಯೇವ ನಾಸ್ತಿ ತೇಷು ಸಹಾಯತಾ ‖ ೨೩ ‖ ಏಕೋಪ್ಯಮಾತ್ಯೋ ಮೇಧಾವೀ ಶೂರೋ ದಕ್ಷೋ ವಿಚಕ್ಷಣಃ ‖ ರಾಜಾನಂ ರಾಜಮಾತ್ರಂವಾ ಪ್ರಾಪಯೇನ್ಮಹತೀಂ ಶ್ರಿಯಂ ‖ ೨೪ ‖ ಕಚ್ಚಿನ್ಮುಖ್ಯಾ ಮಹತ್ಸ್ವೇವ ಮಧ್ಯಮೇಷುಚ ಮಧ್ಯಮಾಃ ‖ ಜಘನ್ಯಾಸ್ತು ಜಘನ್ಯೇಷು ಭೃತ್ಯಾ ಕರ್ಮಸು ಯೋಜಿತಾಃ ‖

ಯೇ - ಯಾವುಗಳೋ, ತೈಃ - ಅವುಗಳಿಂದ, ನಬುಧ್ಯಸೇಕಚ್ಚಿತ್ - ತಿಳಿಯಲ್ಪಡದಿದೇಯೇ. ‖ ೨೧ ‖ ಮೂರ್ಖಾಣಾಂ - ಮೂರ್ಖರ, ಸಹಸ್ರಾತ್ - ಸಹಸ್ರವನ್ನು ಬಿಟ್ಟು, ಏಕಂ - ಒಬ್ಬನಾದ, ಪಂಡಿತಂ - ಪಂಡಿತನನ್ನು, ಇಚ್ಛಸಿಕಚ್ಚಿತ್ - ಅಪೇಕ್ಷಿಸುತ್ತಿರುವೆಯಾ, ಪಂಡಿತಃ - ಪಂಡಿತನು, ಹಿ - ಯಾವ ಕಾರಣ, ಅರ್ಥಕೃಚ್ಛ್ರೇಷು - ಕಾರ್ಯಗಳ ಅರ್ಥಸಂಕಟದಲ್ಲಿ, ಮಹತ್ - ಬಹಳವಾದ, ನಿಶ್ರೈಯಸಂ - ಅಭಿವೃದ್ಧಿಯನ್ನು, ಕುರ್ಯಾತ್ - ಮಾಡಿಯಾನು. ‖ ೨೨ ‖ ಮಹೀಪತಿಃ - ಅರಸು, ಮೂರ್ಖಾಣಾಂ - ಶಾಸ್ತ್ರವನ್ನು ತಿಳಿಯದೇ ಬಲ್ಬುಜವಾದವನ್ನು, ಸಹಸ್ರಾಣ್ಯಪಿ - ಸಹಸ್ರಾರುಗಳನ್ನೇ ಆಗಲಿ, ಅಥವಾ - ಹಾಗಲ್ಲದಿದ್ದರೆ, ಅಯುತಾನ್ಯೇವ - ಹತ್ತುಸಾವಿರಗಳನ್ನೇ ಆಗಲಿ, ಉಪಾಸ್ತೇಯದಿ - ಸೇವಿಸಿದನೇ ಆದರೆ, ತೇಷು - ಅವರಲ್ಲಿ, ಸಹಾಯತಾ - ಮಂತ್ರಾಲೋಚನ ಸಾಮರ್ಥ್ಯವು, ನಾಸ್ತ್ಯೇವ - ಇರುವುದೇ ಇಲ್ಲ. ‖ ೨೩ ‖ ಮೇಧಾವೀ - ಬುದ್ಧಿಶಾಲಿಯಾದ, ಶೂರಃ - ಪರಾಕ್ರಮಿಯಾದ, ದಕ್ಷಃ - ವಿಚಾರಸಮರ್ಥನಾದ, ವಿಚಕ್ಷಣಃ - ನೀತಿಯನ್ನು ತಿಳಿದಿರುವ, ಅಮಾತ್ಯಃ - ಮಂತ್ರಿಯು, ಏಕೋಪಿ - ಒಬ್ಬನಾದರೂ, ರಾಜಾನಂ - ಅರಸನನ್ನೇ ಆಗಲಿ, ರಾಜಮಾತ್ರಂವಾ - ರಾಜನಿಗೆ ಸಾಟಿಯಾದವನೇ ಆಗಲಿ, ಮಹತೀಂ - ಬಹಳವಾದ, ಶ್ರಿಯಂ - ಐಶ್ವರ್ಯವನ್ನು, ಪ್ರಾಪಯೇತ್ - ಹೊಂದಿಸುವನು. ‖ ೨೪ ‖ ಮುಖ್ಯಾಃ - ಮುಖ್ಯರಾದ, ಭೃತ್ಯಾಃ - ಭಟರು, ಮಹತ್ಸ್ವೇವ - ದೊಡ್ಡವುಗಳಾವ, ಕರ್ಮಸು - ಕಾರ್ಯಗಳಲ್ಲಿ, ಮಧ್ಯಮಾಃ - ಜಾತ್ಯಾದಿಗಳಿಂದ ಮಧ್ಯಮಪುರುಷರು, ಮಧ್ಯಮೇಷ್ವೇವ - ಶಯ್ಯಾಸನಾದ್ಯಾನಯನಾದಿ ಕಾರ್ಯಗಳಲ್ಲಿಯೂ,

---

ರಿದ್ದರೂ ಒಬ್ಬನಾದರೂ ಪಂಡಿತನಿದ್ದೇ ಇರುತ್ತಾನೆಯೆಂಬ ವಿಷಯವನ್ನು ತಿಳಿದುಕೊಂಡಿರುವೆಯಲ್ಲವೆ? ಕಷ್ಟ ಒದಗಿದ ಕಾಲದಲ್ಲಿ ಮಹಾ ತಿಳಿವಳಿಕೆಯುಳ್ಳ ಪಂಡಿತೋತ್ತಮನು ಆ ಕಷ್ಟವನ್ನು ನಿಗ್ರಹಿಸಿ ಕೊಡುತ್ತಾನೆಂದು ತಿಳಿದಿರುವೆಯಲ್ಲವೆ? ಒಬ್ಬನಾದರೂ, ಮಹಾ ಬುದ್ಧಿಶಾಲಿಯು, ಮಹಾಸಮರ್ಥನು, ಬಹುಶ್ರುತನೂ ಆದ ಮಂತ್ರಿಯನ್ನಾಗಲಿ, ರಾಜನನ್ನಾಗಲಿ, ರಾಜನಿಗೆ ಸಮಾನನಾದವನನ್ನಾಗಲಿ ಆಶ್ರಯಿಸಿದರೆ, ಹಾಗೆ ಆಶ್ರಯಿಸಿದವನಿಗೆ ಸಂಪದವೊದಗುವಂತೆ ಮಾಡುತ್ತಾನೆಯೆಂಬುದನ್ನು ನೀನರಿತಿರುವೆಯಷ್ಟೆ? ವತ್ಸ ; ಭರತ! ಮಹತ್ಕಾರ್ಯಗಳಲ್ಲಿ ಮಹಾ ಸಮರ್ಥರನ್ನೇ ನಿಯಮಿಸುತ್ತಿರುವೆಯಷ್ಟೆ? ಮಧ್ಯಕಾರ್ಯಗಳಲ್ಲಿ ಮಧ್ಯಮರಾದವರನ್ನೇ ನಿಯಮಿಸಬೇಕೆಂಬುದನ್ನು ನೀನು ತಿಳಿದಿರುವೆಯೆಂದು ಯೋಚಿಸುತ್ತೇನೆ. ಯಾವ ಯಾವ ಕಾರ್ಯಗಳಲ್ಲಿ ಯಾವ ಯಾವ ಜನರನ್ನು ನಿಯಮಿಸಬೇಕೋ ಅವರೆಲ್ಲರನ್ನೂ ಆಯಾಯ ಕಾರ್ಯಗಳಲ್ಲಿ ನಿಯಮಿಸಿರುವೆಯಲ್ಲವೆ? ಎಲೈ

ಅಮಾತ್ಯಾ ನುಪಧಾತೀತಾ೯ ಪಿತೃಪೈತಾಮಹಾಂ ಚ್ಛುಚೀ೯ ॥ ಶ್ರೇಷ್ಠಾ೯
ಶ್ರೇಷ್ಠೇಷು ಕಚ್ಚಿ ತ್ತ್ವಂ ನಿಯೋಜಯಸಿ ಕರ್ಮಸು ॥ ೨೫ ॥ ಕಚ್ಚಿನ್ನೊಗ್ರೇಣ
ದಂಡೇನ ಭೃಶಮುದ್ವೇಜಿತ ಪ್ರಜಮ್ ॥ ರಾಜ್ಯಂ ತವಾನುಜಾನಂತಿ ಮಂತ್ರಿಣಃ
ಕೈಕಯಿಸುತ! ॥ ೨೬ ॥ ಕಚ್ಚಿ ತ್ತ್ವಾಂ ನಾವಜಾನಂತಿ ಯಾಜಕಾಃ ಪತಿತಂ
ಯಥಾ ॥ ಉಗ್ರಪ್ರತಿಗ್ರಹೀತಾರಂ ಕಾಮಯಾನಮಿವ ಸ್ತ್ರಿಯಃ ॥ ೨೭ ॥

ಜಘನ್ಯಾಃ - ನೀಚಜಾತೀಯರು, ಜಘನ್ಯೇಷು - ನೀಚವಾದ ಪಾದಪ್ರಕ್ಷಾಳನ ಪಾದರಕ್ಷಾನಯನಾದಿ ನೀಚಕಾರ್ಯಗಳಲ್ಲಿ, ಯೋಜಿತಾಃಕಚ್ಚಿತ್ - ನಿಯಮಿತರಾಗಿರುವರೆ. ॥ ೨೫ ॥ ಉಪಧಾತೀತಾ೯- (ಗೋ) ವಸ್ತ್ರಾದ್ಯಾಭರಣಾದಿಗಳ ವಿಷಯದಲ್ಲಿ ರಾಜಪ್ರತಿಪಾದಿತವಾದುವೆಂದು ಸ್ವಭೃತ್ಯಾದಿಗಳಿಂದ ಕಳುಹಿಸಿ ಆ ವಿಷಯದಲ್ಲಿ ವಂಚನೆಯನ್ನುಳಿದು ಅರ್ಥಾಶೆಯನ್ನು ಅತಿಕ್ರಮಿಸಿದ, ಪಿತೃಪೈತಾಮಹಾ೯- ತಂದೆ ತಾತಂದರ ಕಾಲಗಳಿಂದ ಪ್ರಾಪ್ತರಾದ, ಶುಚೀ೯ - ತ್ರಿಕರಣಶುದ್ಧಿಯುಳ್ಳ, ಶ್ರೇಷ್ಠಾ೯ - ಶ್ಲಾಘನೀಯರಾದ, ಅಮಾತ್ಯಾ೯ - ಮಂತ್ರಿಗಳನ್ನು, ಶ್ರೇಷ್ಠೇಷು - ಉತ್ತಮಗಳಾದ, ಕರ್ಮಸು - ವ್ಯಾಪಾರದಲ್ಲಿ, ತ್ವಂ - ನೀನು, ನಿಯೋಜಯಸಿಕಚ್ಚಿತ್ - ಅಜ್ಞಾಪಿಸಿರುವೆಯಾ. ॥ ೨೬ ॥ ಹೇ ಕೈಕಯಿಸುತ - ಎಲೈಕೈಕೇಯಿದೇವಿಯ ಕುಮಾರನೇ, ಉಗ್ರೇಣ - ತೀಕ್ಷ್ಣವಾದ, ದಂಡೇನ - ಶಿಕ್ಷೆಯಿಂದ, ಭೃಶಂ - ಬಹಳವಾಗಿ, ಉದ್ವೇಜಿತಪ್ರಜಂ - ಹೆದರಿಸಲ್ಪಟ್ಟ ಪ್ರಜೆಗಳುಳ್ಳ, ತವ - ನಿನ್ನ, ರಾಜ್ಯಂ - ರಾಜ್ಯವನ್ನು, ಮಂತ್ರಿಣಃ - ಮಂತ್ರಿಗಳು, ನಾನುಜಾನಂತಿಕಚ್ಚಿತ್ - ಸಮ್ಮತಿಸಲಿಲ್ಲವೆ. ॥ ೨೭ ॥ ಯಾಜಕಾಃ - ಯಜ್ಞಮಾಡಿಸುವವರು, ಪತಿತಂಯಥಾ - ಪತಿತನಾದ ಪುರುಷನನ್ನಂತೆ, ಉಗ್ರಪ್ರತಿಗೃಹೀತಾರಂ - ಕ್ರೂರಕರ್ಮದಿಂದಲೂ ಬಲಾತ್ಕಾರದಿಂದಲೂ ಪ್ರತಿಗ್ರಹಕರ್ತನಾದ, (ಗೋ + ಮ) ದುಷ್ಟದಾನಾದಿಗಳನ್ನು ತೆಗದುಕೊಂಡಿರುವ, ಪತಿತಂ - ಜಾತಿಭ್ರಂಶಕರವಾದ ಕರ್ಮವನ್ನು ಮಾಡಿದವನನ್ನು, ಕಾಮಯಾನಂ - ಕಾಮುಕನನ್ನು, ಸ್ತ್ರಿಯಇವ - ಸ್ತ್ರೀಯರಂತೆ, ತ್ವಾಂ - ನಿನ್ನನ್ನು, ನಾವಜಾನಂತಿಕಚ್ಚಿತ್ - ತಿರಸ್ಕರಿಸುವದಿಲ್ಲವೆ. ॥ ೨೮ ॥ ಉಪಾಯಕುಶಲಂ - ಸಾಮದ್ಯುಪಾಯಗ

ವತ್ಸನೆ! ಪರೀಕ್ಷೆಗೆ ಅತಿಕ್ರಮಿಸಿದವರೂ, ತಂದೆತಾತಂದಿರ ಕಾಲದಿಂದಲೂ ರಾಜಸೇವೆಯನ್ನು ಮಾಡಿಕೊಂಡು ಬಂದಿರುವವರೂ, ಮಹಾ ಪರಿಶುದ್ಧರೂ, ಸರ್ವೋತ್ತಮರೂ ಆದ ಮಂತ್ರಿಗಳು, ಮಹೋನ್ನತ ಕಾರ್ಯಗಳಲ್ಲಿ ನಿಯಮಿತರಾಗಿರುವರಷ್ಟೆ? ಓ ಕೈಕೇಯಿನಂದನನೆ! ನೀನು ತೀಕ್ಷ್ಣವಾದ ದಂಡದಿಂದ ಪ್ರಜೆಗಳೆಲ್ಲರನ್ನೂ ಶಿಕ್ಷಿಸುತ್ತಿರುವುದನ್ನು ನೋಡಿ ಮಂತ್ರಿಗಳು ಸಮಾಧಾನವನ್ನು ಹೊಂದಲಾರರಷ್ಟೆ? ಮಂತ್ರಿಗಳು ನೀನು ದುಷ್ಕಾರ್ಯಗಳನ್ನು ಮಾಡಿದರೆ ಅದನ್ನು ಅಂಗೀಕರಿಸಲಾರರಲ್ಲವೆ? ತೀಕ್ಷ್ಣವಾದ ದಂಡದಿಂದ ಕಠಿನವಾಗಿ ಶಿಕ್ಷಿಸುತ್ತಿರುವ ನಿನ್ನನ್ನು, ಪ್ರಜೆಗಳೆಲ್ಲರೂ, ಭಯಂಕರವಾದ ದುರ್ದಾನಗಳಿಂದ ದ್ರವ್ಯವನ್ನುಸಂಪಾದಿಸಿ ಯಜ್ಞವನ್ನುಮಾಡಲು ಯೋಚಿಸಿದ ಪತಿತನನ್ನು ಯಾಜಕರಂತೆಯೂ, ಮಹಾ ಭಯವುಂಟಾಗುವಂತೆ ಪ್ರವರ್ತಿಸುತ್ತಿರುವ ಕಾಮುಕನನ್ನು ಸ್ತ್ರೀಯರಂತೆಯೂ, ನಿಂದಿಸುವುದಿಲ್ಲವಷ್ಟೆ? (ಎಂದರೆ "ಪ್ರಜೆಗಳು ನಿಂದಿಸುವಂತೆ ನೀನು ದಂಡೋಪಾಯವನ್ನು ಪ್ರಯೋಗಿಸುವುದಿಲ್ಲವಷ್ಟೆ?" ಎಂದಭಿಪ್ರಾಯ.)॥೨೬-೨೮॥ವತ್ಸ; ಸಾಮದಾನಾದ್ಯುಪಾಯ

ಉಪಾಯಕುಶಲಂ ವೈದ್ಯಂ ಭೃತ್ಯಸಂದೂಷಣೇ ರತಂ ॥ ಶೂರಮೈಶ್ವರ್ಯ ಕಾಮಂಚ ಯೋ ನ ಹಂತಿ ಸ ವಧ್ಯತೇ ॥ ೨೯ ॥ ಕಚ್ಚಿದ್ಧೃಷ್ಟಶ್ಚ ಶೂರಶ್ಚ ಮತಿಮಾನ್ ಧೃತಿಮಾಂಚ್ಛುಚಿಃ ॥ ಕುಲೀನಶ್ಚಾನುರಕ್ತಶ್ಚ ದಕ್ಷ ಸ್ಸೇನಾಪತಿಃ ಕೃತಃ ॥ ೩೦ ॥ ಬಲವಂತಶ್ಚ ಕಚ್ಚಿ ತ್ತೇ ಮುಖ್ಯಾ ಯುದ್ಧವಿಶಾರದಾಃ ॥ ದೃಷ್ಟಾಪದಾನಾ ವಿಕ್ರಾಂತಾ ಸ್ತ್ವಯಾ ಸತ್ಕೃತ್ಯ ಮಾನಿತಾಃ ॥ ೩೧ ॥ ಕಚ್ಚಿ ದ್ಬಲಸ್ಯ ಭಕ್ತಂಚ ವೇತನಂಚ ಯಥೋಚಿತಂ ॥ ಸಂಪ್ರಾಪ್ತಕಾಲಂ ದಾತವ್ಯಂ

ಳಲ್ಲಿ ನಿಪುಣನಾದ, ವೈದ್ಯಂ - ಕಾಮಂದಕ್ಯಾದಿ ನೀತಿಶಾಸ್ತ್ರವನ್ನು ತಿಳಿದಿರುವ, ಭೃತ್ಯಸಂದೂಷಣೇ - ಅಂತರಂಗಭೃತ್ಯರ ವಿಘಟನೆಯಲ್ಲಿ, ರತಂ - ಆಸಕ್ತನಾದ, ಶೂರಂ - ರಾಜನ ಹಿಂಸೆಯಲ್ಲಿ ನಿರ್ಭಯ ನಾದ, ಐಶ್ವರ್ಯಕಾಮಂಚ - ರಾಜೈಶ್ವರ್ಯವನ್ನೇ ಬೇಡುತ್ತಿರುವ ಪುರುಷನನ್ನು, ಯಃ - ಯಾವ ಅರಸು, ನಹಂತಿ - ಹೊಡೆಯುವದಿಲ್ಲವೋ, ಸಃ - ಆ ಅರಸು, ವಧ್ಯತೇ - ಆ ಪುರುಷನಿಂದ ಹೊಡೆ ಯಲ್ಪಡುತ್ತಾನೆ. ॥ ೨೯ ॥ ಧೃಷ್ಟಶ್ಚ - ಧೈರ್ಯಶಾಲಿಯಾದ, (ಗೋ + ಮ) ಹೃಷ್ಟಶ್ಚ - ಸಂತೋಷ ಯುಕ್ತನಾದ, ಶೂರಶ್ಚ - ಶೂರನಾದ, ಮತಿಮಾನ್ - ಬುದ್ಧಿಶಾಲಿಯಾದ, ಧೃತಿಮಾನ್ - ಧೈರ್ಯ ಶಾಲಿಯಾದ, ಶುಚಿಃ-ಕಾಯಿಕ, ಮಾನಸಿಕ, ವಾಚಕ ವ್ಯಾಪಾರಗಳಲ್ಲಿ ಶುದ್ಧಬುದ್ಧಿಯುಳ್ಳ, ಕುಲೀನಶ್ಚ- ಸತ್ಕುಲಪ್ರಸೂತನಾದ, ಅನುರಕ್ತಶ್ಚ - ರಾಜನಲ್ಲಿಯೇ ಭಕ್ತಿಯುಳ್ಳ, ದಕ್ಷಃ - ಕಾರ್ಯಸಮರ್ಥ ನಾದ, ಸೇನಾಪತಿಃ - ಸೈನ್ಯಾಧಿಪತಿಯು, ಕೃತಃಕಚ್ಚಿತ್ - ಅಧಿಕಾರದಲ್ಲಿ ನಿಯೋಗಿತನಾಗಿರುವನಷ್ಟೆ. ॥ ೩೦ ॥ ಮುಖ್ಯಾಃ - ಶ್ರೇಷ್ಠರಾದ, ಬಲವಂತಶ್ಚ - ದೇಹತ್ರಾಣವುಳ್ಳ, ಯುದ್ಧವಿಶಾರದಾಃ - ಕಾಳಗ ದಲ್ಲಿ ಸಮರ್ಥರಾದ, ದೃಷ್ಟಾಪದಾನಾಃ - ಕಾಣಲ್ಪಟ್ಟ ಪೂರ್ವದ ಸತ್ಕಾರ್ಯಗಳುಳ್ಳ, ವಿಕ್ರಾಂತಾಃ - ಪರಾಕ್ರಮಶಾಲಿಗಳಾದ, ತೇ - ಆ ಪ್ರಸಿದ್ಧಪುರುಷರು, ತ್ವಯಾ - ನಿನ್ನಿಂದ, ಸತ್ಕೃತ್ಯ - ಬಹುಮಾನ ಮಾಡಿ, ಮಾನಿತಾಃಕಚ್ಚಿತ್ - ಮರ್ಯಾದಿಸಲಾಗಿರುವರೆ. ॥ ೩೧ ॥ ಬಲಸ್ಯ - ಸೈನ್ಯಕ್ಕೆ, ಯಥೋ ಚಿತಂ - ಯಥಾಯೋಗ್ಯವಾದ, ಸಂಪ್ರಾಪ್ತಕಾಲಂ - ಕಾಲದಿಂದ ಪ್ರಾಪ್ತವಾದ, ದಾತವ್ಯಂ - ಕೊಡ

ಗಳಲ್ಲಿ ಮಹಾ ತಿಳಿವಳಿಕೆಯುಳ್ಳವನೂ, ರಾಜನೀತಿ ಶಾಸ್ತ್ರವನ್ನು ಚೆನ್ನಾಗಿ ಓದಿ ತಿಳಿದು ಕೊಂಡಿರುವವನೂ, ಭೃತ್ಯರನ್ನು ದೂಷಿಸುವುದರಲ್ಲಿ ಬಹಳವಾದ ಆಶೆಯುಳ್ಳವನೂ, ಪರಾ ಕ್ರಮಿಯೂ, ಪ್ರಭುತ್ವವು ತನಗೇ ಬರಬೇಕೆಂದು ಅಪೇಕ್ಷಿಸುತ್ತಿರುವನೂ ಆದವನು ರಾಜ ನನ್ನು ಕೊಲ್ಲುವನೆಂಬುದನ್ನು ಚೆನ್ನಾಗಿ ತಿಳಿಯುವವನಾಗು. ಅಂತಹನನ್ನು ಸಂಹರಿಸಿರುವೆ ಯಲ್ಲವೆ? ಅಂತಹನನ್ನು ಕೊಲ್ಲದೆ ಪ್ರೋತ್ಸಾಹಿಸುತ್ತಿರುವ ರಾಜನಿಗೆ ಹಾನಿ ತಾಕುವುದೆಂಬು ದನ್ನು ನೀನು ತಿಳಿದೇ ಇರುವೆಯಷ್ಟೆ? ಎಲೈ ಕುಮಾರನೆ! ಸಂತೋಷವುಳ್ಳವನೂ, ಮಾಡ ಬೇಕಾದ ಕಾರ್ಯದಲ್ಲಿ ಸಾಮರ್ಥ್ಯವುಳ್ಳವನೂ, ಯುದ್ಧಗಳಲ್ಲಿ ಮಹೋನ್ನತ ಪರಾಕ್ರಮ ವನ್ನು ತೋರುವಾತನೂ, ಮಹಾ ಪ್ರಜ್ಞಾಶಾಲಿಯೂ, ಮಹಾ ಧೀರನೂ, ಪರಿಶುದ್ಧನೂ, ಸತ್ಕುಲಪ್ರಸೂತನೂ, ರಾಜನಲ್ಲಿ ಅನುರಾಗವುಳ್ಳವನೂ ಆದವನನ್ನು ಸೇನಾಧಿಕಾರಿಯನ್ನಾಗಿ ನಿಯಮಿಸಿರುವೆಯಲ್ಲವೆ? ॥೨೯-೩೦॥ ಮಹಾ ಬಲವುಳ್ಳವರನ್ನೂ, ಮೊದಲೇ ತಿಳಿದುಬಂದ ಪರಾಕ್ರಮ ವೃತ್ತಾಂತಗಳುಳ್ಳವರೂ ಆದವರನ್ನು ನೀನು ಹೆಚ್ಚಾಗಿ ಗೌರವಿಸುತ್ತಿರುವೆಯಲ್ಲವೆ?

ದದಾಸಿ ನ ವಿಲಂಬಸೇ ॥ ೩೨ ॥ ಕಾಲಾತಿಕ್ರಮಣಾಚ್ಚೈವ ಭಕ್ತವೇತನಯೋಃ ಭೃತಾಃ ॥ ಭರ್ತುಃ ಕುಪ್ಯಂತಿ ದುಷ್ಯಂತಿ ಸೋಽನರ್ಥಃ ಸುಮಹಾನ್ ಸ್ಮೃತಃ ॥ ೩೩ ॥ ಕಚ್ಚಿತ್ಸರ್ವೇಽನುರಕ್ತಾಸ್ತ್ವಾಂ ಕುಲಪುತ್ರಾಃ ಪ್ರಧಾನತಃ ॥ ಕಚ್ಚಿತ್ ಪ್ರಾಣಾಂ ಸ್ತವಾರ್ಥೇಷು ಸಂತ್ಯಜಂತಿ ಸಮಾಹಿತಾಃ ॥ ೩೪ ॥ ಕಚ್ಚಿಜ್ಜಾನಪದೋ ವಿದ್ವಾನ್ ದಕ್ಷಿಣಃ ಪ್ರತಿಭಾನವಾನ್ ॥ ಯಥೋಕ್ತವಾದೀ ದೂತ

ತಕ್ಕ, ಭಕ್ತಂ - ಅನ್ನವನ್ನು, ವೇತನಂಚ - ಸಂಬಳವನ್ನೂ, ದದಾಸಿಕಚ್ಚಿತ್ - ಕೊಡುತ್ತಿರುವೆಯಾ. ॥ ೩೨ ॥ ಭಕ್ತವೇತನಯೋಃ - ಅನ್ನವಿಷಯಲ್ಲಿಯೂ, ಸಂಬಳವಿಷಯದಲ್ಲಿಯೂ, ಕಾಲಾತಿಕ್ರಮಣಾಚ್ಚೈವ - ಸಮಯಾತಿಕ್ರಮಣದಿಂದ, ಭೃತಾಃ - ಚಾಕರರು, ಭರ್ತುಃ - ಪೋಷಕನಾದ ಪ್ರಭುವಿನ ವಿಷಯದಲ್ಲಿ, ಕುಪ್ಯಂತಿ-ಕೋಪಗೊಳ್ಳುತ್ತಾರೆ, ದುಷ್ಯಂತಿಚ-ದೂಷಿಸಲೂ ದೂಷಿಸುತ್ತಾರೆ, ಸಃ-ಅದೇ, ಸುಮಹಾನ್ - ದೊಡ್ಡದಾದ, ಅನರ್ಥಃ-ಅನರ್ಥವಾಗಿ, ಸ್ಮೃತಃ-ಹೇಳಲ್ಪಡುತ್ತದೆ. ॥ ೩೩ ॥ ಸರ್ವೇ - ಸಮಸ್ತರಾದ, ಕುಲಪುತ್ರಾಃ - ಸತ್ಕುಲಪ್ರಸೂತರಾದ, ಪ್ರಧಾನತಃ - ಮುಖ್ಯರು, ತ್ವಾಂ - ನಿನ್ನನ್ನು ಕುರಿತು, ಅನುರಕ್ತಾಃಕಚ್ಚಿತ್ - ಅನುರಾಗಯುಕ್ತರಾಗಿದ್ದಾರೆಯೇ, ತವ-ನಿನ್ನ, ಅರ್ಥೇಷು-ಕಾರ್ಯಗಳ ವಿಷಯದಲ್ಲಿ, ಸಮಾಹಿತಾಃ - ಸಮಾಧಾನಚಿತ್ತರಾಗಿ, ಪ್ರಾಣಾನ್ - ಪ್ರಾಣಗಳನ್ನು, ಸಂತ್ಯಜಂತಿಕಚ್ಚಿತ್ - ಬಿಡುತ್ತಾರೆಯೇ. ॥ ೩೪ ॥ ಹೇ ಭರತ - ಎಲೈ ಭರತನೇ, ಜಾನಪದಃ - ಸ್ವದೇಶದಲ್ಲಿ ಹುಟ್ಟಿದ, ವಿದ್ವಾನ್ - ತಿಳಿವಳಿಕೆಯುಳ್ಳ, ದಕ್ಷಿಣಃ - ಸಮರ್ಥನಾದ, ಪ್ರತಿಭಾನವಾನ್ - ಉತ್ತರ ಪ್ರತ್ಯುತ್ತರಗಳಲ್ಲಿ ಪ್ರತಿಭಾವಂತನಾದ, ಪಂಡಿತಃ - ಇದರ ವಿಷಯವಿಷ್ಟೇ ಎಂದು ತಿಳಿದುಕೊಂಡಿರುವ, ಯಥೋಕ್ತವಾದೀ - ಅರಸನು ಎಷ್ಟು ಹೇಳುವನೋ ಅಷ್ಟನ್ನೇ ಅನುವಾದಮಾಡುವ,

---

ನಿನ್ನಸೈನ್ಯದವರಿಗೂ, ಇತರ ಅಧಿಕಾರಿಗಳಿಗೂ ನಿಯಮಿತಕಾಲ ಒದಗಿದೊಡನೆಯೇ ಸಾವಕಾಶ ಮಾಡದೆ ವೇತನಗಳನ್ನು ಸಲ್ಲಿಸುತ್ತಿರುವೆಯಲ್ಲವೆ? ॥೨೯-೩೨॥ ಮಗುವೆ! ವೇತನಗಳಿಗಾಗಿಯೇ ಕಾದುಕೊಂಡಿದ್ದು, ಅದರಿಂದಲೇ ಜೀವನ ಮಾಡುವ ಪರಿಚಾರಕರು, ಸರಿಯಾದ ಕಾಲಕ್ಕೆ ಅನ್ನ ಒದಗಲಿಲ್ಲವೆಂದು ಯಜಮಾನನನ್ನು ನಿಂದಿಸುತಾ್ತರೆ. ಇಷ್ಟುಮಾತ್ರವಲ್ಲದೆ, ಯಜಮಾನನಾದವನಲ್ಲಿ ಬಹು ಕೋಪವುಳ್ಳವರೂ ಆಗುತ್ತಾರೆ. ಹೀಗಾಗುವುದರಿಂದ ಮಹದನರ್ಥವುಂಟಾಗುತ್ತದೆ. ವತ್ಸ! ಪ್ರಧಾನಿಗಳೂ, ನಮ್ಮ ಕುಲದಲ್ಲಿ ಜನಿಸಿದ ರಾಜಪುತ್ರರೂ ಏಕೀಭವಿಸಿ, ನಿನ್ನಲ್ಲಿ ಅನುರಾಗವುಳ್ಳವರಾಗಿ ತಕ್ಕ ಸಮಯಗಳಲ್ಲಿ ಪ್ರಾಣಗಳನ್ನು ಸಹ ತೊರೆಯುವುದಕ್ಕೆ ಸಿದ್ಧರಾಗಿದ್ದಾರೆಯೇ? ಅಲ್ಲದೆ ಸ್ವದೇಶದಲ್ಲಿ ಹುಟ್ಟಿದವನೂ, ಇತರರ ಬುದ್ಧಿ ವಿಶೇಷಗಳನ್ನೂ, ಕಾರ್ಯಭಾರಗಳನ್ನೂ ಚೆನ್ನಾಗಿ ಅರಿತಿರುವವನೂ, ಮಹಾ ಸಮರ್ಥನೂ, ಬಹು ನೂತನವಾದ ಯುಕ್ತಿಜಾಲಗಳನ್ನರಿತಿರುವವನೂ, ಹೇಳಿದ ಕೆಲಸವನ್ನು ಸತ್ಯವಾಗಿಯೂ, ಮೋಸವಿಲ್ಲದೆಯೂ, ಮಾಡುವವನೂ ಆದ ಮಾನವೋತ್ತಮನನ್ನು ದೂತನನ್ನಾಗಿ ನಿಯಮಿಸಿರುವೆಯಾ? ನೀನು ಶತ್ರುಜನರ ರೀತಿರಂಗಗಳನ್ನು ತಿಳಿದುಕೊಳ್ಳಲು ಪರಪಕ್ಷದಲ್ಲಿ ತಿಳಿದುಕೊಳ್ಳಬೇಕಾದ ಮಂತ್ರಿ,ಪುರೋಹಿತ,ಯುವರಾಜ, ಸೇನಾಪತಿ, ದೌವಾರಿಕ, ಅಂತರ್ವಂಶಿಕ, ಕಾರಾಗೃಹಗಳಲ್ಲಿ ಅಧಿಕಾರವನ್ನು ಹೊಂದಿದವನು, ಧನಾಗಾರಾಧಿಪತಿ,

ಸ್ತೇ ಕೃತೋ ಭರತ ! ಪಂಡಿತಃ ॥ ೩೫ ॥ ಕಚ್ಚಿದಷ್ಟಾದಶಾನ್ಯೇಷು ಸ್ವಪಕ್ಷೇ
ದಶಪಂಚಚ ॥ ತ್ರಿಭಿಸ್ತ್ರಿಭಿ ರವಿಜ್ಞಾತೈ ರ್ವೇತ್ಸಿ ತೀರ್ಥಾನಿ ಚಾರಕೈಃ ॥ ೩೬ ॥
ಕಚ್ಚಿದ್ವ್ಯಪಾಸ್ತಾ ನಹಿತಾ‌ನ್ಪ್ರತಿಯಾತಾಂಶ್ಚ ಸರ್ವದಾ ॥ ದುರ್ಬಲಾ ನನವ

ದೂತಃ - ದೂತನು, ತೇ - ನಿನ್ನಿಂದ, ಕೃತಃಕಚ್ಚಿತ್-ನಿಯಮಿಸಲ್ಪಟ್ಟಿರುವನೆ? ॥ ೩೫ ॥ ಅನ್ಯೇಷು-ಶತ್ರುಪಕ್ಷದಲ್ಲಿ, ಅಷ್ಟಾದಶ - (೧) ಹದಿನೆಂಟು ಸಂಖ್ಯೆಯುಳ್ಳ, ಸ್ವಪಕ್ಷೇ-ತನ್ನ ಪಕ್ಷದಲ್ಲಿ, ದಶಪಂಚಚ-ಹದಿನೈದು ಸಂಖ್ಯೆಯುಳ್ಳ, ತೀರ್ಥಾನಿ - ತೀರ್ಥಶಬ್ದದಿಂದ ಹೇಳಲ್ಪಟ್ಟ ಮಂತ್ರ್ಯಾದಿ ಪದಾರ್ಥಸ್ವರೂಪವನ್ನು, ಅವಿಜ್ಞಾತೈಃ - ಅನ್ಯೋನ್ಯವಾಗಿ ತಿಳಿಯಲ್ಪಡದಿರುವ, ತ್ರಿಭಿಸ್ತ್ರಿಭಿಃ - ಮೂವರು ಮೂವರಾದ, ಚಾರಕೈಃ - ದೂತರಿಂದ, ವೇತ್ಸಿಕಚ್ಚಿತ್ - ತಿಳಿದುಕೊಂಡಿರುವೆಯಾ? ॥ ೩೬ ॥ ಹೇ ರಿಪುಸೂದನ-ಎಲೈ ಶತ್ರುಸಂಹಾರಕನೇ, ವ್ಯಪಾಸ್ತಾ‌ನ್ - ಹೊರಗೆ ಕಳುಹಲ್ಪಟ್ಟ, ಪ್ರತಿಯಾತಾ‌ನ್ - ತಿರುಗಿ ಊರಿಗೆ

ಕಾರ್ಯಯೋಜಕ, ಪ್ರಾಡ್ವಿವಾಕ, ಸೇನಾನಾಯಕ, ನಗರಾಧ್ಯಕ್ಷ, ಕರ್ಮಾಂತಿಕ, ಸಭಾಧಿಕೃತ, ಧರ್ಮಾಧಿಕಾರಿ, ದಂಡಪಾಲ, ದುರ್ಗಪಾಲಕ, ರಾಷ್ಟ್ರಾಂತಪಾಲಕ ಎಂಬ ಹದಿನೆಂಟು ಮಂದಿಯನ್ನೂ; ಸ್ವಪಕ್ಷದಲ್ಲಿ ಮಂತ್ರಿ, ಪುರೋಹಿತ, ಯುವರಾಜ ಎಂಬುವರನ್ನುಳಿದು ಮಿಕ್ಕ ಹದಿನೈದು ಮಂದಿಯನ್ನೂ ವಿಭಾಗಿಸಿ, ಇವರಿಗೆ ತಿಳಿಯದಂತೆ ಬೇರೆಯವರಾದ ಮೂವರು ಮೂವರನ್ನು ದೂತರನ್ನಾಗಿ ನಿಯಮಿಸಿರುವೆಯಾ? ಇವರೆಲ್ಲರೂ ಮಾಡುತ್ತಲಿರುವ ಕಾರ್ಯ

ಟಿ. (೧) " ಕಚ್ಚಿದಷ್ಟಾದಶಾನ್ಯೇಷು " ಇಲ್ಲಿ ತೀರ್ಥಗಳೆಂದು ಹೇಳಲ್ಪಡುವ ಸ್ವಪಕ್ಷ ಪರಪಕ್ಷಗಳಲ್ಲಿನ ರಾಜಪುರುಷರ ಲಕ್ಷಣಗಳು ಈರೀತಿಯಾಗಿ ವರ್ಣಿಸಲ್ಪಡುತ್ತವೆ

ಇವುಗಳಲ್ಲಿ ಮಂತ್ರಿ, ಪುರೋಹಿತ, ಯುವರಾಜ ಇವರನ್ನುಳಿದು ಮಿಕ್ಕ ಹದಿನೈದೂ ಸ್ವಪಕ್ಷದಲ್ಲಿ ತಿಳಿದುಕೊಳ್ಳಬೇಕಾದ ತೀರ್ಥಗಳು. (ಮಂತ್ರಿ, ಪುರೋಹಿತ, ಯುವರಾಜ, ಸೇನಾಪತಿ ಇವರ ಕಾರ್ಯಗಳು ಎಲ್ಲರಿಗೂ ತಿಳಿದೇಇರುತ್ತದೆ.) ಇನ್ನು ಉಳಿದವರ ಕಾರ್ಯಕಲಾಪಗಳು ಹೀಗೆ ಹೇಳಲಾಗಿವೆ.

ದೌವಾರಿಕ—ಅಂತಃಪುರದಲ್ಲಿರುವ ಬಾಗಿಲುಕಾಯುವವರ ಮುಖಂಡ, ಅಂತರ್ವಂಶಿಕ—ಅಂತಃಪುರದಲ್ಲಿನ ಸಕಲ ಕಾರ್ಯಗಳನ್ನು ನಡಿಸುವಾತ, ಕಾರಾಗಾರಾಧಿಕೃತ—ಅಪರಾಧಿಗಳನ್ನು ಬಂಧನದಲ್ಲಿಡುವ ಸ್ಥಳಗಳಲ್ಲಿ ಅಧಿಕಾರಿಯಾದವನು, ಅರ್ಥಸಂಚಯಕೃತ್—ಧನಾಗಾರದಲ್ಲಿ ಮುಖಂಡನಾದವನು, ಕಾರ್ಯಯೋಜಕ—ರಾಜಾಜ್ಞೆಯನ್ನು ಹೊರಪಡಿಸುವವನು, ಪ್ರಾಡ್ವಿವಾಕ—ಪ್ರಜೆಗಳ ವ್ಯವಹಾರಗಳನ್ನೆಲ್ಲ ಆದರದಿಂದ ಕೇಳಿ ರಾಜನಿಗೆ ನಿವೇದನಮಾಡುವ ಅಧಿಕಾರಿ, (ಇವನ ಲಕ್ಷಣವು ಗ್ರಂಥಾಂತರದಲ್ಲಿ " ವಿವಾದೇಪೃಚ್ಛತಿಪ್ರಶ್ನಂ ಪ್ರತಿಪ್ರಶ್ನಂ ತಥೈವಚ । ಪ್ರಿಯಪೂರ್ವಂ ಪ್ರಾಗ್ವದತಿ ಪ್ರಾಡ್ವಿವಾಕಸ್ತತಸ್ಸ್ಮೃತಃ " ಎಂದು ಹೇಳಿದೆ) ಸೇನಾನಾಯಕ--ಸೈನ್ಯದಲ್ಲಿರುವ ಸಮಸ್ತರಿಗೂ ಅನ್ನೋದಕಾದಿಗಳನ್ನೂ, ಸಂಬಳವನ್ನೂ ವಿನಿಯೋಗಮಾಡುವ ಅಧಿಕಾರಿ, ನಗರಾಧ್ಯಕ್ಷ—ರಾತ್ರಿಯ ಕಾಲದಲ್ಲಿ ಪಟ್ಟಣವನ್ನು ಶೋಧಿಸುವಿಕೆ, ದ್ವಾರಪ್ರಾಕಾರಾದಿಗಳನ್ನು ಸಂರಕ್ಷಿಸುವಿಕೆ ಇವೇ ಮೊದಲಾದುವುಗಳನ್ನು ಮಾಡುವಾತ; ಕರ್ಮಾಂತಿಕ—ಸೈನಿಕರನ್ನುಳಿದು ಎಲ್ಲ ಅಧಿಕಾರಿಗಳಿಗೂ ರಾಜನಿಂದ ಒಟ್ಟಾಗಿ ವೇತನವನ್ನು ತಾನೇ ತೆಗೆದುಕೊಂಡು ವಿನಿಯೋಗಮಾಡುವ ಅಧಿಕಾರಿ, ಸಭ್ಯಕ—ಪ್ರತಿ ದಿನದಲ್ಲಿಯೂ ಸಭಾಲಂಕಾರವನ್ನುಮಾಡುವಿಕೆ, ರಾಜ, ಮಂತ್ರಿ ಇವರೇ ಮೊದಲಾದವರಿಗೆ ಆಯಾಯ ಸ್ಥಾನಗಳನ್ನು ಕಲ್ಪಿಸುವಿಕೆ, ಸಭಿಕರನ್ನು ಕರೆತರುವಿಕೆ, ಅಸಭ್ಯರನ್ನು ರಾಜಸಭೆಗೆ ಬಾರದಿರುವಂತೆ ನಿರೋಧಿಸುವಿಕೆ,

ಜ್ಞಾಯ ವರ್ತಸೇ ರಿಪುಸೂದನ! ॥ ೩೭ ॥ ಕಚ್ಚಿನ್ನ (೧) ಲೋಕಾಯತಿಕಾನ್

ಬಂದಿರುವ, ಅಹಿತಾನ್ - ಶತ್ರುಗಳನ್ನು, ದುರ್ಬಲಾನ್ - ಬಲಹೀನರನ್ನಾಗಿ, ಅನವಜ್ಞಾಯ - ಅವ ಮಾನಮಾಡದಂತೆ, ವರ್ತಸೇಕಚ್ಚಿತ್ - ಇರುವೆಯೋ ? ॥ ೩೭ ॥ ಹೇ ತಾತ - ಎಲೈ ತಂದೆಯೇ,

ಗಳನ್ನು ಚಾರರ ಮೂಲಕ ಚೆನ್ನಾಗಿ ತಿಳಿದುಕೊಳ್ಳುತ್ತಿರುವೆಯಲ್ಲವೆ? ಈಗ ನಾನು ಹೇಳಿದ ಈ ಹದಿನೆಂಟು ಮಂದಿಯೂ 'ತೀರ್ಥಗಳೆಂದು' ಹೇಳಲ್ಪಡುತ್ತಾರೆ. ಹಾಗೆಯೇ ನಿನ್ನ ರಾಜ್ಯ ದಲ್ಲಿಯೂ ಸಹ ಎಲ್ಲ ಕಾಲಗಳಲ್ಲಿಯೂ ನಿನ್ನ ಸಮೀಪದಲ್ಲಿಯೇ ಇರುವ ಮಂತ್ರಿ, ಪುರೋ ಹಿತ, ಯುವರಾಜ ಇವರೇ ಮೊದಲಾದವರು ಮಾಡುವ ಕಾರ್ಯಗಳನ್ನು ತಿಳಿದುಕೊಳ್ಳಲು ಮೂವರು ದೂತರನ್ನು ನಿಯಮಿಸಿ, ಅವರಿಂದ ಎಲ್ಲರ ಕಾರ್ಯವನ್ನೂ ತಿಳಿದುಕೊಳ್ಳುತ್ತಿರುವೆ ಯಷ್ಟೆ? ಶತ್ರುಗಳನ್ನು ನಾಶಗೊಳಿಸುವುದರಲ್ಲಿ ಸಮರ್ಥನಾದ ಎಲೈಭರತನೆ! ಮೊದಲು ನಿನ್ನ ರಾಜ್ಯದಲ್ಲಿದ್ದು ಆಮೇಲೆ ಓಡಿಸಲಾದವರೂ, ಆಮೇಲೆ ಯಾವುದೋ ಒಂದು ಕಾರಣದಿಂದ

ರಾಜಸಭೆಯನ್ನು ನಿಶ್ಶಬ್ದವನ್ನಾಗಿಡುವಿಕೆ, ಸಭೆಯನ್ನೂ, ಸಭಾನಿಯಮಗಳನ್ನೂ ಪರಿಪಾಲಿಸುವಿಕೆ ಇವೇ ಮೊದಲಾದ ಕಾರ್ಯಜಾಲಗಳನ್ನು ಮಾಡುವಾತನು, ಧರ್ಮಾಧ್ಯಕ್ಷ—ದಾಯಭಾಗಾದಿ ವಿವಾದಗಳನ್ನೊಳಗೊಂಡಿರುವ ವ್ಯವಹಾರ ಗಳು ಬಂದಾಗ ನಿಷ್ಪಕ್ಷಪಾತದೃಷ್ಟಿಯಿಂದ ಧರ್ಮಶಾಸ್ತ್ರಾನುಸಾರವಾಗಿ ವ್ಯವಹಾರವನ್ನು ತೀರ್ಮಾನಮಾಡುವ ನ್ಯಾಯಾ ಧೀಶ, ದಂಡಪಾಲ-ಇತರರ ಸ್ವತ್ತುಗಳನ್ನಪಹರಿಸುವ ಚೋರಾದಿಗಳಿಗೆ ರಾಜಾಜ್ಞೆಯಂತೆ ಶಿರಶ್ಛೇದನಾದಿಗಳನ್ನು ಮಾಡುವ ಜನರಿಗೆ, ಆಣತಿಯನ್ನೀಯುವವನು, ದುರ್ಗಪಾಲ—ಗಿರಿ ಜಲವನಾದಿ ದುರ್ಗಗಳನ್ನು ಯಾವಾಗಲೂ ಕಾಪಾಡತಕ್ಕ ಜನ ರನ್ನು ಕೈಕೆಳಗಿಟ್ಟುಕೊಂಡಿರುವ ಅಧಿಕಾರಿ, ರಾಷ್ಟ್ರಾಂತಪಾಲ—ರಾಜ್ಯದ ಎಲ್ಲೆಕಟ್ಟುಗಳಲ್ಲಿ ತಿರುಗುತ್ತಿರುವ ಜನರಿಗೆ ಅಧಿನಾಯಕನಿವನು.

ಇನ್ನು ಮಂತ್ರಿ, ಪುರೋಹಿತ, ಯುವರಾಜ ಈ ಮೂವರೂ ಪರೀಕ್ಷಿಸಲ್ಪಡತಕ್ಕವರಲ್ಲ. ಇದಕ್ಕೆ ನೀತಿ ಶಾಸ್ತ್ರ ವಚನವೀರೀತಿಯಿರುತ್ತದೆ.

ಚಾರಾನ್ ವಿಚಾರಯೇತ್ತೀರ್ಥೇ ಷ್ವಾತ್ಮನಶ್ಚ ಪರಸ್ಯಚ ।
ಪಾಷಂಡಾದೀ ನವಜ್ಞಾತಾ ನನ್ಯೋನ್ಯಮಿತರೈರಪಿ ॥
ಮಂತ್ರಿಣಂ ಯುವರಾಜಂಚ ಹಿತ್ವಾಸ್ವೇಷು ಪುರೋಹಿತಂ ॥

"ಯೋನೌ ಜಲಾವತಾರೇಚ ಮಂತ್ರಾದ್ಯಷ್ಟಾದಶಸ್ವಪಿ । ಪುಣ್ಯಕ್ಷೇತ್ರೇ ತಥಾಪಾತ್ರೇ ತೀರ್ಥಸ್ಯಾದ್ದರ್ಶನೇಷ್ವಪಿ" ಎಂಬ ಹಲಾಯುಧ ನಿಘಂಟಿನ ಆಧಾರದಿಂದ ಈ ಹದಿನೆಂಟಕ್ಕೂ "ತೀರ್ಥ" ಶಬ್ದವು ವಿಧಾನವಾಗಿರುತ್ತದೆ.

ಟಿ. (೧) " ಲೋಕಾಯತಿಕಾನ್ " ಎಂಬ ಕಡೆ **ತನಿ** ಶ್ಲೋಕೀಕಾರರು " ಬೌದ್ಧ, ಚಾರ್ವಾಕರೆಂದು " ಅರ್ಥ ಬರೆದಿದ್ದಾರೆ - ಪರಂತು " ದರ್ಶನ " ಕಾರರು ನಿರೀಶ್ವರವಾದಿಗಳಾದ ನಾಸ್ತಿಕರಲ್ಲಿ ಬೌದ್ಧ, ಚಾರ್ವಾಕಾದಿಗಳನ್ನು ಸೇರಿಸಿದ್ದರೂ, ಇಲ್ಲಿನ ಸಮಂಜಸಾರ್ಥವು (ಆದಿಮ, ನಿರೀಶ್ವರ, ದರ್ಶನಗಳನ್ನು ಒಳಹೊಕ್ಕು ನೋಡಿದುದರಿಂದ ಪ್ರತಿ ಪಾದಿತವಾಗುವ) ಚಾರ್ವಾಕರೆಂದೇ ತಿಳಿದು ಬರುತ್ತದೆ. ಸುಲಭಸಾಧ್ಯವಾಗಿ ಕೇವಲ ದೇಹಪೋಷಣೆಯೇ ತತ್ವವಾಗಿರುವ ಈ ಮತವನ್ನು ಎಲ್ಲರೂ ಆ ಕಾಲದಲ್ಲಿ ಅವಲಂಬಿಸಿದ್ದುದರಿಂದ " ಲೋಕಾಯತ " ಮತವೆಂದೂ, ಆ ಮತಸ್ಥರಿಗೆ " ಲೋಕಾಯತಿಕರು ಅಥವ ಚಾರ್ವಾಕರೆಂದೂ " ಹೆಸರಿರುತ್ತದೆ. ಒಂದು ವೇಳೆ ಈ ಪದಕ್ಕೆ " ಬೌದ್ಧ " ರೆಂದು ಅರ್ಥವನ್ನು ಗ್ರಹಿಸಿದರೆ ರಾಮನ ಕಾಲದಲ್ಲಿಯೂ " ಬೌದ್ಧರಿದ್ದರೇ? " ಎಂಬ ಸಂಶಯಕ್ಕೆ ಸಮಾಧಾನ ಹೇಳಬೇಕಾ ಗುತ್ತೆ. ಬುದ್ಧನಯುಗ ಕಲಿಯುಗ, ಶ್ರೀರಾಮನ ಯುಗ ತ್ರೇತಾಯುಗ, ಆದುದರಿಂದ ಕಾಲವ್ಯತ್ಯಾಸವೂ ಕಂಡು ಬರುತ್ತದೆ. **ಮಹೇಶ್ವರತೀರ್ಥರು** ಈ ಸಂಶಯಕ್ಕೆ ಆಸ್ಪದವನ್ನೇ ಕೊಟ್ಟಿರುವುದಿಲ್ಲ .

ಬ್ರಾಹ್ಮಣಾಂ ಸ್ತಾತ! ಸೇವಸೇ ॥ ಅನರ್ಥಕುಶಲಾಹ್ಯೇತೇ ಬಾಲಾಃ ಪಂಡಿತಮಾನಿನಃ ॥ ೩೮ ॥ ಧರ್ಮಶಾಸ್ತ್ರೇಷು ಮುಖ್ಯೇಷು ವಿದ್ಯಮಾನೇಷು ದುರ್ಬುಧಾಃ ॥ ಬುದ್ಧಿ ಮಾನ್ವೀಕ್ಷಕೀಂ ಪ್ರಾಪ್ಯ ನಿರರ್ಥಂ ಪ್ರವದಂತಿ (೧) ತೇ ॥ ೩೯ ॥ ವೀರೈ ರಧ್ಯುಷಿತಾಂ ಪೂರ್ವ ಮಸ್ಮಾಕಂ ತಾತ! ಪೂರ್ವಕೈಃ ॥

ಲೋಕಾಯತಿಕಾ೯ - ಪ್ರತ್ಯಕ್ಷೈಕ ಪ್ರಮಾಣವಾದಿಗಳಾದ (ಗೋ) ಪ್ರತ್ಯಕ್ಷಾನುಮಾನಗಳೆಂಬ ಎರಡು ಪ್ರಮಾಣಗಳನ್ನೇ ನಂಬುವ ಬೌದ್ಧರೇ ಮೊದಲಾಗುಳ್ಳ, ಬ್ರಾಹ್ಮಣಾ೯ - ಬ್ರಾಹ್ಮಣರನ್ನು, ನಸೇವಸೇ ಕಚ್ಚಿತ್ - ಆಶ್ರಯಿಸುವುದಿಲ್ಲವಷ್ಟೆ, ಏತೇ - ಈ ಚಾರ್ವಾಕ ಬ್ರಾಹ್ಮಣರು, ಬಾಲಾಃ - ಮೂರ್ಖರು, ಪಂಡಿತಮಾನಿನಃ - ಏನೂ ತಿಳಿಯದಿರುವ ತಮ್ಮನ್ನೇ ಪಂಡಿತರೆಂದು ತಿಳಿದಿರುವರಾದ ಕಾರಣ, ಅನರ್ಥ ಕುಶಲಾಹಿ - ರಾಜನ ಧರ್ಮಾನುಷ್ಠಾನಕ್ಕೆ ಪ್ರತಿಬಂಧಕವಾದ, ನರಕಪತನಾದಿಗಳಿಗೆ ಹೇತುಭೂತವಾದ ಕಾರ್ಯಗಳಲ್ಲಿ ಸಮರ್ಥರಷ್ಟೆ. ॥ ೩೮ ॥ ಮುಖ್ಯೇಷು - ಶ್ರೇಷ್ಠಗಳಾದ, ಧರ್ಮಶಾಸ್ತ್ರೇಷು - ಮನು ಸ್ಮೃತ್ಯಾದಿ ಧರ್ಮಶಾಸ್ತ್ರಗಳು. ವಿದ್ಯಮಾನೇಷು - ಇದ್ದರೂ, ದುರ್ಬುಧಾಃ - ದುಷ್ಟಪಾಂಡಿತ್ಯವುಳ್ಳ, ತೇ - ಆ ಬ್ರಾಹ್ಮಣರು, ಅನ್ವೀಕ್ಷಕೀಂ - ಶುಷ್ಕತರ್ಕ ಸಂಬಂಧವಾದ, ಬುದ್ಧಿಂ - ಮತಿಯನ್ನು, ಪ್ರಾಪ್ಯ - ಹೊಂದಿ, ನಿರರ್ಥಂ - ನಿಷ್ಪ್ರಯೋಜನವನ್ನಾಗಿ ಅಂದರೆ ಋಷಿಪ್ರೋಕ್ತವಾದ ಧರ್ಮೋಪ ದೇಶವನ್ನು ನಿರರ್ಥಕವನ್ನಾಗಿ, ಪ್ರವದಂತಿ-ಹೇಳುತ್ತಾರೆ. ॥ ೩೯ ॥ ಹೇ ತಾತ-ಎಲೈ ಅಪ್ಪನೇ, ವೀರೈಃ-ಶೂರರಾದ, ಅಸ್ಮಾಕಂ - ನಮ್ಮ, ಪೂರ್ವಕೈಃ - ಪ್ರಾಚೀನರಿಂದ, ಪೂರ್ವಂ - ಮೊದಲಿನಿಂದಲೂ, ಅಧ್ಯುಷಿತಾಂ - ಅಧಿಷ್ಠಿಸಲ್ಪಟ್ಟ, ಸತ್ಯನಾಮಾಂ-ಯಥಾರ್ಥವಾದ ನಾಮಧೇಯವುಳ್ಳ, ದೃಢದ್ವಾರಾಂ-

ಪುನಃ ರಾಜ್ಯವನ್ನು ಸೇರಿದವರೂ ನಿನಗೆ ಶತ್ರುಗಳೂ ಆದ ಜನರನ್ನು, ದುರ್ಬಲರೆಂದು ತಿಳಿಸಿ ಅವಮಾನಿಸದೆ ಎಲ್ಲ ಕಾಲಗಳಲ್ಲಿಯೂ ಯಾವಾಗಲೂ ಜಾಗರೂಕನಾಗಿ ವರ್ತಿಸುತ್ತಿರುವೆಯ ಲ್ಲವೆ?॥೩೩-೩೭॥ವತ್ಸ; ನಾಸ್ತಿಕರಾದ ಬ್ರಾಹ್ಮಣರನ್ನು ನೀನು ಸೇವಿಸುತ್ತಿಲ್ಲವಷ್ಟೆ? ನಾಸ್ತಿ ಕರಾದ ಬ್ರಾಹ್ಮಣರು ಅವಿವೇಕಿಗಳೆಂದೂ, ತಾವೇ ಪಂಡಿತರೆಂದು ತಿಳಿದುಕೊಂಡಿರುವವರನ್ನೂ ನೀನು ತಿಳಿದಿರುವೆಯಾ? ಇಂತಹರನ್ನು ಸೇವಿಸುವುದರಿಂದ ಮಹದನರ್ಥವು ಸಂಭವಿಸುತ್ತದೆ ಯೆಂಬು ನೀನು ಬಲ್ಲೆಯಾ? ನಾಸ್ತಿಕರಾದವರು ಅನೇಕ ವಿಧವಾದ ದುರ್ಬೋಧನೆಗಳನ್ನು ಮಾಡಿ ಬುದ್ಧಿಯನ್ನು ಮಲಿನವನ್ನಾಗಿ ಮಾಡುತ್ತಾರೆ. ವತ್ಸ ; ನಾಸ್ತಿಕರು ಬಹು ಮುಖ್ಯ ಗಳಾದ ಧರ್ಮಶಾಸ್ತ್ರಗಳನ್ನು ನಂಬಿಕೊಂಡಿರುವವರಲ್ಲಿ ಅನೇಕ ದೋಷಗಳನ್ನು ನಿಷ್ಕಾರಣ ವಾಗಿಯೇ ಕಲ್ಪಿಸುತ್ತಾರೆ. ಇಷ್ಟುಮಾತ್ರವಲ್ಲದೆ ಈ ನಾಸ್ತಿಕರು ದಂಡನೀತಿ ಶಾಸ್ತ್ರವನ್ನೇ ಮುಖ್ಯವನ್ನಾಗೆಣಿಸಿ, ಶುಷ್ಕತರ್ಕಗಳನ್ನು ಮಾಡುತ್ತ, ಧರ್ಮಶಾಸ್ತ್ರಾದಿಗಳು ನಿಷ್ಪ್ರಯೋ

ಟಿ. (೧) "ಆನ್ವೀಕ್ಷಕೀಂ ಬುದ್ಧಿಂ ಪ್ರಾಪ್ಯ ನಿರರ್ಥಂ ಪ್ರವದಂತಿ" ಎಂಬ ಕಡೆ ಶುಷ್ಕತರ್ಕವು ದ್ಯೋತಿತವಾಗಿದೆ. "ಆರ್ಷಂ ಧರ್ಮೋಪದೇಶಂಚ ವೇದಶಾಸ್ತ್ರ ವಿರೋಧಿನಾ ॥ ಯಸ್ತರ್ಕೇಣಾನುಸಂಧತ್ತೇ ಸ ಧರ್ಮಂ ವೇದನೇತರಃ" ಎಂಬ ನಿಯಮಕ್ಕೆ ಅನುಸಾರವಾಗಿದ್ದರೇನೇ ತರ್ಕವು ಸಾಧುತ್ವೇನ ಗಣನೀಯವಾಗುತ್ತದೆ. ಇಲ್ಲದಿದ್ದರೆ "ನಾಸ್ತಿಕರ ಶುಷ್ಕತರ್ಕ" ಎಂಬ ಅಪವಾದಕ್ಕೆ ಗುರಿಯಾಗುತ್ತದೆ.

ಸತ್ಯನಾಮಾಂ ದೃಢದ್ವಾರಾಂ ಹಸ್ತ್ಯಶ್ವ ರಥಸಂಕುಲಾಮ್ ‖ ೪೦ ‖ ಬ್ರಾಹ್ಮಣೈಃ ಕ್ಷತ್ರಿಯೈ ರ್ವೈಶ್ಯೈ ಸ್ಸ್ವಕರ್ಮನಿರತೈ ಸ್ಸದಾ ‖ ಜಿತೇಂದ್ರಿಯೈ ರ್ಮಹೋತ್ಸಾಹೈ ರ್ವೃತಾ ಮಾರ್ಯೈಸ್ಸಹಸ್ರಶಃ ‖ ೪೧ ‖ ಪ್ರಾಸಾದೈ ರ್ವಿವಿಧಾಕಾರೈ ರ್ವೃತಾಂ ವೈದ್ಯಜನಾಕುಲಾಮ್ ‖ ಕಚ್ಚಿತ್ ಸಮುದಿತಾಂ ಸ್ಫೀತಾ ಮಯೋಧ್ಯಾಂ ಪರಿರಕ್ಷಸಿ! ‖ ೪೨ ‖ ಕಚ್ಚಿಚ್ಚೈತ್ಯಶತೈ ರ್ಜುಷ್ಟ ಸ್ಸುನಿವಿಷ್ಟ ಜನಾಕುಲಃ ‖ ದೇವಸ್ಥಾನೈಃ ಪ್ರಪಾಭಿಶ್ಚ ತಟಾಕೈ ಶ್ಚೋಪಶೋಭಿತಃ ‖ ೪೩ ‖ ಪ್ರಹೃಷ್ಟ

ಭದ್ರವಾಗಿರುವ ಬಾಗಿಲುಗಳುಳ್ಳ, ಹಸ್ತ್ಯಶ್ವರಥಸಂಕುಲಾಂ - ಆನೆ, ಕುದುರೆ, ರಥ ಎಂಬಿವುಗಳಿಂದ ತುಂಬಿರುವ, ಸದಾ-ನಿರಂತರವೂ, ಸ್ವಕರ್ಮನಿರತೈಃ-ತಮ್ಮ ಕರ್ಮದಲ್ಲಿಯೇ ಆಸಕ್ತರಾದ, ಬ್ರಾಹ್ಮಣೈಃ-ಬ್ರಾಹ್ಮಣರಿಂದಲೂ, ಕ್ಷತ್ರಿಯೈಃ - ಕ್ಷತ್ರಿಯರಿಂದಲೂ, ವೈಶ್ಯೈಃ - ವೈಶ್ಯರಿಂದಲೂ, ಜಿತೇಂದ್ರಿಯೈಃ-ಇಂದ್ರಿಯ ನಿಗ್ರಹವನ್ನುಮಾಡಿರುವ, ಮಹೋತ್ಸಾಹೈಃ - ಮಹಾ ಸಂತೋಷವುಳ್ಳ, ಸಹಸ್ರಶಃ - ಅನೇಕರಾದ, ಆರ್ಯೈಃ - ಪೂಜ್ಯರಿಂದ, ವೃತಾಂ - ಸುತ್ತುವರೆಯಲ್ಪಟ್ಟ, ವಿವಿಧಾಕಾರೈಃ - ಅನೇಕ ಬಗೆಗಳಾದ ಆಕಾರಗಳುಳ್ಳ, ಪ್ರಾಸಾದೈಃ - ರಾಜರಮನೆಗಳಿಂದ, ವೃತಾಂ - ಆವೃತವಾದ, ವೈದ್ಯಜನಾಕುಲಾಂ - ವಿದ್ವಜ್ಜನರಿಂದ ತುಂಬಿರುವ, ಸಮುದಿತಾಂ - ಸಂತೋಷಯುಕ್ತವಾದ ಜನವುಳ್ಳ, ಸ್ಫೀತಾಂ - ಸಮೃದ್ಧಿಯುಳ್ಳ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು, ಪರಿರಕ್ಷಸಿಕಚ್ಚಿತ್-ಸಂರಕ್ಷಿಸುತ್ತಿರುವೆಯಾ? ‖ ೪೦-೪೨ ‖ (ಹೇ ರಾಘವ - ಎಲೈ ಭರತನೇ,) ಚೈತ್ಯಶತೈಃ - ಚಯನಪ್ರದೇಶಗಳ ನೂರರಿಂದ, ಜುಷ್ಟಃ - ಕೂಡಿರುವ, ಸುನಿವಿಷ್ಟಜನಾಕುಲಃ - (ಗೋ) ರಾಜನ್ವತ್ವ, ಸುವೃಷ್ಟಿತ್ವ, ಆರೋಗ್ಯತ್ವ, ದೇಹಗುಣ ಇವುಗಳಿಂದ ಪಟ್ಟಣದಲ್ಲಿಯೇ ಆಸಕ್ತರಾಗಿರುವಜನರಿಂದ ನಿಬಿಡೀಕೃತವಾದ, ದೇವಸ್ಥಾನೈಃ-ದೇವತಾಗೃಹಗಳಿಂದ, ಪ್ರಪಾಭಿಶ್ಚ-ಅರವಟ್ಟಿಕೆಗಳಿಂದಲೂ, ತಟಾಕೈಶ್ಚ-ಕೆರೆಗಳಿಂದಲೂ, ಉಪಶೋಭಿತಃ - ವಿರಾಜಮಾನವಾದ, ಪ್ರಹೃಷ್ಟನರನಾರೀಕಃ - ಸಂತೋಷಗೊಂಡ ಮನುಷ್ಯರೂ

ಜನ ಶಾಸ್ತ್ರಗಳೆಂದು ಹೇಳಿ ಅನೇಕಗಳಾದ ಅನರ್ಥಗಳನ್ನು ಸಂಪಾದಿಸುತ್ತಾರೆ. ಆದುದರಿಂದ ನೀನಂತಹ ದುರಾತ್ಮರೊಡನೆ ಸಹವಾಸವನ್ನು ಮಾಡಬಾರದು. ವತ್ಸ; ಭರತನೆ! ಪರಾಕ್ರಮಿಗಳೂ, ನಮಗೆ ಪೂಜ್ಯರಾದವರೂ ಆದ ರಾಜೋತ್ತಮರಿಂದ ಪರಿಪಾಲಿತವಾದುದೂ, ಶತ್ರುಗಳಿಂದ ಗೆಲ್ಲಲಸಾಧ್ಯವಾದುದೆಂಬ (ಅಯೋಧ್ಯೆ) ಸಾರ್ಥಕ ನಾಮಧೇಯವುಳ್ಳುದೂ, ದೃಢವಾದ ದ್ವಾರಗಳುಳ್ಳುದೂ, ಆನೆ, ಕುದುರೆ, ರಥ, ಪದಾತಿಗಳೆಂಬ ಚತುರಂಗಬಲದಿಂದ ನಿಬಿಡೀಕೃತವಾದುದೂ,ತಮ್ಮತಮ್ಮ ಕಾರ್ಯಗಳಲ್ಲಿ ಆಸಕ್ತಿಯುಳ್ಳ ಬ್ರಹ್ಮ,ಕ್ಷತ್ರಿಯ,ವೈಶ್ಯ, ಶೂದ್ರರಿಂದಲೂ, ಜಿತೇಂದ್ರಿಯರಿಂದಲೂ, ಬಹು ಉತ್ಸಾಹವುಳ್ಳ ಪೂಜ್ಯರಿಂದಲೂ ಯಾವಾಗಲೂ ವ್ಯಾಪ್ತವಾದುದೂ, ನಾನಾವಿಧಗಳಾದ ಆಕಾರವಿಶೇಷಗಳಿಂದೊಪ್ಪಿ ಮೆರೆಯುವ ಉಪ್ಪರಿಗೆಗಳಿಂದ ಪ್ರಕಾಶಿಸುತ್ತಿದ್ದುದೂ ಆದ ಅಯೋಧ್ಯಾಪಟ್ಟಣವನ್ನು ಚೆನ್ನಾಗಿ ಪರಿಪಾಲಿಸುತ್ತಿರುವೆಯಾ?‖೩೮-೪೨‖ರಘುಕುಲೋದ್ಭವನಾದ ಓ ಭರತನೆ! ಅಶ್ವಮೇಧಾದಿ ಯಾಗಗಳನ್ನು ಮಾಡಿದ, ಅನೇಕ ನೂರು ಪ್ರದೇಶಗಳುಳ್ಳುದೂ, ಶ್ರೀಮಂತರೂ, ಈತಿಬಾಧಾರಹಿತರೂ ಆದ ಪ್ರಜೆಗಳಿಂದ ತುಂಬಿರುವುದೂ, ದೇವಾಲಯಗಳಿಂದಲೂ, ಅರಮನೆಗಳಿಂದಲೂ, ತಟಾಕಾದಿ

ನರನಾರೀಕ ಸ್ಸಮಾಜೋತ್ಸವ ಶೋಭಿತಃ ॥ ಸುಕೃಷ್ಟಸೀಮಾ ಪಶುಮಾ
ಹಿಂಸಾಭಿಃ ಪರಿವರ್ಜಿತಃ ॥ ೪೪ ॥ ಅದೇವಮಾತೃಕೋ ರಮ್ಯ ಶ್ಚ್ವಾಪದೈಃ
ಪರಿವರ್ಜಿತಃ ॥ ಪರಿತ್ಯಕ್ತೋ ಭಯೈ ಸ್ಸರ್ವೈಃ ಖನಿಭಿ ಶ್ಚೋಪಶೋಭಿತಃ ॥೪೫॥
ವಿವರ್ಜಿತೋ ನರೈಃ ಪಾಪೈ ರ್ಮಮ ಪೂರ್ವೈ ಸ್ಸುರಕ್ಷಿತಃ ॥ ಕಚ್ಚಿಜ್ಜನಪದ
ಸ್ಸ್ಫೀತ ಸ್ಸುಖಂ ವಸತಿ ರಾಘವ! ॥ ೪೬ ॥ ಕಚ್ಚಿ ತ್ತೇ ದಯಿತಾ ಸ್ಸರ್ವೇ
ಕೃಷಿ ಗೋರಕ್ಷ ಜೀವಿನಃ ॥ ವಾರ್ತಾಯಾಂ ಸಂಶ್ರಿತಸ್ತಾತ! ಲೋಕೋಹಿ ಸುಖ
ಮೇಧತೇ ॥ ೪೭ ॥ ತೇಷಾಂ ಗುಪ್ತಿಪರೀಹಾರೈಃ ಕಚ್ಚಿ ತ್ತೇ ಭರಣಂ ಕೃತಮ್ ॥

ಹೆಂಗಸರೂ ಉಳ್ಳ, ಸಮಾಜೋತ್ಸವಶೋಭಿತಃ - ಸಭೆಸೇರಿ ಉತ್ಸವ ನಡಿಸತಕ್ಕ ಸಂತೋಷಕಾರ್ಯ ಗಳಿಂದ ಪ್ರಕಾಶಮಾನವಾಗಿರುವ, (ಗೋ) ಸಂತೆಕೂಡುವ ಉತ್ಸವಗಳಿಂದಲೂ ಹೊಳೆಯು ತ್ತಿರುವ, ಅಥವ - ಗುಂಪುಗಳಿಂದ ಕೂಡಿರುವ ಉತ್ಸವಾದಿಗಳಿಂದ ಶೋಭಾಯಮಾನವಾದ, ಸುಕೃಷ್ಟಸೀಮಾ - ಸರ್ವದಾ ಉತ್ತಿರುವ ಪ್ರದೇಶಗಳುಳ್ಳ, ಪಶುಮಾ - ಮೇಕೆ, ಗೋವು ಇವೇ ಮೊದ ಲಾದ ಪಶು ಸಮೃದ್ಧಿಯುಳ್ಳ, ಹಿಂಸಾಭಿಃ-(ಗೋ + ಮ)ಅತಿವೃಷ್ಟಿ, ಅನಾವೃಷ್ಟಿ, ಶಲಭ, ಮೂಷಕ,ಖಲ, ಅತ್ಯಾಸನ್ನರಾಜರು ಎಂಬ ಆರು ಈತಿಬಾಧೆಗಳಿಂದಲೂ, ಪರಿವರ್ಜಿತಃ-ಬಿಡಲ್ಪಟ್ಟ, ಅದೇವಮಾತೃಕಃ- ಸರಯೂನದೀ ಸಮೀಪದಲ್ಲಿರುವುದರಿಂದ ನದೀಮಾತೃಕವಾದ, ರಮ್ಯಃ - ಮನೋಹರವಾದ, ಶ್ವಾಪ ದೈಶ್ಚ - ವ್ಯಾಘ್ರಜಾತಿಭೇದಗಳಿಂದ, ಪರಿವರ್ಜಿತಃ - ಬಿಡಲ್ಪಟ್ಟ, ಸರ್ವೈಃ-ಸಮಸ್ತಗಳಾದ, ಭಯೈಃ- ಭಯಗಳಿಂದ, ಪರಿತ್ಯಕ್ತಃ - ಬಿಡಲ್ಪಟ್ಟ, ಖನಿಭಿಶ್ಚ - ಗಣಿಗಳಿಂದ, ಉಪಶೋಭಿತಃ - ಹೊಳೆಯುತ್ತಿ ರುವ, ಪಾಪೈರ್ನರೈಃ - ಪಾಪಿಷ್ಠರಿಂದ, ವಿವರ್ಜಿತಃ - ಬಿಡಲ್ಪಟ್ಟ, ಮಮ - ನನ್ನ, ಪೂರ್ವೈಃ-ಪ್ರಾಚೀನ ರಿಂದ, ಸುರಕ್ಷಿತಃ - ಪಾಲಿಸಲ್ಪಟ್ಟ, ಸ್ಫೀತಃ - ಸಮಗ್ರಮವಾದ, ಜನಪದಃ - ದೇಶವು, ಸುಖಂ - ಸೌಖ್ಯವಾಗಿ, ವಸತಿಕಚ್ಚಿತ್ - ಇದೆಯೆ? ॥ ೪೩-೪೬ ॥ ಹೇ ತಾತ - ಎಲೈ ವತ್ಸನೇ, ಕೃಷಿಗೋರಕ್ಷ ಜೀವಿನಃ - ಕೃಷಿಯಿಂದಲೂ ಗೋರಕ್ಷಣೆಯಿಂದಲೂ ಜೀವನಮಾಡುತ್ತಿರುವ, ಸರ್ವೇ - ಸಮಸ್ತರೂ, ತೇ - ನಿನಗೆ, ದಯಿತಾಃಕಚ್ಚಿತ್ - ಇಷ್ಟರಾಗಿದ್ದಾರೆಯೇ? ವಾರ್ತಾಯಾಂ - ಕ್ರಯವಿಕ್ರಯಾದಿ ವ್ಯಾಪಾರಗಳಲ್ಲಿ, ಸಂಶ್ರಿತಃ - ಆಶ್ರಯಿಸಲ್ಪಟ್ಟ, ಜನಃ - ಜನವು, ಸುಖಂ - ಸುಖವಾಗಿ, ಏಧತೇ

ಜಲಸಂಪತ್ತಿಯಿಂದಪ್ರಕಾಶಿಸುತ್ತಿರುವುದೂ,ಸಂತೋಷಭರಿತರಾದ ಸ್ತ್ರೀಪುರುಷರುಳ್ಳುದೂ, ಅನೇಕಮಂದಿ ಪ್ರಜೆಗಳು ಒಟ್ಟುಗೂಡುವ (ಸಂತೆ) ಪ್ರದೇಶಗಳಿಂದ ಶೋಭಿಸುತ್ತಿರುವುದೂ, ಚೆನ್ನಾಗಿ ಉತ್ತಿದ ಭೂಭಾಗಗಳಿಂದ ಮನೋಹರವಾದುದೂ, ಅನೇಕ ಸಹಸ್ರ ಪಶುಗಳುಳ್ಳು ದೂ, ಹಿಂಸಾಕೃತ್ಯಗಳಿಲ್ಲದೆ ಸುಭಿಕ್ಷವಾಗಿರುವುದೂ, ಕೇವಲ ಮಳೆಬೀಳುವುದರಿಂದಲೇ ಅಲ್ಲದೆ, ನದೀ ಪ್ರವಾಹಗಳಿಂದಲೂ ಬೆಳೆಯುವ ಭೂಭಾಗಗಳುಳ್ಳುದೂ, ಭಯಶೂನ್ಯವಾದುದೂ, ಪಾಪಾತ್ಮರಾದ ಮಾನವರಿಲ್ಲದುದೂ, ಚಿನ್ನ ಬೆಳ್ಳಿಯೇ ಮೊದಲಾದ ಗಣಿಗಳಿಂದುಪರಂಜಿತವಾ ದುದೂ, ನಮ್ಮ ಪೂರ್ವಿಕರಿಂದ ಚೆನ್ನಾಗಿ ಪಾಲಿಸಲಾದುದೂ ಆದ ಸಾಕೇತಸಾಂಮ್ರಾಜ್ಯವೆ ಲ್ಲವೂ ಸುರಕ್ಷಿತವಾಗಿರುವುದೆ? ॥೪೩-೪೬॥ ವತ್ಸ! ಉಳಿಮೆ, ಗೋಸಂರಕ್ಷಣೆ ಇಗವುಳಿಂದಲೂ, ಜೀವನಮಾಡುವ ವೈಶ್ಯರು ನಿನಗೆ ಪ್ರಿಯಂಕರರಾಗಿಯೇ ಇರುವರಲ್ಲವೆ? ಲೋಕವೆಲ್ಲವೂ ವರ್ತ

ರಕ್ಷ್ಯಾಹಿ ರಾಜ್ಞಾ ಧರ್ಮೇಣ ಸರ್ವೇ ವಿಷಯವಾಸಿನಃ ॥ ೪೮ ॥ ಕಚ್ಚಿತ್
ಸ್ತ್ರಿಯಸ್ಸಾಂತ್ವಯಸಿ ! ಕಚ್ಚಿತ್ತಾಸ್ತೇ ಸುರಕ್ಷಿತಾಃ ॥ ಕಚ್ಚಿನ್ನ ಶ್ರದ್ಧಧಾಸ್ಯಾಸಾಂ
ಕಚ್ಚಿದ್ಗುಹ್ಯಂ ನ ಭಾಷಸೇ ॥ ೪೯ ॥ ಕಚ್ಚಿನ್ನಾಗವನಂ ಗುಪ್ತಂ ಕಚ್ಚಿತ್ತೇ ಸಂತಿ
ಧೇನುಕಾಃ ॥ ಕಚ್ಚಿನ್ನಗಣಿಕಾಶ್ವಾನಾಂ ಕುಂಜರಾಣಾಂಚ ತೃಪ್ಯಸಿ ॥ ೫೦ ॥
ಕಚ್ಚಿದ್ದರ್ಶಯಸೇ ನಿತ್ಯಂ ಮಾನುಷಾಣಾಂ ವಿಭೂಷಿತಮ್ ॥ ಉತ್ಥಾಯೋ

ಕಚ್ಚಿತ್ - ವೃದ್ಧಿಗೊಳ್ಳುತ್ತಿದೆಯೇ? ॥ ೪೭ ॥ ತೇಷಾಂ - ಆ ವರ್ತಕಜನರ, ಗುಪ್ತಿಪರೀಹಾರೈಃ - ಇಷ್ಟಪ್ರಾಪಣ, ಅನಿಷ್ಟಪರಿಹಾರಗಳಿಂದ, ಭರಣಂ - ಸಂರಕ್ಷಣೆಯು, ತೇ - ನಿನ್ನಿಂದ, ಕೃತಂ ಕಚ್ಚಿತ್ - ಮಾಡಲಾಗಿರುವುದೇ? ರಾಜ್ಞಾ - ಅರಸನಿಂದ, ವಿಷಯವಾಸಿನಃ - ದೇಶವಾಸಿಗಳಾದ, ಸರ್ವೇ - ಸಮಸ್ತರು, ಧರ್ಮೇಣ - ಧರ್ಮದಿಂದ, ರಕ್ಷ್ಯಾಹಿ - ಸಂರಕ್ಷಣೆಮಾಡತಕ್ಕವರಷ್ಟೆ. ॥೪೮॥ ಸ್ತ್ರಿಯಃ - ಸ್ತ್ರೀಯರನ್ನು, ಸಾಂತ್ವಯಸಿಕಚ್ಚಿತ್ - ಸಮಾಧಾನಗೊಳಿಸುತ್ತಿರುವೆಯಾ? ತಾಃ - ಆ ಸ್ತ್ರೀಯರು, ತೇ - ನಿನ್ನಿಂದ, ಸುರಕ್ಷಿತಾಃಕಚ್ಚಿತ್ - ಉಪಚಾರಾದಿಗಳಲ್ಲಿ ದೋಷಗಳಿಲ್ಲದೆ ಸಂರಕ್ಷಣೆ ಮಾಡಲ್ಪಡುತ್ತಾರೆಯೇ, ಆಸಾಂ - ಈ ಸ್ತ್ರೀಯರ, ವಚನಂ - ಮಾತನ್ನು, ನಶ್ರದ್ಧಧಾಸಿ - ಯಥಾರ್ಥಬುದ್ಧಿಯಿಂದ ಕೇಳದೇ ಇರುವೆಯಷ್ಟೆ, (ತಾಭ್ಯಃ - ಆ ಹೆಂಗಸರಿಗೆ,) ಗುಹ್ಯಂ - ರಹಸ್ಯವನ್ನು, ನಭಾಷಸೇಕಚ್ಚಿತ್ - ಹೇಳದಿರುವೆಯಷ್ಟೆ. ॥ ೪೯ ॥ ನಾಗವನಂ - ಗಜೋತ್ಪತ್ತಿಸ್ಥಾನಭೂತವಾದ ವನವು, ಗುಪ್ತಂಕಚ್ಚಿತ್ - ಸಂರಕ್ಷಣೆಮಾಡಲ್ಪಡುತ್ತದೆಯೇ, ಧೇನುಕಾಃ-ಹೆಣ್ಣಾನೆಗಳು, ತೇ - ನಿನಗೆ, ಸಂತಿಕಚ್ಚಿತ್ - ಇವೆಯೇ, ಗಣಿಕಾಶ್ವಾನಾಂ - ಹೆಣ್ಣಾನೆಗಳ, ಕುದುರೆಗಳ, ಕುಂಜರಾಣಾಂ - ಗಂಡಾನೆಗಳ ಸಂಪಾದನ ವಿಷಯದಲ್ಲಿ, ನತೃಪ್ಯಸಿಕಚ್ಚಿತ್ - ತೃಪ್ತಿಹೊಂದದಿರುವೆಯಾ ? ॥ ೫೦ ॥ ಹೇ ರಾಜಪುತ್ರ - ಎಲೈ ಅರಸುಕುವರನೇ, ಪೂರ್ವಾಹ್ಣೇ - ಪ್ರಾತಃಕಾಲದಲ್ಲಿ, ಉತ್ಥಾಯೋತ್ಥಾಯ - ಎಚ್ಚರಗೊಂಡೊಡನೆಯೆ, ಮಾನುಷಾಣಾಂ - ಮನುಷ್ಯರಿಗೆ, ಮಹಾಪಥೇ - ಸಭೆ

ಕದಿಂದ ಸುಖಗಳನ್ನು ಹೊಂದುತ್ತದೆ. ಆದುದರಿಂದ ನಿನ್ನ ದೇಶದಲ್ಲಿ ವರ್ತಕವು ಚೆನ್ನಾಗಿ ನಡಿಯುತ್ತಿರುವುದೇ? ವ್ಯಾಪಾರಿಗಳಿಗೊದಗುವ ಅನಿಷ್ಟಗಳನ್ನು ಹೋಗಲಾಡಿಸಿ,ಅವರಿಗೆ ಸಂತೋಷವನ್ನುಂಟುಮಾಡಿ ರಾಜ್ಯವನ್ನು ಚೆನ್ನಾಗಿ ಪರಿಪಾಲಿಸುತ್ತಿರುವೆಯಾ? ತಮ್ಮ; ಭರತಕುಮಾರ! ರಾಜನಾದವನು ತನ್ನ ಪ್ರಜೆಗಳನ್ನೀರೀತಿಯಾಗಿಯೇ ಪೋಷಣೆಮಾಡಬೇಕು. ನೀನೂ ಹಾಗೆಯೇ ಪೋಷಿಸುತ್ತಿರುವೆಯಾ ? ಮಗುವೆ ! ಸ್ತ್ರೀಯರನ್ನು ಚೆನ್ನಾಗಿ ಗೌರವಿಸುತ್ತಿರುವೆಯಾ ? ಸ್ತ್ರೀಯರೆಲ್ಲರನ್ನೂ, ಅಪವಾದಗ್ರಸ್ತರಾಗದಂತೆ, ಜಾಗರೂಕತೆಯಿಂದ ಕಾಪಾಡುತ್ತಿರುವೆಯಾ ? ಸ್ತ್ರೀವಾಕ್ಯವಶನಾಗಬಾರದೆಂಬುದನ್ನು ನೀನರಿತಿರುವೆಯಾ ? ಸ್ತ್ರೀಯರಿಗೆ ರಹಸ್ಯವೃತ್ತಾಂತಗಳನ್ನು ಹೇಳಬಾರದೆಂಬುದನ್ನು ನೀನು ತಿಳಿದಿದ್ದೀಯಾ ? ॥೪೭-೪೯॥ ಎಲೈ ಭರತನೆ ! ಹೆಣ್ಣಾನೆಗಳೂ, ಗಂಡಾನೆಗಳೂ ವಾಸಮಾಡುವ ವನವನ್ನು ಸಂರಕ್ಷಿಸುತ್ತಿರುವೆಯಾ? ಹೆಣ್ಣಾನೆಗಳಿಗೂ, ನಾಡಿನಕುದುರೆಗಳಿಗೂ ತೃಪ್ತಿಯಾಗುವಂತೆ ಆಹಾರಾದಿಗಳನ್ನು ಕೊಡುತ್ತಿರುವೆಯಾ ? ಎಲೈ ರಾಜಪುತ್ರನೆ ! ಪ್ರತಿದಿನದ ಪ್ರಾತಃಕಾಲದಲ್ಲಿಯೂ ಎಚ್ಚೆತ್ತವನಾಗಿ ರಾಜಮಾರ್ಗದಲ್ಲಿ ಬಿಜಮಾಡುವ ನಿನ್ನ ದರ್ಶನವನ್ನು ಪ್ರಜೆಗಳೆಲ್ಲರೂ ಹೊಂದು

ತ್ಥಾಯ ಪೂರ್ವಾಹ್ಣೇ ರಾಜಪುತ್ರ! ಮಹಾಪಥೇ ॥ ೫೧ ॥ ಕಚ್ಚಿನ್ನ ಸರ್ವೇ ಕರ್ಮಾಂತಾಃ ಪ್ರತ್ಯಕ್ಷಾ ಸ್ತೇಽವಿಶಂಕಯಾ ॥ ಸರ್ವೇವಾ ಪುನರುತ್ಸೃಷ್ಟಾ ಮಧ್ಯಮೇ ವಾತ್ರ ಕಾರಣಂ ॥ ೫೨ ॥ ಕಚ್ಚಿತ್ಸರ್ವಾಣಿ ದುರ್ಗಾಣಿ ಧನಧಾನ್ಯಾ ಯುಧೋದಕೈಃ ॥ ಯಂತ್ರೈಶ್ಚ ಪರಿಪೂರ್ಣಾನಿ ತಥಾ ಶಿಲ್ಪಿ ಧನುರ್ಧರೈಃ ॥೫೩॥ ಆಯ ಸ್ತೇ ವಿಪುಲಃ ಕಚ್ಚಿತ್ ಕಚ್ಚಿದಲ್ಪತರೋ ವ್ಯಯಃ ॥ ಅಪಾತ್ರೇಷು ನ ತೇ ಕಚ್ಚಿತ್ ಕೋಶೋ ಗಚ್ಛತಿ ರಾಘವ! ॥ ೫೪ ॥ ದೇವತಾರ್ಥೇಚ ಪಿತ್ರರ್ಥೇ

ಯಲ್ಲಿ, ವಿಭೂಷಿತಂ - ಅಲಂಕೃತನಾದ, (ಆತ್ಮಾನಂ-ತನ್ನನ್ನು,) ನಿತ್ಯಂ-ಯಾವಾಗಲೂ, ದರ್ಶಯಸೇ ಕಚ್ಚಿತ್ - ದರ್ಶನಕೊಡುತ್ತಿರುವೆಯಾ? ॥ ೫೧ ॥ ಕರ್ಮಾಂತಾಃ - ಕಾಮಗಾರಿ ಕೆಲಸಮಾಡುತ್ತಿರುವ, ಸರ್ವೇ - ಸಮಸ್ತರೂ, ಅವಿಶಂಕಯಾ - ಭಯರಾಹಿತ್ಯದಿಂದ, ತೇ - ನಿನಗೆ, ಪ್ರತ್ಯಕ್ಷಾಃ - ಇದಿರಾಗಿ ನಿಂತಿರುವರು, ನಕಚ್ಚಿತ್ - ಇರುವುದಿಲ್ಲವಷ್ಟೆ, ತೇಸರ್ವೇ - ಅವರೆಲ್ಲರೂ, ಪುನಃ - ಮತ್ತು, ಉತ್ಸೃಷ್ಟಾನಕಚ್ಚಿತ್ - ಬಿಡಲ್ಪಟ್ಟವರಾಗಲಿಲ್ಲವೇ, ಅತ್ರ - ಈ ಕಾಮಗಾರಿಮಾಡುವ ವಿಷಯದಲ್ಲಿ, ಮಧ್ಯಮೇವ - ನೋಡದಿರುವದಕ್ಕೂ ನೋಡುವದಕ್ಕೂ ಮಧ್ಯಾವಸ್ಥೆಯೇ, ಕಾರಣಂ - ಫಲಸಾಧನವು. ॥ ೫೨ ॥ ಸರ್ವಾಣಿ - ಸಮಸ್ತಗಳಾದ, ದುರ್ಗಾಣಿ - ದುರ್ಗಪ್ರದೇಶಗಳು, (ಗೊ) ಉದಕಪ್ರಾಯ ಭೂಮಿಗಳು, ಗಿಡಗಳೇಹೆಚ್ಚಾಗಿರುವಭೂಮಿಗಳು, ಐರಿಣಂ - ಬಯಲಾಗಿರುವ ಭೂಮಿಯು, ಧಾನ್ವನಂ - ಧಾನ್ವನವೆಂಬ ನೆಲವು, ಇವು ಐದೂ ದುರ್ಗಗಳೆನಿಸಿಕೊಳ್ಳುತ್ತವೆ; ಈ ಐದೂ, ಧನಧಾನ್ಯಾಯುಧೋದಕೈಃ-ಧನದಿಂದಲೂ, ಧಾನ್ಯದಿಂದಲೂ, ಆಯುಧಗಳಿಂದಲೂ, ನೀರಿನಿಂದಲೂ, ಯಂತ್ರೈಃ-ಜಲಯಂತ್ರಾದಿಗಳಿಂದಲೂ, ತಥಾ - ಹಾಗೆಯೇ, ಶಿಲ್ಪಿಧನುರ್ಧರೈಃ - ಶಿಲ್ಪಿಗಳಿಂದಲೂ ಧನುರ್ಧಾರಿಗಳಿಂದಲೂ, ಪರಿಪೂರ್ಣಾನಿಕಚ್ಚಿತ್ - ತುಂಬಿರುವುವೇ. ॥ ೫೩ ॥ ತೇ - ನಿನಗೆ, ಆಯಃ - ಧನಾದಾಯವು, ವಿಪುಲಃಕಚ್ಚಿತ್ - ಹೆಚ್ಚಾಗಿರುವುದೋ, ವ್ಯಯಃ - ಖರ್ಚು, ಅಲ್ಪತರಃಕಚ್ಚಿತ್ - ಸ್ವಲ್ಪವಾಗಿರುವುದಷ್ಟೆ, ಹೇ ರಾಘವ - ಎಲೈ ಭರತನೇ, ತೇ - ನಿನ್ನ, ಕೋಶಃ - ಬೊಕ್ಕಸವು, ಅಪಾತ್ರೇಷು - ಅಯೋಗ್ಯರಲ್ಲಿ, ನಗಚ್ಛತಿಕಚ್ಚಿತ್ - ವಿನಿಯೋಗವಾಗದಿರುವುದಿಲ್ಲವೆ. ॥೫೪॥ ತೇ - ನಿನ್ನ,

ತ್ತಿರುವರಷ್ಟೆ? ಅಲ್ಲದೆ ರಾಜಚಿಹ್ನೆಗಳೆಲ್ಲವನ್ನೂ ಚೆನ್ನಾಗಿ ಅಲಂಕರಿಸಿಕೊಂಡು, ರಾಜಸಭಾಪ್ರವೇಶಮಾಡಿ, ಸಭಾಸದರೆಲ್ಲರಿಗೂ ದರ್ಶನಕೊಡುತ್ತಿರುವೆಯಲ್ಲವೆ? ನಿನ್ನ ಕೈಕೆಳಗೆ ಕೆಲಸ ಮಾಡುವ ಅಧಿಕಾರಿಗಳೆಲ್ಲರೂ ನಿನ್ನೆದುರಿಗೆ ಬಂದು ನಿಂತುಕೊಳ್ಳಲು ಹೆದುರುತ್ತಿರುವರಲ್ಲವೆ? ಅಧಿಕಾರಿಗಳೀರೀತಿಯಿದ್ದರೆ ರಾಜ್ಯದಲ್ಲಿನ ಸಕಲ ಕಾರ್ಯಗಳೂ ವಿತರಣೆಯಿಂದ ಜರಗುತ್ತವೆ. ಆದುದರಿಂದ ಆ ಅಧಿಕಾರಿಗಳಿಗೆ ಯಾವ ಯಾವ ಸಮಯಗಳಲ್ಲಿ ದರ್ಶನವನ್ನೀಯಬೇಕೋ ಆಯಾ ಕಾಲಗಳಲ್ಲಿಯೇ ದರ್ಶನವನ್ನೀಯುತ್ತಿರುವೆಯಲ್ಲವೆ? ॥೫೦-೫೨॥ ಅಧಿಕಾರಿಗಳಿಗೆ ದರ್ಶನವನ್ನು ಕೊಡದಿದ್ದರೂ ಹಾನಿಯುಂಟಾಗುತ್ತದೆ; ಆದುದರಿಂದ ಕಂಡೂ ಕಾಣದಂತೆ ಸಂಚರಿಸುತ್ತಿರಬೇಕು. ಒತೆಯನಾವಾಗ ಬಂದು, ಏನಾಜ್ಞಾಪಿಸುವನೋ ಎಂಬ ಭಯವು ಅಧಿಕಾರಿಗಳ ಮನಸ್ಸಿನಲ್ಲಿ ಬೇರೂರಿರಬೇಕು. ಹೀಗಿದ್ದರೇನೇ ರಾಜನು ನಿರ್ವಾಹಶಕ್ತಿಯುಳ್ಳವನೆನಿಸುತ್ತಾನೆ. ಇಲ್ಲವಾದರೆ ಎಲ್ಲರಿಗೂ ರಾಜನಭಯವು ದೂರಸಾಗುತ್ತದೆ. ಆದ

ಬ್ರಾಹ್ಮಣಾಭ್ಯಾಗತೇಷುಚ ॥ ಯೋಧೇಷು ಮಿತ್ರವರ್ಗೇಷು ಕಚ್ಚಿದ್ಗಚ್ಛತಿ ತೇ ವ್ಯಯಃ ॥೫೫॥ ಕಚ್ಚಿದಾರ್ಯೋ ವಿಶುದ್ಧಾತ್ಮಾ ಕ್ಷಾರಿತ ಶ್ಚೋರಕರ್ಮಣಾ॥ ಅಪೃಷ್ಟ ಶ್ಶಾಸ್ತ್ರಕುಶಲೈ ರ್ನಲೋಭಾ ದ್ವಧ್ಯತೇ ಶುಚಿಃ ॥ ೫೬ ॥ ಗೃಹೀತ ಶ್ಚೈವ ಪೃಷ್ಟಶ್ಚ ಕಾಲೇ ದೃಷ್ಟ ಸ್ಸಕಾರಣಃ ॥ ಕಚ್ಚಿನ್ನ ಮುಚ್ಯತೇ ಚೋರೋ ಧನಲೋಭಾ ನ್ನರರ್ಷಭ! ॥ ೫೭ ॥ ವ್ಯಸನೇ ಕಚ್ಚಿದಾಢ್ಯಸ್ಯ ದುರ್ಗತಸ್ಯ ಚ

ವ್ಯಯಃ-ಧನವ್ಯಯವು, ದೇವತಾರ್ಥೇ-ದೇವತಾನಿಮಿತ್ತವಾಗಿಯೂ, ಪಿತ್ರರ್ಥೇ ಪಿತೃದೇವತೆಗಳಿಗೋಸುಗವೂ, ಬ್ರಾಹ್ಮಣಾಭ್ಯಾಗತೇಷುಚ - ಬ್ರಾಹ್ಮಣರಲ್ಲಿಯೂ, ಅತಿಥಿಅಭ್ಯಾಗತರಲ್ಲಿಯೂ, ಯೋಧೇಷು - ಭಟರ ವಿಷಯವಾಗಿಯೂ, ಮಿತ್ರವರ್ಗೇಷು - ಸ್ನೇಹಿತರವಿಷಯವಾಗಿಯೂ, ಗಚ್ಛತಿಕಚ್ಚಿತ್ - ವ್ಯಯವಾಗುತ್ತಿರುವುದಲ್ಲವೆ. ॥ ೫೫ ॥ ವಿಶುದ್ಧಾತ್ಮಾ - ಪರಿಶುದ್ಧ ಸ್ವಭಾವವುಳ್ಳ, ಶುಚಿಃ - ಕಾಯಕ, ವಾಚಕ, ಮಾನಸಿಕವೆಂಬ ಕರಣತ್ರಯದಲ್ಲಿಯೂ ಶುದ್ಧವಾದ, ಆರ್ಯಃ-ಸಜ್ಜನನು, ಚೋರಕರ್ಮಣಾ-ಚೋರಾದಿ ವ್ಯಾಪಾರದಿಂದ, ಕ್ಷಾರಿತಃ-ಅಪವಾದಗ್ರಸ್ತನನ್ನಾಗಿ ಮಾಡಲ್ಪಡಲು, ಶಾಸ್ತ್ರಕುಶಲೈಃ-ಧರ್ಮಶಾಸ್ತ್ರದಲ್ಲಿ ಬುದ್ಧಿವಂತರಾದವರಿಂದ, ಅಪೃಷ್ಟಃ - ಕೇಳಲ್ಪಡದೇ, ಲೋಭಾತ್ - ಧನಲೋಭದಿಂದ, ನವಧ್ಯತೇಕಚ್ಚಿತ್ - ಹೊಡೆಯಲ್ಪಡಲಿಲ್ಲವೋ. ॥ ೫೬ ॥ ಹೇ ನರರ್ಷಭ - ಎಲೈ ಪುರುಷಶ್ರೇಷ್ಠನೇ, ಗೃಹೀತಶ್ಚೈವ - ಹಿಡಿಯಲ್ಪಟ್ಟ, ಕಾಲೇ-ಕಳ್ಳತನ ಮಾಡಿದಾಗಲೇ, ದೃಷ್ಟಃ-ಕಾಣಲ್ಪಟ್ಟ, ಸಕಾರಣಃ-ಕಾರಣದಿಂದೊಡಗೂಡಿದ, ಚೋರಃ - ಕಳ್ಳನು, ಧನಲೋಭಾತ್-ಧನಾಕಾಂಕ್ಷೆಯಿಂದ, ನಮುಚ್ಯತೇ ಕಚ್ಚಿತ್ - ಬಿಡಲ್ಪಡಲಿಲ್ಲವಷ್ಟೆ. ॥ ೫೭ ॥ ಹೇ ರಾಘವ - ಎಲೈ ಭರತನೇ, ಆಢ್ಯಸ್ಯ - ಧನಿಕನಿಗೂ, ದುರ್ಗತಸ್ಯಚ - ದರಿದ್ರನಿಗೂ, ವ್ಯಸನೇ - ವಿವಾದವುಂಟಾಗಲು, ಬಹುಶ್ರುತಾಃ - ಅನೇಕ ಶಾಸ್ತ್ರಜ್ಞರಾದ, ತವ - ನಿನ್ನ, ಅಮಾತ್ಯಾಃ - ಮಂತ್ರಿಗಳು, ವಿರಾಗಾಃ - ಧನೇಚ್ಛಾರಹಿತರಾಗಿ,

ಕಾರಣ ಎಲೈ ಭರತಕುಮಾರನೆ! ನೀನು ಈ ವಿಷಯದಲ್ಲಿ ಜಾಗರೂಕನಾಗಿರುವೆಯಾ? ಭರತಾ! ನಿನ್ನ ದುರ್ಗಪ್ರದೇಶಗಳೆಲ್ಲವೂ, ಧನಧಾನ್ಯಗಳಿಂದಲೂ, ಉದಕಸಂಪತ್ತಿಯಿಂದಲೂ, ತುಂಬಿರುವುವೆ ? ಓ ರಘುಕುಲೋದ್ಭವನೆ ! ನಿನಗೆ ಲಾಭವೇ ಅಧಿಕವಾಗಿರುವುದಲ್ಲವೆ? ನಿನ್ನ ಧನವು ಅಪಾತ್ರರಲ್ಲಿ ಎಳ್ಳಷ್ಟೂ ವಿನಿಯೋಗವಾಗುತ್ತಿಲ್ಲವಷ್ಟೆ ! ನೀನು ನಿನ್ನ ಧನವನ್ನು, ದೇವತೆಗಳು, ಪಿತೃದೇವತೆಗಳು, ಅತಿಥಿ ಅಭ್ಯಾಗತರು, ಸದ್ಬ್ರಾಹ್ಮಣರು, ಸ್ನೇಹಿತರು ಇವರೇವೊದಲಾದವರಲ್ಲಿಯೇ ವ್ಯಯಮಾಡುತ್ತಿರುವೆಯೆಂದು ತಿಳಿಯುತ್ತೇನೆ.॥೫೪-೫೫॥ಅಯ್ಯಾಭರತನೆ! ಪರಿಶುದ್ಧಮನಸ್ಕನೂ, ಮನೋವಾಕ್ಕಾಯ ಕರ್ಮಗಳಿಂದ ಶುದ್ಧನೂ ಆದ ಮಾನವನ ಮೇಲೆ ಇಲ್ಲದ ಸಲ್ಲದ ಕಳ್ಳತನವನ್ನು ಹೊರಿಸಿ, ದುರ್ಮಾರ್ಗರಾದವರು ನಿನ್ನ ಬಳಿಗೈತಂದರೆ ನೀತಿಶಾಸ್ತ್ರಗಳನ್ನು ಬಲ್ಲವರಿಂದ ಚೆನ್ನಾಗಿ ಪರೀಕ್ಷೆಮಾಡಿಸದೆ, ಲಂಚದಮೇಲಣ ಆಶೆಯಿಂದ ಮನಸ್ಸು ಬಂದಂತೆ ಮರಣದಂಡನೆಯೇ ಮೊದಲಾದುವನ್ನು ಮಾಡುವುದಿಲ್ಲವಷ್ಟೆ ? ಹಿಡಿದುಕೊಳ್ಳಲಾದವನೂ, ಕಳ್ಳತನವನ್ನು ಮಾಡುತ್ತಿರುವ ಸಮಯದಲ್ಲಿಯೇ ನೋಡಲಾದವನೂ, "ಕಳ್ಳತನವನ್ನುಮಾಡಿದೆಯಾ ?" ಎಂದು ಕೇಳಿದಾಗ "ಮಾಡಿದೆನೆಂದು" ಒಪ್ಪಿಕೊಳ್ಳುವವನೂ, ಸಾಕ್ಷಿವಿಚಾರಣೆಯಲ್ಲಿಯೂ ಕಳ್ಳನೆಂದೇ ನಿರ್ದೇಶಿಸಲ್ಪಟ್ಟ

ರಾಘವ! ॥ ಅರ್ಥಂ ವಿರಾಗಾಃ ಪಶ್ಯಂತಿ ತವಾಮಾತ್ಯಾ ಬಹುಶ್ರುತಾಃ ॥೫೮॥ ಯಾನಿ ಮಿಥ್ಯಾಭಿಶಸ್ತಾನಾಂ ಪತಂತ್ಯಸ್ರಾಣಿ ರಾಘವ! ॥ ತಾನಿ ಪುತ್ರ ಪಶೂನ್ ಘ್ನಂತಿ ಪ್ರೀತ್ಯರ್ಥ ಮನುಶಾಸತಃ ॥ ೫೯ ॥ ಕಚ್ಚಿದ್ವೃದ್ಧಾಂಶ್ಚ ಬಾಲಾಂಶ್ಚ ವೈದ್ಯಮುಖ್ಯಾಂಶ್ಚ ರಾಘವ! ॥ ದಾನೇನ ಮನಸಾ ವಾಚಾ ತ್ರಿಭಿರೇತೈರ್ಬುಭೂಷಸೇ ॥ ೬೦ ॥ ಕಚ್ಚಿ ದ್ಗುರೂಂಶ್ಚ ವೃದ್ಧಾಂಶ್ಚ ತಾಪಸಾನ್ ದೇವತಾ

ಅರ್ಥಂ - ವ್ಯವಹಾರವನ್ನು, ಪಶ್ಯಂತಿಕಚ್ಚಿತ್ - ನೋಡುತ್ತಾರೆಯೇ. ॥ ೫೮ ॥ ಹೇ ರಾಘವ - ಎಲೈ ಭರತನೇ, ಮಿಥ್ಯಾಭಿಶಸ್ತಾನಾಂ - ಸುಳ್ಳು ಅಪವಾದಗಳಿಂದ ತರಲ್ಪಟ್ಟಜನರ, ಯಾನ್ಯಸ್ರಾಣಿ - ಯಾವ ಕಂಬನಿಗಳುಂಟೋ, ತಾನಿ - ಅವು, ಅರ್ಥಂ - ವ್ಯವಹಾರವನ್ನೂ, ಅನುಶಾಸತಃ- ಪರಿಷ್ಕಾರಮಾಡಿದವನ, ಪುತ್ರಪಶೂನ್ - ಮಕ್ಕಳನ್ನು ಪಶುಗಳನ್ನು, ಘ್ನಂತಿ - ಹೊಡಿಯುತ್ತವೆ. ॥೫೯॥ ಹೇ ರಾಘವ - ಎಲೈ ಭರತನೇ, ವೃದ್ಧಾಂಶ್ಚ - ಮುದುಕರನ್ನೂ, ಬಾಲಾಂಶ್ಚ ಹುಡುಗರನ್ನೂ, ದಾನೇನ - ದ್ರವ್ಯದಾನದಿಂದಲೂ, ಮನಸಾ - ಮನಸ್ಸಿನಿಂದಲೂ, ವಾಚಾ-ಒಳ್ಳೆಯ ಮಾತಿನಿಂದಲೂ, ಏತೈಸ್ತ್ರಿಭಿಃ - ಈ ಮೂರರಿಂದಲೂ, ಬುಭೂಷಸೇಕಚ್ಚಿತ್ - ಸ್ವಾಧೀನಗೊಳಿಸಿಕೊಳ್ಳಲು ಇಚ್ಛಿಸುತ್ತಿರುವೆಯಾ? ॥ ೬೦ ॥ ಗುರೂನ್ - ಗುರುಗಳನ್ನೂ, ವೃದ್ಧಾಂಶ್ಚ - ಮುದುಕರನ್ನೂ, ತಾಪಸಾನ್ - ತಪಸ್ವಿಗಳನ್ನೂ, ದೇವತಾತಿಥೀನ್ - ದೇವತೆಗಳನ್ನೂ ಅತಿಥಿಗಳನ್ನೂ, ಚೈತ್ಯಾಂಶ್ಚ - ನಾಲ್ಕುದಾರಿಗಳು ಸೇರಿರುವ ದೊಡ್ಡಮಾರ್ಗದಲ್ಲಿ ಹುಟ್ಟಿರುವ ಗಿಡಗಳನ್ನೂ, ಸಿದ್ಧಾರ್ಥಾಂಶ್ಚ - ನಿಷ್ಪ್ರಯೋಜನವುಳ್ಳ, ಸರ್ವಾನ್‌ಬ್ರಾಹ್ಮಣಾಂಶ್ಚ - ಸಮಸ್ತ ಬ್ರಾಹ್ಮಣರನ್ನು ಕುರಿತು, ನಮಸ್ಯಸಿಕಚ್ಚಿತ್ - ನಮಸ್ಕಾರ

ವನೂ ಆದ ಚೋರನನು ಲಂಚದ ಮೇಲಣ ಆಶೆಯಿಂದ ಶಿಕ್ಷಿಸಿದೆ ಬಿಡುತ್ತಿಲ್ಲಸಷ್ಟೆ; ಅಯ್ಯಾ ಭರತನೆ! ದರಿದ್ರನಿಗೂ, ಧನಿಕನಿಗೂ ವಿವಾದವುಂಟಾಗಿ, ಸಭೆಗೆ ಬಂದಾಗ ಸಕಲ ಶಾಸ್ತ್ರವೇತ್ತರಾದ ನಿನ್ನ ಮಂತ್ರಿಗಳು ಧನದಲ್ಲಿನ ಆಶೆಯನ್ನು ತೊರೆದು, ಅವರಿಬ್ಬರನ್ನೂ ಪಕ್ಷಪಾತವಿಲ್ಲದೆ ವಿಚಾರಿಸಿ ಅವರೀರ್ವರ ವಿವಾದವನ್ನೂ ನ್ಯಾಯವರಿತು ತೀರ್ಮಾನಿಸುತ್ತಿರುವರಲ್ಲವೆ? ಅಯ್ಯಾ ರಘುಕುಲೋದ್ಭವನೇ! ಒಂದು ವೇಳೆ ಯಾವ ಅಪರಾಧವನ್ನೂ ಮಾಡದ ಪ್ರಜೆಗಳಲ್ಲಿ ಮಿಥ್ಯಾಪವಾದವನು, ಹೊರಿಸಿ, ಯುಕ್ತಾ ಯುಕ್ತ ವಿಚಾರಶೂನ್ಯತೆಯಿಂದ ಕೇವಲ ಆತ್ಮೋಪಭೋಗಕ್ಕಾಗಿಯೇ ದಂಡನಾದಿಗಳನ್ನು ವಿಧಿಸಿದರೆ ಆರೀತಿ ವಿಧಿಸಿದುದರಿಂದ ಉಂಟಾಗುವ ಪ್ರಜೆಗಳ ಕಣ್ಣೀರು ರಾಜಸಂತತಿಯನ್ನೂ ಪಶುಗಳೇಮೊದಲಾದ ಧನಸಂಪತ್ತಿಯನ್ನೂ ನಿರ್ಮೂಲಗೊಳಿಸುತ್ತದೆಯೆಂದುತಿಳಿ. ಈರೀತಿಯಾಗಿ ಎಂದಿಗೂ ರಾಜ್ಯಭಾರವನ್ನು ಮಾಡಬಾರದು. ಅಭಿಮತವಸ್ತು ಪ್ರದಾನದಿಂದಲೂ, ಮೈತ್ರಿಯಿಂದಲೂ, ಸಾಮೋಕ್ತಿಗಳಿಂದಲೂ, ಗುರುಗಳು, ವೃದ್ಧರು, ಬಾಲಕರು, ವೈದ್ಯಶ್ರೇಷ್ಠರು ಇವರೇ ಮೊದಲಾದವರನ್ನು ವಶಪಡಿಸಿಕೊಳ್ಳಬೇಕು. ॥೫೬-೬೦॥ ವಿದ್ಯಾಗುರು, ಪುರೋಹಿತನ, ವೃದ್ಧ ತಪಸ್ವಿಗಳ, ದೇವತೆಗಳು ವಾಸಮಾಡುವ ಚತುಷ್ಪಥಗಳಲ್ಲಿನ ವೃಕ್ಷಗಳು, ದೇವತೆಗಳೂ, ಅತಿಥಿಗಳೂ ಐಹಿಕಾಮುಷ್ಮಿಕ ಪ್ರಯೋಜನಗಳನ್ನು ಪಡೆದಿರುವ ಸದ್ಬ್ರಾಹ್ಮಣರು, ಇವರೆಲ್ಲರನ್ನೂ ವಂದನಾದಿ

ತಿಥೀನ್ ॥ ಚೈತ್ಯಾಂಶ್ಚ ಸರ್ವಾನ್ ಸಿದ್ಧಾರ್ಥಾನ್ ಬ್ರಾಹ್ಮಣಾಂಶ್ಚ ನಮಸ್ಯಸಿ॥೬೧॥ ಕಚ್ಚಿದರ್ಥೇನ ವಾ ಧರ್ಮಮರ್ಥಂ ಧರ್ಮೇಣವಾ ಪುನಃ ॥ ಉಭೌವಾ ಪ್ರೀತಿ ಲೋಭೇನ ಕಾಮೇನಚ ನ ಬಾಧಸೇ ॥೬೨॥ ಕಚ್ಚಿದರ್ಥಂಚ ಧರ್ಮಂಚ ಕಾಮಂಚ ಜಯತಾಂ ವರ! ॥ ವಿಭಜ್ಯ ಕಾಲೇ ಕಾಲಜ್ಞ ಸರ್ವಾನ್ ವರದ! ಸೇವಸೇ ॥೬೩॥ ಕಚ್ಚಿತ್ತೇ ಬ್ರಾಹ್ಮಣಾ ಶ್ಶರ್ಮ ಸರ್ವ ಶಾಸ್ತ್ರಾರ್ಥ ಕೋವಿದಾಃ॥

ಮಾಡುತ್ತಿರುವೆಯಾ? ॥೬೧॥ ಅರ್ಥೇನ - ದ್ರವ್ಯದಿಂದ, ಧರ್ಮಂ - ಧರ್ಮವನ್ನು, ನಬಾಧಸೇ ಕಚ್ಚಿತ್ - ಕೆಡಿಸಿಕೊಳ್ಳದೇ ಇದ್ದೀಯಾ? ಧರ್ಮೇಣ - ಧರ್ಮದಿಂದ, ಅರ್ಥಂವಾಪುನಃ - ಧನವನ್ನೇ ಆಗಲಿ, ನಬಾಧಸೇಕಚ್ಚಿತ್ - ಹೋಗಲಾಡಿಸಿಕೊಳ್ಳದೇ ಇರುವೆಯಾ? ಉಭೌವಾ - ಧರ್ಮಾರ್ಥಗಳೆರಡನ್ನೂ, ಪ್ರೀತಿಲೋಭೇನ - ಸುಖಾಭಿಲಾಷೆಯಿಂದಲೂ, ಕಾಮೇನಚ - ಕಾಮಗುಣದಿಂದಲೂ, ನಬಾಧಸೇಕಚ್ಚಿತ್ - ನಾಶಮಾಡಿಕೊಳ್ಳದೇ ಇರುವೆಯಾ? ॥೬೨॥ ಹೇ ಜಯತಾಂವರ - ಎಲೈ ಜಯಶೀಲರಲ್ಲಿ ಶ್ರೇಷ್ಠನಾದವನೇ, ಹೇ ಕಾಲಜ್ಞ-ಎಲೈ ಕಾಲಧರ್ಮವನ್ನು ತಿಳಿದವನೇ, ಹೇ ವರದ-ಎಲೈ ವರಪ್ರದಾಯಕನೇ, ಕಾಲೇ - ಕಾಲದಲ್ಲಿ, ಧರ್ಮಂಚ - ಧರ್ಮವನ್ನೂ, ಅರ್ಥಂಚ - ಅರ್ಥವನ್ನೂ, ಕಾಮಂಚ - ಕಾಮವನ್ನೂ, ವಿಭಜ್ಯ-ವಿಭಾಗಮಾಡಿ, ಸರ್ವಾನ್ - ಸಮಸ್ತಗಳನ್ನೂ, ಸೇವಸೇಕಚ್ಚಿತ್-ಅನುಷ್ಠಾನ ಮಾಡುತ್ತಿರುವೆಯಾ? ॥೬೩॥ ಹೇ ಮಹಾಪ್ರಾಜ್ಞ - ಎಲೈ ಬುದ್ಧಿಶಾಲಿಯೇ, ಸರ್ವಶಾಸ್ತ್ರಾರ್ಥಕೋವಿದಾಃ - ಸಮಸ್ತ ಶಾಸ್ತ್ರಗಳ ಅರ್ಥಕರಣದಲ್ಲಿ ಕುಶಲರಾದ, ಬ್ರಾಹ್ಮಣಾಃ - ಬ್ರಾಹ್ಮ

ಗಳಿಂದ ಸತ್ಕರಿಸತಕ್ಕುದು. ॥೬೧॥ ಭರತಕುಮಾರಾ! ಧರ್ಮವನ್ನಾರ್ಜಿಸಲು ತಕ್ಕ ಕಾಲವಾದ ಪೂರ್ವಾಹ್ಣದಲ್ಲಿ ಧನಾರ್ಜನೆಯನ್ನುಮಾಡಿ ಧರ್ಮಕ್ಕೆ ಬಾಧೆತರಬಾರದು. ಧನಾರ್ಜನೆಗೆ ತಕ್ಕಕಾಲವಾದ ಅಪರಾಹ್ಣದಲ್ಲಿ ಧರ್ಮಸಂಪಾದನೆಗೆ ಕೈನೀಡಿ ಧನವನ್ನು ನಾಶಗೊಳಿಸಬಾರದು. ಅಥವ ಧರ್ಮವನ್ನುಳಿದು ಹಣವನ್ನು ತೆಗೆದುಕೊಳ್ಳುವುದಾಗಲಿ, ಧರ್ಮವನ್ನೇ ಕಾರಣವಾಗಿಟ್ಟುಕೊಂಡು ಕುಟುಂಬ ನಿರ್ವಾಹಕ್ಕೋಸುಗ ರಕ್ಷಿತವಾಗಿರುವ ಧನವನ್ನು ನಾಶಗೊಳಿಸುವದಾಗಲಿ ಅಯೋಗ್ಯವೆನಿಸುತ್ತದೆ. ಈ ಧರ್ಮಾರ್ಥಗಳೆರಡೂ ಸುಖೇಚ್ಛೆ, ಮನಸ್ಸುಬಂದಂತೆ ಕಾಮದಲ್ಲಿ ಪ್ರವರ್ತಿಸುವಿಕೆ ಎಂಬೀ ಎರಡರಿಂದಲೂ ಬಾಧೆಗೊಳಿಸಲಾಗುತ್ತವೆ. (ರಾಜನಾದವನು ಗಣಿಕಾದಿ ಅಧಮವ್ಯಾಪಾರಗಳಲ್ಲಿ ಆಸಕ್ತನಾದರೆ ಧರ್ಮಾರ್ಥಗಳು ಕೆಲಗೆಡುತ್ತವೆ.) ಆದುದರಿಂದ ಎಲೈ ರಘುಕುಲೋದ್ಭವನೇ! ನೀನು ಧರ್ಮಾರ್ಥಗಳೆಂಬ ಈ ಎರಡನ್ನೂ ಸುಖದಲ್ಲಿ ಲೋಲುಪನಾಗಿ ಕೆಡಿಸುತ್ತಿಲ್ಲವಷ್ಟೆ. ಅಯ್ಯಾ, ಜಯಶೀಲರಲ್ಲಿ ಶ್ರೇಷ್ಠನಾದ ಭರತನೇ! ಪ್ರಾತಃಕಾಲಗಳಲ್ಲಿ ದಾನಾದಿ ಧರ್ಮಗಳನ್ನು ಮಾಡುವಿಕೆ, ಆ ಮೇಲೆ ರಾಜ್ಯದಲ್ಲಿನ ಕಾರ್ಯಕಲಾಪಗಳನ್ನು ಸಭಾಪ್ರವೇಶದಿಂದ ವಿಮರ್ಶಿಸುವಿಕೆ, ಅದಾದ ಬಳಿಕ ಸಂಧ್ಯಾಕಾಲಗಳಲ್ಲಿ ಕಾಮೋಪಭೋಗಗಳಲ್ಲಿ ಪ್ರವರ್ತಿಸುವಿಕೆ ಎಂಬುದಾಗಿ ಧರ್ಮಾರ್ಥ ಕಾಮಗಳನ್ನು ವಿಭಾಗಮಾಡಿ ಆಯಾವುಗಳನ್ನುಮಾಡುವ ಕಾಲಗಳಲ್ಲಿ ಜಾಗರೂಕನಾಗಿ ಮಾಡುತ್ತಿರುವೆಯಷ್ಟೆ. ಓ ಬುದ್ಧಿಶಾಲಿಯೆ! ಸಕಲ ಶಾಸ್ತ್ರಾರ್ಥ

ಆಶಂಸಂತೇ ಮಹಾಪ್ರಾಜ್ಞ! ಪೌರ ಜಾನಪದೈಸ್ಸಹ ॥ ೬೪ ॥ ನಾಸ್ತಿಕ್ಯ ಮನೃತಂ ಕ್ರೋಧಂ ಪ್ರಮಾದಂ ದೀರ್ಘಸೂತ್ರತಾಂ ॥ ಅದರ್ಶನಂ ಜ್ಞಾನವತಾ ಮಾಲಸ್ಯಂ ಪಂಚವೃತ್ತಿತಾಂ ॥ ೬೫ ॥ ಏಕಚಿಂತನ ಮರ್ಥಾನಾ ಮನರ್ಥಜ್ಞೈಶ್ಚ ಮಂತ್ರಣಂ ॥ ನಿಶ್ಚಿತಾನಾ ಮನಾರಂಭಂ ಮಂತ್ರಸ್ಯಾಽಪರಿರಕ್ಷಣಂ ॥೬೬॥ ಮಂಗಳಸ್ಯಾಽಪ್ರಯೋಗಂಚ ಪ್ರತ್ಯುತ್ಥಾನಂಚ ಸರ್ವತಃ ॥ ಕಚ್ಚಿತ್ತ್ವಂ

ಣರು, ಪೌರಜಾನಪದೈಸ್ಸಹ - ಪಟ್ಟಣಸ್ಥರೂ ದೇಶವಾಸಿಗಳೊಡಗೂಡಿ, ತೇ - ನಿನಗೆ, ಶರ್ಮ - ಸುಖವನ್ನು, ಆಶಂಸಂತೇಕಚ್ಚಿತ್ - ಹೇಳುತ್ತಾರೆಯೇ? ॥ ೬೪ ॥ ನಾಸ್ತಿಕ್ಯಂ - ಪರಲೋಕವಿಲ್ಲವೆಂಬ ಬುದ್ಧಿಯನ್ನೂ, ಅನೃತಂ - ಅಸತ್ಯವಚನ, ಕ್ರೋಧಂ - ಕೋಪ, ಪ್ರಮಾದಂ - ಏಕಾಗ್ರಚಿತ್ತವಿಲ್ಲದಿರುವಿಕೆ, ದೀರ್ಘಸೂತ್ರತಾಂ - ಕಾರ್ಯವನ್ನು ಆಲಸ್ಯವಾಗಿ ಮಾಡೋಣ, ಜ್ಞಾನವತಾಂ - ಜ್ಞಾನವಂತರ, ಅದರ್ಶನಂ - ದರ್ಶನಮಾಡದಿರುವಿಕೆ, ಆಲಸ್ಯಂ - ಅಲಸತ್ವ, ಪಂಚವೃತ್ತಿತಾಂ - ಇಂದ್ರಿಯ ವ್ಯಾಪಾರ ಪರವಶತ್ವ, ಅರ್ಥಾನಾಂ - ರಾಜಕಾರ್ಯಗಳ, ಏಕಚಿಂತನಂ - ತಾನೊಬ್ಬನೇ ಆಲೋಚನೆ ಮಾಡುವಿಕೆ, ಅನರ್ಥಜ್ಞೈಃ - ವ್ಯತ್ಯಸ್ತವಾದ ತಿಳಿವಳಿಕೆಯುಳ್ಳವರೊಡನೆ, ಮಂತ್ರಣಂ - ಆಲೋಚನೆ, ನಿಶ್ಚಿತಾನಾಂ - ನಿಶ್ಚಯಿಸಲ್ಪಟ್ಟ ಕಾರ್ಯಗಳ, ಅನಾರಂಭಂ - ಉಪಕ್ರಮಮಾಡದಿರುವಿಕೆ, ಮಂತ್ರಸ್ಯ-ಆಲೋಚನೆ, ಅಪರಿರಕ್ಷಣಂ - ಗೋಪ್ಯವಾಗಿಡದೆ ಇರುವಿಕೆ, ಮಂಗಳಸ್ಯ - ಪ್ರಾತಃಕಾಲದಲ್ಲಿ ಮಾಡತಕ್ಕ ದರ್ಪಣಾಲೋಕನಾದಿ ಶುಭಕಾರ್ಯಗಳ, ಅಪ್ರಯೋಗಂ - ಅನನುಷ್ಠಾನ, ಸರ್ವತಃ - ಎಲ್ಲದಿಕ್ಕುಗಳಲ್ಲಿಯೂ, ಪ್ರತ್ಯುತ್ಥಾನಂಚ - ಶತ್ರುವಿನ ಉದ್ದೇಶದಿಂದ ಸೈನ್ಯಸಮೇತವಾಗಿ ಪ್ರಯಾಣ, (ಗೋ) ಯಾವ ನೀಚನು ಬಂದಾಗ್ಯೂ ಪ್ರತ್ಯುತ್ಥಾನ, ಏತಾನ್ - ಈ, ಚತುರ್ದಶ - ಹದಿನಾಲ್ಕು ಸಂಖ್ಯೆಯುಳ್ಳ, ರಾಜದೋಷಾನ್ - ರಾಜದೋಷಗಳನ್ನು, ತ್ವಂ-ನೀನು,

ನಿಪುಣರಾದ ಸದ್ಬ್ರಾಹ್ಮಣವರ್ಣ್ಯರು ಪ್ರಜಾನಿವಹದಿಂದೊಡಗೂಡಿ ತಮ್ಮ ಸುಖವನ್ನು ಅಲ್ಪವನ್ನಾಗೆಣಿಸಿ ನಿನ್ನ ಸುಖವನ್ನೇ ಹೆಚ್ಚೆಂದು ಎಣಿಸುತ್ತಿರುವರಷ್ಟೆ. ॥೬೩-೬೪॥ ಪರಲೋಕ, ಪರಮಾತ್ಮ, ಇವುಗಳಿಲ್ಲವೆಂದು ಹೇಳುವುದು, ಸುಳ್ಳು, ತಂದೆತಾಯಿ ಬ್ರಾಹ್ಮಣ ಆಚಾರ್ಯ ಅಶಕ್ತ ಇವರಲ್ಲಿ ಕೋಪ, ಅಸಹಿಷ್ಣುತೆ; ಬಹುಕಾಲದವರಿಗೂ ಹಿಡಿದ ಕೆಲಸವನ್ನೇ ಮಾಡುತ್ತಿರುವಿಕೆ, ಸಕಲ ಶ್ರೇಯಸ್ಸಾಧನರೂಪವಾದ ಜ್ಞಾನಿಗಳನ್ನು ನೋಡದಿರುವಿಕೆ, ಪಂಚಕರ್ಮೇಂದ್ರಿಯಗಳಿಗೆ ಪರವಶವಾಗಿರುವಿಕೆ, ರಾಜ್ಯಭಾರಕ್ರಮದಲ್ಲಿ ರಾಜ್ಯಕರಣ ಕುಶಲತೆಯುಳ್ಳ ಮಂತ್ರಿಗಳೊಡನೆ ಏನೊಂದೂ ವಿಚಾರಮಾಡದೆ ಎಲ್ಲ ಕಾರ್ಯಗಳಲ್ಲಿಯೂ ತಾನೊಬ್ಬನೇ ಕುಳಿತು ಯೋಚನೆಮಾಡುವದು, ಅನರ್ಥವನ್ನುಂಟುಮಾಡುವ ಅಧಮರೊಡನೆ ಮಂತ್ರಾಲೋಚನೆಮಾಡುವುದು, ನಿಶ್ಚಿತವಾದ ಕಾರ್ಯಗಳನ್ನು ಆರಂಭಿಸದಿರುವುದು ಚನ್ನಾಗಿ ಆಲೋಚಿಸಲಾದ ಮಂತ್ರಾಲೋಚನೆಗಳನ್ನು ಗುಪ್ತವಾಗಿ ರಕ್ಷಿಸದಿರುವುದು, ಪ್ರಾತಃಕಾಲಗಳಲ್ಲಿ ಎದ್ದು ದರ್ಪಣ, ಗೋವು, ಇವೇ ಮೊದಲಾದ ಮಂಗಳಪ್ರದವಾದ ಪದಾರ್ಥ ಸಮುದಾಯಗಳನ್ನು ನೋಡದಿರುವಿಕೆ, ನೀಚಪುರುಷರ ಆಗಮನಕಾಲಗಳಲ್ಲಿ ಏಳುವಿಕೆ, ಅಥವ ಸುತ್ತೂಸುತ್ತಲೂ ಇರುವ ನೀಚೋಚ್ಚ ಶತ್ರುಗಳಮೇಲೆ ಏಕಕಾಲದಲ್ಲಿಯೇ ದಂಡ

ವರ್ಜಯಸ್ಯೇತಾ ರಾಜದೋಷಾಂಶ್ಚತುರ್ದಶ ॥ ೬೭ ॥ (೧) "ದಶಪಂಚ ಚತುರ್ವರ್ಗಾ ಸಪ್ತವರ್ಗಂಚ ತತ್ವತಃ ॥ ಅಷ್ಟವರ್ಗಂ ತ್ರಿವರ್ಗಂಚ ವಿದ್ಯಾಸ್ತಿ

ವರ್ಜಯಸೇಕಚ್ಚಿತ್ - ಬಿಟ್ಟಿದ್ದೀಯಾ? ॥ ೬೭ ॥ ಹೇ ರಾಘವ - ಎಲೈಭರತನೇ, ದಶಪಂಚಚತುರ್ವರ್ಗಾ - ಮನುವಿನಿಂದ ಹೇಳಲಾದ ಮೃಗಯಾ ಮೊದಲಾದ ಹತ್ತುವರ್ಗಗಳನ್ನೂ, ಜಲಗಿರಿಯೇ ಮೊದಲಾದ ಪಂಚವರ್ಗಗಳೆನಿಸುವ ದುರ್ಗಗಳನ್ನೂ, ಸಾಮದಾನಾದಿ ಚತುರ್ವರ್ಗಗಳೆನಿಸುವ ಚತುರೋಪಾಯಗಳನ್ನೂ, ಸಪ್ತವರ್ಗಂಚ - ಮಂತ್ರಿ, ಮಿತ್ರ, ಬೊಕ್ಕಸ, ರಾಷ್ಟ್ರ, ಜಲ, ದುರ್ಗಗಳೆಂಬ ಸಪ್ತವರ್ಗವನ್ನೂ, ಅಷ್ಟವರ್ಗಂ - ಕೃಷಿ, ವಾಣಿಜ್ಯ, ದುರ್ಗ, ಸೇತು, ಕುಂಜರ ಬಂಧನ, ಖನಿ, ಕರಾದಾನ,

ಯಾತ್ರೆಯನ್ನುಮಾಡುವಿಕೆ, ಎಂಬೀ ಹದಿನಾಲ್ಕು ರಾಜ್ಯಾಂಗದ ದೋಷವನ್ನುದಾಯವೆಂದು ಪ್ರಸಿದ್ಧವಾಗಿದೆ. ಇದನ್ನುನೀನು ಚನ್ನಾಗಿಅರಿತು ರಾಜ್ಯಭಾರಮಾಡುತ್ತಿರುವೆಯಾ?॥೬೫-೬೭॥ ಹತ್ತು ಪ್ರಕಾರವಾಗಿಯೂ, ಐದು, ನಾಲ್ಕು, ಏಳು, ಎಂಟು, ಮೂರು ಪ್ರಕಾರಗಳಾಗಿಯೂ

ಟಿ. (೧) ಈ ಶ್ಲೋಕದಲ್ಲಿರುವ ರಾಜನೀತಿಗೆ ಸಂಬಂಧಿಸಿದ ಪಾರಿಭಾಷಿಕ ಪದಗಳ ವಿವರಣೆ.

ದಶವರ್ಗಗಳು:—" ಮೃಗಯಾಽಕ್ಷೋ ದಿವಾಸ್ವಾಪಃ ಪರೀವಾದಃ ಸ್ತ್ರಿಯೋಮದಃ ।
ತೌರ್ಯತ್ರಿಕಂ ವೃಥಾಟ್ಯಾಚ ಕಾಮಜೋ ದಶಕೋ ಗುಣಃ ॥ " (ಮನು.)

ಬೇಟೆ, ಪಗಡೆಯಾಟ, ಹಗಲುನಿದ್ದೆ, ನಿಂದೆ, ಹೆಂಗಸರು, ಮತ್ತತೆ, ನೃತ್ತ, ಗೀತ, ವಾದ್ಯಗಳು, ಕೆಲಸವಿಲ್ಲದೆ ಅಲೆಯುವಿಕೆ ಎಂಬ ಈ ಹತ್ತೂ ಕಾಮದಿಂದ ಜನಿಸುವ ದುರ್ಗುಣಗಳು, ಇವೇ ದಶವರ್ಗವೆನಿಸುತ್ತವೆ.
(ಇದು ಮನುವಿನ ಅಭಿಪ್ರಾಯ.)

ಕಾಮಂದಕನ ಅಭಿಪ್ರಾಯ ಬೇರೆಯಾಗಿರುತ್ತದೆ. ಅವನ ರೀತಿ ಹೀಗೆ.

" ಲೋಭಕ್ರೋಧಾಲಸ್ಯಾಽಸತ್ಯ ವಚನತ್ವಪ್ರಮಾದ ಭೀರುತ್ವಾಽಸ್ಥಿರತ್ವ
ಮೌಢ್ಯಾನ ಯಾವಮಂ ತ್ಯಕ್ತ್ವಾ ನಿದಶವರ್ಗ ಇತ್ಯುಚ್ಯತೇ "

ಪಂಚವರ್ಗಗಳು:—" ಔದಕಂ ಪಾರ್ವತಂ ವಾರ್ಕ್ಷಮೈರಿಣಂ ಧಾನ್ವನಂ ತಥಾ ।
ಶಸ್ತಂ ಪ್ರಶಸ್ತ ಮತಿಭಿಃ ದುರ್ಗಂ ದುರ್ಗೋಪಚಿಂತಕೈಃ ॥ "

(ಇದು ಮನುವಿನ ಅಭಿಪ್ರಾಯ.)

(ಕಾಮಂದಕನ ಅಭಿಪ್ರಾಯ ಹೀಗೆ.) " ಸಾಪತ್ನ್ಯಂ ವಸ್ತುಜಂ ಸ್ತ್ರೀಜಂ ವಾಗ್ಜಾತಮಪರಾಧಜಂ ।
ವೈರಪ್ರಭೇದ ನಿಪುಣೈರ್ವೈರಂ ಪಂಚವಿಧಂ ಸ್ಮೃತಂ ॥ "

ಚತುರ್ವರ್ಗ:—ಈ ವಿಷಯದಲ್ಲಿ ಕಾಮಂದಕನ ಮೂರಭಿಪ್ರಾಯಗಳನ್ನು ಕೊಟ್ಟಿದ್ದಾನೆ. ಮೂರೂ ಗ್ರಾಹ್ಯವೆಂದು ಹೇಳುತ್ತಾನೆ.

(೧) " ಸಾಮದಾನಂಚ ಭೇದಶ್ಚ ದಂಡಶ್ಚೇತಿ ಚತುರ್ವಿಧಂ "
ಸಾಮದಾನ ಭೇದ ದಂಡೋಪಾಯಗಳು. (೪)

(೨) " ಔರಸಂ ತಂತು ಸಂಬಂಧಂ ತಥಾ ವಂಶ ಕ್ರಮಾಗತಮ್ ।
ರಕ್ಷಿತಂ ವ್ಯಸನೇಭ್ಯಶ್ಚ ಮಿತ್ರಂ ಜ್ಞೇಯಂ ಚತುರ್ವಿಧಂ ॥ "

(೩) " ನ್ಯಾಯೇನಾರ್ಜನ ಮರ್ಥಸ್ಯ ರಕ್ಷಣಂ ವರ್ಧನಂ ತಥಾ ।
ಸತ್ಪಾತ್ರೇ ಪ್ರತಿಪತ್ತಿಶ್ಚ ರಾಜವೃತ್ತಂ ಚತುರ್ವಿಧಂ ॥ "

ಸಪ್ತವರ್ಗ:—(೧) "ಸ್ವಾಮ್ಯಮಾತ್ಯಾಶ್ಚ ರಾಷ್ಟ್ರಂಚ ದುರ್ಗಂ ಕೋಶೋ ಬಲಂ ಸುಹೃತ್ ।
ಪರಸ್ಪರೋಪಕಾರೀದಂ ರಾಜ್ಯಂ ಸಪ್ತಾಂಗ ಮುಚ್ಯತೇ ॥" ಅಥವ,

(೨) ಓಜೋಥಮೈತ್ರಶ್ಚ ಸಮಾಶ್ರಿತಶ್ಚ, ಸುಬಂಧುಜಃ ಕಾರ್ಯಸಮುದ್ಭವಶ್ಚ ।
ಭೃತ್ಯೋ ಗೃಹೀತೋ ವಿವಿಧೋಪಚಾರೈಃ, ಪಕ್ಷಂ ಬುಧಾ ಸ್ಸಪ್ತವಿಧಂ ವದಂತಿ ॥ ಅಥವ,

(೩) "ಶ್ಯೇನಸ್ಸೂಚೀಚವಜ್ರಶ್ಚ ಶಕಟೋಮಕರಸ್ತಥಾ ।
ದಂಡಾಖ್ಯಃ ಪದ್ಮನಾಮಾಚ ವ್ಯೂಹಸ್ಸಪ್ತ ಪ್ರಧಾನತಃ ॥"

ಅಷ್ಟವರ್ಗ:—ಕಾಮಂದಕನ ಅಭಿಪ್ರಾಯ.

"ಕೃಷಿರ್ವಾಣಿಜ್ಯ ದುರ್ಗಾಣಿ ಸೇತುಃ ಕುಂಜರ ಬಂಧನಂ ।
ಖನ್ಯಾಕರಃ ಕರಾದಾನಂ ಶೂನ್ಯಾನಾಂಚ ನಿವೇಶನಂ ॥"

ಮತ್ತೊಂದು ಅಭಿಪ್ರಾಯ.

"ಪೈಶುನ್ಯಂ ಸಾಹಸಂದ್ರೋಹ ಮೀರ್ಷ್ಯಾ ಸೂಯಾರ್ಥದೂಷಣಂ ।
ವಾಗ್ದಂಡಯೋಶ್ಚ ಪಾರುಷ್ಯಂ ಕ್ರೋಧ ಜೋಪಿ ಗುಣಾಷ್ಟಕಃ ॥"

ತ್ರಿವರ್ಗ:—ಉತ್ಸಾಹ ಪ್ರಭುತ್ವ ಮಂತ್ರ ಶಕ್ತಿಗಳು, ಅಥವ "ಕ್ಷಯಃಸ್ಥಾನಂಚ ವೃದ್ಧಿಶ್ಚ ತ್ರಿವರ್ಗೋ ನೀತಿ ವೇದಿನಾಂ" ಎಂಬಂತೆ ಶತ್ರುಗಳ ಕ್ಷಯ, ಸ್ಥಿತಿ, ವೃದ್ಧಿಗಳು.

ಕಾಮಂದಕನ ಅಭಿಪ್ರಾಯ.

(೧) "ವಸ್ತುಷ್ವ ಶಕ್ಯೇಷು ಸಮುದ್ಯಮಶ್ಚ ಶಕ್ಯೇಷು ಮೋಹಾದ ಸಮುದ್ಯಮಶ್ಚ ।
ಶಕ್ಯೇಷ್ವಕಾಲೇಷು ಸಮುದ್ಯಮಶ್ಚ ತ್ರಿಧೈವಕಾರ್ಯ ವ್ಯಸನಂ ವದಂತಿ ॥"

ಅಸಾಧ್ಯ ವಸ್ತುಗಳಲ್ಲಿ ಪ್ರಯತ್ನ, ಸಾಧ್ಯ ವಸ್ತುಗಳಿಗೋಸುಗ ಅಕಾಲದಲ್ಲಿ ಪ್ರಯತ್ನ, ಅಥವ ಸಾಧ್ಯ ವಸ್ತುಗಳಿಗೆ ಮೌಢ್ಯದಿಂದ ಪ್ರಯತ್ನ ಮಾಡದಿರುವಿಕೆ ಎಂಬಿವು ತ್ರಿವರ್ಗವೆನಿಸುತ್ತವೆ.

ವಿದ್ಯಾಸ್ತಿಸ್ರ:—ವೇದ, ಕೃಷಿ ಗೋರಕ್ಷಣೆ, ರಾಜನೀತಿಶಾಸ್ತ್ರ ಇವು ವಿದ್ಯಾತ್ರಯವೆನಿಸುತ್ತವೆ.

ಷಡ್ಗುಣಾಃ:—ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ, ಸಮಾಶ್ರಯ,

ದೈವಮಾನುಷ ವ್ಯಸನಗಳು:—(ದೈವ) ಹುತಾಶನೋ, ಜಲಂವ್ಯಾಧಿಃ ದುರ್ಭಿಕ್ಷಂ ಮರಣಾ ತಥಾ ॥ ಇತಿ ಪಂಚ ವಿಧಂ ದೈವಂ ಮಾನುಷಂ ವ್ಯಸನಂ ಪರಂ ॥ (ಮಾನುಷ) ಆಯುಕ್ತಕೇಭ್ಯ, (ಅಧಿಕಾರಿಗಳು) ಶ್ಚೋರೇಭ್ಯಃ, ಪರೇಭ್ಯೋ, ರಾಜವಲ್ಲಭಾತ್ ॥ ಪೃಥಿವೀಪತಿ ಲೋಭಾಚ್ಚ, ವ್ಯಸನಂ ಪಂಚಧಾ ಭಯಂ.

ವಿಂಶತಿವರ್ಗಃ:—ಬಾಲೋ, ವೃದ್ಧೋ, ದೀರ್ಘರೋಗೀ, ತಥಾಜ್ಞಾತಿ ಬಹಿಷ್ಕೃತಃ ॥ ಭೀರುಕೋ, ಭೀರುಜನಕೋ, ಲುಬ್ಧೋ, ಲುಬ್ಧಜನಸ್ತಥಾ ॥ ವಿರಕ್ತ ಪ್ರಕೃತಿಶ್ಚೈವ, ವಿಷಯೇಷ್ವತಿ ಸಕ್ತಿಮಾ ॥ ಅನೇಕ ಚಿತ್ತಮಂತ್ರಶ್ಚ, ದೇವಬ್ರಾಹ್ಮಣ ನಿಂದಕಃ । ದೈವೋಪ ಹತಕಶ್ಚೈವ, ದೈವಚಿಂತಕ ಏವಚ ॥ ದುರ್ಭಿಕ್ಷ ವ್ಯಸನೋಪೇತೋ ಬಲವ್ಯಸನಸಂಕುಲಃ । ಆದೇಶಸ್ಥೋ, ಬಹುರಿಪುಃ, ಯುಕ್ತೋ, ಕಾಲೇನ ಯಶ್ಚಸಃ । ಸತ್ಯಧರ್ಮ ವ್ಯಪೇತಶ್ಚ, **ವಿಂಶತಿಃ** ಪುರುಷಾ ಅಮೀ । ಏತೈಸ್ಸಂಧಿಂ ನಕುರ್ವೀತ ವಿಗೃಹ್ಣೀಯಾತ್ತು ಕೇವಲಂ ॥

"ದ್ವಿಯೋನೀಸಂಧಿವಿಗ್ರಹೌ" ಎಂಬ ಕಡೆ ಹಿಂದೆಯೇ ಪ್ರತಿಪಾದಿಸಿರುವ ಸಂಧಿವಿಗ್ರಹಾದಿಗಳಲ್ಲಿ ವೈಗುಣ್ಯ ಮತವನ್ನು ಅವಲಂಬಿಸುವುದರಿಂದ ಯಾನಾದಿಗಳಲ್ಲಿ ಸಂಧಿವಿಗ್ರಹಗಳನ್ನು ಅಂತರ್ಭಾವಮಾಡಿ ಹೇಳಿರುತ್ತಾರೆ. ಸಂಧಿಯು ದ್ವೈಧೀಭಾವ ಸಮಾಶ್ರಯ ರೂಪ. ವಿಗ್ರಹವು ಯಾನಾಸನರೂಪ.

ಸ್ಪೃಷ್ಟ ರಾಘವ! ॥ ೬೮ ॥ ಇಂದ್ರಿಯಾಣಾಂ ಜಯಂ ಬುಧ್ವಾ ಷಾಡ್ಗುಣ್ಯಂ ದೈವಮಾನುಷಂ ॥ ಕೃತ್ಯಂ ವಿಂಶತಿವರ್ಗಂ ಚ ತಥಾ ಪ್ರಕೃತಿಮಂಡಲಂ ॥೬೯॥ ಯಾತ್ರಾದಂಡ ವಿಧಾನಂಚ ದ್ವಿಯೋನೀ ಸಂಧಿವಿಗ್ರಹೌ ॥ ಕಚ್ಚಿದೇತಾ ಮಹಾಪ್ರಾಜ್ಞ! ಯಥಾವದನುಮನ್ಯಸೇ" ॥೭೦॥ ಮಂತ್ರಿಭಿಸ್ತ್ವಂ ಯಥೋದ್ದಿಷ್ಟೈ ಶ್ಚತುರ್ಭಿ ಸ್ತ್ರಿಭಿರೇವವಾ ॥ ಕಚ್ಚಿತ್ಸಮಸ್ತೈ ರ್ವ್ಯಸ್ತೈಶ್ಚ ಮಂತ್ರಂ ಮಂತ್ರಯಸೇ ಮಿಥಃ ॥೭೧॥ ಕಚ್ಚಿ ತ್ತೇ ಸಫಲಾ ವೇದಾಃ ಕಚ್ಚಿ ತ್ತೇ ಸಫಲಾಃ ಕ್ರಿಯಾಃ ॥ ಕಚ್ಚಿ ತ್ತೇ ಸಫಲಾ ದಾರಾ ಕಚ್ಚಿ ತ್ತೇ ಸಫಲಂ ಶ್ರುತಂ ॥ ೭೨ ॥

ಶೂನ್ಯನಿವೇಶನಗಳೆಂಬ ಅಷ್ಟವರ್ಗಗಳನ್ನು, ತ್ರಿವರ್ಗಂಚ - ಧರ್ಮಾರ್ಥಕಾಮಗಳೆಂಬ ಮೂರುವರ್ಗಗಳನ್ನೂ, ತಿಸ್ರಃ - ಮೂರಾದ, ವಿದ್ಯಾಶ್ಚ - ತ್ರಯೀ, ವಾರ್ತಾ, ದಂಡನೀತಿಗಳೆಂಬ ಮೂರು ವಿದ್ಯೆಗಳನ್ನೂ, ಇಂದ್ರಿಯಾಣಾಂ - ಇಂದ್ರಿಯಗಳ, ಜಯಂ - ಗೆಲ್ಲುವಿಕೆಯನ್ನು, ಬುಧ್ವಾ - ತಿಳಿದು, ತತ್ವತಃ - ಯಥಾರ್ಥವಾಗಿ, ಷಾಡ್ಗುಣ್ಯಂ - ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ, ಸಮಾಶ್ರಯಗಳೆಂಬ ಆರು ಗುಣಗಳನ್ನೂ, ದೈವಮಾನುಷಂ - ದೈವಿಕ ಮಾನುಷವೆಂಬ ವ್ಯಸನದ್ವಯಗಳನ್ನೂ, ಕೃತ್ಯಂ - ಅಲಬ್ಧವೇತನ, ಅವಮಾನಿತ, ಕೋಪಿತ, ಭೀಷಿತ, ಶತ್ರುಸಂಬಂಧಿ ಎಂಬ ಈ ಐದು ಮಂದಿಗೂ ಅವರಿಗೆ ಇಷ್ಟವಾದ ದ್ರವ್ಯವನ್ನು ಕೊಟ್ಟು ಭೇದೋಪಾಯ ಮಾಡುವುದನ್ನೂ, ವಿಂಶತಿವರ್ಗಂ ಬಾಲವೃದ್ಧಾದಿ ಇಪ್ಪತ್ತು ಮಂದಿಯಿಂದ ಹೇಳಲ್ಪಡುವ ವಿಂಶತಿವರ್ಗವನ್ನೂ, ತಥಾ - ಹಾಗೆಯೇ, ಪ್ರಕೃತಿಮಂಡಲಂ- ಅಮಾತ್ಯ, ರಾಷ್ಟ್ರ, ದುರ್ಗ, ಕೋಶ, ದಂಡ ಎಂಬುವರಿಂದ ಹೇಳಲ್ಪಡುವ ಪ್ರಕೃತಿಮಂಡಲವನ್ನೂ, ಹನ್ನೆರಡುಮಂದಿ ಶತ್ರುಗಳಿಂದ ಹೇಳಲ್ಪಡುವ ರಾಜಮಂಡಲವನ್ನೂ. ಯಾತ್ರಾದಂಡವಿಧಾನಂಚ - ಪಂಚವಿಧಯಾನಗಳನ್ನೂ, ವ್ಯೂಹಭೇದಗಳನ್ನು ಕಟ್ಟುವಿಕೆಯನ್ನೂ, ಸಂದಿವಿಗ್ರಹೌ - ಪ್ರತ್ಯೇಕವಾದ ಸಂಧಿವಿಗ್ರಹಗಳೆಂಬ, ದ್ವಿಯೋನಿ - ಎರಡು ರೂಪಗಳನ್ನೂ, ಏತಾ - ಇವೆಲ್ಲವನ್ನೂ, ಯಥಾವತ್ - ಶಾಸ್ತ್ರೋಕ್ತವಾಗಿ, ಅನುಮನ್ಯಸೇಕಚ್ಚಿತ್ - ತಿಳಿದುಕೊಂಡಿರುವೆಯಾ? ||೬೮-೭೦|| ಯಥೋದ್ದಿಷ್ಟೈಃ - ಶಾಸ್ತ್ರೋಕ್ತವಾಗಿ ಹೇಳಿದ ಮಂತ್ರಿಲಕ್ಷಣ ಲಕ್ಷಿತರಾದ, ಸಮಸ್ತೈಃ- ಎಲ್ಲರನ್ನೂ ಒಟ್ಟುಗೂಡಿಸಿಯೂ, ವ್ಯಸ್ತೈಃ - ಪ್ರತ್ಯೇಕ ಪ್ರತ್ಯೇಕರಾಗಿಯೂ ಇರುವ, ಚತುರ್ಭಿಃ - ನಾಲ್ವರು, ತ್ರಿಭಿರೇವವಾ - ಮೂವರೇ ಆಗಲಿ, ಮಂತ್ರಿಭಿಃ - ಮಂತ್ರಿಗಳೊಡನೆ, ಮಿಥಃ - ರಹಸ್ಯ

ಇರುವ ವರ್ಗಗಳನ್ನೂ, ಮೂರು ವಿಧಗಳಾದ ವಿದ್ಯೆಗಳನ್ನೂ, ಇಂದ್ರಿಯ ಜಯವನ್ನೂ, ದೈವಿಕವೂ ಮಾನುಷವೂ ಆದ ವ್ಯಸನಗಳನ್ನೂ, ಷಾಡ್ಗುಣ್ಯವನ್ನೂ, ಅವಶ್ಯಾನುಷ್ಠೇಯವಾದ ಇಪ್ಪತ್ತು ಪ್ರಕಾರಗಳನ್ನೂ, ರಾಜ್ಯಮಂಡಲವನ್ನೂ, ದಂಡಯಾತ್ರಾವಿಧಾನವನ್ನೂ, ಯಾನಪಂಚಕವನ್ನೂ, ಸಂಧಿವಿಗ್ರಹ ರೀತಿಗಳನ್ನೂ, ಚನ್ನಾಗಿ ಅರಿತಿರುವೆಯಾ? ॥ ೬೮-೭೦ ॥ ಎಲೈ ತಮ್ಮನೆ! ನೀನು ನಾಲ್ವರು ಅಥವ ಮೂವರು ಮಂತ್ರಿಗಳೊಡನೆ ಒಟ್ಟಾಗಿಯೂ, ಬೇರೆಬೇರೆಯಾಗಿಯೂ ಮಂತ್ರಾಲೋಚನೆಯನ್ನು ಮಾಡುತ್ತಿರುವೆಯಲ್ಲವೆ? ಅಯ್ಯಾ ಭರತನೆ! ನಿನ್ನ ಸಂಬಂಧವಾದ ವೇದಾಧ್ಯಯನವೂ, ದಾನಧರ್ಮಾದಿ ಸತ್ಕ್ರಿಯೆಗಳೂ, ಅಂತಃಪುರಸ್ತ್ರೀಯರೂ, ಗುರೂಪದೇಶವಾಗಿ ಕೇಳಲ್ಪಟ್ಟ ಶಾಸ್ತ್ರಾಧ್ಯಯನವು ಸಫಲಗಳಾಗಿರುವುವೇ? ॥ ೭೧-೭೨ ॥

ಕಚ್ಚಿದೇಷೈವತೇ ಬುದ್ಧಿರ್ಯಥೋಕ್ತಾ ಮಮ ರಾಘವ! ॥ ಆಯುಷ್ಯಾಚ ಯಶಸ್ಯಾಚ ಧರ್ಮಕಾಮಾರ್ಥ ಸಂಹಿತಾ ॥ ೭೩ ॥ ಯಾಂ ವೃತ್ತಿಂ ವರ್ತತೇ ತಾತೋ ಯಾಚ ನಃ ಪ್ರಪಿತಾಮಹಾಃ ॥ ತಾಂ ವೃತ್ತಿಂ ವರ್ತಸೇ ಕಚ್ಚಿದ್ಯಾಚ ಸತ್ಪಥಗಾ ಶುಭಾ ॥ ೭೪ ॥ ಕಚ್ಚಿತ್ಸ್ವಾದುಕೃತಂ ಭೋಜ್ಯ ಮೇಕೋ ನಾಶ್ನಾಸಿ ರಾಘವ! ॥ ಕಚ್ಚಿದಾಶಂಸಮಾನೇಭ್ಯೋ ಮಿತ್ರೇಭ್ಯ ಸ್ಸಂಪ್ರಯಚ್ಛಸಿ ॥ ೭೫ ॥

ವಾಗಿ, ಮಾಂತ್ರಯಸೇಕಚ್ಚಿತ್ - ಮಂತ್ರಾಲೋಚನೆಯನ್ನು ಮಾಡುತ್ತಿರುವೆಯಲ್ಲವೆ ? ॥೭೧-೭೨॥ ತೇ - ನಿನ್ನ, ವೇದಾಃ - ವೇದಗಳು, ಸಫಲಾಃಕಚ್ಚಿತ್ - (ಗೋ) ಅಗ್ನಿಹೋತ್ರಾದ್ಯನುಷ್ಠಾನದಿಂದ ಸಫಲವಾಗಿವೆಯೇ, ತೇ - ನಿನ್ನ, ಕ್ರಿಯಾಃ - ಧನಗಳು, ಸಫಲಾಃಕಚ್ಚಿತ್ - ದಾನಭೋಗಗಳಿಂದ ಸಫಲವಾಗಿವೆಯೇ? ತೇದಾರಾಃ - ನಿನ್ನಪತ್ನಿಯು, ಸಫಲಾಃಕಚ್ಚಿತ್ - ರತಿ ಪುತ್ರ ಫಲಗಳಿಂದ ಸಫಲ ವಾಗಿರುವಳೇನು, ತೇ - ನಿನ್ನ, ಶ್ರುತಂ - ಶಾಸ್ತ್ರವು ಶೀಲವೃತ್ತಿಗಳಿಂದ, ಸಫಲಂಕಚ್ಚಿತ್ - ಫಲಿತ ವಾಗಿರುವುದಲ್ಲವೆ ? ॥ ೭೨ ॥ ಹೇ ರಾಘವ - ಎಲೈ ಭರತನೇ, ಮಮ - ನನಗೆ, ಬುದ್ಧಿಃ - ಬುದ್ಧಿಯು, ಯಥಾ - ಹೇಗೋ, ತಥಾ - ಹಾಗೆಯೇ, ತೇ - ನಿನಗೂ, ಉಕ್ತಾ - ಶಾಸ್ತ್ರದಿಂದ ಹೇಳ ಲ್ಪಟ್ಟ, ಏಷೈವಬುದ್ಧಿಃ - ಇದೇ ಬುದ್ಧಿಯು, ಆಯುಷ್ಯಾಚ - ಆಯುಸ್ಸಂಪಾದಕವಾಗಿಯೂ, ಯಶಸ್ಯಾಚ - ಕೀರ್ತಿಸಂಪಾದಕವಾದುದಾಗಿಯೂ, ಧರ್ಮಕಾಮಾರ್ಥಸಂಹಿತಾ - ಧರ್ಮಾರ್ಥಕಾಮ ಗಳೆಂಬ ಪುರುಷಾರ್ಥತ್ರಯದಿಂದಲೂ, ಸಂಹಿತಾ - ಕೂಡಿದುದಾಗಿ, ವರ್ತತೇಕಚ್ಚಿತ್ - ಇರುವು ದಷ್ಟೆ. ॥ ೭೩ ॥ ತಾತಃ - ತಂದೆಯು, ಯಾಂವೃತ್ತಿಂ - ಯಾವ ವೃತ್ತಿಯನ್ನು ಅನುಷ್ಠಾನ ಮಾಡುತ್ತ, ವರ್ತತೇ - ಇರುವನೋ, ನಃ - ನಮ್ಮ, ಪ್ರಪಿತಾಮಹಾಃ - ಮುತ್ತಾತನೇ ಮೊದಲಾದ ವರು, ಯಾಂವೃತ್ತಿಂ - ಯಾವ ನಡತೆಯನ್ನು, ಅವರ್ತಂತ - ನಡಿಯುತಿದ್ದರೋ, ಯಾಚ - ಯಾವ ನಡತೆಯು, ಸತ್ಪಥಗಾ - ಸನ್ಮಾರ್ಗವನ್ನನುಸರಿಸಿದುದಾಗಿ, ಶುಭಾ - ಶುಭಕರವಾದುದೋ, ತಾಂ ವೃತ್ತಿಂ - ಅಂತಹ ನಡತೆಯಲ್ಲಿ, ವರ್ತಸೇಕಚ್ಚಿತ್ - ಇರುತ್ತೀಯಲ್ಲವೆ. ॥ ೭೪ ॥ ಹೇ ರಾಘವ- ಎಲೈ ಭರತನೆ, ಸ್ವಾದು - ರುಚಿಕರವಾಗಿ, ಕೃತಂ - ಮಾಡಲ್ಪಟ್ಟ, ಭೋಜ್ಯಂ - ಭೋಜನಾರ್ಹ ವಾದ ಪದಾರ್ಥವನ್ನು, ಏಕಃ - ಒಬ್ಬನೇ, ನಾಶ್ನಾಸಿಕಚ್ಚಿತ್ - ಭೋಜನಮಾಡುವದಿಲ್ಲವಷ್ಟೆ, ಆಶಂ ಸಮಾನೇಭ್ಯಃ - ಬೇಡುತ್ತಿರುವ, ಮಿತ್ರೇಭ್ಯಃ - ಸ್ನೇಹಿತಜನರಿಗೆ, ಸಂಪ್ರಯಚ್ಛಸಿಕಚ್ಚಿತ್ - ಕೊಡು

ನಾನು ಹೇಳಿದಂತೆ ನಿನ್ನ ಬುದ್ಧಿಯು ಆಯುಷ್ಕರವಾಗಿಯೂ, ಕೀರ್ತಿಸಂಪಾದಕವಾಗಿಯೂ, ಧರ್ಮಾರ್ಥಕಾಮಗಳಿಂದೊಡಗೂಡಿದುದಾಗಿಯೂ, ವೇದಶಾಸ್ತ್ರಾದಿಗಳಿಗೆ ವಿರುದ್ಧವಾಗ ದಂತೆಯೂ, ಇರುವದಷ್ಟೆ. ಸನ್ಮಾರ್ಗದಲ್ಲಿಯೇಹೋಗುತ್ತಿರುವದೂ, ಮಂಗಳಕರವಾದುದೂ, ತಂದೆಯಾದ ದಶರಥರಾಜನೂ, ಅವನ ಪೂರ್ವಿಕರೂ, ಅನುಸರಿಸಿದ ರಾಜವೃತ್ತಿಯನ್ನೇ ನೀನೂ ಅನುಸರಿಸುತ್ತಿರುವೆಯಲ್ಲವೆ.॥೭೩-೭೪॥ಅಯ್ಯಾ ರಘುಕುಮಾರನೆ! ಅರಮನೆಯಲ್ಲಿ ರುಚಿರುಚಿಯಾಗಿ ಮಾಡಿದ ಮೃಷ್ಟಾನ್ನಭೋಜನವನ್ನು ನೀನೊಬ್ಬನೇ ಕುಳಿತು ಊಟಮಾಡದೆ ಅತಿಥಿಅಭ್ಯಾಗತರೊಡನೆಯೂ, ಬಂಧುಮಿತ್ರರೊಡನೆಯೂ, ಸುಖೋಪವಿಷ್ಟನಾಗಿ ಭುಜಿಸು ತ್ತಿರುವೆಯಾ ? ನಿನ್ನ ಸಹಾಯವನ್ನೇ ಅಪೇಕ್ಷಿಸುತ್ತಿರುವ ಮಿತ್ರರಿಗೆ ಸಹಾಯಕನಾಗಿದ್ದು

ರಾಜಾತು ಧರ್ಮೇಣ ಹಿ ಪಾಲಯಿತ್ವಾ
ಮಹಾಮತಿ ರ್ದಂಡಧರಃ ಪ್ರಜಾನಾಂ ||
ಅವಾಪ್ಯ ಕೃತ್ಸ್ನಾಂ ವಸುಧಾಂ ಯಥಾವ
ದಿತಶ್ಚ್ಯುತ ಸ್ಸ್ವರ್ಗಮುಪೈತಿ ವಿದ್ವಾನ್ || ೭೬ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಶತತಮಸ್ಸರ್ಗಃ.

ತ್ತಿರುವೆಯಲ್ಲವೆ. || ೭೫ || ಮಹಾಮತಿಃ - ನೀತಿಶಾಸ್ತ್ರೋಕ್ತವಾದ ಬುದ್ಧಿಯುಳ್ಳ, ವಿದ್ವಾನ್ - ಆತ್ಮಜ್ಞಾನವಂತನಾದ, ರಾಜಾತು - ಅರಸನಾದರೆ, ಧರ್ಮೇಣ - ಧರ್ಮದಿಂದ, ಮಹೀಂ - ಭೂಮಿಯನ್ನು, ಪಾಲಯಿತ್ವಾ - ಸಂರಕ್ಷಣೆಮಾಡಿ, ಪ್ರಜಾನಾಂ - ಜನಗಳಿಗೆ, ಯಥಾವತ್ ದಂಡಧರಃ - ನೀತಿಶಾಸ್ತ್ರದಲ್ಲಿ ಹೇಳಿದ ಪ್ರಕಾರ ಶಿಕ್ಷೆಯನ್ನುಮಾಡುತ್ತ, ಕೃತ್ಸ್ನಾಂ - ಸಮಸ್ತವಾದ, ವಸುಧಾಂ - ಭೂಮಿಯನ್ನು, ಅವಾಪ್ಯ - ಹೊಂದಿ, ಇತಃ - ಈ ಲೋಕದಿಂದ, ಚ್ಯುತಃ - ಮೃತನಾಗಿ, ಸ್ವರ್ಗಂ - ಉತ್ತಮಸ್ಥಾನವನ್ನು, ಉಪೈತಿ - ಹೊಂದುತ್ತಾನೆ. || ೭೬ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಶತತಮಸ್ಸರ್ಗಃ.

ಕೊಂಡು ಅವರ ಅಭೀಷ್ಟಗಳನ್ನು ಸಲ್ಲಿಸುತ್ತಿರುವೆಯಾ ? ||೭೫|| ಎಲೈ ಅನುಜನಾದ ಭರತನೆ ! ಪ್ರಜೆಗಳಿಗೆ ಶಿಕ್ಷಾಪ್ರಭುವಾದ ಭೂಪಾಲನು ನಾನಿದುವರೆವಿಗೂ ಹೇಳಿದ ಧರ್ಮಗಳೆಲ್ಲವನ್ನೂ ಅರಿತುಕೊಂಡು ಧರ್ಮದಿಂದಲೇ ರಾಜ್ಯಪರಿಪಾಲನೆ ಮಾಡುತ್ತಿದ್ದರೆ ಈ ಲೋಕದಲ್ಲಿರುವ ವರೆವಿಗೂ ಸುಖವನ್ನನುಭವಿಸಿ, ದೇಹತ್ಯಾಗಾನಂತರದಲ್ಲಿ ಸ್ವರ್ಗವನ್ನೈದುತ್ತಾನೆ. || ೭೬ ||

ಇಂತಿದು ಶ್ರೀರಾಮಕೃತ ರಾಜ್ಯಕರಣ ವಿಧಾನ ವಿವರಣವೆಂಬ
ನೂರನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕೋತ್ತರಶತತಮಸ್ಸರ್ಗಃ.

ರಾಮಸ್ಯ ವಚನಂ ಶ್ರುತ್ವಾ ಭರತಃ ಪ್ರತ್ಯುವಾಚಹ ॥ ಕಿಂಮೇ ಧರ್ಮಾದ್ವಿಹೀನಸ್ಯ ರಾಜಧರ್ಮಃ ಕರಿಷ್ಯತಿ ॥೧॥ ಶಾಶ್ವತೋಽಯಂ ಸದಾ ಧರ್ಮ ಸ್ಸ್ಥಿತೋ ಸ್ಮಾಸು ನರರ್ಷಭ! ॥ ಜ್ಯೇಷ್ಠಪುತ್ರೇ ಸ್ಥಿತೇ ರಾಜ! ನ ಕನೀಯಾನ್ ನೃಪೋ ಭವೇತ್ ॥೨॥ ಸ ಸಮೃದ್ಧಾಂ ಮಯಾಸಾರ್ಧ ಮಯೋ

ಭರತಃ - ಭರತನು, ರಾಮಸ್ಯ - ಶ್ರೀರಾಮನ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಪ್ರತ್ಯುವಾಚ - ಪ್ರತ್ಯುತ್ತರ ಕೊಟ್ಟನು, ಧರ್ಮಾತ್ - ಧರ್ಮದಿಂದ, ವಿಹೀನಸ್ಯ - ರಹಿತನಾದ, ಮೇ - ನನಗೆ, ರಾಜಧರ್ಮಃ - ರಾಜಧರ್ಮವು, ಕಿಂಕರಿಷ್ಯತಿ - ಏನುಮಾಡುತ್ತದೆ. ॥೧॥ ಹೇ ನರರ್ಷಭ - ಎಲೈ ನರಶ್ರೇಷ್ಠನೇ, ಅಸ್ಮಾಸು - ನಮ್ಮ ಪೂರ್ವಿಕರಲ್ಲಿ, ಶಾಶ್ವತಃ - ಕುಲಕ್ರಮಾಗತ ವಾದ, ಧರ್ಮಃ - ಧರ್ಮವು, ಸದಾ - ನಿರಂತರವೂ, ಸ್ಥಿತಃ - ಇರುತ್ತದೆ, ಹೇ ರಾಜನ್ - ಎಲೈ ರಾಜನೇ, ಜ್ಯೇಷ್ಠಪುತ್ರೇ - ಹಿರಿಮಗನು, ಸ್ಥಿತೇ - ಇರುತ್ತಿರಲು, ಕನೀಯಾನ್ - ಕಿರಿಯ,

---

ಈ ರೀತಿಯಾಗಿ ನುಡಿದ ಶ್ರೀರಾಮನನ್ನು ಕುರಿತು ಭರತಕುಮಾರನಿಂತೆಂದನು. "ಅಣ್ಣ ಶ್ರೀರಾಮಮೂರ್ತಿಯೆ! ನಿನ್ನನ್ನು ಸೇವಿಸಬೇಕೆಂಬ ಧರ್ಮದಿಂದ ವಿಹೀನನಾದ ನನಗೆ ಈ ರಾಜ್ಯದಿಂದ ಪ್ರಯೋಜನವೇನು? ನಾನಿದರಿಂದೇನುತಾನೇ ಮಾಡಬಲ್ಲೆ? ಜ್ಯೇಷ್ಠ ನಿರುವಾಗ, ಕನಿಷ್ಠನು ರಾಜ್ಯಾರ್ಹನಲ್ಲವೆಂದೂ, ಜ್ಯೇಷ್ಠನೇ ರಾಜ್ಯವನ್ನು ಪರಿಪಾಲಿಸ ಬೇಕೆಂದೂ ನಮ್ಮ ಹಿರಿಯರು ನಿರ್ಣಯಿಸಿದ್ದಾರೆ. ಅಲ್ಲದೆ ಈ ಧರ್ಮವು ಶಾಶ್ವತವಾಗಿ ಅನಾದಿವಂಶದವರು ಆಚರಿಸುತ್ತಿದ್ದಾರೆ. ಆದುದರಿಂದ ಈ ಧರ್ಮವು ಸನಾತನ ಧರ್ಮ

ಟಿ. (೧) **ಗೋವಿಂದರಾಜರು** ಈ ಸರ್ಗವಿಲ್ಲಿಯೇ ಇರತಕ್ಕುದೆಂದೂ, ಇದನ್ನು ನೂರೆರಡನೆಯ ಸರ್ಗವನ್ನಾಗಿ ಮಾಡಿದರೆ ಪೂರ್ವಾಪರ ವಿರುದ್ಧವುಂಟಾಗುತ್ತದೆಯೆಂದೂ ಹೇಳುತ್ತಾರೆಯಲ್ಲದೆ, ಶ್ರೀರಾಮನ ಪ್ರಶ್ನೆಗಳಿಗೆ ಭರತನಿಂದ ಸಮಂಜಸವಾದ ಉತ್ತರವೂ ಬರುವುದಿಲ್ಲವೆಂದೂ ದಶರಥ ಮರಣ ವಾರ್ತೆಯನ್ನು ಕೇಳಿ ಶ್ರೀರಾಮನು ದುಃಖಿಸಲಿಲ್ಲವೆಂಬ ದೋಷ ಬರುತ್ತದೆಯೆಂದೂ ಬರೆದಿರುತ್ತಾರೆ.

ಮಹೇಶ್ವರ ತೀರ್ಥರು ಈ ಸರ್ಗದ ಮೊದಲೇ "ತಂತುರಾಮಸ್ಸಮಾಜ್ಞಾಯ ಭ್ರಾತರಂ ಗುರುವತ್ಸಲಂ। ಲಕ್ಷ್ಮಣೇನ ಸಹ ಭ್ರಾತ್ರಾ ಪ್ರಷ್ಟುಂ ಸಮುಪಚಕ್ರಮೇ ॥" ಎಂಬ ಸರ್ಗವೇ ಇರಬೇಕೆಂದು ಹೇಳಿರುತ್ತಾರೆ.

ಅನೇಕ ಪ್ರಾಚೀನ ಪುಸ್ತಕಗಳಲ್ಲಿನ ಪಾಠಗಳನ್ನೂ, ಆಧುನಿಕ ಪಂಡಿತರ ಅಭಿಪ್ರಾಯಗಳನ್ನೂ ವಿಮರ್ಶಿಸಿದ್ದರಲ್ಲಿ ಈ ಸರ್ಗವಿಲ್ಲಿಯೇ ಇರಬೇಕೆಂದು ತೋರುತ್ತದೆ. ತಿಳಿವಳಿಕೆಯುಳ್ಳ ಮಹನೀಯರು ವಿಮರ್ಶಿಸಿ ಯಥಾಸ್ಥಿತಿಯನ್ನರಿತುಕೊಳ್ಳಬೇಕು.

ಗೋವಿಂದರಾಜೀಯ, ತಿಲಕ, ಮಹೇಶ್ವರ ತೀರ್ಥೀಯ, ಕತಕ ತನಿ ಶ್ಲೋಕೀ ಮುಂತಾದ ವ್ಯಾಖ್ಯಾನಗಳ ಅಭಿಪ್ರಾಯಗಳನ್ನಿಲ್ಲಿ ಬರೆಯಲು ಹೋದರೆ ಗ್ರಂಥ ವಿಸ್ತಾರವಾಗುವುದರಿಂದ ಈ ವಿಷಯವನ್ನು ಸೂಕ್ಷ್ಮವಾಗಿ ತಿಳಿಸಿರುತ್ತೇವೆ.

ಧ್ಯಾಂ ಗಚ್ಛ ರಾಘವ! ॥ ಅಭಿಷೇಚಯ ಚಾತ್ಮಾನಂ ಕುಲಸ್ಯಾಸ್ಯ ಭವಾಯ
ನಃ ॥ ೩ ॥ ರಾಜಾನಂ ಮಾನುಷಂ ಪ್ರಾಹು ರ್ದೇವತ್ವೇ ಸಮ್ಮತೋ ಮಮ ॥
ಯಸ್ಯ ಧರ್ಮಾರ್ಥ ಸಹಿತಂ ವೃತ್ತ ಮಾಹು ರಮಾನುಷಂ ॥ ೪ ॥ ಕೇಕಯ
ಸ್ಥೇಚ ಮಯಿತು ತ್ವಯಿಚಾರಣ್ಯ ಮಾಶ್ರಿತೇ ॥ ದಿವಮಾರ್ಯೋ ಗತೋ
ರಾಜಾ ಯಾಯಜೂಕ ಸ್ಸತಾಂ ಮತಃ ॥ ೫ ॥ ನಿಷ್ಕ್ರಾಂತಮಾತ್ರೇ ಭವತಿ

ನೃಪಃ - ಅರಸು, ನಭವೇತ್ - ಆಗಲಾರನು. ॥ ೨ ॥ ಹೇ ರಾಘವ - ಎಲೈ ಶ್ರೀರಾಮನೇ, ಸತ್ವಂ- ಅಂತಹ ನೀನು, ಮಯಾಸಾರ್ಧಂ - ನನ್ನೊಡಗೂಡಿ, ಸಮೃದ್ಧಾಂ - ಸಕಲೈಶ್ವರ್ಯ ಸಂಪನ್ನವಾದ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ಗಚ್ಛ - ಬಾ, ನಃ - ನಮಗೂ, ಅಸ್ಯಕುಲಸ್ಯ - ಈ ವಂಶಕ್ಕೂ, ಭವಾಯ - ಅಭಿವೃದ್ಧಿಗೋಸ್ಕರ, ಆತ್ಮಾನಂ - ನಿನ್ನನ್ನು, ಅಭಿಷೇಚಯ - ಅಭಿಷೇಕ ಮಾಡಿಕೊ. ॥ ೩ ॥ ಯಸ್ಯ - ಯಾವ ರಾಜನ, ಧರ್ಮಾರ್ಥಸಂಹಿತಂ - ಧರ್ಮಾರ್ಥಗಳಿಂದ ಕೂಡಿರುವ, ವೃತ್ತಂ - ನಡತೆಯನ್ನು, ಅಮಾನುಷಂ - ಮನುಷ್ಯಾತೀತವನ್ನಾಗಿ, ಆಹುಃ - ಹೇಳುತ್ತಾರೋ, ತಂರಾಜಾನಂ - ಅಂತಹ ರಾಜನನ್ನು, ಮಾನುಷಂಪ್ರಾಹುಃ - ಮನುಷ್ಯರನ್ನಾಗಿ ಹೇಳುತ್ತಾರೆ, ಸಃ - ಆ ರಾಜನು, ಮಮತು - ನನಗಾದರೆ, ದೇವತ್ವೇ - (ಗೋ) ಸಾಕ್ಷಾನ್ನಾರಾಯಣ ಭಾವದಲ್ಲಿ, ಸಮ್ಮತಃ - ಸಮ್ಮತನಾಗಿದ್ದಾನೆ. ॥ ೪ ॥ ಮಯಿತು - ನಾನಾದರೆ, ಕೇಕಯಸ್ಥೇ - ಕೇಕಯ ದೇಶದಲ್ಲಿದ್ದು, ತ್ವಯಿಚ - ನೀನೂ, ಆರಣ್ಯಂ - ಅರಣ್ಯವನ್ನು, ಆಶ್ರಿತೇ - ಹೊಂದಲು, ಸತಾಂ - ಸತ್ಪುರುಷರಿಗೆ, ಮತಃ - ಇಷ್ಟನಾದ, ಯಾಯಜೂಕಃ - ಸೋಮಯಾಜಿಯೂ, ಆರ್ಯಃ - ಪೂಜ್ಯನೂ, ರಾಜಾ - ದಶರಥರಾಯನು, ದಿವಂ - ಸ್ವರ್ಗವನ್ನು, ಗತಃ - ಹೊಂದಿದನು. ॥ ೫ ॥

ವೆನಿಸಿಕೊಂಡಿರುತ್ತದೆ. ಆದುದರಿಂದ ಇಂತಹ ಧರ್ಮವನ್ನು ನಾನು ತೊರೆಯಲು ಸಮರ್ಥನಾಗುವುದಿಲ್ಲ. ರಘುಕುಲೋದ್ಭವನಾದ ಎಲೈಶ್ರೀರಾಮಚಂದ್ರನೆ! ನನ್ನನ್ನುಹಿಂದಿಟ್ಟುಕೊಂಡು ಸಕಲ ಸಂಪತ್ಸಮೃದ್ಧವಾದ ಅಯೋಧ್ಯಾಪಟ್ಟಣಕ್ಕೆಹೊರಡು. ಇಂತು ಅಯೋಧ್ಯೆಗೆನಡೆತಂದು ನಮ್ಮ ಕುಲಕ್ಕೆ ಮಂಗಳವಾಗಲೋಸುಗ ರಾಜ್ಯದಲ್ಲಿ ಪಟ್ಟಾಭಿಷಿಕ್ತನಾಗು. ॥೧-೩॥ ಅಯ್ಯಾ; ರಘುರಾಮನೆ! ಲೋಕದಲ್ಲಿ ಸಾಮಾನ್ಯರಾದ ಜನರು ದೊರೆಯನ್ನು ಮನುಷ್ಯಮಾತ್ರದವನೆಂದು ಹೇಳುತ್ತಾರೆ. ಆದರೆ ಯಾವ ರಾಜನ ಧರ್ಮಾರ್ಥಸಹಿತವಾದ ನಡತೆಯು ಅಮಾನುಷವೆಂದು ಜ್ಞಾನಿಗಳು ಹೇಳಿದರೊ, ಅದರಿಂದ ರಾಜನೂ ದೇವತೆಗಳಲ್ಲಿ ಸೇರಿದವನೆಂದು ನನ್ನ ಅಭಿಪ್ರಾಯ. ತಪಶ್ಚರಣೆಯೇ ಮೊದಲಾದ ಕಾಯಕ್ಲೇಶಗಳಿಂದ ದೇವತ್ವವು ಲಭಿಸುತ್ತದೆ. ಯಾವ ಈತಿಬಾಧೆಗಳೂ ಇಲ್ಲದೆ ಧರ್ಮವನ್ನನುಸರಿಸಿ ತಪಸ್ಸಿಗೆ ಸಮಾನವಾದ ಕಾಯಕ್ಲೇಶವನ್ನೇ ಅನುಭವಿಸಿ ರಾಜ್ಯಸೂತ್ರವನ್ನು ನಡಿಸುತ್ತಾ, ಭೋಗಾದಿಗಳನ್ನನುಭವಿಸಿದರೂ ದೇವತ್ವವು ಸಿದ್ಧಿಯಾಗುತ್ತದೆ. ಆದುದರಿಂದ ರಾಜನಾದವನು ನನಗೆ ದೇವತೆಗಳಲ್ಲಿ ಸೇರಿದವನೆಂದೇ ಅಭಿಪ್ರಾಯವಿರುತ್ತದೆ.॥೪॥ಎಲೈಶ್ರೀರಾಮನೇ! ನಾನು ಕೇಕಯದೇಶಗಳಲ್ಲಿರಲು, ನೀನೂ ಅರಣ್ಯವನ್ನಾಶ್ರಯಿಸಿರಲು, ಸತ್ಪುರುಷರಿಗೆ ಸಮ್ಮತನು, ಸೋಮಯಾಜಿಯು, ಪೂಜ್ಯನೂ ಆದ ದಶರಥಮಹೀಪಾಲನು ಸ್ವರ್ಗವನ್ನೈದಿದನು. ಸೀತಾಲಕ್ಷ್ಮಣರೊಡಗೂಡಿ

ಸಹಸೀತೇ ಸಲಕ್ಷ್ಮಣೇ ॥ ದುಃಖಶೋಕಾಭಿಭೂತಸ್ತು ರಾಜಾ ತ್ರಿದಿವಮಭ್ಯಗಾತ್ ॥ ೬ ॥ ಉತ್ತಿಷ್ಠ ಪುರುಷವ್ಯಾಘ್ರ! ಕ್ರಿಯತಾಮುದಕಂ ಪಿತುಃ ॥ ಅಹಂಚಾಯಂಚ ಶತ್ರುಘ್ನಃ ಪೂರ್ವಮೇವ ಕೃತೋದಕೌ ॥ ೭ ॥ ಪ್ರಿಯೇಣ ಖಲು ದತ್ತಂಹಿ ಪಿತೃಲೋಕೇಷು ರಾಘವ! ॥ ಅಕ್ಷಯ್ಯಂ ಭವತೀತ್ಯಾಹುರ್ಭವಾಂಶ್ಚೈವ ಪಿತುಃ ಪ್ರಿಯಃ ॥ ೮ ॥

ತ್ವಾಮೇವ ಶೋಚಂ ಸ್ತವದರ್ಶನೇಪ್ಸು
ಸ್ತ್ವಯ್ಯೇವ ಸಕ್ತಾ ಮನಿವರ್ತ್ಯ ಬುದ್ಧಿಂ ॥

ರಾಜಾ - ದಶರಥರಾಯನು, ಸಹಸೀತೇ - ಸೀತಾದೇವಿಯಿಂದಲೂ, ಸಲಕ್ಷ್ಮಣೇ - ಲಕ್ಷ್ಮಣನಿಂದಲೂ ಒಡಗೂಡಿದ, ಭವತಿ - ನೀನು, ನಿಷ್ಕ್ರಾಂತಮಾತ್ರೇ - ಹೊರಟುಹೋದೊಡನೆಯೇ, ದುಃಖಶೋಕಾಭಿಭೂತಸ್ತು - ನಿನ್ನ ವಿಷಯಕಮನೋವ್ಯಥೆಯಿಂದ ಆವಿಷ್ಟನಾಗಿ, ತ್ರಿದಿವಂ - ಸ್ವರ್ಗಲೋಕವನ್ನು, ಅಭ್ಯಗಾತ್ - ಹೊಂದಿದನು. ॥ ೬ ॥ ಹೇ ಪುರುಷವ್ಯಾಘ್ರ - ಎಲೈ ಪುರುಷಶ್ರೇಷ್ಠನೇ, ಉತ್ತಿಷ್ಠ-ಏಳು, ಪಿತುಃ-ತಂದೆಗೆ, ಉದಕಂ - ತಿಲೋದಕವು, ಕ್ರಿಯತಾಂ-ಮಾಡಲ್ಪಡಲಿ, ಅಹಂ - ನಾನೂ, ಅಯಂಶತ್ರುಘ್ನಶ್ಚ - ಈ ಶತ್ರುಘ್ನನು, ಉಭೌ - ಇಬ್ಬರೂ, ಪೂರ್ವಮೇವ - ಮೊದಲೇ, ಕೃತೋದಕೌ - ಮಾಡಲ್ಪಟ್ಟ ತಿಲೋದಕಗಳುಳ್ಳವರಾಗಿದ್ದೇವೆ. ॥ ೭ ॥ ಹೇ ರಾಘವ - ಎಲೈ ಶ್ರೀರಾಮನೇ, ಹಿ - ಯಾವ ಕಾರಣ, ಪ್ರಿಯೇಣ - ಇಷ್ಟನಿಂದ, ದತ್ತಂ - ಕೊಡಲ್ಪಟ್ಟತಿಲೋದಕವು, ಪಿತೃಲೋಕೇಷು - ಪಿತೃಲೋಕಗಳಲ್ಲಿ, ಅಕ್ಷಯ್ಯಂ - ಶಾಶ್ವತವಾದುದು, ಭವತಿ - ಆಗುತ್ತದೆಯೆಂದು, ಆಹುಃ - ಹೇಳುತ್ತಾರೆಯೋ, ಭವಾಂಶ್ಚೈವ - ನೀನೂ, ಪಿತುಃ - ತಂದೆಗೆ, ಪ್ರಿಯಃ - ಇಷ್ಟನು. ॥೮॥ ತೇ - ನಿನ್ನ, ಪಿತಾ - ತಂದೆಯು, ತ್ವಯಾ - ನಿನ್ನಿಂದ, ವಿಹೀನಃ - ಹೀನನಾಗಿ, ತ್ವಾಮೇವ-ನಿನ್ನನ್ನೇಕುರಿತು, ಶೋಚನ್ - ದುಃಖಿಸುತ್ತ, ತವ - ನಿನ್ನ, ದರ್ಶನೇಪ್ಸುಃ - ದರ್ಶನವನ್ನೇ ಬೇಡುತ್ತ, ತ್ವಯ್ಯೇವ - ನಿನ್ನಲ್ಲಿಯೇ, ಸಕ್ತಾಂ - ಸಂಬಂಧಿಸಿದ, ಬುದ್ಧಿಂ - ಬುದ್ಧಿಯನ್ನು, ಅನಿ

ನೀನು ಅರಣ್ಯಕ್ಕೆ ತೆರಳಿದೊಡನೆಯೇ ಮಹಾರಾಜನು ನಿನ್ನವಿಷಯಕವಾದ ದುಃಖಶೋಕಗಳಿಂದ ಪರಿವೃತನಾಗಿ ಸ್ವರ್ಗಲೋಕಕ್ಕೆ ತೆರಳಿದನು ಆದುದರಿಂದೆಲೈ ಪುರುಷಶ್ರೇಷ್ಠನೇ! ಏಳು, ತಂದೆಗೆ ತಿಲೋದಕಾದಿ ಸಕಲ ಕ್ರಿಯೆಗಳನ್ನೂ ಮಾಡುವವನಾಗು. ನಾನೂ ಈ ಶತ್ರುಘ್ನನೂ ಹಿಂದೆಯೇ ಉದಕಕ್ರಿಯೆಗಳನ್ನುಮಾಡಿದ್ದೇವೆ. ॥೬-೭॥ ಅಯ್ಯಾ! ರಘುಕುಲೋದ್ಭವನೆ! ಶಾಸ್ತ್ರವೇತ್ತರಾದ ಪಂಡಿತರು, ಮೃತರಾದವರಿಗೆ ಪ್ರಿಯಂಕರರಾದವರು, ಉದಕಕ್ರಿಯೆಗಳನ್ನು ಮಾಡಿದರೆ ಅದು ಪಿತೃಲೋಕಗಳಲ್ಲಿ ಅಕ್ಷಯವಾದುದಾಗುತ್ತದೆಯೆಂದು ಹೇಳುತಾರೆ. ನೀನಾದರೋ ತಂದೆಯಾದ ದಶರಥರಾಯನಿಗೆ ಪ್ರೀತಿಪಾತ್ರನಾಗಿರುವೆ. ದಶರಥರಾಜನು ನಿನ್ನನ್ನೇ ಕುರಿತು ದುಃಖಿಸುತಾ, ನಿನ್ನ ದರ್ಶನವನ್ನೇ ಅಪೇಕ್ಷಿಸುತಾ,

ತ್ವಯಾ ವಿಹೀನ ಸ್ತವಶೋಕಮಗ್ನ
ಸ್ತ್ವಾಂ ಸಂಸ್ಮರ ನ್ನಸ್ತಮಿತಃ ಪಿತಾ ತೇ ॥ ೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋತ್ತರಶತತಮಸ್ಸರ್ಗಃ.

ವರ್ತ್ಯ - ತಿರುಗಿಸದೆ, ತವ - ನಿನ್ನವಿಷಯಕವಾದ, ಶೋಕಮಗ್ನಃ - ವ್ಯಸನದಲ್ಲಿ ಮುಳುಗಿ, ತ್ವಾಂ - ನಿನ್ನನ್ನು, ಸಂಸ್ಮರ್ರ - ಸ್ಮರಿಸುತ್ತ, ಅಸ್ತಮಿತಃ - ಅಸ್ತಮಯವನ್ನು ಹೊಂದಿದನು. ॥ ೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕೋತ್ತರಶತತಮಸ್ಸರ್ಗಃ.

ನಿನ್ನಲ್ಲಿಯೇ ನೆಟ್ಟಬುದ್ಧಿಯನ್ನು ಹಿಂತಿರುಗಿಸಲಾರದೆ, ನಿನ್ನಗಲಿಕೆಯಿಂದ ಮಹಾದುಃಖಿತನಾಗಿ, ನಿನ್ನನ್ನೇ ಸ್ಮರಿಸುತ್ತಾ ಅಸ್ತಮಿಸಿದನು. ॥ ೮-೯ ॥

ಇಂತಿದು ಭರತಶೋಕ ದಶರಥ ನಿರ್ಯಾಣಕಥನವೆಂಬ
ನೂರೊಂದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ದ್ವ್ಯುತ್ತರಶತತಮಸ್ಸರ್ಗಃ.

ತಾಂ ಶ್ರುತ್ವಾ ಕರುಣಾಂ ವಾಚಂ ಪಿತುರ್ಮರಣ ಸಂಹಿತಾಂ॥ರಾಘವೋ ಭರತೇನೋಕ್ತಾಂ ಬಭೂವ ಗತಚೇತನಃ ॥ ೧ ॥ ತಂತು ವಜ್ರಮಿವೋತ್ಸೃಷ್ಟ ಮಾಹವೇ ದಾನವಾರಿಣಾ ॥ ವಾಗ್ವಜ್ರಂ ಭರತೇನೋಕ್ತಮಮನೋಜ್ಞಂ ಪರಂತಪಃ ॥ ೨ ॥ ಪ್ರಗೃಹ್ಯ ಬಾಹೂ ರಾಮೋವೈ ಪುಷ್ಪಿತಾಗ್ರೋ ಯಥಾ ದ್ರುಮಃ ॥ ವನೇ ಪರಶುನಾ ಕೃತ್ತ ಸ್ತಥಾ ಭುವಿ ಪಪಾತಹ ! ॥ ೩ ॥ ತಥಾ ನಿಪತಿತಂ ರಾಮಂ ಜಗತ್ಯಾಂ ಜಗತೀಪತಿಂ ॥ ಕೂಲಘಾತಪರಿಶ್ರಾಂತಂ ಪ್ರಸುಪ್ತಮಿವ ಕುಂಜರಂ ॥ ೪ ॥ ಭ್ರಾತರಸ್ತೇ ಮಹೇಷ್ವಾಸಂ ಸರ್ವತ ಶ್ಶೋಕ

ರಾಘವಃ - ಶ್ರೀರಾಮನು, ಭರತೇನ-ಭರತನಿಂದ, ಉಕ್ತಾಂ-ಹೇಳಲ್ಪಟ್ಟ, ಪಿತುಃ-ತಂದೆಯ ಮರಣಸಂಹಿತಾಂ - ಮರಣವಾರ್ತೆಯಿಂದ ಕೂಡಿರುವ, ಅಕರುಣಾಂ - ಕ್ರೂರವಾದ, ತಾಂವಾಚಂ - ಆ ಮಾತನ್ನು, ಶ್ರುತ್ವಾ - ಕೇಳಿ, ಗತಚೇತನಃ - ಮೈಮರೆತವನು, ಬಭೂವ - ಆದನು. ॥ ೧ ॥ ದಾನವಾರಿಣಾ - ದೇವೇಂದ್ರನಿಂದ, ಆಹವೇ - ಕಾಳಗದಲ್ಲಿ, ಉತ್ಸೃಷ್ಟಂ-ಬಿಡಲಾದ, ಅಮನೋಜ್ಞಂ-ಮನಸ್ಸಿಗಿಂಪಲ್ಲದ, ವಾಗ್ವಜ್ರಂ - ವಜ್ರಾಯುಧ ಪ್ರಾಯವಾದ ಮಾತನ್ನು, ಶ್ರುತ್ವಾ - ಕೇಳಿ, ಪರಂತಪಃ - ಶತ್ರುಸಂಹಾರಕನಾದ, ರಾಮಃ - ಶ್ರೀರಾಮನು, ವನೇ - ಅರಣ್ಯದಲ್ಲಿ, ಪರಶುನಾ - ಕೊಡಲಿಯಿಂದ, ಕೃತ್ತಃ - ಕತ್ತರಿಸಲ್ಪಟ್ಟ, ಪುಷ್ಪಿತಾಗ್ರಃ - ಹೂವೊಳೆತ ತುದಿಗಳುಳ್ಳ, ದ್ರುಮಃ-ಗಿಡವು, ಯಥಾ - ಹೇಗೆ, ಪತತಿ - ಬೀಳುತ್ತದೆಯೋ, (ತಥಾ - ಹಾಗೆಯೆ) ಬಾಹೂ-ಭುಜಗಳನ್ನು, ಪ್ರಗೃಹ್ಯ-ಎತ್ತಿಕೊಂಡು, ಭುವಿ - ನೆಲದಲ್ಲಿ, ಪಪಾತಹ - ಬಿದ್ದನಷ್ಟೆ. ॥ ೩ ॥ ತಥಾ - ಹಾಗೆಯೇ, ಕೂಲಘಾತ ಪರಿಶ್ರಾಂತಂ - ಕೂಲಘಾತವೆಂಬ ಕ್ರೀಡೆಯಿಂದ, ಪರಿಶ್ರಾಂತಂ - ಬಳಲಿದ, ಪ್ರಸುಪ್ತಂ - ಮಲಗಿರುವ, ಕುಂಜರಮಿವ - ಆನೆಯಂತೆ, ಜಗತ್ಯಾಂ - ನೆಲದಲ್ಲಿ, ನಿಪತಿತಂ - ಬಿದ್ದಿರುವ, ಮಹೇಷ್ವಾಸಂ-

---

ಆಬಳಿಕ ರಘುಕುಲೋದ್ಭವನಾದ ಶ್ರೀರಾಮನು ಭರತನು ಹೇಳಿದ ತಂದೆಯ ಮರಣವಾರ್ತೆಯನ್ನು ಬೋಧಿಸುತ್ತಿರುವುದೂ, ದೈನ್ಯವನ್ನುಂಟುಮಾಡುತ್ತಿರುವುದೂ ಆದ “ ದಶರಥ ಮಹಾ ರಾಜನು ಸ್ವರ್ಗಸ್ಥನಾದನು. “ ಎಂಬ ಮಾತುಗಳನ್ನು ಕೇಳಿ ನಿಶ್ಚೇಷ್ಟಿತನಾದನು. ಅಲ್ಲದೆ ರಣಾಂಗಣದಲ್ಲಿ ಸ್ವರ್ಗರಾಜನಿಂದ ಪ್ರಯೋಗಿಸಲಾದ ವಜ್ರಾಯುಧದಂತೆ ಭಯಂಕರವಾದುದೂ, ಮನಸ್ಸಿಗೆ ದುಃಖವನ್ನುಂಟುಮಾಡುತ್ತಿರುವುದೂ ಆದ ಭರತನ ನುಡಿಗಳನ್ನು ಕೇಳಿ ಶತ್ರುಮರ್ದನನಾದ ಆ ಶ್ರೀರಾಮಮೂರ್ತಿಯು ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ಪುಷ್ಪನಿಬಿಡಿತವಾದುದೂ, ಕೊಡಲಿಯಿಂದ ಕತ್ತರಿಸಲಾದುದೂ ಆದ ವೃಕ್ಷದಂತೆ ಕೆಳಕ್ಕೆ ಬಿದ್ದವನಾದನು. ಆಸಮಯದಲ್ಲಿ ಶ್ರೀರಾಮನ ತಮ್ಮಂದಿರೂ, ಆತನ ಪತ್ನಿಯಾದ ಸೀತಾದೇವಿಯೂ ಆರೀತಿ ಭೂಮಿಯಲ್ಲಿ ಬಿದ್ದವನೂ, ತೀರದಲ್ಲಿರುವ ಮರಳುದಿಣ್ಣೆ

ಕರ್ಶಿತಂ ॥ ರುದಂತ ಸ್ಸಹವೈದೇಹ್ಯಾ ಸಿಷಿಚು ಸ್ಸಲಿಲೇನವೈ ॥ ೫ ॥ ಸತು ಸಂಜ್ಞಾಂ ಪುನ ರ್ಲಬ್ಧ್ವಾ ನೇತ್ರಾಭ್ಯಾ ಮಾಸ್ರಮುತ್ಸೃಜನ್ ॥ ಉಪಾಕ್ರಾಮತ ಕಾಕುತ್ಸ್ಥಃ ಕೃಪಣಂ ಬಹುಭಾಷಿತಂ ॥ ೬ ॥ ಕಿಂಕರಿಷ್ಯಾ ಮ್ಯಯೋಧ್ಯಾಯಾಂ ತಾತೇ ದಿಷ್ಟಾಂ ಗತಿಂ ಗತೇ ॥ ಕಸ್ತಾಂ ರಾಜವರಾ ದ್ವಿನಾ ಮಯೋಧ್ಯಾಂ ಪಾಲಯಿಷ್ಯತಿ? ॥ ೭ ॥ ಕಿಂನು ತಸ್ಯ ಮಯಾ ಕಾರ್ಯಂ ದುರ್ಜಾತೇನ ಮಹಾತ್ಮನಃ? ॥ ಯೋ ಮೃತೋ ಮಮ ಶೋಕೇನ ಮಯಾಚಾಪಿ ನ ಸಂಸ್ಕೃತಃ ॥ ೮ ॥ ಅಹೋ! ಭರತ! ಸಿದ್ಧಾರ್ಥೋ ಯೇನ ರಾಜಾ ಶ್ತ್ವಯಾ

ಮಹಾ ಧನುರ್ಧಾರಿಯಾದ, ಸಹವೈದೇಹ್ಯಾ - ಸೀತಾದೇವಿಯೊಡನೆ, ಶೋಕಕರ್ಶಿತಂ - ಅಳುವಿಕೆಯಿಂದ ಕೃಶೀಭೂತನಾದ, ರಾಮಂ - ಶ್ರೀರಾಮನನ್ನು, ಸರ್ವತಃ - ಸುತ್ತುಮುತ್ತಲೂ, ರುದಂತಃ - ಅಳುತ್ತಿರುವ, ತೇಭ್ರಾತರಃ - ಆ ಅಣ್ಣತಮ್ಮಂದಿರು, ಸಲಿಲೇನವೈ - ನೀರಿನಿಂದ, ಸಿಷಿಚುಃ - ನೆನೆಯಿಸಿದರು. ॥ ೫ ॥ ಸಕಾಕುಸ್ಥಃ - ಆ ಶ್ರೀರಾಮನು, ಪುನಃ - ಮರಳಿ, ಸಂಜ್ಞಾಂ - ಪ್ರಜ್ಞೆಯನ್ನು, ಲಬ್ಧ್ವಾ - ಹೊಂದಿ, ನೇತ್ರಾಭ್ಯಾಂ - ಕಂಗಳಿಂದ, ಆಸ್ರಂ - ಕಂಬನಿಯನ್ನು, ಉತ್ಸೃಜನ್ - ಬಿಡುತ್ತ, ಕೃಪಣಂ ದೈನ್ಯವಾಗಿ, ಬಹು-ಬಹಳವಾಗ, ಭಾಷಿತುಂ-ಮಾತನಾಡಲು, ಉಪಾಕ್ರಮತ-ಆರಂಭಿಸಿದನು. ॥ ೬ ॥ ಧರ್ಮಾತ್ಮಾ - ಧರ್ಮಿಷ್ಠನಾದ, ಸರಾಮಃ - ಆ ಶ್ರೀರಾಮನು, ಪೃಥಿವೀಪತಿಂ - ಅರಸಾದ, ಪಿತರಂ - ತಂದೆಯನ್ನು, ಸ್ವರ್ಗತಂ - ಸ್ವರ್ಗಸ್ಥನನ್ನಾಗಿ, ಶ್ರುತ್ವಾ - ಕೇಳಿ, ಭರತಂ - ಭರತನನ್ನು ಕುರಿತು, ಧರ್ಮಸಂಹಿತಂ - ಧರ್ಮದಿಂದ ಕೂಡಿರುವ, ವಾಕ್ಯಂ - ಮಾತನ್ನು, ಉವಾಚ - ಹೇಳಿದನು. ॥ ೭ ॥ ತಾತೇ - ತಂದೆಯಾದ ದಶರಥನು, ದಿಷ್ಟಾಂ - ಕಾಲಕಲ್ಪಿತವಾದ, ಗತಿಂ-ಮರಣವನ್ನು, ಗತೇ - ಹೊಂದಲು, ಅಯೋಧ್ಯಾಯಾಂ - ಅಯೋಧ್ಯಾಪಟ್ಟದಲ್ಲಿ, ಕಿಂಕರಿಷ್ಯಾಮಿ - ಏನು ಮಾಡೇನು, ರಾಜವರಾತ್ - ರಾಜಶ್ರೇಷ್ಠನಾದ ದಶರಥರಾಯನಿಂದ, ಹೀನಾಂ - ರಹಿತವಾದ, ತಾಂ ಅಯೋಧ್ಯಾಂ - ಆ ಅಯೋಧ್ಯಾಪಟ್ಟಣವನ್ನು, ಕಃ - ಯಾವನು, ಪಾಲಯಿಷ್ಯತಿ-ಪರಿಪಾಲನೆಮಾಡುತ್ತಾನೆ. ॥ ೮ ॥ ಮಹಾತ್ಮನಾ - ಮಹಾ ಪ್ರಭಾವವಂತನಾದ, ತಸ್ಯ - ಆ ದಶರಥರಾಯನಿಗೆ, ದುರ್ಜಾ

ಯನ್ನು ತಿವಿದು ಕೆಳಗೆಬಿದ್ದ ಆನೆಯಂತಿರುವವನೂ, ಮಹಾ ಧನುರ್ಧಾರಿಯೂ, ಅತಿಶಯವಾದ ವ್ಯಸನದಿಂದ ಕೃಶೀಭಾವವನ್ನು ಹೊಂದಿದವನೂ ಆದ ಶ್ರೀರಾಮನ ಮೇಲೆ ಶೀತಳೋದಕವನ್ನು ಚಿಮುಕಿಸಿದರು. ॥ ೧-೫ ॥ ಇದಾದ ಸ್ವಲ್ಪಹೊತ್ತಿನ ಮೇಲೆ ಕಕುತ್ಸ್ಥವಂಶೋದ್ಭವನಾದ ರಾಮಚಂದ್ರನು ಪ್ರಜ್ಞೆಯನ್ನುಹೊಂದಿ ಕಣ್ಣೀರನ್ನು ಧಾರೆಧಾರೆಯಾಗಿ ಸುರಿಸುತ್ತಾ ದೀನಸ್ವರದಿಂದ ಹೀಗೆ ಹೇಳಲಾರಂಭಿಸಿದನು. ಅಲ್ಲದೆ ಧರ್ಮ ಸ್ವಭಾವವುಳ್ಳ ಆ ಶ್ರೀರಾಮನು ತನಗೆ ತಂದೆಯೂ, ಧರಾವಲ್ಲಭನೂ, ಆದ ದಶರಥರಾಯನು ಸ್ವರ್ಗತನಾದನೆಂಬುದನ್ನರಿತು ಧರ್ಮಯುಕ್ತವಾದ ಮಾತುಗಳನ್ನು ಹೇಳಬೇಕೆಂದುಕೊಂಡು ತಮ್ಮನಾದ ಭರತನೊಡನೆ ಹೀಗೆಂದನು. "ಎಲೈ ಭರತನೆ; ನಮಗೆ ತಂದೆಯಾದ ದಶರಥರಾಯನು ಸ್ವರ್ಗವಾಂತನು. ರಾಜಹೀನವಾದ ಅಯೋಧ್ಯಾಪಟ್ಟಣವನ್ನು ಯಾರುತಾನೇ ಆಳಿಯಾರು? ನಾನಾದರೂ ಅಯೋಧ್ಯಾಪಟ್ಟಣದಲ್ಲಿ ಏನುಮಾಡಿಯೇನು? ಅಯ್ಯೋ! ನಾನೆಂತಹ

ನಘ! ॥ ಶತ್ರುಘ್ನೇನಚ ಸರ್ವೇಷು ಪ್ರೇತಕೃತ್ಯೇಷು ಸತ್ಕೃತಃ ॥ ೯ ॥ ನಿಷ್ಪ್ರಧಾನಾ ಮನೇಕಾಗ್ರಾಂ ನರೇಂದ್ರೇಣ ವಿನಾಕೃತಾಂ ॥ ನಿವೃತ್ತ ವನವಾಸೋಪಿ ನಾಯೋಧ್ಯಾಂ ಗಂತು ಮುತ್ಸಹೇ ! ॥ ೧೦ ॥ ಸಮಾಪ್ತ ವನವಾಸಂ ಮಾ ಮಯೋಧ್ಯಾಯಾಂ ಪರಂತಪ! ॥ ಕೋನುಶಾಸಿಷ್ಯತಿ ಪುನ ಸ್ತಾತೇ ಲೋಕಾಂತರಂ ಗತೇ ॥ ೧೧ ॥ ಪುರಾ ಪ್ರೇಕ್ಷ್ಯ ಸುವೃತ್ತಂ ಮಾಂ ಪಿತಾ ಯಾನ್ಯಾಹ ಸಾಂತ್ವಯನ್ ॥ ವಾಕ್ಯಾನಿ ತಾನಿ ಶ್ರೋಷ್ಯಾಮಿ ಕುತ ಶ್ಶ್ರೋತ್ರ ಸುಖಾನ್ಯ

ತೇನ - ದುಷ್ಪುತ್ರನಾದ, ಮಯಾ - ನನ್ನಿಂದ, ಕಿನ್ನುಕಾರ್ಯಂ - ಏನುಮಾಡತಕ್ಕದು, ಯಃ - ಯಾವ ದಶರಥರಾಯನು, ಮಮ - ನನ್ನ, ಶೋಕೇನ - ವ್ಯಸನದಿಂದ, ಮೃತಃ - ಮರಣವನ್ನುಹೊಂದಿದನೋ, ಮಯಾಚಾಪಿ - ನನ್ನಿಂದಲೂ, ನಸಂಸ್ಕೃತಶ್ಚ - ಸಂಸ್ಕಾರಮಾಡಲ್ಪಡಲೂ ಇಲ್ಲವೋ ॥ ೯ ॥ ಹೇ ಭರತ - ಎಲೈ ಭರತನೇ, ಹೇ ಅನಘ-(ಗೋ)ಎಲೈ ಪಿತೃಸಂಸ್ಕಾರ ರೂಪಭಾಗ್ಯಕ್ಕೆ ವಿಘಟವಾದ ಪಾಪದಿಂದರಹಿತನೇ, ರಾಜಾ - ಅರಸಾದ ದಶರಥರಾಯನು, ಯೇನತ್ವಯಾ-ಯಾವ ನಿನ್ನಿಂದ, ಶತ್ರುಘ್ನೇನಚ - ಶತ್ರುಘ್ನನಿಂದಲೂ, ಸರ್ವೇಷು - ಸಮಸ್ತಗಳಾದ, ಪ್ರೇತಕೃತ್ಯೇಷು-ಪ್ರೇತಕಾರ್ಯಗಳಲ್ಲಿ, ಸತ್ಕೃತಃ - ಪೂಜಿಸಲ್ಪಟ್ಟನೋ, ಸತ್ವಂ - ಅಂತಹ ನೀನು, ಸಿದ್ಧಾರ್ಥಃ - ಕೃತಾರ್ಥನಾದೆ, ಅಹಂ - ನಾನು, ನಿವೃತ್ತವನವಾಸೋಪಿ-ಸಮಾಪ್ತವಾದ ವನವಾಸವುಳ್ಳವನಾದರೂ, ನಿಷ್ಪ್ರಧಾನಾಂ-ನಾಥರಹಿತವಾದ, ಅನೇಕಾಗ್ರಾಂ - ಜಾಗರಗೊಂಡಿರುವ, ನರೇಂದ್ರೇಣ - ರಾಜನಿಂದ, ವಿನಾಕೃತಾಂ-ವಿರಹಿತವಾದ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ಗಂತುಂ - ಹೋಗಲು, ನೋತ್ಸಹೇ - ಸಮ್ಮತಿಸಲಾರೆನು. ॥ ೧೧ ॥ ಹೇ ಪರಂತಪ - ಎಲೈ ಶತ್ರುಸಂಹಾರಕನೇ, ತಾತೇ - ತಂದೆಯು, ಲೋಕಾಂತರಂ - ಸ್ವರ್ಗಲೋಕವನ್ನು, ಗತೇ - ಹೊಂದಲು, ಅಯೋಧ್ಯಾಯಾಂ - ಅಯೋಧ್ಯಾಪಟ್ಟಣದಲ್ಲಿ, ಸಮಾಪ್ತವನವಾಸಂ - ಸಂಪೂರ್ಣಗೊಳಿಸಲ್ಪಟ್ಟ ಅರಣ್ಯವಾಸವುಳ್ಳ, ಮಾಂ-

---

ದುಷ್ಟನು. ಮಹಾರಾಜನಾದ ದಶರಥನು ನನ್ನನ್ನು ಕುರಿತೇ ಅಧಿಕವಾಗಿ ದುಃಖಿಸುತ್ತಾ ಮೃತಿಯೊಂದಿದನಲ್ಲವೆ! ಹೀಗೆ ನನ್ನನ್ನೇ ಕುರಿತು ದುಃಖಿಸಿ ಮರಣವಾಂತ ಭೂಪಾಲನ ಸಮೀಪದಲ್ಲಿದ್ದುಕೊಂಡು ಆತನ ಪ್ರೇತಕೃತ್ಯಗಳನ್ನು ಮಾಡದವನಾದೆನಲ್ಲವೆ ?. ಆದುದರಿಂದಲೇ ನಾನು ದುಷ್ಪುತ್ರನೆಂದೆಣಿಸುತ್ತೇನೆ. ತಮ್ಮ, ಭರತ! ನೀನು ಶತ್ರುಘ್ನನೊಡಗೂಡಿ ತಂದೆಯ ಪ್ರೇತಕೃತ್ಯಗಳನ್ನಾಚರಿಸಿದೆ. ಆದುದರಿಂದ ನೀವಿಬ್ಬರೂ ಕೃತಾರ್ಥರೇ ಆದಿರಿ. ॥ ೬-೧೦ ॥ ಮಂತ್ರಿಯಿಲ್ಲದೆಯೂ, ಮಹಾವ್ಯಾಕುಲವಾಗಿಯೂ, ರಾಜನಿಲ್ಲದೆ ಶೂನ್ಯವಾಗಿಯೂ, ಇರುವ ಅಯೋಧ್ಯಾಪಟ್ಟಣಕ್ಕೆ ಈ ಹದಿನಾಲ್ಕು ಸಂವತ್ಸರಗಳು ಕಳೆದ ಮೇಲೆಯಾದರೂ ಬರಲು ನಾನು ಬಯಸುವದಿಲ್ಲ. ನಾನು ಈ ಹದಿನಾಲ್ಕುವರ್ಷಗಳ ವನವಾಸವೆಂಬ ಪಿತೃವಾಕ್ಯವನ್ನು ಪರಿಪಾಲಿಸಿ ಅಯೋಧ್ಯೆಗೆ ಹೇಗೆತಾನೇ ಬರಲಿ? ಒಂದುವೇಳೆ ಹಾಗೆಬಂದುದಾದರೆ ಇನ್ನು ಆ ನಗರದಲ್ಲಿ ಮಾಡಬೇಕಾದ ಕೆಲಸಗಳಲ್ಲಿ ನನ್ನನ್ನು ಯೋಜಿಸುವಾತನಾರು? ತಂದೆಯಿಲ್ಲದ ರಾಜಧಾನಿಗೆ ಬರುವದುಹೇಗೆ ? ಬಂದರೂ “ ರಾಮನು ಬಂದನಲ್ಲ ” ಎಂದು ಸಂತೋಷಪಡುವಾತನಾರು ? ಯಾರೂ ಇರುವದಿಲ್ಲ, ಓ ಭರತಕುಮಾರನೇ! ಹಿಂದೆ ನನ್ನ

ಹಮ್ ‖ ೧೨ ‖ ಏವಮುಕ್ತ್ವಾ ಸ ಭರತಂ ಭಾರ್ಯಾಮಭ್ಯೇತ್ಯ ರಾಘವಃ ‖
ಉವಾಚ ಶೋಕಸಂತಪ್ತಃ ಪೂರ್ಣಚಂದ್ರ ನಿಭಾನನಾಮ್ ‖ ೧೩ ‖ ಸೀತೇ!
ಮೃತ ಸ್ತೇ ಶ್ವಶುರಃ ಪಿತ್ರಾ ಹೀನೋಽಸಿ ಲಕ್ಷ್ಮಣ! ‖ ಭರತೋ ದುಃಖಮಾ
ಚಷ್ಟೇ ಸ್ವರ್ಗತಂ ಪೃಥಿವೀ ಪತಿಂ ‖ ೧೪ ‖ ತತೋ ಬಹುಗುಣಂ ತೇಷಾಂ
ಬಾಷ್ಪೋ ನೇತ್ರೇಷ್ವಜಾಯತ ‖ ತಥಾ ಬ್ರುವತಿ ಕಾಕುತ್‌ಸ್ಥೇ ಕುಮಾ
ರಾಣಾಂ ಯಶಸ್ವಿನಾಂ ‖ ೧೫ ‖ ತತಸ್ತೇ ಭ್ರಾತರ ಸ್ಸರ್ವಂ ಭೃಶಮಾಶ್ವಾಸ್ಯ

ನನ್ನನ್ನು, ಕಃಪುನಃ - ಯಾವನುತಾನೇ, ಅನುಶಾಸಿಷ್ಯತಿ - ಕಾರ್ಯಗಳನ್ನು ನಿಯೋಗಿಸುತ್ತಾನೆ. ‖ ೧೨ ‖ ಪುರಾ - ಪೂರ್ವದಲ್ಲಿ, ಪಿತಾ - ತಂದೆಯು, ಸುವೃತ್ತಂ - ಸದ್ವ್ಯಾಪಾರವುಳ್ಳ, ಮಾಂ - ನನ್ನನ್ನು, ಪ್ರೇಕ್ಷ್ಯ - ಕಂಡು, ಸಾಂತ್ವಯನ್ - ಸಮಾಧಾನಗೊಳಿಸುತ್ತ, ಯಾನಿವಾಕ್ಯಾನಿ - ಯಾವ ಮಾತುಗಳನ್ನು, ಆಹ - ಹೇಳಿದನೋ, ಅಹಂ - ನಾನು, ಶ್ರೋತ್ರಸುಖಾನಿ - ಕರ್ಣಾನಂದ ಕರವಾದ, ತಾನಿ - ಆ ಮಾತುಗಳನ್ನು, ಕುತಃ - ಯಾರಿಂದ, ಶ್ರೋಷ್ಯಾಮಿ-ಕೇಳುತ್ತೇನೆ, ಸರಾಘವಃ- ಆ ಶ್ರೀರಾಮನು, ಭರತಂ - ಭರತನನ್ನು ಕುರಿತು, ಏವಮುಕ್ತ್ವಾ - ಹೀಗೆ ಹೇಳಿ, ಪೂರ್ಣಚಂದ್ರ ನಿಭಾನನಾಂ - ಹುಣ್ಣಿಮೆಯ ಚಂದ್ರನಿಗೆ ಸಮಾನವಾದ ಮುಖವುಳ್ಳ, ಭಾರ್ಯಾಂ - ಹೆಂಡತಿಯನ್ನು ಕುರಿತು, ಅಭ್ಯೇತ್ಯ - ಬಂದು, ಶೋಕಸಂತಪ್ತಃ - ವ್ಯಸನದಿಂದ ಪರಿತಪಿಸುತ್ತ, ಉವಾಚ - ಹೇಳಿದನು, ಹೇ ಸೀತೆ - ಎಲೌ ಸೀತೆಯೇ, ತೇ - ನಿನ್ನ, ಶ್ವಶುರಃ - ಮಾವನು, ಮೃತಃ-ಮಡಿದನು, ಹೇ ಲಕ್ಷ್ಮಣ- ಆಯ್ಯಾ ಲಕ್ಷ್ಮಣನೇ, ತ್ವಂ - ನೀನು, ಪಿತ್ರಾ - ತಂದೆಯಿಂದ, ಹೀನಃ - ರಹಿತನು, ಅಸಿ - ಆದೆ, ಭರತಃ - ಭರತನು, ಪೃಥ್ವೀಪತಿಂ - ಭೂಪತಿಯಾದ ದಶರಥರಾಯನನ್ನು, ಸ್ವರ್ಗತಂ - ಸ್ವರ್ಗಸ್ಥ ನನ್ನಾಗಿ, ದುಃಖಂ - ದುಃಖವಾಗಿ, ಆಚಷ್ಟೇ - ಹೇಳುತ್ತಾನೆ. ‖ ೧೩-೧೪ ‖ ತತಃ - ಬಳಿಕ, ಕಾಕುತ್

ಒಳ್ಳೆಯ ನಡೆನಳಿಕೆಯನ್ನು ನೋಡಿ ತಂದೆಯು ನನ್ನನ್ನು ಬಹುವಿಧವಾಗಿ ಹೊಗಳುತ್ತ, ನನ್ನ ಶ್ರವಣೇಂದ್ರಿಯಕ್ಕೆ ಇಂಪಾದ ನುಡಿಗಳನ್ನಾಡುತ್ತಿದ್ದನು. ಈಗ ಅಂತಹ ತಂದೆಯು ಮರಣ ನಾಂತನು. ಇನ್ನು ಮೇಲೆ ಯಾರುತಾನೇ ಅಂತಹ ಕಿವಿಗಿಂಪಾದ ನುಡಿಗಳನ್ನಾಡುತ್ತಾರೆ ? ನಾನು ಕೇಳಿಯಾದರೂ ಕೇಳೇನೆ! " ಹೀಗೆ ರಘುವಂಶಜನಾದ ರಾಮನು ಭರತನನು ಕುರಿತು ಹೇಳಿದ ಮೇಲೆ ಪೂರ್ಣಚಂದ್ರನಿಗೆ ಸಮಾನವಾದ ಮುಖವುಳ್ಳವಳೂ, ತನ್ನ ಸತೀ ಮಣಿಯೂ ಆದ ಸೀತಾದೇವಿಯನ್ನು ಕುರಿತು, " ಎಲೌ ದೇವಿ ! ನಿನಗೆ ಮಾವನಾದ ದಶರಥ ರಾಯನು ಮೃತಿಯನ್ನೈದಿದನು. ಲಕ್ಷ್ಮಣಾ ! ನೀನು ಪಿತೃರಹಿತನಾದೆ, ಈ ಭರತನು ನಮ್ಮ ತಂದೆಯು ಸ್ವರ್ಗವನ್ನೈದಿದನೆಂಬ ದುಃಖವಾರ್ತೆಯನ್ನು ಹೇಳುತ್ತಿದ್ದಾನೆ" ಎಂದನು. ಶ್ರೀರಾಮನು ನೀರೀತಿ ಹೇಳಲು ಮಹಾಕೀರ್ತಿಯುತರೂ, ವಯಸ್ಸಿನಲ್ಲಿ ಇನ್ನೂ ಚಿಕ್ಕವರೂ ಆದ ಸಿತಾ, ಲಕ್ಷ್ಮಣ, ಭರತಶತ್ರುಘ್ನರ ನೇತ್ರಗಳಿಂದ ಶೋಕಾಶ್ರುಗಳು ನೆಲಕ್ಕುರುಳಿದವು. ‖೧೧-೧೫‖ ಬಳಿಕ ಆ ತಮ್ಮಂದಿರೆಲ್ಲರೂ ಅಣ್ಣನಾದ ಶ್ರೀರಾಮನನ್ನು ಬಹುವಿಧಗಳಿಂದ ಸಮಾಧಾನ ಗೊಳಿಸಿ ಭೂಪತಿಯೂ,ತಂದೆಯೂ ಆದ ದಶರಥನಿಗೆ ತಿಲೋದಕದಾನವನ್ನು ಮಾಡೆಂದು ಹೇಳಿ ದರು.ಆಗ ಮಹಾಪಾವನಳಾದ ಸೀತಾದೇವಿಯು ಮಾವನ ಮರಣವಾರ್ತೆಯನ್ನು ಕೇಳಿದೊಡ

ರಾಘವಂ ॥ ಅಬ್ರುವರ್ಜಗತೀಭರ್ತುಃ ಕ್ರಿಯತಾ ಮುದಕಂ ಪಿತುಃ ॥ ೧೬ ॥ ಸಾ ಸೀತಾ ಶ್ವಶುರಂ ಶ್ರುತ್ವಾ ಸ್ವರ್ಗಲೋಕಗತಂ ನೃಪಂ ॥ ನೇತ್ರಾಭ್ಯಾ ಮಶ್ರುಪೂರ್ಣಾಭ್ಯಾ ಮಶಕ ನ್ನೇಕ್ಷಿತುಂ ಪತಿಂ ॥ ೧೭ ॥ ಸಾಂತ್ವಯಿತ್ವಾತು ತಾಂ ರಾಮೋ ರುದಂತೀಂ ಜನಕಾತ್ಮಜಾಂ ॥ ಉವಾಚ ಲಕ್ಷ್ಮಣಂ ತತ್ರ ದುಃಖಿತೋ ದುಃಖಿತಂ ವಚಃ ॥ ೧೮ ॥ ಆನಯೇಂಗುದಿಪಿಣ್ಯಾಕಂ ಚೀರಮಾಹರ ಚೋತ್ತರಂ ॥ ಜಲಕ್ರಿಯಾರ್ಥಂ ತಾತಸ್ಯ ಗಮಿಷ್ಯಾಮಿ ಮಹಾತ್ಮನಃ ॥ ೧೯ ॥ ಸೀತಾ ಪುರಸ್ತಾ ದ್ವ್ರಜತು ತ್ವಮೇನಾ ಮಭಿತೋ ವ್ರಜ ॥ ಅಹಂ ಪಶ್ಚಾ

ಸ್ಥೇ - ಶ್ರೀರಾಮನು, ತಥಾಬ್ರುವತಿ - ಹಾಗೆ ಹೇಳಲು, ಯಶಸ್ವಿನಾಂ - ಕೀರ್ತಿವಂತರಾದ, ಕುಮಾರಾಣಾಂ - ಕುವರರಾದ, ತೇಷಾಂ - ಆ ಸೀತಾರಾಮಲಕ್ಷ್ಮಣ ಭರತಶತ್ರುಘ್ನರ, ನೇತ್ರೇಷು - ಕಂಗಳಲ್ಲಿ, ಬಾಷ್ಪಃ - ಕಂಬನಿಯು, ಬಹುಗುಣಂ - ಅನೇಕಬಗೆಯಾಗಿ, ಅಜಾಯತ - ಹುಟ್ಟಿತು, ತತಃ - ಬಳಿಕ, ಸರ್ವೇಭ್ರಾತರಃ - ಸಮಸ್ತರಾದ ಅಣ್ಣತಮ್ಮಂದಿರೂ, ರಾಘವಂ - ಶ್ರೀರಾಮನನ್ನು, ಭೃಶಂ - ಅತ್ಯಂತವಾಗಿ, ಆಶ್ವಾಸ್ಯ - ಸಮಾಧಾನಗೊಳಿಸಿ, ಜಗತೀಭರ್ತುಃ - ಭೂಪತಿಯಾದ, ಪಿತುಃ-ತಂದೆಗೆ, ಉದಕಂ - ತಿಲೋದಕವು, ಕ್ರಿಯತಾಂ - ಮಾಡಲ್ಪಡಲಿ, ಇತಿ - ಎಂದು, ಅಬ್ರುವರ್ - ನುಡಿದರು. ॥ ೫೧-೧೬ ॥ ಸಾಸೀತಾ - ಆ ಸೀತಾದೇವಿಯು, ಶ್ವಶುರಂ - ಮಾವನಾದ, ನೃಪಂ - ಅರಸನಾದ ದಶರಥಮಹಾರಾಯನನ್ನು, ಸ್ವರ್ಗಲೋಕಗತಂ -ಸ್ವರ್ಲೋಕವನ್ನು ಹೊಂದಿದವನನ್ನಾಗಿ, ಶ್ರುತ್ವಾ - ಕೇಳಿ, ಅಶ್ರುಪೂರ್ಣಾಭ್ಯಾಂ - ಕಂಬನಿಗಳಿಂದ ಪೂರ್ಣವಾದ, ನೇತ್ರಾಭ್ಯಾಂ - ಕಣ್ಣುಗಳಿಂದ, ಪತಿಂ-ಗಂಡನನ್ನು, ಈಕ್ಷಿತುಂ - ನೋಡುವದಕ್ಕೂ, ನಾಶಕತ್ - ಸಮರ್ಥಳಾಗಲಿಲ್ಲ. ॥ ೧೭ ॥ ದುಃಖಿತಃ - ದುಃಖಗೊಂಡ, ರಾಮಃ - ಶ್ರೀರಾಮನು, ರುದಂತೀಂ - ಅಳುತ್ತಿರುವ, ಜನಕಾತ್ಮಜಾಂ - ಸೀತಾದೇವಿಯನ್ನು, ಸಾಂತ್ವಯಿತ್ವಾ - ಸಮಾಧಾನಗೊಳಿಸಿ, ದುಃಖಿತಂ - ಸಂಕಟಗೊಂಡಿರುವ, ಲಕ್ಷ್ಮಣಂ-ಲಕ್ಷ್ಮಣನನ್ನು ಕುರಿತು, ತತ್ರ - ಅಲ್ಲಿ, ವಚಃ - ಮಾತನ್ನು, ಉವಾಚ - ಹೇಳಿದನು. ॥ ೧೮ ॥ ಮಹಾತ್ಮನಃ - ಮಹಾತ್ಮನಾದ, ತಾತಸ್ಯ - ತಂದೆಗೆ, ಜಲಕ್ರಿಯಾರ್ಥಂ - ತಿಲೋದಕವನ್ನು ಬಿಡುವದಕ್ಕೋಸುಗ, ಗಮಿಷ್ಯಾಮಿ - ಹೋಗುತ್ತೇನೆ, ಇಂಗುದಿಪಿಣ್ಯಾಕಂ - ತಾಪಸ ತರುಬೀಜೋತ್ಪನ್ನವಾದ ಪಿಷ್ಟವನ್ನು, ಆನಯ - ತೆಗೆದುಕೊಂಡುಬಾ, ಉತ್ತರಂಚೀರಂ - ಉತ್ತರೀಯವಾಗಿರುವ ನಾರು

ನೆಯೇ ಕಣ್ಣೀರನ್ನು ಸುರಿಸುತ್ತಾ ರೋದನವಂಗೈಯುತ್ತಿದ್ದಳು. ಅಲ್ಲದೆ ಕಣ್ಣುಗಳ ತುಂಬ ದುಃಖಾಶ್ರುಗಳು ತುಂಬಿದ್ದುದರಿಂದ ಭರ್ತೃವಾದ ಶ್ರೀರಾಮನನ್ನೂ ನೋಡಲಾರದವಳಾದಳು. ಆಗ ಶ್ರೀರಾಮನು ಮಾನವ ಮರಣವಾರ್ತೆಯಿಂದಧಿಕವಾಗಿ ದುಃಖಿಸುತ್ತಿರುವ ಆ ಜಾನಕಿಯನ್ನು ಅನೇಕ ವಿಧಗಳಿಂದ ಸಮಾಧಾನಗೊಳಿಸಿ ತಾನೂ ದುಃಖವನ್ನು ಹೊಂದಿದವನಾಗಿ ಲಕ್ಷ್ಮಣನನ್ನು ಕುರಿತು ಹೀಗೆಂದನು.॥೧೬-೧೮॥"ಎಲೈಲಕ್ಷ್ಮಣನೇ! ಇಂಗುದೀಬೀಜದ ಪಿಷ್ಟವನ್ನೂ, ಉತ್ತರೀಯವನ್ನೂ ತರುವವನಾಗು. ನಾನೂ ಮಹಾನುಭಾವನಾದ ತಂದೆಗೆ ತಿಲೋದಕವನ್ನೀಯಲು ಹೊರಡುತ್ತೇನೆ. ಸೀತಾದೇವಿಯು ಮುಂದೆ ತೆರಳಲಿ, ನೀನು ಆಕೆಯನ್ನುಹಿಂಬಾಲಿಸಿ ಹೊರಡು, ಇದು ಬಹು ಕಠಿನಸ್ಥಿತಿಯಾದುದರಿಂದ ನಾನು ನಿಮ್ಮಿರ್ವರನ್ನೂ

ದ್ಗಮಿಷ್ಯಾಮಿ ಗತಿರ್ಹ್ಯೇಷಾ ಸುದಾರುಣಾ ॥ ೨೦ ॥ ತತೋ ನಿತ್ಯಾನುಗ
ಸ್ತೇಷಾಂ ವಿದಿತಾತ್ಮಾ ಮಹಾಮತಿಃ ॥ ಮೃದುರ್ದಾಂತಶ್ಚ ಶಾಂತಶ್ಚ ರಾಮೇಚ
ದೃಢಭಕ್ತಿಮಾನ್ ॥ ೨೧ ॥ ಸುಮಂತ್ರ ಸ್ತೈರ್ನೃಪಸುತೈಸ್ಸಾರ್ಧಮಾಶ್ವಾಸ್ಯ
ರಾಘವಂ ॥ ಅವತಾರಯ ದಾಲಂಬ್ಯ ನದೀಂ ಮಂದಾಕಿನೀಂ ಶಿವಾಂ ॥ ೨೨ ॥
ತೇ ಸುತೀರ್ಥಾಂ ತತಃ ಕೃಚ್ಛ್ರಾ ದುಪಾಗಮ್ಯ ಯಶಸ್ವಿನಃ ॥ ನದೀಂ ಮಂದಾ
ಕಿನೀಂ ರಮ್ಯಾಂ ಸದಾ ಪುಷ್ಪಿತಕಾನನಾಂ ॥ ೨೩ ॥ ಶೀಘ್ರಸ್ರೋತಸ ಮಾಸಾದ್ಯ

ಮಡಿಯನ್ನು, ಆಹರ - ತೆಗದುಕೊಂಡುಬಾ. ॥ ೧೯ ॥ ಸೀತಾ - ಸೀತಾದೇವಿಯು, ಪುರಸ್ತಾತ್-ಮುಂಗಡೆ, ವ್ರಜತು - ಹೊರಡಲಿ, ತ್ವಂ - ನೀನು, ಏನಾಂ - ಈ ಸೀತಾದೇವಿಗೆ, ಅಭಿತಃ - ಹಿಂದುಗಡೆ, ವ್ರಜ - ಹೋಗು, ಅಹಂ - ನಾನು, ಪಶ್ಚಾತ್ - ನಿಮ್ಮಿಬ್ಬರ ಹಿಂದುಗಡೆ, ಗಮಿಷ್ಯಾಮಿ - ಬರುವೆನು, ಏಷಾಗತಿಃ - ಈ ಗಮನವು, ಸುದಾರುಣಾಹಿ - ಸಹಿಸಲಸಾಧ್ಯವಾದುದಷ್ಟೆ. ॥ ೨೦ ॥ ತತಃ - ಬಳಿಕ, ತೇಷಾಂ - ಅವರಿಗೆ, ನಿತ್ಯಾನುಗಃ - ಯಾವಾಗಲೂ ಹಿಂಬಾಲಿಸುವಾತನೂ (ಗೋ) ಕುಲಕ್ರಮವಾಗಿ ಬಂದಿರುವವನೂ, ವಿದಿತಾತ್ಮಾ - ತಿಳಿಯಲ್ಪಟ್ಟ ಆತ್ಮಸ್ವರೂಪವುಳ್ಳವನೂ, ಮಹಾಮತಿಃ - ಮಹಾ ಜ್ಞಾನಿಯಾದವನೂ, ಮೃದುಃ - ಮೃದುಸ್ವಭಾವವುಳ್ಳವನೂ, ದಾಂತಃ - ಜಿತೇಂದ್ರಿಯನೂ, ಶಾಂತಃ - ಶಾಂತಸ್ವಭಾವನೂಆದ, ರಾಮೇಚ - ಶ್ರೀರಾಮನಲ್ಲಿ, ದೃಢಭಕ್ತಿಮಾನ್-ದೃಢವಾದ ಭಕ್ತಿಯುಳ್ಳವನೂ ಆದ, ಸುಮಂತ್ರಃ - ಸುಮಂತ್ರನು, ತೈರ್ನೃಪಸುತೈಸ್ಸಾರ್ಧಂ - ಆ ರಾಜಪುತ್ರರೊಡನೆ, ರಾಘವಂ - ಶ್ರೀರಾಮನನ್ನು, ಆಶ್ವಾಸ್ಯ - ಸಮಾಧಾನಗೊಳಿಸಿ, ಆಲಂಬ್ಯ - ಹಿಡಿದುಕೊಂಡು, ಶುಭಾಂ - ಶುಭಕರವಾದ, ಮಂದಾಕಿನೀಂನದೀಂ - ಗಂಗಾನದಿಯಲ್ಲಿ, ಅವತಾರಯತ್ - ಸ್ನಾನಾರ್ಥವಾಗಿ ಇಳಿಸಿದನು. ॥ ೨೧-೨೨ ॥ ತತಃ - ಬಳಿಕ, ಯಶಸ್ವಿನಃ - ಕೀರ್ತಿವಂತರಾದ, ತೇ - ಆ ರಾಮಲಕ್ಷ್ಮಣಾದಿಗಳು, ಸುತೀರ್ಥಾಂ - ಪರಿಶುದ್ಧವಾದ ತೀರ್ಥವುಳ್ಳ, ಸದಾ - ನಿರಂತರವೂ, ಪುಷ್ಪಿತಕಾನನಾಂ - ಹೂವೊಳೆತ ಆರಣ್ಯವುಳ್ಳ, ರಮ್ಯಾಂ - ಮನೋಹರವಾದ, ಶೀಘ್ರಸ್ರೋತಸಂ - ವೇಗವತ್ತಾದ ಪ್ರವಾಹವುಳ್ಳ, ಮಂದಾಕಿನೀಂನದೀಂ-ಮಂದಾಕಿನೀನದಿಯನ್ನು ಕುರಿತು, ಕೃಚ್ಛ್ರಾತ್-

---

ರಕ್ಷಿಸುತ್ತಾ ಹಿಂದೆ ಬರುತ್ತೇನೆ." ॥೧೯-೨೦॥ ಶ್ರೀರಾಮನೀರೀತಿ ನುಡಿದು ಮುಂಬರಿದನು. ಆ ಸಮಯದಲ್ಲಿ ಎಲ್ಲ ಕಾಲಗಳಲ್ಲಿಯೂ ಆ ರಾಜಕುಮಾರನನ್ನು ಹಿಂಬಾಲಿಸಿ ಸಂಚರಿಸುವಾತನೂ, ಪರಮಾತ್ಮ ತತ್ವವನ್ನರಿತವನೂ, ಬುದ್ಧಿವಂತರಲ್ಲಿ ಉತ್ತಮನಾದವನೂ, ಮೃದುಸ್ವಭಾವವುಳ್ಳವನೂ, ಜಿತೇಂದ್ರಿಯನೂ, ಶಾಂತನೂ, ಶ್ರೀರಾಮನಲ್ಲಿ ದೃಢಭಕ್ತಿಯುಳ್ಳವನೂ, ಆದ ಸುಮಂತ್ರನು ಶ್ರೀರಾಮನನ್ನು ಸಂತೈಸಿ ಹಿಂದಿಟ್ಟುಕೊಂಡು ಹೊರಟವನಾಗಿ ಮಂಗಳಕರವಾದ ಮಂದಾಕಿನೀನದಿಯ ಉತ್ತಮವಾದ ತೀರಸ್ಥಳದಲ್ಲಿಳಿಸಿದನು ॥೨೧-೨೨॥ ಆಗ ಮಹಾ ಕೀರ್ತಿಯುತರಾದ ಶ್ರೀರಾಮನೇ ಮೊದಲಾದವರು ಸೊಗಸಾದ ತೀರವುಳ್ಳುದೂ, ಮನೋಹರವಾದುದೂ, ಸಾರ್ವದಾ ಹೂವೊಳೆತ ವೃಕ್ಷಜಾಲಗಳಿಂದ ನಿಬಿಡೀಕೃತವಾದ ಆರಣ್ಯಪ್ರದೇಶವುಳ್ಳುದೂ, ಬಹು ರಭಸದಿಂದ ಪ್ರವಹಿಸುತ್ತಿರುವ ಪ್ರವಾಹವುಳ್ಳುದೂ, ಮಂಗಳಕರವಾದುದೂ, ಕೆಸರಿಲ್ಲದುದೂ ಆದ ಮಂದಾಕಿನೀನದಿಯನ್ನು ಬಹು ಕಷ್ಟದಿಂದ

ತೀರ್ಥಂ ಶಿವಮಕರ್ದಮಮ್ ॥ ಸಿಷಿಚು ಸ್ತೂದಕಂ ರಾಜ್ಞೇ ತಾತೈತತ್ತೇ ಭವ ತ್ವಿತಿ ॥ ೨೪ ॥ ಪ್ರಗೃಹ್ಯ ಚ ಮಹೀಪಾಲೋ ಜಲಪೂರಿತ ಮಂಜಲಿಂ ॥ ದಿಶಂ ಯಾಮ್ಯಾ ಮಭಿಮುಖೋ ರುದ ನ್ವಚನ ಮಬ್ರವೀತ್ ॥೨೫॥ ಏತ ತ್ತೇ ರಾಜ ಶಾರ್ದೂಲ! ವಿಮಲಂ ತೋಯ ಮಕ್ಷಯಮ್ ॥ ಪಿತೃಲೋಕಗತಸ್ಯಾದ್ಯ ಮದ್ದತ್ತ ಮುಪತಿಷ್ಠತು ॥ ೨೬ ॥ ತತೋ ಮಂದಾಕಿನೀ ತೀರಾ ತ್ಪ್ರತ್ಯು ತ್ತೀರ್ಯ ಸರಾಘವಃ ॥ ಪಿತುಶ್ಚಕಾರ ತೇಜಸ್ವೀ ನಿವಾಪಂ ಭ್ರಾತೃಭಿ ಸ್ಸಹ॥೨೭॥ ಐಂಗುದಂ ಬದರೀಮಿಶ್ರಂ ಪಿಣ್ಯಾಕಂ ದರ್ಭಸಂಸ್ತರೇ ॥ ನ್ಯಸ್ಯ ರಾಮ ಸ್ಸುದುಃಖಾರ್ತೋ ರುದ ನ್ವಚನ ಮಬ್ರವೀತ್ ॥ ೨೮ ॥ ಇದಂ ಭುಙ್‌ಕ್ಷ್ವ ಮಹಾ

ಕಷ್ಟದಿಂದ, ಉಪಾಗಮ್ಯ - ಬಂದು, ಶಿವಂ - ಶುಭಕರವಾದ, ಅಕರ್ದಮಂ - ಕೆಸರಿಲ್ಲದಿರುವ, ತೀರ್ಥಂ - ತೀರ್ಥವನ್ನು, ಆಸಾದ್ಯ - ಹೊಂದಿ, ಹೇ ತಾತ - ಎಲೈ ತಾತನೇ, ತೇ - ನಿನಗೆ, ಏತತ್- ಈ ತಿಲೋದಕವು ಸ್ವರ್ಗಸಂಪಾದಕವು, ಭವತ್ವಿತಿ - ಆಗಲೆಂದು, ರಾಜ್ಞೇ - ದಶರಥರಾಯನಿಗೆ ಉದಕಂ - ಉದಕವನ್ನು, ನಿಷಿಚುಃ - ಬಿಟ್ಟರು. ॥ ೨೩-೨೪ ॥ ಮಹೀಪಾಲಃ - ಭೂಪಾಲಕನಾದ ಶ್ರೀರಾಮನು, ಜಲಪೂರಿತಂ - ಉದಕಪೂರಿತವಾದ, ಅಂಜಲಿಂ - ಬೊಗಸೆಯನ್ನು, ಪ್ರಗೃಹ್ಯ - ಹಿಡಿದು ಕೊಂಡು, ಯಾಮ್ಯಾಂದಿಶಂ - ಯಮಸಂಬಂಧವಾದ ದಕ್ಷಿಣದಿಕ್ಕಿಗೆ, ಅಭಿಮುಖಃ - ಇದಿರಾಗಿ, ರುದ೯ - ರೋದನಮಾಡುತ್ತ, ವಚನಂ - ಮಾತನ್ನು, ಅಬ್ರವೀತ್ - ನುಡಿದನು. ॥ ೨೫ ॥ ಹೇ ರಾಜಶಾರ್ದೂಲ - ಎಲೈ ರಾಜಶ್ರೇಷ್ಠನೇ, ಪಿತೃಲೋಕಗತಸ್ಯ - ಪಿತೃಲೋಕವನ್ನು ಹೊಂದಿದ, ತೇ- ನಿನಗೆ, ವಿಮಲಂ - ನಿರ್ಮಲವಾದ, ಅದ್ಯ - ಈಗ, ಮದ್ದತ್ತಂ - ನನ್ನಿಂದ ಕೊಡಲ್ಪಟ್ಟ, ಏತತ್ತೋಯಂ - ಈ ಉದಕವು, ಅಕ್ಷಯಂ - ಅಕ್ಷಯವಾದುದಾಗಿ, ಉಪತಿಷ್ಠತು - ಸಮೀಪವರ್ತಿಯಾಗಲಿ. ॥ ೨೬ ॥ ತತಃ - ಬಳಿಕ, ತೇಜಸ್ವೀ - ತೇಜೋವಂತನಾದ, ಸರಾಘವಃ - ಆ ಶ್ರೀರಾಮನು, ಮಂದಾಕಿನೀ ತೀರಾತ್ - ಗಂಗಾತೀರದಿಂದ, ಪ್ರತ್ಯುತ್ತೀರ್ಯ - ಮೇಲಕ್ಕೆದ್ದು, ಪಿತುಃ - ತಂದೆಗೆ, ಭ್ರಾತೃಭಿಸ್ಸಹ - ತಮ್ಮಂದಿರೊಡಗೂಡಿ, ನಿವಾಪಂ - ಪಿಂಡನಿರ್ವಾಪಣವನ್ನು, ಚಕಾರ - ಮಾಡಿದನು. ॥೨೭॥

ಸೇರಿದವರಾದರು. ಆಗ ಶ್ರೀರಾಮನು "ಓ ತಂದೆಯಾದ ದಶರಥಮಹಾರಾಜನೇ! ನಾನೀಗ ಕೊಡುತ್ತಲಿರುವ ಈ ತಿಲೋದಕವು ನಿನಗೆ ಸ್ವರ್ಗಪ್ರಾಪಕವಾದುದಾಗಲಿ" ಎಂದು ಹೇಳಿ, ತಿಲೋದಕವನ್ನಿತ್ತನು. ಅಲ್ಲದೆ ಮಹೀಪಾಲನಾದ ಶ್ರೀರಾಮನು ಬೊಗಸೆಯತುಂಬ ತಿಲಮಿಶ್ರಿತವಾದ ಗಂಗೋದಕವನ್ನು ಗ್ರಹಿಸಿ, ದಕ್ಷಿಣದಿಕ್ಕಿಗೆ ತಿರುಗಿಕೊಂಡು ರೋದಿಸುತ್ತಾ, "ಓ ರಾಜಶ್ರೇಷ್ಠನೇ ; ಮಹಾರಾಜನೇ; ತಂದೆಯೇ! ನನ್ನಿಂದ ಕೊಡಲಾಗುತ್ತಿರುವ ಈ ತಿಲೋದಕವು ಪಿತೃಲೋಕದಲ್ಲಿರುವ ನಿನಗೆ ಅಕ್ಷಯವಾದುದಾಗಲಿ" ಎಂದನು. ॥ ೨೩-೨೬ ॥ ಆ ಬಳಿಕ ಮಹಾ ತೇಜಸ್ವಿಯಾದ ಶ್ರೀರಾಮಚಂದ್ರನು ತಮ್ಮಂದಿರೊಡಗೂಡಿ, ಆ ಮಂದಾಕಿನೀತೀರವನ್ನುಬಿಟ್ಟು ಸ್ವಲ್ಪದೂರಹೋಗಿ ಸ್ವರ್ಗತನಾದ ತಂದೆಯನ್ನುದ್ದೇಶಿಸಿ ಸಪಿಂಡೀಕ್ರಿಯೆಯನ್ನೆಸಗಿದನು. ಆ ಸಮಯದಲ್ಲಿ ಶ್ರೀರಾಮನು ದುಃಖದಿಂದ ಪೀಡಿತನಾಗಿ ಬೋರೆಹಣ್ಣಿನ ರಸದಿಂದ ಮಿಶ್ರಿತವಾದ ಇಂಗುದೀಪಿಣ್ಯಾಕ ಸಂಬಂಧವಾದ ಪಿಂಡವನ್ನು ನೇಲದಲ್ಲಿ ದಕ್ಷಿಣಾಗ್ರವಾಗಿ

ರಾಜ! ಪ್ರೀತೋ ಯದಶನಾ ವಯಂ ॥ ಯದನ್ನಃ ಪುರುಷೋ ಭವತಿ ತದನ್ನಾಸ್ತಸ್ಯ ದೇವತಾಃ ॥ ೨೯ ॥ ತತಸ್ತೇನೈವ ಮಾರ್ಗೇಣ ಪ್ರತ್ಯುತ್ತೀರ್ಯ ನದೀತಟಾತ್ ॥ ಆರುರೋಹ ನರವ್ಯಾಘ್ರೋ ರಮ್ಯಸಾನುಂ ಮಹೀಧರಂ ॥ ೩೦ ॥ ತತಃ ಪರ್ಣಕುಟೀದ್ವಾರ ಮಾಸಾದ್ಯ ಜಗತೀಪತಿಃ ॥ ಪರಿಜಗ್ರಾಹ ಬಾಹುಭ್ಯಾಮುಭೌ ಭರತಲಕ್ಷ್ಮಣೌ ॥ ೩೧ ॥ ತೇಷಾಂತು ರುದತಾಂ ಶಬ್ದಾ ತ್ಪ್ರತಿ

ರಾಮಃ - ಶ್ರೀರಾಮನು, ಸುದುಃಖಾರ್ತಃ - ಬಹಳ ದುಃಖದಿಂದ ಸಂಕಟಗೊಂಡು, ಬದರೀಮಿಶ್ರಂ - ಯಳಚೀಹಣ್ಣಿನ ರಸದಿಂದಮಿಶ್ರವಾದ, ಇಂಗುದಂ - ಗಾರೇಹಣ್ಣಿನ ಬೀಜದ ಸಂಬಂಧವಾದ, ಪಿಣ್ಯಾಕಂ - ಹಿಟ್ಟನ್ನು, ದರ್ಭಸಂಸ್ತರೇ - ದರ್ಭಾಸ್ತರಣದಲ್ಲಿ, ನ್ಯಸ್ಯ - ಇರಿಸಿಕೊಂಡು, ರುದನ್-ರೋದನ ಮಾಡುತ್ತ, ವಚನಂ - ಮಾತನ್ನು, ಅಬ್ರವೀತ್ - ನುಡಿದನು. ॥ ೨೮ ॥ ಹೇ ಮಹಾರಾಜ - ಎಲೈ ಮಹಾರಾಜನೇ, ವಯಂ - ನಾವು, ಯದಶನಾಃ - ಯಾವ ಪದಾರ್ಥವೇ ಅಶನವಾಗಿರುವೆವೋ, ಪುರುಷಃ - ಪುರುಷನು, ಯದನ್ನಃ - ಯಾವದು ಅನ್ನವಾಗಿ ಉಳ್ಳವನು, ಭವತಿ - ಇರುತ್ತಾನೆಯೋ, ತಸ್ಯ - ಆ ಪುರುಷನ, ದೇವತಾಃ - ಪಿತೃದೇವತೆಗಳು, ತದನ್ನಾಃ - ಅದೇ ಅನ್ನವಾಗುಳ್ಳವರು ಎಂಬ ನ್ಯಾಯದಿಂದ, ಪ್ರೀತಃ - ಸಂತುಷ್ಟನಾಗಿ, ಇದಂ - ಈ ಇಂಗುದೀಸಂಬಂಧವಾದ ಪಿಷ್ಟವನ್ನು, ಭುಂಕ್ಷ್ವ - ಭೋಜನಮಾಡು. ॥ ೨೯ ॥ ತತಃ - ಬಳಿಕ, ನರವ್ಯಾಘ್ರಃ - ಪುರುಷಶ್ರೇಷ್ಠನಾದ ಶ್ರೀರಾಮನು, ತೇನೈವಮಾರ್ಗೇಣ - ಅದೇಮಾರ್ಗದಿಂದಲೇ, ನದೀತಟಾತ್ - ಗಂಗಾನದಿಯ ತೀರದಿಂದ, ಪ್ರತ್ಯುತ್ತೀರ್ಯ - ಏರಿಬಂದು, ರಮ್ಯಸಾನುಂ-ಮನೋಹರವಾದ ಜರಿತೆಗಳುಳ್ಳ, ಮಹೀಧರಂ-ಬೆಟ್ಟವನ್ನು, ಆರುರೋಹ - ಏರಿದನು. ॥ ೩೦ ॥ ತತಃ - ಬಳಿಕ, ಜಗತೀಪತಿಃ - ಭೂಪತಿಯಾದ ಶ್ರೀರಾಮನು, ಪರ್ಣಕುಟೀದ್ವಾರಂ - ಪರ್ಣಶಾಲೆಯ ಬಾಗಿಲನ್ನು, ಆಸಾದ್ಯ-ಹೊಂದಿ, ಬಾಹುಭ್ಯಾಂ-ಭುಜಗಳಿಂದ, ಉಭೌ - ಇಬ್ಬರಾದ, ಭರತಲಕ್ಷ್ಮಣೌ - ಭರತಲಕ್ಷ್ಮಣರನ್ನು, ಪರಿಜಗ್ರಾಹ - ಅಪ್ಪಿಕೊಂಡನು, ರುದತಾಂ - ರೋದನಮಾಡುತ್ತಿರುವ, ಭ್ರಾತೄಣಾಂ - ಅಣ್ಣತಮ್ಮಂದಿರಾದ, ವೈದೇಹ್ಯಾ

ಹಾಸಿರುವ ದರ್ಭೆಗಳಮೇಲಿಟ್ಟು ಅಧಿಕವಾಗಿ ರೋದಿಸುತ್ತಾ " ಓ ದಶರಥರಾಯನೇ, ಮಹಾರಾಜನೇ, ತಂದೆಯೇ! ನೀನೀಅನ್ನವನ್ನು ಭುಜಿಸು, ನಾವೂ ಈ ಇಂಗುದೀವೃಕ್ಷಬೀಜ ಸಂಬಂಧವಾದ ಪಿಷ್ಟವನ್ನೇ ಭುಜಿಸುತ್ತಿದ್ದೇವೆ. ಆದುದರಿಂದ ನಿನಗೂ ಈ ಅನ್ನವನ್ನೇ ಸಮರ್ಪಿಸಿದೆವು. ಲೋಕದಲ್ಲಿ ಮಾನವನು ಯಾವ ವಿಧವಾದ ಅನ್ನವನ್ನು ಭುಜಿಸುವನೋ ಅದೇ ಅನ್ನವನ್ನೇ ಸಮರ್ಪಿಸುವದರಿಂದ ದೇವತೆಗಳೂ ಕೂಡ ತೃಪ್ತಿಯೊಂದುತ್ತಾರೆಂದು ಶಾಸ್ತ್ರಗಳು ಉದ್ಘೋಷಿಸುತ್ತಿವೆ ॥೩೦॥ ಆದುದರಿಂದೆಲೈ ಜನಕನೇ! ನಾನು ಈ ಇಂಗುದೀಪಿಣ್ಯಾಕ ಪಿಂಡವನ್ನು ಸಮರ್ಪಿಸಿದ್ದೇನೆ. ನೀನಿದನ್ನು ಭುಜಿಸಿ, ತೃಪ್ತನಾಗು " ಎಂದನು. ಹೀಗೆ ಪ್ರೇತಕೃತ್ಯಗಳೆಲ್ಲವನ್ನೂ ಪೂರ್ಣಗೊಳಿಸಿದ ಮಾನವಶ್ರೇಷ್ಠನಾದ ಶ್ರೀರಾಮನು ಆ ಮಂದಾಕಿನೀ ತೀರವನ್ನುಬಿಟ್ಟು ಯಾವ ಮಾರ್ಗದಿಂದ ತಾನು ಬಂದಿದ್ದನೋ ಅದೇ ಮಾರ್ಗದಿಂದಲೇ ಹಿಂತಿರುಗಿ ಮನೋಹರವಾದ ಕಾನನಪ್ರದೇಶಗಳುಳ್ಳ ಚಿತ್ರಕೂಟಪರ್ವತವನ್ನು ಸೇರಿದನು. ಆ ಬಳಿಕ ರಾಜಶ್ರೇಷ್ಠನಾದ ಶ್ರೀರಾಮನು ತನ್ನ ಪರ್ಣಶಾಲೆಯ ಹೊರಬಾಗಿಲ ಸಮೀಪಕ್ಕೆ

ಶ್ರುತ್ಕೋಽಭವದ್ಗಿರೌ ॥ ಭ್ರಾತೄಣಾಂ ಸಹವೈದೇಹ್ಯಾ ಸಿಂಹಾನಾಮಿವ ನರ್ದತಾಂ ॥ ೩೨ ॥ ಮಹಾಬಲಾನಾಂ ರುದತಾಂ ಕುರ್ವತಾ ಮುದಕಂ ಪಿತುಃ ॥ ವಿಜ್ಞಾಯ ತುಮುಲಂ ಶಬ್ದಂ ತ್ರಸ್ತಾ ಭರತಸೈನಿಕಾಃ ॥ ೩೩ ॥ ಅಬ್ರುವಂ ಶ್ಚಾಪಿ ರಾಮೇಣ ಭರತ ಸ್ಸಂಗತೋ ಧ್ರುವಂ ॥ ತೇಷಾಮೇವ ಮಹಾಶಬ್ದ ಶ್ಶೋಚತಾಂ ಪಿತರಂ ಮೃತಂ ॥ ೩೪ ॥ ಅಥ ವಾಹಾನ್ ಪರಿತ್ಯಜ್ಯ ತಂ ಸರ್ವೇಽಭಿಮುಖಾ ಸ್ಸ್ವನಂ ॥ ಅಪ್ಯೇಕ ಮನಸೋ ಜಗ್ಮು ರ್ಯಥಾ ಸ್ಥಾನಂ ಪ್ರಧಾವಿತಾಃ ॥ ೩೫ ॥ ಹಯೈ ರನ್ಯೇ ಗಜೈರನ್ಯೇ ರಥೈರನ್ಯೇ ಸ್ವಲಂಕೃತೈಃ ॥

ಸಹ - ಸೀತಾದೇವಿಯೊಡಗೂಡಿ, ಸಿಂಹಾನಾಮಿವ - ಸಿಂಹಗಳಂತೆ, ನರ್ದತಾಂ - ಕೂಗುತ್ತಿರುವ, ತೇಷಾಂ - ಅವರ, ಶಬ್ದಾತ್ - ರೋದನಧ್ವನಿಯಿಂದ, ಗಿರೌ - ಬೆಟ್ಟದಲ್ಲಿ, ಪ್ರತಿಶ್ರುತಃ - ಪ್ರತಿಧ್ವನಿಯು, ಅಭವತ್ - ಆಯಿತು. ॥ ೩೧-೩೨ ॥ ಮಹಾಬಲಾನಾಂ - ಮಹಾ ಬಲವಂತರಾದ, ರುದತಾಂ - ರೋದನಮಾಡುತ್ತಿರುವ, ಪಿತುಃ - ತಂದೆಗೆ, ಉದಕಂ - ತಿಲೋದಕವನ್ನು, ಕುರ್ವತಾಂ - ಮಾಡುತ್ತಿರುವ, ತೇಷಾಂ - ಆ ಸೀತಾರಾಮಲಕ್ಷ್ಮಣರ, ತುಮುಲಂ - ಸಂಕುಲವಾದ, ಶಬ್ದಂ - ಶಬ್ದವನ್ನು, ವಿಜ್ಞಾಯ-ಕಂಡು, ಭರತಸೈನಿಕಾಃ-ಭರತನ ಸೈನಿಕರು, ತ್ರಸ್ತಾಃ-ಭಯಗೊಂಡು, ರಾಮೇಣ - ಶ್ರೀರಾಮನೊಡನೆ, ಭರತಃ - ಭರತನು, ಧ್ರುವಂ - ನಿಶ್ಚಯವಾಗಿಯೂ, ಸಂಗತಃ - ಕೂಡಿದನು, ಮೃತಂ - ಮರಣಹೊಂದಿದ, ಪಿತರಂ - ತಂದೆಯನ್ನು ಕುರಿತು, ಶೋಚತಾಂ - ದುಃಖಿಸುತ್ತಿರುವ, ತೇಷಾಂ - ಅವರ, ಮಹಾನ್ - ದೊಡ್ಡದಾದ, ಶಬ್ದ ಏವ - ಶಬ್ದವು ಇದೇ ಎಂದು, ಅಬ್ರುವಂಶ್ಚಾಪಿ - ಮಾತುಗಳನ್ನಾಡಿದರು. ॥ ೩೩-೩೪ ॥ ಅಥ - ಬಳಿಕ, ತಂಸ್ವನಂ-ಆ ಧ್ವನಿಗೆ, ಅಭಿಮುಖಾಃ - ಇದಿರಾದ, ಸರ್ವೇ - ಸಮಸ್ತರೂ, ವಾಹಾನ್ - ವಾಹನಗಳನ್ನು, ಪರಿತ್ಯಜ್ಯ - ತೊರೆದು, ಏಕಮನಸಃ - ಒಂದೇ ಮನವುಳ್ಳವರಾಗಿ, ಯಥಾಸ್ಥಾನಂ - ರೋದನೋತ್ಪತ್ತಿ ಸ್ಥಾನವನ್ನು ಅತಿಕ್ರಮಿಸದೆ, ಪ್ರಧಾವಿತಾಃ - ಓಡಿಬಂದರು. ॥ ೩೫ ॥ ಅನ್ಯೇ - ಕೆಲವರು, ಸುಕುಮಾರಾಃ - ಮೃದುಸ್ವಭಾವವುಳ್ಳವರು, ಹಯೈಃ - ಅಶ್ವಗಳಿಂದಲೂ, ಅನ್ಯೇ - ಮತ್ತೆ ಕೆಲವರು, ಗಜೈಃ - ಆನೆಗಳಿಂ

ಹೋಗಿ, ಭರತ, ಲಕ್ಷ್ಮಣ, ಶತ್ರುಘ್ನರನ್ನು ಬರಸೆಳದಾಲಂಗಿಸಿಕೊಂಡು, ಸೀತಾಸಹಿತನಾಗಿ, ಬಹಳವಾಗಿ ರೋದಿಸಿದನು. ಆಗ ಅವರ ರೋದನ ಧ್ವನಿಯು ಸಿಂಹಧ್ವನಿಯಂತೆ ಆ ಚಿತ್ರಕೂಟಪರ್ವತವೆಲ್ಲವನ್ನೂ ಪ್ರತಿಧ್ವನಿಗೊಳಿಸಿತು. ॥೩೧-೩೨॥ ಸರ್ವೋತ್ತಮವಾದ ಬಲವುಳ್ಳವರೂ, ಬಹಳವಾಗಿ ವಿಲಾಪಿಸುತ್ತಿರುವರೂ, ತಂದೆಗೆ ಅಪರಕ್ರಿಯೆಗಳನ್ನು ಮಾಡಿರುವವರೂ ಆದ ಶ್ರೀರಾಮನೇ ಮೊದಲಾದವರ ರೋದನಧ್ವನಿಯನ್ನು ಕೇಳಿ, "ಭರತನ ಸೈನಿಕರೆಲ್ಲರೂ ಮಹಾ ಭಯವನ್ನು ತಾಳಿ ಭರತಕುಮಾರನು ಶ್ರೀರಾಮನ ಬಳಿಸಾರಿದನೆಂದೂ, ಅವರೆಲ್ಲರೂ ತಂದೆಯನ್ನು ಕುರಿತು ಅಧಿಕವಾಗಿ ರೋದಿಸುತ್ತಿರುವರೆಂದೂ, ಆದುದರಿಂದಲೇ ಇಂತಹ ಧ್ವನಿಯು ಕೇಳುತ್ತಲಿದೆಯೆಂದೂ" ತಮ್ಮಲ್ಲಿ ತಾವೇ ಮಾತನಾಡಿಕೊಂಡರು. ಆ ಬಳಿಕ ಅವರು ಭರತಾದಿಗಳ ರೋದನಧ್ವನಿಯನ್ನನುಸರಿಸಿ ಹೊರಡಬೇಕೆಂದು ಬಯಸಿ, ತಮ್ಮ ವಾಸಸ್ಥಾನಗಳನ್ನು ತೊರೆದು ಆ ಧ್ವನಿಯು ಬರುತ್ತಲಿರುವ ದಿಕ್ಕನ್ನು ಹಿಡಿದು ಮುಂಬರಿದರು. ॥೩೩-೩೫॥

ಸುಕುಮಾರಾ ಸ್ತಥೈವಾನ್ಯೇ ಪದ್ಭಿರೇವ ನರಾ ಯಯುಃ ॥ ೩೬ ॥ ಅಚಿರಪ್ರೋ
ಷಿತಂ ರಾಮಂ ಚಿರವಿಪ್ರೋಷಿತಂ ಯಥಾ ॥ ದ್ರಷ್ಟು ಕಾಮೋ ಜನಸ್ಸರ್ವೋ
ಜಗಾಮ ಸಹಸಾಽಶ್ರಮಂ ॥ ೩೭ ॥ ಭ್ರಾತೄಣಾಂ ತ್ವರಿತಾ ಸ್ತತ್ರ ದ್ರಷ್ಟು
ಕಾಮಾ ಸ್ಸಮಾಗಮಂ ॥ ಯಯು ರ್ಬಹುವಿಧೈ ರ್ಯುಕ್ತೈಃ ಖುರನೇಮಿ
ಸ್ವನಾಕುಲೈಃ ॥ ೩೮ ॥ ಸಾ ಭೂಮಿ ರ್ಬಹುಭಿ ರ್ಯಾನೈಃ ಖುರನೇಮಿ ಸಮಾ
ಹತಾ ॥ ಮುಮೋಚ ತುಮುಲಂ ಶಬ್ದಂ ದ್ಯೌರಿವಾಭ್ರ ಸಮಾಗಮೇ ॥ ೩೯ ॥

ದಲೂ, ಅನ್ಯೇ - ಇನ್ನು ಕೆಲವರು, ಸ್ವಲಂಕೃತೈಃ - ಅಲಂಕರಿಸಲ್ಪಟ್ಟ, ರಥೈಃ - ರಥಗಳಿಂದಲೂ, ತಥೈವ - ಹಾಗೆಯೇ, ಅನ್ಯೇನರಾಃ - ಮತ್ತೆ ಕೆಲಮನುಷ್ಯರು, ಪದ್ಭಿರೇವ - ಪಾದಗಳಿಂದಲೇ, ಯಯುಃ - ತೆರಳಿದರು. ॥ ೩೬ ॥ ಅಚಿರಪ್ರೋಷಿತಂ - ಸ್ವಲ್ಪಕಾಲದಲ್ಲಿಯೇ ಹೊರಟುಬಂದಿರುವ, ರಾಮಂ - ಶ್ರೀರಾಮನನ್ನು, ಚಿರವಿಪ್ರೋಷಿತಂಯಥಾ - ಬಹಳಕಾಲದಲ್ಲಿ ಹೊರಟುಹೋದವನನ್ನಂತೆ, ಸರ್ವಃ ಸಮಸ್ತವಾದ, ಜನಃ - ಜನವು, ದ್ರಷ್ಟುಕಾಮಃ - ನೋಡಲಪೇಕ್ಷೆಯುಳ್ಳದಾಗಿ, ಸಹಸಾ - ಜಾಗ್ರತೆಯಾಗಿ, ಆಶ್ರಮಂ - ರಾಮಾಶ್ರಮವನ್ನು ಕುರಿತು, ಜಗಾಮ - ತೆರಳಿತು. ॥೩೭॥ ತತ್ರ - ಆ ರಾಮಾಶ್ರಮದಲ್ಲಿ, ಭ್ರಾತೄಣಾಂ - ಅಣ್ಣತಮ್ಮಂದಿರ, ಸಮಾಗಮಂ - ಸೇರುವಿಕೆಯನ್ನು, ದ್ರಷ್ಟುಕಾಮಾಃ - ನೋಡಲಪೇಕ್ಷೆಯುಳ್ಳವರಾಗಿ, ತ್ವರಿತಾಃ - ತ್ವರೆಗೊಂಡು, ಖುರನೇಮಿಸ್ವನಾಕುಲೈಃ ಗೊರಸುಗಳ ರಥಚಕ್ರದ ಕೊನೆಗಳ ಶಬ್ದಗಳಿಂದ ವ್ಯಾಪ್ತವಾದ, ಯುಕ್ತೈಃ - ಸನ್ನದ್ಧಗಳಾದ, ಬಹುವಿಧೈಃ - ಅನೇಕಗಳಾದ, ಯಾನೈಃ - ವಾಹನಗಳಿಂದ, ಯಯುಃ - ತೆರಳಿದರು. ॥ ೩೮ ॥ ಸಾಭೂಮಿಃ - ಆ ಬೆಟ್ಟದಭೂಮಿಯು, ಬಹುಭಿಃ - ಅನೇಕಗಳಾದ, ಯಾನೈಃ ವಾಹಗನಳಿಂದ, ಖುರನೇಮಿಸಮಾಹತಾ - ಕುದುರೆಗೊರಸುಗಳಿಂದಲೂ ರಥಚಕ್ರದಕೊನೆಗಳಿಂದಲೂ ಹೊಡೆಯಲ್ಪಟ್ಟದಾಗಿ, ಅಭ್ರಸಮಾಗಮೇ - ಮೇಘಗಳು ಸೇರುವಿಕೆಯಲ್ಲಿ, ದ್ಯೌರಿವ - ಅಂತರಿಕ್ಷದಂತೆ, ತುಮುಲಂ - ಸಂಕುಲವಾದ, ಶಬ್ದಂ - ಶಬ್ದವನ್ನು, ಮುಮೋಚ - ಬಿಟ್ಟಿತು. ॥ ೩೯ ॥ ತೇನ - ಆ ಧ್ವನಿಯಿಂದ ವಿತ್ರಾಸಿತಾಃ - ಹೆದರಿಸಲ್ಪಟ್ಟ, ಕರೇಣುಪರಿವಾರಿತಾಃ - ಹೆಣ್ಣಾನೆಗಳಿಂದ ಸುತ್ತಿಕೊಳ್ಳಲಾದ, ನಾಗಾಃ -

---

ಆ ಸೈನಿಕರಲ್ಲಿ ಕೆಲ ರಾಜಪುತ್ರರು ಅಶ್ವಗಳನ್ನೇರಿಯೂ, ಕೆಲವರು ಆನೆಗಳನ್ನೇರಿಯೂ, ಇನ್ನು ಕೆಲವರು ರಥಗಳನ್ನೇರಿಯೂ, ಮತ್ತೆ ಕೆಲವರು ಸರ್ವಾಲಂಕಾರಗಳಿಂದಲಂಕೃತರಾಗಿ ಪಾದಚಾರಿಗಳಾಗಿಯೂ ಹೊರಟವರಾದರು. ಅಲ್ಲದೆ ಆ ಸೈನ್ಯದಲ್ಲಿನ ಜನರೆಲ್ಲರೂ ಶ್ರೀರಾಮನು ಅರಣ್ಯವನ್ನು ಸೇರಿ ಬಹಳ ದಿನಗಳಾಗದಿದ್ದರೂ ಅನೇಕ ಸಂವತ್ಸರಗಳಾದಂತೆ ಭಾವಿಸಿ ನೋಡಲೇಬೇಕೆಂಬ ಬಯಕೆಯಿಂದ ಶ್ರೀರಾಮಾಶ್ರಮವನ್ನು ಕುರಿತು ಬಹು ಜಾಗ್ರತೆಯಾಗಿ ನಡೆದರು. ಮಾತ್ರವಲ್ಲದೆ ಆ ಚಿತ್ರಕೂಟಪರ್ವತದಲ್ಲಿ ಭರತ, ಶತ್ರುಘ್ನರು, ಶ್ರೀರಾಮಲಕ್ಷ್ಮಣರೊಡಗೂಡಿರುವುದನ್ನು ನೋಡಬೇಕೆಂಬ ಕುತೂಹಲವುಳ್ಳವರಾಗಿ, ಕುದುರೆಯ ಗೊರಸುಗಳ, ರಥದ ಅಂಚುಗಳ, ಧ್ವನಿಯೊಡಗೂಡಿಯೂ,ನಾನಾವಿಧಗಳಿಂದ ವಾಹನಗಳನ್ನೇರಿಯೂ,ಮುಂಬರಿಯುತ್ತಿರುವ ಸೈನಿಕರೊಡಗೂಡಿಯೂ ಅತಿವೇಗವಾಗಿ ಹೊರಟಿತು.॥೩೭-೩೮॥ ಆ ಸಮಯದಲ್ಲಿ ಭೂಮಿಯಾದ್ಯಂತವೂ, ಕುದುರೆ ಗೊರಸುಗಳಿಂದಲೂ, ರಥದ ಚಕ್ರಗಳ

ತೇನ ವಿತ್ರಾಸಿತಾ ನಾಗಾಃ ಕರೇಣುಪರಿವಾರಿತಾಃ ॥ ಆವಾಸಯಂತೋ ಗಂಧೇನ ಜಗ್ಮುರನ್ಯದ್ವನಂ ತತಃ ॥ ೪೦ ॥ ವರಾಹವೃಕಸಂಘಾಶ್ಚ ಮಹಿಷಾ ಸ್ಸರ್ಪ ವಾನರಾಃ ॥ ವ್ಯಾಘ್ರ ಗೋಕರ್ಣ ಗವಯಾ ವಿತ್ರೇಸುಃ ಪೃಷತೈ ಸ್ಸಹ ॥ ೪೧ ॥ ರಥಾಂಗ ಸಾಹ್ವಾ ನತ್ಯೂಹಾಃ ಹಂಸಾಃ ಕಾರಂಡವಾಃ ಪ್ಲವಾಃ ॥ ತಥಾ ಪುಂಸ್ಕೋಕಿಲಾಃ ಕ್ರೌಂಚಾ ವಿಸಂಜ್ಞಾ ಭೇಜಿರೇ ದಿಶಃ ॥ ೪೨ ॥ ತೇನ ಶಬ್ದೇನ ವಿತ್ರಸ್ತೈ ರಾಕಾಶಂ ಪಕ್ಷಿಭಿ ರ್ವೃತಂ ॥ ಮನುಷ್ಯೈ ರಾವೃತಾ ಭೂಮಿ ರುಭಯಂ ಪ್ರಬಭೌ ತದಾ ॥ ೪೩ ॥ ತತಸ್ತಂ ಪುರುಷವ್ಯಾಘ್ರಂ ಯಶಸ್ವಿನ

ಗಂಡಾನೆಗಳು, ಗಂಧೇನ-ಗಂಧದಿಂದ, ಆವಾಸಯಂತಃ - ವಾಸನೆಗೊಳಿಸುತ್ತಿರುವವುಗಳಾಗಿ, ತತಃ - ಆ ವನದಿಂದ, ಅನ್ಯದ್ವನಂ - ಮತ್ತೊಂದು ವನವನ್ನು ಕುರಿತು, ಜಗ್ಮುಃ - ತೆರಳಿದವು. ॥ ೪೦ ॥ ವರಾಹವೃಕಸಂಘಾಶ್ಚ - ಕಾಡುಹಂದಿಗಳ ಮತ್ತು ಶಿವಂಗಿಗಳ ತಂಡಗಳೂ, ಮಹಿಷಾಃ-ಕಾಡೆಮ್ಮೆಗಳು, ಸರ್ಪವಾನರಾಃ-ಹಾವುಗಳು, ಕೋತಿಗಳು, ವ್ಯಾಘ್ರಗೋಕರ್ಣಗವಯಾಃ-ಹುಲಿ, ದೊಡ್ಡಚಿಗುರೆ, ಗವಯಗಳು, ಪೃಷತೈಸ್ಸಹ - ಜಿಂಕೆಗಳಿಂದೊಡಗೂಡಿ, ವಿತ್ರೇಸುಃ - ಭಯಗೊಂಡವು. ॥ ೪೧ ॥ ರಥಾಂಗ ಸಾಹ್ವಾಃ - ಚಕ್ರವಾಕಪಕ್ಷಿಗಳು, ನತ್ಯೂಹಾಃ - ನೀರಿನಲ್ಲಿರುವಕೃಷ್ಣಸಾರಗಳು, ಹಂಸಾಃ - ಹಂಸ ಪಕ್ಷಿಗಳು, ಕಾರಂಡವಾಃ - ನೀರುಕೋಳಿಗಳು, ಪ್ಲವಾಃ-ನೀರುಕಾಗೆಗಳು, ತಥಾ-ಹಾಗೆಯೆ, ಪುಂಸ್ಕೋಕಿಲಾಃ - ಕೋಕಿಲಪಕ್ಷಿಗಳು, ಕ್ರೌಂಚಾಃ - ಕ್ರೌಂಚಪಕ್ಷಿಗಳು, ವಿಸಂಜ್ಞಾಃ - ಪ್ರಜ್ಞಾಶೂನ್ಯಗಳಾಗಿ, ದಿಶಃ - ದಿಕ್ಕುಗಳನ್ನು, ಭೇಜಿರೇ- ಹೊಂದಿದವು. ॥ ೪೨ ॥ ತೇನಶಬ್ದೇನ-ಆ ರೋದನಧ್ವನಿಯಿಂದ, ವಿತ್ರಸ್ತೈಃ - ಭಯಗೊಂಡಿರುವ, ಪಕ್ಷಿಭಿಃ - ಹಕ್ಕಿಗಳಿಂದ, ಆಕಾಶಂ - ಆಕಾಶವು, ವೃತಂ - ಸುತ್ತಿಕೊಂಡಿತು, ಮನುಷ್ಯೈಃ - ಮನಜರಿಂದ, ಭೂಮಿಃ - ಭೂಮಿಯು, ಆವೃತಾ - ತುಂಬಿಹೋಯಿತು, ಉಭಯಂ - ಭೂಮ್ಯಂತರಿಕ್ಷಗಳೆರಡೂ, ತದಾ - ಆ ಕಾಲದಲ್ಲಿ, ಪ್ರಬಭೌ - ಹೊಳೆಯುತ್ತಿದ್ದಿತು. ॥ ೪೩ ॥ ತತಃ - ಬಳಿಕ, ಜನಃ - ಜನವು, ಸ್ಥಂಡಿಲೇ - ನೆಲದಲ್ಲಿ, ಆಸೀನಂ - ಕುಳಿತುಕೊಂಡಿರುವ,

ಅಂಚುಗಳಿಂದಲೂ ತುಳಿಯಲಾದುದಾಗಿ ವರ್ಷಾಕಾಲದಲ್ಲಿ ಆಕಾಶವು ಮೇಘಸಂಘರ್ಷಣೆಯಿಂದೊಡಗೂಡಿ ಅಪರಿಮಿತ ಧ್ವನಿಯುಳ್ಳುದಾದಂತೆ ಅತ್ಯದ್ಭುತವಾದ ಕೋಲಾಹಲವುಳ್ಳುದಾಯಿತು. ಆಗಲಾ ಧ್ವನಿಯಿಂದ ಹೆಣ್ಣಾನೆಗಳೊಡಗೂಡಿದುವೂ, ಮದಿಸಿದುವೂ ಆದ ಗಂಡಾನೆಗಳು ಮಹಾ ಭಯವನ್ನು ಹೊಂದಿ ತಮ್ಮ ಮದಗಂಧದಿಂದ ವನವೆಲ್ಲವನ್ನೂ ಪರಿಮಳಗೊಳಿಸಿ ಬೇರೊಂದು ವನಕ್ಕೆ ಓಡಿದವು. ಅಲ್ಲದೆ ಹಂದಿಯ ಹಿಂಡುಗಳೂ, ತೋಳಗಳ ಸಮುದಾಯಗಳೂ, ಕಾಡೆಮ್ಮೆಗಳ ಸಮೂಹಗಳೂ, ಅನೇಕ ವಿಧಗಳಾದ ಸರ್ಪಗಳೂ, ಕಪಿಗಳೂ, ಹುಲಿಗಳೂ, ದುಪ್ಪೆಚಿಗುರೆಗಳೂ, ಚಕ್ರವಾಕ ಪಕ್ಷಿಗಳೂ, ಜಲನಿವಾಸಿಗಳಾದ ಕೃಷ್ಣಸಾರಮೃಗಗಳೂ, ಹಂಸಪಕ್ಷಿಗಳೂ, ನೀರುಕಾಗೆ, ನೀರುಕೋಳಿಗಳು, ಹೆಣ್ಣು ಗಂಡುಕೋಗಿಲೆಗಳು ಇವೆಲ್ಲವೂ ದಿಕ್ಕುದಿಕ್ಕಿಗೂ ಓಡಿಹೋದವು. ॥೩೯-೪೨॥ ಹೀಗೆ ರೋದನ ಧ್ವನಿಗೆ ಹೆದರಿ ಹಾರಿಹೋದ ಪಕ್ಷಿಗಳಿಂದ ಗಗನಮಂಡಲವು ತುಂಬಿಹೋಯಿತು. ಆ ಅರಣ್ಯಪ್ರದೇಶವೆಲ್ಲವೂ ದಶರಥರಾಜ ಕುವರರನ್ನು ನೋಡಲಪೇಕ್ಷಿಸಿ ವೇಗದಿಂದ ಮುಂಬರೆಯುತ್ತಿರುವ ಜನನಿವಹ

ಮರಿಂದಮಂ || ಆಸೀನಂ ಸ್ಥಂಡಿಲೇ ರಾಮಂ ದದರ್ಶ ಸಹಸಾ ಜನಃ || ೪೪ ||
ವಿಗರ್ಹಮಾಣಃ ಕೈಕೇಯೀಂ ಸಹಿತೋ ಮಂಥರಾಮಪಿ || ಅಭಿಗಮ್ಯ ಜನೋ
ರಾಮಂ ಬಾಷ್ಪಪೂರ್ಣ ಮುಖೋಽಭವತ್ || ೪೫ || ತಾನ್ನರಾನ್ ಬಾಷ್ಪ
ಪೂರ್ಣಾಕ್ಷಾನ್ ಸಮೀಕ್ಷ್ಯಾಥ ಸುದುಃಖಿತಾನ್ || ಪರ್ಯಷ್ವಜತ ಧರ್ಮಜ್ಞಃ
ಪಿತೃವ ನ್ಮಾತೃವಚ್ಚ ಸಃ || ೪೬ || ಸ ತತ್ರ ಕಾಂಶ್ಚಿತ್ಪರಿಷಸ್ವಜೇ ನರಾ ನ್ನರಾಶ್ಚ
ಕೇಚಿತ್ತು ತಮಭ್ಯವಾದಯನ್ || ಚಕಾರ ಸರ್ವಾನ್ ಸವಯಸ್ಯ ಬಾಂಧವಾನ್
ಯಥಾರ್ಹ ಮಾಸಾದ್ಯ ತದಾ ನೃಪಾತ್ಮಜಃ || ೪೭ ||

ಪುರುಷವ್ಯಾಘ್ರಂ - ಪುರುಷಶ್ರೇಷ್ಠನಾದ, ಯಶಸ್ವಿನಂ - ಕೀರ್ತಿವಂತನಾದ, ಅರಿಂದಮಂ - ಶತ್ರು ಸಂಹಾರಕನಾದ, ತಂರಾಮಂ - ಆ ಶ್ರೀರಾಮನನ್ನು, ಸಹಸಾ-ಜಾಗ್ರತೆಯಾಗಿ, ದದರ್ಶ - ಕಂಡಿತು, ಜನಃ - ಜನವು, ಸಹಿತಃ - ಗುಂಪುಸೇರಿದುದಾಗಿ, ಕೈಕೇಯೀಂ - ಕೈಕೇಯಾದೇವಿಯನ್ನು, ಮಂಥ ರಾಮಪಿ - ಮಂಥರೆಯನ್ನೂ, ವಿಗರ್ಹಮಾಣಃ - ನಿಂದಿಸುತ್ತ, ರಾಮಂ - ಶ್ರೀರಾಮನನ್ನು ಕುರಿತು, ಅಭಿಗಮ್ಯ - ಇದಿರಾಗಿಬಂದು, ಬಾಷ್ಪಪೂರ್ಣಮುಖಃ - ಕಂಬನಿಗಳಿಂದ ತುಂಬಿರುವ ಮುಖವುಳ್ಳುದು, ಅಭವತ್ - ಆಯಿತು. || ೪೪-೪೫ || ಧರ್ಮಜ್ಞಃ - ಧರ್ಮವನ್ನು ತಿಳಿದಿರುವ, ಸಃ - ಆ ಶ್ರೀರಾಮನು, ಬಾಷ್ಪಪೂರ್ಣಾಕ್ಷಾನ್ - ಕಣ್ಣೀರಿನಿಂದ ತುಂಬಿರುವ ನೇತ್ರಗಳುಳ್ಳ, ತಾನ್ನರಾನ್ - ಆ ಮನುಷ್ಯರನ್ನು, ಸುದುಃಖಿತಾನ್ - ಬಹಳ ಸಂಕಟಗೊಂಡವರನ್ನಾಗಿ, ಸಮೀಕ್ಷ್ಯ - ಕಂಡು, ಅಥ - ಬಳಿಕ, ಪಿತೃವತ್ - ತಂದೆಯಂತೆಯೂ, ಮಾತೃವಚ್ಚ - ತಾಯಿಯಂತೆಯೂ, ಪರ್ಯಷ್ವಜತ-ಅಪ್ಪಿಕೊಂಡನು. ||೪೬|| ತತ್ರ - ಆ ಗುಂಪಿನಲ್ಲಿ, ಸಃ - ಆ ಶ್ರೀರಾಮನು, ಕಾಂಶ್ಚಿತ್ - ಕೆಲವರಾದ, ನರಾನ್ - ಮನುಷ್ಯರನ್ನು, ಪರಿ ಷಸ್ವಜೇ - ಅಪ್ಪಿಕೊಂಡನು, ಕೇಚಿತ್‌ನರಾಶ್ಚ - ಕೆಲಮನುಷ್ಯರೂ, ತಂ-ಆ ಶ್ರೀರಾಮನನ್ನು ಕುರಿತು, ಅಭ್ಯವಾದಯನ್ - ನಮಸ್ಕರಿಸಿದರು, ತಥಾ-ಹಾಗೆಯೇ, ನೃಪಾತ್ಮಜಃ-ರಾಜಕುವರನಾದ ಶ್ರೀರಾಮನು, ಸವಯಸ್ಯಬಾಂಧವಾನ್ - ಸ್ನೇಹಿತರೂ ಬಂಧುಗಳೂ ಇವರಿಂದೊಡಗೂಡಿದ, ಸರ್ವಾನ್ - ಸಮಸ್ತರನ್ನೂ,

ದಿಂದ ನಿಬಿಡೀಕೃತವಾಯಿತು. ಈ ರೀತಿ ಇರುವ ಆ ಭೂಮಿಯು ಬಹು ಮನೋಹರವಾಗಿ ಕಂಗೊಳಿಸುತ್ತಲಿದ್ದಿತು. ಆಗಲಾ ಜನರೆಲ್ಲರೂ ಮಹಾ ವೇಗದಿಂದ ಹೊರಟು, ಪುರುಷೋ ತ್ತಮನೂ, ಕೀರ್ತಿವಂತನೂ, ಶತ್ರುನಾಶಕನೂ, ನೆಲದಮೇಲೆ ಕುಳಿತುಕೊಂಡಿರುವವನೂ ಆದ ಶ್ರೀರಾಮಮೂರ್ತಿಯನ್ನು ನೋಡಿದರು. ಇಂತು ನೋಡಿದೊಡನೆಯೇ! ಆ ಜನರೆಲ್ಲರೂ ಒಟ್ಟುಗೂಡಿ, ರಾಮನ ಬಳಿಗೈದಿ, ಕೈಕೇಯಿಯನ್ನೂ, ಮಂಥರೆಯನ್ನೂ ಅನೇಕ ವಿಧವಾಗಿ ನಿಂದಿಸಿಬಿಟ್ಟರು. ||೪೪-೪೫|| ಅಲ್ಲದೆ ಆ ಸೈನಿಕರೆಲ್ಲರೂ ಶ್ರೀರಾಮನನ್ನು ನೋಡಿದೊಡನೆಯೇ ಕಂಬನಿಗಳಿಂದ ವ್ಯಾಪ್ತವಾದ ಮುಖವುಳ್ಳವರಾಗಿಯೂ, ಮಿತಿಯಿಲ್ಲದ ದುಃಖದಿಂದ ರೋದಿ ಸುತ್ತಿರುವವರೂ, ಆಗಿರುವವರನ್ನು ಶ್ರೀರಾಮನು ನೋಡಿದನು. ಇಂತು ನೋಡಿದ ರಘು ರಾಮನು ತಾಯಿತಂದೆಗಳು ಮಕ್ಕಳನ್ನು ಅಪ್ಪಿಕೊಂಡು ಸಮಾಧಾನಗೊಳಿಸುವಂತೆ ಅವ ರೆಲ್ಲರನ್ನೂ ಸಂತೈಸಿದನು. ಅಲ್ಲದೆ ಶ್ರೀರಾಮನು ಅಲ್ಲಿದ್ದ ಕೆಲವರನ್ನು ಪ್ರೇಮದಿಂದ ಆಲಿಂಗಿಸಿಕೊಂಡನು. ಸೈನಿಕರಲ್ಲಿ ಮತ್ತೆ ಕೆಲವರು ಶ್ರೀರಾಮನನ್ನು ನಮಸ್ಕರಿಸಿದರು.

ಸ ತತ್ರ ತೇಷಾಂ ರುದತಾಂ ಮಹಾತ್ಮನಾಂ
ಭುವಂಚ ಖಂ ಚಾನು ನಿನಾದಯರ್ನ್ ಸ್ವನಃ॥
ಗುಹಾ ಗಿರೀಣಾಂ ಚ ದಿಶಶ್ಚ ಸಂತತಂ
ಮೃದಂಗ ಘೋಷಪ್ರತಿಮಃ ಪ್ರಶುಶ್ರುವೇ ॥ ೪೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವ್ಯುತ್ತರಶತತಮಸ್ಸರ್ಗಃ.

ಯಥಾರ್ಹಂ - ಯಥಾಯೋಗ್ಯವಾಗಿ, ಆಸಾದ್ಯ - ಹೊಂದಿ, ಸಮ್ಮಾನಂ - ಬಹುಮಾನವನ್ನು, ಚಕಾರ- ಮಾಡಿದನು. ॥ ೪೭ ॥ ತತ್ರ - ಆ ರಾಮಾಶ್ರಮದಲ್ಲಿ, ರುದತಾಂ - ರೋದನಮಾಡುತ್ತಿರುವ, ಮಹಾತ್ಮನಾಂ - ಮಹಾ ಪ್ರಭಾವವಂತರಾದ, ತೇಷಾಂ - ಆ ಶ್ರೀರಾಮಾದಿಗಳ, ಸಸ್ವನಃ - ಆ ಧ್ವನಿಯು, ಭುವಂಚ - ನೆಲವನ್ನು, ಖಂಚ - ಅಂತರಿಕ್ಷವನ್ನು, ಗಿರೀಣಾಂ - ಬೆಟ್ಟಗಳ, ಗುಹಾಶ್ಚ - ಗುಹೆಗಳೂ, ದಿಶಶ್ಚ - ದಿಕ್ಕುಗಳೂ, ಸಂತತಂ - ನಿರಂತರವೂ, ಅನುನಿನಾದಯರ್ನ್ - ಪ್ರತಿಧ್ವನಿಗೊಳಿಸುವುದಾಗಿ, ಮೃದಂಗಘೋಷಪ್ರತಿಮಃ - ಮರ್ದಲೆಗಳಧ್ವನಿಗೆ ಸಮಾನವಾಗಿ, ಪ್ರಶುಶ್ರುವೇ - ಕೇಳಿಸಿತು. ॥ ೪೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವ್ಯುತ್ತರಶತತಮಸ್ಸರ್ಗಃ.

ಆಗ ತನ್ನನ್ನು ನೋಡಲು ಬಂದ ಸ್ನೇಹಿತರಿಗೂ, ಬಂಧುಗಳಿಗೂ, ಶ್ರೀರಾಮನೂ ಯೋಗ್ಯ ರೀತಿಯಲ್ಲಿ ಸತ್ಕಾರವನ್ನು ಮಾಡಿದನು. ॥೪೬-೪೭॥ ಆ ಸಮಯದಲ್ಲಿ ಅಲ್ಲಿದ್ದವರೆಲ್ಲರೂ ಅಪರಿಮಿತವಾದ ಕಣ್ಣೀರನ್ನು ಸುರಿಸಿ ರೋದಿಸಿದರು. ಆ ಮಹಾ ಧ್ವನಿಯು ಭೂಮ್ಯಾಕಾಶಗಳನ್ನು ವ್ಯಾಪಿಸಿ ಪ್ರತಿಧ್ವನಿತವಾದುದಲ್ಲದೆ ಆ ಪರ್ವತದ ಗುಹಾಪ್ರದೇಶಗಳಲ್ಲಿಯೂ ಮದ್ದಲೆಯ ಧ್ವನಿಯಂತೆ ಬಹು ದೂರದವರಿಗೂ ಕೇಳಿಸುತ್ತಲಿದ್ದಿತು. ॥ ೪೮ ॥

ಇಂತಿದು ಶ್ರೀರಾಮಲಕ್ಷ್ಮಣಕೃತ ಸ್ವಪಿತೃ ತಿಲೋದಕಕ್ರಿಯಾ ವಿಧಾನ ನಿರೂಪಣವೆಂಬ ನೂರೆರಡನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ತ್ರ್ಯುತ್ತರಶತತಮಸ್ಸರ್ಗಃ.

ವಸಿಷ್ಠಃ ಪುರತಃ ಕೃತ್ವಾ ದಾರಾ೯ ದಶರಥಸ್ಯ ಚ ॥ ಅಭಿಚಕ್ರಾಮ ತಂ ದೇಶಂ ರಾಮದರ್ಶನ ತರ್ಷಿತಃ ॥ ೧ ॥ ರಾಜಪತ್ನ್ಯಶ್ಚ ಗಚ್ಛಂತ್ಯೋ ಮಂದಂ ಮಂದಾಕಿನೀಂ ಪ್ರತಿ ॥ ದದೃಶು ಸ್ತತ್ರ ತತ್ತೀರ್ಥಂ ರಾಮಲಕ್ಷ್ಮಣ ಸೇವಿತಂ ॥ ೨ ॥ ಕೌಸಲ್ಯಾ ಬಾಷ್ಪಪೂರ್ಣೇನ ಮುಖೇನ ಪರಿಶುಷ್ಯತಾ ॥ ಸುಮಿತ್ರಾ ಮಬ್ರವೀದ್ದೀನಾ ಯಾಶ್ಚಾನ್ಯಾ ರಾಜಯೋಷಿತಃ ॥ ೩ ॥ ಇದಂ ತೇಷಾ ಮನಾಥಾನಾಂ ಕ್ಲಿಷ್ಟ ಮಕ್ಲಿಷ್ಟಕರ್ಮಣಾಂ ॥ ವನೇ ಪ್ರಾಕ್ಕೇವಲಂ

ವಸಿಷ್ಠಃ - ವಸಿಷ್ಠಋಷಿಯು, ರಾಮದರ್ಶನತರ್ಷಿತಃ - ಶ್ರೀರಾಮದರ್ಶನ ವಿಷಯದಲ್ಲಿ ಅಭಿಲಾಷೆಯುಳ್ಳವನಾಗಿ, ದಶರಥಸ್ಯ - ದಶರಥರಾಯನ, ದಾರಾ೯ - ಹೆಂಡತಿಯರನ್ನು, ಪುರತಃ - ಮುಂದು, ಕೃತ್ವಾ - ಮಾಡಿಕೊಂಡು, ತಂದೇಶಂ - ಆ ಪ್ರದೇಶವನ್ನು ಕುರಿತು, ಅಭಿಚಕ್ರಾಮ-ಹೊರಟನು. ॥ ೧ ॥ ರಾಜಪತ್ನ್ಯಶ್ಚ - ದಶರಥರಾಯನ ಹೆಂಡತಿಯರು, ಮಂದಾಕಿನೀಂಪ್ರತಿ - ಗಂಗೆಯನ್ನು ಕುರಿತು, ಮಂದಂ - ಮೆಲ್ಲನೆ, ಗಚ್ಛಂತ್ಯಃ - ಹೋಗುತ್ತ, ತತ್ರ - ಅಲ್ಲಿ, ರಾಮಲಕ್ಷ್ಮಣಸೇವಿತಂ - ಶ್ರೀರಾಮಲಕ್ಷ್ಮಣರಿಂದ ಸೇವಿಸಲ್ಪಟ್ಟ, ತತ್ತೀರ್ಥಂ - ಆ ಗಂಗಾತೀರ್ಥವನ್ನು, ದದೃಶುಃ - ಕಂಡರು. ॥ ೨ ॥ ಕೌಸಲ್ಯಾ - ಕೌಸಲ್ಯಾದೇವಿಯು, ಬಾಷ್ಪಪೂರ್ಣೇನ - ಕಂಬನಿಗಳಿಂದ ತುಂಬಿದ, ಪರಿಶುಷ್ಯತಾ - ಒಣಗಿರುವ, ಮುಖೇನ - ಮುಖದಿಂದ ಕೂಡಿದವಳಾಗಿ, ದೀನಾ - ದೀನಳಾಗಿ, ಸುಮಿತ್ರಾಂ - ಸುಮಿತ್ರಾದೇವಿಯನ್ನು ಕುರಿತು, ಅನ್ಯಾಃ - ಮತ್ತೆ ಕೆಲವರಾದ, ರಾಜಯೋಷಿತಶ್ಚ - ರಾಜಸ್ತ್ರೀಯರು, ಯಾಃ - ಯಾರೋ, ತಾಶ್ಚ - ಅವರನ್ನೂ ಕುರಿತು, ಅಬ್ರವೀತ್ - ನುಡಿದಳು. ॥೩॥ ತೇ - ಪ್ರಸಿದ್ಧರಾದ, ಯೇ - ಯಾವ ಸೀತಾರಾಮಲಕ್ಷ್ಮಣರು, ಪ್ರಾಕ್ - ಮೊದಲು, ನಿರ್ವಿಷಯಿಾ

ಈಪ್ರಕಾರವಾಗಿ ಸೀತಾಲಕ್ಷ್ಮಣ ಭರತಶತ್ರುಘ್ನರೊಡಗೂಡಿದ ಶ್ರೀರಾಮನ ಸಂಗತಿಯನ್ನು, ಗಿರಿಗಹ್ವರಗಳಲ್ಲಿ ಪ್ರತಿಧ್ವನಿತವಾದ ಧ್ವನಿಯಿಂದಲೇ ಅರಿತುಕೊಂಡ ವಸಿಷ್ಠಮಹರ್ಷಿಯು ಆತನನ್ನು ನೋಡಬೇಕೆಂಬ ತೀವ್ರಾಭಿಲಾಷೆಯಿಂದ ದಶರಥರಾಜನ ಮಡದಿಯರೆಲ್ಲರನ್ನೂ ಮುಂದಿಟ್ಟುಕೊಂಡು ಆ ಸ್ಥಳವನ್ನು ಕುರಿತು ಹೊರಟನು. ॥ ೧ ॥ ಆಗೆ ರಾಜಪತ್ನಿಯರೆಲ್ಲರೂ ಮೆಲ್ಲ ಮೆಲ್ಲನೆ ಮಂದಾಕಿನೀನದಿಯ ಕಡೆಗೆ ನಡೆತಂದು ಅಲ್ಲಿ ಶ್ರೀ ಸೀತಾರಾಮಲಕ್ಷ್ಮಣರಿಂದ ಸೇವಿಸಲಾದ ಸ್ನಾನಘಟ್ಟವನ್ನು ನೋಡಿದವರಾದರು. ॥ ೨ ॥ ಆ ಸಮಯದಲ್ಲಿ ಶ್ರೀರಾಮಜನನಿಯಾದ ಕೌಸಲ್ಯಾದೇವಿಯು ಕಣ್ಣೀರಿನಿಂದ ತುಂಬಿದ ಮುಖವುಳ್ಳವಳಾಗಿ ಕಂಠವು ಒಣಗುತ್ತಿರಲು ಸುಮಿತ್ರಾದೇವಿಯನ್ನೂ, ಇತರ ರಾಜಸ್ತ್ರೀಯರನ್ನೂ ಕುರಿತು ಬಹು ದೈನ್ಯದಿಂದ ಹೀಗೆ ಹೇಳಿದಳು. ॥ ೩ ॥ “ ಎಲೌ ಸಖಿಯರಿರಾ! ಇದೋ ಅಯೋಧ್ಯಾನಗರದಿಂದ ಅರಣ್ಯಕ್ಕೆ ಕಳುಹಲಾದವರೂ, ದಿಕ್ಕಿಲ್ಲದದರೂ, ಎಂತಹ ಕಷ್ಟಕೆಲಸ

ತೀರ್ಥಂ ಯೇ ತೇ ನಿರ್ವಿಷಯಿಣಾ ಕೃತಾಃ ॥ ೪ ॥ ಇತಸ್ಸುಮಿತ್ರೇ! ಪುತ್ರಸ್ತೇ ಸದಾ ಜಲಮತಂದ್ರಿತಃ ॥ ಸ್ವಯಂ ಹರತಿ ಸೌಮಿತ್ರಿರ್ಮಮ ಪುತ್ರಸ್ಯ ಕಾರಣಾತ್ ॥ ೫ ॥ ಜಘನ್ಯಮಪಿ ತೇ ಪುತ್ರಃ ಕೃತವಾನ್ನತು ಗರ್ಹಿತಃ ॥ ಭ್ರಾತುರ್ಯದರ್ಥಸಹಿತಂ ಸರ್ವಂ ತದ್ವಿಹಿತಂ ಗುಣೈಃ ॥ ೬ ॥ ಅದ್ಯಾಯಮಪಿ ತೇ ಪುತ್ರಃ ಕ್ಲೇಶಾನಾಮತಥೋಚಿತಃ ॥ ನೀಚಾನರ್ಥಸಮಾಚಾರಂ ಸಜ್ಜಂ ಕರ್ಮ ಪ್ರಮುಂಚತು ॥ ೭ ॥ ದಕ್ಷಿಣಾಗ್ರೇಷು ದರ್ಭೇಷು ಸಾ ದದರ್ಶ ಮಹೀತಲೇ ॥ ಪಿತುರಿಂಗುದಿಪಿಣ್ಯಾಕಂ ನ್ಯಸ್ತಮಾಯತಲೋಚನಾ ॥ ೮ ॥ ತಂ

ಕೃತಾಃ - ದೇಶದಿಂದ ಹೊರಡಿಸಲ್ಪಟ್ಟರೋ, ಅನಾಥಾನಾಂ - ನಾಥರಹಿತರಾದ, ಅಕ್ಲಿಷ್ಟಕರ್ಮಣಾಂ- ಕ್ಲೇಶವಿಲ್ಲದೆಯೇ ವ್ಯಾಪಾರವನ್ನುಮಾಡುತ್ತಿರುವ, ವನೇ - ಅರಣ್ಯದಲ್ಲಿ, ತೇಷಾಂ - ಅವರಿಗೆ, ಇದಂ - ಈ, ತೀರ್ಥಂ - ತೀರ್ಥವು, ಕ್ಲಿಷ್ಟಂ - ಬಳಸಿಕೊಳ್ಳಲಾಗಿದೆ, ಕೇವಲಂ - ನಿಶ್ಚಯವು. ॥ ೪ ॥ ಹೇ ಸುಮಿತ್ರೇ - ಎಲೌ ಸುಮಿತ್ರಾದೇವಿಯೇ, ತೇ - ನಿನ್ನ, ಪುತ್ರಃ - ಕುವರನಾದ, ಸೌಮಿತ್ರಿಃ - ಲಕ್ಷ್ಮಣನು, ಅತಂದ್ರಿತಃ - ಜಾಗರೂಕನಾಗಿ, ಮಮ - ನನ್ನ, ಪುತ್ರಸ್ಯ - ಮಗನ, ಕಾರಣಾತ್ - ನಿಮಿತ್ತವಾಗಿ, ಸದಾ - ಯಾವಾಗಲೂ, ಸ್ವಯಂ - ತಾನೆ, ಇತಃ - ಇಲ್ಲಿಂದ, ಜಲಂ - ನೀರನ್ನು, ಹರತಿ - ತೆಗೆದುಕೊಂಡು ಹೋಗುತ್ತಾನೆ. ॥ ೫ ॥ ತೇ - ನಿನ್ನ, ಪುತ್ರಃ - ಕುವರನು, ಜಘನ್ಯಂ- ಜಲಾಹರಣರೂಪ ನೀಚಕಾರ್ಯವನ್ನು, ಕೃತವಾನಪಿ - ಮಾಡಿದವನಾದರೂ, ನಗರ್ಹಿತಃ - ನಿಂದಿಸಲ್ಪಡಲಿಲ್ಲ, ಭ್ರಾತುಃ - ಅಣ್ಣನಿಗೆ, ಅರ್ಥಸಹಿತಂ - ಪ್ರಯೋಜನವಾದುದು, ಯತ್ - ಯಾವ ಕರ್ಮವೋ, ತತ್ಸರ್ವಂ - ಆ ಸಮಸ್ತ ಕರ್ಮವು, ಗುಣೈಃ - ಗುಣಗಳಿಂದ, ವಿಹಿತಂ-ಮಾಡಲ್ಪಟ್ಟದ್ದು, (ಭವತಿ - ಆಗುತ್ತದೆ) ॥೬॥ ತೇ - ನಿನ್ನ, ಅಯಂಪುತ್ರೋಪಿ - ಈ ಲಕ್ಷ್ಮಣನು, ಕ್ಲೇಶಾನಾಂ - ಕಷ್ಟಗಳಿಗೆ, ಅತಥೋಚಿತಃ - ಅರ್ಹನಲ್ಲದಿದ್ದರೂ, ನೀಚಾನರ್ಥಸಮಾಚಾರಂ - ನಿಕೃಷ್ಟವಾದ ದುಃಖ ಸಂಪಾದಕ ಅನುಷ್ಠಾನವುಳ್ಳ, ಸಜ್ಜಂ - ಪ್ರಸಕ್ತವಾದ, ಕರ್ಮ - ವ್ಯಾಪಾರವನ್ನು, ಪ್ರಮುಂಚತು- ಬಿಡಲಿ. ॥ ೭ ॥ ಆಯತಲೋಚನಾ - ವಿಸ್ತಾರವಾದ ನೇತ್ರಗಳುಳ್ಳ, ಸಾ-ಆ ಕೌಸಲ್ಯಾದೇವಿಯು, ದಕ್ಷಿಣಾಗ್ರೇಷು - ದಕ್ಷಿಣಾಗ್ರವಾಗಿ ಹಾಸಲ್ಪಟ್ಟಕೊನೆಗಳುಳ್ಳ, ದರ್ಭೇಷು - ಕುಶಗಳಲ್ಲಿ, ಮಹೀತಲೇ-

---

ವನ್ನಾದರೂ, ಬಹು ಸುಲಭವಾಗಿ ಸಾಧಿಸುವ ಸಾಮರ್ಥ್ಯವುಳ್ಳವರೂ ಆದ ರಾಮಲಕ್ಷ್ಮಣರಿಂದ ಸೇವಿಸಲ್ಪಟ್ಟ ತೀರ್ಥಸ್ಥಳವಿದು. ಓ ಸುಮಿತ್ರಾದೇವಿಯೆ! ನಿನ್ನ ಮಗನಾದ ಲಕ್ಷ್ಮಣನು ನನ್ನ ರಾಮನಿಗೋಸುಗ ಇಲ್ಲಿಂದ ಕಷ್ಟವಿಲ್ಲದೆ ಯಾವಾಗಲೂ ನೀರನ್ನು ತೆಗೆದುಕೊಂಡು ಹೋಗುತ್ತಿರುವಂತಿದೆ. ಇಂತು ನಿನ್ನ ಮಗನು ನಿಕೃಷ್ಟವಾದ ಕಾರ್ಯವನ್ನೆಸಗಿದರೂ "ಜ್ಯೇಷ್ಠಭ್ರಾತಾಪಿತೃಸಮಃ" ಎಂಬ ನಾಣ್ನುಡಿಯಂತೆ ತಂದೆಗೆ ಸಮಾನನಾದ ಅಣ್ಣನ ಸೇವಾರೂಪಕಾರ್ಯವನ್ನು ಮಾಡುತ್ತಿರುವುದರಿಂದ ಅದೂ ಸತ್ಕಾರ್ಯದಲ್ಲಿಯೇ ಪರಿಗಣಿಸಲ್ಪಡುತ್ತದೆ. ಈಗ ಕ್ಲೇಶಗಳಿಗೆಂದಿಗೂ ಅರ್ಹನಲ್ಲದ ನಿನ್ನ ಮಗನು ಇಂದಿಗೂ ಆಚರಿಸುತ್ತಿರುವ ನೀಚಕರ್ಮವನ್ನು ಬಿಡುವವನಾಗಲಿ." ॥ ೪-೭ ॥ ಹೀಗೆ ನುಡಿದ ಬಳಿಕ ಆ ದೇವಿಯು ಭೂಮಿಯ ಮೇಲೆ ದಕ್ಷಿಣಾಗ್ರವಾಗಿ ಹಾಸಿದ್ದ ದರ್ಭೆಗಳ ಮೇಲೆ ತಂದೆಗೋಸುಗ

ಭೂಮೌ ಪಿತುರಾರ್ತೇನ ನ್ಯಸ್ತಂ ರಾಮೇಣ ವೀಕ್ಷ್ಯಸಾ ॥ ಉವಾಚ ದೇವೀ
ಕೌಸಲ್ಯಾ ಸರ್ವಾ ದಶರಥ ಸ್ತ್ರಿಯಃ ॥ ೯ ॥ ಇದ ಮಿಕ್ಷ್ವಾಕುನಾಥಸ್ಯ ರಾಘ
ವಸ್ಯ ಮಹಾತ್ಮನಃ ॥ ರಾಘವೇಣ ಪಿತುರ್ದತ್ತಂ ಪಶ್ಯತೈ ತದ್ಯಥಾವಿಧಿ ॥ ೧೦ ॥
ತಸ್ಯ ದೇವಸಮಾನಸ್ಯ ಪಾರ್ಥಿವಸ್ಯ ಮಹಾತ್ಮನಃ ॥ ನೈತದೌಪಯಿಕಂ ಮನ್ಯೇ
ಭುಕ್ತಭೋಗಸ್ಯ ಭೋಜನಂ ॥ ೧೧ ॥ ಚತುರಂತಾಂ ಮಹೀಂ ಭುಕ್ತ್ವಾ
ಮಹೇಂದ್ರ ಸದೃಶೋ ವಿಭುಃ ॥ ಕಥಮಿಂಗುದಿ ಪಿಣ್ಯಾಕಂ ಸಭುಂಕ್ತೇ ವಸುಧಾ
ಧಿಪಃ ॥ ೧೨ ॥ ಅತೋದುಃಖತರಂ ಲೋಕೇ ನಕಿಂಚಿ ತ್ಪ್ರತಿಭಾತಿಮಾ ॥

ಭೂಪ್ರದೇಶದಲ್ಲಿ, ನ್ಯಸ್ತಂ - ಇರಿಸಲ್ಪಟ್ಟ, ಪಿತುಃ-ತಂದೆಯ ಉದ್ದೇಶ್ಯಕವಾದ, ಇಂಗುದಿಪಿಣ್ಯಾಕಂ-ಇಂಗುದೀಬೀಜದ ಹಿಟ್ಟನ್ನು, ದದರ್ಶ - ಕಂಡಳು. ॥ ೮ ॥ ಸಾ - ಕೌಸಲ್ಯಾದೇವಿಯು, ಭೂಮೌ - ನೆಲದಲ್ಲಿ, ಆರ್ತೇನ - ದುಃಖಿತನಾದ, ರಾಮೇಣ - ಶ್ರೀರಾಮನಿಂದ, ಪಿತುಃ - ತಂದೆಯ ಉದ್ದೇಶ್ಯವಾಗಿ, ನ್ಯಸ್ತಂ - ಇರಿಸಲಾದ, ತಂ - ಆ ಪಿಷ್ಟಪಿಂಡವನ್ನು, ವೀಕ್ಷ್ಯ - ಕಂಡು, ಸರ್ವಾಃ - ಸಮಸ್ತರಾದ, ದಶರಥಸ್ತ್ರಿಯಃ - ದಶರಥನ ಹೆಂಡತಿಯರನ್ನು ಕುರಿತು, ಉವಾಚ - ಹೇಳಿದಳು. ॥ ೯ ॥ ಮಹಾತ್ಮನಃ - ಮಹಾಮನಸ್ವಿಯಾದ, ಇಕ್ಷ್ವಾಕುನಾಥಸ್ಯ - ಇಕ್ಷ್ವಾಕುಕುಲಕ್ಕೆ ಸ್ವಾಮಿಯಾದ, ರಾಘವಸ್ಯ - ರಘುಕುಲೋತ್ಪನ್ನನಾದ, ಪಿತುಃ - ತಂದೆಯಾದ ದಶರಥರಾಯನಿಗೆ, ರಾಘವೇಣ - ಶ್ರೀರಾಮನಿಂದ, ಯಥಾವಿಧಿ - ಯಥಾಶಾಸ್ತ್ರವಾಗಿ, ದತ್ತಂ - ಕೊಡಲ್ಪಟ್ಟ, ಏತದಿದಂ-ಈ ಪರಿದೃಶ್ಯವಾದ ಪಿಷ್ಟಪಿಂಡವನ್ನು, ಪಶ್ಯತ - ನೋಡಿರಿ. ॥ ೧೦ ॥ ದೇವಸಮಾನಸ್ಯ - ದೇವತೆಗಳಿಗೆ ಸಮಾನನಾದ, ಮಹಾತ್ಮನಃ - ಉದಾರಮನವುಳ್ಳ, ಭುಕ್ತಭೋಗಸ್ಯ - ಅನುಭವಿಸಲ್ಪಟ್ಟ ಅನೇಕ ಸುಖಗಳುಳ್ಳ, ಪಾರ್ಥಿವಸ್ಯ - ಅರಸನಿಗೆ, ಏತದ್ಭೋಜನಂ - ಈ ಭೋಜನವು, ಔಪಯಿಕಂ - ಉಪಯುಕ್ತವಾದುದು, ನ - ಅಲ್ಲವೆಂದು, ಮನ್ಯೇ - ಎಣಿಸುತ್ತೇನೆ. ॥ ೧೧ ॥ ಮಹೇಂದ್ರಸದೃಶಃ - ದೇವೇಂದ್ರನಿಗೆ ಸಮಾನನಾದ, ವಿಭುಃ - ಸಮರ್ಥನಾದ, ವಸುಧಾಧಿಪಃ - ಭೂಪತಿಯಾದ, ಸಃ-ಆ ದಶರಥರಾಯನು, ಇಂಗುದಿಪಿಣ್ಯಾಕಂ - ಗಾರೇಹಣ್ಣಿನ ಬೀಜದ ಹಿಟ್ಟನ್ನು, ಕಥಂಭುಂಕ್ತೇ-ಹೇಗೆತಾನೆ ಭುಜಿಸುತ್ತಾನೆ. ॥೧೨॥ ಅತಃ - ಇದಕ್ಕಿಂತಲೂ, ಲೋಕೇ - ಲೋಕದಲ್ಲಿ, ದುಃಖತರಂ - ಮಹಾ ದುಃಖಕರವಾದುದು,

ದುಃಖಿತನಾದ ಶ್ರೀರಾಮನಿಂದ ಇಡಲಾಗಿದ್ದ ಇಂಗುದೀಬೀಜಪಿಷ್ಟವನ್ನು ನೋಡಿ ಅಲ್ಲಿದ್ದ ದಶರಥರಾಜನಮಡದಿಯರೆಲ್ಲರನ್ನೂ ಕುರಿತು “ಎಲೌ ಇತ್ತನೋಡಿರಿ, ಇಕ್ಷ್ವಾಕುಕುಲದೊಡೆಯನೂ, ರಘುಕುಲೋದ್ಭವನೂ, ಮಹಾತ್ಮನೂ ಆದ ದಶರಥರಾಜನಿಗೆ ಶ್ರೀರಾಮಚಂದ್ರನಿಂದ ಶಾಸ್ತ್ರೋಕ್ತವಾಗಿ ಕೊಡಲಾದ ಇಂಗುದೀಬೀಜಪಿಷ್ಟವೇ ಇದು. ॥ ೮-೧೦ ॥ ಅಯ್ಯೋ! ದೇವತೆಗಳಿಗೆ ಸಮಾನನೂ, ಮಹಾತ್ಮನೂ, ಆದ ನರೇಂದ್ರನಿಗೆ ಇದು ಭೋಗಗಳನ್ನನುಭವಿಸಿದವನಿಗೆ ಭೋಜನದಂತೆ ಸೊಗಸೀತೆ? ಅಯ್ಯೋ ! ಮಹಾ ಪರಾಕ್ರಮಶಾಲಿಯೂ, ದೇವೇಂದ್ರನಿಗೆ ಸಮಾನನಾದವನೂ ಆದ ದಶರಥಮಹಾರಾಜನು ನಾಲ್ಕು ಸಮುದ್ರಗಳವರೆಗೂ ಪಸರಿಸಿರುವ ಭೂಮಂಡಲವನ್ನಾಳಿ, ಇದೀಗ ಈ ಪಿಷ್ಟಭೋಜನವನ್ನು ಹೇಗೆತಾನೇ ಭುಜಿಸಿಯಾನು ? ಮಹಾಪರಾಕ್ರಮಶಾಲಿಯಾದವನೂ, ಸಕಲ ಧರ್ಮಗಳನ್ನರಿತವನೂ ಆದ

ಯತ್ರ ರಾಮಃ ಪಿತುರ್ದದ್ಯಾ ದಿಂಗುದಿಕ್ಷೋದಮೃದ್ಧಿಮಾನ್ ॥ ೧೩ ॥
ರಾಮೇಣೇಂಗುದಿಪಿಣ್ಯಾಕಂ ಪಿತುರ್ದತ್ತಂ ಸಮೀಕ್ಷ್ಯ ತಂ ॥ ಕಥಂ ದುಃಖೇನ
ಹೃದಯಂ ನ ಸ್ಫೋಟತಿ ಸಹಸ್ರಧಾ ॥ ೧೪ ॥ ಶ್ರುತಿಸ್ತು ಖಲ್ವಿಯಂ ಸತ್ಯಾ
ಲೌಕಿಕೀ ಪ್ರತಿಭಾತಿ ಮಾ ॥ ಯದನ್ನಃ ಪುರುಷೋ ಭವತಿ ತದನ್ನಾ ಸ್ತಸ್ಯ
ದೇವತಾಃ ॥ ೧೫ ॥ ಏವಮಾರ್ತಾಂ ಸಪತ್ನ್ಯ ಸ್ತಾ ಜಗ್ಮುರಾಶ್ವಾಸ್ಯ ತಾಂ
ತದಾ ॥ ದದೃಶು ಶ್ಚಾಶ್ರಮೇ ರಾಮಂ ಸ್ವರ್ಗಚ್ಯುತ ಮಿವಾಮರಂ ॥ ೧೬ ॥

ಕಿಂಚಿತ್ - ಸ್ವಲ್ಪವಾದರೂ, ನ - ಇಲ್ಲ, ಇತಿ - ಇಂತೆಂದು, ಮಾ - ನನಗೆ, ಪ್ರತಿಭಾತಿ - ತೋರುತ್ತದೆ, ಯತ್ರ - ಯಾವ ಅರಣ್ಯದಲ್ಲಿ, ಋದ್ಧಿಮಾನ್ - ಮಹದೈಶ್ವರ್ಯವಂತನಾದ, ರಾಮಃ - ಶ್ರೀರಾಮನು, ಪಿತುಃ - ತಂದೆಗೆ, ಇಂಗುದಿಕ್ಷೋದಂ-ಗಾರೇಗಿಡದ ಬೀಜದ ಚೂರ್ಣವನ್ನು, ದದ್ಯಾತ್-ಕೊಡುವನೋ, ರಾಮೇಣ - ಶ್ರೀರಾಮನಿಂದ, ಪಿತುಃ - ತಂದೆಗೆ, ದತ್ತಂ - ಕೊಡಲ್ಪಟ್ಟ, ಇಂಗುದಿಪಿಣ್ಯಾಕಂ - ತಾಪಸತರು ಚೂರ್ಣವನ್ನು, ಸಮೀಕ್ಷ್ಯ - ಕಂಡು, ಮೇ - ನನ್ನ, ಹೃದಯಂ - ವಕ್ಷಸ್ಥಲವು, ದುಃಖೇನ - ದುಃಖದಿಂದ, ಸಹಸ್ರಧಾ - ಸಾವಿರಪಾಲಾಗಿ, ಕಥಂನಸ್ಫೋಟತಿ - ಹೊಡೆದು ಹೋಗಲಾರದೇಕೋ. ॥ ೧೪ ॥ ಲೌಕಿಕೀ - ಲೋಕರೂಢವಾದ, ಇಯಂಶ್ರುತಿಸ್ತು - ಈ ಶ್ರುತಿಯಾದರೆ, ಮಾ - ನನಗೆ, ಸತ್ಯಾ - ನಿಜವಾಗಿ, ಪ್ರತಿಭಾತಿ - ತೋರುತ್ತದೆ, ಪುರುಷಃ - ಮನುಜನು, ಯದನ್ನಃ - ಯಾವ ಪದಾರ್ಥವೇ ಭೋಜನವಾಗುಳ್ಳವನೋ, ತಸ್ಯ - ಆ ಪುರುಷನ, ದೇವತಾಃ - ದೇವತೆಗಳು, ತದನ್ನಾಃ - ಅದೇ ಅನ್ನವಾಗುಳ್ಳವರು, ಇತಿ - ಇಂತೆಂದು, ಯಾ - ಯಾವ ಶ್ರುತಿಯೋ, ॥ ೧೫ ॥ ಏವಂ - ಈಪರಿಯಾಗಿ, ಆರ್ತಾಂ - ದುಃಖಿತಳಾದ, ತಾಂ - ಆ ಕೌಸಲ್ಯಾದೇವಿಯನ್ನು, ಆಶ್ವಾಸ್ಯ - ಸಮಾಧಾನಗೊಳಿಸಿ, ತಾಸ್ಸಪತ್ನ್ಯಃ - ಆ ಸವತಿಯರು, ಜಗ್ಮುಃ - ತೆರಳಿದರು, ತದಾ - ಆ ಕಾಲದಲ್ಲಿ, ಸ್ವರ್ಗಚ್ಯುತಂ - ಸ್ವರ್ಗಲೋಕದಿಂದ ಜಾರಿಬಿದ್ದ, ಅಮರಮಿವಸ್ಥಿತಂ - ದೇವತೆಯಂತಿರುವ, ರಾಮಂಚ - ಶ್ರೀರಾಮನನ್ನು, ಆಶ್ರಮೇ - ಆಶ್ರಮದಲ್ಲಿ, ದದೃಶುಃ - ಕಂಡರು. ॥ ೧೬ ॥

ಶ್ರೀರಾಮನು ತಂದೆಗೆ ಇಂಗುದೀಬೀಜಪಿಷ್ಟವನ್ನು ಅರ್ಪಿಸಿದನೆಂಬುದಕ್ಕಿಂತಲೂ ಮತ್ತೆ ಬೇರೆ ದುಃಖಕರವಾದ ಸಂಗತಿಯು ಇಲ್ಲವೇ ಇಲ್ಲವೆಂದು ನನಗೆ ತೋರುತ್ತದೆ. ಅಯ್ಯೋ! ನನ್ನ ಹೃದಯವು ಎಷ್ಟು ಕಠಿಣವಾದುದು, ತಂದೆಯಾದ ದಶರಥರಾಜನಿಗೆ ರಾಮನಿಂದ ಕೊಡಲಾದ ಇಂಗುದೀಬೀಜಪಿಷ್ಟವನ್ನು ನೋಡಿದರೂ ಸಾವಿರಹೋಳಾಗಿ ಸೀಳಿಹೋಗದಿರುವದಲ್ಲ! ॥ ೧೧-೧೪ ॥ ಪುರುಷನು ಯಾವ ಅನ್ನವನ್ನು ಭೋಜನವಾಗಿ ಉಳ್ಳವನೋ ಆದೇ ಅನ್ನದಿಂದಲೇ ದೇವತೆಗಳೂ ತೃಪ್ತರಾಗುತಾ್ತರೆ ಎಂಬ ಈ ವಾಕ್ಯವು ಶ್ರುತಿವಾಕ್ಯವೇ ವಿನಹ ಗಾಥೆಯಂದು ನನಗೆ ತೋರುವದಿಲ್ಲ" ಎಂದು ಹೇಳಿದಳು. (೧) ಆ ಬಳಿಕ ಕೌಸಲ್ಯಾದೇವಿಯ ಸವತಿಯರೆಲ್ಲರೂ ಆಕೆಯನ್ನು ಸಮಾಧಾನಗೊಳಿಸಿ ಮುಂದಕ್ಕೆಹೊರಟು ಸಮೀಪದಲ್ಲಿಯೇ ಇದ್ದ ಆಶ್ರಮದಲ್ಲಿ ಸ್ವರ್ಗಚ್ಯುತನಾದ ದೇವತೆಯಂತೆ ಸಕಲ ಭೋಗಗಳಿಂದಲೂ ವಿರಹಿತನಾದ ಶ್ರೀರಾಮಮೂರ್ತಿಯನ್ನು ನೋಡಿ ಬಹಳವಾಗಿ ಪರಿತಪಿಸಿ ಘಟ್ಟಿಯಾಗಿ ಅಳುತಾ್ತ ಧಾರೆಧಾರೆಯಾಗಿ ಕಣ್ಣೀರನ್ನು ಸುರಿಸಿದರು. ॥ ೧೫-೧೬ ॥ ಆಗ ಪುರುಷಶ್ರೇಷ್ಠನೂ,

ಟ. (೧) ಇದು ಕತಕಕಾರರ ಅಭಿಪ್ರಾಯ. ಸಾಮಾನ್ಯಾರ್ಥವು ಪ್ರತಿಪದಾರ್ಥದಲ್ಲಿದೆ.

ಸರ್ವಭೋಗೈಃ ಪರಿತ್ಯಕ್ತಂ ರಾಮಂ ಸಂಪ್ರೇಕ್ಷ್ಯ ಮಾತರಃ||ಆರ್ತಾ ಮುಮುಚು ರಶ್ರೂಣಿ ಸಸ್ವರಂ ಶೋಕಕರ್ಶಿತಾಃ || ೧೭ || ತಾಸಾಂ ರಾಮ ಸ್ಸಮುತ್ಥಾಯ ಜಗ್ರಾಹ ಚರಣಾನ್ ಶುಭಾನ್ || ಮಾತೄಣಾಂ ಮನುಜ ವ್ಯಾಘ್ರ ಸ್ಸರ್ವಾಸಾಂ ಸತ್ಯಸಂಗರಃ || ೧೮ || ತಾಃ ಪಾಣಿಭಿ ಸ್ಸುಖಸ್ಪರ್ಶೈ ರ್ಮೃದ್ವಂಗುಳಿತಲೈ ಶ್ಶುಭೈಃ||ಪ್ರಮಮಾರ್ಜೂ ರಜಃ ಪೃಷ್ಠಾ ದ್ರಾಮಸ್ಯಾಯತ ಲೋಚನಾಃ||೧೯|| ಸೌಮಿತ್ರಿರಪಿ ತಾಸ್ಸರ್ವಾ ಮಾತೄ ಸ್ಸಂಪ್ರೇಕ್ಷ್ಯ ದುಃಖಿತಃ || ಅಭ್ಯವಾದ ಯತಾಸಕ್ತಂ ಶನೈ ರಾಮಾದನಂತರಂ || ೨೦ || ಯಥಾ ರಾಮೇ ತಥಾ ತಸ್ಮಿ ಸರ್ವಾ ವವೃತಿರೇ ಸ್ತ್ರಿಯಃ || ವೃತ್ತಿಂ ದಶರಥಾಜ್ಜಾತೇ ಲಕ್ಷ್ಮಣೇ ಶುಭ

ಮಾತರಃ - ತಾಯಿಯರು, ಸರ್ವಭೋಗೈಃ - ಸಮಸ್ತ ಸುಖಗಳಿಂದ, ಪರಿತ್ಯಕ್ತಂ - ಬಿಡಲ್ಪಟ್ಟ, ರಾಮಂ - ಶ್ರೀರಾಮನನ್ನು, ಸಂಪ್ರೇಕ್ಷ್ಯ - ಕಂಡು, ಆರ್ತಾಃ-ದೀನರಾಗಿ, ಶೋಕಕರ್ಶಿತಾಃ - ದುಃಖಾರ್ತರಾಗಿ, ಸಸ್ವರಂ - ಕಂಠಧ್ವನಿಯೊಡಗೂಡಿ, ಅಶ್ರೂಣಿ - ಕಂಬನಿಗಳನ್ನು, ಮುಮುಚುಃ - ಬಿಡುತ್ತಿದ್ದರು. || ೧೭ || ಮನುಜವ್ಯಾಘ್ರಃ - ಮನುಷ್ಯಶ್ರೇಷ್ಠನಾದ, ಸತ್ಯಸಂಗರಃ - ಸತ್ಯಪ್ರತಿಜ್ಞಾವಂತನಾದ, ರಾಮಃ - ಶ್ರೀರಾಮನು, ಸಮುತ್ಥಾಯ - ಮೇಲಕ್ಕೆದ್ದು, ಸರ್ವಾಸಾಂ-ಸಮಸ್ತರಾದ, ತಾಸಾಂಮಾತೄಣಾಂ - ಆ ತಾಯಿಯರ, ಶುಭಾನ್ - ಶುಭಕರಗಳಾದ, ಚರಣಾನ್ - ಪಾದಗಳನ್ನು, ಜಗ್ರಾಹ - ಹಿಡಿದುಕೊಂಡನು. || ೧೮ || ಆಯತಲೋಚನಾಃ - ವಿಸ್ತಾರವಾದ ನೇತ್ರುಗಳುಳ್ಳ, ತಾಃ - ಆ ತಾಯಿಯರು, ಸುಖಸ್ಪರ್ಶೈಃ - ಸುಖಕರವಾದ ಸ್ಪರ್ಶವುಳ್ಳ, ಮೃದ್ವಂಗುಳಿತಲೈಃ - ಮೆತ್ತಗಿರುವ ಬೆರಳುಗಳ ಪ್ರದೇಶಗಳುಳ್ಳ, ಶುಭೈಃ - ಕ್ಷೇಮಕರಗಳಾದ, ಪಾಣಿಭಿಃ - ಹಸ್ತಗಳಿಂದ, ರಾಮಸ್ಯ - ಶ್ರೀರಾಮನ, ಪೃಷ್ಠಾತ್ - ಹಿಂಭಾಗದ, ರಜಃ - ಧೂಳಿಯನ್ನು, ಪ್ರಮಮಾರ್ಜುಃ - ಕೊಡಹಿದರು. || ೧೯ || ಸೌಮಿತ್ರಿರಪಿ - ಲಕ್ಷ್ಮಣನೂ, ಸರ್ವಾಃ - ಸಮಸ್ತರಾದ, ತಾಃಮಾತೄಃ- ಆ ತಾಯಿಯರನ್ನು, ಸಂಪ್ರೇಕ್ಷ್ಯ - ಕಂಡು, ದುಃಖಿತಃ - ವ್ಯಸನಗೊಂಡು, ರಾಮಾತ್ - ಶ್ರೀರಾಮನಿಗಿಂತಲೂ, ಅನಂತರಂ - ಆ ಮೇಲೆ, ಶನೈಃ - ಮೆಲ್ಲನೆ, ಅಸಕ್ತಂ - ಅನುವ್ರತವಾಗಿ, ಅಭ್ಯವಾದಯತ - ನಮಿಸಿದನು. || ೨೦ || ಸರ್ವಾಃ - ಸಮಸ್ತರಾದ, ಸ್ತ್ರಿಯಃ - ಹೆಂಗಸರು, ರಾಮೇ - ಶ್ರೀರಾಮನಲ್ಲಿ, ಯಥಾ - ಹೇಗೆ, ವೃತ್ತಿಂ - ನಡತೆಯನ್ನು, ವವೃತಿರೇ - ನಡೆಯುಸಿದರೋ, ತಥಾ - ಹಾಗೆಯೇ, ದಶರಥಾತ್ - ದಶರಥನಿಂದ, ಜಾತೇ - ಹುಟ್ಟಿದ, ಶುಭಲಕ್ಷಣೇ - ಶುಭಕರವಾದ ಲಕ್ಷಣ

ಸತ್ಯಸಂಗರನೂ ಆದ ಶ್ರೀರಾಮನು ತಾನು ಕುಳಿತಿದ್ದ ಆಸನದಿಂದ ಜಾಗ್ರತೆಯಾಗಿ ಎದ್ದು ಆ ತಾಯಿಯರ ಮಂಗಳಕರವಾದ ಪಾದಕಮಲಗಳನ್ನು ಹಿಡಿದುಕೊಂಡನು. ಆಗಲವರೆಲ್ಲರೂ ಮೃದುವಾದ ಅಂಗುಳಿಗಳಿಂದ ಪಾದಗಳಿಗೆ ನಮಸ್ಕಾರಮಾಡುತ್ತಿರುವ ಶ್ರೀರಾಮನ ಪೃಷ್ಠಾಗ್ರಧೂಳಿಯನ್ನು ಕೊಡಹಿದರು. ಶ್ರೀರಾಮನು ತಾಯಿಯರನ್ನು ನಮಸ್ಕರಿಸಿದ ಬಳಿಕ ಲಕ್ಷ್ಮಣಸ್ವಾಮಿಯೂ ಕೂಡ ಬಹು ದುಃಖಿತನಾಗಿ ಅವರೆಲ್ಲರನ್ನೂ ನೋಡಿ ಮೆಲ್ಲ ಮೆಲ್ಲನೆ ನಮಸ್ಕರಿಸಿದನು. || ೧೭-೨೦ || ಆಗ ಕೌಸಲ್ಯೆಯೇ ಮೊದಲಾದವರೆಲ್ಲರೂ ಶುಭಲಕ್ಷಣ ಲಕ್ಷಿತನಾದವನೂ, ದಶರಥರಾಜಕುವರನೂ ಆದ ಲಕ್ಷ್ಮಣಸ್ವಾಮಿಯನ್ನು ಶ್ರೀರಾಮಮೂರ್ತಿಯಲ್ಲಿ

ಲಕ್ಷ್ಮಣೇ ॥ ೨೧ ॥ ಸೀತಾಪಿ ಚರಣಾಂ ಸ್ತಾಸಾ ಮುಪಸಂಗೃಹ್ಯ ದುಃಖಿತಾ ॥ ಶ್ವಶ್ರೂಣಾ ಮಶ್ರುಪೂರ್ಣಾಕ್ಷೀ ಸಾ ಬಭೂವಾಽಗ್ರತ ಸ್ಸ್ಥಿತಾ ॥ ೨೨ ॥ ತಾಂ ಪರಿಷ್ವಜ್ಯ ದುಃಖಾರ್ತಾಂ ಮಾತಾ ದುಹಿತರಂ ಯಥಾ ॥ ವನವಾಸ ಕೃಶಾಂ ದೀನಾಂ ಕೌಸಲ್ಯಾ ವಾಕ್ಯ ಮಬ್ರವೀತ್ ॥ ೨೩ ॥ ವಿದೇಹರಾಜಸ್ಯ ಸುತಾ ಸ್ನುಷಾ ದಶರಥಸ್ಯಚ ॥ ರಾಮಪತ್ನೀ ಕಥಂ ದುಃಖಂ ಸಂಪ್ರಾಪ್ತಾ ನಿರ್ಜನೇ ವನೇ ॥ ೨೪ ॥ ಪದ್ಮ ಮಾತಪಸಂತಪ್ತಂ ಪರಿಕ್ಲಿಷ್ಟ ಮಿವೋತ್ಪಲಂ ॥ ಕಾಂಚನಂ ರಜಸಾ ಧ್ವಸ್ತಂ ಕ್ಲಿಷ್ಟಂ ಚಂದ್ರ ಮಿವಾಂಬುಧೈಃ ॥ ೨೫ ॥ ಮುಖಂ ತೇ

ಗಳುಳ್ಳ, ತಸ್ಮಿಁಲಕ್ಷ್ಮಣೇ - ಆ ಲಕ್ಷ್ಮಣನಲ್ಲಿಯೂ, ವೃತ್ತಿಂ - ನಡತೆಯನ್ನು, ವವೃತಿರೇ - ನಡೆಯಿಸಿದರು. ॥ ೨೧ ॥ ಸಾಸೀತಾಪಿ - ಆ ಸೀತಾದೇವಿಯೂ, ತಾಸಾಂ - ಆ, ಶ್ವಶ್ರೂಣಾಂ - ಅತ್ತೆಯರ, ಚರಣಾ - ಪಾದಗಳನ್ನು, ಉಪಸಂಗೃಹ್ಯ - ಹಿಡಿದುಕೊಂಡು, ದುಃಖಿತಾ - ವ್ಯಸನಗೊಂಡು, ಅಶ್ರುಪೂರ್ಣಾಕ್ಷೀ - ಕಂಬನಿಗಳಿಂದ ಪೂರ್ಣವಾದ ನೇತ್ರಗಳುಳ್ಳವಳಾಗಿ, ಅಗ್ರತಃ - ಮುಂಗಡೆ, ಸ್ಥಿತಾ - ನಿಂತವಳು, ಬಭೂವ - ಆದಳು. ॥ ೨೨ ॥ ಕೌಸಲ್ಯಾ - ಕೌಸಲ್ಯಾದೇವಿಯು, ದುಃಖಾರ್ತಾಂ - ವ್ಯಸನಾಕ್ರಾಂತಳಾದ, ದೀನಾಂ - ದೀನಳಾದ, ವನವಾಸಕೃಶಾಂ - ಅರಣ್ಯವಾಸದಿಂದ ಕೃಶೀಭೂತಳಾದ, ತಾಂ - ಆ ಸೀತಾದೇವಿಯನ್ನು, ಮಾತಾ - ತಾಯಿಯು, ದುಹಿತರಂಯಥಾ - ಮಗಳನ್ನಂತೆ, ಪರಿಷ್ವಜ್ಯ - ಅಪ್ಪಿಕೊಂಡು, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದಳು. ॥ ೨೩ ॥ ವಿದೇಹರಾಜಸ್ಯ - ಜನಕರಾಯನ, ಸುತಾ - ಕುವರಿಯಾದ, ದಶರಥಸ್ಯಚ - ದಶರಥರಾಯನಿಗೆ, ಸ್ನುಷಾ - ಸೊಸೆಯಾದ, ರಾಮಪತ್ನೀ - ಶ್ರೀರಾಮನ ಹೆಂಡತಿಯು, ನಿರ್ಜನೇ - ಜನರಿಂದ ವರ್ಜಿತವಾದ, ವನೇ - ಅರಣ್ಯದಲ್ಲಿ, ದುಃಖಂ - ವ್ಯಸನವನ್ನು, ಕಥಂಸಂಪ್ರಾಪ್ತಾ - ಹೇಗೆಹೊಂದಿದಳು. ॥ ೨೪ ॥ ಆತಪಸಂತಪ್ತಂ - ಬಿಸಲಿನಿಂದ ಪರಿತಪಿಸಿದ, ಪದ್ಮಮಿವ - ಕಮಲದಂತೆ, ಪರಿಕ್ಲಿಷ್ಟಂ - ಮಗ್ಗಿಹೋದ, ಉತ್ಪಲಮಿವ - ನೈದಿಲೇಹೂವಿನಂತೆ, ರಜಸಾ - ಧೂಳಿಯಿಂದ, ಧ್ವಸ್ತಂ - ಮುಚ್ಚಿಕೊಳ್ಳಲ್ಪಟ್ಟ, ಕಾಂಚನಮಿವ - ಚಿನ್ನದಂತೆ, ಅಂಬುದೈಃ - ಮೇಘಗಳಿಂದ, ಕ್ಲಿಷ್ಟಂ - ಕ್ಲೇಶಗೊಂಡ,

---

ಹೇಗೆ ನಡೆದುಕೊಂಡು ಆತನನ್ನು ಆದರಿಸಿದರೋ ಅಂತೆಯೇ ಆದರಿಸಿದರು. ಆ ಬಳಿಕ ಸೀತಾದೇವಿಯೂ ಕೂಡ ಅತ್ತೆಯರ ಪಾದಗಳನ್ನು ಹಿಡಿದುಕೊಂಡು ದುಃಖಿತಳೂ, ಕಣ್ಣೀರು ತುಂಬಿದ ಕಂಗಳುಳ್ಳವಳೂ ಆಗಿ ಮುಂಗಡೆ ನಿಂತಳು. ॥ ೨೧-೨೨ ॥ ಆಗ ದುಃಖದಿಂದ ಬಳಲಿದವಳೂ, ವನವಾಸದಿಂದ ಕೃಶಳೂ ಆದ ಸೀತಾದೇವಿಯನ್ನು ರಾಮಜನನಿಯಾದ ಕೌಸಲ್ಯಾದೇವಿಯು, ತಾಯಿಯು ಮಗಳನ್ನು ಅಪ್ಪಿಕೊಳ್ಳುವಂತೆ ಆಲಿಂಗಿಸಿ ಆಕೆಯನ್ನು ಕುರಿತು ಹೀಗೆಂದಳು. “ ಎಲೌ ಸೀತಾದೇವಿಯೆ ! ಜನಕರಾಜನ ಕುವರಿಯಾಗಿ, ದಶರಥರಾಜನ ಸೊಸೆಯಾಗಿ, ಶ್ರೀರಾಮನ ಪತ್ನಿಯಾಗಿ, ಜನರಹಿತವಾದ ಈ ಕಗ್ಗಾಡಿನಲ್ಲಿ ಈ ಕಷ್ಟವನ್ನೆಂತು ಹೊಂದಿದೆಯೋ ? ಅಯ್ಯೋ, ಬಿಸಿಲಿನ ಬೇಗೆಯಿಂದ ಬಾಡಿದ ಕಮಲದಂತೆಯೂ, ತಗ್ಗಿಹೋದ ಕನ್ನೈದಿಲೆಯಂತೆಯೂ, ಧೂಳಿಮುಚ್ಚಿದ ಚಿನ್ನದಂತೆಯೂ, ಮುಗಿಲುಮುಚ್ಚಿದ ಚಂದ್ರನಂತೆ ನಿನ್ನ ಮುಖವು ಕಳೆಗುಂದಿರುವದಲ್ಲ ! ಇಂತಿರುವ ನಿನ್ನ ಈ ಮುಖಕಮಲವನ್ನು

ಪ್ರೇಕ್ಷ್ಯ ಮಾಂ ಶೋಕೋ ದಹತ್ಯಗ್ನಿ ರಿವಾಶ್ರಯಂ ॥ ಭೃಶಂ ಮನಸಿ ವೈದೇಹಿ! ವ್ಯಸನಾರಣಿ ಸಂಭವಃ ॥ ೨೬ ॥ ಬ್ರುವಂತ್ಯಾ ಮೇವ ಮಾರ್ತಾಯಾಂ ಜನನ್ಯಾಂ ಭರತಾಗ್ರಜಃ ॥ ಪಾದಾವಾಸಾದ್ಯ ಜಗ್ರಾಹ ವಸಿಷ್ಠಸ್ಯ ಚ ರಾಘವಃ ॥ ೨೭ ॥ ಪುರೋಹಿತಸ್ಯಾಗ್ನಿ ಸಮಸ್ಯ ವೈ ತದಾ ಬೃಹಸ್ಪತೇ ರಿಂದ್ರ ಇವಾಮರಾಧಿಪಃ ॥ ಪ್ರಗೃಹ್ಯ ಪಾದೌ ಸು ಸಮೃದ್ಧ ತೇಜಸ ಸ್ಸಹೈವ ತೇನೋಪವಿವೇಶ ರಾಘವಃ ॥ ೨೮ ॥ ತತೋ ಜಘನ್ಯಂ ಸಹಿತೈ ಸ್ಸಮಂತ್ರಿಭಿಃ ಪುರಃ ಪ್ರಧಾನೈಶ್ಚ ಸಹೈವ ಸೈನಿಕೈಃ ॥ ಜನೇನ ಧರ್ಮಜ್ಞ ತಮೇನ ಧರ್ಮವಾ ನುಪೋಪವಿಷ್ಟೋ ಭರತ

ಚಂದ್ರಮಿವ - ಚಂದ್ರನಂತೆ, ತೇ - ನಿನ್ನ, ಮುಖಂ - ವಕ್ತ್ರವನ್ನು, ಪ್ರೇಕ್ಷ್ಯ - ಕಂಡು, ಹೇ ವೈದೇಹಿ - ಎಲೌ ಸೀತೆಯೇ, ವ್ಯಸನಾರಣಿಸಂಭವಃ - ಮನೋವ್ಯಥೆಯೆಂಬ ಅರಣಿಯಿಂದ ಹುಟ್ಟಿದ, ಶೋಕಃ - ಬಾಹ್ಯದುಃಖವೆಂಬ, ಅಗ್ನಿಃ - ಅಗ್ನಿಯು, ಆಶ್ರಯಮಿವ - ಅಧಿಷ್ಠಾನವನ್ನಂತೆ, ಮಾಂ- ನನ್ನನ್ನು, ದಹತಿ - ಸುಡುತ್ತದೆ. ॥ ೨೬ ॥ ಏವಂ - ಈಪರಿಯಾಗಿ, ಆರ್ತಾಯಾಂ - ದೀನಳಾದ, ಜನನ್ಯಾಂ - ತಾಯಿಯಾದ ಕೌಸಲ್ಯಾದೇವಿಯು, ಬ್ರುವಂತ್ಯಾಂಸತ್ಯಾಂ-ಹೇಳುತ್ತಿರುವ, ಭರತಾಗ್ರಜಃ- ಭರತನಿಗೆ ಜ್ಯೇಷ್ಠನಾದ, ರಾಘವಃ - ಶ್ರೀರಾಮನು, ವಸಿಷ್ಠಸ್ಯ - ವಸಿಷ್ಠನ, ಪಾದೌ - ಚರಣಗಳನ್ನು, ಆಸಾದ್ಯ - ಹೊಂದಿ, ಜಗ್ರಾಹ - ಹಿಡಿದುಕೊಂಡನು. ॥ ೨೭ ॥ ತದಾ - ಆಕಾಲದಲ್ಲಿ, ರಾಘವಃ - ಶ್ರೀರಾಮನು, ಅಮರಾಧಿಪಃ - ದೇವತಾಧಿಪತಿಯಾದ, ಇಂದ್ರಃ - ದೇವೇಂದ್ರನು, ಬೃಹಸ್ಪತೇಃ - ಬೃಹಸ್ಪತ್ಯಾಚಾರ್ಯನ, ಪಾದಾಮಿವ - ಪಾದಗಳನ್ನಂತೆ, ಸುಸಮೃದ್ಧತೇಜಸಃ - ಸಂಪೂರ್ಣವಾದ ಬ್ರಹ್ಮತೇಜಸ್ಸುಳ್ಳ, ಅಗ್ನಿಸಮಸ್ಯ - ಯಜ್ಞೇಶ್ವರನಿಗೆ ಸಮಾನನಾದ, ಪುರೋಹಿತಸ್ಯ - ಆಚಾರ್ಯ ನಾದ ವಸಿಷ್ಠಋಷಿಯ, ಪಾದೌ - ಚರಣಗಳನ್ನು, ಪ್ರಗೃಹ್ಯ - ಹಿಡಿದುಕೊಂಡು, ತೇನಸಹೈವ - ಆ ವಸಿಷ್ಠಋಷಿಯೊಡನೆ, ಉಪವಿವೇಶ - ಕುಳಿತುಕೊಂಡನು. ॥ ೨೮ ॥ ತತಃ - ವಸಿಷ್ಠರಾಮೋ ಪವೇಶನಕ್ಕಿಂತಲೂ, ಜಘನ್ಯಂ - ಕಡೆಯಲ್ಲಿ, ಧರ್ಮವಾ - ಧರ್ಮಿಷ್ಠನಾದ, ಭರತಃ - ಭರತನು, ಸಂಹಿತೈಃ - ಸೇರಿರುವ, ಸುಮಂತ್ರಿಭಿಃ - ಮಂತ್ರಿಶ್ರೇಷ್ಠರೊಡನೆ, ಪುರಪ್ರಧಾನೈಶ್ಚ - ಊರಲ್ಲಿ ಶ್ರೇಷ್ಠ ರಾದವರೊಡನೆಯೂ, ಸೈನಿಕೈಸ್ಸಹ - ಸೇನಾಜನರೊಡನೆಯೂ, ಧರ್ಮಜ್ಞತಮೇನ - ಅತಿಶಯವಾದ ಧರ್ಮವನ್ನು ತಿಳಿದಿರುವ, ಜನೇನಸಹ - ಜನರೊಡನೆಯೂ, ತದಾ - ಆಕಾಲದಲ್ಲಿ, ಅಗ್ರಜಂ-ಜ್ಯೇಷ್ಠ

ನೋಡಿ ಮನೋರೋಗವೆಂಬ ಅರಣಿಯಿಂದ ಜನಿಸಿದ ಬಾಹ್ಯದುಃಖವೆಂಬ ಅಗ್ನಿಯು ತನಗೆ ಆಶ್ರಮಭೂತವಾದ ಕಾಷ್ಠವನ್ನು ಸುಡುವಂತೆ ನನ್ನನ್ನು ಸುಡುತ್ತಿರುವುದು." ॥೩-೨೬॥ ಕೌಸಲ್ಯಾದೇವಿಯು ಈರೀತಿ ಹೇಳುತ್ತಿರಲು ಭರತಾಗ್ರಜನೂ, ರಘುವಂಶೋತ್ಪನ್ನನೂ ಆದ ಶ್ರೀರಾಮನು ವಸಿಷ್ಠಋಷಿಯ ಬಳಿಗೈದಿ ದೇವತೆಗಳಿಗೆ ಪ್ರಭುವಾದ ಇಂದ್ರನು, ನಿಜಗುರು ವಾದ ಬೃಹಸ್ಪತ್ಯಾಚಾರ್ಯನ ಅಡಿಗಳಿಗೆರಗುವಂತೆ ಸಂಪೂರ್ಣ ಬ್ರಹ್ಮತೇಜೋವಿಶೇಷವುಳ್ಳ ವನೂ, ಯಜ್ಞೇಶ್ವರನಂತೆ ಪ್ರಕಾಶಮಾನನಾದವನೂ, ಕುಲಪುರೋಹಿತನೂ ಆದ ಆ ಮಹ ರ್ಷಿಯ ಪಾದಗಳಿಗೆರಗಿ ಆತನೊಡನೆ ಕುಳಿತುಕೊಂಡನು. ಆ ಬಳಿಕ ಮಹಾ ಧರ್ಮಿಷ್ಠನಾದ ಭರತಕುಮಾರನು ತನ್ನೊಡನೆ ಬಂದಿರುವ ಸುಮಂತ್ರನೇ ಮೊದಲಾದವರಿಂದಲೂ, ನಗರ

ಸ್ತದಾಗ್ರಜಂ ॥ ೨೯ ॥ ಉಪೋಪವಿಷ್ಟಸ್ತು ತದಾ ಸ ವೀರ್ಯವಾಂ ಸ್ತಪಸ್ವಿ ವೇಷೇಣ ಸಮೀಕ್ಷ್ಯ ರಾಘವಂ ॥ ಶ್ರಿಯಾ ಜ್ವಲಂತಂ ಭರತಃ ಕೃತಾಂಜಲಿ ರ್ಯಥಾ ಮಹೇಂದ್ರಃ ಪ್ರಯತಃ ಪ್ರಜಾಪತಿಂ ॥ ೩೦ ॥

ಕಿಮೇಷ ವಾಕ್ಯಂ ಭರತೋಽದ್ಯ ರಾಘವಂ
ಪ್ರಣಮ್ಯ ಸತ್ಕೃತ್ಯ ಚ ಸಾಧುವಕ್ಷ್ಯತಿ? ॥
ಇತೀವ ತಸ್ಯಾರ್ಯ ಜನಸ್ಯ ತತ್ವತೋ
ಬಭೂವ ಕೌತೂಹಲ ಮುತ್ತಮಂ ತದಾ ॥ ೩೧ ॥

ಪುತ್ರನಾದ ಶ್ರೀರಾಮನ, ಉಪೋಪವಿಷ್ಟಃ - ಸಮೀಪದಲ್ಲಿ ಕುಳಿತುಕೊಂಡನು. ॥ ೨೯ ॥ ತದಾ - ಆಕಾಲದಲ್ಲಿ, ವೀರ್ಯವಾನ್ - ಪರಾಕ್ರಮಶಾಲಿಯಾದ, ಸಭರತಃ - ಆ ಭರತನು, ತಪಸ್ವಿವೇಷೇಣ - ಋಷಿಗಳ ವೇಷದಿಂದ, ಉಪಲಕ್ಷಿತಃ - ಕೂಡಿದವನಾಗಿ, ಶ್ರಿಯಾ-ತೇಜೋವಿಶೇಷದಿಂದ, ಜ್ವಲಂತಂ-ಹೊಳೆಯುತ್ತಿರುವ, ರಾಘವಂ - ಶ್ರೀರಾಮನನ್ನು, ಸಮೀಕ್ಷ್ಯ - ಕಂಡು, ಕೃತಾಂಜಲಿಃ - ಬದ್ಧಾಂಜಲಿಪುಟನಾಗಿ, ಮಹೇಂದ್ರಃ - ದೇವೇಂದ್ರನು, ಪ್ರಜಾಪತಿಂಯಥಾ - ಬ್ರಹ್ಮನನ್ನಂತೆ, ಪ್ರಯತಃ - ಏಕಾಗ್ರಚಿತ್ತನಾಗಿ, ಉಪೋಪವಿಷ್ಟಃ - ಸಮೀಪದಲ್ಲಿ ಕುಳಿತುಕೊಂಡನು. ॥ ೩೦ ॥ ತದಾ - ಆ ಕಾಲದಲ್ಲಿ, ಏಷಭರತಃ - ಈ ಭರತನು, ರಾಘವಂ - ಶ್ರೀರಾಮನನ್ನು, ಪ್ರಣಮ್ಯ - ನಮಸ್ಕರಿಸಿ, ಸಾಧು - ಚನ್ನಾಗಿ, ಸತ್ಕೃತ್ಯಚ - ಪೂಜೆಯನ್ನೂಮಾಡಿ, ಕಿಂವಾಕ್ಯಂ - ಯಾವ ಮಾತನ್ನು, ವಕ್ಷ್ಯತಿ - ಹೇಳುತ್ತಾನೆಯೋ, ಇತೀವ - ಎಂಬ, ತಸ್ಯಜನಸ್ಯ - ಆ ಪೂಜ್ಯವಾದ ಜನಕ್ಕೆ, ತತ್ವತಃ-ಯಥಾರ್ಥವಾಗಿ, ಉತ್ತಮಂ - ಉತ್ಕೃಷ್ಟವಾದ, ಕೌತೂಹಲಂ - ಅಭಿಲಾಷೆಯು, ಬಭೂವ-ಉಂಟಾಯಿತು. ॥ ೩೧ ॥ ಸತ್ಯಧೃತಿಃ - ಸತ್ಯದಲ್ಲಿಯೇ ದೃಢವ್ರತವುಳ್ಳ, ಸರಾಘವಃ - ಆ ಶ್ರೀರಾಮನು, ಮಹಾನುಭಾವಃ - ಮಹಾಪ್ರಭಾವವಂತನಾದ, ಲಕ್ಷ್ಮಣಶ್ಚ - ಲಕ್ಷ್ಮಣನು, ಧಾರ್ಮಿಕಃ - ಧರ್ಮಿಷ್ಠನಾದ, ಭರತಶ್ಚ - ಭರತನು, ಏತೇತ್ರಯಃ - ಈ ಮೂವರೂ, ಸುಹೃದ್ಭಿಃ - ಸ್ನೇಹಿತರಿಂದ, ವೃತಾಃ-ಸುತ್ತುವರೆದವರಾಗಿ, ಅಧ್ವರೇ - ಯಜ್ಞದಲ್ಲಿ, ಸದಸ್ಯೈಃ - ಸಭಾಸದರಿಂದ, ಸಹಿತಾಃ - ಕೂಡಿರುವ,

---

ಮುಖಂಡರಿಂದಲೂ, ಸೇನಾನಾಯಕರಿಂದಲೂ, ಧಾರ್ಮಿಕರಾದ ಪ್ರಜೆಗಳಿಂದಲೂ, ಒಡಗೂಡಿ ಅಣ್ಣನಾದ ಶ್ರೀರಾಮನ ಬಳಿಯಲ್ಲಿಯೇ ಕುಳಿತುಕೊಂಡನು. ॥ ೨೭-೩೦ ॥ ಆಗ ಮಹಾಪರಾಕ್ರಮಶಾಲಿಯಾದ ಭರತನು ಮುನಿ ವೇಷವನ್ನು ಧರಿಸಿ ನಿಜ ತೇಜಸ್ಸಿನಿಂದ ರಾರಾಜಿಸುತ್ತಿರುವ ರಘುರಾಮನನ್ನುನೋಡಿ ಬದ್ಧಾಂಜಲಿಪುಟನಾಗಿ ದೇವೇಂದ್ರನು ಬ್ರಹ್ಮನ ಬಳಿ ಸಾವಧಾನ ಮನಸ್ಕನಾಗಿ ಕುಳಿತುಕೊಳ್ಳುವಂತೆ ಆತನ ಸಮೀಪದಲ್ಲಿಯೇ ಕುಳಿತವನಾದನು. ಆ ಸಮಯದಲ್ಲಿ ಅಲ್ಲಿದ್ದವರೆಲ್ಲರೂ ಭರತಕುಮಾರನು ಶ್ರೀರಾಮಮೂರ್ತಿಯನ್ನು ನಮಸ್ಕರಿಸಿ, ಸತ್ಕರಿಸಿ, ಯಾವ ಮಾತನ್ನು ಆಡುತ್ತಾನೆಯೋ ಅದನ್ನೇ ಕೇಳಬೇಕೆಂಬ ಕುತೂಹಲಾವಿಷ್ಟರಾದರು. ಆಗ ಸತ್ಯದಲ್ಲಿಯೇ ದೃಢಭಕ್ತಿಯುಳ್ಳ ಶ್ರೀರಾಮನೂ, ಮಹಾಪ್ರಭಾವಶಾಲಿಯಾದ ಲಕ್ಷ್ಮಣನೂ, ಧರ್ಮಾತ್ಮನಾದ ಭರತನೂ, ಸುಹೃಜ್ಜನರಿಂದ ಪರಿವೃತ

ಸ ರಾಘವ ಸ್ಸತ್ಯಧೃತಿಶ್ಚ ಲಕ್ಷ್ಮಣೋ
ಮಹಾನುಭಾವೋ ಭರತಶ್ಚ ಧಾರ್ಮಿಕಃ ||
ವೃತಾ ಸ್ಸುಹೃದ್ಭಿಶ್ಚ ವಿರೇಜು ರಧ್ವರೇ
ಯಥಾ ಸದಸ್ಯೈ ಸ್ಸಹಿತಾ ಸ್ತ್ರಯೋಽಗ್ನಯಃ || ೩೨ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರ್ಯುತ್ತರಶತತಮಸ್ಸರ್ಗಃ.

ತ್ರಯಃ - ಮೂರಾದ, ಅಗ್ನಯೋಯಥಾ - ಆಹವನೀಯ, ಗಾರ್ಹಪತ್ಯ, ದಕ್ಷಿಣಾಗ್ನಿಗಳಂತೆ, ವಿರೇಜುಃ- ಹೊಳೆಯುತ್ತಿದ್ದರು. || ೩೨ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರ್ಯುತ್ತರಶತತಮಸ್ಸರ್ಗಃ.

ರಾಗಿ ಯಾಗದಲ್ಲಿ ಸದಸ್ಯರೊಡಗೂಡಿದ ದಕ್ಷಿಣಾಗ್ನಿ, ಗಾರ್ಹಪತ್ಯ, ಆವಹನೀಯಗಳೆಂಬ ಅಗ್ನಿತ್ರಯದಂತೆ ತಮ್ಮ ಕಾಂತಿವಿಶೇಷಗಳಿಂದ ಪ್ರಕಾಶಿಸುತ್ತಿದ್ದರು. || ೩೧-೩೨ ||

ಇಂತಿದು ವಸಿಷ್ಠಸಹಿತ ದಶರಥರಾಜ ಪತ್ನೀಕೃತ ಶ್ರೀರಾಮಲಕ್ಷ್ಮಣ ದರ್ಶನಾದಿ ವೃತ್ತಾಂತ ಕಥನವೆಂಬ ನೂರಮೂರನೆಯ ಸರ್ಗವು ಸಮಾಪ್ತವಾದುದು.

ತಂತು ರಾಮ ಸ್ಸಮಾಜ್ಞಾಯ ಭ್ರಾತರಂ ಗುರುವತ್ಸಲಂ ‖ ಲಕ್ಷ್ಮ ಣೇನ ಸಹಭ್ರಾತ್ರಾ ಪ್ರಷ್ಟುಂ ಸಮುಪಚಕ್ರಮೇ ‖ ೧ ‖ ಕಿಮೇತದಿಚ್ಛೇಯ ಮಹಂ ಶ್ರೋತುಂ ಪ್ರವ್ಯಾಹೃತಂ ತ್ವಯಾ ‖ ಯಸ್ಮಾತ್ತ್ವ ಮಾಗತೋ ದೇಶ ಮಿಮಂ ಚೀರ ಜಟಾಜಿನೀ ‖ ೨ ‖ ಕಿಂ ನಿಮಿತ್ತ ಮಿಮಂ ದೇಶಂ ಕೃಷ್ಣಾಜಿನ ಜಟಾಧರಃ? ‖ ಹಿತ್ವಾ ರಾಜ್ಯಂ ಪ್ರವಿಷ್ಟ ಸ್ತ್ವಂ ತತ್ಸರ್ವಂ ವಕ್ತು ಮರ್ಹಸಿ‖೩‖ ಇತ್ಯುಕ್ತಃ ಕೈಕಯಿಾಪುತ್ರಃ ಕಾಕುತ್ಸ್ಥೇನ ಮಹಾತ್ಮನಾ ‖ ಪ್ರಗೃಹ್ಯ ಬಲವ

ರಾಮಃ - ಶ್ರೀರಾಮನು, ತಂಭ್ರಾತರಂ - ತಮ್ಮನಾದ ಆ ಭರತನನ್ನು, ಗುರುವತ್ಸಲಂ - ಅಣ್ಣನಾದ ಆತನಲ್ಲಿ ಭಕ್ತಿಯುಳ್ಳವನನ್ನಾಗಿ, ಸಮಾಜ್ಞಾಯ - ತಿಳಿದು, ಭ್ರಾತ್ರಾ - ತಮ್ಮನಾದ, ಲಕ್ಷ್ಮಣೇನಸಹ - ಲಕ್ಷ್ಮಣನೊಡನೆ, ಪ್ರಷ್ಟುಂ - ಪ್ರಕೃತಾರ್ಥವನ್ನು ಕೇಳಲು, ಸಮುಪಚಕ್ರಮೇ - ಆರಂಭಿಸಿದನು. ‖ ೧ ‖ ಯಸ್ಮಾತ್ - ಯಾವ ಕಾರಣ, ತ್ವಂ - ನೀನು, ಚೀರಜಟಾಜಿನೀ - ನಾರುಮಡಿಯೂ, ಜಡೆಗಳೂ, ಕೃಷ್ಣಾಜಿನವೂ ಉಳ್ಳವನಾಗಿ, ಇಮಂದೇಶಂ-ಈ ಪ್ರದೇಶವನ್ನುಕುರಿತು, ಆಗತಃ-ಬಂದೆಯೋ, ಏತತ್-ಇದು, ಕಿಂ-ಏನು, ಇತಿ-ಇಂತೆಂದು, ತ್ವಯಾ-ನಿನ್ನಿಂದ, ಪ್ರವ್ಯಾಹೃತಂ-ಹೇಳಲ್ಪಟ್ಟ (ವಿಷಯವನ್ನು), ಅಹಂ - ನಾನು, ಶ್ರೋತುಂ - ಕೇಳಲು, ಇಚ್ಛೇಯಂ - ಅಪೇಕ್ಷಿಸು ತ್ತೇನೆ. ‖ ೨ ‖ ಕೃಷ್ಣಾಜಿನಜಟಾಧರಃ - ಕೃಷ್ಣಾಜಿನವನ್ನೂ ಜಡೆಗಳನ್ನೂ ಧರಿಸಿದವನಾಗಿ, ತ್ವಂ-ನೀನು, ರಾಜ್ಯಂ - ರಾಜ್ಯವನ್ನು, ಹಿತ್ವಾ - ಬಿಟ್ಟು, ಕಿಂನಿಮಿತ್ತಂ - ಯಾವ ಕಾರಣದಿಂದ, ಇಮಂ ದೇಶಂ - ಈ ಅರಣ್ಯಪ್ರದೇಶವನ್ನು ಕುರಿತು, ಪ್ರವಿಷ್ಟಃ - ಪ್ರವೇಶಿಸಿದೆಯೋ, ತತ್ಸರ್ವಂ - ಆ ಸಮಸ್ತ ವನ್ನೂ, ವಕ್ತುಂ - ಹೇಳುವದಕ್ಕೋಸುಗ, ಅರ್ಹಸಿ - ಯೋಗ್ಯನಾಗು. ‖ ೩ ‖ ಇತಿ - ಈಪರಿ ಯಾಗಿ, ಮಹಾತ್ಮನಾ - ಮಹಾ ಮನಸ್ವಿಯಾದ, ಕಾಕುತ್ಸ್ಥೇನ - ಶ್ರೀರಾಮನಿಂದ, ಬಲವತ್ -

---

ಶ್ರೀರಾಮನೀರೀತಿ ಭರತನನ್ನು ಸಮಾಧಾನಗೊಳಿಸಿ, ಅಣ್ಣನಾದ ತನ್ನಲ್ಲಿ ಅವನು ಅಧಿಕವಾದ ಪ್ರೇಮವುಳ್ಳವನೆಂದು ತಿಳಿದು ಲಕ್ಷ್ಮಣಸ್ವಾಮಿಯೊಡಗೂಡಿ ಹೀಗೆಂದನು. “ವತ್ಸ ; ಭರತ! ನೀನಾವಕಾರಣದಿಂದ ನಾರುಮಡಿಗಳನ್ನೂ, ಜಡೆಗಳನ್ನೂ ಧರಿಸಿಕೊಂಡು, ಈ ಚರ್ಮವನ್ನು ಹೊದ್ದುಕೊಂಡು ಈ ಪ್ರದೇಶಕ್ಕೆ ಬಂದವನಾದೆ? ನೀನು ಬಂದ ಕಾರಣ ವನ್ನು ಕೇಳಲು ನಾವೀರ್ವರೂ ಕುತೂಹಲಿಗಳಾಗಿದ್ದೇವೆ. ವತ್ಸ ; ನೀನು ನಾರುಮಡಿಗಳನ್ನೂ, ಕೃಷ್ಣಮೃಗ ಚರ್ಮವನ್ನೂ, ಜಡೆಗಳನ್ನೂ, ಧರಿಸಿದವನಾಗಿ, ಸಾಕೇತಸಾಂಮ್ರಾಜ್ಯವನ್ನು ತೊರೆದು ಇಲ್ಲಿಗೆ ಏನು ಕಾರಣ ಬಂದವನಾದೆ? ಈ ವಿಷಯಗಳೆಲ್ಲವನ್ನೂ ವಿಶದವಾಗಿ ಹೇಳು ವವನಾಗು” ಎಂದನು. ‖೧-೩‖ಈ ರೀತಿಯಾಗಿ ಮಹಾನುಭಾವನೂ, ಕಕುತ್ಸ್ಥಕುಲಸಂಭೂ ತನೂ ಆದ ಶ್ರೀರಾಮನು ಆ ಭರತನನ್ನು ಆಲಿಂಗನ ಮಾಡಿಕೊಂಡು ಕೇಳಲು ಅವನು

ದ್ಭೂಯಃ ಪ್ರಾಂಜಲಿ ರ್ವಾಕ್ಯ ಮಬ್ರವೀತ್ ॥ ೪ ॥ ಆರ್ಯಂ ತಾತಃ ಪರಿತ್ಯಜ್ಯ ಕೃತ್ವಾ ಕರ್ಮ ಸು ದುಷ್ಕರಂ ॥ ಗತಸ್ಸ್ವರ್ಗಂ ಮಹಾಬಾಹುಃ ಪುತ್ರಶೋಕಾಭಿಪೀಡಿತಃ ॥ ೫ ॥ ಸ್ತ್ರಿಯಾ ನಿಯುಕ್ತಃ ಕೈಕೇಯ್ಯಾ ಮಮ ಮಾತ್ರಾ ಪರಂತಪ! ॥ ಚಕಾರ ಸು ಮಹತ್ಪಾಪ ಮಿದ ಮಾತ್ಮಯಶೋಹರಂ ॥ ೬ ॥ ಸಾ ರಾಜ್ಯ ಫಲಮಪ್ರಾಪ್ಯ ವಿಧವಾ ಶೋಕಕರ್ಶಿತಾ ॥ ಪತಿಷ್ಯತಿ ಮಹಾಘೋರೇ ನಿರಯೇ ಜನನೀ ಮಮ ॥ ೭ ॥ ತಸ್ಯ ಮೇ ದಾಸಭೂತಸ್ಯ ಪ್ರಸಾದಂ ಕರ್ತುಂ

ದೃಢವಾಗಿ, ಪ್ರಗೃಹ್ಯ - ಅಪ್ಪಿಕೊಂಡು, ಭೂಯಃ - ಮತ್ತೂ, ಉಕ್ತಃ - ಹೇಳಲ್ಪಟ್ಟ, ಕೈಕಯಿಪುತ್ರಃ - ಕೈಕೆಯಿದೇವಿಯ ಕುವರನಾದ ಭರತನು, ಪ್ರಾಂಜಲಿಃ - ಅಂಜಲಿಬದ್ಧನಾಗಿ, ವಾಕ್ಯಂ - ವಚನವನ್ನು, ಅಬ್ರವೀತ್ - ನುಡಿದನು. ॥ ೪ ॥ ಮಹಾಬಾಹುಃ - ಮಹಾ ಪರಾಕ್ರಮಶಾಲಿಯಾದ, ತಾತಃ - ತಂದೆಯು, ಸುದುಷ್ಕರಂ - ಮಾಡುವದಕ್ಕೆ ಅನರ್ಹವಾದ, ಕರ್ಮ - ವ್ಯಾಪಾರವನ್ನು, ಕೃತ್ವಾ-ಮಾಡಿ, ಆರ್ಯಂ ಪೂಜ್ಯನಾದ ನಿನ್ನನ್ನು, ಪರಿತ್ಯಜ್ಯ - ತೊರೆದು, ಪುತ್ರಶೋಕಾಭಿಪೀಡಿತಃ - ಪುತ್ರವ್ಯಸನದಿಂದ ಸಂತಪ್ತನಾಗಿ, ಸ್ವರ್ಗಂ - ಸ್ವರ್ಗಲೋಕವನ್ನು, ಗತಃ - ಐದಿದನು. ॥ ೫ ॥ ಹೇ ಪರಂತಪ - ಎಲೈ ಶತ್ರುಸಂಹಾರಕನೇ, ಮಮ - ನನ್ನ, ಮಾತ್ರಾ - ತಾಯಿಯಾದ, ಸ್ತ್ರೀ - ಹೆಂಗಸಾದ, (ತಿಳಿಯದಿರುವವಳಾದ) ಕೈಕೇಯಿಯಾ - ಕೈಕೇಯಿದೇವಿಯಿಂದ, ನಿಯುಕ್ತಃ - ನಿರ್ಬಂಧಿತನಾಗಿ, ಆತ್ಮಯಶೋಹರಂ-ತನ್ನ ಕೀರ್ತಿಯನ್ನು ಹೋಗಲಾಡಿಸುವ, ಸುಮಹತ್ - ಬಹಳವಾದ, ಇದಂಪಾಪಂ - ಈ ಪಾಪಕೃತ್ಯವನ್ನು, (ಜ್ಯೇಷ್ಠಾರ್ಹವಾದ ರಾಜ್ಯವನ್ನು "ಕನಿಷ್ಠನಿಗೆ ಕೊಡುವಿಕೆ" ಎಂಬ ಪಾಪಕೃತ್ಯವನ್ನು,) ಚಕಾರ-ಮಾಡಿದನು. ॥ ೬ ॥ ಮಮ - ನನ್ನ, ಜನನೀ-ತಾಯಿಯಾದ, ಸಾ - ಕೈಕೇಯಿಯು, ರಾಜ್ಯಫಲಂ - ರಾಜ್ಯಪರಿಪಾಲನ ರೂಪವಾದ ಫಲವನ್ನು, ಅಪ್ರಾಪ್ಯೈವ - ಹೊಂದದೆಯೆ, ವಿಧವಾ - ಗತಭರ್ತೃವಾಗಿ, ಶೋಕಕರ್ಶಿತಾ - ವ್ಯಸನಾಕ್ರಾಂತಳಾಗಿ, ಮಹಾಘೋರೇ - ಮಹಾ ಭಯಂಕರವಾದ, ನಿರಯೆ - ನರಕದಲ್ಲಿ, ಪತಿಷ್ಯತಿ - ಬೀಳುವಳು. ॥ ೭ ॥ ತಸ್ಯ-ಅಂತಹ, ದಾಸಭೂತಸ್ಯ - ಕಿಂಕರನಾದ, ಮೇ - ನನಗೆ, ಪ್ರಸಾದಂ - ಅನುಗ್ರಹವನ್ನು, ಕರ್ತುಂ -

---

ಅಂಜಲಿಬದ್ಧನಾಗಿ ಹೀಗೆ ಹೇಳಿದನು. "ಅಣ್ಣ ; ರಾಮಚಂದ್ರ! ನಮಗೆ ತಂದೆಯಾದ ದಶರಥಮಹಾರಾಜನು ಪೂಜ್ಯನಾದ ನಿನ್ನನ್ನು ಪರಿತ್ಯಜಿಸಿ, ಮಹಾ ಕಠಿಣವಾದ ಕಾರ್ಯವನ್ನಾಚರಿಸಿ ಪುತ್ರಶೋಕದಿಂದ ಪೀಡಿತನಾಗಿ ಸ್ವರ್ಗಲೋಕಕ್ಕೆ ಹೋದನು. ಶತ್ರುಸಂಹಾರಕನಾದ ಎಲೈ ಶ್ರೀರಾಮಮೂರ್ತಿಯೇ! ನನಗೆ ತಾಯಿಯಾದವಳೂ, ಏನೂ ತಿಳಿಯದ ಹೆಂಗಸೂ ಆದ ಕೈಕೇಯಿಯು, ದುಷ್ಕಾರ್ಯದಲ್ಲಿ ಪ್ರವೇಶಿಸುವಂತೆ ನಮ್ಮ ತಂದೆಯನ್ನು ಪೀಡಿಸಿ ಆತನಿಗೆ ಅಪಕೀರ್ತಿಯುಂಟಾಗುವಂತಹ ಕಾರ್ಯವನ್ನು ಮಾಡಿದಳು. ಅಂತಹ ದುಷ್ಕಾರ್ಯವನ್ನು ಮಾಡೆಂದು ಬೋಧಿಸಿದ ಕೈಕೇಯಿಯು ವಿಧವೆಯೂ, ದುಃಖಪೀಡಿತಳೂ ಆಗಿ ರಾಜ್ಯಫಲವನ್ನು ಹೊಂದದವಳಾದಳು. ಇಷ್ಟುಮಾತ್ರವಲ್ಲದೆ, ಮರಣಾಂತದಲ್ಲಿ ಘೋರವಾದ ನರಕದಲ್ಲಿಯೂ ಬೀಳುತ್ತಾಳೆ. ॥ ೪-೭ ॥ ಅಣ್ಣ ; ಶ್ರೀರಾಮನೆ! ನಿನಗೆ ದಾಸನಾದ ನನ್ನನ್ನು ಅನುಗ್ರಹಿಸು. ಅಲ್ಲದೆ ನೀನೀಗಲೇ, ಇಂದ್ರನು ಅಮರಾವತಿಯಲ್ಲಿ

ಮರ್ಹಸಿ ‖ ಅಭಿಷಿಂಚಸ್ವ ಚಾದ್ಯೈವ ರಾಜ್ಯೇನ ಮಘವಾನಿವ ‖೮‖ ಇಮಾಃ ಪ್ರಕೃತಯ ಸ್ಸರ್ವಾ ವಿಧವಾ ಮಾತರಶ್ಚ ಯಾಃ ‖ ತ್ವತ್ಸಕಾಶ ಮನುಪ್ರಾಪ್ತಾಃ ಪ್ರಸಾದಂ ಕರ್ತು ಮರ್ಹಸಿ ‖೯‖ ತದಾನುಪೂರ್ವ್ಯಾ ಯುಕ್ತಂಚ ಯುಕ್ತಂಚಾತ್ಮನಿ ಮಾನದ! ‖ ರಾಜ್ಯಂ ಪ್ರಾಪ್ನುಹಿ ಧರ್ಮೇಣ ಸ ಕಾಮಾ ಸುಹೃದಃ ಕುರು ‖೧೦‖ ಭವತ್ವವಿಧವಾ ಭೂಮಿ ಸ್ಸಮಗ್ರಾ ಪತಿನಾ ತ್ವಯಾ ‖ ಶಶಿನಾ ವಿಮಲೇನೇವ ಶಾರದೀ ರಜನೀ ಯಥಾ ‖೧೧‖ (೧) ವಿಭಿಶ್ಚ

ಮಾಡಲು, ಅರ್ಹಸಿ - ಯೋಗ್ಯನಾಗು, ಅದ್ಯೈವ - ಈಗಲೇ, ರಾಜ್ಯೇನ - ರಾಜ್ಯದಿಂದ, ಮಘವಾನಿವ - ದೇವೇಂದ್ರನಂತೆ, ಅಭಿಷಿಂಚಸ್ವ - ಪಟ್ಟಾಭಿಷಿಕ್ತನಾಗು. ‖೮‖ ಸರ್ವಾಃ - ಸಮಸ್ತರಾದ, ಇಮಾಃಪ್ರಕೃತಯಃ - ಈ ಮಂತ್ರಿಗಳು, (ಮ) ಈ ಪ್ರಜೆಗಳು, ವಿಧವಾಃ - ಭರ್ತೃಹೀನರಾದ, ಮಾತುರಶ್ಚ - ತಾಯಿಯರು, ಯಾಃ - ಯಾರುಂಟೋ, ತಾಶ್ಚ - ಅವರೂ, ತ್ವತ್ಸಕಾಶಂ - ನಿನ್ನ ಸಮೀಪವನ್ನು ಕುರಿತು, ಅನುಪ್ರಾಪ್ತಾಃ - ಬಂದಿದ್ದಾರೆ, ಪ್ರಸಾದಂ - ಅನುಗ್ರಹವನ್ನು, ಕರ್ತುಂ-ಮಾಡಲು, ಅರ್ಹಸಿ - ಯೋಗ್ಯನಾಗಿರುವೆ. ‖೯‖ ಹೇ ಮಾನದ - ಎಲೈ ಮಾನದಾಯಕನೇ, ತತ್ - ಆ ಕಾರಣ, ಆನುಪೂರ್ವ್ಯಾತ್ - ಜ್ಯೇಷ್ಠಾನುಕ್ರಮಣಿಕೆಯಿಂದಲೂ, ಯುಕ್ತಂ - ಕೂಡಿರುವ, ಆತ್ಮನಿ - ನಿನ್ನಲ್ಲಿ, ಯುಕ್ತಂ - ಪ್ರಾಪ್ತವಾದ, ರಾಜ್ಯಂ - ರಾಜ್ಯವನ್ನು, ಪ್ರಾಪ್ನುಹಿ - ಹೊಂದು, ಧರ್ಮೇಣ-ಧರ್ಮದಿಂದ, ಸುಹೃತಃ - ಸ್ನೇಹಿತರನ್ನು, ಸಕಾಮಾ - ಕೋರಿಕೆಯಿಂದ ಕೂಡಿದವರನ್ನಾಗಿ, ಕುರು-ಮಾಡು. ‖೧೦‖ ಸಮಗ್ರಾ - ಸಂಪೂರ್ಣವಾದ, ಭೂಮಿಃ - ಭೂಮಿಯು, ವಿಮಲೇನ - ನಿರ್ಮಲವಾದ, ಶಶಿನಾ - ಚಂದ್ರನಿಂದ, ಶಾರದೀ - ಶರದೃತುವಿನ ಸಂಬಂಧವಾದ, ರಜನೀಂಯಥಾ -

ಅಭಿಷಿಕ್ತನಾದಂತೆ ರಾಜ್ಯದಲ್ಲಿ ಪಟ್ಟಾಭಿಷಿಕ್ತನಾಗು. ಈ ಮಂತ್ರಿಗಳೇ ಮೊದಲಾದ ಪ್ರಜೆಗಳೂ, ನಮ್ಮ ತಾಯಿಯರೂ ದಿಕ್ಕಿಲ್ಲದವರಾಗಿ ನಿನ್ನ ಸಮೀಪಕ್ಕೆ ಬಂದಿದಾರೆ. ಆದುದರಿಂದ ಇವರೆಲ್ಲರನ್ನೂ ಅನುಗ್ರಹಿಸಲು ಯೋಗ್ಯನಾಗು. ಅಯ್ಯಾ, ಮಾನದಾತನಾದ ಶ್ರೀರಾಮಮೂರ್ತಿಯೆ! ಹಿಂದಿನಿಂದಲೂ ಜ್ಯೇಷ್ಠಾನುಕ್ರಮವಾಗಿ ಬರುತ್ತಿರುವುದೂ, ನಿನ್ನಿಂದ ಪರಿಪಾಲಿತವಾಗಲು ಯೋಗ್ಯವಾದುದೂ ಆದ ಈ ಅಯೋಧ್ಯಾರಾಜ್ಯವನ್ನು ಧರ್ಮದಿಂದಲೇ ಹೊಂದುವವನಾಗು. ಅಲ್ಲದೆ ನಿನ್ನ ಸ್ನೇಹಿತರ ಕೋರಿಕೆಗಳನ್ನು ಸಫಲವಾದುವುಗಳನ್ನಾಗಿ ಮಾಡುವವನಾಗು. ಅಣ್ಣಾ; ನಿರ್ಮಲನಾದ ಚಂದ್ರನಿಂದ ಶರತ್ಕಾಲೀನವಾದ ರಾತ್ರಿಯು ಮನೋಹರವಾಗಿ ಪ್ರಕಾಶಿಸುವಂತೆ, ಲೋಕಸ್ವಾಮಿಯಾದ ನಿನ್ನನ್ನು ಹೊಂದಿ, ಸಂಪೂ

ಟ. (೧) **ಗೋವಿಂದರಾಜರು** ಈ ಶ್ಲೋಕದಲ್ಲಿನ ಪದಗಳಿಗೆ ಬಹು ಚಮತ್ಕಾರವಾದ ಅರ್ಥಗಳನ್ನು ಬರೆದಿರುತ್ತಾರೆ; ಅವು ಹೇಗೆ.

ಓ ಶ್ರೀರಾಮಮೂರ್ತಿಯೆ! "ನೀನು ನನ್ನೊಬ್ಬನ ಕಣ್ಣೀರನ್ನೇ ಸಹಿಸಲಾರೆ"ಯೆಂಬುದನ್ನು ನಾನು ತಿಳಿದಿದ್ದೇನೆ. ಇಂತಹ ನೀನು ಇವರೆಲ್ಲರ ಶೋಕಾಶ್ರುಗಳನ್ನು ಹೇಗೆತಾನೇ ಸಹಿಸೀಯೆಂದು ಯೋಚಿಸಿ, ಯುದ್ಧಸನ್ನದ್ಧರಾದವರಂತೆ ಕಾಣುತ್ತಿರುವ ಗಜ, ತುರಗ, ರಥ, ಪದಾತಿಗಳೆಂಬ ಈ ಚತುರಂಗಬಲಸಮೇತನಾಗಿ ಬಂದಿದ್ದೇನೆ. ನನ್ನ ಯಾಚನೆಯನ್ನಾದರೂ ಉಪೇಕ್ಷೆ ಮಾಡಬಹುದು. ನಮ್ಮ ರಾಜ್ಯವನ್ನು ನಿರ್ವಹಿಸುತ್ತಿರುವವರೂ, ಪೂಜ್ಯರೂ ಆದ ಈ ಮಂತ್ರಿಗಳು

ಸಚಿವೈ ಸ್ಸಾರ್ಥಂ ಶಿರಸಾ ಯಾಚಿತೋ ಮಯಾ ॥ ಭ್ರಾತು ಶ್ಶಿಷ್ಯಸ್ಯ ದಾಸಸ್ಯ ಪ್ರಸಾದಂ ಕರ್ತು ಮರ್ಹಸಿ ॥೧೨॥ ತದಿದಂ ಶಾಶ್ವತಂ ಪಿತ್ರ್ಯಂ ಸರ್ವಂ ಪ್ರಕೃತಿಮಂಡಲಂ ॥ ಪೂಜಿತಂ ಪುರುಷವ್ಯಾಘ್ರ! ನಾತಿಕ್ರಮಿತು ಮರ್ಹಸಿ ॥೧೩॥ ಏವಮುಕ್ತ್ವಾ ಮಹಾಬಾಹು ಸ್ಸಬಾಷ್ಪಃ ಕೈಕಯೀಸುತಃ ॥ ರಾಮಸ್ಯ

ರಾತ್ರಿಯಂತೆ, ಪತಿನಾ - ಪ್ರಭುವಾದ, ತ್ವಯಾ - ನಿನ್ನಿಂದ, ಅವಿಧವಾ-ಪ್ರಭುವುಳ್ಳದು, ಭವತು - ಆಗಲಿ. ॥೧೧॥ ಏಭಿಃಸಚಿವೈಶ್ಚಸಾರ್ಧಂ - ಈ ಮಂತ್ರಿಗಳೊಡಗೂಡಿ, ಮಯಾ - ನನ್ನಿಂದ, ಯಾಚಿತಃ - ಪ್ರಾರ್ಥಿಸಲ್ಪಟ್ಟು, ಭ್ರಾತುಃ - ತಮ್ಮನಾದ, ಶಿಷ್ಯಸ್ಯ - ಶಿಷ್ಯನಾದ, ದಾಸಸ್ಯ - ಕಿಂಕರನಾದ ನನಗೆ, ಪ್ರಸಾದಂ - ಅನುಗ್ರಹವನ್ನು, ಕರ್ತುಂ - ಮಾಡಲು, ಅರ್ಹಸಿ - ಯೋಗ್ಯನಾಗು, ॥೧೨॥ ಹೇ ಪುರುಷವ್ಯಾಘ್ರ - ಎಲೈ ಪುರುಷಶ್ರೇಷ್ಠನೇ, ತದಿದಂ - ಆ ಈ, ಶಾಶ್ವತಂ-ಪರಂಪರಾಪ್ರಾಪ್ತವಾದ, ಪಿತ್ರ್ಯಂ - ತಂದೆಯ ಸಂಬಂಧವಾದ ರಾಜ್ಯವನ್ನು, ಸರ್ವಂ - ಸಮಸ್ತವಾದ, ಪೂಜಿತಂ - ಪೂಜಾರ್ಹವಾದ, ಪ್ರಕೃತಿಮಂಡಲಂ - (ಗೋ) ಮಂತ್ರಿ ಪ್ರಭೃತಿಗಳ ಸಮೂಹವನ್ನು, ನಾತಿಕ್ರಮಿತುಂ - ಉಲ್ಲಂಘನೆಮಾಡಲು, ನಾರ್ಹಸಿ - ಯೋಗ್ಯನಾಗಬೇಡ. ॥೧೩॥ ಮಹಾಬಾಹುಃ - ಮಹಾಭುಜಗಳುಳ್ಳ, ಕೈಕಯೀಸುತಃ - ಕೈಕೇಯಿಯ ಮಗನಾದ ಭರತನು, ಏವಂ-ಹೀಗೆ, ಉಕ್ತ್ವಾ - ಹೇಳಿ, ಸಬಾಷ್ಪಃ - ಕಂಬನಿಗಳಿಂದ ಕೂಡಿರುವವನಾಗಿ, ಶಿರಸಾ - ಮಂಡೆಯಿಂದ, ರಾಮಸ್ಯ - ಶ್ರೀರಾಮನ, ಪಾದೌ - ಚರಣಗಳನ್ನು, ವಿಧಿವತ್ - ಯಥಾಶಾಸ್ತ್ರವಾಗಿ, ಜಗ್ರಾಹ -

ರ್ಣವಾದ ಈ ಭೂಮಿಯು ದಿಕ್ಕುಳ್ಳದಾಗಲಿ,॥೮-೧೧॥ ನಾನು ಈ ಮಂತ್ರಿಗಳೆಲ್ಲರೊಡಗೂಡಿ ನಿನ್ನನ್ನು ಯಾಚಿಸುತ್ತಿದ್ದೇನೆ. ಆದುದರಿಂದ, ತಮ್ಮನೂ, ಶಿಷ್ಯನೂ, ದಾಸನೂ ಆದ ನನ್ನಲ್ಲಿ ಅನುಗ್ರಹವನ್ನು ಮಾಡುವವನಾಗು. ಎಲೈ ಪುರುಷೋತ್ತಮನೆ! ಶಾಶ್ವತವಾದುದೂ, ಪಿತೃ, ಪಿತಾಮಹಾದಿ ಪರಂಪರೆಯಿಂದ ಪ್ರಾಪ್ತವಾಗಿರುವುದೂ, ಮಂತ್ರಿಗಳೇ ಮೊದಲಾದ ಸತ್ಪ್ರಜೆಗಳೊಡಗೂಡಿರುವುದೂ, ಎಲ್ಲ ಲೋಕದವರಿಂದ ಪೂಜಿತವಾಗಿರುವುದೂ ಆದ ಈ ರಾಜ್ಯವೆಲ್ಲವನ್ನು ಹೊಂದಿ ಪರಿಪಾಲಿಸುವವನಾಗು." ಮಹಾಬಾಹುವೂ, ಕೈಕೇಯಿಯ ಕುಮಾರನೂ ಆದ ಭರತನಿಂತು ಕಣ್ಣೀರಿಡುತ್ತ ನುಡಿದು ಶಾಸ್ತ್ರೋಕ್ತ ವಿಧಿಯಿಂದ ಅಣ್ಣದೇವನ ಪಾದಾರವಿಂದಗಳನ್ನು ಹಿಡಿದುಕೊಂಡು ನಮಸ್ಕಾರವನ್ನು ಮಾಡಿದನು. ॥೧೨-೧೪॥ ಆಗ ಶ್ರೀ

ಪ್ರಾರ್ಥಿಸಿದರೆ ಅವರ ಪ್ರಾರ್ಥನೆಯನ್ನು ನಿರಾಕರಿಸಲಾರೆಯೆಂಬುದನ್ನರಿತು ಇವರೊಡಗೂಡಿ ಬಂದಿರುವೆನು. ನಾನು ಶರಣಾಗತನಾಗಿ ನಿನ್ನ ಮುಂದೆ ನಿಂತರೆ ಸಾಕು; ನೀನು ಮಾಡಬೇಕಾದ ಕೆಲಸವನ್ನು ಮಾಡುತ್ತೀಯೆ. ಅದರಲ್ಲಿಯೂ ನಿನ್ನ ತಮ್ಮನಾದ ನಾನು ನಿನ್ನನ್ನು ಯಾಚಿಸಿಯೂ ಬಿಟ್ಟರೆ? ಇದರಮೇಲೆ ತಲೆಬಾಗಿ ನಮಸ್ಕರಿಸಿ ಯಾಚಿಸಿದ ಮೇಲೆ "ಅಯ್ಯೋ! ಭರತನು ತಲೆಬಾಗಿ ಬೇಡಿದನು. ನಾನು ಅವನ ಕೋರಿಕೆಯನ್ನು ನೆರವೇರಿಸಲಿಲ್ಲವಲ್ಲವೆ" ಎಂದು ನಿನ್ನ ಮನಸ್ಸು ತವಕಗೊಳ್ಳುವುದಿಲ್ಲವೆ? "ನಾನು ನಿನ್ನ ತಮ್ಮನಾಗಿ ನಿನ್ನನ್ನೇಕೆ ಬೇಡಬೇಕು? ಇದುವರೆವಿಗೂ ನೀನೇ ನನ್ನನ್ನು ಕೇಳಿ ನನ್ನ ಕೋರಿಕೆಗಳನ್ನು ಸಫಲಗಳನ್ನಾಗಿ ಮಾಡುತ್ತಿರಲಿಲ್ಲವೆ? ಇದರಮೇಲೆ ನಾನು ನಿನ್ನ ಶಿಷ್ಯನೂ ಆಗಿದ್ದೇನೆ. ನಿನ್ನ ದಾಸನು ಮೊದಲೇ ಆಗಿದ್ದೇನೆ" ಎಂದಮೇಲೆ ಈ ಎಲ್ಲ ಕಾರಣಗಳಿಂದಲೂ ನೀನು ನನ್ನ ಯಾಚನೆಯನ್ನು ಸಫಲಗೊಳಿಸುವವನಾಗು.

ಶಿರಸಾ ಪಾದೌ ಜಗ್ರಾಹ ವಿಧಿವತ್ಪುನಃ ॥ ೧೪ ॥ ತಂ ಮತ್ತಮಿವ ಮಾತಂಗಂ ನಿಶ್ವಸಂತಂ ಪುನಃಪುನಃ ॥ ಭ್ರಾತರಂ ಭರತಂ ರಾಮಃ ಪರಿಷ್ವಜ್ಯೇದ ಮಬ್ರವೀತ್ ॥ ೧೫ ॥ ಕುಲೀನ ಸ್ಸತ್ವಸಂಪನ್ನ ಸ್ತೇಜಸ್ವೀ ಚರಿತವ್ರತಃ ॥ ರಾಜ್ಯ ಹೇತೋಃ ಕಥಂ ಪಾಪ ಮಾಚರೇ ತ್ತ್ವದ್ವಿಧೋಜನಃ ॥ ೧೬ ॥ ನ ದೋಷಂ ತ್ವಯಿ ಪಶ್ಯಾಮಿ ಸೂಕ್ಷ್ಮಮಪ್ಯರಿಸೂದನ ! ॥ ನ ಚಾಪಿ ಜನನೀಂ ಬಾಲ್ಯಾ ತ್ತ್ವಂ ವಿಗರ್ಹಿತು ಮರ್ಹಸಿ ॥ ೧೭ ॥ ಕಾಮಕಾರೋ ಮಹಾಪ್ರಾಜ್ಞ ! ಗುರೂಣಾಂ ಸರ್ವದಾನಘ ! ॥ ಉಪಪನ್ನೇಷು ದಾರೇಷು ಪುತ್ರೇಷುಚ ವಿಧೀ

ಹಿಡಿದುಕೊಂಡನು. ॥ ೧೪ ॥ ರಾಮಃ - ಶ್ರೀರಾಮನು, ಮತ್ತಂ - ಮದವೇರಿದ, ಮಾತಂಗಮಿವ- ಆನೆಯಂತೆ, ಪುನಃ ಪುನಃ - ಬಾರಿಬಾರಿಗೂ, ನಿಶ್ವಸಂತಂ - ನಿಟ್ಟುಸಿರನ್ನು ಬಿಡುತ್ತಿರುವ, ಭ್ರಾತರಂ - ತಮ್ಮನಾದ, ತಂಭರತಂ - ಆ ಭರತನನ್ನು, ಪರಿಷ್ವಜ್ಯ - ಅಪ್ಪಿಕೊಂಡು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೧೫ ॥ ಕುಲೀನಃ - ಸತ್ಕುಲಪ್ರಸೂತನಾದ, ಸತ್ವಸಂಪನ್ನಃ - ಸತ್ವ ಗುಣದಿಂದ ಕೂಡಿರುವ, ತೇಜಸ್ವೀ - ಪರಾಕ್ರಮಶಾಲಿಯಾದ, ಚರಿತವ್ರತಃ - ನಿಯಮನಿಷ್ಠಾಪರ ನಾದ, ತ್ವದ್ವಿಧಃ - ನಿನ್ನಂತಹ, ಜನಃ - ಜನವು, ರಾಜ್ಯಹೇತೋಃ - ರಾಜ್ಯನಿಮಿತ್ತವಾಗಿ, ಪಾಪಂ - ಪಾಪವನ್ನು, ಅಂದರೆ - ಜ್ಯೇಷ್ಠನ ಪ್ರಾತಿಕೂಲರೂಪವಾದ ಪಾಪಕೃತ್ಯವನ್ನು, ಕಥಮಾಚರೇತ್ - ಹೇಗೆ ಮಾಡಿಯಾನು. ॥ ೧೬ ॥ ಹೇ ಅರಿಸೂದನ - ಎಲೈ ಶತ್ರುಸಂಹಾರಕನೇ, ತ್ವಯಿ - ನಿನ್ನಲ್ಲಿ, ಸೂಕ್ಷ್ಮಮಪಿ - ಸ್ವಲ್ಪವಾದರೂ, ದೋಷಂ - ದೋಷವನ್ನು, ನಪಶ್ಯಾಮಿ - ಕಾಣೆನು, ತ್ವಂ - ನೀನು, ಬಾಲ್ಯಾತ್ - ಬಾಲಭಾವದಿಂದ, ಜನನೀಂಚಾಪಿ - ತಾಯಿಯನ್ನು, ವಿಗರ್ಹಿತಂ - ನಿಂದಿಸಲು, ನಾರ್ಹಸಿ - ಯೋಗ್ಯನಾಗದಿರು. ॥ ೧೭ ॥ ಹೇ ಮಹಾಪ್ರಾಜ್ಞ - ಎಲೈ ತಿಳಿವಳಿಕೆಯುಳ್ಳವನೆ, ಹೇ ಅನಘ - ಎಲೈ ನಿರ್ದೋಷನೆ, ಗುರೂಣಾಂ - ಮಹಾತ್ಮರಿಗೆ, ಉಪಪನ್ನೇಷು - ಸಮ್ಮತವಾದ, ದಾರೇಷು - ಹೆಂಡತಿಯರಲ್ಲಿ, ಪುತ್ರೇಷುಚ - ಮಕ್ಕಳಲ್ಲಿಯೂ, ಕಾಮಕಾರಃ - ಸ್ವಚ್ಛಂದಗಮನವು, ವಿಧೀಯತೇ - ವಿಧಿಸಲ್ಪಟ್ಟಿದೆ. ॥ ೧೮ ॥ ಹೇ ಸೌಮ್ಯ - ಎಲೈ ಶಾಂತಿಸಂಪನ್ನನೆ! ಲೋಕೇ -

---

ರಾಮನು ಮಾತಿಮಾತಿಗೂ ಮದ್ದಾನೆಯಂತೆ ನಿಟ್ಟುಸಿರುಗಳನ್ನು ಬಿಡುತ್ತಿರುವವನೂ. ತನಗೆ ತಮ್ಮನಾದವನೂ ಆದ ಭರತಕುಮಾರನನ್ನು ಚೆನ್ನಾಗಿ ಅಪ್ಪಿಕೊಂಡು ಅವನನ್ನು ಕುರಿತು ಹೀಗೆಂದನು. "ವತ್ಸ; ಭರತ! ಸತ್ಕುಲದಲ್ಲಿ ಜನಿಸಿದವನೂ, ಸರ್ವೋತ್ತಮವಾದ ಬಲವುಳ್ಳ ವನೂ, ತೇಜೋವಂತನೂ, ಸಚ್ಚರಿತ್ರೆಯುಳ್ಳವನೂ ಆದ ನಿನ್ನಂತಹ ಬುದ್ಧಿವಂತನು ರಾಜ್ಯ ಕ್ಕೋಸುಗ ಪಾಪವನ್ನಾಚರಿಸುವುದೆಂತು! ಆಚರಿಸಿಯಾನೇ? ಓ ಶತ್ರುಸಂಹಾರಕನಾದ ಭರ ತನೆ! ನಿನ್ನಲ್ಲಿ ಯಾವ ವಿಧವಾದ ದೋಷವೂ ಇರುವುದಿಲ್ಲ ॥೧೫-೧೬॥ ನೀನು ಬಾಲ್ಯದಿಂದ ತಿಳಿ ಯದೆ ತಾಯಿಯನ್ನು ದೂಷಿಸುತ್ತಿರುವೆ; ಹೀಗೆ ನಿಂದಿಸಬಾರದು. ನಿಷ್ಕಲ್ಮಷನೂ, ಪಂಡಿತ ರಲ್ಲಿ ಉತ್ತಮನಾದವನೂ ಆದ ಭರತನೆ! ಗುರುಗಳಾದವರು, ಎಲ್ಲ ಕಾಲಗಳಲ್ಲಿಯೂ, ಯುಕ್ತವಾದ ನಡೆವಳಿಕೆಯುಳ್ಳ ಭಾರ್ಯಾಪುತ್ರರ ವಿಷಯವಾಗಿ ತಮ್ಮ ಇಷ್ಟಾನುಸಾರ ಸಂಚರಿಸಲು ತಕ್ಕವರೆಂಬುದನ್ನು ತಿಳಿದುಕೊ. ಸತ್ಪುರುಷನಾದ ಎಲೈ ಭರತನೆ! ಲೋಕದಲ್ಲಿ

ಯತೇ ॥ ೧೮ ॥ ವಯಮಸ್ಯ ಯಥಾಲೋಕೇ ಸಂಖ್ಯಾತಾ ಸೌಮ್ಯ! ಸಾಧುಭಿಃ ॥ ಭಾರ್ಯಾಃ ಪುತ್ರಾಶ್ಚ ಶಿಷ್ಯಾಶ್ಚ ತ್ವಮನುಜ್ಞಾತುಮರ್ಹಸಿ ॥೧೯॥ ವನೇವಾ ಚೀರವಸನಂ ಸೌಮ್ಯ! ಕೃಷ್ಣಾಜಿನಾಂಬರಂ ॥ ರಾಜ್ಯೇವಾಪಿ ಮಹಾರಾಜೋ ಮಾಂ ವಾಸಯಿತುಮೀಶ್ವರಃ ॥ ೨೦ ॥ ಯಾವತ್ಪಿತರಿ ಧರ್ಮಜ್ಞೇ ಗೌರವಂ ಲೋಕಸತ್ಕೃತಂ ॥ ತಾವದ್ಧರ್ಮಭೃತಾಂ ಶ್ರೇಷ್ಠ! ಜನನ್ಯಾಮಪಿ ಗೌರವಂ ॥ ೨೧ ॥ ಏತಾಭ್ಯಾಂ ಧರ್ಮಶೀಲಾಭ್ಯಾಂ ವನಂ ಗಚ್ಛೇತಿ ರಾಘವ! ॥ ಮಾತಾಪಿತೃಭ್ಯಾಂ ಮುಕ್ತೋಽಹಂ ಕಥಮನ್ಯತ್ಸಮಾಚರೇ? ॥ ೨೨ ॥ ತ್ವಯಾ

ಲೋಕದಲ್ಲಿ, ಭಾರ್ಯಾಃ - ಹೆಂಡತಿಯರು, ಪುತ್ರಾಶ್ಚ - ಮಕ್ಕಳೂ, ಶಿಷ್ಯಾಶ್ಚ - ಶಿಷ್ಯರೂ, ಸಾಧುಭಿಃ- ಸತ್ಪುರುಷರಿಂದ, ಯಥಾ - ಹೇಗೆ, ಸಂಖ್ಯಾತಾಃ - ನಿಯಾಮ್ಯರಾಗಿ ಪರಿಗಣನೆ ಮಾಡಲಾಗಿರುವರೋ, ವಯಂ - ನಾವು, ಅಸ್ಯ - ಈ ದಶರಥರಾಯನಿಗೆ, ತಥೇತಿ - ಹಾಗೆಯೇ ಎಂದು, ತ್ವಂ - ನೀನು, ಅನುಜ್ಞಾತುಂ - ತಿಳಿದುಕೊಳ್ಳಲು, ಅರ್ಹಸಿ - ಯೋಗ್ಯನಾಗು. ॥ ೧೯ ॥ ಹೇ ಸೌಮ್ಯ - ಎಲೈ ಸೌಮ್ಯನೇ, ಮಹಾರಾಜಃ - ಮಹಾರಾಜನಾದ ದಶರಥರಾಯನು, ವನೇವಾ - ಅರಣ್ಯದಲ್ಲಿಯೇ ಆಗಲಿ, ಚೀರವಸನಂ - ನಾರುಮಡಿಯುಟ್ಟಿರುವ, ಕೃಷ್ಣಾಜಿನಾಂಬರಂ - ಕೃಷ್ಣಾಜಿನವೇ ವಸ್ತ್ರವಾಗುಳ್ಳ, ಮಾಂ - ನನ್ನನ್ನು, ರಾಜ್ಯೇವಾಪಿ - ರಾಜ್ಯದಲ್ಲಿಯೇ ಆಗಲಿ, ವಾಸಯಿತುಂ - ಇರಿಸುವುದಕ್ಕೆ, ಈಶ್ವರಃ - ಸಮರ್ಥನು. ॥ ೨೦ ॥ ಹೇ ಧರ್ಮಭೃತಾಂ ಶ್ರೇಷ್ಠ - ಎಲೈ ಧರ್ಮಜ್ಞರಲ್ಲಿ ಶ್ರೇಷ್ಠನಾದವನೆ! ಧರ್ಮಜ್ಞೇ - ಧರ್ಮವನ್ನು ತಿಳಿದಿರುವ, ಪಿತರಿ - ತಂದೆಯಲ್ಲಿ, ಲೋಕಸತ್ಕೃತಂ - ಜನರಿಂದ ಪೂಜಿಸಲ್ಪಟ್ಟ, ಗೌರವಂ - ಗುರುತ್ವವು, ಯಾವತ್ - ಎಷ್ಟೋ, ಜನನ್ಯಾಮಪಿ - ತಾಯಿಯಲ್ಲಿಯೂ ಕೂಡ, ತಾವದ್ಗೌರವಂ - ಅಷ್ಟು ಗೌರವವೇ, ಕರ್ತವ್ಯಂ - ಮಾಡತಕ್ಕದ್ದು. ॥ ೨೧ ॥ ಹೇ ರಾಘವ - ಎಲೈ ರಘುಕುಲೋತ್ಪನ್ನನೇ! ಧರ್ಮಶೀಲಾಭ್ಯಾಂ - ಧರ್ಮದಲ್ಲಿಯೇ ಸ್ವಭಾವವುಳ್ಳ, ಏತಾಭ್ಯಾಂ ಮಾತಾಪಿತೃಭ್ಯಾಂ - ಈ ತಾಯಿತಂದೆಗಳಿಂದ, ವನಂ - ಅರಣ್ಯವನ್ನು ಕುರಿತು, ಗಚ್ಛೇತಿ- ಹೋಗೆಂದು, ಉಕ್ತಃ - ಹೇಳಲ್ಪಟ್ಟವನಾಗಿರುವಲ್ಲಿ, ಅನ್ಯತ್ - ಮತ್ತೊಂದು ಕಾರ್ಯವನ್ನು, ಅಹಂ-

---

ಸತ್ಪುರುಷರಿಂದ ಭಾರ್ಯಾಪುತ್ರಾದಿಗಳು ಯಾವ ರೀತಿ ಗಣಿಸಲ್ಪಡುವರೋ, ಅದೇ ರೀತಿ ನಾವೂ ಸಹ, ಮಹಾರಾಜನಾದ ದಶರಥರಾಯನಿಂದ ಗಣಿಸಲ್ಪಟ್ಟದ್ದೇವೆಂದು ತಿಳಿದುಕೊ. ತಮ್ಮ! ಭರತಕುಮಾರಾ! ದಶರಥಮಹಾರಾಜನು ನನ್ನನ್ನು, ನಾರುಮಡಿಗಳನ್ನೂ, ಜಡೆಗಳನ್ನೂ ಧರಿಸಿ ಅರಣ್ಯಕ್ಕೆ ಕಳುಹುವುದಕ್ಕೂ, ಸಾಕೇತಸಾಂಮ್ರಾಜ್ಯದಲ್ಲಿ ಅಭಿಷಿಕ್ತನನ್ನಾಗಿಮಾಡುವುದಕ್ಕೂ ಸಮರ್ಥನಾಗಿಯೇ ಇದ್ದಾನೆ. ॥೧೭-೨೦॥ ಧರ್ಮವನ್ನು ತಿಳಿದವರಲ್ಲಿ ಶ್ರೇಷ್ಠನಾದ ಎಲೈ ಭರತನೆ! ಧರ್ಮಜ್ಞನಾದ ತಂದೆಯಲ್ಲಿ ಯಾವ ರೀತಿ ಲೋಕೋತ್ತರವಾದ ಗೌರವವನ್ನಿಟ್ಟುಕೊಂಡಿರಬೇಕೋ, ಅದೇ ರೀತಿಯಲ್ಲಿಯೇ ತಾಯಿಯಲ್ಲಿಯೂ ಸಹ ಸರ್ವಲೋಕ ಸ್ತುತ್ಯವಾದ ಗೌರವವನ್ನಿಟ್ಟಿರಬೇಕು. ಅಲ್ಲದೆ ಧರ್ಮಸ್ವಭಾವವುಳ್ಳ ಅಂತಹ ತಂದೆತಾಯಿಗಳಿಂದ ನನಗೆ "ವನಕ್ಕೆ ಹೋಗೆಂಬ" ಆಜ್ಞೆಯು ಕೊಡಲಾಯಿತು. ಈ ರೀತಿ ಆಜ್ಞಾಪಿತನಾದ ನಾನು, ಬೇರೆ ವಿಧವಾದ ಕಾರ್ಯವನ್ನು ಹೇಗೆತಾನೆ ಮಾಡಿಯೇನು?

ರಾಜ್ಯಮಯೋಧ್ಯಾಯಾಂ ಪ್ರಾಪ್ತವ್ಯಂ ಲೋಕಸತ್ಕೃತಂ ॥ ವಸ್ತವ್ಯಂ ದಂಡಕಾರಣ್ಯೇ ಮಯಾ ವಲ್ಕಲವಾಸಸಾ ॥ ೨೩ ॥ ಏವಂ ಕೃತ್ವಾ ಮಹಾರಾಜೋ ವಿಭಾಗಂ ಲೋಕಸನ್ನಿಧೌ ॥ ವ್ಯಾದಿಶ್ಯಚ ಮಹಾತೇಜಾ ದಿವಂ ದಶರಥೋ ಗತಃ ॥ ೨೪ ॥ ಸಚ ಪ್ರಮಾಣಂ ಧರ್ಮಾತ್ಮಾ ರಾಜಾ ಲೋಕಗುರುಸ್ತವ ॥ ಪಿತ್ರಾ ದತ್ತಂ ಯಥಾಭಾಗ ಮುಪಭೋಕ್ತುಂ ತ್ವಮರ್ಹಸಿ ॥ ೨೫ ॥ ಚತುರ್ದಶ ಸಮಾ ಸೌಮ್ಯ! ದಂಡಕಾರಣ್ಯ ಮಾಶ್ರಿತಃ ॥ ಉಪಭೋಕ್ಷ್ಯೇತ್ವಹಂ ದತ್ತಂ ಭಾಗಂ ಪಿತ್ರಾ ಮಹಾತ್ಮನಾ ॥ ೨೬ ॥

ನಾನು, ಕಥಂಸಮಾಚರೇ - ಹೇಗೆತಾನೇ ಆಚರಣೆ ಮಾಡಲಿ. ॥ ೨೨ ॥ ತ್ವಯಾ - ನಿನ್ನಿಂದ, ಲೋಕಸತ್ಕೃತಂ - ಮನುಷ್ಯರಿಂದಲೂ ಪೂಜಿಸಲ್ಪಟ್ಟ, ರಾಜ್ಯಂ - ರಾಜ್ಯವು, ಅಯೋಧ್ಯಾಯಾಂ - ಅಯೋಧ್ಯಾಪಟ್ಟಣದಲ್ಲಿ, ಪ್ರಾಪ್ತವ್ಯಂ - ಹೊಂದತಕ್ಕದು, ವಲ್ಕಲವಾಸಸಾ - ನಾರುಮಡಿಯನ್ನೇ ವಸ್ತ್ರವನ್ನಾಗಿ ಮಾಡಿಕೊಂಡಿರುವ, ಮಯಾ - ನನ್ನಿಂದ, ದಂಡಕಾರಣ್ಯೇ - ದಂಡಕಾರಣ್ಯದಲ್ಲಿ, ವಸ್ತವ್ಯಂ - ಇರತಕ್ಕದು. ॥ ೨೩ ॥ ಮಹಾತೇಜಾಃ - ಮಹಾತೇಜೋವಂತನಾದ, ಮಹಾರಾಜಃ- ರಾಜಾಧಿರಾಜನಾದ, ದಶರಥಃ - ದಶರಥರಾಯನು, ಏವಂ - ಈ ಪರಿಯಾಗಿ, ಲೋಕಸನ್ನಿಧೌ - ಜನರ ಮಧ್ಯದಲ್ಲಿ, ವಿಭಾಗಂ - ವಿಭಾಗವನ್ನು, ಕೃತ್ವಾ - ಮಾಡಿ, ವ್ಯಾದಿಶ್ಯಚ - ಆಜ್ಞಾಪಿಸಿಯೂ ಕೂಡ, ದಿವಂ - ಸ್ವರ್ಗಲೋಕವನ್ನು, ಗತಃ - ಹೊಂದಿದನು. ॥ ೨೪ ॥ ಧರ್ಮಾತ್ಮಾ - ಧರ್ಮಿಷ್ಠನಾದ, ಲೋಕಗುರುಃ - ಲೋಕಸ್ವಾಮಿಯಾದ, ಸರಾಜಾ - ಆ ದಶರಥರಾಯನು, ತವಚ - ನಿನಗೂ (ನನಗೂ ಕೂಡ), ಪ್ರಮಾಣಂ - ಪ್ರಮಾಣವು, ತ್ವಂ - ನೀನು, ಯಥಾಭಾಗಂ - ವಿಭಾಗಾನುಸಾರವಾಗಿ, ಪಿತ್ರಾ - ತಂದೆಯಿಂದ, ದತ್ತಂ - ಕೊಡಲಾದ ರಾಜ್ಯವನ್ನು, ಚತುರ್ದಶಸಮಾಃ - ಹದಿನಾಲ್ಕು ಸಂವತ್ಸರಗಳವರೆವಿಗೂ, ಉಪಭೋಕ್ತುಂ - ಅನುಭವಿಸಲು, ಅರ್ಹಸಿ - ಯೋಗ್ಯನಾಗು. ॥ ೨೫ ॥ ಹೇ ಸೌಮ್ಯ - ಎಲೈ ಸೌಮ್ಯನೇ, ಅಹಂತು - ನಾನಾದರೆ, ಮಹಾತ್ಮನಾ - ಮಹಾತ್ಮನಾದ, ಪಿತ್ರಾ - ತಂದೆಯಿಂದ, ದತ್ತಂ - ಕೊಡಲ್ಪಟ್ಟ, ಭಾಗಂ - ಭಾಗರೂಪವಾದ, ದಂಡಕಾರಣ್ಯಂ - ದಂಡಕಾವನವನ್ನು, ಆಶ್ರಿತಃ - ಆಶ್ರಯಿಸಿ, ಉಪಭೋಕ್ಷ್ಯೇ - ಅನುಭವಿಸುತ್ತೇನೆ. ॥ ೨೬ ॥ ಮಹಾತ್ಮಾ - ಮಹಾಮನಸ್ಸುಳ್ಳ, ನರಲೋಕಸತ್ಕೃತಃ - ಮನುಷ್ಯಲೋಕದಲ್ಲಿ ಪೂಜಿಸಲ್ಪಟ್ಟ, ವಿಬುಧಾಧಿಪೋಪಮಃ-

---

ವತ್ಸ; ಭರತ! ನೀನು ಎಲ್ಲ ಜನರಿಂದ ಸ್ತುತಿಸಲಾದ ರಾಜ್ಯವನ್ನು ಹೊಂದಿ ಅಯೋಧ್ಯಾರಾಜ್ಯವನ್ನು ಪಾಲಿಸಬೇಕು. ಜಡೆಗಳನ್ನೂ, ನಾರುಮಡಿಗಳನ್ನೂ ಧರಿಸಿ ನಾನೀದಂಡಕಾರಣ್ಯದಲ್ಲಿ ವಾಸ ಮಾಡಲೇಬೇಕು.॥೨೧-೨೩॥ಎಂಬೀಪ್ರಕಾರವಾಗಿ ಎಲ್ಲ ಜನರ ಮುಂಗಡೆ, ತೇಜೋವಂತರಲ್ಲುತ್ತಮನಾದ ದಶರಥಮಹಾರಾಜನು ನಮ್ಮೀರ್ವರಿಗೂ ವಿಭಾಗವನ್ನು ಮಾಡಿಕೊಟ್ಟು, ಆಜ್ಞಾಪಿಸಿ, ಸ್ವರ್ಗಲೋಕಕ್ಕೆ ತೆರಳಿದನು. ಧರ್ಮಾತ್ಮನೂ, ಲೋಕಾಚಾರಗಳಿಗೆ ಗುರುವೂ ಆದ ದಶರಥಮಹಾರಾಜನು ನಮಗೆ ಪ್ರಮಾಣ. ತಂದೆಯಾದ ದಶರಥರಾಜನು ವಿಭಾಗಿಸಿಕೊಟ್ಟ ರಾಜ್ಯವನ್ನು ಪರಿತ್ಯಜಿಸದೆ ಪರಿಪಾಲಿಸು. ತಂದೆಯ ಆಣತಿಯನ್ನು ಮೀರಲು ಯಾರಿಗೂ ಅಧಿಕಾರವಿರುವುದಿಲ್ಲವೆಂಬುದನ್ನು ತಿಳಿದುಕೊ. ನಾನು, ತಂದೆಯಾದ ದಶರಥ

ಯದಬ್ರವೀ ನ್ಮಾಂ ನರಲೋಕ ಸತ್ಕೃತಃ
ಪಿತಾ ಮಹಾತ್ಮಾ ವಿಬುಧಾಧಿಪೋಪಮಃ ||
ತದೇವ ಮನ್ಯೇ ಪರಮಾತ್ಮನೋಹಿತಂ
ನ ಸರ್ವಲೋಕೇಶ್ವರ ಭಾವ ಮಪ್ಯಹಂ || ೨೭ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರುತ್ತರಶತತಮಸ್ಸರ್ಗಃ.

ದೇವೇಂದ್ರನಿಗ ಸಮಾನನಾದ, ಪಿತಾ - ತಂದೆಯಾದ ದಶರಥನು, ಮಾಂ - ನನ್ನನ್ನು ಕುರಿತು, ಯತ್ - ಯಾವ ಮಾತನ್ನು, ಅಬ್ರವೀತ್ - ನುಡಿದನೋ, ಅಹಂ - ನಾನು, ತದೇವ - ಆ ಅಭಿಪ್ರಾಯವನ್ನೇ, ಆತ್ಮನಃ - ನನಗೆ, ಪರಂ - ಬಹಳವಾಗಿ, ಹಿತಂ - ಹಿತವನ್ನಾಗಿ, ಮನ್ಯೇ - ಎಣಿಸಿದ್ದೇನೆ, ಸರ್ವಲೋಕೇಶ್ವರಭಾವಮಪಿ - ಸರ್ವಲೋಕಾಧಿಪತ್ಯ ಭಾವವನ್ನಾದರೂ, ನಮನ್ಯೇ - ತಿಳಿಯಲಾರೆನು. || ೨೭ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರುತ್ತರಶತತಮಸ್ಸರ್ಗಃ.

ರಾಯನ ಆಜ್ಞಾನುಸಾರ ಹದಿನಾಲ್ಕು ಸಂವತ್ಸರಗಳನ್ನು ದಂಡಕಾರಣ್ಯದಲ್ಲಿ ಕಳೆದು ಆಮೇಲೆ ಮಹಾತ್ಮನಾದ ಆ ತಂದೆಯ ಹೇಳಿಕೆಯಂತೆ ರಾಜ್ಯವನ್ನು ಪರಿಪಾಲಿಸುತ್ತೇನೆ." ಅಲ್ಲದೆ ಮಹಾತ್ಮನೂ, ಲೋಕಪೂಜ್ಯನೂ, ದೇವೇಂದ್ರನಿಗೆ ಸಮಾನನಾದವನೂಆದ ತಂದೆಯು ನನಗೇನೆಂದು ಆಜ್ಞಾಪಿಸಿರುವನೋ ಅವನ್ನು ಪರಿಪಾಲಿಸಿ, ಅತ್ಯಂತ ಹಿತವಾದುದನ್ನಾಗೆಣಿಸುವೆನೇ ಹೊರ್ತು,ಅದನ್ನುಳಿದು ಲೋಕೇಶ್ವರ ಪದವಿಯನ್ನಾದರೂ ನಾನು ಬಯಸುವುದಿಲ್ಲ.||೨೪-೨೭||

ಇಂತಿದು ಶ್ರೀರಾಮಕೃತ ಭರತಯಾಚನಾ ನಿರಾಕಣವೆಂಬ ನೂರನಾಲ್ಕನೆಯ
ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಪಂಚೋತ್ತರಶತತಮಸ್ಸರ್ಗಃ.

ತತಃ ಪುರುಷಸಿಂಹಾನಾಂ ವೃತಾನಾಂ ತೈ ಸ್ಸುಹೃದ್ಗಣೈಃ ‖ ಶೋಚತಾ ಮೇವ ರಜನೀ ದುಃಖೇನ ವ್ಯತ್ಯವರ್ತತ ‖ ೧ ‖ ರಜನ್ಯಾಂ ಸುಪ್ರಭಾತಾಯಾಂ ಭ್ರಾತರ ಸ್ತೇ ಸುಹೃದ್ವೃತಾಃ ‖ ಮಂದಾಕಿನ್ಯಾಂ ಹುತಂ ಜಪ್ಯಂ ಕೃತ್ವಾ ರಾಮ ಮುಪಾಗತಂ ‖ ೨ ‖ ತೂಷ್ಣೀಂ ತೇ ಸಮುಪಾಸೀನಾ ನಕಶ್ಚಿ ತ್ಕಿಂಚಿದ ಬ್ರವೀತ್ ‖ ಭರತಸ್ತು ಸುಹೃನ್ಮಧ್ಯೇ ರಾಮಂ ವಚನ ಮಬ್ರವೀತ್ ‖ ೩ ‖ ಸಾಂತ್ವಿತಾ ಮಾಮಿಕಾ ಮಾತಾ ದತ್ತಂ ರಾಜ್ಯ ಮಿದಂ ಮಮ ‖ ತದ್ದದಾಮಿ

ತತಃ - ಬಳಿಕ, ತೈಸ್ಸುಹೃದ್ಗಣೈಃ - ಆ ಸ್ನೇಹಿತರಿಂದ, ವೃತಾನಾಂ - ಸುತ್ತುವರೆಯಲ್ಪಟ್ಟ, ಶೋಚತಾಮೇವ-ದುಃಖಿಸುತ್ತಲೇ ಇರುವ, ಸಿಂಹಾನಾಂ - ಪುರುಷಶ್ರೇಷ್ಠರಾದ ಆ ದಶರಥಪುತ್ರರಿಗೆ, ರಜನೀ - ರಾತ್ರಿಯು, ದುಃಖೇನ - ವ್ಯಸನದಿಂದ, ವ್ಯತ್ಯವರ್ತತ - ಕಳೆದುದು. ‖ ೧ ‖ ರಜನ್ಯಾಂ - ರಾತ್ರಿಯು, ಸುಪ್ರಭಾತಾಯಾಂ - ಬೆಳಗಾಗಲು, ತೇಭ್ರಾತರಃ - ಆ ತಮ್ಮಂದಿರಾದ ಭರತಾದಿಗಳು, ಮಂದಾಕಿನ್ಯಾಂ-ಗಂಗಾನದಿಯಲ್ಲಿ, ಹುತಂ ಔಪಾಸನೆಯನ್ನು, ಜಪ್ಯಂ-ಜಪಿಸತಕ್ಕ ಮಂತ್ರಾನುಷ್ಠಾನ ವನ್ನೂ, ಕೃತ್ವಾ - ಮಾಡಿ, ಸುಹೃದ್ವೃತಾಃ-ಸ್ನೇಹಿತರೊಡಗೂಡಿ, ರಾಮಂ-ಶ್ರೀರಾಮನನ್ನು ಕುರಿತು, ಉಪಾಗರ್ಮ - ಬಂದರು. ‖ ೨ ‖ ತೇ-ಅವರು, ತೂಷ್ಣೀಂ-ಸುಮ್ಮನೆ, ಸಮುಪಾಸೀನಾಃ-ಕುಳಿತಿದ್ದರು, ಕಶ್ಚಿತ್-ಯಾವನೂ, ಕಿಂಚಿತ್-ಕೊಂಚವಾದರೂ, ನಾಬ್ರವೀತ್-ನುಡಿಯಲಿಲ್ಲ, ಸುಹೃನ್ಮಧ್ಯೇ-ಸ್ನೇಹಿತರ ಮಧ್ಯದಲ್ಲಿ, ಭರತಸ್ತು-ಭರತನಾದರೆ, ರಾಮಂ-ಶ್ರೀರಾಮನನ್ನು ಕುರಿತು, ವಚನಂ - ಮಾತನ್ನು, ಅಬ್ರವೀತ್ - ನುಡಿದನು. ‖ ೩ ‖ ಮಾಮಿಕಾ - ನನ್ನ ಸಂಬಂಧಿಯಾದ, ಮಾತಾ - ತಾಯಿಯು, ಸಾಂತಿತ್ವಾ - ಸಮಾಧಾನಗೊಳಿಸಲ್ಪಟ್ಟಳು, ಮಮ - ನನಗೆ, ಇದಂರಾಜ್ಯಂ - ಈ ರಾಜ್ಯವು, ದತ್ತಂ-ಕೊಡಲ್ಪಟ್ಟಿತು, ಅಹಂವೈ - ನಾನಾದರೆ, ತವ - ನಿನಗೆ, ತತ್ - ಆ ರಾಜ್ಯವನ್ನು, ದದಾಮಿ -

---

ಆಬಳಿಕ ಸಿಂಹಸಮಾನರಾದ ರಾಮ, ಲಕ್ಷ್ಮಣ, ಭರತ, ಶತ್ರುಘ್ನರು ತಮ್ಮ ಸ್ನೇಹಿತರೇ ಮೊದಲಾದವರೊಡಗೂಡಿ ವ್ಯಸನಪಡುತ್ತಿರುವ ಹಾಗೆಯೇ ಆ ರಾತ್ರಿಯೆಲ್ಲವೂ ಕಳೆದು ಹೋಯಿತು. ಆಮೇಲೆ ಸ್ವಲ್ಪಹೊತ್ತಿಗೆ ಪ್ರಾತಃಕಾಲವಾಯಿತು. ಆಗ ಶ್ರೀರಾಮ ಲಕ್ಷ್ಮಣಭರತಶತ್ರುಘ್ನರು ಸ್ನೇಹಿತರೊಡಗೂಡಿ ಗಂಗಾನದೀತೀರವನ್ನು ಸೇರಿ ಜಪಹೋಮಾದಿ ಕೃತ್ಯಗಳನ್ನೆಸಗಿದವರಾದರು. ಆಬಳಿಕ ಭರತನೇ ಮೊದಲಾದವರೆಲ್ಲರೂ ಶ್ರೀರಾಮನ ಬಳಿಗೈದಿ ಆತನ ಸಮೀಪದಲ್ಲಿ ಕುಳಿತುಕೊಂಡರು ಆಸಮಯದಲ್ಲಿ ಅಲ್ಲಿದ್ದವರೆಲ್ಲರೂ ಏನೊಂದುಮಾತನ್ನೂ ಆಡದೆ ಸುಮ್ಮನೆ ಕುಳಿತಿದ್ದರು. ಆಗ ಸ್ನೇಹಿತರ ಮಧ್ಯದಲ್ಲಿ ಕುಳಿತುಕೊಂಡಿದ್ದ ಭರತನು ಶ್ರೀರಾಮಮೂರ್ತಿಯನ್ನು ಕುರಿತು ಈ ಮಾತುಗಳನ್ನಾಡಿದನು. ‖೧-೩‖ " ಅಣ್ಣಾ; ಶ್ರೀರಾಮಚಂದ್ರನೆ! ನನಗೆ ಈ ಸಾಕೇತರಾಜ್ಯವು ನನ್ನ ಜನನಿಯಾದ ಕೈಕೇಯಿಯಿಂದ ಕೊಡಲಾಯಿತು. ನಾನೀಗ ಈ ರಾಜ್ಯವನ್ನು ನಿನಗೆ ಕೊಡುತ್ತೇನೆ. ವರ್ಷಾಕಾಲದ

ತನ್ನೈವಾಹಂ ಭುಙ್ಕ್ಷ್ವ ರಾಜ್ಯ ಮಕಂಟಕಂ ॥ ೪ ॥ ಮಹತೇವಾಂಬುವೇಗೇನ ಭಿನ್ನಃ ಸೇತು ರ್ಜಲಾಗಮೇ ॥ ದುರಾವಾರಂ ತ್ವದನ್ಯೇನ ರಾಜ್ಯಖಂಡಮಿದಂ ಮಹತ್ ॥ ೫ ॥ ಗತಿಂ ಖರ ಇವಾಶ್ವಸ್ಯ ತಾರ್ಕ್ಷ್ಯಸ್ಯೇವ ಪತತ್ರಿಣಃ ॥ ಅನುಗಂತುಂ ನ ಶಕ್ತಿ ರ್ಮೇ ಗತಿಂ ತವ ಮಹೀಪತೇ ! ॥೬॥ ಸುಜೀವಂ ನಿತ್ಯ ಶಸ್ತಸ್ಯ ಯಃ ಪರೈ ರುಪಜೀವ್ಯತೇ ॥ ರಾಮ ! ತೇನ ತು ದುರ್ಜೀವಂ ಯಃ ಪರಾನುಪಜೀವತಿ ॥೭॥ ಯಥಾ ತು ರೋಪಿತೋ ವೃಕ್ಷಃ ಪುರುಷೇಣ ವಿವರ್ಧಿತಃ ॥

ಕೊಡುತ್ತೇನೆ, ರಾಜ್ಯಂ - ರಾಜ್ಯವನ್ನು, ಅಕಂಟಕಂ - ನಿಷ್ಕಂಟಕವಾಗಿ, ಭುಙ್ಕ್ಷ್ವ - ಅನುಭವಿಸು. ॥ ೪ ॥ ಜಲಾಗಮೇ - ವರ್ಷಾಕಾಲದಲ್ಲಿ, ಮಹತಾ - ಮಹತ್ತರವಾದ, ಅಂಬುವೇಗೇನ - ನೀರಿನ ವೇಗದಿಂದ, ಭಿನ್ನಃ - ಭೇದಿಸಿದ, ಸೇತುರಿವ - ಸೇತುವಿನಂತೆ, ತ್ವದನ್ಯೇವ-ನಿನ್ನಹೊರತು, ಮಹತ್ - ಮಹತ್ತರವಾದ, ಇದಂರಾಜ್ಯಖಂಡಂ - ಈ ನವಖಂಡದಲ್ಲಿನ ಭರತಖಂಡವು, (ಗೊ) ಕೋಸಲಖಂಡವು, ದುರಾವಾರಂ - ನಿಲ್ಲಲಸಾಧ್ಯವು. ॥ ೫ ॥ ಹೇ ಮಹೀಪತೇ - ಎಲೈ ಭೂಪತಿಯೇ, ಖರಃ - ಕತ್ತೆಯು, ಅಶ್ವಸ್ಯ - ಕುದುರೆಯ, ಗತಿಮಿವ - ಗಮನದಂತೆಯೂ, ಪತತ್ರಿಣಃ-ಪಕ್ಷಿಗಳು, ತಾರ್ಕ್ಷ್ಯಸ್ಯೇನ - ಗರುಡನ ಗತಿಯನ್ನಂತೆಯೂ, ತವ - ನಿನ್ನ, ಗತಿಂ - ಗಮನವನ್ನು, ಅನುಗಂತುಂ- ಅನುಸರಿಸುವುದಕ್ಕೆ, ಮೇ - ನನಗೆ, ಶಕ್ತಿಃ - ಸಾಮರ್ಥ್ಯವು, ನ - ಇಲ್ಲ. ॥ ೬ ॥ ಹೇ ರಾಮ - ಎಲೈ ಶ್ರೀರಾಮನೇ, ಯಃ - ಯಾವ ಪುರುಷನು, ಪರೈಃ - ಇತರರೊಡನೆ, ಉಪಜೀವ್ಯತೇ - ಜೀವನ ಮಾಡಿಸುವನೋ, ನಿತ್ಯಶಃ - ನಿರಂತರವೂ, ತಸ್ಯ - ಆ ಪುರುಷನ, ಸುಜೀವಂ - ಸುಖಜೀವನವು, ಕಿಂತು - ಮತ್ತೇನೆಂದರೆ, ಯಃ - ಯಾವ ಪುರುಷನು, ಪರಾ - ಇತರರನ್ನನುಸರಿಸಿ, ಉಪಜೀವತಿ - ಜೀವನ ಮಾಡುತ್ತಾನೆಯೋ, ತೇನ - ಅವನಿಂದ, ದುರ್ಜೀವಂ - ದುಷ್ಟಜೀವನವು. ॥ ೭ ॥ ಯಥಾ - ಹೇಗೆ, ಪುರುಷೇಣ - ಪುರುಷನಿಂದ, ರೋಪಿತಃ - ಆರೋಪಿಸಲಾದ, ವಿವರ್ಧಿತಃ - ವೃದ್ಧಿಗೊಳಿಸಲ್ಪಟ್ಟ, ವೃಕ್ಷಃ - ಗಿಡವು, ಹ್ರಸ್ವಕೇಣ - ಕುಬ್ಜನಿಂದ, ದುರಾರೋಹಃ - ಏರುವುದಕ್ಕಶಕ್ಯವಾದ,

ಲ್ಲಿನ ಮಹಾ ಪ್ರವಾಹದಿಂದ ಮುರಿದುಬಿದ್ದ ಕಟ್ಟೆಯನ್ನು ಪುನಃಕಟ್ಟಲು ಹೇಗೆ ಆಗಲಾರದೋ, ಹಾಗೆಯೇ ನಾನು ಈ ಅಪಾರರಾಜ್ಯಭಾರವನ್ನು ವಹಿಸಲು ಶಕ್ತನಲ್ಲ. ಅಲ್ಲದೆ ನಿನ್ನನ್ನು ಬಿಟ್ಟರೆ ಈ ರಾಜ್ಯವನ್ನು ಭರಿಸುವ ಧೀರನು ಮತ್ತಾವನೂ ಇರುವುದಿಲ್ಲ. ॥೪-೫॥ ಓ, ರಾಜಶ್ರೇಷ್ಠನೆ! ಕುದುರೆಗೆ ಸಮಾನವಾಗಿ ಕತ್ತೆಯು ಹೇಗೆ ನಡಿಯಲಾರದೋ, ಗರುಡನಿಗೆ ಸಮಾನವಾಗಿ, ಇತರ ಪಕ್ಷಿಗಳೆಂತು ಹಾರಲಾರವೋ, ಅಂತೆಯೇ ನಾನೂ ಸಹ ನಿನಗೆ ಸಮಾನವಾಗಿ ರಾಜ್ಯಪರಿಪಾಲನಾದಿಗಳನ್ನು ಮಾಡಲಾರೆನು. ಅಷ್ಟುಸಮರ್ಥನು ನಾನಲ್ಲ. ಅಣ್ಣಾ; ಶ್ರೀರಾಮನೆ! ಇತರರನ್ನು ಜೀವಿಸುವಂತೆ ಮಾಡುವಾತನ ಜನ್ಮವು ಸಫಲವೆನಿಸುತ್ತದೆ. ಇತರರಿಂದ ತಾನು ಜೀವನಮಾಡಿದರೆ, ಅಂತಹನ ಜನ್ಮವು ನಿಷ್ಫಲವೆನಿಸುತ್ತದೆಯಲ್ಲವೆ? ನಾನು ಇತರರಮೂಲಕ ಜೀವನಮಾಡುವವನಾದುದರಿಂದ ನನ್ನಜನ್ಮವು ವ್ಯರ್ಥವಾಗಿರುವುದು.॥೬-೭॥ ನಿನ್ನಿಂದ ಇತರರು ಜೀವಿಸುತ್ತಾರೆಯಾದುದರಿಂದ ನಿನ್ನ ಜನ್ಮವು ಸಫಲವಾದುದು. ಆದುದರಿಂದಲೈ ಅಗ್ರಜನೆ! ನೀನು ರಾಜ್ಯವನ್ನು ಪರಿಪಾಲಿಸಲು ಅರ್ಹನಾದವನು. ಅಲ್ಲದೆ ಈ

ಹ್ರಸ್ವಕೇಣ ದುರಾರೋಹೋ ರೂಢಸ್ಕಂಧೋ ಮಹಾದ್ರುಮಃ ॥೮॥ ಸ ಯದಾ ಪುಷ್ಪಿತೋ ಭೂತ್ವಾ ಫಲಾನಿ ನ ವಿದರ್ಶಯೇತ್ ॥ ಸತಾಂ ನಾನುಭವೇತ್ಪ್ರೀತಿಂ ಯಸ್ಯ ಹೇತೋಃ ಪ್ರರೋಪಿತಃ ॥೯॥ ಏಷೋಪಮಾ ಮಹಾಬಾಹೋ! ತಮರ್ಥಂ ವೇತ್ತು ಮರ್ಹಸಿ ॥ ಯದಿತ್ವಮಸ್ಮಾನ್ವೃಷಭೋ ಭರ್ತಾ ಭೃತ್ಯಾನ್ನ ಶಾಧಿಹಿ ॥೧೦॥ ಶ್ರೇಣಯ ಸ್ತ್ವಾಂ ಮಹಾರಾಜ! ಪಶ್ಯಂ ತ್ವಗ್ರ್ಯಾಶ್ಚ ಸರ್ವಶಃ ॥ ಪ್ರತಪಂತಮಿವಾದಿತ್ಯಂ ರಾಜ್ಯೇ ಸ್ಥಿತ ಮರಿಂದಮಂ ॥೧೧॥

ರೂಢಸ್ಕಂಧಃ - ಹುಟ್ಟದ ಒಳ್ಳೇ ಕೊಂಬೆಗಳುಳ್ಳ, ಮಹಾದ್ರುಮಃ - ದೊಡ್ಡ ವೃಕ್ಷವು, ಜಾತಃ - ಆಯಿತೋ, ಸವೃಕ್ಷಃ - ಆ ವೃಕ್ಷವು, ಪುಷ್ಪಿತಃ - ಹೂವು ಬಿಟ್ಟುದು, ಭೂತ್ವಾ - ಆಗಿ, ಫಲಾನಿ - ಫಲಗಳನ್ನು, ಯಥಾ - ಹೇಗೆ, ನವಿದರ್ಶಯೇತ್ - ತೋರಿಸದೇ ಹೋದೀತು, ಯಸ್ಯ-ಯಾವಫಲದ, ಹೇತೋಃ - ನಿಮಿತ್ತವಾಗಿ, ಪ್ರರೋಪಿತಃ - ನಾಟಲ್ಪಟ್ಟಿತೋ, ಸಃ - ಆ ಪುರುಷನು, ತಾಂಪ್ರೀತಿಂ - ಅಂತಹ ಪ್ರೀತಿಯನ್ನು, ತಸ್ಯಪುರುಷಸ್ಯ - ಆ ಪುರುಷನಿಗೆ, ನಾನುಭವೇತ್ - ಅನುಭವಿಸದೇ ಹೋಗುವನೋ, ಹೇ ಮಹಾಬಾಹೋ - ಎಲೈ ಭುಜಬಲಪರಾಕ್ರಮಶಾಲಿಯೇ, ತ್ವಂ - ನೀನು, ಋಷಭಃ - ಶ್ರೇಷ್ಠನಾದ, ಭರ್ತಾ - ಸಂರಕ್ಷಣಕರ್ತನಾಗಿ, ಭೃತ್ಯಾನ್ - ಭರಣಯೋಗ್ಯರಾದ, ಅಸ್ಮಾನ್-ನಮ್ಮನ್ನು, ನಶಾಧಿಯದಿಹಿ - ಸಂರಕ್ಷಿಸದೇ ಹೋದರೆ, ಏಷಾ - ಇದು, ಉಪಮಾ - ಸಾಮ್ಯವು, ಅತಃ - ಈ ಕಾರಣ, ತಮರ್ಥಂ - ನಮ್ಮ ಪರಿಪಾಲನಾರೂಪವಾದ ಅರ್ಥವನ್ನು, ವೇತ್ತುಂ - ತಿಳಿಯಲು, ಅರ್ಹಸಿ- ಯೋಗ್ಯನಾಗು. ॥೧೦॥ ಹೇ ಮಹಾರಾಜ - ಎಲೈ ಮಹಾರಾಜನೇ, ಶ್ರೇಣಯಃ - ಪೌರಜನರು, ಸರ್ವಶಃ - ಸಮಸ್ತರಾದ, ಅಗ್ರ್ಯಾಶ್ಚ - ಮುಖ್ಯರೂ, ಪ್ರತಪಂತಂ - ತಪಿಸುತ್ತಿರುವ, ಆದಿತ್ಯಮಿವ - ಸೂರ್ಯನಂತೆ, ರಾಜ್ಯೇ - ರಾಜ್ಯದಲ್ಲಿ, ಸ್ಥಿತಂ - ನಿಂತಿರುವ, ಅರಿಂದಮಂ - ಶತ್ರುಸಂಹಾರಕನಾದ, ತ್ವಾಂ - ನಿನ್ನನ್ನು, ಪಶ್ಯಂತು - ನೋಡಲಿ. ॥೧೧॥ ಹೇ ಕಾಕುತ್ಸ್ಥ - ಎಲೈ ಶ್ರೀರಾಮನೇ,

---

ಲೋಕದಲ್ಲಿ ಒಬ್ಬಾನೊಬ್ಬನು ಬೀಜವನ್ನು ಬಿತ್ತಿ ನೀರೆರೆದು ಬಳೆಯಿಸಿದ ವೃಕ್ಷವು ಕೆಲವು ದಿನಗಳ ಮೇಲೆ ಕುಬ್ಜನಿಂದ ಹತ್ತಲಾಗುವುದಿಲ್ಲ. ಮಾತ್ರವಲ್ಲದೆ ಬಹಳವಾದ ಶಾಖೆಗಳುಳ್ಳದೂ, ದೊಡ್ಡದಾದ ತುದಿಗಳುಳ್ಳದೂ ಆಗುತ್ತದೆ ಅಂತಹ ವೃಕ್ಷವು ಹೂವೊಳೆತು ಫಲಗಳನ್ನೀಯದಿದ್ದರೆ ಅದನ್ನು ಬಳೆಯಿಸಿದವನ ಶ್ರಮವು ವ್ಯರ್ಥವಾಗುವುದಲ್ಲವೆ? ನಿನ್ನನ್ನು ಪಡೆಯಲು ಅನೇಕವಿಧಗಳಾದ ತಪಸ್ಸುಗಳನಾಚರಿಸಿ, ಅನೇಕ ಕಷ್ಟಪರಂಪರೆಗಳನ್ನು ಸಹಿಸಿ, ನಮ್ಮ ತಂದೆಯಾದ ದಶರಥಮಹೀಪಾಲನು, ಪೋಷಣೆಮಾಡುವವರನ್ನೆಲ್ಲ ಪೋಷಿಸಲು ಸಾಮರ್ಥ್ಯವುಳ್ಳ ನಿನ್ನನ್ನು ಪಡೆದನು. ಅಂತಹ ನೀನೀಗ ಪೋಷಿಸಲ್ಪಡಬೇಕಾದ ನಮ್ಮೆಲ್ಲರನ್ನೂ ಪೋಷಿಸದೆ, ವನವಾಸಿಯಾದ ಪಕ್ಷದಲ್ಲಿ, ದಶರಥರಾಜನ, ಕೌಸಲ್ಯಾದೇವಿಯ ಕಷ್ಟವೆಲ್ಲವೂ, ವೃಕ್ಷವನ್ನು ಬಳೆಯಿಸಿ, ಅದರ ಫಲವನ್ನನುಭವಿಸದೇ ಹೋದವನ ಕಷ್ಟದಂತೆ ನಿಷ್ಫಲವಾದುದನ್ನಾಗಿ ಮಾಡಬೇಡ. ॥೮-೧೦॥ ಓ ರಾಜೋತ್ತಮನೆ! ಪುರಪ್ರಮುಖರೇ ಮೊದಲಾದ ಪ್ರಜೆಗಳೂ, ಮಂತ್ರಿಗಳೂ ಇವರೇ ಮೊದಲಾದವರೆಲ್ಲರೂ, ನೀನು ರಾಜ್ಯವನ್ನು ಪರಿಪಾಲಿಸುತ್ತ, "ಲೋಕವೆಲ್ಲವನ್ನೂ ತಪಿಸುವಂತೆ ಮಾಡುತಿರುವ ಸೂರ್ಯನಂತೆ ಶತ್ರುಗಳನ್ನು

ತವಾನುಯಾನೇ ಕಾಕುತ್‌ಸ್ಥ! ಮತ್ತಾ ನರ್ದಂತು ಕುಂಜರಾಃ ॥ ಅಂತಃ ಪುರ ಗತಾ ನಾರ್ಯೋ ನಂದಂತು ಸು ಸಮಾಹಿತಾಃ ॥೧೨॥ ತಸ್ಯ ಸಾಧ್ವಿತ್ಯಮನ್ಯಂತ ನಾಗರಾ ವಿವಿಧಾ ಜನಾಃ ॥ ಭರತಸ್ಯ ವಚ ಶ್ಶ್ರುತ್ವಾ ರಾಮಂ ಪ್ರತ್ಯನುಯಾಚತಃ ॥ ೧೩ ॥ ತಮೇವಂ ದುಃಖಿತಂ ಪ್ರೇಕ್ಷ್ಯ ವಿಲಪಂತಂ ಯಶಸ್ವಿನಂ ॥ ರಾಮಃ ಕೃತಾತ್ಮಾ ಭರತಂ ಸಮಾಶ್ವಾಸಯ ದಾತ್ಮವಾನ್ ॥೧೪॥ (೧) ನಾಽತ್ಮನಃ

ತವ - ನಿನ್ನ, ಅನುಯಾನೇ - ಅನುಸರಿಸಿ ಪ್ರಯಾಣ ಕಾಲದಲ್ಲಿ, ಮತ್ತಾಃ - ಮದವೇರಿದ, ಕುಂಜರಾಃ - ಆನೆಗಳು, ನರ್ದಂತು-ಗರ್ಜಿಸಲಿ, ಅಂತಃಪುರಗತಾಃ - ಅಂತಃಪುರವನ್ನು ಹೊಂದಿದ, ನಾರ್ಯಃ- ಸ್ತ್ರೀಯರು, ಸುಸಮಾಹಿತಾಃ - ಸಮಾಧಾನಚಿತ್ತರಾಗಿ, ನಂದಂತು - ಸಂತೋಷಿಸಲಿ. ॥ ೧೨ ॥ ರಾಮಂಪ್ರತಿ - ಶ್ರೀರಾಮನನ್ನು ಕುರಿತು, ಅನುಯಾಚತಃ - ಅನುಸರಿಸಿ ಪ್ರಾರ್ಥಿಸುತ್ತಿರುವ, ತಸ್ಯ ಭರತಸ್ಯ - ಆ ಭರತನ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ನಾಗರಾಃ - ಪಟ್ಟಣವಾಸಿಗಳಾದ, ವಿವಿಧಾಃ - ನಾನಾಜಾತೀಯರಾದ, ಜನಾಃ - ಜನರು, ಸಾಧ್ವಿತಿ - ಒಳ್ಳೆಯದೆಂದು, ಅಮನ್ಯಂತ - ತಿಳಿದರು. ॥ ೧೩ ॥ ಏವಂ - ಈಪರಿಯಾಗಿ, ವಿಲಪಂತಂ - ಪ್ರಲಪಿಸುತ್ತಿರುವ, ಯಶಸ್ವಿನಂ - ಕೀರ್ತಿವಂತನಾದ, ತಂಭರತಂ - ಆ ಭರತನನ್ನು, ದುಃಖಿತಂ - ವ್ಯಸನಗೊಂಡವನನ್ನಾಗಿ, ಪ್ರೇಕ್ಷ್ಯ- ಕಂಡು, ಕೃತಾತ್ಮಾ - ಸುಶಿಕ್ಷಿತಮನವುಳ್ಳ, ರಾಮಃ - ಶ್ರೀರಾಮನು, ಆತ್ಮವಾನ್ - ಧೈರ್ಯವಂತನಾಗಿ, ಸಮಾಶ್ವಾಸಯತ್ - ಸಮಾಧಾನಗೊಳಿಸಿದನು. ॥ ೧೪ ॥ ಆತ್ಮನಃ - ಪುರುಷನಿಗೆ, ಕಾಮಕಾರಃ - ಸ್ವೇಚ್ಛೆಯಾಗಿರುವಿಕೆಯು, ನಾಸ್ತಿ - ಇಲ್ಲವು, ಅಯಂಪುರುಷಃ-ಈ ಪುರುಷನು, ಅನೀಶ್ವರಃ -

---

ತಪಿಸುವಂತೆ ಮಾಡುವುದನ್ನು" ನೋಡಬೇಕೆಂಬ ಕೋರಿಕೆಯುಳ್ಳವರಾಗಿದ್ದಾರೆ. ಆದುದರಿಂದ ಅವರೆಲ್ಲರ ಮನೋಭಿಷ್ಟವನ್ನು ನೆರವೇರಿಸದಿರಬೇಡ. ಅಯ್ಯಾ ಕಕುತ್ಸ್ಥವಂಶೋದ್ಭವನೆ ! ಮದ್ದಾನೆಗಳೆಲ್ಲವೂ ನಿನ್ನನ್ನು ಹಿಂಬಾಲಿಸಿ ಘೀಂಕಾರವನ್ನುಮಾಡಲಿ. ನೀನು ರಾಜ್ಯ ಪರಿಪಾಲನೆಮಾಡುವುದನ್ನು ನೋಡಿ, ಅಂತಃಪುರ ಸ್ತ್ರೀಯರೆಲ್ಲರೂ ಪರಮಾನಂದವನ್ನು ಹೊಂದಲಿ. ನೀನು ಸಾಕೇತಸಾಮ್ರಾಜ್ಯದಲ್ಲಿ ಪಟ್ಟಾಭಿಷಿಕ್ತನಾಗು"॥೧೧-೧೨॥ ಈರೀತಿಯಾಗಿ ಅಣ್ಣನಾದ ಶ್ರೀರಾಮನನ್ನು ಅನೇಕವಿಧಗಳಿಂದ ಪ್ರಾರ್ಥಿಸುತ್ತಿರುವ ಭರತಕುಮಾರನ ಮಾತುಗಳನ್ನು ಕೇಳಿ, ಅಲ್ಲಿದ್ದ ಪುರಜನ, ಪರಿಜನವೆಲ್ಲವೂ ಬಹುವಿಧವಾಗಿ ಶ್ಲಾಘಿಸಿದವರಾದರು. ಆ ಸಮಯದಲ್ಲಿ ಮಹಾ ಬುದ್ಧಿವಂತನೂ, ಧೈರ್ಯಶಾಲಿಯೂ ಆದ ಶ್ರೀರಾಮನು ಅನೇಕವಿಧವಾಗಿ ಪ್ರಾರ್ಥಿಸುತ್ತಿರುವವನೂ, ಬಹಳವಾದ ವ್ಯಸನದಿಂದ ಪ್ರಲಪಿಸುತ್ತಿರುವವನೂ ಆದ ಭರತಕುಮಾರನನ್ನು ನೋಡಿ ಬಹುವಿಧಗಳಿಂದ ಸಮಾಧಾನಗೊಳಿಸುತ್ತ ಹೀಗೆಂದನು. " ಅಯ್ಯಾ ಭರತನೆ ! ಯಾವ ಕಾರ್ಯದಲ್ಲಿಯೇ ಆಗಲಿ ಪುರುಷನು ಸ್ವತಂತ್ರನಲ್ಲ.

ಟಿ. (೧) ಈ ಶ್ಲೋಕದ ತಾತ್ಪರ್ಯವನ್ನು ಹೊರಸೂಸುವ ಶ್ಲೋಕವನ್ನೇ ಗೀತಾಚಾರ್ಯನೂ ಹೇಳಿದ್ದಾನೆ.

" ಈಶ್ವರಸ್ಸರ್ವಭೂತಾನಾಂ ಹೃದ್ದೇಶೇಽರ್ಜುನ! ತಿಷ್ಠತಿ ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥ "

ಕಾಮಕಾರೋಽಸ್ತಿ ಪುರುಷೋಽಯಮನೀಶ್ವರಃ ‖ ಇತಶ್ಚೇತರತಶ್ಚೈನಂ ಕೃತಾಂತಃ ಪರಿಕರ್ಷತಿ ‖ ೧೫ ‖ ಸರ್ವೇ ಕ್ಷಯಾಂತಾ ನಿಚಯಾಃ ಪತನಾಂತಾಸ್ಸಮುಚ್ಛ್ರಯಾಃ ‖ ಸಂಯೋಗಾ ವಿಪ್ರಯೋಗಾಂತಾ ಮರಣಾಂತಂ ಚ ಜೀವಿತಂ ‖ ೧೬ ‖ ಯಥಾ ಫಲಾನಾಂ ಪಕ್ವಾನಾಂ ನಾನ್ಯತ್ರ ಪತನಾದ್ಭಯಂ ‖ ಏವಂ ನರಸ್ಯ ಜಾತಸ್ಯ ನಾನ್ಯತ್ರ ಮರಣಾದ್ಭಯಂ ‖ ೧೭ ‖ ಯಥಾಽಗಾರಂ ದೃಢಸ್ಥೂಣಂ ಜೀರ್ಣಂ ಭೂತ್ವಾಽವಸೀದತಿ ‖ ತಥೈವ ಸೀದಂತಿ ನರಾ ಜರಾ

ಅಸ್ವತಂತ್ರನು, ಕೃತಾಂತಃ - ದೈವವು, ಏನಂ - ಈ ಪುರುಷನನ್ನು, ಇತಶ್ಚ - ಈ ದೇಶದಿಂದ ಅನ್ಯದೇಶಕ್ಕೂ, ಇತರತಶ್ಚ - ಆ ದೇಶದಿಂದೀದೇಶಕ್ಕೂ, ಪರಿಕರ್ಷತಿ - ಎಳೆಯುತ್ತಾನೆ. ‖ ೧೫ ‖ ಸರ್ವೇ - ಸಮಸ್ತವಾದ, ನಿಚಯಾಃ - ಧನಸಂಚಯಗಳು, ಕ್ಷಯಾಂತಾಃ - ವ್ಯಯವೇ ಅಂತ್ಯವಾಗುಳ್ಳದು, ಸಮುಚ್ಛ್ರಯಾಃ - ಅಭಿವೃದ್ಧಿಗಳು, ಪತನಾಂತಾಃ - ಬೀಳುವಿಕೆಯೇ ತುದಿಯಾಗುಳ್ಳದು, ಸಂಯೋಗಾಃ - ಪುತ್ರ, ಮಿತ್ರ, ಕಳತ್ರಾದಿ ಸಂಬಂಧಗಳು, ವಿಪ್ರಯೋಗಾಂತಾಃ - ವಿಯೋಗವೇ ಅಂತ್ಯವಾಗುಳ್ಳದು, ಜೀವಿತಂ - ಬದುಕುವಿಕೆಯು, ಮರಣಾಂತಂ - ಮರಣವೇ ತುದಿಯಾಗುಳ್ಳದ್ದು. ‖ ೧೬ ‖ ಯಥಾ - ಹೇಗೆ, ಪಕ್ವಾನಾಂ - ಮಾಗಿದ, ಫಲಾನಾಂ - ಹಣ್ಣುಗಳಿಗೆ, ಪತನಾದನ್ಯತ್ರ - ಬೀಳುವುದಕ್ಕಿಂತಲೂ ಮತ್ತೊಂದರಲ್ಲಿ, ಭಯಂ - ಭೀತಿಯು, ನಾಸ್ತಿ - ಇಲ್ಲವೋ, ಏವಂ - ಹೀಗೆಯೇ, ಜಾತಸ್ಯ - ಹುಟ್ಟಿದ, ನರಸ್ಯ - ಮನುಷ್ಯನಿಗೆ, ಮರಣಾದನ್ಯತ್ರ - ಮರಣಕ್ಕಿಂತಲೂ ಬೇರೆಯದರಲ್ಲಿ, ಭಯಂ - ಭೀತಿಯು, ನ - ಇಲ್ಲವು. ‖ ೧೭ ‖ ಯಥಾ - ಹೇಗೆ, ದೃಢಸ್ಥೂಣಂ - ಘಟ್ಟಿಯಾದ ತೊಲೆಗಳುಳ್ಳ, ಅಗಾರಂ - ಮನೆಯು, ಜೀರ್ಣಂಭೂತ್ವಾ - ಶಿಥಿಲವಾಗಿ, ಅವಸೀದತಿ -

ಎಲ್ಲ ವಿಷಯಗಳಲ್ಲಿಯೂ ಪುರುಷನು ದೈವಕ್ಕೆ ಅಧೀನನಾಗಿಯೇ ಇರುತ್ತಾನೆ. ದೈವವು ಪುರುಷನನ್ನು ಈ ಕಡೆಯಿಂದಾಕಡೆಗೆ ಆಕಡೆಯಿಂದೀಕಡೆಗೆ ತಿರುಗಿಸುತ್ತಿರುತ್ತದೆಯೆಂದು ತಿಳಿವವನಾಗು. ಅಲ್ಲದೆ ಕೇಳಯ್ಯಾ ಭರತನೆ! “ ಧನವನ್ನು ಎಷ್ಟು ಹೆಚ್ಚಾಗಿ ಕೂಡಿಸಿಟ್ಟರೂ, ಕೊನೆಗೆ ಅದು ನಶಿಸುತ್ತದೆಯೇ ಹೊರತು ಸ್ಥಿರವಾಗಿರುವುದಿಲ್ಲ. ಎಷ್ಟು ದೊಡ್ಡವದವಿಯನ್ನು ಹೊಂದಿದರೂ, ಎಂದಾದರೊಂದುದಿನ ಕನಿಷ್ಠಪದವಿಗೆ ಬಂದೇಬರಬೇಕಾಗುತ್ತದೆ” ಎಂಬುದನ್ನು ತಿಳಿವವನಾಗು. ಭಾರ್ಯಾ ಪುತ್ರಾದಿಗಳೊಡನೆ ಎಷ್ಟೇ ನಿಕಟಸಂಬಂಧವನ್ನು ಬಳೆಯಿಸಿದರೂ, ಕೆಲಕಾಲದ ಮೇಲೆ ವಿಯೋಗವಾದೀತೇ ಹೊರತು, ಆ ಸಂಬಂಧವು ಎಂದಿಗೂ ಶಾಶ್ವತವಾಗಿರುವುದಿಲ್ಲ. ಎಷ್ಟು ದಿನಗಳು ಬದುಕಿದ್ದರೂ, ಎಂದಾದರೊಂದು ದಿನ ದೈವಗತಿಯನ್ನು ಹೊಂದಬೇಕೇ ಹೊರತು ಶಾಶ್ವತವಾಗಿರಲಾಗುವುದಿಲ್ಲ. ‖೧೪-೧೬‖ ಚೆನ್ನಾಗಿ ಮಾಗಿದ ಫಲವು ಕೆಲದಿನಗಳ ಮೇಲೆ ಗಿಡದಿಂದ ಕೆಳಕ್ಕೆ ಬೀಳಬೇಕೇ ಹೊರತು ಅಲ್ಲಿಯೇ ತಗುಲಿಕೊಂಡಿರುವುದಿಲ್ಲವಷ್ಟೆ? ಅಂತೆಯೇ ಹುಟ್ಟಿದ ದಿನ ಮೊದಲ್ಗೊಂಡು ಲಾಲನ ಪೋಷಣಾದಿಗಳಿಂದ ವೃದ್ಧಿಹೊಂದಿಸಿದ ಈ ದೇಹವು ಎಂದಾದರೊಂದು ದಿನ ಜೀವಹೀನವಾಗಿ ಕೆಳಕ್ಕೆ ಬೀಳಲೇ ಬೀಳುತ್ತದೆ. ಆದುದರಿಂದ ಫಲವು ಕೆಳಕ್ಕೆಬೀಳುವುದಕ್ಕಿಂತಲೂ, ಶರೀರವು

ಮೃತ್ಯುವಶಂಗತಾಃ ॥೧೮॥ ಅತ್ಯೇತಿ ರಜನೀ ಯಾತು ಸಾ ನಪ್ರತಿನಿವ
ರ್ತತೇ ॥ ಯಾತ್ಯೇವ ಯಮುನಾ ಪೂರ್ಣಾ ಸಮುದ್ರ ಮುದಕಾಕುಲಂ॥೧೯॥
ಅಹೋರಾತ್ರಾಣಿ ಗಚ್ಛಂತಿ ಸರ್ವೇಷಾಂ ಪ್ರಾಣಿನಾ ಮಿಹ ॥ ಆಯೂಂಷಿ
ಕ್ಷಪಯಂತ್ಯಾಶು ಗ್ರೀಷ್ಮೇ ಜಲಮಿವಾಂಶವಃ ॥೨೦॥ ಆತ್ಮಾನ ಮನುಶೋಚ
ತ್ವಂ ಕಿಮನ್ಯ ಮನುಶೋಚಸಿ? ॥ ಆಯು ಸ್ತೇ ಹೀಯತೇ ಯಸ್ಯ ಸ್ಥಿತಸ್ಯ ಚ
ಗತಸ್ಯಚ ॥೨೧॥ ಸಹೈವ ಮೃತ್ಯುರ್ವ್ರಜತಿ ಸಹ ಮೃತ್ಯು ರ್ನಿಷೀದತಿ ॥

ನಶಿಸಿಹೋಗುತ್ತದೆಯೋ, ತಥೈವ - ಹಾಗೆಯೇ, ನರಾಃ - ಮನುಷ್ಯರು, ಜರಾಮೃತ್ಯುವಶಂಗತಾಃ - ಛಾರ್ಧಿಕ್ಯಾವಸ್ಥೆಯಿಂದ ಮೃತ್ಯುವಿಗೆ ಸ್ವಾಧೀನರಾಗಿ, ಸೀದಂತಿ - ನಶಿಸಿಹೋಗುತ್ತಾರೆ. ॥೧೮॥ ಯಾರಜನೀತು - ಯಾವ ರಾತ್ರಿಯಾದರೆ, ಅತ್ಯೇತಿ - ಕಳೆದುಹೋಗುತ್ತದೆಯೋ, ಸಾ-ಆ ರಾತ್ರಿಯು, ನಪ್ರತಿನಿವರ್ತತೇ - ಹಿಂತಿರುಗುವದಿಲ್ಲ, ಯಮುನಾ - ಯಮುನಾನದಿಯು, ಪೂರ್ಣಾ - ಸಂಪೂರ್ಣವಾದರೂ, ಉದಕಾಕುಲಂ - ನೀರಿನಿಂದ ಸಂಪೂರ್ಣವಾದ, ಸಮುದ್ರಂ - ಕಡಲನ್ನು ಕುರಿತು, ಯಾತ್ಯೇವ - ಹೋಗಿಯೇ ಹೋಗುತ್ತದೆ. ॥೧೯॥ ಸರ್ವೇಷಾಂ - ಸಮಸ್ತರಾದ, ಪ್ರಾಣಿನಾಂ- ಜೀವಿಗಳಿಗೆ, ಇಹ - ಈ ಲೋಕದಲ್ಲಿ, ಅಹೋರಾತ್ರಾಣಿ - ರಾತ್ರಿ ಹಗಲುಗಳು, ಗಚ್ಛಂತಿ - ಕಳೆದು ಹೋಗುತ್ತ, ಆಯೂಂಷಿ - ಆಯುಸ್ಸುಗಳನ್ನು, ಆಶು - ಶೀಘ್ರವಾಗಿ, ಗ್ರೀಷ್ಮೇ - ಗ್ರೀಷ್ಮಕಾಲದಲ್ಲಿ, ಜಲಂ - ಉದಕವನ್ನು, ಅಂಶವಇವ - ಕಿರಣಗಳಂತೆ, ಕ್ಷಪಯಂತಿ - ನಾಶಗೊಳಿಸುತ್ತವೆ. ॥೨೦॥ ತ್ವಂ - ನೀನು, ಆತ್ಮಾನಂ - ನಿನ್ನನ್ನು ಕುರಿತು, ಅನುಶೋಚ - ದುಃಖಿಸು, ಅನ್ಯಂ - ಮತ್ತೊಬ್ಬನನ್ನು ಕುರಿತು, ಕಿಮನುಶೋಚಸಿ - ದುಃಖಿಸುವೆಯೇಕೆ? ಸ್ಥಿತಸ್ಯ - ನಿಂತಿರುವ, ಗತಸ್ಯಚ - ಹೋಗುತ್ತಿರುವ, ಯಸ್ಯ - ಯಾವ, ತೇ - ನಿನ್ನ, ಆಯುಃ - ಆಯುಸ್ಸು, ಹೀಯತೇ - ಕ್ಷಯಿಸಿಹೋಗುತ್ತದೆಯೋ. ॥೨೧॥ ಮೃತ್ಯುಃ - ಮರಣಾಭಿಮಾನಿ ದೇವತೆಯು,

---

ಜೀವಹೀನವಾಗಿ ಕೆಳಕ್ಕೆಬೀಳುವುದಕ್ಕಿಂತಲೂ ಬೇರೆಯಾದ ಭಯವೇ ಇರುವುದಿಲ್ಲ. ಅಲ್ಲದೆ ಎಂತಹ ದೃಢವಾದ ಸ್ತಂಭಗಳುಳ್ಳದಾದರೂ, ಎಷ್ಟೇ ಬಲವಾದ ದೂಲಗಳುಳ್ಳದಾದರೂ ಮನೆಯು ಕೆಲವು ದಿನಗಳ ಮೇಲೆ ಜೀರ್ಣವಾಗಿ ಭೂಮಿಗಿಳಿಯುವಂತೆ, ಮಾನವರು ಎಷ್ಟೇ ದೃಢಶರೀರಿಗಳಾದರೂ ಕೆಲದಿನಗಳ ಮೇಲೆ ಮರಣವನ್ನು ಹೊಂದಿಯೇ ಹೊಂದುತ್ತಾರೆಯೆಂಬುದರಲ್ಲಿ ಸಂಶಯವೇ ಇರುವುದಿಲ್ಲ. ಆದಕಾರಣ ನಾವು ಸ್ಥಿರವಾಗಿರುತ್ತೇವೆಂದು ಎಂದಿಗೂ ತಿಳಿಯಕೂಡದು. ॥೧೭-೧೮॥ ಆಯ್ಯಾ ಭರತಕುಮಾರನೆ ! ನಿನ್ನೆ ಕಳೆದುಹೋದ ರಾತ್ರಿಯು ಎಂದಿಗೂ ಹಿಂತಿರುಗಿ ಬರುವುದಿಲ್ಲ. ಸಮುದ್ರವನ್ನು ಸೇರಿದ ಯಮುನಾನದೀ ಪ್ರವಾಹವು ಎಂದಿಗೇ ಆಗಲಿ ಹಿಂದಕ್ಕೆ ಪ್ರವಹಿಸುವುದಿಲ್ಲ. ಕಳೆದುಹೋದ ರಾತ್ರಿ ಹಗಲುಗಳು, ಗ್ರೀಷ್ಮಕಾಲದಲ್ಲಿನ ಸೂರ್ಯಕಿರಣಗಳು ಭೂಮಿಯಲ್ಲಿರುವ ನೀರೆಲ್ಲವನ್ನೂ ಅಪಹರಿಸುವಂತೆ ಮಾನವರ ಪ್ರಾಣಗಳನ್ನಪಹರಿಸಿಕೊಂಡು ಹೋಗುತ್ತಿವೆ. ಆದುದರಿಂದ ಇತರರನ್ನು ಕುರಿತು ವ್ಯಸನಪಡುವುದರಿಂದೇನು ತಾನೆ ಫಲವುಂಟು? ನಿನ್ನನ್ನು ಕುರಿತು ನೀನೇ ವ್ಯಸನಪಡು. ನೀನು ಎದ್ದಾಗಲೂ, ಬಗ್ಗಿದಾಗಲೂ, ನಡೆದಾಗಲೂ, ನಿನ್ನ ಆಯುಸ್ಸು ನಶಿಸಿಹೋಗುತ್ತ

ಗತ್ವಾ ಸುದೀರ್ಘಮಧ್ವಾನಂ ಸಹಮೃತ್ಯುರ್ನಿವರ್ತತೇ ॥ ೨೨ ॥ ಗಾತ್ರೇಷು ವಳಯಃ ಪ್ರಾಪ್ತಾ ಶ್ವೇತಾಶ್ಚೈವ ಶಿರೋರುಹಾಃ ॥ ಜರಯಾ ಪುರುಷೋ ಜೀರ್ಣಃ ಕಿಂ ಹಿ ಕೃತ್ವಾ ಪ್ರಭಾವಯೇತ್ ॥ ೨೩ ॥ ನಂದಂತ್ಯುದಿತ ಆದಿತ್ಯೇ ನಂದಂತ್ಯಸ್ತಮಿತೇ ರವೌ ॥ ಆತ್ಮನೋ ನಾವಬುಧ್ಯಂತೇ ಮನುಷ್ಯಾ ಜೀವಿತ ಕ್ಷಯಂ ॥ ೨೪ ॥ ಹೃಷ್ಯಂ ತ್ಯೃತುಮುಖಂ ದೃಷ್ಟ್ವಾ ನವಂ ನವ ಮಿಹಾಗತಂ ॥ ಋತೂನಾಂ ಪರಿವರ್ತೇನ ಪ್ರಾಣಿನಾಂ ಪ್ರಾಣಸಂಕ್ಷಯಃ ॥ ೨೫ ॥ ಯಥಾ

ಸಹೈವ - ಒಡನೆಯೇ, ವ್ರಜತಿ - ಹೋಗುತ್ತದೆ, ಮೃತ್ಯುಃ - ಮೃತ್ಯುದೇವತೆಯು, ಸಹನಿಷೀದತಿ - ಜೊತೆಯಲ್ಲಿಯೇ ಕುಳಿತುಕೊಳ್ಳುತ್ತದೆ, ಸುದೀರ್ಘಂ - ಬಹಳ ದೀರ್ಘವಾದ, ಅಧ್ವಾನಂ - ಮಾರ್ಗದಲ್ಲಿ, ಗತ್ವಾ-ಹೋಗಿ, ಸಹಮೃತ್ಯುಃ - ಮೃತ್ಯುವಿನಿಂದೊಡಗೂಡಿದವನಾಗಿಯೇ, ನಿವರ್ತತೇ - ಹಿಂತಿರುಗುತ್ತಾನೆ. ॥ ೨೨ ॥ ಗಾತ್ರೇಷು - ಅವಯವಗಳಲ್ಲಿ, ವಳಯಃ - ಮಡತೆಗಳು, ಪ್ರಾಪ್ತಾಃ - ಪ್ರಾಪ್ತವಾಗಿರುತ್ತವೆ, ಶಿರೋರುಹಾಃ - ಕೇಶಗಳು, ಶ್ವೇತಾಶ್ಚ - ಬೆಳ್ಳಗೂ, ಭವಂತಿ ಆಗುತ್ತವೆ, ಪುರುಷಃ - ಪುರುಷನು, ಜರಯಾ - ವಾರ್ಧಿಕ್ಯಾವಸ್ಥೆಯಿಂದ, ಜೀರ್ಣಃ - ಕೃಶನಾದವನಾಗಿ, ಕಿಂಕೃತ್ವಾ - ಏನುತಾನೇ ಮಾಡಿ, ಪ್ರಭಾವಯೇತ್ - ತನ್ನನ್ನು ಪ್ರಭುವನ್ನಾಗಿ ಮಾಡಿಯಾನು.॥೨೩॥ ಆದಿತ್ಯೇ - ಸೂರ್ಯನು, ಉದಿತೇ - ಉದಯಿಸಲು, ಮನುಷ್ಯಾಃ - ಮನುಷ್ಯರು, ನಂದಂತಿ - ಸಂತೋಷಗೊಳ್ಳುತ್ತಾರೆ, ರವೌ - ಸೂರ್ಯನು, ಅಸ್ತಮಿತೇ - ಅಸ್ತಮಿಸಲು, ನಂದಂತಿ - ಸಂತೋಷಿಸುತ್ತಾರೆ, ಆತ್ಮನಃ - ತನ್ನ, ಜೀವಿತಕ್ಷಯಂ - ಪ್ರಾಣನಾಶವನ್ನು, ನಾವಬುಧ್ಯಂತೇ - ತಿಳಿಯುವುದಿಲ್ಲ. ॥ ೨೪ ॥ ಇಹ - ಈ ಲೋಕದಲ್ಲಿ, ನವಂನವಂ - ಹೊಸಹೊಸದಾಗಿ, ಆಗತಂ - ಬಂದಿರುವ, ಋತುಮುಖಂ - ವಸಂತಾದಿ ಋತುಗಳ ಆರಂಭವನ್ನು, ದೃಷ್ಟ್ವಾ - ಕಂಡು, ಹೃಷ್ಯಂತಿ - ಸಂತೋಷಗೊಳ್ಳುತ್ತಾರೆ, ಋತೂನಾಂ - ಋತುಗಳ, ಪರಿವರ್ತೇನ - ಸುತ್ತುವಿಕೆಯಿಂದ, ಪ್ರಾಣಿನಾಂ - ಪ್ರಾಣಿಗಳಿಗೆ, ಪ್ರಾಣಸಂಕ್ಷಯಃ - ಪ್ರಾಣನಾಶವು, ಭವತಿ - ಆಗುತ್ತದೆ. ॥ ೨೫ ॥ ಯಥಾ - ಹೇಗೆ,

ರುವುದು. ಅಲ್ಲದೆ, ಮಾನವರು ನಡೆಯುವ ಸಮಯದಲ್ಲಿ ಮೃತ್ಯುದೇವತೆಯೂ ಸಹ ಅವರ ಹಿಂದೆಯೇ ನಡೆಯುತ್ತಿರುತ್ತದೆ. ಮಾನವರು ಕುಳಿತಿರುವ ಸಮಯದಲ್ಲಿ ಮೃತ್ಯುದೇವತೆಯೂ ಕೂಡ ಕುಳಿತುಕೊಂಡೇ ಇರುತ್ತದೆ. ಮಾನವರು ಎಷ್ಟುದೂರ ಹೋಗಿಬಂದರೂ, ಮೃತ್ಯುವೂ ಅವರೊಡನೆಯೇ ಹೋಗಿ ಬರುತ್ತದೆ. ಆದುದರಿಂದ ನಾವು ಸ್ಥಿರವಾಗಿರುತ್ತೇವೆಂದು ಎಣಿಸಕೂಡದು. ತಮ್ಮಾ! ನಿನ್ನ ದೇಹದಲ್ಲಿ ಮಡತೆಗಳು ತಲೆದೋರುತ್ತಿವೆ. ನಿನ್ನ ರೋಮರಾಜಿಗಳು ನೆರೆಯುಹತ್ತಿವೆ. ಶರೀರದಲ್ಲಿ ಮುದಿತನವು ಪ್ರವೇಶಿಸಿ ಬಾಧಿಸತೊಡಗುತ್ತಿದೆ. ॥೧೯-೨೩॥ ಆದುದರಿಂದ ನೀನು ಸಂಪೂರ್ಣ ವೃದ್ಧನಾದ ಮೇಲೆ ಏನುತಾನೆ ಮಾಡಬಲ್ಲೆ ? ಆದುದರಿಂದ ನೀನೀಗಲೇ ಬ್ರಹ್ಮವಿಚಾರವನ್ನು ಮಾಡತಕ್ಕುದೆಂಬ ಸಂಗತಿಯನ್ನು ನೀನು ಬಲ್ಲೆಯಷ್ಟೆ ? ಅಲ್ಲದೆ ಲೋಕದಲ್ಲಿ ಮಾನವರೆಲ್ಲರೂ ಸೂರ್ಯೋದಯವಾಗುತ್ತಲೂ, ಸೂರ್ಯನಸ್ತಮಿಸುತ್ತಲೂ ಸಂತೋಷವನ್ನು ಹೊಂದುವರಲ್ಲದೆ, ತಮ್ಮ ಆಯುಸ್ಸು ನಶಿಸಿ ಹೋಗುತ್ತಿದೆಯಲ್ಲ ಎಂದು ಯೋಚಿಸುವುದೇ ಇಲ್ಲ. ಆಯ್ಯಾ ಭರತನೆ! ಈ ಲೋಕದಲ್ಲಿ

ಕಾಷ್ಠಂಚ ಕಾಷ್ಠಂಚ ಸಮೇಯಾತಾಂ ಮಹಾರ್ಣವೇ ॥ ಸಮೇತ್ಯಚ ವ್ಯಪೇಯಾತಾಂ ಕಾಲಮಾಸಾದ್ಯ ಕಂಚನ ॥ ೨೬ ॥ ಏವಂ ಭಾರ್ಯಾಶ್ಚ ಪುತ್ರಾಶ್ಚ ಜ್ಞಾತಯಶ್ಚ ಧನಾನಿಚ ॥ ಸಮೇತ್ಯ ವ್ಯವಧಾವಂತಿ ಧ್ರುವೋಹ್ಯೇಷಾಂ ವಿನಾಭವಃ ॥ ೨೭ ॥ ನಾತ್ರ ಕಶ್ಚಿದ್ಯಥಾ ಭಾವಂ ಪ್ರಾಣೀ ಸಮಭಿವರ್ತತೇ ॥ ತೇನ ತಸ್ಮಿನ್ನ ಸಾಮರ್ಥ್ಯಂ ಪ್ರೇತಸ್ಯಾ ಸ್ತ್ಯನುಶೋಚತಃ ॥ ೨೮ ॥ ಯಥಾಹಿ ಸಾರ್ಥಂ ಗಚ್ಛಂತಂ ಬ್ರೂಯಾ ತ್ಕಶ್ಚಿತ್ಪಥಿ ಸ್ಥಿತಃ ॥ ಅಹಮಪ್ಯಾ ಗಮಿಷ್ಯಾಮಿ

ಮಹಾರ್ಣವೇ - ದೊಡ್ಡ ಕಡಲಿನಲ್ಲಿ, ಕಾಷ್ಠಂಚಕಾಷ್ಠಂಚ - ಈ ಕಟ್ಟಿಗೆಯೂ, ಆ ಕಟ್ಟಿಗೆಯೂ ಕೂಡ, ಸಮೇಯಾತಾಂ - ಸೇರುತ್ತವೋ, ಸಮೇತ್ಯಚ - ಸೇರಿದರೂ, ಕಂಚನಕಾಲಂ - ಸ್ವಲ್ಪಕಾಲವನ್ನು, ಆಸಾದ್ಯ - ಹೊಂದಿ, ವ್ಯಪೇಯಾತಾಂ - ತಪ್ಪಿಹೋಗುತ್ತವೋ. ॥ ೨೬ ॥ ಏವಂ - ಈ ಪರಿಯಾಗಿ, ಭಾರ್ಯಾಶ್ಚ - ಹೆಂಡತಿಯರು, ಪುತ್ರಾಶ್ಚ - ಮಕ್ಕಳೂ, ಜ್ಞಾತಯಶ್ಚ - ಜ್ಞಾತಿಗಳೂ, ಧನಾನಿಚ - ದ್ರವ್ಯವೂ, ಸಮೇತ್ಯ - ಒಂದುಕಡೆ ಸೇರಿ, ವ್ಯವಧಾವಂತಿ - ದೂರವಾಗುತ್ತವೆ, ಏಷಾಂ - ಈ ಭಾರ್ಯಾ ಪುತ್ರಾದಿಗಳಿಗೆ, ವಿನಾಭಾವಃ - ಬೇರೆಬೇರೆ ಸ್ಥಿತಿಯು, ಧ್ರುವೋಹಿ - ಶಾಶ್ವತವಷ್ಟೆ. ॥ ೨೭ ॥ ಕಶ್ಚಿತ್ಪ್ರಾಣಿಃ - ಯಾವ ಪ್ರಾಣಿಯೂ ಕೂಡ, ಅತ್ರ - ಈ ಲೋಕದಲ್ಲಿ, ಯಥಾಭಾವಂ- ಇದ್ದಂತೆ, ನಸಮಭಿವರ್ತತೇ - ಇರುವದಿಲ್ಲ, ತೇನ - ಆ ಕಾರಣದಿಂದ, ಪ್ರೇತಸ್ಯ - ಸತ್ತವನ ವಿಷಯ ದಲ್ಲಿ, ಅನುಶೋಚತಃ - ಅನುಸರಿಸಿ ದುಃಖಿಸುತ್ತಿರುವವನಿಗೆ, ತಸ್ಮಿನ್ - ಆ ಮರಣನಿವಾರಣದಲ್ಲಿ, ಸಾಮರ್ಥ್ಯಂ - ಶಕ್ತಿಯು, ನ - ಇಲ್ಲವು. ॥ ೨೮ ॥ ಗಚ್ಛಂತಂ - ಹೋಗುತ್ತಿರುವ, ಸಾರ್ಥಂ - ಗುಂಪನ್ನು ಕುರಿತು, ಕಶ್ಚಿತ್ - ಒಬ್ಬನು, ಪಥಿ - ಮಾರ್ಗದಲ್ಲಿ, ಸ್ಥಿತಃ - ಇರುತ್ತ, ಭವತಾಂ - ನಿಮ್ಮ, ಪೃಷ್ಠತಃ - ಹಿಂದೆ, ಆಗಮಿಷ್ಯಾಮೀತಿ - ಬರುವೆನೆಂದು, ಬ್ರೂಯಾತ್ - ಹೇಳುತ್ತಾನೋ, ಏವಂ - ಈಪರಿಯಾಗಿ, ಪೂರ್ವೈಃ - ಪೂರ್ವೀಕರಿಂದ, ಗತಃ - ಹೊಂದಲ್ಪಟ್ಟ, ಪಿತೃಪೈತಾಮಹಃ - ಪಿತೃ ಪಿತಾಮಹರ ಸಂಬಂಧವಾದ, ಮಾರ್ಗಃ - ನಡತೆಯು, ಧ್ರುವಃ - ಪುತ್ರಾದಿಗಳಿಂದ ಹೋಗ

ಮಾನವರೆಲ್ಲರೂ ಹೊಸಹೊಸ ಋತುಗಳನ್ನು ನೋಡಿ ಸಂತೋಷವನ್ನು ಹೊಂದುತ್ತಿರುವರಲ್ಲದೆ, ಋತುಗಳು ಕಳೆದುಹೋಗುವುದರಿಂದ ಆಯುಸ್ಸು ತಗ್ಗಿಹೋಗುವುದೆಂಬುದನ್ನೆಂದಿಗೂ ಲೆಕ್ಕಿಸುವುದೇ ಇಲ್ಲವು. ಒಂದೊಂದು ಋತುವು ಕಳೆದಾಗಲೂ ದುಃಖವನ್ನು ಪಡದೆ ಸಂತೋಷವನ್ನು ಪಡೆಯುವುದು ಎಷ್ಟರ ಅವಿವೇಕವೆನಿಸುತ್ತದೆ. ಅಯ್ಯಾ, ಭರತನೆ! ಮಹಾ ಸಮುದ್ರದಲ್ಲಿ ಎರಡು ಕಟ್ಟಿಗೆಗಳೊಂದಾಗಿ ಸೇರಿ ಹೊಡೆದುಕೊಂಡು ಹೋಗುತ್ತ, ಪುನಃ ಕಾಲಕರ್ಮ ಸಂಯೋಗದಿಂದ ಅವೆರಡೂ ಭಿನ್ನಗಳಾಗಿ ಬೇರೆಬೇರೆ ಮಾರ್ಗಗಳಲ್ಲಿ ಹೋಗುವಂತೆ, ಭಾರ್ಯಾಪುತ್ರಾದಿಗಳು, ಜ್ಞಾತಿಗಳು, ಐಶ್ವರ್ಯವೂ, ಒಂದಾನೊಂದುಕಾಲದಲ್ಲಿ ಪ್ರಾಪ್ತವಾದರೂ, ಇನ್ನೊಂದುಕಾಲದಲ್ಲಿ ವಿಯೋಗವನ್ನುಹೊಂದಿಸುತ್ತವೆ. ಆದುದರಿಂದ ಭಾರ್ಯಾಪುತ್ರಾದಿಗಳ ಸಂಬಂಧವು ಶಾಶ್ವತವೆಂದೆಣಿಸಕೂಡದು. ಅಯ್ಯಾ ಭರತನೆ ! ಈ ಲೋಕದಲ್ಲಿ ಯಾವ ಪ್ರಾಣಿಯಾದರೂ ಮರಣಹೊಂದಿದ ಮೇಲೆ ಪುನಃ ಜೀವಿಸುವುದಿಲ್ಲವು. ॥೨೪-೨೮॥ ಆದುದರಿಂದ ಮೃತರಾದವರನ್ನು ಕುರಿತ್ತು ಶೋಚಿಸುವುದು ಅನುಚಿತವೆಂದು ತಿಳಿವವನಾಗು.

ಪೃಷ್ಠತೋ ಭವತಾಮಿತಿ ॥ ೨೯ ॥ ಏವಂ ಪೂರ್ವೈರ್ಗತೋ ಮಾರ್ಗಃ ಪಿತೃಪೈತಾಮಹೋ ಧ್ರುವಃ ॥ ತಮಾಪನ್ನಃ ಕಥಂ ಶೋಚೇ ದ್ಯಸ್ಯ ನಾಸ್ತಿ ವ್ಯತಿಕ್ರಮಃ ॥ ೩೦ ॥ ವಯಸಃ ಪತಮಾನಸ್ಯ ಸ್ರೋತಸೋವಾಽನಿವರ್ತಿನಃ ॥ ಆತ್ಮಾ ಸುಖೇ ನಿಯೋಕ್ತವ್ಯ ಸ್ಸುಖಭಾಜಃ ಪ್ರಜಾ ಸ್ಸ್ಮೃತಾಃ ॥ ೩೧ ॥ ಧರ್ಮಾತ್ಮಾ ಸ ಶುಭೈಃ ಕೃತ್ಸ್ನೈಃ ಕ್ರತುಭಿ ಶ್ಚಾಪ್ತದಕ್ಷಿಣೈಃ ॥ ಧೂತಪಾಪೋ ಗತ ಸ್ಸ್ವರ್ಗಂ ಪಿತಾ ನಃ ಪೃಥಿವೀಪತಿಃ ॥ ೩೨ ॥ ಭೃತ್ಯಾನಾಂ ಭರಣಾ ತ್ಸಮ್ಯ

ತಕ್ಕುದಾಗಿ ನಿಶ್ಚಯವು, ಯಸ್ಯ - ಯಾವ ಮಾರ್ಗಕ್ಕೆ, ವ್ಯತಿಕ್ರಮಃ - ವ್ಯತ್ಯಾಸವು, ನಾಸ್ತಿ-ಇಲ್ಲವೋ, ತಂ - ಅಂತಹ ಮಾರ್ಗವನ್ನು, ಆಪನ್ನಃ - ಹೊಂದಿದವನು, ಕಥಂಶೋಚೇತ್ - ಹೇಗೆತಾನೆ ದುಃಖಿಸುತ್ತಾನೆ. ॥೨೯-೩೦॥ ಅನಿವರ್ತಿನಃ - ಹಿಂತಿರುಗದಿರುವ, ಸ್ರೋತಸೋವಾ - ಪ್ರವಾಹದಂತೆ, ವಯಸಃ-ವಯಸ್ಸು, ಪತಮಾನಸ್ಯ - ಹಿಂದಕ್ಕೆ ತಿರುಗದಂತೆ ಹೋಗುತ್ತಿರಲು, ಆತ್ಮಾ - ತನ್ನಾತ್ಮನು, ಸುಖೇ - ಸುಖಹೇತುಭೂತವಾದ ಧರ್ಮದಲ್ಲಿ, ನಿಯೋಕ್ತವ್ಯಃ - ಸೇರಿಸತಕ್ಕುದು, ಯತಃ - ಯಾವ ಕಾರಣ, ಪ್ರಜಾಃ - ಪ್ರಜೆಗಳು, ಸುಖಭಾಜಃ - ಸುಖವನ್ನೇ ಅನುಭವಿಸುವವರಾಗಿ, ಸ್ಮೃತಾಃ - ಹೇಳಲ್ಪಡುತ್ತಾರೆಯೋ, ಧರ್ಮಾತ್ಮಾ - ಧರ್ಮದಲ್ಲಿಯೇ ಮನಸ್ಸುಳ್ಳ, ಪೃಥಿವೀಪತಿಃ - ಅರಸನಾದ, ನಃ - ನಮ್ಮ, ಪಿತಾ - ತಂದೆಯಾದ, ಸಃ - ಆ ದಶರಥರಾಯನು, ಆಪ್ತದಕ್ಷಿಣೈಃ - ಹೊಂದಲ್ಪಟ್ಟ ದಕ್ಷಿಣೆಗಳುಳ್ಳ, ಶುಭೈಃ - ಶುಭಕರಗಳಾದ, ಕೃತ್ಸ್ನೈಃ - ಸಮಸ್ತಗಳಾದ, ಕ್ರತುಭಿಃ - ಯಜ್ಞಗಳಿಂದ, ಧೂತಪಾಪಃ - ಕೊಡಹಲ್ಪಟ್ಟ ಪಾಪವುಳ್ಳವನಾಗಿ, ಸ್ವರ್ಗಂ - ಸ್ವರ್ಗವನ್ನು, ಗತಃ - ಹೊಂದಿದನು. ॥ ೩೧-೩೨ ॥ ಭೃತ್ಯಾನಾಂ - ಭೃತ್ಯರ, ಭರಣಾತ್ - ಸಂರಕ್ಷಣೆಯಿಂದಲೂ, ಸಮ್ಯಕ್ - ಚನ್ನಾಗಿ, ಪ್ರಜಾನಾಂ - ಪ್ರಜೆಗಳ, ಪರಿಪಾಲನಾತ್ - ಸಂರಕ್ಷಣೆಯಿಂದಲೂ, ಅರ್ಥಾದಾನಾಚ್ಚ - ದ್ರವ್ಯ ಸಂಪಾದನೆಯಿಂದಲೂ, ಧರ್ಮೇಣಚ-ಧರ್ಮದಿಂದಲೂ, ನಃ - ನಮ್ಮ, ಪಿತಾ - ತಂದೆಯು, ತ್ರಿದಿವಂ-

ಲೋಕದಲ್ಲಿ, ಮಾರ್ಗವನ್ನು ನಡೆದುಹೋಗುತ್ತಿರುವವನು ತನ್ನೊಡನೆನಡೆಯುತ್ತಿರುವ ದಾರಿಗನನ್ನು ಕುರಿತು, "ಓ ದಾರಿಗನೆ! ನೀನು ಮುಂದೆಹೊರಡು. ನಾನು ಸ್ವಲ್ಪ ಹೊತ್ತು ಇಲ್ಲಿಯೇ ಕುಳಿತು ವಿಶ್ರಮಿಸಿಕೊಂಡು, ನಿನ್ನ ಮಾರ್ಗವನ್ನೇ ಅನುಸರಿಸಿ ಬರುತ್ತೇನೆಂದು" ಹೇಳುತ್ತಾನೆ. ॥೨೯॥ ಹಾಗೆಯೇ ನಮ್ಮ ತಂದೆಯಾದ ದಶರಥಮಹಾರಾಜನು, ನಮ್ಮ ಪೂರ್ವಿಕರೆಲ್ಲರೂ ಹೊಂದಿದ ಮಾರ್ಗವನ್ನೇ ಅನುಸರಿಸಿ ಹೊರಟುಹೋದನು. ಕೆಲವುಕಾಲದ ಮೇಲೆ ನಾವೂ ಕೂಡ ನಮ್ಮ ತಂದೆಯು ಹೋದ ಮಾರ್ಗವನ್ನೇ ಅನುಸರಿಸಿಹೋಗಲು ಸಿದ್ಧರಾಗಿದ್ದೇವೆ. ಹೀಗಿರುವಾಗ ನೀನು ಮೂಢನಂತೆ ವ್ಯಸನವನ್ನು ಹೊಂದುವುದು ಉಚಿತವಲ್ಲ. ಅಯ್ಯಾ ಭರತಕುಮಾರನೆ! ಯಾವದು ಪುನಃ ಬರುವುದಿಲ್ಲವೋ, ಅದನ್ನು ಕುರಿತು ದುಃಖಿಸುವುದೇಕೆ? ತಿಳಿಯದೆ ದುಃಖಿಸಿದರೂ ಪ್ರಯೋಜನವೇನು? ಹರಿದುಹೋದ ಪ್ರವಾಹವು ಮರಳಿ ಬಾರದಂತೆ, ಕಳೆದುಹೋದ ವಯಸ್ಸು ಪುನಃ ಬರುವುದಿಲ್ಲ. ಆದುದರಿಂದ ಮಾನವರೆಲ್ಲರೂ ಪರಲೋಕದ ಸುಖವನ್ನುಂಟುಮಾಡುವಂತಹ ಧರ್ಮವನ್ನಾಚರಿಸಬೇಕು. ಹೀಗೆಯೇ ವೇದಜ್ಞರಾದವರು ಹೇಳುತಾರೆ. ॥೩೦-೩೧॥ ಎಲೈಅನುಜಾತನೆ! ಭರತನೆ! ಧರ್ಮಾತ್ಮನೂ,

ಕ್ಪ್ರಜಾನಾಂ ಪರಿಪಾಲನಾತ್ ॥ ಅರ್ಥಾದಾನಾಚ್ಚ ಧರ್ಮೇಣ ಪಿತಾ ನ ಸ್ತ್ರಿದಿವಂ ಗತಃ ॥ ೩೩ ॥ ಕರ್ಮಭಿಸ್ತು ಶುಭೈರಿಷ್ಟೈಃ ಕ್ರತುಭಿ ಶ್ಚಾಪ್ತದಕ್ಷಿಣೈಃ ॥ ಸ್ವರ್ಗಂ ದಶರಥಃ ಪ್ರಾಪ್ತಃ ಪಿತಾ ನಃ ಪೃಥಿವೀಪತಿಃ ॥ ೩೪ ॥ ಇಷ್ಟ್ವಾ ಬಹುವಿಧೈರ್ಯಜ್ಞೈ ರ್ಭೋಗಾಂಶ್ಚಾವಾಪ್ಯ ಪುಷ್ಕಲಾನ್ ॥ ಉತ್ತಮಂ ಚಾಯು ರಾಸಾದ್ಯ ಸ್ವರ್ಗತಃ ಪೃಥಿವೀಪತಿಃ ॥ ೩೫ ॥ ಆಯು ರುತ್ತಮ ಮಾಸಾದ್ಯ ಭೋಗಾನಪಿಚ ರಾಘವಃ ॥ ಸ ನ ಶೋಚ್ಯಃ ಪಿತಾ ತಾತ! ಸ್ವರ್ಗತ ಸ್ಸತ್ಕೃತ ಸ್ಸತಾಂ ॥ ೩೬ ॥ ಸ ಜೀರ್ಣಂ ಮಾನುಷಂ ದೇಹಂ ಪರಿತ್ಯಜ್ಯ ಪಿತಾ ಹಿ ನಃ ॥

ಸ್ವರ್ಗಲೋಕವನ್ನು, ಗತಃ - ಪಡೆದನು. ॥ ೩೩ ॥ ಪೃಥಿವೀಪತಿಃ - ಭೂಪತಿಯೂ, ನಃ - ನಮಗೆ, ಪಿತಾ - ತಂದೆಯೂಆದ, ದಶರಥಃ - ದಶರಥರಾಯನು, ಶುಭೈಃ - ಶುಭಕರಗಳಾದ, ಇಷ್ಟೈಃ-ತನಗೆ ಇಷ್ಟವಾದ, ಆಪ್ತದಕ್ಷಿಣೈಃ - ಹೊಂದಲ್ಪಟ್ಟ ದಕ್ಷಿಣೆಗಳುಳ್ಳ, ಕ್ರತುಭಿಶ್ಚ - ಯಜ್ಞಗಳಿಂದಲೂ. ಸ್ವರ್ಗಂ - ಸ್ವರ್ಗವನ್ನು, ಪ್ರಾಪ್ತಃ - ಪಡೆದನು. ॥ ೩೪ ॥ ಪೃಥಿವೀಪತಿಃ - ಭೂಪತಿಯಾದ ದಶರಥ ರಾಯನು, ಬಹುವಿಧೈಃ - ಬಹು ಬಗೆಗಳಾದ, ಯಜ್ಞೈಃ - ಯಜ್ಞಗಳಿಂದ, ಇಷ್ಟ್ವಾ - ದೇವತೆಗಳನ್ನು ತೃಪ್ತಿಗೊಳಿಸಿ, ಪುಷ್ಕಲಾನ್ - ಸಂಪೂರ್ಣಗಳಾದ, ಭೋಗಾಂಶ್ಚ - ಸುಖಗಳನ್ನೂ, ಅವಾಪ್ಯ- ಹೊಂದಿ, ಉತ್ತಮಂ - ಪಾಪಸಂಗರಹಿತವಾದ, ಆಯುಃ - ಆಯುಸ್ಸನ್ನು, ಆಸಾದ್ಯ - ಹೊಂದಿ, ಸ್ವರ್ಗತಃ-ಸ್ವರ್ಗಸ್ಥನಾದನು. ॥೩೫॥ ಹೇ ತಾತ-ಎಲೈ ಅಪ್ಪನೇ, ರಾಘವಃ-ದಶರಥರಾಯನು, ಉತ್ತಮಂ- ನಮ್ಮ ಪಿತಾಮಹಾದಿಗಳಿಗಿಂತಲೂ ಪರಿಪೂರ್ಣವಾದ,ಆಯುಃ-ಆಯುಸ್ಸನ್ನು,ಆಸಾದ್ಯ ಹೊಂದಿ,ಭೋಗಾನಪಿ - ಸುಖಗಳನ್ನೂ, ಆಸಾದ್ಯ - ಅನುಭವಿಸಿ, ಸ್ವರ್ಗತಃ - ಸ್ವರ್ಗಸ್ಥನಾದ, ಸತಾಂ - ಸತ್ಪುರುಷರಿಂದ, ಸತ್ಕೃತಃ - ಪೂಜಿಸಲ್ಪಟ್ಟ, ಸಪಿತಾ - ಆ ತಂದೆಯು, ನಶೋಚ್ಯಃ - ದುಃಖಿಸತಕ್ಕವನಲ್ಲ.॥೩೬॥ ನಃ - ನಮ್ಮ, ಪಿತಾ - ತಂದೆಯಾದ, ಸಃ - ಆ ದಶರಥರಾಯನು, ಜೀರ್ಣಂ - ಗಳಿತವಾದ, ಮಾನುಷಂ ದೇಹಂ - ಮನುಷ್ಯದೇಹವನ್ನು, ಪರಿತ್ಯಜ್ಯ - ತ್ಯಾಗಮಾಡಿ, ಬ್ರಹ್ಮಲೋಕವಿಹಾರಿಣೀಂ - ಬ್ರಹ್ಮ

ನಮ್ಮ ತಂದೆಯೂ ಆದ ದಶರಥರಾಯನು, ಮಂಗಳಕರಗಳಾದುವೂ, ಭೂರಿದಕ್ಷಿಣೆಗಳುಳ್ಳುವೂ ಆದ ಯಜ್ಞಗಳನ್ನುಮಾಡಿ ಸ್ವರ್ಗಲೋಕಕ್ಕೆ ಹೋದನು. ಅಲ್ಲದೆ ನಿಷ್ಪಕ್ಷಪಾತವಾಗಿ ಪ್ರಜೆಗಳನ್ನು ಪರಿಪಾಲಿಸುವುದರಿಂದಲೂ, ಭೃತ್ಯರನ್ನು ಚೆನ್ನಾಗಿ ಪೋಷಿಸುವುದರಿಂದಲೂ, ಧರ್ಮಮಾರ್ಗವನ್ನು ಬಿಡದೆ, ದ್ರವ್ಯವನ್ನು ಸಂಪಾದಿಸುವುದರಿಂದಲೂ ಅಧಿಕವಾದ ಪುಣ್ಯವುಳ್ಳವನಾಗಿ ಸ್ವರ್ಗಲೋಕಕ್ಕೆಹೋದನು. ಮಾತ್ರವಲ್ಲದೆ ನಮ್ಮ ತಂದೆಯಾದ ದಶರಥಮಹೀಪಾಲನು ಮಂಗಳಕರವಾದ ಕರ್ಮಗಳನ್ನು ಮಾಡುವುದರಿಂದಲೂ, ಶಾಸ್ತ್ರೋಕ್ತವಾದ ದಕ್ಷಿಣೆಗಳನ್ನೊಳಗೊಂಡ ಯಾಗಗಳನ್ನು ಆಚರಿಸುವುದರಿಂದಲೂ ಮಹಾ ಪುಣ್ಯಸಮನ್ವಿತನಾಗಿ ಸ್ವರ್ಗಲೋಕಕ್ಕೆ ಹೋದನು. ॥೩೨-೩೪॥ ಭರತ! ನಮ್ಮ ತಂದೆಯು ನಾನಾವಿಧಗಳಾದ ಯಜ್ಞಗಳನ್ನು ಮಾಡಿದನು. ಬಹಳ ಕಾಲದವರೆವಿಗೆ, ಸಮಸ್ತೈಶ್ವರ್ಯಗಳನ್ನೂ ಅನುಭವಿಸಿದನು. ಪೂರ್ಣಾಯುರ್ದಾಯವುಳ್ಳವನಾಗಿ ಜೀವಿಸಿದನು. ಹೀಗೆ ಅನೇಕ ದಿನಗಳವರೆವಿಗೂ ಜೀವಿಸಿ, ಕೊನೆಗೆ ಹುಟ್ಟಿದವರೆಲ್ಲರೂ ಹೊಂದುವ ಮಾರ್ಗವನ್ನು ಹಿಡಿದು ಹೊರಟು

ದೈವೀ ಮೃದ್ಧಿ ಮನುಪ್ರಾಪ್ತೋ ಬ್ರಹ್ಮಲೋಕ ವಿಹಾರಿಣೀಂ ॥ ೩೭ ॥ ತಂತು ನೈವಂ ವಿಧಃಕಶ್ಚಿ ತ್ಪ್ರಾಜ್ಞ ಶ್ಶೋಚಿತು ಮರ್ಹತಿ ॥ ತದ್ವಿಧೋ ಯದ್ವಿಧಶ್ಚಾಸಿ ಶ್ರುತವಾನ್ ಬುದ್ಧಿಮತ್ತರಃ ॥ ೩೮ ॥ ಏತೇ ಬಹುವಿಧಾ ಶ್ಶೋಕಾ ವಿಲಾಪ ರುದಿತೇ ತಥಾ ॥ ವರ್ಜನೀಯಾಹಿ ಧೀರೇಣ ಸರ್ವಾವಸ್ಥಾಸು ಧೀಮತಾ ॥೩೯॥ ಸ ಸ್ವಸ್ಥೋ ಭವ ಮಾ ಶೋಚೀ ರ್ಯಾತ್ವಾ ಚಾವಸ ತಾಂ ಪುರೀಂ ॥ ತಥಾ ಪಿತ್ರಾ ನಿಯುಕ್ತೋಽಸಿ ವಶಿನಾ ವದತಾಂ ವರ! ॥ ೪೦ ॥

ಲೋಕದಲ್ಲಿ ವಿಹಾರಮಾಡುತ್ತಿರುವ, ದೈವೀಂ - ದೇವತಾಸಂಬಂಧವಾದ, ಋದ್ಧಿಂ - ದಿವ್ಯ ದೇಹ ಪ್ರಾಪ್ತಿರೂಪವಾದ ಐಶ್ವರ್ಯವನ್ನು, ಅನುಪ್ರಾಪ್ತಃ - ಹೊಂದಿದನು. ॥ ೩೭ ॥ ಬುದ್ಧಿಮತ್ತರಃ - ಮಹಾ ಬುದ್ಧಿವಂತರಲ್ಲಿ ಗಣ್ಯನಾದ, ಶ್ರುತಿವರ್ಮಾ - ಶಾಸ್ತ್ರಜ್ಞನಾದ, (ತ್ವಂ - ನೀನು,) ಯದ್ವಿಧಃ - ಯಾವ ರೀತಿಯುಳ್ಳವನು, ಅಸಿ - ಆಗಿರುವೆಯೋ, ತದ್ವಿಧಃ - ಅಂತಹ ರೀತಿಯುಳ್ಳ, ಏವಂವಿಧಃ - ಈ ನಾನು ಹೇಳಿದ ಪ್ರಕಾರ ಜ್ಞಾನಸಂಪನ್ನನಾದ, ಪ್ರಾಜ್ಞಃ - ಪಂಡಿತನಾದ, ಕಶ್ಚಿತ್ - ಯಾರೂ, ತಂತು - ಆ ದಶರಥರಾಯನನ್ನಾದರೆ, ಶೋಚಿತುಂ - ದುಃಖಿಸುವುದಕ್ಕೆ, ನಾರ್ಹತಿ - ಅರ್ಹನಲ್ಲ. ॥ ೩೮ ॥ ತಥಾ - ಹಾಗೆಯೇ, ವಿಲಾಪರುದಿತೇ - ಪ್ರಲಾಪವನ್ನು ಕಣ್ಣೀರು ಹಾಕೋಣವನ್ನು, ವರ್ಜನೀಯೇ - ಬಿಡತಕ್ಕುದು, ಏತೇ - ಈ, ಬಹುವಿಧಾಃ - ದಶರಥಮರಣ, ಮದ್ವಿವಾಸನರೂಪವಾದ ಬಹು ಬಗೆಗಳಾದ, ಶೋಕಾಃ - ವ್ಯಸನಗಳು, ಸರ್ವಾವಸ್ಥಾಸು - ಎಲ್ಲಕಾಲಗಳಲ್ಲಿಯೂ, ಧೀಮತಾ - ಬುದ್ಧಿವಂತನಾದ, ಧೀರೇಣ - ಧೈರ್ಯಶಾಲಿಯಿಂದ, ವರ್ಜನೀಯಾಹಿ - ಬಿಡತಕ್ಕುದಷ್ಟೆ. ॥ ೩೯ ॥ ಹೇ ವದತಾಂವರ - ಎಲೈ ಮಾತುಗಾರರಲ್ಲಿ ಶ್ರೇಷ್ಠನೇ, ಸತ್ವಂ - ಅಂತಹ ನೀನು, ಸ್ವಸ್ಥೋಭವ - ಸ್ವಸ್ಥಚಿತ್ತನಾಗು, ಮಾಶೋಚೀಃ - ದುಃಖಪಡಬೇಡ, ತಾಂಪುರೀಂ - ಆ ಅಯೋಧ್ಯಾ ಪಟ್ಟಣವನ್ನು ಕುರಿತು, ಯಾತ್ವಾ - ಹೋಗಿ, ಆವಸ - ಸುಖವಾಗಿರು, ತಥಾ - ಹಾಗೆಯೇ, ವಶಿನಾ - ಜಿತೇಂದ್ರಿಯನಾದ, ಪಿತ್ರಾ - ತಂದೆಯಿಂದ, ನಿಯುಕ್ತಃ - ನಿಯೋಗಿಸಲ್ಪಟ್ಟವನು, ಅಸಿ - ಆಗಿದ್ದೀಯೆ. ॥ ೪೦ ॥ ಅಹಮಪಿ - ನಾನೂ, ಪುಣ್ಯಕರ್ಮಣಾ - ಪುಣ್ಯಕರವಾದ ವ್ಯಾಪಾರವುಳ್ಳ,

---

ಹೋದನು. ರಘುಕುಲೋದ್ಭವನಾದ ದಶರಥಮಹಾರಾಜನು ಸಕಲ ಭೋಗಗಳನ್ನೂ ಅನುಭವಿಸಿ ಪೂರ್ಣಾಯುರ್ದಾಯವನ್ನು ಹೊಂದಿ ಬಳಿಕ ಸ್ವರ್ಗವೈದಿದನಲ್ಲವೆ? ಆದುದರಿಂದೆಲೈ ವತ್ಸನೆ; ಭರತ! ಸತ್ಪುರುಷರಿಂದ ಸತ್ಕರಿಸಲಾದವನೂ, ಸ್ವರ್ಗಲೋಕವನ್ನು ಹೊಂದಿದ ವನೂ ಆದ ದಶರಥಮಹಾರಾಜನನ್ನು ಕುರಿತು ನಾವು ದುಃಖಿಸುವುದು ನ್ಯಾಯವಲ್ಲ. ನಮ್ಮ ತಂದೆಯು ಶಿಥಿಲವಾದ ಮಾನುಷದೇಹವನ್ನು ತೊರೆದು ಬ್ರಹ್ಮಲೋಕದಲ್ಲಿ ಸಂಚರಿಸಲು ಯೋಗ್ಯವಾದುದೂ, ದಿವ್ಯವಾದುದೂ ಸಕಲ ಸಮೃದ್ಧಿಗಳನ್ನೊಳಗೊಂಡಿರುವುದೂ ಆದ ಶರೀರ ವನ್ನು ಹೊಂದಿದ್ದಾನೆ. ॥೩೬-೩೭॥ ಆದುದರಿಂದ ನಾವು ಆತನನ್ನು ಕುರಿತು ದುಃಖಿಸುವುದು ಚಿತವಲ್ಲವು. ಸಕಲ ವಿದ್ಯೆಗಳನ್ನೋದಿರುವವನೂ, ಬುದ್ಧಿವಂತರಲ್ಲಿ ಶ್ರೇಷ್ಠನಾದವನೂ ಆದ ಎಲೈ ಭರತನೆ! ನೀನು ಮರಣವಾಂತ ತಂದೆಯನ್ನು ಕುರಿತು ದುಃಖಿಸಬೇಡ, ನಿನ್ನಂತಹ ಬುದ್ಧಿವಂತನು ಯಾವನೂ ಮೃತನನ್ನು ಕುರಿತು ವ್ಯಸನಪಡುವುದೇ ಇಲ್ಲವು. ಆದುದ

ಯತ್ರಾಹಮಪಿ ತೇನೈವ ನಿಯುಕ್ತಃ ಪುಣ್ಯಕರ್ಮಣಾ ॥ ತತ್ರೈವಾಹಂ ಕರಿ
ಷ್ಯಾಮಿ ಪಿತುರಾರ್ಯಸ್ಯ ಶಾಸನಂ ॥ ೪೧ ॥ ನ ಮಯಾ ಶಾಸನಂ ತಸ್ಯ ತ್ಯಕ್ತುಂ
ನ್ಯಾಯ್ಯ ಮರಿಂದಮ! ॥ ತತ್ತ್ವಯಾಪಿ ಸದಾ ಮಾನ್ಯಂ ಸ ವೈ ಬಂಧು ಸ್ಸನಃ
ಪಿತಾ ॥ ೪೨ ॥ ತದ್ವಚಃ ಪಿತುರೇವಾಹಂ ಸಮ್ಮತಂ ಧರ್ಮಚಾರಿಣಃ ॥
ಕರ್ಮಣಾ ಪಾಲಯಿಷ್ಯಾಮಿ ವನವಾಸೇನ ರಾಘವ! ॥ ೪೩ ॥ ಧಾರ್ಮಿಕೇಣಾ
ನೃಶಂಸೇನ ನರೇಣ ಗುರುವರ್ತಿನಾ ॥ ಭವಿತವ್ಯಂ ನರವ್ಯಾಘ್ರ! ಪರಲೋಕಂ

ತೇನೈವ - ಆ ದಶರಥರಾಯನಿಂದಲೇ, ಯತ್ರ - ಯಾವ ಕಾಲದಲ್ಲಿ, ನಿಯುಕ್ತಃ - ಆಜ್ಞಾಪಿಸಲ್ಪಟ್ಟಿನೋ, ತತ್ರೈವ - ಆ ವನವಾಸರೂಪಕಾರ್ಯದಲ್ಲಿ, ಅಹಂ - ನಾನು, ಆರ್ಯಸ್ಯ - ಪೂಜ್ಯನಾದ, ಪಿತುಃ - ತಂದೆಯ, ಶಾಸನಂ - ಆಜ್ಞಾವಚನವನ್ನು, ಕರಿಷ್ಯಾಮಿ - ಮಾಡುವೆನು. ॥ ೪೧ ॥ ಹೇ ಅರಿಂದಮ - ಎಲೈಶತ್ರುಸಂಹಾರಕನೇ, ಮಯಾ - ನನ್ನಿಂದ, ತಸ್ಯ - ಆ ದಶರಥರಾಯನ, ಶಾಸನಂ- ಆಜ್ಞಾವಚನವು, ತ್ಯಕ್ತುಂ - ಬಿಡಲು, ನನ್ಯಾಯ್ಯಂ - ಯೋಗ್ಯವಲ್ಲ, ತತ್ - ಆ ಕಾರಣದಿಂದ, ತತ್- ಆ ತಂದೆಯ ಶಾಸನವು, ತ್ವಯಾಪಿ - ನಿನ್ನಿಂದಲೂ, ಸದಾ - ಎಲ್ಲ ಕಾಲದಲ್ಲಿಯೂ, ಮಾನ್ಯಂ - ಪೂಜ್ಯವು, ನಃ - ನಮಗೆ, ಬಂಧುಃ - ಬಂಧುವು, ಸವೈ - ಆ ದಶರಥನೇ, ಪಿತಾ - ತಂದೆಯೂ, ಸಏವ - ಆತನೇ. ॥ ೪೨ ॥ ಹೇ ರಾಘವ - ಎಲೈ ರಘುಕುಲೋತ್ಪನ್ನನೇ, ಅಹಂ - ನಾನು, ಧರ್ಮಚಾರಿಣಃ - ಧರ್ಮಾನುಷ್ಠಾನಶೀಲನಾದ, ಪಿತುಃ - ತಂದೆಯ, ಸಮ್ಮತಂ-ಇಷ್ಟವಾದ, ವನವಾಸೇನ- ವನವಾಸರೂಪವಾದ, ತದ್ವಚಃ - ಆ ಮಾತನ್ನು, ಕರ್ಮಣಾ - ಕರ್ಮದಿಂದ, ಪಾಲಯಿಷ್ಯಾಮಿ - ಸಂರಕ್ಷಣೆ ಮಾಡುತ್ತೇನೆ. ॥ ೪೩ ॥ ಹೇ ನರವ್ಯಾಘ್ರ - ಎಲೈ ಪುರುಷಶ್ರೇಷ್ಠನೇ, ಪರಲೋಕಂ - ಪರಲೋಕವನ್ನು, ಜಿಗೀಷತಾ - ಜಯಿಸಲಿಚ್ಛೆಯುಳ್ಳ, ನರೇಣ - ಮನುಷ್ಯನಿಂದ, ಧಾರ್ಮಿಕೇಣ - ಧರ್ಮಿಷ್ಠನಿಂದ, ಅನೃಶಂಸೇನ - ಘಾತಕನಲ್ಲದಿರುವನಿಂದ, ಗುರುವರ್ತಿನಾ - (ಗೋ) ಗುರುವಿನ,

ರಿಂದ ಮಹಾ ಬುದ್ಧಿವಂತನೂ, ಧೀರನೂ, ಶೂರನೂ ಆದ ನೀನು, ವ್ಯಸನಪಡುವಿಕೆ, ಕಣ್ಣೀರಿಡುವಿಕೆ ಇವುಗಳನ್ನು ತೊರೆಯುವವನಾಗು. ಮಾತನಾಡುವವರಲ್ಲಿ ಉತ್ತಮನಾದ ಎಲೈ ಭರತನೆ! ನೀನು ಸ್ವಸ್ಥಚಿತ್ತನಾಗು; ದುಃಖವನ್ನು ತೊರೆ; ನೀನು ಇಲ್ಲಿಂದ ಹೊರಟು ಅಯೋಧ್ಯಾಪಟ್ಟಣವನ್ನು ಪ್ರವೇಶಿಸು.॥೩೮-೪೦॥ಜಿತೇಂದ್ರಿಯನೂ,ತಂದೆಯೂ ಆದ ದಶರಥ ರಾಯನು ನಿನಗೆ ರಾಜ್ಯಪರಿಪಾಲನೆಯನ್ನು ಮಾಡೆಂದು ಆಜ್ಞೆಯಿತ್ತಿರುವನು. ಆದುದರಿಂದ ತಂದೆಯ ಆಜ್ಞೆಯನ್ನು ನೆರವೇರಿಸುವುದು ಉಚಿತವೇ ಹೊರ್ತು ಅದನ್ನು ಮೀರುವುದು ಎಂದಿಗೂ ಉಚಿತವಲ್ಲ. ಪಾವನವಾದ ಕಾರ್ಯಗಳನ್ನೆಸಗಿದ ನಮ್ಮ ತಂದೆಯು ನನ್ನನ್ನು ವನವಾಸಮಾಡೆಂದು ಆಜ್ಞಾಪಿಸಿರುತ್ತಾನೆ. ಅಂತೆಯೇ ನಾನು ಆರಾಯನ ಆಜ್ಞೆಯನ್ನು ಪಾಲಿಸಿ ವನವಾಸಮಾಡುತ್ತೇನೆ. ಓ ಶತ್ರುಮರ್ದನನಾದ ಭರತನೆ! ನಾನು ತಂದೆಯ ಆಜ್ಞಾವಚನವನ್ನು ಮೀರಲು ಅರ್ಹನಾಗಿಲ್ಲ. ನೀನೂ ಸಹ ತಂದೆಯ ಗೌರವವನ್ನುಳಿಸುವವನಾಗು. ನಮಗೆ ತಂದೆಯೂ, ಬಂಧುವೂ ದಶರಥನೇಹೊರ್ತು ಮತ್ತಾರೂ ಅಲ್ಲ.॥೪೧-೪೨॥ ಆದುದರಿಂದ ಧರ್ಮವನ್ನೆಡಬಿಡದೆ ಸಂಚರಿಸಿದ ತಂದೆಯ ಆಜ್ಞೆಯನ್ನು ಶಿರಸಾವಹಿಸಿ ಆಚ

ಜಿಗೀಷತಾ ॥ ೪೪ ॥ ಆತ್ಮಾನ ಮನುತಿಷ್ಠ ತ್ವಂ ಸ್ವಭಾವೇನ ನರರ್ಷಭ! ॥
ನಿಶಾಮ್ಯತು ಶುಭಂ ವೃತ್ತಂ ಪಿತುರ್ದಶರಥಸ್ಯ ನಃ ॥ ೪೫ ॥

ಇತ್ಯೇವ ಮುಕ್ತ್ವಾ ವಚನಂ ಮಹಾತ್ಮಾ
ಪಿತುರ್ನಿದೇಶ ಪ್ರತಿಪಾಲನಾರ್ಥಂ ॥
ಯವೀಯಸಂ ಭ್ರಾತರಮರ್ಥವಚ್ಚ
ಪ್ರಭು ಮುಹೂರ್ತಾ ದ್ವಿರರಾಮ ರಾಮಃ ॥ ೪೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚೋತ್ತರಶತತಮಸ್ಸರ್ಗಃ.

ಅನುವರ್ತನರೂಪ, ಶುಶ್ರೂಷಾಕಾರ್ಯದಲ್ಲಿರುವನಿಂದ, ಭವಿತವ್ಯಂ - ಆಗತಕ್ಕದು. ॥ ೪೪ ॥ ಹೇ ನರರ್ಷಭ - ಎಲೈ ಪುರುಷಶ್ರೇಷ್ಠನೇ, ನಃ - ನಮಗೆ, ಪಿತುಃ - ತಂದೆಯಾದ, ದಶರಥಸ್ಯ - ದಶರಥನ, ಶುಭಂವೃತ್ತಂ - ಶುಭಕರವಾದ ವ್ಯಾಪಾರವನ್ನು, ನಿಶಾಮ್ಯ - ಕಂಡು, ಆತ್ಮಾನಂ - ತನ್ನನ್ನು, ತ್ವಂ - ನೀನು, ಸ್ವಭಾವೇನ - ನಿನ್ನ ಕ್ಷಾತ್ರಸ್ವಭಾವದಿಂದ, ಅನುತಿಷ್ಠ - ಸೇರಿಸು. ॥ ೪೫ ॥ ಮಹಾತ್ಮಾ - ಮಹಾ ಮನಸ್ವಿಯಾದ, ಪ್ರಭುಃ - ಸಮರ್ಥನಾದ, ರಾಮಃ - ಶ್ರೀರಾಮನು, ಯವೀಯಸಂ - ತಮ್ಮನಾದ, ಭ್ರಾತರಂ - ಸಹೋದರನಾದ ಭರತನನ್ನು ಕುರಿತು, ಪಿತುಃ - ತಂದೆಯಾದ ದಶರಥಮಹಾರಾಯನ, ನಿದೇಶಪ್ರತಿಪಾಲನಾರ್ಥಂ - ಆಜ್ಞಾವಚನವನ್ನು ಸಂರಕ್ಷಿಸುವುದಕ್ಕೋಸುಗ, ಇತ್ಯೇವಂ - ಈ ಪರಿಯಾಗಿ, ಅರ್ಥವತ್ - ಗಂಭೀರಾರ್ಥವುಳ್ಳಂತೆ, ವಚನಂ - ಮಾತನ್ನು, ಉಕ್ತ್ವಾ - ಹೇಳಿ, ಮುಹೂರ್ತಾತ್ - ಎರಡು ಘಳಿಗೆಕಾಲಗಳ, ವಿರಾಮ - ಸುಮ್ಮನಾದನು. ॥ ೪೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚೋತ್ತರಶತತಮಸ್ಸರ್ಗಃ.

ರಿಸಬೇಕು. ನಾನು ವನವಾಸವನ್ನುಮಾಡುತ್ತ ತಂದೆಯ ಅಪ್ಪಣೆಯನ್ನು ನೆರವೇರಿಸುತ್ತೇನೆ. ಅಯ್ಯಾ ಪುರುಷಶ್ರೇಷ್ಠನಾದ ಭರತಕುಮಾರನೆ ! ಪರಲೋಕದಲ್ಲಿ ಸಕಲ ಸೌಖ್ಯಗಳನ್ನೂ ಪಡೆಯಬೇಕೆಂದು ಕೋರುವಾತನು, ಧರ್ಮಾತ್ಮನಾಗಿಯೂ, ಹಿಂಸಾಕೃತ್ಯಗಳನ್ನು ಮಾಡದವನೂ, ಗುರು ಶುಶ್ರೂಷೆಯನ್ನು ಮಾಡುವವನಾಗಿಯೂ ಇರಬೇಕು. ಅಲ್ಲದೆ ನೀನು ನಮ್ಮ ತಂದೆಯಾದ ದಶರಥಮಹಾರಾಜನ ಸಚ್ಚರಿತ್ರೆಯನ್ನು ನೋಡಿ ರಾಜಭಾವವನ್ನವಲಂಬಿಸುವವನಾಗು." ಹೀಗೆ ಮಹಾತ್ಮನಾದ ಶ್ರೀರಾಮಮೂರ್ತಿಯು ತಮ್ಮನಾದ ಭರತನಿಗೆ, ತಂದೆಯ ಆಜ್ಞೆಯನ್ನು ಪರಿಪಾಲಿಸೆಂದು ಅನೇಕ ವಿಧಗಳಿಂದ ಹೇಳಿ ಸ್ವಲ್ಪ ಹೊತ್ತು ಸುಮ್ಮನಿದ್ದನು. ॥೪೩-೪೬॥

ಇಂತಿದು ಶ್ರೀರಾಮೋಕ್ತ ಅವಶ್ಯಂಕರಣೀಯ ಪಿತೃವಾಕ್ಯಪರಿಪಾಲನಾ ವಿವರಣವೆಂಬ
ನೂರೈದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಷಡುತ್ತರಶತತಮಸ್ಸರ್ಗಃ.

ಏವಮುಕ್ತ್ವಾತು ವಿರತೇ ರಾಮೇ ವಚನ ಮರ್ಥವತ್ ॥ ತತೋ ಮಂದಾಕಿನೀತೀರೇ ರಾಮಂ ಪ್ರಕೃತಿವತ್ಸಲಂ ॥ ೧ ॥ ಉವಾಚ ಭರತಶ್ಚಿತ್ರಂ ಧಾರ್ಮಿಕೋ ಧಾರ್ಮಿಕಂ ವಚಃ ॥ ಕೋಹಿ ಸ್ಯಾದೀದೃಶೋ ಲೋಕೇ ಯಾದೃಶ ಸ್ತ್ವಮರಿಂದಮ! ॥ ೨ ॥ ನ ತ್ವಾಂ ಪ್ರವ್ಯಥಯೇ ದ್ದುಃಖಂ ಪ್ರೀತಿರ್ವಾನಪ್ರಹರ್ಷಯೇತ್ ॥ ಸಮ್ಮತಶ್ಚಾಸಿ ವೃದ್ಧಾನಾಂ ತಾಂಶ್ಚ ಪೃಚ್ಛಸಿ

ತತಃ - ಬಳಿಕ, ರಾಮೇ - ಶ್ರೀರಾಮನು, ಅರ್ಥವತ್ - ಪ್ರಯೋಜನಕರವಾದ, ವಚನಂ - ಮಾತನ್ನು, ಏವಂ - ಈಪರಿಯಾಗಿ, ಉಕ್ತ್ವಾ - ಹೇಳಿ, ವಿರತೇ - ಸುಮ್ಮನಾಗಲು, ಮಂದಾಕಿನೀ ತೀರೇ - ಗಂಗಾತೀರದಲ್ಲಿ, ಧಾರ್ಮಿಕಃ - ಧರ್ಮಿಷ್ಠನಾದ, ಭರತಃ - ಭರತನು, ಧಾರ್ಮಿಕಂ-ಧರ್ಮದಲ್ಲಿಯೇ ದೃಷ್ಟಿಯುಳ್ಳ, ಪ್ರಕೃತಿವತ್ಸಲಂ - ಸ್ವಭಾವದಿಂದಲೇ ವಾತ್ಸಲ್ಯವುಳ್ಳ, ರಾಮಂ - ಶ್ರೀರಾಮನನ್ನು ಕುರಿತು, ಚಿತ್ರಂ - ಆಶ್ಚರ್ಯಕರವಾದ, ವಚಃ - ವಾಕ್ಯವನ್ನು, ಉವಾಚ - ಹೇಳಿದನು. ॥ ೧ ॥ ಹೇ ಅರಿಂದಮ - ಎಲೈ ಶತ್ರುಸಂಹಾರಕನೇ, ತ್ವಂ - ನೀನು, ಯಾದೃಶಃ - ಎಂತಹನೋ, ಈದೃಶಃ - ಅಂತಹನು, ಲೋಕೇ - ಲೋಕದಲ್ಲಿ, ಕಃ - ಯಾರು, ಸ್ಯಾದ್ಧಿ - ಇರುವನು, ತ್ವಾಂ - ನಿನ್ನನ್ನು, ದುಃಖಂ - ವ್ಯಸನವು, ನಪ್ರವ್ಯಥಯೇತ್ - ವ್ಯಸನಗೊಂಡವನನ್ನಾಗಿ ಮಾಡಲಾರದು, ಪ್ರೀತಿರ್ವಾ - ಸಂತೋಷವಾದರೂ, ತ್ವಾಂ - ನಿನ್ನನ್ನು, ನಪ್ರಹರ್ಷಯೇತ್ - ಸಂತುಷ್ಟನನ್ನಾಗಿ ಮಾಡಲಾರದು. ॥ ೨ ॥ ವೃದ್ಧಾನಾಂ - ಜ್ಞಾನವೃದ್ಧರಿಗೂ, ವಯೋವೃದ್ಧರಿಗೂ, ಸಮ್ಮತಶ್ಚ - ಇಷ್ಟನಾದವನೂ, ಅಸಿ - ಆಗಿದ್ದೀಯೆ, ತಾಂಶ್ಚ - ಆ ವೃದ್ಧರನ್ನು ಕುರಿತು, ಸಂಶಯಾನ್ - ನಿನಗುಂಟಾಗುವ ಸಂಶಯಗಳನ್ನು, ಪೃಚ್ಛಸಿ - ಕೇಳಿ ತಿಳಿದುಕೊಂಡಿರುತ್ತೀಯೆ, ಮೃತಃ - ಸತ್ತವನು, ಯಥಾ- ಹೇಗೆ, (ದ್ವೇಷವಿಷಯಃ - ದ್ವೇಷವಿಷಯನು,) ನಭವತಿ - ಆಗುವದಿಲ್ಲವೋ, ತಥಾ - ಹಾಗೆಯೇ,

---

ಈ ಪ್ರಕಾರವಾಗಿ ಮಹಾ ಗಂಭೀರವಾದ ಮಾತುಗಳನ್ನು ಹೇಳಿ ಶ್ರೀರಾಮನು ಸುಮ್ಮನಾಗಲು, ಧರ್ಮವಂತರಲ್ಲಿ ಉತ್ತಮನಾದ ಭರತನು ಆ ಮಂದಾಕಿನೀ ತೀರದಲ್ಲಿ ವಾಸಿಸುತ್ತಿರುವವನೂ, ಸ್ವಭಾವದಿಂದಲೇ ದಯೆಯುಳ್ಳವನೂ ಆದ ಆತನೊಡನೆ ಧರ್ಮಯುಕ್ತಗಳಾದ ಈ ಮಾತುಗಳನ್ನು ಹೇಳಬೇಕೆಂದೆಣಿಸಿ ಹೀಗೆಂದನು. “ಓ ಶತ್ರುಮರ್ದನನಾದ ಶ್ರೀರಾಮಚಂದ್ರನೆ! ದುಃಖ ಬಂದಾಗ ವ್ಯಸನಪಡದವನೂ, ಸಂತೋಷವೊದಗಿದಾಗ ಸಂತೋಷಪಡದವನೂ, ಎಲ್ಲ ಕಾಲಗಳಲ್ಲಿಯೂ ಸಮಭಾವದಿಂದಿರುವಾತನೂ ಆದ ಮಾನವನು, ಈ ಲೋಕದಲ್ಲಿ ನಿನ್ನನ್ನು ಬಿಟ್ಟರೆ ಮತ್ತಾವನಿರುವನು? ನೀನು ಜ್ಞಾನವೃದ್ಧ, ವಯೋವೃದ್ಧರೆಲ್ಲರಿಗೂ ಸಮ್ಮತನಾಗಿ, ಎಲ್ಲ ಕಾಲಗಳಲ್ಲಿಯೂ ನಿನಗುಂಟಾಗುವ ಸಂಶಯಗಳನ್ನು ಅವರೊಡನೆ ಹೇಳಿ ಪರಿಹರಿಸಿಕೊಳ್ಳುತ್ತಿರುವೆ. ॥ ೧-೩ ॥ ಯಾವ ಪದಾ

ಸಂಶಯರ್ಃ ||೩|| (೧) ಯಥಾ ಮೃತ ಸ್ತಥಾ ಜೀರ್ವ ಯಥಾಸತಿ ತಥಾಸತಿ || ಯಸ್ಯೈಷ ಬುದ್ಧಿಲಾಭ ಸ್ಸ್ಯಾತ್ಪರಿತಪ್ಯೇತ ಕೇನ ಸಃ || ೪ || ಪರಾವರಜ್ಞೋ ಯಶ್ಚಸ್ಯಾತ್ತಥಾ ತ್ವಂ ಮನುಜಾಧಿಪ ! || ಸ ಏವಂ ವ್ಯಸನಂ ಪ್ರಾಪ್ಯ ನ ವಿಷೀದಿತು ಮರ್ಹತಿ ||೫|| ಅಮರೋಪಮ ಸತ್ವ ಸ್ತ್ವಂ ಮಹಾತ್ಮಾ ಸತ್ಯಸಂಗರಃ ||

ಜೀವನ್ನಪಿ - ಬದುಕಿರುವನಾದರೂ, (ದ್ವೇಷವಿಷಯೋನಭವತಿ - ದ್ವೇಷವಿಷಯನು ಆಗುವದಿಲ್ಲ,) ಯಥಾ - ಹೇಗೆ, ಅಸತಿ - (ಗೋ) ಅವಿದ್ಯಮಾನಕಾರ್ಯದಲ್ಲಿ ರಾಗವಿಲ್ಲವೋ, ತಥಾ - ಹಾಗೆ, ಸತಿ - ವಿದ್ಯಮಾನವಿಷಯದಲ್ಲಿಯೂ, ರಾಗವಿಲ್ಲ, ಇತಿ - ಈಪರಿಯಾಗಿ, ಏಷಬುದ್ಧಿಲಾಭಃ - ಇಂತಹ ಬುದ್ಧಿಪ್ರಾಪ್ತಿಯು, ಯಸ್ಯ - ಯಾವ ಪುರುಷನಿಗೆ, ಸ್ಯಾತ್ - ಆಗುವದೋ, ಸಃ - ಆ ಪುರುಷನು, ಕೇನಪರಿತಪ್ಯೇತ - ಯಾವ ಕಾರಣದಿಂದ ಸಂಕಟಗೊಂಡವನಾದಾನು. || ೪ || ಹೇ ಮನುಜಾಧಿಪ - ಎಲೈ ರಾಜನೆ ! ಯಃ - ಯಾವ ಪುರುಷನು, ಪರಾವಜ್ಞಃ - ಆತ್ಮಾನಾತ್ಮಗಳನ್ನು ತಿಳಿದವನು, ಸ್ಯಾತ್ - ಆಗುವನೋ, ಸಃ - ಆ ಪುರುಷನು, ಏವಂ - ಈಪರಿಯಾಗಿ, ದುಃಖಂ-ವ್ಯಸನವನ್ನು, ಪ್ರಾಪ್ಯಾಪಿ - ಹೊಂದಿದರೂ, ವಿಷೀದಿತುಂ - ವ್ಯಸನಗೊಳ್ಳಲು, ನಾರ್ಹತಿ - ಅರ್ಹನಾಗಲಾರನು, ತಥಾ - ಹಾಗೆಯೇ, ತ್ವಂ - ನೀನು. (ಆಗಿರುವೆ.) || ೫ || ಹೇ ರಾಘವ - ಎಲೈ ಶ್ರೀರಾಮನೇ, ಅಮರೋಪಮಸತ್ವಃ - ದೇವತೆಗಳಿಗೆ ಸಮಾನವಾದ ಸತ್ವಗುಣವುಳ್ಳನು, ಮಹಾತ್ಮಾ - ಮಹಾ ಉದಾರತ್ವವುಳ್ಳವನು, ಸತ್ಯಸಂಗರಃ - ಸತ್ಯಪ್ರತಿಜ್ಞಾವಂತನು, ಸರ್ವಜ್ಞಃ - ಸಮಸ್ತವನ್ನೂ ತಿಳಿದವನು,

ರ್ಥವೂ ಇಲ್ಲದವರು ಯಾವುದನ್ನೂ ಹೇಗೆ ಭುಜಿಸುವುದಿಲ್ಲವೋ, ಹಾಗೆಯೇ ಸಕಲ ಪದಾರ್ಥಗಳಿದ್ದರೂ, ಯಾವುದನ್ನೂ ಭುಜಿಸದಿರುವವನೂ, ಸತ್ತವನು ಹೇಗೆ ನಿರ್ವ್ಯಾಪಾರಿಯಾಗಿರುತ್ತಾನೆಯೋ, ಹಾಗೆಯೇ ಬದುಕಿದ್ದರೂ ನಿರ್ವ್ಯಾಪಾರಿಯಾಗಿರುವವನೂ, ಲಾಭಾಲಾಭಗಳಲ್ಲಿಯೂ ಸಮಬುದ್ಧಿಯುಳ್ಳವನೂ ಆದ ಮಾನವನು, ನಿನ್ನನ್ನು ಬಿಟ್ಟರೆ ಮತ್ತಾರೂ ಇರುವುದಿಲ್ಲ. ಆದುದರಿಂದ ನಿನ್ನಂತಹ ಮಹಾನುಭಾವನೆಲ್ಲಿಯೂ ಇಲ್ಲವೆಂದೆಣಿಸುತ್ತೇನೆ. ಎಲೈ ಶ್ರೀರಾಮಮೂರ್ತಿಯೆ! ನೀನು ಆತ್ಮಾನಾತ್ಮ ವಿಚಾರತತ್ಪರ

ಟಿ. (೧) ಹುಟ್ಟುಸಾವುಗಳೂ, ಸುಖದುಃಖಗಳೂ, ಪ್ರಪಂಚದಲ್ಲಿ ಜನ್ಮವೆತ್ತಿದ ಪ್ರತಿಯೊಂದು ಪ್ರಾಣಿಯ ಸಹಜವಾದ ಅನುಭವವೇ ಆಗಿದೆ. ಆತ್ಮನು ಅವಿನಾಶಿ, ಸುಖದುಃಖಾತೀತನೂ, ಜನನಮರಣಾತೀತನೂ ಅಹುದು, ಹುಟ್ಟುವುದೂ ಸಾಯುವುದೂ ಭ್ರಮಣವೆನಿಸುತ್ತದೆ. ಮಾನವನು ಅವಿನಾಶಿಯಾದ ಆತ್ಮನಾರೆಂಬುದನ್ನೂ, ತಾನಾರೆಂಬುದನ್ನೂ, ಸಕಲ ಶಾಸ್ತ್ರಜ್ಞಾನಸಂಪನ್ನರಾದ, ಅನೇಕ ವರ್ಷಗಳವರೆವಿಗೂ ಬದುಕಿ ಪ್ರಪಂಚದ ಇಯತ್ತೆಯನ್ನು ಕೇವಲ ಅನುಭವದಿಂದಲೇ ತಿಳಿದವರಾದ ಮಹನೀಯರಿಂದ ಅರಿತುಕೊಂಡು, ತಾನೆಂಬುದರಿಂದ ಹುಟ್ಟುವ ಸುಖದುಃಖಗಳಿಂದ ದೂರವಾಗಬೇಕು. ಅಂತಹನು, ಎಂದು ಯಾವುದನ್ನು ನೋಡಿದರೂ, “ ಆತ್ಮವತ್ಸರ್ವಭೂತಾನಿ ಯಃ ಪಶ್ಯತಿ ಸಪಶ್ಯತಿ ” ಎಂಬಂತೆ ತನ್ನಂತೆಯೇ ಅದನ್ನೂ ನೋಡಿ, ತನ್ನನ್ನು ತಾನೇ ಅರಿತುಕೊಳ್ಳಲು ಯೋಗ್ಯನಾಗುತ್ತಾನೆ. ಇಂತಹನು ಮೃತನಾದವನೆಂತೋ ಬದುಕಿದ್ದರೂ ಅಂತೆಯೇ ವರ್ತಿಸುವಾತನು. “ಸಕಲ ಸಂಪತ್ಸಮೃದ್ಧನಾಗಿದ್ದರೂ ಇಲ್ಲದಂತೆಯೇ ವರ್ತಿಸುವಾತನು” ಎಂದಮೇಲೆ ಆತ್ಮಾನಾತ್ಮ ವಿಚಾರದಲ್ಲಿ ನಿಷ್ಣಾತನಾದ ಮಹನೀಯನು ದ್ವಂದ್ವಗಳಿಗೆಂದಿಗೂ ಸಿಲುಕುವದಿಲ್ಲ. ಅಂತಹ ಪುಣ್ಯಪುರುಷನೇ ನೀನು. ಇಂತಹನು ಯಾವುದರಿಂದ ತಾನೇ ದುಃಖಗೊಂಡೀಯೆ ಎಂಬುದೇ ಈ ಶ್ಲೋಕದ ರಹಸ್ಯಾರ್ಥ. ಇದು **ಮುನಿಭಾವ ಪ್ರಕಾಶಿಕಾ**ಕಾರರ ಅಭಿಪ್ರಾಯ.

ಸರ್ವಜ್ಞ ಸ್ಸರ್ವದರ್ಶೀಚ ಬುದ್ಧಿಮಾಂಶ್ಚಾಸಿ ರಾಘವ! ॥ ೬ ॥ ನ ತ್ವಾ
ಮೇವಂ ಗುಣೈ ರ್ಯುಕ್ತಂ ಪ್ರಭವಾಭವ ಕೋವಿದಂ ॥ ಅವಿಷಹ್ಯತಮಂ
ದುಃಖ ಮಾಸಾದಯಿತು ಮರ್ಹತಿ ॥ ೭ ॥ ಪ್ರೋಷಿತೇ ಮಯಿ ಯತ್ಪಾಪಂ
ಮಾತ್ರಾ ಮತ್ಕಾರಣಾ ತ್ಕೃತಂ ॥ ಕ್ಷುದ್ರಯಾ ತದನಿಷ್ಟಂ ಮೇ ಪ್ರಸೀದತು
ಭವಾನ್ಮಮ ॥೮॥ ಧರ್ಮಬಂಧೇನ ಬದ್ಧೋಽಸ್ಮಿ ತೇನೇಮಾಂ ನೇಹ ಮಾತರಂ ॥
ಹನ್ಮಿ ತೀವ್ರೇಣ ದಂಡೇನ ದಂಡಾರ್ಹಾಂ ಪಾಪಕಾರಿಣೀಂ ॥ ೯ ॥ ಕಥಂ

ಸರ್ವದರ್ಶೀಚ - ಸರ್ವಕ್ಕೂ ಸಾಕ್ಷಿಭೂತನು, ಬುದ್ಧಿಮಾಂಶ್ಚ - ಭವಿಷ್ಯದರ್ಥವಿಷಯಕ ಬುದ್ಧಿಯುಳ್ಳವನೂ, ಅಸಿ - ಆಗಿದ್ದೀಯೆ. ॥ ೬ ॥ ಏವಂ - ಈಪರಿಯಾಗಿ, ಗುಣೈಃ - ಇಂತಹ ಗುಣಗಳಿಂದ, ಯುಕ್ತಂ - ಕೂಡಿರುವ, ಪ್ರಭವಾಭವಕೋವಿದಂ - ಭೂತಗಳ ಉತ್ಪತ್ತಿವಿನಾಶಗಳನ್ನು ತಿಳಿದಿರುವ, ಅವಿಷಹ್ಯತಮಂ - ಸಹಿಸಲಸಾಧ್ಯನಾದ, ತ್ವಾಂ - ನಿನ್ನಿನ್ನು, ದುಃಖಂ-ದುಃಖವು, ಆಸಾದಯಿತುಂ-ತಿರಸ್ಕರಿಸುವುದಕ್ಕೆ, ನಾರ್ಹತಿ - ಯೋಗ್ಯವಾಗುವದಿಲ್ಲ. ॥ ೭ ॥ ಮಯಿ - ನಾನು, ಪ್ರೋಷಿತೇ - ಪಟ್ಟಣದಲ್ಲಿರದಿರಲು, ಕ್ಷುದ್ರಯಾ - ನೀಚಳಾದ, ಮಾತ್ರಾ - ತಾಯಿಯಿಂದ, ಮತ್ಕಾರಣಾತ್ - ನನ್ನ ನಿಮಿತ್ತವಾಗಿ, ಯತ್ಪಾಪಂ - ಯಾವ ಪಾಪಕೃತ್ಯವು, ಕೃತಂ - ಮಾಡಲ್ಪಟ್ಟಿತೋ, ತತ್ - ಆ ನನ್ನ ಪಟ್ಟಾಭಿಷೇಕವು, (ನಿನಗೆ ವನವಾಸರೂಪವಾದ ಕೃತ್ಯವು,) ಮೇ-ನನಗೆ, ಅನಿಷ್ಟಂ - ಇಷ್ಟವಾದುದಲ್ಲ, ಮಮ - ನನಗೆ, ಭವಾನ್ - ನೀನು, ಪ್ರಸೀದತು - ಪ್ರಸನ್ನನಾಗು. ॥ ೮ ॥ ಧರ್ಮಬಂಧೇನ-ಧರ್ಮಪಾಶದಿಂದ, ಬದ್ಧಃ - ಕಟ್ಟಲ್ಪಟ್ಟವನು, ಅಸ್ಮಿ - ಆಗಿದ್ದೇನೆ, ತೇನ - ಆ ಕಾರಣ, ದಂಡಾರ್ಹಾಂ - ಶಿಕ್ಷೆಗೆಯೋಗ್ಯಳಾದ, ಪಾಪಕಾರಿಣೀಂ - ಪಾಪಕೃತ್ಯವನ್ನುಮಾಡಿರುವ, ಇಮಾಂಮಾತರಂ-

---

ನಾದುದರಿಂದ, ವ್ಯಸನಕಾರಣವುಳ್ಳವನಾದರೂ ವ್ಯಸನವನ್ನು ಹೊಂದದಿರುತ್ತೀಯೆ! ನೀನು ದೇವಸಮಾನನು: ಮಹಾತ್ಮನೂ ಅಹುದು; ಅಲ್ಲದೆ ಎಲ್ಲ ಯುದ್ಧಗಳಲ್ಲಿಯೂ ಜಯವುಳ್ಳವನು; ಸಮಸ್ತವನ್ನೂ ಅರಿತವನೆಂದರೆ ನೀನೇ ಸರಿ; ಎಲ್ಲ ಶಾಸ್ತ್ರಗಳನ್ನೂ ಓದಿರುವೆ; ಎಲ್ಲವನ್ನು ನೋಡುವಾತನೂ ನೀನೆ! ಬುದ್ಧಿವಂತರಲ್ಲಿ ಅತ್ಯುತ್ತಮನಾಗಿದ್ದೀಯೆ; ಆದುದರಿಂದ ನಿನ್ನಂತಹ ಮಹಾತ್ಮನು ಮೂರು ಲೋಕಗಳಲ್ಲಿಯೂ ಇಲ್ಲವೆಂದೆಣಿಸುತ್ತೇನೆ. ಅಣ್ಣಾ; ಶ್ರೀರಾಮಚಂದ್ರನೆ! ಹೀಗೆ ಸಕಲ ಸದ್ಗುಣಸಮನ್ವಿತನಾದವನೂ, ಉತ್ಪತ್ತಿವಿನಾಶಗಳನ್ನು ಚೆನ್ನಾಗಿ ತಿಳಿದವನೂ ಆದ ನೀನು ಎಲ್ಲರಿಗೂ ದುಃಖವನ್ನುಂಟುಮಾಡಲು ಯೋಗ್ಯನಾಗಬೇಡ. ॥೪-೭॥ ನಾನು ದೂರದೇಶಕ್ಕೆ ಹೋಗಿದ್ದಾಗ ನೀಚಸ್ವಭಾವವುಳ್ಳ ನನ್ನ ತಾಯಿಯಾದ ಕೈಕೇಯಿಯು, ನನ್ನನ್ನು ನಿಮಿತ್ತವಾಗಿಟ್ಟುಕೊಂಡು ಪಾಪಕಾರ್ಯವನ್ನು ಮಾಡಿದಳು. ಇದು ನನಗೆಷ್ಟುಮಾತ್ರವೂ ಸಮ್ಮತವಲ್ಲವು. ಆದುದದರಿಂದ ನೀನು ನನ್ನಲ್ಲಿ ಪ್ರಸನ್ನನಾಗು, ಅಣ್ಣಾ; ನಾನು ಧರ್ಮಪಾಶದಿಂದ ಬದ್ಧನಾದೆನು. ಹಾಗಾಗದಿದ್ದಿದ್ದರೆ, ಪಾಪಕೃತ್ಯಗಳನ್ನು ಮಾಡಿದವಳೂ, ದಂಡಾರ್ಹಳೂ ಆದ ನನ್ನ ತಾಯಿಗೆ ಮಹಾ ಕಠಿಣವಾದ ಶಿಕ್ಷೆಯನ್ನು ವಿಧಿಸಿಯೇ ವಿಧಿಸುತ್ತಿದ್ದೆನು. ಏನುಮಾಡಲಿ; ಧರ್ಮಕ್ಕೆ ಕಟ್ಟುಬಿದ್ದೆ!

ದಶರಥಾ ಜ್ಜಾತಾ ಶ್ಶುದ್ಧಾಭಿಜನಕರ್ಮಣಃ ॥ ಜಾನನ್ ಧರ್ಮ ಮಧರ್ಮಿಷ್ಠಂ
ಕುರ್ಯಾಂ ಕರ್ಮ ಜುಗುಪ್ಸಿತಂ ॥ ೧೦ ॥ (೧) ಗುರುಃ ಕ್ರಿಯಾವಾನ್ ವೃದ್ಧಶ್ಚ
ರಾಜಾ ಪ್ರೇತಃ ಪಿತೇತಿಚ ॥ ತಾತಂ ನಪರಿಗರ್ಹೇಯಂ ದೈವತಂ ಚೇತಿಸಂಸದಿ
॥ ೧೧ ॥ ಕೋಹಿ ಧರ್ಮಾರ್ಥಯೋಃ ಹೀನ ಮೀದೃಶಂ ಕರ್ಮ ಕಿಲ್ಬಿಷಂ ॥
ಸ್ತ್ರಿಯಾಃ ಪ್ರಿಯಂ ಚಿಕೀರ್ಷುಸ್ಸನ್ ಕುರ್ಯಾದ್ಧರ್ಮಜ್ಞ ! ಧರ್ಮವಿತ್ ॥೧೨॥
"ಅಂತಕಾಲೇಹಿ ಭೂತಾನಿ ಮುಹ್ಯಂತೀತಿ" ಪುರಾ ಶ್ರುತಿಃ॥ರಾಜ್ಞೈವಂ ಕುರ್ವತಾ

ಈ ತಾಯಿಯನ್ನು, ತೀವ್ರೇಣ - ತೀಕ್ಷ್ಣವಾದ, ದಂಡೇನ - ಶಿಕ್ಷೆಯಿಂದ, ನಹನ್ಮಿ-ಹೊಡೆಯಲಾರೆನು. ॥ ೯ ॥ ಶುದ್ಧಾಭಿಜನಕರ್ಮಣಃ - ಪರಿಶುದ್ಧವಾದ ಸತ್ಕುಲಪ್ರಸೂತತ್ವವೂ ಸತ್ಕರ್ಮವೂವುಳ್ಳ, ದಶರಥಾತ್ - ದಶರಥರಾಯನಿಂದ, ಜಾತಃ - ಹುಟ್ಟಿ, ಧರ್ಮಂ - ಧರ್ಮವನ್ನು, ಜಾನನ್-ತಿಳಿದು, ಅಧರ್ಮಿಷ್ಠಂ - ಅಧರ್ಮಪ್ರಧಾನವಾದ, ಜುಗುಪ್ಸಿತಂ - ದೂಷ್ಯವಾದ, ಕರ್ಮ - ಕಾರ್ಯವನ್ನು, ಕಥಂಕುರ್ಯಾಂ - ಹೇಗೆತಾನೇ ಮಾಡಿಯೇನು. ॥ ೧೦ ॥ ಪಿತಾ - ತಂದೆಯು, ಗುರುಃ - ಗುರುತ್ವವುಳ್ಳವನು, ಕ್ರಿಯಾವಾನ್ - ಕ್ರಿಯಾವಂತನು, ವೃದ್ಧಶ್ಚ - ಜ್ಞಾನವೃದ್ಧನೂ ವಯೋವೃದ್ಧನು, ರಾಜಾ - ಅರಸನಾದವನು, ದೈವತಂಚೇತಿ - ದೇವತಾಸ್ವರೂಪನೆಂದು, ತಾತಂ - ತಂದೆಯನ್ನು, ಸಂಸದಿ - ಸಭೆಯಲ್ಲಿ, ನಪರಿಗರ್ಹೇಯಂ - ನಿಂದಿಸಲಾರೆನು. ॥ ೧೧ ॥ ಹೇ ಧರ್ಮಜ್ಞ - ಎಲೈ ಧರ್ಮವನ್ನರಿತವನೇ, ಧರ್ಮವಿತ್ - ಧರ್ಮಜ್ಞನಾದ, ಕೋಹಿ - ಯಾವನು ತಾನೇ, ಸ್ತ್ರಿಯಾಃ - ಹೆಂಗಸಿಗೆ, ಪ್ರಿಯಂ - ಇಷ್ಟವನ್ನು, ಚಿಕೀರ್ಷುಸ್ಸನ್ - ಮಾಡುವನಾಗಿ, ಧರ್ಮಾರ್ಥಯೋಃ - ಧರ್ಮಾರ್ಥಗಳೆರಡರಿಂದಲೂ, ಹೀನಂ - ವರ್ಜಿತವಾದ, ಈದೃಶಂ - ಇಂತಹುದಾದ, ಕಿಲ್ಬಿಷಂಕರ್ಮ-ಪಾಪಕೃತ್ಯವನ್ನು, ಕುರ್ಯಾತ್ - ಮಾಡುತ್ತಾನೆ. ॥ ೧೨ ॥ ಅಂತಕಾಲೇಹಿ - ಮರಣಕಾಲದಲ್ಲಿಯೂ,

---

ಪರಿಶುದ್ಧವಾದ ಕುಲದಲ್ಲಿ ಹುಟ್ಟಿದವನೂ, ನಿರ್ಮಲವಾದ ಪುಣ್ಯಕಾರ್ಯಗಳನ್ನು ಮಾಡಿದವನೂ ಆದ ದಶರಥರಾಯನ ಮಗನಾಗಿ ಹುಟ್ಟಿ, ಸಕಲ ಧರ್ಮಗಳನ್ನೂ ತಿಳಿದುಕೊಂಡು, ಅಧರ್ಮವನ್ನುಂಟುಮಾಡುವುದೂ, ಲೋಕನಿಂದ್ಯವೂ ಆದ ಕರ್ಮವನ್ನು ಹೇಗೆತಾನೆ ಮಾಡಲಿ? ॥೮-೧೦॥ ಓ ಶ್ರೀರಾಮನೆ! ಗುರುವೆಂದೂ, ಯಾಗಗಳೇ ಮೊದಲಾದ ಸತ್ಕ್ರಿಯೆಗಳನ್ನು ಮಾಡಿದವನೆಂದೂ, ಮುದುಕನೆಂದೂ, ತಂದೆಯೆಂದೂ, ಮೃತನಾದವನೆಂದೂ, ದೇವಸಮಾನನೆಂದೂ ತಿಳಿದು, ಸೇರಿದ ಈ ಸಭೆಯಲ್ಲಿ ತಂದೆಯಾದ ದಶರಥರಾಯನನ್ನು ನಿಂದಿಸದೆ ಸುಮ್ಮನಿದ್ದೇನೆ. ಎಲ್ಲ ಧರ್ಮಗಳನ್ನೂ ಚೆನ್ನಾಗಿ ತಿಳಿದಿರುವ ಎಲೈ ಶ್ರೀರಾಮಚಂದ್ರನೆ!

ಟಿ. (೧) ತಂದೆಯಾದ ದಶರಥನು, ಶಿಕ್ಷಾ ಗುರುವೂ, ಯಜನಾದಿ ಕ್ರಿಯೆಗಳಿಂದ ಮಾನ್ಯನೂ, ವಯೋವೃದ್ಧನೂ, ಮಹಾರಾಜನೂ ಆಗಿದ್ದನು. ಮೃತನೂ ಆದನು. ಇಂತಹನನ್ನು ನಿಂದಿಸುವುದರಿಂದೇನು ಫಲ? ಆದರೆ ಒಂದು ಮಾತ್ರ ನನ್ನನ್ನು ಬಾಧಿಸುತ್ತದೆ. "ಅಂತಕಾಲೇಹಿ ಭೂತಾನಿ ಮುಹ್ಯಂತಿ" (ಎಲ್ಲ ಪ್ರಾಣಿಗಳೂ ಮರಣಕಾಲದಲ್ಲಿ ಮೌಢ್ಯವನ್ನು ವಹಿಸುತ್ತವೆ) ಎಂಬುದು ಹಿಂದಿನವರು ಹೇಳುತ್ತಿದ್ದ ಗಾಥೆಯಾಗಿದ್ದಿತು. ಆ ಗಾಥೆಯು ನಮ್ಮ ತಂದೆಯಾದ ದಶರಥರಾಯನಿಂದಲೇ ಪ್ರತ್ಯಕ್ಷವಾಗಿ ಮಾಡಲ್ಪಟ್ಟಿತಲ್ಲಾ ಎಂಬುದೇ ನನ್ನ ವ್ಯಥೆ. ತಂದೆಗೆ ಮೌಢ್ಯವನ್ನು ಸ್ಥಿರಗೊಳಿಸಲು ನೀನು ಬಯಸುವದಿಲ್ಲವಷ್ಟೆ. ಎಂಬುದೇ ಇಲ್ಲಿನ ಅಭಿಪ್ರಾಯ.

ಲೋಕೇ ಪ್ರತ್ಯಕ್ಷಂ ಸಾ ಶ್ರುತಿಃ ಕೃತಾ ॥ ೧೩ ॥ ಸಾಧ್ವರ್ಥ ಮಭಿಸಂಧಾಯ
ಕ್ರೋಧಾ ನ್ಮೋಹಾಚ್ಚ ಸಾಹಸಾತ್ ॥ ತಾತಸ್ಯ ಯದತಿಕ್ರಾಂತಂ ಪ್ರತ್ಯಾಹರತು
ತದ್ಭವಾನ್ ॥ ೧೪ ॥ ಪಿತುರ್ಹಿ ಸಮತಿಕ್ರಾಂತಂ ಪುತ್ರೋ ಯಸ್ಸಾಧು ಮನ್ಯತೇ॥
ತದಪತ್ಯಂ ಮತಂ ಲೋಕೇ ವಿಪರೀತ ಮತೋಽನ್ಯಥಾ ॥ ೧೫ ॥ ತದಪತ್ಯಂ
ಭವಾನಸ್ತು ಮಾಭವಾನ್ ದುಷ್ಕೃತಂ ಪಿತುಃ ॥ ಅಭಿಪತ್ತಾತ್ಕೃತಂ ಕರ್ಮ
ಲೋಕೇ ಧೀರವಿಗರ್ಹಿತಂ ॥೧೬॥ ಕೈಕೇಯೀಂ ಮಾಂಚ ತಾತಂಚ ಸುಹೃದೋ

ಭೂತಾನಿ - ಭೂತಗಳು, ಮುಹ್ಯಂತಿ - ವಿಪರೀತ ಬುದ್ಧಿಯನ್ನು ಹೊಂದುತ್ತವೆ, ಇತಿ - ಇಂತೆಂದು, ಪುರಾ - ಪೂರ್ವದಲ್ಲಿ, ಶ್ರುತಿಃ - ಗಾದೆಯು ಇದ್ದಿತು, ಸಾಶ್ರುತಿಃ - ಆ ಗಾದೆಯು, ಏವಂ - ಈಪರಿಯಾಗಿ, ಕುರ್ವತಾ - ಮಾಡುತ್ತಿರುವ, ರಾಜ್ಞಾ - ಅರಸನಿಂದ, ಲೋಕೇ - ಲೋಕದಲ್ಲಿ, ಪ್ರತ್ಯಕ್ಷಂ-ಯಥಾರ್ಥವಾಗಿ, ಕೃತಾ - ಮಾಡಲ್ಪಟ್ಟಿತು. ॥ ೧೩ ॥ ಕ್ರೋಧಾತ್ - ಕೈಕೇಯಿಯ ಕ್ರೋಧದಿಂದಲೂ, ಮೋಹಾಚ್ಚ - ದಶರಥನ ಮೌಢ್ಯದಿಂದಲೂ, ಸಾಹಸಾಚ್ಚ - ವಿಮರ್ಶೆಯಿಲ್ಲದ ಕಾರ್ಯ ನಡಿಸಿರುವುದರಿಂದಲೂ, ತಾತಸ್ಯ - ತಂದೆಯ, ಯತ್ - ಯಾವ ಕಾರ್ಯವು, ಅತಿಕ್ರಾಂತಂ-ಧರ್ಮಾತಿಕ್ರಮಣ ಮಾಡಲ್ಪಟ್ಟಿತೋ, ತತ್ - ಅದನ್ನು, ಸಾಧ್ವರ್ಥಂ - ಸದರ್ಥವನ್ನಾಗಿ, ಅನುಸಂಧಾಯ - ಎಣಿಸಿ, ಭವಾನ್ - ನೀನು, ಪ್ರತ್ಯಾಹರತ್ - ಹಿಂದಕ್ಕೆತಿರುಗಿಸು. ॥ ೧೪ ॥ ಪಿತುಃ - ತಂದೆಯಿಂದ, ಸಮತಿಕ್ರಾಂತಂ - ವ್ಯತ್ಯಾಸವಾಗಿ ಮಾಡಲ್ಪಟ್ಟ ಕಾರ್ಯವನ್ನು, ಯಃಪುತ್ರಃ-ಯಾವ ಮಗನು, ಸಾಧು - ಚನ್ನಾಗಿ, ಕರ್ತುಂ - ಮಾಡಲು, ಮನ್ಯತೇ - ಎಣಿಸುತ್ತಾನೆಯೋ, ಲೋಕೇ - ಲೋಕದಲ್ಲಿ, ತತ್ - ಅದೇ, ಅಪತ್ಯಂ - ಸಂತಾನವೆಂದು, ಮತಂ - ಅಭಿಪ್ರಾಯವು, ಅತಃ - ಇದಕ್ಕಿಂತಲೂ, ಅನ್ಯಥಾ - ಮತ್ತೊಂದು ಬಗೆಯಾದರೆ, ವಿಪರೀತಂ - ವ್ಯತ್ಯಸ್ತವು. ॥ ೧೫ ॥ ತದಪತ್ಯಂ-ಅಂತಹ ಮಗನೇ, ಭವಾನ್ - ನೀನು, ಅಸ್ತು - ಆಗು, ಭವಾನ್ - ನೀನು, ಲೋಕೇ - ಲೋಕದಲ್ಲಿ, ಧೀರವಿಗರ್ಹಿತಂ - ಧೈರ್ಯಶಾಲಿಗಳಿಂದ ನಿಂದಿತವಾದ, ಪಿತುಃ - ತಂದೆಯಿಂದ,

ಸಕಲ ಧರ್ಮಗಳನ್ನರಿತ ಯಾವನೇ ಆದರೂ, ಹೆಂಗಸಿಗೋಸುಗ ಪ್ರಿಯವನ್ನುಂಟುಮಾಡಲು, ಧರ್ಮಾರ್ಥಹೀನವಾದುದೂ ಘೋರವಾದ ಪಾಪವನ್ನು ದೊರಕಿಸುವುದೂ ಆದ ಕಾರ್ಯವನ್ನು ಮಾಡುತ್ತಾನೆ? ದಶರಥರಾಯನನ್ನು ಬಿಟ್ಟರೆ ಇಂತಹ ಪಾಪಕಾರ್ಯವನ್ನು ಇನ್ನಾರೂ ಮಾಡುವುದಿಲ್ಲ. ಓ ಪೂಜ್ಯನೆ! ಅಂತ್ಯಕಾಲದಲ್ಲಿ ಸಕಲ ಭೂತಗಳಿಗೂ ಬುದ್ಧಿಮಾಂದ್ಯವುಂಟಾಗುತ್ತದೆಯೆಂದು, ಎಲ್ಲರೂ ಹೇಳಿಕೊಳ್ಳುತ್ತಿದ್ದ ಗಾಥೆಯು ನಮ್ಮ ತಂದೆಯಾದ ದಶರಥಮಹಾರಾಜನು ಮರಣಕಾಲದಲ್ಲಿ ಮಾಡಿದ ಪಾಪಕಾರ್ಯದಿಂದ ವಾಸ್ತವವಾದುದೆಂದು ತೋರುತ್ತದೆ. ಅಲ್ಲದೆ ಕೈಕೇಯಿಯು "ವಿಷವನ್ನು ಕುಡಿದು ಸಾಯುತ್ತೇನೆ" ಎಂದು ಹೇಳಿ ಕೋಪವನ್ನು ತೋರಿದುದರಿಂದಲೂ, ತಾನು ಅವಳಲ್ಲಿ ಮೋಹವುಳ್ಳವನಾದುದರಿಂದಲೂ, ವೃದ್ಧನಾಗಿದ್ದುದರಿಂದಲೂ ನಮ್ಮ ಜನಕನು ಧರ್ಮವನ್ನು ತೊರೆದು ಇಂತಹ ಅಧರ್ಮ ಕಾರ್ಯವನ್ನು ಮಾಡಿದನಲ್ಲವೆ? ಅಯ್ಯಾ ಶ್ರೀರಾಮಮೂರ್ತಿಯೆ! ಈಗ ನೀನು, ನಮ್ಮ ತಂದೆಯು ಮಾಡಿರುವ ಈ ಅಧರ್ಮವನ್ನು ಸರಿ

ಬಾಂಧವಾಂಶ್ಚನಃ ‖ ಪೌರ ಜಾನಪದಾನ್ ಸರ್ವಾಂ ಸ್ತ್ರಾತು ಸರ್ವಮಿದಂ ಭವಾನ್ ‖ ೧೭ ‖ ಕ್ವಚಾರಣ್ಯಂ ಕ್ವಚಕ್ಷಾತ್ರಂ ಕ್ವಜಟಾಃ ಕ್ವಚ ಪಾಲನಂ ‖ ಈದೃಶಂ ವ್ಯಾಹತಂ ಕರ್ಮ ನ ಭವಾನ್ ಕರ್ತುಮರ್ಹತಿ ‖ ೧೮ ‖ ಏಷಹಿ ಪ್ರಥಮೋ ಧರ್ಮಃ ಕ್ಷತ್ರಿಯಸ್ಯಾಽಭಿಷೇಚನಂ ‖ ಯೇನ ಶಕ್ಯಂ ಮಹಾಪ್ರಾಜ್ಞ !

ಕೃತಂ - ಮಾಡಲ್ಪಟ್ಟ, ದುಷ್ಕೃತಂಕರ್ಮ - ದುರ್ವ್ಯಾಪಾರವನ್ನು, ನಾಭಿಪತ್ತಾ - ಹೊಂದತಕ್ಕವನಲ್ಲ. ‖ ೧೬ ‖ ಭವಾನ್ - ನೀನು, ಕೈಕಯೀಂ - ಕೈಕೇಯೀದೇವಿಯನ್ನೂ, ಮಾಂಚ-ನನ್ನನ್ನೂ, ತಾತಂಚ - ತಂದೆಯನ್ನೂ, ನಃ - ನಮ್ಮ, ಸುಹೃದಶ್ಚ - ಸ್ನೇಹಿತರನ್ನೂ, ಬಾಂಧವಾಂಶ್ಚ - ಬಂಧುಗಳನ್ನೂ, ಸರ್ವಾನ್ - ಸಮಸ್ತರಾದ, ಪೌರಜಾನಪದಾನ್ - ಪಟ್ಟಣಿಗರನ್ನೂ ದೇಶವಾಸಿಗಳನ್ನೂ, ಸರ್ವಮಿದಂ - ಈ ಸಮಸ್ತ ಲೋಕವನ್ನೂ, ತ್ರಾತುಂ - ರಕ್ಷಿಸುವುದಕ್ಕೆ, ಅರ್ಹಸಿ - ಯೋಗ್ಯನಾಗು. ‖ ೧೭ ‖ ಅರಣ್ಯಂಚ - ವನವು, ಕ್ವ - ಎಲ್ಲಿ, ಕ್ಷಾತ್ರಂ - ಕ್ಷತ್ರಿಯ ಧರ್ಮವು, ಕ್ವ - ಎಲ್ಲಿ, ಜಟಾಃ - ಜಡೆಗಳು, ಕ್ವ - ಎಲ್ಲಿ, ಪಾಲನಂ - ರಾಜ್ಯಸಂರಕ್ಷಣವು, ಕ್ವ-ಎಲ್ಲಿ, ಈದೃಶಂ - ಇಂತಹುದಾದ, ವ್ಯಾಹತಂ - ಪರಸ್ಪರ ವಿರುದ್ಧವಾದ, ಕರ್ಮ - ವ್ಯಾಪಾರವನ್ನು, ಭವಾನ್ - ನೀನು, ಕರ್ತುಂ - ಮಾಡುವುದಕ್ಕೆ, ನಾರ್ಹತಿ - ಯೋಗ್ಯನಾಗಬೇಡ. ‖ ೧೮ ‖ ಕ್ಷತ್ರ್ಯಸ್ಯ - ರಾಜನಿಗೆ, ಅಭಿಷೇಚನಂ - ಪಟ್ಟಾಭಿಷೇಕವೆಂಬ, ಏಷಃಧರ್ಮಃ - ಈ ಧರ್ಮವು, ಪ್ರಥಮೋಹಿ - ಮೊದಲಿನದಷ್ಟೆ, ಹೇ ಮಹಾಪ್ರಾಜ್ಞ - ಎಲೈ ಬಹಳವಾಗಿ ತಿಳಿದವನೇ, ಯೇನ - ಯಾವ ಪಟ್ಟಾಭಿಷೇಕದಿಂದ, ಪ್ರಜಾನಾಂ - ಪ್ರಜೆಗಳ, ಪರಿಪಾಲನಂ - ಸಂರಕ್ಷಣೆಯು, ಶಕ್ಯಂ - ಅರ್ಹವಾಗುವದೋ. ‖ ೧೯ ‖ ಕಶ್ಚಕ್ಷತ್ರ

ಗೊಳಿಸಿ ಆತನಿಗೆ ಕೀರ್ತಿಯುಂಟಾಗುವಂತೆ ಮಾಡು. ‖೧೧-೧೬‖ ಲೋಕದಲ್ಲಿ ಯಾವಾತನು ತಂದೆಯು ಮಾಡಿದ ಅಧರ್ಮವನ್ನು ಧರ್ಮವಾಗುವಂತೆ ಮಾಡುತ್ತಾನೆಯೋ ಅವನೇ ಮಗನಲ್ಲದೆ, ಬೇರೊಬ್ಬನು ಮಗನೆನಿಸುವುದಿಲ್ಲ. ಹಾಗೆ ನೀನೂ ಸಹ, ನಿನ್ನ ತಂದೆಗೆ ತಕ್ಕ ಮಗನೆನಿಸು. ತಂದೆಯು ಮಾಡಿದುದೂ, ಪ್ರಜೆಗಳ ನಿಂದೆಗೆ ಪಾತ್ರವಾದುದೂ ಆದ ಕರ್ಮವನ್ನು ಸ್ವಲ್ಪವಾದರೂ ಉಪೇಕ್ಷೆ ಮಾಡಬಾರದು. ಅದರಲ್ಲಿಯೂ ನಿನ್ನಂತಹ ಸತ್ಪುತ್ರನಾದವನು, ತಂದೆಯು ಮಾಡಿದ ಅಧರ್ಮವನ್ನು ಸರಿಪಡಿಸದೆ ಎಷ್ಟುಮಾತ್ರವೂ ಸುಮ್ಮನಿರಬಾರದು. ಅಣ್ಣಾ ; ಶ್ರೀರಾಮಚಂದ್ರ! ನೀನು ಕೈಕೇಯಿಯನ್ನೂ, ನನ್ನನ್ನೂ, ತಂದೆಯನ್ನೂ, ಸ್ನೇಹಿತರನ್ನೂ, ಬಂಧುಗಳನ್ನೂ, ಸಂರಕ್ಷಿಸಲು ಯೋಗ್ಯನಾಗಿದ್ದೀಯೆ ! ರಾಜ್ಯಸೂತ್ರವನ್ನು ಹಿಡಿದು ಪ್ರಜೆಗಳೆಲ್ಲರನ್ನೂ ಕಾಪಾಡುವುದರಲ್ಲಿ ನಿನ್ನಂತಹ ಸಮರ್ಥನಾವನುತಾನೇ ಇರುತ್ತಾನೆ! ಅಲ್ಲದೆ ಈ ಅರಣ್ಯವೆತ್ತ? ಕ್ಷಾತ್ರವೆತ್ತ? ಜಡೆಗಳನ್ನು ಧರಿಸುವುದೆಷ್ಟುಮಾತ್ರದ್ದು? ರಾಜ್ಯಪರಿಪಾಲನೆಯು ಎಷ್ಟರಮಟ್ಟನದು? ನಿನ್ನಂತಹ ಮಹಾನುಭಾವನು, ಈ ವಿಧವಾಗಿ ವಿರುದ್ಧ ಕಾರ್ಯಗಳನ್ನು ಮಾಡುವುದು ಎಷ್ಟುಮಟ್ಟಿಗೂ ಯೋಗ್ಯವೆನಿಸುವುದಿಲ್ಲ. ನೀನು ಪಂಡಿತರಲ್ಲಿ ಶ್ರೇಷ್ಠನಾದವ.. ಎಲೈ ಶ್ರೀರಾಮನೆ! ಪ್ರಜಾಪಾಲನೆಯನ್ನು ಮಾಡಲು ತಕ್ಕುದಾದ ಮತ್ತು ಮೂಲಭೂತವಾದ ಪಟ್ಟಾಭಿಷೇಕವೇ ಕ್ಷತ್ರಿಯನಾದವನಿಗೆ ಮೊತ್ತಮೊದಲಿನ ಧರ್ಮವೆನಿಸುತ್ತದೆಯಲ್ಲವೆ?

ಪ್ರಜಾನಾಂ ಪರಿಪಾಲನಂ ॥ ೧೯ ॥ (೧) ಕಶ್ಚ ಪ್ರತ್ಯಕ್ಷ ಮುತ್ಸೃಜ್ಯ ಸಂಶಯಸ್ಥ ಮಲಕ್ಷಣಂ ॥ ಆಯತಿಸ್ಥಂ ಚರೇ ದ್ಧರ್ಮಂ ಕ್ಷತ್ರಬಂಧು ರನಿಶ್ಚಿತಂ ॥ ೨೦ ॥ ಅಥ ಕ್ಲೇಶಜ ಮೇವ ತ್ವಂ ಧರ್ಮಂ ಚರಿತು ಮಿಚ್ಛಸಿ ॥ ಧರ್ಮೇಣ ಚತುರೋ ವರ್ಣಾ ಪಾಲಯರ್ನ್ ಕ್ಲೇಶ ಮಾಪ್ನುಹಿ॥೨೧॥ ಚತುರ್ಣಾ ಮಾಶ್ರಮಾಣಾಂಹಿ ಗಾರ್ಹಸ್ಥ್ಯಂ ಶ್ರೇಷ್ಠ ಮಾಶ್ರಮಂ ॥ ಪ್ರಾಹು ರ್ಧರ್ಮಜ್ಞ ! ಧರ್ಮಜ್ಞಾ ಸ್ತಂ ಕಥಂ ತ್ಯಕ್ತು ಮರ್ಹಸಿ ॥ ೨೨ ॥ ಶ್ರುತೇನ ಬಾಲಸ್ಥಾನೇನ ಜನ್ಮನಾ

ಬಂಧುಃ - ಯಾವ ಅರಸುತಾನೇ, ಪ್ರತ್ಯಕ್ಷಂ - ಪ್ರತ್ಯಕ್ಷವಾದ ತ್ಯಾಗಭೋಗಾರ್ಹರಾಜ್ಯವನ್ನು, ಉತ್ಸೃಜ್ಯ - ಬಿಟ್ಟು, ಸಂಶಯಸ್ಥಂ - ಸಂದಿಗ್ಧವಾದ, ಅಲಕ್ಷಣಂ - ಲಕ್ಷಣರಹಿತವಾದ, ಆಯತಿಸ್ಥಂ-ಮುಂದೆಬರತಕ್ಕ, ಅನಿಶ್ಚಿತಂ - ಹೀಗೆಯೇ ಸರಿಯೆಂದು ಯಾವ ಪ್ರಮಾಣದಿಂದಲೂ ನಿಶ್ಚಯಿಸಲ್ಪಡದಿರುವ, ಧರ್ಮಂ - ಧರ್ಮವನ್ನು, ಚರೇತ್ - ಮಾಡುತ್ತಾನೆ. ॥ ೨೦ ॥ ಅಥ - ಬಳಿಕ, ತ್ವಾಂ - ನೀನು, ಕ್ಲೇಶಜಮೇವ - ಕಾಯಕ್ಲೇಶದಿಂದ ಹುಟ್ಟಿದ, ಧರ್ಮಂ - ಧರ್ಮವನ್ನು, ಚರಿತುಂ-ಮಾಡುವದಕ್ಕೆ, ಇಚ್ಛಸಿ - ಇಚ್ಛಿಸುತ್ತೀಯೋ, ಧರ್ಮೇಣ-ಧರ್ಮದಿಂದ, ಚತುರಃ - ನಾಲ್ಕಾದ, ವರ್ಣಾನ್ - ಬ್ರಹ್ಮ, ಕ್ಷತ್ರ, ವೈಶ್ಯ, ಶೂದ್ರರೆಂಬ ಚತುರ್ವರ್ಣಗಳನ್ನು, ಪಾಲಯನ್ - ರಕ್ಷಿಸುತ್ತ, ಕ್ಲೇಶಂ-ಕಾಯಕ್ಲೇಶವನ್ನು, ಆಪ್ನುಹಿ - ಹೊಂದು. ॥ ೨೧ ॥ ಹೇ ಧರ್ಮಜ್ಞ - ಎಲೈ ಧರ್ಮವನ್ನರಿತವನೇ, ಚತುರ್ಣಾಂ - ನಾಲ್ಕಾದ, ಆಶ್ರಮಾಣಾಂ - ಬ್ರಹ್ಮಚರ್ಯ, ಗಾರ್ಹಸ್ತ್ಯ, ವಾನಪ್ರಸ್ಥ, ಯತ್ಯಾಶ್ರಮಗಳೆಂಬ ನಾಲ್ಕಾಶ್ರಮಗಳೊಳಗೆ, ಗಾರ್ಹಸ್ಥ್ಯಂಆಶ್ರಮಂ - ಗೃಹಸ್ಥಾಶ್ರಮವನ್ನು, ಧರ್ಮಜ್ಞಾಃ-ಧರ್ಮವೇತ್ತರು, ಶ್ರೇಷ್ಠಂ - ಶ್ರೇಷ್ಠವನ್ನಾಗಿ, ಪ್ರಾಹುಃ - ಹೇಳುತ್ತಾರೆ, ತಂ - ಅಂತಹ ಆಶ್ರಮವನ್ನು, ತ್ಯಕ್ತುಂ - ಬಿಡುವದಕ್ಕೆ, ಕಥಮರ್ಹಸಿ - ಹೇಗೆತಾನೆ ಯೋಗ್ಯನಾಗುತ್ತೀಯೆ. ॥ ೨೨ ॥ ಹಿ - ಯಾವ ಕಾರಣ, ಅಹಂತು - ನಾನಾದರೆ, ಭವತಃ - ನಿನಗಿಂತಲೂ, ಶ್ರುತೇನ - ಶಾಸ್ತ್ರದಿಂದಲೂ,

ಲೋಕದಲ್ಲಿ ಯಾವನೇ ಆದರೂ, ಪ್ರತ್ಯಕ್ಷವನ್ನು ತೊರೆದು, ಸಂಶಯುವಾಗಿರುವುದೂ, ಲಕ್ಷಣವಿಲ್ಲದುದೂ, ಬೇರೊಂದು ಕಾಲದಲ್ಲಿ ಫಲಿಸುವಂಥದೂ, ನಿಶ್ಚಯವಲ್ಲದುದೂ ಆದ ಧರ್ಮವನ್ನಾಚರಿಸುತ್ತಾನೆ? ಕ್ಷತ್ರಿಯನಾದವನು ಪ್ರತ್ಯಕ್ಷ ಫಲವನ್ನೀಯುವ ಧರ್ಮವನ್ನು ತೊರೆದು, ಎಂದೋ ಒಂದುದಿನ ಫಲವೀಯುವ ಧರ್ಮವನ್ನು ಅನುಸರಿಸಲು ಯೋಗ್ಯನಾಗುವುದಿಲ್ಲ.॥೧೭-೨೦॥ ಶ್ರಮಪಟ್ಟು ಪ್ರಜಾಪರಿಪಾಲನೆಯನ್ನು ಮಾಡುವುದರಿಂದಲೇ ಧರ್ಮಿಷ್ಠನೆನಿಸು. ಅಯ್ಯಾ ಶ್ರೀರಾಮಮೂರ್ತಿಯೆ? ಲೋಕದಲ್ಲಿ, ಧರ್ಮಗಳನ್ನು ಚೆನ್ನಾಗಿ ಅರಿತಿರುವವರು, ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಯತಿ ಎಂಬ ನಾಲ್ಕು ವಿಧಗಳಾದ ಆಶ್ರಮಗಳಲ್ಲಿ ಗೃಹಸ್ಥಾಶ್ರಮವೇ ಶ್ರೇಷ್ಠವಾದುದೆಂದು ಹೇಳುತ್ತಾರೆ. ಆದುದರಿಂದ ನೀನು ಗಾರ್ಹಸ್ಥ್ಯವನ್ನೇ ಅವಲಂಬಿಸುವವನಾಗು. ನಾನು ನಿನಗಿಂತ, ವಿದ್ಯೆಯ

ಟಿ. (೧) ಇದು ನಾಸ್ತಿಕ ಮತಕ್ಕೆ ಸೇರಿದ ಒಂದು ಮೂಲತತ್ವ, ಪ್ರತ್ಯಕ್ಷವೇ ಪ್ರಮಾಣ, ಅಪರೋಕ್ಷವು ಹೇಯ, ಎಂಬುದೇ ಇಲ್ಲಿನ ರಹಸ್ಯ.

ಭವತೋಹ್ಯಹಂ ॥ ಸಕಥಂ ಪಾಲಯಿಷ್ಯಾಮಿ ಭೂಮಿಂ ಭವತಿ ತಿಷ್ಠತಿ ॥ ೨೩ ॥ ಹೀನಬುದ್ಧಿಗುಣೋ ಬಾಲೋ ಹೀನಸ್ಥಾನೇನ ಚಾಪ್ಯಹಂ ॥ ಭವತಾಚ ವಿನಾಭೂತೋ ನವರ್ತಯಿತು ಮುತ್ಸಹೇ ॥ ೨೪ ॥ ಇದಂ ನಿಖಿಲಮವ್ಯಗ್ರಂ ರಾಜ್ಯಂ ಪಿತ್ರ್ಯ ಮಕಂಟಕಂ ॥ ಅನುಶಾಧಿ ಸ್ವಧರ್ಮೇಣ ಧರ್ಮಜ್ಞ! ಸಹ ಬಾಂಧವೈಃ ॥ ೨೫ ॥ ಇಹೈವ ತ್ವಾಭಿಷಿಂಚಂತು ಸರ್ವಾಃ ಪ್ರಕೃತಯ ಸ್ಸಹ ॥ ಋತ್ವಿಜ ಸ್ಸವಸಿಷ್ಠಾಶ್ಚ ಮಂತ್ರವ ನ್ಮಂತ್ರಕೋವಿದಾಃ ॥ ೨೬ ॥ ಅಭಿಷಿಕ್ತ ಸ್ತ್ವಮಸ್ಮಾಭಿ ರಯೋಧ್ಯಾಂ ಪಾಲನೇ ವ್ರಜ ॥ ವಿಜಿತ್ಯ ತರಸಾ ಲೋಕಾ

ಸ್ಥಾನೇನ - ಸ್ಥಿತಿಯಿಂದಲೂ, ಜನ್ಮನಾ - ಉತ್ಪತ್ತಿಯಿಂದಲೂ, ಬಾಲಃ - ಹುಡುಗನು, ಭವತಿ - ನೀನು, ತಿಷ್ಠತಿ - ಇರಲು, ಸಃ - ಅಂತಹ ನಾನು, ಭೂಮಿಂ - ಭೂಮಂಡಲವನ್ನು, ಕಥಂಪಾಲಯಿಷ್ಯಾಮಿ - ಹೇಗೆ ಪರಿಪಾಲನೆಮಾಡುತ್ತೇನೆ. ॥ ೨೩ ॥ ಅಹಂ - ನಾನು, ಹೀನಬುದ್ಧಿಗುಣಃ-ಸದ್ಗುಣ ಬುದ್ಧಿರಹಿತನಾದ, ಬಾಲಃ - ಹುಡುಗನು, ಸ್ಥಾನೇನಚ - ಸ್ಥಿತಿಯಿಂದಲೂ, ಹೀನಶ್ಚ - ಕಡಿಮೆ ಯಾದವನು, ಭವತಾ - ನಿನ್ನೊಡನೆ, ವಿನಾಭೂತಶ್ಚ - ವಿರಹಿತನೂ ಆಗಿ, ವರ್ತಯಿತುಂ - ಜೀವಿಸುವದಕ್ಕೆ, ನೋತ್ಸಹೇ - ಉದ್ಯುಕ್ತನಾಗಲಾರೆನು. ॥ ೨೪ ॥ ಹೇ ಧರ್ಮಜ್ಞ - ಎಲೈ ಧರ್ಮವನ್ನರಿತವನೇ, ಅಖಿಲಂ - ಸಮಸ್ತವಾದ, ಅವ್ಯಗ್ರಂ - ನಿನ್ನಲ್ಲಿಯೇ ಬಹುಕಾಲದಿಂದಲೂ ಪ್ರಾಪ್ತವಾದ, ಪಿತ್ರ್ಯಂ - ತಂದೆಯ ಸಂಬಂಧವಾದ, ಇದಂರಾಜ್ಯಂ - ಈ ರಾಜ್ಯವನ್ನು, ಸ್ವಧರ್ಮೇಣ - ಕ್ಷತ್ರಿಯ ಧರ್ಮದಿಂದ, ಅಕಂಟಕಂ - ನಿಷ್ಕಂಟಕವಾಗಿ, ಬಾಂಧವೈಸ್ಸಹ - ಬಂಧುಗಳೊಡನೆ, ಅನುಶಾಧಿ - ಸಂರಕ್ಷಿಸು, ಸರ್ವಾಃ - ಸಮಸ್ತರಾದ, ಪ್ರಕೃತಯಃ - ಮಂತ್ರಿಗಳೂ, ಸವಸಿಷ್ಠಾಃ - ವಸಿಷ್ಠ ಋಷಿಗಳಿಂದೊಡಗೂಡಿದ, ಮಂತ್ರಕೋವಿದಾಃ - ಮಂತ್ರಜ್ಞರಾದ, ಋತ್ವಿಜಶ್ಚ - ಋತ್ವಿಕ್ಕುಗಳೂ, ಮಂತ್ರವತ್ - ಮಂತ್ರೋಚ್ಚಾರಣ ಪುರಸ್ಸರವಾಗಿ, ಇಹೈವ - ಇಲ್ಲಿಯೇ, ತ್ವಾ - ನಿನ್ನನ್ನು, ಅಭಿಷಿಂಚಂತು - ಅಭಿಷೇಕಮಾಡಲಿ. ॥ ೨೬ ॥ ಅಸ್ಮಾಭಿಃ - ನಮ್ಮಿಂದ, ಅಭಿಷಿಕ್ತಃ - ಪಟ್ಟಾಭಿಷೇಕ ಮಾಡಲ್ಪಟ್ಟ, ತ್ವಂ - ನೀನು, ತರಸಾ - ಜಾಗ್ರತೆಯಾಗಿ, ಲೋಕಾ - ಮೂರು ಲೋಕಗಳನ್ನು,

ಲ್ಲಿಯೂ, ಸ್ಥಾನದಲ್ಲಿಯೂ, ಹುಟ್ಟಿನಲ್ಲಿಯೂ ಚಿಕ್ಕವನಾಗಿದ್ದೇನೆ. ಹೀಗೆ ಎಲ್ಲ ರೀತಿಗಳಲ್ಲಿಯೂ ಕನಿಷ್ಠನಾದ ನಾನು ಹಿರಿಯಣ್ಣನಾದ ನೀನಿರುವಾಗ ಹೇಗೆತಾನೆ ರಾಜ್ಯಪರಿಪಾಲನೆಯನ್ನು ಮಾಡಲು ಯೋಗ್ಯನಾಗುತ್ತೇನೆ. ಇಂತಹ ನಾನು ನಿನ್ನನ್ನು ತೊರೆದು ಹೇಗೆತಾನೆ ಸಂತೋಷವನ್ನು ಹೊಂದಿಯೇನು? ಅಯ್ಯಾ; ಸಕಲ ಧರ್ಮಗಳನ್ನು ತಿಳಿದ ಶ್ರೀರಾಮನೆ! ತಂದೆಯಿಂದ ಪ್ರಾಪ್ತವಾದುದೂ. ಶತ್ರುರಹಿತವಾದುದೂ ಆದ ಈ ರಾಜ್ಯವೆಲ್ಲವನ್ನೂ ಬಂಧುಗಳೊಡಗೂಡಿದವನಾಗಿ ಯಾವ ವಿಧವಾದ ಅಧರ್ಮವೂ ಬಾರದಂತೆ ಪರಿಪಾಲಿಸುವವನಾಗು. ॥೨೧-೨೫॥ ಎಲ್ಲ ಪ್ರಜೆಗಳೂ, ವಸಿಷ್ಠನೇ ಮೊದಲಾದವರೊಡಗೂಡಿದ ಈ ಮಂತ್ರಿಗಳೂ ಇಲ್ಲಿಯೇ ನಿನ್ನನ್ನು ಪಟ್ಟಾಭಿಷಿಕ್ತನನ್ನಾಗಿ ಮಾಡಲಿ. ಶತ್ರುಗಳೆಲ್ಲರನ್ನೂ ಜಯಿಸಿದ ದೇವೇಂದ್ರನು ಸ್ವರ್ಗಲೋಕದಲ್ಲಿ ದೇವತೆಗಳಿಂದ ಎಂತು ಪಟ್ಟಾಭಿಷಿಕ್ತನಾದನೋ, ಅಂತೆಯೇ ನೀನೂ ಸಹ ಇಲ್ಲಿರುವ ಸಮಸ್ತ ಪ್ರಜೆಗಳಿಂದಲೂ, ಅಯೋಧ್ಯಾ

ಮರುದ್ಭಿರಿವ ವಾಸವಃ ‖ ೨೭ ‖ ಋಣಾನಿ ತ್ರೀಣ್ಯಪಾಕುರ್ವ ದುರ್ಹೃದ
ಸ್ಸಾಧು ನಿರ್ದಹ ‖ ಸುಹೃದ ಸ್ತರ್ಪಯ ಕಾಮ್ಯೈ ಸ್ತ್ವಮೇವಾತ್ರಾಽನುಶಾಧಿ
ಮಾಂ ‖ ೨೮ ‖ ಅದ್ಯಾರ್ಯ! ಮುದಿತಾಸ್ಸಂತು ಸುಹೃದ ಸ್ತೇಽಭಿಷೇಚನೇ ‖
ಅದ್ಯಭೀತಾಃ ಪಲಾಯಂತಾಂ ದುರ್ಹೃದಸ್ತೇ ದಿಶೋ ದಶ ‖ ೨೯ ‖ ಆಕ್ರೋಶಂ
ಮಮ ಮಾತುಶ್ಚ ಪ್ರಮೃಜ್ಯ ಪುರುಷರ್ಷಭ! ‖ ಅದ್ಯ ತತ್ರ ಭವಂತಂಚ ಪಿತರಂ

ವಿಜಿತ್ಯ - ಜಯಿಸಿ, ಮರುದ್ಭಿಃ - ದೇವತೆಗಳೊಡಗೂಡಿದ, ವಾಸವಇವ-ದೇವೇಂದ್ರನಂತೆ, ಅಸ್ಮಾಭಿಃ-ನಮ್ಮೊಡಗೂಡಿ, ಪಾಲನೆ - ರಕ್ಷಣಾರ್ಥವಾಗಿ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ವ್ರಜ - ತೆರಳು. ‖ ೨೭ ‖ ತ್ವಂ - ನೀನು, ತ್ರೀಣಿಋಣಾನಿ - ಮೂರಾದ ದೇವರ್ಷಿ ಪಿತೃ ಋಣಗಳನ್ನು, ಅಪಾಕುರ್ವ - ಬ್ರಹ್ಮಚರ್ಯ, ಯಜ್ಞ, ಪ್ರಜೋತ್ಪತ್ತ್ಯಾದಿಗಳಿಂದ ನಿವೃತ್ತಿಮಾಡಿದವನಾಗಿ, ದುರ್ಹೃದಃ - ಶತ್ರುಗಳನ್ನು, ಸಾಧು - ಚನ್ನಾಗಿ, ನಿರ್ದಹ - ದಹಿಸುತ್ತ, ಸುಹೃದಃ - ಸ್ನೇಹಿತರನ್ನು, ಕಾಮ್ಯೈಃ - ಕೋರಿಕೆಗಳಿಂದ, ತರ್ಪಯ - ತೃಪ್ತಿಗೊಳಿಸಿ, ಅತ್ರೈವ - ಇಲ್ಲಿಯೇ, ಮಾಂ - ನನ್ನನ್ನು, ಅನುಶಾಧಿ-ಆಜ್ಞಾಪಿಸು. ‖೨೮‖ ಹೇಆರ್ಯ-ಎಲೈ ಪೂಜ್ಯನೇ, ಅದ್ಯ-ಈಗಲೇ, ತೇ-ನಿನ್ನ, ಅಭಿಷೇಚನೇ - ಅಭಿಷೇಕವಾಗಲು, ಸುಹೃದಃ - ಸ್ನೇಹಿತರು, ಮುದಿತಾ - ಸಂತೋಷಗೊಂಡವರು, ಸಂತು - ಆಗಲಿ, ತೇ - ನಿನ್ನ, ದುರ್ಹೃದಃ - ಶತ್ರುಗಳು, ಭೀತಾಃ - ಭಯಗೊಂಡವರಾಗಿ, ಅದ್ಯ - ಈಗ, ದಶದಿಶಃ - ಹತ್ತು ದಿಕ್ಕುಗಳಲ್ಲಿಯೂ, ಪಲಾಯಂತಾಂ - ಓಡಿಹೋಗಲಿ. ‖ ೨೯ ‖ ಹೇ ಪುರುಷರ್ಷಭ - ಎಲೈ ಪುರುಷಶ್ರೇಷ್ಠನೇ, ಮಮ - ನನ್ನ, ಮಾತುಶ್ಚ - ತಾಯಿಯ, ಆಕ್ರೋಶಂ - ಸಿಡುಕನ್ನು, ಪ್ರಮೃಜ್ಯ - ಅಳಿಸಿ, ಅದ್ಯ - ಈಗ, ತತ್ರಭವಂತಂ - ಪೂಜ್ಯನಾದ, ಪಿತರಂ - ತಂದೆಯನ್ನು, ಕಿಲ್ಬಿಷಾತ್ - ಪಾಪದಿಂದ, ರಕ್ಷ - ಸಂರಕ್ಷಣೆ ಮಾಡು. ‖ ೩೦ ‖ ಅಹಂ - ನಾನು, ಶಿರಸಾ - ಮಂಡೆಯಿಂದ, ತ್ವಾ-ನಿನ್ನನ್ನು, ಅಭಿಯಾಚೇ-ಬೇಡಿಕೊಳ್ಳುತ್ತೇನೆ, ಮಯಿ-ನನ್ನಲ್ಲಿಯೂ,

---

ರಾಜ್ಯದಲ್ಲಿ ಪಟ್ಟಾಭಿಷಿಕ್ತನಾಗಿ ರಾಜ್ಯಪರಿಪಾಲನೆ ಮಾಡಲು ಈಗಲೇ ಹೊರಡುವವನಾಗು. ಓ ಶ್ರೀರಾಮಚಂದ್ರನೆ! ನೀನು ಅಯೋಧ್ಯಾಪಟ್ಟಣಕ್ಕೆ ಪ್ರಭುವಾಗಿ, ದೇವರ್ಷಿ ಪಿತೃಋಣಗಳೆಂಬ ಮೂರನ್ನೂ ನಿವೃತ್ತಿ ಮಾಡುತ್ತ, ದುಷ್ಟರೆಲ್ಲರನ್ನೂ ದಂಡಿಸುತ್ತ, ಸ್ನೇಹಿತರ ಕೋರಿಕೆಗಳನ್ನು ನೆರವೇರಿಸಿ ಮನೋಹರವಾಗಿ ರಾಜ್ಯಭಾರವನ್ನು ಮಾಡುವವನಾಗು. ನೀನೀಗ ಪಟ್ಟಾಭಿಷಿಕ್ತನಾಗುವುದರಿಂದ ನಿನ್ನ ಸ್ನೇಹಿತರೆಲ್ಲರೂ ಸಂತೋಷಿಸುವವರಾಗಲಿ! ನೀನು ಪಟ್ಟಾಭಿಷಿಕ್ತನಾದ ವೃತ್ತಾಂತವನ್ನು ಕೇಳಿ ನಿನ್ನ ಶತ್ರುಗಳೆಲ್ಲರೂ ಭೀತಿಗೊಳ್ಳುವವರಾಗಲಿ; ಅಲ್ಲದೆ ದಶದಿಶೆಗಳಿಗೂ ಪಲಾಯನಸೂಕ್ತಿಯನ್ನು ಪಠಿಸುವವರಾಗಲಿ.‖೨೬-೨೯‖ ಓ ಪುರುಷೋತ್ತಮನೆ! ನನ್ನ ತಾಯಿಯಾದ ಕೈಕೇಯಿಯು ಮಾಡಿದ ದುಷ್ಕಾರ್ಯವನ್ನು ಮನಸ್ಸಿನಲ್ಲಿಡದೆ, ತಂದೆಯಾದ ದಶರಥರಾಯನಿಗೆ ಅಧರ್ಮವು ಬಾರದಂತೆ ಮಾಡುವವನಾಗು. ನಾನು ನಿನಗೆ ಸಾಷ್ಟಾಂಗಪ್ರಣಾಮವನ್ನು ಮಾಡಿ ಯಾಚಿಸುತ್ತಿದ್ದೇನೆ; ನನ್ನಲ್ಲಿ ದಯೆ ತೋರುವವನಾಗು. ಇಷ್ಟುಮಾತ್ರವಲ್ಲದೆ, ಮಹೇಶ್ವರನು ಸಕಲ ಭೂತಗಳಲ್ಲಿಯೂ, ದಯೆಯಿಡುನಂತೆ, ಬಂಧುಗಳಲ್ಲಿಯೂ ದಯೆಯುಳ್ಳವನಾಗು ‖೩೦-೩೧‖ ನನ್ನ ಪ್ರಾರ್ಥನೆಯು

ರಕ್ಷ! ಕಿಲ್ಬಿಷಾತ್ ॥ ೩೦ ॥ ಶಿರಸಾ ತ್ವಾಽಭಿಯಾಚೇಽಹಂ ಕುರುಷ್ವ ಕರುಣಾಂ ಮಯಿ ॥ ಬಾಂಧವೇಷುಚ ಸರ್ವೇಷು ಭೂತೇಷ್ವಿವ (೧) ಮಹೇಶ್ವರಃ ॥ ೩೧ ॥ ಅಥೈತತ್ಪೃಷ್ಠತಃ ಕೃತ್ವಾ ವನಮೇವ ಭವಾನಿತಃ ॥ ಗಮಿಷ್ಯತಿ ಗಮಿಷ್ಯಾಮಿ ಭವತಾ ಸಾರ್ಧಮಪ್ಯಹಂ ॥ ೩೨ ॥ ತಥಾಹಿ ರಾಮೋ ಭರತೇನ ತಾಮ್ಯತಾ

ಸರ್ವೇಷು - ಸಮಸ್ತರಾದ, ಬಾಂಧವೇಷುಚ - ಬಂಧುಗಳಲ್ಲಿಯೂ, ಭೂತೇಷು - ಸಮಸ್ತ ಭೂತಗಳಲ್ಲಿಯೂ, ಮಹೇಶ್ವರಇವ - ಈಶ್ವರನಂತೆ, ಕರುಣಾಂ - ಕೃಪೆಯನ್ನು, ಕುರುಷ್ವ - ಮಾಡು. ॥ ೩೧ ॥ ಅಥ - ಬಳಿಕ, ಏತತ್ - ಈ ನನ್ನ ಮಾತುಗಳನ್ನು, ಪೃಷ್ಠತಃಕೃತ್ವಾ - ಹಿಂದೆ ಮಾಡಿ, ಭವಾನ್ - ನೀನು, ಇತಃ - ಇಲ್ಲಿಂದ, ವನಮೇವ - ಅರಣ್ಯವನ್ನೇ ಕುರಿತು, ಗಮಿಷ್ಯತಿ - ಹೋಗುವೆಯಾದರೆ, ಭವತಾಸಾರ್ಧಂ - ನಿನ್ನೊಡನೆ, ಅಹಮಪಿ - ನಾನೂ, ಗಮಿಷ್ಯಾಮಿ - ಹೋಗುತ್ತೇನೆ. ॥ ೩೨ ॥ ಮಹೀಪತಿಃ - ಭೂಪತಿಯಾದ, ರಾಮಃ - ಶ್ರೀರಾಮನು, ತಥಾ - ಆ ಪರಿಯಾಗಿ,

---

ನ್ನಂಗೀಕರಿಸದೆ, ನನ್ನ ಮಾತುಗಳನ್ನು ಹಿಂದುಳಿಯುವಂತೆ ಮಾಡುವೆಯಾದರೆ, ನಾನೂ ಸಹ ನಿನ್ನೊಡನೆ, ಈ ಅರಣ್ಯದಲ್ಲಿಯೇ ಸಂಚರಿಸುವವನಾಗುತ್ತೇನೆ." ಮಹಾ ಧರ್ಮಿಷ್ಠನಾದ ಭರತಕುಮಾರನೀರೀತಿ ಹೇಳುತ್ತಿರಲು, ಮಹಾ ಸಮರ್ಥನಾದ ಶ್ರೀರಾಮಚಂದ್ರನು, ಸಂತಾಪಗೊಳ್ಳುತ್ತಲೂ, ಅಂಜಲಿಬದ್ಧನಾಗಿ ಪ್ರಾರ್ಥಿಸುತ್ತಲೂ ಇರುವ ಆತನ ಮಾತುಗಳನ್ನು ಕೇಳಿದರೂ, ಮಹಾ ಸ್ಥಿರಚಿತ್ತವುಳ್ಳವನಾಗಿ, ತಂದೆಯಾದ ದಶರಥರಾಯನು ತನಗೆ ವನವಾಸ ಮಾಡಬೇಕೆಂದು ಮಾಡಿರುವ ಆಜ್ಞಾವಚನದಲ್ಲಿಯೇ ನ್ಯಸ್ತಚಿತ್ತನಾಗಿ, ಅಯೋ

ಟಿ. (೧) ಈ ಶ್ಲೋಕದಲ್ಲಿನ "ಮಹೇಶ್ವರಃ" ಎಂಬ ಪದಕ್ಕೆ ಗೋವಿಂದರಾಜರು ಮಹಾ ವಿಷ್ಣುವೆಂದು ಅರ್ಥವನ್ನು ಬರೆದಿರುತ್ತಾರೆ. ಅಲ್ಲದೆ ಮಹೇಶ್ವರ ಪದಕ್ಕೆ "ರುದ್ರ" ನೆಂಬ ಅರ್ಥ ಮಾಡಕೂಡದೆಂಬುದನ್ನೂ ಈ ರೀತಿಯಲ್ಲಿ ವಿಮರ್ಶಿಸಿದ್ದಾರೆ.

"ಯದ್ವೇದಾದೌಸ್ವರಃ ಪ್ರೋಕ್ತೋ ವೇದಾಂತೇಚ ಪ್ರತಿಷ್ಠಿತಃ ॥ ತಸ್ಯ ಪ್ರಕೃತಿ ಲೀನಸ್ಯ ಯಃ ಪರಸ್ಸ ಮಹೇಶ್ವರಃ" ಎಂಬ ಶ್ರುತಿ ಪ್ರಮಾಣದಿಂದ "ಮಹೇಶ್ವರ" ನೆಂದರೆ, ದಹರೋಪಾಸ್ಯನಾದ "ವಿಷ್ಣು" ವೆಂದರ್ಥ. ದಹರೋಪಾಸ್ಯವು ಅಪಹತ ಪಾಪ್ಮತ್ವಾದಿ ಗುಣಗಳಿಂದೊಡಗೂಡಿದುದು. ಅರ್ಥಾತ್ "ಪುರುಷೋತ್ತಮ" ನೆಂದು ಅಭಿಪ್ರಾಯ. "ಸಉತ್ತಮಃ ಪುರುಷಃ" ಎಂದು ಛಾಂದೋಗ್ಯ ವಚನ, ಅಪಹತ ಪಾಪ್ಮತ್ವವು ರುದ್ರನಿಗಿಲ್ಲ. "ಅನಪಹತ ಪಾಪ್ಮಾವಾ ಅಹಮಸ್ಮಿ" ಎಂದು ಆತನೇ ಹೇಳಿದ್ದಾನೆ. ಭೂತಗಳನ್ನು ಸಂಹಾರ ಮಾಡಲೋಸುಗವೇ ಮಹೇಶ್ವರನು ನಿಯಮಿತನಾಗಿರುವುದರಿಂದ ಆವನಲ್ಲಿ ದಯೆಯೆಂಬುದು ಲವಲೇಶವೂ ಇಲ್ಲವೆಂಬುದು ವಿದಿತ ವಿಷಯವೇ ಆಗಿದೆ. "ಆತಸ್ಸ ಏಕಾಕೀ ನರಮೇತ - ನತತೋ ವಿಜುಗುಪ್ಸತೇ" ಇತ್ಯಾದಿ ಶ್ರುತಿವಚನಗಳಿಂದ ಅಪಾರ ಕರುಣಾಸಮುದ್ರನಾದ ಶ್ರೀಮನ್ನಾರಾಯಣನೇ "ಮಹೇಶ್ವರ" ಶಬ್ದವಾಚ್ಯನೆಂಬುದು ಪ್ರಸಿದ್ಧವಾಗಿದೆ.

ಆದರೆ ಶ್ರೀಧರೀಯ ವ್ಯಾಖ್ಯಾನದಲ್ಲಿ "ಮಹೇಶ್ವರ" ಶಬ್ದಕ್ಕೆ ಈ ಅರ್ಥ ವಿವೇಚನವಿರುತ್ತದೆ. "ಮಹೇಶ್ವರ" ಪದಕ್ಕೆ "ಸದಾಶಿವ" ನೆಂದಲ್ಲದೆ "ವಿಷ್ಣು" ವೆಂದರ್ಥವಲ್ಲ. ಸಏಕ ಸ್ಸಏಕೋರುದ್ರಸ್ಸಈಶಾನಸ್ಸ ಭಗವಾನ್ ಸಮಹೇಶ್ವರಸ್ಸಮಹಾದೇವಃ" ಎಂಬ ಅಥರ್ವಶಿರೋಪನಿಷದ್ವಾಕ್ಯ ಪ್ರಮಾಣದಿಂದ "ಮಹೇಶ್ವರ" ನೆಂದರೆ "ಸದಾಶಿವ" ನೆಂದು ಅರ್ಥವಾಗುತ್ತದೆ. "ತತಸ್ಸ ಭಗವಾನೀಶಃ ಸರ್ವ ತತ್ವಾದಿ ರವ್ಯಯಃ । ಸರ್ವ ತತ್ವ ನಿಧಾನಜ್ಞಃ ಪ್ರಧಾನ ಪುರುಷೇಶ್ವರಃ ॥ (ಭಾರತ. ಅ. ಪ.) ಎಂಬ ವಚನದಂತೆ ಸದಾಶಿವನು ಪುರುಷೋ

ಪ್ರಸಾದ್ಯಮಾನ ಶ್ಶಿರಸಾ ಮಹೀಪತಿಃ ‖ ನಚೈವ ಚಕ್ರೇ ಗಮನಾಯ ಸತ್ವವಾ
ಮತಿಂ ಪಿತು ಸ್ತದ್ವಚನೇ ಪ್ರತಿಷ್ಠಿತಃ ‖೩೩‖ ತದದ್ಭುತಂ ಸ್ಥೈರ್ಯ ಮವೇಕ್ಷ್ಯ
ರಾಘವೇ ಸಮಂ ಜನೋ" ಹರ್ಷಮವಾಪ ದುಃಖಿತಃ ‖ ನಯಾತ್ಯಯೋಧ್ಯಾ
ಮಿತಿ ದುಃಖಿತೋ ಭವತ್ ಸ್ಥಿರಪ್ರತಿಜ್ಞತ್ವ ಮವೇಕ್ಷ್ಯ ಹರ್ಷಿತಃ ‖ ೩೪ ‖

ತಾಮ್ಯತಾ - ಮಗ್ಗಿಹೋಗುತ್ತಿರುವ, ಭರತೇನ - ಭರತನಿಂದ, ಶಿರಸಾ - ಮಂಡೆಯಿಂದ, ಪ್ರಸಾದ್ಯಮಾನಃ - ಬೇಡಿಕೊಳ್ಳಲ್ಪಟ್ಟವನಾದರೂ, ಸತ್ವವಾ - ಸತ್ವಗುಣಪ್ರಧಾನನಾಗಿ, ಪಿತುಃ - ತಂದೆಯ, ತದ್ವಚನೇ - ಆ ಮಾತಿನಲ್ಲಿ, ಪ್ರತಿಷ್ಠಿತಃ - ಸ್ಥಿರಚಿತ್ತನಾಗಿ, ಗಮನಾಯ - ಪಟ್ಟಣಕ್ಕೆ ಬರಲು, ಮತಿಂ - ಬುದ್ಧಿಯನ್ನು, ನಚಕ್ರೇಹಿ - ಮಾಡದೇ ಹೋದನಷ್ಟೆ. ‖ ೩೩ ‖ ರಾಘವೇ - ಶ್ರೀರಾಮನಲ್ಲಿ, ಅದ್ಭುತಂ - ಆಶ್ಚರ್ಯಕರವಾದ, ತತ್‌ಸ್ಥೈರ್ಯಂ - ಆ ಸ್ಥಿರತ್ವವನ್ನು, ಅವೇಕ್ಷ್ಯ - ಕಂಡು, ಜನಃ - ಜನವು, ಸಮಂ - ಏಕಕಾಲದಲ್ಲಿ, ಹರ್ಷಂ - ಸಂತೋಷವನ್ನು, ಅವಾಪ - ಹೊಂದಿತು, ದುಃಖಿತಶ್ಚ - ದುಃಖಾಕ್ರಾಂತವೂ ಆಯಿತು, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ನಯಾತೀತಿ - ಬರುವದಿಲ್ಲವೆಂದು, ದುಃಖಿತಃ - ದುಃಖಗೊಂಡುದು, ಅಭವತ್ - ಆಯಿತು, ಸ್ಥಿರಪ್ರತಿಜ್ಞತ್ವಂ - ದೃಢವಾದ ಪ್ರತಿಜ್ಞೆಯುಳ್ಳವಿಕೆಯನ್ನು, ಅವೇಕ್ಷ್ಯ - ಕಂಡು, ಹರ್ಷಿತಃ - ಸಂತೋಷಗೊಂಡಿತು. ‖ ೩೪ ‖ ಋತ್ವಿಜಃ - ವಸಿಷ್ಠಾದಿ ಋತ್ವಿಕ್ಕುಗಳೂ, ನೈಗಮಯೂಥವಲ್ಲಭಾಃ - ಪಟ್ಟಣ

ಧ್ಯೆಗೆ ತೆರಳದೆ ವನಗಮನದಲ್ಲಿಯೇ ಕೃತಸಂಕಲ್ಪನಾದನು. ಆ ಸಮಯದಲ್ಲಿ ಅಲ್ಲಿದ್ದ ಜನರೆಲ್ಲರೂ, ರಘುವಂಶಜನಾದ ಶ್ರೀರಾಮಮೂರ್ತಿಯಲ್ಲಿದ್ದ ಅತ್ಯಾಶ್ಚರ್ಯಕರವಾದ ಆ ಸ್ಥಿರಭಾವವನ್ನು ನೋಡಿ, ತಮ್ಮನಾದ ಭರತಕುಮಾರನ ಪ್ರಾರ್ಥನೆಯಂತೆ ಶ್ರೀರಾಮನು ಪುರಪ್ರವೇಶವನ್ನು ಮಾಡುವುದಿಲ್ಲವೆಂದು ದುಃಖವನ್ನೂ, ತಂದೆಯಾದ ದಶರಥಮಹಾರಾಜನ ವಚನದಲ್ಲಿ ಆತನ ಸ್ಥಿರಪ್ರತಿಜ್ಞೆಯನ್ನು ನೋಡಿ ಮಹದಾನಂದವನ್ನೂ ಏಕಕಾಲದಲ್ಲಿಯೆ ಹೊಂದಿದವರಾದರು. ‖೩೨-೩೪‖ ಮಾತ್ರವಲ್ಲದೆ, ವಶಿಷ್ಠ ವಾಮದೇವನೇ ಮೊದಲಾದ ಋತ್ವಿಜರೂ, ಪುರನಿವಾಸಿಗಳೂ, ಸೈನಿಕರೂ, ಸೇನಾನಾಯಕರೂ, ತಾಯಿಯರಾದ ಕೌಸ

ತ್ತಮನೂ ಆಹುದು, "ದಹರಂ ವಿಪಾಪ್ಮಂ ಪರವೇಶ್ಮಭೂತಂ ಹೃತ್ಪುಂಡರೀಕಂ ಪುರಮಧ್ಯ ಸಂಸ್ಥಂ। ತತ್ರಾಪಿ ದಹ್ರಂ ದಹನಂ ವಿಶೋಕ ಸ್ತಸ್ಮಿನ್ ಯದಂತಸ್ತದುಪಾಸಿತವ್ಯಂ" ಎಂಬ ತೈತ್ತಿರೀಯೋಪನಿಷದ್ವಾಕ್ಯದಂತೆ ಅಪಹತ ಪಾಪ್ಮತ್ವಾದಿ ಗುಣಗಳು ಈಶ್ವರನಿಗೇ ಸಲ್ಲುತ್ತವೆ. "ಪುರುಷೋನಾಮ ಸಂಪೂರ್ಣಃ - ಶಿವಸ್ಸತ್ಯಾದಿ ಲಕ್ಷಣಃ - ಸಾಂಬಮೂರ್ತಿಧರೋ ನಾನ್ಯೋ - ರುದ್ರೋ ವಿಷ್ಣು ರಜೋಪಿಚ" (ಶಂಕರಸಂಹಿತೆ) ಎಂಬ ಆಧಾರದಿಂದ ಶಿವನೇ ಮೂರು ಪ್ರಕಾರವಾಗಿ ತೋರುವುದರಿಂದ "ಪರಬ್ರಹ್ಮ" ಪದವಾಚ್ಯನೂ ಆತನೇ, ಎಂದಮೇಲೆ ಜಗತ್ಸೃಷ್ಟಿ, ಸ್ಥಿತ್ಯಾದಿ ಸಮಸ್ತ ಕಾರ್ಯಗಳಿಗೂ ಆತನೇ "ಅಧಿಕಾರಿ" ಎಂದ ಹಾಗಾಯಿತು.

ನಮ್ಮ ಅಭಿಪ್ರಾಯಃ—"ಮಹೇಶ್ವರ" ಶಬ್ದಕ್ಕೆ ಸರ್ವಭೂತದಯಾಮಯನಾದ ಪರಮಾತ್ಮನೆಂದು ಹೇಳಿದ್ದರೆ ಸಾಕಾಗಿದ್ದಿತು. ಇಷ್ಟೊಂದು ವಿವರಣವೇನೂ ಬೇಕಾಗಿದ್ದಿರಲಿಲ್ಲ. ಆದರೆ ವ್ಯಾಖ್ಯಾನಕಾರರ ಅಭಿಪ್ರಾಯವನ್ನು, ಯಾರಾರಿಗೆ ಯಾವಾವ ಅಭಿಪ್ರಾಯವು ಅಭಿಮತವೋ ಅವು ಅವರವರಿಗೆ ರುಚಿಸಲೆಂದು ಇಲ್ಲಿ ಕೊಡಲಾಗಿದೆಯೇ ಹೊರ್ತು ಮತ್ತೆ ಬೇರೆ ಅಲ್ಲ.

ತಮೃತ್ವಿಜೋ ನೈಗಮಯೂಥ ವಲ್ಲಭಾ
ಸ್ತದಾ ವಿಸಂಜ್ಞಾಶ್ರು ಕಳಾಶ್ಚ ಮಾತರಃ ||
ತಥಾ ಬ್ರುವಾಣಂ ಭರತಂ ಪ್ರತುಷ್ಟುವುಃ
ಪ್ರಣಮ್ಯ ರಾಮಂಚ ಯಯಾಚಿರೇ ಸಹ || ೩೫ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಡುತ್ತರಶತತಮಸ್ಸರ್ಗಃ.

ಸ್ಥರೂ, ಸೇನಾಧಿಪತಿಗಳೂ, ಆ ಗುಂಪುಗಳಿಗೆ ಯಜಮಾನರೂ, ತದಾ-ಆ ಕಾಲದಲ್ಲಿ, ವಿಸಂಜ್ಞಾಶ್ರು ಕಳಾಃ-ಪ್ರಜ್ಞೆಯಿಲ್ಲದೆ ಕಂಬನಿಗಳನ್ನಿಡುತ್ತಿರುವ, ಮಾತರಶ್ಚ - ತಾಯಿಯರೂ, ತಥಾ - ಆ ಪರಿಯಾಗಿ, ಬ್ರುವಾಣಂ - ಹೇಳುತ್ತಿರುವ, ತಂಭರತಂ - ಆ ಭರತನನ್ನು, ಪ್ರತುಷ್ಟುವುಃ - ಸ್ತುತಿಸಿದರು, ರಾಮಂಚ - ಶ್ರೀರಾಮನನ್ನು, ಪ್ರಣಮ್ಯ - ವಂದಿಸಿ, ಸಹ - ಎಲ್ಲರೂ ಸೇರಿ, ಯಯಾಚಿರೇ - ಪ್ರಾರ್ಥಿಸಿದರು. || ೩೫ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷಡುತ್ತರಶತತಮಸ್ಸರ್ಗಃ.

ಲ್ಯೆಯೇ ಮೊದಲಾದವರೂ ಕಂಬನಿಗಳನ್ನು ಸುರಿಸುತ್ತ ಭರತನನ್ನು ಶ್ಲಾಘಿಸಿದವರಾದರು. ಇಷ್ಟೆಯಲ್ಲದೆ, ಶ್ರೀರಾಮನನ್ನು ಯಥಾಯೋಗ್ಯವಾಗಿ ವಂದನಾದಿಗಳನ್ನು ಮಾಡಿ ಅಯೋಧ್ಯೆಗೆ ಬರುವಂತೆ ಬಹು ವಿಧವಾಗಿ ಯಾಚಿಸಿದವರಾದರು. || ೩೫ ||

ಇಂತಿದು ಭರತಕೃತ ರಾಜ್ಯಾಗಮನಯಾಚನಾ ವಿವರಣವೆಂಬ
ನೂರಾರನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಸಪ್ತೋತ್ತರಶತತಮಸ್ಸರ್ಗಃ.

ಪುನರೇವಂ ಬ್ರುವಾಣಂ ತಂ ಭರತಂ ಲಕ್ಷ್ಮಣಾಗ್ರಜಃ ॥ ಪ್ರತ್ಯುವಾಚ ತತಶ್ಶ್ರೀಮಾ ಜ್ಞಾತಿಮಧ್ಯೇಽಭಿಸತ್ಕೃತಃ ॥ ೧ ॥ ಉಪಪನ್ನಮಿದಂ ವಾಕ್ಯಂ ಯತ್ತ್ವಮೇವಮಭಾಷಥಾಃ ॥ ಜಾತಃ ಪುತ್ರೋ ದಶರಥಾತ್ಕೈಕೇಯ್ಯಾಂ ರಾಜಸತ್ತಮಾತ್॥೨॥ಪುರಾ ಭ್ರಾತಃ ಪಿತಾ ನಸ್ಸ ಮಾತರಂ ತೇ ಸ್ಸಮುದ್ವಹನ್ ॥ ಮಾತಾಮಹೇ ಸಮಾಶ್ರೌಷೀದ್ರಾಜ್ಯಶುಲ್ಕಮನುತ್ತಮಂ (೧) ॥೩॥

ತತಃ - ಬಳಿಕ, ಜ್ಞಾತಿಮಧ್ಯೇ - ಸಗೋತ್ರರ ಮಧ್ಯದಲ್ಲಿ, ಅಭಿಸತ್ಕೃತಃ - ಪೂಜಿಸಲ್ಪಟ್ಟ, ಶ್ರೀಮಾನ್ - ಸಂಪದ್ಯುಕ್ತನಾದ, ಲಕ್ಷ್ಮಣಾಗ್ರಜಃ - ಶ್ರೀರಾಮನು, ಏವಂಬ್ರುವಾಣಂ - ಹೀಗೆ ಹೇಳುತ್ತಿರುವ, ತಂಭರತಂ - ಆ ಭರತನನ್ನು ಕುರಿತು, ಪುನಃ - ಮರಳಿ, ಪ್ರತ್ಯುವಾಚ - ಪ್ರತ್ಯುತ್ತರ ಕೊಟ್ಟನು. ॥ ೧ ॥ ಕೈಕೇಯ್ಯಾಂ - ಕೈಕೆಯಿದೇವಿಯಲ್ಲಿ, ರಾಜಸತ್ತಮಾತ್ - ರಾಜಶ್ರೇಷ್ಠನಾದ, ದಶರಥಾತ್ - ದಶರಥರಾಯನಿಂದ, ಜಾತಃ - ಹುಟ್ಟಿದ, ಪುತ್ರಃ - ಕುವರನಾದ, ತ್ವಂ - ನೀನು, ಏವಂ - ಈಪರಿಯಾಗಿ, ಯದ್ವಾಕ್ಯಂ - ಯಾವ ಮಾತನ್ನು, ಅಭಾಷಥಾಃ - ಹೇಳಿದೆಯೋ, ಇದಂ - ಇದು, ಉಪಪನ್ನಂ - ಯುಕ್ತವೇಸರಿ. ॥ ೨ ॥ ಹೇ ಭ್ರಾತಃ - ಎಲೈ ತಮ್ಮನೇ, ಪುರಾ - ಪೂರ್ವದಲ್ಲಿ, ನಃ - ನಮ್ಮ, ಪಿತಾ - ತಂದೆಯು, ತೇ - ನಿನ್ನ, ಮಾತರಂ - ತಾಯಿಯನ್ನು, ಸಮುದ್ವಹನ್- ವಿವಾಹಮಾಡಿಕೊಂಡು, ಮಾತಾಮಹೇ - ತಾತನಾದ ಕೇಕಯರಾಯನಲ್ಲಿ, ಅನುತ್ತಮಂ - ಸರ್ವೋತ್ತಮವಾದ, ರಾಜ್ಯಶುಲ್ಕಂ - ರಾಜ್ಯಶುಲ್ಕವನ್ನು, ಸಮಾಶ್ರೌಷೀತ್ - ಪ್ರತಿಜ್ಞೆಮಾಡಿದನು. ॥ ೩ ॥

ಆ ತರುವಾಯ ಮಹಾ ಕಾಂತಿಯುಳ್ಳವನೂ, ಬಂಧುಜನರೆಲ್ಲರಿಂದ ಪೂಜಿತನಾದವನೂ, ಲಕ್ಷ್ಮಣಾಗ್ರಜನೂ ಆದ ಶ್ರೀರಾಮಮೂರ್ತಿಯು ಈರೀತಿ ಮಾತನಾಡುತ್ತಿರುವ ಭರತನನ್ನು ಕುರಿತು ಹೀಗೆಂದನು. “ಅಯ್ಯಾ ಭರತನೆ ! ರಾಜಶ್ರೇಷ್ಠನಾದ ದಶರಥರಾಯನಿಂದ ಕೈಕೇಯಿಯಲ್ಲಿ ಜನಿಸಿದ ನಿನ್ನ ವಚನವು ಬಹು ಮನೋಹರವಾಗಿರುವುದು. ಈ ಮಾತು ನಿನಗೆ ತಕ್ಕುದಾಗಿಯೇ ಇರುತ್ತದೆ. ತಮ್ಮಾ ; ಕೇಳು ! ಪೂರ್ವದಲ್ಲಿ ನಮ್ಮ ಜನಕನಾದ ದಶರಥಭೂಪಾಲನು ನಿನ್ನ ತಾಯಿಯಾದ ಕೈಕೇಯೀದೇವಿಯನ್ನು ಮದುವೆಯಾಗುವಾಗ, ಆಕೆಯ ತಂದೆಯಾದ ಕೇಕಯರಾಯನೊಡನೆ, “ನಿನ್ನ ಮಗಳಲ್ಲಿ ಜನಿಸಿದ ಕುಮಾರನಿಗೇ ಪಟ್ಟಕಟ್ಟುತ್ತೇನೆ” ಎಂದು ಹೇಳಿದ್ದನು. ॥೧-೩॥ ಅಲ್ಲದೆ ದೇವಾಸುರಯುದ್ಧ

ಟಿ. (೧) ಇಲ್ಲಿ ಕೆಲವರು ಹೀಗೆ ಆಶಂಕಿಸುತ್ತಾರೆ:—“ಸತ್ಯಪ್ರತಿಜ್ಞಾವಂತನೂ, ಮಹಾ ಮೇಧಾವಿಯೂ ಆದ ದಶರಥರಾಜನು, ಕೈಕೇಯಿಯನ್ನು ಮದುವೆಯಾಗುವಾಗಲೇ ಆಕೆಯ ಮಗನಿಗೆ ರಾಜ್ಯಾಭಿಷೇಕವನ್ನು ಮಾಡುತ್ತೇನೆಂದು ಪ್ರತಿಜ್ಞೆ ಮಾಡಿದ್ದನಲ್ಲವೆ. ಅಂತಹನು ವಚನಭ್ರಷ್ಟನಾದನೆಂದು ಇಲ್ಲಿ ರಾಮವಾಕ್ಯಾಭಿಪ್ರಾಯವೆ? ಅಲ್ಲದೆ ಕೈಕೇಯಿಯು ಈ ವಿಷಯವನ್ನರಿತಿದ್ದರೂ, ದಶರಥರಾಯನನ್ನು ಕುರಿತು ವರದ್ವಯಗಳನ್ನೇ ಕೇಳಿದುದೇಕೆ?”

ದೈವಾಸುರೇಚ ಸಂಗ್ರಾಮೇ ಜನನ್ಯೈ ತವ ಪಾರ್ಥಿವಃ ॥ ಸಂಪ್ರಹೃಷ್ಟೋ ದದೌ ರಾಜಾ ಭೃಶಮಾರಾಧಿತಃ ಪ್ರಭುಃ ॥೪॥ ತತಸ್ಸಾ ಸಂಪ್ರತಿಶ್ರಾವ್ಯ ತವ ಮಾತಾ ಯಶಸ್ವಿನೀ ॥ ಅಯಾಚತ ನರಶ್ರೇಷ್ಠಂ ದ್ವೌ ವರೌ ವರವರ್ಣಿನೀ ॥ ೫ ॥ ತವರಾಜ್ಯಂ ನರವ್ಯಾಘ್ರ! ಮಮ ಪ್ರವ್ರಾಜನಂ ತಥಾ ॥ ತೌಚ ರಾಜಾ ತದಾ ತಸ್ಯೈ ನಿಯುಕ್ತಃ ಪ್ರದದೌ ವರೌ ॥ ೬ ॥ ತೇನ ಪಿತ್ರಾಽಹಮಪ್ಯತ್ರ ನಿಯುಕ್ತಃ

ದೈವಾಸುರೇ - ದೇವರಾಕ್ಷಸ ಸಂಬಂಧವಾದ, ಸಂಗ್ರಾಮೇ - ಕಾಳೆಗದಲ್ಲಿ, ಸಂಪ್ರಹೃಷ್ಟಃ-ಸಂತೋಷ ಗೊಂಡವನಾಗಿ, ಭೃಶಂ-ಬಹಳವಾಗಿ, ಆರಾಧಿತಃ-ಸೇವಿಸಲ್ಪಟ್ಟ, ಪ್ರಭುಃ-ಸ್ವಾಮಿಯಾದ, ಪಾರ್ಥಿವಃ - ಭೂಪತಿಯಾದ, ರಾಜಾ-ಅರಸು, ತೇ-ನಿನ್ನ, ಜನನ್ಯೈ-ತಾಯಿಗೋಸುಗ, ವರಂ-ವರವನ್ನು, ದದೌ- ಕೊಟ್ಟನು. ॥ ೪ ॥ ತತಃ - ಬಳಿಕ, ಯಶಸ್ವಿನೀ - ಕೀರ್ತಿವಂತಳಾದ, ವರವರ್ಣಿನೀ - ಶ್ರೇಷ್ಠ ಸ್ತ್ರೀಯಾದ, ತವ - ನಿನ್ನ, ಸಾಮಾತಾ - ಆ ತಾಯಿಯು, ಸಂಪ್ರತಿಶ್ರಾವ್ಯ-ಶ್ರುತಪಡಿಸಿ, ದ್ವೌವರೌ- ಎರಡು ವರಗಳನ್ನು, ನರಶ್ರೇಷ್ಠಂ - ಮನುಜಶ್ರೇಷ್ಠನಾದ ದಶರಥರಾಯನನ್ನು ಕುರಿತು, ಅಯಾಚತ- ಪ್ರಾರ್ಥಿಸಿದಳು. ॥ ೫ ॥ ಹೇ ನರವ್ಯಾಘ್ರ - ಎಲೈ ಪುರುಷಶ್ರೇಷ್ಠನೇ, ರಾಜಾ-ದಶರಥರಾಯನು, ತವ - ನಿನಗೆ, ರಾಜ್ಯಂ - ರಾಜ್ಯವನ್ನೂ, ತಥಾ - ಹಾಗೆಯೆ, ಮಮ - ನನಗೆ, ಪ್ರವ್ರಾಜನಂ - ಅರಣ್ಯ ಪ್ರಯಾಣ ಎಂಬ, ತೌವರೌ - ಆ ವರಗಳನ್ನು, ತದಾ - ಆ ಕಾಲದಲ್ಲಿ, ತಸ್ಯೈ - ಆ ಕೈಕೇಯಿಗೆ, ನಿಯುಕ್ತಃ - ಸತ್ಯದಿಂದ ಬದ್ಧನಾಗಿ, ಪ್ರದದೌ - ಕೊಟ್ಟನು. ॥ ೬ ॥ ತೇನಪಿತ್ರಾ - ಆ ತಂದೆ ಯಿಂದಲೂ, ಅಹಂ - ನಾನು, ಚತುರ್ದಶವರ್ಷಾಣಿ - ಹದಿನಾಲ್ಕುವರುಷಗಳು, ವರದಾನಿಕಂ - ವರಪ್ರದಾನ ವಿಷಯವಾದ, ಅತ್ರವನೇ - ಈ ಅರಣ್ಯದಲ್ಲಿ, ವಾಸಂ - ಇರುವಿಕೆಯನ್ನು ಕುರಿತು,

ದಲ್ಲಿ ನಿನ್ನ ತಾಯಿಯುಮಾಡಿದ ಉಪಚಾರಗಳಿಗೆ ಸಂತೋಷಪಟ್ಟ ನಮ್ಮ ತಂದೆಯು ವರ ದ್ವಯಗಳನ್ನೀಯುವುದಾಗಿ ಆಕೆಯೊಡನೆ ಹೇಳಿದನು. ಆ ಬಳಿಕ ಕೀರ್ತಿವಂತಳಾದ ನಿನ್ನ ಜನ ನಿಯು "ಮೊದಲೇ ಕೊಡುತ್ತೇನೆಂದು ಹೇಳಿದ್ದ ಆ ಎರಡು ವರಗಳನ್ನು ನನಗೆ ಕೊಡ ಬೇಕೆಂದು" ದಶರಥಭೂಪಾಲನನ್ನು ಕೇಳಿದಳು. ಆ ಎರಡು ವರಗಳಲ್ಲಿ ಮೊದಲನೆಯದು, ತನ್ನ ಮಗನಾದ ನಿನಗೆ ರಾಜ್ಯಭಾರವೆಂದೂ, ಎರಡನೆಯದು, ರಾಮನಾದ ನಾನು ಅರಣ್ಯ ವಾಸ ಮಾಡತಕ್ಕುದೆಂದೂ ಹೇಳಿದಳು. ಆಗ ದಶರಥ ಮಹಾರಾಜನು ಆ ಎರಡು ವರಗಳನ್ನೂ ಕೊಡುತ್ತೇನೆಂದು ಹೇಳಿದನು. ಆದುದರಿಂದೆಲೈ ಪುರುಷಶ್ರೇಷ್ಠನಾದ ಭರತನೆ!

ಎಂಬುದೇ ಸಂಶಯ. ವಿವಾಹ ಕಾಲದಲ್ಲಿ,

ದಶರಥನು ಪ್ರತಿಜ್ಞೆಯನ್ನು ಮಾಡಿದ್ದರೂ ಅದನ್ನು ನೆರವೇರಿಸದಿದ್ದುದು ಆತನನ್ನು ಅಸತ್ಯವಂತನನ್ನಾಗಿ ಮಾಡಲಾರದು. ಏಕೆಂದರೆ, "ಉದ್ವಾಹಕಾಲೇ ರತಿ ಸಂಪ್ರಯೋಗೇ, ಪ್ರಾಣಾತ್ಯಯೇ ಸರ್ವಧನಾಪಹಾರೇ । ವಿಪ್ರಸ್ಯ ಚಾರ್ಥೇಪ್ಯನೃತಂ ವದೇಯುಃ, ಪಂಚಾನೃತಾನ್ಯಾಹು ರಪಾತಕಾನಿ ॥" ಎಂಬ ಸ್ಮೃತಿವಚನದಂತೆ ದಶರಥನ ಪ್ರತಿಜ್ಞೆಯ ಅಪೂರಣವು ಅನೃತದಲ್ಲಿ ಸೇರಲಿಲ್ಲ. ಆದುದರಿಂದಾತನು ಸತ್ಯಪ್ರತಿಜ್ಞನೇ. ವರದ್ವಯಗಳನ್ನು ಕೇಳುವಾಗಲೂ ಮಂಥರೆ ಯಿಂದ ಪ್ರೇರಿಸಲಾದ ಕೈಕೇಯಿಯು ಅದಕ್ಕಿಂತಲೂ ಬಹು ಹಿಂದಿನ ಕಾಲದಲ್ಲಿ ನಡೆದ ಆ ವೃತ್ತಾಂತವನ್ನು ಮರತೇ ಇದ್ದಳೆಂಬುದು ವಿದಿತವಾಗಿಯೇ ಆಗುತ್ತದೆಯಾದುದರಿಂದ ಮೇಲಿನ ಎರಡು ಸಂಶಯಗಳೂ ಇಲ್ಲಿ ಕೂಡುವುದಿಲ್ಲ.

ಪುರುಷರ್ಷಭ ! ‖ ಚತುರ್ದಶ ವನೇ ವಾಸಂ ವರ್ಷಾಣಿ ವರದಾನಿಕಂ ‖ ೭ ‖
ಸೋಹಂ ವನಮಿದಂ ಪ್ರಾಪ್ತೋ ನಿರ್ಜನಂ ಲಕ್ಷ್ಮಣಾನ್ವಿತಃ ‖ ಸೀತಯಾ
ಚಾಽಪ್ರತಿದ್ವಂದ್ವ ಸ್ಸತ್ಯವಾದೇ ಸ್ಥಿತಃ ಪಿತುಃ ‖ ೮ ‖ ಭವಾನಪಿ ತಥೇತ್ಯೇವ
ಪಿತರಂ ಸತ್ಯವಾದಿನಂ ‖ ಕರ್ತು ಮರ್ಹತಿ ರಾಜೇಂದ್ರ! ಕ್ಷಿಪ್ರಮೇವಾಽಭಿಷೇಚ
ನಾತ್ ‖ ೯ ‖ ಋಣಾನ್ಮೋಚಯ ರಾಜಾನಂ ಮತ್ಕೃತೇ ಭರತ! ಪ್ರಭುಂ ‖
ಪಿತರಂ ಚಾಪಿ ಧರ್ಮಜ್ಞಂ ಮಾತರಂಚಾಽಭಿನಂದಯ ‖ ೧೦ ‖ ಶ್ರೂಯ
ತೇಹಿ ಪುರಾ ತಾತ! ಶ್ರುತಿ ರ್ಗೀತಾ ಯಶಸ್ವಿನಾ ‖ ಗಯೇನ ಯಜಮಾನೇನ

ನಿಯುಕ್ತಃ - ಆಜ್ಞಾಪಿಸಲ್ಪಟ್ಟನು. ‖ ೭ ‖ ಸೋಹಂ - ಅಂತಹ ನಾನು, ಲಕ್ಷ್ಮಣಾನ್ವಿತಃ - ಲಕ್ಷ್ಮಣನೊಡಗೂಡಿ, ಸೀತಯಾಚ - ಸೀತಾದೇವಿಯೊಡನೆ, ಪಿತುಃ - ತಂದೆಯ, ಸತ್ಯವಾದೇ - ಸತ್ಯವಾದ ಮಾತಿನಲ್ಲಿ, ಸ್ಥಿತಃ - ನಿಂತವನಾಗಿ, ಅಪ್ರತಿದ್ವಂದ್ವಃ - ಮತ್ತೊಂದು ಇದಿರಿಲ್ಲದವನಾಗಿ, ನಿರ್ಜನಂ - ಜನರಹಿತವಾದ, ಇದಂವನಂ - ಈ ವನವನ್ನು, ಪ್ರಾಪ್ತಃ - ಹೊಂದಿದ್ದೇನೆ. ‖ ೮ ‖ ಹೇ ರಾಜೇಂದ್ರ - ಎಲೈ ರಾಜಶ್ರೇಷ್ಠನೇ, ಭವಾನಪಿ - ನೀನೂ, ಕ್ಷಿಪ್ರಮೇವ - ಜಾಗ್ರತೆಯಾಗಿ, ಅಭಿಷೇಚನಾತ್ - ಪಟ್ಟಾಭಿಷೇಕದಿಂದ, ತಥೇತ್ಯೇವ - ಹಾಗೆಯೇ ಆಗಲೆಂದು, ಪಿತರಂ - ತಂದೆಯನ್ನು, ಸತ್ಯವಾದಿನಂ - ಸತ್ಯವಚನವುಳ್ಳವನನ್ನಾಗಿ, ಕರ್ತುಂ - ಮಾಡುವದಕ್ಕೆ, ಅರ್ಹತಿ-ಯೋಗ್ಯನಾಗು. ‖ ೯ ‖ ಹೇ ಭರತ - ಎಲೈ ಭರತನೇ, ಮತ್ಕೃತೇ - ನನ್ನ ನಿಮಿತ್ತವಾಗಿ, ಪ್ರಭುಂ - ಸ್ವಾಮಿಯಾದ, ಧರ್ಮಜ್ಞಂ - ಧರ್ಮಿಷ್ಠನಾದ, ಪಿತರಂ - ತಂದೆಯಾದ, ರಾಜಾನಮಪಿ - ಅರಸನನ್ನೂ, ಋಣಾತ್ - ಋಣದಿಂದ, ಮೋಚಯ - ಬಿಡಿಸು, ಮಾತರಂಚ - ತಾಯಿಯನ್ನು, ಅಭಿನಂದಯ - ಸಂತೋಷಪಡಿಸು. ‖ ೧೦ ‖ ಹೇ ತಾತ - ಎಲೈ ವತ್ಸನೆ, ಪುರಾ - ಪೂರ್ವದಲ್ಲಿ, ಗಯೇಷ್ವೇವ-ಗಯಾಕ್ಷೇತ್ರದಲ್ಲಿಯೇ, ಪಿತೄನ್ಪ್ರತಿ-ಪಿತೃದೇವತೆಗಳನ್ನುಕುರಿತು, ಯಜಮಾನೇನ-ಯಜ್ಞಮಾಡುತ್ತಿರುವ, ಯಶಸ್ವಿನಾ - ಕೀರ್ತಿವಂತನಾದ, ಗಯೇನ - ಗಯಾಸುರನಿಂದ, ಗೀತಾ - ಹೇಳ

ನಮ್ಮ ತಂದೆಯು ನನ್ನನ್ನು ಕುರಿತು, “ ನೀನು ಹದಿನಾಲ್ಕು ಸಂವತ್ಸರಗಳ ವನವಾಸವನ್ನು ಮಾಡಬೇಕೆಂದು ” ಹೇಳಿದನು. ಅಂತೆಯೇ ನಾನೀಗ ಈ ಸೀತಾಲಕ್ಷ್ಮಣರೊಡಗೂಡಿ, ಜನರಹಿತವಾದೀ ಅರಣ್ಯದಲ್ಲಿ ವಾಸಮಾಡುತ್ತಿದ್ದೇನೆ. ಅಲ್ಲದೆ ನನ್ನ ಪರಾಕ್ರಮಕ್ಕೆ ಎದಿರಿಲ್ಲದಿದ್ದರೂ, ತಂದೆಯ ಸತ್ಯವಚನವನ್ನು ಅಸತ್ಯವನ್ನಾಗಿ ಮಾಡಕೂಡದೆಂದು ಅರಣ್ಯಕ್ಕೆ ಬಂದಿದ್ದೇನೆ.‖೪-೮‖ಅಯ್ಯಾ ರಾಜೇಂದ್ರನಾದ ಭರತನೆ! ನೀನೂ ಸಹ ತಂದೆಯ ಮಾತನ್ನು ಅಸತ್ಯವನ್ನಾಗಿ ಮಾಡಬೇಡ. ತಮ್ಮಾ! ಪ್ರಭುವಾದ ದಶರಥಮಹಾರಾಜನನ್ನು ನನಗೋಸುಗವಾಗಿ ಯಾದರೂ ಸತ್ಯವಂತನನ್ನಾಗಿಮಾಡಿ, ನಿನ್ನ ತಾಯಿಯಾದ ಕೈಕೇಯಿಯ ಋಣವನ್ನು ತೀರಿಸುವವನಾಗು. ಆಕೆಯಲ್ಲಿ ಎಳ್ಳಷ್ಟೂ ಕೋಪವನ್ನು ತೋರಿಸದೆ ವರ್ತಿಸುವವನಾಗು; ಆಕೆಯನ್ನು ಸತ್ಕರಿಸುವವನಾಗು. ಈರೀತಿಯಾಗಿ ವರ್ತಿಸಿ ತಾಯಿಯಾದ ಕೈಕೇಯಿಗೂ, ತಂದೆಯಾದ ದಶರಥರಾಯನಿಗೂ ಸಂತೋಷವನ್ನುಂಟುಮಾಡುವವನಾಗು. ವತ್ಸಾ! ಪೂರ್ವದಲ್ಲಿ, ಗಯಾಕ್ಷೇತ್ರದಲ್ಲಿ ಮಹಾ ಕೀರ್ತಿವಂತನಾದ ಸೋಮಯಾಜೀ ಗಯನು ಪಿತೃದೇವತೆಗೆ

ಗಯೇಷ್ವೇವ ಪಿತೄರ್ನ್ ಪ್ರತಿ ॥ ೧೧ ॥ ಪುನ್ನಾಮ್ನೋ ನರಕಾದ್ಯಸ್ಮಾತ್ಪಿತರಂ ತ್ರಾಯತೇ ಸುತಃ ॥ ತಸ್ಮಾತ್ "ಪುತ್ರ" ಇತಿ ಪ್ರೋಕ್ತಃ ಪಿತೄರ್ನ್ ಯತ್ಪಾತಿ ವಾ ಸುತಃ ॥೧೨॥ ಏಷ್ಟವ್ಯಾ ಬಹವಃ ಪುತ್ರಾ ಗುಣವಂತೋ ಬಹುಶ್ರುತಾಃ ॥ ತೇಷಾಂವೈ ಸಮವೇತಾನಾ ಮಪಿಕಶ್ಚಿದ್ಗಯಾಂ ವ್ರಜೇತ್ ॥ ೧೩ ॥ ಏವಂ ರಾಜರ್ಷಯ ಸ್ಸರ್ವೇ ಪ್ರತೀತಾ ರಾಜನಂದನ! ॥ ತಸ್ಮಾತ್ತ್ರಾಹಿ ನರಶ್ರೇಷ್ಠ! ಪಿತರಂ ನರಕಾತ್ಪ್ರಭೋ! ॥ ೧೪ ॥ ಅಯೋಧ್ಯಾಂ ಗಚ್ಛ ಭರತ! ಪ್ರಕೃತೀ

ಲ್ಪಟ್ಟ, ಶ್ರುತಿಃ - ಹೇಳಿಕೆಯು, ಶ್ರೂಯತೇಹಿ - ಕೇಳಲ್ಪಡುವುದಲ್ಲವೆ, ಯಸ್ಮಾತ್ - ಯಾವ ಕಾರಣ, ಸುತಃ - ಕುವರನು, ಪುನ್ನಾಮ್ನಃ - ಪುತ್ ಎಂಬ, ನರಕಾತ್ - ನರಕದಿಂದ, ಪಿತರಂ - ತಂದೆಯನ್ನು, ತ್ರಾಯತೇ - ಸಂರಕ್ಷಣೆಮಾಡುತ್ತಾನೆಯೋ, ತಸ್ಮಾತ್ - ಆ ಕಾರಣ, ಪುತ್ರಇತಿ - ಮಗನೆಂದು, ಪ್ರೋಕ್ತಃ - ಹೇಳಲ್ಪಡುವನು, ಅಥವಾ - ಹಾಗಲ್ಲದಿದ್ದರೆ, ಯತಾ - ಯಾವ ಕಾರಣ, ಪುನ್ನಾಮ್ನೋ ನರಕಾತ್ - ಪುನ್ನಾಮಕವಾದ ನರಕದಿಂದ, ಸುತಃ - ಕುವರನು, ಪಿತೄರ್ನ್ - ಪಿತೃದೇವತೆಗಳನ್ನು, ಪಾತಿ - ಸಂರಕ್ಷಣೆಮಾಡುತ್ತಾನೆಯೋ, ತಸ್ಮಾತ್ - ಆ ಕಾರಣ, ಪುತ್ರಇತಿ - ಮಗನೆಂದು, ಪ್ರೋಕ್ತಃ - ಹೇಳಲಾಗುತ್ತಾನೆ. ॥ ೧೨ ॥ ಬಹವಃ - ಅನೇಕವಿಧವಾದ, ಗುಣವಂತಃ - ಸದ್ಗುಣ ವಂತರಾದ, ಬಹುಶ್ರುತಾಃ - ಬಹು ಶಾಸ್ತ್ರಜ್ಞರಾದ, ಪುತ್ರಾಃ - ಮಕ್ಕಳು, ಏಷ್ಟವ್ಯಾಃ - ಕೋರತಕ್ಕ ವರು, ಸಮವೇತಾನಾಂ - ಗುಂಪುಸೇರಿರುವ, ತೇಷಾಮಪಿ - ಆ ಮಕ್ಕಳಲ್ಲಿ, ಕಶ್ಚಿದಪಿ - ಯಾರೊಬ್ಬ ನಾದರೂ, ಗಯಾಂ - ಗಯಾಕ್ಷೇತ್ರವನ್ನು ಕುರಿತು, ವ್ರಜೇತ್ - ಬರುವನು. ॥ ೧೩ ॥ ಹೇ ರಾಜ ನಂದನ - ಎಲೈ ರಾಜಕುವರನೇ, ಏವಂ - ಈಪರಿಯಾಗಿ, ಸರ್ವೇ - ಸಮಸ್ತರಾದ, ರಾಜರ್ಷಯಃ - ಋಷಿತ್ವವನ್ನು ವಹಿಸಿರುವ ರಾಜರು, ಪ್ರತೀತಾಃ - ನಂಬಿಕೆಯುಳ್ಳವರಾಗಿದ್ದಾರೆ. ಹೇ ನರಶ್ರೇಷ್ಠ - ಎಲೈ ಮನುಜಶ್ರೇಷ್ಠನೇ, ಹೇ ಪ್ರಭೋ - ಎಲೈ ಸಮರ್ಥನೇ, ತಸ್ಮಾತ್ - ಆ ಕಾರಣ, ಪಿತರಂ - ತಂದೆಯನ್ನು, ನರಕಾತ್ - ನರಕದಿಂದ, ತ್ರಾಹಿ - ಸಂರಕ್ಷಣೆಮಾಡು. ॥ ೧೪ ॥ ಹೇ ಭರತ -

---

ಳನ್ನುದ್ದೇಶಿಸಿ ಹೇಳಿದ ಚರಿತ್ರೆಯನ್ನು ನೀನು ಕೇಳಿಯೇ ಇರುವೆಯಷ್ಟೆ? ಆದರೂ ನಾನೀಗ ಅದನ್ನು ಪುನಃ ವಿವರಿಸಿ ಹೇಳುತ್ತೇನೆ ಕೇಳು. ತಂದೆಗೆ "ಪುತ್" ಎಂಬ ನರಕವು ಬಾರದಿರು ವಂತೆ ಮಾಡುವಾತನೇ ಪುತ್ರನಾಮಕನು. ಹಾಗಿಲ್ಲದಿದ್ದರೆ ಅಂತಹ ಮಗನು ಮಗನೇ ಅಲ್ಲ ವೆಂದು ಆ ಗಯನು ಹೇಳಿದ್ದಾನೆ.॥೯-೧೨॥ಅಲ್ಲದೆ ತಂದೆಯಾದವನು,ಗುಣಸಂಪನ್ನರೂ,ಶಾಸ್ತ್ರ ವೇತ್ತರೂ ಆದ ಅನೇಕ ಪುತ್ರರನ್ನು ಬಯಸಬೇಕೆಂದು ಆತನ ಹೇಳಿಕೆ. ಅದೃಷ್ಟವಶದಿಂದ, ಗುಣವಂತರೂ, ಶಾಸ್ತ್ರಜ್ಞರೂ ಆದ ಅನೇಕ ಪುತ್ರರು ಜನಿಸಿದರೆ, ಅವರಲ್ಲಿ ಯಾವನಾದರೂ ಒಬ್ಬನು ಗಯಾಕ್ಷೇತ್ರಕ್ಕೆ ಹೋಗಿ ಅಲ್ಲಿ ಶ್ರಾದ್ಧಕ್ರಿಯೆಯನ್ನಾಚರಿಸಿ, ಪಿತೃದೇವತೆಗಳಿಗೆ ಬ್ರಹ್ಮಲೋಕವುಂಟಾಗುವಂತೆ ಮಾಡುತ್ತಾನೆಯೆಂದೂ, ಹಾಗೆ ಮಾಡಲೇ ಬೇಕೆಂದೂ ಆ ಮಹಾತ್ಮನು ಹೇಳಿದ್ದಾನೆ.॥೧೩॥ ಈರೀತಿಯಾದ ಆ ಗಯನ ಚರಿತ್ರೆಯನ್ನುಕೇಳಿ ಹಿಂದಿನ ರಾಜ ರೆಲ್ಲರೂ ಪ್ರವರ್ತಿಸಿದರು. ಆದುದರಿಂದ, ರಾಜಪುತ್ರನೂ, ಪ್ರಭುವೂ, ಪುರುಷಶ್ರೇಷ್ಠನೂ ಆದ ಎಲೈ ಭರತನೆ! ನೀನೂಕೂಡ ಪೂರ್ವರಾಜರಂತೆಯೇ ನಮ್ಮ ತಂದೆಯಾದ ದಶರಥ

ರಸುರಂಜಯ ॥ ಶತ್ರುಘ್ನಸಹಿತೋ ವೀರ! ಸಹಸರ್ವೈ ರ್ದ್ವಿಜಾತಿಭಿಃ ॥೧೫॥
ಪ್ರವೇಕ್ಷ್ಯೇ ದಂಡಕಾರಣ್ಯ ಮಹಮಪ್ಯವಿಳಂಬಯರ್ನ್ ॥ ಆಭ್ಯಾಂತು ಸಹಿತೋ
ರಾಜರ್! ವೈದೇಹ್ಯಾ ಲಕ್ಷ್ಮಣೇನಚ ॥ ೧೬ ॥ ತ್ವಂ ರಾಜಾ ಭರತ! ಭವ
ಸ್ವಯಂ ನರಾಣಾಂ ವನ್ಯಾನಾ ಮಹಮಪಿ ರಾಜರಾಣ್ಮೃಗಾಣಾಂ ॥ ಗಚ್ಛ ತ್ವಂ
ಪುರವರಮದ್ಯ ಸಂಪ್ರಹೃಷ್ಟ ಸ್ಸಂಹೃಷ್ಟ ಸ್ತ್ವಹಮಪಿ ದಂಡಕಾರ್ನ್ ಪ್ರವೇಕ್ಷ್ಯೇ
॥ ೧೭ ॥ ಛಾಯಾಂ ತೇ ದಿನಕರಭಾಃ ಪ್ರಬಾಧಮಾನಾಂ ವರ್ಷತ್ರಂ ಭರತ!

ಎಲೈ ಭರತನೇ, ಹೇ ವೀರ - ಎಲೈ ಶೂರನೇ, ಶತ್ರುಘ್ನಸಹಿತಃ - ಶತ್ರುಘ್ನನಿಂದ ಕೂಡಿದವನಾಗಿ, ಸರ್ವೈಃ - ಸಮಸ್ತರಾದ, ದ್ವಿಜಾತಿಭಿಸ್ಸಹ - ಬ್ರಾಹ್ಮಣರೊಡಗೂಡಿ, ಅಯೋಧ್ಯಾಂ - ಅಯೋಧ್ಯಾ ಪಟ್ಟಣವನ್ನು ಕುರಿತು, ಗಚ್ಛ - ಹೋಗು, ಪ್ರಕೃತೀಃ - ಮಂತ್ರಿಗಳನ್ನು, (ಗೋ) ಪ್ರಜೆಗಳ ನ್ನೆಲ್ಲ, ಅನುರಂಜಯ - ಸಂತೋಷಗೊಳಿಸು. ॥ ೧೫ ॥ ಅಹಮಪಿ - ನಾನೂ, ಹೇ ರಾಜರ್ - ಎಲೈ ರಾಜನಾದ ಭರತನೇ, ವೈದೇಹ್ಯಾ - ಸೀತಾದೇವಿಯು, ಲಕ್ಷ್ಮಣೇನಚ - ಲಕ್ಷ್ಮಣನು ಎಂಬ, ಆಭ್ಯಾಂ - ಇವರಿಬ್ಬರಿಂದ, ಸಹಿತಃ - ಕೂಡಿದವನಾಗಿ, ಅವಿಳಂಬಯರ್ನ್ - ಸಾವಕಾಶಮಾಡದೆ, ದಂಡಕಾರಣ್ಯಂ - ದಂಡಕಾರಣ್ಯವನ್ನು, ಪ್ರವೇಕ್ಷ್ಯೇ - ಪ್ರವೇಶಿಸುತ್ತೇನೆ. ॥ ೧೬ ॥ ಹೇ ಭರತ - ಎಲೈ ಭರತನೇ, ತ್ವಂ - ನೀನು, ನರಾಣಾಂ - ಮನುಜರಿಗೆ, ಸ್ವಯಂ - ತಾನು, ರಾಜಾ - ಅರಸು, ಭವ - ಆಗು, ಅಹಮಪಿ - ನಾನಾದರೊ, ವನ್ಯಾನಾಂ - ವನದಲ್ಲಿ ಹುಟ್ಟಿದ, ಮೃಗಾಣಾಂ - ಮೃಗಗಳಿಗೆಲ್ಲಾ, ರಾಜರಾಟ್ - ರಾಜಾಧಿರಾಜನು, ಭವಾಮಿ - ಆಗುವೆನು, ತ್ವಂ - ನೀನು, ಅದ್ಯ - ಈಗ, ಸಂಪ್ರಹೃಷ್ಟಃ - ಸಂತೋಷಗೊಂಡವನಾಗಿ, ಪುರವರಂ - ಶ್ರೇಷ್ಠವಾದ ಅಯೋಧ್ಯಾಪಟ್ಟಣವನ್ನು ಕುರಿತು, ಗಚ್ಛ - ಹೋಗು, ಅಹಮಪಿ - ನಾನೂ, ಸಂಹೃಷ್ಟಃ - ಸಂತೋಷಚಿತ್ತನಾಗಿ, ದಂಡಕಾರ್ನ್ - ದಂಡಕಾರಣ್ಯವನ್ನು, ಪ್ರವೇಕ್ಷ್ಯೇ - ಪ್ರವೇಶಮಾಡುತ್ತೇನೆ. ॥ ೧೭ ॥ ಹೇ ಭರತ - ಎಲೈ ಭರ

ಮಹಾರಾಜನಿಗೆ ನರಲೋಕ ನಿವಾಸವು ಬಾರದಂತೆ ಮಾಡಿ ಸಂರಕ್ಷಿಸುವವನಾಗು. ಅಯ್ಯಾ! ಪರಾಕ್ರಮಶಾಲಿಯಾದ ಭರತನೆ! ನೀನು ಈ ಶತ್ರುಘ್ನನೊಡಗೂಡಿ, ಇಲ್ಲಿರುವ ಬ್ರಾಹ್ಮಣಾದಿ ಸಮಸ್ತ ಜನಸಮೇತನಾಗಿ, ಪ್ರಜಾಪಾಲನೆಗೋಸುಗ ಅಯೋಧ್ಯಾಪಟ್ಟಣಕ್ಕೆ ನಡೆವವನಾಗು. ಪ್ರಜೆಗಳೆಲ್ಲರನ್ನೂ ಧರ್ಮದಿಂದ ಪರಿಪಾಲಿಸು. ॥ ೧೫ ॥ ಅಯ್ಯಾ ರಾಜಶ್ರೇಷ್ಠನೆ! ನಾನು ಸೀತಾ ಲಕ್ಷ್ಮಣ ಸಮೇತನಾಗಿ, ಬಹು ಜಾಗ್ರತೆಯಾಗಿ ದಂಡಕಾರಣ್ಯವನ್ನು ಕುರಿತು ತೆರಳುತ್ತೇನೆ. ತಮ್ಮಾ; ಭರತಾ! ನೀನಿಲ್ಲಿಂದ ಹೊರಟು ಸಕಲ ಮಾನವರಿಗೂ ಪ್ರಭುವಾಗು. ನಾನೀ ವನದಲ್ಲಿರುವ ಮೃಗಗಳೆಲ್ಲಕ್ಕೂ ರಾಜನಾಗುತ್ತೇನೆ. ನೀನು ಮಹಾ ಸಂತೋಷಭರಿತನಾಗಿ ಅಯೋಧ್ಯಾಪಟ್ಟಣವನ್ನು ಪ್ರವೇಶಿಸುವವನಾಗು. ನಾನೂ ಸಹ ಮಹದಾನಂದದಿಂದ ದಂಡಕಾರಣ್ಯ ಪ್ರವೇಶವನ್ನು ಮಾಡುತ್ತೇನೆ. ಎಲೈ ಭರತನೆ! ಶ್ವೇತಛತ್ರವು ನಿನಗೆ ಬಿಸಿಲುತಾಕದೆ, ಸೂರ್ಯಕಿರಣಗಳನ್ನು ಬಾಧಿಸುವುದಾಗಲಿ. ನಾನೂ ಸಹ ಈ ವನದಲ್ಲಿನ ವೃಕ್ಷಗಳ ತಣ್ಣೆಳಲನ್ನು ಆಶ್ರಯಿಸಿ ಸುಖವಾಗಿರುತ್ತೇನೆ. ಮಹಾ ನಿಪುಣನಾದ ಶತ್ರುಘ್ನನು ನಿನಗೆ ಸಹಾಯಕನಾಗಿರುವನಲ್ಲವೆ? ನನಗೆ ಮುಖ್ಯಸ್ನೇಹಿತನಾದವನು ಈ ಲಕ್ಷ್ಮಣನೇ

ಕರೋತು ಮೂರ್ಧ್ನಿ ಶೀತಾಂ ॥ ಏತೇಷಾ ಮಹಮಪಿ ಕಾನನದ್ರುಮಾಣಾಂ
ಛಾಯಾಂತಾ ಮತಿಶಯಿನೀಂ ಸುಖೀ ಶ್ರಯಿಷ್ಯೇ ॥ ೧೮ ॥

ಶತ್ರುಘ್ನಃ ಕುಶಲಮತಿಸ್ತು ತೇ ಸಹಾಯ
ಸ್ಸೌಮಿತ್ರಿ ರ್ಮಮ ವಿದಿತಃ ಪ್ರಧಾನಮಿತ್ರಂ ॥
ಚತ್ವಾರ ಸ್ತನಯವರಾ ವಯಂ ನರೇಂದ್ರಂ
ಸತ್ಯಸ್ಥಂ ಭರತ! ಚರಾಮ ಮಾ ವಿಷಾದಂ ॥ ೧೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತೋತ್ತರಶತತಮಸ್ಸರ್ಗಃ.

ತನೇ, ತೇ - ನಿನ್ನ, ಮೂರ್ಧ್ನಿ - ಮಂಡೆಯಲ್ಲಿ, ವರ್ಷತ್ರಂ-ಶ್ವೇತಛತ್ರವು, ದಿನಕರಭಾಃ - ಸೂರ್ಯ ಕಿರಣಗಳ ಸಂತಾಪಗಳನ್ನು, ಪ್ರಬಾಧಮಾನಾಂ - ಹೋಗಲಾಡಿಸುತ್ತಿರುವ, ಶೀತಾಂ - ತಣ್ಣಗಿರುವ, ಛಾಯಾಂ - ನೆರಳನ್ನು, ಕರೋತು - ಉಂಟುಮಾಡಲಿ, ಅಹಮಪಿ - ನಾನೂ, ತಾಂ - ಆ ಛತ್ರ ಚಪ್ಪೆಯೆಯನ್ನು, ಅತಿಶಯಿನೀಂ - ಮೀರಿಸಿರುವ, ಏತೇಷಾಂಕಾನನದ್ರುಮಾಣಾಂ - ಈ ಅರಣ್ಯದ ಗಿಡಗಳ, ಛಾಯಾಂ - ನೆರಳನ್ನು, ಸುಖೀ - ಸುಖವಂತನಾಗಿ, ಶ್ರಯಿಷ್ಯೇ - ಆಶ್ರಯಮಾಡುತ್ತೇನೆ. ॥ ೧೮ ॥ ಹೇ ಭರತ - ಎಲೈ ಭರತನೇ, ಕುಶಲಮತಿಃ - ಒಳ್ಳೆಯ ಬುದ್ಧಿವಂತನಾದ, ಶತ್ರುಘ್ನಸ್ತು- ಶತ್ರುಘ್ನನಾದರೆ, ತೇ - ನಿನಗೆ, ಸಹಾಯಃ - ಸಹಾಯವು; ಮಮತು-ನನಗಾದರೆ, ಸೌಮಿತ್ರಿಃ-ಲಕ್ಷ್ಮಣನು, ಪ್ರಧಾನಮಿತ್ರಂ - ಶ್ರೇಷ್ಠವಾದ ಮಿತ್ರನಾಗಿ, ವಿದಿತಃ - ಪ್ರಖ್ಯಾತನಾಗಿದ್ದಾನೆ, ಚತ್ವಾರಃ - ನಾಲ್ವರಾದ, ತನಯವರಾಃ - ಶ್ರೇಷ್ಠ ಕುವರರಾದ, ವಯಂ - ನಾವು, ನರೇಂದ್ರಂ - ಅರಸನನ್ನು, ಸತ್ಯಸ್ಥಂ - ಸತ್ಯವಂತನು ಹೇಗಾಗುವನೋ ಹಾಗೆ, ಚರಾಮ - ವರ್ತಿಸೋಣ, ವಿಷಾದಂ - ವ್ಯಸನವನ್ನು, ಮಾ(ಕುರುಷ್ವ) - ಮಾಡಬೇಡ. ॥ ೧೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತೋತ್ತರಶತತಮಸ್ಸರ್ಗಃ.

ಎಂಬುದು ನಿಮಗೆಲ್ಲರಿಗೂ ತಿಳಿದೇ ಇರುವುದಷ್ಟೆ? ಹೆಚ್ಚೇನು; ಕೇಳಯ್ಯಾ ಭರತನೆ! ದಶರಥ ರಾಜಕುವರರಾದ ನಾವು ನಾಲ್ವರೂ ತಂದೆಯಾದ ಆ ರಾಯನನ್ನು ಸತ್ಯವಚನನನ್ನಾಗಿ ಮಾಡೋಣ. ನೀನೀ ವಿಷಯದಲ್ಲಿ ಸ್ವಲ್ಪವಾದರೂ ವ್ಯಸನವನ್ನು ಹೊಂದಬೇಡ. ॥೧೬-೧೯॥

ಇಂತಿದು ಶ್ರೀರಾಮಕೃತ ಭರತಸಮಾಶ್ವಾಸನ ಕಥಾಕಥನವೆಂಬ
ನೂರ ಏಳನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಅಷ್ಟೋತ್ತರಶತತಮಸ್ಸರ್ಗಃ.

ಆಶ್ವಾಸಯಂತಂ ಭರತಂ ಜಾಬಾಲಿ ರ್ಬ್ರಾಹ್ಮಣೋತ್ತಮಃ ‖ ಉವಾಚ ರಾಮಂ ಧರ್ಮಜ್ಞಂ ಧರ್ಮಾಪೇತಮಿದಂ ವಚಃ ‖ ೧ ‖ ಸಾಧು ರಾಘವ! ಮಾಭೂ ತ್ತೇ ಬುದ್ಧಿರೇವಂ ನಿರರ್ಥಿಕಾ ‖ ಪ್ರಾಕೃತಸ್ಯ ನರಸ್ಯೇವ ಹ್ಯಾರ್ಯ ಬುದ್ಧೇ ರ್ಮನಸ್ವಿನಃ ‖ ೨ ‖ ಕಃ ಕಸ್ಯ ಪುರುಷೋ ಬಂಧುಃ ಕಿಮಾಪ್ಯಂ ಕಸ್ಯ ಕೇನಚಿತ್ ‖ ಯದೇಕೋ ಜಾಯತೇ ಜಂತು ರೇಕಏವ ವಿನಶ್ಯತಿ ‖ ೩ ‖

ಬ್ರಾಹ್ಮಣೋತ್ತಮಃ - ಬ್ರಾಹ್ಮಣಶ್ರೇಷ್ಠನಾದ, ಜಾಬಾಲಿಃ - ಜಾಬಾಲಿಋಷಿಯು, ಭರತಂ-ಭರತನನ್ನು, ಆಶ್ವಾಸಯಂತಂ - ಸಮಾಧಾನಗೊಳಿಸುತ್ತಿರುವ, ಧರ್ಮಜ್ಞಂ - ಸಕಲ ಧರ್ಮಗಳನ್ನೂ ತಿಳಿದಿರುವ, ರಾಮಂ - ಶ್ರೀರಾಮನನ್ನು ಕುರಿತು, ಧರ್ಮಾಪೇತಂ - ವೈದಿಕಧರ್ಮದಿಂದ ಬಹಿಷ್ಕೃತವಾದ, ಇದಂವಚಃ - ಈ ಮಾತನ್ನು, ಉವಾಚ - ಹೇಳಿದನು. ‖ ೧ ‖ ಹೇ ರಾಘವ - ಎಲೈ ಶ್ರೀರಾಮನೇ, ಏವಂ - ಈಪರಿಯಾಗಿ, ಪ್ರಾಕೃತಸ್ಯನರಸ್ಯೇವ - ಸಾಮಾನ್ಯಮನುಷ್ಯನಂತೆ, ಆರ್ಯಬುದ್ಧೇಃ - ಶ್ರೇಷ್ಠವಾದ ಬುದ್ಧಿಯುಳ್ಳ, ಮನಸ್ವಿನಃ - ಶ್ರೇಷ್ಠವಾದ ಮನವುಳ್ಳ, ತೇ - ನಿನಗೆ, ಏವಂ - ಈಪರಿಯಾಗಿ, ನಿರರ್ಥಿಕಾ - ನಿಷ್ಪ್ರಯೋಜನಕರವಾದ, ಬುದ್ಧಿಃ - ಬುದ್ಧಿಯು, ಸಾಧು - ಚೆನ್ನಾಗಿ, ಮಾಭೂತ್ - ಆಗಬೇಡ. ‖ ೨ ‖ ಕಸ್ಯ - ಯಾವನಿಗೆ, ಕಃಪುರುಷಃ - ಯಾವ ಪುರುಷನು, ಬಂಧುಃ - ಬಂಧುವು, ಕಸ್ಯ - ಯಾವನಿಗೆ, ಕೇನಚಿತ್ - ಯಾವನಿಂದ, ಕಿಮಾಪ್ಯಂ - ಏನು ತಾನೆ ಹೊಂದತಕ್ಕದು, ಯತ್ - ಯಾವ ಕಾರಣ, ಜಂತುಃ - ಪುರುಷನು, ಏಕಃ - ಒಬ್ಬನೇ, ಜಾಯತೇ - ಹುಟ್ಟುತ್ತಾನೆಯೋ, ಏಕಏವ - ಒಬ್ಬನೇ, ವಿನಶ್ಯತಿ - ಸಾಯುತ್ತಾನೆಯೋ. ‖ ೩ ‖ ಹೇ ರಾಮ - ಎಲೈ ಶ್ರೀರಾಮನೇ, ತಸ್ಮಾತ್ - ಆ ಕಾರಣ, ಮಾತಾ - ತಾಯಿಯೆಂತಲೂ, ಪಿತಾ ಚೇತಿ - ತಂದೆಯೆಂತಲೂ, ಯೋನರಃ - ಯಾವ ಮನುಷ್ಯನು, ಸಜ್ಜೇತ - ಆಸಕ್ತನಾಗುವನೋ, ಸಃ-

---

ತಮ್ಮನಾದ ಭರತನನ್ನು ಸಮಾಧಾನಗೊಳಿಸುತ್ತಿರುವವನೂ ಸಮಸ್ತ ಧರ್ಮಗಳನ್ನರಿತಿರುವವನೂ ಆದ ಶ್ರೀರಾಮನನ್ನು ಕುರಿತು ಬ್ರಾಹ್ಮಣಶ್ರೇಷ್ಠನಾದ ಜಾಬಾಲಿಯು ಧರ್ಮವಲ್ಲದ ಈ ಮಾತುಗಳನ್ನಾಡಿದನು. "ಅಯ್ಯಾ ಶ್ರೀರಾಮಚಂದ್ರನೆ! ಮಹಾ ತಪಸ್ವಿಯೂ, ಪೂಜ್ಯವಾದ ಬುದ್ಧಿಯುಳ್ಳವನೂ ಆದ ನಿನಗೆ ಸಾಮಾನ್ಯಜನರಂತೆ ಈ ವಿಧವಾದ ನಿಷ್ಫಲಬುದ್ಧಿಯುಂಟಾಗದಿರಲಿ. ಪ್ರಪಂಚದಲ್ಲಿ ಯಾರಿಗೆ ಯಾರು ಬಂಧುವು ? ಯಾರಿಂದ ಏನುತಾನೇ ಆಗಬೇಕು ? ಹುಟ್ಟುವುದೂ ಒಂಟಿಯಾಗಿಯೇ; ಸಾಯುವುದೂ ಒಂಟಿಯಾಗಿಯೇ; ಇದು ಪ್ರಾಣಿಗಳ ಸ್ಥಿತಿಯೆನಿಸುತ್ತದೆ. ಜನಿಸುವ ಪ್ರಾಣಿಯು ಅವರಿವರೊಡಗೂಡಿ ಹುಟ್ಟುವದಿಲ್ಲ; ಅಂತೆಯೇ ಸಾಯುವ ಪ್ರಾಣಿಯೂ ಜತೆಗೂಡಿ ಸಾಯುವದಿಲ್ಲ. ಅಯ್ಯಾ! ಪ್ರಪಂಚದ ಸ್ಥಿತಿಯು ಇಂತಿರುವಾಗ ಯಾವ ಮಾನವನು ತಾನೇ ತಾಯಿ, ತಂದೆ, ಬಂಧು,

ತಸ್ಮಾನ್ಮಾತಾ ಪಿತಾಚೇತಿ ರಾಮ! ಸಜ್ಜೇತ ಯೋ ನರಃ ॥ ಉನ್ಮತ್ತಇವ ಸಜ್ಞೇಯೋ ನಾಸ್ತಿಕಶ್ಚಿದ್ಧಿ ಕಸ್ಯಚಿತ್ ॥ ೪ ॥ ಯಥಾ ಗ್ರಾಮಾಂತರಂ ಗಚ್ಛನ್ನರಃ ಕಶ್ಚಿತ್ಕ್ವಚಿದ್ವಸೇತ್ ॥ ಉತ್ಸೃಜ್ಯ ಚ ತಮಾವಾಸಂ ಪ್ರತಿಷ್ಠೇತಾಽಪರೇಽಹನಿ ॥ ೫ ॥ ಏವಮೇವ ಮನುಷ್ಯಾಣಾಂ ಪಿತಾ ಮಾತಾಗೃಹಂ ವಸು ॥ ಆವಾಸಮಾತ್ರಂ ಕಾಕುತ್ಸ್ಥ! ಸಜ್ಜಂತೇ ನಾತ್ರ ಸಜ್ಜನಾಃ ॥ ೬ ॥ ಪಿತ್ರ್ಯಂ ರಾಜ್ಯಂ ಪರಿತ್ಯಜ್ಯ ಸ ನಾರ್ಹಸಿ ನರೋತ್ತಮ! ॥ಆಸ್ಥಾತುಂ ಕಾಪಥಂ ದುಃಖಂ ವಿಷಮಂ

ಆ ಪುರುಷನು, ಉನ್ಮತ್ತಇವ - ಹುಚ್ಚನೆಂದು, ಜ್ಞೇಯಃ - ತಿಳಿಯತಕ್ಕವನು, ಕಶ್ಚಿತ್ - ಯಾವನೂ, ನಾಸ್ತಿಹಿ - ಇಲ್ಲವಷ್ಟೆ. ॥ ೪ ॥ ಯಥಾ - ಹೇಗೆ, ಗ್ರಾಮಾಂತರಂ - ಮತ್ತೊಂದು ಗ್ರಾಮವನ್ನು ಕುರಿತು, ಗಚ್ಛನ್-ಹೋಗುತ್ತಿರುವ, ಕಶ್ಚಿನ್ನರಃ-ಒಬ್ಬಾನೊಬ್ಬ ಮನುಷ್ಯನು, ಕ್ವಚಿತ್-ಒಂದಾನೊಂದು ಸ್ಥಳದಲ್ಲಿ, ವಸೇತ್ - ಇದ್ದು, ಅಪರೇಹನಿ - ಎರಡನೆಯ ದಿನದಲ್ಲಿ, ತಮಾವಾಸಂ - ಆ ಸ್ಥಳವನ್ನು, ಉತ್ಸೃಜ್ಯ-ಬಿಟ್ಟು, ಪ್ರತಿಷ್ಠೇತ - ಹೊರಟು ಹೋಗುವನೋ, ಏವಮೇವ-ಹೀಗೆಯೇ, ಹೇ ಕಾಕುತ್ಸ್ಥ - ಎಲೈ ಶ್ರೀರಾಮನೇ, ಮನುಷ್ಯಾಣಾಂ-ಮನುಷ್ಯರಿಗೆ, ಪಿತಾ-ತಂದೆಯು, ಮಾತಾ - ತಾಯಿಯು, ಗೃಹಂ-ಮನೆಯು, ವಸು-ದ್ರವ್ಯವು, ಆವಾಸಮಾತ್ರಂ-ಇರುವಷ್ಟು ದಿನಗಳು ಮಾತ್ರವೇ, ಅತ್ರ - ಈ ಮಾತಾಪಿತ್ರಾದಿ ವಿಷಯದಲ್ಲಿ, ಸಜ್ಜನಾಃ - ಸತ್ಪುರುಷರು, ನಸಜ್ಜಂತೇ - ಆಸಕ್ತರಾಗುವದಿಲ್ಲ. ॥ ೬ ॥ ಹೇ ನರೋತ್ತಮ - ಎಲೈ ನರಶ್ರೇಷ್ಠನೇ, ಸಃ - ಅಂತಹ ನೀನು, ಪಿತ್ರ್ಯಂ - ಪಿತೃ ಪಿತಾಮಹಾರ್ಜಿತವಾದ, ರಾಜ್ಯಂ - ರಾಜ್ಯವನ್ನು, ಪರಿತ್ಯಜ್ಯ - ಪರಿತ್ಯಾಗಮಾಡಿ, ದುಃಖಂ -

ಬಳಗ, ವೆಂಬಿವರಲ್ಲಿ ಅನುರಕ್ತನಾದಾನು? ಒಂದು ವೇಳೆ ಹಾಗಾದನೆಂದರೆ ಅವನು ಹುಚ್ಚನೆಂದೇ ತಿಳಿಯತಕ್ಕದು.॥೧-೪॥ಈ ತಾಯಿತಂದೆಗಳೇ ಮೊದಲಾದವರ ಸಂಬಂಧವೆಂಬುದು ಯ್ಯಾರಿಗೂ ಶಾಶ್ವತವಾಗಿ ಇರುವದಿಲ್ಲ. ಪುರುಷನಾದವನು ತಾನೊಬ್ಬನೇ ಜನಿಸಿ ತನ್ನ ಜನ್ಮಕ್ಕೆ ಹೇತುಭೂತಗಳಾದ ಕಾರ್ಯಪರಂಪರೆಗಳು ಮುಗಿಯುತ್ತಲೇ ಪುನಃ ತಾನೆಲ್ಲಿಂದ ಬಂದನೋ ಅಲ್ಲಿಗೆ ತಾನೊಬ್ಬನೇ ಹೊರಟು ಹೋಗುತ್ತಾನೆ. ಕೇಳು! ಗ್ರಾಮದಿಂದ ಗ್ರಾಮಕ್ಕೆ ಪಯಣಿಸುವ ಪುರುಷನೊಬ್ಬನು, ಮಾರ್ಗಮಧ್ಯದಲ್ಲಿನ ಮತ್ತೊಂದು ಗ್ರಾಮದಲ್ಲಿ ತಂಗಿದ್ದು ಅಲ್ಲಿನ ತನ್ನ ಕೆಲಸಗಳನ್ನು ನೆರವೇರಿಸಿಕೊಂಡು ಮುಂದಕ್ಕೆ ಎಂತು ಹೊರಡುತ್ತಾನೆಯೋ, ಅಂತೆಯೇ ಈ ಪ್ರಪಂಚದಲ್ಲಿನ ಪ್ರತಿ ಮಾನವನ ಸ್ಥಿತಿಯೆಂದು ತಿಳಿವವನಾಗು. ಮಧ್ಯಮಾರ್ಗದಲ್ಲಿ ತಂಗಿದ್ದ ಪುರುಷನಿಗೆ ಕಾರ್ಯವಾಗುವವರೆವಿಗೂ ಆ ಗ್ರಾಮವು ಹೇಗೆ ವಾಸಭೂಮಿಯಾಗಿರುತ್ತದೆಯೋ, ಹಾಗೆಯೇ ಈ ಜಗತ್ತಿನ ಸಮಸ್ತ ಪ್ರಾಣಿಗಳಿಗೂ ತಂದೆ, ತಾಯಿ, ಮನೆ, ಮಠ, ಧನ, ಮೊದಲಾದುವು ನಿಯಮಿತಕಾಲದವರೆವಿಗೆ ಮಾತ್ರ ಆಶ್ರಯವಾಗಿರುತ್ತವೆಯೇ ಹೊರತು ಎಂದಿಗೂ ಶಾಶ್ವತವಾಗಿರುವದಿಲ್ಲ. ಆದಕಾರಣ ಬುದ್ಧಿವಂತನಾದವನು ಈ ಪುತ್ರ, ಮಿತ್ರ, ಕಳತ್ರಾದಿಗಳಲ್ಲಿನ ಮಮತ್ವವನ್ನು ಎಂದಿಗೂ ಹೊಂದಿರುವದಿಲ್ಲ. ಎಲೈ ಪುರುಷಶ್ರೇಷ್ಠನಾದ ಶ್ರೀರಾಮಮೂರ್ತಿಯೇ! ನೀನು ದಶರಥಮಹಾ

ಬಹು ಕಂಟಕಂ ॥ ೭ ॥ ಸಮೃದ್ಧಾಯಾ ಮಯೋಧ್ಯಾಯಾ ಮಾತ್ಮಾನ
ಮಭಿಷೇಚಯ ॥ ಏಕವೇಣೀ ಧರಾಹಿ ತ್ವಾಂ ನಗರೀ ಸಂಪ್ರತೀಕ್ಷತೇ ॥ ೮ ॥
ರಾಜಭೋಗಾ ನನುಭವ ಮಹಾರ್ಹಾ ಪಾರ್ಥಿವಾತ್ಮಜ! ॥ ವಿಹರತ್ವ
ಮಯೋಧ್ಯಾಯಾಂ ಯಥಾ ಶಕ್ರ ಸ್ತ್ರಿವಿಷ್ಟಪೇ ॥ ೯ ॥ ನ ತೇ ಕಶ್ಚಿದ್ದಶರಥ
ಸ್ತ್ವಂಚ ತಸ್ಯ ನ ಕಶ್ಚನ ॥ ಅನ್ಯೋ ರಾಜಾ ತ್ವ ಮನ್ಯಸ್ಯ ತಸ್ಮಾತ್ಕುರು ಯದು

ದುಃಖಕರವಾದ, ವಿಷಮಂ - ಅನುಚಿತವಾದ, ಬಹುಕಂಟಕಂ-ಅನೇಕ ಉಪದ್ರವಗಳುಳ್ಳ, ಕಾಪಥಂ - ಕುತ್ಸಿತಮಾರ್ಗವನ್ನು, ಆಸ್ಥಾತುಂ - ಅನುಸರಿಸಲು, ನಾರ್ಹಸಿ - ಯೋಗ್ಯನಾಗಬೇಡ. ॥ ೭ ॥ ಸಮೃದ್ಧಾಯಾಂ - ಸಕಲೈಶ್ವರ್ಯ ಸಂಪನ್ನವಾದ, ಅಯೋಧ್ಯಾಯಾಂ - ಅಯೋಧ್ಯಾಪಟ್ಟಣದಲ್ಲಿ, ಆತ್ಮಾನಂ-ನಿನ್ನನ್ನು, ಅಭಿಷೇಚಯ-ಅಭಿಷೇಕಮಾಡಬೇಕೆಂದು, ಏಕವೇಣೀಧರಾ-ಒಂದೇ ಜಡೆಯನ್ನು ಧರಿಸಿದವಳಾಗಿ, ನಗರೀ - ಪಟ್ಟಣವು, ತ್ವಾಂ - ನಿನ್ನನ್ನು, ಸಂಪ್ರತೀಕ್ಷತೇಹಿ - ಇದಿರುನೋಡುತ್ತಲಿರುವುದಷ್ಟೆ. ॥ ೮ ॥ ಹೇ ಪಾರ್ಥಿವಾತ್ಮಜ - ಎಲೈ ಅರಸುಮಗನೇ, ತ್ವಂ - ನೀನು, ಅಯೋಧ್ಯಾಯಾಂ - ಅಯೋಧ್ಯಾಪಟ್ಟಣದಲ್ಲಿ, ತ್ರಿವಿಷ್ಟಪೇ - ಸ್ವರ್ಗದಲ್ಲಿ, ಶಕ್ರೋಯಥಾ - ದೇವೇಂದ್ರನಂತೆ, ಮಹಾರ್ಹಾ - ಶ್ರೇಷ್ಠಗಳಾದ, ರಾಜಭೋಗಾ - ರಾಜಭೋಗಗಳನ್ನು, ಅನುಭವ - ಅನುಭವಿಸುತ್ತ, ವಿಹರ - ವಿಹಾರಮಾಡು. ॥ ೯ ॥ ತೇ - ನಿನಗೆ, ದಶರಥಃ - ದಶರಥರಾಯನು, ನಕಶ್ಚಿತ್ - ಯಾರೂ ಅಲ್ಲ, ತ್ವಂಚ - ನೀನೂ, ತಸ್ಯ - ಅವನಿಗೆ, ನಕಶ್ಚನ-ಯಾರೂ ಅಲ್ಲ, ರಾಜಾ - ಅರಸು, ಅನ್ಯಃ - ಬೇರೆಯವನು; ತ್ವಂ - ನೀನು, ಅನ್ಯಃ - ಬೇರೆಯವನು, ತಸ್ಮಾತ್ -

---

ರಾಜನೇ ಗುರುವೆಂದೆಣಿಸಿದ್ದೀಯೆ. ಆತನ ಮಾತನ್ನು ಎಂದಿಗೂ ಮೀರಬಾರದೆಂಬ ಸಂಕಲ್ಪವನ್ನು ಹೊಂದಿದ್ದೀಯೆ. ಇದು ಎಲ್ಲಿನ ವ್ಯಾಮೋಹ! ಪಿತೃ ಪಿತಾಮಹಾದಿ ಪಾರಂಪರ್ಯದಿಂದ ಪ್ರಾಪ್ತವಾಗಿರುವ ಸಾಕೇತಸಾಂಮ್ರಾಜ್ಯವನ್ನು ತೊರೆದು, ದುಃಖವನ್ನುಂಟುಮಾಡುವುದೂ, ವಕ್ರವಾಗಿರುವುದೂ, ಬಹು ವಿಧ ಬಾಧೆಗಳನ್ನೊಳಗೊಂಡಿರುವುದೂ ಆದ ಈ ವನವಾಸವನ್ನು ಮಾಡಬೇಕೆಂದು ಬಯಸುತ್ತಿರುವೆಯಲ್ಲವೆ! ಇದು ಶುದ್ಧ 'ಕಾಪಥ' ವೆನಿಸುತ್ತದೆ. ಈ ಮಾರ್ಗವನ್ನೆಂದಿಗೂ ಅನುಸರಿಸಬೇಡ, ಸಕಲ ಸಂಪತ್ಸಮೃದ್ಧವಾಗಿರುವ ಅಯೋಧ್ಯಾಪಟ್ಟಣಕ್ಕೈತಂದು ಪಟ್ಟಾಭಿಷಿಕ್ತನಾಗಿ ರಾಜ್ಯವನ್ನಾಳು. ಇಡೀ ಅಯೋಧ್ಯಾರಾಜ್ಯವೆಲ್ಲವೂ ತಿರಿಕಟ್ಟದ ಒಂದೇ ಜಡೆಯುಳ್ಳದಾಗಿ ನಿನ್ನ ಆಗಮನವನ್ನು ನಿರೀಕ್ಷಿಸುತ್ತಿದೆ. ॥೭-೮॥ ನಿನ್ನ ಆಗಮನವಾಗುವವರೆಗೂ ಪುರನಿವಾಸಿಗಳೆಲ್ಲರೂ ತಲೆ ಬಾಚುವದಿಲ್ಲವೆಂದು ಪ್ರತಿಜ್ಞೆ ಮಾಡಿದ್ದಾರೆ. ದಯೆಮಾಡು, ಓ ರಾಜಪುತ್ರನೇ! ಸಮಸ್ತ ರಾಜಭೋಗಗಳನ್ನೂ ಅನುಭವಿಸುತ್ತ, ದೇವೇಂದ್ರನು ಅಮರಾವತಿಯಲ್ಲಿ ವಿಹರಿಸುವಂತೆ ಅಯೋಧ್ಯಾಪಟ್ಟಣದಲ್ಲಿ ಮನಬಂದಂತೆ ವಿಹಾರಲೋಲುಪನಾಗು. ದಶರಥನಿಗೆ ನೀನಾರು? ನಿನಗಾದರೂ ದಶರಥನಾರು? ನಿಮ್ಮಿಬ್ಬರಿಗೂ ಯಾವ ವಿಧವಾದ ಬಾಂಧವ್ಯವೂ ಇರುವದಿಲ್ಲವೆಂಬುದನ್ನು ತಿಳಿ. ದಶರಥರಾಜನು ಬೇರೆ; ನೀನು ಬೇರೆ; ಹೀಗಿರುವಲ್ಲಿ ಈ ಭ್ರಾಂತಿ ನಿನಗೇಕೆ?

ಚ್ಯತೇ ॥ ೧೦ ॥ ಬೀಜಮಾತ್ರಂ ಪಿತಾ ಜಂತೋಃ ಶುಕ್ಲಂ ರುಧಿರಮೇವಚ ॥ ಸಂಯುಕ್ತ ಮೃತುಮನ್ಮಾತ್ರಾ ಪುರುಷಸ್ಯೇಹ ಜನ್ಮ ತತ್ ॥ ೧೧ ॥ ಗತ ಸ್ಸ ನೃಪತಿ ಸ್ತತ್ರ ಗಂತವ್ಯಂ ಯತ್ರ ತೇನ ವೈ ॥ ಪ್ರವೃತ್ತಿ ರೇಷಾ ಮರ್ತ್ಯಾನಾಂ ತ್ವಂ ತು ಮಿಥ್ಯಾ ವಿಹನ್ಯಸೇ ॥೧೨॥ ಅರ್ಥಧರ್ಮ ಪರಾ ಯೇ ಯೇ ತಾಂಸ್ತಾ

ಆ ಕಾರಣ, ಸಃ - ನೀನು, ಮಯಾ - ನನ್ನಿಂದ, ಯತ್ - ಯಾವದು, ಉಚ್ಯತೇ - ಹೇಳಲ್ಪಡು ತ್ತದೆಯೋ, ತತ್ - ಆ ಕಾರ್ಯವನ್ನು, ಕುರು - ಮಾಡು. ॥ ೧೦ ॥ ಜಂತೋಃ - ಹುಟ್ಟತಕ್ಕ ಪ್ರಾಣಿಗೆ, ಪಿತಾ-ತಂದೆಯು, ಬೀಜಮಾತ್ರಂ - ಬೀಜಪ್ರದಾಯಕನು ಮಾತ್ರವೇ, ಋತುಮನ್ಮಾತ್ರಾ - ಋತುಮತಿಯಾದ ತಾಯಿಯಿಂದ, ಸಂಯುಕ್ತಂ - ಸಂಯೋಗ ಮಾಡಲ್ಪಟ್ಟ, ತತ್‌ಶುಕ್ಲಂರುಧಿರ ಮೇವಚ - ಆ ಶುಕ್ಲಶೋಣಿತಗಳೂ, ಪುರುಷಸ್ಯ - ಪುರುಷನಿಗೆ, ಇಹ - ಇಲ್ಲಿ, ಜನ್ಮ - ಉತ್ಪತ್ತಿಗೆ ಕಾರಣ. ॥ ೧೧ ॥ ತೇನ - ಆ ದಶರಥರಾಯನಿಂದ, ಯತ್ರ - ಯಾವ ಸ್ಥಳದಲ್ಲಿ, ಗಂತವ್ಯಂ - ಹೋಗತಕ್ಕದೋ, ತತ್ರ - ಅಲ್ಲಿ, ಸನೃಪತಿಃ - ಆ ಅರಸು, ಗತಃ - ಹೋದನು, ಮರ್ತ್ಯಾನಾಂ - ಮನುಷ್ಯರಿಗೆ, ಏಷಾಪ್ರವೃತ್ತಿಃ - ಇದು ಸ್ವಭಾವವು, ತ್ವಂತು - ನೀನಾದರೆ, ಮಿಥ್ಯಾವಿಹನ್ಯಸೇ - ಸುಳ್ಳಾದ ಅಭಿಮಾನದಿಂದ ಹೊಡೆಯಲ್ಪಡುತ್ತಿದ್ದೀಯೆ. ॥ ೧೨ ॥ ಯೇಯೇ - ಯಾರು ಯಾರು,

ಆದುದರಿಂದ ನಾನು ಹೇಳಿದಂತೆ ಮಾಡು. "ದಶರಥರಾಜನಕುಮಾರನು ನಾನು. ಆತನ ಆಜ್ಞಾವಚನವನ್ನು ನೆರವೇರಿಸಬೇಕು" ಎಂಬ ಚಪಲವು ನಿನಗುಂಟೇನೊ? ಇದು ಅಷ್ಟು ಮುಖ್ಯವಾದ ಸಂಬಂಧವಲ್ಲ.॥೯-೧೦॥ಏಕೆಂಬೆಯೋ? ಲೋಕದಲ್ಲಿ ಪ್ರಾಣಿಗಳ ಉತ್ಪತ್ತಿಗೆ ಜನಕನಾದವನು ಬೀಜಪ್ರದಾಯಕನಲ್ಲವೆ. ಇದು ಅಲ್ಪ ಕಾರಣ; ಇದು ಹೊರ್ತು ತಂದೆ ಯಿಂದ ಇನ್ನಾವ ಮಹತ್ಕಾರ್ಯವೂ ಆಗಬೇಕಾದುದಿಲ್ಲ. ಋತುಮತಿಯಾದ ಜನನಿ ಯಿಂದ ಶುಕ್ಲ, ಶೋಣಿತಗಳೆರಡೂ ಮಿಶ್ರಿತವಾಗಿ ಪುರುಷನ ಜನ್ಮಕ್ಕೆ ಕಾರಣವಾಗುತ್ತವೆ. ಅಂದರೆ ಕಾಮಬಾಣ ಸಂತಪ್ತರಾದ ಈ ಮಾತಾಪಿತೃಗಳು ಆ ಸಂತಾಪ ಪರಿಹಾರಕನಾದ ಸಂಗಮವನ್ನು ಬಯಿಸಲು ಪ್ರಾಣಿಯು ಜನಿಸುತ್ತದೆ. ಇದರಿಂದ "ತಂದೆಯಾದವನು ಕೇವಲ ಬೀಜಪ್ರದಾಯಕನು, ತಾಯಿಯಾದವಳು ಕೇವಲ ಕ್ಷೇತ್ರದಂತಿರುವವಳೂಆಗಿ ದ್ದಾರೆಂದು ತಿಳಿವವನಾಗು" ಎಂದಮೇಲೆ ಬೀಜಕ್ಕೂ, ಬೀಜಪ್ರದಾಯಕನಿಗೂ; ಕ್ಷೇತ್ರಕ್ಕೂ, ಎಷ್ಟರಮಟ್ಟಿನ ನಿಕಟಸಂಬಂಧವಿದೆ ಎಂಬುದನ್ನು ಯೋಚಿಸು. ॥ ೧೧ ॥ ಚನ್ನಾಗಿ ಯೋಚಿಸಿ ದರೆ ಪುರುಷನಜನ್ಮಕ್ಕೆ ತಂದೆಗಿಂತಲೂ ತಾಯಿಯೇ ಮುಖ್ಯಕಾರಣಳೆಂದು ಕಂಡುಬರುತ್ತದೆ. ನಿಮ್ಮ ತಂದೆಯಾದ ದಶರಥನು ಎಲ್ಲಿಗೆ ಹೋದನೆಂದು ತಿಳಿದಿದ್ದೀಯೆ. ಎಲ್ಲಿಗೆ ಹೋಗ ಬೇಕೋ ಅಲ್ಲಿಗೇ ಹೋಗಿದ್ದಾನೆ. ಪ್ರಪಂಚದಲ್ಲಿನ ಸಮಸ್ತ ಪ್ರಾಣಿಗಳೂ ಅಲ್ಲಿಗೇ ಹೋಗ ಬೇಕು. ಇದು ಹುಟ್ಟಿದ ಪ್ರಾಣಿಗಳಿಗೆ ಸ್ವಾಭಾವಿಕವಾದುದು. ನೀನು ಕೇವಲ ಭ್ರಾಂತಿ ಯಿಂದಲೂ, ಮಿಥ್ಯಾಭಿಮಾನದಿಂದಲೂ ತಂದೆ, ತಾಯಿ ಮುಂತಾದವರಲ್ಲಿ ವ್ಯಾಮೋಹವ ನ್ನಿಟ್ಟುಕೊಂಡು ಕೆಡುತ್ತಿದ್ದೀಯೆ.॥೧೨॥ಇದರಲ್ಲಿ ಎಳ್ಳಷ್ಟೂಪ್ರಯೋಜನವಿಲ್ಲ. ಆದುದರಿಂದೆಲ್ಲೈ

ಶೋಚಾಮಿ ನೇತರಾ೯॥ತೇ ಹಿ ದುಃಖ ಮಿಹ ಪ್ರಾಪ್ಯ ವಿನಾಶಂ ಪ್ರೇತ್ಯ ಭೇಜಿರೇ ॥ ೧೩ ॥ ಅಷ್ಟಕಾ ಪಿತೃದೈವತ್ಯ ಮಿತ್ಯಯಂ ಪ್ರಸೃತೋ ಜನಃ ॥ ಅನ್ನಸ್ಯೋಪದ್ರವಂ ಪಶ್ಯ ಮೃತೋಹಿ ಕಿಮಶಿಷ್ಯತಿ? ॥ ೧೪ ॥ ಯದಿ ಭುಕ್ತ ಮಿಹಾನ್ಯೇನ ದೇಹಮನ್ಯಸ್ಯ ಗಚ್ಛತಿ ॥ ದದ್ಯಾ ತ್ಪ್ರವಸತ ಶ್ಶ್ರಾದ್ಧಂ ನತತ್ಪಥ್ಯಶನಂ ಭವೇತ್

ಅರ್ಥಧರ್ಮಪರಾಃ - ಅರ್ಥದಲ್ಲಿಯೂ ಧರ್ಮದಲ್ಲಿಯೂ ಆಸಕ್ತರೋ, ತಾಂಸ್ತಾ೯ - ಆಯಾಯ ಮನುಷ್ಯರನ್ನು ಕುರಿತು, ಶೋಚಾಮಿ - ವ್ಯಸನಗೊಂಡಿದ್ದೇನೆ, ಇತರಾ೯ - ಇತರರನ್ನು ಕುರಿತು, ನಶೋಚಾಮಿ - ದುಃಖಿಸುವುದಿಲ್ಲ, ತೇಹಿ - ಆ ಧರ್ಮಾರ್ಥ ಕಾಮರಾದರೆ, ಇಹ - ಈ ಲೋಕದಲ್ಲಿ, ದುಃಖಂ - ವ್ಯಸನವನ್ನು, ಪ್ರಾಪ್ಯ - ಹೊಂದಿ, ಪ್ರೇತ್ಯ - ಸತ್ತು, ವಿನಾಶಂ - ನಾಶವನ್ನು, (ಅಂದರೆ ದುಃಖವನ್ನು) ಭೇಜಿರೇ - ಹೊಂದಿದ್ದಾರೆ. ॥ ೧೩ ॥ ಅಷ್ಟಕಾಃ - ಅಷ್ಟಕಶ್ರಾದ್ಧವು, ಪಿತೃದೈವತ್ಯ ಮಿತಿ - ಪಿತೃಗಳೇ ದೇವತೆಗಳೆಂದು, ಅಯಂಜನಃ - ಈ ಜನವು, ಪ್ರಸೃತಃ - ಪ್ರವರ್ತಿಸಿದೆ, ಅನ್ನಸ್ಯ - ತಾನು ಉಣ್ಣತಕ್ಕ ಅನ್ನಕ್ಕೆ, ಉಪದ್ರವಂ - ನಾಶವನ್ನು, ಪಶ್ಯ - ತಿಳಿದುಕೋ, ಮೃತಃ - ಮರಣವನ್ನು ಹೊಂದಿದವನು, ಅಶಿಷ್ಯತಿಕಿಂ - ಊಟ ಮಾಡುವನೇನು? ॥೧೪॥ ಇಹ - ಈ ಲೋಕದಲ್ಲಿ, ಅನ್ಯೇನ - ಮತ್ತೊಬ್ಬನಿಂದ, ಭುಕ್ತಂ - ಭೋಜನ ಮಾಡಲ್ಪಟ್ಟದು, ಅನ್ಯಸ್ಯ - ಬೇರೆಯವನ, ದೇಹಂ - ಶರೀರವನ್ನು, ಗಚ್ಛತಿಯದಿ - ಹೊಂದಿದರೆ, ಪ್ರವಸತಃ - ಸತ್ತವನಿಗೂ, ಶ್ರಾದ್ಧಂ - ಶ್ರಾದ್ಧವನ್ನು, ದದ್ಯಾತ್ - ಕೊಡತಕ್ಕದು; ತತ್ - ಆ ಅನ್ನವು, ಪಥಿ - ಮಾರ್ಗದಲ್ಲಿ, ಅಶನಂ - ಆಶನವು, ನಭವೇತ್ - ಆಗಲಾರದು. ॥ ೧೫ ॥ ಏತೇ - ಈ, ದಾನಸಂವನನಾಃ - ದಾನಕ್ಕೋಸುಗ

ಪುರುಷಶ್ರೇಷ್ಠನಾದ ಶ್ರೀರಾಮನೇ!ನಾನುಅಹರ್ನಿಶವೂ ಧರ್ಮ,ಧರ್ಮಅರ್ಥ,ಅರ್ಥಇವುಗಳಲ್ಲಿಯೇ ನ್ಯಸ್ತಚಿತ್ತರಾಗಿ ಅವನ್ನೇ ಅನುಸರಿಸುತ್ತಿರುವವರನ್ನು ಕುರಿತು ಯೋಚಿಸುತ್ತಿರುವೆನೇ ಹೊರ್ತು ಮತ್ತಾರವಿಷಯದಲ್ಲಿಯೂ ಅಷ್ಟು ಯೋಚಿಸುವದಿಲ್ಲ. ಏಕೆಂದರೆ ಈ ಧರ್ಮಾರ್ಥಗಳನ್ನಪೇಕ್ಷಿಸುವ ಪುರುಷರು ಈ ಲೋಕದಲ್ಲಿ ಮಹತ್ತರವಾದ ದುಃಖ ಪರಂಪರೆಯನ್ನನುಭವಿಸಿ ಮೃತಿಯೊಂದಿದ ಮೇಲೆಯೂ ದುಃಖವನನುಭವಿಸುತ್ತಾರೆ. ॥೧೩॥ ಅಲ್ಲದೆ ಗಯಾ ಕ್ಷೇತ್ರದಲ್ಲಿ ಮಾನವರು ಆಚರಿಸುತ್ತಿರುವ ಅಷ್ಟಕಶ್ರಾದ್ಧವೆಂಬುದು ಪಿತೃದೇವತೆಗಳನ್ನುದ್ದೇಶಿಸಿದುದೆಂದು ಈ ವೈದಿಕರು ತಾವು ತಿನ್ನುವ ಅನ್ನವನ್ನು ಅನ್ಯಾಯವಾಗಿ ಕಳೆದು ಕೊಳ್ಳುತ್ತಾರೆ? ಇದೆಂತಹ ಹುಚ್ಚು! ಮೃತನಾದವನು ಎಂದಿಗೇ ಆಗಲಿ ಭುಜಿಸುವದುಂಟೇ? ಈ ಲೋಕದಲ್ಲಿ ಒಬ್ಬನು ಭುಜಿಸಿದ ಭೋಜನದಿಂದ ಬೇರೊಬ್ಬನಿಗೆ ತೃಪ್ತಿಯಾಗಿ ಅವನ ಕ್ಷುತ್ಪಿಪಾಸೆಗಳು ಪರಿಹಾರವಾಗುವದೆಂದರೆ ಮೃತರನ್ನುದ್ದೇಶಿಸಿ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕೆಂಬ ಶ್ರಾದ್ಧವನ್ನು ಅವಶ್ಯವಾಗಿ ಅನುಷ್ಠಿಸಬಹುದು. ಒಬ್ಬನ ಭೋಜನದಿಂದ ಬೇರೊಬ್ಬನಿಗೆ ತೃಪ್ತಿಯುಂಟಾಗಬಹುದೆಂಬ ಈ ವಿಷಯವನ್ನು ಕೇಳಿಯೂ ಇಲ್ಲ; ನೋಡಿಯೂ ಇರುವದಿಲ್ಲ. ಒಂದುವೇಳೆ ಶ್ರದ್ಧಾಭಕ್ತಿಯುಳ್ಳವನಾಗಿ ಕರ್ಮಗಳನ್ನೇ ನಂಬಿ, ಶ್ರಾದ್ಧಾದಿಗಳನ್ನು ಮಾಡುವುದಾದರೆ ಅಂಧಶ್ರದ್ಧೆಯಿಂದ ಮಾಡಿದ ಆ ಶ್ರಾದ್ಧವು ಯಮ ಲೋಕದಲ್ಲಿರುವ ಪಿತೃಗಳಿಗೆ ಎಂದಿಗೂ ಅಶನವಾಗಿ ಪರಿಣಮಿಸಲಾರದು. ॥೧೪-೧೫॥ ಆದರೆ

ದಾನಸಂವನನಾ ಹ್ಯೇತೇ ಗ್ರಂಥಾ ಮೇಧಾವಿಭಿಃ ಕೃತಾಃ ॥ ಯಜಸ್ವ ದೇಹಿ ದೀಕ್ಷಸ್ವ ತಪಸ್ತಪ್ಯಸ್ವ ಸಂತ್ಯಜ ॥ ೧೬ ॥ ಸ ನಾಸ್ತಿ ಪರಮಿತ್ಯೇವ ಕುರು ಬುದ್ಧಿಂ ಮಹಾಮತೇ! ॥ ಪ್ರತ್ಯಕ್ಷಂ ಯತ್ತದಾತಿಷ್ಠ ಪರೋಕ್ಷಂ ಪೃಷ್ಠತಃ ಕುರು ॥೧೭॥
ಸ ತಾಂ ಬುದ್ಧಿಂ ಪುರಸ್ಕೃತ್ಯ ಸರ್ವಲೋಕ ನಿದರ್ಶಿನೀಂ ॥
ರಾಜ್ಯಂ ತ್ವಂ ಪ್ರತಿಗೃಹ್ಣೀಷ್ವ ಭರತೇನ ಪ್ರಸಾದಿತಃ ॥ ೧೮ ॥
ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟೋತ್ತರಶತತಮಸ್ಸರ್ಗಃ.

ವಶೀಕರಣೋಪಾಯಗಳಾದ, ಗ್ರಂಥಾಃ - ಗ್ರಂಥಗಳು, ಮೇಧಾವಿಭಿಃ - ಬುದ್ಧಿಶಾಲಿಗಳಿಂದ, ಕೃತಾಃ- ಮಾಡಲ್ಪಟ್ಟವು, ಹೇ ಮಹಾಮತೇ - ಎಲೈ ಬುದ್ಧಿಶಾಲಿಯೇ, ಸಃ - ಅಂತಹ ನೀನು, ಯಜಸ್ವ - ಯಜ್ಞ ಮಾಡು, ದೇಹಿ - ದಕ್ಷಿಣಾದಿಗಳನ್ನು ಕೊಡು, ದೀಕ್ಷಸ್ವ - ದೀಕ್ಷಾವಂತನಾಗು, ತಪಃ - ತಪಸ್ಸನ್ನು, ತಪ್ಯಸ್ವ - ತಪಿಸು. ಇತಿ - ಇಂತೆಂದು ಹೇಳತಕ್ಕ ಗ್ರಂಥಗಳನ್ನು, ಸಂತ್ಯಜ - ಬಿಟ್ಟುಬಿಡು, ಪರಂ - ಪರಲೋಕವು, ನಾಸ್ತೀತ್ಯೇವ - ಇಲ್ಲವೇ ಇಲ್ಲವೆಂದು, ಬುದ್ಧಿಂ - ಮತಿಯನ್ನು, ಕುರು - ಮಾಡು, ಯತ್ - ಯಾವದು, ಪ್ರತ್ಯಕ್ಷಂ - ಪ್ರತ್ಯಕ್ಷ ಸಿದ್ಧವಾದುದೋ, ತತ್-ಅದನ್ನು, ಆತಿಷ್ಠ - ಅನುಷ್ಠಾನಮಾಡು, ಪರೋಕ್ಷಂ-ಪ್ರತ್ಯಕ್ಷವಲ್ಲದುದನ್ನು, ಪೃಷ್ಠತಃಕುರು-ತಿರಸ್ಕಾರಮಾಡು. ॥೧೬-೧೭॥ ಸರ್ವಲೋಕನಿದರ್ಶಿನೀಂ - ಸರ್ವ ಜನಕ್ಕೂ ಸಮ್ಮತವಾದ, ತಾಂಬುದ್ಧಿಂ - ಅಂತಹ ಬುದ್ಧಿಯನ್ನು, ಪುರಸ್ಕೃತ್ಯ-ಮುಂದೆ ಮಾಡಿಕೊಂಡು, ಸತ್ವಂ - ಮಹಾಮತಿವಂತನಾದ ನೀನು, ಭರತೇನ - ಭರತನಿಂದ, ಪ್ರಸಾದಿತಃ - ಸಮಾಧಾನಗೊಳಿಸಲ್ಪಟ್ಟವನಾಗಿ, ರಾಜ್ಯಂ - ರಾಜ್ಯವನ್ನು, ಪ್ರತಿಗೃಹ್ಣೀಷ್ವ - ಪರಿಗ್ರಹಿಸು. ॥ ೧೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟೋತ್ತರಶತತಮಸ್ಸರ್ಗಃ.

'ದಾನ ಮಾಡಬೇಕು' ಎಂದು ಅನೇಕ ಗ್ರಂಥಗಳು ಸಾರುತ್ತಿಲ್ಲವೇ? ಎಂದು ಶಂಕಿಸಬಹುದು. ಇವೆಲ್ಲವೂ ಮಹಾ ನಿಪುಣರಾದವರಿಂದ ಬರೆಯಲ್ಪಟ್ಟಿವೆ. ಈ ಗ್ರಂಥಕರ್ತೃಗಳೆಲ್ಲರೂ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುವದರಲ್ಲಿಯೇ ಲೋಲುಪರಾದುದರಿಂದ 'ದಾನ ಮಾಡಬೇಕು' ಎಂದು ಬರೆದಿರುತ್ತಾರೆಯೇ ಹೊರತು ಮತ್ತೆ ಬೇರೆ ಅಲ್ಲ. "ಅಯ್ಯಾ, ಮತಿವಂತನೆ! ನಿನಗೆ ಕರ್ಮದಲ್ಲಿ ಶ್ರದ್ಧೆಯಿದ್ದರೆ ಅಶ್ವಮೇಧಾದಿ ಯಾಗಗಳನ್ನು ಮಾಡಿ, ಭೂರಿದಕ್ಷಿಣೆಗಳನ್ನೀಯುತ್ತ, ದೀಕ್ಷಾಬದ್ಧನಾಗಿರು. ಅಲ್ಲದೆ ಕೃಚ್ಛ್ರ, ಚಾಂದ್ರಾಯಣಾದಿ ವ್ರತಗಳನ್ನೂ ಆಚರಿಸು" ಎಂದು ಕರ್ಮಮಾರ್ಗವನ್ನು ಬೋಧಿಸುವ ಗ್ರಂಥಗಳು ನೋಡತಕ್ಕವಲ್ಲ. ॥೧೬॥ ಪರಲೋಕವಿಲ್ಲವೇ ಇಲ್ಲವೆಂಬ ತತ್ವವನ್ನು ತಿಳಿವವನಾಗು. ಪ್ರತ್ಯಕ್ಷವೇ ಪ್ರಮಾಣವಾಗಿರುವುದರಿಂದಲೂ ಕಣ್ಣಿಗೆ ಕಾಣಿಸದ ಯಾವ ಪದಾರ್ಥವೂ ಇಲ್ಲದಿರುವುದರಿಂದಲೂ, ಪ್ರತ್ಯಕ್ಷವನ್ನೇ ನಂಬಿ "ಪರೋಕ್ಷದಲ್ಲಿದೆ" ಎಂಬುದನ್ನು ತೊರೆವವನಾಗು. ಅಯ್ಯಾ, ರಾಮಚಂದ್ರನೇ! ಇದುವರೆವಿಗೂ ನಾನು ಹೇಳಿದ ತತ್ವಗಳು ಆಬಾಲವೃದ್ಧರಿಗೂ ತೋರತಕ್ಕುವೂ, ಸರ್ವಸಮ್ಮತವೂ ಆಗಿವೆಯಾದುದರಿಂದ ಸರ್ವೋತ್ತಮವಾದ ಈ ಪ್ರತ್ಯಕ್ಷಸಿದ್ಧಾಂತರೂಪ ಬುದ್ಧಿಯನ್ನು ಹೊಂದಿ ಭರತನ ಪ್ರಾರ್ಥನೆಯಂತೆ ರಾಜ್ಯವನ್ನು ಪರಿಗ್ರಹಿಸಿ, ಈ ಭ್ರಾಂತಿಯನ್ನು ಬಿಡುವವನಾಗು. ॥ ೧೭-೧೮ ॥

ಇಂತಿದು ಜಾಬಾಲಿಮುನಿಕಥಿತ ನಾಸ್ತಿಕಮತ ನಿರೂಪಣಪೂರ್ವಕ ರಾಜ್ಯಾಂಗೀಕಾರ ಯಾಚನಾ ವಿವರಣವೆಂಬ ನೂರ ಎಂಟನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ನವೋತ್ತರಶತತಮಸ್ಸರ್ಗಃ.

ಜಾಬಾಲೇಸ್ತು ವಚಶ್ಶ್ರುತ್ವಾ ರಾಮ ಸ್ಸತ್ಯಾತ್ಮನಾಂ ವರಃ || ಉವಾಚ
ಪರಯಾ ಭಕ್ತ್ಯಾ ಸ್ವಬುಧ್ಯಾ ಚಾಽವಿಪನ್ನಯಾ ||೧|| ಭವಾನ್ಮೇ ಪ್ರಿಯ
ಕಾಮಾರ್ಥಂ ವಚನಂ ಯದಿಹೋಕ್ತವಾನ್ || ಅಕಾರ್ಯಂ ಕಾರ್ಯಸಂಕಾಶ
ಮಪಥ್ಯಂ ಪಥ್ಯಸಮ್ಮಿತಂ ||೨|| ನಿರ್ಮರ್ಯಾದಸ್ತು ಪುರುಷಃ ಪಾಪಾ
ಚಾರ ಸಮನ್ವಿತಃ || ನೂನಂ ನ ಲಭತೇ ಸತ್ಸು ಭಿನ್ನಚಾರಿತ್ರ ದರ್ಶನಃ ||೩||

ಸತ್ಯಾತ್ಮನಾಂ - ಸತ್ಯದಲ್ಲಿಯೇ ನೆಟ್ಟಮನವುಳ್ಳವರಲ್ಲಿ, ವರಃ - ಶ್ರೇಷ್ಠನಾದ, ರಾಮಃ - ಶ್ರೀರಾಮನು, ಜಾಬಾಲೇಃ - ಜಾಬಾಲಿಋಷಿಯ, ವಚಃ - ಮಾತನ್ನು, ಶ್ರುತ್ವಾತು - ಕೇಳಿಯಾದರೆ, ಪರಯಾ - ಶ್ರೇಷ್ಠವಾದ, ಭಕ್ತ್ಯಾ - ಭಕ್ತಿಯಿಂದ, ಅವಿಪನ್ನಯಾ - ಪ್ರಮಾದವನ್ನು ಹೊಂದದಿರುವ, ಭಕ್ತ್ಯಾ - ಭಕ್ತಿಯಿಂದಲೂ, ಸ್ವಬುಧ್ಯಾಚ - ತನ್ನ ಬುದ್ಧಿಯಿಂದಲೂ, ಉಪಲಕ್ಷಿತಃ - ಕೂಡಿದವನಾಗಿ, ಉವಾಚ - ಹೇಳಿದನು. ||೧|| ಭವಾನ್ - ನೀನು, ಮೇ - ನನಗೆ, ಪ್ರಿಯಕಾಮಾರ್ಥಂ - ಇಷ್ಟಮಾಡುವ ನಿಮಿತ್ತವಾಗಿ, ಯದ್ವಚನಂ - ಯಾವ ಮಾತನ್ನು, ಇಹ - ಈಗ, ಉಕ್ತವಾನ್ - ಹೇಳಿದೆಯೋ, ತತ್ - ಅದು, ಕಾರ್ಯಸಂಕಾಶಂ - ಕರ್ತವ್ಯದಂತೆ ತೋರುತ್ತಿರುವುದಾಗಿಯೂ, ಅಪಥ್ಯಂ - ಅನಿಷ್ಟಫಲಕರವಾದುದಾಗಿಯೂ, ಪಥ್ಯಸಮ್ಮಿತಂ - ಇಷ್ಟವಾಗಿ ತೋರುವಂತಹುದಾಗಿಯೂ ಇರುವಕಾರಣ, ಅಕಾರ್ಯಂ - ಮಾಡತಕ್ಕುದಲ್ಲ. ||೨|| ನಿರ್ಮರ್ಯಾದಃ - ವೇದೋಕ್ತಪದ್ಧತಿಯನ್ನು ಬಿಟ್ಟಿರುವ, ಪುರುಷಃ - ಪುರುಷನು, ಪಾಪಾಚಾರಸಮನ್ವಿತಃ-ವೇದವಿರುದ್ಧವಾದ ಆಚಾರದಿಂದ ಕೂಡಿ, ಭಿನ್ನಚಾರಿತ್ರದರ್ಶನಃ - ಸದಾಚಾರಕ್ಕೆ ಭಿನ್ನವಾದ ನಡತೆಯೂ ಅನುಷ್ಠಾನವೂ ಉಳ್ಳವನಾಗಿ, ಸತ್ಸು-ಸತ್ಪುರುಷರಲ್ಲಿ, ನೂನಂ-ನಿಜವಾಗಿಯೂ, ನಲಭತೇ-ಮರ್ಯಾದೆಯನ್ನು ಹೊಂದಲಾರನು. ||೩|| ಚಾರಿತ್ರಮೇವ ನಡತೆಯೇ, ಕುಲೀನಂ-ಸತ್ಕುಲಪ್ರಸೂತನನ್ನಾಗಿಯೂ, ಅಕು

ಈ ರೀತಿ ನುಡಿದ ಜಾಬಾಲಿ ಮುನಿಯ ವಚನಗಳನ್ನು ಕೇಳಿ, ಸತ್ಯವಂತರಲ್ಲಿ ಉತ್ತಮನಾದ ಶ್ರೀರಾಮನು ಮಹಾ ಭಕ್ತಿಯುಳ್ಳವನಾಗಿ, ಸ್ವಲ್ಪವಾದರೂ ಚಿತ್ತಚಾಂಚಲ್ಯವನ್ನು ಹೊಂದದೆ ಆತನನ್ನು ಕುರಿತು ಹೀಗೆಂದನು "ಎಲೈ ಮುನಿಯೆ! ನೀನು ನನಗೆ ಪ್ರಿಯವನ್ನುಂಟುಮಾಡಬೇಕೆಂದು ಬಯಸಿ ಈ ಮಾತುಗಳನ್ನೇನೋ ಹೇಳಿದೆ. ಆದರೆ ನಿನ್ನ ಮಾತುಗಳು ಈಗ ಕೇಳುವವರಿಗೆ ಉಚಿತವೆಂದು ತೋರುತ್ತದೆ. ವಿಚಾರಿಸುವಲ್ಲಿ ಅಯುಕ್ತವಾಗಿಯೇ ಕಂಡುಬರುತ್ತದೆ; ತೋರುವುದು ಹಿತವಚನದಂತೆಯೇ; ಆಲೋಚಿಸಿದಮೇಲೆ ಅನರ್ಥವಾಗಿಯೇ ಪರಿಣಮಿಸುತ್ತದೆ. ಮರ್ಯಾದೆಯಿಲ್ಲದವನು, ಪಾಪಾಚಾರಗಳುಳ್ಳವನು, ವಿರುದ್ಧವಾದ ಆಚಾರಗಳುಳ್ಳವನೂ ಆದ ಮಾನವನು ಸಜ್ಜನರ ಬಳಿಗೈದಿದರೆ, ಗೌರವವನ್ನೆಂದಿಗೂ ಹೊಂದಲಾರನು; ಅಲ್ಲದೆ ನಡೆವಳಿಕೆಯುಳ್ಳ, ಇವನು ಕುಲೀನ; ಇವನು

ಕುಲೀನ ಮಕುಲೀನಂವಾ ವೀರಂ ಪುರುಷಮಾನಿನಂ ॥ ಚಾರಿತ್ರಮೇವ ವ್ಯಾಖ್ಯಾತಿ ಶುಚಿಂವಾ ಯದಿವಾಽಶುಚಿಂ ॥ ೪ ॥ ಅನಾರ್ಯ ಸ್ತ್ವಾರ್ಯ ಸಂಕಾಶ ಶ್ಶೌಚಾ ದ್ಧೀನ ಸ್ತಥಾಽಶುಚಿಃ ॥ ಲಕ್ಷಣ್ಯವದಲಕ್ಷಣ್ಯೋ ದುಶ್ಶೀಲ ಶ್ಶೀಲವಾನಿವ ॥೫॥ ಅಧರ್ಮಂ ಧರ್ಮವೇಷೇಣ ಯದ್ಯಹಂ ಲೋಕಸಂಕರಂ॥ ಅಭಿಪತ್ಸ್ಯೇ ಶುಭಂ ಹಿತ್ವಾ ಕ್ರಿಯಾ ವಿಧಿ ವಿವರ್ಜಿತಂ ॥ ೬ ॥ ಕಶ್ಚೇತಯಾನಃ ಪುರುಷಃ ಕಾರ್ಯಾಕಾರ್ಯವಿಚಕ್ಷಣಃ ॥ ಬಹುಮಂಸ್ಯತಿ ಮಾಂ ಲೋಕೇ ದುರ್ವೃತ್ತಂ ಲೋಕದೂಷಣಂ ॥ ೭ ॥ ಕಸ್ಯ ದಾಸ್ಯಾಮ್ಯಹಂ ವೃತ್ತಂ ಕೇನವಾ

ಲೀನಂ - ದುಷ್ಟಕುಲದಲ್ಲಿ ಹುಟ್ಟಿದವನನ್ನಾಗಿಯೂ, ಪುರುಷಮಾನಿನಂ - ನಾನೇ ಶ್ರೇಷ್ಠಪುರುಷ ನೆಂಬುದಾಗಿ ಭಾವಿಸುವನನ್ನಾಗಿಯೂ, ಶುಚಿಂ - ಪರಿಶುದ್ಧನನ್ನಾಗಿಯೂ, ಯದಿವಾ-ಹಾಗಲ್ಲದಿದ್ದರೆ, ಅಶುಚಿಂ - ಅಪರಿಶುದ್ಧನನ್ನಾಗಿಯೂ, ವ್ಯಾಖ್ಯಾತಿ - ಹೇಳುತ್ತದೆ. ॥ ೪ ॥ ಅನಾರ್ಯಃ-ಅಪೂಜ್ಯ ನಾಗಿ, ಆರ್ಯಸಂಕಾಶಃ - ಪೂಜ್ಯನಿಗೆ ಸಮಾನನಂತಿರುವನಾಗಿ, ಶೌಚಾತ್ - ಪಾರಿಶುದ್ಧ್ಯದಿಂದ, ಹೀನಃ - ರಹಿತನಾಗಿ, ತಥಾ - ಹಾಗೆಯೇ, ಅಶುಚಿಃ - ಅಪರಿಶುದ್ಧನಾಗಿ, ಅಲಕ್ಷಣ್ಯಃ - ಲಕ್ಷಣ ವಂತನಲ್ಲದೆ, ಲಕ್ಷಣ್ಯವತ್ - ಒಳ್ಳೆಯಲಕ್ಷಣದಿಂದ ಯುಕ್ತನಾದವನಂತೆಯೂ, ದುಶ್ಶೀಲಃ - ದುಷ್ಟ ಸ್ವಭಾವವುಳ್ಳವನಾಗಿಯೂ, ಶೀಲವಾನಿವ - ಸತ್ಸ್ವಭಾವವುಳ್ಳವನಂತೆಯೂ, ಧರ್ಮವೇಷೇಣ-ಧರ್ಮ ವಂತನೆಂಬ ವ್ಯಾಜದಿಂದ, ಶುಭಂ - ಮಂಗಳಕರವಾದ ಕಾರ್ಯವನ್ನು, ಹಿತ್ವಾ - ಬಿಟ್ಟು, ಕ್ರಿಯಾ ವಿಧಿವಿವರ್ಜಿತಂ - ಕರ್ಮವಿಧಾಯಕವಾದ ಶಾಸ್ತ್ರದಿಂದ ಬಿಡಲ್ಪಟ್ಟ, ಲೋಕಸಂಕರಂ - ಲೋಕವ ನ್ನೆಲ್ಲ ಕೆಡಿಸುವ, ಅಧರ್ಮಂ - ಅಧರ್ಮವನ್ನು, ಅಹಂ - ನಾನು, ಅಭಿಪತ್ಸ್ಯೇಯದಿ - ಹೊಂದಿದವನೇ ಆದರೆ, ಚೇತಯಾನಃ - ಚೈತನ್ಯವುಳ್ಳವನಾಗಿ, ಕಾರ್ಯಾಕಾರ್ಯವಿಚಕ್ಷಣಃ - ಕರ್ತವ್ಯಾಕರ್ತವ್ಯಗಳನ್ನು ವಿಮರ್ಶಿಮಾಡುತ್ತಿರುವ, ಕಃಪುರುಷಃ - ಯಾವ ಪುರುಷನು ತಾನೆ, ಲೋಕೇ - ಲೋಕದಲ್ಲಿ, ದುರ್ವೃತ್ತಂ - ದುರ್ವ್ಯಾಪಾರಿಯಾದ, ಲೋಕದೂಷಣಂ - ಜನಗಳಿಂದ ನಿಂದಿತನಾದ, ಮಾಂ - ನನ್ನನ್ನು, ಬಹುಮಂಸ್ಯತಿ - ಶ್ಲಾಘಿಸುತ್ತಾನೆ. ॥ ೫-೭ ॥ ಅಹಂ-ನಾನು,

---

ಕುಲಹೀನ, ಇವನು ಕ್ರೂರಿಯೂ ಅಹಂಕಾರಿಯೂ ಆಗಿದ್ದಾನೆ; ಇವನು ಪರಿಶುದ್ಧ, ಇವನು ಅಪರಿಶುದ್ಧ, ಎಂಬೀ ಭೇದಗಳು ಕಾಣುತ್ತವೆ.॥೧-೪॥ಆದುದರಿಂದೆಲೈ ಜಾಬಾಲಿಯೆ! ನಾನು ದುಷ್ಟನಾದ ಸತ್ಪುರುಷನಂತೆಯೂ, ಅಪರಿಶುದ್ಧನಾದ ಪರಿಶುದ್ಧನಂತೆಯೂ, ದುರ್ಲಕ್ಷಣ ಗಳುಳ್ಳವನಾದರೂ ಒಳ್ಳೆಯ ಲಕ್ಷಣಗಳುಳ್ಳವನಂತೆಯೂ, ಕೆಟ್ಟಸ್ವಭಾವವುಳ್ಳವನಾದರೂ ಸತ್ಸ್ವಭಾವವುಳ್ಳವನಂತೆಯೂ, ಅಧರ್ಮಗಳನ್ನವಲಂಬಿಸಿದವನಾದರೂ ಮಹಾ ಧರ್ಮಿಷ್ಠ ನಂತೆಯೂ, ಸಂಚರಿಸುತ್ತ, ಲೋಕದಲ್ಲಿ ಸಂಕರವನ್ನುಂಟುಮಾಡುತ್ತಿರುವುದೂ, ವೇದೋಕ್ತ ಗಳಾದ ಯಾಗಾದಿ ಕ್ರಿಯೆಗಳಿಂದ ಶೂನ್ಯವಾದುದೂ ಆದ ಅಮಂಗಳ ಕೃತ್ಯವನ್ನೆಂತು ಗೈಯಲಿ! ಮಂಗಳಕರವಾದ ಯಾಗಾದಿ ಕ್ರಿಯೆಗಳನ್ನು ಹೇಗೆತಾನೆ ತೊರೆಯಲಿ! ಎಲ್ಲ ಜನ ರಿಂದ ನಿಂದಿಸಲಾದುದೂ, ದುಷ್ಟವಾದುದೂ ಆದ ಕಾರ್ಯವನ್ನು ಮಾಡುತ್ತಿರುವ ನನ್ನನ್ನು ನೋಡಿ, ಕಾರ್ಯಾಕಾರ್ಯಗಳನ್ನು ಚೆನ್ನಾಗಿ ತಿಳಿದವನೂ, ಬುದ್ಧಿಮಂತನೂ ಆದ ಯಾವ

ಸ್ವರ್ಗ ಮಾಪ್ನುಯಾಂ ॥ ಅನಯಾ ವರ್ತಮಾನೋಹಿ ವೃತ್ತ್ಯಾ ಹೀನಪ್ರತಿ
ಜ್ಞಯಾ ॥ ೮ ॥ ಕಾಮವೃತ್ತಸ್ತ್ವಯಂ ಲೋಕಃ ಕೃತ್ಸ್ನ ಸ್ಸಮುಪವರ್ತತೇ ॥
ಯದ್ವೃತ್ತಾ ಸ್ಸಂತಿರಾಜಾನ ಸ್ತದ್ವೃತ್ತಾ ಸ್ಸಂತಿ ಹಿ ಪ್ರಜಾಃ ॥ ೯ ॥ ಸತ್ಯ
ಮೇವಾಽನೃಶಂಸಂಚ ರಾಜವೃತ್ತಂ ಸನಾತನಂ ॥ ತಸ್ಮಾತ್ಸತ್ಯಾತ್ಮಕಂ ರಾಜ್ಯಂ
ಸತ್ಯೇ ಲೋಕಃ ಪ್ರತಿಷ್ಠಿತಃ ॥ ೧೦ ॥ ಋಷಯಶ್ಚೈವ ದೇವಾಶ್ಚ ಸತ್ಯಮೇವಹಿ

ಅನಯಾ - ಈಗ ನಿನ್ನಿಂದ ಹೇಳಲ್ಪಟ್ಟ, ಹೀನಪ್ರತಿಜ್ಞಯಾ - ಹದಿನಾಲ್ಕುವರುಷ ವನವಾಸರೂಪ ಪ್ರತಿಜ್ಞೆಯನ್ನು ಬಿಡುತ್ತಿರುವ, ವೃತ್ತ್ಯಾ - ನಡತೆಯಿಂದ, ವರ್ತಮಾನಃ - ಇರುತ್ತ, ವೃತ್ತಂ - ಸದ್ವ್ಯಾಪಾರವನ್ನು, ಕಸ್ಯ - ಯಾವನಿಗೆ, ದಾಸ್ಯಾಮಿ - ಕೊಟ್ಟುಬಿಡಲಿ, ಕೇನವಾ - ಏತರಿಂದ ತಾನೇ, ಸ್ವರ್ಗಂ - ಸ್ವರ್ಗವನ್ನು, ಆಪ್ನುಯಾಂ - ಹೊಂದಿಯೇನು ? ॥ ೮ ॥ ಕೃತ್ಸ್ನಃ-ಸಮಸ್ತ ವಾದ, ಅಯಂಲೋಕಃ - ಈ ಲೋಕವು, ಕಾಮವೃತ್ತಃ - ಸ್ವೇಚ್ಛಾವೃತ್ತಿಯುಳ್ಳದಾಗಿ, ಸಮುಪವ ರ್ತತೇ - ಇರುವದು, ರಾಜಾನಃ - ಅರಸರು, ಯದ್ವೃತ್ತಾಃ - ಯಾವ ನಡತೆಯುಳ್ಳವರಾಗಿ, ಸಂತಿ- ಇರುತ್ತಾರೆಯೋ, ಪ್ರಜಾಃ - ಪ್ರಜೆಗಳು, ತದ್ವೃತ್ತಾಃ - ಅಂತಹ ನಡತೆಯುಳ್ಳವರಾಗಿ, ಸಂತಿಹಿ - ಇರುತ್ತಾರೆಯಷ್ಟೆ. ॥ ೯ ॥ ಅನೃಶಂಸಂ - ಭೂತಗಳಲ್ಲಿ ದಯಾರೂಪವಾದ, ಸನಾತನಂ - ಚಿರ ಕಾಲಪ್ರವರ್ತಕವಾದ, ರಾಜವೃತ್ತಂ - ಕ್ಷತ್ರಿಯರ ನಡತೆಯು, ಸತ್ಯಮೇವ - ಸತ್ಯಸ್ವರೂಪವಾದುದು, ತಸ್ಮಾತ್ - ಆ ಕಾರಣ, ರಾಜ್ಯಂ - ರಾಜ್ಯವು, ಸತ್ಯಾತ್ಮಕಂ - ಸತ್ಯಸ್ವರೂಪವಾದುದು, ಸತ್ಯೇ-ಸತ್ಯ ದಲ್ಲಿ, ಲೋಕಃ - ಜಗತ್ತು, ಪ್ರತಿಷ್ಠಿತಃ - ಇರಿಸಲ್ಪಟ್ಟದೆ. ॥ ೧೦ ॥ ಋಷಯಶ್ಚೈವ - ಋಷಿ ಗಳೂ, ದೇವಾಶ್ಚ - ದೇವತೆಗಳೂ, ಸತ್ಯಮೇವ - ಸತ್ಯವನ್ನೇ, ಮೇನಿರೇಹಿ - ಗತಿಪ್ರದಾಯಕವಾದು ದನ್ನಾಗಿ ತಿಳಿದಿದ್ದಾರೆ, ಅಸ್ಮಿಁಲೋಕೇ - ಈ ಲೋಕದಲ್ಲಿ, ಸತ್ಯವಾದೀ - ಸತ್ಯವನ್ನೇ ನುಡಿಯುವ ಪುರುಷನು, ಪರಮಂ - ಉತ್ಕೃಷ್ಟವಾದ, ಕ್ಷಯಂ - ಸ್ಥಾನವನ್ನು, ಗಚ್ಛತಿಹಿ - ಹೊಂದುತ್ತಾನೆ

ಮಾನವನು ತಾನೇ ನನ್ನನ್ನು ಗೌರವಿಸುತ್ತಾನೆ? ॥೫-೭॥ ಲೋಕದಲ್ಲಿ ನನ್ನನ್ನು ಯಾವನೂ ಗೌರವಿಸುವುದಿಲ್ಲ. ಓ ಮುನಿಯೆ ! ನಾನು ಪ್ರತಿಜ್ಞೆಯನ್ನು ತೊರೆದು ಇಂತಹ ನೀಚವೃತ್ತಿ ಯಲ್ಲಿ ಸಂಚರಿಸುತ್ತ ಯಾರಿಗೆತಾನೇ ಸದಾಚಾರವನ್ನುಪದೇಶಿಸಲಿ! ನನ್ನ ಉಪದೇಶವನ್ನು ಯಾವನುತಾನೇ ಕೇಳುತ್ತಾನೆ? ಪ್ರತಿಜ್ಞಾಹೀನನಾದ ನನಗೆ ಸ್ವರ್ಗಲೋಕವು ದೊರಕುವು ದೆಂತು? ನಾನು ಈ ದುರ್ಮಾರ್ಗವನ್ನವಲಂಬಿಸಿದರೆ ಸ್ವರ್ಗಫಲವು ನನಗೆ ದೊರಕುವುದೇ ಇಲ್ಲ. ಅಲ್ಲದೆ ಮೊದಲೇ ಈ ಲೋಕವು ತನ್ನಷ್ಟಕ್ಕೆ ತಾನೇ ಮನಬಂದಂತೆ ಸಂಚರಿಸುತ್ತಿದೆ. ರಾಜರು ಹೇಗೆ ನಡೆವರೋ ಪ್ರಜೆಗಳೂ ಹಾಗೆಯೇ ವರ್ತಿಸುತ್ತಾರೆ. ನಾನು ಧರ್ಮವನ್ನು ಒದರಿ ವರ್ತಿಸಿದರೆ, ಪ್ರಜೆಗಳೆಲ್ಲರೂ ಇನ್ನಷ್ಟು ಹೆಚ್ಚಾಗಿ ಅನ್ಯಾಯಗಳನ್ನು ಮಾಡಲುಪಕ್ರ ಮಿಸುತ್ತಾರೆಯಲ್ಲವೆ? ದಯೆಯೇ ಮುಖ್ಯವಾಗುಳ್ಳದೂ, ಶಾಶ್ವತವಾಗಿರುವುದೂ ಆದ ರಾಜಧರ್ಮವು ಸತ್ಯರೂಪವಾದುದು. ಆದುದರಿಂದಲೇ ರಾಜ್ಯವೆಂಬುದು ಸತ್ಯರೂಪವಾದು ದೆಂದು ಎಲ್ಲರಿಂದಲೂ ಪ್ರಸಿದ್ಧವಾಗಿ ಕೀರ್ತಿಸಲಾಗಿದೆ. ಸತ್ಯದಲ್ಲಿಯೇ ಈ ಜಗತ್ತು ಪ್ರತಿಷ್ಠಿ ಸಿದೆ.॥೮-೧೦॥ಇಂತಹ ಸತ್ಯವನ್ನು ನಾನು ಹೇಗೆತಾನೇ ಬಿಟ್ಟುಬಿಡಲಿ! ಅಗ್ಯಾ ಮುನಿಯೆ!

ಮೇನಿರೇ ॥ ಸತ್ಯವಾದೀಹಿ ಲೋಕೇಽಸ್ಮಿ೯ ಪರಮಂ ಗಚ್ಛತಿ ಕ್ಷಯಂ ॥ ೧೧ ॥ ಉದ್ವಿಜಂತೇ ಯಥಾ ಸರ್ಪಾನ್ನರಾ ದನೃತವಾದಿನಃ ॥ ಧರ್ಮ ಸ್ಸತ್ಯಂ ಪರೋ ಲೋಕೇ ಮೂಲಂ ಸ್ವರ್ಗಸ್ಯ ಚೋಚ್ಯತೇ ॥ ೧೨ ॥ ಸತ್ಯಮೇವೇಶ್ವರೋ ಲೋಕೇ ಸತ್ಯಂ ಪದ್ಮಾಶ್ರಿತಾ ಸದಾ ॥ ಸತ್ಯಮೂಲಾನಿ ಸರ್ವಾಣಿ ಸತ್ಯಾನ್ನಾಸ್ತಿ ಪರಂಪದಂ ॥ ೧೩ ॥ ದತ್ತಮಿಷ್ಟಂ ಹುತಂಚೈವ ತಪ್ತಾನಿಚ ತಪಾಂಸಿಚ ॥ ವೇದಾ ಸ್ಸತ್ಯಪ್ರತಿಷ್ಠಾನಾ ಸ್ತಸ್ಮಾತ್ಸತ್ಯಪರೋ ಭವೇತ್ ॥ ೧೪ ॥ ಏಕಃ

ಯಷ್ಟೇ. ॥ ೧೧ ॥ ಅನೃತವಾದಿನಃ - ಅಸತ್ಯವನ್ನೇ ಹೇಳತಕ್ಕ, ನರಾತ್ - ಮನುಷ್ಯನಿಂದ, ಸರ್ಪಾದ್ಯಥಾ - ಹಾವಿನಿಂದ ಹೇಗೋ ಹಾಗೆ, ಜನಾಃ - ಜನರು, ಉದ್ವಿಜಂತೇ - ಹೆದರುತ್ತಾರೆ, ಲೋಕೇ - ಲೋಕದಲ್ಲಿ, ಸತ್ಯಂ - ಸತ್ಯವೇ, ಪರೋಧರ್ಮಃ - ಶ್ರೇಷ್ಠವಾದ ಧರ್ಮವು, (ಧರ್ಮಃ - ಧರ್ಮವೇ,) ಸ್ವರ್ಗಸ್ಯ - ಸ್ವರ್ಗಕ್ಕೆ, ಮೂಲಂಚ - ಕಾರಣವಾಗಿಯೂ, ಉಚ್ಯತೇ - ಹೇಳಲ್ಪಡುತ್ತದೆ, ಲೋಕೇ - ಲೋಕದಲ್ಲಿ, ಸತ್ಯಮೇವ - ಸತ್ಯವೇ, ಈಶ್ವರಃ - ದೇವರು; ಪದ್ಮಾ - ಲಕ್ಷ್ಮೀದೇವಿಯು, ಸದಾ - ಸರ್ವಕಾಲದಲ್ಲಿ, ಸತ್ಯಂ - ಸತ್ಯವನ್ನೇ, ಆಶ್ರಿತಾ - ಆಶ್ರಯಿಸುತ್ತಿದ್ದಾಳೆ, ಸರ್ವಾಣಿ - ಸಮಸ್ತವಾದ ಕಾರ್ಯಗಳು, ಸತ್ಯಮೂಲಾನಿ - ಸತ್ಯವೇ ಆಧಾರವಾಗುಳ್ಳವು, ಸತ್ಯಾತ್-ಸತ್ಯಕ್ಕಿಂತಲೂ, ಪರಂಪದಂ - ಶ್ರೇಷ್ಠವಾದ ಪದವಿಯು, ನಾಸ್ತಿ - ಇಲ್ಲವು, ದತ್ತಂ - ದಾನವು, ಇಷ್ಟಂ - ಯಜ್ಞಾದಿ ಕರ್ಮಗಳು, ಹುತಂ - ಅಗ್ನಿಹೋತ್ರಾದಿಗಳು, ತಪ್ತಾನಿಚೈವ - ತಪಿಸಲಾದ, ತಪಾಂಸಿಚ - ದೇವತಾಧ್ಯಾನಾದಿ ರೂಪವಾದ ತಪಸ್ಸುಗಳೂ, ವೇದಾಶ್ಚ - ವೇದಗಳೂ, ಸತ್ಯಪ್ರತಿಷ್ಠಾನಾಃ - ಸತ್ಯದಲ್ಲಿಯೇ ವಾಸವುಳ್ಳವುವಾಗಿವೆ, ತಸ್ಮಾತ್ - ಆ ಕಾರಣ, ಸತ್ಯಪರಃ - ಸತ್ಯಸಂಧನು, ಭವೇತ್ - ಆಗಬೇಕು. ॥ ೧೨-೧೪ ॥ ಏಕಃ - ಸತ್ಯಸಂಧನಾದ ಒಬ್ಬನೇ, ಲೋಕಂ - ಜಗತ್ತನ್ನು, ಪಾಲಯತೇ - ರಕ್ಷಿಸುತ್ತಾನೆ, ಕುಲಂ - ವಂಶವನ್ನು, ಪಾಲಯತೇ - ಉದ್ಧರಿಸುತ್ತಾನೆ,

ಋಷಿಗಳು, ದೇವತೆಗಳು, ಸತ್ಯವನ್ನು ಸರ್ವೋತ್ತಮವಾದುದನ್ನಾಗಿ ಗಣಿಸಿದರು. ಈ ಲೋಕದಲ್ಲಿ ಸತ್ಯವಾದಿಯಾದವನು ಉತ್ತಮವಾದ ಲೋಕಗಳನ್ನು ಹೊಂದುತಾನೆ. ಲೋಕದಲ್ಲಿ ಜನರೆಲ್ಲರೂ, ಎಲ್ಲವನ್ನೂ ನೋಡಿ ಭಯವನ್ನು ಹೊಂದುವಂತೆ, ಅಸತ್ಯವನ್ನು ನುಡಿಯುವ ದುಷ್ಟನನ್ನು ನೋಡುವಾಗಲೂ ಭಯಗೊಳ್ಳುತ್ತಾರೆ. ಸತ್ಯವೇ ಈಶ್ವರನು ; ಲಕ್ಷ್ಮೀದೇವಿಯೂ ಸತ್ಯವನ್ನೇ ಆಶ್ರಯಿಸಿದ್ದಾಳೆ; ಎಲ್ಲ ಕಾರ್ಯಗಳೂ ಸತ್ಯವನ್ನೇ ಆಶ್ರಯಿಸಿರುವುವು; ಮಾತ್ರವಲ್ಲದೆ ಎಲ್ಲ ಕಾರ್ಯಗಳಿಗೂ ಸತ್ಯವೇ ಕಾರಣವೂ ಆಗಿದೆ. ಆದುದರಿಂದ ಲೋಕದಲ್ಲಿ ಸತ್ಯಕ್ಕಿಂತ ಅಧಿಕವಾದ ಧರ್ಮವಾವುದೂ ಇಲ್ಲ. ಆದಕಾರಣ ದಾನ, ಯಾಗ, ಹೋಮಗಳು, ತಪಸ್ಸುಗಳು, ಅಲ್ಲದೆ ಇನ್ನೂ ಇತರಗಳಾದ ಧರ್ಮಕಾರ್ಯಗಳೆಲ್ಲವೂ ಸತ್ಯದಿಂದಲೇ ನಿಂತಿರುವುವು. ಇದರಿಂದಲೇ ಹಿರಿಯರು ಸತ್ಯವಂತರಾಗಬೇಕೆಂದು ನುಡಿಯುತ್ತಾರೆ. ಓ ಜಾಬಾಲಿಯೆ ! ಲೋಕದಲ್ಲಿ ಸತ್ಯವಂತನಾದ ಮಾನವನೊಬ್ಬನಿದ್ದರೂ ಅವನೇ ಇಡೀ ಜಗತ್ತನ್ನು ಉದ್ಧಾರ ಮಾಡುತ್ತಾನೆ. ಸತ್ಯವಂತನೊಬ್ಬನೇ ಕುಲವನ್ನೂ ಉದ್ಧಾರ ಮಾಡುತ್ತಾನೆ. ಸತ್ಯಹೀನನಾದವನು ನರಕಕ್ಕೆ ಬೀಳುತ್ತಾನೆ. ಸತ್ಯ

ಪಾಲಯತೇ ಲೋಕ ಮೇಕಃ ಪಾಲಯತೇ ಕುಲಂ ॥ ಮಜ್ಜತ್ಯೇಕೋಹಿ ನಿರಯೇ ಏಕ ಸ್ಸ್ವರ್ಗೇ ಮಹೀಯತೇ ॥ ೧೫ ॥ ಸೋಹಂ ಪಿತುರ್ನಿಯೋಗಂ ತು ಕಿಮರ್ಥಂ ನಾನುಪಾಲಯೇ? ॥ ಸತ್ಯಪ್ರತಿಶ್ರವ ಸ್ಸತ್ಯಂ ಸತ್ಯೇನ ಸಮಯೀಕೃತಃ ॥ ೧೬ ॥ ನೈವಲೋಭಾ ನ್ನಮೋಹಾದ್ವಾ ನಹ್ಯಜ್ಞಾನಾ ತ್ತಮೋನ್ವಿತಃ ॥ ಸೇತುಂ ಸತ್ಯಸ್ಯ ಭೇತ್ಸ್ಯಾಮಿ ಗುರೋಃ ಸ್ಸತ್ಯಪ್ರತಿಶ್ರವಃ ॥ ೧೭ ॥ ಅಸತ್ಯಸಂಧಸ್ಯ ಸತಶ್ಚಲಸ್ಯಾಽಸ್ಥಿರಚೇತಸಃ ॥ ನೈವ ದೇವಾ ನ ಪಿತರಃ ಪ್ರತೀ

ಏಕಃ - ಅಧರ್ಮಿಷ್ಠನಾದ ಒಬ್ಬನೇ, ನಿರಯೇ - ನರಕದಲ್ಲಿ, ಮಜ್ಜತಿಹಿ - ಮುಳುಗುತ್ತಾನೆ, ಏಕಃ - ಸತ್ಯವಂತನೊಬ್ಬನೇ, ಸ್ವರ್ಗೇ - ಸ್ವರ್ಗದಲ್ಲಿ, ಮಹೀಯತೇ-ಪೂಜ್ಯನಾಗುತ್ತಾನೆ. ॥ ೧೫ ॥ ಸೋಹಂ - ಅಂತಹ ಸತ್ಯವನ್ನೇ ನುಡಿಯುವ ನಾನು, ಸತ್ಯಪ್ರತಿಶ್ರವಃ - ಸತ್ಯಪ್ರತಿಜ್ಞೆಯುಳ್ಳವನಾಗಿ, ಸತ್ಯಂ - ಸತ್ಯವಾದ, ಪಿತುಃ - ತಂದೆಯ, ನಿಯೋಗಂ - ಆಜ್ಞಾವಚನವನ್ನು, ಕಿಮರ್ಥಂ - ಯಾವ ನಿಮಿತ್ತವಾಗಿ, ನಾನುಪಾಲಯೇ - ಸಂರಕ್ಷಣೆಮಾಡದಿದ್ದೇನು, ಸತ್ಯೇನ - ಸತ್ಯದಿಂದಲೆ, ಸಮಯೀಕೃತಃ - ಶಪಥಮಾಡಲ್ಪಟ್ಟದ್ದೇನೆ ॥ ೧೬ ॥ ಅಹಂ - ನಾನು, ಸತ್ಯಪ್ರತಿಶ್ರವಃ - ಸತ್ಯಪ್ರತಿಜ್ಞೆಯುಳ್ಳವನಾಗಿ, ಲೋಭಾತ್ - ಧನಲೋಭದಿಂದಾಗಲಿ, ಸತ್ಯಸ್ಯ - ಸತ್ಯದ, ಸೇತುಂ - ನಿಬಂಧನವನ್ನು, ನಭೇತ್ಸ್ಯಾಮಿ - ಒಡೆಯುವವನಲ್ಲ, ಮೋಹಾತ್ - ಭ್ರಾಂತಿಯಿಂದ, ನಭೇತ್ಸ್ಯಾಮಿ-ಭೇದಿಸಲಾರೆನು, ಅಜ್ಞಾನಾದ್ವಾ - ಅಜ್ಞಾನದಿಂದಾಗಲಿ, (ನಭೇತ್ಸ್ಯಾಮಿ) - ಬಿಡಲಾರೆನು, ತಮೋನ್ವಿತಃ - ಅಜ್ಞಾನಕ್ಕೆ ಮೂಲವಾದ ತಮೋಗುಣದಿಂದ ಕೂಡಿದವನೇ ಆಗಲಿ, ಗುರೋಃ - ತಂದೆಯ, ಸತ್ಯಸ್ಯ - ಸತ್ಯಧರ್ಮದ, ಸೇತುಂ - ನಿಬಂಧನವನ್ನು, (ನಭೇತ್ಸ್ಯಾಮಿ) - ಬಿಡಲಾರೆನು. ॥ ೧೭ ॥ ಅಸತ್ಯಸಂಧಸ್ಯ - ಸತ್ಯಸಂಧನಲ್ಲದಿರುವ, ಚಲಸ್ಯ - ಚಪಲಚಿತ್ತನಾದ, ಅಸ್ಥಿರಚೇತಸಃ - ಚಪಲವಾದ ಮನವುಳ್ಳ, ಸತಃ - ಸತ್ಪುರುಷನ, (ಹವ್ಯಕವ್ಯಾನಿ - ಹವ್ಯಕವ್ಯಗಳನ್ನು,) ದೇವಾಃ - ದೇವತೆಗಳು, ನಪ್ರತೀಚ್ಛಂತಿ - ತೆಗದುಕ್ಕೊಳ್ಳುವದಿಲ್ಲ, ಪಿತರಶ್ಚ - ಪಿತೃದೇವತೆಗಳೂ, ನಪ್ರತೀಚ್ಛಂತಿ - ತೆಗದುಕ್ಕೊಳ್ಳುವದಿಲ್ಲ, ಇತಿ - ಇಂತೆಂದು, ನಃ - ನಮ್ಮಿಂದ, ಶ್ರುತಂ - ಕೇಳಲ್ಪಟ್ಟಿದೆ. ॥ ೧೮ ॥ ಅಹಂ -

ವಂತನೊಬ್ಬನೇ ಸ್ವರ್ಗಲೋಕದಲ್ಲಿ ಶಾಶ್ವತವಾದ ಸುಖವನ್ನು ಹೊಂದುವಾತನು. ॥೧೧-೧೫॥ ಸತ್ಯವನ್ನು ತಪ್ಪುವುದಿಲ್ಲವೆಂದು ಪ್ರತಿಜ್ಞೆ ಮಾಡಿದವನೂ, ಸತ್ಯವನ್ನೇ ಪರಿಪಾಲಿಸುತ್ತೇನೆಂದು ಪ್ರಮಾಣ ಮಾಡಿದವನೂ ಆದ ನಾನು, ನಮ್ಮ ತಂದೆಯ ಸತ್ಯವಚನವನ್ನು ಪರಿಪಾಲಿಸಟೆ ಹೇಗೆತಾನೆ ಸುಮ್ಮನಿದ್ದೇನು ? ಸತ್ಯಪ್ರತಿಜ್ಞನಾದ ನಾನು ರಾಜ್ಯದಲ್ಲಿನ ಆಶೆಯಿಂದಲಾಗಲಿ, ಮೋಹದಿಂದಲಾಗಲಿ, ಅವಿವೇಕದಿಂದಲಾಗಲಿ, ಮತ್ತಿನ್ನಾವ ಕಾರಣದಿಂದಲೇ ಆಗಲಿ, ನಮ್ಮ ತಂದೆಯಾದ ದಶರಥಭೂಪಾಲನು ಹೇಳಿದ ರೀತಿಯಲ್ಲಿ ಸಂಚರಿಸುವುದಲ್ಲದೆ ಅಸತ್ಯಪ್ರವರ್ತನೆಯನ್ನು ಮಾಡುವುದಿಲ್ಲ? ಅಲ್ಲದೆ ಸತ್ಯವೆಂಬ ಪ್ರವಾಹದ ಕಟ್ಟನ್ನು ಸಡಲಿಸುವುದೂ ಇಲ್ಲವೆಂದು ತಿಳಿ. ॥ ೧೬ ॥ ಅಸತ್ಯದಲ್ಲಿ ಪ್ರವರ್ತಿಸುವವನೂ, ಚಪಲಚಿತ್ತನೂ ಆದ ಮಾನವನು ಕೊಟ್ಟ ಹವ್ಯಕವ್ಯಗಳು ದೇವತೆಗಳಿಗೂ, ಪಿತೃದೇವತೆಗಳಿಗೂ, ತಲುಪುವುದಿಲ್ಲ ; ತಲುಪಿದರೂ ಅವರು ಅಂಗೀಕರಿಸುವುದಿಲ್ಲ. ಆದುದರಿಂದ ಅಸತ್ಯವಂತನು

ಚ್ಛಂತೀತಿ ನ ಶ್ಶ್ರುತಂ ॥ ೧೮ ॥ ಪ್ರತ್ಯಗಾತ್ಮಮಿಮಂ ಧರ್ಮಂ ಸತ್ಯಂ ಪಶ್ಯಾಮ್ಯಹಂ ಸ್ವಯಂ ॥ ಭಾರ ಸ್ಸತ್ಪುರುಷಾಚೀರ್ಣ ಸ್ತದರ್ಥ ಮಭಿಮನ್ಯತೇ ॥ ೧೯ ॥ ಕ್ಷಾತ್ರಧರ್ಮಮಹಂ ತ್ಯಕ್ಷ್ಯೇ ಹ್ಯಧರ್ಮಂ ಧರ್ಮಸಂಹಿತಂ ॥ ಕ್ಷುದ್ರೈರ್ನೃಶಂಸೈ ರ್ಲುಬ್ಧೈಶ್ಚ ಸೇವಿತಂ ಪಾಪಕರ್ಮಭಿಃ ॥ ೨೦ ॥ ಕಾಯೇನ ಕುರುತೇ ಪಾಪಂ ಮನಸಾ ಸಂಪ್ರಧಾರ್ಯಚ ॥ ಅನೃತಂ ಜಿಹ್ವಯಾ ಚಾಹ ತ್ರಿವಿಧಂ ಕರ್ಮಪಾತಕಂ ॥ ೨೧ ॥ ಭೂಮಿಃ ಕೀರ್ತಿ ರ್ಯಶೋ ಲಕ್ಷ್ಮೀಃ ಪುರುಷಂ

ನಾನು, ಸತ್ಯಂ - ಯಥಾರ್ಥಸ್ವರೂಪವಾದ, ಇಮಂಧರ್ಮಂ - ಈ ಧರ್ಮವನ್ನು, ಸ್ವಯಂ - ತಾನೇ, ಪ್ರತ್ಯಗಾತ್ಮಂ - (ಗೋ + ಮ) ಜೀವಾತ್ಮನತಾದಾತ್ಮ್ಯಾಪನ್ನವನ್ನಾಗಿ, ಪಶ್ಯಾಮಿ - ನೋಡುವೆನು, ಸತ್ಪುರುಷಾಚೀರ್ಣಃ - ಸತ್ಪುರುಷರಿಂದ ಮಾಡಲ್ಪಟ್ಟ, ಭಾರಃ - ವಲ್ಕಲಜಟಾಧಾರಣಾದಿ ಭಾರವು, ತದರ್ಥಂ - ಆ ಸತ್ಯಧರ್ಮಾರ್ಥವಾಗಿ, ಅಭಿಮನ್ಯತೇ - ಇಷ್ಟವಾಗಿ ಎಣಿಸಲ್ಪಡುತ್ತದೆ. ॥ ೧೯ ॥ ಅಹಂ - ನಾನು, ಅಧರ್ಮಂ - ಅಧರ್ಮಸಂಪಾದಕವಾದ, ಧರ್ಮಸಂಹಿತಂ-ಸ್ವಲ್ಪವಾದ ಧರ್ಮದಿಂದ ಕೂಡಿರುವ, ಕ್ಷುದ್ರೈಃ - ನೀಚರಿಂದಲೂ, ನೃಶಂಸೈಃ - ಘಾತಕರಿಂದಲೂ, ಲುಬ್ಧೈಶ್ಚ - ಧನಾಕಾಂಕ್ಷೆಯುಳ್ಳವರಿಂದಲೂ, ಪಾಪಕರ್ಮಭಿಃ - ಪಾಪಕರ್ಮವನ್ನೇ ಮಾಡುವರಿಂದಲೂ, ಸೇವಿತಂ - ಹೊಂದಲ್ಪಟ್ಟ, ಕ್ಷಾತ್ರಧರ್ಮಂ - ಕ್ಷತ್ರಿಯಧರ್ಮವನ್ನು, ತ್ಯಕ್ಷ್ಯೇ - ಬಿಡುತ್ತೇನೆ, ॥ ೨೦ ॥ ಮನಸಾ - ಮನಸ್ಸಿನಿಂದ, ಸಂಪ್ರಧಾರ್ಯ - ನಿಶ್ಚಯಿಸಿ, ಅನೃತಂ - ಅಬದ್ಧವನ್ನು, ಜಿಹ್ವಯಾ - ನಾಲಿಗೆಯಿಂದ, ಆಹ - ಹೇಳುತ್ತಾನೆ, ಪಾಪಂ - ಪಾಪಕಾರ್ಯವನ್ನು, ಕಾಯೇನ - ಶರೀರದಿಂದ, ಕುರುತೇ - ಮಾಡುತ್ತಾನೆ, ತ್ರಿವಿಧಂ - ಕಾಯಕ, ವಾಚಕ, ಮಾನಸಿಕವೆಂಬ ಮೂರುಬಗೆಯುಳ್ಳ, ಕರ್ಮ - ವ್ಯಾಪಾರವು, ಪಾತಕಂ - ಪಾಪಜನಕವಾದುದು. ॥ ೨೧ ॥ ಭೂಮಿಃ - ಭೂಮಿಯು, ಕೀರ್ತಿಃ - ಧನಪ್ರದಾನದಿಂದ ಹುಟ್ಟಿದ ಕೀರ್ತಿಯು, ಯಶಃ - ತನ್ನ ಪರಾಕ್ರಮದಿಂದ ಹುಟ್ಟಿದ

ಮಾಡಿದ ಪುಣ್ಯಕರ್ಮಗಳೆಲ್ಲವೂ ವ್ಯರ್ಥವೆನಿಸುತ್ತವೆ. ॥ ೧೭-೧೮ ॥ ಅಲ್ಲದೆ ನಾನು ಸತ್ಯವೆಂಬ ಧರ್ಮವನ್ನು ಪರಬ್ರಹ್ಮವೆಂದು ತಿಳಿದಿದ್ದೇನೆ. ಆದುದರಿಂದಲೇ ಸತ್ಪುರುಷರಾಚರಿಸಿದ ವಿಧದಲ್ಲಿ ಜಟಾವಲ್ಕಲಾದಿ ಭಾರವನ್ನು ವಹಿಸಿರುತ್ತೇನೆ. ಘಾತಕರೂ, ಲುಬ್ಧಸ್ವಭಾವವುಳ್ಳವರೂ, ಪಾಪಕೃತ್ಯಗಳನ್ನು ಮಾಡುತ್ತಿರುವವರೂ ಅದಮಾನವರಿಂದ ಆಚರಿಸಲಾದುದೂ, ಧರ್ಮದಂತೆ ತೋರುತ್ತಿರುವುದೂ, ಅಧರ್ಮವಾದುದೂ, ಧರ್ಮಬಹಿಷ್ಕೃತವಾದುದೂ ಆದ ಕ್ಷತ್ರಧರ್ಮವನ್ನು ನಾನು ಬಿಟ್ಟುಬಿಡಬೇಕೆಂದು ಯೋಚಿಸುತ್ತಿದ್ದೇನೆ. ಓ, ಜಾಬಾಲಿಯೆ ! ಲೋಕದಲ್ಲಿ ಮಾನವನಾದವನು ಮೊದಲು ಮನಸ್ಸಿನಲ್ಲಿ ಸಂಕಲ್ಪಿಸಿಕೊಂಡು ಆ ಮೇಲೆ ಕಾಯಾ ಪಾಪಗಳನ್ನು ಮಾಡುತಾನೆ. ಪಾಪವನ್ನು ಮಾಡಿದೆನೆಂದೂ, ಮಾಡಲುಜ್ಜುಗಿಸುತ್ತಿರುವೆನೆಂದೂ, ಮಾಡುತ್ತಿದ್ದೇನೆಯೆಂದೂ ಬಾಯಿಯಿಂದ ಹೇಳುವುದಿಲ್ಲ. ಆದುದರಿಂದ ಪಾಪವು, ಕಾಯಿಕ, ವಾಚಿಕ, ಮಾನಸಿಕವೆಂದು ಮೂರುವಿಧ. ಭೂಮಿಯೂ, ಕೀರ್ತಿಯೂ, ಲಕ್ಷ್ಮೀದೇವಿಯೂ ಎಲ್ಲ ಕಾಲಗಳಲ್ಲಿಯೂ, ಸತ್ಯವಂತನಾದ ಪುರುಷನನ್ನೇ ಕೋರುತ್ತವೆಯಲ್ಲವೆ? ಅಂತಹನು ಸ್ವರ್ಗ

ಪ್ರಾರ್ಥಯಂತಿಹಿ ॥ ಸ್ವರ್ಗಸ್ಥಂ ಚಾನುಪಶ್ಯಂತಿ ಸತ್ಯಮೇವ ಭಜೇತ ತತ್॥೨೨॥
ಶ್ರೇಷ್ಠಂ ಹ್ಯನಾರ್ಯಮೇವಸ್ಯಾದ್ಯದ್ಭವಾನವಧಾರ್ಯ ಮಾಂ॥ಆಹ ಯುಕ್ತಿ
ಕರೈರ್ವಾಕ್ಯೈರಿದಂ ಭದ್ರಂ ಕುರುಷ್ವಹ ॥ ೨೩ ॥ ಕಥಂ ಹ್ಯಹಂ ಪ್ರತಿ
ಜ್ಞಾಯ ವನವಾಸಮಿಮಂ ಗುರೌ ॥ ಭರತಸ್ಯ ಕರಿಷ್ಯಾಮಿ ವಚೋ ಹಿತ್ವಾ
ಗುರೋರ್ವಚಃ॥೨೪॥ಸ್ಥಿರಾ ಮಯಾ ಪ್ರತಿಜ್ಞಾತಾ ಪ್ರತಿಜ್ಞಾ ಗುರುಸನ್ನಿಧೌ॥
ಪ್ರಹೃಷ್ಯಮಾಣಾ ಸಾ ದೇವೀ ಕೈಕೇಯೀ ಚಾಽಭವತ್ತದಾ ॥ ೨೫ ॥ ವನ

ಯಶಸ್ಸು, ಲಕ್ಷ್ಮೀಃ - ಐಶ್ವರ್ಯವು, ಪುರುಷಂ - ಪುರುಷನನ್ನು, ಪ್ರಾರ್ಥಯಂತಿಹಿ - ಬೇಡಿಕೊಳ್ಳುತ್ತವಷ್ಟೆ, ಸ್ವರ್ಗಸ್ಥಂಚ - ಸ್ವರ್ಗಲೋಕವಾಸಿಯಾದ ಪುರುಷನನ್ನು, ಅನುಪಶ್ಯಂತಿ - ಅನುಸರಿಸಿ ಬರುತ್ತವೆ, ತತ್ - ಆ ಕಾರಣ, ಸತ್ಯಮೇವ - ಸತ್ಯವನ್ನೇ, ಭಜೇತ - ಸೇವಿಸತಕ್ಕದು. ॥ ೨೨ ॥ ಭವಾನ್ - ನೀನು, ಅವಧಾರ್ಯ - ನಿಶ್ಚೈಸಿ, ಮಾಂ - ನನ್ನನ್ನು ಕುರಿತು, ಯುಕ್ತಿಕರೈಃ - ಯುಕ್ತಿಗಳಿಂದ ಕೂಡಿರುವ, ವಾಕ್ಯೈಃ - ಮಾತುಗಳಿಂದ, ಇದಂಭದ್ರಂ - ಇದೇ ಶುಭಕರವು, ಕುರುಷ್ವಹ - ಇದನ್ನೇಮಾಡು ಎಂದು, ಯತ್ - ಯಾವ ಮಾತನ್ನು, ಆಹ - ಹೇಳಿದೆಯೋ, ತತ್ - ಅದು, ಶ್ರೇಷ್ಠಂವಾ - ಶ್ರೇಷ್ಠವೇ ಆಗಲಿ, ಅನಾರ್ಯಮೇವ - ಅಪೂಜ್ಯವೇ, ಸ್ಯಾತ್ - ಆಗಲಿ. ॥ ೨೩ ॥ ಅಹಂ - ನಾನು, ಗುರೌ - ತಂದೆಯವಿಷಯದಲ್ಲಿ, ಇಮಂವನವಾಸಂ - ಈ ವನವಾಸವನ್ನು, ಪ್ರತಿಜ್ಞಾಯ - ಶಪಥಮಾಡಿ, ಗುರೋಃ - ತಂದೆಯ, ವಚಃ - ಮಾತನ್ನು, ಹಿತ್ವಾ - ಬಿಟ್ಟು, ಭರತಸ್ಯ - ಭರತನ, ವಚಃ - ಮಾತನ್ನು, ಕಥಂಕರಿಷ್ಯಾಮಿ - ಹೇಗೆತಾನೆಮಾಡೇನು. ॥ ೨೪ ॥ ಮಯಾ - ನನ್ನಿಂದ, ಗುರುಸನ್ನಿಧೌ - ತಂದೆಯ ಸನ್ನಿಧಾನದಲ್ಲಿ, ಪ್ರತಿಜ್ಞಾತಾ - ಪ್ರತಿಜ್ಞೆಮಾಡಲ್ಪಟ್ಟ, ಪ್ರತಿಜ್ಞಾ - ಶಪಥವು, ಸ್ಥಿರಾ - ಶಾಶ್ವತವಾದುದು, ತದಾ - ಆ ಕಾಲದಲ್ಲಿ, ಸಾಕೈಕೇಯೀದೇವೀಚ - ಆ ಕೈಕೇಯೀದೇವಿಯು, ಪ್ರಹೃಷ್ಯಮಾಣಾ - ಸಂತೋಷಯುಕ್ತಳು, ಅಭವತ್ - ಆದಳು. ॥ ೨೫ ॥ ಏವಂ - ಈಪರಿಯಾಗಿ, ವನವಾಸಂ - ಅರಣ್ಯವಾಸವನ್ನು, ವರ್ಸ - ಮಾಡುತ್ತ, ಶುಚಿಃ - ಸ್ನಾನಾದಿ

ವಡರಿದರೂ ಆತನನ್ನೇ ಬಯಸುತ್ತವೆ.॥೧೯-೨೨॥ಆದುದರಿಂದ ನಾನು ಸತ್ಯವನ್ನೇ ಅವಲಂಬಿಸುತ್ತೇನೆಯಲ್ಲದೆ ಅಸತ್ಯವನ್ನು ಎಂದಿಗೇ ಆಗಲಿ ಅವಲಂಬಿಸುವುದಿಲ್ಲ. ಅಯ್ಯಾ, ಮುನಿಯೆ! ನೀನು ಮಹಾ ಅನರ್ಥಕರಗಳೂ, ದುಷ್ಕೀರ್ತಿಯನ್ನುಂಟುಮಾಡುವವೂ ಆದ ವಾಕ್ಯಗಳಿಂದ, ನನಗೆ ಒಳ್ಳೆಯದನ್ನು ಮಾಡಬೇಕೆಂದೆಣಿಸಿ "ಈ ಕೆಲಸವನ್ನುಮಾಡೆಂದು" ಯುಕ್ತಿಯುಕ್ತವಾಗಿ ಹೇಳಿಯೇನೋ ಹೇಳಿದೆ. ಆದರೂ ಆ ವಿಷಯುವು ಒಳ್ಳೆಯದೆಂದು ಸ್ವಲ್ಪಮಾತ್ರವೂ ನನ್ನ ಮನಸ್ಸಿಗೆ ತೋರಲಿಲ್ಲ. ನನಗೆ ಗುರುವಾದ ದಶರಥಮಹಾರಾಜನೊಡನೆ ಸಮಸ್ತಜನರೂ ಕೇಳುವಂತೆ "ನಾನು ಸತ್ಯವಾಗಿಯೂ ವನವಾಸವನ್ನು ಮಾಡುತ್ತೇನೆಂದು" ಹೇಳಿದೆ. ಹಾಗೆಂದು ನಾನು ನನ್ನ ತಂದೆಯಾಣತಿಯನ್ನು ತೊರೆದು ಭರತನ ವಚನದಂತೆ ಹೇಗೆತಾನೆ ಪ್ರವರ್ತಿಸಲಿ ? ಅಯ್ಯಾ, ಜಾಬಾಲಿಮುನಿಯೆ ! ನಾನು ತಂದೆಯಾದ ದಶರಥನ ಬಳಿಯಲ್ಲಿ ಪ್ರತಿಜ್ಞೆಯನ್ನುಮಾಡಿದೆ. ಇದರಿಂದ ಪಟ್ಟದರಾಣಿಯಾದ ಕೈಕೇಯಿಯು ಸಂತುಷ್ಟಳಾದಳು. ಅಂತಹ ಪ್ರತಿಜ್ಞೆಯನ್ನು ನಾನೆಂತು ಬಿಡಲಿ?॥೨೩-೨೫॥ ಈರೀತಿಯಾಗಿಯೇ ನಾನು

ನಾಸಂ ವಸನ್ನೇವಂ ಶುಚಿ ರ್ನಿಯತ ಭೋಜನಃ ॥ ಮೂಲೈಃ ಪುಷ್ಪೈಃ ಫಲೈಃ ಪುಣ್ಯೈಃ ಪಿತೄನ್ ದೇವಾಂ ಶ್ಚ ತರ್ಪಯನ್॥೨೬॥ಸಂತುಷ್ಟ ಪಂಚವರ್ಗೋಽಹಂ ಲೋಕಯಾತ್ರಾಂ ಪ್ರವರ್ತಯೇ ॥ ಅಕುಹ ಶ್ಶ್ರದ್ದಧಾನಸ್ಸನ್ ಕಾರ್ಯಾ ಕಾರ್ಯ ವಿಚಕ್ಷಣಃ ॥ ೨೭ ॥ ಕರ್ಮ ಭೂಮಿಮಿಮಾಂ ಪ್ರಾಪ್ಯ ಕರ್ತವ್ಯಂ ಕರ್ಮಯಚ್ಛುಭಂ ॥ ಅಗ್ನಿರ್ವಾಯುಶ್ಚ ಸೋಮಶ್ಚ ಕರ್ಮಣಾಂ ಫಲಭಾಗಿನಃ ॥ ೨೮ ॥ ಶತಂ ಕ್ರತೂನಾ ಮಾಹೃತ್ಯ ದೇವರಾಟ್ತ್ರಿದಿವಂ ಗತಃ ॥ ತಪಾಂಸ್ಯು

ಗಳಿಂದ ಪರಿಶುದ್ಧನಾಗಿ, ಪುಣ್ಯೈಃ - ಪುಣ್ಯಕರಗಳಾದ, ಮೂಲೈಃ - ಕಂದಮೂಲಗಳಿಂದಲೂ, ಪುಷ್ಪೈಃ - ಹೂವುಗಳಿಂದಲೂ, ಫಲೈಃ - ಫಲಗಳಿಂದಲೂ, ನಿಯತಭೋಜನಃ - ಮಿತವಾದ ಭೋಜನ ವುಳ್ಳವನಾಗಿ, ಪಿತೄನ್ದೇವಾಂಶ್ಚ - ಪಿತೃದೇವತೆಗಳನ್ನೂ, ತರ್ಪಯನ್-ತೃಪ್ತಿಗೊಳಿಸುತ್ತ, ಸಂತುಷ್ಟ ಪಂಚವರ್ಗಃ - ಸಂತೋಷಗೊಂಡ ಪಂಚೇಂದ್ರಿಯಗಳೂ ಉಳ್ಳವನಾಗಿ, ಶ್ರದ್ಧಧಾನಸ್ಸನ್ - ಕರ್ಮ ಶ್ರದ್ಧೆಯುಳ್ಳವನಾಗಿ, ಕಾರ್ಯಾಕಾರ್ಯವಿಚಕ್ಷಣಃ - ವಿಧಿನಿಷೇಧ ಕಾರ್ಯಗಳನ್ನು ತಿಳಿದವನಾಗಿ, ಅಕುಹಃ - ಕೃತ್ರಿಮವಿಲ್ಲದೆ, ಅಹಂ - ನಾನು, ಲೋಕಯಾತ್ರಾಂ - ಲೋಕಾನುವರ್ತನವನ್ನು, ಪ್ರವರ್ತಯೇ - ನಡಿಸುತ್ತೇನೆ. ||೨೬-೨೭|| ಇಮಾಂಕರ್ಮಭೂಮಿಂ - ಈ ಕರ್ಮಭೂಮಿಯನ್ನು, ಪ್ರಾಪ್ಯ - ಹೊಂದಿ, ಯತ್ - ಯಾವದು, ಶುಭಂ - ಪುಣ್ಯಕರವಾದ, ಕರ್ಮ - ಕರ್ಮವೋ, ತತ್ - ಅದೇ ಕರ್ಮವು, ಕರ್ತವ್ಯಂ - ಮಾಡತಕ್ಕದು, ಅಗ್ನಿಃ - ಅಗ್ನಿಯು, ವಾಯುಃ - ವಾಯುವು, ಸೋಮಶ್ಚ - ಚಂದ್ರನೂ, ಕರ್ಮಣಾಂ - ಸತ್ಕರ್ಮಗಳಿಗೆ, ಫಲಭಾಗಿನಃ - ಫಲಗಳನ್ನು ಹೊಂದಿ ದ್ದಾರೆ. ॥ ೨೮ ॥ ದೇವರಾಟ್ - ದೇವೇಂದ್ರನು, ಕ್ರತೂನಾಂ - ಅಶ್ವಮೇಧಗಳ, ಶತಂ-ನೂರನ್ನು, ಆಹೃತ್ಯ - ಮಾಡಿ, ತ್ರಿದಿವಂ - ಸ್ವರ್ಗವನ್ನು, ಗತಃ - ಹೊಂದಿದನು, ಉಗ್ರಾಣಿ - ಭಯಂಕರಳಾದ, ತಪಾಂಸಿ - ತಪಸ್ಸುಗಳನ್ನು, ಆಸ್ಥಾಯ - ಅನುಷ್ಠಾನ ಮಾಡಿ, ಮಹರ್ಷಯಃ - ದೇವರ್ಷಿಗಳು,

ವನವಾಸವನ್ನು ಮಾಡುತ್ತ, ನಿಯಮಿತವಾದ ಆಹಾರವುಳ್ಳವನಾಗಿ, ಮಹಾ ಪವಿತ್ರಗಳಾದ ಕಂದಮೂಲ ಫಲಗಳಿಂದ ಪಿತೃದೇವತೆಗಳನ್ನೂ, ದೇವತೆಗಳನ್ನೂ ತೃಪ್ತಿಹೊಂದಿಸುತ್ತೇನೆ. ನಾನು ಕಾರ್ಯಾಕಾರ್ಯಗಳನ್ನು ಚೆನ್ನಾಗಿ ತಿಳಿದುಕೊಂಡವನಾಗಿ, ಕಂದಮೂಲ ಫಲಾದಿಗ ಳಿಂದ ಜೀವಿಸುತ್ತ, ಪಂಚೇಂದ್ರಿಯಗಳಿಗೆ ತೃಪ್ತಿಮಾಡಿ ಬಾಳುತ್ತೇನೆ. ಇಷ್ಟೆಯಲ್ಲದೆ ಕಪಟವ್ಯಾಪಾರವನ್ನು ತೊರೆದು, ಗುರುವೇ ಮೊದಲಾದವರಲ್ಲಿಯೂ, ದೇವತೆಗಳಲ್ಲಿಯೂ ಭಕ್ತಿಯುಳ್ಳವನಾಗಿ ಪ್ರವರ್ತಿಸುತ್ತಿರುತ್ತೇನೆ. ಅಯ್ಯಾ! ಈ ಕರ್ಮ ಭೂಮಿಯಲ್ಲಿ ಹುಟ್ಟಿದವನು ಶುಭ ಕರ್ಮಗಳೆಲ್ಲವನ್ನೂ ಮಾಡಿಯೇ ತೀರಬೇಕು. ಸೂರ್ಯ, ಅಗ್ನಿ, ಚಂದ್ರ ರೆಂಬ ಮೂವರೂ ಕರ್ಮ ಫಲವನ್ನೇ ಹೊಂದಿರುತ್ತಾರೆ. ದೇವೇಂದ್ರನೆಂಬುವನು ಈ ಲೋಕದಲ್ಲಿ ನೂರು ಯಜ್ಞಗಳನ್ನು ಮಾಡಿಯಲ್ಲವೆ ಆ ಇಂದ್ರತ್ವವನ್ನು ಹೊಂದಿದುದು ? ಮಹರ್ಷಿಗಳೆಲ್ಲರೂ ಈ ಲೋಕದಲ್ಲಿ ಘೋರಗಳಾದ ತಪಸ್ಸುಗಳನ್ನು ಮಾಡಿಯಲ್ಲವೆ ಸ್ವರ್ಗ ಲೋಕಕ್ಕೆ ತೆರಳಿದುದು ? ಆದುದರಿಂದ ಈ ಲೋಕದಲ್ಲಿ ಹುಟ್ಟಿದವರೆಲ್ಲರೂ ಕರ್ಮಗಳನ್ನು ಮಾಡಿಯೇ ತೀರಬೇಕು." ॥೨೬-೨೯॥ ಶ್ರೀರಾಮನೀರೀತಿಯಾಗಿ ನುಡಿದು ಸ್ವಲ್ಪಕಾಲ ಸುಮ್ಮ

ಗ್ರ್ಯಾಣಿ ಚಾಸ್ಥಾಯ ದಿವಂ ಯಾತಾ ಮಹರ್ಷಯಃ ॥ ೨೯ ॥ ಅಮೃಷ್ಯ
ಮಾಣಃ ಪುನರುಗ್ರತೇಜಾ ನಿಶಮ್ಯ ತಂ ನಾಸ್ತಿಕ ವಾಕ್ಯಹೇತುಂ ॥ ಅಥಾಬ್ರ
ವೀತ್ತಂ ನೃಪತೇ ಸ್ತನೂಜೋ ವಿಗರ್ಹಮಾಣೋ ವಚನಾನಿ ತಸ್ಯ ॥ ೩೦ ॥
ಸತ್ಯಂಚ ಧರ್ಮಂಚ ಪರಾಕ್ರಮಂಚ ಭೂತಾನುಕಂಪಾಂ ಪ್ರಿಯವಾದಿತಾಂಚ ॥
ದ್ವಿಜಾತಿ ದೇವಾತಿಥಿ ಪೂಜನಂಚ ಪಂಥಾನ ಮಾಹು ಸ್ತ್ರಿದಿವಸ್ಯ ಸಂತಃ ॥೩೧॥
ತೇನೈವ ಮಾಜ್ಞಾಯ ಯಥಾವದರ್ಥ ಮೇಕೋದಯಂ ಸಂಪ್ರತಿಪದ್ಯ
ವಿಪ್ರಾಃ ॥ ಧರ್ಮಂಚರಂತ ಸ್ಸಕಲಂ ಯಥಾವ ತ್ಕಾಂಕ್ಷಂತಿ ಲೋಕಾಗಮ

ದಿವಂ - ಸ್ವರ್ಗವನ್ನು, ಯಾತಾಃ - ಹೊಂದಿದರು. ॥ ೨೯ ॥ ಅಥ - ಬಳಿಕ, ನೃಪತೇಃ - ದಶರಥ ರಾಯನಿಗೆ, ತನೂಜಃ - ಕುವರನಾದ ಶ್ರೀರಾಮನು, ತಂನಾಸ್ತಿಕವಾಕ್ಯಹೇತುಂ - (ಗೋ+ಮ) ಪರಲೋಕವಿಲ್ಲವೆಂಬ ನಾಸ್ತಿಕರ ಮತಾನುಸಾರಿಯಾದ ವಾಕ್ಯಕ್ಕೆ ಹೇತುಭೂತವಾದ ಆ ಜಾಬಾಲಿಯ ಹೇತು ವಾಕ್ಯವನ್ನು, ನಿಶಮ್ಯ - ಕೇಳಿ, ಅಮೃಷ್ಯಮಾಣಃ - ಸಹಿಸದಿರುವನಾಗಿ, ಪುನಃ - ಮತ್ತು, ಉಗ್ರತೇಜಾಃ - ಕ್ರೂರವಾದ ತೇಜಸ್ಸುಳ್ಳವನಾಗಿ, ತಸ್ಯ - ಆ ಜಾಬಾಲಿ ಋಷಿಯ, ವಚನಾನಿ - ಮಾತುಗಳನ್ನು, ವಿಗರ್ಹಮಾಣಃ - ನಿಂದಿಸುತ್ತ, ತಂ - ಆ ಜಾಬಾಲಿ ಋಷಿಯನ್ನು ಕುರಿತು, ಅಬ್ರವೀತ್ - ನುಡಿದನು. ॥ ೩೦ ॥ ಸಂತಃ - ಸತ್ಪುರುಷರು, ಸತ್ಯಂಚ - ಸತ್ಯವನ್ನೂ, ಧರ್ಮಂಚ - ವೇದೋಕ್ತ ಕರ್ಮಾನುಷ್ಠಾನವನ್ನೂ, ಪರಾಕ್ರಮಂಚ - ಧರ್ಮದಿಂದ ಶತ್ರುಗಳ ನಿರಾಕರಣವನ್ನು, ಭೂತಾನುಕಂಪಾಂಚ - ಭೂತಗಳಲ್ಲಿ ದಯಾರಸವನ್ನೂ, ಪ್ರಿಯವಾದಿತಾಂಚ - ಪ್ರಿಯವನ್ನೇ ಹೇಳುವಿಕೆಯನ್ನು, ದ್ವಿಜಾತಿದೇವಾತಿಥಿಪೂಜನಂಚ-ಬ್ರಾಹ್ಮಣರ, ದೇವತೆಗಳ, ಅಭ್ಯಾಗತರ ಪೂಜೆಯನ್ನೂ, ತ್ರಿದಿವಸ್ಯ - ಸ್ವರ್ಗಲೋಕಕ್ಕೆ, ಪಂಥಾನಂ - ಮಾರ್ಗವನ್ನಾಗಿ, ಆಹುಃ - ಹೇಳುತ್ತಾರೆ. ॥ ೩೧ ॥ ತೇನ - ಆ ಹೇತುವಿನಿಂದಲೇ, ವಿಪ್ರಾಃ - ಬ್ರಾಹ್ಮಣರು, ಏವಂ - ಈಪರಿಯಾಗಿ, ಯಥಾವದರ್ಥಂ - ಸತ್ಯವಾದ ಅರ್ಥವುಳ್ಳವನನ್ನಾಗಿಯೂ, ಆಜ್ಞಾಯ-ತಿಳಿದು, ಏಕೋದಯಂ - ಒಂದೇ ಮಾರ್ಗವನ್ನು, ಸಂಪ್ರತಿಪದ್ಯ - ಹೊಂದಿ, ಸಕಲಂ - ಸಮಸ್ತವಾದ, ಧರ್ಮಂ - ಧರ್ಮವನ್ನು, ಯಥಾವತ್ - ಯಥಾ ಶಾಸ್ತ್ರವಾಗಿ, ಚರಂತಃ - ಅನುಷ್ಠಾನಮಾಡುತ್ತ, ಅಪ್ರಮತ್ತಾಃ - ಪ್ರಮಾದವಿಲ್ಲದೆ, ಲೋಕಾ

ನಾದನು. ಆ ಬಳಿಕ ಮಹಾ ತೇಜಸ್ವಿಯೂ, ರಾಜನಂದನನೂ ಆದ ಆತನು, ನಾಸ್ತಿಕ ತತ್ವವನ್ನು ಯುಕ್ತಿ ಯುಕ್ತವಾಗಿ ಬೋಧಿಸುತ್ತಿರುವ ಜಾಬಾಲಿಯ ಮಾತುಗಳನ್ನು ಪುನಃ ಸ್ಮರಿಸಿಕೊಂಡು ಆ ವಿಷಯಗಳನ್ನು ಕುರಿತು ಮಹಾ ಅಸಹ್ಯವನ್ನು ಹೊಂದುತ್ತ ಆ ಮುನಿಯನ್ನು ಕುರಿತು ಮತ್ತೂ ಹೀಗೆ ಹೇಳಿದನು. “ಅಯ್ಯಾ, ಜಾಬಾಲಿಮುನಿಶ್ರೇಷ್ಠನೆ! ಸತ್ಯವಂತರಾದ ಮಾನವರು, ಸತ್ಯ,ಧರ್ಮ,ಪರಾಕ್ರಮ, ಭೂತದಯೆ, ಪ್ರಿಯಕರವಾಗಿ ಮಾತನಾಡುವಿಕೆ ಮೊದಲಾದುವು ಸ್ವರ್ಗಲೋಕಕ್ಕೆ ಹೋಗಲು ತಕ್ಕುದಾದ ಮಾರ್ಗವೆಂದು ಹೇಳುತ್ತಾರೆ.॥೩೦-೩೧॥ಆದುದರಿಂದಲೇ ವೇದವೇದಾಂಗಪಾರಗರಾದ ಬ್ರಾಹ್ಮಣರೆಲ್ಲರೂ ಈ ವಿಷಯಗಳೆಲ್ಲವನ್ನೂ ತಿಳಿದುಕೊಂಡು, ಐಕಮತ್ಯವನ್ನು ಹೊಂದಿ ಸಕಲ ಧರ್ಮಗಳನ್ನೂ ಆಚರಿಸಿ, ಸ್ವಲ್ಪವಾದರೂ ಪ್ರಮಾದವಿಲ್ಲದೆ, ಕೋರಿದ ಲೋಕಗಳಿಗೆ ಸುಖವಾಗಿ ಹೋಗುತ್ತಿದ್ದಾರೆ,

ಮುಪ್ರಮತ್ತಾಃ ॥ ೩೨ ॥ ನಿಂದಾಮ್ಯಹಂ ಕರ್ಮ ಪಿತುಃ ಕೃತಂ ತದ್ಯಸ್ತ್ವಾಮ ಗೃಹ್ಣಾ ದ್ವಿಷಮಸ್ಥ ಬುದ್ಧಿಂ ॥ ಬುದ್ಧ್ಯಾಽನಯೈವಂ ವಿಧಯಾ ಚರಂತಂ ಸುನಾಸ್ತಿಕಂ ಧರ್ಮ ಪಥಾದಪೇತಂ ॥೩೩॥ (೧) (ಯಥಾಹಿ ಚೋರ ಸ್ಸತಥಾಹಿ ಬುದ್ಧ ಸ್ತಥಾಗತಂ ನಾಸ್ತಿಕ ಮತ್ರ ವಿದ್ಧಿ! ॥ ತಸ್ಮಾದ್ಧಿ ಯಶ್ಶಂಕ್ಯತಮಃ ಪ್ರಜಾನಾಂ ನನಾಸ್ತಿಕೇನಾಽಭಿಮುಖೋ ಬುಧ ಸ್ಸ್ಯಾತ್ ? ॥ ೩೪ ॥) ತ್ವತ್ತೋ ಜನಾಃ ಪೂರ್ವತರೇವರಾಶ್ಚ ಶುಭಾನಿ ಕರ್ಮಾಣಿ ಬಹೂನಿ ಚಕ್ರುಃ ॥ ಜಿತ್ವಾ ಸದೇಮಂ

ಗಮಂ - ಲೋಕಪ್ರಾಪ್ತಿಯನ್ನು, ಕಾಂಕ್ಷಂತಿ - ಕೋರುತ್ತಾರೆ. ॥ ೩೨ ॥ ಯಃ - ಯಾವ ನಮ್ಮ ತಂದೆಯು, ಏವಂವಿಧಯಾ - ಇಂತಹ ರೀತಿಯುಳ್ಳ, ಅನಯಾಬುದ್ಧ್ಯಾ - ಇಂತಹ ಬುದ್ಧಿಯಿಂದಲೆ, ಚರಂತಂ - ಸಂಚರಿಸುತ್ತಿರುವ, ಸುನಾಸ್ತಿಕಂ - ಒಳ್ಳೇನಾಸ್ತಿಕನಾದ, ಧರ್ಮಪಥಾತ್ - ವೇದೋಕ್ತ ವಾದ ಧರ್ಮಮಾರ್ಗದಿಂದ, ಅಪೇತಂ - ಬಿಡಲ್ಪಟ್ಟ, ವಿಷಮಸ್ಥಬುದ್ಧಿಂ - ವಕ್ರಬುದ್ಧಿಯುಳ್ಳ, ತ್ವಾಂ- ನಿನ್ನನ್ನು, ಅಗೃಹಾತ್ - ಮಂತ್ರಿತ್ವೇನ ಪರಿಗ್ರಹಿಸಿದನು, ಅಹಂ - ನಾನು, ಪಿತುಃ - ತಂದೆಯಿಂದ, ಕೃತಂ - ಮಾಡಲ್ಪಟ್ಟ, ತತ್ಕರ್ಮ - ಆ ಕರ್ಮವನ್ನು, ನಿಂದಾಮಿ - ನಿಂದಿಸುತ್ತೇನೆ. ॥ ೩೩ ॥ (ಅತ್ರ - ಈ ಲೋಕದಲ್ಲಿ, ಚೋರಃ - ಕಳ್ಳನು, ಯಥಾ - ಹೇಗೋ, ತಥಾ - ಹಾಗೆಯೇ, ಸಃಬುದ್ಧಃ- ಆ ಬೌದ್ಧನು (ಬಹಿಷ್ಕರಣೀಯನು), ತಥಾಗತಂ - ಅಂತಹ ಬುದ್ಧನನ್ನೂ, ನಾಸ್ತಿಕಂ - ಪರಲೋಕ ವಿಲ್ಲದವನನ್ನಾಗಿ, ವಿದ್ಧಿ - ತಿಳಿದುಕೋ, ತಸ್ಮಾತ್ - ಆ ಕಾರಣ, ಯಃ - ಯಾವ ನಾಸ್ತಿಕನು, ಪ್ರಜಾನಾಂ - ಜನಗಳಿಗೆ, ಶಂಕ್ಯತಮಃ - ವೇದೋಕ್ತ ಕರ್ಮಗಳಿಗೆ ವಿರೋಧಿ ಎಂದು ಆಲೋಚಿಸ ತಕ್ಕವನೋ, ತೇನನಾಸ್ತಿಕೇನ - ಅಂತಹ ನಾಸ್ತಿಕನೊಡನೆ, ಬುಧಃ - ವಿದ್ವಾಂಸನು, ಅಭಿಮುಖಃ - ಎದುರಾಗಿ ಮಾತನಾಡತಕ್ಕವನು, ನಸ್ಯಾತ್-ಆಗಬಾರದು. ॥ ೩೪ ॥) ತ್ವತ್ತಃ-ನಿನ್ನಿಂದ, ಪೂರ್ವತರೇ- ಪೂರ್ವೀಕರಾದ, ವರಾಃ - ಶ್ರೇಷ್ಠರಾದ, ಜನಾಃ - ಜನರು, ಶುಭಾನಿ - ಶುಭಕರವಾದ, ಬಹೂನಿ - ಅನೇಕಗಳಾದ, ಕರ್ಮಾಣಿ - ಕರ್ಮಗಳನ್ನು, ಚಕ್ರುಃ - ಮಾಡಿದರು, ಸರ್ವದಾ-ಸರ್ವಕಾಲದಲ್ಲಿಯೂ, ಇಮಂಚ - ಈ ಲೋಕವನ್ನು, ಪರಂಚಲೋಕಂ - ಪರಲೋಕವನ್ನೂ, ಜಿತ್ವಾ - ಜಯಿಸಿ, ಸಂತಿ -

ಅಲ್ಲದೆ, ಲೋಕವಿರುದ್ಧವಾದ ನಾಸ್ತಿಕ ಬುದ್ಧಿಯುಳ್ಳವನೂ, ನಾಸ್ತಿಕ ಬುದ್ಧಿಯಿಂದಲೇ ಸಂಚರಿಸುತ್ತಿರುವವನೂ, ಧರ್ಮಮಾರ್ಗವನ್ನುತಪ್ಪಿನಡೆಯುವವನೂ ಆದ ನಿನ್ನನ್ನು ಹತ್ತಿರ ಸೇರಿಸಿದುದಕ್ಕೆ, ನನ್ನ ತಂದೆಯು ಮಾಡಿದ ಕೆಲಸವನ್ನು ನಿಂದಿಸಬೇಕೇ ಹೊರ್ತು ಇನ್ನಾವ ವಿಷಯವನ್ನು ಕುರಿತು ನಿಂದಿಸಿದರೂ ಪ್ರಯೋಜನವಿಲ್ಲ. ॥೩೨-೩೩॥ ನಾಸ್ತಿಕನು ಅನೇಕ ಕಾರಣಗಳಿಂದ ಕಳ್ಳನೆನಿಸುತ್ತಾನೆ. ಆದುದರಿಂದ ಮಾನವರೆಲ್ಲರಿಗೂ, ಸಂದೇಹಿಸಲು ತಕ್ಕ ವನೂ, ಕಳ್ಳಬುದ್ಧಿಯುಳ್ಳವನೂ ಆದ ನಾಸ್ತಿಕನಿದಿರಾಗಿ ಸತ್ಪುರುಷರಾದವರು ಹೋಗ

ಟಿ. (೧) ಈ ಶ್ಲೋಕದ ವಿಷಯದಲ್ಲಿ ಬಹಳ ಆಕ್ಷೇಪಣೆಗಳುಂಟು. ಬುದ್ಧನಿಗಿಂತ ಈ ಗ್ರಂಥವು ಪ್ರಾಚೀನವಾದುದರಿಂದ ಪ್ರಕ್ಷಿಪ್ತವೆಂದು ಕೆಲವರ ಅಭಿಪ್ರಾಯವಿರುತ್ತದೆ. ಆದರೆ ಅವತಾರಸ್ವರೂಪ ವಿಮರ್ಶಕರು “ ಇದು ಸಂಗತ; ಈ ರಾಮಾವತಾರವು ಎಷ್ಟನೆಯದೆಂಬುದನ್ನು ತಿಳಿದುಕೊಂಡರೆ ಇಲ್ಲಿ ಬುದ್ಧ ವಿಷಯಕ ಸಂಶಯವು ತಲೆದೋರುವುದಿಲ್ಲ ” ಎಂದು ಹೇಳುತ್ತಾರೆ. ಕೆಲವರು ಈ ಅಧ್ಯಾಯ, ಇದರ ಹಿಂದಿನ ಅಧ್ಯಾಯ, ಎರಡೂ ಪ್ರಕ್ಷಿಪ್ತವೆಂದು ಹೇಳುತ್ತಾರೆ. ಇದನ್ನಷ್ಟು ಒಪ್ಪಲಾಗುವುದಿಲ್ಲ.

ಚ ಪರಂಚ ಲೋಕಂ ತಸ್ಮಾ ದ್ವಿಜಾ ಸ್ಸ್ವಸ್ತಿ ಹುತಂ ಕೃತಂಚ ॥ ೩೫ ॥
ಧರ್ಮೇರತಾ ಸ್ಸತ್ಪುರುಷೈ ಸ್ಸಮೇತಾ ಸ್ತೇಜಸ್ವಿನೋ ದಾನಗುಣಪ್ರಧಾನಾಃ ॥
ಅಹಿಂಸಕಾ ವೀತಮಲಾಶ್ಚ ಲೋಕೇ ಭವಂತಿ ಪೂಜ್ಯಾ ಮುನಯಃ ಪ್ರಧಾನಾಃ
॥ ೩೬ ॥ ಇತಿ ಬ್ರುವಂತಂ ವಚನಂ ಸರೋಷಂ ರಾಮಂ ಮಹಾತ್ಮಾನ ಮದೀನ
ಸತ್ವಂ ॥ ಉವಾಚ ತಥ್ಯಂ ಪುನರಾಸ್ತಿಕಂ ಚ ಸತ್ಯಂ ವಚ ಸ್ಸಾನುನಯಂಚ

ಇರುತ್ತಾರೆ, ತಸ್ಮಾತ್ - ಆ ಕಾರಣ, ದ್ವಿಜಾಃ - ಬ್ರಾಹ್ಮಣರು, ಸ್ವಸ್ತಿ - ಶುಭಕರವಾದ, ಕೃತಂ - ಪೂರ್ವಿಕರಿಂದ ಮಾಡಲ್ಪಟ್ಟ, ಹುತಂಚ - ಹೋಮಾದಿ ಕಾರ್ಯಗಳನ್ನು, ಕುರ್ವಂತಿ - ಮಾಡುತ್ತಾರೆ. ॥ ೩೫ ॥ ಧರ್ಮೇ - ಆಮುಷ್ಮಿಕ ಧರ್ಮದಲ್ಲಿ, ರತಾಃ - ಆಸಕ್ತರಾಗಿ, ಸತ್ಪುರುಷೈಃ - ಸತ್ಪುರುಷರೊಡನೆ, ಸಮೇತಾಃ - ಕೂಡಿರುವ, ತೇಜಸ್ವಿನಃ - ಬ್ರಹ್ಮತೇಜಸ್ವಿಗಳಾದ, ದಾನಗುಣಪ್ರಧಾನಾಃ - ದಾನಗುಣವೇ ಮುಖ್ಯವಾಗುಳ್ಳ, ಅಹಿಂಸಕಾಃ - ಭೂತಹಿಂಸೆಗಳನ್ನು ಮಾಡದಿರುವ, ವೀತಮಲಾಶ್ಚ - ಕಳೆದುಹೋದ ಪಾಪಕೃತ್ಯಗಳುಳ್ಳ, ಪ್ರಧಾನಾಃ - ಮುಖ್ಯರಾದ, ಮುನಯಃ - ಋಷಿಗಳು, ಲೋಕೇ - ಜಗತ್ತಿನಲ್ಲಿ, ಪೂಜ್ಯಾಃ - ಪೂಜಿಸತಕ್ಕವರು, ಭವಂತಿ-ಆಗುತ್ತಾರೆ. ॥ ೩೬ ॥ ಇತಿ - ಈಪರಿಯಾಗಿ, ಸರೋಷಂ - ರೋಷದಿಂದ ಕೂಡಿದ, ವಚನಂ - ಮಾತನ್ನು, ಬ್ರುವಂತಂ - ಹೇಳುತ್ತಿರುವ, ಮಹಾತ್ಮಾನಂ - ಮಹಾ ಮನಸ್ವಿಯಾದ, ಅದೀನಸತ್ವಂ-ಅಪ್ರತಿಹತವಾದ ಪರಾಕ್ರಮವುಳ್ಳ, ರಾಮಂ - ಶ್ರೀರಾಮನನ್ನು ಕುರಿತು, ವಿಪ್ರಃ - ಬ್ರಾಹ್ಮಣನಾದ ಜಾಬಾಲಿಋಷಿಯು, ಪುನಃ - ಮತ್ತು, ಸಾನುನಯಂ - ಅನುವರ್ತನೆಯಿಂದೊಡಗೂಡಿದ, ತಥ್ಯಂ - ಯಥಾರ್ಥವಾದ, ಆಸ್ತಿಕಂಚ - ಪರಲೋಕ ಸಂಪಾದಕವಾದ, ಸತ್ಯಂ - ಸಫಲವಾದ, ವಚಃ - ಮಾತನ್ನು, ಉವಾಚ - ಹೇಳಿದನು. ॥ ೩೭ ॥ ಅಹಂ - ನಾನು, ನಾಸ್ತಿಕಾನಾಂ - ನಾಸ್ತಿಕರ, ವಚನಂ - ಮಾತನ್ನು, ನಬ್ರವೀಮಿ - ಹೇಳಲಿಲ್ಲ, ಅಹಂ - ನಾನು ನಾಸ್ತಿಕನು, ನ - ಅಲ್ಲ, ಕಿಂಚನ - ಪರಲೋ

ಕೂಡೆದು. ಅಲ್ಲದೆ ನಿನಗಿಂತ ಹಿಂದಿನ ಶ್ರೇಷ್ಠರಾದ ಮಾನವರು, ನಾನಾವಿಧಗಳಾದ ಶುಭಕರ್ಮಗಳನ್ನುಮಾಡಿದರು. ಮಾತ್ರವಲ್ಲದೆ ಸಜ್ಜನರೆಲ್ಲರೂ, ಸರ್ವಕಾಲಗಳಲ್ಲಿಯೂ ಈ ಲೋಕ, ಪರಲೋಕಗಳನ್ನು ಪುಣ್ಯ ಕರ್ಮಗಳಿಂದ ಜಯಿಸಿ ಪ್ರವರ್ತಿಸುತ್ತಿದ್ದಾರೆ. ॥೩೪-೩೬॥ ಅದುದರಿಂದಲೇ ಶುಭ ಕರ್ಮಗಳನ್ನೂ, ಹೋಮಗಳನ್ನೂ, ಯಜ್ಞಗಳನ್ನೂ ಲೋಕದಲ್ಲಿ ಸತ್ಪುರುಷರೆಲ್ಲರೂ ಮಾಡುತ್ತಿದ್ದಾರೆ. ಧರ್ಮ ಕಾರ್ಯಗಳಲ್ಲಿ ಅಭಿಲಾಷೆಯುಳ್ಳವರೂ, ಸತ್ಪುರುಷರೊಡಗೂಡಿರುವವರೂ, ತೇಜೋವಂತರೂ, ದಾನ ಗುಣವೇ ಅಧಿಕವಾಗುಳ್ಳವರೂ, ಹಿಂಸಾ ಕೃತ್ಯಗಳನ್ನು ತೊರೆದವರೂ, ನಿರ್ಮಲವಾದ ಸ್ವಭಾವವುಳ್ಳವರೂ ಆದ ಮುನಿಗಳು ಎಲ್ಲ ಲೋಕಗಳಲ್ಲಿಯೂ ಪೂಜಿತರಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ ಅಲ್ಲವೆ ?" ಈರೀತಿ ಬಹಳವಾದ ಕೋಪದಿಂದ ಮಾತನಾಡುತ್ತಿರುವವನೂ, ಮಹಾನುಭಾವನೂ, ಆದ ಶ್ರೀರಾಮಚಂದ್ರನೊಡನೆ ಜಾಬಾಲಿಮುನಿಯು, ವಾಸ್ತವವಾದ ವಿಷಯವನ್ನು ಬೋಧಿಸುವುದೂ, ಸಮಾಧಾನವನ್ನು ಸೂಚಿಸುವುದೂ ಆದ ಈ ಮಾತುಗಳನ್ನಾಡಿದನು. "ಓ ಶ್ರೀರಾಮಮೂರ್ತಿಯೆ ! ನಾನು ನಾಸ್ತಿಕನಲ್ಲ. ನಾನು ನಾಸ್ತಿಕ ವಚನವನ್ನು ಹೇಳಿ

ವಿಪ್ರಃ ॥ ೩೭ ॥ ನ ನಾಸ್ತಿಕಾನಾಂ ವಚನಂ ಬ್ರವೀಮ್ಯಹಂ ನ ನಾಸ್ತಿಕೋಽಹಂ ನಚ ನಾಸ್ತಿ ಕಿಂಚನ ॥ ಸಮೀಕ್ಷ್ಯ ಕಾಲಂ ಪುನರಾಸ್ತಿಕೋಽಭವಂ ಭವೇಯ ಕಾಲೇ ಪುನರೇವ ನಾಸ್ತಿಕಃ ॥ ೩೮ ॥

ಸಚಾಪಿ ಕಾಲೋಽಯ ಮುಪಾಗತಶ್ಶನೈ
ರ್ಯಥಾ ಮಯಾ ನಾಸ್ತಿಕ ವಾಗುದೀರಿತಾ ॥
ನಿವರ್ತನಾರ್ಥಂ ತವ ರಾಮ ! ಕಾರಣಾ
ತ್ಪ್ರಸಾದನಾರ್ಥಂ ಚ ಮಯೈತ ದೀರಿತಂ ॥ ೩೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ನವೋತ್ತರಶತತಮಸ್ಸರ್ಗಃ.

ಕವೇ ಮೊದಲಾಗುಳ್ಳುದು, ನಾಸ್ತೀತಿನ - ಇಲ್ಲವೆಂಬುವದಿಲ್ಲ, ಕಾಲಂಪುನಃ - ಕಾಲವನ್ನಾದರೆ, (ಗೋ+ಮ) ಸಂಕಟಬಂದಿರುವ ಕಾಲದಲ್ಲಿ ಸಕಲ ಮತಾನುವರ್ತಿಯಾಗಿ ಮಾತನಾಡುವದೇ ಯುಕ್ತವೆಂದರಿತು, ಕಾಲಂ - ಕಾಲವನ್ನು, ಸಮೀಕ್ಷ್ಯ - ಕಂಡು, ಆಸ್ತಿಕಃ - ಆಸ್ತಿಕನು, ಅಭವಂ - ಆದೆ, ಕಾಲೇ - ಸಂಕಟಕಾಲದಲ್ಲಿ, ಪುನರೇವ - ಮತ್ತೂ, ನಾಸ್ತಿಕಃ - ನಾಸ್ತಿಕ ಮತಾವಲಂಬಿಯು, ಭವೇಯಂ - ಆಗುತ್ತೇನೆ. ॥ ೩೮ ॥ ಸೋಽಯಂಕಾಲಃ - ಅಂತಹ ನಾಸ್ತಿಕ ಕಾಲವು, ಉಪಾಗತಃ - ಬಂದಿತು, ಯಥಾ - ಹೇಗೆ, ನಾಸ್ತಿಕವಾಕ್ - ನಾಸ್ತಿಕ ವಚನವು, ಮಯಾ- ನನ್ನಿಂದ, ಉದೀರಿತಾ - ಹೇಳಲ್ಪಟ್ಟಿತೋ, ಹೇ ರಾಮ - ಎಲೈ ಶ್ರೀರಾಮನೇ, ಮಯಾ - ನನ್ನಿಂದ, ಕಾರಣಾತ್ - ಹೇತ್ವಂತರದಿಂದಲೂ, ತವ - ನಿನ್ನ, ಪ್ರಸಾದನಾರ್ಥಂಚ - ಸಮ್ಮತಿಸುವುದಕ್ಕೋಸುಗ, ನಿವರ್ತನಾರ್ಥಂಚ - ಹಿಂತಿರುಗಿಸುವದಕ್ಕೋಸುಗವೂ, ಮಯಾ - ನನ್ನಿಂದ, ಏತತ್ - ಈ ನಾಸ್ತಿಕ ವಾದವು, ಈರಿತಂ - ಹೇಳಲಾಯಿತು. ॥ ೩೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ನವೋತ್ತರಶತತಮಸ್ಸರ್ಗಃ.

ದವನೂ ಅಲ್ಲ. ನನ್ನ ಅಭಿಪ್ರಾಯವು ಪರಲೋಕವಿಲ್ಲವೆಂದಲ್ಲ. ನಾಸ್ತಿಕ ವಚನಗಳನ್ನು ನಾನು ಎಲ್ಲ ಕಾಲಗಳಲ್ಲಿಯೂ ಖಂಡಿಸುತ್ತಿರುತ್ತೇನೆ. ತಕ್ಕ ಕಾಲವನ್ನು ನೋಡಿ ನಾನು ವೇದೋಕ್ತಮತವನ್ನಂಗೀಕರಿಸಿದೆನು.॥೩೭-೩೮॥ ಈಗ ನಾಸ್ತಿಕಮತವನ್ನವಲಂಬಿಸಿ, ನಿನ್ನನ್ನು ಅಯೋಧ್ಯಾಪಟ್ಟಣಕ್ಕೆ ಕರೆದುಕೊಂಡು ಹೋಗಬೇಕೆಂದು ಬಯಸಿದವನಾಗಿ, ಈ ರೀತಿಯಾಗಿ ಮಾತನಾಡಿದೆನೇ ಹೊರ್ತು ಮತ್ತೆ ಬೇರೆಯಲ್ಲ. ಅಯ್ಯಾ ಶ್ರೀರಾಮನೇ! ನಾಸ್ತಿಕ ವಚನಗಳನ್ನು ಹೇಳಲು ಇದು ತಕ್ಕ ಕಾಲವಾದುದದರಿಂದ ಈಗ ಹೇಳಿದ್ದೇನೆ. ಅದೂ ನೀನು ಪುನಃ ಅಯೋಧ್ಯಾಪಟ್ಟಣಕ್ಕೆ ಬರಬೇಕೆಂದೂ, ನಿನ್ನನ್ನು ಪ್ರಸನ್ನನನ್ನಾಗಿ ಮಾಡಬೇಕೆಂದೂ ಈ ಮಾತುಗಳನ್ನು ಹೇಳಿದೆನೇ ಹೊರ್ತು ಬೇರೊಂದು ಕಾರಣವಾವುದೂ ಇಲ್ಲ." ॥ ೩೯ ॥

ಇಂತಿದು ಶ್ರೀರಾಮಕೃತ ಜಾಬಾಲಿಗದಿತ ನಾಸ್ತಿಕವಚನ ನಿರಸನಪೂರ್ವಕ ರಾಜ್ಯಾಗಮನ ಯಾಚನಾ ನಿರಾಕರಣವೆಂಬ ನೂರಒಂಭತ್ತನೆಯ ಸರ್ಗವು ಸಮಾಪ್ತವಾದುದು.

ಕ್ರುದ್ಧಮಾಜ್ಞಾಯ ರಾಮಂತು ವಸಿಷ್ಠಃ ಪ್ರತ್ಯುವಾಚಹ ॥ ಜಾಬಾಲಿರಪಿ ಜಾನೀತೇ ಲೋಕಸ್ಯಾಸ್ಯ ಗತಾಗತಿಂ ॥ ೧ ॥ ನಿವರ್ತಯಿತು ಕಾಮಸ್ತು ತ್ವಾಮೇತದ್ವಾಕ್ಯ ಮುಕ್ತವಾನ್ ॥ ಇಮಾಂ ಲೋಕಸಮುತ್ಪತ್ತಿಂ ಲೋಕನಾಥ! ನಿಬೋಧ ಮೇ ॥ ೨ ॥ ಸರ್ವಂ ಸಲಿಲಮೇವಾಸೀ ತ್ಪೃಥಿವೀ ಯತ್ರ ನಿರ್ಮಿತಾ ॥ ತತಸ್ಸಮಭವ ದ್ಬ್ರಹ್ಮಾ ಸ್ವಯಂಭೂ ರ್ದೈವತೈ ಸ್ಸಹ ॥ ೩ ॥

ವಸಿಷ್ಠಃ - ವಸಿಷ್ಠಋಷಿಯು, ರಾಮಂ - ಶ್ರೀರಾಮನನ್ನು, ಕೃದ್ಧಂ - ಕೋಪಗೊಂಡವನನ್ನಾಗಿ, ಆಜ್ಞಾಯ - ತಿಳಿದು, ಪ್ರತ್ಯುವಾಚಹ - ಪ್ರತ್ಯುತ್ತರಕೊಟ್ಟನು, ಜಾಬಾಲಿರಪಿ - ಜಾಬಾಲಿಯೂ, ಅಸ್ಯಲೋಕಸ್ಯ - ಈ ಜಗತ್ತಿನ, ಗತಾಗತಿಂ - ಗಮನಾಗಮನಗಳನ್ನು, ಜಾನೀತೇ - ತಿಳಿದಿದ್ದಾನೆ, ಹೇ ಲೋಕನಾಥ - ಎಲೈ ಲೋಕಸ್ವಾಮಿಯೇ, ತ್ವಾಂ-ನಿನ್ನನ್ನು, ನಿವರ್ತಯಿತುಕಾಮಸ್ತು-ಹಿಂತಿರುಗಿಸಲಿಚ್ಛೆಯುಳ್ಳವನಾಗಿ, ಏತದ್ವಾಕ್ಯಂ - ಈ ಮಾತನ್ನು, ಉಕ್ತವಾನ್-ಹೇಳಿದನು, ಇಮಾಂ ಲೋಕಸಮುತ್ಪತ್ತಿಂ - ಈ ಜಗತ್ತಿನ ಉತ್ಪತ್ತಿಯನ್ನು, ಮೇ - ನನ್ನಿಂದ, ನಿಬೋಧ - ತಿಳಿದುಕೋ, ॥ ೨ ॥ ಪೃಥಿವೀ - ಈ ನೆಲವು, ಯತ್ರ - ಯಾವ ನೀರಿನಲ್ಲಿ, ನಿರ್ಮಿತಾ - ನಿರ್ಮಿಸಲ್ಪಟ್ಟತೋ, ಸರ್ವಂ - ಸಮಸ್ತವು, ತತ್ಸಲಿಲಮೇವ - ಆ ಉದಕವೆ, ಆಸೀತ್ - ಇದ್ದಿತು, ತತಃ - ಬಳಿಕ, ಬ್ರಹ್ಮಾ - ಬ್ರಹ್ಮನು, ದೈವತೈಸ್ಸಹ - ದೇವತೆಗಳೊಡನೆ, ಸ್ವಯಂಭೂಃ - ತನ್ನಷ್ಟಕ್ಕೆ ತಾನೇ ಹುಟ್ಟಿದವನು, ಸಮಭವತ್ - ಆದನು. ॥ ೩ ॥ ಸಃ - ಆ ಬ್ರಹ್ಮನು, ತತಃ - ಬಳಿಕ, ವರಾಹಃ - ವರಾಹ

ಈ ರೀತಿ ಜಾಬಾಲಿಮುನಿಯು ಅತಿ ಹೇಯವಾದ ನಾಸ್ತಿಕ ಮತಾವಲಂಬನದಿಂದ ನುಡಿದ ನುಡಿಗಳನ್ನು ಕೇಳಿ, ಮಹಾತ್ಮನಾದ ರಘುರಾಮನು ಅವುಗಳನ್ನು ಖಂಡಿಸಿ ಅತಿಶಯವಾದ ಕೋಪವನ್ನು ಹೊಂದಲು, ಕುಲಪುರೋಹಿತನಾದ ವಸಿಷ್ಠಋಷಿಯು ಆತನನ್ನು ಕುರಿತು ಹೀಗೆ ಹೇಳಿದನು. ಅಯ್ಯಾ, ಶ್ರೀರಾಮನೇ! ಜಾಬಾಲಿಯು ಶುದ್ಧ ನಾಸ್ತಿಕನೆಂದು ತಿಳಿಯಬೇಡ. ಮಹಾ ಮನನಶೀಲನೂ, ವೇದಾಚಾರ ಸಮನ್ವಿತನೂ ಆದ ಮಹಾ ಮುನಿಯೇ ಈತನು. ಜಗತ್ತಿನ ಅಳಿವು, ಉಳಿವು, ಬಾಳುಗಳನ್ನರಿತವನೂ ಅಹುದು. ಆದರೆ "ವೇದಬಹಿಷ್ಕೃತವಾದ ನಾಸ್ತಿಕ ತತ್ವವನ್ನೇಕೆ ಹೇಳಿದನು!" ಎಂಬ ಸಂದೇಹವು ನಿನಗೆ ಹುಟ್ಟಿದಿರಲಿ ರಾಜ್ಯಾರ್ಹನಾದ ನೀನು ಅಯೋಧ್ಯೆಗೈತಂದು ಸಾಕೇತ ಸಿಂಹಾಸನದಲ್ಲಿ ಅಭಿಷಿಕ್ತನಾಗಲೆಂಬುದೇ ಈ ಮುನಿಯು ನಿರೂಪಿಸಿದ ನಾಸ್ತಿಕ ವಚನಗಳ ಉದ್ದೇಶವು. ಓ ಜಗತ್ಪತಿಯಾದ ಶ್ರೀರಾಮನೇ! ಈಗ ನಾನು ಹೇಳತೊಡಗುವ ಪ್ರಪಂಚೋದ್ಭವ ರೀತಿಯನ್ನಾದರೂ ಆಲಿಸು; ಆಲಿಸಿ, ಚನ್ನಾಗಿ ತಿಳಿವವನಾಗು.॥೧-೩॥ ಪೃಥಿವ್ಯಾದಿ ಪಂಚಭೂತಗಳ ಉತ್ಪತ್ತಿಗಿಂತ ಮೊದಲು ಸಮಸ್ತವೂ ಜಲಮಯವಾಗಿದ್ದಿತೇ ಹೊರ್ತು ಮತ್ತಿನ್ನೇನೂ ಇರಲಿಲ್ಲ. ಎಂದರೆ

ಸ ವರಾಹ ಸ್ತತೋ ಭೂತ್ವಾ ಪ್ರೋಜ್ಜಹಾರ ವಸುಂಧರಾಂ ‖ ಅಸೃಜಚ್ಚ ಜಗ
ತ್ಸರ್ವಂ ಸಹಪುತ್ರೈಃ ಕೃತಾತ್ಮಭಿಃ ‖೪‖ ಆಕಾಶಪ್ರಭವೋ ಬ್ರಹ್ಮಾ ಶಾಶ್ವತೋ
ನಿತ್ಯ ಅವ್ಯಯಃ ‖ ತಸ್ಮಾನ್ಮರೀಚಿ ಸ್ಸಂಜಜ್ಞೇ ಮರೀಚೇಃ ಕಾಶ್ಯಪ ಸ್ಸುತಃ ‖೫‖
ವಿವಸ್ವಾನ್ ಕಾಶ್ಯಪಾಜ್ಜಜ್ಞೇ ಮನು ರ್ವೈವಸ್ವತ ಸ್ಸುತಃ ‖ ಸತು ಪ್ರಜಾಪತಿಃ
ಪೂರ್ವ ಮಿಕ್ಷ್ವಾಕುಸ್ತು ಮನೋ ಸ್ಸುತಃ ‖೬‖ ಯಸ್ಯೇಯಂ ಪ್ರಥಮಂ

ರೂಪವನ್ನುತಾಳಿದವನು, ಭೂತ್ವಾ - ಆಗಿ, ವಸುಂಧರಾಂ - ಭೂಮಿಯನ್ನು, ಪ್ರೋಜ್ಜಹಾರ - ಎತ್ತಿದನು, ಆಕಾಶಪ್ರಭವಃ - ಪರಬ್ರಹ್ಮನಿಂದ ಹುಟ್ಟಿದ, ಶಾಶ್ವತಃ - ಶಾಶ್ವತನಾದ, ನಿತ್ಯಃ - ನಾಶ ರಹಿತನಾದ, ಅವ್ಯಯಃ - ಕ್ಷಯಾದಿಭಾವವಿಕಾರರಹಿತನಾದ, ಬ್ರಹ್ಮಾ - ಚತುರ್ಮುಖ ಬ್ರಹ್ಮನು, ಕೃತಾತ್ಮಭಿಃ - ಜ್ಞಾನಿಗಳಾದ, ಪುತ್ರೈಸ್ಸಹ - ಮಕ್ಕಳೊಡನೆ, ಸರ್ವಂ - ಸಮಸ್ತವಾದ, ಜಗತ್ - ಲೋಕವನ್ನು, ಅಸೃಜತ್ - ಸೃಷ್ಟಿಮಾಡಿದನು, ತಸ್ಮಾತ್-ಆ ಚತುರ್ಮುಖ ಬ್ರಹ್ಮನಿಂದ, ಮರೀಚಿಃ- ಮರೀಚಬ್ರಹ್ಮನು, ಸಂಜಜ್ಞೇ - ಹುಟ್ಟಿದನು, ಮರೀಚೇಃ - ಮರೀಚಿಬ್ರಹ್ಮನಿಗೆ, ಕಾಶ್ಯಪಃ - ಕಶ್ಯಪ ಬ್ರಹ್ಮನು, ಸುತಃ - ಕುವರನು; ಕಾಶ್ಯಪಾತ್ - ಕಶ್ಯಪಬ್ರಹ್ಮನಿಂದ, ವಿವಸ್ವಾನ್ - ಸೂರ್ಯನು, ಜಜ್ಞೇ - ಹುಟ್ಟಿದನು, ಮನುಃ - ಮನುವು, ವೈವಸ್ವತಃ - ಸೂರ್ಯನಿಗೆ, ಸುತಃ - ಕುವರನು, ಸಃ - ಆ ವೈವಸ್ವತಮನುವು, ಪೂರ್ವಂ - ಪೂರ್ವದಲ್ಲಿ, ಪ್ರಜಾಪತಿಃ - ಪ್ರಜಾಸೃಷ್ಟಿಕರ್ತನು, ಮನೋಃ - ವೈವಸ್ವತಮನುವಿಗೆ, ಇಕ್ಷ್ವಾಕುಸ್ತು - ಇಕ್ಷ್ವಾಕು ಮಹಾರಾಯನು, ಸುತಃ - ಕುವರನು, ಯಸ್ಯ - ಯಾವ ಇಕ್ಷ್ವಾಕು ಮಹಾರಾಯನಿಗೆ, ಮನುನಾ - ವೈವಸ್ವತಮನುವಿನಿಂದ, ಸಮೃದ್ಧಾ - ಸಂಪೂರ್ಣ ವಾದ, ಇಯಂಮಹೀ - ಈ ಪೃಥಿವಿಯು, ಪ್ರಥಮಂ - ಮೊದಲು, ದತ್ತಾ - ಕೊಡಲಾಯಿತೋ,

ಸೃಷ್ಟ್ಯಾರಂಭದಲ್ಲಿ ಪೃಥ್ವಿಯ ಉದ್ಭವಕ್ಕೆ ಹೇತುಭೂತವಾದ ಜಲವೇ ಸಮಸ್ತವನ್ನೂ ಆವರಿಸಿದ್ದಿತು. ಬಳಿಕ ಸರ್ವವ್ಯಾಪಕನೂ, ಸ್ವಯಂವ್ಯಕ್ತನೂ ಆಗಿರುವ ಬ್ರಹ್ಮನು ಯಾವ ಸಹಾಯವೂ ಇಲ್ಲದೆ ತಾನಾಗಿಯೇ ಉದ್ಭವಿಸಿ ದೇವರ್ಕಳೊಡಗೂಡಿ ನೀರಿನಲ್ಲಿ ಮುಳಿಗಿರುವ ಭೂಮಿಯನ್ನು ಕಂಡನು. ಆಮೇಲೆ ಆ ಪರಬ್ರಹ್ಮನು ಮಹಾ ವರಾಹಾವತಾರವನ್ನು ತಾಳಿ ಜಲಮಗ್ನವಾಗಿದ್ದ ಆ ವಸುಂಧರೆಯನ್ನುದ್ಧರಿಸಿ ಅದರ ಭಾರವೆಲ್ಲವನ್ನೂ ತಾನೇ ವಹಿಸಿದನು. ಆತನ ನಾಭೀಕಮಲದಿಂದ ಚತುರ್ಮುಖಬ್ರಹ್ಮನು ಜನಿಸಿದನು ಇಂತು ಆಕಾಶ ಶಬ್ದ ವಾಚ್ಯನಾದ ಪರಬ್ರಹ್ಮಮೂರ್ತಿಯಿಂದ ಹುಟ್ಟಿದವನೂ, ಮರಣವಿವರ್ಜಿತನೊ, ಕ್ಷಯಾದಿ ಭಾವಗಳು, ವಿಕಾರಗಳು ಇವುಗಳಿಂದ ರಹಿತವನಾದವನೂ ಆದ ಚತುರ್ಮುಖನು ಬಹಳ ವಾದ ತಿಳಿವಳಿಕೆಯುಳ್ಳ ಮರೀಚಿಯೇ ಮೊದಲಾದ ನಿಜಕುವರರೊಡಗೂಡಿ ಈ ಬ್ರಹ್ಮಾಂಡ ವನ್ನು ಸೃಜಿಸಿದನು. ಆ ಸೃಷ್ಟಿಯ ಕ್ರಮವು ಹೀಗೆ:—ಚತುರ್ಮುಖಬ್ರಹ್ಮನಿಂದ ಮರೀಚಿ, ಆತನಿಂದ ಕಾಶ್ಯಪ, ಆಕಾಶ್ಯಪನಿಂದ ಸೂರ್ಯ, ಇವರುಂಟಾದರು. ‖ ೧-೫ ‖ ವಿವಸ್ವಾನ್ ಎಂಬ ಸೂರ್ಯನಿಂದ ಮನು ಚಕ್ರವರ್ತಿಯು ಹುಟ್ಟಿದನಾದಕಾರಣ ಈತನಿಗೆ ವೈವಸ್ವತ ಮನುವೆಂದು ಪ್ರಸಿದ್ಧಿಯುಂಟಾಯಿತು. ಈತನು ಸೃಷ್ಟಿಯನ್ನು ಮುಂದುವರೆಯಿಸಿ ಪ್ರಜಾಪತಿ ಯೆನಿಸಿದನು. ಇಕ್ಷ್ವಾಕು ರಾಯನು ಈ ವೈವಸ್ವತ ಮನುವಿನ ಕುವರನು. ಆತನಿಗೆ ತಂದೆ

ದತ್ತಾ ಸಮೃದ್ಧಾ ಮನುನಾ ಮಹೀ ॥ ತಮಿಕ್ಷ್ವಾಕು ಮಯೋಧ್ಯಾಯಾಂ ರಾಜಾನಂ ವಿದ್ಧಿ ಪೂರ್ವಕಂ ॥೭॥ ಇಕ್ಷ್ವಾಕೋಸ್ತು ಸುತ ಶ್ರೀಮಾ ಕುಕ್ಷಿ ರೇವೇತಿ ವಿಶ್ರುತಃ ॥ ಕುಕ್ಷೇ ರಥಾತ್ಮಜೋ ವೀರೋ ವಿಕುಕ್ಷಿ ರುದ ಪದ್ಯತ ॥೮॥ ವಿಕುಕ್ಷೇಸ್ತು ಮಹಾತೇಜಾ ಬಾಣಃ ಪುತ್ರಃ ಪ್ರತಾಪವಾ ॥ ಬಾಣಸ್ಯತು ಮಹಾಬಾಹು ರನರಣ್ಯೋ ಮಹಾಯಶಾಃ ॥೯॥ ಅನಾವೃಷ್ಟಿ ರ್ಬಭೂವಾಸ್ಮಿ ನದುರ್ಭಿಕ್ಷಂ ಸತಾಂ ವರೇ ॥ ಅನರಣ್ಯೇ ಮಹಾರಾಜೇ ತಸ್ಕರೋ ನಾಪಿ ಕಶ್ಚನ ॥೧೦॥ ಅನರಣ್ಯಾ ನ್ಮಹಾಬಾಹುಃ ಪೃಥೂ ರಾಜಾ

ತಮಿಕ್ಷ್ವಾಕುಂ - ಅಂತಹ ಇಕ್ಷ್ವಾಕು ಮಹಾರಾಯನನ್ನು, ಅಯೋಧ್ಯಾಯಾಂ - ಅಯೋಧ್ಯಾ ಪಟ್ಟಣದಲ್ಲಿ, ಪೂರ್ವಕಂ - ಪ್ರಾಚೀನವಾದ, ರಾಜಾನಂ - ಅರಸನನ್ನಾಗಿ, ವಿದ್ಧಿ - ತಿಳಿದುಕೊ ॥೪-೭॥ ಇಕ್ಷ್ವಾಕೋಸ್ತು - ಇಕ್ಷ್ವಾಕು ಮಹಾರಾಯನಿಗೆ, ಶ್ರೀಮಾ - ಸಂಪದ್ಯುಕ್ತನಾದ, ಸುತಃ - ಕುವರನು, ಕುಕ್ಷಿರೇವೇತಿ - ಕುಕ್ಷಿ ಎಂಬದಾಗಿ, ವಿಶ್ರುತಃ - ಪ್ರಸಿದ್ಧನು, ಅಥ - ಬಳಿಕ, ಕುಕ್ಷೇಃ - ಕುಕ್ಷಿಗೆ, ವೀರಃ - ಶೂರನಾದ, ವಿಕುಕ್ಷಿಃ - ವಿಕುಕ್ಷಿ ಎಂಬ, ಆತ್ಮಜಃ - ಕುವರನು, ಉದಪದ್ಯತ - ಹುಟ್ಟಿದನು. ॥೮॥ ವಿಕುಕ್ಷೇಸ್ತು - ವಿಕುಕ್ಷಿರಾಯನಿಗೆ, ಮಹಾತೇಜಾಃ - ಮಹಾ ತೇಜಸ್ವಿಯಾದ, ಪ್ರತಾಪವಾ - ಪರಾಕ್ರಮಶಾಲಿಯಾದ, ಬಾಣಃ - ಬಾಣನು, ಪುತ್ರಃ - ಮಗನು, ಬಾಣಸ್ಯತು - ಬಾಣನಿಗೆ, ಮಹಾಬಾಹುಃ - ಮಹಾ ಭುಜಪರಾಕ್ರಮಶಾಲಿಯಾದ, ಮಹಾಯಶಾಃ - ಬಹಳ ಕೀರ್ತಿವಂತನಾದ, ಅನರಣ್ಯಃ - ಅನರಣ್ಯನೆಂಬುವನು, (ಉದಪದ್ಯತ - ಹುಟ್ಟಿದನು.) ॥೯॥ ಸತಾಂ - ಸತ್ಪುರುಷರಲ್ಲಿ, ವರೇ - ಶ್ರೇಷ್ಠನಾದ, ಅನರಣ್ಯೇ - ಅನರಣ್ಯನು, ಮಹಾರಾಜೇ - ರಾಜ ನಾಗಲು, ಅಸ್ಮಿ - ಈ ದೇಶದಲ್ಲಿ, ಅನಾವೃಷ್ಟಿಃ - ಮಳೆಯಿಲ್ಲದಿರುವಿಕೆಯು, ನಬಭೂವ - ಆಗಲಿಲ್ಲ, ದುರ್ಭಿಕ್ಷಂ - ದುರ್ಭಿಕ್ಷವು, ನ - ಇಲ್ಲ, ತಸ್ಕರೋವಾ - ಕಳ್ಳನೂ, ಕಶ್ಚನ - ಒಬ್ಬನು, ನ - ಇಲ್ಲ. ॥೧೦॥ ಅನರಣ್ಯಾತ್ - ಅನರಣ್ಯನಿಂದ, ಪೃಥೂರಾಜಾ - ಪೃಥುಚಕ್ರವರ್ತಿಯು, ಬಭೂವಹ - ಆದನಷ್ಟೇ, ತಸ್ಮಾತ್ಪೃಥೋಃ - ಆ ಪೃಥುರಾಯನಿಗೆ, ತ್ರಿಶಂಕುಃ - ತ್ರಿಶಂಕುವೆಂಬ, ಮಹಾರಾಜಃ - ಮಹಾರಾಜನು, ಉದಪದ್ಯತ - ಹುಟ್ಟಿದನು, ವೀರಃ - ಶೂರನಾದ, ಸಃ - ಆ ತ್ರಿಶಂಕುರಾಯನು,

---

ಯಾವ ಮನು ಚಕ್ರವರ್ತಿಯು ಸಕಲ ಸಂಪತ್ಸಮೃದ್ಧವಾದ ಈ ಭೂಮಂಡಲವನ್ನು ಆಳ್ವಿಕೆ ಗಾಗಿ ಕೊಟ್ಟನು. ಆ ಇಕ್ಷ್ವಾಕುವೇ ಅಯೋಧ್ಯೆಯಲ್ಲಿ ನಿಂತು ರಾಜ್ಯವಾಳಿದ ನಿಮ್ಮ ವಂಶೀಯರಲ್ಲಿ ಮೊದಲಿಗನೆಂದರಿ. ॥೬-೭॥ ಸುಪ್ರಸಿದ್ಧನಾದ ಈ ಇಕ್ಷ್ವಾಕು ರಾಯನಿಗೆ ಶ್ರೀಮಂತನಾದ ಕುಕ್ಷಿ ಎಂಬ ಮಗನುಂಟಾದನು. ಆತನ ಮಗನೇ ವಿಕುಕ್ಷಿ ಎಂದು ಪ್ರಸಿದ್ಧ ನಾದನು. ಈ ವಿಕುಕ್ಷಿ ರಾಯನಿಗೆ ಮಹಾ ತೇಜಸ್ವಿಯೂ, ಪರಾಕ್ರಮಿಯೂ, ಆದ ಬಾಣ ನೆಂಬುವನುಂಟಾದನು. ಈ ಬಾಣನ ಮಗನೇ ಮಹಾ ಕೀರ್ತಿವಂತನಾದ ಅನರಣ್ಯನು. ಈ ಅನರಣ್ಯರಾಯನ ಆಳ್ವಿಕೆಯಲ್ಲಿ ಮಳೆಯಿಲ್ಲದಿರುವಿಕೆ, ದುರ್ಭಿಕ್ಷ, ಇವೇ ಅಲ್ಲದೆ, ಚೋರ ನೆಂಬುವನೊಬ್ಬನೂ ಇರಲಿಲ್ಲ. ॥೮-೧೦॥ ಅನರಣ್ಯನಾದಮೇಲೆ ಆತನ ಮಗನಾದ ಪೃಥುವೆಂಬ ಮಹಾ ಭುಜಬಲಪರಾಕ್ರಮಶಾಲಿಯು ಅಯೋಧ್ಯೆಗೆ ರಾಜನಾದನು. ಈ

ಬಭೂವಹ ॥ ತಸ್ಮಾತ್ಪೃಥೋರ್ಮಹಾರಾಜ ಸ್ತ್ರಿಶಂಕು ರುದಪದ್ಯತ ॥ ೧೧ ॥
ಸ ಸತ್ಯವಚನಾ ದ್ವೀರ ಸ್ಸಶರೀರೋ ದಿವಂಗತಃ ॥ ತ್ರಿಶಂಕೋ ರಭವತ್ಸೂನು
ರ್ದುಂದುಮಾರೋ ಮಹಾಯಶಾಃ ॥ ೧೨ ॥ ದುಂದುಮಾರೋ ಮಹಾತೇಜಾ
ಯುವನಾಶ್ವೋ ವ್ಯಜಾಯತ ॥ ಯುವನಾಶ್ವ ಸುತಶ್ಶ್ರೀಮಾ ನ್ಮಾಂಧಾತಾ
ಸಮುಪದ್ಯತ ॥ ೧೩ ॥ ಮಾಂಧಾತುಸ್ತು ಮಹಾತೇಜಾ ಸ್ಸುಸಂಧಿ ರುದಪದ್ಯತ॥
ಸುಸಂಧೇರಪಿ ಪುತ್ರೌ ದ್ವೌ ಧ್ರುವಸಂಧಿಃ ಪ್ರಸೇನಜಿತ್ ॥ ೧೪ ॥ ಯಶಸ್ವೀ
ಧ್ರುವ ಸಂಧೇಸ್ತು ಭರತೋ ರಿಪುಸೂದನಃ ॥ ಭರತಸ್ತು ಮಹಾಬಾಹೋ
ರಸಿತೋ ನಾಮ ಜಾಯತ ॥ ೧೫ ॥ ಯಸ್ಯೈತೇ ಪ್ರತಿರಾಜಾನ ಉದಪದ್ಯಂತ

ಸತ್ಯವಚನಾತ್ - ಸತ್ಯವಚನದಿಂದ, ಸಶರೀರಃ - ಶರೀರದಿಂದೊಡಗೂಡಿ, ದಿವಂ - ಸ್ವರ್ಗಲೋಕವನ್ನು, ಗತಃ - ಹೊಂದಿದನು. ॥ ೧೧ ॥ ತ್ರಿಶಂಕೋಃ - ತ್ರಿಶಂಕುರಾಯನಿಗೆ, ಮಹಾಯಶಾಃ - ಬಹಳ ಕೀರ್ತಿವಂತನಾದ, ದುಂದುಮಾರಃ - ದುಂದುಮಾರನೆಂಬ, ಸೂನುಃ-ಕುವರನು, ಅಭವತ್-ಆದನು, ಮಹಾತೇಜಾಃ - ಮಹಾ ಪರಾಕ್ರಮಶಾಲಿಯಾದ, ದುಂದುಮಾರಃ-ದುಂದುಮಾರನು, ಯುವನಾಶ್ವಃ-ಯುವನಾಶ್ವನು ಎಂಬ ಹೆಸರುಳ್ಳವನು, ವ್ಯಜಾಯತ - ಆದನು. ॥ ೧೨ ॥ ಯುವನಾಶ್ವಸುತಃ - ಯುವನಾಶ್ವನಿಗೆ ಕುವರನಾದ, ಶ್ರೀಮಾನ್ - ಸಂಪದ್ಯುಕ್ತನಾದ, ಮಾಂಧಾತಾ-ಮಾಂಧಾತರಾಯನು, ಸಮುಪದ್ಯತ - ಹುಟ್ಟಿದನು, ಮಾಂಧಾತಸ್ತು - ಮಾಂಧಾತ ನೃಪನಿಗೆ, ಮಹಾತೇಜಾಃ-ಮಹಾತೇಜೋವಂತನಾದ, ಸುಸಂಧಿಃ - ಸುಸಂಧಿ ಎಂಬುವನು, ಉದಪದ್ಯತ - ಹುಟ್ಟಿದನು. ॥ ೧೩ ॥ ಸುಸಂಧೇರಪಿ - ಸುಸಂಧಿಗಾದರೆ, ಧ್ರುವಸಂಧಿಃ-ಧ್ರುವಸಂಧಿಯೆಂಬುವನು, ಪ್ರಸೇನಜಿತ್-ಪ್ರಸೇನಜಿತ್ ಎಂಬುವನೂ, ದ್ವೌಪುತ್ರೌ - ಇಬ್ಬರು ಮಕ್ಕಳು, ಅಭವತಾಂ - ಆದರು, ಧ್ರುವಸಂಧೇಸ್ತು - ಧ್ರುವಸಂಧಿಗೆ, ರಿಪುಸೂದನಃ - ಶತ್ರುಸಂಹಾರಕನಾದ, ಭರತಃ - ಭರತನು, ಆಸೀತ್ - ಆದನು. ॥ ೧೪ ॥ ಮಹಾಬಾಹೋಃ - ಮಹಾಭುಜಗಳುಳ್ಳ, ಭರತಾತ್ತು - ಭರತನಿಂದ, ಅಸಿತೋನಾಮ - ಅಸಿತನೆಂದು ಪ್ರಸಿದ್ಧನು, ಜಾಯತ - ಹುಟ್ಟಿದನು, ಯಸ್ಯ - ಯಾವ ಅಸಿತರಾಯನಿಗೆ, ಹೈಹಯಾಃ-ಹೈಹಯ ದೇಶಾಧಿಪತಿಗಳು, ತಾಲಜಂಘಾಶ್ಚ-ತಾಲಜಂಘರೂ, ಶಶಿಬಿಂದವಶ್ಚ-ಶಶಿಬಿಂದುಗಳೂ ಎಂಬ, ಪ್ರತಿರಾಜಾನಃ-ಅನ್ಯರಾಜರುಗಳು, ಶತ್ರವಃ - ಶತ್ರುಗಳಾಗಿ, ಉದಪದ್ಯಂತ - ಹುಟ್ಟಿದರು. ॥ ೧೫ ॥ ಯುದ್ಧೇ-

---

ಪೃಥುರಾಯನಿಂದ ತ್ರಿಶಂಕುವು ಜನಿಸಿದನು. ಮಹಾ ವೀರಾಗ್ರಣಿಯಾದೀತನು ತನ್ನ ಸತ್ಯವಚನದಿಂದಲೇ ಶರೀರದೊಡನೆ ಸ್ವರ್ಗವನ್ನೈದಿದನು. ಈತನ ಮಗನೇ ಮಹಾ ಕೀರ್ತಿವಂತನಾದ ದುಂದುಮಾರನು. ಈ ದುಂದುಮಾರನ ಕುಮಾರನು ಯುವನಾಶ್ವನೆಂದು ಪ್ರಸಿದ್ಧನಾದನು. ಈತನಿಂದ ಶ್ರೀಮಂತನಾದ ಮಾಂಧಾತರಾಯನುಂಟಾದನು. ಈತನಿಂದ ಮಹಾತೇಜಸ್ವಿಯಾದ ಸುಸಂಧಿಯು ಜನಿಸಿದನು. ಸುಸಂಧಿಗೆ ಧ್ರುವಸಂಧಿ, ಪ್ರಸೇನಜಿತ್ತು ಎಂಬ ಇಬ್ಬರು ಮಕ್ಕಳಾದರು. ಧ್ರುವಸಂಧಿಗೆ ಮಹಾ ಕೀರ್ತಿವಂತನೂ, ಶತ್ರುಮರ್ದನನೂ ಆದ ಭರತನುಂಟಾದನು. ಈತನಿಂದ ಅಸಿತನು ಜನಿಸಿದನು. ॥ ೧೧-೧೫ ॥ ಅಸಿತನೆಂಬುವನಿಗೆ ಹೈಹಯರೂ, ತಾಲಜಂಘರೂ, ಶಶಿಬಿಂದುಗಳೂ ಶತ್ರುಗಳಾದರು. ಅಸಿತನು ಅವರೊಡನೆ

ಶತ್ರವಃ ॥ ಹೈಹಯಾ ಸ್ತಾಲಜಂಘಾಂಶ್ಚ ಶೂರಾಶ್ಚ ಶಶಿಬಿಂದವಃ ॥ ೧೬ ॥
ತಾಂಸ್ತು ಸರ್ವಾ೯ ಪ್ರತಿವ್ಯೂಹ್ಯ ಯುದ್ಧೇ ರಾಜಾ ಪ್ರವಾಸಿತಃ ॥ ಸಚ ಶೈಲ
ವರೇ ರಮ್ಯೇ ಬಭೂವಾಽಭಿರತೋ ಮುನಿಃ ॥ ೧೭ ॥ ದ್ವೇಚಾಸ್ಯ ಭಾರ್ಯೇ
ಗರ್ಭಿಣ್ಯೌ ಬಭೂವತು ರಿತಿಶ್ರುತಿಃ ॥ ಏಕಾ ಗರ್ಭವಿನಾಶಾಯ ಸಪತ್ನ್ಯೈ
ಸಗರಂ ದದೌ ॥ ೧೮ ॥ ಭಾರ್ಗವಚ್ಯವನೋ ನಾಮ ಹಿಮವಂತ ಮುಪಾ
ಶ್ರಿತಃ ॥ ತಮೃಷಿಂ ಸಮುಪಾಗಮ್ಯ ಕಾಳಿಂದೀ ತ್ವಭ್ಯವಾದಯತ್ ॥ ೧೯ ॥
ಸತಾ ಮಭ್ಯವದ ದ್ವಿಪ್ರೋ ಪುತ್ರೇಪ್ಸುಂ ಪುತ್ರಜನ್ಮನಿ ॥ ಪುತ್ರ ಸ್ತೇ ಭವಿತಾ

ಕಾಳೆಗದಲ್ಲಿ, ರಾಜಾ - ಅಸಿತರಾಯನು, ಸರ್ವಾ೯ - ಸಮಸ್ತರಾದ, ತಾ೯ - ಆ ಶತ್ರುಗಳನ್ನು, ಪ್ರತಿ ವ್ಯೂಹ್ಯ - ಪ್ರತಿಘಟಿಸಿ, ಪ್ರವಾಸಿತಃ - ಓಡಿಸಲ್ಪಟ್ಟನು, ಸಚ - ಆ ಅಸಿತರಾಯನು, ರಮ್ಯೇ-ಮನೋಹರವಾದ, ಶೈಲವರೇ - ಹಿಮವತ್ಪರ್ವತದಲ್ಲಿ, ಅಭಿರತಃ - ಆಸಕ್ತನಾಗಿ, ಮುನಿಃ - ರಾಜರ್ಷಿಯು, ಬಭೂವ - ಆದನು. ||೧೬-೧೭|| ಅಸ್ಯ - ಈ ಅಸಿತರಾಯನ, ದ್ವೇಭಾರ್ಯೇ-ಇಬ್ಬರು ಹೆಂಡತಿಯರು, ಗರ್ಭಿಣ್ಯೌ - ಗರ್ಭಧಾರಿಗಳು, ಬಭೂವತುಃ - ಆಗಿದ್ದರು, ಇತಿಶ್ರುತಿಃ - ಎಂದು ಕೇಳಿದ್ದೇವೆ, ಏಕಾ - ಒಬ್ಬಳು, ಗರ್ಭವಿನಾಶಾಯ - ಗರ್ಭನಾಶಕ್ಕೋಸುಗ, ಸಪತ್ನ್ಯೈ - ಸವತಿಗೆ, ಸಾ - ಅವಳು, ಗರಂ-ವಿಷವನ್ನು, ದದೌ - ಕೊಟ್ಟಳು. || ೧೮ || ಭಾರ್ಗವಃ - ಭೃಗುವಂಶೋತ್ಪನ್ನನಾದ, ಚ್ಯವನೋ ನಾಮ - ಚ್ಯವನನೆಂಬ ಋಷಿಯು, ಹಿಮವಂತಂ - ಹಿಮವತ್ಪರ್ವತವನ್ನು, ಉಪಾಶ್ರಿತಃ - ಆಶ್ರಯಿಸಿದ್ದನು, ತಮೃಷಿಂ - ಆ ಭಾರ್ಗವಚ್ಯವನನನ್ನು ಕುರಿತು, ಕಾಳಿಂದೀ - ಕಾಳಿಂದಿಯೆಂಬುವಳು, ಸಮುಪಾಗಮ್ಯ-ಆತನ ಸಮೀಪಕ್ಕೆ ಬಂದು, ಅಭ್ಯವಾದಯತ್-ನಮಸ್ಕರಿಸಿದಳು.||೧೯||ಸವಿಪ್ರಃ-ಆಬ್ರಾಹ್ಮಣನು, ಪುತ್ರೇಪ್ಸುಂ - ಮಗನನ್ನು ಅಪೇಕ್ಷಿಸುತ್ತಿರುವ, ತಾಂ - ಆಕೆಯನ್ನು ಕುರಿತು, ಪುತ್ರಜನ್ಮನಿ - ಪುತ್ರ ವಿಷಯವಾಗಿ, ಅಭ್ಯವದತ್ - ಹೇಳಿದನು, ಹೇ ದೇವಿ - ಎಲೌ ಅರಸಿಯೇ, ಮಹಾತ್ಮಾ - ಮಹಾ ಮನವುಳ್ಳ, ಲೋಕವಿಶ್ರುತಃ - ಲೋಕದಲ್ಲಿ ಪ್ರಸಿದ್ಧನಾದ, ಧಾರ್ಮಿಕಃ-ಧರ್ಮಿಷ್ಠನಾದ, ಸುಶೀಲಶ್ಚ - ಒಳ್ಳೆಯ ಸ್ವಭಾವವುಳ್ಳ, ವಂಶಕರ್ತಾ-ವಂಶಾಭಿವೃದ್ಧಿಕರನಾದ, ಅರಿಸೂದನಃ-ಶತ್ರುಸಂಹಾರಕನಾದ,

---

ಕಾಳೆಗನಾಡಿ ತನ್ನ ಬಲವಳಿಯಲು, ಹೆದರಿ, ಬೆಂಡಾಗಿ, ಮಡದಿಯರೀರ್ವರೊಂದಿಗೆ ಪಲಾಯನವಂಗೈದು ಪರ್ವತಗಳಲ್ಲಿ ಮುಖ್ಯವಾದ ಹಿಮವತ್ಪರ್ವತದ ಬಳಿಗೈದಿ ಸ್ಥಿರಚಿತ್ತದಿಂದ ತಪವಂಗೈದು ರಾಜರ್ಷಿಯೆನಿಸಿದ್ದನು. ಆಗಲಾ ರಾಯನ ಮಡದಿಯರೀರ್ವರೂ ಗರ್ಭವತಿಯರಾಗಿದ್ದರೆಂದು ನಾವು ಕೇಳಿದ್ದೇವೆ. ಆಗ ಆ ಸವತಿಯರಲ್ಲಿ ಒಬ್ಬಳು ಕಾಳಿಂದೀ ಎಂಬವಳಿಗೆ ಗರ್ಭವಿಳಿಯಲೆಂದು ವಿಷಭಕ್ಷ್ಯಗಳನ್ನುಣಿಸಿದಳು. || ೧೬-೧೮ || ಅದೇ ಸಮಯದಲ್ಲಿ ಭೃಗುವಂಶೋತ್ಪನ್ನನಾದ ಚ್ಯವನನೆಂಬ ರಾಜರ್ಷಿಯು ಆ ಹಿಮವತ್ಪರ್ವತದಲ್ಲಿಯೇ ತಪಸಂಗೈಯುತ್ತಿದ್ದನು. ಆಗ ಸವತಿಯಿಂದ ಕೊಡಲಾದ ವಿಷಭಕ್ಷ್ಯ ಭೋಜನದಿಂದ ಬಾಧೆಯನ್ನು ತಾಳಲಾರದ ಕಾಳಿಂದಿಯು, ಆ ಚ್ಯವನನ ಬಳಿಗೈದಿ ಆತನನ್ನು ನಮಸ್ಕರಿಸಿದಳು. ಇಂತು ಪುತ್ರಾಪೇಕ್ಷೆಯಿಂದ ವಂದನೆಯಂಗೈದ ಆಕೆಯನ್ನು ಕುರಿತು ಆತನು "ಓ, ದೇವಿಯೆ! ಮಹಾ ಮನನಶೀಲನೂ, ಲೋಕಕೀರ್ತಿಗೆ ಪಾತ್ರನಾಗುವವನೂ,

ದೇವಿ ! ಮಹಾತ್ಮಾ ಲೋಕವಿಶ್ರುತಃ ‖ ೨೦ ‖ ಧಾರ್ಮಿಕಶ್ಚ ಸುಶೀಲಶ್ಚ ವಂಶಕರ್ತಾಽರಿಸೂದನಃ ‖ ಕೃತ್ವಾ ಪ್ರದಕ್ಷಿಣಂ ಹೃಷ್ಟಾ ಮುನಿಂ ತಮನುಮಾನ್ಯಚ ‖ ೨೧ ‖ ಪದ್ಮಪತ್ರಸಮಾನಾಕ್ಷಂ ಪದ್ಮಗರ್ಭಸಮಪ್ರಭಂ ‖ ತತಸ್ಸಾ ಗೃಹಮಾಗಮ್ಯ ದೇವೀ ಪುತ್ರಂ ವ್ಯಜಾಯತ ‖ ೨೨ ‖ ಸಪತ್ನ್ಯಾತು ಗರಸ್ತಸ್ಯೈ ದತ್ತೋ ಗರ್ಭಜಿಘಾಂಸಯಾ ‖ ಗರೇಣ ಸಹ ತೇನೈವ ಜಾತ ಸ್ಸ ಸಗರೋಽಭವತ್ ‖ ೨೩ ‖ ಸ ರಾಜಾ ಸಗರೋ ನಾಮ ಯಸ್ಸಮುದ್ರ ಮಖಾನಯತ್ ‖ ಇಷ್ಟ್ವಾ ಪರ್ವಣಿ ವೇಗೇನ ತ್ರಾಸಯಂತ ಮಿಮಾಃ ಪ್ರಜಾಃ ‖ ೨೪ ‖ ಅಸ

ಪುತ್ರಃ - ಮಗನು, ತೇ - ನಿನಗೆ, ಭವಿತಾ - ಆಗುವನು. ‖ ೨೦ ‖ ತತಃ - ಬಳಿಕ, ಸಾದೇವೀ - ಆ ರಾಣಿಯು, ಹೃಷ್ಟಾ - ಸಂತೋಷಚಿತ್ತಳಾಗಿ, ತಂಮುನಿಂ - ಆ ಮಹರ್ಷಿಯನ್ನು ಕುರಿತು, ಅನುಮಾನ್ಯ - ಪೂಜಿಸಿ, ಪ್ರದಕ್ಷಿಣಂಚ - ಪ್ರದಕ್ಷಿಣವನ್ನೂ, ಕೃತ್ವಾ - ಮಾಡಿ, ಗೃಹಂ - ಮನೆಯನ್ನು ಕುರಿತು, ಆಗಮ್ಯ - ಬಂದು, ಪದ್ಮಪತ್ರಸಮಾನಾಕ್ಷಂ - ಕಮಲಪತ್ರಕ್ಕೆ ಸದೃಶವಾದ ನೇತ್ರಗಳುಳ್ಳ, ಪದ್ಮಗರ್ಭಸಮಪ್ರಭಂ - ತಾವರೆಯ ಗರ್ಭಕ್ಕೆ ಸದೃಶವಾದ ಪ್ರಭೆಯುಳ್ಳ, ಪುತ್ರಂ - ಮಗನನ್ನು, ವ್ಯಜಾಯತ - ಹೆತ್ತಳು. ‖ ೨೧-೨೨ ‖ ಸಪತ್ನ್ಯಾತು - ಸವತಿಯಿಂದಾದರೆ, ಗರ್ಭಜಿಘಾಂಸಯಾ - ಬಸರು ಇಳಿದು ಹೋಗಬೇಕೆಂಬಿಚ್ಛೆಯಿಂದ, ತಸ್ಯೈ - ಆಕೆಗೆ, ಗರಃ-ವಿಷವು, ದತ್ತಃ-ಕೊಡಲ್ಪಟ್ಟಿತು, ತೇನ ಗರೇಣಸಹೈವ - ಆ ವಿಷದ ಸಂಗಡಲೇ, ಜಾತಃ - ಹುಟ್ಟಿದ, ಸಃ - ಆ ಬಾಲಕನು, ಸಗರಃ - ವಿಷಸಹಿತನಾದುದರಿಂದ ಸಗರನೆಂದು ಪ್ರಸಿದ್ಧನು, ಅಭವತ್-ಆದನು. ‖೨೩‖ ಯಃ-ಯಾವ ಅರಸು, ಇಷ್ಟ್ವಾ - ಯಾಗಮಾಡಿ, ಪರ್ವಣಿ - ಪರ್ವಕಾಲದಲ್ಲಿ, ವೇಗೇನ - ಜವದಿಂದ, ಇಮಾಃಪ್ರಜಾಃ - ಈ ಪ್ರಜೆಗಳನ್ನು, ತ್ರಾಸಯಂತಂ - ಹೆದರಿಸುತ್ತಿರುವ, ಸಮುದ್ರಂ - ಕಡಲನ್ನು, ಅಖಾನಯತ್ - ಅಗೆಯಿಸಿದನೋ, ಸಗರೋನಾಮ - ಸಗರನೆಂದು ಪ್ರಸಿದ್ಧನಾದವನು, ಸರಾಜಾ - ಆ ಅರಸನೇ.

ಧರ್ಮೈಕ ದೃಷ್ಟಿಯೂ, ಸದಾಚಾರಸಂಪನ್ನನೂ, ವಂಶೋದ್ಧಾರಕನೂ, ಆದ ಕುವರನು ನಿನ್ನುದರದಲ್ಲಿ ಜನಿಸುತ್ತಾನೆ, ಯೋಚಿಸಬೇಡ" ಎಂದು ಹೇಳಿದನು. ‖ ೧೯-೨೦ ‖ ಆ ಚ್ಯವನಮುನಿಯಿಂತೆನಲು ಮಹಾ ಸಂತುಷ್ಟಳಾದ ಕಾಳಿಂದಿಯು ಆತನಿಗೆ ಪ್ರದಕ್ಷಿಣಪೂರಕ ನಮಸ್ಕಾರವಂಗೈದು, ಕೆಲಕಾಲದಮೇಲೆ ಕಮಲದೆಸೆಳಿನಂತೆ ಅಗಲವಾದ ಕಂಗಳುಳ್ಳವನೂ, ಕಮಲದೊಳಗಿನ ಬೆಳಕಿನಂತೆ ಬೆಳಗುತ್ತಿರುವವನೂ ಆದ ಕುವರನನ್ನು ಪಡೆದಳು. ಆ ಬಾಲಕನು ಚಿಕ್ಕಮ್ಮನಿತ್ತ ವಿಷ(ಗರ)ದೊಡನೆಯೇ ಹುಟ್ಟಿದನಾದುದರಿಂದ ಆತನಿಗೆ 'ಸಗರ'ನೆಂಬ ಹೆಸರು ಪ್ರಸಿದ್ಧವಾಯಿತು. ಈತನು ಚಕ್ರವರ್ತಿಯಾಗಿ ಅಶ್ವಮೇಧಯಾಗವಂಗೈದು ಆ ಯಜ್ಞದಲ್ಲಿ ಇಂದ್ರನಿಂದಪಹೃತವಾದ ಪಶುವನ್ನು ಕಾಣದೆ ತನ್ನ ಅರವತ್ತುಸಾವಿರ ಮಕ್ಕಳಿಗೆ ಯಜ್ಞಪಶುವನ್ನು ಹುಡಿಕಿಕೊಂಡು ಬನ್ನಿರೆಂದು ಅಣತಿಯಿತ್ತನು. ಅವರದನ್ನು ಹುಡುಕುತ್ತ ಹುಡುಕುತ್ತ ಪರ್ವಕಾಲಗಳಲ್ಲಿ ಉಕ್ಕಿಯುಕ್ಕಿ ಜನರೆಲ್ಲರಿಗೂ ಮಹಾ ಭೀತಿಯನ್ನುಂಟುಮಾಡುತ್ತಿದ್ದ ಕಡಲನ್ನಗೆದುಬಿಟ್ಟರು. ಇದರಿಂದ ಸಗರರಾಯನು ಲೋಕದಲ್ಲಿ ಮಹತ್ತರವಾದ ಕೀರ್ತಿಯನ್ನು ಪಡೆದನು. ‖ ೨೧-೨೪ ‖ ಈತನಿಗೆ ಅಸಮಂಜನೆಂಬ

ಮಂಜಸ್ತು ಪುತ್ರೋಽಭೂತ್ ಸಗರಸ್ಯೇತಿ ನ ಶ್ರುತಂ || ಜೀವನ್ನೇವ ಸ
ಪಿತ್ರಾತು ನಿರಸ್ತಃ ಪಾಪಕರ್ಮಕೃತ್ || ೨೫ || ಅಂಶುಮಾನಿತಿ ಪುತ್ರೋಽಭೂ
ದಸಮಂಜಸ್ಯ ವೀರ್ಯವಾನ್ || ದಿಲೀಪೋಂಶುಮತಃ ಪುತ್ರೋ ದಿಲೀಪಸ್ಯ
ಭಗೀರಥಃ || ೨೬ || ಭಗೀರಥಾತ್ಕಕುತ್ಸ್ಥಸ್ತು ಕಾಕುತ್ಸ್ಥಾ ಯೇನ
ವಿಶ್ರುತಾಃ || ಕಕುತ್ಸ್ಥಸ್ಯ ಚ ಪುತ್ರೋಽಭೂದ್ರಘುರ್ಯೇನತು ರಾಘವಾಃ
|| ೨೭ || ರಘೋಸ್ತು ಪುತ್ರಸ್ತೇಜಸ್ವೀ ಪ್ರವೃದ್ಧಃ ಪುರುಷಾದಕಃ || ಕಲ್ಮಾಷ
ಪಾದ ಸೌದಾಸ ಇತ್ಯೇವಂ ಪ್ರಥಿತೋ ಭುವಿ || ೨೮ || ಕಲ್ಮಾಷಪಾದ

|| ೨೪ || ಸಗರಸ್ಯ - ಸಗರಚಕ್ರವರ್ತಿಗೆ, ಅಸಮಂಜಃ - ಅಸಮಂಜನೆಂಬ, ಪುತ್ರಸ್ತು - ಕುವರನು, ಅಭೂತ್ - ಆದನು, ಇತಿ - ಇಂತೆಂದು, ನಃ - ನಮ್ಮಿಂದ, ಶ್ರುತಂ - ಕೇಳಲ್ಪಟ್ಟಿತು, ಪಾಪಕರ್ಮಕೃತ್ - ಪಾಪಕಾರ್ಯಮಾಡುವ, ಸತು - ಅವನಾದರೆ, ಜೀವನ್ನೇವ - ಬದುಕಿರುವಾಗಲೇ, ಪಿತ್ರಾ - ತಂದೆಯಿಂದ, ನಿರಸ್ತಃ - ಹೊರಡಿಸಲ್ಪಟ್ಟನು. || ೨೫ || ಅಸಮಂಜಸ್ಯ - ಅಸಮಂಜನಿಗೆ, ವೀರ್ಯವಾನ್ - ಪರಾಕ್ರಮಶಾಲಿಯಾದ, ಅಂಶುಮಾನಿತಿ - ಅಂಶುಮಂತನೆಂಬ, ಪುತ್ರಃ - ಕುಮಾರನು, ಅಭವತ್ - ಆದನು, ಅಂಶುಮತಃ - ಅಂಶುಮಂತನಿಗೆ, ದಿಲೀಪಃ - ದಿಲೀಪನು, ಪುತ್ರಃ - ಮಗನು; ದಿಲೀಪಸ್ಯ - ದಿಲೀಪನಿಗೆ, ಭಗೀರಥಃ - ಭಗೀರಥನು. || ೨೬ || ಕಕುತ್ಸ್ಥಸ್ತು - ಕಾಕುಸ್ಥನಾದರೆ, ಭಗೀರಥಾತ್ - ಭಗೀರಥನಿಂದ ಹುಟ್ಟಿದವನು, ಯೇನ-ಯಾವನಿಂದ, ಕಾಕುತ್ಸ್ಥ ಇತಿ - ಕಕುತ್ಸ್ಥವಂಶೋತ್ಪನ್ನರೆಂದು, ವಿಶ್ರುತಾಃ - ಕೇಳಲ್ಪಟ್ಟರೋ, ಯೇನ - ಯಾವನಿಂದ, ರಾಘವಾಃ - ರಾಘವರೆನ್ನಲ್ಪಡುವಿರೋ, ಸರಘುಃ - ಆ ರಘುವೆಂಬ, ಪುತ್ರಶ್ಚ - ಮಗನೂ ಕೂಡ, ಕಕುತ್ಸ್ಥಸ್ಯ - ಕಕುತ್ಸ್ಥಮಹಾರಾಯನಿಗೆ, ಅಭೂತ್ - ಆದವನು. || ೨೭ || ರಘೋಃ - ರಘುರಾಯನ, ಪುತ್ರಸ್ತು - ಮಗನಾದರೆ, ತೇಜಸ್ವೀ - ತೇಜೋವಂತನಾದವನು, ಪ್ರವೃದ್ಧಃ - ಅಭಿವೃದ್ಧಿಯನ್ನು ಪಡೆದವನು, ಪುರುಷಾದಕಃ - ಪುರುಷಾದಕನು, ಕಲ್ಮಾಷಪಾದಃ - ಕಲ್ಮಾಷಪಾದರಾಯನು, ಸೌದಾಸಃ - ಸೌದಾಸನು, ಇತ್ಯೇವಂ - ಈಪ್ರಕಾರವಾಗಿ, ಭುವಿ-ಈ ಲೋಕದಲ್ಲಿ, ಪ್ರಥಿತಃ-ಪ್ರಸಿದ್ಧನಾದನು. || ೨೮ || ಕಲ್ಮಾಷಪಾದಪುತ್ರಃ - ಸೌದಾಸನ ಮಗನು, ಶಂಖಣಸ್ತ್ವಿತಿ - ಶಂಖಣ

ಮಗನೊಬ್ಬನಿದ್ದನೆಂದು ನಾವು ಕೇಳಿದ್ದೇವೆ. ಪಾಪಾಚಾರಿಯಾದ ಆ ಅಸಮಂಜನು ಸಗರನಿಂದ ಬದುಕಿರುವಾಗಲೇ ಅರಣ್ಯಕ್ಕಟ್ಟಲಾದನು. ಅಸಮಂಜರಾಯನ ಮಗನೇ ಮಹಾಪರಾಕ್ರಮಶಾಲಿಯಾದ ಅಂಶುಮಂತನು. ಅಂಶುಮಂತನ ಮಗನು ದಿಲೀಪನು. ಭಗೀರಥನು ದಿಲೀಪನ ಮಗನು. ನೀವು ಕಾಕುತ್ಸ್ಥರೆಂದು ಯಾವ ಮಹಾತ್ಮನಿಂದ ಪ್ರಸಿದ್ಧರಾಗಿರುವಿರೋ ಆ ಕಕುತ್ಸ್ಥನು ಭಗೀರಥನ ಪುತ್ರನು. ಈತನ ಮಗನೇ ರಘುರಾಯ. ಈ ರಘುವಿನಿಂದಲೇ ನೀವು ರಾಘವರೆಂದಿನಿಸಿದ್ದೀರಿ. ಮಹಾ ತೇಜಸ್ವಿಯೂ, ಪ್ರವೃದ್ಧಮಾನನೂ ಆದ ಆ ರಘುಕುವರನು ಪುರುಷಾದಕ, ಕಲ್ಮಾಷಪಾದ, ಸೌದಾಸ, ಎಂಬ ಹೆಸರುಗಳಿಂದ ಪ್ರಸಿದ್ಧನಾಗಿದ್ದನು. || ೨೫-೨೮ || ಕಲ್ಮಾಷಪಾದರಾಯನ ಮಗನೇ ಶಂಖಣನು. ಈತನೆದುರಿಗೆ ಚತುರಂಗಬಲ ಸಮೇತನೂ ಧೀರನೂ ಆದ ರಾಜನಾರೂ ನಿಂತಿರಲಿಲ್ಲ. ಮಹಾ

ಪುತ್ರೋಽಭೂಚ್ಛಂಖಣ ಸ್ತ್ವಿತಿ ವಿಶ್ರುತಃ ॥ ಯಸ್ತು ತದ್ವೀರ್ಯ ಮಾಸಾದ್ಯ ಸಹಸೈನ್ಯೋ ವ್ಯನೀನಶತ್ ॥ ೨೯ ॥ ಶಂಖಣಸ್ಯ ಚ ಪುತ್ರೋಽಭೂಚ್ಛೂರ ಶ್ಶ್ರೀಮಾನ್ ಸುದರ್ಶನಃ ॥ ಸುದರ್ಶನಸ್ಯಾಽಗ್ನಿವರ್ಣ ಅಗ್ನಿವರ್ಣಸ್ಯ ಶೀಘ್ರಗಃ ॥ ೩೦ ॥ ಶೀಘ್ರಗಸ್ಯ ಮರುಃ ಪುತ್ರೋ ಮರೋಃ ಪುತ್ರಃ ಪ್ರಶುಶ್ರುಕಃ ॥ ಪ್ರಶುಶ್ರುಕಸ್ಯ ಪುತ್ರೋಽಭೂ ದಂಬರೀಷೋ ಮಹಾದ್ಯುತಿಃ ॥ ೩೧ ॥ ಅಂಬರೀಷಸ್ಯ ಪುತ್ರೋಽಭೂ ನ್ನಹುಷ ಸ್ಸತ್ಯವಿಕ್ರಮಃ ॥ ನಹುಷಸ್ಯಚ ನಾಭಾಗಃ ಪುತ್ರಃ ಪರಮಧಾರ್ಮಿಕಃ ॥ ೩೨ ॥ ಅಜಶ್ಚ ಸುವ್ರತಶ್ಚೈವ ನಾಭಾಗಸ್ಯ ಸುತಾವುಭೌ ॥ ಅಜಸ್ಯೈವ ಚ ಧರ್ಮಾತ್ಮಾ ರಾಜಾ ದಶರಥ ಸ್ಸುತಃ ॥೩೩॥

ನೆಂದು, ವಿಶ್ರುತಃ - ಪ್ರಖ್ಯಾತನು, ಅಭೂತ್ - ಆದನು, ಯಸ್ತು - ಯಾವನಾದರೆ, ತದ್ವೀರ್ಯಂ - ಆ ಪರಾಕ್ರಮವನ್ನು, ಆಸಾದ್ಯ - ಹೊಂದಿ, ಸಹಸೈನ್ಯಃ - ಸೈನ್ಯಸಹಿತನಾಗಿ, ವ್ಯನೀನಶತ್ - ನಾಶವಾದನೋ. ॥ ೨೯ ॥ ಶಂಖಣಸ್ಯ - ಶಂಖಣನಿಗೆ, ಶೂರಃ - ವೀರನಾದ, ಶ್ರೀಮಾನ್-ಸಂಪದ್ಯುಕ್ತನಾದ, ಸುದರ್ಶನಃ - ಸುದರ್ಶನನೆಂಬ, ಪುತ್ರಃ - ಮಗನು, ಅಭವತ್ - ಆದನು, ಸುದರ್ಶನಸ್ಯ- ಸುದರ್ಶನನಿಗೆ, ಅಗ್ನಿವರ್ಣಃ - ಅಗ್ನಿವರ್ಣನೆಂಬವನು, ಅಗ್ನಿವರ್ಣಸ್ಯ ಅಗ್ನಿವರ್ಣನಿಗೆ, ಶೀಘ್ರಗಃ - ಶೀಘ್ರಗನು. ॥ ೩೦ ॥ ಶೀಘ್ರಗಸ್ಯ - ಶೀಘ್ರಗನಿಗೆ, ಪುತ್ರಃ - ಮಗನು, ಮರುಃ - ಮರುವೆಂಬವನು, ಮರೋಃ - ಮರುವಿಗೆ, ಪ್ರಶುಶ್ರುಕಃ - ಪ್ರಶುಶ್ರುಕನೆಂಬವನು, ಪುತ್ರಃ - ಮಗನು, ಪ್ರಶುಶ್ರುಕಸ್ಯ - ಪ್ರಶುಶ್ರುಕನಿಗೆ, ಮಹಾದ್ಯುತಿಃ - ಮಹಾ ತೇಜಸ್ವಿಯಾದ, ಅಂಬರೀಷಃ - ಅಂಬರೀಷನೆಂಬ, ಪುತ್ರಃ - ಕುವರನು, ಅಭವತ್ - ಆದನು. ॥ ೩೧ ॥ ಅಂಬರೀಷಸ್ಯ - ಅಂಬರೀಷನಿಗೆ, ಸತ್ಯವಿಕ್ರಮಃ - ದಿಟವಾದ ಪರಾಕ್ರಮವುಳ್ಳ, ನಹುಷಃ - ನಹುಷನೆಂಬ, ಪುತ್ರಕಃ - ಸುತನು, ಅಭೂತ್- ಆದನು, ನಹುಷಸ್ಯ - ನಹುಷನ, ಪುತ್ರಃ - ಕುವರನು, ಪರಮಧಾರ್ಮಿಕಃ - ಮಹಾ ಧರ್ಮಿಷ್ಠನಾದ, ನಾಭಾಗಃ - ನಾಭಾಗನೆಂಬವನು. ॥ ೩೨ ॥ ನಾಭಾಗಸ್ಯ - ನಾಭಾಗನಿಗೆ, ಅಜಶ್ಚ - ಅಜ, ಸುವ್ರತಶ್ಚೈವ - ಸುವ್ರತ ಎಂಬ, ಉಭೌಸುತೌ - ಇಬ್ಬರು ಕುಮಾರರು, ಅಭೂತಾಂ - ಜನಿಸಿದರು, ಧರ್ಮಾತ್ಮಾ - ಧರ್ಮಸ್ವಭಾವವುಳ್ಳ, ದಶರಥಃ - ದಶರಥನೆಂಬ, ರಾಜೈವ - ಅರಸನೇ, ಅಜಸ್ಯ-ಅಜನ, ಸುತಃ - ಸೂನುವು. ॥ ೩೩ ॥ ತಸ್ಯ - ಆ ದಶರಥರಾಯನಿಗೆ, ರಾಮಇತಿ - ಶ್ರೀರಾಮನೆಂದು,

---

ಜಯಶಾಲಿಯಾದ ಈ ರಾಯನಿಂದ ವೀರನೂ, ಶ್ರೀಮಂತನೂ ಆದ ಸುದರ್ಶನನೆಂಬ ಕುವರನುಂಟಾದನು. ಆತನ ಮಗ ಅಗ್ನಿವರ್ಣ, ಇವನ ಮಗ ಶೀಘ್ರಗ. ॥ ೨೯-೩೦ ॥ ಆ ಶೀಘ್ರಗನ ಮಗನು ಮರು; ಆತನಿಗೆ ಪ್ರಶುಶ್ರುಕನೆಂಬ ಕುವರನು ಜನಿಸಿದನು. ಮಹಾ ತೇಜಸ್ವಿಯಾದ ಅಂಬರೀಷರಾಯನು ಪ್ರಶುಶ್ರುಕನ ಮಗನು. ಅಂಬರೀಷರಾಯನಿಗೆ ಸತ್ಯಪರಾಕ್ರಮಿಯಾದ ನಹುಷನೆಂಬ ಕುವರನು ಜನಿಸಿದನು. ಆತನ ಕುಮಾರನೇ ಮಹಾ ಧರ್ಮಿಷ್ಠನಾದ ನಾಭಾಗ. ಈತನಿಗೆ ಅಜ, ಸುವ್ರತ ಎಂಬಿಬ್ಬರು ಕುವರರುಂಟಾದರು. ಅಜರಾಯನ ಮಗನೇ ನಿನ್ನ ಪೂಜ್ಯಪಾದನಾದ ದಶರಥಮಹಾರಾಜನು. ಆತನ ಜ್ಯೇಷ್ಠಪುತ್ರನೇ ನೀನು. ಆದುದರಿಂದ ನೀನು ಪಾರಂಪರ್ಯದಿಂದ ನಿನ್ನದೇ ಆಗಿರುವ ಸಾಕೇತ ಸಾಮ್ರಾಜ್ಯವನ್ನು

ತಸ್ಯ ಜ್ಯೇಷ್ಠೋಽಸಿ ದಾಯಾದೋ ರಾಮ ಇತ್ಯಭಿವಿಶ್ರುತಃ || ತದ್ಗೃಹಾಣ ಸ್ವಕಂ ರಾಜ್ಯ ಮವೇಕ್ಷಸ್ವ ಜನಂ ನೃಪ! ||೩೪|| ಇಕ್ಷ್ವಾಕೂಣಾಂ ಹಿ ಸರ್ವೇಷಾಂ ರಾಜಾ ಭವತಿ ಪೂರ್ವಜಃ || ಪೂರ್ವಜೇನಾಽವರಃ ಪುತ್ರೋ ಜ್ಯೇಷ್ಠೋ ರಾಜ್ಯೇಽಭಿಷಿಚ್ಯತೇ || ೩೫ ||

ಸ ರಾಘವಾಣಾಂ ಕುಲಧರ್ಮ ಮಾತ್ಮನ
ಸ್ಸನಾತನಂ ನಾದ್ಯ ವಿಹಂತು ಮರ್ಹಸಿ ||
ಪ್ರಭೂತ ರತ್ನಾ ಮನುಶಾಧಿ ಮೇದಿನೀಂ
ಪ್ರಭೂತ ರಾಷ್ಟ್ರಾಂ ಪಿತೃವ ನ್ಮಹಾಯಶಃ || ೩೬ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದಶೋತ್ತರಶತತಮಸ್ಸರ್ಗಃ.

ಅಭಿವಿಶ್ರುತಃ - ಕೇಳಲ್ಪಟ್ಟ, ಜ್ಯೇಷ್ಠೋದಾಯಾದಃ - ಹಿರಿಯಮಗನು, ಅಸಿ ಆಗಿದ್ದೀಯೆ, ತತ್ - ಆ ಕಾರಣ, ಸ್ವಕಂ - ಸ್ವಕೀಯವಾದ, ರಾಜ್ಯಂ - ರಾಜ್ಯವನ್ನು, ಗೃಹಾಣ-ಸ್ವೀಕರಿಸು, ಹೇ ನೃಪ ಎಲೈ ಅರಸೆ, ಜನಂ - ಪ್ರಜೆಗಳನ್ನು, ಅವೇಕ್ಷಸ್ವ - ನೋಡು. || ೩೪ || ಸರ್ವೇಷಾಂ - ಸಮಸ್ತರಾದ, ಇಕ್ಷ್ವಾಕೂಣಾಂ - ಇಕ್ಷ್ವಾಕುವಂಶಸ್ಥರಲ್ಲಿ, ಪೂರ್ವಜಃ - ದೊಡ್ಡಮಗನು, ರಾಜಾ - ಅರಸು, ಭವತಿ - ಆಗುವನು, ಪೂರ್ವಜೇ - ದೊಡ್ಡಮಗನಿರುವಾಗ, ಅವರಃಪುತ್ರಃ - ಕಿರಿಯಮಗನು, ರಾಜ್ಯೇ-ರಾಜ್ಯದಲ್ಲಿ, ನಾಭಿಷಿಚ್ಯತೇ - ಅಭಿಷೇಕಮಾಡಲ್ಪಡುವದಿಲ್ಲ, ಜ್ಯೇಷ್ಠೋಹಿ-ಅಗ್ರಜನೇ, ಅಭಿಷಿಚ್ಯತೇ - ಅಭಿಷೇಕಮಾಡಲ್ಪಡುವನು. || ೩೫ || ಹೇ ಮಹಾಯಶಃ - ಎಲೈ ಮಹಾ ಕೀರ್ತಿವಂತನೇ, ಸಃ - ಅಂತಹ ನೀನು, ಆತ್ಮನಃ - ತನ್ನ ಸಂಬಂಧಿಗಳಾದ, ರಾಘವಾಣಾಂ - ರಘುವಂಶಸ್ಥರ, ಸನಾತನಂ - ಪರಂಪರೆಯಾಗಿ ಬಂದ, ಕುಲಧರ್ಮಂ - ಹಿರಿಯಮಗನಿಗೆ ಪಟ್ಟಾಭಿಷೇಕಮಾಡುವಿಕೆ ಎಂಬ ಧರ್ಮ ವನ್ನು, ಅದ್ಯ - ಈಗ, ವಿಹಂತುಂ - ಹೋಗಲಾಡಿಸಲು, ನಾರ್ಹಸಿ - ಯೋಗ್ಯನಾಗಬೇಡ, ಪ್ರಭೂತ ರತ್ನಾಂ - ಹೆಚ್ಚಾದ ರತ್ನಗಳುಳ್ಳ, ಪ್ರಭೂತರಾಷ್ಟ್ರಾಂ - ಬಹು ದೇಶಗಳುಳ್ಳ, ಮೇದಿನೀಂ - ಭೂಮಿ ಯನ್ನು, ಪಿತೃವತ್ - ತಂದೆಯಂತೆ, ಅನುಶಾಧಿ - ಪಾಲಿಸು. || ೩೬ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದಶೋತ್ತರಶತತಮಸ್ಸರ್ಗಃ.

ಪರಿಗ್ರಹಿಸು. ಇದೋ! ಈ ಪ್ರಜೆಗಳೆಲ್ಲರೂ ನಿನಗೋಸುಗ ಕಾದಿದ್ದಾರೆ. ಕಂಡೆಯಾ! || ೩೧-೩೪ || ಪ್ರಭುವೇ! ಇಕ್ಷ್ವಾಕು ವಂಶದಲ್ಲಿ ಹಿರಿಯಮಗನೇ ಅರಸಾಗಬೇಕು. ಕಿರಿಯ ನಿಗೆ ಪಟ್ಟಗಟ್ಟುವ ಪದ್ಧತಿಯಿಲ್ಲ. ಆದುದರಿಂದ ಜ್ಯೇಷ್ಠಕುವರನಾದ ನೀನು ನಿನ್ನ ವಂಶೀಯ ರಲ್ಲಿ ಬಹು ಕಾಲದಿಂದಲೂ ಬಂದಿರುವ ಧರ್ಮವನ್ನನುಸರಿಸಲೇ ಬೇಕು. ಈ ಕುಲಧರ್ಮಕ್ಕೆ ಲೋಪತರಬೇಡ. ಓ ಶ್ರೀರಾಮಚಂದ್ರನೇ! ಅಸಂಖ್ಯಾತ ರತ್ನಗಳಿಂದ ತುಂಬಿ ತುಳುಕಾಡು ತ್ತಿರುವುದೂ, ಬಹು ದೇಶಗರ್ಭಿತವೂ ಆದ ಈ ಭೂಮಂಡಲವನ್ನು ನಿನ್ನ ಜನಕನಾದ ದಶ ರಥರಾಜನೆಂತು ಪರಿಪಾಲಿಸುತ್ತಿದ್ದನೋ ಅಂತೆಯೇ ನೀನೂ ಪಾಲಿಸುತ್ತಾ ಸ್ವಕುಲ ಧರ್ಮ ರಕ್ಷಣೆಯಂಗೈದು ಸುಖವಾಗಿರು. || ೩೫-೩೬ ||

ಇಂತಿದು ವಸಿಷ್ಠ ಮಹಾ ಮುನಿಗದಿತ ಪ್ರಪಂಚ ಸ್ಥಿತ್ಯಾನುವರ್ಣನವೆಂಬ
ನೂರಹತ್ತನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕಾದಶೋತ್ತರಶತತಮಸ್ಸರ್ಗಃ.

ವಸಿಷ್ಠಸ್ತು ತದಾ ರಾಮ ಮುಕ್ತ್ವಾ ರಾಜಪುರೋಹಿತಃ ॥ ಅಬ್ರವೀ ದ್ಧರ್ಮಸಂಯುಕ್ತಂ ಪುನರೇವಾಽಪರಂ ವಚಃ ॥ ೧ ॥ ಪುರುಷಸ್ಯಹಿ ಜಾತಸ್ಯ ಭವಂತಿ ಗುರವ ಸ್ತ್ರಯಃ ॥ ಆಚಾರ್ಯಶ್ಚೈವ ಕಾಕುತ್‌ಸ್ಥ! ಪಿತಾ ಮಾತಾಚ ರಾಘವ! ॥ ೨ ॥ ಪಿತಾಹ್ಯೇನಂ ಜನಯತಿ ಪುರುಷಂ ಪುರುಷರ್ಷಭ! ॥ ಪ್ರಜ್ಞಾಂ ದದಾತಿ ಚಾಽಚಾರ್ಯ ಸ್ತಸ್ಮಾತ್ಸಗುರು ರುಚ್ಯತೇ॥೩॥ (೧)ಸೋಽಹಂ

ರಾಜಪುರೋಹಿತಃ - ರಾಜಪುರೋಹಿತನಾದ, ವಸಿಷ್ಠಸ್ತು - ವಸಿಷ್ಠಋಷಿಯಾದರೆ, ರಾಮಂ- ಶ್ರೀರಾಮನನ್ನು ಕುರಿತು, ಧರ್ಮಸಂಯುಕ್ತಂ - ಧರ್ಮದಿಂದೊಡಗೂಡಿದ, ವಚಃ - ಮಾತನ್ನು, ಉವಾಚ - ಹೇಳಿ, ತದಾ - ಆಗ, ಪುನಃ - ಮತ್ತು, ಅಪರಂವಚಃ - ಬೇರೊಂದುಮಾತನ್ನು, ಅಬ್ರವೀತ್ - ನುಡಿದನು. ॥ ೧ ॥ ಹೇ ಕಾಕುತ್‌ಸ್ಥ - ಎಲೈ ಕಕುತ್‌ಸ್ಥವಂಶೋತ್ಪನ್ನನಾದ, ಹೇ ರಾಘವ - ಎಲೈ ಶ್ರೀರಾಮನೇ, ಜಾತಸ್ಯ - ಹುಟ್ಟಿದ, ಪುರುಷಸ್ಯ - ಪುರುಷನಿಗೆ, ಆಚಾರ್ಯಃ-ಪುರೋಹಿತನು, ಪಿತಾಚ - ತಂದೆಯೂ, ಮಾತಾಚ - ತಾಯಿಯೂ ಎಂಬ, ತ್ರಯಃ - ಮೂವರಾದ, ಗುರವಃ- ಗುರುಗಳು, ಭವಂತಿ - ಆಗುತ್ತಾರೆ. ॥ ೨ ॥ ಪಿತಾಹಿ - ತಂದೆಯಾದರೆ, ಏನಂಪುರುಷಂ - ಈ ಮನುಷ್ಯನನ್ನು, ಜನಯತಿ - ಹುಟ್ಟಿಸುವನು, ಹೇ ಪುರುಷರ್ಷಭ - ಎಲೈ ಮನುಷ್ಯಶ್ರೇಷ್ಠನೇ, ಆಚಾರ್ಯಃ - ಉಪದೇಶಕರ್ತನು, ಪ್ರಜ್ಞಾಂ - ಪ್ರಜ್ಞೆಯನ್ನು, ದದಾತಿ - ಕೊಡುತ್ತಾನೆ, ತಸ್ಮಾತ್- ಆ ಕಾರಣ, ಸಃ - ಅವನು, ಗುರುರಿತಿ - ಗುರುವೆಂದು, ಉಚ್ಯತೇ - ಹೇಳಲಾಗುತ್ತಾನೆ. ॥ ೩ ॥

ರಾಜಪುರೋಹಿತನಾದ ವಸಿಷ್ಠಮುನಿಯು ಶ್ರೀರಾಮಚಂದ್ರನನ್ನು ಕುರಿತು ಧರ್ಮಯುಕ್ತವಾದ ಈ ಮಾತುಗಳನ್ನು ಹೇಳಿ ಮತ್ತೂ ಹೀಗೆಂದನು. “ ಓ ಕಕುತ್‌ಸ್ಥ ವಂಶೋತ್ಪನ್ನನಾದ ಶ್ರೀರಾಮನೇ ! ಲೋಕದಲ್ಲಿ ಹುಟ್ಟಿದ ಪ್ರತಿಯೊಬ್ಬ ಪುರುಷನಿಗೂ ಪುರೋಹಿತ, ತಂದೆ, ತಾಯಿ, ಎಂದು ಮೂರು ಮಂದಿ ಗುರುಗಳುಂಟು. ಇವರು ಮೂವರೂ ಶ್ರೇಷ್ಠರೇ ಆಹುದು. ಒಬ್ಬರಿಗಿಂತಒಬ್ಬರು ಹೆಚ್ಚೆಂದಾಗಲಿ,ಕಡಿಮೆಯೆಂದಾಗಲಿ,ಭಾವಿಸಬಾರದು. ಆದರೆ ತಂದೆಯಾದವನು ಪುರುಷನಿಗೆ ಜನ್ಮವೀಯುತ್ತಾನೆ. ಆಚಾರ್ಯನಾದವನು ಮಂತ್ರೋಪದೇಶಗಳನ್ನು ಮಾಡಿ ಜ್ಞಾನವನ್ನುಂಟುಮಾಡುತ್ತಾನೆ. ತಾಯಿಯು ಒಂಭತ್ತು ತಿಂಗಳು ಹೊತ್ತು, ಹೆತ್ತು, ಅತಿ ಪ್ರಯಾಸದಿಂದ ಬೆಳೆಯಿಸುತ್ತಾಳೆ. ತಂದೆ, ತಾಯಿ, ಆಚಾರ್ಯ, ಈ ಮೂರು ಮಂದಿಯ ಉಪಕಾರವು ಹೀಗಿರುವುದರಿಂದ ಮೂವರೂ ಗುರುಗಳೆಂದೇ ಎನಿಸು

ಟಿ. (೧) “ ಶರೀರ ಮಾತ್ರ ತಾಯಿತಂದೆಗಳದು. ಆದನ್ನುಪ್ರವೇಶಿಸಿರುವವನು ಪರಮಾತ್ಮ. ಆತನನ್ನು ತಿಳಿಯಲು ಉಪಕಾರಕವಾದ ಜ್ಞಾನವನ್ನು ದೊರಕಿಸಿರುವವನು ಆಚಾರ್ಯನು; ಅಂಧಕಾರ ನಿರೋಧಕವಾದ ಜ್ಞಾನದಾಯಕ

ತೇ ಪಿತುರಾಚಾರ್ಯ ಸ್ತವಚೈವ ಪರಂತಪ! || ಮಮ ತ್ವಂ ವಚನಂ ಕುರ್ವ
ನ್ನಾತಿವರ್ತೇ ಸ್ಸತಾಂಗತಿಂ || ೪ || ಇಮಾಹಿ ತೇ ಪರಿಷದ ಶ್ಶ್ರೇಣಯಶ್ಚ
ದ್ವಿಜಾ ಸ್ತಥಾ || ಏಷು ತಾತ! ಚರ ಧರ್ಮಂ ನಾತಿವರ್ತೇ ಸ್ಸತಾಂಗತಿಂ ||೫||
ವೃದ್ಧಾಯಾಧರ್ಮಶೀಲಾಯಾ ಮಾತು ರ್ನಾರ್ಹಸ್ಯ ವರ್ತಿತುಂ || ಅಸ್ಯಾಸ್ತು
ವಚನಂ ಕುರ್ವ ನ್ನಾತಿವರ್ತೇ ಸ್ಸತಾಂಗತಿಂ || ೬ || ಭರತಸ್ಯ ವಚಃ ಕುರ್ವ

ಹೇ ಪರಂತಪ - ಎಲೈ ಶತ್ರುನಾಶಕನೇ, ಸೋಹಂ - ಅಂತಹ ನಾನು, ತೇ-ನಿನಗೆ, ಪಿತುಃ-ತಂದೆಯು, ತವ - ನಿನಗೆ, ಆಚಾರ್ಯಶ್ಚೈವ - ಪುರೋಹಿತನೂ ಆಗಿದ್ದೇನೆ, ತ್ವಂ - ನೀನು, ಮಮ - ನನ್ನ, ವಚನಂ - ಮಾತನ್ನು, ಕುರ್ವ - ನಡೆಸದವನಾಗಿ, ಸತಾಂ - ಸತ್ಪುರುಷರ, ಗತಿಂ - ನಡತೆಯನ್ನು, ನಾತಿವರ್ತೇಃ - ಉಲ್ಲಂಘಿಸಬೇಡ, ಇಮಾಃ - ಈ, ಪರಿಷದಃ - ಬ್ರಾಹ್ಮಣಸಭೆಯು, ಶ್ರೇಣಯಃ - ಪರಿಜನರು, ತಥಾ - ಹಾಗೆಯೇ, ದ್ವಿಜಾಶ್ಚ - ಬ್ರಾಹ್ಮಣ ಕ್ಷತ್ರಿಯ ವೈಶ್ಯರೂ, ತೇ - ನಿನ್ನ ಸಂಬಂಧಿಗಳು, ಹೇ ತಾತ - ಎಲೈ ವತ್ಸನೇ, ಏಷು - ಇವರ ವಿಷಯವಾಗಿ, ಧರ್ಮಂ - ಪರಿಪಾಲನರೂಪವಾದ ಕ್ಷತ್ರಧರ್ಮವನ್ನು, ಆಚರ - ಮಾಡುವನಾಗಿ, ಸತಾಂ - ಸತ್ಪುರುಷರ, ಗತಿಂ - ಗಮನವನ್ನು, ನಾತಿವರ್ತೇಃ - ಮೀರಬೇಡ. || ೪-೫ || ವೃದ್ಧಾಯಾಃ - ಮುದುಕಿಯಾದ, ಧರ್ಮಶೀಲಾಯಾಃ - ಧರ್ಮಸ್ವಭಾವವುಳ್ಳ, ಮಾತುಃ-ತಾಯಿಯ, ಅವರ್ತಿತುಂ-ಶುಶ್ರೂಷೆಯನ್ನು ಮಾಡದಿರಲು, ನಾರ್ಹಸಿ-ಅಯೋಗ್ಯನಾಗಬೇಡ, ಅಸ್ಯಾಃ-ಈಕೆಯ, ವಚನಂತು - ಮಾತನ್ನಾದರೆ, ಕುರ್ವ - ಮಾಡುವನಾಗಿ, ಸತಾಂಗತಿಂ - ಸತ್ಪುರುಷರ ನಡತೆಯನ್ನು, ನಾತಿವರ್ತೇಃ - ಉಲ್ಲಂಘಿಸಬೇಡ. || ೬ || ಹೇ ರಾಘವ-ಎಲೈ ಶ್ರೀರಾಮನೇ, ಯಾಚಮಾನಸ್ಯ - ಪ್ರಾರ್ಥಿಸುವ, ಭರತಸ್ಯ - ತಮ್ಮನ, ವಚಃ - ಮಾತನ್ನು, ಕುರ್ವ - ಮಾಡುವನಾಗಿ, ತ್ವಂ - ನೀನು, ಸತ್ಯಧರ್ಮಪರಾಕ್ರಮಂ - ಸತ್ಯಧರ್ಮನಿಷ್ಣಾತತ್ವವುಳ್ಳ,

ತ್ತಾರೆ. ಆದರೆ ನಾನು ಎಲ್ಲರಿಗಿಂತಲೂ ಹೆಚ್ಚಿನವನು; ಏಕೆಂಬೆಯೋ? ನಾನು ನಿನ್ನ ತಂದೆಗೂ ಆಚಾರ್ಯನಾಗಿದ್ದೆನು. ನಿನಗೂ ಆಚಾರ್ಯನೇ ಆಗಿದ್ದೇನೆ. ಅಲ್ಲದೆ ತಂದೆಯೂ, ಆಚಾರ್ಯನೂ, ಗುರುವೂ ನಾನೇ ಆದುದರಿಂದ ನನ್ನ ಮಾತನ್ನು ಲ್ಲಂಘಿಸಬೇಡ. ಸತ್ಪುರುಷರಾಚರಿಸುತ್ತಿರುವ ಧರ್ಮವನ್ನು ಮೀರಬೇಡ. ಈ ಬ್ರಾಹ್ಮಣ ಶ್ರೇಷ್ಠರೂ, ರಾಜ್ಯಾಧಿಕೃತರೂ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೂ, ನಿನಗಾಗಿಯೇ ಕಾದಿದ್ದಾರೆ. ಇವರನ್ನು ಧರ್ಮದಿಂದ ಕಾಪಾಡುವ ಭಾರ ನಿನ್ನದು. ಸದ್ಧರ್ಮವನ್ನೆಂದಿಗೇ ಆಗಲಿ ಬಿಡಬೇಡ. || ೧-೫ || ಅಲ್ಲದೆ ವೃದ್ಧಳೂ, ಧರ್ಮದಲ್ಲಿಯೇ ದೃಷ್ಟಿಯುಳ್ಳವಳೂ, ನಿನ್ನ ತಾಯಿಯೂ ಆದ ಕೌಸಲ್ಯಾದೇವಿಯ ಶುಶ್ರೂಷೆಯಂಗೈಯುತ ಆಕೆಯ ಮಾತಿನಂತೆ ನಡಿಯುತ್ತ ಸತ್ಪುರುಷರ ಮಾರ್ಗವನ್ನನುಸರಿಸು. ಎಲೈ ರಘುವಂಶೋ

ನಾದುದರಿಂದಲೇ ಆಚಾರ್ಯನು ಗುರು-ಶ್ರೇಷ್ಠನೆನಿಸುತ್ತಾನೆ. ("ಗು"ಶಬ್ದಸ್ತ್ವಂಧಕಾರಸ್ಯಾತ್ "ರು"ಶಬ್ದಸ್ತನ್ನಿರೋಧಕಃ। ಅಂಧಕಾರನಿರೋಧಿತ್ವಾತ್ "ಗುರು"ರಿತ್ಯುಚ್ಯತೇ ಬುಧೈಃ) ಅಲ್ಲದೆ ನಾನು ನಿನಗೊಬ್ಬನಿಗೆ ಮಾತ್ರ ಆಚಾರ್ಯನೆನಿಸಬೇಡ. ನಿಮ್ಮ ತಂದೆಗೂ ಗುರುವಾಗಿದ್ದೆನು. ಆತನು ನನ್ನ ಮಾತನ್ನುಲ್ಲಂಘಿಸುತ್ತಿರಲಿಲ್ಲ. ನೀನೂ ನನ್ನ ಮಾತಿನಲ್ಲಿ ವಿಶ್ವಾಸವಿಟ್ಟು ರಾಜ್ಯವನ್ನಂಗೀಕರಿಸು." (ಎಂಬುದೇ ಇಲ್ಲಿನ ಅಭಿಪ್ರಾಯ.)

ಯಾಚಮಾನಸ್ಯ ರಾಘವ! ॥ ಆತ್ಮಾನಂ ನಾತಿ ವರ್ತೇಸ್ತ್ವಂ ಸತ್ಯ ಧರ್ಮ
ಪರಾಕ್ರಮಃ ॥ ೭ ॥ ಏವಂ ಮಧುರಮುಕ್ತ ಸ್ಸಗುರುಣಾ ರಾಘವ ಸ್ಸ್ವಯಂ ॥
ಪ್ರತ್ಯುವಾಚ ಸಮಾಸೀನಂ ವಸಿಷ್ಠಂ ಪುರುಷರ್ಷಭಃ ॥ ೮ ॥ (೧) ಯನ್ಮಾತಾ
ಪಿತರೌ ವೃತ್ತಂ ತನಯೇ ಕುರುತ ಸ್ಸದಾ ॥ ನ ಸುಪ್ರತಿಕರಂ ತತ್ತು ಮಾತ್ರಾ

ಆತ್ಮಾನಂ - ನಿನ್ನನ್ನು, ನಾತಿವರ್ತೇಃ - ಮೀರಬೇಡ. ॥ ೭ ॥ ಪುರುಷರ್ಷಭಃ - ಪುರುಷಶ್ರೇಷ್ಠನಾದ, ರಾಘವಃ - ಶ್ರೀರಾಮನು, ಏವಂ - ಈಪ್ರಕಾರವಾಗಿ, ಸಗುರುಣಾ - ಆ ಪುರೋಹಿತನಿಂದ, ಮಧುರಂ-ಇಂಪಾಗಿರುವ ಮಾತನ್ನು, ಸ್ವಯಂ-ತಾನಾಗಿಯೇ, ಉಕ್ತಸ್ಸ-ಹೇಳಲ್ಪಟ್ಟವನಾಗಿ, ಸಮಾಸೀನಂ - ಕುಳಿತುಕೊಂಡಿರುವ, ವಸಿಷ್ಠಂ - ವಸಿಷ್ಠಮುನಿಯನ್ನುದ್ದೇಶಿಸಿ, ಪ್ರತ್ಯುವಾಚ - ಪ್ರತ್ಯುತ್ತರ ಕೊಟ್ಟನು. ॥ ೮ ॥ ಮಾತಾಪಿತರೌ - ತಾಯಿತಂದೆಗಳು, ತನಯೇ - ಮಗನನ್ನು ಸಂಪಾದಿಸುವ ವಿಷಯವಾಗಿ, ಯದ್ವೃತ್ತಂ - ಯಾವ ವ್ರತೋಪವಾಸ ದೇವತಾರಾಧನವೇ ಮೊದಲಾದ ವಿಷಯ

ತ್ಪಸ್ನನೇ! ರಾಮಚಂದ್ರನೇ! ಸತ್ಯ, ಧರ್ಮ, ಇವುಗಳಲ್ಲಿಯೇ ಆಸಕ್ತನಾದ ನೀನು ರಾಜ್ಯವಾಳಬೇಕೆಂದು ಕೈಜೋಡಿಸಿ ಬೇಡುತ್ತಿರುವ ಭರತನ ನುಡಿಗಳನ್ನಾಲಿಸಿ ಜಾಗ್ರತೆಯಾಗಿ ಪಟ್ಟಾಭಿಷಿಕ್ತನಾಗು." ॥ ೬-೭ ॥ ವಸಿಷ್ಠಮುನೀಶ್ವರನಿಂತು ನುಡಿಯಲು ಶ್ರೀರಾಮಚಂದ್ರನು ಮೃದುಮಧುರವಾದ ಆತನ ನುಡಿಗಳನ್ನು ಕೇಳಿ ತನ್ನ ಬಳಿಯಲ್ಲಿಯೇ ಕುಳಿತಿದ್ದ ಆತನನ್ನು ಕುರಿತು ಹೀಗೆಂದನು. "ಓ ಮುನೀಶ್ವರನೇ! ಪ್ರಪಂಚದಲ್ಲಿ ಮಾತಾಪಿತೃಗಳು ಮಗನನ್ನು ಪಡೆಯಬೇಕೆಂದು ಯಾವ ವ್ರತೋಪಾಸಾದಿ ನಿಯಮಗಳನ್ನನುಷ್ಠಿಸುತ್ತಿರುವರೋ ಅವುಗಳನ್ನು ತೀರಿಸಿಕೊಳ್ಳಲು ಮಗನಿಂದೆಂದಿಗೂ ಸಾಧ್ಯವಲ್ಲ. ಮಾತ್ರವಲ್ಲದೆ

ಟ. (೧) ಇಲ್ಲಿ ಶ್ರೀರಾಮಮೂರ್ತಿಯ ಪ್ರತ್ಯುತ್ತರದಲ್ಲಿನ ಸ್ವಾರಸ್ಯ.

ಶರೀರಿಯೊಬ್ಬನಿದ್ದರೆ ತಾನೆ, ಆಚಾರ್ಯನುಪದೇಶಿಸುವುದು? ಅವನೇ ಇಲ್ಲದಿದ್ದರೆ ಆಚಾರ್ಯನಾರಿಗುಪದೇಶಿಸಲು ಯೋಗ್ಯನಾಗುತ್ತಾನೆ? ತಾಯಿಯಾದವಳು ಗರ್ಭವತಿಯಾದಂದಿನಿಂದ ಕಷ್ಟಗಳನ್ನು ಸಹಿಸಿಕೊಂಡು, ಪ್ರಸವವೇದನೆಯನ್ನೂ ಲೆಕ್ಕಿಸದೆ ಹೊತ್ತು, ಹೆತ್ತು, ಬಜ, ಬೆಣ್ಣೆಯಿಟ್ಟು ಪುರುಷನನ್ನು ಬೆಳೆಯಿಸುತ್ತಾಳೆ. ಅವನಿಗೆ ನಾಲ್ಕಾರು ವರುಷಗಳಾದಮೇಲೆ, ಹಿಂದೆಯೇ ದುಡಿಯುತ್ತಿದ್ದ ತಂದೆಯು ಅನ್ನವಸ್ತ್ರಾದಿಗಳಿಂದಲೂ, ಪ್ರಿಯವಾಕ್ಕುಗಳಿಂದಲೂ, ಗುರುಕುಲವಾಸಕ್ಕೆ ತಕ್ಕವನನ್ನಾಗಿ ಮಾಡುತ್ತಾನೆ. ಗುರುಕುಲವಾಸಕ್ಕೆ ಬಂದಮೇಲೆತಾನೆ ಆಚಾರ್ಯನಾದವನು ಅವನನ್ನು ಶಿಷ್ಯನನ್ನಾಗಿ ಪರಿಗ್ರಹಿಸಿ ಜ್ಞಾನೋಪದೇಶ ಮಾಡುವುದು? ಆದುದರಿಂದಲೇ ಶ್ರುತಿಗಳು, "ಮಾತೃದೇವೋಭವ, ಪಿತೃದೇವೋಭವ, ಆಚಾರ್ಯ ದೇವೋಭವ" ಎಂದು ಹೇಳಿ, ಎಲ್ಲಕ್ಕಿಂತಲೂ ತಾಯಿ, ಆಕೆಯಾದಮೇಲೆ ತಂದೆ, ಅವನಾದಮೇಲೆ ಆಚಾರ್ಯ, ಎಂಬ ಕ್ರಮವನ್ನು ಪ್ರತಿಪಾದಿಸಿರುತ್ತವೆ. ಆದುದರಿಂದ ಮೊದಲು ತಾಯಿಯನ್ನು ಸಂತೋಷಗೊಳಿಸಬೇಕು. ಕೈಕೇಯಿಯು ನನ್ನ ಚಿಕ್ಕ ತಾಯಿ, ಆಕೆಗೆ ಮಾತು ಕೊಟ್ಟಿದ್ದೇನೆ. ಆಕೆಯೂ ಸಂತೋಷಪಟ್ಟಿದ್ದಾಳೆ. ಆದರೆ ಭರತನು, "ನನ್ನ ತಾಯಿಯೂ ನಿನ್ನ ರಾಜ್ಯಾಭಿಷೇಕಕ್ಕೆ ಸಮ್ಮತಿಯಿತ್ತಿದ್ದಾಳೆ. ನೀನು ಅಭಿಷಿಕ್ತನಾಗು" ಎಂದು ಹೇಳುತ್ತಾನೆಯಲ್ಲ! ಎನ್ನುವೆಯೇನೊ"? ನಿಜ; ಆಕೆಯ ಮಾತಿನಂತೆ ಈಗಲೂ ನಾನು ನಡೆಯಬೇಕು. ಆದರೆ ತಂದೆಯಾದ ದಶರಥರಾಯನು ಹೀಗೆ ಹೇಳುವುದಕ್ಕೆ ಬದುಕಿಲ್ಲ; ಸ್ವರ್ಗವೈದಿದ್ದಾನೆ. ಆತನ ಮಾತನ್ನು ನಾನು ನಿರರ್ಥಕವನ್ನಾಗಿ ಮಾಡಲು ಸಮರ್ಥನಲ್ಲ. "ನನ್ನ ಮಾತನ್ನೋ" ಎಂದರೆ, ನನ್ನೀಜನ್ಮಕ್ಕೆ ಕಾರಣನಾದ ತಂದೆಯ ಆಜ್ಞೆಯನ್ನು ನೆರವೇರಿಸಿ, ಆ ಬಳಿಕ ನಿನ್ನ ಮಾತನ್ನೂ ಅವಶ್ಯವಾಗಿ ನೆರವೇರಿಸುತ್ತೇನೆ.

ಪಿತ್ರಾಚ ಯತ್ಕೃತಂ ॥ ೯ ॥ ಯಥಾಶಕ್ತಿ ಪ್ರದಾನೇನ ಸ್ನಾಪನೋಚ್ಛಾದ
ನೇನಚ ॥ ನಿತ್ಯಂ ಚ ಪ್ರಿಯವಾದೇನ ತಥಾ ಸಂವರ್ಧನೇನಚ ॥ ೧೦ ॥ ನಹಿ
ರಾಜಾ ಜನಯಿತಾ ಪಿತಾ ದಶರಥೋ ಮಮ ॥ ಆಜ್ಞಾತಂ ಯನ್ಮಯಾ ತಸ್ಯ
ನತನ್ಮಿಥ್ಯಾ ಭವಿಷ್ಯತಿ ॥ ೧೧ ॥ ಏವಮುಕ್ತಸ್ತು ರಾಮೇಣ ಭರತಃ ಪ್ರತ್ಯ
ನಂತರಂ ॥ ಉವಾಚ ಪರಮೋದಾರ ಸ್ಸೂತಂ ಪರಮ ದುರ್ಮನಾಃ ॥ ೧೨ ॥

ವನ್ನು, ಸದಾ - ಯಾವಾಗಲೂ, ಕುರುತಃ - ಮಾಡುವರೋ, ತತ್ - ಅದು, ನಸುಪ್ರತಿಕರಂ - ಪ್ರತಿಯಾಗಿ ಮಾಡಲಸಾಧ್ಯವು, (ಹುಟ್ಟಿದ ಬಳಿಕ) ಮಾತ್ರಾ - ತಾಯಿಯಿಂದಲೂ, ಪಿತ್ರಾಚ - ತಂದೆಯಿಂದಲೂ, ಯಥಾಶಕ್ತಿಪ್ರದಾನೇನ-ಶಕ್ತಿಯಿದ್ದಮಟ್ಟಿಗೆ ಕೊಡುವಿಕೆಯಿಂದಲೂ, ಸ್ನಾಪನೋಚ್ಛಾದನೇನಚ - ಸ್ನಾನಮಾಡಿಸುವದರಿಂದಲೂ, ಅನ್ನವಸ್ತ್ರಾದಿಗಳನ್ನೀಯುವದರಿಂದಲೂ, ನಿತ್ಯಂಚ - ಯಾವಾಗಲೂ, ಪ್ರಿಯವಾದೇನ-ಇಷ್ಟವಾದ ಮಾತುಗಳನ್ನು ಹೇಳುವದರಿಂದಲೂ, ತಥಾ - ಹಾಗೆಯೇ, ಸಂವರ್ಧನೇನಚ - ಬೆಳಿಸುವದರಿಂದಲೂ, ಯತ್ಕೃತಂ - ಯಾವದುಮಾಡಲ್ಪಟ್ಟಿತೋ, (ತಚ್ಚ-ಅದೂ ಕೂಡ,) ನಸುಪ್ರತಿಕರಂ - ಪ್ರತಿಕ್ರಿಯಾರಹಿತವಾದುದು. ॥ ೯-೧೦ ॥ ಸದಶರಥೋರಾಜಾ - ದಶರಥಮಹಾರಾಜನು, ಮಮ - ನನಗೆ, ಜನಯಿತಾ - ಉತ್ಪತ್ತಿಯಿತ್ತ, ಪಿತಾಹಿ - ತಂದೆಯಷ್ಟೆ, ಮಯಾ - ನನ್ನಿಂದ, ತಸ್ಯ - ಆತನಿಗೆ, ಯದಾಜ್ಞಾತಂ - ಯಾವದು ಪ್ರತಿಜ್ಞೆಮಾಡಲ್ಪಟ್ಟಿತೋ, ತತ್ - ಅದು, ಮಿಥ್ಯಾ - ಸುಳ್ಳು, ನಭವಿಷ್ಯತಿ - ಆಗುವುದಿಲ್ಲ. ॥ ೧೧ ॥ ಏವಂ - ಈರೀತಿಯಾಗಿ, ರಾಮೇಣ - ಶ್ರೀರಾಮನಿಂದ, ಉಕ್ತಃ - ಹೇಳಲ್ಪಟ್ಟ, ಪರಮೋದಾರಃ-ಮಹಾದಾತನಾದ, ಭರತಸ್ತು-ಭರತನಾದರೆ, ಪರಮದುರ್ಮನಾಃ - ಬಹುವ್ಯಸನಿಯಾಗಿ, ಪ್ರತ್ಯನಂತರಂ-ಸಮೀಪದಲ್ಲಿರುವ, ಸೂತಂ-ಸುಮಂತ್ರನನ್ನು ಕುರಿತು, ಉವಾಚ - ಹೇಳಿದನು. ॥ ೧೨ ॥ ಹೇ ಸಾರಥೇ - ಎಲೈ ಸಾರಥಿಯೇ,

---

ಹುಟ್ಟಿದ ಮೇಲೆ ಅವರು ತಮ್ಮ ಶಕ್ತ್ಯನುಸಾರ ಮಗನನ್ನು ಅಭ್ಯಂಗನವೇ ಮೊದಲಾದ ಉಪಚಾರಗಳಿಂದ ಪೋಷಿಸುತ್ತಲೂ, ಕಾಲಕಾಲಕ್ಕೆ ತಕ್ಕುದಾದ ಅನ್ನ, ವಸ್ತ್ರಗಳನ್ನೊದಗಿಸುತ್ತಲೂ, ಅಹರ್ನಿಶವೂ ಕಿವಿಗಿಂಪೊಗೆವ ನುಡಿಗಳನ್ನು ನುಡಿಯುತ್ತಲೂ, ಲಾಲನ, ಪ್ರೀಣನ, ಪೋಷಣೇತ್ಯಾದಿ ಯಾವ ಕಾರ್ಯಗಳನ್ನು ಮಾಡುತ್ತಾರೆಯೋ ಅವುಗಳಿಗೆ ಪ್ರತ್ಯುಪಕಾರವನ್ನು ಮಾಡುವುದು ಮಗನಾದವನಿಂದಾಗತಕ್ಕ ಕೆಲಸವಲ್ಲ. ಹೆಚ್ಚೇನು, ತಾಯಿತಂದೆಗಳ ಋಣವನ್ನು ತೀರಿಸಲು ಮಗನಾದವನೆಂದೆಂದಿಗೂ ಸಮರ್ಥನಾಗುವುದಿಲ್ಲ. ಆದರೆ ಅವರು ಹೇಳಿದಂತೆ ನಡಿಯುವುದು ಮಾತ್ರ ಮಗನಿಂದಾಗತಕ್ಕ ಕೆಲಸವಾಗಿದೆಯಷ್ಟೆ. ॥ ೮-೧೦ ॥ ದಶರಥಭೂಪಾಲನು ನನ್ನನ್ನು ಹೆತ್ತ ತಂದೆ; ಆತನು ನನಗೆ ಆಣತಿಯಿತ್ತಿದ್ದಾನೆ. ನಾನು "ಆಜ್ಞೆಯಂತೆ ನಡೆಯುತ್ತೇನೆ"ಂದು ಪ್ರತಿಜ್ಞೆ ಮಾಡಿಯೇ ಇದ್ದೇನೆ. ಅದೆಂದಿಗೂ ವ್ಯರ್ಥವಾಗುವುದಿಲ್ಲ." ಶ್ರೀರಾಮಮೂರ್ತಿಯು ಈ ರೀತಿ ನುಡಿಯಲು ಮಹಾ ಉದಾರಿಯಾದ ಭರತಕುಮಾರನು ಮನಗೆಟ್ಟು, ಮಹಾ ದುಃಖವುಳ್ಳವನಾಗಿ ತನ್ನ ಸಮೀಪದಲ್ಲಿಯೇ ಇದ್ದ ಸುಮಂತ್ರನನ್ನು ಕುರಿತು, " ಅಯ್ಯಾ, ಸಾರಥಿಯೇ! ಇದೋ ಈ ಪ್ರದೇಶದಲ್ಲಿ ದರ್ಭೆಗಳನ್ನು ಹಾಸು; ಇದು ನನಗಾಗಿ; ಶ್ರೀರಾಮಚಂದ್ರನು ಪ್ರಸನ್ನನಾಗುವವರೆ

ಇಹ ಮೇ ಸ್ಥಂಡಿಲೇ ಶೀಘ್ರಂ ಕುಶಾನಾಸ್ತರ ಸಾರಥೇ! ॥ ಆರ್ಯಂ ಪ್ರತ್ಯುಪವೇಕ್ಷ್ಯಾಮಿ ಯಾವನ್ನೈವ ಪ್ರಸೀದತಿ ॥ ೧೩ ॥ ಅನಾಹಾರೋ ನಿರಾಲೋಕೋ ಧನಹೀನೋ ಯಥಾ ದ್ವಿಜಃ ॥ ಶೇಷ್ಯೇ ಪುರಸ್ತಾ ಚ್ಛಾಲಾಯಾ ಯಾವನ್ನ ಪ್ರತಿಯಾಸ್ಯತಿ ॥೧೪॥ ಸತು ರಾಮಮವೇಕ್ಷಂತಂ ಸುಮಂತ್ರಂ ಪ್ರೇಕ್ಷ್ಯ ದುರ್ಮನಾಃ॥ ಕುಶೋತ್ತರ ಮುಪಸ್ಥಾಪ್ಯ ಭೂಮಾವೇವಾಽಸ್ತರ ತ್ಸ್ವಯಂ ॥ ೧೫ ॥ ತಮುವಾಚ ಮಹಾತೇಜಾ ರಾಮೋ ರಾಜರ್ಷಿ ಸತ್ತಮಃ ॥ ಕಿಂ ಮಾಂ ಭರತ! ಕುರ್ವಾಣಂ ತಾತ! ಪ್ರತ್ಯುಪವೇಕ್ಷ್ಯಸಿ? ॥ ೧೬ ॥ ಬ್ರಾಹ್ಮಣೋ ಹ್ಯೇಕ

ಇಹಸ್ಥಂಡಿಲೇ - ಈ ಭೂಮಿಯಲ್ಲಿ, ಮೇ - ನನಿಗೋಸುಗ, ಕುಶಾ - ದರ್ಭೆಗಳನ್ನು, ಶೀಘ್ರಂ - ಜಾಗ್ರತೆಯಾಗಿ, ಆಸ್ತರ - ಹಾಸು, ಮೇ - ನನ್ನವಿಷಯದಲ್ಲಿ, ಯಾವತ್ - ಎಷ್ಟರವರೆವಿಗೂ, ನಪ್ರಸೀದತಿ - ಪ್ರಸನ್ನನಾಗುವದಿಲ್ಲವೋ, ತಾವತ್ - ಅದುವರಿವಿಗೂ, ಆರ್ಯಂಪ್ರತಿ - ಅಣ್ಣನನ್ನುದ್ದೇಶಿಸಿ, ಉಪವೇಕ್ಷ್ಯಾಮಿ - ಅಡ್ಡವಾಗಿ ಉಪವಾಸನಮಾಡುತ್ತೇನೆ. ॥ ೧೩ ॥ ಯಾವತ್ - ಎಷ್ಟು ಪರ್ಯಂತವೂ, ನಪ್ರತಿಯಾಸ್ಯತಿ - ಹಿಂತಿರುಗಿ ಬರುವದಿಲ್ಲವೋ, ತಾವತ್ - ಅದುವರಿಗೂ, ಶಾಲಾಯಾಃ - ಪರ್ಣಶಾಲೆಯ, ಪುರಸ್ತಾತ್ - ಮುಂಗಡೆ, ಧನಹೀನಃ - ಸಾಲಕೊಟ್ಟು ಹಣವನ್ನು ಹೋಗಲಾಡಿಸಿಕೊಂಡ, ದ್ವಿಜೋಯಥಾ - ಬ್ರಾಹ್ಮಣನಂತೆ, ಅನಾಹಾರಃ - ಆಹಾರವಿಲ್ಲದೆ, ನಿರಾಲೋಕಃ - ತಲೆತುಂಬ ಹೊದ್ದುಕೊಂಡು, ಶೇಷ್ಯೇ - ಮಲಗುತ್ತೇನೆ. ॥ ೧೪ ॥ ಸತು - ಆ ಭರತನಾದರೆ, ರಾಮಂ - ಶ್ರೀರಾಮನನ್ನು, ಅವೇಕ್ಷಂತಂ - ನೋಡುವ, ಸುಮಂತ್ರಂ - ಸುಮಂತ್ರನನ್ನು, ಪ್ರೇಕ್ಷ್ಯ - ಕಂಡು, ದುರ್ಮನಾಃ - ಮನಗೆಟ್ಟು, ಸ್ವಯಮೇವ - ತಾನೇ, ಕುಶೋತ್ತರಂ - ಧರ್ಭಾಸ್ತರಣವನ್ನು, ಉಪಸ್ಥಾಪ್ಯ - ತೆಗದುಕೊಂಡು, ಭೂಮೌ - ನೆಲದಲ್ಲಿ, ಆಸ್ತರತ್ - ಹಾಸಿಕೊಂಡನು. ॥೧೫॥ ರಾಜರ್ಷಿಸತ್ತಮಃ - ರಾಜರ್ಷಿಶ್ರೇಷ್ಠನಾದ, ಮಹಾತೇಜಾಃ-ಬಹು ತೇಜಸ್ವಿಯಾದ, ರಾಮಃ ಶ್ರೀರಾಮನು, ತಂ - ಆ ಭರತನನ್ನು ಕುರಿತು, ಉವಾಚ - ಹೀಗೆ ಹೇಳಿದನು, ಹೇ ತಾತ - ಎಲೈ ವತ್ಸನೆ, ಹೇ ಭರತ - ಭರತ, ಕಿಂಕುರ್ವಾಣಂ - ಯಾವ ಅಪಕಾರವನ್ನು ಮಾಡುತ್ತಿರುವ, ಮಾಂ -

---

ವಿಗೂ ಆತನನ್ನು ನಿರ್ದೇಶಿಸಿ ಈ ದರ್ಭಾಶಯನದಲ್ಲಿ ಅಡ್ಡಲಾಗಿ ಮಲಗುತ್ತೇನೆ. ಈ ನಮ್ಮಣ್ಣನು ಎದುವರಿವಿಗೂ ಹಿಂತಿರುಗಿ ಬರುವದಿಲ್ಲವೋ! ಅದುವರೆವಿಗೂ ಈ ಪರ್ಣಶಾಲೆಯ ಮುಂಗಡೆಯೇ ಸಾಲಕೊಟ್ಟು ಹಣವನ್ನು ಕಳೆದುಕೊಂಡ ಬ್ರಾಹ್ಮಣನ ಹಾಗೆ ಆಹಾರಾದಿಗಳನ್ನುಳಿದು ಯಾರನ್ನೂ ಕಾಣದೆ ತಲೆಯು ತುಂಬ ಹೊದ್ದುಕೊಂಡು ಇಲ್ಲಿಯೇ ಮಲಗುತ್ತೇನೆ" ಎಂದನು. ॥ ೧೧-೧೪ ॥ ಭರತನಾಡಿದ ಮಾತುಗಳನ್ನು ಕೇಳಿ ಸುಮಂತ್ರನು ಆತನಾಡಿದಂತೆ ಮಾಡದೆ ಶ್ರೀರಾಮಮೂರ್ತಿಯ ಮುಖವನ್ನೇ ನೋಡುತ್ತಿರಲು ಭರತಕುಮಾರನು ತಾನಾಗಿಯೇ ದರ್ಭಾಸ್ತರಣವನ್ನು ಹಾಸಿ ಶಯನಿಸಲು ಸನ್ನದ್ಧನಾದನು. ಆ ಸಮಯದಲ್ಲಿ ರಾಜರ್ಷಿ ಶ್ರೇಷ್ಠನೂ, ಮಹಾ ತೇಜೋವಂತನೂ ಆದ ಶ್ರೀರಾಮನು ಆ ತಮ್ಮನಾದ ಭರತನನ್ನು ಕುರಿತು, "ವತ್ಸ! ನಿನಗೆ ನಾನಾವ ಅಪಕಾರವನ್ನು ಮಾಡಿದೆನಯ್ಯಾ, ಸುಮ್ಮನೆ ನನ್ನನ್ನೇಕೆ ತೊಂದರೆಗೊಳಿಸುವೆ. ಹಣ ಕಳೆದುಕೊಂಡ, ಕೈಲಾಗದ, ಬಡ ಬ್ರಾಹ್ಮಣನು

ಪಾರ್ಶ್ವೇನ ನರಾ‌ನ್ ರೋದ್ಧು ಮಿಹಾರ್ಹತಿ ॥ ನತು ಮೂರ್ಧಾಭಿಷಿಕ್ತಾನಾಂ ವಿಧಿಃ ಪ್ರತ್ಯುಪವೇಶನೇ ॥ ೧೭ ॥ ಉತ್ತಿಷ್ಠ ನರಶಾರ್ದೂಲ! ಹಿತ್ವೈತ ದ್ದಾರುಣಂ ವ್ರತಂ ॥ ಪುರವರ್ಯಾಮಿತಃ ಕ್ಷಿಪ್ರ ಮಯೋಧ್ಯಾಂ ಯಾಹಿ ರಾಘವ! ॥ ೧೮ ॥ ಆಸೀನ ಸ್ತ್ವೇವ ಭರತಃ ಪೌರ ಜಾನಪದಂ ಜನಂ ॥ ಉವಾಚ ಸರ್ವತಃ ಪ್ರೇಕ್ಷ್ಯ ಕಿಮಾರ್ಯಂ ನಾನುಶಾಸಥ ॥ ೧೯ ॥ ತೇ ತಮೂಚು ರ್ಮಹಾತ್ಮಾನಂ ಪೌರಜಾನಪದಾ ಜನಾಃ ॥ ಕಾಕುತ್ಸ್ಥ ಮಭಿ ಜಾನೀಮ ಸ್ಸಮ್ಯಗ್ವದತಿ ರಾಘವಃ ॥ ೨೦ ॥ ಏಷೋಽಪಿ ಹಿ ಮಹಾಭಾಗಃ

ನನ್ನನ್ನು, ಪ್ರತ್ಯುಪವೇಕ್ಷ್ಯಸಿ - ತಡೆಯುತ್ತೀಯೆ, ಬ್ರಾಹ್ಮಣಃ - ಹಣಕಳೆದುಕೊಂಡ ಬ್ರಾಹ್ಮಣನು, ನರಾನ್ - ಮನುಷ್ಯರನ್ನು, ಏಕಪಾರ್ಶ್ವೇನ - ಒಂದು ಪಕ್ಕದಲ್ಲಿ ಮಲಗುವಿಕೆಯಿಂದ, ರೋದ್ಧುಂ - ತಡೆಮಾಡುವದಕ್ಕೆ, ಅರ್ಹತಿ - ಯೋಗ್ಯನು, ಮೂರ್ಧಾಭಿಷಿಕ್ತಾನಾಂತು - ರಾಜರಿಗಾದರೆ, ಪ್ರತ್ಯುಪವೇಶನೇ - ಅಡ್ಡಹಾಕುವದರಲ್ಲಿ, ವಿಧಿಃ - ವಿಧಿಯು, ನ - ಇಲ್ಲ. ॥ ೧೭ ॥ ಹೇ ನರಶಾರ್ದೂಲ - ಎಲೈ ಮನುಷ್ಯಶ್ರೇಷ್ಠನೇ, ಏತತ್ - ಈ, ದಾರುಣಂ - ಕ್ರೂರವಾದ, ನಿಯಮಂ - ವ್ರತವನ್ನು, ಹಿತ್ವಾ - ಬಿಟ್ಟು, ಉತ್ತಿಷ್ಠ - ಏಳು, ಹೇ ರಾಘವ - ಎಲೈ ಭರತನೇ, ಪುರವರ್ಯಾಂ - ನಗರೋತ್ತಮವಾದ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ಕ್ಷಿಪ್ರಂ - ಜಾಗ್ರತೆಯಾಗಿ, ಯಾಹಿ - ಹೊರಡು. ॥ ೧೮ ॥ ಭರತಸ್ತು - ಭರತನಾದರೆ, ಆಸೀನಏವ - ಕುಳಿತುಕೊಂಡೇ, ಸರ್ವತಃ - ಎಲ್ಲ ಕಡೆಯಲ್ಲಿಯೂ, ಪ್ರೇಕ್ಷ್ಯ - ನೋಡಿ, ಆರ್ಯಂ - ಪೂಜ್ಯನನ್ನು, ಕಿನ್ನಾನುಶಾಸಥ - ಶ್ರೀರಾಮನನ್ನು ಕುರಿತು ಏಕೆ ಹೇಳಲಾರಿರಿ, ಇತಿ - ಇಂತೆಂದು, ಪೌರಜಾನಪದಂ - ಪುರವಾಸಿಗಳನ್ನು ದೇಶವಾಸಿಗಳನ್ನೂ ಕುರಿತು, ಉವಾಚ - ಹೇಳಿದನು. ॥ ೧೯ ॥ ಪೌರಜಾನಪದಾಃ - ಪಟ್ಟಣಸ್ಥರೂ ದೇಶವಾಸಿಗಳೂ ಆದ, ತೇ - ಆವರು, ಮಹಾತ್ಮಾನಂ - ಮಹಾ ಮನಸ್ವಿಯಾದ, ತಂ - ಆ ಭರತನನ್ನು ಕುರಿತು, ಊಚುಃ - ಹೀಗೆ ಹೇಳಿದರು, ಕಾಕುತ್ಸ್ಥಂ - ಶ್ರೀರಾಮನನ್ನು, ಅಭಿಜಾನೀಮಃ - ಚನ್ನಾಗಿ ತಿಳಿದಿದ್ದೇವೆ, ರಾಘವಃ - ಶ್ರೀರಾಮನು, ಸಮ್ಯಕ್-ಚನ್ನಾಗಿ, ವದತಿ-ಹೇಳುತ್ತಾನೆ, ಅಪಿಚ-

---

ಒಂದು ಮಗ್ಗುಲಲ್ಲಿ ಮಲಗಿ ನಿರ್ಬಂಧಗೊಳಿಸಲು ತಕ್ಕವನೇ ಹೊರ್ತು ಬಾಹುಬಲ ಪರಾಕ್ರಮಶಾಲಿಗಳಾದ ಕ್ಷತ್ರಿಯ ವೀರನಾವನೇ ಆಗಲಿ ಅಡ್ಡವಾಗಿ ಶಯನಿಸಿ ಮುಷ್ಕರ ಹಿಡಿಯಬೇಕೆಂದು ಎಲ್ಲಿಯೂ ವಿಧಿಸಿರುವುದಿಲ್ಲ. ॥ ೧೫-೧೭ ॥ ಅಯ್ಯಾ, ಪುರುಷಶ್ರೇಷ್ಠನೇ! ಈ ದಾರುಣವಾದ ಈ ನಿಯಮವನ್ನುಳಿದು ಮೇಲಕ್ಕೇಳು, ಓ, ರಘುವಂಶೋತ್ಪನ್ನನೇ! ಪಟ್ಟಣಗಳಲ್ಲಿ ಶ್ರೇಷ್ಠವಾದ ಅಯೋಧ್ಯೆಗೆ ಇಲ್ಲಿಂದ ಜಾಗ್ರತೆಯಾಗಿ ತೆರಳು" ಎಂದನು. ಆಗ ಭರತಕುಮಾರನು ಹಾಗೆಯೇ ಕುಳಿತು ಸುತ್ತುಮುತ್ತಲೂ ನೋಡಿ ಪೂಜ್ಯರಾದವರೆಲ್ಲರನ್ನೂ ಕುರಿತು, "ಅಯ್ಯಾ, ಪೂಜ್ಯರೇ! ಅಗ್ರಜನಾದ ಶ್ರೀರಾಮಮೂರ್ತಿಗೆ ಸಮಾಧಾನವನ್ನು ಹೇಳದೆ ಏಕೆ ಸುಮ್ಮನಿದ್ದೀರಿ. ರಾಜ್ಯಾಭಿಷೇಕಕ್ಕೆ ಒಪ್ಪಿಕೊಳ್ಳುವಂತೆ ನೀವೆಲ್ಲರೂ ಹೇಳಬಾರದೇಕೆ?" ಎಂದು ಸಾರಿದನು. ಆಗ ಪುರನಿವಾಸಿಗಳೂ, ದೇಶದವರೂ, ಮಹಾ ಮನಸ್ವಿಯಾದ ಆ ಭರತಕುಮಾರನನ್ನು ಕುರಿತು, "ಅಯ್ಯಾ, ಕಕುತ್ಸ್ಥ ವಂಶೋ

ಪಿತುರ್ವಚಸಿ ತಿಷ್ಠತಿ ॥ ಅತಏವ ನಶಕ್ತಾಸ್ಮೋ ವ್ಯಾವರ್ತಯಿತು ಮಂಜಸಾ ॥ ೨೧ ॥ ತೇಷಾಮಾಜ್ಞಾಯ ವಚನಂ ರಾಮೋ ವಚನ ಮಬ್ರವೀತ್ ॥ ಏವಂ ನಿಬೋಧ ವಚನಂ ಸುಹೃದಾಂ ಧರ್ಮಚಕ್ಷುಷಾಂ ॥ ೨೨ ॥ ಏತಚ್ಚೈವೋಭಯಂ ಶ್ರುತ್ವಾ ಸಮ್ಯಕ್ಸಂಪಶ್ಯ ರಾಘವ! ॥ ಉತ್ತಿಷ್ಠ ತ್ವಂ ಮಹಾಬಾಹೋ ಮಾಂಚ ಸ್ಪೃಶ ತಥೋದಕಂ ॥ ೨೩ ॥ ಅಥೋತ್ಥಾಯ ಜಲಂ ಸ್ಪೃಷ್ಟ್ವಾ ಭರತೋ ವಾಕ್ಯ ಮಬ್ರವೀತ್ ॥ ಶ್ರುಣ್ವಂತು ಮೇ ಪರಿಷದೋ ಮಂತ್ರಿಣ

ಇಷ್ಟೇ ಅಲ್ಲ, ಹಿ - ಯಾವ ಕಾರಣ, ಮಹಾಭಾಗಃ - ಮಹಾ ಪುಣ್ಯವಂತನಾದ, ಏಷಃ - ಈತನೂ ಕೂಡ, ಪಿತುಃ - ತಂದೆಯ, ವಚಸಿ - ಮಾತಿನಲ್ಲಿ, ತಿಷ್ಠತಿ - ಇರುವನೋ, ಅತಏವ - ಆದಕಾರಣ ದಿಂದಲೇ, ಅಂಜಸಾ - ಜಾಗ್ರತೆಯಾಗಿ, ವ್ಯಾವರ್ತಯಿತುಂ - ಹಿಂತಿರುಗಿಸುವದಕ್ಕೆ, ನಶಕ್ತಾಸ್ಮಃ - ಶಕ್ತಿಯಿಲ್ಲದವರಾಗಿದ್ದೇವೆ. ॥೨೦-೨೧॥ ಧರ್ಮಚಕ್ಷುಷಾಂ-ಧರ್ಮದೃಷ್ಟಿಯುಳ್ಳ, ತೇಷಾಂಸುಹೃದಾಂ-ಆ ಸ್ನೇಹಿತರ, ವಚನಂ - ಮಾತನ್ನು, ಆಜ್ಞಾಯ - ತಿಳಿದು, ರಾಮಃ - ಶ್ರೀರಾಮನು, ಏವಂ - ಈಪ್ರಕಾರವಾಗಿ, ವಚನಂ - ಮಾತನ್ನು, ನಿಬೋಧ - ಹೇಳಿರಿ, ಇತಿ - ಇಂತೆಂದು, ವಚನಂ - ಮಾತನ್ನು, ಅಬ್ರವೀತ್ - ನುಡಿದನು. ॥ ೨೨ ॥ ಹೇ ಮಹಾಬಾಹೋ - ಎಲೈ ಮಹಾಭುಜ ಪರಾಕ್ರಮಿಯೇ, ಹೇ ರಾಘವ - ಎಲೈ ಭರತನೇ, ಏತತ್ - ಈ, ಉಭಯಂಚೈವ - ಪುರಜನರ ಮಾತನ್ನೂ ನನ್ನ ಮಾತನ್ನೂ ಕೂಡ, ಶ್ರುತ್ವಾ - ಕೇಳಿ, ಸಮ್ಯಕ್ - ಚನ್ನಾಗಿ, ಸಂಪಶ್ಯ - ನೋಡು, ತ್ವಂ - ನೀನು, ಉತ್ತಿಷ್ಠ - ಏಳು, ಮಾಂಚ - ನನ್ನನ್ನೂ, ತಥಾ - ಹಾಗೆಯೇ, ಉದಕಂ - ಜಲವನ್ನೂ, ಸ್ಪೃಶ - ಸ್ಪರ್ಶಿಸು. ॥ ೨೩ ॥ ಅಥ - ಬಳಿಕ, ಭರತಃ - ಭರತನು, ಉತ್ಥಾಯ - ಎದ್ದು, ಜಲಂಸ್ಪೃಷ್ಟ್ವಾ - ಉದಕವನ್ನು ಸ್ಪರ್ಶಿಸಿ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು, ಮೇ - ನನ್ನ ಸಂಬಂಧಿಗಳಾದ, ಪರಿಷದಃ - ಸಭಿಕರು, ಮಂತ್ರಿಣಃ - ಮಂತ್ರಿಗಳು, ತಥಾ - ಹಾಗೆಯೆ,

---

ತ್ಪನ್ನನಾದ ಶ್ರೀರಾಮನ ಗುಣಗಳನ್ನು ಚನ್ನಾಗಿ ಬಲ್ಲೆವು. ಈತನು ತನ್ನ ತಂದೆಯಾದ ದಶರಥರಾಯನ ಆಜ್ಞಾವಚನದ ಆಧಾರದಿಂದಲೇ ಮಾತನಾಡುತ್ತಿದ್ದಾನೆ. ಆದುದರಿಂದಲೇ ನಾವೀತನನ್ನು ಜಾಗ್ರತೆಯಾಗಿ ಹಿಂತಿರುಗಿಸಲು ಅಸಮರ್ಥರಿದ್ದೇವೆ" ಎಂದು ನುಡಿದರು. ॥ ೧೮-೨೧ ॥ ಹೀಗೆ ನುಡಿದ, ಧರ್ಮದಲ್ಲಿಯೇ ದೃಷ್ಟಿಯುಳ್ಳ ಆ ಮಿತ್ರವರ್ಗದ ನುಡಿಗಳನ್ನು ಕೇಳಿ ಶ್ರೀರಾಮನು, ಭರತ! ನೀನು ರಘುವಂಶೋತ್ಪನ್ನನು, ಮಹಾ ಪರಾಕ್ರಮಿಯೂ ಅಹುದು. ನಾನು ಹೇಳಿದ ಮಾತುಗಳನ್ನು, ಪಟ್ಟಣಸ್ಥರೂ, ನಮ್ಮ ಮಿತ್ರರೂ ಆದ ಈ ಮಹನೀಯರ ಮಾತುಗಳನ್ನೂ ಕೇಳಿ, ಗುಣಾಗುಣಗಳನ್ನು ಯೋಚಿಸಿಕೊಂಡು ಮೇಲಕ್ಕೇಳು. ಆಮೇಲೆ ಕ್ಷತ್ರಿಯರಿಗನುಚಿತವಾದ ಪ್ರತ್ಯುಪವೇಶನವನ್ನು ಮಾಡಿದೆಯಾದುದರಿಂದ ಪ್ರಾಯಶ್ಚಿತ್ತಾರ್ಥವಾಗಿ ನನ್ನನ್ನು ಸ್ಪರ್ಶಿಸಿ, ಉದಕವನ್ನು ತೆಗೆದುಕೊಂಡು ಆಚಮನವನ್ನು ಮಾಡು. "ಶ್ರೀರಾಮನಿಂತೆಂದೊಡನೆಯೇ ಭರತಕುಮಾರನು ಮೇಲಕ್ಕೆದ್ದು ಜಲ ಪ್ರಾಶನವನ್ನು ಮಾಡಿ ಈ ಮಾತನ್ನಾಡಿದನು." ಓ, ಮಂತ್ರಿಗಳಿರಾ! ಸಭಿಕರಿರಾ! ಅಯ್ಯಾ ವರ್ತಕರೇ! ನೀವೆಲ್ಲರೂ ಸಾವಧಾನದಿಂದ ಕೇಳಿರಿ. ಭರತನಾದ ನಾನು ನನಗೆ

ಶ್ರೇಣಯ ಸ್ತಥಾ ॥ ೨೪ ॥ ನ ಯಾಚೇ ಪಿತರಂ ರಾಜ್ಯಂ ನಾನುಶಾಸಾಮಿ
ಮಾತರಂ ॥ ಆರ್ಯಂ ಪರಮ ಧರ್ಮಜ್ಞಂ ನಾನುಜಾನಾಮಿ ರಾಘವಂ ॥೨೫॥
ಯದಿತ್ವವಶ್ಯಂ ವಸ್ತವ್ಯಂ ಕರ್ತವ್ಯಂಚ ಪಿತುರ್ವಚಃ ॥ ಅಹಮೇವ ನಿವತ್ಸ್ಯಾಮಿ
ಚತುರ್ದಶ ಸಮಾ ವನೇ ॥ ೨೬ ॥ ಧರ್ಮಾತ್ಮಾ ತಸ್ಯ ತಥ್ಯೇನ ಭ್ರಾತು
ರ್ವಾಕ್ಯೇನ ವಿಸ್ಮಿತಃ ॥ ಉವಾಚ ರಾಮ ಸ್ಸಂಪ್ರೇಕ್ಷ್ಯ ಪೌರಜಾನಪದಂ ಜನಂ
॥ ೨೭ ॥ ವಿಕ್ರೀತ ಮಾಹಿತಂ ಕ್ರೀತಂ ಯತ್ಪಿತ್ರಾ ಜೀವತಾ ಮಮ ॥ ನತ

ಶ್ರೇಣಯಃ - ಪರಿವಾರವೂ, ಶೃಣ್ವಂತು - ಕೇಳಲಿ, ರಾಜ್ಯಂ - ರಾಜ್ಯವನ್ನುದ್ದೇಶಿಸಿ, ಪಿತರಂ - ತಂದೆಯನ್ನು, ನಯಾಚೇ - ಕೇಳಿದವನಲ್ಲ, ಮಾತರಂ - ತಾಯಿಯನ್ನು, ನಾನುಶಾಸಾಮಿ - ಹೀಗೆ ಮಾಡೆಂದು ಉಪದೇಶಿಸಿದವನಲ್ಲ, ಪರಮಧರ್ಮಜ್ಞಂ - ಮಹಾ ಧರ್ಮವನ್ನು ತಿಳಿದಿರುವ, ರಾಘವಂ- ರಘುವಂಶೋತ್ಪನ್ನನಾದ, ಆರ್ಯಂ - ಅಣ್ಣನಾದ ಶ್ರೀರಾಮನನ್ನು, ನಾನುಜಾನಾಮಿ - ವನವಾಸಿಯಾಗುವನೆಂದು ತಿಳಿದವನಲ್ಲ, ಕಿಂತು - ಆದರೆ, ಅವಶ್ಯಂ - ಅಗತ್ಯವಾಗಿ, ವಸ್ತವ್ಯಂ - ಇರತಕ್ಕದು, ಪಿತುಃ - ತಂದೆಯ, ವಚೋಪಿ - ವಾಕ್ಯೂ, ಕರ್ತವ್ಯಂ - ಮಾಡತಕ್ಕುದೆಂದು, (ಯದಿಮನ್ಯಸೇ - ನಮ್ಮಣ್ಣನು ತಿಳಿದಿದ್ದರೆ,) ಅಹಮೇವ - ನಾನೇ ಆತನಿಗೆ ಪ್ರತಿಯಾಗಿ, ಚತುರ್ದಶಸಮಾಃ - ಹದಿನಾಲ್ಕು ಸಂವತ್ಸರಗಳು, ವನೇ - ಅರಣ್ಯದಲ್ಲಿ, ವತ್ಸ್ಯಾಮಿ - ಇರುವೆನು. ॥ ೨೪-೨೬ ॥ ಧರ್ಮಾತ್ಮಾ- ಧರ್ಮಿಷ್ಠನಾದ, ರಾಮಃ - ಶ್ರೀರಾಮನು, ತಸ್ಯಭ್ರಾತುಃ - ಆ ತಮ್ಮನ, ತಥ್ಯೇನ - ಯಥಾರ್ಥವಾದ, ವಾಕ್ಯೇನ - ಮಾತಿನಿಂದ, ವಿಸ್ಮಿತಃ - ಆಶ್ಚರ್ಯಗೊಂಡು, ಪೌರಜಾನಪದಂ - ಪುರವಾಸಿಗಳೂ ದೇಶವಾಸಿಗಳೂ ಆದ, ಜನಂ - ಜನರನ್ನು, ಪ್ರೇಕ್ಷ್ಯ - ಕಂಡು, ಉವಾಚ - ಹೇಗೆ ಹೇಳಿದನು. ॥ ೨೭ ॥ ಜೀವತಾ - ಬದುಕಿರುವ, ಮಮಪಿತ್ರಾ - ನನ್ನ ತಂದೆಯಿಂದ, ವಿಕ್ರೀತಂ - ವಿಕ್ರಯಿಸಲ್ಪಟ್ಟ, ಆಹಿತಂ - ಆಧಾರಮಾಡಲ್ಪಟ್ಟ, ಕ್ರೀತಂ - ಕ್ರಯಕ್ಕೆ ತೆಗದುಕೊಳ್ಳಲ್ಪಟ್ಟುದು, ಯತ್-ಯಾವದೋ,

---

"ರಾಜ್ಯವನ್ನು ಕೊಡಿಸು" ಎಂದು ತಂದೆಯಾದ ದಶರಥಮಹಾರಾಜನನ್ನು ಕೇಳಲಿಲ್ಲ, "ನನ್ನ ತಾಯಿಯಾದ ಕೈಕೇಯಿಗೂ ದಶರಥನನ್ನು ಯಾಚಿಸಿ ರಾಜ್ಯವನ್ನು ಪಡೆ"ಯೆಂದು ಹೇಳಿಕೊಟ್ಟವನು ನಾನಲ್ಲ. ನಾನು ವಿಶೇಷ, ಸಾಮಾನ್ಯ ಧರ್ಮಗಳನ್ನು ಬಲ್ಲವನೂ, ರಘುವಂಶೋತ್ಪನ್ನನೂ, ಅಗ್ರಜನೂ, ಅತಏವಪೂಜ್ಯನೂ, ಆದ ಶ್ರೀರಾಮಮೂರ್ತಿಗೆ ಅರಣ್ಯವಾಸವುಂಟಾಗಲೆಂದು ಎಣಿಸಿದವನು ಮೊದಲೇ ಅಲ್ಲ. ಹಾಗೊಂದುವೇಳೆ ಶ್ರೀರಾಮಮೂರ್ತಿಯು ಜನಕನಾಣತಿಯಂತೆ ಈ ವನದಲ್ಲಿಯೇ ವಾಸ ಮಾಡಬೇಕೆಂತಲೂ, ಆತನ ಆಜ್ಞಾವಚನವನ್ನು ಪೂರ್ಣಗೊಳಿಸಬೇಕೆಂತಲೂ ಮನ ಮಾಡಿದವನಾದರೆ ನಾನೂ ಆತನಿಗೆ ಬದಲಾಗಿ ಹದಿನಾಲ್ಕುವರ್ಷಗಳಕಾಲ ಅರಣ್ಯದಲ್ಲಿ ವಾಸಮಾಡುತ್ತೇನೆ. ಮಹಾತ್ಮನಾದ ಈತನು ಅಯೋಧ್ಯೆಯಲ್ಲಿ ರಾಜ್ಯವಾಳುತ್ತಿರಲಿ" ಎಂದು ನುಡಿದನು. ॥ ೨೨-೨೬ ॥ ಧರ್ಮದಲ್ಲಿಯೇ ದೃಷ್ಟಿಯುಳ್ಳವನಾದ ಶ್ರೀರಾಮನು ತಮ್ಮನಾದ ಭರತನ ಮನೋನಿಶ್ಚಯದಿಂದೊಡಗೂಡಿದ ವಾಕ್ಯವನ್ನು ಕೇಳಿ ಅಚ್ಚರಿಗೊಂಡು ಪಟ್ಟಣಿಗರನ್ನೂ, ದೇಶದಿಂದ ಬಂದವರನ್ನೂ ನೋಡಿ "ಎಲೈ, ಜನಗಳಿರಾ! ನನ್ನ ತಂದೆಯಾದ ದಶರಥಭೂಪಾಲನು ಜೀವಂತ

ಲ್ಲೋಪಯಿತುಂ ಶಕ್ಯಂ ಮಯಾವಾ ಭರತೇನವಾ ॥ ೨೮ ॥ ಉಪಧಿ
ರ್ನಮಯಾ ಕಾರ್ಯೋ ವನವಾಸೇ ಜುಗುಪ್ಸಿತಃ ॥ ಯುಕ್ತಮುಕ್ತಂ ಚ
ಕೈಕೇಯ್ಯಾ ಪಿತ್ರಾ ಮೇ ಸುಕೃತಂ ಕೃತಂ ॥ ೨೯ ॥ ಜಾನಾಮಿ ಭರತಂ
ಕ್ಷಾಂತಂ ಗುರು ಸತ್ಕಾರಕಾರಿಣಂ ॥ ಸರ್ವಮೇವಾತ್ರ ಕಲ್ಯಾಣಂ ಸತ್ಯಸಂಧೇ

ತತ್ - ಅದು, ಮಯಾವಾ - ನನ್ನಿಂದಾಗಲಿ, ಭರತೇನವಾ-ಭರತನಿಂದಲೇ ಆಗಲಿ, ಲೋಪಯಿತುಂ- ಇಲ್ಲವೆನ್ನಲು, ನಶಕ್ಯಂ - ಆಗಲಾರದು. ॥ ೨೮ ॥ ಮಯಾ - ಶಕ್ತಿಯುಳ್ಳ ನನ್ನಿಂದ, ಜುಗುಪ್ಸಿತಃ - ಹೀನಕಲ್ಪವಾದುದರಿಂದ ನಿಂದಿತವಾದ, ಉಪಧಿಃ - ಪ್ರತಿನಿಧಿಯು, ವನವಾಸೇ - ವನವಾಸ ವಿಷಯದಲ್ಲಿ, ನಕಾರ್ಯಃ - ಮಾಡತಕ್ಕುದಲ್ಲ, ಕೈಕೇಯ್ಯಾ - ಕೈಕೆಯಿದೇವಿಯಿಂದ, ಯುಕ್ತಂ - ಯೋಗ್ಯವಾಗಿಯೇ, ಉಕ್ತಂ - ಹೇಳಲ್ಪಟ್ಟಿತು, ಮೇ - ನನ್ನ, ಪಿತ್ರಾಚ - ತಂದೆಯಿಂದಲೂ, ಸುಕೃತಂ - ಧರ್ಮವಾಗಿಯೇ, ಕೃತಂ - ಮಾಡಲ್ಪಟ್ಟಿತು. ॥ ೨೯ ॥ ಗುರುಸತ್ಕಾರಕಾರಿಣಂ - ಅಣ್ಣನಿಗೆ ಸೇವೆಯನ್ನುಮಾಡುವ, ಕ್ಷಾಂತಂ-ಸೈರಣೆಯುಳ್ಳವನನ್ನಾಗಿ, ಭರತಂ-ಭರತನನ್ನು, ಜಾನಾಮಿ-ತಿಳಿದಿದ್ದೇನೆ, ಮಹಾತ್ಮನಿ - ಮಹಾ ಮನಸ್ವಿಯಾದ, ಸತ್ಯಸಂಧೇ - ಯಥಾರ್ಥವಾದ ಪ್ರತಿಜ್ಞೆಯುಳ್ಳ, ಅತ್ರ - ಈ ಭರತನ ವಿಷಯವಾಗಿ, ಸರ್ವಂ - ಸಮಸ್ತವೂ, ಕಲ್ಯಾಣಂ - ಮಂಗಳವು, ಭವಿಷ್ಯತಿ - ಆಗುವದು. ॥ ೩೦ ॥ ವನಾತ್ - ವನದಿಂದ, ಪುನಃ - ಮತ್ತು, ಪ್ರತ್ಯಾಗತಃ - ಹಿಂತಿರುಗಿದವನಾಗಿ, ಧರ್ಮಶೀಲೇನ - ಧರ್ಮಸ್ವಭಾವಿಯಾದ, ಅನೇನಭ್ರಾತ್ರಾಸಹ - ಈ ತಮ್ಮನೊಡನೆ, ಪೃಥಿವ್ಯಾಃ - ಭೂಮಿಗೆ, ಉತ್ತಮಃಪತಿಃ - ಉತ್ಕೃಷ್ಟನಾಯಕನು, ಭವಿಷ್ಯಾಮಿ - ಆಗುತ್ತೇನೆ. ॥ ೩೧ ॥ ಕೈಕೇಯ್ಯಾ -

ನಾಗಿರುವಾಗಲೇ ಆತನಿಂದ ವಿಕ್ರಯಿಸಲ್ಪಟ್ಟುದೂ, ಆಧಾರ ಮಾಡಲ್ಪಟ್ಟುದೂ ಆದ ಏನೇನಿರುವುದೋ ಅದು ನನ್ನಿಂದಾಗಲಿ, ಭರತನಿಂದಾಗಲಿ, ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲವಷ್ಟೆ. 'ನಿನ್ನ ಬದಲು ನಾನು ವನವಾಸ ಮಾಡುತ್ತೇನೆಂದು ಭರತನ' ಹೇಳಿಕೆ. ಆದರೆ ನಾನು ವನವಾಸಕ್ಕೆ ಅಸಮರ್ಥನಲ್ಲದಿರುವಾಗ ಈತನು ಹೀಗೆ ಹೇಳುವುದು ಯುಕ್ತವಲ್ಲ. ಕೈಕೇಯಿಯ ನಡತೆಯನ್ನು ಈ ನನ್ನ ತಮ್ಮನು ನಿರಾಕರಿಸುತ್ತಾನೆ. ಇದು ತಪ್ಪು. ಆಕೆಯು ಯುಕ್ತವಾಗಿ ಹೇಳಿದಳೇ ಹೊರ್ತು ಅಯೋಗ್ಯವಾದುದಾವುದನ್ನೂ ಹೇಳಿಲ್ಲ. ಆ ದೇವಿಯು ಪತಿಯಾದ ದಶರಥನನ್ನು ಧರ್ಮವಾದುದನ್ನೇ ಕೇಳಿದ್ದಾಳೆ. ಆತನೂ ಧರ್ಮವಾದುದನ್ನೇ ಮಾಡಿದ್ದಾನೆ. ಮಾತ್ರವಲ್ಲದೆ ನನ್ನ ತಮ್ಮನಾದ ಈ ಭರತನು ತನಗಿಂತಲೂ ಹಿರಿಯನೂ, ಗುರುಸ್ವರೂಪನೂ ಆದ ನನ್ನ ಸೇವೆಯನ್ನೇ ಮಾಡುವವನೆಂತಲೂ, ಮಹಾ ತಾಳ್ಮೆಯುಳ್ಳವನೆಂತಲೂ ನನಗೆ ತೋರುತ್ತದೆ. ಮಹಾ ಬುದ್ಧಿಶಾಲಿಯೂ, ಸತ್ಯಪ್ರತಿಜ್ಞಾವಂತನೂ ಆದ ಈ ಭರತನ ವಿಷಯದಲ್ಲಿ ಎಲ್ಲವೂ ಮಂಗಳವಾಗಿಯೇ ಪರಿಣಮಿಸುತ್ತದೆ. ॥ ೨೭-೩೦ ॥ ನಾನು ಈ ಹದಿನಾಲ್ಕು ಸಂವತ್ಸರಗಳ ಈ ಅರಣ್ಯವಾಸವನ್ನು ಮುಗಿಸಿ, ಪುನಃ ಪುರಪ್ರವೇಶಮಂಗೈದು ಧರ್ಮಿಷ್ಠನಾದ ಈ ತಮ್ಮನೊಡನೆ ರಾಜ್ಯವಾಳುತ್ತೇನೆ" ಎಂದು ಹೇಳಿ ಭರತನನ್ನು ಕುರಿತು, "ಭರತ ! ಕೇಕಯರಾಜ ಕುವರಿಯಾದ ಕೈಕೇಯಿದೇವಿಯು ದಶರಥಮಹಾರಾಯನನ್ನು ಕುರಿತು ನಾನು ಹೀಗೆಯೇ ಇರಬೇಕೆಂದು ಪ್ರಾರ್ಥಿಸಿದ್ದಾಳೆ. ಆತನು ಅಂತೆಯೇ

ಮಹಾತ್ಮನಿ ‖ ೩೦ ‖ ಅನೇನ ಧರ್ಮಶೀಲೇನ ವನಾತ್ಪ್ರತ್ಯಾಗತಃ ಪುನಃ ‖
ಭ್ರಾತ್ರಾಸಹ ಭವಿಷ್ಯಾಮಿ ಪೃಥಿವ್ಯಾಃ ಪತಿರುತ್ತಮಃ ‖ ೩೧ ‖

ವೃತೋ ರಾಜಾಹಿ ಕೈಕೇಯ್ಯಾ ಮಯಾ ತದ್ವಚನಂ ಕೃತಂ ‖
ಅನೃತಾ ನ್ಮೋಚಯಾನೇನ ಪಿತರಂ ತಂ ಮಹೀಪತಿಂ ‖ ೩೨ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಾದಶೋತ್ತರಶತತಮಸ್ಸರ್ಗಃ.

ಕೈಕೆಯೀದೇವಿಯಿಂದ, ರಾಜಾ - ಅರಸು, ವೃತೋಹಿ - ಪ್ರಾರ್ಥಿಸಲ್ಪಟ್ಟನಷ್ಟೆ, ಮಯಾ-ನನ್ನಿಂದ, ತದ್ವಚನಂ - ಆ ಮಾತು, ಕೃತಂ - ಮಾಡಲ್ಪಟ್ಟಿತು, ಅನೇನ - ಈ ಮಾತಿನಿಂದ, ಪಿತರಂ - ತಂದೆಯಾದ, ತಂಮಹೀಪತಿಂ - ಆ ದಶರಥರಾಯನನ್ನು, ಅನೃತಾತ್ - ಸುಳ್ಳಿನಿಂದ, ಮೋಚಯ - ಬಿಡಿಸು. ‖ ೩೨ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಏಕಾದಶೋತ್ತರಶತತಮಸ್ಸರ್ಗಃ

ಸಮ್ಮತಿಸಿದ್ದಾನೆ. ನಾನು ಆತನ ಆಜ್ಞೆಯನ್ನು ನೆರವೇರಿಸಿದ್ದೇನೆ. ನೀನೂ ಸಹ ತಂದೆಯಾದ ಆ ರಾಯನಿಗೆ ಅಸತ್ಯ ವಚನದಿಂದುಂಟಾದ ದೋಷವು ಬಾರದಂತೆ ನಡೆವವನಾಗು" ಎಂದು ನುಡಿದನು. ‖ ೩೧-೩೨ ‖

ಇಂತಿದು ವಸಿಷ್ಠೋಕ್ತಿ ನಿರೂಪಣ ಶ್ರೀರಾಮ ಭರತ ಸಂವಾದ ಕಥಾಕಥನವೆಂಬ ನೂರಹನ್ನೊಂದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ದ್ವಾದಶೋತ್ತರಶತತಮಸ್ಸರ್ಗಃ.

ತಮಪ್ರತಿಮ ತೇಜೋಭ್ಯಾಂ ಭ್ರಾತೃಭ್ಯಾಂ ರೋಮಹರ್ಷಣಂ ॥ ವಿಸ್ಮಿತಾ ಸ್ಸಂಗಮಂ ಪ್ರೇಕ್ಷ್ಯ ಸಮವೇತಾ ಮಹರ್ಷಯಃ ॥ ೧ ॥ ಅಂತರ್ಹಿತಾ ಸ್ತ್ವೃಷಿಗಣಾ ಸ್ಸಿದ್ಧಾಶ್ಚ ಪರಮರ್ಷಯಃ ॥ ತೌ ಭ್ರಾತರೌ ಮಹಾತ್ಮಾನೌ ಕಾಕುತ್ಸ್ಥೌ ಪ್ರಶಶಂಸಿರೇ ॥೨॥ ಸ ಧನ್ಯೋ ಯಸ್ಯ ಪುತ್ರೌ ದ್ವೌ ಧರ್ಮಜ್ಞೌ ಧರ್ಮ ವಿಕ್ರಮೌ ॥ ಶ್ರುತ್ವಾ ವಯಂಹಿ ಸಂಭಾಷಾ ಮುಭಯೋಃ ಸ್ಸ್ಪೃಹಯಾಮಹೇ ॥ ೩ ॥ ತತಸ್ತ್ವೃಷಿಗಣಾಃ ಕ್ಷಿಪ್ರಂ ದಶಗ್ರೀವ ವಧೈಷಿಣಃ ॥ ಭರತಂ

ಮಹರ್ಷಯಃ - ಮಹಾ ಮುನಿಗಳು, ಅಪ್ರತಿಮತೇಜೋಭ್ಯಾಂ - ಅಸದೃಶವಾದ ತೇಜಸ್ಸುಳ್ಳ, ಭ್ರಾತೃಭ್ಯಾಂ - ಅಣ್ಣತಮ್ಮಂದರಿಂದ ಮಾಡಲ್ಪಟ್ಟ, ರೋಮಹರ್ಷಣಂ - ರೋಮಾಂಚಕರವಾದ, ತಂಸಂಗಮಂ - ಆ ಸೇರುವಿಕೆಯನ್ನು, ಪ್ರೇಕ್ಷ್ಯ - ಕಂಡು, ವಿಸ್ಮಿತಾಃ - ಆಶ್ಚರ್ಯಯುಕ್ತರಾಗಿ, ಸಮವೇತಾಃ - ಗುಂಪುಸೇರಿದರು. ॥ ೧ ॥ ಅಂತರ್ಹಿತಾಃ - ಅಂತರ್ಧಾನವನ್ನು ಹೊಂದಿದ, ಋಷಿಗಣಾಃ - ಮುನಿಸಮೂಹಗಳು, ಸಿದ್ಧಾಶ್ಚ - ಸಿದ್ಧರೆಂಬ ದೇವಜಾತೀಯರು, ಪರಮರ್ಷಯಃ - ದೇವರ್ಷಿಗಳೂ, ಮಹಾತ್ಮಾನೌ - ಮಹಾ ಮನಸ್ವಿಗಳಾದ, ಕಾಕುತ್ಸ್ಥೌ - ಕಕುತ್ಸ್ಥವಂಶೋತ್ಪನ್ನರಾದ, ತೌಭ್ರಾತರೌ - ಆ ಅಣ್ಣತಮ್ಮಂದಿರನ್ನು, ಪ್ರಶಶಂಸಿರೇ - ಶ್ಲಾಘಿಸಿದರು. ॥ ೨ ॥ ಧರ್ಮವಿಕ್ರಮೌ - ಧರ್ಮಮಾರ್ಗಪ್ರವರ್ತಕರಾದ, ಧರ್ಮಜ್ಞೌ - ಧರ್ಮವನ್ನು ಚೆನ್ನಾಗಿ ತಿಳಿದಿರುವ ಶ್ರೀರಾಮ ಭರತರು, ಯಸ್ಯ - ಯಾವ ಪುರುಷನಿಗೆ, ಪುತ್ರೌ - ಮಕ್ಕಳೋ, ಸಃ - ಆತನು, ಧನ್ಯಃ - ಪುಣ್ಯವಂತನು, ವಯಂಹಿ - ನಾವಾದರೋ, ಉಭಯೋಃ - ಇವರಿಬ್ಬರ, ಸಂಭಾಷಾಂ - ಸಂವಾದವನ್ನು, ಶ್ರುತ್ವಾ - ಕೇಳಿ, ಸ್ಪೃಹಯಾಮಹೇ - ಬಾರಿಬಾರಿಗೂ ಕೇಳಲಿಚ್ಛಿಸುತ್ತೇವೆ. ॥ ೩ ॥ ತತಃ - ಬಳಿಕ, ಋಷಿಗಣಾಸ್ತು - ಆ ಮುನಿ ತಂಡಗಳಾದರೆ, ಕ್ಷಿಪ್ರಂ - ತ್ವರೆಯಾಗಿ, ದಶಗ್ರೀವ

ಆ ಬಳಿಕಲಾ ವನದಲ್ಲಿ ಮಹಾ ಮುನಿಗಳೆಲ್ಲರೂ ಮಹಾ ತೇಜಸ್ವಿಗಳೂ, ಒಡಹುಟ್ಟಿದವರೂ ಆದ ಶ್ರೀರಾಮ, ಲಕ್ಷ್ಮಣ, ಭರತ, ಶತ್ರುಘ್ನಾದಿಗಳ ಸೌಹಾರ್ದಪೂರಿತವಾದ ಸಮಾಗಮವನ್ನು ಕಂಡು, ರೋಮಹರ್ಷಕವಾದ ಅವರ ನುಡಿಗಳನ್ನಾಲಿಸಿ ಗುಂಪು ಸೇರಿದರು. ಹೀಗೆ ಯಾರಿಗೂ ಕಾಣಿಸದಂತೆ ಹಿಂದೆಯೇ ಅಂತರ್ಧಾನವಾಗಿ ಆ ವೇಳೆಯಲ್ಲಿ ಬಂದು ಸೇರಿದ ರಾಜರ್ಷಿ, ಪರಮರ್ಷಿ, ದೇವರ್ಷಿಗಳೂ, ಸಿದ್ಧರೂ, ಮಹಾ ಬುದ್ಧಿಶಾಲಿಗಳಾದ ಆ ಶ್ರೀರಾಮ ಭರತರನ್ನು ಈ ರೀತಿ ಬಹಳವಾಗಿ ಕೊಂಡಾಡಿದರು. "ಧರ್ಮಮಾರ್ಗದಲ್ಲಿಯೇ ಇರುವವರೂ, ಎಲ್ಲ ಧರ್ಮಗಳನ್ನೂ ಬಲ್ಲವರೂ ಆದ ಶ್ರೀರಾಮ, ಭರತರೆಂಬ ಈ ಇಬ್ಬರು ಯಾವಾತನಿಗೆ ಕುವರರಾಗಿರುವರೋ ಆ ದಶರಥಧರಾವಲ್ಲಭನು ಮಹಾ ಧನ್ಯನು, ನಾವಾದರೋ ಈ ಮಹಾತ್ಮರಿಬ್ಬರ ಮಾತುಗಳನ್ನು ಕೇಳಿ ಅವನ್ನೇ

ರಾಜಶಾರ್ದೂಲ ಮಿತ್ಯೂಚು ಸ್ಸಂಗತಾ ವಚಃ ॥ ೪ ॥ ಕುಲೇ ಜಾತ! ಮಹಾ
ಪ್ರಾಜ್ಞ! ಮಹಾವೃತ್ತ! ಮಹಾಯಶಃ! ॥ ಗ್ರಾಹ್ಯಂ ರಾಮಸ್ಯ ವಾಕ್ಯಂ ತಂ
ಪಿತರಂ ಯದ್ಯವೇಕ್ಷಸೇ ॥೫॥ ಸದಾಽನೃಣ ಮಿಮಂ ರಾಮಂ ವಯಮಿಚ್ಛಾಮ
ಹೇಪಿತುಃ ॥ ಅನೃಣತ್ವಾಚ್ಚ ಕೈಕೇಯ್ಯಾ ಸ್ಸ್ವರ್ಗಂ ದಶರಥೋ ಗತಃ ॥ ೬ ॥
ಏತಾವದುಕ್ತ್ವಾ ವಚನಂ ಗಂಧರ್ವಾ ಸ್ಸಮಹರ್ಷಯಃ ॥ ರಾಜರ್ಷಯಶ್ಚೈವ
ತದಾ ಸರ್ವೇ ಸ್ವಾಂ ಸ್ವಾಂ ಗತಿಂ ಗತಾಃ ॥ ೭ ॥ ಹ್ಲಾದಿತ ಸ್ತೇನ ವಾಕ್ಯೇನ
ಶುಭೇನ ಶುಭದರ್ಶನಃ ॥ ರಾಮ ಸ್ಸಂಹೃಷ್ಟವದನ ಸ್ತಾನೃಷೀ ನಭ್ಯಪೂಜ

ವಧೈಷಿಣಃ - ರಾವಣಸಂಹಾರವನ್ನಿಚ್ಛಿಸಿ, ಸಂಗತಾಃ - ಗುಂಪುಸೇರಿದ, ರಾಜಶಾರ್ದೂಲಂ - ರಾಜೋತ್ತಮನಾದ, ಭರತಂ - ಭರತನನ್ನು ಕುರಿತು, ಇತಿ - ಈಪರಿಯಾಗಿ, ಊಚುಃ - ಹೇಳಿದರು. ॥೪॥ ಹೇ ಮಹಾಪ್ರಾಜ್ಞ - ಎಲೈ ಮಹಾ ತಿಳಿವಳಿಕೆಯುಳ್ಳವನೆ, ಹೇ ಕುಲೇಜಾತ - ಎಲೈ ಸತ್ಕುಲಪ್ರಸೂತನೇ, ಹೇ ಮಹಾವೃತ್ತ - ಎಲೈ ಒಳ್ಳೆಯ ನಡತೆಯುಳ್ಳವನೇ, ಹೇ ಮಹಾಯಶಃ - ಎಲೈ ಬಹುಕೀರ್ತಿಶಾಲಿಯೇ, ಪಿತರಂ - ತಂದೆಯನ್ನು, ಅವೇಕ್ಷಸೇಯದಿ - ಸುಖವಾಗಿರುವವನನ್ನಾಗಿ ಕಾಣಬೇಕಾದರೆ, ರಾಮಸ್ಯ - ಶ್ರೀರಾಮನ, ವಾಕ್ಯಂ - ಮಾತು, ತೇ - ನಿನ್ನಿಂದ, ಗ್ರಾಹ್ಯಂ - ಗ್ರಹಿಸತಕ್ಕುದು. ॥ ೫ ॥ ವಯಂ - ನಾವು, ಇಮಂರಾಮಂ - ಈ ಶ್ರೀರಾಮನನ್ನು, ಸದಾ - ನಿರಂತರವು, ಪಿತುಃ - ತಂದೆಯ, ಅನೃಣಂ - ಋಣವಿಮೋಚಕನನ್ನಾಗಿ, ಇಚ್ಛಾಮಹೇ - ಇಚ್ಛಿಸುತ್ತೇವೆ, ಕೈಕೇಯ್ಯಾಃ - ಕೈಕೇಯಿಯ, ಅನೃಣತ್ವಾಚ್ಚ - ಋಣವಿಮೋಚನದಿಂದ, ದಶರಥಃ - ದಶರಥರಾಜನು, ಸ್ವರ್ಗಂ - ಸ್ವರ್ಗವನ್ನು, ಗತಃ - ಹೊಂದಿದನು. ॥ ೬ ॥ ಏತಾವತ್ - ಇಷ್ಟುಮಾತ್ರ, ವಚನಂ - ಮಾತನ್ನು, ಉಕ್ತ್ವಾ - ಹೇಳಿ, ತದಾ - ಆ ವೇಳೆಯಲ್ಲಿ, ಸರ್ವೇ - ಸಮಸ್ತರಾದ, ಗಂಧರ್ವಾಃ - ಗಂಧರ್ವರು, ಸಮಹರ್ಷಯಃ - ಮುನಿಗಳಿಂದೊಡಗೂಡಿ, ರಾಜರ್ಷಯಶ್ಚೈವ - ರಾಜರ್ಷಿಗಳೂ, ಸ್ವಾಂಸ್ವಾಂ - ತಮ್ಮ ತಮ್ಮ ಸಂಬಂಧವಾದ, ಗತಿಂ - ಲೋಕವನ್ನು, ಗತಾಃ - ಹೊಂದಿದರು. ॥ ೭ ॥ ಶುಭದರ್ಶನಃ - ಮಂಗಳಕರವಾದ ದೃಷ್ಟಿಯುಳ್ಳ, ರಾಮಃ - ಶ್ರೀರಾಮನು, ಶುಭೇನ - ಮಂಗಳಕರವಾದ, ತೇನವಾಕ್ಯೇನ - ಆ ಮಾತಿನಿಂದ, ಹ್ಲಾದಿತಃ - ಸಂತೋಷಗೊಂಡವನಾಗಿ, ಸಂಪ್ರಹೃಷ್ಟವದನಃ -

ಪುನಃ ಪುನಃ ಕೇಳಬೇಕೆಂದು ಅಪೇಕ್ಷಿಸುತ್ತಿದ್ದೇವೆ” ಈ ಪ್ರಕಾರವಾಗಿ ನುಡಿದ ಆ ಋಷಿಗಳು ದಶಕಂಠನ ವಧೆಯನ್ನಪೇಕ್ಷಿಸಿ, ಗುಂಪುಗೂಡಿ, ರಾಜೋತ್ತಮನಾದ ಭರತಕುಮಾರನನ್ನು ಕುರಿತು ಏಕಕಂಠದಿಂದ ಹೀಗೆಂದರು. “ಎಲೈ, ತಿಳಿವಳಿಕೆಯುಳ್ಳವನೇ! ಸತ್ಕುಲಪ್ರಸೂತನೇ! ಸದಾಚಾರಸಮನ್ವಿತನೇ! ಮಹಾಕೀರ್ತಿವಂತನೇ! ಭರತಕುಮಾರನೇ! ನಿನಗೆ ತಂದೆಯಾದ ದಶರಥಮಹಾರಾಜನ ಋಣವಿಮೋಚನೆಯಾಗಬೇಕೆಂಬ ಆಶೆಯಿದ್ದರೆ, ನಿನ್ನ ಅಣ್ಣನಾದ ಶ್ರೀರಾಮನ ಮಾತುಗಳನ್ನು ಕೇಳು, ಅದರಂತೆ ನಡೆದುಕೊ. ॥ ೧-೫ ॥ ನಾವೇನೆನ್ನುವೆವೆಂಬೆಯೋ? ಶ್ರೀರಾಮಮೂರ್ತಿಯು ಪಿತೃಋಣವನ್ನು ತೀರಿಸಲೆಂದು ಬಯಸುತ್ತಿದ್ದೇವೆ. ದಶರಥರಾಜನಾದರೋ ಕೈಕೇಯಿಯ ಸಾಲವನ್ನು ತೀರಿಸಿ ದಿವಂಗತನಾದನು.” ಎಂಬೀ ಪ್ರಕಾರವಾಗಿ ನುಡಿದು ಅವರೆಲ್ಲರೂ ತಂತಮ್ಮ ಲೋಕಗಳಿಗೆ ತೆರಳಿದರು. ಆಮೇಲೆ ಮಂಗಳಕರವಾದ ನೋಟವುಳ್ಳ ಶ್ರೀರಾಮನು ಆ ಮಹರ್ಷಿಗಳ ವಾಕ್ಯದಿಂದ ಸಂತಸವಾಂತು, ಆ ಸಂತೋಷಾಧಿಕ್ಯದಿಂದಲೇ ಅರಳಿದ ಮುಖವುಳ್ಳವನಾಗಿ ಅವರೆಲ್ಲ

ಯತ್ ॥ ೮ ॥ ತ್ರಸ್ತಗಾತ್ರಸ್ತು ಭರತ ಸ್ಸವಾಚಾ ಸಜ್ಜಮಾನಯಾ ॥ ಕೃತಾಂ ಜಲಿರಿದಂ ವಾಕ್ಯಂ ರಾಘವಂ ಪುನರಬ್ರವೀತ್ ॥ ೯ ॥ ರಾಜಧರ್ಮ ಮನು ಪ್ರೇಕ್ಷ್ಯ ಕುಲಧರ್ಮಾನುಸಂತತಿಂ ॥ ಕರ್ತು ಮರ್ಹಸಿ ಕಾಕುತ್ಸ್ಥ! ಮಮ ಮಾತುಶ್ಚ ಯಾಚನಾಂ ॥೧೦॥ ರಕ್ಷಿತುಂ ಸುಮಹದ್ರಾಜ್ಯ ಮಹಮೇಕ ಸ್ತು ನೋತ್ಸಹೇ ॥ ಪೌರ ಜಾನಪದಾಂಶ್ಚಾಪಿ ರಕ್ತಾ ರಂಜಯಿತುಂ ತಥಾ ॥೧೧॥ ಜ್ಞಾತಯಶ್ಚಹಿ ಯೋಧಾಶ್ಚ ಮಿತ್ರಾಣಿ ಸುಹೃದಶ್ಚ ನಃ ॥ ತ್ವಾಮೇವ ಪ್ರತಿ ಕಾಂಕ್ಷಂತೇ ಪರ್ಜನ್ಯಮಿವ ಕರ್ಷಕಾಃ ॥ ೧೨ ॥ ಇದಂ ರಾಜ್ಯಂ ಮಹಾ

ಹರ್ಷದಿಂದ ವಿಕಸಿತವಾದ ಮುಖವುಳ್ಳವನಾಗಿ, ತಾನ್ಮುನೀನ್ - ಆ ಮುನಿಗಳನ್ನು, ಅಭ್ಯಪೂಜಯತ್ - ಪೂಜಿಸಿದನು. ॥ ೮ ॥ ತ್ರಸ್ತಗಾತ್ರಃ - ಶಿಥಿಲವಾದ ಶರೀರವುಳ್ಳ, ಸಭರತಸ್ತು-ಆ ಭರತನಾದರೆ, ಸಜ್ಜಮಾನಯಾ - ತೊದಲು ತೊದಲಾದ, ವಾಚಾ - ಮಾತಿನಿಂದ, ಕೃತಾಂಜಲಿಃ - ಕೈಮುಗಿದು, ರಾಘವಂ - ಶ್ರೀರಾಮನನ್ನು ಕುರಿತು, ಪುನಃ - ಮತ್ತು, ಇದಂವಾಕ್ಯಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೯ ॥ ಹೇ ಕಾಕುತ್ಸ್ಥ - ಎಲೈ ಅಣ್ಣನೇ, ರಾಜಧರ್ಮಂ-ಕ್ಷತ್ರಿಯ ಧರ್ಮವನ್ನು, ಅನುಪ್ರೇಕ್ಷ್ಯ - ನೋಡಿ, ಕುಲಧರ್ಮಾನುಸಂತತಿಂ - ಕುಲಕ್ರಮಾಗತವಾದ ಪಾರಂಪರ್ಯವನ್ನು, ಅನುಪ್ರೇಕ್ಷ್ಯ - ಕಂಡು, ಮಮ - ನನ್ನ, ಮಾತುಃ - ತಾಯಿಯ, ಯಾಚನಾಂಚ - ಪ್ರಾರ್ಥನೆಯನ್ನೂ, ಕರ್ತುಂ - ಮಾಡುವದಕ್ಕೆ, ಅರ್ಹಸಿ - ಯೋಗ್ಯನಾಗು ॥ ೧೦ ॥ ಏಕೋಹಂ - ನಾನೊಬ್ಬನೇ, ಸುಮಹತ್ - ದೊಡ್ಡದಾದ, ರಾಜ್ಯಂ - ರಾಜ್ಯವನ್ನು, ರಕ್ಷಿತುಂ - ಸಂರಕ್ಷಿಸುವದಕ್ಕೆ, ನೋತ್ಸಹೇ - ಉದ್ಯುಕ್ತನಾಗಲಾರೆ, ರಕ್ತಾನ್ - ಅನುರಕ್ತರಾದ, ಪೌರಜಾನಪದಾಂಶ್ಚಾಪಿ - ಪುರವಾಸಿಗಳನ್ನು ದೇಶವರ್ತಿಗಳನ್ನು ಕೂಡ, ತಥಾ - ಹಾಗೆ, ರಂಜಯಿತುಂ - ಸಂತೋಷಗೊಳಿಸಲು, ಜ್ಞಾತಯಶ್ಚ - ಜ್ಞಾತಿಗಳೂ, ಯೋಧಾಶ್ಚ - ಕಾಲಾಳುಗಳೂ, ನಃ - ನಮ್ಮ ಮಿತ್ರಾಣಿ - ಸ್ನೇಹಿತರೂ, ಸುಹೃದಶ್ಚ - ಆಪ್ತರೂ, ಕರ್ಷಕಾಃ - ಉಳುವವರು, ಪರ್ಜನ್ಯಮಿವ - ಮಳೆಯನ್ನಂತೆ, ತ್ವಾಮೇವ - ನಿನ್ನನ್ನೇ, ಪ್ರತಿಕಾಂಕ್ಷಂತೇ - ನಿರೀಕ್ಷಿಸುತ್ತಿದ್ದಾರೆ. ॥ ೧೧-೧೨ ॥ ಹೇ ಮಹಾಪ್ರಾಜ್ಞ - ಎಲೈ ಮಹಾಪಂಡಿತನೇ, ಇದಂರಾಜ್ಯಂ - ಈ ರಾಷ್ಟ್ರವನ್ನು, ಪ್ರತಿಪದ್ಯ - ಅಂಗೀ

ರನ್ನೂ ಶ್ಲಾಘಿಸಿದನು. ವಾಕ್ಶೈಥಿಲ್ಯವನ್ನು ಹೊಂದಿದ ಆ ಭರತನಾದರೋ ತೊದಲುತ್ತಾ, ಎರಡು ಕೈಗಳನ್ನೂ ಜೋಡಿಸಿಕೊಂಡು, ರಘುವಂಶೋತ್ಪನ್ನನಾದ ಶ್ರೀರಾಮನನ್ನುಕುರಿತು, “ಅಣ್ಣಾ! ರಾಜಧರ್ಮವನ್ನೂ, ನಮ್ಮ ವಂಶಾನುಕ್ರಮಣಿಕೆಯಿಂದ ಬಂದ ಪದ್ಧತಿಯನ್ನೂ ನೋಡಿ ನನ್ನಜನನಿಯಾದ ಕೈಕೇಯೀದೇವಿಯೂ ಕೂಡ ನೀನೇ ಪಟ್ಟಾಭಿಷೇಕವನ್ನು ಮಾಡಿಕೊಂಡು ರಾಜ್ಯವಾಳುತ್ತಿರಬೇಕೆಂದು ಬೇಡಿಕೊಳ್ಳುತ್ತಾಳೆ. ॥ ೬-೧೦ ॥ ಅಲ್ಲದೆ ಮಹತ್ತರವಾದ ಸಾಕೇತಸಾಂಮ್ರಾಜ್ಯವನ್ನು ಪರಿಪಾಲಿಸಲು ನನ್ನೊಬ್ಬನಿಂದ ಆಗುವುದಿಲ್ಲ. ನಾನು ಅಸಮರ್ಥ. ಆದುದರಿಂದ ನನ್ನೊಂದಿಗೆ ನೀನೂ ಇರುವವನಾಗು. ಪುರಜನರು, ಪರಿಜನರು, ದೇಶಿಗರು ಇವರೆಲ್ಲರನ್ನೂ ಸಂತಸಗೊಳಿಸಬೇಕೆಂದು, ಜ್ಞಾತಿಗಳು, ಭಟರು, ಸ್ನೇಹಿತರು, ಆಪ್ತರೂ, ರೈತರು ವರ್ಷವನ್ನಪೇಕ್ಷಿಸುವಂತೆ ನಿನ್ನನ್ನು ಎದುರುನೋಡುತ್ತಿದ್ದಾರೆ. ಪೂಜ್ಯನೇ! ನೀನು ಮಹಾ ತಿಳಿವಳಿಕೆಯುಳ್ಳವನು. ನೀನು ಈ ರಾಜ್ಯವನ್ನು ಪರಿಗ್ರಹಿಸಿ ಉದ್ಧಾರಮಾಡು. ಓ, ಕಾಕುತ್ಸ್ಥನೇ! ಈ ಭೂಮಿಯನ್ನು ಪರಿಪಾಲಿಸುವುದು

ಪ್ರಾಜ್ಞ! ಸ್ಥಾಪಯ ಪ್ರತಿಪದ್ಯಹಿ ॥ ಶಕ್ತಿಮಾನಸಿ ಕಾಕುತ್ಸ್ಥ! ಲೋಕಸ್ಯ
ಪರಿಪಾಲನೇ ॥೧೩॥ ಇತ್ಯುಕ್ತ್ವಾ ನ್ಯಪತ ದ್ಭ್ರಾತುಃ ಪಾದಯೋ ರ್ಭರತ
ಸ್ತದಾ ॥ ಭೃಶಂ ಸಂಪ್ರಾರ್ಥಯಾಮಾಸ ರಾಮಮೇವ ಪ್ರಿಯಂವದಃ ॥೧೪॥
ತಮಂಕೇ ಭ್ರಾತರಂ ಕೃತ್ವಾ ರಾಮೋ ವಚನ ಮಬ್ರವೀತ್ ॥ ಶ್ಯಾಮಂ ನಳಿನ
ಪತ್ರಾಕ್ಷಂ ಮತ್ತ ಹಂಸಸ್ವರಂ ಸ್ವಯಂ ॥ ೧೫ ॥ ಆಗತಾ ತ್ವಾಮಿಯಂ ಬುದ್ಧಿ
ಸ್ಸ್ವಜಾ ವೈನಯಿಕೀಚ ಯಾ ॥ ಭೃಶಮುತ್ಸಹಸೇ ತಾತ! ರಕ್ಷಿತುಂ ಪೃಥಿವೀ
ಮಪಿ ॥ ೧೬ ॥ ಅಮಾತ್ಯೈಶ್ಚ ಸುಹೃದ್ಭಿಶ್ಚ ಬುದ್ಧಿಮದ್ಭಿಶ್ಚ ಮಂತ್ರಿಭಿಃ ॥ ಸರ್ವ

ಕರಿಸಿ, ಸ್ಥಾಪಯ - ಪ್ರತಿಷ್ಠೆಮಾಡು, ಹೇ ಕಾಕುತ್ಸ್ಥ - ಎಲೈ ಕಕುತ್ಸ್ಥವಂಶೋತ್ಪನ್ನನೇ, ಲೋಕಸ್ಯ - ಭೂಲೋಕದ, ಪರಿಪಾಲನೇ - ಸಂರಕ್ಷಣೆಯ ವಿಷಯದಲ್ಲಿ, ಶಕ್ತಿರ್ಮಾ - ಸಾಮರ್ಥ್ಯವಂತನು, ಅಸಿಹಿ - ಆಗಿರುವೆಯಷ್ಟೆ. ॥ ೧೩ ॥ ಪ್ರಿಯಂವದಃ - ಇಷ್ಟವಾದ ಮಾತುಗಳನ್ನು ನುಡಿಯುವ, ಭರತಃ - ಭರತನು, ತದಾ - ಆ ಕಾಲದಲ್ಲಿ, ಇತ್ಯುಕ್ತ್ವಾ - ಈರೀತಿ ಹೇಳಿ, ಭ್ರಾತುಃ - ಅಣ್ಣನ, ಪಾದಯೋಃ - ಕಾಲ್ಗಳಲ್ಲಿ, ನ್ಯಪತತ್ - ಬಿದ್ದನು, ರಾಮಮೇವ - ಶ್ರೀರಾಮನನ್ನೇ, ಭೃಶಂ - ಅಧಿಕವಾಗಿ, ಸಂಪ್ರಾರ್ಥಯಾಮಾಸ - ಬೇಡಿದನು. ॥ ೧೪ ॥ ರಾಮಃ - ಶ್ರೀರಾಮನು, ಶ್ಯಾಮಂ - ಕಪ್ಪಾಗಿರುವ, ನಳಿನಪತ್ರಾಕ್ಷಂ - ತಾವರೆಯೆಸಳೆನಂತಿರುವ ಕಣ್ಣುಗಳುಳ್ಳ, ಮತ್ತಹಂಸಸ್ವರಂ - ಮದಿಸಿದ ಹಂಸಪಕ್ಷಿಯ ಧ್ವನಿಯುಳ್ಳ, ತಂಭರತಂ - ಆ ಭರತನನ್ನು, ಅಂಕೇ-ತೊಡೆಯ ಮೇಲೆ, ಕೃತ್ವಾ - ಕೂಡಿಸಿಕೊಂಡು, ಸ್ವಯಂ - ತಾನಾಗಿಯೇ, ವಚನಂ-ಮಾತನ್ನು, ಅಬ್ರವೀತ್-ನುಡಿದನು. ॥ ೧೫ ॥ ಹೇ ತಾತ - ಎಲೈ ತಂದೆಯೇ, ಯಾಬುದ್ಧಿಃ - ಯಾವ ಮತಿಯು, ಸ್ವಜಾ-ನಿನ್ನಿಂದಲೇ ಹುಟ್ಟಿದೆಯೋ, ವೈನಕೀಚ - ಗುರುಶಿಕ್ಷೆಯಿಂದಲೂ ಹುಟ್ಟಿದೆಯೋ, ಇಯಂಬುದ್ಧಿಃ - ಈ ಮತಿಯು, ತ್ವಾಂ - ನಿನ್ನನ್ನು, ಆಗತಾ - ಹೊಂದಿದೆ, ಪೃಥಿವೀಮಪಿ - ಭೂಮಿಯನ್ನು ಕೂಡ, ರಕ್ಷಿತುಂ - ಪಾಲಿಸುವದಕ್ಕೆ, ಭೃಶಂ - ಬಹಳ, ಉತ್ಸಹಸೇ - ಶಕ್ತನಾಗಿಯೂ ಇರುವೆ. ॥ ೧೬ ॥ ಅಮಾತ್ಯೈಶ್ಚ - ಮಂತ್ರಿಗಳಿಂದಲೂ, ಸುಹೃದ್ಭಿಶ್ಚ - ಸ್ನೇಹಿತರಿಂದಲೂ, ಬುದ್ಧಿಮದ್ಭಿಃ - ಮತಿವಂತರಾದ, ಮಂತ್ರಿಭಿಶ್ಚ - ಉಪಮಂತ್ರಿಗಳಿಂದಲೂ, ಸುಮಹಾಂತ್ಯಪಿ-ದೊಡ್ಡವಾದ, ಸರ್ವಕಾರ್ಯಾಣಿ-

---

ನಿನಗೇನೂ ಮಹತ್ತರವಲ್ಲ. ಸುಲಭಸಾಧ್ಯವೇ ಆಗಿದೆ" ಎಂದು ನುಡಿದು, ಅಣ್ಣದೇವನ ಪಾದಗಳನ್ನು ಹಿಡಿದುಕೊಂಡು ಬಹುವಾಗಿ ಪ್ರಾರ್ಥಿಸಿದನು. ಆಗ ಶ್ರೀರಾಮಮೂರ್ತಿಯು, ಶ್ಯಾಮಲವರ್ಣವುಳ್ಳವನೂ, ಕಮಲದೆಸಳಿನಂತೆ ವಿಶಾಲವಾದ ಕಂಗಳುಳ್ಳವನೂ, ಮದಿಸಿದ ಹಂಸನಂತೆ ಗಂಭೀರಧ್ವನಿಯುಳ್ಳವನೂ ಆದ ಭರತನನ್ನು ಬಹು ಪ್ರೇಮೆಯಿಂದ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಹೀಗೆಂದನು. ॥ ೧೧-೧೫ ॥ "ಮಗು, ಭರತ! ನೀನೇನು ಸಾಮಾನ್ಯನೇ? ರಾಜ್ಯವಾಳಲು "ನಾನು ಅಸಮರ್ಥ" ಎಂದು ಹೇಳಿದೆ. ಇದು ನಂಬತಕ್ಕ ನುಡಿಯಲ್ಲ. ಸ್ವಭಾವಸಿದ್ಧವಾದ ಬುದ್ಧಿ, ಗುರುಶುಶ್ರೂಷಣೆಯಿಂದ ಕಲಿತ ಬುದ್ಧಿ, ಈ ಎರಡೂ ನಿನ್ನಲ್ಲಿರುವುದರಿಂದ ರಾಜ್ಯವಾಳುವ ಸಾಮರ್ಥ್ಯವು ನಿನ್ನಲ್ಲಿ ಇದ್ದೇ ಇರುವುದು. ಯೋಚಿಸಬೇಡ. ಮಾತ್ರವಲ್ಲದೆ ಮಂತ್ರಿಗಳು, ಸ್ನೇಹಿತರು, ಮಹಾ ತಿಳಿವಳಿಕೆಯುಳ್ಳ ಆಲೋಚನಾಪರರೂ, ನಿನ್ನ ದೇಶದಲ್ಲಿದ್ದಾರೆ. ಅವರು ನಿನಗೆ ಸಹಾಯಭೂತರಾಗಿರುವರು. ಅವರೊಡಗೂಡಿ ರಾಜಕಾರ್ಯಗಳನ್ನು ಮಾಡುತ್ತಿರು. ನನ್ನ ವಿಷಯದಲ್ಲಿ

ಕಾರ್ಯಾಣಿ ಸಂಮಂತ್ರ್ಯ ಸುಮಹಾಂತ್ಯಪಿ ಕಾರಯ ॥೧೭॥ ಲಕ್ಷ್ಮೀ
ಶ್ಚಂದ್ರಾದಪೇಯಾದ್ವಾ ಹಿಮವಾನ್ವಾ ಹಿಮಂತ್ಯಜೇತ್ ॥ ಅತೀಯಾ
ತ್ಸಾಗರೋ ವೇಲಾಂ ನ ಪ್ರತಿಜ್ಞಾ ಮಹಂ ಪಿತುಃ ॥೧೮॥ ಕಾಮಾದ್ವಾ
ತಾತ! ಲೋಭಾದ್ವಾ ಮಾತ್ರಾ ತುಭ್ಯಮಿದಂ ಕೃತಂ ॥ ನತನ್ಮನಸಿ ಕರ್ತವ್ಯಂ
ವರ್ತಿತವ್ಯಂ ಚ ಮಾತೃವತ್ ॥೧೯॥ ಏವಂ ಬ್ರುವಾಣಂ ಭರತಃ ಕೌಸಲ್ಯಾ
ಸುತ ಮಬ್ರವೀತ್ ॥ ತೇಜಸಾದಿತ್ಯ ಸಂಕಾಶಂ ಪ್ರತಿಪಚ್ಚಂದ್ರ ದರ್ಶನಂ ॥೨೦॥
ಅಧಿರೋಹಾರ್ಯ! ಪಾದಾಭ್ಯಾಂ ಪಾದುಕೇ ಹೇಮಭೂಷಿತೇ॥ಏತೇಹಿ ಸರ್ವ

ಎಲ್ಲ ಕಾರ್ಯಗಳನ್ನೂ, ಸಂಮಂತ್ರ್ಯ - ಆಲೋಚಿಸಿ, ಕಾರಯ-ಮಾಡಿಸು. ॥ ೧೭ ॥ ಲಕ್ಷ್ಮೀಃ-ಕಾಂತಿಯು, ಚಂದ್ರಾತ್ - ಚಂದ್ರನಿಂದ, ಅಪೇಯಾತ್ - ಹೋಗಲಿ, ಹಿಮವಾನ್ - ಹಿಮವತ್ಪರ್ವತವು, ಹಿಮಂ - ಮಂಜನ್ನು, ತ್ಯಜೇತ್ - ಬಿಡಲಿ, ಸಾಗರಂ - ಕಡಲು, ವೇಲಾಂ - ದಡವನ್ನು, ಅತೀಯಾತ್ - ಮೀರಲಿ, ಅಹಂ - ನಾನು, ಪಿತುಃ - ತಂದೆಯ, ಪ್ರತಿಜ್ಞಾಂ - ಪ್ರತಿಜ್ಞೆಯನ್ನು, ನಾತೀಯಾತ್ - ಮೀರುವುದಿಲ್ಲ. ॥ ೧೮ ॥ ಹೇ ತಾತ - ಎಲೈ ತಂದೆಯೇ, ಮಾತ್ರಾ - ತಾಯಿಯಿಂದ, ತುಭ್ಯಂ - ನಿನಗಾಗಿ, ಕಾಮಾದ್ವಾ - ಇಷ್ಟದಿಂದಲೋ, ಲೋಭಾದ್ವಾ - ರಾಜ್ಯಾಸಕ್ತಿಯಿಂದಲೋ, ಇದಂ - ಈ ಕೆಲಸವು, ಕೃತಂ-ಮಾಡಲ್ಪಟ್ಟಿತು, ತತ್ - ಅದು, ಮನಸಿ - ಮನದಲ್ಲಿ, ನಕರ್ತವ್ಯಂ - ಮಾಡತಕ್ಕದಲ್ಲ, ಮಾತೃವತ್ - ತಾಯಿಯಲ್ಲಿಯಂತೆಯೇ, ವರ್ತಿತವ್ಯಂಚ - ಇರಲೇಬೇಕು. ॥ ೧೯ ॥ ಏವಂ - ಈರೀತಿ, ಬ್ರುವಾಣಂ - ಹೇಳುವ, ತೇಜಸಾ - ಬೆಳಕಿನಿಂದ, ಆದಿತ್ಯಸಂಕಾಶಂ - ಸೂರ್ಯಸದೃಶನಾದ, ಪ್ರತಿಪಚ್ಚಂದ್ರದರ್ಶನಂ - ಪ್ರತಿಪಚ್ಚಂದ್ರನಂತೆ ಕಾಣುವ, ಕೌಸಲ್ಯಾಸುತಂ - ಶ್ರೀರಾಮನನ್ನು ಕುರಿತು, ಭರತಂ - ಭರತನು, ಅಬ್ರವೀತ್ - ನುಡಿದನು. ॥ ೨೦ ॥ ಹೇ ಆರ್ಯ - ಎಲೈ ಪೂಜ್ಯನೇ, ಪಾದಾಭ್ಯಾಂ - ಕಾಲುಗಳಿಂದ, ಹೇಮಭೂಷಿತೇ - ಭಂಗಾರದಿಂದಲಂಕೃತವಾದ, ಪಾದುಕೇ - ಪಾದುಕೆಗಳನ್ನು, ಅಧಿರೋಹ - ಏರು, ಏತೇಹಿ - ಇವುಗಳೇ, ಸರ್ವಲೋಕಸ್ಯ - ಸಮಸ್ತ ಜನಗಳ, ಯೋಗಕ್ಷೇಮಂ - ಪರಿಪಾಲನೆಯನ್ನು, ವಿಧಾಸ್ಯತಃ ಮಾಡುತ್ತವೆ.

ಕೇಳುವೆಯೇನೋ? ಕೇಳು. ನಿಶಾನಾಥನು ಬೆಳದಿಂಗಳನ್ನು ಬೀರದಿದ್ದರೂ, ಹಿಮವಂತನು ಹಿಮರಹಿತನಾದರೂ, ಸಮುದ್ರನು ತನ್ನ ಮಿತಿಯನ್ನು ಮೀರಿದರೂ, ನಾನು ತಂದೆಯಾದ ದಶರಥರಾಜನಿಗೆ ಕೊಟ್ಟ ಭಾಷೆಯನ್ನೆಂದಿಗೇ ಆಗಲಿ ತಪ್ಪುವುದಿಲ್ಲ. ನಿನ್ನ ತಾಯಿಯಾದ ಕೈಕೇಯೀದೇವಿಯು ಬೇಕಾಗಿಯೋ, ಬೇಡದೆಯೋ, ರಾಜ್ಯದಲ್ಲಿ ಆಶೆಪಟ್ಟೋ, ಪಡೆದೆಯೋ, ಮನಃಪೂರ್ವಕವಾಗಿಯೋ, ಅದಲ್ಲದೆಯೋ, ಅಂತು ನಿನಗಾಗಿಯೇ ಈ ಕಾರ್ಯವನ್ನು ಮಾಡಿದ್ದಾಳೆ. 'ಹೀಗೆ ಮಾಡಿದಳಲ್ಲ' ಎಂದು ಆಕೆಯಲ್ಲಿ ಆಕ್ರೋಶಗೊಂಡು 'ತಾಯಿ' ಎಂಬ ಭಾವವನ್ನು ತೊರೆಯುತಕ್ಕುದಲ್ಲ. ಆಕೆಯಲ್ಲಿ ವಿಶ್ವಾಸವಾಗಿಯೇ ಇರಬೇಕು. ॥ ೧೭-೧೯ ॥ ಈ ಪ್ರಕಾರವಾಗಿ ಶ್ರೀರಾಮನು ನುಡಿಯಲು ಭರತನು ಆ ನುಡಿಗಳನ್ನು ಕೇಳಿ ದಿನಕರನಂತೆ ತೇಜೋವಿಶೇಷದಿಂದ ಬೆಳಗುವವನೂ, ಪ್ರತಿಪಚ್ಚಂದ್ರನಂತೆ ಮಂಗಳಕರವಾದ ದರ್ಶನವುಳ್ಳವನೂ, ಕೌಸಲ್ಯಾತನಯನೂ ಆದ ಶ್ರೀರಾಮಚಂದ್ರನನ್ನು ಕುರಿತು, "ಓ, ಪೂಜ್ಯನೇ! ನಾನು ಎಷ್ಟುವಿಧವಾಗಿ ಬೇಡಿದರೂ ನೀನು ರಾಜ್ಯಾಭಿಷೇಕಕ್ಕೆ ಸಮ್ಮತಿಸಲಿಲ್ಲ. ನಾನು ಏನೇ ಆಗಲಿ ಸ್ವತಂತ್ರವಾಗಿ ರಾಜ್ಯಭಾರವನ್ನಂತೂ ಮಾಡುವದೇ

ಲೋಕಸ್ಯ ಯೋಗಕ್ಷೇಮಂ ವಿಧಾಸ್ಯತಃ ॥ ೨೧ ॥ ಸೋಧಿರುಹ್ಯ ನರವ್ಯಾಘ್ರಃ ಪಾದುಕೇ ಹ್ಯವರುಹ್ಯಚ ॥ ಪ್ರಾಯಚ್ಛತ್ಸುಮಹಾತೇಜಾ ಭರತಾಯ ಮಹಾತ್ಮನೇ ॥ ೨೨ ॥ ಸ ಪಾದುಕೇ ಸಂಪ್ರಣಮ್ಯ ರಾಮಂ ವಚನ ಮಬ್ರವೀತ್ ॥ "ಚತುರ್ದಶಹಿ ವರ್ಷಾಣಿ ಜಟಾಚೀರಧರೋ ಹ್ಯಹಂ ॥೨೩॥ ಫಲಮೂಲಾಶನೋ ವೀರ! ಭವೇಯಂ ರಘುನಂದನ! ॥ ತವಾಗಮನಮಾಕಾಂಕ್ಷ ನ್ವಸಂತೇ ನಗರಾದ್ಬಹಿಃ ॥೨೪॥ ತವಪಾದುಕಯೋರ್ನ್ಯಸ್ತ ರಾಜ್ಯತಂತ್ರಃ ಪರಂತಪ! ॥ ಚತುರ್ದಶೇಹಿ ಸಂಪೂರ್ಣೇ ವರ್ಷೇಽಹನಿ ರಘೂತ್ತಮ! ॥೨೫॥ ನದ್ರಕ್ಷ್ಯಾಮಿ

॥ ೨೧ ॥ ನರವ್ಯಾಘ್ರಃ - ಪುರುಷಶ್ರೇಷ್ಠನಾದ, ಸುಮಹಾತೇಜಾಃ - ಮಹಾ ತೇಜಸ್ವಿಯಾದ, ಸಃ- ಆ ಶ್ರೀರಾಮನು, ಪಾದುಕೇ - ಪಾದರಕ್ಷೆಗಳನ್ನು, ಅಧಿರುಹ್ಯ - ಏರಿ, ಅವರುಹ್ಯ - ಇಳಿದು, ಮಹಾತ್ಮನೇ - ಮಹಾ ಮನಸ್ಸುಳ್ಳ, ಭರತಾಯ - ಭರತನಿಗೆ, ಪ್ರಾಯಚ್ಛತ್ - ಕೊಟ್ಟನು. ॥ ೨೨ ॥ ಸಃ - ಆ ಭರತನು, ಪಾದುಕೇ - ಪಾದುಕೆಗಳನ್ನು ಕುರಿತು, ಸಂಪ್ರಣಮ್ಯ - ಕೈಮುಗಿದು, ರಾಮಂ - ಶ್ರೀರಾಮನನ್ನು ಕುರಿತು, ಅಬ್ರವೀತ್ - ನುಡಿದನು, ಹೇ ರಘುನಂದನ - ಎಲೈ ಅಣ್ಣನೇ, ಹೇ ವೀರ - ಎಲೈ ಶೂರನೇ, ಅಹಂ - ನಾನು, ಚತುರ್ದಶವರ್ಷಾಣಿ - ಹದಿನಾಲ್ಕು ಸಂವತ್ಸರಗಳು, ಜಟಾಚೀರಧರಃ - ಜಡೆಗಳನ್ನು ನಾರುವಸ್ತ್ರಗಳನ್ನೂ ಧರಿಸಿ, ಫಲಮೂಲಾಶನಃ - ಫಲಗಳನ್ನೂ ಕಂದಮೂಲಗಳನ್ನೂ ಭುಜಿಸುತ್ತ, ಭವೇಯಂ - ಇರುತ್ತೇನೆ, ಹೇ ಪರಂತಪ - ಎಲೈ ಶತ್ರುನಾಶಕನೆ, ತವ- ನಿನ್ನ, ಆಗಮನಂ - ಬರುವಿಕೆಯನ್ನು, ಆಕಾಂಕ್ಷ್ - ಎದುರುನೋಡುತ್ತ, ತವ - ನಿನ್ನ, ಪಾದುಕಯೋಃ-ಪಾದುಕೆಗಳಲ್ಲಿ, ನ್ಯಸ್ತರಾಜ್ಯತಂತ್ರಃ - ಇರಿಸಲ್ಪಟ್ಟ ರಾಜ್ಯಭಾರವುಳ್ಳವನಾಗಿ, ನಗರಾತ್ - ಪಟ್ಟಣದಿಂದ, ಬಹಿಃ - ಹೊರಗೆ, ಹೇ ರಘೋತ್ತಮ - ಎಲೈ ಶ್ರೀರಾಮನೇ ! ಚತುರ್ದಶೇವರ್ಷೇ - ಹದಿನಾಲ್ಕನೆಯ ವರುಷದ, ವಸಂತೇ - ವಸಂತಕಾಲವು, ಸಂಪೂರ್ಣೇ - ಪೂರ್ತಿಯಾಗಲು, ಅಹನಿ - ಹಗಲಿನಲ್ಲಿ, ತ್ವಾಂ - ನಿನ್ನನ್ನು, ನದ್ರಕ್ಷ್ಯಾಮಿಯದಿ - ನೋಡದಿದ್ದರೆ, ಹುತಾಶನಂ - ಅಗ್ನಿಯನ್ನು, ಪ್ರವೇಕ್ಷ್ಯಾಮಿ - ಪ್ರವೇಶಿಸುವೆನು. ॥ ೨೫ ॥ ತಥೇತಿ - ಹಾಗೆಯೇ ಆಗಲೆಂದು,

---

ಇಲ್ಲ. ಆದುದರಿಂದ ಸುವರ್ಣಾಲಂಕೃತವಾದ ಈ ನಿನ್ನ ಪಾದುಕೆಗಳನ್ನು ಮೆಟ್ಟಿ, ನನಗೆ ದಯಪಾಲಿಸು. ಈ ಪಾದುಕೆಗಳೇ ಪ್ರಜೆಗಳೆಲ್ಲರನ್ನೂ ಪರಿಪಾಲಿಸುತ್ತವೆ" ಎಂದು ನುಡಿದನು. ಆಗ ಪುರುಷೋತ್ತಮನಾದ ಶ್ರೀರಾಮನು ತಮ್ಮನಾದ ಭರತನ ಅಪೇಕ್ಷೆಯಂತೆ ಆ ಪಾದುಕೆಗಳನ್ನೇರಿ, ಮಹಾ ಬುದ್ಧಿಶಾಲಿಯಾದ ಆತನಿಗೆ ದಯೆಗೈದವನಾದನು. ಆ ಸಮಯದಲ್ಲಿ ಭರತಕುಮಾರನು ಆ ಪಾದುಕೆಗಳಿಗೆ ನಮಸ್ಕಾರಮಾಡಿ, ಅಣ್ಣದೇವನಾದ ಶ್ರೀರಾಮನನ್ನು ಕುರಿತು, "ಎಲೈ, ರಘುಕುಲಾನಂದಕರನೇ! ಶೂರನೇ! ಶ್ರೀರಾಮಚಂದ್ರನೇ! ಅಣ್ಣಾ! ನಾನು ಹದಿನಾಲ್ಕು ವರ್ಷಗಳಕಾಲ ಜಟೆಗಳನ್ನು ಧರಿಸಿ, ನಾರುಮಡಿಗಳನ್ನುಡುತ್ತಲೂ, ಕಂದಮೂಲ ಫಲಗಳನ್ನು ಭುಜಿಸುತ್ತಲೂ, ನಿನ್ನ ಆಗಮನವನ್ನೇ ಬಯಸುತ್ತಲೂ, ಈ ನಿನ್ನ ಪಾದುಕೆಗಳಲ್ಲಿಯೇ ಆಳ್ವಿಕೆಯ ಭಾರವನ್ನಿರಿಸಿ, ನಿಯಮಿತ ಕಾಲವಾದ ಮೇಲಣ ವಸಂತಋತುವಿನ ಪ್ರಥಮ ದಿನವನ್ನು ನಿರೀಕ್ಷಿಸುತ್ತಿರುತ್ತೇನೆ. ಅಂದಿನ ದಿನ ನೀನು ಬಾರದಿದ್ದರೆ, ನಾನು ಅಗ್ನಿಪ್ರವೇಶವಂಗೈಯುತ್ತೇನೆಂದು" ಪ್ರತಿಜ್ಞೆ ಮಾಡಿದನು. ॥ ೨೦-೨೫ ॥ ಅ ಬಳಿಕ ಶ್ರೀರಾಮನು 'ಅಂತೆಯೇ ಆಗಲಿ. ವನವಾಸ

ಯದಿತ್ವಾಂತು ಪ್ರವೇಕ್ಷ್ಯಾಮಿ ಹುತಾಶನಂ" ‖ ತಥೇತಿಚ ಪ್ರತಿಜ್ಞಾಯ ತಂಪರಿಷ್ವಜ್ಯ ಸಾದರಂ ‖೨೬‖ ಶತ್ರುಘ್ನಂಚ ಪರಿಷ್ವಜ್ಯ ಭರತಂ ಚೇದ ಮಬ್ರವೀತ್‖"ಮಾತರಂ ರಕ್ಷ! ಕೈಕೇಯೀಂ ಮಾ ರೋಷಂ ಕುರು ತಾಂ ಪ್ರತಿ ‖೨೭‖ ಮಯಾಚ ಸೀತಯಾ ಚೈವ ಶಪ್ತೋಽಸಿ ರಘುಸತ್ತಮ ! " ‖ ಇತ್ಯುಕ್ತ್ವಾಽಶ್ರುಪರೀತಾಕ್ಷೋ ಭ್ರಾತರಂ ವಿಸಸರ್ಜಹ ‖ ೨೮ ‖ ಸಪಾದುಕೇ ತೇ ಭರತಃ ಪ್ರತಾಪವಾನ್ ಸ್ವಲಂಕೃತೇ ಸಂಪರಿಪೂಜ್ಯ ಧರ್ಮವಿತ್ ‖ ಪ್ರದಕ್ಷಿಣಂಚೈವ ಚಕಾರ ರಾಘವಂ ಚಕಾರ ತೇಚೋತ್ತಮನಾಗ ಮೂರ್ಧನಿ ‖ ೨೯ ‖ ಅಥಾಽನು

ಪ್ರತಿಜ್ಞಾಯ - ಪ್ರತಿಜ್ಞೆಮಾಡಿ, ತಂ - ಆ ಭರತನನ್ನು, ಪರಿಷ್ವಜ್ಯ - ಅಪ್ಪಿಕೊಂಡು, ಸಾದರಂ - ಆದರಣೆಯಿಂದೊಡಗೂಡಿ, ಶತ್ರುಘ್ನಂ - ಶತ್ರುಘ್ನನನ್ನು, ಪರಿಷ್ವಜ್ಯ - ಆಲಿಂಗಿಸಿ, ಭರತಂ - ಭರತನನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್-ಹೇಳಿದನು. ‖ ೨೬ ‖ ಹೇ ರಘುಸತ್ತಮ- ಎಲೈ ಭರತನೇ ! ಮಾತರಂ - ತಾಯಿಯಾದ, ಕೈಕೇಯೀಂ - ಕೈಕೇಯೀದೇವಿಯನ್ನು, ಪಾಲಯ - ರಕ್ಷಿಸು, ತಾಂಪ್ರತಿ - ಆಕೆಯನ್ನುದ್ದೇಶಿಸಿ, ರೋಷಂ - ಕೋಪವನ್ನು, ಮಾಕುರು - ಮಾಡಬೇಡ, ಮಯಾಚ - ನನ್ನಿಂದಲೂ, ಸೀತಯಾಚ - ಸೀತಾದೇವಿಯಿಂದಲೂ, ಶಪ್ತಃ - ಶಪಿಸಲ್ಪಡುವನು, ಅಸಿ - ಆಗುವೆ, ಇತಿ - ಇಂತೆಂದು, ಉಕ್ತ್ವಾ - ಹೇಳಿ, ಅಶ್ರುಪರೀತಾಕ್ಷಃ - ಕಣ್ಣೀರಿನಿಂದ ವ್ಯಾಪ್ತವಾದ ಕಂಗಳುಳ್ಳವನಾಗಿ, ಭ್ರಾತರಂ - ತಮ್ಮನಾದ ಭರತನನ್ನು, ವಿಸಸರ್ಜಹ - ಬಿಟ್ಟನಷ್ಟೆ. ‖ ೨೮ ‖ ಪ್ರತಾಪವಾನ್ - ಪರಾಕ್ರಮಶಾಲಿಯಾದ, ಧರ್ಮವಿತ್ - ಧರ್ಮಜ್ಞನಾದ, ಸಭರತಃ - ಆ ಭರತನು, ಸ್ವಲಂಕೃತೇ - ಚೆನ್ನಾಗಿ ಅಲಂಕರಿಸಲ್ಪಟ್ಟ, ತೇಪಾದುಕೇ - ಆ ಪಾದುಕೆಗಳನ್ನು, ಪರಿಪೂಜ್ಯ - ಪೂಜಿಸಿ, ರಾಘವಂಚ - ಶ್ರೀರಾಮನನ್ನು ಕುರಿತು, ಪ್ರದಕ್ಷಿಣಂಚೈವ - ಪ್ರದಕ್ಷಿಣವನ್ನೂ, ಚಕಾರ - ಮಾಡಿದನು, ತೇಚ - ಆ ಪಾದುಕೆಗಳನ್ನೂ, ಉತ್ತಮನಾಗಮೂರ್ಧನಿ - ಉತ್ಕೃಷ್ಟವಾದ ಶತ್ರುಂಜಯವೆಂಬ ಆನೆಯಶಿರದಲ್ಲಿ, ಚಕಾರ - ಇಟ್ಟವನಾದನು. ‖ ೨೯ ‖ ಅಥ - ಬಳಿಕ, ರಾಘವವಂಶವರ್ಧನಃ - ರಘುವಂಶೋದ್ಧಾರಕನಾದ ಶ್ರೀರಾಮನು, ಹಿಮವಾನ್ - ಹಿಮವತ್ಪರ್ವತದಂತೆ-

ಮುಗಿದ ಮರುದಿನವೇ ಖಂಡಿತವಾಗಿಯೂ ಬರುತ್ತೇನೆ'ಂದು ವಚನವಿತ್ತು, ಆ ಭರತನನ್ನು ಬರಸೆಳದಾಲಿಂಗಿಸಿ, ಆ ಬಳಿಕ ಶತ್ರುಘ್ನನನ್ನೂ ಆದರದಿಂದ ಅಪ್ಪಿಕೊಂಡು ಭರತನನ್ನು ಕುರಿತು, " ಅಯ್ಯಾ, ರಘುಶ್ರೇಷ್ಠನೇ ! ನಿನ್ನತಾಯಿಯಾದ ಕೈಕೇಯೀದೇವಿಯನ್ನು ಸಂರಕ್ಷಿಸುತ್ತಿರು. ಆಕೆಯನ್ನು ಕುರಿತು ಎಂದಿಗಾದರೂ ರೋಷವನ್ನು ಮಾಡೀಯೆ. ಹಾಗೆ ಮಾಡಿದೆಯಾದರೆ ನನ್ನಿಂದಲೂ, ಸೀತಾದೇವಿಯಿಂದಲೂ ಶಪಿಸಲಾಗುವೆ " ಎಂದು ಹೇಳಿ, ಕಂಬನಿಗರೆಯುತ್ತ ತಮ್ಮನಾದ ಆ ಭರತನನ್ನ ಹಿಂದಕ್ಕೆ ಕಳುಹಿದವನಾದನು. ‖ ೨೬-೨೮ ‖ ಆಗ ಮಹಾ ಪರಾಕ್ರಮಿಯೂ, ಸಮಸ್ತ ಧರ್ಮಗಳನ್ನರಿತವನೂ ಆದ ಆ ಭರತನು ಸುವರ್ಣಾಲಂಕೃತವಾದ ಆ ಪಾದುಕೆಗಳನ್ನು ಚನ್ನಾಗಿ ಗೌರವಿಸಿ, ಶಿರಸಾ ಧರಿಸಿದವನಾಗಿ, ರಘುವಂಶೋದ್ಭವನಾದ ಶ್ರೀರಾಮನಿಗೆ ಪ್ರದಕ್ಷಿಣವನ್ನುಮಾಡಿದನು. ಆ ಸಮಯದಲ್ಲಿಯೂ ರಘುವಂಶದವರಿಗೆ ಆನಂದವನ್ನೆಸಗುವ ರಾಮಚಂದ್ರನು ಹಿಮವತ್ಪರ್ವತದಂತೆ ಚಿತ್ತಚಾಂಚಲ್ಯವನ್ನು ಹೊಂದದೆ ಪಿತೃವಾಕ್ಯಪರಿಪಾಲನಾರೂಪವಾದ ಸ್ವಧರ್ಮದಲ್ಲಿಯೇ ನಿರತನಾಗಿ, ತನ್ನ ಬಳಿಗೆ ಬಂದಿದ್ದ ವಸಿಷ್ಠನೇ ಮೊದಲಾದ ಗುರುಗಳನ್ನೂ, ಸುಮಂತ್ರನೇ ಮುಂತಾದ



पादुका प्राप्ति

A 7515—Lakshmi Art, Bombay, 8.

ಪೂರ್ವಾನ್ಯ ತ್ಪ್ರತಿನಂದ್ಯ ತಂ ಜನಂ ಗುರೂಂಶ್ಚ ಮಂತ್ರಿಪ್ರಕೃತೀ ಸ್ತಥಾಽನುಜೌ॥
ವ್ಯಸರ್ಜಯ ದ್ರಾಘವ ವಂಶವರ್ಧನ ಸ್ಸ್ಥಿರ ಸ್ಸ್ವಧರ್ಮೇ ಹಿಮವಾ ನಿವಾ
ಚಲಃ ॥ ೩೦ ॥

ತಂ ಮಾತರೋ ಬಾಷ್ಪ ಗೃಹೀತ ಕಂಠ್ಯೋ
ದುಃಖೇನ ನಾಮಂತ್ರಯಿತುಂ ಹಿ ಶೇಕುಃ ॥
ಸ ತ್ವೇವ ಮಾತೄ ರಭಿವಾದ್ಯ ಸರ್ವಾ
ರುದನ್ ಕುಟೀಂ ಸ್ವಾಂ ಪ್ರವಿವೇಶ ರಾಮಃ ॥ ೩೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಾದಶೋತ್ತರಶತತಮಸ್ಸರ್ಗಃ.

ಅಚಲಃ - ಚಲಿಸಲಸಾಧ್ಯನಾಗಿ, ಸ್ವಧರ್ಮೇ - ತನ್ನ ಪ್ರತಿಜ್ಞಾಪರಿಪಾಲನರೂಪ ಧರ್ಮದಲ್ಲಿ, ಸ್ಥಿರಃ ಸ್ಥಿರಚಿತ್ತನಾಗಿ, ಅನುಪೂರ್ವ್ಯಾತ್ - ಕ್ರಮವಾಗಿ, ತಂಜನಂ - ಆ ಬಂಧುಜನರನ್ನು, ಗುರೂಂಶ್ಚ - ವಸಿಷ್ಠಾದಿ ಗುರುಗಳನ್ನೂ, ತಥಾ - ಹಾಗೆಯೇ, ಮಂತ್ರಿಪ್ರಕೃತೀಃ - ಮಂತ್ರಿಗಳನ್ನೂ, ಅನುಜೌ - ತಮ್ಮಂದಿರಾದ ಭರತ ಶತ್ರುಘ್ನರನ್ನೂ, ಪ್ರತಿನಂದ್ಯ-ಸಂತೋಷಗೊಳಿಸಿ, ವ್ಯಸರ್ಜಯತ್-ಬಿಟ್ಟನು. ॥ ೩೦ ॥ ಮಾತರಃ - ತಾಯಿಯರು, ಬಾಷ್ಪಗೃಹೀತಕಂಠ್ಯಃ - ಕಂಬನಿಗಳಿಂದ ಹಿಡಿದ ಕಂಠಗಳುಳ್ಳವರಾಗಿ, ದುಃಖೇನ - ವ್ಯಸನದಿಂದ, ಆಮಂತ್ರಯಿತುಂ - ಕರೆದು ಮಾತನಾಡುವದಕ್ಕೆ, ನಶೇಕುಃ - ಸಮರ್ಥರಾಗಲಿಲ್ಲವಷ್ಟೆ, ಸಏವರಾಮಸ್ತು - ಆ ಶ್ರೀರಾಮನಾದರೊ, ಸರ್ವಾಃ - ಸಮಸ್ತರಾದ, ಮಾತೄಃ - ತಾಯಿಯರನ್ನು, ಅಭಿವಾದ್ಯ - ವಂದಿಸಿ, ರುದನ್ - ಅಳುತ್ತ, ಸ್ವಾಂ-ಸ್ವಕೀಯವಾದ, ಕುಟೀಂ - ಆಶ್ರಮವನ್ನು, ಪ್ರವಿವೇಶ - ಹೊಕ್ಕನು. ॥ ೩೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ದ್ವಾದಶೋತ್ತರಶತತಮಸ್ಸರ್ಗಃ.

ಮಂತ್ರಿಗಳನ್ನೂ, ಒಡಹುಟ್ಟಿದವರಾದ ಭರತಶತ್ರುಘ್ನರನ್ನೂ ಕ್ರಮವಾಗಿ ಸಂತಸಗೊಳಿಸಿ ಕಳುಹಿದನು. ॥ ೨೯-೩೦ ॥ ಆಗ ಕೌಸಲ್ಯೆಯೇ ಮೊದಲಾದ ಜನನಿಯರೂ, ಅಂತಃಪುರಸ್ತ್ರೀಯರೂ, ಕಂಬನಿಗಳನ್ನು ಸುರಿಸುತ್ತಾ ಶ್ರೀರಾಮನನ್ನು ಕರೆದು ಮಾತನಾಡಿಸುವುದಕ್ಕೂ ಅಶಕ್ತರಾಗಿ ನಿಂತಿರಲು, ಆತನೇ ಅವರ ಬಳಿಗೈದಿ ನಮಸ್ಕರಿಸಿ, ರೋದಿಸುತ್ತಾ ತನ್ನ ಪರ್ಣಶಾಲೆಯನ್ನು ಪ್ರವೇಶಿಸಿದನು. ॥ ೩೧ ॥

ಇಂತಿದು ಶ್ರೀರಾಮಕೃತ ಪಾದುಕಾಪ್ರದಾನ ಕಥನವೆಂಬ
ನೂರಹನ್ನೆರಡನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ತ್ರಯೋದಶೋತ್ತರಶತತಮಸ್ಸರ್ಗಃ.

ತತ ಶ್ಶಿರಸಿ ಕೃತ್ವಾತು ಪಾದುಕೇ ಭರತ ಸ್ತದಾ || ಆರುರೋಹ ರಥಂ ಹೃಷ್ಟಃ ಶತ್ರುಘ್ನೇನ ಸಮನ್ವಿತಃ || ೧ || ವಸಿಷ್ಠೋ ವಾಮದೇವಶ್ಚ ಜಾಬಾಲಿಶ್ಚ ದೃಢವ್ರತಃ || ಅಗ್ರತಃ ಪ್ರಯಯು ಸ್ಸರ್ವೇ ಮಂತ್ರಿಣೋ ಮಂತ್ರ ಪೂಜಿತಾಃ || ೨ || ಮಂದಾಕಿನೀಂ ನದೀಂ ರಮ್ಯಾಂ ಪ್ರಾಙ್ಮುಖಾಸ್ತೇ ಯಯು ಸ್ತದಾ || ಪ್ರದಕ್ಷಿಣಂಚ ಕುರ್ವಾಣಾ ಶ್ಚಿತ್ರಕೂಟಂ ಮಹಾಗಿರಿಂ || ೩ || ಪಶ್ಯ೯ ಧಾತುಸಹಸ್ರಾಣಿ ರಮ್ಯಾಣಿ ವಿವಿಧಾನಿಚ||ಪ್ರಯಯು ಸ್ತಸ್ಯ ಪಾರ್ಶ್ವೇನ

ತತಃ - ಬಳಿಕ, ಭರತಃ - ಭರತನು, ಪಾದುಕೇ - ಪಾದುಕೆಗಳನ್ನು, ಶಿರಸಿ - ಮಂಡೆಯಲ್ಲಿ, ಕೃತ್ವಾ - ಧರಿಸಿ, ಹೃಷ್ಟಃ - ಸಂತೋಷಗೊಂಡವನಾಗಿ, ಶತ್ರುಘ್ನೇನ-ಶತ್ರುಘ್ನನೊಡನೆ, ಸಮನ್ವಿತಃ-ಕೂಡಿ, ತದಾ - ಆಗ, ರಥಂ - ತೇರನ್ನು, ಆರುರೋಹ - ಏರಿದನು. || ೧ || ವಸಿಷ್ಠಃ - ವಸಿಷ್ಠ ಋಷಿಯು, ವಾಮದೇವಶ್ಚ - ವಾಮದೇವಋಷಿಯೂ, ದೃಢವ್ರತಃ - ದೃಢವಾದ ನಿಯಮವುಳ್ಳ, ಜಾಬಾಲಿಶ್ಚ - ಜಾಬಾಲಿಋಷಿಯೂ, ಮಂತ್ರಪೂಜಿತಾಃ - ಆಲೋಚನೆಯಲ್ಲಿ ಶ್ಲಾಘಿಸಲ್ಪಟ್ಟ, ಸರ್ವೇ - ಸಮಸ್ತರಾದ, ಮಂತ್ರಿಣಶ್ಚ - ಮಂತ್ರಿಗಳೂ, ಅಗ್ರತಃ - ಮುಂಗಡೆ, ಪ್ರಯಯುಃ - ತೆರಳಿದರು, ತೇ - ಆ ಮಂತ್ರಿಗಳು, ತದಾ - ಆ ಕಾಲದಲ್ಲಿ, ರಮ್ಯಾಂ - ಮನೋಹರವಾದ, ಮಂದಾಕಿನೀಂ ನದೀಂ - ಗಂಗಾನದಿಯನ್ನುದ್ದೇಶಿಸಿ, ಚಿತ್ರಕೂಟಂ - ಚಿತ್ರಕೂಟವೆಂಬ, ಮಹಾಗಿರಿಂ - ದೊಡ್ಡ ಬೆಟ್ಟವನ್ನೂ, ಪ್ರದಕ್ಷಿಣಂ - ಪ್ರದಕ್ಷಿಣವನ್ನು, ಕುರ್ವಾಣಾಃ - ಮಾಡುತ್ತ, ಯಯುಃ - ತೆರಳಿದನು. || ೨-೩ || ಭರತಃ - ಭರತನು, ತದಾ - ಆ ಕಾಲದಲ್ಲಿ, ಸಸೈನ್ಯಃ - ಸೇನಾಸಮೇತನಾಗಿ, ತಸ್ಯ - ಆ ಚಿತ್ರಕೂಟಪರ್ವತದ, ರಮ್ಯಾಣಿ - ಮನೋಹರಗಳಾದ, ಧಾತುಸಹಸ್ರಾಣಿ - ಸಾವಿರಾರು

ಆ ಬಳಿಕ ಭರತಕುಮಾರನು ಸರ್ವೋತ್ತಮವೂ, ಶತ್ರುಂಜಯವೆಂದು ಪ್ರಸಿದ್ಧವಾದುದೂ, ಆದ ಆನೆಯ ಶಿರಸ್ಸಿನಿಂದ ಶ್ರೀರಾಮನಿಂದ ಕೊಡಲಾದ ಪಾದುಕೆಗಳನ್ನು ತನ್ನ ಶಿರಸ್ಸಿನಲ್ಲಿಟ್ಟುಕೊಂಡು ಪರಮಾನಂದವುಳ್ಳವನಾಗಿ, ಶತ್ರುಘ್ನನೊಡಗೂಡಿ ರಥವನ್ನೇರಿದನು. ಆಗ ದೃಢವಾದ ವ್ರತವುಳ್ಳ ವಸಿಷ್ಠನು, ವಾಮದೇವ, ಜಾಬಾಲಿ, ಕಾರ್ಯಾಕಾರ್ಯಗಳಲ್ಲಿ ಮಹಾ ನಿಪುಣರಾದ ಮಂತ್ರಿಶ್ರೇಷ್ಠರು, ಇತರ ಜನರು, ಇವರೆಲ್ಲರೂ ಮುಂದಕ್ಕೆ ಹೊರಟು, ಸೀತಾರಾಮರ ಕ್ರೀಡೆಯಿಂದ ಮನೋಹರವಾದ ಮಂದಾಕಿನೀ ನದಿಗಭಿಮುಖವಾಗಿ ತೆರಳಿದವರಾದರು. ಈ ರೀತಿ ಮುಂಬರಿಯುತ್ತ ಬಹು ದೊಡ್ಡದಾದುದೂ, ಮನೋಹರವಾದುದೂ ಆದ ಚಿತ್ರಕೂಟಪರ್ವತಕ್ಕೂ ಪ್ರದಕ್ಷಿಣವನ್ನು ಮಾಡಿದರು.||೧-೩||ಆ ಬಳಿಕ ಭರತನು ಸೈನ್ಯದಿಂದೊಡಗೂಡಿ ಮಹಾ ಸುಂದರಗಳೂ, ನಾನಾವಿಧಗಳೂ ಆದ ಗೈರಿಕಾದಿ ಧಾತುವಿಶೇಷಗಳನ್ನೂ ಒಳಗೊಂಡ ಚಿತ್ರಕೂಟಪರ್ವತದ ಪೂರ್ವಭಾಗವನ್ನನುಸರಿಸಿ

ಸಸೈನ್ಯೋ ಭರತ ಸ್ತದಾ ॥ ೪ ॥ ಅದೂರಾ ಚ್ಚಿತ್ರಕೂಟಸ್ಯ ದದರ್ಶ ಭರತ
ಸ್ತದಾ ॥ ಆಶ್ರಮಂ ಯತ್ರ ಸ ಮುನಿಃ ಭರದ್ವಾಜಃ ಕೃತಾಲಯಃ ॥ ೫ ॥
ಸ ತಮಾಶ್ರಮ ಮಾಗಮ್ಯ ಭರದ್ವಾಜಸ್ಯ ಬುದ್ಧಿಮಾನ್ ॥ ಅವತೀರ್ಯ ರಥಾ
ತ್ಪಾದೌ ವವಂದೇ ಭರತ ಸ್ತದಾ ॥ ೬ ॥ ತತೋ ಹೃಷ್ಟೋ ಭರದ್ವಾಜೋ
ಭರತಂ ವಾಕ್ಯ ಮಬ್ರವೀತ್ ॥ "ಅಪಿಕೃತ್ಯಂ ಕೃತಂ ತಾತ ! ರಾಮೇಣ ಚ
ಸಮಾಗತಂ?" ॥ ೭ ॥ ಏವಮುಕ್ತ ಸ್ಸತು ತತೋ ಭರದ್ವಾಜೇನ ಧೀಮತಾ ॥
ಪ್ರತ್ಯುವಾಚ ಭರದ್ವಾಜಂ ಭರತೋ ಭ್ರಾತೃವತ್ಸಲಃ ॥೮॥ ಸ ಯಾಚ್ಯಮಾನೋ

ಇಂಗಳೀಕ, ಹರಿದಳವೇ ಮೊದಲಾದ ಗೈರಿಕಾದಿ ಧಾತುಗಳನ್ನು, ಪಶ್ಯನ್-ನೋಡುತ್ತ, ಪಾರ್ಶ್ವೇನ-ಉತ್ತರ ಪಾರ್ಶ್ವ ಮಾರ್ಗದಿಂದ, ಪ್ರಯಯೌ - ಹೊರಟನು. ॥ ೪ ॥ ಭರತಃ - ಭರತನು, ತದಾ - ಆ ಕಾಲದಲ್ಲಿ, ಸಃ - ಪ್ರಸಿದ್ಧನಾದ, ಭರದ್ವಾಜೋಮುನಿಃ - ಭರದ್ವಾಜಋುಷಿಯು, ಯತ್ರ - ಯಾವ ಸ್ಥಳದಲ್ಲಿ, ಕೃತಾಲಯಃ - ಮಾಡಲ್ಪಟ್ಟ ಮನೆಯುಳ್ಳವನಾಗಿದ್ದಾನೋ, ಚಿತ್ರಕೂಟಸ್ಯ - ಚಿತ್ರಕೂಟ ಪರ್ವತಕ್ಕೆ, ಅದೂರಾತ್ - ಸಮೀಪದಲ್ಲಿ, ತಮಾಶ್ರಮಂ - ಆ ಆಶ್ರಮವನ್ನು, ದದರ್ಶ - ಕಂಡನು. ॥ ೫ ॥ ಬುದ್ಧಿಮಾನ್ - ಬದ್ಧಿಶಾಲಿಯಾದ, ಸಭರತಃ - ಆ ಭರತನು, ತಮಾಶ್ರಮಂ - ಆ ಆಶ್ರಮ ವನ್ನು ಕುರಿತು, ಆಗಮ್ಯ - ಬಂದು, ರಥಾತ್ - ರಥದಿಂದ, ಅವತೀರ್ಯ - ಇಳಿದು, ತದಾ - ಆ ಕಾಲದಲ್ಲಿ, ಭರದ್ವಾಜಸ್ಯ - ಭರದ್ವಾಜಋುಷಿಯ, ಪಾದೌ - ಚರಣಗಳನ್ನು, ವವಂದೇ - ನಮಸ್ಕರಿಸಿ ದನು. ॥ ೬ ॥ ತತಃ - ಬಳಿಕ, ಭರದ್ವಾಜಃ - ಭರದ್ವಾಜಋುಷಿಯು, ಹೃಷ್ಟಃ - ಸಂತೋಷ ಗೊಂಡು, ಭರತಂ - ಭರತನನ್ನು ಕುರಿತು, ಹೇ ತಾತ - ಎಲೈ ವತ್ಸನೇ, ಕೃತ್ಯಂ - ನಿನ್ನಿಂದ ಮಾಡ ತಕ್ಕ ಕಾರ್ಯವು, ಅಪಿಕೃತಂ - ಮಾಡಲಾಯಿತೇ ! ರಾಮೇಣಚ - ಶ್ರೀರಾಮನಿಂದಲೂ, ಅಪಿಸ ಮಾಗತಂ - ಒಡಗೂಡಿದೆಯಾ. ॥ ೭ ॥ ಧೀಮತಾ - ಬುದ್ಧಿಶಾಲಿಯಾದ, ಭರದ್ವಾಜೇನ - ಭರ ದ್ವಾಜಋುಷಿಯಿಂದ, ಏವಂ - ಈಪರಿಯಾಗಿ, ಉಕ್ತಃ - ಹೇಳಲ್ಪಟ್ಟ, ಭ್ರಾತೃವತ್ಸಲಃ - ಅಣ್ಣನಲ್ಲಿ ಭಕ್ತಿಯುಳ್ಳ, ಭರತಃ - ಭರತನು, ತತಃ - ಬಳಿಕ, ಭರದ್ವಾಜಂ - ಭರದ್ವಾಜಋುಷಿಯನ್ನು ಕುರಿತು, ಪ್ರತ್ಯುವಾಚ - ಪ್ರತ್ಯುತ್ತರ ಕೊಟ್ಟನು. ॥ ೮ ॥ ದೃಢವಿಕ್ರಮಃ - ದೃಢವಾದ ಪ್ರತಿಜ್ಞೆಯುಳ್ಳ,

---

ಹೊರಟವನಾದನು.॥೪॥ಹಾಗೆ ಚಿತ್ರಕೂಟಪರ್ವತದ ಸೌಂದರ್ಯವನ್ನು ನೋಡುತ್ತ ಹೋಗು ತ್ತಿರಲು ಭರದ್ವಾಜನಿಂದ ನಿರ್ಮಿತವಾದ ಆಶ್ರಮವನ್ನು ಸಮೀಪದಲ್ಲಿರುವುದನ್ನಾಗಿ ನೋಡಿ ದವನಾದನು. ಆಗ ಮಹಾ ಬುದ್ಧಿಶಾಲಿಯಾದಾಭರತಕುಮಾರನು, ಆ ಮುನಿಯ ಆಶ್ರಮಕ್ಕೆ ಹೋದನು. ಇಂತು ಆ ಮುನಿಯ ಆಶ್ರಮದ ಬಳಿಗೈದಿ ರಥದಿಂದಿಳಿದು ಆತನ ಪಾದಗಳಿಗೆ ನಮಸ್ಕಾರ ಮಾಡಲು, ಆ ಮುನಿಯು ಮಹದಾನಂದಭರಿತನಾಗಿ ಆ ಭರತನನ್ನು ಕುರಿತು, "ವತ್ಸ! ಭರತ; ನೀನು ಶ್ರೀರಾಮನನ್ನುಕಂಡು ಆತನೊಡಗೂಡಿದೆಯಾ? ಆತನು ನಿನ್ನಕೋರಿಕೆ ಯನ್ನು ನೆರವೇರಿಸಿದನೆ ?" ಎಂದು ಕೇಳಿದನು. ಭರದ್ವಾಜ ಮುನಿಪುಂಗವನಿಂತು ನುಡಿ ಯಲು ಅಣ್ಣತಮ್ಮಂದಿರಲ್ಲಿ ಮಹಾ ದಯೆಯುಳ್ಳವನೂ, ಮಹಾನುಭಾವನೂ ಆದ ಆ ಭರ ತನು, ಮಹಾ ಮೇಧಾವಿಯಾದ ಆ ಮುನಿಯನ್ನು ಕುರಿತು, " ಅಯ್ಯಾ ಮುನಿಶ್ರೇಷ್ಠನೇ !

ಗುರುಣಾ ಮಯಾಚ ದೃಢವಿಕ್ರಮಃ ॥ ರಾಘವಃ ಪರಮಪ್ರೀತೋ ವಸಿಷ್ಠಂ ವಾಕ್ಯ ಮಬ್ರವೀತ್ ॥೯॥ "ಪಿತುಃ ಪ್ರತಿಜ್ಞಾಂ ತಾಮೇವ ಪಾಲಯಿಷ್ಯಾಮಿ ತತ್ವತಃ ॥ ಚತುರ್ದಶಹಿ ವರ್ಷಾಣಿ ಯಾ ಪ್ರತಿಜ್ಞಾ ಪಿತು ರ್ಮಮ" ॥ ೧೦ ॥ ಏವಮುಕ್ತೋ ಮಹಾಪ್ರಾಜ್ಞೋ ವಸಿಷ್ಠಃ ಪ್ರತ್ಯುವಾಚಹ ॥ ವಾಕ್ಯಜ್ಞೋ ವಾಕ್ಯಕುಶಲಂ ರಾಘವಂ ವಚನಂ ಮಹತ್ ॥ ೧೧ ॥ ಏತೇ ಪ್ರಯಚ್ಛ ಸಂಹೃಷ್ಟಃ ಪಾದುಕೇ ಹೇಮಭೂಷಿತೇ ॥ ಅಯೋಧ್ಯಾಯಾಂ ಮಹಾಪ್ರಾಜ್ಞ!

ಸರಾಘವಃ - ಆ ಶ್ರೀರಾಮನು, ಮಯಾಚ - ನನ್ನಿಂದಲೂ, ಗುರುಣಾಚ - ಕುಲಗುರುವಾದ ವಸಿಷ್ಠ ರಿಂದಲೂ, ಯಾಚ್ಯಮಾನಃ - ಬೇಡಿಕೊಳ್ಳಲ್ಪಟ್ಟವನಾಗಿ, ಪರಮಪ್ರೀತಃ-ಬಹಳ ಸಂತೋಷಗೊಂಡು, ವಸಿಷ್ಠಂ - ವಸಿಷ್ಠಋಷಿಯನ್ನು ಕುರಿತು, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥ ೯ ॥ ಪಿತುಃ - ತಂದೆಗೆ, ಮಮ - ನನ್ನಿಂದ, ಚತುರ್ದಶಹಿವರ್ಷಾಣಿ - ಹದಿನಾಲ್ಕು ವರುಷಗಳು, ಯಾ ಪ್ರತಿಜ್ಞಾ - ಯಾವ ಶಪಥವು, ಕೃತಾ - ಮಾಡಲ್ಪಟ್ಟಿತೋ, ಪಿತುಃ-ತಂದೆಯ, ತಾಂಪ್ರತಿಜ್ಞಾಮೇವ- ಆದೇ ಪ್ರತಿಜ್ಞೆಯನ್ನೇ, ತತ್ವತಃ - ಯಥಾರ್ಥವಾಗಿ, ಪಾಲಯಿಷ್ಯಾಮಿ - ರಕ್ಷಿಸುತ್ತೇನೆ. ॥ ೧೦ ॥ ಏವಂ - ಈಪರಿಯಾಗಿ, ಉಕ್ತಃ - ಹೇಳಲ್ಪಟ್ಟ, ಮಹಾಪ್ರಾಜ್ಞಃ-ಮಹಾ ಪಂಡಿತನಾದ, ವಾಕ್ಯಜ್ಞಃ- ಇತರರ ಮಾತುಗಳನ್ನು ತಿಳಿವುದರಲ್ಲಿ ಪಂಡಿತನಾದ, ವಸಿಷ್ಠಃ - ವಸಿಷ್ಠಋಷಿಯು, ವಾಕ್ಯಕುಶಲಂ - ವಚನದಲ್ಲಿ ನಿಪುಣನಾದ, ರಾಘವಂ - ಶ್ರೀರಾಮನನ್ನು ಕುರಿತು, ಮಹದ್ವಚನಂ - ದೊಡ್ಡದಾದ ಈ ಮಾತನ್ನು, ಪ್ರತ್ಯುವಾಚಹ - ಪ್ರತ್ಯುತ್ತರ ಕೊಟ್ಟನು. ॥ ೧೧ ॥ ಹೇ ಮಹಾಪ್ರಾಜ್ಞ - ಎಲೈ ಮಹಾವಿವೇಕಶಾಲಿಯೇ, ಸಂಪ್ರಹೃಷ್ಟಃ - ಸಂತೋಷಗೊಂಡವನಾಗಿ, ಹೇಮಭೂಷಿತೇ - ಚಿನ್ನದಿಂದ ಅಲಂಕೃತವಾದ, ಏತೇಪಾದುಕೇ - ಈ ಪಾದುಕೆಗಳನ್ನು, ಪ್ರಯಚ್ಛ - ಕೊಡು, ಅಯೋಧ್ಯಾಯಾಂ-

---

ನಿನ್ನಾಜ್ಞೆಯನ್ನು ಹೊಂದಿದ ಬಳಿಕ ನಾನು ಶ್ರೀರಾಮನನ್ನು ನೋಡಿದನು. ಆಮೇಲೆ ನಾನೂ, ವಸಿಷ್ಠ ಮಹಾ ಮುನಿಯೂ, ದೃಢಪರಾಕ್ರಮಿಯಾದ ಆತನನ್ನು ಅನೇಕ ವಿಧವಾಗಿ ಪ್ರಾರ್ಥಿಸಿದೆವು. ಆಗಲಾತನು ಪರಮಾನಂದಿತನಾಗಿ ವಸಿಷ್ಠ ಮುನಿಜೊಡನೆ ಹೀಗೆಂದನು. ॥೫-೯॥ "ಎಲೈ ವಸಿಷ್ಠಋಷಿಯೆ! ನನ್ನ ತಂದೆಯಾದ ದಶರಥಮಹಾರಾಜನೊಡನೆ, ಹದಿನಾಲ್ಕುಸಂವತ್ಸರಗಳವರೆವಿಗೂ ವನವಾಸ ಮಾಡುತ್ತೇನೆಂದು ಪ್ರತಿಜ್ಞೆಯನ್ನು ಮಾಡಿದ್ದೇನೆ. ಇದಕ್ಕಾಗಿ ದಶರಥರಾಯನು ಸಂತುಷ್ಟನಾದನು. ಆದುದರಿಂದ ನಾನು ನನ್ನ ತಂದೆಯ ಆಜ್ಞೆಯಂತೆ ಹದಿನಾಲ್ಕುಸಂವತ್ಸರಗಳವರೆವಿಗೂ ಅರಣ್ಯದಲ್ಲಿಯೇ ಇರುತ್ತೇನೆ." ಶ್ರೀರಾಮ ಮೂರ್ತಿಯಿಾರೀತಿ ನುಡಿಯಲು, ಮಹಾ ಬುದ್ಧಿಯುಳ್ಳವನೂ, ಮಾತನಾಡುವುದರಲ್ಲಿ ಮಹಾ ಚತುರನೂ ಆದ ವಸಿಷ್ಠಋಷಿಯು, ಬಹು ವಿಚಿತ್ರಗಳಾದ ಮಾತುಗಳಾಡುವುದರಲ್ಲಿ ನಿಪುಣನಾದ ಶ್ರೀರಾಮನನ್ನು ಕುರಿತು, ಒಂದು ದೊಡ್ಡ ಮಾತನ್ನಾಡಬೇಕೆಂದು ಬಯಸಿ ಹೀಗೆಂದನು. "ಎಲೈ ಬುದ್ಧಿವಂತನಾದ ಶ್ರೀರಾಮನೆ! ಈ ಭರತನು ನಿನಗೆ ಸಮರ್ಪಿಸ ಬೇಕೆಂಬ ಬುದ್ಧಿಯಿಂದ ಬಂಗಾರದ ಈ ಪಾದುಕೆಗಳನ್ನು ತೆಗೆದುಕೊಂಡು ಬಂದಿದ್ದಾನೆ. ಇವುಗಳನ್ನು ನೀನು ಹಾಕಿಕೊಂಡು ಪುನಃ ಭರತನಿಗೆ ಕೊಡುವವನಾಗು. ಆಮೇಲೆ ಭರತನೀ

ಯೋಗಕ್ಷೇಮಕರೇ ತವ ॥೧೨॥ ಏವಮುಕ್ತೋ ವಸಿಷ್ಠೇನ ರಾಘವಃ
ಪ್ರಾಙ್ಮುಖಸ್ಥಿತಃ ॥ ಪಾದುಕೇ ಹ್ಯಧಿರುಹ್ಯೈತೇ ಮಮ ರಾಜ್ಯಾಯ ವೈ ದದೌ
॥೧೩॥ ನಿವೃತ್ತೋಽಹ ಮನುಜ್ಞಾತೋ ರಾಮೇಣ ಸು ಮಹಾತ್ಮನಾ ॥ ಅಯೋ
ಧ್ಯಾಮೇವ ಗಚ್ಛಾಮಿ ಗೃಹೀತ್ವಾ ಪಾದುಕೇ ಶುಭೇ ॥೧೪॥ ಏತಚ್ಛ್ರುತ್ವಾ
ಶುಭಂ ವಾಕ್ಯಂ ಭರತಸ್ಯ ಮಹಾತ್ಮನಃ ॥ ಭರದ್ವಾಜ ಶ್ಶುಭತರಂ ಮುನಿರ್ವಾಕ್ಯ

ಅಯೋಧ್ಯಾಪಟ್ಟಣದಲ್ಲಿ, ತವ - ನಿನ್ನ, ಪಾದುಕೇ - ಪಾದುಕೆಗಳು, ಯೋಗಕ್ಷೇಮಕರೇ - ಯೋಗಕ್ಷೇಮವನ್ನು ಮಾಡುತ್ತವೆ. ॥೧೨॥ ಏವಂ - ಈಪರಿಯಾಗಿ, ವಸಿಷ್ಠೇನ - ವಸಿಷ್ಠಋಷಿಯಿಂದ, ಉಕ್ತಃ - ಹೇಳಲ್ಪಟ್ಟ, ರಾಘವಃ - ಶ್ರೀರಾಮನು, ಪ್ರಾಙ್ಮುಖಃ - ಪೂರ್ವಾಭಿಮುಖನಾಗಿ, ಸ್ಥಿತಃ - ನಿಂತು, ಏತೇಪಾದುಕೇ - ಈ ಪಾದುಕೆಗಳನ್ನು, ಅಭಿರುಹ್ಯ - ಏರಿ, ಮಮ - ನನಗೆ, ರಾಜ್ಯಾಯವೈ-ರಾಜ್ಯಭಾರಕ್ಕೋಸುಗ, ದದೌ - ಕೊಟ್ಟನು. ॥೧೩॥ ಅಹಂ - ನಾನು, ಸುಮಹಾತ್ಮನಾ - ಒಳ್ಳೆಯ ಮನವುಳ್ಳ, ರಾಮೇಣ - ಶ್ರೀರಾಮನಿಂದ, ಅನುಜ್ಞಾತಃ-ಸಮ್ಮತಿಸಲ್ಪಟ್ಟವನಾಗಿ, ನಿವೃತ್ತಃ - ಹಿಂತಿರುಗಿ, ಶುಭೇ - ಶುಭಕರವಾದ, ಪಾದುಕೇ - ಪಾದುಕೆಗಳನ್ನು, ಗೃಹೀತ್ವಾ - ತೆಗದುಕೊಂಡು, ಅಯೋಧ್ಯಾಮೇವ - ಅಯೋಧ್ಯಾಪಟ್ಟಣವನ್ನೇ ಕುರಿತು, ಗಚ್ಛಾಮಿ - ಹೋಗುತ್ತೇನೆ. ॥೧೪॥ ಭರದ್ವಾಜೋಮುನಿಃ - ಭರದ್ವಾಜಋಷಿಯು, ಮಹಾತ್ಮನಃ - ಮಹಾ ಧೈರ್ಯಶಾಲಿಯಾದ, ಭರತಸ್ಯ-ಭರತನ, ಶುಭಂ - ಮಂಗಳಕರವಾದ, ಏತದ್ವಾಕ್ಯಂ - ಈ ಮಾತನ್ನು, ಶ್ರುತ್ವಾ - ಕೇಳಿ, ಶುಭಕರಂ-ಶುಭಕರವಾದ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥೧೫॥ ಹೇ ನರವ್ಯಾಘ್ರ -

ಪಾದುಕೆಗಳನ್ನು ತೆಗೆದುಕೊಂಡು ಹೋಗಿ ಅಯೋಧ್ಯಾಪಟ್ಟಣದಲ್ಲಿ ಅಭಿಷೇಕ ಮಾಡುತ್ತಾನೆ. ಹಾಗೆ ಮಾಡಿದರೆ ನಿನ್ನೀಪಾದುಕೆಗಳೇ ಪ್ರಜೆಗಳ ಯೋಗಕ್ಷೇಮವನ್ನು ವಹಿಸಿ ಪರಿಪಾಲನಾಕಾರ್ಯವನ್ನು ಮಾಡುತ್ತವೆ"॥೧೧-೧೨॥ ವಸಿಷ್ಠಮಹಾಮುನಿಯು ಹೀಗೆನ್ನಲು ಶ್ರೀರಾಮನು ಪೂರ್ವಾಭಿಮುಖನಾಗಿ ಆ ಪಾದುಕೆಗಳನ್ನೇರಿ ರಾಜ್ಯಭಾರವನ್ನು ಮಾಡಲು ನನಗಿತ್ತವನಾದನು. ಆಗ ನಾನು ಮಹಾತ್ಮನಾದ ಆ ಶ್ರೀರಾಮನ ಆಜ್ಞೆಯನ್ನು ಹೊಂದಿ, ಆ ಪಾದುಕೆಗಳನ್ನು ತಲೆಯಲ್ಲಿಟ್ಟುಕೊಂಡು, ಪುನಃ ಅಯೋಧ್ಯಾಪಟ್ಟಣಕ್ಕೆ ಹೊರಡುತ್ತಿದ್ದೇನೆ" ಎಂದು ಹೇಳಿದನು. ಆಗ ಮಹಾನುಭಾವನಾದ ಭರತನ ಮಾತುಗಳನ್ನು ಕೇಳಿ, ಭರದ್ವಾಜಮುನಿಯು ಮಂಗಳಕರವಾದ ಮಾತುಗಳನ್ನಾಡಬೇಕೆಂದು ಬಯಸಿ ಅತನನ್ನು ಕುರಿತು ಹೀಗೆಂದನು. "ಮಾನವೋತ್ತಮನಾದ ಎಲೈ ಭರತನೆ! ಸದಾಚಾರಗಳುಳ್ಳವರಲ್ಲಿ ಮಹಾ ಶ್ರೇಷ್ಠನಾದ ನೀನೀರೀತಿ ಮಾಡಿದುದೇನೂ ಹೆಚ್ಚಿನದಲ್ಲ. "ಕೆರೆಯಲ್ಲಿ ನೀರು ನಿಲ್ಲುವುದೂ ಒಂದು ಆಶ್ಚರ್ಯ ವಿಷಯವೆ?" ಹಾಗೆಯೇ ಸತ್ಪುರುಷನಾದ ನಿನ್ನಲ್ಲಿ ಜ್ಯೇಷ್ಠ ಭ್ರಾತೃವಾದ ಶ್ರೀರಾಮನನ್ನು ಅನುಸರಿಸಿ ಹೋಗುವ ಪುಣ್ಯಕಾರ್ಯವೆಂಬುದಿರುವುದೇನು ತಾನೇ ಅತಿಶಯ? ಆದುದರಿಂದ ನಿನ್ನಂತಹ ಸತ್ಪುರುಷರಿಗೆ ಇದೇನೂ ಹೆಚ್ಚಿನದಲ್ಲ; ಇದು ಸಹಜವಾದುದೆಂದು ತಿಳಿಯುತ್ತೇನೆ. ಸಕಲ ಧರ್ಮಗಳನ್ನೂ ಚೆನ್ನಾಗಿ ತಿಳಿದವನೂ, ಧರ್ಮದಲ್ಲಿಯೇ ಪ್ರೀತಿಯುಳ್ಳ ನಿನ್ನಂತಹ ಪುತ್ರನನ್ನು ಪಡೆದುದರಿಂದ, ಮಹಾ ಬಾಹುವೂ,

ಮುವಾಚತಂ ॥೧೫॥ "ನೈತಚ್ಚಿತ್ರಂ ನರವ್ಯಾಘ್ರ! ಶೀಲವೃತ್ತವತಾಂ ವರ! ॥
ಯದಾರ್ಯಂ ತ್ವಯಿ ತಿಷ್ಠೇತ್ತು ನಿಮ್ನೇ ವೃಷ್ಟಮಿವೋದಕಂ ॥ ೧೬ ॥
ಅಮೃತ ಸ್ಸ ಮಹಾಬಾಹುಃ ಪಿತಾ ದಶರಥ ಸ್ತವ ॥ ಯಸ್ಯ ತ್ವಮೀದೃಶಃ
ಪುತ್ರೋ ಧರ್ಮಜ್ಞೋ ಧರ್ಮವತ್ಸಲಃ" ॥ ೧೭ ॥ ತಮೃಷಿಂತು ಮಹಾತ್ಮಾನ
ಮುಕ್ತವಾಕ್ಯಂ ಕೃತಾಂಜಲಿಃ ॥ ಆಮಂತ್ರಯಿತು ಮಾರೇಭೇ ಚರಣಾವುಪ
ಗೃಹ್ಯ ಚ ॥ ೧೮ ॥ ತತಃ ಪ್ರದಕ್ಷಿಣಂ ಕೃತ್ವಾ ಭರದ್ವಾಜಂ ಪುನಃ ಪುನಃ ॥
ಭರತಸ್ತು ಯಯೌ ಶ್ರೀಮಾನಯೋಧ್ಯಾಂ ಸಹಮಂತ್ರಿಭಿಃ ॥ ೧೯ ॥
ಯಾನೈಶ್ಚ ಶಕಟೈಶ್ಚೈವ ಹಯೈರ್ನಾಗೈಶ್ಚ ಸಾಚಮೂಃ ॥ ಪುನರ್ನಿವೃತ್ತಾ

ಎಲೈ ಮನುಷ್ಯಶ್ರೇಷ್ಠನೇ, ಹೇಶೀಲವೃತ್ತವತಾಂವರ - ಎಲೈ ಒಳ್ಳೆಯ ನಡತೆಯುಳ್ಳವರಲ್ಲ ಶ್ರೇಷ್ಠನೇ, ತ್ವಯಿ - ನಿನ್ನಲ್ಲಿ, ಆರ್ಯಂ - ಜ್ಯೇಷ್ಠಾನುವರ್ತನರೂಪ ಕಾರ್ಯವು, ಯತ್-ಯಾವದು, ತಿಷ್ಠೇತ್ - ಇರುವದೋ, ಏತತ್ - ಈ ಕೃತ್ಯವು, ನಿಮ್ನೇ - ತಟಾಕಾದಿ ನಿಮ್ನ ಪ್ರದೇಶದಲ್ಲಿ, ವೃಷ್ಟಂ - ಇರುವ, ಉದಕಮಿವ - ನೀರಿನಂತೆ, ಚಿತ್ರಂ - ವಿಚಿತ್ರಕರವಾದುದು, ನ - ಅಲ್ಲ. ॥ ೧೬ ॥ ಈದೃಶಃ - ಇಂತಹನಾದ, ಧರ್ಮವತ್ಸಲಃ - ಧರ್ಮದಲ್ಲಿಯೇ ಅಭಿಮಾನಶಾಲಿಯಾದ, ಧರ್ಮಜ್ಞಃ-ಧರ್ಮವೇತ್ತನಾದ, ತ್ವಂ - ನೀನು, ಯಸ್ಯ - ಯಾವ ದಶರಥರಾಯನಿಗೆ, ಪುತ್ರಃ - ಮಗನಾಗಿರುವೆಯೋ, ತವ - ನಿನಗೆ, ಪಿತಾ - ತಂದೆಯಾದ, ಮಹಾಬಾಹುಃ - ಮಹಾ ಭುಜಪರಾಕ್ರಮಶಾಲಿಯಾದ, ಸದಶರಥಃ - ಆ ದಶರಥರಾಯನು, ಅಮೃತಃ - ಸತ್ತವನಲ್ಲ. ॥ ೧೭ ॥ ಮಹಾತ್ಮಾನಂ - ಮಹಾ ತಪಸ್ವಿಯಾದ, ಉಕ್ತವಾಕ್ಯಂ - ಹೇಳಲ್ಪಟ್ಟ ಮಾತುಗಳುಳ್ಳ, ತಮೃಷಿಂ - ಆ ಭರದ್ವಾಜಋಷಿಯನ್ನು ಕುರಿತು, ಕೃತಾಂಜಲಿಃ - ಅಂಜಲಿಬದ್ಧನಾಗಿ, ಚರಣೌ - ಪಾದಗಳನ್ನು, ಪರಿಗೃಹ್ಯ - ಹಿಡಿದುಕೊಂಡು, ಆಮಂತ್ರಯಿತುಂ - ಅಪ್ಪಣೆಕೇಳುವದಕ್ಕೆ, ಆರೇಭೇ - ಆರಂಭಿಸಿದನು. ॥ ೧೮ ॥ ತತಃ - ಬಳಿಕ, ಶ್ರೀಮಾನ್ - ಸಂಪದ್ಯುಕ್ತನಾದ, ಭರತಸ್ತು - ಭರತನಾದರೆ, ಭರದ್ವಾಜಂ - ಭರದ್ವಾಜಋಷಿಯನ್ನು ಕುರಿತು, ಪುನಃಪುನಃ - ಬಾರಿಬಾರಿಗೂ, ಪ್ರದಕ್ಷಿಣಂ - ನಮಸ್ಕಾರಮಾಡಿ, ಮಂತ್ರಿಭಿಸ್ಸಹ - ಮಂತ್ರಿಗಳೊಡನೆ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ಯಯೌ - ತೆರಳಿದನು. ॥ ೧೯ ॥ ಸಾಚಮೂಃ - ಆ ಸೈನ್ಯವು, ಯಾನೈಶ್ಚ - ವಾಹನಗಳಿಂದಲೂ, ಶಕಟೈಶ್ಚ-

ನಿನ್ನ ತಂದೆಯೂ ಆದ ದಶರಥರಾಯನು ಮೃತನಾದರೂ ಬದುಕಿದ್ದಂತೆಯೇ ತಿಳಿಯುತ್ತೇನೆ. ಸತ್ಪುತ್ರರನ್ನು ಹೆತ್ತ ತಂದೆಯು ಮೃತನಾದರೂ ಬದುಕಿದವನೆಂದು ವೇದಗಳು ಸಾರುತ್ತಿವೆ." ॥೧೩-೧೬॥ ಆಗಲಾಭರತಕುಮಾರನು ಕೈಗಳನ್ನುಜೋಡಿಸಿಕೊಂಡು, ಮೇಲೆ ಹೇಳಿದ ರೀತಿಯಲ್ಲಿ ಹೇಳುತ್ತಿರುವವನೂ, ಮಹಾನುಭಾವನೂ ಆದ ಆ ಭರದ್ವಾಜಮುನಿಗೆ ಪಾದಾಭಿವಂದನೆಯಂಗೈದನು. ಆ ಬಳಿಕ ಹೋಗಿ ಬರುತ್ತೇನೆಂದು ಹೇಳತೊಡಗಿ ಆ ಮುನಿಗೆ ನೂರುಸಾರಿ ಪ್ರದಕ್ಷಿಣೆಯನ್ನು ಮಾಡಿ, ಆತನ ಆಜ್ಞೆಯನ್ನು ಪಡೆದು ಮಂತ್ರಿಗಳೇ ಮೊದಲಾದವರೊಡಗೂಡಿ ಅಯೋಧ್ಯಾಪಟ್ಟಣವನ್ನು ಕುರಿತು ಹೊರಟವನಾದನು. ಆಗ ಪಲ್ಲಕ್ಕಿಗಳೇ ಮೊದಲಾದ ಯಾನಗಳು, ಎತ್ತಿನಭಂಡಿಗಳು, ಗಜಶ್ರೇಷ್ಠಗಳು ಇವೇ ಮೊದಲಾದುವುಗಳಿಂ

ವಿಸ್ತೀರ್ಣಾ ಭರತಸ್ಯಾಽನುಯಾಯಿನೀ ॥ ೨೦ ॥ ತತಸ್ತೇ ಯಮುನಾಂ ದಿವ್ಯಾಂ ನದೀಂ ತೀರ್ತ್ವೋರ್ಮಿಮಾಲಿನೀಂ ॥ ದದೃಶು ಸ್ತಾಂ ಪುನಸ್ಸರ್ವೇ ಗಂಗಾಂ ಶುಭಜಲಾಂ ನದೀಂ ॥ ೨೧ ॥ ತಾಂ ರಮ್ಯಜಲ ಸಂಪೂರ್ಣಾಂ ಸಂತೀರ್ಯ ಸಹ ಬಾಂಧವಃ॥ಶೃಂಗೀಬೇರಪುರಂ ರಮ್ಯಂ ಪ್ರವಿವೇಶ ಸ ಸೈನಿಕಃ ॥ ೨೨ ॥ ಶೃಂಗೀಬೇರಪುರಾ ದ್ಭೂಯ ಸ್ತ್ವಯೋಧ್ಯಾಂ ಸಂದದರ್ಶಹ ॥ ಅಯೋಧ್ಯಾಂ ಚ ತತೋ ದೃಷ್ಟ್ವಾ ಪಿತ್ರಾ ಭ್ರಾತ್ರಾ ವಿವರ್ಜಿತಾಂ ॥ ೨೩ ॥

ಭಂಡಿಗಳಿಂದಲೂ, ಹಯೈಶ್ಚ - ಆನೆಗಳಿಂದಲೂ, ವಿಸ್ತೀರ್ಣಾ - ವಿಸ್ತಾರವಾದುದಾಗಿ, ಭರತಸ್ಯ - ಭರತನಿಗೆ, ಅನುಯಾಯಿನೀ - ಹಿಂದೆ ಬರುತ್ತಿರುವದಾಗಿ, ಪುನಃ - ಮತ್ತು, ನಿವೃತ್ತಾ - ತಿರುಗಿತು. ॥ ೨೦ ॥ ತತಃ - ಬಳಿಕ, ತೇಸರ್ವೇ - ಆ ಸಮಸ್ತ ಸೇನಾಜನರು, ಊರ್ಮಿಮಾಲಿನೀಂ - ತೆರೆಗಳ ಪರಂಪರೆಗಳುಳ್ಳ, ದಿವ್ಯಾಂ - ದೇವತಾಸಂಬಂಧವಾದ, ಯಮುನಾಂನದೀಂ - ಯಮುನಾನದಿಯನ್ನು, ತೀರ್ತ್ವಾ - ದಾಟಿ, ಶುಭಜಲಾಂ - ನಿರ್ಮಲೋದಕವುಳ್ಳ, ತಾಂಗಂಗಾನದೀಂ - ಆ ಗಂಗಾನದಿಯನ್ನು, ಪುನಃ - ಮತ್ತು, ದದೃಶುಃ - ಕಂಡರು. ॥ ೨೧ ॥ ಸಹಬಾಂಧವಃ - ಬಂಧುಗಳಿಂದೊಡಗೂಡಿ, ಸಸೈನಿಕಃ - ಸೇನೆಯಿಂದ ಸಮೇತನಾದ ಭರತನು, ರಮ್ಯಜಲಸಂಪೂರ್ಣಾಂ - ಇಂಪಾಗಿರುವ ನೀರಿನಿಂದ ತುಂಬಿರುವ, ತಾಂ - ಆ ಭಾಗೀರಥಿಯನ್ನು, ಸಂತೀರ್ಯ - ದಾಟಿ, ರಮ್ಯಂ - ಮನೋಹರವಾದ, ಶೃಂಗಿಬೇರಪುರಂ - ಶೃಂಗಿಬೇರವೆಂಬ ಗುಹನ ಪಟ್ಟಣವನ್ನು, ಪ್ರವಿವೇಶ - ಹೊಕ್ಕನು. ॥ ೨೨ ॥ ಶೃಂಗಿಬೇರಪುರಾತ್ - ಶೃಂಗಿಬೇರಪುರದಿಂದ, ಭೂಯಃ - ಮತ್ತು, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು, ಸಂದದರ್ಶಹ - ಕಂಡನಷ್ಟೆ, ತತಃ - ಬಳಿಕ, ಭರತಃ - ಭರತನು, ಪಿತ್ರಾ - ತಂದೆಯಿಂದಲೂ, ಭ್ರಾತ್ರಾ - ಅಣ್ಣನಿಂದಲೂ, ವಿವರ್ಜಿತಾಂ - ಶೂನ್ಯವಾದ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು, ದೃಷ್ಟ್ವಾ - ಕಂಡು, ದುಃಖಸಂತಪ್ತಃ - ದುಃಖದಿಂದ ಸಂಕಟಗೊಂಡು, ಸಾರಥಿಂಚ - ಸಾರಥಿಯಾದ ಸುಮಂತ್ರನನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೨೩ ॥ ಹೇ ಸಾರಥೇ - ಎಲೈ ಸಾರಥಿಯೇ, ಪಶ್ಯ - ನೋಡು, ವಿಧ್ವಸ್ತಾ - ನಾಶ

ದೊಡಗೂಡಿದ ಆ ಭರತಕುಮಾರನ ಸೈನಿಕರು ಒಡೆಯನನ್ನನುಸರಿಸಿ ಹೊರಟಿತು. ॥೧೮-೨೦॥ ತೆರೆಗಳ ಮಾಲೆಯಿಂದಭಿರಂಜಿಸುತ್ತಿರುವ ಮನೋಹರವಾದ ಯಮುನಾನದಿಯನ್ನು ದಾಟಿದ ಬಳಿಕಲಾ ಭರತಾದಿಗಳು, ಮಂಗಳಕರವಾದ ಉದಕವುಳ್ಳ ಗಂಗಾನದಿಯನ್ನು ಕಂಡವರಾದರು. ಆಮೇಲೆಯಾಭರತನು ನಿರ್ಮಲೋದಕವುಳ್ಳ ಆ ಗಂಗಾನದಿಯನ್ನು ದಾಂಟಿ, ಸುಪ್ರಸಿದ್ಧವೂ ಗುಹನ ರಾಜಧಾನಿಯೂ ಆದ ಶೃಂಗೀಬೇರಪುರವನ್ನು ಸೈನ್ಯಸಮೇತನಾಗಿ ಪ್ರವೇಶಿಸಿ, ಅಲ್ಲಿಂದ ಮುಂಬರಿದು ಅಯೋಧ್ಯಾಪಟ್ಟಣವನ್ನು ಪ್ರವೇಶಿಸಿದನು. ಇಂತು ಪ್ರವೇಶಿಸಿಯೂ, ತಂದೆಯಿಂದಲೂ, ಅಣ್ಣನಿಂದಲೂ ವರ್ಜಿತವಾದ ಆ ಪಟ್ಟಣವನ್ನು ನೋಡಿ ಬಹು ದುಃಖಿತನಾಗಿ ಸಾರಥಿಯಾದ ಸುಮಂತ್ರನನ್ನು ಕುರಿತು, "ಅಯ್ಯಾ, ಸುಮಂತ್ರನೆ! ನೋಡಿದೆಯಾ; ರಾಜಧಾನಿಯಾದ ಅಯೋಧ್ಯಾಪಟ್ಟಣವು ಈಗ ಪ್ರಕಾಶಿಸುತ್ತಿಲ್ಲ. ಆಕಾರಗೆಟ್ಟಿದೆ; ಆನಂದರಹಿತವಾಗಿದೆ; ಶಬ್ದವಡಗಿದೆ; ಬಹು ದೀನವಾಗಿ ಪ್ರಕಾಶಿಸುತ್ತಿರು

ಭರತೋ ದುಃಖಸಂತಪ್ತ ಸ್ಸಾರಥಿಂಚೇದ ಮಬ್ರವೀತ್ ॥
ಸಾರಥೇ ! ಪಶ್ಯ ವಿಧ್ವಸ್ತಾ ಸಾಯೋಧ್ಯಾ ನಪ್ರಕಾಶತೇ ॥
ನಿರಾಕಾರಾ ನಿರಾನಂದಾ ದೀನಾ ಪ್ರತಿಹತ ಸ್ವರಾ ॥ ೨೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ
ತ್ರಯೋದಶೋತ್ತರಶತತಮಸ್ಸರ್ಗಃ.

ಗೊಳಿಸಲ್ಪಟ್ಟ, ನಿರಾಕಾರಾ - ಆಕಾರಕೆಟ್ಟ, ನಿರಾನಂದಾ - ತಪ್ಪಿದ ಸಂತೋಷವುಳ್ಳ, ದೀನಾ - ಪರಿತಾಪವುಳ್ಳ, ಪ್ರತಿಹತಸ್ವರಾ - ಹೊಡೆಯಲ್ಪಟ್ಟ ಶಬ್ದಗಳುಳ್ಳ, ಸಾಅಯೋಧ್ಯಾ - ಆ ಅಯೋಧ್ಯಾಪಟ್ಟಣವು, ನಪ್ರಕಾಶತೇ - ಹೊಳೆಯುವದಿಲ್ಲ. ॥ ೨೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ತ್ರಯೋದಶೋತ್ತರಶತತಮಸ್ಸರ್ಗಃ.

ವುದು. ಶ್ರೀರಾಮಮೂರ್ತಿಯ ವಿರಹದಿಂದ ಇಡೀ ಅಯೋಧ್ಯಾಪಟ್ಟಣವೇ ದುಃಖಿಸುತ್ತಿರುವಂತೆ ಕಾಣಿಸುತ್ತಿರುವುದು. ॥ ೨೧-೨೪ ॥

ಇಂತಿದು ಭರತಕೃತ ಪುನರಾಗಮನ ವೃತ್ತಾಂತ ನಿರೂಪಣವೆಂಬ
ನೂರಹದಿಮೂರನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಚತುರ್ದಶೋತ್ತರಶತತಮಸ್ಸರ್ಗಃ.

ಸ್ನಿಗ್ಧ ಗಂಭೀರ ಘೋಷೇಣ ಸ್ಯಂದನೇನೋಽಪಯಾತ್ ಪ್ರಭುಃ ‖
ಅಯೋಧ್ಯಾಂ ಭರತಃ ಕ್ಷಿಪ್ರಂ ಪ್ರವಿವೇಶ ಮಹಾಯಶಃ ‖ ೧ ‖ ಬಿಡಾಲೋ
ಲೂಕಚರಿತಾ ಮಾಲೀನ ನರವಾರಣಾಂ ‖ ತಿಮಿರಾಭ್ಯಾಹತಾಂ ಕಾಳೀ ಮಪ್ರ
ಕಾಶಾಂ ನಿಶಾಮಿವ ‖ ೨ ‖ ರಾಹುಶತ್ರೋಃ ಪ್ರಿಯಾಂ ಪತ್ನೀಂ ಶ್ರಿಯಾ
ಪ್ರಜ್ವಲಿತಪ್ರಭಾಂ ‖ ಗ್ರಹೇಣಾಽಭ್ಯುತ್ಥಿತೇನೈಕಾಂ ರೋಹಿಣೀಮಿವ ಪೀಡಿತಾಂ
‖ ೩ ‖ ಅಲ್ಪೋಷ್ಣ ಕ್ಷುಬ್ಧಸಲಿಲಾಂ ಘರ್ಮೋತ್ತಪ್ತ ವಿಹಂಗಮಾಂ ‖ ಲೀನ

ಮಹಾಯಶಾಃ - ಬಹಳ ಕೀರ್ತಿವಂತನಾದ, ಪ್ರಭುಃ - ಸಮರ್ಥನಾದ, ಭರತಃ - ಭರತನು, ಸ್ನಿಗ್ಧಗಂಭೀರಘೋಷೇಣ - ಮನೋಹರವಾದ ಗಂಭೀರಧ್ವನಿಯುಳ್ಳ, ಸ್ಯಂದನೇನ - ರಥದಿಂದ, ಉಪಯಾತ್ - ಬಂದು, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು, ಕ್ಷಿಪ್ರಂ - ಜಾಗ್ರತೆಯಾಗಿ, ಪ್ರವಿವೇಶ-ಹೊಕ್ಕನು. ‖ ೧ ‖ ಬಿಡಾಲೋಲೂಕಚರಿತಾಂ - ಮಾರ್ಜಾಲಗಳಿಂದಲೂ ಗೂಬೆಗಳಿಂದಲೂ ಸಂಚರಿಸಲ್ಪಟ್ಟ, ಆಲೀನನರವಾರಣಾಂ - ಅಲ್ಲಲ್ಲೆ ಮುಗ್ಗಿಹೋದ ಮನುಷ್ಯರೂ ಆನೆಗಳೂ ಉಳ್ಳ, ತಿಮಿರಾಭ್ಯಾಹತಾಂ - ಅಂಧಕಾರದಿಂದ ತಿರಸ್ಕೃತವಾದ, ಕಾಳೀಂ - ಕೃಷ್ಣಪಕ್ಷಸಂಬಂಧವಾದ, ಅಪ್ರಕಾಶಾಂ - ಕಾಂತಿಯಿಲ್ಲದ, ನಿಶಾಮಿವಸ್ಥಿತಾಂ - ರಾತ್ರಿಯಂತಿರುವ, ರಾಹುಶತ್ರೋಃ - ರಾಹುವಿಗೆ ಶತ್ರುವಾದ ಚಂದ್ರನಿಗೆ, ಪ್ರಿಯಾಂ - ಇಷ್ಟಳಾದ, ಪತ್ನೀಂ - ಹೆಂಡತಿಯೂ, ಶ್ರಿಯಾ - ಕಾಂತಿಯಿಂದ, ಪ್ರಜ್ವಲಿತಪ್ರಭಾಂ - ಹೊಳೆಯುತ್ತಿರುವ ಪ್ರಕಾಶವುಳ್ಳ, ಅಭ್ಯುಕ್ಷಿತೇನ - ಮಧ್ಯದಲ್ಲಿ ಹುಟ್ಟಿರುವ, ಗ್ರಹೇಣ - ಅಂಗಾರಕ ಗ್ರಹದಿಂದ, ಪೀಡಿತಾಂ - ಬಾಧಿಸಲ್ಪಟ್ಟ, ರೋಹಿಣೀಮಿವ ರೋಹಿಣೀದೇವಿಯಂತಿರುವ, ಅಲ್ಪೋಷ್ಣಕ್ಷುಬ್ಧಸಲಿಲಾಂ - ಸ್ವಲ್ಪ ಬಿಸಿಯಾಗಿ ಕ್ಷೋಭಿಸಲ್ಪಟ್ಟ ನೀರುಳ್ಳ ಘರ್ಮೋತ್ತಪ್ತವಿಹಂಗಮಾಂ - ಗ್ರೀಷ್ಮಕಾಲದಲ್ಲಿ ತಪಿಸಿಹೋದ ಹಕ್ಕಿಗಳುಳ್ಳ, ಲೀನಮೀನಝಷಗ್ರಾ

ಮಹಾ ಕೀರ್ತಿವಂತನೂ, ಬಹು ಸಾಮರ್ಥ್ಯವಂತನೂ ಆದ ಭರತಕುಮಾರನು ಸುಮಂತ್ರನೊಡನೆ ಈ ರೀತಿಯಾಗಿ ಹೇಳುತ್ತಾ, ಬಹು ಸುಂದರವೂ ಗಂಭೀರವೂ ಆದ ರಥದಲ್ಲಿ ಕುಳಿತುಕೊಂಡು ಬಹು ಜಾಗ್ರತೆಯಾಗಿ ಅಯೋಧ್ಯೆಯನ್ನು ಪ್ರವೇಶಿಸಿದನು. ಇಂತು ಪ್ರವೇಶಿಸಿದೊಡನೆಯೇ ಮಾರ್ಜಾಲಗಳಿಂದಲೂ, ದಿವಾಂಧ (ಗೂಬೆ) ಗಳಿಂದಲೂ ಸಂಚರಿಸಲ್ಪಟ್ಟುದೂ, ಅಲ್ಲಲ್ಲಿಯೇ ಅವಿತುಕೊಂಡಿರುವ ಜನಗಳಿಂದಲೂ, ಗಜಗಳಿಂದಲೂ ಕೂಡಿದುದೂ, ಅಂಧಕಾರದಿಂದ ವ್ಯಾಪ್ತವಾಗಿ ಎತ್ತ ನೋಡಿದರತ್ತ ಕಪ್ಪಾಗಿ ಕಾಣುತ್ತಾ, ಬೆಳಕಿಲ್ಲದ ನಿಶೆಯಂತೆ ಕಾಂತಿಹೀನವಾದುದೂ, ಚಂದ್ರಮನಸತಿಯಾದ ರೋಹಿಣೀದೇವಿಯು ಪ್ರಕಾಶಿಸುತ್ತಿರಲು, ಮಹಾಕ್ರೂರಿಯಾದ ರಾಹುವಿನಿಂದ ಬಾಧಿಸಲ್ಪಡಲು ಎಂತು ದುಃಖಿಸುವಳೋ, ಅಂತು ಮಹಾ ದುಃಖದಿಂದ ಪೀಡಿತವಾದುದೂ, ಅರೆಬಿಸಿಯಾಗಿ ಕದಡಲ್ಪಟ್ಟಿರುವ

ಮೀನ ಝಷಗ್ರಾಹಾಂ ಕೃಶಾಂ ಗಿರಿನದೀಮಿವ ॥ ೪ ॥ ವಿಧೂಮಾಮಿವ ಹೇಮಾಭಾ ಮಧ್ವರಾಗ್ನೇಸ್ಸಮುತ್ಥಿತಾಂ ॥ ಹವಿರಭ್ಯುಕ್ಷಿತಾಂ ಪಶ್ಚಾ ಚ್ಛಿಖಾಂ ವಿಪ್ರಲಯಂ ಗತಾಂ ॥೫॥ ವಿಧ್ವಸ್ತ ಕವಚಾಂ ರುಗ್ಣ ಗಜ ವಾಜಿ ರಥ ಧ್ವಜಾಂ॥ ಹತಪ್ರವೀರಾ ಮಾಪನ್ನಾಂ ಚಮೂಮಿವ ಮಹಾಹವೇ ॥ ೬ ॥ ಸಫೇನಾ ಸಸ್ವನಾ ಭೂತ್ವಾ ಸಾಗರಸ್ಯ ಸಮುತ್ಥಿತಾಂ ॥ ಪ್ರಶಾಂತ ಮಾರುತೋದ್ಧೂತಾಂ ಜಲೋರ್ಮಿಮಿವ ನಿಸ್ಸ್ವನಾಂ ॥ ೭ ॥ ತ್ಯಕ್ತಾಂ ಯಜ್ಞಾಯುಧೈ ಸ್ಸರ್ವೈ ರಭಿರೂಪೈಶ್ಚ ಯಾಜಕೈಃ॥ಸುತ್ಯಾ ಕಾಲೇ ನಿರ್ವೃತ್ತೇ ವೇದಿಂಗತ ರಮಾಮಿವ ॥೮॥

ಹಾಂ - ಅವಿತುಕೊಂಡ ಮತ್ಸ್ಯಗಳೂ, ಮಕರಗಳೂ, ಮೊಸಳೆಗಳೂ ಉಳ್ಳ, ಕೃಶಾಂ - ಬತ್ತಿಹೋದ, ಗಿರಿನದೀಮಿವಸ್ಥಿತಾಂ - ಬೆಟ್ಟದಲ್ಲಿನ ನದಿಯಂತಿರುವ, ವಿಧೂಮಾಂ - ಹೊಗೆಯಿಲ್ಲದ, ಹೇಮಾಭ್ಯಾಂ - ಚಿನ್ನದಕಾಂತಿಯಂತೆ ಕಾಂತಿಯುಳ್ಳ, ಅಧ್ವರಾಗ್ನೇಃ - ಯಜ್ಞಸಂಬಂಧವಾದ ಅಗ್ನಿಯಿಂದ, ಸಮುತ್ಥಿತಾಂ - ಮೇಲಕ್ಕೆ ಹುಟ್ಟಿದ, ಪಶ್ಚಾತ್ - ಬಳಿಕ, ಹವಿರಭ್ಯುಕ್ಷಿತಾಂ - ದಧ್ಯಾದಿಹವಿರ್ದ್ರವ್ಯಗಳಿಂದ ನೆನೆಯಿಸಲ್ಪಟ್ಟ, ವಿಪ್ರಳಯಂ - ನಾಶವನ್ನು, ಗತಾಂ - ಹೊಂದಿರುವ, ಶಿಖಾಮಿವಸ್ಥಿತಾಂ - ಜ್ವಾಲೆಯಂತಿರುವ, ಮಹಾಹವೇ - ದೊಡ್ಡ ಕಾಳೆಗದಲ್ಲಿ, ವಿಧ್ವಸ್ತಕವಚಾಂ - ನಾಶಗೊಳಿಸಲ್ಪಟ್ಟ ಕವಚಗಳುಳ್ಳ, ರುಗ್ಣಗಜವಾಜಿರಥಧ್ವಜಾಂ - ರೋಗಯುಕ್ತವಾದ ಆನೆಗಳೂ, ಕುದುರೆಗಳೂ, ಮುರಿದ ರಥಗಳೂ, ನಿಶಾನಿಗಳೂ ಉಳ್ಳ, ಹತಪ್ರವೀರಾಂ - ಹೊಡೆಯಲ್ಪಟ್ಟ ಶೂರರುಳ್ಳ, ಆಪನ್ನಾಂ - ವಿಪತ್ತನ್ನು ಹೊಂದಿರುವ, ಚಮೂಮಿವಸ್ಥಿತಾಂ - ಸೈನ್ಯವಂತಿರುವ, ಸಫೇನಾ - ನೊರೆಯಿಂದೊಡಗೂಡಿದುದಾಗಿ, ಸಸ್ವನಾ - ಧ್ವನಿಯಿಂದೊಡಗೂಡಿದುದಾಗಿಯೂ, ಭೂತ್ವಾ - ಆಗಿ, ಸಾಗರಸ್ಯ - ಕಡಲಿನಿಂದ, ಸಮುತ್ಥಿತಾಂ - ಹುಟ್ಟಿರುವ, ಪ್ರಶಾಂತಮಾರುತೋದ್ಧೂತಾಂ - ಉಪಶಾಂತವಾದ ಗಾಳಿಯಿಂದ ಹಾರಿಸಲ್ಪಟ್ಟ, ನಿಸ್ವನಾಂ - ಧ್ವನಿಯಿಲ್ಲದಿರುವ, ಜಲೋರ್ಮಿರಿವ ಸ್ಥಿತಾಂ ತೆರೆಗಳಂತಿರುವ, ಸರ್ವೈಃ - ಸಮಸ್ತವಾದ, ಯಜ್ಞಾಯುಧೈಃ - ಯಜ್ಞೋಪಯುಕ್ತವಾದ ಅಸ್ತ್ರಶಸ್ತ್ರಗಳಿಂದಲೂ, ಅಭಿರೂಪೈಃ -

---

ಉದಕವುಳ್ಳುದೂ, ಗ್ರೀಷ್ಮಕಾಲದಲ್ಲಿ ಸಂತಾಪವನ್ನು ಹೊಂದಿದ ಪಕ್ಷಿಗಳುಳ್ಳುದಾದುದೂ, ಅಲ್ಲಲ್ಲಿಯೇ ಅವಿತುಕೊಂಡ ಮೀನುಗಳೂ, ಹಕ್ಕಿಗಳೂ, ಮೊಸಳೆಗಳೂ, ಇವುಗಳನ್ನೊಳಗೊಂಡಿರುವ ಸ್ವಲ್ಪೋದಕವುಳ್ಳ ನದಿಯಂತೆ ಕೃಶಿಸಿ ಹೋಗಿರುವುದೂ, ಹೊಗೆ ಮುಚ್ಚಿದ ಚಿನ್ನದಂತೆಯು, ಯಜ್ಞಕುಂಡದ ಬೆಂಕಿಯಿಂದ ಪ್ರಜ್ವಲಿಸಿ ಹವಿಸ್ಸುಗಳಿಂದ ನೆಂದು ಲಯ ಹೊಂದಿದ ಅಗ್ನಿಜ್ವಾಲೆಯಂತೆಯೂ, ಶಾಂತವಾಗಿರುವುದೂ ಮಹೋಗ್ರವಾದ ರಣರಂಗದಲ್ಲಿ ಕವಚಗಳನ್ನು ಕಳೆದುಕೊಂಡ ರೋಗಪೀಡಿತವಾದ ಗಜ, ತುರಗಗಳೂ, ಮುರಿದುಬಿದ್ದ ರಥಗಳೂ, ಮೃತಿಯೊಂದಿದ ಧೀರಾಗ್ರಣಿಗಳೂ ಉಳ್ಳ, ವಿಪತ್ತಿಗೆ ಸಿಲುಕಿದ ಸೈನ್ಯದಂತೆ ಮಹಾ ವಿಪತ್ತಿಗೊಳಗಾದುದೂ, ನೊರೆಯಿಂದಲೂ ಧ್ವನಿಯಿಂದಲೂ ಕೂಡಿಕೊಂಡು ಸಾಗರದಲ್ಲಿ ಉದ್ಭವಿಸಿದ ಪ್ರಳಯಮಾರುತದಿಂದ ಮೇಲಕ್ಕೆ ಹಾರಿಸಲ್ಪಟ್ಟ ತೆರೆಗಳುಳ್ಳ ಸಮುದ್ರದಂತೆಯೂ, ಯಾಗೋಪಕರಣಗಳಾದ ಶಸ್ತ್ರಾಸ್ತ್ರಗಳಿಂದ ನೋಡಲು ಬಹು ರಮಣೀಯವಾದ ಅಧ್ವರ್ಯುವೇ ಮೊದಲಾದ ಯಾಜಕರಿಂದ ವರ್ಜಿತವಾದ ಯಜ್ಞಶಾಲೆ

ಗೋಷ್ಠಮಧ್ಯೇಸ್ಥಿತಾ ಮಾರ್ತಾ ಮಚರಂತೀಂ ತೃಣಂ ನವಂ ॥ ಗೋ ವೃಷೇಣ
ಪರಿತ್ಯಕ್ತಾಂ ಗವಾಂ ಪತ್ನಿಮಿವೋತ್ಸುಕಾಂ ॥೯॥ ಪ್ರಭಾಕರಾದ್ಯೈ ಸ್ಸುಸ್ನಿಗ್ಧೈಃ
ಪ್ರಜ್ವಲದ್ಭಿ ರಿವೋತ್ತಮೈಃ ॥ ವಿಯುಕ್ತಾಂ ಮಣಿಭಿ ರ್ಜಾತ್ಯೈ ರ್ನವಾಂ
ಮುಕ್ತಾವಳೀ ಮಿವ ॥೧೦॥ ಸಹಸಾ ಚಲಿತಾಂ ಸ್ಥಾನಾ ನ್ಮಹೀಂ ಪುಣ್ಯ
ಕ್ಷಯಾ ದ್ಗತಾಂ ॥ ಸಂಹೃತದ್ಯುತಿ ವಿಸ್ತಾರಾಂ ತಾರಾಮಿವ ದಿವಶ್ಚ್ಯುತಾಂ॥೧೧॥
ಪುಷ್ಪನದ್ಧಾಂ ವಸಂತಾಂತೇ ಮತ್ತಭ್ರಮರ ನಾದಿತಾಂ ॥ ದ್ರುತದಾವಾಗ್ನಿ
ವಿಪ್ಲುಷ್ಟಾಂ ಕ್ಲಾಂತಾಂ ವನಲತಾಮಿವ ॥೧೨॥ ಸಂಮೂಢ ನಿಗಮಾಂ

ಮನೋಹರರಾದ, ಯಾಜಕೈಃ - ಅಧ್ವರ್ಯುವೇ ಮೊದಲಾಗುಳ್ಳ ಋತ್ವಿಕ್ಕುಗಳಿಂದ, ತ್ಯಕ್ತಾಂ - ಬಿಡಲ್ಪಟ್ಟ, ಸುತ್ಯಾಕಾಲೇ - ಸುತ್ಯಾಹಸ್ಸು, ವಿನಿರ್ವೃತ್ತೇ - ಕಳೆಯಲು, ಗತರವಾಂ - ಅಡಗಿದ ಶಬ್ದವುಳ್ಳ, ವೇದಿಮಿವಸ್ಥಿತಾಂ - ಬಹಿರ್ವೇದಿಕೆಯಂತಿರುವ, ಗೋಷ್ಠಮಧ್ಯೇ - ಗೋಶಾಲೆಯ ಮಧ್ಯದಲ್ಲಿ, ಸ್ಥಿತಾಂ - ನಿಂತಿರುವ, ಆರ್ತಾಂ - ದೀನಧ್ವನಿಯುಳ್ಳ, ನವಂ - ನೂತನವಾದ, ತೃಣಂ - ಹುಲ್ಲನ್ನು, ಅಚರಂತೀಂ - ಭಕ್ಷಿಸದಿರುವ, ಗೋವೃಷೇಣ - ವೃಷಭದಿಂದ, ಪರಿತ್ಯಕ್ತಾಂ-ಬಿಡಲ್ಪಟ್ಟ, ಉತ್ಸುಕಾಂ- ಉತ್ಕಂಠವುಳ್ಳ, ಗವಾಂ - ಗೋವುಗಳ, ಪತ್ನಿಮಿವಸ್ಥಿತಾಂ - ಪತ್ನಿಯಂತಿರುವ, ಪ್ರಭಾಕರಾದ್ಯೈಃ - ಪದ್ಮರಾಗ, ಕೆಂಪುಗಳೇ ಮೊದಲಾಗುಳ್ಳ, ಸುಸ್ನಿಗ್ಧೈಃ - ಬಹು ಮನೋಹರಗಳಾದ, ಪ್ರಜ್ವಲದ್ಭಿರಿವಸ್ಥಿತೈಃ - ಹೊಳೆಯುತ್ತದೆಯೋ ಎಂಬಂತಿರುವ, ಉತ್ತಮೈಃ - ಉತ್ಕೃಷ್ಟಗಳಾದ, ಜಾತ್ಯೈಃ - ಒಳ್ಳೆಯ ಜಾತಿಯವುಗಳಾದ, ಮಣಿಭಿಃ - ರತ್ನಗಳಿಂದ, ವಿಯುಕ್ತಾಂ - ವಿರಹಿತವಾದ, ನವಾಂ - ಹೊಸದಾದ, ಮುಕ್ತಾವಳೀಮಿವಸ್ಥಿತಾಂ - ಮುತ್ತಿನಸರದಂತಿರುವ, ಸಹಸಾ - ಜಾಗ್ರತೆಯಾಗಿ, ಪುಣ್ಯಕ್ಷಯಾತ್ - ಪುಣ್ಯನಾಶದಿಂದ, ಸ್ಥಾನಾತ್ - ಸ್ವಸ್ಥಾನದಿಂದ, ಚಲಿತಾಂ - ಕದಲಿರುವ, ಮಹೀಂ - ಭೂಮಿಯನ್ನು, ಗತಾಂ - ಹೊಂದಿರುವ, ಸಂಹೃತದ್ಯುತಿವಿಸ್ತಾರಾಂ - ಹೋಗಲಾಡಿಸಿದ ಕಾಂತಿಯುಳ್ಳ, ದಿವಃ - ಅಂತರಿಕ್ಷದಿಂದ, ಚ್ಯುತಾಂ - ಇಳಿಬೀಳುತ್ತಿರುವ, ತಾರಾಮಿವಸ್ಥಿತಾಂ - ನಕ್ಷತ್ರದಂತಿರುವ, ವಸಂತಾಂತೇ - ವಸಂತಋತುವಿನ ಅಂತ್ಯಭಾಗದಲ್ಲಿ, ಪುಷ್ಪ

ಯಿಂದಲೂ, 'ಸುತ್ಯ' ವೆಂಬ ಅಹಸ್ಸು ಕಳೆದ ಬಳಿಕ ಧ್ವನಿಯಡಗಿದ ಯಜನವೇದಿಕೆಯಂತೆಯೂ, ನಿಶ್ಶಬ್ದವಾಗಿರುವುದೂ, ಗೋಶಾಲೆಯ ಮಧ್ಯದಲ್ಲಿ ಹುಲ್ಲು ಮೇಯದೆ ಅರಚುತ್ತ ವೃಷಭರಹಿತವಾಗಿ ಅದರ ಮೇಲೆಯೇ ದೃಷ್ಟಿಯುಳ್ಳ ಗೋಸಮುದಾಯವಂತೆತ್ತಲೂ ರೋದನ ಧ್ವನಿಯುಕ್ತವಾದುದೂ, ಪದ್ಮರಾಗವೇ ಮೊದಲಾದ ಮನೋಹರವಾದ ರತ್ನಗಳಿಂದ ರಂಜಿಸದ ಹೊಸ ಮುತ್ತಿನ ಹಾರದಂತೆ ಕಾಂತಿಹೀನವಾಗಿರುವುದೂ, ಆಕಸ್ಮಿಕವಾಗಿ ತನ್ನ ಸ್ಥಾನದಿಂದ ಚಲಿಸಲಾದುದೂ, ಪುಣ್ಯ ಕ್ಷೀಣವಾಗಲು ಭೂಮಿಯನ್ನು ಹೊಂದಿದುದೂ, ವಿಶಾಲವಾದ ಕಾಂತಿಯಿಂದ ಹೀನವಾದುದೂ, ಸ್ವರ್ಗಚ್ಯುತವಾದುದೂ ಆದ ನಕ್ಷತ್ರದಂತಿರುವುದೂ, ಮಧುಮಾಸದ ತುದಿಯಲ್ಲಿ ಕುಸುಮಯುಕ್ತವಾಗಿ ಮದವೇರಿದ ಆರಡಿ (ತುಂಬಿ) ಗಳಿಂದ ಧ್ವನಿಗೈಯುತ್ತಿರುವುದೂ, ಹಿಡಿಮಿಡಿಗೊಳ್ಳುತ್ತಿರುವ ಕಾಳ್ಗಿಚ್ಚಿನಿಂದ ಬೆಂದು ಬೆಂಡಾಗಿಯೂ ಇರುವ ವನಲತೆಯಂತೆ ಶ್ರೀರಾಮನ ವಿರಹದಿಂದ ಬೆಂದು ಬೇಗುದಿಗೊಳ್ಳುತ್ತಿರುವುದೂ, ಜನರಹಿತವಾದ ರಾಜವೀಥಿಗಳುಳ್ಳುದರಿಂದ ಶಬ್ದರಹಿತವಾದುದೂ, ವ್ಯಾಪಾರಗಳಿಲ್ಲದೆ ಬಾಗಿಲುಗಳನ್ನು ಮುಚ್ಚಿದ ಮಳಿಗೆಗಳುಳ್ಳುದಾದುದ

ಸ್ತಬ್ಧಾಂ ಸಂಕ್ಷಿಪ್ತ ವಿಪಣಾಽಪಣಾಂ ॥ ಪ್ರಚ್ಛನ್ನ ಶಶಿನಕ್ಷತ್ರಾಂ ದ್ಯಾಮಿವಾಂಬುಧರೈ ರ್ವೃತಾಂ ॥೧೩॥ ಕ್ಷೀಣಪಾನೋತ್ತಮೈ ರ್ಭಿನ್ನೈ ಶ್ಶರಾವೈ ರಭಿಸಂವೃತಾಂ ॥ ಹತಶೌಂಡಾ ಮಿವಾಕಾಶೇ ಪಾನಭೂಮಿ ಮಸಂಸ್ಕೃತಾಂ ॥೧೪॥ ವೃಕ್ಣ ಭೂಮಿತಲಾಂ ನಿಮ್ನಾಂ ವೃಕ್ಣಪಾತ್ರೈ ಸ್ಸಮಾವೃತಾಂ ॥ ಉಪಯುಕ್ತೋದಕಾಂ ಭಗ್ನಾಂ ಪ್ರಪಾಂ ನಿಪತಿತಾಮಿವ ॥೧೫॥ ವಿಪುಲಾಂ ವಿತತಾಂ ಚೈವ ಯುಕ್ತಪಾಶಾಂ ತರಸ್ವಿನಾಂ ॥ ಭೂಮೌ ಬಾಣೈ ರ್ವಿನಿಷ್ಕೃತ್ತಾಂ ಪತಿತಾಂ ಜ್ಯಾಮಿವಾಽಯುಧಾತ್ ॥೧೬॥ ಸಹಸಾ ಯುದ್ಧಶೌಂಡೇನ ಹಯಾರೋಹೇಣ

ನದ್ಧಾಂ - ಹಾರಗಳಿಂದ ಕೂಡಿಕೊಂಡಿರುವ, ಮತ್ತಭ್ರಮರನಾದಿತಾಂ-ಮದವೇರಿದ ದುಂಬಿಗಳಿಂದ ಧ್ವನಿಗೊಳಿಸುತ್ತಿರುವ, ದೃತದಾಗ್ನಿವಿಪ್ಲುಷ್ಟಾಂ - ವೇಗವತ್ತಾದ ಕಾಡುಕಿಚ್ಚಿನಿಂದ ಶೋಷಿಸಿದ, ಕ್ಲಾಂತಾಂ-ಮುಗ್ಗಿರುವ, ವನಲತಾಮಿವ - ಅರಣ್ಯದ ಲತೆಯಂತಿರುವ, ಸಂಮೂಢನಿಗಮಾಂ-ಜನರಹಿತವಾದ ರಾಜಮಾರ್ಗಗಳುಳ್ಳ, ಸ್ತಬ್ಧಾಂ - ನಿಶ್ಶಬ್ದವಾದ, ಸಂಕ್ಷಿಪ್ತವಿಪಣಾಪಣಾಂ - ಹೋಗಲಾಡಿಸಿದ ಮಾರಾಟವೂ ಮಳಿಗೆಗಳೂ ಉಳ್ಳ, ಪ್ರಚ್ಛನ್ನಶಶಿನಕ್ಷತ್ರಾಂ - ಆಚ್ಛಾದಿತವಾದ ಚಂದ್ರನೂ ನಕ್ಷತ್ರಗಳೂ ಉಳ್ಳ, ಅಂಬುಧರೈಃ - ಮೇಘಗಳಿಂದ, ವೃತಾಂ - ಸುತ್ತುವರೆದ, ದ್ಯಾಮಿವಸ್ಥಿತಾಂ - ಅಂತರಿಕ್ಷದಂತಿರುವ, ಕ್ಷೀಣಪಾನೋತ್ತಮೈಃ - ಮುಗಿದುಹೋದ ಜೇನುತುಪ್ಪವೇ ಮೊದಲಾದ ಪಾನದ್ರವ್ಯಗಳುಳ್ಳ, ಭಿನ್ನೈಃ - ಒಡೆದುಹೋದ, ಶರಾವೈಃ - ಚಟ್ಟಿಗಳಿಂದ, ಅಭಿಸಂವೃತಾಂ - ಸುತ್ತುವರೆದ, ಹತಶಾಂತಾಂ - ನಾಶಗೊಂಡ ಜನವುಳ್ಳ, ಆಕಾಶೇ - ಬೈಲಿನಲ್ಲಿ, ಅಸಂಸ್ಕೃತಾಂ - ಸಾರಿಸಿ ಗುಡಿಸದಿರುವ, ಪಾನಭೂಮಿಮಿವಸ್ಥಿತಾಂ - ಪಾನಪ್ರದೇಶದಂತಿರುವ, ವೃಕ್ಣಭೂಮಿತಲಾಂ - ಒಡೆದುಹೋದ ಭೂಪ್ರದೇಶವುಳ್ಳ, ನಿಮ್ನಾಂ - ಹಳ್ಳನಾಗಿರುವ, ವೃಕ್ಣಪಾತ್ರೈಃ - ಒಡೆದುಹೋದ ಪಾತ್ರೆಗಳಿಂದ, ಸಮಾವೃತಾಂ - ಕೂಡಿರುವ, ಉಪಯುಕ್ತೋದಕಾಂ - ಉಪಯೋಗಿಸಿದನೀರುಳ್ಳ, ಭಾಗ್ನಾಂ - ಮುರಿದು, ನಿಪತಿತಾಂ - ಬಿದ್ದುಹೋದ, ಪ್ರಪಾಮಿವಸ್ಥಿತಾಂ - ಪಾನಶಾಲೆಯಂತಿರುವ, ವಿಪುಲಾಂ - ವಿಸ್ತಾರವಾದ, ವಿತತಾಂ - ದೀರ್ಘವಾದ, ಯುಕ್ತಪಾಶಾಂ - ಕೂಡಿರುವ ಹಗ್ಗವುಳ್ಳ, ಬಾಣೈಃ - ಬಾಣಗಳಿಂದ, ಭೂಮೌ - ಭೂಮಿಯಲ್ಲಿ, ವಿನಿಷ್ಕೃತ್ತಾಂ - ಕತ್ತರಿಸಲ್ಪಟ್ಟ, ಆಯುಧಾತ್-ಧನುಸ್ಸಿ

ರಿಂದ ಮುಗಿಲು ಮುಚ್ಚಿದ ಚಂದ್ರನೂ ನಕ್ಷತ್ರಗಳೂ ಉಳ್ಳ ಗಗನಮಂಡಲದಂತೆ ಬಹು ಭಯಂಕರವಾಗಿ ತೋರುತ್ತಿರುವುದೂ ಆದ ಅಯೋಧ್ಯಾಪಟ್ಟಣವನ್ನು ಪ್ರವೇಶಿಸಿದನು. ॥ ೧-೧೩ ॥ ಇಷ್ಟುಮಾತ್ರವಲ್ಲದೆ, ರಸನೇಂದ್ರಿಯಕ್ಕೆ ರುಚಿಕರವಾದ, ಮದ್ಯಗಳಿಲ್ಲದ, ಒಡೆದು ಚೂರುಚೂರಾದ ಪಾನಪಾತ್ರೆಗಳುಳ್ಳುದೂ, ಜನರಹಿತವಾದ ಬಯಲು ಪ್ರದೇಶದಲ್ಲಿರುವ, ಸಾರಿಸುವಿಕೆ, ಗುಡಿಸುವಿಕೆ, ಇವುಗಳಿಲ್ಲದ ಪಾನೀಯ ಶಾಲೆಗಳಂತೆ ನೋಡಲು ಬಹು ಭಯಂಕರವಾದುದೂ, ಭೂಮಿಯೊಡೆದು ಅಲ್ಲಲ್ಲಿ ಹಳ್ಳ, ಪಳ್ಳಗಳುಳ್ಳುದಾಗಿ ಕಾಣುತ್ತ ಒಡೆದುಹೋದ ಪಾತ್ರೆಗಳೂ ಕುಡಿದುಳಿದ ಜಲವೂ ಉಳ್ಳುದಾಗಿ, ಮುರಿದು ಬಿದ್ದಿರುವ ಪಾನಶಾಲೆಯಂತೆ ಕಾಂತಿಹೀನವಾಗಿರುವುದೂ, ರಣರಂಗದಲ್ಲಿ ಬಹು ತೀಕ್ಷ್ಣಗಳಾದ ಬಾಣಗಳಿಂದ ಕತ್ತರಿಸಲ್ಪಟ್ಟು ಬಿಲ್ಲಿನಿಂದ ಕೆಳಗಿಳಿದು ಬಿದ್ದಿರುವ ಬಹು ನೀಳವಾಗಿಯೂ ಬಹು ದಪ್ಪವಾಗಿಯೂ ಇರುವ ಹೆದೆಯಂತೆ ಯಾರಿಗೂ ಉಪಯೋಗವಿಲ್ಲದುದೂ, ಸಮರಾಂಗಣದಲ್ಲಿ ಧೀರನಾದ ಸವಾರನಿಂದ ಮುಂಬರಿಸಲ್ಪಟ್ಟು ಎರಚಲ್ಪಟ್ಟ ಆಭರಣ ವಿಶೇಷವುಳ್ಳ

ವಾಹಿತಾಂ ॥ ವಿಕ್ಷಿಪ್ತಭಾಂಡಾ ಮುತ್ಸೃಷ್ಟಾಂ ಕಿಶೋರೀಮಿವ ದುರ್ಬಲಾಂ
॥ ೧೭ ॥ ಶುಷ್ಕತೋಯಾಂ ಮಹಾಮತ್ಸ್ಯೈಃ ಕೂರ್ಮೈಶ್ಚ ಬಹುಭಿರ್ವೃತಾಂ ॥
ಪ್ರಭಿನ್ನ ತಟವಿಸ್ತೀರ್ಣಾಂ ವಾಪೀಮಿವ ಹೃತೋತ್ಪಲಾಂ ॥ ೧೮ ॥ ಪುರು
ಷಸ್ಯಾಽಪ್ರಹೃಷ್ಟಸ್ಯ ಪ್ರತಿಷಿದ್ಧಾಽನುಲೇಪನಾಂ ॥ ಸಂತಪ್ತಾಮಿವ ಶೋಕೇನ
ಗಾತ್ರಯಷ್ಟಿಮಭೂಷಣಾಂ ॥ ೧೯ ॥ ಪ್ರಾವೃಷಿ ಪ್ರವಿಗಾಢಾಯಾಂ ಪ್ರವಿ
ಷ್ಟಸ್ಯಾಽಭ್ರಮಂಡಲಂ ॥ ಪ್ರಚ್ಛನ್ನಾಂ ನೀಲಜೀಮೂತೈ ರ್ಭಾಸ್ಕರಸ್ಯ ಪ್ರಭಾ
ಮಿವ ॥ ೨೦ ॥ ಭರತಸ್ತು ರಥಸ್ಥಸ್ಸನ್ ಶ್ರೀಮಾನ್ ದಶರಥಾತ್ಮಜಃ ॥ ವಾಹ

ನಿಂದ, ಪತಿತಾಂ - ಬಿದ್ದುಹೋದ, ಜ್ಯಾಮಿವಸ್ಥಿತಾಂ - ಹೆದೆಯಂತಿರುವ, ಸಹಸಾ - ಜಾಗ್ರತೆ ಯಾಗಿ, ಯುದ್ಧಶೌಂಡೇನ - ಕಾಳಗದಲ್ಲಿ ಸಮರ್ಥನಾದ, ಹಯಾರೋಹೇಣ - ಅಶ್ವಸಾದಿಯಿಂದ, ವಾಹಿತಾಂ - ಓಡಿಸಿದ, ವಿಕ್ಷಿಪ್ತಭಾಂಡಾಂ - ಎರಚಲ್ಪಟ್ಟ ಅಲಂಕಾರಗಳುಳ್ಳ, ಉತ್ಸೃಷ್ಟಾಂ - ಬಿಡಲ್ಪಟ್ಟ, ದುರ್ಬಲಾಂ - ಬಲಹೀನವಾದ, ಕಿಶೋರೀಮಿವಸ್ಥಿತಾಂ - ಹೆಣ್ಣುಕುದುರೆಯ ಮರಿಯಂತಿ ರುವ, ಶುಷ್ಕತೋಯಾಂ - ಇಂಗಿದ ನೀರುಳ್ಳ, ಮಹಾಮತ್ಸ್ಯೈಃ - ದೊಡ್ಡ ಮೀನುಗಳಿಂದಲೂ, ಬಹುಭಿಃ - ಅನೇಕವಾದ, ಕೂರ್ಮೈಃ - ಆಮೆಗಳಿಂದ, ವೃತಾಂ - ಸುತ್ತುವರೆದ, ಪ್ರಭಿನ್ನತಟ ವಿಸ್ತೀರ್ಣಾಂ-ಒಡೆದುಹೋದ ದಡದವಿಸ್ತಾರವುಳ್ಳ, ಹೃತೋತ್ಪಲಾಂ ಅಪಹರಿಸಲ್ಪಟ್ಟ ನೈದಿಲೆಹೂವು ಗಳುಳ್ಳ, ವಾಪೀಮಿವಸ್ಥಿತಾಂ - ಭಾವಿಯಂತಿರುವ, ಅಪ್ರಹೃಷ್ಟಸ್ಯ - ಸಂತೋಷವಿಲ್ಲದಿರುವ, ಪುರು ಷಸ್ಯ - ಮನುಷ್ಯನ ಸಂಬಂಧವಾದ, ಪ್ರತಿಷ್ಠಾನುಲೇಪನಾಂ - ನಿರಾಕೃತವಾದ ಗಂಧಲೇಪನಗಳುಳ್ಳ, ಶೋಕೇನ - ವ್ಯಸನದಿಂದ, ಸಂತಪ್ತಾಂ - ಸಂಕಟಗೊಂಡ, ಅಭೂಷಣಾಂ - ಅಲಂಕಾರವಿಲ್ಲದಿರುವ, ಗಾತ್ರಯಷ್ಟಿಮಿವಸ್ಥಿತಾಂ - ದಂಡದಂತಿರುವ ಶರೀರವುಳ್ಳ, ಪ್ರಾವೃಷಿ - ವರ್ಷಾಕಾಲವು, ಪ್ರವಿಗಾಢಾ ಯಾಂ - ಹೆಚ್ಚಲು, ಅಭ್ರಮಂಡಲಂ - ಮೇಘಮಂಡಲವನ್ನು, ಪ್ರವಿಷ್ಟಸ್ಯ - ಪ್ರವೇಶಮಾಡು ತ್ತಿರುವ, ಭಾಸ್ಕರಸ್ಯ - ಸೂರ್ಯನ, ನೀಲಜೀಮೂತೈಃ - ಕಪ್ಪಾಗಿರುವ ಮೇಘಗಳಿಂದ, ಪ್ರಚ್ಛನ್ನಾಂ- ತುಂಬಿರುವ, ಪ್ರಭಾಮಿವಸ್ಥಿತಾಂ - ಕಾಂತಿಯಂತಿರುವ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು, ಪ್ರವಿವೇಶ - ಹೊಕ್ಕನು. ॥ ೨೦ ॥ ದಶರಥಾತ್ಮಜಃ - ದಶರಥಪುತ್ರನಾದ, ಶ್ರೀಮಾನ್ - ಸಂಪದ್ಯು ಕ್ತನಾದ, ಭರತಸ್ತು - ಭರತನಾದರೆ, ರಥಸ್ಥಸ್ಸನ್ - ರಥದಲ್ಲಿಯೇ ಕುಳಿತುಕೊಂಡು, ರಥಶ್ರೇಷ್ಠಂ -

ಹೆಣ್ಣುಕುದುರೆಯ ಮರಿಯಂತೆ ಬಲಹೀನವಾಗಿರುವುದೂ, ನೀರಿಂಗಿದಮೇಲೆ ದೊಡ್ಡದೊಡ್ಡ ಮೀನುಗಳಿಂದಲೂ, ಅನೇಕ ಆಮೆಗಳಿಂದಲೂ ಕೂಡಿರುವುದೂ, ಕಟ್ಟೆಯು ಒಡೆದುದರಿಂದ ನಾಶವಾದ ಕನ್ನೈದಿಲೆಗಳುಳ್ಳ ಕೆರೆಯಂತೆಯೂ, ನೋಡಲಶಕ್ಯವಾದುದೂ, ಪುರುಷನಿಗೆ ಸಂತೋಷವಿಲ್ಲದಿರುವಿಕೆಯೂ, ಆತನ ಶರೀರಕ್ಕೆ ಗಂಧಾದಿ ಪರಿಮಳ ದ್ರವ್ಯಗಳನ್ನು ಹಚ್ಚಿ ಕೊಳ್ಳದೆಯೂ, ಆಭರಣಗಳನ್ನು ಧರಿಸದೆಯೂ ಇದ್ದರೆ ಸಂತಾಪ ಪರಿವೃತವಾದ ಆ ಶರೀರವು ನೋಡಲೆಂತು ಅಶಕ್ಯವೋ ಅಂತೆಯೇ ಕಾಣುತ್ತಿರುವುದೂ, ವರ್ಷಾಕಾಲವು ಪ್ರಬಲವಾಗಿ ಮೇಘಮಂಡಲವನ್ನು ಪ್ರವೇಶಿಸಿ, ಆದರಿಂದಲೇ ಆಚ್ಛಾದಿತನಾದ ದಿನಕರನ ಬೆಳಕಿನಂತೆ ಪ್ರಭಾಶೂನ್ಯವಾಗಿರುವುದೂ ಆದ ಅಯೋಧ್ಯಾಪಟ್ಟಣವನ್ನು ಪ್ರವೇಶಿಸಿದನು. ॥ ೧೭-೨೦ ॥ ಆಗ ಮಹಾ ತೇಜಸ್ವಿಯೂ, ದಶರಥರಾಜ ಕುವರನೂ ಆದ ಭರತಕುಮಾರನು ತನ್ನ ರಥ ವನ್ನು ನಡೆಸುತ್ತಿದ್ದ ಸಾರಥಿಯಾದ ಸುಮಂತ್ರನನ್ನು ಕುರಿತು ಹೀಗೆಂದನು. “ಅಯ್ಯಾ,

ಯಂತಂ ರಥಶ್ರೇಷ್ಠಂ ಸಾರಥಿಂ ವಾಕ್ಯಮಬ್ರವೀತ್ ॥ ೨೧ ॥ ಕಿನ್ನು ಖಲ್ವದ್ಯ ಗಂಭೀರೋ ಮೂರ್ಛಿತೋ ನ ನಿಶಮ್ಯತೇ ॥ ಯಥಾ ಪುರಮಯೋಧ್ಯಾಯಾಂ ಗೀತವಾದಿತ್ರ ನಿಸ್ವನಃ ॥ ೨೨ ॥ ವಾರುಣೀಮದಗಂಧಶ್ಚ ಮಾಲ್ಯಗಂಧಶ್ಚ ಮೂರ್ಛಿತಃ ॥ ಧೂಪಿತಾಗರು ಗಂಧಶ್ಚ ನಪ್ರವಾತಿ ಸಮಂತತಃ ॥ ೨೩ ॥ ಯಾನ ಪ್ರವರಘೋಷಶ್ಚ ಸ್ನಿಗ್ಧಶ್ಚ ಹಯನಿಸ್ವನಃ ॥ ಪ್ರಮತ್ತ ಗಜನಾದಶ್ಚ ಮಹಾಂಶ್ಚ ರಥನಿಸ್ವನಃ ॥ ೨೪ ॥ ನೇದಾನೀಂ ಶ್ರೂಯತೇ ಪುರ್ಯಾಮಸ್ಯಾಂ ರಾಮೇ ವಿವಾಸಿತೇ ॥ ಚಂದನಾಗರು ಗಂಧಾಂಶ್ಚ ಮಹಾರ್ಹಾಶ್ಚ ನವಸ್ರಜಃ

ಉತ್ತಮವಾದ ರಥವನ್ನು, ವಾಹಯಂತಂ - ನಡೆಯಿಸುತ್ತಿರುವ, ಸಾರಥಿಂ-ಸಾರಥಿಯನ್ನು ಕುರಿತು, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥ ೨೧ ॥ ಅಯೋಧ್ಯಾಯಾಂ - ಅಯೋಧ್ಯಾ ಪಟ್ಟಣದಲ್ಲಿ, ಯಥಾಪುರಂ - ಪೂರ್ವದಂತೆ, ಅದ್ಯ - ಈಗ, ಮೂರ್ಛಿತಃ - ನುಡಿಸಲ್ಪಟ್ಟ, ಗಂಭೀರಃ - ಮನೋಹರವಾದ, ಗೀತವಾದಿತ್ರನಿಸ್ವನಃ - ಗಾನಧ್ವನಿಯೂ ವೀಣಾದಿವಾದ್ಯವಿಶೇಷ ಧ್ವನಿಯೂ, ಕಿಂ ನನಿಶಮ್ಯತೇಖಲು - ಕೇಳಿಸುವುದಿಲ್ಲವೇಕೆ. ॥ ೨೨ ॥ ವಾರುಣೀಮದಗಂಧಶ್ಚ - ಮದ್ಯಗಳ ಉತ್ಕೃಷ್ಟವಾದ, ಮಾಲ್ಯಗಂಧಶ್ಚ - ಪುಷ್ಪಗಳ ಗಂಧವೂ, ಧೂಪಿತಾಗರುಗಂಧಶ್ಚ - ಧೂಪಹಾಕಲ್ಪಟ್ಟ ಕೃಷ್ಣಾಗರುವೇ ಮುಂತಾದ ಪರಿಮಳದ್ರವ್ಯಗಳ ವಾಸನೆಯು, ಸಮಂತತಃ - ಎಲ್ಲೆಡೆಯಲ್ಲಿಯೂ, ಮೂರ್ಛಿತಃ - ಪ್ರವೃದ್ಧವಾಗಿ, ನಪ್ರವಾತಿ - ಪಸರಿಸುತ್ತಿಲ್ಲ. ॥ ೨೩ ॥ ಯಾನಪ್ರವರಘೋಷಶ್ಚ - ಶ್ರೇಷ್ಠವಾದ ವಾಹನಗಳ ಧ್ವನಿಯೂ, ಸ್ನಿಗ್ಧಃ - ಮನೋಹರವಾದ, ಹಯನಿಸ್ವನಶ್ಚ - ಕುದುರೆಗಳ ಘೋಷವೂ, ಅಸ್ಯಾಂಪುರ್ಯಾಂ - ಈ ಪಟ್ಟಣದಲ್ಲಿ, ರಾಮೇ - ಶ್ರೀರಾಮನು, ವಿವಾಸಿತೇ - ಅರಣ್ಯಕ್ಕೆ ಕಳುಹಲ್ಪಡಲು, ಪ್ರಮತ್ತಗಜನಾದಶ್ಚ - ಮದವೇರಿದ ಆನೆಗಳ ಧ್ವನಿಯೂ, ಮಹಾಂಶ್ಚ - ದೊಡ್ಡದಾದ, ರಥನಿಸ್ವನಶ್ಚ - ತೇರುಗಳ ಘೋಷವು, ಇದಾನೀಂ - ಈಗ, ನಶ್ರೂಯತೇ - ಕೇಳಿಸುವುದಿಲ್ಲ. ॥ ೨೪ ॥ ರಾಮೇ - ಶ್ರೀರಾಮನು, ಗತೇ - ಹೊರಟು ಹೋಗಲು, ತರುಣಾಃ - ಯುವಕರು, ಸಂತಪ್ತಾಃ - ಸಂಕಟಗೊಂಡು, ಚಂದನಾಗರುಗಂಧಾಶ್ಚ - ಶ್ರೀಗಂಧ ಕೃಷ್ಣಾಗರು ಮುಂತಾದ ಪರಿಮಳಗಳನ್ನು, ಮಹಾರ್ಹಾಃ - ಶ್ರೇಷ್ಠಗಳಾದ, ನವಸ್ರಜಃ - ಹೊಸ ಹೊಸ ಹೂವಿನಸರಗಳನ್ನು, ನೋಪಭುಂಜತೇ - ಅನುಭವಿಸುವದಿಲ್ಲ. ॥ ೨೫ ॥ ರಾಮಶೋಕಾರ್ದಿತೇ - ಶ್ರೀರಾಮನ ವಿಷಯಕವಾದ

ಸುಮಂತ್ರನೇ! ಈ ಅಯೋಧ್ಯಾಪಟ್ಟಣದಲ್ಲಿ ಮೊದಲಿನಂತೆ ಕಿವಿಗಿಂಪಾದ ಗಾನಧ್ವನಿ, ಮನೋಹರವಾದ ವಾದ್ಯಘೋಷ, ಇವು ಕೇಳಿಬರುತ್ತಿಲ್ಲ. ಮಧುವಿನ ವಾಸನೆಯೂ, ಕುಸುಮಗಳ ವಾಸನೆಯೂ, ಕೃಷ್ಣಾಗರು ಧೂಪದ ಪರಿಮಳವೂ, ತೋರುತ್ತಿಲ್ಲವು. ಉತ್ತಮವಾದ ವಾಹನಗಳ ಶಬ್ದ, ಮಹಾ ಗಂಭೀರವಾದ ಕುದುರೆಗಳ ಧ್ವನಿ, ಇವು ನಮ್ಮಣ್ಣನಾದ ಶ್ರೀರಾಮಮೂರ್ತಿ ಇದ್ದಾಗ ಕೇಳಿಸುತ್ತಿದ್ದಂತೆ ಈಗ ಕೇಳಿಬರುತ್ತಿಲ್ಲ. ಮದ್ದಾನೆಗಳ ಘೀಟ್ಕಾರಧ್ವನಿಗಳೂ, ರಥಾದಿವಾಹನ ಕಲಕಲಧ್ವನಿಗಳೂ ಕೇಳಿಸುವುದೇ ಇಲ್ಲ. ॥೨೧-೨೪॥ ಶ್ರೀರಾಮನು ವನಗಮನವಮಾಡಲು ಯುವಕರೆಲ್ಲರೂ ಮಹಾದುಃಖವನ್ನುಹೊಂದಿ, ಶ್ರೀಗಂಧ, ಕೃಷ್ಣಾಗರು, ಮುಂತಾದ ಪರಿಮಳ ದ್ರವ್ಯಗಳನ್ನು ಲೇಪಿಸಿಕೊಳ್ಳದೆ, ಸೊಬಗಿನ ಹೂಗಳನ್ನು ಮುಡಿದುಕೊಳ್ಳದೆ, ಸಂತಪಿಸುತ್ತಿದ್ದಾರೆ. ಶ್ರೀರಾಮನ ಸಂಬಂಧವಾದ ವ್ಯಸನದಿಂದ ಪುರಜನರು ವಿವಿಧ ಕುಸುಮಗಳನ್ನು ಧರಿಸದೆಯೂ, ಉದ್ಯಾನವನವೇ ಮೊದಲಾದ ರಮ್ಯ

|| ೨೫ || ಗತೇಹಿ ರಾಮೇ ತರುಣಾ ಸ್ಸಂತಪ್ತಾ ನೋಪಭುಂಜತೇ || ಬಹಿ
ರ್ಯಾತ್ರಾಂ ನಗಚ್ಛಂತಿ ಚಿತ್ರಮಾಲ್ಯಧರಾ ನರಾಃ || ೨೬ || ನೋತ್ಸವಾ ಸ್ಸಂಪ್ರ
ವರ್ತಂತೇ ರಾಮಶೋಕಾರ್ದಿತೇ ಪುರೇ || ಸಹನೂನಂ ಮಮಭ್ರಾತ್ರಾ ಪುರ
ಸ್ಯಾಸ್ಯ ದ್ಯುತಿರ್ಗತಾ || ೨೭ || ನಹಿ ರಾಜತ್ಯಯೋಧ್ಯೇಯಂ ಸಾಸಾರೇವಾಽ
ರ್ಜುನೀ ಕ್ಷಪಾ || ಕದಾನು ಖಲು ಮೇ ಭ್ರಾತಾ ಮಹೋತ್ಸವ ಇವಾಗತಃ ||೨೮||
ಜನಯಿಷ್ಯ ತ್ಯಯೋಧ್ಯಾಯಾಂ ಹರ್ಷಂ ಗ್ರೀಷ್ಮ ಇವಾಂಬುದಃ || ತರುಣೈ
ಶ್ಚಾರುವೇಷೈಶ್ಚ ನರೈ ರುನ್ನತಗಾಮಿಭಿಃ || ೨೯ || ಸಂಪತದ್ಭಿ ರಯೋಧ್ಯಾಯಾಂ

ಸಂಕಟದಿಂದ, ಪುರೇ - ಪಟ್ಟಣದಲ್ಲಿ, ನರಾಃ - ಮನುಷ್ಯರು, ಚಿತ್ರಮಾಲ್ಯಧರಾಃ - ನಾನಾಬಣ್ಣಗಳುಳ್ಳ ಪುಷ್ಪಸರಗಳನ್ನು ಧರಿಸಿ, ಬಹಿಃ - ಹೊರಗೆ, ಯಾತ್ರಾಂ - ಪಟ್ಟಣವನ್ನು, ನಗಚ್ಛಂತಿ - ಹೊರಡುವುದಿಲ್ಲವು, ಉತ್ಸವಾಃ - ಸಂತೋಷಕಾರ್ಯಗಳು, ನಸಂಪ್ರವರ್ತಂತೇ - ನಡೆಯುವದಿಲ್ಲ. || ೨೬ || ನೂನಂ - ನಿಶ್ಚವು, ಅಸ್ಯಪುರಸ್ಯ - ಈ ಪಟ್ಟಣದ, ದ್ಯುತಿಃ - ಕಾಂತಿಯು, ಮಮ - ನನ್ನ, ಭ್ರಾತ್ರಾ ಸಹ - ಅಣ್ಣನೊಡನೆ, ಗತಾ - ಹೊರಟು ಹೋಯಿತು, ಇಯಮಯೋಧ್ಯಾ - ಈ ಅಯೋಧ್ಯಾಪಟ್ಟಣವು, ಸಾಸಾರಾ - ವರ್ಷಧಾರೆಯಿಂದೊಡಗೂಡಿದ, ಅರ್ಜುನೀ - ಶುಕ್ಲಪಕ್ಷಸಂಬಂಧವಾದ, ಕ್ಷಪೇವ- ರಾತ್ರಿಯಂತೆ, ನರಾಜತಿಹಿ - ಪ್ರಕಾಶಿಸುವದಿಲ್ಲವಷ್ಟೆ. || ೨೭ || ಮೇ - ನನ್ನ, ಮಹೋತ್ಸವಇವ- ದೊಡ್ಡ ಉತ್ಸವದಂತೆ, ಆಗತಃ - ಬಂದು, ಗ್ರೀಷ್ಮೇ - ಗ್ರೀಷ್ಮಕಾಲದಲ್ಲಿ, ಅಂಬುದಇವ - ಮೇಘದಂತೆ, ಕದಾನು - ಯಾವಾಗ, ಅಯೋಧ್ಯಾಯಾಂ - ಅಯೋಧ್ಯಾಪಟ್ಟಣದಲ್ಲಿ, ಹರ್ಷಂ - ಸಂತೋಷವನ್ನು, ಜನಯಿಷ್ಯತಿ - ಉಂಟುಮಾಡುವನೋ. || ೨೮ || ಅಯೋಧ್ಯಾಯಾಂ - ಅಯೋಧ್ಯಾಪಟ್ಟಣದಲ್ಲಿ, ಮಹಾಪಥಾಃ - ದೊಡ್ಡ ಬೀದಿಗಳು, ಸಂಪತದ್ಭಿಃ - ಬರುತ್ತಿರುವ, ಉನ್ನತಗಾಮಿಭಿಃ - ಮಂದಗಮನದಿಂದ ಬರುತ್ತಿರುವ, ಚಾರುವೇಷೈಃ - ಮನೋಹರವಾದ ಅಲಂಕಾರಗಳುಳ್ಳ, ತರುಣೈಃ- ಯೌವನಶಾಲಿಗಳಾದ, ನರೈಃ - ಮನುಷ್ಯರಿಂದ, ನಾಭಿಭಾಂತಿ - ಹೊಳೆಯುತ್ತಿಲ್ಲ. || ೨೯ || ಏವಂ - ಈ ರೀತಿ, ಬಹುವಿಧಂ - ಬಹುಬಗೆಯಾಗಿ, ಸಿಂಹಹೀನಾಂ - ಸಿಂಹವಿಲ್ಲದಿರುವ, ಗುಹಾಮಿವ - ಗುಹೆಯಂತೆ, ತೇನನರೇಂದ್ರೇಣ - ಆ ದಶರಥರಾಯನಿಂದ, ಹೀನಾಂ - ರಹಿತವಾದ, ಪಿತುಃ -

---

ಪ್ರದೇಶಗಳಲ್ಲಿ ಸಂಚರಿಸದೆಯೂ, ಯಾವ ವಿಧವಾದ ಸಂತೋಷ ಸಂಭ್ರಮದಿಂದ ಕೂಡಿದ ಕಾರ್ಯಗಳನ್ನು ಮಾಡದೆಯೂ ಇರುವರು. ಅಲ್ಲದೆ ಈ ಪಟ್ಟಣದ ಕಾಂತಿಯು ನಮ್ಮ ಅಣ್ಣನಾದ ಶ್ರೀರಾಮನೊಡನೆಯೇ ಹೊರಟುಹೋಗಿರುವುದರಿಂದ ಸಂತತವಾಗಿ ಸುರಿಯುತ್ತಿರುವ ಮಳೆಯಿಂದೊಡಗೂಡಿದ ಶುಕ್ಲಪಕ್ಷದ ರಾತ್ರಿಯಂತೆ ತೇಜೋಹೀನವಾಗಿರುವುದು. ||೨೫-೨೭|| ನನಗೆ ಹಿರಿಯಣ್ಣನಾದ ಶ್ರೀರಾಮನು ಮಹದುತ್ಸವದೊಂದಿಗೆ ಬಿಜಯೈದು, ಗ್ರೀಷ್ಮಕಾಲದ ಮೇಘದಂತೆ ಈ ಅಯೋಧ್ಯಾಪಟ್ಟಣದಲ್ಲಿ ನಮ್ಮೆಲ್ಲರನ್ನೂ ಯಾವಾಗ ಆನಂದಗೊಳಿಸುತ್ತಾನೆಯೋ? ಆತನು ಬರುವವರೆಗೂ ಈ ಪಟ್ಟಣದ ರಾಜವೀಥಿಗಳು ಮೆಲ್ಲಮೆಲ್ಲನೆ ಗಜಗಮನದಿಂದ ಮುಂಬರಿಯುತ್ತ ಕಣ್ಗಿಂಪೊಗೆವ ಯುವಕರಿಂದಲಂಕೃತವಾಗುವುದೇಇಲ್ಲ!" ಈ ರೀತಿ ಆ ಭರತನು ನಿಜ ರಾಜಧಾನಿಯನ್ನು ಬಹು ವಿಧವಾಗಿ ವರ್ಣಿಸುತ್ತ, ಸಿಂಹವಿಲ್ಲದ ಗುಹೆಯಂತೆ ಜನಕನಾದ ದಶರಥಮಹೀಪಾಲನಿಲ್ಲದ ಆ ನಗರವನ್ನೂ ಪ್ರವೇಶಿಸಿದನು. || ೨೮-೩೦ || ಆಗ ಮಹಾ ಧೈರ್ಯಶಾಲಿಯಾದ ಆತನು ದೇವತೆಗಳಿಂದ ತೊರೆಯ

ನಾಭಿಭಾಂತಿ ಮಹಾಪಥಾಃ ॥ ಏವಂ ಬಹುವಿಧಂ ಜಲ್ಪನ್ ವಿವೇಶ ವಸತಿಂ ಪಿತುಃ ॥ ೩೦ ॥ ತೇನ ಹೀನಾಂ ನರೇಂದ್ರೇಣ ಸಿಂಹಹೀನಾಂ ಗುಹಾಮಿವ ॥

ತದಾ ತದಂತಃಪುರ ಮುಜ್ಝಿತಪ್ರಭಂ
ಸುರೈರಿವೋತ್ಸೃಷ್ಟ (೧) ಮಭಾಸ್ಕರಂ ದಿನಂ ॥
ನಿರೀಕ್ಷ್ಯ ಸರ್ವಂ ತು ವಿವಿಕ್ತ ಮಾತ್ಮವಾನ್
ಮುಮೋಚ ಬಾಷ್ಪಂ ಭರತ ಸ್ಸುದುಃಖಿತಃ ॥ ೩೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ
ಚತುರ್ದಶೋತ್ತರಶತತಮಸ್ಸರ್ಗಃ.

ತಂದೆಯ, ವಸತಿಂ - ಮನೆಯನ್ನು, ವಿವೇಶ - ಹೊಕ್ಕನು. ॥೩೦॥ ತದಾ - ಆ ಕಾಲದಲ್ಲಿ, ಆತ್ಮವಾನ್-ಧೈರ್ಯಶಾಲಿಯಾದ, ಭರತಃ - ಭರತನು, ಸುರೈಃ - ದೇವತೆಗಳಿಂದ, ಉತ್ಸೃಷ್ಟಂ - ಬಿಡಲ್ಪಟ್ಟ, ಅಭಾಸ್ಕರಂ - ಸೂರ್ಯನಿಲ್ಲದ, ದಿನಮಿವ - ಹಗಲಿನಂತೆ, ಉಜ್ಝಿತಪ್ರಭಂ - ಬಿಡಲ್ಪಟ್ಟ ಪ್ರಕಾಶವುಳ್ಳ, ವಿವಿಕ್ತಂ - ಜನರಹಿತವಾದ, ಸರ್ವಂ - ಸಮಸ್ತವಾದ, ಅಂತಃಪುರಂ - ಆ ಅಂತಃಪುರವನ್ನು, ನಿರೀಕ್ಷ್ಯ - ಕಂಡು, ಸುದುಃಖಿತಃ - ಬಹಳ ಸಂಕಟಗೊಂಡು, ಬಾಷ್ಪಂ-ಕಂಬನಿಗಳನ್ನು, ಮುಮೋಚ - ಬಿಟ್ಟನು. ॥ ೩೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಚತುರ್ದಶೋತ್ತರಶತತಮಸ್ಸರ್ಗಃ.

ಲಾದ ಸೂರ್ಯನಿಲ್ಲದ ಹಗಲಿನಂತೆ ತೇಜೋಹೀನವೂ, ಜನರಹಿತವೂ ಆದ, ರಾಜಾಂತಃಪುರವನ್ನು ಕಂಡು ಉಕ್ಕಿಯುಕ್ಕಿ ಬರುತ್ತಿರುವ ದುಃಖವನ್ನಡಗಿಸಿಕೊಳ್ಳಲಾರದೆ ಕಂಬನಿಗರೆದವನಾದನು. ॥ ೩೧ ॥

ಇಂತಿದು ಭರತಕೃತ ಪಾದುಕಾಸಹಿತ ಅಯೋಧ್ಯಾನಗರಪ್ರವೇಶ ಕಥಾಕಥನವೆಂಬ
ನೂರಹದಿನಾಲ್ಕನೆಯ ಸರ್ಗವು ಸಮಾಪ್ತವಾದುದು.

ಟಿ. (೧) ಇಲ್ಲಿ ಪೌರಾಣಿಕ ಕಥೆಯೊಂದು ಪ್ರಸಿದ್ಧವಾಗಿದೆ.

ಹಿಂದೆ ದೇವಾಸುರ ಯುದ್ಧದಲ್ಲಿ ದೇವಭಾನುವಿನಿಂದ, ಸೂರ್ಯನು ಕೆಳಕ್ಕುರುಳಿಸಲ್ಪಟ್ಟನು. ಆಗ ಬ್ರಹ್ಮಾಂಡವೆಲ್ಲವೂ ದಿನಕರರಹಿತವಾಯಿತು. ಆ ಸಮಯದಲ್ಲಿ ದೇವತೆಗಳೆಲ್ಲರೂ ಬಹುವಾಗಿ ಭಯಭ್ರಾಂತರಾದರು; ಬ್ರಾಹ್ಮಣರ ಜಪ, ತಪ, ಹೋಮಾದಿಗಳೆಲ್ಲವೂ ನಿಂತುಹೋದುವು; ಎಲ್ಲಿ ನೋಡಿದರೂ ಅಂಧಕಾರವೇ ತುಂಬಿ ತುಳುಕಿಹೋಯಿತು; ಆಗ ಚತುರ್ಮುಖಬ್ರಹ್ಮನು ಅತ್ರಿ ಮಹರ್ಷಿಗೆ ಸೂರ್ಯತ್ವವನ್ನು ವಹಿಸೆಂದು ಆಜ್ಞಾಪಿಸಿದನು. ಅಂತೆಯೇ ಅತ್ರಿಯು ನಿಜ ತಪಃಪ್ರಭಾವದಿಂದ ಏಳು ದಿನಗಳವರೆವಿಗೂ ಸೂರ್ಯ ಪದವಿಯನ್ನು ವಹಿಸಿ ಜಗತ್ತನ್ನು ಬೆಳಗಿಸಿದನು. (ಇದು ಗೋ + ಮ ಅಭಿಪ್ರಾಯ. ತಿಲಕ ಮತ್ತು ಕತಕಕಾರರು ಇದು ಕವಿಕಲ್ಪಿತವಾದ ಉಪಮಾನವೆಂದು ಹೇಳಿದ್ದಾರೆ.) ಪೌರಾಣಿಕ ಗಾಥೆಯು ಕೂರ್ಮ, ಸ್ಕಾಂದ ಮುಂತಾದ ಪುರಾಣಗಳಲ್ಲಿದೆ.

ಅಯೋಧ್ಯಾಕಾಂಡೇ ಪಂಚದಶೋತ್ತರಶತತಮಸ್ಸರ್ಗಃ.

ತತೋ ನಿಕ್ಷಿಪ್ಯ ಮಾತೄ್ರ ಸ್ಸ ಅಯೋಧ್ಯಾಯಾಂ ದೃಢವ್ರತಃ ॥ ಭರತ ಶ್ಶೋಕಸಂತಪ್ತೋ ಗುರೂನಿದ ಮಥಾಬ್ರವೀತ್ ॥ ೧ ॥ ನಂದಿಗ್ರಾಮಂ ಗಮಿಷ್ಯಾಮಿ ಸರ್ವಾ ನಾಮಂತ್ರಯೇಽದ್ಯ ವಃ॥ ತತ್ರ ದುಃಖಮಿದಂ ಸರ್ವಂ ಸಹಿಷ್ಯೇ ರಾಘವಂ ವಿನಾ ॥ ೨ ॥ ಗತಶ್ಚ ಹಿ ದಿವಂ ರಾಜಾ ವನಸ್ಥಶ್ಚ ಗುರುರ್ಮಮ॥ ರಾಮಂ ಪ್ರತೀಕ್ಷ್ಯೇ ರಾಜ್ಯಾಯ ಸಹಿ ರಾಜಾ ಮಹಾಯಶಾಃ ॥ ೩ ॥ ಏತ

ತತಃ - ಬಳಿಕ, ದೃಢವ್ರತಃ - ಸ್ಥಿರ ನಿಯಮವುಳ್ಳ, ಸಭರತಃ - ಆ ಭರತನು, ಅಯೋಧ್ಯಾಯಾಂ - ಅಯೋಧ್ಯಾಪಟ್ಟಣದಲ್ಲಿ, ಮಾತೄಃ - ತಾಯಿಯರನ್ನು, ನಿಕ್ಷಿಪ್ಯ - ಇರಿಸಿ, ಅಥ - ಬಳಿಕ, ಶೋಕಸಂತಪ್ತಃ - ವ್ಯಸನದಿಂದ ಸಂಕಟಗೊಂಡು, ಗುರೂ-ವಸಿಷ್ಠಾದಿ ಪೂಜ್ಯರನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೧ ॥ ಸರ್ವಾನ್ - ಸಮಸ್ತರಾದ, ವಃ - ನಿಮ್ಮನ್ನು, ಅದ್ಯ - ಈಗಲೇ, ಆಮಂತ್ರಯೇ - ಅಪ್ಪಣೆ ಕೇಳುತ್ತೇನೆ, ನಂದಿಗ್ರಾಮಂ - ನಂದಿಗ್ರಾಮವನ್ನು ಕುರಿತು, ಗಮಿಷ್ಯಾಮಿ - ಹೋಗುವೆನು, ತತ್ರ - ಅಲ್ಲಿ, ರಾಘವಂವಿನಾ-ಶ್ರೀರಾಮನನ್ನು ಬಿಟ್ಟು, ಸರ್ವಂ - ಸಮಸ್ತವಾದ, ಇದಂದುಃಖಂ - ಈ ವ್ಯಸನವನ್ನು, ಸಹಿಷ್ಯೇ - ಸಹಿಸುವೆನು. ॥ ೨ ॥ ರಾಜಾ - ದಶರಥರಾಯನು, ಹಿ - ಯಾವ ಕಾರಣ, ದಿವಂ - ಸ್ವರ್ಗವನ್ನು, ಗತಃ - ಹೊಂದಿದನೋ, ಮಮ - ನನ್ನ, ಗುರುಶ್ಚ - ಅಣ್ಣನಾದ ಶ್ರೀರಾಮನು, ವನಸ್ಥಶ್ಚ - ವನವಾಸಿಯಾದನೋ, ತಸ್ಮಾತ್- ಆ ಕಾರಣ, ರಾಜ್ಯಾಯ - ರಾಜ್ಯಕ್ಕೆ, ರಾಮಂ - ಶ್ರೀರಾಮನನ್ನು, ಪ್ರತೀಕ್ಷ್ಯೇ - ನಿರೀಕ್ಷಿಸುತ್ತೇನೆ,

---

ಆ ಬಳಿಕ ಮಹಾ ಪ್ರಭಾವಶಾಲಿಯಾದ ಭರತನು ಕೌಸಲ್ಯೆಯೇ ಮೊದಲಾದ ತನ್ನ ತಾಯಿಯರನ್ನು ಅಯೋಧ್ಯಾಪಟ್ಟಣದಲ್ಲಿಯೇ ಇರಗೊಳಿಸಿ, ರಾಜಹೀನವೂ, ದುಃಖಸಂತಪ್ತವೂ ಆದ ಆ ನಗರವನ್ನು ನೋಡಿ ಅತಿಶಯವಾದ ದುಃಖದಿಂದ ಪೀಡಿತನಾಗಿ, ಗುರುವಾದ ವಸಿಷ್ಠ ಮಹರ್ಷಿಯೇ ಮೊದಲಾದವರನ್ನು ಕುರಿತು, "ಓ, ಪೂಜ್ಯರೇ! ಅಗ್ರಜನಾದ ಶ್ರೀರಾಮನನ್ನು ಬಿಟ್ಟು ನಾನೀಪಟ್ಟಣದಲ್ಲಿರಲಾರೆ. ಆದುದರಿಂದೀಗಲೇ ನಂದಿಗ್ರಾಮಕ್ಕೆ ಹೊರಡುತ್ತೇನೆ. ನನಗೆ ಅಣತಿಯನ್ನೀಯುವರಾಗಿರಿ. ಆ ಗ್ರಾಮದಲ್ಲಿ ರಾಮನ ಅಗಲಿಕೆಯಿಂದುಂಟಾದ ವ್ಯಸನವನ್ನು ನಾನೊರ್ವನೇ ಏಕಾಂತವಾಗಿ ಅನುಭವಿಸುತ್ತಿರುತ್ತೇನೆ. ತಂದೆಯಾದ ದಶರಥರಾಜನು ಸ್ವರ್ಗವೈದಿದನು. ಅಣ್ಣನಾದ ರಘುರಾಮನು ಕಾಡು ಸೇರಿದನು. ತಂದೆ, ತಂದೆಗೆ ಸಮಾನನಾದ ಅಣ್ಣ, ಇವರೀರ್ವರಿಂದ ತೊರೆಯಲಾದ ಈ ರಾಜ್ಯದಲ್ಲಿ ನಾನೆಷ್ಟುಮಾತ್ರಕ್ಕೂ ನಿಲ್ಲಲಾರೆ. ಆ ನಂದಿಗ್ರಾಮದಲ್ಲಿ ಶ್ರೀರಾಮಮೂರ್ತಿಯ ಆಗಮನವನ್ನೇ ನಿರೀಕ್ಷಿಸುತ್ತಿರುತ್ತೇನೆ. ಮಹಾ ಕೀರ್ತಿವಂತನೂ, ನಮ್ಮಣ್ಣನೂ ಆದ ರಘುರಾಮನೇ ರಾಜನಾಗಲು ಅರ್ಹನಲ್ಲದೆ ನಾನು ಎಂದಿಗೂ ಯೋಗ್ಯನಲ್ಲ" ಎಂದು ಹೇಳಿ

ಚ್ಛೃತ್ವಾ ಶುಭಂ ವಾಕ್ಯಂ ಭರತಸ್ಯ ಮಹಾತ್ಮನಃ || ಅಬ್ರುವ ನ್ಮಂತ್ರಿಣ ಸ್ಸರ್ವೇ ವಸಿಷ್ಠಶ್ಚ ಪುರೋಹಿತಃ ||೪|| ಸುಭೃಶಂ ಶ್ಲಾಘನೀಯಂಚ ಯದುಕ್ತಂ ಭರತ! ತ್ವಯಾ || ವಚನಂ ಭ್ರಾತೃವಾತ್ಸಲ್ಯಾ ದನುರೂಪಂ ತವೈವತತ್ ||೫|| ನಿತ್ಯಂ ತೇ ಬಂಧುಲುಬ್ಧಸ್ಯ ತಿಷ್ಠತೋ ಭ್ರಾತೃಸೌಹೃದೇ || ಆರ್ಯಮಾರ್ಗಂ ಪ್ರಪನ್ನಸ್ಯ ನಾನುಮನ್ಯೇತ ಕಃ ಪುಮಾ೯? ||೬|| ಮಂತ್ರಿಣಾಂ ವಚನಂ ಶ್ರುತ್ವಾ ಯಥಾಭಿಲಷಿತಂ ಪ್ರಿಯಮ್ || ಅಬ್ರವೀ ತ್ಸಾರಥಿಂ ವಾಕ್ಯಂ ರಥೋ ಮೇ ಯುಜ್ಯತಾ ಮಿತಿ ||೭|| ಪ್ರಹೃಷ್ಟವದನ ಸ್ಸರ್ವಾ ಮಾತೄ್ರ ಸ್ಸಮಭಿ

ಮಹಾಯಶಾಃ - ಮಹಾ ಕೀರ್ತಿವಂತನಾದ, ಸಃ - ಆ ಶ್ರೀರಾಮನು, ರಾಜಾಹಿ - ಅರಸನಷ್ಟೆ. ||೩|| ಮಹಾತ್ಮನಃ - ಮಹಾ ಮನಸ್ಸುಳ್ಳ, ಭರತಶ್ಚ - ಭರತನ, ಶುಭಂ - ಶುಭಕರವಾದ, ಏತದ್ವಾಕ್ಯಂ - ಈ ಮಾತನ್ನು, ಶ್ರುತ್ವಾ - ಕೇಳಿ, ಸರ್ವೇ - ಸಮಸ್ತರಾದ, ಮಂತ್ರಿಣಶ್ಚ - ಮಂತ್ರಿಗಳೂ, ಅಬ್ರುವ೯ - ನುಡಿದರು, ಪುರೋಹಿತಃ - ರಘುಕುಲಾಚಾರ್ಯನಾದ, ವಸಿಷ್ಠಶ್ಚ-ವಸಿಷ್ಠಋಷಿಯೂ, ಅಬ್ರವೀತ್ - ನುಡಿದನು. ||೪|| ಹೇ ಭರತ - ಎಲೈ ಭರತನೇ, ತ್ವಯಾ - ನಿನ್ನಿಂದ, ಯದ್ವಚನಂ - ಯಾವ ಮಾತು, ಭ್ರಾತೃವಾತ್ಸಲ್ಯಾತ್ - ಅಣ್ಣನಲ್ಲಿ ಭಕ್ತಿಯಿಂದ, ಉಕ್ತಂ ಹೇಳಿದ, ತದ್ವಚನಂ-ಆ ಮಾತು, ಸುಭೃಶಂ - ಬಹಳವಾಗಿ, ಶ್ಲಾಘನೀಯಂ - ಸ್ತುತಿಸತಕ್ಕುದು, ತವೈವ - ನಿನಗೆ, ಅನುರೂಪಂ - ಯೋಗ್ಯವಾದುದು. ||೫|| ನಿತ್ಯಂ - ನಿರಂತರವೂ, ಬಂಧುಲುಬ್ಧಸ್ಯ - ಬಂಧುಗಳಲ್ಲಿಯೇ ಆಸಕ್ತಿಯುಳ್ಳ, ಭಾತೃಸೌಹೃದೇ - ಅಣ್ಣನಲ್ಲಿ ಸ್ನೇಹದಿಂದ, ತಿಷ್ಠತಃ-ಇರುವ, ಆರ್ಯಮಾರ್ಗಂ - ದೊಡ್ಡವರ ಮಾರ್ಗದಲ್ಲಿ, ಪ್ರಪನ್ನಸ್ಯ - ನಡೆಯುತ್ತಿರುವ, ತೇ - ನಿನ್ನ, ವಚನಂ - ಮಾತನ್ನು, ಕಃಪುಮಾ೯ - ಯಾವ ಪುರುಷನು ತಾನೆ, ನಾನುಮನ್ಯೇತ - ಸಮ್ಮತಿಸದಿದ್ದಾನು. ||೬|| ಮಂತ್ರಿಣಾಂ - ಅಮಾತ್ಯರ, ಯಥಾಭಿಲಷಿತಂ-ತನ್ನಭಿಮತದಂತಿರುವುದೂ, ಪ್ರಿಯಂ - ಪ್ರಿಯಂಕರವಾಗಿಯೂ ಇರುವ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಸಾರಥಿಂ-ಸೂತನನ್ನು ಕುರಿತು, ಮೇ-ನನ್ನ, ರಥಃ-ರಥವು, ಯುಜ್ಯತಾ ಮಿತಿ - ಕಟ್ಟಲ್ಪಡಲೆಂದು, ವಾಕ್ಯಂ - ಮಾತನ್ನು, ಅಬ್ರವೀತ್-ನುಡಿದನು. ||೭|| ಪ್ರಹೃಷ್ಟವದನಃ -

ದನು. ||೧-೩|| ಮಹಾತ್ಮನಾದ ಭರತನು ಮಂಗಳಕರವಾದ ಈ ನುಡಿಗಳನ್ನಾಡಲು ಪುರೋಹಿತನಾದ ವಸಿಷ್ಠಋಷಿಯು, ಸುಮಂತ್ರನೇ ಮೊದಲಾದ ಸಕಲ ಮಂತ್ರಿಗಳೂ ಆತನನ್ನು ಕುರಿತು, "ಅಯ್ಯಾ, ಭರತನೇ! ನಿನ್ನ ಮಾತು ಬಹು ಶ್ಲಾಘ್ಯವಾಗಿದೆ. ಭ್ರಾತೃವಾತ್ಸಲ್ಯದಿಂದ ಕೂಡಿದ ನಿನ್ನ ಆ ಮಾತುಗಳು ರಘುಕುಲದಲ್ಲಿ ಜನ್ಮವೆತ್ತಿದ ನಿನಗೆ ತಕ್ಕುದಾಗಿಯೇ ಇರುವುದು. ||೪-೫|| ಎಲ್ಲ ಕಾಲಗಳಲ್ಲಿಯೂ ಬಂಧುಜನರಲ್ಲಿಯೇ ಪ್ರೇಮಯುಳ್ಳವನೂ, ಭ್ರಾತೃವಾತ್ಸಲ್ಯಭರಿತನೂ, ಹಿರಿಯರ ಮಾರ್ಗವನ್ನು ಹಿಡಿದೇ ನಡೆವವನೂ ಆದ ನಿನ್ನ ಮಾತುಗಳನ್ನು ಯಾರುತಾನೇ ಸಮ್ಮತಿಸದಿದ್ದಾರು" ಎಂದು ಹೇಳಿದರು. ಆ ಬಳಿಕಲಾ ಭರತನು ತನ್ನ ಮಾತಿನಂತೆಯೇ ವಸಿಷ್ಠನೇ ಮೊದಲಾದ ಸಚಿವಾಗ್ರಣಿಗಳೂ ಅಭಿಪ್ರಾಯ ಕೊಡಲು, ಸಾರಥಿಯಾದ ಸುಮಂತ್ರನನ್ನು ಕುರಿತು, ರಥವನ್ನು ಸಿದ್ಧಗೊಳಿಸೆಂದು ಆಣತಿಯಿತ್ತನು. ಸುಮಂತ್ರನಂತೆಯೇ ಮಾಡಲು ರಾಜಪುತ್ರನಾದ ಆ ಭರತನು ಸಂತಸ

ನಾದ್ಯ ಸಃ ॥ ಆರುರೋಹ ರಥಂ ಶ್ರೀಮಾನ್ ಶತ್ರುಘ್ನೇನ ಸಮನ್ವಿತಃ ॥ ೮ ॥
ಆರುಹ್ಯಚ ರಥಂ ಶೀಘ್ರಂ ಶತ್ರುಘ್ನಭರತಾ ವುಭೌ ॥ ಯಯತುಃ ಪರಮ
ಪ್ರೀತೌ ವೃತೌ ಮಂತ್ರಿ ಪುರೋಹಿತೈಃ ॥ ೯ ॥ ಅಗ್ರತೋ ಗುರವಸ್ತತ್ರ
ವಸಿಷ್ಠ ಪ್ರಮುಖಾ ದ್ವಿಜಾಃ ॥ ಪ್ರಯಯುಃ ಪ್ರಾಙ್ಮುಖಾ ಸ್ಸರ್ವೇ ನಂದಿ
ಗ್ರಾಮೋ ಯತೋಽಭವತ್ ॥ ೧೦ ॥ ಬಲಂಚ ತ ದನಾಹೂತಂ ಗಜಾಶ್ವ ರಥ
ಸಂಕುಲಂ ॥ ಪ್ರಯಯೌ ಭರತೇ ಯಾತೇ ಸರ್ವೇ ಚ ಪುರವಾಸಿನಃ ॥ ೧೧ ॥
ರಥಸ್ಥ ಸ್ಸಹಿ ಧರ್ಮಾತ್ಮಾ ಭರತೋ ಭ್ರಾತೃವತ್ಸಲಃ ॥ ನಂದಿಗ್ರಾಮಂ ಯಯೌ

ಸಂತೋಷಯುಕ್ತವಾದ ಮುಖವುಳ್ಳ, ಶ್ರೀಮಾನ್ - ಸಂಪದ್ಯುಕ್ತನಾದ, ಸಃ - ಆ ಭರತನು, ಶತ್ರು ಘ್ನೇನ - ಶತ್ರುಘ್ನನಿಂದ, ಸಮನ್ವಿತಃ - ಕೂಡಿದವನಾಗಿ, ಸರ್ವಾಃ - ಸಮಸ್ತರಾದ, ಮಾತೄಃ - ತಾಯಿಯರನ್ನು, ಅಭಿವಾದ್ಯ - ನಮಸ್ಕರಿಸಿ, ರಥಂ - ರಥವನ್ನು, ಆರುರೋಹ - ಏರಿದನು. ॥ ೮ ॥ ಪರಮಪ್ರೀತೌ - ಬಹಳ ಸಂತೋಷಗೊಂಡು, ಉಭೌ - ಇಬ್ಬರಾದ, ಶತ್ರುಘ್ನಭರತೌ - ಭರತಶತ್ರುಘ್ನರು, ಶೀಘ್ರಂ - ಜಾಗ್ರತೆಯಾಗಿ, ರಥಂ - ರಥವನ್ನು, ಆರುಹ್ಯ - ಏರಿ, ಮಂತ್ರಿಪುರೋಹಿತೈಃ - ಮಂತ್ರಿಗಳಿಂದಲೂ ಪುರೋಹಿತರಿಂದಲೂ, ವೃತೌ - ಸುತ್ತುವರೆದವರಾಗಿ, ಯಯತುಃ-ತೆರಳಿದರು. ॥ ೯ ॥ ಯತಃ - ಯಾವ ಸ್ಥಳದಲ್ಲಿ ನಂದಿಗ್ರಾಮವೆಂಬ ಹಳ್ಳಿಯು, ಅಭವತ್ - ಇರುವುದೋ, ತತ್ರ - ಅಲ್ಲಿ, ವಸಿಷ್ಠಪ್ರಮುಖಾಃ - ವಸಿಷ್ಠಋಷಿಯೇ ಮೊದಲಾದ, ಗುರವಃ-ಆಚಾರ್ಯರು, ಸರ್ವೇ - ಸಮಸ್ತರಾದ, ದ್ವಿಜಾಃ - ಬ್ರಾಹ್ಮಣರು, ಪ್ರಾಙ್ಮುಖಾಃ - ಪೂರ್ವಾಭಿಮುಖರಾಗಿ, ಅಗ್ರತಃ-ಮುಂಗಡೆ, ಪ್ರಯಯುಃ - ತೆರಳಿದರು. ॥ ೧೦ ॥ ಭರತೇ - ಭರತನು, ಯಾತೇ - ಹೊರಡಲು, ಅನಾಹೂತಂ - ಕರೆಯಲ್ಪಡದಿದ್ದರೂ, ಗಜಾಶ್ವರಥಸಂಕುಲಂ - ಆನೆಗಳಿಂದಲೂ, ಕುದುರೆಗಳಿಂದಲೂ, ರಥಗಳಿಂದಲೂ ತುಂಬಿರುವ, ತದ್ಬಲಂ - ಆ ಸೈನ್ಯವು, ಪ್ರಯಯೌ - ತೆರಳಿತು, ಸರ್ವೇ - ಸಮಸ್ತರಾದ, ಪುರವಾಸಿನಶ್ಚ - ಪಟ್ಟಣಸ್ಥರೂ, ಪ್ರಯಯುಃ - ಹೊರಟರು. ॥ ೧೧ ॥ ಧರ್ಮಾತ್ಮಾ - ಧರ್ಮಿಷ್ಠನಾದ, ಭ್ರಾತೃವತ್ಸಲಃ - ಅಣ್ಣನಲ್ಲಿ ವಿಶ್ವಾಸವುಳ್ಳ, ಸಭರತಃ - ಆ ಭರತನು, ರಥಸ್ಥಃ - ರಥದಲ್ಲಿ ಕುಳಿತುಕೊಂಡಿರುವನಾದರೂ, ಪಾದುಕೇ - ಶ್ರೀರಾಮ ಪಾದುಕೆಗಳನ್ನು, ಶಿರಸಿ - ಮಂಡೆ

ದಿಂದ ಶತ್ರುಘ್ನಸಮೇತನಾಗಿ ತಾಯಿಯರೆಲ್ಲರಿಗೂ ನಮಸ್ಕಾರ ಮಾಡಿ ಮಹಾ ಕಾಂತಿಯುಕ್ತವಾದಾ ರಥವನ್ನೇರಿದನು. ॥ ೬-೮ ॥ ಇಂತು ರಥಾರೂಢರಾದ ಆ ಭರತಶತ್ರುಘ್ನರು ವಸಿಷ್ಠನೇ ಮೊದಲಾದ ಪುರೋಹಿತರಿಂದಲೂ, ಸುಮಂತ್ರಾದಿ ಸಚಿವರಿಂದಲೂ ಪರಿವೃತರಾಗಿ ನಂದಿಗ್ರಾಮವನ್ನು ಕುರಿತು ಹೊರಟರು. ಆ ಸಮಯದಲ್ಲಿ ಶ್ರೇಷ್ಠರಾದ ವಸಿಷ್ಠಾದಿ ಗುರುಗಳೂ, ಬ್ರಾಹ್ಮಣರೂ, ಪೂರ್ವಾಭಿಮುಖವಾಗಿ ಮುಂಬರಿದರು. ಭರತಕುಮಾರನು ಕರೆಯದಿದ್ದರೂ, ಆತನನ್ನು ಬಿಟ್ಟು ಪಟ್ಟಣದಲ್ಲಿರಲಾರದೆ ಚತುರಂಗ ಬಲದವರೂಸಮಸ್ತ ಪ್ರಜೆಗಳೂ, ಆತನನ್ನೇ ಅನುಸರಿಸಿ ಹೊರಟವರಾದರು. ॥ ೯-೧೧ ॥ ಮಹಾ ಧರ್ಮಿಷ್ಠನೂ, ಅಣ್ಣನಾದ ಶ್ರೀರಾಮನಲ್ಲಿಯೇ ಅಧಿಕ ವಾತ್ಸಲ್ಯವುಳ್ಳವನೂ ಆದ ಭರತನು, ರಥಾರೂಢನಾಗಿದ್ದರೂ ಶ್ರೀರಾಮನಿಂದ ಕೊಡ

ತೂರ್ಣಂ ಶಿರಸ್ಯಾಽಧಾಯ ಪಾದುಕೇ ‖೧೨‖ ತತಸ್ತು ಭರತಃ ಕ್ಷಿಪ್ರಂ ನಂದಿಗ್ರಾಮಂ ಪ್ರವಿಶ್ಯಸಃ ‖ ಅವತೀರ್ಯ ರಥಾತ್ತೂರ್ಣಂ ಗುರೂನಿದ ಮುವಾಚಹ ‖೧೩‖ ಏತದ್ರಾಜ್ಯಂ ಮಮ ಭ್ರಾತ್ರಾ ದತ್ತಂ ಸನ್ನ್ಯಾಸವತ್ಸ್ವಯಂ ‖ ಯೋಗಕ್ಷೇಮ ವಹೇಚೇಮೇ ಪಾದುಕೇ ಹೇಮಭೂಷಿತೇ ‖೧೪‖ ಭರತ ಶ್ಶಿರಸಾ ಕೃತ್ವಾ ಸನ್ನ್ಯಾಸಂ ಪಾದುಕೇ ತತಃ ‖ ಅಬ್ರವೀದ್ದುಃಖ ಸಂತಪ್ತಸ್ಸರ್ವಂ ಪ್ರಕೃತಿ ಮಂಡಲಮ್ ‖೧೫‖ ಛತ್ರಂ ಧಾರಯತ! ಕ್ಷಿಪ್ರ ಮಾರ್ಯ ಪಾದಾ ವಿಮೌ ಮತೌ ‖ ಆಭ್ಯಾಂ ರಾಜ್ಯೇ ಸ್ಥಿತೋ ಧರ್ಮಃ ಪಾದುಕಾಭ್ಯಾಂ

ಯಲ್ಲಿ, ಆಧಾಯ - ಹೊತ್ತು, ತೂರ್ಣಂ - ಜಾಗ್ರತೆಯಾಗಿ, ನಂದಿಗ್ರಾಮಂ - ನಂದಿಗ್ರಾಮವೆಂಬ ಹಳ್ಳಿಯನ್ನು ಕುರಿತು, ಯಯೌ - ತೆರಳಿದನು. ‖೧೨‖ ತತಃ - ಬಳಿಕ, ಸಭರತಃ-ಆ ಭರತನು, ಕ್ಷಿಪ್ರಂ - ಜಾಗ್ರತೆಯಾಗಿ, ನಂದಿಗ್ರಾಮಂ - ನಂದಿಗ್ರಾಮವನ್ನು, ಪ್ರವಿಶ್ಯ - ಪ್ರವೇಶಮಾಡಿ, ತೂರ್ಣಂ - ಜಾಗ್ರತೆಯಾತ, ರಥಾತ್ - ರಥದಿಂದ, ಅವತೀರ್ಯ - ಇಳಿದು, ಗುರೂನ್ - ಆಚಾರ್ಯರನ್ನು ಕುರಿತು, ಇದಂ - ಈ ಮಾತನ್ನು, ಉವಾಚಹ - ಹೇಳಿದನಷ್ಟೆ. ‖೧೩‖ ಮಮ - ನನಗೆ, ಭ್ರಾತ್ರಾ-ಅಣ್ಣನಿಂದ, ಸನ್ನ್ಯಾಸವತ್-ಅಡುವಿನದ್ರವ್ಯದಂತೆ, ಸ್ವಯಂ-ತಾನಾಗಿಯೆ, ಏತದ್ರಾಜ್ಯಂ - ಈ ರಾಜ್ಯವು, ದತ್ತಂ - ಕೊಡಲಾಯಿತು, ಹೇಮಭೂಷಿತೇ - ಚಿನ್ನದಿಂದ ಅಲಂಕೃತವಾದ, ಇಮೇ ಪಾದುಕೇ - ಈ ಪಾದುಕೆಗಳು, ಯೋಗಕ್ಷೇಮವಹೇ - ಅಪೂರ್ವವಾದ ವಸ್ತುಲಾಭ ಸಂರಕ್ಷಣೆಯನ್ನು ವಹಿಸುತ್ತವೆ. ‖೧೪‖ ತತಃ - ಬಳಿಕ, ಭರತಃ - ಭರತನು, ಸನ್ನ್ಯಾಸಂ - ಪ್ರತಿನಿಧಿಯಾಗಿ ಇರಿಸಲ್ಪಟ್ಟ, ಪಾದುಕೇ - ಪಾದುಕೆಗಳನ್ನು, ಶಿರಸಾ - ಮಂಡೆಯಲ್ಲಿ, ಕೃತ್ವಾ - ಧರಿಸಿ, ದುಃಖಸಂತಪ್ತಃ - ವ್ಯಸನದಿಂದ ಪೀಡಿತನಾಗಿ, ಸರ್ವಂ - ಸಮಸ್ತವಾದ, ಪ್ರಕೃತಿಮಂಡಲಂ - ಮಂತ್ರಿಗಳ ಸಮೂಹವನ್ನು ಕುರಿತು, ಅಬ್ರವೀತ್ - ನುಡಿದನು. ‖೧೫‖ ಮತೌ - ಸಮ್ಮತವಾದ, ಇಮೌಆರ್ಯಪಾದೌ - ಈ ಶ್ರೇಷ್ಠವಾದ ಅಣ್ಣನ ಪಾದುಕೆಗಳಿಗೆ, ಛತ್ರಂ - ಛತ್ರಚಾಮರಾದಿಗಳನ್ನು, ಕ್ಷಿಪ್ರಂ - ಜಾಗ್ರತೆಯಾಗಿ, ಧಾರಯತ-ಇರಿಸಿರಿ, ಮಮ - ನನಗೆ, ಗುರೋಃ-ಅಣ್ಣನಾದ ಶ್ರೀರಾಮನು,

ಲಾದ ಸ್ವರ್ಣಪಾದುಕೆಗಳನ್ನು ತನ್ನ ಶಿರಸ್ಸಿನಲ್ಲಿಯೇ ಧಾರಣಮಾಡಿಕೊಂಡು, ಬಹು ಜಾಗ್ರತೆಯಾಗಿ ಆ ನಂದಿಗ್ರಾಮದ ಬಳಿ ಸಾರಿದನು. ಆ ಬಳಿಕ ಆತನು ಆ ಗ್ರಾಮ ಪ್ರವೇಶವಂಗೈದು, ಗುರುಗಳಾದ ವಸಿಷ್ಠನೇ ಮೊದಲಾದವರನ್ನು ಕುರಿತು, "ಓ, ಪೂಜ್ಯರೇ! ಅಗ್ರಜನಾದ ಶ್ರೀರಾಮಚಂದ್ರನು ಈ ರಾಜ್ಯವನ್ನು ಪರಿಪಾಲಿಸುವಂತೆ ಆಜ್ಞಾಪಿಸಿ, ಈ ಪಾದುಕೆಗಳನ್ನು ನನ್ನ ವಶಕ್ಕೆ ಅಡುವಾಗಿ ಕೊಟ್ಟಿದ್ದಾನೆ. ಸುವರ್ಣಾಲಂಕೃತವಾದ ಈ ಪಾದುಕೆಗಳೇ ಈ ರಾಜ್ಯದ ಯೋಗಕ್ಷೇಮವನ್ನು ವಹಿಸುತ್ತವೆ" ಎಂದು ಹೇಳಿದನು. ‖ ೧೨-೧೪ ‖ ಆ ಬಳಿಕ ಆ ಭರತನು ಅಣ್ಣನಿಂದ ನ್ಯಾಸವಾಗಿ ಕೊಡಲಾದ ಆ ಪಾದುಕೆಗಳನ್ನು ಶಿರಸ್ಸಿನಲ್ಲಿ ಧರಿಸಿಕೊಂಡೇ ಭ್ರಾತೃವಿರಹದಿಂದ ಖತಿಗೊಂಡು ಅಲ್ಲಿದ್ದ ಪ್ರಜೆಗಳನ್ನೂ ರಾಜ್ಯಾಧಿಕೃತರನ್ನೂ ಕುರಿತು, "ಎಲೈ ಮಂತ್ರಿಗಳಿರಾ! ಓ ಪ್ರಜೆಗಳಿರಾ! ಇದೋ; ಈ ಪಾದುಕೆಗಳು ನಮ್ಮಣ್ಣನಾದ ಶ್ರೀರಾಮನವು; ಈ ಸಾಕೇತಸಾಂಮ್ರಾಜ್ಯದ ಆಡಳಿತವೆಲ್ಲವೂ ಇವುಗಳಿಗೇ

ಗುರೋರ್ಧರ್ಮಃ ‖ ೧೬ ‖ ಭ್ರಾತ್ರಾಹಿ ಮಯಿ ಸನ್ನ್ಯಾಸೋ ನಿಕ್ಷಿಪ್ತ
ಸ್ಸೌಹೃದಾದಯಂ‖ತಮಿಮಂ ಪಾಲಯಿಷ್ಯಾಮಿ ರಾಘವಾಗಮನಂ ಪ್ರತಿ ‖೧೭‖
ಕ್ಷಿಪ್ರಂ ಸಂಯೋಜಯಿತ್ವಾತು ರಾಘವಸ್ಯ ಪುನ ಸ್ಸ್ವಯಂ ‖ ಚರಣೌ ತೌತು
ರಾಮಸ್ಯ ದ್ರಕ್ಷ್ಯಾಮಿ ಸಹಪಾದುಕೌ ‖ ೧೮ ‖ ತತೋ ನಿಕ್ಷಿಪ್ತಭಾರೋಹಂ
ರಾಘವೇಣ ಸಮಾಗತಃ ‖ ನಿವೇದ್ಯ ಗುರವೇ ರಾಜ್ಯಂ ಭಜಿಷ್ಯೇ ಗುರುವೃತ್ತಿತಾಂ
‖ ೧೯ ‖ ರಾಘವಾಯ ಚ ಸನ್ನ್ಯಾಸಂ ದತ್ವೇ ಮೇ ವರಪಾದುಕೇ ‖ ರಾಜ್ಯಂ
ಚೇದ ಮಯೋಧ್ಯಾಂಚ ಧೂತಪಾಪೋ ಭವಾಮಿಚ ‖ ೨೦ ‖ ಅಭಿಷಿಕ್ತೇತು

ಆಭ್ಯಾಂಪಾದುಕಾಭ್ಯಾಂ - ಈ ಪಾದುಕೆಗಳಿಂದ, ರಾಜ್ಯೇ - ರಾಜ್ಯದಲ್ಲಿ, ಧರ್ಮಃ - ಧರ್ಮವು, ಸ್ಥಿತಃ - ಇರಿಸಲ್ಪಟ್ಟಿತು. ‖ ೧೬ ‖ ಮಯಿ - ನನ್ನಲ್ಲಿ, ಸೌಹೃದಾತ್ - ವಾತ್ಸಲ್ಯದಿಂದ, ಭ್ರಾತ್ರಾ- ಅಣ್ಣನಿಂದ, ಅಯಂಸನ್ನ್ಯಾಸಃ - ಈ ಪಾದುಕಾರೂಪ ಪ್ರತಿನಿಧಿದ್ರವ್ಯವು, ನಿಕ್ಷಿಪ್ತೋಹಿ-ಇರಿಸಲ್ಪಟ್ಟಿತಷ್ಟೆ, ತಮಿಮಂ - ಈ ನಿಕ್ಷಿಪ್ತರೂಪದ್ರವ್ಯವನ್ನು, ರಾಘವಾಗಮನಂಪ್ರತಿ - ಶ್ರೀರಾಮನಾಗಮನ ಪರ್ಯಂತವೂ, ಪಾಲಯಿಷ್ಯಾಮಿ - ರಕ್ಷಿಸುತ್ತೇನೆ, ಕ್ಷಿಪ್ರಂ - ಜಾಗ್ರತೆಯಾಗಿ, ರಾಘವಸ್ಯ-ಶ್ರೀರಾಮನಿಗೆ, ಪಾದುಕೌ - ಪಾದುಕೆಗಳನ್ನು, ಸಂಯೋಜಯಿತ್ವಾ - ಕೂಡಿಸಿ, ಪುನಃ - ಮತ್ತು, ಸ್ವಯಂ - ನಾನು, ಸಹಪಾದುಕೌ - ಆ ಪಾದುಕೆಗಳಿಂದೊಡಗೂಡಿದ, ರಾಮಸ್ಯ - ಶ್ರೀರಾಮನ, ತೌಚರಣೌ ಆ ಪಾದಗಳನ್ನು, ದ್ರಕ್ಷ್ಯಾಮಿ - ನೋಡುವೆನು. ‖ ೧೮ ‖ ತತಃ - ಬಳಿಕ, ನಿಕ್ಷಿಪ್ತಭಾರಃ - ಇರಿಸಲ್ಪಟ್ಟ ರಾಜ್ಯಭಾರವುಳ್ಳ, ಅಹಂ - ನಾನು, ರಾಘವೇಣ - ಶ್ರೀರಾಮನೊಡನೆ, ಸಮಾಗತಃ - ಕೂಡಿ, ಗುರವೇ - ದೊಡ್ಡವನಾದ ಶ್ರೀರಾಮನಿಗೋಸ್ಕರ, ರಾಜ್ಯಂ - ರಾಜ್ಯವನ್ನು, ನಿವೇದ್ಯ - ಸಮರ್ಪಿಸಿ, ಗುರುವೃತ್ತಿತಾಂ - ಗುರುಭಾವವನ್ನು, ಭಜಿಷ್ಯೇ - ಹೊಂದುತ್ತೇನೆ. ‖ ೧೯ ‖ ರಾಘವಾಯ - ಶ್ರೀರಾಮನಿಗೆ, ಸನ್ನ್ಯಾಸಂ - ನಿಕ್ಷಿಪ್ತದ್ರವ್ಯರೂಪವಾದ, ಇಮೇ - ಈ, ವರಪಾದುಕೇ - ಶ್ರೇಷ್ಠವಾದ ಪಾದುಕೆಗಳಿಗೆ, ಇದಂರಾಜ್ಯಂಚ - ಈ ರಾಜ್ಯವನ್ನೂ, ಅಯೋಧ್ಯಾಂಚ - ಅಯೋಧ್ಯಾ

ಸೇರಿದುದು; ಇದು ನಿಮಗೂ ಸಮ್ಮತವಾಗಿದೆ. ರಾಜ್ಯದ ಯೋಗಕ್ಷೇಮದ ಭಾರವನ್ನು ವಹಿಸುವ ಈ ಪಾದುಕೆಗಳಿಗೆ ಛತ್ರ, ಚಾಮರಗಳನ್ನು ಹಿಡಿಯುವವರಾಗಿರಿ. ನಮ್ಮಣ್ಣನಾದ ರಘುರಾಮನು ನನ್ನಲ್ಲಿ ವಾತ್ಸಲ್ಯವುಳ್ಳವನಾಗಿಯೂ, ನಂಬಿಕೆಯುಳ್ಳವನಾಗಿಯೂ, ಇವುಗಳನ್ನು ನ್ಯಾಸವಾಗಿಟ್ಟಿರುವನಲ್ಲವೆ! ಆದುದರಿಂದಲೇ ನಾನಾತನ ಆಗಮನದವರೆವಿಗೂ ಈ ಪಾದುಕಾ ಪ್ರತಿನಿಧಿಯನ್ನು ಸಂರಕ್ಷಿಸುತ್ತಿರುತ್ತೇನೆ. ‖ ೧೫-೧೭ ‖ ನಮ್ಮಣ್ಣನಾದ ಶ್ರೀರಾಮಚಂದ್ರನು ಹದಿನಾಲ್ಕು ವರ್ಷಗಳ ವನವಾಸವನ್ನು ಮುಗಿಸಿಕೊಂಡು ಪುರಪ್ರವೇಶ ಮಾಡಿದ ಬಳಿಕ ಆತನಿಗೀರಾಜ್ಯಭಾರವನ್ನುವಹಿಸಿ, ತಂದೆಯಲ್ಲಿಯಂತೆ ಆತನ ಶುಶ್ರೂಷೆಯನ್ನು ಮಾಡಿಕೊಂಡಿರುತ್ತೇನೆ. ಆ ಬಳಿಕ ಶ್ರೀರಾಮನಿಂದ ಕೊಡಲಾದ ನ್ಯಾಸರೂಪ ರಾಜ್ಯವನ್ನಾತನಿಗೇ ಒಪ್ಪಿಸಿ, ಈ ಪಾದುಕೆಗಳನ್ನೂ ಸಮರ್ಪಿಸಿ ನಿಷ್ಕಲ್ಮಷನೆನಿಸುತ್ತೇನೆ. ಎಂದು ಶ್ರೀರಾಮಮೂರ್ತಿಯು ಸಾಕೇತಸಾಂಮ್ರಾಜ್ಯದಲ್ಲಿ ಅಭಿಷಿಕ್ತನಾಗಿ, ಪ್ರಜೆಗಳೆಲ್ಲರೂ ಸಂತೋಷಗೊಂಡು ರೋಮಾಂಚವುಳ್ಳವರಾಗುವರೋ, ಆದೇ ನನಗೆ ಪ್ರೀತಿ

ಕಾಕುತ್ಸ್ಥೇ ಪ್ರಹೃಷ್ಟ ಮುದಿತೇ ಜನೇ ॥ ಪ್ರೀತಿರ್ಮಮ ಯಶಶ್ಚೈವ ಭವೇ
ದ್ರಾಜ್ಯಾ ಚ್ಚತುರ್ಗುಣಂ ॥ ೨೦ ॥ ಏವಂತು ವಿಲಪನ್ ದೀನೋ ಭರತ ಸ್ಸಮಹಾ
ಯಶಾಃ ॥ ನಂದಿಗ್ರಾಮೇ ಕರೋದ್ರಾಜ್ಯಂ ದುಃಖಿತೋ ಮಂತ್ರಿಭಿ ಸ್ಸಹ ॥೨೨॥
ಸ ವಲ್ಕಲ ಜಟಾಧಾರೀ ಮುನಿವೇಷಧರಃ ಪ್ರಭುಃ ॥ ನಂದಿಗ್ರಾಮೇಽವಸದ್ವೀರ
ಸ್ಸಸೈನ್ಯೋ ಭರತ ಸ್ತದಾ ॥ ೨೩ ॥ ರಾಮಾಗಮನ ಮಾಕಾಂಕ್ಷನ್ ಭರತೋ
ಭ್ರಾತೃವತ್ಸಲಃ ॥ ಭ್ರಾತು ರ್ವಚನಕಾರೀಚ ಪ್ರತಿಜ್ಞಾಪಾರಗ ಸ್ತದಾ ॥ ೨೪ ॥
ಪಾದುಕೇ ತ್ವಭಿಷಿಚ್ಯಾಥ ನಂದಿಗ್ರಾಮೇ ವಸತ್ತದಾ ॥ ಭರತ ಶ್ಶಾಸನಂ ಸರ್ವಂ

ಪಟ್ಟಣವನ್ನೂ, ದತ್ವಾ - ಸಮರ್ಪಿಸಿ, ಧೂತಪಾಪಃ - ನಿಷ್ಕಳಂಕನು, ಭವಾಮಿ - ಆಗುತ್ತೇನೆ. ॥ ೨೦ ॥ ಕಾಕುತ್ಸ್ಥೇ - ಕಕುತ್ಸ್ಥವಂಶೋತ್ಪನ್ನನಾದ ರಾಮನು, ಅಭಿಷಿಕ್ತೇ - ಪಟ್ಟಾಭಿಷಿಕ್ತನಾಗಲು, ಜನೇತು-ಪ್ರಜೆಗಳು, ಪ್ರಹೃಷ್ಟಮುದಿತೇ - ಅಂತರ್ಬಹಿಸ್ಸಂತೋಷವುಳ್ಳವರಾಗಲು, ಮಮ - ನನಗೆ, ಪ್ರೀತಿಃ - ಸಂತೋಷವು, ರಾಜ್ಯಾತ್ - ರಾಜ್ಯಭಾರಕ್ಕಿಂತಲೂ, ಚತುರ್ಗುಣಂ - ನಾಲ್ಕರಷ್ಟಾದ, ಯಶಶ್ಚೈವ - ಕೀರ್ತಿಯೂ, ಭವೇತ್ - ಉಂಟಾಗುತ್ತದೆ. ॥ ೨೧ ॥ ಮಹಾಯಶಾಃ-ಮಹಾಕೀರ್ತಿವಂತನಾದ, ಸಭರತಃ - ಆ ಭರತನು, ಏವಂ - ಈಪರಿಯಾಗಿ, ವಿಲಪನ್ - ರೋದನಮಾಡುತ್ತ, ದೀನಃ - ಪರಿತಪ್ತನಾಗಿ, ದುಃಖಿತಃ - ವ್ಯಸನಗೊಂಡು, ಮಂತ್ರಿಭಿಸ್ಸಹ - ಮಂತ್ರಿಗಳೊಡನೆ, ನಂದಿಗ್ರಾಮೇ - ನಂದಿಗ್ರಾಮದಲ್ಲಿ, ರಾಜ್ಯಂ - ರಾಜ್ಯಭಾರವನ್ನು, ಅಕರೋತ್ - ಮಾಡಿದನು. ॥ ೨೨ ॥ ತದಾ - ಆಗ, ವೀರಃ - ಶೂರನಾದ, ಭರತಃ - ಆ ಭರತನು, ಪ್ರಭುಃ - ಅರಸನಾದರೂ, ವಲ್ಕಲ ಜಟಾಧಾರೀ - ನಾರುವಸ್ತ್ರವನ್ನೂ ಜಡೆಗಳನ್ನೂ ಧರಿಸಿ, ಮುನಿವೇಷಧರಃ - ಋಷಿವೇಷಧಾರಿಯಾಗಿ, ಸಸೈನಃ - ಸೈನ್ಯದಿಂದೊಡಗೂಡಿ, ನಂದಿಗ್ರಾಮೇ - ನಂದಿಗ್ರಾಮದಲ್ಲಿ, ಅವಸತ್ - ನಿಂತನು. ॥ ೨೩ ॥ ಪ್ರತಿಜ್ಞಾಪಾರಗಃ - ಪ್ರತಿಜ್ಞೆಯಲ್ಲಿ ಪಾರಂಗತನಾದ, ತಥಾ - ಆಪರಿಯಾಗಿ, ಭ್ರಾತುಃ - ಅಣ್ಣನ, ವಚನಕಾರೀಚ - ಮಾತನ್ನು ನಡೆಯಿಸುತ್ತಿರುವ, ಭ್ರಾತೃವತ್ಸಲಃ - ಅಣ್ಣನಲ್ಲಿ ವಾತ್ಸಲ್ಯವುಳ್ಳ, ಭರತಃ - ಭರತನು, ರಾಮಾಗಮನಂ - ಶ್ರೀರಾಮನ ಬರುವಿಕೆಯನ್ನು, ಆಕಾಂಕ್ಷನ್-ಎದುರು ನೋಡುತ್ತ, ಪಾದುಕೇ - ಪಾದುಕೆಗಳಿಗೆ, ಅಥ - ಬಳಿಕ, ಅಭಿಷಿಚ್ಯ - ಪಟ್ಟಾಭಿಷೇಕಮಾಡಿ,

---

ಯುಂಟಾಗುತ್ತದೆ. ಮಾತ್ರವಲ್ಲದೆ ರಾಜ್ಯಪ್ರಾಪ್ತಿಗಿಂತಲೂ ನಾಲ್ಕರಷ್ಟು ಹೆಚ್ಚಾದ ಕೀರ್ತಿಯೂ ಸಹ ನನಗೆ ದೊರಕುತ್ತದೆ" ಎಂದು ಹೇಳಿದನು. ॥ ೧೮-೨೧ ॥ ಮಹಾ ಕೀರ್ತಿಮಂತನಾದ ಆ ಭರತನು ಈ ರೀತಿ ಬಹು ದೀನನಾಗಿ ವಿಲಪಿಸುತ್ತ ಬಹುವಾಗಿ ದುಃಖಗೊಂಡು ಮಂತ್ರಿಗಳೊಡಗೂಡಿ ಆ ನಂದಿಗ್ರಾಮದಲ್ಲಿಯೇ ರಾಜ್ಯಭಾರ ಮಾಡಿದನು. ನಾರುಮಡಿಗಳನ್ನೂ ಜಡೆಗಳನ್ನೂ ಧರಿಸಿ, ಮುನಿವೇಷಧಾರಿಯೂ ಮಹಾ ಸಮರ್ಥನೂ, ಬಹು ಪರಾಕ್ರಮಿಯೂ, ಸೈನ್ಯದಿಂದೊಡಗೂಡಿದವನೂ ಆದ ಆ ಭರತಕುಮಾರನು ಈ ರೀತಿ ರಾಜ್ಯಭಾರ ಮಾಡುತ್ತ ಆ ಗ್ರಾಮದಲ್ಲಿಯೇ ವಾಸ ಮಾಡುತ್ತಿದ್ದನು. ಅಲ್ಲದೆ ಅಣ್ಣನಲ್ಲಿಯೇ ಅಧಿಕವಾದ ವಾತ್ಸಲ್ಯವುಳ್ಳವನೂ, ಆತನ ಮಾತಿನಂತೆಯೇ ನಡೆದವನೂ, ನಿಜಸಂಕಲ್ಪವನ್ನು ನೆರವೇರಿಸಿಕೊಂಡವನೂ ಆದ ಭರತನು ಶ್ರೀರಾಮಚಂದ್ರನ ಪಾದುಕೆಗಳಿಗೆ ಪಟ್ಟಾಭಿಷೇಕವನ್ನು

ಪಾದುಕಾಭ್ಯಾಂ ನ್ಯವೇದಯತ್ ॥ ೨೫ ॥ ತತಸ್ತು ಭರತ ಶ್ರೀಮಾ ನಭಿಷಿಚ್ಯಾ
ರ್ಯ ಪಾದುಕೇ ॥ ತದಧೀನ ಸ್ತದಾರಾಜ್ಯಂ ಕಾರಯಾಮಾಸ ಸರ್ವದಾ ॥೨೬॥

ತದಾಹಿ ಯತ್ಕಾರ್ಯಮುಪೈತಿ ಕಿಂಚಿ
ದುಪಾಯನಂ ಚೋಪಹೃತಂ ಮಹಾರ್ಹಂ ॥
ಸ ಪಾದುಕಾಭ್ಯಾಂ ಪ್ರಥಮಂ ನಿವೇದ್ಯ
ಚಕಾರ ಪಶ್ಚಾ ದ್ಭರತೋ ಯಥಾವತ್ ॥ ೨೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚದಶೋತ್ತರಶತತಮಸ್ಸರ್ಗಃ.

ತದಾ - ಆಕಾಲದಲ್ಲಿ, ನಂದಿಗ್ರಾಮೇ - ನಂದಿಗ್ರಾಮದಲ್ಲಿ, ಅವಸತ್ - ಸಿಂತನು, ಭರತಃ-ಭರತನು, ಸರ್ವಂ - ಸಮಸ್ತವಾದ, ಶಾಸನಂ - ರಾಜ್ಯಭಾರವನ್ನು, ಪಾದುಕಾಭ್ಯಾಂ - ಪಾದುಕೆಗಳಿಗೇ, ನಿವೇದಯತ್ - ಸಮರ್ಪಿಸಿದನು. ॥ ೨೫ ॥ ತತಃ - ಬಳಿಕ, ಶ್ರೀಮಾ - ಸಂಪದ್ಯುಕ್ತನಾದ, ಭರತಃ - ಭರತನು, ಆರ್ಯಪಾದುಕೇ - ಅಣ್ಣನಾದ ಶ್ರೀರಾಮನ ಪಾದುಕೆಗಳಿಗೆ, ಅಭಿಷಿಚ್ಯ - ಪಟ್ಟಾಭಿಷೇಕ ಮಾಡಿ, ತದಧೀನಃ - ಆ ಪಾದುಕೆಗಳಿಗೆ ಸ್ವಾಧೀನನಾಗಿ, ತದಾ - ಆಕಾಲದಲ್ಲಿ, ರಾಜ್ಯಂ - ರಾಜ್ಯವನ್ನು, ಸರ್ವದಾ - ಸದಾಕಾಲದಲ್ಲಿಯೂ, ಕಾರಯಾಮಾಸ - ನಡೆಯಿಸಿದನು. ॥ ೨೬ ॥ ತದಾ - ಆಕಾಲದಲ್ಲಿ, ಯತ್ಕಾರ್ಯಂ - ಯಾವ ಕಾರ್ಯವು, ಕಿಂಚಿತ್ - ಯಾವದಾದರೂ, ಉಪೈತಿ - ಬರುತ್ತದೆಯೋ, ಮಹಾರ್ಹಂ - ಅಮೂಲ್ಯವಾದ, ಉಪಾಯನಂಚ - ಕಾಣಿಕೆಯು, ಯತ್-ಯಾವದು, ಉಪಹೃತಂ - ತರಲ್ಪಡುತ್ತದೆಯೊ, ಸಃಭರತಃ - ಆ ಭರತನು, ಪಾದುಕಾಭ್ಯಾಂ - ಪಾದುಕೆಗಳಿಗೇ, ತತ್ - ಅದನ್ನು, ಪ್ರಥಮಂ - ಮೊದಲು, ನಿವೇದ್ಯ - ತಿಳಿಸಿ, ಯಥಾವತ್ - ಯಥಾ ಶಾಸ್ತ್ರವಾಗಿ, ಪಶ್ಚಾತ್ - ಬಳಿಕ, ಚಕಾರ - ವಿನಿಯೋಗಮಾಡಿದನು. ॥ ೨೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಪಂಚದಶೋತ್ತರಶತತಮಸ್ಸರ್ಗಃ.

ಮಾಡಿ, ರಾಜಾಜ್ಞೆಗಳನ್ನೂ ಆ ಪಾದುಕೆಗಳಿಗೇ ನಿವೇದಿಸುತ್ತಿದ್ದನು. ॥ ೨೨-೨೫ ॥ ಆ ಬಳಿಕ ಮಹಾ ತೇಜಸ್ವಿಯಾದ ಆ ಭರತನು ಪಾದುಕಾಪಟ್ಟಾಭಿಷೇಕವಂಗೈದು, ಯಾವಾಗಲೂ ಅವುಗಳಿಗಧೀನನಾಗಿ ರಾಜ್ಯಭಾರವಂಗೈದನು. ಆ ಆಳ್ವಿಕೆಯಲ್ಲಿ ಯಾವ ಕಾರ್ಯವನ್ನು ಮಾಡಬೇಕಾದರೂ, ರಾಜೋಪಾಯನವಾಗಿ ಯಾವ ಪದಾರ್ಥ ಬಂದರೂ, ಸಾಮಂತ ರಾಜರಿಂದ ಅಮೋಘವಾದ ಕಪ್ಪಕಾಣಿಕೆಗಳು ಏನೇ ಬಂದರೂ ಅವುಗಳೆಲ್ಲವನ್ನೂ ಶ್ರೀರಾಮನ ಪಾದುಕೆಗಳಿಗೆ ನಿವೇದಿಸಿ, ಆ ಬಳಿಕ ಕ್ರಮಾನುಸಾರ ಯಾವ ಯಾವ ದ್ರವ್ಯವನ್ನು ಯಾವ ಯಾವ ರೀತಿಯಲ್ಲಿ ವಿನಿಯೋಗಿಸಬೇಕೆಂದು ಮನ್ವಾದಿ ಧರ್ಮಶಾಸ್ತ್ರಗಳು ಸಾರುತ್ತಿವೆಯೋ ಆ ರೀತಿಯೇ ವಿನಿಯೋಗಿಸುತ್ತಿದ್ದನೇ ಹೊರ್ತು ಸ್ವತಂತ್ರನಾಗಿ ಯಾವ ಕಾರ್ಯವನ್ನೂ ಮಾಡಲುಜ್ಜಗಿಸುತ್ತಿರಲಿಲ್ಲ. ॥ ೨೬-೨೭ ॥

ಇಂತಿದು ಭರತಕುಮಾರಕೃತ ಶ್ರೀರಾಮ ಪಾದುಕಾಪಟ್ಟಾಭಿಷೇಕ ಕಥಾವಿವರಣವೆಂಬ ನೂರಹದಿನೈದನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಷೋಡಶೋತ್ತರಶತತಮಸ್ಸರ್ಗಃ.

ಪ್ರತಿಪ್ರಯಾತೇ ಭರತೇ ವಸನ್ರಾಮ ಸ್ತಪೋವನೇ ॥ ಲಕ್ಷಯಾಮಾಸ ಸೋದ್ವೇಗ ಮಥೌತ್ಸುಕ್ಯಂ ತಪಸ್ವಿನಾಂ ॥ ೧ ॥ ಯೇ ತತ್ರ ಚಿತ್ರಕೂಟಸ್ಯ ಪುರಸ್ತಾ ತ್ತಾಪಸಾಶ್ರಮೇ ॥ ರಾಮಮಾಶ್ರಿತ್ಯ ನಿರತಾ ಸ್ತಾನಲಕ್ಷಯ ದುತ್ಸುಕಾ ॥ ೨ ॥ ನಯನೈ ರ್ಭ್ರುಕುಟೀಭಿಶ್ಚ ರಾಮಮುದ್ದಿಶ್ಯ ಶಂಕಿತಾಃ ॥ ಅನ್ಯೋನ್ಯ ಮುಪಜಲ್ಪಂತ ಶ್ಶನೈಶ್ಚಕ್ರು ರ್ಮಿಥಃ ಕಥಾಃ ॥ ೩ ॥ ತೇಷಾ

ಭರತೇ - ಭರತನು, ಪ್ರತಿಪ್ರಯಾತೇ - ಹೊರಟವನಾಗಲು, ಅಥ - ಬಳಿಕ, ತಪೋವನೇ - ತಪಸ್ಸಿಗೆ ಯೋಗ್ಯವಾದ ವನದಲ್ಲಿ, ವರ್ಸ - ಇರುವ, ರಾಮಃ - ಶ್ರೀರಾಮನು, ಸೋದ್ವೇಗಂ - ಭೀತಿಗೊಳ್ಳುತ್ತಿರುವ, ತಪಸ್ವಿನಾಂ - ಮುನಿಗಳ, ಔತ್ಸುಕ್ಯಂ - ಬೇರೊಂದು ಕಡೆಗೆ ಹೋಗಬೇಕೆಂಬ ಬಯಕೆಯನ್ನು, ಲಕ್ಷಯಾಮಾಸ - ತಿಳಿದನು. ॥ ೧ ॥ ಚಿತ್ರಕೂಟಸ್ಯ - ಚಿತ್ರಕೂಟಪರ್ವತದ, ಪುರಸ್ತಾತ್-ಮುಂಗಡೆ, ತತ್ರತಾಪಸಾಶ್ರಮೇ - ಆ ಋಷ್ಯಾಶ್ರಮದಲ್ಲಿ, ರಾಮಮಾಶ್ರಿತ್ಯ - ಶ್ರೀರಾಮನನ್ನಾಶ್ರಯಿಸಿ, ಯೇ-ಯಾರು, ನಿರತಾಃ-ಆಸಕ್ತರಾಗಿದ್ದರೋ, ತಾ - ಆ ಋಷಿಗಳನ್ನು, ಉತ್ಸುಕಾ-ಮತ್ತೊಂದು ಆಶ್ರಮಕ್ಕೆ ಹೋಗಲಿಚ್ಛಿಸಿದವರನ್ನಾಗಿ, ಅಲಕ್ಷಯತ್ - ತಿಳಿದನು. ॥ ೨ ॥ ರಾಮಂ-ಶ್ರೀರಾಮನನ್ನು, ಉದ್ದಿಶ್ಯ - ಕುರಿತು, ಶಂಕಿತಾಃ - ಸಂಶಯಗೊಂಡು, ನಯನೈಃ ನೇತ್ರಗಳಿಂದಲೂ, ಭ್ರುಕುಟೀಭಿಶ್ಚ - ಹುಬ್ಬುಗಳಿಂದಲೂ, ಅನ್ಯೋನ್ಯಂ - ಒಬ್ಬರಿಗೊಬ್ಬರು, ಉಪಜಲ್ಪಂತಃ-ಪಿಸುಮಾತುಗಳಾಡುತ್ತ, ಮಿಥಃ - ಅನ್ಯೋನ್ಯವಾಗಿ, ಕಥಾಃ - ಕಥೆಗಳನ್ನು, ಚಕ್ರುಃ - ಹೇಳಿದರು. ॥ ೩ ॥ ರಾಮಸ್ತು - ಶ್ರೀರಾಮನಾದರೆ, ತೇಷಾಂ-ಆ ಮುನಿಗಳ, ಔತ್ಸುಕ್ಯಂ - ಮನೋರಥವನ್ನು, ಆಲಕ್ಷ್ಯ-

---

ಈ ಪ್ರಕಾರವಾಗಿ ಭರತಕುಮಾರನು ಶ್ರೀರಾಮಮೂರ್ತಿಯ ಪಾದುಕೆಗಳನ್ನು ಶಿರಸಾಧಾರಣಮಾಡಿಕೊಂಡು ಅಯೋಧ್ಯೆಯನ್ನುಸೇರಿ ನಿಜಜನನಿಯರನ್ನಲ್ಲಿಯೇ ಇರಿಸಿ ನಂದೀಗ್ರಾಮಕ್ಕೆ ಹೋಗಿ ಆ ಪಾದುಕೆಗಳಿಗೆ ರಾಜ್ಯಾಭಿಷೇಕವಂಗೈದು ಅಲ್ಲಿಯೇ ವಾಸಿಸುತ್ತಿದ್ದನು. ಹೀಗಿರಲು ಇತ್ತ ತಪೋವನನಿವಾಸಿಯಾದ ಶ್ರೀರಾಮನು ಆ ಅರಣ್ಯದಲ್ಲಿನ ಮುನಿಗಳೆಲ್ಲರೂ ಭಯಗೊಂಡಿರುವುದನ್ನು, ಅವರ ಇಂಗಿತ, ಆಕಾರಾದಿಗಳಿಂದಲೇ ತಿಳಿದವನಾದನು. ಆ ಚಿತ್ರಕೂಟಪರ್ವತದ ಮುಂಗಡೆ ಪರ್ಣಶಾಲೆಗಳನ್ನು ನಿರ್ಮಿಸಿಕೊಂಡು ಶ್ರೀರಾಮನನ್ನೇ ಆಶ್ರಯಿಸಿ ವಾಸ ಮಾಡುತಿದ್ದ ಮುನಿಗಳೆಲ್ಲರೂ ಬೇರೊಂದು ಕಡೆಗೆ ಪಯಣಿಸಬೇಕೆಂದು ಸಿದ್ಧವಾಗುತ್ತಿದ್ದರು. ಮಾತ್ರವಲ್ಲದೆ ಅವರೆಲ್ಲರೂ ಶ್ರೀರಾಮನನ್ನುದ್ದೇಶಿಸಿ ಸಂಶಯಗೊಂಡು ಕಣ್ಣುಸಂಜ್ಞೆಯಿಂದಲೇ ಒಬ್ಬರಿಗೊಬ್ಬರು ತಂತಮ್ಮ ಅಭಿಪ್ರಾಯಗಳನ್ನು ಸೂಚಿಸುತ್ತಲೂ, ಯಾರಿಗೂ ತಿಳಿಯದಂತೆ ರಹಸ್ಯವಾಗಿ ಮಾತನಾಡುತ್ತಲೂ ಇದ್ದರು. ॥ ೧-೩ ॥ ಆಗ ಶ್ರೀರಾಮಚಂದ್ರನು ಬೇರೊಂದು ಕಡೆಗೆ ಪ್ರಯಾಣ

ಮೌತ್ಸುಕ್ಯ ಮಾಲಕ್ಷ್ಯ ರಾಮಸ್ತ್ವಾತ್ಮನಿ ಶಂಕಿತಃ ॥ ಕೃತಾಂಜಲಿ ರುವಾಚೇದ ಮೃಷಿಂ ಕುಲಪತಿಂ ತತಃ ॥೪॥ ನಕಚ್ಚಿ ದ್ಭಗವನ್ ಕಿಂಚಿ ತ್ಪೂರ್ವವೃತ್ತ ಮಿದಂಮಯಿ ॥ ದೃಶ್ಯತೇ ವಿಕೃತಂ ಯೇನ ವಿಕ್ರಿಯಂತೇ ತಪಸ್ವಿನಃ (೧) ॥೫॥

ಕಂಡು,ಆತ್ಮನಿ-ತನ್ನಲ್ಲಿ, ಶಂಕಿತಃ-ಸಂದೇಹಿಸಿದರೆಂದು, ಕೃತಾಂಜಲಿಃ-ಅಂಜಲಿಬದ್ಧನಾಗಿ, ತತಃ-ಬಳಿಕ, ಕುಲಪತಿಂ - ಮುನಿಕುಲದಲ್ಲಿ ಶ್ರೇಷ್ಠನಾದ, ಋಷಿಂ-ಮುನಿಯನ್ನುಕುರಿತು, ಇದಂ - ಈ ಮಾತನ್ನು, ಉವಾಚ - ನುಡಿದನು. ॥ ೪ ॥ ಹೇ ಭಗವನ್ - ಎಲೈ ಪೂಜ್ಯನೇ, ಮಯಿ - ನನ್ನಲ್ಲಿ, ಪೂರ್ವವೃತ್ತಂ - ಪೂರ್ವದ ನಡತೆಯು, ನದೃಶ್ಯತೇಕಚ್ಚಿತ್ - ಕಾಣುವುದಿಲ್ಲವೆ? ವಿಕೃತಂ - ವಿಕಾರವು, ಕಿಂಚೀತ್ - ಸ್ವಲ್ಪವಾದರೂ, ದೃಶ್ಯತೇಕಚ್ಚಿತ್-ಕಂಡಿತೇ, ಯೇನ-ಯಾವ ವಿಕಾರದಿಂದ, ತಪಸ್ವಿನಃ - ಋಷಿಗಳು, ವಿಕ್ರಿಯಂತೇ - ವಿಕಾರವನ್ನು ಹೊಂದಿದ್ದಾರೆ, ಇದಂಕಿಂ - ಇದೇನು. ॥೫॥ ಪ್ರಮಾದಾತ್ - ಮೌಢ್ಯದಿಂದ, ಮೇ-ನನ್ನ, ಅವರಜಸ್ಯಲಕ್ಷ್ಮಣಸ್ಯ - ತಮ್ಮನಾದ ಲಕ್ಷ್ಮಣನಿಂದ, ಆತ್ಮನಃ - ತನಗೆ, ನಾನು

ಮಾಡಲಪೇಕ್ಷಿಸುತ್ತಿರುವ ಆ ಮುನಿಗಳ ಅಭಿಪ್ರಾಯವನ್ನು ತಿಳಿದು, ತನ್ನಲ್ಲಿ ಯಾವ ಅಪರಾಧವುಂಟೋ ಎಂಬ ಸಂಶಯದಿಂದ ಅವರಲ್ಲಿ ಓರ್ವ ಮುನಿಶ್ರೇಷ್ಠನನ್ನು ಕುರಿತು, ಕೈಜೋಡಿಸಿಕೊಂಡು, "ಓ, ಪೂಜ್ಯನೇ! ನನ್ನ ನಡೆವಳಿಕೆಯು ಹಿಂದಿನಂತಿಲ್ಲದೆ ಯಾವ ವಿಕಾರವನ್ನಾದರೂ ಹೊಂದಿತೇ? ಅಥವ ನನ್ನಲ್ಲಿ ಯಾವ ಅಪರಾಧವಾದರೂ ಕಂಡುಬಂದಿತೋ? ಹಾಗಿರುವುದರಿಂದಲೇ ಈ ಮುನಿಪುಂಗವರೆಲ್ಲರೂ ಕುಪಿತರಾಗಿರುವಂತೆ ತೋರುತ್ತದೆ. ಇದಕ್ಕೆ ಕಾರಣವೇನೆಂಬುದು ನನಗೆ ತಿಳಿಯದು. ಈ ವಿಷಯವನ್ನು ದಯೆಯಿಟ್ಟು ತಿಳಿಸುವವರಾಗಿರಿ. ತಿಳಿವಳಿಕೆಯಿಲ್ಲದೆ ನಾನಾಗಲಿ, ನನ್ನ ತಮ್ಮನಾಗಲಿ, ನನ್ನ ಪತ್ನಿ

ಟಿ. (೧) **ತಿಲಕ**ಕಾರರು ಇಲ್ಲಿ ಹೀಗೆ ಅಭಿಪ್ರಾಯಪಡುತ್ತಾರೆ.

ಭರತನು ಅಯೋಧ್ಯೆಯಿಂದ ಚಿತ್ರಕೂಟಪರ್ವತಕ್ಕೆ ಬಂದುದು ಜ್ಯೇಷ್ಠಮಾಸದಲ್ಲಿ; ಮುಂದೆ ವರ್ಷಾಕಾಲವು ಬಂದುದರಿಂದ, ಕಾರ್ತೀಕಮಾಸದವರೆವಿಗೂ ಶ್ರೀರಾಮನು ಚಿತ್ರಕೂಟಪರ್ವತದಲ್ಲಿಯೇ ವಾಸವಾಗಿದ್ದನು. ಇದೇ ಇಲ್ಲಿನ ಅಭಿಪ್ರಾಯ. ಈ ವರ್ಷಾಕಾಲವು ಮುಗಿದಮೇಲೆ ಅಲ್ಲಿನ ತಪಸ್ವಿಗಳು ಮತ್ತೊಂದು ವನಕ್ಕೆ ತೆರಳಬೇಕೆಂದು ಬಯಸಿದುದು. ಭರತಕುಮಾರನು ಚಿತ್ರಕೂಟಪರ್ವತಕ್ಕೆ ಬಂದು ಅಯೋಧ್ಯಾಪಟ್ಟಣಕ್ಕೆ ತೆರಳಿದಮೇಲೆ ಬೇರೊಂದು ವನಕ್ಕೆ ಹೋಗಬೇಕೆಂಬ ವಿಚಾರವು ಮುನಿಗಳ ಹೃದಯದಲ್ಲುಂಟಾಗಲಿಲ್ಲ. ಈ ವಿಷಯಕ್ಕೆ ಪೋಷಕವಾಗಿ ಪದ್ಮಪುರಾಣದಲ್ಲಿನ ಈ ಶ್ಲೋಕಗಳನ್ನು ಪ್ರತಿಪಾದಿಸಿರುತ್ತಾರೆ.

ರಾಘವಶ್ಚಿತ್ರಕೂಟಾದ್ರೌ ಸಾನುಜೋ ರಮತ ಸ್ತ್ರಿಯಾ ।
ಕದಾಚಿದಂಕೇ ವೈದೇಹ್ಯಾ ನಿದ್ರಾಣೇ ರಘುನಂದನೇ ॥
ಐಂದ್ರಃಕಾಕುಃ ಸಮಾಗಮ್ಯ ಜಾನಕೀಂ ವೀಕ್ಷ್ಯ ಕಾಮುಕಃ ।
....

ಅರ್ಥ:—ರಘುವಂಶೋತ್ಪನ್ನನಾದ ಶ್ರೀರಾಮನು ತಮ್ಮನಾದ ಲಕ್ಷ್ಮಣನೊಡನೆಯೂ, ಮಡದಿಯಾದ ಸೀತಾದೇವಿಯೊಡನೆಯೂ ಕೂಡಿದವನಾಗಿ ಚಿತ್ರಕೂಟಪರ್ವತದಲ್ಲಿ ವಿಹರಿಸುತ್ತಿದ್ದನು. ಆಗ ಇಂದ್ರಕುಮಾರನು ಕಾಕವೇಷದಿಂದ ಬಂದು ಸೀತಾದೇವಿಯನ್ನು ನೋಡಿ ಮನ್ಮಥ ಬಾಣಾಪತನಾದನು. (ಈ ವಿಚಾರವು ಭರತನು ಚಿತ್ರಕೂಟಪರ್ವತಕ್ಕೆ ಬಂದು ಪಾದುಕೆಗಳನ್ನು ತೆಗೆದುಕೊಂಡು ಹೊರಟುಹೋದಮೇಲೆ ಹೇಳಿದೆ.)

ಪ್ರಮಾದಾಚ್ಚರಿತಂ ಕಚ್ಚಿತ್ಕಿಂಚಿನ್ನಾವರಜಸ್ಯ ಮೇ ॥ ಲಕ್ಷ್ಮಣಸ್ಯರ್ಷಿಭಿ
ರ್ದೃಷ್ಟಂ ನಾನುರೂಪಮಿವಾತ್ಮನಃ ॥ ೬ ॥ ಕಚ್ಚಿಚ್ಛುಶ್ರೂಷಮಾಣಾ ವ
ಶ್ಶುಶ್ರೂಷಣಪರಾ ಮಯಿ ॥ ಪ್ರಮದಾಭ್ಯುಚಿತಾಂ ವೃತ್ತಿಂ ಸೀತಾಯುಕ್ತಾಂ
ನವರ್ತತೇ ॥ ೭ ॥ ಅಥರ್ಷಿರ್ಜರಯಾ ವೃದ್ಧಸ್ತಪಸಾಚ ಜರಾಂಗತಃ ॥
ವೇಪಮಾನ ಇವೋವಾಚ ರಾಮಂ ಭೂತದಯಾಪರಂ ॥ ೮ ॥ ಕುತಃ ಕಲ್ಯಾಣ
ಸತ್ವಾಯಾಃ ಕಲ್ಯಾಣಾಭಿರತೇಸ್ತಥಾ ॥ ಚಲನಂ ತಾತ! ವೈದೇಹ್ಯಾಸ್ತಪ
ಸ್ವಿಷು ವಿಶೇಷತಃ ॥ ೯ ॥ ತ್ವನ್ನಿಮಿತ್ತಮಿದಂ ಹ್ಯೇವ ತಾಪಸಾನ್ ಪ್ರತಿವರ್ತತೇ ॥

ರೂಪಂ - ಅನುರೂಪವಲ್ಲದ, ಕಿಂಚಿತ್-ಯಾವುದಾದರೂ, ಆಚರಿತಂ - ಮಾಡಲ್ಪಟ್ಟುದಾಗಿ, ನದೃಷ್ಟಂ ಕಚ್ಚಿತ್ - ಕಾಣಿಸಲಿಲ್ಲವಷ್ಟೆ. ॥ ೬ ॥ ವಃ - ನಿಮ್ಮನ್ನು, ಶುಶ್ರೂಷಮಾಣಾಃ - ಸೇವಿಸುವರು, ಮಯಿ - ನನ್ನಲ್ಲಿ, ಶುಶ್ರೂಷಣಪರಾಃಕಚ್ಚಿತ್ - ಸೇವೆಯಲ್ಲಿ ಆಸಕ್ತರಾಗಿದ್ದಾರಯೇ? ಸೀತಾ - ಸೀತಾದೇವಿಯು, ಪ್ರಮದಾಭ್ಯುಚಿತಾಂ - ಹೆಂಗಸರಿಗೆ ಅರ್ಹವಾದ, ವೃತ್ತಿಂ - ನಡತೆಯನ್ನು, ಯುಕ್ತಾಂ - ಯುಕ್ತವಾಗಿ, ನವರ್ತತೇಕಚ್ಚಿತ್ - ನಡೆಯಲಿಲ್ಲವೇ. ॥ ೭ ॥ ಅಥ - ಬಳಿಕ, ಜರಯಾ - ಮುದಿತನದಿಂದ, ವೃದ್ಧಃ - ಮುದುಕನಾದ, ತಪಸಾಚ - ತಪದಿಂದ, ಜರಾಂ - ವಾರ್ಧಿಕ್ಯವನ್ನು, ಗತಃ - ಹೊಂದಿದ, ಋಷಿಃ - ಮುನಿಯು, ವೇಪಮಾನಇವ - ನಡುಗುವನಂತಿರುವನಾಗಿ, ಭೂತದಯಾಪರಂ - ಜೀವರಾಶಿಗಳಲ್ಲಿ ದಯಾವಂತನಾದ, ರಾಮಂ - ಶ್ರೀರಾಮನನ್ನು ಕುರಿತು, ಉವಾಚ - ಹೇಳಿದನು. ॥ ೮ ॥ ಹೇ ತಾತ - ಎಲೈ ತಂದೆಯೇ, ಕಲ್ಯಾಣಸತ್ವಾಯಾಃ - ಶುಭಸ್ವಭಾವವುಳ್ಳ, ತಥಾ-ಹಾಗೆ, ಕಲ್ಯಾಣಾಭಿರತೇಃ - ಎಲ್ಲರಿಗೂ ಮಂಗಳವನ್ನುಂಟುಮಾಡುವುದರಲ್ಲಿಯೇ ಆಸಕ್ತಿಯುಳ್ಳ, ವೈದೇಹ್ಯಾಃ - ಸೀತಾದೇವಿಗೆ, ವಿಶೇಷತಃ - ವಿಶೇಷವಾಗಿ, ತಪಸ್ವಿಷು - ಮುನಿಗಳಲ್ಲಿ, ಚಲನಂ - ಬುದ್ಧಿಚಾಂಚಲ್ಯವು, ಕುತಃ-ಉಂಟಾಗುವುದೆಂತು? ॥೯॥ (ಹೇ ತಾತ - ಎಲೈ ತಂದೆಯೇ,)

ಯಾದ ಸೀತಾದೇವಿಯಾಗಲಿ, ನಮಗೆ ತಕ್ಕುದಾದ ನಡೆತೆಗೆ ವಿರೋಧವಾಗಿ ಏನನ್ನೂ ಮಾಡಲಿಲ್ಲವಷ್ಟೆ. ಹೀಗಿರಲು ಈ ಮುನಿಶ್ರೇಷ್ಠರು ನನ್ನಲ್ಲಿ ಕೋಪಗೊಂಡಿರುವುದೇಕೆ? ಅಥವ ನಿಮ್ಮ ಸೇವೆಯನ್ನು ಮಾಡುತ್ತಿರುವ ಜನರು ನನಗೆ ಸೇವೆಯನ್ನು ಮಾಡುತ್ತ ನಿಮಗೆ ತೊಂದರೆಯುಂಟುಮಾಡುತ್ತಿಲ್ಲವಷ್ಟೆ. ಹೀಗೆ ನಾವೇನಾದರೂ ಅಪರಾಧ ಮಾಡಿದ್ದರೆ ತಿಳಿಸಬೇಕು" ಎಂದು ಪ್ರಾರ್ಥಿಸಿದನು. ॥ ೪-೭ ॥ ಆಗ ವಾರ್ಧಿಕ್ಯದಿಂದಲೂ, ತಪೋವಿಶೇಷದಿಂದಲೂ ಮುದುಕನಾದ ಆ ಮುನಿಯು ಶ್ರೀರಾಮನ ನುಡಿಗಳನ್ನು ಕೇಳಿ ಅವರಲ್ಲಿ ಯಾವ ದೋಷವೂ ಇಲ್ಲದಿದ್ದುದರಿಂದ ಗಡಗಡನೆ ನಡುಗುತ್ತ ಹೀಗೆಂದನು. "ವತ್ಸ! ರಾಮಚಂದ್ರ! ಎಲ್ಲ ಕಾಲಗಳಲ್ಲಿಯೂ ಮಂಗಳಕರವಾದ ನಡತೆಯುಳ್ಳವಳೂ, ಎಲ್ಲರಿಗೂ ಮಂಗಳವನ್ನುಂಟುಮಾಡುವುದರಲ್ಲಿಯೇ ಆಸಕ್ತಿಯುಳ್ಳವಳೂ ಆದ ಸೀತಾದೇವಿಗೆ ಚಿತ್ತಚಾಂಚಲ್ಯವುಂಟಾಗುವುದೆಂತು? ಅಲ್ಲದೆ ಶಮದಮಾದಿ ಗುಣಯುಕ್ತರೂ, ಕೇವಲ ತಪಸ್ವಿಗಳೂ ಆದ ಮುನಿಗಳ ವಿಷಯವಾಗಿ ಆಕೆಗೆ ಚಪಲವೆಂದರೇನು? ಆಕೆಯಲ್ಲಿ ಸ್ವಲ್ಪವೂ ದೋಷವಿಲ್ಲವು. ನಿನ್ನ ಮೂಲಕವಾದ ರಾಕ್ಷಸಭೀತಿಯು ಈ ತಪಸ್ವಿಗಳನ್ನು ಬಾಧಿಸು

ರಕ್ಷೋಭ್ಯಸ್ತೇನ ಸಂವಿಗ್ನಾಃ ಕಥಯಂತಿ ಮಿಥಃ ಕಥಾಃ ॥ ೧೦ ॥ ರಾವಣಾ
ವರಜಃ ಕಶ್ಚಿತ್ಖರೋನಾಮೇಹ ರಾಕ್ಷಸಃ ॥ ಉತ್ಪಾಟ್ಯ ತಾಪಸಾನ್ ಸರ್ವಾನ್
ಜನಸ್ಥಾನ ನಿಕೇತನಾನ್ ॥ ೧೧ ॥ ಧೃಷ್ಟಶ್ಚ ಜಿತಕಾಶೀಚ ನೃಶಂಸಃ ಪುರುಷಾ
ದಕಃ ॥ ಅವಲಿಪ್ತಶ್ಚ ಪಾಪಶ್ಚ ತ್ವಾಂಚ ತಾತ! ನಮೃಷ್ಯತೇ ॥ ೧೨ ॥ ತ್ವಂ
ಯದಾ ಪ್ರಭೃತಿ ಹ್ಯಸ್ಮಿನ್ನಾಶ್ರಮೇ ತಾತ! ವರ್ತಸೇ ॥ ತದಾ ಪ್ರಭೃತಿ
ರಕ್ಷಾಂಸಿ ವಿಪ್ರಕುರ್ವಂತಿ ತಾಪಸಾನ್ ॥ ೧೩ ॥ ದರ್ಶಯಂತಿಹಿ ಬೀಭತ್ಸೈಃ
ಕ್ರೂರೈರ್ಭೀಷಣಕೈರಪಿ ॥ ನಾನಾರೂಪೈರ್ವಿರೂಪೈಶ್ಚ ರೂಪೈರ್ವಿಕೃತ

ತ್ವನ್ನಿಮಿತ್ತಂ - ನಿನಗಾಗಿ, ಇದಂತಾವತ್ - ಈ ರಾಕ್ಷಸ ಭಯವು, ತಾಪಸಾನ್ಪ್ರತಿ - ಮುನಿಗಳನ್ನು ಕುರಿತು, ವರ್ತತೇ - ಸಂಭವಿಸಿದೆ, ತೇನ - ಆದರಿಂದ, ರಕ್ಷೋಭ್ಯಃ - ರಾಕ್ಷಸರಿಂದ, ಸಂವಿಗ್ನಾಃ - ಹೆದರಿ, ಮಿಥಃ - ಒಬ್ಬರಿಗೊಬ್ಬರು, ಕಥಾಃ - ಮಾತುಗಳನ್ನು, ಕಥಯಂತಿ - ಹೇಳುತ್ತಾರೆ, ಇಹ-ಇಲ್ಲಿ, ರಾವಣಾಽವರಜಃ - (ಬಂಧುತ್ವೇನ) ರಾವಣನ ತಮ್ಮನಾದ, ಖರೋನಾಮ - ಖರನೆಂದು ಪ್ರಸಿದ್ಧನಾದ, ಕಶ್ಚಿದ್ರಾಕ್ಷಸಃ-ರಾಕ್ಷಸನೊಬ್ಬನು, (ಅಸ್ತಿ-ಇದ್ದಾನೆ,) ನೃಶಂಸಃ-ಘಾತಕನೂ, ಧೃಷ್ಟಃ - ಧೂರ್ತನೂ, ಪುರುಷಾದಕಃ-ಮನುಷ್ಯರನ್ನು ತಿನ್ನುವವನೂ, ಜನಸ್ಥಾನನಿಕೇತನಾನ್-ಜನಸ್ಥಾನದ ಉಳ್ಕುಡವೇ ಸ್ಥಾನವಾಗುಳ್ಳ, ಸರ್ವಾನ್ - ಸಮಸ್ತರಾದ, ತಾಪಸಾನ್ - ಮುನಿಗಳನ್ನು, ಉತ್ಪಾಟ್ಯ - ಮೂಲೋತ್ಪಾಟನ ಮಾಡಿ, ಅವಲಿಪ್ತಶ್ಚ - ಗರ್ವಿತನೂ, ಪಾಪಶ್ಚ - ಪಾಪಿಯೂ ಆಗಿ, ತ್ವಾಂಚ - ನಿನ್ನನ್ನೂ, ನಮೃಷ್ಯತೇ - ಸೈರಿಸಲಾರನು. ॥ ೧೦-೧೨ ॥ ಹೇ ತಾತ - ಎಲೈ ಅಪ್ಪನೇ, ತ್ವಂ - ನೀನು, ಯದಾಪ್ರಭೃತಿ - ಎಂದಿನಿಂದ, ಅಸ್ಮಿನ್ನಾಶ್ರಮೇ - ಈ ಆಶ್ರಮದಲ್ಲಿ, ವರ್ತಸೇ - ಇರುವೆಯೋ, ತದಾಪ್ರಭೃತಿ - ಅದು ಮೊದಲು, ರಕ್ಷಾಂಸಿ - ರಾಕ್ಷಸರು, ತಾಪಸಾನ್ - ಋಷಿಗಳನ್ನು ಕುರಿತು, ವಿಪ್ರಕುರ್ವಂತಿ - ವಿರೋಧವನ್ನು ಮಾಡುತ್ತಾರೆ. ॥ ೧೩ ॥ ಬೀಭತ್ಸೈಃ - ನೋಡುವದಕ್ಕೆ ಅಸಹ್ಯಗಳಾದ, ಕ್ರೂರೈಃ-ಉಗ್ರಗಳಾದ, ಭೀಷಣಕೈರಪಿ - ಭಯಂಕರಗಳಾದ, ನಾನಾರೂಪೈಃ - ಅನೇಕ ರೂಪಗಳಾದ, ವಿರೂಪೈಃ - ವಿಕಾರರೂಪಗಳುಳ್ಳ, ವಿಕೃತದರ್ಶನೈಃ - ವಿಕಾರದೃಷ್ಟಿಯುಳ್ಳ, ರೂಪೈಃ - ಆಕಾರಗಳಿಂದ, ಭಯಂ -

ತ್ತಿದೆ. ಆದುದರಿಂದಲೇ ಇವರು ಆ ರಾಕ್ಷಸರ ಕೋಟಲೆಯನ್ನು ಕುರಿತು ಹೆದರಿ, ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದಾರೆ. ಈ ಕಾಡಿನಲ್ಲಿ ರಾವಣನ ತಮ್ಮನೂ, ಖರನೆಂದು ಪ್ರಸಿದ್ಧನೂ ಆದ ರಾಕ್ಷಸನೊಬ್ಬನಿರುವನು. ಅವನು ಮಹಾ ಜಯಶಾಲಿ, ಘಾತಕನು, ನರಭಕ್ಷಕನು, ಮಹಾ ಗರ್ವಿಯೂ ಅಹುದು. ಈ ವನದಲ್ಲಿಯೇ ನಿವಾಸವೊಂದನ್ನು ಮಾಡಿಕೊಂಡು ಅದರ ಸುತ್ತುಮುತ್ತಲೂ ಇರುವ ತಾಪಸರನ್ನು ಮೂಲೋತ್ಪಾಟನ ಮಾಡುತ್ತ, ಮಹಾ ಪಾಪಕಾರ್ಯವನ್ನೆಸಗಿ ನಿನ್ನ ಇರುವಿಕೆಯನ್ನು, ನಮ್ಮ ಇರುವಿಕೆಯನ್ನೂ ಸಹಿಸದಿದ್ದಾನೆ. ॥ ೮-೧೨ ॥ ಎಂದು ನೀನು ಈ ಪ್ರದೇಶಕ್ಕೆ ಬಂದು ಸೇರಿದೆಯೋ, ಅಂದಿನಿಂದಲೂ ಆ ರಾಕ್ಷಸರು ಯಾಗಧ್ವಂಸವೇ ಮೊದಲಾದ ಕ್ರೂರಕಾರ್ಯಗಳನ್ನೆಸಗುತ್ತಲೂ, ನೋಡಲತ್ಯಸಹ್ಯವೂ, ಬಹು ಕಠಿನವೂ, ಭಯಂಕರವೂ ಆದ ಅನೇಕ ವಿಕಾರಗಳನ್ನು ತೋರುತ್ತಲೂ, ನಮ್ಮೆಲ್ಲರಿಗೂ ಬಹು ಭೀತಿಯನ್ನುಂಟುಮಾಡುತ್ತಿದ್ದಾರೆ. ಮಾತ್ರವಲ್ಲದೆ, ಆ ದುಷ್ಟ ರಾಕ್ಷಸರು ಮುನಿಗಳಿಗೆ ವಿರೋಧಿಗಳಾಗಿ, ಉಚ್ಛಿಷ್ಟವೇ ಮೊದಲಾದುವುಗಳಿಂದ ಆಶ್ರಮ ಪ್ರದೇಶಗಳನ್ನು ಅಪವಿತ್ರಗೊಳಿಸುತ್ತ, ಮುನಿಗಳ ಮೇಲೆ

ದರ್ಶನೈಃ ॥೧೪॥ ಅಪ್ರಶಸ್ತ್ಯೈ ರಶುಚಿಭಿ ಸ್ಸಂಪ್ರಯೋಜ್ಯಚ ತಾಪಸಾನ್ ॥
ಪ್ರತಿಘ್ನಂ ತ್ಯಪರಾನ್ ಕ್ಷಿಪ್ರ ಮನಾರ್ಯಾಃ ಪುರತಃ ಸ್ಥಿತಾಃ ॥೧೫॥ ತೇಷು
ತೇಷ್ವಾಶ್ರಮಸ್ಥಾನೇ ಷ್ವಬುದ್ಧ ಮವಲೀಯಚ ॥ ರಮಂತೇ ತಾಪಸಾಂಸ್ತತ್ರ
ನಾಶಯಂತೋಲ್ಪಚೇತಸಃ ॥೧೬॥ ಅಪಕ್ಷಿಪಂತಿ ಸ್ರುಗ್ಭಾಂಡಾ ನಗ್ನೀನ್
ಸಿಂಚಂತಿ ವಾರಿಣಾ ॥ ಕಲಶಾಂಶ್ಚ ಪ್ರಮೃಥ್ನಂತಿ ಹವನೇ ಸಮುಪಸ್ಥಿತೇ ॥೧೭॥
ತೈರ್ದುರಾತ್ಮಭಿ ರಾವಿಷ್ಟಾ ನಾಶ್ರಮಾನ್ ಪ್ರಜಿಹಾಸವಃ ॥ ಗಮನಾಯಾಽನ್ಯ
ದೇಶಸ್ಯ ಚೋದಯಂತ್ಯೃಷಯೋದ್ಯ ಮಾಂ ॥೧೮॥ ತತ್ಪುರಾ ರಾಮ!
ಶಾರೀರಾ ಮುಪಹಿಂಸಾಂ ತಪಸ್ವಿಷು ॥ ದರ್ಶಯಂತಿಹಿ ದುಷ್ಟಾಸ್ತೇ ತ್ಯಕ್ಷ್ಯಾಮ

ಭಯವನ್ನು, ದರ್ಶಯಂತಿಹಿ - ತೋರಿಸುತ್ತಾರೆ. ॥೧೪॥ ಅನಾರ್ಯಾಃ - ದುಷ್ಟರಾಕ್ಷಸರು, ಪುರತಃ - ಮುಂಗಡೆ, ಸ್ಥಿತಾಃ-ನಿಂತು, ಅಪ್ರಶಸ್ತೈಃ - ಅಯೋಗ್ಯಗಳಾದ, ಅಶುಚಿಭಿಃ - ಉಚ್ಛಿಷ್ಟವೇ ಮೊದಲಾದ ಪದಾರ್ಥಗಳಿಂದ, ಅಪರಾನ್ - ಮತ್ತೆ ಕೆಲವರಾದ, ತಾಪಸಾನ್ - ಋಷಿಗಳನ್ನು, ಸಂಪ್ರಯೋಜ್ಯ - ಮುಟ್ಟಿಸಿ, ಕ್ಷಿಪ್ರಂ - ಜಾಗ್ರತೆಯಾಗಿ ಪ್ರತಿಘ್ನಂತಿ - ಹೊಡೆಯುತ್ತಾರೆ ॥೧೫॥ ಅಲ್ಪಚೇತಸಃ - ಕ್ಷುದ್ರಬುದ್ಧಿಯುಳ್ಳ ರಾಕ್ಷಸರು, ತೇಷುತೇಷು - ಆಯಾಯ ಆಶ್ರಮಪ್ರದೇಶಗಳಲ್ಲಿ, ಅಬುದ್ಧಂ - ತಿಳಿಯದೆ, ಅವಲೀಯಚ - ಅವಿತುಕೊಂಡಿದ್ದು, ತಾಪಸಾನ್ - ಋಷಿಗಳನ್ನು, ನಾಶಯಂತಃ - ನಾಶಗೊಳಿಸುತ್ತ, ತತ್ರ - ಆ ಆಶ್ರಮಗಳಲ್ಲಿ, ರಮಂತೇ - ವಿಹರಿಸುತ್ತಾರೆ. ॥೧೬॥ ಹವನೇ - ಹೋಮಕರ್ಮವು, ಸಮುಪಸ್ಥಿತೇ - ಪ್ರಾಪ್ತವಾಗಲು, ಸ್ರುಗ್ಭಾಂಡಾನ್ - ಸ್ರುಕ್ಸ್ರುವಾದಿ ಪಾತ್ರೆಗಳನ್ನು, ಅಪಕ್ಷಿಪಂತಿ - ಎತ್ತಿಹಾಕುತ್ತಾರೆ, ಅಗ್ನೀನ್-ಆಹವನೀಯ, ಗಾರ್ಹಪತ್ಯ, ದಕ್ಷಿಣಾಗ್ನಿಗಳನ್ನು, ವಾರಿಣಾ - ನೀರಿನಿಂದ, ಸಿಂಚಂತಿ - ನೆನೆಯಿಸುತ್ತಾರೆ, ಕಲಶಾಂಶ್ಚ - ಕಲಶಗಳನ್ನು, ಪ್ರಮೃಥ್ನಂತಿ - ಒಡೆದುಹಾಕುತ್ತಾರೆ. ॥೧೭॥ ಋಷಯಃ - ಋಷಿಗಳು, ದುರಾತ್ಮಭಿಃ - ದುಷ್ಟರಾದ, ತೈಃ - ಆ ರಾಕ್ಷಸರಿಂದ, ಆವಿಷ್ಟಾನ್ - ವ್ಯಾಪ್ತವಾದ, ಆಶ್ರಮಾನ್ - ಪರ್ಣಶಾಲೆಗಳನ್ನು, ಪ್ರಜಿಹಾಸವಃ - ಬಿಡಲಿಚ್ಛೆಯುಳ್ಳವರಾಗಿ, ಅನ್ಯದೇಶಸ್ಯ - ಮತ್ತೊಂದು ಪ್ರದೇಶಕ್ಕೆ, ಗಮನಾಯ - ಹೋಗುವದಕ್ಕೋಸುಗ, ಅದ್ಯ - ಈಗ, ಮಾಂ - ನನ್ನನ್ನು, ಚೋದಯಂತಿ - ಪ್ರೇರಿಸುತ್ತಾರೆ. ॥೧೮॥ ಹೇ ರಾಮ - ಎಲೈ ಶ್ರೀರಾಮನೇ, ತಪಸ್ವಿಷು - ಋಷಿಗಳಲ್ಲಿ, ತೇದುಷ್ಟಾಃ - ಆ ದುಷ್ಟರಾದ ರಾಕ್ಷಸರ, ಶಾರೀರಾಂ - ಶರೀರಸಂಬಂಧವಾದ, ಉಪಹಿಂಸಾಂ - ಹಿಂಸೆಯನ್ನು, ಪುರಾದರ್ಶ

ಯೂ ಅಂತಹ ಅಪವಿತ್ರ ಪದಾರ್ಥಗಳನ್ನೆಸೆಯುತ್ತ ಪೀಡಿಸುವುದಲ್ಲದೆ, ಬಹು ನೀಚಬುದ್ಧಿಯುಳ್ಳ ಕೆಲ ರಕ್ಕಸರು ಮರೆಯಲ್ಲಿಯೇ ಅವಿತುಕೊಂಡಿದ್ದು, ಮುನಿಗಳನ್ನು ಹಿಂಸಿಸಿ, ಆಶ್ರಮಪ್ರದೇಶಗಳಲ್ಲಿಯೇ ವಿಹರಿಸುತ್ತಿದ್ದಾರೆ. ॥೧೫-೧೬॥ ಹೋಮಕಾಲಗಳಲ್ಲಿ ಸ್ರುಕ್, ಸ್ರುವಾದಿ ಪಾತ್ರೆಗಳನ್ನು ಎತ್ತಿಹಾಕುವುದು ಮಾತ್ರವಲ್ಲದೆ, ದಾಕ್ಷಿಣಾತ್ಯ, ಗಾರ್ಹಪತ್ಯ, ಆಹವನೀಯ ಮೊದಲಾದ ಅಗ್ನಿತ್ರಯಗಳನ್ನೂ ಜಲಸೇಚನವೇ ಮೊದಲಾದುವುಗಳಿಂದ ಆರಿಸುತ್ತಿದ್ದಾರೆ. ಇದೂ ಅಲ್ಲದೆ ಆಶ್ರಮದ ಪದಾರ್ಥಗಳೆಲ್ಲವನ್ನೂ ಪುಡಿ ಪುಡಿ ಮಾಡುತ್ತಿದ್ದಾರೆ. ಈ ರೀತಿಯಾದ ಆ ರಾಕ್ಷಸರ ಕಾಟವನ್ನು ತಡಿಯಲಾರದೆ, ಋಷಿಗಳೆಲ್ಲರೂ ಪರ್ಣಶಾಲೆಗಳನ್ನು ತೊರೆದು, ಸುರಕ್ಷಿತವಾದ ಬೇರೊಂದು ಸ್ಥಳಕ್ಕೆ ಹೋಗಲು ನನ್ನನ್ನು ಪ್ರೇರಿಸುತ್ತಿದ್ದಾರೆ. ॥೧೭-೧೮॥ ದುಷ್ಟ ರಾಕ್ಷಸರು ಇಲ್ಲಿನ ಮುನಿಗಳೆಲ್ಲರಿಗೂ ಶರೀರಸಂಬಂಧವಾದ ಬಾಧೆಯನ್ನುಂಟುಮಾಡುತ್ತಿರುವುದರಿಂದ ಈ ಪ್ರದೇಶವನ್ನು ತೊರೆದು ಇಲ್ಲಿಗೆ

ಇಮಮಾಶ್ರಮಂ ‖ ೧೯ ‖ ಬಹುಮೂಲಫಲಂ ಚಿತ್ರ ಮತಿದೂರಾ ದಿತೋ ವನಂ ‖ ಪುರಾಣಾಶ್ರಮ ಮೇವಾಹಂ ಶ್ರಯಿಷ್ಯೇ ಸಗಣಃ ಪುನಃ ‖ ೨೦ ‖ ಖರಸ್ತ್ವಯ್ಯಪಿ ಚಾಽಯುಕ್ತಂ ಪುರಾ ತಾತ! ಪ್ರವರ್ತತೇ ‖ ಸಹಾಸ್ಮಾಭಿ ರಿತೋ ಗಚ್ಛ ಯದಿ ಬುದ್ಧಿಃ ಪ್ರವರ್ತತೇ ‖ ೨೧ ‖ ಸಕಳತ್ರಸ್ಯ ಸಂದೇಹೋ ನಿತ್ಯಂ ಯತ್ತಸ್ಯ ರಾಘವ! ‖ ಸಮರ್ಥಸ್ಯಾಪಿ ಹಿ ಸತೋ ವಾಸೋ ದುಃಖ ಮಿಹಾಽದ್ಯತೇ ‖ ೨೨ ‖ ಇತ್ಯುಕ್ತವಂತಂ ರಾಮಸ್ತಂ ರಾಜಪುತ್ರ ಸ್ತಪಸ್ವಿನಂ ‖ ನಶಶಾಕೋತ್ತರೈ ರ್ವಾಕ್ಯೈ ರವರೋದ್ಧುಂ ಸಮುತ್ಸುಕಂ ‖ ೨೩ ‖ ಅಭಿನಂದ್ಯ

ಯಂತಿ - ತೋರಿಸುವರು, ತತ್ - ಆ ಕಾರಣ, ಇಮಮಾಶ್ರಮಂ - ಈ ಆಶ್ರಮವನ್ನು, ತ್ಯಕ್ಷ್ಯಾಮಃ - ಬಿಡುತ್ತೇವೆ. ‖ ೧೯ ‖ ಅಹಂ - ನಾನು, ಸಗಣಃ - ನಮ್ಮ ಗುಂಪುಗಳೊಡಗೂಡಿ, ಇತಃ - ಇಲ್ಲಿಗೆ, ಅತಿದೂರಾತ್ - ಬಹು ದೂರದಲ್ಲಿರುವ, ಬಹುಮೂಲಫಲಂ - ಅನೇಕವಾದ ಕಂದಮೂಲಗಳೂ ಫಲಗಳೂ ಉಳ್ಳ, ಚಿತ್ರಂ - ಆಶ್ಚರ್ಯಕರವಾದ, ಪುರಾಣಾಶ್ರಮಂ - ಪುರಾತನವಾದ ಆಶ್ರಮವುಳ್ಳ, ವನಮೇವ - ವನವನ್ನೇ, ಪುನಃ - ಮತ್ತು, ಶ್ರಯಿಷ್ಯೇ - ಆಶ್ರಯಿಸುತ್ತೇವೆ. ‖ ೨೦ ‖ ಹೇ ತಾತ - ಎಲೈ ವತ್ಸನೆ, ಖರಶ್ಚ - ಖರಾಸುರನೂ, ತ್ವಯ್ಯಪಿ - ನಿನ್ನಲ್ಲಿಯೂ, ಅಯುಕ್ತಂ - ಅಯೋಗ್ಯಕಾರ್ಯವನ್ನು, ಪುರಾಪ್ರವರ್ತತೇ - ಮುಂದೆ ನಡೆಸುತ್ತಾನೆ, ಬುದ್ಧಿಃ - ಬುದ್ಧಿಯು, ಪ್ರವರ್ತತೇಯದಿ - ಉಂಟಾದರೆ, ಇತಃ - ಇಲ್ಲಿಂದ, ಅಸ್ಮಾಭಿಸ್ಸಹ - ನಮ್ಮೊಡನೆ, ಗಚ್ಛ - ಹೊರಟುಬಾ. ‖ ೨೧ ‖ ಹೇ ರಾಘವ - ಎಲೈ ಶ್ರೀರಾಮನೇ, ನಿತ್ಯಂ - ನಿರಂತರವು, ಯತ್ತಸ್ಯ - ಜಾಗರೂಕನಾದರೂ, ಸಮರ್ಥಸ್ಯಾಪಿ - ಸಮರ್ಥನಾದರೂ, ಇಹ - ಈ ವನದಲ್ಲಿ, ಸತಃ - ಇರುವ, ಸಕಳತ್ರಸ್ಯ - ಹೆಂಡತಿಯೊಡಗೂಡಿದ, ತೇ - ನಿನಗೆ, ವಾಸಃ - ಇರುವಿಕೆಯು, ಅದ್ಯ - ಈಗ, ದುಃಖಂಹಿ - ಕಷ್ಟವಾದುದಷ್ಟೆ. ‖ ೨೨ ‖ ರಾಜಪುತ್ರಃ - ರಾಜಕುವರನಾದ, ರಾಮಃ - ಶ್ರೀರಾಮನು, ಇತಿ - ಈಪರಿಯಾಗಿ, ಉಕ್ತವಂತಂ - ಹೇಳುತ್ತಿರುವ, ಸಮುತ್ಸುಕಂ - ಮತ್ತೊಂದುಕಡೆ ಹೋಗಲಿಚ್ಛೆಯುಳ್ಳ, ತಂತಪಸ್ವಿನಂ - ಆ ಋಷಿಯನ್ನು, ಉತ್ತರೈಃ - ಸಮಾಧಾನಪೂರ್ವಕವಾದ, ವಾಕ್ಯೈಃ ಮಾತುಗಳಿಂದ, ಅವಬದ್ಧುಂ - ನಿಲ್ಲಿಸುವದಕ್ಕೆ, ನಶಶಾಕ - ಸಮರ್ಥನಾಗಲಿಲ್ಲವು. ‖ ೨೩ ‖ ಕುಲಪತಿಃ - ಆ ಮುನಿಗಳಿಗೆ ಯಜ

ಸ್ವಲ್ಪದೂರದಲ್ಲಿ ಅನೇಕ ಕಂದಮೂಲ ಫಲಾದಿಗಳುಳ್ಳ, ಬಹು ಪುರಾತನವಾದ ಮತ್ತೊಂದು ವನಕ್ಕೆ ಇವರೆಲ್ಲರೊಡಗೂಡಿ ಹೊರಡುತ್ತಿದ್ದೇನೆ. ಅಯ್ಯಾ, ರಾಮಚಂದ್ರನೇ! ಈ ಖರನೇನು ಸಾಮಾನ್ಯನಲ್ಲ; ಇವನು ಮುಂದೆ ನಿನಗೂ ತೊಂದರೆಯನ್ನುಂಟುಮಾಡುತ್ತಾನೆ. ನನ್ನ ಮಾತು ನಿನಗೆ ಸಮ್ಮತವಾಗಿದ್ದರೆ, ನೀನು ಬುದ್ಧಿವಂತನೂ ಆದರೆ, ನಮ್ಮೊಡನೆಯೇ ಹೊರಡುವವನಾಗು. ನೀನು ಮಹಾ ಸಮರ್ಥನೆಂದೂ, ಬಹು ಜಾಗರೂಕನೆಂದೂ ನಾನು ತಿಳಿದಿದ್ದೇನೆ. ಆದರೂ ಹೆಂಡತಿಯೊಡಗೂಡಿದ ನಿನಗೆ ಇಲ್ಲಿನ ವಾಸವು ತಕ್ಕುದಲ್ಲ. ಆದುದರಿಂದ ಈಗ ಬೇರೆಯ ವನಕ್ಕೆ ತೆರಳುತ್ತಿರುವ ಈ ತಪಸ್ವಿಗಳೊಡನೆ ಹೊರಡುವವನಾಗು" ‖ ೧೯-೨೨ ‖ ಆ ವೃದ್ಧ ಮುನಿಯಿಂತೆನಲು ರಾಜಪುತ್ರನಾದ ಆ ಶ್ರೀರಾಮನು ಸಮಾಧಾನ ವಚನಗಳಿಂದ ಆತನನ್ನುಪಚರಿಸಿ ಅಲ್ಲಿಯೇ ನಿಲ್ಲಿಸಿಕೊಳ್ಳಲು ಸಮರ್ಥನಾಗಲಿಲ್ಲ. ಆಗ ಆ ಮುನಿಗಳೆಲ್ಲರಿಗೂ ಮುಖಂಡನಾದ ಆ ವೃದ್ಧ ತಪಸ್ವಿಯು ತನ್ನವರೊಡಗೂಡಿ ಪ್ರಯಾಣೋದ್ಯುಕ್ತನಾಗಿ, ರಘುವಂಶೋತ್ಪನ್ನನಾದ ಶ್ರೀರಾಮಚಂದ್ರನಿಗೆ ಉಚಿತ ವಚನಗಳಿಂದ

ಸಮಾಪೃಚ್ಛ್ಯ ಸಮಾಧಾಯ ಚ ರಾಘವಂ ॥ ಸಜಗಾಮಾಽಶ್ರಮಂ ತ್ಯಕ್ತ್ವಾ
ಕುಲೈಃ ಕುಲಪತಿ ಸ್ಸಹ ॥ ೨೪ ॥ ರಾಮಸ್ಸಂಸಾಧ್ಯ ತ್ವೃಷಿಗಣ ಮನುಗಮನಾ
ದ್ದೇಶಾ ತ್ತಸ್ಮಾ ತ್ಕುಲಪತಿ ಮಭಿವಾದ್ಯ ಋಷಿಂ ॥ ಸಮ್ಯಕ್ಪ್ರೀತೈ ಸ್ತೈರನು
ಮತ ಉಪದಿಷ್ಟಾರ್ಥಃ ಪುಣ್ಯಂ ವಾಸಾಯ ಸ್ವನಿಲಯ ಮುಪಸಂಪೇದೇ ॥೨೫॥

ಆಶ್ರಮಂ ತ್ವೃಷಿ ವಿರಹಿತಂ ಪ್ರಭುಃ
ಕ್ಷಣಮಪಿ ನವಿಜಹೌ ಸ ರಾಘವಃ ॥
ರಾಘವಂ ಹಿ ಸತತ ಮನುಗತಾ
ಸ್ತಾಪಸಾಶ್ಚಾಽರ್ಷ ಚರಿತ ಧೃತಗುಣಾಃ ॥ ೨೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷೋಡಶೋತ್ತರಶತತಮಸ್ಸರ್ಗಃ.

ಮಾನನಾದ, ಸಃ - ಆ ಋಷಿಯು, ಕುಲೈಸ್ಸಹ - ಋಷಿಸಂಘದೊಡಗೂಡಿ, ಆಶ್ರಮಂ - ಆಶ್ರಮವನ್ನು, ತ್ಯಕ್ತ್ವಾ - ಬಿಟ್ಟು, ರಾಘವಂ - ಶ್ರೀರಾಮನನ್ನು, ಸಮಾಧಾಯ - ಸಮಾಧಾನಗೊಳಿಸಿ, ಸಮಾಪೃಚ್ಛ್ಯ - ಅಪ್ಪಣೆ ಕೇಳಿ, ಜಗಾಮ - ಮುಂದಕ್ಕೆಹೊರಟನು. ॥ ೨೪ ॥ ರಾಮಃ-ಶ್ರೀರಾಮನು, ಋಷಿಗಣಂ - ಋಷಿಗಳ ತಂಡವನ್ನು, ಅನುಗಮನಾತ್ - ಅನುಸರಿಸಿಹೋಗುವಿಕೆಯಿಂದ, ತಸ್ಮಾದ್ದೇಶಾತ್ - ಆ ಆಶ್ರಮ ಪ್ರದೇಶದಿಂದ, ಸಂಸಾಧ್ಯ - ಕಳುಹಿಸಿ, ಕುಲಪತಿಂ - ಕುಲಾಧ್ಯಕ್ಷನಾದ, ಋಷಿಂ - ಆ ವೃದ್ಧಋಷಿಯನ್ನು, ಅಭಿವಾದ್ಯ - ನಮಸ್ಕರಿಸಿ, ಸಮ್ಯಕ್ - ಚನ್ನಾಗಿ, ಪ್ರೀತೈಃ - ಸಂತೋಷಗೊಂಡ, ತೈಃ - ಆ ಋಷಿಗಳಿಂದ, ಅನುಮತಃ - ಸಮ್ಮತಿಗೊಂಡು, ಉಪದಿಷ್ಟಾರ್ಥಃ - ಉಪದೇಶಮಾಡಲ್ಪಟ್ಟ ಪ್ರಯೋಜನವುಳ್ಳವನಾಗಿ, ವಾಸಾಯ - ನಿವಾಸಕ್ಕೋಸುಗ, ಪುಣ್ಯಂ - ಪುಣ್ಯಕರವಾದ, ಸ್ವನಿಲಯಂ - ತನ್ನಾಶ್ರಮವನ್ನು ಕುರಿತು, ಉಪಸಂಪೇದೇ - ಹೊರಟುಬಂದನು. ॥೨೫॥ ಪ್ರಭುಃ - ಸಮರ್ಥನಾದ, ಸರಾಘವಃ - ಆ ಶ್ರೀರಾಮನು, ಋಷಿವಿರಹಿತಂ-ಋಷಿಗಳಿಂದ ಬಿಡಲ್ಪಟ್ಟ, ಆಶ್ರಮಂ - ಆಶ್ರಮವನ್ನು, ಕ್ಷಣಮಪಿ - ಕ್ಷಣವಾದರೂ, ನವಿಜಹೌ - ಬಿಡಲಿಲ್ಲ, ಹಿ - ಯಾವ ಕಾರಣ, ತಾಪಸಾಶ್ಚ - ಋಷಿಗಳೂ, ಆರ್ಷಚರಿತಧೃತಗುಣಾಃ - ಋಷಿಸಂಬಂಧವಾದ ನಡತೆಯಿಂದ ಗುಣಭರಿತರಾಗಿ, ರಾಘವಂ - ಶ್ರೀರಾಮನನ್ನು, ಸತತಂ - ನಿರಂತರವೂ, ಅನುಗತಾಃ - ಅನುಸರಿಸಿದ್ದರೋ. ॥ ೨೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಷೋಡಶೋತ್ತರಶತತಮಸ್ಸರ್ಗಃ

ಸಮಾಧಾನೋಕ್ತಿಗಳನ್ನುಹೇಳಿ ಆತನನುಮತಿಯನ್ನುಪಡೆದು ಮುಂದಕ್ಕೆ ಹೊರಟನು. ಆ ಬಳಿಕ ಶ್ರೀರಾಮನು ಆ ಮುನಿ ಸಮೂಹವನ್ನು ಅನುಸರಿಸಿ ತಾನೂ ಸ್ವಲ್ಪ ದೂರ ಹೋಗಿ ಅವರನ್ನುಕಳುಹಿಸಿಕೊಟ್ಟು, ಮುನಿಕುಲಾಚಾರ್ಯನಿಗೆ ನಮಸ್ಕಾರಮಾಡಿ, ಮಹಾಸಂತೋಷಚಿತ್ತರಾದ ಅವರಿಂದಲೂ ಸಮ್ಮತಿ ಪಡೆದು ತನ್ನಾಶ್ರಮವನ್ನು ಸೇರಿದನು. ॥ ೨೪-೨೫ ॥ ಆಗ ಮಹಾ ಸಮರ್ಥನಾದ ಆ ರಘುನಂದನನು ಮುನಿಗಳಿಂದಲೂ ಋಷಿಗಳಿಂದಲೂ ವರ್ಜಿತವಾದ ಆ ಆಶ್ರಮವನ್ನುಬಿಟ್ಟು ಒಂದು ಕ್ಷಣಕಾಲಮಾತ್ರ ಅದನ್ನಗಲದೆ ಅಲ್ಲಿಯೇ ಇದ್ದನು. ಆ ತಪಸ್ವಿಗಳು ತಮ್ಮ ನಡೆವಳಿಕೆಯಿಂದ ಶ್ರೀರಾಮನನ್ನೇ ಅನುಸರಿಸುತ್ತಿದ್ದುದರಿಂದ ಆತನು ಆ ಪ್ರದೇಶವನ್ನು ಕ್ಷಣಕಾಲಮಾತ್ರ ಬಿಡದಿರಲು ಕಾರಣವಾಯಿತು. ॥ ೨೬-೨೭ ॥

ಇಂತಿದು ಕುಲಪತಿಕಥಿತ ಖರಾದಿ ರಾಕ್ಷಸ ಪೀಡಾಕರಣ ವೃತ್ತಾಂತವೆಂಬ
ನೂರಹದಿನಾರನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಸಪ್ತದಶೋತ್ತರಶತತಮಸ್ಸರ್ಗಃ.

ರಾಘವಸ್ತ್ವಥ ಯಾತೇಷು ತಪಸ್ವಿಷು ವಿಚಿಂತಯರ್ನ್ || ನತತ್ರಾ೭ರೋಚಯ ದ್ವಾಸಂ ಕಾರಣೈ ರ್ಬಹುಭಿ ಸ್ತದಾ || ೧ || ಇಹ ಮೇ ಭರತೋ ದೃಷ್ಟೋ ಮಾತರಶ್ಚ ಸನಾಗರಾಃ || ಸಾಚ ಮೇ ಸ್ಮೃತಿರನ್ವೇತಿ ತಾನ್ನಿತ್ಯ ಮನುಶೋಚತಃ || ೨ || ಸ್ಕಂಧಾವಾರ ನಿವೇಶೇನ ತೇನ ತಸ್ಯ ಮಹಾತ್ಮನಃ|| ಹಯಹಸ್ತಿಕರೀಷೈಶ್ಚ ಉಪಮರ್ದಃ ಕೃತೋ ಭೃಶಂ || ೩ || ತಸ್ಮಾದನ್ಯತ್ರ ಗಚ್ಛಾಮ ಇತಿ ಸಂಚಿಂತ್ಯ ರಾಘವಃ || ಪ್ರಾತಿಷ್ಠತ ಸ ವೈದೇಹ್ಯಾ ಲಕ್ಷ್ಮಣೇನಚ

ಅಥ - ಬಳಿಕ, ತಪಸ್ವಿಷು - ಋಷಿಗಳು, ಯಾತೇಷು - ಹೊರಟುಹೋಗಲು, ರಾಘವಸ್ತು - ಶ್ರೀರಾಮನಾದರೆ, ವಿಚಿಂತಯರ್ನ್ - ಆಲೋಚಿಸುತ್ತ, ತತ್ರ - ಆ ಚಿತ್ರಕೂಟದಲ್ಲಿ, ಬಹುಭಿಃ-ಅನೇಕ ಗಳಾದ, ಕಾರಣೈಃ - ಕಾರಣಗಳಿಂದ, ತದಾ - ಆ ಕಾಲದಲ್ಲಿ, ವಾಸಂ - ನಿವಾಸವನ್ನು, ನಾರೋಚ ಯತ್ - ಸಮ್ಮತಿಸಲಿಲ್ಲ. || ೧ || ಇಹ - ಈ ಸ್ಥಳದಲ್ಲಿ, ಮೇ - ನನ್ನಿಂದ, ಭರತಃ - ಭರತನು, ದೃಷ್ಟಃ - ನೋಡಲ್ಪಟ್ಟನು, ಮಾತರಶ್ಚ - ತಾಯಿಯರೂ, ಸನಾಗರಾಃ - ಪುರವಾಸಿಗಳೂ, ದೃಷ್ಟಾಃ - ಕಾಣಲ್ಪಟ್ಟರು, ಸಾಸ್ಮೃತಿಃ - ಆ ಸ್ಮರಣವು, ತಾರ್ನ್ - ಅವರನ್ನು ಕುರಿತು, ನಿತ್ಯಂ - ಯಾವಾಗಲೂ, ಅನುಶೋಚತಃ - ಅನುಸರಿಸಿ ವ್ಯಸನಗೊಂಡಿರುವ, ಮೇ - ನನ್ನನ್ನು, ಅನ್ವೇತಿ - ಅನುಸರಿಸಿ ಬರುತ್ತದೆ. || ೨ || ಮಹಾತ್ಮನಃ - ಮಹಾ ಮನಸ್ವಿಯಾದ, ತಸ್ಯ - ಆ ಭರತನ, ತೇನ - ಆ ಪ್ರಸಿದ್ಧ ವಾದ, ಸ್ಕಂಧಾವಾರನಿವೇಶನ - ದಂಡಿನ ನಿವಾಸಪ್ರದೇಶದಿಂದಂದ, ಹಯಹಸ್ತಿಕರೀಷೈಶ್ಚ - ಕುದುರೆ ಗಳ ಆನೆಗಳ ಲದ್ದಿಗಳಿಂದ, ಉಪಮರ್ದಃ - ಸಂಮರ್ದವು, ಭೃಶಂ - ಬಹಳವಾಗಿ, ಕೃತಃ - ಮಾಡ ಲ್ಪಟ್ಟಿತು. || ೩ || ತಸ್ಮಾತ್ - ಆ ಕಾರಣ, ಅನ್ಯತ್ರ - ಮತ್ತೊಂದು ಪ್ರದೇಶವನ್ನು ಕುರಿತು, ಗಚ್ಛಾಮ ಇತಿ - ಹೋಗೋಣವೆಂದು, ಸಂಚಿಂತ್ಯ - ಆಲೋಚಿಸಿ, ಸರಾಘವಃ - ಆ ಶ್ರೀರಾಮನು,

---

ಈಪ್ರಕಾರವಾಗಿ ಆ ಚಿತ್ರಕೂಟಪರ್ವತದ ನಿವಾಸಿಗಳಾದ ಮುನಿಪುಂಗವರೆಲ್ಲರೂ ಬೇರೊಂದು ವನಕ್ಕೆ ತೆರಳಿದವರಾಗಲು, ಶ್ರೀರಾಮಮೂರ್ತಿಯು ಬಹಳವಾಗಿ ಯೋಚಿಸಿ, ಅನೇಕ ಕಾರಣಗಳಿಂದ ಆ ಪರ್ವತದಲ್ಲಿ ವಾಸಮಾಡಲು ಅಪೇಕ್ಷೆಯಿಲ್ಲದವನಾದನು. ಹೀಗೆ ಶ್ರೀರಾಮನು ತನ್ನ ಬಂಧುಗಳಾದ ಭರತಾದಿಗಳನ್ನು ತೊರೆದೆನೆಂದು ದುಃಖವಾಂತಿದ್ದುದ ರಿಂದ “ ಇದೋ ! ಇಲ್ಲಿ ಭರತನನ್ನು ನೋಡಿದೆ. ಇಲ್ಲಿ ತಾಯಿಯರನ್ನು ಕಂಡೆ, ಈ ಪ್ರದೇಶ ದಲ್ಲಿಯೇ ಪುರಜನರನ್ನು ನೋಡಿದೆನು ” ಎಂದು, ಹಿಂದೆ ನಡೆದ ವೃತ್ತಾಂತಗಳನ್ನೇ ಸ್ಮರಿಸಿ ಕೊಳ್ಳುತ್ತಿದ್ದನು. ಇಂತು ಸ್ಮರಿಸಿ ಈರೀತಿ ಯೋಚಿಸಿದನು. ಮಹಾನುಭಾವನಾದ ಭರತನು ಇಲ್ಲಿಗೆ ಸೈನ್ಯಸಮೇತನಾಗಿ ಬಂದಿದ್ದಾಗ ಕುದುರೆಗಳೂ, ಆನೆಗಳೂ, ಇವುಗಳ ಪಿಚಿಕೆ ಗಳಿಂದ ಈ ಆಶ್ರಮವೆಲ್ಲವೂ ಅಸಹ್ಯಮಾಡಲಾಗಿದೆ. ಆದುದರಿಂದ ಈ ಆಶ್ರಮ ಪ್ರದೇಶದಲ್ಲಿ

ಸಂಗತಃ ॥ ೪ ॥ ಸೋತ್ರೇರಾಶ್ರಮ ಮಾಸಾದ್ಯ ತಂ ವವಂದೇ ಮಹಾಯಶಾಃ॥ ತಂಚಾಪಿ ಭಗವಾನತ್ರಿಃ ಪುತ್ರವ ತ್ಪ್ರತ್ಯಪದ್ಯತ ॥ ೫ ॥ ಸ್ವಯಮಾತಿಥ್ಯ ಮಾದಿಶ್ಯ ಸರ್ವಮಸ್ಯ ಸುಸತ್ಕೃತಂ ॥ ಸೌಮಿತ್ರಿಂಚ ಮಹಾಭಾಗಾಂ ಸೀತಾಂಚ ಸಮಸಾಂತ್ವಯತ್ ॥ ೬ ॥ ಪತ್ನೀಂಚ ಸಮನುಪ್ರಾಪ್ತಾಂ ವೃದ್ಧಾ ಮಾಮಂತ್ರ್ಯ ಸತ್ಕೃತಾಂ ॥ ಸಾಂತ್ವಯಾಮಾಸ ಧರ್ಮಜ್ಞ ಸ್ಸರ್ವಭೂತ ಹಿತೇ ರತಃ ॥ ೭ ॥

ವೈದೇಹ್ಯಾ - ಸೀತಾದೇವಿಯೊಂದಿಗೆ, ಲಕ್ಷ್ಮಣೇನಚ - ಲಕ್ಷ್ಮಣನೊಡನೆಯೂ, ಸಂಗತಃ-ಸೇರಿ, ಪ್ರಾತಿಷ್ಠತ - ತೆರಳಿದನು. ॥ ೪ ॥ ಮಹಾಯಶಾಃ - ಮಹಾ ಕೀರ್ತಿವಂತನಾದ, ಸಃ - ಆ ಶ್ರೀರಾಮನು, ಅತ್ರೇಃ - ಅತ್ರಿಋಷಿಯ, ಆಶ್ರಮಂ - ಆಶ್ರಮವನ್ನು, ಆಸಾದ್ಯ - ಹೊಂದಿ, ತಂ - ಆ ಅತ್ರಿಋಷಿಯನ್ನು, ವವಂದೇ - ನಮಸ್ಕರಿಸಿದನು, ಭಗವಾನ್ - ಷಡ್ಗುಣೈಶ್ವರ್ಯ ಸಂಪನ್ನನಾದ, ಅತ್ರಿಃ-ಅತ್ರಿಋಷಿಯು, ತಂಚಾಪಿ - ಆ ಶ್ರೀರಾಮನನ್ನೂ, ಪುತ್ರವತ್ - ಮಗನಂತೆ, ಪ್ರತ್ಯಪದ್ಯತ - ಕಂಡನು. ॥ ೫ ॥ ಸ್ವಯಂ - ತಾನು, ಅಸ್ಯ - ಈ ಶ್ರೀರಾಮನಿಗೆ, ಸರ್ವಂ - ಸಮಸ್ತವಾದ, ಆತಿಥ್ಯಂ-ಅತಿಥಿಸತ್ಕಾರವನ್ನು, ಆದಿಶ್ಯ - ಆಜ್ಞಾಪಿಸಿ, ಸುಸತ್ಕೃತಂ - ಚೆನ್ನಾಗಿ ಸತ್ಕರಿಸಿದ, ಸೌಮಿತ್ರಿಂಚ-ಲಕ್ಷ್ಮಣನನ್ನೂ, ಮಹಾಭಾಗಾಂ - ಮಹಾಪುಣ್ಯವತಿಯಾದ, ಸೀತಾಂಚ - ಸೀತಾದೇವಿಯನ್ನೂ, ಸಮಸಾಂತ್ವಯತ್ - ಚನ್ನಾಗಿ ಸಮಾಧಾನಗೊಳಿಸಿದನು. ॥ ೬ ॥ ಸರ್ವಭೂತಹಿತೇ - ಸಮಸ್ತ ಪ್ರಾಣಿಗಳ ಹಿತದಲ್ಲಿಯೂ, ರತಃ - ಆಸಕ್ತನಾದ, ಧರ್ಮಜ್ಞಃ - ಸಕಲ ಧರ್ಮಗಳನ್ನೂ ತಿಳಿದಿರುವ ಅತ್ರಿಮಹಾಮುನಿಯು, ಸಮನುಪ್ರಾಪ್ತಾಂ - ಎದುರಾಗಿ ಬಂದಿರುವ, ಸತ್ಕೃತಾಂ - ಶ್ರೀರಾಮನಿಂದ ಪೂಜಿಸಲ್ಪಟ್ಟ, (ಗೋ) ಸರ್ವಜನರಿಂದ ಪೂಜಿಸಲ್ಪಟ್ಟ, ವೃದ್ಧಾಂ - ಮುದುಕಿಯಾದ, ಪತ್ನೀಂಚ - ಹೆಂಡತಿಯಾದ ಅನಸೂಯಾದೇವಿಯನ್ನು, ಆಮಂತ್ರ್ಯ - ಕರೆದು, ಸಾಂತ್ವಯಾಮಾಸ - ಸಮಾಧಾನಗೊಳಿಸಿದನು. ॥ ೭ ॥ ಋಷಿಸತ್ತಮ - ಋಷಿಶ್ರೇಷ್ಠನಾದ ಅತ್ರಿಮಹಾಮುನಿಯು, ಮಹಾಭಾಗಾಂ -

ರಲು ತಕ್ಕುದಲ್ಲವೆಂದೂ, ಅಲ್ಲಿಂದ ಬೇರೊಂದು ಪ್ರದೇಶಕ್ಕೆ ಹೊರಡಬೇಕೆಂದೂ ಯೋಚಿಸಿ, ಸೀತಾ ಲಕ್ಷ್ಮಣರೊಡಗೂಡಿ ಮುಂದಕ್ಕೆ ಹೊರಟನು. ॥ ೧-೪ ॥ ಈಪ್ರಕಾರವಾಗಿ ಚಿತ್ರಕೂಟಪರ್ವತದಿಂದ ಹೊರಹೊರಟ ಶ್ರೀರಾಮಚಂದ್ರನು ಅತ್ರಿಮಹಾಮುನಿಯ ಆಶ್ರಮವನ್ನು ಸೇರಿ ಆ ಮುನಿಯ ದರ್ಶನವಂಗೈದು ಆತನನ್ನು ನಮಸ್ಕರಿಸಿದನು. ಆಗ ಷಡ್ಗುಣೈಶ್ವರ್ಯ ಸಂಪನ್ನನಾದ ಅತ್ರಿಮುನಿಯು ಶ್ರೀರಾಮನನ್ನು ನೋಡಿ, ಮಗನನ್ನು ನೋಡಿ ಆನಂದಿಸುವಂತೆ ಸಂತಸಪಾಂತನು. ಆ ಬಳಿಕ ತಪೋಮಹಿಮನಾದ ಅತ್ರಿಮಹಾಮುನಿಯು ಶ್ರೀರಾಮನಿಗೆ ಆತಿಥ್ಯವಿತ್ತು ಎಲ್ಲ ವಿಧಗಳಿಂದಲೂ ಗೌರವಿಸಿದನು. ಅಲ್ಲದೆ ಸೀತಾದೇವಿಯನ್ನೂ, ಲಕ್ಷ್ಮಣನನ್ನೂ ಸತ್ಕರಿಸಿ, ತನ್ನ ಬಳಿಗೈದಿದವಳೂ, ಬಹುವೃದ್ಧಳೂ, ನಿಜಸತಿಯೂ ಆದ ಅನಸೂಯಾದೇವಿಯನ್ನು ಕರೆದು, ಸಕಲ ಭೂತದಯಾಮಯನೂ, ಸಕಲ ಧರ್ಮವೇತ್ತನೂ ಆದ ಆ ಮುನಿಯು ಸ್ವರ್ಗ, ಮರ್ತ್ಯ, ಪಾತಾಳಾದಿ ಲೋಕಗಳಲ್ಲಿಯೂ ಪೂಜನೀಯಳಾದ ಆ ಅನಸೂಯಾದೇವಿಯನ್ನು ಸಮ್ಮತಗೊಳಿಸಿ, ಜನಕರಾಜನಂದಿನಿಯನ್ನು ಕುರಿತಿಂತೆಂದನು. " ಓ, ವಿದೇಹರಾಜಪುತ್ರಿಯೇ ! ಸೀತಾದೇವಿಯೆ ! ಮಹಾನುಭಾವಳೂ, ತಪವನ್ನಾಚರಿ

ಅನಸೂಯಾಂ ಮಹಾಭಾಗಾಂ ತಾಪಸೀಂ ಧರ್ಮಚಾರಿಣೀಂ ॥ ಪ್ರತಿಗೃಹ್ಣೀಷ್ವ
ವೈದೇಹೀ ಮಬ್ರವೀ ದೃಷಿಸತ್ತಮಃ ॥ ೮ ॥ ರಾಮಾಯ ಚಾಽಚಚಕ್ಷೇತಾಂ
ತಾಪಸೀಂ ಧರ್ಮಚಾರಿಣೀಂ ॥ ದಶವರ್ಷಾಣ್ಯನಾವೃಷ್ಟ್ಯಾ ದಗ್ಧೇ ಲೋಕೇ
ನಿರಂತರಂ ॥ ೯ ॥ ಯಯಾ ಮೂಲಫಲೇ ಸೃಷ್ಟೇ ಜಾಹ್ನವೀಚ ಪ್ರವರ್ತಿತಾ॥
ಉಗ್ರೇಣ ತಪಸಾ ಯುಕ್ತಾ ನಿಯಮೈಶ್ಚಾ ಪ್ಯಲಂಕೃತಾ ॥ ೧೦ ॥ ದಶವರ್ಷ
ಸಹಸ್ರಾಣಿ ಯಯಾ ತಪ್ತಂ ಮಹತ್ತಪಃ ॥ ಅನಸೂಯಾ ವ್ರತೈ ಸ್ಸ್ನಾತಾ
ಪ್ರತ್ಯೂಹಾಶ್ಚ ನಿವರ್ತಿತಾಃ ॥ ೧೧ ॥ ದೇವಕಾರ್ಯ ನಿಮಿತ್ತಂಚ ಯಯಾ

ಮಹಾ ಪುಣ್ಯಶಾಲಿಯಾದ, ತಾಪಸೀಂ - ತಪಸ್ವಿಯಾದ, ಧರ್ಮಚಾರಿಣೀಂ - ಧರ್ಮಪ್ರಧಾನವಾದ ಸದಾಚಾರವುಳ್ಳ, ಅನಸೂಯಾಂ - ಅನಸೂಯಾದೇವಿಯನ್ನು ಕುರಿತು, ವೈದೇಹೀಂ - ಸೀತಾದೇವಿಯನ್ನು, ಪ್ರತಿಗೃಹ್ಣೀಷ್ವೇತಿ - ಪರಿಗ್ರಹಿಸೆಂದು, ಅಬ್ರವೀತ್ - ನುಡಿವನು. ॥ ೮ ॥ ರಾಮಾಯ - ಶ್ರೀರಾಮನಿಗೆ, ಧರ್ಮಚಾರಿಣೀಂ - ಧರ್ಮವನ್ನೇ ಅನುಷ್ಠಾನಮಾಡುತ್ತಿರುವ, ತಾಪಸೀಂ - ತಪಃ ಪ್ರಧಾನಳಾದ, ತಾಂ - ಆ ಅನಸೂಯಾದೇವಿಯ ವಿಷಯನ್ನು, ಆಚಚಕ್ಷೇ - ಹೇಳಿದನು. ॥ ೯ ॥ ದಶವರ್ಷಾಣಿ - ಹತ್ತುವರುಷಗಳು, ಲೋಕೇ - ಲೋಕವು, ಅನಾವೃಷ್ಟ್ಯಾ - ವರ್ಷವಿಲ್ಲದೆ, ದಗ್ಧೇ-ಉರಿಯುತ್ತಿರಲು, ನಿರಂತರಂ - ಯಾವಾಗಲೂ, ಮೂಲಫಲೇ - ಕಂದಮೂಲ ಫಲಗಳು, ಯಯಾ - ಯಾವ ಅನಸೂಯೆಯಿಂದ, ಸೃಷ್ಟೇ - ನಿರ್ಮಿಸಲ್ಪಟ್ಟವೋ, ಜಾಹ್ನವೀಚ - ಗಂಗಾನದಿಯು, ಪ್ರವಹಿತಾ - ಪ್ರವಹಿಸಲ್ಪಟ್ಟಿತೋ, ಉಗ್ರೇಣ - ಭಯಂಕರವಾದ, ತಪಸಾ - ತಪಸ್ಸಿನಿಂದ, ಯುಕ್ತಾ - ಕೂಡಿರುವ, ನಿಯಮೈಶ್ಚ - ಕೃಚ್ಛ್ರಚಾಂದ್ರಾಯಣಾದಿ ನಿಯಮಗಳಿಂದ, ಅಲಂಕೃತಾ - ಅಲಂಕರಿಸಲ್ಪಟ್ಟಿದ್ದಾಳೆಯೋ, ಯಯಾ - ಯಾವ ಅನಸೂಯಾದೇವಿಯಿಂದ, ದಶವರ್ಷಸಹಸ್ರಾಣಿ - ಹತ್ತು ಸಾವಿರವರ್ಷಗಳು, ಮಹತ್ - ಬಹಳವಾದ, ತಪಃ - ತಪಸ್ಸು, ತಪ್ತಂ-ಮಾಡಲ್ಪಟ್ಟಿತೋ, ಸೇಯಂ-ಆ ಈ, ಅನಸೂಯಾ - ಅನಸೂಯಾದೇವಿಯು, ವ್ರತೈಃ - ಕೃಚ್ಛ್ರಚಾಂದ್ರಾಯಣಾದಿ ವ್ರತಗಳಿಂದ,

---

ಸುತ್ತಿರುವವಳೂ, ನನ್ನ ಧರ್ಮಪತ್ನಿಯೂ ಆದ ಈ ಅನಸೂಯಾದೇವಿಗೆ ನಮಸ್ಕಾರಮಾಡು ಈಕೆಯೇ ನಿನಗೆ ಆಧಾರವಾಗಿರುತ್ತಾಳೆ." ॥ ೫-೮ ॥ ಎಂದು ಹೇಳಿ ಶ್ರೀರಾಮನಿಗೆ ತಪೋನಿಷ್ಠಳೂ, ಧರ್ಮವನ್ನು ಎಡಬಿಡದೆ ಆಚರಿಸುತ್ತಿರುವಳೂ ಆದ ಆ ಅನಸೂಯಾದೇವಿಯ ವೃತ್ತಾಂತವನ್ನು ಹೇಳಬೇಕೆಂದೆಣಿಸಿ, ಆತನನ್ನು ಕುರಿತು, ಪೂಜ್ಯನಾದ ಶ್ರೀರಾಮನೇ ! ಕೇಳು. ಹಿಂದೆ ಅನಾವೃಷ್ಟಿಯಿಂದ ಹತ್ತುವರುಷಗಳವರೆವಿಗೂ ಈ ಜಗತ್ತು ಅಲ್ಲಕಲ್ಲೋಲವಾಗಿತ್ತು. ಆಗಲೀ ದೇವಿಯು ನಿಜಮಹಿಮಾ ವಿಶೇಷದಿಂದ ಕಂದಮೂಲ ಫಲಾದಿಗಳನ್ನು ಸೃಜಿಸಿದಳು. ಮಾತ್ರವಲ್ಲ; ಈಕೆಯು ಬತ್ತಿಹೋಗಿದ್ದ ಗಂಗಾನದಿಯನ್ನು ಮಹಾಪ್ರವಾಹವುಳ್ಳುದನ್ನಾಗಿ ಮಾಡಿದಳು. ಅಯ್ಯಾ, ಶ್ರೀರಾಮಮೂರ್ತಿಯೇ ! ಈಕೆಯೇನು ಸಾಮಾನ್ಯಳಲ್ಲ. ಮಹಾ ಘೋರವಾದ ತಪವನ್ನಾಚರಿಸಿದ್ದಾಳೆ. ಬಹುವಿಧವಾದ ವ್ರತನಿಯಾಮಾನುಷ್ಠಾನವನ್ನು ಮಾಡಿದ್ದಾಳೆ. ಈರೀತಿ ತಪವನ್ನಾಚರಿಸಿ, ಪೂಜ್ಯಳಾದ ಈಕೆಯು ದುರ್ಭಿಕ್ಷವೇ ಮೊದಲಾದ ಉಪದ್ರವಗಳನ್ನು ನಿವಾರಣೆಮಾಡಿದ್ದಾಳೆ. ಓ ರಘು

ಸಂತ್ವರಮಾಣಯಾ॥ದಶರಾತ್ರಂ ಕೃತಾ ರಾತ್ರಿ ಸ್ಸೇಯಂ ಮಾತೇವ ತೇಽನಘ !
॥ ೧೨ ॥ ತಾಮಿಮಾಂ ಸರ್ವಭೂತಾನಾಂ ನಮಸ್ಕಾರ್ಯಾಂ ಯಶಸ್ವಿನೀಂ ॥
ಅಭಿಗಚ್ಛತು ವೈದೇಹೀ ವೃದ್ಧಾ ಮಕ್ರೋಧನಾಂ ಸದಾ ॥ ೧೩ ॥ ಅನಸೂ
ಯೇತಿ ಯಾ ಲೋಕೇ ಕರ್ಮಭಿಃ ಖ್ಯಾತಿ ಮಾಗತಾ ॥ ಏವಂ ಬ್ರುವಾಣಂ
ತಮೃಷಿಂ ತಥೇತ್ಯುಕ್ತ್ವಾ ಸ ರಾಘವಃ ॥ ೧೪ ॥ ಸೀತಾಮುವಾಚ ಧರ್ಮಜ್ಞಾ
ಮಿದಂ ವಚನ ಮುತ್ತಮಂ ॥ ರಾಜಪುತ್ರಿ! ಶ್ರುತಮಿದಂ ಮುನೇರಸ್ಯ ಸಮಿ

ಸ್ನಾತಾ - ಪರಿಶುದ್ಧಳಾಗಿದ್ದಾಳೆ, ದೇವಕಾರ್ಯನಿಮಿತ್ತಂಚ - ದೇವತೆಗಳ ಕಾರ್ಯಸಿದ್ಧಗಾಗಿ, ಸಂತ್ವರಮಾಣಯಾ - ಜಾಗ್ರತೆಗೊಂಡು, ಯಯಾ - ಯಾವ ಅನಸೂಯಾದೇವಿಯಿಂದ, ಪ್ರತ್ಯೂಹಾಃ - ವಿಘ್ನಗಳು, ನಿವರ್ತಿತಾಃ - ಹೋಗಲಾಡಿಸಲ್ಪಟ್ಟುವೋ, ದಶರಾತ್ರಂ - ಹತ್ತುರಾತ್ರಿಗಳು, ರಾತ್ರಿಃ - ಏಕರಾತ್ರಿಯಾಗಿ, ಕೃತಾ - ಮಾಡಲ್ಪಟ್ಟಿತೋ, ಹೇ ಅನಘ - ಎಲೈ ನಿರ್ದೋಷನೇ, ಸೇಯಂ - ಆ ಈ ಅನಸೂಯಾದೇವಿಯು, ತೇ - ನಿನಗೆ, ಮಾತೇವ - ತಾಯಿಯಂತಿರುವಳು. ॥ ೧೦-೧೨ ॥ ಸರ್ವಭೂತಾನಾಂ - ಸಮಸ್ತ ಪ್ರಾಣಿಗಳಿಗೂ, ನಮಸ್ಕಾರ್ಯಾಂ - ನಮಸ್ಕಾರಯೋಗ್ಯಳಾದ, ಯಶಸ್ವಿನೀಂ- ಕೀರ್ತಿವಂತಳಾದ, ಸದಾ - ನಿರಂತರವೂ, ಅಕ್ರೋಧನಾಂ - ಕೋಪವಿಲ್ಲದ, ವೃದ್ಧಾಂ - ಮುದುಕಿಯಾದ, ತಾಮಿಮಾಂ - ಆ ಈ ಅನಸೂಯಾದೇವಿಯನ್ನು ಕುರಿತು, ವೈದೇಹೀ - ಸೀತಾದೇವಿಯು, ಅಭಿಗಚ್ಛತು - ಸಮೀಪಿಸಲಿ. ॥ ೧೩ ॥ ಯಾ - ಯಾವಳು, ಕರ್ಮಭಿಃ - ತನ್ನ ಸದಾಚಾರದಿಂದ, ಲೋಕೇ - ಲೋಕದಲ್ಲಿ, ಅನಸೂಯೇತಿ - ಅನಸೂಯಾರಹಿತಳೆಂದು, ಖ್ಯಾತಿಂ - ಪ್ರಸಿದ್ಧಿಯನ್ನು, ಆಗತಾ - ಪಡೆದಿದ್ದಾಳೆ, ಏವಂ - ಈ ಪರಿಯಾಗಿ, ಬ್ರುವಾಣಂ - ಹೇಳುತ್ತಿರುವ, ತಮೃಷಿಂ - ಆ ಅತ್ರಿ ಋಷಿಯನ್ನು ಕುರಿತು, ಸರಾಘವಃ - ಆ ಶ್ರೀರಾಮನು, ತಥೇತ್ಯುಕ್ತ್ವಾ - ಹಾಗೆಯೇ ಆಗಲೆಂದು ಹೇಳಿ. ॥ ೧೪ ॥ ಧರ್ಮಜ್ಞಾಂ - ಧರ್ಮವನ್ನು ತಿಳಿದಿರುವ, ಸೀತಾಂ - ಸೀತಾದೇವಿಯನ್ನು ಕುರಿತು, ಉತ್ತಮಂ - ಉತ್ಕೃಷ್ಟವಾದ, ಇದಂವಚನಂ - ಈ ಮಾತನ್ನು, ಉವಾಚ - ಹೇಳಿದನು,

---

ಕುಲ ಶ್ರೇಷ್ಠನಾದ ಶ್ರೀರಾಮಚಂದ್ರನೇ! ಈ ಮಹಾನುಭಾವಳು ಪೂರ್ವದಲ್ಲಿ ದೇವತೆಗಳಿಗೋಸುಗ ಬಹು ಜಾಗ್ರತೆಯುಳ್ಳವಳಾಗಿ ತನ್ನ ತಪೋಮಹಿಮೆಯಿಂದ ಹತ್ತು ರಾತ್ರಿಗಳನ್ನು ಒಂದೇ ರಾತ್ರಿಯನ್ನಾಗಿ ಮಾಡಿದ್ದಾಳೆ. ॥ ೯-೧೨ ॥ ಆದುದರಿಂದೀ ಮಹನೀಯಳೂ ನಿನಗೆ ತಾಯಿಯಂತೆ ಪೂಜನೀಯಳೆಂದು ತಿಳಿಯುವವನಾಗು. ಅಲ್ಲದೆ ಸಕಲ ಭೂತಗಳಿಂದ ಪೂಜಿಸಲ್ಪಡುವವಳೂ, ನಮಸ್ಕರಿಸಲಾದವಳೂ, ಮಹಾ ಕೀರ್ತಿಸಮನ್ವಿತಳೂ, ವೃದ್ಧೆಯೂ, ಎಲ್ಲ ಕಾಲಗಳಲ್ಲಯೂ ಕೋಪವಿಲ್ಲದಿರುವವಳೂ ಆದ ಈಕೆಗೆ, ನಿನ್ನ ಸಹಧರ್ಮಚಾರಿಣಿಯಾದ ಸೀತಾದೇವಿಯು ನಮಸ್ಕರಿಸುವದುಚಿತವೆಂದು ತೋರುತ್ತದೆ. ಕೇಳಯ್ಯಾ, ರಘುರಾಮನೇ ! ಕೋಪವೇ ಇಲ್ಲದಿರುವದರಿಂದಲೂ, ಯಾವಾಗಲೂ ಪುಣ್ಯಕರ್ಮಗಳನ್ನೇ ಮಾಡುತ್ತಿರುವುದರಿಂದಲೂ, ಸ್ವಲ್ಪವಾದರೂ ಅಸೂಯೆಯಿಲ್ಲದಿರುವುದರಿಂದಲೂ, ಈ ಮಹನೀಯಳು ಎಲ್ಲರಿಂದಲೂ, 'ಅನಸೂಯೆ' ಎಂದು ಕರೆಯಿಸಿಕೊಂಡು ಪ್ರಸಿದ್ಧಳಾಗಿದ್ದಾಳೆ. ಇಂತು ನುಡಿದ ಅತ್ರಿಮಹರ್ಷಿಯ ಮಾತುಗಳನ್ನು ಕೇಳಿ ಶ್ರೀರಾಮನು

ರಿತಂ ॥ ೧೫ ॥ ಶ್ರೇಯೋರ್ಥ ಮಾತ್ಮನ ಶ್ಶೀಘ್ರ ಮಭಿಗಚ್ಛ ತಪಸ್ವಿನೀಂ ॥
ಸೀತಾ ತ್ವೇತದ್ವಚ ಶ್ಶ್ರುತ್ವಾ ರಾಘವಸ್ಯ ಹಿತೈಷಿಣಃ ॥ ೧೬ ॥ ತಾಮತ್ರಿ
ಪತ್ನೀಂ ಧರ್ಮಜ್ಞಾ ಮಭಿಚಕ್ರಾಮ ಮೈಥಿಲೀ ॥ ಶಿಥಿಲಾಂ ವಳಿತಾಂ ವೃದ್ಧಾಂ
ಜರಾಪಾಂಡುರ ಮೂರ್ಧಜಾಂ ॥ ೧೭ ॥ ಸತತಂ ವೇಪಮಾನಾಂಗೀಂ ಪ್ರವಾತೇ
ಕದಳೀ ಯಥಾ ॥ ತಾಂತು ಸೀತಾ ಮಹಾಭಾಗಾ ಮನಸೂಯಾಂ ಪತಿವ್ರತಾಂ ॥

ಹೇ ರಾಜಪುತ್ರಿ - ಎಲೌ ರಾಜಕುವರಿಯೇ, ಅಸ್ಯಮುನೇಃ-ಈ ಅತ್ರಿಮಹಾಮುನಿಯಿಂದ, ಸಮೀರಿತಂ-ಹೇಳಲ್ಪಟ್ಟ, ಇದಂ - ಈಮಾತು, ಶ್ರುತಂ - ಕೇಳಲಾಯಿತೆ, ಆತ್ಮನಃ - ತನಗೆ, ಶ್ರೇಯೋರ್ಥಂ - ಅಭಿವೃದ್ಧಿಗೋಸುಗ, ತಪಸ್ವಿನೀಂ - ತಪಸ್ವಿನಿಯಾದ ಅನಸೂಯಾದೇವಿಯನ್ನು ಕುರಿತು, ಶೀಘ್ರಂ - ಜಾಗ್ರತೆಯಾಗಿ, ಅಭಿಗಚ್ಛ - ಹೋಗು. ॥ ೧೫ ॥ ಮೈಥಿಲೀ - ಜನಕರಾಯನ ಮಗಳಾದ, ಸೀತಾತು - ಸೀತಾದೇವಿಯು, ಹಿತೈಷಿಣಃ - ತನ್ನ ಶ್ರೇಯಸ್ಸನ್ನೇ ಅಪೇಕ್ಷಿಸುತ್ತಿರುವ, ರಾಘವಸ್ಯ - ಶ್ರೀರಾಮನ, ಏತದ್ವಚಃ - ಈ ಮಾತನ್ನು, ಶ್ರುತ್ವಾ - ಕೇಳಿ, ಧರ್ಮಜ್ಞಾಂ - ಸಕಲ ಧರ್ಮಗಳನ್ನು ತಿಳಿದಿರುವ, ಅತ್ರಿಪತ್ನೀಂ - ಅತ್ರಿಋಷಿಯ ಹೆಂಡತಿಯಾದ, ತಾಂ - ಆ ಅನಸೂಯಾದೇವಿಯನ್ನು ಕುರಿತು, ಅಭಿಚಕ್ರಾಮ - ನಡೆದುಹೋದಳು. ॥ ೧೬ ॥ ಮಹಾಭಾಗಾ - ಮಹಾ ಪುಣ್ಯಶಾಲಿಯಾದ, ಸೀತಾ - ಸೀತಾದೇವಿಯು, ಅವ್ಯಗ್ರಾ - ತ್ವರೆಯಿಲ್ಲದೆ, ಶಿಥಿಲಾಂ ಗಳಿತವಾದ ಶರೀರವುಳ್ಳ, ವಳಿತಾಂ-ಮುಡತೆಗಳುಳ್ಳ, ವೃದ್ಧಾಂ - ವಯೋವೃದ್ಧಳಾದ, ಜರಾಪಾಂಡುರಮೂರ್ಧಜಾಂ - ವಾರ್ಧಿಕಾವಸ್ಥೆಯಿಂದ ಬೆಳ್ಳಗಾದ ಕೂದಲುಗಳುಳ್ಳ, ಪ್ರವಾತೇ - ಗಾಳಿಯು ಹೆಚ್ಚಾದ ಸ್ಥಳದಲ್ಲಿ, ಕದಳೀಯಥಾ - ಬಾಳೆಯಮರದಂತೆ, ಸತತಂ-ನಿರಂತರವೂ, ವೇಪಮಾನಾಂಗೀಂ-ಕದಲುತ್ತಿರುವ ಶರೀರವುಳ್ಳ, ತಾಂ - ಪ್ರಸಿದ್ಧಳಾದ, ಪತಿವ್ರತಾಂ - ಪತಿವ್ರತೆಯಾದ, ಅನಸೂಯಾಂ - ಅನಸೂಯಾದೇವಿಯನ್ನು ಕುರಿತು, ಅಭ್ಯವಾದಯತ್ - ವಂದಿಸಿದಳು, ಸ್ವನಾಮ - ತನ್ನ ನಾಮಧೇಯವನ್ನು, ಸಮುದಾಹರತ್-ಹೇಳಿ

ಆತನಭಿಮತದಂತೆಯೇ ಮಾಡಬೇಕೆಂದು ಬಯಸಿ, ಸಕಲ ಧರ್ಮಗಳನ್ನೂ ಚನ್ನಾಗಿ ಅರಿತವಳಾದ ಸೀತಾದೇವಿಯನ್ನು ಕುರಿತು, " ಓ, ರಾಜಕುವರಿಯೇ ! ಸೀತಾದೇವಿಯೇ ! ಅತ್ರಿಮಹಾಮುನಿಯ ನುಡಿಗಳನ್ನು ಕೇಳಿದೆಯಲ್ಲವೆ ! ನಿನಗೆ ಶ್ರೇಯಸ್ಸುಂಟಾಗಲೋಸುಗ ತಪೋವಂತಳಾದ ಈ ಅನಸೂಯಾದೇವಿಯ ಬಳಿಗೆ ಜಾಗ್ರತೆಯಾಗಿ ತೆರಳುವವಳಾಗು " ಎಂದನು. ಹೀಗೆ ತನ್ನ ಹಿತವನ್ನೇ ಕೋರುತ್ತಿರುವ ಶ್ರೀರಾಮನ ನುಡಿಗಳನ್ನು ಕೇಳಿ, ಮಿಥಿಲರಾಜಕುವರಿಯಾದ ಸೀತಾದೇವಿಯು ಸಕಲ ಧರ್ಮಗಳನ್ನು ತಿಳಿದವಳೂ, ಅತ್ರಿಮಹರ್ಷಿಯ ಧರ್ಮಪತ್ನಿಯೂ ಆದ ಅನಸೂಯಾದೇವಿಯ ಬಳಿಗೈದಿದಳು. ॥ ೧೫-೧೬ ॥ ಆ ಬಳಿಕ ಮಹಾನುಭಾವಳಾದ ಆ ದೇವಿಯು ಶಿಥಿಲವಾದ ಅವಯವಗಳುಳ್ಳವಳೂ, ಹಣ್ಣು ಹಣ್ಣಾಗಿ ಎತ್ತ ನೋಡಿದರತ್ತ ಮುಡತೆ ಮುಡತೆಗಳಾದ ಶರೀರವುಳ್ಳವಳೂ, ನೆರತು ಬಿಳುಪಾಂತ ತಲೆಗೂದಲುಳ್ಳವಳೂ, ಎಲ್ಲ ಕಾಲಗಳಲ್ಲಿಯೂ ಗಡಗಡನೆ ಒಣಕುತ್ತಿರುವ ಅವಯವಗಳುಳ್ಳವಳೂ, ಗಾಳಿಹೆಚ್ಚಿದೆಡೆಯಲ್ಲಿ ಬಾಳೆಯಂತೆ ತೂಗಾಡುತ್ತಿರುವವಳೂ, ಮಹಾ ಪತಿವ್ರತೆಯೂ,ಮಹಾಪೂಜ್ಯಳೂ, ತಪೋನಿಷ್ಠಳೂ ಆದ ಅನಸೂಯಾದೇವಿಯನ್ನು ನೋಡಿದಳು. ಆಮೇಲೆ ಆಕೆಗೆ ನಮಸ್ಕಾರವಂಗೈದು ಪರಮಸಂತೋಷದಿಂದ ಕೈಜೋಡಿಸಿಕೊಂಡು ಕುಶಲಪ್ರಶ್ನೆಯಂಗೈದವಳಾದಳು. ॥೧೭-೧೮॥ ಹೀಗೆ ನಮಸ್ಕರಿಸಿ ಕುಶಲಪ್ರಶ್ನೆಯನ್ನುಮಾಡುತ್ತಿರುವ ಮಹಾನು

ಅಭ್ಯನಾದಯು ದನ್ಯಗ್ರಾ ಸ್ತನಾಮ ಸಮುದಾಹರತ್ ॥ ಅಭಿವಾದ್ಯಚ ವೈದೇಹೀ ತಾಪಸೀಂ ತಾಮನಿಂದಿತಾಂ ॥ ೧೯ ॥ ಬದ್ಧಾಂಜಲಿಪುಟಾ ಹೃಷ್ಟಾ ಪರ್ಯಪೃಚ್ಛ ದನಾಮಯಂ ॥ ತತ ಸ್ಸೀತಾಂ ಮಹಾಭಾಗಾಂ ದೃಷ್ಟ್ವಾ ತಾಂ ಧರ್ಮಚಾರಿಣೀಂ ॥ ೨೦ ॥ ಸಾಂತ್ವಯಂ ತ್ಯಬ್ರವೀ ದ್ಧೃಷ್ಟಾ ದಿಷ್ಟ್ಯಾ ಧರ್ಮ ಮವೇಕ್ಷಸೇ ॥ ತ್ಯಕ್ತ್ವಾ ಜ್ಞಾತಿಜನಂ ಸೀತೇ ಮಾನ ಮೃದ್ಧಿಂಚ ಭಾಮಿನಿ! ॥ ೨೧ ॥ ಅವರುದ್ಧಂ ವನೇ ರಾಮಂ ದಿಷ್ಟ್ಯಾ ತ್ವಮನುಗಚ್ಛಸಿ! ॥ ನಗರಸ್ಥೋ

ದಳು. ॥೧೭-೧೮॥ ವೈದೇಹೀ - ಸೀತಾದೇವಿಯು, ಅನಿಂದಿತಾಂ - ಸರ್ವೋತ್ಕೃಷ್ಟಳಾದ, ತಾಪಸೀಂ - ತಪಸ್ವಿನಿಯಾದ, ತಾಂ - ಆ ಅನಸೂಯಾದೇವಿಯನ್ನು, ಅಭಿವಾದ್ಯ - ನಮಸ್ಕರಿಸಿ, ಹೃಷ್ಟಾ - ಸಂತೋಷಗೊಂಡು, ಬದ್ಧಾಂಜಲಿಪುಟಾ - ಕೈಗಳನ್ನು ಜೋಡಿಸಿಕೊಂಡು, ಅನಾಮಯಂ - ಕುಶಲ ವನ್ನು, ಪರ್ಯಪೃಚ್ಛತ್ - ಕೇಳಿದಳು. ॥ ೧೯ ॥ ತತಃ - ಬಳಿಕ, ಮಹಾಭಾಗಾಂ - ಮಹಾ ಪುಣ್ಯವತಿಯಾದ, ಧರ್ಮಚಾರಿಣೀಂ - ಪಾತಿವ್ರತ್ಯರೂಪ ಧರ್ಮದಲ್ಲಿಯೇ ತತ್ಪರಳಾದ, ತಾಂಸೀತಾಂ - ಆ ಸೀತಾದೇವಿಯನ್ನು, ದೃಷ್ಟ್ವಾ - ಕಂಡು, ಸಾಂತ್ವಯಂತೀ - ಸಮಾಧಾನಗೊಳಿಸಿ, ದಿಷ್ಟ್ಯಾ - ದೈವಾಧೀನದಿಂದ, ಧರ್ಮಂ - ಧರ್ಮವನ್ನು, ಅವೇಕ್ಷಸೇ - ನೋಡುತ್ತೀಯೆ, ಇತಿ - ಇಂತೆಂದು, ಅಬ್ರವೀತ್ - ನುಡಿದಳು, ಹೇ ಸೀತೇ - ಎಲೌ ಸೀತಾದೇವಿಯೆ, ಜ್ಞಾತಿಜನಂ - ಬಂಧು ಬಳಗದವ ರನ್ನು, ತ್ಯಕ್ತ್ವಾ - ಬಿಟ್ಟು, ಮಾನಂ - ಅಹಂಕಾರವನ್ನು, ಋದ್ಧಿಂ - ಐಶ್ವರ್ಯವನ್ನು, ತ್ಯಕ್ತ್ವಾ - ಬಿಟ್ಟು, ಹೇ ಭಾಮಿನಿ - ಎಲೌ ಮಗಳೇ, ವನೇ - ಅರಣ್ಯದಲ್ಲಿ, ಅವರುದ್ಧಂ - ನಿಯಮಿಸಲ್ಪಟ್ಟ, ರಾಮಂ - ಶ್ರೀರಾಮನನ್ನು, ತ್ವಂ - ನೀನು, ದಿಷ್ಟ್ಯಾ - ದೈವಾಧೀನದಿಂದ, ಅನುಗಚ್ಛಸಿ - ಅನುಸರಿಸಿ ಬಂದೆ, ಯಾಸಾಂಸ್ತ್ರೀಣಾಂ - ಯಾವ ಸ್ತ್ರೀಯರಿಗೆ, ಭರ್ತಾ - ಪತಿಯು, ನಗರಸ್ಥೋವಾ - ನಗರದಲ್ಲಿ ದ್ದವನೇ ಆಗಲಿ, ವನಸ್ಥೋವಾ - ವನವಾಸಿಯೇ ಆಗಲಿ, ಪಾಪೋವಾ-ಪಾಪಿಷ್ಠನೇ ಆಗಲಿ, ಯದಿವಾ- ಹಾಗಲ್ಲದಿದ್ದರೆ, ಶುಭಃ - ಮಂಗಳಕರನೇ ಆಗಲಿ, ಪ್ರಿಯಃ - ಇಷ್ಟನೋ, ತಾಸಾಂ-ಅಂತಹ ಸ್ತ್ರೀಯ ರಿಗೆ, ಲೋಕಾಃ - ಲೋಕಗಳು, ಮಹೋದಯಾಃ - ಮಹಾ ಫಲಗಳುಳ್ಳವುಗಳು, ದುಶ್ಶೀಲಃ - ದುಷ್ಟ

ಭಾವಳೂ, ಧರ್ಮಿಷ್ಠಳೂ ಆದ ಸೀತಾದೇವಿಯನ್ನು ನೋಡಿ, ಅನಸೂಯಾದೇವಿಯು ಪರಮಾನಂದಭರಿತಳಾಗಿ ಆಕೆಯನ್ನು ಕುರಿತು, "ಅಮ್ಮಾ, ಸೀತಾದೇವಿಯೆ! ನಿನ್ನ ಭಾಗ್ಯ ದಿಂದಲೇ ನೀನು ಧರ್ಮವನ್ನೆಡಬಿಡದೆ ಆಚರಿಸುತ್ತಿರುವೆಯಲ್ಲವೆ. ನೀನು ಬಂಧುಬಳಗ ದವರನ್ನು ತೊರೆದು, ದುರಹಂಕಾರವನ್ನು ಬಿಟ್ಟು, ಸೌಖ್ಯವನ್ನು ತೃಣದಂತೆ ಭಾವಿಸಿ, ಹದಿನಾಲ್ಕು ಸಂವತ್ಸರಗಳ ಕಾಲ ಜನಕನಾಜ್ಞತಿಯಂತೆ ವನವಾಸವಂಗೈಯ್ಯಲೋಸುಗ ನಿನ್ನ ಪತಿಯೊಡಗೂಡಿ ಅರಣ್ಯಕ್ಕೆ ಬಂದಿರುವುದನ್ನು ನೋಡಿದರೆ, ನನಗೂ ಕೂಡ ಮಹದಾ ಶ್ಚರ್ಯವುಂಟಾಗಿರುವುದು. ಆಹಾ! ನೀನು ಒಳ್ಳೆಯ ಅದೃಷ್ಟಶಾಲಿಯೆಂದೂ, ಮಹಾ ಪತಿವ್ರತೆಯೆಂದೂ ನಾನು ತಿಳಿಯುತ್ತೇನೆ! ಓ, ದೇವಿ! ಲೋಕದಲ್ಲಿ ಸ್ತ್ರೀಯೆನಿಸಿದ ಯಾವಳಿಗಾದರೂ, ನಿಜಕಾಂತನು ಅರಣ್ಯದಲ್ಲಿದ್ದರೂ, ಸರ್ವಭೋಗ ಸಮನ್ವಿತವಾದ ನಗರ ದಲ್ಲಿದ್ದರೂ, ಪಾಪಾತ್ಮನಾದರೂ, ಪುಣ್ಯಶಾಲಿಯಾದರೂ, ದುಷ್ಟಸ್ವಭಾವಿಯಾದರೂ, ಮನ ಬಂದಂತೆ ಸಂಚರಿಸುವವನಾದರೂ, ಧನವಂತನಾದರೂ, ಧನಹೀನನಾದರೂ, ಅವನೇ ತನಗೆ ಪ್ರೀತಿಪಾತ್ರನಾದವನೆಂಬ ಸಂಕಲ್ಪವಿರುತ್ತದೆಯೋ, ಪತಿಯೇ ಪರದೈವವೆಂದು ಸದ್ಭಾವನೆ

ವನಸ್ಥೋವಾ ಪಾಪೋವಾ ಯದಿವಾ ಶುಭಃ ॥ ೨೨ ॥ ಯಾಸಾಂ ಸ್ತ್ರೀಣಾಂ
ಪ್ರಿಯೋ ಭರ್ತಾ ತಾಸಾಂ ಲೋಕಾ ಮಹೋದಯಾಃ ॥ ದುಶ್ಶೀಲಃ ಕಾಮ
ವೃತ್ತೋವಾ ಧನೈರ್ವಾ ಪರಿವರ್ಜಿತಃ ॥ ೨೩ ॥ ಸ್ತ್ರೀಣಾ ಮಾರ್ಯಸ್ವಭಾ
ವಾನಾಂ ಪರಮಂ ದೈವತಂ ಪತಿಃ ॥ ನಾತೋ ವಿಶಿಷ್ಟಂ ಪಶ್ಯಾಮಿ ಬಾಂಧವಂ
ವಿಮೃಶಂ ತ್ಯಹಂ ॥ ೨೪ ॥ ಸರ್ವತ್ರ ಯೋಗ್ಯಂ ವೈದೇಹಿ! ತಪಃಕೃತ ಮಿವಾ
ವ್ಯಯಂ ॥ ನತ್ವೇನ ಮವಗಚ್ಛಂತಿ ಗುಣದೋಷಮಸತ್ ಸ್ತ್ರಿಯಃ ॥ ೨೫ ॥

ಸ್ವಭಾವವಂತನೇ ಆಗಲಿ, ಕಾಮವೃತೋವಾ - ಸ್ವೇಚ್ಛೆಯಾಗಿರುವನೇ ಆಗಲಿ, ಧನೈಃ - ದ್ರವ್ಯಗಳಿಂದ, ಪರಿವರ್ಜಿತೋವಾ - ಬಿಡಲ್ಪಟ್ಟವನೇ ಆಗಲಿ, ಪತಿಃ - ಪತಿಯು, ಆರ್ಯಸ್ವಭಾವಾನಾಂ - ಒಳ್ಳೆಯ ಚಿತ್ತವೃತ್ತಿಯುಳ್ಳ, ಸ್ತ್ರೀಣಾಂ - ಹೆಣ್ಣು ಮಕ್ಕಳಿಗೆ, ಪರಮಂದೈವತಂ - ಶ್ರೇಷ್ಠವಾದ ದೈವವು, ಅಹಂ - ನಾನು, ವಿಮೃಶಂತೀ - ಆಲೋಚಿಸುತ್ತ, ಅತಃ - ಈ ಗಂಡನಿಗಿಂತಲೂ, ವಿಶಿಷ್ಟಂ-ಹೆಚ್ಚಾದ, ಬಾಂಧವಂ - ಬಂಧುಜನವನ್ನು, ನಪಶ್ಯಾಮಿ - ತಿಳಿಯುವುದಿಲ್ಲ. ||೨೦-೨೪|| ಹೇ ವೈದೇಹಿ - ಎಲೌ ಸೀತಾದೇವಿಯೆ, ಅವ್ಯಯಂ - ನಾಶರಹಿತವಾದ, ಕೃತಂ - ಮಾಡಲ್ಪಟ್ಟ, ತಪಇವ - ತಪದಂತೆ, ಸರ್ವತ್ರ - ಸರ್ವಾವಸ್ಥೆಗಳಲ್ಲಿಯೂ, ಯೋಗ್ಯಂ - ರಕ್ಷಣಸಮರ್ಥನಾದ, ಏನಂ - ಈ ಪುರುಷನನ್ನು ಅಸತ್ಸ್ತ್ರಿಯಃ - ದುಷ್ಟಸ್ತ್ರೀಯರು, ಗುಣದೋಷಂ - ಗುಣವನ್ನೂ ದೋಷವನ್ನೂ, ನಾವಗಚ್ಛಂತಿ - ತಿಳಿಯಲಾರರು, ಹೇ ಮೈಥಿಲಿ - ಎಲೌ ಸೀತಾದೇವಿಯೇ, ಕಾಮವಕ್ತವ್ಯಹೃದಯಾ - ಕಾಮದಿಂದ ಮಿತವಾದ ಹೃದಯವುಳ್ಳವರಾಗಿ, (ಗೋ + ತಿ) ಕಾಮಗುಣಕ್ಕೆ ವಿಧೇಯವಾದ ಮನವುಳ್ಳವರಾಗಿ, ಭರ್ತೃನಾಥಾಃ - ಗಂಡಂದರಿಗೆ ನಿಯಾಮಕರಾಗಿ, (ಗೋ) ಭರ್ತೃನಾಥಾಃ - ಅನ್ಯಪುರುಷರನ್ನಪೇಕ್ಷಿಸುವರಾಗಿ, ಯಾಃ - ಯಾವ ಸ್ತ್ರೀಯರು, ಚರಂತಿ - ಸಂಚರಿಸುತ್ತಾರೆಯೋ, ತಾಃ - ಆ ಸ್ತ್ರೀಯರು, ಅಯಶಶ್ಚೈವ - ಅಪಕೀರ್ತಿಯನ್ನೂ, ಧರ್ಮಭ್ರಂಶಂಚ - ಪಾತಿವ್ರತ್ಯಧರ್ಮದಿಂದ ಚ್ಯುತಿಯನ್ನೂ, ಪ್ರಾಪ್ನುವಂತಿ - ಹೊಂದುತ್ತಾರೆ, ಅಕಾರ್ಯವಶಂ-ದುಷ್ಕಾರ್ಯಗಳಿಗೆ ಸ್ವಾಧೀನತೆಯನ್ನು, ಆಪನ್ನಾಃ - ಹೊಂದಿ, ಯಾಃ - ಯಾವ ಸ್ತ್ರೀಯರು, ಸಂತಿ - ಇರುತ್ತಾರೆಯೋ, ತದ್ವಿಧಾಃ -

ಯಿರುವುದೋ, ಆಕೆಯೇ ಮಹಾ ಪುಣ್ಯವತಿಯೆನಿಸುತ್ತಾಳೆ. ಮಾತ್ರವಲ್ಲದೆ ಇಂತಹ ಸ್ತ್ರೀಯರು ಸಕಲ ಸಂಪತ್ಸಮೃದ್ಧವಾದ ಪುಣ್ಯಲೋಕಗಳಿಗೂ ಹೋಗುತ್ತಾರೆ. ಲೋಕದಲ್ಲಿ ಸತ್ಸ್ವಭಾವಗಳುಳ್ಳ ಹೆಂಗಸರಿಗೆ ಪತಿಯೇ ದೈವವೆಂತಲೂ, ಆತನನ್ನುಳಿದು ಬೇರೊಂದು ದೈವವೇ ಇಲ್ಲವೆಂತಲೂ, ಆತನಿಗಿಂತ ಆಪ್ತರಾದ ಬಂಧುಗಳೂ ಇಲ್ಲವೆಂತಲೂ, ಯಾವಾಗಲೂ ನನಗೆ ತೋರುತ್ತಿರುವುದು " ಎಂದು ಹೇಳಿದಳು. ||೧೯-೨೪|| ಮಹಾ ಪತಿವ್ರತೆಯಾದ ಅನುಸೂಯಾದೇವಿಯು ಹೀಗೆ ಹೇಳಿ ಮತ್ತೂ ಹೇಳಬೇಕೆಂದು ಬಯಸಿ ಆ ಸೀತಾದೇವಿಯನ್ನು ಕುರಿತು, " ಅಮ್ಮಾ ! ಕೇಳು, ಸರ್ವಾವಸ್ಥೆಗಳಲ್ಲಿಯೂ, ಸರ್ವಕಾಲಗಳಲ್ಲಿಯೂ, ಸಂರಕ್ಷಣೆಗೈಯ್ಯಲು ಸಮರ್ಥನೂ ಪೂರ್ವಜನ್ಮದಲ್ಲಿಮಾಡಿದ ಸತ್ಕರ್ಮಗಳಿಂದಲೇ ದೊರಕಿದ ಫಲಸ್ವರೂಪವಾಗಿರುವವನೂ ಆದ ಪತಿಯಲ್ಲಿನ ಗುಣದೋಷಗಳನ್ನು ತಿಳಿದುಕೊಳ್ಳಲಾರದವರೂ ಮನಬಂದಂತೆ ಯುಕ್ತಾಯುಕ್ತಗಳನ್ನರಿಯದೆ ಸಕಲ ಪದಾರ್ಥಗಳನ್ನೂ ಬಯಸುವವರೂ, ಪರಪುರುಷರನ್ನು ಕೋರುವವರೂ ಆದ ಸ್ತ್ರೀಯರು ಬಹಳವಾದ ಅಪಕೀರ್ತಿಯನ್ನು ಹೊಂದುತ್ತಾರೆಯಲ್ಲದೆ ಧರ್ಮಭ್ರಷ್ಟರಾಗಿ ಪರಲೋಕದಲ್ಲಿ ಘೋರವಾದ ನರಕ

ಕಾಮವಕ್ತವ್ಯ ಹೃದಯಾ ಭರ್ತೃನಾಥಾ ಶ್ಚರಂತಿ ಯಾಃ ॥ ಪ್ರಾಪ್ನುವಂತ್ಯ ಯಶಶ್ಚೈವ ಧರ್ಮಭ್ರಂಶಂಚ ಮೈಥಿಲಿ! ॥ ೨೬ ॥ ಅಕಾರ್ಯ ವಶಮಾಪನ್ನಾ ಸ್ತ್ರಿಯೋ ಯಾಃ ಖಲು ತದ್ವಿಧಾಃ ॥ ತ್ವದ್ವಿಧಾಸ್ತು ಗುಣೈ ರ್ಯುಕ್ತಾ ದೃಷ್ಟ ಲೋಕ ಪರಾವರಾಃ ॥ ೨೭ ॥ ಸ್ತ್ರಿಯ ಸ್ಸ್ವರ್ಗೇ ಚರಿಷ್ಯಂತಿ ಯಥಾ ಧರ್ಮ ಕೃತ ಸ್ತಥಾ ॥

ತದೇವಮೇನಂ ತ್ವಮನುವ್ರತಾ ಸತೀ
ಪತಿವ್ರತಾನಾಂ ಸಮಯಾನುವರ್ತಿನೀ ॥
ಭವಸ್ವ ಭರ್ತು ಸ್ಸಹಧರ್ಮಚಾರಿಣೀ
ಯಶಶ್ಚ ಧರ್ಮಂಚ ತತ ಸ್ಸಮಾಪ್ಸ್ಯಸಿ ॥ ೨೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತದಶೋತ್ತರಶತತಮಸ್ಸರ್ಗಃ.

ಅಂತಹ, ಸ್ತ್ರಿಯಃ - ಹೆಂಗಳು (ಧರ್ಮಚ್ಯುತಿಯನ್ನು ಹೊಂದುತ್ತಾರೆ,) ತ್ವದ್ವಿಧಾಸ್ತು - ನಿನ್ನಂತಹ, ಸ್ತ್ರಿಯಸ್ತು - ಹೆಂಗಸರಾದರೆ, ಗುಣೈಃ - ಗುಣಗಳಿಂದ, ಯುಕ್ತಾಃ - ಕೂಡಿ, ದುಷ್ಟಲೋಕಪರಾಪರಾಃ - ನೋಡಲ್ಪಟ್ಟ ಲೋಕಸಂಬಂಧವಾದ ನೀಚೋಚ್ಚಭಾವಗಳುಳ್ಳವರಾಗಿ, ಯಥಾ - ಹೇಗೆ, ಧರ್ಮ ಕೃತಃ - ಧರ್ಮವನ್ನಾಚರಿಸುವರೋ, ತಥಾ - ಹಾಗೆಯೇ, ಸ್ವರ್ಗೇ - ಸ್ವರ್ಗದಲ್ಲಿ, ಚರಿಷ್ಯಂತಿ - ಸಂಚರಿಸುತ್ತಾರೆ. ॥ ೨೦-೨೭ ॥ ತತ್ - ಆ ಕಾರಣ, ಪತಿವ್ರತಾನಾಂ - ಪತಿವ್ರತಾಸ್ತ್ರೀಯರ, ಸಮಯಾನುವರ್ತಿನೀ - ಆಚಾರವಿಚಾರಗಳನ್ನು ಅನುಸರಿಸಿರುವ, ತ್ವಂ - ನೀನು, ಏವಂ - ಈಪರಿಯಾಗಿ, ಏನಂ - ಈ ಶ್ರೀರಾಮನನ್ನು, ಅನುವ್ರತಾ - ಅನುಸರಿಸಿ ನಿಯಮವನ್ನು ನಡಿಸುವವಳಾಗಿ, ಭರ್ತುಃ - ಗಂಡನಿಗೆ, ಸಹಧರ್ಮಚಾರಿಣೀ - ಆತನೊಡಗೂಡಿ ಧರ್ಮಾನುಷ್ಠಾನವನ್ನೇ ಆಚರಿಸುತ್ತ, ಭವಸ್ವ - ಇರು, ತತಃ - ಆದರಿಂದ, ಧರ್ಮಂಚ - ಧರ್ಮವನ್ನೂ, ಸಮಾಪ್ಸ್ಯಸಿ - ಹೊಂದುವೆ ॥ ೨೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಸಪ್ತದಶೋತ್ತರಶತತಮಸ್ಸರ್ಗಃ.

ವನ್ನೂ ಅನುಭವಿಸುತ್ತಾರೆ. ಇದೂ ಅಲ್ಲದೆ ದುಷ್ಕಾರ್ಯಗಳಲ್ಲಿಯೇ ಪ್ರವರ್ತಿಸುವ ಹೆಂಗಸರು ಇಹಪರಗಳೆರಡರಲ್ಲಿಯೂ ದುಃಖವಾನುತ್ತಾರೆ. ಅಮ್ಮಾ! ಸೀತಾದೇವಿಯೆ! ಆದುದರಿಂದ ನೀನು ನಿನ್ನ ಪತಿಯಾದ ಶ್ರೀರಾಮನ ಆಜ್ಞೆಯಂತೆ ಯಾವಾಗಲೂ ಆತನನ್ನೇ ಅನುಸರಿಸುತ್ತಿರು. ಅಲ್ಲದೆ ಪತಿವ್ರತೆಯ ನಿಯಮನಿಷ್ಠೆಗಳಾವವುಂಟೋ, ಅವುಗಳನ್ನೆಲ್ಲವನ್ನೂ ಅರಿತುಕೊಂಡು ಸನ್ಮಾರ್ಗದಲ್ಲಿ ಪ್ರವರ್ತಿಸು. ನಿನ್ನ ಪತಿದೇವನಾದ ಶ್ರೀರಾಮನಾಚರಿಸುವ ಧರ್ಮಕಾರ್ಯಗಳಲ್ಲಿ ನೀನೂ ಧರ್ಮದಿಂದಲೇ ನಡೆದುಕೊಳ್ಳುವವಳಾಗು. ಹೀಗೆ ಪತಿವ್ರತೆಯರ ಮಾರ್ಗವನ್ನೇ ಅನುವರ್ತಿಸುವೆಯಾದರೆ ಉನ್ನತವಾದ ಕೀರ್ತಿಯನ್ನೂ, ಅತಿಶಯವಾದ ಪುಣ್ಯವನ್ನೂ ಪಡೆಯುತ್ತೀಯ. ಹೀಗೆ ಪಡೆದ ಪುಣ್ಯದಿಂದಲೂ ಕೀರ್ತಿಯಿಂದಲೂ, ಪರಲೋಕದಲ್ಲಿ ಸಮಸ್ತ ಭೋಗಗಳನ್ನೂ ಹೊಂದುತ್ತೀಯೆ" ಎಂದು ನುಡಿದಳು. ॥ ೨೫-೨೮ ॥

ಇಂತಿದು ಶ್ರೀಸೀತಾರಾಮಲಕ್ಷ್ಮಣಕೃತ ಅತ್ರಿಮಹಾಮುನಿದರ್ಶನ ವೃತ್ತಾಂತ
ವಿವರಣವೆಂಬ ನೂರಹದಿನೇಳನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಅಷ್ಟಾದಶೋತ್ತರಶತತಮಸ್ಸರ್ಗಃ.

ಸಾ ತ್ವೇವ ಮುಕ್ತಾ ವೈದೇಹೀ ಅನಸೂಯಾಽನಸೂಯಯಾ ‖ ಪ್ರತಿಪೂಜ್ಯ ವಚೋ ಮಂದಂ ಪ್ರವಕ್ತು ಮುಪಚಕ್ರಮೇ ‖ ೧ ‖ ನೈತದಾಶ್ಚರ್ಯ ಮಾರ್ಯಾಯಾ ಯನ್ಮಾಂ ತ್ವ ಮಭಿಭಾಷಸೇ ‖ ವಿದಿತಂತು ಮಮಾಪ್ಯೇತ ದ್ಯಥಾ ನಾರ್ಯಾಃಪತಿ ರ್ಗುರುಃ ‖ ೨ ‖ ಯದ್ಯಪ್ಯೇಷ ಭವೇದ್ಭರ್ತಾ ಮಮಾ ರ್ಯೆವೃತ್ತಿ ವರ್ಜಿತಃ ‖ ಅದ್ವೈಧದ ಮುಪಚರ್ತವ್ಯ ಸ್ತಥಾಪ್ಯೇಷ ಮಯಾ

ಸಾವೈದೇಹೀ - ಆ ಸೀತಾದೇವಿಯು, ಅನುಸೂಯಯಾ - ಅನುಸೂಯಾದೇವಿಯಿಂದ, ಏವಂ - ಈಪರಿಯಾಗಿ, ಉಕ್ತಾ - ಹೇಳಲ್ಪಟ್ಟು, ಅನಸೂಯಯಾ-ಅಸೂಯೆಯನ್ನುಳಿದು, **ವಚಃ** - ಮಾತನ್ನು, ಪ್ರತಿಪೂಜ್ಯ - ಶ್ಲಾಘಿಸಿ, ಮಂದಂ - ಮೆಲ್ಲಗೆ, ಪ್ರವಕ್ತುಂ - ಪ್ರತ್ಯುತ್ತರ ಕೊಡು ವದಕ್ಕೆ, ಉಪಚಕ್ರಮೇ - ಆರಂಭಿಸಿದಳು. ‖ ೧ ‖ ತ್ವಂ - ನೀನು, ಮಾಂ - ನನ್ನನ್ನು ಕುರಿತು, **ಯತ್** - ಯಾವ ಮಾತನ್ನು, ಅಭಿಭಾಷಸೇ - ಹೇಳಿದೆಯೋ, ಆರ್ಯಾಯಾಃ - ಪೂಜ್ಯಳಾದ ನಿನಗೆ, **ಏತತ್** - ಇದು, ಆಶ್ಚರ್ಯಂ - ಆಶ್ಚರ್ಯಕರವಾದುದಲ್ಲ, ಮಮಾಪಿ - ನನಗೂ, ಯಥಾ - ಹೇಗೋ, **ನಾರ್ಯಾಃ** - ಹೆಂಗಸಿಗೆ, ಪತಿಃ - ಗಂಡನು, ಗುರುಃ - ಶ್ರೇಷ್ಠನು, ಏತತ್ - ಎಂಬದಾಗಿ, ವಿದಿತಂ - ತಿಳಿದಿದ್ದೇನೆ. ‖ ೨ ‖ ಹೇ ಆರ್ಯೇ - ಎಲೌ ಪೂಜ್ಯಳೇ, ಮಮ - ನನ್ನ, ಏಷಭರ್ತಾ - **ಈ ಪತಿಯು**, ಯದ್ಯಪಿ-ಹೇಗಾದರೂ, ವೃತ್ತಿವರ್ಜಿತಃ (ಗೋ) ರಾಜಜೀವನದಿಂದ ಬಿಡಲ್ಪಟ್ಟವನು, ತಥಾಪಿ-ಹಾಗಾದರೂ, ಏಷಃ - ಈತನು, ಮಯಾ - ನನ್ನಿಂದ, ಅದ್ವೈಧಂ - ಗುಣತ್ವ ನಿರ್ಗುಣತ್ವ ಭೇದವನ್ನು ಬಿಟ್ಟು, ಉಪಚರ್ತವ್ಯಃ - ಸೇವಿಸತಕ್ಕವನು, ಭವೇತ್ - ಆದವನು. ‖ ೩ ‖ ಯಃ - ಯಾವ

ಅನುಸೂಯಾದೇವಿಯು ಈ ರೀತಿಯಾಗಿ ನುಡಿಯಲು, ಆ ಮಾತುಗಳನ್ನು ಭಕ್ತಿ ಶ್ರದ್ಧೆಗಳಿಂದ ಕೇಳಿ, ಸ್ವಲ್ಪವಾದರೂ ಅಸೂಯೆಯಿಲ್ಲದ ಆ ಸೀತಾದೇವಿಯು, ಮಹಾನು ಭಾವಳಾದ ಆಕೆಯನ್ನು ಪೂಜಿಸಿ, ಯಾವುದೋ ಒಂದು ವಿಚಾರವನ್ನು ಕೇಳಬೇಕೆಂದು ಕೊಂಡು, ಮೆಲ್ಲಗೆ ಮೃದುಮಧುರ ವಚನ ರಚನೆಯಿಂದ ಆಕೆಯನ್ನು ಕುರಿತು, “ಪೂಜ್ಯ ಳಾದ ಅನುಸೂಯಾದೇವಿಯೆ! ಸ್ತ್ರೀಯರಿಗೆ ಪತಿಯೇ ಗುರುವೆಂದು ನನಗೂ ಸಹ ತಿಳಿ ದಿರುವುದು. ಆದುದರಿಂದಲೇ ನೀನಾಡಿದ ನುಡಿಗಳು ನನಗೆ ಮಹದಾಶ್ಚರ್ಯವನ್ನುಂಟು ಮಾಡಲಿಲ್ಲವು. ಆದರೂ ನಿನ್ನಂತಹ ಮಹಾನುಭಾವಳು ನನ್ನೊಡನೆ ಪ್ರಿಯಕರವಾಗಿ ಮಾತ ನಾಡುವುದರಿಂದ ನನಗೆ ಬಹಳವಾದ ಆಶ್ಚರ್ಯವನ್ನುಂಟುಮಾಡುತ್ತಿರುವುದು. ಓ ಪೂಜ ನೀಯಳೆ! ಅನುಸೂಯಾದೇವಿಯೆ! ನನಗೆ ಪತಿಯಾದ ಶ್ರೀರಾಮನು ಸನ್ಮಾರ್ಗವನ್ನು ತೊರೆದು, ದುರ್ಮಾರ್ಗದಲ್ಲಿ ಸಂಚರಿಸುತ್ತಿದ್ದರೂ, ಭೇದಬುದ್ಧಿಯನ್ನು ತೊರೆದು ಪೂಜಿಸ ಲ್ಪಡತಕ್ಕವನೆಂಬುದರಲ್ಲಿ ಲೇಶಮಾತ್ರವೂ ಸಂಶಯವಿಲ್ಲವು.‖೧-೩‖ಆದುದರಿಂದ ನಾನಾಗಲಿ,

ಭವೇತ್ ॥ ೩ ॥ ಕಿಂಪುನರ್ಯೋ ಗುಣಶ್ಲಾಘ್ಯ ಸ್ಸಾನುಕ್ರೋಶೋ ಜಿತೇಂದ್ರಿಯಃ ॥ ಸ್ಥಿರಾಽನುರಾಗೋ ಧರ್ಮಾತ್ಮಾ ಮಾತೃವತ್ಪಿತೃವತ್ಪ್ರಿಯಃ ॥ ೪ ॥ ಯಾಂ ವೃತ್ತಿಂ ವರ್ತತೇ ರಾಮಃ ಕೌಸಲ್ಯಾಯಾಂ ಮಹಾಬಲಃ ॥ ತಾಮೇವ ನೃಪನಾರೀಣಾ ಮನ್ಯಾಸಾಮಪಿ ವರ್ತತೇ ॥ ೫ ॥ ಸಕೃದ್ದೃಷ್ಟಾಸ್ವಪಿ ಸ್ತ್ರೀಷು ನೃಪೇಣ ನೃಪವತ್ಸಲಃ ॥ ಮಾತೃವ ದ್ವರ್ತತೇ ವೀರೋ ಮಾನಮುತ್ಸೃಜ್ಯ

ಪುರುಷನು, ಗುಣಶ್ಲಾಘ್ಯಃ - ಸೌಶೀಲ್ಯಾದಿ ಗುಣಗಳಿಂದ ಶ್ಲಾಘಿಸತಕ್ಕವನೋ, ಸಾನುಕ್ರೋಶಃ - ನಿಂದಿತ ವ್ಯಾಪಾರವಿಷಯದಲ್ಲಿ ಜಿಗುಪ್ಸೆಯಿಂದೊಡಗೂಡಿದವನೋ, ಜಿತೇಂದ್ರಿಯಃ - ಜಯಿಸಲ್ಪಟ್ಟ ಇಂದ್ರಿಯವ್ಯಾಪಾರವುಳ್ಳವನೋ, ಸ್ಥಿರಾನುರಾಗಃ - ಚಾಪಲ್ಯವಲ್ಲದ ಅಭಿಲಾಷೆಯುಳ್ಳವನೋ, ಧರ್ಮಾತ್ಮಾ - ಧರ್ಮಿಷ್ಠನೋ, ಮಾತೃವತ್ - ತಾಯಿಯಂತೆಯೂ, ಪಿತೃವತ್ - ತಂದೆಯಂತೆಯೂ, ಪ್ರಿಯಃ-ಪ್ರಜಾರಂಜನದಲ್ಲಿ ಪ್ರೀತಿಯುಳ್ಳವನೋ, ಸಃ-ಅಂತಹ ಪುರುಷನವಿಷಯವಾಗಿ, ಕಿಂಪುನಃ-ಏನು ಹೇಳತಕ್ಕದು. ॥ ೪ ॥ ಮಹಾಬಲಃ - ಬಹಳ ಪರಾಕ್ರಮಿಯಾದ, ರಾಮಃ - ಶ್ರೀರಾಮನು, ಕೌಸಲ್ಯಾಯಾಂ - ಕೌಸಲ್ಯಾದೇವಿಯಲ್ಲಿ, ಯಾಂವೃತ್ತಿಂ - ಯಾವ ನಡತೆಯನ್ನು, ವರ್ತತೇ - ಅನುಸರಿಸಿದ್ದಾನೆಯೋ, ತಾಮೇವ - ಆ ವೃತ್ತಿಯನ್ನೇ, ಅನ್ಯಾಸಾಂ - ಇತರರಾದ, ನೃಪನಾರೀಣಾಮಪಿ - ರಾಜಸ್ತ್ರೀಯರಲ್ಲಿಯೂ, ವರ್ತತೇ - ನಡಿಸುತ್ತಾನೆ. ॥ ೫ ॥ ನೃಪವತ್ಸಲಃ - ರಾಜರಲ್ಲಿ ಭಕ್ತಿಯುಳ್ಳ, ವೀರಃ - ಶೂರನಾದ, ಧರ್ಮವಿತ್ - ಧರ್ಮವೇತ್ತರಾದ ಶ್ರೀರಾಮನು, ನೃಪೇಣ - ಅರಸಿನಿಂದ, ಸಕೃತ್ - ಒಂದಾವರ್ತಿ, ದೃಷ್ಟಾಸ್ವಪಿ - ನೋಡಲ್ಪಟ್ಟವನಾದರೂ, ಸ್ತ್ರೀಷು - ಹೆಂಗಳಲ್ಲಿ, ಮಾನಂ - ಗರ್ವವನ್ನು, ಉತ್ಸೃಜ್ಯ - ಬಿಟ್ಟು, ಮಾತೃವತ್ - ತಾಯಿಯಲ್ಲಿಯಂತೆ, ವರ್ತತೇ - ನಡಿಯುತ್ತಾನೆ. ॥ ೬ ॥ ಏವಂ - ಈಪರಿಯಾಗಿ, ಭಯಾವಹಂ - ಭಯಂಕವಾದ, ವಿಜನಂ -

ಯಾವ ಸ್ತ್ರೀಯೇ ಆಗಲಿ ಗಂಡನಲ್ಲಿನ ಗುಣಾಗುಣ ವಿಚಾರವನ್ನು ಮಾಡಲೇ ಕೂಡದು. ಇದರಮೇಲೆ ಸಕಲ ಸದ್ಗುಣಗಳಿಂದ ಹೊಗಳತಕ್ಕವನೂ, ಹೆಚ್ಚಾದ ಭೂತದಯೆ, ಪಶ್ಚಾತ್ತಾಪ ಇವುಗಳುಳ್ಳನನೂ, ಇಂದ್ರಿಯನಿಗ್ರಹಮಾಡಿರುವವನೂ, ದೃಢವಾದ ಚಿತ್ತವೃತ್ತಿಯುಳ್ಳವನೂ, ಧರ್ಮಾತ್ಮನೂ, ತಾಯಿಯಂತೆ ಪ್ರಿಯಂಕರವಾಗಿ ಸಂಚರಿಸುವವನೂ, ತಂದೆಯಂತೆ ಯಾವಾಗಲೂ ಹಿತವನ್ನುಪದೇಶಿಸುತ್ತಿರುವವನೂ ಆದ ಶ್ರೀರಾಮನು, ನನಗೆ ಪರಮಪೂಜ್ಯನೆಂದು ಹೇಳುವುದರಲ್ಲಿ ಸಂದೇಹವೇನಾದರೂ ಉಂಟೆ? ಎಂದಿಗೂ ಇಲ್ಲ. ನನ್ನ ಪತಿದೇವನಾದ ಶ್ರೀರಾಮನಲ್ಲಿರುವ ಸದ್ಗುಣಗಳು ಇಷ್ಟುಮಾತ್ರವೇ ಅಲ್ಲ. ಆತನು ತನ್ನ ತಾಯಿಯಾದ ಕೌಸಲ್ಯಾದೇವಿಯನ್ನು ಯಾವ ರೀತಿಯಿಂದ, ಯಾವ ಅಭಿಪ್ರಾಯವಿಟ್ಟುಕೊಂಡು ಆದರಿಸುತ್ತಾನೆಯೋ, ಅದೇ ರೀತಿ ಅದೇ ಭಾವನೆಯಿಂದ ಆಕೆಯ ಸವತಿಯರಲ್ಲಿಯೂ ನಡೆದುಕೊಳ್ಳತಕ್ಕವನು.॥೪-೫॥ಇದು ಮಾತ್ರವಲ್ಲದೆ ಆ ಮಹನೀಯನು ತನ್ನತಂದೆಯಾದ ದಶರಥರಾಯನಿಂದ ಒಂದುಸಲವಾದರೂ ನೋಡಲ್ಪಡದಿರುವ ಸ್ತ್ರೀಯರಲ್ಲಿಯೂ ಕೂಡ ತಾಯಿಯಲ್ಲಿಯಂತೆಯೇ ನಡೆದುಕೊಳ್ಳತಕ್ಕವನು. ಅಮ್ಮಾ ಅನಸೂಯಾದೇವಿಯೇ! ಈ ದುರಹಂಕಾರವನ್ನು ತೊರೆದು ಎಲ್ಲಾ ಸ್ತ್ರೀಯರಲ್ಲಿಯೂ ತಾಯಿಯಲ್ಲಿಯಂತೆ ನಡೆದು

ಧರ್ಮವಿತ್ ॥೬॥ ಆಗಚ್ಛಂತ್ಯಾಶ್ಚ ವಿಜನಂ ವನಮೇವಂ ಭಯಾವಹಂ ॥
ಸಮಾಹಿತಂ ಮೇ ಶ್ವಶ್ರ್ವಾಚ ಹೃದಯೇ ತದ್ಧೃತಂ ಮಹತ್ ॥೭॥ ಪಾಣಿ
ಪ್ರದಾನಕಾಲೇಚ ಯತ್ಪುರಾ ತ್ವಗ್ನಿಸನ್ನಿಧೌ ॥ ಅನುಶಿಷ್ಟಾ ಜನನ್ಯಾಸ್ಮಿ ವಾಕ್ಯಂ
ತದಪಿ ಮೇ ಧೃತಂ ॥೮॥ ನವೀಕೃತಂ ತು ತತ್ಸರ್ವಂ ವಾಕ್ಯೈಸ್ತೇ ಧರ್ಮ
ಚಾರಿಣಿ! ॥ ಪತಿಶುಶ್ರೂಷಣಾ ನ್ನಾರ್ಯಾಸ್ತಪೋ ನಾನ್ಯ ದ್ವಿಧೀಯತೇ ॥೯॥
ಸಾವಿತ್ರೀ ಪತಿಶುಶ್ರೂಷಾಂ ಕೃತ್ವಾ ಸ್ವರ್ಗೇ ಮಹೀಯತೇ ॥ ತಥಾವೃತ್ತಿಶ್ಚ

ಜನವರ್ಜಿತವಾದ, ವನಂ - ಅರಣ್ಯವನ್ನು ಕುರಿತು, ಆಗಚ್ಛಂತ್ಯಾಃ - ಬರುತ್ತಿರುವ, ಮೇ - ನನಗೆ, ಶ್ವಶ್ರ್ವಾಚ - ಅತ್ತೆಯಾದ ಕೌಸಲ್ಯಾದೇವಿಯಿಂದಲೂ, ಯತ್ - ಯಾವ ಪಾತಿವ್ರತ್ಯ ಧರ್ಮಾಚರಣವು, ಸಮಾಹಿತಂ - ಉಪದೇಶಮಾಡಲ್ಪಟ್ಟಿತೋ, ಮಹತ್ - ಬಹಳವಾದ, ತತ್ - ಅದನ್ನು, ಹೃದಯೇ - ಮನಸ್ಸಿನಲ್ಲಿ, ಧೃತಂ - ಧರಿಸಲ್ಪಟ್ಟಿದೆ. ॥೭॥ ಪಾಣಿಪ್ರಧಾನಕಾಲೇಚ - ಪಾಣಿಗ್ರಹಣ ಕಾಲದಲ್ಲಿಯೂ, ಅಗ್ನಿಸನ್ನಿಧೌ - ಅಗ್ನಿಯ ಸಾನಿಧ್ಯದಲ್ಲಿ, ಪುರಾ - ಪೂರ್ವದಲ್ಲಿ, ಜನನ್ಯಾ-ತಾಯಿಯಿಂದ, ಯದ್ವಾಕ್ಯಂ - ಯಾವ ಮಾತನ್ನು, ಅನುಶಿಷ್ಟಾ - ಉಪದೇಶಮಾಡಲ್ಪಟ್ಟವಳು ಆಗಿದ್ದೇನೆಯೋ, ತದಪಿ - ಅದೂ, ಮೇ - ನನ್ನ, ಹೃದಯೇ - ಮನಸ್ಸಿನಲ್ಲಿ, ಧೃತಂ - ಧರಿಸಲ್ಪಟ್ಟಿದೆ. ॥೮॥ ಹೇ ಧರ್ಮಚಾರಿಣಿ - ಎಲೌ ಧರ್ಮವನ್ನಾಚರಿಸುವಳೇ, ತೇ - ನಿನ್ನ, ವಾಕ್ಯೈಃ-ಮಾತುಗಳಿಂದ, ತತ್ಸರ್ವಂ - ಆ ಸಮಸ್ತವಾದ ಪಾತಿವ್ರತ್ಯ ಧರ್ಮೋಪದೇಶವು, ನವೀಕೃತಂ - ಹೊಸದಾಗಿ ಮಾಡಲ್ಪಟ್ಟಿತು, ನಾರ್ಯಾಃ - ಹೆಂಗಸರಿಗೆ, ಪತಿಶುಶ್ರೂಷಣಾತ್ - ಪತಿಸೇವೆಗಿಂತಲೂ, ಅನ್ಯತ್ತಪಃ-ಮತ್ತೊಂದು ತಪಸ್ಸು, ನವಿಧೀಯತೇ - ವಿಧಿಸಲ್ಪಡುವದಿಲ್ಲ. ॥೯॥ ಸಾವಿತ್ರೀ - ಸಾವಿತ್ರಿಯು, ಪತಿಶುಶ್ರೂಷಾಂ - ಪತಿಸೇವೆಯನ್ನು, ಕೃತ್ವಾ - ಮಾಡಿ, ಸ್ವರ್ಗೇ - ಸ್ವರ್ಗಲೋಕದಲ್ಲಿ, ಮಹೀ

ಕೊಳ್ಳುವ ಪತಿದೇವನಾದ ಶ್ರೀರಾಮನೊಡನೆ, ನಿರ್ಜನವಾದುದೂ, ಮಹಾ ಭಯಂಕರವಾದುದೂ ಆದ ಈ ಅರಣ್ಯಕ್ಕೆ ಹೊರಟಾಗ, ನಮ್ಮ ಅತ್ತೆಯಾದ ಕೌಸಲ್ಯಾದೇವಿಯು ಹೇಳಿದ ಪತಿವ್ರತಾ ಧರ್ಮಗಳನ್ನು ಮರೆಯದೆ, ಎಲ್ಲ ಕಾಲಗಳಲ್ಲಿಯೂ ಅವುಗಳನ್ನೇ ಸ್ಮರಿಸಿಕೊಳ್ಳುತ್ತಿದ್ದೇನೆ. ಮಾತ್ರವಲ್ಲದೆ, ಹಿಂದೆ ಅಗ್ನಿಸಾಕ್ಷಿಕವಾಗಿ ವಿವಾಹವನ್ನು ಮಾಡಿಕೊಳ್ಳುವ ಸಮಯದಲ್ಲಿ ನಮ್ಮ ತಾಯಿಯು ನನಗೆ ಹೇಳಿದ ಪತಿವ್ರತಾ ಧರ್ಮಗಳನ್ನೂ ಮನಸ್ಸಿನಲ್ಲಿಟ್ಟುಕೊಂಡು ಅದರಂತೆ ಆಚರಿಸಿಕೊಂಡಿದ್ದೇನೆ.॥೬-೮॥ಪತಿವ್ರತಾ ಧರ್ಮವನ್ನೇ ಯಾವಾಗಲೂ ಆಚರಿಸುತ್ತಿರುವ ಎಲೌ ಅನುಸೂಯಾದೇವಿಯೆ! ಈಗ ಆ ಧರ್ಮಗಳೆಲ್ಲವೂ ನಿನ್ನ ಮಾತುಗಳಿಂದ ಹೊಸದಾಗಿ ಮಾಡಲಾದುವು. ಭರ್ತನಿಗೆ ಶುಶ್ರೂಷೆಯನ್ನು ಮಾಡುವುದಕ್ಕಿಂತಲು, ಸ್ತ್ರೀಯರಿಗೆ ಬೇರೆಯಾದ ಧರ್ಮಕಾರ್ಯವಾವುದೂ ಇರುವುದಿಲ್ಲ. ಸಾವಿತ್ರೀದೇವಿಯು ಪತಿಶುಶ್ರೂಷೆಯನ್ನು ಮಹಾ ಭಕ್ತಿಯಿಂದ ಮಾಡಿ, ಅದರಿಂದ ದೊರಕಿದ ಪುಣ್ಯದಿಂದ ಈಗಲೂ ಸ್ವರ್ಗಲೋಕದಲ್ಲಿ ಇಂದಿಗೂ ಹೊಗಳಲ್ಪಟ್ಟು ಸುಖವನ್ನನುಭವಿಸುತ್ತಿದ್ದಾಳೆ. ಅಂತೆಯೇ ನೀನೂ ಸಹ ಪತಿಶುಶ್ರೂಷೆಯನ್ನು ಮಾಡಿ ಅದರಲ್ಲಿನ ವಿಶ್ವಾಸದಿಂದಲೇ, ಅರಣ್ಯವಾಸಿನಿಯಾಗಿ ಮಹಾಮಹಿಮಾನ್ವಿತಳಾಗಿರುವೆ. ಇಷ್ಟೆಯಲ್ಲದೆ

ಯಾತಾ ತ್ವಂ ಪತಿಶುಶ್ರೂಷಯಾ ದಿವಂ ॥ ೧೦ ॥ ವರಿಷ್ಠಾ ಸರ್ವನಾರೀಣಾ ಮೇಷಾಚ ದಿವಿ ದೇವತಾ ॥ ರೋಹಿಣೀ ನ ವಿನಾ ಚಂದ್ರಂ ಮುಹೂರ್ತಮಪಿ ದೃಶ್ಯತೇ ॥ ೧೧ ॥ ಏವಂ ವಿಧಾಶ್ಚ ಪ್ರವರಾ ಸ್ತ್ರಿಯೋ ಭರ್ತೃ ದೃಢವ್ರತಾಃ ॥ ದೇವಲೋಕೇ ಮಹೀಯಂತೇ ಪುಣ್ಯೇನ ಸ್ವೇನ ಕರ್ಮಣಾ ॥ ೧೨ ॥ ತತೋ ನಸೂಯಾ ಸಂಹೃಷ್ಟಾ ಶ್ರುತ್ವೋಕ್ತಂ ಸೀತಯಾ ವಚಃ ॥ ಶಿರಸ್ಯಾಘ್ರಾಯ ಚೋವಾಚ ಮೈಥಿಲೀಂ ಹರ್ಷಯಂತ್ಯುತ ॥ ೧೩ ॥ ನಿಯಮೈ ರ್ವಿವಿಧೈ ರಾಪ್ತಂ ತಪೋಹಿ ಮಹದಸ್ತಿ ಮೇ ॥ ತತ್ಸಂಶ್ರಿತ್ಯ ಬಲಂ ಸೀತೇ! ಛಂದಯೇ

ಯತೇ - ಮಹತ್ವವನ್ನು ಹೊಂದಿ ಮಹಾತ್ಮಳೆನಿಸಿದ್ದಾಳೆ, ತಥಾವೃತ್ತಿಶ್ಚ - ಅಂತಹ ನಡತೆಯೇಉಳ್ಳ, ತ್ವಂ - ನೀನು, ಪತಿಶುಶ್ರೂಷಯಾ - ಪತಿಸೇವೆಯಿಂದ, ದಿವಂ - ಸ್ವರ್ಗಲೋಕವನ್ನು, ಯಾತಾ - ಹೊಂದುವೆ. ॥ ೧೦ ॥ ಸರ್ವನಾರೀಣಾಂ - ಹೆಂಗಸರೆಲ್ಲರಲ್ಲಿಯೂ, ಏಷಾ - ಈರೀತಿಯಾದ ಆಚಾರಗಳುಳ್ಳ, ದೇವತಾ - ದೇವತಾಸ್ವರೂಪಳಾದ, ರೋಹಿಣೀ - ರೋಹಿಣೀದೇವಿಯು, ಮುಹೂರ್ತ ಮಪಿ - ಒಂದು ಮುಹೂರ್ತಕಾಲವಾದರೂ, ಚಂದ್ರಂವಿನಾ - ಚಂದ್ರನನ್ನು ಬಿಟ್ಟು, ದಿವಿ - ಅಂತ ರಿಕ್ಷದಲ್ಲಿ, ನದೃಶ್ಯತೇ - ಕಾಣುವುದಿಲ್ಲ. ॥ ೧೧ ॥ ಏವಂವಿಧಾಃ - ಈಪರಿಯಾಗಿರುವ, ಪ್ರವರಾಃ - ಶ್ರೇಷ್ಠರಾದ, ಸ್ತ್ರಿಯಃ - ಹೆಂಗಸರು, ಭರ್ತೃದೃಢವ್ರತಾಃ - ತಮ್ಮ ಗಂಡಂದಿರಲ್ಲಿ ನಿಶ್ಚಂಚಲವಾದ ನಿಯಮವುಳ್ಳವರಾಗಿ, ಸ್ವೇನ - ಸ್ವಕೀಯವಾದ, ಪುಣ್ಯೇನಕರ್ಮಣಾ - ಪುಣ್ಯಕರ್ಮದಿಂದ, ದೇವ ಲೋಕೇ - ಸ್ವರ್ಗಲೋಕದಲ್ಲಿ, ಮಹೀಯಂತೇ - ಮಹಾ ಮಹಿಮರೆನಿಸುತ್ತಾರೆ. ॥ ೧೨ ॥ ತತಃ - ಬಳಿಕ, ಸೀತಯಾ - ಸೀತಾದೇವಿಯಿಂದ, ಉಕ್ತಂ - ಹೇಳಲ್ಪಟ್ಟ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಸಂಹೃಷ್ಟಾ - ಸಂತೋಷಗೊಂಡ, ಅನಸೂಯಾ - ಅನಸೂಯಾದೇವಿಯು, ಮೈಥಿಲೀಂ - ಸೀತಾದೇವಿಯನ್ನು, ಹರ್ಷಯಂತೀ - ಸಂತೋಷಗೊಳಿಸಿ, ಶಿರಸಿ - ಮಂಡೆಯಲ್ಲಿಯೂ, ಆಘ್ರಾಯ - ಆಘ್ರಾಣಿಸಿ, ಉವಾಚ - ಹೇಳಿದಳು. ॥ ೧೩ ॥ ಹೇ ಶುಚಿಸ್ಮಿತೇ - ಎಲೌ ಮನೋಹರವಾದ ಮುಗುಳು ನಗೆಯುಳ್ಳವಳೆ, ವಿವಿಧೈಃ - ನಾನಾ ಬಗೆಗಳಾದ, ನಿಯಮೈಃ - ನಿಯಮಗಳಿಂದ, ಆಪ್ತಂ -

ನೀನು ಸ್ವರ್ಗದಲ್ಲಿಯೂ ಹೊಗಳಲ್ಪಡುತ್ತೀಯೆ ; ಲೋಕದಲ್ಲಿನ ಸಮಸ್ತ ಸ್ತ್ರೀಯ ರಲ್ಲಿಯೂ ಕೀರ್ತಿಸಲಾಗುವೆ. ರೋಹಿಣೀದೇವಿಯು ಮುಹೂರ್ತಮಾತ್ರವಾದರೂ ಪತಿ ಯನ್ನಗಲಲಾರದೆ ಎಂತು ಹಿಂಬಾಲಿಸಿಯೇ ಸಂಚರಿಸುವಳೋ, ಅಂತೆಯೇ ಮಹಾಪೂಜ್ಯಳಾದ ನೀನೂ ಸಹ ಪತಿಯನ್ನಗಲದೆ ಸಂಚರಿಸುತ್ತಿದ್ದೀಯೆ.॥೯-೧೧॥ ಈ ರೀತಿಯಾಗಿಯೆ ಅನೇಕ ಮಂದಿ ಸ್ತ್ರೀಯರು ಪತಿಯಲ್ಲಿ ದೃಢವಾದ ಪ್ರೇಮೆಯುಳ್ಳವರಾಗಿಯೂ, ಮಹಾ ಭಕ್ತಿ ಯಿಂದ ಶುಶ್ರೂಷೆ ಮಾಡುವವರೂ ಆಗಿ ಪುಣ್ಯವಶದಿಂದ ಲಭಿಸುವ ದೇವಲೋಕದಲ್ಲಿ ಪೂಜ್ಯ ರೆನಿಸಿದ್ದಾರೆ" ಎಂದು ನುಡಿದಳು. ಈ ರೀತಿ ಹೇಳಿದ ಸೀತಾದೇವಿಯ ಮಾತುಗಳನ್ನುಕೇಳಿ, ಮಹಾ ಪತಿವ್ರತಾಶಿರೋಮಣಿಯಾದ ಅನುಸೂಯಾದೇವಿಯು ಮಹದಾನಂದಭರಿತಳಾಗಿ, ಆಕೆಯನ್ನು ಬಹುವಾಗಿ ಸಂತೋಷಗೊಳಿಸುತ್ತ ಶಿರವನ್ನಾಘ್ರಾಣಿಸಿ ಆಕೆಯನ್ನು ಕುರಿತು, "ಅಮ್ಮಾ ಸೀತಾದೇವೀ! ನಾನಾವಿಧಗಳಾದ ನಿಯಮಗಳಿಂದ ನನಗೆ ಮಹತ್ತರವಾದ

ತ್ವಾಂ ಶುಚಿಸ್ಮಿತೇ! ॥ ೧೪ ॥ ಉಪಪನ್ನಂ ಮನೋಜ್ಞಂಚ ವಚನಂ ತವ
ಮೈಥಿಲಿ! ॥ ಪ್ರೀತಾಽಸ್ಮ್ಯುಚಿತಂ ಕಿಂ ತೇ ಕರವಾಣಿ ಬ್ರವೀಹಿ ಮೇ ॥೧೫॥
ತಸ್ಯಾಸ್ತದ್ವಚನಂ ಶ್ರುತ್ವಾ ವಿಸ್ಮಿತಾ ಮಂದವಿಸ್ಮಯಾ ॥ ಕೃತ ಮಿತ್ಯಬ್ರವೀತ್
ಸೀತಾ ತಪೋಬಲ ಸಮನ್ವಿತಾಂ ॥ ೧೬ ॥ ಸಾ ತ್ವೇವ ಮುಕ್ತಾ ಧರ್ಮಜ್ಞಾ
ತಯಾ ಪ್ರೀತತರಾಽಭವತ್ ॥ ಸಫಲಂಚ ಪ್ರಹರ್ಷಂ ತೇ ಹಂತ ಸೀತೇ! ಕರೋ
ಮ್ಯಹಂ ॥ ೧೭ ॥ ಇದಂ ದಿವ್ಯಂ ವರಂ ಮಾಲ್ಯಂ ವಸ್ತ್ರ ಮಾಭರಣಾನಿಚ ॥

ಹೊಂದಲ್ಪಟ್ಟ, ಮಹತ್ - ಬಹಳವಾದ, ತಪಃ - ತಪಸ್ಸು, ಮೇ - ನನಗೆ, ಅಸ್ತಿ - ಇದೆ, ತತ್ - ಆ ತಪೋರೂಪವಾದ, ಬಲಂ - ಬಲವನ್ನು, ಸಂಶ್ರುತ್ಯ - ಆಶ್ರಯಿಸಿ, ಹೇ ಸೀತೇ-ಎಲೌ ಸೀತಾದೇವಿಯೆ, ತ್ವಾಂ - ನಿನ್ನನ್ನು ಕುರಿತು, ಛಂದಯೇ - ವರಬೇಡಿಕೋ ಎಂದು ಹೇಳುತ್ತೇನೆ. ॥ ೧೪ ॥ ಹೇ ವೈಥಿಲೀ - ಎಲೌ ಸೀತಾದೇವಿಯೇ, ಉಪಪನ್ನಂ - ಉಪಪತ್ತಿಯಿಂದ ಕೂಡಿರುವ, ಮನೋಜ್ಞಂ - ಇಂಪಾಗಿರುವ, ತವ - ನಿನ್ನ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಪ್ರೀತಾ - ಸಂತೋಷಗೊಂಡ ವಳು, ಅಸ್ಮಿ - ಆಗಿದ್ದೇನೆ, ತೇ - ನಿನಗೆ, ಉಚಿತಂ - ಯೋಗ್ಯವಾದ, ಕಿಂ-ಯಾವುದನ್ನು, ಕರವಾಣಿ-ಮಾಡಲಿ, ಮೇ - ನನಗೆ, ಬ್ರವೀಹಿ - ಹೇಳು. ॥ ೧೫ ॥ ಸೀತಾ - ಸೀತಾದೇವಿಯು, ತಸ್ಯಾಃ - ಆ ಅನಸೂಯಾದೇವಿಯ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ವಿಸ್ಮಿತಾ - ಆಶ್ಚರ್ಯ ಗೊಂಡು, ಮಂದವಿಸ್ಮಯಾ - ಕಿರುನಗೆಯುಳ್ಳವಳಾಗಿ, ತಪೋಬಲಸಮನ್ವಿತಾಂ - ತಪೋಬಲದಿಂದ ಕೂಡಿರುವ ಅನಸೂಯಾದೇವಿಯನ್ನು ಕುರಿತು, ಕೃತಮಿತಿ - ಮಾಡಲ್ಪಟ್ಟಿತೆಂದು, ಅಬ್ರವೀತ್ - ನುಡಿದಳು. ॥ ೧೬ ॥ ಧರ್ಮಜ್ಞಾ - ಧರ್ಮವನ್ನು ತಿಳಿದವಳಾದ, ಸಾತು - ಆ ಅನಸೂಯಾದೇವಿ ಯಾದರೆ, ತಯಾ - ಆ ಸೀತಾದೇವಿಯಿಂದ, ಏವಂ - ಈಪರಿಯಾಗಿ, ಉಕ್ತಾ - ಹೇಳಲ್ಪಟ್ಟವಳಾಗಿ, ಪ್ರೀತತರಾ - ಅತ್ಯಂತ ವಿಶ್ವಾಸಗೊಂಡವಳು, ಅಭವತ್ - ಆದಳು, ಹೇ ಸೀತೇ - ಎಲೌ ಸೀತಾ ದೇವಿಯೇ, ತೇ - ನಿನಗೆ, ಪ್ರಹರ್ಷಂ - ಸಂತೋಷವನ್ನು, ಸಫಲಂಚ - ಸಪ್ರಯೋಜನವನ್ನಾಗಿ, ಅಹಂ - ನಾನು, ಕರೋಮಿ - ಮಾಡುತ್ತೇನೆ, ಹಂತ - ಆಶ್ಚರ್ಯವು. ॥ ೧೭ ॥ ಹೇ ವೈದೇಹಿ -

---

ತಪೋಮಹಿಮೆಯುಂಟು. ನಾನೀರೀತಿ ತಪೋಬಲವನ್ನಾಶ್ರಯಿಸಿರುವುದರಿಂದ ನಿನಗೆ ಬೇಕಾದ ವರಗಳನ್ನು ಬೇಡಿಕೋ; ಕೊಡುತ್ತೇನೆ. ಆದುದರಿಂದಲೌ, ಕಿರುನಗೆಯುಳ್ಳ ಸೀತಾದೇವಿಯೆ! ನೀನಾಡಿದ ಮಾತುಗಳು ಬಹಳ ಉಚಿತವಾಗಿರುವುವು. ನಿನ್ನ ಆ ನುಡಿಗಳನ್ನು ಕೇಳಿ ಬಹಳ ವಾಗಿ ಸಂತೋಷಿಸಿದೆನು. ಆದುದರಿಂದ ನಿನಗಾವ ಪ್ರಿಯವನ್ನುಂಟುಮಾಡಬೇಕೋ ಆದನ್ನು ಹೇಳುವವಳಾಗು" ಎಂದಳು. ಈ ರೀತಿ ಹೇಳುತ್ತಿರುವ ಆ ಅನುಸೂಯಾದೇವಿಯ ಮಾತು ಗಳನ್ನು ಕೇಳಿದ ಆ ಸೀತಾದೇವಿಯು ನಸುನಗುತ್ತ, ತಪೋಬಲ ಸಮನ್ವಿತಳಾದ ಆ ದೇವಿ ಯನ್ನು ಕುರಿತು, "ಓ ಜನನಿಯೆ! ನಿನ್ನ ಮಾತುಗಳಿಂದಲೇ ಸಂತೋಷವಾಗುತ್ತಿರುವುದು. ಇಷ್ಟು ಮಾತು ಹೇಳಿದುದೇ ಸಾಕು. ಇನ್ನೇನೂ ಬೇಕಾಗಿರುವುದಿಲ್ಲ; ಇದಕ್ಕಿಂತಲೂ ಪ್ರಿಯ ವಾದುದಿನ್ನೇನುತಾನೆ ಬೇಕಾಗುತ್ತದೆ" ಎಂದು ನುಡಿದಳು. ॥೧೨-೧೭॥ ಆಗ ಸಕಲ ಧರ್ಮ ಗಳನ್ನೂ ಚೆನ್ನಾಗಿ ಅರಿತಿರುವ ಆ ಅನುಸೂಯಾದೇವಿಯು ಪರಮಾನಂದವನ್ನು ಹೊಂದಿ,

ಅಂಗರಾಗಂಚ ವೈದೇಹಿ! ಮಹಾರ್ಹಂ ಚಾನುಲೇಪನಂ ॥ ೧೮ ॥ ಮಯಾ ದತ್ತಮಿದಂ ಸೀತೇ! ತವಗಾತ್ರಾಣಿ ಶೋಭಯೇತ್ ॥ ಅನುರೂಪ ಮಸಂಕ್ಲಿಷ್ಟಂ ನಿತ್ಯಮೇವ ಭವಿಷ್ಯತಿ ॥ ೧೯ ॥ ಅಂಗರಾಗೇಣ ದಿವ್ಯೇನ ಲಿಪ್ತಾಂಗೀ ಜನಕಾತ್ಮಜೇ! ॥ ಶೋಭಯಿಷ್ಯಸಿ ಭರ್ತಾರಂ ಯಥಾ ಶ್ರೀ ರ್ವಿಷ್ಣು ಮವ್ಯಯಂ ॥೨೦॥ ಸಾ ವಸ್ತ್ರ ಮಂಗರಾಗಂಚ ಭೂಷಣಾನಿ ಸ್ರಜ ಸ್ತಥಾ ॥ ಮೈಥಿಲೀ ಪ್ರತಿಜಗ್ರಾಹ ಪ್ರೀತಿದಾನ ಮನುತ್ತಮಂ ॥ ೨೧ ॥ ಪ್ರತಿಗೃಹ್ಯಚ ತತ್ಸೀತಾ ಪ್ರೀತಿದಾನಂ

ಎಲೌ ಸೀತಾದೇವಿಯೇ ! ವರಂ - ಶ್ರೇಷ್ಠವಾದ, ಇದಂಮಾಲ್ಯಂ - ಈ ಪುಷ್ಪಮಾಲಿಕೆಯು, ದಿವ್ಯಂ - ದೇವತಾಸಂಬಂಧವಾದುದು, ಇದಂವಸ್ತ್ರಂಚ - ಈ ವಸ್ತ್ರವನ್ನು, ಆಭರಣಾನಿಚ - ಒಡಿವೆಗಳನ್ನೂ, ಅಂಗರಾಗಂಚ - ಅಂಗಲೇಪನವೂ, ಅನುಲೇಪನಂಚ - ಕಸ್ತೂರಿ, ಕರ್ಪೂರ, ಕುಂಕುಮಾದಿ ಅಂಗಲೇಪನ ದ್ರವ್ಯವು, ಮಹಾರ್ಹಂ - ಅಮೂಲ್ಯವಾದುದು, ಹೇ ಸೀತೇ - ಎಲೌ ಸೀತಾದೇವಿಯೇ, ಮಯಾ-ನನ್ನಿಂದ, ದತ್ತಂ - ಕೊಡಲ್ಪಟ್ಟ, ಇದಂ - ಈ ವಸ್ತುಜಾಲವು, ತವ - ನಿನ್ನ, ಗಾತ್ರಾಣಿ - ಅವಯವಗಳನ್ನು, ಶೋಭಯೇತ್ - ಕಂಗೊಳಿಸುವದು, ಅನುರೂಪಂ - ನಿನಗೆ ಯೋಗ್ಯವಾಗಿ, ನಿತ್ಯಮೇವ-ನಿರಂತರವು, ಅಸಂಕ್ಲಿಷ್ಟಂ - ಅಬಾಧಿತವಾದ ಶೋಭೆಯುಳ್ಳದು, ಭವಿಷ್ಯತಿ - ಆಗುವದು, ಹೇ ಜನಕಾತ್ಮಜೇ - ಎಲೌ ಸೀತಾದೇವಿಯೇ, ತ್ವಂ - ನೀನು, ದಿವ್ಯೇನ - ದೇವತಾಸಂಬಂಧವಾದ, ಅಂಗರಾಗೇಣ - ಅಂಗಲೇಪನದಿಂದ, ಲಿಪ್ತಾಂಗೀ - ಲೇಪನಮಾಡಲ್ಪಟ್ಟ ಶರೀರವುಳ್ಳವಳಾಗಿ, ಅವ್ಯಯಂ - ನಾಶರಹಿತನಾದ, ವಿಷ್ಣುಂ - ಶ್ರೀಮಹಾವಿಷ್ಣುವನ್ನು, ಶ್ರೀರ್ಯಥಾ-ಲಕ್ಷ್ಮೀದೇವಿಯಂತೆ, ಭರ್ತಾರಂ-ಗಂಡನಾದ ಶ್ರೀರಾಮನನ್ನು, ಶೋಭಯಿಷ್ಯಸಿ - ಕಂಗೊಳಿಸುವಂತೆಮಾಡುವೆ. ॥೨೦॥ ಸಾಮೈಥಿಲೀ-ಆ ಸೀತಾದೇವಿಯು ಅನುತ್ತಮಂ - ಸರ್ವೋತ್ತಮವಾದ, ಪ್ರೀತಿದಾನಂ-ವಿಶ್ವಾಸದಿಂದ ದತ್ತವಾದ, ಅಂಗರಾಗಂ - ಅಂಗಲೇಪನವನ್ನು, ವಸ್ತ್ರಂ - ಸೀರೆಯನ್ನು, ಭೂಷಣಾನಿ - ಒಡಿವೆಗಳನ್ನೂ, ಸ್ರಜಃ-ಮಾಲ್ಯವನ್ನೂ, ಪ್ರತಿಜಗ್ರಾಹ - ಸ್ವೀಕರಿಸಿದಳು. ॥ ೧೮-೨೧ ॥ ಯಶಸ್ವಿನೀ - ಕೀರ್ತಿವಂತಳಾದ,

“ ಮಗಳೆ ! ಸೀತಾದೇವಿಯೆ ; ನಿನ್ನ ಸಂತೋಷವನ್ನು ಸಫಲವನ್ನಾಗಿ ಮಾಡುವವಳಾಗಿದ್ದೇನೆ. ಓ ದೇವೀ ! ದಿವ್ಯವಾದುದೂ, ಶ್ರೇಷ್ಠವಾದುದೂ ಆದ ಹೂಮಾಲಿಕೆಗಳನ್ನೂ, ವಸ್ತ್ರಗಳನ್ನೂ, ಆಭರಣಗಳನ್ನೂ, ಬಹು ಬೆಲೆಯುಳ್ಳವೂ, ಶರೀರದಲ್ಲಿ ಲೇಪಿಸಿಕೊಳ್ಳಲು ತಕ್ಕುದೂ ಆದ ಅಂಗರಾಗವನ್ನೂ ನಿನಗಾಗಿ ಕೊಡುತ್ತೇನೆ ; ಇವುಗಳನ್ನು ತೆಗೆದುಕೊಳ್ಳುವವಳಾಗು. ಓ ಸೀತೆ! ನನ್ನಿಂದ ಕೊಡಲಾದ ಈ ಆಭರಣಗಳೇ ಮೊದಲಾದವೆಲ್ಲವೂ ನಿನ್ನ ಅವಯವಗಳಿಗೆ ಅಧಿಕವಾದ ಕಾಂತಿಯನ್ನು ಕೊಡುವುದು ಮಾತ್ರವಲ್ಲದೆ, ಇವು ಯಾವಾಗಲೂ ನಿನ್ನ ಶರೀರಕ್ಕೆ ತಕ್ಕುವಾಗಿಯೇ ಇರುತ್ತವೆ; ಇದೂ ಅಲ್ಲದೆ ನಿನ್ನನ್ನಗಲಿರುವುದೇ ಇಲ್ಲವು. ಆದುದರಿಂದೆಲೌ ಜನಕರಾಜ ಕುಮಾರಿಯಾದ ಸೀತಾದೇವಿಯೆ ! ಸರ್ವೋತ್ತಮವಾದ ಈ ಲೇಪನ ದ್ರವ್ಯವನ್ನು ನಿನ್ನ ಶರೀರಕ್ಕೆ ಲೇಪಿಸಿಕೊಂಡು, “ ಲಕ್ಷ್ಮೀದೇವಿಯು ಶ್ರೀ ಮಹಾ ವಿಷ್ಣುವಿನ ಅವಯವಗಳಿಗೆ ಕಾಂತಿಯನ್ನೂ, ಮನಸ್ಸಿಗೆ ಸಂತೋಷವನ್ನೂ ಉಂಟುಮಾಡುವಂತೆ” ನಿನ್ನೊಡನೆ ನಿನ್ನ ಪತಿದೇವನಾದ ಶ್ರೀರಾಮಮೂರ್ತಿಯ



अनसूया-प्रीतिदान

A 7515—Lakshmi Art, Bombay, 8.

ಯಶಸ್ವಿನೀ ॥ ಕ್ಲಿಷ್ಟಾಂಜಲಿಪುಟಾ ತತ್ರ ಸಮುಪಾಸ್ತ ತಪೋಧನಾತ್ ॥ ೨೨ ॥
ತಥಾ ಸೀತಾ ಮುಪಾಸೀನಾ ಮನುಸೂಯಾ ದೃಢವ್ರತಾ ॥ ವಚನಂ ಪ್ರಷ್ಟು
ಮಾರೇಭೇ ಕಾಂಚಿ ತ್ಪ್ರಿಯಕಥಾ ಮನು ॥ ೨೩ ॥ ಸ್ವಯಂ ವರೇ ಕಿಲ
ಪ್ರಾಪ್ತಾ ತ್ವಮನೇನ ಯಶಸ್ವಿನಾ ॥ ರಾಘವೇಣೇತಿ ಮೇ ಸೀತೇ! ಕಥಾ ಶ್ರುತಿ
ಮುಪಾಗತಾ ॥ ೨೪ ॥ ತಾಂ ಕಥಾಂ ಶ್ರೋತು ಮಿಚ್ಛಾಮಿ ವಿಸ್ತರೇಣ ಚ
ಮೈಥಿಲಿ ! ॥ ಯಥಾನುಭೂತಂ ಕಾರ್ತ್ಸ್ನ್ಯೇನ ತನ್ಮೇ ತ್ವಂ ವಕ್ತು ಮರ್ಹಸಿ॥

ಸೀತಾ - ಸೀತಾದೇವಿಯು, ಪ್ರೀತಿದಾನಂ - ವಿಶ್ವಾಸದಿಂದಕೊಡಲ್ಪಟ್ಟ ದಾನರೂಪವಾದ, ತತ್ - ಆ ಅಂಗಲೇಪನಾದಿ ದ್ರವ್ಯಗಳನ್ನು, ಪ್ರತಿಗೃಹ್ಯ - ಪರಿಗ್ರಹಿಸಿ, ಕ್ಲಿಷ್ಟಾಂಜಲಿಪುಟಾಚ - ಕೈಮುಗಿದು, ತತ್ರ - ಅಲ್ಲಿಯೇ, ತಪೋಧನಾಂ - ತಪವೇ ಧನವಾಗುಳ್ಳ ಅನಸೂಯಾದೇವಿಯನ್ನು, ಸಮುಪಾಸ್ತ - ಸಮಿಪಾಪದಲ್ಲಿ ಸೇವೆಮಾಡಿಕೊಂಡಿದ್ದಳು. ॥ ೨೨ ॥ ತಥಾ - ಹಾಗೆಯೇ, ಉಪಾಆಸೀನಾಂ-ಕುಳಿತು ಕೊಂಡಿರುವ, ಸೀತಾಂ ಸೀತಾದೇವಿಯನ್ನು ಕುರಿತು, ದೃಢವ್ರತಾ - ಸ್ಥಿರನಿಯಮವುಳ್ಳ, ಅನಸೂಯಾ- ಅನಸೂಯಾದೇವಿಯು, ಕಾಂಚಿತ್ - ಒಂದಾನೊಂದಾದ, ಪ್ರಿಯಕಥಾಂ - ಇಷ್ಟವಾದ ಕಥೆಯನ್ನನು ಸರಿಸಿ, ವಚನಂ - ಮಾತನ್ನು, ಪ್ರಷ್ಟುಂ - ಪ್ರಶ್ನೆಮಾಡಲು, ಆರೇಭೇ - ಉಪಕ್ರಮಿಸಿದಳು. ॥ ೨೩ ॥ ಹೇ ಸೀತೇ - ಎಲೌ ಸೀತಾದೇವಿಯೇ, ತ್ವಂ - ನೀನು, ಯಶಸ್ವಿನಾ - ಕೀರ್ತಿವಂತನಾದ, ಅನೇನ ರಾಘವೇಣ - ಈ ಶ್ರೀರಾಮನಿಂದ, ಸ್ವಯಂವರೇ - ಸ್ವಯಂವರದಲ್ಲಿ, ಪ್ರಾಪ್ತಾ - ಹೊಂದಲ್ಪಟ್ಟ ವಳು, ಇತಿ - ಇಂತೆಂದು, ಕಥಾ - ಪ್ರಸ್ತಾಪವು, ಮೇ - ನನ್ನ, ಶ್ರುತಿಂ - ಶ್ರೋತ್ರವನ್ನು, ಉಪಾ ಗತಾ - ಹೊಂದಿತು. ॥ ೨೪ ॥ ಹೇ ಮೈಥಿಲೀ-ಎಲೌ ಸೀತಾದೇವಿಯೆ, ತಾಂಕಥಾಂ-ಆ ವೃತ್ತಾಂತ ವನ್ನು, ವಿಸ್ತರೇಣ - ವಿಸ್ತಾರವಾಗಿ, ಶ್ರೋತುಂ - ಕೇಳಲು, ಇಚ್ಛಾಮಿ - ಅಪೇಕ್ಷಿಸುತ್ತೇನೆ, ಅನುಭೂತಂಯಥಾ - ಹೇಗೆ ನಡೆಯಿತೋ ಹಾಗೆ, ಕಾರ್ತ್ಸ್ನ್ಯೇನ - ಸಂಪೂರ್ಣವಾಗಿ, ತತ್-ಅದನ್ನು

ಶರೀರಕ್ಕೆ, ಕಾಂತಿಯನ್ನೂ, ಮನಕಾನಂದವನ್ನೂ ಉಂಟುಮಾಡುವವಳಾಗು" ಎಂದು ಹೇಳಿದಳು. ಆಗಲಾ ಸೀತಾದೇವಿಯು ಅನುಸೂಯಾದೇವಿಯಿಂದ ಕೊಡಲಾದ ಪ್ರೀತಿ ದಾನರೂಪವಾದುದೂ, ಮಹಾ ಶ್ರೇಷ್ಠನಾದುದೂ ಆದ ವಸ್ತ್ರಗಳನ್ನೂ, ಲೇಪನ ದ್ರವ್ಯ ವನ್ನೂ, ಆಭರಣಗಳನ್ನೂ, ಪೂಮಾಲಿಕೆಗಳನ್ನೂ ಮಹಾ ವಿನಯದಿಂದ ಸ್ವೀಕರಿಸಿದವಳಾದಳು. ಈ ರೀತಿ ಕೀರ್ತಿವಂತಳಾದ ಆ ಸೀತಾದೇವಿಯು ಆ ಅನುಸೂಯಾದೇವಿಯಿಂದ ಪ್ರೀತಿ ಪೂರ್ವಕವಾಗಿ ಕೊಡಲಾದ ಪುಷ್ಪಮಾಲಿಕೆಗಳೇ ಮೊದಲಾದುವನ್ನು ತೆಗೆದುಕೊಂಡು ಭಕ್ತಿ ಶ್ರದ್ಧಾದಿಗಳೊಡಗೂಡಿದವಳಾಗಿ, ಕೈಮುಗಿದು, ತಪೋಧನಳಾದ ಆ ಅನುಸೂಯೆಯ ಬಳಿ ಕುಳಿತುಕೊಂಡಿದ್ದಳು. ॥೧೮-೨೩॥ ಆಗಲಾ ಅನುಸೂಯಾದೇವಿಯು ಆ ಜಾನಕಿಯನ್ನು ಕುರಿತು ಒಂದಾನೊಂದು ಕಥೆಯನ್ನುಕೇಳಲಪೇಕ್ಷಿಸಿ, "ವತ್ಸೆ; ಸೀತೆ! ಮಹಾಕೀರ್ತಿವಂತನೂ, ರಘುಕುಲದಲ್ಲಿ ಜನಿಸಿದವನೂ ಆದ ಶ್ರೀರಾಮನು ಸ್ವಯಂವರದಲ್ಲಿ ನಿನ್ನನ್ನು ಮದುವೆ ಯಾದನೆಂದು ನಾನು ಜನಗಳಿಂದ ಕೇಳಿದ್ದೇನೆ. ಆ ಕಥೆಯನ್ನು ಸಂಪೂರ್ಣವಾಗಿ ನಿನ್ನಿಂದ ಕೇಳಬೇಕೆಂಬ ಕುತೂಹಲವುಂಟಾಗಿರುವುದು. ಆದುದರಿಂದಲೌ ಜನಕರಾಜ ಕುವರಿಯೆ !

|| ೨೫ || ಏವಮುಕ್ತಾತು ಸಾ ಸೀತಾ ತಾಂ ತತೋ ಧರ್ಮಚಾರಿಣೀಂ ||
ಶ್ರೂಯತಾಮಿತಿ ಚೋಕ್ತ್ವಾನ್ವೈ ಕಥಯಾಮಾಸ ತಾಂ ಕಥಾಂ || ೨೬ ||
ಮಿಥಿಲಾಧಿಪತಿ ರ್ವೀರೋ ಜನಕೋ ನಾಮ ಧರ್ಮವಿತ್ || ಕ್ಷತ್ರಧರ್ಮೇ ಹ್ಯಭಿ
ರತೋ ನ್ಯಾಯತ ಶ್ಶಾಸ್ತಿ ಮೇದಿನೀಮ್ || ೨೭ || ತಸ್ಯ ಲಾಂಗಲ ಹಸ್ತಸ್ಯ
ಕರ್ಷತಃ ಕ್ಷೇತ್ರಮಂಡಲಂ || ಅಹಂ ಕಿಲೋತ್ಥಿತಾ ಭಿತ್ವಾ ಜಗತೀಂ ನೃಪತೇ

ಮೇ - ನನಗೆ, ತ್ವಂ - ನೀನು, ವಕ್ತುಂ - ಹೇಳಲು, ಅರ್ಹಸಿ - ಯೋಗ್ಯಳಾಗು. || ೨೫ || ಏವಂ - ಈಪರಿಯಾಗಿ, ಉಕ್ತಾ - ಹೇಳಲ್ಪಟ್ಟ, ಸಾಸೀತಾತು - ಆ ಸೀತಾದೇವಿಯಾದರೆ, ತತಃ - ಬಳಿಕ, ಧರ್ಮಚಾರಿಣೀಂ - ಧರ್ಮಿಷ್ಠಳಾದ, ತಾಂ-ಆ ಅನಸೂಯಾದೇವಿಯನ್ನು ಕುರಿತು, ಶ್ರೂಯತಾಮಿತಿ- ಕೇಳಲ್ಪಡಲೆಂದು, ಉಕ್ತ್ವಾ - ಹೇಳಿ, ತಾಂಕಥಾಂ - ಆ ಕಥೆಯನ್ನು, ಕಥಯಾಮಾಸ - ಹೇಳಿದಳು. || ೨೬ || ಮಿಥಿಲಾಧಿಪತಿಃ - ಮಿಥಿಲಾಪಟ್ಟಣಕ್ಕೆ ಅಧಿಪತಿಯಾದ, ವೀರಃ - ಶೂರನಾದ, ಜನಕೋ ನಾಮ - ಜನಕರಾಯನೆಂದು ಪ್ರಸಿದ್ಧನಾದ, ಧರ್ಮವಿತ್ - ಧರ್ಮವನ್ನರಿತಿರುವ ಅರಸು, ಕ್ಷತ್ರ ಧರ್ಮೇ - ರಾಜಧರ್ಮದಲ್ಲಿ, ಅಭಿರತಃ - ಆಸಕ್ತನಾಗಿ, ನ್ಯಾಯತಃ-ನೀತಿಶಾಸ್ತ್ರೋಕ್ತಮಾರ್ಗದಿಂದ, ಮೇದಿನೀಂ - ನೆಲವನ್ನು, ಶಾಸ್ತಿ - ಸಂರಕ್ಷಣೆಮಾಡುತ್ತಿದ್ದಾನೆ. || ೨೭ || ಲಾಂಗಲಹಸ್ತಸ್ಯ - ನೇಗಲನ್ನು ಹಿಡಿದಿರುವ, ಕ್ಷೇತ್ರಮಂಡಲಂ - ಯಜ್ಞಕ್ಷೇತ್ರ ಪ್ರದೇಶವನ್ನು, ಕರ್ಷತಃ - ಶೋಧ ನಾರ್ಥವಾಗಿ ಉಳುತ್ತಿರುವ, ತಸ್ಯನೃಪತೇಃ - ಆ ಜನಕರಾಯನ, ಜಗತೀಂ - ಭೂಮಿಯನ್ನು, ಭಿತ್ವಾ - ಭೇದಿಸಿ, ಅಹಂ - ನಾನು, ಉತ್ಥಿತಾ - ಹುಟ್ಟಿದವಳಾದುದರಿಂದ, ಸುತಾಕಿಲ - ಮಗಳಾಗಿ ದ್ದೇನಷ್ಟೆ. || ೨೮ || ಮುಷ್ಟಿವಿಕ್ಷೇಪತತ್ಪರಃ - (೧) ಕೈಹಿಡಿಯಿಂದ ಮೂಲಿಕೆಗಳನ್ನು ತೆಗೆದುಹಾಕು

ನಿನ್ನ ವಿವಾಹದಲ್ಲಿ ನಡೆದ ಸಂಗತಿಗಳೆಲ್ಲವನ್ನೂ ವಿಶದವಾಗಿ ತಿಳಿಸುವವಳಾಗು" ಎಂದಳು. ಅನುಸೂಯಾದೇವಿಯಿಂದ ಈ ಮಾತುಗಳನ್ನು ಕೇಳಿ ಆ ಸೀತಾದೇವಿಯು, ಧರ್ಮವಾಗಿ ಸಂಚರಿಸುತ್ತಿರುವ ಆಕೆಯನ್ನು ಕುರಿತು "ಆಲಿಸೆಂದು" ಬಿನ್ನವಿಸಿ ಆ ಕಥೆಯನ್ನು ಸಂಪೂರ್ಣ ವಾಗಿ ಹೇಳಲಪೇಕ್ಷಿಸಿ ಹೀಗೆಂದಳು. "ಅಮ್ಮಾ, ಅನುಸೂಯಾದೇವಿಯೆ! ಸಕಲ ಧರ್ಮ ಗಳನ್ನೂ ಚೆನ್ನಾಗಿ ತಿಳಿದಿರುವ ಜನಕಮಹಾರಾಜನು ಮಿಥಿಲಾಪಟ್ಟಣಕ್ಕಧಿಪತಿಯಾಗಿ ದ್ದನು. ಆತನು ಕ್ಷತ್ರಿಯ ಕುಲಕ್ಕೆ ತಕ್ಕ ಧರ್ಮವನ್ನೆಡಬಿಡದೆ ಅನುಸರಿಸುತ್ತ, ರಾಜನೀತಿ ಗಳನ್ನು ಚೆನ್ನಾಗಿ ತಿಳಿದು ಅದರಂತೆ ರಾಜ್ಯಭಾರವಂಗೈಯ್ಯುತ್ತಿದ್ದನು. ಹೀಗೆ ರಾಜ್ಯ ಪರಿ ಪಾಲನೆಮಾಡುತ್ತ ಒಂದಾನೊಂದುದಿನ ಯಾಗವನ್ನು ಮಾಡಬೇಕೆಂಬಪೇಕ್ಷೆಯುಳ್ಳವನಾಗಿ, ಯಾಗ ಮಾಡಲನುಕೂಲವಾಗಿರುವಂತೆ ಮಂಡಲಾಕಾರವಾಗಿ ಒಂದು ಪ್ರದೇಶದಲ್ಲಿ ಭೂಮಿಯ ನ್ನು ಉಳುತ್ತಿದ್ದನು. ಆಗ ನಾನು ಭೂಮಿಯನ್ನು ಭೇದಿಸಿಕೊಂಡು ಹುಟ್ಟಿದವಳಾಗಿ ಆ ಜನಕ ಚಕ್ರೇಶ್ವರನಿಗೆಕುಮರಿಯೆನಿಸಿದೆನು.||೨೪-೨೮||ಆಗಲಾ ಉತ್ತಭೂಮಿಯಲ್ಲಿತೆಗೆದುಹಾಕುತ್ತಿದ್ದ

ಟಿ. (೧) "ಯಾಜಾತಾ ಓಷಧಯೋ ದೇವೇಭ್ಯಃ":—"ಇತಿ ಚತುರ್ದಶಭಿರೋಷಧೀರ್ವಪತಿ" ಎಂಬಂತೆ ಸೋಮ ಯಾಜಿಯಾದವನು ಉತ್ತ ಭೂಮಿಯಲ್ಲಿ ಹದಿನಾಲ್ಕು ಹಿಡಿ ಮೂಲಿಕೆಗಳನ್ನು ತೆಗದುಹಾಕಬೇಕು.

ಸ್ಸುತಾ ॥ ೨೮ ॥ ಸ ಮಾಂ ದೃಷ್ಟ್ವಾ ನರಪತಿ ರ್ಮುಷ್ಟಿವಿಕ್ಷೇಪ ತತ್ಪರಃ ॥
ಪಾಂಸುಕುಂಠಿತ ಸರ್ವಾಂಗೀಂ ಜನಕೋ ವಿಸ್ಮಿತೋ ಭವತ್ ॥ ೨೯ ॥ ಅನ
ಪತ್ಯೇನಚ ಸ್ನೇಹಾ ದಂಕಮಾರೋಪ್ಯ ಚ ಸ್ವಯಮ್ ॥ ಮಮೇಯಂ ತನಯೇ
ತ್ಯುಕ್ತ್ವಾ ಸ್ನೇಹೋ ಮಯಿ ನಿಪಾತಿತಃ ॥ ೩೦ ॥ ಅಂತರಿಕ್ಷೇಚ ವಾಗುಕ್ತಾ
ಪ್ರತಿಮಾಽಮಾನುಷೀ ಕಿಲ! ॥ ಏವಮೇತ ನ್ನರಪತೇ ಧರ್ಮೇಣ ತನಯಾ
ತವ ॥ ೩೧ ॥ ತತಃ ಪ್ರಹೃಷ್ಟೋ ಧರ್ಮಾತ್ಮಾ ಪಿತಾ ಮೇ ಮಿಥಿಲಾಧಿಪಃ ॥
ಅವಾಪ್ತೋ ವಿಪುಲಾ ಮೃದ್ಧಿಂ ಮಾಮ-ವಾಪ್ಯ ನರಾಧಿಪಃ ॥ ೩೨ ॥ ದತ್ತಾ

ವದರಲ್ಲಾಸಕ್ತನಾದ, ನರಪತಿಃ - ಅರಸಾದ, ಸಜನಕೋಪಿ - ಆ ಜನಕರಾಯನೂ, ಪಾಂಸುಕುಂಠಿತ ಸರ್ವಾಂಗೀಂ - ಧೂಳಿಯಿಂದ ಪ್ರಸರಿತವಾದ ಸರ್ವಾವಯವಗಳುಳ್ಳ, ಮಾಂ - ನನ್ನನ್ನು, ದೃಷ್ಟ್ವಾ-ಕಂಡು, ವಿಸ್ಮಿತಃ - ಆಶ್ಚರ್ಯಗೊಂಡವನು, ಅಭವತ್ - ಆದನು. ॥ ೨೯ ॥ ಅನಪತ್ಯೇನಚ - ಮಕ್ಕಳಿಲ್ಲದ ಆ ಜನಕರಾಯನಿಂದ, ಸ್ನೇಹಾತ್ - ಪ್ರೇಮಪೂರ್ವಕವಾಗಿ, ಅಂಕಂ - ತೊಡೆಯಲ್ಲಿ, ಆರೋಪ್ಯ - ಕೂಡಿಸಿಕೊಂಡು, ಸ್ವಯಂ - ತಾನು, ಇಯಂ - ಇವಳು, ಮಮ - ನನಗೆ, ತನಯೇತಿ-ಮಗಳೆಂದು, ಉಕ್ತ್ವಾ - ಹೇಳಿ, ಮಯಿ - ನನ್ನಲ್ಲಿ, ಸ್ನೇಹಃ - ಪ್ರೇಮೆಯು, ನಿಪಾತಿತಃ - ಮಾಡಲ್ಪಟ್ಟಿತು. ॥ ೩೦ ॥ ಅಂತರಿಕ್ಷೇಚ - ಅಂತರಿಕ್ಷದಲ್ಲಿಯೂ, ಮಾಂಪ್ರತಿ - ನನ್ನನ್ನುದ್ದೇಶಿಸಿ, ಹೇ ನರಪತೇ - ಎಲೈ ಅರಸೇ, ತವ - ನಿನಗೆ, ಧರ್ಮೇಣ - ಧರ್ಮದಿಂದ, ಇಯಂ - ಇವಳು, ತನಯಾ-ಕುವರಿಯಿಂದ, ಏತತ್ - ಇದು, ಏವಂ - ಹೀಗೆಯೇ ಸರಿ, ಇತಿ-ಇಂತೆಂದು, ಅಮಾನುಷೀ-ದೇವತಾ ಸಂಬಂಧವಾದ, ವಾಕ್ - ಮಾತು, ಉಕ್ತಾ - ಹೇಳಲ್ಪಟ್ಟಿತು. ॥ ೩೧ ॥ ತತಃ - ಆ ವಾಕ್ಯದಿಂದ, ಪ್ರಹೃಷ್ಟಃ - ಸಂತೋಷಗೊಂಡವನಾಗಿ, ಧರ್ಮಾತ್ಮಾ - ಧರ್ಮಿಷ್ಠನಾದ, ನರಾಧಿಪಃ - ಅರಸಾದ, ಮಿಥಿಲಾಧಿಪತಿಃ - ಮಿಥಿಲಾಪುರಕ್ಕೆ ದೊರೆಯಾದ, ಮೇ - ನನ್ನ, ಪಿತಾ-ತಂದೆಯು, ಮಾಂ-ನನ್ನನ್ನು, ಅವಾಪ್ಯ - ಹೊಂದಿ, ವಿಪುಲಾಂ - ವಿಸ್ತಾರವಾದ, ಋದ್ಧಿಂ - ಐಶ್ವರ್ಯವನ್ನು, ಅವಾಪ್ತಃ - ಹೊಂದಿದನು. ॥ ೩೨ ॥ ಪುಣ್ಯಕರ್ಮಣಾ - ಪುಣ್ಯಕರವಾದ ಕರ್ಮಗಳುಳ್ಳ ಜನಕರಾಯನಿಂದ,

ಮೂಲಿಕೆಗಳನ್ನು ಹಿಡಿಯಲ್ಲಿ ಹಿಡಿದಿದ್ದ ಜನಕರಾಯನು ಧೂಳಿಯಿಂದ ವ್ಯಾಪ್ತವಾದ ಸರ್ವಾವಯವಗಳುಳ್ಳ ನನ್ನನ್ನು ನೋಡಿ ಮಹದಾಶ್ಚರ್ಯವನ್ನು ಹೊಂದಿದನು. ಆ ಬಳಿಕಲಾತನು ಸಂತಾನವಿಲ್ಲದಿದ್ದುದರಿಂದ ಬಹು ಪ್ರೀತಿಯಿಂದ ನನ್ನನ್ನೆತ್ತಿಕೊಂಡು ತೊಡೆಯ ಮೇಲಿರಿಸಿಕೊಂಡು "ಈ ಮಗುವು ನನ್ನ ಮಗಳೆ"ಂದುಕೊಂಡನು. ಹೀಗೆ ಹೇಳಿದ ಬಳಿಕ ನನ್ನಲ್ಲಿ ಅಧಿಕವಾದ ಪ್ರೇಮೆಯುಳ್ಳವನೂ ಆದನಷ್ಟೆ. ಅದೇ ಸಮಯದಲ್ಲಿಯೇ ಗಗನದಲ್ಲಿ ಆಕಾಶವಾಣಿಯೂ ನನ್ನನ್ನುದ್ದೇಶಿಸಿ, "ಓ ರಾಯನೆ! ನೀನಾಚರಿಸುತ್ತಿರುವ ಸದ್ಧರ್ಮದಿಂದಲೇ ಈ ಬಾಲೆಯು ನಿನಗೆ ಪುತ್ರಿಯಾಗಿದ್ದಾಳೆ. ಈಕೆಯನ್ನು ತೊರೆಯದೆ ಸಂರಕ್ಷಿಸುತ್ತಿರು" ಎಂದು ಹೇಳಿತು. ॥೨೯-೩೧॥ ಆ ಬಳಿಕ ನನ್ನ ತಂದೆಯಾದ ಜನಕಚಕ್ರೇಶ್ವರನು ತನ್ನಭಿಮತದಂತೆಯೇ ನಿರೂಪಿಸಿದ ಆ ಗಗನವಾಣಿಯ ನುಡಿಗಳನ್ನು ಕೇಳಿ ಮಹದಾನಂದಭರಿತನಾಗಿ, ಧರ್ಮೈಕದೃಷ್ಟಿಯುಳ್ಳವನಾದುದರಿಂದ ನನ್ನನ್ನು ತನ್ನ ಬಳಿಯಲ್ಲಿರಿಸಿಕೊಂಡು ಸಂರಕ್ಷಣೆಯಂ

ಚಾಸ್ಮೀಷ್ಟವದ್ದೇವ್ಯೈ ಜ್ಯೇಷ್ಠಾಯೈ ಪುಣ್ಯಕರ್ಮಣಾ ॥ ತಯಾ ಸಂಭಾವಿತಾ ಚಾಸ್ಮಿ ಸ್ನಿಗ್ಧಯಾ ಮಾತೃಸೌಹೃದಾತ್ ॥ ೩೩ ॥ ಪತಿಸಂಯೋಗಸುಲಭಂ ವಯೋ ದೃಷ್ಟ್ವಾ ತು ಮೇ ಪಿತಾ ॥ ಚಿಂತಾಮಭ್ಯಗಮದ್ದೀನೋ ವಿತ್ತನಾಶಾದಿವಾಧನಃ ॥ ೩೪ ॥ ಸದೃಶಾಚ್ಚಾಪಕೃಷ್ಟಾಚ್ಚ ಲೋಕೇ ಕನ್ಯಾಪಿತಾ ಜನಾತ್ ॥ ಪ್ರಧರ್ಷಣಾಮವಾಪ್ನೋತಿ ಶಕ್ರೇಣಾಪಿ ಸಮೋ ಭುವಿ ॥ ೩೫ ॥ ತಾಂ ಧರ್ಷಣಾಮದೂರಸ್ಥಾಂ ದೃಷ್ಟ್ವಾ ಚಾತ್ಮನಿ ಪಾರ್ಥಿವಃ ॥ ಚಿಂತಾರ್ಣವ

ಇಷ್ಟವದ್ದೇವ್ಯೈ - ಪ್ರೇಮಪಾತ್ರಳೂ ಪಟ್ಟದರಾಣಿಯೂ ಆದ, ಜ್ಯೇಷ್ಠಾಯೈ - ಹಿರಿಯಹೆಂಡತಿಗೆ, ದತ್ತಾಚ - ಕೊಡಲ್ಪಟ್ಟವಳು, ಅಸ್ಮಿ - ಆದೆನು, ಸ್ನಿಗ್ಧಯಾ - ಪ್ರೇಮೆಯುಳ್ಳ, ತಯಾ - ಆ ಪಟ್ಟದ ರಾಣಿಯಿಂದ, ಮಾತೃಸೌಹೃದಾತ್ - ತಾಯಿಯಂತೆ ಪ್ರೇಮೆಯಿಂದ, ಸಂಭಾವಿತಾಚ - ವೃದ್ಧಿಗೊಳಿಸಲ್ಪಟ್ಟವಳು, ಅಸ್ಮಿ - ಆಗಿದ್ದೇನೆ. ॥ ೩೩ ॥ ಮೇ - ನನ್ನ, ಪಿತಾ - ತಂದೆಯು, ಪತಿಸಂಯೋಗಸುಲಭಂ - ಪಾಣಿಗ್ರಹಣಕ್ಕೆ ಯೋಗ್ಯವಾದ, ಮೇ - ನನ್ನ, ವಯಃ - ವಯಸ್ಸನ್ನು, ದೃಷ್ಟ್ವಾ - ಕಂಡು, ಅಧನಃ - ದರಿದ್ರನು, ವಿತ್ತನಾಶಾದಿವ - ದ್ರವ್ಯನಾಶದಿಂದ ದುಃಖಗೊಳ್ಳುವಂತೆ, ದೀನಃ - ಪರಿತಪ್ತನಾಗಿ, ಚಿಂತಾಂ - ಆಲೋಚನೆಯನ್ನು, ಅಭ್ಯಗಮತ್ - ಹೊಂದಿದನು. ॥ ೩೪ ॥ ಲೋಕೇ - ಲೋಕದಲ್ಲಿ, ಕನ್ಯಾಪಿತಾ - ಕನ್ಯೆಕೆಗೆ ತಂದೆಯಾದವನು, ಶಕ್ರೇಣ - ದೇವೇಂದ್ರನೊಡನೆ, ಸಮೋಪಿ - ಸಮಾನನಾದರೂ, ಭುವಿ - ಈ ಲೋಕದಲ್ಲಿ ತನಗೆ ಸಮಾನನಾದವನಿಂದಲೂ, ಅಪಕೃಷ್ಟಾತ್ - ತನಗಿಂತಲೂ ಕನಿಷ್ಠನಾದವನಿಂದ, ಜನಾಚ್ಚ - ಲೋಕದ ಜನರಿಂದಲೂ, ಪ್ರಧರ್ಷಣಾಂ - ತಿರಸ್ಕಾರವನ್ನು, ದೃಷ್ಟ್ವಾ - ಕಂಡು, ಚಿಂತಾರ್ಣವಗತಃ - ಚಿಂತೆಯೆಂಬ ಸಮುದ್ರದಲ್ಲಿ ಮುಳುಗಿ, ಅಪ್ಲವೋಯಥಾ - ತೆಪ್ಪವಿಲ್ಲದವನಂತೆ, ಪಾರಂ - ದಡವನ್ನು, ನಾಸಸಾದ -

---

ಗೈಯುತ್ತ ಕ್ರಮೇಣ ಮಹದೈಶ್ವರ್ಯವನ್ನು ಪಡೆದನು. ಅಲ್ಲದೆ ನಿರಂತರವೂ ಪುಣ್ಯಕಾರ್ಯಗಳನ್ನೇ ಮಾಡುತ್ತಿರುವ ಆ ಜನಕರಾಜನು ನನ್ನನ್ನೀರೀತಿಯಾಗಿ ಪಡೆದು ತನಗೆ ಬಹು ಪ್ರೀತಿಪಾತ್ರಳೂ ಮಕ್ಕಳಾಗಬೇಕೆಂದು ಅಹರ್ನಿಶವೂ ತಪಿಸುತ್ತಿರುವವಳೂ ಆದ ಪಟ್ಟದರಸಿಗೆ ಒಪ್ಪಿಸಲು, ಆಕೆಯು ಹೆತ್ತ ತಾಯಿಯಂತೆ ಪರಮ ಪ್ರೀತಿಯಿಂದ ನನ್ನನ್ನು ಪೋಷಿಸಿದಳು. ಈ ರೀತಿ ಕೆಲ ಸಂವತ್ಸರಗಳು ಕಳೆದ ಬಳಿಕ ನನ್ನ ತಂದೆಯಾದ ಆ ಜನಕ ಭೂಪಾಲನು, ವಿವಾಹವಂಗೈದು ಪತಿಗೃಹಕ್ಕೆ ಕಳುಹಲು ತಕ್ಕ ವಯಸ್ಸಿಗೆ ಬಂದಿರುವ ಯೌವನವತಿಯಾದ ನನ್ನನ್ನು ನೋಡಿ, ದ್ರವ್ಯವನ್ನು ಸಂಪಾದಿಸಲು ಶಕ್ತಿಯಿಲ್ಲದ ದರಿದ್ರನು, ತನ್ನಲ್ಲಿರುವ ಅತ್ಯಲ್ಪವಾದ ದ್ರವ್ಯವನ್ನು ಕಳೆದುಕೊಂಡು ದುಃಖಸಂತಪ್ತನಾಗುವಂತೆ, ವರನಿಶ್ಚಯವಿಲ್ಲದೆ ಖತಿಯಾಂತುದಲ್ಲದೆ ಬಹಳವಾದ ಆಲೋಚನೆಯನ್ನೂ ಮಾಡಿದನು. ಲೋಕದಲ್ಲಿ ಹೆಣ್ಣುಮಕ್ಕಳನ್ನು ಪಡೆದವನು, ದೇವೇಂದ್ರನಂತೆ ಮಹದೈಶ್ವರ್ಯಸಂಪನ್ನನಾಗಿದ್ದರೂ ತನಗಿಂತಲೂ ಕೀಳಾದವರಿಂದಲೇ ಅವಮಾನವನ್ನು ಹೊಂದುತ್ತಾನೆಂದ ಮೇಲೆ, ಸಮಾನಸ್ಕಂಧರಾದವರಿಂದ ಅವಮಾನಿತನಾಗುತ್ತಾನೆಯೆಂದು ಹೇಳತಕ್ಕುದೇನಿದೆ? ಆದುದರಿಂದಲೇ ಪ್ರಭುವೂ ನನ್ನ ತಂದೆಯೂ ಆದ ಜನಕರಾಯನು ಕನ್ಯೆಯಾದ ನನಗೋಸುಗ ಸಂಭವಿಸಿರುವ

ಗತಃ ಪಾರಂ ನಾಸಸಾದಾಽಪ್ಲವೋ ಯಥಾ ॥ ೩೬ ॥ ಅಯೋನಿಜಾಂ ಹಿ
ಮಾಂ ಜ್ಞಾತ್ವಾ ನಾಧ್ಯಗಚ್ಛ ದ್ವಿಚಿಂತಯರ್ನ್ ॥ ಸದೃಶಂ ಚಾಽನುರೂಪಂಚ
ಮಹೀಪಾಲಃ ಪತಿಂ ಮಮ ॥ ೩೭ ॥ ತಸ್ಯ ಬುದ್ಧಿರಿಯಂ ಜಾತಾ ಚಿಂತಯಾ
ನಸ್ಯ ಸಂತತಂ ॥ ಸ್ವಯಂವರಂ ತನೂಜಾಯಾಃ ಕರಿಷ್ಯಾಮೀತಿ ಧೀಮತಃ॥೩೮॥
ಮಹಾಯಜ್ಞೇ ತದಾ ತಸ್ಯ ವರುಣೇನ ಮಹಾತ್ಮನಾ ॥ ದತ್ತಂ ಧನುರ್ವರಂ

ಹೊಂದಲಿಲ್ಲ. ॥ ೩೬ ॥ ಮಹೀಪಾಲಃ - ಜನಕರಾಯನು, ಮಾಂ - ನನ್ನನ್ನು, ಅಯೋನಿಜಾಂ - ಅಯೋನಿಜಳನ್ನಾಗಿ, ಜ್ಞಾತ್ವಾ - ತಿಳಿದು, ಮಮ - ನನಗೆ, ಸದೃಶಂ-ಸಮಾನನಾದ, ಅನುರೂಪಂ-(೧) ಅಭಿಜಾತ್ಯಾದಿಗಳಿಂದ ಸಮಾನನಾದ, ಪತಿಂ - ಗಂಡನನ್ನು, ವಿಚಿಂತಯರ್ನ್ - ಆಲೋಚಿಸುತ್ತ, ನಾಧ್ಯಗಚ್ಛತ್ - ಹೊಂದಲಿಲ್ಲ. ॥ ೩೭ ॥ ಸತತಂ - ನಿರಂತರವೂ, ಚಿಂತಯಾನಸ್ಯ - ಆಲೋಚಿಸುತ್ತಿರುವ, ಧೀಮತಃ - ಬುದ್ಧಿವಂತನಾದ, ತಸ್ಯ - ಆ ಜನಕರಾಯನಿಗೆ, ಇಯಂ - ಈ ವಕ್ಷ್ಯಮಾಣ ಪ್ರಕಾರವಾದ, ತನೂಜಾಯಾಃ - ಮಗಳಿಗೆ, ಸ್ವಯಂವರಂ-ಸ್ವಯಂವರವನ್ನು, ಕರಿಷ್ಯಾಮಿ - ಮಾಡುವೆನು, ಇತಿ - ಹೀಗೆಂಬ, ಬುದ್ಧಿಃ - ಬುದ್ಧಿಯು, ಜಾತಾ - ಹುಟ್ಟಿತು. ॥ ೩೮ ॥ ತಸ್ಯ - ಆ ಜನಕರಾಯನ ವಂಶಸ್ಥರಿಗೆ, ಮಹಾತ್ಮನಾ - ಮಹಾ ಮನಸ್ವಿಯಾದ, ವರುಣೇನ - (೨) ವರುಣನಿಂದ, (ಮ) ಈಶ್ವರನಿಂದ, ಮಹಾಯಜ್ಞೇ - ಯಜ್ಞದಲ್ಲಿ, ತದಾ - ಆ ಕಾಲದಲ್ಲಿ,

ತಿರಸ್ಕಾರವನ್ನು ಸ್ಮರಿಸುತ್ತ, ಚಿಂತಾಸಾಗರದಲ್ಲಿ ಮುಳುಗಿಹೋದ ನಾವೆಯಂತೆ ಪಾರವನ್ನು ಹೊಂದಲೇ ಇಲ್ಲವು.॥೩೨-೩೬॥ ಇದುಮಾತ್ರವಲ್ಲದೆ ತನ್ನ ಮಗಳೆನಿಸಿರುವ ನಾನು ಅಯೋನಿಜೆಯೆಂಬುದನ್ನು ತಿಳಿದಿದ್ದನಾದಕಾರಣ ಸತ್ಕುಲಪ್ರಸೂತಳೂ,ವಿದ್ಯಾವತಿಯೂ,ಗುಣಸಂಪನ್ನಳೂ ಆದ ನನಗೆ ಅನುರೂಪವಾದ ವಯಸ್ಸು, ಸೌಂದರ್ಯ ಇವೇ ಮೊದಲಾದುವುಗಳಿಂದ ಸ್ತೋತ್ರಾರ್ಹನಾದ ವರನಾವನಿದ್ದಾನೆಯೋ ಎಂದು ಯೋಚಿಸುತ್ತ ಪಾರವನ್ನು ಹೊಂದಲೇ ಇಲ್ಲವು. ಈ ಪ್ರಕಾರವಾಗಿ ಆ ಭೂಪಾಲನು ಹಗಲಿರಳೂ ನಿದ್ರಾಹಾರಗಳಿಲ್ಲದೆ ಯಾವಾಗಲೂ ಯೋಚಿಸುತ್ತಿರಲು, ನನ್ನಮಗಳಿಗೆ ಸ್ವಯಂವರವನ್ನುಮಾಡಿದರೆ ಭೂಮಂಡಲದ ರಾಜಪುತ್ರರೆಲ್ಲರೂ ಬರುತ್ತಾರೆ. ಅವರಲ್ಲಿ ಯಾರನ್ನಾದರೂ, ತನಗೆ ಅನುರೂಪನಾಗಿರುವವನನ್ನುವರಿಸಿ ಸುಖವಾಗಿರಲೆಂದು ಬುದ್ಧಿಯುಂಟಾಯಿತು. ॥೩೭-೩೮॥ ಮಾತ್ರವಲ್ಲದೆ ನನ್ನತಂದೆಯಾದ ಆ ಜನಕರಾಯನವಂಶದ ಪೂರ್ವದ ರಾಜರಿಗೆ ಹಿಂದೆ ವರುಣನಿಂದ ದಕ್ಷಯಜ್ಞ ಪರಿಪೂರ್ತಿಯಾಗಲು ಉತ್ತಮವಾಗಿರುವ ಧನುಸ್ಸು ಮತ್ತು ಅಕ್ಷಯವಾದ ಬತ್ತಳಿಕೆಯೂ ಪ್ರೇಮ

ಟಿ. (೧) "ಅಭಿರೂಪಂ" ಎಂಬ ಪಾಠಾಂತರವುಂಟು. ಇಲ್ಲಿ "ಸುಂದರನೆ"ಂದು ಅರ್ಥ.

ಟಿ. (೨) ಇಲ್ಲಿನ "ವರುಣ" ಶಬ್ದಕ್ಕೆ, "ವ್ರಿಯತೇ ಸರ್ವೈರಿತಿ ವರುಣಃ" ಎಂಬ ವ್ಯುತ್ಪತ್ತಿಯಿಂದ ಈಶ್ವರನೆಂದು ಅರ್ಥ ಮಾಡಿದ್ದಾರೆ. ಜನಕರಾಯನಿಗೆ ಶೈವಧನುಸ್ಸು ಬಂದ ಕಥೆಯನ್ನು ಹಿಂದೆಯೇ, ಎಂದರೆ, ಬಾಲಕಾಂಡದ ೫೮೭ನೆಯ ಪುಟದ ಟಿಪ್ಪಣಿಯಲ್ಲಿ ವಿಶದಗೊಳಿಸಿದ್ದೇವೆ. ಅಲ್ಲಿ ಪ್ರಮಾದ ವಶದಿಂದ "ಅರಣ್ಯಕಾಂಡದಲ್ಲಿ" ಎಂದಿದೆ. ಅದನ್ನು "ಅಯೋಧ್ಯಾಕಾಂಡದಲ್ಲಿ" ಎಂದು ತಿದ್ದಿಕೊಳ್ಳಬೇಕು.

ಪ್ರೀತ್ಯಾ ತೂಣೀ ಚಾಕ್ಷಯಸಾಯಕೌ ‖ ೩೯ ‖ ಅಸಂಚಾಲ್ಯಂ ಮನುಷ್ಯೈಶ್ಚ ಯತ್ನೇನಾಪಿಚ ಗೌರವಾತ್ ‖ ತನ್ನಶಕ್ತಾ ನಮಯಿತುಂ ಸ್ವಪ್ನೇಷ್ವಪಿ ನರಾಧಿಪಾಃ ‖ ೪೦ ‖ ತದ್ಧನುಃ ಪ್ರಾಪ್ಯ ಮೇ ಪಿತ್ರಾ ವ್ಯಾಹೃತಂ ಸತ್ಯವಾದಿನಾ ‖ ಸಮವಾಯೇ ನರೇಂದ್ರಾಣಾಂ ಪೂರ್ವಮಾಮಂತ್ರ್ಯ ಪಾರ್ಥಿವಾನ್ ‖ ೪೧ ‖ ಇದಂಚ ಧನುರುದ್ಯಮ್ಯ ಸಜ್ಯಂ ಯಃ ಕುರುತೇ ನರಃ ‖ ತಸ್ಯ ಮೇ ದುಹಿತಾ ಭಾರ್ಯಾ ಭವಿಷ್ಯತಿ ನ ಸಂಶಯಃ ‖ ೪೨ ‖ ತಚ್ಚ ದೃಷ್ಟ್ವಾ ಧನುಶ್ಶ್ರೇಷ್ಠಂ

ಧನುರ್ವರಂ - ಧನುಃಶ್ರೇಷ್ಠವನ್ನು, ಪ್ರೀತ್ಯಾ - ವಿಶ್ವಾಸದಿಂದ, ದತ್ತಂ - ಕೊಡಲ್ಪಟ್ಟಿತು, ಅಕ್ಷಯಸಾಯಕೌ - ನಾಶರಹಿತವಾದ ಬಾಣಗಳುಳ್ಳ, ತೂಣೀಚ - ಬತ್ತಳಿಕೆಗಳೂ, ದತ್ತೌ-ಕೊಡಲ್ಪಟ್ಟವು. ‖ ೩೯ ‖ ಮನುಷ್ಯೈಶ್ಚ - ಮನುಷ್ಯರಿಂದ, ಯತ್ನೇನಾಪಿಚ - ಪ್ರಯತ್ನದಿಂದಲೂ, ಗೌರವಾತ್ - ಭಾರದಿಂದಲೂ, ಅಸಂಚಾಲ್ಯಂ - ಕದಲಿಸಲಸಾಧ್ಯವಾದ, ತತ್ - ಆ ಧನುಸ್ಸನ್ನು, ನರಾಧಿಪಾಃ-ಆ ಅರಸರು, ನಮಯಿತುಂ- ಬಗ್ಗಿಸುವದಕ್ಕೆ, ಸ್ವಪ್ನೇಷ್ವಪಿ - ಸ್ವಪ್ನಗಳಲ್ಲಿಯೂ, ನಶಕ್ತಾಃ-ಸಮರ್ಥರಾಗದೆಹೋದರು. ‖ ೪೦ ‖ ಪೂರ್ವಂ - ಮೊದಲು, ಪಾರ್ಥಿವಾನ್ - ಅರಸರನ್ನು, ಆಮಂತ್ರ್ಯ - ಕರೆಯಿಸಿ, ನರೇಂದ್ರಾಣಾಂ - ಅರಸರ, ಸಮವಾಯೇ - ಗುಂಪಿನಲ್ಲಿ. ಸತ್ಯವಾದಿನಾ-ಸತ್ಯವಾದಿಯಾದ, ಮೇ - ನನ್ನ, ಪಿತ್ರಾ - ತಂದೆಯಾದ ಜನಕರಾಯನಿಂದ, ತದ್ಧನುಃ - ಆ ಧನಸ್ಸನ್ನು, ಪ್ರಾಪ್ಯ - ಹೊಂದಿ, (ತೋರಿಸಿ) ವ್ಯಾಹೃತಂ-ಹೇಳಲ್ಪಟ್ಟಿತು. ‖೪೧‖ ಯಃನರಃ-ಯಾವ ಮನುಜನು, ಇದಂಚಧನುಃ - ಈ ಬಿಲ್ಲನ್ನು, ಉದ್ಯಮ್ಯ - ಮೇಲಕ್ಕೆತ್ತಿ, ಸಜ್ಯಂಕುರುತೇ - ಹೆದೆಯೇರಿಸುವನೋ, ಮೇ - ನನ್ನ, ದುಹಿತಾ - ಮಗಳು, ತಸ್ಯ - ಆ ಪುರುಷನಿಗೆ, ಭಾರ್ಯಾ - ಹೆಂಡತಿಯು, ಭವಿಷ್ಯತಿ - ಆಗುವಳು, ನಸಂಶಯಃ - ಸಂಶಯವಿಲ್ಲ, ಇತಿ - ಇಂತೆಂದು ಹೇಳಿದನು. ‖ ೪೨ ‖ ನೃಪಾಃ - ರಾಜರು, ಗೌರವಾತ್ - ಭಾರದಿಂದ, ಗಿರಿಸನ್ನಿಭಂ - ಬೆಟ್ಟಕ್ಕೆಸಮಾನವಾದ, ಶ್ರೇಷ್ಠಂ - ಉತ್ತಮವಾದ, ತದ್ಧನುಶ್ಚ - ಆ ಬಿಲ್ಲನ್ನು, ದೃಷ್ಟ್ವಾ - ಕಂಡು, ತಸ್ಯ - ಆ ಬಿಲ್ಲಿನ, ತೋಲನೇ -

ಪುರಸ್ಸರವಾಗಿ ಕೊಡಲಾಗಿದ್ದಿತು. ಯಾರು ಎಷ್ಟುಯತ್ನಿಸಿದರೂ ಆ ಬಿಲ್ಲು ಬಹು ಭಾರವಾಗಿದ್ದುದರಿಂದ ಅದನ್ನು ಕದಲಿಸಲು ಶಕ್ತಿಯಿಲ್ಲದವರಾಗಿದ್ದರು.ಆದುದರಿಂದ ಭೂಮಂಡಲದಲ್ಲಿನ ಯಾವ ಭೂಪತಿಯೂ ಆ ಧನುಸ್ಸನ್ನು ಬಗ್ಗಿಸಲು ಅಸಮರ್ಥನಾಗಿದ್ದನು. ಹೀಗಿದ್ದುದರಿಂದ ನನ್ನ ಜನಕನಾದ ಆ ಜನಕರಾಯನು ಮೊದಲು ಅನೇಕಮಂದಿ ರಾಜರನ್ನು ತನ್ನ ಸಭೆಗೆ ಬರಮಾಡಿಕೊಂಡು ಅವರ ಮಧ್ಯದಲ್ಲಿ ಆ ಧನುಸ್ಸನ್ನು ತೋರಿಸಿ "ಯಾವ ವೀರಪುರುಷನು ಈ ಧನುಸ್ಸನ್ನು ಕೈಯಿಂದಲೇ ಮೇಲಕ್ಕೆತ್ತಿ ನಾರಿಯನ್ನುಹೂಡಿ ಬಾಣಸಂಧಾನವಂಗೈಯುತ್ತಾನೆಯೋ, ಆತನಿಗೆ ನನ್ನ ಮಗಳಾದ ಸೀತಾದೇವಿಯು ಮಡದಿಯಾಗುತ್ತಾಳೆ. ಈವಿಷಯದಲ್ಲಿ ಸ್ವಲ್ಪಮಾತ್ರವೂ ಸಂಶಯವಿರುವುದಿಲ್ಲ" ಎಂದು ನುಡಿದನು. ‖೩೯-೪೨‖ ಆಗಲಾ ನರನಾಥರು ಗೌರವದಲ್ಲಿ ಮಹಾ ಪರ್ವತೋಪಮವೂ, ಮಹಾ ಶ್ರೇಷ್ಠವೂ ಆದ ಆ ಶಿವಧನುಸ್ಸನ್ನು ನೋಡಿ ಅದನ್ನು ಇದ್ದಸ್ಥಳದಿಂದ ಅತ್ತಿತ್ತ ಕದಲಿಸಲೂ ಶಕ್ತಿಸಾಲದೆ, ಅದಕ್ಕೆ ಶರಣುಹೊಡೆದು, ತಮ್ಮ ತಮ್ಮ ದೇಶಗಳನ್ನು ಕುರಿತು ಹೊರಟು ಹೋದರು. ‖೪೩‖ ಈರೀತಿ

ಗೌರವಾ ದ್ಗಿರಿಸನ್ನಿಭಂ ॥ ಅಭಿವಾದ್ಯ ನೃಪಾ ಜಗ್ಮು ರಶಕ್ತಾ ಸ್ತಸ್ಯ ತೋಲನೇ ॥ ೪೩ ॥ ಸುದೀರ್ಘಸ್ಯ ತು ಕಾಲಸ್ಯ ರಾಘವೋಽಯಂ ಮಹಾದ್ಯುತಿಃ ॥ ವಿಶ್ವಾಮಿತ್ರೇಣ ಸಹಿತೋ ಯಜ್ಞಂ ದ್ರಷ್ಟುಂ ಸಮಾಗತಃ ॥ ೪೪ ॥ ಲಕ್ಷ್ಮಣೇನ ಸಹಭ್ರಾತ್ರಾ ರಾಮ ಸ್ಸತ್ಯ ಪರಾಕ್ರಮಃ ॥ ವಿಶ್ವಾಮಿತ್ರಸ್ತು ಧರ್ಮಾತ್ಮಾ ಮಮ ಪಿತ್ರಾ ಸುಪೂಜಿತಃ ॥ ೪೫ ॥ ಪ್ರೋವಾಚ ಪಿತರಂ ತತ್ರ ಭ್ರಾತರೌ ರಾಮ ಲಕ್ಷ್ಮಣೌ ॥ ಸುತೌ ದಶರಥಸ್ಯೇಮೌ ಧನುರ್ದರ್ಶನ ಕಾಂಕ್ಷಿಣೌ ॥ ೪೬ ॥ ಧನು ರ್ದರ್ಶಯ ರಾಮಾಯ ರಾಜಪುತ್ರಾಯ ದೈವಿಕಂ ॥ ಇತ್ಯುಕ್ತ ಸ್ತೇನ

ಚಲನದಲ್ಲಿಯೂ, ಅಶಕ್ತಾಃ - ಸಾಮರ್ಥ್ಯವಿಲ್ಲದೆ, ಅಭಿವಾದ್ಯ-ವಂದನೆಯಂಗೈದು, ಜಗ್ಮುಃ - ತೆರಳಿದರು. ॥ ೪೩ ॥ ಸುದೀರ್ಘಸ್ಯ - ಬಹು ದೀರ್ಘವಾದ, ಕಾಲಸ್ಯ - ಕಾಲಕ್ಕೆ, ಮಹಾದ್ಯುತಿಃ - ಮಹಾ ಪ್ರಕಾಶವಂತನಾದ, ರಾಘವಃ - ರಘುವಂಶೋತ್ಪನ್ನನಾದ, ಸತ್ಯಪರಾಕ್ರಮಃ - ಸತ್ಯದಿಂದಲೇ ಶತ್ರುಗಳನ್ನು ಜಯಿಸುವ, ಅಯಂರಾಮಃ - ಈ ಶ್ರೀರಾಮನು, ಭ್ರಾತ್ರಾ - ತಮ್ಮನಾದ, ಲಕ್ಷ್ಮಣೇನ ಸಹ - ಲಕ್ಷ್ಮಣನಿಂದಲೂ, ವಿಶ್ವಾಮಿತ್ರೇಣ - ವಿಶ್ವಾಮಿತ್ರನಿಂದಲೂ, ಸಹಿತಃ - ಕೂಡಿ, ಯಜ್ಞಂ - ಜನಕರಾಜನ ಯಜ್ಞವನ್ನು, ದ್ರಷ್ಟುಂ - ನೋಡಲು, ಸಮಾಗತಃ-ಬಂದನು, ಧರ್ಮಾತ್ಮಾ - ಧರ್ಮಿಷ್ಠನಾದ, ವಿಶ್ವಾಮಿತ್ರಸ್ತು - ವಿಶ್ವಾಮಿತ್ರಋಷಿಯು, ಮಮ-ನನ್ನ, ಪಿತ್ರಾ-ತಂದೆಯಿಂದ, ಸುಪೂಜಿತಃ-ಚನ್ನಾಗಿ ಪೂಜಿಸಲ್ಪಟ್ಟು. ॥ ೪೪-೪೫ ॥ ತತ್ರ - ಆ ಯಜ್ಞಶಾಲೆಯಲ್ಲಿ, ಪಿತರಂ - ತಂದೆಯಾದ ಜನಕರಾಯನನ್ನು ಕುರಿತು, ದಶರಥಸ್ಯ - ದಶರಥರಾಯನಿಗೆ, ಸುತೌ - ಕುವರರಾದ, ಇಮೌ - ಇವರು, ರಾಮಲಕ್ಷ್ಮಣೌ - ರಾಮ ಲಕ್ಷ್ಮಣರೆಂದು ಹೆಸರುಳ್ಳವರು, ಭ್ರಾತರೌ - ಅಣ್ಣತಮ್ಮಂದಿರು, ಧನುರ್ದರ್ಶನಕಾಂಕ್ಷಿಣೌ - ಶೈವಧನುಸ್ಸನ್ನು ನೋಡಲಿಚ್ಛೆಯುಳ್ಳವರಾಗಿದ್ದಾರೆ. ॥ ೪೬ ॥ ರಾಜಪುತ್ರಾಯ - ಅರಸುಮಗನಾದ, ರಾಮಾಯ - ಶ್ರೀರಾಮನಿಗೆ, ದೈವಿಕಂ - ದೇವತಾಸಂಬಂಧವಾದ, ಧನುಃ - ಶೈವಧನುಸ್ಸನ್ನು, ದರ್ಶಯ - ತೋರಿಸು, ತೇನವಿಪ್ರೇಣ - ಬ್ರಹ್ಮರ್ಷಿಯಾದ ಆ ವಿಶ್ವಾಮಿತ್ರನಿಂದ, ಇತ್ಯುಕ್ತಃ - ಈಪರಿಯಾಗಿ ಹೇಳಲ್ಪಟ್ಟವನಾಗಿ, ತದ್ಧನುಃ - ಆ ಬಿಲ್ಲನ್ನು, ಸಮುಪಾ

ಕೆಲಕಾಲ ಕಳೆದುಹೋಗಲು ಮಹಾ ಪ್ರಭಾವಶಾಲಿಯೂ, ರಘುವಂಶೋತ್ಪನ್ನನೂ, ಮಹಾ ಸತ್ಯಪರಾಕ್ರಮಿಯೂ ಆದ ಈ ರಘುರಾಮನು ತನ್ನ ಅನುಜಾತನಾದ ಲಕ್ಷ್ಮಣನೊಡಗೂಡಿ, ವಿಶ್ವಾಮಿತ್ರಮುನಿಯೊಡನೆ ನನ್ನ ತಂದೆಯಾದ ಜನಕರಾಯನ ಯಾಗಶಾಲೆಗೆ ಬಂದನು. ಆಗ ಮಹಾ ಧರ್ಮವಂತನೂ, ತೇಜಸ್ವಿಯೂ ಆದ ವಿಶ್ವಾಮಿತ್ರಮಹರ್ಷಿಯು ನನ್ನತಂದೆಯ ಸತ್ಕಾರಗಳಿಂದ ಗೌರವಿಸಲ್ಪಟ್ಟವನಾಗಿ ಯಾಗಶಾಲೆಯಲ್ಲಿದ್ದ ಆತನನ್ನು ಕುರಿತು, ॥ ೪೫ ॥ " ಅಯ್ಯಾ ಜನಕಚಕ್ರೇಶ್ವರನೆ ! ಈ ಬಾಲಕರೀರ್ವರೂ ಮಹಾ ಪ್ರಖ್ಯಾತನೂ, ಅಯೋಧ್ಯಾಧೀಶನೂ ಆದ ದಶರಥಭೂಪಾಲನ ಕುಮಾರರು. ಇವರು ಶ್ರೀರಾಮ ಲಕ್ಷ್ಮಣರೆಂದು ಜಗತ್ಪ್ರಸಿದ್ಧರಾಗಿದ್ದಾರೆ. ಇವರೀರ್ವರೂ ನಿನ್ನ ಬಳಿಯಲ್ಲಿ ಬಹು ಪುರಾತನ ಕಾಲದಿಂದಲೂ ಇರುವ ಮಹಾ ಮಹಿಮಾನ್ವಿತವಾದ ಶೈವಧನುಸ್ಸನ್ನು ನೋಡಲಪೇಕ್ಷಿಸುತ್ತಾರೆ. ಆದುದರಿಂದದನ್ನು ಇವರಿಗೆ ತೋರುವವನಾಗು " ಎಂದು ನಿರೂಪಿಸಿದನು. ಆಗ ನನ್ನ ತಂದೆಯು ಆ ಮಹರ್ಷಿಯ ಮಾತುಗಳನ್ನು ಕೇಳಿ ಆ ಧನುಸ್ಸನ್ನು ತರಿಸಿದನು. ಆ ಬಳಿಕ ಮಹಾ ಶೂರನಾದ ಆ

ವಿಪ್ರೇಣ ತದ್ಧನುಸ್ಸಮುಪಾನಯತ್ ॥ ೪೭ ॥ ನಿಮೇಷಾಂತರಮಾತ್ರೇಣ ತದಾನಮ್ಯ ಸ ವೀರ್ಯವಾನ್ ॥ ಜ್ಯಾಂ ಸಮಾರೋಪ್ಯ ಝುಡಿತಿ ಪೂರಯಾಮಾಸ ವೀರ್ಯವತ್ ॥ ೪೮ ॥ ತೇನ ಪೂರಯತಾ ವೇಗಾ ನ್ಮಧ್ಯೇಭಗ್ನಂ ದ್ವಿಧಾ ಧನುಃ ॥ ತಸ್ಯಶಬ್ದೋ ಭವದ್ಭೀಮಃ ಪತಿತಸ್ಯಾಶನೇರಿವ ॥ ೪೯ ॥ ತತೋಹಂ ತತ್ರ ರಾಮಾಯ ಪಿತ್ರಾ ಸತ್ಯಾಭಿಸಂಧಿನಾ ॥ ನಿಶ್ಚಿತಾ ದಾತು ಮುದ್ಯಮ್ಯ ಜಲ ಭಾಜನ ಮುತ್ತಮಂ ॥ ೫೦ ॥ ದೀಯಮಾನಾಂ ನತು ತದಾ ಪ್ರತಿಜಗ್ರಾಹ

ನಯತ್ - ತರಿಸಿದನು. ॥ ೪೭ ॥ ವೀರ್ಯವಾನ್ - ಪರಾಕ್ರಮಶಾಲಿಯಾದ, ಸಃ - ಆ ಶ್ರೀರಾಮನು, ನಿಮೇಷಾಂತರಮಾತ್ರೇಣ - ನಿಮಿಷಮಾತ್ರದಲ್ಲಿ, ವೀರ್ಯವತ್ - ಸಾರವತ್ತಾದ, ತತ್ - ಆ ಧನುಸ್ಸನ್ನು, ಆನಮ್ಯ - ಬಗ್ಗಿಸಿ, ಜ್ಯಾಂ - ಹೆದೆಯನ್ನು, ಝುಡಿತಿ - ಶೀಘ್ರವಾಗಿ, ಸಮಾರೋಪ್ಯ - ಏರಿಸಿ, ತತ್ - ಆ ಧನುಸ್ಸನ್ನು, ಪೂರಯಾಮಾಸ ಟಂಕಾರಮಾಡಿದನು. ॥ ೪೮ ॥ ವೇಗಾತ್ - ಜಾಗ್ರತೆಯಾಗಿ, ಪೂರಯತಾ - ಪೂರಿಸುತ್ತಿರುವ, ತೇನ - ಆ ಶ್ರೀರಾಮನಿಂದ, ಮಧ್ಯೇ - ಧನುರ್ಮಧ್ಯದಲ್ಲಿ, ಧನುಃ - ಬಿಲ್ಲು, ದ್ವಿಧಾ - ಎರಡುಭಾಗವಾಗಿ, ಭಗ್ನಂ - ಮುರಿದುಹೋಯಿತು, ತಸ್ಯ - ಆ ಧನುಸ್ಸಿನ, ಶಬ್ದಃ - ಧ್ವನಿಯು, ಪತಿತಸ್ಯ - ಕೆಳಕ್ಕೆಬೀಳುತ್ತಿರುವ, ಅಶನೇರಿವ ಸಿಡಿಲಿನಂತೆ, ಭೀಮಃ-ಭಯಂಕರವಾದುದು, ಅಭವತ್ - ಆಯಿತು. ॥ ೪೯ ॥ ತತಃ - ಬಳಿಕ, ಸತ್ಯಾಭಿಸಂಧಿನಾ - ಸತ್ಯದಲ್ಲಿಯೇ ಅಭಿಲಾಷೆಯುಳ್ಳ, ಪಿತ್ರಾ - ತಂದೆಯಾದ ಜನಕರಾಯನಿಂದ, ತತ್ರ - ಆ ಯಾಗಶಾಲೆಯಲ್ಲಿ, ಉತ್ತಮಂ - ಸರ್ವೋತ್ತಮವಾದ, ಜಲಭಾಜನಂ - ಜಲಪಾತ್ರವನ್ನು, ಉದ್ಯಮ್ಯ - ಎತ್ತಿಕೊಂಡು, ಅಹಂ - ನಾನು, ರಾಮಾಯ - ಶ್ರೀರಾಮನಿಗೆ, ದಾತುಂ - ಕೊಡಲು, ನಿಶ್ಚಿತಾ - ನಿಶ್ಚಯಿಸಲ್ಪಟ್ಟಿನು. ॥ ೫೦ ॥ ತದಾ - ಆ ಕಾಲದಲ್ಲಿ, ರಾಘವಃ - ಶ್ರೀರಾಮನು, ಅಯೋಧ್ಯಾಧಿಪತೇಃ - ಅಯೋಧ್ಯಾಪುರಕ್ಕೆ ರಾಜನಾದ, ಪ್ರಭುಃ - ಅರಸಾದ, ಪಿತುಃ - ತಂದೆಯಾದ ದಶರಥರಾಯನ, ಛಂದಂ - ಅಭಿಪ್ರಾಯವನ್ನು, ಅವಿಜ್ಞಾಯ - ತಿಳದುಕೊಳ್ಳದೆ, ದೀಯಮಾನಾಂ - ಕೊಡಲ್ಪಡುತ್ತಿ

ಶ್ರೀರಾಮಮೂರ್ತಿಯು ಆ ಶೈವಧನುಸ್ಸನ್ನು ಕ್ಷಣಮಾತ್ರದಲ್ಲಿಯೇ ಬಗ್ಗಿಸಿ ಹೆದೆಯನ್ನೇರಿಸಿ, ಬಹು ಜಾಗ್ರತೆಯಾಗಿ ಬಾಣಾರೋಪಣವಂಗೈದನು. ಈ ರೀತಿ ಬಾಣಾರೋಪಣಮಾಡಿ, ಧನುಷ್ಟಂಕಾರಮಾಡಿ ಸೆಳೆಯಲು, ಆ ಶೈವಧನುಸ್ಸು ಮಧ್ಯದಲ್ಲಿ ಮರಿದು ಎರಡು ತುಂಡುಗಳಾಗಿ ನೆಲಕ್ಕುರುಳಿತು. ಹೀಗೆ ಆ ಧನುಸ್ಸು ಮುರಿದು ನೆಲಕ್ಕೆ ಬೀಳುವಾಗ ಸಿಡಿಲಿನಂತೆ ಮಹಾ ಭಯಂಕರವಾದ ಧ್ವನಿಯುಂಟಾಯಿತು. ॥ ೪೬-೪೯ ॥ ಆಗ ಸತ್ಯದಲ್ಲಿಯೇ ಅಭಿರುಚಿಯುಳ್ಳ ನನ್ನ ತಂದೆಯಾದ ಜನಕಭೂಪಾಲನು ಆ ಯಾಗಶಾಲೆಯಲ್ಲಿಯೇ ಉತ್ತಮೋತ್ತಮವಾದ ಉದಕಪಾತ್ರೆಯನ್ನು ಹಿಡಿದು ನನ್ನನ್ನು ವಿಜಯಿಯಾದ ಶ್ರೀರಾಮನಿಗೆ ಪಾಣಿಗ್ರಹಣಮಾಡಿ ಕೊಡಲು ಸಂಕಲ್ಪಿಸಿದನು. ಆ ಸಮಯದಲ್ಲಿ ರಘುಕುಲೋತ್ಪನ್ನನಾದ ಶ್ರೀರಾಮಚಂದ್ರನು ಅಯೋಧ್ಯಾಪಟ್ಟಣಕ್ಕೆ ದೊರೆಯೂ ನನ್ನ ತಂದೆಯೂ ಆದ ದಶರಥರಾಯನ ಆಶಯವನ್ನು ತಿಳಿಯದವನಾಗಿ, ನನ್ನನ್ನು ನನ್ನ ತಂದೆಯಾದ ಜನಕರಾಜನು ತನಗೆ ಕೊಡಲು ನಿಶ್ಚಯಿಸಿದ್ದರೂ ತಾನು ಪರಿಗ್ರಹಿಸದಿದ್ದನು. ಆಗ ನನ್ನ ತಂದೆಯು, ನನ್ನ ಮಾವನೂ, ಜ್ಞಾನದಿಂದಲೂ ವಯಸ್ಸಿನಿಂದಲೂ ವೃದ್ಧನೂ ಆದ, ದಶರಥರಾಯನನ್ನು ಕರೆಯಿಸಿಕೊಂಡು

ರಾಘವಃ ॥ ಅವಿಜ್ಞಾಯ ಪಿತುಶ್ಛಂದ ಮಯೋಧ್ಯಾಧಿಪತೇಃ ಪ್ರಭೋಃ ॥೫೧॥
ತತಶ್ಶ್ವಶುರ ಮಾಮಂತ್ರ್ಯ ವೃದ್ಧಂ ದಶರಥಂ ನೃಪಂ ॥ ಮಮ ಪಿತ್ರಾ ತ್ವಹಂ
ದತ್ತಾ ರಾಮಾಯ ವಿದಿತಾತ್ಮನೇ ॥ ೫೨ ॥ ಮಮ ಚೈವಾಽನುಜಾ ಸಾಧ್ವೀ
ಊರ್ಮಿಳಾ ಪ್ರಿಯದರ್ಶನಾ ॥ ಭಾರ್ಯಾರ್ಥೇ ಲಕ್ಷ್ಮಣಸ್ಯಾಪಿ ಪಿತ್ರಾ ದತ್ತಾ
ಮಮ ಸ್ವಯಂ ॥ ೫೩ ॥ ಏವಂ ದತ್ತಾಸ್ಮಿ ರಾಮಾಯ ತದಾ ತಸ್ಮಿನ್ ಸ್ವಯಂ
ವರೇ ॥ ಅನುರಕ್ತಾಸ್ಮಿ ಧರ್ಮೇಣ ಪತಿಂ ವೀರ್ಯವತಾಂ ವರಂ ॥ ೫೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ
ಅಷ್ಟಾದಶೋತ್ತರಶತತಮಸ್ಸರ್ಗಃ.

ರುವ, (ಮಾಂತು - ನನ್ನನ್ನು,) ನಪ್ರತಿಜಗ್ರಾಹ - ಸ್ವೀಕರಿಸಲಿಲ್ಲ. ॥ ೫೧ ॥ ತತಃ - ಬಳಿಕ, ಮಮ - ನನ್ನ, ಪಿತ್ರಾ - ತಂದೆಯಿಂದ, ಶ್ವಶುರಂ - ಮಾವನಾಗ, ವೃದ್ಧಂ - (ಗೋ × ಮ) ಜ್ಞಾನದಿಂದಲೂ ವಯಸ್ಸಿನಿಂದಲೂ ವೃದ್ಧನಾದ, ದಶರಥಂನೃಪಂ - ದಶರಥಮಹಾರಾಯನನ್ನು, ಆಮಂತ್ರ್ಯ-ಕರೆಯಿಸಿ, ವಿದಿತಾತ್ಮನೇ - ಆತ್ಮಜ್ಞಾನಿಯಾದ, ರಾಮಾಯ - ಶ್ರೀರಾಮನಿಗೆ, ಅಹಂ - ನಾನು, ದತ್ತಾ - ಕೊಡಲ್ಪಟ್ಟೆನು. ॥ ೫೨ ॥ ಮಮ - ನನ್ನ, ಅನುಜಾ - ತಂಗಿಯಾದ, ಸಾಧ್ವೀ - ಗುಣಸಂಪನ್ನೆಯಾದ, ಪ್ರಿಯದರ್ಶನಾ - ಕಣ್ಗಿಂಪಾದ ನೋಟವುಳ್ಳ, ಊರ್ಮಿಳಾಚೈವ - ಊರ್ಮಿಳಾದೇವಿಯೂ, ಮಮ - ನನ್ನ, ಪಿತ್ರಾ - ತಂದೆಯಿಂದ, ಸ್ವಯಂ - ತಾನು, ಲಕ್ಷ್ಮಣಸ್ಯಾಪಿ - ಲಕ್ಷ್ಮಣನಿಗೂ, ಭಾರ್ಯಾರ್ಥೇ - ಪತ್ನ್ಯರ್ಥವಾಗಿ, ದತ್ತಾ - ಕೊಡಲ್ಪಟ್ಟಳು. ॥ ೫೩ ॥ ಏವಂ - ಈ ಪರಿಯಾಗಿ, ತದಾ - ಆ ಕಾಲದಲ್ಲಿ, ತಸ್ಮಿನ್ಸ್ವಯಂವರೇ - ಆ ಸ್ವಯಂವರದಲ್ಲಿ, ರಾಮಾಯ - ಶ್ರೀರಾಮನಿಗೆ, ದತ್ತಾ - ಕೊಡಲ್ಪಟ್ಟವಳು, ಅಸ್ಮಿ - ಆದೆನು, ವೀರ್ಯವತಾಂ - ಶೌರ್ಯವಂತರಲ್ಲಿ, ವರಂ - ಶ್ರೇಷ್ಠನೂ, ಪತಿಂ - ಗಂಡನೂ ಆದ ಶ್ರೀರಾಮನಲ್ಲಿ, ಧರ್ಮೇಣ - ಪಾತಿವ್ರತ್ಯಧರ್ಮದಿಂದ, ಅನುರಕ್ತಾ - ಅನುರಕ್ತಳಾದವಳು, ಅಸ್ಮಿ - ಆಗಿದ್ದೇನೆ. ॥ ೫೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಾದಶೋತ್ತರಶತತಮಸ್ಸರ್ಗಃ.

ಮಹಾತ್ಮನಾದ ಶ್ರೀರಾಮಚಂದ್ರನಿಗೆ ನನ್ನನ್ನು ಧಾರೆಯೆರೆದನು ॥ ೫೦-೫೧ ॥ ಆ ಬಳಿಕ ನನಗೆ ತಂಗಿಯಾಗಿಯೂ, ಮಹಾ ಗುಣಾಢ್ಯಳಾಗಿಯೂ, ಇರುವ ಊರ್ಮಿಳೆಯನ್ನು ನನ್ನ ತಂದೆಯೇ ನನ್ನ ಮೈದುನನಾದ ಲಕ್ಷ್ಮಣಸ್ವಾಮಿಗೆ ಭಾರ್ಯಾರ್ಥವಾಗಿ ವಿವಾಹ ಮಾಡಿ ಕೊಟ್ಟವನಾದನು ॥ ೫೨-೫೩ ॥ ಎಲೌ ಪೂಜ್ಯಳಾದ ಅನುಸೂಯಾದೇವಿಯೆ! ಈ ಪ್ರಕಾರವಾಗಿ ನಾನು ಶ್ರೀರಾಮನಿಗೂ, ಊರ್ಮಿಳೆಯು ಲಕ್ಷ್ಮಣಸ್ವಾಮಿಗೂ, ಕೊಡಲ್ಪಟ್ಟು ವಿವಾಹಿತರಾದೆವು; ನಾನು ಶೂರಾಗ್ರಣಿಯಾದ ಶ್ರೀರಾಮನನ್ನು ಹೊಂದಿ ಪತಿವ್ರತಾಧರ್ಮದಿಂದ ಆತನಲ್ಲಿಯೇ ಅನುರಾಗವುಳ್ಳವಳಾಗಿದ್ದೇನೆ.” ಹೀಗೆ ಮಹಾ ಪತಿವ್ರತೆಯಾದ ಸೀತಾದೇವಿಯು ಅನುಸೂಯಾದೇವಿಯೊಡನೆ ತನ್ನ ವಿವಾಹ ವೃತ್ತಾಂತವನ್ನು ಬಿನ್ನವಿಸಿಕೊಂಡಳು. ॥ ೫೪ ॥

ಇಂತಿದು ಶ್ರೀಸೀತಾದೇವ್ಯುಕ್ತ ಸ್ವವಿವಾಹ ವೃತ್ತಾಂತ ನಿರೂಪಣವೆಂಬ
ನೂರಹದಿನೆಂಟನೆಯ ಸರ್ಗವು ಸಮಾಪ್ತವಾದುದು.

ಅಯೋಧ್ಯಾಕಾಂಡೇ ಏಕೋನವಿಂಶೋತ್ತರಶತತಮಸ್ಸರ್ಗಃ.

ಅನುಸೂಯಾತು ಧರ್ಮಜ್ಞಾ ಶ್ರುತ್ವಾ ತಾಂ ಮಹತೀಂ ಕಥಾಂ ||
ಪರ್ಯಷ್ವಜತ ಬಾಹುಭ್ಯಾಂ ಶಿರಸ್ಯಾಽಘ್ರಾಯ ಮೈಥಿಲೀಂ ||೧|| ವ್ಯಕ್ತಾ
ಕ್ಷರಪದಂ ಚಿತ್ರಂ ಭಾಷಿತಂ ಮಧುರಂ ತ್ವಯಾ || ಯಥಾ ಸ್ವಯಂವರಂ ವೃತ್ತಂ
ತತ್ಸರ್ವಂ ಹಿ ಶ್ರುತಂ ಮಯಾ ||೨|| ರಮೇಽಹಂ ಕಥಯಾ ತೇ ತು ದೃಢಂ
ಮಧುರಭಾಷಿಣಿ! || ರವಿರಸ್ತಂಗತ ಶ್ರೀಮಾ ನುಪೋಹ್ಯ ರಜನೀಂ ಶಿವಾಂ ||೩||
ದಿವಿ ಸಂಪ್ರತಿ ಕೀರ್ಣಾನಾ ಮಾಹಾರಾರ್ಥಂ ಪತತ್ರಿಣಾಂ || ಸಂಧ್ಯಾಕಾಲೇ

ಧರ್ಮಜ್ಞಾ - ಧರ್ಮವನ್ನು ತಿಳಿದಿರುವ, ಅನಸೂಯಾತು - ಅನಸೂಯಾದೇವಿಯಾದರೆ, ಮಹತೀಂ - ದೊಡ್ಡದಾದ, ತಾಂಕಥಾಂ - ಆ ಸ್ವಯಂವರ ಕಥೆಯನ್ನು, ಶ್ರುತ್ವಾ - ಕೇಳಿ, ಮೈಥಿಲೀಂ - ಸೀತಾದೇವಿಯನ್ನು, ಶಿರಸಿ - ಮಂಡೆಯಲ್ಲಿ, ಆಘ್ರಾಯ - ಆಘ್ರಾಣಿಸಿ, ಬಾಹುಭ್ಯಾಂ - ಭುಜಗಳಿಂದ, ಪರ್ಯಷ್ವಜತ - ಅಪ್ಪಿಕೊಂಡಳು. ||೧|| ತ್ವಯಾ - ನಿನ್ನಿಂದ, ವ್ಯಕ್ತಾಕ್ಷರಪದಂ - ಬಹು ಮನೋಹರವಾದ ಅಕ್ಷರಗಳೂ ಪದಗಳೂ ಉಳ್ಳಂತೆ, ಮಧುರಂ - ಮನೋಹರವಾಗಿ, ಚಿತ್ರಂ - ಸ್ವಯಂವರವು, ಯಥಾ - ಹೇಗೆ, ವೃತ್ತಂ - ನಡೆಯಿತೋ, ತಥಾ - ಹಾಗೆ, ಭಾಷಿತಂ - ಹೇಳಲ್ಪಟ್ಟಿತು, ತತ್ಸರ್ವಂ - ಆ ಸಮಸ್ತವೂ, ಮಯಾ - ನನ್ನಿಂದ, ಶ್ರುತಂಹಿ - ಕೇಳಲ್ಪಟ್ಟಿತಷ್ಟೆ. ||೨|| ಹೇ ಮಧುರಭಾಷಿಣಿ - ಎಲೌ ರುಚಿಕರವಾಗಿ ಮಾತನಾಡುವಳೇ, ತೇ - ನಿನ್ನ, ಕಥಯಾ - ಕಥೆಯಿಂದ, ಅಹಂ - ನಾನು, ದೃಢಂ - ನಿಶ್ಚಯವಾಗಿ, ರಮೇ - ಸಂತೋಷಗೊಂಡೆನು, ಶ್ರೀಮಾ೯ - ಸಂಪದ್ಯುಕ್ತನಾದ, ರವಿಃ - ಸೂರ್ಯನು, ಶಿವಾಂ - ಮಂಗಳಕರವಾದ, ರಜನೀಂ - ರಾತ್ರಿಯನ್ನು, ಉಪೋಹ್ಯ - ಸಮೀಪದೇಶವನ್ನು ಹೊಂದಿಸಿ, ಅಸ್ತಂ - ಅಸ್ತಾಚಲವನ್ನು, ಗತಃ -

---

ಶ್ರೀರಾಮಚಂದ್ರನ ಮಡದಿಯಾದ ಸೀತಾದೇವಿಯು ಈ ರೀತಿ ನುಡಿಯಲು, ಎಲ್ಲ ಧರ್ಮಗಳನ್ನು ತಿಳಿದಿರುವ ಅನುಸೂಯಾದೇವಿಯು, ಆ ದೇವಿಯ ಸ್ವಯಂವರದ ಕಥೆಯೆಲ್ಲವನ್ನೂ ಆದರದಿಂದ ಕೇಳಿ ಸಂತಸಪಡುತ್ತ, ಆಕೆಯ ಶಿರವನ್ನಾಘ್ರಾಣಿಸಿ, ಅಲಿಂಗಿಸಿಕೊಂಡು "ಅಮ್ಮಾ ಸೀತಾದೇವಿಯೆ! ವಿಷಯಗಳು ಒಂದಕ್ಕೊಂದು ಸೇರದೆ ಬಹು ಸುಲಭವಾಗಿ ತಿಳಿವ ವರ್ಣಗಳೂ ಪದಗಳೂ ಉಳ್ಳುದಾದಕಾರಣ, ಕಿವಿಗಿಂಪಾಗಿಯೂ, ಬಹು ವಿಚಿತ್ರವಾಗಿಯೂ ಇರುವ, ನೀನದುವರೆವಿಗೂಹೇಳಿದ ಸ್ವಯಂವರದಕಥೆಯನ್ನು ನಡೆದುದು ನಡೆದಂತೆಯೇ ಹೇಳಿರುತ್ತೀಯೆ. ಅದನ್ನು ನಾನು ಆದರದಿಂದ ಕೇಳಿಯೂ ಕೇಳಿದೆನು. ಎಲೌ ಮಧುರಭಾಷಿಣಿಯೆ! ನೀನು ಹೇಳಿದ ಸ್ವಯಂವರ ಕಥೆಯನ್ನು ಕೇಳಿ ನಿಜವಾಗಿಯೂ ಸಂತೋಷಪಟ್ಟದ್ದೇನೆ. ||೧-೩|| ಮಹಾ ಪ್ರಭಾಸಂಪನ್ನನಾದ ದಿನಕರನು ಅಸ್ತಗಿರಿಯನ್ನೈದಿದನು. ಹಗಲಿನಲ್ಲಿ ಆಹಾರಾರ್ಥವಾಗಿ ಅಲ್ಲಲ್ಲಿ ಚದುರಿಹೋಗಿದ್ದ ಪಕ್ಷಿಗಳು ತಮ್ಮ ತಮ್ಮ ಗೂಡು

ನಿಲೀನಾನಾಂ ನಿದ್ರಾರ್ಥಂ ಶ್ರೂಯತೇ ಧ್ವನಿಃ ||೪|| ಏತೇಚಾ ಪ್ಯಭಿಷೇಕಾರ್ದ್ರಾ ಮುನಯಃ ಕಲಶೋದ್ಯತಾಃ || ಸಹಿತಾ ಉಪವರ್ತಂತೇ ಸಲಿಲಾಪ್ಲುತ ವಲ್ಕಲಾಃ || ೫ || ಋಷೀಣಾ ಮಗ್ನಿಹೋತ್ರೇಷು ಹುತೇಷು ವಿಧಿಪೂರ್ವಕಮ್ || ಕಪೋತಾಂಗಾರುಣೋ ಧೂಮೋ ದೃಶ್ಯತೇ ಪವನೋದ್ಧತಃ || ೬ || ಅಲ್ಪಪರ್ಣಾಹಿ ತರವೋ ಘನೀಭೂತಾ ಸ್ಸಮಂತತಃ || ವಿಪ್ರಕೃಷ್ಟೇಪಿ ದೇಶೇಸ್ಮಿ ನಪ್ರಕಾಶಂತಿ ವೈ ದಿಶಃ || ೭ || ರಜನೀಚರ ಸತ್ವಾನಿ ಪ್ರಚರಂತಿ ಸಮಂತತಃ || ತಪೋವನ

ಹೊಂದಿದನು, ದಿವಸಂ - ಹಗಲು, ಆಹಾರಾರ್ಥಂ - ಆಹಾರನಿಮಿತ್ತವಾಗಿ, ಪ್ರತಿಕೀರ್ಣಾನಾಂ - ಸ್ವೇಚ್ಛೆಯಾಗಿ ಹೊರಟುಹೋಗಿರುವ, ಸಂಧ್ಯಾಕಾಲೇ - ಸಾಯಂಕಾಲದಲ್ಲಿ, ನಿದ್ರಾರ್ಥಂ - ನಿದ್ರಾನಿಮಿತ್ತವಾಗಿ, ನಿಲೀನಾನಾಂ - ತಮ್ಮ ತಮ್ಮ ಗೂಡುಗಳನ್ನು ಸೇರಿರುವ, ಪತತ್ರಿಣಾಂ - ಪಕ್ಷಿಗಳ, ಧ್ವನಿಃ - ಶಬ್ದವು, ಶ್ರೂಯತೇ - ಕೇಳಲ್ಪಡುತ್ತದೆ. || ೩-೪ || ಏತೇಚಮುನಯಃ - ಈ ಋಷಿಗಳೂ, ಅಭಿಷೇಕಾರ್ದ್ರಾಃ - ಸ್ನಾನದಿಂದನೆನೆದು, ಕಲಶೋದ್ಯತಾಃ - ಎತ್ತಿಹಿಡಿದ ಉದಕಕುಂಭಗಳುಳ್ಳವರಾಗಿ, ಸಹಿತಾಃ - ಒಬ್ಬರಿಗೊಬ್ಬರು ಸೇರಿದವರಾಗಿ, ಸಲಿಲಾಪ್ಲುತವಲ್ಕಲಾಃ - ನೀರಿನಿಂದ ನೆನೆಯಿಸಲ್ಪಟ್ಟ ನಾರುಮಡಿಗಳುಳ್ಳವರಾಗಿ, ಉಪವರ್ತಂತೇ - ಸಮೀಪದಲ್ಲಿಯೇ ಬರುತ್ತಿದ್ದಾರೆ. || ೫ || ಋಷೀಣಾಂ - ಋಷಿಗಳ, ವಿಧಿಪೂರ್ವಕಂ - ಶಾಸ್ತ್ರೋಕ್ತವಾಗಿ, ಹುತೇಷು - ಹೋಮಮಾಡಲ್ಪಟ್ಟ, ಅಗ್ನಿಹೋತ್ರೇಷು - ಅಗ್ನಿಹೋತ್ರಗಳಲ್ಲಿ, ಕಪೋತಾಂಗಾರುಣಃ - ಕಪೋತಪಕ್ಷಿಗಳ ಶರೀರದಂತೆ ಸ್ವಲ್ಪ ಕೆಂಪಾಗಿರುವ, ಧೂಮಃ - ಹೊಗೆಯು, ಪವನೋದ್ಧೂತಃ - ಗಾಳಿಯಿಂದ ಹಾರಿಸಲ್ಪಟ್ಟುದಾಗಿ, ದೃಶ್ಯತೇ - ಕಾಣಲ್ಪಡುತ್ತದೆ. || ೬ || ಅಲ್ಪಪರ್ಣಾ - ಸ್ವಲ್ಪವಾದ ಎಲೆಗಳುಳ್ಳ, ತರವಃ-ಗಿಡಗಳು, ಸಮಂತತಃ - ಎಲ್ಲೆಡೆಯಲ್ಲಿಯೂ, ಘನೀಭೂತಾಃ - ಒತ್ತಾಗುತ್ತ, ವಿಪ್ರಕೃಷ್ಟೇಪಿ - ದೂರವಾದರೂ, ಅಸ್ಮಿನ್ದೇಶೆ - ಈ ಪ್ರದೇಶದಲ್ಲಿ, ದಿಶಃ - ದಿಕ್ಕುಗಳು, ನಪ್ರಕಾಶಂತಿವೈ - ಪ್ರಕಾಶಿಸುವದಿಲ್ಲವಷ್ಟೆ. || ೭ || ರಜನೀಚರಸತ್ವಾನಿ - ರಾತ್ರಿಯಲ್ಲಿ ಸಂಚರಿಸುವ ಜಂತುವಿಶೇಷಗಳು, ಸಮಂತತಃ - ಎಲ್ಲಾ ಕಡೆಯಲ್ಲಿಯೂ, ಪ್ರಚರಂತಿ - ಸಂಚರಿಸುತ್ತವೆ, ಏತೇ - ಈ, ತಪೋವನಮೃಗಾಃ - ತಪೋವನದಲ್ಲಿರುವ ಮೃಗಜಾತಿಗಳು, ವೇದಿತೀರ್ಥೇಷು - ಪುಣ್ಯಕರಗಳಾದ ವೇದಿಕೆಗಳಲ್ಲಿ, ಶೇರತೇ - ಮಲಗಿ

ಗಳನ್ನು ಸೇರುತ್ತಿರುವುವು. ಈ ರೀತಿ ಗೂಡುಗಳನ್ನು ಸೇರುವಾಗ ಅವು ಮಾಡುವ ಕಿಲಕಿಲ ನಾದವು ಕೇಳಿಸುತ್ತಿರುವುದು. || ೪ || ಇದಲ್ಲದೆ ನಮ್ಮ ಆಶ್ರಮದ ಸಮೀಪದಲ್ಲಿರುವ ಮುನಿಪುಂಗವರೆಲ್ಲರೂ ಸ್ನಾನಮಂಗೈದು, ಜಲಪೂರಿತ ಕುಂಭಗಳನ್ನು ಹೊತ್ತು ಜತೆಗೂಡಿ ಆರ್ದ್ರ ವಸ್ತ್ರಗಳುಟ್ಟು ನಿಜಾಶ್ರಮಗಳನ್ನು ಕುರಿತು ಬರುತ್ತಿದ್ದಾರೆ. ಶಾಸ್ತ್ರೋಕ್ತವಾಗಿ ಮುನಿವರೇಣ್ಯರಿಂದ ಹೋಮ ಮಾಡಲ್ಪಡುವ ಅಗ್ನಿಕುಂಡದಲ್ಲಿ ಕಪೋತ (ಪಾರಿವಾಳ) ಪಕ್ಷಿಯ ಶರೀರದಂತೆ ಸ್ವಲ್ಪ ಕೆಂಪಾಗಿರುವ ಧೂಮವು ವಾಯುವಿನಿಂದ ಹಾರಿಸಿದುದಾಗಿ ಕಂಗೊಳಿಸುತ್ತಿದೆ; ಮಾತ್ರವಲ್ಲದೆ ಸ್ವಲ್ಪವಾದ ಎಲೆಗಳುಳ್ಳ ಗಿಡಗಳೆಲ್ಲವೂ ಸುತ್ತಲೂ ಒಂದಕ್ಕೊಂದು ಸೇರಿಕೊಂಡಿರುವುವು. ಆದುದರಿಂದಲೇ ದೂರದಲ್ಲಿ ಕಾಣಿಸುವ ದಿಕ್ಕುಗಳು ಬೆಳಗುತ್ತಿಲ್ಲ. ರಾತ್ರಿಯ ಕಾಲಗಳಲ್ಲಿ ಸಂಚರಿಸುವ ಕ್ರಿಮಿಕೀಟಾದಿಗಳೆಲ್ಲವೂ ನಿರಾತಂಕವಾಗಿ ಸಂಚರಿಸು

ಮೃಗಾಹ್ಯೇತೇ ವೇದಿತೀರ್ಥೇಷು ಶೇರತೇ ||೮|| (೧) ಸಂಪ್ರವೃತ್ತಾ ನಿಶಾ ಸೀತೇ! ನಕ್ಷತ್ರ ಸಮಲಂಕೃತಾ || ಜೋತ್ಸ್ನಾ ಪ್ರಾವರಣ ಶ್ಚಂದ್ರೋ ದೃಶ್ಯತೇಽಭ್ಯುದಿತೇಂಬರೇ || ೯ || ಗಮ್ಯತಾ ಮನುಜಾನಾಮಿ ರಾಮಸ್ಯಾಽನುಚರೀಭವ || ಕಥಯಂತ್ಯಾಹಿ ಮಧುರಂ ತ್ವಯಾಹಂ ಪರಿತೋಷಿತಾ || ೧೦ || ಅಲಂಕುರುಚ ತಾವತ್ತ್ವಂ ಪ್ರತ್ಯಕ್ಷಂ ಮಮ ಮೈಥಿಲಿ! || ಪ್ರೀತಿಂ ಜನಯ ಮೇ ವತ್ಸೇ! ದಿವ್ಯಾಲಂಕಾರ ಶೋಭಿತಾ || ೧೧ || ಸಾ ತದಾ ಸಮಲಂಕೃತ್ಯ ಸೀತಾ ಸುರಸುತೋ

ಕೊಳ್ಳುತ್ತವೆ. || ೮ || ಹೇ ಸೀತೇ - ಎಲೌ ಸೀತಾದೇವಿಯೇ, ಸಂಪ್ರವೃದ್ಧಾ - ವೃದ್ಧಿಗೊಂಡ, ನಿಶಾ - ರಾತ್ರಿಯು, ನಕ್ಷತ್ರಸಮಲಂಕೃತಾ - ನಕ್ಷತ್ರಗಳಿಂದ ಅಲಂಕೃತವಾಗಿದೆ, ಜ್ಯೋತ್ಸ್ನಾಪ್ರಾವರಣಃ - ಬೆಳದಿಂಗಳೇ ಹೊದಿಕೆಯಾಗುಳ್ಳ, ಚಂದ್ರಃ - ಚಂದ್ರನು, ಅಂಬರೇ - ಅಂತರಿಕ್ಷದಲ್ಲಿ, ಅಭ್ಯುದಿತಃ - ಉದಯವನ್ನು ಹೊಂದಿ, ದೃಶ್ಯತೇ - ಕಾಣುತ್ತಾನೆ. || ೯ || ಅಹಂ - ನಾನು, ಮಧುರಂ- ಮಧುರವಾಗಿ, ಕಥಯಂತ್ಯಾ - ಮಾತನಾಡುತ್ತಿರುವ, ತ್ವಯಾ-ನಿನ್ನಿಂದ, ಪರಿತೋಷಿತಾ - ಸಂತೋಷಿಸಲ್ಪಟ್ಟೆನು, ಗಮ್ಯತಾಂ - ತೆರಳು, ಅನುಜಾನಾಮಿ - ಅನುಜ್ಞೆಯನ್ನು ಕೊಟ್ಟಿದ್ದೇನೆ, ರಾಮಸ್ಯ - ಶ್ರೀರಾಮನಿಗೆ, ಅನುಚರೀ - ಸೇವಕಳು, ಭವ - ಆಗು. || ೧೦ || ಹೇ ಮೈಥಿಲಿ - ಎಲೌ ಸೀತಾದೇವಿಯೇ, ಮಮ - ನನಗೆ, ಪ್ರತ್ಯಕ್ಷಂತಾವತ್ - ಎದುರಾಗಿ, ತ್ವಂ-ನೀನು, ಆತ್ಮಾನಂ- ನಿನ್ನನ್ನು, ಅಲಂಕುರು - ಅಂಗರಾಗಾದಿಗಳಿಂದ ಅಲಂಕಾರಮಾಡಿಕೋ, ಹೇ ವತ್ಸೇ - ಎಲೌ ಮಗಳೇ, ದಿವ್ಯಾಲಂಕಾರಶೋಭಿತಾ - ದೇವತಾಸಂಬಂಧವಾದ ಗಂಧಪುಷ್ಪಗಳೇ ಮೊದಲಾಗುಳ್ಳ

ತ್ತಿರುವುವು. ತಪೋವನದ ಮೃಗಗಳೆಲ್ಲವೂ ಪುಣ್ಯಕರಗಳಾದ ವೇದಿಕೆಗಳಲ್ಲಿ ಮಲಗಿಕೊಂಡಿರುವುವು. || ೫-೮ || ರಾತ್ರಿಯು ಅಧಿಕವಾಗಿ, ಅಂಬರತಲವು ನಕ್ಷತ್ರಾಲಂಕೃತವಾಗಿರುವುದು. ಚಂದ್ರನುದಯಿಸಿ ಸುತ್ತುಮುತ್ತಲೂ ಬೆಳದಿಂಗಳರಳಿರುವುದು. ಎಲೌ ಸೀತಾದೇವಿಯೆ! ಕೇಳಲಿಂಪೊಗೆವ ನಿನ್ನ ವಚನಗಳಿಂದ ಬಹು ಸಂತೋಷವಾಯಿತು. ಈಗ ನಿದ್ರಾಕಾಲವು ಪ್ರಾಪ್ತವಾದುದರಿಂದ ಜಾಗ್ರತೆಯಾಗಿ ಶ್ರೀರಾಮನ ಬಳಿಸಾರಿ ಆತನನ್ನು ಸೇವಿಸು. ಎಲೌ ಮಿಥಿಲರಾಜಕುಮಾರಿಯಾದ ಸೀತಾದೇವಿಯೆ! ನನ್ನೆದುರಾಗಿಯೇ ನಾನಿತ್ತ ಅಂಗರಾಗಾದಿ ಸಮಸ್ತಾಭರಣಗಳನ್ನು ಅಲಂಕರಿಸಿಕೊಂಡು ನನ್ನನ್ನಾನಂದಗೊಳಿಸಿ, ನಿನ್ನ ಪತಿಯ ಬಳಿಗೈದುವವಳಾಗು" ಎಂದು ಹೇಳಿದಳು. ಅತ್ರಿಮಹರ್ಷಿಯ ಮಡದಿಯಾದ ಅನು

ಟಿ. (೧) ಈ ಶ್ಲೋಕದಲ್ಲಿ ಚಂದ್ರೋದಯವನ್ನು ವರ್ಣಿಸಿರುವುದರಿಂದ ಈ ವಿಷಯವು ವಿದಿತವಾಗುತ್ತದೆ. ಹಿಂದೆ ಭರತಕುಮಾರನು ಅಣ್ಣದೇವನ ದರ್ಶನೇಚ್ಛುವಾಗಿ ಚಿತ್ರಕೂಟಪರ್ವತಕ್ಕೆ ಬಂದುದು ಜ್ಯೇಷ್ಠಮಾಸದಲ್ಲೆಂದೂ, ಆಮೇಲೆ ಶ್ರೀರಾಮನು ಕಾರ್ತೀಕಮಾಸ ಪರ್ಯಂತವೂ ಅಲ್ಲಿಯೇ ಇದ್ದನೆಂದೂ ಹೇಳಿದೆ. ಇದಾದ (ವರ್ಷಾಕಾಲವಾದ) ಮೇಲೆ ಶ್ರೀರಾಮನು ಅತ್ರಿಮಹರ್ಷಿಯ ಆಶ್ರಮಕ್ಕೈತಂದನೆಂದೂ ಉಕ್ತವಾಯಿತು. ಇಲ್ಲಿ ಚಂದ್ರೋದಯ ವರ್ಣನೆಯಿಂದ ಮಾರ್ಗಶೀರ್ಷ ಮಾಸವು ಅನುಮೇಯಿಸಲಾಗುತ್ತದೆ. ಏವಂಚ ಕಾರ್ತೀಕ ಮಾಸದ ಪ್ರತಿಪತ್ತಿನ ದಿನ ಚಿತ್ರಕೂಟದಿಂದ ಶ್ರೀ ಸೀತಾರಾಮ ಲಕ್ಷ್ಮಣರು ಅತ್ರಿಮುನಿಯ ಆಶ್ರಮಕ್ಕೈತಂದರೆಂದು ತಿಳಿಯುತ್ತದೆ.

(ಇದು ರಾಮ ಪಂಡಿತರ ಅಭಿಪ್ರಾಯ.)

ಪಮಾ ॥ ಪ್ರಣಮ್ಯ ಶಿರಸಾ ತಸ್ಯೈ ರಾಮಂ ತ್ವಭಿಮುಖೀ ಯಯೌ ॥ ೧೨ ॥
ತಥಾ ತು ಭೂಷಿತಾಂ ಸೀತಾಂ ದದರ್ಶ ವದತಾಂ ವರಃ ॥ ರಾಘವಃ ಪ್ರೀತಿ
ದಾನೇನ ತಪಸ್ವಿನ್ಯಾ ಜಹರ್ಷಚ ॥ ೧೩ ॥ ನ್ಯವೇದಯ ತ್ತತಸ್ಸರ್ವಂ ಸೀತಾ
ರಾಮಾಯ ಮೈಥಿಲೀ ॥ ಪ್ರೀತಿದಾನಂ ತಪಸ್ವಿನ್ಯಾ ವಸನಾಭರಣಸ್ರಜಂ ॥೧೪॥
(೧)ಪ್ರಹೃಷ್ಟ ಸ್ತ್ವಭವ ದ್ರಾಮೋ ಲಕ್ಷ್ಮಣಶ್ಚ ಮಹಾರಥಃ ॥ ಮೈಥಿಲ್ಯಾ ಸ್ಸತ್ಕ್ರಿ

ಅಲಂಕಾರಗಳಿಂದ ಹೊಳೆಯುತ್ತ, ಮೇ-ನನಗೆ, ಪ್ರೀತಿಂ-ಸಂತೋಷವನ್ನು, ಜನಯ-ಉಂಟುಮಾಡು. ॥ ೧೧ ॥ ಸುರಸುತೋಪಮಾ - ದೇವಕನ್ನಿಕೆಗೆ ಸದೃಶಳಾದ, ಸಾಸೀತಾ - ಆ ಸೀತಾದೇವಿಯು, ತಥಾ - ಹಾಗೆಯೇ, ಸಮಲಂಕೃತ್ಯ - ಅಲಂಕಾರಮಾಡಿಕೊಂಡು, ತಸ್ಯೈ - ಆ ಅನಸೂಯಾದೇವಿಗೆ, ಶಿರಸಾ - ಶಿರಸ್ಸಿನಿಂದ, ಪ್ರಣಮ್ಯ - ನಮಸ್ಕರಿಸಿ. ರಾಮಂತು - ಶ್ರೀರಾಮನನ್ನು ಕುರಿತು, ಅಭಿಮುಖೀ - ಎದುರಾಗಿ, ಯಯೌ - ತೆರಳಿದಳು. ॥ ೧೨ ॥ ತಥಾತು - ಆಪರಿಯಾಗಿ, ಭೂಷಿತಾಂ- ಅಲಂಕಾರಮಾಡಲ್ಪಟ್ಟ, ಸೀತಾಂ - ಸೀತಾದೇವಿಯನ್ನು, ವದತಾಂ - ಮಾತನಾಡುವರಲ್ಲಿ, ವರಃ - ಶ್ರೇಷ್ಠನಾದ, ರಾಘವಃ - ಶ್ರೀರಾಮನು, ದದರ್ಶ - ಕಂಡನು, ತಪಸ್ವಿನ್ಯಾಃ - ತಪಸ್ವಿನಿಯಾದ ಅನುಸೂಯಾದೇವಿಯ, ಪ್ರೀತಿದಾನೇನ - ವಿಶ್ವಾಸಪೂರ್ವಕವಾದ ಅಲಂಕಾರಪ್ರದಾನದಿಂದ, ಜಹರ್ಷಚ - ಸಂತೋಷಗೊಂಡನು. ॥ ೧೩ ॥ ತತಃ - ಬಳಿಕ, ಮೈಥಿಲೀ - ಜನಕರಾಯನ ಮಗಳಾದ, ಸೀತಾ- ಸೀತಾದೇವಿಯು, ತಪಸ್ವಿನ್ಯಾಃ - ಋಷಿಪತ್ನಿಯಾದ ಅನಸೂಯಾದೇವಿಯ, ಪ್ರೀತಿದಾನಂ - ವಿಶ್ವಾಸಪೂರ್ವಕವಾಗಿ ದಾನರೂಪವಾದ, ಸರ್ವಂ - ಸಮಸ್ತವಾದ, ವಸನಾಭರಣಸ್ರಜಂ - ವಸ್ತ್ರಾಭರಣಮಾಲಿಕೆಗಳನ್ನು, ರಾಮಾಯ - ಶ್ರೀರಾಮನಿಗೆ, ನ್ಯವೇದಯತ್ - ತೋರಿದಳು. ॥ ೧೪ ॥ ರಾಮಃ - ಶ್ರೀರಾಮನು, ಮಹಾರಥಃ - ಮಹಾರಥಿಕನಾದ, ಲಕ್ಷ್ಮಣಶ್ಚ - ಲಕ್ಷ್ಮಣನೂ, ಮಾನುಷೇಷು -

ಸೂಯಾದೇವಿಯು ಈ ರೀತಿ ನುಡಿದವಳಾಗಲು, ದೇವಕನ್ನೆಗೆ ಸಮಾನಳಾದ ಆ ಸೀತಾದೇವಿಯು ಆಕೆಯು ಅಭಿಮತದಂತೆ ಆ ಆಭರಣಗಳೆಲ್ಲವನ್ನೂ ಉಚಿತ ರೀತಿಯಲ್ಲಲಂಕರಿಸಿಕೊಂಡು ಆ ದೇವಿಯನ್ನು ತಲೆಬಾಗಿ ನಮಸ್ಕರಿಸಿ ಶ್ರೀರಾಮಮೂರ್ತಿಯ ಬಳಿಗೈದಿದಳು. ॥ ೯-೧೨ ॥ ಮಾತನಾಡುವುದರಲ್ಲಿ ಮಹಾ ಚತುರನಾದ ಶ್ರೀರಾಮನು, ಅಂತು ದಿವ್ಯವಾಗಿ ಅಲಂಕರಿಸಿಕೊಂಡು ತನ್ನ ಬಳಿ ಸಾರಿರುವ ಸೀತಾದೇವಿಯನ್ನು ನೋಡಿ ಮಹದಾನಂದಭರಿತನಾಗಿ, ಆ ಅನುಸೂಯಾದೇವಿಯಿತ್ತ ಪ್ರೀತಿದಾನದಿಂದ ಸಂತಸವಾಂತನು. ಆ ಸಮಯದಲ್ಲಿ ಶ್ರೀರಾಮ ಪತ್ನಿಯಾದ ಸೀತಾದೇವಿಯು, ಅನುಸೂಯಾದೇವಿಯು ತನಗಿತ್ತ, ಪ್ರೀತಿದಾನರೂಪವಾದ, ಅಂಗರಾಗ, ವಸ್ತ್ರಾಭರಣಗಳು, ಪುಷ್ಪಮಾಲಿಕೆಗಳು ಇವುಗಳೆಲ್ಲವನ್ನೂ

ಟಿ. (೧) ಇಲ್ಲಿ ಶ್ರೀರಾಮಲಕ್ಷ್ಮಣರಿಬ್ಬರೂ ಸಂತೋಷಪಟ್ಟರೆಂಬುದಕ್ಕೆ ಈ ಕಾರಣವು ಕೂಡುತ್ತದೆ. "ಅನುಸೂಯಾದೇವಿಯು ಸೀತಾದೇವಿಗಿತ್ತ ಮಂಗಳದ್ರವ್ಯಗಳು ಯಾವಾಗಲೂ ಒಂದೇ ರೀತಿಯಾಗಿರುವುವೆಂದೂ, ಎಂದಿಗೂ ಬಣ್ಣ ಕೆಡತಕ್ಕವುಗಳಲ್ಲವೆಂದೂ, ಯಾವಾಗಲೂ ಪರಿಮಳಯುಕ್ತವಾಗಿಯೇ ಇರತಕ್ಕುವೆಂದೂ, ಆಕೆಯಿತ್ತ ಪೂಮಾಲಿಕೆಯು ಎಂದಿಗೂ ಮಾಲಿನ್ಯ ಹೊಂದತಕ್ಕುದಲ್ಲವೆಂದೂ, ಇಂತಹ ಪದಾರ್ಥಗಳು ಭೂಲೋಕದಲ್ಲೆಲ್ಲೂ ದೊರಕುವುದಿಲ್ಲವೆಂದೂ ಸಂತೋಷಪಟ್ಟರು."

ಯಾಂ ದೃಷ್ಟ್ವಾ ಮಾನುಷೇಷು ಸುದುರ್ಲಭಾಂ ‖ ೧೫ ‖ ತತಸ್ತಾಂ ಶರ್ವರೀಂ ಪ್ರೀತಃ ಪುಣ್ಯಾಂ ಶಶಿನಿಭಾನನಃ ‖ ಅರ್ಚಿತ ಸ್ತಾಪಸೈ ಸ್ಸಿದ್ಧೈ ರುವಾಚ ರಘುನಂದನಃ ‖ ೧೬ ‖ ತಸ್ಯಾಂ ರಾತ್ರ್ಯಾಂ ವ್ಯತೀತಾಯಾ ಮಭಿಷಿಚ್ಯ ಹುತಾಗ್ನಿಕಾ ‖ ಆಪೃಚ್ಛೇತಾಂ ನರವ್ಯಾಘ್ರೌ ತಾಪಸಾ ನ್ವನಗೋಚರಾ ‖ ೧೭ ‖ ತಾವೂಚು ಸ್ತೇ ವನಚರಾ ಸ್ತಾಪಸಾ ಧರ್ಮಚಾರಿಣಃ ‖ ವನಸ್ಯ ತಸ್ಯ ಸಂಚಾರಂ ರಾಕ್ಷಸೈ ಸ್ಸಮಭಿಪ್ಲುತಂ ‖ ೧೮ ‖ ರಕ್ಷಾಂಸಿ ಪುರುಷಾದಾನಿ ನಾನಾರೂಪಾಣಿ

ಮನುಷ್ಯಲೋಕವಾಸಿಗಳಲ್ಲಿ, ಸುದುರ್ಲಭಾಂ - ಹೊಂದಲಸಾಧ್ಯವಾದ, ಮೈಥಿಲ್ಯಾಃ-ಸೀತಾದೇವಿಯ, ಸತ್ಕ್ರಿಯಾಂ - ಅಲಂಕಾರವನ್ನು, ದೃಷ್ಟ್ವಾ - ಕಂಡು, ಪ್ರಹೃಷ್ಟಃ - ಸಂತೋಷಗೊಂಡವನು, ಅಭವತ್ - ಆದನು. ‖ ೧೫ ‖ ತತಃ - ಬಳಿಕ, ಶಶಿನಿಭಾನನಃ - ಚಂದ್ರನಿಗೆ ಸಮಾನವಾದ ಮುಖವುಳ್ಳ, ರಘುನಂದನಃ - ಶ್ರೀರಾಮನು, ಸಿದ್ಧೈಃ - ಯೋಗಸಿದ್ಧರಾದ, ತಾಪಸೈಃ - ಋಷಿಗಳಿಂದ, ಅರ್ಚಿತಃ - ಪೂಜಿತನಾದ, ಪ್ರೀತಃ - ಸಂತೋಷಗೊಂಡವನಾಗಿ, ಪುಣ್ಯಾಂ - ಪುಣ್ಯಕರವಾದ, ತಾಂ ಶರ್ವರೀಂ - ಆ ರಾತ್ರಿಯಲ್ಲಿ, ಉವಾಸ - ಇದ್ದನು. ‖ ೧೬ ‖ ತಸ್ಯಾಂರಾತ್ರ್ಯಾಂ - ಆ ರಾತ್ರಿಯು, ವ್ಯತೀತಾಯಾಂ - ಕಳೆದುಹೋಗಲು, ನರವ್ಯಾಘ್ರೌ - ಪುರುಷಶ್ರೇಷ್ಠರಾದ ರಾಮ ಲಕ್ಷ್ಮಣರು, ಅಭಿಷಿಚ್ಯ-ಸ್ನಾನಮಾಡಿ, ಹುತಾಗ್ನಿಕಾ-ಹೋಮಮಾಡಲ್ಪಟ್ಟ ಯಜ್ಞೇಶ್ವರನುಳ್ಳವರಾಗಿ, ವನಗೋಚರಾ-ವನವಾಸಿಗಳಾದ, ತಾಪಸಾ - ಋಷಿಗಳನ್ನು ಕುರಿತು, ಆಪೃಚ್ಛೇತಾಂ-ಅಪ್ಪಣೆಕೇಳಿದರು. ‖೧೭‖ ವನಚರಾಃ - ವನದಲ್ಲೇ ಸಂಚಾರಿಗಳಾದ, ಧರ್ಮಚಾರಿಣಃ - ಧರ್ಮಾನುಷ್ಠಾನದಲ್ಲಿಯೇ ಆಸಕ್ತರಾದ, ತೇತಾಪಸಾಃ - ಆ ಋಷಿಗಳು, ತೌ - ಆ ರಾಮಲಕ್ಷ್ಮಣರನ್ನು ಕುರಿತು, ರಾಕ್ಷಸೈಃ - ರಕ್ಕಸರಿಂದ, ತಸ್ಯವನಸ್ಯ - ಆ ವನದ, ಸಂಚಾರಂ - ಸಂಚಾರವನ್ನು, ಸಮಭಿಪ್ಲುತಂ - ವಿಘ್ನಮಾಡಲ್ಪಟ್ಟುದನ್ನಾಗಿ, ಊಚುಃ - ಹೇಳಿದರು. ‖ ೧೮ ‖ ಹೇ ರಾಘವ-ಎಲೈ ಶ್ರೀರಾಮನೇ, ನಾನಾರೂಪಾಣಿ -

ಆತನಿಗೆ ತೋರಿದಳು. ಆಗ ಶ್ರೀರಾಮನೂ, ಮಹಾರಥಿಕನಾದ ಲಕ್ಷ್ಮಣಸ್ವಾಮಿಯೂ, ಮಾನವ ಪ್ರಪಂಚದಲ್ಲೆಲ್ಲಿಯೂ ದೊರೆಯದ, ಆ ಸೀತಾದೇವಿಯ ಅಲಂಕಾರವನ್ನು ನೋಡಿ ಬಹುವಾಗಿ ಸಂತೋಷಗೊಂಡರು. ‖ ೧೪-೧೫ ‖ ಆ ಬಳಿಕ ಶ್ರೀರಾಮಮೂರ್ತಿಯು, ಚಂದ್ರನಂತೆ ಪ್ರಕಾಶಮಾನವಾದ ಮುಖವುಳ್ಳವನಾಗಿ, ತಪಸ್ಸಿದ್ಧರಾದ ಮಹಾ ಮುನಿಗಳಿಂದ ಪೂಜೆಯನ್ನು ಕೈಕೊಂಡು. ಅಂದಿನ ರಾತ್ರಿಯನ್ನು ಆ ಅತ್ರಿಮುನಿಯ ಆಶ್ರಮದಲ್ಲಿಯೇ ಸಂತೋಷವಾಗಿ ಕಳೆದವನಾದನು. ಹೀಗೆ ಆ ರಾತ್ರಿಯು ಸುಖವಾಗಿ ಕಳೆಯಲು, ಮಾರನೆಯ ದಿನ ಪ್ರಾತಃಕಾಲದಲ್ಲಿ ಪುರುಷೋತ್ತಮರಾದ ಆ ಶ್ರೀರಾಮಲಕ್ಷ್ಮಣರು ಸ್ನಾನವಂಗೈದು, ಔಪಾಸನಾದಿ ನಿತ್ಯಕರ್ಮಗಳೆಲ್ಲವನ್ನೂ ಮುಗಿಸಿಕೊಂಡು, ಅಲ್ಲಿನ ಮುನಿಪುಂಗವರ ಅಣತಿಯನ್ನು ಹೊಂದಲು ಅವರನ್ನು ಕೇಳಿದರು. ‖ ೧೬-೧೭ ‖ ಆ ಸಮಯದಲ್ಲಿ ವನದಲ್ಲಿಯೇ ಸಂಚರಿಸುವವರಾದ ಆ ಮುನಿಶ್ರೇಷ್ಠರು ಧರ್ಮೈಕದೃಷ್ಟಿಗಳಾದ ಆ ಶ್ರೀರಾಮಲಕ್ಷ್ಮಣರನ್ನು ಕುರಿತು, "ಅಯ್ಯಾ ರಾಜಕುವರರೆ! ನಾವು ಈ ಅರಣ್ಯದಲ್ಲಿ ಸಂಚರಿಸದಂತೆ ಇಲ್ಲಿನ ರಾಕ್ಷಸರು ನಮ್ಮನ್ನು ಪೀಡಿಸುತ್ತಿರುವರು. ಓ ರಘುವಂಶೋತ್ಪನ್ನನೆ!

ರಾಘವ! ॥ ವಸಂತ್ಯಸ್ಮಿನ್ ಮಹಾರಣ್ಯೇ ವ್ಯಾಳಾಶ್ಚ ರುಧಿರಾಶನಾಃ ॥ ೧೯ ॥
ಉಚ್ಛಿಷ್ಟಂ ವಾ ಪ್ರಮತ್ತಂ ವಾ ತಾಪಸಂ ಧರ್ಮಚಾರಿಣಂ ॥ ಅದಂತ್ಯಸ್ಮಿ
ನ್ಮಹಾರಣ್ಯೇ ತಾನ್ನಿವಾರಯ ರಾಘವ! ॥ ೨೦ ॥ ಏಷಪಂಥಾ ಮಹರ್ಷೀಣಾಂ
ಫಲಾನ್ಯಾಹರತಾಂ ವನೇ ॥ ಅನೇನತು ವನಂ ದುರ್ಗಂ ಗಂತುಂ ರಾಘವ!
ತೇ ಕ್ಷಮಂ ॥ ೨೧ ॥

ಇತೀವ ತೈಃ ಪ್ರಾಂಜಲಿಭಿ ಸ್ತಪಸ್ವಿಭಿ
ರ್ದ್ವಿಜೈಃ ಕೃತಸ್ವ ಸ್ತ್ಯಯನಃ ಪರಂತಪಃ ॥

ನಾನಾಬಗೆಗಳಾದ ರೂಪಗಳುಳ್ಳ, ಪುರುಷಾದಾನಿ - ಮನುಷ್ಯರನ್ನು ತಿನ್ನುವ, ರಕ್ಷಾಂಸಿ - ರಾಕ್ಷಸರು, ರುಧಿರಾಶನಾಃ - ರಕ್ತಪಾನವಮಾಡುವ, ವ್ಯಾಳಾಃ - ಘಾತಕಪಶುಗಳು, ಅಸ್ಮಿನ್ಮಹಾರಣ್ಯೇ - ಈ ಗೊಂಡಾರಣ್ಯದಲ್ಲಿ, ವಸಂತಿ - ಇರುತ್ತವೆ. ॥ ೧೯ ॥ ಹೇ ರಾಘವ - ಎಲೈ ಶ್ರೀರಾಮನೇ, ಅಸ್ಮಿನ್ಮಹಾರಣ್ಯೇ - ಈ ದೊಡ್ಡ ಅರಣ್ಯದಲ್ಲಿ, ಉಚ್ಛಿಷ್ಟಂವಾ - ಅಶುಚಿಯಾಗಿರುವವನನ್ನೇ ಆಗಲಿ, ಪ್ರಮತ್ತಂವಾ - ಜಾಗರೂಕನಲ್ಲದಿರುವವನನ್ನಾಗಲೀ, ಧರ್ಮಚಾರಿಣಂ - ಧರ್ಮಿಷ್ಠನಾದ, ತಾಪಸಂ - ಋಷಿಯನ್ನು, ಅದಂತಿ - ತಿನ್ನುತ್ತವೆ, ತಾನ್ - ಆ ರಾಕ್ಷಸಗನ್ನೂ ಘಾತಕಪಶುಗಳನ್ನು, ನಿವಾರಯ - ಪರಿಹರಿಸು. ॥ ೨೦ ॥ ಹೇ ರಾಘವ - ಎಲೈ ಶ್ರೀರಾಮನೇ, ವನೇ - ಅರಣ್ಯದಲ್ಲಿ, ಫಲಾನಿ - ಫಲಗಳನ್ನು, ಆಹರತಾಂ - ತರುತ್ತಿರುವ, ಮಹರ್ಷೀಣಾಂ - ಋಷಿಗಳಿಗೆ, ಏಷಪಂಥಾಃ- ಇದೇಮಾರ್ಗವು, ತೇ - ನಿನಗೆ, ಅನೇನ - ಇದೇಮಾರ್ಗದಿಂದ, ದುರ್ಗಂ - ಹೋಗಲಸಾಧ್ಯವಾದ, ವನಂ - ಅರಣ್ಯವನ್ನು ಕುರಿತು, ಗಂತುಂ - ಹೋಗಲು, ಕ್ಷಮಂ - ಯುಕ್ತವು. ॥ ೨೧ ॥ ಇತೀವ - ಈಪರಿಯಾಗಿಯೇ, ಪ್ರಾಂಜಲಿಭಿಃ - ಅಂಜಲಿಬದ್ಧರಾದ, ತಪಸ್ವಿಭಿಃ ತಪಸ್ಸುಮಾಡುತ್ತಿರುವ, ತೈರ್ದ್ವಿಜೈಃ- ಆ ಬ್ರಾಹ್ಮಣರಿಂದ, ಕೃತಸ್ವಸ್ತ್ಯಯನಃ - ಮಾಡಲ್ಪಟ್ಟ ಆಶೀರ್ವಾದವುಳ್ಳ, ಪರಂತಪಃ - ಶತ್ರುಸಂಹಾರಕನಾದ, ಸಭಾರ್ಯಃ - ಹೆಂಡತಿಯೊಡಗೂಡಿದ, ರಾಘವಃ ಶ್ರೀರಾಮನು, ಸಲಕ್ಷ್ಮಣಃ -

---

ನಾನಾವಿಧಗಳಾದ ಆಕಾರಗಳುಳ್ಳವರು, ಮನುಷ್ಯಭಕ್ಷಕರೂ ಆದ ದುಷ್ಟರಾಕ್ಷಸರೂ, ರಕ್ತಪಾನಾಸಕ್ತಗಳಾದ ಕ್ರೂರಮೃಗಗಳೂ ಈ ಅರಣ್ಯದಲ್ಲಿ ತುಂಬಿಹೋಗಿವೆ. ಈ ರಾಕ್ಷಸರೂ, ದುಷ್ಟಮೃಗಗಳೂ ಈ ವನದಲ್ಲಿ ಸೇರಿಕೊಂಡು, ಜಾಗರೂಕರೂ ಪರಿಶುದ್ಧರೂ ಆದ ಮುನಿಗಳನ್ನು ಭಕ್ಷಿಸುತ್ತಿರುವುವು. ಈ ಬಾಧೆಯನ್ನು ನೀನೀಗ ಪರಿಹರಿಸಬೇಕು. ॥೧೮-೨೦॥ ಅಯ್ಯಾ, ರಘುವಂಶೋತ್ಪನ್ನನೆ! ವನದಲ್ಲಿ ಕಂದಮೂಲಫಲಾದಿಗಳನ್ನು ತೆಗೆದುಕೊಂಡು ಬರಬೇಕಾದ ಋಷಿಗಳಿಗೂ ಇದೇ ಮಾರ್ಗವಾಗಿರುವುದರಿಂದ, ನೀನು ಈ ಮಾರ್ಗದಿಂದಲೇ ಅರಣ್ಯವನ್ನು ಪ್ರವೇಶಿಸಬಹುದು. ಇದು ಸ್ವಲ್ಪಮಟ್ಟಿಗೆ ನಿರಾತಂಕವಾಗಿರುವುದು" ಎಂದು ಹೇಳಿ, ಕೆಲವರು ಕೈಗಳನ್ನು ಜೋಡಿಸುತ್ತಲು, ಇನ್ನುಕೆಲವರು ಆಶೀರ್ವಾದಗಳನ್ನು ಮಾಡುತ್ತಲೂ ಇರಲು, ಶತ್ರುಸಂಹಾರಕನಾದ ಆ ಶ್ರೀರಾಮಮೂರ್ತಿಯು ಅವರ ಆಶೀರ್ವಾದಗಳನ್ನು ಕೈಕೊಂಡು ಮಡದಿಯಾದ ಸೀತಾದೇವಿಯಿಂದಲೂ, ತಮ್ಮನಾದ ಲಕ್ಷ್ಮಣಸ್ವಾಮಿಯಿಂದಲೂ ಒಡಗೂಡಿದವನಾಗಿ, ನಕ್ಷತ್ರಗಳಿಗೆ ಸ್ಥಾನಭೂತವಾದ ಗಗನಮಂಡಲ

ವನಂ ಸಭಾರ್ಯಃ ಪ್ರವಿವೇಶ ರಾಘವ
ಸ್ಸಲಕ್ಷ್ಮಣ ಸ್ಸೂರ್ಯಇವಾ ಭ್ರಮಂಡಲಂ ॥ ೨೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಆದಿಕಾವ್ಯೇ ಶ್ರೀಮದ್ವಾಲ್ಮೀಕೀಯೇ
ಚತುರ್ವಿಂಶತ್ಸಹಸ್ರಿಕಾಯಾಂ ಸಂಹಿತಾಯಾಂ
ಶ್ರೀಮದಯೋಧ್ಯಾಕಾಂಡೇ ಏಕೋನವಿಂಶೋತ್ತರಶತತಮಸ್ಸರ್ಗಃ.

ಅಯೋಧ್ಯಾಕಾಂಡಸ್ಸಮಾಪ್ತಃ.

ಶ್ರೀಸೀತಾಲಕ್ಷ್ಮಣ ಭರತಶತ್ರುಘ್ನ ಹನುಮತ್ಸಮೇತ ಶ್ರೀರಾಮಚಂದ್ರ
ಚರಣಾರವಿಂದಾರ್ಪಣಮಸ್ತು.

ಲಕ್ಷ್ಮಣನಿಂದೊಡಗೂಡಿ, ಅಭ್ರಮಂಡಲಂ - ನಕ್ಷತ್ರಮಂಡಲವನ್ನು, ಸೂರ್ಯಇವ-ಸೂರ್ಯನಂತೆ, ವನಂ - ಅರಣ್ಯವನ್ನು, ಪ್ರವಿವೇಶ - ಹೊಕ್ಕನು. ॥ ೨೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಆದಿಕಾವ್ಯೇ ವಾಲ್ಮೀಕೀಯೇ ಚತುರ್ವಿಂಶತ್ಸಹಸ್ರಿಕಾಯಾಂ
ಸಂಹಿತಾಯಾಂ ಶ್ರೀಮದಯೋಧ್ಯಾಕಾಂಡೇ ಏಕೋನವಿಂಶೋತ್ತರಶತತಮಸ್ಸರ್ಗಃ.

ಶ್ರೀಸೀತಾಲಕ್ಷ್ಮಣ ಭರತಶತ್ರುಘ್ನ ಹನುಮತ್ಸಮೇತ ಶ್ರೀರಾಮಚಂದ್ರ
ಚರಣಾರವಿಂದಾರ್ಪಣಮಸ್ತು.

ವನ್ನು ದಿನಕರನು ಹೊಗುವಂತೆ ಮಹತ್ತರವಾದ ಆ ದಂಡಕಾರಣ್ಯವನ್ನು ಪ್ರವೇಶಿಸಿದವನಾದನು. ॥ ೨೧-೨೨ ॥

ಇಂತಿದು ಸೀತಾ ಲಕ್ಷ್ಮಣ ಸಮೇತ ಶ್ರೀರಾಮಚಂದ್ರಕೃತ ದಂಡಕಾರಣ್ಯ ಪ್ರವೇಶ
ಕಥಾಕಥನವೆಂಬ ನೂರಹತ್ತೊಂಭತ್ತನೆಯ ಸರ್ಗವು ಸಮಾಪ್ತವಾದುದು.

"ಅಯೋಧ್ಯಾಕಾಂಡಂ ಮುಗಿದುದು"

—: ಈ ಕಾಂಡದ ಧ್ಯಾನ ಶ್ಲೋಕ :—

ಶ್ಲೋ ॥ ಸೀತಾದೇವೀಯುತಂ ವೀರಂ ಸರ್ವಾಭರಣ ಭೂಷಿತಂ ।
ಪಿತೃಭಕ್ತಂ ಹರಿಂಧ್ಯಾಯೇ ದಯೋಧ್ಯಾಕಾಂಡ ಉತ್ತಮೇ ॥

ಶ್ರೀ ಸೀತಾಲಕ್ಷ್ಮಣ ಭರತಶತ್ರುಘ್ನ ಹನುಮತ್ಸಮೇತ ಶ್ರೀರಾಮಚಂದ್ರಾರ್ಪಣಮಸ್ತು.

—: ಶ್ರೀ ಶ್ಶುಭಂ ದದಾತು :—

ಅರಣ್ಯಕಾಂಡಪ್ರಾರಂಭವು.

ಪ್ರವಿಶ್ಯತು ಮಹಾರಣ್ಯಂ ದಂಡಕಾರಣ್ಯ ಮಾತ್ಮವಾ೯ ॥
ದದರ್ಶ ರಾಮೋ ದುರ್ಧರ್ಷ ಸ್ತಾಪಸಾಶ್ರಮ ಮಂಡಲಂ ॥

ಶ್ರೀ ವೆಂಕಟಾದ್ರಿ ಪ್ರೆಸ್,
ಬೆಂಗಳೂರು ಸಿಟಿ.
1932